KSA LIBRARY, B'lore
B004721
328.32402 548 LAD,1955
JJ32

THE MYSORE LEGISLATIVE ASSEMBLY DEBATES

OFFICIAL REPORT

Volume XII

PART III

(7th April 1955 to 26th April 1955)

SIXTH SESSION

OF THE

SECOND LEGISLATIVE ASSEMBLY

1955

4721

BANGALORE:
PRINTED BY THE DIRECTOR OF PRINTING, STATIONERY
AND PUBLICATIONS AT THE GOVERNMENT PRESS
1957

GOVERNMENT OF KARNATAKA
KARNATAKA STATE ARCHIVES
LIBRARY
BANGALORE

For Reference only

Not to be issued out of the Library

Karnataka State Archives
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪ್ರಾಪ್ತಿ ಕ್ರಮಾಂಕ Accession No. 44721
ದಿನಾಂಕ Date..............................

V-23NSS
N56-12-26-SL:[illegible]
(15) ૪૧૨૧

TABLE OF CONTENTS

TO THE

MYSORE LEGISLATIVE ASSEMBLY DEBATES

VOLUME XII—Nos. 26 to 51

(7th April 1955 to 26th April 1955.)

PAGES

Thirty-sixth Day—Thursday, 7th April 1955.

Questions and Answers ... ... 1927—1939
Questions for Answers on the day but not taken up ... 1939—1940
Motor Vehicles (Mysore Amendment) Bill, 1955—Discussion on Clauses—(not concluded) ... 1940—1970
Mysore Tenancy (Second Amendment) Bill, 1954—Motion to consider—(not concluded) ... 1970—1977

Thirty-seventh Day—Saturday, 9th April 1955.

Questions for Answers on the day but not taken up ... 1979—1991

Legislative Business—

Mysore Agricultural Income-tax Bill, 1955—Introduced 1991

Mysore Tenancy (Second Amendment) Bill, 1955—Motion to consider (not concluded) ... 1991—1994, 2005—2020
Member's right to continue his speech after an interval, if absent when debate begins ... ... 1994—2004
Adjournment motion re: Adverse effects of introducing new procedure in collecting Sales-tax—Deferred to Monday ... . 2004—2005
Mysore Sales-Tax (Amendment) Bill, 1955—Extension of time limit for presentation of Select Committee Report 2005

Thirty-eighth Day—Monday, 11th April 1955.

Questions and Answers ... ... 2021—2042
Questions for Answers on the day but not taken up ... 2043
Adjournment Motion re: adverse effects of incidence of Sales-Tax on Agricultural Produce—Deferred to next day ... ... 2043—2049
Business of the House ... ... 2050—2051

Bills Introduced—

The Mysore Sales-Tax (Second Amendment) Bill, 1955 2051

PAGES

The Madras Tobacco (Taxation of Sales and Registration) Mysore Amendment Bill, 1955 ... 2051

Mysore Village Panchayets and District Boards (Amendment) Bills, 1955—Motion to consider (not concluded) 2051—2072

Thirty-ninth Day—Tuesday, 12th April 1955.

Questions and Answers ... ... 2073—2079
Questions for Answers on the day but not taken up ... 2079—2081
Adjournment Motion *re*: Adverse effect of incidence of Sales-tax on Agricultural produce—Disallowed ... 2081—2082
Adjournment Motion *re*: Delayed publication of the results of Sakti-Vishistadwaita Examination—(Withdrawn) ... . 2082—2083
Mysore Village Panchayets and District Boards (Amendment) Bill, 1955—(Motion to consider concluded)... 2083—2119
Discussion on Q. No. 462 *re*: construction of an anecut across the Shimsha .... 2119—2122

Fortieth Day—Wednesday, 13th April 1955.

Questions and Answers ... .. 2123—2141
Questions for Answers on the day but not taken up .. 2141
Holiday for Tamil New Year's Day ... ... 2141—2142
2175
Questions held up for answers 2142
Papers laid on the Table : Home Minister's Statement on Q. No. 811 2142
Home Minister's Statement as Road Transport investments ... ... 2142—2143
Business of the House 2143
Mysore University Bill, 1955—(Introduced) ... 2143
Mysore Village Panchayets and District Boards (Amendment) Bill, 1955—(passed as amended) ... 2144—2168
Mysore Agricultural Income-tax Bill, 1955, Motion to consider—(not concluded) ... ... 2168—2175

Forty-first Day—Thursday, 14th April 1955.

Questions and Answers ... ... 2177—2193
Short Notice Questions and Answers ... ... 2193—2194
Questions for Answers on the day but not taken up ... 2194—2195
Mysore Agricultural Income Tax Bill, 1955—referred to Select Committee ... ... 2195—2249

Forty-second Day—Friday, 15th April 1955.

Questions and Answers ... ... 2251—2266
Business of the House ... ... 2266—2267
Discussion on the Report of the Committee to review the working of the Agreement between Government and Kolar Gold Field Companies—(not concluded) 2267—2321

PAGES

Forty-third Day—Saturday, 16th April 1955.

Questions and Answers	2323—2333
Short Notice Question and Answer	2333—2335
Questions for Answers on the day but not taken up ...	2335
Mysore Sales Tax (Amendment) Bill, 1955, Select Committee Report Presented	2335
Duration of the Session	2336
Discussion on the Report of the Committee constituted to review the working of the Agreement between Government and Kolar Gold Field Mining Companies—(Concluded and Special Resolution passed) ...	2336—2380

Forty-fourth Day—Monday, 18th April 1955.

Questions and Answers	2381—2403
Questions for Answers on the day but not taken up ...	2403—2406
Disposal of Questions requiring Answer ...	2406
Adjournment Motion *re*: Strike in the Kolar Gold Mines—Disallowed	2406
Mysore Appropriation (No. 3) Bill, 1955—(Passed) ...	2406—2410
Madras General Sales Tax (Mysore Amendment) Bill—Passed as amended	2410—2411
Mysore Sales Tax (Second Amendment) Bill, 1955—(Passed)	2411—2432
Madras Tobacco (Taxation of Sales and Registration) (Mysore Amendment) Bill, 1955—(Passed) ...	2432—2433
Mysore Sales Tax (Amendment) Bill, 1955, as reported by the Select Committee—(Passed) ...	2433—2436

Forty-fifty Day—Tuesday, 19th April 1955.

Questions and Answers	2437—2445
Questions for Answers on the day but not taken up ...	2445—2446
Business of the House	2446—2447
Mysore Agricultural Income-Tax Bill, 1955—Select Committee Report presented	2447—2448
Debate on the Fact Finding Committee Report (not concluded)	2448—2478

Forty-sixth Day—Wednesday, 20th April 1955.

Questions and Answers	2479—2056
Questions for Answers on the day but not taken up ...	2505—2550
Papers laid on the Table—	
List of Promises made during July-August Session, 1953, Budget Session, 1954 and October Session, 1954 and action taken thereon... ...	2506
Business of the House	2506
Discussion on the Fact Finding Committee Report (not concluded)	2506—2535

PAGES

Forty-seventh Day—Thursday, 21st April 1955.

Questions and Answers .. ... 2537—2547
Questions for Answers on the day but not taken up ... 2547—2556
Message from the Council *re*: Acceptance of amendments made in the Assembly to Mysore Co-operative Societies (Amendment Bill, 1955 ... 2556
Mysore Agricultural Income-Tax Bill, 1955—Passed as amended ... ... 2557—2595

Forty-eighth Day—Friday, 22nd April 1955.

Questions and Answers ... ... 2597—2619
Questions for Answers on the day but not taken up ... 2619—2620

Papers laid on the Table—

(1) Notification dated 21st April 1955 issued under Motor Vehicles Act, 1939 2620
(2) Statement showing details of Commercial Vehicles plying in the Corporation area, Bangalore 2620

Business of the House ... ... 2620—2621
Mysore Sales-Tax (Third Amendment) Bill, 1955—(Passed) ... ... 2621—2633
Discussion on the Fact Finding Committee (not concluded) ... ... 2633—2650

Forty-ninth Day—Saturday, 23rd April 1955.

Questions and Answers ... ... 2651—2673
Disposal of Postponed Questions 2673
Questions for Answers on the day but not taken up ... 2673—2674

Papers laid on the Table—

Postponed Questions and Answers ... 2674

Discussion on the Fact Finding Committee Report (not concluded) ... ... 2674—2698

Fiftieth Day—Monday, 25th April 1955.

Questions and Answers ... ... 2699—2714
Short Notice Question and Answer ... ... 2714—2715
Undisposed of Questions ... ... 2715—2716
Questions for Answers on the day but not taken up ... 2716—2720
Discussion on the Fact Finding Committee Report (not concluded) ... ... 2721—2760

Fifty-first Day—Tuesday, 26th April 1955.

Questions and Answers ... ... 2761—2787
Short Notice Question and Answer ... ... 2787—2794

PAGES

Questions for Answers on the day but not taken up ... 2794—2796
Message from the Council *re*: Bills passed ... 2796
Statistics relating to questions, resolutions and half-hour debates during the Session ... ... 2797—2798
Procedure in answering questions ... ... 2798—2799
Question No. 205 *re*: Totis and Talaris ... 2799—2801
Mysore Mines (Amendment) Bill, 1955—Introduced ... 2801
Official Resolution *re*: Draft amendment to Madras General Sales-Tax (Turnover and Assessment) Rules, 1939—Adopted ... ... 2801—2802

Papers laid on the Table.—

House Committee Recommendations and action taken thereon 2802

Special Resolutions *re*: Maximum and Mininum salaries for all classes of Government employees—(The First was withdrawn and the second as amended adopted) ... ... 2802—2825
Discussion on the Fact Finding Committee Report—(concluded) ... ... 2826—2855
House adjourned *sine die* 2855

ERRATA

Page	*Column*	*Line*	*For*	*Read*
296	Left	12	*Insert* after "ಸಂಸ್ಥೆಗಳಲ್ಲಿ" "ಹೆಚ್ಚು ಅವಕಾಶ ಕೊಡಬೇಕು" from line 11.	
303	,,	27	*Insert* "Sri Kadidal MANJAPPA—" before "Due" and treat this as a para.	
,,	,,	30-31	*Omit* "Sri S. SRINIVASA IYENGAR.—Increase in acquisition charges?"	
,,	,,	32	*Omit* "Sri Kadidal MANJAPPA" *and let the following words run on.*	
,,	,,	33	gald	glad
369	,,	22	ನಿರೋಗುವುದಿಲ್ಲ	ನೀರೊದಗುವುದಿಲ್ಲ
383	,,	22	ರೀತಿಯಪ್ಪು	ರೀತಿಯಲ್ಲಿ
,,	,,	23	ವ್ಯಕ್ತಡಿಲ್ಲಸಿದ್ದರೇ	ವ್ಯಕ್ತಪಡಿಸಿದ್ದರೇ
396	Right	3	ವನ್ಸ್ಪೆಕ್ಟರುಗಳಿಗೇ	ಇನ್ಸ್ಪೆಕ್ಟರುಗಳಿಗೇ
,,	,,	4	ಇ್ಯತ್ಯಾಸವನ್ನು	ವ್ಯತ್ಯಾಸವನ್ನು
420	Left	28	ಕೇರಿ	ಗೇಣ್
425	Right	31	pionts	points
431	,,	22	ಟೆನೆಸ್ಸಿ	ಟೆನೆನ್ಸಿ
432	,,	12	bnformation	information
443	,,	12	proved	proceed
443	,,	32	*Insert* "ಎಸ್" between "ಶ್ರೀ" and "ಗೋಪಾಲಗೌಡ"	
444	Left	53	ಜಮಾದ್ದಾರ	ಜಹಿರ್ನದಾರ
451	,,	42	clastes	castes
455	Right	13	"ಬಿ. ಎನ್. ಬೈರಣ್ಣಗೌಡ"	"ಬಿ. ಎನ್. ಬೋರಣ್ಣಗೌಡ"
461	Left	8	areras	areas
463	,,	30	daeily	daily
523	,,	21	*Insert* "sanction" after "ಮೊಬಲಗನ್ನು"	
555	Right	48	ಪ್ರತ್ರಿಕೆ	ಪತ್ರಿಕೆ
575	Left	53	ಯು.ಪಿ.	ಯು.ಪಿ.
582	,,	49	*Omit* "of" after "composite"	
583	,,	8	Dabbegalla	Dabbegatta
584	,,	6	where	were
595	Right	8,11, 15	ಎನ್. ಆಂಜನೇಯರೆಡ್ಡಿ	ಎಂ. ಸಿ. ಆಂಜನೇಯರೆಡ್ಡಿ
611	Left	28	*Omit* "Sri B. MADHAVACHAR" *and let it run on.*	
614	Right	6	started	stated
624	,,	41	ಬಯುಶಃ	ಬಹುಶಃ
646	Left	8	are	were
650	Right	48	donates	donate
651	Left	40	start	started
651	Right	17	Karnatakas	Karnataka
652	Left	44	Karnataks	Karnataka
668	Right	23, 24	ಜನನವನ್ನು	ಜನರನ್ನು
686	,,	1	Incidenthal	Incidental
687	,,	53	and	land

Page	Column	Line	For	Read
691	Left	23	ಯಾವದರಲ್ಲಿ	ಯಾವದರದಲ್ಲಿ
713	,,	45	been burdened we have	we have been burdened
714	Right	49	*Omit* " tation "	
715	,,	54	*Omit* " to " *after* "which a "	
716	,,	53	Kornataka	Karnataka
755	Right	31	" fell "	" feel "
758	Left	51	scereafter	hereafter
758	Right	12	hcrutinise	scrutinise
761	Left	22	falling	taking
777	Right	40	2·68	2.86
792	,,	12	ನಡೆನಡೆಸಿದಿರೆಂದು	ನಡೆಸಿದರೆಂದು
840	,,	38	juded	judged
928	Left	45-46	" having so ably friend Sri Madiah for my Hon'ble "	" My Hon'ble friend Sri Madiah for having so ably "
949	,,	45	*Delete* " Rs "	
949	,,	51	— do —	
983	Right	20	Speaker	Deputy Speaker
1023	Left	17	sour	our
1063	,,	19	second by	secondly
1074	Right	40	" supply of free are "	" free supply "
1139	,,	49	*Delete* " ಯವರು after " ನಾರಾಯಣರೆಡ್ಡಿ "	
1140	Left	1	ಶ್ರೀ ಬಿ. ವಿ. ನಾರಾಯಣರೆಡ್ಡಿ ಯವರು	Sri H. SIDDA-VEERAPPA.
1164	,,	6-7	Sri D. H. CHANDRA-SEKHARAIYA.	Sri Y. M. CHANDRA-SEKHARAIYA.
1657	,,	47	" wise "	" arise "
1684	,,	24	" way "	why
1717	Left	30	*Insert* "ಹಣವನ್ನು" after " ಎಷ್ಟರಮಟ್ಟಿಗೆ "	
,,	,,	31-32	*Omit* " ಹಣವನ್ನು "	
,,	Right	45	be	been
1734	Left	50	dose	does
1735	,,	21	whol	" whole "
1735	,,	23-25	"Sir, in Part III an acre an area of 4,840 sq. yds. is defined as."	"Sir, in Part III an acre is defined as an area of 4,840 sq. yds."
1741	Left	16	sadi	said
,,	,,	18	mance	manu
,,	,,	19	onu	once
1751	,,	28	ನಾನನೂ	ನಾನೂ
1756	,,	13	resltoration	restoration
1761	Right	9	Rs. 1,595	Rs. 15,595
1772	,,	6	form	from
1773	Left	27	uro	our
1783	,,	15	ಓದುವವನೆ	ಓದುವ
1801	Right	27	ಅಂಗಗಳನ್ನು	ಅಂಗಳಗಳನ್ನು
1817	,,	Last line	ಸಂಬಳ	ಸಂಖ್ಯೆ
1826	Left	16	way	why
1832	,,	13	" and agricultural "	in agricultural
1839	Right	24	ಹಿಂಯೂ	ಹಿಂದೆಯೂ
1849	Left	41	raferred	referred

Page	Column	Line	*For*	*Read*
1858	Right	48-49	ತ್ಪ,ಸೋಣ	ತಪ್ಪಿಸೋಣ
1858	,,	49	ಅಷವೆ	ಅಷ್ಟು
1860	,,	9	in	is
1927	,,	14	ಇದ್ದೀರಾ ?	ಇದ್ದಾರೆಯೇ ?
1937	,,	25	ಯೋಜನೆಗಳಗಳಿವೆ	ಯೋಜನೆಗಳಿವೆ
1962	,,	9	in	it
1971	Left	18-19	ತತ್ವಗಳಿಂದು	ತತ್ವಗಳಿಂದ
1976	,,	27	ಗೇಣಿದಾರು	ಗೇಣೀದಾರರು
2083	Right	3	ಎಸ್.	ಎಚ್.
2161	Left	27	*Delete* " ಶ್ರೀ ಕಡಿದಾಳ್ ಮಂಜಪ್ಪ "	
2180	,,	17	ಗೋಗಾಲಗೌಡ	ಗೋಪಾಲಗೌಡ
2261	,,	53	K. Puttaswamy	H. Siddaveerappa
2341	,,	37	1430 temperature	143° temperature
2365	Right	6	these	there
2373	,,	47	ಶ್ರೀ ಶ್ರೀನಿವಾಸರ್ರವರು	ಶ್ರೀ ವಾಸನ್‌ರವರು
2412	,,	33	bento	be to
2425	,,	39-40	ಈ ದಿಸಿ	ಈ ರೀತಿ
2432	Left	47	geg	beg
2453	,,	26	ಹೇಳುತ್ತೇನೆ	ಹೇಳಿದ್ದಾರೆ
2464	,,	12	enernal	eternal
2526	Right	31	ಮಾಡಬೇಕೆ ?	ಮಾಡಬೇಕು.
2620	,,	14	be will	will be
2638	Left	1	ಎಂ. ಚಿಕ್ಕಲಿಂಗಯ್ಯ	ಡಿ. ದೇವರಾಜ್ ಅರಸ್
2703	,,	52	partice	practice
2755	Right	30	ಮನೋ	ಮನೋಭಾವ
2803	,,	51	disus	discuss
2852	,,	32	*Delete* " ಪಶ್ಚಾತ್ " after " ಶ್ರೀ ಎಸ್. ಸಿದ್ದಪ್ಪ'	

MYSORE LEGISLATIVE ASSEMBLY.

THIRTY-SIXTH DAY.

Thursday, 7th April 1955.

The House met in the Assembly Hall, Old Public Offices, Bangalore, at Twelve of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS

Untouchability (Advisory Committees for Eradication).

Q.—854. Sri B. T. KEMPARAJ (Bangalore South-Scheduled Castes).—

Will the Government be pleased to state :—

(*a*) when the advisory committees for eradication of untouchability were constituted at the District and Taluk levels ;

(*b*) who constituted these committees ?

A.—Sri K. HANUMANTHAIYA (Chief Minister).—

(*a*) The District and Taluk Advisory Committees in the several Districts except Bellary were constituted in September 1954. The Committees in Bellary District were constituted in October 1954.

(*b*) Government.

ಶ್ರೀ ಬಿ. ಟಿ. ಕೆಂಪರಾಜ್.—ಈ ಸಮಿತಿಗಳನ್ನು ರಚನೆಮಾಡುವುದಕ್ಕೆ ಸಲಹೆ ಕೊಟ್ಟವರು ಯಾರು ?

*ಶ್ರೀ ಕೆ. ಹನುಮಂತಯ್ಯ.—ಡಿಪ್ರೆಸ್ಡ್ ಕ್ಲಾಸ್ ಕಮಿಷನರು.

ಶ್ರೀ ಬಿ. ಟಿ. ಕೆಂಪರಾಜ್.—ಅವರು ಆಯಾ ತಾಲ್ಲೂಕುಗಳ ಅಮಲ್ದಾರರು ಮತ್ತು ಡೆಪ್ಯುಟಿ ಕಮಿಷನರುಗಳನ್ನು consult ಮಾಡಿ ಈ ಸಮಿತಿಯ ಸದಸ್ಯರನ್ನು ನೇಮಕಮಾಡಲು ಸಲಹೆ ಮಾಡಿದ್ದಾರೆಯೇ?

ಶ್ರೀ ಕೆ. ಹನುಮಂತಯ್ಯ.—ಹಾಗೆ ಎಲ್ಲರನ್ನೂ ವೈಯಕ್ತಿಕವಾಗಿ ಸಲಹೆಕೇಳಿ ಮಾಡುವುದಕ್ಕೆ ಆಗುವುದಿಲ್ಲ. ಸಾಧ್ಯವಾದಷ್ಟು ಅಭಿಪ್ರಾಯ ಶೇಖರಿಸಿಕೊಂಡು ಕಮಿಟಿಗಳನ್ನು ಮಾಡಿದೆ.

ಶ್ರೀ ಬಿ. ಟಿ. ಕೆಂಪರಾಜ್.—ಈ ಕಮಿಟಿಗಳನ್ನು ರಚನೆಮಾಡುವಾಗ ಆಯಾ ಕ್ಷೇತ್ರದ ಶಾಸನ ಸಭಾ ಸದಸ್ಯರ ಅಭಿಪ್ರಾಯವನ್ನು ಡಿಪ್ರೆಸ್ಡ್ ಕ್ಲಾಸ್ ಕಮಿಷನರು ಕೇಳಿದ್ದಾರೆಯೇ?

ಶ್ರೀ ಕೆ. ಹನುಮಂತಯ್ಯ.—ಅದು ನನಗೆ ಗೊತ್ತಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಅಸ್ಪೃಶ್ಯತೆಯನ್ನು ನಿರ್ಮೂಲ ಮಾಡಲಿಕ್ಕೆ ರಚಿಸಿರುವ ಸಮಿತಿಗಳಲ್ಲಿ ಸವರ್ಣೀಯರೂ ಇದ್ದಾರೆಯೇ?

ಶ್ರೀ ಕೆ. ಹನುಮಂತಯ್ಯ.—ಇದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಈ ಸಮಿತಿಯ ಕೆಲಸಕಾರ್ಯಗಳೇನು ಎಂಬುದನ್ನು ಸರ್ಕಾರದವರು ನಿಗದಿಮಾಡಿದ್ದಾರೆಯೇ ?

ಶ್ರೀ ಕೆ. ಹನುಮಂತಯ್ಯ.—ನೀವೇ ಹೇಳಿದ್ದೀರಲ್ಲಾ, ಅಸ್ಪೃಶ್ಯತೆ ನಿವಾರಣೆ ಮಾಡುವುದು.

ಶ್ರೀ ಎಸ್. ಗೋಪಾಲಗೌಡ.—ಅವರಿಗೆ ಏನಾದರೂ ಈರೀತಿ ನಡೆದುಕೊಳ್ಳಬೇಕು ಎಂಬ ನಿರ್ದಿಷ್ಟವಾದ ಕಾರ್ಯಕ್ರಮ ಇದೆಯೇ? ಅದಕ್ಕೆ ಸರ್ಕಾರದವರು ಹಣಕಾಸನ್ನೇನಾದರೂ ಒದಗಿಸುತ್ತಾ ಇದ್ದೀರಾ?

ಶ್ರೀ ಕೆ. ಹನುಮಂತಯ್ಯ.—ಹಣಕಾಸನ್ನು ಕೊಟ್ಟಿದೆ. ಈ ಕೆಲಸಕಾರ್ಯಗಳನ್ನು ಅವರೇ ವಿವರವಾಗಿ ಸಮಾಲೋಚನೆಮಾಡಿ ನಿರ್ಧರಿಸಬೇಕು.

ಶ್ರೀ ಕೆ. ಲಕ್ಕಪ್ಪ.—ಈ ಕಮಿಟಿಗಳು ಆಗಿಂದಾಗ್ಗೆ meet ಆಗುತ್ತಾ ಇವೆಯೇ?

ಶ್ರೀ ಕೆ. ಹನುಮಂತಯ್ಯ.—ಆಗುತ್ತಾ ಇವೆ.

ಶ್ರೀ ಕೆ. ಲಕ್ಕಪ್ಪ.—ವರ್ಷಕ್ಕೆ ಎಷ್ಟು ಸಾರಿ?

ಶ್ರೀ ಕೆ. ಹನುಮಂತಯ್ಯ.—ಅದು ಅವರಿಗೆ ಸಂಬಂಧಪಟ್ಟಿದ್ದು.

ಶ್ರೀ ಕೆ. ಲಕ್ಕಪ್ಪ.—ಈ ಕಮಿಟಿಗಳನ್ನು ರಚನೆ ಮಾಡಿದ ಮೇಲೆ ಏನು ಸಾಧನೆ ಮಾಡಿದ್ದಾರೆ?

Sri K. HANUMANTHAIYA.—I must get the information from the Committees what work they have done and I will furnish. ಪ್ರತ್ಯೇಕವಾದ ಪ್ರಶ್ನೆ ಕೇಳಿ ಉತ್ತರ ಕೊಡುತ್ತೇನೆ.

ಶ್ರೀ ಆರ್. ಮುನಿಸ್ವಾಮಯ್ಯ.—ಅನೇಕ ತಾಲ್ಲೂಕುಗಳಲ್ಲಿ ಈ ಕಮಿಟಿ ಮೀಟಿಂಗ್ ನಡೆದೇ ಇಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಹನುಮಂತಯ್ಯ.—ಇದುವರೆಗೂ ಆ ಕಮಿಟಿ ಮೀಟಿಂಗ್‌ಗಳು ನಡೆದಿಲ್ಲ ಎಂದು ಹೇಳಿ ನನ್ನ ಗಮನಕ್ಕೆ ಯಾರೂ ತಂದಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ಈ ಸಮಿತಿಗಳನ್ನು ನೇಮಿಸುವಾಗ ಅವರಿಗೆ ಇಷ್ಟಬಂದ ಸದಸ್ಯರನ್ನು ನೇಮಕಮಾಡುವುದರಿಂದ ಆ ಮೆಂಬರುಗಳು ಮೀಟಿಂಗಿಗೆ ಬರುವುದೇ ಇಲ್ಲ ಎಂಬುದು ಗೊತ್ತೇ?

* Indicates that the remarks or speeches have not been revised by the Member concerned.

(1927)

ಶ್ರೀ ಕೆ. ಹನುಮಂತಯ್ಯ.—ಯಾವ ಕಮಿಟಿಯನ್ನು ರಚನೆ ಮಾಡಿದರೂ ಇಷ್ಟಬಂದವರನ್ನು ಹಾಕುತ್ತಾರೆ ಎಂಬುದು ಬಂದೇ ಬರುತ್ತದೆ. ಆದ್ದರಿಂದ ಆ ತರಹ ಆರೋಪಣೆಗಳಿಂದ ಪ್ರಯೋಜನವಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ಎಂ. ಎಲ್. ಎ. ಗಳನ್ನು consult ಮಾಡಿ ಅಮಲ್ದಾರರುಗಳು ಸಾಕಾದಷ್ಟು ಆಸಕ್ತಿ ಇರತಕ್ಕವರ ಹೆಸರುಗಳನ್ನು ಕೊಟ್ಟಿದ್ದ ಪಕ್ಷದಲ್ಲಿ ಈ ಸಮಿತಿಗಳ ಮೀಟಿಂಗುಗಳು ಸರಿಯಾಗಿ ನಡೆಯುತ್ತಾ ಇದ್ದವು ಎಂಬುದು ಗೊತ್ತೇ ?

ಶ್ರೀ ಕೆ. ಹನುಮಂತಯ್ಯ.—ಆ ತರಹ ಎಂ.ಎಲ್.ಎ. ಗಳನ್ನು ಕೇಳಬೇಕಾಗಿ ನಿಯಮ ಮಾಡುವುದು ಕಷ್ಟ.

ಶ್ರೀ ಆರ್. ಮುನಿಸ್ವಾಮಯ್ಯ.—ಹಾಗಾದರೆ ಡಿಪ್ರೆಸ್ಡ್ ಕ್ಲಾಸ್ ಕಮಿಷನರಿಗೆ ಅವರು ಯಾವ ರೀತಿ ಹೆಸರುಗಳನ್ನು ಕೊಟ್ಟಿದ್ದಾರೆ ?

ಶ್ರೀ ಕೆ. ಹನುಮಂತಯ್ಯ.—ಅದು ಅವರ ವಿವೇಚನೆಗೆ ಬಿಟ್ಟಿದ್ದು.

ಶ್ರೀ ಆರ್. ಮುನಿಸ್ವಾಮಯ್ಯ.—ಈ ಸಮಿತಿಗಳು ಯಾವಯಾವಾಗ ಸೇರಬೇಕೆಂದು ತಿಳಿಸಿರುತ್ತೀರಿ ?

ಶ್ರೀ ಕೆ. ಹನುಮಂತಯ್ಯ.—ಅದು ಗೌರ್ನಮೆಂಟ್ ಆರ್ಡರ್‌ನಲ್ಲಿ ಇರಬೇಕು. The Committee may meet as often as necessary. But not less than four meetings should be held in a year. I will find out and tell you.

ಶ್ರೀ ಆರ್. ಮುನಿಸ್ವಾಮಯ್ಯ.—ಸಾಧ್ಯವಾದಷ್ಟು ಜಾಗ್ರತೆ ಈ ಸಮಿತಿಗಳನ್ನು ಪುನಃರಚನೆ ಮಾಡಿ ಇದರಲ್ಲಿ ಆಸಕ್ತಿಯುಳ್ಳ ಹೊಸ ಸದಸ್ಯರನ್ನು ನೇಮಕ ಮಾಡಲು ಯೋಚನೆ ಮಾಡುತ್ತೀರಾ ?

ಶ್ರೀ ಕೆ. ಹನುಮಂತಯ್ಯ.—ಈಗಿರತಕ್ಕ ಸದಸ್ಯರಿಗೆ ಆಸಕ್ತಿ ಇದೆ. ಆ ಆಧಾರದ ಮೇಲೆ ಈ ಸಮಿತಿಗಳನ್ನು ರಚಿಸಿರುವುದು. ಹಾಗೆ ಯಾರಾದರೂ ಮೀಟಿಂಗಿಗೆ ಬರದೇ ಆಸಕ್ತಿವಹಿಸದಿದ್ದರೆ ಅಂಥವರನ್ನು ತೆಗೆದು ಹೊಸಬರನ್ನು ನೇಮಕಮಾಡಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ತಾಲ್ಲೂಕು ಡೆವಲಪ್‌ಮೆಂಟ್ ಕಮಿಟಿಗಳು ರಚನೆ ಆದಮೇಲೆ ಈ ಈ ಕೆಲಸವನ್ನು ಆ ಸಮಿತಿಗಳಿಗೆ ವಹಿಸಿ ಇವುಗಳನ್ನು ವಜಾ ಮಾಡುತ್ತೀರಾ ?

Sri K. HANUMANTHAIYA.—That is a hypothetical question.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ಸಮಿತಿಗಳಲ್ಲಿ ಒಂದು ಹೋಬಳಿಯಿಂದ ಹೆಚ್ಚು ಜನ ಮೆಂಬರುಗಳನ್ನು ತೆಗೆದುಕೊಂಡು, ಮತ್ತೆ ಕೆಲವು ಹೋಬಳಿಗಳನ್ನು ಪೂರ್ತಿಯಾಗಿ ಬಿಟ್ಟಿರುವುದು ಗೊತ್ತೇ ?

ಶ್ರೀ ಕೆ. ಹನುಮಂತಯ್ಯ.—ಹಾಗೆ ಆದರೂ ಪರವಾಗಿಲ್ಲ. ಕೆಲಸ ಆಗಬೇಕಾದದ್ದು ಮುಖ್ಯವೇ ಹೊರತು ದಾಮಾಷಾ ಪ್ರಕಾರ ಎಲ್ಲಾ ಹೋಬಳಿಗಳಿಗೂ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಒಂದು ಸಾರಿ ಕಮಿಟಿ ಮೆಂಬರುಗಳನ್ನು ಚುನಾಯಿಸಿ ಗೆಜೆಟ್ ನೋಟಿಫಿಕೇಷನ್ ಬಂದು, ಒಂದು ಮೀಟಿಂಗ್ attend ಮಾಡಿದ ಮೇಲೆ ಕೆಲವರನ್ನು remove ಮಾಡಿರುವುದು ಗೊತ್ತೇ ?

ಶ್ರೀ ಕೆ. ಹನುಮಂತಯ್ಯ.—ಅವರು ಮುಂದಿನ ಕೆಲವು ಮೀಟಿಂಗುಗಳಿಗೆ ಹೋಗದೇ ಇದ್ದಿದ್ದರೆ ಆ ರೀತಿ ಮಾಡಿರಬಹುದು.

ಶ್ರೀ ಎಂ. ಚಿಕ್ಕಲಿಂಗಯ್ಯ.—Representationನ್ನೇ remove ಮಾಡಿದ್ದಾರೆ, without asigning any reason. ಅದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕೆ. ಹನುಮಂತಯ್ಯ.—ಅಂಥದು ಯಾವುದೂ ಗೊತ್ತಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಈ ಕಮಿಟಿಗಳು ಮಾಡುತ್ತಿರುವ ಕೆಲಸದ ವಿಷಯವಾಗಿ ಸರ್ಕಾರದವರಿಗೆ ವರದಿ ಕ್ರಮವಾಗಿ ಬರುತ್ತಾ ಇದೆಯೇ ?

ಶ್ರೀ ಕೆ. ಹನುಮಂತಯ್ಯ.—ವರ್ಷಕ್ಕೆ ಒಂದುಸಾರಿ ವರದಿ ತರಿಸಿಕೊಳ್ಳುವುದು ಪದ್ಧತಿ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಈ ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ರಮಕ್ಕೆ ಇಂಡಿಯಾ ಸರ್ಕಾರದವರು ಹಣ ಕೊಡುತ್ತಾರೆಯೇ ?

ಶ್ರೀ ಕೆ. ಹನುಮಂತಯ್ಯ.—ಅವರೂ ಸ್ವಲ್ಪ ಕೊಡುತ್ತಾರೆ.

ಶ್ರೀ ಎಚ್ ಸಿ. ಲಿಂಗಾರೆಡ್ಡಿ.—ಎಷ್ಟು ಕೊಡುತ್ತಾರೆ ?

ಅಧ್ಯಕ್ಷರು.—ಹೋದಸಲ ಈ ಪ್ರಶ್ನೆ ಬಂದಿತ್ತು.

ಶ್ರೀ ವಿ. ಆರ್. ನಾಯ್ಡು.—ಈ ಅಸ್ಪೃಶ್ಯತಾ ನಿರ್ಮೂಲ ಸಮಿತಿಗಳು ಏರ್ಪಾಡಾದಮೇಲೆ ಒಳ್ಳೆಯದಾಗಿದೆ ಅಲ್ಲವೇ ?

ಶ್ರೀ ಕೆ. ಹನುಮಂತಯ್ಯ.—ಒಳ್ಳೆಯದಾಗಿದೆ.

Chokkanahalli Village Extension (Lands acquired).

Q.—839. Sri K. V. BYRE GOWDA (Bangalore North).—

Will the Government be pleased to state :—

(*a*) the Survey Numbers that were acquired and taken possession of for the extension of Chokkanahalli village, Yalahanka Hobli, Bangalore North Taluk, within the past six months ;

(*b*) the extent acquired ;

(*c*) owners of the acquired lands ?

A.—Sri T. CHANNIAH (Minister for Public Health and Local Self-Government).—

(*a*) 105 and 106.

(*b*) One acre.

(*c*) S. No. 105 is in the *khate* and *anubhava* of Sri Muninarasimha Reddy while S. No. 106 is in the *khate* of Sri Anjaneyaswamy Devaru and in the *anubhava* of the Archak Sri Narayanappa.

ಶ್ರೀ ಕೆ. ವಿ. ಬೈರೇಗೌಡ.—ಈ ಸರ್ವೇ ನಂಬರುಗಳನ್ನು ಅಕ್ವೈರ್ ಮಾಡಿಕೊಂಡದ್ದು ಯಾವಾಗ ?

ಶ್ರೀ ಟಿ. ಚನ್ನಯ್ಯ.—2ನೇ ನವಂಬರ್ 1954ರಲ್ಲಿ.

ಶ್ರೀ ಕೆ. ವಿ. ಬೈರೇಗೌಡ.—ಅವರ ಸುಪರ್ದಿಗೆ ಕೊಟ್ಟ ಮೇಲೆ ಯಾರಾದರೂ ಸ್ಟೇ ಆರ್ಡರ್‌ಗೆ ಕೇಳಿ ಕೊಂಡಿದ್ದಾರೆಯೇ?

ಶ್ರೀ ಟಿ. ಚನ್ನಯ್ಯ.—ಹೌದು ಕೇಳಿಕೊಂಡಿದ್ದರು. ಕೊಟ್ಟಿದೆ.

ಶ್ರೀ ಕೆ. ವಿ. ಬೈರೇಗೌಡ.—ಯಾರು ಕೇಳಿರುವುದು?

ಶ್ರೀ ಟಿ. ಚನ್ನಯ್ಯ.—ಎರಡನೇ ಸರ್ವೆ ನಂಬರಿನವರು. ಆ ಜಮೀನು ದೇವಸ್ಥಾನಕ್ಕೆ ಸೇರಿದ್ದು, ಅದನ್ನು ಅಕ್ವೈರ್ ಮಾಡಿಕೊಂಡ ಪಕ್ಷದಲ್ಲಿ ದೇವಸ್ಥಾನಕ್ಕೆ ಬರತಕ್ಕ ಆದಾಯ ಹೊರಟು ಹೋಗುತ್ತದೆ, ಆದ್ದರಿಂದ ಅಕ್ವೈರ್ ಮಾಡಕೂಡದು ಎಂಬುದಾಗಿ ಅವರು ಹೇಳಿದ್ದಾರೆ. ಅದಕ್ಕೇ ಅವರಿಗೆ ಕೊಟ್ಟಿದೆ.

ಶ್ರೀ ಕೆ. ವಿ. ಬೈರೇಗೌಡ.—ಇದನ್ನು ಅಕ್ವೈರ್ ಮಾಡಿಕೊಳ್ಳಬೇಕಾದರೆ ಅಕ್ವಿಸಿಷನ್ ಆಫೀಸರು ಅದನ್ನೆಲ್ಲಾ ತನಿಖೆಮಾಡಲಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಹಿಂದೆ ಬಹುಶಃ ಯಾರೂ objection ಹಾಕಿರಲಿಲ್ಲ. ಆದ್ದರಿಂದ ಅವರ ಗಮನಕ್ಕೆ ಬಂದಿಲ್ಲ ಎಂದು ಕಾಣುತ್ತದೆ. ಅಕ್ವೈರ್ ಮಾಡಿದ್ದಾರೆ ಎಂಬುದು ಗೊತ್ತಾದ ಮೇಲೆ ದೇವಸ್ಥಾನಕ್ಕೆ ಬರತಕ್ಕ ಆದಾಯ ಹೊರಟು ಹೋಗುತ್ತದೆ ಎಂದು ಹೇಳಿ objection ಹಾಕಿದ್ದಾರೆ.

ಶ್ರೀ ಕೆ. ವಿ. ಬೈರೇಗೌಡ.—ಅಕ್ವಿಸಿಷನ್ ಆದಮೇಲೆ ಗೆಜೆಟ್‌ನಲ್ಲಿ ಪ್ರಕಟವಾಗುವುದಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಆಗುತ್ತದೆ.

ಶ್ರೀ ಕೆ. ವಿ. ಬೈರೇಗೌಡ.—ಅದು ಆ ಪಾರ್ಟಿಗಳಿಗೆ ಗೊತ್ತಾಗುವುದಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಬಹುಶಃ ಅವರು ಗೆಜೆಟ್ ನೋಡಿರಬಹುದು, ನೋಡದೇ ಇರಬಹುದು. ಅಂತು ಜಮೀನನ್ನು actual possession ಗೆ ಕೊಟ್ಟ ನಂತರ ಅವರಿಗೆ ಅಕ್ವೈರ್ ಆಗಿದೆ ಎಂದು ಗೊತ್ತಾಗಿ ಅನಂತರ objection ಹಾಕಿದ್ದಾರೆ.

ಶ್ರೀ ಕೆ. ವಿ. ಬೈರೇಗೌಡ.—ಈ 106ನೆಯ ಸರ್ವೆ ನಂಬರಿಗೆ ಮಾತ್ರ ಸ್ಟೇ ಆರ್ಡರನ್ನು ಕೇಳಲಾಗಿತ್ತು, ಆದರೆ ಈ 105ನೆ ನಂಬರಿಗೆ ಕೇಳದೆ ಇದ್ದರೂ ತಾವೇಕೆ ಸ್ಟೇ ಆರ್ಡರನ್ನು ಕೊಟ್ಟಿದ್ದೀರಿ?

ಶ್ರೀ ಟಿ. ಚನ್ನಯ್ಯ.—ನಾನು ಈ ವಿಚಾರವನ್ನು ಆಗಲೇ ಮಾನ್ಯ ಸದಸ್ಯರ ಕೈಲಿ ಮಾತನಾಡಿದಾಗ್ಗೆ ತಿಳಿಸಿದಂತೆ ಇದನ್ನು ಜಾಗ್ರತೆ ಫೈಸಲ್ಮಾಡಲಾಗುತ್ತದೆ, ಬೇಗ ಮುಗಿದರೆ ಮುಂದಕ್ಕೆ ಯಾವ ತಕರಾರೂ ಇರುವುದಿಲ್ಲ.

ಶ್ರೀ ಕೆ. ವಿ. ಬೈರೇಗೌಡ.—ಹಾಗಾದರೆ ತಾವು ಹೇಳಿದ ಪ್ರಕಾರ ಇದನ್ನು ಬೇಗ ತೀರ್ಮಾನ ಮಾಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಇನ್ನು ಒಂದು ವಾರದೊಳಗಾಗಿಯೇ ಇದನ್ನು ಇತ್ಯರ್ಥ ಮಾಡಲಾಗುವುದು.

Sri K. PUTTASWAMY.—What is the purport of the stay order?

Sri T. CHANNIAH.—The purport is that the proceedings in respect of the land should be stayed pending final decision on the appeal petition.

Sri K. PUTTASWAMY.—To whom you should hand over possession of the land?

Sri T. CHANNIAH.—Chairman of the Village Panchayet.

Sri K. PUTTASWAMY.—What is the effect of your stay order?

Sri T. CHANNIAH.—The effect is that further proceedings would be stayed pending hearing of the petitioner and decision according to the rules.

Sri K. PUTTASWAMY.—You have issued a stay order after delivery of possession. Has it any effect at all?

Sri T. CHANNIAH.—Yes, when the appeal is filed before Government; it is only fair that the petitioner should be given a hearing to find out the *pros* and *cons* of the matter and dispose it of according to rules.

Sri K. PUTTASWAMY.—The question of legality of such an order has been raised on the floor of this House several times. Have the Government taken advice about the legality of the stay order?

Sri T. CHANNIAH.—There have been instances where even when possession has been given and the matter set at rest, the whole matter has been reopened and the acquired lands reconveyed to the original owners. Such reconveyance has been considered quite legal.

Mr. SPEAKER.—You are going too far from the question.

ಶ್ರೀ ಆರ್. ಮುನಿಸ್ವಾಮಯ್ಯ.—ಈ 106ನೆಯ ಸರ್ವೆ ನಂಬರಿಗೆ ಮಾತ್ರ ಸ್ಟೇ ಆರ್ಡರನ್ನು ಕೇಳಿದ್ದರೆ ತಾವು ಈ 105ನೆಯ ಸರ್ವೆ ನಂಬರಿಗೇಕೆ ಸ್ಟೇ ಆರ್ಡರ್ ಮಾಡಿದಿರಿ?

ಶ್ರೀ ಟಿ. ಚನ್ನಯ್ಯ.—ಈ ಎರಡು ಸರ್ವೆ ನಂಬರುಗಳೂ ಆ ಒಂದು ಎಕರೆಯಲ್ಲಿ ಸೇರಿಕೊಂಡಿರುತ್ತವೆ. ಕೆಲವು ವೇಳೆ ಇಂಥಾ ಡಿಸ್ಪ್ಯೂಟುಗಳು ಬಂದಾಗ ಅವೆರಡರ ವಿಚಾರವನ್ನೂ ಒಂದೇ ಸಾರ್ತಿ ತೀರ್ಮಾನ ಮಾಡತಕ್ಕದ್ದು ಉಚಿತವೆಂಬುದಾಗಿ ಭಾವಿಸಲಾಗಿದೆ. ಆ ಕಾರಣದಿಂದ ಈಗ ಈ ಎರಡು ನಂಬರಿಗೂ ಸ್ಟೇ ಆರ್ಡರ್ ಕೊಡಲಾಗಿದೆ.

ಶ್ರೀ ಆರ್. ಮುನಿಸ್ವಾಮಯ್ಯ.—ಒಂದನ್ನು ಬಿಟ್ಟು ಮತ್ತೊಂದನ್ನು ಸ್ಟೇ ಮಾಡುವುದಕ್ಕೆ ಆಗುತ್ತಿರಲಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಆ ಎರಡು ಜಮೀನುಗಳನ್ನೂ ನೇರವಾಗಿ ಅಕ್ವಯರ್ ಮಾಡಿಕೊಳ್ಳಲಾಗಿತ್ತು. ಆದ ಕಾರಣ ಈ ತಕರಾರುಗಳು ಆ ಎಲ್ಲಾ ಜಮೀನಿಗೂ ಸಂಬಂಧಪಟ್ಟಿರುತ್ತೆಂದು ಭಾವಿಸಿ ಅದನ್ನೂ ಕೂಡ ಸ್ಟೇ ಮಾಡಲಾಗಿದೆ.

Kurikuppe Farm, Bellary District.

Q.—32. Sri B. N. BORANNA GOWDA (Belur).—

Will the Government be pleased to state:—

(*a*) the total amount, including the establishment, the Government is spending annually for the maintenance of the Kurikuppe Farm in Bellary District;

(*b*) the number of cattle maintained in that Farm:

(*c*) the number of sheep maintained in that Farm; and

(*d*) the total annual income that the Government is deriving from that Farm?

A.—Dr. R. NAGAN GOWDA (Minister for Agriculture).—

(*a*) 1954-55 (up to end of February 1955)—

Rs. 1,38,532-3-9.

(*b*) As on 31st December 1954—

1	Hallikar	...	430
2	Sindhi	...	...
3	Murrah	...	23
4	Work cattle	...	47
	Total	...	500

(*c*) 308.

(*d*) By sale of (up to February 1955)—

			Rs.	a.	p.
1	Livestock	...	17,827	0	0
2	Dairy products	...	5,042	0	6
3	Wool	...	640	0	0
4	Agricultural products	...	1,930	15	6
5	Miscellaneous receipts	...	501	8	0
	Total	...	25,941	7	6

Sri B. N. BORANNA GOWDA.—May I know the main object of maintaining this Farm?

Dr. R. NAGAN GOWDA.—There are two objects in this. One of the main objects is to improve the breed of cattle that is found in this area. This area is a very well known area for wool bearing sheep and the purpose of this Farm is to improve the quality of wool or this sheep by cross-breeding.

Sri B. N. BORANNA GOWDA.—How many Hallikars and how many Murrahs are maintained in this Farm?

Dr. R. NAGAN GOWDA.—Now since this answer was given, we have reduced the number of Hallikar cattle by 129. We have got about 300 Hallikar cattle and Murrah cattle are as stated here. Of the 300, I can give approximately the number of calves and other animals. There are about 100 cows, 80 heifers and 40 bullocks and 21 male calves and about 50 female calves. I am giving the figures approximately.

Sri B. N. BORANNA GOWDA.—What is the plan contemplated to improve the quality of sheep?

Dr. R. NAGAN GOWDA.—We are using an Indian breed of sheep—Bikanir sheep which is considered to be a better breed than Bellary sheep. We are using that male stock for improving the stock here. We are not using any of the European breeds such as Marino or the Rambulo for this purpose.

Sri B. N. BORANNA GOWDA.—According to the figures that you have given, is it not a loss?

Dr. R. NAGAN GOWDA.—Now with regard to the maintenance of this Farm, we are trying to make this as far as possible self-supporting, but that might be a difficult thing. In 1952-53 for this Farm they spent Rs. 2,30,000; in 1953-54 Rs. 2,20,000. Up to the end of February this year we have reduced the expenditure to Rs. 1,38,000. Now we have got a programme to reduce the expenditure to a further extent. In this Farm there has been certain expenditure which we think can be reduced and we are trying to make it as near as possible self-sufficient.

ಶ್ರೀ ಎಂ. ಚಿಕ್ಕಲಿಂಗಯ್ಯ.—ತಾವು ಈ ಫಾರಂನಲ್ಲಿ ಈಗ 500 ಕಾಲ್ನಡೆಗಳನ್ನು ಸಾಕುತ್ತಿರಲಾಗಿದೆಯೆಂದು ಹೇಳೋಣವಾಗಿದೆ. ಎಂದರೆ ಈ ಕಾಲ್ನಡೆಗಳೆಲ್ಲಾ ಎಲ್ಲಿಂದಲಾದರೂ ಖರೀದಿಗೆ ಕೊಂಡುಕೊಂಡು ತಂದವುಗಳೋ ಅಥವಾ ಅಲ್ಲೇ ಹುಟ್ಟಿ ಬೆಳೆದವುಗಳೋ?

ಡಾ|| ಆರ್. ನಾಗನಗೌಡ.—ಇದು ಇನ್ನೂ ಈಗ ತಾನೆ ಹೊಸದಾಗಿ ಪ್ರಾರಂಭವಾಗಿದೆ. ಬೇರೆ ಬೇರೆ ಕ್ಷೇತ್ರಗಳಲ್ಲಿದ್ದಂಥ ಕಾಲ್ನಡೆಗಳನ್ನು ಇಲ್ಲಿಗೆ ವರ್ಗಾಯಿಸಲಾಗಿದೆ. ಕೆಲವನ್ನು ಕೊಂಡುಕೊಳ್ಳಲಾಗಿದೆ. ಆದರೆ ಕುರಿಗಳು ಮಾತ್ರ ಅದೇ ಪ್ರದೇಶದವುಗಳು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ಫಾರಂನ್ನು ಮ್ಯಾನೇಜ್ ಮಾಡುವುದಕ್ಕೇನಾದರೂ ಒಂದು ಸಮಿತಿ ಇದೆಯೇ ?

ಡಾ॥ ಆರ್. ನಾಗನಗೌಡ.—ಯಾವುದೂ ಇಲ್ಲ.

Sri M. CHIKKALINGAIAH.—Who is in charge of this Farm ?

Dr. R. NAGAN GOWDA.—This Farm is under the management of one of the Deputy Directors of Animal Husbandry and as you know, the Director of Animal Husbandry is in overall charge of all the Farms.

ಶ್ರೀ ಎಸ್. ಗೋಪಾಲಗೌಡ.—ಈ ಕುರಿಕುಪ್ಪೆ ಫಾರಂ ಅನ್ನುವುದು ಯಾವಾಗ ಪ್ರಾರಂಭವಾಯಿತು ?

ಡಾ॥ ಆರ್. ನಾಗನಗೌಡ.—ಸುಮಾರು 4-5 ವರ್ಷಗಳಾಯಿತೆಂದು ಕಾಣುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಈಗ ತಾವು ಈ ಕುರಿ ಕ್ಷೇತ್ರವನ್ನು ಕೇವಲ ಉಣ್ಣೆಗಾಗಿ ಸಾಕುತ್ತಿರ ಲಾಗಿದೆಯೆಂತ ಹೇಳಿದಿರಿ. ಆದರೆ ಇದರಿಂದ ಬರ ತಕ್ಕಂಥ ವರಮಾನ 640 ರೂಪಾಯಿಗಳು ಮಾತ್ರ ಎಂದು ತಿಳಿಸಿದೆ. ಇದರ ಉತ್ಪತ್ತಿಯಲ್ಲಿ ಇಷ್ಟು ಕಮ್ಮಿ ಆಗುವುದಕ್ಕೆ ಕಾರಣವೇನು ?

ಡಾ॥ ಆರ್. ನಾಗನಗೌಡ.—ಅಲ್ಲಿ ಕುರಿಗಳು ಬಹಳ ಕಮ್ಮಿ ಇವೆ. ಒಂದು ಕುರಿ ಅಡಲ್ಟ್ ಸ್ಟೇಜಿಗೆ ಬಂದರೆ ಎರಡು ಪೌಂಡ್ ಉಣ್ಣೆಯನ್ನು ಅದು ಉತ್ಪತ್ತಿ ಮಾಡಬಲ್ಲದು. ಆದ್ದರೆ ನಮಗೀಗ ಬೇಕಾಗಿರುವುದು ಬರಿ ಪ್ರಮಾಣ ಒಂದೇ ಅಲ್ಲ. ಗುಣ ಮತ್ತು ಪ್ರಮಾಣ ಗಳೆರಡನ್ನೂ ನಾವು ವೃದ್ಧಿಗೊಳಿಸಬೇಕೆಂದಿದ್ದೇವೆ.

ಶ್ರೀ ಎಸ್. ಗೋಪಾಲಗೌಡ.—ಈಗ ಈ ಫಾರಂಗೆ ವರ್ಷ ಒಂದಕ್ಕೆ 1,38,532 ರೂಪಾಯಿ 3 ಅಣೆ 9 ಕಾಸುಗಳು ಖರ್ಚಾಗುತ್ತಿದ್ದು ವರ್ಷಕ್ಕೆ ಈ ಬಾಬಿ ನಿಂದ ಕೇವಲ 25,941 ರೂಪಾಯಿ 7 ಅಣೆ 6 ಕಾಸು ಗಳು ವರಮಾನ ಬರುತ್ತಿದ್ದರೆ ಇಂಥಾ ಒಂದು ಲುಕ್ಸಾ ನಿನ ಬದುಕನ್ನು ರೈತನಾಗಿದ್ದ ಪಕ್ಷದಲ್ಲಿ ಮಾಡು ತ್ತಿದ್ದನೇ ?

ಡಾ॥ ಆರ್. ನಾಗನಗೌಡ.—ಅಲ್ಲಿ ಈಗ ಈ ಕುರಿ ಸಾಕುವುದೊಂದೇ ಅಲ್ಲದೆ ಷೀಪ್ ಬ್ರೀಡಿಂಗ್ ಕಾರ್ಯ ವನ್ನು ಸಹ ಮಾಡಲಾಗುತ್ತಿದೆ. ಈಗ ಅಲ್ಲಿಗೆ ನಾವು ಹೆಚ್ಚಿನ ನಿಗಾ ಕೊಟ್ಟಿದ್ದೇವೆ. ಅಲ್ಲಿ ಈಗ ಹಸುಗಳನ್ನು ಸಾಕುವುದಕ್ಕೆ ಬೇರೆ ಏರ್ಪಾಡು ಮಾಡಿದ್ದೇವೆ. ಸಾಧ್ಯವಾದಮಟ್ಟಿಗೂ ಇದನ್ನು ಅಭಿವೃದ್ಧಿಪಡಿಸಲು ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತಿದ್ದೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಇಲ್ಲಿ ಹಳ್ಳಿಕಾರ್ ರಾಸುಗಳನ್ನು ಸಾಕುವುದು, ಅದರ ತಳಿ ಅಭಿವೃದ್ಧಿ ಮಾಡುವುದಕ್ಕೋಸ್ಕರವಲ್ಲವೆ ?

ಡಾ॥ ಆರ್. ನಾಗನಗೌಡ.—ಈ ಏರ್ಪಾಡು ಮೊದಲಿನಿಂದಲೂ ಅಲ್ಲಿ ತಂದಿದ್ದು, ಅದರ ತಳಿ ಅಭಿ ವೃದ್ಧಿ ಮಾಡುವುದಕ್ಕೆ ಮತ್ತು ತುಂಗಭದ್ರ ಪ್ರಾಜೆಕ್ಟ್ ಏರಿಯಾಕ್ಕೆ ಅನೇಕ ರಾಸುಗಳು ಬೇಕಾಗುತ್ತವೆಂದು supply position improve ಮಾಡುವುದಕ್ಕಾಗಿ ಮದರಾಸು ಸರ್ಕಾರದವರು ಮೊದಲು ಇದನ್ನು ಏರ್ಪಾಟುಮಾಡಿದರು. ನಮಗೆ ತಿಳಿದಹಾಗೆ ಈ ಬಳ್ಳಾರಿ ಜನ ವಿಶೇಷವಾಗಿ ಘಾಟಿ ಸುಬ್ರಹ್ಮಣ್ಯ, ಹಾಸನ ಮುಂತಾದ ಸ್ಥಳಗಳಿಗೆ ಬಂದು ಇಲ್ಲಿಂದ ರಾಸುಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ಇಲ್ಲಿ ಬೆಳೆದು ಇನ್ನೂ ಚಿಕ್ಕದಾಗಿದ್ದಾಗಲೇ ರೈತರಿಗೆ ಮಾರಾಟ ಮಾಡುತ್ತೇವೆ. ಸುಮಾರು 92,000 ಎಕರೆಗಳ ತರಿಭೂಮಿ ನೀರಾವರಿಗೆ ಬಂದಿರುವುದರಿಂದ ಸಪ್ಲೈಮಾಡುವ ಏರ್ಪಾಡು ಮಾಡಿದ್ದೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ರೈತರು ನಮ್ಮ ಫಾರಂನಲ್ಲಿ ಕೊಂಡುಕೊಳ್ಳುವುದಕ್ಕಿಂತ ಮೈಸೂರಿನ ಇತರ ಭಾಗಗಳಲ್ಲಿ ರೈತರ ಹತ್ತಿರ ಕೊಂಡುಕೊಳ್ಳು ವುದು ಸುಲಭವಾದ ಮಾರ್ಗವಲ್ಲವೆ ?

ಡಾ॥ ಆರ್. ನಾಗನಗೌಡ.—ಘಾಟಿ ಸುಬ್ರ ಹ್ಮಣ್ಯಕ್ಕೆ ಬಂದು 3-4 ವರ್ಷದ ಹೋರಿಗಳನ್ನು ತೆಗೆದುಕೊಂಡು ಹೋಗಬೇಕಾದರೆ ಸುಲಭವಾಗಿ 500 ರೂಪಾಯಿನಿಂದ 1,200 ರೂಪಾಯಿವರೆಗೂ ಖರೀದಿಯಾಗುತ್ತದೆ. ಶ್ರೀಮಂತರು ಕೆಲವರು ಆ ರೀತಿ ತೆಗೆದುಕೊಂಡು ಹೋಗುತ್ತಾರೆ. ಸಾಧಾರಣ ರೈತರು ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ. ಕಳೆದ ಜನವರಿ ತಿಂಗಳಿನಲ್ಲಿ ನಮ್ಮಲ್ಲಿದ್ದಂಥ 150 ರಾಸುಗಳನ್ನು ಮಾರಿದ್ದೇವೆ. ಇನ್ನುಮೇಲೆ ಹೋರಿ ಗಳನ್ನು ರೈತರಿಗೆ 10 ತಿಂಗಳು ಮಾರಾಟಮಾಡ ಬಹುದು. ಅದು ಬಹಳ economical ಆಗುತ್ತದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಜೂಜಿನ ಕುದುರೆ ಗಳನ್ನು ತಯಾರುಮಾಡುವ ಹಾಗೆ pedigree basis ಮೇಲೆ ಹಳ್ಳಿಕಾರ್ ರಾಸುಗಳನ್ನು ಉತ್ತಮ ಗೊಳಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಡಾ॥ ಆರ್. ನಾಗನಗೌಡ.—ಹೆಸರಘಟ್ಟದಲ್ಲಿ ಅದನ್ನು ಇಟ್ಟುಕೊಂಡಿದ್ದೇವೆ. ಹೆಸರುಘಟ್ಟದಿಂದಲೇ ಈಗ ನಾವು ಬಹಳ ಉತ್ತಮವಾದ ಹೋರಿಗಳನ್ನು ತೆಗೆದುಕೊಂಡುಹೋಗಿ ಇಲ್ಲಿರುವ ಹಾಗೆ ಹಸುಗಳನ್ನು ಅಭಿವೃದ್ಧಿಮಾಡಿ artificial insemination ಪ್ರಕಾರ ಅದನ್ನು improve ಮಾಡುತ್ತಿದ್ದೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಇಲ್ಲಿ ಹುಟ್ಟಿದಂಥ ಬೀಜದ ಹೋರಿಗಳನ್ನೂ, ಉತ್ತಮ ಟಗರುಗಳನ್ನೂ ರೈತರಿಗೆ ಸಪ್ಲೈ ಮಾಡಿದ್ದೀರಾ ?

ಡಾ॥ ಆರ್. ನಾಗನಗೌಡ.—ಟಗರುಗಳನ್ನು ಬಿಕನೀರ್, ಮೆರಿನೋ cross breed ಮಾಡಿ ಬಳ್ಳಾರಿ ಯಲ್ಲಿ local ಆಗಿ ಮಾರಾಟ ಮಾಡುತ್ತಿದ್ದೇವೆ. ಕೆಲವನ್ನು price subside ಮಾಡಿಕೊಡುವುದಕ್ಕೆ ಏರ್ಪಾಡು ಮಾಡಿದ್ದೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಇನ್ನು ಮುಂದೆ ರೈತರಿಗೆ ಇಲ್ಲಿಂದ ಹೋರಿಗಳನ್ನೂ ಎತ್ತುಗಳನ್ನೂ ಸಪ್ಲೈಮಾಡುವುದಕ್ಕೆ ಬದಲಾಗಿ ಅದಕ್ಕೆ ಬೇಕಾದಷ್ಟು ಮೂಲ ತಳಿ ಅಭಿವೃದ್ಧಿಮಾಡುವುದಕ್ಕೆ ಮಾತ್ರ ಒಂದು ಯೋಜನೆಯನ್ನು ಸರ್ಕಾರದವರು ಹಾಕಿಕೊಳ್ಳುವುದ ಸೂಕ್ತವಲ್ಲವೆ ?

ಡಾ॥ ಆರ್. ನಾಗನಗೌಡ.—ಈ ಬಳ್ಳಾರಿ ಏರಿಯಾ ದಲ್ಲಿ ಹಸುಗಳು ಒಂದಾದರೂ ಸಿಕ್ಕುವುದಿಲ್ಲ. ಅವರು ಹಸುಗಳನ್ನು ಇಟ್ಟುಕೊಂಡೇ ಇಲ್ಲ. ಅಲ್ಲಿ 92,000 ಎಕರೆ ಜಮೀನು ತುಂಗಭದ್ರ ಯೋಜನೆಯಮೇಲೆ ನೀರಾವರಿ irrigation ಆಗುವುದರಿಂದ ಅವರಿಗೆ ಹೋರಿಗಳು ಬೇಕಾದರೆ ತಾತ್ಕಾಲಿಕವಾಗಿ, ಹೆಚ್ಚು ಪ್ರಮಾಣದಲ್ಲಿ ಈ ಫಾರಂ ಮೂಲಕ ಸಪ್ಲೈಮಾಡ ಬೇಕಾಗುತ್ತದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಬಳ್ಳಾರಿಪ್ರಾಂತ ನಮ್ಮ ಮೈಸೂರು ದೇಶಕ್ಕೆ ಸೇರದೆ ಇದ್ದಾಗ ಮದರಾಸು ಸರ್ಕಾರ ಇದನ್ನು ಪ್ರಾರಂಭಮಾಡಿದರು. ಈಗ ಮೈಸೂರು ಸಂಸ್ಥಾನದೊಳಗೆ ಬಳ್ಳಾರಿ ಸೇರಿರು ವುದರಿಂದ ಇಲ್ಲಿಂದ ದನಗಳನ್ನು ಕೊಂಡುಕೊಂಡು ಹೋಗುವುದಕ್ಕೆ ಸುಲಭವಾದ ದಾರಿ ಇರುವುದರಿಂದ ಮೊದಲಿನ ಉದ್ದೇಶದಂತೆ ಈಗ ಅದನ್ನೂ ನಡೆಸ ವುದು ಅವಶ್ಯಕವೇ ?

ಡಾ॥ ಆರ್. ನಾಗನಗೌಡ.—ಈಗ ನಾವು ಎರಡನ್ನೂ ನಡೆಸುತ್ತಿದ್ದೇವೆ. ಅಲ್ಲಿ ತಳಿಯನ್ನು ಅಭಿವೃದ್ಧಿ ಮಾಡುತ್ತಿದ್ದೇವೆ. ಹೋರಿಗಳನ್ನೂ ಜನರಿಗೆ ಕೊಡುತ್ತಿದ್ದೇವೆ.. ಎತ್ತುಗಳನ್ನೂ ವ್ಯವಸಾಯದ ಕೆಲಸಕ್ಕೆ ಬೇಕಾದ ಹೋರಿಗಳನ್ನೂ ಸಹ ಮಾರುತ್ತಿದ್ದೇವೆ. ಇನ್ನೂ ವಿಸ್ತಾರ ಮಾಡುತ್ತಿದ್ದೇವೆಯೇ ಹೊರತು ಕಡಿಮೆ ಮಾಡಿಲ್ಲ.

ಶ್ರೀ ಬಿ. ಚಿಕ್ಕಣ್ಣ.—ಈಗ ಹೆಚ್ಚಾಗಿ ಹಣ ಖರ್ಚಾಗುತ್ತಿದೆ. ಅದನ್ನು ತಗ್ಗಿಸಲು ಏನು ಏರ್ಪಾಡು ಮಾಡುತ್ತಿದ್ದೀರಿ!

ಡಾ॥ ಆರ್. ನಾಗನಗೌಡ.—ಇದರಲ್ಲಿ ನಾನು ಹೇಳಿದಹಾಗೆ ಕಳೆದ ವರ್ಷ ಮತ್ತು ಅದರ ಹಿಂದಿನ ವರ್ಷ 2,30,300 ರೂಪಾಯಿ ಖರ್ಚಾಯಿತು. ಈ ವರ್ಷ ಫೆಬ್ರುವರಿ ಆಖೈರಿಗೆ ಒಂದು ಲಕ್ಷ ರೂಪಾಯಿ ಖರ್ಚು ಕಡಿಮೆಮಾಡಿದ್ದೇವೆ. ಏಪ್ರಿಲ್ ಒಂದರಿಂದ ಇನ್ನೂ ಕಡಿಮೆಮಾಡುವುದಕ್ಕೆ ಪ್ರಯತ್ನಮಾಡುತ್ತೇವೆ.

ಶ್ರೀ ಕೆ. ವಿ. ಬೈರೇಗೌಡ.—ಹೆಸರುಘಟ್ಟ ಫಾರಮ್ಮಿಗೆ 3,000 ಎಕರೆ ಜಮೀನು ಇದೆ. ಅದು ಎಷ್ಟುಮಟ್ಟಿಗೆ improve ಆಗಬೇಕೋ ಅಷ್ಟು ಮಟ್ಟಿಗೆ ಆಗಿದೆ ಎಂದು ತಿಳಿದುಕೊಂಡಿದ್ದೀರಾ?

ಡಾ॥ ಆರ್. ನಾಗನಗೌಡ.—ಹೆಸರುಘಟ್ಟ ಅಲ್ಲ ಕುರಿಕುಪ್ಪೆ ಫಾರಂ ವಿಷಯ ಮಾತನಾಡುತ್ತಿದ್ದೇವೆ. ಹೆಸರುಘಟ್ಟಕ್ಕೂ ಅಲ್ಲಿಗೂ compare ಮಾಡುವುದಕ್ಕೆ ಆಗುವುದಿಲ್ಲ.

Bulldozers in Hassan District.

Q.—657. Sri K. PANCHAKSHARIAH (Arsikere).—

Will the Government be pleased to state :—

(*a*) the number of bulldozers in Hassan District;

(*b*) the number of acres of land in each taluk for which services of the bulldozers were utilised during the years 1952-53 and 1953-54;

(*c*) the number of applications received in Arsikere taluk requesting for the services of bulldozers;

(*d*) the period for which applications are pending; and if pending, the reason thereof?

A.—Dr. R. NAGAN GOWDA (Minister for Agriculture).—

(*a*) One.

(*b*) Please see Statements I and II appended below. The number of acres bull-dozed is not maintained as the services of bulldozers are always reckoned and the rate calculated on the basis of hours the machines have worked.

(*c*) and (*d*) 16 during the year 1952-53 and 1953-54. 9 applicants were given service during the year 1952-53. The details of the 7 pending are :—

Name	*Date from which pending.*
Sriyuths—	
1. Channegowda, Jalagaranahalli.	9th February 1953.
2. K. M. Basavaraj, Kolgunda.	18th June 1953.
3. M. T. Chikkanna Setty, Mylanahalli.	29th June 1953.
4. K. C. Mahalingaiah, Muddanahalli.	16th July 1954.
5. Kempegowda, Aladahalli.	3rd August 1953.
6. Channaveerappa, Arsikere.	3rd August 1953.
7. Channabasave Gowda Melanahalli.	3rd August 1953.

The services of the Bulldozer could not be made available to the applicants of Arsikere Taluk, as it was otherwise engaged.

STATEMENT I.

Progress Report on H. D. 7 Bulldozer during the year 1952-53 and 1953-54.

1952-53

No.	Month	Place	Hours
1.	April 1952	Channarayapatna Taluk	21 Hours
		Hassan	83 "
2.	May 1952	Arkalgud Taluk	28 "
3.	June 1952	Do	57 "
4.	July 1952	Do	83 "
5.	August 1952	Do	46 "
6.	September 1952	Do	71 "
7.	October 1952	Do	68 "
8.	November 1952	Do	128 "
9.	December 1952	Do	107 "
10.	January 1953	Do	104 "
11.	February 1953	Do	83 "
12.	March 1953	Do	48 "
		Total	927 Hours

1953-54

Month	Place	Hours
April 1953	Arkalgud Taluk	71 Hours
May 1953	Do	87 "
June 1953	Do	7 "
	Holenarsipur Taluk	46 "
July 1953	Holenarsipur	53 "
August 1953	Do	30 "
	Hassan	25 "
September 1953 to end of March 1954.	Hassan Town Municipality.	1020 "
	Total	1,339 Hours

ABSTRACT.

No.	Place	Hours
1.	Channarayapatna Taluk	21 Hours
2.	Hassan Taluk	83 "
3.	Arkalgud Taluk	823 "
	Total	927 Hours

No.	Place	Hours
1.	Arkalgud Taluk	165 Hours
2.	Holenarsipur Taluk	129 "
3.	Hassan Municipality	1045 "
	Total	1,339 Hours

(DR. R. NAGAN GOWDA.)

STATEMENT II.

Progress Report of H. D. 5 Bulldozer during 1952-53 and 1953-54.

1952-53.

1.	April 1952	Hassan Taluk	142 Hours
2.	May 1952	Do	37 "
3.	June 1952	Hassan	70 "
4.	July 1952	Do	2 "
		Arsikere	30 "
5.	August 1952	Do	58 "
6.	September 1952	Do	92 "
7.	October 1952	Do	62 "
8.	November 1952	Do	Nil
9.	December 1952	Do	29 "
10.	January 1953	Do	85 "
11.	February 1953	Do	24 "
12.	March 1953	Do	58 "
		Total	689 Hours

1953-54.

April 1953	Arsikere Taluk	25 Hours
May 1953	Do	68 "
June 1953	Arsikere	41 "
	Arkalgud	3 "
July 1953	Do	24 "
August 1953	Holenarsipur	4 "
	Hassan	15 " (Municipality work).
September 1953	Do	76 "
	Total	256 Hours

ABSTRACT.

Hassan Taluk 251 ... Arsikere Taluk 438—689

1.	Arsikere	134 Hours
2.	Arkalgud	27 "
3.	Holenarsipur	4 "
4.	Hassan	91 "
	Total	256 Hours

ಶ್ರೀ ಕೆ. ಪಂಚಾಕ್ಷರಯ್ಯ.—ಪರಿಶಿಷ್ಟ I ರಲ್ಲಿ H.D. 7. Bulldozer 1953-54 ನೆ ಸಾಲಿನಲ್ಲಿ ಹಾಸನ ಟವುನಲ್ಲಿ 1,045 ಘಂಟೆ ಕೆಲಸ ಮಾಡಿದೆ ಎಂದು ಕೊಟ್ಟಿದ್ದೀರಿ. ಅದು ಡಿಸ್ಟ್ರಿಕ್ಟಿನಲ್ಲಿ ಒಟ್ಟು ಕೆಲಸ ಮಾಡಿರುವುದು 1,339 ಘಂಟೆ. ಆದುದರಿಂದ ಕೇವಲ 294 ಘಂಟೆಗಳ ಕಾಲ ಮಾತ್ರ ಇಡೀ ಡಿಸ್ಟ್ರಿಕ್ಟ್‌ನಲ್ಲಿ ಕೆಲಸ ಮಾಡಿದೆಯಲ್ಲವೆ?

*ಡಾ॥ ಆರ್. ನಾಗನಗೌಡ.—ಹಾಸನ ಟೌನ್ ಮತ್ತು ಆ ಡಿಸ್ಟ್ರಿಕ್ಟಿನ ತಾಲ್ಲೂಕುಗಳನ್ನು ತೆಗೆದು ಕೊಂಡರೆ, ಎಲ್ಲಾ ಒಟ್ಟು ಕೂಡಿಸಿದರೆ 1,339 ಘಂಟೆ ಬರುತ್ತದೆ.

ಶ್ರೀ ಕೆ. ಪಂಚಾಕ್ಷರಯ್ಯ.—ಒಟ್ಟು ಡಿಸ್ಟ್ರಿಕ್ಟಿನಲ್ಲಿ ಕೆಲಸ ಮಾಡಿರುವುದರಲ್ಲಿ 1,045 ಘಂಟೆ ಹಾಸನ ಮುನಿಸಿಪಾಲಿಟಿಯಲ್ಲಿ ಕೆಲಸ ಮಾಡಿದೆಯಲ್ಲವೇ?

ಡಾ॥. ಆರ್ ನಾಗನಗೌಡ.—ಹೌದು.

ಶ್ರೀ ಕೆ. ಪಂಚಾಕ್ಷರಯ್ಯ.—ಅಲ್ಲಿಗೆ ಗ್ರಾಮಾಂತರ ಪ್ರದೇಶಗಳಲ್ಲಿ 300 ಘಂಟೆ ಮಾತ್ರ ಕೆಲಸ ಮಾಡಿದ ಹಾಗಾಯಿತಲ್ಲವೆ!

ಅಧ್ಯಕ್ಷರು.—ಉತ್ತರದಲ್ಲಿ ವಿವರಗಳನ್ನು ಕೊಟ್ಟಿದ್ದಾರೆ.

ಶ್ರೀ ಕೆ. ಪಂಚಾಕ್ಷರಯ್ಯ.—ಆದುದರಿಂದ ಸರ್ಕಾರದವರು Bulldozer ಇಟ್ಟಿರುವುದು ಮುನಿಸಿ ಪಾಲಿಟಿಗಳಿಗೆ ಮಾತ್ರ ಅನುಕೂಲವಾಗಲಿ ಎಂಬ ಉದ್ದೇಶದಿಂದಲೇ?

ಡಾ॥ ಆರ್. ನಾಗನಗೌಡ.—Bulldozer ಹಾಸನ ಟೌನ್ ಮುನಿಸಿಪಾಲಿಟಿಗೆ ಹೆಚ್ಚಾಗಿ ಕೊಟ್ಟಿರುವುದಕ್ಕೆ ಕಾರಣವೇನೆಂದರೆ, ಅಲ್ಲಿ ದನಗಳ ಜಾತ್ರೆ ನಡೆಯುವ ಸ್ಥಳವನ್ನು improve ಮಾಡುವುದಕ್ಕೆ ಅವಸರವಾಗಿ ಬೇಕಾಯಿತು. ಆದಕಾರಣ ಆ ಕೆಲಸ ಮುಗಿಸಲು ಕೊಟ್ಟಿದ್ದೆವು.

ಶ್ರೀ ಕೆ. ಪಂಚಾಕ್ಷರಯ್ಯ.—ವ್ಯವಸಾಯಗಾರರು ಕೇಳಿದಾಗ ಅವರಿಗೆ ಕೊಟ್ಟು ಜಮೀನನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುವುದು ಮುಖ್ಯವೇ ಅಥವಾ ಮುನಿಸಿಪಾಲಿಟಿಯಲ್ಲಿ ಗುಂಡಿ ಮುಚ್ಚುವ ಕೆಲಸಕ್ಕೆ ಕೊಡುವುದು ಮುಖ್ಯವೇ?

Dr. R. NAGAN GOWDA.—It is a matter of opinion.

ಶ್ರೀ ಕೆ. ಪಂಚಾಕ್ಷರಯ್ಯ.—ಪರಿಶಿಷ್ಟವನ್ನು ನೋಡಿದರೆ ಅರಸೀಕೆರೆ ತಾಲ್ಲೂಕಿಗೆ ಬುಲ್‌ಡೋಜರ್‌ಗಳನ್ನು ಒದಗಿಸಿರುವಂತೆ ಕಾಣುವುದಿಲ್ಲ. ಅವರಿಗೆ ಯಾತಕ್ಕೆ ಒದಗಿಸಲಿಲ್ಲ?

ಡಾ॥ ಆರ್. ನಾಗನಗೌಡ.—1952-53 ರಲ್ಲಿ H.D. 5 ಬುಲ್‌ಡೋಜರ್‌ನ್ನು ಪರಿಶಿಷ್ಟ II ರಲ್ಲಿ ತಿಳಿಸಿರುವಂತೆ 438 ಘಂಟೆಗಳ ಕಾಲ ಕೊಟ್ಟಿದ್ದೇವೆ. 1953-54ರಲ್ಲಿ 134 ಘಂಟೆಗಳ ಕಾಲ ಕೊಟ್ಟಿದ್ದೇವೆ. ಒಟ್ಟು ಹಾಸನದಲ್ಲಿ 8 ತಾಲ್ಲೂಕುಗಳಿದ್ದರೆ ಅದರಲ್ಲಿ ಈ 4 ತಾಲ್ಲೂಕುಗಳಲ್ಲೇ 2 ಬುಲ್‌ಡೋಜರ್ ಕೆಲಸ ಮಾಡುತ್ತಿವೆ.

ಶ್ರೀ ಕೆ. ಪಂಚಾಕ್ಷರಯ್ಯ.—1952-53ರ ಹಿಂದೆ ಅರ್ಜಿ ಕೊಟ್ಟಿದ್ದರೂ ಸಹ ಅವರಿಗೆ ಬುಲ್‌ಡೋಜರ್ ಒದಗಿಸದೆ ಹಾಸನ ಟೌನ್ ಮುನಿಸಿ ಪಾಲಿಟಿಗೆ ಕೊಡಲು ಕಾರಣವೇನು?

ಡಾ॥ ಆರ್. ನಾಗನಗೌಡ.—ಈಗ ನಮ್ಮಲ್ಲಿ 10 ಬುಲ್ ಡೋಜರುಗಳು ಇವೆ. ಅವನ್ನು ಹಂಚಿದರೆ ಒಂದೊಂದು ಡಿಸ್ಟ್ರಿಕ್ಟಿಗೆ ಒಂದೊಂದು ಮಾತ್ರ ಬರುತ್ತದೆ. ಆದರೆ ಹಾಸನ ಡಿಸ್ಟ್ರಿಕ್ಟಿನಲ್ಲಿ ಪ್ರದರ್ಶನದ ಕೆಲಸ ಅವಸರವಾಗಿ ಆಗಬೇಕಾದ್ದರಿಂದ 2 ಬುಲ್‌ಡೋಜರುಗಳನ್ನು ಹಾಸನ ಡಿಸ್ಟ್ರಿಕ್ಟಿಗೆ ಒದಗಿಸಿದ್ದೇವೆ, ಆದಕಾರಣ ಹೆಚ್ಚು ಸೌಲಭ್ಯ ಆ ಡಿಸ್ಟ್ರಿಕ್ಟಿಗೆ ಒದಗಿಸಿದ ಹಾಗಾಯಿತು.

ಶ್ರೀ ಕೆ. ಪಂಚಾಕ್ಷರಯ್ಯ.—ಪಟ್ಟಣದಲ್ಲಿರತಕ್ಕ ಮತ್ತು ನಗರದಲ್ಲಿರತಕ್ಕವರ ಪ್ರಭಾವಕ್ಕೆ ಒಳಗಾಗಿ ಹಳ್ಳಿಯವರನ್ನು ತಿರಸ್ಕಾರಮಾಡಿ ಪಟ್ಟಣದವರಿಗೆ ಬುಲ್‌ಡೋಜರ್ಸ್ ಒದಗಿಸಿದ್ದೀರಲ್ಲವೇ?

ಡಾ॥ ಆರ್. ನಾಗನಗೌಡ.—ಹಳ್ಳಿಯವರು ಬಂದು ತಮ್ಮ ದನಗಳನ್ನು ಪ್ರದರ್ಶನ ಮಾಡಬೇಕಾಗಿತ್ತು. ಅವರಿಗೆ ಜಾಗವನ್ನು ಏರ್ಪಾಡು ಮಾಡಿ ಅನುಕೂಲ ಮಾಡಿ ಕೊಡುವುದಕ್ಕೋಸ್ಕರ ಬುಲ್‌ಡೋಜರುಗಳ ಸಹಾಯವನ್ನು ಆ ಪಟ್ಟಣದಲ್ಲಿ ಕೊಡಲಾಯಿತು.

12-30 P.M.

ಶ್ರೀ ಕೆ. ಲಕ್ಕಪ್ಪ.—ಈ ಬುಲ್‌ಡೋಜರುಗಳನ್ನು ಮುಖ್ಯವಾಗಿ ವ್ಯವಸಾಯ ಅಭಿವೃದ್ಧಿಗೆ ಉಪಯೋಗಿಸಿಕೊಳ್ಳಬೇಕೆಂದು ಸರ್ಕಾರದವರ ಉದ್ದೇಶವಲ್ಲವೇ?

ಡಾ॥. ಆರ್. ನಾಗನಗೌಡ.—ಹೌದು.

ಶ್ರೀ ಕೆ. ಲಕ್ಕಪ್ಪ.—ಹಾಗಾದರೆ ಸಾವಿರಾರು ಘಂಟೆಗಳ ಕಾಲ ಮುನಿಸಿ ಪಾಲಿಟಿಗಳಿಗೇಕೆ ಕೊಟ್ಟಿದ್ದೀರಿ?

ಡಾ॥ ಆರ್. ನಾಗನಗೌಡ.—ಮುನಿಸಿಪಲ್ ಪ್ರದೇಶದಲ್ಲಿ ಅಲ್ಲಿರುವ ಜಾತ್ರೆಗಳಿಗಾಗಿ ಕೊಡಲಾಗಿದೆ.

ಶ್ರೀ ಕೆ. ಲಕ್ಕಪ್ಪ.—ಅರಕಲಗೂಡು ತಾಲ್ಲೂಕಿಗೆ 823 ಘಂಟೆಗಳ ಕಾಲಕೊಟ್ಟಿದ್ದೀರಿ; ಅರಸೀಕೆರೆ ತಾಲ್ಲೂಕಿಗೆ 438 ಘಂಟೆಗಳು ಮತ್ತು 134 ಘಂಟೆಗಳ ಕಾಲ ಕೊಟ್ಟಿದ್ದೀರಿ. ಹೀಗಿರುವಾಗ ಚನ್ನರಾಯಪಟ್ಟಣ ತಾಲ್ಲೂಕಿಗೆ 23 ಘಂಟೆಗಳ ಕಾಲ ಮಾತ್ರ ಕೊಟ್ಟಿದೆ. ಆ ತಾಲ್ಲೂಕಿನಿಂದ ಬೇಕಾದಷ್ಟು ಅರ್ಜಿಗಳು ಬಂದು pending ನಲ್ಲಿದ್ದರೂ ಅಲ್ಲಿಗೆ ಕೊಡದಿರುವುದಕ್ಕೆ ಕಾರಣವೇನು?

ಡಾ॥ ಆರ್. ನಾಗನಗೌಡ.—ಮೊನ್ನೆತಾನೆ ಹಿರೀಸಾವೆ ಮತ್ತು ಶ್ರವಣಬೆಳಗೊಳದ ರಸ್ತೆ ಮಾಡುವುದಕ್ಕೆ ಒಂದನ್ನು ಕೊಟ್ಟಿದೆ.

ಶ್ರೀ ಕೆ. ಲಕ್ಕಪ್ಪ.—ಅನೇಕರು ವ್ಯವಸಾಯಕ್ಕೆ ಬುಲ್‌ಡೋಜರ್ ಬೇಕೆಂದು ಅರ್ಜಿ ಕೊಟ್ಟು ಡಿಪಾಜಿಟ್ ಮಾಡಿಯೂ ಅವರಿಗೆ ಕೊಡದಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಡಾ॥ ಆರ್. ನಾಗನಗೌಡ.—Demand ನೋಡಿ ಕೊಡುತ್ತಿದ್ದೇವೆ. ಕಷ್ಟಬಂದಿರುವುದೆಲ್ಲಾ ರಸ್ತೆಯ ಕೆಲಸಕ್ಕೆ.

ಶ್ರೀ ಕೆ. ಲಕ್ಕಪ್ಪ.—ವ್ಯವಸಾಯಕ್ಕೆ ಕೂಡಲೆ ಕೊಡುತ್ತೀರಾ?

ಡಾ॥ ಆರ್. ನಾಗನಗೌಡ.—ಕೊಡುತ್ತೇವೆ.

ಶ್ರೀ ಎಸ್. ಸಿದ್ದಪ್ಪ.—ಅರಸೀಕೆರೆ, ಹಾಸನಕ್ಕೆ ತಾವು ಕೊಟ್ಟಿದ್ದೀರಲ್ಲಾ ಅದು ಪ್ರಜಾ ಸೌಕರ್ಯಕ್ಕೆ ತಾನೆ ಕೊಟ್ಟಿದ್ದು?

ಡಾ॥ ಆರ್. ನಾಗನಗೌಡ.—ಹಾಸನದಲ್ಲಿ ಪ್ರದರ್ಶನಕ್ಕಾಗಿ ಕೊಟ್ಟಿದೆ.

Pre-child Education.

Q.—199. **Sri G. BASAPPA** (Hosadurga).—

Will the Government be pleased to state :—

(*a*) whether it is a fact that the Central Advisory Board of Education has recommended for pre-child education;

(*b*) whether the State Governments have been addressed in the matter;

(*c*) whether there was a letter from the Education Department to the Commissioner for Local Self-Government and copies to the Deputy Commissioners in this behalf;

(*d*) whether it is a fact that one Sri H. N. Siddappa of Hosadurga publicly promised to give a donation of Rs. 5,000 towards the construction of a Nursery School Building in the name of late Srimathi Gowramma;

(*e*) whether it is a fact that the Town Municipal Council, Hosadurga, have agreed to pay their quota towards the establishment of the School as per rules and have asked the permission of the Education Department for the location of the building in the Primary School Compound;

(*f*) if so, what is the action taken in the matter?

A.—**Sri A. G. RAMACHANDRA RAO** (Minister for Law and Education).—

(*a*) Yes.

(*b*) Yes.

(*c*) Yes.

(*d*) Yes.

(*e*) Yes.

(*f*) The Municipal Council, Hosadurga, has been requested to start the school and send up proposals for recognition and for sanction of maintenance as well as building grants.

ಶ್ರೀ ಜಿ. ಬಸಪ್ಪ.—ಸೆಂಟ್ರಲ್ ಅಡ್ವೈಸರಿ ಬೋರ್ಡಿನವರ ಶಿಫಾರಸಿನ ಮೇಲೆ ಅದಕ್ಕೆ ಮನ್ನಣೆಕೊಟ್ಟು ನರ್ಸರಿ ಸ್ಕೂಲುಗಳನ್ನು ಏರ್ಪಾಡುಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿದ್ಯಾಭ್ಯಾಸ ಸುಧಾರಣಾ ಸಮಿತಿಯವರು ಈ ಭಾಗಕ್ಕೆ ಗಮನ ಕೊಡಬೇಕೆಂದು ಹೇಳಿದ್ದಾರೆಂಬದು ಗೊತ್ತಿದೆ.

ಶ್ರೀ ಜಿ. ಬಸಪ್ಪ.—ಎಷ್ಟು ಕಡೆಗಳಲ್ಲಿ ಈ ವರ್ಷ ಸರ್ಕಾರಿ ಸ್ಕೂಲುಗಳನ್ನು ಏರ್ಪಾಡು ಮಾಡಬೇಕೆಂದು ಮಾಡಿದ್ದೀರಿ ?

Mr. SPEAKER.—That does not arise.

ಶ್ರೀ ಜಿ. ಬಸಪ್ಪ.—(*f*) ಪ್ರಶ್ನೆಗೆ ಉತ್ತರವಾಗಿ, ಆ ಮುನಿಸಿಪಲ್ ಕೌನ್ಸಿಲ್‌ನವರಿಗೆ, ಸ್ಕೂಲನ್ನು ಪ್ರಾರಂಭ ಮಾಡಿ ಆ ಮೇಲೆ ಗ್ರಾಂಟ್ ಕೇಳಿಕೊಳ್ಳಿ, ಎಂದು ತಿಳಿಸಲಾಗಿದೆಯೆಂದು ಹೇಳಿದ್ದೀರಿ. Buildings ಇಲ್ಲದೆ ಪ್ರಾರಂಭ ಹೇಗೆ ಮಾಡುವುದು ?

ಶ್ರೀ ಎ. ಜಿ. ರಾಮಚಂದ್ರರಾವ್.—ಮುನಿಸಿಪಾಲಿಟಿಯವರು ಒದಗಿಸಿಕೊಡಬೇಕು.

ಶ್ರೀ ಜಿ. ಬಸಪ್ಪ.—ಬಾಡಿಗೆ ಮನೆಯಲ್ಲಿ ಮಾಡಿದರೆ ಸರ್ಕಾರದವರು ಕೊಡುತ್ತಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸರ್ಕಾರದವರು ರೂಲ್ಸ್ ಪ್ರಕಾರ ಎಷ್ಟುಮಟ್ಟಿಗೆ ಸಹಾಯ ಮಾಡಬೇಕೋ ಅಷ್ಟು ಮಾಡುತ್ತಾರೆ.

ಶ್ರೀ ಜಿ. ಬಸಪ್ಪ.—ಈ ವರ್ಷ ಮಾಡುತ್ತಾರೆಯೇ, ಹಾಗಾದರೆ ?

ಅಧ್ಯಕ್ಷರು.—ಉತ್ತರ ಕೊಟ್ಟಿದ್ದಾರೆ.

ಶ್ರೀ ಜಿ. ಬಸಪ್ಪ.—ಮುನಿಸಿಪಾಲಿಟಿಯವರು ಅದನ್ನು ಒಪ್ಪಿಕೊಂಡು ಶಿಫಾರಸು ಕಳುಹಿಸಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಬಂದ ಮೇಲೆಯೇ ಪ್ರಾರಂಭಮಾಡಿ proposalsನ್ನು ಕಳುಹಿಸಿ ಎಂದು ಹೇಳಿದ್ದೇವೆ.

ಶ್ರೀ ಟಿ. ಸಿ. ಬಸಪ್ಪ.—ಸರ್ಕಾರಿ ಸ್ಕೂಲುಗಳನ್ನು qualified ಉಪಾಧ್ಯಾಯರುಗಳಿದ್ದರೆ ಮಾತ್ರ recognise ಮಾಡುತ್ತೇವೆಂದು ಸರ್ಕಾರಿ ಹುಕುಂ ಮಾಡಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸರ್ಕಾರಿ ಹುಕುಂ ಹಾಗೆಯೇ ಇದೆ.

ಶ್ರೀ ಟಿ. ಸಿ. ಬಸಪ್ಪ.—Rural partsನಲ್ಲಿ qualified teachersನ್ನು ಸರಿಯಾದವರನ್ನು ನೇಮಿಸಿಕೊಂಡರೆ ಅಂಥವರನ್ನೇಕೆ recognise ಮಾಡಕೂಡದು ?

Mr. SPEAKER.—It does not arise out of this question.

ಶ್ರೀ ಟಿ. ಸಿ. ಬಸಪ್ಪ.—Recognition point ಇದೆ. ಅದರಮೇಲೆ ಕೇಳುತ್ತಿದ್ದೇನೆ.

Mr. SPEAKER.—It does not arise here.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಶಿಶು ವಿಹಾರಗಳಿವೆ.

Mr. SPEAKER.—Does not arise.

ಶ್ರೀ ಆರ್. ಮುನಿಸ್ವಾಮಯ್ಯ.—(ಸಿ) ಪ್ರಶ್ನೆಯಲ್ಲಿ "Whether there was a letter from the Education Department to the Commissioner for Local Self-Government and copies to the Deputy Commissioners of districts" ಎಂದು ಕೇಳಿದೆ. Informationಗಾಗಿ ಇದನ್ನು ಕಳುಹಿಸಿದ್ದಿರಿ ತಾನೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಡೆಲ್ಲಿಯಲ್ಲಿ ನ್ಯಾಷನಲ್ ಕಮಿಟಿ ಎಂದಿದೆ. ಆ ಕಮಿಟಿ ಈ ವಿಷಯದಲ್ಲಿ ಪರ್ಯಾಲೋಚನೆಮಾಡಿ ಶಿಫಾರಸು ಮಾಡಿದ್ದರು, ಎಲ್ಲಾ ಸ್ಥಳೀಯ ಸಂಸ್ಥೆಗಳಿಗೂ ಕಳುಹಿಸಬೇಕೆಂದು ಸೂಚನೆ ಕೊಟ್ಟಿದ್ದರು. ಅದರ ಮೇಲೆ ಅವರ ತಿಳಿವಳಿಕೆಗಾಗಿ ಕಳುಹಿಸಿದೆ.

Discharged Soldiers (Rehabilitation).

Q.—478. Sri V. R. NAIDU (Malleswaram).—

Will the Government be pleased to state:—

(*a*) the number of discharged soldiers in the State;

(*b*) the number of them to whom they have provided employment;

(*c*) in what way relief has been given to the rest (details to be furnished);

(*d*) the manner of relief given to the families of the soldiers who died after their discharge (details to be furnished)?

A.—Sri A. G. RAMACHANDRA RAO (Minister for Law and Education).—

(*a*) The number of discharged soldiers, including officers, J.C.Os. (Junior Commissioned Officers) and civilians is 4,063.

(*b*) The total number of ex-servicemen re-employed so far in Government and private concerns is 1,335.

(*c*) The following schemes have been started for the rehabilitation and re-settlement of ex-servicemen.

(1) Land Colonisation Scheme;
(2) Financial aid to individual settlers on land;
(3) Technical Training Scheme;
(4) Auto-rikshaw and other Schemes;
(5) Awarding of lands under Military Concession Rules.

Besides this, Government have passed up to end of January 1955, 3,520 awards to the personnel of the former Mysore State Forces awarding lands under the Military Concession Rules. Out of these 1,494 awardees were allotted lands in full settlement of their claims and 329 awardees in partial satisfaction of their claims till the end of January 1955.

(*d*) The Mysore Soldiers' Board is granting reliefs to the families of deceased ex-servicemen by way of small financial help to each family ranging from Rs. 3 to Rs. 10 per mensem. This relief is given from the funds of the Mysore Soldiers' Board. Last year reliefs were given as noted below:

(1) 194 families at Rs. 5 per month for 10 months.
(2) 2 families at Rs. 10 ,, do
(3) 2 families at Rs. 15 ,, do

ಶ್ರೀ ವಿ. ಆರ್. ನಾಯ್ಡು.—ಮೈಸೂರು ಸಂಸ್ಥಾನದಲ್ಲಿ ನಿವೃತ್ತ ಸೈನಿಕರು ಎಷ್ಟು ಜನ ಇದ್ದಾರೆ ?

ಶ್ರೀ ಎ. ಜಿ. ರಾಮಚಂದ್ರರಾವ್.—4,063 ಎಂದು ಹೇಳಿದ್ದೇವೆ.

ಶ್ರೀ ವಿ. ಆರ್. ನಾಯ್ಡು.—ಈ 4,063 ಜನ ನಿವೃತ್ತ ಸೈನಿಕರು ಮೈಸೂರು ಸಂಸ್ಥಾನಕ್ಕೆ ಸೇರಿದ ಯಾವ ಯಾವ Batallionನಲ್ಲಿ ಎಷ್ಟೆಷ್ಟು ಸಂಖ್ಯೆಯಲ್ಲಿದ್ದಾರೆ?

ಶ್ರೀ ಎ. ಜಿ. ರಾಮಚಂದ್ರರಾವ್.—Batallionಗಳ ವಿವರ ನನಗೆ ಗೊತ್ತಿಲ್ಲ.

ಶ್ರೀ ವಿ. ಆರ್. ನಾಯ್ಡು.—ಮೈಸೂರು ಲಾನ್ಸರ್ಸ್ ಮತ್ತು ಮೈಸೂರು ಇಣ್ಫೇಣ್ಟ್ರಿ ಎಂದು ಇರಲಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದ್ದುವು.

ಶ್ರೀ ವಿ. ಆರ್. ನಾಯ್ಡು.—(ಸಿ) ಪ್ರಶ್ನೆಗೆ ಉತ್ತರ ಕೊಡುತ್ತ "ಜಮೀನುಗಳಲ್ಲಿ ವಸಾಹತುಗಳನ್ನು ಏರ್ಪಡಿಸುವುದಕ್ಕೆ ಸಂಬಂಧಪಟ್ಟ ಯೋಜನೆ, ಜಮೀನಿನಲ್ಲಿ ನೆಲಸತಕ್ಕ ಒಬ್ಬೊಬ್ಬರಿಗೂ ದ್ರವ್ಯ ಸಹಾಯವನ್ನೊದಗಿಸುವುದು" ಮುಂತಾದ ಯೋಜನೆಗಳಿಗಳಿವೆಯೆಂದು ಹೇಳಿದ್ದೀರಿ. ಇವೆಲ್ಲಾ ಬರೀ ಯೋಜನೆಗಳೇ ಅಥವಾ ಸಹಾಯವನ್ನೇನಾದರೂ ಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಹಾಯ ಮಾಡಿದ್ದೇವೆ.

ಶ್ರೀ ವಿ. ಆರ್. ನಾಯ್ಡು.—ಯಾವ ಯಾವ ಸಹಾಯ ಮಾಡಿದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—Land colonisation ಸ್ಕೀಮಿನಲ್ಲಿ 60 ಜನರಿಗೂ, Individual Settlers on land ಎಂದು 14 ಜನರಿಗೂ ಕೊಟ್ಟಿದೆ. Technical Training Scheme ಎಂದು 34 ಜನರನ್ನು ತೆಗೆದುಕೊಂಡು ತರಪೇತು ಕೊಡುತ್ತಿದೆ. ಅದರ ಪೈಕಿ ಟ್ರೈನಿಂಗ್ ಆಗಿರುವವರು 26 ಜನ ಮತ್ತು total rehabilitation schemeನಲ್ಲಿ 65 ಜನರಿಗೆ ಕೊಟ್ಟಿದೆ.

ಶ್ರೀ ವಿ. ಆರ್. ನಾಯ್ಡು.—Ex-servicemen ಮಕ್ಕಳಿಗೆ ಸ್ಕಾಲರ್‌ಷಿಪ್ ಏನಾದರೂ ಕೊಟ್ಟಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—194 ಸಂಸಾರದವರಿಗೆ 5 ರೂಪಾಯಿಗಳಂತೆಯೂ, ಎರಡು ಸಂಸಾರದವರಿಗೆ 10 ರೂಪಾಯಿಗಳಂತೆಯೂ, ಇನ್ನೆರಡು ಸಂಸಾರದವರಿಗೆ 15 ರೂಪಾಯಿಗಳಂತೆಯೂ ಕೊಟ್ಟಿದೆ.

ಶ್ರೀ ವಿ. ಆರ್. ನಾಯ್ಡು.—ಮಕ್ಕಳಿಗೆ ವಿದ್ಯಾಭ್ಯಾಸವನ್ನು ಉಚಿತವಾಗಿ ಕೊಡುವುದಕ್ಕೆ ಏರ್ಪಾಡು ಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ಯೋಚನೆ ಮಾಡಿಲ್ಲ.

ಶ್ರೀ ವಿ. ಆರ್. ನಾಯ್ಡು.—ಎಕ್ಸ್-ಸರ್ವಿಸ್‌ಮೆನ್ ಕಾಲೊನಿ ಎಂದು ವಸಂತನಗರದ ಪಕ್ಕದಲ್ಲಿ ಸುಮಾರು 500 ಜನ ನಿವೃತ್ತ ಸೈನಿಕ ಸಂಸಾರಗಳು ಮನೆಗಳನ್ನು ಕಟ್ಟಿಕೊಂಡು ಸರ್ಕಾರದವರ ಆಶೀ

(ಶ್ರೀ ವಿ. ಆರ್. ನಾಯ್ಡು.)
ರ್ವಾದದಿಂದ ಇದ್ದೇವೆಂದು ತಮ್ಮ ಹೆಸರನ್ನು ಹೇಳಿ ಕೊಂಡಿದ್ದಾರಲ್ಲ, ಅವರಿಗೆ ಮನೆ ಕಟ್ಟಿಕೊಳ್ಳುವುದಕ್ಕೇನಾದರೂ ಸಹಾಯ ಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವೆಲ್ಲಾ unauthorised constructions.

ಶ್ರೀ ವಿ. ಆರ್. ನಾಯ್ಡು.—Unauthorised ಆಗಿರಬಹುದು. ಬೆಂಗಳೂರಿನ ಸುತ್ತಮುತ್ತಲೂ ಅಂಥವು ಬೇಕಾದಷ್ಟಿವೆ. ಹಾಲಿ ಬಾಲಾಜಿ ನಗರದಲ್ಲಿ ವಾಸವಾಡುತ್ತಿದ್ದಾರಲ್ಲ ಅವರುಗಳಿಗೆ ಉಚಿತವಾಗಿ ನೀರು, ಸ್ಯಾನಿಟೆರಿ ಏರ್ಪಾಡುಗಳನ್ನು ಒದಗಿಸಿಕೊಡುವುದಕ್ಕೇನಾದರೂ ಏರ್ಪಾಡು ಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವೆಲ್ಲಾ unauthorised constructionಗಳೆಂದು ಆಗಲೇ ಹೇಳಿದ್ದೇನೆ.

ಶ್ರೀ ವಿ. ಆರ್. ನಾಯ್ಡು.—Unauthorised ಆಗಿರಬಹುದು. ಅವುಗಳನ್ನು authorised ಆಗಿ ಮಾಡುವುದು ಅವಶ್ಯಕ. ತಮ್ಮ ಆಶೀರ್ವಾದ ಅದಕ್ಕೆ ಆಗಬೇಕೆಂದು ನಾನು ಕೇಳುತ್ತೇನೆ.

(No answer).

ಶ್ರೀ ವಿ. ಆರ್. ನಾಯ್ಡು.—ಜಮೀನಿಲ್ಲದವರಿಗೆ ಜಮೀನನ್ನು ಒದಗಿಸುತ್ತಿದ್ದೇವೆಂದು ಹೇಳಿದ್ದೀರಿ. ಎಷ್ಟೋ ಜನರು ಅರ್ಜಿ ಹಾಕಿ ಜಮೀನಿಲ್ಲದೆ ತಿರುಗುತ್ತಿರುವುದು ತಮಗೆ ಗೊತ್ತಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—Land Colonisationನ್ನಿಗೆ ಇವೊತ್ತು ಬಂದರೂ settle ಮಾಡಿಕೊಡುತ್ತೇವೆ.

ಶ್ರೀ ವಿ. ಆರ್. ನಾಯ್ಡು.—ಸರ್ಕಾರಕ್ಕೆ ಅರ್ಜಿ ಕೊಟ್ಟ ದಿನದಿಂದ ಬೆಳಿಗ್ಗೆ ಆದದ್ದೆ ನಿಮ್ಮಲ್ಲಿಗೆ ತಿರುಗುತ್ತಿದ್ದರೂ ಅವರಿಗೆ ಕೊಟ್ಟಿಲ್ಲವೆಂದು ಗೊತ್ತಿದೆಯೋ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವರುಗಳು ಬೆಂಗಳೂರಿನಲ್ಲಿಯೇ ಇರಬೇಕು ಎಂದು ಹೇಳುತ್ತಿದ್ದಾರೆ. ಜಮೀನಿನ ಮೇಲೆ ಇರುತ್ತೇವೆಂದು ಹೇಳಿ ಈಗ ಬಂದರೂ ಕೊಡುತ್ತೇವೆ.

Sri Mulka GOVINDA REDDY.—Out of 4,063 discharged soldiers, how many belong to the Indian Army and how many to the Mysore State Army ?

ಶ್ರೀ ಎ. ಜಿ. ರಾಮಚಂದ್ರರಾವ್.—ಈಗ ಕೊಟ್ಟಿರುವ ಅಂಕಿಅಂಶವೆಲ್ಲಾ ಮೈಸೂರು ಸೈನ್ಯದಲ್ಲಿದ್ದು ನಿವೃತ್ತರಾಗಿರುವವರಿಗೆ ಸಂಬಂಧಪಟ್ಟಿದೆ. ಇಂಡಿಯನ್ ಆರ್ಮಿಯಿಂದ ಡಿಸ್ಚಾರ್ಜ್ ಆಗಿರುವವರ ಪೈಕಿ ಬಹಳ ಜನರು ಬೆಂಗಳೂರಿನಲ್ಲೇ ಇದ್ದಾರೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಅಂಥವರಿಗೇನು ಸಹಾಯ ಮಾಡಿದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಂಡಿಯಾ ಸರ್ಕಾರಕ್ಕೆ ಸಂಬಂಧಪಟ್ಟಿರುವವರಿಗೆ ಆ ಸರ್ಕಾರದವರೇ ಸಹಾಯ ಮಾಡಬೇಕು.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಇಂಡಿಯಾ ಸರ್ಕಾರದವರು ತಯಾರಿಸುವ ಸ್ಕೀಮನ್ನು ಮೈಸೂರು ಸರ್ಕಾರದ ಮೂಲಕ ಮಾಡಿಸುತ್ತಿದ್ದಾರೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವರೂ ಇದೇ ರೀತಿ ಮಾಡಿದ್ದಾರೆಂದು ಗೊತ್ತಾಗಿದೆ. ನಮ್ಮಲ್ಲಿ ವಿವರವಿಲ್ಲ.

Sri Mulka GOVINDA REDDY.—Out of 4,063 excluding 1,335 who have been re-employed in Government and private concerns, how many are yet to be employed in gainful avocations, Sir ?

Sri A. G. RAMACHANDRA RAO.—I have already said, Sir. 3,520 ಮಂದಿಗೆ ಅವಾರ್ಡುಗಳನ್ನು ಕೊಟ್ಟರು. ಅದರ ಪೈಕಿ 1,494 ಮಂದಿಗೆ ಪೂರ್ಣವಾಗಿಯೂ, 329 ಮಂದಿಗೆ ಪಾರ್ಷಿಯಲ್ಲಾಗಿಯೂ ಕೊಟ್ಟಿದ್ದಾರೆ.

Sri Mulka GOVINDA REDDY.—To what extent partial satisfaction of their claims has been met ?

Sri A. G. RAMACHANDRA RAO.—That differs from individual to individual. I cannot answer that, Sir.

Sri Mulka GOVINDA REDDY.—Are there any among the discharged soldiers who are not yet employed ?

ಶ್ರೀ ಎ. ಜಿ. ರಾಮಚಂದ್ರರಾವ್.—ಒಟ್ಟು 4,063 ಮಂದಿ ಪೈಕಿ 3,000 ಚಿಲ್ಲರೆಯವರಿಗೆ ಸೆಟ್ಲ್‌ಮೆಂಟಾಗಿದೆ. ಇನ್ನೂ ಒಂದು ಸಾವಿರ ಜನರಿಗೆ ಖಾಸಗಿ ಹುದ್ದೆಗಳಿವೆ; ದೂರುಗಳೇನೂ ಬಂದಿಲ್ಲ.

Sri Mulka GOVINDA REDDY.—You have said in the answer: 'We are awarding lands under military concession rules.' How many have been awarded and to what extent ?

ಶ್ರೀ ಎ. ಜಿ. ರಾಮಚಂದ್ರರಾವ್.—ಇವೆಲ್ಲಾ ಮಿಲಟರಿ ಕನ್ಸೆಷನ್ಸ್, ಲ್ಯಾಂಡ್ ಕಾಲೊನೈಜೇಷನ್ ಸ್ಕೀಂ, ಟೆಕ್ನಿಕಲ್ ಟ್ರೈನಿಂಗ್ ಸ್ಕೀಂ, ಫೈನಾನ್ಷಿಯಲ್ ಏಡ್ ಟು ಇಂಡಿವಿಜುಯಲ್ ಸೆಟ್ಲರ್ಸ್ ಆನ್ ಲ್ಯಾಂಡ್, ಆಟೋರಿಕ್ಷಾ ಎಂಡ್ ಅದರ್ ಸ್ಕೀಮ್ಸ್—ಈ ನಾಲ್ಕೂ ಕೂಡ ಪ್ರಾರಂಭವಾಗಿದೆಯೆಂದು ಹೇಳಿದೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಬೆಂಗಳೂರಿನಲ್ಲಿ ಅನ್‌ಆಥರೈಸ್ಡಾಗಿ ಮನೆ ಕಟ್ಟಿರುವವರಿಗೆ ಬೇರೆ ಮನೆ ಕಟ್ಟಲು ಏರ್ಪಾಡು ಮಾಡುತ್ತಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ನಾವು ಮಾಡುತ್ತಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಲ್ಯಾಂಡ್ ಕಾಲೊನೈಜೇಷನ್ ಸ್ಕೀಂ ಪ್ರಕಾರ ಎಷ್ಟು ಜನ ನಿವೃತ್ತ ಸೈನಿಕರು ಸೆಟ್ಲ್ ಆಗುವುದಕ್ಕೆ ಏರ್ಪಾಡು ಮಾಡಿದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್—ಅದು ಜ್ಞಾಪಕವಿಲ್ಲ. ಇನ್ನೂ ಬಹಳ ಜಮೀನಿದೆ.

ಶ್ರೀ ಡಿ. ದೇವರಾಜ ಅರಸ್.—ಈಗ ಲ್ಯಾಂಡ್ ಕಾಲೊನೈಜೇಷನ್ ಸ್ಕೀಂ ಎಂದು ಮಾಡಿ 3,000 ಚಿಲ್ಲರೆ ಎಕರೆ ರಿಲೀಸ್ ಮಾಡಿ ಮೈಸೂರಿನಲ್ಲಿ ಒಂದು ಕಾಲೊನಿ ಸ್ಥಾಪಿಸಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿದೆ.

ಶ್ರೀ ಡಿ. ದೇವರಾಜ ಅರಸ್.—ಈಗ ಆ ಕಾಲೊನಿಯಲ್ಲಿ ಎಷ್ಟು ಸಂಸಾರದವರು ಬಂದು ವಾಸ ಮಾಡುತ್ತಿದ್ದಾರೆ ?

ಶ್ರೀ ಎ. ಜಿ. ರಾಮಚಂದ್ರರಾವ್.—60 ಎಂದು ಸಮಾಚಾರ ಬಂದಿದೆ.

ಶ್ರೀ ಡಿ. ದೇವರಾಜ ಅರಸ್.—ಇನೂ ಎಷ್ಟಕ್ಕೆ ಪ್ರಾವಿಷನ್ ಇದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೂರಾರು ಜನರಿಗೆ ಪ್ರಾವಿಷನ್ ಇದೆ.

ಶ್ರೀ ಡಿ. ದೇವರಾಜ ಅರಸ್.—ಆ ಪ್ರಾವಿಷನ್ ಇದ್ದ ಮೇಲೆ, ಜಮೀನಿದ್ದ ಮೇಲೆ ಏಕೆ ಮಿಲಿಟರಿಯವರು ಅದನ್ನು ಉಪಯೋಗಿಸಿಕೊಳ್ಳುತ್ತಿಲ್ಲ ?

ಶ್ರೀ ಎ ಜಿ. ರಾಮಚಂದ್ರರಾವ್.—ಅವರಿಗೆ ಟೌನುಗಳಲ್ಲಿರಲು ಇಷ್ಟವಿದೆಯೇ ಹೊರತು ಜಮೀನಿನಲ್ಲಿ ಸೆಟ್ಲ್ ಆಗಲು ಇಷ್ಟವಿಲ್ಲ ಎಂದು ಕಾಣುತ್ತದೆ.

ಶ್ರೀ ಪಿ. ಆರ್. ರಾಮಯ್ಯ.—ಮೈಸೂರು ಸೈನಿಕರ ಬೋರ್ಡಿನಲ್ಲಿ ಫಂಡು ಎಷ್ಟಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಪಿ. ಆರ್. ರಾಮಯ್ಯ.—ಇಂಡಿಯಾ ಸರ್ಕಾರದವರೂ ಕಾಂಟ್ರಿಬ್ಯೂಟ್ ಮಾಡುತ್ತಿರುವರೆ ?

Sri A. G. RAMACHANDRA RAO.—I think part of it is contributed by the Government of India.

ಶ್ರೀ ಪಿ. ಆರ್. ರಾಮಯ್ಯ.—ಈಗ ಡಿಸ್ಚಾರ್ಜ್ಡ್ ಸೈನಿಕರ ಯೋಗಕ್ಷೇಮ ನೋಡಿಕೊಳ್ಳಲು ಯಾವುದಾದರೂ ಆರ್ಗನೈಜೇಷನ್ ಸಂಸ್ಥಾನದಲ್ಲಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ರಿಕ್ತಾ ಆರ್ಗನೈಜೇಷನ್ ಕೋ-ಆಪರೇಟಿವ್ ಬೇಸಿಸ್‌ಮೇಲೆ ಇದೆ.

ಶ್ರೀ ಪಿ. ಆರ್. ರಾಮಯ್ಯ.—ಅವರಿಗಾಗಿ ಒಂದು ಕೋ-ಆಪರೇಟಿವ್ ಸೊಸೈಟಿಯುದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಒಂದು ಬೋರ್ಡ್ ಇದೆ.

ಶ್ರೀ ಪಿ. ಆರ್. ರಾಮಯ್ಯ —ಅದಕ್ಕೆ ಛೇರ್ಮನ್ ಯಾರು ?

Sri A. G. RAMACHANDRA RAO.—I think the concerned Minister is the Chairman, Sir.

QUESTIONS FOR ANSWERS ON THE DAY.

(but not taken up)

Municipal High Schools.

Q.—631. **Sri D. M. GOVINDARAJU** (Nelamangala).—

Will the Government be pleased to state :—

(*a*) the number of Municiple High Schools in the State (districtwar figures to be supplied).;.

(*b*) the number of students studying in the said High Schools and out of them the number coming from the rural areas and the number from the Municipal areas ;

(*c*) whether the District Boards have contributed anything towards the maintenance of these Municipal High Schools ; if so, the extent of help and the names of schools so helped ?

A.—**Sri A. G. RAMACHANDRA RAO** (Minister for Law and Education).—

(*a*), (*b*) and (*c*) Please see Statement appended below.

STATEMENT.

Serial No.	Name of District	Number of Municipal High Schools	Number of pupils coming from rural areas.	Number of pupils coming from Municipal areas.	Contribution from District Board
		Rs.	Rs.	Rs.	
1	Bangalore ...	10	1,745	1,412	Nil
2	City District, Bangalore.	2	15	672	Nil
3	Civil Area ...	1	133	93	Nil.
4	Tumkur ...	4	725	428	Nil
5	Hassan ...	7	683	859	Nil
6	Shimoga ...	8	434	1,703	Nil
7	Chitaldrug ...	8	1,005	839	Nil
8	Bellary ...	3	287	2,446	Nil
Sri Rajasekhara Murthy explained this provision at some length. Here, Sir, when two persons have applied for a permit to the R.T.A. and one Mr. X is granted, the other will have opposed the grant of permit to Mr. X. He goes in appeal to the S.T.A. The aggrieved person Mr. Y goes in appeal because Mr. X has been granted permit by the R.T.A. When Mr. Y goes in appeal against the grant of that permit to the S.T.A., and if the S.T.A. without deciding on the merits of the case, issues a temporary permit in favour of Mr.Y, a great injustice will be done. I can understand if a stay order is issued and *status quo* maintained, *i.e.*, the position where these two people were before the R.T.A. issued a permit in favour of one or the other. But if we invest the S.T.A. with this power of issuing a temporary permit in favour of a person who has been aggrieved by the decision of the R.T.A., the very purpose for which these R.T.As. and S.T.A. are constituted will be defeated. Hence, even under this clause (*f*), there is no need.

> "(*g*) being the holder of a licence, who is aggrieved by the refusal of a Regional Transport Authority to grant an authorisation to drive a public service vehicle"

Here, I do not understand why this clause should be necessary. For the issue of a driving licence—it is covered under some other provision of this Act. The issue of a temporary permit on an application pending decision according to section 64 (g) is I think uncalled for. I therefore oppose the amendment as moved by Sri Bheemappa Naik.

Mr. SPEAKER.—Sri B. T. Kemparaj. May I request the Hon'ble Members not to repeat the arguments advanced by other members, but only to give new arguments or throw new light on the amendment? There are clear instructions in the Rules that repetitions should not be allowed.

*Sri B. T. KEMPARAJ (Bangalore South—Scheduled Castes).—Sir, it has been expressed by most of the members that clause (*d*) in section 62 is unnecessary and that it is superfluous. Many objections have been raised by my friends. On the other hand I find that there is a clear case for the inclusion of this clause. The R.T.A. cannot sit always just to give temporary permits. It is allowed under this Act. The Deputy Commissioner as the Chairman of the R.T.A. is empowered to issue the temporary permit for a period of four months as it is contemplated under section 62. So when exactly a temporary permit should be issued is the question for us which we have to consider seriously. In the usual course, whenever a person applies for the grant of a fresh route, that application will be sent to the Police Department and several other departments to find out whether there is a route which can be granted by the R.T.A. When that application comes before the R.T.A., the R.T.A. approves of that route. Then the next procedure as it is contemplated in the Act is that the Chairman of the R.T.A. should publish that route in the *Mysore Gazette*, thereby allowing the applicants to apply for that particular route. During that period there will be necessity and there will be urgency for the conveyance or the carriage for the public use. We have to take that interim period seriously into consideration. To fulfil the requirements, the demands of the public, the Regional Transport Authority should think of granting a temporary licence. So under such circumstances, it is necessary that a temporary permit should be issued. Again, Sir, there are permanent permits issued to several bus owners. Whenever bus routes are sanctioned, the several bus

owners—many of them—do not put their buses on the route. Under such circumstances, if there is no power to the Chairman of the Road Transport Authority to give a temporary permit, then also, there will be some difficulty. As it is expressed by some of our friends, when a temporary permit is cancelled by the R.T.A., the person whose application has been rejected by the R.T.A., may go in appeal, etc., that fact should also be taken into consideration. By the amendment moved by my learned friend Sri Bheemappa Naik, it limits the scope of giving these temporary permits by the Government. If confines, it limits the power of the grant of temporary permits to the R.T.A. and to the S.T.A., thereby limiting the scope of this clause which was being added to section 62. I wish to give a specific instance. Suppose there is a person who applies for a temporary licence to the R.T.A. His application having been rejected by the Deputy Commissioner, he may prefer an appeal to the S.T.A,, where also the application may be rejected. Then, there will be no room for him to go in appeal to the Government, thereby doing him injustice ; as it is, it has been allowed by the inclusion of clause (*d*) to section 62. Therefore, Sir, I personally feel that to add up clause (*d*) to section 62 is quite correct, and it gives the scope of giving these temporary permits when a person is disappointed.

Coming to the other side of the clause, it is essential for us to think that there will be quite a great deal of demand by the public from the several parts of the State for conveyances. When there is no power for these bodies to allow temporary permits, then there will be great difficulty to meet the emergency and the demand of the public. Therefore, I think it is high time for us that such a convenient clause is inserted in section 62, because this is the only section throughout the Act which can give room for any authority to sanction or issue temporary permits. Therefore, Sir, I feel that clause (*d*) is quite appropriate, legal and justifiable in the interests of the public.

(*Sri S. Gopala Gowda rose.*)

Sri N. HUCHMASTHY GOWDA (Huliyurdurga).—I move for closure, Sir.

Mr. SPEAKER.—The Hon'ble Member is on his legs.

***Sri S. GOPALA GOWDA.**—I want to oppose this amendment. ನಾನು ಬೆಳಿಗ್ಗೆ ಈ ಮಸೂದೆಯ ಮೇಲೆ ಮಾತನಾಡುತ್ತಾ ಇರುವಾಗ ಸರ್ಕಾರದವರು ಸೂಚಿಸಿರತಕ್ಕ ತಿದ್ದುಪಡಿಗಿಂತ ಈ ತಿದ್ದುಪಡಿ ಪರಿಸ್ಥಿತಿಯನ್ನು ಉತ್ತಮಪಡಿಸುತ್ತದೆ ಎಂದು ಹೇಳಿ ನಾನು ತಿಳಿದುಕೊಂಡಿದ್ದೆ. ಆದರೆ ಅನಂತರದಲ್ಲಿ ಆದ ಚರ್ಚೆ ಮತ್ತು ಈ ತಿದ್ದುಪಡಿಯನ್ನು ಸೂಚಿಸಿರತಕ್ಕಂಥ ಮಾನ್ಯ ಸದಸ್ಯರು ಕೊಟ್ಟಂಥ ಕಾರಣಗಳನ್ನು ಕೇಳಿದಮೇಲೆ ಆ ರೀತಿ ಆಗುವುದಿಲ್ಲ ಎಂದು ಎನ್ನಿಸುತ್ತದೆ. ಮಾನ್ಯ ಮಂತ್ರಿಗಳು ಇದನ್ನು ಯಾವರೀತಿ defend ಮಾಡಿಕೊಂಡರು ಎಂಬುದನ್ನು ತಿಳಿದುಕೊಂಡ ಮೇಲೆ ಇದರ ಅವಶ್ಯಕತೆ ಇಲ್ಲ ಎಂದು ಬೆಳಿಗ್ಗೆ ಹೇಳಿದ್ದೆ. ಈಗ ಮತ್ತಷ್ಟು ಇದರ ಅವಶ್ಯಕತೆಯೇ ಇಲ್ಲ ಎನ್ನುವುದು ಮನದಟ್ಟಾಗಿರುವುದಲ್ಲದೆ ಇದು amplify ಮಾಡಬೇಕಾದ ವಿಷಯವೂ ಆಗುವುದಿಲ್ಲವೆಂದು ತೋರುತ್ತಿದೆ. ಏಕೆಂದರೆ ಟೆಂಪೊರರಿ ಪರ್ಮಿಟ್ಸ್ ಕೊಡುವುದು ಎಂಥ ಸಂದರ್ಭದಲ್ಲಿ ಎನ್ನುವುದನ್ನು ಚೆನ್ನಾಗಿ ವಿವೇಚನೆ ಮಾಡಿ ಕಾನೂನಿನಲ್ಲಿ ನಮೂದು ಮಾಡಿದ್ದಾರೆ. ಈಗ ಟೆಂಪೊರರಿ ಲೈಸೆನ್ಸ್ ಮೇಲೆ ಏನೊಂದು ಹಿಡಿತವಿದೆ ಅದು ಇಲ್ಲದೇ ಹೋಗುವ ಪಕ್ಷಕ್ಕೆ ಇನ್ನುಮುಂದೆ ಎಂಟು-ಹತ್ತು ಟೆಂಪೊರರಿ ಲೈಸೆನ್ಸ್‌ಗಳನ್ನು ತೆಗೆದುಕೊಂಡು ಬಸ್ಸುಗಳನ್ನು ಓಡಾಡಿಸುವುದಕ್ಕೆ ಷುರುಮಾಡಬಹುದು. ಆದ್ದರಿಂದ ಇದನ್ನು ಒತ್ತಾಯಮಾಡದೆ ಶ್ರೀ ಮಾನ್ ಭೀಮಪ್ಪನಾಯಕರು ಅವರ ತಿದ್ದುಪಡಿಯನ್ನು ವಾಪಸು ತೆಗೆದುಕೊಳ್ಳಬೇಕು ಮತ್ತು ಎರಡನೇ ತಿದ್ದುಪಡಿ ಏನಿದೆ ಅಪೀಲುಮಾಡುವುದು ಅದು ಒಂದೇ ಇದ್ದರೆ ಸಾಕು ಎಂದು ನಾನು ಹೇಳುತ್ತೇನೆ.

4 P.M.

Mr. SPEAKER.—Sri Bheemappa Naik, have you anything to say ?

ಶ್ರೀ ಎ. ಭೀಮಪ್ಪನಾಯಕ್.—ಈಗಾಗಲೇ ಅನೇಕ ಮಾನ್ಯ ಸದಸ್ಯರು ಈ ವಿಷಯದಲ್ಲಿ ತುಂಬ ಚರ್ಚೆ ನಡೆಸಿದ್ದಾರೆ. ಶ್ರೀ ಎಂ. ರಾಜಶೇಖರಮೂರ್ತಿಯವರೂ ಮತ್ತು ಶ್ರೀ ದೇವರಾಜ ಅರಸ್‌ನವರೂ ಇದರ ಅಗತ್ಯ ಅಷ್ಟಾಗಿ ಕಾಣುವುದಿಲ್ಲವೆಂದೂ ಮತ್ತು ಈ ತಿದ್ದುಪಡಿಯನ್ನು ಈ 62ನೆಯ ಸೆಕ್ಷನ್ನಿಗೆ ಸರಿಹೊಂದಿಸುವುದಕ್ಕೂ ಕೂಡ ಆಗುವುದಿಲ್ಲವೆಂದೂ ಅಪ್ಪಣೆ ಕೊಡಿಸಿದರು. ಆದರೆ ಹೀಗೆ ಇದು 62ಕ್ಕೆ ಸರಿಹೊಂದದೆ ಹೋದರೆ ಮತ್ತೆ ಯಾವ ಸೆಕ್ಷನ್ನಿಗೆ ಇದು ಸರಿಹೋಗುತ್ತದೆ ಎನ್ನುವುದನ್ನು ಅವರಿಗೆ ಹೇಳುವುದಕ್ಕೆ ಆಗಲಿಲ್ಲ. ಹೀಗೆ ಇನ್ನು ಕೆಲವರು ಕೆಲವು ರೀತಿಯಾಗಿ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತಾರೆ. ಆದರೆ ಈಗ ಈ ಹಂಗಾಮಿ ಪರ್ಮಿಟ್ಟುಗಳನ್ನು ಯಾವ ಯಾವ ಸಂದರ್ಭಗಳಲ್ಲಿ ಕೊಡಬಹುದು ಎನ್ನುವುದಕ್ಕೆ ಮೂರು ಸಂದರ್ಭಗಳನ್ನು ನಮೂದಿಸಿದ್ದಾರೆ. ಅಂದರೆ ಸಾಧಾರಣವಾಗಿ ಈ ಜಾತ್ರೆ, ಪರಿಷೆ ಇತ್ಯಾದಿಗಳನ್ನು ಕೈಗೊಳ್ಳುವಾಗ ಹಂಗಾಮಿಯಾಗಿ ಲೈಸೆನ್ಸನ್ನು ಕೊಡಬಹುದೆಂದು ಹೇಳಿದೆ. ಅಥವಾ ಇನ್ನು ಬೇರೆ ಕೆಲವು ಸಂದರ್ಭಗಳಲ್ಲಿ ಕೇವಲ

(ಶ್ರೀ ಎ. ಭೀಮಪ್ಪನಾಯಕ್.)

ಕೆಲವಾರು ದಿನಗಳಿಗೆ ಯಾವುದೋ ಒಂದು ಹೊಸ ಲೈನಿಗೆ ಹಂಗಾಮಿಯಾಗಿ ಯಾರಾದರೂ ಲೈಸೆನ್ಸು ಬೇಕೆಂದು ಕೇಳಿಕೊಂಡರೆ, ಅವರಿಗೆ ಆ ಲೈನು ಗ್ರಾಂಟ್ ಆಗತಕ್ಕ ಸಂಭವವಿದ್ದು ಅವರ ಹೆಸರಿಗೆ ಪರ್ಮಿಟ್ ಆಗತಕ್ಕದ್ದು ನಿಧಾನವಾದಾಗ, ಅಂಥ ಸಂದರ್ಭಗಳಲ್ಲಿ ಹೀಗೆ ಹಂಗಾಮಿಯಾಗಿ ಲೈಸೆನ್ಸು ಕೊಡುವುದರಿಂದ ಮತ್ತು ಯಾವ ಅಪಘಾತಗಳೂ ಆಗುವುದಿಲ್ಲವೆಂದು ಕಂಡುಬರತಕ್ಕಂಥ ಸಂದರ್ಭಗಳಲ್ಲಿ ಹಾಗೆ ಹಂಗಾಮಿ ಲೈಸೆನ್ಸುಗಳನ್ನು ಕೊಡಲು ಅವರಿಗೆ ಅಧಿಕಾರವಿರತಕ್ಕದ್ದು ಅಗತ್ಯವೇ ಎನ್ನುವುದನ್ನು ಪರಿಶೀಲನೆ ಮಾಡಿದಾಗ ಅವರಿಗೆ ಹೀಗೆ ಹಂಗಾಮಿಯಾಗಿ ಲೈಸೆನ್ಸ್ ಕೊಡುವುದಕ್ಕೆ ಅಧಿಕಾರವಿರತಕ್ಕದ್ದು ಅಗತ್ಯ ಎಂದು ಸರ್ಕಾರಕ್ಕೆ ಕಂಡುಬಂದುದರಿಂದ ಮೇಲ್ಕಂಡ ಮೂರು ಸಂದರ್ಭಗಳಲ್ಲಿ ಹಂಗಾಮಿ ಲೈಸೆನ್ಸುಗಳನ್ನು ಕೊಡಬಹುದೆಂದು ಹೇಳಿದ್ದಾರೆ. ಈಗ ಯಾರೋ ಒಬ್ಬರು ಒಂದು ಜಾತ್ರೆಗೆ ಬಸ್ಸನ್ನು ಬಿಡಬೇಕಾಗಿರುತ್ತದೆಂದೂ ಅದಕ್ಕಾಗಿ ಟೆಂಪೊರೆರಿ ಪರ್ಮಿಟ್ಟನ್ನು ಕೊಡಬೇಕೆಂದೂ ಅರ್ಜಿ ಹಾಕಿಕೊಳ್ಳುತ್ತಾನೆ. ಆಗ ಆತನಿಗೆ ಸ್ಥಳದಲ್ಲಿರತಕ್ಕಂಥ ಅಧಿಕಾರಿಗಳು ಪರ್ಮಿಷನ್ ಕೊಡುವುದಿಲ್ಲವೆಂದು ಹೇಳಿದರೆ ಆತನು ಅಪಲೇಟ್ ಅಧಿಕಾರಿಗಳಿಗೆ ಅರ್ಜಿ ಹಾಕಿಕೊಳ್ಳಬಹುದು ಎಂದು ಮಾಡಿದ್ದೇವೆ. ಹಾಗೆ ಅದರಿಂದ ಏನಾದರೂ ಆತನಿಗೆ ತೊಂದರೆಯಾಗುವ ಹಾಗಿದ್ದರೆ ಆತನ ಅಪೀಲಿನ ಮೇಲೆ ಆತನಿಗೆ ಪರ್ಮಿಷನ್ ಕೊಡಬಹುದು ಇಂದು ಈಗ ಹೇಳಿದೆಯೇ ಹೊರತು ಇದನ್ನು ಅಂಗೀಕರಿಸುವುದರಿಂದ ಅಂಥ ಯಾವ flood gateನ್ನು ತೆರೆದಹಾಗೆ ಆಗುವುದಿಲ್ಲ, ಯಾವ ಬೆಳೆಯ ಮೇಲೂ ನೀರು ಹಾದು ನುಗ್ಗಿ ಹರಿದು ಹಾಳಾಗುವುದಿಲ್ಲ; ಅಂಥ ಸಂದರ್ಭಗಳು ಯಾವುವೂ ಇಲ್ಲಿರುವುದಿಲ್ಲವೆಂದು ಹೇಳುತ್ತೇನೆ. ಇಷ್ಟು ವಿಚಾರಕ್ಕೆ ಈ (ಬಿ) ಯಿಂದ ಹಿಡಿದು (ಜಿ) ವರೆಗೂ ಅದು ಅಗತ್ಯವಿಲ್ಲ, ಇದು ಅಗತ್ಯವಿಲ್ಲ ಎಂದು ಹೇಳಿದರು. ಆದರೆ ಹಾಗೆ ಪ್ರತಿಯೊಂದರಲ್ಲೂ ಅಗತ್ಯವಿದೆಯೆಂಬುದನ್ನು ತಿಳಿಸಬಹುದು.

Unless temporary permit is granted, mere stay order does not give him the right of running the vehicle.

ಈಗ ಯಾರಾದರೂ ಒಬ್ಬ ಬಸ್ ಮಾಲೀಕನ ವಿಚಾರದಲ್ಲಿ—ನೀನು ನಿನ್ನ ಬಸ್ಸಿನಲ್ಲಿ ನಾಲ್ಕು ಜನ ಪ್ರಯಾಣಿಕರನ್ನು ಜಾಸ್ತಿ ಹಾಕಿದ್ದೆ ಎಂದು ಒಂದು ಕೇಸನ್ನು ಹಾಕಿದಾಗ ಆತನು ನಾನು ಹಾಗೆ ಓವರ್ ಲೋಡ್ ಮಾಡಲಿಲ್ಲ ಎಂದು ಹೇಳಬಹುದು. ಆದಾಗ್ಯೂ ಆತನ ಪರ್ಮಿಟ್ಟನ್ನು ಈಗ ಸಸ್‌ಪೆಂಡ್ ಮಾಡುವುದಕ್ಕೆ ಅವಕಾಶವಿದೆ. ಹಾಗೆ ಮಾಡಿಯೂ ಮಾಡುತ್ತಾರೆ. ಈ ಟೆಂಪೊರೆರಿ ಪರ್ಮಿಟ್ಟುಗಳನ್ನು ರಿನ್ಯೂ ಮಾಡತಕ್ಕಂಥ ವಿಚಾರ ಈ ಸೆಕ್ಷನ್ 58ರಲ್ಲಿ ಹೇಳಿದ್ದಾರೆ. ಇನ್ನು ಈ ಸೆಕ್ಷನ್ 57ರಲ್ಲಿ ಇತರ ಕಾರ್ಯ ಕ್ರಮಗಳನ್ನು ಮಾತ್ರ ತಿಳಿಸಿದ್ದಾರೆ. ಸೆಕ್ಷನ್ 58ರಲ್ಲಿ ರಿನ್ಯೂ ಮಾಡತಕ್ಕಂಥ ವಿಚಾರ ಮಾತ್ರ ಇರುತ್ತದೆ. ಈ ಟೆಂಪೊರೆರಿ ಪರ್ಮಿಟ್ಟುಗಳನ್ನು ಕೊಡತಕ್ಕಂಥ ಸಂದರ್ಭಗಳು ಯಾವು ಯಾವವು ಇರುತ್ತವೆಯೋ ಅವೂ ಸಹಿತ ಟೆಂಪೊರೆರಿಯಾಗಿಯೇ ಇರುತ್ತವೆ. ಅಂದರೆ ಆಗಿನ ಸಂದರ್ಭಕ್ಕೆ ಅನುಸಾರವಾಗಿ ಅವು ಕೇವಲ ತಾತ್ಕಾಲಿಕವಾದವುಗಳಾಗಿರುತ್ತವೆ. ಅಂಥ ಸಂದರ್ಭಗಳಲ್ಲಿ ಈ ಸ್ಟೇ ಆರ್ಡರುಗಳನ್ನು ಕೊಟ್ಟರೆ ಅವುಗಳನ್ನು ರಿನ್ಯೂ ಮಾಡುವುದಕ್ಕಾಗುವುದಿಲ್ಲ. ಇದನ್ನು ನಮ್ಮ ಆ ಮಾನ್ಯ ಮಿತ್ರರು ತಿಳಿದುಕೊಳ್ಳಬೇಕು. ಈಗ ಮೂರು ತಿಂಗಳವರೆಗೆ ಈ ಸೆಕ್ಷನ್ 61ರ ಪ್ರಕಾರ ಟೆಂಪೊರೆರಿಯಾಗಿ ಪರ್ಮಿಟ್ ಕೊಡಲು ಅವಕಾಶ ಕೊಡಲಾಗಿದೆ ಎಂದು ಹೇಳಿದ್ದಾರೆ. ಆದರೆ ಈಗ ಯಾರಾದರೂ ಒಬ್ಬ ಬಸ್ ಮಾಲೀಕನು ಪೌತಿಯಾಗುತ್ತಾನೆಂದು ಇಟ್ಟುಕೊಳ್ಳೋಣ. ಆತನಿಗೆ ಅಣ್ಣ-ತಮ್ಮ, ಮಕ್ಕಳು ಎಲ್ಲರೂ ಇರುತ್ತಾರೆ. ಹೀಗಿರುವಾಗ ಆ ಬಸ್ ಲೈನನ್ನು ಹೊಸದಾಗಿ ಯಾರ ಹೆಸರಿಗೆ ವರ್ಗಾಯಿಸಬೇಕೆಂಬ ವಿಚಾರದಲ್ಲಿ ಅವರವರಲ್ಲಿ ಭಿನ್ನಾಭಿಪ್ರಾಯಗಳು ತಲೆದೋರಿದಾಗ ಪರ್ಮಿಟ್ ಕೊಡತಕ್ಕಂಥ ಅಧಿಕಾರಿಗಳು ನೀವು ಈ ಲೈನನ್ನು ಯಾರ ಹೆಸರಿಗೆ ಖಚಿತವಾಗಿ ವರ್ಗಾಯಿಸಬೇಕೆಂಬುದನ್ನು ನಿರ್ಧಾರ ಮಾಡಿಕೊಂಡು ಬರುವತನಕ ಪರ್ಮಿಟ್ ಕೊಡುವುದಕ್ಕಾಗುವುದಿಲ್ಲ ಅಂತ ಅವರು ಹೇಳಬಹುದು. ಆಗ ಅಂಥ ಸಂದರ್ಭಗಳಲ್ಲಿ ಒಂದು Status quo maintain ಮಾಡುವುದಕ್ಕೆ ಅವಕಾಶವಿರಬೇಕು. ಆದರೆ ಆ ಓನರ್ ಸತ್ತರೇನು ಬಸ್ ಹೇಗೂ ಅದೇ ರನ್ ಆಗುತ್ತೆ ಎಂದು ಶ್ರೀ ರಾಜಶೇಖರಮೂರ್ತಿಯವರು ಹೇಳಿದರು. ಆದರೆ ಇಂಥ ಸಂದರ್ಭಗಳಲ್ಲಿ ಅವರು ಅಪೀಲ್ ಬಂದರೆ ಅವರಿಗೆ ಅವರ ಪೊಸೆಷನ್ನನ್ನು ರೆಸ್ಟೋರ್ ಮಾಡಬೇಕಾಗುತ್ತದೆ. ಆದರೆ ಇದನ್ನು ಇಂಥ ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಉಪಯೋಗಿಸಲಾಗುತ್ತದೆಯೇ ಶಿವಾಯಿ ಎಲ್ಲಾ ಸಂದರ್ಭಗಳಲ್ಲೂ ಉಪಯೋಗಿಸುವುದಕ್ಕಾಗುವುದಿಲ್ಲ. ಈ ಅಲ್ಪಕಾಲಾವಧಿಯ ಪರ್ಮಿಟ್‌ಗಳು ಕೇವಲ ಒಂದು ಬಗೆಯ ರಿಲೀಫ್ ಕಾಂಗಾರಿಗಳಿದ್ದ ಹಾಗೆ. ಅದರೆ ಈ ಕ್ಲಾಜೇ ಬೇಕಾಗಿಲ್ಲ ಎನ್ನುವುದಾದರೆ ಆ ಮಾತು ಬೇರೆಯಾಯಿತು. ಆದರೆ, ಈಗಾಗಲೆ ಟ್ರಾನ್ಸ್‌ಪೋರ್ಟ್ ಮಂತ್ರಿಗಳು ಹೇಳಿರುವ ಹಾಗೆ, ಈ ತಿದ್ದುಪಡಿಯಿಂದ ಅಂಥ ತೊಂದರೆಗಳು ಯಾವವೂ ಇರುವುದಿಲ್ಲ. ಯಾವುದಾದರೂ ಅಂಥ ಅನಿವಾರ್ಯ ಸಂದರ್ಭಗಳು ಬಂದು ಸಾರ್ವಜನಿಕರಿಗಾಗಲಿ ಅಥವಾ ಬಸ್ ಮಾಲೀಕರುಗಳಿಗಾಗಲಿ ಅವರ ಹಿತಕ್ಕೆ ಧಕ್ಕೆ ಬರುತ್ತೆಂದು ಕಂಡುಬಂದಾಗ ಅಂಥ ಅನಾನುಕೂಲಗಳನ್ನು ತೆಗೆದುಹಾಕಿ ಅವರಿಗೆ ಹಂಗಾಮಿಯಾಗಿ ಆಗತಕ್ಕಂಥ ತೊಂದರೆಗಳನ್ನು ತಪ್ಪಿಸಬೇಕು ಎನ್ನತಕ್ಕಂಥ ಒಂದು ಸದುದ್ದೇಶದಿಂದ ಇದನ್ನು ಮಾಡಿರುವುದಾಗಿದೆ. ಈ ಕ್ಲಾಜ್ (ಬಿ) ಮತ್ತು (ಸಿ)ಗಳ. . .

ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ತೊಂದರೆ ಆಗಬಹುದು ಎನ್ನುವುದನ್ನು ಒಪ್ಪಿಕೊಂಡರೆ . . . .

ಶ್ರೀ ಎ. ಭೀಮಪ್ಪನಾಯಕ್.-ಈಗ ಬಸ್ ಮಾಲೀಕನಾಗಿರತಕ್ಕ ಒಬ್ಬ ಮನುಷ್ಯ ಸತ್ತುಹೋದರೆ ಆತನ ತರುವಾಯ ಆ ಬಸ್ಸಿನ ಪರ್ಮಿಟ್ಟನ್ನು ಆತನ ಮಗನಿಗೆ ಬದಲಾಯಿಸಬೇಕೋ ಅಥವಾ ಆತನ ಅಣ್ಣನಿಗೆ ಬದಲಾಯಿಸಬೇಕೋ ಎನ್ನತಕ್ಕ ಒಂದು ಹೆರಡಿಟರಿ ಹಕ್ಕಿನ ಪ್ರಶ್ನೆ ಉದ್ಭವಿಸಿದಾಗ ನೀವು ಹೈಕೋರ್ಟಿಗೆ ಹೋಗಿ ತೀರ್ಮಾನಮಾಡಿಕೊಂಡು ಬನ್ನಿ, ಅನಂತರ ನಾವು ಈ ಪರ್ಮಿಟ್ಟನ್ನು ಯಾರ ಹೆಸರಿಗೆ ಕೊಡಬೇಕೆಂಬುದನ್ನು ಇತ್ಯರ್ಥ ಮಾಡೋಣ ಎಂದು ಹೇಳಿದರೆ ಮತ್ತು ಅಂಥ ಸಂದರ್ಭಗಳಲ್ಲಿ ಅವರಿಗೆ ಹೈ ಕೋರ್ಟಿಗೆ ಹೋಗಲು ಅವಕಾಶವಿಲ್ಲದಿದ್ದಾಗ ಅವರಿಗೆ ತಾತ್ಕಾಲಿಕವಾಗಿ ಕಾರ್ಯನಿರ್ವಹಣೆ. . . .

SRI K. PUTTASWAMY.—He can be allowed to run the bus on his own permit by virtue of the stay order.

ಶ್ರೀ ಎ. ಭೀಮಪ್ಪನಾಯಕ್.—ಬರೀ ಸ್ಟೇ ಆರ್ಡರ್ ಮಾಡಿದರೆ ರಿನ್ಯೂ ಮಾಡಿದಂತೆ ಆಗಲಿಲ್ಲ. It cannot be done. Stay order does not

amount to renewal. Renewal is a temporary renewal under this Act that could be made, because final decision has not been given. That is why advisedly it is said "pending the decision." It comes under section 58— a temporary permit for a particular period.

Sri B. NARAYANASWAMY.—Under section 58, there is no provision for renewal of a temporary permit.

Sri A. BHEEMAPPA NAIK.—When there is a permanent permit held by him and when it is to be renewed temporarily for a period on account of certain causes metioned in section 64, temporarily he is granted a permit. The man is dead. It is no longer a permit in his name. The formalities are not necessary. (*Interruption*) After three months it is no longer a permit; till three months it is a permit. After the lapse of three months, it is no longer a permit. There is an appeal that the decision is incorrect.

Sri B. NARAYANASWAMY.—If only there is an application for a fresh permit and if that is rejected, there will be an appeal.

Sri A. BHEEMAPPA NAIK.—He is simply cross-examining. My friend thinks that after the lapse of three months it is no longer a permit. I say that the previous holder had the permit and after three months it has lapsed. Now here is a person who comes for regularising the thing. Under such circumstances, this temporary permit will have been given until decision is taken. Similar circumstances are mentioned herein. My friends conceive that there is no danger. The Transport Minister has just now said that it may be superfluous. But there is still some use. There is a necessity. If circumstances call for such a grant it will be made, not unnecessarily. I feel that there are circumstances which require such a grant. Therefore I press my amendment.

Mr. SPEAKER.—What does the Hon'ble Minister say?

*Sri H. SIDDAVEERAPPA.—I have heard with rapt attention the various arguments advanced for and against this amendment. The mover of the amendment has given his reasons as to why this amendment is preferred. If you keep in view the central point raised in the amendment, if say, that it is only in a specified and given case, this temporary permit must not be given. I believe, as I have already explained and which I need not repeat again, the amendment is a wholesome one. The amendment is really commendable. The Hon'ble Member does not wish to give more power through his amendment but wish to restrict the power proposed by the Government amendment. I also feel it is not superfluous. I did not concede at any moment that this amendment was superfluous. What I said was that even for the sake of argument conceding it was superfluous, it did not do you any harm. That is only for purposes of argument. I said that even if it was conceded, there was no harm. I believe this is a wholesome amendment and therefore I am glad to accept the amendment moved by the Hon'ble Member.

Mr. SPEAKER.—The question is:

> 'For the proposed clause (*d*) of section 62, the following clause shall be substituted, namely.—
>
> "(*d*) pending the decision on an application for the renewal of a stage carriage permit or a public carrier's permit or pending the decision of an appellate authority on any appeal under section 64 other than an appeal under clause (a) of sub-section (1) of the said section." '

The motion was adopted.

Mr. SPEAKER.—There is another amendment tabled by Sri Rajasekharamurthy, which is not tenable for more than one reason. The effect of this amendment will be to nullify the clause. It also goes against the decision taken by the Assembly just now on the amendment introduced by Sri Bheemappa Naik. Therefore, it cannot be moved. I disallow the amendment.

I now put in the clause as amended to vote. The question is:

> "That Clause 2, as amended, stand part of the Bill."

The motion was adopted.

Clause 2, as amended, was added to the Bill.

Mr. SPEAKER.—Clause 3. There is one amendment tabled by Sri Rajasekharamurthy in respect of this Clause, which is quite outside the scope of this amending Bill. Therefore, I will put Clause 3 to vote.

Sri Mulka GOVINDA REDDY.—I would like to know whether Sri Rajasekharamurthy had tabled his amendment before Sri Bheemappa Naik's amendment was tabled or whether he has tabled his amendment after Sri Bheemappa Naik has tabled his amendment.

Sri Kadidal MANJAPPA.—That is irrelevant.

Sri Mulka GOVINDA REDDY.—Not irrelevant. Just now you have taken a decision on Sri Bheemappa Naik's amendment. Automatically, Sri Rajasekhara Murthy's amendment which is counter to that amendment cannot be moved. That is what the Speaker said.

Mr. SPEAKER.—I caught the point raised by the Hon'ble Member. But even otherwise, it was communicated to him that the amendment was not in order. Therefore I said 'for more than one reason'.

Sri Mulka GOVINDA REDDY.—Thank you.

Mr. SPEAKER.—The question is :

"That Clause 3 stand part of the Bill."

The motion was adopted.

Clause 3 was added to the Bill.

Mr. SPEAKER.—Clause 1. The question is :

"That Clause 1 stand part of the Bill."

The motion was adopted.

Clause 1 was added to the Bill.

Mr. SPEAKER.—Title and Preamble. The question is :

"That the Title and the Preamble stand part of the Bill."

The motion was adopted.

The Title and the Preamble were added to the Bill.

Motion to pass.

Sri H. SIDDAVEERAPPA.—I beg to move :

"That the Motor Vehicles (Mysore Amendment) Bill, 1955, as amended, be passed."

Mr. SPEAKER.—The question is :

"That the Motor Vehicles (Mysore Amendment) Bill, 1955, as amended, be passed."

The motion was adopted.

THE MYSORE TENANCY (SECOND AMENDMENT) BILL, 1954.

Motion to consider (contd.)

Mr. SPEAKER.—Now we shall take up the discussion on the Mysore Tenancy (Second Amendment) Bill, 1954. Sri Channabasappa will continue his speech.

ಶ್ರೀ ಎಚ್. ಎಂ. ಚನ್ನಬಸಪ್ಪ (ಪೆರಿಯಾಪಟ್ಟಣ).—ಸ್ವಾಮೀ, ಈ ಗೇಣಿದಾರರ ತಿದ್ದುಪಡಿ ಮಸೂದಾ ಕಾನೂನು ಬಗ್ಗೆ ಹೋದ ಸಲ ಮಾತನಾಡಿದಾಗ ಅದು premature ಎಂದು ಹೇಳುವುದಕ್ಕೆ ಎಷ್ಟು ಕಾರಣ ಗಳು ಬೇಕೋ ಅಷ್ಟು ಕಾರಣಗಳನ್ನೂ ಕೊಟ್ಟಿದ್ದೇನೆ. ಈ ತಿದ್ದುಪಡಿ ಮಸೂದಾ ಕಾನೂನನ್ನು ತರುವುದಕ್ಕೆ ಕಾರಣಗಳನ್ನು ಕೊಟ್ಟಿರುವುದನ್ನು ಸ್ವಲ್ಪ ಪರಿಶೀಲಿಸಿ ದರೆ ಆ ಕಾರಣಗಳು ಇವೊತ್ತು ಇವೆ ಎಂಬುದನ್ನು ತೋರಿಸಬಹುದು. Certain difficulties have been experienced by the landless tenants.

ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸ ನಗರ).—ಮಾನ್ಯ ಸದಸ್ಯರು ಪ್ರಾರಂಭದಿಂದ ಷುರು ಮಾಡುವಹಾಗೆ ಕಾಣುತ್ತದೆ.

Mr. SPEAKER.—He will only continue his speech. Any Hon'ble Member is entitled to bring to my notice any repetition in arguments.

*ಶ್ರೀ ಹೆಚ್. ಎಂ. ಚನ್ನಬಸಪ್ಪ.—ಸುಮಾರು 15 ದಿವಸದ ಮೇಲೆ ಆಗಿದೆಯಾದ್ದರಿಂದ ಅನೇಕವೇಳೆ ಯಾವ ಯಾವ ವಿಷಯಗಳನ್ನು ಪ್ರಸ್ತಾಪ ಮಾಡಿದ್ದೆವು ಎನ್ನುವುದು ಸ್ವಲ್ಪ ಮರೆಯುತ್ತದೆ. ತಮ್ಮನ್ನು request ಮಾಡಿಕೊಳ್ಳುವಾಗ ಕೆಲವು ಮುಖ್ಯ ಅಂಶ ಗಳನ್ನು ಪುನಃ ಹೇಳಬೇಕಾಗಿ ಬರುತ್ತದೆ. ಕೆಲವು ಕಷ್ಟಗಳು ಜಮೀನ್ದಾರರುಗಳಿಂದ ಮತ್ತು ಗೇಣಿದಾರ ರುಗಳಿಂದ ತಿಳಿದುಬಂದಿವೆ, ಅವನ್ನು ನಿವಾರಣೆ ಮಾಡುವುದಕ್ಕೋಸ್ಕರ ಈ ತಿದ್ದುಪಡಿಯನ್ನು ತಂದಿದ್ದೇ ವೆನ್ನುವುದು ಒಂದು ಕಾರಣ. ಎರಡನೆಯದು:

The Planning Commission have recommended the enactment of legislation conferring greater security of tenure on cultivating tenants and the conferring of the right to acquire ownership of the lands cultivated by them . . .

Sri Kadidal MANJAPPA (Minister for Revenue and Public Works).—He has advanced that argument. He has referred to the Planning Commission. He has stated that the Planning Commission has erred.

Sri H. M. CHANNABASAPPA.—I will tell you what the Planning Commission has said. ಈ ಭೂಸುಧಾರಣೆಯ ಅಂಗವಾಗಿ ಗೇಣಿ ಕಾನೂನನ್ನು ತಿದ್ದುಪಡಿ ಮಾಡಬೇಕು ಎಂಬುದು ಸರ್ಕಾರದ ಉದ್ದೇಶ. ಅವರ ತತ್ವಗಳು ಬಹಳ ಶ್ಲಾಘನೀಯವಾದುವು. ಆದರೆ ಬರೀ ತತ್ವಗಳಿಂದು ನಾವು ಕೆಲಸ ಮಾಡುವುದಕ್ಕೆ ಹೋಗಿ ಕಷ್ಟಗಳ ಪರಂಪರೆಯಲ್ಲಿ ತೊಡರಿಕೊಳ್ಳತಕ್ಕದ್ದು ಸರಿಯಲ್ಲವೆಂಬುದು ನನ್ನ ವಾದ. ಇದರ ಜೊತೆಗೆ ನಾವು ಯಾವ ಉದ್ದೇಶವನ್ನು ಸಾಧನೆ ಮಾಡಬೇಕೆಂಧು ಹೊರಟಿದ್ದೇವೆಯೋ ಆ ಉದ್ದೇಶವನ್ನು ಸುಲಭ ಮಾರ್ಗದಲ್ಲಿ ಸಾಧನೆ ಮಾಡಬೇಕು ಎಂಬುದು ನನ್ನ ಅಭಿಪ್ರಾಯ.

ಈ ಗೇಣಿ ಮಸೂದಾ ಕಾನೂನನ್ನು 1952 ನೆ ಇಸವಿಯಲ್ಲಿ ನಾವು ಅದನ್ನು ಚರ್ಚೆಮಾಡಿದಾಗ ಈ ವಿಷಯಗಳನ್ನು ಅಂದರೆ ಈಗ ಹೊಸದಾಗಿ ತರಬೇಕೆಂದಿರತಕ್ಕ ವಿಷಯಗಳನ್ನೆಲ್ಲ ಚರ್ಚೆ ಮಾಡದೆ ಇಲ್ಲ. ಐದು ವರ್ಷಗಳ ಅವಧಿಯನ್ನು ಹತ್ತುವರ್ಷ ಮಾಡಬೇಕೆನ್ನುವ ಪ್ರಶ್ನೆಯೂ ಇತ್ತು. ಮತ್ತು ಗೇಣಿದಾರನಿಗೆ ಜಮೀನನ್ನು ಕೊಂಡುಕೊಳ್ಳತಕ್ಕ ಹಕ್ಕನ್ನು ಕೊಡಬೇಕೆಂಬುದೂ ಇತ್ತು. ಈಗ ಯಾವಯಾವ ಉದ್ದೇಶಗಳನ್ನು ನಮೂದು ಮಾಡಿದ್ದಾರೋ ಅವೆಲ್ಲವೂ ಕೂಡ ಆ ಹೊತ್ತಿನ ದಿವಸ ಚರ್ಚೆಯಲ್ಲಿದ್ದುವು. ಅವುಗಳೆಲ್ಲವನ್ನೂ ಕೂಲಂಕಷವಾಗಿ ಚರ್ಚೆಮಾಡಿ ಇವೊತ್ತಿನ ದಿವಸ ನಮ್ಮ ಸಂಸ್ಥಾನದಲ್ಲಿರುವ ಪರಿಸ್ಥಿತಿಗೆ ಹೊಂದಿಕೊಳ್ಳುವಂತೆ ಕಾನೂನು ಹೇಗಿರಬೇಕು ಎಂದು ಮಾನ್ಯಸಭೆ ನಿರ್ಧಾರ ಮಾಡಿತು. ಹಾಗೆ ನಿರ್ಧಾರ ಮಾಡಿದಾಗ ಆ ಕಾನೂನನ್ನು ನಮ್ಮಲ್ಲಿ ಕೆಲವು ತಾಲ್ಲೂಕುಗಳಲ್ಲಿ ಮಾತ್ರ ಜಾರಿಗೆ ಕೊಟ್ಟು, ಅವಶ್ಯಕಬಿದ್ದಾಗ ಇತರ ಕಡೆಗಳಲ್ಲಿಯೂ ಜಾರಿಗೆ ಕೊಡಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸಲ್ಪಟ್ಟಿತು.

Sri Kadidal MANJAPPA.—All this he has stated. But I have no objection.

Sri H. M. CHANNABASAPPA.—Many of the important facts which I have touched upon last time I am repeating just to impress on you.

Sri Kadidal MANJAPPA.—Too much.

Sri H. M. CHANNABASAPPA.—You are suffering from too much of land reform. That is the difficulty.

Mr. SPEAKER.—I want to bring to the notice of the Hon'ble Members that it is quite relevant for any Hon'ble Member to bring to the notice of the House that repetition of argument should be avoided. It is strictly provided for in the Rules.

ಶ್ರೀ ಮುಲ್ಕ ಗೋವಿಂದರೆಡ್ಡಿ (ಚಿತ್ರದುರ್ಗ).—ಇದಕ್ಕೆಲ್ಲ ಸರ್ಕಾರದವರೇ ಹೊಣೆ. ಒಂದು ಬಿಲ್ ಬಂದಾಗ ಅದನ್ನು ಪೂರ್ತಿಯಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದರೆ ಈ ರೀತಿಯಾಗುತ್ತಿರಲಿಲ್ಲ. They will have to bear with the arguments.

Mr. SPEAKER.—I have no objection, if the House does not object.

Sri A. BHEEMAPPA NAIK (Molakalmuru).—Once on a Full Moon day they bring in this Bill and it is unfortunate that they take it back at the tail end of the day. If that is taken up again, how will the House understand what a member has said already ?

Mr. SPEAKER.—Arguments should not be repeated at length. He was reminding the House of what he was saying.

Sri H. M. CHANNABASAPPA.—I would request the Hon'ble Members and the Hon'ble Minister to bear with me, with what I say.

Sri K. PUTTASWAMY.—We have no option.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಈ ಎರಡು ಉದ್ದೇಶಗಳಿಗಾಗಿ ತಂದಿದ್ದೇವೆಂದು ಹೇಳಿದ್ದಾರೆ. 1952ನೆ ಇಸವಿಯಲ್ಲಿ ಪಾಸ್ ಮಾಡಿದ ಕಾನೂನನ್ನು ಸರ್ಕಾರದವರು 1954ನೇ ಇಸವಿ ಜನವರಿ ಒಂದನೇ ತಾರೀಖು ದೇಶಾದ್ಯಂತ ಜಾರಿಗೆಕೊಟ್ಟರು. ಈ ತಿದ್ದುಪಡಿ ಕಾನೂನನ್ನು ತಂದದ್ದು 1954ನೆ ಇಸವಿ ಅಕ್ಟೋಬರ್ ನಲ್ಲಿ ಎಂದರೆ ಹತ್ತು ತಿಂಗಳು ಕಳೆಯುವುದರೊಳಗಾಗಿಯೇ ಒಂದು ತಿದ್ದುಪಡಿಯನ್ನು ತಂದರು. ಆ ತಿದ್ದುಪಡಿಯನ್ನು draft ಮಾಡಬೇಕಾದರೆ ಸುಮಾರು ಎರಡು ತಿಂಗಳ ಮುಂಚೆ ತೆಗೆದುಕೊಂಡಿರುತ್ತಾರೆ. ಕಾನೂನನ್ನು ಜಾರಿಗೆ ಕೊಟ್ಟ ಆರೇಳು ತಿಂಗಳೊಳಗಾಗಿಯೇ ಇದಕ್ಕೆ ತಿದ್ದುಪಡಿ ಮಸೂದಾ ಕಾನೂನನ್ನು ತರಬೇಕೆಂದು ಮನಸ್ಸು ಮಾಡಿರಬೇಕಾದರೆ ಇದಕ್ಕೆ ಮಹತ್ಕಾರಣಗಳೇನಿದ್ದುವು ಎಂಬುದನ್ನು ತಾವೇ ಯೋಚನೆಮಾಡಬೇಕು. ಈ ಕಾನೂನು ಯಾವರೀತಿ ಕೆಲಸಮಾಡಿದೆ ಎನ್ನುವುದರ ಅನುಭವವೇ ಅವರಿಗೂ ಇಲ್ಲ, ನಮಗೂ ಇಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ತಮಗಿಲ್ಲದೆ ಇರಬಹುದು ; ನನಗಿದೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ತಮಗೆ ಅನುಭವವಿದೆಯೋ ಇಲ್ಲವೇ ಎನ್ನುವುದನ್ನು ಯೋಚನೆಮಾಡುವ ಶಕ್ತಿ ಈ ಮಾನ್ಯ ಸಭೆಗಿದೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಕಾನೂನಿನ ವ್ಯಾಪ್ತಿ ದೇಶದಲ್ಲಿ ಎಷ್ಟರಮಟ್ಟಿಗೆ ಪ್ರಸರಿಸಿದೆ ಎಂಬುದನ್ನು ಮಾನ್ಯ ಮಂತ್ರಿಗಳು ಮತ್ತು ಸರ್ಕಾರದವರು ತಿಳಿದುಕೊಳ್ಳಬೇಕಾದದ್ದು ಅಗತ್ಯ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಈ ಶಾಸನದಲ್ಲಿ ಮುಖ್ಯವಾಗಿ, 5 ವರ್ಷಗಳ ಅವಧಿ ಒಬ್ಬ ಗೇಣಿದಾರನಿಗೆ ಇರತಕ್ಕದ್ದು ಎಂದು ಮಾಡಿದ್ದಾರೆ. ಈ ಕಾನೂನು ದೇಶಾದ್ಯಂತ ಗೊತ್ತಾಗಬೇಕಾದರೆ ಕೆಲವು ವರ್ಷಗಳು ತೆಗೆದುಕೊಳ್ಳುತ್ತದೆ. ಒಂದು ವೇಳೆ ಕಾನೂನು ಪ್ರಾರಂಭವಾದಂದಿನಿಂದ 5 ವರ್ಷ ಗೇಣಿ ಕರಾರುಗಳು ಮುಗಿದಮೇಲೆ ಇಂಥಿಂಥ ಕಷ್ಟಸುಖಗಳು ಬಂದುವು ಎಂದರೆ ಒಪ್ಪಿಕೊಳ್ಳಬಹುದು. ಕೇವಲ 5-6 ತಿಂಗಳು ಕಳೆಯುವುದಕ್ಕೆ ಮೊದಲೇ ಇದರ ಅವಶ್ಯಕತೆ ಇದೆ ಎಂದರೆ ಒಪ್ಪುವುದಕ್ಕಾಗುವುದಿಲ್ಲ. ಅಂತೂ ನನಗೆ ತಿಳಿದಿರುವಂತೆ ಮತ್ತು ಈ ಸಭೆಯ ಮಾನ್ಯ ಸದಸ್ಯರನೇಕರಿಗೆ ತಿಳಿದಿರುವಂತೆ ಈ ಕಾನೂನಿನ ವಿಷಯದಲ್ಲಿ ಆಕ್ಷೇಪಣೆ ಎದ್ದು, ಅಸಮಾಧಾನ ಹೊಂದಿ ಬೇರೆ ಕಾನೂನು ಆಗಲೇ ಬೇಕು ಎಂಬ ಒತ್ತಡ ಯಾವ ಮೂಲೆಯಿಂದಲೂ ಬಂದಿರಲಿಲ್ಲವೆಂದು ನನ್ನ ಅನುಭವದಲ್ಲಿ ಮತ್ತು ಅನೇಕ ಮಾನ್ಯ ಸದಸ್ಯರ ಅನುಭವದಲ್ಲಿದೆ.

ಎರಡನೆಯದು ಏನೆಂದರೆ: Planning Commissionನವರ ಒತ್ತಡ ಬಹಳ ಜೋರಾಯಿತು. ಎಂಬುದು. Land reforms ಮಾಡತಕ್ಕ ವಿಷಯದಲ್ಲಿ ಈ ಸಭೆಯಲ್ಲಿ ಅನೇಕವೇಳೆ Planning Commission ಸರಿಯಿಲ್ಲವೆಂದು ಹೇಳುತ್ತಿದ್ದಾರೆ. ಅದಕ್ಕೋಸ್ಕರವಾಗಿ ವಿಷಯವನ್ನು ಸರಿಯಾಗಿ ನಾವು ತಿಳಿದುಕೊಳ್ಳತಕ್ಕದ್ದು ಮತ್ತು ದೇಶ ತಿಳಿದುಕೊಳ್ಳತಕ್ಕದ್ದು ಬಹಳ ಅವಶ್ಯಕವಿದೆ.—Planning Commission report ನಲ್ಲಿ land policy ಎನ್ನತಕ್ಕದ್ದರಲ್ಲಿ ಮಾನ್ಯ ಸದಸ್ಯರ ಮತ್ತು ಸರ್ಕಾರದ ಗಮನಕ್ಕೆ ಈ ಕೆಲವು ಅಂಶಗಳನ್ನು ತರುತ್ತೇನೆ.

"The achievement of these economic and social aims is as much a part of the purpose of the Five-Year Plan as the fulfilment of targets in industry or transport or agriculture. While broad principles and directions of policy can be indicated, it is necessary to remember that the form and manner of their application and the adaptations to which they are subject will differ widely in different parts of the country. In the main, land policy has to be worked out in terms of local needs and local conditions. The texture of relationships concerning land, conditions of economic life, the social composition of rural communities and the pattern of occupational distribution differ widely, so that no generalisation can have more than a limited value."

ಇದನ್ನು ಮಾನ್ಯ ಸದಸ್ಯರು ಮತ್ತು ಮಹಾಜನರು ಗಮನದಲ್ಲಿಟ್ಟುಕೊಂಡರೆ ಅವರು ಬಹಳ ವಿಚಾರಪೂರ್ವಕವಾದ ವಿಷಯವನ್ನು ತಿಳಿಸಿದ್ದಾರೆಂಬುದು ಗೊತ್ತಾಗುತ್ತದೆ. ಆ ಭೂಸ್ವಾಮ್ಯ ಪದ್ಧತಿಯಲ್ಲಿ ಬದಲಾವಣೆ ಮಾಡಬೇಕಾದರೆ ಎಲ್ಲದಕ್ಕೂ ಒಂದೇ ನಮೂನೆ ಮಾಡುವುದಕ್ಕಾಗುವುದಿಲ್ಲ, ಎಲ್ಲ ಕಡೆಯೂ ಒಂದೇ ತರಹ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಆಯಾ ಸ್ಥಳ, ಅಲ್ಲಿನ ಪರಿಸ್ಥಿತಿ, ಅಲ್ಲಿನ conditions ಇವನ್ನೆಲ್ಲ ದೃಷ್ಟಿಯಲ್ಲಿಟ್ಟುಕೊಂಡು ಆಯಾ ಸ್ಥಳಕ್ಕೆ, ಪರಿಸ್ಥಿತಿಗೆ, ಅನುಗುಣವಾಗುವಂಥ, ಮೂಲಭೂತವಾದ ನೀತಿ ಏನಿದೆಯೋ ಅದಕ್ಕೆ ವಿರೋಧ ಬಾರದ ರೀತಿಯಲ್ಲಿ ನಾವು ಶಾಸನಗಳನ್ನು ಮಾಡಬೇಕೆಂದು Planning Commissionನವರು ಅವರ ವರದಿಯಲ್ಲಿ ಸೂಚನೆ ಕೊಟ್ಟಿದ್ದಾರೆಯೇ ವಿನಾ ಬೊಂಬಾಯಿನಲ್ಲಿ ಇಂಥ ಕಾನೂನಿದೆ, ಪಂಜಾಬಿನಲ್ಲಿ ಇಂಥ ಕಾನೂನಿದೆ, ಪಶ್ಚಿಮ ಬಂಗಾಳದಲ್ಲಿ ಇದೆ, ಆದುದರಿಂದ ಮೈಸೂರಿನಲ್ಲಿಯೂ ಮಾಡಿ ಎಂದು ಹೇಳಲಿಲ್ಲ.

Sri Kadidal MANJAPPA.—Sir, the Planning Commission have devoted a chapter on land policy. My learned friend read two sentences and conveniently left out what has been stated there.

Sri A. BHEEMAPPA NAIK.—Will the Hon'ble Minister wish that it should be uniform all throughout India? There, it is stated that it should vary according to the conditions of the area.

Sri H. M. CHANNABASAPPA.— I point out these two sentences:

"In the main, land policy has to be worked out in terms of local needs and conditions. The texture of relationships concerning land, conditions of economic life, the social composition of rural communities and the pattern of occupational distribution differ widely, so that no generalisation can have more than a limited value."

ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ—ಅನುಸೂಚಿತ ಜಾತಿಗಳು).—ಆಯಾ ಸ್ಥಳಕ್ಕೆ ಅನುಗುಣವಾಗಿ ಬದಲಾಯಿಸಬೇಕು ಎಂದು ಅಪ್ಪಣೆ ಕೊಡಿಸುತ್ತಿದ್ದಾರೆ. ಮೈಸೂರು ಜಿಲ್ಲೆಗೇ ಒಂದು, ಪಿರಿಯಾಪಟ್ಟಣ ತಾಲ್ಲೂಕಿಗೇ ಒಂದು, ಮೈಸೂರು ತಾಲ್ಲೂಕಿಗೇ ಒಂದು, ಶಿವಮೊಗ್ಗ ಜಿಲ್ಲೆಗೇ ಒಂದು ಬೇಕು ಎಂದು ಅರ್ಥವೇ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಆಯಾ ಸಂಸ್ಥಾನದಲ್ಲಿರತಕ್ಕ ಪರಿಸ್ಥಿತಿ, ಅಲ್ಲಿ ಭೂಮಿಯ ಮೇಲೆ ಇರತಕ್ಕ ಒತ್ತಡ, ಅಲ್ಲಿನ ಪ್ರಜಾಸಂಖ್ಯೆ, agricultural population, tenancy problem, ಮತ್ತು ಹೇರಳವಾದ ಜಮೀನು ಕೆಲವರ ಕೈಯಲ್ಲಿ ಇರುವುದು, ಇವೆಲ್ಲವನ್ನೂ ಗಣನೆಗೆ ತೆಗೆದುಕೊಂಡು ಅಲ್ಲಲ್ಲಿಗೆ ಅನುಗುಣವಾಗುವಂತೆ ಶಾಸನವನ್ನು ಮಾಡಬೇಕು ಎಂದು ಸೂಚನೆ ಕೊಟ್ಟಿದ್ದಾರೆ. ಆದ್ದರಿಂದ ಶ್ರೀಮಾನ್ ಮಂಜಪ್ಪನವರೇ, ನಾನು ಹೇಳತಕ್ಕದ್ದೇ ಸರಿ.

ಶ್ರೀ ಎಸ್. ಸಿದ್ದಪ್ಪ.—ಲಗ್ನಮಾಡಿಕೊಳ್ಳಬೇಕು ಎಂದರೆ, ತಂದೆತಾಯಿಗಳನ್ನು ಕೇಳಿ ಲಗ್ನಮಾಡಿಕೊಳ್ಳಬೇಕೆಂದು ಅರ್ಥ! ಇದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು.

4-30 P.M.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಇದರ ಜೊತೆಗೆ, ಭೂಸ್ವಾಮ್ಯ ಪದ್ಧತಿ ಬದಲಾವಣೆ ಮಾಡಬೇಕೆಂಬ ಸೂಚನೆ ಇಟ್ಟಿರುವಾಗ ಮುಖ್ಯವಾಗಿ ಗಮನದಲ್ಲಿಟ್ಟು ಕೊಳ್ಳಬೇಕಾದ ವಿಷಯಗಳು ಯಾವುವು ಎನ್ನುವುದನ್ನೂ ಪ್ಲಾನಿಂಗ್ ಕಮಿಷನರು ಸೂಚನೆ ಕೊಟ್ಟಿದ್ದಾರೆ. ಅದರ ಪ್ರಕಾರ Top priority ಯಾವುದಕ್ಕೆ ಕೊಡಬೇಕು ಎಂದರೆ, Increased Agricultural production, Higher level of Agricultural Efficiency—ಇವೆರಡನ್ನೂ ಮುಖ್ಯ ಗಮನದಲ್ಲಿಟ್ಟುಕೊಳ್ಳಬೇಕು. ಆಮೇಲೆ minimisation and elimination of exploitation, ಎಂದರೆ ಒಬ್ಬರು ಇನ್ನೊಬ್ಬರನ್ನು ಶೋಷಣೆ ಮಾಡುವುದನ್ನು ತಪ್ಪಿಸಬೇಕು. ಅನಂತರ Highest level of agricultural efficiency; minimisation of or abolition or elimination of exploitation. Bring down the possibility of works and means of production, and abolition of all intermediaries. ಈ disability ಎಲ್ಲೆಲ್ಲಿದೆಯೆಂದು ನೋಡಿಕೊಂಡು ಅದನ್ನು ಒಂದಕ್ಕೊಂದಕ್ಕೆ ಸರಿಹೋಗುವಂತೆ ಕಡಮೆ ಮಾಡಬೇಕು. Abolition of Intermediaries ಎಂದರೆ, ಮಧ್ಯವರ್ತಿಗಳಾಗಿದ್ದು ತಾವು ವ್ಯವಸಾಯ ಮಾಡದೆ ಬೇರೆಯವರು ವ್ಯವಸಾಯ ಮಾಡಿದ್ದರಿಂದ ಬಂದದ್ದನ್ನು ತೆಗೆದುಕೊಂಡು ಸುಮ್ಮನೆ ಕುಳಿತಿರುವ ಜನರನ್ನು ಕಡಮೆ ಮಾಡಬೇಕೆಂಬ ಮೂಲಭೂತವಾದ ಉದ್ದೇಶವನ್ನಿಟ್ಟುಕೊಂಡು ಭೂ-ಸುಧಾರಣೆಗಳನ್ನು ಮಾಡಬೇಕೆಂದು ಹೇಳಿದ್ದಾರೆ. ಈ ರೀತಿಯಾಗಿ ಪ್ಲಾನಿಂಗ್ ಕಮೀಷನ್ನಿನವರು ಭೂಸುಧಾರಣೆ ಮಾಡುವಾಗ ಇಂಥಿಂಥ ರೀತಿಯಲ್ಲೇ ಮುಂದುವರಿಯಬೇಕೆಂದು ಬಹಳ ಚನ್ನಾಗಿ ಉದಹರಿಸಿದ್ದಾರೆ. . . . I am very sorry that the Hon'ble Minister goes beyond what is necessary. As he rightly put it some time during the discussion in the A.I.C.C., he is more an economist than a socialist. But we want him to be socialist so long as we are here.

Sri Kadidal MANJAPPA.—He is misquoting me, Sir. In the A.I.C.C., I said some other thing but not what he said.

Sri H. M. CHANNABASAPPA.—He said "I have a tendency to go communist."

Sri Kadidal MANJAPPA.—Certainly not.

Sri H. K. VEERANNA GOWDH (Maddur).—He takes pride in that.

ಶ್ರೀ ಎಚ್. ಎಂ. ಚನ್ನಬಸಪ್ಪ.—"I have a tendency to go communist" ಎಂದು ಹೇಳಿ "ನನ್ನನ್ನು ಅನೇಕರು ಕಮ್ಯುನಿಸ್ಟ್ ಎಂದೇ ಕರೆಯುತ್ತಾರೆ" ಎಂದು ಅವರು ಹೆಮ್ಮೆಪಟ್ಟುಕೊಂಡರು. ಅಂದ ಮೇಲೆ ಕಮ್ಯೂನಿಸ್ಟ್ ಭಾವನೆಗಳು ಅವರಲ್ಲಿ ಕಾಣಬರುತ್ತವೆಂದು ಹೇಳಬಹುದು. ಆದ್ದರಿಂದ ನಾನು ಸರ್ಕಾರದವರಿಗೆ ಸೂಚನೆ ಕೊಡತಕ್ಕದ್ದು, ಈ ಹೊತ್ತು ಭರತ ಖಂಡದಲ್ಲಿ ಕಮ್ಯುನಿಸ್ಟ್ ಮನೋಭಾವನೆಯನ್ನು ಬೆಳೆಸಬೇಕೆಂಬ ಅಭಿಪ್ರಾಯ ಯಾರಿಗೂ ಇಲ್ಲ. ಸೋಷಿಯಲಿಸ್ಟ್ ಪ್ಯಾಟ್ರನ್ ಮಾಡಬೇಕೆಂಬುದೇ ಅಖಿಲ ಭಾರತ ಕಾಂಗ್ರೆಸ್ಸಿನ ಸೂಚನೆಯಾಗಿದೆ ಹಾಗೂ ಕೇಂದ್ರ ಸರ್ಕಾರದವರ ಸೂಚನೆಯೂ ಆಗಿದೆ. ಆದ್ದರಿಂದ ಅಂಥ ಕಮ್ಯುನಿಸ್ಟ್ ಭಾವನೆಗಳು ಅವರಲ್ಲಿದ್ದರೆ ಅದನ್ನು ತಡೆಗಟ್ಟಿ, ಸೋಷಿಯಲಿಸ್ಟ್ ಭಾವನೆಗಳನ್ನು ಬೆಳೆಸಿಕೊಳ್ಳಲೆಂದು ನಾನು ಮಾನ್ಯ ಸಚಿವರಿಗೆ ಸೂಚಿಸಬಯಸುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಭಾವನೆಗಳೇನು ? ಸೋಷಿಯಲಿಸ್ಟೇ ಅಥವಾ ಕಮ್ಯುನಿಸ್ಟೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನನ್ನ ಭಾವನೆ, ಈ ದೇಶ ಯಾವುದನ್ನು ಮಾಡಬೇಕೆಂದು ನಿರೀಕ್ಷಣೆ ಮಾಡುತ್ತಿದೆಯೋ ಅದೇ.

ಆಮೇಲೆ, ಭೂಸ್ವಾಮ್ಯವನ್ನು ಬದಲಾವಣೆ ಮಾಡಬೇಕೆಂದು ಹೇಳಿ ಹಿಂದೆಯೇ 28 ಜನ ಪ್ರವೀಣರನ್ನೊಳಗೊಂಡ ಒಂದು ಸಮಿತಿಯೇರ್ಪಾಡಾಗಿತ್ತು. ಆ ಕಮಿಟಿ ಎರಡು ವರ್ಷ ಕುಳಿತು ದೇಶದ ಎಲ್ಲಾ ವಿಷಯಗಳನ್ನೂ ಪರಿಶೀಲನೆ ಮಾಡಿತು. ನಾನೂ ಆ ಕಮಿಟಿಯ ಒಬ್ಬ ಸದಸ್ಯನಾಗಿದ್ದೆ. ಈ ಸಭೆಯ ಅನೇಕ ಮಾನ್ಯ ಸದಸ್ಯರೂ ಆ ಕಮಿಟಿಯಲ್ಲಿದ್ದರು. ಆ ಕಮಿಟಿಯವರು ತಮ್ಮ ವರದಿಯ 146ನೆಯ ಪುಟದಲ್ಲಿ 'Need for tenancy legislation in Mysore' ಎಂದು ಹೇಳಿ ಇದರ ಅವಶ್ಯಕತೆಯೇನಿದೆಯೆಂಬುದನ್ನು ತಿಳಿಸಿದ್ದಾರೆ.

ಒಬ್ಬ ಸದಸ್ಯರು.—ಒಬಿರಾಯನ ಕಾಲದ್ದು !

ಶ್ರೀ ಎಚ್. ಎಂ. ಚನ್ನಬಸಪ್ಪ.—1950ನೆಯ ಇಸವಿ, ಒಬಿರಾಯನ ಕಾಲವಲ್ಲ. I will only read some relevant portion of it. ಅಲ್ಲಿ ಹೇಳಿದ್ದಾರೆ:

> "In view of the fact that the tenancy problem is not acute in Mysore State, most of us were inclined at first to the view that no legislation is necessary in this behalf."

Please bear with me, I may be one with you.

> "This view is supported by the evidence we heard from the landholders of the Malnad, where only the number of tenants is anywhere near the number of owner cultivators. These landholders were all agreed that due to the paucity of cultivators in the Malnad, tenants are a valuable asset and that no landholder would rackrent a tenant or evict him as tenants are always in great demand and difficult to get and large extents of land were available. This was generally agreed to by the representatives of the Genidars' Association, who however urged that legislation should be enacted fixing maximum

(ಶ್ರೀ ಎಚ್. ಎಂ. ಚನ್ನಬಸಪ್ಪ.)

rents at the scales prescribed in the Bombay Act and giving the protected tenant the right to compel the landlord to sell the land to him for a reasonable price. In these circumstances, most of us felt inclined to think that legislation might actually make the relationship between landlords and tenants worse than it is now, as it would be impossible to provide by law for all the small points which are covered by local usage or mutual understanding in the several areas. We were also inclined to consider that tenancy legislation may be injurious to the tenant also, as it would inevitably result in a crop of litigation. But the members from the Malnad were able to persuade most of us to the view that while the provisions of the Bombay Tenancy Act of 1948 are too drastic for application to Mysore, a simple Tenancy Act is necessary."

"We have, therefore, come to the conclusion that it would be better to make an attempt from now alone to foster better relationship between the landlords and tenants by a simple legislation which would ensure a fair deal to the tenant and make him feel contented."

This is what the Land Reforms Committee have stated in their Report only in 1950 after taking evidence from all interested people.

ಈ ರೀತಿಯಾಗಿ ಅವರು 1950ನೆಯ ಇಸವಿಯಲ್ಲಿ ಹೇಳಿದರು. ಅದರ ಮೇಲೆಯೇ 1952ನೆಯ ಇಸವಿಯಲ್ಲಿ ಟೆನೆನ್ಸಿ ಕಾನೂನು ಬಂದದ್ದು. ಆಗ ಇದೆಲ್ಲವನ್ನೂ ಪರಿಶೀಲನೆ ಮಾಡಿ, ಐದು ವರ್ಷವೆಂದು ಮಾಡುವುದು ಸೂಕ್ತ. . .

Sri Kadidal MANJAPPA.—I am listening that argument for the fifth time, Sir.

Sri H. M. CHANNABASAPPA.—What is the Hon'ble Minister going to lose? Why should he get impatient?

ಅವರ ರಿಪೋರ್ಟಿನ ಆಧಾರದ ಮೇಲೆಯೇ ಅನೇಕ ವಿಷಯಗಳನ್ನು ಕೂಲಂಕಷವಾಗಿ ಚರ್ಚೆ ಮಾಡಿ ನಮ್ಮ ದೇಶಕ್ಕೆ ಅನುಗುಣವಾದ ಟೆನೆನ್ಸಿ ಕಾನೂನನ್ನು ಆ ದಿವಸ ಜಾರಿಗೆ ಕೊಟ್ಟೆವು. ಅದೇ ಸಂದರ್ಭದಲ್ಲಿ ನಮ್ಮ ಅಕ್ಕಪಕ್ಕ ದೇಶಗಳಲ್ಲಿ ಟೆನೆನ್ಸಿ problem ಬಹಳ ಉಗ್ರವಾಗಿತ್ತು. ಹಾಗಿದ್ದರೂ ನಮ್ಮ ಸಂಸ್ಥಾನದ ಪರಿಸ್ಥಿತಿಯನ್ನು ನೋಡಿಕೊಂಡು ಇಷ್ಟಿದ್ದರೆ ಸಾಕು ಎಂದು ಮಾಡಿದೆವು. ನಮ್ಮ ಉದ್ದೇಶವೆಲ್ಲಾ ಉಳುವವನಿಗೇ ಜಮೀನಾಗಬೇಕು, ಬೆಂಗಳೂರು, ಮೈಸೂರುಗಳಲ್ಲಿದ್ದುಕೊಂಡು ಮಂಡ್ಯ, ಶ್ರೀರಂಗಪಟ್ಟಣಗಳಲ್ಲಿ ಜಮೀನುಗಳನ್ನಿಟ್ಟುಕೊಂಡು absentee landlords ಆಗಿರುವುದು ತಪ್ಪಬೇಕು ಎಂಬುದು. ಹೀಗಿರುವಾಗ ಈ ಟೆನೆನ್ಸಿ ಲೆಜಿಸ್ಲೇಷನ್ ಮಾಡುವುದರಿಂದ ಟೆನೆನ್ಸಿಗೆ ಎಷ್ಟು ಅನಾನುಕೂಲವಾಗುತ್ತದೆ, ಎಷ್ಟು ತೊಂದರೆಯಾಗುತ್ತದೆಯೆಂಬುದನ್ನು ಗಮನಿಸಬೇಕು. ಹೈದರಾಬಾದಿನಲ್ಲಿದ್ದಂಥ ಟೆನೆನ್ಸಿ ಕಾನೂನು ನಮಗಿಂತ ಬಹಳ ಉಗ್ರವಾಗಿದ್ದುದನ್ನು, ಅಗ್ರೇರಿಯನ್ ರಿಫಾರ್ಮ್ಸ್ ಕಮಿಟಿಯೆಂಬ ವಿಶೇಷ ಸಮಿತಿಯು ಐದು ವರ್ಷ ಜಾರಿಯಲ್ಲಿದ್ದ ಕಾನೂನು ಯಾವ ರೀತಿ ಕೆಲಸ ಮಾಡಿದೆಯೆಂಬುದನ್ನು ಐದು ತಿಂಗಳಕಾಲ ಪರಿಶೀಲನೆ ಮಾಡಿ, ಕೊನೆಗೆ ಆ ಕಾನೂನನ್ನೇ ತೆಗೆದು ಹಾಕಬೇಕೆಂದು ಹೇಳಿತು. ಅದರಮೇಲೆ ಒಬ್ಬ ಸ್ಪೆಷಲ್ ಆಫೀಸರನ್ನು ನೇಮಕ ಮಾಡಿದರು.

The report of the Special Officer discloses that the working of the Act in those districts was most disappointing.

Sri Kadidal MANJAPPA.—May I know the date of that report, Sir?

Sri H. M. CHANNABASAPPA.—This is 1949 Report. I am telling how exactly the Tenancy Act has work edthere according to the report of the Special Officer. I will come to the conclusion later on.

Sri Kadidal MANJAPPA.—Here is the Hyderabad Report. If he wants, I may give this for the information of the Hon'ble Member.

Sri H. M. CHANNABASAPPA.—I really cannot understand why the Hon'ble Minister is so very impatient. Why don't you know things? We will do something which you want later on.

Sri Kadidal MANJAPPA.—Let us not waste the time of the House by bringing to it notice old things. Here is the latest development report.

Sri H. M. CHANNABASAPPA.—I am making out a case that tenancy of this kind is not the remedy for the evil. That is my point. I am going to propose what are the remedies that we have to resort to if we want land reforms in this State. This Bill is not the remedy; it is simply an eye wash.

Sri Kadidal MANJAPPA.—The Hon'ble Member need not bring to the notice of the House the old reports or statements published.

Sri H. M. CHANNABASAPPA.—It was the duty of the Minister who is in-charge of this Bill to have brought to

the notice of the House, if any report has been subsequently published. If he had put in that report, probably this point would not have been raised at all. The Special Officer observes in that report that the tenants right would be insecure if frequent enactments, etc., etc., are made. Though the Government have provided an Act five years ago, almost all the grievances of the tenants are still there.

This is the report of the Special Officer appointed to go into the working of the Tenancy Act as to what has been achieved by that Tenancy Act. ನಾನು ಇದನ್ನು ಹೇಳುತ್ತಿರುವುದು ಭೂಸುಧಾರಣೆ ಬೇಡವೆಂದು ಹೇಳುವುದಕ್ಕಲ್ಲ. ನೀವು ಕೊಡುವ ಔಷಧಿಯಿಂದ ಭೂಸುಧಾರಣೆಯಾಗಿ ನಮ್ಮ ಉದ್ದೇಶ ಸಾಧನೆಯಾಗುವುದಿಲ್ಲ, ಅದಕ್ಕೆ ಬೇರೆ ಮಾರ್ಗ ಹಿಡಿಯಿರಿ ಎಂದು ಸೂಚನೆ ಕೊಡಲು ಇಷ್ಟೆಲ್ಲಾ ಹೇಳಬೇಕಾಗಿ ಬಂತು. ಮುಖ್ಯವಾಗಿ ಒಂದು ವಿಷಯ ಗಮನದಲ್ಲಿಡಬೇಕು. ಬೇರೆ ದೇಶಗಳಲ್ಲಿ ಅದೂ ಭರತ ಖಂಡದಲ್ಲಿ ಭೂಸ್ವಾಮ್ಯ ಪದ್ಧತಿ ಯಾವರೀತಿಯಿದೆ, ಅಲ್ಲೇನು ಪರಿಸ್ಥಿತಿಯಿದೆ ಎಂದು ಸ್ವಲ್ಪ ಹೇಳಿದರೆ ಬಹುಶಃ ಅಲ್ಲಿರುವುದು ನಮಗನುಗುಣವಾಗಿಲ್ಲವೆಂದು ಗೊತ್ತಾಗುತ್ತದೆ. ಬೊಂಬಾಯಿನಲ್ಲಿ ಜಮೀನ್ದಾರಿ ಪದ್ಧತಿಯಲ್ಲಿ ನೂರಕ್ಕೆ 25 ರಷ್ಟು ಭೂಮಿಯಿದೆ; ಅಸ್ಸಾಂನಲ್ಲಿ ಶೇಕಡ 16, ಮದ್ರಾಸಿನಲ್ಲಿ ಶೇಕಡ 33, ಸೆಂಟ್ರಲ್ ಪ್ರಾವಿನ್ಸಿನಲ್ಲಿ ಶೇಕಡ 45, ಒರಿಸ್ಸಾದಲ್ಲಿ ಶೇಕಡ 75, ಬಂಗಾಳದಲ್ಲಿ ಶೇಕಡ 87, ಇಷ್ಟು ಎಕರೆ ಜಮೀನು ಬರೀ ಜಮೀನ್ದಾರಿ ಪದ್ಧತಿಯಲ್ಲಿದೆ. ಇಲ್ಲಿ ಬರೀ ಇನಾಂ ಪದ್ಧತಿ ಮಾತ್ರ ಇರುವುದು, ಜಮೀನ್ದಾರಿ ಪದ್ಧತಿಯಿಲ್ಲ. ಅಲ್ಲಿನ ಪರಿಸ್ಥಿತಿಗನುಗುಣವಾಗಿ ಅಲ್ಲೂ ಇಲ್ಲಿನ ಪರಿಸ್ಥಿತಿಗನುಗುಣವಾಗಿ ಇಲ್ಲೂ ಭೂಸ್ವಾಮ್ಯಪದ್ಧತಿಯ ವಿಚಾರದಲ್ಲಿ ಶಾಸನ ಮಾಡಬೇಕಾಗಿದೆ. ಅಲ್ಲಿರುವುದನ್ನೇ ಇಲ್ಲೂ ಜಾರಿಗೆ ತಂದರೆ ಪೂರ್ಣಪ್ರಯೋಜನವಾಗಲಾರದು. ಅಲ್ಲಿ ಈಗ ಜಮೀನ್ದಾರಿಪದ್ಧತಿ ರದ್ದಾಯಿತು. ಈಗ ನಮ್ಮ ದೇಶದಲ್ಲಿ ಜಮೀನ್ದಾರಿ ಪದ್ಧತಿಯಿಲ್ಲ; ಇನಾಂ ಪದ್ಧತಿಯಿತ್ತು; ಅದನ್ನು ರದ್ದುಮಾಡಿದ್ದೇವೆ. ಈಗ ದೇಶದಾದ್ಯಂತ ರೈತವಾರಿ ಪದ್ಧತಿ ಜಾರಿಯಲ್ಲಿದೆ. ಇಲ್ಲಿ ಟೆನೆನ್ಸಿಪ್ರಾಬ್ಲಂ ಎಷ್ಟಿದೆಯೆಂಬುದಕ್ಕೆ ಮೊದಲೇ ಅಂಕಿ ಅಂಶಕೊಟ್ಟಿದ್ದೇನೆ. ಭಾರತದ ಬೇರೆ ಪ್ರಾಂತಗಳಿಗೆ ಹೋಲಿಸಿದರೆ ಬೊಂಬಾಯಿನಲ್ಲಿ 52, ತಿರುವಾಂಕೂರು-ಕೊಚಿನ್‌ನಲ್ಲಿ 50, ವೆಸ್ಟ್‌ಪಂಜಾಬಿನಲ್ಲಿ 42, ನಮ್ಮ ದೇಶದಲ್ಲಿ 58, ಟೆನೆನ್ಸಿಯಲ್ಲಿರುವುದು 4,06,393 ಜನ, ಸಂಸಾರಗಳು 75-80 ಸಾವಿರ ಅವರ ಪೈಕಿ ಎಲ್ಲರಿಗೂ ಜಮೀನಿಲ್ಲವೆಂದು ಹೇಳುವ ಹಾಗಿಲ್ಲ. ಅಲ್ಪಸ್ವಲ್ಪ ಜಮೀನಿರುವವರು ಉತ್ಪತ್ತಿ ಸಾಲದೆ ಬೇರೆಯವರ ಜಮೀನು ಮಾಡಿ ಅವರ ಗೇಣೀದಾರರಾಗಿರುವುದೂ ಉಂಟು. ಅಂಥವರೂ ಕೂಡ ಈ ನಾಲ್ಕು ಲಕ್ಷ ಚಿಲ್ಲರೆಯಲ್ಲಿ ಸೇರಿದಾರೆ. ಅಂದಮೇಲೆ ನಮ್ಮ ದೇಶದಲ್ಲಿ ಭೂಸ್ವಾಮ್ಯ ಸ್ವಲ್ಪ ಹೆಚ್ಚುಕಡಮೆ ಇತರ ಇಂಡಿಯಾ ದೇಶದ ಪ್ರಾಂತಗಳೊಡನೆ ಹೋಲಿಸಿದರೆ ಸಾಧಾರಣೆಯಾಗಿದೆಯೆಂಬುದು ಸ್ವಯಂವೇದ್ಯವಾಗಿದೆ. ಈ ಪರಿಸ್ಥಿತಿಯಲ್ಲಿ ಇಲ್ಲಿಗನುಗುಣವಾಗಿ ಶಾಸನ ಮಾಡತಕ್ಕದ್ದು ಯುಕ್ತವೇ ವಿನಾ ಬೊಂಬಾಯಿನಲ್ಲಿ ಯಾವರೀತಿಯಿದೆಯೋ ಅದನ್ನು ಮಕ್ಕೀಕಾಮಕ್ಕಿ ಮೈಸೂರಿಗನುಗುಣವಾಗಿ ಜಾರಿಯಲ್ಲಿ ತರಬೇಕೆಂದು ಹೇಳಿದರೆ ಒಳ್ಳೆಯದಾಗುವುದಾದರೆ ಅಭ್ಯಂತರವಿಲ್ಲ. ಆದರೆ ಒಳ್ಳೆಯದಾಗುತ್ತದೆಯೆ ಎಂದು ನಮ್ಮ ಪರಿಸ್ಥಿತಿಗೆ ಹೋಲಿಸಿ ನೋಡಬೇಕಾದದ್ದು ಅವಶ್ಯಕವಾಗಿದೆ. ನಮ್ಮ ದೇಶದಲ್ಲಿ ಒಂದು ಹಿಡುವಳಿಯಲ್ಲಿ 500 ಎಕರೆ ಮೇಲ್ಪಟ್ಟಿರುವುದು ಕೇವಲ 64 ಸಾವಿರ ಎಕರೆ; ಇಷ್ಟು ಹಿಡುವಳಿಯಲ್ಲಿರುವುದು. ಇದು ಕೇವಲ 77 ಜನರ ಕೈಯಲ್ಲಿದೆ. ಮೈಸೂರು ಡಿಸ್ಟ್ರಿಕ್ಟಿನಲ್ಲಿ ಒಂದು, ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ 8, ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ 8, ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ 11, ಚಿಕ್ಕಮಗಳೂರು ಡಿಸ್ಟ್ರಿಕ್ಟಿನಲ್ಲಿ 31, ಹಾಸನ ಡಿಸ್ಟ್ರಿಕ್ಟಿನಲ್ಲಿ 13, ತುಮಕೂರು ಡಿಸ್ಟ್ರಿಕ್ಟಿನಲ್ಲಿ 5 ಈ ರೀತಿಯಿದೆ. ಈ 77 ಜನರ ಪೈಕಿ ಸುಮಾರು 55 ಜನ ಚಿಕ್ಕಮಗಳೂರು, ಶಿವಮೊಗ್ಗ, ಹಾಸನ ಈ ಮೂರು ಜಿಲ್ಲೆಗಳಲ್ಲಿದ್ದಾರೆ. ಈ ಮೂರು ಜಿಲ್ಲೆಗಳಲ್ಲಿ ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳಲ್ಲಿ ಬೆಟ್ಟಗುಡ್ಡ ಜಾಸ್ತಿ; ಕಾಫಿ ಎಸ್ಟೇಟುಗಳಲ್ಲಿ 500 ರಿಂದ 1,000 ಎಕರೆವರೆಗೆ ಜಮೀನಿದೆ. ಒಟ್ಟಿನಲ್ಲಿ 500 ಎಕರೆ ಮೇಲ್ಪಟ್ಟಿರುವ ಜಮೀನಿನಿಂದ ಅಷ್ಟಾಗಿ ನಮ್ಮ ದೇಶಕ್ಕೆ ಸಹಾಯವಾಗುವುದಿಲ್ಲ ಎಂದು ಸೂಚಿಸಲು ಇದನ್ನು ಹೇಳಿದೆ. ಇನ್ನು 100 ಎಕರೆ ಮೇಲ್ಪಟ್ಟಿರುವುದು ಒಟ್ಟು 4,06,293 ಎಕರೆ; ಅದು 2,489 ಜನರ ಕೈಯಲ್ಲಿದೆ. ಅದು ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ ಕಡೆ ಹೆಚ್ಚಾಗಿದೆ. ಚಿಕ್ಕಮಗಳೂರಿನಲ್ಲಿ 1,019, ಚಿತ್ರದುರ್ಗದಲ್ಲಿ 599, ಶಿವಮೊಗ್ಗದಲ್ಲಿ 356 ಈ ರೀತಿಯಿದೆ. ಇದನ್ನು ಸ್ವಲ್ಪ ಮನಸ್ಸಿನಲ್ಲಿಟ್ಟು ಭೂಸ್ವಾಮ್ಯ ಪದ್ಧತಿ ಯಾವರೀತಿ ಮಾಡಬೇಕೆಂದು ನಾವೂ ನೀವೂ ಕಲೆತು ತೀರ್ಮಾನಮಾಡೋಣ. ಉದ್ದೇಶ ಸಾಧನೆಯಾಗಬೇಕೆಂಬುದೇ ನಮ್ಮ ಅಭಿಪ್ರಾಯ. ಆದರೆ ಸಾಧನೆ ಮಾಡುವಾಗ ಔಷಧಿ ಕೊಟ್ಟು ಹೊಸಪರಿಸ್ಥಿತಿಯನ್ನುಂಟುಮಾಡಬಾರದೆಂದು ಸೂಚನೆಕೊಡುತ್ತಿದ್ದೇನೆ. For every 100 acres, 95 is owned by people owning less than 100 acres, only 5.6 per cent of the land is held by people owning above 100 acres. ಇನ್ನು 50 ಎಕರೆ ಮೇಲ್ಪಟ್ಟಿರುವುದು ಕೇವಲ ಶೇಕಡ 15. ಜನರಿಗೆ ಶೇಕಡ 85ರಷ್ಟು ಭೂಮಿ ನಮ್ಮ ದೇಶದಲ್ಲಿ 50 ಎಕರೆಗಳಿಗಿಂತ ಕಡಮೆ ಉಳ್ಳವರಲ್ಲಿ ಸೇರಿದೆ. ಹೋಲ್ಡಿಂಗ್ ಇರುವುದು 82 ಲಕ್ಷ ಎಕರೆ. ಶೇಕಡ 15 ತೆಗೆದರೆ ಉಳಿದಿರುವುದು 50 ಎಕರೆಗಳಿಗಿಂತ ಕಡಮೆಯಿರುವ ಹಿಡುವಳಿಯಲ್ಲಿದೆ. ಇದೇನೂ ಹೆಚ್ಚಲ್ಲ. You may be surprised if you know what is obtaining in China. 1953ನೆಯ ಇಸವಿಯ ಅಂಕಿಅಂಶ ಅಲ್ಲಿ ಹೇಗಿದೆಯೆಂಬುದನ್ನು ಹೇಳುತ್ತೇನೆ. 90 per cent of the agriculturing families own 47 per cent of the land. About 10 per cent of the population own 53 per cent of the land. ಇಲ್ಲಿ ಎಕ್ಸ್‌ಪ್ಲಾಯ್ಟೇಷನ್ ಆಗ ಕೂಡದು ಎಂಬುದು ನಮ್ಮ ಉದ್ದೇಶ. People who are not cultivators, absentee landlords should be eliminated. ಎರಡನೆಯ ಉದ್ದೇಶ ಉತ್ತು ಬಿತ್ತಿ ಜೀವನ ಮಾಡಬೇಕೆಂದಿರುವ ಎಲ್ಲರಿಗೂ ಭೂಮಿ ಕೊಡಬೇಕೆಂಬುದು. ಜಮೀನನ್ನು ಗುತ್ತಿಗೆಗೆ ಅಥವಾ ವಾರಕ್ಕೆಮಾಡಿ ಜೀವನ ಮಾಡುವವರೆಲ್ಲರಿಗೂ ಜಮೀನುದೊರಕಬೇಕೆಂಬುದು ನನ್ನ ಅಭಿಪ್ರಾಯ. ಈ

(SRI H. M. CHANNABASAPPA)

ಎರಡೂ ಸಾಧನೆಯಾಗಬೇಕಾದ್ದಲ್ಲದೆ ಭೂಮಿ ವ್ಯವಸಾಯ ಮಾಡುವ ವಿಧಾನ ಉನ್ನತಮಟ್ಟದಲ್ಲಿ ನಡೆಯಬೇಕು, ಉತ್ಪತ್ತಿ ಹೆಚ್ಚಬೇಕು. ಈ ನಾಲ್ಕನ್ನೂ ದೃಷ್ಟಿಯಲ್ಲಿಟ್ಟು ಈ ಕಾನೂನನ್ನು ಪರಿಶೀಲನೆಮಾಡಬೇಕು. ಮಾನ್ಯಸದಸ್ಯರು ಈ ಕಾನೂನಿನಲ್ಲಿ ಈ ಉದ್ದೇಶಗಳು ಸಾಧನೆಯಾಗುತ್ತವೆಂದು ಹೇಳಿದರೆ ನಾನೂ ತಮ್ಮೊಡನೆ ಸೇರಿ ಇದನ್ನು ಒಪ್ಪುತ್ತೇನೆ. ಅದಕ್ಕೆ ಬದಲಾಗಿ ಈ ಕಾನೂನಿಂದ ಅಹಿತವಾಗುವುದಾದರೆ ಪ್ರಯೋಜನವಿಲ್ಲ. ಕೆಲವು ವೇಳೆ ಬಡವರಿಗೆ ಅನೇಕ ಕಿರುಕುಳವಾಗಿ ಲಂಚ ರುಷುವತ್ತು ಹೆಚ್ಚಲು ಅವಕಾಶವಿದೆ. ಅದಕ್ಕೆ ಅವಕಾಶವಾದರೆ ವಾಸ್ತವವಾಗಿ ಸಾಧನೆಮಾಡಬೇಕೆಂದಿರುವ ಉದ್ದೇಶಕ್ಕೆ ಬದಲಾಗಿ ಇನ್ನೊಂದು ಪರಿಣಾಮ ಉಂಟಾಗಿ ಅದಕ್ಕೆ ಪರಿಹಾರ ಕಲ್ಪಿಸಬೇಕಾದ ಸಂದರ್ಭ ವೊದಗುತ್ತದೆ. ಈಗಿರುವ ಹಾಗೆ ಅನಾನುಕೂಲವಾಗಲು ಅವಕಾಶವಿದೆಯೆಂಬುದನ್ನು ಒಂದೊಂದು ಸೆಕ್ಷನ್ ತೆಗೆದುಕೊಂಡು ತೋರಿಸುತ್ತೇನೆ. ಶ್ರೀ ಪುಟ್ಟಸ್ವಾಮಿ ಮತ್ತು ಶ್ರೀ ತಿಮ್ಮಪ್ಪಗೌಡರ ತಾಲ್ಲೂಕಿನ ಅಂಕಿಅಂಶ ಕೊಡುವುದನ್ನು ಮರೆತೆ, ಸಂಸ್ಥಾನದಲ್ಲಿ 6,09,828 ಗೇಣಿದಾರರಿದ್ದಾರೆ. ಅವರ ಪೈಕಿ ಮಂಡ್ಯ ಡಿಸ್ಟ್ರಿಕ್ಟಿನಲ್ಲಿ 20,228 ಜನರೂ ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ 9,509 ಜನರೂ ಇದ್ದಾರೆ.

5 P.M.

ಶ್ರೀ ಟಿ. ಎನ್. ಮುಡಲಗಿರಿಗೌಡ (ಕುಣಿಗಲು).—ಕಿರುಕುಳವಾಗತಕ್ಕದ್ದು ಹಿಡುವಳಿದಾರರ ದೃಷ್ಟಿಯಿಂದಲೋ? ಅಥವಾ ಗೇಣಿದಾರರ ದೃಷ್ಟಿಯಿಂದಲೋ? ಹಾಗಾದರೆ ತಾವು ಹೇಳುವ ಪ್ರಕಾರ ಗೇಣಿದಾರು ಹೆಚ್ಚು ಸಂಖ್ಯೆ ಎಂದು ತಿಳಿದುಕೊಳ್ಳೋಣವೇ? ಹಿಡುವಳಿದಾರರು ಹೆಚ್ಚು ಸಂಖ್ಯೆ ಎಂದು ತಿಳಿದುಕೊಳ್ಳೋಣವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಶ್ರೀಮಾನ್ ತಿಮ್ಮಪ್ಪಗೌಡರು ಆ ವಿಷಯದಲ್ಲಿ ಅಂಕಿ ಅಂಶ ಕೊಟ್ಟಿದ್ದಾರೆ, ಪೆರಿಯಾಪಟ್ಟಣದಲ್ಲಿ ಬೇಕಾದಷ್ಟು ಜಮೀನು ಇದೆ, ಯಾರು ಬೇಕಾದರೂ ಉಳುಮೆ ಮಾಡುವುದಕ್ಕೆ ಬರಬಹುದು. ಸರ್ಕಾರದವರು ಸ್ವಲ್ಪ ಉದಾರವಾಗಿ ಇರಬೇಕು ಅಷ್ಟೆ. ಇದು ನಮ್ಮ ದೇಶದ ಪರಿಸ್ಥಿತಿ. I invite the Hon'ble Ministers' attentions to his *Anki Amsa* ಆ ಅಂಕಿ ಅಂಶಗಳ ಪ್ರಕಾರ ಬಳ್ಳಾರಿ ಸೇರಿ 8 ಲಕ್ಷ 82 ಸಾವಿರ ಎಕರೆ ಅಸೆಸ್ಡ್ ವೇಸ್ಟ್ ಇದೆ. ವ್ಯವಸಾಯಕ್ಕೆ ಲಾಯಖ್ಖಾಗಿಲ್ಲದೆ ಹೋದರೆ, ಅದರ ಮೇಲೆ ಅಸೆಸ್‌ಮೆಂಟ್ ಹಾಕುವುದಿಲ್ಲ. It will not come under assessed waste.

(*Interruption*)

Assessed waste is land which can be cultivated and which has been assessed for the purpose of disposing it of to the landlord in actual possession.

Sri Kadidal MANJAPPA.—He has given me figures on the last occasion.

Mr. SPEAKER.—Yes, last time, he had given the figures.

Sri H. M. CHANNABASAPPA.—The Hon'ble Minister said the other day that these figures are incorrect. So I want to make sure. If the Minister wants to contend, let him contend here.

8 ಲಕ್ಷ 83 ಸಾವಿರ ಎಕರೆ ನಮ್ಮ ಸಂಸ್ಥಾನದಲ್ಲಿ ಇವೊತ್ತು ಭೂಮಿ ಉಳುವುದಕ್ಕೆ ಸಿದ್ಧವಾಗಿದೆ ಎಂದು ಹೇಳಿದರು. ಅದು ಸರಿಯಲ್ಲ ಎಂದು ಹೇಳುವುದಾದರೆ ತಮ್ಮ ಅಂಕಿ ಅಂಶಗಳು ಸುಳ್ಳಾಗಬೇಕಾಗುತ್ತದೆ. ಇದರ ಜೊತೆಗೆ ಶ್ರೀಮಾನ್ ಟಿ. ಮರಿಯಪ್ಪನವರು ಮಂತ್ರಿಗಳಾಗಿದ್ದಾಗ Fallow Land Act ತಂದರು. ಅದರ ಪರಿಣಾಮವಾಗಿ ಇವೊತ್ತು ಸಾಗುವಳಿಗೆ ಯೋಗ್ಯವಾಗಿರತಕ್ಕ 19 ಲಕ್ಷ ಎಕರೆ ಜಮೀನು ಸಿಕ್ಕಬಹುದು.

ಶ್ರೀ ಟಿ. ಮರಿಯಪ್ಪ (ಮೈಸೂರು ಉತ್ತರ).—Fallow lands ವಿಸ್ತೀರ್ಣ ಹೆಚ್ಚಾಗುವುದು, ಕಮ್ಮಿ ಆಗುವುದು ಮಳೆ ಇತ್ಯಾದಿ ಅನೇಕ ಕಾರಣಗಳ ಮೇಲೆ ಅವಲಂಬಿಸುತ್ತದೆ.

Sri H. M. CHANNABASAPPA.—I quite see. ಅವರು ಬಹಳ ಒಳ್ಳೆಯ ಉದ್ದೇಶದಿಂದ ಆ ಮಸೂದೆಯನ್ನು ತಂದರು. ಏಕೆಂದರೆ ಅನೇಕರು ನೂರಾರು ಎಕರೆ ಭೂಮಿಯನ್ನು ಇಟ್ಟುಕೊಂಡು ತಾವೂ ವ್ಯವಸಾಯ ಮಾಡದೆ, ಮಾಡುವವರಿಗೂ ಕೊಡದೆ dog in the manger ಪಾಲಿಸಿ ಅನುಸರಿಸಿಕೊಂಡು ಬಂದಿದ್ದಾರೆ. ಅಂಥದನ್ನು ತಪ್ಪಿಸಬೇಕೆಂದು ಬಹಳ ಒಳ್ಳೆಯ ಉದ್ದೇಶದಿಂದ ಅದನ್ನು ತಂದರು. ಇಷ್ಟಾದರೂ ಕೂಡ ಹೆಚ್ಚು ಭೂಮಿ ಇದ್ದರೂ ಉಳುಮೆಯಾಗುತ್ತಾ ಇಲ್ಲ. 1943-44ರಲ್ಲಿ 67 ಲಕ್ಷ 27 ಸಾವಿರ ಎಕರೆ cropped area ಇತ್ತು. ಅದೆ 1952-53ರಲ್ಲಿ 66 ಲಕ್ಷ 66 ಸಾವಿರ ಎಕರೆ ಆಗಿದೆ. ಎಂದರೆ ಈ ಹತ್ತು ವರ್ಷಗಳಲ್ಲಿ ಸುಮಾರು 50-60 ಸಾವಿರ ಎಕರೆಯಷ್ಟು ಕಮ್ಮಿ ಆಗಿದೆ.

Sri M. LINGANNA (Nanjangud).—It is going to take a lot of time.

Sri H. M. CHANNABASAPPA.—I am only quoting from their figures and placing the facts before you. If the House wishes to rise and if the Chair will give me permission to speak tomorrow. . . .

Mr. SPEAKER.—Tomorrow is a holiday. Therefore, we can sit for half an hour more to day.

Sri Kadidal MANJAPPA.—At this rate, I do not think that the Hon'ble Member will be able to finish discussion on this Bill in one month. Some Hon'ble Members felt that the Government have withdrawn the Bill and then re-introduced the same. We have not withdrawn the Bill and we have not re-introduced also. On account of the tactics adopted by some members, we had to postpone discussion.

Sri H. M. CHANNABASAPPA.—I should like to humbly submit to the Chair that this is a Bill of far-reaching

consequences and any time is worth spending on this. We do not want to make a hasty legislation and come back to this House again with an amendment.

Mr. SPEAKER.—I would like to bring to the notice of the House one thing. Of course, I will allow only new points. Repetition of arguments should certainly be avoided and on this point Rules of Procedure are clear. Some Hon'ble Members may take this opportunity to prolong the debate. But the Rules of Procedure are very clear in the matter that there should be no repetition of the arguments and also matters that are discussed here must be strictly relevant to the subject. Under these conditions, I will allow any length of time to discuss this Bill.

Sri H. M. CHANNABASAPPA.—But for the fact that we had to take up the Bill after 20 days, there was no necessity for me to quote the same figures.

Mr. SPEAKER.—Suppose we discontinue today and take up the same on some other day, the same thing will happen.

Sri H. M. CHANNABASAPPA.—It is not the intention of the members to waste the time of the House.

Sri H. K. VEERANNA GOWDH.—Sir, it is not the intention of some of us to prolong unnecessarily. As Sri Channabasappa put it, it is a Bill of far-reaching consequences. Simply because, we want to expedite the work of the legislature and simply because we want to go away on the 19th, it does not mean that we should not discuss the Bill in detail. I am only bringing to your notice that it is not the intention of the Members to take this opportunity to prolong the discussion unduly and unnecessarily.

Mr. SPEAKER.—If the House agrees to pass this Bill, it must sit for longer hours. The House will now rise for the day and meet at 8-30 A. M. on Saturday.

The House adjourned for the day at Ten Minutes past Five of the Clock to meet again on Saturday, the 9th April 1955 at Thirty Minutes past Eight of the Clock.

WD 4508—GPB—550—22-9-55

THE MYSORE LEGISLATIVE ASSEMBLY.

THIRTY-SEVENTH DAY.

Saturday, 9th April 1955.

The House met in the Assembly Hall, Old Public Offices, Bangalore, at Thirty Minutes past Eight of the Clock.

Mr. SPEAKER (Sri H. S. Rudrappa, B.Sc., LL.B.), in the Chair.

Question Nos. **775, 808, 812, 539, 658, 553, 898** and **899**—The members were not present when the questions were called.

QUESTIONS FOR ANSWER ON THE DAY.

(but not taken up).

Electric Power (Supply for Irrigation purposes).

Q.—539. Sri G. PAPANNA (Sidlaghatta and Chikballapur).—

Will the Government be pleased to state:—

(*a*) the extent of money provided by the Central Government and also by the State Government during the last three years for the purpose of supplying electricity to irrigation purposes;

(*b*) the extent of amount lapsed at the end of each year out of the amount so allotted for this purpose?

A.—Dr. R. NAGAN GOWDA (Minister for Agriculture).—

(*a*)

Year	The amount of loan granted by the Central Government (Tenable from 1st July of the year up to 30th June of the next year)	Amount allotted out of the State Revenues (For the Official year)
1951-52 ...	Rs. 50 lakhs ... (sanctioned in 1950-51, but utilised in 1951-52)	Rs. 51,09,947
1952-53 ...	Rs. 50 lakhs ...	Rs. 50 lakhs
1953-54 ...	Rs 50 lakhs ...	Rs. 65 lakhs

(*b*)

Year	Lapses as per Central Loan	Lapses as per State allotment
1951-52 ...	Rs. 10,19,272 ...	Rs. 16,80,722
1952-53 ...	No lapse ...	Rs. 14,78,834
1953-54 ...	Rs. 5,81,574 ...	Rs. 10,40,679

Depressed Classes for Arsikere Taluk (Grants for purchase of bullocks)

Q.—553. Sri B. CHIKKANNA (Javagal).—

Will the Government be pleased to state:—

(*a*) the amount provided for purchasing bullocks for agricultural purposes to the depressed class people in Arsikere Taluk during 1954-55;

(*b*) the families in each village of this taluk to whom bullocks are supplied (whether bullocks are supplied or money is given for purchase may be furnished)?

A.—Sri K. HANUMANTHAIYA (Chief Minister).—

(*a*) Rs. 600.

(*b*) (i)

	Village		*No. of families*
1.	Haranahalli	...	1
2.	Kurubarahalli	...	1
3.	Arekere	...	2
4.	Vaderahalli	...	1
5.	Kadalamage	...	1

(ii) Bullocks were purchased and distributed.

Prisons and Jail Reforms.

Q.—658. Sri S. GOPALA GOWDA (Sagar-Hosanagar).—

Will the Government be pleased to state :—

(*a*) the number of prisoners that are at present in the various jails (including Bellary) of the State (details to be furnished jailwar, *re* the number convicted, the number under trial, the number of juveniles and the number of males and females) ;

(*b*) of them, the number of life-long prisoners in the Central Jail, Bangalore ;

(*c*) of them, whether there are any who are in jail for a period more than that required by law ;

(*d*) whether they have received any representation from these prisoners requesting for mass release or concessions ;

(*e*) the number of prisoners that are being made use of every day for the construction of Vidhana Soudha building ;

(*f*) whether they are being given wages for the work done ;

(*g*) the action taken by them till now for the general reforms of Jails ?

A.—Sri A. G. RAMACHANDRA RAO (Minister for Law and Education).—

(*a*) 1. Central Jail, Bangalore :

	Males	*Females*
Convicts	681	21
Under-trials	191	7
Juveniles	7	5
Total	879	33=912

2. Mysore Jail, Mysore :

Convicts	238	1
Under-trials	31	2
Juveniles (under-trials)	4	...
Total	273	3=276

3. Central Jail, Bellary :

Convicts	129	...
Under-trials	3	...
Juveniles	...	...
Total	132	...=132

4. Alipuram Jail, Bellary :

Convicts	1,138	...
Under-trials	...	...
Juveniles	...	....
Total	1,138	...=1,138

(*b*)

Males	*Females*	*Total*
130	8	138

(*c*) Nil.

(*d*) Nil.

(*e*) Not exceeding 200 prisoners.

(*f*) Yes. They are being given wages according to the quality and quantity of work done and gauged by the Public Works Department.

(*g*) A list of important items of reforms introduced in Prisons in the State in accordance with the recommendations of the Prison Reforms Committee is appended herewith. Further reforms contemplated are noted below :—

(1) The relaxation of rules in respect of the release of prisoners on parole and extending the period of parole.

(2) Extending the benefit of remission system to prisoners sentenced to imprisonment for short periods of less than six months.

(3) Provision for indoor games and outdoor games.

(4) Restoration of pre-ration scale of diet to prisoners in jails and lock-ups.

(5) Starting of a shop in the Jails for the benefit of prisoners to purchase sweets, tobacco, jaggery, betel leaves, etc., from out of their earnings.

(6) Cultural activities like drama, etc., in the jail and later if found satisfactory in open theatres.

(7) Framing of rules for implementing the Mysore Borstal Schools Act, 1943 and the Mysore Children Act, 1943, and

(8) Framing of rules for the release of well behaved prisoners on probation system and establishing private Certified Schools and Rescue Homes.

1. Amenities and indulgences shown to condemned prisoners.
G.O. No. P. 5250-52—Pris. 62-41-6, dated 19th May 1942.
2. Provision of recreation to female prisoners.
G.O. No. P. 5405-15—Pris. 62-41-9, dated 27th May 1942.
3. Interviews with prisoners—simplification of procedure.
G.O. No. P. 5716—Pris. 62-41-10, dated 22nd June 1942.
4. Simplification of procedure for interviews.
G.O. No. P. 5831—Pris. 62-41-12, dated 27th June 1942.
5. Medical attendance on female prisoners.
G.O. No. P. 78—Pris. 62-41-13, dated 1st July 1942.
6. Use of books by prisoners—supply of writing materials.
G.O. No. P. 466—Pris. 6-41-15, dated 20th July 1942.
7. Annual grant to the Jail libraries.
G.O. No. P. 467—Pris. 62-41-11, dated 20th July 1942.
8. Issue of butter-milk to prisoners.
G.O. No. P. 6699-709—Pris. 2-42-4, dated 7th July 1942.
9. Abolition of corporal punishments in Jails.
G.O. No. P. 698—Pris. 2-42-3, dated 27th July 1942.
10. Enhancement of scale of clothing and toilet articles to female prisoners.
G.O. No. P. 853-4—Pris. 2-42-7, dated 1st August 1942.
ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಕಾನೂನಿನಲ್ಲಿ ಹಾಗೆ ಎಲ್ಲಿಯೂ ಹೇಳಲಿಲ್ಲ. ಹಾಗೆ ಅವಕಾಶ ಕೊಡಬಾರದೆಂದು ಉದ್ದೇಶ ಕೂಡ ಯಾವ ಸದಸ್ಯರಿಗೂ ಇಲ್ಲ. ಆದರೆ ಕಾನೂನು ಏನು ಹೇಳುತ್ತಿದೆ ಎಂದರೆ—ಒಂದಾವರ್ತಿ ಒಬ್ಬ ಸದಸ್ಯರು ಒಂದು ವಿಚಾರದ ಮೇಲೆ ಮಾತನಾಡಿದರೆ ಪುನಃ ಅದೇ ಸದಸ್ಯರಿಗೆ ಆ ವಿಚಾರದ ಮೇಲೆ ಮಾತನಾಡಲು ಅವಕಾಶವಿಲ್ಲ. ಆದರೆ ಪುನಃ ಅವರು ಮಾತನಾಡುವುದಕ್ಕೆ ಅವಕಾಶವೂ ಇದೆ. ಅವಕಾಶ ಯಾವಾಗ ಇದೆಯೆಂದರೆ—ಯಾವಾಗ ಅಧ್ಯಕ್ಷರು ಅಂಥಾದ್ದಕ್ಕೆ ಇಷ್ಟಪಟ್ಟು ಅವಕಾಶ ಕೊಟ್ಟರೆ ಆಗ ಅವರಿಗೆ ಮಾತನಾಡಲು ಪುನಃ ಅವಕಾಶವಿರುತ್ತದೆ. ಈ ಒಂದು ಅಂಶವನ್ನು ಮಾನ್ಯ ಅಧ್ಯಕ್ಷರು ತಮ್ಮ ಗಮನಕ್ಕೆ ತೆಗೆದುಕೊಂಡು ಅಥವಾ ಇತರ ಇನ್ನು ಯಾವುದಾದರೂ ಅಂಥಾ ಪ್ರಾಮುಖ್ಯವಾದ ವಿಚಾರವಿದ್ದರೆ ಅದನ್ನೂ ಕೂಡ ಅಧ್ಯಕ್ಷರು ಗಮನಕ್ಕೆ ತೆಗೆದುಕೊಂಡು ಅವಕಾಶ ಕೊಡಬಹುದು ಎಂದು ರೂಲ್ಸಿನಲ್ಲಿದೆ. ಆದುದರಿಂದ ಈಗ ನಡೆಯುತ್ತಿರುವ ವಿಚಾರದಲ್ಲಿ ಪುನಃ ಅವರಿಗೆ ಮಾತನಾಡಲು ಅವಕಾಶ ಕೊಡಬಹುದೆಂದು ಮಾನ್ಯ ಅಧ್ಯಕ್ಷರು ಭಾವಿಸುವುದಾದರೆ ಮತ್ತೆ ಅವರಿಗೆ ಮಾತನಾಡಲು ಅವಕಾಶ ಕೊಡಬಹುದು ಎಂದು ನಾನು ಹೇಳುತ್ತೇನೆ. ಆದರೆ ಮಾನ್ಯ ಚನ್ನಬಸಪ್ಪನವರು ಈಗಾಗ್ಗೆ ಅನೇಕ ವಿಷಯಗಳನ್ನು ತಿಳಿಸಿದ್ದಾರೆ. ಆದುದರಿಂದ ಈಗ ಅಧ್ಯಕ್ಷರು ತಮ್ಮ ಡಿಸ್ಕ್ರಿಷನ್ನನ್ನು ಉಪಯೋಗಿಸಿ ಅವಕಾಶ ಕೊಡಬಹುದು. ರೂಲ್ಸಿನಲ್ಲಿ ಹಾಗೆ ಕೊಡಕೂಡದೆಂದು ಎಲ್ಲಿಯೂ ಹೇಳಿಲ್ಲ.

9 30 A. M.

ಶ್ರೀ ತಿಮ್ಮಪ್ಪಗೌಡರು ಹೇಳುತ್ತಿದ್ದ ಹಾಗೆ ಈ ದಿನ ವಿಷಯ ಬಂದ ಸಂದರ್ಭದಲ್ಲಿ ಅವರು ಇರಲಿಲ್ಲ, ಈ ಬಿಲ್ಲಿನ ಮೇಲೆ ಸುಮಾರು 10-15 ದಿವಸಗಳ ಹಿಂದೆ ಚರ್ಚೆ ನಡೆಯಿತು, ಆಗ ಒಂದು ದಿನವೆಲ್ಲಾ ಮಸೂದೆಯ ಮೇಲೆ ಮಾತನಾಡಿದರು, ಮೊನ್ನೆದಿವಸ ಅವರೇ ಭಾಷಣ ಮುಂದುವರಿಸಲಿ ಎಂದು ಹೇಳಿದಪ್ರಕಾರ ಮುಂದುವರಿಸಿದರು, ಈ ದಿನ ಅದೇ ವಿಷಯ ಬಂದಾಗ ಮಾನ್ಯ ಚೆನ್ನಬಸಪ್ಪನವರು ಇಲ್ಲದೆ ಇದ್ದುದರಿಂದ ಬೇರೆಯವರಿಗೆ ಮಾತನಾಡಲು ಅವಕಾಶಕೊಟ್ಟಿರಿ. ಸಭೆ ಪ್ರಾರಂಭವಾದಾಗ ನಾನೂ ಸಹ ಇರಲಿಲ್ಲ. ಆದರೆ ನನ್ನ ಸ್ನೇಹಿತರು ಹೇಳಿದ ಹಾಗೆ ಶ್ರೀ ಚೆನ್ನಬಸಪ್ಪನವರು ಇಲ್ಲದೆ ಇದ್ದು ಈ ಮಸೂದೆಯ ಮೇಲೆ ಚರ್ಚೆ ಮುಂದುವರಿಸಬೇಕಾದಾಗ ಅವರು ಇಲ್ಲದ್ದರಿಂದ ಬೇರೆಯವರಿಗೆ ಅವಕಾಶ ಕೊಟ್ಟಿರಿ ಎಂದು ಹೇಳಿದರು ತಾವು ಈ ಸಂದರ್ಭದಲ್ಲಿ ಕ್ರಮ ಮತ್ತು ಕಾನೂನನ್ನು ಅನುಸರಿಸಿ ಅವರಿಗೆ ಅವಕಾಶ ಕೊಡಿ ಎಂದು ಹೇಳುವುದಿಲ್ಲ. ಚರ್ಚೆಯನ್ನು ಮುಂದುವರಿಸಲು ಕೇಳಿದಾಗ ಆ ಸದಸ್ಯರು ಹಾಜರಿಲ್ಲದೆ ಇದ್ದರೆ ಆ ಅವಕಾಶ ಬೇರೆಯವರಿಗೆ ಹೋಗಬೇಕು ಎಂದು ಹೇಳುತ್ತೇನೆ. ವಿಷಯ ಬಹಳ ಮುಖ್ಯವಾದುದು, ಬಹಳ ಚೆನ್ನಾಗಿ ಮಾತನಾಡುತ್ತಾರೆ ಎಂಬ ಕಾರಣಗಳ ಮೇಲೆ ಅವಕಾಶ ಕೊಡುವುದು ನ್ಯಾಯವಾದುದಲ್ಲ. ಅಲ್ಲದೆ ಅವರು ಈಗಾಗಲೇ ಎರಡು ದಿನಗಳ ಕಾಲ ಭಾಷಣ ಮಾಡಿದ್ದಾರೆ. ಇನ್ನೂ ಭಾಷಣ ಮಾಡುವವರು ಅನೇಕ ಮಂದಿ ಇದ್ದಾರೆ. ಅವರುಗಳಿಗೆಲ್ಲಾ ಅವಕಾಶ ಕೊಡಬೇಕು. ಇವರಿಗೂ ಸಹ, ಅಧ್ಯಕ್ಷರು ಇಷ್ಟಪಟ್ಟಲ್ಲಿ ಮಧ್ಯದಲ್ಲಾಗಲಿ, ಕಡೆಯಲ್ಲಾಗಲಿ, ಯಾವಾಗಲಾದರೂ ಭಾಷಣ ಮಾಡಲು ಅಧಿಕಾರ ಕೊಡುವ ಅಧಿಕಾರವಿದ್ದೇ ಇದೆ. ಆದ್ದರಿಂದ ಈ ರೀತಿಯಾಗಿ ತಾವು regulate ಮಾಡತಕ್ಕದ್ದು ಒಳ್ಳೆಯದು.

ಶ್ರೀ ಟಿ. ಎನ್. ಮೂಡಲಗಿರಿಗೌಡ (ಕುಣಿಗಲ್).—ಒಂದು ಸತ್ಸಂಪ್ರದಾಯವನ್ನು ಹಾಕುವಾಗ, ಈ ದಿವಸದ ವಿಷಯ ಬಹಳ ಪ್ರಾಮುಖ್ಯವಾದುದು, ಪರಿಣಾಮಕಾರಿಯಾದುದು, ಇದಕ್ಕೆ ಅವಕಾಶವನ್ನು ಕೊಡಬೇಕು ಎನ್ನುವುದು ಒಂದು ವಾದ. ನಾವು ಕಾನೂನು ಮತ್ತು rules ಪ್ರಕಾರ ಸರಿಯಾದ ರೀತಿಯಲ್ಲಿ ಸತ್ಸಂಪ್ರದಾಯವನ್ನು ಹಾಕಬೇಕು ಎನ್ನುವುದು ಮತ್ತೊಂದು ವಾದ. ನಾಳೆಯ ದಿವಸ ಪ್ರತಿ ವಿಷಯದಲ್ಲಿಯೂ ಕೂಡ ಒಬ್ಬ ಭಾಷಣಕಾರರು ಅಥವಾ ಮಾನ್ಯಸದಸ್ಯರು ಯಾರಾದರೂ ಭಾಷಣಮಾಡುತ್ತಿದ್ದು lunch hourನಲ್ಲೋ, ಬೇರೆ ಕಾಲದಲ್ಲೋ ತಾವು ಮಾನ್ಯಸಭೆಯನ್ನು ನಿಲ್ಲಿಸಿ ಮತ್ತೆ ಪ್ರಾರಂಭಮಾಡತಕ್ಕ ಸಂದರ್ಭದಲ್ಲಿ ಆ ಸದಸ್ಯರು ಕಾಲಕ್ಕೆ ಸರಿಯಾಗಿ ಸಿದ್ಧವಾಗಿರಬೇಕಾದದ್ದು ಅವರ ಧರ್ಮ, ಅವರ ಕರ್ತವ್ಯ. ಹಾಗಿಲ್ಲದೆ ಈ ದಿನ ಆ ಸದಸ್ಯರಿಗೆ ಮಾತನಾಡಲು ಅವಕಾಶಕೊಟ್ಟು ಒಂದು precedent ಹಾಕುವುದಾದರೆ, ನಾಳೆ ದಿವಸ ಯಾವ ಕಾಲಕ್ಕೆ ಹೋದರೂ ನಮಗೆ ಮಾತನಾಡುವುದಕ್ಕೆ ಅವಕಾಶವಿದೆ, ಭಾಷಣ ಮುಂದುವರಿಸುವುದಕ್ಕೆ ಅವಕಾಶವಿದೆಯೆಂದು ತಿಳಿಯುತ್ತಾರೆ. ಹೀಗಿರುವಾಗ ಮುಂದೆ ಒಂದು ತಪ್ಪು ಸಂಪ್ರದಾಯಕ್ಕೆ ನಾವು precedent ಹಾಕತಕ್ಕದು, ಅಡಿಪಾಯ ಹಾಕತಕ್ಕದ್ದು ಸರಿಯಾದದ್ದಲ್ಲ. ಪ್ರಶ್ನೋತ್ತರಕಾಲ ಒಂದು ಗಂಟೆ ಎಂದು ನಿಗದಿಯಾಗಿರುತ್ತದೆ. ಅಷ್ಟೇ ಹೊರತು ಆ ಅವಧಿಯೊಳಗೆ ಯಾವಾಗ ಬೇಕಾದರೂ ಪ್ರಶ್ನೋತ್ತರ ಮುಗಿದ ತರುವಾಯ ಇತರ ಕೆಲಸ ಕಾರ್ಯಗಳು ಪ್ರಾರಂಭವಾಗುತ್ತವೆ. ಒಂದು ಗಂಟೆಗೆ ಮುಂಚಿತವಾಗಿ ಪ್ರಶ್ನೋತ್ತರಗಳು ಮುಗಿದುಹೋದರೆ ಪ್ರಶ್ನೋತ್ತರಗಳ ಅವಧಿಯಾದ ಒಂದು ಗಂಟೆ ಕಳೆಯುವವರೆಗೂ ಸಭೆಯನ್ನು suspend ಮಾಡುವುದಕ್ಕೆ ಸಾಧ್ಯವಿಲ್ಲ. ಹೀಗಿರುವಾಗ ಕಾರ್ಯಕಲಾಪಗಳು ಮುಂದುವರಿಯತಕ್ಕ ಸಂದರ್ಭದಲ್ಲಿ ಹಿಂದಿನ ದಿವಸದ ವಿಷಯ ಏನು ಇತ್ತೋ ಅದನ್ನು ಮುಂದುವರಿಸುತ್ತೇವೆ. ಈ ರೀತಿ ಮುಂದುವರಿಸುವಾಗ ಯಾವ ಸದಸ್ಯರು ಮಾತನಾಡಬೇಕೋ ಅವರು ಇರಬೇಕಾದ್ದು ಅತ್ಯಗತ್ಯ ಮತ್ತು ಅದು ಅವರ ಆದ್ಯ

ಕರ್ತವ್ಯ. ಹಾಗಿಲ್ಲದೆ ಹೋದರೆ ಅವರ chance lapse ಆಗುತ್ತದೆ ಮತ್ತು ಅವರಿಗೆ ಮತ್ತೊಂದು ಸಾರಿ ಅವಕಾಶವನ್ನು ಕೊಡಬೇಕಾದರೆ ಮಹತ್ತರವಾದ ವಿಷಯವಾಗಿರಬೇಕು. ನ್ಯಾಯವನ್ನು ಪ್ರತಿಪಾದನೆ ಮಾಡತಕ್ಕ ಕ್ರಮವನ್ನನುಸರಿಸುವಾಗ ಸಭೆಯ ಕಾರ್ಯಕ್ರಮ ಮಹತ್ತರವಾದ ವಿಷಯವೇ ಎನ್ನುವುದನ್ನು ನಾವು ಯೋಚನೆಮಾಡಬೇಕಾಗಿದೆ ಮತ್ತು ಸಭೆಯ ಕಾರ್ಯಕ್ರಮಗಳನ್ನು ಸರಿಯಾದ ರೀತಿಯಲ್ಲಿ ಹಾಕಿಕೊಂಡು ಸತ್ಸಂಪ್ರದಾಯವನ್ನು ಬೆಳೆಸಬೇಕು. ಈ ವಿಚಾರದಲ್ಲಿ ಅವರಿಗೆ ಭಾಷಣಮಾಡಲು ಅವಕಾಶ ಕೊಡುವುದರಿಂದ ಒಂದು precedent ಹಾಕಿಕೊಟ್ಟ ಹಾಗಾಗುತ್ತದೆ. ಇದು ಸರಿಯಾದದ್ದಲ್ಲವೆಂದು ಖಚಿತವಾಗಿ ಹೇಳುತ್ತೇನೆ.

Sri R. CHANNIGARAMIAH (Koratagere-Madhugiri-Scheduled Castes).—Sir, this is a very simple case...

Mr. SPEAKER.—No, it is not simple. I want to bring to the notice of the Hon'ble Members as to why I have allowed so much of discussion on this matter. It concerns with the privilege of a member. At the same time, while conferring the privilege on one member it curtails the privilege of other members. Therefore, it is a point which has got to be carefully considered.

Sri R. CHANNIGARAMIAH.—This is important no doubt, but if all the members agree it becomes simple. This is an unusual incident that has happened to-day. Normally all members are expected to be here at 8-30, the time at which the House meets on Saturdays. This is the first time in the history of our Legislaturd that all the Hon'ble Members who hae sent questions were not present when the questions were taken up. The Hon'ble Member who had to continue his speech after question hour probably thought that he could be here before 9-30 so that he may have his chance in the normal course to continue his speech. To-day though he was expected to be here at 8-30, he has come a little late. The Hon'ble Home Minister who interpreted section 115 said that under extraordinay circumstances, it is left to the Chair to allow a member or not at a later stage. Later stage does not mean that a member should be allowed to speak at the end of the day or at the end of the session. When a member is called upon to speak and if he is not present at that time in the House, it does not mean the entire House should wait for him. The Chair can call upon another member to speak. In the course of the day the Chair can call upon the previous speaker to speak at any time. It is not right to say that because one member has been allowed to speak, the previous speaker loses his chance. There is nothing wrong if the Speaker decides in favour of Sri Channabasappa now. This itself becomes 'later stage'. My interpretation of 'later stage' is the Speaker can call upon Sri Channabasappa now, or at any time during the day though another member has spoken; since he is present now, he may be called upon to speak now. No Hon'ble Member should feel that his privileges are curtailed. He should not go home with a feeling that he was not allowed to express his views. I feel that we need not go on discussing this subject. The Treasury Bench should also view this liberally. Whether I agree with Sri Channabasappa's arguments on the merit of the Bill or not is a different matter altogether. But, the point is whether the member has the right to speak or not. Certainly, the decision of the Chair must be in favour of the member.

Mr. SPEAKER.—Suppose, the debate on a subject goes on till Three o'clock and the House adjourns for lunch at Three and meets at 3-30 P.M., and the member who was speaking at Three and who had not concluded his speech is not present at 3-30 P.M. to continue his speech. Then what happens?

Sri R. CHANNIGARAMIAH.—If the member is not present at 3-30 P.M. when he is expected to be present according to the scheduled time, he loses his chance. But, the case is not so here. In the normal course Sri Channabasappa was expected to speak after question hour. But, unfortunately it has so happened to-day that all the members in whose names the questions stood were not present at the time when the questions and answers were taken up. This is very unusual and unprecedented.

Mr. SPEAKER.—Supposing, after one o'clock the Hon'ble Member is not present.

Sri R. CHANNIGARAMIAH.—Then, certainly he loses his chance; there is no doubt about it. But, to-day's situation is not like that.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ) — ಸಭೆ ಪ್ರಾರಂಭವಾದ ಎರಡು ನಿಮಿಷಗಳೊಳಗಾಗಿ ಈ ದಿನ ಇದ್ದ ಪ್ರಶ್ನೆಗಳ ಮೇಲೆ ಉಪಪ್ರಶ್ನೆಗಳನ್ನು ಹಾಕಲು ಸದಸ್ಯರು ಹಾಜರಿಲ್ಲದ್ದರಿಂದ ಪ್ರಶ್ನೋತ್ತರಗಳ ಕಾಲ ಮುಗಿಯಿತೆಂದೂ, Tenancy Bill ತೆಗೆದುಕೊಂಡು ಅದರಮೇಲೆ ಚರ್ಚೆ ಮುಂದುವರಿಸೋಣವೆಂದು ಹೇಳಿದಿರಿ. ಆಗ ಶ್ರೀ ಚನ್ನಬಸಪ್ಪನವರು ಸಭೆಯಲ್ಲಿಲ್ಲವೆಂದು ಶ್ರೀ ಮಲ್ಲಿಕಾರ್ಜುನಪ್ಪಗೌಡರನ್ನು ಮಾತನಾಡಲು ಕರೆದಿರಿ. ಆದರೆ ಶ್ರೀ ಚನ್ನಬಸಪ್ಪನವರು ಇದ್ದಾರೆಯೇ ಇಲ್ಲವೇ ಎಂದು ತಿಳಿಯಲು ತಾವು ಅವರನ್ನು ಕರೆದುದನ್ನು ನಾನು ಕೇಳಲಿಲ್ಲ. ತಾವು ಶ್ರೀ ಚನ್ನಬಸಪ್ಪನವರು ಇದ್ದಾರೆಯೇ ಎಂದು ಕೂಗಿದ್ದರೆ ಪ್ರಾಯಶಃ ಹೊರಗಡೆ ಇದ್ದಿದ್ದರೆ ಬರುವುದಕ್ಕೆ ಅವಕಾಶವಾಗುತ್ತಿತ್ತು. ಪ್ರಶ್ನೋತ್ತರದ ಕಾಲ ಒಂದು ಘಂಟೆಯವರೆಗೆ ಇರುತ್ತದೆ ಎಂದು ತಿಳಿದುಕೊಂಡದ್ದರಿಂದ ಪರಿಸ್ಥಿತಿ ಬದಲಾವಣೆಯಾಗಿದೆ. ಒಬ್ಬ ಸದಸ್ಯರು ಭಾಷಣ ಮಾಡಿದನಂತರ ಪುನಃ ಹಿಂದೆ ಮಾತನಾಡುತ್ತಿದ್ದ ಸದಸ್ಯರಿಗೆ ಅವಕಾಶಕೊಡುವುದರಿಂದ ತಪ್ಪಾಗುವುದಿಲ್ಲವೆಂದು ತಿಳಿದುಕೊಂಡಿದ್ದೇನೆ. ತಮಗೆ ಅಧಿಕಾರವಿದೆ. ಆದ್ದರಿಂದ ಮಾನ್ಯ ಸದಸ್ಯರಾದ ಶ್ರೀ ಚನ್ನಬಸಪ್ಪನವರಿಗೆ ಭಾಷಣಮಾಡಲು ಅವಕಾಶಕೊಡಬೇಕೆಂದು ಹೇಳುತ್ತೇನೆ.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).— ಪ್ರಶ್ನೆ ಉತ್ತರಗಳು ಕಾಲ ಒಂದು ಗಂಟೆಯೆಂದು ಇದೆ. ಆದರೆ ಈಗ ಕೆಲವು ದಿನಗಳಿಂದ ಒಂದು ಗಂಟೆ ಕಾಲ ಎಂದೂ ನಡದೇಯಿಲ್ಲ. ಬಹಳ ಬೇಗ ಮುಗಿದುಹೋಗುತ್ತಿದೆ. ಸದಸ್ಯರು ಕಾಲಕ್ಕೆ ಸರಿಯಾಗಿ ಬಂದು ಸಭೆಯಲ್ಲಿ ಹಾಜರಿರಬೇಕಾದದ್ದು ಅವರ ಕರ್ತವ್ಯ. ಹಾಗಿಲ್ಲದೆ ಪ್ರಶ್ನೋತ್ತರ ಕಾಲ ಒಂದು ಗಂಟೆ ಇರುತ್ತದೆ, ಅಷ್ಟರೊಳಗಾಗಿ ಹೋದರೆ ಸರಿಯೆಂದು ಆ ರೀತಿ ಮಾಡುವುದು ಸರಿಯಲ್ಲ. ಸುಮಾರು ಇಪ್ಪತ್ತು ಪ್ರಶ್ನೆಗಳಿದ್ದು, ಆ ಪಟ್ಟಿಯ ಪ್ರಕಾರ ಅರ್ಧ ಗಂಟೆಯಾದ ಮೇಲೆ ನನ್ನ ಪ್ರಶ್ನೆ ಬರುತ್ತದೆ ಎಂದು ಆ ಹೊತ್ತಿಗೆ ಸರಿಯಾಗಿ ಬರುವುದು ಒಳ್ಳೆಯದಲ್ಲ. ಸದಸ್ಯರು ಸಭೆಯಲ್ಲಿ ಹಾಜರಿಲ್ಲದಿದ್ದು ಅವರ chance lapse ಆಗಿ, ಅವರು ಬಂದಾಗ ಪುನಃ ಭಾಷಣಕ್ಕೆ ಅವಕಾಶಕೊಡುವುದು ನ್ಯಾಯವಾದದ್ದಲ್ಲ ಮತ್ತು ಈ ರೀತಿಯಾದ precedent ಹಾಕುವುದೂ ಸರಿಯಾದದ್ದಲ್ಲ ಆದರೆ ಅಧ್ಯಕ್ಷರು ಇಷ್ಟಪಟ್ಟರೆ ಸಭೆಯು ನಡೆಯುವಾಗ ಯಾವಾಗಲಾದರೂ ಮಾತನಾಡುವುದಕ್ಕೆ ಅವಕಾಶ ಕೊಡಲು ಅಧಿಕಾರ ಹೊಂದಿರುತ್ತಾರೆ. ಸದಸ್ಯರು ಮಾತನಾಡಲು ಅವಕಾಶಕೊಡುವುದಕ್ಕೆ ಬೇಕಾದಷ್ಟು ಅಧಿಕಾರ ಅಧ್ಯಕ್ಷರಿಗಿದೆ. ಈ ರೀತಿ ಅವಕಾಶ ಕೊಡಬೇಕಾದರೆ ಬಹಳ ಮಹತ್ತರವಾದ ವಿಷಯವಾಗಿದ್ದ ಪಕ್ಷದಲ್ಲಿ ಕೊಡಬಹುದೇ ಹೊರತು ಹಾಗಿಲ್ಲದೆ ಪ್ರತಿ ಸಂದರ್ಭದಲ್ಲಿಯೂ ಅವಕಾಶಕೊಟ್ಟರೆ ಅದರಿಂದ ಮುಂದೆ ಬಹಳ ಅನರ್ಥಕಾರಿಯಾದ ಪರಿಣಾಮವಾಗುತ್ತದೆಂದು ಹೇಳುತ್ತೇನೆ.

Sri K. S. VASAN (Kolar Gold Fields).—Sir, I have got a fresh point to urge. Sir, much of the discussion here seems to be on the question of for or against allowing Sri Chennabasappa to speak. That is not the point here. Regarding the question hour, it is stated that the first hour of every day of meeting shall be for asking and answering questions. I feel it was available and every one of the questions with the answers with the name of the concerned member was printed. When the questions were called and since nobody was there, the question hour was over and the next item on the agenda was taken up. Here, when a discussion on a motion is resumed on a particular day, the member who was last speaking on that issue, if he had not concluded his speech, gets a right to speak again. If he is not there, then when another member is called upon to speak, it must be taken by the House that he concluded his speech on the last occasion itself. So Rule 150 cannot be applied in this case and Rule 152 must be taken into consideration. The member wants now to speak for the second time and it is within the discretion of the Speaker to allow or not to allow any member to speak for the second time on the motion. If the Speaker so decides to allow Sri Chennabasappa to speak, he may be given that opportunity to speak, Sir.

Sri Kadidal MANJAPPA (Minister for Revenue and Public Works).—Mr. Speaker Sir, it is not the intention of the Treasury Bench, as some Hon'ble Members have put it, that they want to adopt obstructive tactics; it is for you and for the House to decide whether we are adopting obstructive tactics or some other people.

Sri D. DEVARAJ URS.—I raise a point of order on this issue, Sir. This is a reflection which the Hon'ble Minister is casting upon the Hon'ble Members of this House. Nobody has so far adopted any obstructive tactics.

Sri Kadidal MANJAPPA.—Sri Veeranna Gowda has definitely stated that it looked as though the Government wast adopting obstructive tactics.

Mr. SPEAKER.–The Hon'ble Members must wait. Of course as the Hon'ble Minister puts it, somebody made that remark not intentionally, but in a casual way. Therefore he has met that point.

Sir H. K. VEERANNA GOWDH.—It looks as though the Government is afraid of other members expressing their view freely on this important Bill. That is what I said and I still hold that opinion.

Sri Kadidal MANJAPPA.—It is not our intention to shut out Sri Chennabasappa from what he has got to say. Sri Veeranna Gowdh said that it looks as though we were trying to obstruct Sri Chennabasappa........................

ಶ್ರೀ ವೀರಣ್ಣಗೌಡರು ಮಾತನಾಡುವಾಗ ಸರ್ಕಾರದವರಿಗೆ, ಈ ಮಸೂದೆಯ ಮೇಲೆ ಶ್ರೀ ಚನ್ನಬಸಪ್ಪನವರು ಹೇಳಬೇಕಾದ್ದನ್ನೆಲ್ಲಾ ಹೇಳುವುದಕ್ಕೆ ಅವಕಾಶ ಕೊಡಬಾರದು ಎಂಬ ಉದ್ದೇಶವಿರುವಂತೆ ತೋರುತ್ತದೆ ಎಂದು ಹೇಳಿದರು. ಆ ರೀತಿ ನಾವು ಮಾಡಿಲ್ಲ. ಆ ಉದ್ದೇಶವೂ ಇಲ್ಲ. ಈ ಮಾನ್ಯ ಸಭೆಯಲ್ಲಿರತಕ್ಕ ಎಲ್ಲ ಮಾನ್ಯ ಸದಸ್ಯರುಗಳಿಗೂ ಅವರವರ ಅಭಿಪ್ರಾಯವನ್ನು ಕಾನೂನು ಪ್ರಕಾರ, ರೂಲ್ಸ್ ಪ್ರಕಾರ, ತಿಳಿಸುವುದಕ್ಕೆ ಅವಕಾಶವಿದೆ. ಶ್ರೀ ವೀರಣ್ಣಗೌಡರು ಮಾತನಾಡುವಾಗ, 'ಗೃಹ ಸಚಿವರಿಗೆ ಯಾವುದಾದರೂ ವಿಷಯವನ್ನು ಮಾತನಾಡುವಾಗ ಒಂದು peculiar ಆದ, ವಿಚಿತ್ರಕರವಾದ, ಆಶ್ಚರ್ಯಕರವಾದ ರೀತಿಯಲ್ಲಿ ಆ ವಿಷಯವನ್ನು ಹೇಳತಕ್ಕ ರೀತಿ ಅವರಲ್ಲಿದೆ'ಯೆಂದು ಹೇಳಿದರು.

Sri H. M. CHANNABASAPPA—Is the Home Minister incapable of defending himself?

ಶ್ರೀ ಕಡಿದಾಳ್ ಮಂಜಪ್ಪ.—ಗೃಹಸಚಿವರು ಮಾತನಾಡಿದಾಗ ರೂಲ್ಸ್ ಪ್ರಕಾರ ಯಾವ ರೀತಿಯಿದೆ ಎಂಬುದನ್ನು ವಿವರಿಸಿದರೇ ಹೊರತು, ಶ್ರೀ ಚನ್ನಬಸಪ್ಪನವರಿಗೆ ಕಾನೂನು ಪ್ರಕಾರ ಮಾತನಾಡುವುದಕ್ಕೆ ಅವಕಾಶವಿದ್ದರೂ ಕೂಡ, ಅವಕಾಶಕೊಡಬಾರದೆಂದು ಹೇಳಲಿಲ್ಲ.

ಸ್ವಾಮಿ, ಚರ್ಚೆ ಯಾವ ರೀತಿ ಈ ಸಭೆಯಲ್ಲಿ ನಡೆಯಬೇಕೆಂಬ ಬಗ್ಗೆ ನಿರ್ದಿಷ್ಟವಾದ ನಿಯಮಗಳಿವೆ. ಆ ನಿಯಮಗಳಿಗೆ ನಾವೂ ಬದ್ಧರಾಗಿದ್ದೇವೆ, ಮಾನ್ಯ ಸದಸ್ಯರೂ ಬದ್ಧರಾಗಿದ್ದಾರೆ ನಾವೂ ಆ ನಿಯಮಗಳನ್ನು ಬಿಟ್ಟು ಹೋಗುವಹಾಗಿಲ್ಲ. ತಾವೂ ಬಿಟ್ಟು ಹೋಗುವ ಹಾಗಿಲ್ಲ.

ಗೃಹ ಸಚಿವರು ಹೇಳಿದ್ದು, ನಿಯಮಗಳ ಪ್ರಕಾರ, ಶ್ರೀ ಚನ್ನಬಸಪ್ಪನವರು Question Hour ಆದನಂತರ ಇಲ್ಲದ್ದರಿಂದ ಅವರ ಹಕ್ಕನ್ನು ಕಳೆದುಕೊಂಡಿದ್ದಾರೆ ಎಂದು. ರೂಲ್ಸ್‌ನಲ್ಲಿ ಕೂಡ ಅದೇ ರೀತಿಯಿದೆ. 150ನೆಯ ರೂಲ್ ನೋಡುವುದಾದರೆ, ಅದರಲ್ಲಿ ಹೇಳಿದೆ.—

> Rule 150. "(1) After the member who moves has spoken, other members may speak to the motion in such order as the Speaker may call upon them. If any member who is so called upon does not speak, he shall not be entitled, except by the permission of the Speaker, to speak to the motion at any later stage of the debate."

ಇಲ್ಲಿ "He shall not be entitled" ಎಂದು ಹೇಳಿರುವುದರಿಂದ ಹಕ್ಕನ್ನು ಕಳೆದುಕೊಂಡಿದ್ದಾರೆಂದು ಅರ್ಥವಾಗುತ್ತದೆಂದು ನಾನು ಮತ್ತೊಮ್ಮೆ ಒತ್ತಿ ಹೇಳುತ್ತೇನೆ. ಒಬ್ಬ ಮಾನ್ಯ ಸದಸ್ಯರಿಗೆ ಮಾತನಾಡತಕ್ಕ ಹಕ್ಕು ಮತ್ತು ಅವಕಾಶ—ಎರಡೂ ಇದ್ದು ಅವರು ನಿಯಮಿತ ಕಾಲದಲ್ಲಿ ಮಾತನಾಡತಕ್ಕದ್ದು ಎಂದು ನಿರ್ಧಾರವಾಗಿದ್ದಾಗ, ಆ ಕಾಲದಲ್ಲಿ ಅವರು ತಮ್ಮ ಸ್ಥಳದಲ್ಲಿ ಇಲ್ಲದೆ ಇದ್ದರೆ, ಸಭೆಯ ಕಾರ್ಯಕಲಾಪಗಳು ಪ್ರಾರಂಭವಾದಾಗ ಅವರು ಸಭೆಯಲ್ಲಿಲ್ಲದಿದ್ದರೆ, 'It implies that he was called upon.

Sri H. M. CHANNABASAPPA.—How?

ಶ್ರೀ ಕಡಿದಾಳ್ ಮಂಜಪ್ಪ.—ಅವರ ವಾದವನ್ನು ನಾನು ತಾಳ್ಮೆಯಿಂದ ಕೇಳಿದೆ. ನನ್ನ ವಾದವನ್ನೂ ಅವರು ತಾಳ್ಮೆಯಿಂದ ಕೇಳಬೇಕೆಂದು ಕೇಳಿಕೊಳ್ಳುತ್ತೇನೆ. ಒಂದು ವೇಳೆ ನನಗೆ ಸಂಬಂಧಪಟ್ಟ ವಿಷಯ ಚರ್ಚೆಗೆ ಬರುವ ಕಾಲದಲ್ಲಿ ನಾನು ಇಲ್ಲದೆ ಇದ್ದರೆ, it is open to the Speaker to call upon him to speak. If any member who is so called upon does not speak, he shall not be entitled to speak.

ಈಗ, ಈ ಸಂದರ್ಭದಲ್ಲಿ 'discussion will continue' ಎಂದು ಹೇಳಿದ ಮೇಲೆ, ಸ್ಪೀಕರ್‌ರವರು ಆ ಮಾನ್ಯ ಸದಸ್ಯರನ್ನು ಮಾತನಾಡುವುದಕ್ಕೆ ಆಹ್ವಾನಿಸಿದರು ಎಂದು ಹೇಳಿ ಅರ್ಥ ಬರುತ್ತದೆಂದು ನನ್ನ ವಾದ.

> ಆಮೇಲೆ, 24ನೆಯ ರೂಲ್‌ನಲ್ಲಿ "unless the Speaker otherwise directs, the first hour of every day of the meeting shall be available for the asking and answering of questions".

ಎಂದು ಹೇಳಿದೆ. ಪ್ರಶ್ನೋತ್ತರಗಳಿಗೆ ಒಂದು ಘಂಟೆಯ ಕಾಲ ನಿಗದಿಯಾಗಿತ್ತು. ನಿಗದಿಯಾದ ಅವಧಿಯಲ್ಲಿ, ಯಾರು ಪ್ರಶ್ನೆಗಳನ್ನು ಕಳುಹಿಸಿದ್ದರೋ ಆ ಮಾನ್ಯ ಸದಸ್ಯರು ಸಭೆಯಲ್ಲಿಲ್ಲದ್ದರಿಂದ ಅವರಿಗಿದ್ದ ಅವಕಾಶವನ್ನು ಅವರು ಕಳೆದುಕೊಂಡರು. ಅನಂತರ ಅಜೆಂಡಾದಲ್ಲಿರತಕ್ಕ ಉಳಿದ ವಿಷಯಗಳನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕಾದ ಅಗತ್ಯವಿತ್ತು. ಆ ರೀತಿಯಾಗಿ ತೆಗೆದುಕೊಳ್ಳಲಾಗಿದೆ. ಆ ಕಾಲದಲ್ಲಿ ಶ್ರೀಮಾನ್ ಚನ್ನಬಸಪ್ಪನವರು ಇರಲಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇರುವುದು ಮುಖ್ಯವಲ್ಲ; ಕರೆಯಬೇಕು.

ಶ್ರೀ ಕಡಿದಾಳ್ ಮಂಜಪ್ಪ.—ಶ್ರೀ ವೆಂಕಟಪ್ಪನವರು ಮಾತನಾಡುವಾಗ, ಮಂತ್ರಿಗಳಿಗೆ, ಅವರು ಒಂದು ವೇಳೆ ಇಲ್ಲದೆ ಇದ್ದರೂ ಕೂಡ, ಅವರು ಬಂದ ತರುವಾಯ ಅವರಿಗೆ ಅಧ್ಯಕ್ಷರು ಅವಕಾಶವನ್ನು ಕೊಡುತ್ತಾ ಇಲ್ಲವೇ, ಎಂದು ಪ್ರಶ್ನಿಸಿದರು. ಯಾವುದಾದರೂ ಒಂದು ವಿಷಯ ಚರ್ಚೆಗೆ ಬಂದಾಗ ಮಂತ್ರಿಗಳೆಲ್ಲರೂ ಗೈರ್‌ಹಾಜರಾಗಿದ್ದರೆ ಏನಾಗುತ್ತದೆಂಬುದು ಮಾನ್ಯ ಸದಸ್ಯರಿಗೂ ಗೊತ್ತಿದೆ, ತಮಗೂ ಗೊತ್ತಿದೆ. ಮಂತ್ರಿಗಳು ಯಾರಾದರೂ ಒಬ್ಬರು ಸಭೆಯಲ್ಲಿ ಗೈರ್‌ಹಾಜರಾಗಿದ್ದರೆ ಇನ್ನೊಬ್ಬರು ಅವರ ಪರವಾಗಿ ಉತ್ತರ ಹೇಳುತ್ತಾರೆ; ಆ ಪ್ರಕಾರ ಮಾತನಾಡಲು ಕಾನೂನು ಪ್ರಕಾರ ಅವರು ಅರ್ಹತೆ ಪಡೆದಿರುತ್ತಾರೆ. ಆದ್ದರಿಂದ ಶ್ರೀ ವೆಂಕಟಪ್ಪನವರ ವಾದದಲ್ಲಿ ಅಷ್ಟೊಂದು ಸತ್ವವಿಲ್ಲವೆಂದು ವಿನಯಪೂರ್ವಕವಾಗಿ ಹೇಳುತ್ತೇನೆ.

(SRI KADIDAL MANJAPPA.)

When there are definite rules, I submit that we are governed by rules. Of course, it is within the discretion of the Speaker to permit Sri Channabasappa to speak at a later stage. Well, Sri Channabasappa has taken two days aheads

Mr. SPEAKER.—What does the Hon'ble Minister mean by 'at a later stage of the debate'?

Sri Kadidal MANJAPPA.—At a later stage means, not in the earlier stage. It should necessarily mean when others have been given chance earlier.

> Rule 151. "In cases not specifically provided for in these rules the Speaker may, having regard to the state of business before the Assembly and the nature of the motion, prescribe a time limit for speeches."

Mr. SPEAKER.—That does not apply to this case.

Sri Kadidal MANJAPPA.—Sri Channabasappa has spoken for two days. Whether it is desirable to give him further time, is a matter within your discretion. I do not want to say anything in the matter. Sir, I submit that if you decide to give him another opportunity to speak, it can only be at a later stage and after others have participated in the debate on this Bill.

Mr. SPEAKER.—This is a very important matter concerning the privilege of the Hon'ble Members and also I know the implications of the ruling. Therefore my ruling should not create a bad precedent. I will give a ruling on Monday.

Now the House will rise and meet at 10-30.

The House adjourned for Lunch at Ten of the Clock and met again at Thirty Minutes past Ten of the Clock.

(MR. DEPUTY SPEAKER in the Chair.)

ADJOURNMENT MOTION.

Re. Adverse effect of incidence of Sales-tax on Agricultural Produce.

Sri Mulka GOVINDA REDDY.—(Chitaldrug).—Sir, I had tabled an Adjournment motion yesterday regarding the stoppage of trade in Davangere, Tumkur and Mysore Regulated markets on account of the introduction of sales-tax from 1st April 1955, whereby the agriculturist is made to pay tax on groundnut.

Mr. DEPUTY SPEAKER.—That will be taken up on Monday.

ಶ್ರೀ ಮುಲ್ಕ ಗೋವಿಂದ ರೆಡ್ಡಿ.—ಇದು ಬಹಳ ತ್ವರಿತವಾಗಿ ಆಗಬೇಕಾದದ್ದು. ಸಾಮಾನ್ಯವಾದುದಾಗಿದ್ದರೆ ಸೋಮವಾರ ತೆಗೆದುಕೊಳ್ಳಬಹುದಾಗಿತ್ತು. ಈಗ 8 ದಿವಸಗಳಿಂದಲೂ ದಾವಣಗೆರೆ, ತುಮಕೂರು. ಮೈಸೂರು ಮಾರ್ಕೆಟ್ಟುಗಳಲ್ಲಿ ಅಗ್ರಿಕಲ್ಚರಲ್ ಪ್ರಾಡ್ಯೂಸ್ ಮಾರಾಟಕ್ಕೆ ಅವಕಾಶವಾಗದೆ........

Mr. DEPUTY SPEAKER.—My difficulty is this should have been taken up immediately after question hour at 9-30. At that time you did not raise the point.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಆಗ ಚನ್ನಬಸಪ್ಪನವರ ವಿಚಾರ ಚರ್ಚೆಯಾಗುತ್ತಿದ್ದುದರಿಂದ ಹೇಳಲು ಅವಕಾಶವಾಗಲಿಲ್ಲ. ಮಾರ್ಕೆಟ್ಟುಗಳಲ್ಲಿ ಬಹಳ ಮಾಲು ಬಂದು ಬಿದ್ದಿದೆ. ಕಂದಾಯ ಕೊಡಲು ರೈತರಿಗೆ ಬಹಳ ಕಷ್ಟವಾಗಿದೆ. ಒಂದು ವಾರದಿಂದ ಈ ಪರಿಸ್ಥಿತಿಯೊದಗಿರುವುದರಿಂದ ಇದು ಅತಿ ಪ್ರಾಮುಖ್ಯವಾದುದು ಮತ್ತು ಡೆಫಿನಿಟ್ಟಾಗಿರುವ ವಿಷಯ. ರೈತರಿಗೆ ಬಹಳ ತೊಂದರೆಯಾಗಿದೆ.

It is admissible and so I request the Chair to take up this motion.

Mr. DEPUTY SPEAKER.—May I tell the Hon'ble Member that the Adjournment motion was received by our Office at 7-30 in the morning? It should have been received two hours earlier. I would advise him to wait till Monday.

Sri Mulka GOVINDA REDDY.— I sent this motion yesterday 7-30 p.m. on the 8th.

Mr. DEPUTY SPEAKER.—What will the Government say?

Sri Kadidal MANJAPPA (Minister for Revenue and Public Works).—Sir, there is an Act passed by this House last year. In accordance with that Act, Rules have been framed after calling for objections, giving one month's time to prefer objections, if any. In accordance with the rules, I suppose the tax is being collected. Somebody brought this matter to my notice only two days ago and I am going to examine the matter. Anyway it is not a matter for adjournment motion.

Sri Mulka GOVINDA REDDY.—These rules are repugnant to the spirit of the Act, Sir.

Sri V. M. MASCARENHAS (St. John's Hill).—Sir, the Sales Tax Bill was passed by this House 12 months ago in the last Budget Session. It received the assent of the President in October, six months ago. It is rather strange that the Sales Tax Department was not ready with the rules and have taken so much time to frame the rules. I am not speaking on the Adjournment motion, Sir, but I do say that the Sales Tax Department has failed in its duty in not framing the rules earlier.

Mr. DEPUTY SPEAKER.—At this stage, we are only concerned about the admissibility of the motion. You can say all that when the motion is actually taken up.

Sri V. M. MASCARENHAS.—That is for the information of the Minister concerned, Sir.

Mr. DEPUTY SPEAKER.—What is the idea of the Government?

Sri Kadidal MANJAPPA.—Sir, I have no objection to make a definite statement on Monday.

MYSORE SALES TAX (AMENDMENT) BILL 1955.

Extension of time limit for presentation of Select Committee Report.

Sri Kadidal MANJAPPA (Minister for Revenue and Public Works).—Sir, I move.—

> "That the time appointed for the presentation of the report of the Select Committee on the Mysore Sales-Tax (Amendment) Bill, 1955, be extended and that the report be presented before the close of the present session of the Assembly.

Mr. DEPUTY SPEAKER.—The question is:—

> "That the time appointed for the presentation of the Report of the Select Committee on the Mysore Sales-Tax (Amendment) Bill 1955, be extended and that the Report be presented before the close of the present session of the Assembly".

The motion was adopted.

MYSORE TENANCY (SECOND AMENDMENT) BILL 1954.

Motion to consider.—(continued).

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ಈ ಟೆನೆನ್ಸಿ ಕಾನೂನನ್ನು ನಾನು ಸ್ವಾಗತಿಸುತ್ತಾ ಇದರಲ್ಲಿರುವ ಮುಖ್ಯಾಂಶಗಳನ್ನು ಸಭೆಯ ಗಮನಕ್ಕೆ ತರಲು ಪ್ರಯತ್ನಪಡುತ್ತೇನೆ. ಒಬ್ಬ ಜಮೀನ್ದಾರ 25 ಎಕರೆಗಳಿಗಿಂತ ಹೆಚ್ಚಾಗಿ ಜಮೀನನ್ನಿಟ್ಟುಕೊಂಡು ವ್ಯವಸಾಯ ಮಾಡಕೂಡದು, ಜಮೀನ್ದಾರ ಸ್ವಂತ ವ್ಯವಸಾಯ ಮಾಡುವಾಗ ಇಷ್ಟು ಜಮೀನನ್ನಿಟ್ಟುಕೊಳ್ಳಲು ಅವಕಾಶವಿರಬೇಕು. ಖಾಯಂಗುತ್ತಿಗೆದಾರರಿಗೆ ಸ್ವಂತ ಜಮೀನೆಷ್ಟಿರಬೇಕು, ಜಮೀನ್ದಾರ ಸ್ವಂತ ವ್ಯವಸಾಯಕ್ಕೆ ಬೇಕಾದರೆ 25 ಸ್ಟ್ಯಾಂಡರ್ಡ್ ಎಕರೆಗಳಿಗಿಂತ ಹೆಚ್ಚಾಗಿ ಬಿಡಿಸಿಕೊಳ್ಳಲು ಅವಕಾಶವಿರಬಾರದು. ಪ್ಲಾನಿಂಗ್ ಕಮಿಷನ್ ಹೇಳಿರುವಂತೆ ಜಮೀನಿನ ಮೇಲೆ ಒತ್ತಡವಿರುವುದು ಕಡಮೆ ಮಾಡಬೇಕು. ರೈತರು ಸ್ವಂತ ವ್ಯವಸಾಯ ಮಾಡಲು ಜಮೀನು ಕೊಂಡುಕೊಳ್ಳುವುದಕ್ಕೆ ಅವಕಾಶ ಕಲ್ಪಿಸಲು ಜಮೀನಿನ ಮೇಲಿರುವ ಒತ್ತಡ ಕಡಮೆಮಾಡಬೇಕು ಎಂದು ಪ್ಲಾನಿಂಗ್ ಕಮಿಷನ್ ಶಿಫಾರ್ಸು ಮಾಡಿರುವಂತೆ ಈ ಬಿಲ್ಲನ್ನು ತರಲಾಗಿದೆ. 5 ವರ್ಷಗಳವರೆಗೆ ಗೇಣಿ ಅವಧಿಯಿರಬೇಕೆಂದಿರುವುದನ್ನು 10 ವರ್ಷಗಳವರೆಗೆ ಹೆಚ್ಚಿಸಿ ರಕ್ಷಣೆ ಹೆಚ್ಚಾಗಿ ಕೊಡಬೇಕೆಂಬ ಅಂಶವನ್ನು ಅನೇಕ ಸದಸ್ಯರು ಹೇಳಿದರು. ಸುಮಾರು ಒಂದು ಎಕರೆಯಿಂದ 10 ಎಕರೆಗಳ ವರೆಗೆ ಜಮೀನುಳ್ಳವರು ಸುಮಾರು 10 ಲಕ್ಷ ಜನರಿರುವರು, 42 ಲಕ್ಷ ಎಕರೆ ಅವರ ವಶದಲ್ಲಿದೆ. 10 ಎಕರೆ ಮೇಲ್ಪಟ್ಟು 500 ಎಕರೆ ವರೆಗೆ ಉಳ್ಳವರು ಸುಮಾರು ಒಂದು ಲಕ್ಷ ಜನರಿದ್ದಾರೆ. ವಿಸ್ತೀರ್ಣ 42 ಲಕ್ಷ ಎಕರೆಗಳು. ಇದರಲ್ಲಿರುವ ವ್ಯತ್ಯಾಸ ಕಡಮೆಮಾಡುವುದು ಮುಖ್ಯವಾದ ಅಂಶ. 10—15 ಎಕರೆ ಇರುವವರು ಈ ಜಮೀನನ್ನೇ ತಮ್ಮ ಮುಖ್ಯ ಆಧಾರವಾಗಿಟ್ಟುಕೊಂಡು ವ್ಯವಸಾಯ ಮಾಡುವವರು ಯಾರಿದ್ದಾರೋ ಅವರಿಗೆ ವ್ಯವಸಾಯಮಾಡಲು ಅನುಕೂಲವಾಗುವಂತೆ ಒಂದು ಕಾನೂನನ್ನು ತಂದು ವ್ಯತ್ಯಾಸವಿರುವುದನ್ನು ತೊಡೆದುಹಾಕತಕ್ಕುದು ಮುಖ್ಯವಾದ ಉದ್ದೇಶವೆಂದು ಕಂಡುಬರುತ್ತದೆ. ಅರ್ಧ ಎಕರೆ ಒಂದೆಕರೆ ಉಳ್ಳವರು ಅವರ ಜಮೀನನ್ನು ಬಹಳ ಚೆನ್ನಾಗಿ ಸಾಗುವಳಿಮಾಡಿ ಅದರಿಂದ ಜೀವನೋಪಾಯ ನಡೆಸಿಕೊಳ್ಳಲು ಬಹಳ ತೊಂದರೆಯಾಗಿರುವುದರಿಂದ ಹೆಚ್ಚು ಜಮೀನು ಅವರಿಗೆ ಸಿಕ್ಕುವಂತೆ ಮಾಡುವುದು ಕೂಡ ಈ ಕಾನೂನಿನ ಮುಖ್ಯಾಂಶವಾಗಿದೆ. ಆದರೆ ಈ ಕಾನೂನಿನಲ್ಲಿ ಒಂದೆರಡು ಲೋಪದೋಷಗಳು ಕಂಡುಬರುತ್ತವೆ. ಜಮೀನ್ದಾರ ತಾನು ಸ್ವಂತ ವ್ಯವಸಾಯ ಮಾಡದೆ ತನ್ನ ಜಮೀನನ್ನು ರೈತರಿಗೆ ಕೊಟ್ಟಿದ್ದರೆ ಕಾಲಕ್ರಮದಲ್ಲಿ ಆ ಜಮೀನನ್ನು ವಾಪಸು ಪಡೆದುಕೊಳ್ಳಲು ಆತನಿಗೆ ಹಕ್ಕಿದೆ. ಆದ್ದರಿಂದ ಯಾರಾದರೂ ವ್ಯವಸಾಯ ಮಾಡದೆ ಸುಮ್ಮನೆ ಜಮೀನು ಪಡೆದು ಶೋಷಣೆ' ಮಾಡುವುದಕ್ಕೆ ಅವಕಾಶವಿರಬಾರದೆಂದು ಈ ಕಾನೂನನ್ನು ತಂದಿದೆ. ಮ್ಯಾಗ್ಸಿಮಂ ಹೋಲ್ಡಿಂಗ್ 25 ಎಕರೆ ಇಡಬೇಕೆಂದು ಹೇಳುವಾಗ ಅದನ್ನು ಬೇರೆಯವರಿಗೆ ಸಾಗುವಳಿಗೆ ಕೊಟ್ಟು ಅವರಿಂದ ಮಾಡಿಸುತ್ತೇವೆಂದು ಹೇಳಕೂಡದು ಎಂದು ಈ ಕಾನೂನಿನಲ್ಲಿದೆ. ಆದ್ದರಿಂದ ಮೂಲ ಉದ್ದೇಶ 'ಯಾರು ವ್ಯವಸಾಯ ಮಾಡುವುದಿಲ್ಲವೋ ಅವರಿಗೆ ಜಮೀನಿನ ಆವಶ್ಯಕತೆಯಿಲ್ಲ

(ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.)

ಎಂದು ಹೇಳುವುದು ಒಂದು ದೊಡ್ಡ ಅನುಕೂಲವಾಗಿದೆ. ಪ್ಲಾನಿಂಗ್ ಕಮಿಷನ್‌ನವರು ಈಗ ದೇಶದಲ್ಲಿ ನೂರಕ್ಕೆ 80 ಜನ ವ್ಯವಸಾಯ ಅವಲಂಬಿಗಳೆಂದೂ, 20 ಜನ ಕೈಗಾರಿಕೆಗಳಲ್ಲಿರುವವರೆಂದೂ ಹೇಳುತ್ತಾರೆ. ಈ ಶೇಕಡ 80 ಜನ ವ್ಯವಸಾಯ ಅವಲಂಬಿಸಿರುವವರು ಒಂದು ಮಟ್ಟದಲ್ಲಿ ಉತ್ಪತ್ತಿ ಮಾಡಿ ಜೀವನೋಪಾಯ ನಡೆಸಿಕೊಳ್ಳಲು ಈಗ ಅನುಕೂಲವಾಗುತ್ತಿಲ್ಲ. ಆದ್ದರಿಂದ ಜಮೀನಿನ ಮೇಲಿರುವ 80 ಭಾಗ ಜನರ ಸಂಖ್ಯೆ ಕಡಮೆಮಾಡಿ 60 ಅಥವಾ 50ಕ್ಕೆ ಅದನ್ನು ಇಳಿಸಿ ಇನ್ನು 40 ಜನರು ಬೇರೆ ಕೆಲಸ ಮಾಡಲು ಅನುಕೂಲ ಕಲ್ಪಿಸಬೇಕೆಂದಿದ್ದಾರೆ. ಹಳ್ಳಿಗಳಲ್ಲಿ ಒಂದೆರಡೆಕರೆ ಇರುವವರು ಹೊರಗಡೆ ಹೋಗಿ ಕೈಗಾರಿಕೆಗಳನ್ನು ಮಾಡಲು ಅವರಿಗೆ ಅವಕಾಶವಿರುವುದಿಲ್ಲ. ಅಲ್ಲಿ ಒಂದು ಎಕರೆಯನ್ನು ಪಡೆದಿರುವವರು ಸ್ವತಂತ್ರವಾಗಿ ಬಾಳುವುದಕ್ಕೆ, ಸಂಸಾರ ನಡೆಸುವುದಕ್ಕೆ ಅವಕಾಶವಾಗುತ್ತಿಲ್ಲ. ಒಂದೆರಡೆಕರೆ ಫ್ರ್ಯಾಗ್‌ಮೆಂಟೇಷನ್ ಇರುವುದನ್ನು ತಪ್ಪಿಸಿ ಕನಿಷ್ಠಪಕ್ಷ 5 ಅಥವಾ 10 ಎಕರೆಯಾದರೂ ವ್ಯವಸಾಯವನ್ನೇ ಅವಲಂಬಿಸಿಕೊಂಡು ಸಂಸಾರ ನಡೆಸತಕ್ಕವರಿಗೆ ಕೊಡಲು ಅವಕಾಶ ಮಾಡಿದರೆ ದೇಶಕ್ಕೆ ಅನುಕೂಲವಾಗುವುದರಿಂದ ಅದಕ್ಕೆ ತಕ್ಕಂತೆ ಈ ಬಿಲ್ಲನ್ನು ಸ್ವಲ್ಪ ಮಾರ್ಪಾಡು ಮಾಡುವುದು ಆವಶ್ಯಕ. 5 ಎಕರೆಗಿಂತ ಕೆಳದರ್ಜೆಯಲ್ಲಿರುವ ರೈತನಿಗೆ ಈ ದಿವಸ ಒಂದೆಕರೆ ಸಾಲದು, ಕೊನೇಪಕ್ಷ 5 ಎಕರೆಯಾದರೂ ಕೊಡಲು ಅವಕಾಶಮಾಡಿದರೆ ಅವನ ಸ್ಥಿತಿ ಉತ್ತಮವಾಗುತ್ತದೆಂದು ಕಂಡುಬರುತ್ತದೆ.

ಈ ಬಿಲ್ಲಿನಲ್ಲಿ ಜಮೀನುಳ್ಳವನೇ ಒಡೆಯನಾಗಬೇಕು, ಕಾಲಕ್ರಮದಲ್ಲಿ ಉಳುವವನಿಗೆ ಜಮೀನನ್ನು ಖರೀದಿಗೆ ಕೊಡಲು ಅವಕಾಶಮಾಡಬೇಕು ಎಂದಿದೆ; ಜಮೀನಿದ್ದರೆ ವ್ಯವಸಾಯ ಕಡ್ಡಾಯವಾಗಿ ಜಮೀನ್‌ದಾರ ತಾನೇ ಮಾಡಬೇಕು ಎಂದಿದೆ. ಜಮೀನಿದ್ದವರು ಬೇರೆಯವರಿಂದ ಕೆಲಸಮಾಡಿಸಿ ಸುಮ್ಮನೆ ಗುತ್ತಿಗೆಗೆ ಕೊಟ್ಟು ಸೋಮಾರಿಗಳಾಗಿ ಶೋಷಣೆಮಾಡುವುದು ಸರಿಯಲ್ಲ. ಜಮೀನಿಟ್ಟುಕೊಳ್ಳಬೇಕೆಂದು ಇಷ್ಟಪಡುವವರು ತಾವೇ ಸ್ವಂತವಾಗಿ ವ್ಯವಸಾಯಮಾಡಬೇಕು ಎಂದು ಏರ್ಪಾಡುಮಾಡುವುದರಿಂದ ಅನುಕೂಲವಿದೆ. ಇದರಿಂದ ಸೋಮಾರಿಗಳಾಗಲು ಇರುವ ಅವಕಾಶ ತಪ್ಪುತ್ತದೆ ಎಂದು ಈ ಕಾನೂನಿನಿಂದ ಕಂಡುಬರುತ್ತವೆ. ಈ ದಿವಸ ವ್ಯಾಪಾರಮಾಡಿ ಹೆಚ್ಚು ಲಾಭ ಪಡೆಯುತ್ತಿರುವವರಿಗೆ, ಒಂದೆರಡು ಸಾವಿರ ರೂಪಾಯಿ ಸಂಬಳ ಪಡೆಯುತ್ತಿರುವ ಸರ್ಕಾರಿ ಅಧಿಕಾರಿಗಳಿಗೆ ಮತ್ತು ಇನ್ಯಾವುದಾದರೂ ಅನೇಕ ವಿಧವಾದ ಸಂಪಾದನೆಮಾಡುತ್ತಿರುವವರಿಗೆ ಅವರ ಸಂಸಾರಕ್ಕೆ ಬೇಕಾಗುವಷ್ಟು ವರಮಾನವಿದ್ದರೂ ಕೂಡ ಅವರಿಗೂ ಜಮೀನಿನ ಆವಶ್ಯಕತೆಯಿದೆಯೆಂದು ಕೆಲವರು ಊಹೆಮಾಡುತ್ತಿದ್ದಾರೆ. ಆದ್ದರಿಂದ ಯಾರು ಸ್ವತಃ ವ್ಯವಸಾಯಮಾಡಿ ರೂಢಿಸಿಕೊಳ್ಳುತ್ತಾರೋ ಅವರಿಗೆ ಮಾತ್ರ ಜಮೀನಿರಬೇಕೆಂದು ಕಾನೂನುಮಾಡುವ ಆವಶ್ಯಕತೆ ಕಂಡುಬರುತ್ತದೆ. ಈ ಕಾನೂನಿನ ಪ್ರಕಾರ ಕಾಲಕ್ರಮದಲ್ಲಿ ಜಮೀನನ್ನಿಟ್ಟುಕೊಂಡಿರುವವನು ತಾನು ಸ್ವತಃ ವ್ಯವಸಾಯಮಾಡದೆ ಇದ್ದರೆ ಅದನ್ನು ಪಡೆದುಕೊಳ್ಳಲು ಅವಕಾಶವಿಲ್ಲ ಎಂದು ತೋರುತ್ತದೆ. 25 ಎಕರೆ ಹೋಲ್ಡಿಂಗ್ ಇಟ್ಟುಕೊಂಡು ಸ್ವಂತ ವ್ಯವಸಾಯಮಾಡಬೇಕೆಂದು ಹೇಳಬಹುದೇ ವಿನಾ ಬೇರೆಯವರಿಗೆ ಗುತ್ತಿಗೆಗೆ ಕೊಡಲು ಅವಕಾಶವಿಲ್ಲ. ಈಗ ಅಣ್ಣತಮ್ಮಂದಿರಿಗೆ ವ್ಯಾಜ್ಯವಾಗಿ ಕೋರ್ಟುಗಳಲ್ಲಿ ವ್ಯವಹಾರಗಳಿಗೆ ಅವಕಾಶವಾಗುತ್ತಿದೆ. ಈ ದಿನ ಈ ಕಾನೂನನ್ನು ಜಾರಿಗೆತರಬೇಕೆಂದಿರುವ ಸಂದರ್ಭದಲ್ಲಿ ಅನೇಕ ಕಡೆಗಳಲ್ಲಿ ಹೋರಾಟ ನಡೆದು ಕೋರ್ಟುಗಳಿಗೆ ಹೋಗಲು ಅವಕಾಶವಾಗಿದೆ ಇದನ್ನು ನೀಗಿಸಲು ಯಾವುದಾದರೂ ಪರಿಹಾರ ಸೂಚಿಸುವುದು ಉತ್ತಮವಾದುದೆಂದು ನಾನು ತಿಳಿದುಕೊಂಡಿದ್ದೇನೆ.

ಜಮೀನು ಮಾರಾಟದ ವಿಷಯದಲ್ಲಿ ಹತ್ತು ವರ್ಷ ಪ್ರೊಟೆಕ್ಟೆಡ್ ಟೆನೆಂಟ್ ಆಗಿರುವವನಿಗೆ ಜಮೀನ್‌ದಾರನ ಹತ್ತಿರ 25 ಎಕರೆಗಳಿಗಿಂತ ಹೆಚ್ಚಾಗಿರುವಾಗ ಜಮೀನು ಖರೀದಿಗೆ ಕೊಡಿಸಬಹುದೆಂದು ಕಾನೂನಿನಲ್ಲಿ ಹೇಳಿದೆ. ಇದರ ಪ್ರಕಾರ ಒಂದು ಸಾವಿರ ರೂಪಾಯಿ ಬೆಲೆಬಾಳುವುದಾದ ಒಂದು ಎಕರೆ ಜಮೀನು ಪಡೆಯಬೇಕಾದರೆ ಜಮೀನ್‌ದಾರನಿಗೆ ನೋಟೀಸು ಕೊಟ್ಟು ಕೇಳಬೇಕು. ಮೂರು ತಿಂಗಳೊಳಗೆ ಒಪ್ಪಿಗೆ ಬಾರದಿದ್ದರೆ ಅನಂತರ ಡೆಪ್ಯುಟಿ ಕಮಿಷನರಿಗೆ ನೋಟೀಸು ಕೊಟ್ಟು ತಾನು ಕೇಳುವ ಬೆಲೆಗೆ ಅಥವಾ ಮಾರ್ಕೆಟ್ ಖರೀದಿಗೆ ಆ ಜಮೀನನ್ನು ಕೊಡಿಸಬೇಕೆಂದು ಕೇಳುತ್ತಾನೆ. ಆಗ ಒಂದು ಸಾವಿರ ರೂಪಾಯಿ ಬೆಲೆಬಾಳುವುದಕ್ಕೆ ಹತ್ತು ಕಂತುಗಳಲ್ಲಿ ಹಣ ಪಾವತಿಮಾಡಲು ಅವಕಾಶಕೊಡಬೇಕೆಂದಿದೆ. ಆ ಹತ್ತು ಕಂತುಗಳಿಗೆ ಹತ್ತು ವರ್ಷ ವಾಯಿದೆ ಕೊಡಬೇಕು. 10 ವರ್ಷ ಹಣ ಕೊಡುವವರೆಗೆ ರೈತನಿಂದ ಜಮೀನ್‌ದಾರ ಪ್ರತಿ ವರ್ಷವೂ ಆ ಜಮೀನಿನಿಂದ ಗುತ್ತಿಗೆ ಪಡೆಯುತ್ತಾನೆ. ಆ ಗುತ್ತಿಗೆ ಕನಿಷ್ಠಪಕ್ಷ ಒಂದು ಎಕರೆಗೆ ಈ ದಿವಸ 60 ರೂಪಾಯಿನಿಂದ 100 ರೂಪಾಯಿನವರೆಗಿದೆ. ಇದರ ಪ್ರಕಾರ ಹತ್ತು ವರ್ಷಕ್ಕೆ ಬೆಳೆಗಾಗಿ 600 ರೂಪಾಯಿ ಸಲ್ಲಿಸಬೇಕಾಗುತ್ತದೆ. ಜಮೀನಿನ ಬೆಲೆ ಒಂದು ಸಾವಿರ ರೂಪಾಯಿ, ಆದ್ದರಿಂದ ಹತ್ತು ವರ್ಷದಲ್ಲಿ ಕೊಡಬೇಕೆಂದು ಹೇಳಿದರೆ ಆ ಅವಧಿಯಲ್ಲಿ 1,600 ರೂಪಾಯಿ ಕೊಟ್ಟು ಜಮೀನು ಪಡೆಯಬೇಕು. ಇದರ ಬದಲು ಸರ್ಕಾರದವರೇ ಒಂದು ಸಾವಿರ ರೂಪಾಯಿ ಹಣವನ್ನು ಸಾಲವಾಗಿ ರೈತನಿಗೆ ಕೊಟ್ಟು ಅದಕ್ಕೆ ನಾಲ್ಕು ರೂಪಾಯಿನಂತೆ ಬಡ್ಡಿ ಹಾಕಿದರೆ ಒಂದೇ ಮೊತ್ತದಲ್ಲಿ ಜಮೀನ್‌ದಾರನಿಗೆ ಹಣ ಕೊಡಲು ಅವಕಾಶವಾಗುತ್ತದೆ; ರೈತನಿಗೂ ಅನುಕೂಲವಾಗುತ್ತದೆ, ಇಲ್ಲದಿದ್ದರೆ ರೈತ ಹೆಚ್ಚಾಗಿ ತೆರಬೇಕಾಗುತ್ತದೆ. ಒಂದು ವೇಳೆ ಹತ್ತು ವರ್ಷ ಅವಕಾಶಕೊಟ್ಟರೆ ನಾಲ್ಕು ವರ್ಷದಲ್ಲಿ ರೈತ 400 ರೂಪಾಯಿಗಳನ್ನು ಜಮೀನ್‌ದಾರನಿಗೆ ಕೊಟ್ಟಿರುತ್ತಾನೆ. ಒಂದು ವೇಳೆ ರೈತ ನಿಗದಿಯಾದ ಅವಧಿಯಲ್ಲಿ ಪೂರ್ತಿ ಹಣಕೊಡದೇಹೋಗುವಪಕ್ಷಕ್ಕೆ ಅಥವಾ ನನಗೆ ಜಮೀನು ಬೇಡ ನನ್ನ ಹಣ ವಾಪಸು ಕೊಡಿ ಅನ್ನುವ ಪಕ್ಷದಲ್ಲಿ, ಸರ್ಕಾರದಲ್ಲಿ ಹಣ ಡಿಪಾಜಿಟ್ ಆಗಿರುವುದು ಇರುತ್ತದೆ, ಅದನ್ನು ಆತನಿಗೆ ವಾಪಸು ಕೊಡುತ್ತೀರಿ. ಹೀಗೆ ಮಾಡುವುದರಿಂದ ಜಮೀನ್‌ದಾರನಿಗೆ ಅನ್ಯಾಯವಾಗಬಹುದು. ಯಾವತ್ತಿನ ದಿವಸ ಆ ಪ್ರೊಟೆಕ್ಟೆಡ್ ಟೆನೆಂಟು ಜಮೀನು ತೆಗೆದುಕೊಳ್ಳುತ್ತೇನೆ ಎಂದು ಹೇಳುತ್ತಾನೋ ಆವೊತ್ತಿನ ದಿವಸ ಜಮೀನಿನ ಬೆಲೆ 1,000 ರೂಪಾಯಿ ಇರಬಹುದು ಅದೇ ಅವನು ಬೇಡ ಎನ್ನುವ ದಿವಸ 300 ರೂಪಾಯಿಗೆ ಬಂದು ಬೆಲೆ ಇಳಿದುಹೋಗಬಹುದು. ಜಮೀನ್‌ದಾರ ಆವೊತ್ತಿನ ದಿವಸ ಬೇರೆಯವನಿಗೆ ಮಾರಾಟಮಾಡಿದ್ದರೆ ನಿಗದಿಯಾಗಿ ಸಾವಿರ ರೂಪಾಯಿ ಸಿಕ್ಕುತ್ತಾಇತ್ತು. ಈ ದಿನ ಅದು ಸಿಕ್ಕದೇ ನಷ್ಟವಾಗುತ್ತದೆ. ರೈತನ ಪರಿಸ್ಥಿತಿಯನ್ನು ನೋಡೋಣ ಆತನಿಗೆ ಜಮೀನು ಸಿಕ್ಕಬೇಕಾದರೆ ಅವನು ಯಾವ ದರದಂತೆ ಕೊಂಡುಕೊಳ್ಳುತ್ತೇನೆ ಎಂದು ಹೇಳುತ್ತಾನೋ ಆ ದರದಂತೆ ಆಗತಕ್ಕ ಒಟ್ಟು ಮೊಬಲಗನ್ನು ಹತ್ತು ಕಂತಿನಲ್ಲಿ ಹತ್ತು ವರ್ಷದ ಅವಧಿಯೊಳಗೆ ಕೊಡಬೇಕೆಂದು ನಿಗದಿ ಮಾಡಿದ್ದೀರಿ. ಹಾಗಿದ್ದರೂ ಕೂಡ ಅಷ್ಟು ಹಣವನ್ನು

ಅವನು ಕೊಡಬೇಕಾಗಿದ್ದರೆ ಬಹಳ ಕಷ್ಟವಿದೆ. ಆತನಲ್ಲಿ ಹಣ ಇಲ್ಲ. ಬೇರೆ ಕಡೆ ಸಾಲದ ರೂಪವಾಗಿ ಹಣ ತೆಗೆದುಕೊಂಡರೆ 9ರಿಂದ 12 ರೂಪಾಯಿಗಳವರೆಗೂ ಬಡ್ಡಿ ಹಾಕುತ್ತಾರೆ. ಇದನ್ನು ಲೆಕ್ಕಾಹಾಕಿದರೆ 600 ರೂಪಾಯಿ ಜಮೀನಿಗೆ ಕೊಡಬೇಕಾಗಿರುವ ಕಡೆ 400 ರೂಪಾಯಿ ಬಡ್ಡಿಗೇ ಕೊಡಬೇಕಾಗುತ್ತದೆ. ಈ ರೀತಿ ಒಂದಕ್ಕೆ ಎರಡರಷ್ಟು ಬಡ್ಡಿ ಕೊಟ್ಟು, ಜಮೀನ್‌ದಾರನ ಕಿರುಕುಳದಲ್ಲಿ ಸಿಕ್ಕಿಹಾಕಿಕೊಂಡು, ಕೊನೆಗೆ ಹತ್ತು ವರ್ಷ ಆದಮೇಲೆ ಜಮೀನು ಸಿಕ್ಕುತ್ತದೆಯೋ ಇಲ್ಲವೋ ಎಂಬ ಒಂದು ಅನುಮಾನದ ಪರಿಸ್ಥಿತಿಯಲ್ಲಿ ಇರಬೇಕಾದ ಸಂದರ್ಭ ಅವನಿಗೆ ಉಂಟಾಗುತ್ತದೆ. ಈ ವ್ಯವಸ್ಥೆ ನೋಡಿದರೆ ರೈತರಿಗೆ ಜಮೀನಿನ ಕೈವಶ ಆಗುತ್ತದೆ ಎಂದು ನಾನಂತೂ ತಿಳಿದುಕೊಂಡಿಲ್ಲ. ಯಾವುದಾದರೂ ಒಂದು ಕಿರುಕುಳದಿಂದ ಜಮೀನ್‌ದಾರರ ಕೈಗಳಿಗೆ ಸಿಕ್ಕಿಹಾಕಿಕೊಂಡು ರೈತ ಜಮೀನು ಪಡೆದುಕೊಳ್ಳುವುದಕ್ಕೆ ಆಗುವುದಿಲ್ಲ. ಈ ದಿನ ಗುತ್ತಿಗೆ ಕೊಟ್ಟು ಆತ ಜೀವನ ನಡೆಸುತ್ತಿರುವ ಪರಿಸ್ಥಿತಿಯನ್ನು ನೋಡಿದರೆ ಸರ್ಕಾರದವರೇ ಯಾವುದಾದರೂ ಒಂದು ರೀತಿಯಲ್ಲಿ ಆತನಿಗೆ ಜಮೀನಿನ ಬೆಲೆ ಎಷ್ಟಾಗುತ್ತದೆಯೋ ಅಷ್ಟನ್ನು ಮುಂಗಡವಾಗಿ ಕೊಟ್ಟು ಆತ ಜಮೀನನ್ನು ಕೊಂಡುಕೊಳ್ಳುವಹಾಗೆ ಮಾಡಬೇಕೇ ಹೊರತು ಬೇರೆ ಯಾವ ರೀತಿಯಲ್ಲಿ ಮಾಡಿದರೂ ಆತನಿಗೆ ಅನುಕೂಲವಾಗುವುದಿಲ್ಲ. ತಂಟೆತಕರಾರುಗಳು ಬಂದು ಕೋರ್ಟು ವ್ಯವಹಾರ ನಡೆದು ಜಮೀನು ಆತನ ಕೈಸೇರುವುದಿಲ್ಲ. ಜಮೀನಿನ ಮಾರಾಟವಾಗುವುದಿಲ್ಲ. ಮಾರಾಟ ಎನ್ನುವುದು ನಿರ್ದಿಷ್ಟವಾಗಿ ಒಂದು ಕ್ಷಣದಲ್ಲಿ ನಡೆಯಬೇಕು. ಕಂತಿನ ಮೇಲೆ ಹಣ ಕಟ್ಟತಕ್ಕ ರೀತಿಯಲ್ಲಿ ಸರ್ಕಾರದವರು ಹಣ ಡಿಪಾಜಿಟ್‌ಮಾಡಿಸಿಕೊಂಡರೆ ಅದನ್ನು ವಾಪಸು ಪಡೆಯಬೇಕಾದವರೆ ರೈತನಿಗಾಗಲಿ, ಜಮೀನ್‌ದಾರನಿಗಾಗಲಿ ಬಹಳ ತೊಂದರೆಯಾಗುತ್ತದೆ. ಅನೇಕ ತೊಂದರೆಗಳಿಗೆ ಒಳಗಾಗಬೇಕಾಗುತ್ತದೆ. ಆ ಹಣ ಪಡೆಯಬೇಕಾದರೆ ಹೈಕೋರ್ಟು, ಸುಪ್ರೀಂ ಕೋರ್ಟಿಗೆ ಹೋಗಬೇಕಾಗುವ ಸಂದರ್ಭ ಬರುತ್ತದೆ. ಆದ್ದರಿಂದ ಈಗ ತಾವು ಇನ್‌ಸ್ಟಾಲ್‌ಮೆಂಟ್‌ಗಳನ್ನು ಡಿಪಾಜಿಟ್‌ಮಾಡಬೇಕೆಂಬ ಯಾವ ಒಂದು ಪದ್ಧತಿಯನ್ನು ಜಾರಿಗೆ ತರಬೇಕೆಂದಿದ್ದೀರಿ, ಅದನ್ನು ಬ್ಯಾಂಕುಗಳಲ್ಲಿ ಡಿಪಾಜಿಟ್‌ಮಾಡುವಂತೆ ಮಾಡಬೇಕು. ಹಾಗೆ ಮಾಡಿದ್ದೇ ಆದಪಕ್ಷದಲ್ಲಿ ಜಮೀನ್‌ದಾರನಿಗಾಗಲೀ, ರೈತನಿಗಾಗಲೀ ಸುಲಭವಾಗಿ ಹಣವಾಪಸು ಪಡೆಯುವುದಕ್ಕೆ ಅವಕಾಶವಿರುತ್ತದೆ. ಹಾಗಲ್ಲದೇ ಸರ್ಕಾರದವರೇ ಡಿಪಾಜಿಟ್ ಮಾಡಿಕೊಂಡಪಕ್ಷದಲ್ಲಿ ಅಧಿಕಾರಿಗಳಿಂದ ಹಣ ವಾಪಸುತೆಗೆದುಕೊಳ್ಳಬೇಕಾದ ಸಂದರ್ಭದಲ್ಲಿ 100 ರೂಪಾಯಿ ಡಿಪಾಜಿಟ್‌ಮಾಡಿದ್ದರೆ 25 ರೂಪಾಯಿ ಖರ್ಚುಮಾಡಿ 75 ರೂಪಾಯಿ ತೆಗೆದುಕೊಳ್ಳಬೇಕಾದ ಪ್ರಮೇಯ ಬರುತ್ತದೆ ಎಂದು ನನಗೆನ್ನಿಸುತ್ತಾಯಿದೆ. ಆದ್ದರಿಂದ ಯಾವುದೇ ರೀತಿಯಲ್ಲಿ ವ್ಯಾಪಾರ ನಡೆದರೂ ಕೂಡ ಸರ್ಕಾರಕ್ಕೆ ಹಣ ಕಟ್ಟತಕ್ಕ ಪದ್ಧತಿಯನ್ನು ತಪ್ಪಿಸಿ ಕೋ-ಆಪರೇಟೀವ್ ಸೊಸೈಟಿಗಳಲ್ಲೋ ಅಥವಾ ಬ್ಯಾಂಕುಗಳಲ್ಲೋ ಹಣ ಡಿಪಾಜಿಟ್‌ಮಾಡತಕ್ಕ ಪದ್ಧತಿಯನ್ನು ಇದರಲ್ಲಿ ಏರ್ಪಾಡುಮಾಡಬೇಕೆಂದು ಸೂಚಿಸುತ್ತೇನೆ.

ಈ ಮಸೂದೆಯಲ್ಲಿ ಕಾಣುವಂಥ ಅನೇಕ ವ್ಯತ್ಯಾಸಗಳನ್ನು ಮತ್ತು ಲೋಪದೋಷಗಳನ್ನು ನಿವಾರಣೆ ಮಾಡಲು ಇದನ್ನು ಕೂಲಂಕಷವಾಗಿ ಪರಿಶೀಲಿಸಬೇಕಾಗುತ್ತದೆ. ಆದಕಾರಣ ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಅಲ್ಲಿ ಇವುಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲನೆಮಾಡಿ ಈ ಸಭೆಗೆ ಕಳುಹಿಸಿಕೊಡುವುದಾದರೆ ನಾವು ಇದರ ವಿಷಯದಲ್ಲಿ ಒಂದು ತೀರ್ಮಾನಮಾಡಲಿಕ್ಕೆ ಅವಕಾಶವಾಗುತ್ತದೆಯೇ ವಿನಾ ಈ ಒಂದು ಸಭೆಯಲ್ಲಿ ಎಲ್ಲರೂ ಕುಳಿತುಕೊಂಡು clause by clause ಚರ್ಚೆಮಾಡಿ ವಿಷಯಗಳನ್ನು ಕ್ರೋಢೀಕರಿಸುವುದಕ್ಕೆ ಆಗುವುದಿಲ್ಲ. ಆದ್ದರಿಂದ ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಿ, ಇದರಲ್ಲಿರತಕ್ಕ ಲೋಪದೋಷಗಳನ್ನು ಸರಿಪಡಿಸಿ, ಜಮೀನಿನ ವ್ಯವಸಾಯ ಮಾಡತಕ್ಕವನಿಗೆ ಕಾಲಕ್ರಮೇಣದಲ್ಲಿ ಜಮೀನ್‌ದಾರರಿಂದ ಶೋಷಣೆ ಆಗದಂತೆ ಆತನಿಗೆ ಜಮೀನು ದೊರೆಯುವಂತಾಗಲು ತಕ್ಕ ಸೌಲಭ್ಯ ವುಂಟುಮಾಡಿಕೊಡಬೇಕೆಂದು ಹೇಳುತ್ತೇನೆ. ಆ ರೀತಿ ಆಗಿ ಆತ ಸ್ವತಃ ವ್ಯವಸಾಯಮಾಡುವಂತಾಗಬೇಕು. ಮತ್ತು fragmentation of holdings ½ ಎಕರೆ, ¼ ಎಕರೆ ಇರುವುದೆಲ್ಲಾ ಒಟ್ಟಿಗೆ ಸೇರಿ ಕೊನೆಯಪಕ್ಷ ಒಬ್ಬ ಮನುಷ್ಯನಿಗೆ ಐದು ಎಕರೆ ಜಮೀನು ಇರುವಂತೆ ಮಾಡಲು ಈ ಕಾನೂನನ್ನು ಸೂಕ್ತ ಬದಲಾವಣೆ ಮಾಡುವುದರಿಂದ ದೇಶದಲ್ಲಿ ಶಾಂತಿ ನೆಲಸುತ್ತದೆ, ರೈತನಿಗೂ ಕೂಡ ರಕ್ಷಣೆ ದೊರಕುತ್ತದೆ. ಒಟ್ಟಿನಲ್ಲಿ ಇಷ್ಟು ಹೇಳಿ, ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಿ ವಿಷಯಗಳನ್ನು ಕೂಲಂಕಷವಾಗಿ ಚರ್ಚೆಮಾಡಿ ತೀರ್ಮಾನ ತೆಗೆದುಕೊಳ್ಳಬೇಕೆಂದು ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ ಅನುಸೂಚಿತ ಜಾತಿಗಳು).—ಸ್ವಾಮಿ, ಈ ಗೇಣಿ ಕಾನೂನನ್ನು ನಾನು ಸ್ವಾಗತಮಾಡುತ್ತಾ ಒಂದೆರಡು ಅಂಶಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಬೇಕೆಂದು ಇಚ್ಛೆಪಡುತ್ತೇನೆ. ಈಗ ಸರ್ಕಾರದವರು ಕೊಟ್ಟಿರತಕ್ಕ Statement of Objects and Reasonsನಲ್ಲಿ ಎರಡು ವಿಷಯಗಳನ್ನು ಹೇಳಿದ್ದಾರೆ. ಒಂದು 1952ನೆ ಆಕ್ಟಿನಲ್ಲಿ ಇದ್ದಂಥ ಕೆಲವು ಕುಂದುಕೊರತೆಗಳನ್ನು ಹೋಗಲಾಡಿಸುವುದು, ಎರಡನೆಯದು ಯಾವನು ಕಷ್ಟಪಟ್ಟು ಭೂಮಿಯನ್ನು ಉಳುತ್ತಾನೆಯೋ ಅವನಿಗೆ ಆ ಭೂಮಿಯಲ್ಲಿ ಸಾಕಾದಷ್ಟು ಹಕ್ಕನ್ನು ಸಂಪಾದಿಸಿಕೊಡಬೇಕು. ಆಗ ಆತ ನಿರಾಶನಾಗಬಾರದು. ನಿರಾಶನಾದಪಕ್ಷದಲ್ಲಿ ದೇಶಕ್ಕೆ ಬಡತನ ಜಾಸ್ತಿಯಾಗುತ್ತದೆ ಎಂದು ಹೇಳಿ ಪ್ಲಾನಿಂಗ್ ಕಮೀಷನ್‌ನವರು ಶಿಫಾರಸುಮಾಡಿರುವಂತೆ ಆತನಿಗೆ ಒಂದು ಹೆಚ್ಚಿನ ಹಕ್ಕುಬಾಧ್ಯತೆಯನ್ನು ಸಂಪಾದಿಸಿಕೊಳ್ಳಲಿಕ್ಕೆ ಅವಕಾಶಮಾಡಿಕೊಡಬೇಕೆಂದು ಹೇಳಿ ಇದನ್ನು ತಂದಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಕೆಲವು ಸಂಸ್ಥಾನಗಳಲ್ಲಿ ಈ ಭೂಮಿಯ ಸಮಸ್ಯೆಯ ವಿಷಯದಲ್ಲಿ ಬಹಳ ನಿಧಾನಮಾಡುತ್ತಾ ಇದ್ದಾರೆ. ಅದರಲ್ಲೂ ಕೂಡ ಮೈಸೂರು ಸಂಸ್ಥಾನದವರು ಬಹಳ ನಿಧಾನ ಮಾಡುತ್ತಾ ಇದ್ದಾರೆ ಎಂದು ಪ್ಲಾನಿಂಗ್ ಕಮಿಷನ್‌ನವರು ಅಭಿಪ್ರಾಯಪಟ್ಟಿರುವಂತೆ ಕೇಳಿದ್ದೇನೆ. ಮೊನ್ನೆ ದಿನ ಶ್ರೀಮಾನ್ ಚನ್ನಬಸಪ್ಪನವರು ನಾಲ್ಕು ವಿಷಯಗಳನ್ನು ಹೇಳಿದರು. Absentee Landlords ಯಾರಿದ್ದಾರೆ ಅಂಥವರ ಒಂದು ಗುಂಪನ್ನು ತಪ್ಪಿಸಬೇಕು ಎಂಬುದು ಒಂದನೆಯದು, tiller of the soil must be the owner of the land ಎನ್ನುವುದು ಎರಡನೆಯದು, ಇನ್‌ಟೆನ್‌ಸೀವ್ ಕಲ್ಟಿವೇಷನ್‌ಮಾಡಬೇಕು ಎಂಬುದು ಮೂರನೆಯದು, ಮತ್ತು ಇಂಟರ್‌ಮೀಡಿಯರೀಸ್ ಯಾರಿದ್ದಾರೆ ಅವರನ್ನು ತಪ್ಪಿಸಬೇಕು ಎಂಬುದು ನಾಲ್ಕನೆಯದು. ಈ ರೀತಿ ನಾಲ್ಕು ವಿಷಯಗಳನ್ನು ಹೇಳಿದ್ದಾರೆ.

ಈಗ Absentee landlords ವಿಷಯ ತೆಗೆದುಕೊಂಡರೆ ನನಗೆ ತಿಳಿದಮಟ್ಟಿಗೆ ಮೈಸೂರು ಸಂಸ್ಥಾನದಲ್ಲಿ ಹಿಡುವಳಿ ಬಂಜರು ಬಹಳವಾಗಿ ಇದೆ, ಈ ವಿಷಯದಲ್ಲಿ ಸರ್ಕಾರದವರು ಏನೊಂದು ಕಾನೂನನ್ನು

(ಶ್ರೀ ಎಂ. ಚಿಕ್ಕಲಿಂಗಯ್ಯ.)

ಮಾಡಿದ್ದಾರೆಯೋ ಅವನ್ನು ಸರಿಯಾಗಿ ಜಾರಿಗೆ ಕೊಡುತ್ತಿಲ್ಲ. ಒಬ್ಬೊಬ್ಬರ ಹತ್ತಿರ 300-400 ಎಕರೆ ಬಂಜರು ಜಮೀನು ಇದೆ. ಇಷ್ಟೊಂದು ಏಕೆ ಬಿಟ್ಟು ಕೊಂಡಿದ್ದೀರಿ ಎಂದರೆ ಹುಲ್ಲುಗಾವಲಿಗಾಗಿ ಇಟ್ಟು ಕೊಂಡಿದ್ದೇವೆ ಎಂದು ಅನೇಕರು ಹೇಳಿದ್ದಾರೆ ಸರ್ಕಾರದವರು ಈ ವಿಷಯದಲ್ಲಿ ಒಂದು ಡಿಸ್ಟ್ರಿಕ್ಟ್ ಕಮಿಟಿ ಮಾಡಿದ್ದರು. ಆ ಕಮಿಟಿಯಲ್ಲಿ ಎಲ್ಲಾ ತಾಲ್ಲೂಕುಗಳಿಂದಲೂ ಇನ್‌ಫರ್ಮೇಷನ್ ಕೂಡಿಸಿಕೊಡ ಬೇಕೆಂದು ಮನವಿಮಾಡಿಕೊಂಡಿದ್ದರು. ಅದು ನನಗೆ ಚೆನ್ನಾಗಿ ಗೊತ್ತಿದೆ. ಹಿಡುವಳಿ ಬಂಜರು ಯಾರ್ಯಾರ ಹತ್ತಿರ ಎಷ್ಟೆಷ್ಟು ಇದೆ ಎಂಬ ಸಮಾಚಾರ ಸಂಗ್ರಹ ಮಾಡಿ, ಅನಂತರ ತಾವು ಆ ಕಾನೂನನ್ನು ಜಾರಿಗೆ ಕೊಡಬೇಕಾಗಿತ್ತು, ಆ ರೀತಿ ಜಾರಿಗೆ ಕೊಟ್ಟಿಲ್ಲ ಎಂದು ನಾನು ಘಂಟಾಘೋಷವಾಗಿ ಹೇಳುತ್ತಾ ಇದ್ದೇನೆ. ಒಂದು ವೇಳೆ ಆ ಆಕ್ಟ್ ಅಂಗೀಕಾರವಾದ ಲಾಗಾಯ್ತಿನಿಂದ ಅದನ್ನು ಜಾರಿಗೆ ಕೊಟ್ಟಿದ್ದ ಪಕ್ಷದಲ್ಲಿ ಈ ಟೆನೆನ್ಸಿ ಆಕ್ಟು ಇಷ್ಟು ಕಠಿಣವಾದ ಸಮಸ್ಯೆ ಆಗುತ್ತಿರಲಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಯುದ್ಧ ಪ್ರಾರಂಭವಾಗುವುದಕ್ಕೆ ಮುಂಚೆ ಜಮೀನಿನ ಸಮಸ್ಯೆ ಅಷ್ಟಾಗಿ ಹೆಚ್ಚಿರಲಿಲ್ಲ. ಈ ಹತೋಟಿ ಯಾವಾಗ ಬಂತೋ ಅಂದಿನಿಂದ ಇದು ಪ್ರಾರಂಭವಾಗಿ ಒಂದು ದೊಡ್ಡ ಸಮಸ್ಯೆಯಾಗಿ ತಲೆದೋರಿದೆ. ಮೊದಲು ಕೆಲವರು ತರೀ ಜಮೀನನ್ನು ಎಕರೆಗೆ 30-40 ರೂಪಾಯಿನಂತೆ ಮಾರಿಕೊಂಡಿರುವವರೂ ಇದ್ದಾರೆ, ಇದನ್ನು ಪದೇಪದೇ ಸರ್ಕಾರದವರ ಗಮನಕ್ಕೆ ತರುತ್ತಾ ಇದ್ದೇನೆ. ಈಗ 200-300 ಎಕರೆ ತರೀ ಜಮೀನು ಯಾರು ಇಟ್ಟುಕೊಂಡಿದ್ದಾರೆ ತವರು ಅದಕ್ಕೆ ಸರಿಯಾದ ಬೆಲೆ ಕೊಟ್ಟು ತೆಗೆದು ಕೊಂಡಿಲ್ಲ. ಬೇಕಾದರೆ ಅದನ್ನು ಪರೀಕ್ಷೆಮಾಡಬಹುದು. 200-300 ಎಕರೆ ಜಮೀನು ಶ್ರೀರಂಗಪಟ್ಟಣದಲ್ಲಿ ಇಟ್ಟುಕೊಂಡು ಅವರು ಮಾತ್ರ ಬೆಂಗಳೂರೋ, ಮದರಾಸೋ, ಹೈದರಾಬಾದೋ, ಕಲ್ಕತ್ತದಲ್ಲೋ ಇರುತ್ತಾರೆ. ರೈತ ಕಷ್ಟಪಟ್ಟು 24 ಗಂಟೆಯೂ ದುಡಿದು, ರಾತ್ರಿ ಹಗಲು ಕಳೆಕಿತ್ತು, ನೀರಿನಲ್ಲಿ ನಿಂತು, ನಾಟಿಹಾಕಿ ಬೆಳೆ ಮಾಡಬೇಕಾದರೆ ಅವನ ಕಷ್ಟ ಹೇಳತೀರದು ಇದು ರೈತರಾಗಿರತಕ್ಕ ಮಾನ್ಯ ಸದಸ್ಯ ರನೇಕರಿಗೆ ಚೆನ್ನಾಗಿ ಗೊತ್ತಿದೆ. ಆದ್ದರಿಂದ absentee landlords ಆಗಿ ಮದರಾಸಿನಲ್ಲೋ, ಕಲ್ಕತ್ತಾ ದಲ್ಲೋ ಯಾರಿರುತ್ತಾರೋ ಅವರಿಗೆ ಇದನ್ನು ಕಡ್ಡಾಯವಾಗಿ ಅನ್ವಯಿಸಬೇಕೆಂದು ಒತ್ತಾಯಪಡಿಸುತ್ತೇನೆ.

ಆ ಮೇಲೆ Tiller of the soil must be the owner of the land ಎಂದು ಹೇಳಿದರು. ಈಗ ಈ ಟೆನೆನ್ಸಿ ಆಕ್ಟು ಜಾರಿಗೆ ಬಂದಮೇಲೆ ಯಾವ ರೀತಿ ಆಗುತ್ತಾ ಇದೆ ಎಂಬುದನ್ನು ಹೇಳುತ್ತೇನೆ. ಕೆಲವರು ಗೇಣಿದಾರರಿಗೆ ಗೇಣಿ ಕೊಡುವಾಗ ರೆಕಾರ್ಡ್ ಮೂಲಕ ಕೊಡುತ್ತಾ ಇಲ್ಲ. ಕೈತೂಕ, ಬಾಯಿಬಣ್ಣ ಅನ್ನುವ ಹಾಗೆ ನಡೆಯುತ್ತಾ ಇದೆ. ಯಾವನಾದರೂ ಒಬ್ಬ ಗೇಣಿದಾರ, ಸ್ವಾಮಿ, ಏನಾದರೂ ಒಂದು ಗುರುತಿಗೆ ಇರಲಿ, ಪತ್ರ ಬರೆದುಕೊಡಿ ಅಂತ ಕೇಳಿದರೆ 20 ವರ್ಷ ದಿಂದ ಮಾಡುತ್ತಾ ಇದ್ದೀ, ನಿನಗೆ ಏನು ಕಷ್ಟ ಆಗಿದೆ, ಪತ್ರ ಬರೆದುಕೊಟ್ಟರೆ ಕೊನೆಗೆ ನಿನಗೇ ತೊಂದರೆ ಆಗುತ್ತದೆ, ಜಮೀನು ಇಲ್ಲದಹಾಗೆ ಆಗುತ್ತದೆ ಎಂದು ಏನಾದರೂ ಹೇಳಿ ಅವನನ್ನು ಒಪ್ಪಿಸಿಬಿಡುತ್ತಾರೆ. ಅವನು ಹಾಗೇ ಆಗಲಿ ಸ್ವಾಮಿ ಎಂದು ಒಪ್ಪಿಕೊಂಡು ಬಿಡುತ್ತಾನೆ. ಇಂಥಾದ್ದೆಲ್ಲಾ ನಡೆಯುತ್ತಾ ಇದೆ. ಎರಡನೆಯದಾಗಿ 6ನೇ ಸೆಕ್ಷನ್‌ನಲ್ಲಿ for the words "the crop or crops", the words "the main crop" shall be substituted ಎಂದು ಹೇಳುತ್ತೀರಿ. Main crop ಅಂದರೆ ರಾಗಿ ಕೂಡ ಆಗುತ್ತದೆ. ಇದು 4-5 ತಿಂಗಳಿನಲ್ಲಿ ಬರುತ್ತದೆ ಇದಕ್ಕೂ ತಾವು ಅನ್ವಯಿಸಬಹುದೇ ಎಂಬುದನ್ನು ಯೋಚನೆಮಾಡಬೇಕೆಂದು ಹೇಳುತ್ತೇನೆ.

ಈಗ ಪಹಣಿ ಬರೆಯುವಾಗ ಏನಾಗುತ್ತಿದೆ ಎಂದರೆ ಯಾವನು ಕಷ್ಟಪಟ್ಟು ಜಮೀನು ಮಾಡುತ್ತಾನೆಯೋ ಅವನ ಹೆಸರಿಗೆ ಪಹಣಿ ಬರೆಯುತ್ತಾ ಇಲ್ಲ. ಯಾರು ಜಹಗೀರ್‌ದಾರರು ಇದ್ದಾರೋ ಅವರ ಹೆಸರಿನಲ್ಲಿ ಪಹಣಿ ಬರೆಯುತ್ತಾ ಇದ್ದಾರೆ. ಇದರಿಂದ ಏನಾಗುತ್ತಿದೆ ಎಂದರೆ ಯಾವನು ಸ್ವತಃ ಜಮೀನು ವ್ಯವಸಾಯ ಮಾಡುತ್ತಾನೋ ಅವನು 10 ವರ್ಷ ಅಲ್ಲ 20 ವರ್ಷ ಮಾಡಿದರೂ ಕೂಡ ಅವನ ಹೆಸರು ಪಹಣಿಯಲ್ಲಿ ಇರುವುದಿಲ್ಲ ಮತ್ತು ಅವನೇ ಜಮೀನು ವ್ಯವಸಾಯಮಾಡುತ್ತಿದ್ದಾನೋ ಅಥವಾ ಜಮೀನುದಾರ ಮಾಡುತ್ತಿದ್ದಾನೋ ಎಂಬ ಸಂಶಯ ಕೂಡ ಬರುತ್ತದೆ. ಆದ್ದರಿಂದ ಪಹಣಿ ಬರೆಯುವಾಗ ಯಾವನು actual ಆಗಿ ಜಮೀನು ಮಾಡುತ್ತಾನೋ ಅವನ ಹೆಸರಿನಲ್ಲಿ ಪಹಣಿ ಬರೆಯಬೇಕೆಂದು insist ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಈಗ ಒಬ್ಬ ಮನುಷ್ಯನಿಗೆ 100 ಎಕರೆ ಜಮೀನಿದ್ದರೆ ಆತನಿಗೆ 4-5 ಟೆನೆಂಟುಗಳಿದ್ದರೆ ಅವರಿಗೆ ಇಷ್ಟಿಷ್ಟು ಜಮೀನು ಎಂದು ವಿಭಾಗಮಾಡಿ ಅವರಿಗೆ ಖಾತೆ ವರ್ಗಾವಣೆಮಾಡಿಕೊಡಬೇಕಾಗಿದೆ. ಈಗಾಗಲೇ ಈ ವ್ಯವಸಾಯದ ಜಮೀನುಗಳು ಖರೀದಿಯಾಗುವುದು ಜಾಸ್ತಿಯಾಗುತ್ತಿದೆ. ಈಗ ಈ ರೀತಿಯಾಗಿ ಒಂದು ಕಾನೂನನ್ನು ಜಾರಿಗೆ ತರುತ್ತಾರೆಂಬ ಕೂಗು ದೇಶಾದ್ಯಂತವೂ ಜನರಿಗೆಲ್ಲಾ ತಿಳಿದುಹೋಗಿದೆ. ಅದಕ್ಕಾಗಿ ಮುಂದೆ ನಮ್ಮಲ್ಲಿ ಹಾಗೇನಾದರೂ ಹೆಚ್ಚಿನ ಜಮೀನುಗಳನ್ನಿಟ್ಟುಕೊಂಡಿದ್ದರೆ ಹೇಗೂ ಸರ್ಕಾರದವರು ನಾಳೆ ಇವುಗಳನ್ನು ಕಿತ್ತುಕೊಳ್ಳುತ್ತಾರೆಂಬ ಹೆದರಿಕೆಯಿಂದ ಈ ದಿವಸ ಆ ದೊಡ್ಡ ದೊಡ್ಡ ಜಮೀನ್ದಾರರೆಲ್ಲಾ ಜಮೀನನ್ನು ರೈತರಿಂದ ಬಿಡಿಸಿಕೊಂಡು ಮಾರಾಟಮಾಡುತ್ತಿದ್ದಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಇದಕ್ಕೆ ತಾವೇನು ಉಪಾಯ ಸೂಚಿಸುತ್ತೀರಿ ?

ಶ್ರೀ ಎಂ. ಚಿಕ್ಕಲಿಂಗಯ್ಯ.—ಆದರೆ ಈ ದಿವಸ ಹಾಗೆಲ್ಲಾ ಮಾಡುತ್ತಿದ್ದಾರೆಂದು ನಾನು ಈ ಸಬ್-ರಿಜಿಸ್ಟ್ರಾರ್ ಅವರ ಆಫೀಸುಗಳನ್ನೆಲ್ಲಾ ಮುಚ್ಚಿಸಿಬಿಡಿ ಎಂದು ಹೇಳುವುದಿಲ್ಲ. ಆದರೆ ನಾನು ಹೇಳತಕ್ಕದ್ದು ಹೀಗೆ 400-500 ಎಕರೆ ಜಮೀನುಗಳನ್ನಿಟ್ಟುಕೊಂಡಿರತಕ್ಕಂಥವರನ್ನು ಆ ಜಮೀನನ್ನು ಅವರು ಇತರರಿಗೆ ಪರಭಾರೆಮಾಡದಹಾಗೆ ಮಾಡಿ ಎಂದು ಮಾತ್ರ ಹೇಳುತ್ತಿದ್ದೇನೆ.

ಉಪಾಧ್ಯಕ್ಷರು.—ಹಾಗೊಂದು ವೇಳೆ ಅವರು ಮಾರಾಟಮಾಡಿದರೇನು ವ್ಯತ್ಯಾಸವಾಗುತ್ತದೆ ? ಆ ಜಮೀನು ಅಲ್ಲೇ ಇರುತ್ತದೆಯಲ್ಲವೆ ?

Sri Kadidal MANJAPPA —What the Chair said is, even if the land is sold, the tenant will be there, the land will be there.

ಶ್ರೀ ಎಂ. ಚಿಕ್ಕಲಿಂಗಯ್ಯ.—ಆ ಬಗ್ಗೆ ತಾವು ಒಂದು ಕಠೋರವಾದ ಶಾಸನವನ್ನು ಜಾರಿಗೆ ತಂದರೆ ಆಗ ಅವರಿಗೆ ಹೀಗೆಲ್ಲಾ ಜಮೀನನ್ನು ಮಾರಾಟಮಾಡಿಕೊಳ್ಳಲು ಅವಕಾಶವೆಲ್ಲಿರುತ್ತದೆ ? ಆದರೆ ತಾವು ಈಗಾಗಲೇ ದೇಶದಲ್ಲಿ ಆ ಒಂದು ಪ್ರೊಹಿಬಿಟಿವ್ ಪ್ಯಾಟರ್ನ್

ಸೊಸೈಟಿಯನ್ನು ಜಾರಿಗೆತರುವುದಾಗಿ ಹೇಳುತ್ತಿದ್ದೀರಿ, ಹೀಗೆ ತಾವು ಹೇಳುತ್ತಿರುವುದಕ್ಕಾದರೂ ಕಾರಣವಿಷ್ಟೇ— ದೇಶದಲ್ಲಿ ಬಹಳ ಜನ ಬಡವರಿದ್ದಾರೆ ; ಅವರೂ ಕೂಡ ನಮ್ಮಂತೆ ಎಲ್ಲರಹಾಗೆ ಒಂದು ಒಳ್ಳೆಯ ಸ್ಥಿತಿಗೆ ಬರಲಿ ಅನ್ನತಕ್ಕದ್ದೇ ಆಗಿದೆ. ಹೀಗೆ ಮಾಡಿದರೆ ದೇಶಕ್ಕೂ ಕೂಡ ಒಂದು ಕಲ್ಯಾಣವನ್ನುಂಟುಮಾಡಿದ ಹಾಗೆ ಆಗುತ್ತದೆ. ತಾವು ಇದನ್ನು ಬೇಗ ಜಾರಿಗೆ ತರಬೇಕೆಂದು ತಮ್ಮಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಈಗ ಈ ಇಂಟರ್‌ಮೀಡಿಯರೀಗಳನ್ನು ತೆಗೆದುಹಾಕತಕ್ಕ ಬಗ್ಗೆ ಈಗಾಗಲೇ ಪರ್ಸನಲ್ ಅಂಡ್ ಮಿಸ್ಲೇನಿಯಸ್ ಇನಾಂ ಅಬಾಲಿಷನ್ ಬಿಲ್ಲನ್ನು ಮತ್ತು ಛಾರಿಟಬಲ್ ಇನಾಂ ಅಬಾಲಿಷನ್ ಬಿಲ್ಲನ್ನು ಜಾರಿಗೆ ತರಲು ಹೊರಟಿದ್ದೀರಿ. ಇದರಿಂದ ಈಗ ಈ ಮಧ್ಯವರ್ತಿ ಜನಗಳೆಲ್ಲಾ ಹೊರಟುಹೋಗುತ್ತಾರೆ. ಈಗ ಯಾರೋ ಒಬ್ಬ ಆಬ್‌ಸೆಂಟಿ ಲ್ಯಾಂಡ್‌ಲಾರ್ಡಿದ್ದಾನೆ. ಆತನಿಗೆ 500 ಎಕರೆ ಜಮೀನಿರುತ್ತದೆ. ಆ ಜಮೀನನ್ನೆಲ್ಲಾ ಆತನು ಯಾರಿಗೋ ಗುತ್ತಿಗೆ ಕೊಟ್ಟು ಎಲ್ಲೋ ತಾನು ವಾಸಮಾಡುತ್ತಿರುತ್ತಾನೆ. ಆದರೆ ಬರವಣಿಗೆಯಲ್ಲಿ ಮಾತ್ರ ಏನೂ ಇರುವುದಿಲ್ಲ. ಇಂಥ ಸಂದರ್ಭಗಳು ವಿಶೇಷವಾಗಿವೆ. ಇನ್ನು ಕೆಲವು ಕಡೆಗಳಲ್ಲಿ ಈ ಆಬ್‌ಸೆಂಟಿ ಲ್ಯಾಂಡ್‌ಲಾರ್ಡ್‌ಗಳ ಜಮೀನನ್ನು ಒಳ್ಳೆಯ ಅನುಕೂಲವಾಗಿ ಪಡೆದಿರುವಂಥ ರೈತರು ಎಕರೆ ಒಂದಕ್ಕೆ ಎಂಟು ಪಲ್ಲಗಳಂತೆ ಗುತ್ತಿಗೆ ಕೊಡುತ್ತೇವೆಂದು ಹೇಳಿ ತೆಗೆದುಗೊಂಡು ಜಮೀನ್ದಾರರಿಗೆ ಏನೂ ಕೊಡದೆ ಪೂರಾ ಸತಾಯಿಸುತ್ತಿರುವಂಥ ನಿದರ್ಶನಗಳೂ ಇವೆ. ಇನ್ನು ಕೆಲವು ಸಂದರ್ಭಗಳಲ್ಲಿ ಆ ಜಮೀನ್ದಾರರು "ನೀನು ಸರಿಯಾಗಿ ಗುತ್ತಿಗೆ ಕೊಡುತ್ತಿಲ್ಲ; ಆದುದರಿಂದ ಜಮೀನನ್ನು ಇನ್ನು ಮೇಲೆ ನೀನು ಬಿಟ್ಟುಬಿಡಬೇಕು" ಎಂದು ಒತ್ತಾಯಪಡಿಸಿದಾಗ ಆ ರೈತರುಗಳೆಲ್ಲಾ ಒಂದಾಗಿ ಹೇಗೂ ಈತನು ಬಂದು ಸ್ವಂತವಾಗಿ ಇಲ್ಲಿ ಜಮೀನ್ ಸಾಗುವಳಿ ಮಾಡಲು ಸಾಧ್ಯವಿಲ್ಲ, ಆದುದರಿಂದ ನಾವೆಲ್ಲರೂ ಸ್ವಲ್ಪ ಬಿಗಿಯಾಗಿದ್ದರೆ ಆಗ ಪುನಃ ಆತನು ಆ ಜಮೀನುಗಳನ್ನೆಲ್ಲಾ ನಮಗೇ ಕೊಟ್ಟುಹೋಗುತ್ತಾನೆಂದು ಕೆಲ ಕೆಲವು ಕಡೆ ಇಂಥ ಕಟ್ಟುಪಾಡುಗಳನ್ನು ಮಾಡಿಕೊಂಡು ಜಮೀನ್ದಾರರಿಗೂ ರೈತರು ತುಂಬ ತೊಂದರೆಗಳನ್ನು ಕೊಡುತ್ತಿದ್ದಾರೆ. ಈ ಎಲ್ಲ ಅಂಶಗಳನ್ನೂ ಸರ್ಕಾರದವರು ಈಗ ಪರಿಶೀಲನೆ ಮಾಡಬೇಕಾಗಿದೆ. ಈ ದಿವಸ ಈ ಗೇಣೀ ಕಾನೂನು ಜಾರಿಯಲ್ಲಿದ್ದರೂ ಅನೇಕ ಕಡೆಗಳಲ್ಲಿ ಅನೇಕ ಗ್ರಾಮಗಳಲ್ಲಿರತಕ್ಕಂಥ ಜನರಿಗೆ ಇದರ ಅರಿವೇ ಇರುವುದಿಲ್ಲ, ತಾವು ಇದನ್ನು ಇನ್ನೂ ಹೆಚ್ಚಿನ ಮಟ್ಟದಲ್ಲಿ ದೇಶಾದ್ಯಂತವೂ ಪ್ರಚಾರಪಡಿಸಬೇಕಾಗಿದೆ. ಈ ಜಮೀನ್ದಾರರಿಗೂ ಮತ್ತು ಜಮೀನ್ ಮಾಡತಕ್ಕಂಥ ರೈತರಿಗೂ ಒಂದು ವಿರಸವನ್ನು ತಂದೊಡ್ಡಬೇಕೆಂಬ ಉದ್ದೇಶದಿಂದಲೇನೂ ನಾನು ಇದನ್ನೆಲ್ಲಾ ಹೇಳುತ್ತಿಲ್ಲ. ನನ್ನ ಉದ್ದೇಶ ಇದಲ್ಲ. ಆದರೆ ಈಗ ಸರ್ಕಾರದವರು ಯಾವ ಒಂದು ತಿದ್ದುಪಡಿಯನ್ನು ಈಗ ತಂದಿದ್ದಾರೋ ಅದರಿಂದ ಜನರಿಗೆ ಅನುಕೂಲವಾಗುತ್ತದೆಯೇ ಹೊರತು ಯಾರಿಗೂ ಅಂಥ ಅನ್ಯಾಯವೇನೂ ಆಗುವುದಿಲ್ಲವೆಂದು ಹೇಳುತ್ತೇನೆ.

ಆದರೆ ಈಗ ಸರ್ಕಾರದವರು ತಂದಿರತಕ್ಕಂಥ ಕಾನೂನಿನಲ್ಲಿಯೇ ಈ ಸೀಲಿಂಗ್ ಲಿಮಿಟ್ಟನ್ನೂ ಸಹ ಏಕೆ ತರಬಾರದಾಗಿತ್ತೆಂದು ಕೆಲವರು ಒಂದು ಪ್ರಶ್ನೆಯನ್ನು ಎತ್ತಿದ್ದಾರೆ. ಇದೂ ಕೂಡ ಬಹಳ ಮುಖ್ಯವಾದ ವಿಚಾರ. ಇದನ್ನೂ ಕೂಡ ಮಾಡಲೇಬೇಕಾಗಿದೆ. ಈ ಸೀಲಿಂಗ್ ಲಿಮಿಟ್ಟನ್ನು ನಿರ್ಧಾರ ಮಾಡದೇ ಹೋದರೆ ಈ ಕಾನೂನು ಪೂರ್ತಿಯಾದಂತೆ ಆಗುವುದಿಲ್ಲ. ಆದರೆ ಈಗಾಗಲೇ ಇಂಡಿಯಾ ಸರ್ಕಾರದವರು ಈ ಬಗ್ಗೆ ಒಂದು ಸಮಿತಿಯನ್ನೇ ನೇಮಕಮಾಡಿದ್ದಾರೆಂದು ಕೇಳುತ್ತೇನೆ. ಎಲ್ಲಾ ಸಂಸ್ಥಾನಗಳ ಭೂ ಸುಧಾರಣೆಯನ್ನು ಯಾವ ರೀತಿಯಾಗಿ ಮಾಡಬೇಕಾಗಿರುತ್ತೆಂಬ ಬಗ್ಗೆ ಅವರು ಎಲ್ಲಾ ವಿಷಯಗಳನ್ನೂ ಪರಿಶೀಲನೆ ಮಾಡುತ್ತಿದ್ದಾರೆ. ಅವರೂ ಸಹ ಅಲ್ಲಿ ಈಗ ಸೀಲಿಂಗ್ ಲಿಮಿಟ್ಟನ್ನು ನಿರ್ಧರಿಸಿ ಕಾನೂನನ್ನು ಜಾರಿಗೆ ತರಬೇಕೆಂದಿದ್ದಾರೆಂದು ಕೇಳುತ್ತೇನೆ. ಆದುದರಿಂದ ತಾವೂ ಸಹ ಮೊದಲೇ ಈ ಸೀಲಿಂಗ್ ಲಿಮಿಟ್ಟನ್ನು ನಿರ್ಧಾರ ಮಾಡಿ ಅದನ್ನೂ ಸಹ ಈ ಕಾನೂನಿನಲ್ಲೇ ಅಳವಡಿಸಿದರೆ ಚೆನ್ನಾಗಿರುತ್ತದೆಂದು ತಿಳಿದುಕೊಂಡಿದ್ದೇನೆ.

ಮತ್ತೆ ಕೆಲವರು ಈ ಭೂಸುಧಾರಣೆಯೊಂದನ್ನೇ ತಾವು ಜಾರಿಗೆ ತರಬಾರದು, ಇದೊಂದನ್ನೇ ತಂದರೆ ಏನೂ ಅಷ್ಟು ಸುಖವಿಲ್ಲ, ಇದೇ ರೀತಿ ತಾವು ಇತರೇ ಎಲ್ಲಾ ಆಸ್ತಿಪಾಸ್ತಿಗಳಿಗೂ ಕಾನೂನನ್ನು ತರಬೇಕೆಂದು ಕೇಳುತ್ತಿದ್ದಾರೆ. ಆದರೆ ಈಗ ಸಧ್ಯಕ್ಕೆ ಹಾಗೆ ಮಾಡುವುದಕ್ಕಾಗುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಈ ದಿವಸ ಆಗಲೇ ಜನರು ಯಾರೂ ಹಳ್ಳಿಗಳಲ್ಲಿ ವಾಸಮಾಡುವುದಕ್ಕೆ ಇಷ್ಟಪಡುವುದಿಲ್ಲ. ಜನರು ಪಟ್ಟಣವಾಸದಲ್ಲಿ ಮೂರು ನಾಲ್ಕು ಅಂತಸ್ತು ಮನೆಗಳನ್ನು ಕಟ್ಟಿಕೊಂಡು ಜೀವನ ಮಾಡುತ್ತಿರುವುದನ್ನು ನೋಡಿ, ಹಳ್ಳಿಯಲ್ಲಿ ವಾಸ ಮಾಡುವುದಕ್ಕೆ ಈ ದಿವಸ ಯಾರಿಗೂ ಮನಸ್ಸಿಲ್ಲ. ಆದರೆ ಈ ದಿವಸ ಈ ಬೆಂಗಳೂರಿನಲ್ಲಿ ಈ ನಿವೇಶನದ ದರಗಳನ್ನು ಪೂರಾ ಹೆಚ್ಚಿಸಿದ್ದಾರೆ. ಈ ಹಿಂದೆ 1925ರಲ್ಲಿ ಈ ಬೆಂಗಳೂರು ನಗರದಲ್ಲಿ ಅನೇಕ ಬಡಾವಣೆಗಳಲ್ಲಿ ಜನರು ಯಾರೂ ಈ ನಿವೇಶನಗಳನ್ನು ಕೇಳತಕ್ಕವರೇ ಇರಲಿಲ್ಲ. ಅನೇಕ ಬಡಾವಣೆಗಳಲ್ಲಿ ಪಿಶಾಚಿಗಳೂ ಕೂಡ ವಾಸಿಸುವುದಕ್ಕೆ ಇಷ್ಟಪಡುತ್ತಿರಲಿಲ್ಲ. ಆಗ ಈ ನಿವೇಶನಗಳ ಬೆಲೆಗಳೆಲ್ಲಾ ತೀರಾ ಕಡಮೆಯಾಗಿದ್ದುವು. ಈ ದಿವಸ ಇವುಗಳ ಬೆಲೆ ಏನಾಗಿದೆ? ಹಿಂದೆ ಚದರಗಜಕ್ಕೆ 3-4 ಆಣೆ ಇದ್ದದ್ದು ಈ ದಿವಸ 30-40 ರೂಪಾಯಿಗಳಾಗಿದೆ.

ಉಪಾಧ್ಯಕ್ಷರು.—ಆ ವಿಚಾರಗಳಿಗೂ ಈ ಮಸೂದೆಗೂ ಏನು ಸಂಬಂಧವಿದೆ ?

ಶ್ರೀ ಎಂ. ಚಿಕ್ಕಲಿಂಗಯ್ಯ.—ಸಂಬಂಧವಿದೆ. ಆದುದರಿಂದಲೇ ಹೇಳುತ್ತಿದ್ದೇನೆ. ಈಗ ಬೆಂಗಳೂರು-ಮೈಸೂರು ನಗರಗಳಲ್ಲಿ ಒಬ್ಬೊಬ್ಬರು ನಾಲ್ಕೈದು ಸೈಟುಗಳನ್ನು ಇಟ್ಟುಕೊಂಡಿದ್ದಾರೆ. ಕೇಳಿದರೆ ಚದರಗಜ ಒಂದಕ್ಕೆ 1. -20 ರೂಪಾಯಿಗಳನ್ನು ಹೇಳುತ್ತಿದ್ದಾರೆ. ತಾವೀಗ ಈ ಸೋಷಿಯಲಿಸ್ಟಿಕ್ ಪ್ಯಾಟರನ್ ಸೊಸೈಟಿಯನ್ನು ಜಾರಿಗೆ ತರುತ್ತೇವೆಂದು ಹೇಳುತ್ತಿರುವಾಗ ಅದರಲ್ಲಿ ಈ ವಿಚಾರಗಳೆಲ್ಲಾ ಬಂದೇ ಬರುತ್ತವೆ. ಆದುದರಿಂದ ಮಾನ್ಯ ಸಚಿವರು ಈ ಎಲ್ಲಾ ವಿಚಾರಗಳ ಬಗ್ಗೆಯೂ ಬಹಳ ಪ್ರೋಗ್ರೇಸೀವ್ ಐಡಿಯಾಗಳನ್ನು ಇಟ್ಟುಕೊಂಡು ಈ ಕಾನೂನನ್ನು ಜಾಗ್ರತೆ ತರತಕ್ಕದ್ದು ಅತ್ಯಗತ್ಯ ಎಂತ ಹೇಳಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಸ್ವಾಮಿ, ನಾನು ಜಮೀನ್ದಾರನೂ ಅಲ್ಲ, ಆಬ್‌ಸೆಂಟಿ ಲ್ಯಾಂಡ್ ಲಾರ್ಡೂ ಅಲ್ಲ, ಟೆನೆಂಟೂ ಅಲ್ಲ ಮತ್ತು ಮೊಟ್ಟಮೊದಲಿಗೆ ರೈತನೂ ಅಲ್ಲ. ಆದರೆ ನಾನೊಬ್ಬ ಕನ್ಸೂಮರು.

ಒಬ್ಬ ಮಾನ್ಯ ಸದಸ್ಯರು.—ಹಾಗಾದರೆ ತಾವು ಒಬ್ಬ ಪ್ಯಾರಾಸೈಟ್‌ಗಳು ಎಂದು ಆಯಿತು.

ಶ್ರೀ ಪಿ. ಆರ್. ರಾಮಯ್ಯ.—ಅಲ್ಲ, ಹಾಗೆ ನಾನು ಒಬ್ಬ ಪ್ಯಾರಾಸೈಟೂ ಸಹ ಅಲ್ಲ.

(ಶ್ರೀ ಪಿ. ಆರ್. ರಾಮಯ್ಯ.)

ಸ್ವಾಮಿ, ಈಗ ಸಭೆಯ ಮುಂದೆ ಬಂದಿರತಕ್ಕಂಥ ಈ ಮಸೂದೆ ಭೂಸುಧಾರಣೆಯ ಒಂದು ಪರಂಪರೆಯಾಗಿ ಬಂದಿರತಕ್ಕಂಥಾಗಿದೆ. ಈ ಭೂಸುಧಾರಣೆ ಎನ್ನತಕ್ಕದ್ದರಲ್ಲಿ ಈ ಟೆನೆನ್ಸಿ ಆಕ್ಟು ಎನ್ನುವುದು ಮೊದಲು ಬಂತು, ಎರಡನೆಯದು ಪರ್ಸನಲ್ ಮತ್ತು ಮಿಸ್ಲೇನಿಯಸ್ ಇನಾಂ ಅಬಾಲಿಷನ್ ಬಿಲ್ಲು ಅನ್ನುವುದು ಬಂತು, ಇನ್ನು ಮೂರನೇಯದು ರಿಲಿಜಿಯಸ್ ಅಂಡ್ ಛಾರಿಟಬಲ್ ಇನಾಂ ಅಬಾಲಿಷನ್ ಬಿಲ್ಲು ಅನ್ನುವುದು ಬಂತು. ಆದರೆ ಇದರಲ್ಲಿ ನಾಲ್ಕನೆಯದು ಒಂದು ಹಂತ ಇದ್ದಿದ್ದರೆ ಚೆನ್ನಾಗಿತ್ತು. ಅದು ಯಾವುದೆಂದರೆ—ಈ ಆಬ್‌ಸೆಂಟಿ ಲ್ಯಾಂಡ್‌ಲಾರ್ಡ್ ಎಂದು ಯಾರಾದರೂ ಇದ್ದರೆ ಅಂಥವರ ಜಮೀನನ್ನು ವಜಾ ಮಾಡುತ್ತೇವೆಂದು ಇನ್ನೊಂದು ಮಸೂದೆಯನ್ನು ತಂದಿದ್ದರೆ ಬಹಳ ಚೆನ್ನಾಗಿತ್ತು. ಈಗಲೂ ನೀವು ಬುದ್ಧಿವಂತರಾಗಿದ್ದರೆ ಜಮೀನ್ದಾರನು ತನ್ನ ಸ್ವಂತ ವ್ಯವಸಾಯಕ್ಕಾಗಿ ಎಷ್ಟು ಜಮೀನನ್ನು ಇಟ್ಟುಕೊಂಡಿದ್ದಾನೋ ಅಷ್ಟನ್ನು ಮಾತ್ರ ಜಮೀನ್ದಾರನಿಗೆ ಬಿಟ್ಟುಕೊಟ್ಟು ಇನ್ನುಳಿದದ್ದನ್ನು ಸರಕಾರಕ್ಕೆ ತೆಗದುಕೊಳ್ಳುತ್ತೇವೆಂದು ಹೇಳಿ ಈ ಮಸೂದೆಯನ್ನು ತಂದಿದ್ದರೆ ಆಗ ಇದು ಬಹಳ ಚೆನ್ನಾಗಿರುತ್ತಿತ್ತು. ತಾವು ಈ ಮಸೂದೆಯಲ್ಲಿ ಒಬ್ಬ ವ್ಯವಸಾಯಮಾಡತಕ್ಕಂಥ ಮನುಷ್ಯನಿಗೆ ಮೂರು ಎಕರೆ ತರಿ, ಇಂತಿಷ್ಟು ಎಕರೆ ಖುಷ್ಕಿ ಹಾಗೆ ಎಂದು ಹೇಳಿ ಒಂದು ಸೀಲಿಂಗ್ ಲಿಮಿಟ್‌ನ್ನು ಹಾಕಿ ತಂದಿದ್ದರೆ ಈ ಭೂಸುಧಾರಣೆಯ ಅರ್ಥ ಜನರಿಗೆಲ್ಲಾ ಸುಲಭವಾಗಿ ತಿಳಿಯುತ್ತಿತ್ತು. ಆದರೆ ತಾವು ಈ ಆಬ್‌ಸೆಂಟೀ ಲ್ಯಾಂಡ್‌ಲಾರ್ಡ್ ಮತ್ತು ಈ ಸೀಲಿಂಗ್ ಲಿಮಿಟ್‌ನ ಎರಡು ಮಸೂದೆಗಳನ್ನು ತರದೆ......

Sri Kadidal MANJAPPA.—The ceiling limit deals only with absentee landlords and their tenants.

ಶ್ರೀ ಪಿ. ಆರ್. ರಾಮಯ್ಯ.—ಈ ಮಸೂದೆಯು ಸೆಲೆಕ್ಟ್ ಸಮಿತಿಯ ಮುಂದೆ ಹೋದಾಗ ಇದರಲ್ಲಿರತಕ್ಕಂಥ ಕೆಲವು ಸಾಮಾನ್ಯ ಲೋಪದೋಷಗಳನ್ನು ಅವರು ತಿದ್ದುಪಡಿ ಮಾಡಬಹುದು. ಆದರೆ ಈಗ ನಾವು ಕೆಲವು ಮೂಲ ತತ್ವಗಳನ್ನು ಪರಿಶೀಲನೆ ಮಾಡಬೇಕಾಗಿದೆ. ಈ ದಿವಸ ನಾವೆಲ್ಲರೂ ಈ ಭೂಸುಧಾರಣೆಯನ್ನು ನಮ್ಮ ದೇಶದಲ್ಲಿ ಜಾರಿಗೆ ತರಬೇಕೆಂಬ ಉದ್ದೇಶದಿಂದ ಈಗ ಜಮೀನು ಇಲ್ಲದವರೆಗೆ ಜಮೀನು ದೊರೆಯುವ ಹಾಗೆ ಮಾಡಲು ಈ ಕಾನೂನುಗಳನ್ನೆಲ್ಲಾ ತರುತ್ತಿದ್ದೇವೆ. ಹೀಗೆ ಮಾಡುವುದು ಬಹಳ ಒಳ್ಳೆಯದು. ಈ ದಿವಸ ನಮ್ಮ ದೇಶದಲ್ಲಿ ಭೂ ವ್ಯವಸಾಯದಲ್ಲಿ ನಿರತರಾಗಿರಕ್ಕ ಜನಗಳಲ್ಲಿ ಮೂರು ತರಹೆಯ ಜನಗಳಿದ್ದಾರೆ. ಸ್ವಂತ ಜಮೀನ್ ಮಾಲೀಕರಾಗಿ ತಾವೇ ಸ್ವಂತ ವ್ಯವಸಾಯ ಮಾಡಿಕೊಂಡು ಹೋಗತಕ್ಕಂಥವರ ಗುಂಪು ಒಂದು; ತಾವು ಜಮೀನಿನ ಮಾಲೀಕರಾಗಿದ್ದರೂ ಸ್ವತಃ ವ್ಯವಸಾಯ ಮಾಡದೆ ಕೂಲಿಯವರನ್ನಿಟ್ಟುಕೊಂಡು ವ್ಯವಸಾಯ ಮಾಡಿಸಿಕೊಂಡು ಹೋಗತಕ್ಕವರು ಎರಡನೆಯ ಗುಂಪು; ಇನ್ನು ಮೂರನೆಯವರು ತಮಗೆ ಯಾವ ಸ್ವಂತ ಜಮೀನುಗಳೂ ಇಲ್ಲದೆ ಗುತ್ತಿಗೆಗೆ ಅಥವಾ ವಾರಕ್ಕೋ ಅನ್ಯರ ಭೂಮಿಯನ್ನು ಪಡೆದುಕೊಂಡು ವ್ಯವಸಾಯದಲ್ಲಿ ನಿರತರಾಗಿರತಕ್ಕವರ ಗುಂಪು ಒಂದು. ಇದರ ಮೇಲೆ ಇನ್ನೂ ಒಂದು ಗುಂಪಿದೆ—ಅವರು ಯಾವ ಈ ಗುತ್ತಿಗೆಯನ್ನೂ ಮಾಡುವುದಿಲ್ಲ; ವಾರಕ್ಕೂ ಜಮೀನು ಮಾಡುವುದಿಲ್ಲ. ಕೇವಲ ದಿನಗೂಲಿಯ ಮೇಲೆ ಕೆಲಸಮಾಡಿಕೊಂಡು ಹೋಗತಕ್ಕಂಥ ಅಗ್ರಿಕಲ್ಚರಲ್ ಲೇಬರರ್ಸ್ ಕ್ಲಾಸ್ ಒಂದು ಇದೆ. ಈ ನಾಲ್ಕು ಗುಂಪಿನಲ್ಲಿ ಈ ಅಗ್ರಿಕಲ್ಚರಲ್ ಲೇಬರ್ ಕ್ಲಾಸೇ ಬಹಳ ಜಾಸ್ತಿಯಾಗಿ ಇರತಕ್ಕದ್ದು ಎಂದು ಕಾಣಿಸುತ್ತಿದೆ. ಸುಮಾರು 6 ಲಕ್ಷ ಜನರು ಬರಿ ಈ ಅಗ್ರಿಕಲ್ಚರಲ್ ಲೇಬರರ್ಸ್ ಆಗಿ ಜೀವನ ಮಾಡುತ್ತಿದ್ದಾರೆಂದು ಕಾಣುತ್ತದೆ. ಇನ್ನು ಲ್ಯಾಂಡ್ ಹೋಲ್ಡರ್ಸ್ ಆಗಿರತಕ್ಕವರ ಸಂಖ್ಯೆ 12 ಲಕ್ಷ ಎಂದು ಕೊಟ್ಟಿದ್ದಾರೆ. ಇದರಲ್ಲಿ ಈ ವಾರ ಅಥವಾ ಗುತ್ತಿಗೆ ವ್ಯವಸಾಯ ಮಾಡತಕ್ಕಂಥ ಜನರು 15 ಸಾವಿರ ಜನರಿದ್ದಾರೆ. ಆದರೆ ಮಾನ್ಯ ಮಂತ್ರಿಗಳು ಈ ಗುತ್ತಿಗೆದಾರರ ಸಂಖ್ಯೆಯೆಷ್ಟಿದೆ, ಸ್ವಂತ ಸಾಗುವಳಿದಾರರ ಸಂಖ್ಯೆಯೆಷ್ಟಿದೆ ಅನ್ನುವ ವಿವರಗಳನ್ನೆಲ್ಲಾ ನಮಗೆ ಒದಗಿಸಿಕೊಟ್ಟಿದ್ದರೆ ಚೆನ್ನಾಗಿತ್ತು.........

ಶ್ರೀ ಕಡಿದಾಳ್ ಮಂಜಪ್ಪ.—ಹಿಂದೆಲ್ಲಾ ಒದಗಿಸಿ ಕೊಟ್ಟಿದ್ದೇನೆ.

ಶ್ರೀ ಪಿ. ಆರ್. ರಾಮಯ್ಯ.—ಹಾಗಾದರೆ ಇವರೆಲ್ಲರ ಸಂಖ್ಯೆ ಎಷ್ಟಿರಬಹುದು ?

ಶ್ರೀ ಡಿ. ದೇವರಾಜ ಅರಸ್.—ಈ ವಾರ ಅಥವಾ ಗುತ್ತಿಗೆದಾರರ ಸಂಸಾರಗಳೇ ಸುಮಾರು 75 ಸಾವಿರದ ಮೇಲಿರಬಹುದು.

Sri H. M. CHANNBASAPPA.—The correct figure is 4,32,415 people or about 75,000 families.

ಶ್ರೀ ಪಿ. ಆರ್. ರಾಮಯ್ಯ.—ಸ್ವಾಮಿ, ಈ ಲೆಕ್ಕಗಳನ್ನೆಲ್ಲಾ ಸರಿಯಾಗಿ ತಪಶೀಲ್ವಾರಾಗಿ ಪ್ರಕಟಿಸಿ ನಮ್ಮ ಸದಸ್ಯರಿಗೆಲ್ಲಾ ಹಂಚಿದರೆ ಮತ್ತು ಇಡೀ ದೇಶಕ್ಕೆ ತಿಳಿಯುವ ಹಾಗೆ ಮಾಡಲು ಕೆಲವು ಪತ್ರಿಕೆಗಳಲ್ಲಿ ಹಾಕಿಸಿದರೆ ಈ ಸಮಸ್ಯೆಯಮೇಲೆ ಬೆಳಕು ಹಾಕಿದ ಹಾಗಾಗುತ್ತದೆ. ಮುಖ್ಯವಾಗಿ ಈ ಸಮಸ್ಯೆಯನ್ನು ನಾವು ಪರಿಹಾರ ಮಾಡಬೇಕಾದರೆ ಭೂಸುಧಾರಣೆಯಾಗಬೇಕು. ಇದಾಗಬೇಕಾದರೆ ಎರಡು ಮೂರು ವಿಷಯಗಳನ್ನು ಚೆನ್ನಾಗಿ ಆಲೋಚನೆ ಮಾಡಬೇಕು. ಈ ಕಾನೂನು ಈಗ ತಂದಿರತಕ್ಕ ರೀತಿಯಲ್ಲಿ ಇದ್ದರೆ land holdersಗೆ ಕಷ್ಟವಾಗುವ ಹಾಗೆ ಮತ್ತು ತೊಂದರೆಯಾಗುವ ಹಾಗೆ ಕಾಣುತ್ತದೆ. ಟೆನೆಂಟ್‌ಗಳಿಗೆ ಅಷ್ಟು ಉಪಯೋಗವಾಗುವ ಹಾಗೆ ಕಾಣಿಸುತ್ತಿಲ್ಲ. ಆದ್ದರಿಂದ ಈ ಮಸೂದೆಯನ್ನು ತರಬೇಕಾದರೆ ನಾನು ಹೇಳಿದ ಹಾಗೆ ಮಧ್ಯೆ ಎರಡು ವಿಷಯಗಳನ್ನು ಎಂದರೆ, abolition of absentee landlordism ಮತ್ತು ceiling of land limit ಅಂದರೆ,—ಒಬ್ಬ ಮನುಷ್ಯ ಎಷ್ಟು ಎಕರೆ ಜಮೀನು ಹೊಂದಿರಬೇಕು ಎನ್ನತಕ್ಕದ್ದು. ಇವುಗಳನ್ನು ಅಡಕಮಾಡಿ ತರಬೇಕಾಗಿತ್ತು—ನಮ್ಮ ಇಂಡಿಯಾ ಸರ್ಕಾರದವರು ನೇಮಿಸಿರುವ Planning Commissionನವರು ceiling limit ವಿಚಾರ ಆಲೋಚನೆ ಮಾಡುತ್ತಿದ್ದಾರೆ. ಆದ್ದರಿಂದ ಈ ಮಸೂದೆಯನ್ನು ತರಬೇಕಾದರೆ comprehensive ಆಗಿ ಎಲ್ಲಾ ವಿಷಯಗಳನ್ನೂ ಅದರಲ್ಲಿ ಅಡಕಮಾಡಿ ತಂದಿದ್ದರೆ ಚೆನ್ನಾಗಿತ್ತು. ಅದು ಬಿಟ್ಟು piecemeal ಆಗಿ ಒಂದೊಂದನ್ನೇ ತಂದರೆ ಅದರಿಂದ ಹೆಚ್ಚು ಉಪಯೋಗವಾಗುವುದಿಲ್ಲವೆಂದು ನಾನು ಭಾವಿಸುತ್ತೇನೆ.

ಈ Tenancy Act ಜಾರಿಗೆ ಕೊಟ್ಟದ್ದು 1952 ರಲ್ಲಿ. ಅದರಲ್ಲಿ 5 ವರ್ಷಗಳವರೆಗೆ tenantಗೆ ಅವಕಾಶ ಕೊಟ್ಟಿದ್ದಿರಿ. ಈಗ ಆ ಅವಧಿಯನ್ನು 10 ವರ್ಷ ಮಾಡಿದ್ದೀರಿ. ಇದನ್ನು ಜಾರಿಗೆ ಕೊಡುವಾಗ ಕೆಲವು ತಾಲ್ಲೂಕುಗಳಲ್ಲಿ ಮಾತ್ರ ಕೊಟ್ಟಿದ್ದೀರಿ. ಇಡೀ ದೇಶದಲ್ಲಿ ಜಾರಿಗೆ ತಂದಿಲ್ಲ. ಈ Tenancy Act ಸಮರ್ಪಕವಾಗಿ ಕೆಲಸ ಮಾಡುತ್ತಿ

ದೆಯೇ, ಇದರಿಂದ ಏನಾದರೂ ತೊಂದರೆಯಾಗಿದೆಯೇ, ಎಂದು ಕೆಲವು ವರ್ಷಗಳಕಾಲವಾದರೂ ನೋಡದೆ, ಇದರ ಸಾಧಕಬಾಧಕಗಳೇನೆಂಬುದನ್ನು ತಿಳಿಯದೆ, ಮತ್ತು ಈ ವಿಚಾರದಲ್ಲಿ ಒಂದು ಸಮಿತಿಯನ್ನಾದರೂ ನೇಮಿಸಿ ಅವರ ಅಭಿಪ್ರಾಯವನ್ನೂ ಸಹ ತೆಗೆದು ಕೊಳ್ಳದೆ, 5 ವರ್ಷಗಳು ಪೂರೈಸುವುದಕ್ಕೆ ಮುಂಚೆಯೇ ಈ ತಿದ್ದುಪಡಿ ಕಾನೂನನ್ನು ಆತುರವಾಗಿ ತಂದಿರುವುದ ರಲ್ಲಿ ಏನಾಗಿದೆ ಎಂದರೆ ನಾವು ಎಷ್ಟು ತಿನ್ನಬಹುದೋ ಅದಕ್ಕಿಂತ ಹೆಚ್ಚಾಗಿ ತುರುಕಿಕೊಳ್ಳುತ್ತಿದ್ದೇವೆಂದು ಕಾಣುತ್ತಿದೆ. ಹೀಗೆ ಮಾಡದೇಬೇಕು, ಸುಧಾರಣೆ ಯಾಗಲೇಬೇಕು ಎಂದರೆ ಆಗ ಎಲ್ಲಾ ವಿಷಯಗಳನ್ನೂ ಒಳಗೊಂಡಿರತಕ್ಕ ಒಂದು comprehensive ಆಗಿರ ತಕ್ಕ ಮಸೂದೆಯನ್ನು ತಂದಿದ್ದರೆ ಚೆನ್ನಾಗಿತ್ತು.

ಶ್ರೀ ಕಡಿದಾಳ್ ಮಂಜಪ್ಪ.—ನಿಮ್ಮ ಅಭಿಪ್ರಾಯ ದಲ್ಲಿ Tenancy Bill, ceiling limit, abolition of intermediaries ಈ ರೀತಿ ಎಲ್ಲವನ್ನೂ ಒಟ್ಟಿಗೆ ತರಬೇಕಾಗಿತ್ತು ಎಂದೇ !

ಶ್ರೀ ಪಿ. ಆರ್. ರಾಮಯ್ಯ.—ಹಾಗೆ ಹೇಳಲಿಲ್ಲ. ಈಗ ಎರಡನ್ನು ತಂದಿದ್ದೀರಿ. ಇನ್ನು Absentee Landlordism ಮತ್ತು ceiling limit ಇವೆರಡನ್ನೂ ತರಬೇಕಾಗಿತ್ತು.

ಶ್ರೀ ಕಡಿದಾಳ್ ಮಂಜಪ್ಪ.—Absentee Landlordism ಗೆ ಸಂಬಂಧಪಟ್ಟ ವಿಷಯ ಈ ಬಿಲ್ಲಿನಲ್ಲಿಯೇ ಇದೆ.

ಶ್ರೀ ಎಸ್. ಗೋಪಾಲಗೌಡ.—ಬಹುಶಃ ಶ್ರೀ ರಾಮಯ್ಯನವರು ಹೇಳುವುದು ಹಿಂದೆ ತಿರುವಾಂಕೂರು ಕೊಚಿನ್‌ನಲ್ಲಿ ಜಾರಿಗೆ ತಂದ ಹಾಗೆ ಒಟ್ಟಿಗೆ ಒಂದೇ ಬಿಲ್ಲಿನಲ್ಲಿ ತರದೆ, ceiling limitಗೆ ಒಂದು, absentee landlordismಗೇ ಒಂದು, tenancy ವಿಷಯಕ್ಕೇ ಒಂದು ಹೀಗೆ ತರುವುದು ಒಳ್ಳೆಯದೆಂದು ಪ್ರಾಯಶಃ ಅವರ ಅಭಿಪ್ರಾಯ ಇರಬಹುದು.

ಶ್ರೀ ಪಿ. ಆರ್. ರಾಮಯ್ಯ.—Comprehensive Act ತರುವುದು ಯುಕ್ತವಾದದ್ದು ಎನ್ನುವ ಅಭಿಪ್ರಾಯ ದಲ್ಲಿ ಹೇಳುತ್ತಿದ್ದೇನೆ. ನಮ್ಮ ಮಾನ್ಯ ಮಂತ್ರಿಗಳು ಈ Tenancy Amendment Billನಲ್ಲೇ Absentee Landlordism ವಿಷಯ ಅಡಕವಾಗಿದೆ ಎಂದು ಹೇಳಿದರು. ಆದರೆ ಅದರಲ್ಲಿ ಈಗ ಹೇಗಿದೆ ಎಂದರೆ tenancy ಗೆ.....................

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯರು ಒಂದು ವಿಷಯವನ್ನು ತಿಳಿಸಬೇಕು. Ceiling limit ವಿಚಾರ, Absentee Landlordism abolition ವಿಚಾರ ಇವೆಲ್ಲವನ್ನೂ ಒಂದೇ ಬಿಲ್ಲಿನಲ್ಲಿ ತರಬೇಕು ಎಂದು ಹೇಳಿದರು. ಅವರ ಸೂಚನೆಗಳೇನು, ಅವನ್ನು ಯಾವ ರೀತಿ ತರಬೇಕಾಗಿತ್ತು ಎನ್ನುವ ವಿಚಾರದಲ್ಲಿ ನಾಲ್ಕು ಮಾತುಗಳನ್ನು ಹೇಳಿದರೆ ಅನುಕೂಲವಾಗು ತ್ತದೆ.

Sri P. R. RAMAIYA.—"Hereafter anybody who possesses the land should cultivate the land for himself", it is a very simple thing.

ಇದನ್ನು ಒಂದು ರೀತಿಯಾಗಿ ತಂದುಬಿಟ್ಟರೆ ಅದು ಚೆನ್ನಾಗಿರುತ್ತದೆ. ಯಾಕೆ ಹೇಳುತ್ತೇನೆಂದರೆ ಇದ ರೊಳಗೆ ತಾವು ಏನುಮಾಡಿದ್ದೀರಿ ಅದನ್ನು circumvent ಮಾಡಿಕೊಂಡು, ಕೂಲಿಗಳನ್ನು ಇಟ್ಟುಕೊಂಡು, I can possess 200 acres of land, but yet I can circumvent this Tenancy law by engaging labourers instead of calling him a tenant I will pay him money and get the lands cultivated. How can you prevent this? The object of the legislation, I think, is to see that a man does not possess more than a certain number of acres of land and that the man who works on the land should get the ownership. But, here there is scope for circumventing"

ಶ್ರೀ ಕಡಿದಾಳ್ ಮಂಜಪ್ಪ.—ಪ್ರೆಸ್ ಯಾರಾದರೂ ಇಟ್ಟುಕೊಂಡು ನಡೆಸುತ್ತಿದ್ದರೆ ಕೂಲಿಗಾರರನ್ನೇ ಇಟ್ಟು ಕೊಳ್ಳಬಾರದು. ಪ್ರೆಸ್ ಇಟ್ಟಿರುವವರೇ ನಡೆಸಬೇಕು !

ಶ್ರೀ ಪಿ. ಆರ್. ರಾಮಯ್ಯ.—ಮುಂದೆ ಅದನ್ನೂ ಮಾಡಬೇಕಾಗುತ್ತದೆ. ಅವರೂ ನೋಡಿಕೊಳ್ಳಬೇಕು. ಮಹಾತ್ಮ ಗಾಂಧಿಯವರು ಹೇಳಿರುವ ತತ್ವವನ್ನು ನಾವು ಜಾರಿಗೆ ತರಬೇಕು. ನಮ್ಮ ಜೀವಮಾನದಲ್ಲಿ ಆ ತತ್ವವನ್ನು ಜಾರಿಗೆ ತರಬೇಕು. ದಿನಕ್ಕೆ 8 ಗಂಟೆ ಕಾಲ ಪ್ರತಿಯೊಬ್ಬ ಮನುಷ್ಯನೂ ಕೆಲಸ ಮಾಡಬೇಕು. ತನ್ನ ಆಹಾರವನ್ನು ತಾನು ಸಂಪಾದಿಸಬೇಕು. ಇದೇ ಮಹಾತ್ಮ ಗಾಂಧಿಯವರ ತತ್ವ. ಇದನ್ನು ನಾವು ಹೇಗೆ ಬೇಕಾದರೂ ಕರೆಯಬಹುದು, Communism, socialism, ಸರ್ವೋದಯ, 8 hours' labour, ಈ ರೀತಿಯಾಗಿ ಯಾವ ಹೆಸರಿನಿಂದ ಬೇಕಾದರೂ ಕರೆಯಬಹುದು. ಆದರೆ he should be entitled for bread. ತಾವು ಆ ರೀತಿ ಮಾಡಿದರೆ ನಾನು ಒಂದು ನೋಬೆಲ್ ಬಹುಮಾನ ಕೊಡುತ್ತೇನೆ.

ನಮಗೆ ಒಂದು ಆಸೆ ಇದೆ. ನಮ್ಮ ಜೀವಮಾನದಲ್ಲಿ ಆ ತತ್ವವನ್ನು ನಾವು ಜಾರಿಗೆ ತರಬೇಕಾಗಿದೆ, ಎಂದರೆ ಉಳತಕ್ಕವನಿಗೆ, ದುಡಿಯತಕ್ಕವನಿಗೆ ಭೂಮಿಯನ್ನು ಕೊಡಬೇಕು. ಈ ತತ್ವವನ್ನು ಜಾರಿಗೆ ತರಬೇಕಾದರೆ ನಾವು ಮನಸ್ಸನ್ನು ಸ್ವಲ್ಪ ಗಟ್ಟಿಮಾಡಿಕೊಂಡು ಒಂದೇ ಸಮಯದಲ್ಲಿ ಎಲ್ಲವನ್ನೂ ತರಬೇಕು. ತಾವು ಆ ರೀತಿ ಯಾಗಿ ತರದೆ ಅರ್ಧ ಮನಸ್ಸಿನಿಂದ ತರುವುದರಿಂದ ಏನೂ ಸಾರ್ಥಕವಾಗುವುದಿಲ್ಲ. Radical ಆಗಿ ಇರಬೇಕು. ಯಾರೂ ಕೂಡ circumvent ಮಾಡಿ, agricultural labour ಇಟ್ಟುಕೊಂಡು ಸಾಗುವಳಿ ಮಾಡಬಾರದು. ಆ ಒಂದು ನಿರ್ಬಂಧ ಮಾಡಬೇಕು. ನನಗೆ ವ್ಯವಸಾಯ ಗೊತ್ತಿಲ್ಲ. ಆದರೆ ಅದರ ತತ್ವ ಗೊತ್ತಿದೆ. ತಾವು ಹೇಳುವುದರಲ್ಲಿ ಉಳುವವನಿಗೆ ಭೂಮಿ ಎಂದು ಇದೆ. ಭೂಮಿಯನ್ನು ಉಳುವವನು ಒಡೆಯನಾಗಬೇಕು, ಉಳುವವನು ಬರಿ ಕೂಲಿ ತೆಗೆದು ಕೊಳ್ಳುವುದಕ್ಕೆ ಆಗುವುದಿಲ್ಲ. ಅದರ ಅರ್ಥವೇನೆಂದರೆ ಯಾವಾತನು ಉಳುತ್ತಾನೆಯೋ ಅವನಿಗೆ 2 ಎಕರೆ, 5 ಎಕರೆ ಹೀಗೆ ಕೊಡಿ. ಅವನು ಸ್ವಂತವಾಗಿ ಸಾಗುವಳಿ ಮಾಡಲಿ. ಹಾಗೆ ಮಾಡಿದರೆ ನೀವು ನಿಜವಾದ ಸುಧಾರಣೆ ತಂದಹಾಗಾಗುತ್ತದೆ. ಅದಿಲ್ಲದೆ ಹೋದರೆ ಏನೋ ಒಂದು ರೀತಿಯೊಳಗೆ ನಾವೂ ಮಾಡುತ್ತಿದ್ದೇವೆ ಎಂದಹಾಗಾಗುತ್ತದೆ.

ಶ್ರೀ ವಿ ವೆಂಕಟಪ್ಪ (ಚನ್ನಪಟ್ಟಣ).—ಯಾವಾತನು ಭೂಮಿಯನ್ನು ವ್ಯವಸಾಯ ಮಾಡುತ್ತಾನೆಯೋ ಅವ ನಿಗೇ ಸ್ವತ್ತು ಸೇರಬೇಕು. ಎಲ್ಲಾ ವಿಚಾರಗಳಲ್ಲೂ ಹಾಗೆಯೇ......

Sri P. R. RAMAIYA.—I want the socialistic pattern to come to-day in every walk of life. ಈ ಸುಧಾರಣೆಗಳಲ್ಲಿ ಆ ತತ್ವ ಯಾವುದೂ ಇಲ್ಲ. ಬೇಕಾದಷ್ಟು ಜನ agricultural labourers ಇಟ್ಟುಕೊಂಡು ಅವರ

(SRI P. R. RAMAIYA)

ಕೈಯಲ್ಲಿ ದುಡಿಸಿದರೆ ಆಗ Tenancy Act ಅದಕ್ಕೆ ಅನ್ವಯಿಸುವುದಿಲ್ಲ. ಕೂಲಿಯವರನ್ನು ಇಟ್ಟುಕೊಂಡು ಕೆಲಸ ಮಾಡಿಸಿ ತಾವು ಸಂಪಾದನೆ ಮಾಡಿಕೊಳ್ಳುತ್ತಾರೆ. ಈ ರೀತಿ ಮಾಡುತ್ತಿರುವ ನಿದರ್ಶನಗಳು ಅನೇಕವಿವೆ. ಆದ್ದರಿಂದ ಒಂದು ceiling limit ಮಾಡಬೇಕು. ಇಲ್ಲದೆ ಇದ್ದರೆ putting the cart before the horse ಎಂದಾಗುತ್ತದೆ.

Indian Planning Commissionನವರು ಈ ceiling limit ವಿಷಯದಲ್ಲಿ ಯೋಚನೆ ಮಾಡುತ್ತಿದ್ದಾರೆ. ಅದನ್ನು ಮಾಡಿದರೆ ಆಗ ಭೂಮಿಯನ್ನು ಹೊಂದಿರುವವನೇ ವ್ಯವಸಾಯ ಮಾಡಬೇಕಾಗುತ್ತದೆ. ಈ ರೀತಿ ಮಾಡುವುದರಿಂದ socialistic pattern ನಿಜವಾಗಿ ಆಗುತ್ತದೆ. ಈ ವಿಚಾರವಾಗಿ ಕಾನೂನು ಬೇರೆ ತಂದರೆ ಅದಕ್ಕೆ ಈ ಸಭೆಯ ಒಪ್ಪಿಗೆ ದೊರೆಯುವುದು ಕಷ್ಟವೆಂದು ನನ್ನ ಅಭಿಪ್ರಾಯ, ಏಕೆಂದರೆ ಅದು ಅರ್ಧ ಅರ್ಧವಾಗುತ್ತದೆ.

ಮತ್ತೆ ಇನ್ನೂ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. Statement of Objects and Reasons ನಲ್ಲಿ ತಾವು

"conferring greater security of tenure on cultivating tenants and the conferring of the right to acquire ownership of the lands cultivated by them."

ಈ ತತ್ವವನ್ನು ನಾನು ಒಪ್ಪುತ್ತೇನೆ. ಅದು ಸಾಧುವಾಗಿದೆ. ಆದರೆ ಇದನ್ನು ತಾವು ಜಾರಿಗೆ ತರುವುದರೊಳಗೆ landlords ನಿಂದ ಕೆಲವು ತೊಂದರೆಗಳು tenantಗೆ ಆಗುತ್ತವೆ. ಆದ್ದರಿಂದ ಏನಾದರೂ compensation ಕೊಟ್ಟು ಜಮೀನುಗಳನ್ನೆಲ್ಲಾ ಸರ್ಕಾರದವರು ತೆಗೆದುಕೊಂಡು ರೈತನಿಗೆ ಪುನಃ ಹಂಚಿದರೆ it would be a sort of free distribution of wealth.

ಶ್ರೀ ಕಡಿದಾಳ್ ಮಂಜಪ್ಪ.—ತಾವು ಹೇಳಿದ್ದನ್ನು ಸುಲಭವಾಗಿ ಮಾಡಬಹುದು.

ಶ್ರೀ ಪಿ. ಆರ್. ರಾಮಯ್ಯ.—ಇಲ್ಲ ಅದನ್ನು ಜಾರಿಗೆ ತರಬೇಕು. ಒಟ್ಟಿನಲ್ಲಿ legislation ಹೇಗಿರಬೇಕೆಂದರೆ, —I imagine the picture like this:— ಒಬ್ಬ ಮನುಷ್ಯನಿಗೆ ಜೀವನಕ್ಕೆ ಎಷ್ಟು ಜಮೀನು ಬೇಕೋ ಅದಕ್ಕಿಂತ ಜಾಸ್ತಿ ಕೂಡದು. More than that, the Government must take over the land by giving him some compensation and then distribute that land to the raiyats by fixing some rate. But do not leave the things in suspense. 5 ವರ್ಷ, 10 ವರ್ಷ ಹೀಗೆ ನಾವು suspenseನಲ್ಲಿಟ್ಟುಕೊಟ್ಟಲ್ಲಿ land value ಕಡಿಮೆಯಾಗುತ್ತದೆ.

11-30 A. M.

ಆಮೇಲೆ ನಮ್ಮ ದೇಶದಲ್ಲೂ ಕೂಡ 1926 ಆದಮೇಲೆ ಮಾಡಲ್ ವಿಲೇಜ್ ಸ್ಕೀಂ ಬಂತು, ಹೋಬಳಿ ಡ್ರೈವ್ ಬಂತು, ರೂರಲ್ ಡೆವಲಪ್‌ಮೆಂಟ್ ಸ್ಕೀಂ ಬಂತು, ನ್ಯಾಷನಲ್ ಎಕ್ಸ್‌ಟೆನ್ಷನ್ ಸ್ಕೀಂ ಬಂತು. ಈ ನ್ಯಾಷನಲ್ ಎಕ್ಸ್‌ಟೆನ್ಷನ್ ಸ್ಕೀಂ ಬರುವುದಕ್ಕೆ ಮುಂಚೆಯೇ 1947ರಲ್ಲಿ ಹೋಬಳಿ ಡ್ರೈವ್ ಎಂದು ಮಾಡಿದ್ದೆವು. ಗ್ರಾಮಸುಧಾರಕರನ್ನು ನೇಮಕಮಾಡಿಕೊಂಡು Village Workers ಎಂದು ಇಂಡಿಯಾ ಸರ್ಕಾರದವರು ಯಾವ ರೀತಿ ಮಾಡಿದ್ದರೋ ಅದೇ ರೀತಿ ಕೆಲಸಮಾಡುವ ಸ್ಕೀಂನ್ನು ಮೈಸೂರಿನಲ್ಲಿ ಮೊದಲೇ ತಂದಿದ್ದೇವೆ. ಆ ಅನುಭವ ಇಟ್ಟುಕೊಂಡು ಕೂಡ ಈ ರೀತಿ ತಡವರಿಸುತ್ತ ಇರುವುದು ಮತ್ತು ಈ ಬಿಲ್ಲಿನ ವಿಚಾರದಲ್ಲಿ ಹೀಗೆ ನಡೆಸುತ್ತ ಇರತಕ್ಕ ನಡವಳಿಕೆ ಬಹಳ ವಿಷಾದಕರವಾದದ್ದು ಎಂದು ಹೇಳುತ್ತೇನೆ.

ಆಮೇಲೆ ಚಂದ್ರಶೇಖರಯ್ಯ ಕಮಿಟಿ ಎಂದು ಒಂದು ಮಾಡಿದ್ದರು. ಈ ಚಂದ್ರಶೇಖರಯ್ಯ ಕಮಿಟಿ ಏಕೆ ಮಾಡಿದ್ದು ಎಂದರೆ ಇನ್ನೂ ಒಂದು ವರ್ಷದ ದಿವಸ ಚುನಾವಣೆಗಳನ್ನು ಮುಂದಕ್ಕೆ ತಳ್ಳುವದಕ್ಕೆ ಅಥವಾ ಜಿಲ್ಲಾ ಬೋರ್ಡುಗಳ ಚುನಾವಣೆ ನಡೆಯದಂತೆ ಮಾಡುವುದಕ್ಕೆ ಸಾಧ್ಯವಾಗಲಿ ಎಂದು ಹೇಳಿ ಮಾಡಿದರು. ಆ ಸಮಿತಿಯವರ ಅಭಿಪ್ರಾಯಕ್ಕೆ ಎಳ್ಳಷ್ಟೂ ಬೆಲೆ ಕೊಡಲಿಲ್ಲ. ಆ ಸಮಿತಿ ರಿಪೋರ್ಟಿನಲ್ಲಿ ಏನು ಹೇಳಿದೆ ಎಂಬುದು ಕೂಡ ಇಲ್ಲ. ಸಮಿತಿ ಏಕೆ ಮಾಡಬೇಕಾಯಿತು, ಯಾವ ಸರ್‌ಕಂಸ್ಟೆನ್ಸಸ್‌ನಲ್ಲಿ ಎಂದು ಕೂಡ ಇಲ್ಲ. 1952ನೇ ಬಿಲ್ ಪ್ರಕಾರ ಒಂದು ಟ್ರೈಯಲ್ ಕೊಟ್ಟು, ಚುನಾವಣೆ ನಡೆಸಿ, ಅದರ ಸಾಧಕ ಬಾಧಕಗಳೇನು ಎಂಬುದನ್ನು ನೋಡಿದ್ದರೆ ಚೆನ್ನಾಗಿತ್ತು ಮತ್ತು ಆಗ ಯಾರು

ಒಳ್ಳೆಯ ಅಭಿಪ್ರಾಯಪಟ್ಟರೋ ಅವರ ಮಾತಿಗೂ ಕೂಡ ಲಕ್ಷ್ಯ ಕೊಡಲಿಲ್ಲ.

ಆ ಮೇಲೆ ಈ ಬಿಲ್ಲು ಹುಟ್ಟುತ್ತಲೇ ಎಷ್ಟೋ ತಿದ್ದುಪಡಿಗಳು ಆದವು. ಚುನಾವಣೆ ವಿಚಾರದಲ್ಲಿ 3ನೇ ಸಾರಿ ತಿದ್ದುಪಡಿ ಬಂದಿದೆ. ಒಂದು ಹೋಬಳಿವಾರು ಮಾಡಬೇಕು ಎಂದೂ, ಎರಡನೆಯದು ಮಲ್ಟಿ ಮೆಂಬರ್ ಕಾನ್ಸ್ಟಿಟ್ಯುಯನ್ಸಿ ಮಾಡತಕ್ಕದ್ದು ಎಂದೂ ಆಮೇಲೆ ಷೆಡ್ಯೂಲ್ 4ರ ಪ್ರಕಾರ ಇದ್ದದ್ದನ್ನು ತಿರುಗಿ ಪ್ರತಿಯೊಂದಕ್ಕೂ 50 ಜನ ಮೆಂಬರುಗಳು ಇರಬೇಕೆಂದೂ ಮಾಡಿದರು. ಇದರಲ್ಲೇ ಕಾಲಹರಣ ಆಯಿತು. ಈಗ ಏನಾಗಿದೆ ಎಂದರೆ ಹಿಂದಿನ ಬಿಲ್‌ನಲ್ಲಿ ಏನು ಮಾಡಿದ್ದರೋ ಅದೇ ರೀತಿ ಪ್ರತಿಯೊಂದು ತಾಲ್ಲೂಕಿಗೂ ಒಬ್ಬೊಬ್ಬ ಷೆಡ್ಯೂಲ್ಡ್ ಕ್ಯಾಸ್ಟ್ ಮೆಂಬರು ಇರಬೇಕೆಂದು ತಿದ್ದುಪಡಿ ಮಾಡಿದರು. ಈಗಿನ ತಿದ್ದುಪಡಿ ಪ್ರಕಾರ ಸರ್ಕಾರದವರೇ ಆ ಪವರ್ ತೆಗೆದುಕೊಂಡು ಪ್ರತಿಯೊಂದು ತಾಲ್ಲೂಕಿಗೂ 3 ಜನಕ್ಕೆ ಜಾಸ್ತಿ ಇರಬಾರದು ಎಂದು ಮಾಡಿದ್ದಾರೆ. ಜನಸಂಖ್ಯೆಗನುಗುಣವಾಗಿ ಇರಬೇಕೆಂದು ಮಾಡಿದ್ದಾರೆ, ಇದರಲ್ಲೇ ಷೆಡ್ಯೂಲ್ಡ್ ಕ್ಯಾಸ್ಟಿಗೆ ಎಷ್ಟಿರಬೇಕೆಂಬುದನ್ನು ಏಕೆ ನಿಗದಿಮಾಡಬಾರದಾಗಿತ್ತು? ಈ ರೀತಿ ನಿಗದಿಯಿಲ್ಲದೆ ಯಾವ ಯಾವ ತಾಲ್ಲೂಕಿಗೆ ಎಷ್ಟೆಷ್ಟು ಪ್ರಾತಿನಿಧ್ಯ ಕಾನೂನು ಪ್ರಕಾರ ಇರಬೇಕು, ಎಂದು ಮಿನಿಮಂ ಏನಾದರೂ ಉಂಟೇ? ಒಂದು ತಾಲ್ಲೂಕಿಗೆ ಒಂದೇ ಎರಡೇ ಎನ್ನುವುದನ್ನು ರೆಗ್ಯುಲೇಟ್ ಮಾಡಿಲ್ಲ. ಇದು ಒಂದು ಅನಾಮಲಿ ಆಗುತ್ತದೆ.

ಆ ಮೇಲೆ ಎಲ್ಲಕ್ಕಿಂತ ಹೆಚ್ಚಾಗಿ ಸೆಕ್ಷನ್ 106 (3) ರಲ್ಲಿ "In sub-section (4), the figures and brackets '(2)' shall be omitted" ಎಂದು ಇದೆ. ಇದು ಬಹಳ ಅನ್ಯಾಯ. ಜಿಲ್ಲಾಬೋರ್ಡಿನವರಿಗೆ ಈಗ ಅವರ ಜವಾಬ್ದಾರಿ ಬಹಳವಾಗಿ ಜಾಸ್ತಿಯಾಗಿದೆ. ಮೊದಲು ಕೇವಲ ಒಂದೊಂದು ತಾಲ್ಲೂಕಿಗೆ ಒಂದು ಎರಡು ಆಸ್ಪತ್ರೆಗಳು ಇದ್ದವು. ಈಗ 5-6 ಆಸ್ಪತ್ರೆಗಳು ಇವೆ. ಅವನ್ನು ನಡಸಬೇಕಾಗಿದೆ. ಮತ್ತು ಸ್ಯಾನಿಟೇಷನ್‌ಗೆ ಲಕ್ಷಾಂತರ ರೂಪಾಯಿ ಖರ್ಚುಮಾಡಬೇಕಾಗಿದೆ. ಮೊದಲು ಕೇವಲ 18-20 ಸಾವಿರ ರೂಪಾಯಿಗಳನ್ನು ಒಂದೊಂದು ಕಡೆ ಖರ್ಚು ಮಾಡುತ್ತ ಇದ್ದರು. ಅದೇ ಈಗ 1⅛ ಕೋಟಿ ರೂಪಾಯಿಗಳವರೆಗೂ ಖರ್ಚುಮಾಡಬೇಕಾಗಿದೆ; ಮತ್ತು ರಸ್ತೆಗಳು ದಿನವಹಿ ಒಂದು ಊರಿನಿಂದ ಇನ್ನೊಂದು ಊರಿಗೆಹೋಗಬೇಕಾಗಿರುವಾಗ, ಈ ರಸ್ತೆಗಳು ನವನಾಗರೀಕತೆಯ ಕಾಲದಲ್ಲಿ ಬಹಳ ಅಗತ್ಯ. ಅವನ್ನು ಮಾಡಬೇಕಾದ ಅವಶ್ಯಕತೆ ಬಹಳವಾಗಿರತಕ್ಕ ಈ ಪರಿಸ್ಥಿತಿಯಲ್ಲಿ ಅವರಿಗೆ ಕೊಟ್ಟಿರತಕ್ಕ ಶೇಕಡ 6¼ ಬಹಳ ಅನ್ಯಾಯವಾಗುತ್ತದೆ. ಹಿಂದೆ ಇದರಲ್ಲಿ ಬೇಕಾದಷ್ಟು ಗ್ರಾಂಟು ಕೂಡ ಬರುತ್ತಾ ಇತ್ತು. ಲ್ಯಾಂಡ್ ರೆವಿನ್ಯೂ ನಮ್ಮ ದೇಶದಲ್ಲಿ ಸುಮಾರು 30-40 ವರ್ಷದಿಂದ ಇದ್ದಷ್ಟೇ ಇದೆ. 1 ಕೋಟಿ 30 ಲಕ್ಷ ರೂಪಾಯಿ ಹಿಂದೆ ಇತ್ತು. ಈಗಲೂ ಅಷ್ಟೇ ಇದೆ. ನಮ್ಮ ಸಂಸ್ಥಾನದ ಒಟ್ಟು ಉತ್ಪತ್ತಿ 2½ ಕೋಟಿ ರೂಪಾಯಿ ಇದ್ದಾಗ ಎಷ್ಟಿತ್ತೋ, 20 ಕೋಟಿ ರೂಪಾಯಿಗಳಷ್ಟು ಹೆಚ್ಚಿರತಕ್ಕ ಈ ಸಮಯದಲ್ಲೂ ಅಷ್ಟೇ ಇದೆ. ಆದ್ದರಿಂದ ಲ್ಯಾಂಡ್ ರೆವಿನ್ಯೂನಿಂದ ಬರತಕ್ಕ ಉತ್ಪತ್ತಿ ಎಲ್ಲಾ ಆಯಾಯ ಗ್ರಾಮದವರಿಗೇ ಅಥವಾ ಸ್ಥಳೀಯ ಸಂಸ್ಥೆಗಳಿಗೇ ಕೊಡಬೇಕಾದ್ದು ಸೂಕ್ತ. ಆದಷ್ಟು ಜಾಗ್ರತೆ ಪಂಚಾಯ್ತಿಗಳಿಗೆ ಶೇಕಡ 50, ಜಿಲ್ಲಾಬೋರ್ಡಿಗೆ ಶೇಕಡ 50ರಂತೆ ಲ್ಯಾಂಡ್ ರೆವಿನ್ಯೂ ಕೊಟ್ಟು ಅವರು ಲ್ಯಾಂಡ್ ರೆವಿನ್ಯೂ ವಸೂಲು ಮಾಡಿಕೊಳ್ಳುವುದಕ್ಕೆ ಕಾನೂನುಮಾಡಬೇಕು. ಈಗ ಮಾಡಿರತಕ್ಕ ಕಾನೂನಿನ ಪ್ರಕಾರ ನಾವು ಹಿಂದು ಹಿಂದಕ್ಕೆ ಹೋಗುತ್ತಾ ಇದ್ದೇವೆ. ನಮ್ಮ ಪಂಚಾಯ್ತಿ ಆಕ್ಟ್ ತೆಗೆದುಕೊಂಡರೆ ಅದರಲ್ಲೂ ಕೂಡ ಹಿಂದೆ ಇದ್ದಷ್ಟು ಅಧಿಕಾರ ಈಗ ಪಂಚಾಯ್ತಿಗಳಿಗೆ ಕೊಟ್ಟಿಲ್ಲ ಒಬ್ಬ ಸೆಕ್ರೆಟರಿ ಎಂದು ಇಟ್ಟಿದ್ದಾರೆ. ಸೆಕ್ರೆಟರಿ ಅಧೀನದಲ್ಲಿ ಕೆಲಸಕಾರ್ಯಗಳು ನಡೆಯುತ್ತವೆ. ಜನಗಳಿಂದ ಚುನಾಯಿತರಾದ ಪಂಚಾಯ್ತಿದಾರರಿಗೆ ಅಥವಾ ಅಧ್ಯಕ್ಷರಿಗೆ ಏನೇನೂ ಅಧಿಕಾರ ಸಾಲದು. ಜಿಲ್ಲಾ ಬೋರ್ಡಿಗೂ ಕೂಡ ಅದೇ ರೀತಿ ಮಾಡಿದ್ದೀರಿ. ಈಗಿರತಕ್ಕ ಜಿಲ್ಲಾ ಬೋರ್ಡು ಕಾನೂನು ಪ್ರಕಾರ ಹಿಂದಿನ ಬೇಜವಾಬ್ದಾರಿ ಸರ್ಕಾರ ಏನು ಮಾಡುತ್ತ ಇತ್ತು ಎಂದು ಹೇಳುತ್ತ ಇದ್ದೆವೋ ಅದನ್ನೇ ಮಾಡಿ, ಆ ಕಾನೂನನ್ನೇ ಸಾಧ್ಯವಾದಮಟ್ಟಿಗೂ ಈಗಿನ ಕಾಲಕ್ಕನುಸಾರವಾಗಿ ತಿದ್ದುಪಡಿಮಾಡಿ ಅದರಲ್ಲಿರತಕ್ಕ ರೆಸ್ಟ್ರಿಕ್ಷನ್ ಕಮ್ಮಿಮಾಡಿ ಸ್ವಲ್ಪ ಹೆಚ್ಚುವಿಶಾಲ ಪಡಿಸಿದ್ದೀರಿ. ಜಿಲ್ಲಾ ಬೋರ್ಡುಗಳು ತಾವೇ ಸ್ವಾವಲಂಬಿಗಳಾಗಿ ಅಧಿಕಾರ ನಡೆಸಿ, ತಮ್ಮ ಆದಾಯ ವೆಚ್ಚಕ್ಕೆ ಸರ್ಕಾರದಿಂದ ಬಕ್ಷೆ ನೀಡದೆ, ತಮಗೆ ಅವಶ್ಯಕವಾದ ಕಾನೂನುಗಳನ್ನು ತಾವೇ ಮಾಡಿಕೊಳ್ಳಲು ಒಂದು ಮಾರ್ಗವನ್ನು ಅವರಿಗೆ ಕಲ್ಪಿಸಿಕೊಡಬೇಕು; ಅವರ ಜವಾಬ್ದಾರಿ ಮತ್ತು ಅವರ ಅನುಭವದ ಮೇಲೆ ಸಾರ್ವಜನಿಕ ಕ್ಷೇತ್ರದಲ್ಲಿ ಜನಗಳು ಇನ್ನೂ ಹೆಚ್ಚಿನ ಕೆಲಸ ಮಾಡುವುದಕ್ಕೆ ತರಪೇತು ಹೊಂದಿದಂತಾಗುತ್ತದೆ ಎಂದು ನಾವು ಯಾವ ಒಂದು ಆಶೆಯನ್ನಿಟ್ಟು ಕೊಂಡಿದ್ದೆವೋ ಅದು ಈಗಿನ ಬಿಲ್‌ನ ಅವಸ್ಥೆಯನ್ನು ನೋಡಿದರೆ ಅದಕ್ಕೆ ವ್ಯತಿರಿಕ್ತವಾಗಿದೆ. ಹಿಂದಿನ ಸರ್ಕಾರದವರು ಖಾಸಗಿಯವರಿಗೆ ಅಧಿಕಾರ ಕೊಡದೇ ಎಷ್ಟುಮಟ್ಟಿಗೆ ಒಂದು ಬಿಕ್ಕಟ್ಟು ಇಟ್ಟುಕೊಂಡಿದ್ದರೋ ಅದೇ ಪರಿಸ್ಥಿತಿ ಈಗಲೂ ಉಂಟುಮಾಡುತ್ತಾ ಇದ್ದೀರಿ, ಅದಕ್ಕಿಂತಲೂ ಹೆಚ್ಚಾಗಿ ಈ ಸರ್ಕಾರ ವರ್ತಿಸುತ್ತ ಇರುವುದು ನಮ್ಮ ದುರಾದೃಷ್ಟ. 1949ರಲ್ಲಿ ಸರ್ಕಾರ ಈ ವಿಚಾರಕ್ಕೆ ಕೈಹಾಕಿ 1955ನೆ ಇಸವಿ ಬಂದರೂ ಕೂಡ, 6 ವರ್ಷ ತುಂಬಿದರೂ ಕೂಡ ಈ ಕೆಲಸದಲ್ಲಿ ಕೃತಕೃತ್ಯರಾಗಿಲ್ಲ ಎಂದರೆ ಅದು ಅವರ ದಕ್ಷತೆಯನ್ನು ತೋರಿಸುತ್ತದೆಯೇ ಹೊರತು ಜಿಲ್ಲಾ ಸಂಸ್ಥೆಗಳಿಗೆ ದಕ್ಷತೆಯಿಲ್ಲ, ಜಿಲ್ಲಾ ಸಂಸ್ಥೆಗಳಿಗೆ ಅಧಿಕಾರಮಾಡಲು ಶಕ್ತಿಯಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಹೀಗೆ ಮಾಡಿಕೊಂಡು ಹೋಗುವುದರಲ್ಲಿ ಯಾವ ಮಟ್ಟದ ದಕ್ಷತೆಯನ್ನು ಹೊಂದಿದ್ದೀರಿ ಎಂಬುದನ್ನು ನಾನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ನಮ್ಮ ಪ್ರತಿನಿಧಿಗಳಾದ ಅವರು ಇಲ್ಲಿ ಮಂತ್ರಿವರ್ಗದಲ್ಲಿ ಕೆಲಸ ಮಾಡುವುದು ಮತ್ತು ಸರ್ಕಾರ ನಡಸುವುದಕ್ಕೆ ಯಾವ ರೀತಿ ದಕ್ಷತೆ ನೀವು ಹೊಂದಿದ್ದೀರೋ ಅದೇ ರೀತಿ ಅಧ್ಯಕ್ಷರಾಗಿ ಕೆಲಸಕಾರ್ಯ ತೃಪ್ತಿಕರವಾಗಿ ಮಾಡಿ ಆಡಳಿತ ನಡೆಸಲು ಹೆಚ್ಚಿನ ಸೇವೆ ಮಾಡಲು ಕೂಡ ಸಿದ್ಧವಾಗಿದ್ದಾರೆ. ಮಂತ್ರಿಗಳು ಇಲ್ಲಿ ಮಾಡತಕ್ಕ ಕೆಲಸಕ್ಕಿಂತ ಹೆಚ್ಚಿನಸೇವೆ ಅಲ್ಲಿ ಸಲ್ಲಿಸುವುದಕ್ಕೆ ಅವರಿಗೆ ಅವಕಾಶವಿದೆ. ಸ್ಥಳೀಯ ಸಂಸ್ಥೆಗಳು ನೇರವಾಗಿ ಅವರ ದುಡ್ಡಿನ ಕೊರತೆಯಿಂದ ಹಣ ಖರ್ಚುಮಾಡುವುದಕ್ಕೆ ಸಾಧ್ಯವಿಲ್ಲದೆ ಇರಬಹುದು. ಆದರೆ ಅವರು ಸೇವಾದೃಷ್ಟಿಯಿಂದ ಸರ್ಕಾರದ ಕೆಲಸಕಾರ್ಯಗಳು ಸುಗಮವಾಗಿ ನಡೆಯಬೇಕಾದರೆ, ಸ್ಥಳೀಯ ಸಂಸ್ಥೆಗಳು ದಕ್ಷತೆಯಿಂದ ಕೆಲಸ ಮಾಡಬೇಕಾದರೆ ಅದಕ್ಕೆ ಸಾಕಾದಷ್ಟು, ಒಂದು ವಿಶಾಲತೆಯ ದೃಷ್ಟಿಯಿಂದ ಅಧಿಕಾರವಿರಬೇಕು; ಮತ್ತು ಅದಕ್ಕೆ ಜವಾಬ್ದಾರಿ ಪೂರ್ಣವಾಗಿ ವಹಿಸಿರಬೇಕು ಎನ್ನುವುದನ್ನು ಸರ್ಕಾರ ಮನಗಾಣಬೇಕು. ಈ ದೃಷ್ಟಿಯಿಂದ ಕಾನೂನು ಮಾಡುವುದಕ್ಕೆ ಸರ್ಕಾರ

(ಶ್ರೀ ಬಿ. ಹುಚ್ಚೇಗೌಡ)

ಮನಸ್ಸು ಮಾಡಿದರೆ ಮಾತ್ರ ನಮ್ಮ ದೇಶ ಮುಂದೆ ಬರುವುದಕ್ಕೆ ಸಾಧ್ಯ. ಅದು ಬಿಟ್ಟು ಕೇವಲ ಒಂದು ಹಿಡಿತದಿಂದ, ಕಮಿಷ್ನರಿಯಿಂದ ಮತ್ತು ಬರೀ ಮಂತ್ರಿ ಮಂಡಲದಿಂದಲೇ ಕೆಲಸ ನಡೆಯಬೇಕು ಎಂಬ ದೃಷ್ಟಿ ಯಿಂದ ಮಾತು ಯಾವ ಒಂದು ಕೆಲಸ ಕಾರ್ಯಗಳಿಗೂ ಸರ್ಕಾರದ ಗ್ರಾಂಟು, ಸಬ್‌ಸಿಡಿ ಮತ್ತು ಪ್ರತಿಯೊಂದು ಸಹಾಯಕ್ಕೂ ಕೂಡ ನೇರವಾಗಿ ಸರ್ಕಾರಕ್ಕೆ ಪ್ರಾರ್ಥ ನೆಮಾಡತಕ್ಕ ಪರಿಸ್ಥಿತಿ ಇಟ್ಟುಕೊಳ್ಳಬೇಕೆಂಬುದಕ್ಕೆ ಉಚಿತ ಈಮಾನ್ಯ ಸಭೆಅಗಗೊಡಬಾರದು ಎಂದು ನಾನು ನನ್ನ ಸ್ನೇಹಿತರಲ್ಲಿ ಬೇಡಿಕೊಳ್ಳುತ್ತೇನೆ. ಈಗ ಸ್ಥಳೀಯ ಸಂಸ್ಥೆಗಳು ಇರತಕ್ಕ ಒಂದು ಸ್ಥಿತಿಯನ್ನು ನೋಡಿದರೆ ಮತ್ತು ಜನಗಳಿಗೆ ಇರತಕ್ಕ ತೊಂದರೆ ಏನು ಎಂಬು ದನ್ನು ಪರಿಶೀಲಿಸಿದರೆ ರಸ್ತೆ ವಗೈರೆ ಯಾವುದೂ ಕೂಡ ಸರಿಯಾಗಿ ರಿಪೇರಿ ಆಗುತ್ತಾ ಇಲ್ಲ. ಯಾವುದೊಂದಕ್ಕೂ ತಕರಾರು. ಜನರು ಉತ್ಸಾಹಕರವಾಗಿ ಯಾವ ಒಂದು ಕೆಲಸವನ್ನು ಕೂಡ ಜವಾಬ್ದಾರಿಯುತವಾಗಿ ನಡೆಸಲು ಸಾಧ್ಯವಾಗಿಲ್ಲ. ಆದ್ದರಿಂದ ಈ ಸನ್ನಿವೇಶದಲ್ಲಿ ಸರ್ಕಾರದವರು ಏನು ಮಾಡಬೇಕು ಎಂದರೆ ಈ ಬಿಲ್ಲಿನಲ್ಲಿ ರತಕ್ಕ ನ್ಯೂನಾತಿರಿಕ್ತಗಳನ್ನು ಒಂದೇಸಾರಿ ಸರಿಪಡಿಸು ವುದಕ್ಕೆ ಈ ಬಿಲ್‌ನ್ನೇ ವಾಪಸು ತೆಗೆದುಕೊಳ್ಳಬೇಕು.

Mr. SPEAKER.—According to the Hon'ble Member, Government should not be immediately empowered to conduct elections.

Sri B. HUTCHE GOWDA.—They can hold the elections under the present Act.

Mr. SPEAKER.—But Government have accepted your views. Therefore some other Member can make that statement but not you.

ಶ್ರೀ ಬಿ. ಹುಚ್ಚೇಗೌಡ.—ಅಥವಾ ಸೆಲೆಕ್ಟ್ ಕಮಿಟಿ ಗಾದರೂ ಹಾಕಿ ತಕ್ಷಣ ಕೆಲವು, ಸೂಕ್ತ ಬದಲಾವಣೆ ಮಾಡಬೇಕಾದುದು ಅಗತ್ಯ. ಆದಷ್ಟು ಜಾಗ್ರತೆ ತೃಪ್ತಿಕರವಾದ ಬದಲಾವಣೆ ಮಾಡುವುದಕ್ಕೆ ಕಾಲಾವ ಕಾಶವಿದೆ ಎಂದು ಹೇಳುತ್ತೇನೆ. 3 ದಿವಸದಲ್ಲಿ ಸೆಲೆಕ್ಟ್ ಕಮಿಟಿಯಿಂದ ಪರಿಶೀಲನೆಮಾಡಿಸಿ ವಾಪಸು ತರಿಸಿಕೊಳ್ಳ ಬಹುದು, ಕೆಲವು ಮೂಲಭೂತ ಬದಲಾವಣೆಗಳನ್ನು ಮಾಡುವುದಕ್ಕೆ ಸಾಧ್ಯವಿದೆ ಎಂದು ನನ್ನ ಅಭಿಪ್ರಾಯ. ಏಕೆಂದರೆ ಜಿಲ್ಲಾ ಬೋರ್ಡುಗಳು ಅನಾಯಕವಾಗಿರುವ ಈಗಿನ ಪರಿಸ್ಥಿತಿಯಲ್ಲಿ ಇನ್ನೂ ಏನೇನೂ ಆಗುತ್ತದೆಯೋ ಹೇಳುವುದಕ್ಕೆ ಸಾಧ್ಯವಿಲ್ಲ. ಮುನಿಸಿಪಲ್ ಏರಿಯಾದಲ್ಲಿ ಇರಬೇಕೇ, ಇಲ್ಲವೇ ಎಂದು ಪ್ರಶ್ನೆಮಾಡಿದರು, ನಾನು ತುಮಕೂರಿನಲ್ಲಿ ವಾಸಮಾಡುತ್ತೇನೆ. ನಾಳೆ ನನಗೆ disqualification ಬರಬಹುದು.

Mr. SPEAKER.—That clause is not under the consideration of the amending Bill. Qualification of the Members ಬಂದಿಲ್ಲ. Voters ಅಷ್ಟೇ ಬಂದಿರುವುದು.

Sri B. HUTCHE GOWDA.—Every District Board shall be composed of members elected in accordance with the provisions of the Act and the rules made thereunder.

Reserved seats ವಿಚಾರ ಹೇಳಿದ್ದಾರೆ. ಇದರಲ್ಲಿ ಮತ್ತೆ ಅನಾಮಲಿ ಬಂದಿದೆ. 3 ಜನರಿಗಿಂತ ಹೆಚ್ಚು ಇರಕೂಡದು, ಕಡಿಮೆ ಆಗಿರಬೇಕು ಎಂದರೆ ಎಷ್ಟು? ಒಂದು ಇದ್ದರೆ ಆಗಬಹುದೆ? ಒಂದು ಇರಲೇಬೇಕೆ?

Sri Kadidal MANJAPPA.—The Hon'ble Member is under the misconception that it is provided in the existing Act, that at least one member should be a member of the district board for every taluk. That is not the provision in the existing Act.

Sri B. HUTCHE GOWDA.—Is there not such a provision?

Sri Kadidal MANJAPPA.—There is no such provision as you think.

Mr. SPEAKER.—This is an improvement on the previous provision.

Sri Kadidal MANJAPPA.—If the Hon'ble Member reads section 52, I do not think there will be need for further argument on that subject.

ಶ್ರೀ ಬಿ. ಹುಚ್ಚೇಗೌಡ.—One member from each taluk ಎಂದು ಹೇಳಿದೆ. ಅದನ್ನು ಈಗ ಹೀಗೆ ತಿದ್ದುಪಡಿಮಾಡಿದ್ದಾರೆ. ಉದಾಹರಣೆಗೆ ಹೇಳುವು ದಾದರೆ ಮೊದಲನೆಯ ಆಕ್ಟಿನಲ್ಲಿ ಪ್ರತಿಯೊಂದು ಜಿಲ್ಲಾ ಬೋರ್ಡಿಗೂ 40 ಜನ ಸದಸ್ಯರಿರತಕ್ಕದ್ದೆಂದು ಹೇಳಿ ದ್ದರು. ಆದರೆ ಅದರ ಮುಂದೆ ಜಾರಿಗೆ ಬಂದ ಆಕ್ಟಿ ನಲ್ಲಿ 45 ಜನ ಸದಸ್ಯರಿರಬೇಕೆಂದು ಹೇಳಿದ್ದಾರೆ. ಆದರೆ ಹೀಗೆ ಅವರು ಹೇಳಿರತಕ್ಕದ್ದು ಕೇವಲ ಈ ಡಿಪ್ರೆಸ್ಡ್ ಕ್ಲಾಸಿನವರಿಗೆ ಪ್ರಾತಿನಿಧ್ಯ ಎಷ್ಟಿರಬೇಕು ಎನ್ನುವುದನ್ನು ಮಾತ್ರ ಹೇಳಿದ್ದಾರೆ.

3 P.M.

Sri Kadidal MANJAPPA.—I will read for the benefit of the Hon'ble Member so that he may not repeat his argument once again.

"(1) Seats shall be reserved in District Board for the Scheduled Castes.

"(2) The number of such seats shall bear, as nearly as may be, the same proportion to the total number of seats in the District Board as the population of the Scheduled Castes in the district bears to the total population of the district:

"Provided that at least one seat shall be reserved in District Board for the Scheduled Castes:

"Provided, further that this section shall cease to have effect after ten years from the commencement of this Act:

"Provided further that the second proviso to this section shall not affect any representation in a

District Board until the expiry of the term of office of the members ''

There is no proposal just at present to amend this section.

Mr. SPEAKER.—Section 52 is printed in this Bill copy of which is included.

ಶ್ರೀ ಬಿ. ಹುಚ್ಚೇಗೌಡ.—ಸ್ವಾಮಿ ನಾನೀಗ ಸರ್ಕಾರದವರು ಈ 1/4% ನ್ನು ತೆಗೆದುಕೊಳ್ಳುವುದರಿಂದ ಜಿಲ್ಲಾ ಬೋರ್ಡುಗಳಿಗೆ ಎಷ್ಟು ಅನಾನುಕೂಲವಾಗುತ್ತದೆ, ಎಷ್ಟು ತೊಂದರೆಯಾಗುತ್ತದೆಂಬ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲಪೇಕ್ಷಿಸುತ್ತೇನೆ. 1943-44ರಲ್ಲಿ ಜಿಲ್ಲಾ ಬೋರ್ಡುಗಳ ಆಡಳಿತದಲ್ಲಿದ್ದ ರಸ್ತೆ ಸುಮಾರು 4,919 ಮೈಲಿಗಳು. ಅದು 1955 ರಲ್ಲಿ 7,140 ಮೈಲಿಗಳಿಗೆ ಏರಿದೆ. ಇದೇ ರೀತಿ number of bridges, causeways, culverts and tunnels ಹಿಂದೆ 28 ಮಾತ್ರ ಇದ್ದುವು. ಈಗ 1,147 ಇರುತ್ತವೆ. Number of Hospitals and Dispensaries 1943-44ರಲ್ಲಿ 255 ಇದ್ದದ್ದು ಈಗ 287ಕ್ಕೆ ಏರಿರುತ್ತೆ. Number of Midwives ಸಂಖ್ಯೆ 182 ಇದ್ದದ್ದು 2[illegible]6ಕ್ಕೆ ಏರಿದೆ. Number of Ayurvedic and Unani Dispensaries ಗಳಸಂಖ್ಯೆ 218 ಇದ್ದದ್ದು 271ಕ್ಕೆ ಏರಿದೆ. Number of Veterinary Hospitalsಗಳ ಸಂಖ್ಯೆ 111 ಇದ್ದದ್ದು 201ಕ್ಕೆ ಹೋಗಿದೆ. Expenditure of Vaccination ಮೊದಲು 57,152ರೂಗಳು ಇದ್ದದ್ದು ಈಗ 91,947 ರೂ.ಗೆ ಏರಿಹೋಗಿದೆ. Conservancy and Sanitation charges 61,156 ರೂ. ಗಳು ಮಾತ್ರ ಇತ್ತು. ಈಗ 0,414 ರೂ.ಗಳಾಗಿವೆ. 1943ರಲ್ಲಿ Number of High Schools ಈಗ ಇಷ್ಟಿರಲಿಲ್ಲ. ಈಗ 35 ಹೈಸ್ಕೂಲುಗಳಿವೆ. ಈ ಸ್ಕಾಲರ್ ಷಿಪ್‌ಗಾಗಿ ಮೊದಲು ಕೊಡುತ್ತಿದ್ದಂಥ ಗ್ರ್ಯಾಂಟ್ 1,420 ರೂಪಾಯಿಗಳು ಮಾತ್ರಇತ್ತು. ಈಗ 11,500 ರೂಪಾಯಿಗಳಿಗೆ ಹೆಚ್ಚಿದೆ. ಈ ರೀತಿಯಾಗಿ ಜಿಲ್ಲಾ ಬೋರ್ಡುಗಳ ಕಾರ್ಯಚಟುವಟಿಕೆಗಳು ಜಾಸ್ತಿಯಾಗುತ್ತಿರುವಾಗ ತಾವು ಈ 1/4%ನ್ನು ಕಮ್ಮಿ ಮಾಡುವುದು ಸರಿಯಾದ್ದಲ್ಲ. ಹೀಗೆ ತಾವು ಇದನ್ನು ಕಮ್ಮಿಮಾಡುವುದರ ಬದಲು ಹೆಚ್ಚುಮಾಡಬೇಕಾಗಿತ್ತೆಂದು ಹೇಳುತ್ತೇನೆ. ಆದರೆ ಈ ಮೊದಲೇ ಲ್ಯಾಂಡ್ ರೆವಿನ್ಯೂನಲ್ಲಿ 25%ನ್ನು ಈ ಜಿಲ್ಲಾ ಬೋರ್ಡುಗಳ ಖರ್ಚುವೆಚ್ಚಗಳಿಗೆ ತೆಗೆದಿಡಬೇಕೆಂದು ಹೇಳಲಾಗಿತ್ತು. ಆದುದರಿಂದ ಈ ದಿವಸ ಈ ಜಿಲ್ಲಾ ಬೋರ್ಡುಗಳ ಕೆಲಸ ಕಾರ್ಯಗಳು ಸೂಸೂತ್ರವಾಗಿ ನಡೆಯಬೇಕಾದರೆ ಈ ಮಸೂದೆಯಲ್ಲಿ ಅಗತ್ಯವಾಗಿ ಯಾವ ಯಾವ ತಿದ್ದುಪಡಿಗಳನ್ನು ಮಾಡಬೇಕಾಗಿದೆಯೋ ಅವುಗಳನ್ನು ಮಾಡಿ ಅನಂತರ ಈ ಬಿಲ್ಲನ್ನು ಸಭೆಯ ಮುಂದೆ ತರಬೇಕೆಂದು ಹೇಳುತ್ತೇನೆ. ಆದರೆ ತಾವು ಈಗ ಈ ತಾಲ್ಲೂಕು ಬೋರ್ಡುಗಳನ್ನು ರಚನೆಮಾಡಬೇಕೆಂದು ಹೇಳಿದ್ದೀರಿ. ಇದನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ತಾವು ಈ ರೀತಿಯಾಗಿ ಮಾಡುವುದಕ್ಕೆ ಬದಲಾಗಿ ಈಗ ಈ ಜಿಲ್ಲಾ ಬೋರ್ಡುಗಳಿಗೆ ಪ್ರತಿಯೊಂದು ತಾಲ್ಲೂಕಿನಿಂದಲೂ 3 ಜನ ಸದಸ್ಯರುಗಳು ಬರಬೇಕೆಂದು ಹೇಳಿದ್ದೀರೋ ಅದನ್ನೇ ಬೇಕಾಗಿದ್ದರೆ ಇನ್ನೂ 1—2 ಸದಸ್ಯರನ್ನು ಜಾಸ್ತಿಮಾಡಿ, ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಬಂದು ಪ್ರತಿನಿಧಿಸುವಂತೆ ಮಾಡಿದರೆ ಅನುಕೂಲವೇ ಹೊರತು ಈ ತಾಲ್ಲೂಕು ಬೋರ್ಡುಗಳಿಂದ ಏನೂ ಪ್ರಯೋಜನವಾಗುವುದಿಲ್ಲವೆಂದು ಹೇಳುತ್ತೇನೆ. ತಾವು ಈ ತಾಲ್ಲೂಕು ಬೋರ್ಡುಗಳನ್ನು ರಚಿಸುವುದರಿಂದ ವ್ಯರ್ಥ ಹಣ ವ್ಯಯವಾಗುತ್ತದೆ. ಈಗ ತಾವು ರಚಿಸಬೇಕೆಂದು ಹೊರಟಿರತಕ್ಕ ಈ ತಾಲ್ಲೂಕು ಬೋರ್ಡುಗಳ ಕೆಲಸ ಕಾರ್ಯಗಳಿಗೆ ಹಣವನ್ನು ಯಾವ ರೀತಿಯಾಗಿ ಒದಗಿಸಲು ಹೊರಟಿರುತ್ತಾರೆಂಬ ಬಗ್ಗೆ ಹೀಗೆ ಹೇಳಿದ್ದೀರಿ:—

Provision to secure Public Health Sanitation......... and control of Health Inspectors.

ಈಗ ಈ ಹೆಲ್ತ್ ಇನ್ಸ್‌ಪೆಕ್ಟರುಗಳು ಜಿಲ್ಲಾ ಬೋರ್ಡಿನ ಛಾರ್ಜಿನಲ್ಲಿದ್ದಾರೆ. ನಾಳೆ ಇವರನ್ನು ತಾಲ್ಲೂಕಾಮಾಳೆ ಇಡಬೇಕೆಂದರೆ ಎಷ್ಟು ಹಣವನ್ನು ನಾವು ಹೆಚ್ಚಾಗಿ ಖರ್ಚುಮಾಡಬೇಕಾಗಿರುತ್ತದೆಂಬುದನ್ನು ನೋಡಬೇಕಾಗಿದೆ. ಒಂದು ಜಿಲ್ಲೆಗೆ ಸಾಂಕ್ರಾಮಿಕ ಜಾಡ್ಯ ತಗುಲಿದಾಗ ಆಗ ಬೇರೆ ಹೆಚ್ಚು ಸಿಬ್ಬಂದಿಯನ್ನು ನೇಮಿಸಿಕೊಳ್ಳಬೇಕಾಗುತ್ತದೆ. ಹೀಗೆಲ್ಲಾ ಮಾಡುವುದರಿಂದ ಖರ್ಚುವೆಚ್ಚಗಳ ಬಗ್ಗೆ ಎಷ್ಟೊಂದು ವ್ಯತ್ಯಾಸವಾಗುತ್ತದೆಂಬುದನ್ನು ಗಮನಿಸಬೇಕು.

Promotion of vaccination and control of vaccinators and midwives.

Construction and repair of public wells, tanks and water works which serve more than one panchayet, supply of water from them and other sources and preservation of water for drinking and cooking purposes from pollution.

ಈಗ ತಾವು ಈ ರೀತಿಯಾಗಿ ಹೇಳಿರುವುದರಿಂದ ಯಾವ ಯಾವ ಕೆಲಸಕಾರ್ಯಗಳನ್ನು ಆ ತಾಲ್ಲೂಕು ಬೋರ್ಡಿನವರು ಮಾಡಬೇಕು, ಯಾವ್ಯಾವ ಕೆಲಸಗಳನ್ನು ಜಿಲ್ಲಾ ಬೋರ್ಡಿನವರು ಮಾಡಬೇಕು ಎನ್ನುವುದೇ ಗೊತ್ತಾಗುವ ಹಾಗಿಲ್ಲ. ಈ ಎರಡಕ್ಕೂ ಒಂದು ಘರ್ಷಣೆ ನಡೆಯುವ ಹಾಗೆ ತಾವು ಹೇಳಿರುತ್ತೀರಿ. ಈಗ ಈ ಜಿಲ್ಲಾ ಬೋರ್ಡುಗಳಿಗೂ ಮತ್ತು ಗ್ರಾಮ ಪಂಚಾಯಿತಿಗಳಿಗೂ ಹೇಗೆ ಬೇರೆ ಬೇರೆಯಾಗಿ ಕೆಲಸ ಕಾರ್ಯಗಳನ್ನು ವಿಂಗಡಿಸಲಾಗಿದೆಯೋ ಹಾಗೆ ಇದರಲ್ಲಿ ವಿಂಗಡಣೆ ಮಾಡಿಲ್ಲ. ಗ್ರಾಮಪಂಚಾಯಿತಿಗಳಿಗೂ ಮತ್ತು ಜಿಲ್ಲಾ ಬೋರ್ಡುಗಳಿಗೂ ಏನೋ ಒಂದು ರೀತಿಯಲ್ಲಿ ಹೊಂದಾಣಿಕೆಯಾಗಿತ್ತು. ಅದಕ್ಕಾಗಿ ಈ ಎರಡನ್ನೂ ಸೇರಿಸಿ ಒಂದು ಆಕ್ಟನ್ನು ತಯಾರಿಸಿದ್ದಾರೆ. ಈಗ ಇಲ್ಲಿಯವರೆಗೂ ಹಾಗೆ ಹೊಂದಾಣಿಕೆಯಿಂದ ಕೆಲಸ ನಡೆಸಿಕೊಂಡು ಬರುತ್ತಿದ್ದಂಥ ಗ್ರಾಮಪಂಚಾಯಿತಿಗಳನ್ನೂ ಮತ್ತು ಜಿಲ್ಲಾ ಬೋರ್ಡುಗಳನ್ನೂ ಬೇರೆ ಬೇರೆಯಾಗಿ ಮಾಡಿ ಈ ಮಧ್ಯೆ ಈ ತಾಲ್ಲೂಕು ಬೋರ್ಡುಗಳನ್ನು ರಚಿಸಬೇಕೆಂದು ಹೇಳಿದ್ದೀರಿ. ಇದರಿಂದ ತುಂಬಾ ತೊಂದರೆಗಳಾಗುತ್ತವೆ. ಈಗ ತಾವು ಈ ತಾಲ್ಲೂಕು ಬೋರ್ಡುಗಳಿಗೆ ಯಾವ ಅಧಿಕಾರ ಕೊಡಬೇಕು, ಈ ಜಿಲ್ಲಾ ಬೋರ್ಡುಗಳಿಗೆ ಯಾವ ಅಧಿಕಾರ ಕೊಡಬೇಕೆಂಬ ಬಗ್ಗೆ ಒಂದಕ್ಕೊಂದಕ್ಕೂ ಕಾನ್‌ಫ್ಲಿಕ್ಟ್ ಆಗತಕ್ಕ ರೀತಿಯಲ್ಲಿ ಮಾಡಿ ಮುಂದೆ ಅದರಿಂದ ತುಂಬಾ ಅನಾನುಕೂಲಗಳಾಗುತ್ತವೆಂದು ನಾನು ತಿಳಿದುಕೊಂಡಿದ್ದೇನೆ. ಈಗ ಈ ಜಿಲ್ಲಾ ಬೋರ್ಡುಗಳು ತಾಲ್ಲೂಕುಗಳಲ್ಲಿ ಡೆವಲೆಪ್‌ಮೆಂಟ್ ಕಾರ್ಯಗಳನ್ನು

(ಶ್ರೀ ಬಿ. ಹುಚ್ಚೇಗೌಡ.)

ನಡೆಸತಕ್ಕ ಬಗ್ಗೆ ಹಣವನ್ನು ತಾಲ್ಲೂಕು ಬೋರ್ಡು ಗಳಿಗೆ ಕೊಡಬೇಕೆಂದು ಹೇಳಿದ್ದೀರಿ.

ಅಧ್ಯಕ್ಷರು.—ಅವರು ಆ ರೀತಿ ಹೇಳಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಆ ರೀತಿಯಾಗಿ ಹೇಳಿದ್ದಾರೆ. ಈ ತಾಲ್ಲೂಕು ಸಮಿತಿ............

ಶ್ರೀ ಕಡಿದಾಳ್ ಮಂಜಪ್ಪ.—ಅವರಿಗೆ ವಿಧಾಯಕವಾಗಿರತಕ್ಕಂಥ ಕೆಲಸಗಳನ್ನು ಮಾತ್ರ ಅವರು ಮಾಡಿದರೆ ಸಾಕಾಗಿದೆ ಎಂದು ಮಾತ್ರ ಹೇಳಿದೆ

ಶ್ರೀ ಬಿ. ಹುಚ್ಚೇಗೌಡ.—ಈಗ ಅಂತೂ ತಾವು ಹೇಳಿರತಕ್ಕದ್ದು ಸೂಪರ್ ಫ್ಲ್ಯೂಯಸ್ ಆಗಿದೆ. ಇದರಿಂದ ಜನರಿಗೇನೂ ಪ್ರಯೋಜನವಾಗುವುದಿಲ್ಲ. ಇದರಿಂದ ಮುಂದೆ ನಡೆಯಬೇಕಾದಂಥ ಪ್ರತಿಯೊಂದು ಕೆಲಸಗಳಿಗೂ ಒಂದು ಅಡ್ಡಿ ಅಡಚಣೆಯನ್ನು ತಂದು ತಾವು ಒಡ್ಡಿದ ಹಾಗೆ ಆಗುತ್ತದೆಯೇ ವಿನಾ ಇದರಿಂದ ಮತ್ತೆ ಯಾವ ಸುಖವೂ ಇಲ್ಲ. ಆದಕಾರಣ ತಾವು ಈ ತಾಲ್ಲೂಕು ಬೋರ್ಡುಗಳನ್ನೂ ಮನ್ನಾ ಮಾಡಬೇಕೆಂದು ಹೇಳುತ್ತೇವೆ. ತಾವು ಈಗ ತಾಲ್ಲೂಕು ಬೋರ್ಡುಗಳನ್ನು ಮಾಡಿದರೆ ಸಾರ್ವಜನಿಕರ ದುಡ್ಡು ಹಾಳಾಗಿ ಯಾವ ಕೆಲಸಗಳೂ ಸುಲಲಿತವಾಗಿ ಆಗುವುದಿಲ್ಲ. ಈ ತಾಲ್ಲೂಕು ಬೋರ್ಡಗಳ ಅಧಿಕಾರವೇನು ; ಇವುಗಳ ಕರ್ತವ್ಯವೇನೆಂಬುದೇ ಗೊತ್ತಿಲ್ಲ.

Mr. SPEAKER.—I do not think it is within the scope of the provisions of the Bill to discuss the details of taluk committee. The obligatory and other duties have been defined in the Act. The Board will be entrusted to carry on those duties and if you want to add any more duties or take away some duties, you can speak about it, but not about the constitution.

Sri B. HUTCHE GOWDA.—The immediate withdrawing of $6\frac{1}{2}$ per cent.........

Mr. SPEAKER.—That you can say.

Sri B. HUTCHE GOWDA.—Why they are withdrawing it ....

Mr. SPEAKER.—That you have said. You want more money.

ಶ್ರೀ ಬಿ. ಹುಚ್ಚೇಗೌಡ.—ಅಷ್ಟೇ ಅಲ್ಲ ಸ್ವಾಮಿ, ಈ $6\frac{1}{4}\%$ ಮೊಬಲಗನ್ನು ಈ ತಾಲ್ಲೂಕು ಬೋರ್ಡುಗಳಿಗೆ ಖರ್ಚುಮಾಡುತ್ತೇವೆಂದು ಹೇಳಿದ್ದಾರೆ. ಇಷ್ಟು ಹಣವನ್ನು ಈ ಜಿಲ್ಲಾ ಬೋರ್ಡುಗಳ ಫಂಡಿನಿಂದ ತೆಗೆದುಕೊಂಡು ಆ ತಾಲ್ಲೂಕು ಬೋರ್ಡುಗಳಿಗೆ ಕೊಡಬೇಕಾಗಿದೆಯೆಂದು ಹೇಳಿದ್ದಾರೆ. ಹೀಗೆ ಜಿಲ್ಲಾ ಬೋರ್ಡಿನವರು ಅವರಿಗೆ ಹಣವನ್ನು ಕೊಟ್ಟು ಕೆಲಸ ಮಾಡಿಸಿದರೆ ಅವರು ಸ್ವತಂತ್ರವಾಗಿ ಯಾವ ಕೆಲಸಗಳನ್ನು ಮಾಡಿದಹಾಗಾಯಿತು ? ಹೀಗೆ ಅವರಿಗೆ ಯಾವ ಕೆಲಸ ಕಾರ್ಯಗಳನ್ನೂ ಕೈಗೊಳ್ಳುವುದಕ್ಕೆ ಅವಕಾಶವೇ ಇಲ್ಲದಿರುವಾಗ ತಾವು ಈ ಬೋರ್ಡುಗಳನ್ನು ರಚಿಸುವುದರಿಂದ ಆಗತಕ್ಕ ಪ್ರಯೋಜನವಾದರೂ ಏನೆಂದು ಕೇಳುತ್ತೇನೆ !

Mr. SPEAKER.—You can say you want more money. That is all.

ಶ್ರೀ ಬಿ. ಹುಚ್ಚೇಗೌಡ —ಹೀಗೆ more money ಅನ್ನುವುದು ಒಂದೇ ಅಲ್ಲ. ಯಾವಾಗ ಅವರು ಇಷ್ಟೊಂದು ದುಡ್ಡನ್ನು ತೆಗೆದುಕೊಳ್ಳುತ್ತಾರೋ ಅದನ್ನು ಅವರು ಯಾವ ರೀತಿಯಾಗಿ ಖರ್ಚು ಮಾಡುತ್ತಾರೆಂಬುದನ್ನೂ ಕೂಡ ವಿವರವಾಗಿ ತಿಳಿಸಬೇಕಾದ್ದು ಸರ್ಕಾರದವರ ಕರ್ತವ್ಯ.

ಅಧ್ಯಕ್ಷರು.—ಮಂತ್ರಿಗಳು ಕೊನೆಯಲ್ಲಿ ಈ ಮಸೂದೆಗೆ ಉತ್ತರವಾಗಿ ಹೇಳಿಕೆ ಕೊಡುವಾಗ ಇದನ್ನೆಲ್ಲಾ ತಿಳಿಸುತ್ತಾರೆ.

Sri B. HUTCHE GOWDA.—Revival of folk dances and other branches—ಇದಕ್ಕೆ ಬೇರೆ ದುಡ್ಡನ್ನು ಕೊಡುತ್ತಾರಂತೆ.

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲಿ ಹಾಗೆ ಹೇಳಿದೆ ?

ಶ್ರೀ ಬಿ. ಹುಚ್ಚೇಗೌಡ.—ಈಗ ನಾನು ಶ್ರೀ ಡಿ. ಹೆಚ್. ಚಂದ್ರಶೇಖರಯ್ಯನವರ ವರದಿಯ ಮೇಲೆ ಮಾತನಾಡುತ್ತಿದ್ದೇನೆ ಆ ರಿಪೋರ್ಟನಲ್ಲಿ ಹೀಗೆ ಹೇಳಿದೆ :—

Appointment and transfer of health inspectors, vaccinators and midwives.

"Promotion of vaccination and control of vaccinators and midwives....."

ಹೀಗೆ ಜಿಲ್ಲಾ ಬೋರ್ಡಿನವರಿಗೆ ಇಂಥಿಂಥಾ ಅಧಿಕಾರಗಳಿರುತ್ತವೆಂದು ಹೇಳಿದ್ದಾರೆ. ಆದರೆ ಈ ತಾಲ್ಲೂಕು ಬೋರ್ಡಿಗೆ ಇಂಥ ಅಧಿಕಾರಗಳೇ ಇವೆಯೆಂಬುದಾಗಿ ಏಕೆ ಹೇಳಲಿಲ್ಲ ?

Mr. SPEAKER.—That Report also need not be discussed. We are concerned only with the provisions of the present amendment Bill.

Sri Mulka GOVINDA REDDY.—This Report will throw a good deal of light for discussion of this Bill.

Mr. SPEAKER.—On that account we cannot quote everything.

Sri B. HUTCHE GOWDA.—The Government's intention is well-advised and we have to correct it, if possible.

Mr. SPEAKER.—I think I must bring it to the notice of the Hon'ble Members once again that we have got many Bills and that we have to hurry through the business. I have given the Hon'ble Member more than 45 minutes.

ಶ್ರೀ ಬಿ. ಹುಚ್ಚೇಗೌಡ.—ಆದುದರಿಂದ ನಾನೀಗ ಸರ್ಕಾರಕ್ಕೆ ಏನು ಎಚ್ಚರಿಕೆ ಕೊಡಬೇಕಾಗಿರುತ್ತದೆಯೆಂದರೆ, ತಾವು ಈ ದಿವಸ ದೇಶಕ್ಕೆ ಬಂದಿರತಕ್ಕಂಥ ಪ್ರಜಾಪ್ರಭುತ್ವ ತತ್ವಕ್ಕೆ ಪೋಟಕು ಆಗುವಂಥ ರೀತಿಯಲ್ಲಿ ವರ್ತಿಸುತ್ತಿದ್ದೀರಿ. ಹೀಗೆ ಖಂಡಿತ ತಾವು ಇಂಥ ಅಡ್ಡದಾರಿ ಹಿಡಿಯಬೇಡಿ ಎಂದು ಹೇಳಬೇಕಾಗಿದೆ. ಹಿಂದೆ ಇದ್ದಂಥಾ ಒಂದು ಸರ್ಕಾರದವರನ್ನು ತಾವು ಹೇಗೆ ಬೇಜವಾಬ್ದಾರಿ ಸರ್ಕಾರ ಎಂದು ಕರೆಯುತ್ತಿದ್ದಿರೋ ಆ ಸರ್ಕಾರ ವರ್ತಿಸುತ್ತಿದ್ದಂಥ ರೀತಿಯಲ್ಲೇ ತಾವು ಈ ದಿವಸ ವರ್ತಿಸಬಾರದೆಂದು ಹೇಳುತ್ತೇನೆ. ಹೀಗೆ ಮಾಡುತ್ತಾ ಹೋದರೆ ತಮಗೆ ಎಳ್ಳಷ್ಟೂ ಹೆಸರು ಬರುವುದಿಲ್ಲವೆಂದು ಹೇಳುತ್ತೇನೆ. ಈಗ ತಾವು ಈ ಬಿಲ್ಲನ್ನು ಹೇಗಾದರೂ ಮಾಡಿ ಬೇಗ ಪಾಸ್ ಮಾಡಿ

ಸರ್ಲೇ ಬೇಕಾಗಿದೆ. ಆದುದರಿಂದ ಈಗಿನ ಪ್ರಜಾ ಪ್ರಭುತ್ವ ಆಡಳಿತದ ತತ್ವಗಳಿಗೆ ಅನುಗುಣವಾಗಿ ಈ ಜಿಲ್ಲಾ ಬೋರ್ಡುಗಳು ಒಂದು ವ್ಯವಸ್ಥೆಗೊಳ್ಳುವಂತೆ ಕಾನೂನಿನಲ್ಲಿ ತಾವು ಅವಕಾಶವಿರುವಂತೆ ಇದನ್ನು ತಿದ್ದುಪಡಿ ಮಾಡಬೇಕಾಗಿದೆ. ಈಗ ಇದರಲ್ಲಿ ಅನೇಕ ನ್ಯೂನಾತಿರಿಕ್ತಗಳಿರುತ್ತವೆ. ಇವುಗಳನ್ನೆಲ್ಲಾ ತೆಗೆದು ಹಾಕಲು ಕೊನೇ ಪಕ್ಷ ಇದನ್ನು ಸೆಲೆಕ್ಟ್ ಸಮಿತಿಗಾದರೂ ಕಳುಹಿಸಿಕೊಡಬೇಕೆಂದು ಹೇಳಿ ನಾನು ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—The House will now rise for Lunch and meet at 3-45 P.M.

The House adjourned for Lunch at Fifteen Minutes past Three of the Clock and re-assembled at Forty-five Minutes past Three of the Clock.

[MR. SPEAKER in the Chair.]

*ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮುರು).—ಸ್ವಾಮಿ, ಈ ಜಿಲ್ಲಾಬೋರ್ಡ್ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ. ಆದರೆ ಇದರಲ್ಲಿ ಕೆಲವು ಬದಲಾವಣೆಗಳು ಅಗತ್ಯವೆಂದು ನಾನು ಭಾವಿಸುತ್ತೇನೆ. ಶ್ರೀಮಾನ್ ಹುಚ್ಚೇಗೌಡರು ಅನೇಕ ಬದಲಾವಣೆಗಳನ್ನು ಸೂಚಿಸಿದರು. ಅದಕ್ಕಿಂತ ಮುಂಚೆ ಇದು ಬಹಳ ದಿವಸ ತಡವಾಯಿತು ಎಂದು ಹೇಳಿ ಎದುರು ಪಾರ್ಟಿಯಲ್ಲಿ ಇರವುದರಿಂದ ಸರ್ಕಾರವನ್ನು ಬಯ್ಯುವುದಕ್ಕೆ ಅವಕಾಶವಿದೆ ಎಂದು ಹೇಳಿದರೇ ಹೊರತು ಅವರ ಅಭಿಪ್ರಾಯ ಏನು ಎನ್ನುವುದನ್ನು ಹೇಳಲಿಲ್ಲ. ಅದನ್ನು ಸೂಚಿಸುವುದರಲ್ಲಿ ಮುಖ್ಯವಾದ ಒಂದು ಬದಲಾವಣೆ ಏನೆ ದರೆ ಈ ಚುನಾವಣಾ ಕ್ಷೇತ್ರವನ್ನು ಒಂದು ತಾಲ್ಲೂಕಿಗೆ ಒಂದು ಕ್ಷೇತ್ರವಾಗಿಯೂ, ಒಂದೊಂದು ಕ್ಷೇತ್ರದಿಂದ ಮೂರು ಜನರನ್ನು ಚುನಾಯಿಸಬೇಕೆಂದೂ multi-member constituency ಮಾಡಬೇಕು, ಬಹು ಸದಸ್ಯರ ಕ್ಷೇತ್ರವನ್ನಾಗಿ ಮಾಡಬೇಕು ಎಂದೂ ಹೇಳಿದ್ದಾರೆ. ಯಾವ ಉದ್ದೇಶದಿಂದ ಇಂಡಿಯಾ ಸರ್ಕಾರದವರು single-member constituency ಮಾಡಿದ್ದಾರೆಯೋ ಆ ಉದ್ದೇಶಕ್ಕೆ ಧಕ್ಕೆ ಬರುತ್ತದೆಂದು ನನ್ನ ಅಭಿಪ್ರಾಯ. ಕಾರಣವಿಷ್ಟೇ. ವಿಲೇಜ್ ಪಂಚಾಯಿತಿ ಲೆವಲ್‌ನಲ್ಲಿ single-member voters ಮಾಡಿದಾಗಲೂ ಕೂಡ ಒಟ್ಟು ಹಳ್ಳಿಯನ್ನೇ ಒಂದು electoral roll ಆಗಿ ಮಾಡಿಕೊಂಡಿದ್ದಾರೆ. Town Municipalityಗಳಲ್ಲೂ ಕೂಡ single-member constituency ಮಾಡಿಕೊಂಡಿದ್ದಾರೆ. ಹಾಗೆಯೇ legislatureಗೆ ಸಹ single member constituency ಮಾಡಿಕೊಂಡಿದ್ದಾರೆ. ಈಗ multi-member constituency ಮಾಡಿಕೊಂಡು ತಾಲ್ಲೂಕನ್ನೇ ಒಂದು constituency ಮಾಡಿದಾಗ genaral electionsನಲ್ಲಿ ಏನು ಖರ್ಚು ಬೀಳುತ್ತಿತ್ತೋ, ಏನೇನು ತೊಂದರೆಯಾಗುತ್ತಿತ್ತೋ ಆ ತೊಂದರೆಗಳೆಲ್ಲವೂ ಇದರಲ್ಲಿ ಪುನಃ ಉಂಟಾಗುತ್ತವೆ. ಈ ರೀತಿ multi-member constituency ಮಾಡುವುದರಿಂದ ಉಮೇದುವಾರರಾಗಿ ನಿಲ್ಲತಕ್ಕವರಿಗೆ ಖರ್ಚುಗಳು ಹೆಚ್ಚಾಗಿ ಇವರಿಗೆ ಪಾಪರಿಸಂ ನಾವಾಗಿ ನಾವು ತಂದುಕೊಟ್ಟ ಹಾಗಾಗುತ್ತದೆ. ಆದರೆ ಒಂದೊಂದು ಹೋಬಳಿಗೂ ಪ್ರತ್ಯೇಕ constituency ಮಾಡಿದರೆ ಉದಾಹರಣೆಗೆ—ಒಂದು ಹೋಬಳಿಯಲ್ಲಿ ಸುಮಾರು 30 ಸಾವಿರ ಜನಸಂಖ್ಯೆ ಇದ್ದಾರೆಂದಿಟ್ಟುಕೊಳ್ಳೋಣ; ಇದರಲ್ಲಿ 15,000 ಜನ ಓಟುದಾರರು ಇರಬಹುದು. ಕೆಲವರು ಈ ರೀತಿ ಸಣ್ಣ ಸಣ್ಣದಾಗಿ ಚುನಾವಣಾ ಕ್ಷೇತ್ರವನ್ನು ವಿಂಗಡಿಸಿದರೆ ಓಟುಗಳನ್ನು ಕೊಂಡುಕೊಳ್ಳುತ್ತಾರೆಂದು ಕೆಲವರು ಹೇಳಬಹುದು. 15 ಸಾವಿರ ಓಟುಗಳನ್ನು ಕೊಂಡುಕೊಳ್ಳತಕ್ಕ ಮನುಷ್ಯ ನಮ್ಮ ದೇಶದಲ್ಲಿ ಸಿಕ್ಕುವುದು ಕಷ್ಟವೆಂದು ನನ್ನ ಅಭಿಪ್ರಾಯ. ಸಾಧಾರಣವಾಗಿ 1,000 ಅಥವಾ 2,000 ಓಟುದಾರರಿದ್ದಾಗ ಒಬ್ಬನಿಗೆ 500–600 ಓಟುಗಳು ಬರುವಹಾಗಿದ್ದು 200–300 ಓಟು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬಹುದೇ ಹೊರತು 15,000 ಓಟುದಾರರಿರುವಾಗ ಆ ರೀತಿಯಾಗಿ ಮಾಡುವುದಕ್ಕಾಗುವುದಿಲ್ಲ. ಹಿಂದೆ Legislative Councilಗೆ ಉಮೇದುವಾರರಾಗಿ ನಿಲ್ಲುತ್ತಿದ್ದಾಗ ಇಡೀ ಒಂದು ಡಿಸ್ಟ್ರಿಕ್ಟಿಗೆ ಎಷ್ಟು ಓಟುಗಳು ಇರುತ್ತಿದ್ದುವೋ ಅಷ್ಟು ಓಟುಗಳು ಈಗ ಒಂದು ಹೋಬಳಿಯಲ್ಲಿ ಕೇಂದ್ರೀಕೃತವಾಗಿರುವುದರಿಂದ, ಒಂದೊಂದು ಹೋಬಳಿಯನ್ನೂ single-member constituencyಯಾಗಿ ಮಾಡಿದರೆ ಆ ಹೋಬಳಿಯು ಕೇಂದ್ರದಿಂದ ಸಾಧಾರಣವಾಗಿ 5–6 ಮೈಲಿ ತಪ್ಪಿದರೆ 10 ಮೈಲಿ radiusನಲ್ಲಿ ಎಲ್ಲಾ ಹಳ್ಳಿಗಳೂ ಸಿಕ್ಕುತ್ತವೆ. ಆಗ ಸಾಧಾರಣವಾಗಿ ಆ ಹೋಬಳಿಯಲ್ಲಿ ಸಂಚಾರಮಾಡಲು ಒಂದು ಗಾಡಿಯನ್ನು ತೆಗೆದುಕೊಂಡೋ, ಬೈಸಿಕಲ್ ಮೇಲೆ ತಿರುಗಿಯೋ ಓಟುದಾರರೊಡನೆ ಮಾತನಾಡಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಕೆಲವರು ಹೇಳಬಹುದು, ಯಾವ ರೀತಿ ಮಾಡಿದರೂ ಉಮೇದುವಾರನಿಗೆ ಖರ್ಚೆಲ್ಲಾ ಒಂದೇ ಆಗುತ್ತದೆಂದು. ಹೇಗೆಂದರೆ ಒಂದು ತಾಲ್ಲೂಕಿಗೆ ಮೂರು ಜನ ಉಮೇದುವಾರರೆಂದು ತಾಲ್ಲೂಕನ್ನೆಲ್ಲಾ ಸಂಚರಿಸಲು ಆಗುವ ಖರ್ಚನ್ನು ಎಲ್ಲರೂ ಹಂಚಿಕೊಂಡರೆ ಆಗ ಪ್ರತಿಯೊಬ್ಬರಿಗೂ ಹೆಚ್ಚಾಗಿ ಖರ್ಚಾಗುವುದಿಲ್ಲವೆಂದು ಹೇಳಬಹುದು. ಒಂದು ತಾಲ್ಲೂಕಲ್ಲಿ ಸಂಚಾರ ಮಾಡಬೇಕಾದರೆ ಎಷ್ಟು ಖರ್ಚಾಗುತ್ತದೆಯೋ ನಾವು ಯೋಚನೆ ಮಾಡಬೇಕು. ಅದೇ ಒಂದು ಹೋಬಳಿಯಲ್ಲಿ ಒಬ್ಬ ಮನುಷ್ಯ ಬಹಳ ಕಡಿಮೆ ಖರ್ಚಿನಲ್ಲಿ ಎಲ್ಲ ಹಳ್ಳಿಗಳನ್ನೂ ಸುತ್ತುವುದಕ್ಕೆ ಸಾಧ್ಯವಿದೆ. ಅಲ್ಲದೆ ಇನ್ನೊಂದು ತೊಂದರೆ ಏನೆಂದರೆ, ಈ ರೀತಿ ತಾಲ್ಲೂಕು Constituency ಮಾಡಿದರೆ ಅಲ್ಲಿರುವ ಲಾಯರುಗಳು ಅಥವಾ ಇನ್ನು ಯಾರಾದರೂ ಪ್ರಮುಖ ವ್ಯಕ್ತಿಗಳು, ತಾಲ್ಲೂಕು head-quartersನಲ್ಲಿರುವವರು ಚುನಾವಣೆಯಲ್ಲಿ ಬರುವುದಕ್ಕೆ ಅವಕಾಶವಾಗುತ್ತದೆಯೇ ಹೊರತು ಸಾಧಾರಣವಾದ ಹಳ್ಳಿಗನು ಬರುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಆಯಾ ಭಾಗದ ಪ್ರತಿನಿಧಿಗಳು ಈ ಚುನಾವಣೆಗಳಲ್ಲಿ ಬರುವುದು ಅಗತ್ಯ ಮತ್ತು ಆ ರೀತಿಯಾಗಿ ಆಯಾ ಭಾಗದ ಜನರು ಬರುವುದರಿಂದ ಅವರಿಗೆ ಬೇಕಾದ ಭಾವಿ, ರಸ್ತೆ, ಆಸ್ಪತ್ರೆ, ಆದಿಕರ್ಣಾಟಕರಿಗೆ ಮತ್ತು ಬಡವರಿಗೆ ವಾಸಮಾಡಲು ಮನೆಗಳ ಏರ್ಪಾಡು ಮಾಡುವುದು ಇವೆಲ್ಲಾ ಕೆಲಸ ಕಾರ್ಯಗಳು ಜಿಲ್ಲಾ ಬೋರ್ಡಿನಲ್ಲಿರುತ್ತವೆ. ಅಲ್ಲಿ legislation ಮಾಡುವುದಕ್ಕೆ ಯಾರೂ ಹೋಗಬೇಕಾಗಿಲ್ಲ. ಶ್ರೀ ಕೆ. ಪಟ್ಟಾಭಿರಾಮನ್, ಶ್ರೀ ಎ. ಭೀಮಪ್ಪನಾಯಕ್, ನಮ್ಮ ರೆವಿನ್ಯೂ ಮಂತ್ರಿಗಳು ಮೊದಲಾದಂಥ ಲಾಯರುಗಳು ಅಲ್ಲಿ ಬೇಕಾಗಿಲ್ಲ. ಸಾಧಾರಣವಾಗಿ ಜನತೆಯ ಪ್ರತಿನಿಧಿ ಅಲ್ಲಿರಬೇಕು. ಜಿಲ್ಲಾ ಬೋರ್ಡುಗಳಲ್ಲಿ ನಿಜವಾದ ಹಳ್ಳಿಗರ ಪ್ರತಿನಿಧಿ

(ಶ್ರೀ ಎ. ಭೀಮಪ್ಪನಾಯಕ್.)

ಇರಬೇಕು. ಎಂದರೆ ಆಯಾ ಹೋಬಳಿ ಪ್ರಾತಿನಿಧ್ಯವಿರಬೇಕು. ಆಯಾ ಜನಗಳ ಪ್ರತಿನಿಧಿ ಅಲ್ಲಿಯ ಜನಗಳಲ್ಲಿ ಪ್ರೀತಿ ವಿಶ್ವಾಸ ಗಳಿಸಿದ ಮನುಷ್ಯ ಬಂದರೆ ಅದರಿಂದ ಆ ಕ್ಷೇತ್ರದವರಿಗೆ ಬಹಳ ಅನುಕೂಲವಾಗುತ್ತದೆ. ಆದ್ದರಿಂದ ತಾಲ್ಲೂಕನ್ನೇ ಒಂದು ಕ್ಷೇತ್ರವಾಗಿ ಮಾಡಿ ಮೂರು ನಾಲ್ಕು ಜನ ನಿಂತುಕೊಂಡು ಆಗುವ ಖರ್ಚನ್ನೆಲ್ಲಾ ಎಲ್ಲರೂ ಹಂಚಿಕೊಂಡು ಯಾರೋ ಸದಸ್ಯರಾಗಿ ಬರುವುದಕ್ಕಿಂತ ಒಂದೊಂದು ಹೋಬಳಿಯನ್ನೂ ಒಂದೊಂದು ಚುನಾವಣಾ ಕ್ಷೇತ್ರವನ್ನಾಗಿ ಮಾಡಿ single-member constituency ಮಾಡುವುದು ಒಳ್ಳೆಯದು ಎಂದು ನನ್ನ ಅಭಿಪ್ರಾಯ.

Multi-member constituency ಇಟ್ಟುಕೊಂಡರೆ ಇದರಲ್ಲಿ distributive or cumulative system ಅನುಸರಿಸಬೇಕು. ಈ ರೀತಿಯ distributive ಅಥವಾ cumulative ಪದ್ಧತಿಯಿಂದ ತೊಂದರೆಗಳನ್ನು ಮನಗಂಡು ಇಡೀ ಹಿಂದೂಸ್ಥಾನದಲ್ಲಿ ಚುನಾವಣೆಗಳಲ್ಲಿ single-member constituency ಇರಬೇಕೆಂದು ಮಾಡಿದರು. ಹಿಂದೆ ಅನೇಕರು cumulative system ಬೇಕು ಎಂದು ಹೇಳುತ್ತಿದ್ದರು. ಏಕೆಂದರೆ, minority communities, un-represented communities ಇವರಿಗೆ cumulative ಪದ್ಧತಿಯಿಂದ ಎರಡು ಅಥವಾ ಮೂರು ಓಟುಗಳನ್ನು ತೆಗೆದುಕೊಂಡು ಚುನಾವಣೆಗಳಲ್ಲಿ ಜಯಶೀಲರಾಗುವುದಕ್ಕೆ ಅವಕಾಶವಾಗುತ್ತಿತ್ತು. Majority community ಯವರಿಗೆ ಇದು ಬೇಡವಾಗಿತ್ತು ಎನ್ನುವುದು ಎಲ್ಲರಿಗೂ ಗೊತ್ತಾಗುತ್ತದೆ. ನಮ್ಮ ದೇಶದಲ್ಲಿ ಇನ್ನೂ ಕಮ್ಯೂನಿಟಿ ಭಾವನೆಗಳು, ಜಾತಿವಾರು, ಕೋಮುವಾರು ಭಾವನೆಗಳು ಸಂಪೂರ್ಣವಾಗಿ ಹೋಗಿವೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಹೋಬಳಿವಾರು ಚುನಾವಣಾ ಕ್ಷೇತ್ರಗಳಿದ್ದರೆ ಒಬ್ಬನೇ ಒಬ್ಬ ಚುನಾವಣೆಗೆ ನಿಲ್ಲುತ್ತಾನೆ.

ನಾನು ಈಗ ಹೇಳುವುದೇನೆಂದರೆ distributive system ನಲ್ಲಿ ಮೂರು ಓಟುಗಳನ್ನು ಮೂರು ಜನರಿಗೆ ಕೊಟ್ಟೇ ಕೊಡಬೇಕು. ಕೊಡದೆಹೋದರೆ invalid ಎಂದು ಮಾಡುವುದಿಲ್ಲ. ಒಂದು ತಾಲ್ಲೂಕಿಗೆ ಮೂರು ಜನಕ್ಕೆ ಓಟು ಕೊಡಬೇಕೆಂದು ಒಬ್ಬ ಮತದಾರನಿಗೆ ಮೂರು ಓಟು ಕೊಡುವ ಹಕ್ಕು ಇದೆಯೆಂದು ಮೂರು ಚೀಟಿಗಳನ್ನು ಕೊಡುತ್ತೀರಿ. ಯಾವುದಾದರೂ ಒಂದು ಪೆಟ್ಟಿಗೆಯಲ್ಲಿ ಒಂದು ಚೀಟಿ ಹಾಕಿ ಉಳಿದ ಚೀಟಿಗಳನ್ನು ಅತನು ವಾಪಸು ತಂದರೆ ಏನು ಮಾಡುತ್ತೀರಿ ? ಹೀಗೆ single vote ಕೊಡುವಂತೆ ಉಮೇದುವಾರರು ಏರ್ಪಡಿಸಿಕೊಳ್ಳುತ್ತಾರೆ. ಹಳ್ಳಿಯವರು ಬಹಳ ಜನ ಓಟ ಮಾಡತಕ್ಕವರಿರುವುದರಿಂದ ಬಣ್ಣದ ಪೆಟ್ಟಿಗೆಗಳನ್ನು ಇಟ್ಟಿರುತ್ತಾರೆ, ಅವರಿಗೆ ಎಷ್ಟು ಓಟು ಕೊಡಲು ಹಕ್ಕಿರುತ್ತದೆಯೋ ಅಷ್ಟು ಚೀಟಿಗಳನ್ನು ಕೊಟ್ಟು ತಮಗೆ ಬೇಕಾದ ಪೆಟ್ಟಿಗೆಗಳಲ್ಲಿ ಒಂದೊಂದಾಗಿ ಹಾಕುವಂತೆ ಹೇಳುತ್ತೀರಿ. ಅವರು ಒಂದೊಂದನ್ನು ತಮಗೆ ಬೇಕಾದ ಪೆಟ್ಟಿಗೆಗಳಲ್ಲಿ ಹಾಕಬಹುದು ಅಥವಾ ಒಂದು ಚೀಟಿಯನ್ನು ಒಂದು ಪೆಟ್ಟಿಗೆಯಲ್ಲಿ ಮಾತ್ರ ಹಾಕಿ ಉಳಿದುದನ್ನು ಜೇಬಿನಲ್ಲಿಟ್ಟುಕೊಂಡು ವಾಪಸು ಬರಬಹುದು. ಈ ರೀತಿ ಮಾಡಿದರೆ single vote ಕೊಟ್ಟಂತಾಗಿ ಉಳಿದುವು invalid ಆಗುತ್ತದೆ. ಆದ್ದರಿಂದ ಒಬ್ಬ ಮತದಾರನು ಓಟುಗಳನ್ನು valid ಅಥವಾ invalid ಮಾಡಬಹುದು. ಉಮೇದುವಾರರು ಮತದಾರರ ಮೇಲೆ ತಮ್ಮ ಪ್ರಭಾವ ಬೀರಿ ಮೂರು ಓಟುಗಳಪೈಕಿ ಒಂದನ್ನು ಮಾತ್ರ ತಾವು ಪಡೆದು ಉಳಿದೆರಡನ್ನು invalid ಮಾಡಿ ತಮಗೆ ಹೆಚ್ಚು ಓಟು ಬರುವಂತೆ ಮಾಡುವುದಕ್ಕೆ ಅವಕಾಶವಿದೆ.

4 P.M.

ಇದು ಒಂದು ತೊಂದರೆಯೆಂದು ನನ್ನ ಅಭಿಪ್ರಾಯ. ಎಲ್ಲಕ್ಕಿಂತ ಹೆಚ್ಚಾಗಿ ಸಾರ್ವತ್ರಿಕ ಚುನಾವಣೆಗಳಲ್ಲಿ ಆದ ಅಪಘಾತಗಳು ಈಗ ಆಗುವುದಕ್ಕೆ ಅವಕಾಶಕೊಡುವುದರಿಂದ ಜನರಿಗೆ ಬಹಳ ತೊಂದರೆಯಾಗುತ್ತದೆ. ಮತ್ತು ಯಾವ ಹಳ್ಳಿಗಳಿಗೆ ಪ್ರಾತಿನಿಧ್ಯಬೇಕೆಂದು ಹೇಳುತ್ತಿದ್ದೇವೋ ಆ ಹಳ್ಳಿಗಳ ಜನ, rural folk ಆ ಜಿಲ್ಲಾ ಬೋರ್ಡಿನಲ್ಲಿದ್ದು ಹಳ್ಳಿಗಾಡಿನ ಜನರ ಸೌಕರ್ಯವನ್ನು ಹೆಚ್ಚು ಮಾಡುವುದಕ್ಕೆ ಅವಕಾಶಕೊಡಬೇಕು. ಆದ್ದರಿಂದ ಹಾಗೆ ಹಂಚಿಕೊಳ್ಳುತ್ತಾರೆ, ಹೀಗೆ ಹಂಚಿಕೊಳ್ಳುತ್ತಾರೆ —ಎಂದು ಹೇಳುವುದಕ್ಕಾಗುವುದಿಲ್ಲ. ಯಾವ ಪಾರ್ಟಿಗೂ ಸೇರದವನಿದ್ದರೆ ಹೇಗೆ ಹಂಚಿಕೊಳ್ಳುವುದಕ್ಕೆ ಸಾಧ್ಯ. ಏನೋ ಪಾರ್ಟಿ ಸಿಸ್ಟಂ ಇದ್ದರೆ ಹಂಚಿಕೆ ಬಂದರೂ ಬರಬಹುದು. ಹಾಗಿಲ್ಲದೆ ಒಬ್ಬೊಬ್ಬನೇ ನಿಂತಿದ್ದಾಗ ಆತ ಇಡೀ ತಾಲ್ಲೂಕನ್ನು ತಿರುಗಬೇಕೆಂದರೆ ಎಷ್ಟು ಕಷ್ಟ ಬರುತ್ತದೆಂದು ಯೋಚನೆ ಮಾಡಬಹುದು.

ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಆ ಕಮ್ಯೂನಿಟಿಯ ಮನುಷ್ಯ ಒಬ್ಬನೂ ಇಲ್ಲದಿದ್ದರೆ ಏನು ಮಾಡುತ್ತೀರಿ ?

ಶ್ರೀ ಎ. ಭೀಮಪ್ಪನಾಯಕ್.—ಆ ಜನರ ವಿಶ್ವಾಸವುಳ್ಳವನಾಗಿದ್ದರೆ ಪರವಾಗಿಲ್ಲ. ಆ ಕಮ್ಯೂನಿಟಿಯವನೂ ಆಗಿಲ್ಲದ, ವಿಶ್ವಾಸವುಳ್ಳವನೂ ಆಗಿಲ್ಲದಿದ್ದರೆ, ಅಂಥವನಿಗೆ ವೋಟು ಸಿಕ್ಕುವುದೇ ಇಲ್ಲ. ಅಲ್ಲದೆ ಕಮ್ಯೂನಿಟಿಯ ಪ್ರಶ್ನೆಯನ್ನು ಸೇರಿಸಿಕೊಳ್ಳುವುದರಿಂದ ಅನೇಕ ತೊಂದರೆಗಳಿವೆಯೆಂದು ನಾನು ಹೇಳುತ್ತೇನೆ. ಏಕೆ ತಾಲ್ಲೂಕು-ತಾಲ್ಲೂಕು ಎಂದು ಹೇಳುತ್ತಿದ್ದೀರಿ ? ಯಾವುದರಿಂದ ಮನೆ ಮನೆಗಳೇ ಹಾಳಾಗಿವೆಯೋ ಅದೇ ಬೇಕೆಂದು ಮತ್ತೆ ಏಕೆ ಕೇಳುತ್ತಿದ್ದೀರಿ ? ಎಲ್ಲಾ ಕ್ಷೇತ್ರಗಳಲ್ಲೂ ತಾಲ್ಲೂಕು ಲೆವೆಲ್‌ನಲ್ಲೂ ಜನಾನುರಾಗಿಗಳಾದ ಮನುಷ್ಯರೇ ಬರಬೇಕೆಂದು ಹೇಳುವುದಾದರೆ ಎಲ್ಲವೂ ತಾಲ್ಲೂಕ್ ಲೆವೆಲ್‌ನಲ್ಲೇ ಆದ ಹಾಗಾಯಿತು. ಅಂದಮಾತ್ರಕ್ಕೇ ಇಲ್ಲಿದ್ದವರು ಅಲ್ಲಿಗೆ ಹೋಗಕೂಡದು, ಅಲ್ಲಿದ್ದವರು ಇಲ್ಲಿಗೆ ಬರಕೂಡದು ಎಂಬುದಲ್ಲ. ಡಿಸ್ಟ್ರಿಕ್ಟ್ ಬೋರ್ಡು ಎನ್ನುವುದು ಮೂಲತಃ ಹಳ್ಳಿಗರ ಉಪಯೋಗಕ್ಕಾಗಿ ಕೆಲಸ ನಡೆಸಬೇಕೆಂದಿದೆ. ಆದ್ದರಿಂದ 10–15 ಹಳ್ಳಿಗಳು ಸೇರಿ ಒಂದು ಕೇಂದ್ರವಾಗಿದ್ದರೆ, ಆ ಹಳ್ಳಿಗಳೆಲ್ಲಾ ಆ ಕೇಂದ್ರದಿಂದ 5–6 ಮೈಲಿಗಳಲ್ಲಿರುತ್ತವೆ. ಯಾವನೇ ಉಮೇದುವಾರನು ಒಂದು ಸೈಕಲ್ ಮಾಡಿಕೊಂಡು ಅಷ್ಟು ಹಳ್ಳಿಗಳನ್ನೂ ಸುತ್ತಬಹುದು. ಹಾಗಿಲ್ಲದೆ ತಾಲ್ಲೂಕು ಪ್ರಾತಿನಿಧ್ಯವೆಂದಿಟ್ಟುಕೊಂಡರೆ, ಒಂದು ಕಾರನ್ನೇ ಇಟ್ಟುಕೊಳ್ಳಬೇಕು, ದೊಡ್ಡದೊಡ್ಡ ಹಸ್ತಪತ್ರಿಕೆಗಳನ್ನು ಹಂಚಿಯೇ ತೀರಬೇಕು. ಆದ್ದರಿಂದ ಅದು ಅಷ್ಟು ಸೂಕ್ತವಲ್ಲವೆಂದು ಹೇಳುತ್ತೇನೆ.

Sri Kadidal MANJAPPA.—Is it possible to make every hobli in every taluk a constituency ?

ಶ್ರೀ ಎ. ಭೀಮಪ್ಪನಾಯಕ್.—ಒಂದೊಂದು ಹೋಬಳಿಯನ್ನೂ ಮಾಡುವುದಕ್ಕಾಗದಿದ್ದರೆ ಒಂದೂವರೆ ಹೋಬಳಿಗೊಂದು ಕ್ಷೇತ್ರ ರಚಿಸಿ constituency ಗಳನ್ನು delimit ಮಾಡುವುದೇನೂ ಕಷ್ಟವಲ್ಲ. ಒಂದು ಲಕ್ಷ ಪ್ರಜಾಸಂಖ್ಯೆಯಿರುವ ಒಂದು ತಾಲ್ಲೂಕಿನಲ್ಲಿ ಮೂರು ಹೋಬಳಿಗಳಿದ್ದರೆ ಮೂರು ಕ್ಷೇತ್ರಗಳನ್ನು ಮಾಡಿ. ಇನ್ನು ಕೆಲವು ಕಡೆ ಕೆಲವು ಹಳ್ಳಿಗಳು

contiguous area ದಲ್ಲಿದ್ದು ಒಂದು ಹೋಬಳಿಯಲ್ಲಿ ಜಾಸ್ತಿ ಜನಸಂಖ್ಯೆಯಿದ್ದು ಇನ್ನೊಂದು ಹೋಬಳಿಯಲ್ಲಿ ಕಡಮೆಯಿದ್ದರೆ, ಎರಡನ್ನೂ ಸೇರಿಸಿ ಒಂದುಮಾಡಬಹುದು. ಇದಕ್ಕೆಲ್ಲಾ ಎಷ್ಟುಕಾಲ ಬೇಕಾಗುತ್ತದೆ? ಒಟ್ಟು ದೇಶದ ಭೂಪಟವನ್ನಿಟ್ಟುಕೊಂಡು ಸ್ವಲ್ಪ ಯೋಚನೆಮಾಡಿ ಮಾಡುವುದಾದರೆ ಒಂದು ವಾರದಲ್ಲಿ ಮಾಡಿಬಿಡಬಹುದು. ಸಾಧಾರಣವಾಗಿ ಡಿ-ಲಿಮಿಟೇಷನ್ ಮಾಡುವಾಗ ಪ್ರಜಾಸಂಖ್ಯೆಯನ್ನು ಸೆನ್ಸಸ್ ಲೆಕ್ಕವನ್ನು ನೋಡಿ ಮತ್ತು contiguous areas ನೋಡಿಕೊಂಡು ಮಾಡುತ್ತಾರೆ. ಹೇಗಿದ್ದರೂ 25,000 ಪ್ರಜಾಸಂಖ್ಯೆಗೆ ಒಬ್ಬರು, ಮತ್ತು ತಾಲ್ಲೂಕಿಗೆ ಮೂರು ಜನರಿಗೆ ಮೇಲ್ಪಟ್ಟಿರಕೂಡದೆಂದು limit ಮಾಡಿಯೇ ಇದ್ದೀರಿ. ಅದರಂತೆ ಯಾವುದಾದರೂ ಹೋಬಳಿಯಲ್ಲಿ 24,000 ಅಥವಾ 23,000 ಪ್ರಜಾಸಂಖ್ಯೆಯಿದ್ದರೆ ಬೇರೊಂದು ಹೋಬಳಿಯನ್ನು ಸೇರಿಸಿಕೊಳ್ಳಬಹುದು. ಆದರಿಂದ ರೆವಿನ್ಯೂ ಮಂತ್ರಿಗಳು ಹೇಳಿದ ಹಾಗೆ ಅಷ್ಟಾಗಿ ಕಷ್ಟ ಬರುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ತಾಲ್ಲೂಕನ್ನು delimit ಮಾಡಿ, ಹೋಬಳಿಯನ್ನೇ ಒಂದು ಕಾನ್‌ಸ್ಟಿಟ್ಯೂಯನ್ಸಿಯಾಗಿ ಏರ್ಪಡಿಸಿ single-member ನ್ನು ಅಲ್ಲಿಂದ ಬರುವಹಾಗೆ ಮಾಡಿದರೆ advantages ಜಾಸ್ತಿ, disadvantages ಕಡಮೆಯಾಗುತ್ತದೆಂದು ಹೇಳುತ್ತೇನೆ. ಸಿಂಗಲ್ ಮೆಂಬರು ಕಾನ್‌ಸ್ಟಿಟ್ಯೂಯೆನ್ಸಿ ಮಾಡಿದರೆ ಯಾವನಾದರೂ ಕೋಟ್ಯಾಧೀಶನಿದ್ದರೆ ವೋಟನ್ನು ಕೊಂಡುಕೊಳ್ಳಬಹುದೆಂದು ಹೇಳಿ ಮುನಿಸಿಪಲ್ ಚುನಾವಣೆಯೊಂದನ್ನು ಉದಹರಿಸಿದರು. ಮುನಿಸಿಪಾಲಿಟಿಯಲ್ಲಾದರೆ, 5000 ಪ್ರಜಾಸಂಖ್ಯೆಯಿದ್ದರೆ ಅವರಲ್ಲಿ 2,500 ವೋಟರುಗಳಿದ್ದಾರೆಂದಿಟ್ಟುಕೊಳ್ಳಬಹುದು. ಅವರಿಂದ 15 ಜನ ಬರಬೇಕಾಗಿರುತ್ತದೆ. ಆದ್ದರಿಂದ ಒಬ್ಬಾನೊಬ್ಬನಿಗೆ ಬರಬಹುದಾದ ವೋಟುಗಳು 40 ಇದ್ದರೆ, ಜೊತೆಗೆ 30-40 ಕೊಂಡುಕೊಂಡರೆ ಚುನಾಯಿತನಾಗಿರಬಹುದೆಂದು ಭಾವಿಸಬಹುದು. ಆ ಮುನಿಸಿಪಲ್ ಚುನಾವಣೆಯನ್ನೂ ಈ ಚುನಾವಣೆಯನ್ನೂ ಹೋಲಿಸುವುದಕ್ಕೆ ಆಗುತ್ತದೆಯೇ? 25,000 ಜನಸಂಖ್ಯೆಯಿರುವಾಗ ಓಟನ್ನು ಕೊಂಡುಕೊಳ್ಳುವುದಕ್ಕೆ ಹೋದರೆ ಅವನು ಹಾಳಾಗಿ ಹೋಗುತ್ತಾನೆ. ಅಲ್ಲದೆ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಗೆ ಖರ್ಚುಮಾಡಿದರೆ ಅವನಿಗೇನು ಬರುತ್ತದೆ? ಅಲ್ಲಿಗೆ ಬರುವವರು ಕೇವಲ ಸೇವೆ ಸಲ್ಲಿಸುವುದಕ್ಕೆ ಬರುತ್ತಾರೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಹಾಗಾದರೆ ಅದನ್ನೇ ಈ ಅಸೆಂಬ್ಲಿಗೂ ತನ್ನಿ!

ಶ್ರೀ ಎ. ಭೀಮಪ್ಪನಾಯಕ್.—ಇಲ್ಲಿಗೂ 400 ಜನ ಮೆಂಬರುಗಳು ಬರಬಹುದೆಂದಿದ್ದರೆ ಇಲ್ಲಿಗೂ ಅದನ್ನೇ ತರುತ್ತಿದ್ದೆವು. ಈಗ 400 ಮೆಂಬರುಗಳೆಂದಿಲ್ಲ; 100 ಜನರು ಮಾತ್ರ ಇರಬೇಕೆಂದಿದೆ. ಆದ್ದರಿಂದ ಇದಕ್ಕನುಗುಣವಾಗಿ ಒಂದು ಲಕ್ಷ ಪ್ರಜಾಸಂಖ್ಯೆಗೆ ಒಂದು ಸಿಂಗಲ್ ಮೆಂಬರ್ constituency ಎಂದು ಹೇಳಿದೆವು. ಹಾಗೆಯೇ ಡಿಸ್ಟ್ರಿಕ್ಟ್ ಬೋರ್ಡಿಗೆ ಐದು ಜನ ಮೆಂಬರುಗಳೆಂದು ಹೇಳಿದ್ದರೆ ಎರಡೆರಡು ತಾಲ್ಲೂಕಿಗೊಬ್ಬರೆಂದು ಮಾಡುತ್ತಿದ್ದೆವು. ಈಗ ಹಾಗಲ್ಲ. ಈಗ ಒಂದು ಡಿಸ್ಟ್ರಿಕ್ಟ್ ಬೋರ್ಡಿಗೆ 25-30 ಜನರು ಬೇಕೆಂದು ಹೇಳಿದಮೇಲೆ 30 ಜನರೂ 30 ಸ್ಥಾನಗಳಿಂದ ಬರಲಿ ಎಂದು ನಾನು ಹೇಳುತ್ತೇನೆ. ಇದರಿಂದ ಪ್ರಜಾಪ್ರಾತಿನಿಧ್ಯ ಕಡಮೆಯಾಗುತ್ತದೆಂದರೆ ನಾನು ಒಪ್ಪುವುದಿಲ್ಲ. ಏಕೆಂದರೆ ನೀವು ಆ ರೀತಿ ಭಾವಿಸುವುದಾದರೆ 200 ಜನ ವೋಟರುಗಳಿಂದ ಮೆಂಬರಾಗಿ ಬಂದ ಮುನಿಸಿಪಲ್ ಸದಸ್ಯನಿಗೂ ಕೂಡ ಪ್ರಜಾಪ್ರಾತಿನಿಧ್ಯವಿಲ್ಲವೆಂದೇ ಹೇಳಬೇಕು. ಆ ಮೇಲೆ ಹಳ್ಳಿಗಳಲ್ಲಿ ಅಂಥ ಪ್ರತಿನಿಧಿ ಸಿಕ್ಕುತ್ತಾರೆಯೇ ಎಂದರೆ, ಇಲ್ಲಿಗೆ ಶ್ರೀ [illegible] ಶಿವನಂಜೇಗೌಡರು ಹಳ್ಳಿಯಿಂದಲೇ ಬಂದಿಲ್ಲವೇ? ಹಳ್ಳಿಗಳಲ್ಲೂ ಬುದ್ಧಿವಂತರಿದ್ದಾರೆ. ಪಟ್ಟಣಗಳಲ್ಲೂ ಬುದ್ಧಿವಂತರಿದ್ದಾರೆ. ಹಳ್ಳಿಯಲ್ಲೂ ದಡ್ಡರಿದ್ದಾರೆ, ಡಿಲ್ಲಿಯಲ್ಲೂ ದಡ್ಡರಿದ್ದಾರೆ. ಹಳ್ಳಿಯಲ್ಲೂ ಅನೇಕರು ಬುದ್ಧಿವಂತರಿದ್ದಾರೆ, ಅವರಲ್ಲಿ ಜನರಿಗೂ ನಂಬಿಕೆಯಿರುತ್ತದೆ. ಆದರೂ ಅವರು ಏಕೆ ನಿಲ್ಲುವುದಿಲ್ಲ? ಅವರು ತಾಲ್ಲೂಕಿಗೆಲ್ಲಾ ನಿಂತುಕೊಂಡು ತನಗೆ ಗೊತ್ತಿಲ್ಲದವರನ್ನೆಲ್ಲಾ ಕೇಳಿಕೊಳ್ಳುವುದಕ್ಕೆ ಹೋಗಿ ಅವರಿಂದ ವೋಟು ತೆಗೆದುಕೊಂಡುಬರುವುದಕ್ಕೆ ಇಷ್ಟಪಡುವುದಿಲ್ಲ. ಒಬ್ಬ ಮನುಷ್ಯ 15 ಹಳ್ಳಿಗಳಿಗೆ ಸೇವೆ ಮಾಡಿರಬಹುದು. ಅಲ್ಲಿನ ಜನರ ಪ್ರೀತಿ ವಿಶ್ವಾಸವನ್ನು ಗಳಿಸಿರಬಹುದು, ಅಂಥವನನ್ನು ನೀವು ಆ ರೀತಿ ಕ್ಷೇತ್ರವಿಭಜನೆಮಾಡಿ ಏಕೆ ಅವರ ಪ್ರತಿನಿಧಿಯಾಗಿ ಬರಲು ಅವನು ಇಷ್ಟಪಟ್ಟರೂ ಅವಕಾಶ ಕೊಡುವುದಿಲ್ಲ? ಅಲ್ಲದೆ ಮುಖ್ಯವಾಗಿ ಜಿಲ್ಲಾ ಬೋರ್ಡುಗಳಲ್ಲಿ ನಿಮಗೆ ಬೇಕಾಗಿರುವವರು ಅಲ್ಲಿನ ಜನತೆಯನ್ನು ಪ್ರತಿಬಿಂಬಿಸುವವರು. ರಾಜಕೀಯ ತತ್ವಗಳನ್ನು ರೂಪಿಸುವುದಕ್ಕೇನೂ ಯಾರೂ ಹೋಗಬೇಕಾಗಿಲ್ಲ. ಅವರವರ ಊರಿಗೆ ಆಗಬೇಕಾದ ಕೆರೆ, ಕುಂಟೆ ಮುಂತಾದ ಆವಶ್ಯಕತೆಗಳನ್ನು ಕೇಳುವುದಕ್ಕೆ ಜಿಲ್ಲಾಬೋರ್ಡ್ ಇರುವುದು. ಇಂಥ ಸಂದರ್ಭದಲ್ಲಿ ಅವರ ಪ್ರಾತಿನಿಧ್ಯವಿರುವುದೇ ನ್ಯಾಯ. ಚುನಾವಣಾ ಖರ್ಚಿನ ದೃಷ್ಟಿಯಿಂದಲೂ, ಈ ರೀತಿ ಮಾಡುವುದಾದರೆ, ದೊಡ್ಡದಾಗಿ ವೋಟಾರು ಕಾರು ಮುಂತಾದುವುಗಳನ್ನಿಟ್ಟುಕೊಂಡು ಖರ್ಚುಮಾಡುವ ಆವಶ್ಯಕತೆಯೂ ಇರುವುದಿಲ್ಲ.

ಅಲ್ಲದೆ ವೋಟು ಮಾಡುವುದರಲ್ಲಿಯೂ, ಮಲ್ಟಿ ಮೆಂಬರು ಕಾನ್‌ಸ್ಟಿಟ್ಯೂಯನ್ಸಿಯಾದರೆ, ಮೂರು ಜನ ಕಾಂಗ್ರೆಸ್ಸಿನವರು, ಮೂರು ಜನ ಸೋಷಿಯಲಿಸ್ಟರು, ಮೂರು ಜನ Independent ಮೆಂಬರುಗಳಿದ್ದರೆ ಹನ್ನೆರಡು ಪೆಟ್ಟಿಗೆಗಳನ್ನಿಟ್ಟು ಆ ಅವಿದ್ಯಾವಂತ ಓಟರುಗಳ ಕೈಲಿ ಓಟನ್ನು ಕೊಟ್ಟು ಹಾಕಿ ಎಂದರೆ, ಅವರು ಹನ್ನೆರಡು ಪೆಟ್ಟಿಗೆಗಳನ್ನು ದಾಟಿಕೊಂಡು ಹೋಗಿ ಸರಿಯಾಗಿ ವೋಟು ಕೊಡುವುದು ಬಹಳ ಕಷ್ಟ. ಇತ್ತ ಕಡೆಯಿಂದ ಅತ್ತಕಡೆಯವರೆಗೆ ಹೋಗುವುದರೊಳಗೆ ಅವರಿಗೆ ಯಾವ ಬಣ್ಣದ ಪೆಟ್ಟಿಗೆಗೆ ಹಾಕಬೇಕೆಂಬುದೇ ಮರೆತುಹೋಗುತ್ತದೆ. ಪಾರ್ಲಿಮೆಂಟಿಗೆ ನಡೆದ ಚುನಾವಣೆಗಳಲ್ಲಿ ಏನಾಯಿತೆಂಬುದನ್ನು ನಾವೆಲ್ಲಾ ನೋಡಿದ್ದೇವೆ. ಅಲ್ಲಾದರೋ ಎರಡು ಮೂರು ಪೆಟ್ಟಿಗೆಗಳಿಗಿಂತ ಜಾಸ್ತಿಯಿರಲಿಲ್ಲ, ನಾನು ನಿಂತಕಡೆ ಎರಡೇ ಇತ್ತು; ಶ್ರೀ ಇಮಾಮರವರು ನಿಂತಕಡೆಯೂ ಎರಡೇ ಇತ್ತು, ಅದೂ ಕಷ್ಟವೆಂದು ಎಲ್ಲರಿಗೂ ಗೊತ್ತಾಯಿತು. ಶ್ರೀ ಶಿವಣ್ಣನವರು ಮತ್ತು ಶ್ರೀ ದುಗ್ಗಪ್ಪನವರು ನಿಂತಕಡೆ ಹನ್ನೊಂದು ಪೆಟ್ಟಿಗೆಗಳಿದ್ದುವು! ಅಲ್ಲಿ ವೋಟುಮಾಡಲು ಹೋಗಿದ್ದ ಜನರನ್ನು ಯಾವ ಪೆಟ್ಟಿಗೆಗೆ ಹಾಕಿದಿರಿ ಎಂದು ಕೇಳಿದ್ದಕ್ಕೆ "ಯಾವುದಕ್ಕೋ ಹಾಕಿಬಿಟ್ಟೆವು, ಪೆಟ್ಟಿಗೆಗಳನ್ನು ನೋಡಿದ್ದರಲ್ಲಿ ಯಾವುದಕ್ಕೆ ಹಾಕಬೇಕೆಂಬುದೇ ಗೊತ್ತಾಗಲಿಲ್ಲ" ಎಂದರು. ಬರೀ ಕಾಂಗ್ರೆಸ್ಸಿನವರಿಗೆ ಹಾಕಬೇಕು ಎಂದು ಬೇಕಾದರೆ ಹಳದಿ ಪೆಟ್ಟಿಗೆಗೆ ಹಾಕಿಬರಬಹುದು. ಆದರೆ ಒಂದು ವೋಟು ಕಾಂಗ್ರೆಸ್ಸಿಗೆ, ಒಂದು ವೋಟು ಸೋಷಿಯಲಿಸ್ಟ್, ಇನ್ನೊಂದು ಇನ್ನೊಂದು ಪೆಟ್ಟಿಗೆಗೆ ಹಾಕಬೇಕೆಂದರೆ ಎಷ್ಟು ಕಷ್ಟವಾಗುತ್ತದೆ! ಸಿಂಗಲ್ ಮೆಂಬರ್ ಕಾನ್‌ಸ್ಟಿಟ್ಯೂಯನ್ಸಿಯಾದ್ದರೆ ಅಷ್ಟು ಕಷ್ಟವಾಗುವುದಿಲ್ಲ. ಈ ಕಾರಣ

(ಶ್ರೀ ಎ. ಭೀಮಪ್ಪನಾಯಕ್.)

ಸಿಂಗಲ್ ಮೆಂಬರ್ ಕ್ಷೇತ್ರಗಳನ್ನು ಮಾಡಿ ಹೆಚ್ಚು ಖರ್ಚಿಲ್ಲದಂತೆ ಮಾಡುವುದು ಉತ್ತಮ. ಹರಿಜನರು ನಿಲ್ಲಬೇಕಾದ ಕಡೆ ಡಬ್ಬಲ್ ಮೆಂಬರು ಕ್ಷೇತ್ರವನ್ನು ಮಾಡಿ ಅವರಿಗೆ ಒಂದು ಹೋಬಳಿಯನ್ನು ರಿಸರ್ವ್ ಮಾಡಬೇಕೆಂದು ಹೇಳಿದರೆ ರಿಸರ್ವೇಷನ್ ಕೂಡ ಮಾಡಬಹುದು. ಯಾರೇ ಉಮೇದುವಾರರಾದರೂ ಸುಲಭವಾಗಿ ಬಂದು ಸೈಕಲ್ ಇಟ್ಟು ಕೊಂಡು ತಮ್ಮ ಕ್ಷೇತ್ರವನ್ನೆಲ್ಲಾ ತಿರುಗಬಹುದು. ಇದು ಡೀಲಿಮಿಟೇಷನ್ ಅಫ್ ಕಾನ್‌ಸ್ಟಿಟ್ಯೂಯೆನ್ಸೀಸ್ ವಿಚಾರದಲ್ಲಿನನ್ನ ಅಭಿಪ್ರಾಯ, ಆಮೇಲೆ ಶೇ|| $6\frac{1}{4}$ ಡೋಲೌಟ್ ಮಾಡಬೇಕೆಂದು ಮಂತ್ರಿಗಳು ಹೇಳಿದರು. ಒಂದು ಜಿಲ್ಲೆಯಲ್ಲಿ ವಸೂಲಾಗುವುದರಲ್ಲಿ ಶೇ|| $6\frac{1}{4}$ ಅಲ್ಲ ಇಡೀ ಸಂಸ್ಥಾನದ ಲೆಕ್ಕಹಾಕಿ ಅದರಲ್ಲಿ ಶೇ|| $6\frac{1}{4}$ ಒಂದು ಡಿಸ್ಟ್ರಿಕ್ಟಿಗೆ ಕೊಡಬೇಕೆಂದು ಹೇಳಿದರು. ಒಂದು ಜಿಲ್ಲೆಯಲ್ಲಿ ಆದಾಯ ಹೆಚ್ಚಾಗಿರಬಹುದು, ಇನ್ನೊಂದು ಜಿಲ್ಲೆಯಲ್ಲಿ ಕಡಮೆಯಾಗಿರಬಹುದು. ಆದ್ದರಿಂದ ಎಲ್ಲಕ್ಕೂ ಸಮನಾಗಿ ಬರಲಿ, ಆದಾಯ ಹೆಚ್ಚಾಗಿಲ್ಲದಿರುವ ಕಡೆಗೆ ಹೆಚ್ಚಾಗಿ ದೊರೆಯಲಿ ಎಂಬ ಅಭಿಪ್ರಾಯದಿಂದ ಇಡೀ ಸಂಸ್ಥಾನದ ಆದಾಯದಲ್ಲಿ ಶೇಕಡ $6\frac{1}{4}$ ರಷ್ಟನ್ನು ತೆಗೆದು ಜಿಲ್ಲೆಗಳಿಗೆ ಕೊಡುವ ಅಧಿಕಾರ ಕೊಟ್ಟಿದೆ. ಇದನ್ನು ನಾವು ಒಪ್ಪಿಕೊಳ್ಳೋಣ. ಆದರೆ ತಾಲ್ಲೂಕು ಡೆವಲಪ್‌ಮೆಂಟ್ ಕಮಿಟಿ ಆಗಬೇಕೆಂದು ಹೇಳುವಾಗ ಅದಕ್ಕೆ ತಕ್ಕ ಹಣದ ಅನುಕೂಲತೆಯಿದೆಯೆ ಎಂಬುದನ್ನು ನೋಡಬೇಕು. ಈಗ ಸಾಧಾರಣವಾಗಿ ಇಡೀ ಸಂಸ್ಥಾನದಲ್ಲಿ ಒಂದು ಕೋಟಿ 25 ಲಕ್ಷ ರೂಪಾಯಿ ಜಮೀನು ಕಂದಾಯ ಬರುವುದಾದರೆ ಐದು ಅಥವಾ ಆರು ಲಕ್ಷ ರೂಪಾಯಿ ಶೇಕಡ $6\frac{1}{4}$ ರಂತೆ ಅದರಿಂದ ತೆಗೆದು ಮೈಸೂರು ಸಂಸ್ಥಾನದಲ್ಲಿರುವ ಸುಮಾರು 90 ತಾಲ್ಲೂಕುಗಳಿಗೆ ಹಂಚಿದರೆ ಎಷ್ಟು ಬರುತ್ತದೆಯೆಂಬುದನ್ನು ನೋಡಬೇಕು. ಅದರಿಂದ ತಾಲ್ಲೂಕು ಎಷ್ಟು ಉದ್ಧಾರವಾಗುತ್ತದೆಂಬುದನ್ನು ಗಮನಿಸಬೇಕು. ಇದಲ್ಲದೆ ತಾಲ್ಲೂಕು ಡೆವಲಪ್‌ಮೆಂಟ್ ಸಮಿತಿಗೆ ಬೇರೆ ಯಾವುದಾದರೂ ವರಮಾನವಿದೆಯೆ ಎಂಬುದು ಗೊತ್ತಾಗಲಿಲ್ಲ. ಹಾಗೆ ಬೇರೆ ವರಮಾನವಿರುವುದಾದರೆ ಆಗ ತಾಲ್ಲೂಕು ಡೆವಲಪ್‌ಮೆಂಟ್ ಕಮಿಟಿ ಮಾಡಿದರೆ ಸಾರ್ಥಕವಾಗುತ್ತದೆ. ಆದ್ದರಿಂದ ಸರ್ಕಾರದವರು ತಾಲ್ಲೂಕು ಡೆವಲಪ್‌ಮೆಂಟ್ ಕಮಿಟಿಗೆ ವರಮಾನಬರುವ ಬಾಬುಗಳ್ಯಾವುವೆಂಬುದನ್ನು ಹೇಳಿದರೆ ಒಳ್ಳೆಯದು, ಮತ್ತು ಕೆಲಸಕಾರ್ಯಗಳ ಹಂಚಿಕೆ ಮಾಡುವಾಗ ಇಂಟರ್ ತಾಲ್ಲೂಕು ರಸ್ತೆಗಳು, ಹೈಸ್ಕೂಲು, ಆಸ್ಪತ್ರೆ ಮುಂತಾದ್ದು ಡಿಸ್ಟ್ರಿಕ್ಟ್ ಬೋರ್ಡಿಗೆ ಸಂಬಂಧಪಟ್ಟಿರುವುವು, ಭಾವಿಗಳು ಮುಂತಾದ್ದು ತಾಲ್ಲೂಕು ಬೋರ್ಡಿಗೆ ಸಂಬಂಧಪಟ್ಟಿದೆ ಎಂದು ಪ್ರತ್ಯೇಕಮಾಡಿ ಅದಕ್ಕಾಗಿ ಫಂಡ್ ಏನಿದೆಯೆಂದು ಗಮನಿಸುವುದು ಆವಶ್ಯಕ, ಇನ್ನು ಮುಂದೆ ಒಂಭತ್ತಕ್ಕಿಂತ ಕಡಮೆಯಿಲ್ಲದೆ ತಾಲ್ಲೂಕು ಡೆವಲಪ್‌ಮೆಂಟ್ ಕಮಿಟಿಗಳಾಗುತ್ತವೆ. ಅವಕ್ಕೆ ಗುಮಾಸ್ತರು, ಓವರ್‌ಸೀಯರಗಳು ಅವರ ಜೊತೆಗೆ ಜಿಲ್ಲಾ ಬೋರ್ಡಿಗೆ ಸಿಬ್ಬಂದಿ ಇದಕ್ಕೆಲ್ಲಾ ಹಣ ಬೇಕೆ ಅಥವಾ ಒಬ್ಬ ತಾಲ್ಲೂಕು ಅಮಲ್ದಾರರೇ ಎಲ್ಲಾ ನೋಡಿಕೊಳ್ಳುವರೆ ? ತಾಲ್ಲೂಕು ಡೆವಲಪ್‌ಮೆಂಟ್ ಕಮಿಟಿ ಆಗಬೇಕೆಂದು ಹೇಳುವವರಲ್ಲಿ ನಾನೂ ಒಬ್ಬ, ಹಾಗಾಗುವಾಗ ಅದಕ್ಕೆ ಸಾಕಾದಷ್ಟು.........

Mr. SPEAKER.—May I bring it to the notice of the Hon'ble Member, that that was incidentally mentioned. It was not necessary for the passing of this Bill at all.

Sri A. BHEEMAPPA NAIK.—I am not elaborating this. I am speaking only to illustrate the point.

Mr. SPEAKER.—I do not want any digression on the point relating to the constitution of and finances that will be provided by the Government to the Taluk Committees. We need not go into that question Incidentally the Hon'ble Member has referred to the amount that may be spared for the taluk committees. It is not relevant at this stage to go into details. Whether it is necessary or whether it can be included here is all the question. Because, if I allow you to go into details, I cannot prevent others from doing so.

Sri A. BHEEMAPPA NAIK.—I do not want any special privilege. I do not want any special treatment.

Sri M. LINGANNA.—So far as this aspect is concerned, I submit that the Hon'ble Chair may direct the Minister to make a statement about that.

Mr. SPEAKER.—No, it is not necessary. The Speeches of Hon'ble Members must be strictly relevant to the matter at issue. Members need not elaborate on a point referred to by the Hon'ble Minister incidentally.

Sri A. BHEEMAPPA NAIK.—I am sorry Sir, it was deliberately mentioned with a view to show why this $6\frac{1}{4}$ per cent should be deducted. Because that amount has been statutorily allotted for that purpose.

Sri Mulka GOVINDA REDDY.—There is another aspect of it, Sir. In the Rajpramukh's Address, it was mentioned clearly that the Government are contemplating to set up Taluk Boards and the Minister while moving the Bill also mentioned about it. Though it was incidental, it was a very vital point, because he was making out a case why this $6\frac{1}{4}$ per cent should be given to District Boards.

Mr. SPEAKER.—That you can say. I do not object. You can also say : 'This amount is not necessary. This amount may be allotted for the District Board.'

ಶ್ರೀ ಎ. ಭೀಮಪ್ಪನಾಯಕ್.—ಶೇಕಡ $6\frac{1}{4}$ ನೀವು ತೆಗೆದು ಹಾಕುವುದಾದರೆ ಅದರ ಜೊತೆಗೆ ಇನ್ನೂ ಜಾಸ್ತಿ ಹಣವನ್ನು ತಾಲ್ಲೂಕು ಡೆವಲಪ್‌ಮೆಂಟ್ ಕಮಿಟಿಗಳಿಗೆ ಯಾವುದಾದರೂ ಮಾರ್ಗದಿಂದ ಕೊಡುವು

ದಕ್ಕೆ, ತಯಾರಾಗಿದ್ದರೆ ವಜಾಮಾಡಿ ಅಭ್ಯಂತರವಿಲ್ಲ. ಆದರೆ ಆ ರೀತಿ ವಜಾಮಾಡಿ, ಬೇರೆ ಸೋರ್ಸ್ ತೋರಿಸದೆಇದ್ದರೆ ಹಿಂದಿನ ಶೇಕಡ $6\frac{1}{4}$ ಜೊತೆಗೆ ಇನ್ನೂ ಶೇಕಡ $6\frac{1}{4}$ ಕೊಡುವುದು ಅಗತ್ಯ. ಒಟ್ಟಿನಲ್ಲಿ ಜಿಲ್ಲಾ ಬೋರ್ಡು ಚುನಾವಣೆ ಅತ್ಯಗತ್ಯವಾಗಿ ಬಹಳ ಜಾಗ್ರತೆಯಾಗಿ ಆಗಬೇಕಾದ್ದು ಅಗತ್ಯ, ಈಗಾಗಲೇನೇ ಚುನಾವಣೆಯಾಗಿ 8-10 ವರ್ಷವಾಯಿತೆಂದು ಅನೇಕರು ಹೇಳುತ್ತಿದ್ದಾರೆ. ಈ ಜಿಲ್ಲಾ ಬೋರ್ಡ್ ಆಕ್ಟು ತಿದ್ದುಪಡಿ ಮಾಡುವುದರಲ್ಲಿ ಕಾಲಕಳೆಯಬಾರದು. ಒಂದೆರಡು ವಿಷಯಗಳಲ್ಲಿ ಮಾತ್ರ ತಿದ್ದುಪಡಿಯಿದೆ, ಹೆಚ್ಚು ಬದಲಾವಣೆಯೇನೂ ಕಾಣುವುದಿಲ್ಲ. ಆದ್ದರಿಂದ ಇದನ್ನು ಇಲ್ಲಿಯೇ ಚರ್ಚೆಮಾಡಿ ತಿದ್ದುಪಡಿಮಾಡಿ ಜಾಗ್ರತೆ ಇದನ್ನು ಲಾ ಮಾಡಿ ಚುನಾವಣೆಗೆ ತಕ್ಷಣ ಏರ್ಪಾಡು ಮಾಡಬೇಕೆಂದು ಕೋರುತ್ತೇನೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ಈ ಜಿಲ್ಲಾಬೋರ್ಡ್ ಮತ್ತು ಗ್ರಾಮಪಂಚಾಯಿತಿಗಳ ತಿದ್ದುಪಡಿ ಮಸೂದೆಯನ್ನು ಸ್ವಾಗತಿಸುತ್ತಾ ಎರಡು ಮೂರು ವಿಷಯಗಳನ್ನು ಹೇಳಬೇಕೆಂದಿದ್ದೇನೆ. ಇದರಲ್ಲಿ ನೇರವಾಗಿ ಪ್ರತ್ಯಕ್ಷ ಚುನಾವಣೆಯಿಂದ ಆರಿಸಲು ಅವಕಾಶಮಾಡಿರುವುದು ಬಹಳ ಪ್ರಶಂಸನೀಯವಾದುದು. ಹಿಂದಿನ ಆಕ್ಟಿನಂತೆ ಅಪ್ರತ್ಯಕ್ಷವಾಗಿ ಚುನಾವಣೆಯಾಗುವುದು ಸರಿಯಲ್ಲವೆಂದು ಇದೇ ಸಭೆಯಲ್ಲಿ ಸಾಮಾನ್ಯವಾಗಿ ಅನೇಕ ಸಲ ಚರ್ಚೆಯಾಗಿ ತೀರ್ಮಾನವಾಗಿದೆ. ಈಗ ವಿಶಾಲಭಾವನೆಯಿಂದ ತಾಲ್ಲೂಕುಗಳಲ್ಲಿರುವ ಜನರ ಪ್ರೀತಿ ವಿಶ್ವಾಸ ಸಂಪಾದಿಸಿ ಡಿಸ್ಟ್ರಿಕ್ಟು ಬೋರ್ಡಿಗೆ ಪ್ರತ್ಯಕ್ಷವಾಗಿ ಚುನಾಯಿತರಾಗಿ ಬರಲು ಅವಕಾಶವಿದೆ. ತಾಲ್ಲೂಕು ಬೋರ್ಡು ರಚಿಸುವುದರಿಂದ ಹೋಬಳಿವಾರು ಕಾನ್ಸ್ಟಿಟ್ಯುಯನ್ಸಿಮಾಡಿ ಒಂದು ಸಂಕುಚಿತ ಮನೋಭಾವನೆಯಿಂದ ಚುನಾವಣೆ ಮಾಡುವುದರಿಂದ ಪ್ರತಿ ಹೋಬಳಿಯಿಂದಲೂ ಚುನಾಯಿತರಾಗಿ ಬರಲು ಅವಕಾಶವಿಲ್ಲವೆಂದು ಕಾಣುತ್ತದೆ. ತಾಲ್ಲೂಕಿನಿಂದ ಜನರಲ್ಲಾಗಿ ವಯಸ್ಕರ ಮತದಾನದ ಮೇಲೆ ಚುನಾಯಿತರಾಗಿ ಬರುವುದು ಸರಿಯಾದುದು. ಎಲ್ಲಾ ಕೋಮುಗಳ ಪ್ರತಿನಿಧಿಗಳೂ ಸಹಾ ಅದರಿಂದ ಬರಲು ಅನುಕೂಲ. ಒಂದು ತಾಲ್ಲೂಕು ಯೂನಿಟ್ಟಾಗಿ ಮಾಡುವುದರಿಂದ ವೆಚ್ಚ ಕಡಮೆಯಾಗಿ ಚುನಾವಣೆ ನಡೆಯಲು ಅವಕಾಶವಿದೆ.

ಇದರಲ್ಲಿ ಅಸೆಂಬ್ಲಿ ಕಾನ್ಸ್ಟಿಟ್ಯುಯೆನ್ಸಿ ಓಟರುಗಳ ಪಟ್ಟಿ ಪ್ರಕಟವಾಗಬೇಕಾದ್ದು ಮುಖ್ಯವಾದ ವಿಷಯ, ಇದರಲ್ಲಿ ತರ್ಕವಿಲ್ಲ. ನಿಮ್ನವರ್ಗದವರಿಗೆ ಸ್ಥಾನಗಳನ್ನು ಕಾದಿಡಲು ಅವಕಾಶವಿದೆ, ಮೊದಲಿನ ಆಕ್ಟಿನಲ್ಲಿ ಈ ಅವಕಾಶವಿರಲಿಲ್ಲ, ಈಗ ಅವಕಾಶ ಕೊಟ್ಟು ಕನಿಷ್ಠಪಕ್ಷ ಒಂದು ಸ್ಥಾನವಾದರೂ ಜಿಲ್ಲಾ ಬೋರ್ಡಿನಲ್ಲಿ ಸಿಕ್ಕಲು ಅವರಿಗೆ ಅವಕಾಶ ಕಲ್ಪಿಸಲಾಗಿದೆ, ಯಾವ ತಾಲ್ಲೂಕುಗಳಲ್ಲಾದರೂ ಪ್ರತಿನಿಧಿ ಬಾರದಿದ್ದರೆ ಪ್ರತಿನಿಧಿಯೊಬ್ಬರು ಬರಲು ಅವಕಾಶವಿದೆ. ಆಮೇಲೆ ಜಿಲ್ಲಾ ಬೋರ್ಡುಗಳಿಗೆ ಶೇಕಡ $6\frac{1}{4}$ ಹಣ ಕೊಡುವುದು ಬೇಡ, ಅದಕ್ಕೆ ಪ್ರತ್ಯೇಕ ಉತ್ಪನ್ನ ಮಾಡಿಕೊಡಲು ಅವಕಾಶವಿದೆ. ಈ ರೆವೆನ್ಯೂ ತಾಲ್ಲೂಕು ಬೋರ್ಡುಗಳಿಗೆ ಹಂಚುವುದರಿಂದ ಪ್ರತಿಯೊಂದು ತಾಲ್ಲೂಕಿನಲ್ಲೂ ಅಭಿವೃದ್ಧಿ ಕಾರ್ಯ ಕೈಕೊಳ್ಳಬಹುದು ಎಂದು 106ನೆಯ ಸೆಕ್ಷನ್ ತಿದ್ದುಪಡಿ ಮಾಡಿರುವುದನ್ನು ಸ್ವಾಗತಿಸುತ್ತೇನೆ. ಜಿಲ್ಲಾ ಬೋರ್ಡು ನೇರವಾಗಿ ವಸೂಲುಮಾಡಿ ಕೆಲಸಮಾಡಲು ಅವಕಾಶವಿದೆ. ಆದ್ದರಿಂದ ಶೇಕಡ $6\frac{1}{4}$ ಕೊಡುವುದನ್ನು ಜಿಲ್ಲಾ ಬೋರ್ಡಿಗೆ ತಪ್ಪಿಸಿ ಗ್ರಾಮಪಂಚಾಯಿತಿಗಳಿಗೆ ಕೊಡುವುದರಿಂದ ತಾಲ್ಲೂಕು ಬೋರ್ಡುಗಳು ನಡೆಯಲು ಅನುಕೂಲವಾಗುತ್ತದೆ. ಹೋಬಳಿ ಮತ್ತು ತಾಲ್ಲೂಕುಗಳಲ್ಲಿ ಖರ್ಚಿಗೆ ಹಣ ಸಿಕ್ಕುವುದು ಕಷ್ಟವಾದ್ದರಿಂದ ಶೇಕಡ $6\frac{1}{4}$ನ್ನು ಗ್ರಾಮಪಂಚಾಯಿತಿಗಳಿಗೆ ಕೊಡುವುದನ್ನು ಒಪ್ಪುತ್ತೇನೆ.

4-30 P.M.

ಈಗ ತಂದಿರತಕ್ಕ ಈ ಮಸೂದೆ ಸೆಲೆಕ್ಟು ಕಮಿಟಿಗೆ ಹೋಗಬೇಕಾದ ಅವಶ್ಯಕತೆ ಇಲ್ಲ. ಈಗಿರುವಂತೆಯೇ ಸರಿಯಾದ ರೀತಿಯಲ್ಲಿ ಇದೆ. ಆದ್ದರಿಂದ ಇದನ್ನು ಸಭೆಯವರು ಒಪ್ಪಿ ಆದಷ್ಟು ಜಾಗ್ರತೆ ಜಿಲ್ಲಾ ಬೋರ್ಡಿನ ಚುನಾವಣೆ ನಡೆಯುವುದಕ್ಕೆ ಅವಕಾಶ ಮಾಡಿಕೊಡುವುದು ಉತ್ತಮ ಎಂದು ಹೇಳಿ ಈ ಮಸೂದೆಯನ್ನು ತಂದುದಕ್ಕಾಗಿ ಸರ್ಕಾರದವರನ್ನು ಅಭಿನಂದಿಸುತ್ತೇನೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ (ಮಾಲೂರು).—ಈ ಜಿಲ್ಲಾ ಬೋರ್ಡು ತಿದ್ದುಪಡಿ ಮಸೂದೆಯನ್ನು ಸ್ವಾಗತಿಸುತ್ತಾ ಕೆಲವು ಮಾತುಗಳನ್ನು ಮಾತ್ರ ಹೇಳಬೇಕೆಂದು ನಿಂತಿದ್ದೇನೆ. ಈಗಾಗಲೇ ಜಿಲ್ಲಾ ಬೋರ್ಡಿನ ಚುನಾವಣೆಗಳು ನಡೆದು 1 ವರ್ಷಗಳ ಮೇಲೆ ಆಗಿದೆ. ಈಗ ಸ್ಪೆಷಲ್ ಆಫೀಸರುಗಳ ವಶಕ್ಕೆ ಜಿಲ್ಲಾ ಬೋರ್ಡುಗಳನ್ನು ವಹಿಸಿದ್ದೇವೆ. ಈ ಜಿಲ್ಲಾ ಬೋರ್ಡಿನ ಕೆಲಸ ಕಾರ್ಯಗಳು ಅಷ್ಟಾಗಿ ಚೆನ್ನಾಗಿ ನಡೆಯುತ್ತಿಲ್ಲ. ಈ ಜಿಲ್ಲಾ ಬೋರ್ಡಿನ ಕೆಲಸವನ್ನು ನಾವು ಹೋದ ಸಲ ಸ್ಪೆಷಲ್ ಆಫೀಸರುಗಳಿಗೆ ವಹಿಸುವ ಸಂದರ್ಭದಲ್ಲಿ, ಅದರಲ್ಲಿ ಇನ್ನೂ ಒಂದು ಕಲಂನ್ನು ಕೂಡ ಹಾಕಿದ್ದೆವು. ಅದೇನೆಂದರೆ ಸ್ಪೆಷಲ್ ಆಫೀಸರುಗಳ ಸಹಾಯಕ್ಕೆ ಒಂದು ಸಮಿತಿಯನ್ನು ಕೂಡ ಸರ್ಕಾರದವರು ನೇಮಿಸಬೇಕೆಂದು ಸೂಚಿಸಲಾಗಿತ್ತು. ಜಿಲ್ಲಾ ಬೋರ್ಡಿನ ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆಯುವುದಕ್ಕೆ ಸಹಾಯಕವಾಗಿರುವ ಏರ್ಪಾಡು ಕೂಡ ಮಾಡಬೇಕೆಂದು ಹೇಳಿತ್ತು. ಈಗ ನೋಡಿದ್ದರಲ್ಲಿ ಆ ರೀತಿ ಆಗಿಲ್ಲ. ಹಿಂದೆ ನಾವು ಮಾಡಿದ ಆಕ್ಟಿನಲ್ಲಿ ಏನನ್ನು ಸೂಚನೆ ಮಾಡಿದ್ದೆವು ಎಂಬುದನ್ನು ಈ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳುವುದು ಒಳ್ಳೆಯದು ಎಂದು ಏಕೆ ಹೇಳುತ್ತಾ ಇದ್ದೇನೆ ಎಂದರೆ ಈ ಚುನಾವಣೆಗಳು ಆಗಬೇಕಾಗಿದ್ದರೂ ಕೂಡ ಇನ್ನೂ 6 ತಿಂಗಳು ಬೇಕು. ಅದಕ್ಕೆ ಮೊದಲೇ ಆಗುವುದಿಲ್ಲ ಅಥವಾ ಇನ್ನೂ ಒಂದು ವರ್ಷವೇ ಬೇಕಾಗುತ್ತದೆಯೋ ಏನೋ! ಆದ್ದರಿಂದ ಈ ಚುನಾವಣೆಗಳನ್ನು ಆದಷ್ಟು ಜಾಗ್ರತೆ ನಡೆಸಬೇಕು ಎನ್ನುವುದು ಒಂದು ಮುಖ್ಯವಾದ ಅಂಶ. ಈ ತಿದ್ದುಪಡಿ ಮಸೂದೆ ಪ್ರಕಾರ ತೀರ್ಮಾನ ಮಾಡಿ ಚುನಾವಣೆಗಳನ್ನು ನಡೆಸುವುದಕ್ಕೆ ಮೊದಲು ಈಗಿರತಕ್ಕ ಜಿಲ್ಲಾ ಬೋರ್ಡಿನ ಸ್ಪೆಷಲ್ ಆಫೀಸರುಗಳ ಸಹಾಯಕ್ಕೆ ಒಂದು ಸಲಹಾಸಮಿತಿಯನ್ನು ನೇಮಿಸಿಕೊಡುವುದು ಒಳ್ಳೆಯದು ಎಂದು ಹೇಳಿ ಈ ಸಂದರ್ಭದಲ್ಲಿ ಸರ್ಕಾರದವರಿಗೆ ಸಲಹೆ ಮಾಡುತ್ತೇನೆ. ಈಗ ನೋಡಿದ್ದರಲ್ಲಿ ಜಿಲ್ಲಾ ಬೋರ್ಡಿನ ಕೆಲಸಕಾರ್ಯಗಳು ಏನೇನೂ ನಡೆಯುತ್ತಿಲ್ಲ. ಸ್ಪೆಷಲ್ ಆಫೀಸರು ಎಂದು ಯಾರು ಇದ್ದಾರೆ, ಅವರೇನಿದ್ದರೂ ಅವರ ಹತ್ತಿರ ಹೋದ ಕಾಗದಗಳಿಗೆ ರುಜು ಹಾಕುವುದು ಎಷ್ಟೋ ಅಷ್ಟು ಮಾತ್ರ ಕೆಲಸ ಆಗುತ್ತಾ ಇದೆ. ಆಸ್ಪತ್ರೆಗಳ ಕೆಲಸ ಆಗಲೀ ರಸ್ತೆಗಳ ಕೆಲಸ ಆಗಲೀ, ಯಾವ ತಾಲ್ಲೂಕಿನಲ್ಲೂ ಕೂಡ ನಡೆಯುತ್ತಿಲ್ಲ. ಆದ್ದರಿಂದ ನಾನು ಸರ್ಕಾರದವರಿಗೆ ಸಲಹೆ ಮಾಡುವುದೇನೆಂದರೆ, ಈ ಜಿಲ್ಲಾ ಬೋರ್ಡಿನ ಆಕ್ಟನ್ನು ಜಾರಿಗೆ ತರುವುದಕ್ಕೆ ಇನ್ನೂ 6 ತಿಂಗಳು ಅಥವಾ

(ಶ್ರೀ ಎಚ್. ಸಿ. ಲಿಂಗಾರೆಡ್ಡಿ.)

ಒಂದು ವರ್ಷ ಆಗುವುದರಿಂದ ಈ ಜಿಲ್ಲಾ ಬೋರ್ಡ್ ಸ್ಪೆಷಲ್ ಆಫೀಸರುಗಳ ಸಹಾಯಕ್ಕೆ ಒಂದು ಸಲಹಾ ಸಮಿತಿಯನ್ನು ರಚನೆಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಇದರಲ್ಲಿ ಇನ್ನೊಂದು ಬಹಳ ಪ್ರಾಮುಖ್ಯವಾದ ವಿಷಯವನ್ನು ಸೂಚನೆ ಮಾಡಲಾಗಿದೆ. ನಾವು ಮೊದಲಿನಿಂದಲೂ ಕೂಡ ಪ್ರತ್ಯಕ್ಷ ಚುನಾವಣಾ ಪದ್ಧತಿ ಇರಬೇಕೇ, ಅಪ್ರತ್ಯಕ್ಷ ಚುನಾವಣಾ ಪದ್ಧತಿ ಇರಬೇಕೇ ಎಂಬ ವಿಷಯವನ್ನು ಚರ್ಚೆ ಮಾಡುತ್ತಾ, ಮಾಡುತ್ತಾ, 5-6 ವರ್ಷಗಳ ಕಾಲವನ್ನು ಕಳೆದಿದ್ದೇವೆ. ಕೊನೆಯದಾಗಿ ಅಪ್ರತ್ಯಕ್ಷ ಚುನಾವಣೆ ಬೇಡ, ಪ್ರತ್ಯಕ್ಷ ಚುನಾವಣಾ ಪದ್ಧತಿಯನ್ನು ಅನುಸರಿಸೋಣ ಎಂದು ಇಲ್ಲಿ ಸೂಚನೆ ಮಾಡಿರುವುದರಿಂದ ಈಗಲಾದರೂ ಇದನ್ನು ಒಪ್ಪಿಕೊಂಡಿರಬಹುದೇನೋ ಎಂದು ಇದ್ದೆ. ಆದರೆ ಈಗಲೂಕೂಡ ಪ್ರತ್ಯಕ್ಷ ಚುನಾವಣೆ ಬೇಕು ಎಂದು ಕೆಲವರು, ಅಪ್ರತ್ಯಕ್ಷ ಚುನಾವಣೆ ಬೇಕು ಎಂದು ಮತ್ತೆ ಕೆಲವರು ಹೇಳುತ್ತಾ ಇರುವುದನ್ನು ನೋಡಿದರೆ ಯಾವುದಾದರೂ ಒಂದು ತೀರ್ಮಾನಕ್ಕೆ ಬಂದು ಆ ತೀರ್ಮಾನದ ಪ್ರಕಾರ ಚುನಾವಣೆ ನಡೆಸಿದರೆ ಅದರ ಅನುಭವ ಗೊತ್ತಾಗುತ್ತದೆಯೇ ಹೊರತು ಇಲ್ಲದೇ ಇದ್ದ ಪಕ್ಷದಲ್ಲಿ ಯಾವಾಗಲೂ ಇದು ಇದ್ದೇ ಇರುತ್ತದೆ. ಕೆಲವರು ಹಾಗೆ ಬೇಕು ಎನ್ನುತ್ತಾರೆ, ಕೆಲವರು ಹೀಗೆ ಬೇಕು ಎನ್ನುತ್ತಾರೆ. ಇದರಲ್ಲಿ ಅನುಕೂಲ ಇದೆ, ಅದರಲ್ಲಿ ಅನುಕೂಲ ಇದೆ ಎಂದು ಹೇಳುವುದು ವಾದಕ್ಕೆ ಸಂಬಂಧಪಟ್ಟ ವಿಷಯ. ಎರಡು ಅಭಿಪ್ರಾಯಗಳು ಇದ್ದೇ ಇರುತ್ತವೆ, ಹೋಗುವುದೇ ಇಲ್ಲ. ಆದ್ದರಿಂದ ನಾವು ಈಗಲಾದರೂ ಕೂಡ ಇದನ್ನೇ ಹೆಚ್ಚಾಗಿ ಚರ್ಚೆ ಮಾಡಿಕೊಂಡು ಕಾಲವಿಳಂಬಿಸಿಕೊಂಡು, ನಿಧಾನ ಮಾಡಿಕೊಂಡು ಸಾವಕಾಶವಾಗಿ ಹೋಗುವುದಕ್ಕೆ ಬದಲಾಗಿ ಪ್ರತ್ಯಕ್ಷ ಚುನಾವಣಾ ಪದ್ಧತಿಯ ಆಧಾರದ ಮೇಲೆ ಚುನಾವಣೆಗಳನ್ನು ಬಹು ಜಾಗ್ರತೆಯಾಗಿ ನಡೆಸಬೇಕೆಂದು ನಾನು ಈ ಸಂದರ್ಭದಲ್ಲಿ ಸೂಚನೆ ಮಾಡಲು ಬಯಸುತ್ತೇನೆ. ಶ್ರೀ ಭೀಮಪ್ಪ ನಾಯಕರು ಹೇಳಿದಂತೆ ಚುನಾವಣೆಗಳನ್ನು ನಡೆಸಬೇಕಾದರೆ ಬಹಳ ಕಾಲ ವಿಳಂಬವಾಗುತ್ತದೆ. ತಾಲ್ಲೂಕುಗಳನ್ನು ಡೀಲಿಮಿಟ್ ಮಾಡುವುದಕ್ಕೆ ಸುಮಾರು 1-2 ವರ್ಷ ಬೇಕಾಗಬಹುದು. ಅಷ್ಟು ಹೊತ್ತಿಗೆ ಸಾರ್ವತ್ರಿಕ ಚುನಾವಣೆಗಳು ಬರುತ್ತವೆ. ಎರಡು ತಾಲ್ಲೂಕುಗಳನ್ನೂ ಸೇರಿಸಿ ಒಂದೇ ಸಾರಿ ಚುನಾವಣೆ ನಡೆಸೋಣ ಎಂದು ನಮ್ಮ ಮಾನ್ಯ ಮಿತ್ರರು ಕೆಲವರು ವಾದಮಾಡಿದರು. ಆದರೆ ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು, ಯಾವುದು ಹೆಚ್ಚು ಪ್ರಯೋಜನ ಎಂಬುದನ್ನು ಕೂಡ ಗಮನಿಸಬೇಕು.

ಈಗ ನಾವು ಪುರಸಭಾ ಚುನಾವಣೆಗಳನ್ನು ನಡೆಸುತ್ತಾ ಇದ್ದೇವೆ. ಪೌರಸಭೆಯ ಚುನಾವಣೆಗಳು ಸಿಂಗಲ್ ಮೆಂಬರ್ ಕಾನ್‌ಸ್ಟಿಟ್ಯುಯೆನ್ಸಿ ಪ್ರಕಾರ ನಡೆಯುತ್ತಾ ಇವೆ. ಈಗ ಅನೇಕರು ಸಿಂಗಲ್ ಮೆಂಬರ್ ಕಾನ್‌ಸ್ಟಿಟ್ಯುಯೆನ್ಸಿ ಬೇಡ, ಪ್ಲೂರಲ್ ಮೆಂಬರ್ ಕಾನ್‌ಸ್ಟಿಟ್ಯುಯೆನ್ಸಿಪ್ರಕಾರ ಏರ್ಪಾಡು ಮಾಡಿ ಎಂದು ಹೇಳುತ್ತಾ ಇದ್ದಾರೆ. ನಮ್ಮ ಅನುಭವ ಆದರೂ ಕೂಡ ಏನು ಎಂದರೆ, ಈ ಪ್ಲೂರಲ್ ಮೆಂಬರ್ ಕಾನ್‌ಸ್ಟಿಟ್ಯುಯೆನ್ಸಿಯಲ್ಲಿ ವಿದ್ಯಾವಂತರಾದವರು, ಅನುಭವಸ್ಥರಾದವರು, ತಿಳಿವಳಿಕಸ್ಥರಾದವರು ಯಾರಿದ್ದಾರೋ ಅವರಿಗೆ ಅವಕಾಶವೇ ಇಲ್ಲ. ಇದನ್ನು ಯಾರು ಕೇಳುತ್ತಾ ಇದ್ದಾರೆ ಎಂದರೆ ಹಣ ಬೇಕಾದಷ್ಟು ಇರುವವರು, ಬಹಳ ಪ್ರಭಾವಶಾಲಿಗಳಾಗಿರುವವರು ಯಾರಿದ್ದಾರೆ ಅವರೇ ಹೊರತು ಇನ್ನಾರೂ ಅಲ್ಲ. ವಿದ್ಯಾವಂತನಿಗೆ, ಬುದ್ಧಿವಂತನಿಗೆ ಅಲ್ಲಿ ಅವಕಾಶವಿಲ್ಲ. ಈ ಚುನಾವಣೆಗಳಲ್ಲಿ ಯಾವ ರೀತಿ ಪ್ರಚಾರ ಆಗುತ್ತವೆ, ಹಣ ಹೇಗೆ ಸಿಕ್ಕಾಪಟ್ಟೆ ಖರ್ಚು ಮಾಡುತ್ತಾರೆ ಎಂಬುದು ಈಗಾಗಲೇ ಒಂದು ಮಹಾಚುನಾವಣೆ ಆಗಿ ಇಲ್ಲಿರತಕ್ಕ ಮಾನ್ಯ ಸದಸ್ಯರಿಗೆ ಗೊತ್ತಿರುವ ವಿಚಾರ. ಅದನ್ನು ಹೆಚ್ಚಾಗಿ ವಿವರಿಸುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ಈ ಪುರಸಭೆಗಳಿಗಾದರೂ ಕೂಡ ಮಲ್ಟಿ ಮೆಂಬರ್ ಕಾನ್‌ಸ್ಟಿಟ್ಯುಯೆನ್ಸಿ ಮಾಡುವುದು ಒಳ್ಳೆಯದಲ್ಲ ಎಂದು ಎನ್ನಿಸುತ್ತಾ ಇದೆ. ನಮ್ಮ ಜನಗಳಿಗೆ ಜಾತಿ ಮನೋಭಾವ ಇನ್ನೂ ಹೋಗಿಲ್ಲ. ಯಾವ ಹೋಬಳಿಯಲ್ಲಿ ಯಾರು ಬಹುಸಂಖ್ಯಾತರಾಗಿರುತ್ತಾರೋ ಅವರ ಪೈಕಿ ಯಾರಾದರೂ ಉಮೇದುವಾರರಾಗಿ ನಿಂತುಕೊಂಡರೆ ಅಲ್ಪಸಂಖ್ಯಾತರನ್ನು ಸುಲಭವಾಗಿ ಸೋಲಿಸಿಬಿಡುತ್ತಾರೆ. ಮೈನಾರಿಟಿ ಕಮ್ಯೂನಿಟಿಯವರು ಗೆಲ್ಲುವುದಕ್ಕೆ ಸಾಧ್ಯವೇ ಆಗುವುದಿಲ್ಲ. ಯಾವ ಪಾರ್ಟಿ ಆದರೂ ಆಗಲಿ, ಈ ವಿಧವಾಗಿರುವುದರಿಂದ ಇಡೀ ತಾಲ್ಲೂಕು ಒಂದು ಚುನಾವಣಾ ಕ್ಷೇತ್ರವಾಗಿ ಮಾಡಿ ಚುನಾವಣೆ ನಡೆಸುವುದು ಬಹಳ ಮುಖ್ಯ ಮತ್ತು ಬಹಳ ಪ್ರಯೋಜನಕಾರಿ ಎಂದು ಹೇಳಿ ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಈ ಮಸೂದೆಗೆ ನಾನು ಕೂಡ ಕೆಲವು ತಿದ್ದುಪಡಿಗಳನ್ನು ತರಬೇಕೆಂದು ಅಂದುಕೊಂಡಿದ್ದೆ. ಮೊನ್ನೆ ತಾವು ತೀರ್ಮಾನ ಮಾಡಿರುವ ಹಾಗೆ ಈ ಜಿಲ್ಲಾ ಬೋರ್ಡ್ ಆಕ್ಟಿನಲ್ಲಿ ಪ್ರತಿಯೊಂದು ತಾಲ್ಲೂಕಿಗೂ ಕೂಡ ಅಲ್ಲಿನ ಪ್ರಜಾಸಂಖ್ಯೆಗನುಗುಣವಾಗಿ ಸ್ಥಾನಗಳನ್ನು ಕೊಟ್ಟಿದ್ದೀರಿ. 25 ಸಾವಿರಕ್ಕೆ ಒಬ್ಬೊಬ್ಬ ಸದಸ್ಯನಂತೆ ಏರ್ಪಾಡು ಮಾಡಿ ಷೆಡ್ಯೂಲ್‌ನಲ್ಲಿ ನಮೂದುಮಾಡಿದ್ದೀರಿ. ಅದರಲ್ಲಿರುವ ಪ್ರಕಾರ ಪ್ರತಿಯೊಂದು ತಾಲ್ಲೂಕಿನಲ್ಲೂ ಕೂಡ ಪ್ಲೂರಲ್ ಮೆಂಬರ್ ಕಾನ್‌ಸ್ಟಿಟ್ಯುಯೆನ್ಸಿ ಇಟ್ಟುಕೊಂಡು ಚುನಾವಣೆ ನಡೆಸುವುದು ಎಂದು ಮಾಡಿದೆ. ಆ ಸದಸ್ಯರ ಸಂಖ್ಯೆ 3ಕ್ಕೆ ಹೆಚ್ಚಾಗದಂತೆ ಮಾಡಬೇಕೆಂದು ಅದರಲ್ಲಿ ಹೇಳಿದ್ದೀರಿ. ಇದರಿಂದ ಬಹಳ ತೊಂದರೆಯಾಗುತ್ತದೆ. ಕೆಲವು ತಾಲ್ಲೂಕುಗಳು ಇವೆ. ಆ ತಾಲ್ಲೂಕುಗಳಲ್ಲಿ ಒಂದು ಲಕ್ಷ ಒಂದೂವರೆ ಲಕ್ಷ ಪ್ರಜಾಸಂಖ್ಯೆ ಇರುತ್ತದೆ. ಇನ್ನೂ ಕೆಲವು ತಾಲ್ಲೂಕುಗಳಲ್ಲಿ 40 ಸಾವಿರ, 50 ಸಾವಿರ, 75 ಸಾವಿರ ಪ್ರಜಾಸಂಖ್ಯೆ ಇರುತ್ತದೆ. ಆದ್ದರಿಂದ $1—1\frac{1}{2}$ ಲಕ್ಷ ಪ್ರಜಾಸಂಖ್ಯೆ ಇರತಕ್ಕ ಕೆಲವು ತಾಲ್ಲೂಕುಗಳಿಗೆ ಕೇವಲ 3 ಸ್ಥಾನಗಳನ್ನು ಕೊಟ್ಟು 50—60—70 ಸಾವಿರ ಪ್ರಜಾಸಂಖ್ಯೆ ಇರತಕ್ಕ ತಾಲ್ಲೂಕುಗಳಿಗೂ 3 ಸ್ಥಾನಗಳನ್ನು ಕೊಡುವುದರಿಂದ ಇದು ಪ್ರಜಾಪ್ರಭುತ್ವ ತತ್ವಕ್ಕೂ ಕೂಡ ವಿರೋಧವಾಗುತ್ತದೆ. ಇದು ಚೆನ್ನಾಗಿಲ್ಲ. ಆದ್ದರಿಂದ ಇದನ್ನು ಸೂಕ್ತವಾಗಿ ಬದಲಾವಣೆ ಮಾಡಬೇಕು. ಕೆಲವು ಸದಸ್ಯರು ಈ ಜಿಲ್ಲಾ ಬೋರ್ಡುಗಳಲ್ಲಿ ಬಹಳ ಜನ ಸದಸ್ಯರಾಗಿ ಬಿಟ್ಟರೆ ಕೆಲಸಕಾರ್ಯ ನಡೆಯುವುದೇ ಕಷ್ಟ, ಅಥವಾ ಅದು ಬಹು unwieldy ಆಗುತ್ತದೆ ಎಂದು ಅಭಿಪ್ರಾಯಪಟ್ಟ ಹಾಗೆ ಕಾಣುತ್ತದೆ. ಆದರೆ ಈ ಪರಿಶಿಷ್ಟದಲ್ಲಿ ಕೊಟ್ಟಿರತಕ್ಕ ಸಂಖ್ಯೆಯನ್ನು ನೋಡಿದರೆ ಅದೇನೂ ಅಷ್ಟು ಹೆಚ್ಚಾಗಿ ಕಾಣುವುದಿಲ್ಲ. ಹಿಂದಿನ ಜಿಲ್ಲಾ ಬೋರ್ಡುಗಳ ಸಂಖ್ಯೆ ಎಷ್ಟಿತ್ತೋ ಅಷ್ಟೇ ಈಗಲೂ ಸ್ವಲ್ಪ ಹೆಚ್ಚು ಕಡಿಮೆ ಇದೆ. ಕೋಲಾರ ಜಿಲ್ಲೆಯಲ್ಲಿ ಹೇಳುವುದಾದರೆ ಮೊದಲು 32 ಇತ್ತು. ಈಗ 34 ಆಗಿದೆ. ಒಟ್ಟಿನಲ್ಲಿ 25 ಸಾವಿರಕ್ಕೆ ಒಬ್ಬರಂತೆ ಮಾಡುವುದು ಒಳ್ಳೆಯದಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

ಈ ಜಿಲ್ಲಾ ಬೋರ್ಡುಗಳಿಗೆ ಕಂದಾಯದ ಶೇಕಡ $12\frac{1}{2}$ ಭಾಗದ ಪೈಕಿ $6\frac{1}{4}$ ಭಾಗ ಮಾತ್ರ ಕೊಡಬೇಕೆಂದು ಮಾಡಿದ್ದೀರಿ. ಬಾಕಿಯದನ್ನು ತಾಲ್ಲೂಕು ಸಲಹಾ ಕಮಿಟಿಗಳಿಗೆ ಕೊಡಲಾಗುತ್ತದೆ ಎಂಬ ಉದ್ದೇಶವನ್ನು ಮಾನ್ಯ ರೆವಿನ್ಯೂ ಮಂತ್ರಿಗಳು ಹೇಳಿದ್ದಾರೆ. ಉದ್ದೇಶವೇನೋ ಒಳ್ಳೆಯದೇ. ಆದರೆ ಅದನ್ನು ಈ ಕಾನೂನಿನಲ್ಲಿ ನಮೂದು ಮಾಡಿಲ್ಲ. ಕೇವಲ ಒಂದು ಭರವಸೆಯನ್ನು ಕೊಡುವುದು ಅಷ್ಟಾಗಿ ಉತ್ತಮವಾಗುವುದಿಲ್ಲ. ಆ ರೀತಿ ಹೇಳಿದಂತೆ ಇದರಲ್ಲಿ ನಮೂದು ಮಾಡಿದ್ದರೆ ನಮ್ಮ ಸ್ನೇಹಿತರೆಲ್ಲರೂ ಒಪ್ಪಿಕೊಳ್ಳುತ್ತಾ ಇದ್ದರು ಎಂದು ಕಾಣುತ್ತದೆ. ಈ ಜಿಲ್ಲಾ ಬೋರ್ಡುಗಳು ಕೆಲಸ ಮಾಡುವಾಗ, ಆಸ್ಪತ್ರೆ, ರಸ್ತೆಗಳು ಮುಂತಾದ ದೊಡ್ಡ ದೊಡ್ಡ ಕೆಲಸಗಳನ್ನು ಮಾಡಬೇಕಾಗುತ್ತದೆ. ಹಣದ ಕೊರತೆ ಉಂಟಾದಲ್ಲಿ ಜನಸಾಮಾನ್ಯರಿಗೆ ಹೆಚ್ಚಿನ ಸೌಕರ್ಯ ಮಾಡಿಕೊಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಈ 6 ಲಕ್ಷ ಚಿಲ್ಲರೆ ರೂಪಾಯಿಗಳನ್ನು ತಾಲ್ಲೂಕು ಸಲಹಾ ಕಮಿಟಿಗಳಿಗೆ ಹಂಚುವುದಾದರೆ 10 ಜಿಲ್ಲೆಗಳಿಗೆ ಸ್ವಲ್ಪ ಹೆಚ್ಚುಕಡಿಮೆ 1 ಲಕ್ಷಕ್ಕೂ ಕಡಿಮೆ ಹಣ ಬರುತ್ತದೆ. ಆದ್ದರಿಂದ ನನ್ನ ಸೂಚನೆ ಏನೆಂದರೆ ಜಿಲ್ಲಾ ಬೋರ್ಡಿನಿಂದ ಶೇಕಡ $6\frac{1}{4}$ ರಷ್ಟು ಹಣವನ್ನು ತೆಗೆದು ತಾಲ್ಲೂಕುಗಳಿಗೆ ಕೊಡುವ ಉದ್ದೇಶ ಇದೆ ಎಂದು ಹೇಳಿ ನಮೂದಿಸಿ ಸೂಕ್ತ ಬದಲಾವಣೆ ಮಾಡಿದರೆ ಸಾಕು. ಇಷ್ಟು ಹೇಳಿ ಈ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ.

ಶ್ರೀ ಕೆ. ಪಟ್ಟಾಭಿರಾಮನ್ (ಕೋಲಾರ).—ಮಾನ್ಯ ಸಭಾಪತಿಗಳೇ, ಪ್ರಾಯಶಃ ಈ ಜಿಲ್ಲಾ ಬೋರ್ಡುಗಳ ಭವಿಷ್ಯದ ಬಗ್ಗೆ ಈ ಸರ್ಕಾರ ಅಥವಾ ಮಂತ್ರಿಮಂಡಲ ರಚನೆ ಆದಾಗಿನಿಂದ ಒಂದಲ್ಲ ಒಂದು ರೀತಿಯಲ್ಲಿ ಒಂದು ವಿಷಾದ ಘಟನೆಗಳ ಹಾವಳಿಯೇ ನಡೆದುಕೊಂಡು ಬಂದಿದೆ ಎಂದು ಹೇಳಿದರೆ ಅದು ಅತ್ಯುಕ್ತಿ ಆಗಲಾರದು., ಪ್ರಾಯಶಃ ಈ ರೀತಿಯಾಗಿ ಈ ಜಿಲ್ಲಾ ಬೋರ್ಡುಗಳಿಗೆ ಸಂಬಂಧಪಟ್ಟ ಹಾಗೆ ಈ ಮೂರು ವರ್ಷಗಳಿಂದ ಒಂದು ಸನ್ನಿವೇಶವನ್ನು ಅನೇಕ ಸಾರಿ ಉಪಯೋಗಿಸಿಕೊಂಡು ನನ್ನ ಅಭಿಪ್ರಾಯಗಳನ್ನು ಈ ಮಾನ್ಯ ಸಭೆಯ ಮುಂದೆ ಇಟ್ಟಿರುವುದರಿಂದ ಪುನರುಕ್ತಿ ದೋಷಕ್ಕೆ ಪಾತ್ರನಾಗುತ್ತೇನೆಯೋ ಏನೋ ಎಂಬ ಅಂಶ ನನ್ನ ಮನಸ್ಸಿಗೆ ಬರುತ್ತಿರುವುದರಿಂದ ಇದನ್ನು ಹೆಚ್ಚು ವಿಳಂಬಮಾಡಲು ಪ್ರಯತ್ನಪಡುವುದಿಲ್ಲ. ಇಷ್ಟು ಮಾತ್ರ ಹೇಳಬಲ್ಲೆ. ಈ ಮಸೂದೆಯನ್ನು ಈ ಸಭೆಯ ಮುಂದೆ ಇಟ್ಟ ಇದಕ್ಕೆ ತೀರ ವಿರೋಧವಾದ ಒಂದು ಮಾತನ್ನು ಮಾನ್ಯ ಸದಸ್ಯರುಗಳು ಹೇಳಿದರು. ನನ್ನ ಅಭಿಪ್ರಾಯವನ್ನು ಹೊರಪಡಿಸುತ್ತ ಎರಡು ಮಾತುಗಳನ್ನು ಹೇಳಲು ಇಚ್ಛಿಸುತ್ತೇನೆ. ಇದರೊಳಗೆ ಹೆಚ್ಚಿನ ಒಂದು ಅವಕಾಶವಿದ್ದರೂ ಕೂಡ ಸರ್ಕಾರದವರು ಏಕೋ ಏನೋ ಒಂದು ಕಾರಣ ಇಟ್ಟುಕೊಂಡು ಹಿಂದೂ ಮುಂದೂ ನೋಡುತ್ತಾ ಮಂದಗಮನದಿಂದ ಹೋಗುತ್ತಾ ಇದ್ದಾರಲ್ಲಾ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಎರಡನೆಯ ಮಾತು ಸ್ವಲ್ಪ ಅಧಿಕಪ್ರಸಂಗತನವಾಗುತ್ತದೆಯೋ ಏನೋ ಆದರೂ ಹೇಳಬೇಕೆಂದು ಆಶೆಪಡುತ್ತೇನೆ. ಈ ಮಸೂದೆಯಲ್ಲಿರತಕ್ಕ ಬೇರೆ ಬೇರೆ ಅಂಶಗಳನ್ನು ನೋಡಿದರೆ ಇದು ಪಾರ್ಟಿ ದೃಷ್ಟಿಯಲ್ಲಿ, ಪಕ್ಷದ ಹಿತದೃಷ್ಟಿಯಲ್ಲಿ, ಅದನ್ನೇ ಒಂದು ಪ್ರಾಮುಖ್ಯವಾಗಿ ಮನಸ್ಸಿನಲ್ಲಿಟ್ಟುಕೊಂಡು ಮಾಡಿದಂತೆ ಇದೆ. ಇಂಥಾ ಒಂದು ಮಸೂದೆಯನ್ನು ತಂದು ದೇಶಕ್ಕೆ ಅನ್ಯಾಯ ಮಾಡಿದಂತಾಗಿದೆ ಎಂದು ಹೇಳಿದರೆ ನನ್ನ ಅಭಿಪ್ರಾಯಗಳೆಲ್ಲವನ್ನೂ ಕೂಡ ಆ ಒಂದು ಮಾತಿನಲ್ಲಿ ಹೇಳಿದಂತಾಗುತ್ತದೆ ಎಂದು ಹೇಳಿ ಅದನ್ನು ಅಲ್ಲಿಗೆ ಬಿಟ್ಟುಬಿಡುತ್ತೇನೆ. ಈ ಜಿಲ್ಲಾ ಬೋರ್ಡುಗಳ ಮಸೂದೆಯ ಮೇಲೆ ಈಗ ಚರ್ಚೆ ಆಗುತ್ತಾ ಇರತಕ್ಕ ಸಂದರ್ಭದಲ್ಲಿ ಇಲ್ಲಿಗತಕ್ಕ ಬೇರೆ ಬೇರೆ ಅಂಶಗಳ ಬಗ್ಗೆ ದೀರ್ಘವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಒಂದೆರಡು ವಿಚಾರ ಮಾತ್ರ ತಮ್ಮ ಗಮನಕ್ಕೆ ತರಬೇಕೆಂದು ಆಶೆಪಡುತ್ತೇನೆ. ಮುಖ್ಯವಾಗಿ ಶ್ರೀ ಭೀಮಪ್ಪ ನಾಯಕರು ಹೇಳಿದಂಥಾ ಅನೇಕ ಅಭಿಪ್ರಾಯಗಳನ್ನು ನಾನು ಅನುಮೋದಿಸುತ್ತೇನೆ. ಅದನ್ನು ಒತ್ತಿ ಹೇಳಬೇಕು ಎನ್ನುವುದೇ ನನ್ನ ಮುಖ್ಯ ಉದ್ದೇಶ. ಈ ಮಸೂದೆಯಲ್ಲಿ ತಾಲ್ಲೂಕಿಗೆ ಮೂರಕ್ಕೆ ಹೆಚ್ಚಿಲ್ಲದಂತೆ ಸದಸ್ಯರನ್ನು ಆರಿಸಬೇಕೆಂದು ಹೇಳಿದ್ದೀರಿ.

ಏತಕ್ಕಾಗಿ ಈ ದಿವಸ ತಾವು ಹೀಗೆ ವಿರೋಧವಾಗಿ ಮಾತನಾಡುತ್ತಿದ್ದೀರಿ ಮತ್ತು ತಾವು ಏತಕ್ಕಾಗಿ ಯಾವ ಪ್ರತಿಯೊಂದು ಬಾಬಿಗೂ ಹೀಗೆ ಹಿಂದು ಹಿಂದಕ್ಕೆ ಹೆಜ್ಜೆ ಇಟ್ಟುಕೊಂಡು ಹೋಗುತ್ತಾ ಇದ್ದೀರಿ ಅನ್ನುವುದು ನನಗೆ ಚೆನ್ನಾಗಿ ಅರ್ಥವಾಗುತ್ತಿದೆ. ಈ ಜಿಲ್ಲಾ ಬೋರ್ಡುಗಳ ರಚನೆ ಯಾವ ರೀತಿಯಾಗಿರಬೇಕು, ಇವುಗಳನ್ನು ಯಾವ ರೂಪದಲ್ಲಿ ರಚಿಸಬೇಕು, ಇವುಗಳ ವೈಶಿಷ್ಟ್ಯತೆ ಯಾವ ರೀತಿಯಾಗಿರಬೇಕು ಎನ್ನತಕ್ಕಂಥಾ ವಿಚಾರದಲ್ಲಿ ಸರ್ಕಾರದವರಿಗೆ ಒಂದು ಸ್ಪಷ್ಟವಾದಂಥ ಒಂದು ಖಚಿತವಾದಂಥ, ಒಂದು ನಿರ್ದಿಷ್ಟವಾದಂಥ ಅಭಿಪ್ರಾಯವಿರುವುದಿಲ್ಲ ಎನ್ನತಕ್ಕಂಥಾದ್ದನ್ನು ನಾನು ಧಾರಾಳವಾಗಿ ಹೇಳಬಲ್ಲೆ. ತಾವು ಈ ದಿವಸ ದೇಶದ ಮುಂದೆ ಇಡಲು ಉದ್ದೇಶಪಟ್ಟಿರತಕ್ಕಂಥ ಈ ಜಿಲ್ಲಾ ಬೋರ್ಡುಗಳ ಮಸೂದೆ ಎಲ್ಲರಿಗೂ ಅರ್ಥವಾಗುವಂತೆಯೂ ಕಾನೂನು ದೃಷ್ಟಿಯಲ್ಲಿ ಇತರ ದೇಶಗಳ ಕಾನೂನಿಗೆ ಒಂದು ಹೊಂದಾವಣಿಕೆಯಾಗಿರುವಂತೆಯೂ, ಪ್ರಗತಿ ಪರವನ್ನು ಸಾಧಿಸತಕ್ಕಂಥ ಒಂದು ವೈಶಿಷ್ಟ್ಯತೆಯಿಂದ ಈ ಮಸೂದೆ ಕೂಡಿಲ್ಲ ಎಂಬ ಅಂಶವನ್ನು ನಾನು ಬಹಳ ಖೇದ ಮನಸ್ಸಿನಿಂದ ನೊಂದುಕೊಂಡು ಹೇಳಬೇಕಾಗಿದೆ. ಈ ಮಸೂದೆಯನ್ನು ಒಂದು ಪ್ರಗತಿಪರವಾದ ರೀತಿಯಲ್ಲಿ ತರಲು ತಾವು ಹೆಜ್ಜೆ ಹೆಜ್ಜೆಗೂ ಹಿಂದಕ್ಕೂ ಮುಂದಕ್ಕೂ ನೋಡುತ್ತಿದ್ದೀರಿ. ಇದರ ಬಗ್ಗೆ ತಾವೀ ರೀತಿಯಾಗಿ ಮಾಡುತ್ತಿರುವುದು ಕೇವಲ ತಮ್ಮ ಒಂದು ಪಕ್ಷದ ಹಿತಕ್ಕಾಗಿಯೇ ಎಂದು ಹೇಳದೆ ವಿಧಿಯಿಲ್ಲ. ಈಗ ಸಭೆಯ ಮುಂದೆ ಚರ್ಚೆಗಾಗಿ ಬಂದಿರತಕ್ಕ ಈ ಮಸೂದೆಗೆ ಹಿನ್ನೆಲೆಯಾಗಿ ಎರಡು ವರದಿಗಳನ್ನು ಸರ್ಕಾರಕ್ಕೆ ಒಪ್ಪಿಸಲಾಗಿರುತ್ತದೆ. ಒಂದು ಶ್ರೀ ವಿ. ವೆಂಕಟಪ್ಪನವರ ಸಮಿತಿಯ ವರದಿ. ಮತ್ತೊಂದು ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರ ಸಮಿತಿಯ ವರದಿ. ಸರ್ಕಾರದವರು ತಾವು ಈ ಎರಡು ವರದಿಗಳನ್ನೂ ಒಂದೇ ಸಮನಾಗಿ ಕಂಡು, ಯಾವುದಕ್ಕೂ ಒಂದು ಪಕ್ಷಪಾತ ಭಾವನೆಯನ್ನು ತೋರಿಸದಂತೆ ತಾವು ಆ ಸಮಿತಿಗಳ ನಿರ್ಧಾರಗಳು ಏನೇ ಇರಲಿ ಅಂತೂ ಆ ಎರಡು ವರದಿಗಳಿಗೂ ಒಂದೇ ಬೆಲೆಯನ್ನು ಕೊಟ್ಟಿದ್ದೀರಿ. ಈ ಒಂದು ದೃಷ್ಟಿಯಿಂದಲಾದರೂ ತಾವು ಅವುಗಳ ಬೆಲೆಯೇನೆಂಬುದನ್ನು ಮೊದಲಿಸದೆ, ಎರಡಕ್ಕೂ ಒಂದೇ ರೀತಿಯಾಗಿ ತಮ್ಮ ಪೂರ್ಣ ಅಭಿಮಾನವನ್ನು ವ್ಯಕ್ತಪಡಿಸಿದ್ದೀರಿ. ಇಷ್ಟನ್ನಾದರೂ ತಾವು ಯಾವ ಒಂದು ಪಕ್ಷಪಾತವೂ ಇಲ್ಲದಂತೆ ಮಾಡಿದ್ದಕ್ಕಾಗಿ ದೇವರು ತಮ್ಮನ್ನು ಆಶೀರ್ವದಿಸಲಿ. ಆದರೆ ಈಗೇನು ಶ್ರೀ ಭೀಮಪ್ಪನಾಯಕರು ತಿಳಿಸಿರುತ್ತಾರೋ ಅದನ್ನು ನಾನು ಅಕ್ಷರಶಃ ಅನುಮೋದಿಸುತ್ತೇನೆ. ನನ್ನ ಅಭಿಪ್ರಾಯವೂ ಮತ್ತು

(ಶ್ರೀ ಕೆ. ಪಟ್ಟಾಭಿರಾಮನ್.)

ಅವರ ಅಭಿಪ್ರಾಯಗಳೂ ಎರಡೂ ಕೇವಲ ಹತ್ತಿರ ಹತ್ತಿರವಿರುವುದರಿಂದ ಈ ಬಗ್ಗೆ ನಾನೂ ಸಹ ಒಂದೆರಡು ಮಾತುಗಳನ್ನಾಡಲು ಅಪೇಕ್ಷೆಪಟ್ಟಿರುತ್ತೇನೆ. ಈಗ ನಾನು ಒಂದೆರಡು ಹೊಸ ವಿಚಾರಗಳನ್ನು ಸರ್ಕಾರದವರ ಗಮನಕ್ಕೆ ತರಬೇಕೆಂದಿದ್ದೇನೆ. ಈಗಾಗಲೇ ಮಾತನಾಡಿರತಕ್ಕಂಥ ಶ್ರೀ ಭೀಮಪ್ಪನಾಯಕರು ಇನ್ನು ಮುಂದೆ ರಚಿತವಾಗಲಿರುವ ಜಿಲ್ಲಾ ಬೋರ್ಡುಗಳು ಯಾವ ರೀತಿಯಾಗಿರಬೇಕು, ಅವುಗಳ ರೂಪರೇಖೆಗಳೇನು ಎಂಬ ವಿಚಾರಗಳನ್ನು ಪ್ರಸ್ತಾಪಮಾಡುತ್ತ ಇನ್ನು ಮುಂದೆ ರಚಿತವಾಗತಕ್ಕಂಥ ಈ ಜಿಲ್ಲಾ ಬೋರ್ಡುಗಳ ಬಗ್ಗೆ ತಾವು ಈ ರಾಜಕೀಯ ನೈಪುಣ್ಯತೆಯೇನಿದೆಯೋ ಅದಕ್ಕೆ ಹೆಚ್ಚಿನ ಅವಕಾಶವನ್ನು ಕೊಟ್ಟುಬಿಟ್ಟರೆ ಅದರಿಂದ ಏನೇನು ತೊಂದರೆಗಳು, ಏನೇನು ಅನಾಹುತಗಳಾಗುತ್ತವೆ ಮತ್ತು ಅದರಿಂದ ಹೇಗೆ ಈ ಸ್ಥಳೀಯ ಸಂಸ್ಥೆಗಳಿಗೆ ಸ್ವಾತಂತ್ರ್ಯವುಂಟಾಗುತ್ತದೆ ಎನ್ನುವುದನ್ನು ಅವರು ಬಹಳ ಚೆನ್ನಾಗಿ ಅವರವೇ ಆದಂಥಾ ಒಂದು ಶೈಲಿಯಲ್ಲಿ ಬಹಳ ವಿವರವಾಗಿ ತಿಳಿಸಿದ್ದಾರೆ. ಈ ಜಿಲ್ಲಾ ಬೋರ್ಡುಗಳು ಕೈಗೊಳ್ಳುವಂಥ ಕೆಲಸಕಾರ್ಯಗಳಾದರೂ ಯಾವುವು? ಒಂದು ರಸ್ತೆಯ ಕೆಲಸ, ಒಂದು ಕೆರೆ, ಒಂದು ಬಾವಿ, ಒಂದು ವೈದ್ಯಸಹಾಯ ಇತ್ಯಾದಿ ಕಾರ್ಯಗಳೇ ಆಗಿವೆ. ಇವರಲ್ಲಿ ಯಾವ ರಾಜಕೀಯವೂ ಇರುವುದಿಲ್ಲ. ಈ ಕೆಲಸಗಳೆಲ್ಲಾ ಸಾರ್ವಜನಿಕರ ಹಿತದೃಷ್ಟಿಯಿಂದ ನಡೆಸಲ್ಪಡತಕ್ಕವುಗಳಾಗಿವೆ. ಆದರೆ ಹಾಗೆ ಇದರಲ್ಲಿ ಯಾವ ಒಂದು ರಾಜಕೀಯ ಕೈವಾಡಕ್ಕೂ ಅವಕಾಶವಿಲ್ಲದೆ ಇದ್ದಾಗ್ಯೂ ತಾವು ಕೇವಲ ತಮ್ಮ ಒಂದು ಪಕ್ಷದ ಬೆಂಬಲಕ್ಕಾಗಿ, ತಮ್ಮ ಪಕ್ಷದ ಉಮೇದುವಾರರುಗಳಿಗೆ ಒಂದು ಸ್ಥಾನವನ್ನು ಕಲ್ಪಿಸಿಕೊಡಬೇಕೆಂಬ ದೃಷ್ಟಿಯಿಂದ ಈ ರೀತಿಯಾಗಿ ಮಾಡಿರುತ್ತೀರಿ ಈ ಜಿಲ್ಲಾ ಬೋರ್ಡಿನ ಸದಸ್ಯತ್ವಕ್ಕೆ ಇಂಥಾ ರಾಜಕೀಯ ನಿಪುಣರು ಬೇಕಾಗಿಲ್ಲ. ಈ ಕೆಲಸಕ್ಕೆ ಬೇಕಾಗಿರುವಂಥ ಜನರು ಯಾರೆಂದರೆ ಯಾರು ಯೋಗ್ಯರಾಗಿರುತ್ತಾರೋ ಯಾರು ಜನಾನುರಾಗಿಗಳಾಗಿರುತ್ತಾರೋ ಯಾರು ತಮ್ಮ ಒಂದು ನಿಸ್ವಾರ್ಥಸೇವೆಯನ್ನು ಈ ಜಿಲ್ಲಾ ಬೋರ್ಡುಗಳ ಏಳಿಗೆಗಾಗಿ ಸಲ್ಲಿಸುತ್ತಾರೋ, ಯಾರು ಸದಾ ಜನರ ಹಿತವನ್ನೇ ಕೋರುತ್ತಿರುತ್ತಾರೋ ಅಂಥವರಿಗಾಗಿ ಈ ಸ್ಥಾನಗಳನ್ನು ಮುಡುಪಾಗಿಡಬೇಕು. ಇಂಥ ಉಮೇದುವಾರರನ್ನೇ ನೋಡಿ ಆರಿಸಿ ಚುನಾವಣೆಮಾಡಬೇಕಾಗಿದೆಯೇ ಹೊರತು ಇದರಲ್ಲಿ ನಾವು ಈ ಒಂದು ರಾಜಕೀಯ ಗೊಂದಲವನ್ನು ತಂದು ಹಾಕಬಾರದು ಎಂದು ನಾನು ಇಲ್ಲಿಗೆ ಮೂರು ವರ್ಷಗಳಿಂದಲೂ ಒಂದೇ ಸಮನಾಗಿ ವಾದಿಸುತ್ತಾ ಬಂದಿದ್ದೇನೆ. ಈಗ ತಾವು ಪ್ರತಿಯೊಂದು ತಾಲ್ಲೂಕಿನಿಂದಲೂ ಮೂರು ಮೂರು ಜನಗಳನ್ನು ಚುನಾವಣೆಗೆ ನಿಲ್ಲಿಸಬೇಕೆಂದು ಹೇಳಿದ್ದೀರಿ. ಹೀಗೆ ಜನರು ಚುನಾವಣೆಗೆ ನಿಂತರೆ ಇದರ ಪರಿಣಾಮವೇನಾಗುತ್ತದೆಂಬುದು ತಮಗೆಲ್ಲರಿಗೂ ಗೊತ್ತಿರುವುದೇ ಆಗಿದೆ. ಈ ದಿವಸ ಯಾವುದಾದರೂ ಹತ್ತು ಜನರು ಚುನಾವಣೆಯಾಗಿ ಬರತಕ್ಕಂಥ ಒಂದು ಮೈನರ್ ಮುನಿಸಿಪಾಲಿಟಿಯ ವಿಚಾರವನ್ನೇ ತೆಗೆದುಕೊಳ್ಳೋಣ. ಹಾಗೆ ಕೇವಲ ಹತ್ತು ಜನರು ಚುನಾವಣೆಯಾಗಿ ಬರಬೇಕಾಗಿರುವಂಥ ಸ್ಥಾನಗಳಿಗೆ ಈ ದಿವಸ 10, 15, 20 ಜನಗಳು ಚುನಾವಣೆಗೆ ನಿಲ್ಲುವುದು ಕಂಡುಬರುತ್ತಾ ಇದೆ. ಇದರಿಂದ ಕೆಲವರಿಗೆ ಹೆಚ್ಚಿನ ಒಂದು ಸಂಖ್ಯಾಬಲದ ಬೆಂಬಲವಿದ್ದಾಗ್ಯೂ ಅವರು ಚುನಾವಣೆಗಳಲ್ಲಿ ಜಯಶೀಲರಾಗಿ ಬರುವುದಕ್ಕೆ ಅವಕಾಶವಿಲ್ಲದೆ ಕೇವಲ ಕಮ್ಮಿ ಸಂಖ್ಯಾಬಲದ ಜನರು ಚುನಾವಣೆಯಾಗಿ ಬರುತ್ತಿರುವಂಥಾ ನಿದರ್ಶನವನ್ನು ನಾವು ನೋಡುತ್ತಿದ್ದೇವೆ. ಈ ವಿಚಾರವನ್ನು ಕೂಡ ನಾನು ಹೇಳುತ್ತಿಲ್ಲ. ಇದನ್ನು ನಿಮ್ಮ ಪಾರ್ಟಿಗೆ ಸೇರಿರತಕ್ಕಂಥ ಶ್ರೀ ಭೀಮಪ್ಪನಾಯಕರೇ ಹೇಳಿದ್ದಾರೆ. ನಾನು ಈ ಬಗ್ಗೆ ಇಷ್ಟು ವರ್ಷಗಳಿಂದಲೂ ಪ್ರಯತ್ನಪಟ್ಟಿದ್ದೆಲ್ಲಾ ನೀರಿನಲ್ಲಿ ಹೋಮಮಾಡಿದಂತಾಯಿತು. ಆದರೆ ಇಂಗ್ಲೀಷಿನಲ್ಲಿ ಒಂದು ಮಾತನ್ನು ಹೇಳುತ್ತಾರೆ. A man who is going down deep in waters will try to catch the last straw ಎಂದು ಹೇಳುತ್ತಾರಲ್ಲ ಹಾಗೆಯೇ ಈ ದಿವಸ ನನ್ನ ಗತಿ ಸಹ ಆಗಿರುತ್ತೆಂದು ನಾನು ಹೇಳವೆ ವಿಧಿಯಿಲ್ಲ. ನಾನೀದಿವಸ ಆ last straw ಹಿಡಿದುಕೊಂಡಂತೆ ಶ್ರೀ ಭೀಮಪ್ಪನಾಯಕರನ್ನು ಹಿಡಿದುಕೊಂಡು ಮುಂದಕ್ಕೆ ಹೋಗಬೇಕಾಗಿದೆ. ಈ ರೀತಿಯಾಗಿ ಮನಸ್ಸುಮಾಡಿಕೊಂಡಿದ್ದೇನೆ. ಆದರೆ ಇದೂ ಕೂಡ ನನ್ನ ಒಂದು ಅದೃಷ್ಟವೆಂದೇ ಹೇಳಬೇಕಾಗಿದೆ. ಆದರೆ ಈಗ ನನ್ನ ಆಶ್ರಯಕ್ಕೆ ಸಿಕ್ಕಿರುವಂಥ ಮಾನ್ಯ ಸದಸ್ಯರು last straw ಇದ್ದ ಹಾಗೇನೂ ಅಲ್ಲ. ಅವರು ನನಗೆ ಒಂದು ದೊಡ್ಡ ಪರ್ವತವೇ ಸಿಕ್ಕಿದಹಾಗೆ ಸಿಕ್ಕಿದ್ದಾರೆ. ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ಭೀಮಪ್ಪನಾಯಕರು ಹೇಳಿರುವ ಪ್ರಕಾರ ಈ ಮೂರು ಜನರನ್ನು ವಿಂಗಡಣೆಮಾಡಿ ಇವರಿಗೆ ಒಂದು ತಾಲ್ಲೂಕನ್ನು ಒಂದು ಚುನಾವಣಾಕ್ಷೇತ್ರವನ್ನಾಗಿ ವಿಂಗಡಣೆ ಮಾಡಿರತಕ್ಕದ್ದು ಸರಿಯಲ್ಲ. ಇದಕ್ಕೆ ಬದಲಾಗಿ ಅವರು ಒಂದೆರಡು ಹೋಬಳಿಗಳನ್ನು ಒಂದಾಗಿ ಸೇರಿಸಿ ಒಂದು ಚುನಾವಣೆಕ್ಷೇತ್ರ ಎಂತಲಾದರೂ ಮಾಡಿ ಎಂಬುದಾಗಿ ಹೇಳಿದ್ದಾರೆ. ಆದುದರಿಂದ ಪುನಃ ನಾನೂ ಕೂಡ ಅದನ್ನೇ ಮತ್ತೆ ಹೇಳಿದರೆ ಅದು ಚೆನ್ನಾಗಿರುವುದಿಲ್ಲ. ಈ ಸಂದರ್ಭದಲ್ಲೇ ನಾನೂ ಕೂಡ ಒಂದೆರಡು ಮಾತುಗಳನ್ನು ಆಡಬೇಕೆಂದಿದ್ದೇನೆ. ಯಾವಾಗಲೂ ಈ ಚುನಾವಣೆಕ್ಷೇತ್ರಕ್ಕೂ ಮತ್ತು ಚುನಾಯಿಸಲ್ಪಡತಕ್ಕಂಥ ಉಮೇದುವಾರನಿಗೂ ಬಹಳ ನಿಕಟವಾದಂಥ ಒಂದು ಸಂಪರ್ಕವಿರಬೇಕು, ಬಾಂಧವ್ಯ ಇರಬೇಕು. ಅವರವರಿಗೆ ಅಷ್ಟು ಪ್ರೀತಿ ವಿಶ್ವಾಸಗಳಿರಬೇಕು ಅನ್ನುವುದು ಒಂದು ಪ್ರಜಾಪ್ರಭುತ್ವ ನೀತಿಯಲ್ಲಿ ಅಡಕವಾಗಿರುವಂಥ ತತ್ವ ಮತ್ತು ಒಂದು ದೊಡ್ಡ ಸಿದ್ಧಾಂತ. ಯಾವಾಗಲೂ ಈ ಒಂದು ಚುನಾವಣೆಕ್ಷೇತ್ರ ದೊಡ್ಡದಾದಷ್ಟೂ ಈ ನಿಕಟಸಂಪರ್ಕ ಮತ್ತು ಬಾಂಧವ್ಯಗಳು ದಿನ ದಿನಕ್ಕೂ ಕಮ್ಮಿಯಾಗುತ್ತಾ ಹೋಗುತ್ತದೆ. ಇನ್ನು ಈ ಚುನಾವಣೆಯ ಸಂಬಂಧದಲ್ಲಿ ಆಗಬಹುದಾದಂಥ ಖರ್ಚು ವೆಚ್ಚಗಳೂ ಕೂಡ ಪೂರಾ ಅಧಿಕವಾಗುತ್ತವೆ. ಜನರೆಲ್ಲರ ಅಂದರೆ ಅಷ್ಟೊಂದು ಅಗಾಧವಾದ ಪ್ರದೇಶದಲ್ಲಿರತಕ್ಕಂಥ ಜನರ ಬಾಂಧವ್ಯ ಬೆಳೆಸಲು ಬಹಳ ಕಷ್ಟವಾಗುತ್ತದೆ. ಆದರೆ ಈ ಚುನಾವಣಾಕ್ಷೇತ್ರದ ವ್ಯಾಪ್ತಿ ಕಡಮೆಯಾದಷ್ಟೂ ಈ ನಿಕಟ ಸಂಬಂಧ ಮತ್ತು ಬಾಂಧವ್ಯಗಳು ಹೆಚ್ಚಾಗುತ್ತವೆ. ಅಂದರೆ ಹೀಗೆ ಈ ಚುನಾವಣೆಕ್ಷೇತ್ರಗಳು ದೊಡ್ಡದಾದ ಹಾಗೆಲ್ಲಾ ಜನರಲ್ಲಿ ಸಂಬಂಧ ಕಮ್ಮಿಯಾಗುತ್ತಾ ಹೋಗುತ್ತದೆ. ಈ ದಿವಸ ತಾವು ಪ್ರತಿಯೊಂದು ತಾಲ್ಲೂಕನ್ನೂ ಒಂದೊಂದು ಚುನಾವಣಾಕ್ಷೇತ್ರವನ್ನಾಗಿ ಮಾಡಿ ಮೂರು ಜನಗಳಿಗೆ ಚುನಾಯಿತರಾಗಿ ಬರಲು ಅವಕಾಶವಿದೆಯೆಂದು ಹೇಳಿದ್ದೀರಿ. ಇದರಿಂದ ಕೇವಲ ಒಂದು ರಾಜಕೀಯ ಪಕ್ಷಕ್ಕೆ ಬೆಂಬಲ ನೀಡಬೇಕೆಂಬ ದೃಷ್ಟಿ ಕಾಣುತ್ತಿದೆಯೇ ಹೊರತು ಪ್ರಜಾ ಬೆಂಬಲಿಗರಿಗೆ ಮತ್ತು ಸ್ಥಳದಲ್ಲಿರತಕ್ಕಂಥ ಯೋಗ್ಯ ಜನಗಳಿಗೆ ಅವಕಾಶ ಕೊಟ್ಟಹಾಗೆ ಕಂಡುಬರುವುದಿಲ್ಲ. ಇಷ್ಟೇ ಅಲ್ಲದೆ ಹೀಗೆ ಚುನಾವಣೆಕ್ಷೇತ್ರಗಳನ್ನು ದೊಡ್ಡ

ದನ್ನಾಗಿ ಮಾಡುತ್ತಾ ಹೋದರೆ ಆಗ ಆ ಪ್ರದೇಶದಲ್ಲಿ ಯಾರು ಯೋಗ್ಯರು, ಯಾರು ಪ್ರಜಾ ಹಿತೈಷಿಗಳು, ಯಾರು ಜನಾನುರಾಗಿಗಳು, ಯಾರು ನಿಷ್ಪಕ್ಷಪಾತವಾದ ರೀತಿಯಲ್ಲಿ ಪ್ರಜಾಸೇವೆ ನಡೆಸಬಲ್ಲರು, ಎನ್ನುವುದನ್ನು ಕಂಡುಹಿಡಿಯಲು ತುಂಬ ತೊಡಕುಗಳುಂಟಾಗುತ್ತವೆ. ಹೀಗೆ ಈ ಚುನಾವಣೆಗಳ ನಾನಾ ತೊಡುಕುಗಳ ಬಗ್ಗೆ ಇದೂ ಒಂದು ದೊಡ್ಡ ಕಾರಣವಾಗಿದೆ. ಆದರೆ ಈ ವಿಚಾರವನ್ನು ನಾನಿನ್ನೂ ಲಂಬಿಸಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಈಗಾಗಲೇ ಶ್ರೀ ಭೀಮಪ್ಪನಾಯಕರು ಏನು ಹೇಳಿದ್ದಾರೋ ಅದನ್ನು ಮಾನ್ಯ ಮಂತ್ರಿಗಳು ಕಾರ್ಯಗತಮಾಡುತ್ತಾರೆಂದು ನಾನು ಭಾವಿಸಿದ್ದೇನೆ. ಈ ಚುನಾವಣೆಗಳು ಯಾವ ರೀತಿಯಾಗಿ ಆಗಬೇಕೆಂಬ ಬಗ್ಗೆ ನಾನೀಗ ತಮಗೆ ಕೆಲವು ಸಲಹೆಗಳನ್ನು ಕೊಡಬೇಕೆಂದಿದ್ದೇನೆ. ಈಗ ತಮ್ಮ ಮಸೂದೆಯಲ್ಲಿ ಹೇಳಿರುವ ಪ್ರಕಾರ ಮುನಿಸಿಪಲ್ ಪ್ರದೇಶ ಒಂದನ್ನು ಬಿಟ್ಟು ತಾಲ್ಲೂಕಿನಲ್ಲಿ ಉಮೇದುವಾರನಾಗಿ ನಿಲ್ಲತಕ್ಕಂಥ ಮನುಷ್ಯನು ಎಲ್ಲಿಯಾದರೂ ವಾಸವಾಗಿರಲಿ ಆತನಿಗೆ ಯಾವ ತಾಲ್ಲೂಕಿನಲ್ಲಿ ಬೇಕಾಗಿದ್ದರೂ ಈ ಚುನಾವಣೆಗಳಿಗೆ ನಿಲ್ಲಬಹುದು ಎಂದು ಹೇಳುವ ಒಂದು ಅಧಿಕಾರವನ್ನು ಈಗ ಈ ಮಸೂದೆಯಲ್ಲಿ ತಾವು ಕೊಟ್ಟಿದ್ದೀರಿ. ಇದನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ.—ಇದನ್ನೆಲ್ಲಾ ನಾವೇನೂ ಮಾಡಿಲ್ಲ.

ಶ್ರೀ ಕೆ. ಪಟ್ಟಾಭಿರಾಮ್.—ಹೌದು, ನೀವು ತಂದಿಲ್ಲ. ಆದರೆ ನೀವು ಒಂದು ಸೂಕ್ತ ತಿದ್ದುಪಡಿಯನ್ನು ಬಗ್ಗೆ ತರಬೇಕಾಗಿತ್ತು. ಈಗ ಮುನಿಸಿಪಲ್ ಇದರ ಅಥವಾ ಕಾರ್ಪೊರೇಷನ್ ಆಕ್ಟುಗಳನ್ನೇ ತೆಗೆದುಕೊಳ್ಳೋಣ. ಅಲ್ಲಿ ತಾವು ಉಮೇದುವಾರರಾಗಿ ನಿಲ್ಲುವಂಥ ಅವಕಾಶವನ್ನೇನಿದ್ದರೂ ಕೇವಲ ಆ ಸಂಬಂಧಪಟ್ಟ ಸರಹದ್ದಿನೊಳಗಿರತಕ್ಕವರಿಗೆ ಮಾತ್ರ ಕೊಟ್ಟಿದ್ದೀರೇ ಹೊರತು ಅನ್ಯರಿಗೆ ಆ ಅವಕಾಶವಿಲ್ಲ. ಅದರಂತೆಯೇ ತಾವೀಗ ಈ ಮುನಿಸಿಪಲ್ ಸರಹದ್ದಿನೊಳಗಿರುವಂಥ ಯಾವ ಒಬ್ಬ ಮನುಷ್ಯನಾಗಲೀ ಒಂದು ಹಳ್ಳಿಗೆ ಹೋಗಿ ಪಂಚಾಯಿತಿ ಚುನಾವಣೆಗೆ ನಿಲ್ಲುವುದಕ್ಕೆ ಅವಕಾಶವಿಲ್ಲ ಎಂದು ಹೇಳಿದ್ದೀರಿ. ತಮಗೆ ನಿಜವಾಗಿಯೂ ಅಂಥ ಒಂದು ಪ್ರಗತಿಪರವಾದ ರೀತಿಯಲ್ಲಿ ಈ ಸ್ಥಳೀಯ ಸಂಸ್ಥೆಗಳ ವಿಚಾರದಲ್ಲಿ ಒಂದು ಹೆಜ್ಜೆ ಮುಂದೆಹಾಕಬೇಕೆಂಬ ಆಕಾಂಕ್ಷೆ ಇರುವುದಾದರೆ ತಾವು ಈ ಟೌನ್ ಪ್ರದೇಶದಲ್ಲಿರುವ ಜನಗಳಿಗೆ ಇದರಲ್ಲಿ ಯಾವ ಪ್ರಾಬಲ್ಯವನ್ನೂ ಕೊಡಬಾರದು... .....

ಶ್ರೀ ಎ. ಭೀಮಪ್ಪನಾಯಕ್.—ಟೌನ್ ಪ್ರದೇಶದಲ್ಲಿರತಕ್ಕಂಥವರಿಗೆ ಇದರಲ್ಲಿ ಕೈಹಾಕಲು ಅವಕಾಶವಿರಬಾರದು. ಇದನ್ನು ತಪ್ಪಿಸಿ ಎಂದು ಹೇಳಿದೆ.

ಶ್ರೀ ಕೆ. ಪಟ್ಟಾಭಿರಾಮ್.—ಈಗ ನಾನೂ ಮತ್ತು ಅವರೂ ಇಬ್ಬರೂ ಬಹಳ ಹತ್ತಿರ ಹತ್ತಿರವಾಗಿ ಹೋಗುತ್ತಿದ್ದೇವೆ. ಈ ಜಿಲ್ಲಾಬೋರ್ಡುಗಳ ಚುನಾವಣೆಗೆ ಬಹಳ ಅಧಿಕ ಸಂಖ್ಯೆಯಲ್ಲಿ ಆ ಹಳ್ಳಿಗಾಡಿನ ಜನರು ಮಾತ್ರ ನಿಲ್ಲಲು ಅರ್ಹರಾಗಿರುತ್ತಾರೆ ಶಿವಾಯಿ ಇತರರಿಗೆ ಅವಕಾಶವಿಲ್ಲವೆಂದು ಹೇಳುವಂಥ ರೀತಿಯಲ್ಲಿ ತಾವು ಈ 51ನೆಯ ಸೆಕ್ಷನ್ನನ್ನು ತಿದ್ದುಪಡಿಮಾಡಬೇಕಾಗಿದೆ. ಆದರೆ ಇವನ್ನು ಹೀಗೆ ತಿದ್ದುಪಡಿಮಾಡಿದರೆ ಬಹಳ ಜನರಿಗೆ ಅಸಮಾಧಾನವಾಗಬಹುದು, ಆದರೂ ಚಿಂತೆಯಿಲ್ಲ ಅವರನ್ನು ಸಮಾಧಾನಪಡಿಸಿಕೊಳ್ಳತಕ್ಕ ಆತುರದಲ್ಲಿ ತಾವು ಎದುರುಪಕ್ಷದ ವರ್ಗದ ಧ್ಯೇಯ ವೃದ್ಧಿಹೊಂದುವುದಕ್ಕೆ ಮಾತ್ರ ಅವಕಾಶ ಮಾಡಿಕೊಳ್ಳಬೇಡಿ. ಹೀಗೆ ತಾವು ತಮ್ಮ ವರ್ಗದಲ್ಲಿ ಒಂದು ಪಕ್ಷದ ಹಿತಕ್ಕಾಗಿ ಅವರನ್ನು ಜಿಲ್ಲಾಬೋರ್ಡು ಅಧ್ಯಕ್ಷತನಕ್ಕಾಗಿ ನಿರ್ಮಾಣಮಾಡಲು ಒಂದು ಜಿಲ್ಲಾಧ್ಯಕ್ಷರ ವರ್ಗವನ್ನು ಬೆಳಸಲು ತಾವು ದೇಶಕ್ಕೆ ಬಂದಂಥ ಸ್ವಾತಂತ್ರ್ಯವನ್ನು ಸೂರೆಮಾಡಬೇಕೆಂದು ಇಷ್ಟಪಟ್ಟಿದ್ದೀರಾ ಎಂದು ಕೇಳುತ್ತೇನೆ? ನಿಜವಾಗಿಯೂ ಈ ಪ್ರಜಾಪ್ರಭುತ್ವ ನೀತಿಗಳಿಗೆ ಅನುಗುಣವಾಗಿ ಮುಂದುವರೆಯಬೇಕೆಂಬ ಆಕಾಂಕ್ಷೆ ತಮಗೆ ಇದ್ದಿದ್ದೇ ಆದರೆ ಈ ತಾಲ್ಲೂಕು ನಗರಗಳಲ್ಲಿರತಕ್ಕಂಥ ಜನರಿಗೆ ಈ ಜಿಲ್ಲಾಬೋರ್ಡು ಚುನಾವಣೆಗಳಿಗೆ ನಿಲ್ಲಲು ಅವಕಾಶ ಕೊಡದಂತೆ ಮಾಡಬೇಕು, ಅವರಿಗೆ ಖಂಡಿತ ಅವಕಾಶವಿರಬಾರದು. ಈಗ ತಾವು ಈ ಗ್ರಾಮಪಂಚಾಯಿತಿಗಳಿಗೆ ಯಾವ ರೀತಿಯಾಗಿ ಈ ನಿಯಮಗಳನ್ನು ವಿಧಾಯಕಮಾಡಿದ್ದೀರೋ ಇದಕ್ಕೂ ಅದೇ ರೀತಿ ಮಾಡಬೇಕಾಗಿದೆ. ಈಗ ಒಬ್ಬ ಎಲ್ಲೋ ಇರತಕ್ಕಂಥ ಮನುಷ್ಯನು ಬಂದು ಯಾವುದೇ ಒಂದು ಪಂಚಾಯಿತಿಗೂ ಚುನಾವಣೆಗೆ ನಿಲ್ಲಲು ಸಾಧ್ಯವಿಲ್ಲ. ಆದಾಗ್ಯೂ ತಾವೀಗ ಕೆಲವು ವ್ಯಕ್ತಿಗಳ ಪ್ರಾಬಲ್ಯವನ್ನು ಬೆಳೆಸುವುದಕ್ಕಾಗಿ ಈ ರೀತಿ ಮಾಡಿಕೊಂಡು ಬಂದಿದ್ದೀರಿ. ಆದರೆ ಈಗಾಗಲೇ ಆ ಹಳ್ಳಿ ಜನರಿಗೆ ಯಾವ ರೀತಿಯಾಗಿ ಈ ಅಸೆಂಬ್ಲಿಯಲ್ಲಿ ಕುಳಿತು ಉಪಕಾರ ಮಾಡುತ್ತಿದ್ದೀರಿ ಎನ್ನುವುದನ್ನು ಇಡೀ ದೇಶವೇ ನೋಡಿ ಆನಂದಪಡುತ್ತಿದೆ............

ಶ್ರೀ ಜಿ. ಎ. ತಿಮ್ಮಪ್ಪಗೌಡ.—ತಮ್ಮ ಹಾಗೆ ಪಟ್ಟಣಗಳಲ್ಲಿರತಕ್ಕಂಥ ಯಾರೋ ಒಬ್ಬರು ಹಳ್ಳಿಗೆ ಹೋಗದೆ ಇದ್ದರೆ ಬಾಕಿ ಪಟ್ಟಣದಲ್ಲಿರತಕ್ಕವರಿಗೆಲ್ಲಾ ಆ ಹಳ್ಳಿಯ ವಿಚಾರವೇ ಗೊತ್ತಿಲ್ಲವೆಂದು ಹೇಳುತ್ತೀರಾ?

ಶ್ರೀ ಕೆ. ಪಟ್ಟಾಭಿರಾಮ್.—ಈ ಪ್ರಜಾಪ್ರಭುತ್ವಾಡಳಿತದ ಮೂಲಭೂತ ತತ್ವಗಳೇನೆಂಬುದನ್ನೇ ಶ್ರೀ ತಿಮ್ಮಪ್ಪಗೌಡರು ಸರಿಯಾಗಿ ಅರ್ಥಮಾಡಿಕೊಂಡಿಲ್ಲವೆಂದು ನಾನು ಅವರಿಗೆ ತಿಳಿಸಬೇಕಾಗಿದೆ. ಈ ಪ್ರಜಾಪ್ರಭುತ್ವದಲ್ಲಿ ಪ್ರಾತಿನಿಧ್ಯಕ್ಕೆ ಇರತಕ್ಕಂಥ ಮುಖ್ಯ ತಿರುಳು ಮತ್ತು ಆ ಮೂಲಭೂತವಾದಂಥ ತತ್ವ ಯಾವುದೆಂದರೆ, ಜನ ಬೆಂಬಲವನ್ನು ಯಾರು ಹೆಚ್ಚಿಗೆ ಗಳಿಸಿಕೊಂಡಿರುತ್ತಾರೋ, ಯಾರು ಹೆಚ್ಚು ಪ್ರಜಾನುರಾಗಿಗಳಾಗಿರುತ್ತಾರೋ ಅಂಥಾ ವ್ಯಕ್ತಿಗೇ ಈ ಪ್ರಾತಿನಿಧ್ಯ ಹೆಚ್ಚಾಗಿ ದೊರೆಯಬೇಕೆಂದು ಹೇಳತಕ್ಕದ್ದೇ ಆ ಮೂಲಭೂತ ತತ್ವದ ತಿರುಳು. ಆದರೆ ನಾನು ಕಲ್ಕತ್ತಾದಲ್ಲಿ ವಾಸವಾಗಿದ್ದರೂ ಈ ಸ್ಥಾನಗಳಿಗೆ ಒಬ್ಬ ಪ್ರತಿನಿಧಿಯಾಗಿ ನಿಲ್ಲಲು ಸಾಧ್ಯವಿದೆ. ಆದುದರಿಂದ ತಾವು ಈ ಜಿಲ್ಲಾಬೋರ್ಡುಗಳ ಕೆಲಸಕಾರ್ಯಗಳು ಮತ್ತು ಅವುಗಳ ರಚನೆ ಮತ್ತು ಅವುಗಳ ರೂಪರೇಖೆಗಳು ಯಾವ ಈ ಪ್ರಜಾಪ್ರಭುತ್ವದ ಮೂಲಭೂತ ತತ್ವಗಳಿವೆಯೋ ಅವುಗಳಿಗೆ ಅನುಗುಣವಾಗಿ ಹೊಂದಾಣಿಕೆಯಾಗಿರುವಂತೆ ಮಾಡಲೇಬೇಕೆಂಬ ಆಸೆ ತಮಗೆ ಇರುವುದಾದರೆ ಈ ಟೌನುಗಳಲ್ಲಿರತಕ್ಕಂಥಾ ಜನರಿಗೆ ಈ ಚುನಾವಣೆಗಳಲ್ಲಿ ಭಾಗವಹಿಸಲು ಅವಕಾಶವಿರಲೇಬಾರದು. ಶ್ರೀ ಎ. ಭೀಮಪ್ಪನಾಯಕರು ಈ ವಿಚಾರವನ್ನು ಅವರದೇ ಆದಂಥ ಶೈಲಿಯಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ. ತಾವು ಈ ಟೌನಿನಲ್ಲಿರತಕ್ಕಂಥ ಜನರಿಗೆ ಅವಕಾಶ ಕೊಟ್ಟರೆ ನಮ್ಮ ಲಾಯರುಗಳಿಗೆ ಹೆಚ್ಚು ಅವಕಾಶ ಕೊಟ್ಟಹಾಗೆ ಆಗುತ್ತದೆ. ಆಗ ಇವರೇ ಹೆಚ್ಚು ಹೆಚ್ಚಾಗಿ ಬರಲು ಅವಕಾಶವಾಗಿ ಆ ಹಳ್ಳಿ ಜನರಿಗೆ ಅವಕಾಶವೇ ಇಲ್ಲದಂತಾಗುತ್ತದೆ. ಆದರೆ ತಾವು ಯಾವಾಗ ಶ್ರೀ ವಿ. ವೆಂಕಟಪ್ಪನವರ ಮತ್ತು ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರ ಕಮಿಟಿಗಳ ರಿಪೋರ್ಟನ್ನು ಮೂಲೆಗೆ ತಳ್ಳುವುದಕ್ಕೆ ಪ್ರಯತ್ನಮಾಡಿದಿರೋ ಆಗಲೇ ತಮ್ಮ ಅಭಿ

(ಶ್ರೀ ಕೆ. ಪಟ್ಟಾಭಿರಾಮನ್.)

ಪ್ರಾಯವೇನೆಂಬುದು ಎಲ್ಲರಿಗೂ ತಿಳಿದುಹೋಯಿತು. ತಮ್ಮ ಭಾವನೆ ಬೆಕ್ಕು ಕಣ್ಣುಮುಚ್ಚಿಕೊಂಡು ಹಾಲನ್ನು ಕುಡಿದರೆ ಯಾರೂ ಕಾಣಲಿಲ್ಲ ಅನ್ನುವಂತೆ ತಾವು ಭಾವಿಸಿದ್ದೀರಿ. ಆದರೆ ಇದರ ಪರಿಣಾಮ ಏನೂ ಆಗಲಾರದೆಂದು ತಾವು ಭಾವಿಸಬಾರದು. ನಾನಂತೂ ಈ ಪ್ರತ್ಯಕ್ಷ ಚುನಾವಣೆಯನ್ನು ಅತಿ ತೀವ್ರವಾಗಿ ವಿರೋಧಿಸುತ್ತೇನೆ.

Sri Kadidal MANJAPPA.—So you are for indirect election, is it ?

ಶ್ರೀ ಕೆ. ಪಟ್ಟಾಭಿರಾಮನ್.—ಇಲ್ಲ. ನಾನು ಇದೇ ವಿಚಾರವನ್ನು ಮೂರು ವರ್ಷಗಳಿಂದಲೂ ಹೇಳುತ್ತಿದ್ದೇನೆ.

ಇನ್ನು ಮೂರನೆಯದಾಗಿ ನಾನು ಈಗ ತಮಗೆ ಈ ಬಿಲ್ಲಿನ ಬಗ್ಗೆ 2-3 ಸಲಹೆಗಳನ್ನು ಮಾತ್ರ ಕೊಡಬೇಕೆಂದಿದ್ದೇನೆ. ತಾವು ಈಗ ಈ 9ನೆಯ ಸೆಕ್ಷನ್ನಿನಲ್ಲಿ ಚುನಾವಣೆ ಆದನಂತರ ಒಬ್ಬ candidate ಏನಾದರೂ ಅಕ್ರಮನಡೆಸಿದ್ದರೆ ಒಂದು ತಕರಾರನ್ನು ಸಬಾರ್ಡಿನೇಟ್ ಜಡ್ಜ್‌ರವರಲ್ಲಿ ಹಾಕಬಹುದು ಎಂತ ಹೇಳಿದ್ದೀರಿ. ಈ ಸೆಕ್ಷನ್ನಲ್ಲಿ ತಾವು ಹೀಗೆ ಹೇಳಿದ್ದೀರಿ: by the improper acceptance or rejection of a nomination paper ಎಂದು ಹೇಳಿದ್ದೀರಿ. ಅಂದರೆ ಈ ಚುನಾವಣೆಗಳು ಕಳೆದುಹೋದನಂತರ ಬರತಕ್ಕಂಥ ಈ ಎಲೆಕ್ಷನ್ ಪೆಟಿಷನ್‌ಗಳನ್ನು ಈ ಜಡ್ಜ್‌ರವರಲ್ಲಿ ಅಪೀಲ್ ಹಾಕಿಕೊಳ್ಳಬಹುದೆಂದು ಹೇಳಿದೆ. ಆದರೆ ಮೊನ್ನೆ ಕಳೆದ ಚುನಾವಣೆಗಳಲ್ಲಿ ಇದರ ಪರಿಣಾಮ ಆ ಟ್ರಿಬ್ಯುನಲ್‌ನವರ ಮುಂದೆ ಏನಾಯಿತೆಂಬ ವಿಚಾರ ಎಲ್ಲರಿಗೂ ತಿಳಿದೇ ಇದೆ. ಯೋಗ್ಯರ ಅರ್ಜಿಗಳು ತಿರಸ್ಕಾರವಾಗಿಹೋಗಿ ಯಾರು ಯೋಗ್ಯರಲ್ಲವೋ ಮತ್ತು ಯಾರ ಅರ್ಜಿಯನ್ನು ನಿರಾಕರಣೆಮಾಡಬಹುದಾಗಿತ್ತೋ ಅಂಥವರ ಅರ್ಜಿಗಳನ್ನೆಲ್ಲಾ ಅಂಗೀಕಾರಮಾಡಿದ್ದರೂ ಕಾಯಬೇಕು. ಆದ್ದರಿಂದ ತಾವು ಇದನ್ನು ಬದಲಾವಣೆ ಮಾಡಬೇಕು. ಇದರಿಂದ ಬಹಳ ತೊಂದರೆ ಆಗುತ್ತದೆ.

ಸೆಂಟ್ರಲ್ ಪಾರ್ಲಿಮೆಂಟಿನಲ್ಲಿ ಇದಕ್ಕೆ ಸಂಬಂಧಪಟ್ಟ ತಿದ್ದುಪಡಿ ತರುವುದಕ್ಕೆ ಪ್ರಯತ್ನ ನಡೆಯುತ್ತಿದೆ ಎಂದು ನಾನು ಕೇಳಿದ್ದೇನೆ. ಅಲ್ಲಿ ಹಾಗಿರುವಾಗ್ಗ ಮಹಾ ಚುನಾವಣೆಗಳ ಅನುಭವ ನಮಗೆ ಇರುವಾಗ ಕೇಂದ್ರ ಸರ್ಕಾರದವರು ಕೂಡ ಇದಕ್ಕೆ ಸಂಬಂಧಪಟ್ಟ ತಿದ್ದುಪಡಿ ಈಗಾಗಲೇ ಮಾಡಬೇಕು ಎಂಬ ಅಭಿಪ್ರಾಯ ಹೊಂದಿರುವಾಗ, ಇಲ್ಲಿಯೂ ಕೂಡ ಹಾಗೆಯೇಮಾಡಿ ಚುನಾವಣೆಗಳು ಆಗುವವರೆಗೆ ಕಾದಿದ್ದು ನಂತರ ಒಂದು ತಕರಾರು ಅರ್ಜಿಯನ್ನು ತನ್ನ ಉಮೇದುವಾರಿಕೆ ಪತ್ರವನ್ನು ತಿರಸ್ಕರಿಸಿರುವುದು ಸರಿಯಲ್ಲವೆಂದು ಹಾಕಿ, ಆ ಅರ್ಜಿಯಮೇಲೆ ವಿಚಾರಣೆಯಾಗಿ ಈ ರೀತಿ ಅರ್ಜಿ ತಿರಸ್ಕರಿಸಿರುವುದು ಸರಿಯಲ್ಲವೆಂದು ಚುನಾವಣೆ ರದ್ದುಮಾಡಿದರೆ ಆಗ ಅದರಿಂದ ಖರ್ಚು ಎಷ್ಟು, ತೊಂದರೆ ಎಷ್ಟು ಆಗುತ್ತದೆ! ಅದಕ್ಕೋಸ್ಕರವಾಗಿ ಈ ಸೆಕ್ಷನ್ ಬದಲಾವಣೆಮಾಡಬೇಕು ಎಂದು ತಮ್ಮ ಗಮನಕ್ಕೆ ತರುತ್ತೇನೆ.

ಕೇಂದ್ರ ಸರ್ಕಾರದವರು ಇದಕ್ಕೆ ಸಂಬಂಧಪಟ್ಟ ಕಾನೂನಿಗೆ ಸೂಕ್ತವಾದ ತಿದ್ದುಪಡಿ ತರುವುದಕ್ಕೆ ಪ್ರಯತ್ನಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಮದರಾಸಿನಲ್ಲಿ ನಡೆದ ಒಂದು ಸಮಾಚಾರವನ್ನು ಸಭೆಯ ಗಮನಕ್ಕೆ ತರುತ್ತೇನೆ. ಅಲ್ಲಿ ಒಂದು ದೊಡ್ಡ ಪ್ರಮಾದವೇ ಆಯಿತು. ಅಲ್ಲಿ Legislative Councilಗೆ ಚುನಾವಣೆಯಾದಾಗ ತಿರಸ್ಕರಿಸಲ್ಪಟ್ಟ ಅರ್ಜಿದಾರರು Election tribunalಗೆ ಅರ್ಜಿಕೊಟ್ಟರು. ಅವರು Election ಪೂರ್ತಿಯಾಗುವವರೆಗೂ ಕಾದಿದ್ದರು. 10-12 ಜನರನ್ನು ಚುನಾಯಿಸಿದರು. ಇಷ್ಟಾದ ನಂತರ ಬಂದ ಒಂದು ತಕರಾರು ಅರ್ಜಿಯನ್ನು ಸ್ವೀಕರಿಸಿ ಅದನ್ನು ಪರಿಶೀಲಿಸಿ ಚುನಾವಣೆಗಳನ್ನು ರದ್ದುಮಾಡಿದರು. ಇದರ ಪರಿಣಾಮವಾಗಿ ಕೇಂದ್ರದಲ್ಲಿ ಒಂದು ತಿದ್ದುಪಡಿ ತರುವ ಪ್ರಯತ್ನಮಾಡುತ್ತಿದ್ದಾರೆ. ಈ ರೀತಿ ಮಾಡುವುದರಿಂದ ಇದರಲ್ಲಿ ಕಷ್ಟವೇನೂ ಕಾಣುವುದಿಲ್ಲ. Election Calender fix ಮಾಡುವಾಗ ಮಧ್ಯದಲ್ಲಿ interim order ಎಂದು Election Sub-Judge ಕೊಡಬಹುದು. Subordinate Judges ಎಲ್ಲಾ ಕಡೆಯೂ ಇರುವುದರಿಂದ ಚುನಾವಣೆಗಳು ನಡೆಯುವುದಕ್ಕೆ ಮುಂಚೆಯೇ ಇಂಥ ಅರ್ಜಿದಾರರು ಅರ್ಜಿ ಹಾಕಿ ಅದರ ಮೇಲೆ interim order ತರುವುದಕ್ಕೆ ಅವಕಾಶವಿರುತ್ತದೆ. ಈ ರೀತಿ ಮಾಡುವುದರಿಂದ ಚುನಾವಣೆಗಳು ನಡೆದ ನಂತರ ಅದನ್ನು ರದ್ದುಮಾಡಿದರೆ ಆಗತಕ್ಕ ಖರ್ಚುಗಳೆಲ್ಲವೂ ಉಳಿತಾಯವಾಗುತ್ತವೆ.

ಮೂರನೆಯ ಸಲಹೆ ವಿಷಯದಲ್ಲಿ ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ ಅದು ಏನೆಂದರೆ 106ನೆ ಸೆಕ್ಷನ್‌ಗೆ ಸಂಬಂಧಪಟ್ಟುದು; ಎರಡನೆ ಭಾಗವನ್ನು ಇನ್ನು ಮುಂದೆ ತೆಗೆದುಹಾಕಬೇಕು ಎಂದು ಹೇಳಿದೆ.

"106(2). The Government shall also assign to all the District Boards in the State an amount equal to six and one-fourth per-cent of the net land revenue collected in the State, the amount to be allotted to each District Board being such as the Government may from time to time determine."

ಇದರಲ್ಲಿ ಎರಡು ರೀತಿಯ ಅನಮಾಧಾನಗಳಿವೆಯೆಂದು ಅಭಿಪ್ರಾಯಪಡುತ್ತೇನೆ. ಈ ರೀತಿ ವಿನಾಯಿತಿ ಮಾಡಿಕೊಂಡು ಉಳಿದ ಹಣವನ್ನು ಯಾವ ರೀತಿ ಖರ್ಚು ಮಾಡುತ್ತಾರೆನ್ನುವುದಕ್ಕೆ ಪ್ರಾಸಂಗಿಕವಾಗಿ ಒಂದು ಸಲಹೆ ಕೊಟ್ಟಿದ್ದಾರೆಂದು ಮಾನ್ಯ ಸಭಾಪತಿಗಳು ಈಗಾಗಲೇ ತಿಳಿಸಿದ್ದಾರೆ. ಪ್ರಾಸಂಗಿಕವಾಗಿ ಕೊಟ್ಟಿರುವ ಸಲಹೆ ನಮಗೆ ಇಲ್ಲದ ಭಯವನ್ನುಂಟುಮಾಡಿದೆಯೆಂದು ಅಭಿಪ್ರಾಯ ಪಡುತ್ತೇನೆ. ಒಂದು ಕಾನೂನಿನ ಚೌಕಟ್ಟಿನಲ್ಲಿ ಕೆಲಸಮಾಡತಕ್ಕಂಥ ಒಂದು ಸಂಸ್ಥೆಗೆ ಬರುತ್ತಿದ್ದ ಹಣವನ್ನು ಮೊಟಕುಮಾಡಿ ಯಾವುದೋ ಒಂದು ಪರೋಕ್ಷವಾದ ರೀತಿಯಲ್ಲಿ ಅದನ್ನು ಖರ್ಚುಮಾಡುತ್ತೇವೆಂದು ಮಾನ್ಯ ಸಭೆಯ ಒಪ್ಪಿಗೆ ಕೇಳುತ್ತಿರುವುದನ್ನು ನೋಡಿದರೆ ಬಹಳ ವಿಚಿತ್ರವಾಗಿ ಕಾಣುತ್ತದೆ. ಕಾನೂನಿನ ಚೌಕಟ್ಟಿನಲ್ಲಿ ಇರತಕ್ಕ ಸಂಸ್ಥೆಯ ವರಮಾನವನ್ನು ಮೊಟಕುಮಾಡುವುದಕ್ಕೆ ಈ ಸಭೆಯ ಒಪ್ಪಿಗೆ ಕೇಳುತ್ತಿದ್ದೀರಲ್ಲಾ ಎಂದು ನನಗೆ ಆಶ್ಚರ್ಯವಾಗುತ್ತದೆ.

ಇನ್ನೊಂದು ದೃಷ್ಟಿಯನ್ನು ತಮ್ಮ ಗಮನಕ್ಕೆ ತರಬಯಸುತ್ತೇವೆ. ಈ ಹೊತ್ತು ಡಿಸ್ಟ್ರಿಕ್ಟ್ ಬೋರ್ಡುಗಳ ಕೆಲಸಕಾರ್ಯಗಳು ಎಷ್ಟುವೆಯೆಂಬುದನ್ನು ಶ್ರೀ ಭೀಮಪ್ಪನಾಯಕರು ಬಹಳ ಚೆನ್ನಾಗಿ ವಿವರಿಸಿ ತಮ್ಮ ಅಭಿಪ್ರಾಯವನ್ನು ಕೊಟ್ಟರು. ಈಗ ಅನೇಕ ಡಿಸ್ಟ್ರಿಕ್ಟ್ ಬೋರ್ಡುಗಳು ಕಾನೂನಿನಲ್ಲಿರತಕ್ಕ obligatory duties ಕಡ್ಡಾಯ ಕೆಲಸದ ಜೊತೆಗೆ ಹೈಸ್ಕೂಲುಗಳನ್ನು ಕೂಡ ನಡೆಸುತ್ತಿದ್ದಾರೆ. ಕೋಲಾರ ಜಿಲ್ಲೆಯಲ್ಲಿ ಹಾಗೂ ಮೈಸೂರು ಜಿಲ್ಲೆಯಲ್ಲಿ ಹೆಚ್ಚು ಹೈಸ್ಕೂ

ಲುಗಳನ್ನು ಡಿಸ್ಟ್ರಿಕ್ಟು ಬೋರ್ಡಿನವರೇ ನಡೆಸುತ್ತಿದ್ದಾರೆ. ಈ ಮಸೂದೆಯಾದ ಮೇಲೆ ಅವುಗಳ ವ್ಯಾಪ್ತಿಯೇನಾಗಬೇಕು ? ಆ ಸ್ಕೂಲುಗಳ ಖರ್ಚು ವೆಚ್ಚಗಳನ್ನು ಸರ್ಕಾರದವರಾದರೂ ವಹಿಸಿಕೊಳ್ಳುವುದಕ್ಕೆ ತಯಾರಾಗಿದ್ದಾರೆಂದು ಆಶ್ವಾಸನ ಕೂಡ ಬಂದಿಲ್ಲ. ಬರುತ್ತಿರುವ ದುಡ್ಡಿನಲ್ಲೇ ಏನೋ ಅಲ್ಪಸ್ವಲ್ಪ ಕೆಲಸಮಾಡುತ್ತಿರುವಾಗ ಈ ರೀತಿ ಶೇಕಡ 6¼ನ್ನು ತೆಗೆದುಹಾಕಿಬಿಟ್ಟರೆ, ಇನ್ನು ಅವುಗಳ obligatory ಕರ್ತವ್ಯಗಳನ್ನು ಹಾಗೂ ಹೈಸ್ಕೂಲುಗಳನ್ನು ನಡೆಸುವುದಕ್ಕೆ ಅವಕ್ಕೆ ಸಾಧ್ಯವಿದೆಯೇ ಇಲ್ಲವೇ ಎಂಬುದನ್ನು ಸರ್ಕಾರದವರು ಗಮನಿಸಿಲ್ಲವೆಂದು ನಾನು ವಿಷಾದದಿಂದ ಹೇಳಬೇಕಾಗಿದೆ. ಈಗಲಾದರೂ ಈ ಬಗ್ಗೆ ತಮ್ಮಿಂದ ಸಮಂಜಸವಾದ ಉತ್ತರ ಬರುವುದಾದರೆ ನಾನು ಸಂತೋಷಪಡುತ್ತೇನೆ. ಆದರೂ ಒಟ್ಟಿನಲ್ಲಿ ಹೇಳುವುದಾದರೆ, ಈ ರೀತಿ ಶೇಕಡ 6¼ನ್ನು ತೆಗೆದುಹಾಕಬೇಕೆಂದಿರುವ ನಿಷೇಧ ಸರಿಯಾದದ್ದಲ್ಲ. ಎಲ್ಲೋ ಒಂದೆರಡು ಕಡೆ ಅದನ್ನು ಮಾಡಬಹುದೇ ಹೊರತು ಸರ್ವೆ ಸಾಮಾನ್ಯವಾಗಿ ಎಲ್ಲ ಕಡೆಗಳಲ್ಲೂ developmental activitesಗಾಗಿ ಕಾನೂನು ರೀತ್ಯಾ ಒದಗಿಸಿದ್ದಂಥ ಹಣವನ್ನು ತೆಗೆದು ಹಾಕುವುದು ನ್ಯಾಯವಲ್ಲ. ಇದರಿಂದಾಗಿ ಡಿಸ್ಟ್ರಿಕ್ಟ್ ಬೋರ್ಡು ಕೆಲಸಗಳಿಗೆ ಖಂಡಿತವಾಗಿಯೂ ತೊಂದರೆಯಾಗುತ್ತದೆ. ಏಕೆಂದರೆ, ಇದರಿಂದಾಗಿಯೇ ಒಂದೊಂದು ಡಿಸ್ಟ್ರಿಕ್ಟು ಬೋರ್ಡಿಗೆ 60,000, 70,000, ಒಂದು ಲಕ್ಷದವರೆಗೂ ಹಣ ಬರುತ್ತಿತ್ತು. ಈಗ ಅದನ್ನು ತೆಗೆದುಹಾಕಿದರೆ, ಅವರ developmental ಕೆಲಸಕಾರ್ಯಗಳನ್ನು ಹೇಗೆ ನಿರ್ವಹಿಸಿಯಾರು? ಮೊನ್ನೆ ತಾನೆ ಇದೇ ಸಂಬಂಧದಲ್ಲಿ ಒಂದು ಪ್ರಶ್ನೆ ಚರ್ಚೆಗೆ ಬಂದಿತ್ತು. ಯಾವ್ಯಾವ ಡಿಸ್ಟ್ರಿಕ್ಟು ಬೋರ್ಡಿನವರು ಎಷ್ಟೆಷ್ಟು ಹಣವನ್ನು ಸ್ಪೆಷಲ್ ಆಫೀಸರುಗಳಿಗೆ ತಮ್ಮ ಆಫೀಸನ್ನು ವಹಿಸಿದ ಕಾಲದಲ್ಲಿ ಬಿಟ್ಟುಕೊಟ್ಟಿದ್ದಾರೆ ಎಂಬುದನ್ನು ಕೇಳಿದ್ದಕ್ಕೆ minus balance ಇರತಕ್ಕ ಅನೇಕ ಡಿಸ್ಟ್ರಿಕ್ಟು ಬೋರ್ಡುಗಳನ್ನು ಉದಾಹರಿಸಿದ್ದಾರೆ. ಹೀಗೆ ಅವರು ಬಿಟ್ಟುಕೊಡುವಾಗ ಅಷ್ಟು ಕಮ್ಮಿ ಹಣವಿತ್ತೆಂದ ಮೇಲೆ ಅವರಿಗೆ ಬರತಕ್ಕ ಹಣವನ್ನು ಇನ್ನೂ ಮೊಟಕುಮಾಡಿ ಯಾವುದೋ developmental ಕೆಲಸಗಳಿಗೆ ಖರ್ಚು ಮಾಡುತ್ತೇವೆಂದು ಹೇಳುವುದು ನ್ಯಾಯವಲ್ಲ. ಅವಂತೂ ಇನ್ಯಾವ ಕೆಲಸಕಾರ್ಯಗಳನ್ನೂ ನಡೆಯಿಸುವಂತಿಲ್ಲ. ಆದ್ದರಿಂದ ಈ ಎರಡು ಕಾರಣಗಳಿಂದ ನಾನು ಈ ವಿಚಾರದಲ್ಲಿ ನಮ್ಮ ತೀವ್ರ ಅಸಮಾಧಾನವನ್ನು ಸೂಚಿಸುತ್ತೇನೆ.

ಒಟ್ಟಿನಲ್ಲಿ ಒಂದು ಮಾತನ್ನು ನಾನು ಈ ಮಸೂದೆಯ ಮೇಲೆ ಹೇಳಬೇಕೆಂದು ಆಶಿಸುತ್ತೇನೆ. ಇದು ನನ್ನ ಮನಸ್ಸಿನ ತೃಪ್ತಿಗೆ. ಏಕೆಂದರೆ, ನನಗೆ ಗೊತ್ತು ನಾನು ಏನೇ ಹೇಳಿದರೂ ಈ ಮಸೂದೆ ಪಾಸಾಗುತ್ತದೆ. ಅನೇಕರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರುಗಳು ಬೇಗ ಆಗುವವರಾಗಿದ್ದಾರೆ. ನಾನು ಅವರನ್ನು ಅಭಿನಂದಿಸುವ ಅವಕಾಶವೂ ಸದ್ಯದಲ್ಲೇ ಸಿಕ್ಕುತ್ತದೆ. ಅದು ನನಗೆ ಗೊತ್ತು. ಆದರೂ ಇಷ್ಟುಮಾತ್ರ ನಾನು ಹೇಳಬಲ್ಲೆ.

ಮೊದಲಿನಿಂದಲೂ ನಮಗೊಂದು ಆಸೆಯಿತ್ತು, ಗ್ರಾಮಪಂಚಾಯಿತಿಗಳಿಗೂ ಕೂಡ ಸುಧಾರಿತವಾದ ಒಂದು ಶಾಸನ ಬರುವಂತೆ ಮಾಡಬೇಕು ಎಂದು. ಆ ಅವಕಾಶವನ್ನು ಉಂಟುಮಾಡಲಿಕ್ಕೆ ಈಗಲಾದರೂ ಪ್ರಯತ್ನಿಸುತ್ತಾರೆಂದು ಭಾವಿಸಿದ್ದೆವು. ಅದೇನನ್ನೂ ಮಾಡದಿರುವುದು ಬಹು ವಿಷಾದಕರ. ಮೊನ್ನೆ ದಿವಸ ತಾನೆ ಇನ್ನೊಂದು ಸಂದರ್ಭ ಹೇಳಿದ್ದೇನೆ. ಗ್ರಾಮ ಪಂಚಾಯಿತಿಗಳಿಗೆ ಸಂಬಂಧಪಟ್ಟ ಕಾನೂನು ಬಂದು ಅದು ಚರ್ಚೆಗೆ ಬಂದಾಗ, ನಿಜವಾಗಿಯೂ ಸ್ಥಳೀಯ ಸ್ವರಾಜ್ಯ, ಪಂಚಾಯಿತಿ ರಾಜ್ಯ ಎಂಬುದಾಗಿ ದೊಡ್ಡ ದೊಡ್ಡ ಪದಗಳನ್ನು ನಮ್ಮ ರಾಜ್ಯಾಂಗದ Directive principles ನಲ್ಲೆಲ್ಲಾ ಉಪಯೋಗಿಸುತ್ತಿದ್ದೇವಲ್ಲ, ಆ ಕಡೆ ಒಂದು ಹೆಜ್ಜೆಯಾದರೂ ಇಡುವುದಕ್ಕೆ ಈ ಸರ್ಕಾರ ಧೈರ್ಯಮಾಡಲಿ, ಆ ವಿಷಯದಲ್ಲಿ ತಮ್ಮ ಅಂತಃಕರಣವನ್ನಾದರೂ ತೋರಿಸಲಿ ಎಂದು ಹೇಳಿದೆ. 'ಅಂತಃಕರಣ' ಎಂದರೆ ಮಾನ್ಯ ಮಂತ್ರಿಗಳಿಗೆ ಬಹುಶಃ ಚುಚ್ಚಿದಂತಾಗುತ್ತದೆ. ಏಕೆಂದರೆ ಈ ಮೂರು ವರ್ಷದ ಹಿನ್ನೆಲೆಯನ್ನು ನೋಡಿದರೆ, ವೀರಾಗ್ರಣಿಗಳಂತೆ ಧೈರ್ಯದಿಂದ ಮುನ್ನುಗ್ಗಿ ಹೋಗುತ್ತಿದ್ದಂಥಾವರು ಈಗೇಕೆ ಅಂಬೆಗಾಲು ಇಡಲಿಕ್ಕೂ ಪ್ರಯತ್ನಪಡದೆ ತೊಳಲುತ್ತಿದ್ದಾರಲ್ಲಾ ಅಂದರೆ "ಅಂತಃಕರಣ" ಎನ್ನುವ ಪದವನ್ನು ಉಪಯೋಗಿಸದೆ ಇನ್ನೇನು ಉಪಯೋಗಿಸಲಿ ?

ಆದ್ದರಿಂದ ಇಷ್ಟುಮಾತ್ರ ಹೇಳಬಲ್ಲೆ; ಪ್ರಗತಿಗೆ ವಿರುದ್ಧವಾಗಿ ಈ ಮಸೂದೆಯನ್ನು ತಂದಿರುವುದನ್ನು ನಾನು ವಿರೋಧಿಸುತ್ತೇನಾದರೂ ಒಂದು ಶಾಸನ ಕಡತಕ್ಕೆ ಇದು ಬರುವುದಾದರೆ ಶ್ರೀ ಭೀಮಪ್ಪನಾಯಕ ರಂಥ ಮಹಾ ಜ್ಞಾನಿಗಳು ಕೊಟ್ಟಿರುವ ಸಲಹೆಗಳ ಪ್ರಕಾರ ಸ್ವಲ್ಪಮಟ್ಟಿಗೆ ಬದಲಾವಣೆಯಾಗಬೇಕು. ಪ್ರಾಯಶಃ ಈಗ ಈ ಕಾನೂನನ್ನು ಸೆಲೆಕ್ಟ್ ಕಮಿಟಿಗೆ ಹಾಕುವುದು ಒಳ್ಳೆಯದೆಂದು ಕಾಣುತ್ತದೆ; ಆಗಬೇಕಾದ ಬದಲಾವಣೆ ಬಹಳವಾಗಿದೆ. ಆದರೆ ಮುಂದುವರೆಸಬೇಕೆಂದು ಹೇಳುತ್ತೇನೆಂದು ಯಾರೂ ಅನುಮಾನ ಪಡಬೇಕಾಗಿಲ್ಲ. ಕೇವಲ 2–3 ದಿನಗಳಲ್ಲಿ ಈ ಶಾಸನ ಸಭೆ ಮುಕ್ತಾಯವಾಗುವುದರೊಳಗಾಗಿ, 19ನೆಯ ತಾರೀಖಿನ ಒಳಗಾಗಿ ಕಮಿಟಿಯ ಸಲಹೆಪಡೆದು ಅಂಗೀಕಾರ ಪಡೆಯಬಹುದು. ಬಹಳ ಮಟ್ಟಿಗೆ ಸ್ವಲ್ಪ ಬದಲಾವಣೆ ಮಾಡಬೇಕೆಂದು ಮಾನ್ಯ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿರುವುದರಿಂದ ಅದಕ್ಕೆ ಮನ್ನಣೆಯನ್ನಿತ್ತು ತಕ್ಕಂತೆ ತಿದ್ದುಪಡಿ ಮಾಡುವುದು ಅವಶ್ಯಕ. ಇಷ್ಟು ಹೇಳಿ ಇದಕ್ಕೆ ವಿರೋಧ ತೋರಿಸಿ ಈ ಸಾಪಾರ್ಡಾಗ ತಕ್ಕದ್ದು ಆವಶ್ಯಕವೆಂದು ಸೂಚಿಸಿ ನನ್ನ ಮಾತನ್ನು ಮುಕ್ತಾಯಗೊಳಿಸುತ್ತೇನೆ.

Mr. SPEAKER.—The House has agreed to sit till 5-30 and finish it. Tomorrow we have to take up the Agricultural Income-tax Bill. If this Bill is not finished today, it will have to be taken up some time later.

Sri T. MARIAPPA.—Sir, certain very interesting observations have been made by Sri Pattabbiraman. It will not be proper to stifle opinions. If need be, we shall sit till 5-30, but still if it is necessary, it must be continued to-morrow also.

Sri J. MOHAMED IMAM.—This is a very important Bill. The Hon'ble Leader of the House is not present here. There was an understanding between me and him about tomorrow's Business of the House. But now since we are

(SRI J. MOHAMED IMAM.)

not able to finish this Bill even if we sit till 5-30 or 6, I suggest that we may rise now and continue this Bill tomorrow also and if necessary sit late tomorrow and finish it. We will take up the Agricultural Income-tax Bill next day.

Mr. SPEAKER.—There is urgency about the Agricultural Income-tax Bill because it will have to go to Select Committee.

Sri J. MOHAMED IMAM.—You can consult the Leader of the House on this point and decide, Sir.

Mr. SPEAKER.—The House will now adjourn and meet at 12 noon tomorrow.

The House adjourned at Fifteen Minutes past Five of the Clock to meet again at Twelve of the Clock on Tuesday, the 12th April 1955.

WD 4508—GPB—550—23-9-55.

MYSORE LEGISLATIVE ASSEMBLY

THIRTY-NINTH DAY.

Tuesday, 12th April 1955.

The House met in the Assembly Hall, Old Public Offices, Bangalore, at Twelve of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS.

Construction of a tank to an Addehalla near Nagarle Village, Nanjangud Taluk (Estimates for).

Q.—684. Sri M. LINGANNA (Nanjangud).—

Will the Government be pleased to state :—

(*a*) whether an estimate has been prepared for constructing a tank to an Addehalla near Nagarle Village, Nanjangud Taluk, for irrigation purposes ;

(*b*) the total area of land that would be fed by this water storage ;

(*c*) the total cost of the estimate ?

A.—Sri Kadidal MANJAPPA (Minister for Revenue and Public Works).—

(*a*) Yes.

(*b*) 88 acres.

(*c*) Rs. 1,19,000.

ಶ್ರೀ ಎಂ. ಲಿಂಗಣ್ಣ.—ಈ ಎಸ್ಟಿಮೇಟು ಎಷ್ಟಾಗಿದೆಯೆಂಬುದನ್ನು ಹೇಳುತ್ತೀರಾ ?

Sri Kadidal MANJAPPA.—It is under scrutiny in the Executive Engineer's office.

Sri M. LINGANNA.—May I know the time that is required to scrutinise and pass this estimate, Sir ?

Sri Kadidal MANJAPPA.—It will take some time for scrutiny at various offices.

Sri M. LINGANNA—Do they expedite the matter early as the advantages accrued are greater ?

Sri Kadidal MANJAPPA.—We will expedite as early as possible.

ಶ್ರೀ ಬಿ. ಹುಚ್ಚೇಗೌಡ.—ಈ ಖರ್ಚಿನ ವಿಷಯದಲ್ಲಿ ಏನಾದರೂ ಒಂದು ನಿಬಂಧನೆಯಿದೆಯೇ, ಒಂದು ಎಕರೆಗೆ ಎಷ್ಟು capital cost ಬೀಳಬೇಕು ಎಂದು!

ಶ್ರೀ ಕಡಿದಾಳ್ ಮಂಜಪ್ಪ.—ಒಂದು ಸಾವಿರ ಎಂದು ಹೇಳಿ ನಿಬಂಧನೆಯಿದೆ.

Assistant Commissioners (Vacancies).

Q.—897. Sri D. R. KARI GOWDA (Hassan).—

Will the Government be pleased to state :—

(*a*) the number of places that have fallen vacant in the cadre of Assistant Commissioners from April 1954 ;

(*b*) which are they ?

A.—Sri Kadidal MANJAPPA (Minister for Revenue and Public Works).—

(*a*) 11.

(*b*)—

(1) Assistant Secretary to Government.

(2) Assistant Secretary to Government.

(3) Assistant Secretary to Government.

(4) Assistant to the Chief Engineer.

(5) District Survey Officer, Bellary.

(6) District Survey Officer, Kolar.

(7) Sub-Division Officer, Davangere.

(8) Assistant Secretary on the personal staff of His Highness the Rajpramukh.

(9) District Treasury Officer, Chitaldrug.

(10) City Magistrate, Bangalore.

(11) City Magistrate, Mysore.

ಶ್ರೀ ಡಿ. ಆರ್. ಕರಿಗೌಡ.—ಅಸಿಸ್ಟೆಂಟ್ ಕಮಿಷನರ ಸ್ಥಾನಗಳು ಹನ್ನೊಂದು ಖಾಲಿ ಇವೆಯೆಂದು ಹೇಳಿದ್ದೀರಿ. ಎಷ್ಟೆಷ್ಟು ದಿವಸದಿಂದ ಖಾಲಿಯಿದೆಯೆಂಬುದನ್ನು ಹೇಳುತ್ತೀರಾ !

ಶ್ರೀ ಕಡಿದಾಳ್ ಮಂಜಪ್ಪ.—ಈಚೆಗೆ ಇವೆಲ್ಲಾ fill up ಆಗಿವೆ. ಅಸಿಸ್ಟೆಂಟ್ ಸೆಕ್ರೆಟರಿಗಳ ಸ್ಥಾನಗಳು ಮತ್ತು ಛೀಫ್ ಎಂಜಿನಿಯರ ಅಸಿಸ್ಟೆಂಟರ ಸ್ಥಾನಗಳು fill up ಆಗಿವೆ. ಏನಿದ್ದರೂ ಡಿಸ್ಟ್ರಿಕ್ಟ್ ಸರ್ವೆ ಆಫೀಸರ್ ; ಬಳ್ಳಾರಿ, ಡಿಸ್ಟ್ರಿಕ್ಟ್ ಸರ್ವೆ ಆಫೀಸರ್, ಕೋಲಾರ; ಸಿಟಿ ಮ್ಯಾಜಿಸ್ಟ್ರೇಟ್, ಮೈಸೂರು—ಇವು ಮಾತ್ರ ಖಾಲಿಯುವೆ.

ಶ್ರೀ ಡಿ. ಆರ್. ಕರಿಗೌಡ.—ಇವನ್ನೆಲ್ಲಾ ಭರ್ತಿ ಮಾಡುವುದಕ್ಕೇಕೆ ತಡಮಾಡುತ್ತೀರಿ ? ಮ್ಯಾಜಿಸ್ಟ್ರೇಟ್ ಕೆಲಸ ಮಾಡುತ್ತಿದ್ದರಲ್ಲಾ ಆ ಅಸಿಸ್ಟೆಂಟ್ ಕಮಿಷನರುಗಳನ್ನು withdraw ಮಾಡಬೇಕೆಂದು ಒಂದು proposal ಇದೆಯಲ್ಲಾ, ಅದರಂತೆ ಈಗ magisterial work ಮಾಡುತ್ತಿರುವ ಎಷ್ಟು ಜನರು ಸಿವಿಲ್ ಸರ್ವಿಸ್ಸಿನಿಂದ ಬಂದವರಾಗಿದ್ದಾರೆ ?

Sri Kadidal MANJAPPA.—About nine.

ಶ್ರೀ ಡಿ. ಆರ್. ಕರಿಗೌಡ.—ಇದೆಲ್ಲಾ ಮಾಡುವುದಕ್ಕೆ ಒಂದು ವರ್ಷ ಬೇಕಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅಷ್ಟು ಟೈಮ್ ಬೇಕಾಗಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಮೈಸೂರಿನಲ್ಲಿ ಸಿಟಿ ಮ್ಯಾಜಿಸ್ಟ್ರೇಟ್‌ರು ಎಷ್ಟು ದಿವಸದಿಂದ ಇಲ್ಲ ?

Sri Kadidal MANJAPPA.—I think for a month and a half.

Sri K. PUTTASWAMY.—What is the difficulty in the Government posting some other person to fill up the office ?

Sri A. G. RAMACHANDRA RAO.—Sir, it is true that there is some delay. The reason is this :—we wanted to recruit people for the Munsiff's post from the magisterial cadre. There was a writ application which has been disposed of recently. It will be taken up and the matter hastened to fill up the post.

Sri K. PUTTASWAMY.—My point is : There was no City Magistrate for 1½ months. What prevented the Government from posting a civilian to that post and then withdrawing him after the decision is taken to post a person from other cadre ?

Sri A. G. RAMACHANDRA RAO.—Because in the order of the High Court, they wanted a judicial magistrate to be posted to try a particular case. That is why the difficulty.

Sri K. PUTTASWAMY.—If the order of the High Court was to refer a certain case to judicial matters, there were several judicial matters in the Mysore City. This case could have been transferred to the Judicial Magistrate. Was there any difficulty in not posting a man to that office ?

Sri A. G. RAMACHANDRA RAO.—That will have to be done considering the quantum of work in the other Courts in the Mysore City also.

Sri K. PUTTASWAMY.—Has not the work of this Court been very much dislocated and hampered on account of the fact that for nearly a month and a half there is no magistrate ?

Sri A. G. RAMACHANDRA RAO.—Just as I said, it is true, Sir.

ಶ್ರೀ ಬಿ. ಎನ್. ಬೋರಣ್ಣಗೌಡ.—ಅಸಿಸ್ಟೆಂಟ್ ಸೆಕ್ರಿಟೆರಿಯವರನ್ನು ನೇಮಕ ಮಾಡಿದ್ದೀರೆಂದು ಹೇಳಿದ್ದೀರಲ್ಲಾ, ಪ್ರಮೋಷನ್ ಕೊಟ್ಟು ನೇಮಕ ಮಾಡಿದ್ದೀರಾ ಅಥವಾ ಬೇರೆಕಡೆ ಇದ್ದವರನ್ನೇ ಅಲ್ಲಿಗೆ ನೇಮಕ ಮಾಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅಸಿಸ್ಟೆಂಟ್ ಕಮಿಷನರಾಗಿದ್ದವರನ್ನೇ ಅಸಿಸ್ಟೆಂಟ್ ಸೆಕ್ರಿಟೆರಿಯವರಾಗಿ post ಮಾಡಿದ್ದೇವೆ. I think one was promoted.

ಶ್ರೀ ಬಿ. ಎನ್. ಬೋರಣ್ಣಗೌಡ.—ಒಬ್ಬರೋ ಇಬ್ಬರೋ ?

Sri Kadidal MANJAPPA.—I want notice.

ಶ್ರೀ ಬಿ. ಎನ್. ಬೋರಣ್ಣಗೌಡ.—ಜ್ಯುಡಿಷಿಯರಿಯಲ್ಲಿ 9 ಜನರಿದ್ದಾರೆಂದು ಹೇಳಿದ್ದೀರಿ. ಅವರೆಲ್ಲರೂ ರೆವಿನ್ಯೂ ಡಿಪಾರ್ಟ್‌ಮೆಂಟಿಗೆ ಬಂದಮೇಲೆ ಅವರಿಗೆಲ್ಲ ಸ್ಥಳ ಒದಗಿಸಿ ಕೊಡುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲೆಲ್ಲಿ ಸ್ಥಳ ಇದೆಯೋ ಅಲ್ಲೆಲ್ಲಾ ಸ್ಥಳ ಕೊಡಬೇಕಾಗುತ್ತದೆ.

ಶ್ರೀ ಬಿ. ಎನ್. ಬೋರಣ್ಣಗೌಡ.—ಹಾಗೆ ಸ್ಥಳ ಕೊಡಬೇಕಾದ ಸಂದರ್ಭದಲ್ಲಿ ಈಗ ಎಲ್ಲೆಲ್ಲಿ ಖಾಲಿ ಇದೆಯೋ ಅಲ್ಲಿಯೇ ಕೊಡುವುದಕ್ಕನುಕೂಲವಾಗುವಂತೆ ಅವುಗಳನ್ನು ಖಾಲಿ ಇಡಿಸುವುದಕ್ಕಾಗುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಬಹಳ ಕಾಲ ಇಡುವುದಕ್ಕಾಗುವುದಿಲ್ಲ. ಖಾಲಿಯಿದ್ದ ಸ್ಥಳಗಳನ್ನು ಆದಷ್ಟುಮಟ್ಟಿಗೆ ಭರ್ತಿಮಾಡಬೇಕಾಗುತ್ತದೆ.

ಶ್ರೀ ಬಿ. ಎನ್. ಬೋರಣ್ಣಗೌಡ.—ಹೊಸದಾಗಿ ಅಮಲ್ದಾರರಾಗಿದ್ದವರನ್ನು ಕೆಲವರನ್ನು ಅಸಿಸ್ಟೆಂಟ್ ಕಮಿಷನರಾಗಿ promotion ಮಾಡಿದ್ದೀರಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಈಚೆಗೆ ಯಾರನ್ನೂ ಮಾಡಿಲ್ಲ. ಈಚೆಗೆ ಸರ್ಕಾರದವರು ಒಂದು eligibility ಲಿಸ್ಟನ್ನು ತಯಾರು ಮಾಡಿದ್ದಾರೆ.

Sri R. ANANTARAMAN.—Is it the First City Magistrate or the Second City Magistrate ?

Sri A. G. RAMACHANDRA RAO.—Perhaps the Hon'ble Member knows much better than the Minister.

Sri R. ANANTARAMAN.—Are the Government aware that the First City Magistrate is a Civilian—Sri Hombaliah ?

Sri Kadidal MANJAPPA.—Yes.

Sri R. ANANTARAMAN.—Is there any vacancy now ?

Sri Kadidal MANJAPPA.—I have already answered.

Sri Mulka GOVINDA REDDY.—May I know how many Assistant Commissioners are working as City Magistrates or First Class Magistrates ?

Sri Kadidal MANJAPPA.—I have already answered that question.

Sri Mulka GOVINDA REDDY.—Why is it, Sir, that you have not filled up Sl. No. 1-2-3 Assistant Secretary to Government ?

Sri Kadidal MANJAPPA.—They have been filled up.

Epidemic Diseases Hospital in Mysore City (Shifting from present location).

Q.—793. Sri K. PUTTASWAMY (Srirangapatna).—

Will the Government be pleased to state :—

(*a*) whether it is a fact that a few buildings were constructed to shift the Epidemic Diseases Hospital in Mysore City from its present location ;

(*b*) whether residential houses have not come up close to the existing Epidemic Hospital ;

(*c*) whether the Municipal Council has not requested the Government to shift the building from its present location ; the steps that are taken in this behalf ?

A.—Sri T. CHANNIAH (Minister for Public Health and Local Self-Government).—

(*a*) A block of wards was constructed.

(*b*) There are residential buildings round about the E. D. Hospital at a good distance.

(*c*) Yes. Government consider that it is not necessary to shift the E. D. Hospital from its present location.

Sri K. PUTTASWAMY.—What has happened to the block of wards that were built ?

Sri T. CHANNIAH.—The block of wards are available and members of the Municipal Council, Mysore, wanted to utilise a portion of the block for the E. D. Hospital and also a portion for the Beggars Colony.

Sri K. PUTTASWAMY.—It is stated that a block of wards was constructed. My question is : how are these block of wards being used now ?

Sri T. CHANNIAH.—They want to utilise for the location of the E. D. Hospital.

Sri K. PUTTASWAMY.—The responsibility of shifting the E. D. hospital or running the E. D. hospital is that of the Government, not of the municipality. My question is not for what use they would put. My question is : how are these buildings being made use of for the present ?

Sri T. CHANNIAH.—Not yet, Sir.

Sri K. PUTTASWAMY.—May I know when these buildings were completed ?

Sri T. CHANNIAH.—I want notice.

Sri K. PUTTASWAMY.—May I know the expenditure incurred on these buildings ?

Sri T. CHANNIAH.—The expenditure incurred on these buildings is Rs. 54,000.

Sri K. PUTTASWAMY.—It is stated in answer to (*b*) that there are residential houses at some distance. May I know what is that distance ?

Sri T. CHANNIAH.—I cannot tell the exact distance of the residential buildings, to the E. D. hospital at present.

Sri K. PUTTASWAMY.—May I know the lung-space available for this E. D. Hospital ?

Sri T. CHANNIAH.—I want notice please.

Sri K. PUTTASWAMY.—What was the reason that prompted the Government to take a decision to shift the E. D. Hospital from its present location to a place where these block wards are built ?

Sri T. CHANNIAH.—On previous occasion the Director of Public Health gave an opinion that the existing E. D. Hospital may be shifted to near Soldiers' House near Bannimantap. But it was in August 1953. When an inspection was made by the Chief Minister, the Director of Medical Services and the Director of Public

(SRI T. CHANNIAH.)

Health and the Municipal Commissioner, it was thought desirable that the existing E. D. Hospital may not be shifted from that place and it may be continued with suitable sanitary arrangements.

Sri K. PUTTASWAMY.—May I point out during the said inspection, the Director of Medical Services and the Director of Public Health were not present there ? Has it come to the notice of the Government that the residential houses have been permitted quite close to the existing E. D. Hospital ?

Sri T. CHANNIAH.—Not quite close to the existing hospital. But some sites have been sold by the Trust Board at heavy prices.

Sri K. PUTTASWAMY.—My question is not with reference to the sites. My question is that residential houses have been built and persons and families are residing in houses which are very close to the hospital.

Sri T. CHANNIAH.—My information is that they are situated at considerable distance from the hospital.

Sri K. PUTTASWAMY.—May I know what is the source of your information saying that they are at 'good distance' ?

Sri T. CHANNIAH.— Official sources.

Sri K. PUTTASWAMY.—What is that official source, Sir ? I am a person who is residing just near it and the information that is supplied to you is far from truth. There are houses where families are residing and these houses are adjacent to the E. D. hospital. You get this information and you rely on it.

Mr. SPEAKER.—May I bring to the notice of the Hon'ble Member that, that is the answer given and if he wants to refute that statement, the question hour cannot be utilised for that.

Sri K. PUTTASWAMY.—May I know whether the Hon'ble Minister has inspected these buildings at any time ?

Sri T. CHANNIAH.—I have not inspected.

Sri K. PUTTASWAMY.—May I know the date on which the Director of Public Health has given his opinion ?

Sri T. CHANNIAH.—The date on which the Director of Public Health has given his opinion, I cannot give at present. But I think it is about $1\frac{1}{2}$ years back.

Sri K. PUTTASWAMY.—Is that not subsequent to the date on which the Chief Minister inspected the place, Sir?

Sri T. CHANNIAH.—I think the Chief Minister and the Director of Public Health have inspected the spot in the month of August 1953. I think it is after the date of the inspection of the Director of Public Health.

Sri K. PUTTASWAMY.—Has there been any representation or resolution by the Municipal Council very recently about the shifting of this hospital, Sir ?

Sri T. CHANNIAH.—Yes.

Sri K. PUTTASWAMY.—May I know when that resolution or representation was sent to the Government ?

Sri T. CHANNIAH.—I think on 30th November 1954.

Sri K. PUTTASWAMY.—Have they not sent up the opinion of the Director of Public Health which he furnished in the month of October 1954, to the Government ?

Sri T. CHANNIAH.—Yes, I have got the date on which the Director of Public Health has sent his report to the Commissioner, City Municipality. It is on 25th August 1954.

Sri K. PUTTASWAMY.—Will the Government kindly consider the opinion of the Director of Public Health in all earnestness, Sir ?

Sri T. CHANNIAH.—The Government have considered his report and the report of the Commissioner, City Municipality, in detail and they have come to the conclusion that at present there is no necessity to shift the existing E. D. hospital from its present location. Instead, they want to make sanitary arrangements to mitigate possible infection.

ಶ್ರೀ ಎ. ವಿ. ನರಸಿಂಹರೆಡ್ಡಿ.—ಪಬ್ಲಿಕ್ ಹೆಲ್ತ್ ಇಲಾಖೆ ಡೈರೆಕ್ಟರು ಅವರ ವರದಿಯಲ್ಲಿ ಏನು ಹೇಳಿದ್ದಾರೆ ?

ಶ್ರೀ ಟಿ. ಚೆನ್ನಯ್ಯ.—ಅವರು ಷಿಫ್ಟ್ ಮಾಡುವುದು ನೂಕ್ತವೆಂದು ಹೇಳಿದ್ದಾರೆ. ಒಂದುವೇಳೆ ಬದಲಾವಣೆ ಮಾಡುವುದಕ್ಕೆ ಸಾಧ್ಯವಾಗದೇ ಹೋದರೆ ಕೆಲವು ಬ್ಲಾಕುಗಳನ್ನು ಕಟ್ಟಿ ಅಲ್ಲಿ ಕೆಲವು ಸ್ಯಾನಿಟರಿ ಅರೇಂಜ್ ಮೆಂಟ್ ಮಾಡಿದರೆ ಅಲ್ಲಿ ವಾಸಮಾಡುವವರಿಗೆ ಯಾವ ತೊಂದರೆಯೂ ಆಗುವುದಿಲ್ಲವೆಂಬ ಅಭಿಪ್ರಾಯವಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಮುನಿಸಿಪಲ್ ಕೌನ್ಸಿಲ್‌ನವರೂ ಮತ್ತು ಪಬ್ಲಿಕ್ ಹೆಲ್ತ್ ಇಲಾಖೆ ಡೈರೆಕ್ಟರೂ ಷಿಫ್ಟ್ ಮಾಡಬೇಕೆಂದು ಹೇಳುವಾಗ ಸರ್ಕಾರದವರು ಅದನ್ನು ಯೋಚನೆ ಮಾಡುವುದು ಒಳ್ಳೆಯದಲ್ಲವೆ?

ಶ್ರೀ ಟಿ. ಚನ್ನಯ್ಯ.—ಅದನ್ನು ಯೋಚನೆ ಮಾಡಿ ಈಗ ಸಧ್ಯಕ್ಕೆ ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಸರ್ಕಾರ ಅಭಿಪ್ರಾಯಪಟ್ಟಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ಆಸ್ಪತ್ರೆಗಾಗಿ ತಾವೆಷ್ಟು ಖರ್ಚು ಮಾಡುತ್ತಿರುವುದು?

ಶ್ರೀ ಟಿ. ಚನ್ನಯ್ಯ.—ಅದಕ್ಕೆ ನೋಟೀಸ್ ಬೇಕು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈಗ ಕಟ್ಟಿರುವ ವಾರ್ಡುಗಳ ಬ್ಲಾಕಿಗೆ ಎಷ್ಟು ಖರ್ಚಾಗಿದೆ?

Sri T. CHANNIAH.—It is not possible to give that information now.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈಗಾಗಲೆ 54 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಬ್ಲಾಕನ್ನು ಕಟ್ಟಿದೆ. ಅದನ್ನು ಉಪಯೋಗಿಸುವ ದೃಷ್ಟಿಯಿಂದ ಮತ್ತು ಮುನಿಸಿಪಲ್ ಕೌನ್ಸಿಲ್ ಮತ್ತು ಪಬ್ಲಿಕ್ ಹೆಲ್ತ್ ಇಲಾಖೆ ಷಿಫ್ಟ್ ಮಾಡಬೇಕೆಂದು ಹೇಳಿರುವುದರಿಂದ ಇನ್ನೊಂದು ಸಾರಿ ಈ ಪ್ರಶ್ನೆಯನ್ನು ಪರಿಶೀಲಿಸುವುದು ಒಳ್ಳೆಯದಲ್ಲವೆ?

Mr. SPEAKER.—It is a matter of opinion.

Buildings for Schools in Arsikere Taluk.

Q.—545. Sri B. CHIKKANNA (Javagal).—

Will the Government be pleased to state:—

(*a*) the number of primary, middle and high schools in Arsikere Taluk;

(*b*) the number of primary, middle and high schools for which buildings have been constructed by them;

(*c*) the number of primary and middle schools for which buildings have been constructed by the villagers;

(*d*) the amount of grant given to each of the buildings constructed by the villagers?

A.—Sri A. G. RAMACHANDRA RAO (Minister for Law and Education).—

(*a*)	(1) High Schools	...	2
	(2) Middle Schools	...	9
	(3) Primary Schools	...	151
(*b*)	(1) High Schools	...	...
	(2) Middle Schools	...	8
	(3) Primary Schools	...	33
(*c*)	(1) Middle Schools	...	...
	(2) Primary Schools and N. T. M. Schools.		6
(*d*)	Nil so far.		

ಶ್ರೀ ಬಿ. ಚಿಕ್ಕಣ್ಣ.—ಅರಸೀಕೆರೆ ತಾಲ್ಲೂಕಿನಲ್ಲಿ ಮಾಧ್ಯಮಿಕ ಶಾಲೆ ಮತ್ತು ಪ್ರಾಥಮಿಕ ಶಾಲೆ ಕಟ್ಟಡಗಳಿಗಾಗಿ ಗ್ರಾಮಸ್ಥರು ಎಷ್ಟು ಹಣ ಡಿಪಾಜಿಟ್ ಮಾಡಿದ್ದಾರೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಡಿಪಾಜಿಟ್ ಮಾಡಿಲ್ಲ. ಸ್ಕೂಲು ಕಟ್ಟಡಗಳಿಗಾಗಿ ಗ್ರಾಮಸ್ಥರು ಎಷ್ಟು ಖರ್ಚು ಮಾಡಿದ್ದಾರೆಂದು ಎಸ್ಟಿಮೇಟ್ ಮಾಡಿದೆ. ಆರು ಸ್ಕೂಲುಗಳ ಪೈಕಿ ಐದು ಸ್ಕೂಲುಗಳ ಸಮಾಚಾರ ಗೊತ್ತಾಗಿದೆ; ಎಗ್ಜಿಕ್ಯುಟಿವ್ ಇಂಜಿನಿಯರು ತಿಳಿಸಿದ್ದಾರೆ, ಇನ್ನೊಂದರ ಸಮಾಚಾರ ಗೊತ್ತಾಗಿಲ್ಲ. ಇದರ ಪೈಕಿ ಗಂಡಸಿ ಹೋಬಳಿ ಅಲಾಡಿ ಹಳ್ಳಿ ಪ್ರೈಮರಿ ಸ್ಕೂಲಿಗೆ 6,000 ರೂಪಾಯಿ, ಹುಲ್ಲೇಕೆರೆ ಪ್ರೈಮರಿ ಸ್ಕೂಲಿಗೆ 9,300 ರೂಪಾಯಿ, ಚಿಕ್ಕಯಾರಗನಲು ಪ್ರೈಮರಿ ಸ್ಕೂಲಿಗೆ 11,300 ರೂಪಾಯಿ, ಚಿಕ್ಕೂರು ಪ್ರೈಮರಿ ಸ್ಕೂಲಿಗೆ 15 ಸಾವಿರ ರೂಪಾಯಿ, ಕಲ್ಯಾಡಿ ಎನ್.ಟಿ.ಎಂ. ಸ್ಕೂಲಿಗೆ 9,415 ರೂಪಾಯಿ ಖರ್ಚಾಗಿದೆ. ಕಲಗುಂಡದ ಎನ್.ಟಿ.ಎಂ. ಸ್ಕೂಲಿನ ಸಮಾಚಾರ ತಿಳಿಸಿಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ.—ಈ ಚಿಕ್ಕೂರು ಸ್ಕೂಲಿಗೆ ಸರ್ಕಾರದವರು ಎಷ್ಟು ಗ್ರಾಂಟ್ ಕೊಟ್ಟಿದ್ದೀರಿ?

ಶ್ರೀ ಎ. ಜಿ. ರಾಮಚಂದ್ರರಾವ್.—7,500 ರೂಪಾಯಿ ಇರಬೇಕು ಅಂತ ಕಾಣುತ್ತದೆ.

ಶ್ರೀ ಡಿ. ಆರ್. ಕರಿಗೌಡ.—ಆ ತಾಲ್ಲೂಕಿನಲ್ಲಿ 151 ಪ್ರೈಮರಿ ಸ್ಕೂಲುಗಳು ಇವೆ ಎಂದು ಹೇಳಿದ್ದೀರಿ. ಸ್ಕೂಲು ಕಟ್ಟಡ ಕೊಟ್ಟಿರುವುದು ಒಟ್ಟು 39 ಸ್ಕೂಲುಗಳಿಗೆ. ಇನ್ನು ಬಾಕಿ 112 ಸ್ಕೂಲುಗಳಿಗೆ ಬಾಡಿಗೆ ಕೊಡುತ್ತಾ ಇದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಅನೇಕ ಕಟ್ಟಡಗಳಿಗೆ ಬಾಡಿಗೆ ಕೊಡುತ್ತಾ ಇದ್ದಾರೆ. ಕೆಲವು ಮುಫತ್ತಾಗಿಯೂ ಇವೆ.

ಶ್ರೀ ಡಿ. ಆರ್. ಕರಿಗೌಡ.—ಆ ತಾಲ್ಲೂಕಿನಲ್ಲಿ ಖಾಸಗೀ ಕಟ್ಟಡ ಯಾವುದಕ್ಕೂ ಬಾಡಿಗೆ ಕೊಡುತ್ತಾ ಇಲ್ಲ ಎಂಬುದು ಗೊತ್ತೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಲ್ಲೂ ಕೆಲವು ಕಡೆ ಕೊಡುತ್ತಾ ಇದ್ದಾರೆ.

ಶ್ರೀ ಕೆ. ಲಕ್ಕಪ್ಪ.—ಖಾಸಗಿ ಜನಗಳು ತಾವಾಗಿಯೇ ಸ್ಕೂಲು ಕಟ್ಟಡಗಳನ್ನು ಕಟ್ಟಿ ಕೊಟ್ಟರೆ, ಸರ್ಕಾರದವರು ಅರ್ಧ ಹಣ ಕೊಡಬೇಕೆಂದು ನಿರೀಕ್ಷೆ ಮಾಡಿದರೆ ಅದಕ್ಕೆ ಅವಕಾಶ ಕಲ್ಪಿಸಿ ಕೊಂಡಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ಕೆ. ಲಕ್ಕಪ್ಪ.—ಅರಸೀಕೆರೆ ತಾಲ್ಲೂಕಿನಲ್ಲಿ ಈ ರೀತಿ ಅರ್ಧ ಹಣ ಕೊಡಬೇಕೆಂದು ಹೇಳಿ ಎಷ್ಟು ಅರ್ಜಿಗಳು ಬಂದಿವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಆರು ಗ್ರಾಮಗಳಿಂದ ಬಂದಿವೆ. ಪರಿಶೀಲನೆ ಮಾಡಿಸುತ್ತಾ ಇದ್ದೇವೆ. ಬಾಕಿಯದು ಸರ್ಕಾರದ ಪರ್ಯಾಲೋಚನೆಯಲ್ಲಿದೆ.

Non-Graduate Teachers in the Education Department (Grant of 1st grade's pay).

Q.—829. Sri T. C. BASAPPA (Tarikere).—

Will the Government be pleased to state:—

(*a*) whether it is a fact that non-graduate II Division Clerks in the

(SRI T. C. BASAPPA.)

Education Department are given the pay and grade of I Division Clerks when they graduate ;

(b) whether the same facility would be extended to non-graduate teachers when they graduate ;

(c) if the answer to (b) is in the negative, the reasons ?

A.—Sri Kadidal MANJAPPA (Minister for Revenue and Public Works).—

(a) It was ordered in Government Order No. E. 3157-256—R. & P. S. 38-52-2, dated 22nd May 1953, that the pay of all II Division Clerks in service as have become graduates subsequent to their appointment be fixed at Rs. 60 per mensem in the II Division grade itself.

(b) It is under consideration of Government.

(c) Does not arise in view of reply to (b).

ಶ್ರೀ ಟಿ. ಸಿ. ಬಸಪ್ಪ.—(a) ಭಾಗದಲ್ಲಿ ಉತ್ತರ ಕೊಟ್ಟಿದ್ದೀರಿ. ಈ ಪ್ರಕಾರ II ಡಿವಿಜನ್‌ನಲ್ಲಿರತಕ್ಕ ಕ್ಲಾರ್ಕ್ಸ್ I ಡಿವಿಜನ್ನಿಗೆ ಪ್ರೊಮೋಷನ್ ಆಗಲು ಸಾಧ್ಯವಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ವೇಕೆನ್ಸಿ ಬಿದ್ದಾಗ ರೂಲ್ಸ್ ಪ್ರಕಾರ ಪ್ರೊಮೋಷನ್ ಆಗುವುದಕ್ಕೆ ಅವಕಾಶವಿದೆ.

ಶ್ರೀ ಟಿ. ಸಿ. ಬಸಪ್ಪ.—ಇದೇರೀತಿ ನಾನ್ ಗ್ರಾಜ್ಯುಯೇಟ್ ಟೀಚರ್ಸ್ ಗ್ರಾಜ್ಯುಯೇಟ್ಸ್ ಆದರೆ ಪ್ರೊಮೋಷನ್ ಆಗುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ರೂಲ್ಸ್ ಪ್ರಕಾರ ಕ್ವಾಲಿಫಿಕೇಷನ್ ಬಂದ ಕೂಡಲೇ ಪ್ರೊಮೋಷನ್ ಬರುವುದಿಲ್ಲ. II ಡಿವಿಜನ್‌ನಲ್ಲೇ ಗ್ರಾಜ್ಯುಯೇಟ್ಸ್ ಆದ ಮೇಲೂ ಕೂಡ 60 ರೂಪಾಯಿ ಸಂಬಳ ಕೊಟ್ಟು ಮೊದಲು ಯಾವ ಸ್ಥಳದಲ್ಲಿದ್ದರೋ ಅದೇ ಸ್ಥಳದಲ್ಲಿ ಇಡಲ್ಪಡುತ್ತಾರೆ. ತಕ್ಷಣ ಪ್ರೊಮೋಷನ್ ಕೊಡುವುದಿಲ್ಲ.

ಶ್ರೀ ಟಿ. ಸಿ. ಬಸಪ್ಪ.—II ಡಿವಿಜನ್‌ನಲ್ಲಿ ಕ್ಲಾರ್ಕ್ ಆಗಿದ್ದು ಗ್ರಾಜ್ಯುಯೇಟ್ ಆದರೆ I ಡಿವಿಜನ್‌ಗೆ ಪ್ರೊಮೋಷನ್ ಆಗುವುದಕ್ಕೆ ಅವಕಾಶವಿದೆಯಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಗ್ರಾಜ್ಯುಯೇಟ್ ಆದ ತಕ್ಷಣ ಆಗುವುದಿಲ್ಲ. He has to wait for his chance according to seniority.

ಶ್ರೀ ಟಿ. ಸಿ. ಬಸಪ್ಪ.—ಅದರಂತೆ ನಾನ್‌ಗ್ರಾಜ್ಯುಯೇಟ್ ಟೀಚರ್ಸ್‌ಗೂ, ಗ್ರಾಜ್ಯುಯೇಟ್ಸ್ ಆದರೆ I ಡಿವಿಜನ್‌ಗೆ ಪ್ರೊಮೋಷನ್ ಆಗುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಪರಿಶೀಲನೆ ಆಗಿ I ಡಿವಿಜನ್ ಕ್ಲಾರ್ಕ್ಸ್ 1/3 ಭಾಗ ಗ್ರಾಜ್ಯುಯೇಟ್ ಆದವರಿಗೆ ಪ್ರೊಮೋಷನ್ ಕೊಡಬೇಕೆಂದು ಆರ್ಡರಾಗಿದೆ. ಇವರಿಗೂ ಅದೇ ರೀತಿ ಕೊಡುವುದು ಸೂಕ್ತವೆ ಎಂಬ ವಿಷಯ ಪರ್ಯಾಲೋಚನೆಯಲ್ಲಿದೆ.

ಶ್ರೀ ಟಿ. ಸಿ. ಬಸಪ್ಪ.—ಅಕ್ಟೋಬರ್ ಅಧಿವೇಶನದಲ್ಲಿ ಇದೇ ತರಹ 626 ನೇ ಪ್ರಶ್ನೆ ಬಂದಾಗ ಉತ್ತರ ಕೊಡಲಾಗಿತ್ತು, "The matter is under consideration" ಎಂದು. ಈಗಾಗಲೇ ಆರು ತಿಂಗಳು ಆಯಿತು.

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ಪರ್ಯಾಲೋಚನೆಮಾಡಿ 1/3 ಭಾಗ ಕೊಟ್ಟಿದ್ದಾರೆ. ಅವರಿಗೆ ಅನ್ವಯಿಸಿರುವಹಾಗೆಯೇ ಬಾಕಿಯವರಿಗೂ ಅನ್ವಯಿಸುವ ಸೂಕ್ತತೆಯನ್ನು ಪರ್ಯಾಲೋಚಿಸುತ್ತಿದ್ದಾರೆ.

ಶ್ರೀ ಟಿ. ಸಿ. ಬಸಪ್ಪ.—ಬಾಕಿಯವರ ವಿಷಯದಲ್ಲೂ ಅದೇ ರೀತಿ ಆರ್ಡರ್ ಮಾಡಲಕ್ಕೆ ಸಾಧ್ಯವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆದಷ್ಟು ಜಾಗ್ರತೆ ಮಾಡುತ್ತೇವೆ.

ಶ್ರೀ ಆರ್. ಅನಂತರಾಮನ್.—ಸೆಕ್ರೆಟೇರಿಯಟ್‌ನಲ್ಲಿ ಗ್ರಾಜ್ಯುಯೇಟ್ಸ್‌ನ್ನು II ಡಿವಿಜನ್ ಕ್ಲಾರ್ಕ್ಸ್ ಆಗಿ ಬಹಳ ದಿವಸದಿಂದ ನೇಮಕಮಾಡಿಕೊಂಡಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—II ಡಿವಿಜನ್ ಕ್ಲಾರ್ಕ್ಸ್ ನಾನ್ ಗ್ರಾಜ್ಯುಯೇಟ್ಸ್ ಆಗಿದ್ದವರು ಗ್ರಾಜ್ಯುಯೇಟ್ಸ್ ಆದರೆ, he will be paid Rs. 60 but his place in the gradation list will not change.

Sri R. ANANTARAMAN.—Have you not appointed gradaute teachers as second grade clerks in the Secretariat ?

Sri Kadidal MANJAPPA.—I want notice.

Sri R. ANANTARAMAN.—If it is so, will you kindly see that they are made first grade clerks ?

Sri Kadidal MANJAPPA.—It is hypothetical, Sir.

ಶ್ರೀ ಡಿ. ಆರ್. ಕರಿಗೌಡ.—ಗ್ರಾಜ್ಯುಯೇಟ್ಸ್‌ಗೆ 60 ರೂಪಾಯಿ ಸಂಬಳ ಬರುವಂತೆ ಮಾಡಿದ್ದರೂ ಕೂಡ ಫಾರೆಸ್ಟ್ ಡಿಪಾರ್ಟ್‌ಮೆಂಟಿನಲ್ಲಿ ಗ್ರಾಜ್ಯುಯೇಟ್ ಆದರೂ 40 ರೂಪಾಯಿ ಸಂಬಳ ಕೊಡುತ್ತಿರುವುದು ಗೊತ್ತೇ ?

Sri Kadidal MANJAPPA.—I want notice.

ಶ್ರೀ ಡಿ. ಆರ್. ಕರಿಗೌಡ.—ಹಾಸನ ಜಿಲ್ಲೆಯ ಜಿಲ್ಲಾಫಾರೆಸ್ಟ್ ಆಫೀಸಿನಲ್ಲಿ ಒಬ್ಬ ಗ್ರಾಜ್ಯುಯೇಟ್‌ಗೆ 40 ರೂಪಾಯಿ ಸಂಬಳ ಕೊಡುತ್ತಾ ಇದ್ದಾರೆ. 60 ರೂಪಾಯಿ ಕೊಡಬೇಕು ಎಂದು ಅವರು ಕೇಳಿಕೊಳ್ಳುತ್ತಾ ಇದ್ದರೂ ಕೂಡ ಆರು ತಿಂಗಳಿನಿಂದಲೂ ಹಾಗೆಯೇ ಪೆಂಡಿಂಗ್‌ನಲ್ಲಿದೆ ಎಂಬುದು ಗೊತ್ತೇ ?

Sri Kadidal MANJAPPA.—I will enquire into the matter.

ಶ್ರೀ ಬಿ. ಹುಚ್ಚೇಗೌಡ.—Under-graduate teachers, graduates ಆಗಿಬಿಟ್ಟಮೇಲೂ ಅವರನ್ನು ಗ್ರಾಜ್ಯುಯೇಟ್ಸ್ ಎಂದು consider ಮಾಡುವುದಿಲ್ಲ ಎಂದು ಹೇಳುತ್ತಾರೆ. ಆ ರೀತಿ ಏಕೆ ಮಾಡಬಾರದು ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಂಥಾ ಲೋಪ ಗಮನಕ್ಕೆ ಬಂದಲ್ಲಿ ವಿಚಾರಿಸುತ್ತೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ವಿದ್ಯಾಭ್ಯಾಸ ಇಲಾಖೆಯಲ್ಲಿ I ಡಿವಿಜನ್, II ಡಿವಿಜನ್ ಕ್ಲಾರ್ಕ್ಸ್ ಎಷ್ಟು ಜನ ಇದ್ದಾರೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಆರ್. ಮುನಿಸ್ವಾಮಯ್ಯ.—I ಡಿವಿಜನ್ ಕ್ಲಾರ್ಕ್‌ನ್ನು ನೇಮಕಮಾಡಿಕೊಳ್ಳುವಾಗ ಗ್ರ್ಯಾಜುಯೇಟ್ಸ್ ಆಗಿರತಕ್ಕವರ ಪಟ್ಟಿ ಮೊದಲೇ ಮಾಡಿಕೊಂಡು ಆಮೇಲೆ ಏಕೆ ನೇಮಿಸಿಕೊಳ್ಳಬಾರದು ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನೆಲ್ಲಾ ಯೋಚನೆ ಮಾಡುತ್ತೇವೆ ಎಂದು ಹೇಳಿದೆ.

QUESTIONS FOR ANSWERS ON THE DAY.

(but not taken up)

Power supply to Irrigation Pump Sets from Madhugiri to Midigesi.

Q.—387. Sri Mali MARIAPPA (Pavagada).—

Will the Government be pleased to state :—

(*a*) whether an estimate for supply of power to Irrigation Pump sets from Madhugiri to Midigesi *via* Hosakere is prepared ?

(*b*) when the work will be taken up ?

A.—Dr. R. NAGAN GOWDA (Minister for Agriculture).—

(*a*) Yes.

(*b*) The question of taking up the work during 1955-56 is being examined.

Grow More Food Scheme (Confirmation of land grants).

Q.—407. Sri K. PRABHAKAR (Nelamangala—Scheduled Castes).—

Will the Government be pleased to state :—

(*a*) the number of applicants and extent of lands granted under Grow More Food Scheme in the State from the inception of the scheme up-to-date (yearwar information may be given) ;

(*b*) of that, what is the number of applicants and extent granted to scheduled caste people ;

(*c*) with regard to scheduled caste people, how many cases have been confirmed so far and how many cases were pending confirmation before the issue of Government Order to convert all grants under Grow More Food into grants, as if made under D. D. rules ;

(*d*) whether it is not a fact that lands granted during 1944-45 still remain without being confirmed, for example, Hanumanthapuram in Nelamangala Taluk ?

A.—Sri Kadidal MANJAPPA (Minister for Revenue and Public Works).—

(*a*) Please see Statement appended on page 2080.

(*b*) Information is not readily available.

(*c*) No such Government Order has been issued.

(*d*) In some cases, yes.

(SRI KADIDAL MANJAPPA.)

Statement showing the number of applications received and the extent of land granted under Grow More Food Scheme from the inception of the Scheme.

Year	Bangalore No.	Bangalore Extent	Kolar No.	Kolar Extent	Mysore No.	Mysore Extent	Mandya No.	Mandya Extent	Tumkur No.	Tumkur Extent
1	2	3	4	5	6	7	8	9	10	11
		A. G.		A. G.		A. G.		A. G.		A. G.
1941-42	883	6,811 24	...	2,775 11	227	923 05	...	1,764 24	..	...
1942-43	10,571	14,753 25	...	10,092 11	705	4,059 14	...	6,314 02	1,854	15,184 39
1943-44	4,430	5,304 14	...	7,329 16	231	1,601 28	...	4,404 05	1,122	9,958 06
1944-45	1,112	4,036 36	...	5,945 34	335	1,818 18	...	3,199 17	1,926	11,710 15
1945-46	2,957	4,024 36	...	6,277 11	505	1,320 17	...	3,199 01	1,827	2,404 37
1946-47	507	2,222 37	...	4,330 05	541	2,007 33	...	934 35	641	2,812 11
1947-48	772	1,896 13	...	7,030 26	335	2,952 14	...	282 18	570	2,714 28
1948-49	669	1,760 06	...	4,179 09	324	1,692 11	...	162 21	439	3,204 07
1949-50	341	1,088 14	...	6,476 16	488	2,[illegible]41 02	...	...	251	1,518 29
1950-51	211	565 14	...	6,207 16	888	1,425 31	...	...	307	1,985 23
1951-52	100	319 30	...	9,987 33	569	2,066 16	...	..	166	1,014 02
1952-53	930	340 39	...	4,980 17	96	1,122 20	...	...	113	684 20

Year	Hassan No.	Hassan Extent	Chikmagalur No.	Chikmagalur Extent	Shimoga No.	Shimoga Extent	Chitaldrug No.	Chitaldrug Extent
	12	13	14	15	16	17	18	19
		A. G.		A. G.		A. G.		A. G.
1941-42	...	..	230	1,580 31	...	117 08	382	11,360 05
1942-43	345	1,378 28	409	2,194 01	...	2,775 27	831	11,831 17
1943-44	201	1,280 09	430	1,728 17	...	3,144 27	519	10,770 05
1944-45	72	925 15	146	2,520 32	...	2,663 14	474	5,431 00
1945-46	132	688 36	111	801 17	...	28,971 12	371	4,189 24
1946-47	82	768 31	119	829 38	...	2,740 27	176	2,474 37
1947-48	67	512 14	166	948 39	...	1,204 13	198	2,105 34
1948-49	69	956 28	123	768 01	...	1,366 20	163	1,476 33
1949-50	89	1,046 12	123	611 21	...	1,848 16	110	781 06
1950-51	135	453 28	53	377 15	...	2,283 36	42	113 37
1951-52	137	899 16	73	271 19	...	1,899 07	...	...
1952-53	78	144 05	81	181 33	...	527 37	...	...

Note.—Information regarding the number of applications in the Districts of Kolar, Mandya and Shimoga are not readily available.

Petition against Sri T. M. Rangayya Setty, Municipal Councillor of Chintamani Town.

Q.—578. Sri M. C. ANJANEYA REDDY (Chintamani).—

Will the Government be pleased to state :—

(*a*) the date on which the Sub-Division Officer of Chikballapur Sub-Division submitted his report to the Commissioner with reference to the petition received by the Commissioner for Local Self-Government from one Sri A. C. Veerabhadrappa of Chintamani Town alleging that Sri T. M. Rangayya Setty, a Municipal Councillor of Chintmani Town, has acted against the interests of the said municipality ?

(*b*) whether it is a fact that the Commissioner had called for the views of the Municipal Council in respect of the misconduct of the said Sri T. M. Rangayya Setty ;

(*c*) if so, on what date ;

(*d*) the date on which the Municipal Council sent up their decision unanimously recommending for his removal in accordance with Section 16 of the Town Municipal Act ;

(*e*) the reason for not disposing of this matter so far ?

A.—Sri T. CHANNIAH (Minister for Public Health and Local Self-Government).—

(*a*) 14th July 1954.

(*b*) Yes.

(*c*) On 2nd September 1954.

(*d*) On 6th September 1954.

(*e*) Some records which are required for a full consideration of the case are not made available yet.

Landless agricultural families.

Q.—815. Sri S. R. NAGAPPA SETTY (Shimoga).—

Will the Government be pleased to state :—

(*a*) the number of landless agricultural families in the State ;

(*b*) whether they would consider to register the agricultural families in the State who are entirely depending on agriculture as tenants and consider such registered agricultural families while granting lands ?

A.—Sri Kadidal MANJAPPA (Minister for Revenue and Public Works).—

(*a*) The information is not available.

(*b*) No.

ADJOURNMENT MOTION.

Re: Adverse effect of incidence of Sales-Tax on Agricultural Produce.

Mr. SPEAKER.—Sri Mulka Govinda Reddy has given notice of an adjournment motion as follows :—

"This House do now stand adjourned to discuss a definite matter of urgent public importance and of recent occurrence to wit the situation arising out of the non-disposal of agricultural produce, groundnut by the growers after the introduction of the new system of sales-tax from 1st April, whereby the agriculturist is made to pay sales-tax on his produce which has resulted in accumulation of huge stocks in the market yards at Davangere, Tumkur and Mysore Regulated Markets and thus causing hardship to the raiyats and breakdown of normal trade."

The matter is no doubt of great public importance. But, the new system of sales-tax referred to in the motion, though stated to come into force from the 1st of April, is as a result of an amending Act passed quite some time ago by the Legislature.

I also learn that the Rules under which the levy is made was published on 2-2-1955 and objections were called for and it is only thereafter that the levy has come into force. Therefore there was enough time for the Mover to bring this matter before the Assembly earlier.

It is also clear that any change in the method of levy has to be by legislation. It has been laid down that when an alteration in the law

(MR. SPEAKER.)

which is complained of is required, then the method is not by an adjournment motion.

As stated by Mr. Speaker Peel as early as 1894, "What I think was contemplated was the occurrence of some sudden emergency. But I do not think it was contemplated that a question of very wide scope, which would demand legislation to deal with it in any effective manner should be the subject of discussion."

In the circumstances, the adjournment motion is not in order and I therefore disallow it.

Sri J. MOHAMED IMAM (Jagalur).—Sir, I would like to know if the Hon'ble Minister is contemplating to bring an amendment to the Sales Tax Act very soon. What is the intention of Government?

Sri Kadidal MANJAPPA (Minister for Revenue and Public Works).—I am examining the question.

Mr. SPEAKER.—Since, yesterday, during discussion, the Government also admitted that the report of the committee was otherwise, they will take necessary action.

Sri J. MOHAMED IMAM.—Sir, yesterday the Hon'ble Minister said emphatically that Government want to bring an amendment and today, the Hon'ble Minister says that he wants to examine. Why is this inconsistency, Sir?

Sri Kadidal MANJAPPA.—Even yesterday, I submitted that I am examining the matter and actively considering the subject.

Sri J. MOHAMED IMAM.—It is a very urgent matter.

Sri Kadidal MANJAPPA.—I understand. The only solution would be to shift this commodity from the single point levy to the multi-point levy.

Sri J. MOHAMED IMAM.—The entire market is paralysed.

Sri Kadidal MANJAPPA.—I am fully aware of it.

Sri J. MOHAMED IMAM.—If necessary and if the matter is so grave, I would suggest to Government to bring in an ordinance....

Sri Kadidal MANJAPPA.—We are sitting here and we cannot draw an ordinance. I am drafting an amendment. I will consult some Hon'ble members before taking a final decision.

12-30 P.M.

ADJOURNMENT MOTION

Re. Delayed Publication of the Results of Sakti-Vishistadwaita Examination.

Mr. SPEAKER.—I have got another adjournment motion to be disposed of before taking up any other business. Sri Linganna has sent up an adjournment motion which is as follows :—

"This House do stand adjourned to discuss a definite matter of public importance and of recent occurrence, namely, :the delayed publication of the results of Sakti-Vishistadwaita Examinations of the State on April 7th 1955 resulting in the prevention of the failed candidates from appearing for the 1955 examination in the usual course."

Sri A. G. RAMACHANDRA RAO (Minister for Law and Education).—I may submit that there is a short notice question also covering this issue. Further, Sir, this is not a matter of public importance because it concerns just a few students against whom there was a charge of corruption and leakage of papers. It was considered and a very sympathetic view was taken and the results were announced. No doubt there was some delay because the matter had to be investigated at length. My submission therefore is that it is not a matter of public importance and it concerns just a few students. In view of the fact that there is a short notice question on this subject technically also, this adjournment motion is not admissible.

Sri M. LINGANNA (Nanjangud).—I want to know whether the Minister wants to admit Short Notice Question. In that case, I am not pressing this adjournment motion at all.

Mr. SPEAKER.—It has been stated by the Honourable Minister that there is a short notice question. That means he is going to answer that also.

Sri M. LINGANNA. – I do not press the motion.

Sri A. V. NARASIMHA REDDY (Bangalore South).—There is a ruling pending from the Chair regarding the chance to be given to Sri H. M. Channabasappa. The Chair undertook to give the ruling.

Mr. SPEAKER.—I am examining it and I also wanted to know the procedure that has been adopted in the other legislatures. Since that Bill is not taken up for consideration, I will announce my ruling in a day or two.

Now the discussion on the Village Panchayets and District Boards (Amendment) Bill will continue.

MYSORE VILLAGE PANCHAYETS AND DISTRICT BOARDS (AMENDMENT) BILL, 1955.

Motion to consider (contd.)

*ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಸ್ವಾಮಿ, ಮಾನ್ಯ ಕಂದಾಯ ಮಂತ್ರಿಗಳು ನಿನ್ನೆಯ ದಿವಸ ಸಭೆಯ ಮುಂದೆ ಮಂಡಿಸಿರತಕ್ಕಂಥ ಮೈಸೂರು ಗ್ರಾಮಪಂಚಾಯಿತಿಗಳ ಮತ್ತು ಜಿಲ್ಲಾ ಮಂಡಳಿಗಳ ತಿದ್ದುಪಡಿ ಮಸೂದೆಯ ವಿಷಯದಲ್ಲಿ ಈಗಾಗಲೇ ಮಾನ್ಯ ಸದಸ್ಯರನೇಕರು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈ ಮಸೂದೆಯನ್ನು ಸಭೆಯ ಮುಂದೆ ಮಂಡಿಸುತ್ತ ಮಾನ್ಯ ಮಂತ್ರಿಗಳು ಜಿಲ್ಲಾ ಬೋರ್ಡು ಮತ್ತು ಗ್ರಾಮ ಪಂಚಾಯಿತಿಗಳ ಇತಿಹಾಸವು ಎಲ್ಲಾ ಮಾನ್ಯ ಸದಸ್ಯರುಗಳಿಗೂ ತಿಳಿದಿರತಕ್ಕದ್ದೇ ಆಗಿದೆ, ಆದುದರಿಂದ ನಾನು ಈ ವಿಷಯದಲ್ಲಿ ಹೆಚ್ಚಿನ ಒಂದು ವಿವರಣೆಯನ್ನು ಕೊಡುವುದಕ್ಕೆ ಇಷ್ಟಪಡುವುದಿಲ್ಲ. ಸ್ವಲ್ಪ ಮಟ್ಟಿಗೆ ವಿವರಣೆಗಳನ್ನು ಕೊಡುತ್ತೇನೆಂದು ಹೇಳಿ ಕೆಲವು ಮಾತುಗಳನ್ನು ಆಡಿರುತ್ತಾರೆ ಈ ಹಿಂದೆ 1947 ನೆಯ ಇಸವಿಯಲ್ಲಿ ಆಗ ಜಾರಿಯಲ್ಲಿದ್ದ 1926 ನೆಯ ಇಸವಿ ಜಿಲ್ಲಾ ಬೋರ್ಡುಗಳ ಆಕ್ಟಿನ ಆಧಾರದ ಮೇಲೆ ಚುನಾವಣೆಗಳಾದುವು. ಆಮೇಲೆ 1949 ನೆಯ ಇಸವಿಯಲ್ಲಿ ಶ್ರೀ ವಿ. ವೆಂಕಟಪ್ಪನವರ ನೇತೃತ್ವದಲ್ಲಿ ಒಂದು ಕಮಿಟಿಯನ್ನು ರಚಿಸಿದರು. ಆ ಸಮಿತಿಯವರು ಒಪ್ಪಿಸಿದ ವರದಿಯ ಆಧಾರದ ಮೇಲೆ 1952 ರಲ್ಲಿ ಇದರ ಬಗ್ಗೆ ಒಂದು ಕಾನೂನು ರಚಿತವಾಯಿತು. ಅನಂತರ ಮತ್ತೆ ಈ ಚುನಾವಣೆಗಳ ವಿಷಯದಲ್ಲಿ ಕೆಲವು ಭಿನ್ನಾಭಿಪ್ರಾಯಗಳು ತಲೆದೋರಿ ಈ ಚುನಾವಣೆಗಳೆಲ್ಲವೂ ನೇರವಾಗಿ ನಡೆಯಬೇಕೇ ಅಥವಾ ಅಪ್ರತ್ಯಕ್ಷವಾಗಿ ನಡೆಯಬೇಕೇ ಎಂಬ ವಿಚಾರದಲ್ಲಿ ಭಿನ್ನಾಭಿಪ್ರಾಯಗಳು ಬಂದವು. ಆಗ ಪುನಃ ಈ ವಿಷಯಗಳನ್ನೆಲ್ಲಾ ಪರಿಶೀಲನೆ ಮಾಡುವುದಕ್ಕಾಗಿ ಶ್ರೀ ಡಿ. ಎಸ್. ಚಂದ್ರಶೇಖರಯ್ಯನವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಿದರು. ಈಗ ಜಿಲ್ಲಾ ಬೋರ್ಡುಗಳಿಗೆ ಚುನಾವಣೆಗಳು ನಡೆಯಬೇಕಾದದ್ದು ಅತ್ಯಗತ್ಯ ಎಂದು ಹೇಳಿ ಈ ಒಂದು ತಿದ್ದುಪಡಿಯನ್ನು ತಂದು ಈ ದಿವಸ ಈ ಚುನಾವಣೆಗಳೆಲ್ಲವೂ ಪ್ರತ್ಯಕ್ಷವಾಗಿಯೇ ನಡೆಯಬೇಕೆಂದು ಸ್ಪಷ್ಟವಾಗಿ ಸಭೆಯ ಮುಂದೆ ತಿಳಿಸಿರುತ್ತಾರೆ. ಆದರೆ ನಾನು ಮೊಟ್ಟಮೊದಲನೆಯದಾಗಿ ಈ ವಿಷಯದಲ್ಲಿ ಹೇಳಬೇಕಾಗಿರುವಂಥ ಒಂದು ಅಂಶವೇನೆಂದರೆ ನಮ್ಮ ದೇಶಕ್ಕೆ ಈಗಾಗಲೇ ಸ್ವಾತಂತ್ರ್ಯ ಬಂದು ಎಂಟು ವರ್ಷಗಳಿಗೆ ಮೇಲಾಯಿತು. ಈ ಅವಧಿಯಲ್ಲಿ ಕಾಂಗ್ರೆಸ್ ಸರ್ಕಾರ ಈ ಸ್ಥಳೀಯ ಸಂಸ್ಥೆಗಳ ಬಗ್ಗೆ ತೋರಿಸಿರುವಂಥ ಒಂದು ಅನಾದರಣೀಯ ಮತ್ತು ತಾತ್ಸಾರ ಮನೋಭಾವನೆಯೇನಿದೆಯೋ ಅದು ತೀರಾ ಖಂಡನೀಯ ಮಾತ್ರವೇ ಅಲ್ಲದೆ ಪೂರಾ ವಿಷಾದಕರವಾದಂಥ ಅಂಶವೆಂಬುದಾಗಿ ನಾನು ಹೇಳಬೇಕಾಗಿದೆ. ಆದರೆ ಈಗಾಗಲೇ ಈ ಮಸೂದೆಯ ಬಗ್ಗೆ ಮಾತನಾಡಿರತಕ್ಕಂಥ ಶ್ರೀ ಕೆ. ಪಟ್ಟಾಭಿರಾಮನ್‌ರವರು ತಮ್ಮ ಒಂದು ಅಭಿಪ್ರಾಯವನ್ನು ಯಾವ ರೀತಿಯಾಗಿ ವ್ಯಕ್ತಪಡಿಸಿರುತ್ತಾರೋ ಅದರಂತೆ ತಮ್ಮ ಒಂದು ರಾಜಕೀಯ ಪಕ್ಷದ ಮತ್ತು ರಾಜಕೀಯ ಚಟುವಟಿಕೆಗಳನ್ನು ಯಾವ ರೀತಿಯಾಗಿ ನಡೆಯುವಂತೆ ಮಾಡಿದರೆ ತಮ್ಮ ಪಕ್ಷದ ಸದಸ್ಯರಿಗೆ ಬೆಂಬಲ ದೊರೆಯುತ್ತದೆಂಬ ಅಂಶವನ್ನೇ ತಾವು ತಮ್ಮ ಮುಖ್ಯ ಗಮನದಲ್ಲಿಟ್ಟುಕೊಂಡು ಈ ಸ್ಥಳೀಯ ಸಂಸ್ಥೆಗಳ ಸ್ಥಾನಗಳು ತಮ್ಮ ಪಕ್ಷಕ್ಕೆ ಭದ್ರವಾಗಿ ಮತ್ತು ಊರ್ಜಿತವಾಗಿ ಉಳಿಯುವಂತೆ ಮಾಡಬೇಕೆಂಬ ಉದ್ದೇಶದಿಂದ ಈ ಮಸೂದೆ ತಂದಿದ್ದೀರಿ. ಈ ಅಧಿಕಾರವರ್ಗವನ್ನು ತಮ್ಮ ಕೈಲೇ ಯಾವಾಗಲೂ ಉಳಿಯುವಂತೆ ಮಾಡಿಕೊಳ್ಳಬೇಕೆಂಬ ಉದ್ದೇಶ ತಮಗೆ ಪೂರ್ತಿಯಾಗಿ ಇದ್ದಂತೆ ಕಂಡು ಬರುತ್ತಿದೆ. ನಾನೇ ಈ ರೀತಿಯಾಗಿ ಮೊಟ್ಟಮೊದಲನೆಯದಾಗಿ ಒಂದು ಟೀಕೆಯನ್ನೇನಾದರೂ ಮಾಡಿದ್ದಿದ್ದರೆ ಶ್ರೀಮಾನ್ ಗೋಪಾಲಗೌಡರು ತಮ್ಮ ಪಕ್ಷದ ದೃಷ್ಟಿಯಿಂದ ಹೀಗೆ ಹೇಳುತ್ತಿದ್ದಾರೆ ಎಂದು ಹೇಳಿ ಇದನ್ನು ತಾವುಗಳೆಲ್ಲರೂ ತಿರಸ್ಕಾರ ಮಾಡುವುದಕ್ಕೆ ಒಂದು ಅವಕಾಶ ಬಹುಶಃ ಇರುತ್ತಿತ್ತೋ ಏನೋ. ಆದರೆ ಈಗಾಗಲೇ ಈ ವಿಷಯವನ್ನು ಯಾವ ಪಕ್ಷಕ್ಕೂ ಸೇರದೆ ಇರುವಂಥ ಶ್ರೀ ಕೆ. ಪಟ್ಟಾಭಿರಾಮನ್‌ರವರು ಒಂದು ನಿಷ್ಪಕ್ಷಪಾತ ದೃಷ್ಟಿಯಿಂದ ಹೇಳಿರುತ್ತಾರಾದುದರಿಂದ ನಾನೀಗ ಇದನ್ನು ಪುಷ್ಟೀಕರಿಸುತ್ತಿದ್ದೇನೆ. ಆದರೆ ಹೀಗೆ ಅವರು ಹೇಳಿರತಕ್ಕದ್ದನ್ನೇ ನಾನು ಪುಷ್ಟೀಕರಿಸುತ್ತಿರುವುದರಿಂದ ಈಗಿನ ರಾಜಕೀಯ ಪಕ್ಷ ನನ್ನ ಮೇಲೇನೂ ಬೀಳಲಾರದೆಂಬ ಭರವಸೆಯಿಂದ ನಾನೀಗ ಮಾತನಾಡುತ್ತಿದ್ದೇನೆ.

ಶ್ರೀ ಕಡಿದಾಳ್ ಮಂಜಪ್ಪ (ರೆವಿನ್ಯೂ ಮತ್ತು ಮುಜರಾಯಿ ಇಲಾಖೆಗಳ ಮಂತ್ರಿಗಳು).—ಆ ವ್ಯಾಧಿ ಮೊದಲು ಅಲ್ಲಿತ್ತು. ಈಗ ಅದು ಇಲ್ಲಿಗೆ ಬಂದಿದೆ.

ಶ್ರೀ ಎಸ್. ಗೋಪಾಲಗೌಡ.—ಈಗ ತಾವು ಈ ರೀತಿಯಾಗಿ ಈ ಸ್ಥಳೀಯ ಸಂಸ್ಥೆಗಳ ವಿಚಾರದಲ್ಲಿ ಒಂದು ರಾಜಕೀಯ ದೃಷ್ಟಿಯನ್ನಿಟ್ಟುಕೊಂಡು ತಮ್ಮ ಪಕ್ಷದ ಜನಗಳಿಗೇನೇ ಒಂದು ಅನುಕೂಲವಾದಂಥ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಉದ್ದೇಶಪಟ್ಟಿರತಕ್ಕದ್ದು ದೇಶದ ಹಿತದೃಷ್ಟಿಯಲ್ಲಿ ಅಪ್ಪು

* Asterisk indicates that the remarks and speeches have not been revised by the Member concerned.

(ಶ್ರೀ ಎಸ್. ಗೋಪಾಲಗೌಡ.)

ಹಿತಕರವಾದುದಲ್ಲ ಮತ್ತು ಒಳ್ಳೆಯದಲ್ಲ ಎಂದು ಹೇಳ
ಬೇಕಾಗಿದೆ. ನಮ್ಮ ದೇಶದಲ್ಲಿ ಸ್ಥಳೀಯ ಸಂಸ್ಥೆ
ಗಳ ಇತಿಹಾಸವು ಬಹಳ ಪುರಾತನವಾದದ್ದು.
ಬ್ರಿಟಿಷರು ನಮ್ಮ ದೇಶಕ್ಕೆ ಬಂದಮೇಲೆ ಈ ಸ್ಥಳೀಯ
ಸಂಸ್ಥೆಗಳು ಸಂಪೂರ್ಣವಾಗಿ ನಿರ್ಜೀವಿಗಳಾದವು.
ಅವರಿಂದ ಇವುಗಳಿಗೆ ಬಹಳ ಕಾಲ ಯಾವ ಒಂದು
ಪುರಸ್ಕಾರವೂ ದೊರೆಯಲಿಲ್ಲ. ಆದರೆ ಅವರಿಗೆ ಅನಿ
ವಾರ್ಯವಾಗಿ ಕೊನೆಕೊನೆಯಲ್ಲಿ ಈ ಸಂಸ್ಥೆಗಳಿಗೆ
ಒಂದು ರೂಪ ಕೊಡದೇಬೇಕಾಗಿ ಬಂತು. ಇಲ್ಲಿಗೆ
ಸುಮಾರು 80 ವರ್ಷಗಳಿಂದ ನಮ್ಮ ಮೈಸೂರಿನಲ್ಲಿ
ಈ ಸಂಸ್ಥೆಗಳು ನಡೆದುಕೊಂಡುಬರುತ್ತಿವೆ. ಆದರೆ
ಆ ಹಳೆಯ ಕಾಲದಲ್ಲಿ ಪ್ರಜಾಪ್ರಭುತ್ವದ ಅರಿವು
ಇಲ್ಲ ಇನ್ನೂ ಜನಗಳಲ್ಲಿ ಉದಯವಾಗಿರಲಿಲ್ಲ. ಆದುದ
ರಿಂದ ಇದನ್ನು ಆಗಿನ ಕಾಲದಲ್ಲಿ ಯಾವ ಕ್ಷೇತ್ರ
ದಲ್ಲಿಯೂ ಜಾರಿಗೆ ತರುವುದಕ್ಕೆ ಆಗಲಿಲ್ಲ. ಆಗ ಜನರು
ಒಂದು ರೀತಿಯಾಗಿ ನಾಮಕರಣದ ಪದ್ಧತಿಯ
ಮೇಲೆ ಚುನಾಯಿತರಾಗಿ ಬಂದು ಯಾವುದೋ ಒಂದು
ರೀತಿಯಲ್ಲಿ ಸರ್ಕಾರಕ್ಕೆ ಅನುಕೂಲವಾಗಿ ಈ ಕಾರ್ಯ
ಗಳನ್ನೆಲ್ಲಾ ನಡೆಸಿಕೊಂಡು ಹೋಗುತ್ತಿದ್ದರು. ಆದರೆ
ಇತ್ತೀಚೆಗೆ ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಹೊಸ
ಹೊಸ ಕಾನೂನುಗಳು ಜಾರಿಗೆ ಬಂದು ಈ ಸಂಸ್ಥೆಗಳ
ಕಾರ್ಯಗಳನ್ನು ಒಂದು ದೊಡ್ಡ ರೀತಿಯಲ್ಲಿ ಮಾಡು
ವುದಕ್ಕೆ ಅವಕಾಶವಾಗಿರುತ್ತದೆ. ಆದರೆ ಹೀಗೆ ದೊರೆ
ತಂಥ ಒಂದು ಮಹಾ ಅವಕಾಶವನ್ನು ಸಾರ್ಥಕ
ಪಡಿಸಿಕೊಳ್ಳಬೇಕೆಂದು ಈ ಹಿಂದೆ ಸ್ವಾತಂತ್ರ್ಯಕ್ಕಾಗಿ
ಹೋರಾಟ ನಡೆಸಲು ಹೊರಟಂಥ ಕಾಲದಲ್ಲಿ
ಮಹಾತ್ಮ ಗಾಂಧಿಯವರೂ ಮತ್ತು ಇತರ
ಸ್ವರಾಜ್ಯ ಪಕ್ಷದ ರಾಜಕೀಯ ಮುಖಂಡರುಗಳೂ
ಈ ಸ್ಥಳೀಯ ಸಂಸ್ಥೆಗಳ ಬಗ್ಗೆ ಇವು ಹಾಗೆ ಇರ
ಬೇಕಾಗಿತ್ತು, ಹೀಗಿರಬೇಕಾಗಿತ್ತೆಂದು ಬಹಳವಾಗಿ
ಮಾತನಾಡುತ್ತಿದ್ದರು. ಸ್ವರಾಜ್ಯ, Self-Govern-
ment ಇಂಥಾದ್ದು ದೇಶಕ್ಕೆ ಲಭಿಸಿದ ಮೇಲೆ,
ಕಾಂಗ್ರೆಸ್ ಇವುಗಳ ಬಗ್ಗೆ ಒಂದು ಉದಾತ್ತ ಧ್ಯೇಯ
ಧೋರಣೆಗಳನ್ನು ತೋರಿಸಬೇಕೆಂದು ಹೇಳುತ್ತಿದ್ದರು.
ಆದರೆ ಹಾಗೆ ಆ ದಿವಸ ಮಹಾತ್ಮಾ ಗಾಂಧಿಯವರು
ಮತ್ತು ಇತರ ರಾಜಕೀಯ ಪಕ್ಷಗಳು ಯಾವುದನ್ನು
ಬಹಳ ತೀವ್ರವಾಗಿ ವಿರೋಧಿಸುತ್ತಿದ್ದರೋ ಅದನ್ನೇ
ಈಗ ಕಾಂಗ್ರೆಸ್ ಅಧಿಕಾರಕ್ಕೆ ಬಂದಮೇಲೂ ಆಚರಣೆ
ಯಲ್ಲಿ ತರುತ್ತಿದ್ದೀರಿ. ಈ ಸ್ಪಿರಿಟಿನ ಒಂದು ದೌರ್ಜನ್ಯ
ಶಕ್ತಿ ಕಮ್ಮಿಯಾಗುವುದಕ್ಕೆ ಕಾರಣ ಈ ದಿನ ಸ್ಥಳೀಯ
ಸಂಸ್ಥೆಗಳನ್ನು ಹರಿದು ಹಂಚಿಬಿಟ್ಟಿದ್ದಾರೆಂದು ಸ್ಥೂಲ
ವಾಗಿ ಹೇಳಬಹುದು. ಆದರೆ ಕಾರ್ಯತಃ
ಏನು ಎದ್ದು ಕಾಣುತ್ತದೆ ಎಂದರೆ ಹೆಚ್ಚುಹೆಚ್ಚಾಗಿ
ಇವೊತ್ತು ನಮಗೆ ಹೊಸ ಲಕ್ಷಣಗಳು ಏನು ಕಂಡು
ಬರುತ್ತವೆ ಎಂದರೆ ಬಹುಶಃ Planning ದೇಶದಲ್ಲಿ
ನಡೆಯುತ್ತ ಇರುವುದರಿಂದ ಇರಬಹುದು ಅಥವಾ
ಕೇಂದ್ರದಿಂದ ಆಡಳಿತವನ್ನು ನಿರ್ವಹಿಸುವುದು ಹೆಚ್ಚು
ಸೂಕ್ತವೆಂದೂ ಭಾವಿಸಿರಬಹುದು. ವಸ್ತುಸ್ಥಿತಿಯಲ್ಲಿ
ಏನಾಗಿದೆ ಎಂದರೆ ಬೇರೆ ಯಾವುದೋ ಸಂಸ್ಥೆಗಳಿಗೆ
ಹೆಚ್ಚಿನ ಅಧಿಕಾರವನ್ನು ಮತ್ತು ಹೆಚ್ಚಿನ ಹಣಕಾಸಿನ
ಸೌಲಭ್ಯವನ್ನು ಕಲ್ಪಿಸಿಕೊಟ್ಟು ಅವುಗಳನ್ನೆಲ್ಲ ರೂಢ
ಮೂಲವಾಗಿ ಊರ್ಜಿತಗೊಳಿಸಿ ಅವುಗಳಿಗೆ ಹೆಚ್ಚಿನ
ಶಕ್ತಿಯನ್ನೂ ಜೀವವನ್ನೂ ತುಂಬುವುದಕ್ಕೆ ಸೌಕರ್ಯ
ಗಳು ಬೇಕು. ಸಣ್ಣ ಉದಾಹರಣೆಗಾಗಿ ಈ ಗ್ರಾಮ
ಪಂಚಾಯಿತಿ ಮತ್ತು ಜಿಲ್ಲಾಬೋರ್ಡುಗಳ ಬಗ್ಗೆ
ಇದುವರೆಗೂ ಅವರು ಯಾವ ವರ್ತನೆಯನ್ನು ತೋರಿ
ಸಿದ್ದಾರೆಯೋ ತನ್ಮುಖಾಂತರ ನಾವು ಕಂಡುಕೊಳ್ಳ
ಬಹುದಾಗಿದೆ. ಈ ರೀತಿ ಇವುಗಳನ್ನು ಕಡೆಗಣಿಸಿದ್ದು
ಅಲ್ಲದೆ ಅವು ಅತಿ ಕೆಲಸ ಮಾಡುತ್ತಿವೆ ಎನ್ನುವ ಒಂದು
ತೋರುಗಾಣಿಕೆಯ ಅಸ್ತಿತ್ವದಲ್ಲಿ ಅವನ್ನು ರೂಪಿಸಿ
ಸರ್ಕಾರ ವರ್ತಿಸಿಕೊಂಡು ಹೋಗುತ್ತಿದೆ. ಶ್ರೀಮಾನ್
ಕೆ. ಪಟ್ಟಾಭಿರಾಮಯ್ಯರವರು ಹೇಳಿರುವ ಹಾಗೆ ಸಮಿತಿ
ಗಳನ್ನು ನೇಮಿಸುತ್ತಿದ್ದಾರೆ. ಆ ಸಮಿತಿಗಳವರು
ತಮ್ಮ ವರದಿಗಳನ್ನು ತೀರ್ಮಾನಗಳನ್ನು ಕೊಡುತ್ತಾರೆ.
ಅವರು ಕೊಟ್ಟ ತೀರ್ಮಾನಗಳನ್ನು ಹಾಗೆಯೇ
ಕಾರ್ಯಗತ ಮಾಡಬೇಕೆಂದು ನಾನು ಅಭಿಪ್ರಾಯ
ಪಡುವುದಿಲ್ಲ. ಆದರೆ ಆ ಸಮಿತಿಗಳು ಶ್ರಮಪಟ್ಟು
ಏನೊಂದು ತೀರ್ಮಾನವನ್ನೂ, ಸಲಹೆಗಳನ್ನೂ
ಕೊಡುತ್ತವೆಯೋ ಅವುಗಳನ್ನು ಪರಿಶೀಲನೆ ಮಾಡಿ
ಆ ರೀತಿ ಸರ್ಕಾರ ಮುಂದುವರಿಯುವುದಕ್ಕೆ ಅನೇಕ
ವೇಳೆ ಈ ಸರ್ಕಾರಗಳು ಐದು ವರ್ಷಗಳಿಗೆ ಒಂದಾವರ್ತಿ
ಬದಲಾಗುತ್ತ ಇರುತ್ತವೆ. ಹಿಂದಿನ ಸಮಿತಿಯವರು
ಮಾಡಿದ್ದು ಮುಂದೆ ಬರುವ ಸರ್ಕಾರದವರಿಗೆ ಇಷ್ಟ
ವಿಲ್ಲದೆ ಹೋಗಬಹುದು. ಆ ಸರ್ಕಾರದಲ್ಲಿ ರಚಿತವಾದ
ಸಮಿತಿಗಳು ಮಾಡಿರತಕ್ಕಂಥ ಕೆಲವು ಸಲಹೆಗಳು,
ತೀರ್ಮಾನಗಳು, ವರದಿಗಳು, ಮುಂದೆ ಇನ್ನು ಐದು
ವರ್ಷಕ್ಕೆ ಬರುವ ಮಂತ್ರಿಮಂಡಲದವರಿಗೆ ಇಷ್ಟವಿಲ್ಲದೆ
ಹೋಗಬಹುದು. ಹೀಗಾಗಿ ಏನಾಗಿದೆ ಎಂದರೆ
ಪ್ರಜಾಪ್ರಭುತ್ವದಲ್ಲಿ ಮಂತ್ರಿಮಂಡಲಗಳು ಬದ
ಲಾವಣೆಯಾದ ಹಾಗೆಲ್ಲ ಈ ದೃಷ್ಟಿಕೋಣವೂ ಬದ
ಲಾವಣೆಯಾಗುತ್ತ ಹೋಗಿ ಅನೇಕವೇಳೆ ಇದರಿಂದ
ಪ್ರಗತಿಗೆ ಧಕ್ಕೆ ಬರುತ್ತದೆ. ಆ ರೀತಿಯ ಮನೋ
ಭಾವ ಇದ್ದರೆ ಅದೂ ಕೂಡ ಪ್ರಗತಿಗೆ ಧಕ್ಕೆ ತರತಕ್ಕ
ಮನೋಭಾವವೆಂದು ಹೇಳಬೇಕಾಗಿದೆ. ಅಂತೂ
ಶ್ರೀಮಾನ್ ಕೆ. ಪಟ್ಟಾಭಿರಾಮಯ್ಯರವರು ಹೇಳಿದ
ಹಾಗೆ ಶ್ರೀಮಾನ್ ವಿ. ವೆಂಕಟಪ್ಪನವರ ಸಮಿತಿಗೆ
ಯಾವ ಒಂದು ಗೌರವ ಸರ್ಕಾರದಿಂದ ತೋರಿಸ
ಲ್ಪಟ್ಟಿತೋ ಅದೇ ಗೌರವ ಶ್ರೀಮಾನ್ ಡಿ. ಹೆಚ್.
ಚಂದ್ರಶೇಖರಯ್ಯನವರ ಸಮಿತಿಗೂ ತೋರಿಸಲ್ಪಟ್ಟಿತು
ಎಂದು ಈಗ ನಾನು ತಿಳಿದುಕೊಳ್ಳಬಹುದಾಗಿದೆ.

ಅದು ಏನೇ ಇರಲಿ, ಸರ್ಕಾರದವರು ಈಗ ಇರತಕ್ಕ
ಕಾನೂನು ಆಧಾರದ ಮೇಲೆ ಗ್ರಾಮಪಂಚಾಯಿತಿಗಳ
ಚುನಾವಣೆ ನಡೆಸಿದರು. ಗ್ರಾಮಪಂಚಾಯಿತಿಗಳ
ಚುನಾವಣೆ ವೈಖರಿಯನ್ನು ನಾವು ಸ್ವಲ್ಪ ಅರ್ಥ
ಮಾಡಿಕೊಳ್ಳಬೇಕು. ಈ ಚುನಾವಣೆಗಳು ಸಾಮಾನ್ಯ
ವಾಗಿ ಗ್ರಾಮಪಂಚಾಯಿತಿಗಳಲ್ಲಿ ನಡೆಯಬೇಕಾದರೆ
ಯಾವುದೇ ರೀತಿಯ ಪಾರ್ಟಿ ಅಥವಾ ಪಕ್ಷಗಳಿರ
ಬಾರದು. ಸತ್ಯದ ಆಡಳಿತಕ್ಕೆ ಅಲ್ಲಿ ಒಮತ್ತವಾದ
ಸಮಿತಿ ರಚನೆಯಾಗಬೇಕು, ಅದಕ್ಕೆ ಒಂದು ಅವಕಾಶ
ವನ್ನು ಕಲ್ಪಿಸಿಕೊಡಬೇಕು. ಹಳ್ಳಿಗಳಲ್ಲಿ ಒಂದು
ಸೌಹಾರ್ದ, ಒಂದು ಸಹಕಾರ, ಅವರಲ್ಲಿ ಅನ್ಯೋನ್ಯ
ಭಾವನೆಯನ್ನು ಪ್ರೇರೇಪಿಸಬೇಕು. ಅದಕ್ಕೆ ಸಹಾಯಕ
ವಾಗಿರಬೇಕು ಎನ್ನುವ ಮನೋಭಾವನೆಯಲ್ಲಿ ಗ್ರಾಮ
ಪಂಚಾಯಿತಿಗಳ ಚುನಾವಣೆ ಮಾಡಬೇಕು ಎನ್ನುವ
ಸಾಮಾನ್ಯವಾದ ನಿಯಮವನ್ನು ಇಟ್ಟುಕೊಳ್ಳಬೇಕು.
ಆದರೆ ಈ ದಿನ ಚುನಾವಣೆಗಳು ನಡೆದ ರೀತಿಯಲ್ಲಿ
ಏನಾಗಿದೆ ಎಂದರೆ . . .

Mr. SPEAKER.—How is it relevant to this Bill ? The Hon'ble Member can only speak on the provisions of the amending Bill—not on the provisions of the original Act.

ಶ್ರೀ ಎಸ್. ಗೋಪಾಲಗೌಡ.—ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ ಈ ವಿಲೇಜ್ ಪಂಚಾಯಿತಿಗೆ ಸಂಬಂಧಪಟ್ಟ ಕಾನೂನನ್ನು ತಿದ್ದುಪಡಿ ಮಾಡುತ್ತಿಲ್ಲ. ಅದೇ ರೀತಿ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಗಳನ್ನು ನಡೆಸಿದ್ದರೆ ಏನು ಅಡ್ಡಿ ಬರುತ್ತಿತ್ತು ಎಂದು ಕೇಳುತ್ತೇನೆ; ಪ್ರತಿದಿವಸ ಒಂದೊಂದು ಕಾನೂನು ಜಾರಿಗೆ ಬರುತ್ತಿದೆ. ಯಾರಾದರೂ ಫಿರ್ಯಾದು ಕೊಟ್ಟರೆ ಅದನ್ನು ತೆಗೆದುಕೊಳ್ಳುವವರು ಇಲ್ಲ. ಇಂಥ ಗ್ರಾಮರಾಜ್ಯಕ್ಕೆ ನಮಸ್ಕಾರ.

ಈ ರೀತಿಯಲ್ಲಿ ಅವರು ಚುನಾವಣೆ ನಡೆಸುವಾಗ ಈ ವಿಧಾನ ಸಭೆಯನ್ನು ಕೇಳಿದ್ದರೆ, ಅನೇಕ ಸಲ ಅವರು ಬೊಬ್ಬೆಯನ್ನು ಹೊಡೆಯುತ್ತಿದ್ದರು ಅಷ್ಟೆ. ಈ ವಿಲೇಜ್ ಪಂಚಾಯಿತಿಯೇ ಮೂಲಾಧಾರವೆಂದು ತಾವು ಈ ವಿಧಾನ ಸಭೆಯಲ್ಲಿ ಎಷ್ಟು ಸಲ ಸಾರಲಿಲ್ಲ? ಇಂಥವುಗಳನ್ನೆಲ್ಲಾ ನಾವು ಸ್ಮರಿಸಿಕೊಂಡು ಈ ದೇಶದಲ್ಲಿ ಬಾಳಿಕೊಂಡಿದ್ದೇವೆ. ಇದರಲ್ಲೆಲ್ಲಾ ನಮ್ಮನ್ನು ಕೇಳದೆ ಗ್ರಾಮಪಂಚಾಯಿತಿಗಳಿಗೆ ಚುನಾವಣೆ ಮಾಡಿದಿರಿ. ನಮ್ಮ ಹತ್ತಿರ ಒಂದು ಮಸೂದೆ ತರುತ್ತೀರಿ. ಗ್ರಾಮಪಂಚಾಯಿತಿಗಳ ವಿಷಯವನ್ನು ಕೈಬಿಟ್ಟು ಬರೀ ಡಿಸ್ಟ್ರಿಕ್ಟ್ ಬೋರ್ಡಿಗೆ ಸಂಬಂಧಪಟ್ಟ ವಿಚಾರಗಳಲ್ಲಿ ಮಾತ್ರ ತಮಗೆ ಅನುಕೂಲವಾದ ರೀತಿಯಲ್ಲಿ ಕೆಲವು ತಿದ್ದುಪಡಿಗಳನ್ನು ತಂದು ಸಭೆಯ ಮುಂದೆ ಇಟ್ಟಿದ್ದೀರಿ. ಇದನ್ನು ನಾವು ಪಾಸ್ ಮಾಡುವುದಕ್ಕೆ ಅಡ್ಡಿ ಇಲ್ಲವೆಂದು ಹೇಳಿದರೂ ಕೂಡ ತಕ್ಷಣ ಚುನಾವಣೆ ಮಾಡುತ್ತೀರೆಂದು ನಮಗೆ ಭರವಸೆ ಇಲ್ಲ. ಯಾರೋ ಒಬ್ಬರು ಸಲಹೆಯನ್ನು ಮಾಡಿದರೆಂದು ಒಂದು ಸಮಿತಿಯನ್ನು ಮಾಡಿದಿರಿ. ಅವರ ವರದಿಯೂ ಬಂತು. ಅದು ಈಗ ಏನಾಗಿದೆ? ಕಮಿಟಿ ಸಲಹೆ ಮಾಡಿದ ತಿದ್ದುಪಡಿಗಳನ್ನು ತಂದಿದ್ದೇವೆ ಅಥವಾ ಅವರು ಹೇಳಿರುವ ಪ್ರಕಾರ ನಮಗೆ ನ್ಯೂನಾತಿರೇಕಗಳು ಕಂಡುಬಂದದ್ದರಿಂದ ತಂದಿದ್ದೇವೆ ಎಂದು Objects and Reasons ನಲ್ಲಿ ಹೇಳಿದ್ದೀರಾ? ಎಲ್ಲವನ್ನೂ ಇದರಲ್ಲಿ ಪರಿಶೀಲಿಸಿ ನೋಡಿದರೆ ಇದರಲ್ಲಿ ಏನೂ ಇಲ್ಲ. ಅಸ್ತಿತ್ವದಲ್ಲಿ ಇದೇ ಸರ್ಕಾರದ ಮನೋಭಾವವೆಂದು ನೋಡಬೇಕೇ ಹೊರತು ಇದರಲ್ಲಿ ಯಾವುದೋ ಒಂದು ಮೂಲಭೂತವಾದ ಪ್ರಗತಿಯನ್ನು ಸಾಧಿಸಬೇಕು. ಈ ತಿದ್ದುಪಡಿಗಳನ್ನು ನೋಡಿದರೆ ವಿಲೇಜ್ ಪಂಚಾಯಿತಿಗಳು ಮತ್ತು ಜಿಲ್ಲಾ ಬೋರ್ಡುಗಳು ಒಂದು ಪ್ರತಿನಿಧಿ ಸ್ವರೂಪವಾದಂಥ ಸಮಿತಿಗಳಾಗಿ ಕೆಲಸ ಮಾಡಬೇಕು ಎನ್ನತಕ್ಕ ಮನೋಭಾವ ಸರ್ಕಾರಕ್ಕೆ ಇದ್ದಂತೆ ನನಗೇನೂ ತೋರಲಿಲ್ಲ. ಆದ್ದರಿಂದ ಈ ಗ್ರಾಮಪಂಚಾಯಿತಿಗಳಿಗೆ ಚುನಾವಣೆ ಮಾಡಿದಾಗ ಯಾವ ಆಧಾರದ ಮೇಲೆ ಮಾಡಿದಿರಿ ಅದನ್ನು ಮಾಡುವಾಗ ಸಾಕಷ್ಟು ವ್ಯವಸ್ಥೆಯನ್ನು ಮಾಡಿದ್ದರೆ ಅದು ಯಾವ ರೀತಿ ನಡೆಯುತ್ತಿತ್ತು ಎನ್ನುವುದನ್ನು ನಾನು ಇವೊತ್ತು ಸರ್ಕಾರದವರ ಮುಂದೆ ಪ್ರಶ್ನಿಸಬೇಕಾಗಿದೆ.

Mr. SPEAKER.—That is not relevant, Sri Gopala Gowda. I want to be very strict; it does not matter even if I incur the displeasure of some Hon'ble members. I request Hon'ble members to adhere to Rules of Procedure.

*Sri J. MOHAMED IMAM (Jagalur).—With due deference to the Chair, I submit that this Amending Bill seeks to amend the Village Panchayets and District Boards Act. Whenever we speak on the amendment, necessarily we will have to refer to the original Act Without reference to the original Act, it would be very difficult for us to confine our speeches to the amending bill. Therefore, I submit that whenever an amendment is placed before the House, that entire particular Act will be the object of discussion. If the Chair restricts discussion only to the clauses here, then it would be very difficult for us to do full justice. So, we will have to cover the entire provisions of the Act.

For exemple, there is one important clause regarding the delimitation of constituencies. The original Act was quite different. Now they want to create one taluk constituency. When we have to discuss the Bill, we will have to discuss the provisions of the old Act and also refer to the relevant portions. So, my humble submission is this: when the existing Act is sought to be amended necessarily, we will have to refer to various provisions of the old Act which will have a bearing on the amendments. I submit to the Chair that it will be very difficult to confine ourselves to the amending Bill without making a reference to the old Act. Therefore, I request that due latitude will have to be given to the member to refer to the necessary clauses contained in the old Act.

Sri Kadidal MANJAPPA.—Sir, it is true that Honourable Members while speaking on this Bill can refer to the relevant clauses incidentally, but they cannot cover the entire District Board and Village Panchayet Act and comment upon the existing provisions. For instance, Mr. Gopala Gowda made a reference to the elections held in connection with Village Panchayets; It was not at all relevant; he could have simply said what procedure we had adopted. But he went on criticising the method and the manner in which the election was held and said the Shanbhogue was the 'show-master' there.

Sri J. MOHAMED IMAM.—I may bring to your notice one point; that is, last year, we discussed the amendments

(SRI J. MOHAMED IMAM.)

on the Sales-Tax. The Government introduced a series of amendments to the Sales-Tax Bill, and the Chair may remember that it took me nearly two or three days in that connection. We not only discussed the amended provision but also we went into the entire sales-tax structure.

Mr. SPEAKER.—Whatever it may be, I can understand the point of the Honourable Member.

Sri J. MOHAMED IMAM.—We will not waste the time of the House. We want to point out further amendments if necessary. We want to suggest to the Government that certain Clauses are not helpful. So the practice is, whenever amendments are made to a particular Act, the members have a right to refer to any important points in that Act. We are not going to refer to any other Act.

Mr. SPEAKER.—Of course, it is laid down in the Rules of Procedure that relevant provisions can be referred it. Relevancy should be strictly adhered to, that is also stressed there. I have no objection if the Honourable leader of the Opposition refers to relevant provisions of the old Act. But any matter outside the scope of the Bill, cannot be allowed in the discussion. I have no objection to a passing reference being made. The scope of the discussion should not extend to the subject of elections and the procedure adopted by the Government and the result thereof. All relevant provisions in the original Act can be referred to and I will allow the discussion to that extent.

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಈ ತಿದ್ದುಪಡಿಯಲ್ಲಿ ಮುಖ್ಯವಾಗಿ, ಸರ್ಕಾರದವರು ಪರೋಕ್ಷವಾಗಿ ವ್ಯಕ್ತಪಡಿಸಿರುವ ರೀತ್ಯಾ ತಾಲ್ಲೂಕು ಬೋರ್ಡ್‌ಗಳ ರಚನೆಯು ಸೂಚಿತವಾಗಿದೆ. ತಾಲ್ಲೂಕು ಬೋರ್ಡುಗಳ ರಚನೆಯನ್ನು ಸರ್ಕಾರದವರು ಪರಿಶೀಲಿಸುತ್ತಾರೆಂದು ಅವರೇ ಹೇಳಿದರು. ಅದಕ್ಕೆ ನಾಮಕರಣವನ್ನು ಕೂಡ ಮಾಡಬಹುದು ಎಂಬ ಅಭಿಪ್ರಾಯವನ್ನೂ ಅವರು ವ್ಯಕ್ತಪಡಿಸಿರುತ್ತಾರೆ. ಇಂಥ ಕಮಿಟಿಗಳ ಅನುಭವ ಹಿಂದಿದ್ದ ಡೆವಲಪ್‌ಮೆಂಟ್ ಸಮಿತಿಗಳ ಸಂಬಂಧದಲ್ಲಿ ನಮಗೆ ಸಾಕಷ್ಟು ಬಂದಿದೆ.

ಶ್ರೀ ಟಿ. ಎನ್. ಮುದ್ಲಗಿರಿಗೌಡ.—ಏನು ಅನುಭವ ನಿಮಗೆ ಬಂದಿದೆ? ಅವು ಚೆನ್ನಾಗಿ ಕೆಲಸ ಮಾಡಿದ್ದರೂ ಕೂಡ, ಅವುಗಳಿಂದ ದೇಶಕ್ಕೆ ಒಳ್ಳೆಯದಾಗಿದೆಯೆಂದು ಹೇಳುವುದಕ್ಕೂ ಅನೇಕ ಜನರಿರುವಾಗ, ಅವುಗಳಿಂದ ದೇಶಕ್ಕೇನೋ ಆಘಾತವಾಗಿದೆಯೆನ್ನುವ ಹಾಗೆ ತಪ್ಪರ್ಥ ಬರುವಂತೆ ಹೇಳುವುದು ಸರಿಯಲ್ಲ.

ಶ್ರೀ ಎಸ್. ಗೋಪಾಲಗೌಡ.—ಬಹುಶಃ ಮಾನ್ಯ ಸದಸ್ಯರೂ ಆ ಕಮಿಟಿಯ ಅಧ್ಯಕ್ಷರಾಗಿದ್ದರೋ ಏನೋ, ಗೊತ್ತಿಲ್ಲ. ಅದೇನೇ ಇರಲಿ, ಈ ರಿಪೋರ್ಟಿನಲ್ಲೂ ಶ್ರೀ ಚಂದ್ರಶೇಖರಯ್ಯನವರು ಬಹುಮಟ್ಟಿಗೆ ತಾಲ್ಲೂಕು ಬೋರ್ಡ್‌ಗಳನ್ನು ಶಿಫಾರಸು ಮಾಡಿಕೊಂಡೇ ಹೋಗಿದ್ದಾರೆ. ನಾನಾದರೋ, ಈ ತಾಲ್ಲೂಕು ಬೋರ್ಡುಗಳನ್ನು ಬೇಕೆಂದು ಹೇಳುವವನಲ್ಲ. ಇಂಥ ಸ್ಟ್ಯಾಚುಟರಿ ಅಸ್ತಿತ್ವವಿಲ್ಲದ ಒಂದು ಬೋರ್ಡನ್ನು ನಾಮಕರಣ ಮಾಡಬೇಕೆಂದಿರುವ ವಿಷಯದಲ್ಲಿ ನನ್ನ ತೀವ್ರ ವಿರೋಧವಿದೆ. ಯಾವಾಗ ಅದಕ್ಕೆ ಸ್ಟ್ಯಾಚುಟರಿ ಅಧಿಕಾರವಿಲ್ಲವೋ ಅದಕ್ಕೆ ಸರ್ಕಾರಿ ಬೊಕ್ಕಸದಿಂದ ಮೂರು ಕಾಸನ್ನು ಖರ್ಚುಮಾಡುವ ಅಧಿಕಾರವಿರಕೂಡದೆಂದು ನನ್ನ ಅಭಿಪ್ರಾಯ ಏಕೆಂದರೆ, ಅಲ್ಲಿನ ಸದಸ್ಯರು ಗೌರವ ಸದಸ್ಯರು. ನಾಮಕರಣ ಮಾಡಿರುತ್ತೇವೆ. ಅವರೇನೇ ಮಾಡಿದರೂ ಅವರಮೇಲೆ ಯಾವುದೇ ಕಾರ್ಯಕ್ರಮ ತೆಗೆದುಕೊಳ್ಳುವದಕ್ಕೆ ಅವಕಾಶವಿಲ್ಲ. ಅಂಥವರನ್ನು ನಾಮಕರಣಮಾಡಿ ಆಮೇಲೆ ಅವರು ದುಡ್ಡು ತಿಂದಿದ್ದಾರೆ, ಲಂಚ ತೆಗೆದುಕೊಂಡಿದ್ದಾರೆ ಎಂದು ಆಪಾದನೆ ಮಾಡುವುದು ಬಹಳ ತಪ್ಪು. ಆದ್ದರಿಂದ ಇಂಥ ಸಮಿತಿಗಳನ್ನು ರಚನೆಮಾಡಿ ನಮ್ಮ ಹಣಕಾಸನ್ನು ಅವರ ಕೈಗೆ ಕೊಡುವುದು ಸೂಕ್ತವಲ್ಲ. ಈ ಕಾರಣವೇ ಅಲ್ಲದೆ ರಾಜಕೀಯ ಕಾರಣಗಳನ್ನೂ ಅವರ ವಿಷಯದಲ್ಲಿ ಹೇಳಬೇಕಾಗುತ್ತದೆ.

Mr. SPEAKER.—I do not want the Hon'ble Member to give room to provocation. You can only make passing reference to these committees.

ಶ್ರೀ ಎಸ್. ಗೋಪಾಲಗೌಡ.—ನಿನ್ನೆ ದಿವಸ ಈ ಸಭೆಯ ಮುಂದೆ ಈ ಮಸೂದೆಯನ್ನು ಮಂಡಿಸುವಾಗಲೇ ಮಾನ್ಯ ಕಂದಾಯ ಮಂತ್ರಿಗಳು ಈ ವಿಷಯವನ್ನು ಸಭೆಯಲ್ಲಿ ತಿಳಿಸಿದ್ದಾರೆ. ಮತ್ತು ಬೇರೆ ಸಂದರ್ಭಗಳಲ್ಲೂ ಅವರ ಅಭಿಪ್ರಾಯ ನಮಗೆ ತಿಳಿದು ಬಂದಿದೆ. ಇಂಥ ಕಮಿಟಿಗಳನ್ನು ರಚಿಸುವುದು ಸರ್ಕಾರದವರ ಉದ್ದೇಶವಾಗಿದೆಯೆಂದು ಗೊತ್ತಾಗಿದೆ.

Mr. SPEAKER.—The Constitution of these Committees is not before us. It would have been relevant if the Hon'ble Member had made reference to such points during the Budget Discussion or during the debate on the Rajpramukh's Address. Now they are unnecessary.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಡಿಸ್ಟ್ರಿಕ್ಟ್ ಬೋರ್ಡ್ ಕೆಲಸಗಳನ್ನು ಮಾಡುವುದಕ್ಕೆ ಬೇರೊಂದು ಸಮಿತಿಯನ್ನು ಮಾಡುತ್ತೇವೆಂದು ಅವರೇ ಹೇಳುವಾಗ ಇದು relevant ಆಗಿಯೇ ಆಗುತ್ತದೆ.

Sri J. MOHAMED IMAM.—It is like this, Sir. The constitution of rural development committees encroaches upon the District Board which ought not to. Secondly, the constitution of these committees would deprive the District Boards of their legitimate income. On these two

grounds we are opposing the amending Bill.

Mr. SPEAKER.—They have not abrogated any of the provisions relating to the powers of the District Boards.

1 P. M.

ಶ್ರೀ ಎಸ್. ಗೋಪಾಲಗೌಡ.—ಎರಡನೆಯದಾಗಿ ರಾಜಕೀಯ ಕಾರಣಗಳಿಗಾಗಿಯೂ ಕೂಡ ಇಂಥ ಸಮಿತಿಗಳನ್ನು ರಚಿಸುವುದನ್ನು ನಾನು ವಿರೋಧಿಸ ಬೇಕಾಗಿದೆ.

106ನೇ ಸೆಕ್ಷನ್ ತಿದ್ದುಪಡಿ ಮಾಡಬೇಕೆಂಬುದು ಮತ್ತೊಂದು ಬಹಳ ಮುಖ್ಯವಾದ ಅಂಶ. ಈಗಿರುವ ಪ್ರಕಾರ ಡಿಸ್ಟ್ರಿಕ್ಟ್ ಬೋರ್ಡಿಗಿರತಕ್ಕಂಥ ವರಮಾನಗಳೇ ಕಡಿಮೆ. ಡಿಸ್ಟ್ರಿಕ್ಟ್ ಬೋರ್ಡು ತನ್ನ ಕಾರ್ಯವ್ಯಾಪ್ತಿಯನ್ನು ಹೆಚ್ಚಿಸಿಕೊಂಡು ಈ ದಿವಸ ಅದು ಸರಿಯಾದ ರೀತಿಯಲ್ಲಿ ಒಂದು ವ್ಯವಸ್ಥಿತವಾದ ರೀತಿಯಲ್ಲಿ ತನ್ನ ಜವಾಬ್ದಾರಿಯನ್ನು ನಿರ್ವಹಿಸಬೇಕಾದರೆ ಹಣಕಾಸಿನ ಕೊರತೆ ಅದಕ್ಕೆ ಬಹಳವಾಗಿದೆ. ಉದಾಹರಣೆಗೆ ಜಿಲ್ಲಾ ಬೋರ್ಡುಗಳ ಹೈಸ್ಕೂಲುಗಳು ಈಗ ಹೇಗೆ ನಡೆಯುತ್ತಿವೆಯೆಂಬುದನ್ನು ನೋಡಬಹುದು. ನಮ್ಮ ಅಧ್ಯಕ್ಷರ ತಾಲ್ಲೂಕಿನಲ್ಲೂ ಸಹ ಒಂದು ಇಂಥ ಹೈಸ್ಕೂಲಿದೆ. ಅದನ್ನು ನೋಡಿದರೆ ಬೋರ್ಡು, ಚಾಕ್‌ಪೀಸು, ಉಪಾಧ್ಯಾಯರು ಇಲ್ಲದೆ ಬಹಳ ತೊಂದರೆಯಿದೆ. ಬೇರೆ ಸ್ಕೂಲುಗಳ ಮಟ್ಟಕ್ಕೆ ಬರಲು ಅವಕ್ಕೆ ಸಾಧ್ಯವಿಲ್ಲ. ಮತ್ತು ಇಲ್ಲಿ ಕೆಲಸ ಮಾಡುವ ಉಪಾಧ್ಯಾಯರಿಗೆ ಬೇರೆ ಉಪಾಧ್ಯಾಯರ ಸ್ಕೇಲನ್ನು ಕೊಡುವುದಿಲ್ಲ. ಬರೀ ಒಂದು ಸ್ಕೂಲಿನ ವಿಚಾರವೇ ಹೀಗಿರುವಾಗ ಜಿಲ್ಲಾ ಬೋರ್ಡಿನ ಕೆಲಸ ಎಷ್ಟು ಕಷ್ಟಕರವಾಗಿದೆ ಎಂಬುದನ್ನು ಊಹಿಸಬಹುದು. ಅದರ ಹಣಕಾಸಿನ ಪರಿಸ್ಥಿತಿ ತೀರಾ ಕೊರತೆಯಿಂದ ಮುಂದುವರೆದುಕೊಂಡು ಹೋಗುತ್ತಿದೆ. ಮತ್ತು ಅದರ ರಸ್ತೆಗಳನ್ನು ಈ ದಿವಸ ಸರಿಯಾದ ಸ್ಥಿತಿಯಲ್ಲಿಡಲು ಸಾಧ್ಯವಿಲ್ಲವಾಗಿದೆ. ಆದ್ದರಿಂದ ಜಿಲ್ಲಾ ಬೋರ್ಡು ತನ್ನ ಕೆಲಸ ಕಾರ್ಯಗಳನ್ನು ಸಲೀಸಾಗಿ ನಡೆಸಿಕೊಂಡು ಹೋಗಲು ಹೆಚ್ಚಿನ ಆದಾಯ ಅದಕ್ಕೆ ದೊರೆಯುವಂತೆ ಕಾನೂನಿನಲ್ಲಿ ಅವಕಾಶ ಮಾಡಬೇಕಾಗಿತ್ತು. ನಮಗೆ ಪ್ರಜಾ ಪ್ರಭುತ್ವದಲ್ಲಿ ಮತ್ತು ಸೆಲ್ಫ್-ಗೌರ್ನಮೆಂಟಿನಲ್ಲೂ ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಚೆನ್ನಾಗಿ ಕೆಲಸಮಾಡಬೇಕು, ಎಂಬ ತತ್ವದಲ್ಲೂ ಮಾನ್ಯ ಸರ್ಕಾರದವರಿಗೇನಾದರೂ ನಂಬಿಕೆ ಎಳ್ಳಷ್ಟಾದರೂ ಇದ್ದರೆ, ಕಾರ್ಯತಃ ಈ ತತ್ವವನ್ನು ಆಚರಣೆಗೆ ತರಲು ತಿದ್ದುಪಡಿ ತಂದರೆ ಮಾನ್ಯ ಸದಸ್ಯರೂ ಈ ಸಭೆಯೂ ಈ ಮಸೂದೆಯನ್ನು ಸ್ವಾಗತಿಸಿ ಬೆಂಬಲ ಕೊಡುತ್ತಾರೆ. ಅದು ಬಿಟ್ಟು ಬರುವ ಶೇಕಡ $12\frac{1}{2}$ಯಲ್ಲಿ, $6\frac{1}{4}$ ತೆಗೆಯಬೇಕೆಂದು ಇಷ್ಟಪಟ್ಟಿದ್ದಾರೆ. ಎರಡನೆಯ ಕ್ಲಾಜಿನಲ್ಲಿ ಹೀಗೆ ಹೇಳಿದೆ :—

"The Government shall assign to all the District Boards in the State an amount equal to $6\frac{1}{4}$ per cent of the land revenue collected in the State. The amount to be allotted to each district board being such as Government may from time to time determine."

ಇದೊಂದು ನಿಖರವಾಗಿ ಬರುತ್ತಿರುವ ಆದಾಯ. ಇದನ್ನು ತೆಗೆದುಹಾಕಬೇಕೆಂದು ಸೂಚಿಸಿದ್ದಾರೆ. ಇದಕ್ಕೆ ಕಾರಣ ಸರ್ಕಾರದವರು ಕೊಡುವುದು ನೋಡಿದರೆ ತೆಗೆದುಹಾಕುವುದಕ್ಕಿಂತ ಕಾರಣ ತೀರಾ ಆಭಾಸವಾಗಿದೆ. ಈಗ ಕೊಟ್ಟಿರುವುದು ಬಹಳ ಕ್ಷುಲ್ಲಕವಾದ ಕಾರಣ. ಏನು ಕಾರಣ ಹೇಳಿದರೆಂಬುದನ್ನು ಹೇಳಲು ಕೂಡ ನಾನು ಇಷ್ಟಪಡುವುದಿಲ್ಲ. ಅದು ಕಾರಣವಲ್ಲ, ನೆಪ. ಮತ್ತು ಪುನಃ ಸಮಿತಿ ದೃಷ್ಟಿಯಿಂದಲೇ ಇದನ್ನು ಕಡಮೆ ಮಾಡುವುದಾದರೆ, ಡಿಸ್ಟ್ರಿಕ್ಟ್ ಬೋರ್ಡ್ ಕೆಲಸ ಸಮಿತಿ ಮೂಲಕ ಮಾಡಿಸುತ್ತೇವೆಂದು ಹೇಳುವುದಾದರೆ ಅದು ಬಹಳ ಅಸಮಂಜಸ ಮತ್ತು ಎಲ್ಲಾ ದೃಷ್ಟಿಯಿಂದಲೂ ಅಂಥ ಒಂದು ನಿಲುವನ್ನು ಅಥವಾ ಮಾರ್ಗವನ್ನು ಸರ್ಕಾರ ತಳೆಯಬಾರದು ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಈ ಕ್ಲಾಜನ್ನು ಡಿಲೀಟ್ ಮಾಡುವುದಕ್ಕೆ ಪ್ರಯತ್ನ ಮಾಡಿದರೆ ಸರ್ಕಾರ ಇದರ ಮುಖಾಂತರ ಜಿಲ್ಲಾ ಬೋರ್ಡುಗಳನ್ನೇ ಸಂಪೂರ್ಣವಾಗಿ ಮುಗಿಸುವುದಕ್ಕೆ ಪ್ರಯತ್ನ ಮಾಡಿದೆ ಎಂದು ನಾನು ಹೇಳಲೇಬೇಕಾಗುತ್ತದೆ.

ಶ್ರೀ ಪಟ್ಟಾಭಿರಾಮಯ್ಯರವರು ನಿನ್ನೆ ಒಂದು ಸಲಹೆಯನ್ನು ಕೊಟ್ಟರು. ಅದು ಸೂಕ್ತವಾದ ಸಲಹೆಯೆಂದು ನಾನು ತಿಳಿದುಕೊಂಡಿದ್ದೇನೆ. ಡಿಸ್ಟ್ರಿಕ್ಟ್ ಬೋರ್ಡು ಕಾನ್‌ಸ್ಟಿಟ್ಯೂಯೆನ್ಸಿಯಲ್ಲಿರುವವರು ಮಾತ್ರ ಓಟು ಮಾಡಬೇಕು, ಕಂಟೆಸ್ಟ್ ಮಾಡಬೇಕು ಎಂದು ಹೇಳಿದರು. ಇದರಿಂದ ಕೆಲವರಿಗೆ ಅಸಮಾಧಾನವುಂಟಾಗಬಹುದು ; ಮುನಿಸಿಪಲ್ ಲಿಮಿಟ್ಸಿನಲ್ಲಿರುವವರಿಗೆ ಮತ್ತು ಸಿಟಿಗಳಲ್ಲಿರುವವರಿಗೆ ಅಸಮಾಧಾನವಾಗಬಹುದು. ಅವರು ಕೆಲವುವೇಳೆ ಹಳ್ಳಿಗಳಲ್ಲಿ ತುಂಬಾ ಪ್ರೀತಿ, ಗೌರವ ಸಂಪಾದಿಸಿರಬಹುದು ಮತ್ತು ಹಳ್ಳಿಯವರೊಡನೆ ನಿಕಟ ಸಂಬಂಧವನ್ನು ಕೂಡ ಇಟ್ಟುಕೊಂಡಿರಬಹುದು. ಆದರೂ ಕೂಡ ಆ ರೀತಿ ಹೊರಗಡೆಯವರು ಅಲ್ಲಿ ಚುನಾವಣೆಗೆ ನಿಂತುಕೊಳ್ಳುವುದಕ್ಕೆ ಅವಕಾಶಮಾಡಿಕೊಟ್ಟರೆ ಅದರಿಂದ ನಮಗೆ ಗೊತ್ತಿರುವ ಹಾಗೆ ರಾಜಕೀಯವನ್ನೇ ಒಂದು ರೀತಿಯ ಜೀವನವನ್ನಾಗಿಟ್ಟುಕೊಂಡು ಹಾಗೂ ಜೀವನ ಮಾಡುವವರಿಗೆ ಅದು ಮತ್ತೊಂದು ರಂಗಸ್ಥಳವಾಗುತ್ತದೆಯೋ ಏನೋ. ಸಾಮಾನ್ಯವಾಗಿ ತಮ್ಮ ಹೋಬಳಿ ಕೆಲಸ ತಮ್ಮ ತಾಲ್ಲೂಕು ಕೆಲಸ ತಾವೇ ಮಾಡಿಕೊಳ್ಳೋಣ, ಅದಕ್ಕೇನಾದರೂ ಪ್ರಯತ್ನಮಾಡೋಣ ಎಂದು ಇಷ್ಟವಿರುವವರು ರಾಜಕೀಯ ಗೊಂದಲಕ್ಕೆ ಬೀಳದೆ ಹೋಗುವುದಿಲ್ಲ ; ಇಂಥವರಿಗೆ ಈ ಮೂಲಕ ಒಂದು ಅವಕಾಶ ಮಾಡುತ್ತಾರೋ ಏನೋ ಎಂಬ ಭಯವಿದೆ. ಪಟ್ಟಣಗಳಲ್ಲಿರುವವರಿಗೆ ಹಳ್ಳಿಯ ಸಂಬಂಧವಿರಕೂಡದೆಂದು ನನಗೆ ಅಭಿಪ್ರಾಯವಿಲ್ಲ. ಆ ರೀತಿಯಾಗಿ ನಿರ್ಬಂಧ ಪಡಿಸುವುದು ತಾತ್ವಿಕವಾಗಿ ವಿರೋಧವಾಗಿದ್ದರೂ ಈ ದಿವಸದ ಪರಿಸ್ಥಿತಿಯಲ್ಲಿ ಅದಕ್ಕೆ ಅವಕಾಶ ಕೊಟ್ಟರೆ ಪುನಃ ಕೆಲವರ ಕೈಲಿ ಸಿಕ್ಕಿ ರಾಜಕೀಯದ ಗೊಂದಲದಿಂದ ಉಪಕಾರವಾಗುವುದಕ್ಕೆ ಬದಲಾಗಿ ಜನರಿಗೆ ಅಪಕಾರವೇ ಆಗಬಹುದು. ಆ ದೃಷ್ಟಿಯಿಂದ ಮಾನ್ಯ ಮಿತ್ರರ ಸಲಹೆಯನ್ನು ಸರ್ಕಾರ ಒಪ್ಪಿ ಸೂಕ್ತವಾದ ತಿದ್ದುಪಡಿಯನ್ನು ಮಾಡುವುದು ಒಳ್ಳೆಯದು ಎಂದು ಅಭಿಪ್ರಾಯ ಪಡುತ್ತೇನೆ.

ಒಂದು ತಾಲ್ಲೂಕನ್ನು ಈಗಿರುವಂತೆ ಒಂದು ಯೂನಿಟ್ಟಾಗಿಟ್ಟುಕೊಂಡು ಪಲ್ಟಿಮೆಂಬರ್ ಕಾನ್‌ಸ್ಟಿಟ್ಯೂಯೆನ್ಸಿಯಾಗಿ ಮಾಡಬೇಕೆಂದು ಅಭಿಪ್ರಾಯಪಟ್ಟಿರುವುದು ಸರಿಯಲ್ಲ. ಇದರ ಸಾಧಕ ಬಾಧಕಗಳನ್ನು ಪರಿಶೀಲಿಸಿದರೆ ನಾವು ಶ್ರೀ ಭೀಮಪ್ಪನಾಯಕರು

(ಶ್ರೀ ಎಸ್. ಗೋಪಾಲಗೌಡ.)

ಕೊಟ್ಟಿರುವ ಸಲಹೆಯನ್ನೊಪ್ಪಿಕೊಳ್ಳುವುದು ಈ ಸಂದರ್ಭದಲ್ಲಿ ಸೂಕ್ತವೆಂದು ನನಗೆ ಕಾಣುತ್ತದೆ. ಏಕೆಂದರೆ ಪುನಃ 3 ಜನರನ್ನು ಒಂದು ತಾಲ್ಲೂಕಿಗೆ ಆರಿಸಬೇಕೆಂದರೆ ಜನರಲ್ ಎಲೆಕ್ಷನ್ನಿಗೆ ಯಾವರೀತಿ ಖರ್ಚು ಮಾಡಬೇಕಾಗುತ್ತದೆಯೋ ಅದೇ ರೀತಿ ಖರ್ಚು ಮಾಡಬೇಕಾಗುತ್ತದೆ; ಮತ್ತು ಸಾಮಾನ್ಯವಾಗಿ ತಾಲ್ಲೂಕುಗಳಲ್ಲಿ ಪ್ರಭಾವವನ್ನು ಬೆಳೆಸಿರುವವರು ಅಂಥ ಚುನಾವಣೆಗಳಿಗೆ ನಿಲ್ಲಬೇಕಾದ ಪ್ರಸಂಗವೂ ಬರಬಹುದು. ಒಬ್ಬರಿಗಿಂತ ಹೆಚ್ಚು ಜನರನ್ನು ಆರಿಸಬೇಕಾದ ಸಂದರ್ಭ ಬರುವುದರಿಂದ ಓಟು ಮಾಡುವವರಿಗೆ ಈ ರೀತಿಯ ಕನ್‌ಫ್ಯೂಷನ್ ಕೂಡ ಬರುತ್ತದೆ. ಸಾಮಾನ್ಯವಾಗಿ ಸಿಂಗಲ್ ಮೆಂಬರ್ ಕಾನ್‌ಸ್ಟಿಟ್ಯೂಯೆನ್ಸಿಯನ್ನು ಡೀ ಲಿಮಿಟ್ ಮಾಡಿದರೆ ಅದರಿಂದ ಹೆಚ್ಚಿನ ಸೌಲಭ್ಯವಾಗುವುದೂ ಅಲ್ಲದೆ ಆರಿಸಿ ಬರುವ ಪ್ರತಿನಿಧಿಗಳು ತಮ್ಮ ಕ್ಷೇತ್ರದ ನಿಕಟ ಸಂಬಂಧವನ್ನಿಟ್ಟುಕೊಂಡು ಕೆಲಸ ಮಾಡಲೂ ಸಹ ಅನುಕೂಲವಾದೀತು. ಇದು ಪರಿಶೀಲಿಸಬೇಕಾದ ವಿಷಯ. ಈ ದಿವಸ ಕಾನ್‌ಸ್ಟಿಟ್ಯೂಯೆನ್ಸಿ ಡೀ ಲಿಮಿಟ್ ಮಾಡುವುದು ಬಹಳ ಕಷ್ಟವಾದ ಕೆಲಸವಾಗುತ್ತದೆ; ಒಂದೊಂದು ಹೋಬಳಿಯನ್ನು ಒಡೆಯಬೇಕಾದ ಪ್ರಸಂಗಗಳು ಬರಬಹುದು. ಆಗ ಕೆಲವು ಹೋಬಳಿ ಜನರು ಇನ್ನೊಂದು ಹೋಬಳಿಗೆ ಸೇರುವುದಕ್ಕೆ ಇಷ್ಟಪಡದೆ! ಹೋಗಬಹುದು. ಹೀಗೆ ಡೀ ಲಿಮಿಟ್ ಮಾಡುವ ಸಮಸ್ಯೆ ಪುನಃ ಕಂಡರೆ ಎದೆಗೆಡಬಹುದು ಎಂಬ ಭಯ ಕೂಡ ಇನ್ನೊಂದು ಕಡೆ ಇದೆ. ಈ ದಿವಸ ತಾಲ್ಲೂಕನ್ನು ನಾವು ಬೇಸಿಸ್ಸಾಗಿಟ್ಟರೆ ಶೃಂಗೇರಿಯಲ್ಲಿ 10 ಸಾವಿರ ಜನಸಂಖ್ಯೆಯಿದೆ ತುಮಕೂರು ತಾಲ್ಲೂಕಿನಲ್ಲಿ 1,86,000 ಜನಸಂಖ್ಯೆಯಿದೆ, ಬಳ್ಳಾರಿ ತಾಲ್ಲೂಕಿನಲ್ಲಿ 1,70,000 ಜನಸಂಖ್ಯೆಯಿದೆ. ತಾಲ್ಲೂಕಿನ ಜನಸಂಖ್ಯೆ ಮೇಲೆ ನಾವು ಸ್ಥಾನ ನಿಗದಿ ಮಾಡುವಾಗ ಜಿಲ್ಲೆಯಲ್ಲಿ ಕೆಲವು ತಾಲ್ಲೂಕುಗಳು ಹೆಚ್ಚು ಪ್ರಾತಿನಿಧ್ಯವನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ, ಮತ್ತೆ ಕೆಲವು ತಾಲ್ಲೂಕುಗಳಿಗೆ ಸ್ವಾಭಾವಿಕವಾಗಿ ಯಾವ ಪ್ರಾತಿನಿಧ್ಯವೂ ದೊರೆಯುವುದಿಲ್ಲ. ಏಕೆ ಸಾಕಷ್ಟು ಪ್ರಾತಿನಿಧ್ಯ ಬರುವುದಿಲ್ಲವೆಂದರೆ ಜನಸಂಖ್ಯೆ ಆಧಾರದಮೇಲೆ ಸಣ್ಣ ಮತ್ತು ದೊಡ್ಡ ತಾಲ್ಲೂಕುಗಳಿವೆ. ಅದನ್ನು ಡೀಲಿಮಿಟ್ ಮಾಡುವ ಅಂಶವನ್ನು ಗಣನೆಗೆ ತೆಗೆದುಕೊಳ್ಳುವ ಸಂದರ್ಭದಲ್ಲಿ- -ಈಗಾಗಲೆ ಶ್ರೀ ಹುಚ್ಚೇಗೌಡರು 30 ಸಾವಿರ ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು ಸಿಂಗಲ್‌ಮೆಂಬರ್ ಕಾನ್‌ಸ್ಟಿಟ್ಯೂಯೆನ್ಸಿ ಮಾಡಬೇಕೆಂದು ದ್ದುಪಡಿ ಸೂಚಿಸಿದ್ದಾರೆ,—ಆ ತಿದ್ದುಪಡಿಯನ್ನು ಕೂಡ ಪರಿಶೀಲಿಸಿ ಅದು ಸೂಕ್ತವಾಗಿ ಕಂಡುಬಂದರೆ ಅದನ್ನು ಒಪ್ಪಿಕೊಳ್ಳುವುದರಲ್ಲಿ ಹೆಚ್ಚಿನ ಅನುಕೂಲವಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಡೀ ಲಿಮಿಟ್ ಮಾಡುವಾಗ ಕಷ್ಟ ಬಂದರೆ ಕಾರ್ಯತಃ ಏರ್ಪಾಡು ಮಾಡಲು ತೊಂದರೆಯಾಗುತ್ತದೆ. ಡೀ ಲಿಮಿಟ್‌ಮಾಡಬೇಕಾದರೂ ಈಗಿರುವ ಜನರಲ್ ಎಲೆಕ್ಷನ್ನಿನ ಎಲೆಕ್ಟರಲ್ ರೋಲ್ ಏನಿದೆಯೋ ಅದನ್ನೇ ಉಪಯೋಗಿಸುವುದರಿಂದ ಆ ಕೆಲಸ ತಪ್ಪುತ್ತದೆ. ಈಗ ಹೋಬಳಿಗಳಲ್ಲಿ 30 ಸಾವಿರ ಜನಸಂಖ್ಯೆಯಿದೆ. ಕೆಲವುಕಡೆ ಎರಡು, ಕೆಲವುಕಡೆ 3-4 ಹೋಬಳಿ ಸೇರಿಸಬಹುದು. ಡೀ ಲಿಮಿಟ್ ಮಾಡಿದರೆ 30 ಸಾವಿರ ಜನರಿಗೆ 15 ಸಾವಿರ ಓಟರುಗಳಾಗುತ್ತಾರೆ. ಷೆಡ್ಯೂಲನ್ನು ತೆಗೆಯಬೇಕೆಂದು ಸರ್ಕಾರ ಸೂಚನೆ ಮಾಡಿದೆ: ಹಾಗೆ ಮಾಡುವಾಗ ಈ ಷೆಡ್ಯೂಲನ್ನು ಬಿಟ್ಟು ಇದರ ಪರಿಮಿತಿಯಲ್ಲೇ ಕಾನ್‌ಸ್ಟಿಟ್ಯೂಯೆನ್ಸಿಗಳನ್ನು ರಚಿಸಿದರೆ ಅದರಿಂದ ಡಿಸ್ಟ್ರಿಕ್ಟ್ ಬೋರ್ಡಿನ ರಚನೆ ಸಮರ್ಪಕವಾಗುತ್ತದೆಂಬುದು ನನ್ನ ಅಭಿಪ್ರಾಯ. ಈ ಮಸೂದೆಯ ಕೊನೆಯ ಪುಟದಲ್ಲಿರುವಂತೆ, ಕಾಂಪೊಸಿಷನ್ ಆಫ್ ಡಿಸ್ಟ್ರಿಕ್ಟ್ ಬೋರ್ಡ್ಸ್‌ನಲ್ಲಿ 50 ನೆಯ ಸೆಕ್ಷನ್‌ಗೆ ಸಂಬಂಧಪಟ್ಟ ಹಾಗೆ ನಾಲ್ಕನೆಯ ಷೆಡ್ಯೂಲಿನಲ್ಲಿ ಬೆಂಗಳೂರಿಗೆ 40, ಮೈಸೂರಿಗೆ 36, ಮಂಡ್ಯಕ್ಕೆ 25, ಹಾಸನಕ್ಕೆ 23, ಶಿವಮೊಗ್ಗಕ್ಕೆ 20, ಚಿಕ್ಕಮಗಳೂರಿಗೆ 20, ಚಿತ್ರದುರ್ಗಕ್ಕೆ 29, ತುಮಕೂರಿಗೆ 40 ಮತ್ತು ಕೋಲಾರಕ್ಕೆ 34 ಸದಸ್ಯರೆಂದು ಹೇಳಿದೆ; ಬಳ್ಳಾರಿ ವಿಚಾರ ಹೇಳಿಲ್ಲ. ಹೀಗೆ ಒಂದು ಲಿಮಿಟ್ ಇಟ್ಟು ಅದಕ್ಕೆ ಕಡಿಮೆಯಾಗದಹಾಗಿರಬೇಕೆಂದು ಹೇಳಿದೆ. ಒಂದುವೇಳೆ ಜನಸಂಖ್ಯೆ ಕಡಮೆಯಿರುವ ತಾಲ್ಲೂಕುಗಳಿಗೆ ಪ್ರಾತಿನಿಧ್ಯ ಸಿಕ್ಕುತ್ತದೆಂಬುದನ್ನು ಗಮನಿಸಿ ಸೆಕ್ಷನ್ 50ನ್ನು ತಿದ್ದುಪಡಿ ಮಾಡುತ್ತೇವೆ ಎಂಬ ಅಭಿಪ್ರಾಯ ಸರ್ಕಾರಕ್ಕೆ ಇದ್ದರೆ 30 ಸಾವಿರಕ್ಕೆ ಒಂದು ಸಿಂಗಲ್ ಮೆಂಬರ್ ಕಾನ್‌ಸ್ಟಿಟ್ಯೂಯೆನ್ಸಿ ಮಾಡುವುದು ಸೂಕ್ತ. ಆಮೇಲೆ ಬರೀ ರೆವೆನ್ಯೂ ತಾಲ್ಲೂಕಿದ್ದರೆ ಅದರಲ್ಲಿ ಹೇಗೆ ಡಿಸ್ಟ್ರಿಕ್ಟ್ ಬೋರ್ಡ್ ಕಾನ್‌ಸ್ಟಿಟ್ಯೂಯೆನ್ಸಿ ಮಾಡಬೇಕೆಂಬ ಬಗ್ಗೆ ಒಂದು ತಿದ್ದುಪಡಿಯಿರುವುದು ಈ ರೀತಿಯಿದೆ :—

"51 *District Board Constituencies.*—(1) Every Revenue Taluk (excluding such portions of the taluk as included in a Municipality or area under the authority of a sanitary Board or a Town Board) in the District shall be a constituency and each such constituency shall elect such number of members not exceeding three having regard to the population of each constituency, as the Government may, by notification under sub-section (2), determine."

ಈಗ ತುಮಕೂರಿನಲ್ಲಿ, ಒಂದು ತಾಲ್ಲೂಕಿನಲ್ಲಿ ಸುಮಾರು 1,80,000 ಜನಸಂಖ್ಯೆ ಇದೆ. 3ಕ್ಕೆ ಮೀರದಂತೆ ಎಂದರೆ ಅಲ್ಲಿಗೆ ಪ್ರಾತಿನಿಧ್ಯ ಕಮ್ಮಿ ಆಗುತ್ತದೆ. ಆ ಕಾರಣದಿಂದ, ಜನಸಂಖ್ಯೆಯ ಆಧಾರದ ಮೇಲೆಯೇ ಒಂದು ವ್ಯವಸ್ಥೆಮಾಡಿ ಕ್ಷೇತ್ರಗಳನ್ನು ರಚಿಸಿ ಅದರ ಮೇಲೆ ಒಬ್ಬೊಬ್ಬರು ಒಂದೊಂದು ಕ್ಷೇತ್ರಕ್ಕೆ ನಿಲ್ಲಬೇಕೆಂದು ತೀರ್ಮಾನ ಮಾಡುವುದು ಹೆಚ್ಚು ಸುಗಮವೆಂದು ನಾನು ಅಭಿಪ್ರಾಯ ಪಡುತ್ತೇನೆ. ಇದೇ ಸಂದರ್ಭದಲ್ಲಿ ನಿಮ್ನ ವರ್ಗದವರಿಗೆ ಸ್ಥಳವನ್ನು ಕಾದಿಡುವುದಕ್ಕೆ ವ್ಯವಸ್ಥೆಮಾಡಿದೆ, ಸ್ಥಳವನ್ನು ಕಾದಿಡುವಾಗ ಯಾವರೀತಿ ಕಾದಿಡಬೇಕು ಎನ್ನುವುದು ಕೂಡ ಒಂದು ಸಮಸ್ಯೆ. ಈಗ ಸಾಮಾನ್ಯವಾಗಿ ಟೌನ್ ಮುನಿಸಿಪಾಲಿಟಿಗಳಲ್ಲಿ ಅವರಿಗೆ ಒಂದು ಕಾಲೊನಿ ಅಥವಾ ಪ್ರದೇಶ ಇರುತ್ತದೆ. ಆ ಪ್ರದೇಶದಲ್ಲಿ ಅವರು ಹೆಚ್ಚಾಗಿರುತ್ತಾರೆ. ಆ ಸ್ಥಳವನ್ನು ರಿಸರ್ವ್ಡ್ ಸೀಟ್ ಎಂದು ಕರೆದು ಅಂಥವರೇ ನಿಲ್ಲಬೇಕೆಂದು ಹೇಳುತ್ತಾರೆ. ಆ ರೀತಿ ಒಂದು ಕ್ಷೇತ್ರವನ್ನು ಜಿಲ್ಲಾದ್ಯಂತ ಅಥವಾ ತಾಲ್ಲೂಕುಗಳಲ್ಲಿ ರಚನೆಮಾಡುವುದು ಕಷ್ಟ. ಯಾವ ಸ್ಥಳವನ್ನು ರಿಸರ್ವ್ ಆಗಿಡಬೇಕೆಂಬುದು ಕಷ್ಟಕ್ಕೆ ಬರುತ್ತದೆ. ಆ ಸಂದರ್ಭದಲ್ಲಿ ನಾವೇನು ಸಲಹೆ ಕೊಡಬಹುದು ಎಂದರೆ, ಈಗ ಸಾಮಾನ್ಯವಾಗಿ ಸಿಂಗಲ್‌ಮೆಂಬರ್ ಕಾನ್‌ಸ್ಟಿಟ್ಯೂಯನ್ಸಿ ಮಾಡಿದರೆ,

ಯಾವ ಕಾನ್ಸ್ಟಿಟ್ಯೂಯನ್ಸಿಯಲ್ಲಿ ಹೆಚ್ಚು ಜನ ನಿಮ್ಮ ವರ್ಗದವರು ಇರುತ್ತಾರೋ ಆ ಕಾನ್ಸ್ಟಿಟ್ಯೂಯನ್ಸಿಯಲ್ಲಿ ಅವರೂ ಕೂಡ ಒಬ್ಬರು ಚುನಾವಣೆಗೆ ಇತರರೊಡನೆ ನಿಂತುಕೊಳ್ಳಬೇಕು. ಅಲ್ಲಿ ಓಟುಮಾಡತಕ್ಕವರು ಜನರಲ್ ಸೀಟಿಗೆ ಓಟುಮಾಡುವವರೆ ನಿಮ್ಮ ವರ್ಗದವರಿಗೂ ಕೂಡ ಓಟು ಮಾಡುತ್ತಾರೆ ಎಂದು ಇಟ್ಟುಕೊಂಡು ಆ ರೀತಿ ವ್ಯವಸ್ಥೆ ಮಾಡುವುದರಿಂದ ಅವರಿಗೆ ಸ್ಥಾನವನ್ನು ಮೀಸಲಾಗಿಟ್ಟಂತೆ ಆಗುತ್ತದೆ; ಮತ್ತು ಚುನಾವಣೆಯೂ ಕೂಡ ಸುಗಮವಾಗಿ ನಡೆಯುವುದಕ್ಕೆ ಅವಕಾಶವಾಗುತ್ತದೆ. ಹಾಗಲ್ಲದೆ ಡಬ್ಬಲ್‌ಮೆಂಬರ್ ಕಾನ್ಸ್ಟಿಟ್ಯೂಯನ್ಸಿ ಮಾಡಿದರೆ ಆಗಲೂ ಖರ್ಚು ಜಾಸ್ತಿ ಆಗುತ್ತದೆ. ಅವರಿಗಾಗಿ ಒಂದು ಸ್ಥಾನ ಮೀಸಲಾಗಿಡಬೇಕೆಂಬ ಕಾರಣದಿಂದಲೆ ನಾವು ಈಗ ಹೇಗೆ ಅಸೆಂಬ್ಲಿಗೆ ಡಬ್ಬಲ್ ಮೆಂಬರ್ ಕಾನ್ಸ್ಟಿಟ್ಯೂಯನ್ಸಿ ಮಾಡಿಕೊಂಡಿದ್ದೇವೆಯೋ ಆ ರೀತಿ ಮಾಡುವುದರಿಂದ ಹೆಚ್ಚು ಖರ್ಚಾಗುತ್ತದೆ. ಆದ್ದರಿಂದ ರಿಸರ್ವ್ಡ್‌ಸೀಟ್ ಕಲ್ಪಿಸಿಕೊಡುವಾಗ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯನ್ಸಿ ಮಾಡಿಕೊಂಡು ಯಾವ ಕ್ಷೇತ್ರದಲ್ಲಿ ಹೆಚ್ಚು ನಿಮ್ಮ ವರ್ಗದವರ ಜನಸಂಖ್ಯೆ ಇದೆಯೋ ಆ ಕ್ಷೇತ್ರದಲ್ಲಿ ನಿಮ್ಮ ವರ್ಗದವರ ಸದಸ್ಯರಿಗೆ ಅವಕಾಶಮಾಡಿ ಕೊಟ್ಟರೆ ಅದರಿಂದ ಹೆಚ್ಚು ಖರ್ಚು, ಮತ್ತು ಶ್ರಮ ಇಲ್ಲದೆ ಅವರಿಗೆ ಪ್ರಾತಿನಿಧ್ಯವನ್ನು ಒದಗಿಸಿಕೊಡಬಹುದಾಗಿದೆ.

ಇನ್ನು ನೇರವಾದ ಚುನಾವಣೆಯನ್ನು ನಡೆಸಬೇಕೇ ಅಥವಾ ಅಪ್ರತ್ಯಕ್ಷವಾದ ಚುನಾವಣೆಯನ್ನು ನಡೆಸಬೇಕೇ ಎನ್ನುವುದರಲ್ಲಿ ಬಹಳವಾಗಿ ಭಿನ್ನಾಭಿಪ್ರಾಯ ಬಂತು. ಇವತ್ತು ನೇರವಾದ ಚುನಾವಣೆ ನಡೆಸಬೇಕೆಂಬ ಅಭಿಪ್ರಾಯಪಟ್ಟಿದ್ದೇವೆ ಎಂಬುದಾಗಿ ಸರ್ಕಾರದವರು ತಿದ್ದುಪಡಿ ತಂದಿದ್ದಾರೆ. ಸಾಮಾನ್ಯವಾಗಿ ಸರ್ಕಾರದವರು ಶ್ರೀಮಾನ್ ವೆಂಕಟಪ್ಪನವರ ಸಮಿತಿಯ ಸಲಹೆಗಳಲ್ಲಿ ಕಂಡ ದೊಡ್ಡ ನ್ಯೂನತೆ ಅಥವಾ ಅದರ ಆಧಾರದಮೇಲೆ ಕಂಡು ಬಂದ ನ್ಯೂನತೆ ಬಹುಶಃ ಇದೇ ಎಂದು ಕಾಣುತ್ತದೆ. ಇದರಲ್ಲಿ ಕೆಲವರು ಪರೋಕ್ಷವಾಗಿ ಚುನಾವಣೆ ನಡೆಸಬೇಕೆಂದು ಹೇಳಿದರು. ಶ್ರೀ ಮಾನ್ ಪಟ್ಟಾಭಿರಾಮನ್‌ರವರು ಪರೋಕ್ಷವಾದ ಚುನಾವಣೆಯನ್ನು ಪ್ರತಿಪಾದನೆ ಮಾಡಿದರು. ಅವರ ದೃಷ್ಟಿಕೋಣ ಬಹುಶಃ ಬೇರೆ ಇರಬೇಕು. ಮತ್ತು ಗ್ರಾಮಪಂಚಾಯಿತಿಗಳಿಗೆ ಚುನಾವಣೆ ನಡೆಸುವ ರೀತಿಯಲ್ಲೂ ಕೂಡ ಅವರ ಅಭಿಪ್ರಾಯಬೇರೆಯಾಗಿದೆ. ಆ ಸರ್ವೋದಯ ದೃಷ್ಟಿಕೋಣದಿಂದ ಇವೊತ್ತು ಚುನಾವಣೆಗಳನ್ನು ಜಾರಿಗೆತರುವುದು ಕಾರ್ಯತಃ ಕಷ್ಟವಾಗಿದೆ. ಅಂದರೆ ಆ ದಿಕ್ಕಿನಲ್ಲೇ ಹೋಗಬಾರದು ಎಂದು ನನ್ನ ಅಭಿಪ್ರಾಯವಲ್ಲ. ಆ ಆದರ್ಶ ಕಾರ್ಯತಃ ಜಾರಿಗೆಬರುವಾಗ, ನಿರ್ಮೋಹ ದೃಷ್ಟಿಯಿಂದ, ಪಕ್ಷಾತೀತ ದೃಷ್ಟಿಯಿಂದ, ಸೇವಾ ಮನೋಭಾವದಿಂದ, ನಮ್ಮವರು, ನಾವು ಇನ್ನೂ ಅಷ್ಟುಮಟ್ಟಿಗೆ ಮುಂದುವರಿದಿಲ್ಲ. ಆದ್ದರಿಂದ ಇವೊತ್ತು ನಾವು ಇನ್ನೂ ಕೆಲವು ನಿಯಮಗಳನ್ನು ಇಟ್ಟುಕೊಂಡು, ಈ ಚುನಾವಣೆಗೆ ಸಂಬಂಧಪಟ್ಟಂತೆ ಸಾಮಾನ್ಯವಾಗಿ ನಾಗರೀಕದೇಶಗಳಲ್ಲಿ ಅನುಸರಿಸಬೇಕಾದ ಕೆಲವು ಪದ್ಧತಿಗಳನ್ನು ಅನುಸರಿಸಲೇಬೇಕಾಗಿದೆ. ಬ್ಯಾಲೆಟ್ ಬಾಕ್ಸ್ ಇಟ್ಟುಕೊಳ್ಳುವುದು, ಪ್ರಚಾರ ಮಾಡುವುದು, ಯಾರ್ಯಾರು ಅರ್ಜಿಹಾಕುತ್ತಾರೆ ಎಂದು ಕೇಳುವುದು ಅರ್ಜಿಯನ್ನು ಸೂಕ್ತವಾಗಿ ತೀರ್ಮಾನಮಾಡಿ, ಇಂತಹವರು ಚುನಾವಣೆಯಾಗಿ ಬಂದರು, ಇಂತಹವರು ಬರಲಿಲ್ಲ ಎಂದು ಹೇಳುವುದು ಇದೆಲ್ಲಾ ಅಗಲೇ ಬೇಕು. ಒಂದು ವೇಳೆ ತೀರ ಸೇವೆಮಾಡತಕ್ಕ ಬಹಳ ಒಳ್ಳೆಯ ಮನುಷ್ಯ ಸೋತುಹೋಗಬಹುದು. ಅಂದಮಾತ್ರಕ್ಕೆ ಒಳ್ಳೆಯ ಮನುಷ್ಯನನ್ನು ಸೋಲಿಸಿ, ಸೇವೆಮಾಡುವುದಕ್ಕೆ ಅನರ್ಹನಾಗಿರುವವನನ್ನು ಆರಿಸಿದ್ದೀರಿ ಎಂದು ಯಾರೂ ಪ್ರಶ್ನೆಮಾಡುವಹಾಗಿಲ್ಲ. ಒಂದು ತತ್ವ ಒಪ್ಪಿಕೊಂಡಮೇಲೆ ಕೆಲವು ಅಡ್ಡಿ ಆತಂಕಗಳು ಅದರಲ್ಲಿ ಇದ್ದರೂ ಕೂಡ ಸಹಿಸಿಕೊಂಡು ಮುಂದೆಹೋಗಬೇಕಾಗುತ್ತದೆ. ಇದು ಪ್ರಜಾಪ್ರಭುತ್ವದಲ್ಲಿ ಇವೊತ್ತು ನಡೆಯುತ್ತ ಇರುವ ರೀತಿ. ಅಪ್ರತ್ಯಕ್ಷ ಚುನಾವಣೆ ನಡೆಯಬೇಕೆಂಬ ಅಭಿಪ್ರಾಯಕ್ಕೆ ನನ್ನ ಸಮ್ಮತಿ ಇಲ್ಲ, ಎಂದರೆ ಪ್ರತ್ಯಕ್ಷವಾಗಿ ಚುನಾವಣೆ ನಡೆಯಬೇಕೆಂಬುದು ಸಮಂಜಸವಾಗಿದೆ. ಮತ್ತು ಅದು ಪ್ರಜಾಪ್ರಭುತ್ವಕ್ಕೆ ಹೆಚ್ಚುಕಳೆಯನ್ನು ಕೊಡುತ್ತದೆಯೇ ಹೊರತು, ಅಪ್ರತ್ಯಕ್ಷವಾಗಿ ಚುನಾವಣೆ ನಡೆದರೆ ಅದರಿಂದ ಆಗುವ ತೊಂದರೆ ನಮಗೆ ಬಹಳ ಹೆಚ್ಚು. ಖಾಯಿಲೆಗಿಂತ, ಮದ್ದೇ ಜಾಸ್ತಿ ಎನ್ನುವಹಾಗೆ ಆಗಿದೆ. ನಾವು ನೋಡಿದ್ದೇವೆ, ಕೆಲವು ಮುನಿಸಿಪಾಲಿಟಿಗಳಲ್ಲಿ ಹಣಕ್ಕೆ ಕೆಲವರು ಓಟುಗಳನ್ನು ಕೊಂಡುಕೊಳ್ಳುವುದು ಮತ್ತು ಇತರ ಪ್ರಭಾವಗಳಿಗೆ ಒಳಗಾಗುವುದು ಇವೆಲ್ಲಾ ಇರುತ್ತವೆ. ಆದ್ದರಿಂದ 10 ಜನ ಗ್ರಾಮಪಂಚಾಯಿತಿ ಸದಸ್ಯರನ್ನು ನಾನು ಸ್ವಲ್ಪ ಚೆನ್ನಾಗಿಟ್ಟುಕೊಂಡರೆ ನನಗೆ ಒಂದು ಸ್ಥಾನ ಜಿಲ್ಲಾಬೋರ್ಡಿನಲ್ಲಿ ಖಾಯಂ ಎಂದೇ ತಿಳಿದುಕೊಳ್ಳಬಹುದು. ಅಂತಹ ಪರಿಸ್ಥಿತಿಗಳಿಗೆ ನಾವು ಅವಕಾಶಕೊಡದೆ ಇರಬೇಕಾದರೆ ಸಾಮಾನ್ಯ ಜನತೆಗೆ ನೇರವಾದ ಚುನಾವಣೆ ಮಾಡತಕ್ಕ ಒಂದು ಅವಕಾಶ ಕಲ್ಪಿಸಿಕೊಟ್ಟರೆ, ನೇರವಾದ ಚುನಾವಣೆ ಇದ್ದರೆ ಸಾಮಾನ್ಯವಾಗಿ ಅಂಥಾ ಪ್ರಭಾವಗಳಿಗೆ ಅವರು ಕೈಹಾಕುವುದಿಲ್ಲ. ಇಲ್ಲದೇ ಇದ್ದರೆ ಏನಾಗುತ್ತದೆ ಎಂದರೆ 10 ಗ್ರಾಮದಲ್ಲಿ ಯಾವ ಪಾರ್ಟಿಯವರು ಇರುತ್ತಾರೋ ಅವರೇ ಚುನಾವಣೆಯಾಗಿ ಬರಬೇಕಾಗುತ್ತದೆ; ಅಂಥ ಒಂದು ತೀರ್ಮಾನವೇ ಆಗುತ್ತದೆ. 200-300-500 ಜನರ ಓಟಿನ ಆಧಾರದ ಮೇಲೆ ಒಬ್ಬ ಜಿಲ್ಲಾಬೋರ್ಡಿಗೆ ಬರುವುದಾದರೆ-ನಿನ್ನೆಕೂಡ ಮಾನ್ಯ ಸದಸ್ಯರೊಬ್ಬರು ಆ ವಿಷಯ ಹೇಳಿದರು. ಓಟು ಖರೀದಿ ಮಾಡಿ ಅವರೇ ಬಂದು ಬಿಡುತ್ತಾರೆ, ಆದ್ದರಿಂದ ಉದ್ದೇಶ ಸಾರ್ಥಕವಾಗುವುದಿಲ್ಲ. ಮತ್ತು ಜನತೆಗೆ ಇದರಿಂದ ಯಾವ ಸೇವೆಯೂ ದೊರೆಯುವುದಿಲ್ಲ; ಖರ್ಚುಮಾಡಿ ಬಂದಿರುತ್ತಾರೆ, ಆ ಖರ್ಚು ಇಲ್ಲಿ ಹುಟ್ಟಿಸಿಕೊಳ್ಳಲೇ ಬೇಕಾಗುತ್ತದೆ. As a matter of right and fact he will do it. ಆ ಹಣ ಇವತ್ತು ದುಡಿದುಕೊಳ್ಳಬೇಕು, ಅದಕ್ಕೆ ಇದೇ ಕ್ಷೇತ್ರ ಎಂದು ತೀರ್ಮಾನ ಮಾಡುತ್ತಾರೆ, ಘಂಟಾಘೋಷವಾಗಿ ಹೇಳಿ ದುಡ್ಡು ಮಾಡಿಕೊಳ್ಳುತ್ತಾರೆ. ಆದ್ದರಿಂದ ಅಲ್ಲಿ ಕರಪ್ಷನ್‌ಗೂ ಮತ್ತು ಬೇರೆಬೇರೆ ಅಕ್ರಮಗಳಿಗೂ ಅವಕಾಶವಾಗುತ್ತದೆ. ಅಂಥಾದ್ದಕ್ಕೆ ನಾವು ಅವಕಾಶ ಕೊಡಬಾರದು. ಅದನ್ನು ಸಾಧ್ಯವಾದಷ್ಟು ತಪ್ಪಿಸುವುದಕ್ಕೆ ನಾವು ಏನುಮಾಡಬೇಕೆಂದರೆ, ನೇರವಾದ ಚುನಾವಣೆಗಳನ್ನು ನಡೆಸಿ ಅದರಲ್ಲಿ ಸಾಧ್ಯವಾದ ಮಟ್ಟಿಗೂ ನಿಸ್ಪೃಹರಾಗಿರತಕ್ಕವರನ್ನು ಆರಿಸುವುದಕ್ಕೆ ಒಂದು ವ್ಯವಸ್ಥೆಯನ್ನು ಮಾಡುವುದು ಸೂಕ್ತವಾಗಿದೆ. ಆದ್ದರಿಂದ ನೇರವಾದ ಚುನಾವಣೆ ನಡೆಯುವುದಕ್ಕೆ ವ್ಯವಸ್ಥೆ ಮಾಡತಕ್ಕದ್ದು ಅಗತ್ಯ ಎಂದು ಹೇಳುತ್ತೇನೆ.

ಆಮೇಲೆ ಇನ್ನೊಂದು ಸಲಹೆಯನ್ನು ಕೂಡ ಈಗಲೇ ಸೂಚನೆಮಾಡುವುದು ಒಳ್ಳೆಯದು. ನ್ಯಾಯವಾದ ಅರ್ಜಿಗಳನ್ನು ತಿರಸ್ಕರಿಸಿ, ಅಕ್ರಮವಾದ ಅರ್ಜಿಗಳನ್ನು ಪುರಸ್ಕರಿಸಿ ತೆಗೆದುಕೊಂಡ ಸಂದರ್ಭ ಬಂದರೆ, ಚುನಾವಣೆ ಆದಮೇಲೆ ಇತ್ಯರ್ಥ ಮಾಡುವುದಕ್ಕಿಂತ—ಶ್ರೀಮಾನ್ ಪಟ್ಟಾಭಿರಾಮನ್‌ರವರೂಕೂಡ ಹೇಳಿದ್ದಾರೆ—ಅಸೆಂಬ್ಲಿ

(ಶ್ರೀ ಎಸ್. ಗೋಪಾಲಗೌಡ.)

ಮತ್ತು ಪಾರ್ಲಿಮೆಂಟ್‌ಗೆ ಸಂಬಂಧಪಟ್ಟ ವಿವಾದಗಳ ರೀತ್ಯಾ ಇತ್ಯರ್ಥಮಾಡಬೇಕೆಂದು ಈಗ ಚರ್ಚೆನಡೆದಿದೆ. ಆದ್ದರಿಂದ ಈ ಸಂದರ್ಭದಲ್ಲಿ ಜಿಲ್ಲಾ ಬೋರ್ಡಿಗೆ ಚುನಾವಣೆ ನಡೆಯುವಾಗಲೂ ಕೂಡ ಬರಬಹುದಾದ ವಿವಾದಗಳನ್ನು calendar of events ಹಾಕಿಕೊಂಡು ತೀರ್ಮಾನಮಾಡುವುದು ಒಳ್ಳೆಯದು. ಮುಂದೆ ಚುನಾವಣೆ ಆಗಿ ವಿವಾದ ಬಂದು ಅರ್ಜಿಹಾಕಿ ಆಗಬಹುದಾದ ತೊಂದರೆಯನ್ನು ಹೋಗಲಾಡಿಸಿಕೊಳ್ಳಬಹುದು ಎಂಬುದು ನನ್ನ ಅಭಿಪ್ರಾಯವೂಕೂಡ ಆಗಿದೆ. ಒಟ್ಟಿನಲ್ಲಿ ಈ ಮಸೂದೆಯಲ್ಲಿ ಇನ್ನೂ ಕೆಲವು ತಿದ್ದುಪಡಿಗಳನ್ನು ಸರ್ಕಾರದವರು ಸೂಚಿಸಿದ್ದಾರೆ. ಮುಖ್ಯವಾದ ತಿದ್ದುಪಡಿಗಳಮೇಲೆ ಈಗ ನಾನು ನನ್ನ ಅಭಿಪ್ರಾಯವನ್ನು ಹೇಳಿದ್ದೇನೆ. ಆದರೆ ಈ ಸರ್ಕಾರದ ಮನೋಭಾವ ಏನಿದೆ, ಇದು ಪೂರ್ಣ ಬದಲಾವಣೆಯಾಗದೇ ಹೋದರೆ, ಈ ರೀತಿಯಲ್ಲೇ ನಡೆದುಕೊಂಡು ಹೋದರೆ, ಇದರಿಂದ ದೇಶಕ್ಕೆ ಹಾನಿಯುಂಟಾಗುತ್ತದೆ ಎಂಬುದನ್ನು ಮಾತ್ರ ಈ ಸಂದರ್ಭದಲ್ಲಿ ನಾನು ಹೇಳಬೇಕಾಗಿದೆ. ಏಕೆಂದರೆ ಇಷ್ಟು ದಿವಸ ಕಾಲವಿಳಂಬ ಮಾಡಿರುವುದೂಕೂಡ, ಅನೇಕ ಜಿಲ್ಲಾಬೋರ್ಡಿನ ಕೆಲಸಗಳು ನಿಂತುಹೋಗಿರುವುದಕ್ಕೆ ಕಾರಣವಾಗಿದೆ. ಇವತ್ತು ರಸ್ತೆಗಳನ್ನು ಯಾರು ನೋಡಿಕೊಳ್ಳಬೇಕು ಎನ್ನುವುದು ನಿಗದಿಯಾಗದೆ ಅನೇಕರಸ್ತೆಗಳುಕಾಂಗಾರಿಯಾಗದೆ ಹೋಗಿದೆ. ಆದ್ದರಿಂದ ಇದನ್ನು ಇನ್ನೂ ವಿಳಂಬಮಾಡಬೇಕು ಎಂದು ಹೇಳಿ ಯಾರಿಗೂ ಅಭಿಪ್ರಾಯವಿಲ್ಲ. ಈ ಸುಧಾರಣೆಗಳನ್ನು ಜಾರಿಗೆ ತರುವಾಗ ಅಥವಾ ಒಂದು ಕಾನೂನನ್ನು ತಿದ್ದುಪಡಿಮಾಡುವಾಗ ದೂರ ಮತ್ತು ವಿಶಾಲದೃಷ್ಟಿಯನ್ನಿಟ್ಟುಕೊಂಡು ಮಾಡಬೇಕಾದ್ದು ಬಹಳ ಸೂಕ್ತವಾದದ್ದು. ಇವೊತ್ತು ನನ್ನ ಹಿತದೃಷ್ಟಿಯಿಂಥ, ನಮ್ಮವರ ಹಿತದೃಷ್ಟಿಯಿಂದ ಕಾನೂನುಮಾಡುವುದಾಗಲೀ ಅಥವಾ ನಮ್ಮ ಮೂಗಿನ ನೇರಕ್ಕೆ ಒಂದು ಅಭಿಪ್ರಾಯವನ್ನು ಕೊಟ್ಟುಬಿಡುವುದಾಗಲೀ ಸೂಕ್ತವಾಗುವುದಿಲ್ಲ. ಆದ್ದರಿಂದ ಸರ್ಕಾರದವರು ಇದನ್ನೆಲ್ಲಾ ಪರಿಶೀಲನೆ ಮಾಡಿ ಹೆಚ್ಚು ವ್ಯವಸ್ಥಿತವಾದ ರೀತಿಯಲ್ಲಿ ಈ ಜಿಲ್ಲಾಬೋರ್ಡುಗಳನ್ನು ಪುನರಃಚನೆ ಮಾಡುವುದಕ್ಕೂ ಮತ್ತು ಪುನರುದ್ಧಾರ ಮಾಡುವುದಕ್ಕೂ ಪ್ರಯತ್ನವನ್ನು ಮಾಡಬೇಕು. ಇವತ್ತು ಇರತಕ್ಕ ಕಾನೂನು ಆದರೂಕೂಡ ಸಮರ್ಪಕವಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಇದರಲ್ಲಿ ಸೂಪರ್‌ಸೆಷನ್ ಮಾಡುವುದು ಮುಂತಾದುವು ಅನೇಕವಿವೆ. ಅದನ್ನೆಲ್ಲಾ ಸೂಚನೆಮಾಡುವುದಕ್ಕೆ ಹೋಗಬಾರದು; ಹೋದರೆ irrelevant ಆಗುತ್ತದೆ ಎಂಬ ಅಭಿಪ್ರಾಯ ಬರುತ್ತದೆ. ಇರ್ರೆಲವೆಂಟೇ ರೆಲವೆಂಟೇ ಎನ್ನುವುದನ್ನು ಕೆಲವುವೇಳೆ ಹೇಳುವುದಕ್ಕೆ ಕಷ್ಟವಾಗುತ್ತದೆ. ಇದೇ ರೆಲವೆಂಟು, ಇದರ ಮೇಲೆ ಕನ್‌ಫೈನ್ ಮಾಡಿಕೊಂಡು ಮಾತನಾಡಬೇಕೆಂದರೆ ಕೆಲವುವೇಳೆ ಕಷ್ಟವಾಗುತ್ತದೆ. ಏಕೆಂದರೆ ವಿಲೇಜ್ ಪಂಚಾಯಿತಿಗಳ ವಿಷಯದಲ್ಲಿ ಮಾತನಾಡುವಾಗ, ಈ ತಿದ್ದುಪಡಿ ಕಾನೂನಿನ ವಿಷಯದಲ್ಲಿ ಮಾತನಾಡುವಾಗ ಕೆಲವುವೇಳೆ ಸ್ವಲ್ಪ ಆಕಡೆ, ಈ ಕಡೆ ಹೋಗಿ ಮಾತನಾಡುವ ಸಂಭವ ಇರುತ್ತದೆ. ಆದ್ದರಿಂದ ಇವೊತ್ತು ಈ ಜಿಲ್ಲಾಬೋರ್ಡುಗಳ ಚುನಾವಣೆಯನ್ನು ಈ ವರ್ಷವೇ ಮಾಡುತ್ತೇವೆ ಎಂದು ಏನು ಒಂದು ಘೋಷಣೆ ಮಾಡಿದ್ದೀರಿ, ಅದನ್ನು ಮಾಡುವುದಕ್ಕೆ ಒಂದು ಹಿನ್ನೆಲೆಯನ್ನು ರಚಿಸಬೇಕಾಗುತ್ತವೆ. ರಚಿಸದೆ ಹೋದರೆ, ಏಕಾಏಕಿ ಚುನಾವಣೆಗಳನ್ನು ಪ್ರಾರಂಭಿಸುತ್ತೇವೆ, ಎಂದರೆ ಜನಗಳಿಗೆ ಬಹಳ ಕಷ್ಟವಾಗುತ್ತದೆ. ಕಳೆದ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಯಾವ ಉಮೇದುವಾರರು ಯಾವ ಕ್ಷೇತ್ರದಲ್ಲಿ ಯಾವ ಸ್ಥಾನಕ್ಕೆ ಚುನಾವಣೆಗೆ, ನಿಲ್ಲುತ್ತಾರೆ, ಯಾವಾಗ ಪ್ರಾರಂಭವಾಗುತ್ತದೆ, ಎಂಬುದೇ ಅನೇಕರಿಗೆ ಗೊತ್ತಿರಲಿಲ್ಲ; ಎಲ್ಲಿಹೋಗಬೇಕು, ಏನು ಮಾಡಬೇಕು ಎಂಬುದೇ ಗೊತ್ತಿಲ್ಲದೆ ಬಹಳ ತೊಂದರೆಯಾಯಿತು. ಜಿಲ್ಲಾ ಬೋರ್ಡಿನ ಚುನಾವಣೆಗೂ ಅದೇರೀತಿ ಆಗಬಾರದು. ಸರಿಯಾದ ಏರ್ಪಾಡು ಮಾಡಬೇಕು. ಅದಕ್ಕಾಗಿ ಈ ಕಾನೂನನ್ನು ಈ ಅಧಿವೇಶನ ಮುಕ್ತಾಯವಾಗುವುದರೊಳಗೇ ಅಂಗೀಕಾರ ಮಾಡುವುದಕ್ಕಾಗಿ ಇದನ್ನು ಒಂದು ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಅಲ್ಲಿ ಸಂಪೂರ್ಣವಾಗಿ ಈ ಸಭೆಯಲ್ಲಿ ಯಾವ ಒಂದು ಅಭಿಪ್ರಾಯ ಮಾಡಿದೆಯೋ ಆ ಅಭಿಪ್ರಾಯದ ಪ್ರಕಾರ ಮತ್ತಷ್ಟು ತಿದ್ದುಪಡಿಮಾಡಿ, ಸೂಕ್ತ ತಿದ್ದುಪಡಿಗಳೊಡನೆ ಈ ಮಸೂದೆಯನ್ನು ಅಂಗೀಕಾರ ಮಾಡಿಸಿ, ಈ ಚುನಾವಣೆಗಳನ್ನು ಆದಷ್ಟು ಜಾಗ್ರತೆ ತಾವು ಹೇಳಿರುವ ಪ್ರಕಾರ ಈ ವರ್ಷವೇ ನಡೆಸಬೇಕೆಂದು ಸರ್ಕಾರದವರಿಗೆ ಸಲಹೆ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

1-30 P.M.

*ಶ್ರೀ ಕೆ. ಲಕ್ಕಪ್ಪ (ಚೆನ್ನರಾಯಪಟ್ಟಣ).—ಸ್ವಾಮಿ ನಿನ್ನೆಯಿಂದಲೂ ಈ ಸಭೆಯ ಮುಂದೆ ಈ ಜಿಲ್ಲಾ ಬೋರ್ಡ್ ತಿದ್ದುಪಡಿ ಮಸೂದೆಯ ಬಗ್ಗೆ ಚರ್ಚೆಗಳ ನಡೆಯುತ್ತಿವೆ. ಹೀಗೆ ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲಿ ನಮ್ಮ ಮುಂದೆ ನಾಲ್ಕೈದು ಬಹಳ ಪ್ರಾಮುಖ್ಯವಾದ ವಿಷಯಗಳು ನಿಂತಿರುತ್ತವೆ. ಇವುಗಳಲ್ಲಿ ಬಹಳ ಪ್ರಾಮುಖ್ಯವಾದ ಒಂದು ವಿಷಯ ಯಾವುದೆಂದರೆ, ಈಗ ಈ ಚುನಾವಣೆಗಳ ಬಗ್ಗೆ ಏರ್ಪಡಿಸತಕ್ಕ ಕ್ಷೇತ್ರಗಳು ಸಿಂಗಲ್ ಮೆಂಬರ್ಸ್ ಕಾನ್‌ಸ್ಟಿಟ್ಯುಎನ್ಸಿಗಳಾಗಿರಬೇಕೇ ಅಥವಾ ಡಬ್ಬಲ್ ಮೆಂಬರ್ಸ್ ಕಾನ್‌ಸ್ಟಿಟ್ಯುಯೆನ್ಸಿಗಳಾಗಿರಬೇಕೆ ಅನ್ನುವುದು ಒಂದು ಬಹಳ ಪ್ರಾಮುಖ್ಯವಾದಂಥ ವಿಷಯವಾಗಿದೆ. ಆದರೆ, ಹೀಗೆ ಓಟ್ ಮಾಡತಕ್ಕಂಥ ಸಂದರ್ಭಗಳಲ್ಲಿ ಹಿಂದಿನಿಂದಲೂ ಯಾವರೀತಿ ಇದು ನಡೆದುಕೊಂಡು ಬರುತ್ತಿದೆ ಅನ್ನುವುದನ್ನು ನಾವೆಲ್ಲರೂ ನೋಡಿದ್ದೇವೆ. ಆದರೆ ಈಗ ನಮ್ಮ ಈ ಅಸೆಂಬ್ಲಿ ಆಕ್ಟಿನಲ್ಲಿ ಇರುವಹಾಗೆ ಈ ಸದಸ್ಯರನ್ನು ಚುನಾವಣೆ ಮಾಡತಕ್ಕ ಸಂದರ್ಭದಲ್ಲಿ ಅವರಿಗೆ ಕೆಲವು ಡಿಸ್‌ಕ್ವಾಲಿಫಿಕೇಷನ್‌ಗಳನ್ನು ಹಾಕಿದ್ದಾರೆ. ಅದೇರೀತಿ ಈ ಚುನಾವಣೆಗಳ ಸಂಬಂಧದಲ್ಲಿಯೂ ಕೆಲವು ನಿಯಮಗಳನ್ನು ಹಾಕತಕ್ಕದ್ದು ಅಗತ್ಯ. ಅದಕ್ಕಾಗಿ ಹೀಗೆಲ್ಲಾ ಈ ಕಾನೂನನ್ನು ಮಾರ್ಪಾಡು ಮಾಡುತ್ತಾ ಬಂದಿದ್ದಾರೆ. ಇದೂ ಬಹಳ ಒಳ್ಳೆಯದೆಂದೇ ಹೇಳುತ್ತೇನೆ. ಇದರಲ್ಲಿ ಅಡಕ ಮಾಡತಕ್ಕಂಥ ತಿದ್ದುಪಡಿಗಳಲ್ಲಿ ಬಹಳ ಮುಖ್ಯವಾದಂಥ ತಿದ್ದುಪಡಿ ಯಾವುದೆಂದರೆ:—ಈಗ ಸಿಂಗಲ್ ಮೆಂಬರ್ಸ್ ಕಾನ್‌ಸ್ಟಿಟ್ಯುಯೆನ್ಸಿಗಳು ಇರಬೇಕೇ ಅಥವ ಡಬ್ಬಲ್ ಮೆಂಬರ್ಸ್ ಕಾನ್‌ಸ್ಟಿಟ್ಯುಯೆನ್ಸಿಗಳಿರಬೇಕೇ ಎನ್ನುವುದು. ಇದು ಬಹಳ ಮುಖ್ಯವಾದದ್ದು ಎನ್ನತಕ್ಕದ್ದನ್ನು ಈಗಾಗಲೇ ಕೆಲವು ಮಾನ್ಯ ಸದಸ್ಯರು ಒತ್ತಿ ಹೇಳಿದ್ದಾರೆ. ಆದರೆ ಇನ್ನು ಒಬ್ಬಿಬ್ಬರು ಸದಸ್ಯರು ಇದನ್ನು ವಿರೋಧಿಸುತ್ತಾ ಹೀಗೆ ಇವುಗಳನ್ನು ಸಿಂಗಲ್ ಮೆಂಬರ್ಸ್ ಕಾನ್‌ಸ್ಟಿಟ್ಯುಯೆನ್ಸಿ ಮಾಡಿದರ ಹೆಚ್ಚಿನ ಹಣವನ್ನು ಖರ್ಚುಮಾಡಬೇಕಾಗಿ ಬರುತ್ತದೆ ಎಂದು ಹೇಳಿ ವಾದಮಾಡಿದ್ದಾರೆ. ನನಗೂ ಕೂಡ ಹಾಗೇ ಅನ್ನಿಸುತ್ತಿದೆ. ಆದರೆ ಶ್ರೀ ಎ. ಭೀಮಪ್ಪ ನಾಯಕರು ಮಾತನಾಡುತ್ತ ಸಿಂಗಲ್ ಮೆಂಬರ್ಸ್

ಕಾನ್‌ಸ್ಟಿಟ್ಯುಯೆನ್ಸಿ ಮಾಡಿದರೆ ಅನುಕೂಲ. ಇದರಿಂದ ಖರ್ಚು ಸಹ ಕಡಮೆಯಾಗುತ್ತದೆ ಎಂದು ಹೇಳಿದರು. ಆದರೆ ಖರ್ಚು ಹಾಗೆ ಕಡಮೆಯಾಗುವುದಿಲ್ಲ; ಅದು ಇನ್ನೂ ಹೆಚ್ಚಾಗುತ್ತದೆ ಎಂಬುದು ನನ್ನ ಅಭಿಪ್ರಾಯ. ಈ ಕಾನ್‌ಸ್ಟಿಟ್ಯುಯೆನ್ಸಿಗಳು ಚಿಕ್ಕದಾದಷ್ಟು ಓಟುದಾರರನ್ನು ಕಾಣತಕ್ಕಂಥ ಪ್ರದೇಶದ ವಿಸ್ತೀರ್ಣ ಬಹಳ ಕಮ್ಮಿಯಾಗಿರುತ್ತದೆ. ಇದರಿಂದ ಕಡಮೆ ಖರ್ಚಿನಲ್ಲಿ ಚುನಾವಣೆಗಳನ್ನು ನಡೆಸಬಹುದೆಂದು ಅವರು ಅಭಿಪ್ರಾಯಪಟ್ಟಿರುತ್ತಾರೆ. ಆದರೆ ಈಗಾಗಲೇ ಈ ಚುನಾವಣೆಗಳು ಹೇಗೆ ನಡೆಯುತ್ತವೆಯೆಂಬ ಅನುಭವ ನಮ್ಮೆಲ್ಲರಿಗೂ ಸಾಕಷ್ಟು ಗೊತ್ತಾಗಿದೆ. ಈ ದಿವಸ ಇಲ್ಲಿ ಸೇರಿರತಕ್ಕಂಥ ಸದಸ್ಯರೆಲ್ಲರಿಗೂ ಇದರ ಸ್ವಂತ ಅನುಭವವಿದ್ದೇ ಇದೆ. ಈಗ ನಾವೆಲ್ಲರೂ ನೋಡಿರುವಹಾಗೆ ಒಂದು ಚಿಕ್ಕ ಮುನಿಸಿಪಾಲಿಟಿಗೆ 10-12 ಜನರ ಚುನಾವಣೆಗಳು ನಡೆಯಬೇಕಾಗಿ ಬಂದ ಸಂದರ್ಭಗಳಲ್ಲಿ ಆ ಮುನಿಸಿಪಲ್ ಪ್ರದೇಶವನ್ನು ಚಿಕ್ಕಚಿಕ್ಕ ಬ್ಲಾಕುಗಳಾಗಿ ವಿಂಗಡಿಸಿದ್ದಾಗ್ಯೂ ದಿನಬೆಳಗಾದರೆ ಉಮೇದುವಾರರು ಕಾರಿನಲ್ಲಿ ಓಡಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ನಾವು ಎಷ್ಟೇ ಹಿಡಿತಮಾಡಿದರೂ ದುಡ್ಡನ್ನು ಖರ್ಚು ಮಾಡಲೇಬೇಕಾಗುತ್ತದೆ. ಆ ಅನುಭವ ತಮಗೆಲ್ಲರಿಗೂ ಬಂದಿರುತ್ತದೆಂದು ನಾನು ಭಾವಿಸ ತ್ತೇನೆ. ಆದುದರಿಂದ ಹೀಗೆ ಕಾನ್‌ಸ್ಟಿಟ್ಯುಯೆನ್ಸಿ ಚಿಕ್ಕದಾದರೆ ಹಣ ಖರ್ಚು ಮಾಡುವುದು ಕಡಮೆಯಾಗುತ್ತದೆಂಬುದನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಇದನ್ನು ನಾವು ವಿಧಿಯಿಲ್ಲದೆ ಖರ್ಚು ಮಾಡಲೇ ಬೇಕಾಗಿ ಬರುತ್ತದೆಂಬುದನ್ನು ನಾನು ತಮ್ಮಲ್ಲಿ ಒತ್ತಿ ತಿಳಿಸಬೇಕಾಗಿದೆ. ಈ ಚುನಾವಣೆ ಕ್ಷೇತ್ರಗಳು ಇನ್ನೂ ದೊಡ್ಡವಾದರೆ ಖರ್ಚು ಬಹಳ ಕಡಮೆಯಾಗುತ್ತದೆಂದು ಹೇಳಬೇಕಾಗಿದೆ. ಅಷ್ಟು ಹೊರತು ಹೀಗೆ ಚುನಾವಣಾಕ್ಷೇತ್ರ ಚಿಕ್ಕದಾದರೆ ಖರ್ಚುವೆಚ್ಚಗಳೇನೂ ಕಡಮೆಯಾಗುವುದಿಲ್ಲ. ನಾನು ಚುನಾವಣೆಗೆ ನಿಂತುಕೊಂಡರೆ ನನ್ನ ಮೇಲೆ ಅನೇಕರು ಕಂಟೆಸ್ಟ್ ಮಾಡಬಹುದು. ನಾನು ಚುನಾವಣಾಕ್ಷೇತ್ರದಲ್ಲಿ ಒಂದೆರಡುಸಾರಿ ಪ್ರಚಾರ ಕಾರ್ಯ ನಡೆಸಿಕೊಂಡು ಬಂದರೆ ನನ್ನ ಎದುರು ಪಕ್ಷದವರು ಅವರು ಮೂರು ನಾಲ್ಕು ಸಲ ತಮ್ಮ ಪ್ರಚಾರ ಕಾರ್ಯವನ್ನು ನಡೆಸುತ್ತಾರೆ. ಹಾಗೆ ಅವರು ಮೂರು ನಾಲ್ಕು ಆವರ್ತಿ ಪ್ರಚಾರ ನಡೆಸಿದ್ದಾರೆಂದು ಪುನಃ ನಾನೂ ಸಹ ಮತ್ತೆ ಪ್ರಚಾರಕ್ಕೆ ಹೊರಡಬೇಕಾಗುತ್ತದೆ. ಹೀಗೆ ಇದು ಒಬ್ಬರ ಪ್ರಚಾರದ ಮೇಲೆ ಮತ್ತೊಬ್ಬರ ಪ್ರಚಾರ ಹತ್ತಾರಾವರ್ತಿ ಪ್ರಾರಂಭವಾಗುವುದು ಸಹಜವಾಗೇ ಇರುತ್ತದೆ. ಹೀಗಾಗಿ ಖರ್ಚುವೆಚ್ಚಗಳು ಹೆಚ್ಚಲು ಕಾರಣವಾಗಿರುತ್ತದೆ. ಪ್ರತಿಯೊಬ್ಬ ಉಮೇದುವಾರನಿಗೂ ಆತನ ಚುನಾವಣೆಯ ಕ್ಷೇತ್ರದಲ್ಲಿ ಬಹಳ ಇಂಟೆನ್ಸಿವ್ ಆಗಿ ಪ್ರಚಾರ ನಡೆಸಬೇಕೆಂಬ ಕುತೂಹಲವಿದ್ದೇ ಇರುತ್ತದೆ. ಇದರಿಂದ ಪ್ರತಿಯೊಬ್ಬ ಉಮೇದುವಾರನೂ ಹೆಚ್ಚು ಹಣವನ್ನು ಖರ್ಚುಮಾಡಲೇ ಬೇಕಾಗುತ್ತದೆ. ಆದರೆ ಹೀಗೆ ಮಾಡುವುದಕ್ಕೆ ಬದಲಾಗಿ ಈ ಚುನಾವಣೆಕ್ಷೇತ್ರಗಳನ್ನು ದೊಡ್ಡದಾಗಿ ಮಾಡಿದರೆ ಖರ್ಚು ಇನ್ನೂ ಕಡಮೆಯಾಗುತ್ತದೆ. . . .

ಶ್ರೀ ಬಿ. ರಾಚಯ್ಯ (ಎಳಂದೂರು—ಅನುಸೂಚಿತ ಜಾತಿಗಳು).—ಹಾಗಾದರೆ ಇಡೀ ಜಿಲ್ಲೆಯನ್ನೇ ಒಂದು ಕ್ಷೇತ್ರವನ್ನಾಗಿ ಮಾಡಿ; ತಮಗೆ ಖರ್ಚು ಇನ್ನೂ ಕಡಮೆಯಾಗುತ್ತದೆ.

ಶ್ರೀ ಕೆ. ಲಕ್ಕಪ್ಪ.—ಈಗ ನಮ್ಮ ಮುಂದೆ ಇರತಕ್ಕದ್ದು ತಾಲ್ಲೂಕು ಬೋರ್ಡುಗಳ ವಿಚಾರ. ಈಗ ಅನೇಕ ಮೈನರ್ ಕಮ್ಯುನಿಟಿಗಳು ಬೇರೆ ಇರುತ್ತವೆ. ಇವರ ಸಂಖ್ಯೆ ಒಂದೇ ಸ್ಥಳದಲ್ಲಿ ಹೆಚ್ಚಿಗೆ ಇರುವುದಿಲ್ಲ. ಅಲ್ಲಲ್ಲೇ ಹರಡಿಕೊಂಡಿರುತ್ತದೆ. ಈ ನಾನಾ ಕಾರಣಗಳಿಂದ ಈ ಸಿಂಗಲ್ ಮೆಂಬರ್ ಕಾನ್‌ಸ್ಟಿಟ್ಯುಯೆನ್ಸಿಯನ್ನು ಮಾಡಬೇಕೆಂದು ಹೇಳಿದರೆ ಈ ಮೈನರ್ ಕಮ್ಯುನಿಟಿಗಳವರಿಗೆ ಚುನಾವಣೆಯಲ್ಲಿ ನಿಂತು ಜೈಶೀಲರಾಗಿ ಬರುವುದಕ್ಕೆ ಅನೇಕ ಎಡರುತೊಡರುಗಳು ಇರುತ್ತವೆಂದು ಹೇಳಿದರೆ ತಾವುಗಳೆಲ್ಲರೂ ಒಪ್ಪಿ ಕೊಳ್ಳುತ್ತೀರಿ ಎಂದು ನಾನು ಭಾವಿಸುತ್ತೇನೆ. ಆದರೆ ಈ ಪ್ರಜಾಪ್ರಭುತ್ವಯುಗದಲ್ಲಿ ಕೋಮುವಾರು ಭಾವನೆ ಇರಬಾರದೆಂಬುದನ್ನು ನಾನೂ ಕೂಡ ಒಪ್ಪುತ್ತೇನೆ. ಇದು ಬೇಗ ಹೊರಟುಹೋಗಬೇಕೆಂದು ನಾನೂ ಹೇಳುತ್ತೇನೆ. ಆದರೆ ಇದು ಇನ್ನೂ ಅಲ್ಲಲ್ಲೇ ಇರತಕ್ಕದ್ದನ್ನು ನಾನು ನನ್ನ ಅನುಭವದಿಂದ ನೋಡಿ ತಿಳಿದುಕೊಂಡಿದ್ದೇನೆ. ಆದುದರಿಂದ ಈ ಕೋಮುವಾರು ಭಾವನೆ ಅಷ್ಟಾಗಿ ಇನ್ನೂ ನಮ್ಮಲ್ಲಿ ಅಳಿಸಿಹೋಗಿಲ್ಲವೆಂದು ತಿಳಿಸಬೇಕಾಗಿದೆ. ಆದುದರಿಂದ ನಾವು ಈ ದಿವಸ ಈ ಚುನಾವಣೆಗಳನ್ನು ಸಿಂಗಲ್ ಮೆಂಬರ್ ಕಾನ್‌ಸ್ಟಿಟ್ಯುಯೆನ್ಸಿ ಮೇಲೆ ನಡೆಸಬೇಕೆಂದರೆ ಅನೇಕ ತೊಂದರೆಗಳುಂಟಾಗಬಹುದು. ಇದಕ್ಕೆ ಬದಲಾಗಿ ಡಬ್ಬಲ್ ಮೆಂಬರ್ಸ್ ಕಾನ್‌ಸ್ಟಿಟ್ಯುಯೆನ್ಸಿ ಮಾಡಿದರೆ ತಾಲ್ಲೂಕಾಮುಳೆ ಹರಿದು ಹಂಚಿರುವಂಥ ಈ ಮೈನರ್ ಕೋಮುಗಳ ಓಟುದಾರರುಗಳ ಓಟನ್ನು ಪಡೆಯಲು ಅನುಕೂಲವಾಗುತ್ತದೆ. ಈ ಓಟುಗಳ ಜೊತೆಗೆ ಇತರ ಕೋಮಿನವರ, ಅಂದರೆ ಜನರಲ್ ಕಾನ್‌ಸ್ಟಿಟ್ಯುಯೆನ್ಸಿಯವರ ಓಟನ್ನು ಪಡೆಯುವುದಕ್ಕೂ ಸಹ ಇದರಿಂದ ಅನುಕೂಲವಾಗುತ್ತದೆ. ಮೈನರ್ ಕೋಮಿನವರು ಸುಲಭವಾಗಿ ಚುನಾವಣೆಗಳಲ್ಲಿ ಜಯಪಡೆದು ಬರಬಹುದು. ಆದುದರಿಂದ ಈ ಚುನಾವಣೆ ಕ್ಷೇತ್ರಗಳು ದೊಡ್ಡದಾಗಿದ್ದಷ್ಟೂ ಒಳ್ಳೆಯದೆಂದು ಹೇಳುತ್ತೇನೆ. ಆದರೆ ಮತ್ತೆ ಕೆಲವರು ಹೀಗೆ ಮೂರು ಜನಗಳು ಒಂದೇ ಸಲಕ್ಕೆ ಒಂದು ತಾಲ್ಲೂಕಿನಿಂದ ಚುನಾವಣೆಗೆ ನಿಂತರೆ ಆಗ ಉಮೇದುವಾರರನ್ನು ಗುರ್ತಿಸಲಿಕ್ಕೆ ಬಹಳ ಕಷ್ಟವಾಗುತ್ತದೆಂದು ಕೆಲವರು ಹೇಳಿದರು. ಆದರೆ ಹಾಗೇನೂ ತೊಂದರೆ ಆಗುವುದಿಲ್ಲ; ಅದರಲ್ಲಿ ಅಂಥ ಕಷ್ಟವು ಇರುವುದಿಲ್ಲ. ಈಗ ಒಂದೊಂದು ಡಿವಿಜನ್‌ನಲ್ಲಿ ಈ ಮುನಿಸಿಪಾಲಿಟಿಗಳ ಚುನಾವಣೆಗೆ 15-20 ಜನರು ನಿಲ್ಲುತ್ತಾರೆ. ಇದು ನಮಗೆಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ಹೀಗೆ ಚುನಾವಣೆಗೆ ನಿಲ್ಲುವಂಥ ಜನಗಳಿಗೆ ಹಸು, ಕುದುರೆ ಇತ್ತಿತ್ಯಾದಿ ಗುರುತುಗಳನ್ನು ಇಟ್ಟುಕೊಂಡಿರುತ್ತಾರೆ. ಆದ್ದರಿಂದ ಓಟುಮಾಡಲು ಅಂಥ ತೊಂದರೆಯೇನೂ ಆಗುವುದಿಲ್ಲ. ಮೇಲಾಗಿ ಈಗ ನಮ್ಮ ಪ್ರಜೆಗಳಿಗೆ ಈ ಚುನಾವಣೆಗಳಲ್ಲಿ ಹೇಗೆ ಓಟ್ ಮಾಡಬೇಕೆಂಬ ತಿಳುವಳಿಕೆ ಬಂದಿದೆ. ಸರಿಯಾಗಿ ಓಟ್ ಮಾಡತಕ್ಕಂಥ ಶಕ್ತಿಯನ್ನು ಈ ದಿವಸ ಅವರು ಸಂಪಾದಿಸಿಕೊಂಡಿರುತ್ತಾರೆ. ಕಾಂಗ್ರೆಸ್ ಸಂಸ್ಥೆಯಿಂದ ಮೂರು ಜನರು ಚುನಾವಣೆಗೆ ನಿಂತರೆ ಅವರೆಲ್ಲರೂ ಒಂದು ಗುರ್ತನ್ನು ಇಟ್ಟುಕೊಳ್ಳುತ್ತಾರೆ. ಪ್ರಜಾ ಸೋಷಿಯಲಿಸ್ಟ್ ಪಾರ್ಟಿಯಿಂದ ಮೂರು ಜನರು ಚುನಾವಣೆಗೆ ನಿಂತರೆ ಅವರೊಂದು ಗುರುತನ್ನು ಇಟ್ಟುಕೊಳ್ಳುತ್ತಾರೆ. ಅವರವರ ಓಟಿನ ಚೀಟಿಗಳಲ್ಲಿ ಅವರ ಹೆಸರುಗಳು ಮತ್ತು ಅವರು ಇಟ್ಟುಕೊಂಡಿರತಕ್ಕಂಥ ಗುರುತುಗಳು ಇತ್ಯಾದಿ ಎಲ್ಲ ವಿವರಗಳನ್ನೂ ಬರೆದಿರುತ್ತದೆ. ಆದುದರಿಂದ ಈ ಒಂದು ಪದ್ಧತಿಯಿಂದ ಅಂಥ ತೊಂದರೆಗಳೇನೂ ಬರುವುದಿಲ್ಲವೆಂದು ಹೇಳಬಯಸುತ್ತೇನೆ. ಇದೇ ಸಂದರ್ಭದಲ್ಲಿ ಕೆಲವರು

(ಶ್ರೀ ಕೆ. ಲಕ್ಕಪ್ಪ.)

ಇನ್ನೂ ಒಂದು ವಾದವನ್ನು ಎತ್ತಿದ್ದಾರೆ, ಈ ಚುನಾವಣೆಗೆ ಸ್ವತಂತ್ರವಾಗಿ ನಿಲ್ಲತಕ್ಕಂಥ ಉಮೇದುವಾರರಿಗೆ ಬಹಳ ತೊಂದರೆಯಾಗುತ್ತದೆ, ಇವರಿಗೆ ಆ ಇಡೀ ತಾಲ್ಲೂಕನ್ನು ತಿರುಗಲು ಕಾಲ ಹೆಚ್ಚಾಗಿ ಹಿಡಿಯುತ್ತದೆ ಮತ್ತು ಹೆಚ್ಚು ಹಣ ಖರ್ಚಾಗುತ್ತದೆ ಎಂದು. ಆದರೆ ಹಾಗೆ ಸ್ವತಂತ್ರವಾಗಿ ಚುನಾವಣೆಗೆ ನಿಲ್ಲತಕ್ಕಂಥವರಿಗೆ ಈ ದಿವಸ ಅವಕಾಶವೇ ಇಲ್ಲ ಎಂದ ನಾನು ಹೇಳುತ್ತೇನೆ. ಹೀಗೆ ಯಾರಾದರೂ ಸ್ವತಂತ್ರವಾಗಿ ಚುನಾವಣೆಗೆ ನಿಲ್ಲುವುದಾಗಿದ್ದರೆ ಎಲ್ಲರೂ ಸೇರಿ ಹಾಗೆ ನಿಲ್ಲತಕ್ಕದ್ದನ್ನು ತಡೆಗಟ್ಟಬೇಕಾಗಿರುತ್ತೆಂದು ಹೇಳುತ್ತೇನೆ. ಈದಿವಸ ಚುನಾವಣೆಗೆ ನಿಲ್ಲತಕ್ಕವರೆಲ್ಲರೂ ಒಂದಲ್ಲ ಒಂದು ಪಾರ್ಟಿ ಶಿಸ್ತು ನಿಯಮಗಳ ಮೇಲೆ ಚುನಾವಣೆಗೆ ನಿಲ್ಲಬೇಕಾಗಿದೆ. ಇಂಥಾದ್ದನ್ನು ಮಾತ್ರವೇ ನಾವು ಎನ್‌ಕರೇಜ್ ಮಾಡಬೇಕಾಗಿದೆ. ಇನ್ನೊಂದು ಬಹಳ ಮುಖ್ಯವಾದಂಥ ವಿಚಾರವನ್ನು ಶ್ರೀ ಕೆ. ಪಟ್ಟಾಭಿರಾಮನ್‌ರವರು ಎತ್ತಿದ್ದಾರೆ ಅದೇನೆಂದರೆ ಈ ದಿವಸ ಯಾವ ಮನುಷ್ಯನು ಯಾವ ಚುನಾವಣಾಕ್ಷೇತ್ರದಲ್ಲಿ ಚುನಾವಣೆಗೆ ನಿಲ್ಲುತ್ತಾನೋ ಅವನು ಆ ಚುನಾವಣಾಕ್ಷೇತ್ರದಲ್ಲಿ ವಾಸವಾಗಿದ್ದರೆ ಮಾತ್ರ ಅವಕಾಶವಿರಬೇಕೇ ಹೊರತು ಎಲ್ಲಿಯೋ ವಾಸಮಾಡತಕ್ಕಂಥ ಮನುಷ್ಯನಿಗೆ ಯಾವುದೋ ಒಂದು ಕ್ಷೇತ್ರದಲ್ಲಿ ಚುನಾವಣೆಗೆ ನಿಲ್ಲುವುದಕ್ಕೆ ಅವಕಾಶ ಕೊಡಬಾರದು ಎಂದು ಒಂದು ವಾದವನ್ನೆತ್ತಿದ್ದಾರೆ. ಆದರೆ ಇದು ಅಷ್ಟು ಸರಿಯಾಗಿರುವಂತೆ ಕಾಣುವುದಿಲ್ಲ. ಚುನಾವಣೆಗೆ ನಿಲ್ಲುವಂಥ ಮನುಷ್ಯ ಯಾವ ಕ್ಷೇತ್ರದಲ್ಲಿ ವಾಸವಾಗಿದ್ದರೇನು? ಅವನು ಜನಾನುರಾಗಿಯಾಗಿದ್ದರೆ ಮತ್ತು ಜನರೆಲ್ಲರ ಅಭಿಮಾನಕ್ಕೆ ಪಾತ್ರನಾಗಿದ್ದರೆ, ಜನರ ಪ್ರೇಮಗಳಿಸಿಕೊಂಡಿದ್ದರೆ ಸಾಕು. ಆತನು ಚುನಾವಣೆಯಲ್ಲಿ ಗೆದ್ದು ಬರುವುದಕ್ಕೆ ಅವಕಾಶವಿರುತ್ತದೆ. ಆದುದರಿಂದ ಚುನಾವಣೆಗೆ ನಿಲ್ಲತಕ್ಕಂಥ ಮನುಷ್ಯನು ಆ ಚುನಾವಣಾಕ್ಷೇತ್ರದಲ್ಲೇ ವಾಸವಾಗಿರಬೇಕು ಎನ್ನತಕ್ಕಂಥ ಒಂದು ನಿರ್ಬಂಧವನ್ನೇನೂ ಹಾಕಬೇಕಾಗಿಲ್ಲ. ಹಾಗೆ ಒಂದು ನಿರ್ಬಂಧವನ್ನು ಹಾಕತಕ್ಕದ್ದೂ ಸಹ ಸರಿಯಾದುದಲ್ಲ. ಈ ದಿವಸ ಈ ಎಲ್.ಎ. ಮತ್ತು ಎಲ್.ಸಿ.ಗಳ ಚುನಾವಣೆಯಲ್ಲಿ ಯಾರು ಎಲ್ಲಿಬೇಕಾದರೂ ನಿಂತು ಚುನಾವಣೆಗಳಲ್ಲಿ ಸ್ಪರ್ಧಿಸಿ ಸದಸ್ಯರಾಗಿ ಆರಿಸಿ ಬರುವುದಕ್ಕೆ ಅವಕಾಶ ಕೊಟ್ಟಿರುತ್ತದೆ. ಹಾಗೆ ಚುನಾವಣೆಗೆ ನಿಲ್ಲತಕ್ಕಂಥ ವ್ಯಕ್ತಿ ದಕ್ಷನಾಗಿಲ್ಲದೆ, ಜನಗಳಿಂದ ಒಂದು ಹೆಸರನ್ನು ಗಳಿಸಿಕೊಳ್ಳದೆ, ಜನರ ಪ್ರೀತಿವಿಶ್ವಾಸಗಳನ್ನು ಸಂಪಾದಿಸದೆ ಮತ್ತು ಜನರ ಸೇವೆಯನ್ನು ಸರಿಯಾಗಿ ಸಲ್ಲಿಸದೆ ಇರತಕ್ಕಂಥ ಮನುಷ್ಯನು ಆತನು ಎಲ್ಲೇ ಇರಲಿ ಅಥವಾ ಯಾವ ಕ್ಷೇತ್ರದಲ್ಲೇ ಚುನಾವಣೆಗೆ ನಿಲ್ಲಲಿ ಅಂಥ ಮನುಷ್ಯನು ಆರಿಸಿ ಬರುವುದಕ್ಕೆ ಸಾಧ್ಯವೇ ಇರುವುದಿಲ್ಲ.

ಇನ್ನು ಕೊನೆಯದಾಗಿ ಈ ಚುನಾವಣೆಗಳ ತಕರಾರುಗಳಿಗೆ ಬಲಿಬಿದ್ದಿರುವಂಥ ಮೂರುಜನ ಸದಸ್ಯರು ಇದೇ ಸಭೆಯಲ್ಲಿ ಈಗ ಇದ್ದಾರೆ. ಆ ಮೂರು ಜನರ ಪೈಕಿ ನಾನೂ ಒಬ್ಬ. ಇನ್ನುಳಿದ ಇಬ್ಬರು ಯಾರಾರೆಂದರೆ ಶ್ರೀ ಟಿ. ಸಿ. ಬಸಪ್ಪನವರು ಒಬ್ಬರು ಮತ್ತು ಶ್ರೀ ಎಚ್. ಎಂ. ಚನ್ನಬಸಪ್ಪನವರೊಬ್ಬರು. ಈ ಚುನಾವಣೆಗಳ ತಕರಾರು ಬದ್ದಲ್ಲಿ ಎಷ್ಟು ಸಾರ್ತಿ ಜನರು ಕೋರ್ಟುಕಛೇರಿಗಳಿಗೆ ಹತ್ತಬೇಕಾಗುತ್ತದೆ, ಎಷ್ಟೊಂದು ದುಡ್ಡನ್ನು ವ್ಯಯಮಾಡಬೇಕಾಗುತ್ತದೆ, ಎಷ್ಟು ಕಷ್ಟನಷ್ಟಗಳಿರುತ್ತವೆಂಬುದು ನಮಗೀಗ ಚೆನ್ನಾಗಿ ಮನದಟ್ಟಾಗಿದೆ. ಅನೇಕರು ತಮ್ಮ ಮನೆಮಠಗಳನ್ನೇ ಇದಕ್ಕಾಗಿ ಮಾರಾಟಮಾಡಿಕೊಳ್ಳಬೇಕಾಗುತ್ತದೆ. ಇದರಿಂದ ಅನೇಕ ಕಷ್ಟಗಳಿರುತ್ತವೆ. ಆದುದರಿಂದ ಮುಂದಾದರೂ ಇಂಥ ಕೊರತೆಗಳಿಗೆ ಅವಕಾಶ ಕೊಡದಂತೆ ನೋಡಿಕೊಳ್ಳಬೇಕೆಂದು ಹೇಳುತ್ತೇನೆ. ಈ ಬಗ್ಗೆ ಕೇಂದ್ರ ಸರ್ಕಾರ ಕೂಡ ಪ್ರಯತ್ನ ನಡೆಸುತ್ತಿದೆಯೆಂದು ಕೇಳುತ್ತೇನೆ. ಇನ್ನು ಮುಂದಕ್ಕೆ ಇಂಥ ತಕರಾರುಗಳು ಬರುವುದಕ್ಕೆ ಅವಕಾಶವಿಲ್ಲದ ಹಾಗೆ ಈ ಚುನಾವಣೆಗಳನ್ನು ನಡೆಸಬೇಕಾದದ್ದು ಅತ್ಯವಶ್ಯಕ. ಜನರನ್ನು ಚುನಾವಣೆಗೆ ನಿಲ್ಲಿಸುವುದಕ್ಕೆ ಮುನ್ನವೇ ಈ ಬಗ್ಗೆ ಸೂಕ್ತ ಎಚ್ಚರಿಕೆಗಳನ್ನು ಕೈಗೊಂಡು ಒಂದು ಖಚಿತವಾದ ತೀರ್ಮಾನಕ್ಕೆ ಬರುವಂಥ ಏರ್ಪಾಡನ್ನು ಮಾಡಬೇಕು. ತಾವು ಈ ಕ್ಯಾಲೆಂಡರ್ ಆಫ್ ಇವೆಂಟ್ಸ್ ಹಾಕುವಾಗ ಮತ್ತು ಬಂದಂಥ ನಾಮಿನೇಷನ್ ಪೇಪರ್‌ಗಳನ್ನು ಸ್ಕ್ರೂಟಿನಿ ಮಾಡುವಾಗ ಮತ್ತು ಅಬ್‌ಜೆಕ್ಷನ್‌ಗಳನ್ನು ಕಾಲ್ ಫಾರ್ ಮಾಡುವಾಗ ಇವುಗಳಿಗೆಲ್ಲಾ ಒಂದು ಗೊತ್ತಾದ ಕಾಲವನ್ನು ಸೂಚಿಸಿ ಎಲ್ಲಾ ವಿಷಯಗಳನ್ನು ತೀರ್ಮಾನಮಾಡಲು ಒಂದೊಂದು ಡೇಟನ್ನು ನಿರ್ಧರಮಾಡುತ್ತೀರಿ. ಹೀಗೆ ಎಲ್ಲಾ ಆದನಂತರ 10-15 ದಿವಸಗಳು ತಮ್ಮ ತೀರ್ಮಾನ ಕೊಡಲು ಅವಕಾಶವಿರುತ್ತದೆ. ಆ ಅವಧಿಯಲ್ಲೇ ಈ ತಕರಾರುಗಳೇನಿದ್ದರೂ ಫೈಸಲಾಗುವಂತೆ ತಾವು ಒಂದು ನಿರ್ದಿಷ್ಟವಾದ ವ್ಯವಸ್ಥೆಯನ್ನು ಮಾಡಿ ಆ ವೇಳೆಗೆ ಸರಿಯಾಗಿ ಎಲ್ಲಾ ತಕರಾರುಗಳನ್ನೂ ತೀರ್ಮಾನ ಮಾಡಿ ಮುಂದಕ್ಕೆ ಯಾವ ಅಡ್ಡಿ ಅಡಚಣೆಗಳೂ ಬಾರದಿರುವಂತೆ ಒಂದು ಏರ್ಪಾಡನ್ನು ಮಾಡಬೇಕೆಂದು ಸೂಚಿಸುತ್ತೇನೆ—ಇಷ್ಟು ಅಗತ್ಯವಾದಂಥ ಏರ್ಪಾಡುಗಳನ್ನು ಮಾಡಿದರೆ ಈಗ ತಂದಿರತಕ್ಕಂಥ ಮಸೂದೆ ಬಹಳ ಚೆನ್ನಾಗಿ ಆಗುತ್ತದೆಯೆಂದು ತಿಳಿಸಿ ನಾನು ಇದನ್ನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ.

*ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ, ಈಗ ಸರ್ಕಾರದವರು ಈ ಸಭೆಯಮುಂದೆ ತಂದಿರತಕ್ಕಂಥ ಈ ಒಂದು ತಿದ್ದುಪಡಿಯ ಆಧಾರದ ಮೇಲೆ ಮುಂದಕ್ಕೆ ಈ ಜಿಲ್ಲಾ ಬೋರ್ಡುಗಳಿಗೆ ಡೈರೆಕ್ಟ್ ಎಲೆಕ್ಷನ್‌ಗಳನ್ನು ನಡೆಸಬೇಕೆಂದು ಹೇಳಿರುತ್ತಾರೆ. ಇದೇನೋ ಒಳ್ಳೆಯದೆ. ಆದರೆ ಇಂಡೈರೆಕ್ಟ್ ಎಲೆಕ್ಷನ್ನಿನಲ್ಲಿ ಕೆಲವು ಅನಾಹುತಗಳಾಗುತ್ತವೆಂದೂ ಕೆಲವು ಜನರಿಗೆ ಓಟು ದೊರೆಯದೆ ಅವರಿಗೆ ತೊಂದರೆಯಾಗುತ್ತೆ ಎಂದೂ ಈ ಚುನಾವಣೆಗಳು ಯಾವರೀತಿ ನಡೆಯಬೇಕು ಎನ್ನುವ ವಿಚಾರದಲ್ಲಿ ಕೆಲವು ಭಿನ್ನಾಭಿಪ್ರಾಯಗಳು ಬಂದುದರಿಂದ ಈ ದಿವಸ ಸರ್ಕಾರದವರು ಈ ಒಂದು ತೀರ್ಮಾನಕ್ಕೆ ಬಂದು ಹೀಗೆ ಈ ಚುನಾವಣೆಗಳು ಡೈರೆಕ್ಟ್ ಎಲೆಕ್ಷನ್ ಮೂಲಕ ನಡೆಯಬೇಕೆಂದು ಹೇಳಿರತಕ್ಕದ್ದು ಅಷ್ಟು ಸಾಧುವಾದ್ದಲ್ಲ. ಈಗ ಹಾಲಿ ಮೊನ್ನೆತಾನೆ ಗ್ರಾಮಪಂಚಾಯಿತಿಗಳ ಚುನಾವಣೆಗಳು ಹೇಗೆ ನಡೆದುವು ಎಂಬ ಬಗ್ಗೆ ನಾನೀಗ ಒಂದೆರಡು ಮಾತುಗಳನ್ನು ಹೇಳಲು ಇಷ್ಟಪಟ್ಟಿದ್ದೇನೆ. ಈ ದಿವಸ ಜಾರಿಯಲ್ಲಿರುವ ವಿಲೇಜ್ ಪಂಚಾಯ್ತಿ ಆಕ್ಟಿನ ಪ್ರಕಾರ ಈ ಚುನಾವಣೆಗಳೆಲ್ಲವೂ ಸೀಕ್ರೆಟ್ ಬ್ಯಾಲೆಟ್ಟಿನ ಮೂಲಕ ನಡೆಯಬೇಕೆಂದು ಹೇಳಲಾಗಿದೆ.

ಅಧ್ಯಕ್ಷರು.—ಆ ಚುನಾವಣೆಗಳಿಗೂ ಈ ಮಸೂದೆಗೂ ಏನು ಸಂಬಂಧವಿದೆ?

ಶ್ರೀ ಡಿ. ದೇವರಾಜ ಅರಸ್.—ಇದರಿಂದಲೂ ನಾವು ಕೆಲವು ತಿಳಿವಳಿಕೆ ಮಾಡಿಕೊಳ್ಳುವಂಥಾ ವಿಚಾರಗಳಿವೆ. ಅವುಗಳನ್ನು ನಾವು ಗಮನಕ್ಕೆ ತೆಗೆದುಕೊಂಡು ಈಗ ತಂದಿರತಕ್ಕ ಮಸೂದೆಯಲ್ಲಿ ಮುಂದಕ್ಕೆ ಅರೀತಿ ಅನಾನುಕೂಲಗಳಿಗೆ ಅವಕಾಶವಿಲ್ಲದ ರೀತಿ

ಯಲ್ಲಿ ಬದಲಾವಣೆ ಮಾಡಲು ಇದರಿಂದ ಅನುಕೂಲವಾಗುತ್ತದೆ. ಅದಕ್ಕಾಗಿ ಒಂದೆರಡು ಮಾತುಗಳನ್ನು ಹೇಳುವುದು ಯುಕ್ತವೆಂದು ಭಾವಿಸಿದ್ದೇನೆ. ಈ ಚುನಾವಣೆಗಳನ್ನು ಸೀಕ್ರೆಟ್ ಬ್ಯಾಲೆಟ್ಟಿನ ಮೂಲಕ ನಡೆಸಬೇಕೆಂದು ತೀರ್ಮಾನಿಸಲಾಯಿತು. ಆದರೆ ಹಾಗೆ ಚುನಾವಣೆಗೆ ನಿಂತ ಎಷ್ಟೋ ಜನ ಸದಸ್ಯರಿಗೆ ಯಾವ ಗುರುತುಗಳನ್ನೂ ಕೊಟ್ಟಿರಲಿಲ್ಲ. ಒಂದು ಊರಿನಲ್ಲಿ ಈ ಚುನಾವಣೆಗೆ ಹದಿನೈದು ಇಪ್ಪತ್ತು ಜನರು ನಿಂತುಕೊಂಡರು. ಎಲ್ಲರ ಹೆಸರನ್ನೂ ಒಂದು ಪಟ್ಟಿಯಲ್ಲಿ ಬರೆದು ಅದನ್ನು ಒಂದು ಕ್ರಮದಲ್ಲಿ ಗೊತ್ತು ಮಾಡಿದರು. ಈ ಮಾನ್ಯ ಸಭೆಯವರಿಗೂ ಸಹ ಗೊತ್ತಿರಬಹುದು ಹಾಗೆ ಓಟುದಾರರಿಗೆ ಮತದಾರರ ಪಟ್ಟಿಯನ್ನು ಓದಿಕೊಂಡು ಓಟು ಮಾಡತಕ್ಕಂಥ ಶಕ್ತಿ ಈ ದಿವಸ ನಮ್ಮಲ್ಲಿ ಎಷ್ಟು ಜನಗಳಿಗೆ ಬಂದಿದೆ ? ಈ ರೀತಿಯಲ್ಲಿ ಓಟುಮಾಡುವಂಥಾ ಶಕ್ತಿ ಕೇವಲ ಕಮ್ಮಿ ಜನಗಳಿಗೆ ಇರುತ್ತದೆ. ಕೆಲವರಿಗೆ ಮಾತ್ರ ಇದು ಸಾಧ್ಯವೇ ಹೊರತು ಎಲ್ಲರಿಗೂ ಇದು ಹಿಡಿಸುವುದಿಲ್ಲ.

Sri Kadidal MANJAPPA.—On a point of order. I have no objection to the Hon'ble Member bringing to my notice or to the notice of the concerned Minister these facts. But whether it is relevant at this juncture when we are dealing with this Bill is a point for you, Sir, to consider.

Sri D. DEVARAJ URS.—You were pleased to say when the other Hon'ble Member was speaking that a passing remark might be made whenever there was relevancy in the matter. I feel this is relevant and so I want to bring it to the notice of the Government. The Hon'ble Minister need not be perturbed over this; it will be an enlightenment.

Sri Kadidal MANJAPPA.—I am not at all perturbed. I will listen to you for one hour or even two hours; but, whether it is relevant is the point.

Mr. SPEAKER.—In the Bill it is stated that election will be on the basis of direct election. So, the Hon'ble Member wants to say what precautions should be taken. But, the Hon'ble member may be brief.

Sri D. DEVARAJ URS.—I will be very brief, Sir.

ಆಗ ಓದುವುದಕ್ಕೆ ಬರದೆ ಇದ್ದು 15-20 ಹೆಸರುಗಳಲ್ಲಿ ಯಾರು ಯಾರಿಗೆ ಓಟು ಕೊಡಬೇಕೋ ಅವರ ಹೆಸರನ್ನೆಲ್ಲಾ ಜ್ಞಾಪಕದಲ್ಲಿಟ್ಟುಕೊಂಡು returning officer ಅಥವಾ polling officerಗೆ ಮತದಾರರು ಹೇಳಬೇಕು. ಆ polling officer ನಿಗೆ ದೇವರು ಬುದ್ಧಿ ಕೊಟ್ಟರೆ ಅವರು ಹೇಳಿದ ಹೆಸರುಗಳಿಗೆ ಗುರುತು ಹಾಕಬಹುದು. ಹಾಗಿಲ್ಲದೆ ಅನೇಕವೇಳೆ ಬರೀ polling officers ವೋಟು ಮಾಡಿದ್ದಾರೆಂದರೂ ತಪ್ಪಾಗಲಾರದು. ಇಂಥ ಅನಾಹುತಗಳು ವಿಲೇಜ್ ಪಂಚಾಯಿತಿಗಳ ಚುನಾವಣೆಗಳಲ್ಲಿ ನಡೆದಿವೆ. ನಿಜವಾಗಿ ಓಟುದಾರ ಯಾರಿಗೆ ಓಟು ಕೊಡುತ್ತಾನೆ ಎಂಬುದು ಯಾರಿಗೂ ಗೊತ್ತಾಗಕೂಡದೆಂದು ಆ secret ballot ಇಟ್ಟಿರತಕ್ಕಂಥ ಉದ್ದೇಶ ಸಫಲವಾಗಲಿಲ್ಲ. ಸರ್ಕಾರದವರು ಸೂಕ್ತವಾದ ತಿದ್ದುಪಡಿಗಳನ್ನು rules frame ಮಾಡತಕ್ಕ ಕಾಲದಲ್ಲಿ ಮಾಡಬೇಕು ಎಂಬ ವಿಷಯ ಅವರ ಗಮನಕ್ಕೆ ತರಲು ಹೇಳುತ್ತಿದ್ದೇನೆ.

ಆಮೇಲೆ ಈಗ direct elections ಸರ್ಕಾರದವರು ಮಾಡಬೇಕೆಂದು ಇರತಕ್ಕದ್ದು ಸಾಧುವಾಗಿದೆ. Direct elections ನಡೆಯುವಾಗ ತಾಲ್ಲೂಕಿಗೆ ಮೂರು ಸ್ಥಾನಗಳಿಗೆ ಹೆಚ್ಚಿಲ್ಲದ ರೀತಿ ನಿಗದಿ ಮಾಡಬೇಕೆಂದು ಸೂಚನೆ ಇದೆ. ನನ್ನ ಅಭಿಪ್ರಾಯದಲ್ಲಿ multi-member constituency ಮಾಡುವುದಕ್ಕಿಂತ single member constituency ಮಾಡುವುದು ಉತ್ತಮವಾದ ಮಾರ್ಗ, ನ್ಯಾಯವಾದ ಮಾರ್ಗ ಮತ್ತು ಈ ರೀತಿಯಾಗಿ single member constituency ಮಾಡುವುದರಿಂದ ಸ್ಥಳದಲ್ಲಿ ಇರತಕ್ಕ ಜನರಿಗೆ ಡಿಸ್ಟ್ರಿಕ್ಟ್ ಬೋರ್ಡಿನಿಂದ ಮುಖ್ಯವಾಗಿ ನಡೆಯಬೇಕಾದಂಥ ಆಯಾ ಕ್ಷೇತ್ರಗಳಿಗೆ ಸಂಬಂಧಪಟ್ಟಹಾಗೆ, ಆಯಾ ತಾಲ್ಲೂಕಿಗೆ ಸಂಬಂಧಪಟ್ಟಹಾಗೆ ಊರಿಂದೂರಿಗೆ ರಸ್ತೆಗಳು, ಆಸ್ಪತ್ರೆಗಳು, ಭಾವಿಗಳು, ಕುಡಿಯುವ ನೀರಿನ ಸೌಕರ್ಯ, ಆರೋಗ್ಯವಿಚಾರ, ಸ್ಕೂಲುಗಳ ವಿಚಾರ ಇಂಥ ಕೆಲಸಗಳನ್ನು ಮಾಡಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಇಂಥ ಸಂದರ್ಭದಲ್ಲಿ ನನ್ನ ಮಾನ್ಯ ಸ್ನೇಹಿತರಾದ ಲಕ್ಕಪ್ಪನವರು ಈಗತಾನೇ ಅಪ್ಪಣೆ ಕೊಡಿಸುತ್ತ multi-member constituencies ಆಗಿದ್ದರೆ ಖರ್ಚು ಕಡಿಮೆ, minority constituencyಗೆ ಬಹಳ ಸಹಾಯವಾಗುತ್ತದೆ, ಇತ್ಯಾದಿ ಕೆಲವು ಕಾರಣಗಳನ್ನು ಹೇಳಿದರು. ಅವರು ಹೇಳಿದ್ದರಲ್ಲಿ ಎಲ್ಲದರದಲ್ಲಿಯೂ ವ್ಯತ್ಯಾಸವಿದೆ. ಯಾಕೆಂದರೆ ಒಂದು ತಾಲ್ಲೂಕಿನಲ್ಲಿ ಒಬ್ಬ ಸಾದು ಮನುಷ್ಯನೆಂದರೆ ಹಳ್ಳಿಯಲ್ಲಿರತಕ್ಕ ವಿದ್ಯಾವಂತನಾಗಿದ್ದು ರೈತನಾಗಿರುವ ಮನುಷ್ಯ. ಜನರಲ್ ಎಲೆಕ್ಷನ್ನಲ್ಲಿ ಖರ್ಚು ಮಾಡುವಂತೆ ಹತ್ತಾರು ಸಾವಿರ ರೂಪಾಯಿ ಖರ್ಚು ಮಾಡುವುದಕ್ಕೆ ಅವನಿಗೆ ಇದ್ದರೆ ಮಾತ್ರ ಈ ಚುನಾವಣೆಗಳಲ್ಲಿ ಸ್ಪರ್ಧಿಸಬಹುದೇ ಹೊರತು ಹಾಗಿಲ್ಲದೆ ಹೋದರೆ ಸ್ಪರ್ಧಿಸುವುದಕ್ಕೆ ಆಗುವುದಿಲ್ಲ. ಅದು ನಮ್ಮೆಲ್ಲರ ಅನುಭವ. ಮಾನ್ಯ ಸ್ನೇಹಿತರಾದ ಗೋಪಾಲಗೌಡರು ಒಂದು ಮಾತು ಹೇಳಿದರು, ಅದನ್ನು ನಾನು ಒಪ್ಪುತ್ತೇನೆ. ಈ ರೀತಿ ಖರ್ಚು ಮಾಡಿದರೂ ಒಂದು ಭೀತಿ ಹುಟ್ಟುತ್ತದೆ. ಯಾರಾದರೂ ಹಣವಂತರಾದರೆ ಬಾಧಕವಿಲ್ಲ, ಅವರು ಖರ್ಚು ಮಾಡಬಹುದು. ಆದರೆ ಪೂರ್ವಿಕರು ಸಂಪಾದನೆ ಮಾಡಿಟ್ಟಿರಬಹುದಾದ ಅಥವ ಆತನೇ ಸಂಪಾದನೆ ಮಾಡಿಟ್ಟುಕೊಂಡಿದ್ದ ಹಣವನ್ನು ಇಂಥ ಚುನಾವಣೆಗಳಲ್ಲಿ ಖರ್ಚು ಮಾಡಬಹುದು. ಆತನಿಗೆ ಜೀವನೋಪಾಯಕ್ಕೆ ಬೇರೆ ಮಾರ್ಗವಿಲ್ಲದಿದ್ದರೆ ರಾಜಕೀಯವನ್ನೇ ಜೀವನಕ್ಕೆ ಆಧಾರವಾಗಿ ಮಾಡಿಕೊಳ್ಳುವ ಅವಶ್ಯಕತೆ ಬರುತ್ತದೆ. ಹೆಚ್ಚು ಬಡವರಿರುವ ನಮ್ಮ ದೇಶದಲ್ಲಿ ಹೆಚ್ಚು ಹಣ ಖರ್ಚು ಮಾಡಿ ಚುನಾವಣೆಗಳಲ್ಲಿ ನಿಲ್ಲುವುದಕ್ಕೆ ಅನೇಕ ಜನ ಸಿದ್ಧರಾಗಿಲ್ಲ. ಅಂಥ ಜನರ ಸಂಖ್ಯೆಯೂ ಕೂಡ ಕಡಿಮೆ. ಹೀಗಿರುವಾಗ ಒಂದೊಂದು ಡಿಸ್ಟ್ರಿಕ್ಟ್ ಬೋರ್ಡಿಗೆ 25ಜನ, 30ಜನ, 40 ಜನ ಬರತಕ್ಕ ಸಂದರ್ಭದಲ್ಲಿ ಅವರು ಯಾವ ದೊಡ್ಡ ಪಾಲಿಸಿಗಳ ವಿಷಯ, State matters, ಇಂಥವುಗಳನ್ನು ಚರ್ಚೆ ಮಾಡಬೇಕಾಗುತ್ತದೆ ಎಂದು ನನಗೆ ಅರ್ಥವಾಗುವುದಿಲ್ಲ. ಅವರು ತಮ್ಮ ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಹಾಗೆ ಹಳ್ಳಿಯಿಂದ ಹಳ್ಳಿಗೆ

(SRI D. DEVARAJ URS.)

ರಸ್ತೆಗಳು, ಭಾವಿಗಳು ಮುಂತಾದ ಕೆಲಸಗಳನ್ನು ಡಿಸ್ಟ್ರಿಕ್ಟ್ ಬೋರ್ಡಿನಿಂದ ಮಾಡಿಸಿಕೊಳ್ಳುತ್ತಾರೆಯೇ ಹೊರತು ಅಲ್ಲಿ ಯಾವ ಮುಖ್ಯ ವಿಚಾರಗಳ ಮೇಲೂ ಚರ್ಚೆ ಮಾಡಬೇಕಾದ ಅವಶ್ಯಕತೆ ಇಲ್ಲ. ಹೀಗಿರ ಬೇಕಾದರೆ ಈ ಜಿಲ್ಲಾ ಬೋರ್ಡು ಚುನಾವಣೆಗಳಲ್ಲಿ ನಿಲ್ಲುವವರು, ಜನರಲ್ electionsನಲ್ಲಿ ಖರ್ಚು ಮಾಡು ವಂತೆ ಖರ್ಚು ಮಾಡಬೇಕಾದ ಪ್ರಮೇಯವಿಲ್ಲ. ಆದು ದರಿಂದ ಒಂದು ತಾಲ್ಲೂಕನ್ನು ಒಂದು ಚುನಾವಣಾ ಕ್ಷೇತ್ರವನ್ನಾಗಿ ಮಾಡಿ, multi-member constituency ಮಾಡಿ ಮೂರು ಜನ ಒಟ್ಟಿಗೆ ನಿಲ್ಲುವಂತೆ ಮಾಡುವುದು ಒಳ್ಳೆಯದಲ್ಲ.

ಇನ್ನೂ ಒಂದು ವಿಚಾರ. ಕೆಲವರು ಮೂರು ಜನ ಉಮೇದುವಾರರೂ ಒಟ್ಟಿಗೆ ಕಲೆತು ಕೆಲಸ ಕಾರ್ಯಗ ಳನ್ನು ಮಾಡಿದರೆ ಅವರಿಗೆ ಆಗುವ ಖರ್ಚು ಕಡಿಮೆ ಬೀಳುತ್ತದೆಂದು ಹೇಳಿದರು. ಯಾವ ರೀತಿಯಲ್ಲೇ ಯೋಚಿಸಲಿ ಇದು ಸಾಧುವಾದ ಅಭಿಪ್ರಾಯವಲ್ಲ. ಒಂದು ಪಾರ್ಟಿಯವರು ಮೂರು ಜನ, ಇನ್ನೊಂದು ಪಾರ್ಟಿಯವರು ಮೂರು ಜನ ಹೀಗೆ ನಿಲ್ಲುತ್ತಾರೆಂದು ಹೇಳುವುದು ಸರಿಯಲ್ಲ. ಈ ರೀತಿ ಒಟ್ಟಿಗೆ ಕೆಲಸ ಮಾಡುವುದರಿಂದ ಖರ್ಚು ಮಾತ್ರ ಕಡಿಮೆಯಾಗುವು ದಿಲ್ಲ. ಇನ್ನೂ ಜಾಸ್ತಿಯಾಗುತ್ತದೆ. ಮತ್ತು ತಮಗೆ ಗೊತ್ತಿರುವಹಾಗೆ, ಮಲೆನಾಡು ಪ್ರದೇಶದಲ್ಲಿ ಒಂದೊಂದು ತಾಲ್ಲೂಕೂ ಎಷ್ಟೋ ಚದರ ಮೈಲಿಗಳ ವಿಸ್ತೀರ್ಣ ಇರುತ್ತದೆ. 10 ಮನೆ, 25 ಮನೆ, 40 ಮನೆ ಹೀಗೆ ಒಂದೊಂದು ಕಡೆ ಇರತಕ್ಕ ಪ್ರದೇಶಗಳೇ ಹೆಚ್ಚು. ಇಲ್ಲಿ ಜನಸಂಖ್ಯೆ ಕಡಮೆಯಾದರೂ ತಿರುಗ ಬೇಕಾದರೆ ಆಗುವ ಖರ್ಚು ಮತ್ತು ಕಷ್ಟ ಮಾತ್ರ ಒಂದೇ ಎಂದು ಹೇಳಬಹುದು. ಆದುದರಿಂದ ಈ ರೀತಿಯ ತೊಂದರೆಗಳನ್ನು ಗಮನದಲ್ಲಿಟ್ಟುಕೊಂಡು ನಾವು ತೀರ್ಮಾನ ಮಾಡಬೇಕಾಗಿದೆ. 25 ಸಾವಿರ ಅಥವ 30 ಸಾವಿರಕ್ಕೆ ಅಥವಾ ಒಂದೊಂದು ಹೋಬ ಳಿಗೆ ಒಂದೊಂದು ಚುನಾವಣಾ ಕ್ಷೇತ್ರದಂತೆ ಮಾಡಿ ದರೆ ಬಹಳ ಒಳ್ಳೆಯದು. ಅಲ್ಲದೆ ಈ ರೀತಿ ಹೋಬಳಿ constituency ಮಾಡುವುದರಿಂದ ಆ ಕ್ಷೇತ್ರದಲ್ಲಿರುವ ರೈತರು ತಮ್ಮ ಪೈಕಿ ಯಾರಾದರೊಬ್ಬರನ್ನು ಆರಿಸು ವುದಕ್ಕೆ ಇದರಿಂದ ಅವಕಾಶವಾಗುತ್ತದೆ ಮತ್ತು ಮಧ್ಯ ವರ್ಗದವರು ಮತ್ತು ಕೆಳದರ್ಜೆಯಲ್ಲಿರುವವರು ಇವರು ಗಳು ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಈ ರೀತಿ ಕ್ಷೇತ್ರ ವಿಂಗಡಣೆಯಿಂದ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟ ಹಾಗಾಗುತ್ತದೆ. ಈ ಎಲ್ಲ ಕಾರಣ ಗಳಿಂದ multi-member constituency ಗಿಂತ single-member constituency ಇರಬೇಕಾದ್ದು ಅತ್ಯಗತ್ಯವೆಂದೂ, ಈ ತಿದ್ದುಪಡಿಯಾಗಬೇಕು ಎಂದೂ ಹೇಳಿ ಈಗ ಬಂದಿರುವ ಮಸೂದೆಯನ್ನು ಸಮರ್ಥಿಸು ತ್ತೇನೆ.

*ಶ್ರೀ ವಿ. ಮಸಿಯಪ್ಪ (ಹಿರಿಯೂರು).—ಸ್ವಾಮಿ, ಸರ್ಕಾರದವರು ಈಗ ತಂದಿರತಕ್ಕ ಗ್ರಾಮಪಂಚಾ ಯಿತಿ ಮತ್ತು ಜಿಲ್ಲಾಬೋರ್ಡುಗಳ ತಿದ್ದುಪಡಿ ಮಸೂದಾ ಕಾನೂನನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಬಹುಕಾಲದಿಂದ ಜನತೆ ಸಂಸ್ಥಾನ ದಲ್ಲಿ ಜಿಲ್ಲಾಬೋರ್ಡು ಚುನಾವಣೆಯಾಗಬೇಕೆಂದು ನಿರೀಕ್ಷಿಸುತ್ತಿದ್ದರು ಮತ್ತು ಕಾರಣಾಂತರದಿಂದ ಅದು ನಿಂತಿತ್ತು. ಈಗಲಾದರೂ ಕೂಡ ಅದು ಕಾರ್ಯ ರೂಪಕ್ಕೆ ಬರುವುದಕ್ಕೆ ಅನುಕೂಲವಾಗತಕ್ಕ ರೀತಿಯಲ್ಲಿ ಈ ವ್ಯವಸ್ಥೆಯನ್ನು ಮಾಡುವುದಕ್ಕೆ ಸರ್ಕಾರದವರು ಮುಂದೆ ಬಂದಿರುವುದು ಸ್ವಾಗತಾರ್ಹವಾದುದೆಂದು ತಿಳಿಸಲಿಚ್ಛಿಸುತ್ತೇನೆ.

ಈ ಸಂದರ್ಭದಲ್ಲಿ ಈ ಮಸೂದಾ ಕಾನೂನಿನಲ್ಲಿ ಮುಖ್ಯವಾದ ಕೆಲವು ಅಂಶಗಳ ಬಗ್ಗೆ ವಿವಾದಾಸ್ಪದ ವಾಗಿ ಚರ್ಚೆ ನಡೆಯುತ್ತಿರುವುದನ್ನು ನಿನ್ನೆ ಮತ್ತು ಈ ದಿನ ನಾನು ಕೇಳಿದ್ದೇನೆ. ಇದರಲ್ಲಿ ಮುಖ್ಯವಾಗಿರ ತಕ್ಕದ್ದು ಜಿಲ್ಲಾ ಬೋರ್ಡುಗಳಿಗೆ ನೇರವಾದ ಚುನಾ ವಣಾ ಪದ್ಧತಿ ಮತ್ತು single member constituency ಇರಬೇಕೇ multi-member constituency ಇರಬೇಕೇ ಎಂಬ ವಿಚಾರ. ಈ ಮಸೂದಾ ಕಾನೂನಿನಲ್ಲಿರುವ ಪ್ರಕಾರ multi-member constituency ಇರಬೇಕೆಂಬ ಸೂಚನೆ ಇದೆ. ಇದರ ಬಗ್ಗೆ ಮಾನ್ಯ ಸದಸ್ಯರು ವಿವಿಧಾಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ನಾನಾದರೋ ಈ ನೇರವಾದ ಚುನಾವಣಾ ಪದ್ಧತಿಯನ್ನು ಜಾರಿಗೆ ತರಬೇಕು, ಅದರ ಪ್ರಕಾರ ಚುನಾವಣೆಗಳನ್ನು ನಡೆಸಬೇಕು ಎಂದು ಸರ್ಕಾರದವರು ತಂದಿರುವುದು ಬಹಳ ಒಳ್ಳೆ ಯದು ಎನ್ನುವ ಅಭಿಪ್ರಾಯವನ್ನು ಹೊಂದಿದ್ದೇನೆ. ನೇರವಾದ ಚುನಾವಣಾ ಪದ್ಧತಿಯನ್ನು ವಿರೋಧ ಮಾಡತಕ್ಕ ಸಂದರ್ಭದಲ್ಲಿ ಅನೇಕರು ಅನೇಕ ಅಭಿ ಪ್ರಾಯಗಳನ್ನು ಕೊಟ್ಟಿದ್ದಾರೆ. ಆದರೆ ನನಗೆ ತೋರುವುದರಲ್ಲಿ ಪ್ರಜಾ ಪ್ರಭುತ್ವವನ್ನು ನಾವು ಪ್ರತಿ ಪಾದಿಸುತ್ತಿದ್ದೇವೆಂದು ಹೇಳಿಕೊಳ್ಳತಕ್ಕ ಪ್ರತಿ ಯೊಬ್ಬರೂ ಕೂಡ ಆ ತತ್ವವನ್ನನುಸರಿಸಬೇಕಾಗಿದೆ. ಈ ರೀತಿಯಾಗಿ ಪರಿಶೀಲನೆ ಮಾಡಿ ನೋಡಿದಲ್ಲಿ ಪರೋಕ್ಷ ವಾದ ಚುನಾವಣೆಯನ್ನು ಈ ಜಿಲ್ಲಾ ಬೋರ್ಡುಗಳಲ್ಲಿ ಜಾರಿಗೆ ತರುವುದು ಪ್ರಜಾ ಪ್ರಭುತ್ವತತ್ವಕ್ಕೆ ಹೊಂದಿ ಕೊಳ್ಳುವುದಿಲ್ಲವೆಂದು ನಾನು ಖಚಿತವಾಗಿ ಹೇಳಬಹು ದಾಗಿದೆ. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೆಲ್ಲರೂ ತಮಗೆ ಬೇಕಾಗಿರತಕ್ಕ ಪ್ರತಿನಿಧಿಗಳನ್ನು ಆರಿಸಿ ಕಳು ಹಿಸುವುದಕ್ಕೆ, ವಯಸ್ಸಾಗಿರುವ ಪ್ರತಿಯೊಬ್ಬನೂ ಕೂಡ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಅವಕಾಶ ವಿರಬೇಕು. ಈ ವಿಚಾರಗಳ ಮೇಲೆ ಪ್ರತಿಯೊಬ್ಬ ಸದಸ್ಯರೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರು ವುದರಿಂದ ನಾನೂ ಸಹ ಎರಡು ಮಾತುಗಳನ್ನು ಹೇಳಿ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ ಬಹಳ ದೂರ ತಪ್ಪು ಮಾಡಿದಂತಾಗುವುದಿಲ್ಲ ಎಂದು ತಿಳಿದುಕೊಂಡಿ ದ್ದೇನೆ. ಇದು ಜಿಲ್ಲಾಬೋರ್ಡುಗಳಿಗೆ ಸಂಬಂಧ ಪಟ್ಟ ವಿಚಾರ. ತಾಲ್ಲೂಕು ಬೋರ್ಡುಗಳ ರಚನೆ ಮಾಡತಕ್ಕ ಬಗ್ಗೆ ವಿರೋಧ ಪಕ್ಷದವರು ಮತ್ತು ಸ್ವತಂತ್ರರೂ ಕೂಡ ಅದರ ತತ್ವ, ರಚನೆ ಮತ್ತು ಅದರ ಕಾರ್ಯಗಳಬಗ್ಗೆ ಸರಿಯಾದ ಒಂದು ಅಭಿ ಪ್ರಾಯವನ್ನು ತಾಳಿದಂತೆ ಇಲ್ಲ. ಅದನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಳ್ಳಲಿಲ್ಲವೋ ಏನೋ ಎಂದು ಭಾವಿಸುತ್ತೇನೆ. ತಾಲ್ಲೂಕು ಬೋರ್ಡುಗಳು, ಹಿಂದೆ ತಾಲ್ಲೂಕು ಡೆವಲಪ್‌ಮೆಂಟ್ ಕಮಿಟಿಗಳು ರಚನೆಯಾಗಿ ಅವುಗಳ ಕೆಲಸಕಾರ್ಯಗಳು ನಡೆದು ನಾವುಗಳನೇಕರು ಕಣ್ಣಾರೆ ಕಂಡಿದ್ದೇವೆ ಮತ್ತು ಅನೇಕರು ಇದರಲ್ಲಿ ಭಾಗವಹಿಸಿ ಕೆಲಸ ಮಾಡಿದ್ದೇವೆ, ಸರಿಯಾದ ರೀತಿಯಲ್ಲಿ ಅವುಗಳನ್ನು ನಡೆಸಿಕೊಂಡು ಬಂದು ಕೆಲಸ ಮಾಡಿದರೆ ಒಂದು ಸುಖೀ ರಾಜ್ಯವನ್ನು ಸ್ಥಾಪನೆ ಮಾಡುವುದಕ್ಕೆ ಈ ಸಂಸ್ಥೆಯಿಂದ ಸಹಾಯವಾಗುತ್ತದೆನ್ನುವುದು ನಿರ್ವಿವಾದವಾದುದು. ಹಿಂದೆ Development Committee ಗಳು ಕೆಲಸ ಮಾಡುತ್ತಿದ್ದ ಸಂದರ್ಭ ದಲ್ಲಿ, ಈ ದಿವಸ ಟೀಕೆ ಮಾಡಿದವರಲ್ಲಿ ಅನೇಕರು ಆಗಲೂ ಕೂಡ ಮಾಡಿರುವ ಟೀಕೆಗಳನ್ನು ಗಮನಿ ಸಿದ್ದೇನೆ. ಇದರಲ್ಲಿ ಒಂದೇ ಒಂದು ಹೆಚ್ಚು ವಿಷಯ

ಕಂಡುಬರುತ್ತದೆ. ಅದೇನೆಂದರೆ ಈ ಸಂಸ್ಥೆಗಳು ಸರ್ಕಾರದಿಂದ ನಾಮಿನೇಟ್ ಮಾಡಲ್ಪಟ್ಟ ಸದಸ್ಯರಿಂದ ಕೂಡಿದ್ದು. ಕೆಲಸ ಕಾರ್ಯಗಳನ್ನು ನಡೆಸುತ್ತಾ ಹೋದರೆ ಸರ್ಕಾರದವರು ತಮ್ಮ ಪಕ್ಷವನ್ನು ಪ್ರಬಲಗೊಳಿಸುವುದಕ್ಕೆ ಸಹಾಯವಾಗುತ್ತದೆ ಮತ್ತು ಬೇರೆ ಪಕ್ಷದವರಿಗೆ ಜನತೆಯಲ್ಲಿ prominence ಗಳಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲವೆಂಬ ಒಂದು ಶಂಕೆ ಮಾತ್ರ ಬೇರೆಯವರಲ್ಲಿದೆಯೇ ಹೊರತು ಯಾವುದೋ ಒಂದು ಆಧಾರಭೂತವಾಗಿರತಕ್ಕದ್ದು ಅದರಲ್ಲಿ ಕಾಣುವುದಿಲ್ಲವೆನ್ನುವುದು ನನ್ನ ನಿರ್ದಿಷ್ಟವಾದ ಅಭಿಪ್ರಾಯ.

ಇನ್ನು constituency ರಚನೆ ಬಗ್ಗೆ single member constituency ಇರಬೇಕೇ, ಅಥವಾ multi-member constituency ಇರಬೇಕೇ ಎನ್ನುವ ವಿವಾದ ಬಂದು, multi-member constituency ಇರುವುದರಿಂದ ಬಹಳ ತೊಂದರೆಯಾಗುತ್ತದೆ, ಸರಿಯಾದ ಪ್ರತಿನಿಧಿಗಳು ಬರುವುದಕ್ಕೆ ಅವಕಾಶವಾಗುವುದಿಲ್ಲವೆಂದು ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ನನಗೇನೋ ಇದರಲ್ಲಿ ಅಷ್ಟಾಗಿ ತಿರುಳಿದೆಯೆಂದು ಅರ್ಥವಾಗಲಿಲ್ಲ. I fail to under stand if there is any real difficulty in getting real representatives in the case of Multi-member Constituencies. ಇದು ಕೇವಲ ತಾಲ್ಲೂಕು ಮಟ್ಟದಲ್ಲಿ ನಡೆಯತಕ್ಕದು; ಡಿಸ್ಟ್ರಿಕ್ಟ್ ಮಟ್ಟದಲ್ಲಿಲ್ಲ ಅಥವಾ State ಮಟ್ಟದಲ್ಲಿಲ್ಲ ಅಲ್ಲಿರತಕ್ಕ ಪ್ರಜಾಸಂಖ್ಯೆಯಾದರೂ 10,000 ವಿರಬಹುದು.

2 P.M.

ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮುರು).—ಮೈಸೂರು ದೇಶದಲ್ಲಿ ಎಲ್ಲಿಯಾದರೂ ನೋಡಿದ್ದೀರಾ ಅಥವಾ ಕೇಳಿದ್ದೀರಾ 10,000 ಪ್ರಜಾಸಂಖ್ಯೆಯಿರುವ ತಾಲ್ಲೂಕನ್ನು?

ಶ್ರೀ ವಿ. ಮಸಿಯಪ್ಪ.—ಮಾನ್ಯ ಗೋಪಾಲಗೌಡರು ಮಾತನಾಡುವಾಗ ಮಾನ್ಯ ಸದಸ್ಯರು ಇಲ್ಲಿರಲಿಲ್ಲ. ಇಲ್ಲಿ ನಡೆದಿರತಕ್ಕ ವಿದ್ಯಮಾನಗಳನ್ನು ತಿಳಿಯದೆ ನಾವು ಹೇಳುವುದನ್ನು ಅಷ್ಟು ಸುಲಭವಾಗಿ ಟೀಕೆ ಮಾಡುವುದು ಸರಿಯಲ್ಲವೆಂದು ಹೇಳುತ್ತೇನೆ 10 ಸಾವಿರ ಅಥವಾ 15 ಸಾವಿರ ಪ್ರಜೆಗಳಿರುವ ಒಂದು ತಾಲ್ಲೂಕನ್ನು ಯೂನಿಟ್ಟಾಗಿಟ್ಟುಕೊಂಡು ಅಲ್ಲಿಂದ ಮೂರು ಜನರನ್ನು ಆರಿಸತಕ್ಕದ್ದು ನಮ್ಮ ಮತದಾರರಿಗೆ ಅಷ್ಟೇನೂ ಕಷ್ಟವಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಚುನಾವಣಾ ಪದ್ಧತಿಯ ವಿಚಾರದಲ್ಲಿ Secret Ballot ನಿಂದ ತೊಂದರೆಯಿದೆಯೆಂಬ ವಿಚಾರವನ್ನು ಶ್ರೀ ದೇವರಾಜ ಅರಸ್‌ನವರು ಬಹಳ ಮಟ್ಟಿಗೆ ಸೂಚಿಸಿದ್ದಾರೆ. ಅದರಲ್ಲೂ 3 ಜನರಿಗಿಂತ ಜಾಸ್ತಿ ಇರುವಾಗ ಗುರುತುಗಳನ್ನು ಕೊಡದೆ ಇದ್ದರೆ ಬಹಳ ತೊಂದರೆಯಾಗುತ್ತದೆಯೆಂದು ಹೇಳಿದರು. ಆದರೆ ಒಂದು ವಿಷಯ Secret ಬ್ಯಾಲೆಟ್ ಎನ್ನುವುದೇನಿದ್ದರೂ ಒಂದು relative term. ಏಕೆಂದರೆ ಮೊನ್ನೆ ನಡೆದ ಅಸೆಂಬ್ಲಿ ಚುನಾವಣೆಗಳಲ್ಲೂ ಕುರುಡರು ಮುಂತಾದವರಿಗೆ ಪೆಟ್ಟಿಗೆ ನೋಡಿ ಹಾಕುವುದಕ್ಕೆ ಆಗದಿರುವವರಿಗೆ ಸಹಾಯ ಮಾಡುವುದಕ್ಕಾಗಿ ಬೇರೆಯವರು ಹೋಗಿದ್ದೂ ಉಂಟು. ಅವಿದ್ಯಾವಂತರು, ಅನಕ್ಷರಸ್ಥರು ವೋಟುಮಾಡುವುದಕ್ಕೆ ಹೋದರೆ ಪೋಲಿಂಗ್ ಆಫೀಸರು ಅವರಿಗೆ ಸಹಾಯ ಮಾಡುವುದಕ್ಕೆ ಅಭ್ಯಂತರವಿಲ್ಲವೆಂದು ಮೊದಲಿನಿಂದಲೂ ಹೇಳಿದೆ. ಆದ್ದರಿಂದ ನಮ್ಮ ದೇಶದಲ್ಲಿ ಎಲ್ಲಿಯವರೆಗೆ ಅವಿದ್ಯಾವಂತರಿದ್ದಾರೋ ಅಲ್ಲಿಯವರೆಗೂ Secrecy of Ballot ಎಂಬುದು ಕೇವಲ ಹೆಸರಿಗೆ ಮಾತ್ರ ಇರುತ್ತದೆ ಅಷ್ಟೆ. ಆದ್ದರಿಂದ ಮೂರು ಜನರು ಇರತಕ್ಕ ಕಡೆಗಳಲ್ಲೂ ಕೂಡ ಉಮೇದುವಾರರನ್ನು ಆರಿಸುವುದರಲ್ಲಿ ಕಷ್ಟವಾಗುತ್ತದೆಂಬುದಾಗಲಿ, ಬಣ್ಣದ ಪೆಟ್ಟಿಗೆಗಳಿದ್ದರೂ ಅವುಗಳನ್ನು ಗುರುತು ಮಾಡುವುದು ಕಷ್ಟವಾಗುತ್ತದೆಂಬುದನ್ನು ಹೇಳುವುದಾಗಲಿ ನಿಲ್ಲತಕ್ಕವಾದವಲ್ಲ. ಆದ್ದರಿಂದ ಈಗ ತಂದಿರತಕ್ಕ ರೀತಿಯಲ್ಲಿ ಈ ಮಸೂದೆಯಲ್ಲಿರತಕ್ಕ ತಿದ್ದುಪಡಿ ಅಂಶಗಳು ಬಹಳ ಸೂಕ್ತವಾಗಿವೆ. ಇದಕ್ಕೆ ಮಾನ್ಯ ಸದಸ್ಯರು ಅನುಮತಿ ಕೊಟ್ಟು ಜಾರಿಗೆ ತರುವುದಕ್ಕೆ ಅವಕಾಶ ಕೊಡುವುದು ಒಳ್ಳೆಯದು.

ಇನ್ನು ವರಮಾನದ ಬಗ್ಗೆ ಶೇಕಡ 6 1/4 ನಷ್ಟು ಖೋತಾ ಮಾಡಿರುವ ಬಗ್ಗೆ ಕೆಲವರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಜಿಲ್ಲಾ ಬೋರ್ಡುಗಳ ಆಡಳಿತ ಎಲ್ಲಾ ಕಡೆಯಲ್ಲೂ ಸರ್ವ ಸಮರ್ಪಕವಾದ ರೀತಿಯಲ್ಲಿ, ಮೆಚ್ಚಿಕೆಯನ್ನು ಪಡೆಯತಕ್ಕ ರೀತಿಯಲ್ಲಿ ನಡೆದಿದೆಯೆಂದು ಯಾರೂ ಹೇಳುವ ಸ್ಥಿತಿಯಲ್ಲಿಲ್ಲ. ಅವರಿಗೆ ಕೊಟ್ಟಿರತಕ್ಕ ಒಂದೊಂದು ಕಾಸನ್ನೂ ಸದ್ವಿನಿಯೋಗವಾಗಿದೆಯೆಂದು ಯಾರೂ ಹೇಳಲಾರರು. ಈ ಸಭೆಯಲ್ಲಿ ಬಂದಿದ್ದ ಪ್ರಶ್ನೆಗಳಿಗೆ ಒದಗಿಸಲಾಗಿದ್ದ ಉತ್ತರಗಳನ್ನು ಕ್ರೋಢೀಕರಿಸಿ ಹೇಳುವುದಾದರೆ, ಅವು ಸರಿಯಾಗಿ ಕೆಲಸ ನಡೆಸಿಲ್ಲವೆಂದು ಅರ್ಥವಾಗುತ್ತದೆ. ಆದ್ದರಿಂದ ಅಲ್ಲಿ ಇನ್ನೂ ಮಾರ್ಪಾಟಾಗುವುದರ ಅವಶ್ಯಕತೆಯಿದೆ. ಎಲ್ಲಿ ನಾಲ್ಕಾರು ಪ್ರತಿನಿಧಿಗಳು ಸೇರಿ ಕೆಲಸ ಮಾಡುತ್ತಾರೋ, ಅಲ್ಲಿ ಮಾನವ ಸಹಜವಾದ ಲೋಪದೋಷಗಳು ಬಂದೇ ಬರುತ್ತವೆ. ಆದ್ದರಿಂದ ಅಲ್ಲಿಗೆ ಹಾಕುತ್ತಿದ್ದ ಹಣವನ್ನು ಕಡಮೆ ಮಾಡುವುದು ಸರಿಯಾದದ್ದಲ್ಲವೆಂದು ವಾದ ಮಾಡುವುದಾಗಲಿ, ಅವರು ಕೈಕೊಂಡ ಕೆಲಸಕಾರ್ಯಗಳಿಗೆ ಹಣ ಸಾಲದಾಗುತ್ತದೆಂದು ಹೇಳುವುದಾಗಲಿ ಪ್ರಧಾನವಾದ ಕಾರಣವಲ್ಲ. ಈಗ ನಮ್ಮ ಮುಂದಿರುವ ಒಂದನೆಯ ಮತ್ತು ಎರಡನೆಯ ಪಂಚವಾರ್ಷಿಕ ಯೋಜನೆಗಳ ಸಂದರ್ಭದಲ್ಲಿ ಪ್ರತಿಯೊಂದು ಗ್ರಾಮದಲ್ಲೂ ಕೆಲಸಕಾರ್ಯಗಳನ್ನು ಮಾಡಬೇಕಾಗಿರುವಾಗ, ಪ್ರತಿಯೊಂದು ಹಳ್ಳಿಗೂ ಬೇಕಾದ ನಾಗರಿಕ ಸೌಕರ್ಯವನ್ನು ಒದಗಿಸಿಕೊಡಬೇಕೆಂಬ ಯೋಜನೆಯನ್ನು ಸರ್ಕಾರದವರಿಟ್ಟುಕೊಂಡಿರುವಾಗ ಡಿಸ್ಟ್ರಿಕ್ಟ್ ಬೋರ್ಡಿಗೆ ಕೊಡತಕ್ಕ ಹಣವನ್ನು ಸ್ವಲ್ಪ ಕಡಮೆ ಮಾಡಿ, ಅದೇ ಹಣವನ್ನು ಇನ್ನೂ ಜಾಗ್ರತೆ ಮತ್ತು ಸುಲಭದಲ್ಲಿ ಹಳ್ಳಿಗಳ್ಳಿಗೆ ಕೊಡುವುದಕ್ಕೆ ವ್ಯವಸ್ಥೆ ಮಾಡುವುದಾಗಲಿ ಅಥವಾ ಈಗ ತಾವು ಮನಸ್ಸು ಮಾಡಿರುವಂತೆ ತಾಲ್ಲೂಕ್ ಬೋರ್ಡಿಗೆ ಕೊಟ್ಟು ಆ ಮುಖಾಂತರ ಹಳ್ಳಿಗಳಿಗೆ ಸೌಕರ್ಯವುಂಟಾಗುವಂತೆ ಮಾಡುವುದಾಗಲಿ ತಪ್ಪಾಗಲಾರದು. ಈ ದೃಷ್ಟಿಯಿಂದ, ವೆಂಕಟಪ್ಪ ಕಮಿಟಿಯವರ ಶಿಫಾರಸಿನಂತೆ ಡಿಸ್ಟ್ರಿಕ್ಟ್ ಬೋರ್ಡ್‌ಗಳಿಗೆ $12\frac{1}{2}$ ಕೊಡಬೇಕೆಂದಿದ್ದುದನ್ನು ಶೇಕಡ $6\frac{1}{4}$ಗೆ ಇಳಿಸಿರುವುದು ನ್ಯಾಯವಾಗಿದೆ. ಪಂಚವಾರ್ಷಿಕ ಯೋಜನೆಯ ದೃಷ್ಟಿಯಿಂದ ಮಾಡಿರುವ ಈ ಬದಲಾವಣೆಯೇ ಒಂದು ದೊಡ್ಡ ಬದಲಾವಣೆಯೆಂದು ಭಾವಿಸಕೂಡದು. ಇದಲ್ಲದೆ ಡಿಸ್ಟ್ರಿಕ್ಟ್ ಬೋರ್ಡ್‌ಗಳಿಗೆ ಬೇಕಾದರೆ, ಅವರು ಕೈಕೊಳ್ಳುವ ಕೆಲಸಗಳಿಗೆ, ಇಲ್ಲಿ Statuteನಲ್ಲಿ ಕೊಟ್ಟಿರುವುದೇ ಅಲ್ಲದೆ, ಡಿಸ್ಟ್ರಿಕ್ಟ್ ಬೋರ್ಡಿನಿಂದ ಅಂಗೀಕೃತವಾದ ಒಂದು ನಿರ್ಣಯದ ಮೇಲೆ ಸರ್ಕಾರಕ್ಕೆ ಶಿಫಾರಸು ಬಂದರೆ, ಅದರ ಮೇಲೆ ಸರ್ಕಾರದವರು ಅದಕ್ಕೆ ಹೆಚ್ಚಿಗೆ ದುಡ್ಡು ಕೊಡಬಹುದೆಂದೂ ಇದೆ. ಜೊತೆಗೆ ಸೆಸ್ಸು ವಗೈರೆ

(ಶ್ರೀ ವಿ. ಮುನಿಯಪ್ಪ.)

ಗಳನ್ನು ಬೇಕಾದರೂ ಹಾಕಿ ಹಣ ಬರಮಾಡಿಕೊಳ್ಳ ಬಹುದು. ಆದ್ದರಿಂದ ಶೇಕಡ 6¼ ಮಾಡಿದ್ದರಿಂದ ಡಿಸ್ಟ್ರಿಕ್ಟ್ ಬೋರ್ಡಿನ ಕೆಲಸಕಾರ್ಯಗಳಿಗೆ ಧಕ್ಕೆ ತಂದಂತಾಗಲಿಲ್ಲವೆಂದು ನನ್ನ ಅಭಿಪ್ರಾಯ.

ಆಮೇಲೆ, ಇನ್ನೊಂದು ಮುಖ್ಯವಾದ ವಿಷಯ, ಯಾರು ಉಮೇದುವಾರರಾಗಿ ನಿಲ್ಲಬಹುದು ಎಂಬುದು. ಈ ತಿದ್ದುಪಡಿ ಮಸೂದೆಯಲ್ಲಿ ವೋಟುದಾರರು ಯಾರೆಂಬು ದನ್ನು ತಿಳಿಸಿದ್ದಾರೆ. ಉಮೇದುವಾರರಾಗಿ ನಿಲ್ಲು ವವರು ಯಾವ ಪ್ರದೇಶದಿಂದಲಾದರೂ ನಿಲ್ಲಬಹುದೆಂಬ ಅಭಿಪ್ರಾಯವಿದೆ. ಇದು ಹಿಂದಿನ ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ವಿಲೇಜ್ ಪಂಚಾಯಿತಿ ಬಿಲ್ಲು ಆಕ್ಟ್ ಆಗುವಾಗ ಬಹಳ ಚರ್ಚೆ ಮಾಡಲ್ಪಟ್ಟು ಕೊನೆಗೇನೋ ಒಂದು ತೀರ್ಮಾನಕ್ಕೆ ಬಂದದ್ದಾಗಿದೆ. ಆಗ ಅವರು ಯಾವ ಉದ್ದೇಶದಿಂದ ನಗರ ಮತ್ತು ಕಾರ್ಪೊರೇಷನ್ ಪ್ರದೇಶದಲ್ಲಿರುವವರೂ ಉಮೇದುವಾರರಾಗಬಹು ದೆಂದೂ, ವೋಟುದಾರರು ಮಾತ್ರ ಆಗಕೂಡದೆಂದು ಮಾಡಿದರೋ ಗೊತ್ತಿಲ್ಲ. ಅಂತೂ ಇದೊಂದು ವಿರೋಧಾಭಾಸವಾಗಿದೆ. ಒಂದು ವೇಳೆ ಅಲ್ಲಿಂದ ಒಬ್ಬನು ಉಮೇದುವಾರನಾಗುವುದಕ್ಕೆ ಅರ್ಜಿ ಕೊಟ್ಟರೆ, ಅದರ ಮೇಲೆ, ಆ ಮನುಷ್ಯನಿಗಿರುವ ಹಕ್ಕೇನು, ಅವನು ಆ ನಗರದಲ್ಲಿ ವಾಸಮಾಡು ತ್ತಿದ್ದಾನೆಯೇ ಇಲ್ಲವೇ ಅಥವಾ ಅವನು domiciled ಮೈಸೂರಿನವನೇ—ಈ ಅಂಶಗಳನ್ನಾದರೂ ನಿರ್ಧರಿಸು ವುದಕ್ಕೆ ಮಾರ್ಗ ಯಾವುದು? 25 ವರ್ಷ ಆಗಿದೆಯೇ ಇಲ್ಲವೇ, disqualification ಇಲ್ಲದಿರುವ ಆ ಉಮೇದುವಾರ ಮೈಸೂರಿನವನೇ ಅಲ್ಲವೇ, ತಾಲ್ಲೂಕು ಪ್ರದೇಶದಲ್ಲಿ ವಾಸವಾಗಿದ್ದಾನೆಯೇ ಇಲ್ಲವೇ ಎಂಬು ದನ್ನಾದರೂ ನಿರ್ಧಾರಮಾಡುವುದಕ್ಕೆ ರಿಟರ್ನಿಂಗ್ ಆಫೀಸರಿಗೆ ಇರುವ basis ಆದರೂ ಏನು? ಅರ್ಜಿ ಯನ್ನು ಅಂಗೀಕಾರ ಮಾಡುವುದಕ್ಕೆ ಅಥವಾ ವಜಾ ಮಾಡುವುದಕ್ಕೆ ಅವನಿಗಿರುವ ಆಧಾರವೇನು? ಹಿಂದಿದ್ದ ಕಾನೂನಿನಲ್ಲಿರುವುದನ್ನೇ ಉಳಿಸಿಕೊಂಡಿದ್ದೇವೆಂದು ನಿನ್ನೆ ಹೇಳಿದರು. ಅದಿರಬಹುದು. ಆದರೂ ಹಿಂದಿದ್ದ ಕಾನೂನಿನಲ್ಲಿ ಏನಾದರೂ ಕ್ಲಿಷ್ಟ ಸಮಸ್ಯೆಯಿದ್ದರೆ ಅದನ್ನು, ಈಗಿನ ಸಂದರ್ಭದಲ್ಲಿ ಬದಲಾಯಿಸುವುದು ಅತ್ಯಾವಶ್ಯಕವಾಗಿದ್ದರೆ ಆ ರೀತಿ ಮಾಡುವುದು ಸೂಕ್ತ ವೆಂದು ನನ್ನ ಅಭಿಪ್ರಾಯ.

ಇಷ್ಟು ಹೇಳಿ ಮಾನ್ಯ ಸದಸ್ಯರು ಈ ಮಸೂದೆಯನ್ನು ಜಾಗ್ರತೆ pass ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪ (ಹರಿಯಾ ಪಟ್ಟಣ).—ಅಧ್ಯಕ್ಷರೇ, ಜಿಲ್ಲಾಬೋರ್ಡಿಗೆ ಸಂಬಂಧ ಪಟ್ಟ ಈ ತಿದ್ದುಪಡಿ ಮಸೂದಾ ಕಾನೂನಿನಲ್ಲಿ ಮುಖ್ಯ ವಾಗಿ ಎರಡು ಅಂಶಗಳು ಮಾತ್ರ ಪ್ರತಿಪಾದಿಸಲ್ಪಟ್ಟಿವೆ. ಒಂದನೆಯದಾಗಿ Direct Election ಆಗ ಬೇಕೆಂಬುದು. ಜನಗಳಿಂದ ನೇರವಾಗಿ ಚುನಾಯಿತ ರಾಗಿ ಬಂದಂಥ ಪ್ರತಿನಿಧಿಗಳು ಜಿಲ್ಲಾ ಬೋರ್ಡಿನಲ್ಲಿ ಕೆಲಸಮಾಡಬೇಕೆಂಬುದು ಮುಖ್ಯವಾದ ಒಂದು ತಿದ್ದುಪಡಿ.

ಶ್ರೀ ವೆಂಕಟಪ್ಪ ಕಮಿಟಿಯವರು ಈ ವಿಷಯ ವಾಗಿ ಒಂದು ರೀತಿಯ ಸಲಹೆ ಮಾಡಿದ್ದರು. ಆ ಸಮಿತಿ ಯಲ್ಲಿ ನಾನೂ ಒಬ್ಬ ಸದಸ್ಯನಾಗಿದ್ದೆ. ಆ ಸಂದರ್ಭ ದಲ್ಲಿ Indirect Election ಅಂದರೆ, ಪಂಚಾಯಿ ತಿಗಳು ನೇರವಾಗಿ ಪ್ರಜೆಗಳಿಂದ ಚುನಾಯಿತರಾಗಿ ಬರಲಿ, ಅನಂತರ ಪಂಚಾಯಿತಿ ಸದಸ್ಯರಿಂದ ಚುನಾಯಿ ತರಾದ ಸದಸ್ಯರು ಜಿಲ್ಲಾಬೋರ್ಡಿನಲ್ಲಿ ಕೆಲಸ ಮಾಡ ಬೇಕೆಂದು ಹೇಳಿ ಸಲಹೆ ಮಾಡಿದ್ದರು. ಆ ಸಲಹೆ ಯನ್ನು ಅಂಗೀಕಾರಮಾಡಿ ಒಂದು ಶಾಸನವನ್ನು ತಯಾರುಮಾಡಿದೆವು. ಆ ಶಾಸನ 1952ರಲ್ಲಿ ಮಂಜೂರಾಗಿದ್ದರೂ ಇವೊತ್ತಿನವರೆಗೂ ಅದಕ್ಕನು ಗುಣವಾಗಿ ಚುನಾವಣೆಯೇ ನಡೆಯಲಿಲ್ಲ.

ಈ ಸಂದರ್ಭದಲ್ಲಿ ಒಂದಂಶವನ್ನು ಮಾತ್ರ ನಾನು ಸರ್ಕಾರಕ್ಕೆ ಸಲಹೆಮಾಡಲು ಇಷ್ಟಪಡುತ್ತೇನೆ. ಯಾವ ಶಾಸನವೇ ಆಗಲಿ ಅದು ಈ ಮಾನ್ಯ ಸಭೆಯಿಂದ ಅಂಗೀಕಾರವಾದಮೇಲೆ ಆ ಶಾಸನವನ್ನು ಜಾರಿಗೆ ಕೊಟ್ಟು ಅದರಿಂದ ಬರತಕ್ಕ ಕಷ್ಟಸುಖಗಳ ಆಧಾರದ ಮೇಲೆ ತಿದ್ದುಪಡಿಗಳನ್ನು ತರುವುದು ಒಂದು ಸತ್ಸಂಪ್ರ ದಾಯ. ಹಾಗಿಲ್ಲದೆ, ಶಾಸನವನ್ನು ಮಾಡಿ ಅದನ್ನು ಜಾರಿಗೆ ಕೊಡುವುದರ ಮುನ್ನವೇ ತಿದ್ದುಪಡಿಯನ್ನು ತರುವುದು ಸತ್ಸಂಪ್ರದಾಯವಲ್ಲವೆಂದು ಹೇಳಿದರೆ ಸಾಕು.

ನೇರವಾದ ಚುನಾವಣೆ ಬೇಡ, indirect ಆಗಿ ಪಂಚಾಯಿತಿ ಸದಸ್ಯರುಗಳಿಂದ ಚುನಾವಣೆಯಾಗ ಬೇಕೆಂಬುದರ ಉದ್ದೇಶವೇನೆಂಬುದು ಎಲ್ಲರಿಗೂ ಗೊತ್ತೇಇದೆ. ಎಂದು ಸ್ಥಳೀಯ ಸರ್ಕಾರ ಆ ಸ್ಥಳದ ಸರ್ಕಾರದ ಪರವಾಗಿ ಕಾರ್ಯಕ್ರಮ ನಡೆಸತಕ್ಕ ಸರ್ಕಾರ ವಾಗಿದೆಯೋ, ಅಂದು, ಅಲ್ಲಿ ಕೆಲಸಮಾಡತಕ್ಕ ಪ್ರತಿ ನಿಧಿಗಳು ಆಯಾ ಸ್ಥಳದ ಮೂಲೆ ಮೂಲೆಗಳಿಂದ ಬರತಕ್ಕ ಪ್ರತಿನಿಧಿಗಳಾಗಿರಬೇಕು ಮತ್ತು ಪಂಚಾಯಿತಿ ಜಿಲ್ಲಾಬೋರ್ಡು ಮತ್ತು ತಾಲ್ಲೂಕ್ ಬೋರ್ಡು ಇವು ಮೂರಕ್ಕೂ ಒಂದು ವಿಧವಾದ ನಿಕಟ ಸಂಪರ್ಕವಿರ ಬೇಕು, ಪರಸ್ಪರ ಸೌಹಾರ್ದ, ಸಹಕಾರ, ಸಹಾಯ ಗಳಿಂದ ಕೆಲಸ ಮಾಡಬೇಕು; ಇದು ಸ್ಥಳೀಯ ಸಂಸ್ಥೆಗಳ ಮೂಲ ತತ್ವ. ಎಷ್ಟು ಸಂಸ್ಥೆಗಳೇ ಇರಲಿ, ಆ ಸಂಸ್ಥೆಗಳು ಪರಸ್ಪರ ಸ್ಪರ್ಧೆಯಿಂದ ಕೆಲಸ ಮಾಡತಕ್ಕದ್ದಲ್ಲ, ಪರಸ್ಪರ ವೈಮನಸ್ಯಗಳಿಂದ ಅಧಿ ಕಾರಗಳಿಗೆ ಹೋರಾಟ ಮಾಡತಕ್ಕದ್ದಲ್ಲ, ಪರಸ್ಪರ Co-ordination ಮತ್ತು ಕೋ-ಆಪರೇಷನ್ನಿನಮೇಲೆ ಕೆಲಸಮಾಡುವುದು ಸೂಕ್ತವೆಂಬ ಮೂಲೋದ್ದೇಶದಿಂದ ವೆಂಕಟಪ್ಪ ಕಮಿಟಿಯವರು ಶಿಫಾರಸು ಮಾಡಿದರು. ಈಗಿರುವ ರೀತಿಯಲ್ಲಿ ನೇರವಾಗಿ ಪಂಚಾಯಿತಿಗಳಿಗೂ ಮತ್ತು ಡಿಸ್ಟ್ರಿಕ್ಟ್ ಬೋರ್ಡುಗಳಿಗೂ ಯಾವ ಸಂಬಂಧವೂ ಇಲ್ಲ; ಪಂಚಾಯಿತಿಯ ಸದಸ್ಯರಿಗೂ ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ಸದಸ್ಯರಿಗೂ ಸಂಪರ್ಕ ವಿಲ್ಲ; ಅಲ್ಲಿನ ವ್ಯವಹಾರಗಳಿಗೂ ಇಲ್ಲಿನ ವ್ಯವಹಾರ ಗಳಿಗೂ ಸಂಪರ್ಕವಿಲ್ಲ. ಈ ರೀತಿಯಾಗಿದ್ದರೆ ಸ್ಥಳೀಯ ಸರ್ಕಾರದ ಬೆಳವಣಿಗೆ ಸರ್ವಸಮರ್ಪಕವಾಗಿ ಆಗಲು ಸಾಧ್ಯವಿಲ್ಲ ಎಂಬುದನ್ನು ಮನಗಂಡು ಅವರಿಗೂ ಇವರಿಗೂ ಸಂಪರ್ಕವುಂಟಾಗುವಂತೆ ಮಾಡಬೇಕೆಂಬ ಉದ್ದೇಶದಿಂದ ಈಗ ಒಂದು ತಿದ್ದುಪಡಿ ಮಾಡಿದ್ದಾರೆ. ಈಗ ಪ್ರಜಾಭಿಪ್ರಾಯ ರೂಪುಗೊಂಡಿರುವ ಪ್ರಕಾರ ಮಾಡಬೇಕೆಂದು ಸರ್ಕಾರದವರು ಉತ್ಸಾಹದಿಂದ ನಮ್ಮ ಮುಂದೆ ತಿದ್ದುಪಡಿ ಮಸೂದೆಯನ್ನಿಟ್ಟಿದ್ದಾರೆ. ಇದು ಒಳ್ಳೆಯದೇ ಅಥವಾ ಕೆಟ್ಟದ್ದೇ ಎಂಬ ವಿಚಾರದಲ್ಲಿ ಬೇಕಾದಷ್ಟು ಹೇಳಲು ಅವಕಾಶವಿದ್ದರೂ ಕೂಡ ಅದಕ್ಕೆ ಅಷ್ಟು ಗಮನ ಕೊಡಬಾರದು. 1½ ವರ್ಷದಿಂದ ದೇಶಾದ್ಯಂತ ಜಿಲ್ಲಾ ಬೋರ್ಡು ಕೆಲಸ ಕಾರ್ಯನಿಂತು ದೇಶದ ಪ್ರಗತಿ ಸಾಧನೆ ನಿಂತಿ ರುವುದನ್ನು ನೋಡಿದರೆ ಜಾಗ್ರತೆ ಚುನಾವಣೆಯಾಗ ಬೇಕು, ಜಿಲ್ಲಾ ಬೋರ್ಡಿನ ರಚನೆಯಾಗಬೇಕ ಎಂಬ ಉದ್ದೇಶ ಎಲ್ಲರ ಮನಸ್ಸಿನಲ್ಲೂ ಇದೆ. ಆದ್ದರಿಂದ ಈಗೇನಾದರೂ ಅಡ್ಡಿ ಆತಂಕಗಳನ್ನು ನಾವು ತಂದೊ ಡ್ಡಿದರೆ ಜಿಲ್ಲಾ ಬೋರ್ಡು ಚುನಾವಣೆ ಎರಡು ಮೂರು ವರ್ಷಗಳಿಂದ ನಿಂತಿರುವುದು ಇನ್ನೂ ಎರಡು ಮೂರು

ವರ್ಷಗಳವರೆಗೆ ನಿಲ್ಲಬಹುದು. ಆದ್ದರಿಂದ ಬಂದಿರುವ ಸಲಹೆ ಒಪ್ಪಿಕೊಂಡು ಜಾಗ್ರತೆಯಾಗಿ ಚುನಾವಣೆ ನಡೆಯಲು ಅವಕಾಶ ಕಲ್ಪಿಸಬೇಕಾಗುತ್ತದೆ. ಮೂಲೆ ಮೂಲೆಗಳಿಂದ ಬರುವ ಜನರಿಗೆ ಅವಕಾಶವಿರಬೇಕು, ಆದರೆ ಚುನಾವಣೆಗಳಲ್ಲಿ ಸಾವಿರಾರು ರೂಪಾಯಿ ಖರ್ಚುಮಾಡಿ ಮೂಲೆಗಳಲ್ಲಿರುವವರು ಚುನಾಯಿತರಾಗಿ ಬರಲು ಅವಕಾಶವಿಲ್ಲ ಎಂದು ವೆಂಕಟಪ್ಪ ಸಮಿತಿ ವರದಿಯಲ್ಲಿ ಹೇಳಿದ್ದಾರೆ. ಈಗ ನೇರವಾಗಿ ಚುನಾವಣೆಯಾಗಬೇಕೆಂದು ಸರ್ಕಾರ ಮತ್ತು ಸದಸ್ಯರು ಅಭಿಪ್ರಾಯಪಟ್ಟು ಏರ್ಪಾಡು ಮಾಡಿದ್ದಾರೆ. ಹೀಗೆ ನೇರವಾಗಿ ಚುನಾವಣೆ ಮಾಡುವಾಗ ಕಷ್ಟವೇನು ಬರುತ್ತದೆಂಬುದನ್ನು ದೃಷ್ಟಿಯಲ್ಲಿಟ್ಟು ಅದಕ್ಕೆ ತಕ್ಕ ಪರಿಹಾರೋಪಾಯವನ್ನು ಈ ಕಾನೂನಿನಲ್ಲಿ ಒದಗಿಸದೇ ಇದ್ದರೆ ಮುಂದೆಬರುವ ಅನರ್ಥಗಳಿಗೆ ನಾವು ಗುರಿಯಾಗಬೇಕಾಗುತ್ತದೆ ಎಂದು ಶ್ರೀ ದೇವರಾಜ ಅರಸ್‌ನವರು ಹೇಳಿದರು. ಇದು ಅನುಭವ ಪೂರಿತವಾದ ಮಾತು. ಪಂಚಾಯಿತಿ ಚುನಾವಣೆ ನಡೆಯುವಾಗ ಅಲ್ಲಿನ ಸದಸ್ಯರು ಓಟುದಾರರಿಂದ ಚುನಾಯಿಸಲ್ಪಡದೆ ಪೋಲಿಂಗ್ ಆಫೀಸರಿಂದಲೇ ಚುನಾಯಿತರಾಗಿದ್ದಾರೆಂಬುದು ಸತ್ಯವಾದ ಮಾತು. ಏಕೆಂದರೆ, ಓದುವುದಕ್ಕೆ ಕೂಡ ಬಾರದಿರುವ ಓಟುದಾರರಿಗೆ ತಿಳಿಯುವಂತೆ ಆನೆ, ಸಿಂಹ, ಮುಂತಾದ ಗುರುತುಗಳು ಕೂಡ ಚುನಾವಣೆಗೆ ನಿಂತಿರುವ ಸದಸ್ಯರ ಚೀಟಿಗಳಲ್ಲಿರಲಿಲ್ಲ. ಓದುಬರಹ ಬಾರದಿರುವವರಿಗೆ ಪೋಲಿಂಗ್ ಆಫೀಸರು ಅವರಿಗೆ ಬೇಕಾದ ಪಟ್ಟಿ ಕೊಡದೆ—ಯಾವುದನ್ನು ಕೊಟ್ಟರೂ ಅದನ್ನು ಪರೀಕ್ಷಿಸುವ ಶಕ್ತಿಯಿರುವುದಿಲ್ಲ.—ಅನೇಕ ಕಡೆ ಪೋಲಿಂಗ್ ಆಫೀಸರು ತಮಗೆ ಯಾರುಬೇಕೋ ಅವರನ್ನೇ ಚುನಾವಣೆ ಮಾಡಿಸಿದ್ದಾರೆ. ಇಂಥ ಗೊಂದಲ ಜಿಲ್ಲಾ ಬೋರ್ಡು ಚುನಾವಣೆಗಳಲ್ಲಿ ಆಗಬಾರದೆಂಬ ಅಭಿಪ್ರಾಯವಿದೆ. ಮಲ್ಟಿ ಮೆಂಬರ್ ಕಾನ್‌ಸ್ಟಿಟ್ಯೂಯನ್ಸಿ ಬೇಡ, ಸಿಂಗಲ್ ಮೆಂಬರ್ ಕಾನ್‌ಸ್ಟಿಟ್ಯೂಯನ್ಸಿ ಬೇಕು ಎಂಬ ಅಭಿಪ್ರಾಯವಿದೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಮೂರು ಜನ ಮಾತ್ರ ಇರಬೇಕೆಂಬ ಅಭಿಪ್ರಾಯವಿರುವುದು ಸರಿಯಲ್ಲ. ಪ್ರತಿ ತಾಲ್ಲೂಕಿನಲ್ಲೂ, ವೆಂಕಟಪ್ಪ ಸಮಿತಿ ಶಿಫಾರಸುಮಾಡಿರುವ ಹಾಗೆ, 25 ಸಾವಿರ ಜನಸಂಖ್ಯೆಗೆ ಒಂದು ಸ್ಥಾನ ಮಾಡುವುದು ಅವಶ್ಯಕವಾಗಿದೆ. ಮೂರು ಜನ ಇರಬಾರದೆಂದು ಹೇಳಿದರೂ 9-10 ಜನ ನಿಲ್ಲುವುದು ಅಸಂಭವವಲ್ಲ. ಹತ್ತು ಜನ ನಿಂತರೆ ಅವರ ಗುರುತನ್ನು ನೋಡಿ ಓಟು ಮಾಡುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದಲೇ ಸಿಂಗಲ್ ಮೆಂಬರ್ ಕಾನ್‌ಸ್ಟಿಟ್ಯೂಯನ್ಸಿ ಮಾಡಬೇಕೆಂಬುದು ಬಹಳ ಸೂಕ್ತವಾದ ಸಲಹೆ. ಮಲ್ಟಿ ಮೆಂಬರ್ ಕಾನ್‌ಸ್ಟಿಟ್ಯೂಯೆನ್ಸಿ ಮಾಡುವುದರಿಂದ ತೊಂದರೆಯೇನಿದೆಯೆಂಬುದನ್ನು ಮನಗಂಡು ತಕ್ಕ ವ್ಯವಸ್ಥೆ ಮಾಡುವುದು ಒಳ್ಳೆಯದು. ಪ್ರತಿ ತಾಲ್ಲೂಕಿನ ಮೂಲೆ ಮೂಲೆಗಳಲ್ಲೂ ಬಡವರನೇಕರಿರುತ್ತಾರೆ, ಸೇವೆ ಮಾಡುವ ದೃಷ್ಟಿ ಆ ಪ್ರದೇಶದವರಿಗಿರುತ್ತದೆ. ಆದರೆ ಸೇವಾ ಕ್ಷೇತ್ರಕ್ಕಿಳಿಯಲು ಸಾಕಾದಷ್ಟು ಹಣ ಅವರಿಗಿರುವುದಿಲ್ಲ. ಇಡೀ ತಾಲ್ಲೂಕಿನಲ್ಲಿ ಒಂದು ಕ್ಷೇತ್ರ ಮಾಡಿದರೆ ಜನರಲ್ ಎಲೆಕ್ಷನ್ ಆಗುವಾಗ ಎಷ್ಟು ವೆಚ್ಚವಾಗುತ್ತದೋ ಜಿಲ್ಲಾ ಬೋರ್ಡು ಚುನಾವಣೆಯಾಗುವಾಗಲೂ ಅಷ್ಟೇ ವೆಚ್ಚವಾಗುತ್ತದೆಂಬುದನ್ನು ಹೇಳುವುದು ಅನಾವಶ್ಯಕ. ಅಷ್ಟು ಹಣ ಖರ್ಚುಮಾಡುವುದಕ್ಕೆ ಸಿದ್ಧವಾಗಿದ್ದರೆ ಒಬ್ಬ ಮನುಷ್ಯ ಜಿಲ್ಲಾ ಬೋರ್ಡಿಗೆ ನಿಲ್ಲಲು ಸಾಧ್ಯ; ಮಿಕ್ಕವರಿಗೆ ಸಾಧ್ಯವಿಲ್ಲ. ಬಲಾಢ್ಯರಿಗೆ, ಧನಿಕರಿಗೆ, ಪ್ರಭಾವಶಾಲಿಗಳಿಗೆ ಮಾತ್ರ ತುಂಬ ಅವಕಾಶವಿರುತ್ತದೆಯೇ ವಿನಾ ಬಡವರಿಗೆ ಮತ್ತು ಸೇವಾ ಆಸಕ್ತಿಯಿರುವವರಿಗೆ ಹಳ್ಳಿಗಳಲ್ಲಿ ಚುನಾವಣೆಯಾಗಿ ಬರುವುದಕ್ಕೆ ಸಾಧ್ಯವಿಲ್ಲ. ಪ್ರಜಾಪ್ರಭುತ್ವದ ಮೂಲ ತತ್ವ ಹಳ್ಳಿ ಹಳ್ಳಿಗಳಲ್ಲೂ ತಮ್ಮ ಕೆಲಸ ತಾವೇ ಮಾಡಿಕೊಳ್ಳುವ ಶಕ್ತಿ ಬೆಳೆಸಬೇಕು ಎಂದಿರುವಾಗ ಸಾಧ್ಯವಾದ ಪ್ರಯತ್ನಮಾಡಿ ಮೂಲೆ ಮೂಲೆಗಳಲ್ಲಿರುವ ಸೇವಾಸಕ್ತಿಯಿರುವ ಜನರಿಗೆ ಚುನಾಯಿತರಾಗಿ ಬಂದು ಸೇವೆ ಮಾಡಲು ಅವಕಾಶ ಕಲ್ಪಿಸುವ ದೃಷ್ಟಿಯಿರಬೇಕು. ಒಂದೊಂದು ಕ್ಷೇತ್ರದಲ್ಲಿ ನಾಲ್ಕು ಜನರಿದ್ದರೆ ನಾಲ್ಕು ಕ್ಷೇತ್ರ ಮಾಡುವುದರಿಂದ ಕಾಲ ವಿಳಂಬವಾಗುವುದು ನಿಜ, ಒಪ್ಪಬಹುದು. ಸರ್ಕಾರ ಡೀಲಿಮಿಟ್ ಮಾಡಿ ಅಬ್ಜೆಕ್ಷನ್ಸ್ ಕಾಲ್‌ಫಾರ್ ಮಾಡಿ ತೀರ್ಮಾನ ಮಾಡಿದ ಮೇಲೆ ಯಾವ ಯಾವ ಕ್ಷೇತ್ರ ಇರಬೇಕೆಂದು ನಿಗದಿಮಾಡಿ ಚುನಾವಣೆ ಮಾಡಬೇಕು. ಇದಕ್ಕೆ ಕೆಲವು ಕಾಲ ನಿಧಾನವಾಗುತ್ತದೆ ನಿಜ. ಈಗಿರುವ ಪ್ರಶ್ನೆ ನಿಧಾನವಾದರೂ ಚಿಂತೆಯಿಲ್ಲ, ಸತ್ಸಂಪ್ರದಾಯವನ್ನನುಸರಿಸಿ ರಕ್ಷಣೆ ಕೊಡಲು ಈ ವಿಧಾನ ಮಾಡುವುದು ಒಳ್ಳೆಯದು ಎಂಬ ಅಭಿಪ್ರಾಯವಿದೆ. ಒಂದುವೇಳೆ ಮಲ್ಟಿ ಮೆಂಬರ್ ಕ್ಷೇತ್ರ ಆಗಬೇಕು, ತಕ್ಷಣ ಚುನಾವಣೆಯಾಗಬೇಕು ಎಂದು ಹೇಳಿದರೆ, ಒಂದು ದೃಷ್ಟಿಯಿಂದ, ಏನಾದರೂ ಮಾಡಲಿ, ಜಿಲ್ಲಾ ಬೋರ್ಡ್ ಚುನಾವಣೆಯಾಗಿ ಬೋರ್ಡ್ ರಚನೆಯಾಗಿ ಜನರಿಗೆ ಸೇವೆ ಪ್ರಾರಂಭವಾಗಲಿ ಎಂದು ಅದನ್ನು ಒಪ್ಪಬೇಕೇ ವಿನಾ ಅನ್ಯಥಾ ಅಲ್ಲ.

ಮತ್ತೊಂದು, ಈ ಮಸೂದೆಯಲ್ಲಿ ತಿಳಿಸದೇ ಇದ್ದಾಗ್ಯೂ ಕೂಡ ಒಂದು ವಿಷಯವನ್ನು ಮಾನ್ಯ ಮಂತ್ರಿಗಳು ಹೇಳಿದರು. ತಾಲ್ಲೂಕು ಲೆವಲ್‌ನಲ್ಲಿ ಒಂದು ಸಂಸ್ಥೆ ಏರ್ಪಾಡು ಮಾಡಬೇಕೆಂದು ಹೇಳಿದರು. ಈ ವಿಷಯದಲ್ಲಿ ಹೆಚ್ಚು ಚರ್ಚೆಮಾಡುವುದು ಅನಾವಶ್ಯಕ. ಒಟ್ಟಿನಲ್ಲಿ ಸಾರ್ವಜನಿಕ ಸಂಸ್ಥೆಗಳು ಹಳ್ಳಿಗಳ ಮಟ್ಟದಲ್ಲಿ, ತಾಲ್ಲೂಕುಗಳ ಮಟ್ಟದಲ್ಲಿ, ಜಿಲ್ಲಾಗಳ ಮಟ್ಟದಲ್ಲಿ ಇರಬೇಕಾದದ್ದು ತತ್ವಶಃ ಸರಿಯಲ್ಲ. ನಾವು ಇವುಗಳನ್ನು ಸೃಷ್ಟಿಮಾಡಿ ಇವುಗಳಿಗೆ ತಕ್ಕಷ್ಟು ಕೆಲಸ ಕಾರ್ಯ ಸಿಬ್ಬಂದಿ ಹಣ, ಒದಗಿಸಿ, ಇವುಗಳ ಮೇಲ್ವಿಚಾರಣೆ ನೋಡಿ ಕೊಂಡು ತಮ್ಮ ಕೆಲಸ ಕಾರ್ಯಗಳನ್ನು ಇವುಗಳೇ ನೋಡಿಕೊಳ್ಳಬೇಕೆಂದು ಹೇಳುವುದು ತತ್ವಶಃ ಸರಿಯಲ್ಲ. ಈಗಿರುವ ಪರಿಸ್ಥಿತಿಯಲ್ಲಿ ಜಿಲ್ಲಾ ಬೋರ್ಡಿನ ಮಟ್ಟದಲ್ಲಿ ಮತ್ತು ತಾಲ್ಲೂಕು ಬೋರ್ಡಿನ ಮಟ್ಟದಲ್ಲಿ ಎರಡು ಸಂಸ್ಥೆಗಳಿರಬೇಕೆ, ಬೇಡವೆ ಎಂದು ಬೇಕಾದಷ್ಟು ಸಲ ಚರ್ಚೆಯಾಗಿದೆ. ಒಟ್ಟಿನಲ್ಲಿ ಇದರ ಗೊಂದಲಕ್ಕೆ ಹೋಗುವುದು ಅನಾವಶ್ಯಕ. ಈಗ ಪ್ರಾಸಂಗಿಕವಾಗಿ ತಾಲ್ಲೂಕು ಲೆವಲ್‌ನಲ್ಲಿ ಒಂದು ಸಂಸ್ಥೆ ಏರ್ಪಾಡು ಮಾಡಬೇಕೆಂಬ ಒಂದು ದೃಷ್ಟಿಯಿರುವುದರಿಂದ ಕೆಲವು ಸಲಹೆ ಕೊಡಬೇಕೆಂದಿದ್ದೇನೆ. ಈಗ ಜಿಲ್ಲಾ ಬೋರ್ಡಿಗೆ ಬರಬೇಕಾದ ಹಣಕಾಸನ್ನು ತೆಗೆದು ಅದನ್ನು ಹೇಗೆ ವಿನಿಯೋಗಿಸಬೇಕೆಂದು ಈ ಮಸೂದೆಯಲ್ಲಿ ಹೇಳಿದೆ. ಇದು ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿದೆ. ರಸ್ತೆಗಳ ವಿಚಾರ ಬಂದಾಗ ಅವುಗಳ ಸ್ಥಿತಿಗತಿ ಎಷ್ಟು ಶೋಚನೀಯವಾಗಿದೆಯೆಂಬುದನ್ನು ಹೇಳಿ ಸದಸ್ಯರು ಕಟುವಾಗಿ ಟೀಕೆ ಮಾಡಿದರು. ಸರ್ಕಾರ ಅದನ್ನು ನಂಬಬೇಕಾಗಿ ಬಂತು. ರಸ್ತೆಯ ಉದ್ದ ಪ್ರತಿ ದಿನವೂ ಹೆಚ್ಚುತ್ತಿದೆ. ದೇಶದ ನಾನಾ ಬಾಬುಗಳಿಂದ ಹಣವನ್ನೊದಗಿಸಿ ಅಥವಾ ಗ್ರಾಮಸ್ಥರು ಸ್ವಂತವಾಗಿ ಖರ್ಚುಮಾಡಿ ರಸ್ತೆ ಮಾಡುತ್ತಿದ್ದಾರೆ. ಎನ್. ಇ. ಎಸ್. ಸ್ಕೀಂ ಮತ್ತು ಕಮ್ಯೂನಿಟಿ ಪ್ರಾಜೆಕ್ಟ್ ಸ್ಕೀಂ ಪ್ರಕಾರ ರಸ್ತೆ ಮಾಡುತ್ತಿದ್ದಾರೆ. ಅವನ್ನು ನಾವು ಸರಿಯಾದ ಸ್ಥಿತಿಯಲ್ಲಿಟ್ಟುಕೊಳ್ಳಬೇಕು; ಇಲ್ಲದಿದ್ದರೆ ದೇಶಕ್ಕೆ ಅಪಾರ ನಷ್ಟವಾಗುತ್ತದೆ.

(ಶ್ರೀ ಎಚ್. ಎಂ. ಚನ್ನಬಸಪ್ಪ.)

ಪರಿಸ್ಥಿತಿ ಹೀಗಿರುವಾಗ ಇದಕ್ಕಾಗಿ ಜಿಲ್ಲಾ ಬೋರ್ಡಿಗೆ ಅಥವಾ ತಾಲ್ಲೂಕು ಬೋರ್ಡಿಗೆ ಸಾಕಾದಷ್ಟು ಹಣ ಒದಗಿಸದೇ ಹೋದರೆ ರಸ್ತೆ ಚೆನ್ನಾಗಿಟ್ಟುಕೊಳ್ಳಲು ಸಾಧ್ಯವಿಲ್ಲ. ಸರ್ಕಾರ ಕೈಕಟ್ಟಿಕೊಂಡು ಕುಳಿತು ಈ ರಸ್ತೆ ನಮ್ಮದಲ್ಲ ಎಂದು ಹೇಳುವುದು ಸರಿಯಲ್ಲ. ಸರ್ಕಾರಕ್ಕೂ ಜವಾಬ್ದಾರಿಯಿದೆ. ಜಿಲ್ಲಾ ಬೋರ್ಡು ಬೇರೆ ಸರ್ಕಾರ ಬೇರೆ ಎಂದು ಹೇಳಬಾರದು. ಜಿಲ್ಲಾ ಬೋರ್ಡು ಅಥವಾ ತಾಲ್ಲೂಕು ಬೋರ್ಡು ಮುಂತಾದ ಸ್ಥಳೀಯ ಸಂಸ್ಥೆಗಳೆಲ್ಲವೂ ಸರ್ಕಾರದ್ದೇ. ಸರ್ಕಾರ ಮಾಡ ಬೇಕಾದ ಕೆಲಸ ಕಾರ್ಯವನ್ನು ಸ್ಥಳೀಯ ಸಂಸ್ಥೆಗಳು ಸರ್ಕಾರದ ಪರವಾಗಿ ಮಾಡುತ್ತವೆಯೇ ಹೊರತು ಅವು ಬೇರೆಯಲ್ಲ ಎಂದು ತಿಳಿಯಬೇಕು. ಹೀಗಿರುವಾಗ ಈಗ ಕೊಡುತ್ತಿರುವ ಹಣವನ್ನೇ ತೆಗೆದುಕೊಳ್ಳುತ್ತೇವೆಂದು ಹೇಳುವುದರಲ್ಲಿ ಅರ್ಥವಿದೆಯೇ ಎಂಬುದನ್ನು ಯೋಚನೆ ಮಾಡಬೇಕು. ಒಂದು ಹೆಜ್ಜೆ ಮುಂದೆ ಹೋಗಿ ಮಾನ್ಯ ಸದಸ್ಯರಿಗೂ ಮತ್ತು ಸರ್ಕಾರಕ್ಕೂ ಸಲಹೆ ಮಾಡುವುದು ಏನೆಂದರೆ ಈ ಸಂಸ್ಥೆಗಳ ಕೆಲಸದ ಮಟ್ಟವೆಷ್ಟು ಅವಕ್ಕೆ ಎಷ್ಟು ಹಣ ಬೇಕು ಎಂದು ಅಂದಾಜು ಮಾಡಿ ಅವುಗಳಿಗೆ ಬೇಕಾಗುವಷ್ಟು ಹಣವನ್ನು ಉತ್ಪನ್ನ ಮಾಡಿ ಒಂದು ರೀತಿಯಲ್ಲಿ ಒದಗಿಸಬೇಕು. ತಾಲ್ಲೂಕು ಬೋರ್ಡ್ ಆಗಿರಲಿ,-ಯಾವುದೇ-ಆಗಿರಲಿ-ಹಣ -ಒದಗಿಸದೆ ಕಾನೂನಿನಲ್ಲಿ ಒಂದು ಲಿಸ್ಟ್ ಬರೆದರೆ ಹಲ್ಲಿದ್ದವನಿಗೆ ಕಡ್ಲೆಯಿಲ್ಲ, ಕಡ್ಲೆಯಿದ್ದವನಿಗೆ ಹಲ್ಲಿಲ್ಲ ಎಂಬಂತಾಗುತ್ತದೆ. ಅದರಿಂದೇನೂ ಅಷ್ಟು ಪ್ರಯೋಜನವಾಗುವುದಿಲ್ಲ. ಆದ್ದರಿಂದ ಸಲಹೆ ಮಾಡುವುದು ಶೇಕಡ 6¼ ಲ್ಯಾಂಡ್ ರೆವೆನ್ಯೂನಲ್ಲಿ ತೆಗೆದು ಬೇರೆ ಸಮಿತಿಗಳಿಗೆ ಕೊಡಬೇಕೆಂದು ಮಾಡಿರುವುದು ಸರಿಯಲ್ಲ. ಈಗ ಜಿಲ್ಲಾ ಬೋರ್ಡುಗಳಿಗೆ ಅಧಿಕೃತವಾಗಿ ಕೊಡುವ ಹಣವೇನಿದೆ ಅದನ್ನು ಮುಟ್ಟಬೇಡಿ. ಸಾಧ್ಯವಾದರೆ ಹೆಚ್ಚು ಪ್ರಮಾಣದಲ್ಲಿ ಗ್ರಾಂಟು ರೂಪವಾಗಿ ಅಥವಾ ಬೇರೆ ರೂಪವಾಗಿ ಕೊಟ್ಟು ಅವುಗಳ ಉತ್ಪತ್ತಿ ಹೆಚ್ಚಿಸುವುದಕ್ಕೆ ತಕ್ಕ ವಾತಾವರಣ ಕಲ್ಪಿಸಿ. ಕೆಲಸ ಸಮರ್ಪಕವಾಗಿ ಮಾಡುವುದಿಲ್ಲವೆಂದು ಸದಸ್ಯರು ಟೀಕೆ ಮಾಡುತ್ತಿದ್ದಾರೆ. ಕೆಲಸ ಸಮರ್ಪಕವಾಗಿ ನಡೆಯಲೆಂಬ ಉದ್ದೇಶದಿಂದ ಅಧಿಕಾರ ಅಥವಾ ಹಣ ಕೊಡುವುದನ್ನು ತಪ್ಪಿಸುವುದು ನೀತಿಯಲ್ಲ. ತಕ್ಕಷ್ಟು ಅಧಿಕಾರ ಮತ್ತು ಹಣ ಸಾರ್ವಜನಿಕ ಸಂಸ್ಥೆಗಳಿಗೆ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಇರಬೇಕಾದ್ದು ಅಗತ್ಯ. ತಪ್ಪು ಮಾಡುವ ಕಡೆ ಸೂಕ್ತಕಾರ್ಯಕ್ರಮ ತೆಗೆದುಕೊಳ್ಳಲು ಈ ಕಾನೂನಿನಲ್ಲಿ ತಕ್ಕ ರಕ್ಷಣೆಯಿದೆ. ಹಾಗಿರುವುದರಿಂದ ಹೆಚ್ಚು ಅವಕಾಶ ಈ ಸಂಸ್ಥೆಗಳಿಗೆ ಕಲ್ಪಿಸಿ ಕೊಡಬೇಕು. ಹೀಗೆ ಹೇಳುವಾಗ ಹಳ್ಳಿಗಳ ಸಂಸ್ಥೆಗಳಿಗೆ ಏನು ಮಾಡಬೇಕೆಂದು ಕೇಳಬಹುದು. ಹಳ್ಳಿಗಳಲ್ಲಿ ಆಗಬೇಕಾದ ಕೆಲಸಕಾರ್ಯಗಳ ಪಟ್ಟಿ ಮಾಡಿರಬಹುದು. ಪಂಚಾಯಿತಿಯವರಿಗೇನು ಕಾರ್ಯಕ್ರಮವಿದೆಯೋ ಅದೇ ತರಹ ಕಾರ್ಯಕ್ರಮ ಡಿಸ್ಟ್ರಿಕ್ ಬೋರ್ಡುಗಳಿಗೂ ಇದೆ. ನಾಲೆ ಕೆಲಸ, ರಸ್ತೆ ಕೆಲಸ, ರೂರಲ್ ಪ್ರಾಪಗ್ಯಾಂಡ ಮುಂತಾದುವು ಎಲ್ಲ ಕಡೆಯೂ ಇವೆ. ಡೂಪ್ಲಿಕೇಷನ್ ತಪ್ಪಿಸಬೇಕೆಂಬುದೇ ಮೂಲೋದ್ದೇಶ. ಯಾವ್ಯಾವ ಕ್ಷೇತ್ರಗಳಲ್ಲಿ ಯಾವ್ಯಾವ ಭಾಗಗಳಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಕೆಲಸ ಕಡಮೆ ಮಾಡಿ ತಾಲ್ಲೂಕು ಬೋರ್ಡುಗಳಿಗೆ ವಹಿಸಬೇಕೆಂಬ ಸೂಚನೆ ನಮ್ಮ ಮುಂದಿಲ್ಲ. ಆ ಸೂಚನೆಗಳು ಇಲ್ಲದೇ

2-30 P.M.

ಇರುವುದರಿಂದ ಯಾವ ಭಾಗದ ಕೆಲಸಕಾರ್ಯಗಳನ್ನು ಡಿಸ್ಟ್ರಿಕ್ಟ್ ಬೋರ್ಡಿನಿಂದ ತೆಗೆದು ಹಾಕುತ್ತೀರಿ ಎಂಬುದು ನಮಗೆ ಗೊತ್ತಿಲ್ಲ. ಆದ್ದರಿಂದ ನನ್ನ ಸಲಹೆ ಏನೆಂದರೆ, ಈಗ ತಾವು ವಯಸ್ಕರ ಶಿಕ್ಷಣ ವ್ಯವಸ್ಥೆ ಮಾಡಿದ್ದೀರಿ. 45 ಲಕ್ಷ ರೂಪಾಯಿ ಖರ್ಚು ಮಾಡುತ್ತಾ ಇದ್ದೀರಿ. ಅದೇ ರೀತಿ ರೂರಲ್ ಡೆವಲಪ್‌ಮೆಂಟ್ ಸ್ಕೀಂ ಮಾಡಿದ್ದೀರಿ. ಜನಗಳಲ್ಲಿ ಸಂಸ್ಕೃತಿ ಬೆಳೆಸಬೇಕೆಂದು ಸಂಸ್ಕೃತಿ ಪ್ರಚಾರಕ್ಕಾಗಿ 4-5 ಲಕ್ಷ ರೂಪಾಯಿ ಖರ್ಚು ಮಾಡುತ್ತ ಇದ್ದೀರಿ.

Mr. SPEAKER.—The Hon'ble Member is dilating on the functions of the taluk boards. He will be perfectly right if he says: "Provide more funds for the District Boards" but not when he says: "Provide for taluks boards."

Sri H. M. CHANNABASAPPA.—I am only indicating how else it is possible to provide.

Mr. SPEAKER.—The Hon'ble Member has already indicated it.

ಶ್ರೀ ಎಚ್. ಎಂ. ಚನ್ನಬಸಪ್ಪ.—ಸದಸ್ಯರ ಸಂಖ್ಯೆ 3 ಇರಬೇಕೆಂದು ಮಾಡಿರುವುದು ಸರಿಯಲ್ಲ. ಮೊದಲೇ ಹೇಳಿದಂತೆ ಈ ದಿನ ತಾಲ್ಲೂಕಿನಲ್ಲಿರತಕ್ಕ ಪ್ರಜಾಸಂಖ್ಯೆಗನುಗುಣವಾಗಿ ಮಾಡತಕ್ಕದ್ದು ಸೂಕ್ತ. ಏಕೆಂದರೆ ಮೂರಕ್ಕೇ ಲಿಮಿಟ್ ಮಾಡುವುದಾದರೆ 2 ಲಕ್ಷ ಪ್ರಜಾಸಂಖ್ಯೆ ಇರತಕ್ಕ ಪ್ರದೇಶಕ್ಕೆ 3, ಒಂದು ಲಕ್ಷ ಪ್ರಜಾಸಂಖ್ಯೆ ಇರತಕ್ಕ ಪ್ರದೇಶಕ್ಕೂ 3 ಆಗುತ್ತದೆ. ಒಟ್ಟಿನಲ್ಲಿ ಹಳ್ಳಿಯ ಮೂಲೆಮೂಲೆಗಳಿಂದ ಜನಗಳು ಬಂದು ಆಯಾಯ ಕ್ಷೇತ್ರದಲ್ಲಿ ಕೆಲಸ ಮಾಡಿ ತಮ್ಮ ಪ್ರದೇಶಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಉದ್ದೇಶವಿರುವುದರಿಂದ ಎಲ್ಲರಿಗೂ ಪ್ರಾತಿನಿಧ್ಯವಿರಬೇಕಾದ್ದು ಅವಶ್ಯಕ. ಆದ್ದರಿಂದ ವೆಂಕಟಪ್ಪನವರ ಕಮಿಟಿಯವರು ಮಾಡಿರತಕ್ಕ ಶಿಫಾರಸು ಸೂಕ್ತವಾಗಿದೆ. ಅದನ್ನು ಅಂಗೀಕಾರ ಮಾಡಬೇಕು.

ಈ ಚುನಾವಣೆ ನಡೆಯುವಾಗ ಅರ್ಜಿಗಳನ್ನು ನಿರಾಕರಣೆ ಮಾಡಿ, ಚುನಾವಣೆಗೆ ಮುಂಚೆಯೇ ಅವುಗಳ ಪರಿಶೀಲನೆ ಮಾಡಬೇಕೆನ್ನುವ ಒಂದು ಬಹಳ ಒಳ್ಳೆಯ ಸಲಹೆ ಕೊಟ್ಟರು. ಶ್ರೀ ಪಟ್ಟಾಭಿರಾಮನ್‌ರವರು ಹೇಳಿದಂತೆ ಪಾರ್ಲಿಮೆಂಟ್‌ನಲ್ಲಿ Representation of the Peoples Actನ್ನು ಸೂಕ್ತ ಬದಲಾವಣೆ ಮಾಡಬೇಕೆಂದು ಯೋಚನೆಮಾಡಿದೆ. ಈಗ ಶಾಸನ ಮಾಡುತ್ತ ಇರುವಾಗ ಹಿಂದಿನ ಅನುಭವದಿಂದ ಸೂಕ್ತವಾದ ಬದಲಾವಣೆಗಳನ್ನು ಇದರಲ್ಲಿ ಅಳವಡಿಸುವುದು ಒಳ್ಳೆಯದು. ಇದಕ್ಕೆ ತಕ್ಕ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಕೊನೆಯದಾಗಿ, ಮಲ್ಟಿಮೆಂಬರ್ ಕಾನ್ಸ್ಟಿಟ್ಯೂಯನ್ಸಿ ಆದರೂ ಮಾಡಿ. ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯನ್ಸಿ ಆದರೂ ಮಾಡಿ, ಅಂತು ಯಾವುದಾದರೂ ಒಂದು ತೀರ್ಮಾನ ಮಾಡಿ ಚುನಾವಣೆಗಳನ್ನು ನಡೆಸಬೇಕಾದುದು ಮುಖ್ಯ. ನನ್ನ ಅಭಿಪ್ರಾಯ ಒಟ್ಟಿನಲ್ಲಿ Single-Member Constituency ಮಾಡುವುದು ಸೂಕ್ತ. Number one. 6¼% ಹಿಡಿಯುವುದು ಸರಿಯಲ್ಲ, Number two. ಚುನಾವಣಾ ತಕರಾರು ಅರ್ಜಿಗಳನ್ನು ನಿರಾಕರಣೆಮಾಡಿ ಚುನಾವಣೆ ಆಗುವುದರ ಮುನ್ನವೇ ಅರ್ಜಿ ತೀರ್ಮಾನ ಮಾಡಿ ಚುನಾವಣೆ ಮಾಡಿಸಬೇಕಾದ್ದು number three. ಈ ಮೂರು ಸಲಹೆಗಳನ್ನು ಕೊಟ್ಟಿದ್ದೇನೆ. ಚುನಾವಣೆಗಳನ್ನು ಆದಷ್ಟು ಬೇಗ ಮಾಡಿ ಜಿಲ್ಲಾ ಬೋರ್ಡಿನ

ಯೋಜನೆಗಳು, ಕೆಲಸಕಾರ್ಯಗಳು ಸುಸೂತ್ರವಾಗಿ ಜರುಗುವಂತೆ ವ್ಯವಸ್ಥೆ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—ಸ್ವಾಮಿ, ನನ್ನ ಅಭಿಪ್ರಾಯ ಬಹುಮಟ್ಟಿಗೆ ನಾನು ಅಧ್ಯಕ್ಷನಾಗಿದ್ದ ಸಮಿತಿಯ ವರದಿಯಲ್ಲಿ ಅಳವಡಿಸಲ್ಪಟ್ಟಿದೆ ಎಂದು ಹೇಳಿದರೆ ತಪ್ಪಾಗಲಾರದು. ಆ ಸಮಿತಿಯ ಸದಸ್ಯರು ಬಹುಮಟ್ಟಿಗೆ ನನ್ನ ಅಭಿಪ್ರಾಯವನ್ನೇ ಅನುಮೋದಿಸಿದರು. ಅದಕ್ಕೆ ನಾನು ಅವರಿಗೆ ಕೃತಜ್ಞನಾಗಿದ್ದೇನೆ. ನನ್ನ ಮತ್ತು ಆ ಸಮಿತಿಯವರ ಉದ್ದೇಶ ಬಹುಮಟ್ಟಿಗೆ ಈ ಪಂಚಾಯಿತಿಗಳಿಗೆ ಹೆಚ್ಚಿನ ಸ್ವಾತಂತ್ರ್ಯ ಇರಬೇಕು, ಕೆಲಸ ಮಾಡುವುದಕ್ಕೆ ಅವರಿಗೆ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸಿಕೊಡಬೇಕು, ಈ ಸಂಸ್ಥೆಗಳನ್ನು ಸರಿಯಾದ ರೀತಿಯಲ್ಲಿ ಬೆಳೆಸದೇ ಹೋಗುವ ಪಕ್ಷಕ್ಕೆ, ಇವಕ್ಕೆ ಪ್ರಾಮುಖ್ಯತೆ ಕೊಡದೇ ಹೋಗುವ ಪಕ್ಷಕ್ಕೆ, ನಿಜವಾದ ಏನು ಒಂದು ದೇಶ ಕಾರ್ಯ ನಡೆಯಬೇಕು ಅಥವಾ ಹಳ್ಳಿಗಳ ಉದ್ಧಾರವಾಗಬೇಕು ಎಂದು ಹೇಳುತ್ತಾ ಇದ್ದೇವೆಯೋ ಅದು ಆಗಲಾರದು ಎಂದೆನ್ನುವ ಅಭಿಪ್ರಾಯವನ್ನು ನಾನು ಸದಾ ಉಳ್ಳವನು. ಯಾವ ಇತರ ಕಾರಣಗಳಿಂದಲೇ ಆಗಲಿ ಪಂಚಾಯಿತಿಗಳ ಸ್ಥಿತಿಗತಿಗಳನ್ನು ಉತ್ತಮಪಡಿಸದೆ, ಅವಕ್ಕೆ ತಮ್ಮ ಸ್ಥಳೀಯ ಕಾರ್ಯವನ್ನು ತಾವೇ ಮಾಡಿಕೊಳ್ಳತಕ್ಕ ಒಂದು ಯೋಗ್ಯತೆಯನ್ನು ಸಂಪಾದನೆಮಾಡಿ ಕೊಡದೆ ನಾವು ಸ್ಥಳೀಯ ಸಂಸ್ಥೆಗಳನ್ನು ಅಭಿವೃದ್ಧಿಪಡಿಸುತ್ತೇವೆ ಎಂದು ಹೇಳಿದರೆ ಅದು ಪೂರ್ಣವಾಗಲಾರದು ಎಂದು ನಾನು ನಂಬಿಕೊಂಡಿದ್ದೇನೆ. ಕಾರಣಾಂತರದಿಂದ, ಆ ಸಮಿತಿಯ ಅಭಿಪ್ರಾಯಗಳನ್ನು ಬಹುಮಟ್ಟಿಗೆ ಬದಲಾವಣೆ ಮಾಡಿದರು. ಮತ್ತು ಇದೇ ಸಂಬಂಧವಾಗಿ ಮತ್ತೊಂದು ಸಮಿತಿಯನ್ನು ಕೂಡ ಸ್ಥಾಪನೆ ಮಾಡಿದರು. ನಾನು ಯಾವ ಒಂದು ಸಮಿತಿಯ ಅಧ್ಯಕ್ಷನಾಗಿದ್ದೆನೋ ಆ ಸಮಿತಿಯ ಶಿಫಾರಸುಗಳ ಮೇಲೆ ಒಂದು ಕಾನೂನಾದರೂ ಆಯಿತು ; ಈ ಎರಡನೆ ಸಮಿತಿಯಿಂದ ಯಾವ ಕೆಲಸವಾಗಿದೆಯೆಂದರೆ ಈ ವಿಷಯದ ಮೇಲೆ ಕಾನೂನು ಮಾತ್ರವೇ ಅಲ್ಲ ಇದು ಏನಾಗಿದೆ ಎಂಬುದನ್ನು ಕೂಡ ನೋಡುವುದಕ್ಕೆ ಅವಕಾಶವಿಲ್ಲದ ಹಾಗೆ ಆಗಿದೆ. ಅದರ ಆಗುಹೋಗುಗಳೇನು ಎಂಬುದನ್ನು ಪರಿಶೀಲನೆಮಾಡುವುದಕ್ಕೂ ಕೂಡ ಅವಕಾಶವಾಗಲಿಲ್ಲ. ಈಗ ಬಂದಿರತಕ್ಕ ಬಿಲ್ಲಿನ ಮೇಲೆ ಡಿಸ್ಟ್ರಿಕ್ಟ್ ಬೋರ್ಡಿಗೆ ಸಂಬಂಧಪಟ್ಟ ವಿಷಯಗಳನ್ನು ಬಹಳವಾಗಿ ಚರ್ಚೆ ಮಾಡಿದ್ದಾರೆ. ಪಂಚಾಯಿತಿಗೆ ಸಂಬಂಧಪಟ್ಟ ಒಂದು ಸೂಚನೆ ಇದರಲ್ಲಿ ಇದೆ. ಅದೇನೆಂದರೆ :

"The expenses of such examination of accounts and audit shall be debitable to and be paid out of the Panchayat Fund in such manner as the Government may direct"

ಎಂದು ಹೇಳಿದೆ. ಇದುವರೆಗೂ ಪಂಚಾಯಿತಿಗಳ ಲೆಕ್ಕಗಳನ್ನು ಆಡಿಟ್ ಮಾಡುವುದಕ್ಕೆ ಸರ್ಕಾರದವರೇ ದುಡ್ಡು ಕೊಡುತ್ತಾ ಇದ್ದರು. ಸ್ವಾಮಿ, ಪಂಚಾಯಿತಿಗಳಿಗೆ ಸಾಕಾದಷ್ಟು ಹಣವಿಲ್ಲ. 100 ರೂಪಾಯಿ ವರಮಾನ ಇರತಕ್ಕ ಪಂಚಾಯಿತಿಗಳೂ ಇವೊತ್ತು ಇವೆ; 25 ರೂಪಾಯಿ ವರಮಾನ ಇರತಕ್ಕ ಪಂಚಾಯಿತಿಗಳೂ ಕೂಡ ಇವೆ ಎಂದು ಹೇಳುತ್ತಾರೆ. ಬರೀ ನಾಮಕಾವಾಸ್ತೆ ಪಂಚಾಯಿತಿಗಳಿವೆ ಎಂದು ಹೇಳಿ, ನಾವು ಸ್ಥಳೀಯ ಸಂಸ್ಥೆಗಳನ್ನು ನಡೆಸುತ್ತೇವೆ ಎಂದು ಹೇಳಿದರೆ ಅದರಿಂದ ಏನೂ ಪ್ರಯೋಜನವಾಗಲಾರದು. ಅದಕ್ಕೆ 4-6 ಹಳ್ಳಿಗಳನ್ನಾದರೂ ಸೇರಿಸಿ, ಸಾಕಾದಷ್ಟು ಉತ್ಪನ್ನ ಬರುವಂತೆಮಾಡಿ, ಆ ತಾಲ್ಲೂಕಿಗೆ ಒಳಪಟ್ಟಂಥ ಲ್ಯಾಂಡ್ ರೆವಿನ್ಯೂನಲ್ಲಿ ಇಷ್ಟನೇ ಒಂದು ಭಾಗವನ್ನು ಅದಕ್ಕೆ ಕೊಡತಕ್ಕದ್ದು ಎಂದು ಸೂಚನೆಮಾಡಿ, ಅಷ್ಟಾದರೂ ಹಣವನ್ನು ಅದಕ್ಕೆ ದೊರಕಿಸಿಕೊಟ್ಟು, ಆ ಹಣವನ್ನು ಖರ್ಚುಮಾಡತಕ್ಕ ಜವಾಬ್ದಾರಿ ಏನಿದೆಯೋ ಅದನ್ನು ಅವರ ಮೇಲೆ ಹೊರಿಸಿ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಅವಕಾಶ ಕಲ್ಪನೆಮಾಡಿ ಕೊಡಬೇಕು. ಅಲ್ಲಿ ಸ್ಥಳದವರು ತಾವೇ ನಿಂತು ಕೆಲಸ ಮಾಡಿದರೆ ಅಭಿಮಾನ ಬರುತ್ತದೆ. ಇವೊತ್ತಿನ ದಿವಸ ಈ ಪಂಚಾಯಿತಿಗಳಿಂದ ಯಾವ ಕೆಲಸವೂ ನಡೆಯುತ್ತಿಲ್ಲ. 1928-29ನೇ ಇಸವಿಯಲ್ಲಿ ಏನು ಮಾತು ಹೇಳಿದ್ದೆನೋ ಇವೊತ್ತು ಕೂಡ ಅದನ್ನೇ ಹೇಳಬೇಕಾಗಿದೆ. ಹೀಗಿರುವಾಗ ಪಂಚಾಯಿತಿಯನ್ನು ಉದ್ಧಾರ ಮಾಡುತ್ತೇವೆ, ಉತ್ತಮಪಡಿಸುತ್ತೇವೆ, ಜನಗಳಿಂದ ರಚಿತವಾದ ಸರ್ಕಾರ ಬಂದಿದೆ, ಇದು ಜನತಾ ಸರ್ಕಾರ ಎಂದು ಹೇಳಿದರೆ ನನಗೇನೋ ಇದರಲ್ಲಿ ನಂಬಿಕೆ ಕಡಿಮೆಯಾಗುತ್ತಾ ಇದೆ. ಈ ದೃಷ್ಟಿಯಿಂದ ಪಂಚಾಯಿತಿಗಳಿಗೆ ಸಾಕಾದಷ್ಟು ಹಣವನ್ನು ಒದಗಿಸಬೇಕೆಂದು ಹೇಳಿದರೆ ಅದಕ್ಕೆ ಒಂದು ವಿಚಿತ್ರವಾದ ಅರ್ಥವನ್ನು ಕಲ್ಪನೆಮಾಡಿ . . . .

Sri Kadidal MANJAPPA.—There is no such provision in this Bill.

ಶ್ರೀ ವಿ. ವೆಂಕಟಪ್ಪ.—ಮತ್ತೆ ಅದೇ ಉತ್ತರ ಏಕೆ ಹೇಳುತ್ತೀರೋ ಅರ್ಥವಾಗುವುದಿಲ್ಲ. ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು "ನಮ್ಮ ಮನಸ್ಸಿಗೆ ಬಂದಂತೆ ಕೊಡುತ್ತಾ ಇದ್ದೇವೆ" ಎಂದು ಹೇಳಿದ್ದಾರೆ; ಇದೇ ಸಭೆಯಲ್ಲಿ ಒಪ್ಪಿಕೊಂಡಿದ್ದಾರೆ. ಅದನ್ನು ನಾನು ತೋರಿಸಿ ಕೊಡುತ್ತೇನೆ.

Mr. SPEAKER.—The point is: there relevant provision in the amending Bill . . . .

ಶ್ರೀ ವಿ. ವೆಂಕಟಪ್ಪ.—ತಾವು ಹೇಳುವುದು ನನಗೆ ಅರ್ಥವಾಗಲಿಲ್ಲ.

Mr. SPEAKER.—I mean, the administration of the Village Panchayet or the allotment of funds from the Government treasuries to the various Panchayets is not relevant to this discussion, because there is no provision in the present Amending Bill relating to that subject matter.

ಶ್ರೀ ವಿ. ವೆಂಕಟಪ್ಪ.—ಬಹಳ ಚೆನ್ನಾಗಿದೆ, ಸ್ವಾಮಿ. ನಾನು ಏನು ಹೇಳುತ್ತಾ ಇದ್ದೆ ಎಂದರೆ, ಈ ಪಂಚಾಯಿತಿಗಳಿಗೆ ಆಡಿಟ್‌ಫೀಜು ಹಾಕಬೇಕೆಂದು ಹೇಳಿದ್ದೀರಿ. ಇವಕ್ಕೆ ಸಾಕಾದಷ್ಟು ಹಣ ಇಲ್ಲ. ಹೀಗಿರುವಾಗ ಅವುಗಳು ಈ ಫೀಜನ್ನು ಯಾವ ರೀತಿ ಕೊಡಬೇಕು ಎಂಬುದನ್ನು ತಾವು ಸ್ವಲ್ಪ ಯೋಚನೆಮಾಡಬೇಕು. ಆಡಿಟ್‌ಫೀಜು ಕೊಡಬೇಕು ಎಂದು ಹೇಳುವುದರಲ್ಲಿ ಏನು ಕಷ್ಟ ಬಂದಿದೆ ಎಂಬುದು, ಕೋ-ಆಪರೇಟಿವ್ ಸೊಸೈಟಿಗಳಿಗೆ ಹಾಕಿದ ಸಂದರ್ಭದಲ್ಲಿ ಏನಾಯಿತು ಎನ್ನುವುದನ್ನು ಜ್ಞಾಪಿಸಿಕೊಂಡರೆ ತಮಗೇ ಗೊತ್ತಾಗು

(ಶ್ರೀ ವಿ. ವೆಂಕಟಪ್ಪ.)

ತ್ತದೆ. ಮೊನ್ನೆ ಒಂದು ಸೊಸೈಟಿಯ ಮೀಟಿಂಗಿಗೆ ಹೋಗಿದ್ದೆ. 999 ರೂಪಾಯಿ ಅದಕ್ಕೆ ವರ್ಷದ ನಿವ್ವಳ ಆದಾಯ, ಆಡಿಟ್‌ಫೀಜು 224 ರೂಪಾಯಿ. ಈ ರೀತಿ ಮಾಡಿದರೆ ಪಂಚಾಯಿತಿಗಳ ಗತಿ ಏನು ? ಏನೂ ಹಣ ಇಲ್ಲದೇ ಇರತಕ್ಕ ಪಂಚಾಯಿತಿಗಳು ಇವೊತ್ತು ಇರುವಾಗ ಅವರು ಎಲ್ಲಿಂದ ಹಣ ಕೊಡುವುದು ? ಆದ್ದರಿಂದ ಈದಿನ ಅವುಗಳ ಲೆಕ್ಕವನ್ನು ಆಡಿಟ್‌ಮಾಡುವ ಒಂದು ಪರಿಸ್ಥಿತಿಗೆ ತರುವಂತೆ ಅವುಗಳನ್ನು ಅಭಿವೃದ್ಧಿ ಸ್ಥಿತಿಗೆ ತರಬೇಕೆಂದು ಹೇಳುತ್ತಾ ಇದ್ದೇನೆ.

ಆಮೇಲೆ ಷೆಡ್ಯೂಲ್‌ನಲ್ಲಿ ಇಂಥಿಂಥ ಡಿಸ್ಟ್ರಿಕ್ಟ್ ಬೋರ್ಡಿಗೆ ಇಷ್ಟಿಷ್ಟು ಜನ ಮೆಂಬರುಗಳು ಇರಬೇಕು ಎಂದು ಹೇಳಿರುವ ಒಂದು ಪಟ್ಟಿಯನ್ನು ಇಲ್ಲಿ ಹಾಕಿದ್ದೀರಿ. ಸರ್ಕಾರದವರು ನೋಟಿಫಿಕೇಷನ್ ಮೂಲಕ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಮೆಂಬರುಗಳಿರಬೇಕೆಂಬುದನ್ನು ನಿರ್ದೇಶ ಮಾಡಬೇಕೆಂದು ಹೇಳಿದ್ದೀರಿ. ನನಗೆ ಅರ್ಥವೇ ಆಗಲಿಲ್ಲ. ಯಾವ ಆಧಾರದ ಮೇಲೆ ? ಬಹುಶಃ ಪ್ರಜಾಸಂಖ್ಯೆ ಏನಿದೆಯೋ ಅದಕ್ಕನುಗುಣವಾಗಿ ಇಷ್ಟಿಷ್ಟು ಇರಬೇಕೆಂದು ಮಾಡಿರಬಹುದು. ಇಷ್ಟಿಷ್ಟು ಸ್ಥಾನಗಳು ಬೇಕು ಎನ್ನುವುದನ್ನು ನಾವು ತೀರ್ಮಾನಮಾಡಿ ಗೆಜೆಟ್ಟಿನಲ್ಲಿ ಪಬ್ಲಿಷ್‌ಮಾಡುತ್ತೇವೆ ಎಂದು ಹೇಳಿದ್ದೀರೇ ವಿನಾ ಅದಕ್ಕೆ ಕಾರಣವನ್ನು ಕೊಟ್ಟಿದ್ದೀರೋ ಎಂದರೆ ಇದರಲ್ಲಿ ಕಾರಣ ಏನೇನೂ ಇಲ್ಲ.

ಸೆಕ್ಷನ್ ಏಳರಲ್ಲಿ ಒಂದು ತಿದ್ದುಪಡಿ ಸೂಚನೆ ಮಾಡಿದ್ದೀರಿ. ಅದು ಏನು ಎಂಬುದು ನನಗೆ ಅರ್ಥವಾಗಲಿಲ್ಲ. ಅದರಲ್ಲಿ

> In sub-section 3 of section 54 of the principal Act for the words "any person is disqualified under this section or disabled from continuing as a member," the words, figure and brackets "a vacancy has occurred under sub-section (2)" shall be substituted

ಎಂದು ಹೇಳಿದ್ದೀರಿ. ಏನೇನು ಹೊಂದಿಸಿ ನೋಡಿದರೂ ಅದು ಅರ್ಥವಾಗಲಿಲ್ಲ. ಏಕೆ ಅದನ್ನು ಹಾಕಿದ್ದೀರಿ ಎಂಬುದನ್ನು ಹೇಳಬೇಕು.

ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ಚುನಾವಣೆಯ ವಿಷಯದಲ್ಲಿ ಈಗ ಬಹಳವಾಗಿ ಚರ್ಚೆ ನಡೆದಿದೆ. Fundamental ಆಗಿ ಇದರಲ್ಲಿ ನನಗೆ ವ್ಯತ್ಯಾಸ ಕಂಡು ಬಂದಿರುವುದರಿಂದ, ಅಪ್ರತ್ಯಕ್ಷ ಚುನಾವಣೆ ಇರಬೇಕಾದ್ದಕ್ಕೆ ಕಾರಣ ಏನಿತ್ತು ಎಂಬುದನ್ನು ಹಿಂದೆಯೇ ಸೂಚನೆ ಮಾಡಿದ್ದೇವೆ. ಇವೊತ್ತು ಕೂಡ ಅದನ್ನು ನಮ್ಮ ಮಿತ್ರರು ಹೇಳಿದ್ದಾರೆ. ಈ ಡಿಸ್ಟ್ರಿಕ್ಟ್ ಬೋರ್ಡುಗಳಿಗೂ, ವಿಲೇಜ್ ಪಂಚಾಯಿತಿಗಳಿಗೂ ಯಾವ ವಿಧವಾದ ಸಂಬಂಧವೂ ಇಲ್ಲದಂತೆ ಮಾಡುವುದಾದರೆ ಪ್ರತ್ಯಕ್ಷ ಚುನಾವಣೆ ಇಟ್ಟು ಕೊಳ್ಳಬಹುದು. ಅದರಲ್ಲೇನೂ ಅಭ್ಯಂತರವಿಲ್ಲ.

ಈ ಜಿಲ್ಲಾ ಬೋರ್ಡುಗಳಿಗೂ ಮತ್ತು ಗ್ರಾಮ ಪಂಚಾಯಿತಿಗಳಿಗೂ ಒಂದು ಸಂಬಂಧವಿರಬೇಕು. ಆದರೆ ಈಗ ತಾವು ಅದಕ್ಕೆ ಅವಕಾಶ ಕೊಟ್ಟಿಲ್ಲವೆಂದು ಕೆಲವರು ಆಕ್ಷೇಪಣೆ ಮಾಡಿರಬಹುದು. ಆದರೆ ಹಾಗೆ ಅವರು ಹೇಳಿರತಕ್ಕದ್ದು ಸರಿಯೇ ಅಥವಾ ಅಲ್ಲವೇ ಎನ್ನುವುದನ್ನು ಈಗ ಹೇಳುವುದಕ್ಕೆ ಸಮಯವಲ್ಲ. ನೀವು ಯಾವರೀತಿಯಲ್ಲೇ ಮಾಡಿ, ಯಾವ ಏರ್ಪಾಡನ್ನೇ ಮಾಡಿ, ಈ ಕಾನ್‌ಸ್ಟಿಟ್ಯುಯನ್ಸಿಗಳು ಯಾವ ರೂಪದಲ್ಲೇ ಇರಲಿ—ನಮಗೆ ಮುಖ್ಯವಾಗಿ ಬೇಕಾಗಿರತಕ್ಕದ್ದು ಈ ಜಿಲ್ಲಾ ಬೋರ್ಡುಗಳ ಕೆಲಸ ಕಾರ್ಯಗಳು ಸುಗಮವಾಗಿ ನಡೆಯುತ್ತವೆಯೇ ಇಲ್ಲವೇ ಎನ್ನುವುದನ್ನು ನೋಡಬೇಕೆಂಬುದು. ಇದು ಬಹಳ ಮುಖ್ಯ. ಈ ಸ್ಥಳೀಯ ಸಂಸ್ಥೆಗಳ ಕೆಲಸಕಾರ್ಯಗಳನ್ನು ಯಾರೋ ಒಬ್ಬರು ಸರಿಯಾಗಿ ಮಾಡಲಿಲ್ಲವೆಂಬ ಕಾರಣದಮೇಲೆ ಈ ರೀತಿ ಮಾಡಿದ್ದೇವೆಂದು ಹೇಳುವುದು ಸರಿಯಲ್ಲ. ಈ ಸಾರ್ವಜನಿಕ ಕ್ಷೇತ್ರದಲ್ಲಿ ನಡೆಯಬೇಕಾದಂಥ ಕೆಲಸಕಾರ್ಯಗಳನ್ನು ಯಾರು ನಡೆಸಲು ದಕ್ಷರಾಗಿರುತ್ತಾರೋ ಅಂಥ ಜನರೇ ಈ ಸ್ಥಾನಗಳಿಗೆ ಬರುವಂತೆ ನಾವು ಏರ್ಪಾಡುಗಳನ್ನು ಮಾಡಬೇಕು. ಮತ್ತು ಅಂಥ ದಕ್ಷರಾಗಿರತಕ್ಕ ಜನಗಳನ್ನೇ ಚುನಾಯಿಸಿ ಕಳುಹಿಸುವಂಥ ಒಂದು ಭಾವನೆ ಸಾರ್ವಜನಿಕರಲ್ಲಿ ಹುಟ್ಟುವಂತೆ ಮಾಡಬೇಕೆಂಬುದೇ ಇದರ ಮೂಲೋದ್ದೇಶ. ಇಂಥ ಒಂದು ಮನೋಭಾವವನ್ನು ಜನರಲ್ಲಿ ಬೆಳೆಸುವುದಕ್ಕೆ ನಾವು ಒಂದು ಸರಿಯಾದ ಏರ್ಪಾಡನ್ನು ಈ ಹಿಂದೆಯೇ ಮಾಡಿದ್ದೆವು. ಇಂಥ ಒಂದು ಮನೋಭಾವ ಜನರಲ್ಲಿ ಎಲ್ಲಿಯತನಕ ಬೆಳೆಯುವುದಿಲ್ಲವೋ ಅಲ್ಲಿಯವರೆಗೂ ಈ ಸಂಸ್ಥೆಗಳಿಗೆ ಉದ್ಧಾರವಿಲ್ಲ. ಆದುದರಿಂದ ಇಂಥ ಒಂದು ಅನುಕೂಲವಾದ ರಾಜ್ಯವನ್ನು ಸ್ಥಾಪನೆ ಮಾಡಬೇಕೆಂದು ಮೊದಲಿನಿಂದಲೂ ಸೂಚನೆಗಳನ್ನು ಮಾಡುತ್ತಲೇ ಬಂದಿದ್ದೇವೆ. ಆದರೆ ತಾವು ಈಗ ಈ ರೀತಿಯಾಗಿ ಇದನ್ನು ಮಾಡಿದ್ದೀರಿ. ಆದರೆ ಇದರ ಫಲಿತಾಂಶ ಮುಂದೇನಾಗುತ್ತದೆಯೋ ಅದನ್ನು ನಾನೀಗಲೇ ಹೇಳುವುದಕ್ಕೆ ಸಾಧ್ಯವಿಲ್ಲ.

ಇನ್ನು ಈ ಮಲ್ಟಿ ಮೆಂಬರ್ಸ್ ಕಾನ್‌ಸ್ಟಿಟ್ಯೂಯೆನ್ಸಿ ವಿಚಾರವಾಗಿ ಅನೇಕ ಸದಸ್ಯರುಗಳು ಅನೇಕ ವಿಚಾರಗಳನ್ನು ತಿಳಿಸಿದ್ದಾರೆ. ಈ ಸಿಂಗಲ್ ಮೆಂಬರ್ ಕಾನ್‌ಸ್ಟಿಟ್ಯುಯನ್ಸಿ ಮಾಡಿದರೆ ಹೆಚ್ಚು ಅನುಕೂಲವೂ ಮತ್ತು ಕಡಮೆ ತೊಂದರೆಗಳೂ ಇರುತ್ತವೆಂದು ಕೆಲವರು ಹೇಳಿದ್ದಾರೆ. ನಾವು ಹೀಗೆ ಬರೀ ಒಂದು ಎಲೆಕ್ಷನ್ನಲ್ಲಿ ಚುನಾವಣೆಯಾಗಿ ಬರತಕ್ಕದ್ದನ್ನೇ ದೃಷ್ಟಿಯಲ್ಲಿಟ್ಟುಕೊಂಡು ಈ ರೀತಿಯಾಗಿ ಮಾಡುವುದಾಗಿದ್ದರೆ ಇದೂ ಕೂಡ ಒಂದು ಉತ್ತಮವಾದ ದಾರಿ ಎಂದೇ ನಾನೂ ಕೂಡ ತಿಳಿದುಕೊಂಡಿದ್ದೇನೆ. ಮುಂದೆ ಈ ಸಂಬಂಧವಾಗಿ ತೊಂದರೆಗಳು ಕಡಮೆಯಾಗುತ್ತ ಹೋಗುವುದಕ್ಕೆ ಯಾವುದು ಸೂಕ್ತವಾದ ಹಾದಿಯೋ ಆ ದಾರಿಯಲ್ಲಿ ನಾವು ಮುಂದುವರಿಯತಕ್ಕದ್ದು ಒಳ್ಳೆಯದು. ಆದರೆ ಈ Multi-members Constituency ಮಾಡುವುದರಲ್ಲಿ ಏನೊಂದು ತೊಂದರೆಯಾಗುತ್ತದೆಯೆಂಬ ಅಂಶವನ್ನು ಈಗಾಗಲೇ ಅನೇಕ ಮಾನ್ಯ ಸದಸ್ಯರುಗಳು ಮೊನ್ನೆತಾನೆ ನಡೆದ ಈ ಗ್ರಾಮ ಪಂಚಾಯಿತಿಗಳ ಚುನಾವಣೆಗಳಲ್ಲಿ ನೋಡಿ ಅನುಭವ ಪಡೆದುಕೊಂಡಿರುತ್ತಾರೆ. ಈಗಾಗಲೇ ನಾವು ಅಡಲ್ಟ್ ಫ್ರಾಂಚೈಜನ್ನು ಒಪ್ಪಿಕೊಂಡಿದ್ದೇವೆ. ಇದಕ್ಕೆ ಯಾವ ತೊಂದರೆಯೂ ಬಾರದಂತೆ ಮಾಡತಕ್ಕದ್ದು ನಮ್ಮೆಲ್ಲರ ಕರ್ತವ್ಯ. ನನ್ನ ಮಿತ್ರರಾದಂಥ ಶ್ರೀಮಾನ್ ಎಚ್. ಸಿ. ನಾಗಯ್ಯರೆಡ್ಡಿಯವರೂ ಮತ್ತು ನಾನೂ ಹಿಂದೆ ಒಂದಾವರ್ತಿ ನಡೆಸಿದ ಚುನಾವಣೆಯಲ್ಲಿ ಭಾಗವಹಿಸಿದ್ದೆವು. ಇದರ ಪರಿಣಾಮ ಏನಾಯಿತೆಂಬುದನ್ನು ಉದಾಹರಣೆಗಾಗಿ ಈಗ ಹೇಳಬೇಕೆಂದಿದ್ದೇನೆ. ಈ ಹಿಂದೆ ಒಂದಾವರ್ತಿ ಒಂದು ಜಿಲ್ಲಾ ಬೋರ್ಡಿಗೆ ಚುನಾವಣೆಗಳು ನಡೆಯಬೇಕಾದಂಥ ಕಾಲದಲ್ಲಿ ನಮ್ಮ ಪಕ್ಷದ ಪರವಾಗಿ ಮೂರುನಾಲ್ಕು ಜನ ಉಮೇದು

ವಾರರು ಚುನಾವಣೆಗೆ ಆಗ ನಿಂತಿದ್ದರು. ಆದರೆ ಆಗೇನೋ ಅಕಸ್ಮಾತ್ತಾಗಿ ಆ ಮೂವರ ಹೆಸರುಗಳೂ ಆ ಓಟರ್ಸ್ ಪಟ್ಟಿಯಲ್ಲಿ ಮೊದಲೇ ಪ್ರಕಟ್ಟಿಸಲ್ಪಟ್ಟಿದ್ದವು. ಇನ್ನು ಉಳಿದ ಉಮೇದುವಾರರುಗಳ ಹೆಸರನ್ನು ಈ ಮೂವರ ಕೆಳಗೆ ಮುದ್ರಿಸಲಾಗಿತ್ತು. ಆದರೆ ಓಟ್ ಮಾಡತಕ್ಕಂಥ ಕಾಲದಲ್ಲಿ ಪೋಲಿಂಗ್ ಆಫೀಸರು ಆ ಓಟರ್ಸ್ ಪಟ್ಟಿಯನ್ನು ಓಟ್‌ದಾರರ ಕೈಗೆ ಕೊಡುವಾಗ ತಲೆ ಕೆಳಕಾಗಿ ಕೊಟ್ಟಿದ್ದರಿಂದ ನಮ್ಮ ಪಕ್ಷದ ಉಮೇದುವಾರರಿಗೆ ಓಟ್ ಮಾಡಬೇಕೆಂದು ಹೋಗಿದ್ದ ಜನರು ನಮ್ಮ ಪಕ್ಷದ ಉಮೇದುವಾರರು ಇಟ್ಟುಕೊಂಡಿದ್ದಂಥ ಹಸುವಿನ ಗುರುತು ತಲೆಕೆಳಗಾಗಿ ಅವುಗಳು ಏಕೋ ಪಾಪ ! ಕಾಲು ಮೇಲಕ್ಕೆ ಮಾಡಿಕೊಂಡಿರುತ್ತವೆಂದು ಹೇಳಿ ಆ ಓಟರ್ಸ್ ಪಟ್ಟಿಯ ಕೊನೆಯಲ್ಲಿದ್ದಂಥ ಬೇರೆ ಮೂರುಜನ ಉಮೇದುವಾರರಿಗೆ ಓಟನ್ನು ಕೊಟ್ಟುಬಂದಿದ್ದರು. (ಸಭೆಯಲ್ಲಿ ನಗು !). ಆದರೆ, ಇನ್ನು ಮುಂದಕ್ಕೆ ಹೀಗಾಗುವುದು ಬೇಡ. ಜನರು ತಮಗೆ ಯಾರು ಬೇಕೋ ಅವರನ್ನು ಸುಲಭವಾಗಿ ಚುನಾವಣೆ ಮಾಡುವುದಕ್ಕೆ ಅವಕಾಶವಿರುವಹಾಗೆ ಮಾಡುವುದು ಒಳ್ಳೆಯದು. ಈಗಾಗಲೇ ನಡೆದಿರತಕ್ಕಂಥ ಈ ವಿಲೇಜ್ ಪಂಚಾಯಿತಿಗಳ ಚುನಾವಣೆಯಲ್ಲಿ ಏನೇನು ನ್ಯೂನಾತಿರಿಕ್ತಗಳು ಕಂಡುಬಂದಿರುತ್ತವೆಯೋ ಅವುಗಳು ಮುಂದಕ್ಕೆ ಉದ್ಭವಿಸದಿರುವಂತೆ ಯಾವರೀತಿ ಮಾಡಬೇಕೋ ಹಾಗೆ ಮಾಡತಕ್ಕದ್ದು ಆವಶ್ಯಕವೆಂದು ಹೇಳುತ್ತೇನೆ. ಹಾಗೆ ನಾವು ಈ ದಿವಸ ಈ ಒಂದು ಎಚ್ಚರಿಕೆಯನ್ನು ತೆಗೆದುಕೊಳ್ಳದೆ ಮುಂದುವರಿದರೆ ಮುಂದೆಯೂ ಸಹ ಇದೇ ರೀತಿ ತೊಂದರೆಗಳು ಉಂಟಾಗಲು ಪುನಃ ನಾವೇ ಅವಕಾಶ ಕಲ್ಪಿಸಿ ಕೊಟ್ಟಂತೆ ಆಗುತ್ತದೆ. ಆದರೆ ಈಗ ಈ ಸಿಂಗಲ್ ಮೆಂಬರ್ಸ್ ಕಾನ್‌ಸ್ಟಿಟ್ಯೂಯೆನ್ಸಿ ಇಟ್ಟುಕೊಂಡರೆ ಅನಾನುಕೂಲವಾಗುತ್ತದೆಂದು ಸುಮ್ಮನೆ ಹೇಳಿದ್ದಾರೆಯೇ ಹೊರತು ಏನು ಅಂಥ ಅನಾನುಕೂಲಗಳಾಗುತ್ತವೆ ಎಂಬುದನ್ನು ಇಲ್ಲಿಯವರೆಗೆ ಯಾರೂ ವಿಶದಪಡಿಸಿ ತಿಳಿಸಿರುವುದಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ—ಅನುಸೂಚಿತ ಜಾತಿಗಳು).—'ಅನುಕೂಲ ಆಗುತ್ತದೆ' ಎಂದು ಹೇಳಿದ್ದಾರೆ.

ಶ್ರೀ ವಿ. ವೆಂಕಟಪ್ಪ.—ಏನು ಅನಾನುಕೂಲ ಆಗುತ್ತದೆ ಎನ್ನತಕ್ಕ ಬಗ್ಗೆ ಇಷ್ಟನ್ನೂ ಹೇಳಿಲ್ಲ. ಈ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಕೊಡತಕ್ಕ ಶೇಕಡ ಆರೂಕಾಲು ಭಾಗದ ಕಂದಾಯದ ಉತ್ಪತ್ತಿಯೇನಿತ್ತೋ ಅದನ್ನು ಈ ಜಿಲ್ಲಾ ಬೋರ್ಡುಗಳಿಗೆ ಕೊಡಬೇಕೆಂದು ಹೇಳುತ್ತಿದ್ದೆವು. ಆದರೆ ಈಗ ಈ ಮಸೂದೆಯಲ್ಲಿ 'ಕೊಡಬೇಕಾಗಿಲ್ಲ' ಎಂದು ತಿಳಿಸಿದ್ದಾರೆ. ಆದರೆ ಹೀಗೆ ಯಾರಿಗೇ ಆಗಲಿ ಯಾವ ಹಣವನ್ನೂ ಕೊಡದೆ ನೀವು ಯಾವ ಕೆಲಸವನ್ನೇ ಆಗಲಿ ಮಾಡಿಕೊಂಡು ಹೋಗಬೇಕೆಂದು ಹೇಳುವುದು ಅಷ್ಟು ಸರಿಹೋಗಲಾರದೆಂದು ನನಗೆನ್ನಿಸುತ್ತಿದೆ. ಸರ್ಕಾರದವರು ಯಾವ ಕೆಲಸಗಳನ್ನೇ ಕೈಗೊಂಡರೂ, ಆ ಕೆಲಸಗಳನ್ನು ಈ ಸ್ಥಳೀಯ ಸಂಸ್ಥೆಗಳ ಮೂಲಕ ಮಾಡಿಸುವುದರಿಂದ ಜನರ ಒಂದು ಹೆಚ್ಚಿನ ಸಂಪರ್ಕವನ್ನು ಸರ್ಕಾರ ಇಟ್ಟುಕೊಳ್ಳಲು ಅನುಕೂಲವಾಗಿರುತ್ತದೆ ಎಂಬ ಒಂದು ದೃಷ್ಟಿಕೂಡ ಇದರಲ್ಲಿ ಅಡಕವಾಗಿದೆ. ಇಲ್ಲಿಯತನಕ ಈ ಜಿಲ್ಲಾ ಬೋರ್ಡುಗಳು ಬಹಳ ಆಸೆಯಿಂದ ಅನೇಕ ರಾಷ್ಟ್ರಾಭಿವೃದ್ಧಿಯ ಕೆಲಸಕಾರ್ಯಗಳನ್ನು ಕೈಗೊಂಡು ಅವುಗಳನ್ನು ನಡೆಸಿದ್ದಾರೆ. ದೇಶದಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಹರಡಲು ಸಂಸ್ಥಾನಾದ್ಯಂತವೂ ಹೈಸ್ಕೂಲುಗಳನ್ನು ತೆರಿದಿದ್ದಾರೆ. ಇದರಿಂದ ನಮ್ಮ ನಾಡಿನ ವಿದ್ಯಾಭಿವೃದ್ಧಿಗೆ ಬಹಳ ಉಪಕಾರ ಮಾಡಿದಂತಾಗಿದೆ. ಈ ಕೆಲಸ ಕಾರ್ಯಗಳನ್ನೆಲ್ಲಾ ಜಿಲ್ಲಾ ಬೋರ್ಡಿನವರು ಮಾಡದಿದ್ದರೆ ಸರ್ಕಾರದವರೇ ಮಾಡಬೇಕಾಗಿತ್ತು. ಆದರೆ ಸರ್ಕಾರದವರು ಈ ಕೆಲಸಗಳನ್ನು ಬಹಳ ನಿಧಾನ ಮಾಡಿದ್ದರಿಂದ ಜಿಲ್ಲಾ ಬೋರ್ಡುಗಳಿಗೇ ಈ ಕೆಲಸಕ್ಕೆ ಕೈಹಾಕಬೇಕಾಗಿ ಬಂತು. ಆದರೆ ಈ ದಿವಸ ಈ ಜಿಲ್ಲಾ ಬೋರ್ಡುಗಳು ಬೇಕಿಲ್ಲ ಎಂದು ಹೇಳಬಹುದು ; ತಾಲ್ಲೂಕು ಬೋರ್ಡುಗಳೂ ಕೆಲಸ ಮಾಡಬಹುದು. ಆದರೆ ಅದನ್ನು ನಾನು ಈಗಲೇ ಹೇಳಲು ತಯಾರಿಲ್ಲ. ಮುಂದೆ ಅವುಗಳಲ್ಲಿ ಒಂದೆರಡರ ಹೆಸರೇನಾದರೂ ಕೆಟ್ಟುಹೋದಲ್ಲಿ ಆಗ ನೀವೇ ಈ ತಾಲ್ಲೂಕು ಬೋರ್ಡು ಬೇಕೆಂದು ಹೇಳಿದ್ದಿರಿ ಎಂದು ಸರ್ಕಾರದವರು ಕೇಳಬಹುದು. ಆದರೆ ಮುಂದೆ ಯಾರೂ ಕೆಲಸ ಮಾಡಲಿಲ್ಲ ಎಂದು ಹೇಳಿದರೆ ಅದಕ್ಕೆಲ್ಲಾ ಸರ್ಕಾರವೇ ಜವಾಬ್ದಾರಿ ಹೊರಬೇಕು. ಈ ದಿವಸ ಯಾರು ಸರಿಯಾಗಿ ಕೆಲಸ ಮಾಡುತ್ತಿದ್ದರೋ ಅವರನ್ನು ಬದಲಾಯಿಸಿ ಬೇರೆ ಸಂಸ್ಥೆಗಳಿಗೆ ಕೆಲಸ ನಿರ್ವಹಿಸಲು ಏರ್ಪಾಡು ಮಾಡಿದರೆ ಆ ಸಂಸ್ಥೆಗಳು ಹೇಗೆ ಕೆಲಸ ಕಾರ್ಯಗಳನ್ನು ನೆರವೇರಿಸಬಲ್ಲವು ಎನ್ನುವುದೆಲ್ಲಾ ಸರ್ಕಾರದವರ ಜವಾಬ್ದಾರಿಯ ಮೇಲೆ ನಿಲ್ಲುತ್ತದೆ. ಅಥವಾ ಇನ್ನು ಮುಂದಕ್ಕೆ ಈ ಹೊಸ ಸಂಸ್ಥೆಗಳನ್ನು ಮಾಡುವುದೂ ಬೇಡ, ಈ ದಿವಸದ ತನಕ ಇದ್ದಂಥ ಸಂಸ್ಥೆಗಳೂ ಬೇಡ, ನೀವೆಲ್ಲಾ ಸುಮ್ಮನೆ ಕುಳಿತಿರಿ ಎಂದು ಹೇಳಿದರೆ ಅದೂ ಕೂಡ ಆಗಬಹುದು. ಈ ಕೆಲಸಗಳನ್ನೂ ಸರ್ಕಾರವೇ ವಹಿಸಿಕೊಳ್ಳಲಿ ; ಈ ಸಂಸ್ಥೆಗಳನ್ನೆಲ್ಲಾ ತೆಗೆದುಹಾಕಿಬಿಡಲಿ. ಅದಕ್ಕೂ ನಾನು ಬೇಡವೆಂದು ಹೇಳುವುದಿಲ್ಲ. ಒಟ್ಟಿನಲ್ಲಿ ಯಾವ ದೃಷ್ಟಿಯಿಂದಲಾದರೂ ಸರಿ, ಕೆಲಸ ನಡೆದುದೆಲ್ಲಾ ಒಂದು. ನಾಲ್ಕು ಜನರು ಎಲೆಕ್ಷನ್ನಿಗೆ ಬರಬೇಕು, ನಾಲ್ಕು ಜನರು ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರುಗಳಿರಬೇಕೆಂದು ಹೇಳುವುದರಿಂದ ದೇಶಕ್ಕೆ ಯಾವ ಪ್ರಯೋಜನವೂ ಆಗುವುದಿಲ್ಲ ; ಇದರಿಂದ ದೇಶಕ್ಕೂ ಒಳ್ಳೆಯದಾಗುವುದಿಲ್ಲ. ತಾಲ್ಲೂಕು ಬೋರ್ಡುಗಳಿಗೆ ಶೇಕಡ 6 1/4 ರೆವಿನ್ಯೂ ಒದಗಿಸುವಂತೆ ಹೇಳಿದ್ದಾರೆ. ಅವುಗಳಿಗೂ ಸರ್ಕಾರದವರು ಈ ಹಣದ ವರಮಾನಕ್ಕೆ ಅಗತ್ಯವಾಗಿ ದಾರಿ ತೋರಿಸಲಿ. ಅದಕ್ಕೆ ನಾನು ಬೇಡ ಎಂದು ಹೇಳುವುದಿಲ್ಲ. ಆದರೆ ಈ ಸಂಸ್ಥೆಗಳಿಗೆ ಬರುತ್ತಿದ್ದ ಉತ್ಪತ್ತಿಯಲ್ಲಿ ಈ ಶೇಕಡ 6 1/4 ಬಿಟ್ಟು ಕೊಡಬೇಕೆಂದು ಹೇಳಿರುವುದು ಸರಿಯಾದದ್ದಲ್ಲ ಎಂದು ಇಷ್ಟು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಜೆ. ಮಹಮ್ಮದ್ ಇಮಾಂ.—ಸ್ವಾಮಿ ಸುಮಾರು ಇಲ್ಲಿಗೆ ಎರಡು ಮೂರು ದಿವಸಗಳಿಂದಲೂ ಈ ಗ್ರಾಮ ಪಂಚಾಯಿತಿ, ತಾಲ್ಲೂಕು ಬೋರ್ಡು ಮತ್ತು ಜಿಲ್ಲಾ ಬೋರ್ಡುಗಳ ವಿಚಾರವಾಗಿ ಬಹಳ ತೀವ್ರವಾದ ಚರ್ಚೆಗಳು ನಡೆಯುತ್ತಿವೆ. ಆದರೆ ಹೀಗೆ ಇವುಗಳ ವಿಚಾರವಾಗಿ ಚರ್ಚೆ ನಡೆಯುತ್ತಿರುವುದು ಈ ಎರಡು ದಿವಸಗಳಿಂದಲೇ ಅಲ್ಲ ; ಸುಮಾರು ಮೂರು ದಿವಸಗಳಿಂದಲೂ ಅಲ್ಲ, ಈ ಜಿಲ್ಲಾ ಬೋರ್ಡು ಮಸೂದೆಯನ್ನು ಯಾವ ರೀತಿಯಾಗಿ ತಿದ್ದುಪಡಿ ಮಾಡಬೇಕೆಂಬುದರ ಬಗ್ಗೆ ಸುಮಾರು ಮೂರು ವರ್ಷಗಳಿಂದಲೂ ಹೀಗೆಯೇ ಚರ್ಚೆಗಳು ನಡೆಯುತ್ತಲೇ ಇವೆ. ಈ ವಿಚಾರದಲ್ಲಿ ಈ ಸಭೆಯ ಮಾನ್ಯ ಸದಸ್ಯರುಗಳಿಗೆಲ್ಲಾ ಮನಸ್ಸು ತುಂಬ ಬಾಧಿಸುತ್ತಿದೆ. ಈ ಸರ್ಕಾರದ ಪೀಠವನ್ನು ಮಂತ್ರಿಗಳು ಅಲಂಕಾರ ಮಾಡ

(ಶ್ರೀ ಜೆ. ಮಹಮ್ಮದ್ ಇಮಾಂ.)

ಇಷ್ಟು ದಿನಗಳಾದರೂ ಈ ಕಾರ್ಯ ನೆರವೇರಲಿಲ್ಲವಲ್ಲಾ ಎಂಬುದಕ್ಕಾಗಿ ನನಗೆ ದುಃಖವೂ ಬರುತ್ತಿದೆ, ಕೋಪವೂ ಬರುತ್ತಿದೆ ಮತ್ತು ನಾಚಿಕೆಯೂ ಆಗುತ್ತಿದೆ. ನನ್ನ ಅಭಿಪ್ರಾಯದಲ್ಲಿ ನಿನ್ನೆಯ ದಿನ ಮತ್ತು ಈ ದಿವಸ ಈ ಸಭೆಯಲ್ಲಿ ನಡೆದಿರತಕ್ಕಂಥ ಚರ್ಚೆಯನ್ನು ನೋಡಿದರೆ, ಸದಸ್ಯರುಗಳು ಕೊಟ್ಟಿರತಕ್ಕಂಥ ಅಭಿಪ್ರಾಯಗಳನ್ನೆಲ್ಲಾ ಕ್ರೋಡೀಕರಿಸಿ ನೋಡಿದರೆ 'ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲ' ಅನ್ನುವ ಹಾಗೆ ನನಗೆ ಕಂಡು ಬರುತ್ತಿದೆ. ನಾನು ಈ ರಾಜಕೀಯಕ್ಕೆ ಪ್ರವೇಶಮಾಡಿ ಇಲ್ಲಿಗೆ 25 ವರ್ಷಗಳಾದವು. ಶ್ರೀ ವಿ. ವೆಂಕಟಪ್ಪನವರು ನನಗಿಂತಲೂ ಸೀನಿಯರ್. ನಾನೂ ಮತ್ತು ಶ್ರೀ ಟಿ. ಮರಿಯಪ್ಪನವರೂ ಈ ಪಾಲಿಟಿಕ್ಸ್‌ಗೆ ಇಳಿಯುವಾಗ ಆಗಲೇ ಶ್ರೀ ವಿ. ವೆಂಕಟಪ್ಪನವರು ಭರ್ಜರಿಯಾಗಿ ಸೂಟ್ ಹಾಕಿಕೊಂಡು ಪಾಲಿಟಿಕ್ಸ್‌ನಲ್ಲಿ ಆಗಲೇ ಬಹಳ ಮುಂದುವರಿದಿದ್ದರು. ಅಂಥ ಹಳೇ ರಾಜಕೀಯ ಪಟುಗಳೂ ಸಹ ಈ ದಿವಸ ನಾನು 'ಯಾವ ಸಂದರ್ಭದಲ್ಲೂ ಯಾವ ಒಂದು ಮಸೂದೆಯೇ ಆಗಲೀ ಇಷ್ಟೊಂದು ವಿವಾದಕ್ಕೆ ಇಟ್ಟುಕೊಂಡಿರಲಿಲ್ಲ' ಎಂದು ಹೇಳಿದರೆ ಅವರೂ ಸಹ ಇದನ್ನು ಒಪ್ಪಿಕೊಳ್ಳುತ್ತಾರೆಂದು ಖಂಡಿತ ಹೇಳಬಲ್ಲೆ. ಇದನ್ನೆಲ್ಲಾ ನೋಡಿದರೆ ನನ್ನ ಮನಸ್ಸಿಗೆ ತುಂಬಾ ವ್ಯಸನವಾಗುತ್ತಿದೆ. ಇದು ಒಂದು ಸಾವಿರನ್ ಪ್ರಶ್ನೆ. ಇದರಲ್ಲಿ ದೇಶಕ್ಕೆ ಸುಖವನ್ನುಂಟುಮಾಡುವಂಥ ವಿಚಾರಗಳು ಅಡಕವಾಗಿರುತ್ತವೆ. ಇಂಥ ಒಂದು ಮಹತ್ತರವಾದ ವಿಚಾರದಲ್ಲಿ ಇಷ್ಟೊಂದು ಜನ ಮಂತ್ರಿಗಳಿದ್ದಾಗ್ಯೂ ಇವರೆಲ್ಲಾ ಸೇರಿ ಒಂದು ನಿರ್ಧಾರಕ್ಕೆ ಇಲ್ಲಿಯವರೆಗೂ ಬರಲಿಲ್ಲವಲ್ಲಾ ಎಂದು ಹೇಳಲು ನನಗೆ ತುಂಬಾ ವ್ಯಸನವೂ ಮತ್ತು ದುಃಖವೂ ಆಗುತ್ತಿದೆ. ಇದರಿಂದ ಇಂದು ದೇಶಕ್ಕೆ ಎಷ್ಟು ಹಾನಿ, ದುಡ್ಡೆಷ್ಟು ಲುಕ್ಸಾನಾಗುತ್ತಿದೆ, ದೇಶಾಭಿವೃದ್ಧಿಗೆ ಎಷ್ಟು ಹಾನಿಯುಂಟಾಯಿತು, ಎಂಬುದಕ್ಕಾಗಿ ನಾವೀಗ ವ್ಯಸನಪಡುತ್ತಿದ್ದೇವೆ. ಆದರೆ ಇಷ್ಟಕ್ಕೆಲ್ಲಾ ಕಾರಣ ಸರ್ಕಾರ ಅನುಸರಿಸುತ್ತಿರುವ ನೀತಿಯೇ ಎಂದು ಹೇಳಬೇಕಾಗಿದೆ. ಆದರೆ ಈ ವಿಚಾರದಲ್ಲಿ ಇಲ್ಲಿಯವರೆಗೆ ಸರ್ಕಾರದವರು ಯಾವ ಒಂದು ನಿರ್ದಿಷ್ಟವಾದಂಥ ನೀತಿ—ನಿಯಮಗಳನ್ನೂ ಅನುಸರಿಸಿಲ್ಲ. ನಾವೆಲ್ಲರೂ ಒಮ್ಮತದಿಂದ ಈ ಡಿಸ್ಟ್ರಿಕ್ಟ್ ಬೋರ್ಡುಗಳು ಬೇಕೇ ಬೇಕು ಇವುಗಳಿಂದ ಪ್ರಜೆಗಳಿಗೆ ಹೆಚ್ಚಿನ ಪ್ರಯೋಜನ ಆಗುತ್ತದೆ ಎಂದು ಹೇಳಿದ್ದೆವು. ನಮ್ಮ ಉದ್ದೇಶ ಹೀಗಿರುವಾಗ ತಮ್ಮ ಪಾರ್ಟಿಯವರು ತಮ್ಮ ಸ್ವಾರ್ಥಾಭಿಪ್ರಾಯಗಳನ್ನಿಟ್ಟುಕೊಂಡು ಇವುಗಳಿಂದ ಕೆಲಸ ಕಾರ್ಯಗಳು ಆಗಬೇಕಾದರೆ ಬಹಳ ಕಷ್ಟವಾಗುತ್ತದೆ ಎಂದು ಹೇಳುತ್ತಿದ್ದಾರೆ. ಹೀಗೆ ಸ್ವಾರ್ಥಪರರಾದಂಥ ಪಾರ್ಟಿಗಳು ಇಲ್ಲಿ ಕುಳಿತು ಇದನ್ನು ತೀರ್ಮಾನ ಮಾಡಲು ಹೊರಟರೆ ಅಡ್ಡಿ ಅಡಚಣೆಗಳು ಬಂದೇ ಬರುತ್ತವೆ. ಆದುದರಿಂದಲೇ ಸರ್ಕಾರದವರ ಮನೋಭಾವ ಮತ್ತು ಅವರ ಕಾರ್ಯ ನೀತಿ ಒಂದೂ ನಿರ್ದಿಷ್ಟವಾಗಿಲ್ಲ ಎಂದು ಹೇಳುತ್ತಿದ್ದೇನೆ. ಅದರಿಂದಲೇ ಇಲ್ಲಿಯವರೆಗೂ ಈ ಜಿಲ್ಲಾ ಬೋರ್ಡಿನ ಕೆಲಸ ಕಾರ್ಯಗಳು ಕಾರ್ಯರೂಪಕ್ಕೆ ಬರಲು ಆಗಿಲ್ಲ. ಹೀಗೆ ನಿಮ್ಮ ಪಾರ್ಟಿಯಲ್ಲೇ ಇಂಥ ದ್ವಂದ್ವಾಭಿಪ್ರಾಯಕ್ಕೆ ಬಂದಿರುವುದರಿಂದ ಈ ಬಗ್ಗೆ ಒಂದು ನಿರ್ಧಾರಕ್ಕೆ ಬರಲು ಇನ್ನೂ ಸಾಧ್ಯವಾಗಿಲ್ಲ. ಇಂಥ ವಿಚಾರಗಳಲ್ಲಿ ಈ ಸಭೆಯು ಒಂದು ತೀರ್ಮಾನಕ್ಕೆ ಬರಬೇಕಾಗಿದ್ದರೆ ಯಾವ ಒಬ್ಬ ವಿರೋಧ ಪಕ್ಷದ ಸದಸ್ಯರಾಗಲಿ ಅಥವಾ ಟ್ರೆಜುರಿ ಬೆಂಚಿನಲ್ಲಿರತಕ್ಕಂಥಾ ಸದಸ್ಯರಾಗಲಿ ಅವರೆಲ್ಲಾ ಸರ್ಕಾರದವರ ಅಭಿಪ್ರಾಯವೆತ್ತಿದೆ ಎಂದು ಆ ಕಡೆಗೇ ನೋಡುತ್ತಿರುತ್ತಾರೆ. ಹೀಗೆ ಸರ್ಕಾರದವರ ಸೂತ್ರಾಡಳಿತ ಯಾವ ಕಡೆ ಹೋದರೆ ನಾವೂ ಆ ಕಡೆ ಹೋಗಬೇಕು. ಆ ರೀತಿ ನಾವೆಲ್ಲರೂ ಬೇಗ ಒಂದು ಅಭಿಪ್ರಾಯಕ್ಕೆ ಬರಲು ಸಾಧ್ಯವಾಗುತ್ತದೆ. ಆದರೆ ಈ ದಿವಸ ತಮ್ಮ ಪಾರ್ಟಿ ಈ ಅಭಿಪ್ರಾಯಕ್ಕೆ ವಿರುದ್ಧವಾಗಿರುವುದಾಗಿದ್ದರೆ ತಾವು ಇದನ್ನು ಬೇಗ ಮಾರ್ಪಾಡು ಮಾಡಿಕೊಳ್ಳಬೇಕಾಗಿದೆಯೆಂದು ಹೇಳುತ್ತೇನೆ.

3 P.M.

ಆದರೆ ನಮ್ಮ ಸರ್ಕಾರ ಹೇಗಿದೆ ಎಂದರೆ, ಇದೇ ಸರ್ಕಾರವೇ ಅಲ್ಲ, ಯಾವ ಪ್ರಜಾ ಸರ್ಕಾರವೇ ಆಗಲಿ, ಜನರ ಆಶೋತ್ತರಗಳ ಜವಾಬ್ದಾರಿಯನ್ನು ವಹಿಸಿರುವವರು ಅವರು Cabinetನಲ್ಲಿ, ಮಂತ್ರಿ ಮಂಡಲದಲ್ಲಿ ಚರ್ಚೆಮಾಡಿ ಈ ವಿಷಯವಾಗಿ ಒಂದು ಅಭಿಪ್ರಾಯಕ್ಕೆ ಬಂದಿದ್ದು, ಒಂದು ತೀರ್ಮಾನಕ್ಕೆ ಬಂದಿದ್ದು, ಆ ತೀರ್ಮಾನವನ್ನು ಸಭೆಯಮುಂದೆ ಇಟ್ಟು ನಾವು ಅದನ್ನು ಪಾಸ್ ಮಾಡಿಸಲೇಬೇಕು ಎಂಬ ತೀರ್ಮಾನಕ್ಕೆ ಬಂದು ಅದನ್ನು ಈ ಸಭೆಯಮುಂದೆ ಇಟ್ಟರೆ ಆ ತೀರ್ಮಾನವನ್ನು ಅವರಿಗಿರುವ majority ಪ್ರಾಬಲ್ಯದಿಂದ ಜಾರಿಗೆ ತರುವುದರಲ್ಲಿ ಯಾವ ಅಡಚಣೆಯೂ ಇರುವುದಿಲ್ಲ. ಆದರೆ ನಮ್ಮ ಸರ್ಕಾರದವರು ಅವರ ಸ್ವಂತ ಅಭಿಪ್ರಾಯವನ್ನು ಕೊಡುತ್ತಿಲ್ಲವೆಂದು ಬಹಳ ದುಃಖದಿಂದ ಹೇಳಬೇಕಾಗಿದೆ. ಈ ವಿಷಯದಲ್ಲಿ ಮಾತ್ರವಲ್ಲ, ಯಾವ ವಿಷಯದಲ್ಲಾಗಲಿ, ಕೂಲಂಕಷವಾಗಿ ಅದರ ಸಾಧಕ ಬಾಧಕಗಳನ್ನು ಯೋಚನೆಮಾಡಿ ಅದರ ತೊಂದರೆಗಳೇನು ಎಂಬುದನ್ನು ಚರ್ಚೆಮಾಡಿ ಒಂದು ಅಭಿಪ್ರಾಯಕ್ಕೆ ಬರುವುದಕ್ಕೆ ಸರ್ಕಾರದವರಿಗೆ ಸರಿಯಾದ ಸಲಕರಣೆಗಳು ಇರುವುದರಿಂದ ಎಲ್ಲವನ್ನೂ ವಿಚಾರಮಾಡಿ ಇಂಥ ಅಭಿಪ್ರಾಯಕ್ಕೆ ಸಭೆಯವರು ಬರಬಹುದು, ಎದುರು ಬೆಂಚಿನವರೂ ಇದನ್ನು ಪುಷ್ಟೀಕರಿಸಬಹುದು ಎಂದು ನಿರ್ದಿಷ್ಟವಾದ ಅಭಿಪ್ರಾಯವನ್ನು ಸಭೆಯಲ್ಲಿ ಇಟ್ಟರೆ ಎಂಥ ಕೆಲಸವಾದರೂ ಸುಲಲಿತವಾಗಿ ನಡೆಯುತ್ತದೆ. ಅದನ್ನು ಬಿಟ್ಟು ಸರ್ಕಾರಿ ಬೆಂಚಿನಲ್ಲಿರತಕ್ಕ ಮಂತ್ರಿಗಳು ಅವರ ಸ್ವಂತ ಅಭಿಪ್ರಾಯವನ್ನು ಕೊಡದೆ ಮೊದಲಿನಿಂಥ ಇಲ್ಲಿಯವರೆಗೂ ಅವರ ನೀತಿ ಅವರ principles ಬದಲಾಯಿಸುತ್ತ ಬಂದಿರುವುದರಿಂದ ಇಷ್ಟು ತೊಂದರೆಗೆ ಕಾರಣವಾಗಿದೆ, ಇಷ್ಟು ಅಡಚಣೆಗೆ ಕಾರಣವಾಗಿದೆ ಎಂದು ಹೇಳಬಹುದಾಗಿದೆ. ಸದಸ್ಯರ ವಿವಿಧಾಭಿಪ್ರಾಯ ಕೇಳಿದರೆ ಡಿಸ್ಟ್ರಿಕ್ಟ್‌ಬೋರ್ಡ್ ಬಿಲ್ಲಿಗೆ ಮುಕ್ತಿ ಇಲ್ಲವೆಂದು ಕಾಣುತ್ತದೆ. ಈಗ ಈ ಸಭೆಯಲ್ಲಿ ಮೂರು ನಾಲ್ಕು ಅಭಿಪ್ರಾಯಗಳು ಬಂದಿವೆ. ಮೊದಲನೆಯದು, ಶ್ರೀಮಾನ್ ವೆಂಕಟಪ್ಪನವರ ಸಮಿತಿಯವರು ಯಾವ ಯಾವ ಸಲಹೆಗಳನ್ನು ಕೊಟ್ಟರೋ ಯಾವ ಸಲಹೆಗಳು ಒಂದು Act ರೂಪವಾಗಿ ಜಾರಿಗೆ ಬಂದವೋ ಅವನ್ನು ಜಾರಿಗೆ ಕೊಡಬೇಕೆಂಬುದು. ಎರಡನೆಯದು, Multi-member Constituencies ಇರಬೇಕು ಮತ್ತು ಸಾರ್ವತ್ರಿಕ ಚುನಾವಣೆಗಳು ನಡೆಯಬೇಕು. ಮೂರನೆಯದು ಡಿಸ್ಟ್ರಿಕ್ಟ್ ಬೋರ್ಡಿನ ಸ್ವಲ್ಪ ಹಣ, ಪಂಚಾಯಿತಿಯ ಸ್ವಲ್ಪ ಹಣ ಹಾಕಿ ಇನ್ನೊಂದ ಸಂಸ್ಥೆ ಮಾಡಬೇಕೆಂಬುದು. ನಾಲ್ಕನೆಯದು, multi-member ಅಥವಾ single-member constituency ಇರಬೇಕೇ ಎಂಬುದು ಈ ರೀತಿಯಾಗಿ 3-4 ಅಭಿಪ್ರಾಯಗಳಿವೆ. ಈ ಅಭಿಪ್ರಾಯಗಳು ನಮ್ಮ ಪಾರ್ಟಿಯಲ್ಲಿ,

ಎಲ್ಲ ಸದಸ್ಯರಲ್ಲೂ ಇದೆ. I do not blame them; they have come to an honest decision in accordance with their conscience. ಈ ವಿವಿಧಾಭಿಪ್ರಾಯಗಳಿರುವುದರಿಂದ ಸರ್ಕಾರದವರ ಅಭಿಪ್ರಾಯ ಯಾವುದು, ಅಥವ ಆಡಳಿತವಹಿಸಿರುವವರ ಅಭಿಪ್ರಾಯ ಯಾವುದು, ನಮ್ಮ ಅಭಿಪ್ರಾಯ ಯಾವುದು, ಯಾವುದನ್ನು ಪುಷ್ಟೀಕರಿಸಬೇಕು ಎಂಬುದೇ ಕಷ್ಟವಾಗಿದೆ. ಮೊದಲಿನ ರಾಗಾಯಿತು ಇದೇ ನೀತಿಯಿದೆ. ಮೊದಲು ಶ್ರೀಮಾನ್ ವಿ. ವೆಂಕಟಪ್ಪನವರ ಸಮಿತಿಯ ರಿಪೋರ್ಟ್ ಬಂತು. ನಾವೆಲ್ಲರೂ ಅದನ್ನು ಪುಷ್ಟೀಕರಿಸಿ ಸ್ವಾಗತಿಸಿದೆವು. ಆಗ ನಮ್ಮ ಸ್ನೇಹಿತರೊಬ್ಬರು ಮಾತ್ರ ಸಾರ್ವತ್ರಿಕ ಚುನಾವಣೆ ಬೇಕು ಎಂದು ಹೇಳಿದರು. ಬಾಕಿಯವರೆಲ್ಲರೂ ಶ್ರೀಮಾನ್ ವೆಂಕಟಪ್ಪನವರ ವರದಿಯನ್ನು ಒಪ್ಪಿದೆವು. ಅದರ ಪ್ರಕಾರ 1951ರಲ್ಲಿ ಒಂದು ಮಸೂದೆ ಬಂದು ದೀರ್ಘ ಚರ್ಚೆ ನಡೆದು ಸರ್ವಾನುಮತದಿಂದ ನಾವೆಲ್ಲರೂ ಅದನ್ನು ಒಪ್ಪಿದೆವು. ಮುಖ್ಯವಾದ ತತ್ವವೇನೆಂದರೆ, ಶ್ರೀಮಾನ್ ವಿ. ವೆಂಕಟಪ್ಪನವರ ಸಮಿತಿಯ report ಪ್ರಕಾರ ಡಿಸ್ಟ್ರಿಕ್ಟ್ ಬೋರ್ಡಿಗೂ, ಪಂಚಾಯಿತಿಗೂ ಒಂದು ನಿಕಟ ಸಂಬಂಧವನ್ನು ಉಂಟು ಮಾಡಬೇಕೆಂಬುದು. It was received with unanimous support without any dissenting minute.

ಈಗ, ಡಿಸ್ಟ್ರಿಕ್ಟ್ ಬೋರ್ಡ್ ಕಾರ್ಯಾಂಗವೇ ಬೇರೆಯಾಗಿದೆ, ಪಂಚಾಯಿತಿಯ ಕಾರ್ಯಾಂಗವೇ ಬೇರೆಯಾಗಿದೆ. ಇವೆರಡಕ್ಕೂ ಯಾವ ಸಂಬಂಧವೂ ಇಲ್ಲ. ಈ ಸಂಬಂಧವನ್ನುಂಟು ಮಾಡುವುದಕ್ಕೋಸ್ಕರ ಪಂಚಾಯಿತಿ ಸದಸ್ಯರುಗಳ ಒಂದು ಕ್ಷೇತ್ರವನ್ನು ಮಾಡಿ ಅಲ್ಲಿಂದ ಡಿಸ್ಟ್ರಿಕ್ಟ್ ಬೋರ್ಡಿಗೆ ಸದಸ್ಯರನ್ನು ಚುನಾಯಿಸಬೇಕು ಎಂಬ ತತ್ವವನ್ನು ನಾವು ಒಪ್ಪಿಕೊಂಡಿದ್ದೆವು. ಅದು ಕಾರ್ಯಾಂಗಕ್ಕೂ ಬಂದು ಪಂಚಾಯಿತಿ ಗ್ರೂಪ್ ಮಾಡುವುದಕ್ಕೆ ತಾಲ್ಲೂಕಿನ ಸದಸ್ಯರನ್ನು ಕರೆಸಿಕೊಂಡು ಅದನ್ನು ಜಾರಿಗೆ ತಂದರು. ಆ ಸಮಯಕ್ಕೆ ಹೊಸ ಮಂತ್ರಿಮಂಡಲ ಅಧಿಕಾರಕ್ಕೆ ಬಂತು. ಆಗ ಏನಾಯಿತೆಂದರೆ ಇದು ಹಳೆಯದು ಹಿಂದಿನ ಸರ್ಕಾರ ಯಾವುದೋ ಒಂದು ಉದ್ದೇಶದಿಂದ ಹೀಗೆ ಮಾಡಿದೆ, ಇದರಿಂದ ಸಂಸ್ಥೆಗೇ ಧಕ್ಕೆ ಬರುತ್ತದೆಯೋ ಏನೋ ಎಂಬ ಒಂದು ರೀತಿಯ ಭಯ ಹುಟ್ಟಿ, ಶ್ರೀಮಾನ್ ಟಿ. ಚನ್ನಯ್ಯನವರು proceedings ನೋಡದೆ ಕೆಲವು ತಿದ್ದುಪಡಿಗಳನ್ನು ತೆಗೆದುಕೊಂಡು ಬಂದರು. ಅದರಲ್ಲಿ ಮಧ್ಯೆ "delete that clause of indirect elections" ಎಂದು ಮೇಲ್ಗಡೆ ಸೇರಿಸಿದರು, ಶ್ರೀ ಎ. ಭೀಮಪ್ಪನಾಯಕರು ನಾವು ಬೇಕಾದಷ್ಟು ಮಾಡಿದೆವು, I accepted neither. ಇಷ್ಟು ಮುಖ್ಯವಾದ ಕ್ಲಾಜ್ ಇಷ್ಟು ತತ್ವಗಳನ್ನು ಒಳಗೊಂಡಿದ್ದುದನ್ನು ಒಂದೇ ಒಂದು ನಿಮಿಷದಲ್ಲಿ ಅದನ್ನು ಬದಲುಮಾಡಿದರಲ್ಲಾ ಎನ್ನುವ ಕಾರಣದಿಂದ ನಾವೆಲ್ಲಾ Walk-out ಮಾಡಿದೆವು. ಯಾವ ಮುಖ್ಯವಾದ ಬದಲಾವಣೆ ಮಾಡಬೇಕಾದರೂ ಅವಸರವಸರವಾಗಿ, ಹಠಾತ್ತಾಗಿ ಮಾಡತಕ್ಕದ್ದು ಸರಿಯಲ್ಲ. We should not be taken by surprise. ಅದರ ಮೇಲೆ ಅವರು ಆ ವಿಷಯವನ್ನು vote down ಮಾಡಿದರೂ ಕೊನೆಗೆ ಏನಾಯಿತೆಂದರೆ ಒಂದು ಜಿಜ್ಞಾಸೆ ಬದ್ದು ಸಾರ್ವತ್ರಿಕ ಚುನಾವಣೆಯಾದರೂ ಕೂಡ District Boardನಿಂದ ಏನಾಗುತ್ತದೋ ಏನೋ ಎಂಬ ಭಯದಿಂದ ತಾಲ್ಲೂಕು ಬೋರ್ಡ್ ಬೇಕು ಎಂಬ ಅಭಿಪ್ರಾಯಬಂತು. ಅದಕ್ಕೆ ಸರ್ಕಾರದವರು ಶ್ರೀಮಾನ್ ಡಿ. ಹೆಚ್. ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕವಮಾಡಿದರು. ಸರ್ಕಾರದವರು ಒಂದು ನೀತಿಗೆ ಭದ್ರವಾಗಿ ನಿಲ್ಲದೇ ಇರುವುದೇ ಇದಕ್ಕೆಲ್ಲಾ ಕಾರಣ. ಸರ್ಕಾರದವರು you must give us support ಎಂದು ಭದ್ರವಾಗಿ ನಿಂತಿದ್ದರೆ ಎಲ್ಲರೂ ಸಹಾಯ ಮಾಡಬೇಕಾಗಿತ್ತು. If they had stood firm to the declarations, all these troubles would not have arisen. ಅವರಲ್ಲಿ ತಾಲ್ಲೂಕು ಬೋರ್ಡ್‌ಗಳನ್ನು ಮಾಡಬೇಕು, ಜಿಲ್ಲಾ ಬೋರ್ಡ್‌ಗಳನ್ನು ಮಾಡಬೇಕು ಎಂದು ಹೀಗೆ wavering policy, inconsistent policy ಇರುವುದರಿಂದ all this trouble has arisen. Rightly or wrongly, Government should stick up to it and get the support of their followers. If they do not get their support, they must resign. ನಮ್ಮ ಡೆಮಾಕ್ರಸಿ ಹಾಗಿಲ್ಲ. ಒಬ್ಬರು ಬಂದು ತಾಲ್ಲೂಕ್ ಬೋರ್ಡ್ ಬೇಕಾಗಿಲ್ಲ, ಡಿಸ್ಟ್ರಿಕ್ಟ್ ಬೋರ್ಡ್ ಬೇಕು ಎಂದರೆ ಡಿಸ್ಟ್ರಿಕ್ಟ್ ಬೋರ್ಡ್ ಮಾಡಲು ನಿರ್ಧರಿಸಿದರು ಹಾಗೆಯೇ ತಾಲ್ಲೂಕು ಬೋರ್ಡ್ ಬೇಕು ಡಿಸ್ಟ್ರಿಕ್ಟ್ ಬೋರ್ಡ್ ಬೇಕಾಗಿಲ್ಲ ಎಂಬ ವಾದ ಬಂದು ಶ್ರೀಮಾನ್ ಡಿ. ಹೆಚ್. ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಮಾಡಿದರು. ಅದರಲ್ಲಿ ನಾನೂ ಒಬ್ಬ ಸದಸ್ಯ. ಶ್ರೀಮಾನ್ ಚಂದ್ರಶೇಖರಯ್ಯನವರು ಬಹಳ ಕಷ್ಟಪಟ್ಟು ಏನೇನೋ ಮಾಡಿ ಒಂದು ರಿಪೋರ್ಟ್ ಬರೆದು ಒಪ್ಪಿಸಿದರು. ಅದರಲ್ಲಿ they wanted to adopt a compromise policy. ಆದ್ದರಿಂದ ತಾಲ್ಲೂಕು ಬೋರ್ಡ್, ಜಿಲ್ಲಾ ಬೋರ್ಡ್, ಪಂಚಾಯಿತಿ ಇವು ಮೂರೂ ಇರಲಿ ಎಂದು ಮಾಡಿದರು. ನಾನು ಒಂದು dissenting note ಕೊಟ್ಟಿದ್ದೇನೆ. ಜಿಲ್ಲಾ ಬೋರ್ಡಿಗೂ ಪಂಚಾಯಿತಿಗೂ ಮಧ್ಯೆ ಯಾವುದಾದರೂ ಇನ್ನೊಂದು ಸಂಸ್ಥೆಯನ್ನು ಹಾಕಿದರೆ, it will be to the detriment to both District Boards and Village Panchayets.

ಅವರ powers ಕಡಿಮೆಯಾಗಿ functions ಕಡಿಮೆಯಾಗುತ್ತದೆ. ಡಿಸ್ಟ್ರಿಕ್ಟ್ ಬೋರ್ಡುಗಳ ಕೆಲಸಗಳು ಕಡಿಮೆಯಾಗಿಬಿಟ್ಟು dual responsibilities treble responsibilities ನಿಂದ ಯಾವ ಕೆಲಸವೂ ನಡೆಯುವುದಿಲ್ಲ. This system was tried, ತಾಲ್ಲೂಕು ಬೋರ್ಡುಗಳು ಹಿಂದೆ ಇದ್ದು ಶ್ರೀಮಾನ್ ಚಾಂಡಿಸಾಹೇಬರ ಕಾಲದಲ್ಲಿ ಅದನ್ನು ವಜಾ ಮಾಡಿದರು. I pleaded for only two bodies. There I gave preference to Venkatappa Committee report. This is what I have said:

> "I personally feel that the proposals embodied in the report of Sri Venkatappa's Committee deserve a fair trial; and they still appeal to me as being the best under the existing circumstances.
>
> It is said that the gap between the District Boards and Village Panchayets is too wide. It is to bridge this gap that the

(ಶ್ರೀ ಜೆ. ಮಹಮ್ಮದ್ ಇಮಾಂ.)

> Venkatappa's Committee proposed election of members from the village panchayets to the district boards, so that there may be harmony and co-operation between the two bodies."

ಆದರೆ ಸರ್ಕಾರದವರು ಶ್ರೀಮಾನ್ ಚಂದ್ರಶೇಖರಯ್ಯ ಸಮಿತಿ ರಿಪೋರ್ಟಿನಲ್ಲಿ ನಾನಾ ವಿಷಯಗಳನ್ನು ಕೊಟ್ಟಿದ್ದರೂ ಸಹ ಅದರಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡರು? What is thier view? Did they consult the members of this House? It was the duty of the Government to have placed the Report of Chandrasekhariah Committee before this House and ascertained their opinion. Government have spent thousands of rupees on that and the members, including several members of this House, have spent their labour for months over this report. But, unfortunately, they have given a go-by to the report. I very much feel for that. I think the Chairman of that Committee must also be feeling very much. At least that report should have been placed before this House and opportunity given to members to express their opinion.

ಶ್ರೀ ಕೆ. ಪಟ್ಟಾಭಿರಾಮರ್‌ರವರು ಹೇಳಿದ ಹಾಗೆ, "ಅದಕ್ಕದಂಪೋಚಿ ಇದಕ್ಕಿದಂಪೋಚಿ" ಎನ್ನುವ ರೀತಿಯಲ್ಲಿ ಎಲ್ಲರೂ ಮಾಡಿದ್ದು ಏನೂ ಆಗಲಿಲ್ಲ. ಈಗ ಒಂದು ತಿದ್ದುಪಡಿ ತಂದಿದ್ದಾರೆ. ಅದನ್ನು ಯಾವ ಉದ್ದೇಶದಿಂದ ತಂದರು, ಯಾರನ್ನು ಕೇಳಿ ಯಾವ ಪ್ರವೀಣರನ್ನು ಕೇಳಿ ತಂದರು ಎನ್ನುವುದು ಗೊತ್ತಿಲ್ಲ. ಇದರಲ್ಲಿ ಮುಖ್ಯವಾದುದು ಯಾವುದೆಂದರೆ, ಮೊದಲನೆಯದು, ಅಪ್ರತ್ಯಕ್ಷ ಚುನಾವಣೆ ತೆಗೆದುಬಿಟ್ಟು ಸಾರ್ವತ್ರಿಕ ಚುನಾವಣೆ ತರಬೇಕೆಂಬುದು ಎರಡನೆಯದು, ತಾಲ್ಲೂಕನ್ನೇ ಒಂದು ಕ್ಷೇತ್ರವನ್ನಾಗಿ ಮಾಡಬೇಕೆಂಬುದು. ಮೂರನೆಯದು ಮುನಿಸಿಪಾಲಿಟಿಗಳಲ್ಲಿರುವ ಮೆಂಬರುಗಳು ಓಟುಮಾಡ ಕೂಡದು, ಆದರೆ ಚುನಾವಣೆಗೆ ನಿಲ್ಲಬಹುದು ಎಂಬುದು ನಾಲ್ಕನೆಯದು ಡಿಸ್ಟ್ರಿಕ್ಟ್ ಬೋರ್ಡಿಗೆ ಇದುವರೆಗೂ ಸಲ್ಲುತ್ತಿದ್ದ ಶೇಕಡ $6\frac{1}{4}$ ಭಾಗದಷ್ಟು ಆದಾಯವನ್ನು ತೆಗೆದುಹಾಕಿ ಅದನ್ನು ಸರ್ಕಾರದಿಂದ ನಿರ್ಮಿತವಾಗುವ ಇನ್ನೊಂದು ಸಂಸ್ಥೆಗೆ ಕೊಡಬೇಕೆಂಬುದು. ಐದನೆಯದು ಪ್ರತಿಯೊಂದು ತಾಲ್ಲೂಕಿಗೂ 3 ಜನಕ್ಕೆ ಮೀರದಂತೆ ಸದಸ್ಯರು ಇರಬೇಕೆಂಬುದು. ಇವು ಮುಖ್ಯವಾದ ವಿಷಯಗಳು. ಇದನ್ನೆಲ್ಲಾ ನೋಡಿದರೆ ಶ್ರೀಮಾನ್ ಕೆ. ಪಟ್ಟಾಭಿರಾಮರ್‌ರವರೂ ನಾವೂ ಮತ್ತು ಅನೇಕ ಸದಸ್ಯರೂ ಹೇಳಿದಂತೆ, ನಮ್ಮ ಸರ್ಕಾರದವರು ಡಿಸ್ಟ್ರಿಕ್ಟ್‌ಬೋರ್ಡಿನಿಂದ ದೇಶಕ್ಕೆ ಒಳ್ಳೆಯದಾಗಬೇಕು, ಡಿಸ್ಟ್ರಿಕ್ಟಿಗೆ ಒಳ್ಳೆಯದಾಗಬೇಕು, ಎನ್ನುವ ಅಭಿಪ್ರಾಯದಿಂದ ನಡೆಯುತ್ತಿಲ್ಲ. ಸುಮ್ಮನೆ ಮುಂದಿನ ಚುನಾವಣೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಹೀಗೆ ಬದಲಾವಣೆಮಾಡಿಕೊಳ್ಳಬೇಕೆಂದು ಎಲ್ಲ ಕೆಲಸಗಳನ್ನೂ ಮಾಡುತ್ತಿದ್ದಾರೆ ಎನ್ನುವುದು ವ್ಯಕ್ತವಾಗುತ್ತದೆ.

ಶ್ರೀ ಕಡಿದಾಳ್ ಮಂಜಪ್ಪ.—ಆ ಭಾವನೆ ಇಲ್ಲ.

ಶ್ರೀ ಜೆ. ಮಹಮ್ಮದ್ ಇಮಾಂ.—ಯಾಕೆಂದರೆ ಸರ್ಕಾರದಲ್ಲಿ ಬೇರೆ ನೀತಿಗಳು, ಭಾವನೆಗಳು ಹುಟ್ಟಿಕೊಂಡಿರುವುದು ಇದನ್ನು ಪುಷ್ಟೀಕರಿಸುತ್ತದೆ. ಸರ್ಕಾರದವರು ಕೆಲವು ಸಂಸ್ಥೆಗಳಿಗೆ ಕೆಲವು ಸದಸ್ಯರ ಈ ನಾಮಕರಣ ಮಾಡುತ್ತಿದ್ದಾರೆ, ಕೆಲವು ಸದಸ್ಯರನ್ನು ಚುನಾಯಿಸುತ್ತಿದ್ದಾರೆ. ಭದ್ರಾವತಿ ಕಬ್ಬಿಣದ ಕಾರ್ಖಾನೆಗೆ 10-12 ಜನರನ್ನು ಚುನಾಯಿಸಿದರು. ಪಾಂಡವಪುರ ಸಕ್ಕರೆ ಕಂಪೆನಿಗೂ ಅದೇರೀತಿ ಮಾಡಿದ್ದಾರೆ. ಆಡಳಿತಕ್ಕೆ ಬರುವವರೆಗೆ ಪಕ್ಷದ ಪರವಾಗಿ ಇರಬೇಕು. ಯಾವಾಗ ಆಡಳಿತಕ್ಕೆ, ಬಂದರೋ, ಆಗ ಮಂತ್ರಿಗಳು ಬರೀ ಕಾಂಗ್ರೆಸ್‌ಗೋಸ್ಕರ ಮಂತ್ರಿಗಳಲ್ಲ, ದೇಶಕ್ಕೆಲ್ಲ ಮಂತ್ರಿಗಳು ಎಲ್ಲ ಜನಗಳ ಹಿತರಕ್ಷಣೆ ಮಾಡತಕ್ಕದ್ದು ಅವರ ಕರ್ತವ್ಯ. ಅವರು ಅನುಸರಿಸುತ್ತಿರುವ ನೀತಿ ಪಕ್ಷವನ್ನೇ ಅನುಸರಿಸಿಕೊಂಡಿದೆ. Bhadravati Iron Works Boardಗೆ ಹಾಕಿರುವ 12 ಮಂದಿ ಸದಸ್ಯರೂ ಸಹ ಕಾಂಗ್ರೆಸ್ಸಿನವರೇ ಆಗಿದ್ದಾರೆ. ಈ ಸ್ಥಾನಗಳೆಲ್ಲಾ ಕಾಂಗ್ರೆಸ್ ಧುರೀಣರಿಗೆ ಮೀಸಲಾಗಿದೆಯೇ ಹೊರತು ಇತರರಿಗಿಲ್ಲ. ಕಬ್ಬಿಣ ಅಂದರೆ ಏನು ಇತ್ಯಾದಿ ವಿಷಯಗಳು ತಿಳಿದಿರಲಿ ತಿಳಿಯದೆ ಇರಲಿ ಅಂಥವರನ್ನೆಲ್ಲ ಈ ಬೋರ್ಡಿನಲ್ಲಿ ಮೆಂಬರುಗಳಾಗಿ ಹಾಕಿದ್ದಾರೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಶ್ರೀಮಾನ್ ಇಮಾಂಸಾಹೇಬರನ್ನೂ ಅನೇಕ ಕಮಿಟಿಗಳಿಗೆ ಹಾಕಿದ್ದಾರೆ. ನಾವೇನೂ ಬೇಡವೆಂದು ಹೇಳಿಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—12 ಜನರನ್ನೂ ಕಾಂಗ್ರೆಸ್‌ನವರನ್ನೇ ಹಾಕಿದ್ದಾರೆಂದು ಹೇಳುವುದು ಸರಿಯಲ್ಲ. 3-4 ಜನ ಕಾಂಗ್ರೆಸ್ಸೇತರರೂ ಇದ್ದಾರೆ. All members are not congressmen. Please read the list.

ಶ್ರೀ ಜೆ. ಮಹಮ್ಮದ್ ಇಮಾಂ.—ಆ list ಈಗ ಇಲ್ಲಿಲ್ಲ. ಆದರೆ ನಾನು ಹೇಳುವುದೇನೆಂದರೆ ಸರ್ಕಾರದ ಆಡಳಿತದಲ್ಲಿ ಪಕ್ಷದ ಮನೋಭಾವನೆ ಇರಕೂಡದು.

ಶ್ರೀ ಕಡಿದಾಳ್ ಮಂಜಪ್ಪ.—ಇನ್ನು ಕೆಲವು ಸಂದರ್ಭಗಳಲ್ಲಿ ಸರ್ಕಾರದವರಮೇಲೆ ಇನ್ನೊಂದು ಆರೋಪಣೆ ಬರುತ್ತದೆ. ಗ್ರಾಮಸ್ಥರಿಗೇ ಹೆಚ್ಚಿಗೆ ಪ್ರೋತ್ಸಾಹ ಕೊಡುತ್ತಿದ್ದಾರೆಂದು ಹೇಳುತ್ತಾರೆ. ಅಂಥದಕ್ಕೇನು ಮಾಡುವುದಕ್ಕಾಗುತ್ತದೆ?

ಶ್ರೀ ಟಿ. ಮರಿಯಪ್ಪ (ಮೈಸೂರು-ಉತ್ತರ).—ಪ್ಲಾನಿಂಗ್ ಕಮಿಷನ್ನಿಗೆ ಅವರನ್ನೇ ಹಾಕಿದ್ದಾರೆ! ಅವರೇ ಉತ್ತರ ಕರ್ನಾಟಕಕ್ಕೆ tour ಹೋಗಿದ್ದಾರೆ. He must be fair to Government.

ಶ್ರೀ ಜೆ. ಮಹಮ್ಮದ್ ಇಮಾಂ.—ಪ್ಲಾನಿಂಗ್ ಕಮಿಷನ್ನಿಗೆ ಹಾಕಿರುವ ವಿಚಾರ ನಾನೀಗ ಪ್ರಸ್ತಾಪ ಮಾಡಲಿಚ್ಛಿಸುವುದಿಲ್ಲ.

ಮುಖ್ಯವಾಗಿ, ಈ ವಿಚಾರಗಳಲ್ಲಿ ರಾಜಕೀಯ ದೃಷ್ಟಿಯನ್ನು ಬಿಟ್ಟು ದೇಶದ ದೃಷ್ಟಿಯನ್ನು ಮನಸ್ಸಿನಲ್ಲಿಟ್ಟುಕೊಂಡು ನಡೆದರೆ ಕೆಲಸ ಚೆನ್ನಾಗಿ ನಡೆಯುತ್ತದೆ. ಈ ಮಸೂದೆಯಲ್ಲಿ ತಾಲ್ಲೂಕನ್ನು ಒಂದು ಚುನಾವಣಾ ಕ್ಷೇತ್ರವಾಗಿ ಮಾಡಿದ್ದೀರಿ. ಈ ಕಡೆಯವರೂ ಮತ್ತು ಆ ಕಡೆಯವರೂ ಕೆಲವರು ಹೋಬಳಿವಾರು ಕ್ಷೇತ್ರಗಳನ್ನೂ ಅಥವಾ ಒಂದೊಂದು ತಾಲ್ಲೂಕನ್ನು ಮೂರು, ಮೂರು ಕ್ಷೇತ್ರಗಳನ್ನಾಗಿಯೋ ಮಾಡಬೇಕೆಂದು ಹೇಳಿದ್ದಾರೆ. ಇದರಲ್ಲಿ ನಮ್ಮ ಅಭಿಪ್ರಾಯ ಇಷ್ಟೇ. ಕಾಂಗ್ರೆಸ್ ಸಂಸ್ಥೆಯಾದರೆ ಅದೊಂದು

ದೊಡ್ಡ ಸಂಸ್ಥೆ. ಅದಕ್ಕೆ ಅನೇಕ ಸಹಾಯ ಸೌಲಭ್ಯಗಳಿವೆ. ದೊಡ್ಡ ಕ್ಷೇತ್ರದಲ್ಲಾದರೂ ಕೆಲಸ ಮಾಡುವುದಕ್ಕೆ ಅನುಕೂಲತೆಗಳಿವೆ. ಅದನ್ನು ತಿಳಿದು ಕಾಂಗ್ರೆಸ್ಸಿನವರೆಲ್ಲರೂ ಇದನ್ನು ಒಪ್ಪುತ್ತಾರೆಂದು ತಿಳಿದು ನೀವು ತಾಲ್ಲೂಕನ್ನು ಒಂದು ಚುನಾವಣಾ ಕ್ಷೇತ್ರವೆಂದು ಮಾಡಿರುತ್ತೀರಿ. ಅದಕ್ಕೆ ಬದಲು ಹೋಬಳಿವಾರಾಗಿ ಮಾಡಿದರೆ, ಮೂರು ಮೆಂಬರುಗಳನ್ನು ಆರಿಸಬೇಕಾಗಿದ್ದರೆ ಎಲ್ಲರೂ ಒಂದೇ ಹೋಬಳಿಯಿಂದ ಬರುವುದಕ್ಕೆ ಸಾಧ್ಯವಿರುವುದಿಲ್ಲ. ಒಬ್ಬೊಬ್ಬರು ಒಂದೊಂದು ಹೋಬಳಿಯಿಂದ ಬರಬೇಕಾಗುತ್ತದೆ. ಅಲ್ಲಿಗೆ ಹೆಚ್ಚು ಜನ ಹಳ್ಳಿಗಾಡಿನಿಂದಲೇ ಬಂದಂತಾಗುತ್ತದೆ. ತನ್ನ ಪ್ರಾತಿನಿಧ್ಯದಲ್ಲೂ ಕೂಡ, he will effectively represent the interests of that hobli and the representation will be more equitable than it would be if all the three members are elected from one hobli or from one place. ಈ ರೀತಿ ಹಿಂದೆ ಆಗುತ್ತಿತ್ತು. ಹಿಂದೆ ಅಸೆಂಬ್ಲಿಗೆ ನಮ್ಮ ಬೆಂಗಳೂರಿನಿಂದಲೇ ಮೂರು ಜನ ಮೆಂಬರುಗಳು ಈ ರೀತಿಯಲ್ಲಿ ಚುನಾಯಿತರಾಗಿ ಬರುತ್ತಿದ್ದರು. ಅದೇ ಪ್ರಕಾರ ತಾವೀಗ ತಾಲ್ಲೂಕನ್ನೆಲ್ಲಾ ಒಂದೇ ಒಂದು ಚುನಾವಣಾ ಕ್ಷೇತ್ರವೆಂದು ಮಾಡುವುದಾದರೆ, ಎಲ್ಲರೂ ಒಂದೇ ಸ್ಥಳದವರೇ, ಧನಿಕರೂ ಬಲ್ಲಿದರಾಗಿರುವವರೇ ಬರುತ್ತಾರೆ. ತಾಲ್ಲೂಕಿನಲ್ಲಿ influence ಇರತಕ್ಕವರೇ ಮೂರು ಜನರೂ ಚುನಾಯಿತರಾಗುತ್ತಾರೆ. ಅಂಥವರಿಗೇ ಇದು monopoly ಯಾಗಿಬಿಡುತ್ತದೆ. ಇದನ್ನು ಬಿಟ್ಟು ಹೋಬಳಿ ಕ್ಷೇತ್ರಗಳೆಂದು ಮಾಡಿದರೆ ಹೋಬಳಿಗೊಬ್ಬೊಬ್ಬರು ಬರುತ್ತಾರೆ. ಹೋಬಳಿಯ interestsನ್ನೂ guard ಮಾಡುವುದಕ್ಕೆ ಅವರಿಗೊಂದು ಅವಕಾಶವಿದ್ದಹಾಗಾಗುತ್ತದೆ. ತಾಲ್ಲೂಕನ್ನೊಂದು ಕ್ಷೇತ್ರವಾಗಿ ಮಾಡಿದರೆ ಉಮೇದುವಾರರಿಗೂ ಕಷ್ಟವಾಗುತ್ತದೆ; ಖರ್ಚೂ ಜಾಸ್ತಿ; ಪ್ರಾತಿನಿಧ್ಯವೂ equitable ಆಗಿರುವುದಿಲ್ಲ. ಕೆಲವರು ಹೇಳಿದರು, 'ಹೋಬಳಿವಾರು ಮಾಡಿದರೆ, there is room for corruption' ಎಂದು. They quoted the example of municipalities in this connection. ಮುನಿಸಿಪಾಲಿಟಿಗೂ, ಹೋಬಳಿಗೂ ಏನು ಸಂಬಂಧ? ಅಲ್ಲದೆ 30,000 ಪ್ರಜಾಸಂಖ್ಯೆಗೆ ಒಬ್ಬರು ಮೆಂಬರಂತೆ ತೆಗೆದುಕೊಳ್ಳಬೇಕೆಂದು ಹುಚ್ಚೇಗೌಡರು ಒಂದು ತಿದ್ದುಪಡಿಯನ್ನು ಕೂಡ ಸೂಚಿಸಿದ್ದಾರೆ. ಅಲ್ಲಿಗೆ 15,000 ವೋಟರುಗಳಾದರು. ಹದಿನೈದು ಸಾವಿರ ಜನಕ್ಕೂ ದುಡ್ಡು ಕೊಡುವುದಕ್ಕೆ ಹೋದರೆ ನಿರ್ನಾಮವಾಗುತ್ತದೆ. Is it ever possible to purchase them? ಮೊದಲಿನಿಂದಲೂ ನಾನೇಕೆ general electionನ್ನಿಗೆ ವಿರೋಧವಾಗಿದ್ದೇನೆಂದರೆ, it would involve tremendous expenditure. That is the most important point. ನಮ್ಮ ಅಸೆಂಬ್ಲಿ ಚುನಾವಣೆಯಲ್ಲಿ ಎಷ್ಟು ದುಡ್ಡು ಖರ್ಚಾಯಿತೋ ಅಷ್ಟೇ ದುಡ್ಡು ಹೆಚ್ಚು ಕಡಮೆ ಇದಕ್ಕೂ ಖರ್ಚುಮಾಡಬೇಕಾಗಿ ಬರುತ್ತದೆ. 1951ನೆಯ ಜನರಲ್ ಎಲೆಕ್ಷನ್ನಲ್ಲಿ ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲೇ ಒಂದು ಲಕ್ಷ, ಎರಡು ಲಕ್ಷ ಖರ್ಚಾಯಿತು! ನಮ್ಮ ದೇಶದಲ್ಲಿ ಆಗ ಒಟ್ಟು ಎಷ್ಟು ಖರ್ಚಾಯಿತೆಂದು ಮಾನ್ಯ ಮಂತ್ರಿಗಳೇ ಹೇಳಲಿ. ಅಷ್ಟೇ ದುಡ್ಡನ್ನು ಈ ಚುನಾವಣೆಗೂ ಖರ್ಚುಮಾಡಬೇಕಾದೀತು. ಆಗ 24 ದಿವಸಗಳು ನಡೆಯಿತು, ಈಗಲೂ 24 ದಿವಸ ನಡೆಯಬೇಕಾಗುತ್ತದೆ. This involves a very heavy expenditure; who is to meet that? Is it to be borne by the District Board or by Government? ಡಿಸ್ಟ್ರಿಕ್ಟ್ ಬೋರ್ಡಿನಮೇಲೆ ಹಾಕಿದರೆ ಒಂದೊಂದು ಡಿಸ್ಟ್ರಿಕ್ಟ್ ಬೋರ್ಡಿಗೂ ಒಂದು-ಎರಡು ಲಕ್ಷ ರೂಪಾಯಿಗಳನ್ನು ಕೊಡಬೇಕಾಗುತ್ತದೆ. This was one point on which I said that for such local elections general elections are unnecessary. I do not want to differ. But even in my heart of hearts, I believe, in indirect election. ಆಮೇಲೆ ಒಂದೊಂದು ತಾಲ್ಲೂಕನ್ನು ಒಂದು ಕ್ಷೇತ್ರವಾಗಿ ಮಾಡಿದರೆ ಸರಿಯಾದ ಸದಸ್ಯರೂ ಬರುವುದಿಲ್ಲ. You must be sure of getting deserving candidates, people with character must come forward, people with enthusiasm and zeal must come forward. But if you make the elections such a herculian affair, ಯಾರು 15,000, 20,000 ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಬರುತ್ತಾರೆ? ಯಾವ ಸರಿಯಾದ candidate ಕೂಡ ಅಷ್ಟು ದುಡ್ಡನ್ನು ಖರ್ಚುಮಾಡುವುದಕ್ಕೆ ಮುಂದೆ ಬರುವುದಿಲ್ಲ. ದುಡ್ಡಿರುವವರು ಯಾರೋ ಬರುತ್ತಾರೆ ಅಷ್ಟೆ. ಅಂಥವರಿಗೂ ಇದರಿಂದ enormous cost ಆಗುತ್ತದೆ. ಅವರೊಂದು ಕಾರನ್ನಿಟ್ಟುಕೊಳ್ಳಬೇಕು, ಪೆಟ್ರೋಲ್ ಖರ್ಚು ವಹಿಸಬೇಕು. ಇಷ್ಟೆಲ್ಲಾ ಮಾಡಿದರೂ ಅವನಿಗೆ ಬರತಕ್ಕ ಪ್ರತಿಫಲ ಕಡಮೆ. After all what are District Boards? Strictly speaking in Local Bodies you should not have politics. I am one of those who believe that in Local Bodies, politics must be completely eschewed. There is no difference. If we are fighting the election for Local Bodies on party tickets, all these troubles will ensue. ಸ್ಥಳೀಯ ಸಂಸ್ಥೆಗಳಲ್ಲಿ ಅಂಥ ಭಿನ್ನಾಭಿಪ್ರಾಯ ಯಾವುದೂ ಇಲ್ಲ. ಬಾವಿ ಕೊಡುವುದು, ರಸ್ತೆ ಕೊಡುವುದು—ಇಂಥ ವಿಷಯಗಳಲ್ಲಿ ಭಿನ್ನಾಭಿಪ್ರಾಯಕ್ಕೆ ಕಾರಣವಿಲ್ಲ. ಇದಕ್ಕೆ ಪಾರ್ಟಿಗಳಾದರೂ ಏಕೆ? ಈಗಲಾದರೂ ನಮ್ಮ ಕಾಂಗ್ರೆಸ್ ಮಿತ್ರರು ಇದನ್ನು ಮನಗಂಡು, ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ಸ್ಥಳೀಯ ಚುನಾವಣೆಗಳಲ್ಲಿ ಪಾರ್ಟಿಗಳಿರಕೂಡದೆಂದು ಮಾಡಿ, ಸುಲಭವಾಗಿ, ಸುಲಲಿತವಾಗಿ ಚುನಾವಣೆಗಳು ನಡೆಯುವಂತೆ ಮಾಡೋಣ. ದಕ್ಷರೂ, ಯೋಗ್ಯರೂ ಆದವರೇ ಬರಲಿ ಎಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಿದರೆ ಯಾವ ಕಷ್ಟವೂ ಇರುವುದಿಲ್ಲ. ಅದು ಬಿಟ್ಟು, if you are fighting the election for Local Bodies on party tickets, all these troubles will ensue.

ಶ್ರೀ ಟಿ. ಮರಿಯಪ್ಪ.—ಇಂಗ್ಲೆಂಡಿನಲ್ಲಿ ಕೌಂಟಿ ಕೌನ್ಸಿಲ್‌ಗಳನ್ನು ಹಾಗಾದರೆ ಯಾವ ರೀತಿ ಮಾಡುತ್ತಾರೆ?

Sri J. MOHAMED IMAM.—ಅಲ್ಲಿ ಈ ರೀತಿಯಿಲ್ಲ. There is no adult franchise in the County Council of England. There one must be a rate payer and only a rate payer has a power to vote. There

(SRI J. MOHAMED IMAM.)

is no adult franchise for County Council. Any Local body is a corporation. Corporator means a member of that particular constituency who must have some interest in the Corporation. If a member has absolutely no interest and does not contribute towards the corporation, he cannot have any part in the Corporation. So, for an election to the County Council, they have made a convention that only the rate-payers should be a voter.

ನಮ್ಮಲ್ಲಿ ಆ ತತ್ವವನ್ನನುಸರಿಸಿಲ್ಲ. Even now, I am feeling that our old system of having a limited franchise was the best. ಆಗ ಒಂದು ರೀತಿಯಲ್ಲಿ ಚೆನ್ನಾಗಿಯೇ ನಡೆಯುತ್ತಿತ್ತು. ಈಗ ಇಷ್ಟೆಲ್ಲಾ ಮಾಡಿರುವುದರಿಂದ ನಮಗೇ ಕಷ್ಟ ಬಂದಿದೆ. ಆದ್ದರಿಂದ ಸಾರ್ವತ್ರಿಕ ಚುನಾವಣೆಯಿರಲಿ ಇಲ್ಲದಿರಲಿ, it is not a serious point. But it is absolutely necessary to have a single member constituency. If you make the entire taluk as one constituency, then you will be landing yourself into trouble and you will be plunging the people also into despair. ಆಗ ಡಿಸ್ಟ್ರಿಕ್ಟ್ ಕೆಲಸಗಳೆಲ್ಲಾ ಹೊಲಸಾಗಿ ಹೋಗುತ್ತವೆ. ಈಗಲೇ ಎಲೆಕ್ಷನ್ ಮುಂತಾದುವುಗಳನ್ನು ಮಾಡಿ ಡಿಸ್ಟ್ರಿಕ್ಟ್ ಬೋರ್ಡ್ ಕೆಲಸಕಾರ್ಯಗಳು ನಿರಾಶಾದಾಯಕವಾಗಿರುತ್ತವೆ. ಅಲ್ಲದೆ, ಹಿಂದಿನ ಚುನಾವಣೆಗಳಲ್ಲಿ, ಈಗ ನೀವು ಹೇಳಿರುವಂತೆ ಮುನಿಸಿಪಾಲಿಟಿಯಲ್ಲಿರುವವರು ಯಾರೇ ಆಗಲಿ ಉಮೇದುವಾರರಾಗಿ ನಿಲ್ಲಬಹುದು ಆದರೆ ವೋಟು ಮಾಡುವುದಕ್ಕೆ ಹಕ್ಕಿಲ್ಲ, ಎಂದಿರಲಿಲ್ಲ. ಇದು ನಿಯಮ ನಿಬಂಧನೆಗಳಿಗೆ ವ್ಯತಿರಿಕ್ತವಾಗಿರುವಂತೆ ಕಾಣುತ್ತದೆ. ನ್ಯಾಯವಾಗಿ ಉಮೇದುವಾರನಾಗಿ ನಿಲ್ಲುವವನು ವೋಟುದಾರನಾಗಿರಲು ಮುಂಚೆಯೇ ಹಕ್ಕು ಪಡೆದವನಾಗಿರಬೇಕು. ಇಲ್ಲದಿದ್ದರೆ ಇದೊಂದು ಬಹಳ ವಿರೋಧಾಭಾಸವಾದ ರೀತಿಯಾಗಿರುತ್ತದೆ. Even now, the Hon'ble Minister may bring an amending Bill.

Mr. SPEAKER.—Not now. How can the Government bring in an amending Billnow? Rules do not permit it.

Sri Mulka GOVINDA REDDY (Chitaldrug).—Rules can be suspended and the Government can bring in an amending Bill. Last time the Government did move an amendment.

Sri B. HUTCHE GOWDA.—This Bill may be referred to a Select Committee and amendments effected.

ಶ್ರೀ ಜೆ. ಮಹಮ್ಮದ್ ಇಮಾಂ.—Anyway, I am warning the Government. ಇದರಿಂದ ಏನಾಗುತ್ತದೆಂದರೆ ಡಿಸ್ಟ್ರಿಕ್ ಬೋರ್ಡೆಲ್ಲಾ municipalise ಆಗಿ ಬಿಡುತ್ತದೆ. ಮೊನ್ನೆತಾನೆ ಒಬ್ಬರು ಇಲ್ಲಿ ಹೇಳುತ್ತಿದ್ದರು, ನಾನು ಹೋಗಿ ನಿಂತು ಡಿಸ್ಟ್ರಿಕ್ ಬೋರ್ಡ್ ಪ್ರೆಸಿಡೆಂಟ್ ಆಗುತ್ತೇನೆ ಎಂದು. ಹೀಗಾದರೆ ಹಳ್ಳಿಯವರಿಗೆ ಯಾವ interest ಕೂಡ ಇರುವುದಿಲ್ಲ.

ಆಮೇಲೆ ಡಿಸ್ಟ್ರಿಕ್ ಬೋರ್ಡ್‌ಗಳಿಗೆ ಭೂಕಂದಾಯದಲ್ಲಿ ಶೇಕಡ 12½ ಯಷ್ಟನ್ನು ಕೊಡಬೇಕೆಂದು ಇದುವರೆಗೂ ನಿಯಾಮಕವಾಗಿತ್ತು. This was a great boon and I thought the Government would render to the District Boards a great help. ಆದರೆ ಈಗ ಇದ್ದಕ್ಕಿದ್ದಹಾಗೆ ಇದನ್ನು ತೆಗೆಯಬೇಕೆಂದು ಯೋಚನೆ ಮಾಡಿದ್ದೀರಿ. ಅದೂ ಎಂಥ ಕಾಲದಲ್ಲಿ ? ಯಾವುದೊಂದು ಡಿಸ್ಟ್ರಿಕ್ ಬೋರ್ಡಿನಲ್ಲಿಯೂ ದುಡ್ಡಿಲ್ಲ. Every District Board has become bankrupt. ಎಲ್ಲದರಲ್ಲೂ *minus* Budget ಇದೆ. ನಮ್ಮ ಚಿತ್ರದುರ್ಗ ಡಿಸ್ಟ್ರಿಕ್ಟ್ ಬೋರ್ಡಿಗೆ 9 ಲಕ್ಷ ರೂಪಾಯಿಗಳ liabilities ಇವೆ. ಹೀಗಿರುವಲ್ಲಿ ಇದೇನೊ ಅಲ್ಪಸ್ವಲ್ಪ ದುಡ್ಡು ಬರುತ್ತದೆ, ಕೆಲಸ ಕಾರ್ಯಗಳನ್ನು ಮಾಡೋಣ ಎಂದರೆ ಅದಕ್ಕೂ ಕಲ್ಲು ಬಿತ್ತು. ಆ ಡಿಸ್ಟ್ರಿಕ್ಟ್ ಬೋರ್ಡ್‌ಗಳಿಗೆ ವಿಲೇಜ್ ಪಂಚಾಯ್ತಿಗಳಿಗೆ ಸಂಬಂಧಪಟ್ಟಂತೆ ಮೆಡಿಕಲ್ ರಿಲೀಫ್, ವ್ಯಾಕ್ಸಿನೇಷನ್ ಮುಂತಾದ ಕೆಲಸಗಳೂ ಇವೆ. ಇದಕ್ಕೆಲ್ಲಾ ದುಡ್ಡು ಬೇಕು. ಈಗ ಅದಕ್ಕೆ ಬರುತ್ತಿರುವ ದುಡ್ಡನ್ನೂ ತೆಗೆದುಕೊಂಡು ಹೋಗುತ್ತಿದ್ದೀರಿ. ಈ ಹಣವನ್ನು ತೆಗೆದುಕೊಂಡು ಹೋದಮೇಲೆ ಅದಕ್ಕೇನಾದರೂ ಬೇರೆ ವ್ಯವಸ್ಥೆ ಮಾಡಿದ್ದೀರಾ ? You will be depriving the income that was intended for the District Boards. If you interpose a third body between the Village Panchayet and the District Board, you will be creating the worst conditions and you will be crippling not only the resources of these local bodies, but you will be creating a handicap and making the village panchayet only a nominal body. You will be depriving the District Board of all its powers. ಈ ಮಧ್ಯೆ ಏರ್ಪಟ್ಟಿದ್ದ ಚಂದ್ರಶೇಖರಯ್ಯ ಕಮಿಟಿಯವರೂ ಕೂಡ ತಮ್ಮ ರಿಪೋರ್ಟಿನಲ್ಲಿ ಏಕೆ ಈ ರೀತಿ ಮಧ್ಯೆ ಒಂದು Body ಬಂತೆಂಬುದನ್ನು ಹೇಳಿದ್ದಾರೆ. 1925 ನೆಯ ಇಸವಿಯಲ್ಲಿ ವಿಲೇಜ್ ಪಂಚಾಯ್ತಿ ಆಕ್ಟ್ ಬಂದಾಗ ಅವರು ಸ್ಪಷ್ಟವಾಗಿ ಹೇಳಿದ್ದಾರೆ.

> "You should not have a body which has no normal resources of revenue and which depends upon the grant of others" ಎಂದು ಅವರು ಸೂಚಿಸಿದ್ದಾರೆ.

3-30 P.M

It will act as a big obstacle. ಇದರಿಂದ ಈ ಸಂಸ್ಥೆಗಳಿಗಿರುವ ಅಧಿಕಾರ ಕೂಡ ಕಡಮೆಯಾಗುತ್ತದೆ.

It must either be a statutory body like the taluk board with independent source of revenue ಅಥವಾ ಇದನ್ನೇ ಬೇರೆಮಾಡಬೇಕು. Its existence should not be to

the prejudice of the Village Panchayet or the District Board. ಈಗಿರುವ ಕಾನ್ಸ್ಟಿಟ್ಯೂಷನ್ ಪ್ರಕಾರ every village must be a self-governing unit. ಎಷ್ಟು ಹಣ ಬಂದರೂ ಗ್ರಾಮ ಪಂಚಾಯಿತಿಗಳಿಗೆ ಕೊಡಬೇಕು.

We must encourage Village Panchayets so that Village Panchayets may become as strong as possible. There is a proposal even to entrust judicial powers and powers of collection to village panchayets. ಹಾಗಿರಬೇಕಾದರೆ ಈ ಡೆವಲಪ್‌ಮೆಂಟ್ ಬಾಡಿಗೆ ಸರ್ಕಾರಿ ಗ್ರಾಂಟು ಕೊಟ್ಟರೇನಾಗುತ್ತದೆಂದರೆ ಗ್ರಾಮ ಪಂಚಾಯ್ತಿಗೆ ಪ್ರಾಮುಖ್ಯತೆ ಹೋಗುತ್ತದೆ, ಜಿಲ್ಲಾ ಬೋರ್ಡು ರೆವೆನ್ಯೂ ತೆಗೆದುಕೊಳ್ಳುತ್ತದೆ. ಇದರ ಕೆಲಸ ಅದರ ಕೆಲಸ ಎರಡೂ ನಡೆಯುವುದಿಲ್ಲ. It may be purely a Government nominee. ಮರಿಯಪ್ಪನವರಿದ್ದಾಗ ರೂರಲ್ ಡೆವಲಪ್‌ಮೆಂಟ್ ಕಮಿಟಿ, ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕಮಿಟಿ ಮಾಡಿದರು. ಅವು ಚೆನ್ನಾಗಿ ಕೆಲಸ ಮಾಡಿದುವೋ, ಇಲ್ಲವೋ, ಅಂತೂ ಸರ್ಕಾರ ಅವನ್ನು ವಜಾಮಾಡಿತು. ಅವು ಚೆನ್ನಾಗಿ ಕೆಲಸ ಮಾಡುತ್ತಿದ್ದರೆ. Why did you not continue them? It is because that these bodies were not working properly, you abolished them. Even between these two statutory bodies, they want to have a Government nominated body. ಅವರಿಗೆ ಹೇಳುವವರೂ ಇಲ್ಲ, ಕೇಳುವವರೂ ಇಲ್ಲ. They are not responsible to anybody. They are not responsible even to the Deputy Commissioners. They are only responsible to the Government to whom they owe their existence. ಸರ್ಕಾರಕ್ಕೆ ತಾವು ಜವಾಬ್ದಾರರೆಂದು ಹೇಳಿಕೊಂಡು ಅವರು ಆಡಿದ್ದೇ ಆಟ, ಹೊಡಿದ್ದೇ ಲಗ್ಗೆಯಾಗಿದೆ. ಈ ರೀತಿ ತಮ್ಮ ಪಕ್ಷದ ದೃಷ್ಟಿಯಿಂದ, ಮುಂದಿನ ಚುನಾವಣೆ ದೃಷ್ಟಿಯಿಂದ ಮಾಡುತ್ತಾರೇ ಹೊರತು ದೇಶದ ಅಭ್ಯುದಯದ ದೃಷ್ಟಿಯಿಂದ ಮಾಡುತ್ತಿಲ್ಲ. This will be most undemocratic and retrograde idea. ಗ್ರಾಮ ಪಂಚಾಯಿತಿಗಳು, ಡಿಸ್ಟ್ರಿಕ್ಟ್ ಬೋರ್ಡುಗಳು ಏಜೆನ್ಸಿಗಳು ಮಾತ್ರ. When there are two statutory bodies, two agencies, you can spend the amount through them. Do you mean to say that the District Board is incompetent to carry on the work? Is the Village Panchayet incompetent? You must tell us where is the need to have an intermediate body. ಎಲ್ಲಾದರೂ ಕಾರಣ ಕೊಟ್ಟಿದ್ದೀರಾ? ಏನು ಕೆಲಸ ಮಾಡಿದ್ದಾರೆ? ಬಾವಿ ಕೆಲಸ ಅಥವಾ ರಸ್ತೆ ಕೆಲಸ ಮಾಡಿದ್ದಾರೆಯೇ? ಏನೇನ ಕೆಲಸಗಳಿಗಾಗಿ ನೀವು ಅವರಿಗೆ ಹಣ ಕೊಡುವುದು? ರಸ್ತೆ ಕೆಲಸ, ಬಾವಿ ಕೆಲಸ. You assign them to the Panchayets or District Boards. It will simply be a superfluous body which will waste money. Please think over. It is my constructive suggestion. Don't think of setting up an intermediate body either statutory or non-statutory body between these two bodies. This is my appeal. ಹಾಗಿಲ್ಲದೆ ನಾಮಿನೇಷನ್ ಮುಂತಾದ್ದನ್ನೆಲ್ಲ ಮಾಡಿದರೆ You must change your policy or aim or it will be misunderstood. We are bound to consider that it is done with some partisan spirit to please your own party-men. When my friend asked me first whether I would speak, I said, I am sick of this District Board affair. I am rather sick of this Bill. I said I am going to give a blank cheque to the Government. ಈಗಿರುವ ಹಾಗೆ I am afraid we do not see the end of this Bill. ನಾನು ಸಲಹೆ ಮಾಡುವುದು: Let the Government not be in a hurry. Let them not be hasty. ಈಗ ಸೆಲೆಕ್ಟ್ ಕಮಿಟಿ ಮಾಡಿ. We will thrash out the Bill; we will come to some understanding in the light of difficulties as revealed by the working of the old Act. Let it be referred to the Select Committee of this House. ಎರಡು ದಿವಸ ಕೂತು ಪರಿಶೀಲಿಸೋಣ. There are 8 or 9 District Board Presidents here who have done yeomen service to the District Board. You please refer to them. Please constitute a small committee of this House. Whether to have single-member constituency or double-member constituency, whether to have direct or indirect election or whether to have an intermediate body or not; all these points could be considered in a committee. I appeal to you not to proceed in haste, but to refer it to a small committee with direction to submit their report within two or three days. Otherwise, you will be landing yourself in greater trouble. The same controversy is bound to continue.

Mr. SPEAKER.—The House will now rise and meet at 4-5 P.M.

The House adjourned for Lunch at Thirty-five Minutes past Three of the Clock and reassembled again at Five Minutes past Four of the Clock.

[MR. SPEAKER in the Chair.]

*ಶ್ರೀ ಎಂ. ಮಾದಯ್ಯ (ನಂಜನಗೂಡು—ಅನುಸೂಚಿತ ಜಾತಿಗಳು).—ಸ್ವಾಮಿ, ಈ ಬಿಲ್ಲನ್ನು ಕ್ಲಾಜುವಾರಾಗಿ ವಿಮರ್ಶೆಮಾಡಿ ಕೆಲವು ಸಲಹೆಗಳನ್ನು ನೀಡುತ್ತೇನೆ. ಎರಡನೆಯ ಕ್ಲಾಜಿನಲ್ಲಿ ಷೆಡ್ಯೂಲ್ಡ್ ಕ್ಯಾಸ್ಟು

(ಶ್ರೀ ಎಂ. ಮಾದಯ್ಯ)

ಡೆಫಿನಿಷನ್ ಕೊಟ್ಟಿದೆ. ಅದರಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಎಂದರೆ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಎಂದು ಕಾನ್ಸ್ಟಿಟ್ಯೂಷನ್ ಆರ್ಡರಿನಲ್ಲಿರುವುದೆಲ್ಲಾ ಸೇರುತ್ತದೆ, ಪ್ರೆಸಿಡೆಂಟರು ಯಾವ್ಯಾವುದು ಸೇರಬೇಕೆಂದು ಹೇಳುತ್ತಾರೋ ಅದೆಲ್ಲಾ ಸೇರುತ್ತದೆ ಎಂದು ಹೇಳುತ್ತಾರೆ. ಆದರೆ ಹಾಗೆ ಹೇಳುವುದಕ್ಕೆ ಶಾಸನಸಭೆಗೆ ಅಧಿಕಾರವಿಲ್ಲವೆಂಬುದು ನನ್ನ ಅಭಿಪ್ರಾಯ. ಆದರೆ ರಾಜ್ಯಾಂಗದ ಪ್ರಕಾರ ಈ ಅಧಿಕಾರ ಪ್ರೆಸಿಡೆಂಟರಿಗೆ ಮಾತ್ರ ಇರುತ್ತದೆ. For the purpose of this constitution ಎಂದು ಹೇಳುತ್ತಾರೆ. ಹಾಗೆ ಹೇಳುವಾಗ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಎಂದು ಯಾರನ್ನು ಪ್ರೆಸಿಡೆಂಟರು ಗೊತ್ತು ಮಾಡುತ್ತಾರೋ ಅವರು ಮಾತ್ರ ಆ ಪಂಗಡಕ್ಕೆ ಸೇರುತ್ತಾರೆ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಎಂದು ಪ್ರೆಸಿಡೆಂಟರು ಯಾರಿಗೆ ಹೇಳುತ್ತಾರೋ ಅವರು ಮಾತ್ರ ಆ ಪಂಗಡದಲ್ಲಿ ಸೇರುತ್ತಾರೆ. 'For the purpose of this Constitution, ಎಂದು ಹೇಳಿದಾಗ ಪಾರ್ಲಿಮೆಂಟ್ ಮತ್ತು ಲೆಜಿಸ್ಲೇಚರುಗಳಿಗೆ ಮಾತ್ರ ಅನ್ವಯಿಸುತ್ತದೆಂದು ಯಾರೂ ಅರ್ಥಮಾಡಿಕೊಳ್ಳಬಾರದು. ನಾನು ಲೀಗಲ್ ನಾಲೆಡ್ಜ್ ಹೆಚ್ಚಾಗುಳ್ಳ ಸದಸ್ಯನಲ್ಲದಿದ್ದರೂ ನನಗೆ ತಿಳಿದಮಟ್ಟಿಗೆ ಸಾಮಾನ್ಯ ಸದಸ್ಯನಾಗಿ ಹೇಳುವುದಾದರೆ ಈ ಡೆಫಿನಿಷನ್ ಈರೀತಿ ಇರುವುದು ಸರಿಹೊಂದುವುದಿಲ್ಲ. It will be illegal. ಷೆಡ್ಯೂಲ್ಡ್ ಕ್ಯಾಸ್ಟ್ಸ್ ಎಂಬುದನ್ನು ಡಿಫೈನ್‌ಮಾಡಿ ಷೆಡ್ಯೂಲ್ಡ್ ಟ್ರೈಬ್ಸ್ ಎಂಬುದಕ್ಕೆ ಪ್ರತ್ಯೇಕವಾದ ಡೆಫಿನಿಷನ್ ಕೊಟ್ಟರೆ, ರಿಸರ್ವ್ ಅವಕ್ಕೆ ತಕ್ಕಂತೆ ಮಾಡಿಯೆಂದು ಹೇಳಿದರೆ ಸರಿಯಾಗುತ್ತದೆ. ಹಾಗೆ ಹೇಳಬೇಕಾದ್ದು ಅಗತ್ಯ. 1952ನೆಯ ಇಸವಿಯ ಆಕ್ಟ್ ಮಾಡುವಾಗ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಡೆಫಿನಿಷನ್ ಕೊಡಬೇಕಾಗಿತ್ತು. ಹಾಗೆ ಮಾಡಲು ಅಡ್ಡಿ ಆತಂಕವೇನು ? ಹಾಗಿಲ್ಲದೆ ಎರಡನ್ನೂ ಸೇರಿಸಿ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಎಂದು ಹೇಳಿರುವುದು ರಾಜ್ಯಾಂಗಕ್ಕೆ ವಿರೋಧವಾಗಿದೆ, ಸರಿಯಲ್ಲ, ಪ್ರತ್ಯೇಕವಾಗಿ ಡೆಫಿನಿಷನ್ ಇರಬೇಕಾದ್ದು ಅಗತ್ಯ, ಇಲ್ಲದಿದ್ದರೆ ಇಲ್ಲೀಗಲ್ ಎಂದು ಹೇಳುತ್ತೇನೆ. ಹದಿನೈದನೆಯ ಆರ್ಟಿಕಲ್ಲನ್ನು ತಿದ್ದುಪಡಿ ಮಾಡಿದಾಗ ಕೊನೆಯ ಪ್ರಾವಿಸೊನಲ್ಲಿ ಹೀಗೆ ಹೇಳಿದ್ದಾರೆ :

> "Nothing in this article 29 shall prevent the State from making any special provision for the advancement of socially and educationally backward classes of citizens or for scheduled castes or for scheduled tribes"

ಹೀಗೆಂದು ಹೇಳುವಾಗ ನಮ್ಮ ಮುಂದಿರುವ ಬಿಲ್ಲಿನಲ್ಲಾಗಲಿ 1952ನೆಯ ಇಸವಿಯ ಆಕ್ಟಿನಲ್ಲಾಗಲಿ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಅಲ್ಲದೆ ಇನ್ಯಾರಿಗಾದರೂ ರಿಸರ್ವೇಷನ್ ಮಾಡಿದರೆ ಡಿಸ್ಕ್ರಿಮಿನೇಷನ್ ಆಗುತ್ತದೆ. ಷೆಡ್ಯೂಲ್ಡ್ ಕ್ಯಾಸ್ಟಿನವರಿಗೆ ರಿಸರ್ವ್ ಮಾಡಲು ರಾಜ್ಯಾಂಗದ ಅನುಮತಿಯಿದೆ, ಅವರಿಗೆ ರಿಸರ್ವ್ ಮಾಡಿದರೆ ಡಿಸ್ಕ್ರಿಮಿನೇಷನ್ ಆಗುವುದಿಲ್ಲ. For the purpose of the constitution ಎಂದಿರುವುದರಿಂದ 15ನೇ ಆರ್ಟಿಕಲ್ಲಿಗನುಗುಣವಾಗಿ ರಿಸರ್ವ್ ಮಾಡಿದ್ದಾರೆ. ಆದರೆ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಅಂದರೆ ರಾಜ್ಯಾಂಗದ ಪ್ರಕಾರ ಪ್ರೆಸಿಡೆಂಟರು ಗೊತ್ತುಮಾಡಿರುವವರಿಗೆ ಮಾತ್ರ ಅನ್ವಯಿಸುತ್ತದೆ. ಇತರರು ಆರೀತಿ ಮಾಡಿದರೆ ಇಲ್ಲೀಗಲ್ಲಾಗುತ್ತದೆ. ಸಂಬಂಧಪಟ್ಟ ಮಂತ್ರಿಗಳು 'ಲಾ' ಇಲಾಖೆಯನ್ನು ಸರಿಯಾಗಿ ಕನ್ಸಲ್ಟ್‌ಮಾಡಿ ಮಾಡದಿದ್ದರೆ . ನಾಳೆ ದಿವಸ ಷೆಡ್ಯೂಲ್ಡ್ ಟ್ರೈಬ್ಸ್‌ನವರು ಚುನಾವಣೆಗೆ ನಿಂತರೆ ಕೋರ್ಟಿಗೆ ಹೋದರೆ ಆ ಉಮೇದುವಾರರು ಷೆಡ್ಯೂಲ್ಡ್ ಕ್ಯಾಸ್ಟಿನವರಲ್ಲವೆಂದು ತೀರ್ಮಾನ ಬರುತ್ತದೆ. ಈ ತೊಂದರೆಯನ್ನು ನಿವಾರಣೆ ಮಾಡಬೇಕು.

ಐದನೆಯ ಕ್ಲಾಜಿನಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಕಾನ್ಸ್ಟಿಟ್ಯೂಯೆನ್ಸಿ ಫಾಸಲೆ ಹೇಳಿದ್ದಾರೆ ಅದರಲ್ಲಿ

> "Not exceeding three having regard to population of each constituency"

ಎಂದು ಹೇಳಿದೆ. ಇದು ಯಾವುದನ್ನು ಮನಸ್ಸಿನಲ್ಲಿಟ್ಟು ಮಾಡಿದರೋ ಅರ್ಥವಾಗಲಿಲ್ಲ. ಇದು ಅಷ್ಟು ಸರಿಯಾಗಿಲ್ಲ. ಈಗಿರತಕ್ಕ ಆಕ್ಟಿನಲ್ಲಿ ಷೆಡ್ಯೂಲ್ ಏನಿದೆಯೋ ಅದನ್ನೇ ಇಡಬೇಕು. ಹಾಗೆ ಇಡದಿದ್ದ ಪಕ್ಷದಲ್ಲಿ ಜನಸಂಖ್ಯೆಯನ್ನು ಪ್ರತಿಚುನಾವಣಾ ಕ್ಷೇತ್ರದಲ್ಲೂ ಗಮನಿಸಿ ಅದಕ್ಕೆ ತಕ್ಕಂತೆ ಸರ್ಕಾರ ಕ್ಷೇತ್ರಗಳನ್ನು ನಿಗದಿ ಮಾಡಬಹುದು. ಉದಾಹರಣೆಗೆ ಮೈಸೂರು ಜಿಲ್ಲೆಯಲ್ಲಿ ಹತ್ತು ತಾಲ್ಲೂಕುಗಳಿವೆ. 'Not exceeding three' ಎಂದು ಹೇಳುವುದರಿಂದ ಆ ಜಿಲ್ಲೆಯಲ್ಲಿ 30 ಕ್ಕಿಂತ ಜಾಸ್ತಿ ಸದಸ್ಯರಿಗೆ ಅವಕಾಶವಾಗುವುದಿಲ್ಲ; ಪೆರಿಯಾಪಟ್ಟಣ, ಹೆಗ್ಗಡದೇವನಕೋಟೆ, ಹುಣಸೂರು ಕಡೆ ಜಾಸ್ತಿಯಾಗುವುದಿಲ್ಲ. ನಂಜನಗೂಡು ಸಬ್ ಡಿವಿಜನ್ ತಾಲ್ಲೂಕುಗಳಲ್ಲಿ ಒಂದುಲಕ್ಷ ಐವತ್ತುಸಾವಿರ ಜನಸಂಖ್ಯೆಯಿದೆ. ನಂಜನಗೂಡಿಗೆ ಮೂರು, ಹೆಗ್ಗಡದೇವನಕೋಟೆಗೆ ಮೂರು, ಹುಣಸೂರಿಗೆ ಒಂದೆರಡು ಸ್ಥಾನಗಳು ದೊರೆತರೆ ಅದೇ ಹೆಚ್ಚು, ಎಳಂದೂರಿಗೆ ಮೂರು ಸ್ಥಾನ ಕೊಟ್ಟರೆ ಬಹಳ ಕಡಮೆಯಾಗುತ್ತದೆ. ಜನಸಂಖ್ಯೆ ಜಾಸ್ತಿಯಿರುವ ತಿರುಮಕೂಡಲು ನರಸೀಪುರ, ಗುಂಡಲುಪೇಟೆಗೆ ಹೆಚ್ಚು ಅವಕಾಶ ನೀಡಿದಂತಾಗುವುದಿಲ್ಲ. ಐವತ್ತು ಸಾವಿರ ಜನಸಂಖ್ಯೆಯಿರುವ ಪೆರಿಯಾಪಟ್ಟಣಕ್ಕೂ ಒಂದೇ ಒಂದೂವರೆ ಲಕ್ಷ ಜನರಿರುವುದಕ್ಕೂ ಒಂದೇ ಮಾಡಿದರೆ ನ್ಯಾಯ ಸಲ್ಲಿಸಿದಂತಾಗುವುದಿಲ್ಲ. ಇದರಿಂದ ಕೆಲವು ಕ್ಷೇತ್ರಗಳಿಗಿರುವ ಅವಕಾಶ ತಪ್ಪಿಸಿದಂತಾಗುತ್ತದೆ, ಮ್ಯಾಗ್ಸಿಮಂ ನಂಬರನ್ನು ಕಡಮೆ ಮಾಡಲು ಪ್ರಯತ್ನ ಮಾಡಬಾರದು. ಹೆಚ್ಚಿನ ಸದಸ್ಯರು ಬಂದರೆ ಆಯಾ ಜಿಲ್ಲೆಯ ಪ್ರಾತಿನಿಧ್ಯವನ್ನು ಹೆಚ್ಚಿಸಲು ಅವಕಾಶ ಕೊಟ್ಟ ಹಾಗಾಗುತ್ತದೆ. ಪ್ರತಿನಿಧಿಗಳ ಸಂಖ್ಯೆ ಜಾಸ್ತಿಯಾದರೂ ಪರವಾಗಿಲ್ಲ. 'Not exceeding three' ಎಂಬುದನ್ನಾದರೂ ತೆಗೆಯಬೇಕು. ಈಗ ಪ್ರಪೋಸ್ ಮಾಡಿರುವ ತಿದ್ದುಪಡಿಯಲ್ಲಿ,

> "having regard to the population of each such constituency shall elect. . . . as the Government may determine"

ಎಂದಿದೆ, ಹಾಗಿಲ್ಲದೆ ಷೆಡ್ಯೂಲ್ ರೀಟೈನ್ ಮಾಡಿದರೆ ಸರಿಯಾಗಿರುತ್ತದೆ, ಇದು ಮುಖ್ಯವಾದ ವಾದ.

ಆರನೆಯ ಕ್ಲಾಜಿನಲ್ಲಿ 53ನೆಯ ಸೆಕ್ಷನ್‌ಗೆ ಬದಲಾಗಿ ಒಂದು ಹೊಸ ಸೆಕ್ಷನ್ ಸೇರಿಸಿದ್ದೀರಿ. ಟೌನ್ ಪ್ರದೇಶವನ್ನು ಬಿಟ್ಟು ಬಾಕಿಕಡೆ ಇರುವ ಓಟರುಗಳು ಆಯಾ ಕ್ಷೇತ್ರಗಳಲ್ಲಿ ಓಟು ಮಾಡಬೇಕೆಂದು ಗೊತ್ತುಮಾಡುವಾಗ within municipal limit ಎಂದಿರುವ

ದನ್ನು ತಿದ್ದುಪಡಿ ಮಾಡದಿದ್ದರೆ ಹೊರಗಡೆ ಇರುವವರು ಬಂದು ನಿಲ್ಲಲು ಅವಕಾಶವಾಗುತ್ತದೆ. ಅದರಿಂದ ಉದ್ದೇಶ ಸಾರ್ಥಕವಾಗುವುದಿಲ್ಲ. ಈಗ ಟರ್ಫ ಪ್ರದೇಶ ಸೇರಿಸದಿರುವುದರಿಂದ ಅಸೆಂಬ್ಲಿ ಕಾನ್ಸ್ಟಿಟ್ಯೂಯೆನ್ಸಿಯಲ್ಲಿರುವ ಟರ್ಫ ಪ್ರದೇಶದವರನ್ನು ತೆಗೆದು ಡಿಸ್ಟ್ರಿಕ್ಟ್ ಪ್ರದೇಶದಲ್ಲಿರುವ ಅಸೆಂಬ್ಲಿ ಕಾನ್ಸ್ಟಿಟ್ಯೂಯೆನ್ಸಿಯಲ್ಲಿರುವವರು ಓಟು ಮಾಡಬಹುದೆಂದು ಹೇಳಿದರೆ ಹೇಗೆ? ಆ ಕ್ಷೇತ್ರದಲ್ಲಿಲ್ಲದಿರುವವರು ಓಟು ಮಾಡಲು ಹಕ್ಕಿಲ್ಲವೆಂದು ಹೇಳಿದೆಯೆ? ಹಾಗೆ ಹೇಳದಿರುವಾಗ ಹಕ್ಕಿಲ್ಲದವರಿಗೆ ಅವಕಾಶ ಕೊಡುವುದು ನ್ಯಾಯವಲ್ಲ. ಇದನ್ನು ಸಂಬಂಧಪಟ್ಟ ಸೆಕ್ಷನಿಂದ 55ನೇ ಸೆಕ್ಷನಿಂದ ಎಕ್ಸ್‌ಕ್ಲೂಡ್ ಮಾಡಬೇಕು. 'Every person who is not less than 25 years of age inclusive of all municipal limits is eligible to stand as candidate' ಎಂದಿದೆ. ಅದರಿಂದ ಎಲ್ಲರಿಗೂ ಅವಕಾಶಕೊಟ್ಟರೆ ಉದ್ದೇಶ ಸಾರ್ಥಕವಾಗುವುದಿಲ್ಲ. ಇದನ್ನು ಸಹ ತಿದ್ದುಪಡಿ ಮಾಡಬೇಕು. ಅದನ್ನು ಯಾವರೀತಿ ಮಾಡಬೇಕೆಂದು ನೋಡಿ ಸೂಕ್ತವಾದ ಬದಲಾವಣೆ ಮಾಡಬೇಕು.

ಆಮೇಲೆ Reservation of seats ವಿಚಾರ ಇದೆ. I do not know whether the other members have suggested reservation of seats for Scheduled Castes. 52 (1)ರಲ್ಲಿ Reservation of seats for Scheduled Castes ಎಂದು ಇದೆ. ಅದರಲ್ಲಿ ಪ್ರೊವೈಸೋ (2) ರಲ್ಲಿ Provided further that this Section shall cease to have effect after ten years from the Commencement of this Act ಎಂದು ಹೇಳಿದ್ದೀರಿ. ಈ ಆಕ್ಟು ಪ್ರಾರಂಭವಾದ ಲಾಗಾಯ್ತು 10 ವರ್ಷದವರೆಗೂ ಇದು ಜಾರಿಯಲ್ಲಿ ಇರಬೇಕೆಂದು ಹೇಳಲಾಗಿದೆ. 1952|ರಿಂದಲೂ ಹೇಳುತ್ತಾ ಇದ್ದೇವೆ. ಚುನಾವಣೆಗಳು ಆಗಬೇಕೆಂದು ತಿದ್ದುಪಡಿ ಮಸೂದೆಗಳು ಬರುತ್ತಲೇ ಇವೆ. 1956ಕ್ಕೆ ಆದರೂ ಆಗುತ್ತದೆಯೋ ಇಲ್ಲವೋ ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಮೊದಲನೆ ಚುನಾವಣೆ ಯಾವಾಗ ಆಗುತ್ತದೆಯೋ ಅಲ್ಲಿಂದ 10 ವರ್ಷದ ವರೆಗೂ ಇದು ಜಾರಿಯಲ್ಲಿರಬೇಕೆಂದು ಮಾಡುವುದು ಒಳ್ಳೆಯದು. ಇದನ್ನು ಸಂಬಂಧಪಟ್ಟ ಮಂತ್ರಿಗಳು ಆಲೋಚನೆ ಮಾಡಿ ಆಗತ್ಯವಾದ ತಿದ್ದುಪಡಿಯನ್ನು ತರುತ್ತಾರೆ ಎಂದು ಭಾವಿಸುತ್ತೇನೆ.

ಪ್ಲೂರಲ್ ಮೆಂಬರ್, ಸಿಂಗಲ್ ಮೆಂಬರ್ ಕಾನ್‌ಸ್ಟಿಟ್ಯೂಯನ್ಸಿ ವಿಷಯದಲ್ಲಿ ಅನೇಕ ಮಾನ್ಯ ಸ್ನೇಹಿತರು ಅನೇಕ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. Single Member Constituency ಮಾಡುವ ವಿಚಾರದಲ್ಲಿ I am in favour of that. ಇದಕ್ಕೆ ಕಾರಣ ಏನೆಂದರೆ, ಒಂದು ಜಿಲ್ಲೆಗೆ Reservation of seats 5-6 ಬರುತ್ತವೆ. ಅವರು ಹೆಚ್ಚು ಕ್ಷೇತ್ರದಲ್ಲಿ ಕೆಲಸ ಮಾಡಬೇಕಾದ ಸಂಧರ್ಭ ಬರುತ್ತದೆ. ಹಣಕಾಸಿನ ದೃಷ್ಟಿಯಲ್ಲಿ ಮತ್ತು ಹಿಂದಿನ ವಯಸ್ಕರ ಮತದಾನದ ಪದ್ಧತಿಯ ಮೇಲೆ ಅಸೆಂಬ್ಲಿಗೆ ನಡೆದ ಚುನಾವಣೆಯ ಅನುಭವದ ಮೇಲೆ ನೋಡಿಕೊಂಡರೆ ಹೋಬಳಿವಾರು ಕಾನ್ಸ್ಟಿಟ್ಯೂಯನ್ಸಿ ಮಾಡಿ ಆ ಕ್ಷೇತ್ರಗಳಲ್ಲಿ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯನ್ಸಿ ಇಟ್ಟು, ಯಾವ ಕಾನ್ಸ್ಟಿಟ್ಯೂಯನ್ಸಿನಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ನವರು ಹೆಚ್ಚು ಜನರು ಇದ್ದಾರೋ ಅಲ್ಲಿ ಒಂದು ಸೀಟು ರಿಸರ್ವ್ ಮಾಡಿದರೆ ಸಾಧುವಾದದ್ದು ಎಂದು ಕೆಲವು ಸಲಹೆಗಳು ಬಂದಿವೆ. ಆ ರೀತಿ ಮಾಡುವುದರಿಂದ ಆ ಪ್ರದೇಶದಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಅನುಕಾಲವೇನೋ ಆಗುತ್ತದೆ. ಬಾಕಿ ಪ್ರದೇಶದಲ್ಲಿರತಕ್ಕರಿಗೂ ಕೂಡ ಅಷ್ಟೇ ಸುಲಭವಾಗಿ contest ಮಾಡುವುದಕ್ಕೆ ಅವಕಾಶವಿದ್ದರೂ ಕೂಡ ಅವರು ಅದಕ್ಕೆ ಪ್ರಯತ್ನ ಪಡುವುದಿಲ್ಲ. ಕಾರಣ he is not nearer the Constituency. Entire ತಾಲ್ಲೂಕಿನಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿದ್ದರೆ ಆ ಕ್ಷೇತ್ರದಲ್ಲಿರತಕ್ಕ ಷೆಡ್ಯೂಲ್ಡ್ ಕ್ಯಾಸ್ಟ್‌ನವರೆಲ್ಲರಿಗೂ ಅವಕಾಶವಿರುತ್ತದೆ. ಆ ದೃಷ್ಟಿಯಿಂದ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ entire District Constituency ಈಗ ತಾವು ಏನು ಪ್ರಪೋಸ್ ಮಾಡಿದ್ದೀರಿ ಅದರ ಪ್ರಕಾರ ಖರ್ಚು ಜಾಸ್ತಿ ಆದರೂ opportunities ಇವೆ. ಆ ಒಂದು ದೃಷ್ಟಿಯಿಂದ ನೋಡಿದರೆ ಎಲ್ಲರಿಗೂ ಅವಕಾಶ ಕಲ್ಪಿಸಿಕೊಟ್ಟಂತಾಗುತ್ತದೆ ಎಂದು ಕಾಣುತ್ತದೆ.

ಇನ್ನೊಂದು ವಿಷಯ 'not exeeding three' ಅನ್ನುವುದನ್ನು ತಿದ್ದುಪಡಿ ಮಾಡದಿದ್ದರೆ ಖಂಡಿತ ಡಿಸ್ಕ್ರಿಮಿನೇಟ್ ಮಾಡಿದ ಹಾಗಾಗುತ್ತದೆ. ಅಸೆಂಬ್ಲಿ ಕ್ಷೇತ್ರಕ್ಕೆ ಯಾವ ಪ್ರದೇಶ ಬರುತ್ತದೆಯೋ ಅದನ್ನೇ ರೆವಿನ್ಯೂ ತಾಲ್ಲೂಕಿನಲ್ಲಿ ಸೇರಿಸಿರುವುದರಿಂದ ಆ ಒಂದು ಕ್ಷೇತ್ರದಲ್ಲಿರತಕ್ಕ ಜನರಿಗೆ ಬಹಳ ಅನ್ಯಾಯ ಮಾಡಿದಂತಾಗುತ್ತದೆ, ಅದನ್ನು ಮನಸ್ಸಿನಲ್ಲಿಟ್ಟುಕೊಂಡು ತಿದ್ದುಪಡಿ ಮಾಡಬೇಕೆಂದು ಮತ್ತೊಂದು ಸಾರಿ ಒತ್ತಿ ಹೇಳುತ್ತೇನೆ.

*ಶ್ರೀ ಜಿ. ಎ. ತಿಮ್ಮಪ್ಪಗೌಡ.—ಸ್ವಾಮಿ, ಈ ಬಿಲ್ಲು ಬಹಳ ವಿವಾದಕ್ಕೆ ಆಸ್ಪದ ಕೊಟ್ಟಿದೆ. ಮುಂಚಿನಿಂದಲೂ ಕೂಡ ಇದೇ ವಿಧವಾಗಿ ಆಗಿದೆ. ಇದನ್ನು ನೋಡಿದರೆ ಸರ್ಕಾರದವರು ಇದನ್ನು ಯಾವುದೋ ಒಂದು ರಾಹುಕಾಲದಲ್ಲಿ ತಂದಿರುವ ಹಾಗೆ ಕಾಣುತ್ತದೆ. ಇಂದೂ ಕೂಡ ಇದು ಚರ್ಚಾಸ್ಪದವಾಗಿ ಮುಂದುವರಿಯುತ್ತಾ ಇದೆ. ಈ ಬಿಲ್ಲನ್ನು ಈ ದಿವಸ ವಿರೋಧಿಸಿದಂಥ ಮಿತ್ರರೂ ಸಹ ಕೊನೆಯಲ್ಲಿ ಯಾವ ರೀತಿಯಲ್ಲಾದರೂ ಆಗಲಿ, ಏನೇ ಲೋಪದೋಷಗಳಿದ್ದರೂ ಇರಲಿ ಈ ಬಿಲ್ಲು ಈ ದಿವಸ ಪಾಸ್ ಆಗಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಬಿಲ್ಲು ಬಹಳ ಸಮರ್ಪಕವಾಗಿದೆ ಎಂದು ನಾನು ಹೇಳುತ್ತೇನೆ. ಅನೇಕ ವರ್ಷಗಳಿಂದ ಚರ್ಚೆಯಾಗಿ ಎಲ್ಲರ ಅಭಿಪ್ರಾಯಗಳ ಒಂದು ಕಡತವಾಗಿರುವುದು ಈ ದಿವಸ ನಮ್ಮ ಮುಂದೆ ಏನಿದೆ ಅದರ ಸಾರವನ್ನೆಲ್ಲಾ ತೆಗೆದುಕೊಂಡು, ಭಟ್ಟಿ ಇಳಿಸಿ ಈ ಬಿಲ್ಲನ್ನು ಇಂದು ತಿದ್ದುಪಡಿಯ ಮಸೂದೆಯ ರೂಪದಲ್ಲಿ ನಮ್ಮ ಮುಂದೆ ಇಟ್ಟಿದ್ದಾರೆ. ಆದರೂ ಕೂಡ ವಿವಾದದಲ್ಲಿ ಪ್ರಾರಂಭವಾದದ್ದರಿಂದ ಕೊನೆಯವರೆಗೂ ಬಿಡಬಾರದು ಎಂಬ ಅಭಿಪ್ರಾಯದಿಂದ ಕೆಲವರು ವಿರೋಧವನ್ನು ಮಾಡಿದ್ದಾರೆ. ಇದರಲ್ಲಿ ಮುಖ್ಯವಾದ ವಿಷಯ, ಮೊದಲನೆಯದು ಕಾನ್ಸ್ಟಿಟ್ಯೂಯೆನ್ಸಿ. ಮಲ್ಟಿಮೆಂಬರ್ ಕಾನ್ಸ್ಟಿಟ್ಯೂಯೆನ್ಸಿ ಆಗಬೇಕೇ, ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿ ಆಗಬೇಕೇ ಎಂಬುದು ಬಹಳ ಮುಖ್ಯವಾದದ್ದು. ಸಾಧಾರಣವಾಗಿ ನಮ್ಮ ಸ್ನೇಹಿತರು ಮಲ್ಟಿಮೆಂಬರ್ ಕಾನ್ಸ್ಟಿಟ್ಯೂಯೆನ್ಸಿ ಮಾಡತಕ್ಕದ್ದು ಸಾಧುವಾದದ್ದು, ಇದರಿಂದ ಯೋಗ್ಯರಾದಂಥವರು, ದಕ್ಷರಾದಂಥವರು ಉಮೇದುವಾರರಾಗಿ ಚುನಾವಣೆಯಲ್ಲಿ ನಿಲ್ಲುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳಿದ್ದಾರೆ; ಮತ್ತು

(ಶ್ರೀ ಜಿ. ಎ. ತಿಮ್ಮಪ್ಪಗೌಡ)

ಅಂಥ ಯೋಗ್ಯರಾದಂಥ, ದಕ್ಷರಾದಂಥ, ಉಮೇದುವಾರರು ಜಯಶೀಲರಾಗಿ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳಾಗುವುದಕ್ಕೆ ಇಡೀ ತಾಲ್ಲೂಕನ್ನೇ ಒಂದು ಕ್ಷೇತ್ರವಾಗಿಟ್ಟರೆ ಅದು ಒಳ್ಳೆಯದು ಎಂಬ ಅಭಿಪ್ರಾಯವನ್ನೂ ಕೂಡ ಕೆಲವು ಸ್ನೇಹಿತರು ಹೇಳಿದ್ದಾರೆ. ಅದಕ್ಕೆ ವಿರೋಧವಾಗಿಯೂ ಕೂಡ ಕೆಲವರು ಹೇಳಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಕ್ಷೇತ್ರ ವಿಶಾಲವಾದಷ್ಟು ಮೆಂಬರುಗಳ ಸಂಖ್ಯೆ ಹೆಚ್ಚಾದಷ್ಟೂ ನಿಜವಾದ ಯೋಗ್ಯತೆ ಅಲ್ಲಿ ಬರುತ್ತದೆ, ಸಿಕ್ಕುತ್ತದೆ ಎಂದು ಹೇಳಿ ನಮ್ಮ ಅನುಭವಸಿದ್ಧಾಂತವಾಗಿದೆ.

ಓಟರುಗಳ · ಸಂಖ್ಯೆ ಕಡಿಮೆ ಆದಷ್ಟೂ ಕೂಡ ಹೋಬಳಿಗಳನ್ನು ಕಾನ್‌ಸ್ಟಿಟ್ಯುಯೆನ್ಸಿ ಮಾಡತಕ್ಕವಾದದಲ್ಲಿ ಸ್ವಲ್ಪ ಬೆಲೆ ಇದ್ದರೂ ನಾನು ಮೊದಲೇ ಹೇಳಿದ್ದಕ್ಕೂ ಇದಕ್ಕೂ ಹೋಲಿಕೆ ಮಾಡಿಕೊಂಡು comparative ಆಗಿ ಯಾವುದು ಉತ್ತಮವಾದದ್ದು ಇವೆರಡರಲ್ಲಿ ಎಂದು ಆಲೋಚನೆ ಮಾಡಿ ಅರಿಸಿಕೊಳ್ಳಬೇಕಾಗಿದ್ದರೆ—ಎರಡು ಸಿಸ್ಟಂನಲ್ಲಿ ಲೋಪದೋಷಗಳಿದ್ದರೂ ಕೂಡ—ಒಟ್ಟಿನಲ್ಲಿ ಮಲ್ಟಿ ಮೆಂಬರ್ ಕಾನ್‌ಸ್ಟಿಟ್ಯುಯೆನ್ಸಿ ಮಾಡುವುದೇ ತಾಲ್ಲೂಕಿನ ಹಿತ ದೃಷ್ಟಿಯಿಂದ ಒಳ್ಳೆಯದು ಎಂಬುದು ನನ್ನ ಅಭಿಪ್ರಾಯ. ಕೆಲವರು 'ಇದರಿಂದ ಪಾರ್ಟಿ, ಪಕ್ಷ ಬೆಳೆಯುವುದಕ್ಕೆ ಅವಕಾಶವಾಗುತ್ತದೆ, ಸ್ವತಂತ್ರರಿಗೆ ಮತ್ತು ಮೈನಾರಿಟಿ ಕೋಮಿನವರಿಗೆ ತಾಲ್ಲೂಕಿನ ಕ್ಷೇತ್ರ ಎಂದರೆ ವಿಶಾಲ ಕ್ಷೇತ್ರದಿಂದ ಚುನಾಯಿತರಾಗಿ ಬರುವುದಕ್ಕೆ ಕಷ್ಟವಾಗುತ್ತದೆ' ಎಂದು ಹೇಳುತ್ತಾರೆ. ಅದನ್ನು ನಾನು ಒಪ್ಪುವುದಿಲ್ಲ. ಇವತ್ತಿನ ದಿವಸ ಮೈನಾರಿಟಿ ಕೋಮಿನವರು ಏನಾದರೂ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಅವಕಾಶವನ್ನು ಪಡೆಯಬೇಕು, ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಪ್ರಾತಿನಿಧ್ಯ ಹೊಂದಬೇಕು, ಡಿಸ್ಟ್ರಿಕ್ಟ್ ಬೋರ್ಡಿನಲ್ಲಿದ್ದು ಆ ಡಿಸ್ಟ್ರಿಕ್ಟ್, ತಾಲ್ಲೂಕಿನ ಸೇವೆ ಸಲ್ಲಿಸಬೇಕೆಂದು ಇದ್ದ ಪಕ್ಷದಲ್ಲಿ ತಾಲ್ಲೂಕನ್ನು ಕಾನ್‌ಸ್ಟಿಟ್ಯುಯನ್ಸಿ ಆಗಿ ಇಟ್ಟುಕೊಂಡರೆ ಮಾತ್ರ ಅವರಿಗೆ ಅವಕಾಶವಿರುತ್ತದೆಯೇ ಹೊರತು ಹೋಬಳಿಯನ್ನು ಕಾನ್‌ಸ್ಟಿಟ್ಯುಯನ್ಸಿ ಆಗಿ ಇಟ್ಟುಕೊಂಡರೆ ಅವಕಾಶ ಸಿಕ್ಕುವುದಿಲ್ಲ. ಏಕೆಂದರೆ ತಾಲ್ಲೂಕ್ ಕಾನ್‌ಸ್ಟಿಟ್ಯುಯೆನ್ಸಿ ಆದರೆ 3 ಜನ ಉಮೇದುವಾರರ ಪೈಕಿ ಒಬ್ಬರು ಕಾಂಗ್ರೆಸ್ ಪಾರ್ಟಿ, ಒಬ್ಬರು ಪಿ. ಎಸ್. ಪಿ. ನವರು. ಆದರೂ ಕೂಡ—ಒಬ್ಬರಿಗಾದರೂ ಮೈನಾರಿಟಿ ಕೋಮಿನವರಿಗೆ ಓಟು ಕೊಡಬೇಕೆಂಬುದನ್ನು ಗಮನದಲ್ಲಿಟ್ಟುಕೊಳ್ಳಲೇ ಬೇಕಾಗುತ್ತದೆ, ಕೊಡಲೇಬೇಕಾಗುತ್ತದೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಮೈನಾರಿಟಿ ಕೋಮಿನವರು ಒಬ್ಬರಾದರೂ ಕೂಡ ಚುನಾವಣೆ ಆಗುವುದಕ್ಕೆ ಅವಕಾಶ ಸಿಕ್ಕುತ್ತದೆ. ಕ್ಷೇತ್ರ ಕಡಿಮೆಯಾಗಿ ಒಂದು ಹೋಬಳಿಗೆ ಒಂದು ಕಾನ್‌ಸ್ಟಿಟ್ಯುಯನ್ಸಿ ಆದರೆ ಮೈನಾರಿಟಿ ಕೋಮಿಗೆ ಸೇರಿದಂಥಾ ಜನರು ಯಾರು ಚುನಾವಣೆಯಲ್ಲಿ ಪೈಪೋಟಿ ಮಾಡಬೇಕು, ಚುನಾವಣೆಗೆ ನಿಲ್ಲಬೇಕೆಂದು ಇರುತ್ತಾರೆಯೋ ಅವರು ಚುನಾಯಿತರಾಗಿ ಬರುವ ಸಂಭವ ಕಡಿಮೆ, ಚುನಾಯಿತರಾಗಬಹುದು ಎಂಬ ಯಾವ ಗ್ಯಾರಂಟಿಯೂ ಇಲ್ಲ. ಆದ್ದರಿಂದ ಮಲ್ಟಿಮೆಂಬರ್ ಕಾನ್‌ಸ್ಟಿಟ್ಯುಯನ್ಸಿ ಮಾಡುವುದು ಸರಿಯಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ನಾವು ಒಂದು ಐಕಮತ್ಯವನ್ನು ಸಾಧನೆ ಮಾಡಬೇಕಾದರೆ, ಕೋಮುವಾರು ಅಭಿಪ್ರಾಯ ಅಂತ ಮಾನ್ಯ ಮಿತ್ರರು ಹೇಳಿದರು. ಆ ಕೋಮುವಾರು ಅಭಿಪ್ರಾಯವನ್ನು ತಡೆಗಟ್ಟಬೇಕಾದರೆ, ಕೋಮುವಾರು ವಿಷಬೀಜ ತಾಲ್ಲೂಕಿನಲ್ಲಿ ಹರಡದಂತೆ ತಡೆಗಟ್ಟಬೇಕಾದರೆ ತಾಲ್ಲೂಕನ್ನೇ ಒಂದು ಕಾನ್‌ಸ್ಟಿಟ್ಯುಯನ್ಸಿ ಆಗಿ ಮಾಡಿ ಚುನಾವಣೆ ನಡೆಸಿದರೆ ಆಗ ಸ್ವಲ್ಪಮಟ್ಟಿಗೆ ಅದರ ಪ್ರಭಾವ ಕಡಿಮೆಯಾಗುತ್ತದೆ ಎಂದು ನನಗೆ ಎನ್ನಿಸುತ್ತದೆ. ಹೋಬಳಿವಾರು ಆದ ಪಕ್ಷದಲ್ಲಿ ಆ ಹೋಬಳಿಯಲ್ಲಿ ಯಾವ ಕೋಮು ಹೆಚ್ಚಾಗಿರುತ್ತದೆಯೋ ಆ ಕೋಮಿನ ಉಮೇದುವಾರರು ಚುನಾವಣೆಯಾಗುತ್ತಾರೆಯೋ ಹೊರತು ಇತರರಿಗೆ ಅವಕಾಶವಿರುವುದಿಲ್ಲ. ಸಣ್ಣ ಕ್ಷೇತ್ರವಾದಷ್ಟೂ ಕೂಡ ಯಾರು ಮೆಜಾರಿಟಿ ಕೋಮಿನ ಉಮೇದುವಾರರಾಗಿರುತ್ತಾರೆಯೋ ಅವರು ಜಯಶೀಲರಾಗುವುದು ಖಂಡಿತ. ತಾಲ್ಲೂಕು ಆದರೆ ಮಿಶ್ರಕೋಮುಗಳು ಇರುವುದರಿಂದ ಅಲ್ಲಿ ಜಾತಿಯ ಪ್ರಭಾವ ಅಷ್ಟೊಂದು ಬರುವುದಿಲ್ಲ.

ಆಮೇಲೆ ಪಾರ್ಟಿ ಪ್ರಭಾವ ಎಂದು ಹೇಳಿದರು. ಪಾರ್ಟಿಗಳನ್ನು ಬೆಳೆಸುವುದರಲ್ಲಿ ತಪ್ಪೇನು ಎಂದು ಕೇಳುತ್ತೇನೆ. ಮುಂದೆ ರಾಜಕೀಯದಲ್ಲಿ ಯಾವ ಮನುಷ್ಯನೇ ಆಗಲೀ ಯಾವುದಾದರೂ ಒಂದು ಪಾರ್ಟಿಯಲ್ಲಿ ಸೇರಿಕೊಂಡು, ಆ ಪಾರ್ಟಿಯನ್ನು ಅಭಿವೃದ್ಧಿಪಡಿಸಿ ಅಲ್ಲಿ ಶಿಸ್ತಿನಿಂದ ದೇಶದ ಐಕ್ಯತೆಯನ್ನು ಸಾಧಿಸುವುದಕ್ಕೆ, ದೇಶಸೇವೆ ಸಲ್ಲಿಸುವುದಕ್ಕೆ ಪ್ರಯತ್ನಪಟ್ಟರೆ ಹೆಚ್ಚಿನ ಅವಕಾಶ ದೊರಕುತ್ತದೆಯೇ ಹೊರತು ಸ್ವತಂತ್ರರಾಗಿರತಕ್ಕವರಿಗೆ ಹೆಚ್ಚಿನ ಅವಕಾಶ ಸಿಕ್ಕುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದರೆ ತಪ್ಪಾಗಲಾರದು. ನಮ್ಮ ಮಾನ್ಯ ಮಿತ್ರರು ಪ್ರಭಾವಶಾಲಿಗಳಾದ ಶ್ರೀ ಪಟ್ಟಾಭಿರಾಮನ್‌ರವರಂಥವರು ಒಬ್ಬೊಬ್ಬರು ಅವರ ಪ್ರಭಾವದಿಂದ ಸ್ವತಂತ್ರರಾಗಿ ಆದರೂ ಕೂಡ ಚುನಾಯಿತರಾಗಿ ಬರುವುದಕ್ಕೆ ಅವಕಾಶ ಇರಬಹುದು.

ಅವರಿಗೆ ನಾನು ಅಪೀಲ್ ಮಾಡಿಕೊಳ್ಳುವುದೇನೆಂದರೆ ಅವರೂ ಕೂಡ ದೇಶದ ಹಿತದೃಷ್ಟಿಯಿಂದ, ಸತ್ ಸಂಪ್ರದಾಯವನ್ನು ಬೆಳಸಿಕೊಂಡು ಬರುವ ದೃಷ್ಟಿಯಿಂದ ಯಾವುದಾದರೂ · ಪಾರ್ಟಿಗಳಿಗೆ ಸೇರಿ ಅದನ್ನು ಚೆನ್ನಾಗಿ ರೂಢಿಸಿ, ಅಭಿವೃದ್ಧಿಪಡಿಸಿ ಅದರ ಮೂಲಕ ದೇಶಸೇವೆ ಮಾಡಿಕೊಂಡು ಹೋಗುವುದು ಒಳ್ಳೆಯದು ಎಂದು ತಿಳಿದುಕೊಂಡಿದ್ದೇನೆ.

ಎರಡನೆಯದಾಗಿ ಇದೇ ಸಂದರ್ಭದಲ್ಲಿ ಮಾತನಾಡುತ್ತಾ ನಮ್ಮ ಎದುರು ಪಾರ್ಟಿ ನಾಯಕರು ಮತ್ತು ಶ್ರೀ ಪಟ್ಟಾಭಿರಾಮನ್‌ರವರು 'ಸ್ಥಳೀಯ ಸಂಸ್ಥೆಗಳಲ್ಲಿ ರಾಜಕೀಯಕ್ಕೆ ಅವಕಾಶ ಇರಕೂಡದು, ಪಾರ್ಟಿ ಬೇಸಿಸ್‌ಮೇಲೆ ಚುನಾವಣೆ ನಡೆಯಕೂಡದು' ಎಂದು ಹೇಳಿದರು. ಅದು ಸ್ವಾಭಾವಿಕವಾದುದಲ್ಲ, ಅಸ್ವಾಭಾವಿಕವಾದದ್ದು. ದೇಶದಲ್ಲಿ ಪಾರ್ಟಿಗಳು ಬೆಳೆಯುತ್ತಿರುವಾಗ, ರಾಜಕೀಯ ಪಾರ್ಟಿ ಬೇಸಿಸ್ ಮೇಲೆ ನಡೆಯುತ್ತಾ ಇರುವಾಗ ಇವುಗಳನ್ನೆಲ್ಲಾ ಬಿಟ್ಟುಬಿಟ್ಟು ಇನ್ನೊಂದು ವಿಧದಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಚುನಾವಣೆ ನಡೆಸಿ ಎನ್ನುವುದು ಸಾಧುವಾದುದಲ್ಲ. ಇಂಗ್ಲೆಂಡಿನಲ್ಲೂ ಕೂಡ ಕೌಂಟೀ ಕೌನ್ಸಿಲ್‌ಗಳಿಗೆ ಚುನಾವಣೆ ನಡೆಸುವಾಗ, ಲೇಬರ್ ಪಾರ್ಟಿ, ಕನ್ಸರ್ವೇಟೀವ್‌ಪಾರ್ಟಿ ಮುಂತಾದ ಪಾರ್ಟಿಯವರು ಪಾರ್ಟಿ ಟಿಕೆಟ್ ಮೇಲೆ ಚುನಾವಣೆಗೆ ನಿಲ್ಲುತ್ತಾರೆ.

Sri Mulka GOVINDA REDDY.—In the last Municipal Elections in Mysore State, elections were not contested on party basis.

Sri T. MARIAPPA.—In Bangalore City and Mysore City?

Sri Mulka GOVINDA REDDY.—Except those.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಜನರಲ್ ಎಲೆಕ್ಷನ್ ನಡೆಯುವಾಗಲೂ ಕೂಡ ಪಾರ್ಟಿ ಟಿಕೆಟ್ ಮೇಲೆ ನಿಲ್ಲುತ್ತಾರೆ. ಯಾವ ಪಾರ್ಟಿ ಸರ್ಕಾರ ಬರುತ್ತದೆ ಎಂಬುದನ್ನು ಕೂಡ ಕೌಂಟಿ ಕೌನ್ಸಿಲ್ ಚುನಾವಣೆ ಆದಾಗಲೇ ಊಹಿಸಿಕೊಳ್ಳಬಹುದು. ನಮ್ಮ ಮೈಸೂರು ಸಂಸ್ಥಾನದಲ್ಲೂ ಕೂಡ ನಮ್ಮ ಪಾರ್ಟಿ ಬಲಾಬಲಗಳನ್ನು ತಿಳಿದುಕೊಳ್ಳಬೇಕಾದರೆ ಪಾರ್ಟಿಗಳಲ್ಲಿರತಕ್ಕ ಜನಗಳು, ಅವರ ಸಂಪರ್ಕ ಜನಗಳಲ್ಲಿ ಹೇಗಿದೆ ಎಂಬುದರಮೇಲೆ ಹೋಗುತ್ತದೆ; ಮತ್ತು ಯಾವ್ಯಾವ ಪಾರ್ಟಿ, ಯಾವ್ಯಾವರೀತಿ ಸೇವೆ ಸಲ್ಲಿಸಿದೆ ಎಂಬ ಅಳತೆಯ ಕೋಲಿನಿಂದ ಅಂದಾಜುಮಾಡಿ ತಿಳಿದುಕೊಳ್ಳಬೇಕಾಗುತ್ತದೆ. ಪಾರ್ಟಿ ಬೇಸಿಸ್ ಮೇಲೆ ಚುನಾವಣೆ ನಡೆಸಿ, ಪಾರ್ಟಿ ಪ್ರಭಾವ ಬೆಳೆಸಿಕೊಂಡು ಸ್ವಾರ್ಥ ಸಾಧಿಸಿಕೊಳ್ಳಬೇಕೆಂದು ಇಲ್ಲ. ಆ ತರಹ ಊಹಾಪೋಹಗಳಿಗೆ ಆಧಾರವೇ ಇಲ್ಲ. ಸರ್ಕಾರದವರು ಇವತ್ತಿನ ದಿವಸ ನೇರವಾದ ಚುನಾವಣೆ ಇರಬೇಕೆಂದು ಈ ಬಿಲ್ಲನ್ನು ತಂದಿರಬೇಕಾದರೆ ಈ ಸಭೆಯ ಸದಸ್ಯರು ಸ್ವಲ್ಪ ಹೆಚ್ಚು ಕಮ್ಮಿ ಬಹುಜನ ಸದಸ್ಯರ ಅಭಿಪ್ರಾಯದಂತೆಯೇ ತಂದಿದ್ದಾರೆ. ಮತ್ತು ಹೊರಗಡೆ ದೇಶದಲ್ಲೂ ಕೂಡ ಜನಗಳ ಅಭಿಪ್ರಾಯ ಹೇಗಿದೆ ಎಂಬುದನ್ನು ತಿಳಿದುಕೊಂಡೇ ಈ ನೇರವಾದ ಚುನಾವಣಾತತ್ತ್ವವನ್ನು ಸರ್ಕಾರದವರು ಅಂಗೀಕರಿಸಬೇಕಾಗಿ ಬಂತು. ಸ್ವಾಮಿ, ಹೀಗೆ ಮಾಡಿದರೆ ಇದರಿಂದ ಪ್ರತಿಯೊಂದು ಪಾರ್ಟಿಗೂ ಅನುಕೂಲವಾಗುತ್ತದೆ. ಹೀಗೆ ವಿಲೀನೀಕರಣಮಾಡಿದರೆ ಅನುಕೂಲ ಹೆಚ್ಚಾಗುತ್ತದೆ. ಆದರೆ ನಮ್ಮ ಶ್ರೀ ಕೆ. ಪಟ್ಟಾಭಿರಾಮನ್‌ರವರು ಅವರು ಯಾವಾಗ್ಲೂ ಆದರ್ಶವಾದಿಗಳು. ಅವರ ಆದರ್ಶ . . . .

4-30 P. M.

ಶ್ರೀ ಕೆ. ಪಟ್ಟಾಭಿರಾಮನ್ (ಕೋಲಾರ).—ನನಗೆ ಈ ದಿವಸ ತಮ್ಮಿಂದ ಪಾಠ ಕಲಿಯುವಂಥ ಕಾಲ ಬಂತಲ್ಲ!

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಆದರೆ ಆ ಆದರ್ಶತ್ವದ ಪ್ರಕಾರ ನಾವು ಈ ದಿವಸ ಹೋದರೆ ಬಹಳ ಅವ್ಯವಸ್ಥೆಗಳಾಗುತ್ತವೆ. ಈ ಚುನಾವಣೆಗಳ ಬಗ್ಗೆ ವ್ಯಾಜ್ಯ ವ್ಯವಹಾರಗಳು ಮೊದಲಿಂದಲೂ ಇದ್ದೇ ಇವೆ. ನಾನು ಇದೆನ್ನೆಲ್ಲಾ ಏತಕ್ಕಾಗಿ ಹೇಳುತ್ತಿದ್ದೇನೆಂದರೆ ಅವರು ಈ ಗ್ರಾಮಪಂಚಾಯಿತಿಗಳಿಗೂ, ತಾಲ್ಲೂಕು ಬೋರ್ಡುಗಳಿಗೂ ಮತ್ತು ಜಿಲ್ಲಾ ಬೋರ್ಡುಗಳಿಗೂ ಒಂದು ಸಂಪರ್ಕವಿರಲೇಬೇಕೆಂದು ಹೇಳುತ್ತಿದ್ದರು. ಇದರಲ್ಲೇನೋ ಒಂದು ಆದರ್ಶತ್ವವಿದೆ. ಆದರೆ ಪ್ರಕೃತ ಸಂದರ್ಭಕ್ಕೆ ಅದು ಸರಿಹೋಗುವುದಿಲ್ಲ. ಇದಕ್ಕೆ ಒಂದು ವಿನಾಯಿತಿಯನ್ನು ಅನುಸರಿಸಬೇಕಾಗಿದೆ. ಹಾಗೆ ಮಾಡದಿದ್ದರೆ ಇದು ಸಾಧ್ಯವೇ ಆಗುವುದಿಲ್ಲ. ಹೀಗೆ ನಾವು ಈ ದಿವಸ ಇದನ್ನು ಬದಲಾವಣೆ ಮಾಡದೆ ಹೋದರೆ ಮುಂದೆ ಅನೇಕ ರೀತಿಯ ಅನ್ಯಾಯಗಳು ನಡೆಯಲು ಇದು ಅವಕಾಶವನ್ನುಂಟು ಮಾಡುತ್ತದೆ ಅನ್ನುವುದು ನಮಗೆ ಕಂಡುಬಂದಿದೆ. ತತ್ತ್ವಗಳನ್ನು ಪ್ರತಿಪಾದಿಸಲೇಬೇಕು. ಈ ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಇನ್‌ಡೈರೆಕ್ಟ್ ಚುನಾವಣೆಗಳು ನಡೆದಾಗ ಅನೇಕ ನಿದರ್ಶನಗಳು ನನ್ನ ಮಿತ್ರರಿಗೂ ಮತ್ತು ನನಗೂ ಪ್ರತ್ಯಕ್ಷವಾಗಿ ಗೊತ್ತಾಗಿವೆ. ಇನ್ನು ಕೋರ್ಟುಗಳ ವ್ಯವಹಾರ ತೆಗೆದುಕೊಂಡರೆ ಅದರ ಮಹತ್ವವೆಂಥಾದ್ದು ಎನ್ನುವುದು ಇಡೀ ಸಂಸ್ಥಾನಕ್ಕೆಲ್ಲಾ ಗೊತ್ತಾಗಿದೆ. ನಾನು ನನ್ನ ಸ್ವಂತ ಜಿಲ್ಲೆಯಲ್ಲಿ ಪಡೆದುಕೊಂಡಿರುವಂಥ ಅನುಭವದ ಮೇಲೆ ಇದನ್ನು ಹೇಳುತ್ತಿದ್ದೇನೆ. ಆದರೆ ಈ ಇನ್‌ಡೈರೆಕ್ಟ್ ಎಲೆಕ್ಷನ್‌ಗಳು ಎಷ್ಟೇ ಸತ್ಯವಾಗಿ ನಡೆಯುತ್ತವೆಂದು ಹೇಳಿದರೂ ಅವುಗಳನ್ನು ಯೋಗ್ಯವಾದ ರೀತಿಯಲ್ಲಿ ನಡೆಸುವುದು ಬಹಳ ಕಷ್ಟವಿದೆ. ನಾವು ಈ ವಿಚಾರದಲ್ಲಿ ಎಷ್ಟೋ ನೋಡಿದ್ದೇವೆ; ಕೇಳಿಯೂ ಇದ್ದೇವೆ. ನಮ್ಮ ಜಿಲ್ಲೆಯಲ್ಲೇ ಈ ಬಗ್ಗೆ ಏನೇನು ನಡೆಯಿತು ಎನ್ನುವುದನ್ನೆಲ್ಲಾ ನಾನು ಕಿವಿಯಾರ ಕೇಳಿದ್ದೇನೆ. ಈ ನಾನಾ ಕಾರಣಗಳಿಂದ ನಾನೀಗ ಡೈರೆಕ್ಟ್ ಎಲೆಕ್ಷನ್ ಬಹಳ ಸಾಧುವಾದ್ದು ಮತ್ತು ಸತ್ಯವಾದುದು ಎಂದು ಹೇಳುತ್ತೇನೆ. ಇನ್ನು ಈ ವಿಚಾರದಲ್ಲಿ ನನ್ನ ಸ್ನೇಹಿತರು ಹೇಳಿರತಕ್ಕಂಥ ಅಂಶ ನೇರವಾಗಿ ಸಂಬಂಧಪಡದೇ ಇದ್ದರೂ ರೆಸಿಡೆನ್ಷಿಯಲ್ ತೊಂದರೆ ಇಲ್ಲವಾದರೂ ಎಂದಿನಂತೆ ಟೌನುಗಳಲ್ಲಿ ಅಡ್ವೋಕೇಟುಗಳು ಚುನಾವಣೆಗೆ ನಿಲ್ಲುತ್ತಿದ್ದಂತೆ ಇನ್ನು ಮುಂದೆ ಹಳ್ಳಿಹಳ್ಳಿಗೆ ಹೋಗಿ ಚುನಾವಣೆಗೆ ನಿಂತು ಆರಿಸಿ ಬರತಕ್ಕಂಥ ಕಾಲ ಹೋಯಿತು. ಈಗ ಬೆಂಗಳೂರಿನಲ್ಲಿರತಕ್ಕಂಥ ಒಬ್ಬ ಲಾಯರು ಜನರಲ್ಲಿ ನೇರವಾದಂಥ ಸಂಪರ್ಕವನ್ನು ಇಟ್ಟುಕೊಳ್ಳದೆ ಹೋದರೆ ಸುಮ್ಮನೆ ವಿದ್ಯಾವಂತರೆಂದು ಹೇಳಿ ಅವರಿಗೆ ಯಾರೂ ಓಟು ಕೊಡುವುದಿಲ್ಲ. ಹೀಗಿರುವುದರಿಂದ ಇನ್ನು ಮುಂದಕ್ಕೆ ಟೌನಿನಲ್ಲಿ ವಾಸಮಾಡತಕ್ಕಂಥ ಜನಗಳು ಯಾರೂ ಹಳ್ಳಿಗಳಿಗೆ ಹೋಗಿ ಚುನಾವಣೆಗೆ ನಿಂತು ಗೆಲ್ಲುವುದಕ್ಕೆ ಅವಕಾಶವೇ ಇಲ್ಲ. ಆದುದರಿಂದ ನಾವೀಗ ಇದನ್ನು ಅಮೆಂಡ್ ಮಾಡಬೇಕಾದ ಗೋಜಿಗೇ ಹೋಗಬೇಕಾಗಿಲ್ಲ. ಜನರ ಸೇವೆಯನ್ನು ಯಾರು ಸರಿಯಾಗಿ ಸಲ್ಲಿಸಬಲ್ಲರೋ ಯಾರು ಅಂಥ ಯೋಗ್ಯರಾಗಿರುತ್ತಾರೋ, ಯಾರು ಅಷ್ಟು ಸಂಪನ್ನರಾಗಿರುತ್ತಾರೋ ಅಂಥವರಿಗೇನೆ ಇದರಲ್ಲಿ ಅವಕಾಶವಿರುವುದು. ಹೇಗೆ ಯಾರ್ಯಾರ ಹಿನ್ನೆಲೆ ಏನೇನಿರುತ್ತದೆಯೋ ಅದಕ್ಕಾನುಸಾರವಾಗಿ ಚುನಾವಣೆಗಳ ಫಲಿತಾಂಶ ಉಂಟಾಗುವುದರಿಂದ ಅವರು ಚುನಾವಣೆಗೆ ನಿಲ್ಲುವಂಥ ಅವಕಾಶವನ್ನು ನಾವೀಗ ತಪ್ಪಿಸಬಾರದು. ಹೀಗೆ ಮಾಡುವುದು ಸರಿಯಾದ್ದಲ್ಲ. ಈಗ ಈ ಬಿಲ್ಲಿನಲ್ಲಿರುವುದೇ ಸಮರ್ಪಕವಾಗಿದೆ. ಆದರೆ ಕೆಲವರಿಗೆ ಕೆಲಕೆಲವು ಭಿನ್ನಾಭಿಪ್ರಾಯಗಳಿರುತ್ತವೆ. ಈ ಎರಡು ವಿಧಾನಗಳಲ್ಲಿಯೂ ಎಡರು ತೊಡರುಗಳಿರುವುದು ಎಲ್ಲರಿಗೂ ಗೊತ್ತಿದೆ. ಶ್ರೀ ವಿ. ವೆಂಕಟಪ್ಪನವರು ಕೆಲವು ವಿಚಾರಗಳನ್ನು ತಿಳಿಸಿದ್ದಾರೆ. ಆದರೆ ಸಿಂಗಲ್ ಮೆಂಬರ್ಸ್ ಕಾನ್‌ಸ್ಟಿಟ್ಯುಯೆನ್ಸಿಯಲ್ಲಿ ಕೆಲವು ವಿಧವಾದ ಅನುಕೂಲತೆಗಳಿರುವಂತೆ ಕಂಡುಬಂದರೆ ಅದರಲ್ಲಿ ಎರಡು ವಿಧವಾದ ಸಮಸ್ಯೆಗಳು ಉಂಟಾಗುತ್ತವೆ. ಮಲ್ಟಿ ಮೆಂಬರ್ಸ್ ಕಾನ್‌ಸ್ಟಿಟ್ಯುಯೆನ್ಸಿಯಲ್ಲಿಯೂ ಅನುಕೂಲತೆಗಳಿರುತ್ತವೆ. ಈ ಎರಡರ ಪೈಕಿ ಯಾವುದು ಉತ್ತಮವಾದ್ದೋ ಅದನ್ನು ಆರಿಸಿಕೊಳ್ಳಬಹುದು ಎಂದು ಹೇಳಿದರು. ಅದನ್ನು ಒಪ್ಪಿಕೊಳ್ಳೋಣ. ಆದರೆ, ಅವರು ಶೇಕಡ 6 1/4 ಭಾಗದ ಆದಾಯವನ್ನು ಈ ಬಿಲ್ಲಿನಿಂದ ಡಿಲೀಟ್ ಮಾಡಿರತಕ್ಕ ವಿಷಯವನ್ನು ಪ್ರಸ್ತಾಪ ಮಾಡುತ್ತ ಹಾಗೆ ಒಂದಾವರ್ತಿ ಕಾನೂನು ಚೌಕಟ್ಟಿನಲ್ಲಿ ಒದಗಿಸಿರತಕ್ಕಂಥ ಹಣವನ್ನು ಪುನಃ ಕಿತ್ತುಕೊಳ್ಳುವುದು ಸರಿಯಾದ್ದಲ್ಲ ಎಂದು ಹೇಳಿದ್ದಾರೆ. ಆ ಪ್ಲಾನಿಂಗ್ ಸಮಿತಿಯವರು ಕೂಡ ತಾಲ್ಲೂಕು ಸಮಿತಿಗಳಿರಲೇಬೇಕೆಂದು ಹೇಳಿದ್ದಾರೆ. ಇದರಲ್ಲಿ ನಾಮಿನೇಟ್ ಸಮಿತಿ ಇರುವುದೂ

(ಶ್ರೀ ಜಿ. ಎ. ತಿಮ್ಮಪ್ಪಗೌಡ.)
ಸಹ ಅವಶ್ಯಕ. ತಾಲ್ಲೂಕು ಲೆವಲ್‌ನಲ್ಲಿ ಒಂದು
ಸಮಿತಿ ಇರಲೇಬೇಕೆಂದು ಪ್ಲಾನಿಂಗ್ ಸಮಿತಿಯವರೂ
ಹೇಳಿದ್ದಾರೆ. ಆದರೆ ಇನ್ನುಮುಂದಕ್ಕೆ ತಾಲ್ಲೂಕು
ಬೋರ್ಡುಗಳಿಗೆ ಹಣವನ್ನು ಹಂಚುವಾಗ ಜಿಲ್ಲಾ
ಬೋರ್ಡುಗಳಿಗೆ ಬಹಳ ಖರ್ಚುವೆಚ್ಚಗಳು ಕಡಮೆಯಾಗ
ಬಹುದು. ಈಗ ಕೆಲವು ಕಡೆ ಜಿಲ್ಲಾ ಬೋರ್ಡು
ಗಳು ತಮ್ಮ ಕೆಲಸವನ್ನು ತಾವು ನೆರವೇರಿಸಲು ಸಾಧ್ಯ
ವಾಗದೆ ಹೋದುದರಿಂದ ಜಿಲ್ಲಾ ಬೋರ್ಡಿಗೆ
ಸೇರಿದ್ದಂಥ 2 1/2 ಸಾವಿರ ಮೈಲಿ ರಸ್ತೆಯನ್ನು
ಸರ್ಕಾರ ತನ್ನ ಕಡೆಗೆ ವಹಿಸಿಕೊಂಡಿದೆ. ಇತ್ತೀಚೆಗೆ
ಜಿಲ್ಲಾ ಬೋರ್ಡುಗಳವರೂ ಕೂಡ ಎಲ್ಲೆಲ್ಲಿ ರಸ್ತೆಗಳ
ಕೆಲಸಕಾರ್ಯಗಳು ಸಮರ್ಪಕವಾಗಿ ನಡೆಯುತ್ತಿ
ಲ್ಲವೋ ಅವುಗಳನ್ನೆಲ್ಲಾ ಸರ್ಕಾರದವರೇ ವಹಿಸಿ
ಕೊಳ್ಳಬೇಕೆಂದು ಹೇಳುತ್ತಿದ್ದಾರೆ. ಅದೇರೀತಿ ಈಗ
ಜಿಲ್ಲಾ ಬೋರ್ಡುಗಳವರೂ ಮತ್ತು ಮುನಿಸಿ
ಪಾಲಟಿಯವರೂ ಪ್ರಾರಂಭಿಸಿರುವಂಥ ಅನೇಕ
ಹೈಸ್ಕೂಲುಗಳನ್ನು ಸರ್ಕಾರದವರೇ ವಹಿಸಿಕೊಳ್ಳಿ
ಎಂದು ಹೇಳುತ್ತಿದ್ದಾರೆ. ಈ ದಿವಸ ಈ ಇನ್‌ಸ್ಟಿಟ್ಯೂಷನ್
ಗಳನ್ನು ನಡೆಸಲು ಅವರಲ್ಲಿ ಹಣವಿಲ್ಲ. ಆದಕಾರಣ
ಇವುಗಳನ್ನೆಲ್ಲಾ ಸರ್ಕಾರದವರೇ ವಹಿಸಿಕೊಳ್ಳಲಿ
ಎಂದು ಅವರು ಕೇಳುತ್ತಿದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—ಯಾವ ಡಿಸ್ಟ್ರಿಕ್ಟ್
ಬೋರ್ಡು ಹೈಸ್ಕೂಲಿನವರು ಆ ರೀತಿ ಕೇಳಿದ್ದಾರೆ?

ಶ್ರೀ ಜಿ. ಎ. ತಿಮ್ಮಪ್ಪಗೌಡ,—ಇತ್ತೀಚೆಗಂತೂ
S.S.L.C. ಪರೀಕ್ಷೆಗಳ ಫಲಿತಾಂಶವನ್ನು ತಾವುಗಳು
ನೋಡುವುದಾದರೆ ಡಿಸ್ಟ್ರಿಕ್ಟ್ ಬೋರ್ಡ್ ಹೈಸ್ಕೂಲು
ಗಳಲ್ಲಿ ಓದತಕ್ಕಂಥ ವಿದ್ಯಾರ್ಥಿಗಳ ದಕ್ಷತೆಯು ಕಡಿಮೆ
ಯಾಗುತ್ತಾ ಬರುತ್ತಿದೆ... ... ...

ಶ್ರೀ ವಿ. ವೆಂಕಟಪ್ಪ.—ನಿಮ್ಮ ವಾದ ನಿಮಗೇ
ವಿರೋಧವಾಗುತ್ತದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಹೀಗೆ ಅವರ
ವಿದ್ಯಾಮಟ್ಟ ಕಡಿಮೆಯಾಗುತ್ತಿರುವುದರಿಂದ ಸಾರ್ವ
ಜನಿಕರ ಅಭಿಪ್ರಾಯದ ಪ್ರಕಾರ ಈ ಪಾಠಶಾಲೆಗಳ
ನ್ನೆಲ್ಲಾ ಸರ್ಕಾರದವರೇ ವಹಿಸಿಕೊಳ್ಳುವುದು ಸೂಕ್ತ
ಎಂದು ಹೇಳುತ್ತೇನೆ. ಇವುಗಳನ್ನು ಸರ್ಕಾರ ತೆಗೆದು
ಕೊಂಡರೆ ಇನ್ನುಳಿದ ಕೆಲಸಗಳನ್ನು ಅವರು ಅವರಿಗಿರ
ತಕ್ಕಂಥ ಹಣಕಾಸಿನ ವರಮಾನದ ಮೇಲೆ ನಡೆಸಿ
ಕೊಂಡು ಹೋಗಲು ಸಾಧ್ಯವಾಗುತ್ತದೆಂದು ಹೇಳು
ತ್ತೇನೆ. ಈ ಎಲ್ಲಾ ಕಾರಣಗಳಿಂದ ಈ ಬಿಲ್ಲು
ಸೆಲೆಕ್ಟ್ ಸಮಿತಿಯವರ ಪರಿಶೀಲನೆಗೆ ಹೋಗತಕ್ಕದ್ದು
ಅನಾವಶ್ಯಕವೆಂದು ಹೇಳುತ್ತೇನೆ, ಆದರೆ ಈ ಬಿಲ್ಲು
ಯಾವುದೋ ರಾಹುಕಾಲದಲ್ಲಿ ಹುಟ್ಟಿರುವಂತೆ ಕಾಣು
ತ್ತಿದೆ. ಈ ಬಿಲ್ಲಿನ ಬಗ್ಗೆ ಎಲ್ಲರೂ ಬಹಳ ತವಕ ಪಡುತ್ತಿ
ದ್ದಾರೆ. ಆದುದರಿಂದ ಇದನ್ನು ಈ ಅಧಿವೇಶನದಲ್ಲಿ
ಪಾಸ್ ಮಾಡಬೇಕಾಗಿದೆ. ಎದುರು ಪಕ್ಷದ ನಾಯ
ಕರೂ ಸಹ ಇದನ್ನೇ ಹೇಳಿದ್ದಾರೆ. ಆದುದರಿಂದ
ಇದನ್ನು ಈಗಲೇ ಪಾಸ್ ಮಾಡಿಸಬೇಕೆಂದು
ಹೇಳುತ್ತೇನೆ.

Mr. SPEAKER.—I want to consult the Leader of the Opposition, whether as agreed to yesterday by the House we could complete the Bill today.

Sri J. MOHAMED IMAM.—What about the suggestion made by me and also several other members that this Bill may be referred to a small Committee to come to a unanimous understanding ? It is only a question of giving two days' more time and I think that is acceptable.

Sri Kadidal MANJAPPA.—We have thought over the matter for nearly $2\frac{1}{2}$ years. There is nothing to be thought over afresh. I think we can finish the consideration stage. If there is not sufficient time, we can postpone the consideration of the clauses to next time. Meanwhile we can have an informal talk.

Sri J. MOHAMED IMAM.—We have moved certain amendments to this Bill. If the Minister is not agreeable to refer this Bill to a Committee, Select Committee or a Special Committee, then we would like to move the amendments. Necessarily, we want some time because we have to concentrate on specific issues there. So, that would involve some time. If the Minister accepts the formation of a Committee I have no objection to close the discussions now alone and the amendments also may be referred to that Committee.

Mr. SPEAKER.—That would be better. That would be healthier and the Hon'ble Members may come to some agreement. Suppose it is referred to a Select Committee, then there may be a dissenting minute and all that. As the Hon'ble Leader of the Opposition put it, if the House is agreeable, we may adopt that suggestion since the House is also very desirous of passing this Bill as early as passible.

Sri J. MOHAMED IMAM.—I have no objection.

Mr. SPEAKER.—So, we shall close it at 5-30 p. m.

Sri J. MOHAMED IMAM.—What about amendments ?

Mr. SPEAKER.—As the Hon'ble Minister put it, we shall refer them to a Committee, not to a Select Committee.

Sri Kadidal MANJAPPA.—I suggested that we may discuss these amendments informally and then the consideration of the clauses may be taken up tomorrow.

*ಶ್ರೀ ಎಂ. ಚಿಕ್ಕಲಿಂಗಯ್ಯ.—ಸ್ವಾಮಿ, ಈಗ ಮಾನ್ಯ ಸಭೆಯ ಮುಂದೆ ಚರ್ಚೆಯಾಗುತ್ತಿರುವ ಬಿಲ್ಲಿನ ವಿಚಾರದಲ್ಲಿ ಈವರೆಗೆ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರತಕ್ಕ ಸದಸ್ಯರ ಪೈಕಿ ಒಬ್ಬೊಬ್ಬರ ಅಭಿಪ್ರಾಯಗಳಲ್ಲಿ ಸ್ವಲ್ಪ ವ್ಯತ್ಯಾಸವಿರುವಂತೆ ಕಂಡುಬಂದಾಗ್ಯೂ ಇನ್ನುಳಿದ ಮಾನ್ಯ ಸದಸ್ಯರ ಅಭಿಪ್ರಾಯಗಳೆಲ್ಲಾ ಒಬ್ಬೊಬ್ಬರದು ಒಂದೊಂದು ರೀತಿಯಾಗಿದೆ. ಆದುದರಿಂದ ಈ ಮಸೂದೆ ರಾಹುಕಾಲಕ್ಕೂ-ಗುಳಿಕ ಕಾಲಕ್ಕೂ ಮಧ್ಯೆ ಗಜಲಗ್ನದಲ್ಲಿ ಹುಟ್ಟಿರಬೇಕೆಂದು ತೋರುತ್ತದೆ. ಈ ಬಿಲ್ಲಿಗಾಗಿ ಶ್ರಮಿಸುತ್ತಿರುವುದನ್ನು ನೋಡಿದರೆ ಬೆಟ್ಟ ಬಗೆದು ಇಲಿ ಹಿಡಿದಂತೆ ಆಗಿದೆ. ಆದರೆ ಇಲ್ಲಿಯವರೆಗೂ ಆದುದ್ದೆಲ್ಲಾ ಆಯಿತು. ಈಗಲಾದರೂ ಈ ಮಸೂದೆಯನ್ನು ಈ ಸಾಲಿನಲ್ಲೇ ಪರಿಪೂರ್ಣ ಮಾಡಲು ನಾವು ಮುಖ್ಯವಾಗಿ ಸಮಾಲೋಚನೆ ಮಾಡಬೇಕಾದ ವಿಚಾರಗಳೇನಿರುತ್ತವೆಯೋ ಅವುಗಳ ಬಗ್ಗೆ ನಾನೀಗ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ಮೊಟ್ಟಮೊದಲನೆಯದಾಗಿ ಸರ್ಕಾರದವರೇ ಈ ಬಿಲ್ಲನ್ನು ತರಲು ಬಹಳ ನಿಧಾನವಾಯಿತು ಎಂದು ಹೇಳಿದ್ದಾರೆ. ಹೀಗೆ ಪೆಂಡಿಂಗ್‌ನಲ್ಲಿ ಈ ಬಿಲ್ಲು ಮೂರು ವರ್ಷಗಳ ಕಾಲ ಇರಬೇಕಾಗಿರಲಿಲ್ಲ. ಇದು ಹುಟ್ಟುವ ಕಾಲದಲ್ಲೇ ರೋಗಗ್ರಸ್ತವಾಗಿದ್ದುದರಿಂದಲೂ ಮತ್ತು ಈ ಮಧ್ಯೆ ಇದರಲ್ಲಿ ಪಾರ್ಟಿ ಹಿತದೃಷ್ಟಿ ಸೇರಿಕೊಂಡಿದ್ದರಿಂದಲೂ ಮತ್ತು ಇದರ ಬಗ್ಗೆ ಒಂದೊಂದು ಸ್ಟೇಜಿನಲ್ಲೂ ಒಂದೊಂದು ಹೊಸ ಅಭಿಪ್ರಾಯವನ್ನು ಜೋಡಿಸಿದ್ದರಿಂದ ಈ ಬಿಲ್ಲು ಹೀಗೆ ಸ್ಟೇಜ್ ಬೈ ಸ್ಟೇಜ್ ನಿಧಾನವಾಗಲು ಕಾರಣವಾಗಿರುತ್ತದೆ. ನಾನು ಕಳೆದ ಸಾಲಿನಲ್ಲೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇನೆ. ಆದರೆ ತಾವು ಹೀಗೆಲ್ಲಾ ಮಾಡುತ್ತಾ ಹೋದರೆ ದೇಶದಲ್ಲಿ ಜನಗಳು ಕಾಂಗ್ರೆಸ್ ಸಂಸ್ಥೆಯ ಬಗ್ಗೆ ಏನೊಂದು ಅಭಿಪ್ರಾಯವನ್ನಿಟ್ಟುಕೊಂಡಿದ್ದರೋ ಅದಕ್ಕೆ ನಾಳೆ ಒಳ್ಳೆಯ ಪರಿಣಾಮವಿರಲಾರದು.

ಶ್ರೀ ಕಡಿದಾಳ್ ಮಂಜಪ್ಪ.—ಜನರು ಯಾವಾಗ್ಲೂ ಈ ಸಂಸ್ಥೆ ವಿಚಾರದಲ್ಲಿ ಒಳ್ಳೆಯ ಅಭಿಪ್ರಾಯವನ್ನೇ ಇಟ್ಟುಕೊಂಡಿರುತ್ತಾರೆ. ಅದಕ್ಕೆ ಯಾವ ಸಂಶಯವೂ ಇಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಏನೇ ಆಗಲಿ ಇದಕ್ಕೆ ಹೀಗೆ ನಿಧಾನ ಮಾಡಬಾರದು ಎಂಬುದೇ ನನ್ನ ಮುಖ್ಯಾಭಿಪ್ರಾಯ.

ಎರಡನೆಯದಾಗಿ ಈ direct ಮತ್ತು indirect elections ಮಾಡಬೇಕೆನ್ನುವ ವಿಚಾರದಲ್ಲಿ ಅನೇಕ ಚರ್ಚೆಗಳು ಆಗಿ ಈ ವಿಚಾರದಲ್ಲಿ ಶ್ರೀ ವಿ. ವೆಂಕಟಪ್ಪನವರ ಸಮಿತಿಯವರ ವರದಿಯನ್ನು ನಾವು ಒಪ್ಪಿಕೊಂಡಿದ್ದೆವು. ಅದರ ತತ್ವವನ್ನು ಒಪ್ಪಿಕೊಂಡಿದ್ದೆವು. ಆದರೆ ಕಳೆದ ಸಾಲಿನಲ್ಲಿ ಅದರಲ್ಲಿ ಬದಲಾವಣೆ ಮಾಡಿ ಬೇರೆ ತಂದದ್ದಕ್ಕಾಗಿ ಆ ತತ್ವದಮೇಲೆ ನಾವು ಸಭಾತ್ಯಾಗ ಮಾಡಿರುವುದು ಕೂಡ ಸರ್ಕಾರದ ಗಮನಕ್ಕೆ ಬಂದಿದೆ, ಜನಗಳಿಗೂ ಸಹ ಗೊತ್ತಾಗಿದೆ.

ಅನಂತರ ಈ direct elections ಈಗಿನ ತತ್ವಕ್ಕೆ ಒಪ್ಪುವುದಾದರೂ ಕೂಡ ನನಗೆ ಇದರಲ್ಲಿ ಒಂದು ಶಂಕೆ ಇದೆ. ಅದೇನೆಂದರೆ ಈಗ Multi-member Constituency ಮಾಡಿಕೊಂಡು direct election ಮಾಡಬೇಕು ಎಂದು ನಿಗದಿ ಮಾಡಿದ್ದಾರೆ. ಆದರೆ ಟ್ರೆಷರಿ ಬೆಂಚಿನ ಅನೇಕ ಮಾನ್ಯ ಸದಸ್ಯರು ಮತ್ತು ಗಣ್ಯ ವ್ಯಕ್ತಿಗಳು ಕೂಡ Single-member Constituency ಆಗಬೇಕು. ಅದರಲ್ಲಿ reservation ಮಾಡಬೇಕು, ಷೆಡ್ಯೂಲ್ಡ್ ಜಾತಿಗಳವರಿಗೆ ಅವಕಾಶ ಕೊಡಬೇಕೆಂದು ಅಪ್ಪಣೆ ಕೊಡಿಸಿರುವುದರ ದೆಸೆಯಿಂದ, ನೀವು ತಂದಿರುವುದು ತಿದ್ದುಪಡಿಯಾಗಲೇಬೇಕು, ತಿದ್ದುಪಡಿ ಮಾಡದೆ ಇದ್ದ ಪಕ್ಷದಲ್ಲಿ ಅದನ್ನು ಖಂಡಿತವಾಗಿಯೂ ಒಪ್ಪುವುದಕ್ಕಾಗುವುದಿಲ್ಲ. ಅಲ್ಲದೆ direct Election ಮಾಡಿ Multi-member Constituency ಗಳನ್ನು ಇಟ್ಟುಕೊಂಡ ಪಕ್ಷದಲ್ಲಿ, ನಮ್ಮ ನಾಯಕರು ಆಗಲೇ ಅಪ್ಪಣೆ ಕೊಡಿಸಿದ ಹಾಗೆ ಸಾರ್ವತ್ರಿಕ ಚುನಾವಣೆಗಳು ನಡೆದು ಅದಕ್ಕಾಗಿ ಹಣ ಖರ್ಚಾಗಿ ದೇಶಕ್ಕೆ ಎಷ್ಟೊಂದು ಕಷ್ಟನಷ್ಟಗಳುಂಟಾಗುತ್ತವೆ ಎಂಬುದನ್ನು ಯೋಚಿಸಬೇಕು. ಈ ವರ್ಷ ಸಾರ್ವತ್ರಿಕವಾಗಿ ಚುನಾವಣೆಗಳನ್ನು ಮಾಡಿದಪಕ್ಷದಲ್ಲಿ ಲಕ್ಷಾಂತರ ರೂಪಾಯಿ ಖರ್ಚಾಗಬೇಕಾಗುತ್ತದೆ. ಈ ಖರ್ಚನ್ನು ಸರ್ಕಾರದವರು ವಹಿಸಬೇಕೇ ಅಥವಾ ಜಿಲ್ಲಾ ಬೋರ್ಡುಗಳು ವಹಿಸಬೇಕೇ ಎನ್ನುವುದನ್ನು ಯೋಚಿಸಬೇಕಾಗುತ್ತದೆ. ಇದಲ್ಲದೆ ಜನಗಳೂ ಮತ್ತು ಉಮೇದುವಾರರೂ ಸಹ ವಿಶೇಷವಾದ ಹಣವನ್ನು ಖರ್ಚು ಮಾಡಬೇಕಾಗುತ್ತದೆ ಎನ್ನುವುದನ್ನೂ ಯೋಚಿಸಬೇಕು.

ಇದರ ಜೊತೆಗೆ ಈ ಜಿಲ್ಲಾಬೋರ್ಡು ಚುನಾವಣೆಗಳು ಆದ ತಕ್ಷಣ ಸಂಸ್ಥಾನಾದ್ಯಂತ ವಯಸ್ಕರ ಮತದಾನ ಪದ್ಧತಿಯ ಮೇಲೆ 1956ನೆ ಇಸವಿಯಲ್ಲಿ ಮುನಿಸಿಪಾಲಿಟಿಗಳ ಚುನಾವಣೆಗಳು ಬರುತ್ತವೆ. ಎರಡು ವರ್ಷದ ಅವಧಿಯೊಳಗೆ ಮೂರು ಮಹಾ ಚುನಾವಣೆಗಳನ್ನು ದೇಶದಲ್ಲಿ ಎದುರಿಸಬೇಕಾಗಿರುವ ಸಂದರ್ಭವಿರುವುದರಿಂದ ಇದರಿಂದ ಎಷ್ಟು ತೊಂದರೆಯಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಇದಕ್ಕೆ ಬದಲಾಗಿ ಶ್ರೀಮಾನ್ ವೆಂಕಟಪ್ಪ ಸಮಿತಿಯವರು ಮಾಡಿರತಕ್ಕ ಸಲಹೆಗಳ ಪ್ರಕಾರ indirect election ಅಂದರೆ, ಅಪ್ರತ್ಯಕ್ಷ ಚುನಾವಣೆಗಳನ್ನು ಬಹಳ ಸುಲಭ ಖರ್ಚಿನಲ್ಲಿ ಮಾಡಬಹುದೆಂದು ಹೇಳುತ್ತೇನೆ.

ಇನ್ನೊಂದು ವಿಚಾರ: ಈಗ Multi-member Constituency ಎಂದು ಹೇಳುತ್ತಿದ್ದೀರಿ. ಇದರ ಮೇಲೆ ಎಲ್ಲರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಒಂದು ಜಿಲ್ಲೆಗೆ ಮೂರು ಸ್ಥಾನಗಳಿಗೆ ಜಾಸ್ತಿ ಇರಕೂಡದೆಂದು ತಿದ್ದುಪಡಿಯನ್ನು ತಂದಿದ್ದಾರೆ. ಇದರಲ್ಲಿ ಮೀಸಲು ಸ್ಥಾನಗಳೆಷ್ಟು ಇರಬೇಕು, ಒಂದೊಂದು ಜಿಲ್ಲೆಗೆ ಏನಿರಬೇಕು ಎಂಬುದನ್ನು ನಮೂದುಮಾಡಿಲ್ಲ. ಇಷ್ಟಿಷ್ಟು ಜನಸಂಖ್ಯೆಗೆ ಇಷ್ಟಿಷ್ಟು ಸದಸ್ಯತ್ವವಿರಬೇಕು ಎನ್ನುವುದನ್ನು ಸಹ ನಮೂದು ಮಾಡಲಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ನಿಮ್ಮ ವರ್ಗದವರಿಗೆ ಎಷ್ಟು ಸ್ಥಾನಗಳನ್ನು ಮೀಸಲಾಗಿಡಬೇಕೆಂದು ಈಗಿರತಕ್ಕ ಕಾನೂನಿನಲ್ಲಿ ವಿಧಾಯಕಮಾಡಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ Multi-member Constituency ಬರುವುದರಿಂದ ಒಂದೇ ಪಾರ್ಟಿಯವರು ಚುನಾವಣೆಗಳಲ್ಲಿ ಬರುವುದಕ್ಕೆ ಸಹಾಯವಾಗುತ್ತದೆ. ಶ್ರೀ ಪಟ್ಟಾಭಿರಾಮನ್‌ರವರೂ ಮತ್ತು ನಮ್ಮ ನಾಯಕರೂ ಹೇಳಿದಹಾಗೆ ಸ್ಥಳೀಯ ಸಂಸ್ಥೆಗಳಾದ ಮುನಿಸಿಪಾಲಿಟಿಗಳಲ್ಲಿ ಮತ್ತು ಜಿಲ್ಲಾ ಬೋರ್ಡುಗಳಲ್ಲಿ ಸಹ ರಾಜಕೀಯವನ್ನು ತಂದೊಡ್ಡುತ್ತಿದ್ದಾರೆ.

Mr. SPEAKER.—Hon'ble Member need not repeat arguments already advanced by other Hon'ble Members; if he has any new points to put forth, he may do so.

ಶ್ರೀ ಎಂ. ಚಿಕ್ಕಲಿಂಗಯ್ಯ.—ಆದುದರಿಂದ ಈ Multi-member Constituencyಯಿಂದ Single-member Constituencyಗೆ ಬದಲಾವಣೆಮಾಡಿ 25-30 ಸಾವಿರ ಪ್ರಜಾಸಂಖ್ಯೆಗೆ ಒಂದು ಸ್ಥಾನದಂತೆ ಮಾಡಿ, ನಿಮ್ನ ತರಗತಿಗಳವರಿಗೆ ಮೀಸಲು ಸ್ಥಾನಗಳನ್ನು ಸಹ ಅವಕಾಶಮಾಡಿ ಕೊಡಬೇಕು. ಈ ರೀತಿಯಾಗಿ ಮಾಡುವುದರಿಂದ ನಿಮ್ನ ತರಗತಿಗಳವರಿಗೆ ಖರ್ಚು ಕಡಿಮೆಯಾಗುವುದರಿಂದ ಮೀಸಲು ಸ್ಥಾನಗಳನ್ನು ಮಾಡಬೇಕೆಂದು ಹೇಳುತ್ತೇನೆ.

Sri Kadidal MANJAPPA—With your permission, may I ask the Hon'ble member as to what the political motive involved in this Bill is ? Hon'ble members on the opposite are repeatedly levelling that charge against the Government without specifying in what way Government is intending to strengthen their party.

ಶ್ರೀ ಎಂ. ಚಿಕ್ಕಲಿಂಗಯ್ಯ.—ಯಾಕೆಂದರೆ Multi-member Constituency ಮಾಡುವುದರ ದೆಸೆಯಿಂದ ಒಂದೇ ಪಾರ್ಟಿಗೆ ಅದರಲ್ಲೂ ಅಧಿಕಾರದಲ್ಲಿರುವ ಪಾರ್ಟಿಗೆ ಚುನಾವಣೆಗಳಲ್ಲಿ ಜಯಶೀಲರಾಗಿ ಬರಲು ಹೆಚ್ಚಾದಂಥ ಅವಕಾಶವಿರುತ್ತದೆ. Single-member Constituency ಮಾಡಿ ಅದರಲ್ಲಿ ಕೆಲವು ಸ್ಥಾನಗಳನ್ನು ಮೀಸಲಾಗಿರಿಸಬೇಕು ಎಂದು ಹೇಳುತ್ತೇನೆ. ಶ್ರೀ ಕೆ. ಪಟ್ಟಾಭಿರಾಮನ್‌ರವರೂ ಮತ್ತು ನಮ್ಮ ನಾಯಕರಾದ ಶ್ರೀಮಾನ್ ಇಮಾಂ ಸಾಹೇಬರೂ ಹೇಳಿದಹಾಗೆ, ಟೌನಿನವರು ಮತ್ತು ಸಿಟಿಗಳವರು ಚುನಾವಣೆಗಳಲ್ಲಿ ಸ್ಪರ್ಧಿಸಲು ಅವಕಾಶವಿಲ್ಲದೆ ಇದ್ದರೆ ಚೆನ್ನಾಗಿರುತ್ತದೆಂಬ ವಾದವನ್ನು ಸಮರ್ಥನೆಮಾಡುತ್ತೇನೆ. ತಾವು ಯಾವ socialistic pattern of society ಎಂಬ ವ್ಯವಸ್ಥೆಯನ್ನು ಒಪ್ಪಿಕೊಂಡಿದ್ದೀರೋ ಆ ತತ್ವದ ಪ್ರಕಾರ ಪಂಚಾಯಿತಿಗಳವರಿಗೆ ಹೆಚ್ಚಿಗೆ ಅವಕಾಶ ಕೊಡಬೇಕು. ಗ್ರಾಮಾಂತರಗಳಲ್ಲಿರುವವರಲ್ಲಿ ಪ್ರತಿಯೊಬ್ಬರೂ ಅನುಭವವಿರತಕ್ಕವರಿರುವುದಿಲ್ಲ. ಆದುದರಿಂದ ಪ್ರಭಾವಶಾಲಿಗಳಿಗಿಂತ ಪ್ರತಿಯೊಂದು ಕಡೆ ಗ್ರಾಮಾಂತರಗಳಲ್ಲಿ ಹೆಚ್ಚು ಜನಗಳ ಸಂಪರ್ಕವಿಟ್ಟುಕೊಂಡಿರತಕ್ಕವರಿಗೆ ಮಾತ್ರ ಚುನಾವಣೆಗಳಲ್ಲಿ ಬರಲು ಅವಕಾಶವಾಗುತ್ತದೆ. ಆದುದರಿಂದ ಈ ಟೌನಿನವರು ಮತ್ತು ಸಿಟಿಯವರು ಈ ಚುನಾವಣೆಗಳಲ್ಲಿ ಭಾಗವಹಿಸದಂತೆ ಮಾಡತಕ್ಕದ್ದು ಸೂಕ್ತವಾದಂಥ ಸಲಹೆ ಎಂದು ನಾನು ತಿಳಿದುಕೊಂಡಿದ್ದೇನೆ.

ಕೊನೆಯದಾಗಿ ಶೇಕಡ 6¼ ಭಾಗದಷ್ಟು ವರಮಾನವನ್ನು ಕೊಡುತ್ತಿದ್ದುದನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳಿದ್ದೀರಿ. ಮೇಲೆ ಹೇಳಿದಂತೆ ಶೇಕಡ 6¼ ಭಾಗವನ್ನು ಯಾವ ಉದ್ದೇಶದಿಂದ ತಾವು reserve ಮಾಡಿಕೊಳ್ಳಬೇಕೆಂದಿದ್ದೀರಿ ಎಂದರೆ ತಾಲ್ಲೂಕು ಹಂತದಲ್ಲಿ ಬೇರೊಂದು ಕಮಿಟಿಯನ್ನು ಏರ್ಪಾಡು ಮಾಡಬೇಕಾಗುತ್ತದೆ ಎಂದು ಹೇಳಿರುವುದಕ್ಕೆ ಇದನ್ನು ಕೊಡಬೇಕೆಂಬ ಅಭಿಪ್ರಾಯವಿರುವಂತೆ ತೋರುತ್ತದೆ. ಈಗಾಗಲೇ ಪಂಚಾಯಿತಿ, ಮುನಿಸಿಪಾಲಿಟಿ, ಡಿಸ್ಟ್ರಿಕ್ಟ್ ಬೋರ್ಡು ಎಂದಿರುವುದರ ಜೊತೆಗೆ ಇನ್ನೂ ಯಾವುದೋ ಒಂದು ಕಮಿಟಿಯನ್ನು ಮಾಡಿದ ಪಕ್ಷದಲ್ಲಿ ಇದರ ಖರ್ಚು ಎಷ್ಟಾಗುತ್ತದೆ, duplication of work ಎಷ್ಟಾಗುತ್ತದೆ ಎನ್ನುವುದನ್ನು ಯೋಚಿಸಬೇಕು. ಈ ಹೊಸದಾಗಿ ತಾಲ್ಲೂಕು ಹಂತದಲ್ಲಿ ಇನ್ನೊಂದು ಸಮಿತಿಯನ್ನು ಏರ್ಪಾಡು ಮಾಡುವುದರಿಂದ ಬರೀ resolution ಮಾಡುವುದರಲ್ಲಿ ಆಗುತ್ತದೆಯೇ ಹೊರತು ನಿಜವಾಗಿ ಕೆಲಸಕಾರ್ಯಗಳು ನಡೆಯುವುದಿಲ್ಲ. ಆದುದರಿಂದ ಈ 6¼ ಭಾಗವನ್ನು ಜಿಲ್ಲಾ ಬೋರ್ಡಿಗೇ ಕೊಟ್ಟು, ಅವರಿಗೇ ಅಧಿಕಾರವನ್ನು ಕೊಟ್ಟು ಜಿಲ್ಲಾ ಬೋರ್ಡನ್ನೇ ಇಟ್ಟುಕೊಳ್ಳುವುದು ಸೂಕ್ತವೆಂದು ನಾನು ತಿಳಿದುಕೊಂಡಿದ್ದೇನೆ.

Number of Committees ಆದ ಪಕ್ಷದಲ್ಲಿ supervision, control ವಗೈರೆ ಕಷ್ಟವಾಗುತ್ತದೆಂದು ನಾನು ಅಭಿಪ್ರಾಯ ಪಡುತ್ತೇನೆ.

ಆದುದರಿಂದ ಇಷ್ಟು ವಿಷಯ ಹೇಳಿ ಖಂಡಿತವಾಗಿಯೂ ನಾವು ಈಗ ಸೂಚಿಸಿರತಕ್ಕ ವಿಷಯಗಳನ್ನು ಸರ್ಕಾರದವರು ಒಪ್ಪಿ, ಈ ತಿದ್ದುಪಡಿಗಳ ಸಹಿತ ಬಿಲ್ಲನ್ನು ಒಂದು Special Committeeಗೆ ಅಥವಾ Select Committeeಗೆ refer ಮಾಡಿ, ಅವರು ಕೂಲಂಕಷವಾಗಿ ಪರಿಶೀಲನೆ ಮಾಡಿದನಂತರ ನಾವು ಈ ಅಧಿವೇಶನದಲ್ಲೇ ಈ ಬಿಲ್ ಪಾಸ್ ಮಾಡುವುದರಲ್ಲಿ ನನ್ನ ಅಭ್ಯಂತರವೇನೂ ಇಲ್ಲ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri M. LINGANNA.—On a point of clarification, Sir. Under section 55 any person who is above 25 years can contest as a candidate to the district board. But persons who live in the Municipal area and city are excluded and they cannot vote. But power is conferred on people living in those areas to contest.

Mr. SPEAKER.—The Hon'ble Member may meet the Minister and discuss the point on which he feels any doubt.

Sri Mulka GOVINDA REDDY.—Discussion between the member and the Minister is not a private matter, Sir it is the concern of the House.

Sri Kadidal MANJAPPA.—It is not a private discussion between Sri Mulka Govinda Reddy and me ; it is between the Minister who sponsors the Bill and Sri Mulka Govinda Reddy, Member Legislative Assembly.

ಅಧ್ಯಕ್ಷರೇ, ಈ ಮಸೂದೆಯಮೇಲೆ ತೀವ್ರ ಚರ್ಚೆ ನಡೆದಿದೆ. ಶ್ರೀ ಇಮಾಂಸಾಹೇಬರು ಅಪ್ಪಣೆ ಕೊಡಿಸಿದಹಾಗೆ ಮೂರು ವಿಧವಾದ ಅಭಿಪ್ರಾಯಗಳು ಹೊರಬಿದ್ದಿವೆ. ಜಿಲ್ಲಾ ಬೋರ್ಡ್ ಚುನಾವಣೆ ನಡೆಸದೆ ಇದ್ದುದಕ್ಕೆ ಸರ್ಕಾರದವರ ಮೇಲೆ ಒಂದು ಜವಾಬ್ದಾರಿ ಮತ್ತು ಆಪಾದನೆಯನ್ನು ಮತ್ತು ಈ ಕಡೆ ಮಾತನಾಡಿದ ಕೆಲವು ಮಿತ್ರರೂ ಕೂಡ ದೊಡ್ಡ ಆಪಾದನೆಯನ್ನು ಹೊರಸಿದ್ದಾರೆ. ನಾನು ಒಂದೇ ಮಾತಿನಲ್ಲಿ ಈ ಆಪಾದನೆಗೆ ಉತ್ತರ ಹೇಳುವುದಾದರೆ, ಜವಾಬ್ದಾರಿ ಸರ್ಕಾರದ ಮೇಲೆ ಎಷ್ಟಿದೆಯೋ, ಅಷ್ಟೇ ಜವಾಬ್ದಾರಿ ಈ ಮಾನ್ಯ ಸಭೆಯ ಸದಸ್ಯರ ಮೇಲೆಯೂ ಇದೆ ಎಂದು ಸ್ಪಷ್ಟವಾಗಿ ತಿಳಿಸಲಿಚ್ಛಿಸುತ್ತೇನೆ. ಪ್ರಜಾಪ್ರಭುತ್ವ ತತ್ವದ ಪ್ರಕಾರ ಯಾವುದಾದರೂ ಒಂದು ಸರ್ಕಾರ ನಡೆಯುತ್ತ ಇರುವಾಗ ಕಾನೂನು ಮಾಡತಕ್ಕ ಜವಾಬ್ದಾರಿ ಶಾಸನ ಸಭೆಗೆ ಸೇರಿರುತ್ತದೆ. ಕಾನೂನನ್ನು ಸಭೆಯಮುಂದೆ ಮಂಡಿಸತಕ್ಕ

ಜವಾಬ್ದಾರಿ ಸರ್ಕಾರದ್ದು. ಅದರ ಜೊತೆಗೆ ಮಾನ್ಯ ಸದಸ್ಯರುಗಳು ಕೂಡ ಕಾನೂನು ಮಾಡತಕ್ಕ ಬಗ್ಗೆ ಅಥವಾ ಕಾನೂನು ತಿದ್ದುಪಡಿ ಮಾಡತಕ್ಕ ಬಗ್ಗೆ ಸೂಕ್ತ ಮಸೂದೆಯನ್ನು ಸಭೆಯ ಮುಂದೆ ಮಂಡಿಸುವುದಕ್ಕೆ ಕೂಡ ಅಧಿಕಾರವನ್ನು ಪಡೆದಿರುತ್ತಾರೆ ಎಂಬುದನ್ನು ಮಾನ್ಯ ಸದಸ್ಯರು ಮರೆಯಬಾರದು.

5 P.M.

ಸರ್ಕಾರದ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ ಎಂಬುದನ್ನು ಅರಿತುಕೊಂಡಿದ್ದೇನೆ. ಅದನ್ನು ಒಪ್ಪಿಕೊಳ್ಳುತ್ತೇನೆ. ಸರ್ಕಾರ ಯಾವುದಾದರೂ ಒಂದು ಕಾನೂನನ್ನು ಮಾಡಬೇಕಾದರೆ ಈ ಮಾನ್ಯ ಸಭೆಯ ಬಹು ಮಂದಿ ಸದಸ್ಯರ ಒಪ್ಪಿಗೆ ಇಲ್ಲದೆ ಕಾನೂನನ್ನು ಮಾಡುವುದಕ್ಕಾಗುವುದಿಲ್ಲ ಎಂಬುದನ್ನು ತಿಳಿದಂಥ ತಮ್ಮೆಲ್ಲರಿಗೆ ನಾನು ಹೇಳಬೇಕಾದ್ದಿಲ್ಲ ಎಂದು ಅರಿಕೆ ಮಾಡಿಕೊಳ್ಳುತ್ತೇನೆ. ನಿಜ, 1947ನೇ ಇಸವಿಯಿಂದ ಜಿಲ್ಲಾಬೋರ್ಡ್‌ಗಳ ಚುನಾವಣೆ ನಡೆದಿಲ್ಲ. ನಾನು ನಿನ್ನೆ ತಮ್ಮಲ್ಲಿ ಅರಿಕೆಮಾಡಿಕೊಂಡಹಾಗೆ ಈ ಮಸೂದೆಯ ಹಿನ್ನೆಲೆಯನ್ನು ಮತ್ತು ತತ್ವಗಳನ್ನು ತಮ್ಮ ಜ್ಞಾಪಕಕ್ಕೆ ಸ್ವಲ್ಪಮಟ್ಟಿಗೆ ತಂದುಕೊಳ್ಳಿ, ಸರ್ಕಾರದ ಮೇಲೆ ತಾವು ಆರೋಪಣೆ ಹೊರಿಸಿದ್ದೀರಿ. ನಮ್ಮ ತಪ್ಪೂ ಇದೆ, ತಮ್ಮಗಳ ತಪ್ಪೂ ಇದೆ ಎಂದು ನಿರ್ಭಯವಾಗಿ ಹೇಳ ಬಲ್ಲೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಇಬ್ಬರದೂ ತಪ್ಪು ಇದೆ.

ಶ್ರೀ ಕಡಿದಾಳ್ ಮಂಜಪ್ಪ.—ಮುಖ್ಯವಾಗಿ ಈ ಮಸೂದೆಯಮೇಲೆ ಮಾತನಾಡಿದವರು ಮೂರು ವಿಷಯಗಳಿಗೆ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆ. ಜಿಲ್ಲಾಬೋರ್ಡಿಗೆ ಚುನಾವಣೆ ನಡೆಯುವಾಗ ಬಹು ಮಂದಿ ಸದಸ್ಯರನ್ನೊಳಗೊಂಡ ಚುನಾವಣಾಕ್ಷೇತ್ರ ಇರಬೇಕೋ ಅಥವಾ ಒಬ್ಬ ಸದಸ್ಯರನ್ನೊಳಗೊಂಡ ಚುನಾವಣಾಕ್ಷೇತ್ರವಿರಬೇಕೋ ಎಂಬುದರಲ್ಲಿ ಭಿನ್ನಾಭಿಪ್ರಾಯವನ್ನು ಮಾನ್ಯ ಸದಸ್ಯರು ವ್ಯಕ್ತಪಡಿಸಿದ್ದಾರೆ. ಕೆಲವು ಮಾನ್ಯ ಸದಸ್ಯರು ಬಹುಮಂದಿಯನ್ನು ಚುನಾವಣೆ ಮಾಡತಕ್ಕ ಚುನಾವಣಾ ಕ್ಷೇತ್ರ ಇರತಕ್ಕದ್ದು ಅನುಕೂಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮತ್ತೆ ಕೆಲವರು ಒಬ್ಬ ಉಮೇದುವಾರನನ್ನು ಚುನಾವಣೆ ಮಾಡತಕ್ಕ ಚುನಾವಣಾಕ್ಷೇತ್ರ ಇರತಕ್ಕದ್ದು ಅವಶ್ಯಕವೆಂದು ತಿಳಿಸಿದ್ದಾರೆ. ಈ ಎರಡು ಪದ್ಧತಿಗಳಲ್ಲೂ ಕೂಡ ಸಾಧಕ ಬಾಧಕಗಳಿವೆ ಎಂಬುದನ್ನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಇದರಲ್ಲಿ ಆ ಪದ್ಧತಿಯಾಗಲಿ ಈ ಪದ್ಧತಿಯಾಗಲೀ ಪರಿಪೂರ್ಣವಾದುದು ಇದಕ್ಕಿಂತ ಉತ್ತಮವಾದ ಪದ್ಧತಿ ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಬಹು ಮಂದಿ ಸದಸ್ಯರನ್ನು ಚುನಾವಣೆ ಮಾಡತಕ್ಕ ಚುನಾವಣಾ ಕ್ಷೇತ್ರದಲ್ಲೂ ಕೂಡ ಕೆಲವು ಸಾಧಕ ಬಾಧಕಗಳಿವೆ. ಇನ್ನೊಂದು ಪದ್ಧತಿಯಲ್ಲೂ ಕೂಡ ಕೆಲವು ಸಾಧಕ ಬಾಧಕಗಳಿವೆ. ಶ್ರೀ ಪಟ್ಟಾಭಿರಾಮಯ್ಯರವರು ಮತ್ತು ಇನ್ನು ಕೆಲವರು ಒಬ್ಬ ಸದಸ್ಯರನ್ನು ಚುನಾವಣೆ ಮಾಡಿ ಕಳುಹಿಸತಕ್ಕ ಚುನಾವಣಾ ಕ್ಷೇತ್ರ ಇರತಕ್ಕದ್ದು ಅವಶ್ಯಕ ಮತ್ತು ಅದು ಪ್ರಜಾಪ್ರಭುತ್ವದ ತತ್ವಕ್ಕೆ ಅನುಸಾರವಾಗಿದೆ ಎಂಬ ವಾದವನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಇನ್ನು ಕೆಲವರು ಯಾವುದಾದರೂ ಒಂದು ತಾಲ್ಲೂಕಿನಿಂದ ಚುನಾವಣೆಗೆ ಸ್ಪರ್ಧಿಸತಕ್ಕಂತಹವನು ಆ ತಾಲ್ಲೂಕಿನ ಎಲ್ಲರ ಪ್ರೀತಿ, ವಿಶ್ವಾಸಕ್ಕೂ ಮತ್ತು ಗೌರವಕ್ಕೂ ಪಾತ್ರನಾಗಿರಬೇಕು, ಅಂತಹವನೇ ಚುನಾಯಿತನಾಗುವುದು ಸಾಧುವಾದುದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶ್ರೀ ಪಟ್ಟಾಭಿರಾಮಯ್ಯರವರು ಮತ್ತು ಇತರ ಮಿತ್ರರು ಹೇಳಿದಂತೆ, ಒಬ್ಬ ವ್ಯಕ್ತಿಯನ್ನು ಚುನಾವಣೆ ಮಾಡತಕ್ಕ ಚುನಾವಣಾಕ್ಷೇತ್ರ ಇಟ್ಟುಕೊಂಡರೆ ಅದರಲ್ಲಿಯೂ ಸ್ವಲ್ಪ ತೊಂದರೆ ಇದೆ ಎಂಬುದನ್ನು ನನ್ನ ಮಾನ್ಯ ಮಿತ್ರರು ಅರಿತುಕೊಂಡಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. ಕೆಲವು ಕಡೆ ಜಹಗೀರಾಗಿದ್ದಹಾಗೆ ನಾನಾಕಾರಣಗಳಿಂದ ಕೆಲವರು ಚುನಾವಣೆಯಾಗಿ ಬರುತ್ತಾರೆ. Pocket Borough ಇದ್ದ ಹಾಗೆ ದೊಡ್ಡ ಜಮೀನ್ದಾರರಾಗಿಯೋ ಅಥವಾ ಇನ್ನು ಯಾವುದಾದರೋ ಒಂದು ಕಾರಣದಿಂದ ಜನಗಳ ಮೇಲೆ ಹತೋಟಿಯನ್ನು ಇಟ್ಟುಕೊಂಡಿರುವ ವ್ಯಕ್ತಿಗಳು ಅಂದರೆ Money lenders, ಫೂಟ್‌ಲಾಯರುಗಳು, ಮುಂತಾದವರು ಅಲ್ಲಲ್ಲಿ ಇರುತ್ತಾರೆ.

ಶ್ರೀ ಎ. ಭೀಮಪ್ಪನಾಯಕ್.—Bus-owners ಮತ್ತು Cinema owners ಇರುತ್ತಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಸಿನಿಮಾ owners ಎಲ್ಲರೂ ಕೆಟ್ಟವರು ಎಂದು ಹೇಳುತ್ತಾ ಇಲ್ಲ. ಅಂತಹ ಪ್ರಭಾವವನ್ನು ಜನಗಳಮೇಲೆ ಇಟ್ಟುಕೊಂಡಿರತಕ್ಕ ವ್ಯಕ್ತಿಗಳು ಒಂದೊಂದು ಹೋಬಳಿಯಲ್ಲೂ ಕೂಡ ಎಷ್ಟೋ ಅನಾಹುತ ಮಾಡುವುದಕ್ಕೆ ಅಸ್ಪದವಾಗುತ್ತದೆ ಎಂದು ಹೇಳುತ್ತಿದ್ದೇನೆ. ಅದೇ ಪದ್ಧತಿ ಪರಿಪೂರ್ಣವಾದುದು. ಇದೇ ಪದ್ಧತಿ ಪರಿಪೂರ್ಣವಾದುದು ಎಂದು ವಾದ ಮಾಡುತ್ತಿಲ್ಲ. ಸಾಧಕ ಬಾಧಕಗಳು ಇನ್ನೊಂದು ಪದ್ಧತಿಯಲ್ಲೂ ಇವೆ. ಈ ಎರಡರಲ್ಲೂ ಸಾಧಕ ಬಾಧಕಗಳಿವೆ ಎಂದು ವಾದ ಮಾಡುತ್ತಿದ್ದೇನೆ. ಇನ್ನು ಕೆಲವರು ಜಾತಿವಿಚಾರ ಪ್ರಸ್ತಾಪ ಮಾಡಿದ್ದಾರೆ. ಕೆಲವು ಕಡೆಗಳಲ್ಲಿ ಕೆಲವು ಜಾತಿಯವರು ಹೆಚ್ಚಾಗಿದ್ದಾರೆ. ಅಲ್ಲಿ ಅವರದೇ ಒಂದು ಸ್ಥಾನ ಕಲ್ಪನೆಯಾಗಿರುತ್ತದೆ. ಅವರನ್ನು ತಪ್ಪಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಹೀಗೆ ಅನೇಕ ಸಾಧಕ ಬಾಧಕಗಳಿವೆ. ಈಗ ಒಂದು ತಾಲ್ಲೂಕಿನಿಂದ ಸ್ಪರ್ಧಿಸುವುದಾದರೆ ತಾಲ್ಲೂಕಿನಲ್ಲಿ ಹೆಸರನ್ನು ಪಡೆದ ವ್ಯಕ್ತಿ ಜನರ ಪ್ರೀತಿ ಮತ್ತು ಗೌರವವನ್ನು ಗಳಿಸಿರತಕ್ಕ ವ್ಯಕ್ತಿ ಸ್ಪರ್ಧಿಸುವುದಕ್ಕೆ ಸಾಧ್ಯವಾಗುತ್ತದೆ. ಒಂದು ಹೋಬಳಿಯನ್ನು ಎಲ್ಲಾ ಕಡೆಯೂ ಚುನಾವಣಾ ಕ್ಷೇತ್ರವನ್ನಾಗಿ ಮಾಡುವುದಕ್ಕಾಗುವುದಿಲ್ಲ. ಒಂದು ತಾಲ್ಲೂಕಿಗೆ ಮೂರು ಜನ ಸದಸ್ಯರಿಗಿಂತ ಹೆಚ್ಚಿಗೆ ಇರಕೂಡದು ಎಂದು ಮಸೂದೆಯಲ್ಲಿ ವಿಧಾಯಕವಾಗಿರಬೇಕಾದರೆ ಒಂದೊಂದು ಹೋಬಳಿಯಿಂದ ಒಬ್ಬೊಬ್ಬ ಸದಸ್ಯರನ್ನು ಚುನಾವಣೆ ಮಾಡುವುದಕ್ಕಾಗುವುದಿಲ್ಲ. ಒಂದು ತಾಲ್ಲೂಕಿಗೆ ಇಬ್ಬರು ಅಥವಾ ಮೂರು ಜನ ಸದಸ್ಯರನ್ನು ಆರಿಸತಕ್ಕ ಹಕ್ಕು ಬರುತ್ತದೆ. ಆಗ ಕ್ಷೇತ್ರ ತಕ್ಕಷ್ಟು ವಿಸ್ತಾರವಾಗುತ್ತದೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಮೂರು ಜನಕ್ಕೆ ಬದಲು ಚುನಾವಣೆಯಲ್ಲಿ ನಾಲ್ಕು ಜನ ಬರುತ್ತಾರೆ.

ಶ್ರೀ ಕಡಿದಾಳ್ ಮಂಜಪ್ಪ.—ರಾಜಕೀಯ ಪಕ್ಷ ಕಟ್ಟುವ ಉದ್ದೇಶದಿಂದ, ತಮ್ಮ ಪಕ್ಷಕ್ಕೆ ಸಹಾಯ ಮಾಡುವ ಉದ್ದೇಶದಿಂದ ಸರ್ಕಾರದವರು ಈ ಮಸೂದೆಯನ್ನು ತಂದಿದ್ದಾರೆಯೆಂದು ಆರೋಪಣೆಯನ್ನು ಸರ್ಕಾರದವರ ಮೇಲೆ ಹೊರಿಸಿದ್ದಾರೆ. ಯಾವರೀತಿ ಸಹಾಯ ಮಾಡುತ್ತಾರೆಂದು ಮಾನ್ಯ ಸದಸ್ಯರು ಈ ಸಭೆಯ ಮುಂದೆ ಹೇಳಲಿಲ್ಲ. ನಮಗೆ ಯಾವ ಒಂದು ಅವಕಾಶ ಈ ಮಸೂದೆಯ ಮೂಲಕ ದೊರೆಯುತ್ತದೋ, ತಮ್ಮದೂ ಒಂದು ಪಕ್ಷವಾಗಿರುವುದರಿಂದ ತಮಗೂ ಕೂಡ ಅದೇ ಅವಕಾಶ ದೊರೆಯು

(ಶ್ರೀ ಕಡಿದಾಳ್ ಮಂಜಪ್ಪ.)

ತ್ತದೆ ಎಂಬುದನ್ನು ಮರೆಯಬಾರದು. Multi-member Constituency ನಿರ್ಮಾಣ ಮಾಡಬೇಕು ಎಂದು ಉದ್ದೇಶ ಮಾಡಿಕೊಂಡಿದ್ದೇವೆ. ಅದರಿಂದ ನಮಗೆ ಯಾವ ಅನುಕೂಲಗಳು ಪ್ರಾಪ್ತವಾಗುತ್ತದೋ ತಮಗೂ ಅದೇ ಅನುಕೂಲಗಳು ಪ್ರಾಪ್ತವಾಗಲೇ ಬೇಕು. ಇದರಲ್ಲಿ ವ್ಯತ್ಯಾಸ ನನಗೆ ಕಾಣಲಿಲ್ಲ. ಸರ್ಕಾರದ ಪರ ಹೇಳುವುದಾದರೆ ಸರ್ಕಾರದ ಮನಸ್ಸಿನಲ್ಲಿ Multi-member Constituency ಮಾಡಿದರೆ ಕಾಂಗ್ರೆಸ್ ಸಂಸ್ಥೆಗೆ ಬಲ ಬರುತ್ತದೆ ಎಂದು ನಾನೇನೂ ಯೋಚನೆ ಮಾಡಲಿಲ್ಲ. ತಾವು ಮಾತನಾಡುವುದಕ್ಕೆ ಪ್ರಾರಂಭ ಮಾಡಿದಮೇಲೆ ಅದು ಹೌದೇ ಎಂದು ಸಂದೇಹ ಬರುತ್ತಿದೆ. ಒಂದು ವೇಳೆ ಕಾಂಗ್ರೆಸ್ ಸಂಸ್ಥೆಗೆ ಈ ಒಂದು ವ್ಯವಸ್ಥೆಯಿಂದ ಅನುಕೂಲವಾಗುವುದಾದರೆ ಅದೇ ಅನುಕೂಲ ಇನ್ನೊಂದು ಪಕ್ಷಕ್ಕೂ ಆಗಲೇ ಬೇಕು. ಆದ್ದರಿಂದ ಇನ್ನೊಂದು ಪಕ್ಷದವರು ಹೆದರಬಾರದು ಎಂದು ಅರಿಕೆ ಮಾಡಿಕೊಳ್ಳುತ್ತೇನೆ. ಎರಡನೆಯದು 106ನೇ ನಿಬಂಧನೆಗೆ ಸಂಬಂಧ ಪಟ್ಟುದು. ಈ ವಿಚಾರದಲ್ಲಿ ಮಾನ್ಯ ಸದಸ್ಯರು ಬಹಳ ಕಟುವಾಗಿ ಟೀಕೆಗಳನ್ನು ಮಾಡಿದ್ದಾರೆ. ಕಾನೂನು ಪ್ರಕಾರ ಸ್ಥಾಪಿಸಲ್ಪಟ್ಟ ಒಂದು ಸಂಸ್ಥೆಗೆ ಕೊಡಬೇಕೆಂದು ನಿಬಂಧನೆಯಾಗಿರತಕ್ಕ ಮೊಬಲಗನ್ನು ಸರ್ಕಾರದವರು ತೆಗೆದುಕೊಳ್ಳತಕ್ಕದ್ದು ಅನ್ಯಾಯವೆಂದು ಆರೋಪಣೆ ಮಾಡಿದ್ದಾರೆ. Civil worksಗೆ ಸಂಬಂಧಪಟ್ಟ 50ನೇ ಡಿಮ್ಯಾಂಡ್ ಚರ್ಚಿಸಲ್ಪಟ್ಟಾಗ ಶ್ರೀ ಇಮಾಂಸಾಹೇಬರು ಮತ್ತು ಇನ್ನೂ ಅನೇಕ ಮಾನ್ಯ ಸದಸ್ಯರೂ ಕೂಡ ಸಂಸ್ಥಾನದಲ್ಲಿ ಜಿಲ್ಲಾ ಬೋರ್ಡ್‌ಗಳ ಸ್ವಾಧೀನದಲ್ಲಿರತಕ್ಕ ರಸ್ತೆ ಸಮರ್ಪಕವಾಗಿಲ್ಲ ಆದ್ದರಿಂದ ಸರ್ಕಾರದವರು ರಸ್ತೆಗಳನ್ನು ಸರಿಯಾದ ಸ್ಥಿತಿಯಲ್ಲಿಟ್ಟುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ವಾದ ಮಾಡಿದ್ದಾರೆ. 1952ನೇ ಇಸವಿಯಿಂದ ಈಚೆಗೆ ಸರ್ಕಾರದವರು $2\frac{1}{2}$ ಸಾವಿರ ಮೈಲಿಗಳ ರಸ್ತೆಗಳನ್ನು ಜಿಲ್ಲಾ ಬೋರ್ಡುಗಳಿಂದ ತಮ್ಮ ಅಧೀನಕ್ಕೆ ತೆಗೆದುಕೊಂಡಿದ್ದಾರೆ. ಇದರ ಪರಿಣಾಮವಾಗಿ ಸರ್ಕಾರದ ಜವಾಬ್ದಾರಿ ಸುಮಾರು 8 ಲಕ್ಷದಿಂದ 10 ಲಕ್ಷದ ವರೆಗೆ ಹೆಚ್ಚಾಗಿದೆ. ಮತ್ತು ಜಿಲ್ಲಾ ಬೋರ್ಡ್‌ಗಳ ಜವಾಬ್ದಾರಿ ಅಷ್ಟರಮಟ್ಟಿಗೆ ಕಡಿಮೆಯಾಗಿದೆಯೆಂದು ಅರಿಕೆ ಮಾಡಿಕೊಳ್ಳುತ್ತೇನೆ.

Sri H. M. CHANNABASAPPA.—I would like to submit to the House, it is not so. At the time of Road Reclassification the Government and the District Boards were sharing the expenditure. It was the view of the Road Re-classification Committee that the roads should be divided into two parts, one part being maintained by the District Boards and the other part by the Government and Government need not pay to the District Boards and the District Boards need not pay to the Government.

Sri Kadidal MANJAPPA.—It is not a wrong statement. It is a correct statement. I can prove with facts and figures.

ನಿನ್ನೆ ನಾನು ಅರಿಕೆಮಾಡಿಕೊಂಡಹಾಗೆ ಹಳ್ಳಿಗಾಡಿನಲ್ಲಿ ಅಭಿವೃದ್ಧಿ ಕಾರ್ಯಗಳು ಅಗತ್ಯವಾಗಿ ಆಗಬೇಕಾಗಿದೆ. ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನೂ ಕೂಡ ಜಿಲ್ಲಾ ಬೋರ್ಡಿನವರೇ ಆ ಬೋರ್ಡಿನ ಅಧ್ಯಕ್ಷರು ಮತ್ತು ಸದಸ್ಯರು ಎಷ್ಟೇ ಸಮರ್ಥರಾಗಿದ್ದರೂ ಕೈಕೊಳ್ಳಲು ಸಾಧ್ಯವಾಗುವುದಿಲ್ಲ. ಆದ್ದರಿಂದ ತಾಲ್ಲೂಕು ಮಟ್ಟದಲ್ಲಿ ಕೆಲವು ಅಭಿವೃದ್ಧಿ ಕಾರ್ಯಗಳನ್ನು ನಡೆಸಲೇಬೇಕಾಗುತ್ತದೆ. ಈಗ ಜಿಲ್ಲಾ ಬೋರ್ಡುಗಳಿಗೆ ಸರ್ಕಾರದ ವರಮಾನದಲ್ಲಿ ಕೆಲವು ಭಾಗವನ್ನು ಕೊಡುತ್ತಿದ್ದರೂ ಕೂಡ ಪ್ರತಿದಿವಸವೂ ಹಳ್ಳಿಗಾಡಿನಿಂದ ರಸ್ತೆಯಾಗಬೇಕು, ಕುಡಿಯುವ ನೀರಿನ ಭಾವಿ ನಿರ್ಮಾಣವಾಗಬೇಕು ಎಂದು ಪದೇ ಪದೇ ಬೇಡಿಕೆಗಳು ಬರುತ್ತಿವೆ. ಈ ಕಾರಣದಿಂದ ತಾಲ್ಲೂಕಿನ ಮಟ್ಟದಲ್ಲಿ ಕೆಲವು ಅಭಿವೃದ್ಧಿ ಕಾರ್ಯಗಳು ಆವಶ್ಯಕವಾಗಿ ಆಗಬೇಕಾದ್ದರಿಂದ ಆ ಬಾಬಿಗೆ ಕೂಡ ಈ ಹಣದಲ್ಲಿ ಕೆಲವು ಭಾಗವನ್ನು ಕೊಡತಕ್ಕದ್ದು ಅಗತ್ಯವೆಂದು ತಮ್ಮಲ್ಲಿ ನಿನ್ನೆ ಅರಿಕೆಮಾಡಿಕೊಂಡೆ. ಜಿಲ್ಲಾ ಬೋರ್ಡುಗಳಿಗೆ ಸಾಕಾದಷ್ಟು ಕಾರ್ಯಕ್ಷೇತ್ರವಿದೆ, ಅದರಲ್ಲಿ ಕೆಲಸ ಮಾಡಲು ಅವಕಾಶವಿದೆ.

Sri K. PATTABHIRAMAN.—May I seek a clarification from the Hon'ble Minister, Sir? Yesterday a figure was announced on the floor of the House that what you really expect to be covered under that clause would be about six lakhs and you also made what you called an incidental reference, that that amount would be ear-marked for the developmental activity which you would like to carry on through the developmental committees which have yet to come into existence. That was yesterday. Within 24 hours, you have made the startling announcement that consistent with taking away the roads from the District Boards, naturally you have to augment your own resources and that you would like this six lakhs or five lakhs to come into the coffers of the State so that this responsibility for the maintenance of these roads might be covered. I want you to reconcile the two statements and not keep us in doubt.

ಶ್ರೀ ಕಡಿದಾಳ್ ಮಂಜಪ್ಪ.—ನಾವು ಜವಾಬ್ದಾರಿ ಹೊತ್ತಿರುವ ಸಂಬಂಧದಲ್ಲಿ ಅಂಕಿ ಅಂಶಗಳನ್ನು ಸ್ವಲ್ಪ ಮಟ್ಟಿಗೆ ತಮ್ಮ ಮುಂದಿಡಲು ಪ್ರಯತ್ನ ಮಾಡಿದೆ. ಸ್ಪೆಷಲ್ ರಿಪೇರ್ಸ್ ಅಲ್ಲದೆ ಸಾಮಾನ್ಯ ರಿಪೇರಿಗೆ ಜಿಲ್ಲಾ ಬೋರ್ಡು ಹನ್ನೆರಡು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಈಗಿರುವ ಕ್ಲಾಸಿಫಿಕೇಷನ್ ಪ್ರಕಾರ ಸಾಮಾನ್ಯ ರಿಪೇರಿಗೆ ಎಂಟು ಲಕ್ಷ ರೂಪಾಯಿ ಚಿಲ್ಲರೆ ಮಾತ್ರ ಜಿಲ್ಲಾ ಬೋರ್ಡುಗಳಿಗೆ ಖರ್ಚಾಗುತ್ತಿದೆ ಎಂದು ಹೇಳುತ್ತೇನೆ. ಇದಕ್ಕೆ ಗವರ್ನಮೆಂಟ್ ಆರ್ಡರಿದೆ. ಮಾನ್ಯ ಸದಸ್ಯರಿಗೂ ಇದು ಗೊತ್ತಿದೆ.

ಶ್ರೀ ಎ. ಭೀಮಪ್ಪನಾಯಕ್.—ತಾಲ್ಲೂಕು ಕಮಿಟಿ ಡೆವೆಲಪ್‌ಮೆಂಟ್ ಕೆಲಸಕ್ಕೆ ಉಪಯೋಗಿಸುತ್ತಾರೆಯೆ

ಅಥವಾ ಸರ್ಕಾರಕ್ಕೆ ತೆಗೆದುಕೊಳ್ಳುತ್ತಾರೆಯೆ ಎಂಬುದನ್ನು ಹೇಳಬೇಕು. ಅದು ಬಿಟ್ಟು ಬೇರೆ ಹೇಳಿದರೆ ಅನುಮಾನ ಬರುತ್ತದೆ.

Sri Kadidal MANJAPPA.—If the Hon'ble Member has not heard it, I want to repeat once again. The intention is to spend this amount on developmental activities in the rural areas. That argument was advanced that the District Boards would be deprived of this legitimate income; I said in answer that their responsibility in regard to the roads had been reduced and therefore they could spare this amount for developmental activity in the rural areas.

Sri A. BHEEMAPPA NAIK.—So, you categorically say that it will be used for developmental activities in the rural areas?

Sri Kadidal MANJAPPA.—Yes, I only brought these facts and figures to the notice of the Hon'ble Members to say that the District Board's responsibility had been reduced on account of the Government taking away about 2,500 miles of roads from District Boards.

ಇನ್ನೊಂದು ಆಕ್ಷೇಪಣೆ ಸದಸ್ಯರ ಸಂಖ್ಯೆಗೆ ಸಂಬಂಧಪಟ್ಟಿದ್ದು. ಈಗಿರತಕ್ಕ ಕಾನೂನಿನಲ್ಲಿ ಒಂದು ಷೆಡ್ಯೂಲಿದೆ. ಆ ಷೆಡ್ಯೂಲಿನಲ್ಲಿರುವ ಸಂಖ್ಯೆಗಿಂತ ಈ ಮಸೂದೆಯಲ್ಲಿ ನಮೂದು ಮಾಡಿರುವ ಸಂಖ್ಯೆ ಕಡಮೆ ಎಂಬ ವಾದವನ್ನು ಕೆಲವರು ಎತ್ತಿದ್ದಾರೆ. ಸ್ವಲ್ಪ ಹೆಚ್ಚು ಕಡಮೆ ಸಂಖ್ಯೆ ವ್ಯತ್ಯಾಸವಾಗುವುದಿಲ್ಲ.

ಶ್ರೀಮಾನ್ ವೆಂಕಟಪ್ಪನವರು ಮಾತನಾಡುವಾಗ ಪಂಚಾಯಿತಿಗಳಿಗೆ ಸಂಬಂಧಪಟ್ಟ ಹಣದಿಂದ ಆಡಿಟ್ ಫೀಜನ್ನು ವಜಾಮಾಡುವುದು ಯುಕ್ತವಲ್ಲವೆಂದು ಹೇಳಿದರು. ಇದಕ್ಕೆ ಆವಶ್ಯಕವಾದ ನಿಬಂಧನೆ ಜಿಲ್ಲಾ ಬೋರ್ಡಿಗೆ ಸಂಬಂಧಪಟ್ಟ ನಿಬಂಧನೆಗಳಲ್ಲಿ ಕೂಡ ಇದೆ.

ಸರ್ಕಾರದವರು ಶೇಕಡ 12½ ಯಷ್ಟು ಕಂದಾಯದ ಮೊಬಲಗನ್ನು ಸ್ಥಳೀಯ ಸಂಸ್ಥೆಗಳಿಗೆ ಕೊಡುತ್ತಾ ಇರುವಾಗ ಪುನಃ ಸರ್ಕಾರದವರು ತಮ್ಮ ಖಾತೆಯಿಂದ ಪಂಚಾಯಿತಿಗಳ ಲೆಕ್ಕಗಳ ತನಿಖೆಯನ್ನು ಮಾಡಬೇಕೆಂಬುದು ಸರಿಯಾದ ವಾದವಲ್ಲ ಎಂದು ಬಹಳ ವಿನಯಪೂರ್ವಕವಾಗಿ ಅರಿಕೆ ಮಾಡಿಕೊಳ್ಳುತ್ತೇನೆ. ಕಾನೂನ್ನು ಪ್ರಕಾರ ಏನೇನು ಮೊಬಲಗನ್ನು ಸ್ಥಳೀಯ ಸಂಸ್ಥೆಗಳಿಗೆ ಕೊಡಬೇಕಾಗಿದೆಯೋ ಅವುಗಳನ್ನು ಕೊಡತಕ್ಕದ್ದು ಅಗತ್ಯ, ಕೊಡಬೇಕಾದದ್ದು ನಮ್ಮ ಧರ್ಮ, ಅಷ್ಟುಮಾತ್ರ ಹೇಳಬಲ್ಲೆ.

ಶ್ರೀಮಾನ್ ವೆಂಕಟಪ್ಪನವರು 7ನೇ ನಿಬಂಧನೆ ಅರ್ಥವಾಗಲಿಲ್ಲ ಎಂದು ಹೇಳಿದರು. 7ನೇ ನಿಬಂಧನೆ 54ನೇ ಸೆಕ್ಷನ್‌ಗೆ ಸಂಬಂಧಪಟ್ಟಿದ್ದು. 54ನೇ ಸೆಕ್ಷನ್‌ನಲ್ಲಿ ಅನರ್ಹತೆ ಸಂಭವಿಸಿದಾಗ ಯಾರು ಅನರ್ಹತೆ ವಿಚಾರದಲ್ಲಿ ತೀರ್ಪುಕೊಡಬೇಕೆಂಬುದು ವಿಧಾಯಕವಾಗಿದೆ. ಚುನಾವಣೆ ಆದನಂತರ ಅನರ್ಹತೆ ಸಂಭವಿಸಿದರೆ, ಆ ಅನರ್ಹತೆ ವಿಚಾರದಲ್ಲಿ ಅಂತಿಮ ತೀರ್ಮಾನವನ್ನು ಕೊಡತಕ್ಕವರು ಸರ್ಕಾರದವರು ಎಂದು ಹೇಳಿ ಆ ತಿದ್ದುಪಡಿಯಲ್ಲಿ ಸೂಚಿಸಲಾಗಿದೆ. ಇದರಲ್ಲಿ ಬಾಧಕವೇನೂ ಇಲ್ಲ. ಶ್ರೀಮಾನ್ ಮಾದಯ್ಯನವರು ಮಾತನಾಡುವಾಗ ನಿಮ್ನ ತರಗತಿಯವರಿಗೆ ಸಂಬಂಧಪಟ್ಟ ವಿವರಣೆ ರಾಜ್ಯಾಂಗಕ್ಕೆ ವಿರೋಧವಾಗಿದೆ ಎಂಬುದಾಗಿ ಹೇಳಿದರು. ಆ ವಾದ ಸರಿಯಲ್ಲ. ಆ ವಿಚಾರದಲ್ಲಿ ಕಾನೂನು ಪಂಡಿತರ ಸಲಹೆಯನ್ನು ಸರ್ಕಾರದವರು ಪಡೆದಿದ್ದಾರೆ. ರಾಜ್ಯಾಂಗಕ್ಕೆ ವಿರೋಧವಾಗುವುದಿಲ್ಲ ಎಂದು ಅವರಿಗೆ ಭರವಸೆ ಹೇಳಲಿಚ್ಛಿಸುತ್ತೇನೆ. ಒಟ್ಟಿನಲ್ಲಿ ಹೇಳುವುದಾದರೆ ಈ ಮಸೂದೆ ಸಮರ್ಪಕವಾಗಿದೆ. ಈ ಮಸೂದೆಯನ್ನು ಕಾನೂನನ್ನಾಗಿ ಮಾಡತಕ್ಕದ್ದು ಅವಶ್ಯಕ. ಜಿಲ್ಲಾ ಬೋರ್ಡುಗಳಿಗೆ ಚುನಾವಣೆ ಬಹಳ ಜಾಗ್ರತೆಯಾಗಿ ನಡೆಯಬೇಕಾಗಿದೆ. ಮಾನ್ಯಸದಸ್ಯರಲ್ಲಿ ಇಂಥ ವಿಚಾರಗಳಲ್ಲಿ ಭಿನ್ನಾಭಿಪ್ರಾಯ ಇರತಕ್ಕದ್ದು ಸ್ವಾಭಾವಿಕ. ಮಾನ್ಯ ಸದಸ್ಯರೂ ಕೂಡ ತಾವು ಹೇಳತಕ್ಕ ವಾದವೇ ಸರಿ ಎಂದು ಹೇಳುವುದು ಸಹ ಮಾನವ ಸ್ವಭಾವ. ರಾಜಕೀಯದಲ್ಲಾಗಲಿ, ವಿಜ್ಞಾನದಲ್ಲಾಗಲಿ ಇದೇ ಕಟ್ಟಕಡೆಯ ಮಾತು ಎಂದು ಹೇಳುವಹಾಗಿಲ್ಲ. ಆದ್ದರಿಂದ ಭಿನ್ನಾಭಿಪ್ರಾಯಗಳು ಬರತಕ್ಕದ್ದು ಸ್ವಾಭಾವಿಕ. ಇದರಲ್ಲಿ ಬಹು ಜನರಿಗೆ ಯಾವುದು ಒಪ್ಪಿಗೆಯಾಗುತ್ತದೆಯೋ ಅದನ್ನು ಒಪ್ಪಿಕೊಳ್ಳುವುದಕ್ಕೆ ಸರ್ಕಾರದವರು ತಯಾರಾಗಿದ್ದೇವೆ ಎಂದು ಆಖೈರಾಗಿ ಹೇಳುತ್ತೇನೆ.

ಶ್ರೀ ಟಿ. ಮರಿಯಪ್ಪ.—Decentralisation of powers ಮಾಡಬೇಕು ಎಂಬ ಪ್ರಶ್ನೆ ಹಾಕಿದರು. ಆ ವಿಷಯ ಹೇಳಿ.

*ಶ್ರೀ ಕೆ. ಹನುಮಂತಯ್ಯ (ಮುಖ್ಯಮಂತ್ರಿಗಳು).—ಸ್ವಾಮಿ, ಹಿಂದೆ ಒಮ್ಮೆ ಈ ಮಸೂದೆಯ ವಿಚಾರದಲ್ಲಿ ನಾನು ಭಾಷಣ ಮಾಡಿದಾಗ ಸಭೆಯಲ್ಲಿ ಅರಿಕೆ ಮಾಡಿಕೊಂಡೆ. ಈ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆ ಜಾಗ್ರತೆ ಆಗದೆ, 7 ವರ್ಷಗಳ ಕಾಲದಿಂದ ಇದರ ವಿಚಾರದಲ್ಲಿ ಜಿಜ್ಞಾಸೆ ನಡೆಯುತ್ತಾ ಇರುವುದು ನಿಜವಾಗಿಯೂ ಈ ವಿಷಯದಲ್ಲಿ ಎಷ್ಟು ಭಿನ್ನಾಭಿಪ್ರಾಯವಿದೆ ಎಂಬುದನ್ನು ಸ್ಪಷ್ಟಪಡಿಸುತ್ತಾ ಇದೆ. ಇರತಕ್ಕ ಭಿನ್ನಾಭಿಪ್ರಾಯವನ್ನು ಸಮಂಜಸಗೊಳಿಸಿ ಒಂದು ರೂಪಕ್ಕೆ ತಂದು ಈ ಬಿಲ್ಲನ್ನು ತಂದಿದ್ದೇವೆ. ಭಿನ್ನಾಭಿಪ್ರಾಯ ಈ ರೀತಿ ಇರುವಾಗ ಒಂದು ದುರುದ್ದೇಶವನ್ನು ಕಲ್ಪನೆ ಮಾಡುವುದು ಅಷ್ಟು ಲಕ್ಷಣವಾದ ಮಾರ್ಗವಲ್ಲ. ಇದು ಕಾನೂನು ಆಗುತ್ತಾ ಇದೆ. ಇದು ಕಾನೂನು ಆದಮೇಲೆ ಎಲ್ಲರಿಗೂ ಇದರ ಆಶ್ರಯದಲ್ಲಿ ಸರಿಸಮಾನವಾದ ಹಕ್ಕು ಬಾಧ್ಯತೆಗಳು ಇವೆ. ಕಾಂಗ್ರೆಸ್ ಪಾರ್ಟಿಯವರಿಗೆ ಹೆಚ್ಚು ಬಾಧ್ಯತೆ, ಮಿಕ್ಕವರಿಗೆ ಕಡಿಮೆ ಬಾಧ್ಯತೆ ಏನೂ ಇಲ್ಲ. ಒಂದುವೇಳೆ, ಸಿಂಗಲ್ ಮೆಂಬರ್ ಕಾನ್‌ಸ್ಟಿಟ್ಯೂಯೆನ್ಸಿ, ಅಥವಾ ಮಲ್ಟಿ ಮೆಂಬರ್ ಕಾನ್‌ಸ್ಟಿಟ್ಯೂಯೆನ್ಸಿ ಎಂದು ಮಾಡಿದಾಕ್ಷಣಕ್ಕೇ ಅದರಲ್ಲಿ ಯಾವ ದುರುದ್ದೇಶವೂ ಇಲ್ಲ. ಚುನಾವಣೆಯಲ್ಲಿ ಇದೆಲ್ಲವೂ ಅನುಸರಿಸಬೇಕಾದ ಮತ್ತು ಎಲ್ಲರಿಗೂ ಗೊತ್ತಿರತಕ್ಕ ಸುಪ್ರಸಿದ್ಧವಾದ ಮಾರ್ಗ. ಆದ್ದರಿಂದ ಯಾವ ಸದಸ್ಯರಿಗೂ ಕೂಡ ಸದುದ್ದೇಶ ಅಥವಾ ದುರುದ್ದೇಶ ಆರೋಪಣೆಮಾಡತಕ್ಕಂಥ ಸಂಗತಿ ಇಲ್ಲಿ ಏನೂ ಇಲ್ಲ. ಎಲ್ಲವೂ ಬಹಿರಂಗವಾಗಿ ಚರ್ಚೆಯಾಗುತ್ತ ಇದೆ. ಕಾನೂನು ಆಗಿ ಬಹಿರಂಗವಾಗಿ ಚುನಾವಣೆಗಳೂ ಕೂಡ ನಡೆಯುತ್ತವೆ. ಯಾವ ಸದಸ್ಯರೂ ಕೂಡ ಈ ವಿಷಯದಲ್ಲಿ ಅನುಮಾನ ಇಟ್ಟುಕೊಳ್ಳಬೇಕಾದ ಕಾರಣವೇನೂ ಇಲ್ಲ.

(ಶ್ರೀ ಕೆ ಹನುಮಂತಯ್ಯ.)

ಸ್ಥಳೀಯ ಸರ್ಕಾರಗಳನ್ನೇ ಏಕೆ ಬೆಳೆಸಬಾರದು ಎಂದು ಪ್ರಶ್ನೆ ಸ್ವಾಭಾವಿಕವಾಗಿ ಏಳುತ್ತದೆ. ಒಂದು ದೃಷ್ಟಿಯಲ್ಲಿ ನೋಡಿದರೆ ಅವರು ಹೇಳುವ ವಾದ ಸರಿ. ಮತ್ತೊಂದು ದೃಷ್ಟಿಯಲ್ಲಿ ನೋಡಿದರೆ, ಆ ಪದ್ಧತಿ ಈ ಕಾಲಕ್ಕೆ ಅನ್ವಯವಾಗುವುದಿಲ್ಲ. ಏನೋ, ಸರ್ಕಾರವನ್ನು ಟೀಕೆ ಮಾಡಬೇಕು ಎಂಬ ಒಂದು ಉದ್ದೇಶದಿಂದ ವಾದಗಳನ್ನು ಹೂಡುವುದಕ್ಕೂ ಒಂದು ಮಾರ್ಗ ಇದೆ. 'ನಿಜವಾದ ಧ್ಯೇಯಸಾಧನೆ ಮಾಡುವುದಕ್ಕೆ' ಎಂಬ ವಾದ ಹೂಡುವುದಕ್ಕೂ ಮಾರ್ಗ ಇದೆ. ನಾವು ಈ ಸಭೆಯಲ್ಲಿ ಇರತಕ್ಕವರೆಲ್ಲರೂ ಗಾಂಧಿಜೀಯವರ ಅನುಯಾಯಿಗಳು. ಕೇಂದ್ರ ಸರ್ಕಾರದವರು ಇದ್ದಾರೆ. ನಾವು ಪ್ರಾಂತೀಯ ಸರ್ಕಾರಗಳಿಗೆ ಇರತಕ್ಕ Constitutional rights ಏನಿದೆಯೋ ಅವು ಕೂಡ ಕುಂಠಿತವಾಗಿ over centralisation ಆಗುತ್ತ ಇದೆ ಎಂದು ಹೇಳುತ್ತಾ ಇದ್ದೇವೆ. ಇದನ್ನು ಒಮ್ಮೆ ನಾನು ನ್ಯಾಷನಲ್ ಡೆವಲೆಪ್‌ಮೆಂಟ್ ಕೌನ್ಸಿಲ್‌ನಲ್ಲಿ ಪ್ರಸ್ತಾಪ ಮಾಡಿದೆ. ಅದಕ್ಕೆ ಪ್ರಧಾನಿಯವರಾದ ನೆಹರೂರವರು ಯಾವ ಒಂದು planned economy ಯಲ್ಲಿ, social pattern of society ಇದೆಯೋ ಅಲ್ಲಿ, ಸ್ವಲ್ಪ ಕೇಂದ್ರೀಕೃತವಾಗುವುದು ಸಹಜ ಎಂದು ಹೇಳುತ್ತಾರೆ. In a social pattern of society and in planned economy certain amount of centralisation is inevitable. That is what he says. ಹಾಗಿರುವಾಗ ಈರೀತಿ ಸುಮ್ಮನೆ ಬಡಪಾಯಿಗಳಾದ ನಮ್ಮಗಳನ್ನು ಏಕೆ ಇದನ್ನು ಮಾಡಲಲ್ಲ, ಅದನ್ನು ಮಾಡಲಿಲ್ಲ ಎನ್ನುವುದಕ್ಕೆ ಬದಲಾಗಿ, ಧೈರ್ಯಸ್ಥರಾಗಿರತಕ್ಕ ಮಹನೀಯರು ಅಧಿಕಾರ ಮತ್ತು ಹಣ ಇವೆಲ್ಲಾ ಕೇಂದ್ರೀಕೃತವಾಗಿರತಕ್ಕ ಕೇಂದ್ರದಲ್ಲಿ ನಾಯಕರು ಯಾರಿದ್ದಾರೋ ಸರ್ಕಾರ ಯಾವುದು ಇದೆಯೋ ಅವರನ್ನು ಏಕೆ ಹಾಗೆ ಮಾಡುತ್ತಾ ಇದ್ದೀರಿ ಎಂದು ಕೇಳಬೇಕು.

I appeal to the House to realise the situation in which we are placed and also the object before us.

Sri K. PATTABHIRAMAN.—Within the limited scope that opens up before you, in respect of these Bills, you cannot implement that direction, even if you have really the heart in that. We go with a begging bowl to Delhi.

Sri K. HANUMANTHAIYA.—We have got the heart and we have made the necessary provision to the extent possible; if my Hon'ble friend reads the provisions of the Bill, I am certain that his ideas are incorporated therein and it will work under the circumstances guaranteeing that amount of autonomy that is needed for these.

5-30 P.M.

The only question is not so much about the powers as about the finances. You may have thousand shafts in your bow and argue; but if you have not got the wherewithal to shoot, those shafts will be a waste. Let us not talk of autonomy, power and all that. Everything requires money and how much money we have at our disposal is the question which ultimately we will have to face. Therefore, if the District Boards are not provided with such funds as we possibly cna, it is not because we grudge in that direction; it is because we have not got the wherewithal. That is exactly what we have to plead before the Finance Commission. The Central Government have started local development works. Hon'ble Members will realise that under the Constitution or even in pre-Constitution days whether a well has to be dug or not was the concern of the District Board or even the Village Panchayet. Now it has become the concern of the Central Government. The State Government is undertaking Harijan welfare and the Central Government is also supplementing its efforts. Community Project, National Extension Service, etc., are mere rural development works. In the old days, these duties were cast upon the local self-governing institutions, either the Village Panchayet or the District Board. But now, the Central Government is directly participating. Therefore, Hon'ble Members will see that the trend is going towards centralisation or over-centralisation, whatever it may be. Now, Community Projects, National Extension Service, Harijan Welfare and local development works which relate to small things like digging a well, building a small bridge or opening a new road, have come under the control of the Central Government; social welfare centres have been established with the object of opening milk centres, rural housing and so on. Therefore, what is left for the District Board? In fact, to be honest, it is far better we scrap it and I agree with you.

Sri K. PATTABHIRAMAN.—That would be an honest work for an administrator. That would be an honest work for a Government.

Sri K. HANUMANTHAIYA.—The course can be honest as well as advantageous. The course that we have adopted is, whatever field is left for the

District Board to administer, we have guaranteed the position in the Bill. Whatever is beyond the scope or control, we have not been able to include them here. Therefore, we have made, I am honest enough to say, the best of the bad situation. Nobody can deny that.

Sri K. PATTABHIRAMAN.—Could you not make it better ?

Sri K. HANUMANTHAIYA.—It is not in my hands.

Sri K. PATTABHIRAMAN.—The House has stated for these two days that you could make it better and you have not got the heart and the willingness to do it.

Sri K. HANUMANTHAIYA.—Whenever I agreed to your suggestion I have got the heart ; whenever I have not agreed to your suggestion, you say, I have not got the heart.

Sri K. PATTABHIRAMAN.—Not to my suggestion. I come nowhere in the picture. There has been a debate for the last two days and that has been made clear.

As regards the strength of the District Boards, I said yesterday that I would consider the question of retaining the old schedule. Accordingly, I have sent an amendment to make necessary changes in sections 4, 5 and 11. As regards section 11, I am told that there is some legal difficulty for accepting the amendment. I think it has to be voted down.

Mr. SPEAKER.—Just to avoid the legal difficulty, another member has sent an amendment to that section. That can be voted.

Sri Kadidal MANJAPPA.—As regards the issue whether it is proper to deprive the District Boards of their legitimate share of land revenue assignment, I am still considering the question. I was thinking that if this sum is retained with the Government they could take District Boards roads and maintain them well. The Leader of the Opposition, time and again, has been criticising the Government for not taking adequate steps to get these District Board roads improved. I have been repeatedly telling him that the responsibility of maintaining these roads and keeping them in good order, is that of the District Boards and not that of the Government. If we had been allowed to retain 6¼ per cent land revenue assignment, we could have

(SRI KADIDAL MANJAPPA.)

taken away some of the District Board roads under our control and managed them properly. It is left to the Hon'ble Members.

Sri J. MOHAMED IMAM.—On a point of information, Sir, in regard to this 6¼ per cent of land revenue which was intended to be given over to the District Boards, was there any understanding that it should be purely earmarked for the maintenance of the roads or that it could go to the general expenditure according to needs ?

Sri Kadidal MANJAPPA.—Repairing the District Board roads is also a part of the functions of the District Boards. There is no earmarking on this question. If the Hon'ble Members do not want that Government should take over some of these District Board roads, I do not worry much myself. I am prepared to consider the question of deleting this clause, *viz.*, clause 10.

2 P.M.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಹಿಂದೆ ಕೊಡಬೇಕೆಂದಿದ್ದ ಶೇಕಡ 12½ ಯೊಳಗೆ ಶೇಕಡ 6¼ ಮಾತ್ರ ತೆಗೆದುಕೊಂಡು ಕೆಲಸಮಾಡಬೇಕೆಂದರೆ ಹೇಗೆ ಸಾಧ್ಯ ? ಈಗ ಎಕ್ಸೈಜ್ ಸೆಸ್ ಸಂಸ್ಥಾನದಲ್ಲಿ ನಾಲ್ಕು ಡಿಸ್ಟ್ರಿಕ್ಟುಗಳಿಗೆ ಮಾತ್ರ ಹೋಗುತ್ತಿದೆ. ಅದರಿಂದ ಬರುವ ಸುಮಾರು 12 ಲಕ್ಷ ರೂಪಾಯಿಗಳು ಸಂಸ್ಥಾನದ ನಾಲ್ಕು ಡಿಸ್ಟ್ರಿಕ್ಟುಗಳಿಗೆ ಮಾತ್ರ ಹೋಗುತ್ತಿದೆ. ಶೇಕಡ 6¼ ಉತ್ಪತ್ತಿಯಲ್ಲಿ ಹಂಚಿಕೆ ಮಾಡುವಾಗ ಎಕ್ಸೈಜ್ ರೆವೆನ್ಯೂ ಬರುವುದನ್ನೂ ಸೇರಿಸಿ ಒಟ್ಟು ರೆವೆನ್ಯೂನಲ್ಲಿ ಸಂಸ್ಥಾನಕ್ಕೆಲ್ಲಾ ಶೇಕಡ 6¼ ಬರುವಂತೆ ಮಾಡುವುದು ಒಳ್ಳೆಯದು.

ಶ್ರೀ ಕಡಿದಾಳ್ ಮಂಜಪ್ಪ.—ಡಿಸ್ಟ್ರಿಕ್ಟ್ ಬೋರ್ಡು ಗಳಿಗಿರುವ ಹಣಕಾಸಿನ ಬಾಬುಗಳಲ್ಲಿ ರೋಡ್‌ಸೆಸ್ ನಿಂದ ಬರುವ ಹಣ ಇಂಥ ಬಾಬಿಗೇ ಉಪಯೋಗಿಸಬೇಕು ಅಥವಾ ಎಕ್ಸೈಜ್ ಬಾಬಿನಿಂದ ಬರುವುದನ್ನು ಇಂಥ ಬಾಬಿಗೇ ಉಪಯೋಗಿಸಬೇಕು ಎಂದು ನಿಗದಿ ಮಾಡಿಲ್ಲ. ಎಲ್ಲಾ ಬಾಬುಗಳನ್ನೂ ಒಟ್ಟಿಗೆ ತೆಗೆದುಕೊಂಡು ಎಲ್ಲಾ ಬಾಬುಗಳಿಗೂ ಒಟ್ಟಿಗೆ ಖರ್ಚು ಮಾಡುತ್ತಾರೆ. ಶೇಕಡ 6¼ನ್ನು ಸರ್ಕಾರಕ್ಕೆ ಕೊಟ್ಟರೆ ಕೆಲವು ಜಿಲ್ಲಾಬೋರ್ಡ್ ರಸ್ತೆಗಳನ್ನು ಸರ್ಕಾರ ತೆಗೆದುಕೊಂಡು ರೆವೆನ್ಯೂ ಏಜೆನ್ಸಿ ಮುಖಾಂತರ ಅಥವಾ ಬೇರೆ ಏಜೆನ್ಸಿ ಮುಖಾಂತರ ರಸ್ತೆಗಳನ್ನು ಸರಿಯಾದ ಸ್ಥಿತಿಯಲ್ಲಿಡಲು ಯೋಚನೆ ಮಾಡಿದೆ. ಇದೇ ಮುಖ್ಯ ಉದ್ದೇಶ. ಇದು ಬೇಡವೆಂದು ಹೇಳಿದರೆ ಬಿಡಬಹುದು. ಮಾನ್ಯ ಸದಸ್ಯರು ಪದೇಪದೇ ಜಿಲ್ಲಾ ಬೋರ್ಡ್ ರಸ್ತೆ ರಿಪೇರಿ ಮಾಡುವುದು ಸರ್ಕಾರದ ಜವಾಬ್ದಾರಿ ಎಂದು ಹೇಳಬಾರದು.

Sri J. MOHAMED IMAM.—Government should see that the District Boards work properly. If they do not work properly, then the responsibility is yours.

Mr. SPEAKER.—What you mean is that the ultimate responsibility is that of the Government.

ಶ್ರೀ ಕಡಿದಾಳ್ ಮಂಜಪ್ಪ.—ಜಿಲ್ಲಾಬೋರ್ಡು ಗಳಿಗೇನು ವರಮಾನವಿದೆಯೋ ಆ ವರಮಾನದಿಂದ ಜಿಲ್ಲಾ ಬೋರ್ಡ್ ಆಡಳಿತಗಾರರು ಜಿಲ್ಲಾ ಬೋರ್ಡು ಗಳಿಗೆ ಸಂಬಂಧಪಟ್ಟ ರಸ್ತೆಗಳನ್ನು ಸರಿಯಾದ ಸ್ಥಿತಿಯಲ್ಲಿಡುವುದು ಅವರ ಜವಾಬ್ದಾರಿ. ಹಾಗೆ ಅವರ ಜವಾಬ್ದಾರಿಯಿರುವಾಗ ಆ ಬಗ್ಗೆ ಸರ್ಕಾರದ ಹಣ ಸಹಾಯ ನಿರೀಕ್ಷೆ ಮಾಡುವುದು ನ್ಯಾಯವಲ್ಲ. ಈಗಿರುವ ಎಲ್ಲಾ ಜಿಲ್ಲಾ ಬೋರ್ಡುಗಳವರೂ 11 ಲಕ್ಷ ಚಿಲ್ಲರೆ ಹಣ ರಸ್ತೆ ರಿಪೇರಿಗೆ ಖರ್ಚು ಮಾಡುತ್ತಿದ್ದರು. ಅದರಲ್ಲಿ 5 ಲಕ್ಷ ಚಿಲ್ಲರೆ ಸರ್ಕಾರಕ್ಕೆ ಬಂದಿದ್ದರೂ ಅರ್ಧಕ್ಕಿಂತ ಹೆಚ್ಚು ರಸ್ತೆಗಳನ್ನು ಸರ್ಕಾರದವರೇ ನೋಡಿಕೊಳ್ಳುತ್ತಿದ್ದಾರೆ. ಅದರೂ ಚಿಂತೆಯಿಲ್ಲ. ಶೇಕಡ 6¼ ರಷ್ಟು ಲ್ಯಾಂಡ್ ರೆವೆನ್ಯೂ ವೊಬಲಗಿನಿಂದ ಎಷ್ಟು ರಸ್ತೆ ಪ್ರತಿ ವರ್ಷ ರಿಪೇರಿಮಾಡಲು ಸಾಧ್ಯವೋ ಅಷ್ಟು ಸರ್ಕಾರ ತೆಗೆದುಕೊಳ್ಳಲು ಸಾಧ್ಯವಿದೆ.

ಇನ್ನು ಉಳಿದಿರುವ ಒಂದು ವಿವಾದಾಸ್ಪದವಾದ ವಿಚಾರ : ಸಿಂಗಲ್ ಮೆಂಬರ್ ಕಾನ್‌ಸ್ಟಿಟ್ಯೂಯೆನ್ಸಿ ಇರಬೇಕೆ ಅಥವಾ ಮಲ್ಟಿ ಮೆಂಬರ್ ಕಾನ್‌ಸ್ಟಿಟ್ಯೂಯೆನ್ಸಿ ಇರಬೇಕೆ ಎಂಬುದು. ಮಾನ್ಯ ವಿರುದ್ಧಪಕ್ಷದ ನಾಯಕರು ಪದೇಪದೇ ರಾಜಕೀಯ ಉದ್ದೇಶದಿಂದ ಈ ಮಸೂದೆಯನ್ನು ತಂದಿದ್ದಾರೆಂದು ಆರೋಪಣೆಯನ್ನು ಮಾಡುತ್ತಿದ್ದಾರೆ. ಮಲ್ಟಿ ಮೆಂಬರ್ ಕಾನ್‌ಸ್ಟಿಟ್ಯೂಯೆನ್ಸಿಯಾದರೆ ರಾಜಕೀಯ ಉದ್ದೇಶ ಅದರಲ್ಲೇನಿರುತ್ತದೆ ಅಥವಾ ಸಿಂಗಲ್ ಮೆಂಬರು ಕಾನ್‌ಸ್ಟಿಟ್ಯೂಯೆನ್ಸಿಯಾದರೆ ರಾಜಕೀಯ ಉದ್ದೇಶವೇನಿರುವುದಿಲ್ಲ ಎಂಬುದನ್ನು ಅವರು ವಿಶದವಾಗಿ ತಿಳಿಸಲಿಲ್ಲ. ಮಲ್ಟಿ ಮೆಂಬರ್ ಕಾನ್‌ಸ್ಟಿಟ್ಯೂಯೆನ್ಸಿ ಇಡುವುದರಿಂದ ಕಾಂಗ್ರೆಸ್ ಪಕ್ಷಕ್ಕೆ ಸಹಾಯವಾಗುವುದಾದರೆ ಅದೇ ರೀತಿ ಇತರ ರಾಜಕೀಯ ಪಕ್ಷಗಳಿಗೂ ಸಹಾಯವಾಗಬೇಕು. ಯಾವ ತತ್ವವಾದರೂ ಅದು ಎಲ್ಲರಿಗೂ ಅನ್ವಯಿಸುವುದಾಗಿರಬೇಕು. ನಮಗೆ ಸಹಾಯವಾಗುವುದಾದರೆ ಅವರಿಗೂ ಆಗುತ್ತದೆ, ಅವರಿಗಾಗದಿದ್ದರೆ ನಮಗೂ ಆಗುವುದಿಲ್ಲ. ಆದ್ದರಿಂದ ಇದರಲ್ಲಿ ರಾಜಕೀಯ ಉದ್ದೇಶವೇನೂ ಇಲ್ಲ. ತಲೆಯೊಳಗೇನೋ ಒಂದು ಅಂಟಿಕೊಂಡಿದೆ, ಅದನ್ನು ತೆಗೆಯಲು ಏನು ಮಾಡಬೇಕೋ ನನಗೆ ಗೊತ್ತಾಗುವುದಿಲ್ಲ.

ಶ್ರೀ ಜೆ. ಮಹಮ್ಮದ್ ಇಮಾಂ.—ಮಲ್ಟಿಮೆಂಬರ್ ಕಾನ್‌ಸ್ಟಿಟ್ಯೂಯೆನ್ಸಿ ಮಾಡುವುದರಿಂದ ಅನುಕೂಲವೇನೆಂಬುದನ್ನು ಹೇಳಬೇಕು.

ಶ್ರೀ ಕಡಿದಾಳ್ ಮಂಜಪ್ಪ.—ನಿನ್ನೆಯೇ ಹೇಳಿದ್ದೇನೆ. ಸಾಧಕಬಾಧಕ ಎರಡು ರೀತಿಯದೆ. ಬಹಳ ಜನರು ಈ ಸಭೆಯಲ್ಲಿ ಮಲ್ಟಿ ಮೆಂಬರ್ ಕಾನ್‌ಸ್ಟಿಟ್ಯೂಯೆನ್ಸಿ ಇರುವುದು ಅಗತ್ಯವೆಂದು ಹೇಳಿದ್ದಾರೆ. ಅದರಂತೆ ವರ್ತಿಸಬೇಕಾದ್ದು ನಮ್ಮ ಧರ್ಮ. ಈ ಎಲ್ಲಾ ವಿಚಾರಗಳೂ ಕೂಡ ಕೂಲಂಕಷವಾಗಿ ವಿಮರ್ಶೆಯಾಗಿರುವುದರಿಂದ, ಚರ್ಚೆಯಾಗಿರುವುದರಿಂದ, ಪುನಃ ಈ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಹಾಕುವುದು ಅನಗತ್ಯ.

ಶ್ರೀ ಇಮಾಂರವರು ಸಾರ್ವಜನಿಕರ ಅಭಿಪ್ರಾಯವನ್ನು ಮತ್ತೊಂದು ಸಾರಿ ಕೇಳೋಣ ಎಂದು ಹೇಳಿದರು. ಹಾಗಾದರೆ ಇನ್ನೆಷ್ಟು ವರ್ಷ ಜಿಲ್ಲಾ ಬೋರ್ಡಿಗೆ ಚುನಾವಣೆ ಮಾಡದೆ ಇರಬೇಕೆಂದು ಕೇಳು

ತ್ತೇನೆ. ಸಾರ್ವಜನಿಕಾಭಿಪ್ರಾಯವನ್ನು ಬೇಕಾದಷ್ಟು ನಾವು ಪಡೆದಿದ್ದೇವೆ; ಅದು ತಮಗೂ ಗೊತ್ತಿದೆ. ಈ ಮಸೂದೆಯನ್ನು ಪುನಃ ಸೆಲೆಕ್ಟ್ ಕಮಿಟಿಗೆ ಹಾಕುವುದು ಅನಗತ್ಯ, ಇಲ್ಲೇ ವಿಮರ್ಶೆಮಾಡಿ ಇವತ್ತೇ ಒಂದು ತೀರ್ಮಾನ ಕೈಕೊಳ್ಳೋಣ ಎಂದು ಹೇಳುತ್ತೇನೆ.

ಶ್ರೀ ಲಿಂಗಣ್ಣನವರು ಮಾತನಾಡುತ್ತಾ ಈ ಮಸೂದೆಗೆ ನೇರವಾಗಿ ಸಂಬಂಧವಿಲ್ಲದಿರುವ ಕೆಲವು ವಿಷಯಗಳನ್ನು ಪ್ರಸ್ತಾಪಿಸಿದರು. ಉಮೇದುವಾರನಿಗಿರತಕ್ಕಂಥ ಅರ್ಹತೆ ವಿಚಾರದಲ್ಲಿ ಕೆಲವು ಬದಲಾವಣೆ ಮಾಡಬೇಕೆಂದು ಹೇಳಿದರು. ಈ ವಿಚಾರದಲ್ಲಿ ಯಾವ ತಿದ್ದುಪಡಿಯನ್ನೂ ನಾವು ತಂದಿಲ್ಲ.

Sri M. LINGANNA.—Sir, reservation of Scheduled Caste canditates is mentioned in section 55 and my observation with regard to that point is quite relevant.

ಶ್ರೀ ಕಡಿದಾಳ್ ಮಂಜಪ್ಪ.—ಇದು ಶ್ರೀ ಲಿಂಗಣ್ಣನವರಿಗೆ ನ್ಯೂನತೆ ತರುವುದಾದರೆ, ಇದೊಂದು ಸೆಕ್ಷನ್‌ಗಾಗಿ ಒಂದು ವರ್ಷಕಾಲ ಹಿಂದಿನ ಬಿಲ್ಲು ಕಾನೂನಾಗದೆ ಇತ್ತು; ಆದ್ದರಿಂದ ಇದನ್ನು ಪುನಃ ರೀ ಓಪನ್ ಮಾಡಿದರೆ ಇನ್ನಾವಾಗ ಕಾನೂನಾಗುವುದು ?

Sri M. LINGANNA.—Otherwise, on what basis will the Returning Officer decide the validity of candidature ?

Sri Kadidal MANJAPPA.—Sir, on account of the difference of opinion in regard to this section, the Bill was pending for one year without becoming law. Therefore, I am not prepared to re-open that matter once again and make it a controversial issue. ಈ ಎಲ್ಲಾ ಕಾರಣಗಳಿಂದ ಇದು ಸೆಲೆಕ್ಟ್ ಕಮಿಟಿಗೆ ಹೋಗಬೇಕಾದದ್ದು ಅನಗತ್ಯ. ಆದ್ದರಿಂದ ಶ್ರೀ ಮುಲ್ಕಾ ಗೋವಿಂದರೆಡ್ಡಿಯವರು ಅವರ ತಿದ್ದುಪಡಿಯನ್ನು ವಾಪಸು ತೆಗೆದುಕೊಳ್ಳುತ್ತಾರೆಂದು ನಾನು ನಂಬಿದ್ದೇನೆ.

Mr. SPEAKER.—What will the Hon'ble Member say about his amendment ?

Sri Mulka GOVINDA REDDY.—I press my motion, Sir.

Mr. SPEAKER.—The question is :

"That the Mysore Village Panchayets and District Boards (Amendment) Bill, 1955, be referred to a Select Committee consisting of the following Members with a direction that the report may be submitted within the 18th April, 1955 :

"Sri B. Hutche Gowda,
Sri L. Siddappa,
Sri K. Pattabhiraman,
Sri A. Bheemappa Naik,
Sri H. M. Channabasappa,
Sri N. C. Nagiah Reddy,
Sri V. Venkatappa,
Sri G. A. Thimmappa Gowda and the Mover."

The motion was negatived.

Mr. SPEAKER.—We shall now take up the clauses of the Bill. Clauses 2 and 3. There are no amendments to clauses 2 and 3. The question is :

"That Clauses 2 and 3 stand part of the Bill."

The motion was adopted.

Clauses 2 and 3 were added to the Bill.

Mr. SPEAKER.—Clause 4. There is only one amendment sent by the Hon'ble Minister.

Sri Kadidal MANJAPPA.—Sir, I beg to move the following amendment to clause 4 :

"For clause 4 the following clause shall be substituted.—

"4. Amendment of section 50 of Mysore Act IV of 1952.

For sub-section (1) of section 50 of the Principal Act the following sub-section shall be substituted, namely.—

(1) Every District Board shall consist of members directly elected by the voters in each District in accordance with the provisions of this Act and the rules made thereunder."

ಇಲ್ಲಿ ವ್ಯತ್ಯಾಸ ಇಷ್ಟೇ ಇರುವುದು. 50ನೆಯ ಸೆಕ್ಷನ್‌ನಲ್ಲಿ composition of District Boards ಎಂದು ಎರಡು ಕ್ಲಾಜುಗಳಿವೆ. ಮೊದಲು ಆ ಎರಡಕ್ಕೆ ಬದಲಾಗಿ ಒಂದು ಕ್ಲಾಜನ್ನು ಸೇರಿಸಬೇಕೆಂದು ಹೇಳಿತ್ತು. ಈಗ ಒಂದು ಕ್ಲಾಜಿಗೆ ಮಾತ್ರ substitution ಇರುವುದರಿಂದ ಷೆಡ್ಯೂಲಿಗೆ ಸಂಬಂಧಪಟ್ಟಿರುವುದು ಹಾಗೆಯೇ ಉಳಿಯುತ್ತದೆ. ಆದ್ದರಿಂದ ಈ ತಿದ್ದುಪಡಿ ಸೂಕ್ತವಾದುದೆಂದು ಅರಿಕೆ ಮಾಡುತ್ತೇನೆ.

Mr. SPEAKER.—This amendment is in accordance with the wishes of the Hon'ble House. I will put the amendment to the vote. The question is :

"That for clause 4 the following clause shall be substituted.—

"4. Amendment of section 50 of Mysore Act IV of 1952 :

(MR. SPEAKER.)

For sub-section (1) of section 50 of the Principal Act the following sub-section shall be substituted, namely.—

(1) Every District Board shall consist of members directly elected by the voters in each District in accordance with the provisions of this Act and the rules made thereunder.''

The motion was adopted.

Mr. SPEAKER.—The question is:

"That Clause 4, as amended, stand part of the Bill."

The motion was adopted.

Clause 4 as amended, was added to the Bill.

Mr. SPEAKER.—Clause 5. There are a number of amendments to clause 5 We shall take all of them together and they can be discussed. I will put them to vote one by one if necessary, after discussion. There is an amendment by Sri H. C. Linga Reddy.

Sri H. C. LINGA REDDY (Malur).—I am not moving my amendment Sir.

Mr. SPEAKER.—The next amendment is in the name of Sri Hutche Gowda. Possibly he may also not like to move the amendment in view of the amendment moved by the Hon'ble Minister himself.

*Sri B. HUTCHE GOWDA (Thuruvekere).—No Sir, my amendment relates to constituencies. I want to move my amendment. Sir, I beg to move:

'That in sub-section (1) of the proposed section 51, for the words "not exceeding three having regard to the population of each constituency, as the Government may, by notification under sub-section (2) determine," the words "at the rate of one member for every 30,000 of the rural population of each constituency" shall be substituted'.

ಒಬ್ಬ ಸದಸ್ಯರನ್ನು ಚುನಾಯಿಸಬೇಕಾದರೆ ಗ್ರಾಮಾಂತರಗಳಲ್ಲಿ 30 ಸಾವಿರ ಜನ ಸಂಖ್ಯೆ ಇರತಕ್ಕ ಪ್ರದೇಶವನ್ನು ಒಂದು ಚುನಾವಣಾ ಕ್ಷೇತ್ರವನ್ನಾಗಿ ಮಾಡಿ ಅಲ್ಲಿ ಒಬ್ಬ ಸದಸ್ಯರನ್ನು ಚುನಾಯಿಸುವುದಕ್ಕೆ ಅವಕಾಶಕೊಡಬೇಕೆಂಬುದಾಗಿ ನನ್ನ ತಿದ್ದುಪಡಿಯ ಉದ್ದೇಶವಾಗಿದೆ. ಈಗ ಮಾಡಿರುವಂತೆ ಒಂದೊಂದು ತಾಲ್ಲೂಕಿಗೆ ಐದು ಜನ ಮತ್ತು ದೊಡ್ಡ ತಾಲ್ಲೂಕಿನಲ್ಲಿ ಆರು ಜನ ಸದಸ್ಯರನ್ನು ಚುನಾಯಿಸುವುದಕ್ಕೆ ಅವಕಾಶವಿದೆ. ಉದಾಹರಣೆಗೆ ತುಮಕೂರು ತಾಲ್ಲೂಕಿಗೆ ಆರು ಜನ ಸದಸ್ಯರ ಚುನಾವಣಾಸ್ಥಾನವನ್ನು ಕಲ್ಪಿಸಿರುವುದರಿಂದ ಒಂದು ಬಹು ಮಟ್ಟಿನ confusionಗೆ ಕಾರಣವಾಗುತ್ತವೆ. ಇದನ್ನು ಶ್ರೀ ಭೀಮಪ್ಪ ನಾಯಕರು ಮತ್ತು ಶ್ರೀ ವೆಂಕಟಪ್ಪನವರು ಹೇಳಿದ್ದಾರೆ. ಶ್ರೀ ಚನ್ನಬಸಪ್ಪನವರೂ ಕೂಡ ಅದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಯಾವಾಗಲು ಕೂಡ ಒಂದು ಮಲ್ಟಿ ಮೆಂಬರ್ ಕಾನ್ಸ್ಟಿಟ್ಯುಯನ್ಸಿ ಮಾಡಬೇಕಾದರೆ ಸರ್ಕಾರದ ಉದ್ದೇಶ ಯಾವುದಿರುತ್ತದೆ ಎಂಬುದನ್ನು ನಮ್ಮ ನಾಯಕರು ಹೇಳಿದ್ದಾರೆ. ಈಗ ಒಂದು ಪಾರ್ಟಿಯವರು 5-6 ಜನ ಸದಸ್ಯರನ್ನು ಚುನಾವಣೆಗೆ ನಿಲ್ಲಿಸಿ ಅಲ್ಲಿ ಯಾವರೀತಿ ಫಲಿತಾಂಶ ಬರುತ್ತದೆ ಎಂಬುದನ್ನು ನೋಡಿಕೊಂಡು ಮುಂದೆ ಸಾರ್ವತ್ರಿಕ ಚುನಾವಣೆಗೆ ಯಾವರೀತಿ ಮಾಡಬೇಕೆಂಬುದನ್ನು ಈಗಲೇ ನಿರ್ಧರಿಸಿಕೊಳ್ಳುತ್ತಾರೋ ಏನೋ ಎಂಬ ಒಂದು ಸಂದೇಹ ಇದೆ. ಆ ಸಂದೇಹವನ್ನು ನಿವಾರಣೆ ಮಾಡುವುದಕ್ಕೆ ಬದಲಾಗಿ ಅದನ್ನು ಎಷ್ಟು ಅವರು Press ಮಾಡುತ್ತಾರೆಯೋ ಅಷ್ಟುಕೂಡ ನಮ್ಮ ಸಂಶಯ ಜಾಸ್ತಿಯಾಗುತ್ತಾ ಇದೆ. ಆದ್ದರಿಂದ ಈ ತಿದ್ದುಪಡಿಯನ್ನು ಸರ್ಕಾರದವರು ಅಂಗೀಕಾರ ಮಾಡಿ ಸಾಮಾನ್ಯ ಜನಗಳಿಗೆ ಈಗಿನಂತೆ ಆಗತಕ್ಕ ತೊಂದರೆಯನ್ನು ತಪ್ಪಿಸಬೇಕೆಂದು ನಾನು ಕೇಳಿಕೊಳುತ್ತೇನೆ. ಒಬ್ಬ ಸದಸ್ಯ ಆರು ಕ್ಷೇತ್ರಗಳಲ್ಲಿ ತಿರುಗಬೇಕಾದರೆ ಅದಕ್ಕನುಗುಣವಾಗಿ ಖರ್ಚುಕೂಡ ಆಗುತ್ತದೆ. ಇದೆಲ್ಲವನ್ನು ತಪ್ಪಿಸಬೇಕೆಂಬ ಉದ್ದೇಶದಿಂದ ಈ ತಿದ್ದುಪಡಿಯನ್ನು ತಂದಿದ್ದೇನೆ. ಕಳೆದ ಚುನಾವಣೆಯಲ್ಲಿ ಬೇಕಾದಷ್ಟು ಅನುಭವವನ್ನು ನಾವು ಪಡೆದಿದ್ದೇವೆ. ಈಗಿನ ಪ್ರಕಾರ ಚುನಾವಣೆ ಆಗುವಾಗ ಬಹಳವಾಗಿ ಖರ್ಚಾಗುತ್ತಾ ಇದೆ. ಅಲ್ಲದೆ ಸರ್ಕಾರಕ್ಕೂ ಕೂಡ ಈ ಚುನಾವಣೆಯಿಂದ ಸುಮಾರು ಎಂಟು ಲಕ್ಷ ರೂಪಾಯಗಳವರೆಗೂ ಖರ್ಚಾಗುತ್ತವೆ ಎಂದು ಹಿಂದೆ ಅಂದಾಜು ಮಾಡಿದ್ದರು.

Mr. SPEAKER.—Even if there is a single-member constituency the expenses will not be decreased.

ಶ್ರೀ ಬಿ. ಹುಚ್ಚೇಗೌಡ.—ನನ್ನ ಅಭಿಪ್ರಾಯದಲ್ಲಿ ಕಮ್ಮಿ ಆಗಬಹುದು ಎಂದು ಇದೆ. ಇದು ಇನ್ನು ಪ್ರಥಮ ಚುನಾವಣೆ ಆದ್ದರಿಂದ ಕರಾರುವಾಕ್ಕಾಗಿ ಹೇಳುವುದಕ್ಕಾಗುವುದಿಲ್ಲ.

Mr. SPEAKER.—If there was an indirect election, what you say is correct; but so far as this is concerned, the expenses will not be decreased.

ಶ್ರೀ ಬಿ. ಹುಚ್ಚೇಗೌಡ.—ಏನೇ ಆಗಲೀ ನಮಗೆ ಇರತಕ್ಕ ಪೂರ್ಣಅನುಭವದಿಂದ ಈ ತಿದ್ದುಪಡಿಯನ್ನು ತಂದಿದ್ದೇನೆ. ಇದರಲ್ಲಿ ಭಿನ್ನಾಭಿಪ್ರಾಯಕ್ಕೆ ಅಷ್ಟು ಅವಕಾಶವಿಲ್ಲ. ಆದ್ದರಿಂದ ಸರ್ಕಾರದವರು ಈ ತಿದ್ದುಪಡಿಯನ್ನು ಒಪ್ಪಿಕೊಳ್ಳುತ್ತಾರೆ ಎಂದು ನಂಬಿ ಇದನ್ನು ಸಭೆಯ ಮುಂದೆ ಮಂಡಿಸುತ್ತೇನೆ.

Mr. SPEAKER.—Amendment moved.—

"That in sub-section (1) of the proposed section 51, for the words

'not exceeding three having regard to the population of each constituency, as the Government may, by notification under sub-section (2) determine', the words 'at the rate of one member for every 30,000 of the rural population of each constituency' shall be substituted."

*Sri M. LINGANNA (Nanjangud).—I beg to move that.—

CLAUSE 5.

"1. In sub-section 1 of the proposed section 51), for the word 'Taluk' occurring in lines 1 and 2 the word 'Hobli' shall be substituted.

2. For the words "such number of members not exceeding three having regard to the population of each constituency, as the Government may, by notification under sub-section (2), determine", the words "one member from each constituency:

Provided the Government shall have power to combine two Revenue Hoblies in any Revenue Taluk to make a double member constituency carrying a general and reserved seat wherever necessary in order to give representation to Scheduled Castes," shall be substituted.

3. "For items (*a*) and (*b*) of sub-section (2) of the proposed section 51 the following items shall be substituted namely,—

"(*a*) the number of seats reserved for the Scheduled Castes in each District; and

(*b*) the number of double member constituencies, if any, reserved for Scheduled Castes based on their population in each Revenue Taluk."

ಸ್ವಾಮಿ, ಈ ತಿದ್ದುಪಡಿಯಲ್ಲಿ ಸರ್ವೇ ಸಾಮಾನ್ಯವಾಗಿ ನಾನು ತಿಳಿದ ಮಟ್ಟಿಗೆ ಈ ಒಂದು ಮಸೂದೆಯ ಮೇಲೆ ಮಾತನಾಡಿದ ಮಾನ್ಯ ಸದಸ್ಯರೆಲ್ಲರ ಬಹುಮತದ ಅಭಿಪ್ರಾಯವೇನಿತ್ತು ಅದೆಲ್ಲವೂ ಅಡಕವಾಗಿದೆ ಎಂದು ನನ್ನ ಭಾವನೆ. ಅನೇಕ ಮಾನ್ಯ ಸದಸ್ಯರು ಚುನಾವಣಾ ಕ್ಷೇತ್ರ ಮಲ್ಟಿ ಚುನಾವಣಾ ಕ್ಷೇತ್ರ ಇರಬಾರದು, ಏಕ ಸದಸ್ಯರ ಚುನಾವಣಾ ಕ್ಷೇತ್ರ ಮಾಡಿದರೆ ಬಹಳ ಒಳ್ಳೆಯದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಒಂದು ಸಮಯದಲ್ಲಿ ಮಾನ್ಯ ಮಂತ್ರಿಗಳು ಏಕ ಸದಸ್ಯ ಕ್ಷೇತ್ರವನ್ನು ಮಾಡಿದರೆ ಕಷ್ಟವಾಗುತ್ತದೆ, ಈಗಾಗಲೇ ಬಹಳ ದಿವಸದ ಹಿಂದೆ ಆಗಬೇಕಾಗಿದ್ದ ಜಿಲ್ಲಾಬೋರ್ಡ್ ಚುನಾವಣೆ ಆಗದೆ ವಿಳಂಬವಾಗಿದೆ, ಏಕಸದಸ್ಯಕ್ಷೇತ್ರವನ್ನು ಮಾಡಬೇಕಾದರೆ ಆ ಕ್ಷೇತ್ರಗಳ ವಿಭಜನೆ ಮಾಡಿಸಬೇಕಾಗುತ್ತದೆ, ಕ್ಷೇತ್ರ ವಿಭಜನೆ ಮಾಡುವುದಕ್ಕೆ ಹೊರಟರೆ ಒಂದು ವರ್ಷ ಹಿಡಿಯುತ್ತದೆ, ಈಗಾಗಲೇ ಎಂಟು ವರ್ಷ ಜಿಲ್ಲಾ ಬೋರ್ಡ್ ಚುನಾವಣೆ ನಡೆಯದೇ ಮುಂದುವರಿಯುತ್ತಾ ಇರುವಾಗ ಇನ್ನೂ ಒಂದು ವರ್ಷ ಮುಂದುವರಿಸುವುದು ಸೂಕ್ತವಲ್ಲ, ಆ ದೃಷ್ಟಿಯಿಂದ ಏಕಸದಸ್ಯ ಕ್ಷೇತ್ರವನ್ನು ಮಾಡಲಿಕ್ಕೆ ತೊಂದರೆ ಇದೆಎಂದು ಹೇಳಿದರು. ನನ್ನ ಈ ತಿದ್ದುಪಡಿಯಲ್ಲಿ ಏನು ಒಂದು ವಾದ ಇದೆ ಎಂದರೆ ಏಕ ಸದಸ್ಯ ಕ್ಷೇತ್ರವನ್ನು 25 ಸಾವಿರಕ್ಕೆ ಅಥವಾ 30 ಸಾವಿರಕ್ಕೆ ನಿಗದಿ ಮಾಡದೇ ಈಗಿರತಕ್ಕಂಥಾ ರೆವಿನ್ಯು ಹೋಬಳಿಗಳನ್ನೇ ಸದ್ಯಕ್ಕೆ ನಾವು ಒಂದು ಏಕಸದಸ್ಯ ಕ್ಷೇತ್ರ ಅಂತ ಭಾವಿಸಿಕೊಂಡರೆ ಡೀಲಿಮಿ ಟ್ ಮಾಡತಕ್ಕ ಒಂದು ಕಷ್ಟ ಅಥವಾ ಡೀಲಿಮಿ ಟ್ ಮಾಡತಕ್ಕ ಖರ್ಚು ವೆಚ್ಚಾ ನಿಂತೇ ಹೋಗುತ್ತದೆ. ಈ ಒಂದು ತಿದ್ದುಪಡಿಯನ್ನು ಒಪ್ಪಿಕೊಂಡರೆ ಷೆಡ್ಯೂಲ್‌ನಲ್ಲಿ ಏನು ಇಟ್ಟುಕೊಂಡಿದ್ದೇವೆ ಅದಕ್ಕೂ 5ನೇ ಸೆಕ್ಷನ್‌ಗೂ ವ್ಯತ್ಯಾಸ ಬರತ್ತದೆಯೋ ಎಂಬುದನ್ನು ನೋಡಬೇಕು. ಷೆಡ್ಯೂಲ್‌ನಲ್ಲಿ ಮೈಸೂರ ಜಿಲ್ಲೆಗೆ 36 ಜನ ಉಮೇದುವಾರರ ನಿಲ್ಲಬಹುದು ಅಂತ ನಮೂದಾಗಿದೆ. ಈಗ ಹೋಬಳಿವಾರು ತೆಗೆದುಕೊಂಡರು ಕೂಡ ಮೈಸೂರು ಜಿಲ್ಲೆಯಲ್ಲಿ ಸುಮಾರು 36 ಜನ ಸದಸ್ಯರನ್ನು ಚುನಾವಣೆ ಮಾಡಬಹುದು. ನಮ್ಮ ತಾಲ್ಲೂಕಿನಲ್ಲಿ 5 ಹೋಬಳಿಗಳಿವೆ. ಗುಂಡಲುಪೇಟೆ ತಾಲ್ಲೂಕಿನಲ್ಲಿ 4 ಹೋಬಳಿ, ಮೈಸೂರು ತಾಲ್ಲೂಕನಲ್ಲಿ 4 ಹೋಬಳಿ, ಹ ಣಸೂರು ತಾಲ್ಲೂಕಿನಲ್ಲ 4 ಹೋಬಳಿ, ಚಾಮರಾಜನಗರ, ಟೀ-ನರಸೀಪುರ ತಾಲ್ಲೂಕುಗಳಲ್ಲಿ 5-5 ಹೋಬಳಿಗಳು ಇವೆ. ಈ ದೃಷ್ಟಿಯಿಂದ ಲೆಕ್ಕಹಾಕಿದ್ದರೂ ಕೂಡ ಷೆಡ್ಯೂಲ್‌ನಲ್ಲಿ ಏನು ನಮ್ಮ ಜಿಲ್ಲಾ ಬೋರ್ಡಿಗೆ 36 ಜನ ಸದಸ್ಯರಿರಬೇಕೆಂದು ನಿಗದಿಮಾಡಿದ್ದೇವೆಯೋ ಆ ಒಂದು ನಿಗದಿ ಪ್ರಕಾರ ಹೋಬಳಿ ಕ್ಷೇತ್ರಮಾಡಿಕೊಂಡರೂ ಕೂಡ ಯಾವ ವ್ಯತ್ಯಾಸವೂ ಆಗಲಾರದು. ಆದ್ದರಿಂದ ನಾವು ಈಗ ಯಾವ ಒಂದು ಷೆಡ್ಯೂಲ್‌ನ್ನು ಒಪ್ಪಿಕೊಂಡಿದ್ದೇವೆಯೋ ಅದಕ್ಕನುಗುಣವಾಗಿಯೇ ಇರುವುದರಿಂದ ಹೋಬಳಿವಾರು ಕ್ಷೇತ್ರವನ್ನು ಒಪ್ಪಿಕೊಳ್ಳುವುದು ಸಾಧುವಾದದ್ದು ಎಂದು ನನ್ನ ಭಾವನೆ.

ಅದೂ ಅಲ್ಲದೆ ಇನ್ನೂ ಒಂದು ನಿಗೂಢವಾದ ತತ್ವ ಏನೆಂದರೆ-ಈಗಾಗಲೇ ಬಹು ಸಂಖ್ಯಾತ ಸದಸ್ಯರ ಕ್ಷೇತ್ರ ಅಥವಾ ಏಕಸದಸ್ಯರಕ್ಷೇತ್ರ ಮಾಡುವುದುವುದರಿಂದ ಆಗತಕ್ಕ ಸಾಧಕ ಬಾಧಕಗಳ ಬಗ್ಗೆ ಬಹಳ ವಿಪೂಲವಾಗಿ ಚರ್ಚೆ ನಡೆದಿದೆ. ಆದ್ದರಿಂದ ನಾನು ಹೆಚ್ಚಿಗೆ ಏನೂ ಹೇಳುವುದಕ್ಕೆ ಹೋಗುವುದಿಲ್ಲ. ಒಟ್ಟಿನಲ್ಲಿ ನನ್ನ ಅಭಿಪ್ರಾಯವೇನೆಂದರೆ—ಏಕ ಸದಸ್ಯ ಕ್ಷೇತ್ರ ಮಾಡಿದ ಪಕ್ಷದಲ್ಲಿ ಅಲ್ಪಸಂಖ್ಯಾತರಿಗೆ ಪ್ರಾತಿನಿಧ್ಯ ದೊರಕಲಾರದು ಎಂಬ ಒಂದು ಶಂಕೆಯನ್ನು ಸೂಚನೆ ಮಾಡಿದರು—ಬಹು ಸಂಖ್ಯಾತರ ಕ್ಷೇತ್ರವನ್ನು ಮಾಡಿದರೆ ಜಿಲ್ಲಾ ಬೋರ್ಡಿಗೆ ಎಷ್ಟು ಜನ ಅಲ್ಪ ಸಂಖ್ಯಾತದ ಪ್ರತಿನಿಧಿಗಳನ್ನು ಚುನಾವಣೆ ಮಾಡಬಹುದೋ ಅಷ್ಟೇ ಸಂಖ್ಯೆಯ ಜನರನ್ನು ಏಕಸದಸ್ಯ ಕ್ಷೇತ್ರವನ್ನು ಮಾಡಿದರು ಕೂಡ ಚುನಾವಣೆ ಮಾಡಬಹುದು ಎಂದು ನನ್ನ ಭಾವನೆ. ಏಕೆಂದರೆ ತಮಗೆಲ್ಲರಿಗೂ ಗೊತ್ತಿರುವ

(SRI M. LINGANNA.)

ಹಾಗೆ ಕೆಲವು ಹೋಬಳಿಗಳಲ್ಲಿ ಒಂದೇ ತರಹದ-ಪ್ರಜಾ ಸಂಖ್ಯೆ ಇರುವುದಿಲ್ಲ. ಮಲ್ಟಿ ಮೆಂಬರ್ ಕ್ಷೇತ್ರಕ್ಕೆ ಯಾವ ಒಂದು ವಾದವನ್ನು ಹೂಡುತ್ತಾರೆಯೋ ಅದೇ ವಾದವನ್ನು ಈ ಹೋಬಳಿ ಕ್ಷೇತ್ರಕ್ಕೂ ಕೂಡ ಹೂಡಬಹುದು. ಅಲ್ಲೂ ಕೊಡಬಹುದು ಅಲ್ಲೂಕೂಡ It is a composite population ಇದೆ. It is not a population cent per cent of one community. As such, I believe that the argument advanced that the minority community can, wherever they be, be represented is a far-fetched argument. ಈ ದೃಷ್ಟಿಯಿಂದ ನನ್ನ ಅಭಿಪ್ರಾಯದಲ್ಲಿ ಹೋಬಳಿವಾರುಕ್ಷೇತ್ರ ಇಟ್ಟುಕೊಂಡು ಏಕ ಸದಸ್ಯಕ್ಷೇತ್ರ ಮಾಡಿದರೆ ಒಳ್ಳೆಯದಾಗುತ್ತದೆ ಎಂದು ಹೇಳಿ ಇದೆ.

ಇದರಲ್ಲಿ ಇನ್ನೂ ಒಂದು ಯೋಚನೆಮಾಡೋಣ. ಮಲ್ಟಿಮೆಂಬರ್ ಕ್ಷೇತ್ರ ಆದರೆ ಚುನಾವಣೆ ಆಗತಕ್ಕ ಉಮೇದುವಾರರ ಸಂಖ್ಯೆ ಮೂರು ಆಗುತ್ತವೆ. ಮೂರು ಜನಕ್ಕಿಂತ ಹೆಚ್ಚು ಜನರನ್ನು ಚುನಾಯಿಸುವುದಕ್ಕೆ ಅವಕಾಶವಿಲ್ಲ. ಒಂದು ತಾಲ್ಲೂಕಿನಲ್ಲಿ ಒಂದು ಪಾರ್ಟಿಯವರು ಮೂರು ಜನ, ಇನ್ನೊಂದು ಪಾರ್ಟಿಯವರು ಮೂರು ಜನ ಈ ರೀತಿ ನಾಲ್ಕಾರು ಜನ ನಿಂತುಕೊಳ್ಳಬಹುದು. ಹೀಗಾಗಿ ಒಂದೊಂದು ತಾಲ್ಲೂಕಿನಲ್ಲಿ ನಾಲ್ಕಾರು ಗುಂಪುಗಳಾಗುತ್ತವೆ. ನನ್ನ ಅನುಭವದಲ್ಲಿರುವುದನ್ನು ಹೇಳುವುದಾದರೆ ಹೋಬಳಿವಾರು ಕ್ಷೇತ್ರ ಮಾಡಿದರೆ ಅನೇಕ ಹೋಬಳಿಗಳಲ್ಲಿ ಚುನಾವಣೆ ನಡೆಸಬೇಕಾದ ಪ್ರಮೇಯವೇ ಬೀಳದಿರಬಹುದು. ಅದೂ ಅಲ್ಲದೆ ಹೋಬಳಿಗಳಲ್ಲಿರತಕ್ಕ ಜನಗಳು ಅಷ್ಟೇನೂ ದಡ್ಡರಲ್ಲ. ಮಾನ್ಯ ಮಂತ್ರಿಗಳು ಹೇಳಿದಹಾಗೆ ಹಣಗಾರನಾಗಿ ಅಥವ ಹಣ ಕೊಡತಕ್ಕ ಮನುಷ್ಯನಾಗಿ ಯೋಚನೆ ಮಾಡಿ ವರ್ತಿಸತಕ್ಕವರಾಗಿದ್ದಾರೆ ಎಂದು ನನ್ನ ಭಾವನೆ. ಈಗ ಗೂಂಡಾವರ್ತನೆಯ ಕಾಲವಲ್ಲ. ಓಟು ಮಾಡತಕ್ಕ ಜನಗಳು ದಡ್ಡರಲ್ಲ. ಅವರೂ ಯೋಚನೆ ಮಾಡುತ್ತಾರೆ. ಯಾರು ಪ್ರತಿನಿಧಿಗಳಾದರೆ ಅನುಕೂಲವಾಗುತ್ತವೆ, ಯಾರು ಪ್ರತಿನಿಧಿಗಳಾಗಿ ಹೋಗಲಿಕ್ಕೆ ಅರ್ಹರು ಎಂಬುದನ್ನು ಯೋಚನೆಮಾಡಿ, ತೂಕಹಾಕಿ ಓಟು ಕೊಡುತ್ತಾರೆ. ಆ ದೃಷ್ಟಿಯಿಂದ ಯಾರೂ ಕೂಡ ಯಾರಿಗೆ ಆಗಲೀ ಅನ್ಯಾಯವಾಗುತ್ತದೆ ಎಂದು ಭಾವಿಸಬೇಕಾಗಿಲ್ಲ ಎಂದು ನನ್ನ ಭಾವನೆ.

ಈಗ ಓಟುಮಾಡತಕ್ಕ ವಿಧಾನ ಯಾವುದಿರಬೇಕೆಂಬುದನ್ನು ಯೋಚನೆ ಮಾಡಬೇಕು. ಒಂದು ಕ್ಷೇತ್ರಕ್ಕೆ ಮೂರು ಜನ ಪ್ರತಿನಿಧಿಗಳಿರಬೇಕೆಂಬುದನ್ನು ನಿಗದಿ ಮಾಡಿದಮೇಲೆ ಬಣ್ಣದ ಪೆಟ್ಟಿಗೆಗಳನ್ನು ಇಟ್ಟು, ಗುರುತುಗಳನ್ನು ನಿಗದಿಮಾಡಿ ಇಂತಿಂಥವರಿಗೆ ಓಟು ಮಾಡಬೇಕೆಂದು ಹೇಳಬೇಕಾಗುತ್ತದೆ. ಈ ರೀತಿ ಬಣ್ಣದ ಪೆಟ್ಟಿಗೆಗಳನ್ನು ಮಾಡಿಸಿ ಪ್ರತಿಯೊಂದು ಗ್ರಾಮದಲ್ಲೂ ಇಡಬೇಕಾದರೆ ಆಗತಕ್ಕ ಖರ್ಚುವೆಚ್ಚ ಎಷ್ಟು ಎಂಬುದನ್ನು ನೋಡಿ ಏಕ ಸದಸ್ಯಕ್ಷೇತ್ರ ಮಾಡಿದರೆ ಇನ್ನೂ ಒಂದು ಅನುಕೂಲ ಇದೆ. ಒಂದು ತಾಲ್ಲೂಕಿನಲ್ಲಿ ಚುನಾವಣೆ ನಡೆಸಬೇಕಾದರೆ ಶಿಬ್ಬಂದಿ ಬೇಕಾಗುತ್ತದೆ. ಹೋಬಳೀವಾರು ಮಾಡಿದರೆ ಎರಡು ಹೋಬಳಿಗಳಲ್ಲಿ ಒಂದೇ ದಿವಸ ಚುನಾವಣೆ ನಡೆಸಿ, ನಂತರ ಉಳಿದ ಹೋಬಳಿಗಳಲ್ಲೂ ಅದೇ ಶಿಬ್ಬಂದಿಯವರು ಚುನಾವಣೆ ನಡೆಸಬೇಕು. ಆಯಾಯ ತಾಲ್ಲೂಕಿನಲ್ಲಿರತಕ್ಕ ಶಿಬ್ಬಂದಿಯವರೂ ಆಯಾಯ ತಾಲ್ಲೂಕಿನ ಚುನಾವಣೆಗಳನ್ನು ಬಹಳ ಸುಸೂತ್ರವಾಗಿ, ಜಾಣ್ಮೆಯಿಂದ, ಜಾಗರೂಕತೆಯಿಂದ ನಡೆಸುವುದಕ್ಕೆ ಅವಕಾಶವಾಗುತ್ತದೆ. ಬಹುಸಂಖ್ಯಾತರ ಕ್ಷೇತ್ರ ಮಾಡಿದರೆ ಓಟುಮಾಡಿರತಕ್ಕ ಜನಗಳಿಗೆ ಮತ್ತು ಉಮೇದುವಾರರಿಗೂ ಕೂಡ ಬಹಳ ತೊಂದರೆಯಾಗುತ್ತವೆ. ಆ ದೃಷ್ಟಿಯಿಂದ ಈ ತಿದ್ದುಪಡಿ ಬಹಳ ಸಾಧುವಾದುದಾಗಿದೆ.

2-30 P.M.

ಇದನ್ನು ನಾವು ಇನ್ನೂ ಸಾಧನೆ ಮಾಡಬೇಕಾಗಿದೆ. ಆದರೆ ತಾವು ಈ ಸ್ಥಳೀಯ ಸಂಸ್ಥೆಗಳಿಗೆ ಅವಕಾಶ ಕೊಟ್ಟಿಲ್ಲ. ಈ ಒಂದು ಶಂಕೆಯಮೇಲೆ ನಾನು ಈಗ ಈ ತಿದ್ದುಪಡಿಯನ್ನು ತಂದಿದ್ದೇನೆ. ತಾವು ಈಗ ಈ ವ ಸೂದೆಯಲ್ಲಿ ಒಂದು ತಾಲ್ಲೂಕಿಗೆ ಮೂರುಜನ ಸದಸ್ಯರಿರಬೇಕೆಂದು ಒಂದು ಪರಿಮಿತಿಯನ್ನು ಮಾಡಿರುತ್ತೀರಿ. ಆದರೆ ಈಗಾಗಲೇ ಶ್ರೀ ಹುಚ್ಚೇಗೌಡರು ಹೇಳಿರುವಹಾಗೆ ಒಂದು ತಾಲ್ಲೂಕಿನಲ್ಲಿ 80 ಸಾವಿರ ಜನರೇ ಇರಲಿ ಅಥವಾ ಇನ್ನು 30 ಸಾವಿರ ಕಡಮೆಯೇ ಇರಲಿ, ಅಂತೂ ಪ್ರತಿಯೊಂದು ತಾಲ್ಲೂಕಿಗೂ ಮೂರು ಜನ ಮಾತ್ರ ಪ್ರತಿನಿಧಿಗಳು ಇರಬೇಕೆಂದು ಹೇಳಿರತಕ್ಕದ್ದು ಅಷ್ಟು ಸರಿಯಾಗಿಲ್ಲವೆಂದು ಹೇಳುತ್ತೇನೆ. ಹೀಗೆ ಮಾಡಿರತಕ್ಕದ್ದನ್ನು ಒಂದು ಪಾರ್ಷಿಯಾಲಟಿ ಎಂದು ಕರೆದರೂ ಕರೆಯಬಹುದು. ಇಂಥಾ ಒಂದು ಪಾರ್ಷಿಯಾಲಟಿ ಈಗ ಈ ಮಸೂದೆಯಲ್ಲಿ ಎದ್ದು ಕಾಣುತ್ತದೆ. ಈ ದೃಷ್ಟಿಯಿಂದ ನಾನು ಹೇಳುವುದು ಏನೆಂದರೆ ಈಗ ಇಡೀ ತಾಲ್ಲೂಕನ್ನೇ ಒಂದು ಚುನಾವಣಾ ಕ್ಷೇತ್ರವನ್ನಾಗಿ ಮಾಡುವ ಬದಲು ಹೋಬಳಿವಾರು ಚುನಾವಣಾಕ್ಷೇತ್ರಗಳನ್ನು ವಿಂಗಡಿಸತಕ್ಕದ್ದು ಸೂಕ್ತ ಮತ್ತು ಉತ್ತಮವಾದ ಮಾರ್ಗ ಎಂದು ಹೇಳುತ್ತೇನೆ. ಇದರಿಂದ ಹರಿಜನಗಳಿಗೂ ಕೂಡ ಅಂಥಾ ಅನಾನುಕೂಲವೇನೂ ಆಗುವುದಿಲ್ಲ. ಯಾವುದಾದರೂ ಒಂದು ಹೋಬಳಿಯಲ್ಲಿ ಈ ಹರಿಜನರ ಸಂಖ್ಯೆ ಜಾಸ್ತಿಇದ್ದರೆ ಅವರು ಬಹುಸಂಖ್ಯಾತರಾಗಿದ್ದರೆ ಅಂಥಾ ಹೋಬಳಿಯಲ್ಲಿ ಅವರಿಗೆ ಒಂದು ಪ್ರತ್ಯೇಕ ಪ್ರಾತಿನಿಧ್ಯವನ್ನು ಕೊಡಲು ತಾವು ಅವಕಾಶ ಮಾಡಿಕೊಡಬಹುದು. ಹೀಗೆ ಅವರಿಗೆ ಸಾಕಷ್ಟು ಪ್ರಾತಿನಿಧ್ಯ ಕೊಡಲು ಈ ಮಸೂದೆಯಲ್ಲಿ ಅವಕಾಶವಿದೆಯೇ ಅಥವಾ ಇಲ್ಲವೇ ಅನ್ನುವುದನ್ನೂ ಕೂಡ ಪರಿಶೀಲನೆಮಾಡಲು ನನ್ನ ತಿದ್ದುಪಡಿಯಲ್ಲಿ ಅವಕಾಶವಿರುತ್ತದೆ. ಈ ವಿಚಾರದಲ್ಲಿ ಶ್ರೀ ವಿ. ವೆಂಕಟಪ್ಪನವರ ಸಮಿತಿ ಮಾಡಿದ್ದಂಥ ತೀರ್ಮಾನಗಳು ಸರಿಸಮನ್ವಯವಾದುವುಗಳಾಗಿದ್ದುವು. ಅವುಗಳನ್ನು ತಾವು ಜಾರಿಗೆ ತಂದಿದ್ದರೆ ಅನುಕೂಲವಾಗಿತ್ತು. ಈ ಒಂದು ಕ್ರಮವನ್ನು ಅನುಸರಿಸುವುದರಿಂದ ಓಟರಿಗೂ ಕೂಡ ಯಾವ ತೊಂದರೆಗಳೂ ಆಗುವುದಿಲ್ಲ, ಯಾವ ಕಷ್ಟನಷ್ಟವೂ ಆಗುವುದಿಲ್ಲ, ಬಹಳ ಸಾಧುವಾದದ್ದು. ಇಷ್ಟೇ ಅಲ್ಲದೆ ತಾವು ಈ ಹೋಬಳಿಗಳನ್ನು ಚುನಾವಣೆಕ್ಷೇತ್ರಗಳನ್ನಾಗಿ ಮಾಡಿದರೆ ಅನೇಕ ಕಡೆಗಳಲ್ಲಿ ಈ ಯಾವ ಒಂದು ಚುನಾವಣೆಯೂ ನಡೆಯದಂತೆಹಾಗೆಯೇ ಜನರು ಒಂದು ಐಕಮತ್ಯದಿಂದ ಯಾರನ್ನಾದರೂ ಒಬ್ಬರನ್ನು ಮಾತ್ರ ಆರಿಸಿ ಕಳುಹಿಸುವುದಕ್ಕೂ ಕೂಡ ಅವಕಾಶವಿದೆ. ಆದರೆ ತಾವೀಗ ಈ ತಾಲ್ಲೂಕು ಕಾನ್‌ಸ್ಟಿಟ್ಯೂಯನ್ಸಿಗಳನ್ನು ಮಾಡಿ ಮೂರು ಮೂರು ಜನರು ಜೊತೆಯಲ್ಲಿ ಒಟ್ಟಾಗಿ ನಿಂತು ಜನರಲ್ಲಿ ಓಟನ್ನು ಕೇಳುವಾಗ ಆ ಜನಗಳನ್ನು ಅಲ್ಲದನಲ್ಲದ ಪಾರ್ಟಿಪಕ್ಷಗಳ ಒತ್ತಡಕ್ಕೆ ಗುರಿಮಾಡಿ, ಅವರಲ್ಲಿ ಈ ನಾನಾವಿಧವಾದ ಪಾರ್ಟಿ ವೈಷಮ್ಯಗಳನ್ನು ಬೆಳೆಸುವುದಕ್ಕೆ ಅವಕಾಶ ಉಂಟು ಮಾಡಬೇಡಿ. ಹೀಗೆ ಮಾಡುವುದು ದೇಶದ ಹಿತದೃಷ್ಟಿ

ಯಿಂದ ಖಂಡಿತ ಸಾಧುವಾದದ್ದಲ್ಲ, ಮುಂದಕ್ಕೆ ಇದರಿಂದ ಬಹಳ ದುಷ್ಪರಿಣಾಮಗಳಾಗುತ್ತವೆ. ಆದುದರಿಂದ ತಾವು ಏಕಸದಸ್ಯ ಚುನಾವಣೆಕ್ಷೇತ್ರಗಳನ್ನು ಮಾಡಿ, ಚುನಾವಣೆ ನಡೆಸಿದರೆ ಅದರಿಂದ ದೇಶಕ್ಕೆ ಬಹಳ ಉಪಕಾರ ಮಾಡಿದಂತಾಗುತ್ತದೆ. ನೇರವಾಗಿ ಜನರು ಚುನಾಯಿತರಾಗಿ ಬಂದು ತಮ್ಮ ತಮ್ಮ ಕಾನ್ಸ್ಟಿಟ್ಯೂಯನ್ಸಿಗಳ ಬಗ್ಗೆ ಕಷ್ಟನಿಷ್ಠುರಗಳನ್ನು ಪ್ರತಿನಿಧಿಸಲು ಇದರಿಂದ ಅನುಕೂಲವಾಗುತ್ತದೆ. ಆದರೆ ಈ ಒಂದೊಂದು ಹೋಬಳಿಯಿಂದಲೂ ಚುನಾಯಿತರಾಗಿ ಬರತಕ್ಕಂಥ ಸದಸ್ಯರುಗಳು ಇಡೀ ತಾಲ್ಲೂಕಿನ ಅಭಿವೃದ್ಧಿಗೆ ಇಡೀ ತಾಲ್ಲೂಕಿನ ಪರವಾಗಿ ಆರಿಸಿ ಬರುವಂಥ ಸದಸ್ಯರು ಗಮನಕೊಡುವಷ್ಟು ಕೊಡಲಾರರು ಎಂದು ಹೇಳುವುದಕ್ಕೆ ಯಾವ ಆಧಾರವೂ ಕೂಡ ಇರುವುದಿಲ್ಲ. ಆದರೆ ಈಗಾಗಲೇ ಕೆಲವು ಮಾನ್ಯಮಿತ್ರರು ಈ ಹೋಬಳಿಗಳಿಂದ ಆರಿಸಿ ಬರುವಂಥ ಜನರಿಗೆ ತಾಲ್ಲೂಕಿನ ಅಭಿಮಾನವಿರುವುದಿಲ್ಲ ಎಂದು ಹೇಳಿದರು. ಆದರೆ ಹೀಗೆಲ್ಲಾ ವಾದಮಾಡುವುದಕ್ಕೆ ಅವಕಾಶವೇ ಇಲ್ಲ. ಈಗ ನಾನು ತಂದಿರತಕ್ಕ ತಿದ್ದುಪಡಿಯಲ್ಲಿ ಈ ಚುನಾವಣೆ ಕ್ಷೇತ್ರಗಳನ್ನು ಮುಂದಕ್ಕೆ ಡೀಲಿಮಿಟೇಷನ್ ಮಾಡುವುದಕ್ಕೆ ಅವಕಾಶವಿಲ್ಲದಂತೆ ಚುನಾವಣೆ ನಡೆಸಲು ಯಾವಾಗ್ಲೂ ಒಂದೇ ಸಮನಾದ ಅವಕಾಶವಿರುತ್ತದೆ. ಇದರಿಂದ ಚುನಾವಣೆಗೆ ನಿಲ್ಲುವಂಥ ಉಮೇದುವಾರರಿಗೆ ಯಾವ ಅನಾನುಕೂಲವಾಗಲಿ ಅಥವಾ ತೊಂದರೆಯಾಗಲಿ ಆಗುವುದಿಲ್ಲ. ಅಂಥಾ ಯಾವ ಕಷ್ಟನಷ್ಟಗಳೂ ಆಗುವುದಿಲ್ಲ. ಸಾಕಷ್ಟು ಪ್ರತಿನಿಧಿಗಳು ಬರುವುದಕ್ಕೂ ಅವಕಾಶವಾಗುತ್ತದೆ. ಇನ್ನು ಮುಂದೆ ಈ ಜಿಲ್ಲಾಬೋರ್ಡುಗಳ ಕೆಲಸಕಾರ್ಯಗಳು ಸುಲಲಿತವಾಗಿ ನಡೆದು ದೇಶಕ್ಕೆ ಒಳ್ಳೆಯದಾಗಲಿ ಎನ್ನತಕ್ಕಂಥ ಒಂದು ಸದುದ್ದೇಶದಿಂದ ನಾನೀಗ ಈ ತಿದ್ದುಪಡಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

Mr. SPEAKER.–Amendment moved :

"1. In sub-section 1 of the porposed Section 51), for the word 'Taluk' occurring in lines 1 and 2 the word 'Hobli' shall be substituted."

2. For the words 'such number of members not exceeding three having regard to the population of each constituency, as the Government may, by notification under sub-section (2), determine' the words 'one member from each constituency':

"Provided the Government shall have power to combine two Revenue Hoblis in any Revenue Taluk to make a double-member constituency carrying a general and reserved seat wherever necessary in order to give representation to Scheduled Castes," shall be substituted.

23. For items (*a*) and (*b*) of sub-section (2) of the proposed section 51, the following items shall be substituted namely,—

"(*a*) the number of seats reserved for the Scheduled Castes in each District; and

(*b*) the number of double member constituencies, if any, reserved for Scheduled Castes based on their population in each Revenue Taluk."

Sri J. MAHOMED IMAM.—I would like to know the procedure with regard to these amendments.

Mr. SPEAKER.—I have already stated that I would allow the Hon'ble Minister and the Hon'ble Members to move all the amendments, we shall discuss them together and then I will put the amendments one by one to the vote.

Sri Kadidal MANJAPPA.—Sir, I beg to move the following amendment to clause 5:

"That in the new sub-section (1) of section 51, the words 'not exceeding three having regard to the population of each constituency' shall be omitted."

Sir, this is a consequential change. In the previous amendment that I moved, I had proposed to retain the Schedule. So, this becomes necessary. When we retain the schedule, this phrase will have to be deleted. This phrase provides for the election of not exceeding three candidates from each constituency. We have retained the schedule now and therefore there is no need for this phrase.

Mr. SPEAKER.–Amendment moved :

"That in the new sub-section (1) of section 51, the words 'not exceeding three having regard to the population of each constituency' shall be omitted."

ಶ್ರೀ ಬಿ. ಪಿ. ನಾಗರಾಜಮೂರ್ತಿ (ಮಳವಳ್ಳಿ).—ಸ್ವಾಮಿ ಈಗ ಈ 5ನೆಯ ಕ್ಲಾಜಿನ ಬಗ್ಗೆ ಶ್ರೀ ಬಿ. ಹುಚ್ಚೇಗೌಡರೂ ಮತ್ತು ಶ್ರೀ ಎಂ. ಲಿಂಗಣ್ಣನವರೂ ತಂದಿರತಕ್ಕಂಥ ತಿದ್ದುಪಡಿಗಳನ್ನು ನಾನು ಸಮರ್ಥಿಸುತ್ತ ಕೆಲವು ವಿಷಯಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

ಈ ಸ್ಥಳೀಯ ಸಂಸ್ಥೆಗಳ ಎಂದರೆ ಈ ಗ್ರಾಮ ರಾಜ್ಯಸ್ಥಾಪನೆ ಮತ್ತು ಈ ಪಂಚಾಯಿತಿ ರಾಜ್ಯಸ್ಥಾಪನೆ ಮಾಡಬೇಕೆಂದು ಹೇಳುತ್ತಿರುವುದರ

(ಶ್ರೀ ಬಿ. ಪಿ. ನಾಗರಾಜಮೂರ್ತಿ.)

ಮೂಲೋದ್ದೇಶ ಈ ಸ್ಥಳೀಯ ಸಂಸ್ಥೆಗಳ ಆಡಳಿತವನ್ನು ಆಯಾ ಪ್ರದೇಶದ ಜನರೇ ನಿರ್ವಹಿಸುವಂತೆ ಮಾಡಲು ಆಯಾ ಜನರಿಗೆಲ್ಲಾ ಒಂದು ಹೆಚ್ಚಿನ ಅವಕಾಶಕೊಟ್ಟು ಕಡೆಗೆ ಅವರವರೇ ಈ ಕೆಲಸಗಳ ಆಡಳಿತವನ್ನು ನಡೆಸಿಕೊಂಡು ಹೋಗತಕ್ಕ ರೀತಿಯ ಲ್ಲಿ ಅವರಿಗೆ ಒಂದು ತರಪೇತನ್ನು ಕೊಟ್ಟು ಅವರನ್ನು ಮುಂದಕ್ಕೆ ತರಬೇಕೆಂಬುದೇ ಆಗಿದೆ. ಆದರೆ ಈಗ ಈ ಸ್ಥಳೀಯ ಸಂಸ್ಥೆಗಳಿಗೆ ಏಕಸದಸ್ಯ ಚುನಾವಣೆ ಕ್ಷೇತ್ರಗಳಿರಬೇಕೇ ಅಥವಾ ಬಹು ಸದಸ್ಯ ಚುನಾವಣೆ ಕ್ಷೇತ್ರಗಳಿರಬೇಕೆ ಎನ್ನತಕ್ಕ ಬಗ್ಗೆ ಚರ್ಚೆ ಯೆದ್ದಿದೆ. ಆದರೆ ಮೊನ್ನೆ ನಮ್ಮ ಮಾನ್ಯ ಮಂತ್ರಿಗಳು ಈ ಸಭೆಯಮುಂದೆ ಮಂಡಿಸತಕ್ಕಂಥ ಈ ಬಿಲ್ಲಿನ ಬಗ್ಗೆ ಉತ್ತರ ಕೊಡುವಾಗ " ಈ ಮಲ್ಟಿ ಮೆಂಬರ್ಸ್ ಕಾನ್ಸ್ಟಿಟ್ಯೂಯೆನ್ಸಿ ಇರಬೇಕೆಂದು ಹೇಳಿರುವುದರಲ್ಲಿ ಯಾವ ರಾಜಕೀಯ ಉದ್ದೇಶವೂ ಇಲ್ಲ; ದೇವರ ನಮ್ಮ ವಿರೋಧಾ ಪಕ್ಷದವರ ತಲೆಯಲ್ಲಿ ಏಕೋ ಈ ಒಂದು ಭಾವನೆಯನ್ನು ತಂದು ಇಟ್ಟುಬಿಟ್ಟಿದ್ದಾನೆ; ಇದರಲ್ಲಿ ಅಂಥ ಪಕ್ಷಪಾತ ಭಾವನೆಗಳೇನೂ ಇರುವುದಿಲ್ಲ " ಎಂದು ಹೇಳಿದರು. ಆದರೆ ನಾವು ಇಲ್ಲಿಯವರೆಗೂ ಈ ಮಾನ್ಯ ಸಭೆಯಲ್ಲಿ ಈ ತಿದ್ದುಪಡಿಯ ಬಗ್ಗೆ ನಡೆದಿರತಕ್ಕಂಥ ಚರ್ಚೆಗಳನ್ನೆಲ್ಲಾ ವಿಮರ್ಶೆಮಾಡಿ ನೋಡಿದರೆ ಈ ಕಾಂಗ್ರೆಸ್ ಪಕ್ಷದಲ್ಲಿ ಇಂಥಿಂಥ ಅತ್ಯಂತ ಮೇಧಾವಿಗಳೂ, ಸಾರ್ವಜನಿಕ ರಂಗದಲ್ಲಿ ಚೆನ್ನಾಗಿ ಅರಿತು ನುರಿತವರು ಇಂಥಿಂಥ ಅನುಭವ ಶಾಲಿಗಳೂ ಇದ್ದಾಗ್ಯೂ ಏಕೆ ಈ ಏಕಮಾತ್ರ ಸದಸ್ಯ ಸ್ಥಾನಗಳು ಇರಬಾರದೆಂದು ಹೇಳುತ್ತಿದ್ದಾರೆ, ಇದರ ರಹಸ್ಯವೇನಿರಬಹುದು ಎಂಬುದನ್ನು ಕಂಡುಹಿಡಿಯಲು ಬಹಳ ಪ್ರಯತ್ನಪಟ್ಟೆನು. ಆ ಪ್ರಯತ್ನದಿಂದ ಇವರ ರಹಸ್ಯ ಹೀಗೆಯೇ ಇರಬೇಕೆಂದು ನಾನು ಒಂದ ತೀರ್ಮಾನಕ್ಕೆ ಬಂದಿದ್ದೇನೆ. ಅದನ್ನೀಗ ನಾನು ಈ ಸಭೆಯಮುಂದೆ ಇಡಬೇಕೆಂದಿದ್ದೇನೆ.—ಈ ವಿಚಾರವನ್ನು ನಾನೀಗ ಮಾನ್ಯ ಅಧ್ಯಕ್ಷರ ಗಮನಕ್ಕೂ, ಈ ಮಾನ್ಯ ಸಭೆಯ ಗಮನಕ್ಕೂ ಮತ್ತು ಸಾರ್ವಜನಿಕರ ಗಮನಕ್ಕೂ ತರಲು ಅಪೇಕ್ಷಿಸುತ್ತೇನೆ. ಆ ವಿಚಾರ ಏನೆಂದು ಕೇಳಿದರೆ ಇದೇ ತಾಲ್ಲೂಕನ್ನೇ ಒಂದು ಚುನಾವಣೆ ಕ್ಷೇತ್ರವನ್ನಾಗಿ ಮಾಡಿದರೆ ಅದರಿಂದ ಆಗತಕ್ಕ ತೊಂದರೆ ಮತ್ತು ಅನಾನುಕೂಲಗಳೇನು ಮತ್ತು ಕಷ್ಟನಷ್ಟಗಳು ಎಷ್ಟಿರುತ್ತವೆ ಎಂಬುದನ್ನೆಲ್ಲಾ ಕಳೆದ ಚುನಾವಣೆಗಳಲ್ಲಿ ನಾವು ಚೆನ್ನಾಗಿ ಅನುಭವ ಪಡೆದುಕೊಂಡಿದ್ದೇವೆ. ಕಳೆದ ಸಾರ್ವತ್ರಿಕ ಚುನಾವಣೆಗಳಲ್ಲಿ ಉಮೇದುವಾರರಾಗಿ ನಿಂತಿದ್ದು ಈ ಸಭೆಗೆ ಆ ಚುನಾವಣೆಗಳಲ್ಲಿ ಆರಿಸಿ ಬಂದಿದ್ದಕ್ಕೂ ಮತ್ತು ಈ ದಿವಸ ಈ ಜಿಲ್ಲಾಬೋರ್ಡ ಚುನಾವಣೆಗಳಿಗೆ ನಿಂತು ಆರಿಸಿಬರುವುದಕ್ಕೂ ಎಷ್ಟು ವ್ಯತ್ಯಾಸವಿರುತ್ತದೆ ಎಂಬುದು ಎಲ್ಲರಿಗೂ ಗೊತ್ತಿದೆ. ಆದರೆ ಈ ಜಿಲ್ಲಾ ಬೋರ್ಡುಗಳ ಕೆಲಸ ಕಾರ್ಯಗಳನ್ನು ಯಾರು ನಿಸ್ವಾರ್ಥತೆಯಿಂದ ನಡೆಸಿಕೊಂಡು ಬರುತ್ತಾರೋ ಅಂಥವರನ್ನೇ ಸದಸ್ಯರನ್ನಾಗಿ ಚುನಾಯಿಸತಕ್ಕದ್ದು ಸೂಕ್ತವೇ ಅಥವಾ ಅಲ್ಲವೇ ಎನ್ನುವುದನ್ನು ಯಾರೂ ಈ ಸಭೆಯಲ್ಲಿ ತಿಳಿಸಿದೆ ಇಲ್ಲ. ಆದರೆ ಈ ವಿಚಾರವನ್ನು ಮಾತ್ರ ಯಾರೂ ಬಾಯಿಬಿಟ್ಟು ಹೇಳಿಲ್ಲ. ಆದರೆ ನಾನು ಕಷ್ಟಪಟ್ಟು ಇದರ ರಹಸ್ಯವೇನಿರಬಹುದೆಂಬುದನ್ನು ಕಂಡುಹಿಡಿದಿದ್ದೇನೆ. ಅದೇನೆಂದರೆ ನಾಳೆ ಬರಲಿರುವ ಈ ಮಹಾ ಚುನಾವಣೆಗಳ ವೇಳೆಗೆ ಎಲ್ಲಾ ಕಾಂಗ್ರೆಸ್ ಸದಸ್ಯರೂ ಈ ಸ್ಥಾನಗಳಿಗಾಗಿ ಬಹಳ ದಾಹದಿಂದ ಕಾದುಕುಳಿತಿದ್ದಾರೆ, ಅಂಥವರಿಗಾಗಿ ಈಗ ಒಂದು ಸ್ಥಾನ ದೊರಕಿಸಿಕೊಡಲು ಮತ್ತು ಅವರಿಗೆ ಈ ಚುನಾವಣೆಗಳ ಬಿಸಿ ತಗುಲುವಂತೆ ಮಾಡಬೇಕೆಂಬ ಉದ್ದೇಶದಿಂದ, ಈಗ ಇಡೀ ತಾಲ್ಲೂಕನ್ನೇ ಒಂದು ಚುನಾವಣಾ ಸ್ಥಾನವನ್ನಾಗಿ ಏರ್ಪಡಿಸಿಬಿಟ್ಟರೆ ಆಗ ಈ ಸದಸ್ಯತ್ವಕ್ಕೆ ಹೊಡೆದಾಡತಕ್ಕವರು ವಿಶೇಷವಾಗಿ ಹಣವನ್ನು ಖರ್ಚು ಮಾಡಿಕೊಳ್ಳುವುದಲ್ಲದೆ ವಿಶೇಷ ಶ್ರಮವನ್ನೂ ಕೂಡ ವಹಿಸಬೇಕಾಗುತ್ತದೆ ಮತ್ತು ಈ ಚುನಾವಣೆಗಳಿಂದ ಎಂತಹ ಪ್ರಮಾದಗಳಾಗುತ್ತವೆ ಎನ್ನುವುದೆಲ್ಲಾ ಅವರಿಗೆ ಗೊತ್ತಾಗುತ್ತದೆ, ಎಂಬುದೇ ಇದರ ರಹಸ್ಯ. ಆದರೆ ಅವರು ಹಾಗೆ ಅಷ್ಟೊಂದು ಹಣ ಖರ್ಚುಮಾಡಿದಾಗ್ಯೂ ಚುನಾವಣೆಗಳಲ್ಲಿ ಗೆದ್ದರೂ ಗೆಲ್ಲಬಹುದು ಇಲ್ಲವೇ ಸೋತರೂ ಸೋಲಬಹುದು. ಹೀಗೆ ಅವರಿಗೊಂದು ಅವಕಾಶ ಕೊಟ್ಟು ಈ ಚುನಾವಣೆಗಳ ಸ್ವರೂಪವೇನೆಂಬುದನ್ನು ತೋರಿಸಿದ್ದಾರೆ. ನಾಳೆ ಬರುವ ಮಹಾ ಚುನಾವಣೆಗಳ ಕಾಲದಲ್ಲಿ ಅವರು ಯಾರೂ ಧೈರ್ಯ ಮಾಡಿ ಉಮೇದುವಾರರಾಗಿ ನಿಲ್ಲುವುದಕ್ಕೆ ಮುಂದೆ ಬರುವುದಿಲ್ಲ, ನೀವೇ ನಿಂತುಕೊಳ್ಳಿ ಎಂದು ಹೇಳಿಬಿಡುತ್ತಾರೆ. ಆದುದರಿಂದ ಹೀಗೆ ಮಾಡಿದರೆ ಈಗ ಇರುವಂಥ ಈ ಸದಸ್ಯರುಗಳಿಗೇನೇ ಮುಂದಿನ ಚುನಾವಣೆಗಳಲ್ಲಿ ಕೂಡ ಈ ಅಸೆಂಬ್ಲಿಯ ಸ್ಥಾನ ಭದ್ರಮಾಡಿಕೊಳ್ಳಬೇಕೆಂಬ ಉದ್ದೇಶದಿಂದಲೇ ಹೀಗೆ ಮಾಡಿದ್ದಾರೆಂಬುದನ್ನು ನಾನು ಕಂಡುಹಿಡಿದಿದ್ದೇನೆ. (ನಗು). ಈಗ ತಂದಿರತಕ್ಕಂಥ ಈ ತಿದ್ದುಪಡಿಯಲ್ಲಿ ಅಡಕವಾಗಿರತಕ್ಕಂಥ, ಒಂದು ಪ್ರಬಲವಾದ ರಾಜಕೀಯ ಹಿನ್ನೆಲೆಯೂ ಇದೇ ಆಗಿದೆ. ಆದರೆ ಹೀಗೆಲ್ಲಾ ಮಾಡತಕ್ಕದ್ದು ಈ ಮಾನ್ಯ ಸಭೆಯ ಸದಸ್ಯರಿಗೆ ಸಾಧುವಾದುದಲ್ಲ. ಈಗ ತಂದಿರತಕ್ಕಂಥ ತಿದ್ದುಪಡಿಗನುಗುಣವಾಗಿ ಇಡೀ ತಾಲ್ಲೂಕನ್ನೇ ಒಂದು ಚುನಾವಣೆ ಕ್ಷೇತ್ರವನ್ನಾಗಿ ಮಾಡಿದರೆ ಇದರಿಂದ ಆಗತಕ್ಕಂಥ ಸಾಧಕಕ್ಕಿಂತ ಬಾಧಕಗಳೇ ಜಾಸ್ತಿಯಾಗಿರುತ್ತವೆ. ಈಗ ತಾವು ಆ ಗ್ರಾಮ ರಾಜ್ಯಸ್ಥಾಪನೆ ಮಾಡಿದರೆ ಮಾತ್ರವೇ ಫಲಕಾರಿಯಾದಂಥ ಮತ್ತು ಪರಿಣಾಮಕಾರಿಯಾದಂಥ ಪ್ರಾತಿನಿಧ್ಯ ಕೊಡುವುದಕ್ಕೆ ಅವಕಾಶವಿರುತ್ತದೆ . ಆದುದರಿಂದ ತಾವು ಹೋಬಳಿವಾರು ಚುನಾವಣೆ ಸ್ಥಾನಗಳನ್ನು ಏರ್ಪಡಿಸುವುದು ಸೂಕ್ತವಾದುದು. ಹೀಗೆ ಮಾಡದೆ ಇಡೀ ತಾಲ್ಲೂಕನ್ನೇ ಒಂದು ಚುನಾವಣೆ ಕ್ಷೇತ್ರವನ್ನಾಗಿ ಮಾಡಿದರೆ ಅದೊಂದು ಆದರ್ಶ ಚುನಾವಣೆಯೆಂದು ಕರೆಯುವುದಕ್ಕೆ ಸಾಧ್ಯವಿರುವುದಿಲ್ಲ ಮತ್ತು ಚುನಾವಣೆ ಹೊಂದಿದ ಮನುಷ್ಯನು ತನ್ನ ಕ್ಷೇತ್ರದಲ್ಲಿರತಕ್ಕ ಜನರ ಕುಂದು ಕೊರತೆಗಳನ್ನು ತಿಳಿಯಲು ತುಂಬ ಕಷ್ಟವಾಗುತ್ತದೆ. ಆದುದರಿಂದ ಈ ತಾಲ್ಲೂಕು ಕ್ಷೇತ್ರಗಳನ್ನು ಮಾಡುವುದು ಖಂಡಿತ ಸಾಧುವಾದುದ್ದಲ್ಲ ಎಂದು ಹೇಳಿ ನಾನು ಶ್ರೀ ಬಿ. ಹುಚ್ಚೇಗೌಡರು ಮತ್ತು ಶ್ರೀ ಎಂ. ಲಿಂಗಣ್ಣನವರು ತಂದಿರತಕ್ಕಂಥ ತಿದ್ದುಪಡಿಗಳಿಗೆ ಸಂಪೂರ್ಣ ಬೆಂಬಲ ನೀಡುತ್ತೇನೆ.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಸ್ವಾಮಿ, ಈಗ ಸಭೆಯ ಮುಂದೆ ಬಂದಿರುವ ವಿಚಾರ ಈ ಮಲ್ಟಿಮೆಂಬರ್ ಕಾನ್ಸ್ಟಿಟ್ಯುಯೆನ್ಸಿ ಇರಬೇಕೇ ಅಥವಾ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯುಯನ್ಸಿ ಇರಬೇಕೇ ಎನ್ನುವುದು. ಈ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯುಯೆನ್ಸಿ ಬೇಕು ಎಂದರೆ ಅದು ಮಲ್ಟಿ ಮೆಂಬರ್ ಕಾನ್ಸ್ಟಿಟ್ಯುಯೆನ್ಸಿಯೇ ಆಗುತ್ತದೆ. ಈ ವಿಚಾರದಲ್ಲಿ ಕೆಲವು ಮಾತುಗಳನ್ನು ನನ್ನ ಸ್ವಂತ ಅನುಭವದ ಮೇಲೆ ಹೇಳುವುದಾದರೆ, ಈ ನಮ್ಮ ಬೆಂಗಳೂರಿನಲ್ಲಿಯೇ ಅನೇಕ ವಾರ್ಡುಗಳನ್ನಾಗಿ ವಿಂಗಡಿಸಿ ಈ ಸಿಂಗಲ್ ಮೆಂಬರ್ಸ್ ಕಾನ್ಸ್ಟಿಟ್ಯುಯೆನ್ಸಿಗಳನ್ನಾಗಿ ಮಾಡಿ ಚುನಾವಣೆಗಳನ್ನು ನಡೆಸಿದರು. ಆದರೆ ಆಗ

ಆ ಚುನಾವಣೆಗಳಲ್ಲಿ ಆದ ಪರಿಣಾಮ ಏನೆಂದರೆ, ಯಾರು ಚುನಾವಣೆಗೆ ನಿಂತರೋ ಅಂಥವರಿಗೆ ಸರಿಯಾಗಿ ದುಡ್ಡನ್ನು ಖರ್ಚು ಮಾಡುವುದಕ್ಕೆ ಶಕ್ತಿ ಇದ್ದರೆ ಮಾತ್ರ ಅವರಿಗೆ ಕೊಂಚ ಪ್ರಭಾವವಿರುತ್ತಿತ್ತೇ ಹೊರತು ಹಾಗೆ ದುಡ್ಡಿಲ್ಲದ ಮನುಷ್ಯನು ಎಷ್ಟೇ ಬುದ್ಧಿವಂತನಾಗಿದ್ದರೂ ಆತನಿಗೇನೂ ಪ್ರಭಾವವೇ ಇರುತ್ತಿರಲಿಲ್ಲ. ಹೀಗಾಗಿ ಈ ಸಿಂಗಲ್ ಮೆಂಬರ್ ಚುನಾವಣೆಗಳಲ್ಲಿ ಸಾಮಾನ್ಯ ಮನುಷ್ಯರು ಗೆಲ್ಲುವುದಕ್ಕೆ ಬಹಳ ಕಷ್ಟವಿದೆ. ಇದು ಸಾಧ್ಯವೇ ಆಗುವುದಿಲ್ಲ ಎಂದು ಹೇಳಿದರೂ ಹೇಳಬಹುದು. ಆದರೆ ಯಾರಿಗೆ ಈ ಸೇವಾ ಮನೋಭಾವನೆ ಇರುತ್ತದೆಯೋ ಅಂಥವರು ಈ ಚುನಾವಣೆಯಲ್ಲಿ ನಿಂತು ಗೆಲ್ಲಬೇಕಾಗಿದ್ದರೆ ಈ ಮಲ್ಟಿ ಮೆಂಬರ್ಸ್ ಕಾನ್ಸ್ಟಿಟ್ಯುಯೆನ್ಸಿಯೇ ಸಾಧುವಾದದ್ದು ಎನ್ನುವುದು ನನ್ನ ಅನುಭವ ಸಿದ್ಧವಾದಂಥ ವಿಷಯ. ಈ ಡೆಮಾಕ್ರಸಿಯ ಆಡಳಿತದಲ್ಲಿ ಬಡವರಾಗಿರತಕ್ಕವರಿಗೆ, ಬಡವರ ಸೇವೆ ಮಾಡತಕ್ಕವರಿಗೆ, ನಿಷ್ಕಾಮದಿಂದ ಕೆಲಸ ಮಾಡತಕ್ಕವರಿಗೆ ಒಂದು ಅವಕಾಶ ಸಿಕ್ಕಬೇಕೆಂದರೆ ಈ ಸಿಂಗಲ್ ಮೆಂಬರ್ಸ್ ಕಾನ್ಸ್ಟಿಟ್ಯುಯೆನ್ಸಿಯಲ್ಲಿ ಅವಕಾಶವೇ ಇರುವುದಿಲ್ಲ. ಇದು ಅನುಭವಸಿದ್ಧವಾದ ಮಾತು.

Sri M. LINGANNA.—May I know the number in each ward in the Corporation area ?

Sri P. R. RAMAIYA.—The population of Bangalore Corporation is from 7½ to 8 lakhs. There are 50 wards. There are some wards the population of which is 5,000; there are some wards the population of which is 50,000; there are some other wards the population of which is 15,000. So, the population is not uniform.

ಇದರೊಳಗೆ ಸಾಮಾನ್ಯವಾಗಿ, ನಾನು informal ಆಗಿ ಹೇಳಬೇಕಾದರೆ, ಕಳೆದ ಚುನಾವಣೆಯಲ್ಲಿ ಒಂದೊಂದು ವಾರ್ಡಿನಲ್ಲೂ ಕೂಡ ಎಷ್ಟು ಹಣವನ್ನು ಉಮೇದುವಾರರು ಖರ್ಚು ಮಾಡಿದ್ದಾರೆನ್ನುವುದು ಜನಗಳಿಗೆಲ್ಲ ಗೊತ್ತಿರುವ ವಿಚಾರ. ಒಂದು ವಿಷಯವನ್ನು ನಾನು ಈ ಸಭೆಯಲ್ಲಿ ಸೂಚಿಸುತ್ತೇನೆ. ಈ ಚುನಾವಣೆಗಳಲ್ಲಿ ಬಹಳ ಹಣ ವ್ಯಯವಾಗುತ್ತದೆ. ಸಾಮಾನ್ಯವಾಗಿ ಇರತಕ್ಕವರಿಗೆ, ಬಡವರಿಗೆ, ಬರೀ ಸೇವೆ ಮಾಡಬೇಕು ಎಂದು ಇರತಕ್ಕವರಿಗೆ, ಈ ಚುನಾವಣೆಗಳಲ್ಲಿ ಬರುವುದಕ್ಕೆ ಅವಕಾಶವಿಲ್ಲ. Parliamentನಲ್ಲಿ single-member constituency ಇದೆ, Assemblyಗಳಲ್ಲಿಯೂ single member constituency ಇದೆ. ಇನ್ನು ಮುಂದೆ ನಮ್ಮ ಅನುಭವದಿಂದ ಇವುಗಳಲ್ಲಿ ಕೂಡ multi-member constituency ಮಾಡಬೇಕಾದಂಥ ಅಗತ್ಯ ಬರಬಹುದೆಂಬುದಾಗಿ ನಾನು ಊಹಿಸುತ್ತೇನೆ. ಯಾಕೆ ಎಂದರೆ England ಸ್ಥಿತಿಯೇ ಬೇರೆ, ನಮ್ಮ ದೇಶದ ಸ್ಥಿತಿಯೇ ಬೇರೆ. England ನಲ್ಲಿ single-member constituency ಇದೆ. ಇಲ್ಲಿಯೂ ಅದೇ ತತ್ವವನ್ನು ಅನುಸರಣೆ ಮಾಡತಕ್ಕದ್ದಕ್ಕೆ ನಮ್ಮ ದೇಶದಲ್ಲಿ ಜನ ಬಹಳ ಹಿಂದುಳಿದಿರುವುದರಿಂದ, ನಮ್ಮ ಜನ ಬಡವರಾಗಿರುವುದರಿಂದ, ಸಾಮಾನ್ಯವಾಗಿ ಶಿಕ್ಷಣ ಹೆಚ್ಚಾಗಿ ಅಗತ್ಯವಾಗಿರುವುದರಿಂದ ಆದಷ್ಟು ಮಟ್ಟಿಗೆ ಬಹು ಸದಸ್ಯತ್ವದ ಪದ್ಧತಿಯನ್ನು ಜಾರಿಗೆ ತಂದರೆ ಅನುಕೂಲವಾಗುತ್ತದೆ. ಈ ಜಿಲ್ಲಾ ಬೋರ್ಡ್ ಚುನಾವಣೆಗಳ ವಿಷಯವಾಗಿ ಬೇಕಾದಷ್ಟು ಚರ್ಚೆಯಾಗಿದೆ. ಒಬ್ಬೊಬ್ಬರಿಗೆ ಒಂದೊಂದು ರೀತಿಯ ಅನುಭವವಿದೆ. ಕೋಮುವಾರು ಭಾವನೆ ಇರತಕ್ಕವರಿಗೆ ಬಂದುಬಿಡುತ್ತದೆ ಎಂದು ಹೇಳುತ್ತಾರೆ. ಇದಕ್ಕಾಗಿ ಹೆಚ್ಚು ಸ್ಥಾನಗಳಿದ್ದರೆ ಎಲ್ಲರಿಗೂ ಸ್ವಲ್ಪ ಅವಕಾಶವಿರುತ್ತದೆ. ಸಾಮಾನ್ಯವಾಗಿ ನಮ್ಮ ದೇಶದಲ್ಲಿ ಈಗಿನ ಸ್ಥಿತಿಯಲ್ಲಿ ಈ ಸಭೆಯ ಸದಸ್ಯರಾರಿಗೂ ಜಾತಿ ಭಾವನೆ ಇಲ್ಲದೆ ಇದ್ದರೂ ಕೂಡ ಓಟುದಾರರಲ್ಲಿ ಈ ಭಾವನೆ ಇರುವುದರಿಂದ ಬಹುಸದಸ್ಯತ್ವ ಪದ್ಧತಿ ಮೇಲೆಂದು ನನ್ನ ಅಭಿಪ್ರಾಯ. ಅದರಲ್ಲೂ ಡಿಸ್ಟ್ರಿಕ್ಟ್ ಬೋರ್ಡುಗಳು, ಮುನಿಸಿಪಾಲಿಟಿಗಳು ಮತ್ತು ಕಾರ್ಪೊರೇಷನ್‌ಗಳಲ್ಲಿ ಆದಷ್ಟು ಬೇಗ ಬಹುಸದಸ್ಯತ್ವ ಪದ್ಧತಿ ಬರಬೇಕು. ಯಾರಿಗೆ ನಿಜವಾದ ಸೇವಾ ಮನೋಭಾವನೆಯಿದೆಯೋ ಯಾರಿಗೆ ಸ್ವಲ್ಪ ದಕ್ಷತೆ ಇದೆಯೋ ಅಂಥವರು ಬರಬೇಕಾದರೆ, ದುಡ್ಡಿನ ಪ್ರಾಬಲ್ಯ ಕಡಿಮೆಯಾಗಬೇಕಾದರೆ ಮತ್ತು ಜಾತಿ ಪ್ರಾಬಲ್ಯ ಕಡಿಮೆಯಾಗಬೇಕಾದರೆ ಬಹುಸದಸ್ಯತ್ವ ಪದ್ಧತಿಯ ಮೇಲೆ ಚುನಾವಣೆಗಳನ್ನು ಮಾಡಬೇಕೆಂದು ಸರ್ಕಾರದವರು ತುಂಬ ಯೋಚನೆ ಮಾಡಿ ದೂರ ದೃಷ್ಟಿಯಿಂದ ತಂದಿದ್ದಾರೆ. ಇದ ನಮ್ಮ ದೇಶದ ಸ್ಥಿತಿಗತಿಗಳಿಗನುಗುಣವಾಗಿದೆ. ಇದನ್ನು ಸಭೆಯವರು ಒಪ್ಪಬೇಕು ಎಂದು ಪ್ರಾರ್ಥಿಸುತ್ತೇನೆ.

ಶ್ರೀ ಎಂ. ಮಾದಯ್ಯ (ನಂಜನಗೂಡು—ಅನುಸೂಚಿತ ಜಾತಿಗಳು).—ಸ್ವಾಮಿ, ಶ್ರೀ ಎಂ. ಲಿಂಗಣ್ಣನವರು clause ಐದಕ್ಕೆ ಒಂದು amendment ತಂದಿರುತ್ತಾರೆ. ಅದು ಈ ರೀತಿ ಇದೆ. "The number of seats reserved for the Scheduled Castes in each district". ಅದನ್ನು ಗೊತ್ತುಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರ ಕೊಡಿ ಎಂದು ಹೇಳುತ್ತಾರೆ. ಅವರು original Actನ 52ನೆ ಸೆಕ್ಷನ್ ನೋಡಿದಹಾಗಿಲ್ಲ. Section 52 says:

> "Seats shall be reserved in a District Board for the Scheduled Castes."

ಆದುದರಿಂದ ಈವಾಗ ಅವರು ಸರ್ಕಾರಕ್ಕೆ ಅಧಿಕಾರ ಕೊಡಿ ಎಂದು ತಮ್ಮ ತಿದ್ದುಪಡಿಯಲ್ಲಿ ಸೂಚಿಸಿರುವುದು ಅನಗತ್ಯ ಮತ್ತು ಅನಾವಶ್ಯಕ.

> "(2) The number of such seats shall bear, as nearly as may be, the same proportion to the total number of seats in the District Board as the population of the Scheduled Castes in the district bears to the total population of the district."

ಎಂದು ಹೇಳಿಬಿಟ್ಟಿದೆ. ಅವರು ಅದನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲವೋ ಏನೋ ಎಂದು ನನಗೆ ಅನುಮಾನವಾಗುತ್ತದೆ. Act ನಲ್ಲಿ 52ನೆ ಸೆಕ್ಷನ್‌ನಲ್ಲಿ Scheduled Castes ನವರಿಗೆ seats are reserved ಎಂದು ಇದೆ. ಆದರೆ ಇವರ proposed amendmentನಲ್ಲಿ ಸರ್ಕಾರಕ್ಕೆ ಅಧಿಕಾರ ಕೊಡಿ ಎಂದು ಹೇಳುತ್ತಿದ್ದಾರೆ. ಕ್ಷೇತ್ರವನ್ನೇ reserve ಮಾಡಿ ಎಂದು ಹೇಳುತಿದ್ದಾರೆ. Double member constituency reserve ಮಾಡುವುದಕ್ಕೆ ಸರ್ಕಾರದವರಿಗೆ ಅಧಿಕಾರ ಕೊಡಿ ಎಂದು ಕೇಳುತ್ತಿದ್ದಾರೆ. ಇದಕ್ಕೆ ಈ ಮಾನ್ಯ ಸಭೆ ಒಪ್ಪಿಗೆ ಕೊಡುತ್ತದೆಯೇ ಎಂದು ಅನುಮಾನಾಸ್ಪದವಾಗಿದೆ.

(ಶ್ರೀ ಎಂ. ಮಾದಯ್ಯ.)

Multi-member constituency ಇರಬೇಕೇ single member constituency ಇರಬೇಕೇ ಎಂಬ ವಿಷಯದಮೇಲೆ ಚರ್ಚೆಯಾಗಿದೆ. ಕೆಲವರು ಹೋಬಳಿಗೆ ಒಂದು constituencyಯಂತೆ ಮಾಡಬೇಕು ಎಂದು ಹೇಳಿದರು. ಹೀಗೆ ಒಂದು ಹೋಬಳಿಯಿಂದ ಒಬ್ಬ ಪ್ರತಿನಿಧಿ ಡಿಸ್ಟ್ರಿಕ್ಟ್ ಬೋರ್ಡಿಗೆ ಹೋದರೆ ಏನೊಂದು ಸಹಾಯ, ಅನುಕೂಲವಾಗಬೇಕಾದರೂ ತನ್ನ ಹೋಬಳಿಯ ವಿಚಾರ ಮಾತ್ರ ಮನಸ್ಸಿನಲ್ಲಿಟ್ಟುಕೊಂಡು ಕೇಳುತ್ತಾನೆ. ಇಡೀ ತಾಲ್ಲೂಕನ್ನೇ ಒಂದು ಕ್ಷೇತ್ರವಾಗಿ ಮಾಡಿದರೆ ಆ ತಾಲ್ಲೂಕಿನ ಇಬ್ಬರೂ ಮೂವರ ಸದಸ್ಯರೂ ಸಹ ತಾಲ್ಲೂಕಿನ ಹಿತದೃಷ್ಟಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಜಿಲ್ಲಾಬೋರ್ಡಿನಲ್ಲಿ ಕೆಲಸ ಮಾಡುತ್ತಾರೆ. ಈ ದೃಷ್ಟಿಯಿಂದ ತೆಗೆದುಕೊಂಡರೆ multi-member constituency ಮಾಡತಕ್ಕದ್ದು ಕ್ಷೇಮ, single member constituency ಮಾಡುವುದರಿಂದ ತೊಂದರೆಗಳಿವೆ ಎಂದು ಹೇಳಿ ಈ ತಿದ್ದುಪಡಿಯನ್ನು ವಿರೋಧಿಸುತ್ತೇನೆ.

*ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಸ್ವಾಮಿ, ಈ ಬಿಲ್ಲಿನ 5ನೆ ಕ್ಲಾಜಿಗೆ ಈಗ ಮೂರುಕಡೆಯಿಂದ ತಿದ್ದುಪಡಿಗಳು ಬಂದಿವೆ. ಶ್ರೀ ಬಿ. ಹುಚ್ಚೇಗೌಡರು ತಂದಿರತಕ್ಕದ್ದು ಒಂದು, ಶ್ರೀ ಲಿಂಗಣ್ಣನವರು ತಂದಿರತಕ್ಕದ್ದು ಒಂದು ಮತ್ತು ಈ ಮಸೂದೆಯನ್ನು ಪ್ರತಿಪಾದನೆ ಮಾಡಿರತಕ್ಕ ಸರ್ಕಾರದವರಿಂದ ಮಂತ್ರಿಗಳ ಕೂಡ ತಂದಿರತಕ್ಕ ತಿದ್ದುಪಡಿ ಒಂದು, ಹೀಗೆ ಮೂರು ತಿದ್ದುಪಡಿಗಳಿವೆ. ಮಂತ್ರಿಗಳು ತಿದ್ದುಪಡಿಯನ್ನು ತರುವಾಗ ಇದರಲ್ಲಿ ಒಂದು ಭಾಗವನ್ನು ಮಾತ್ರ ಒಪ್ಪಿಕೊಂಡಿದ್ದಾರೆ. "Not exceeding three" ಎಂಬ ಭಾಗಕ್ಕೆ ಸಂಬಂಧಪಟ್ಟ ತಿದ್ದುಪಡಿಯನ್ನು ಮಾತ್ರ ಒಪ್ಪಿಕೊಂಡು ಇದರಲ್ಲಿ ಇನ್ನೊಂದು ಭಾಗವನ್ನು ಒಪ್ಪಿಕೊಳ್ಳುವುದಕ್ಕೆ ಸಿದ್ಧರಾಗಿಲ್ಲವೆಂದು ಹೇಳಿದ್ದಾರೆ. ನಾವು ಹೇಳಿದ ಮಾತ್ರಕ್ಕೆ ಒಪ್ಪಿಕೊಳ್ಳಬೇಕು, ನಾವು ಹೇಳಿದ್ದನ್ನೆಲ್ಲ ನೀವು ಕೇಳಬೇಕು ಎಂದು ಯಾವಾಗಲೂ ಸರ್ಕಾರಕ್ಕೆ ಹೇಳುವುದಿಲ್ಲ. ಆದರೆ ನ್ಯಾಯವಾಗಿರುವುದನ್ನು ಒಪ್ಪಿಕೊಳ್ಳುವುದರಲ್ಲಿ ಯಾವ ತಪ್ಪು ಇದೆ, ನ್ಯಾಯವಾದದ್ದನ್ನು ಹೇಳುವುದಕ್ಕೆ ಅಡ್ಡಿ ಏನು ಇದೆ ಎನ್ನುವುದನ್ನು ಮಾತ್ರ ನಾನು ಪ್ರಶ್ನೆ ಮಾಡುತ್ತೇನೆ.

ಈ ಸಂದರ್ಭದಲ್ಲಿ multi-member constituency ಇರುವುದರಿಂದ ಬಹಳ ಅನುಕೂಲವಿದೆ ಎಂದು ಕೆಲವರು ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಅನೇಕ ಮಹನೀಯರು single member constituency ಇರುವುದು ಉಚಿತವೆಂದು ಅದಕ್ಕೆ ಕೆಲವು ಕಾರಣಗಳನ್ನು ಸಹ ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಶ್ರೀ ಪಿ. ಆರ್. ರಾಮಯ್ಯನವರು ಬೆಂಗಳೂರು ಕಾರ್ಪೊರೇಷನ್ ವಿಷಯ ಉದಾಹರಣೆ ಕೊಟ್ಟರು. ಕಾರ್ಪೊರೇಷನ್‌ನಲ್ಲಿ ಸುಮಾರು 700-800 ಮತದಾರರಿರುವ ಸಂದರ್ಭಗಳಲ್ಲಿ ಓಟುಗಳನ್ನು ಕೊಂಡುಕೊಳ್ಳುವುದು ಇತ್ಯಾದಿ ಕಾರ್ಯಗಳು ನಡೆಯುತ್ತವೆ. ಆದರೆ ಅದೇ ಸಂದರ್ಭದಲ್ಲಿ 5,000-10,000 ಹೀಗೆ ಮತದಾರರಿರುವ ಮಲ್ಲೇಶ್ವರ ಮುಂತಾದ ಚುನಾವಣಾಕ್ಷೇತ್ರಗಳಲ್ಲಿ ಓಟುಗಳನ್ನು ಯಾರೂ ಕೊಂಡುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಇಂಥ ಕಡೆ ಯಾರು ಪ್ರಬಲರಾಗಿರುತ್ತಾರೋ ಅವರೇ ಬರುತ್ತಾರೆನ್ನುವುದನ್ನು ಎಲ್ಲರೂ ತಿಳಿದುಕೊಳ್ಳಬೇಕು.

ಇನ್ನೊಂದು ವಿಷಯ: ತುಮಕೂರು ಡಿಸ್ಟ್ರಿಕ್ಟನ್ನು ಉದಾಹರಣೆಗೆ ತೆಗೆದುಕೊಳ್ಳೋಣ. ಒಂದು ಕ್ಷೇತ್ರಕ್ಕೆ 6 ಸ್ಥಾನಗಳಿದ್ದರೆ, ಮೂರು-ನಾಲ್ಕು ಗುಂಪುಗಳವರು ಎಲ್ಲ ಸ್ಥಾನಗಳಿಗೂ ಸ್ಪರ್ಧಿಸಿದರೆ ಒಟ್ಟು ಎಷ್ಟು ಜನರು ಉಮೇದುವಾರರಾಗುತ್ತಾರೆ? ಕಳೆದ ಗ್ರಾಮಪಂಚಾಯಿತಿಗಳ ಚುನಾವಣೆಯಲ್ಲಿ ಈ ರೀತಿ ಬಹುಸಂಖ್ಯಾತ ಸದಸ್ಯ ಸ್ಥಾನಗಳಿರಬೇಕೆಂದು ಹೇಳಿ ಆ ರೀತಿ ಮಾಡಿದ್ದರಿಂದ ಮತದಾರರಿಗೆ ಗುರ್ತು ಹಾಕುವುದಕ್ಕೆ ತೊಂದರೆಯಾದುದು ನಮ್ಮ ಅನುಭವಕ್ಕೆ ಬಂದಿದೆ. ಕೆಲವು ಕಡೆ ಕಾಗದಗಳ ಮೇಲೆ ಗುರ್ತು ಹಾಕುವುದಕ್ಕೆ ಬದಲಾಗಿ ಗೋಡೆಗಳ ಮೇಲೆ ಗುರ್ತು ಹಾಕಿರುವುದನ್ನು ಸಹ ನೋಡಿದ್ದೇವೆ. ನಮ್ಮ ಜನಗಳಿಗೆ ವಿದ್ಯಾಭ್ಯಾಸವಿಲ್ಲ. ಯಾವ ಭಾಷೆಯಲ್ಲೂ ಸಹ ಓದುವುದಕ್ಕೆ ಬರದೆ ಇರುವವರು ಯಾರಿಗೆ ಓಟು ಮಾಡಬೇಕು ಎಂದು ಹೇಗೆ ತಿಳಿದುಕೊಳ್ಳಬಲ್ಲರು? ಈ ಗುರ್ತು ಮಾಡುವುದನ್ನು ತಪ್ಪಿಸಲು ಬೇರೆ ಬೇರೆ ballot boxes provide ಮಾಡುತ್ತೀರಾ ಎಂಬ ಪ್ರಶ್ನೆ ಬರುತ್ತದೆ. 6 ಜನಗಳಿಗೂ ಒಂದೇ ಗುರ್ತಿನ ಪೆಟ್ಟಿಗೆಗಳನ್ನು ಇಡಬೇಕು. ಈ ರೀತಿ multi-member constituency ಇದ್ದರೆ ballot box ಯಾವ ರೀತಿ ಕೊಡಬೇಕೆಂಬುದನ್ನು ಯೋಚನೆ ಮಾಡಿಲ್ಲವೆಂದು ಕಾಣುತ್ತದೆ. ಈ multi-member constituency ಇದ್ದರೆ ಓಟುದಾರರಿಗೆ ತೊಂದರೆ ಇರುತ್ತದೆ ಎಂಬ ಕಾರಣದಿಂದಲೇ ಅಸೆಂಬ್ಲಿಯಲ್ಲಾಗಲಿ ಪಾರ್ಲಿಮೆಂಟಿನಲ್ಲಾಗಲಿ single member constituency ಇರಬೇಕು, ಎಂದು ಒಂದೊಂದು ballot box ಒಬ್ಬೊಬ್ಬ ಮೆಂಬರಿಗೆ ಕೊಡುವ ಪದ್ಧತಿಯನ್ನು ಜಾರಿಗೆ ತಂದರು. ಇದನ್ನೆಲ್ಲಾ ಯಾಕೆ ಹೇಳಿದೆನೆಂದರೆ ಇದು ಸಣ್ಣ ಚುನಾವಣೆಯಾಗುವುದಿಲ್ಲ. ಒಂದು ತಾಲ್ಲೂಕಿಗೆ ಮೂರು ಜನವೆಂದರೆ ಬಹಳ ತೊಂದರೆಯಾಗುತ್ತದೆ.

ಇವೊತ್ತು ಒತ್ತಾಯಪೂರ್ವಕವಾಗಿ ಸರ್ಕಾರದವರಿಗೆ ನಾನು ಹೇಳುತ್ತಿದ್ದೇನೆ. ಯಾಕೆಂದರೆ ಇದನ್ನು ಒಪ್ಪಿಕೊಳ್ಳದಿದ್ದರೆ ಓಟು ಮಾಡುವವರಿಗೆ ಅನಾನುಕೂಲವಾಗುತ್ತದೆ. ಇದರಲ್ಲಿ single member constituency ಮಾಡಲು ತಿದ್ದುಪಡಿಯನ್ನು ತಂದರೆ ಬಹಳ ಒಳ್ಳೆಯದು. ಎಲ್ಲರಿಗೂ ಇದರಿಂದ ಹಿತವಿದೆ ಎನ್ನುವುದನ್ನು ನಾನು ಹೇಳುತ್ತೇನೆ.

ಮತ್ತೆ ಒಬ್ಬ ಸದಸ್ಯರು ಒಂದು ತಾಲ್ಲೂಕಿನಲ್ಲಿ ಮೂರು ಜನ ಸದಸ್ಯರು ಒಟ್ಟಿಗೆ ಬಂದರೆ ಆ ತಾಲ್ಲೂಕಿನ ಹಿತದೃಷ್ಟಿಯಿಂದ ಕೆಲಸ ಮಾಡುತ್ತಾರೆ ಎಂದು ಹೇಳಿದರು. ನಾನು ನೋಡಿರುವುದರಲ್ಲಿ ಅನೇಕ ವೇಳೆ ಆಯಾ ಸದಸ್ಯರು ತಮ್ಮ ಹೋಬಳಿ, ತಮ್ಮ ಗ್ರಾಮ ಮೊದಲು ನೋಡಿಕೊಂಡು ಅನಂತರ ಬೇರೆ ಗ್ರಾಮ ಅಥವಾ ಬೇರೆ ವಿಷಯಗಳ ಕಡೆಗೆ ಗಮನ ಕೊಡುವ ಮನೋಧರ್ಮ ಅವರಲ್ಲಿ ನೆಲಸಿರುತ್ತದೆ. ತಾಲ್ಲೂಕಿನಲ್ಲಿ ಆರಿಸಿ ಬಂದವರು ತಾಲ್ಲೂಕಿನಲ್ಲೆಲ್ಲ ಓಡಾಡಿ ಕೆಲಸ ಮಾಡುತ್ತಾರೆ, ಹಾಗೆ ಮಾಡುವುದು ಸಾಧ್ಯವಿದೆ ಎಂದು ನಾನು ಭಾವಿಸುವುದಿಲ್ಲ.

ಈಗ ತಿದ್ದುಪಡಿಯನ್ನು ತಂದಿರುವಂತೆ single member constituency ಇರಬೇಕು. 30 ಸಾವಿರ ಪ್ರಜಾಸಂಖ್ಯೆಗೆ ಒಂದು constituency ಇರಬೇಕು. ಇದರ ಆಧಾರದ ಮೇಲೆ ಚುನಾವಣೆಯನ್ನು ನಡೆಸುವುದು ಸೂಕ್ತ ಎಂದು ಹೇಳಿ ಈ ತಿದ್ದುಪಡಿಯನ್ನು ಸರ್ಕಾರದವರು ಒಪ್ಪಿಕೊಳ್ಳಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ.—ಸ್ವಾಮಿ, ಹಿಂದಿನ ನನ್ನ ತಿದ್ದುಪಡಿಯನ್ನು ಸಭೆ ಒಪ್ಪಿಕೊಂಡಿದೆ. ಶ್ರೀ ಹುಚ್ಚೇಗೌಡರ ಮತ್ತು ಶ್ರೀ ಲಿಂಗಣ್ಣನವರ ತಿದ್ದುಪಡಿಗಳು ಹಿಂದೆ ಒಪ್ಪಿಕೊಂಡ ತಿದ್ದುಪಡಿಗೆ ವಿರೋಧವಾಗಿದೆ ಎಂಬುದನ್ನು ಅವರಿಬ್ಬರೂ ಮರೆತಿದ್ದಾರೆ. ಈಗ ತಿದ್ದುಪಡಿಯಾಗಿರುವಂತೆ 50ನೆ ಸೆಕ್ಷನ್ ಈ ರೀತಿ ಓದುತ್ತದೆ:

> "Every District Board shall consist of members directly elected by the voters in each district in accordance with the provisions of this Act and the rules made thereunder.
>
> The Total number of seats in a District Board specified in the first column of the fourth schedule shall be the number specified in the second column thereof opposite to that district."

Total number of members ಯಾವ ಯಾವ ಡಿಸ್ಟ್ರಿಕ್ಟಿಗೆ ಎಷ್ಟು ಎಂಬುದನ್ನು ಇದರಲ್ಲಿ ಕೊಟ್ಟಿರುವ schedule ನಲ್ಲಿ ವಿಧಾಯಕ ಮಾಡಲಾಗಿದೆ. ಶ್ರೀ ಹುಚ್ಚೇಗೌಡರ ತಿದ್ದುಪಡಿ ಈ ಷೆಡ್ಯೂಲಿಗೆ ವಿರೋಧವಾಗಿದೆ, 30 ಸಾವಿರ ಜನಗಳಿಗೆ ಒಂದು ಚುನಾವಣಾಕ್ಷೇತ್ರ ಇರಬೇಕು ಎಂದು ಹೇಳಿ ನಮೂದು ಮಾಡಿದ್ದಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಈ ಷೆಡ್ಯೂಲಿನಲ್ಲಿರತಕ್ಕ upper limitನ್ನು ಒಪ್ಪಿಕೊಂಡರೆ ಅದಕ್ಕೂ ಇದಕ್ಕೂ ಹೇಗೆ ಸರಿಹೋಗುತ್ತದೆಂದು ಹೇಳಿ ಶ್ರೀ ಹುಚ್ಚೇಗೌಡರು ತಿಳಿಸಲಿಲ್ಲ. ಹೆಚ್ಚು-ಕಡಿಮೆ ಆಗಿಯ್ಯೂ ಆಗುತ್ತದೆ. 30,000 ಜನಸಂಖ್ಯೆಗೆ ಒಂದು ಚುನಾವಣಾಕ್ಷೇತ್ರವಾದರೆ ಈ ಷೆಡ್ಯೂಲಿನಲ್ಲಿ ವಿಧಾಯಕವಾರುವ ಸಂಖ್ಯೆಗೆ ಜಾಸ್ತಿಯಾದರೂ ಆಗಬಹುದು ಕಡಿಮೆಯೂದರೂ ಆಗಬಹುದು.

ಶ್ರೀ ಜೆ. ಮಹಮ್ಮದ್ ಇಮಾಂ.—ಆಗಲಿ!

ಶ್ರೀ ಕಡಿದಾಳ್ ಮಂಜಪ್ಪ.—ಆದ್ದರಿಂದ ಈಗತಾನೆ ತಾವು ಒಪ್ಪಿಕೊಂಡ ತಿದ್ದುಪಡಿಗೆ ಶ್ರೀ ಹುಚ್ಚೇಗೌಡರ ತಿದ್ದುಪಡಿ ವಿರುದ್ಧವಾಗಿದೆಯೆಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ. The words "at the rate of one member for every 30,000 of the rural population of each constituency" shall be substituted. Each constituency ಎಂದು ಹೇಳಿ ಅವರು definite ಆಗಿ ಹೇಳಿದ್ದಾರೆ, 5,000 ಹೆಚ್ಚುಕಡಿಮೆ ಮಾಡಬಹುದೆಂದು ಅವರು ಹೇಳಿಲ್ಲ.

ಆಮೇಲೆ ಶ್ರೀ ಲಿಂಗಣ್ಣನವರ ತಿದ್ದುಪಡಿಯ ವಿಚಾರ ಹೇಳುವುದಾದರೆ, ಅವರು ಪ್ರತಿಯೊಂದು ಜಿಲ್ಲೆಯಲ್ಲೂ ಒಂದು ಪಾರ್ಲಿಮೆಂಟನ್ನು ಸ್ಥಾಪನೆ ಮಾಡಬೇಕೆಂದು ಉದ್ದೇಶವುಳ್ಳವರಾಗಿದ್ದಾರೆಂದು ಕಾಣುತ್ತದೆ. ಒಂದು ಹೋಬಳಿಗೆ ಒಬ್ಬೊಬ್ಬರನ್ನು ಮತ್ತು ಎಲ್ಲೆಲ್ಲಿ ನಿಮ್ನತರಗತಿಯವರಿದ್ದಾರೋ ಅಲ್ಲಿ ಎರಡೆರಡು ಹೋಬಳಿಗಳನ್ನು ಸೇರಿಸಿ ಇಬ್ಬರನ್ನು ತೆಗೆದುಕೊಳ್ಳಬೇಕೆಂದು ಅವರು ಹೇಳಿದರು. ಒಂದೊಂದು ತಾಲ್ಲೂಕಿನಲ್ಲೂ ಸಾಮಾನ್ಯವಾಗಿ 10-11 ಹೋಬಳಿಗಳಿರುತ್ತವೆ.

ಶ್ರೀ ಎಂ. ಲಿಂಗಣ್ಣ.—ಆರು ಹೋಬಳಿಗಿಂತ ಹೆಚ್ಚಿಗೆ ಇರುವ ಒಂದು ತಾಲ್ಲೂಕನ್ನಾದರೂ ಉದಾಹರಣೆಯಾಗಿ ಹೇಳಿ, ನೋಡೋಣ.

ಶ್ರೀ ಕಡಿದಾಳ್ ಮಂಜಪ್ಪ.—ಆರಕ್ಕಿಂತಲೂ ಎಲ್ಲೂ ಜಾಸ್ತಿ ಇಲ್ಲವೇ!

ಶ್ರೀ ಎಂ. ಲಿಂಗಣ್ಣ.—ಎಲ್ಲಿದೆ!

ಶ್ರೀ ಕಡಿದಾಳ್ ಮಂಜಪ್ಪ.—10-11 ಎಂದು ಹೇಳಿದ್ದು ಸ್ವಲ್ಪ ಜಾಸ್ತಿಯಾಗಿರಬಹುದು' ಆದರೆ, ಆರಕ್ಕಿಂತಲೂ ಜಾಸ್ತಿಯಿರುವುದಿದೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಚಿತ್ರದುರ್ಗದ ವಿಚಾರ ಹೇಳುವುದಾದರೆ, ಅಲ್ಲಿ ಒಂದು ತಾಲ್ಲೂಕಿನಲ್ಲಿ ಎರಡು, ಒಂದು ತಾಲ್ಲೂಕಿನಲ್ಲಿ ಮೂರು, ಉಳಿದ ತಾಲ್ಲೂಕುಗಳಲ್ಲೆಲ್ಲಾ ನಾಲ್ಕು ಮಾತ್ರ ಇವೆ.

ಶ್ರೀ ಕಡಿದಾಳ್ ಮಂಜಪ್ಪ.—ಆರೇ ಆದರೂ ಒಂದೊಂದು ಜಿಲ್ಲೆಯಲ್ಲೂ ಎಷ್ಟೋ ತಾಲ್ಲೂಕುಗಳಿವೆ. ಅದರಮೇಲೆ......

Sri M. LINGANNA.—Chamarajanagar Taluk in Mysore carries six hoblies and the rest five, four, one and two. The total number of hoblies added together will not be more and as such there is necessity for creating a parliament there and the number will be within the Schedule provided for under the old Act.

ಶ್ರೀ ಕಡಿದಾಳ್ ಮಂಜಪ್ಪ.—ಅವರೇ ಹೇಳಿದಹಾಗೆ ಆರೇ ಇದ್ದರೂಕೂಡ ಪ್ರತಿಯೊಂದು ಜಿಲ್ಲೆಯಲ್ಲೂ 9-10 ತಾಲ್ಲೂಕುಗಳಿವೆ. ಅಲ್ಲಿಗೂ 54 ಅಥವಾ 60 ಹೋಬಳಿಗಳಾಗುತ್ತವೆ. ಅಂತೂ unwieldy body ಎಂದು ಹೇಳಬಹುದು.

ಆಮೇಲೆ ಓಟಿನ ವಿಧಾನದಲ್ಲಿ ಬಹಳ ಮಂದಿ ಉಮೇದುವಾರರು ತೊಡಕುಗಳು ಉಂಟಾಗುತ್ತವೆಂದು ಹೇಳಿದ್ದಾರೆ. ಮಲ್ಟಿ ಮೆಂಬರು ಕಾನ್‌ಸ್ಟಿಟ್ಯೂಯನ್ಸಿಯಿದ್ದರೂ ಬಹಳ ಮಂದಿ ಉಮೇದುವಾರರಾಗಿ ನಿಲ್ಲುವುದಕ್ಕೆ ಅವಕಾಶವಿದೆ; ಸಿಂಗಲ್ ಮೆಂಬರು ಕಾನ್‌ಸ್ಟಿಟ್ಯೂಯನ್ಸಿಯಿದ್ದರೂ ಅಷ್ಟೇ ಹೆಚ್ಚಿಗೆ ಮೆಂಬರುಗಳು ಇರಬಹುದು. ಎಲ್ಲೂಕೂಡ, ಯಾವ ಕಾನ್‌ಸ್ಟಿಟ್ಯೂಯನ್ಸಿಯೇ ಆದರೂ ಕೂಡ ಮೂವರು ನಾಲ್ವರಿಗಿಂತ ಹೆಚ್ಚಿಗೆ ಉಮೇದುವಾರರು ನಿಲ್ಲಕೂಡದೆಂದು ವಿಧಾಯಕ ಮಾಡಿಲ್ಲ. ಒಬ್ಬೊಬ್ಬರಿಗೂ ಒಂದೊಂದು ಚಿಹ್ನೆ ಕೊಡಲೇಬೇಕಾಗುತ್ತದೆ. ಆದ್ದರಿಂದ ಮಲ್ಟಿ ಮೆಂಬರು ಕಾನ್‌ಸ್ಟಿಟ್ಯೂಯನ್ಸಿಯಲ್ಲಿ ಯಾವ ತೊಡಕುಂಟಾಗುತ್ತದೋ ಅದೇ ತೊಡಕು ಸಿಂಗಲ್ ಮೆಂಬರು ಕಾನ್‌ಸ್ಟಿಟ್ಯೂಯನ್ಸಿಯಲ್ಲೂ ಉಂಟಾಗುತ್ತದೆಂದು ನನ್ನ ಅಭಿಪ್ರಾಯ.

ಆಮೇಲೆ ಚುನಾವಣೆ ನಡೆಯುವಾಗ ಮತದಾರರು ಅನೇಕ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಓಟು ಕೊಡುತ್ತಾರೆ. ವ್ಯಕ್ತಿಯ ಪ್ರಭಾವವೇ ಇರಬಹುದು, ಅಥವಾ ತತ್ವದ ಪ್ರಭಾವವೇ ಇರಬಹುದು. ಚುನಾವಣೆಯ ಕ್ಷೇತ್ರ ವಿಶಾಲವಾದರೆ ವ್ಯಕ್ತಿಯ ಪ್ರಭಾವಕ್ಕಿಂತ ತತ್ವದ ಪ್ರಭಾವ ಮತದಾರರ ಮೇಲೆ ಬೀಳುತ್ತದೆ. ಈ ಕಾರಣದಿಂದ ತತ್ವದ ಪ್ರಕಾರ ಮತ್ತು ಧ್ಯೇಯ ಧೋರಣೆಗಳ ಮೇಲೆ ಚುನಾವಣೆಯಲ್ಲಿ ಸ್ಪರ್ಧಿಸುವವರಿಗೆ ಕ್ಷೇತ್ರ ವಿಶಾಲವಾದರೆ ಒಳ್ಳೆಯದು.

ಶ್ರೀ ಎಸ್. ಗೋಪಾಲಗೌಡ.—ಯಾವ ತತ್ವ ತಮ್ಮದು!

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ತತ್ವ ನಮ್ಮ ತತ್ವ ಎರಡೂ ಒಂದೇ. ಹೆಚ್ಚು ವ್ಯತ್ಯಾಸವಿಲ್ಲ. ತಾವು ತಮ್ಮ ತತ್ವವನ್ನು ಜನತೆಯ ಮುಂದೆ ಇಟ್ಟು ಸ್ಪರ್ಧಿಸುತ್ತೀರಿ. ನಾವು ನಮ್ಮ ತತ್ವವನ್ನಿಟ್ಟು ಸ್ಪರ್ಧಿಸುತ್ತೇವೆ. ಈ ವಿಚಾರದಲ್ಲಿ ಕೂಲಂಕಷವಾಗಿ ವಿಮರ್ಶೆ ನಡೆದಿದೆ; ವಾದವಿವಾದ ಬೇಕಾದಷ್ಟು ನಡೆದಿದೆ. ಬಹುಮಂದಿ ಸದಸ್ಯರು ಮಲ್ಟಿ ಮೆಂಬರು ಕಾನ್‌ಸ್ಟಿಟ್ಯೂಯನ್ಸಿ ಇರತಕ್ಕದ್ದು ಅಗತ್ಯವೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಸರ್ಕಾರದವರು ಬಹುಮಂದಿಯವರ ಅಭಿಪ್ರಾಯಕ್ಕೆ ಮನ್ನಣೆ ಕೊಡತಕ್ಕದ್ದು ಧರ್ಮವೆಂದು ಹೇಳಿ ನಾನು ಮತ್ತೊಮ್ಮೆ ಅರಿಕೆ ಮಾಡಿಕೊಳ್ಳುತ್ತೇನೆ.

Sri J. MOHAMED IMAM.—I think the Minister has made an interim statement. ಏಕೆಂದರೆ, ಇನ್ನೂ ಮಾತನಾಡುವವರಿದ್ದರು. ತಾವು ಒಂದು clarification ಕೊಡುತ್ತೇನೆಂತಲೇ ಅವರು ಶುರುಮಾಡಿದರು.

Mr. SPEAKER.—What does the Hon'ble Member say about his amendments?

Sri B. HUTCHE GOWDA.—I press the amendments.

Mr. SPEAKER.—The question is:

"That in sub-section (1) of the proposed section 51, for the words 'not exceeding three having regard to the population of each constituency, as the Government may, by notification under sub-section (2), determine', the words 'at the rate of one member for every 30,000 of the rural population of each constituency' shall be substituted."

The motion was negatived.

Mr. SPEAKER.—What about the amendments of Sri M. Linganna?

Sri M. LINGANNA.—As against the consolidated whipped up opinion built up from the last three days, I do not want to press my amendments.

The amendment was, by leave, withdrawn.

Mr. SPEAKER.—The question is:

"That in the new sub-section (1) of section 51, the words 'not exceeding three having regard to the population of each constituency' shall be omitted."

The motion was adopted.

Mr. SPEAKER.—The question is:

"That Clause 5 as amended stand part of the Bill"

The motion was adopted.

Clause 5, as amended, was added to the Bill.

Mr. SPEAKER.—Clauses 6, 7, 8. The question is:

"That Clauses 6, 7 and 8 stand part of the Bill."

The motion was adopted.

Clauses 6, 7 and 8 were added to the Bill.

Mr. SPEAKER.—Clause 9.

***Sri Mulka GOVINDA REDDY.**—I want to oppose Clause 9, Sir. It is stated as follows:—

"(b) if in any case the Judge is satisfied that the result of the election has been materially affected by the improper acceptance or rejection of any nomination or the improper reception or refusal of a vote or of any non-compliance with the provisions of this Act or of any rules made thereunder, the Judge shall set aside the election of the returned candidate."

It was urged yesterday by some Hon'ble Members that the Judge should go into the matter before the election actually takes place when a nomination paper has been improperly accepted or improperly rejected. Sir, if this question comes up in election dispute and settled after the election, it is quite possible that some of the members whose nomination papers were accepted and who contested the election, will have incurred huge expenditure and when such election is set aside, it will be unnecessarily making them to pay for the folly of the Returning Officer. And sometimes, it may so happen that by a lapse of long interval, a candidate whose nomination paper was rejected might be induced not to press his election petition when it is placed before the Judge. In order to obviate these difficulties, I strongly urge that summary proceedings should be provided for deciding whether a nomination paper was properly accepted or rejected. Because that provision has not been provided in this section, I vehemently oppose the clause, Sir.

Mr. SPEAKER.—What does the Hon'ble Minister say?

Sri Kadidal MANJAPPA.—Sir, though there is a certain amount of force in what my Hon'ble Friend Sri Mulka said, there are certain difficulties in accepting his suggestion just at present. This clause, section 9, deals with an amendment proposed to section 57. Section 57 provides for the determination of the validity of election and enquiry by the Judge. It also provides for the procedure to be adopted. This section runs into two pages. The suggestion made yesterday was that we must provide for the adjudication of pre-election disputes before election takes place. There is a lot of force in what Sri Mulka says. But there are some practical difficulties. If we provide in this clause that a Judge should enquire into the dispute before the election takes place, he may or he may not decide. Supposing due to some reason, he is unable to decide the case within the prescribed period, what has to be done is the question.

Sri Mulka GOVINDA REDDY.—It is so simple. . . .

Sri Kadidal MANJAPPA.—It is not so simple. I got this point examined in the Law Secretariat. Then the whole election will have to be stayed. Whether an appeal has to be provided against the decision of the Judge is also a point for consideration. Supposing the Judge gives a decision in favour or against the petitioner. If the opposite party approaches the High Court with a writ petition and if the High Court chooses to grant him interim relief. what should happen then? All these are matters to be considered in detail. I may assure the Hon'ble Member that the Government is in sympathy with the view expressed by him. We are going to examine the suggestions put forward by the Hon'ble Member and also by the other Members of the House.

There is also some other difficulty. This amendment deals with clause 3 of section 57. As I submitted earlier, 57 deals with the determination of the disputes subsequent to the election. So, if at all, a provision has to be made in section 56, for which no amendment is proposed in this Bill; that is also a point for consideration. Therefore, a new Bill will have to be introduced to provide for the settlement of these disputes before the election takes place. I may assure the Hon'ble Member once again that I am going to examine the point once again. If possible we will try to introduce an amending Bill as early as possible.

Sri Mulka GOVINDA REDDY.—Before the District Board elections take place?

Sri Kadidal MANJAPPA.—As early as possible.

Mr. SPEAKER.—The question is:

"That Clause 9 stand part of the bill."

The motion was adopted.

Clause 9 was added to the Bill.

Mr. SPEAKER.—Clause 10. There is an amendment by Sri Hutche Gowda. But it is not allowable for more than one reason. In this amendment, sub-section (1) of the original Section is also included, and it cannot be admitted. The Hon'ble Member cannot bring an amendment to the original section which is not in the amending Bill. Also for another reason, this amendment is not admissible. If this amendment is carried, it involves additional expenditure to the Exchequer. For that reason, also it cannot be admitted.

Sri J. MOHAMED IMAM.—The Hon'ble Minister just now said that he has no objection to concede 6 1/4 per cent.

Sri Kadidal MANJAPPA.—I will be bound by the decision of the House, I said.

* Sri B. HUTCHE GOWDA.—Then I oppose the clause, Sir. I may be permitted to speak on the clause itself.

ಸ್ವಾಮಿ, ಜಿಲ್ಲಾ ಬೋರ್ಡುಗಳನ್ನು ಪುನರ್ವ್ಯವಸ್ಥೆ ಮಾಡಿ ಅವಕ್ಕೆ ಕೆಲಸಕಾರ್ಯಗಳನ್ನು ತೃಪ್ತಿಕರವಾಗಿ ನಡೆಸಿಕೊಂಡು ಬರುವುದಕ್ಕೆ ತಕ್ಕಷ್ಟು ಫಂಡು ಕೊಡಬೇಕೆಂಬ ಉದ್ದೇಶದಿಂದ ಸಮಿತಿಯವರು ಸರ್ಕಾರದಿಂದ ಲ್ಯಾಂಡ್ ರೆವೆನ್ಯೂ ಹಣದಲ್ಲಿ ಶೇಕಡ 12½ ಯಷ್ಟು ಕೊಡಬೇಕೆಂದೂ ಖಾಯಮಾದ ಗ್ರಾಂಟು ಬರಬೇಕೆಂದೂ ಸೂಚಿಸಿದರು. ಸ್ಥಳೀಯ ಸಂಸ್ಥೆಗಳು ಯಾವಾಗಲೂ ಕೂಡ ಒಂದು ಗ್ರಾಂಟು ಅಥವಾ ಸಹಾಯ ದ್ರವ್ಯ ಪಡೆದುಕೊಂಡು ಕೆಲಸ ಮಾಡಬೇಕೆಂದು ಹೇಳಿದರೆ ಸಾಧ್ಯವಿಲ್ಲ. ಆ ಸಂಸ್ಥೆಗಳು ತಮ್ಮ ಅಧಿಕಾರವ್ಯಾಪ್ತಿಯಲ್ಲಿ ಸ್ವಾತಂತ್ರ್ಯವನ್ನು ಪಡೆದು ಕೆಲಸಕಾರ್ಯಗಳನ್ನು ನಡೆಸಬೇಕಾದದ್ದು ಅತ್ಯಗತ್ಯ

(ಶ್ರೀ ಬಿ. ಹುಚ್ಚೇಗೌಡ.)

ವೆಂದು ಇದನ್ನು ಏರ್ಪಾಡು ಮಾಡಲಾಯಿತು. ಜಿಲ್ಲಾ ಬೋರ್ಡುಗಳ ಹಣಕಾಸಿನ ಪರಿಸ್ಥಿತಿಯನ್ನು ಉತ್ತಮ ಪಡಿಸುವುದಕ್ಕೆ ಈಗ ಸಾಧಾರಣವಾಗಿ ಸರ್ಕಾರದವರು ಸಮಿತಿಗಳನ್ನು ಕೂಡ ಮಾಡಿದ್ದಾರೆ. ಇಂಥ ಒಂದು ಸಮಿತಿ 1938 ರಲ್ಲಿ ರಚಿತವಾಗಿತ್ತು. ಆ ಸಮಿತಿ ಯವರು ಕೂಡ ಹೇಳಿದ್ದಾರೆ. 1936 ಕ್ಕಿಂತ ಮುಂಚೆ ಸರ್ಕಾರಕ್ಕೆ ಕಲೆಕ್ಷನ್ ಛಾರ್ಜಸ್ ಬೀಳುತ್ತಿರಲಿಲ್ಲ. ಈಗ ಕಲೆಕ್ಷನ್ ಛಾರ್ಜಸ್ ಸುಮಾರು 25 ಸಾವಿರ ರೂಪಾಯಿಯಾಗುತ್ತದೆ. ಸಿಬ್ಬಂದಿ ಮತ್ತು ಟೂಲ್ಸ್ ಅಂಡ್ ಪ್ಲಾಂಟ್ ಛಾರ್ಜಸ್ 25 ಸಾವಿರ ಚಿಲ್ಲರೆ ರೂಪಾಯಿ ಕೊಡಬೇಕಾಗುತ್ತದೆ. ಇದಲ್ಲದೆ ಡಿಸ್ಟ್ರಿಕ್ಟ್ ಬೋರ್ಡ್ ಹೆಡ್‌ಕ್ವಾರ್ಟರ್ಸ್ ಆಸ್ಪತ್ರೆಗಳಿಗೆ ಕಾಂಟ್ರಿಬ್ಯೂಷನ್ ಕೊಡಕೂಡದೆಂದು ಸಲಹೆ ಮಾಡಿದ್ದಾರೆ. ಅಂಥದರಲ್ಲಿ ಈಗ ಕೊಟ್ಟಿರುವುದನ್ನೂ, ಕಾನೂನು ಪ್ರಕಾರ ಶೇಕಡ 12½ ಕೊಟ್ಟಿರುವುದನ್ನೂ ವಾಪಸು ತೆಗೆದುಕೊಳ್ಳುವುದಾದರೆ ಅದು ಪ್ರತಿಗಾಮಿ ಲಕ್ಷಣ, ಅಭಿವೃದ್ಧಿಪಡಿಸುವ ಲಕ್ಷಣವಲ್ಲ. ಇನ್ನೊಂದು. ನಮ್ಮ ದೇಶದಲ್ಲಿ ಎಲ್ಲಾ ಡಿಸ್ಟ್ರಿಕ್ಟ್ ಬೋರ್ಡುಗಳಿಗೂ ಒಂದೇ ಸಮನಾದ ಜವಾಬ್ದಾರಿಯಿದೆ ; ಆಸ್ಪತ್ರೆ, ರಸ್ತೆ ಎಲ್ಲಾ ನೋಡಿಕೊಳ್ಳಬೇಕು. ಜಿಲ್ಲಾ ಬೋರ್ಡುಗಳಿಗೆ ಮುಖ್ಯವಾದುದು ಸೆಸ್, ಲ್ಯಾಂಡ್ ರೆವೆನ್ಯೂ ಮೇಲೆ ಬರುವ ಸೆಸ್, ಎಕ್ಸೈಜ್ ರೆವೆನ್ಯೂಮೇಲೆ ಬರುವ ಸೆಸ್. ನಮ್ಮ ಸಂಸ್ಥಾನದಲ್ಲಿ ಪಾನನಿರೋಧ ಜಾರಿಗೆ ತಂದ ಮೇಲೆ ಐದು ಡಿಸ್ಟ್ರಿಕ್ಟುಗಳಲ್ಲಿ ಬರುವ ಎಕ್ಸೈಜ್ ರೆವಿನ್ಯೂ ಪೂರ್ಣವಾಗಿ ಹೋಯಿತು. ಆದ್ದರಿಂದ ಶೇಕಡ 50 ಭಾಗ ಕಡಮೆಯಾಯಿತು. ಈ ಆಕ್ಟು ಜಾರಿಗೆ ಬರುವಾಗ ಶೇಕಡ 6 1/4 ಆಯಾ ಜಿಲ್ಲಾ ಬೋರ್ಡಿಗೆ ಆಯಾ ಡಿಸ್ಟ್ರಿಕ್ಟಿನ ಉತ್ಪತ್ತಿಯಲ್ಲಿ ಕೊಡುವುದರ ಜತೆಗೆ ಇನ್ನೂ ಶೇಕಡ 6 1/4 ಸಂಸ್ಥಾನದ ಲ್ಯಾಂಡ್ ರೆವೆನ್ಯೂ ಅನ್ನೂ ಒಟ್ಟಿಗೆ ಪೂಲ್‌ಮಾಡಿ ಸಬ್ಸಿಡಿ ರೂಪದಲ್ಲಿ ಕೊಡುವುದು ಎಂದರೆ ಎಷ್ಟು ನಷ್ಟವಾಗುತ್ತದೆ ಎಂಬುದನ್ನು ಗಮನಿಸಬೇಕು. ಇದು ಎರಡು ಕ್ಲಾಜು ಮಾಡಲು ಕಾರಣವಾಯಿತು. ಈ ರೀತಿ ಮಾಡಿದ್ದರಿಂದ ಈ ದಿವಸ ಎಕ್ಸೈಜ್ ರೆವೆನ್ಯೂ ಬಾರದಿರುವಾಗ ಧಕ್ಕೆ ಬರುತ್ತದೆಂಬುದನ್ನೂ ಗಮನಿಸಬೇಕು.

ಮಾನ್ಯ ರೆವೆನ್ಯೂ ಸಚಿವರು ಜಿಲ್ಲಾಬೋರ್ಡ್ ರಸ್ತೆ ವಹಿಸಿಕೊಂಡಿದ್ದೇವೆಂದು ಛಾಲೆಂಜ್ ಮಾಡಿ ಹೇಳಿದರು. ಈಗಲೂ ವಹಿಸಿಕೊಳ್ಳಲು ಸಿದ್ಧ, ಶೇಕಡ 6 1/4 ಬಿಟ್ಟರೆ ಅಷ್ಟು ಹಣಕ್ಕೆ ತಕ್ಕಂತೆ ರಸ್ತೆಗಳನ್ನು ವಹಿಸುತ್ತೇವೆ ಎಂದು ಹೇಳಿದರು. ಎಷ್ಟೇ ವಹಿಸಿಕೊಂಡರೂ ಸರ್ಕಾರಕ್ಕೆ ಭಾರ ಬೀಳುವುದಿಲ್ಲ ! ಎಷ್ಟು ರಸ್ತೆ ವಹಿಸಿಕೊಳ್ಳುತ್ತಾರೋ ಅದಕ್ಕೆ ತಕ್ಕಷ್ಟು ಹಣ ಅವರಿಗೆ ಬರುತ್ತದೆ. ಸರ್ಕಾರಕ್ಕೆ ದ್ವಿಗುಣವಾಗಿ ಹಣ ಬರಲು ಅನುಕೂಲವಿದೆ. ಈಗ ಪ್ರತಿಯೊಂದು ಬಸ್ಸಿನಿಂದಲೂ ವರ್ಷಕ್ಕೆ ಸುಮಾರು ನಾಲ್ಕು ಸಾವಿರ ರೂಪಾಯಿಗಳು ಬರುತ್ತಿವೆ; ಒಂದು ಮೈಲಿಗೆ ಒಂದು ಸಾವಿರ ರೂಪಾಯಿಗಳಿಗೆ ಕಡಿಮೆಯಿಲ್ಲದೆ ಬರುತ್ತಿದೆ. ಈಗ 15 ಸಾವಿರ ಮೈಲಿ ರಸ್ತೆಗಿಂತ ಹೆಚ್ಚಾಗಿ ನಮ್ಮ ದೇಶದಲ್ಲಿದೆ. ಫಾಯಿದೆ ಸರ್ಕಾರ ತೆಗೆದುಕೊಂಡು ನಾಲ್ಕು ಸಾವಿರ ಮೈಲಿ ಡಿಸ್ಟ್ರಿಕ್ಟ್ ಬೋರ್ಡಿಗೆ ಬಿಟ್ಟರೆ, ಅದಕ್ಕೆ ಅವರನ್ನು ಜವಾಬ್ದಾರರನ್ನಾಗಿ ಮಾಡಿದರೆ ಅದು ನ್ಯಾಯಕ್ಕೆ ದೂರವಾದುದು, ಸರಿಯಲ್ಲ. ಈಗ ಖರ್ಚುಮಾಡುತ್ತಿರುವ ಹಣವೆಲ್ಲಾ ಸ್ಟೇಟ್ ಕ್ವಾರ್ಟರ್ಸಿನಿಂದ ಬರುತ್ತಿಲ್ಲ. ಉದಾಹರಣೆಗೆ 1954-55 ರಲ್ಲಿ ಆರ್ಡಿನರಿ ರಿಪೇರ್ಸ್‌ಗೆ 50 ಲಕ್ಷ ರೂಪಾಯಿ, ಸ್ಪೆಷಲ್ ರಿಪೇರ್ಸ್‌ಗೆ 39 ಲಕ್ಷ ರೂಪಾಯಿ, ಆಸ್ಫಾಲ್ಟಿಂಗ್‌ಗೆ 36 ಲಕ್ಷ ರೂಪಾಯಿ, ಸಿಮೆಂಟ್ ಕಾಂಕ್ರೀಟಿಂಗ್‌ಗೆ 18 ಲಕ್ಷ ರೂಪಾಯಿ ಹೀಗೆ ಇಷ್ಟು ಖರ್ಚುಮಾಡುವಾಗ, 133 ಲಕ್ಷದ 58 ಸಾವಿರ ರೂಪಾಯಿ ಸರ್ಕಾರಕ್ಕೆ ಬರುತ್ತಿದೆ. ವೆಹಿಕಲ್ ಟ್ಯಾಕ್ಸ್ 89 ಲಕ್ಷ ರೂಪಾಯಿ, ಪೆಟ್ರೋಲ್‌ನಿಂದ 24 ಲಕ್ಷ ರೂಪಾಯಿ, ಸೆಂಟ್ರಲ್ ರೋಡ್ ಫಂಡಿನಿಂದ 11 ಲಕ್ಷ ರೂಪಾಯಿ ಚಿಲ್ಲರೆ ಈ ರೀತಿ 133 ಲಕ್ಷ ರೂಪಾಯಿ ಬರುವಾಗ ಖರ್ಚು ಸರಿಯಾಗಿ ಮಾಡುತ್ತಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಆನ್ಯುಯಲ್ ಮೈಂಟಿನೆನ್ಸ್ ಎಂದು ಹೇಳುವಾಗ ಹೊಸ ಸೇತುವೆ, ಕಾಸ್‌ವೇ ಆಸ್‌ಫಾಲ್ಟಿಂಗ್, ಕಾಂಕ್ರೀಟಿಂಗ್ ಇವನ್ನೆಲ್ಲಾ ಗಮನಕ್ಕೆ ತೆಗೆದುಕೊಳ್ಳಬೇಕು.

ಶ್ರೀ ಬಿ. ಹುಚ್ಚೇಗೌಡ.—ರಸ್ತೆಗಳಿಗೆ 50 ಲಕ್ಷ ರೂಪಾಯಿ, ಸೇತುವೆಗಳಿಗೆ 91 ಸಾವಿರ ರೂಪಾಯಿ ಖರ್ಚು ಮಾಡುತ್ತಿದ್ದೇವೆ. ಡೆವಲಪ್‌ಮೆಂಟ್ ಬಾಬಿನಿಂದ 62 ಲಕ್ಷ, ರಿಪೇರ್ಸ್ 42 ಲಕ್ಷ ಹೀಗೆ ಎಲ್ಲ/ಕೆಲಸಕ್ಕೂ ಐಟಂವಾರು ಹೇಳುತ್ತೇನೆ. ಆಸ್‌ಫಾಲ್ಟಿಂಗ್ 36 ಲಕ್ಷ 46 ಸಾವಿರ ರೂಪಾಯಿ, ಸಿಮೆಂಟ್ ಕಾಂಕ್ರೀಟಿಂಗ್ 18 ಲಕ್ಷ 76 ಸಾವಿರ ರೂಪಾಯಿ, ಆರ್ಡಿನರಿ ರಿಪೇರ್ಸ್ 50 ಲಕ್ಷ ರೂಪಾಯಿ, ಸ್ಪೆಷಲ್ ರಿಪೇರ್ಸ್ 39 ಲಕ್ಷ ರೂಪಾಯಿ ಹೀಗೆ ಖರ್ಚಾಗುತ್ತಿದೆ. ಬರುವ ಹಣವನ್ನು ಲೆಕ್ಕ ಹಾಕಿದ್ದೇನೆ. ರಸ್ತೆ ತೆಗೆದುಕೊಂಡರೆ ಸರ್ಕಾರದ ಮೇಲೇನೂ ಭಾರ ಬೀಳುವುದಿಲ್ಲ. ಡಿಸ್ಟ್ರಿಕ್ಟ್ ಬೋರ್ಡುಗಳಿಗೇ ಎಲ್ಲಾ ಬಿಟ್ಟರೆ ಅವರಿಗೆ ತೊಂದರೆಯಾಗುತ್ತದೆ. ಪ್ಲಾನ್ ಇರುವ ಪ್ರಕಾರ ಜಿಲ್ಲಾ ಬೋರ್ಡಿನವರ 1/3 ಭಾಗ ರಸ್ತೆ ಕೂಡ ತೆಗೆದುಕೊಂಡಿಲ್ಲ. 20 ಸಾವಿರ ಮೈಲಿ ರಸ್ತೆ ಆಗಬೇಕು. ಇದನ್ನು ಸರ್ಕಾರ ತೆಗೆದುಕೊಳ್ಳಲು ಜವಾಬ್ದಾರಿ ವಹಿಸಿಲ್ಲ. ಇರುವ ರಸ್ತೆ ಸರಿಯಾದ ಸ್ಥಿತಿಯಲ್ಲಿಡುವುದಕ್ಕೇ ಎಷ್ಟೋ ಖರ್ಚಿದೆ. ಹೆಚ್ಚು ಜವಾಬ್ದಾರಿ ಡಿಸ್ಟ್ರಿಕ್ಟ್ ಬೋರ್ಡುಗಳಿರುವುದರಿಂದ ಶೇಕಡ 6¼ ಎಂದಿರುವುದನ್ನು ಶೇಕಡ 25ಕ್ಕೆ ಹೆಚ್ಚಿಸಬೇಕೆಂದು ಒತ್ತಾಯ ಮಾಡಿದೆ. ಆದರೆ ನನ್ನ ತಿದ್ದುಪಡಿಗೆ ಅವಕಾಶವಿಲ್ಲವೆಂದು ಹೇಳುವುದರಿಂದ ನಾನು ಈ ಕ್ಲಾಜನ್ನು ವಿರೋಧಿಸುತ್ತೇನೆ.

(The Hon'ble Leader of the House rose).

Sri Mulka GOVINDA REDDY.—I would like to oppose the Bill, Sir. ನಮ್ಮ ಕಡೆಯವರಿಗೆ ಸಾಕಷ್ಟು ಅವಕಾಶ ಸಿಕ್ಕುತ್ತಿಲ್ಲ. ಆ ಕಡೆ ಒಬ್ಬರಿಗೆ ಈ ಕಡೆ ಒಬ್ಬರಿಗೆ ಮಾತನಾಡಲು ಅವಕಾಶ ಕೊಟ್ಟರೆ ಜಾಗ್ರತೆ ಚರ್ಚೆ ಮುಗಿಯಲು ಅವಕಾಶವಾಗುತ್ತದೆಂದು ಸಲಹೆ ಮಾಡುತ್ತೇನೆ.

Mr. SPEAKER.—The charges made by the Hon'ble Member are not correct. I have allowed the debate to go on for three days on a Bill which could have been finished in one day. The Hon'ble Leader of the Opposition will, I hope, agree with me if I say that I have given as many chances as were necessary. You must realise the difficulty about the time at our disposal.

There is a complaint from the Treasury Bench that I am too lenient.

Sri J. MOHAMED IMAM.—The Chair is always lenient to us, Sir. My friend Sri Mulka referred to the Members of the Treasury Bench when he made that remark and not to the Chair.

(The Hon'ble Leader of the House rose again).

Sri Mulka GOVINDA REDDY.—If the Government are anxious that the Bills are to be rushed through, I suggested a procedure. In this particular case, only one Member of this Assembly has spoken against this clause. There is no amendment to the clause. Why should I not have a chance to speak on the Clause, Sir.

Mr. SPEAKER.—We have to consider the time at our disposal also.

Sri Mulka GOVINDA REDDY.—The Government bring these Bills at the fag end of the Session and they want to rush through the Bill. This is a very important Bill and it concerns the entire State.

Sir, I vehemently oppose this clause 10. If we accept this clause, it will cripple the functions of the local boards and especially the District Boards. The volume of work has increased enormously and especially from 1947-48, the work of the District Board has gone up by leaps and bounds.

3-30 P.M.

Sir, for High Schools alone, before 1948-49, District Boards were not spending anything. Since 1948-49, from Rs. 17,565 the expenditure of the District Boards on high schools has gone up to Rs. 3,31,606. Again the road works in Mysore State—the State Fund Roads maintained by Government—are 6,857 miles and District Fund Roads are 3,976 miles. While answering a question on 17th March 1955—question No. 266—the Minister for Public Health and Local Self-Government has stated that 3,177 miles and 2½ furlongs of roads have been transferred—these are inter-village communication roads—to the District Boards. So much so, the enormous responsibility that has devolved on these District Boards has gone up by leaps and bounds.' When such is the case, if the Government were to think of crippling the finances of District Boards, it is unthinkable, unimaginable and a retrograde step.

Regarding the finances of the District Boards, many a time, committees have been set up and those committees have suggested that the resources of the District Boards should be augmented. A committee was set up in 1938 under the Chairmanship of *Rajasevasakta* Hiranniah and that committee suggested that the resources of the District Boards must be developed. Again, Sir, a committee was set up under the Chairmanship of Sri V. Venkatappa. They have also suggested that the finances of the District Boards should be strengthened. "In recent years the introduction of prohibition in some districts has also deprived the District Boards concerned of the income from the Excise Revenue. Laterly, the Venkatappa Committee considered the subject of local finance in some detail and suggested measures for improving the resources of both the Village Panchayets and the District Boards." Accordingly a Bill was placed before the Assembly and an Act was passed. According to that Act, under sections 105, 106 and 107, certain finances were set apart for the use of the District Boards. Even there, the Government failed to implement section 107. This is what the Chandrasekharaiya Committee has stated regarding section 107. The resources that should have been set apart and made available for the use of the District Boards, Government have not kept up and they have not acted according to the functions as adumbrated in this Act and it is a dereliction of duty on the part of Government. "Except item No. 3, the rest are all sources which existed prior to the commencement of Act No. IV of 1952. So far as item No. 8 is concerned, the Revenues from the taxes referred to under it, have not yet been assigned by Government." Again, the Chandrasekharaiya Committee recommended the constitution of Taluk Boards. They emphatically and definitely state that the District Boards should have the

(SRI MULKA GOVINDA REDDY.)

"compulsory assignment of 6¼ per cent of Land Revenue collected within the district, in addition to the assignment made from out of the 6¼ per cent of the Land Revenue collected for the whole State, excluding the cost of collection".

Again, Sir, regarding the District Board High Schools, a suggestion was made that the managemeet of these District Board High Schools should be taken over by the Government. Sir, the burden on the District Boards which are managing these high schools and which are incurring about 3½ lakhs of rupees of expenditure on these high schools would have lessened if this suggestion had been implemented. But the Government have emphatically stated according to the Report:

> "So far as the Government are concerned, it has been definitely ascertained that they have no intention of assuming charge of any of them. When the Director of Public Instruction was examined by the Committee, he expressed the view that it would not be possible to take over the High Schools under Departmental management, even with the transfer of the funds now spent for them. Again, the question of making arrangements for maintaining the existing works and institutons is not all. It would be a very serious obstacle to further progress if proper agencies are not made responsible for undertaking fresh projects which involve heavy cost and benefit two or more taluks in the District. In view of all these considerations, the Committee feels convinced that the District Boards have an undoubted role to play in the developmental activities of the District."

I wanted to bring this to notice of the Minister concerned because day before yesterday he was making a statement that most of the development activities that are now being undertaken by the District Boards need not be carried out by them but by some other bodies. Again it is stated here:

> "But there is no doubt whatever that such unofficial bodies will not be able to command either the prestige or the utility of statutory organisations, however well they may be constituted."

For these reasons, I emphatically oppose these amendments.

*ಶ್ರೀ ಕೆ. ಹನುಮಂತಯ್ಯ (ಮುಖ್ಯಮಂತ್ರಿಗಳು).—ಮಾನ್ಯ ಸದಸ್ಯರುಗಳು ಡಿಸ್ಟ್ರಿಕ್ಟ್ ಬೋರ್ಡ್ ಸ್ಥಾಪನೆಯಾದಮೇಲೆ ಸಮರ್ಪಕವಾಗಿ ಕೆಲಸಮಾಡಬೇಕು, ಅದಕ್ಕೆ ಸಾಕಾದಷ್ಟು ಹಣ ಒದಗಿಸಬೇಕು ಎಂದು ಹೇಳಿದ್ದಾರೆ. ಆ ಉದ್ದೇಶ ಸರ್ಕಾರಕ್ಕೂ ಇದೆ. ಆದ್ದರಿಂದ ಈ ಕ್ಲಾಸ್‌ಗೆ ವ್ಯತಿರಿಕ್ತವಾಗಿ ಮಾತನಾಡಿದವರ ಉದ್ದೇಶ ಏನಿದೆಯೊ, ಆ ಉದ್ದೇಶಕ್ಕೂ ಸರ್ಕಾರದವರ ಉದ್ದೇಶಕ್ಕೂ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಡಿಸ್ಟ್ರಿಕ್ಟ್ ಬೋರ್ಡಿಗೆ ಜವಾಬ್ದಾರಿ ಹೆಚ್ಚಾಗಿದೆ ಎಂದು ಹೇಳತಕ್ಕವರು ಮತ್ತೊಂದು ಅಂಶವನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಡಿಸ್ಟ್ರಿಕ್ಟ್ ಬೋರ್ಡಿನವರು ಹಿಂದೆ ಏನು ಕೆಲಸಮಾಡುತ್ತಾ ಇದ್ದರೋ ಆ ಕೆಲಸದ ಬಹು ಭಾಗವನ್ನು ಮೂರು ಸಂಸ್ಥೆಗಳವರು ಈಗ ವಹಿಸಿಕೊಳ್ಳುತ್ತಾ ಇರುವುದು ತಮ್ಮ ಅವಗಾಹನೆಗೆ ಬಂದಿದೆ. ಒಂದನೆಯದು ಕಮ್ಯೂನಿಟಿ ಪ್ರಾಜೆಕ್ಟು; ಎರಡನೆಯದು ನ್ಯಾಷನಲ್ ಎಕ್ಸ್‌ಟೆನ್ಷನ್ ಬ್ಲಾಕ್ಸ್; ಮೂರನೆಯದು ಲೋಕಲ್ ಡೆವಲಪ್‌ಮೆಂಟ್ ವರ್ಕ್ಸ್. ಈ ಮೂರಕ್ಕೆ ಸರ್ಕಾರದವರು ನೇರವಾಗಿ ಹಣ ಕೊಡುವುದು ಈ ಸ್ಕೀಂನಲ್ಲಿ ಒತ್ತಾಯಪೂರ್ವಕವಾಗಿ ಬಂದಿದೆ. ಆ ರೀತಿ ಕೊಡುತ್ತಾ ಇದ್ದಾರೆ ಎಂಬುದು ತಮಗೂ ಗೊತ್ತಿದೆ. ಈ ಲೋಕಲ್ ಡೆವಲಪ್‌ಮೆಂಟ್ ವರ್ಕ್ಸ್‌ಗೆ ನಾನು ಹೋದ ವರ್ಷ ಬಡ್ಜೆಟ್ ಭಾಷಣದಲ್ಲಿ ಹೇಳಿದ್ದೇನೆ, 8½ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇನೆ. ಎನ್. ಇ. ಎಸ್. ಬ್ಲಾಕು ಈಗಾಗಲೇ ಡಿಸ್ಟ್ರಿಕ್ಟಿಗೆ ಎರಡೆರಡು ಬರುತ್ತಾ ಇವೆ, ಅದರಲ್ಲಿ ಸ್ಟೇಟ್ ಷೇರು 1 ಲಕ್ಷ 25 ಸಾವಿರ ಆಗುತ್ತದೆ. ಕಮ್ಯೂನಿಟಿ ಪ್ರಾಜೆಕ್ಟಿಗಾಗಿ ಸ್ಟೇಟ್ ಷೇರು ಸುಮಾರು 9½ ಲಕ್ಷ ರೂಪಾಯಿಗೆ ಬರುತ್ತದೆ. ಈ ರೀತಿ ಸುಮಾರು 15-16 ಲಕ್ಷ ರೂಪಾಯಿಗಳವರೆಗೂ ಈಗಾಗಲೇ ಬಂದಿದೆ. ನ್ಯಾಷನಲ್ ಡೆವಲಪ್‌ಮೆಂಟ್ ಬ್ಲಾಕ್ಸನ್ನು ಪ್ರತಿಯೊಂದು ತಾಲ್ಲೂಕಿಗೂ ಕೊಟ್ಟು, ಸಂಸ್ಥಾನ ಎಲ್ಲಕ್ಕೂ ಕೂಡ ಈ ಯೋಜನೆ ಅನ್ವಯಿಸುವ ಹಾಗೆ ಮಾಡಬೇಕೆಂಬ ನೀತಿಯೂ ಇದೆ. ಈ ರೀತಿ ಆದಮೇಲೆ ಒಂದು ವರ್ಷಕ್ಕೆ ಪ್ರತಿಯೊಂದು ಡಿಸ್ಟ್ರಿಕ್ಟಿಗೂ ಬಹುಶಃ 10-15 ಲಕ್ಷ ರೂಪಾಯಿಗಳ ಗ್ರ್ಯಾಂಟು ಕೊಡಬೇಕಾಗುತ್ತದೆ. ಈ ದೃಷ್ಟಿಯಲ್ಲಿ ತಾವು ನೋಡಿದರೆ ಡಿಸ್ಟ್ರಿಕ್ಟ್ ಬೋರ್ಡುಗಳ ಜವಾಬ್ದಾರಿ ಅನೇಕ ವಿಷಯಗಳಲ್ಲಿ ಕಡಿಮೆ ಆಗುತ್ತಾ ಇದೆ. ಸರ್ಕಾರ ಕೊಡುತ್ತಾ ಇರತಕ್ಕ ಗ್ರ್ಯಾಂಟು ಆ ಉದ್ದೇಶಗಳಿಗೆ ಹೆಚ್ಚಾಗುತ್ತಾ ಇದೆ. ನಾವು ಈ ಡಿಸ್ಟ್ರಿಕ್ಟ್ ಬೋರ್ಡಿಗೂ ಗ್ರ್ಯಾಂಟು ಬೇಕಾದಷ್ಟು ಕೊಟ್ಟು ನ್ಯಾಷನಲ್ ಡೆವಲಪ್‌ಮೆಂಟ್ ಬ್ಲಾಕ್ಸ್ ಕಮ್ಯೂನಿಟಿ ಪ್ರಾಜೆಕ್ಟು, ಡೆವಲಪ್‌ಮೆಂಟ್ ವರ್ಕ್ಸ್ ಇವುಗಳಿಗೂ ಕೊಡುತ್ತಾ ಬಂದರೆ ಒಂದೇ ಉದ್ದೇಶಕ್ಕೆ ಎರಡು ಗ್ರ್ಯಾಂಟು ಕೊಟ್ಟ ಹಾಗಾಗುತ್ತದೆ. ಆದ್ದರಿಂದ ಇದನ್ನೆಲ್ಲಾ ಯೋಚನೆ ಮಾಡಿ ನೋಡಿದರೆ ಈ ಮೂರು ಯೋಜನೆಗಳು ಡಿಸ್ಟ್ರಿಕ್ಟ್ ಬೋರ್ಡಿನ ಜವಾಬ್ದಾರಿಯನ್ನು ಬಹಳವಾಗಿ ಕಡಿಮೆ ಮಾಡಿರುವುದರಿಂದ ಈ ಮೊಬಲಗನ್ನು ಕೊಡದೆ ಇದ್ದರೂ ಚಿಂತೆ ಇಲ್ಲ ಎನ್ನುವುದು ಅವರಿಗೆ ಹೊಳೆಯುತ್ತದೆ.

ಎರಡನೆಯದಾಗಿ ಡಿಸ್ಟ್ರಿಕ್ಟ್ ಬೋರ್ಡ್ ಸಮರ್ಪಕವಾಗಿ ಕೆಲಸ ಮಾಡಬೇಕು. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ, ಎದುರು ಪಕ್ಷದವರಿಗೆ ಗೊತ್ತಿರುವ ಹಾಗೆ, ಡಿಸ್ಟ್ರಿಕ್ಟ್ ಬೋರ್ಡಿನ ವಿಚಾರದಲ್ಲಿ ಮೂರು ವರ್ಷದಿಂದಲೂ ಬಹಳ ಉದಾರವಾಗಿ ಸಹಾಯಮಾಡಿದ್ದೇವೆ; ಇದನ್ನು ಅವರು ಖಂಡಿತವಾಗಿ ಒಪ್ಪಿಕೊಳ್ಳುತ್ತಾರೆ ಎನ್ನಬಹುದು. ಮುಂದೆ ಒಂದು ವೇಳೆ ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ಹಣ ಕಡಿಮೆ ಆಗಿ, ಏನ ಕೆಲಸ ವಹಿಸಿಕೊಳ್ಳುತ್ತಾರೋ ಅದನ್ನು ಸಮರ್ಪಕವಾಗಿ ಮಾಡುವುದಕ್ಕೆ ಹಣ ಸಾಕಾಗದಿದ್ದರೆ ಸರ್ಕಾರದವರು ಪರಿಶೀಲನೆ ಮಾಡಲೇ ಬೇಕಾಗುತ್ತದೆ. ಲೋಕಲ್ ಸೆಲ್ಫ್ ಗವರ್ನ್ಮೆಂಟ್ ಇನ್ಸ್ಟಿಟ್ಯೂಷನ್ಸ್ ಅಂದಕ್ಷಣಕ್ಕೆ ಅದೇ ಬೇರೆ ಪ್ರತ್ಯೇಕವಾದದ್ದು ಎಂದಲ್ಲ. ಅದರ ಕೆಲಸವೂ ಸರಿಯಾಗಿ ನಡೆಯಬೇಕು. ಮುನಿಸಿಪಾಲಿಟಿಗಳಿಗೆ, ಕಾರ್ಪೊರೇಷನ್‌ಗೆ ಯಾವರೀತಿ ಸರ್ಕಾರದವರು ಗ್ರಾಂಟ್ ಮೂಲಕ ಹಣ ಕೊಡುತ್ತಾರೆಯೋ ಅದೇ ತತ್ವಕ್ಕನುಸಾರವಾಗಿ ಡಿಸ್ಟ್ರಿಕ್ಟ್ ಬೋರ್ಡ್‌ಗಳಿಗೂ ಸಮಯ ಸಂದರ್ಭ ನೋಡಿಕೊಂಡು ಕೊಡಬೇಕಾಗುತ್ತದೆ. ಅವರಿಗೆ ಎಷ್ಟು ಹಣ ಇದೆ, ಎಷ್ಟು ಜವಾಬ್ದಾರಿ ಇದೆ ಎಂಬುದನ್ನು ವಿಮರ್ಶೆಮಾಡಿ ಬಡ್ಜೆಟ್‌ನಲ್ಲಿ ಗ್ರಾಂಟನ್ನು ಒದಗಿಸುವುದಕ್ಕೆ ಯಾವ ಪ್ರತಿಬಂಧಕವೂ ಇಲ್ಲ. ಈಗ ಕೇಳುತ್ತ ಇರುವುದು ಕೇವಲ 6¼ ಲಕ್ಷ. 6¼ ಲಕ್ಷದ ಹತ್ತರಷ್ಟು ಹಣವನ್ನು ಯೋಜನೆಗಳ ಮೂಲಕವಾಗಿ ಕೊಡುತ್ತಾ ಇದ್ದೇವೆ. ಅಲ್ಲೂಕೊಡಿ, ಇಲ್ಲೂ ಕೊಡಿ ಎಂದರೆ, the State finances gets upset. ಆದ್ದರಿಂದ ಮುಂದೆ ನಾನು ಮೊದಲೇ ಹೇಳಿರುವ ಹಾಗೆ ಡಿಸ್ಟ್ರಿಕ್ ಬೋರ್ಡ್ ಕೆಲಸಕಾರ್ಯಗಳು ಸಮಸಪಕವಾಗಿ ನಡೆಯುವುದಕ್ಕೆ ಎಷ್ಟು ಜವಾಬ್ದಾರಿ ವಹಿಸುತ್ತಾರೆಯೋ ಅದಕ್ಕನುಗುಣವಾಗಿ ಕೆಲಸ ಸಮರ್ಪಕವಾಗಿ ನಡೆಯಲು ಗ್ರಾಂಟ್ ಮೂಲಕ ಹಣ ಕೊಡೋಣ. ರಸ್ತೆಗಳನ್ನು ಕೂಡ ರಿಪೇರಿ ಮಾಡಬೇಕಾಗಿರುವುದು ಅಗತ್ಯ, ಅದಕ್ಕೆ ದುಡ್ಡು ಕೊಡಬೇಕು ಎಂಬುದನ್ನು ಅನುಮೋದಿಸುತ್ತೇನೆ. ಆದ್ದರಿಂದ ದಯವಿಟ್ಟು ಈ ಸಭೆಯವರು ಈ ಕ್ಲಾಜನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಈಗಾಗಲೇ ಬಹಳ ಹೊತ್ತಾಗಿರುವುದರಿಂದ, ಈ ಬಿಲ್ಲನ್ನು ಜಾಗ್ರತೆ ಅಂಗೀಕಾರ ಮಾಡಿದರೆ, ಉಪಹಾರದ ನಂತರ ಫೈನಾನ್ಸ್ ಬಿಲ್ ತೆಗೆದುಕೊಳ್ಳಲು ಅವಕಾಶವಾಗುತ್ತದೆ ಎಂದು ಹೇಳಿ, ಇದನ್ನು ಒಪ್ಪುತ್ತೀರಿ ಎಂದು ನಂಬಿದ್ದೇನೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಹಾಗಾದರೆ ತಾವು ನಮ್ಮ ಪ್ರಾರ್ಥನೆಯನ್ನು ಒಪ್ಪಿಕೊಂಡ ಹಾಗೆ ಕಾಣುವುದಿಲ್ಲ. ಡಿಸ್ಟ್ರಿಕ್ಟ್ ಬೋರ್ಡಿನ ವಿಷಯದಲ್ಲಿ ಮೊದಲಿನಿಂದ ಕೊನೆಯವರೆಗೂ ಸರ್ಕಾರದವರು ಇಷ್ಟು uncompromising ಆಗಿದ್ದು ನಮ್ಮ ಸಲಹೆಗಳಿಗೆ ಮನ್ನಣೆಕೊಡದೆ ಇರುವುದರಿಂದ ವಿರೋಧಪಕ್ಷದ ಸದಸ್ಯರಾದ ನಾವು ಸಭಾತ್ಯಾಗ ಮಾಡುತ್ತೇವೆ.

(At 3-42 P.M. the Members of the Opposition staged a walk out).

Mr. SPEAKER.—I will put Clause 10 to vote. The question is :

"That Clause 10 stand part of the Bill."

The motion was adopted.

Clause 10 was added to the Bill.

Mr. SPEAKER.—Clause 11. Clause 11 has got a negative effect. I will put it to vote. The question is :

"That Clause 11 will stand part of the Bill."

The motion was negatived.

Clause 11 was omitted from the Bill.

Mr. SPEAKER.—Clause 1, Title and Preamble. The question is :

"That Clause 1, the Title and Preamble stand part of the Bill".

The motion was adopted.

Clause 1, the Title and the Preamble were added to the Bill.

Motion to pass.

Sri Kadidal MANJAPPA.—Sir,

"I beg to move that the Mysore Village Panchayets and District Boards (Amendment) Bill, 1955, as amended, be passed."

Mr. SPEAKER.—The question is :

"That the Mysore Village Panchayets and District Boards (Amendment) Bill, 1955, as amended, be passed."

The motion was adopted.

Sri K. HANUMANTHAIYA.—Shal we take up the Finance Bill after lunch ?

Mr. SPEAKER.—Yes. Now the House will rise and meet at 4-15 P.M.

The House adjourned for Lunch a Forty-five Minutes past Three of the Clock and re-assembled at Fifteen Minutes past Four of the Clock.

[MR. SPEAKER in the Chair.]

Sri J. MOHAMED IMAM.—I would like to ascertain from the Minister for Local Self-Government one information. We have somehow completed the Village Panchayets and District Boards (Amendment) Bill. So, may I have an indication as to when they are going to hold elections because the Government were so anxious to push through the Bill. I want to know whether the elections are going to be held before June.

Mr. SPEAKER.—Just now the Bill is passed.

Sri K. HANUMANTHAIYA.—I understand the anxiety of the Hon'ble Leader of the Opposition. We will have to see the calendar of events. I will make a statement on this matter.

MYSORE AGRICULTURAL INCOME-TAX BILL, 1955.

Sri K. HANUMANTHAIYA (Chief Minister).—I move:

> "That the Mysore Agricultural Income-Tax Bill, 1955 be taken into consideration."

*ಸ್ವಾಮಿ, ಈ ತೆರಿಗೆ ಮಸೂದೆಯನ್ನು ತರಬೇಕಾದ ಅಗತ್ಯವೇನಿತ್ತು ಎಂಬುದನ್ನು ಸ್ವಲ್ಪ ಕಾಲ ವಿವರಿಸುತ್ತೇನೆ. ಪಾಂಚ ವಾರ್ಷಿಕ ಯೋಜನೆಯ ಪ್ರಕಾರ ನಾವು ಈ ಹಿಂದೆಯೇ ಎಂಟು ಕೋಟಿ 80 ಲಕ್ಷ ರೂಪಾಯಿಗಳ ತೆರಿಗೆಯನ್ನು ಎತ್ತುತ್ತೇವೆಂದು ಒಪ್ಪಿಕೊಂಡಿದ್ದೇವೆ. ಈ ಪಾಂಚವಾರ್ಷಿಕ ಯೋಜನೆ ಎನ್ನುವುದು ಒಂದು ಪಕ್ಷಕ್ಕೆ ಸೇರಿರತಕ್ಕದ್ದಲ್ಲ. ಇದನ್ನು ತಯಾರು ಮಾಡುವಾಗ ಇದಕ್ಕೆ ಸಂಬಂಧಪಟ್ಟಂಥ ಅಧಿಕಾರಿಗಳು ಸಾಧ್ಯವಾದಮಟ್ಟಿಗೂ ಎಲ್ಲಾ ಪಕ್ಷಗಳ ಮತ್ತು ಎಲ್ಲಾ ಸಂಸ್ಥೆಗಳ ಪ್ರತಿನಿಧಿಗಳನ್ನೂ ಕರೆಸಿಕೊಂಡು ಅವರೊಡನೆ ವಿಚಾರ ವಿನಿಮಯ ಮಾಡಿ ಎಲ್ಲರಿಗೂ ಒಪ್ಪಿಗೆಯಾಗುವಂಥ ಮತ್ತು ಸರ್ವರೂ ಸಮ್ಮತಿಪಡುವಂಥ ಒಂದು ಒಪ್ಪಂದಕ್ಕೆ ಬಂದು ಅನಂತರ ಇದನ್ನು ಕಾರ್ಯರೂಪಕ್ಕೆ ತಂದಿದ್ದಾರೆ. ಈ ಯೋಜನೆಗೆ ಪಿ. ಎಸ್. ಪಿ.ಯವರ ಸಮಾಲೋಚನೆ ಕೂಡ ದೊರಕಿದೆ. ಇದನ್ನು ಸ್ಥೂಲವಾಗಿ ಹೇಳುವುದಾದರೆ ಅವರ ಒಪ್ಪಿಗೆ ಕೂಡ ದೊರಕಿದೆ.

ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಈ ಬಗ್ಗೆ ನಮ್ಮ ವಿರೋಧವೇನಿದೆ ಎಂಬುದನ್ನು ಕೂಡ ಹೇಳಿದ್ದೇವೆ.

ಶ್ರೀ ಕೆ. ಹನುಮಂತಯ್ಯ.—ತಾವು ಹೀಗೆ ಹೇಳುತ್ತೀರಿ ಎಂದೇ ನಾನೂ ಕೂಡ 'ಸ್ಥೂಲವಾಗಿ' ಎನ್ನತಕ್ಕಂಥಾ ಆ ಪದವನ್ನು ಉಪಯೋಗಿಸಿದ್ದೇನೆ. ಈ ದಿವಸ ಈ ರೀತಿಯಾಗಿ ಯಾವ ಒಂದು ಯೋಜನೆಯನ್ನು ಇಡೀ ಇಂಡಿಯಾ ದೇಶವೇ ಒಪ್ಪಿಕೊಂಡಿರುತ್ತದೆಯೋ ಅಂಥ ಒಂದು ಯೋಜನೆಯನ್ನು ಪ್ರಾಮಾಣಿಕತೆಯಿಂದ ಕಾರ್ಯರೂಪಕ್ಕೆ ತರಬೇಕಾದದ್ದು ಸಂಬಂಧಪಟ್ಟವರ ಕರ್ತವ್ಯವಾಗಿದೆ. ಆದುದರಿಂದ ಇದೇ ಸಂಬಂಧದಲ್ಲಿ ನಮ್ಮ ಮೈಸೂರಿಗೆ ಸಂಬಂಧಪಟ್ಟಿರುವ ಹಾಗೆ ರೂಪಿತವಾಗಿರತಕ್ಕಂಥ ಈ ಪಾಂಚವಾರ್ಷಿಕ ಯೋಜನೆಯನ್ನು ಜಾರಿಗೆ ತರಲು ಎಲ್ಲ ಮಾನ್ಯ ಸದಸ್ಯರುಗಳೂ ಬಹಳ ಕಾತರರಾಗಿದ್ದಾರೆ ಎನ್ನುವುದು ಇಡೀ ದೇಶಕ್ಕೇ ಗೊತ್ತಿದೆ. ಈ ರೀತಿಯಾಗಿ ಒಂದು ಯೋಜನೆಯನ್ನು ನಾವೆಲ್ಲರೂ ಒಪ್ಪಿಕೊಂಡು ಅದನ್ನು ಬೇಗ ಕಾರ್ಯ ರೂಪಕ್ಕೆ ತರಬೇಕೆಂದು ಕಾತರರಾಗಿರುವಾಗ ಅದಕ್ಕೆ ಬೇಕಾಗಿರುವಂಥ ಹಣವನ್ನು ಒದಗಿಸತಕ್ಕದ್ದು ಕೂಡ ನಮ್ಮೆಲ್ಲರ ಕರ್ತವ್ಯ. ನಾವು ಈ ಎಂಟು ಕೋಟಿ 80 ಲಕ್ಷ ರೂಪಾಯಿಗಳ ತೆರಿಗೆಯನ್ನು ಐದು ವರ್ಷಗಳ ಅವಧಿಯಲ್ಲಿ ಎತ್ತಬೇಕಾಗಿದೆ. ಆದರೆ ನಾವು ಈಗಾಗಲೇ ಮಾಡಿರತಕ್ಕ ಪ್ರಯತ್ನದಿಂದ 3½ ಕೋಟಿ ರೂಪಾಯಿಗಳ ತೆರಿಗೆಯನ್ನು ಎತ್ತುವುದಕ್ಕೆ ಮಾತ್ರ ಸಾಧ್ಯವಾಗಿದೆ. ನಾವು ಇನ್ನೂ ಐದು ಕೋಟಿ ರೂಪಾಯಿಗಳಷ್ಟು ತೆರಿಗೆಯನ್ನು ಎತ್ತಬೇಕಾಗಿದೆ. ಆದರೆ ನಮ್ಮ ಮೈಸೂರು ದೇಶದ ಸ್ಥಿತಿಗತಿಗಳನ್ನು ನೋಡಿದರೆ ಈ ಐದು ಕೋಟಿ ರೂಪಾಯಿಗಳ ತೆರಿಗೆಯನ್ನು ಎತ್ತುವುದಕ್ಕೆ ಬಹಳ ದುಸ್ಸಾಧ್ಯವಾಗಿದೆ. ಈ ರೀತಿ ದುಸ್ಸಾಧ್ಯವಾಗಿದೆಯೆಂದು ಹೇಳಿ ನಾವು ಯಾವ ತೆರಿಗೆಯನ್ನೂ ಎತ್ತುವುದಕ್ಕಾಗುವುದಿಲ್ಲ ಎನ್ನುವುದು ಈಗಾಗಲೇ ನಾವು ನಮ್ಮ ಮನಸ್ಸಿನಲ್ಲಿ ಮಾಡಿಕೊಂಡಿರುವಂಥ ಉದ್ದೇಶಗಳಿಗೆ ಅನುಗುಣವಾಗಿರುವುದಿಲ್ಲ. ಆದುದರಿಂದ ಈಗ ಎಲ್ಲೆಲ್ಲಿ ಯಾವ ಯಾವ ಬಾಬುಗಳಿಂದ ಎಷ್ಟೆಷ್ಟು ತೆರಿಗೆಗಳನ್ನು ಹೆಚ್ಚಿಸಬಹುದೋ ಅಷ್ಟನ್ನು ಹೆಚ್ಚಿಸಬೇಕಾದುದು ಸರ್ಕಾರದವರ ಕರ್ತವ್ಯ. ಆದುದರಿಂದ ಈಗ ಸರ್ಕಾರದವರು ಈ ಬಿಲ್ಲನ್ನು ತರಬೇಕಾಯಿತು. ಈ ಹಿಂದೆ ಇದೇ ಸ್ವಭಾವದ ನಾಲ್ಕು ಮಸೂದೆಗಳನ್ನು ಈ ಸಭೆಯ ಮುಂದೆ ತಂದಿದ್ದೆನು. ಅವುಗಳಿಗೆಲ್ಲ ಈ ಸಭೆಯ ಅನುಮತಿ ದೊರಕಿತು. ಅದೇ ರೀತಿ ಈಗ ಈ ಮಸೂದೆಗೂ ತಮ್ಮೆಲ್ಲರ ಅನುಮತಿ ದೊರಕುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಈ ಮಸೂದೆಯನ್ನು ಜಾರಿಗೆ ತಂದರೆ ಸರ್ಕಾರಕ್ಕೆ 22 ಲಕ್ಷ ರೂಪಾಯಿಗಳ ವರಮಾನ ದೊರಕುತ್ತದೆ. ಆದರೆ ಈ ವರಮಾನ ಸ್ವಲ್ಪವೆಂದು ಯಾರೂ ತಾತ್ಸಾರಮಾಡಬಾರದು. ಇದು ಕೇವಲ ಒಂದೆರಡು ವರ್ಷಗಳಿಗೆ ಮಾತ್ರ ಅನ್ವಯಿಸತಕ್ಕಂಥ ಮಸೂದೆಯಲ್ಲ. ಇದರಿಂದ ಪ್ರತಿ ವರ್ಷವೂ ಸರ್ಕಾರಕ್ಕೆ 22 ಲಕ್ಷ ರೂಪಾಯಿಗಳ ವರಮಾನ ದೊರಕುತ್ತಲೇ ಇರುತ್ತದೆ. ಇದರಿಂದ ಈ ಪಾಂಚವಾರ್ಷಿಕ ಯೋಜನೆಯನ್ನು ಜಾರಿಗೆ ತರಲು ತುಂಬ ಸಹಾಯವಾಗುತ್ತದೆ. ಇಷ್ಟೇ ಅಲ್ಲದೆ ಮುಂದಿನ ಎರಡನೇ ಪಾಂಚವಾರ್ಷಿಕ ಯೋಜನೆಗೂ ಸಹ ಇದು ಸಹಾಯಕವಾಗಿರುತ್ತದೆ. ಇಂಥ ಒಂದು ದೊಡ್ಡ ಉದ್ದೇಶದಿಂದ ಈ ಮಸೂದೆಯನ್ನು ತಂದಿದ್ದೇನೆ. ಆದ್ದರಿಂದ ಈ ಮಸೂದೆಯನ್ನು ಸರ್ವರೂ ಒಪ್ಪಿಕೊಳ್ಳತಕ್ಕದ್ದು ಸೂಕ್ತ. ಆದರೆ ಈ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಎನ್ನತಕ್ಕಂಥ ತೆರಿಗೆಯನ್ನು ನಮ್ಮ ಮೈಸೂರು ದೇಶಕ್ಕೇ ಹೊಸದಾಗಿ ತಂದಿರುವುದಿಲ್ಲ. ಈಗಾಗಲೇ ಈ ತೆರಿಗೆಯು ಅನೇಕ ಸಂಸ್ಥಾನಗಳಲ್ಲಿ ಜಾರಿಯಲ್ಲಿದೆ. ನಮ್ಮ ಅಕ್ಕಪಕ್ಕಗಳ ಪ್ರಾಂತ್ಯಗಳಲ್ಲಿ ಕೂಡ ಇದು ಈಗಾಗಲೇ ಜಾರಿಯಲ್ಲಿದೆ. ಮದ್ರಾಸಿನಲ್ಲಿ ಇದು ಜಾರಿಗೆ ಬಂದಿದೆ. ಕೊಡಗು, ಹೈದರಾಬಾದ್ ಮತ್ತು ಟ್ರಾವಂಕೂರ್ ಮತ್ತು ಕೊಚಿನ್‌ನಲ್ಲಿ ಇದು ಜಾರಿಗೆ ಬಂದಿದೆ. ಈ ತೆರಿಗೆ ಹೀಗೆ ಮೈಸೂರು ಸುತ್ತಮುತ್ತಲೂ ಇರುವ ದೇಶಗಳಲ್ಲಿ ಜಾರಿಯಲ್ಲಿರುತ್ತದೆ. ಇಷ್ಟೇ ಅಲ್ಲದೆ ಈ ತೆರಿಗೆಯು ಇನ್ನೂ ಅನೇಕ ಪ್ರಾಂತಗಳಲ್ಲಿ ಎಂದರೆ ಬೀಹಾರ್, ಆಸ್ಸಾಂ, ಬಂಗಾಳ, ಒರಿಸ್ಸಾ, ಮಧ್ಯಪ್ರದೇಶ, ಹೈದರಾಬಾದ್, ರಾಜಾಸ್ಥಾನ್, ಭೂಪಾಲ್ ಮತ್ತು ಮಧ್ಯಪ್ರದೇಶ ಮುಂತಾದ ಇಂಡಿಯಾ ದೇಶದ ಇತರ ಕಡೆಗಳಲ್ಲಿ ಕೂಡ ಈ ತೆರಿಗೆ ಮಸೂದೆಯೂ ಜಾರಿಗೆ ಬಂದಿದೆ. ಒಟ್ಟು ಇಡೀ ಭಾರತಕ್ಕೆಲ್ಲಾ ಎಂದರೆ ಭಾರತದ ಅನೇಕ ಭಾಗಗಳಿಗೆ ಅನ್ವಯಿಸುವಂಥ ಯಾವ ಈ ಒಂದು ಕಾನೂನಿದೆಯೋ ಇದನ್ನು ನಮ್ಮ ಸಂಸ್ಥಾನದಲ್ಲಿಯೂ ಜಾರಿಗೆ ತರತಕ್ಕದ್ದು ಸೂಕ್ತ ಮತ್ತು ಅಗತ್ಯ. ಇದರ ಜೊತೆಗೆ Taxation Enquiry Report ಎನ್ನುವುದೂ ಒಂದು ಬಂದಿದೆ. ಆ ಮಾನ್ಯ ಸಮಿತಿಯ ಸದಸ್ಯರೂ ಸಹ ಈ ತೆರಿಗೆ

ಯನ್ನು ಎಲ್ಲ ಕಡೆಯೂ ಜಾರಿಗೆ ತರಬೇಕಾಗಿದೆಯೆಂದು ಹೇಳಿದ್ದಾರೆ. ಹೀಗೆ ಈ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಎನ್ನುವುದನ್ನು ಎಲ್ಲ ಸಂಸ್ಥಾನಗಳಲ್ಲೂ ವಿಧಿಸಬೇಕೆಂದು ಹೇಳಿದ್ದಾರೆ. ಇತರ ಸಂದರ್ಭಗಳಲ್ಲಾಗಲೇ ನಾನು ಈ ಮಾನ್ಯ ಸಭೆಗೆ ಅರಿಕೆಮಾಡಿಕೊಂಡಿರುವ ಹಾಗೆ, ಪ್ರತಿಯೊಂದು ಸಂಸ್ಥಾನದ ಮತ್ತು ಇಂಡಿಯಾ ಸರ್ಕಾರದ ನೀತಿಯು ಈ ಹಣಕಾಸಿನ ಪರಿಸ್ಥಿತಿಯಲ್ಲಿ ಒಂದೇ ರೂಪ ತಾಳುತ್ತಾ ಬಂದಿದೆ. ಆದುದರಿಂದ ನಮಗೆ ಈ ದಿವಸ ಈ ಕೆಲಕೆಲವು ಸೌಲಭ್ಯಗಳೇನುಬೇಕಾಗಿರುತ್ತವೆಂದು ಜನರೆಲ್ಲರೂ ಆಶಿಸುತ್ತಿದ್ದಾರೋ ಅಂಥ ಸೌಲಭ್ಯಗಳನ್ನೊದಗಿಸಲು ಈ ದಿವಸ ಕೇಂದ್ರ ಸರ್ಕಾರ ಯಾವ ತೆರಿಗೆಗಳನ್ನು ಹಾಕಿರುತ್ತದೆಯೋ ನಾವೂ ಅದೇ ತೆರಿಗೆಗಳನ್ನು ಹಾಕತಕ್ಕದ್ದು ನ್ಯಾಯ ಎನ್ನುವುದನ್ನು ಈಗಾಗಲೇ ಒಪ್ಪಿಕೊಂಡಿದ್ದೇವೆ. ಈ ಹಿಂದೆ ಆ ರೀತಿಯಾಗಿ ಒಪ್ಪಿಕೊಂಡು ಈ ದಿವಸ ನಾವು ಇಂಥ ತೆರಿಗೆಯನ್ನು ಹಾಕುವುದಿಲ್ಲ, ಇದಕ್ಕೆ ಬದಲಾಗಿ ತಾವೇ ಸಹಾಯ ನೀಡಬೇಕು ಎಂದು ಕೇಳಿಕೊಂಡರೆ, ಇಂಥ ಒಂದು ವಾದವನ್ನು ನಾವು ಕೇಂದ್ರ ಸರ್ಕಾರದೊಡನೆ ಹೂಡಿದರೆ, ಕೇಂದ್ರ ಸರ್ಕಾರದವರು ಇದಕ್ಕೆ ಒಪ್ಪುವುದಿಲ್ಲ. ಮತ್ತು ಇಂಥ ಬೇಡಿಕೆಗೆ ಅವರು ಮನ್ನಣನ್ನೂ ಕೂಡ ಕೊಡುವುದಿಲ್ಲ. ಈ ಕಾನೂನಿನ ದೃಷ್ಟಿಯಿಂದ ಮತ್ತು ಎಲ್ಲರಿಗೂ ಆದದ್ದು ನಮಗೂ ಆಗಲೇಬೇಕು ಎನ್ನತಕ್ಕಂಥ ಒಂದು ಧರ್ಮದೃಷ್ಟಿಯಿಂದಲೂ ಕೂಡ ತಾವೀ ದಿವಸ ಈ ಕಾನೂನನ್ನು ಒಪ್ಪಿಕೊಳ್ಳಲೇಬೇಕಾಗಿದೆ. ಈ ಕಾನೂನು ಬಡವರಿಗೆ ಅನ್ವಯಿಸತಕ್ಕದ್ದಲ್ಲ. ಈಗಾಗಲೇ ಬಡ್ಜೆಟ್ ಮತ್ತು ಇತರ ಸಂದರ್ಭಗಳಲ್ಲಿ ಭಾಷಣಗಳನ್ನು ಮಾಡ ವಾಗ ಈ ಸಭೆಯು ನ್ಯಾಯವಾಗಿ ಬಡವನ ಹಿತರಕ್ಷಣೆ ಮಾಡಬೇಕೆಂದು ತಿಳಿಸಿರುತ್ತದೆ. ಈ ತತ್ವವನ್ನು ನಾನೂ ಕೂಡ ಒಪ್ಪಿಕೊಳ್ಳುತ್ತೇನೆ. ಈ ದಿವಸ ಆದಾಯಪಡೆಯತಕ್ಕವರು ಯಾರು ಮತ್ತು ಯಾರಿಗೆ ಈ ತೆರಿಗೆಗಳನ್ನು ಕೊಡುವುದಕ್ಕೆ ಶಕ್ತಿ ಇದೆಯೋ ಅಂಥವರಿಗೆ ಮಾತ್ರವೇ ಈ ತೆರಿಗೆ ಅನ್ವಯಿಸುವುದಾಗಿದೆ. ಈ ತೆರಿಗೆಯನ್ನು ಹಾಕುವುದರಿಂದ ಬಡವರೇನೂ ಯಾವ ಕಷ್ಟ ಕಾರ್ಪಣ್ಯಗಳನ್ನೂ ಅನುಭವಿಸಬೇಕಾಗಿಲ್ಲ. ಈ ತೆರಿಗೆ ಹೆಚ್ಚು ಕಡಿಮೆ ಈ ಅನುಕೂಲಸ್ಥರಾಗಿರತಕ್ಕಂಥವರ ಮತ್ತು ಸಾಹುಕಾರರಾಗಿರುವಂಥವರ ಮೇಲೆ ಬೀಳುತ್ತದೆ. ಈ ದೃಷ್ಟಿಯಿಂದಲೂ ಈ ತೆರಿಗೆಯು ಅಸ್ತಿಭಾರ ನ್ಯಾಯವಾದದ್ದೂ ಮತ್ತು ಸಮತೂಕವಾದದ್ದೂ ಆಗಿದೆ. ಮತ್ತೂ ಒಂದು ದೃಷ್ಟಿಯಿಂದ ಇದು ನ್ಯಾಯವಾಗಿದೆ. ಈ ಇನ್ ಕಂಟ್ಯಾಕ್ಸ್ ಎನ್ನುವುದು ಬಹು ದಿವಸಗಳಿಂದಲೂ ಜಾರಿಯಲ್ಲಿದೆ. ಇದನ್ನು ಈ ದಿವಸ ಈ ಸಂಬಳ ಸಾರಿಗೆ ಬರತಕ್ಕಂಥ ನೌಕರರೂ, ಮಿಲ್‌ಮಾಲೀಕರುಗಳೂ, ಕಾರ್ಖಾನೆಯ ಒಡೆಯರುಗಳೂ ಇಂಥವರೆಲ್ಲರೂ ಕೊಡುತ್ತಿದ್ದಾರೆ. ಇಂಥವರೆಲ್ಲರೂ ಹೀಗೆ ತೆರಿಗೆಗಳನ್ನು ಕೊಡುತ್ತ ದೇಶಾಭಿವೃದ್ಧಿ ಕಾರ್ಯಗಳಿಗೆ ಸಹಾಯಮಾಡುತ್ತಿರುವಾಗ ಈ ವ್ಯವಸಾಯ ಮಾಡತಕ್ಕಂಥವರೂ ತಮ್ಮ ಕಾಣಿಕೆಯನ್ನು ಈ ದೇಶಾಭಿವೃದ್ಧಿಕಾರ್ಯಗಳಿಗೆ ಕೊಡತಕ್ಕಂಥದೂ ನ್ಯಾಯ. ಹೀಗೆ ಈ ಎರಡು ವರ್ಗಗಳಿಗೂ ತೆರಿಗೆ ಹಾಕತಕ್ಕದ್ದು ನ್ಯಾಯ ಎಂದು ಹೇಳಿ ಒಂದು ವರ್ಗಕ್ಕೆ ಮಾತ್ರ ಈಗ ತೆರಿಗೆಯನ್ನು ವಿಧಿಸಿ ಮತ್ತೊಂದು ವರ್ಗಕ್ಕೆತೆರಿಗೆ ಹಾಕದೆ ಹಾಗೆಯೇ ಬಿಟ್ಟುಬಿಟ್ಟಿರುವುದರಿಂದ ಪಕ್ಷಪಾತವಾಗುತ್ತದೆ. ಇಂಥ ಪಕ್ಷಪಾತವನ್ನು ನಿವಾರಣೆ ಮಾಡುವ ಕಾಲ ಈ ದಿವಸ ಬಂದಿದೆ. ಈ ಒಂದು ದೃಷ್ಟಿಯಿಂದಲೂ ನಾವು ಈ ಮಸೂದೆಯನ್ನು ಸ್ವಾಗತಿಸಬೇಕಾಗಿದೆ. ಈಗ ಈ ಇನ್‌ಕಂಟ್ಯಾಕ್ಸ್ ಯೋಜನೆಯಲ್ಲಿ ಹೇಳಿರುವ ಪ್ರಕಾರ ಯಾವ ಯಾವ ರೀತಿಯಲ್ಲಿ ಯಾರುಯಾರಿಗೆ ಏನೇನು ವಿನಾಯಿತಿಗಳನ್ನು ಕೊಡಬೇಕೋ ಮತ್ತು ಈ ತೆರಿಗೆಯ ದರಗಳು ಯಾವರೀತಿ ಇರಬೇಕೋ ಅದೇ ರೀತಿಯಲ್ಲಿ ಈ ಮಸೂದೆಯನ್ನ ಕೂಡ ರಚಿಸಲಾಗಿದೆ. 3,500 ರೂಪಾಯಿಗಳ ಮೇಲ್ಪಟ್ಟ ನಿವ್ವಳ ವರಮಾನವಿರತಕ್ಕಂಥ ವ್ಯವಸಾಯಗಾರರ ಮೇಲೆ ಈ ತೆರಿಗೆ ಬೀಳುತ್ತದೆ. ಈ 3,500 ರೂಪಾಯಿಗಳನ್ನು ಸಂಪಾದಿಸುವಂಥ ಶಕ್ತಿಯನ್ನು ಯಾರು ಪಡೆದಿಲ್ಲವೋ ಅಂಥವರಿಗೆ ಈ ತೆರಿಗೆ ಅನ್ವಯಿಸುವುದಿಲ್ಲ. ಕೇವಲ ಬಡವರನ್ನೇ ಅಲ್ಲದೆ ಈ ಮಿಡಲ್ ಕ್ಲಾಸ್ ಎಂದು ಏನು ಹೇಳುತ್ತೇವೋ ಅಂಥ ಮಧ್ಯಮ ವರ್ಗದ ರೈತರನ್ನೂ ಸಹ ಈ ಮಸೂದೆಯು ವ್ಯಾಪ್ತಿಯಿಂದ ದೂರ ಇಡಲಾಗಿದೆ.

ಅಧ್ಯಕ್ಷರು.—3,500 ರೂಪಾಯಿಗಳು ವರಮಾನ ಬರತಕ್ಕಂಥ ಕಮರ್ಷಿಯಲ್ ಕ್ರಾಪ್ಸ್‌ಗಳೇ.

ಶ್ರೀ ಕೆ. ಹನುಮಂತಯ್ಯ.—ಆಮೇಲೆ ಆ ವಿಚಾರಕ್ಕೆ ಬರುತ್ತೇನೆ. ಈ ದಿವಸ ಮಾನ್ಯ ಸದಸ್ಯರು ಒಂದು ವಾದ ಹೂಡಬಹುದು. ಈಗ ವರಮಾನ ತೆರಿಗೆ ಕೊಡುವವರಲ್ಲಿ ಯಾರುಯಾರಿಗೆ 4,200 ರೂಪಾಯಿಗಳ ಕೆಳಪಟ್ಟು ವರಮಾನವಿರತ್ತೆಯೋ ಅಂಥವರಿಗೆಲ್ಲಾ ಹೇಗೆ ತಾವು ವಿನಾಯಿತಿ ತೋರಿಸಿದ್ದೀರೋ ಅದೇ ರೀತಿ ಈಗ ಈ ತೆರಿಗೆದಾರರಿಗೂ 4,200 ರೂಪಾಯಿಗಳ ಕೆಳಪಟ್ಟ ವರಮಾನವಿರತಕ್ಕಂಥವರಿಗೆಲ್ಲಾ ವಿನಾಯಿತಿ ತೋರಿಸಿ ಎಂದು ತಾವು ಒಂದು ವಾದಮಾಡಬಹುದು. ಆದರೆ ಈ ವಿಚಾರದಲ್ಲಿ ಮಿಕ್ಕ ಸಂಸ್ಥಾನಗಳವರು ಯಾವ ರೀತಿಯಲ್ಲಿ ಈ ವಿನಾಯಿತಿ ಲಿಮಿಟ್ಟನ್ನು ಇಟ್ಟುಕೊಂಡು ಬಂದಿದ್ದಾರೆಂಬ ಅಂಶವನ್ನೂ ಸಹ ನಾನೀಗ ತಮ್ಮೆಲ್ಲರ ಗಮನಕ್ಕೆ ತರಬೇಕಾಗಿದೆ. ಆದರೆ ನಾವು ಈಗಾಗಲೇ ಆ ವಿಚಾರಗಳನ್ನೆಲ್ಲಾ ನೋಡಿ ಅವುಗಳನ್ನೆಲ್ಲಾ ಪರಿಶೀಲನೆ ಮಾಡಿಕೊಂಡು ಅನಂತರ ಈ ಮಸೂದೆಯಲ್ಲಿ ನಾವು ಈ ರೀತಿ ನಿರ್ಧರಮಾಡಿದ್ದೇವೆ. ನಾನು ಈಗಾಗಲೇ ಹೇಳಿರತಕ್ಕಂಥ ಸಂಸ್ಥಾನಗಳು ಸುಮಾರು ಹನ್ನೆರಡಿರುತ್ತವೆ. ಹಾಗೆ ಈ ತೆರಿಗೆಯನ್ನು ಜಾರಿಗೆ ತಂದಿರತಕ್ಕಂಥ ಹನ್ನೆರಡು ಸಂಸ್ಥಾನಗಳಲ್ಲಿ ಒಂದನ್ನು ಬಿಟ್ಟರೆ ಇನ್ನು ಉಳಿದ ಸಂಸ್ಥಾನಗಳೆಲ್ಲಾ ಈ ತೆರಿಗೆ ವಿನಾಯಿತಿ ತೋರಿಸತಕ್ಕಂಥ ಲಿಮಿಟ್ಟನ್ನು 3,000 ರೂಪಾಯಿಗಳಿಗೆ ಇಟ್ಟುಕೊಂಡಿದ್ದಾರೆ.

ಶ್ರೀ ಟಿ. ಮರಿಯಪ್ಪ (ಮೈಸೂರು—ಉತ್ತರ).—ಒರಿಸ್ಸಾ ಮತ್ತು ಬಿಹಾರ್ ?

*Sri K. HANUMANTHAIYA.—When Bihar first levied the tax in 1938, the prescribed exemption limit was Rs. 5,000. The rates were also lower than at present—the minimum was six pies in the rupee on incomes exceeding Rs. 5,000 and the maximum was 30 pies in the rupee on incomes exceeding 15 lakhs. To-day the exemption limit is Rs. 3,000, the minimum rate is nine pies in the rupee with a maximum rate of four annas per rupee for incomes exceeding Rs. 1.5 lakhs and in addition, there is a surcharge on incomes exceeding Rs. 25,000 at rates varying from a minimum of one anna in the rupee on incomes not exceeding Rs. 35,000 to a

(SRI K. HANUMANTHAIYA.)

maximum of five annas and three pies in the rupee on incomes exceeding Rs. 1·5 lakhs. In Travancore-Cochin, the exemption limit was originally fixed at Rs. 2,000 but was later increased to Rs. 3,000. In Bengal also the exemption limit is Rs. 3,000. In Uttar Pradesh also the exemption limit is Rs. 3,000.

Sri T. MARIAPPA.—What is the limit in Orissa ?

Sri K. HANUMANTHAIYA.—My friend asks figures for Orissa. The exemption limit in Orissa has been Rs. 5,000 since the beginning, but the maximum rate has recently been raised from three annas in a rupee to twelve annas and six pies in a rupee. The exemption limit in Madras is Rs. 3,000 and the minimum rate is nine pies and the maximum rate is four annas in the rupee. Hyderabad has the highest exemption limit and the lowest rates of tax. The exemption limit is Rs. 10,000 and the rates vary from six pies to three annas. The exemption limit in Rajasthan is Rs. 6,000 while the rate of tax varies from six pies to two annas and four pies in the rupee. In Coorg, the exemption limit has been fixed at Rs. 3,500 and the minimum rate is six pies in the rupee, the maximum rate being four annas in the rupee.

ಆದುದರಿಂದ ಹೈದರಾಬಾದು ಸಂಸ್ಥಾನ ಬಿಟ್ಟರೆ ಇನ್ನು ಯಾವ ಸಂಸ್ಥಾನವೂ ಕೂಡ ಹತ್ತು ಸಾವಿರ ರೂಪಾಯಿ exemption limit ಇಟ್ಟುಕೊಂಡಿಲ್ಲ. ಮಿಕ್ಕವರು ಆರು ಸಾವಿರ, ಮೂರು ಸಾವಿರ, ಹೀಗೆ ಇಟ್ಟುಕೊಂಡಿದ್ದಾರೆ. Exemption limit ಹೆಚ್ಚಾಗಿದ್ದರೆ, tax structure ನಲ್ಲಿ rates ಹೆಚ್ಚಾಗಿಟ್ಟುಕೊಂಡಿದ್ದಾರೆ. ಮೈಸೂರಿನಲ್ಲಿ ಈಗ ನಾವು ಈ ಮಸೂದೆ ತಂದಿರುವುದರಲ್ಲಿ ಮೂರು ಸಾವಿರ ಇಟ್ಟುಕೊಳ್ಳಬಹುದಾಗಿತ್ತು. ಒಂದು ವೇಳೆ ಸಭಾಸದಸ್ಯರು ಈ limit ಮೂರು ಸಾವಿರ ಸಾಕೆಂದು ಸಲಹೆ ಮಾಡಿದರೆ ಅದನ್ನು ಒಪ್ಪಿಕೊಳ್ಳಬೇಕೆಂಬ ಮನಸ್ಸಿದೆ. ಸಾಮಾನ್ಯವಾಗಿರತಕ್ಕ ಮೂರು ಸಾವಿರ ರೂಪಾಯಿನ exemption limit ನಲ್ಲಿ ಸ್ವಲ್ಪ ರಿಯಾಯಿತಿ ತೋರಿಸಿ ನಾವು 3,500 ರೂಪಾಯಿಗೆ ಏರಿಸಿದ್ದೇವೆ. ಇದೇ ದೊಡ್ಡ ರಿಯಾಯಿತಿ. ಇದಕ್ಕಿಂತಲೂ ದೊಡ್ಡ ರಿಯಾಯಿತಿಯನ್ನು ತಾವು ಬಯಸಿದರೆ ಅದರಿಂದ ಆದಾಯ ಬರುವುದಿಲ್ಲ ಮತ್ತು ನನ್ನ ಭಾಷಣದ ಪೀಠಿಕೆಯಲ್ಲಿ ಹೇಳಿದ ರೀತಿ ನಮ್ಮ ಕರ್ತವ್ಯವನ್ನು ನೆರವೇರಿಸಿದ ಹಾಗಾಗುವುದಿಲ್ಲ. ಇದರ ಜೊತೆಗೆ ಅನೇಕ ಸಂಸ್ಥಾನಗಳಲ್ಲಿ super-tax ಕೂಡ ಇದೆ. ನಾನು ಆಗಲೇ ಹೇಳಿದ ಕೆಲವು ಸಂಸ್ಥಾನಗಳಲ್ಲಿ ಒಂದು limit ಮೇಲೆ super-tax ಕೂಡ ಇದೆ. ಈ ಮಸೂದೆಯಲ್ಲಿ ನಾನು super-tax proposal ತಂದಿಲ್ಲ. ಈ ಎರಡು ದೃಷ್ಟಿಗಳಿಂದ ಈ ಮಸೂದೆ ಹೈದರಾಬಾದು ಬಿಟ್ಟು ಮಿಕ್ಕ ಸಂಸ್ಥಾನಗಳಲ್ಲಿ ಎಷ್ಟು ಕಟ್ಟುನಿಟ್ಟಾಗಿದೆಯೋ ಅಷ್ಟು ಕಟ್ಟುನಿಟ್ಟಾಗಿಮಾಡದೆ ತೆರಿಗೆಯನ್ನು ಕೊಡತಕ್ಕವರ ದೃಷ್ಟಿಯಿಂದ ರಿಯಾಯಿತಿಯನ್ನು ತೋರಿಸಬೇಕಾಗಿದೆ. ಈ ತರಹ ರಿಯಾಯಿತಿ ಸರಿಯೋ ಅಲ್ಲವೋ ಎನ್ನುವುದು ಚರ್ಚೆಯ ವಿಷಯ. ಆ ಚರ್ಚೆಯ ಫಲವಾಗಿ ಈ ಸಭೆಯ ಅಭಿಪ್ರಾಯ ಯಾವ ರೀತಿ ಮಾಡುತ್ತದೆಯೋ ಅದನ್ನು ಸರ್ಕಾರದವರು ಅನುಕರಿಸುವುದಕ್ಕೆ ಸಿದ್ಧರಾಗಿದ್ದಾರೆ.

ಈ ಮಸೂದೆಗೆ Agricultural Income-tax Bill ಎಂದು ಹೆಸರು ಕೊಟ್ಟಿದ್ದರೂ ಕೂಡ ಎಲ್ಲ ವ್ಯವಸಾಯದ ಬೆಳೆಗಳಿಗೂ ಕೂಡ ಅನ್ವಯಿಸುವ ಹಾಗೆ ಇದನ್ನು ತಂದಿಲ್ಲ. ಇದರ ಷೆಡ್ಯೂಲನಲ್ಲಿ ಸೇರಿಸಿರುವ ಬೆಳೆಗಳು ಯಾವುವು ಎಂದರೆ, ಸಾಧಾರಣವಾಗಿ ಎಲ್ಲರೂ ಯಾವ ಬೆಳೆಗಳನ್ನು ವ್ಯಾಪಾರದ ಬೆಳೆಗಳು ಎಂದು ಪರಿಗಣಿಸುತ್ತಾರೋ ಅವುಗಳಿಗೆ ಮಾತ್ರ ಅನ್ವಯಿಸುವ ಹಾಗೆ ಈ ಮಸೂದೆ ರಚಿತವಾಗಿದೆ. ಇತರ ಬೆಳೆಗಳನ್ನು ಇದರ ವ್ಯಾಪ್ತಿಗೆ ಒಳಪಡಿಸಿಲ್ಲ. ಮುಂದೆ ಶ್ರೀಮಾನ್ ಇಮಾಂ ಸಾಹೇಬರ Socialistic ಸರ್ಕಾರ ಬಂದಾಗ ಏನಾದರೂ ಮಾಡಿಕೊಳ್ಳಲಿ. ಇದರಲ್ಲಿ ಪಕ್ಷಪಾತ ತೋರಿಸಬೇಕು ಎನ್ನುವ ಉದ್ದೇಶ ನಮಗೇನೂ ಇಲ್ಲ. ಇದರಲ್ಲಿ ಒಂದು ತರಗತಿಯ ರೈತರಿಗೆ ಮಾತ್ರ ತೆರಿಗೆಯ ಭಾರವನ್ನು ಹೇರಿ ಮಿಕ್ಕವರಿಗೆ ರಿಯಾಯಿತಿ ತೋರಿಸಬೇಕು ಎಂಬ ಉದ್ದೇಶವೂ ಸಹ ಇಲ್ಲ. ಅರ್ಥಶಾಸ್ತ್ರ ತತ್ವಗಳಿಗನುಗುಣವಾಗಿ ಸದ್ಯಕ್ಕೆ ಆಹಾರ ಧಾನ್ಯಗಳ ಮೇಲೆ ತೆರಿಗೆಯನ್ನು ಹಾಕುವುದಕ್ಕೆ ಹೋಗಿಲ್ಲ. ಈ ಅರ್ಥಶಾಸ್ತ್ರತತ್ವ ಇದಕ್ಕೆ ಅನ್ವಯಿಸವಹಾಗೆ ಎರಡು ಬಗೆಯಾಗಿದೆ. ಆಹಾರ ಧಾನ್ಯಗಳನ್ನು ಎಲ್ಲರೂ ಉಪಯೋಗಿಸುತ್ತಾರೆ. As they say in English, it is a common necessity; ಎಲ್ಲರೂ ಉಪಯೋಗಿಸತಕ್ಕ ಪದಾರ್ಥ ಏನಿದೆ ಅದು ಸುಲಭ ಬೆಲೆಯಲ್ಲಿ ದೊರೆತರೆ ಜೀವನ ಸಾಧ್ಯವಾದಷ್ಟು ಸುಗಮವಾಗಿ ನಡೆಯುವುದಕ್ಕೆ ಸಹಾಯವಾಗುತ್ತದೆ. ಈ ದೇಶದಲ್ಲಿ ಬಡವರ ಸಂಖ್ಯೆ ಶೇಕಡ 80-90 ಇದೆ ಎಂದು ನಾವೆಲ್ಲ ಒಪ್ಪಿಕೊಳ್ಳುತ್ತೇವೆ. ಶೇಕಡ 80-90 ಭಾಗ ಇರುವ ಜನರಿಗೆ ಪ್ರತಿ ದಿನ ಅವಶ್ಯಕವಾಗಿ ಬೇಕಾದ ಆಹಾರಪದಾರ್ಥಗಳೇನಿವೆ ಅವು ಸಾಧ್ಯವಾದಷ್ಟು ಕಡಿಮೆ ಬೆಲೆಯಲ್ಲಿ ದೊರಕಿದರೆ ದೇಶದೇಶಕ್ಕೆ ನಾವು ಉಪಕಾರಮಾಡಿದ ಹಾಗಾಗುತ್ತದೆ.

ಎರಡನೆ ತತ್ವ ಆ ಬೆಲೆಗಳು ಸುಮ್ಮನೆ ಮುಗಿಲಿಗೆ ಏರುವ ಹಾಗೆ ಬಿಡಬಾರದು. ಅದನ್ನು inflation ಎನ್ನುತ್ತಾರೆ. ಏರುತ್ತಿರತಕ್ಕ ಬೆಲೆಯನ್ನು ಕಡಿಮೆ ಮಾಡತಕ್ಕದ್ದು ಸರ್ಕಾರದ ನೀತಿ, ಎಲ್ಲರೂ ಪ್ರತಿಪಾದಿಸತಕ್ಕ ನೀತಿ. Agriculture prices are the base prices. Agriculture prices ಹೆಚ್ಚಿದರೆ ಇತರ ಪದಾರ್ಥಗಳ ಬೆಲೆ ಮತ್ತು manufactured articles ಬೆಲೆ ಹೆಚ್ಚಾಗುತ್ತದೆ. ಆಗ ಏನಾಗುತ್ತದೆಂದರೆ ಇದಕ್ಕೆ ಹೆಚ್ಚು ಬೆಲೆ ಕೊಟ್ಟರೆ, ಅದನ್ನೂ ಹೆಚ್ಚು ಬೆಲೆ ಕೊಟ್ಟು ಕೊಂಡುಕೊಳ್ಳಬೇಕಾಗುತ್ತದೆ. ಅದು ಒಂದು vicious circle ಆಗುತ್ತದೆ.

"It is the opinion of almost all economists that these base prices, agricultural prices, must be kept down as far as possible."

ಆದರೆ ಹಾಗೆ ಹೇಳಿದ ಮಾತ್ರಕ್ಕೆ ಆದಾಯ ಲವಲೇಶವೂ ಬರದೆ ಇರತಕ್ಕ ಬೆಳೆಗಳನ್ನು ನಿಗದಿ ಮಾಡಬೇಕು ಎಂದಲ್ಲ. Remunerative prices ಎಂದು ಏನು ನಿಗದಿಮಾಡುತ್ತೇವೋ ಅದು ಆದಷ್ಟು ಕಡಿಮೆಯಾಗಿರಬೇಕು ಎನ್ನುವುದೇ ಮುಖ್ಯ ಉದ್ದೇಶ. ಆಹಾರಧಾನ್ಯಗಳಮೇಲೆ ಬೆಲೆಯನ್ನು ಹೆಚ್ಚುಮಾಡಿದರೆ ಉಳಿದ ಎಲ್ಲ ಪದಾರ್ಥಗಳ ಬೆಲೆಗಳೂ ತಮ್ಮಷ್ಟಕ್ಕೆ ತಾವೇ ಹೆಚ್ಚುತ್ತವೆ. ಆರೀತಿ ಮಾಡತಕ್ಕಂಥದ್ದು ಅಷ್ಟು ಸೂಕ್ತವಾದದಲ್ಲವೆನ್ನುವುದು ನನ್ನ ವೈಯಕ್ತಿಕ ಅಭಿಪ್ರಾಯ. ಅದನ್ನು ಸಭೆಯವರು ಒಪ್ಪುತ್ತಾರೆಯೋ ಇಲ್ಲವೋ ಗೊತ್ತಿಲ್ಲ. ಈ ರೀತಿ ಬೆಲೆಗಳನ್ನು ಕಡಿಮೆ ಮಾಡುವ ದೃಷ್ಟಿಯಿಂದ ಆಹಾರಧಾನ್ಯಗಳ ಮೇಲೆ ಈ ತೆರಿಗೆ ಏನು ಹಾಕಬೇಕೆಂದಿದ್ದೆವೋ ಅದನ್ನು ಹಾಕುವುದು ಸೂಕ್ತವಲ್ಲವೆಂದು ನನ್ನ ಸಲಹೆ.

ಮತ್ತೊಂದು ತತ್ವ ಇದೆ. ಆಹಾರ ಸಾಮಗ್ರಿಗಳ ಬೆಲೆ ಯುದ್ಧಕಾಲದಲ್ಲಿ ಹೆಚ್ಚಾದದ್ದರಿಂದ, ಮಿತಿಮೀರಿ ಏರಿದ್ದರಿಂದ ನಾವು ಸರ್ಕಾರದ ನೌಕರರಿಗೆ ಮತ್ತು ಕಾರ್ಮಿಕರಿಗೆ High Price Allowance ಮತ್ತು Dearness Allowance ಇವುಗಳನ್ನು ಕೊಡಬೇಕಾಯಿತು. ಹೋದ ತಿಂಗಳಿನಲ್ಲಿ ಸಭೆಯ ಅನುಮತಿಯ ಪ್ರಕಾರ High Price Allowanceನ್ನು ಸರ್ಕಾರದವರು ತೆಗೆದುಹಾಕಿದರು. ಅದಕ್ಕೆ ಒಂದು ಕಾರಣ ಆಹಾರಧಾನ್ಯಗಳ ಬೆಲೆ ಕಡಿಮೆಯಾಗುತ್ತ ಇರುವುದು ಎಂದು ಹೇಳಿದ್ದೆ. ಆ ಮಾರ್ಗವನ್ನು ನಾವು ಅನುಸರಿಸಿ ಈ ದಿವಸ ಆಹಾರ ಪದಾರ್ಥಗಳ ಬೆಲೆಯನ್ನು ಅನಾವಶ್ಯಕವಾಗಿ ಹೆಚ್ಚುಮಾಡತಕ್ಕದ್ದು ಸರಿಯಲ್ಲವೆಂದು ವಾದಿಸುತ್ತಿದ್ದೇನೆ. ನಾವು ಉಪಯೋಗಿಸಿರತಕ್ಕ ಅನಾವಶ್ಯಕ ಎಂಬ ಮಾತನ್ನು ತಾವು ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕು. ಈ ರೀತಿ ಆಹಾರಧಾನ್ಯಗಳ ಬೆಲೆಯನ್ನು ಅನಾವಶ್ಯಕವಾಗಿ ಹೆಚ್ಚಿಸಿದರೆ ಸಂಬಳಸಾರಿಗೆಗಳನ್ನು ಕೊಡತಕ್ಕವರಿಗೆ, ಸರ್ಕಾರಿ ನೌಕರರಿಗೆ ಕಾರ್ಮಿಕರಿಗೆ ಕಷ್ಟವಾಗಿ living index figure ಹೆಚ್ಚುತ್ತದೆ. ಮುಕ್ಕಾಲು ಪಾಲು ಜನ ಸರ್ಕಾರಿ ನೌಕರರು, ಕಾರ್ಮಿಕರು ಬಡವರೂ ಇದ್ದಾರೆ. ಇವರ ಆದಾಯ ತಿಂಗಳಿಗೆ ಸುಮಾರು 100 ರೂಪಾಯಿ ಮೇಲೆ ಇರುವುದಿಲ್ಲ. ಅದಕ್ಕೆ ಇಂಥ ಕಾರ್ಮಿಕರು ಮತ್ತು ನೌಕರರು, ಸರ್ಕಾರದ ಅಧಿಕಾರದಲ್ಲಿರಲಿ, ಕೈಗಾರಿಕಾ ಕ್ಷೇತ್ರದಲ್ಲಿರಲಿ, ಎಲ್ಲೇ ಇರಲಿ ಆಹಾರಪದಾರ್ಥಗಳ ಮೇಲೆ ತೆರಿಗೆ ಹಾಕುವುದರಿಂದ ಇವರುಗಳಮೇಲೂ ಸಹ ಹೊರೆ ಹೇರಿದಹಾಗೆ ಆಗದೆ ಇರಲಿ ಎನ್ನುವುದೂ ಒಂದು ಉದ್ದೇಶ. ಆದ್ದರಿಂದ ಈ ಆಹಾರಧಾನ್ಯಗಳ ಮೇಲೆ ನಾನು ಈ ತೆರಿಗೆಯನ್ನು ವಿಧಿಸಬೇಕು ಎಂಬ ಸಲಹೆಯನ್ನು ಈ ಮಸೂದೆಯಲ್ಲಿ ತಂದಿಲ್ಲ.

ಇನ್ನು ನಾನು ಈ ದಿವಸ ಮಸೂದೆಯಲ್ಲಿ ಸೇರಿಸಿರತಕ್ಕ ಬೆಳೆಗಳು ಯಾವುವೆಂದರೆ ಕಾಫಿ, ಟಿ, ರಬ್ಬರ್, ಬಾಳೆಹಣ್ಣು, ಮಾವಿನಹಣ್ಣು, ಹೊಗೆಸೊಪ್ಪು, ಈರುಳ್ಳಿ, ಬೆಳ್ಳುಳ್ಳಿ ಇತ್ಯಾದಿ ಹೀಗೆ ಯಾವ ಬೆಳೆಗಳು ಲಾಭಕ್ಕೋಸ್ಕರ, ವ್ಯಾಪಾರಕ್ಕೋಸ್ಕರ ಬೆಳೆಯುತ್ತಾರೋ ಅಂಥ ಬೆಳೆಗಳಮೇಲೆ ಮಾತ್ರ ಈ ತೆರಿಗೆಯನ್ನು ತಂದಿದ್ದೇವೆ.

ಒಬ್ಬ ಸದಸ್ಯರು.—ಹೂವಿನ ಮೇಲೂ ಹಾಕಿದ್ದೀರಲ್ಲ.

ಶ್ರೀ ಕೆ. ಹನುಮಂತಯ್ಯ.—ಎಲ್ಲಾ ಹೂವುಗಳನ್ನೂ ಇದರಲ್ಲಿ ಸೇರಿಸಿಲ್ಲ. ನಮಗೆ ತಿಳಿದಿರುವ ಹಾಗೆ ದೇವನಹಳ್ಳಿ ತಾಲ್ಲೂಕಿನಲ್ಲಿ ಅನೇಕ ಎಕರೆಗಳಲ್ಲಿ ಸುಗಂಧರಾಜ ಹೂವು ಬೆಳೆಯುತ್ತಾರೆ. ಒಂದು ಎಕರೆಗೆ 5-6 ಸಾವಿರ ರೂಪಾಯಿ ಸಂಪಾದನೆಮಾಡುತ್ತಿದ್ದಾರೆ. ಆದ್ದರಿಂದ ಇದರಲ್ಲಿ ವಿಶೇಷ ಲಾಭವಿವೆ ಎನ್ನುವ ದೃಷ್ಟಿಯಿಂದ ಇದನ್ನು ತಂದಿದ್ದೇವೆಯೇ ಹೊರತು ಮಲ್ಲಿಗೆ, ಸಂಪಿಗೆ, ರೋಜಾ ಇತ್ಯಾದಿ ಹೂವುಗಳಮೇಲೆ ತಂದಿಲ್ಲ. ಈ ಸಭೆಯಲ್ಲಿ ಯಾವುದಾದರೂ ಹೂವುಗಳ ಮೇಲೆ ಈ ತೆರಿಗೆ ಅನಾವಶ್ಯಕವೆಂದು ಹೇಳಿದರೆ ಅದನ್ನು ಪರಿಶೀಲನೆಮಾಡೋಣ.

ಹೋದ ಮಸೂದೆ ಬಂದಾಗ ಎದುರುಗಡೆ ಇರತಕ್ಕ ಮಾನ್ಯ ಸದಸ್ಯರು Select Committeeಗೆ ಹಾಕಿ ಎಂದರು. ಅದನ್ನು ನಾನು ಮನಸ್ಸಿನಲ್ಲಿಟ್ಟುಕೊಂಡು ಇದನ್ನು ಸೆಲೆಕ್ಟ್ ಕಮಿಟಿಗೆ ಹಾಕಲು ಸೂಚಿಸುತ್ತೇನೆ. ಆಗ ಅದನ್ನು ಪರಿಶೀಲನೆಮಾಡುವುದಕ್ಕೆ ಸಾಧ್ಯವಾಗುತ್ತದೆ. ಸರ್ಕಾರಕ್ಕೂ ಕೂಡ ಸೂಕ್ತ ಸಲಹೆಗಳನ್ನು ಕೊಟ್ಟು ಸಹಾಯಮಾಡುವುದಕ್ಕೆ ಅವಕಾಶವಾಗುತ್ತದೆ.

ಈ ಮಸೂದೆಯಲ್ಲಿ ನಾಲ್ಕೈದು ವಿಷಯಗಳು ಬಹಳ ಅನುಕೂಲವಾದುದಿವೆ. ಮೊದಲನೆಯದು tax ಕೊಡತಕ್ಕವನು compound ಮಾಡಿಕೊಳ್ಳುವುದಕ್ಕೆ ಅವಕಾಶವನ್ನುಂಟುಮಾಡಿದೆ. ಅನೇಕವೇಳೆ ಎಷ್ಟೇ ದೊಡ್ಡ ರೈತನಾಗಿರಲಿ ಲೆಖ್ಖ ಪುಸ್ತಕಗಳನ್ನು ಕರಾರುವಾಕ್ಕಾಗಿ ಇಟ್ಟುಕೊಳ್ಳದೆ ಇರಬಹುದು.

4 30 P.M.

ಅಂಥವರು ಪ್ರಾಮಾಣಿಕರಾಗಿಯೇ ಇರಬಹುದು. ಲೆಕ್ಕ ಇಡದಾಕ್ಷಣ ಅವರು ಪ್ರಾಮಾಣಿಕರಲ್ಲವೆಂದು ಆಪಾದನೆ ಮಾಡುವುದಕ್ಕಾಗುವುದಿಲ್ಲ. ಹಾಗೆಯೇ, ಲೆಕ್ಕ ಕೊಡುವವರೆಲ್ಲರೂ ಸರಿಯಾಗಿಯೇ ಲೆಕ್ಕ ವಿಡುತ್ತಾರೆಂದೂ ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಲೋಕ ವ್ಯವಹಾರ ದೃಷ್ಟಿಯಿಂದ ನಾವು ಈ ದಾರಿಯಲ್ಲಿ ಹೋಗಬೇಕು: ಜನರಿಗೆ, ತೆರಿಗೆ ಕೊಡುವವರಿಗೆ ತೊಂದರೆಯೂ ಆಗಕೂಡದು, ಸರ್ಕಾರದವರಿಗೂ ಆದಾಯ ಬರಬೇಕು. ಈ ದೃಷ್ಟಿಯಿಂದಲೇ 63 ನೆಯ ಸೆಕ್ಷನ್ನಿನಲ್ಲಿ Composition of Agricultural Income Tax ಎಂದು ಹೇಳಿ ಒಂದು ರಿಯಾಯಿತಿಯನ್ನು ಅಡಕ ಮಾಡಿದೆ. ಇಷ್ಟು ಎಕರೆ ಇದ್ದು, ಒಂದು ವೇಳೆ ಲೆಕ್ಕವಿಡದೆ ಇದ್ದರೆ ಸಂಬಂಧಪಟ್ಟ taxing ಅಧಿಕಾರಿಯೂ ಅವರೂ ಕುಳಿತುಕೊಂಡು ಸಮಾಲೋಚನೆ ಮಾಡಿ ಅವರ ಆದಾಯವನ್ನು ಊಹಿಸಿ ಕೊನೆಗೆ ಇಷ್ಟು ತೆರಿಗೆ ಕೊಡಬೇಕೆಂದು ಹೇಳಿ ನಿಗದಿ ಮಾಡುವುದಕ್ಕೆ ಅವಕಾಶವಿದೆ. ಈ ಸೆಕ್ಷನ್ನಿನಿಂದ, ಲೆಕ್ಕ ಇಡಲೇಬೇಕು, ಇಡದೆ ಇದ್ದರೆ ತೊಂದರೆ ಬರುತ್ತದೆ ಎನ್ನತಕ್ಕ ವಾದಕ್ಕೆ ಬಹಳ ಮಟ್ಟಿಗೆ ಪರಿಹಾರ ದೊರೆತಂತಾಗುತ್ತದೆ. ಇದರ ಜೊತೆಗೆ, ಲೆಕ್ಕ ಇಡತಕ್ಕಂತ ಹದು ಇದೆ, ಪ್ರತಿಯೊಬ್ಬರೂ ಕಡ್ಡಾಯವಾಗಿ ಇಡಲೇಬೇಕು ಎಂಬ ಕಟ್ಟುನಿಟ್ಟಾದ ನೀತಿಯನ್ನು ನಾವು ಅಷ್ಟಾಗಿ ಅನುಸರಿಸಿಂದತಾಗುವುದಿಲ್ಲ. ನಮ್ಮ ಜನಗಳ ವ್ಯವಹಾರ, ನಡವಳಿಕೆ ಇವುಗಳಿಗೆ ಹೊಂದಿಕೊಂಡು ಕಿರುಕುಳವುಂಟಾಗದಂತೆ ನೋಡಿಕೊಳ್ಳುವುದಕ್ಕಾಗಿ 63 ನೆಯ ಸೆಕ್ಷನ್ನನ್ನು ಸೇರಿಸಿದ್ದಾಗಿದೆ.

ಮತ್ತೊಂದು ಸೆಕ್ಷನ್ನಿನಲ್ಲಿ, ಒಂದು ವರ್ಷ ಬೆಳೆಗಳಿಂದ ಆದಾಯ ಬಂದು ಮೂರನೆಯ ವರ್ಷ ಬೆಳೆಗಳಿಂದ ಏನೂ ಆದಾಯ ಬಾರದೆ ಇದ್ದರೆ, ಆದಾಯ ಬಂದ ವರುಷ ತೆರಿಗೆ ಕೊಟ್ಟುಬಿಡಿ, ಬರದಿರುವ ವರುಷ ತೆರಿಗೆ ಕೊಡಬೇಕಾಗಿಲ್ಲವೆಂಬುದು ಸರಿಯಾದ ನೀತಿಯಾದರೂ ಕೂಡ, ರೈತನಿಗೆ ಒಂದು ರಕ್ಷಣೆ ಕೊಟ್ಟಿದೆ. ಒಂದು ವರ್ಷ ಆದಾಯ ತೆರಿಗೆ ಕೊಟ್ಟು ಮುಂದಿನ ವರ್ಷ ಪೂರ್ತಿ ಬೆಳೆಯದೆ ಹೋದರೆ, ಕೊಟ್ಟ ತೆರಿಗೆ

ಯಲ್ಲಿ ರಿಯಾಯಿತಿ ಕೊಡುವುದಕ್ಕೆ ಏರ್ಪಾಡು ಮಾಡಿದೆ. ಇದಕ್ಕಾಗಿ ಆರುವರ್ಷಗಳ ಒಂದು ಯೂನಿಟ್ ಮಾಡಿದೆ. ಆರು ವರ್ಷಗಳಲ್ಲಿ ಕೆಲವು ವರ್ಷಗಳಲ್ಲಿ ಬೆಳೆ ಕೆಟ್ಟುಹೋಗಿ ಕೆಲವು ವರ್ಷಗಳು ಬೆಳೆಯಾದರೆ, ಅದರ ಮೇಲೆ ಲೆಕ್ಕಾಚಾರಹಾಕಿ ಎಷ್ಟು ತೆರಿಗೆ ತೆಗೆದುಕೊಳ್ಳಬೇಕೋ ಅಷ್ಟು ಮಾತ್ರ ತೆಗೆದುಕೊಳ್ಳುತ್ತೇವೆ. ಉದಾಹರಣೆಗೆ, ಮೂರು ವರ್ಷ ಚೆನ್ನಾಗಿ ಬೆಳೆಯಾಗಿ ತೆರಿಗೆ ಕೊಟ್ಟರೆ, ಇನ್ನು ಮೂರು ವರ್ಷ ಬೆಳೆಯಾಗದಿದ್ದರೆ, ಆಗ ಆ ಮೂರು ವರ್ಷವೂ ತೆಗೆದುಕೊಳ್ಳುವುದು ಸರಿಯಲ್ಲವೆಂದು ನಿರ್ಧರಿಸುವುದಕ್ಕೆ ಇದರಲ್ಲಿ ಅವಕಾಶವಿದೆ. 12 ನೆಯ ಸೆಕ್ಷನ್ನಿನಲ್ಲಿ ಈ ರೀತಿ ಹೇಳಿದೆ:

"12. Carrying forward of loss.—Where any person sustains a loss in agricultural income in any year, the loss shall be carried forward to the following year and set off against the agricultural income for that year and if it cannot be wholly so set off, the amount of loss not so set off shall be carried forward to the following year and so on; but no loss shall be carried forward for more than six years:

Provided that, in the case of loss sustained before the commencement of this Act, this section shall apply only to such loss as was sustained in the previous year immediately before such commencement."

ಆದ್ದರಿಂದ ಬೆಳೆಯತಕ್ಕವನಿಗೆ ಬಹುಭಾಗಿ ಈ 12 ನೆಯ ಸೆಕ್ಷನ್ನಿನಿಂದ ರಕ್ಷಣೆ ದೊರಕಿದೆಯೆಂಬುದನ್ನು ತಾವು ಒಪ್ಪಿಕೊಳ್ಳಬೇಕು.

ಈ ದಿವಸ ನಾವೆಲ್ಲರೂ ಒಂದು ಸಮತಾವಾದ ಸಮಾಜ ರಚನೆಯಾಗಬೇಕೆಂಬ ಧ್ಯೇಯವನ್ನು ಒಪ್ಪಿಕೊಂಡಿದ್ದೇವೆ. ಬಡವರಿಗೂ ಸಾಹುಕಾರರಿಗೂ ಇರತಕ್ಕ ಅಂತರ ಕಡಮೆಯಾಗಬೇಕಾದದ್ದು ಅದರ ತಿರುಳು, ತತ್ವ. ಆ ತತ್ವಕ್ಕನುಗುಣವಾಗಿ ಈ ಮಸೂದೆ ಬಂದಿದೆ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಬಡವರಿಗೆ exemption ಸಿಕ್ಕುತ್ತದೆಯೋ ?

ಶ್ರೀ ಕೆ. ಹನುಮಂತಯ್ಯ.—ಆಗಲೇ ಅದರ ವಿಚಾರ ಹೇಳಿದ್ದೇನೆ.

ಆದ್ದರಿಂದ ಈ ಸಭೆಯವರು ಇಂಥ ಬಹಳ ಸೂಕ್ತವಾದ ಮಸೂದೆಯನ್ನು ಸಂತೋಷದಿಂದ ಸರ್ವಾನುಮತದಿಂದ ಒಪ್ಪಿಕೊಳ್ಳಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮುರು).—ಸೋಷಿಯಲಿಸ್ಟರೇ oppositionನ್ನಿನವರಾಗಿರುವುದರಿಂದ, ಅವರು oppose ಮಾಡುವುದೇ ಇಲ್ಲ ವೆಂದು ಹೇಳಬಹುದು.

Mr. SPEAKER.—Motion moved:

"That the Mysore Agricultural Income-Tax Bill, 1955 be taken into consideration."

Sri J. MOHAMED IMAM (Jaglur).—Sir, it is nearly 5 o'clock. We would like to digest the Chief Minister's speech. It is better that this Bill is taken up tomorrow, Sir.

Sri K. HANUMANTHAIYA.—I will suggest a way.

ಈ ಬಿಲ್ಲನ್ನು ಅವರು ಚರ್ಚೆ ಮಾಡಬೇಕಾದದ್ದು ನ್ಯಾಯ, ಚರ್ಚೆ ಮಾಡುತ್ತಾರೆ. ಆದರೆ ಚರ್ಚೆ ಮಾಡುವುದೇನಿದ್ದರೂ final stage ನಲ್ಲಿ ಮಾಡುವುದು ಸೂಕ್ತ. Consideration stage ನಲ್ಲಿ ಏನೂ ಬೇಕಾಗಿಲ್ಲ. ನಾನಿದನ್ನು ಸೆಲೆಕ್ಟ್ ಕಮಿಟಿಗೆ move ಮಾಡುತ್ತೇನೆ. ಆಗ ಮಾತನಾಡಬಹುದು. ಇಲ್ಲದಿದ್ದರೆ ಈ ಫೈನಾನ್ಸ್ ಬಿಲ್ ಪಾಸಾಗುವುದಕ್ಕೆ ಬಹಳ ಕಾಲ ಹಿಡಿಯುತ್ತದೆ.

* Sri J. MOHAMED IMAM.—The Bill requires a full dressed debate at the consideration stage alone. ಇದು socialism ಅಲ್ಲ ಎಂದು ಹೇಳಿ ನಾವಿದನ್ನು ವಿರೋಧಿಸಬೇಕೆಂದಿದ್ದೇವೆ. As a Socialist, I am going to oppose this Bill, because it is not socialism. At the consideration stage, the Bill requires a full dressed debate. ಆಮೇಲೆ ಸೆಲೆಕ್ಟ್ ಕಮಿಟಿಗೆ ಹೋಗುವಾಗ ಹೆಚ್ಚಿಗೆ ಕಾಲ ತೆಗೆದುಕೊಳ್ಳುವುದಿಲ್ಲ. ಈಗ ಸ್ವಲ್ಪ ಹೆಚ್ಚಿಗೆ ಕಾಲಾವಕಾಶ ಬೇಕು.

Mr. SPEAKER.—I want to bring to the notice of the Hon'ble Members that it is necessary to fix up some time limit before it is sent to the Select Committee. The Government has already agreed to refer the Bill to the Select Committee. There are four stages of the Bill. One is the 'consideration' stage, that is, before sending it to the Select Committee. The second stage is: the Bill will come up for consideration after the Select Committee. The third stage is discussion of the Bill, clause by clause. The fourth stage is passing the Bill.

Sri J. MOHAMED IMAM.—At the introduction stage, much time will not be taken up. It is only at the consideration stage, that there should be detailed and full dressed debate. So far as the discussions on the Bills are concerned, I submit with all humility and it is the practice also, that the members will be in a position to express their full view as far as possible,

provided the speeches and the arguments are relevant. I think full time must be given. Necessary speeches should not be cut down unless the Chair feels that we refer to irrelevant points. I submit that this Financial Bill is a very important measure which affects the interests of the country, and we do not want to rush through it in a hurry. At the consideration stage, I request you to kindly give us some latitude. When it is referred to a Select Committee, then, I think, the Chair my use its discretion and allow discussion.

Mr. SPEAKER.—I would like to draw the attention of the Hon'ble the Leader of the Opposition to the procedure laid down in the Rules of Procedure and Conduct of Business with regard to Financial Bills. It is specifically mentioned there that the time has to be limited. Of course, with due consideration to the importance of the Bill that is before us. Supposing if all the hundred members want to speak at every stage, as the Hon'ble Member wants me to allow, it may not be possible to complete the speeches not only in this session but even in the next session.

Mr. A. BHEEMAPPA NAIK.— Mr. Speaker, I want to know whether the general principles involved in the Bill are accepted. As regards the particular clauses of the Bill to be amended, that is a different stage. Even to accept the general principles of the Bill, one or two hours may be given either today or tomorrow. If the general principles are accepted, then the Bill will go to the Select Committee where detailed discussion on each clause will be gone through. The Leader of the Opposition might be allowed to speak on the general principles of the Bill. It is better some time is given to him. . .

Sri J. MOHAMED IMAM.—It is only at the consideration stage we can cover all the grounds. When it is moved for reference to the Select Committee, then the scope of discussion would, be restricted. Consideration stage is the most important stage.

Mr. SPEAKER.—So we shall take up this Bill tomorrow and send it to the Select Committee. As the Leader of the Opposition puts it, there is very little now to speak.

Sri J. MOHAMED IMAM.—I do not think we will be able to finish it, tomorrow. Anyway we will do our best to cover all the grounds.

Mr. SPEAKER.—I do not think we can speak much over the Bill.

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಮಾತನಾಡುವುದಿದ್ದರೆ ಈ ದಿವಸವೇ ಇನ್ನೂ ಅರ್ಧ ಘಂಟೆ ಹೆಚ್ಚಿಗೆ ಕುಳಿತುಕೊಂಡು ಮಾತನಾಡಬಹುದು.

ಶ್ರೀ ಜೆ. ಮಹಮ್ಮದ್ ಇಮಾಂ.—ಮಾತನಾಡುವುದಕ್ಕೆ ಅಭ್ಯಂತರವಿಲ್ಲ, ಆದರೆ, ಚೀಫ್ ಮಿನಿಸ್ಟರು controversial ಬಿಲ್ಲನ್ನು ಮಂಡಿಸಿದ್ದಾರೆ. ಇದನ್ನು ಅರ್ಥ ಮಾಡಿಕೊಂಡು ಹೇಳಬೇಕು. I must improve this Bill. We were all under the impression that the whole of today will be taken up for the discussion of the District Boards and Village Panchayets (Amendment) Bill. We never knew that this Bill would be taken up.

5 P.M.

***Sri K. HANUMANTHAIYA.**—Sir, in any case, I have no objection if Members want time to speak at this stage. What I am particular about is that the Rules must be observed and Rules authorise you to fix up the time for various stages of this Bill and we cannot take much time, because, we are at the tail-end of the Session, and there are so many important Bills like the Univessity Bill. All these measures have to be passed before we rise. Taking the future business into consideration, you can kindly fix the time. One day for general discussion would be more than enough and if necessary, if some Members want to speak upon it, let us sit over-time even after Five. At the conclusion of tomorrow's meeting at five o'clock or ten o'clock, it must be referred to the Select Committee. That is all, I am particular about.

***Sri M. V. RAMA RAO (Tumkur).**—Sir, the Hon'ble the Chief Minister referred to some rule which authorises the fixation of time-limit for the various stages of the legislative measure under discussion. It is not quite clear which rule he was referring to; and in any case, it is very doubtful whether time-limit as such can be prescribed for the

(SRI M. V. RAMA RAO.) discussion of a legislative measure during its various stages. It may no doubt be possible to arrive at an understanding either within the precincts of this House or outside in the Party to which the Members happen to belong, about the length of time that may be desirable to be devoted for the discussion of the various stages of the Bill. But if it is proposed to deal with this point with a view to authorise the Speaker to fix a time-limit for a particular stage of the consideration of the Bill, or with a view to commence imposing the time-limit upon the duration of speeches on a legislative measure, the matter appears to be so important that I would suggest that the Speaker should examine the position not only with reference to our own Rules of Procedure but also with reference to prevailing parliamentary practice both at the Centre and in the neighbouring provinces. If discussion on a legislative measure can be curtailed in the manner suggested, it may lead to strange results and I do not know exactly what the Chief Minister had in mind when he referred to the particular instance which he did not cite as a matter of fact. But if he has any particular rule in mind, and if he would only cite, it would enable the members to understand the exact position which he is visualising.

SRI K. HANUMANTHAIYA.—Sir, whatever proposal I make, the Hon'ble Member always begins with a doubt. That is a welcome sign, because, doubt is the beginning of wisdom. I thought he was so wise and learned that he knew the Rules. In fact when the Leader of the House and especially when the Leader of the Party to which he belongs, makes a statement, at least party discipline requires that he must accept it unless he is in a position to controvert it. These things are happening in the usual fashion and I can only pray that things will improve later.

Sir, I need not take the time of the House and I merely bring to your notice Rules 131 and 133. The Hon'ble Member can read these Rules at leisure.

MR. SPEAKER.—Rules do give power to the Speaker to prescribe time-limit for the various stages of the Bill.

*SRI J. MOHAMED IMAM.—What I would submit is this, Sir. We are all under the protection of the Chair. We are expected to deliberate on such measures which affect the destiny of the people and specially a finance bill or any taxation measure is such that it is going to be permanently on the Statute Book and we are going to impose a permanent burden on the people. Such being the importance of this Bill, the Members of this House who form the representatives of the people and who are expected to guard their interests, will be very anxious to take part in the debate and to express their full and unfettered views. Regarding the importance of the Bill, there are no two opinions. But what is the time to be allotted for a discussion of this Bill is left to the discretion of the Speaker according to Rules. This Rule says:

> "131 : (1) In this rule "Finance Bill" means the Bill ordinarily introduced in each year to give effect to the financial proposals of the Government for the next following financial year and includes a Bill to give effect to supplementary financial proposals for any period.
>
> (2) At any time after the introduction in the Assembly of a Finance Bill, the Speaker may allot a day or days jointly or severally, for the completion of all or any of the stages involved in the passage of the Bill. . . ."

So, the entire discretion as to the number of days to be allotted, is left to the Speaker. So, I appeal to the Speaker that, taking into consideration the importance of this Bill and the interest the Members have been evincing in this Bill, I appeal that sufficient time may be allotted for the consideration of this Bill.

Secondly, Sir, the Chief Minister was pleased to suggest one day and you were also good enough to say that we may sit over-time. I submit in all himility that this time suggested is

inadequate taking into consideration the importance of the Bill and taking into consideration the number of members that would like to take part in the debate and express their views. So, I submit that at least two clear days may be set apart for the consideration stage and then the next stage would be to refer the Bill to the Select Committee. For that I will be satisfied if one day is allotted. So, I request that at least a minimum of three days may be allotted—two days for the consideration and one day for referring to the Select Committee. The third stage is a formal affair and that arises only when the Bill is returned from the Select Committee and when their report is received. So, I submit that one day is hardly sufficient for this Bill. It is my view that at least two days should be allotted for the consideration of this Bill and for the stage of reference to Select Committee. I will be satisfied with half a day. Sir, it is going to affect the future of the State and it is going to impose a permanent burden on the people. So I request that members must be given ample scope to express the opinion of the people's voice for whom they have dedicated their life.

Tamil New Year's Day.

Mr. SPEAKER.—There was a request from some Hon'ble friends regarding Tamil New Year's Day tomorrow. I am sorry, I cannot comply with the request.

The House will now rise and meet at 12 NOON tomorrow.

The House adjourned at Ten Minutes past Five of the Clock to meet again at Twelve of the Clock on Thursday, the 14th April 1955.

WD 4508—GPB—550—26-9-55

MYSORE LEGISLATIVE ASSEMBLY.

FORTY-FIRST DAY.

Thursday, 14th April 1955.

The House met at Twelve of the Clock in the Assembly Hall, Old Public Offices, Bangalore.

MR. SPEAKER (SRI H. S. RUDRAPPA, B.Sc., LL.B.) in the Chair.

QUESTIONS AND ANSWERS.

Mr. SPEAKER.—Sri Imam. Question No. 275.

(The Chief Minister had not yet arrived).

Sri A. G. RAMACHANDRA RAO (Minister for Law and Education).—Sir, the next question may be taken up. The Hon'ble the Chief Minister will be coming in a few minutes.

Mr. SPEAKER.—Yes.

Reports in "Prajavani" on one of the colleges at Mysore.

Q.—859. Sri S. SRINIVASA IYENGAR (T.-Narsipur).—

Will the Government be pleased to state:—

(*a*) whether their attention has been drawn to the reports about 'Bhogavilas' in one of the Colleges at Mysore, in *Prajavani* very recently;

(*b*) whether their attention has also been drawn to the letters from readers about this subject in the issue of *Prajavani* dated 23rd March 1955?

A.—Sri A. G. RAMACHANDRA RAO (Minister for Law and Education).—

(*a*) Yes.

(*b*) Yes.

Sri S. SRINIVASA IYENGAR.—May I know what action the Government have taken in this matter?

Sri A. G. RAMACHANDRA RAO.—The University has taken action. They have appointed a Committee and the Committee is going into that matter.

Sri S. SRINIVASA IYENGAR.—What are the terms of reference to the Committee, Sir?

Sri A. G. RAMACHANDRA RAO.—I have not received any copy of the terms of reference from the University.

Sri S. SRINIVASA IYENGAR.—What is that that the University is going to enquire into, Sir?

Sri A. G. RAMACHANDRA RAO.—Allegations in the Press against some of the staff and students of Maharaja's College, Mysore—that was the subject matter which was discussed by the University Council. They have appointed a Committee to go into the matter.

Sri S. SRINIVASA IYENGAR.—Are the Committee empowered to take evidence on oath?

Sri A. G. RAMACHANDRA RAO.—Not that I am aware of.

Sri S. SRINIVASA IYENGAR.—What do the Government propose to do in this connection?

Sri A. G. RAMACHANDRA RAO.—We propose to wait for the report and then we will consider the matter.

Sri S. SRINIVASA IYENGAR.—Are the Government aware that the confidence of the people has been shaken by this incident?

Sri A. G. RAMACHANDRA RAO.—No.

Sri S. SRINIVASA IYENGAR.—Will the Government at least ascertain whether it is so?

Sri A. G. RAMACHANDRA RAO.—From whom?

Sri S. SRINIVASA IYENGAR.—From the people.

Sri A. G. RAMACHANDRA RAO.—I do not know if we can hold a referendum in the matter.

Sri S. SRINIVASA IYENGAR.—Cannot the Government hold a public enquiry in this connection?

Sri A. G. RAMACHANDRA RAO.—I do not think it is necessary at this stage.

Sri R. ANANTARAMAN.—While the enquiry is going on, is it not fair that the Assistant Professors against whom allegations are made should be kept under suspension?

Sri A. G. RAMACHANDRA RAO.—That is a matter for the University Council to decide.

Sri R. ANANTARAMAN.—Will the the Hon'ble Minister direct the Vice-Chancellor to keep them under suspension pending enquiry?

Sri A. G. RAMACHANDRA RAO.—I do not want to form any opinion in the matter till the report comes.

Sri R. ANANTARAMAN.—Are you aware that by allowing the Assistant Professors to remain on duty they will be able to influence the students?

Sri A. G. RAMACHANDRA RAO.—The impartiality will not be disturbed as I see that there are public men and high class people in the Committee.

Sri R. ANANTARAMAN.—Is it a public enquiry or is the enquiry held in secret?

Sri A. G. RAMACHANDRA RAO.—I will ascertain.

Sri B. NARAYANASWAMY.—Apart from waiting for the report, have Government not thought of taking any action?

Sri A. G. RAMACHANDRA RAO.—Government does not propose to act on allegations.

Sri B. NARAYANASWAMY.—So Government have not taken any notice of the allegations. Am I to understand so?

Sri A.G. RAMACHANDRA RAO.—We have taken notice and we know that an enquiry is being held and that the Committee is functioning.

Sri B. NARAYANASWAMY.—Is it the Government that has appointed the Committee or the University Council?

Sri A. G. RAMACHANDRA. RAO.—The University Council.

Sri B. NARAYANASWAMY.—In that case, am I to understand that the Government has not taken any action in the matter?

Sri A. G. RAMACHANDRA RAO.—Government is satisfied that the steps taken by the University Council is adequate.

Sri B. NARAYANASWAMY.—Is the Government kept in contact with the proceedings of the Committee?

Sri A. G. RAMACHANDRA RAO.—We have not been in contact with the Committee but with the Chairman of the Committee and through him we are knowing the day to day-proceedings of the Committee.

Sri B. NARAYANASWAMY.—May I know who is the Chairman of the Committee?

Sri A. G. RAMACHANDRA RAO.—Professor D'Souza, Vice-Chancellor of the University.

Sri B. NARAYANASWAMY.—Are there any other non-officials on the Committee who are not interested in the professors of the University?

Sri A. G. RAMACHANDRA RAO.—There are others—members of the Council, but who are not on the staff of the University.

Sri B. NARAYANASWAMY.—Is the Government aware of any member of Committee who is related to the members of the staff?

Sri A. G. RAMACHANDRA RAO.—No.

Sri B. NARAYANASWAMY.—If the Government come to know of any member who is related to the staff, will that member be taken away from the Committee?

Sri A. G. RAMACHANDRA RAO.—I believe all these things have been taken into consideration by the University Council and they have come to the conclusion that the present members of the Committee are proper and that they are satisfied.

Sri B. NARAYANASWAMY.—Should it not be that a person who is related to the staff should not be on the Committee?

Sri A.G. RAMACHANDRA RAO.—I am not aware of any such person being on the Committee.

ಶ್ರೀ ಪಿ. ಆರ್. ರಾಮಯ್ಯ.—ಯೂನಿವರ್ಸಿಟಿಯಲ್ಲಿರತಕ್ಕ ಅಧ್ಯಾಪಕರ ಮೇಲೆ ಈ ರೀತಿಯಾದ

ಅಪಾದನೆ ಬಂದಿರುವುದು ಇದೇ ಮೊದಲನೆಯ ಸಾರಿ ಅಲ್ಲವೇ, ಸ್ವಾಮಿ, ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಿಂದೆ ಇಂಥಾ ಅಪಾದನೆ ಬಂದಿರುವುದು ನನಗೆ ಗೊತ್ತಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಯಾವ ಅಧ್ಯಾಪಕರ ಮೇಲೆ ಈ ರೀತಿ ಅಪಾದನೆ ಬಂದಿದೆ ?

Sri A. G. RAMACHANDRA RAO.—I want notice about those allegations. The allegations appearing in the Press have been referred to the Committee.

ಶ್ರೀ ಪಿ. ಆರ್. ರಾಮಯ್ಯ.—ತಾವು ಈ ವಿಷಯ ಜನರ ಮನಸ್ಸನ್ನು ಬಹಳವಾಗಿ ಕದಡಿದೆ, ಅದಕ್ಕೇ ಒಂದು ಸಮಿತಿ ನೇಮಕವಾಗಿದೆ, ಪತ್ರಿಕೆಗಳಲ್ಲಿ ಲೇಖನ ಬಂದಿದೆಯೆಂದು ಹೇಳಿದಿರಿ. ಯಾವ ಅಧ್ಯಾಪಕರು ಎನ್ನುವುದು ತಮ್ಮ ಗಮನಕ್ಕೆ ಬಂದಿಲ್ಲ ಎಂದು ಹೇಳುತ್ತೀರಿ, ಇದೇನು, ಸ್ವಾಮಿ?

ಶ್ರೀ ಎ. ಜಿ. ರಾಮಚಂದ್ರರಾವ್.—ಪತ್ರಿಕೆಗಳಲ್ಲಿ ಬಂದಿರತಕ್ಕ ಅಧ್ಯಾಪಕರು ಯಾರು ಎಂಬುದನ್ನು ಅವರೂ ನಮೂದಿಸಿಲ್ಲ. ಅದು ಪತ್ರಿಕೆಯಲ್ಲೇ ಇದೆ. ಅಷ್ಟೇ ಸರ್ಕಾರದವರಿಗೆ ಗೊತ್ತಿರುವುದು.

ಶ್ರೀ ಪಿ. ಆರ್. ರಾಮಯ್ಯ.—ಈಗ ಯಾವ ಸ್ಥಿತಿಯಲ್ಲಿದೆ ಆ ವಿಚಾರಣೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿಚಾರಣೆ ನಡೆಯುತ್ತಾ ಇದೆ.

ಶ್ರೀ ಪಿ. ಆರ್. ರಾಮಯ್ಯ.—ವಿಚಾರಣೆ ಫಲಿತಾಂಶ ಬಂದಮೇಲೆ, ಅದರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳತಕ್ಕವರು ಯಾರು, ಸ್ವಾಮಿ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ನೋಡಬೇಕು. ಏನು ಶಿಫಾರಸನ್ನು ಮಾಡುತ್ತಾರೆ ಎಂಬುದನ್ನು ನೋಡಿ ತೀರ್ಮಾನ ಮಾಡಬೇಕು.

ಶ್ರೀ ಪಿ. ಆರ್. ರಾಮಯ್ಯ.—ಸರ್ಕಾರದವರಿಗೆ ಈ ವಿಷಯದಲ್ಲಿ ಎಷ್ಟು ಮಟ್ಟಿಗೆ ಜವಾಬ್ದಾರಿ ಇದೆ, ಸ್ವಾಮಿ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಷ್ಟುಮಟ್ಟಿನ ಜವಾಬ್ದಾರಿ ಎನ್ನುವುದೂ ಕೂಡ ಅವರ ಶಿಫಾರಸಿನ ಮೇಲೆ ನಿಂತಿರುತ್ತದೆ.

ಶ್ರೀ ಪಿ. ಆರ್. ರಾಮಯ್ಯ.—ಈ ವಿಷಯ ಯೂನಿವರ್ಸಿಟಿಗೆ ಮಾತ್ರವೇ ಅಲ್ಲದೆ, ವಿದ್ಯಾಭ್ಯಾಸವನ್ನು ಕೊಡಿಸತಕ್ಕ ಎಲ್ಲಾ ತಂದೆ ತಾಯಿಗಳಿಗೂ ಸಂಬಂಧಿಸಿದ್ದು ಮತ್ತು ಅಖಿಲಪ್ರಜಾವರ್ಗಕ್ಕೇ ಸಂಬಂಧಿಸಿದ್ದು. ಆದ್ದರಿಂದ ಸರ್ಕಾರದವರು ತೀವ್ರವಾಗಿ ಈ ವಿಷಯದಲ್ಲಿ ಆಸಕ್ತಿವಹಿಸಿ, ವರದಿಯನ್ನು ತರಿಸಿಕೊಂಡು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ, ಸ್ವಾಮಿ?

ಶ್ರೀ ಎ. ಜಿ. ರಾಮಚಂದ್ರರಾವ್.—ವರದಿ ಬಂದಮೇಲೆ ಅದನ್ನು ತೀವ್ರವಾಗಿ ಆಲೋಚನೆ ಮಾಡೋಣ.

Committee to enquire into representations of Electrical Department Employees' Union.

Q.—869. Sri S. GOPALA GOWDA (Sagar–Hosanagar).—

Will the Government be pleased to state:—

*Sri J. MOHAMED IMAM.—(Jagalur) I can assure the Speaker that I will not unnecessarily waste the time of the House, but take only as much time as the importance of this Bill demands. The Chief Minister announced through his Budget Speech that the Government proposes to levy agricultural income-tax on coffee and other important crops. Though the announcement was made more than a month ago and though the financial business was finished before the end of the last month, it is rather surprising that he brings and places before this House this important business at the tail-end of this session. This is a Bill which seeks to burden the people with extra taxation and it is a Bill which is the first of its kind that has to be introduced and naturally the Hon'ble Members would like to have reasonable time at their disposal to study the relevant clauses, to study the Bill and come to a decision. Nothing prevented the Finance Minister from bringing this Bill soon after the financial business was over in the last month, because this was considered to be a financial Bill and naturally it ought to have been placed before this House soon after the Budget was passed and soon after the Appropriation Bill was passed. He delays it by more than 20 days and just when the session is about to be closed, the Finance Minister places this measure before this House and wants us to hustle throught. Yesterday I said that in such matters there should not be any time limit prescribed and matters should not be hustled through. To-day pamphlets have been distributed, announcing the names of the members of the Select Committee with a direction that the Select Committee Report should be submitted before the 16th of this month. That means, then is hardly one day's time. Is it fair and reasonable on the part of the Government to give only one day or 12 hours or 5 hours to consider such an important measure? When the Select Committee sits, it may be necessary on the part of the Select Committee not only to consider the entire Bill clause by clause, but also, if necessary, to examine different interests, and to collect evidence. For example, this Bill contains an important clause seeking to levy income-tax on coffee industry. It is but reasonable that the Select Committee should give an opportunity to the representatives of the coffee interests, the coffee planters and the law provides for it. The Select Committee mustbe given an opportunity for them to come and explain their case. Similarly, the Select Committee may find a need,—I do not say they must—they may find a need to consult other persons, other agriculturists who are deeply interested in this. But this attitude on the part

of the Government to place this Bill at the tail-end of this session and ask the members to hustle through and enable them to levy this fresh taxation, is really unfair and I have to resent against this attitude or this policy of the Government. Of course, the Government may say that the reason for adopting such an attitude is this: " We form the majority party." The Government feels that it is armed by the group majority and that in spite of the reasonable protest of the Opposition they could carry it through. I admit they are in a position to pass it through, overlooking our protests. There is what we call a good Government. Aristotle says that any Government, whether it is a monarchichal form of Government or an aristocracy or a democracy—it must be nourished and fostered by good Government. Majority alone is not the test. In good old days we had the Kings who claimed the divine right of kingship. Each King said that he had been specially created by God to rule over the people and he claimed the right not only to rule but also to tyrannise. Those days are gone, but it is replaced by another divine right, that is what is called the divine right of the majority rule. The Government say: "Since we are armed by majority, we have got the divine right of majority rule. We can rule as we please as we are the majority, we can spend the money as we please, we can levy tax as we please and when we please." True that majority rule gives them power to rule, but I want to know, does it give them power to misrule? I said it must be a good Government. The Government is meant for the good of the people and they must always have the interests of the people at heart and must take necessary steps. That is why I said it is an important measure which seeks to tax the entire population of the State and it is therefore necessary and reasonable that all the Members are given adequate time to consider and think over the matter and come to some reasonable understanding.

1 P.M.

Sir, I oppose this Bill. I oppose this taxation measure. I have declared previously that so long as the present Government continues its financial policy, it is the duty of every member of this House to oppose any fresh taxation. This is not the only tax we have to reckon with. Since the democratic days dawned in, the people of the State of Mysore, as I have stated previously, have been subject to aeries of taxation and according to my own calculation this forms the 19th or 20th taxation measure. Along with these, we have to face the taxes imposed by the Central Government and also the taxes that are going to be imposed by the Local Self-Governments. So, while we consider this tax, we consider as to what the cumulative effect of all these taxes will be on the people. Sir, I admit that taxation forms an important source of revenue to the Government. It is one of the main sources of revenue to the Government. But what is the limit to taxation? How long can you go on taxing the people? Yesterday, the Chief Minister advanced two or three reasons as to why he has undertaken this taxation. First, he said, money is needed for implementing the Five-Year Plan. I think when he introduced the Bill, he also said that he wanted money to wipe off the deficit. The third reason he gave was that a number of adjoining States had levied the agricultural income tax or were about to levy it. Along with these, I wish he had stated as to what was the economic condition of the people in the State, their taxable capacity, their paying capacity and their earning capacity. I have no objection if the people are in a position or are in such an affluent position as to meet the demands of all these taxes and also lead a comfortable living. If the Chief Minister states that after payment of all these taxes, a reasonable surplus will still be left with the people so as to enable them to lead a comfortable and decent life, then have no objection. No survey about this has been made for all these years and no figures have been obtained as to the standard of living. In fact, nothing has been done to ascertain their taxable capacity. The taxable capacity according to financial experts means the capacity to squeeze out of a person the amount needed.

Sir J. MOHAMED IMAM.—I am saying where the socialistic pattern must be applied first. Sir, I have been urging from the beginning that before any fresh taxation measure is undertaken, economy should be effected wherever possible. The mounting expenditure on administration should be cut down. It is this financial policy and it is this reckless expenditure that is being followed by Government that is responsible for this extra taxation. On the other day I pointed out how the expenditure on administration was going up. In the year 1941 we had only 27,000 persons in the superior service ; now we are having 47,000.

> "Some idea of their increase can be had from the fact that the superior services alone have increased from 27,250 in 1941 to as many as 48,573 in 1951. No information is available as regards the number of menials. But considering that as a rule there are nearly as many of them in an office as the officials, and very often more, it would not be far wrong to put their number at roughly 40,000 of which 20,000 may be taken approximately as the decade increase."

So, Sir, during these ten years there has been considerable increase in the administration and that too after half the number of departments were transferred to Government of India. In the year 42-43 the expenditure for establishment was about 3 crores and now it is 8 crores 88 lakhs.

Sri D. DEVARAJ URS.—What was the receipt during '41-42 and what is the receipt now ?

Sri J. MOHAMED IMAM.—Then, the income exceeded the expenditure and therefore there was a surplus. Now, in spite of this huge income, there is deficit. The expenditure on establishment is mounting up. I hold that this deficit has been created not for providing extra amenities to the general public but due to the indiscriminate expenditure on establishment. I hold that it is the Government Officers and Officials that are responsible for this deficit. If this deficit has to be made good, Government should adopt a bold policy. As I suggested in my budget speech, there must be a uniform cut in the salaries of all these people. Because I hold them responsible for this rise in expenditnre, I say, it is but right that they sacrifice some of their interests and undergo a uniform cut so as to make good this deficit. Sir, this expenditure is incurred because of the proposals of the officers for the increased staff in every department. It is their duty and the duty of the Government to see that a uniform reduction in their pay, say at least 25 per cent, is introduced drastically so as to cover the deficit. That is the only way to bridge the gap ; that is the only way to wipe out the deficit.

Sri D. DEVARAJ URS.—Does the Hon'ble Member want to apply this to both the Non-gazetted and Gazetted officers ?

Sri J. MOHAMED IMAM.—I have said 100 and above. Sir, compare their position with an average raiyat. What is the income of the raiyat ? Moreover, his income is not assured ; he has to undergo manual labour ; he has to work day and night.

Sri R. ANANTARAMAN (Chamarajpet).—May I know as to what would be the savings according to your proposal to apply the cut in the salaries ?

Sri J. MOHAMED IMAM.—I have not calculated ; anyway, it will be a substantial amount. Last time, the Finance Minister was good enough to announce that 'Government will take action to do away with all the allowances. He said it would amount to about 5 lakhs. I request him to take us into confidence and tell us as to the amount that has been saved by this. Sir, we are facing a deficit of more than 4 crores which is a progressive one. Taxation is out of question. Even if tax is levied, it would net solve the problem. Even if this tax is levied, it would bring only 15 or 20 lakhs. Still the bulk of the deficit remains. So, we must adopt that policy which was adopted by Sir Albion Banerjee. Sir, then there was a deficit of 60 lakhs ; a committee was appointed and there was a uniform cut in the pay of the officers. I have seen some of these I.A.S. and I.P.S. officers saying that Rs. 1,800 per

month is not enough. Recently a friend of mine said, "What Sir, I am losing Rs. 100 allowance". I told him; "I grew five hundred maunds of cotton and got Rs. 5,000 whereas this year it was only one hundred maunds and I got only Rs. 500. How to make up this income." That is why I say that the income of the raiyat is always uncertain. But, in the case of a Government Servant, whatever may be his income, that is assured and he enjoys more amenities than the raiyats. Again Sir, whenever a work is sanctioned, the Chief Engineer will say that he wants two more Executive Engineers. Similarly, heads of departments always propose for increase in the staff. Therefore, I hold that they are responsible for the deficit.

Mr. SPEAKER.—The Hon'ble Member may now come to the provisions of the Bill.

Sri J. MOHAMED IMAM.—I am coming to it, Sir. I wanted to say that my suggestion to cut the salaries must be adopted and this taxation measure may be dropped. Then, these I.A.S. and I.P.S. people say that we cannot touch them. It is also true that we cannot touch them. They imagine themselves to be demi-gods. Sir, Mysore Government should take up this question with the Government of India. They must all undergo some sacrifice. If this could not be done, I opine that some surcharge may be levied on their salaries and the amount collected So, Sir, I have given different ways where socialistic pattern should be applied first. If you take the *per capita* income in the State, the Services will top the list. Next come the industrialists and the raiyats come last. So, the socialistic pattern must work from above and not from below. I think, Government will not misunderstand me but pursue this matter.

Coming to the Bill, I would say that this is a most inopportune time for this taxation. Sir, it has been pointed to Government time and often that there has been a steep fall in the prices of all agricultural commodities so much so, the entire equilibrium has been upset. But the expenditure of the raiyat has not gone down. He has to pay more for his cloths, for iron and for every other article he has to purchase in the market. He has to pay the existing taxes. Considering all this, I say that this is not the opportune time to bring this measure. By this you will be doing great injustice to the raiyat. Government have not taken any action to stabilise the prices of agricultural commodities. He has to pay through his nose more for everything that he purchases. So, Sir, before Government undertakes this, I would request them to make a comprehensive survey and study the economic position. It is the fundamental principle of socialism that every person must be left with an income which will enable him to lead a reasonable and decent life. It is not the intention of anybody to bring him down to dust and make him lead a life of misery.

1-30 P.M.

So, I think, some enquiry should be made regarding the present conditions of people, their present state of affairs and their economic situation, and then alone some action should be taken. Now, the Government is in such a hurry and their only intention is to get money. They always try to get the earliest opportunity to tax the people and tax them indiscriminately irrespective of the consequences it will have on the people.

Take the various commodities included in the Bill. All the commercial crops are singled out to be taxed. Those crops are of essential nature; they are needed by the raiyats for the irdaily use. Government have stated that they are exempting all food crops. Now I would like to know what is the difference between the food crops and the chillies, onions and garlic or cocoanut; are not these articles needed by common man every day? Can you eat food without chillies? Chilly is a commodity needed by high and low in the State. Whatever you have proposed to tax is an article of essential nature which is needed by every people. Cocoanut is considered to be a food. Regarding groundnut I can state, under the Constitution, it is supposed to be an essential commodity and it is exempt from taxation. Even

(SRI J. MOHAMED IMAM.)

sales-tax cannot be levied on groundnuts because the Constitution gives exemption to edible oils and edible seeds. Groundnut being an edible seed, this is not subject to any taxation. Mangoes, onions, oranges, and plantains are all articles which are daily need and if agricultural tax is levied on those articles, it is sure the prices of these articles will go up high and inflation will set in and every man will be affected.

With regard to the commercial crop, coffee, I may state here, Sir, that coffee is one of the oldest industry in Mysore and peculiar to Mysore; Mysore is a pioneer in that industry. I may also point out that, as it is, the planters have been paying Rs. 150 per acre as tax not only to the Government of Mysore but to the Central Government and to the Coffee Board. Their cost of cultivation has gone up high and to burden them again with taxation, will result in killing the coffee industry. Sir, it is desirable that the Select Committee that will be appointed, meets the representatives of the coffee industry and also tea industry, because these are the two big industries on which half of the State depends. It is very desirable to meet their representatives to ascertain their grievances. You can do whatever you please, but be posted with the first hand inforamation regarding their grievances and difficulties.

Sir, the levy of agricultural income-tax will involve every person to maintain accounts. Every grower, every agriculturist who has got a few acres of land, he will be under the obligation to maintain accounts. As a result of which, we will be throwing him to the mercy of the local officials, to the mercy of the village officers, and it will be a nuisance to him. We know the hardship and the difficulties we have been undergoing due to the levy of income-tax. Income-tax is a Central Subject which I do not want to discuss here. But I know the miseries and the difficulties that the assessees are undergoing and the way in which they are being treated by the Income-tax Officers. The same thing will repeat here also. Every raiyat will have to maintain the account; every coffee planter will have to maintain account; every cotton grower will have to maintain account and the remedy will be worse than the disease. In order to maintain accounts, they will have to entertain cle ks and pay them salaries. And what is more Sir, the return to Government will be very little. In the Financial Memorandum you have stated that Rs. 50,000 will be spent over the establishment each year on account of this measure; but, take it from me, after three years, this cost will mount up to lakhs and lakhs of rupees; fresh proposals will come before you for sanction of Inspectors, staff and a separate Commissioner. So much so, in course of time, it would become a big department. The result would be, whatever income you derive, more than half of it will go towards the cost of establishment and the actual return to the Government will be very little and at the same time you will be creating trouble, miseries, hardship and inconvenience to the people. So, Sir, please think over all these matters. Please do not think of your Rs. 10 lakhs or Rs 15 lakhs. You are expected to look after the interests of the people, to give them reasonable comforts. I can state that inspite of your Five-Year Plan, the condition of the people is becoming miserable. Please study the conditions of the raiyats of Mysore State, not of the States which you have stated in the Bill where the agricultural income-tax is being levied i.e. Madras, Bihar, Bengal and in other States. The conditions there are quite different. You must study the condition prevailing in Mysore State. Mysore is the poorest State in India. The people here are the poorest. We have not got the alluvial soil as you find in Bihar, Bengal or Orissa. There every acre costs thousands of rupees and every acre brings in a return of thousands of rupees. But in the State of Mysore, how many raiyats are there who get a return of Rs. 5,000 or Rs. 10,000 or enough return to maintain his family? There are only a few raiyats who are getting enough return. No doubt there may be only a few number, but the obligation you cast, the responsibility you cast on

the entire population, is leavy most of them will be obliged to maintain accounts, and to undergo all these ordeals. Whereas the income derived by the Government isvery little.

So, all these matters require very careful consideration. I appeal to you please do not rush through this measure Let all these matters be considered carefully and in all its details. I am of the opinion, Sir, that this Bill shoul' not be passed during this session alone. Let it be taken up during the next session. Meanwhile, ascertain the public opinion; let us investigage the economic position of the country; let us find out the conditions of the raiyats. They are very hard-hit by the steep decline of the prices. Then, if there is need and if all of us are satisfied that the agricultural income-tax will bring blessings instead of curses, let us then pursue the matters. I would request the House to consider this matter seriously and not to pass the Bill within a day and burden the people, people who are already burdened and oppressed with taxes, with the fresh taxation; we will be doing a great injustice and we will not be discharging our duty properly. Because, as I said, they are already oppress d with taxes, and their economic condition is very low. On these grounds, appeal to the Government to go slow in the matter. Even if you lose some revenue, that does not matter. But let us not do injustice to the people who have trusted you, who have voted you to power. If the raiyats had known that you are going to levy agricultural income-tax and other taxes at the time of election, I do not know what attitude they would have adopted. Let us collect the public opinion; let us study their economic position and then come to a reasonable conclusion. But simply because you want money for your Five-Year Plan, for your Reforms or for Vidhana Soudha or for other buildings, please do not rush through the legislation. Be patient and go cautiously. With these observations, I oppose this Bill, Sir.

ಶ್ರೀ ಬಿ. ಎನ್. ಬೋರಣ್ಣಗೌಡ (ಬೇಲೂರು) — ಅಧ್ಯಕ್ಷರೇ, ನಿನ್ನೆ ಮಾನ್ಯ ಮಂತ್ರಿಗಳು ಈ ಬಿಲ್ಲಿನ ವಿಚಾರಣೆಯಲ್ಲಿ ವಿವರಣೆ ಕೊಡುತ್ತಾ, ಸಾಧಾರಣವಾಗಿ ಬಡವರಾದವರ ಮೇಲೆ ಈ ಹೊರೆಯನ್ನು ಹೊರಿಸುವುದಕ್ಕಾಗುವುದಿಲ್ಲ, ಶ್ರೀಮಂತರಾಗಿರತಕ್ಕವರು ಈ ಹೊರೆಯನ್ನು ಹೊತ್ತು ದೇಶದ ಸಂಪತ್ತನ್ನು ಹೆಚ್ಚಿಸುವುದಕ್ಕೆ ಖರ್ಚಾಗುವ ಮೊಬಲಗಿನಲ್ಲಿ ತಮ್ಮ ಭಾಗದ ಮೊಬಲಗನ್ನು ಒದಗಿಸಬೇಕಾದದ್ದು ತಮ್ಮ ಕರ್ತವ್ಯವೆಂದು ಹೇಳಿದ್ದಾರೆ. ಈಗಾಗಲೆ ದೇಶದಲ್ಲಿ ಅನೇಕ ರೀತಿಯಲ್ಲಿ ನಾವು ಹಣವನ್ನು ಖರ್ಚು ಮಾಡುತ್ತಿದ್ದೇವೆ, ದೇಶವು ಮುಂದುವರಿಯಬೇಕಾದರೆ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕಾಗುತ್ತದೆಂದು ನಮ್ಮ ಮಾನ್ಯ ಮುಖಂಡರು ಹೇಳಿದ್ದಾರೆ. ನಮ್ಮ ದೇಶದಲ್ಲೂ ಸಹ ಎರಡನೆಯ ಪಂಚವಾರ್ಷಿಕ ಯೋಜನೆಗೆ ನೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ನಿರ್ಧರಿಸಿದ ಮೇಲೆ ಈ ಹಣವನ್ನು ಯಾವ ರೀತಿ ಬರಮಾಡಿಕೊಳ್ಳಬೇಕೆಂದು ಯೋಚನೆಮಾಡಿ, ಈ ಬಿಲ್ಲನ್ನು ಜಾರಿಗೆ ತಂದರೆ ಸುಮಾರು 20 ಲಕ್ಷ ರೂಪಾಯಿಗಳವರೆಗೂ ಆದಾಯ ಬರಬಹುದೆಂದು ತಿಳಿಸಿದರು. ಒಳ್ಳೆಯದು; ಈಗಾಗಲೇ ನಮ್ಮ ದೇಶದಲ್ಲಿ ಖೋತಾ ಬಡ್ಜೆಟ್ ಇದೆಯೆಂಬುದು ಎಲ್ಲರಿಗೂ ತಿಳಿದೇ ಇದೆ. ಇಂಥ ಸಂದರ್ಭದಲ್ಲಿ ಈ ಬಿಲ್ಲಿನಿಂದ ಬರಬಹುದಾದ 20 ಲಕ್ಷ ರೂಪಾಯಿಗಳ ಉತ್ಪನ್ನದಲ್ಲಿ ಒಂದೆರಡು ಲಕ್ಷ ರೂಪಾಯಿಗಳ ಖರ್ಚು ಹೋದರೂ 18-19 ಲಕ್ಷ ರೂಪಾಯಿಗಳು ಬರುವಂತಾದರೆ ನಮ್ಮ ದೇಶಾಭ್ಯುದಯಕ್ಕೆ ಎಷ್ಟೋ ಮಟ್ಟಿಗೆ ಸಹಾಯವಾಗುತ್ತದೆಂದು ತಿಳಿದಿದ್ದೇವೆ. ಅಲ್ಲದೆ, ಮಾನ್ಯ ಮಂತ್ರಿಗಳು ತಿಳಿಸಿದ ಹಾಗೆ, ಈಗಾಗಲೇ ಅಕ್ಕಪಕ್ಕದ ರಾಷ್ಟ್ರಗಳಲ್ಲಿ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಹಾಕಿದ್ದಾರೆಂಬ ವಾದವೂ ಇದೆ.

ಆದರೆ, ಅವರು ಹಾಕಿರುವ ರೀತಿಯೇ ಬೇರೆ, ನಮ್ಮ ಸರ್ಕಾರದವರು ಹಾಕುತ್ತಿರುವ ರೀತಿಯೇ ಬೇರೆ. ಅಲ್ಲಿರತಕ್ಕ ಕಾಫಿ ಪ್ಲಾಂಟರುಗಳು ಶ್ರೀಮಂತರು; ಒಂದು ಸಾವಿರ, ಎರಡು ಸಾವಿರ ಎಕರೆಗಳವರೆಗೂ ಇರತಕ್ಕ ಕಾಫಿ ಪ್ಲಾಂಟರುಗಳು ಅಲ್ಲಿದ್ದಾರೆ. ಅಲ್ಲದೆ, ಅಲ್ಲಿ ಒಂದು ಎಕರೆಗೆ 20- ಮಣದಿಂದ -40 ಮಣದವರೆಗೂ ಕಾಫಿಯು ಬೆಳೆಯಾಗುತ್ತದೆ. ಇಲ್ಲಾದರೋ ಸಾಧಾರಣವಾಗಿ ಒಂದು ಮಣದಿಂದ ಹಿಡಿದು ಹತ್ತು ಮಣದವರೆಗೆ ಬರುತ್ತದೆ. ಬಹಳ ಉತ್ತಮವಾದ ತೋಟಗಳು ಎಂದರೆ, 15 ಮಣಕ್ಕಿಂತ ಹೆಚ್ಚಿಗೆ ಬರುವುದಿಲ್ಲ. ಸಾಧಾರಣವಾಗಿ 100 ಎಕರೆ ಇಟ್ಟುಕೊಂಡಿರುವವನಿಗೆ ಸರಾಸರಿ ನಾಲ್ಕು ಮಣದಂತೆ ಕಾಫಿ ಬರುತ್ತದೆಂದಿಟ್ಟುಕೊಂಡರೂ ಅವನಿಗಿರತಕ್ಕ ಖರ್ಚು ಲೆಕ್ಕ ಹಾಕುವುದಾದರೆ, ಭೂಕಂದಾಯ 100 ರೂಪಾಯಿ, ಗೊಬ್ಬರ 3,500 ರೂಪಾಯಿಗಳು, ಕೂಲಿಗೆ 12,800 ರೂಪಾಯಿ—ಒಟ್ಟು ಸುಮಾರು 17,000 ರೂಪಾಯಿಗಳ ಖರ್ಚು ಬರುತ್ತದೆ. ಹೀಗೆ ಬರತಕ್ಕ ಆದಾಯ 16,000 ರೂಪಾಯಿ, ಖರ್ಚು 17,000 ರೂಪಾಯಿ! ಈ ರೀತಿಯಾಗಿ ಮೈಸೂರು ದೇಶದ ಕಾಫಿ ಪ್ಲಾಂಟರುಗಳು ನಿಜವಾಗಿಯೂ ಕಷ್ಟ ಪರಿಸ್ಥಿತಿಯಲ್ಲಿದ್ದಾರೆ. ಇವೊತ್ತೇನೊ ನೀವು ಕಾಫಿ ಪ್ಲಾಂಟರುಗಳು ಉತ್ತಮ ಸ್ಥಿತಿಯಲ್ಲಿದ್ದಾರೆಂದು ಭಾವಿಸಿರಬಹುದು. 8-10 ವರ್ಷಗಳ ಹಿಂದಿನ ಅವರ ಸ್ಥಿತಿಯನ್ನು ನೋಡಿದರೆ ಬಹಳ ಶೋಚನೀಯವಾಗಿತ್ತು. ಒಂದು ಮಣಕ್ಕೆ ಆರು ರೂಪಾಯಿನಂತೆ ಮಾರಿ, ಅನೇಕ ಕಾಫಿ ಪ್ಲಾಂಟರುಗಳು ತಮ್ಮ ತೋಟಗಳನ್ನೆಲ್ಲಾ ಮಾರಿಕೊಂಡು ಬೇರೆಕಡೆ ಜೀವನೋಪಾಯ ಹುಡುಕಿಕೊಂಡು ತಿರುಗುತ್ತಿದ್ದರು. ಈಗೇನೋ 40 ರೂಪಾಯಿ ಮಣಕ್ಕೆ ಬರುತ್ತಿದೆ; ಈಗ ಸ್ವಲ್ಪ ಅವರು ಚೇತರಿಸಿಕೊಂಡು ತಮ್ಮ ತೋಟಗಳನ್ನು ಉತ್ತಮಪಡಿಸಬೇಕೆಂದಿರುವಾಗ ಹೊಸದಾಗಿ ಒಂದು ಗದೆಯನ್ನು ಅವರ

(ಶ್ರೀ ಬಿ. ಎಚ್. ಬೋರಣ್ಣಗೌಡ.)

ಮೇಲೆ ಹೇರುತ್ತಿದ್ದೀರಿ. ಅಂಥದರಲ್ಲೂ ಈಗಲೂ ಹಿಂದಿನ ಸಾಲಸೋಲಗಳನ್ನು ತೀರಿಸಿಕೊಂಡು ಸರಿಯಾಗಿರುವ ಕಾಫಿ ಪ್ಲಾಂಟರುಗಳು ನಮ್ಮ ದೇಶದಲ್ಲಿ 200–250ರ ಮೇಲಿಲ್ಲವೆಂದರೆ ಅತಿಶಯೋಕ್ತಿಯಲ್ಲ. ಅವರುಗಳೂ ಕೂಡ ಶ್ರೀಮಂತರಾಗಿ ಉನ್ನತ ಸ್ಥಿತಿಯಲ್ಲಿದ್ದು ರೋಲ್ಸ್‌ರಾಯ್ಸ್ ಕಾರುಗಳಲ್ಲಿ ಓಡಾಡುವ ಹಾಗಿದ್ದಾರೆಂದು ಈ ಸಭೆಯವರು ಭಾವಿಸಿದ್ದರೆ ಅದು ತಪ್ಪು ಭಾವನೆ. ಅವರ ಸ್ಥಿತಿಯೇನಿದ್ದರೂ ಒಬ್ಬ ಸಾಧಾರಣ ರೈತನ ಸ್ಥಿತಿಯಷ್ಟೇ ಹೊರತು, ಹೆಚ್ಚಲ್ಲ.

ಇನ್ನು ಏಲಕ್ಕಿ ತೋಟಗಾರರ ಪರಿಸ್ಥಿತಿ ನೋಡುವುದಾದರೆ, ಅದು ಇನ್ನೂ ಶೋಚನೀಯ. ಕಾಫಿಯಾದರೂ ಎಕರೆಗೆ 7–8 ಮಣ ಸಿಕ್ಕಿದರೆ, ಏಲಕ್ಕಿಯಾದರೊ ಎಕರೆಗೆ 2–3 ಮಣ ಸಿಕ್ಕಿದರೇ ಅದು ಬಹಳ ಉತ್ತಮವೆಂದು ಹೇಳಬೇಕು. ಏಲಕ್ಕಿಗೆ ಕಾಫಿಯಷ್ಟು ಹೆಚ್ಚಿಗೆ ಖರ್ಚಾಗದಿದ್ದರೂ, ಏಲಕ್ಕಿಯ ಕೊಯ್ಲಿಗೆ ಅದರಿಂದ ಬರತಕ್ಕ ಆದಾಯದಲ್ಲಿ ಅರ್ಧ ಭಾಗಕ್ಕಿಂತ ಹೆಚ್ಚಿಗೆ ಕೊಡಬೇಕಾಗುತ್ತದೆ. ಅದನ್ನೆಲ್ಲಾ ರೆಡಿ ಮಾಡಿ ಮಾರಾಟಕ್ಕೆ ಸಿದ್ಧಪಡಿಸಬೇಕಾದರೆ ಬಹಳ ಕಷ್ಟ. ಎರಡು ಮಣ ಏಲಕ್ಕಿ ಬೆಳೆ ಮಾಡುವುದು 10 ಮಣ ಕಾಫಿ ಬೆಳೆ ಮಾಡುವುದಕ್ಕಿಂತ ಕಷ್ಟ. ಜೊತೆಗೆ ಇನ್ನೊಂದು ದುರದೃಷ್ಟವೆಂದರೆ ಏಲಕ್ಕಿ ಬೆಳೆ ಒಂದು ವರ್ಷ ಆದರೆ, ಇನ್ನೊಂದು ವರ್ಷ ಆಗುವುದಿಲ್ಲ. ಈ ವರ್ಷ ಒಂದು ಸಾವಿರ ಮಣ ಒಬ್ಬನಿಗೆ ಆಗಿದ್ದರೆ ಮಾರನೆಯ ವರ್ಷ ಕೇವಲ ನಾಲ್ಕು ಮಣ ಕೂಡ ಆಗದೆ ಏಲಕ್ಕಿ ತೋಟಗಾರರು ಮೂರ್ಛೆ ಬಿದ್ದುಹೋಗಿರುವುದೂ ಉಂಟು. ಇಂಥ ಸಂದರ್ಭದಲ್ಲಿ ಕಾಫಿ ಪ್ಲಾಂಟರುಗಳು ಏಲಕ್ಕಿ ಪ್ಲಾಂಟರುಗಳು ಬಹಳ ಉತ್ತಮ ಸ್ಥಿತಿಯಲ್ಲಿದ್ದಾರೆಂದು ಭಾವಿಸುವುದು ಸರಿಯಲ್ಲ.

ಇವೊತ್ತಿನ ರೀತಿ ನೀತಿ ನೋಡಿದರೆ ಅವರು ಜೀವನ ನಡೆಸಿಕೊಂಡು ಬರುವುದೇ ಒಂದು ಸಂತೋಷ ಸೂಚನೆಯೆಂದು ಹೇಳಬಹುದು. ಇದಕ್ಕೆ ನಾನು ಸಲಹೆಮಾಡುವುದು, ಈಗ ಕಾಫಿ ಪ್ಲಾಂಟರುಗಳ ಮೇಲೆ ಹಾಕಿದರೆ ಎಷ್ಟು ನಿರೀಕ್ಷೆಯಿದೆಯೋ ಅಷ್ಟು ಆದಾಯ ಬರುವುದಿಲ್ಲ, ದೇಶಕ್ಕೆ ಆವಶ್ಯಕತೆಯಿರುವಾಗ ಯಾವುದಾದರೂ ಒಂದು ರೀತಿಯಲ್ಲಿ ಉತ್ಪತ್ತಿಯಿರುವವರು ಒಂದು, ಕಾಂಟ್ರಿಬ್ಯೂಷನ್ ಕೊಡುವುದು ಧರ್ಮವೆಂದು ಕಂಡರೂ ಈಗ ಸೂಚಿಸಿರುವ ರೀತಿ ಮಾಡುವುದಕ್ಕೆ ಬದಲಾಗಿ ಹೀಗೆ ಮಾಡುವುದೊಳ್ಳೆಯದು. ಪ್ಲಾಂಟರುಗಳು ಕೂಲಿಗಾಗಿ ಕೊಡುವುದು, ವರ್ತಕರಿಗೆ ಕೊಡುವುದು ಮುಂತಾದ ಲೆಕ್ಕ ಸಿಕ್ಕುತ್ತದೆ. ಮಣಕ್ಕಿಷ್ಟು ಎಂದು ಹೇಳಿದರೂ ಪರವಾಗಿಲ್ಲ, ವಿನಾಯಿತಿ ತೋರಿಸಿರುವವರನ್ನು ಬಿಟ್ಟು ಬಾಕಿಯವರಿಗೆ ಬೆಳೆಯಮೇಲೆ ಹಾಕುವುದಾದರೆ ಅವರಿಗೆ ಲೆಕ್ಕ ಮಾಡುವ ತೊಂದರೆಯಿದೆ, ಆದ್ದರಿಂದ ಸದ್ಯಕ್ಕೆ ಲೆಕ್ಕವಿಡಲು ಆಗುವ ಖರ್ಚು ವಗೈರೆ ತೊಂದರೆಯನ್ನು ನಿವಾರಣೆಮಾಡುವುದು ಒಳ್ಳೆಯದು.

ಇನ್ನೊಂದು ವಿಚಾರ ಇಲ್ಲಿ ಹೇಳಿದೆ. ಹತ್ತಿ ಮತ್ತು ಇತರ ಕಮರ್ಷಿಯಲ್ ಕ್ರಾಪ್ಸ್ ಮೇಲೆ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಹಾಕುವುದಾಗಿ ಹೇಳಿದೆ. ಒಳ್ಳೆಯದು, ಸಂಪಾದನೆಯಿರುವವರಿಂದ ತೆಗೆದುಕೊಳ್ಳಬಹುದು, ಅವರು ಕೊಟ್ಟೇಕೊಡಬೇಕು. ಆರು ಎಕರೆ ಪ್ರದೇಶಕ್ಕಿಂತ ಹೆಚ್ಚಾದ ಪ್ರದೇಶದಲ್ಲಿ ಹತ್ತಿ, ಟೀ ಬಿಟ್ಟು ಕಮರ್ಷಿಯಲ್ ಕ್ರಾಪ್ಸ್ ಬೆಳೆಯುವವರಿಗೆ ಈ ತೆರಿಗೆ ಹಾಕುವುದಾಗಿ ಹೇಳಿದ್ದಾರೆ. ಹಾಗೆ ಹೇಳುವಾಗ ಮೆಣಸಿನಕಾಯಿ ಬೆಳೆ 20–30 ಎಕರೆಗಳಲ್ಲಿಡುವವರು ಈ ತೆರಿಗೆ ಕೊಡವುದು ಸೂಕ್ತ, ಆಲೂಗಡ್ಡೆ ಇಪ್ಪತ್ತು ಎಕರೆಯಲ್ಲಿ ಬೆಳೆಯುವವರು ಕೊಡುವುದು ಸೂಕ್ತ. ಈ ದಿವಸ ಎಷ್ಟು ಜನರು ದೊಡ್ಡ ಬೇಸಾಯ ಮಾಡುತ್ತಾರೆ, ಅವರ ಸ್ಥಿತಿ ವಾಸ್ತವವಾಗಿ ಹೇಗಿದೆ ಎಂದು ನೋಡಿ ಅವರ ಮೇಲೆ ತೆರಿಗೆ ಹಾಕಿದರೆ ಷೆಡ್ಯೂಲು ದರದಂತೆ ಕೊಡಲು ಅನುಕೂಲ. ಈ ದಿನ ಹತ್ತಿ ವಿಚಾರದಲ್ಲಿ ಮಾನ್ಯ ಮಿತ್ರರು ವಿವರಣೆ ಕೊಡುತ್ತಾ ಈ ಬೆಳೆ ತೆಗೆಯುವುದು ಕಷ್ಟವೆಂದು ಹೇಳಿದರು. ನಮ್ಮ ತಾಲ್ಲೂಕಿನಲ್ಲೂ ಹತ್ತಿ ಬೆಳೆಯುವವರು ಬಹಳ ಜನರಿದ್ದಾರೆ. ನನಗೂ ಇವರ ವಿಚಾರ ಸ್ವಲ್ಪ ಗೊತ್ತಿದೆ, ಈಗ ಎಂ.ಎ. V ಹತ್ತಿಗೆ ಮಣಕ್ಕೆಷ್ಟು ಬೆಲೆಯಿದೆ, ಒಂದು ಎಕರೆಗೆಷ್ಟು ಬೆಳೆಯುತ್ತದೆ ಎಂಬುದನ್ನು ಲಕ್ಷ್ಮೀ ಮಾರ್ಕಿನ ಹತ್ತಿಗೆ ಹೋಲಿಸಿ ನೋಡಬೇಕು. ಹಾಗೆ ಹೋಲಿಕೆಮಾಡಿ ನೋಡಿದರೆ ಹೆಚ್ಚು ಬೆಳೆ ಬರುವುದಿಲ್ಲ, ಆದಾಯ ಕಡಿಮೆ, ವಿನಾಯಿತಿಕೊಡುವ ಆವಶ್ಯಕತೆಯಿದೆ, ನಿರೀಕ್ಷಿಸುವಷ್ಟು ಹತ್ತಿ ಬೆಳೆ ಬರುವುದಿಲ್ಲ. ಇದನ್ನು ಪರೀಕ್ಷೆಮಾಡಬಹುದು. ದೇಶಕ್ಕೆ ಹಣ ಬೇಕೆಂದರೆ ಕೊಡಲು ಹಿಂಜರಿಯುವುದಿಲ್ಲ. ಕೆಲವು ಸಂದರ್ಭಗಳಲ್ಲಿ ವಿನಾಯಿತಿ ಕೊಡಬಹುದೆಂದಿದೆ, ಇಷ್ಟು ಬೆಳೆಯ ಮೇಲಾದರೆ ಕೊಡಬಹುದೆಂದು ಕಾಂಪೌಂಡ್ ಮಾಡಬಹುದೆಂದು ಹೇಳಿದರು. ಪ್ರತಿಯೊಂದಕ್ಕೂ ಅಕೌಂಟ್ ಇಡುವ ಪದ್ಧತಿಯಿಂದ ಬಹಳ ತೊಂದರೆಯಾಗುತ್ತದೆ. ಈ ದಿವಸ ನಮ್ಮ ದೇಶದಲ್ಲಿರುವ ರೈತವರ್ಗಕ್ಕೆ ಲೆಕ್ಕವಿಡವ ರೀತಿ ನೀತಿ ಗೊತ್ತಿಲ್ಲ. ಯಾರು ಚತುರರೋ, ಅಕೌಂಟ್ ಬರೆಯಲು ಯಾರು ನಿಪುಣರೋ ಅವರನ್ನು ರೈತರು ಆಶ್ರಯಿಸಬೇಕಾಗುತ್ತದೆ.– ಅವರಿಗೆ ಬರೆಯಲು ಏನಾದರೂ ಕೊಡಬೇಕಾಗುತ್ತದೆ. ಅದು ಕಷ್ಟಕರ. ವರಮಾನ ತೆರಿಗೆ ಕೊಡುವವರು ಪ್ರತಿಯೊಂದು ವಿಚಾರದಲ್ಲೂ ಲೆಕ್ಕವಿಡಬೇಕಾಗುತ್ತದೆ. ಸಂತೆಗೆ ಹೋಗಿ ತರುವುದಕ್ಕೆ ಲೆಕ್ಕವಿಡಬೇಕಾಗುತ್ತದೆ. ಅವರೇಕಾಯಿ ತಂದರೆ ಇಷ್ಟು ಕೊಂಡೆ ಎಂದು ಲೆಕ್ಕವಿಡುವುದು ಬಹಳಕಷ್ಟ, ಯಾರೂ ಇಡಲು ಸಾಧ್ಯವಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯಲ್ಲ. ಆದರೆ ದೊಡ್ಡ ದೊಡ್ಡ ಶ್ರೀಮಂತರು ಲೆಕ್ಕವಿಡುವುದಿಲ್ಲವೇ ಎಂದು ಕೇಳಬಹುದು. ಅವರು ವಿದ್ಯಾವಂತರು, ಅವರಿಗೆ ಸಹಾಯಕರಾಗಿ ಗುಮಾಸ್ತರಿರುತ್ತಾರೆ. ಲೇಣೆ ದೇಣೆ ಅಕೌಂಟ್ ಅವರಿಡುವಾಗ ಈ ಅಕೌಂಟ್ ಇಡುವುದರಲ್ಲೇನೂ ಅವರಿಗೆ ಕಷ್ಟವಾಗುವುದಿಲ್ಲ. ರೈತರು ಅಕೌಂಟ್ ಇಡಲು ಒಬ್ಬರನ್ನು ನೇಮಿಸಬೇಕೆಂದರೆ ಬಹಳ ಕಷ್ಟ, ಬಹಳ ತೊಂದರೆಯಾಗುತ್ತದೆ. ಅಲ್ಲದೆ ಸತ್ಯವಂತನಾಗಿ ರೈತ ಸರಿಯಾದ ಲೆಕ್ಕ ಕೊಟ್ಟರೆ ನಮ್ಮ ಅಧಿಕಾರಿಗಳು ಅದು ಸರಿಯಾಗಿಲ್ಲವೆಂದು ಹೇಳಿಬಿಡುತ್ತಾರೆ. ಒಂದು ಸಲ ಜಾಸ್ತಿ ತೋರಿಸಿ ಸೇಕಡ 90ರಷ್ಟು ಬಂದಿದೆಯೆಂದು ಹೇಳಿ, ಇನ್ನೊಂದು ಸಲ ಕಡಮೆ ತೋರಿಸಿದರೆ, ಅಷ್ಟು ವ್ಯತ್ಯಾಸ ಬರಲು ಕಾರಣವಿಲ್ಲ ಎಂದು ಒಪ್ಪುವುದಿಲ್ಲ; ಹ್ಯಾಗಾದರೂ ಮಾಡಿ ಸರ್ಕಾರದ ಬೊಕ್ಕಸಕ್ಕೆ ಬೇಕಾದಷ್ಟು ಹಣ ಬರಬೇಕೆಂಬ ಉದ್ದೇಶ ಅಧಿಕಾರಿಗಳಿಗಿರುತ್ತದೆ. ಆ ಉದ್ದೇಶದಿಂದ ಅಧಿಕಾರಿಗಳು ಅವರವರಿಗೆ ತೋರಿದಂತೆ ಮಾಡಿದರೆ ರೈತರಿಗೆ ತೊಂದರೆ. ಈ ತೊಂದರೆಯಾಗುವುದನ್ನು ಸಾಧ್ಯವಾದಷ್ಟು ತಪ್ಪಿಸಲು ಪ್ರಯತ್ನಪಡಬೇಕೆಂದೂ, ಈ ವಿಚಾರವನ್ನು ಯೋಚನೆಮಾಡಬೇಕೆಂದೂ ಸರ್ಕಾರಕ್ಕೆ ಸಲಹೆಮಾಡುತ್ತೇನೆ. ಈ ದಿನದ ಪರಿಸ್ಥಿತಿಯಲ್ಲಿ ಈ ತೆರಿಗೆಯಿಂದ ಸಾಧಾರಣವಾಗಿ ಎಲ್ಲರಿಗೂ ತೊಂದರೆಯಾಗುವುದು ನಿಜ. ಎಲ್ಲರಿಗೂ ಇದನ್ನು ತಪ್ಪಿಸಬೇಕೆಂದು ಹೇಳಲು ಸಾಧ್ಯವಿಲ್ಲ. ದೊಡ್ಡವರಿಗೆ ತಪ್ಪಿಸುವುದಕ್ಕಾಗಿದ್ದರೂ ರೈತವರ್ಗ

ದವರಿಗೂ, ವಿದ್ಯಾವಂತರಲ್ಲದವರಿಗೂ, ವ್ಯವಹಾರ್ಪ ಸಾಧಾರಣವಾಗಿ ತಿಳಿಯದವರಿಗೂ ಇದನ್ನು ತಪಿಸಲು ಅವಕಾಶ ಕೊಡಬೇಕೆಂದು ಸಲಹೆಮಾಡುತ್ತೇನೆ.

*ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಮಾನ್ಯ ಆರ್ಥಿಕ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರುವ ವ್ಯವಸಾಯ ಉತ್ಪನ್ನಗಳ ಮೇಲೆ ಆದಾಯ ತೆರಿಗೆ ಹಾಕಲು ಉದ್ದೇಶಪಟ್ಟು ತಂದಿರತಕ್ಕಂಥ ಮಸೂದೆ ಸಭೆಯ ಮುಂದೆ ಚರ್ಚೆಯಾಗುತ್ತಿದೆ. ಮಾನ್ಯ ಮಂತ್ರಿಗಳು ಮಸೂದೆಯನ್ನು ಸಭೆಯ ಮುಂದೆ ಮಂಡಿಸಿ ಪ್ರತಿಪಾದನೆಮಾಡುವ ಸಂದರ್ಭದಲ್ಲಿ ತಮ್ಮ ಸುದೀರ್ಘ ಭಾಷಣದಲ್ಲಿ ಅನೇಕ ವಿಷಯಗಳನ್ನು ಪ್ರಸ್ತಾಪಿಸಿ ಈ ತೆರಿಗೆ ಯಾವ ರೀತಿಯಲ್ಲಿ ಅಗತ್ಯ, ಆವಶ್ಯಕ ಮತ್ತು ಸಾಧುವಾದುದು ಎಂಬ ವಿಷಯಗಳ ಬಗ್ಗೆ ಸಭೆಗೆ ತಮ್ಮ ವಿವರಣೆಗಳನ್ನು ಕೊಟ್ಟಿದ್ದಾರೆ. ನಾನಾದರೂ ಕೂಡ ಈ ಮಸೂದೆಯನ್ನು ಆರ್ಥಿಕ ತತ್ವಗಳ ಸಂಬಂಧದಲ್ಲಿ ಸ್ವಾಗತಿಸುತ್ತೇನೆ. So far as economic principles are concerned, I welcome this measure. ಆದರೆ ಈ ಮಸೂದೆ ಯಾರಿಂದ, ಯಾವಾಗ, ಯಾವ ಸಂದರ್ಭದಲ್ಲಿ, ಯಾವ ರೀತಿಯಲ್ಲಿ ಮಂಡಿಸಲ್ಪಟ್ಟಿತು ಎಂಬುದು ನಮಗೆ ಸಂಬಂಧಪಟ್ಟ ವಿಷಯ. ಹಾಗೆಯೇ ಕಂದಾಯ ಕೊಡುವವರೂ, ಈ ಸಭೆಯ ಮಾನ್ಯ ಸದಸ್ಯರೂ ಮತ್ತು ದೇಶದ ಎಲ್ಲಾ ಜನರೂ ಈ ದೃಷ್ಟಿಯಿಂದ ಈ ಮಸೂದೆಯನ್ನು ಪರಿಶೀಲಿಸುತ್ತಾರೆ ಮತ್ತು ಈ ದೃಷ್ಟಿಯಿಂದ ತಮ್ಮ ಸ್ವಾಗತ ಅಥವಾ ಪುರಸ್ಕಾರ ಅಥವಾ ತಿರಸ್ಕಾರವನ್ನು ನೀಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಮಸೂದೆಯ ಹಿಂಭಾಗದಲ್ಲಿ ಕೊನೆಯಲ್ಲಿ ಗುರಿ ಮತ್ತು ಕಾರಣಗಳನ್ನು ಕೊಡುವ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಸಮಾಜವಾದದ ಮಾದರಿ ಸಮಾಜದಲ್ಲಿ ಎಲ್ಲರೂ ಕೂಡ ಸರ್ಕಾರದ ಬೊಕ್ಕಸಕ್ಕೆ ತೆರಿಗೆಯನ್ನು ತಮ್ಮ ಯಥಾಶಕ್ತಿ ಕೊಡಬೇಕು. ಈ ಕೆಲವು ವ್ಯವಸಾಯ ಉತ್ಪನ್ನದ ಮೇಲೆ ಆದಾಯವನ್ನು ಪಡೆದುಕೊಳ್ಳುವವರೂ ಕೂಡ ಕೊಡಬೇಕಾದದ್ದು ನ್ಯಾಯ, ಇದು ವೆಲ್‌ಫೇರ್ ಸ್ಟೇಟ್ ಸ್ಥಾಪನೆಮಾಡುವುದಕ್ಕೆ ಹೆಚ್ಚಿನ ಅವಕಾಶ ನೀಡುತ್ತದೆ ಎಂದೂ ಮತ್ತು ಎರಡನೆಯ ಪ್ಯಾರಾದಲ್ಲಿ ಈ ತೆರಿಗೆ ಈಗಾಗಲೆ ಅನೇಕ ಸಂಸ್ಥಾನಗಳಲ್ಲಿದೆ, ಟ್ಯಾಕ್ಸೇಷನ್ ಎನ್‌ಕ್ವೈರಿ ಕಮಿಷನ್‌ನವರು ಕೂಡ ಈ ತೆರಿಗೆಯನ್ನು ಹಾಕಬೇಕೆಂದು ಹೇಳಿದ್ದಾರೆ ಎಂದೂ ಇಷ್ಟು ಕಾರಣಗಳನ್ನು ಸೂಚಿಸಿದ್ದಾರೆ. ಇತ್ತೀಚೆಗೆ ಆವಡಿ ಅಧಿವೇಶನವಾದಮೇಲೆ ಇಡೀದೇಶದ ರಾಜಕೀಯದಲ್ಲೇ ಒಂದು ದೊಡ್ಡ ಬದಲಾವಣೆಯುಂಟಾಗಿದೆಯೆಂದು ಹೇಳಬಹುದು. ಶ್ರೀ ನೆಹರೂರವರ ನೇತೃತ್ವದಲ್ಲಿ ಸಮಾಜವಾದದ ಮಾದರಿ ಸಮಾಜವನ್ನು ಕಾಂಗ್ರೆಸ್ ಒಪ್ಪಿಕೊಳ್ಳಬೇಕಾಗುತ್ತದೆ, ಇದು ಯುಗದ ಒಂದು ಸವಾಲಿದ್ದ ಹಾಗಿದೆ ಎಂದು ಹೇಳಿದ್ದರು. ಇಷ್ಟರಮಟ್ಟಿಗೆ ಈ ತತ್ವವನ್ನು ಕಾಂಗ್ರೆಸ್ ಸಂಸ್ಥೆ ಅಂಗೀಕರಿಸಿದೆ, ಒಪ್ಪಿಕೊಂಡಿದೆ ಎಂಬುದನ್ನು ನಾವೀಗ ಹೇಳುವುದಕ್ಕಾಗುವುದಿಲ್ಲ. ಅಂತೂ ಇದು ಚೆನ್ನಾಗಿದೆ. ಅನೇಕಬಾರಿ ನೆಹ್ರೂ ಅವರೂ ಮತ್ತು ಅವರ ಅನುಯಾಯಿಗಳೂ 'ನಮ್ಮ ಗುರಿ ಈ ತರಹದ ಸಮಾಜವನ್ನು ರಚಿಸುವುದೇ ಆಗಿದೆ' ಎಂದು ಒತ್ತಿ ಹೇಳಿದ್ದಾರೆ. ಈ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಸಮಾಜವಾದದ ಮಾದರಿ ಸರ್ಕಾರವೆಂದ ಮೇಲೆ ಗುರಿ ಒಂದೇ ಆದಂತಾಯಿತು. ಮುಖ್ಯವಾಗಿ ಈ 8 ವರ್ಷಗಳ ಅವಧಿಯಲ್ಲಿ ಕಾಂಗ್ರೆಸ್ ತೆರಿಗೆಯ ವಿಷಯದಲ್ಲಿ ಮತ್ತು ತನ್ನ ಕಾರ್ಯಕ್ರಮಗಳ ವಿಷಯದಲ್ಲಿ ಯಾವ ರೀತಿ ಮುಂದುವರಿದಿದೆ, ಅದು ಕಾಮನ್‌ವೆಲ್ತ್ ಸಮಾಜವನ್ನು ರಚನೆ ಮಾಡುವ ದಾರಿಯಲ್ಲಿದೆಯೇ? ವೆಲ್‌ಫೇರ್ ಸ್ಟೇಟಿಗೆ ಅವಶ್ಯಕವಾದ ಕಾರ್ಯಕ್ರಮವನ್ನು ಕೈಕೊಂಡು ಮುಂದುವರೆದಿದೆಯೇ? ಮತ್ತು ಈಗ ತನ್ನ ಯೋಜನೆಗಳಲ್ಲಿ ಸಮಾಜವಾದದ ಮಾದರೀ ಸಮಾಜ ರಚನೆಮಾಡುವ ಕಡೆ ಹೋಗುತ್ತಿದೆಯೇ ಎಂಬುದನ್ನೆಲ್ಲಾ ದೇಶದ ಅಭಿವೃದ್ಧಿಯಲ್ಲಿ ಆಸಕ್ತಿ ಇರುವವರು ಕೂಲಂಕಷವಾಗಿ ವಿಚಾರಮಾಡಬೇಕಾದದ್ದು ಅಗತ್ಯ. ಈ ಸಭೆಯಲ್ಲಿ ಈ ಸಂದರ್ಭದಲ್ಲಿ ಮತ್ತು ಇನ್ನೂ ಕೆಲವು ಮಸೂದೆಗಳು ಬಂದಾಗ ಕೂಡ ಮಸೂದೆಯ ಉದ್ದೇಶಗಳು ಮತ್ತು ಕಾರಣಗಳ ವಿವರಗಳಲ್ಲಿ ಸೋಷಿಯಲಿಸ್ಟಿಕ್ ಪ್ಯಾಟ್ರನ್ ಸಮಾಜ ನಿರ್ಮಾಣ ಮಾಡುವುದೇ ತಮ್ಮ ಮುಖ್ಯ ಉದ್ದೇಶ್ಯವೆಂದು ಹೇಳುತ್ತಿದ್ದಾರೆ ಮತ್ತು ಹೊರಗಡೆ ಭಾಷಣಗಳನ್ನು ಮಾಡುವಾಗ ಕೂಡ ಇದೇ ಕಾರಣವನ್ನು ಹೇಳುತ್ತಿದ್ದಾರೆ. ಇದರ ಬಗ್ಗೆ ನನ್ನದೇನೂ ಅಸಮಾಧಾನ ಅಥವಾ ಆಕ್ಷೇಪಣೆ ಇಲ್ಲ.

ಈಗ ಮಾನ್ಯ ಮಂತ್ರಿಗಳು ಪ್ರಕೃತ ಸಂದರ್ಭದಲ್ಲಿ ಈ ತೆರಿಗೆಯನ್ನು ಏಕೆ ತರಬೇಕಾಯಿತು ಎಂಬುದನ್ನು ಈ ರೀತಿಯಾಗಿ ವಿವರಿಸಿದ್ದಾರೆ. "ಪಂಚವಾರ್ಷಿಕ

2 P.M.

ಯೋಜನೆ ಪ್ರಕಾರ ನಮಗೆ ಸುಮಾರು 8 ಕೋಟಿ 80 ಲಕ್ಷ ರೂಪಾಯಿಗಳು ಬೇಕು. ಅದನ್ನು ತೆರಿಗೆ ಮುಖಾಂತರ ಎತ್ತಬೇಕಾಗಿತ್ತು. ಅದರಲ್ಲಿ $3\frac{1}{2}$ ಕೋಟಿ ರೂಪಾಯಿಗಳನ್ನು ಮಾತ್ರ ಎತ್ತುವುದಕ್ಕೆ ಸಾಧ್ಯವಾಗಿದೆ. ಇನ್ನೂ 5 ಕೋಟಿ ರೂಪಾಯಿಗಳನ್ನು ಎತ್ತುವುದು ಇದೆ. ಹಾಗೆಯೇ ಈ ಒಂದು ಪಂಚವಾರ್ಷಿಕ ಯೋಜನೆ ಯಾವ ಪಕ್ಷಕ್ಕೂ ಸೇರಿದ್ದಲ್ಲ. ಎಲ್ಲ ಪಕ್ಷದವರು ಸೇರಿ ಮಾಡಬೇಕಾದ ಕೆಲಸ, ಇದು ಒಂದು ಸಾರ್ವಜನಿಕ ಯೋಜನೆ" ಎಂದು ಹೇಳಿದರು. ಮುಂದುವರಿದು ಪಿ. ಎಸ್. ಪಿ. ಪಾರ್ಟಿಯವರೂ ಸ್ಥೂಲವಾಗಿ ಅವರೂ ಕೂಡ ನಿಯಮ ಒಪ್ಪಿಕೊಂಡಿದ್ದಾರೆ ಎಂದು ಹೇಳಿದರು. ಸ್ಥೂಲವಾಗಿ ಯೋಜನೆಯನ್ನು ಒಪ್ಪಿಕೊಂಡದ್ದು ನಿಜ. ಸಮಾಜವಾದದ ಆರ್ಥಿಕ ಸಿದ್ಧಾಂತದ ಪ್ರಕಾರ ಒಂದು economic planning ದೇಶಕ್ಕೆ ಬೇಕು. ಯೋಜನೆಗೆ ಬದ್ಧವಾದ ರೀತಿಯಲ್ಲಿ ಕಾರ್ಯಕ್ರಮ ನಡೆಯಬೇಕೆಂಬ ಒಂದು ತತ್ವವನ್ನು ಪ್ರತಿಪಾದನೆ ಮಾಡಿದ್ದೇವೆ ಮತ್ತು ಒಪ್ಪಿಕೊಂಡಿದ್ದೇವೆ. ಆದರೆ ಈ ಮೊದಲನೆ ಪಂಚವಾರ್ಷಿಕ ಯೋಜನೆ ಏನನ್ನು ದೇಶದ ಮುಂದೆ ಪ್ಲಾನಿಂಗ್ ಕಮಿಷನ್‌ನವರು ಇಟ್ಟಿದ್ದಾರೋ ಅದರ ಬಗ್ಗೆ ನಮ್ಮ ಅನೇಕ ಮುಖಂಡರು ವೈಯಕ್ತಿಕವಾಗಿ ಹಾಗೂ ಪಾರ್ಟಿ ನಿಯಮಗಳ ಮುಖಾಂತರ ಮತ್ತು ಪಾರ್ಟಿ ಸಮ್ಮೇಳನಗಳಲ್ಲಿ ಅವರ ನೀತಿಯನ್ನು ಹೇಳಿದ್ದಾರೆ. ಅದರಲ್ಲಿ ಈ ಸರ್ಕಾರದ ನೀತಿಯಿಂದ ಪ್ರೈವೇಟ್ ಸೆಕ್ಟರ್‌ಗೆ 30 ವರ್ಷದವರೆಗೂ ಏನೂ ಮಾಡುವುದಕ್ಕಾಗುವುದಿಲ್ಲ; ಇನ್‌ಷ್ಯೂರೆನ್ಸ್ ಬ್ಯಾಂಕುಗಳು ಇವುಗಳನ್ನೆಲ್ಲಾ ನ್ಯಾಷನಲೈಸ್ ಮಾಡಬೇಕೆಂದು ಹೇಳಿದ್ದೇವೆ ಮತ್ತು ಇನ್ನೂ ಅನೇಕ ವಿಧವಾಗಿ ದೇಶದಲ್ಲಿ Radical changes ಮಾಡಬೇಕಾಗುತ್ತದೆ ಎಂದು ಹೇಳಿ 14 ಪಾಯಿಂಟ್ ಪ್ರೋಗ್ರಾಂ ಕೂಡ ಕೊಟ್ಟು ನೀವು ಇದನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವೇ ಎಂದು ಕೂಡ ಹೇಳಿದ್ದೇವೆ. ಆದರೆ ಮಾನ್ಯ ಮಂತ್ರಿಗಳು, 'ಸಮಾಜವಾದದ ತತ್ವವನ್ನು ಒಪ್ಪಿಕೊಂಡಿದ್ದೇವೆ. ಪಿ. ಎಸ್.ಪಿ. ಅವರನ್ನು ಕೂಡ ಕೇಳಿದ್ದೇವೆ' ಎಂದು ಹೇಳಿದ್ದಕ್ಕೆ ನಾವು ಯಾವ ವಿಷಯದಲ್ಲಿ ಒಪ್ಪಿಗೆ ಕೊಟ್ಟಿದ್ದೇವೆ, ಯಾವ ವಿಷಯದಲ್ಲಿ ಕೊಟ್ಟಿಲ್ಲ ಎಂಬುದನ್ನು ಈ ಸಂದರ್ಭದಲ್ಲಿ ಹೇಳದಿದ್ದರೆ ನನಗೇನೂ ಭಯ ಇಲ್ಲ, ನನಗೆ ಎಲ್ಲಾ ಚೆನ್ನಾಗಿ ಗೊತ್ತಿದೆ, ಇದು ಗೊತ್ತಿರುವ ವಿಷಯ, ಆದರೂ ಹೊರ

(ಶ್ರೀ ಎಸ್. ಗೋಪಾಲಗೌಡ.)

ಗಡೆಯವರಿಗೆ, ತಿಳಿಯದೇ ಇರುವವರಿಗೆ ತಪ್ಪುಭಾವನೆ
ಉಂಟಾಗಬಹುದು ಎಂದು ಹೇಳಿ ಸ್ವಲ್ಪ ಸ್ಪಷ್ಟಪಡಿಸು
ವುದೂ ಉತ್ತಮ ಎಂದು ಆ ಪಾಯಿಂಟ್ meet ಮಾಡು
ತ್ತೇನೆ. ಇದರಲ್ಲಿ ಬಹಳ ಅಮೂಲ್ಯವಾದ ತತ್ವ ಕೃಪಾ
ಲನಿಯವರೂ ಕೂಡ ಹೇಳಿದ್ದಾರೆ. ಒಂದು ದೇಶದಲ್ಲಿ 2
ಸಾವಿರ ಕೋಟಿ ರೂಪಾಯಿಗಳ ಒಂದು ಯೋ
ಜನೆ ಕಾರ್ಯಗತವಾಗುತ್ತಾ ಇದ್ದರೆ ಎಲ್ಲಿ ನೋಡಿ
ದರೂ ಕೆಲಸ ದೊರೆಯಬೇಕು. ಉದ್ಯೋಗ ಹೆಚ್ಚಾಗಿ
ನಿರುದ್ಯೋಗ ಸಮಸ್ಯೆ ಮಾಯವಾಗಬೇಕು. ಅದಕ್ಕೆ
ಬದಲಾಗಿ ಈ ಪಂಚವಾರ್ಷಿಕ ಯೋಜನೆ ಕಾರ್ಯಗತ
ವಾಗುತ್ತ ಇರುವ ಸಂದರ್ಭದಲ್ಲಿ ನಿರುದ್ಯೋಗ ಮಾಗಿ
ಲಿನ ಮಟ್ಟಮುಟ್ಟುತ್ತಿದೆ. ಇದು ಒಂದು ; strange
phenomenon ಎಂದು ಹೇಳಬೇಕಾಗುತ್ತದೆ.
ಡಾಕ್ಟರ್ ಲೋಹಿಯಾರವರ ಅಭಿಪ್ರಾಯ ಕೇಳುವು
ದಾದರೆ, ಇನ್ನೂ ಕಟುವಾಗಿದೆ. This plan is a big
hoax and fraud. ಇದು ಅವರವರ ಅಭಿಪ್ರಾಯ.
ಬೇರೆಬೇರ ರೀತಿಯಾಗಿದೆ. ಆದ್ದರಿಂದ ಈ ಕೆಲವು ಮೂಲ
ಭೂತವಾದ ವಿಷಯಗಳಲ್ಲಿ planning ಇರಬೇಕು ಎಂಬು
ದನ್ನೂ ಮತ್ತು ಭೂಸುಧಾರಣೆ ಆಗಬೇಕು, ಅದಕ್ಕೆ
ಪೂರ್ವಭಾವಿಯಾಗಿ ಏನೇನು ಕಾರ್ಯಕ್ರಮ ಕಾನೂನು
ಆಗಬೇಕು ಎಂಬುದನ್ನೂ ಒಪ್ಪಿಕೊಂಡಿದ್ದೇವೆ.
Compensation ಕೊಡತಕ್ಕ ಆರ್ಟಿಕಲ್ ಇದೆ. ಇವು
ಗಳನ್ನೆಲ್ಲಾ ಯಾವ ರೀತಿ ತಿದ್ದುಪಡಿ ಮಾಡಬೇಕು,
ಸಮಾಜವಾದದ ಮಾದರಿಯಲ್ಲಿ ಸಮಾಜವನ್ನು ರಚಿಸ
ಬೇಕು ಎಂಬುದನ್ನು ಕೂಡ ಒಂದು ಸನ್ನಿವೇಶವನ್ನು
ಮೊದಲೇ create ಮಾಡದೇ ಸುಮ್ಮನೆ ಎಲ್ಲವನ್ನೂ
ಮಾಡುತ್ತೇವೆ, ಘೂಡುತ್ತೇವೆ ಎಂದರೆ ಅದು ಬರೀ
ಒಂದು ಯಾವ ರಾಜಕೀಯ ಭಾಷಣ ಎಂದು
ಹೇಳುತ್ತಾರೋ ಆ ಮಾತು ಅವರಿಗೆ ಹೆಚ್ಚಾಗಿ
ಸಲ್ಲುತ್ತದೆ ಎಂದು ಹೇಳಬಲ್ಲೆ. ಈ ರೀತಿ ತೆರಿಗೆಯನ್ನು
ಹಾಕಬೇಕು, ಎಲ್ಲೆಲ್ಲಿ ತೆರಿಗೆಯನ್ನು ಹೆಚ್ಚಿಸುವುದಕ್ಕೆ
ಸಾಧ್ಯವಿದೆ, ಸ್ವಲ್ಪಮಟ್ಟಿಗೆ ತೆರಿಗೆ ಹಾಕದಿದ್ದರೆ ಯಾವ
ಒಂದು ದೊಡ್ಡ ಉದಾತ್ತಧ್ಯೇಯವನ್ನಿಟ್ಟುಕೊಂಡಿದ್ದೇ
ವೆಯೋ ಅದಕ್ಕೆ ಭಂಗ ಬರುತ್ತದೆ ಎಂದು ಕೂಡ ಮಾನ್ಯ
ಮಂತ್ರಿಗಳು ಹೇಳಿದರು. ಆಮೇಲೆ 'ಕಳೆದ ವರ್ಷ ನಾಲ್ಕು
ಮಸೂದೆಗಳಿಗೆ ಅಂಗೀಕಾರ ದೊರೆತಿದೆ, ಈಗ ಈ
ಮಸೂದೆಯನ್ನು ತಂದಿದ್ದೇವೆ, ಇದರಿಂದ ಸುಮಾರು
20 ಲಕ್ಷ ರೂಪಾಯಿಗಳ ವರಮಾನವನ್ನು ನಿರೀಕ್ಷಿಸು
ತ್ತೇವೆ. ಇದು ವ್ಯವಸಾಯದ ಮೇಲೆ ಹಾಕತಕ್ಕ ಒಂದು
ಆದಾಯದ ತೆರಿಗೆ' ಎಂದು ಹೇಳಿದರು ; ಮತ್ತು
'ಮದರಾಸು, ಕೊಡಗು, ಹೈದರಾಬಾದು, ತಿರುವಾಂ
ಕೂರು, ಕೊಚ್ಚಿನ್, ಬಿಹಾರ, ಅಸ್ಸಾಂ, ಬೆಂಗಾಲ್,
ಒರಿಸ್ಸಾ, ಉತ್ತರಪ್ರದೇಶ, ರಾಜಸ್ಥಾನ್, ಭೂಪಾಲ್,
ವಿಂಧ್ಯಪ್ರದೇಶ್ ಈ ಹನ್ನೆರಡು ಪ್ರಾಂತ್ಯಗಳಲ್ಲಿ ಈಗಾ
ಗಲೇ ಇದೆ. ಅಲ್ಲಿ ಕೂಡ ಹೈದರಾಬಾದು ಒಂದು ಬಿಟ್ಟರೆ
ಬಾಕಿ ಎಲ್ಲಾ ಕಡೆಯೂ ಮೂರು ಸಾವಿರದಿಂದ
ಪ್ರಾರಂಭಮಾಡುತ್ತಾರೆ ನಾವು 3,500 ಇಟ್ಟಿದ್ದೇವೆ.
ಇದು ಒಂದು ದೊಡ್ಡ ರಿಯಾಯಿತಿ ಎಂದು ಹೇಳಿದರು.
ಪ್ಲಾನಿಂಗ್ ಕಮಿಷನ್‌ನವರು ತೆರಿಗೆಯ ವಿಷಯದಲ್ಲಿ
ಟ್ಯಾಕ್ಸೇಷನ್ ಎನ್‌ಕ್ವೈರಿ ಕಮಿಟಿ ಎಂದು ಮಾಡಿ, ಅವರು
ಒಂದು ದೊಡ್ಡ ರಿಪೋರ್ಟನ್ನು ಕೊಟ್ಟಿದ್ದಾರೆ. 50
ವರ್ಷದವರೆಗೂ ಇದೇ ರೀತಿ ಆರ್ಥಿಕಪರಿಸ್ಥಿತಿ, ಈ
feudal system, ruined economy ಮುಂದು
ವರಿಯುವುದಾದರೆ ಯಾವ ರೀತಿ ತೆರಿಗೆಗಳನ್ನು ಯಾರಾ,
ರಮೇಲೆ ಎಷ್ಟೆಷ್ಟು ಹಾಕಬೇಕೆಂಬುದನ್ನು ಹೇಳಿದ್ದಾರೆ.
50 ವರ್ಷಗಳವರೆಗೂ ಯಾರೂ ಯಾವ ಪುಸ್ತಕವನ್ನೂ
ಓದಬೇಕಾಗಿಲ್ಲ. ಅವರು ಹೇಳಿರುವ ರೀತಿಯಲ್ಲಿ ಹಾಕ
ಬಹುದು. ಈಗಿರತಕ್ಕ structure ಮೇಲೆ ಯಾವ
ರೀತಿ ರಿಫಾರಂ ಮಾಡಬಹುದು ಎಂಬುದನ್ನು ಯೋಚನೆ
ಮಾಡಬೇಕು. ಯಾರಿಗೂ ಹೆಚ್ಚು ತೊಂದರೆ ಆಗಬಾ
ರದು, ಆದಾಯ ಬರಬೇಕು, ಅದು ಸಾಧ್ಯವಾದ
ಮಟ್ಟಿಗೂ ಈ ರೀತಿಯಲ್ಲೇ ಖರ್ಚಾಗಬೇಕು ಎಂಬು
ದಾಗಿ ಸ್ಥೂಲವಾದ ಒಂದು ಶಿಫಾರಸು ಮಾಡಿದ್ದಾರೆ
ಇದರಲ್ಲಿ ಸಾಮಾನ್ಯವಾಗಿ ಏನಾಗಿದೆ ಎಂಬುದನ್ನು
ಇತ್ತೀಚೆಗೆ ನಮ್ಮವರೂ ಕೂಡ ಹೇಳಿದ್ದಾರೆ. ಇದನ್ನು
ಇಂಪ್ಲಿಮೆಂಟ್ ಮಾಡುವುದಾದರೆ ಸಮಗ್ರವಾಗಿ ಮಾಡಿ,
ಯಾವಯಾವ ಸೆಕ್ಟರ್ ಮೇಲೆ ಎಷ್ಟೆಷ್ಟು ಹಾಕಬಹುದು
ಎಂಬುದನ್ನು ಎನ್‌ಕ್ವೈರಿ ಕಮಿಷನ್‌ನವರೂ ಮತ್ತು ಸಿ.ಡಿ.
ದೇಶಮುಖ್‌ರವರೂ ಸೂಚನೆ ಮಾಡಿದ್ದಾರೆ. ಎಲ್ಲ ಸಂ
ಸ್ಥಾನಗಳೂ ಇಂಥಿಂಥ ಬಾಬುಗಳ ಮೇಲೆ ಆದಾಯ
ತೆರಿಗೆ ಹಾಕಲೇಬೇಕು, 1955ನೆಯ ಇಸವಿ ಬಡ್ಜೆಟ್ಟಿನಲ್ಲಿ
ಅದನ್ನು ತರತಕ್ಕವರಿದ್ದೇವೆ, ಅದು ಎಲ್ಲರಿಗೂ ಅನ್ವಯಿಸು
ವುದು ಎಂದು ಹೇಳಿ ಇಷ್ಟು ಹೊತ್ತಿಗೆ ಆದೇಶ ಕೊಡ
ಬಹುದಾಗಿತ್ತು. ಈಗಾಗಲೇ ಟ್ಯಾಕ್ಸೇಷನ್ ಎನ್‌ಕ್ವೈರಿ
ಕಮಿಷನ್ ರಿಪೋರ್ಟು ಬಂದು ಬಹಳ ದಿವಸ ಆಯಿತು.
ಅವರು ಅನೇಕ ವಿಷಯಗಳನ್ನು ನಮೂದಿಸಿದ್ದಾರೆ. ಈಗೇ
ನೋ ಮಾನ್ಯ ಮಂತ್ರಿಗಳು, ಅವರ ಅಭಿಪ್ರಾಯ ನೋ
ಡಿದ್ದರಲ್ಲಿ ಅವುಗಳನ್ನೆಲ್ಲಾ ತಕ್ಷಣ ಜಾರಿಗೆ ತರುವುದಕ್ಕೆ
ಆಗಲಿಲ್ಲ ಎಂದು justify ಮಾಡಿಕೊಂಡರು. ಏಕೆಂದರೆ
ಎಲ್ಲಿ ತಮಗೆ ಅನುಕೂಲವಾಗಿ ಕಾಣುತ್ತದೆಯೋ
ಅದನ್ನು ಇಟ್ಟುಕೊಳ್ಳುವುದು ಸ್ವಾಭಾವಿಕ. ಈ ಒಂದು
ಮಸೂದೆಯಲ್ಲಿ ಖಚಿತವಾಗಿ ಬರೆದಿದ್ದಾರೆ, 3,000
ರೂಪಾಯಿಗಳ ಒಂದು ಲಿಮಿಟ್ ಇಟ್ಟುಕೊಂಡು ಅದರ
ಮೇಲೆ ಎಲ್ಲ ಸಂಸ್ಥಾನಗಳವರೂ ವ್ಯವಸಾಯದ ವರ
ಮಾನ ತೆರಿಗೆ ಹಾಕಲೇಬೇಕು ಎಂದು ಸಲಹೆಮಾಡಿ
ದ್ದಾರೆ. ಈ ರೀತಿ ಮಾಡಬೇಕು, ಮಾಡಿದರೆ ಅನುಕೂಲ
ಎಂಬ ವಾದದಲ್ಲಿ ಭಿನ್ನಾಭಿಪ್ರಾಯವಿಲ್ಲ. ಇದರಲ್ಲಿ
ಕೆಲವು ವಿಷಯಗಳನ್ನು ಸರ್ಕಾರದವರು ಗಮನಿಸಿದ್ದಾ
ರೆಯೇ, ಎಷ್ಟುಮಟ್ಟಿಗೆ ಅವರು ಅವುಗಳನ್ನು ಕಾರ್ಯ
ಗತ ಮಾಡುವುದಕ್ಕೆ ಸಿದ್ಧರಾಗಿದ್ದಾರೆ ಎಂಬುದನ್ನು
ಕೂಡ ನೋಡಬೇಕಾಗಿದೆ. ಎರಡು, ಮೂರು ಸಣ್ಣ
ವಾಕ್ಯಗಳನ್ನು ಮಾತ್ರ ಇದರಲ್ಲಿ ಓದಿ ಅಲ್ಲಿಗೆ ಬಿಡು
ತ್ತೇನೆ.

"No reliable measure of the degree of inequality of income or wealth in the country was available at present. A wide range of inequality however did exist. It had been accentuated by infla ion. At the same time there had been a fall in real incomes of considerable sections of the population."

"The (limit of taxable capacity might be said to be relevant to the purposes for which the procedds of additional taxes were expended. Efficiency in administration and economy in public expenditure would diminish people's unwillingness to suffer an increase in tax burdens. It would not be incorrect to state, the Commission observes, that taxable capacity shrinks with

impecurious and unpopular policies and ineffective governance, and expands the beneficence in competent administration."

ಈ ರೀತಿ ಇದರಲ್ಲಿ ಹೇಳಿದ್ದಾರೆ. ಇವೊತ್ತು ನಮಗೆ ತಿಳಿದಿರುವ ಹಾಗೆ ನಮ್ಮಲ್ಲಿ ಕೆಲಕೆಲವು ಸ್ಕೀಮುಗಳು ಇವೆ. ಈಗಾಗಲೇ ಈ ಸಭೆಯಲ್ಲಿ ಅನೇಕವೇಳೆ ಮಾನ್ಯ ಸದಸ್ಯರನೇಕರು ನಮ್ಮ ಪಕ್ಷದವರೇ ಅಲ್ಲ ಇತರ ಪಕ್ಷದವರೂ ಕೂಡ ಆ ಸ್ಕೀಮುಗಳಿಂದ ತೊಂದರೆ ಏನಿದೆ ಎಂಬುದನ್ನು ಕೂಡ ಹೇಳಿದ್ದಾರೆ. ಅಂಥ ಸ್ಕೀಮುಗಳನ್ನೆಲ್ಲಾ avoid ಮಾಡಬಹುದಾಗಿತ್ತು. ಉದಾಹರಣೆಗೆ ಸಂಸ್ಕೃತಿ ಪ್ರಚಾರ, ಎಫಿಷೆನ್ಸಿ ಇಲ್ಲದೆ ಇರುವಿಕೆ, ಅಡ್ಮಿನಿಸ್ಟ್ರೇಷನ್ top heavy ಆಗಿರುವುದು ಇಂಥವು ಅನೇಕವಿದೆ. ಯಾವ ಒಂದು ಸಾಧನವನ್ನು ಮಾಡುತ್ತೇವೆಯೋ ಆ ಸಾಧನ ಚೆನ್ನಾಗಿದೆಯೇ ಇಲ್ಲವೇ ಎಂಬುದನ್ನು ನೋಡಬೇಕು. ಮರ ಕಡಿಯುವುದಕ್ಕೆ ಒಂದು ಕೊಡಲಿ ತೆಗೆದುಕೊಂಡರೆ ಅದು ಹರಿತವಾಗಿದೆಯೋ, ಮರವನ್ನು ಕಡಿದೀತೇ ಎಂಬುದನ್ನು ನೋಡಿಕೊಳ್ಳದೆ ಮರದ ಕೊಡಲಿ ತೆಗೆದುಕೊಂಡು ಹತ್ತು ಮರ ಕಡಿಯುತ್ತೇನೆ ಎಂದು ತಮ್ಮ ಮುಂದೆ ಹೊರಟರೆ ತಾವು "ಹುಚ್ಚ, ಮರದ ಕೊಡಲಿಯಿಂದ ಕಡಿಯುವುದಕ್ಕೆ ಆಗುವುದಿಲ್ಲ, ಕಬ್ಬಿಣದ ಕೊಡಲಿಯನ್ನೋ ಉಕ್ಕಿನ ಕೊಡಲಿಯನ್ನೋ ತೆಗೆದುಕೋ" ಎಂದು ಹೇಳುತ್ತೀರಿ. ಹಾಗೆಯೇ ತೆರಿಗೆಗಳನ್ನು ಹಾಕುವಾಗಲೂ ಕೂಡ ಸಮಾಜವಾದದ ಮಾದರಿಯಲ್ಲಿ ಮಾಡುತ್ತೇವೆ ಎಂದು ಹೇಳುವುದಾದರೆ ಅದಕ್ಕೆ ಯಾವ ವಾತಾವರಣ ಇರಬೇಕು, ದೇಶದಲ್ಲಿ ಯಾವ ರೀತಿ ತೆರಿಗೆಗಳನ್ನು ಹಾಕಬೇಕು, ಯಾವ ರೀತಿ ಆದಾಯ ಸರಿತೂಗಿಸಬೇಕು ಎಂಬವುಗಳೆಲ್ಲಾ ಬಹಳವಾಗಿ ವಿಚಾರಮಾಡತಕ್ಕ ಗಹನವಾದ ವಿಷಯಗಳು.

ಆಮೇಲೆ ಅವರು ಇನ್ನೂ ಹೇಳಿದ್ದಾರೆ. ಈ ವಿಷಯ ಸಮರ್ಥನೆ ಮಾಡಿಕೊಳ್ಳುವುದಕ್ಕೆ ಹೇಳಿರುವುದು ಏನೆಂದರೆ...........

"A ceiling of personal incomes on the basis of a reasonable multiple of the per capita or per family income was necessary and it is the Commission's view that there should be a ceiling on net personal incomes after tax which generally speaking should not exceed approximately 30 times the prevailing average per family income in the country."

ಎಂದು ಸಲಹೆಗಳನ್ನು ಕೊಟ್ಟಿದ್ದಾರೆ. ಇದನ್ನೆಲ್ಲಾ ಏಕೆ ಹೇಳುತ್ತೇನೆ ಎಂದರೆ ಈ ಟ್ಯಾಕ್ಸೇಷನ್ ಎಂಕ್ವೈರಿ ಕಮಿಷನ್ನಿನ ಶಿಫಾರಸುಗಳನ್ನು ಕಾರ್ಯಗತಮಾಡುತ್ತೇವೆ ಎಂದು ನೀವು ಯಾವುದಾದರೂ ಒಂದು ಸಂದರ್ಭದಲ್ಲಿ ಹೇಳುವುದಾದರೆ ಈಗಾಗಲೇ ಎಷ್ಟುಮಟ್ಟಿಗೆ ಮಾಡಿದ್ದೀರಿ, ಆಮೂಲಾಗ್ರವಾಗಿ ಮಾಡಿದ್ದೀರಾ ಅಥವಾ ಯಾವುದು ಅನುಕೂಲವಾಗಿ ಕಾಣುತ್ತದೆಯೋ ಅದನ್ನು ಮಾತ್ರ ಮಾಡಿದ್ದೀರಾ ಎಂಬುದು ಬಹಳ ಮುಖ್ಯವಾದ ಅಂಶ. ಆದ್ದರಿಂದ ಈ ರೀತಿ ಟ್ಯಾಕ್ಸೇಷನ್ ಎಂಕ್ವೈರಿ ಕಮಿಷನ್ನಿನವರು ಮಾಡತಕ್ಕ ಶಿಫಾರಸುಗಳನ್ನು ಕಾರ್ಯತಃ ಕಾರ್ಯಗತ ಮಾಡುವುದಕ್ಕೆ ಕೇಂದ್ರ ಸರ್ಕಾರ ಆಗಲಿ, ಮೈಸೂರು ಸರ್ಕಾರ ಆಗಲಿ ಯಾವ ಒಂದು ಹೆಜ್ಜೆಯನ್ನೂ ತೆಗೆದುಕೊಂಡಿಲ್ಲ ಎಂದು ಹೇಳಿ ಅವರಿಗೆ ಈ ಸಮಯದಲ್ಲಿ ಹೇಳಬಯಸುತ್ತೇನೆ.

ಆ ಮೇಲೆ ಇದರಲ್ಲಿ ಕೆಲಕೆಲವು ಬಹಳ ಒಳ್ಳೆಯ ಗುಣಗಳೂ ಇವೆ. ಹೆಚ್ಚಿಗೆ ಯಾರಿಗೆ ಆದಾಯ ಬರುತ್ತದೆಯೋ ಅವರ ಮೇಲೆ, commercial crops ಮೇಲೆ ಮಾತ್ರ ಹಾಕಿದ್ದೇವೆ ಎಂದು ಕೂಡ ಹೇಳಿದ್ದಾರೆ. ಇದರಲ್ಲಿ ಏನಾಗಿದೆ ಎಂದರೆ ಈ ತೆರಿಗೆ ಹಾಕುವ ವಿಷಯದಲ್ಲಿ ಮಾತನಾಡುತ್ತೇನೆ.—ಇವತ್ತು ಅನೇಕವಾಗಿ, ಇದೇ ಸಭೆಯಲ್ಲಿ ಚರ್ಚೆ ಆಯಿತು. "ವ್ಯವಸಾಯದ ಉತ್ಪನ್ನದ ಬೆಲೆಯಲ್ಲಿ ಬಹಳವಾಗಿ ಇಳಿದು ಹೋಗುತ್ತಾ ಇದೆ. ಅದನ್ನು ತಡೆಗಟ್ಟಬೇಕಾದದ್ದು ಅತ್ಯವಶ್ಯಕ. ಇಲ್ಲದೇ ಇದ್ದರೆ ವ್ಯವಸಾಯಗಾರರ ಆರ್ಥಿಕ ಸ್ಥಿತಿ ಕೆಟ್ಟುಹೋಗುತ್ತದೆ. ಅವರು ವಿನಾಶಕ್ಕೆ ಗುರಿಯಾಗುತ್ತಾರೆ" ಎಂದು ಹೇಳಿ ಚರ್ಚೆ ಆಯಿತು. ಮತ್ತು ಇದೇ ಪ್ರಕಾರ ಕೇಂದ್ರದಲ್ಲೂ ಕೂಡ ಇದರ ಬಗ್ಗೆ ಪರಿಶೀಲನೆ ನಡೆದಿದೆ. ಸರ್ಕಾರದವರು ಕಾರ್ಯಕ್ರಮ ತೆಗೆದುಕೊಳ್ಳುವವರಿದ್ದಾರೆ. ನಮ್ಮ ಸರ್ಕಾರದವರೂ ಕೂಡ ಸಲಹೆಗಳನ್ನು ಕೊಡುತ್ತೇವೆ, ಏನಾದರೂ ಒಂದು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿ ಮಾನ್ಯ ಮಂತ್ರಿಗಳು ಹೇಳಿದರು. ಹಿಂದೆ ಒಂದು ದಿವಸ ಇಲ್ಲಿ ಚರ್ಚೆ ನಡೆಯಿತು. ಈಗ ಅದೇ ವಾದ ಇನ್ನೊಂದು ರೀತಿಯಲ್ಲಿದೆ. ಮಾನ್ಯ ಮಂತ್ರಿಗಳು ವಿಚಿತ್ರವಾಗಿ ಅವರ ಕೆಲವು ಆರ್ಥಿಕ ಸಿದ್ಧಾಂತಗಳನ್ನು ಹೇಳುತ್ತಾರೆ. ನಾನು 10–15 ವರ್ಷಗಳಿಂದ ನನ್ನ ತಿಳುವಳಿಕೆಗೆ ಎಟಕಿದಷ್ಟುದೂರ ಆರ್ಥಿಕ ತಜ್ಞರಾದ ರಾಬರ್ಟ್ ಓವನ್ ಮೊದಲಾದವರು ಪ್ರತಿಪಾದಿಸಿರತಕ್ಕ ಮೂರು ಶತಮಾನಗಳಿಂದ ಬರೆದಿರತಕ್ಕ ಆರ್ಥಿಕ ಸಿದ್ಧಾಂತವನ್ನು ಅಲ್ಪಸ್ವಲ್ಪ ಓದಿರುವುದು ಉಂಟು. ನಮ್ಮ ಮಾನ್ಯ ಮಂತ್ರಿಗಳು ಹೇಳಿರತಕ್ಕಷ್ಟು ಸರಳವಾಗಿ ಯಾರೂ ಇಂಟರ್‌ಪ್ರೆಟ್ ಮಾಡಿಲ್ಲ. ಇನ್‌ಫ್ಲೇಷನ್ ವಿಷಯದಲ್ಲಾಗಲಿ ತೆರಿಗೆಗಳಿಗೆ ಸಂಬಂಧಪಟ್ಟ ವಿಷಯದಲ್ಲಾಗಲಿ ಇಷ್ಟು ಸುಲಭವಾಗಿ ಯಾರೂ ಇಂಟರ್‌ಪ್ರೆಟ್ ಮಾಡಿಲ್ಲ. ಇವರು ಇಷ್ಟು ಸರಳವಾಗಿ ಹೇಳಿಕೊಂಡು ಹೋದರು! ಈ ರೀತಿಯಲ್ಲಿ ಹೇಳುವಾಗ, ಈ ವ್ಯವಸಾಯದ ಬೆಳೆಗಳಿಗೆ ಬೆಲೆ ಏರುವುದಕ್ಕೆ ನಾವು ಅನಾವಶ್ಯಕವಾಗಿ ಅವಕಾಶ ಕೊಡಬಾರದು ಎಂದು ಹೇಳಿದರು. 'ಅನಾವಶ್ಯಕವಾಗಿ' ಎನ್ನುವುದೇ ಅದರ ಜೀವಾಳ ಎಂದು ಹೇಳಿದರು. ಅನಾವಶ್ಯಕವಾಗಿ ಏರಬಾರದು ಎನ್ನುವುದು ಅದರ ಜೀವಾಳ ಎಂದು ಹೇಳುವಾಗ ಆ ಮಾತನ್ನು ಯೋಚನೆ ಮಾಡಿ ಹೇಳಿದರೇ ಎನ್ನುವುದು ನನಗೆ ಇನ್ನೂ ಅಷ್ಟು ಖಚಿತವಾಗಿಲ್ಲ. ಈಗ ಏರುವುದೇ ಅನವಶ್ಯಕವಾಗಿ ಏರಿದೆ ಎಂದು ಅವರ ಅಭಿಪ್ರಾಯವೋ ಅಥವಾ ಈಗ ಕಮರ್ಷಿಯಲ್ಸ್ ಕ್ರಾಪ್ಸ್ ಅಂದರೆ ವ್ಯಾಪಾರದ ಉತ್ಪನ್ನಗಳು ಅಡಿಕೆ, ಏಲಕ್ಕಿ, ಕಡಲೆಕಾಯಿ, ಇನ್ನೂ ಬೇರೆ ಬೇರೆ ಅನೇಕಾನೇಕವಾಗಿ ಏರಿವೆ, ಅವುಗಳಿಗೆ ಈಗ ಇತಕ್ಕ ಬೆಲೆ, ಅವುಗಳ ಉತ್ಪನ್ನಕ್ಕೆ ಆಗತಕ್ಕಂಥ ಖರ್ಚು ಶ್ರಮ ಬಹಳ ಹೆಚ್ಚಾಗಿದೆ ಎನ್ನುವ ಕಾರಣದಿಂದ ಇದರಲ್ಲಿ ಕೆಲವು ಅಂಶಗಳನ್ನು ತೆಗೆದುಕೊಳ್ಳುವುದಕೆ ಸಾಧ್ಯವಿಲ್ಲ ಎಂಬ ಅರ್ಥದಲ್ಲಿ ಹೇಳಿದರೋ ಅರ್ಥವಾಗಲಿಲ್ಲ. ನನಗೆ ಗೊತ್ತಿರುವ ಹಾಗೆ ಅಡಿಕೆ ಮೇಲೆ ಬೇರೆಬೇರೆ ದರಗಳನ್ನು ಕೊಡುತ್ತಾ ಇದ್ದಾರೆ. Cost of production ತೆಗೆದುಕೊಂಡರೂ ಕೂಡ ಇವೊತ್ತು ಮಣಕ್ಕೆ 40 ರೂಪಾಯಿ ಬಂದರೂ ಸಹ ನಿವ್ವಳ ನಫೆ ಎಷ್ಟು ಬರುತ್ತದೆ ಎಂಬುದನ್ನು ನೋಡಿದರೆ ಅನೇಕ ವೇಳೆ ನಫೆಯೇ ಬರುವುದಿಲ್ಲ; ನಷ್ಟವಾಗಿ ಹೋಗುತ್ತದೆ. ತಾನು, ತನ್ನ ಹೆಂಡತಿ, ತನ್ನ ಮಕ್ಕಳು ಎಲ್ಲರೂ ಸೇರಿ ಕೃಷಿಮಾಡಿ, ತನ್ನದೇ ಆದ ಗಾಡಿಯಿಂದ

(ಶ್ರೀ ಎಸ್. ಗೋಪಾಲ ಗೌಡ.)

ಅಥವಾ ಲಾರಿಯಿಂದ ತಂದುಹಾಕಿದರೆ ಸುಮಾರು 5 ಅಥವಾ 6 ರೂಪಾಯಿ ಒಂದು ಮಣದ ಮೇಲೆ ಲಾಭ ಸಿಕ್ಕಬಹುದು, ನಿವ್ವಳ ಆದಾಯ. ಅದೇ ಬೇರೆಯವರು ಒಂದು ಅಡಿಕೆ ಸುರಿಯಬೇಕು, ಬೇರೆಯವರ ಲಾರಿಯಿಂದ ಅದನ್ನು ಸಾಗಿಸಬೇಕು ಎನ್ನುವುದಾದರೆ ನಷ್ಟವೇ ಖಂಡಿತ. ಅಷ್ಟೇ ಅಲ್ಲ. ಅದಕ್ಕೆ ಕೊಳೇ ರೋಗ ಮುಂತಾದುವು ಬರುವುದುಂಟು. ಅಂಥ ಸಂದರ್ಭದಲ್ಲಿ 44-45 ರೂಪಾಯಿಗಳ ವರೆಗೂ ಖರ್ಚು ಬೀಳಬಹುದು. ಎಲ್ಲರೂ ವ್ಯವಸಾಯ ಮಾಡತಕ್ಕವರೇ ಆಗಿದ್ದರೂ ಆತನು 100 ಮಣ ಅಡಿಕೆ ಆಗಬಹುದು ಎಂದು ಅಂದಾಜುಮಾಡಿದ್ದರೆ ಅದು ಕೇವಲ 80 ಮಣಗಳಾಗಬಹುದು. ಅಲ್ಲಿಗೆ ಆತನ ಅಂದಾಜ ಪ್ರಕಾರ 20 ಮಣ ಲುಕ್ಸಾನಾಯಿತು ಅಂದರೆ 20×40= ರೂಪಾಯಿಗಳು ಆತನ ಅಂದಾಜಿಗಿಂತ ಖೋತಾ ಆದಹಾಗಾಯಿತು ಇದನ್ನೆಲ್ಲಾ ಏತಕ್ಕಾಗಿ ಹೇಳುತ್ತಿದ್ದೇನೆಂದರೆ ಈ ಸಮಾಜವಾದದ ಒಂದು ಮುಖ್ಯ ತತ್ವ ಈ ಸ್ಪೆಕ್ಯುಲೇಷನ್‌ಗಳ ಮೇಲೆ ನಿಂತಿರುವುದಿಲ್ಲ ಎನ್ನುವುದನ್ನು ತಿಳಿಸುವುದಕ್ಕಾಗಿ ಹೇಳುತ್ತಿದ್ದೇನೆ. ಈ ಸ್ಪೆಕ್ಯುಲೇಷನ್ ಮೇಲೆ ಅವಲಂಬಿಸಿಕೊಂಡಿರುವುದು ಈ ಸಟ್ಟಾ ಇತ್ಯಾದಿ ವ್ಯವಹಾರಗಳು ಮಾತ್ರ. ಈ ಸ್ಪೆಕ್ಯುಲೇಷನ್‌ಗಳಮೇಲೆ ಅವಲಂಬಿಸಿರುವ ವಸ್ತುಗಳು ಈ ದಿವಸ 5 ರೂಪಾಯಿಗಳಿದ್ದರೆ ನಾಳೆ ಎಕ್‌ದಂ 10 ರೂಪಾಯಿಗಳಾಗಬಹುದು ದಿವಸ ಲಕ್ಷಾಧಿಕಾರಿಯಾಗಿದ್ದವನು ನಾಳೆ ಭಿಕ್ಷಾಧಿಕಾರಿ ಆಗಬಹುದು. ಇಲ್ಲವೇ ಭಿಕ್ಷಾಧಿಕಾರಿ ಲಕ್ಷಾಧಿಕಾರಿಯೂ ಆಗಬಹುದು. ಇಂಥ ತತ್ವ ಒಂದು ಏನಿದೆಯೋ ಇದನ್ನು ಒಂದು ಸಮಾಜವಾದಿ ತತ್ವ ಎಂದು ಕರೆಯುವುದಕ್ಕಾಗುವುದಿಲ್ಲ. ಇದನ್ನು ಬಂಡವಾಳಶಾಹಿ ಇಲ್ಲವೇ ಸರಂಜಾಮಶಾಹಿ ತತ್ವ ಎಂದು ಕರೆದರೂ ಆಗಬಹುದು. ಆದರೆ ನಾವು ಈ ಸಮಾಜವಾದಿ ತತ್ವದ ಪ್ರಕಾರ ನಡೆಯಬೇಕಾಗಿದ್ದರೆ, ನಾವು ಈ ದಿವಸ ಪ್ರಾರಂಭ ಮಾಡತಕ್ಕಂಥ ಒಂದು ಪದ್ಧತಿಯನ್ನು ಕೊನೆಯವರೆಗೂ ಅದನ್ನು ಸಾಧಿಸಿಕೊಂಡು ಬರಬೇಕು. ಒಂದು ಸಲ ಒಂದು ರೀತಿಯಾಗಿ ವಾದಮಾಡಿ ಮತ್ತೊಂದಾವರ್ತಿಗೆ ಮತ್ತೊಂದು ರೀತಿ ವಾದಮಾಡತಕ್ಕದ್ದು ಸಮಾಜವಾದವಾಗುವುದಿಲ್ಲ. ಈ ದಿವಸ ನಾವು ರೈತನಿಗೆ ಕೊಳ್ಳುವ ಶಕ್ತಿ ಇನ್ನೂ ಸರಿಯಾಗಿ ಬಂದಿಲ್ಲ ಎಂದು ಹೇಳುತ್ತಿದ್ದೇವೆ. ಆದರೆ ಕೊಳ್ಳುವ ಶಕ್ತಿ ಉತ್ಪತ್ತಿ ಮಾಡತಕ್ಕಂಥ ಶಕ್ತಿಗಳೊಡನ್ನೂ ಒಂದು ಸಮಾನತೆಯಲ್ಲಿಡಬೇಕು. ಅಂದರೆ ಈ ಸ್ಟೆಬಿಲೈಜೇಷನ್ ಆಫ್ ಪ್ರೈಸಸ್' ಮತ್ತು ಪ್ಯಾರಿಟಿ ಆಫ್ ಪ್ರೈಸಸ್' ಇವುಗಳಿಗೆ ಇರತಕ್ಕಂಥ ಒಂದು ಸಾಮರಸ್ಯವನ್ನು ಉಂಟುಮಾಡಬೇಕಾಗಿದೆ. ಹೇಗೆಂದರೆ ಈಗ ಕೈಗಾರಿಕೋತ್ಪನ್ನ ವಸ್ತುಗಳನ್ನು ತಯಾರಿಸುವುದಕ್ಕೂ ಮತ್ತು ಮಾರಾಟ ಮಾಡುವುದಕ್ಕೂ ಒಂದು ಸಾಮರಸ್ಯವಿರುವುದರಿಂದ ಈಗ ಆ ಕೈಗಾರಿಕೋದ್ಯಮಗಳು ಸ್ವಲ್ಪಮಟ್ಟಿಗೆ ಮುಂದಕ್ಕೆ ಬಂದಿರುತ್ತವೆ. ಅದೇ ರೀತಿ ಈ ದಿವಸ ರೈತನು ಬೆಳೆಯತಕ್ಕ ಸಾಮಾನುಗಳಿಗೂ ಮತ್ತು ಆತನು ಕೊಳ್ಳತಕ್ಕ ಸಾಮಾನುಗಳಿಗೂ ಒಂದು ಸಾಮರಸ್ಯವಿರಬೇಕು ಅಂಥ ಒಂದು ಸಮರಸತೆ ಈ ದಿವಸ ಇಲ್ಲವೆ ಇದ್ದರೆ ಅದನ್ನು ನಾವು ಉಂಟುಮಾಡಬೇಕು. ಆದರೆ ಇಂಥ ಒಂದು ನಿಯಂತ್ರಣವನ್ನು ಒಮ್ಮೆಗೇ ನಾವು ತರುವುದಕ್ಕಾಗುವುದಿಲ್ಲ. ಇದನ್ನು ಸ್ವಲ್ಪ ಸ್ವಲ್ಪವಾಗಿ ತಂದರೆ ಮುಂದಕ್ಕೆ ಒಳ್ಳೆಯದಾಗುತ್ತದೆ. ಆದರೆ ಒಮ್ಮೆ ಹೀಗೆ ಒಂದು ಪ್ರಯತ್ನಕ್ಕೆ ಕೈ ಹಾಕಿ ಆಮೇಲೆ ರೈತನ ದವಸಗಳಿಗೆಲ್ಲಾ ಬೆಲೆ ಇಳಿಮುಖವಾಗುತ್ತಿದೆ ಎಂದು ನಿಟ್ಟುಸಿರುಬಿಟ್ಟುಕೊಂಡು ಆತನು ಬೆಳೆಯತಕ್ಕಂಥ ಸಾಮಾನುಗಳ ಬೆಲೆ ಇಳಿಯದೆ ಇರುವಂತೆ ಮಾಡಲು ಮತ್ತೊಂದು ನಿಯಂತ್ರಣ ಇರಲೇಬೇಕೆಂದು ಹೇಳಿದ ಹಾಗಾಯಿತು. ಆದರೆ ನಾವು ಹಿಂದೆ ಮಾಡಿದ್ದ ಒಂದು ವಾದಕ್ಕೂ ಈ ದಿವಸ ಮಾಡುವ ಒಂದು ವಾದಕ್ಕೂ ಸಂಬಂಧವಿಲ್ಲದಂತಾಯಿತು. ನಾವು ಹೀಗೆ ವಾದಮಾಡುವಾಗ ಯಾವ ಒಂದು ಕಾಂಟೆಕ್ಸ್ಟ್‌ನಲ್ಲಿ ಮಾತನಾಡುತ್ತಿದ್ದೇವೆ ಎನ್ನುವುದನ್ನು ನಾವು ಮುಖ್ಯವಾಗಿ ನಮ್ಮ ಗುರಿಯಲ್ಲಿಟ್ಟುಕೊಂಡಿರಬೇಕಾದ್ದು ಅಗತ್ಯ. ಈ ದಿವಸ ಈ ತೆರಿಗೆಯನ್ನು ರೈತರ ಮೇಲೆ ಹಾಕತಕ್ಕದ್ದು ಸಮಂಜಸವಾಗಿದೆ ಎಂಬ ಒಂದು ಕಾರಣ ಕೊಟ್ಟಿದ್ದಾರೆ. ಆದರೆ ಆ ಕಾರಣ ಅಷ್ಟು ಸಮಂಜಸವಾಗಿಲ್ಲ. ಈ ದಿವಸ ಅವರಮೇಲೆ ತೆರಿಗೆ ಹಾಕತಕ್ಕದ್ದು ಅಷ್ಟು ಸೂಕ್ತವಾಗಿಲ್ಲವೆಂದು ಕಂಡುಬರುತ್ತದೆ. ಆದರೆ ಇದರಲ್ಲಿ ಹೇಳಿರತಕ್ಕ ಕೆಲವು ಪ್ರಿನ್ಸಿಪಲ್ಸ್‌ಗಳು ಏನಿವೆಯೋ ಅವುಗಳನ್ನು ಮಾತ್ರ ಸ್ವಾಗತಮಾಡಿದ್ದೇನೆ.

ಶ್ರೀ ಬಿ. ನಾರಾಯಣಸ್ವಾಮಿ.—ತಾವು ಇನ್ನಾವ ರೀತಿಯಲ್ಲಿ ತೆರಿಗೆ ಹಾಕಬೇಕೆಂದು ಹೇಳುತ್ತೀರಿ?

Mr. SPEAKER.—The Hon'ble Member need not answer all thoes questions If the Hon'ble Members go on asking questions like that, I do not think I can allow them. They can later on effectively reply him.

Sri D. DEVARAJ URS.—One submission, Sir. To effectively reply, we must know the Hon'ble Member's view properly.

ಶ್ರೀ ಎಸ್. ಗೋಪಾಲಗೌಡ.—ನನಗೆ ಈಗ ಈ ಆರ್ಥಿಕ ಸಿದ್ಧಾಂತದಮೇಲೆ ಭಾಷಣ ಮಾಡುವುದಕ್ಕೆ ಇದು ಸ್ಥಳವಲ್ಲ ಮತ್ತು ಕಾಲವೂ ಅಲ್ಲ ಎಂದು ತಿಳಿದುಕೊಂಡಿದ್ದೇನೆ. ಆದರೆ ನಾನೀಗ ಮಾನ್ಯ ಮುಖ್ಯಮಂತ್ರಿಗಳು ಹೇಳಿದಂಥ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಮಾತನಾಡುತ್ತಿದ್ದೇನೆ.

ಈಗ ನಮ್ಮ ದೇಶದಲ್ಲಿ ಜಾರಿಯಲ್ಲಿರತಕ್ಕಂಥ ಜಮೀನ್ ಕಂದಾಯದ ದರವನ್ನು ಬದಲಾಯಿಸಬೇಕೆಂಬ ಒಂದು ಅಭಿಪ್ರಾಯವಿದೆ. ಈಗಿರತಕ್ಕಂಥ ರೇಟುಗಳೆಲ್ಲಾ ಬಹಳ ಹಿಂದೆಯೇ ನಿಗದಿಮಾಡಲ್ಪಟ್ಟವುಗಳಾಗಿವೆ. ಈಗ ಈ ಕಂದಾಯಗಳನ್ನೆಲ್ಲಾ ಜಾಸ್ತಿಮಾಡಬೇಕೆಂದೂ ಈ ಸಂಬಂಧದಲ್ಲೇ ಒಂದು ಸರ್‌ಛಾರ್ಜನ್ನು ವಿಧಿಸಬೇಕೆಂದೂ ಹೇಳಲಾಗಿತ್ತು. ಇದನ್ನು ಮಾಡತಕ್ಕದ್ದೇನೋ ಸರಿಯಾಗಿದೆ. ಆದರೆ, ಇನ್ನು ಮುಂದಕ್ಕೆ ಇವರಮೇಲೆ ಈ ಇನ್‌ಕಂಟ್ಯಾಕ್ಸನ್ನೂ ಸಹ ಹಾಕಬೇಕೆಂದು ಹೇಳಿದರೆ ಇದು progressive and equitable method of taxation ಆಗುವುದಿಲ್ಲ. ಏಕೆಂದರೆ ಹೀಗೆ ಆದಾಯ ತೆರಿಗೆ ಹಾಕಿದಮೇಲೆ ಅವರಿಗೆ ಪುನಃ ಕಂದಾಯ ಹಾಕುವುದು ಸರಿಯೇ ಅಲ್ಲವೇ ಎಂಬುದನ್ನು ಪರಿಶೀಲನೆಮಾಡಬೇಕಾಗಿದೆ. ಈಗ ಈ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸನ್ನು 3,500 ರೂಪಾಯಿಗಳ ನಿವ್ವಳ ಆದಾಯ ಅಥವಾ ವರಮಾನ ಬರತಕ್ಕಂಥವರ ಮೇಲೂ ಮತ್ತು 6 ಎಕರೆಗಳಿಗೆ ಮೇಲ್ಪಟ್ಟು ಜಮೀನನ್ನು ಸಾಗುವಳಿಮಾಡತಕ್ಕವರ ಮೇಲೂ ಹಾಕಬೇಕೆಂದು ಹೇಳಿದ್ದೀರಿ. ಇನ್ನೂ ಕೆಲವು ಬೇರೆ ಬೇರೆ ಕಮರ್ಷಿಯಲ್ ಕ್ರಾಪ್ಸ್‌ಗಳಿಗೂ ಈ ತೆರಿಗೆ ಬೀಳುತ್ತದೆ ಎಂದು ಹೇಳಿದ್ದೀರಿ. ಹೀಗೆ ತಾವು ಈಗ 3,500 ರೂಪಾಯಿಗಳಿಗೆ ಮೇಲ್ಪಟ್ಟು ಬರತಕ್ಕ ವರಮಾನಕ್ಕೆ 9 ಪೈಗಳಿಂದ ಹಿಡಿದು 5 ಆಣೆ 6 ಕಾಸುಗಳ ವರೆಗೂ ತೆರಿಗೆಯ ಲಿಮಿಟ್ಟನ್ನು ಇಟ್ಟಿರುತ್ತೀರಿ. ಇನ್ನು

ಈ 63ನೆಯ ಸೆಕ್ಷನ್ನಿನಲ್ಲಿ ತಾವು ಒಂದು ರಿಯಾಯಿತಿಯನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ. ಅದರಲ್ಲಿ ಹೀಗೆ ಹೇಳಿದ್ದೀರಿ :—

"63. *Composition of agricultural income-tax.*—(1) Any person who derives agricultural income from land not exceeding eighteen acres in extent if used for growing any crop specified in class I of Part II of the Schedule or an extent equivalent thereto if used for growing any crop specified in class 2 of the said Part, may apply to the prescribed officer for permission to compound the agricultural income-tax payable by him and to pay in lieu thereof a lumpsum at the rate or rates specified in the said Part of the Schedule."

Schedule part II says :

"Land used for growing cocoanut, arecanut, sugarcane, potatoes, onions, garlic, etc."

ಇವುಗಳಿಗೆ—not exceeding six acres—ಇದಕ್ಕೇನೂ ಹಾಕಿಲ್ಲ. Exceeding 6 acres but not exceeding 12 acres—12 ರೂಪಾಯಿಗಳನ್ನು ಹಾಕಿರುತ್ತೀರಿ ; exceeding 12 acres but not exceeding 18 acres—15 ರೂಪಾಯಿಗಳನ್ನು ಹಾಕಿದ್ದೀರಿ. ಈಗ ದೇವನಹಳ್ಳಿ ಇತ್ಯಾದಿ ಸ್ಥಳಗಳಲ್ಲಿ ಈ ಸುಗಂಧರಾಜನ ಹೂ ಇತ್ಯಾದಿಗಳನ್ನು ಬೆಳೆಯುತ್ತಿದ್ದಾರೆ. ಇಂಥ ಬೆಳೆಗಳಮೇಲೆಲ್ಲಾ ತೆರಿಗೆಯನ್ನು ಹಾಕಬಾರದೆಂದು ಹೇಳಿದ್ದೇವೆ. ಅದಕ್ಕೆ ಮಂತ್ರಿಗಳ ಅಭಿಪ್ರಾಯಕೂಡ ಇದನ್ನು ಹಾಕುವುದು ಸರಿಯಲ್ಲ ಎಂದು ತಿಳಿದುಕೊಂಡಿರಬಹುದು. ಆದರೆ, ಈಗ ತಾವು ಈ ಬಿಲ್ಲಿನಲ್ಲಿ ಯಾವ ಯಾವ ಕಮರ್ಷಿಯಲ್ ಕ್ರಾಪುಗಳೆಂದು ಭಾವಿಸಲಾಗಿದೆಯೋ ಅಂಥವುಗಳಲ್ಲಿ ಕೆಲವನ್ನು ಕೈಬಿಟ್ಟಿದ್ದೀರಿ. ಮತ್ತೆ ಯಾವ ಕೆಲವನ್ನು ಕೈಬಿಡಬೇಕಾಗಿತ್ತೋ ಅಂಥವುಗಳನ್ನೆಲ್ಲಾ ಇದರಲ್ಲಿ ಸೇರಿಸಿರುತ್ತೀರಿ. ಅದು ಏನೇ ಇರಲಿ, ಈ ಹೂವುಗಳಮೇಲೆ ತೆರಿಗೆ ಹಾಕತಕ್ಕದ್ದು ಸರಿಯಲ್ಲ. ಇದನ್ನೂ ಕೂಡ ತಾವೀಗ ಪರಿಶೀಲನೆ ಮಾಡಬೇಕಾಗಿದೆ. ಈಗ 6 ಎಕರೆಗಳಿಗೆ ತಾವು ವಿನಾಯಿತಿ ಕೊಟ್ಟಿದ್ದೀರಿ. ಈ 6 ಎಕರೆಯಲ್ಲಿ ಯಾವ ಬೆಳೆಯಿಟ್ಟರೆ ಬೆಳೆಯಬಹುದೋ ಅಂಥ ಬೆಳೆಯನ್ನೇ ಇಡಬೇಕು. ಬೇರೆ ಬೆಳೆ ಆ ಜಮೀನಿನಲ್ಲಿ ಆಗದೆ ಇರಬಹುದು. ಆಗ ಇದಕ್ಕೆ ತೊಂದರೆ ಬರುತ್ತದೆ. ತಾವು ಕಂದಾಯ ಒಂದು ಪರಿಮಿತಿಯನ್ನು ಮುಟ್ಟಿದಂಥ ಪರಿಸ್ಥಿತಿ ಇದ್ದಾಗ ತಾವು ಈ ತೆರಿಗೆ ಹಾಕತಕ್ಕದ್ದನ್ನು ಪರಿಶೀಲನೆ ಮಾಡಬೇಕೆ ಹೊರತು ಎಲ್ಲಾ ಸಂದರ್ಭಗಳಲ್ಲಿಯೂ ಹೀಗೆ ತೆರಿಗೆ ಹಾಕುವುದು ಅಷ್ಟು ಸಾಧುವಾದದ್ದೆಂದು ಕಂಡುಬರುವುದಿಲ್ಲ. ಈ ವಿಚಾರವನ್ನು ಕೂಡ ಅವರು ಪರಿಶೀಲನೆಮಾಡಬೇಕಾಗಿದೆ. ಇದನ್ನೆಲ್ಲಾ ತಾವು ಸರಿಯಾಗಿ ಯೋಚನೆಮಾಡಿ ಎಲ್ಲರಿಗೂ ಒಂದು ಸಮತೂಕದಲ್ಲಿ ತೆರಿಗೆ ಬೀಳುವಂತೆ ಮಾಡತಕ್ಕಂಥ ಮಾರ್ಗ ಯಾವುದಿದೆಯೋ ಅದನ್ನು ಅನುಸರಿಸಬೇಕೆಂದು ಸೂಚಿಸುತ್ತೇನೆ.

ಇನ್ನು ಕೆಲವುಕಡೆ ಸೂಪರ್‌ಟ್ಯಾಕ್ಸನ್ನು ಬೇರೆ ಹಾಕಿರುವುದಾಗಿ ಹೇಳಿದರು. ಹಾಗೆ ಸೂಪರ್‌ಟ್ಯಾಕ್ಸನ್ನು ಹಾಕಿರತಕ್ಕದ್ದು ಬಡವರಿಗೂ ಶ್ರೀಮಂತರಿಗೂ ಇರುವ ಅಂತರವನ್ನು ತಪ್ಪಿಸಲು ಬಡವರಿಗೆ ಸಹಾಯಮಾಡತಕ್ಕ ಬಗ್ಗೆ ಹಣ ಬೇಕಾಗಿದ್ದುದರಿಂದ ಈ ತೆರಿಗೆಯನ್ನು ಹಾಕಿರುತ್ತಾರೆ. ಆದರೆ ವ್ಯವಸಾಯಗಾರನ ವಿಷಯದಲ್ಲಿ ಈ ವಿಚಾರವೇ ಬರುವುದಿಲ್ಲ. ಈಗಾಗಲೇ ರೈತನು ಬೆಳೆಯತಕ್ಕಂಥ ದಿನಸಿಗಳ ಧಾರಣೆವಾಸಿಗಳು ದಿನ ದಿನಕ್ಕೂ ಇಳಿಯುತ್ತಿವೆ. ಆದರೆ ಈ ದವಸಗಳ ಧಾರಣೆವಾಸಿಗಳನ್ನು ಇನ್ನೂ ನಿಗದಿಮಾಡಿಲ್ಲವಾದ್ದರಿಂದ ನಮ್ಮ ಪಾರ್ಟಿ ನಾಯಕರು ಹೇಳಿರುವ ಹಾಗೆ ಈ ರೈತನ ಸ್ಥಿತಿಗತಿಗಳನ್ನು ಬೇರೆ ಆದಾಯ ಹೊಂದತಕ್ಕ ಪಾರ್ಟಿಗಳಿಗೆ ಹೋಲಿಕೆ ಹಾಕಿ ನೋಡಿದರೆ, ರೈತನ ಜೀವನದ ವೆಚ್ಚವೇನು, ಆತನ ಆದಾಯವೇನು, ಆತನು ಕೊಳ್ಳುವ ಮಾಲುಗಳಿಗೆ ಎಷ್ಟು ಬೆಲೆ ಸಿಕ್ಕುತ್ತದೆ ಎಂಬುದನ್ನೆಲ್ಲಾ ಪರಿಶೀಲನೆಮಾಡಿ ನೋಡಿದರೆ ರೈತನ ಸ್ಥಿತಿಗತಿಗಳು ಬಹಳ ವಿಷಾದಕರವಾಗಿರುತ್ತವೆ. ರೈತನ ಆದಾಯವೆಲ್ಲಾ ದಿನ ದಿನಕ್ಕೂ ಏರುಪೇರಾಗುತ್ತಿರುವ ಮಾರುಕಟ್ಟೆಯಮೇಲೆ ನಿಂತಿದೆ. ಇದರಿಂದ ರೈತನಿಗೆ ಬಹಳ ಲುಕ್ಸಾನಾಗುತ್ತಿದೆ. ಇತ್ತೀಚೆಗೆ ಈ ಕೂಲಿಯ ದರಗಳು ಬೇರೆ ಏರಿದ್ದರಿಂದ ರೈತನಿಗೆ ಈ ಲುಕ್ಸಾನು ಇನ್ನೂ ಜಾಸ್ತಿಯಾಗಿರುತ್ತದೆ. ಆದುದರಿಂದ ರೈತನಿಗೆ ಈ ತೆರಿಗೆ ಹಾಕುವುದು ಖಂಡಿತ ಸೂಕ್ತವಲ್ಲ. ಈ ವಿಚಾರಗಳನ್ನೆಲ್ಲಾ ವಿಮರ್ಶೆಮಾಡಬೇಕಾಗಿದೆ. ಇವುಗಳನ್ನು ವಿಮರ್ಶೆಮಾಡದೆ ಕೈಬಿಟ್ಟರೆ ಅದು ತುಂಬ ಅನ್ಯಾಯ ಮಾಡಿದಂತಾಗುವುದು. ರೈತರಿಗೆ ತೆರಿಗೆ ಹಾಕತಕ್ಕದ್ದು, ಅವರು ಈ ಬಗ್ಗೆ ಲೆಕ್ಕಗಳನ್ನಿಡತಕ್ಕದ್ದು ಎಂದು ಹೇಳಿದರೆ ಇದು ಖಂಡಿತ ಸಾಧ್ಯವಾಗಲಾರದು. ರೈತನು ಅಕ್ಷರಸ್ಥನಾಗಿಲ್ಲ. ಅಲ್ಲದೆ ರೈತನು ಈ ವ್ಯವಸಾಯವನ್ನು ಒಂದು ಲಾಭದ ದೃಷ್ಟಿಯಿಂದೇನೂ ಮಾಡುತ್ತಿಲ್ಲ. ಲಾಭವೋ ಲುಕ್ಸಾನೋ ಆತನು ವ್ಯವಸಾಯಗಾರನಾದದ್ದರಿಂದ ವ್ಯವಸಾಯ ಮಾಡಬೇಕಾಗಿದೆ ಎಂದು ಆ ಕಸುಬನ್ನು ಮಾಡುತ್ತಿದ್ದಾನೆ. ಆದ್ದರಿಂದ ಈ ದಿವಸ ನೀವು ಈ ತೆರಿಗೆಯನ್ನು ಆ ರೈತನ ಮೇಲೆ ಹಾಕಿದರೆ ಆತನನ್ನು ತುಂಬ ತೊಂದರೆಗಳಿಗೀಡುಮಾಡಿದಂತಾಗುತ್ತದೆ. ಹೀಗೆ ರೈತರನ್ನು ಸರ್ಕಾರ harass ಮಾಡುವುದು ನ್ಯಾಯವಾದುದಲ್ಲ. ತಾವು ರೈತನಿಗೆ ಲೇಬರ್ ಟ್ರಾನ್ಸ್‌ಪೋರ್ಟ್, ಮಾರುವ ಕಟ್ಟೆ ಇತ್ಯಾದಿ ವ್ಯವಸ್ಥೆಗಳೊಂದನ್ನೂ ಕಲ್ಪಿಸಿಕೊಟ್ಟಿಲ್ಲ. ಈ ದಿವಸ ಆ ರೈತನ ಆದಾಯವೆಲ್ಲಾ ಬಹಳ ಅಖಾತರಿಯ ಮೇಲೆ ನಿಂತಿದೆ, ಹಾಗೆ ಆತನಿಗೆ ಬರತಕ್ಕಂಥ ಆದಾಯ ಒಂದು ಖಚಿತವಾದ ಮಟ್ಟಕ್ಕೆ ಬಂದಮೇಲೆ ಬೇಕಾದರೆ ತಾವು ಈ ತೆರಿಗೆಯನ್ನು ವಿಧಿಸಬಹುದು. ಆಗ ಅದಕ್ಕೆ ಯಾರ ಅಭ್ಯಂತರವೂ ಇಲ್ಲ. ಈಗ ನಮ್ಮ ಸಂಸ್ಥಾನದಲ್ಲಿ ಇನ್ನೂ ಮೊದಲನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಕೈಗೊಂಡಿರತಕ್ಕ ಕಾರ್ಯಗಳ ಬಗ್ಗೆ 14 ಕೋಟಿ ರೂಪಾಯಿಗಳು ಬೇಕಾಗಿರುತ್ತೆಂದು ತಿಳಿಸಿದ್ದಾರೆ. ಆದರೆ ಈ 14 ಕೋಟಿ ರೂಪಾಯಿಗಳನ್ನು ನಾವು ಯಾವ ಯಾವ ಬಾಬಿನಲ್ಲಿ ಎತ್ತಬೇಕೆಂಬುದೇ ಒಂದು ದೊಡ್ಡ ಸಮಸ್ಯೆಯಾಗಿ ನಿಂತಿದೆ. ಆದರೆ ಈಗಾಗಲೇ ಪ್ರಾರಂಭಿಸಿರುವಂಥ ದೊಡ್ಡ ದೊಡ್ಡ ಪ್ರಾಜೆಕ್ಟುಗಳು ಮತ್ತು ಇತರೇ ಕಾಂಗಾರಿಗಳಿಗೆಲ್ಲಾ ಅಷ್ಟು ಹಣ ಬರಲೇ ಬೇಕಾಗಿದೆ. ಆದರೆ ನಾವು ಹಣವನ್ನು ಹೀಗೆ ಇನ್ನೂ 10 ವರ್ಷಗಳು ಖರ್ಚುಮಾಡಿದಾಗ್ಯೂ ಅಷ್ಟೇನೂ ಪ್ರಯೋಜನವಾಗುವಂತೆ ಕಂಡುಬರುವುದಿಲ್ಲ. ಈಗ ತಾವು ಈ ಮೊದಲನೆ 5 ವರ್ಷದಲ್ಲಿ ಪ್ರಾರಂಭಿಸಿರುವ ಕೆಲಸಗಳು ಈ ರೇಟಿನಲ್ಲಿ ಹೋಗುವುದಾದರೆ ಇವು ಇನ್ನು ಹತ್ತು ವರ್ಷಗಳಾದರೂ ಮುಗಿಯುವುದಿಲ್ಲ, ಪ್ರಯೋಜನವೂ ಆಗುವುದಿಲ್ಲ. ಒಂದುವೇಳೆ ತಾವು ತಮ್ಮ ರೆವಿನ್ಯೂ

(ಶ್ರೀ ಎಸ್. ಗೋಪಾಲಗೌಡ.)

ನಿಂದಲೇ ಖರ್ಚುಮಾಡುತ್ತೇವೆಂದು ಹೇಳಿದಾಗ್ಯೂ, ಆಗ ಮತ್ತೆ ಇತರ ಬೇರೆ ಬಾಬುಗಳಿಗೆ ಅಂದರೆ ವಿದ್ಯಾಭ್ಯಾಸ, ಆಸ್ಪತ್ರೆ ಇತ್ಯಾದಿ ಅಭಿವೃದ್ಧಿ ಕಾರ್ಯಗಳಿಗೆ ಖರ್ಚುಮಾಡಲು ಹಣವಿರುವುದಿಲ್ಲ. ತಾವು ಡಿಫಿಸಿಟ್ ಆಗಿರತಕ್ಕ ಹಣವನ್ನು ಭರ್ತಿಮಾಡಿಕೊಳ್ಳಲು ಯಾವ ದಾರಿಯನ್ನು ಹುಡುಕಿದ್ದೀರಿ ಎಂದು ನೋಡಿದರೆ ಯಾವ ದಾರಿಯೂ ಕಾಣುತ್ತಿಲ್ಲ. ಕೇಂದ್ರ ಸರ್ಕಾರ ಈ ಬಗ್ಗೆ ಸುಮ್ಮನಿರುವುದಕ್ಕೆ ಆಗುವುದಿಲ್ಲ. ಅವರ ಸಹಾಯವನ್ನು ನಾವು ಅಪೇಕ್ಷೆ ಮಾಡಬೇಕಾಗಿದ್ದರೆ ಮೊದಲು ನಾವು ನಮ್ಮ ಕಾಂಟ್ರಿಬ್ಯೂಷನ್ನನ್ನು ಸಿದ್ಧಪಡಿಸಿಕೊಳ್ಳಬೇಕಾಗಿರುತ್ತೆಂದು ನಮ್ಮ ಸರ್ಕಾರದವರು ಹೇಳುತ್ತಿದ್ದಾರೆ. ಇದಕ್ಕಾಗಿ ನಾವು ಸಾಧ್ಯವಾದ ಎಲ್ಲಾ ಪ್ರಯತ್ನಗಳನ್ನೂ ಮಾಡಲೇಬೇಕು. ಆದರೆ ನಾವು ಈ ದಿವಸ ನಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಲು ಯಾವುದು ಸೂಕ್ತವಾದ ಮಾರ್ಗ ಎನ್ನುವುದನ್ನು ಹುಡುಕಬೇಕಾಗಿದೆ. ಈ ಹಿಂದೆ ಮಾನ್ಯ ನೆಹರೂ ಅವರೇ ಈ ಪ್ರೀವಿ ಪರ್ಸುಗಳನ್ನು ತಾವಾಗಿಯೇ ಸ್ವಲ್ಪ ಮಟ್ಟಿಗೆ ಖೋತ ಮಾಡಿಕೊಂಡರೆ ಬಹಳ ಉಪಕಾರ ಮಾಡಿದಂತಾಗುತ್ತದೆಂದು ಹೇಳಿದ್ದರು. ಆದರೆ ಅವರ ಮನವಿಗೆ ಅನುಗುಣವಾಗಿ ಯಾರೂ ಹಾಗೆ ಅವರ ಪ್ರೀವಿ ಪರ್ಸುಗಳನ್ನು ಖೋತಾ ಮಾಡಿಕೊಳ್ಳಲಿಲ್ಲ. ಈಗಾಗಲೇ ಆ ಕೇಂದ್ರ ಸರ್ಕಾರಕ್ಕೆ ನಮ್ಮ ಸಂಸ್ಥಾನದಲ್ಲಿ ಅಧಿಕಾರದಲ್ಲಿರುವ ಪಾರ್ಟಿಯು ಈ ಪಾಂಚವಾರ್ಷಿಕ ಯೋಜನೆಗೆ ಒಪ್ಪಿಗೆ ಕೊಟ್ಟಿದೆ, ಆದಕ್ಕಾಗಿ ನೀವು ಆಗ ಹೇಳಿದ್ದ ಪ್ರಕಾರ ಹಣವನ್ನು ಒದಗಿಸಿಕೊಳ್ಳಲೇಬೇಕೆಂದು ಕೇಂದ್ರ ಸರ್ಕಾರ ಒತ್ತಾಯಪಡಿಸುತ್ತಿದೆಯೆಂದು ತಿಳಿಸಿದ್ದಾರೆ. ಆದರೆ ಈಗ ನಾವು ಒದಗಿಸಬೇಕಾಗಿರತಕ್ಕಂಥ ಮೊಬಲಗಿನಿಂದ ಶ್ರೀಮಂತರ ಮತ್ತು ಬಡವರ ಆರ್ಥಿಕ ಅಸಮಾನತೆಯನ್ನು ನೀಗುವಂತೆ ಮಾಡಬೇಕಾಗಿದೆ. ನಮ್ಮ ರಾಜಪ್ರಮುಖರೊಬ್ಬರೇ ದೊಡ್ಡಮನಸ್ಸುಮಾಡಿ ತಮ್ಮ ಪ್ರೀವಿ ಪರ್ಸನ್ನು ಸ್ವಲ್ಪ ಕಟ್‌ಮಾಡಿಕೊಂಡರೆ ಅದರಿಂದಲೇ ನಮಗೆ 28-30 ಲಕ್ಷ ರೂಪಾಯಿಗಳು ಬರಬಹುದು. ಆದರೆ ಇದನ್ನು ಮಾಡಲು ನಮ್ಮ ಸರ್ಕಾರಕ್ಕೆ ಸಾಧ್ಯವಿಲ್ಲ ಎಂದು ಹೇಳಬಹುದು. ಕೇಂದ್ರ ಸರ್ಕಾರ ಹೀಗೊಂದು ಆದೇಶವನ್ನು ಸಂಸ್ಥಾನ ಸರ್ಕಾರಕ್ಕೆ ಕೊಟ್ಟರೆ ಆಗಬಹುದೆಂದು ತೋರುತ್ತದೆ. ಆ ಕಾನೂನಿಗೆ ಸರಿಯಾಗಿ ಏನಾದರೂ ಅಡ್ಡಿ ಆತಂಕಗಳಿದ್ದರೆ ತಿದ್ದುಪಡಿ ಮಾಡಬೇಕು. ಸುಮ್ಮನೆ ಕಾಲ ವಿಳಂಬ ಮಾಡುವುದರಲ್ಲಿ ಅರ್ಥವಿಲ್ಲ.

2-30 P.M.

ಮೈಸೂರು ಬ್ಯಾಂಕನ್ನು ನಾವು ತೆಗೆದುಕೊಳ್ಳಬೇಕು. ಅದಕ್ಕೆ ಅಡ್ಡಿ ಇಲ್ಲ. ಈಗಾಗಲೇ ರಿಸರ್ವ್ ಬ್ಯಾಂಕಿನ ಷೇರು ಹಣ ಕೊಡುತ್ತಿದ್ದಾರೆ. ಮೈಸೂರ್ ಬ್ಯಾಂಕನ್ನೂ ತೆಗೆದುಕೊಂಡರೆ ಎಷ್ಟೋ ಹಣ ಬರುತ್ತದೆ. ಆ ರೀತಿಯಾಗಿ face value ಕೊಟ್ಟು ತೆಗೆದುಕೊಳ್ಳಬೇಕು. ಅದೂ ದೇಶದ ದುಡ್ಡೇ. ಇನ್ನೂ ಹೀಗೆಯೇ ಅನೇಕ sources ಇವೆ. ಅವನ್ನೆಲ್ಲ ನಾವು ತೆಗೆದುಕೊಳ್ಳಬೇಕು. ಇಲ್ಲಿ ತಕ್ಷಣ ಕಾಣಿಸಿಕ್ಕುತ್ತದೆ. ಕಡಿಮೆ ಜನರಿಗೆ ಸ್ವಲ್ಪ ತೊಂದರೆಯಾದರೂ ಹೆಚ್ಚು ಹಣ ಬರುತ್ತದೆ ಮತ್ತು ದೇಶದಲ್ಲಿರತಕ್ಕ ಸಾಮಾಜಿಕ ತತ್ವಗಳಿಗೆ ಹೊಂದಿಕೊಳ್ಳತಕ್ಕ ರೀತಿಯಲ್ಲಿ ನಾವು ಹಿಂದೆ ಯೋಜನೆ ಹಾಕಿಕೊಂಡು ಸಮಗ್ರವಾದ ಒಂದು ಕಾರ್ಯಕ್ರಮ ಹಾಕಿಕೊಂಡು ಮುಂದುವರಿದರೆ ನಮಗೆ ಬೇಕಾದ 14 ಕೋಟಿಯಲ್ಲಿ 20 ಕೋಟಿ ಅಥವಾ 50 ಕೋಟಿ ಬೇಕಾದರೂ ಬರುತ್ತದೆ. ದೇಶದ ಜನತೆ ಅವರ ಅವಶ್ಯಕತೆಗಳನ್ನು ಪೂರೈಸಿದ ಮೇಲೆ ಉಳಿಯುವ surplus income ಏನಿರುತ್ತದೆಯೋ ಅದೆಲ್ಲವನ್ನೂ State exchequer ಗೆ ತರುವಂತಾಗಬೇಕು. ಆರೀತಿಯಾಗುವಂತೆ ಮಾಡಿದರೆ ಸಮಾಜವಾದವನ್ನು ತರತಕ್ಕ ಒಂದು ವ್ಯವಸ್ಥೆಯಾಗುತ್ತದೆಯೇ ಹೊರತು ಈ ರೀತಿ ಸಾಹಸಮಾಡಿ ಎಲ್ಲೋ ಒಂದು ಭಾಗವನ್ನು ತಂದು ಅದರಲ್ಲಿ ಕೂಡ ಪಾರ್ಟ್ interest ಬಂದು ಕಾಫಿ ಕೈಬಿಡಬೇಕು ಎಂದರೆ ಅದನ್ನು ಬಿಡುವುದು, ಇನ್ನೊಂದನ್ನು ಬಿಡಬೇಕು ಎಂದರೆ ಅದನ್ನು ಕೈಬಿಡುವುದು, ಹೀಗೆ ಮಾಡಿದರೆ ಏನೂ ಪ್ರಯೋಜನವಾಗುವುದಿಲ್ಲ. ಅಲ್ಲದೆ ಪ್ರತಿಯೊಬ್ಬರನ್ನೂ ನಾವು ಮೆಚ್ಚಿಸಬೇಕೆಂದು ಹೋದರೆ 20 ಲಕ್ಷವೂ ಬರುವುದಿಲ್ಲ, ಏನೂ ಬರುವುದಿಲ್ಲ. ಎಲ್ಲ ರೀತಿಯಲ್ಲೂ ಸಮತ್ವವನ್ನು ತರತಕ್ಕಂಥ ನಿಜವಾದ ಪ್ರಯತ್ನಗಳಾಗಬೇಕು. ಈ ರೀತಿ ಇಲ್ಲದೆ ಒಂದೊಂದು ಸಲ ಒಂದೊಂದು ಮಸೂದೆಯನ್ನು ತರುವುದರಿಂದ ಜನರಿಗೆ ಕಿರುಕುಳ ಹೆಚ್ಚಾಗಿ ಅವರಲ್ಲಿ ಅಸಮಾಧಾನ ಹೆಚ್ಚಾಗುತ್ತದೆ. ಅಲ್ಲದೆ ಪ್ರತಿಯೊಂದು ವರ್ಗವೂ ಅಸಮಾಧಾನದಿಂದ ಕೂಡಿ ಎಲ್ಲ ಯೋಜನೆಗಳೂ ಅಲ್ಲಿಗೇ ನಿಂತುಹೋಗಿ ಎಲ್ಲ ಕಾರ್ಯಕ್ರಮಗಳಿಗೂ ಅಡಚಣೆಯಾಗುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು)—ಸ್ವಾಮಿ, Agricultural Income-Tax ಹಾಕತಕ್ಕ ವಿಚಾರದಲ್ಲಿ ನಾನು ನಾಲ್ಕು ಮಾತುಗಳನ್ನು ಸರ್ಕಾರದ ಗಮನಕ್ಕೂ ಸಭೆಯ ಗಮನಕ್ಕೂ ತರುತ್ತೇನೆ. ನಮ್ಮ ಸರ್ಕಾರದವರು ಖೋತಾ ಬಡ್ಜೆಟ್ ಎಂದು ಹೇಳಿ ಸುಮಾರು 20 ಲಕ್ಷ ರೂಪಾಯಿ ವರಮಾನ ಬರತಕ್ಕ ಒಂದು taxation ಬಿಲ್ಲನ್ನು ನಮ್ಮ ಸಭೆಯ ಮುಂದೆ ಇಟ್ಟಿದ್ದಾರೆ. 20 ಲಕ್ಷ ರೂಪಾಯಿ ತೆಗೆದುಕೊಳ್ಳಬೇಕಾದರೂ ಕೂಡ ಬಹಳ ಸುಲಭವಾಗಿ ತೆಗೆದುಕೊಳ್ಳಬಹುದಾಗಿತ್ತು ಎಂದು ನನ್ನ ಸಲಹೆ, ಇದು ಯಾವ ರೀತಿ ಎಂಬುದನ್ನು ಹೇಳುತ್ತೇನೆ. ಮೈಸೂರು ದೇಶದಲ್ಲಿ ರೆವಿನ್ಯೂ ಕಂದಾಯ 1,35,00,000 ರೂಪಾಯಿ ಇದೆ. ಇದಕ್ಕೆ ರೂಪಾಯಿಗೆ ಎರಡಾಣೆಯಂತೆ ಕಂದಾಯ ಹೆಚ್ಚು ಮಾಡಿದರೂ ಕೂಡ ಸುಮಾರು 20 ಲಕ್ಷ ರೂಪಾಯಿ ಬಹಳ ಸುಲಭವಾಗಿ ಬರುತ್ತಿತ್ತು. ಪಟೇಲ್, ಶ್ಯಾನುಭೋಗರು ಇದನ್ನು ಬಹಳ ಸುಲಭವಾಗಿ ವಸೂಲ್ಮಾಡುತ್ತಿದ್ದರು. ಈ ರೀತಿಯಾಗಿ ಈಗ ಹಾಕತಕ್ಕ ತೆರಿಗೆಯನ್ನು ವಸೂಲ್ಮಾಡಬೇಕಾದರೆ ಅದಕ್ಕೆ ಬೇರೆ ಸಿಬ್ಬಂದಿ ಬೇಕಾಗುತ್ತದೆ. ಅದಕ್ಕೆ ರೆವೆನ್ಯೂ ಇನ್‌ಸ್ಪೆಕ್ಟರ್ ಮೊದಲ್ಗೊಂಡು ದೊಡ್ಡ ನೌಕರರವರೆಗೂ ಕೂಡಿದ ಒಂದು ದೊಡ್ಡ ಸಿಬ್ಬಂದಿಯನ್ನು ಇಡಬೇಕಾಗುತ್ತದೆ. ಈ ತೆರಿಗೆಯನ್ನು ಹಾಕಿದ್ದರಿಂದ ಮೈಸೂರು ದೇಶಕ್ಕೆ ಸುಮಾರು ಮತ್ತೊಂದು ಕಂಟ್ರೋಲ್ ಬಂತೋ ಏನೋ ಎಂದು ನನ್ನ ಭಾವನೆ. ಅಲ್ಲದೆ ಇದರಿಂದ ಎಷ್ಟು ಹಣ ಬರುತ್ತದೆ ಎಂದು ಸರ್ಕಾರದವರು ಆಸೆ ಇಟ್ಟುಕೊಂಡಿದ್ದಾರೋ ಅಷ್ಟು ಬರುವುದಿಲ್ಲವೆಂದು ನಾನು ಅಂಕಿಅಂಶಗಳಿಂದ ಹೇಳುತ್ತೇನೆ. ಇದಲ್ಲದೆ ನಾಲ್ಕೈದು ವರ್ಷಗಳ ಹಿಂದೆ Tenancy Act ಬೇರೆ ತಂದಿದ್ದೀರಿ. ಅದು ಅರ್ಧಂಬರ್ಧವಾಗಿದೆ. ತೆರಿಗೆಯನ್ನು ನಾವು ಕೊಡಬೇಕಾದದ್ದೇ ; ನಮ್ಮ ದೇಶದಲ್ಲಿ ಅನೇಕ ದೊಡ್ಡ ಕೆಲಸಕಾರ್ಯಗಳು ಆಗಬೇಕಾದರೆ, ರೈತರಿಗೆ ಅನುಕೂಲ ಮಾಡಿಕೊಡಬೇಕಾದರೆ, ತೆರಿಗೆಯನ್ನು ಹಾಕಬೇಕಾಗುತ್ತದೆ. ಅದನ್ನು ಹಾಕಬೇಕಾದರೂ ಕೂಡ ರೈತನು ಅಧಿಕಾರಿಗಳ ಕೈಗೆ ಸಿಕ್ಕಿದ ಹಾಗೆ ಸುಲಭ ರೀತಿಯಲ್ಲಿ ತಪ್ಪಿಸಿಕೊಳ್ಳತಕ್ಕ

ರೀತಿ ಮಾಡಿದ್ದರೆ ಚೆನ್ನಾಗಿತ್ತು ಎಂದು ನನಗನ್ನಿಸುತ್ತದೆ. ಶ್ರೀ ಇಮಾಂ ಸಾಹೇಬರು, ಗೋಪಾಲಗೌಡರು ಮುಂತಾದವರು ಇದರ ಮೇಲೆ ಮಾತನಾಡಿದ್ದಾರೆ. ಆದರೆ ಅವರನ್ನು ನಾನು ಟೀಕೆ ಮಾಡುತ್ತಿಲ್ಲ. ಈ ರೀತಿಯಾದ ತೆರಿಗೆ ಹಾಕುವುದರಿಂದ ರೈತರಿಗೆ ಜುಗುಪ್ಸೆಯುಂಟಾಗುತ್ತದೆ. ಯಾಕೆಂದರೆ ಅನೇಕ ತರಹದಲ್ಲಿ ತೆರಿಗೆ ವಿಧಾಯಕಮಾಡುವಾಗ ವರ್ಷಕ್ಕೆ 3,500 ರೂಪಾಯಿಗಳಿಗೆ ಮೇಲ್ಪಟ್ಟು ಬರುವವರು ಸಾಮಾನ್ಯವಾಗಿ ಅನುಕೂಲಸ್ಥರಾಗಿರುವುದರಿಂದ ಅಂಥವರು ತೆರಿಗೆ ಕೊಡಬೇಕು ಎಂದು ಮಾಡಿದ್ದೀರಿ. ತಾವು ನೇಮಿಸತಕ್ಕ ಅಧಿಕಾರಿಗಳು ನೇರವಾಗಿ 3,500 ರೂಪಾಯಿ ಮತ್ತು ಅದಕ್ಕೆ ಮೇಲ್ಪಟ್ಟು ವರಮಾನ ಬರತಕ್ಕವರಿಗೆ ಮಾತ್ರನೋಟೀಸ್ ಕೊಡದೆ ಪ್ರತಿಯೊಬ್ಬ ಜಮೀನ್ದಾರನಿಗೂ ಸಾಮಾನ್ಯವಾಗಿ ಮುಕ್ಕಾಲು ಮೂರುವೀಸೆಪಾಲು ನೋಟೀಸ್ ಕೊಡುತ್ತಾರೆ. ಇದು ಅನುಭವದ ಮಾತು. ಲೆಖ್ಖ ಇಡಿ ಎಂದು ನೋಟೀಸ್ ಕೊಡುತ್ತಾರೆ. ಲೆಖ್ಖವಿಟ್ಟಿದ್ದರೂ ಸಹ ತಪ್ಪು ಬರೆದಿದ್ದೀರಿ ಎಂದು ಹೇಳುತ್ತಾರೆ. ಈ ರೀತಿಯಾಗಿ ತೆರಿಗೆಯನ್ನು ವಸೂಲ್ಮಾಡತಕ್ಕ ಅಧಿಕಾರಿಗಳಿಂದ ರೈತರೇ ಮೊದಲಾದವರಿಗೆ ಕಿರುಕುಳ ಬರುತ್ತದೆ ಎಂದು ನನ್ನ ಅನುಭವದ ಮಾತು. ಯಾಕೆಂದರೆ ರೈತನು ಲೆಕ್ಕವಿಟ್ಟುಕೊಳ್ಳತಕ್ಕ ಜವಾಬ್ದಾರಿಗೆ ಹೋಗಿಲ್ಲ. ಸಾಮಾನ್ಯವಾಗಿ ಒಂದು ಎಕರೆ ಸಾಗುವಳಿ ಮಾಡಬೇಕಾದರೆ ಕಳೆಕೀಳುವುದಕ್ಕೆ ಇಷ್ಟು, ಬೀಜಕ್ಕೆ ಇಷ್ಟು, ಗೊಬ್ಬರಕ್ಕೆ ಇಷ್ಟು ಈ ರೀತಿಯಾಗಿ ಪ್ರತಿಯೊಂದು ಬಾಬಗೂ ಲೆಕ್ಕವಿಡಬೇಕು. ಬೇಸಾಯ ಮಾಡಬೇಕಾದರೆ ಒಬ್ಬ ರೈತ ಲೆಕ್ಕವಿಡಬೇಕಾದರೆ ಅವನು ವಿದ್ಯಾವಂತನಾಗಿರಬೇಕು. ನಮ್ಮ ಸಂಸ್ಥಾನದಲ್ಲಿ ಸಾಮಾನ್ಯವಾಗಿ ಅವಿದ್ಯಾವಂತರೇ ಜಾಸ್ತಿಯಾಗಿದ್ದಾರೆ. ಹಳ್ಳಿಗಳಲ್ಲಿರತಕ್ಕ ಶ್ರೀಮಂತರು ಕೂಡ, ಶ್ರೀಮಂತ ಮನೆತನದಲ್ಲಿ ಕೂಡ ವಿದ್ಯಾವಂತರಿಲ್ಲವೆಂದು ನನ್ನ ಅನುಭವ. ಆದ್ದರಿಂದ ತೆರಿಗೆ ಸುಲಭವಾಗಿ ಬರುವ ಹಾಗೆ ಮಾಡಿದ್ದರೆ ಚೆನ್ನಾಗಿತ್ತು. ಸರ್ಕಾರದವರು ಮಾಡುವ ಕೆಲಸಕಾರ್ಯಗಳಿಗೆ ನಾವು ಹಣವನ್ನು ಒದಗಿಸಿಕೊಟ್ಟು ದೇಶದ ಕೆಲಸ ಚೆನ್ನಾಗಿ ನಡೆಯಲಿ ಎನ್ನುವವರಲ್ಲಿ ನಾನೂ ಒಬ್ಬ. ಆದರೆ ಈಗ ಹೊಸದಾಗಿ ಬಂದಿರತಕ್ಕಂಥ ತೆರಿಗೆ ಹೇಗಿದೆ ಎಂದರೆ ಹಳ್ಳಿ ಕಡೆ ಒಂದು ಗಾದೆ ಹೇಳುವಂತೆ ಕಣ್ಣಿಗೆ ಬಂತು, ಕಾಲಿಗೆ ಬಂತು, ತಲೆಗೆ ಬಂತು, ಕೃಷ್ಣಂಭಟ್ಟರ ಜುಟ್ಟಿಗೆ ಬಂತು ಎನ್ನುವ ಹಾಗೆ ಸ್ತ್ರೀಯರು ಧರಿಸುವ ಹೂವುಗಳಿಗೆ ಸಹ ತೆರಿಗೆ ಬಿದ್ದಿದೆ. ಸಾಮಾನ್ಯವಾಗಿ ನಮ್ಮ ಕಡೆ ಎಕರೆಗಟ್ಟಲೆ ಹೂವು ಹಾಕುವುದಿಲ್ಲ. ಬೆಂಗಳೂರು ಮೈಸೂರು ಕಡೆ ಹಾಗಿರಬಹುದು. ಆದರೂ ಹೂವಿಗೆ ತೆರಿಗೆ ಹಾಕಿದ್ದಾರೆ ಎಂಬ ಮಾತು ಬರುತ್ತದೆ.

ರೈತನು ಲೆಕ್ಕವಿಡಬೇಕಾದರೆ ಒಬ್ಬ ಗುಮಾಸ್ತನನ್ನು ಇಟ್ಟುಕೊಳ್ಳಬೇಕು. ಹಳ್ಳಿಯಲ್ಲಿರತಕ್ಕ ವ್ಯವಸಾಯಗಾರನು ಲೆಕ್ಕವಿಡುವ ಪದ್ಧತಿಯನ್ನಿಟ್ಟಿಲ್ಲ. ಹೀಗಿರುವಾಗ ಅವಿದ್ಯಾವಂತನಾದವನು ಮನೆಯಲ್ಲಿ ಗುಮಾಸ್ತನನ್ನು ಇಟ್ಟುಕೊಂಡರೆ ಯಾವ ರೀತಿ ಲೆಕ್ಕವಿಡುತ್ತಾನೆ ಅಥರಿಂದ ಅವನಿಗೆ ಎಷ್ಟು ಮಟ್ಟಿಗೆ ಅನುಕೂಲವಾಗುತ್ತದೆಂಬುದನ್ನು ತಿಳಿಯಬೇಕು. ಆದುದರಿಂದ ಹಳ್ಳಿಯಲ್ಲಿರತಕ್ಕ ರೈತನು ಅಕ್ಷರಸ್ಥನಾಗಿ ತಾನು ಲೆಕ್ಕಚಾರಗಳನ್ನು ನೋಡಿಕೊಳ್ಳುವುದಕ್ಕೆ ಸಹಾಯವಾಗುವಂತೆ ಪ್ರಯತ್ನ ಮಾಡಬೇಕು.

ಇಂಥ ತೆರಿಗೆಯನ್ನು ರೈತರ ಮೇಲೆ ಹಾಕಬಾರದಾಗಿತ್ತು. ಹಾಕಿದ್ದರಿಂದ ರೈತರಿಗೆ ಕಿರುಕುಳ ಉಂಟಾಗುತ್ತದೆಂದು ನನಗೆ ಅನುಭವಕ್ಕೆ ಬಂದಿದೆ.

ಸಾಮಾನ್ಯವಾಗಿ ಮಲೆನಾಡು ವಿಚಾರ ತೆಗೆದುಕೊಂಡರೆ ನಮ್ಮ ತಾಲ್ಲೂಕು ಮಲೆನಾಡಿಗೆ ಸೇರದಿದ್ದರೂ ಹೆಚ್ಚಿಗೆ ಮಲೆನಾಡಿನ ಸಂಪರ್ಕ ಮಾಡಿರುವುದರಿಂದ ಕೆಲವು ವಿಷಯಗಳನ್ನು ಹೇಳುತ್ತೇನೆ ಈಗ ಅಡಿಕೆಗೆ ತೆರಿಗೆ ಹಾಕಿದ್ದೀರಿ. ಕಾಫಿ, ತೆಂಗು, ಹತ್ತಿ, ಧನಿಯ ಹೀಗೆ ಎಲ್ಲಕ್ಕೂ ತೆರಿಗೆ ಹಾಕಿದ್ದೀರಿ. ಒಂದು ಎಕರೆ ಕಾಫಿ ತೋಟ ಸಾಗುವಳಿಮಾಡಬೇಕಾದರೆ ಖರ್ಚು ಎಷ್ಟು ಬೀಳುತ್ತದೆ, ಒಂದು ಎಕರೆ ಅಡಿಕೆ ತೋಟಕ್ಕೆ ಖರ್ಚು ಎಷ್ಟು ಬೀಳುತ್ತದೆ, ಎಂದು ಯೋಚನೆ ಮಾಡಬೇಕು. ಮಲೆನಾಡಿನಲ್ಲಿ ಒಂದೊಂದು ಕಡೆ ನಾಲ್ಕೈದು ಮನೆಗಳು ಮಾತ್ರವಿರುತ್ತವೆ. ಅಲ್ಲದೆ ಇಲ್ಲಿ ಜಿಗಣೆಗಳಿಂದ ಕಡಿಸಿಕೊಳ್ಳಬೇಕು. ಈ ಕಷ್ಟಗಳನ್ನೆಲ್ಲಾ ಯೋಚಿಸಿಕೊಂಡರೆ ಈ ತೋಟಗಳೂ ಬೇಡ, ಹಣವೂ ಬೇಡವೆಂದೆನಿಸುತ್ತದೆ. ಇಂತಹ ಸಂದರ್ಭಗಳು ಒದಗಿರಬೇಕಾದರೆ ಮಲೆನಾಡಿನ ಪರಿಸ್ಥಿತಿ ಅಷ್ಟು ಆಶಾದಾಯಕವಾಗಿಲ್ಲ. ಬಯಲುಸೀಮೆಯಲ್ಲಿರತಕ್ಕ ಜನರು ಸುಖಸಂತೋಷಗಳಿಂದಿರುವಷ್ಟು ಮಲೆನಾಡಿನ ಜನರು ಸುಖಸಂತೋಷಗಳಿಂದ ಕೂಡಿಲ್ಲವೆಂದು ಹೇಳುತ್ತೇನೆ. ಈಗ ನಾಲ್ಕೈದು ವರ್ಷಗಳಿಂದ ಆರೋಗ್ಯ ಕೇಂದ್ರಗಳಲ್ಲಿ ಡಿ. ಡಿ. ಟಿ. spray ಮಾಡುವುದರಿಂದ ಸ್ವಲ್ಪ ಮಟ್ಟಿಗೆ ಉತ್ತಮವಾಗಿದ್ದೇವೆಂದು ಹೇಳಬಹುದಾಗಿದೆ. ಆದರೂ ಇನ್ನೂ ಸರಿಯಾಗಿ ಚೈತನ್ಯ ಬಂದಿಲ್ಲ. ಅಲ್ಲದೆ ಕಾಫಿ ಪ್ಲಾಂಟೇಷನ್ ಅಡಿಕೆ ತೋಟ ಮುಂತಾದುವುಗಳಲ್ಲಿ ಒಂದು ವರ್ಷಕ್ಕೆ ಬರತಕ್ಕ ಉತ್ಪತ್ತಿಯಲ್ಲಿ ಅರ್ಧಭಾಗದಷ್ಟು ಔಷಧಿಗಳಿಗೆ ಖರ್ಚಾಗುತ್ತದೆ. ಅದಕ್ಕೆ ಅವನು ಏನು ಲೆಕ್ಕವಿಡಬೇಕೋ ಗೊತ್ತಿಲ್ಲ. ಅದಕ್ಕೆ ಲೆಕ್ಕವಿಟ್ಟಿದ್ದರೂ ಸಹ ನೀವು ಒಪ್ಪುವುದಿಲ್ಲ. ವ್ಯವಸಾಯಕ್ಕೆ ಖರ್ಚು ಆಗುವುದನ್ನು ಮಾತ್ರ ಲೆಕ್ಕಕೊಡುವುದಕ್ಕೆ ಹೇಳುತ್ತೀರಿ. ಮನುಷ್ಯರಾಗಿ ಅವರು ಬದುಕಬೇಕಾದರೆ ವರಮಾನದ ಅರ್ಧಭಾಗವನ್ನು ಖರ್ಚು ಮಾಡುತ್ತಾರೆ. ನಾನು ಮಲೆನಾಡಿಗೆ ಹೆಣ್ಣುಕೊಟ್ಟಿರುವುದರಿಂದ ಅಲ್ಲಿಯ ಅನುಭವಗಳನ್ನು ನೋಡಿದ್ದೇನೆ. ಮೈಸೂರು ಸಂಸ್ಥಾನದ ಮೂರು ಜಿಲ್ಲೆಗಳಲ್ಲಿ ಅಂದರೆ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಇವುಗಳಲ್ಲಿ ಮಾತ್ರ ತೊಂದರೆ ಇರುತ್ತದೆ. ಯಾಕೆಂದರೆ ಹೊಲ ಹಚ್ಚಗಾದರೆ ಒಡೆಯನ ಕಣ್ಣು ಕೆಂಪಗೆ ಎಂಬ ಒಂದು ಗಾದೆ ಹೇಳುತ್ತಾರೆ. ಹಾಗೆ ಮಲೆನಾಡಿನಲ್ಲಿ ಎಲ್ಲಿನೋಡಿದರೂ ಹಚ್ಚಗೆ ಇರುವುದರಿಂದ ಎಲ್ಲರೂ ಚೆನ್ನಾಗಿದ್ದಾರೆಂದು ಮಾನ್ಯ ಸದಸ್ಯರು ಒಂದು ಅಭಿಪ್ರಾಯ ಇಟ್ಟುಕೊಂಡಿದ್ದಾರೆಂದು ತೋರುತ್ತದೆ. ಈ ಬಿಲ್ಲಿನಲ್ಲಿ ಹೆಚ್ಚಿಗೆ ವರಮಾನ ಬರತಕ್ಕ ಮನುಷ್ಯ ತೆರಿಗೆ ಕೊಡಬೇಕಾಗಿದೆ ಎಂದು ಇದೆ. ತೆರಿಗೆ ಕೊಡಬಾರದೆಂದು ನಾನು ಹೇಳುವುದಿಲ್ಲ. ಇದರಲ್ಲಿ ಒಂದು ವಿಚಾರ ಕೇಳಬೇಕಾಗಿದೆ ಸರ್ಕಾರಕ್ಕೆ ಇದರಿಂದ ಖರ್ಚು ಎಷ್ಟುಬೀಳುತ್ತದೆ, ಇದರಿಂದ ಬರತಕ್ಕ ಆದಾಯದಲ್ಲಿ ಎಷ್ಟು ಭಾಗ ಖರ್ಚಾಗುತ್ತದೆ ಎಂಬುದನ್ನು ಸರ್ಕಾರದವರು ಯೋಚನೆಮಾಡಬೇಕು.

ಈಗ ಈ ಬಿಲ್ಲು ಸೆಲೆಕ್ಟ್ ಕಮಿಟಿಗೆ ಹೋಗುತ್ತದೆ, ಅದರಲ್ಲಿ ಸದಸ್ಯರಾಗಿರತಕ್ಕವರು ರೈತರ ಕಷ್ಟಸುಖಗಳನ್ನು ಅರಿತಿರುವವರು ಇರಬೇಕೆಂದು ಹೇಳುತ್ತೇನೆ. ಬರೀ ಜಮೀನ್ದಾರರಲ್ಲದೆ, ರೈತರ ಕಷ್ಟಸುಖ ಗೊತ್ತಿರುವವರಿಲ್ಲದೆ ಇದ್ದರೆ ಮಲೆನಾಡಿನ ಜನಗಳಿಗೆ ಬಹಳ ಕಷ್ಟವಾಗುತ್ತದೆ. ನಾನು ತೆರಿಗೆ ವಜಾ ಮಾಡಬೇಕೆಂದು ಹೇಳುತ್ತಿಲ್ಲ. ಮಲೆನಾಡಿನಲ್ಲಿ ತೆರಿಗೆ ಹಾಕಬಾರದೆಂತಲೂ ಹೇಳುತ್ತಿಲ್ಲ. ಕಾಫಿ ಬೆಳೆಯುವವರ ಮೇಲೆ ತೆರಿಗೆ ಹಾಕ ಬೇಡಿ ಎಂದು ನಾನು ಹೇಳುವುದಿಲ್ಲ. ಆದರೆ ಅವರ ಜೀವನಕ್ಕೆ ಸರಿಯಾಗಿ ಆಗುವಷ್ಟು ಬಿಟ್ಟುಕೊಟ್ಟು ಹೆಚ್ಚಿಗೆಯಿರುವುದನ್ನು ತೆಗೆದುಕೊಳ್ಳಿ. ಈ ದಿವಸ

(ಶ್ರೀ ವೈ. ಎಂ. ಚಂದ್ರಶೇಖರಯ್ಯ.)

ಮೈಸೂರು ಸರ್ಕಾರದವರೂ ಹಾಗೂ ಇಂಡಿಯಾ ಸರ್ಕಾರದವರೂ ಮಲೆನಾಡಿನ ಜನರು ಬಹಳ ಹೀನ ಸ್ಥಿತಿಯಲ್ಲಿದ್ದಾರೆಂಬುದನ್ನು ಮನಗಂಡು ಅವರನ್ನು ಮುಂದಕ್ಕೆ ತರುವುದಕ್ಕೆ ನಾನಾ ರೀತಿ ಪ್ರಯತ್ನ ಮಾಡುತ್ತಿದಾರೆ. ಅದೇ ರೀತಿ ಅವರಿಗೆ ತೆರಿಗೆ ಹಾಕಬೇಕಾದ್ದೇನೋ ನ್ಯಾಯ. ಆದರೆ, ಅಕ್ಕಪಕ್ಕದ ರಾಷ್ಟ್ರಗಳಲ್ಲಿ ಯಾವ ರೀತಿ ತೆರಿಗೆ ಹಾಕಿದ್ದಾರೆಂಬುದನ್ನು ನೋಡಿ ನಾವು ಅದಕ್ಕಿಂತ ಕಡಮೆ ಹಾಕಬೇಕೆಂದು ಹೇಳುತ್ತೇನೆ. ಏಕೆಂದರೆ ಅಕ್ಕಪಕ್ಕದ ದೇಶದೊಡನೆ ನಮ್ಮ ದೇಶವನ್ನು ಹೋಲಿಕೆ ಮಾಡುವುದಾದರೆ, ನಮ್ಮ ದೇಶದ ಜನರು, ಮಲೆನಾಡಿನವರೇ ಆಗಲಿ ಬಯಲುಸೀಮೆಯವರೇ ಆಗಲಿ, ಅವರಿಗಿಂತ ಕೀಳುದೆಶೆಯಲ್ಲಿದ್ದಾರೆ. ಆದ್ದರಿಂದ, ಸಾಧಾರಣವಾಗಿ ಕೊಡಗಿನಲ್ಲಿ ಯಾವ ರೀತಿ ಹಾಕಿದ್ದಾರೋ ಆ ರೀತಿ ಹಾಕಬಹುದು ಅಷ್ಟೆ. ಹಾಗಿಲ್ಲದೆ ಇಂಡಿಯಾ ಸರ್ಕಾರದವರು ವ್ಯವಸಾಯಕ್ಕೆ ಕೊಡತಕ್ಕ ಹಣವನ್ನು ಖೋತಾ ಮಾಡಿದ್ದಾರೆಂದು ಯೋಚಿಸಿ ನಮ್ಮ ಮೇಲೆ ತೆರಿಗೆ ಹಾಕಬೇಕೆಂಬುದು ಸರಿಯಲ್ಲ. ನಿಮಗೆ ಹಣ ಬೇಕಾಗಿದ್ದರೆ ಇನ್ನೂ ಬೇರೆ ರೀತಿಯಲ್ಲಿ ಮಾಡಬಹುದಾಗಿದೆ. ಪ್ರತಿಯೊಂದು ವಿಧದಲ್ಲಿಯೂ ವ್ಯವಸಾಯಗಾರರ ಮೇಲೆಯೆ ನಿಮ್ಮ ದೃಷ್ಟಿಯನ್ನು ಬೀರುವುದು ಸರಿಯಲ್ಲ. ಮೊನ್ನೆ ತಾನೆ ಟೆನೆನ್ಸಿ ಆಕ್ಟ್ ತಂದಿರಿ. ಈಗ ಅಗ್ರಿಕಲ್ಚರಲ್ ಇನ್‌ಕಂಟಾಕ್ಸ್ ಬಂದಿದೆ. ನಿಜವಾಗಿಯೂ ಈ ಅಗ್ರಿಕಲ್ಚರಲ್ ಟ್ಯಾಕ್ಸ್ ಬಂದ ದಿವಸ ನಾನು ಊಟ ಮಾಡಲಿಲ್ಲ! ಮೈಸೂರು ದೇಶದ ರೈತರಿಗೆ ಎಷ್ಟು ಕಷ್ಟ ಕೊಡುತ್ತಿದ್ದಾರೆಂದು ನನಗೆ ಬಹಳ ವ್ಯಸನವಾಯಿತು. ಲಕ್ಷಪ್ರಜೆಗಳ ಪ್ರತಿನಿಧಿಗಳಾಗಿ ಬಂದ ನಾವುಗಳು ಇದನ್ನು ಮುಖ್ಯವಾಗಿ ಯೋಚನೆ ಮಾಡಬೇಕು. ಸರ್ಕಾರದವರು ಬೇರೆ ಯಾವುದಾದರೂ ವಿಧಾನದಲ್ಲಿ ಏರ್ಪಾಡು ಮಾಡಬಹುದಾಗಿತ್ತು, ಈ ತೆರಿಗೆ ಮಾತ್ರ ಹಾಕಬೇಡಿ ಎಂದು ಕೆಲವರು ಹೇಳಿದರು ಆದರೆ ಬೇರೆ ಯಾವ ರೀತಿ ಹಾಕಬೇಕೆಂಬುದನ್ನು ಅವರು ಹೇಳಲಿಲ್ಲ. ಬೇರೆ ಯಾವ ರೀತಿ ಅವರ ಸರ್ಕಾರ ಬಂದಾಗ ಮಾಡುತ್ತಾರೋ ಗೊತ್ತಿಲ್ಲ. ಬಹುಶಃ ಒಂದು ಹರಿತವಾದ ಕೊಡಲಿ ತೆಗೆದುಕೊಂಡು ಒಂದೇ ಸಲ ಕತ್ತು ಹಾರಿಸುತ್ತಾರೋ ಕಾಣೆ! ಅವರು ಮಾತನಾಡುವಾಗ ಮಾತ್ರ 'ಅದಕ್ಕೆ ಹಣ ಬೇಕು, ಇದಕ್ಕೆ ಬೇಕು' ಎಂದು ಹೇಳುತ್ತಿರುತ್ತಾರೆ. ಆದರೆ, ಕಡಮೆಯಾಗತಕ್ಕ ಹಣವನ್ನು ಹೇಗೆ ಒದಗಿಸಿಕೊಳ್ಳಬೇಕು, ದೇಶದ ಅಭಿವೃದ್ಧಿ ಕಾರ್ಯಗಳನ್ನು ಯಾವ ರೀತಿಮಾಡಬೇಕೆಂದು ಹೇಳಲಿಲ್ಲ. ಸುಮ್ಮನೆ ವಿರೋಧಮಾಡುತ್ತಾರೆ ಅಷ್ಟೆ.

ಆದ್ದರಿಂದ ಒಟ್ಟಿನಲ್ಲಿ, ಈಗ ಹಾಕಿರತಕ್ಕ ತೆರಿಗೆ ಸಾಮಾನ್ಯವಾಗಿ, ಬಡವರಿಗೆ ಅನಾನುಕೂಲವಾಗುವುದಿಲ್ಲವೆಂದು ತೋರುತ್ತದೆ. ಆದರೆ ಜಾರಿಗೆ ಕೊಡುವಾಗ ಸರ್ಕಾರದವರು ರೈತರಿಗೆ ಕಿರುಕುಳಗಳಾಗದಂತೆ, ಮಲೆನಾಡಿನ ಕಷ್ಟಗಳನ್ನರಿತು ಮುನ್ನಡೆಯುವಂತೆ ಏರ್ಪಾಡುಮಾಡಬೇಕೆಂದು ಹೇಳಿ ನಾನು ಮುಕ್ತಾಯಮಾಡುತ್ತೇನೆ.

*ಶ್ರೀ ಡಿ. ಆರ್. ಕರ್‍ಗಿಗೌಡ (ಹಾಸನ).—ಅಧ್ಯಕ್ಷರೇ, ಈಗ ನಮ್ಮ ಮುಂದಿರುವ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಬಿಲ್ಲನ್ನು ನಾನು ಸ್ವಾಗತಿಸುತ್ತಾ ಕೆಲವು ಅನಿವಾರ್ಯ ತೊಂದರೆಗಳಾಗುವುದನ್ನು ಸಭೆಗೆ ತಿಳಿಸಬೇಕೆಂದಿಚ್ಛಿಸುತ್ತೇನೆ. ಈ ಬಿಲ್ಲನ್ನು ಮಂಡಿಸುತ್ತಾ ಮಾನ್ಯ ಮುಖ್ಯಮಂತ್ರಿಗಳು, ಈ ಬಿಲ್ಲಿನಿಂದ ಮೈಸೂರು ದೇಶದಲ್ಲಿ ಎಷ್ಟು ಜನ ಪ್ರಜೆಗಳಿಗೆ ತೊಂದರೆಯಾಗುತ್ತದೆ, ಎಷ್ಟು ಜನ ಕೊಡಬೇಕಾಗುತ್ತದೆ ಎಂಬುದನ್ನು ತಿಳಿಸಿದ್ದರೆ ಹೆಚ್ಚು ಚರ್ಚೆಗೆ ಅವಕಾಶವಿರುತ್ತಿರಲಿಲ್ಲ. ಏಕೆಂದರೆ ಯಾವುದೇ ತೆರಿಗೆ ಹಾಕಿದರೂ, ಅವರು ಹೆಚ್ಚಾಗಿ ಜನರ ಮೇಲೆ ಬೀಳದಂತೆ ಮಾಡುತ್ತೇವೆಂದು ಅವರು ಹೇಳುತ್ತಾರೆ. ಈಗ ಈ ಬಿಲ್ಲಿನ ಪ್ರಕಾರ 3,500 ರೂಪಾಯಿಗಳ ವರಮಾನ ಬರುತ್ತದೆಂದು ಗೊತ್ತಾದಾಕ್ಷಣ ಅವನಿಗೆ ನೋಟೀಸ್ ಕೊಡುವುದಕ್ಕೆ ಅಧಿಕಾರಿಗಳಿಗೆ ಅಧಿಕಾರವಿದೆ. ಈ ಸಂದರ್ಭದಲ್ಲಿ 3,000–2,000 ರೂಪಾಯಿಗಳಿದ್ದರೂ ಅವನಿಗೆ ಆರು ಎಕರೆಗೆ ಮೇಲ್ಪಟ್ಟಿದ್ದರೆ, ಸುಮ್ಮನೆ, ಶ್ಯಾನುಬೋಗರು ಅವನು ಇಂಥ ಬೆಳೆಯನಿಟ್ಟಿದ್ದಾನೆಂದು ಬರೆಯುತ್ತೇನೆಂದು ಹೆದರಿಸಿ ಲಂಚ ತೆಗೆದುಕೊಳ್ಳುವ ಸಂದರ್ಭಗಳಿವೆ. ಏಕೆಂದರೆ ಹಿಂದೆ ಕಂಟ್ರೋಲ್ ಇದ್ದ ಕಾಲದಲ್ಲಿ ಎರಡುಪಲ್ಲ ರಾಗಿ ಉಳಿಸಿಕೊಳ್ಳಲಿಕ್ಕೆ ನೂರಾರು ರೂಪಾಯಿ ಲಂಚ ಕೊಟ್ಟಿರುವ ನಿದರ್ಶನಗಳಿವೆ.

ಆದ್ದರಿಂದ ಈ ಬಿಲ್ಲನ್ನು ತರುವುದಕ್ಕೆ ಮುಂಚೆ ಎಷ್ಟು ಜನರಮೇಲೆ ಇದು ಬೀಳುತ್ತದೆ. ಎಷ್ಟು ಜನರಿಗೆ ತೊಂದರೆಯಾಗುತ್ತದೆಯೆಂಬ ಬಗ್ಗೆ statisticsನ್ನು ಶೇಖರಿಸಿ ಹೇಳಿದ್ದರೆ ನಾವು ಸುಲಭವಾಗಿ ಒಪ್ಪಿಕೊಳ್ಳಬಹುದಾಗಿತ್ತು. ಈಗ ಇದರಲ್ಲಿ ಹೇಳಿರುವ ಪ್ರಕಾರವೂ 3,500 ರೂಪಾಯಿ income ಬರುವ ಜನರು ಬಹಳ ಕಡಿಮೆ. ಹಳ್ಳಿಗಾಡಿನಲ್ಲಿ ಶೇ॥ 80 ಜನರಿಗೆ 1,000 ಬರುವುದೂ ಕಷ್ಟವೆಂದು ಹೇಳಬಹುದು. ಇಡೀ ಗ್ರಾಮಕ್ಕೇ 20–30 ಸಾವಿರ ರೂಪಾಯಿಗಳ ಒಟ್ಟು ಉತ್ಪತ್ತಿಯಿದ್ದರೆ, 70–80 ಸಾವಿರ ರೂಪಾಯಿಗಳಷ್ಟು ಖರ್ಚಿದೆಯೆಂದು, ರೂರಲ್ ಇಂಡಸ್ಟ್ರಿಯಲ್ ಸರ್ವೇಷನ್ನಿನವರು ತೆಗೆದಿರುವ ಅಂಕಿಅಂಶಗಳಿಂದಲೇ ಗೊತ್ತಾಗುತ್ತದೆ. ಆದ್ದರಿಂದ ಈಗಲೂ ಮಾನ್ಯಮಂತ್ರಿಗಳು ಅಂಕಿಅಂಶಗಳನ್ನು ತರಿಸಿ ಎಷ್ಟು ಜನರಮೇಲೆ ಇದನ್ನು ಹಾಕಬಹುದಾಗಿದೆಯೆಂಬುದನ್ನು ತಿಳಿಸಿದರೆ ಸಂತೋಷದಿಂದ ಈ ಮಸೂದೆಯನ್ನು ಒಪ್ಪಿಕೊಳ್ಳುತ್ತೇನೆ.

ಈ ಸಂದರ್ಭದಲ್ಲಿ, ಆಲೂಗೆಡ್ಡೆ, ಈರುಳ್ಳಿ, ಬೆಳ್ಳುಳ್ಳಿ ಮುಂತಾದ ಜಾಗ್ರತೆ ನಾಶವಾಗುವ ಪೈರುಗಳಿಗೂ ತೆರಿಗೆ ಹಾಕಿರುವುದು ಬಹಳ ಅನ್ಯಾಯ. ಬೆಳ್ಳುಳ್ಳಿಯನ್ನು 10 ರೂಪಾಯಿನಿಂದ ಹಿಡಿದು 100 ರೂಪಾಯಿಗಳವರೆಗೂ ವ್ಯಾಪಾರವಾಡಿದ್ದುಂಟು, ನಿಜ. ಆದರೆ, ಬೆಳ್ಳುಳ್ಳಿಯನ್ನು ಪೈರುಮಾಡಲು ಬೀಜ, ಗೊಬ್ಬರ ವಗೈರೆಗಳಿಗೆ ಆಗುವ ಖರ್ಚನ್ನು ನೋಡುವುದಾದರೆ 150 ರೂಪಾಯಿ ಬೀಳುತ್ತದೆ. ಈ ಹೊತ್ತಿನ ಧಾರಣೆಯಾದ 15–16 ರೂಪಾಯಿಗಳನ್ನೇ ಇಟ್ಟುಕೊಂಡರೂ, ಒಬ್ಬನು 10 ಪಲ್ಲ ಬೆಳೆದರೂ ಒಟ್ಟು 150 ರೂಪಾಯಿ ಖರ್ಚೂ ಬರುವುದಿಲ್ಲ. ಆಲೂಗಡ್ಡೆ, ಈರುಳ್ಳಿ ವಿಷಯ ನಮ್ಮ ಕಡೆ ಹೇಳುವಹಾಗಿಲ್ಲ. ಕಳೆದ ವರ್ಷದಲ್ಲಿ 40 ಲಕ್ಷ ರೂಪಾಯಿಗಳ ಬೀಜಹಾಕಿ ಮಳೆ ಹೆಚ್ಚಾಗಿ, ಇಲ್ಲವೇ ಕಡಿಮೆಯಾಗಿ ಆಲೂಗಡ್ಡೆ ಬೇಸಾಯಗಾರರು ವಿಪರೀತ ನಷ್ಟ ಬಿದ್ದು ಈಗ ಆ ವ್ಯವಸಾಯವನ್ನೇ ಬಿಡುವುದರಲ್ಲಿದ್ದಾರೆ. ಸಾಧಾರಣವಾಗಿ, ವರ್ಷೇ ವರ್ಷೇ ಇವೊತ್ತಿನ ದಿವಸದ ಹೊತ್ತಿಗೆ 10 ಲಕ್ಷ ರೂಪಾಯಿಗಳ ಬೀಜವನ್ನು ನಮ್ಮ ಕಡೆ ತರಿಸುತ್ತಿದ್ದರು. ಆದರೆ, ಈ ವರ್ಷ 10 ಮೂಟೆಯನ್ನು ಕೂಡ ತಂದಿಲ್ಲ. ಇಂಥ ಜಾಗ್ರತೆ ಕೆಟ್ಟು ಹೋಗುವ ಪದಾರ್ಥಗಳಮೇಲೆ ಹಾಕುವುದು ಸರಿಯಲ್ಲ. ಅಲ್ಲದೆ ಬೆಳೆಯ ವಿಚಾರ ಇರಲಿ, ಒಂದು ಎಕರೆ ಅಗತೆ ಮಾಡಿಸಬೇಕಾದರೆ 50 ರೂಪಾಯಿಗಳಾಗುತ್ತದೆ. ಬೀಜಕ್ಕೆ ಎಕರೆಗೆ ನಾಲ್ಕು ಮೂಟೆಯೆಂದರೂ $30 \times 4 = 120$ ರೂಪಾಯಿಯಾಗುತ್ತವೆ. ಗೊಬ್ಬರಕ್ಕೆ 250–300 ರೂಪಾಯಿ ಖರ್ಚಾಗುತ್ತದೆ. ಇಷ್ಟೆಲ್ಲಾ ಮಾಡಿದರೂ ಒಂದು ಎಕರೆಗೆ 300 ಮಣದಮೇಲೆ ಆಗುವುದಿಲ್ಲ. 1,000 ಮಣ ಬೆಳೆಯಬಹುದೆಂದು experts

ಹೇಳುತ್ತಾರೆ ಅಷ್ಟೆ. ಸಾಧಾರಣವಾಗಿ 300 ಮಣದ ಮೇಲೆ ಬೆಳೆಯುವುದಕ್ಕಾಗುವುದಿಲ್ಲ. ಇದನ್ನೆಲ್ಲಾ ಲೆಕ್ಕಹಾಕಿದರೆ 200 ರೂಪಾಯಿಗಳಮೇಲೆ ಎಂದೂ ಲಾಭ ಹೊಂದುವುದಕ್ಕಾಗುವುದಿಲ್ಲ. ಆದ್ದರಿಂದ ಆಲೂಗೆಡ್ಡೆ, ಈರುಳ್ಳಿ, ಬೆಳ್ಳುಳ್ಳಿ ಮುಂತಾದುವುಗಳಿಗೆ ರೆಮಿಷನ್ ಕೊಟ್ಟು ಧ್ರುವಪೈರುಗಳಿಗೆ ಎರಡು ವರ್ಷ, ಮೂರು ವರ್ಷ ಇರುವಂಥವುಗಳಿಗೆ ಎಂದರೆ, ತೆಂಗಿನ ಕಾಯಿ, ಮಾವಿನಕಾಯಿ, ಅಡಕೆ, ಕಿತ್ತಳೆ, ಸೇಬು, ದ್ರಾಕ್ಷಿ ಇಂಥವುಗಳಿಗೆ ಹಾಕಬೇಕೆಂದು ಹೇಳುತ್ತೇನೆ. ಒಂದು ವರ್ಷ ಆರು ತಿಂಗಳುಗಳಲ್ಲಿ ಮಾಡಿರತಕ್ಕ ಪೈರುಗಳಿಗೆ ತೆರಿಗೆ ಹಾಕುವುದು ಸರಿಯಲ್ಲ. ಬಾಳೆಹಣ್ಣಿಗೆ ಈ ತೆರಿಗೆ ಹಾಕಿದ್ದಾರೆ. ಸಂತೆಗೆ ತೆಗೆದುಕೊಂಡು ಹೋಗಿ ವ್ಯಾಪಾರವಾಡಿದರೆ ರಸೀತಿ ಹೇಗೆ ತರುವುದು ಸಂತೆಯಲ್ಲಿ ಯಾರು ಕೊಡುತ್ತಾರೆ ? ಇಂಥವೆಲ್ಲಾ ಬಡರೈತರನ್ನು ಶ್ಯಾನುಭೋಗರು ಮುಂತಾದವರು ಹೆದರಿಸುವುದಕ್ಕೆ ಅವಕಾಶಕೊಡುತ್ತವೆ. ಏಕೆಂದರೆ 100 ರೂಪಾಯಿ ಕಂದಾಯ ಕೊಡುವ ಯಾವ ರೈತ ತಾನೆ ಇವೊತ್ತು ಒಬ್ಬ ಮಗನನ್ನು ಹೈಸ್ಕೂಲಿನಲ್ಲಿ ಓದಿಸುವುದಕ್ಕೆ ಶಕ್ತಿಯುಳ್ಳವನಾಗಿದ್ದಾನೆ? ಯಾರು ನೋಡಲಿ ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್; ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನಸಾಲ ತೆಗೆದುಕೊಂಡಿರುವರೇ ನೂರಕ್ಕೆ 90ರಷ್ಟು ಜನ ಹೀಗಿರುವಾಗ ಬಾಳೆಹಣ್ಣು ಮಾರುವ ರೈತರು 1,000 ರೂಪಾಯಿ ಉಳಿಸುತ್ತಾರೆ, 3,000 ರೂಪಾಯಿ ಉಳಿಸುತ್ತಾರೆ ಎಂದರೆ ಆಶ್ಚರ್ಯವಾಗುತ್ತದೆ. ಯಾರು ನೋಡಲಿ ಎತ್ತಿಗೆ ಸಾಲ ಕೇಳುತ್ತಿರುತ್ತಾರೆ, ಗಾಡಿಗೆ ಸಾಲ ಕೇಳುತ್ತಿರುತ್ತಾರೆ. ಆದ್ದರಿಂದ 100 ರೂಪಾಯಿಗೆ ಹೆಚ್ಚಿಗೆ ಕಂದಾಯ ಕೊಡುವವನು ಲೆಕ್ಕ ಇಡಬೇಕೆಂದು ಮಾಡಬೇಕು. ಈ ಬಿಲ್ಲನ್ನು ಮುಖ್ಯವಾಗಿ oppose ಮಾಡುತ್ತಿರುವುದೂ ಕೂಡ ಲೆಕ್ಕ ಇಡುವುದಕ್ಕೆ ತೊಂದರೆಯಾಗುತ್ತದೆ, ಜನ ಸಾಮಾನ್ಯರೆಲ್ಲರೂ ಲೆಕ್ಕ ಇಡಬೇಕಾಗುತ್ತದೆ ಎಂಬುದಕ್ಕಾಗಿ. ಈ ತೊಂದರೆಯನ್ನು ತಪ್ಪಿಸುತ್ತಾರೆಂದು ನಂಬಿದ್ದೇವೆ. ತಾವು ಎಷ್ಟು ಜನರಿಗೆ ಇದು ಅನ್ವಯಿಸುತ್ತದೆಂಬುದನ್ನು ಹೇಳಿ. 100 ರೂಪಾಯಿಗಳಿಗೆ ಕಡಮೆ ಕಂದಾಯ ಕೊಡುವವರಿಗೆ ಅನ್ವಯಿಸುವುದಿಲ್ಲವೆಂದು ಹೇಳುವುದಾದರೆ ಬಹಳ ಜನರು ಈ ಮಸೂದೆಯನ್ನು ಒಪ್ಪಿಕೊಳ್ಳುತ್ತಾರೆಂದು ಹೇಳುತ್ತೇನೆ.

*ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಅಧ್ಯಕ್ಷರೆ, ಈಗ ನಮ್ಮ ಮುಂದೆ ಮಂಡಿಸಿರತಕ್ಕ ಈ ವ್ಯವಸಾಯದ Income-tax Billನ್ನು ನಾನು ಸ್ವಾಗತಿಸುತ್ತಾ ಕೆಲವು ಮಾತುಗಳನ್ನು ಹೇಳಬೇಕೆಂದು ಅಪೇಕ್ಷೆಪಡುತ್ತೇನೆ. ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಎಂದು ಈ ಮಸೂದೆಯ ಮೂಲಕ ನಮ್ಮ ಸರ್ಕಾರದವರು ಯಾವ ತೆರಿಗೆಯನ್ನು ವಸೂಲು ಮಾಡಬೇಕೆಂದಿದ್ದಾರೋ ಅದು ಒಂದು ವಿದದಲ್ಲಿ ಸರಿಯಲ್ಲವೆನ್ನಬೇಕು. ವ್ಯವಸಾಯಗಾರನಿಂದ ತೆರಿಗೆಯ ರೂಪದಲ್ಲಿ ವಸೂಲು ಮಾಡುವುದು, the method of getting tax from the raiyat on his income—ಇದು ಸರಿಯಲ್ಲ. ಹೋದ ಸಾರಿ ಮಾನ್ಯ ಹಣಕಾಸಿನ ಸಚಿವರು Land ಮೇಲೆ ಸರ್‌ಚಾರ್ಜ್ ಮಾಡಬೇಕೆಂದು ಹೇಳಿ ಒಂದು ಮಸೂದೆಯನ್ನು ತಂದು ಅದು ಹಾಗೆಯೇ ವಾಪಸು ಹೊರಟು ಹೋಯಿತು. ಈಗ ಮಾನ್ಯ ಸದಸ್ಯರು ಮಾತನಾಡುತ್ತಾ ಯಾವರೀತಿ ರೈತರಿಗೆ ಲೆಕ್ಕವಿಡುವುದಕ್ಕೆ ತೊಂದರೆಯಾಗುತ್ತದೆ, ಅವರು ಯಾವರೀತಿ ವಿದ್ಯಾವಂತರಮೇಲೆ ಆಧಾರವಾಗಿ ನಿಲ್ಲಬೇಕಾಗುತ್ತದೆ, ಹಳ್ಳಿಯಲ್ಲಿರತಕ್ಕ ಕರಣಿಕರ ಅಥವಾ ಗುಮಾಸ್ತರ ಸಹಾಯವನ್ನು ಅಪೇಕ್ಷಿಸಬೇಕಾಗುತ್ತದೆಂದು ಹೇಳಿದ್ದಾರೆ. ವ್ಯವಸಾಯ ಮಾಡತಕ್ಕಂಥವನು ದಿನಚರಿ ಕೂಲಿಗಾರರಿಗೆ, ಗೊಬ್ಬರಕ್ಕೆ ಬೀಜಕ್ಕೆ ಇತ್ಯಾದಿ, ಇತ್ಯಾದಿಯಾಗಿ ಯಾವ ಯಾವ ಬಾಬಿಗೆ ಖರ್ಚುಮಾಡುತ್ತಾನೆಯೋ ಅದಕ್ಕೆಲ್ಲಾ ಲೆಕ್ಕ ವಿಡಬೇಕೆಂದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಎಕರೆಗೆ ಇಷ್ಟು ಎಂದುಹೇಳಿ, ತರಿ ಆದರೆ ಇಷ್ಟು, ಬಾಗಾಯಿತು ಜಮೀನಾದರೆ ಇಷ್ಟು, ಖುಷ್ಕಿಯಾದರೆ ಇಷ್ಟು ಎಂದು ಆಯಾ ಜಮೀನಿನಲ್ಲಿ ಬೆಳೆಯುತಕ್ಕ ಶಕ್ತಿಯಮೇಲೆ ಒಂದು ಸರ್‌ಚಾರ್ಜ್‌ಹಾಕಿ ತೆರಿಗೆಯನ್ನು ವಸೂಲು ಮಾಡುವುದೇ ಒಳ್ಳೆಯದೆಂದು ನನಗೆ ತೋರುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಬೆಳೆ ಆಗದೆ ಇದ್ದರೆ !

ಶ್ರೀ ಡಿ. ದೇವರಾಜ ಅರಸ್.—ಆಗ ರಿಮಿಷನ್ ಇದ್ದೇ ಇದೆ. ಆದ್ದರಿಂದ ಈ ರೀತಿ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಎಂದು ಹೇಳಿ ವ್ಯವಸಾಯಗಾರನಿಗೆ ಬರತಕ್ಕ ನಿವ್ವಳ ಆದಾಯದಮೇಲೆ ತೆರಿಗೆ ಹಾಕುವುದು ಹೆಚ್ಚಿಗೆ ಶಾಸ್ತ್ರೀಯವಾದ ವಿಧಾನವೆಂದು ಅನೇಕರು ಒಪ್ಪುವುದಾದರೂ, ನಮ್ಮ ದೇಶದಲ್ಲಿ ಹೆಚ್ಚಿಗೆ ರೈತರು ಅವಿದ್ಯಾವಂತರಾಗಿದ್ದು ಲೆಕ್ಕ ಪತ್ರಗಳನ್ನಿಡುವುದು ಕಷ್ಟವಾಗಿ ಇತರರ ಕೈಗೆ ಸಿಕ್ಕಿ ತೊಂದರೆಯಾಗುತ್ತದೆಂದು ಹೇಳಿ, ಈ ರೀತಿ ಸರ್‌ಚಾರ್ಜ್ ಹಾಕಿದರೆ ಚೆನ್ನಾಗಿರುತ್ತದೋ ಎಂದೆನಿಸುತ್ತದೆ. ಮಾನ್ಯ ಮುಖ್ಯಮಂತ್ರಿಗಳು 63 ನೆಯ ಸೆಕ್ಷನ್ನನ್ನು ಪ್ರಸ್ತಾಪಮಾಡುತ್ತಾ 'Composition of Agricultural Income-tax ' ಎಂದು ಒಂದು ಅವಕಾಶವನ್ನು ಕಲ್ಪಿಸಿಕೊಟ್ಟು ಯಾವ ಮನುಷ್ಯನು ಲೆಕ್ಕಪತ್ರಗಳನ್ನಿಟ್ಟು ತೆರಿಗೆ ಕೊಡುವುದಕ್ಕೆ ಅನಾನುಕೂಲವಾಗುತ್ತದೋ ಅವನಿಗೆ ತನ್ನ ಜಮೀನಿನ ಮೇಲೆ ಇಷ್ಟು ಕೊಡಬೇಕೆಂದು ಹೇಳಿ ಒಂದು ಅವಕಾಶ ಕಲ್ಪಿಸಿದ್ದಾರೆ. ಇದು ಬಹುಮಟ್ಟಿಗೆ ಶ್ರೀ ಕರಿಗೌಡರು ಮತ್ತು ಚಂದ್ರಶೇಖರಯ್ಯನವರು ಹೇಳಿದ ತೊಂದರೆಗಳನ್ನು ನಿವಾರಣೆ ಮಾಡುವುದಾಗಿರುವುದರಿಂದ ಈ ಮಸೂದೆಯನ್ನು ಸ್ವಾಗತಿಸುವುದರಿಂದೇನೂ ತಪ್ಪಾಗಲಾರದು.

ಇನ್ನೊಂದು ವಿಚಾರ : ಮಾನ್ಯ ಸ್ನೇಹಿತರಾದ ಶ್ರೀ ಕರಿಗೌಡರು ಹೇಳಿದ ಹಾಗೆ, ಹಣಕಾಸಿನ ಸಚಿವರು ಈ ಮಸೂದೆಯನ್ನು ಮಂಡಿಸತಕ್ಕ ಕಾಲದಲ್ಲಿ ಈ ಬಿಲ್ಲಿಗೆ ಸಂಬಂಧಪಟ್ಟಂತೆ ಕೆಲವು ಅಂಕಿ ಅಂಶಗಳನ್ನು ಶೇಖರಿಸಿ ಮಾತನಾಡಿದ್ದರೆ ಉತ್ತಮವಾಗುತ್ತಿತ್ತು. ಏನೇ ಆಗಲಿ, ಹಾಲಿ ಇರತಕ್ಕ ಅಂಕಿಅಂಶಗಳ ಆಧಾರದ ಮೇಲೆ ಹೇಳುವುದಾದರೆ, ಬಳ್ಳಾರಿಯೂ ಸೇರಿ ನಮ್ಮ ದೇಶದಲ್ಲಿ ಸುಮಾರು 14 ಲಕ್ಷ ಚಿಲ್ಲರೆ ಹೋಲ್ಡಿಂಗ್‌ಗಳಿವೆ, ಅಂದರೆ ಜಮೀನು ಪಡೆದಿರತಕ್ಕ ಹಿಡುವಳಿದಾರರ ಸಂಖ್ಯೆ ಇಷ್ಟಿದೆ. 25 ಎಕರೆಗೆ ಒಳಪಟ್ಟಿರುವವರು ಪಡೆದಿ

3 P.M.

ರುವಹೋಲ್ಡಿಂಗ್ಸ್ ಸುಮಾರು 12 ಅಥವಾ 11 ಲಕ್ಷ ಚಿಲ್ಲರೆ ಇರಬಹುದು, ಬಾಕಿಯಾದುದು 25 ಎಕರೆ ಮೇಲ್ಪಟ್ಟಿರುವುದು. ಈ ರೀತಿಯಾಗಿ ಬಹುಭಾಗದ ಜನರು ಎಂದರೆ ಸುಮಾರು 55 ಅಥವಾ 60 ಲಕ್ಷ ಜನರು ವ್ಯವಸಾಯಗಾರರ ಪೈಕಿ ಸ್ಮಾಲ್ ಹೋಲ್ಡರ್ಸ್. ಈ ಮಸೂದೆಯನ್ನು ಜಾರಿಗೆ ತರುವಾಗ ಇವರು ಯಾವ ರೀತಿ ಕಮರ್ಷಿಯಲ್ ಕ್ರಾಪ್ಸ್ ಬೆಳೆಯುತ್ತಾರೆ, ಇವರಿಗೆ ಯಾವ ದಾಮಾಷಾ ಪ್ರಕಾರ ತೆರಿಗೆ ಹಾಕಬೇಕು ಎಂಬುದನ್ನು ಯೋಚನೆ ಮಾಡಬೇಕು. ಈ ಕಾನೂನಿನ ಪ್ರಕಾರ 6 ಎಕರೆಗೆ ಒಳಪಟ್ಟಿರುವವರು ಯಾವ ಕಮರ್ಷಿಯಲ್ ಕ್ರಾಪ್ಸ್ ಹಾಕಿದರೂ ಕೂಡ ಈ

(ಶ್ರೀ ಡಿ. ದೇವರಾಜ ಅರಸ್.)

ತೆರಿಗೆ ಕೊಡಬೇಕಾಗಿಲ್ಲ. ಆಲೂಗಡ್ಡೆಯಾಗಲಿ ಅಥವಾ ಈರುಳ್ಳಿಯಾಗಲಿ ಅಥವಾ ಮೆಣಸಿನಕಾಯಿ ಆಗಲಿ 6 ಎಕರೆ ಮೇಲ್ಪಟ್ಟು ಹಿಡುವಳಿಯಲ್ಲಿ ಹಾಕಿರುವವರು ಸುಮಾರು 25 ಎಕರೆ ಜಮೀನುಳ್ಳ 11-12 ಲಕ್ಷ ಜನರ ಪೈಕಿ 50 ಸಾವಿರ ಜನರು ಸಿಕ್ಕುತ್ತಾರೋ ಇಲ್ಲವೋ ಎಂಬ ಭಾವನೆಯಿದೆ. 25 ಎಕರೆ ಪೈಕಿ ಎಲ್ಲವೂ ಖುಷ್ಕೀ ಜಮೀನಾಗಿರುವುದಿಲ್ಲ. ನೀರಾವರಿಯಿಂದ ವ್ಯವಸಾಯ ಮಾಡುವ ಪ್ರದೇಶ ಕೂಡ ಇರುತ್ತದೆ. ನಾಲೆಯಿಂದ ಅಥವಾ ಭಾವಿಗಳಿಂದ ಕಪಿಲೆ ಹೊಡೆದು ವ್ಯವಸಾಯ ಮಾಡುವ ಪ್ರದೇಶವೂ ಇರಬಹುದು. ಭಾವಿಗಳಿಂದ ಕಪಿಲೆ ಹೊಡೆದು ಮತ್ತು ಎಲೆಕ್ಟ್ರಿಕ್ ಪಂಪ್ ಮೂಲಕ ನೀರನ್ನೆತ್ತಿ ವ್ಯವಸಾಯ ಮಾಡುವ ಬೇಸಾಯಗಾರರು 7-8 ಎಕರೆ ಪ್ರದೇಶದಲ್ಲಿ ಕಮರ್ಷಿಯಲ್ ಕ್ರಾಪ್ಸ್ ಬೆಳೆಯಬಹುದೇ ಹೊರತು ಕುಷ್ಕಿ ಜಮೀನು ಇರುವವರು 25 ಎಕರೆ ಇದ್ದರೂ 6 ಎಕರೆಗಿಂತ ಹೆಚ್ಚು ಪ್ರದೇಶದಲ್ಲಿ ಕಮರ್ಷಿಯಲ್ ಕ್ರಾಪ್ಸ್ ಬೆಳೆಯುವುದು ತೀರ ಅಸಂಭವ, ಸಾಧ್ಯವಿಲ್ಲ ಏಕೆಂದರೆ ಕೆಲವು ಭಾಗ ರಾಗಿಗೆ, ಕೆಲವು ಭಾಗ ಜೋಳಕ್ಕೆ, ದನ ಮೇಯಿಸುವುದಕ್ಕೆ ಇಟ್ಟುಕೊಳ್ಳಬೇಕಾಗುತ್ತದೆ. ಇತರ ಬೆಳೆಗೆ ಮತ್ತು ಉಪಯೋಗಕ್ಕೆ ಎಷ್ಟು ಜಮೀನು ಬೇಕೋ ಅಷ್ಟನ್ನು ಇಟ್ಟುಕೊಂಡು ಬಾಕಿ ಪ್ರದೇಶದಲ್ಲಿ ಕಮರ್ಷಿಯಲ್ ಕ್ರಾಪ್ ಬೆಳೆಯಬಹುದು. ಹಾಗಿರುವಾಗ ಎಲ್ಲ ರೈತರಿಗೂ ಈ ಬಿಲ್ಲು ಇರುವ ರೀತಿಯಲ್ಲಿ ಕಷ್ಟವಾಗುತ್ತದೆ, ಎಲ್ಲರೂ ಕೂಡ ಲೆಖ್ಖಪತ್ರ ಇಡಬೇಕಾಗುತ್ತದೆ ಎಂದು ಶಂಕೆಪಡುವುದಕ್ಕೆ ಅವಕಾಶವಿಲ್ಲ.

ಆಮೇಲೆ ಕಾಫಿ ಬೆಳೆಯ ವಿಚಾರವನ್ನು ಕೆಲವರು ಪ್ರಸ್ತಾಪ ಮಾಡಿದ್ದಾರೆ. ಮೈಸೂರಿನ ಅಕ್ಕಪಕ್ಕದಲ್ಲಿ ಕೊಡಗು ಮತ್ತು ಮದ್ರಾಸ್ ಪ್ರಾಂತ್ಯಗಳಲ್ಲಿ ಕಾಫಿ ಬೆಳೆಯುವ ಪ್ರದೇಶಗಳಿಗೆ ನಮ್ಮ ದೇಶದ ಕಾಫಿ ಬೆಳೆಯುವ ಪ್ರದೇಶಗಳನ್ನು ಹೋಲಿಸಿನೋಡಿದರೆ ಈ ಬೆಳೆ ಅಲ್ಲಿರುವಷ್ಟು ನಮ್ಮ ದೇಶದಲ್ಲಿ ಆಶಾದಾಯಕವಾಗಿಲ್ಲ, ಅಲ್ಲಿನ ಬೆಳೆಗೆ ಹೋಲಿಸಿದರೆ ಸರಿಹೊಂದುವುದಿಲ್ಲ ಎಂದು ಕೆಲವು ಅಂಕಿಅಂಶಗಳ ಆಧಾರದ ಮೇಲೆ ನಿಪುಣರು ಮತ್ತು ಅನುಭವಶಾಲಿಗಳು ಹೇಳುತ್ತಿದ್ದಾರೆ. ಇದಕ್ಕೆ ಮುಖ್ಯಕಾರಣವೇನೆಂದರೆ, ನಮ್ಮ ದೇಶದಲ್ಲಿರುವ ಕಾಫಿ ತೋಟಗಾರರಿಗೆ ಮುತುವರ್ಜಿ ಕಡಿಮೆ ಎಂದು ಹೇಳಬಹುದು. ಇದಕ್ಕಿಂತ ಹೆಚ್ಚಾಗಿ ಹೇಳುವುದು, ಒಂದು ಕಾಫಿ ಗಿಡ 30-40 ವರ್ಷಗಳವರೆಗೆ ಇರುತ್ತದೆ, ನಮ್ಮ ದೇಶದ ಕಾಫಿ ಗಿಡಗಳು ಬಹಳ ಹಳೆಯದಾಗಿವೆ, ಇದರಿಂದ ಒಂದು ಎಕರೆಗೆ ಬರುವ ಉತ್ಪತ್ತಿ ಕೊಡಗು ಮತ್ತು ಮದ್ರಾಸುಗಳಲ್ಲಿರುವುದಕ್ಕಿಂತಲೂ ಕಡಮೆಯಾಗಿದೆ. ಹೀಗೆ ಉತ್ಪತ್ತಿ ಕಡಿಮೆಯಾಗಿರುವುದರಿಂದ ಕಾಫಿ ಬೆಳೆಯುವವರು ಕೆಲವು ರಿಯಾಯಿತಿ ಬೇಕೆಂದು ಕೇಳುತ್ತಿದ್ದಾರೆ. ಕೊಡಗಿನಲ್ಲೂ ಕಾಫಿ ಬೆಳೆಗೆ ಕೆಲವು ರಿಯಾಯಿತಿಗಳನ್ನು ಕೊಟ್ಟಿದ್ದಾರೆ. ಕೊಡಗಿನಲ್ಲಿರುವ 1951ನೇ ಇಸವಿಯ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಆಕ್ಟ್ ಪ್ರಕಾರ ಪರಮಾವಧಿಯ ದರ 4 ಆಣೆ ಮೇಲೆ ಇಲ್ಲ. ಅದೇ ಇಲ್ಲಿ ಈಗ 5 ಆಣೆ 6 ಕಾಸು ಹಾಕಿದೆ. ಅಂದರೆ 1 ರೂಪಾಯಿನಲ್ಲಿ 1/3 ಭಾಗವನ್ನು ತೆಗೆದುಕೊಂಡರೆ ಬಹಳ ತೊಂದರೆಯಾಗುತ್ತದೆ, ಇದನ್ನು ಕಡಿಮೆಮಾಡಿ ಕೊಡಗಿನಲ್ಲಿರುವಂತೆ ರೂಪಾಯಿನಲ್ಲಿ 1/4 ಭಾಗವನ್ನಾದರೂ ವಸೂಲು ಮಾಡಿದರೆ ಸ್ವಲ್ಪ ಸಹಾಯವಾಗುತ್ತದೆ, ಸ್ವಲ್ಪ ಆದಾಯ ಉಳಿದರೆ ಮುಂದಿನ ವ್ಯವಸಾಯಕ್ಕೆ ಆ ಹಣವನ್ನು ಬಂಡವಾಳವನ್ನಾಗಿ ಇಟ್ಟುಕೊಂಡು ಉಪಯೋಗಿಸುವುದಕ್ಕೆ ಅವಕಾಶವಾಗುತ್ತದೆ. ಆ ರೀತಿ 5 ಆಣೆ 6 ಕಾಸು ಎಂದು ನಿಗದಿ ಮಾಡಿರುವ ದರವನ್ನು ಸ್ವಲ್ಪ ಕಡಿಮೆ ಮಾಡಬೇಕು ಎಂಬುದು ಒಂದು ವಿಚಾರ.

ಇದರ ಜೊತೆಗೆ ಷೆಡ್ಯೂಲಿನ ಎರಡನೆಯ ಭಾಗದಲ್ಲಿ 63ನೆಯ ಸೆಕ್ಷನ್‌ಗೆ ಸಂಬಂಧಪಟ್ಟಹಾಗೆ 36 ಎಕರೆಗೆ ಮೇಲ್ಪಟ್ಟು 54 ಎಕರೆಗಿಂತ ಜಾಸ್ತಿಯಾಗಿಲ್ಲದಿರುವುದಕ್ಕೆ 5 ರೂಪಾಯಿ ಎಂದಿದೆ. ಕಾಫಿ ಬೆಳೆಯುವವರಿಗೆ 36 ಎಕರೆ ಮೇಲ್ಪಟ್ಟು 54 ಎಕರೆ ಒಳಗೆ ಇರುವ ಪ್ರದೇಶಕ್ಕೆ 5 ರೂಪಾಯಿ ದರವಿದೆ. 18 ಎಕರೆಗೆ ಒಳಪಟ್ಟಿರುವವರಿಗೆ ವಿನಾಯಿತಿ ಇದೆ. 54 ಎಕರೆ ಮೇಲ್ಪಟ್ಟು ಕಾಫಿತೋಟ ಇಟ್ಟುಕೊಂಡಿರುವವರಿಗೆ 63ನೇ ಸೆಕ್ಷನ್‌ನಲ್ಲಿ ರಿಯಾಯಿತಿ ಏನು ಕೊಟ್ಟಿದ್ದೀರೋ, ಒಂದು ಸೌಕರ್ಯವೇನು ಕೊಟ್ಟಿದ್ದೀರೋ ಅದು ಅನ್ವಯಿಸುವುದಿಲ್ಲ, ಅವರು ಎಲ್ಲಿದ್ದರೂ ಲೆಖ್ಖವಿಡಲೇಬೇಕು, ತೆರಿಗೆ ಆ ಲೆಖ್ಖದ ಪ್ರಕಾರ ಕೊಡಲೇಬೇಕು. 54 ಎಕರೆ ಮೇಲ್ಪಟ್ಟಿರುವವರಿಗೆ ಕೂಡ 54 ಎಕರೆಗೆ ಒಳಪಟ್ಟಿರುವವರಿಗೆ ಏನು ರಿಯಾಯಿತಿ ಕೊಡುತ್ತೀರೋ ಅದನ್ನು ಕೊಡಬೇಕು, ಈ ಲಿಮಿಟ್ ತೆಗೆದು ಒಂದು (Slab) ಸ್ಲ್ಯಾಬ್ ರೇಟ್ ಪ್ರಕಾರ 54 ರಿಂದ 75 ಎಕರೆವರೆಗೆ, 75 ರಿಂದ 100 ಎಕರೆವರೆಗೆ 5 ರೂಪಾಯಿ ಅಥವಾ ದಾಮಾಷಾ ಪ್ರಕಾರ ಒಂದು ದರ ನಿಗದಿ ಮಾಡುವುದು ಸೂಕ್ತ, ಹಾಗೆ ಮಾಡುವುದರಿಂದ ಈಗಿರುವ ಇನ್‌ಕಂಟಾಕ್ಸ್ ರೀತಿಯಲ್ಲಿ ಲೆಖ್ಖಪತ್ರ ಕೊಡಲು ಅವಕಾಶವಾಗುತ್ತದೆ, ಹಾಗಿಲ್ಲದಿದ್ದರೆ ಎಕರೆವಾರು ಹಣ ಕೊಡಲು ಒಂದು ಅವಕಾಶ ಕಲ್ಪಿಸಿಕೊಟ್ಟ ಹಾಗಾಗುತ್ತದೆ, ಈ ರೀತಿಯಾಗಿ ಒಂದು ರಿಯಾಯಿತಿ ತೋರಿಸಿ ಬದಲಾವಣೆ ಮಾಡಬೇಕೆಂದು ಕೂಡ ಹೇಳುತ್ತಿದ್ದಾರೆ. ಇದನ್ನೆಲ್ಲಾ ಸೆಲೆಕ್ಟ್ ಸಮಿತಿಯವರು ಸ್ವಲ್ಪ ಕೂಲಂಕಷವಾಗಿ ಪರಿಶೀಲನೆ ಮಾಡಬೇಕು ಎಂದು ನಾನು ಅಭಿಪ್ರಾಯ ಪಡುತ್ತೇನೆ.

ಆಮೇಲೆ ಗೋಪಾಲಗೌಡರು ಸಮಾಜವಾದದ ವಿಚಾರವಾಗಿ ಒಂದೆರಡು ಮಾತನ್ನು ಪ್ರಸ್ತಾಪಿಸಿದರು. ಸಮಾಜವಾದದ ತಳಹದಿಯ ಮೇಲೆ ನಾವು ದೇಶವನ್ನು ಕಟ್ಟಬೇಕಾದರೆ ಈ ತೆರಿಗೆಗಳಿಂದ ಅಷ್ಟೇನೂ ಸಹಾಯವಾಗುತ್ತದೆಯೋ ಇಲ್ಲವೋ ಎಂಬುದಾಗಿ ಹೇಳಿ, ನಮ್ಮ ದೇಶದಲ್ಲಿ ಈಗಿರುವ ವಾತಾವರಣ ಸಮಾಜವಾದದ ತತ್ವದ ಮೇಲೆ ದೇಶ ಕಟ್ಟಲು ಸರಿಯಾಗಿಲ್ಲ, ಆ ರೀತಿಯ ವಾತಾವರಣ ಕಲ್ಪಿಸುತ್ತಿಲ್ಲ ಎಂದು ಆಕ್ಷೇಪಿಸಿದರು. ಅವರು ಹೇಳುವುದರಲ್ಲಿ ಸ್ವಲ್ಪ ಅರ್ಥವಿದೆಯೆಂದು ಹೇಳುತ್ತೇನೆ. ಆದರೆ ನಮ್ಮ ಮಾನ್ಯಮಿತ್ರರು ಒಂದು ವಿಚಾರವನ್ನು ಮರೆತಹಾಗೆ ಕಾಣುತ್ತದೆ. ಪ್ರಪಂಚದಲ್ಲಿ ಸಮಾಜವಾದ ಸ್ಥಾಪನೆಯಾಗಿರುವ ರಷ್ಯಾ ಮತ್ತು ಚೈನಾದೇಶಗಳನ್ನು ತೆಗೆದುಕೊಂಡರೆ ಅಲ್ಲಿ ಪ್ರಜಾಪ್ರಭುತ್ವವಿದ್ದಾಗ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ಕ್ರಿಯೇಟ್ ಮಾಡಲು ಪ್ರಯತ್ನ ಮಾಡಿಲ್ಲ. ಪ್ರಜಾಪ್ರಭುತ್ವದ ಆಧಾರದ ಮೇಲೆ ಸರ್ಕಾರ ನಡೆಸುತ್ತಿರುವಾಗ, ಗೋಪಾಲಗೌಡರು ಹೇಳುವ ಹಾಗೆ, ಒಂದೇ ಸಾರಿ ಅದಕ್ಕೆ ಬೇಕಾದ ವಾತಾವರಣ ಕಲ್ಪಿಸಲು ಸಾಧ್ಯವಾಗುವುದಿಲ್ಲವೆಂಬುದನ್ನು ಅವರು ಜ್ಞಾಪಕದಲ್ಲಿಡಬೇಕು. ಏಕೆಂದರೆ, ಈಗಾಗಲೇ ಈ ತೆರಿಗೆಯನ್ನು ಈಗಿರುವ ಪರಿಮಿತಿಯಲ್ಲೂ ಕೊಡಲು ಕಷ್ಟವಾಗುತ್ತದೆ, ವಿನಾಯಿತಿ ಕೊಡಬೇಕು ಎಂದು ಹೇಳಿದ್ದಾರೆ. ಅಡಕೆತೋಟಗಳ ವಿಚಾರ ಹೇಳಿದ್ದಾರೆ. ಆರು ಎಕರೆಗಳಿಗೆ ಅಡಕೆತೋಟದಲ್ಲಿ ವಿನಾಯಿತಿ ಇದೆ, ಅದಕ್ಕೆ ಮೇಲ್ಪಟ್ಟಿದ್ದರೆ ತೆರಿಗೆ ಕೊಡಬೇಕು, ಅದು ಜಾಸ್ತಿ ಎಂದು ವಾದಮಾಡಿದರು. ಒಂದು ಮಣ ಅಡಿಕೆ ಬೆಳೆಯಲು ಸುಮಾರು 40 ರೂಪಾಯಿ ಖರ್ಚಾಗುತ್ತದೆಂದು ಬಲ್ಲವರು ಹೇಳುತ್ತಾರೆ. ಒಂದು

ಎಕರೆಗೆ 20 ಮಣ ಅಡಿಕೆಯಾಗುತ್ತದೆ. ಒಂದುಲಕ್ಷ ಅಡಿಕೆ ಬೆಳೆಯಲು 700 ರೂಪಾಯಿ ಖರ್ಚಾಗುತ್ತದೆಂದು ಹೇಳಿದರು. ಒಂದು ಲಕ್ಷ ಅಡಿಕೆ ಅಂದರೆ ಸಿಪ್ಪೆ ಸಮೇತ ಇರುವ ಅಡಿಕೆ. ಹದಮಾಡಿದಮೇಲೆ 16 ರಿಂದ 20 ಮಣ ಅಡಿಕೆ ಅದರಿಂದ ದೊರೆಯುತ್ತದೆ. ಹಸೀಅಡಕೆಗೆ ಲೆಖ್ಖ ಇಡಬೇಕು. ಅದಕ್ಕೆ 500-600 ರೂಪಾಯಿ ಬೆಲೆ ಇದೆ. ಕೆಲವು ಕಡೆ 400 ರೂಪಾಯಿ ಸಹ ಇದೆ. ಒಂದು ಲಕ್ಷ ಅಡಿಕೆ ಬೆಳೆದು ಹದಮಾಡಲು 800 ರೂಪಾಯಿ ಏನೋ ಖರ್ಚಾಗುತ್ತದೆ ಎಂದು ಹೇಳಿದರು. ಅಷ್ಟು ಖರ್ಚಾಗುವುದಿಲ್ಲ. ಮುಖ್ಯ ಮಂತ್ರಿಗಳು, ವಿನಾಯಿತಿ ತೋರಿಸಬೇಕೆಂದು ಹೇಳಿದರೆ ತೋರಿಸುವುದಾಗಿ ಹೇಳಿದ್ದಾರೆ. ಒಂದುವೇಳೆ ಹಾಗೆ ಮಾಡುವುದಾದರೆ ನನ್ನದೇನೂ ಅಭ್ಯಂತರವಿಲ್ಲ, 15 ಎಕರೆಗೆ ಬೇಕಾದರೂ ತೋರಿಸಲಿ. ಕಾನೂನಿನಲ್ಲಿ ಈ ಷೆಡ್ಯೂಲನಲ್ಲಿರುವುದು ಸರಿಯಾದ ಆಧಾರದಮೇಲೆ ನಿಗದಿ ಮಾಡಿರತಕ್ಕದ್ದಲ್ಲವೆಂದು ನಾನು ಭಾವಿಸುತ್ತೇನೆ. ಈಗಿರುವ ವಿನಾಯಿತಿಗಳು ಸಾಲದು ಇನ್ನೂ ಹೆಚ್ಚು ವಿನಾಯಿತಿಗಳು ಬೇಕು ಎಂದು ಕೇಳುವ ಗೊಂದಲದಲ್ಲಿ ಸಿಕ್ಕಿ ನಾವು ತೆರಿಗೆ ಹಾಕಬೇಕಾದರೆ, ಒಂದುವೇಳೆ ಸಮಾಜವಾದ ಪದ್ಧತಿಯನ್ನು ಅನುಸರಿಸಿ ದೇಶದಲ್ಲಿ ಕೆಲಸ ಕಾರ್ಯ ನಡೆಸಬೇಕಾದರೆ, ಸಮಾಜ ಬೆಳೆಸಬೇಕಾದರೆ, ದೇಶಕ್ಕೆ ಹಣ ಹೆಚ್ಚಾಗಿ ಬರಬೇಕೆಂದು ಹೇಳುವಾಗ ಸರ್ಕಾರಕ್ಕೆ ಹೆಚ್ಚು ಹಣಬೇಕು, ದೊಡ್ಡದೊಡ್ಡ ಕೆಲಸಕಾರ್ಯ ಮತ್ತು ಯೋಜನೆಗಳನ್ನು ಕೈಗೊಳ್ಳಬೇಕು ಎನ್ನುವ ಕಾಲದಲ್ಲಿ ವಿನಾಯಿತಿಗೆ ತೀರ ಹೊಡೆದಾಡುತ್ತ ಕುಳಿತಿರುವಾಗ ಈ ಪ್ರಜಾಪ್ರಭುತ್ವದ ಒಂದು ಸನ್ನಿವೇಶದಲ್ಲಿ ನಾವು ಬಯಸುವುದೆಲ್ಲವನ್ನು ಕೂಡ ಏಕಕಾಲದಲ್ಲಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಒಂದು ವೇಳೆ ಒಂದು ಪಾರ್ಟಿ ಗವರ್ನಮೆಂಟ್ ಆಗಿದ್ದಪಕ್ಷದಲ್ಲಿ ಪೂರ್ವಭಾವಿಯಾಗಿ ಒಂದು ತೀರ್ಮಾನಮಾಡಿ ಬಾಕಿಯವರು ಯಾರು ಏನೇ ಹೇಳಲಿ ಅದಕ್ಕೆ ಒಪ್ಪಲಿ, ಒಪ್ಪದೇ ಇರಲಿ ಆ ಪಾರ್ಟಿ ಏನು ಹೇಳುತ್ತದೆಯೋ ಅದನ್ನೇ ದೇಶವೆಲ್ಲಾ ಕೇಳಬೇಕು ಎಂದು ಹೇಳಿ ಮಾಡಬಹುದಾಗಿತ್ತು; ಎಲ್ಲಾ ಸುಧಾರಣೆಗಳನ್ನೂ ಒಂದೇ ಸಾರಿ ತರಬಹುದಾಗಿತ್ತು. ಶ್ರೀ ಇಮಾಂರವರು ಹೇಳುವ ಹಾಗೆ, ಈಗಿನ ಸನ್ನಿವೇಶದಲ್ಲಿ ಸರ್ಕಾರಿ ಅಧಿಕಾರಿಗಳ ಸಂಬಳದಲ್ಲೂ ಕೂಡ 1,000 ರೂಪಾಯಿಗೆ ಮೇಲ್ಪಟ್ಟಿರುವುದರಲ್ಲಿ ಶೇಕಡ 20–25 ರಷ್ಟು ಖೋತಾಮಾಡಿ ಆ ಹಣವನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಳ್ಳಬಹುದು. ಆದ್ದರಿಂದ ಎಲ್ಲವನ್ನೂ ಏಕಕಾಲದಲ್ಲಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೇನು ಸರ್ಕಾರದವರು ಒಬ್ಬ ವ್ಯವಸಾಯಗಾರರ ಮೇಲೆ ಒಂದು ಟ್ಯಾಕ್ಸೇಷನ್ ಬಿಲ್ ತಂದು, ಟೆನೆನ್ಸಿ ಬಿಲ್ ಮೂಲಕ ಅವರಿಗೆ ಎಲ್ಲೆಲ್ಲಿ ಜಮೀನು ಹಂಚಿಕೆ ಮಾಡಿಸಬಹುದು ಅಥವಾ ಸೀಲಿಂಗ್ ಲಿಮಿಟ್ ನಿಗದಿಮಾಡಬೇಕು ಎಂದು ಹೇಳುತ್ತ ಇದ್ದೇವೆಯೋ ಅಷ್ಟು ಮಾಡಿದರೆ ಸಾಲದು. ಎಲ್ಲಾ ವಿಧವಾದ ಐಶ್ವರ್ಯಕ್ಕೂ, ಟ್ಯಾಕ್ಸೇಷನ್ ಎನ್‌ಕ್ವೈರಿ ಕಮಿಟಿಯವರು ಹೇಳಿರುವ ಹಾಗೆ, ಸೀಲಿಂಗ್ ಲಿಮಿಟ್ ನಿಗದಿಮಾಡಿದರೆ ಸರಿಹೋಗುತ್ತದೆ. ದೇಶದಲ್ಲಿ ಆರ್ಥಿಕ ಸ್ಥಿತಿ ಬದಲಾವಣೆ ಮಾಡುವುದಕ್ಕೆ ಇದು ಒಂದು ಬುನಾದಿಯನ್ನು ಹಾಕಿದ ಹಾಗಾಗುತ್ತದೆ ಎಂದು ಹೇಳಿ ಈ ಮಸೂದೆಯನ್ನು ಸಮರ್ಥಿಸುತ್ತೇನೆ.

Mr. SPEAKER.—The House will now rise for lunch and meet at 3-45.

The House rose for Lunch at Seventeen Minutes past Three of the Clock and re-assembled at Forty-seven Minutes past Three of the Clock.

[MR. SPEAKER in the Chair]

(*Sri B. Hutche Gowda rose.*)

Mr. SPEAKER.—Some of the Hon'ble Members are in the Select Committee. I request them to give chance to others,

ಶ್ರೀ ಕೆ. ಪಟ್ಟಾಭಿರಾಮನ್ (ಕೋಲಾರ).—ಮಾನ್ಯ ಸಭಾಪತಿಗಳೇ, ಈಗ ಸಭೆಯ ಮುಂದೆ ಇರತಕ್ಕಂಥ ವ್ಯವಸಾಯ ವರಮಾನದ ಈ ಮಸೂದೆಯ ಬಗ್ಗೆ ಒಂದು ನಾಲ್ಕು ಮಾತುಗಳನ್ನು ಹೇಳಬೇಕೆಂದು ಆಶೆ ಪಡುತ್ತೇನೆ. ಮೊದಲನೆಯದಾಗಿ ಒಂದು ಹಿನ್ನೆಲೆಗೆ ಸಂಬಂಧಪಟ್ಟ ಹಾಗೆ ಎರಡು ಮಾತುಗಳನ್ನು ತಮ್ಮ ಮೂಲಕ ಈ ಸಭೆಯ ಗಮನಕ್ಕೆ ತರಬೇಕೆಂದು ಬಯಸುತ್ತೇನೆ. ಈ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಎನ್ನುವುದನ್ನು ಮೊದಲು ತಂದಾಗ—ಅದರಲ್ಲೂ ದಕ್ಷಿಣ ಹಿಂದೂಸ್ಥಾನದಲ್ಲಿ ಮೊಟ್ಟಮೊದಲು ಇದರ ಶಾಖೆ ನಮಗೆ ಕಂಡುಬಂದದ್ದು ತಿರುವಾಂಕೂರು, ಕೊಚ್ಚಿನ್ ಸಂಸ್ಥಾನದಲ್ಲಿ-ಅಲ್ಲಿ ಅದು ಯಾವ ರೀತಿಯಾಗಿ ಆಯಿತು. ಯಾವ ಒಂದು ಹಿನ್ನೆಲೆಯಲ್ಲಿ ನಡೆಯಿತು ಎಂಬುದನ್ನು ಸ್ವಲ್ಪ ಗಮನಿಸಬೇಕಾದದ್ದು ಮುಖ್ಯ ಎಂದು ನಾನು ಅಂದುಕೊಂಡಿದ್ದೇನೆ. ಆಗಿನ ಸ್ಥಿತಿಯಲ್ಲಿ ಅವರು ಏನು ಮಾಡಿದರು ಎಂದರೆ ಕಂದಾಯದಲ್ಲಿ ಒಂದು ವಿಶೇಷವಾದಂಥ ವೈಶಿಷ್ಟ್ಯವನ್ನೂ, ಶಾಸ್ತ್ರೀಯವಾದ ದೃಷ್ಟಿಯನ್ನೂ ತಂದರು. ಸಾಮಾನ್ಯ ವರಮಾನ ಬರತಕ್ಕ ಎಂದರೆ ಬೇರೆ ವಿಧದಲ್ಲಿ ಜೀವನೋಪಾಯ ಮಾಡತಕ್ಕವರ ಅಥವಾ ಬೇರೆ ಒಂದು ಅರ್ಜನೆ ಮಾಡತಕ್ಕವರ ವಿಷಯದಲ್ಲಿ ಯಾವ ರೀತಿ ಇನ್‌ಕಂಟ್ಯಾಕ್ಸ್ ವಸೂಲು ಮಾಡುತ್ತೇವೆಯೋ ಆ ರೀತಿಯಾಗಿ ವ್ಯವಸಾಯದಲ್ಲಿ ತೊಡಗಿರತಕ್ಕವರಿಂದಲೂ ವಸೂಲು ಮಾಡತಕ್ಕದ್ದಲ್ಲಿ ಬೇರೆಯವರನ್ನೂ, ಇವರನ್ನೂ ಒಂದೇ ದೃಷ್ಟಿಯಲ್ಲಿ ನೋಡತಕ್ಕದ್ದು ಎಂಬುದೇ ಆ ದೃಷ್ಟಿ. ವ್ಯವಸಾಯದಲ್ಲಿ ಉತ್ಪನ್ನಮಾಡಿ ಅದರಿಂದ ಬರತಕ್ಕ ವರಮಾನದಲ್ಲಿ ಬಹಳ ಕಷ್ಟಪಟ್ಟು ಜೀವನ ಮಾಡಬೇಕು. ಜೀವನವನ್ನೆಲ್ಲಾ ಅದರ ಮೇಲೆ ನಡೆಸಬೇಕು. ಸರ್ಕಾರ ಯಾವ ಒಂದು ಕಂದಾಯ ಹಾಕಿದೆಯೋ ಅದನ್ನು ಆ ಜಮೀನಿನಲ್ಲಿ ಉತ್ಪನ್ನ ಬರಲಿ ಬರದೆ ಇರಲಿ ಕೊಡಬೇಕೆಂದು ನಿರ್ಬಂಧಪಡಿಸುವುದು ಸೂಕ್ತವಲ್ಲ; ವ್ಯಾಪಾರದಲ್ಲಿ ತೊಡಗಿರತಕ್ಕವರಿಗೆ ಮತ್ತು ಇತರ ಕೆಲಸಗಳಲ್ಲಿ ತೊಡಗಿರತಕ್ಕವರಿಗೆ ಅವರ ವರಮಾನದ ಒಂದು ಪರಿಮಿತಿ ಇಟ್ಟುಕೊಂಡು ಅದಕ್ಕೆ ಮೇಲ್ಪಟ್ಟು ಆದಾಯ ಹೊಂದಿದ ಪಕ್ಷದಲ್ಲಿ ವರಮಾನ ತೆರಿಗೆ ಕೊಡಬೇಕೆಂದು ಮಾಡಿರುವಾಗ ಇವರಿಗೆ ಮಾತ್ರ ಈ ರೀತಿ ಕಂದಾಯ ಹಾಕಿ ಒಂದು ರಿಯಾಯಿತಿ ಕೊಡದೆ ವ್ಯತ್ಯಾಸ ಮಾಡಿರುವುದು ಸರಿಯಾದದ್ದಲ್ಲ ಎಂದು ಹೇಳಿ ಮೊದಲಿನಿಂದಲೂ ಚರ್ಚೆ ಮಾಡುತ್ತ ಬಂದೆವು. ಇದಕ್ಕೆ ದೃಷ್ಟಾಂತವಾಗಿ ಚಾರಿತ್ರಿಕವಾದ ಅನೇಕ ಶತಮಾನಗಳಲ್ಲಿ ನಡೆದಂಥ ಮಾತುಗಳನ್ನು ಜೋಡಿಸಿಕೊಳ್ಳಬಹುದು. ಆದರೆ ಈಗ ಅದೆಲ್ಲಾ ಅಗತ್ಯವಿಲ್ಲ. ಮೊಟ್ಟಮೊದಲು ತಿರುವಾಂಕೂರು-ಕೊಚಿನ್‌ನಲ್ಲಿ ಏನು ಮಾಡಿದರು ಎಂದರೆ ಬೇರೆ ಬೇರೆ ಜಮೀನುಗಳಿಗೆ ಕಂದಾಯವನ್ನು ಹೆಚ್ಚು

(ಶ್ರೀ ಕೆ. ಪಟ್ಟಾಭಿರಾಮನ್.)

ಕಮ್ಮಿ ಮಾಡುವುದಕ್ಕೆ ಬದಲಾಗಿ ಒಂದು ಜಮೀನಿನಲ್ಲಿ token tax ಎಂದು ಹೇಳಿ 14 ಆಣೆ ಅಥವಾ 1 ರೂಪಾಯಿ ಎಂದು 2–3 ಭಾಗ ಮಾಡಿ ಕಂದಾಯ ಕೊಡಬೇಕೆಂತಲೂ ಬಾಕಿ ಜಮೀನು ಎಷ್ಟಿದ್ದರೂ ಕೂಡ—ವರಮಾನಕ್ಕೆ ಸಂಬಂಧಪಟ್ಟ ಹಾಗೆ ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್ ಎಂದು ಈಗ ಏನು ಹೇಳುತ್ತೇವೆಯೋ ಹಾಗೆ ವರಮಾನಕ್ಕೆ ತಕ್ಕಂತೆ ಕೊಡಬೇಕೆಂತಲೂ ಮಾಡಿದರು. ಈ ಒಂದು ವೈಶಿಷ್ಟ್ಯವಾದ ಮಾರ್ಗವನ್ನು ನ್ಯಾಯಸಮ್ಮತವಾದ ದೃಷ್ಟಿಯಲ್ಲಿ ಅಳವಡಿಸಿ ಮೊಟ್ಟಮೊದಲು ತಿರುವಾಂಕೂರು-ಕೊಚ್ಚಿನ್‌ನಲ್ಲಿ ಆಗ ದಿವಾನರಾಗಿದ್ದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರು ಈ ಭಾವನೆಯನ್ನು ದಕ್ಷಿಣ ಹಿಂದೂಸ್ಥಾನದಲ್ಲಿ ತಂದುಕೊಟ್ಟರು. ಅದನ್ನು ಏಕೆ ಹೇಳುತ್ತೇನೆ ಎಂದರೆ, ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಹಾಕಬೇಕೆಂಬುದು ತಾತ್ವಿಕವಾಗಿ ನ್ಯಾಯಸಮ್ಮತವಾಗಿದೆ ಎಂದು ನಾನು ಅಭಿಪ್ರಾಯಪಡುವುದಾದರೂ ಕೂಡ ಅದನ್ನು ಯಾವ ಸಂದರ್ಭದಲ್ಲಿ ಹಾಕಬೇಕೆಂಬುದನ್ನು ಸ್ಪಷ್ಟಪಡಿಸಬೇಕಾಗಿದೆ. ನಾನು ಈ ಮಸೂದೆಯನ್ನು ನೋಡಿದಾಗ ಮತ್ತು ಈ ಮಸೂದೆಯನ್ನು ಇಲ್ಲಿ ಸಮರ್ಥನೆಮಾಡುತ್ತಿರುವಾಗ ಮಾನ್ಯ ಮುಖ್ಯಮಂತ್ರಿಗಳವರು ಮಾಡಿದಂಥ ಭಾಷಣದ ಹಿನ್ನೆಲೆಯನ್ನು ಮನಸ್ಸಿನಲ್ಲಿಟ್ಟುಕೊಂಡು ನೋಡುತ್ತಿದೇನೆ. ಇಲ್ಲಿ ಒಂದು ವೈಶಿಷ್ಟ್ಯವಾಗಲಿ ಒಂದು ವಿಶಿಷ್ಟವಾದ ದೃಷ್ಟಿಯಿಂದ ಹೊಸ ರೂಪದಲ್ಲಿ ಬದಲಾವಣೆ ಮಾಡತಕ್ಕದ್ದಾಗಲಿ ಯಾವುದೂ ಕಾಣುವುದಿಲ್ಲ. ಇದರಲ್ಲಿ ಒಂದು ಕಡೆ, 10 ರೂಪಾಯಿ 8 ರೂಪಾಯಿ, 6 ರೂಪಾಯಿ, 4 ರೂಪಾಯಿ ಕಂದಾಯ ವಿಧಿಸುವುದು ಇದ್ದೇ ಇದೆ. ಈ ರೀತಿಯಾಗಿ ಒಂದು ಧಾಟಿ ಹೋಗುತ್ತಾ ಇದೆ. ಮತ್ತೊಂದು ಧಾಟಿ ಇದಕ್ಕೆ ಸಂಬಂಧಪಡದ ರೀತಿಯಲ್ಲಿ ಕೇವಲ ವರಮಾನ ಬರಮಾಡಿಕೊಳ್ಳಬೇಕೆಂಬ ದೃಷ್ಟಿಯಲ್ಲಿ ಹೋಗುತ್ತಾ ಇರುವುದೂ ಕೂಡ ಇದೆ. ಆದರೆ ಇಲ್ಲಿರತಕ್ಕ ಮೂಲಭೂತವಾದ ಉದ್ದೇಶ ಎಂದರೆ ವರಮಾನದ ಮೇಲೆ ತೆರಿಗೆ ಹಾಕಬೇಕೆಂಬ ತತ್ವ ಏನಿದೆ ಅದನ್ನು ಈ ಸಭೆ ಆಗಲಿ, ದೇಶ ಆಗಲಿ, ಜನಗಳಾಗಲೀ ಒಪ್ಪಿಕೊಳ್ಳಬೇಕೆಂದು ಸರ್ಕಾರದವರು ಹೇಳುವುದಾದರೆ ಅದು ಶಾಸ್ತ್ರೀಯವಾಗಿರಬೇಕು, ನ್ಯಾಯಸಮ್ಮತವಾಗಿರಬೇಕು. ಆ ಹಿನ್ನೆಲೆಯನ್ನು ಬಿಟ್ಟು, ಮೊದಲಿನಿಂದಲೂ ಯಾವ ಒಂದು ಕಂದಾಯ ವಿಧಿಸುವ ಪದ್ಧತಿ ಇದೆಯೋ ಅದನ್ನೇ ಇಟ್ಟುಕೊಂಡು ಅದರ ಜೊತೆಗೆ ವರಮಾನಕ್ಕೆ ಸಂಬಂಧಪಡುವ ಹಾಗೆ ತೆರಿಗೆಯನ್ನು ವಿಧಿಸುವುದೂ ಕೂಡ ಸೂಚನೆ ಮಾಡಲಾಗಿದೆ. ಇದನ್ನು ನೋಡಿದರೆ ತಿರುವಾಂಕೂರು ಸಂಸ್ಥಾನದ ಅಥವಾ ಇತರ ಸಂಸ್ಥಾನಗಳ ಒಂದು ಹಿನ್ನೆಲೆಯನ್ನು ಕೊಡುವುದು ಅಷ್ಟು ತೃಪ್ತಿಕರವಾಗಿ ಕಾಣುವುದಿಲ್ಲ ಎಂದು ನಾನು ಅಭಿಪ್ರಾಯಪಡುತ್ತೇನೆ. ಇದೇ ಸಂದರ್ಭದಲ್ಲಿ ಒಂದು ಸಲಹೆ ಕೊಡುವುದಾದರೆ ಈ ಹಿಂದೆ ಗುಂಡಪ್ಪಗೌಡರ ಸಮಿತಿ ನೇಮಕವಾಗಿತ್ತು. ತಾವೂ ಕೂಡ ಆ ಸಮಿತಿಯ ಸದಸ್ಯರಾಗಿದ್ದಿರಿ. ಅಲ್ಲಿ ಈ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸಿಗೆ ಸಂಬಂಧಪಟ್ಟಂತೆ ಚರ್ಚೆ ಮಾಡಿದಾಗ ಯಾವ ಒಂದು ಹಿನ್ನೆಲೆ ಇತ್ತು ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಚರ್ಚೆ ಎರಡು ಭಾಗವಾಗಿ ಇತ್ತು. ಒಂದು ಸಲಹೆ ಏನೆಂದರೆ, ಕಂದಾಯ ಎನ್ನುವುದು ಹೀಗೆ ಹೆಚ್ಚುಕಮ್ಮಿ ಇರುವುದು ಬೇಡ, ಸಾಮಾನ್ಯ ಜನಕ್ಕೂ, ಭೂಮಿಗೂ ಇರತಕ್ಕ ಸಂಬಂಧದಿಂದ ಸರ್ಕಾರದವರು ತೆರಿಗೆಯ ರೂಪದಲ್ಲಿ ವರಮಾನವನ್ನು ಬರಮಾಡಿಕೊಳ್ಳುವುದಕ್ಕಾಗಿ ಟೋಕನ್ ಟ್ಯಾಕ್ಸ್ ಎಂದು ಹೇಳಿ 8 ಆಣೆಯಿಂದ ಒಂದು ರೂಪಾಯಿಯವರೆಗೂ ಟ್ಯಾಕ್ಸ್ ಹಾಕುವುದು ಒಳ್ಳೆಯದು ಎಂದು ಹೇಳಿ ಇತ್ತು. ಜಮೀನು ತೆಗೆದುಕೊಂಡಿರತಕ್ಕವರೆಲ್ಲರೂ ಟೋಕನ್ ಟ್ಯಾಕ್ಸ್ ಕೊಟ್ಟೇಕೊಡಬೇಕು ವಿನಾಯಿತಿ ಇಲ್ಲ. ಮತ್ತು ಒಂದು ವರಮಾನದ ಪರಿಮಿತಿಯನ್ನು ಇಟ್ಟುಕೊಂಡು ಆತನ ಜೀವನೋಪಾಯಕ್ಕೆ ಆತನ ಸ್ಥಿತಿಗತಿಗಳಿಗೆ ತಕ್ಕ ಹಾಗೆ ಯಾರಿಗೆ ಅವಶ್ಯಕತೆಯಿದೆಯೋ ಅಂತಹವರಿಗೆ ವಿನಾಯಿತಿ ಕೊಡಬೇಕು, ಯಾವ ಪರಿಮಿತಿಯ ಒಂದು ಮಟ್ಟ ಇದೆಯೋ ಆ ಮಟ್ಟಕ್ಕೆ ಮೇಲ್ಪಟ್ಟು ಹೋಗತಕ್ಕವನ ಮೇಲೆ ಮಾತ್ರ ವರಮಾನ ತೆರಿಗೆ ಹಾಕಬೇಕು ಎಂಬ ಒಂದು ತತ್ವ ಸರಿಯಾಗಿರುತ್ತದೆ. ಇದು ಪ್ರಜಾಪ್ರಭುತ್ವ ತತ್ವಕ್ಕನುಗುಣವಾಗಿಯೂ ಕೂಡ ಇರುತ್ತದೆ ಮತ್ತು ಈಗಿನ ಕಾಲಕ್ಕನುಗುಣವಾಗಿ ಇರುತ್ತದೆ. ಮತ್ತು ಈ ಕಂದಾಯದ ವಿಚಾರದಲ್ಲಿ ಪ್ರಪಂಚದಲ್ಲೇ ಯಾವ ಒಂದು ಹೊಸ ಧೋರಣೆ ಕಂಡುಬರುತ್ತಿದೆಯೋ ಅದಕ್ಕೂ ಕೂಡ ಇದು ಸಮಂಜಸವಾಗಿರುತ್ತದೆ. ಈ ರೀತಿ ಮಾಡಬೇಕೆಂಬ ತತ್ವವನ್ನು ಗುಂಡಪ್ಪಗೌಡರ ಸಮಿತಿಯ ವರದಿಯಲ್ಲೂ ಕೂಡ ಅಳವಡಿಸಲಾಗಿದೆ. ಈಗ ಸರ್ಕಾರದವರು ಯೋಚನೆಮಾಡಿರತಕ್ಕ ಪ್ರಕಾರ ಅದಕ್ಕೆ ಮಾನ್ಯತೆ ಕೊಟ್ಟಿಲ್ಲ. ಅದನ್ನು ಪುರಸ್ಕಾರ ಮಾಡುತ್ತಾ ಇಲ್ಲ. ಕೇವಲ ಸರ್ಕಾರಕ್ಕೆ ದುಡ್ಡು ಬರಮಾಡಿಕೊಳ್ಳಬೇಕು ಎಂಬ ಒಂದೇ ಒಂದು ದೃಷ್ಟಿಯಿಂದ ಈ ಮಸೂದೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಬಹು ಮುಖ್ಯವಾದ ಈ ಭೂಸಮಸ್ಯೆಯ ವಿಚಾರದಲ್ಲಿ ವಿಶಿಷ್ಟವಾದ ಅಂಶಗಳನ್ನು ಪರಿಶೀಲನೆಮಾಡಿ ಯಾವ ವ್ಯವಸ್ಥೆಯನ್ನು ಮಾಡಬೇಕೆಂದು ನಿರ್ಧರಿಸುವಾಗ ಒಂದು ಮೂಲಭೂತವಾದ ಬದಲಾವಣೆ ಮಾಡತಕ್ಕ ಅಂಶಕ್ಕೆ ಗಮನಕೊಟ್ಟಿಲ್ಲ. ಆ ರೀತಿ ಬದಲಾವಣೆ ಮಾಡಲು ತೊಡಗುತ್ತೀರಿ ಎಂಬ ಭಾವನೆ ಈ ಬಿಲ್ಲಿನಲ್ಲಿ ನಮಗೆ ಬರುತ್ತಾ ಇಲ್ಲ ಎಂದು ಸ್ಪಷ್ಟವಾಗಿ ನಾನು ಹೇಳಬಯಸುತ್ತೇನೆ.

ಎರಡನೆಯದಾಗಿ ಈ ಮಸೂದೆಗೆ ಸಂಬಂಧಪಟ್ಟಂತೆ ಎರಡು ಮೂರು ಅಂಶಗಳನ್ನು ಸರ್ಕಾರದವರ ಗಮನಕ್ಕೆ ತರಬೇಕಾಗಿದೆ. ಇದು ಸೆಲೆಕ್ಟ್ ಕಮಿಟಿಗೆ ಹೋಗುವುದರಿಂದ ಪರಿಣತರಾದವರು ಸೆಲೆಕ್ಟ್ ಕಮಿಟಿಯಲ್ಲಿ ಯೋಚನೆಮಾಡಲಿ ಎಂದು ಹೇಳಿ ಎರಡು ಮೂರು ಸಲಹೆಗಳನ್ನು ಕೊಡಲಿಕ್ಕೆ ಆಶಿಸುತ್ತೇನೆ. ಇದಕ್ಕೆ ಸಂಬಂಧಪಟ್ಟ ಹಾಗೆ ಮೊದಲನೆಯದಾಗಿ ಕಾಣುತ್ತ ಇರುವುದೇನೆಂದರೆ ಮಾನ್ಯ ಮುಖ್ಯ ಮಂತ್ರಿಗಳು ಮಾಡಿರತಕ್ಕ ಭಾಷಣದಲ್ಲಿ ಎರಡು ಮೂರು ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಕೆಲವು ಮೂಲಭೂತವಾದ ಅಂಶಗಳು ಆಕರ್ಷಣೀಯವಾಗಿವೆ. ಅವರು 'ಸಾಮಾನ್ಯ ಜನಗಳ ನಿತ್ಯ ಜೀವನೋಪಾಯಕ್ಕೆ, ಆತನ ಊಟ ಉಪಚಾರಕ್ಕೆ ಸಂಬಂಧಪಟ್ಟಿರುವ ಸಾಮಾಗ್ರಿಗಳ ಮೇಲೆ ತೆರಿಗೆಯನ್ನು ಹಾಕುವುದಕ್ಕೆ ಹೋಗಿಲ್ಲ, ಆದಕ್ಕಾಗಿಯೇ ಬಟ್ಟೆಯನ್ನು ಬಿಟ್ಟುಬಿಟ್ಟಿದ್ದೇವೆ, ರಾಗಿಯನ್ನು ಬಿಟ್ಟುಬಿಟ್ಟಿದ್ದೇವೆ, ಇನ್ನೂ ಇಂಥ ಸಾಮಾನ್ಯ ಮನುಷ್ಯನ ಜೀವನೋಪಾಯಕ್ಕೆ ಬರುವಂಥ ಅನೇಕಾನೇಕ ಪದಾರ್ಥಗಳೇನಿವೆಯೋ ಅವುಗಳನ್ನೆಲ್ಲಾ ಬಿಟ್ಟುಬಿಟ್ಟಿದ್ದೇವೆ,' ಎಂದು ಹೇಳಿದರು. ಈ ಸಂದರ್ಭದಲ್ಲಿ ಒಂದು ಮಾತು ಹೇಳುತ್ತೇನೆ. ಪ್ರಾಯಶಃ ಹಳ್ಳಿಗಾಡಿನ ಪರಿಸ್ಥಿತಿಯನ್ನು ಸ್ವಲ್ಪ ನೆನಪಿಗೆ ತಂದುಕೊಂಡರೆ ಈಗ ತಾವು ಎರಡನೇ ಸೆಕ್ಷನ್‌ನಲ್ಲಿ commercial crops ಗೆ ಸಂಬಂಧಪಟ್ಟಂತೆ ಏನು ಹೇಳಿದ್ದೀರಿ ಅದರ ಬಗ್ಗೆ ಒಂದೆರಡು ಸಲಹೆಗಳನ್ನು ಕೊಡುತ್ತೇನೆ. ಲಾಭಕರ ಬೆಳೆಗಳು commercial

crops ಎನ್ನುವುದರಲ್ಲಿ ಮೆಣಸಿನಕಾಯನ್ನು ಸೇರಿಸಿದ್ದೀರಿ. ನಾನು ಕೋಲಾರ ಜಿಲ್ಲೆಯಿಂದ ಬಂದಿರತಕ್ಕವನು. ಪ್ರಾಯಶಃ ಕೋಲಾರ, ತುಮಕೂರು, ಚಿತ್ರದುರ್ಗ ಈ ಜಿಲ್ಲೆಗಳಲ್ಲಿ ಸಾಮಾನ್ಯವಾಗಿ ಹಳ್ಳಿಯ ಜನ ಯಾವ ರೀತಿಯಾಗಿರುತ್ತಾರೆ ಎಂಬುದನ್ನು ಗಮನಿಸಿದ್ದೇ ಆದರೆ, ಅವರಿಗೆ ಬೇರೆ ಏನೂ ಇಲ್ಲದೆ ಇದ್ದರೂ ಪರವಾಗಿಲ್ಲ, ಒಂದು ಹಿಟ್ಟಿನ ಮುದ್ದೆ ಎರಡು ಮೆಣಸಿನಕಾಯಿ ಇಷ್ಟಿದ್ದರೆ ಸಾಕು, ಅವನ ಊಟ ಮುಗಿಯುತ್ತದೆ. ಏಕೆಂದರೆ ಯಾವ ತತ್ವವನ್ನು ಪ್ರತಿಪಾದಿಸಿ ಅದಕ್ಕೆ ನಮ್ಮ ಮೆಚ್ಚುಗೆಯನ್ನು ತಾವು ನಿನ್ನೆ ದಿವಸ ನಿರೀಕ್ಷಿಸಿದಿರೋ ಅದನ್ನು ಕಾರ್ಯತಃ ಮಾಡಿ ಎಂದು ಕೇಳಿಕೊಳ್ಳುತ್ತಾ ಇದ್ದೇನೆ. ಒಂದು ತತ್ವ ದೃಷ್ಟಿಯಿಂದ ಹೇಳುತ್ತಾ ಇದ್ದೇನೆಯೇ ಹೊರತು ಮೆಣಸಿನಕಾಯಿ ಸೇರಿಸಬೇಡಿ, ಅದನ್ನು ಬಿಡಿ, ಇದನ್ನು ಸೇರಿಸಿ ಎಂದು ಹೇಳುತ್ತಾ ಇಲ್ಲ. ತಾವು ನಿನ್ನೆಯ ದಿನ ಯಾವಒಂದು ಆಶ್ವಾಸನವನ್ನು ಕೊಟ್ಟರೋ ಅದನ್ನು ಅನುಷ್ಠಾನಕ್ಕೆ ತನ್ನಿ ಎನ್ನುವ ದೃಷ್ಟಿಯಿಂದ ಹೇಳುತ್ತಾ ಇದ್ದೇನೆ. ಮೆಣಸಿನಕಾಯಿ ಒಂದನೆಯದು. ಹಾಗೆಯೇ ಈರುಳ್ಳಿ, ಇವುಗಳೆಲ್ಲವೂ ಕೂಡ ನಿತ್ಯ ಉಪಯೋಗಕ್ಕೆ ಸಂಬಂಧಪಟ್ಟದ್ದು. ನಿತ್ಯ ಜೀವನಕ್ಕೆ ಸಂಬಂಧಪಟ್ಟವು. ಸಾಮಾನ್ಯವಾಗಿ ಬಡವರಿಗೆ ಸಂಬಂಧಪಟ್ಟವು ಎಂದು ಮಾತ್ರ ಸ್ಪಷ್ಟವಾಗಿ ಹೇಳಬಹುದು ಒಟ್ಟಿನಲ್ಲಿ ಎಲ್ಲರಿಗೂ ತಿಳಿದದ್ದೇ, ಹೊಸದಾಗಿ ಹೇಳಬೇಕಾದ-ಮಾತುಗಳು ಇಲ್ಲ. ಯಾವ ಕಂದಾಯವನ್ನು ಯಾವ ರೀತಿಯಲ್ಲಿ ಹೆಚ್ಚುಮಾಡಿದರೂ ಕೂಡ ಕಟ್ಟಕಡೆಯದಾಗಿ ಆ ಕಂದಾಯ ಆ ಪದಾರ್ಥಗಳನ್ನು ಉಪಯೋಗಿಸುವವರು ಯಾರೋ, ಕೊಳ್ಳುವವರು ಯಾರೋ ಅವರ ಮೇಲೆ ಬೀಳುತ್ತದೆ. ಇಂಗ್ಲೀಷಿನಲ್ಲಿ ಹೇಳುವ ಹಾಗೆ, ultimately consumer pays, ಯಾವನು ಆ ಪದಾರ್ಥವನ್ನು ಉಪಯೋಗಿಸುತ್ತಾನೋ ಆ ಮಾನವನ ಮೇಲೆ ಕಟ್ಟಕಡೆಯದಾಗಿ ಯಾವ ತೆರಿಗೆಯೇ ಆಗಲಿ ಬೀಳುತ್ತದೆ ಎಂಬುದು ಒಂದು ಮೂಲಭೂತವಾದ ಸಿದ್ಧಾಂತ. ಇದು ದೊಡ್ಡ ವಿಚಾರವೇನೂ ಅಲ್ಲ, ಎಲ್ಲರಿಗೂ ತಿಳಿದಿರುವುದೇ ಆಗಿದೆ. ಆದ್ದರಿಂದ ಒಂದು ಸಲಹೆ ಏನೆಂದರೆ, ತಾವು ನಿನ್ನೆ ಕೊಟ್ಟ ಭಾಷಣದ ಪ್ರಕಾರ ನಿತ್ಯ ಜೀವನಕ್ಕೆ ಸಂಬಂಧಪಟ್ಟ ಸಾಮಗ್ರಿಗಳಿಗೆ ಕಂದಾಯ ಹೊರಿಸತಕ್ಕ ಮನೋಭಾವವಿಲ್ಲ ಎಂದು ತಾವು ಹೇಳಿರುವುದರಿಂದ ಇಷ್ಟು ಮಾತ್ರ ಹೇಳುತ್ತೇನೆ. ಸ್ಥೂಲವಾಗಿ ನೋಡಿದ್ದೇ ಆದರೆ, ಈ ಮಸೂದೆಯಲ್ಲಿ ಒಂದೊಂದು ಅಂಶವನ್ನೂ ಒಂದೊಂದು ಸೆಕ್ಷನ್ನನ್ನೂ ಕೂಡ ತಮ್ಮ ವಾದದ ದೃಷ್ಟಿಯಿಂದ ಓದಿದ್ದೇನೆ. ತಾವು ನಿನ್ನೆ ದಿನ ತಮ್ಮ ಭಾಷಣದಲ್ಲಿ 20 ಲಕ್ಷ ರೂಪಾಯಿ ಈ ತೆರಿಗೆಯಿಂದ ನಿರೀಕ್ಷಿಸುತ್ತೇವೆ ಎಂದು ಹೇಳಿದಿರಿ. ಪ್ರಾಯಶಃ ಅದಕ್ಕೆ ಸಮಂಜಸವಾದ ಸ್ಪಷ್ಟೀಕರಣ ಕೊಡಿ ಎಂದು ಕೇಳತಕ್ಕ ಅಧಿಕಾರ ನನಗೆ ಇಲ್ಲ. ಆದರೂ ಕೂಡ ಒಂದು ಅಂಶ ಕಾಣುತ್ತದೆ. ನಿಮ್ಮ ಉದ್ದೇಶದ ಪ್ರಕಾರ 20 ಲಕ್ಷ ರೂಪಾಯಿಗಳನ್ನು ನಿರೀಕ್ಷಣೆಮಾಡಲಿಕ್ಕೆ ಸುಸಂದರ್ಭಗಳು ಇವೆಯೇ ಎಂಬುದನ್ನು ನೋಡೋಣ. ಒಂದೊಂದಾಗಿ ತೆಗೆದುಕೊಳ್ಳೋಣ. (6) ನಲ್ಲಿ ವಿನಾಯಿತಿ ಕೊಟ್ಟಿದ್ದೀರಿ. ತಾವು ಹೇಳುವ ಪ್ರಕಾರ ನಮೂದು ಮಾಡಿರತಕ್ಕ ಪದಾರ್ಥಗಳನ್ನು ತೆಗೆದುಕೊಂಡರೆ ಒಂದು ಉದಾಹರಣೆ ಕೊಡುತ್ತೇನೆ. 6 ಎಕರೆಯಲ್ಲಿ ವಿನಾಯಿತಿಗೆ ಒಳಪಟ್ಟಿರತಕ್ಕ ಜಮೀನಿನಲ್ಲಿ ಒಬ್ಬ commerical crop ಹಾಕುತ್ತಾನೆ. ವಿನಾಯಿತಿ ಕೊಟ್ಟಿರುವುದು ಯಾವುದಕ್ಕೆ ಎಂಬುದು ಎಲ್ಲರಿಗೂ ಗೊತ್ತಿದೆ. ಈಗ ಒಂದು ಹೂವು, ಶಾವಂತಿಗೆ ಅಥವಾ ಸುಗಂಧರಾಜ ಹೂವು ತೆಗೆದುಕೊಳ್ಳೋಣ; ಖಂಡಿತವಾಗಿಯೂ ಒಂದು ಎಕರೆಯಷ್ಟು ಅದನ್ನು ಯಾರೂ ಹಾಕುವುದಿಲ್ಲ. ಹತ್ತಾರು ಎಕರೆಗಳಷ್ಟು ಬೆಳೆಯುತ್ತಾರೆ. ವ್ಯಾಪಾರಮಾಡುತ್ತಾರೆ. ಆದ್ದರಿಂದ ಈಗ ತಾವು ಮಾಡುವುದಕ್ಕೆ ವಿನಾಯಿತಿ ಕೊಟ್ಟಿದ್ದೀರಿ ಅದಕ್ಕೆ ವಿನಾಯಿತಿ ಕೊಡಬಾರದು ಎಂದು ನಾನು ಹೇಳುತ್ತಾ ಇಲ್ಲ. ನನ್ನ ಅಭಿಪ್ರಾಯವೇನೆಂದರೆ ಒಂದು ತೆರಿಗೆಯನ್ನು ಹಾಕುವಾಗ ಮೊದಲೇ ಅರಿಕೆಮಾಡಿಕೊಂಡ ಹಾಗೆ ಮೂಲಭೂತವಾಗಿ ಒಂದು ವ್ಯವಸ್ಥಿತವಾದ ರೀತಿಯಲ್ಲಿ ಪುನರ್‌ವ್ಯವಸ್ಥೆಮಾಡಬೇಕು ಎನ್ನುವ ಒಂದು ಆಕಾಂಕ್ಷೆ ಇರುವಾಗ ಆ ರೀತಿ ಪುನರ್‌ವ್ಯವಸ್ಥೆಮಾಡುವ ಗೋಜಿಗೇ ಹೋಗದೆ ಕೇವಲ ವರಮಾನದ ದೃಷ್ಟಿಯಿಂದ ಮಾತ್ರ ನಮ್ಮ ಮುಂದೆ ಈ ಮಸೂದೆಯನ್ನು ತಂದಿರುವುದಕ್ಕಾಗಿ ಆಕ್ಷೇಪಣೆ ಮಾಡಬೇಕಾಗಿದೆ.

4 P.M.

ಹೀಗೆ ತಾವು ಒಂದು ವಿನಾಯಿತಿಯನ್ನು ಮಾಡದೆ ಹೋದರೆ ಆಗಲೂ ಕೂಡ ತಾವು ಇದರಿಂದ ನಿರೀಕ್ಷಿಸಿರುವಷ್ಟು ಹಣ ಖಂಡಿತ ನಿಮಗೆ ಬರಲಾರದು. ಈ ಇಲಾಖೆಗೋಸ್ಕರವಾಗಿ ತಾವು ಒಂದು ಹೊಸ ಸಿಬ್ಬಂದಿಯನ್ನೇ ನೇಮಕಮಾಡಬೇಕಾಗುತ್ತದೆ. ಇನ್ನು ಮುಂದೆ ಈ ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್‌ನ್ನು ವಸೂಲ್ಮಾಡಲು ಪ್ರತಿಯೊಂದು ಜಿಲ್ಲೆಗೂ ಒಬ್ಬೊಬ್ಬ ಜಿಲ್ಲಾ ಮೊಖ್ತೇಸರರನ್ನು ಇಡಬೇಕಾಗುತ್ತದೆ. ಅನಂತರ ಅವರಿಗೆ ಬೇಕಾದಂಥ ಸಿಬ್ಬಂದಿ ಹೀಗೆಲ್ಲಾ ಹೊಸ ಹೊಸದಾಗಿ ಸಿಬ್ಬಂದಿಯನ್ನು ಹೆಚ್ಚಿಸಿಕೊಂಡು ಹೋಗಬೇಕಾಗುತ್ತದೆ. ಈ ಸಿಬ್ಬಂದಿಗೋಸ್ಕರವಾಗಿ ಒಂದೆರಡು ಲಕ್ಷ ರೂಪಾಯಿಗಳು ಹೋಗಿಬಿಟ್ಟರೆ ಆಗ ನಿಮ್ಮ ನಿರೀಕ್ಷಣೆಯ ಪ್ರಕಾರ ನಿಮಗೆ ಖಂಡಿತ ಹಣ ಬರುವುದಿಲ್ಲ. ಇಷ್ಟೆಲ್ಲಾ ಹೇಳಿದ್ದಾದ ಮೇಲೆ ನಾನೀಗ ತಮ್ಮ ಅವಗಾಹನೆಗೆ ಮತ್ತೆ ಕೆಲವು ವಿಚಾರಗಳನ್ನು ತರಬೇಕಾಗಿದೆ. ತಾವೀಗ ಈ ವಿನಾಯಿತಿ ತೋರಿಸಬೇಕೆಂದು ಹೇಳಿರತಕ್ಕಂಥ ಸಂಬಂಧದಲ್ಲಿ ಎರಡು ವಿಧವಾದ ಕಷ್ಟಗಳಿರುತ್ತವೆ. ಅವಿಭಕ್ತ ಕುಟುಂಬಗಳಿಗೆ ಮಾತ್ರ 7,500 ರೂಪಾಯಿಗಳವರೆಗೂ ವಿನಾಯಿತಿ ಕೊಡಬಹುದೆಂದು ತಾವು ಹೇಳೋಣವಾಗಿದೆ. ಅಂದಮೇಲೆ ಈ ವಿನಾಯಿತಿ ಇತರ ಕುಟುಂಬಗಳಿಗೆ ಅನ್ವಯಿಸುವುದಿಲ್ಲವೆಂದು ಹೇಳಿದ ಹಾಗಾಯಿತು. ಈಗ ಮುಸ್ಲಿಮರ ಸಂಸಾರವನ್ನು ತೆಗೆದುಕೊಳ್ಳೋಣ. ಉದಾಹರಣೆಗಾಗಿ ಈಗ ಶ್ರೀ ಮಹಮ್ಮದ್ ಇಮಾಂರವರಿಗಿಬ್ಬರು ಗಂಡುಮಕ್ಕಳೂ ಇಬ್ಬರು ಹೆಣ್ಣುಮಕ್ಕಳೂ ಇದ್ದಾರೆಂದು ಭಾವಿಸೋಣ. ಆದರೆ ಈಗ ಶ್ರೀ ಮಹಮ್ಮದ್ ಇಮಾಂರವರು ಮಾತ್ರ ಈ ಕಾನೂನಿನ ಚೌಕಟ್ಟಿನೊಳಗೆ ಬರುತ್ತಾರೆ, ಅವರ ಕುಟುಂಬ ಬರುವುದಿಲ್ಲ. ಹಿಂದೂ ಅವಿಭಕ್ತ ಕುಟುಂಬಗಳಲ್ಲಿ ಕೆಲವು ಸಂಸಾರಗಳಲ್ಲಿ ಕೇವಲ ಒಬ್ಬರು ಮಾತ್ರವೇ ಇರುತ್ತಾರೆ. ಕೆಲವು ಸಂಸಾರಗಳಲ್ಲಿ ಐದು ಜನರಿರಬಹುದು. ಇಂಥ ಸಂಸಾರಗಳಿಗೆಲ್ಲಾ ಈಗ ತಾವು ತಂದಿರುವಂಥ ಮಸೂದೆಯ ಪ್ರಕಾರ ವಿನಾಯಿತಿ ಸಿಕ್ಕುತ್ತದೆ. ಆದರೆ ಇನ್ನೂ ಅನೇಕವಾಗಿರತಕ್ಕಂಥ ದೊಡ್ಡ ದೊಡ್ಡ ಕುಟುಂಬಗಳಲ್ಲಿ ಕೇವಲ ಒಂದು ಸಂಸಾರಕ್ಕೆ ಮಾತ್ರ ಈ ವಿನಾಯಿತಿ ಸಿಕ್ಕುತ್ತದೆ. ಬಾಕಿ ಸಂಸಾರಗಳಿಗೆ ಯಾವ ರಿಯಾಯಿತಿಯೂ ದೊರೆಯುವುದಿಲ್ಲ. ಆದರೆ ತಾವು ಹೀಗೆ ಮಾಡಿರತಕ್ಕದ್ದು ತಪ್ಪು ಎಂದು ನಾನು ಹೇಳುತ್ತಿಲ್ಲ. ವಾಸ್ತವಾಂಶಗಳನ್ನು ಪರಿಶೀಲನೆಮಾಡಿ ನೋಡುವುದಾದರೆ ಅನೇಕ ಅವಿಭಕ್ತ ದೊಡ್ಡ ದೊಡ್ಡ ಹಿಂದೂ ಕುಟುಂಬಗಳಿಗೂ ಮತ್ತು ಮುಸ್ಲಿಮರ ಸಂಸಾರಗಳಿಗೂ ಇದರಿಂದ ಬಹಳ ಅನ್ಯಾಯವಾಗುತ್ತದೆ. ಆದುದರಿಂದ ಸರ್ಕಾರದವರು ಇಂಥ ಕಾನೂನುಗಳನ್ನು

(ಶ್ರೀ ಕೆ. ಪಟ್ಟಾಭಿರಾಮಯ್ಯ.)

ತರುವುದರಿಂದ ದೇಶದಲ್ಲಿ ಅನೇಕರಿಗೆ ಬಹಳ ಕಷ್ಟವಾಗುತ್ತದೆ. ಹೀಗೆ ಹೇಳುತ್ತಾ ಹೋದರೆ ಈ ಮಸೂದೆಯಲ್ಲಿ ಎಷ್ಟೋ ಲೋಪ ದೋಷಗಳಿರುತ್ತವೆ. ಈಗಾಗಲೇ ಅನೇಕ ಮಾನ್ಯ ಸದಸ್ಯರುಗಳು ಈ ಸಂಬಂಧವಾಗಿ ಅನೇಕ ಸೂಕ್ತ ಸಲಹೆಗಳನ್ನು ನೀಡಿದ್ದಾರೆ. ಈ ಮಸೂದೆ ಆ ಸೆಲೆಕ್ಟ್ ಸಮಿತಿಯ ಮುಂದಿನ್ನೂ ಹೋಗಬೇಕಾಗಿದೆ. ಹೀಗೆ ಅನೇಕ ವಿಧವಾಗಿ ಸಲಹೆಗಳನ್ನು ಮಾನ್ಯ ಮುಖ್ಯ ಮಂತ್ರಿಗಳಿಗೆ ಕೊಡಲಾಗಿರುವುದರಿಂದ ಈ ಬಿಲ್ಲು ಆ ಸೆಲೆಕ್ಟ್ ಸಮಿತಿಯ ಮುಂದೆ ಹೋದಾಗ ಆಗ ಅವರು ಈ ಅಂಶಗಳನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ಇದನ್ನು ಸರಿಯಾದ ರೀತಿಯಲ್ಲಿ ಹೊಸದಾಗಿ ಮತ್ತೆ ತರ್ಜುಮೆಮಾಡಿ ಈ ಮಸೂದೆ ಒಂದು ಸರ್ವಾಂಗ ಸುಂದರವಾದಂಥ ಮಸೂದೆಯನ್ನಾಗಿ ತಯಾರುಮಾಡಿ ಮತ್ತೆ ಇದನ್ನು ಈ ಸಭೆಯವರ ಅನುಮೋದನೆಗಾಗಿ ತರುತ್ತಾರೆಂದು ನಾನು ಭಾವಿಸುತ್ತೇನೆ. ಆದರೆ ಇನ್ನು ಕೊನೆಯದಾಗಿ ನಾನು ಎರಡು ಮಾತುಗಳನ್ನು ಮಾತ್ರ ತಿಳಿಸಬೇಕೆಂದಿದ್ದೇನೆ.

ಈಗ ಚರ್ಚೆಯಾಗುತ್ತಿರುವಂಥ 63ನೇಯ ಸೆಕ್ಷನ್ನಿಗೆ ಅರ್ಥವಿವರಣೆಯನ್ನು ಕೊಡತಕ್ಕಂಥ ಕಾಲದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಈ ಇಂಕಂಟ್ಯಾಕ್ಸನ್ನು ಕೊಡತಕ್ಕಂಥ ದರಿಗೆ ಲೆಕ್ಕ ಪತ್ರಗಳನ್ನಿಡುವುದು ಬಹಳ ಕಷ್ಟವಾಗಿ ಕಂಡುಬಂದರೆ ಅಂಥವರಿಗೆ ಒಂದು ರಿಯಾಯಿತಿಯನ್ನು ತೋರಿಸಲು ಅವರಿಗೆಲ್ಲಾ ಇನ್ನೊಂದು ವಿಧವಾಗಿ ಅನುಕೂಲಮಾಡಿ ಕೊಡುತ್ತೇವೆಂದು ಹೇಳಿದ್ದಾರೆ. ಈ ವಿಚಾರವನ್ನು ನಾವೀಗ ಸ್ವಲ್ಪ ಆಲೋಚನೆಮಾಡಬೇಕಾಗಿದೆ. ಈ ವಿಚಾರವಾಗಿ ಈಗಾಗಲೇ ಶ್ರೀ ಡಿ. ದೇವರಾಜ ಅರಸ್‌ನವರು ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಆದರೆ ಈಗ ಈ ಬಿಲ್ಲಿನಲ್ಲಿ ತಿಳಿಸಿರುವ ಪ್ರಕಾರ ಈ ಎರಡನೆಯ ತರಗತಿ ಜಮೀನ್ದಾರರುಗಳಿಗೆ 54 ಎಕರೆವರೆಗೂ ಕಾಂಪೌಂಡಿಂಗಿಗೆ ವಿನಾಯಿತಿಯನ್ನು ಕೊಡಲಾಗಿದೆ. ಒಂದನೆ ತರಗತಿ ಬೆಳೆಗಳಿಗೆ ಕಾಂಪೌಂಡಿಂಗಿಗೆ 18 ಎಕರೆಗಳವರೆಗೆ ವಿನಾಯಿತಿ ತೋರಿಸಿದ್ದಾರೆ. ಇನ್ನು ಈ ಮಧ್ಯೆ ಕಾಂಪೌಂಡಿಂಗ್ ವಿಚಾರ ಬೇರೆ ಹೇಳಿದ್ದಾರೆ. ಈ ಬಗ್ಗೆ ಮಾತನಾಡುತ್ತಾ ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು ನಮ್ಮ ರೈತರನ್ನು ತಾವು ಹೇಗಾದರೂ ಮಾಡಿ ಈ ಅಧಿಕಾರವರ್ಗದವರ ಕೈಯಿಂದ ತಪ್ಪಿಸಬೇಕೆಂದು ಕೇಳಿದ್ದಾರೆ. "ಅವರ ಭಯದಿಂದ ನಮ್ಮ ರೈತರನ್ನು ಪಾರುಮಾಡಿ, ಅವರಿಗೆ ಈಗಲೇ ನನ್ನ ನಮಸ್ಕಾರಗಳು" ಎಂದು ಅವರು ಹೇಳಿರುತ್ತಾರೆ. ಹೀಗೆ ಈ ಅಧಿಕಾರಿಗಳ ಕೈಯಿಂದ ಪ್ಲಾಂಟರುಗಳನ್ನು ತಪ್ಪಿಸಿದರೆ ಅವರಿಗೆ ಎಷ್ಟೋ ತೊಂದರೆ ತಪ್ಪಿದ ಹಾಗೆ ಆಗುತ್ತದೆಂದು ಹೇಳಿದ್ದಾರೆ. ಆದರೆ ಈಗ ಈ ವಿನಾಯಿತಿಯಲ್ಲಿ ಕೇವಲ ಸಾಮಾನ್ಯ ಬೆಳೆಗಳಿಗೆ 18 ಎಕರೆಗಳ ತನಕ ಒಂದು ಲಿಮಿಟ್ ಹಾಕಿ ಈ ಕಾಫಿ ಬೆಳೆಗೆ 54 ಎಕರೆಗಳ ತನಕ ಲಿಮಿಟ್ ಹಾಕಲು ಈ ವ್ಯತ್ಯಾಸಕ್ಕೆ ಕಾರಣವೇನೋ ಅದು ನನಗೆ ಗೊತ್ತಾಗಲಿಲ್ಲ. ಈಗ ಇಡೀ ದೇಶದಲ್ಲಿ ಜನರು ಯಾವ ಬೆಳೆಯನ್ನೇ ಬೆಳೆಯಲಿ, ಎಲ್ಲರಿಗೂ ಖರ್ಚು ಇದ್ದೇ ಇರುತ್ತದೆ. ಈ ಕಾಫಿ ಬೆಳೆಯಲ್ಲಿ 54 ಎಕರೆಗಳಿಗೆ ಮೇಲ್ಪಟ್ಟು ಇರತಕ್ಕಂಥ ಜಮೀನಿಗೆ ಒಂದು flat rate ಏರ್ಪಾಡು ಮಾಡಿ 100 ಎಕರೆಗೆ ಇಷ್ಟು, 100 ರಿಂದ 150 ಎಕರೆಗಳಿಗಿಷ್ಟು ಎಂದು ಹೇಳಿದ್ದಾರೆ. ಆದರೆ ನಮ್ಮ ಸೀಮೆಯಲ್ಲಿ 150 ಎಕರೆಗಳಿಗಿಂತಲೂ ಜಾಸ್ತಿಯಾಗಿ ಜಮೀನಿಟ್ಟು ಕೊಂಡಿರತಕ್ಕಂಥ ಹಿಡುವಳಿದಾರರ ಸಂಖ್ಯೆ ಬಹಳ ಕಡಮೆ. ಇನ್ನು ಇವರಂತೆಯೇ 150 ಎಕರೆಗಳಿಗೆ ಮೇಲ್ಪಟ್ಟು 500, 1,000 ಎಕರೆಗಳನ್ನಿಟ್ಟುಕೊಂಡಿರತಕ್ಕಂಥ ಜನರ ಸಂಖ್ಯೆ ಮತ್ತೂ ಕಡಮೆಯಾಗಿದೆ. ಇಂಥ ದೊಡ್ಡ ದೊಡ್ಡ ಹಿಡುವಳಿದಾರರು ಇದ್ದಲ್ಲಿ ನಮ್ಮಲ್ಲಿ 8-10 ಜನರಿಗಿಂತ ಜಾಸ್ತಿಯಾಗಿರಲಾರರು. ಆದರೆ ನಮ್ಮಲ್ಲಿರತಕ್ಕಂಥವರೆಲ್ಲಾ 40 ರಿಂದ 60 ಎಕರೆಯೊಳಗೆ ಇರತಕ್ಕಂಥ ಜಮೀನ್ದಾರರಾಗಿದ್ದಾರೆ. ಆದುದರಿಂದ ಇದನ್ನು ತಾವು ಇನ್ನೂ ಸ್ವಲ್ಪ ಲಂಬಿಸಿ ಒಂದು ಕಾಂಪೋಸಿಟ್ ಸ್ಕೀಂ ಮಾಡಿದರೆ ಚೆನ್ನಾಗಿರುತ್ತದೆ. ಹೀಗೆ ಮಾಡಿದರೆ ತಾವು ಕಂದಾಯವನ್ನು ಜಾಸ್ತಿಮಾಡಿ ತೆಗೆದುಕೊಂಡ ಹಾಗೆ ಆಗುತ್ತದೆ. ಈ ದಿವಸ ಈ ಕಾಫಿ ಪ್ಲಾಂಟರುಗಳು ಲೆಕ್ಕ ಇಟ್ಟಿರಬಹುದು. ಮತ್ತೆ ಕೆಲವರು ಇದನ್ನು ಕೈಬಿಟ್ಟಿರಬಹುದು. ಆದರೆ ಇದೆಲ್ಲಾ ಬಹಳ ಕಷ್ಟವಿದೆ. ಯಾವ ಯಾವ ವರ್ಷದಲ್ಲಿ ಇವರಿಗೆ ಎಷ್ಟೆಷ್ಟು ವರಮಾನ ಬಂದಿದೆ ಎಂಬುದನ್ನೆಲ್ಲಾ ಪರಿಶೀಲಿಸಿದರೇನೆ ಇವರ ಮೇಲೆ ಒಂದು ತೆರಿಗೆ ಹಾಕಲು ಅವಕಾಶ ಸಿಕ್ಕುತ್ತದೆ. ಆದುದರಿಂದ ತಾವೀಗ ಅವರವರ ವರಮಾನಕ್ಕೆ ತಕ್ಕ ಹಾಗೆ ಒಂದು ಚೌಕಟ್ಟನ್ನು ತಯಾರುಮಾಡಿ ಬೇರೆ ಬೇರೆ ಬೆಳೆಗಳವರಿಂದ ಬೇರೆ ಬೇರೆ ದರದಲ್ಲಿ ಹೀಗೆ ದುಡ್ಡನ್ನು ತೆಗೆದುಕೊಳ್ಳುವುದಕ್ಕಾಗಿ ಒಂದು ನಿಯಮವನ್ನಿಟ್ಟುಕೊಂಡರೆ ಒಳ್ಳೆಯದೆಂದು ನನ್ನ ಅಭಿಪ್ರಾಯ. ಈಗ ಈ 18 ಎಕರೆ ಮತ್ತು 54 ಎಕರೆಯೊಳಗೆ ಬೆಳೆಯುವಂಥ ವ್ಯವಸಾಯಗಾರರಿಗೆ ಮಾತ್ರ ವಿನಾಯಿತಿ ಇರುವ ಹಾಗೆ ಮಾಡಿರುವುದು ಸಾಧುವಾದದ್ದಲ್ಲ. ಈ ವಿನಾಯಿತಿಯನ್ನು ದೇಶದಲ್ಲಿರತಕ್ಕಂಥ ಸರ್ವ ಜಿರಾಯಿತಿ ಕಸಬಿನವರಿಗೂ ಅನ್ವಯಿಸುವ ಹಾಗೆ ಮಾರ್ಪಾಟು ಮಾಡುವುದು ಚೆನ್ನಾಗಿದೆ. ಆದರೆ ಇದುವರೆಗೂ ನಡೆದ ಚರ್ಚೆಯಲ್ಲಿ ನನಗೆ ಯಾವ ಅರ್ಥವೂ ಆಗಲಿಲ್ಲ. ಈ ಪಾರ್ಟ್ I ಷೆಡ್ಯೂಲಿನಲ್ಲಿ—ಮೊದಲನೆಯ 1,500 ರೂಪಾಯಿಗಳ ಮೊತ್ತದ ಅಗ್ರಿಕಲ್ಚರಲ್ ಇಂಕಂಗೆ ತೆರಿಗೆ ಸಂಪೂರ್ಣ ವಿನಾಯಿತಿ ಇದೆ. ಇದರ ನಂತರ 3,500 ರೂಪಾಯಿಗಳ ತನಕ ಬರುವ ಆದಾಯಕ್ಕೆ ರೂಪಾಯಿಗೆ 9 ಪೈ ತೆರಿಗೆ ಹಾಕಿದ್ದೀರಿ. ಆದರೆ 5,000 ರೂಪಾಯಿಗಳ ವರಮಾನಕ್ಕೆ ರೂಪಾಯಿಗೆ ಒಂದೂವರೆಯಾಣೆಯಂತೆ ತೆರಿಗೆ ಹಾಕಿದ್ದೀರಿ. ಆದರೆ ಹೀಗೆ ವ್ಯತ್ಯಾಸ ಕಂಡುಬಂದಾಗ್ಯೂ ಇದು ಸಮಂಜಸವಾಗಿಲ್ಲ ಎಂದು ನಾನು ಹೇಳುವುದಿಲ್ಲ. ಹೀಗೆ ಇದು 20 ಸಾವಿರದ ಮೇಲೆ ವರಮಾನ ಏರುವತನಕ ಒಂದೇ ಸಮನಾಗಿ ಟ್ಯಾಕ್ಸ್ ಜಾಸ್ತಿಯಾಗುತ್ತಾ ಬರುತ್ತಿದೆ. ಆದರೆ ಹೀಗೆ ತಾವು ಈ ದಿವಸ ಇಂಥ ಒಂದು ನಿಷ್ಕರ್ಷೆಮಾಡುವಾಗ ಯಾವ ಆಧಾರದ ಮೇಲೆ ಒಂದು ರೂಪಾಯಿಗೆ ಇಷ್ಟು ಕಾಸುಗಳ ತೆರಿಗೆ ಎಂಬುದಾಗಿ ನಿರ್ಧಾರಮಾಡಿದಿರಿ ಎಂದು ನಾನೀಗ ಕೇಳಲಿಚ್ಛಿಸುತ್ತೇನೆ. ಬೆಳೆಯುತಕ್ಕವನ ಖರ್ಚು ಆತನಿಗೆ ಬರುವಂಥ ವರಮಾನ ಇತ್ಯಾದಿಗಳನ್ನೆಲ್ಲಾ ಶೇಖರಣೆ ಮಾಡಿಕೊಂಡು ಈಗ ತಾವು ನಿರ್ಧಾರಮಾಡಿರತಕ್ಕಂಥ ತೆರಿಗೆ ದರಗಳು ಸರಿಯಾಗಿರುತ್ತವೆಂದು ಹೇಳಲು ತಾವು ಈಗ ಆ ಅಂಕಿಅಂಶಗಳನ್ನೆಲ್ಲಾ ತಯಾರಿಸಿರುತ್ತೀರಾ? ಇಂಥ ಒಂದು ಸಾಹಿತ್ಯವನ್ನು ತಾವು ಈ ದಿವಸ ನಮ್ಮ ಮುಂದೆ ಇಡುವುದಕ್ಕೆ ಸಿದ್ಧವಾಗಿದ್ದೀರಾ ? ಹೀಗೆ ಯಾವ ಒಂದು ಸಾಹಿತ್ಯವನ್ನೂ ತಯಾರಿಸದೆ ಸುಮ್ಮನೆ 3 ಆಣೆ, $3\frac{1}{2}$ ಆಣೆ, 4 ಆಣೆ, $4\frac{1}{2}$ ಆಣೆ ಎಂದು ತೆರಿಗೆಯನ್ನು ನಿರ್ಧಾರಮಾಡುವುದು ಖಂಡಿತ ಸರಿಯಾದದ್ದಲ್ಲ. ಅವರ ಮೇಲೆ ಒಂದು ತೆರಿಗೆ ಹಾಕಬೇಕಾಗಿದ್ದರೆ ತಾವು ಅಂಕೆ ಸಂಖ್ಯೆಗಳ ಆಧಾರ

ವನ್ನಿಟ್ಟುಕೊಂಡು ತನ್ಮೂಲಕ ಅವರಿಗೆ ಇಷ್ಟಿಷ್ಟು ವರಮಾನ ಜಾಸ್ತಿ ಆಗಿದೆ, ಇಷ್ಟಿಷ್ಟು ಲಾಭ ಹೆಚ್ಚಾಗಿ ಬಂದಿದೆ, ಆದಕಾರಣ ಅವರಮೇಲೆ ಈ ತೆರಿಗೆ ಹಾಕಲಾಗಿದೆ ಎಂದು ಜನರ ಕಣ್ಣಿಗೆ ಕಾಣಿಸತಕ್ಕಂಥ ರೀತಿಯಲ್ಲಿ ಇದನ್ನು ಮಾಡಬೇಕಾಗಿತ್ತೆಂಬುದನ್ನು ತಾವು ಸ್ವಲ್ಪ ಆಲೋಚನೆಮಾಡಿ ನೋಡಬೇಕಾಗಿತ್ತು; ಆದರೆ ಹಾಗೆ ತಾವು ಮಾಡಿಲ್ಲ.

ಇನ್ನು ಕಾಫಿಯವಿಚಾರದಲ್ಲಿ ನಾನೀಗ ಎರಡು ಮಾತುಗಳನ್ನು ಹೇಳಲಿಚ್ಛಿಸಿದ್ದೇನೆ. ಶ್ರೀ ದೇವರಾಜ ಅರಸರು ಈ ಕಾಫಿಯ ವಿಚಾರವಾಗಿ ಮಾತನಾಡುತ್ತಾ, ಈಗಾಗಲೇ ಇಂಡಿಯಾ ಸರ್ಕಾರದವರು ಒಂದು ಕಾನೂನನ್ನು ಮಾಡಿದ್ದಾರೆಂದೂ ಅದರಲ್ಲೇ ಈ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಸೇರಿಕೊಂಡಿರುತ್ತೆಂದೂ ಹೇಳಿದ್ದಾರೆ. ಆದರೆ ಆ ಬಿಸಿನೆಸ್ ದೃಷ್ಟಿಯಿಂದ ಶೇಕಡ 25 ಅಥವಾ 30 ರಷ್ಟನ್ನು ತೆರಿಗೆ ಕೊಟ್ಟಲ್ಲಿ ದೇಶಾಭಿವೃದ್ಧಿಯ ದೃಷ್ಟಿಯಿಂದಲೂ ಅದನ್ನು ಕೊಡಲೇಬೇಕಾಗಿರುತ್ತದೆ. ಈಗ ಇಂಡಿಯಾ ಸರ್ಕಾರದವರು ರಚಿಸಿರತಕ್ಕಂಥ ಆ ಕಾಫಿ ಬೋರ್ಡಿನವರು ಶೇಕಡ 30 ರಷ್ಟು ಆದಾಯವನ್ನು ತೆಗೆದುಕೊಂಡ ಮೇಲೆ ಅದು ಹೋಗುತ್ತ ಉಳಿಯುವ 70 ಪರ್ಸೆಂಟಿಗೆ ಮಾತ್ರ ನಾವು ಈಗ ಈ ತೆರಿಗೆಯನ್ನು ವಿಧಿಸಬೇಕಾಗಿರುತ್ತದೆ. ಈ ವಿಚಾರವನ್ನೂ ಕೂಡ ತಾವು ಸ್ವಲ್ಪ ಸಾವಧಾನದಿಂದ ಆಲೋಚನೆಮಾಡಬೇಕಾಗಿರುತ್ತೆಂದು ನಾನು ತಮ್ಮಲ್ಲಿ ಮನವಿಮಾಡಿಕೊಳ್ಳುತ್ತೇನೆ. ಆದರೆ ಒಟ್ಟಿನಲ್ಲಿ ಹೇಳುವುದಾದರೆ, ಈ ತೆರಿಗೆ ಹಾಕಲು ತಾವೀಗ ತಂದಿರತಕ್ಕಂಥ ಕಾನೂನು ನ್ಯಾಯವೇ ಅಥವಾ ಅನ್ಯಾಯವೇ ಎನ್ನತಕ್ಕಂಥ ಪ್ರಶ್ನೆಗೆ ನಾನೀಗ ಪ್ರವೇಶಮಾಡುವುದಿಲ್ಲ, ಸರ್ಕಾರದವರು ಅಂಥ ಒಂದು ಅನಿವಾರ್ಯ ಪರಿಸ್ಥಿತಿಯಿದೆ ಎಂಬುದನ್ನು ತೋರಿಸಬೇಕು. ಈ ದಿವಸ ನಮಗೆ ತೋರುವುದು ತಾವು ಇದನ್ನು ಪುನಃಪರಿಶೀಲನೆಗೆ ತೆಗೆದುಕೊಂಡರೆ ಈಗ ಲೆಕ್ಕಕ್ಕೆ ತೆಗೆದು ಕೊಂಡಿರುವಂಥ ಆ ಒಂದು ವರಮಾನದ ಮಿತಿಯೇನಿದೆಯೋ ಅದು ಬಹಳ ಜಾಸ್ತಿಯಾಗಿರುತ್ತೆಂಬುದು ತಮಗೇ ಗೊತ್ತಾಗುತ್ತದೆ. ಅಲ್ಲದೆ ತಾವು ವಿಧಿಸಿರತಕ್ಕ ತೆರಿಗೆ ದರವೂ ಕೂಡ ಬಹಳ ಜಾಸ್ತಿಯಾಯಿತು. ಉದಾಹರಣೆಗೆ ತಾವು ಈಗ ನಮ್ಮ ಆ ಕೋಲಾರ ಜಿಲ್ಲೆಯನ್ನೇ ತೆಗೆದುಕೊಳ್ಳಿ:—ಅಲ್ಲಿ ಬೆಳೆಯುವಂಥ ಬೆಲ್ಲ, ಮೆಣಸಿನಕಾಯಿ, ಆಲೂಗಡ್ಡೆ ಇತ್ಯಾದಿ ಪದಾರ್ಥಗಳನ್ನು ತಾವು ಗಮನಿಸುವುದಾದರೆ ಈಗಾಗಲೇ ಈ ಸಾಮಾನುಗಳ ಧಾರಣೆ ಇಳಿಮುಖವಾಗಿದೆ. ಬೆಲೆಯು ದಿನೇ ದಿನೇ ಇಳಿಯುತ್ತಿದೆ. ಹೀಗೆ ದಿನಂಪ್ರತಿ ಜೀವನದ ಉಪಯೋಗಕ್ಕೆ ಅತ್ಯವಶ್ಯಕವಾಗಿ ಬೇಕಾಗಿರುವಂಥ ವಸ್ತುಗಳನ್ನು ಅವುಗಳ ಧಾರಣೆ ಒಂದು ಮಟ್ಟದಲ್ಲಿರುವಂತೆ ಮಾಡುವುದು ಬಹಳ ಮುಖ್ಯವಾದುದೆಂದೂ, ಅದನ್ನು ಮಾಡದೆ ಹೀಗೆ ಏಕ್‌ದಂ ತೆರಿಗೆಗಳನ್ನು ಹಾಕಬಾರದೆಂದೂ ಹೇಳುತ್ತೇನೆ. ಜೀವನಕ್ಕೆ ಸಂಬಂಧಪಟ್ಟಂಥ ಕೆಲವು ಪದಾರ್ಥಗಳ ಧಾರಣೆ ಒಂದು ಮಟ್ಟದಲ್ಲಿರುವಂತೆ ಮಾಡುವುದು ಸರ್ಕಾರದ ಮುಖ್ಯ ಧರ್ಮವೆಂದು ದೊಡ್ಡವರು ಹೇಳಿದ್ದಾರೆ. ಹೀಗಿರುವಾಗ, ಈ ಅಗ್ರಿಕಲ್ಚರಲ್ ಪ್ರಾಡೆಕ್ಟುಗಳ ಬೆಲೆ ಒಂದು ಸರಿಸಮಾನಾದ ರೀತಿಯಲ್ಲಿರುವುದಿಲ್ಲವೆಂದು ಹೇಳುತ್ತಿರುವಾಗ, ನಮ್ಮ ಸರ್ಕಾರದವರು ಇಂಡಿಯಾ ಸರ್ಕಾರದವರು ಈ ಬಗ್ಗೆ ಧಾರಣೆವಾಸಿಗಳನ್ನು stabilize ಮಾಡುವುದಕ್ಕೆ ಏರ್ಪಾಡು ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಆದರೆ ಮುಂದೆ ಅವರು ಈ ಒಂದು ಮಹಾ ಪ್ರಯತ್ನದಲ್ಲಿ ತೊಡಗುವಾಗ ಇನ್ನೂ ಯಾವ ಯಾವ ರೀತಿಯಾಗಿ ಏನೇನು ತೊಡಕುಗಳನ್ನು ತರುತ್ತಾರೋ ನನಗೆ ಅದು ಈಗ ಅರ್ಥವಾಗುವುದಿಲ್ಲ. ಈಗ ಈ ಮಸೂದೆಯಲ್ಲಿ ಹೇಳಿರುವಂತೆ ಈ ತೆರಿಗೆಯು ಈ ವರ್ಷದ ಎಂದರೆ 1955ನೆಯ ಏಪ್ರಿಲ್ 1ನೆಯ ತಾರೀಖಿನಿಂದಲೇ ಜಾರಿಗೆ ಬರುತ್ತದೆ. ಅಂದಮೇಲೆ ಈ ತೆರಿಗೆಯು ಕಳೆದ ವರ್ಷದಲ್ಲಿ ಬಂದಿರತಕ್ಕಂಥ ಆದಾಯದ ಮೇಲೆ ಬೀಳುತ್ತದೆಂದು ಅರ್ಥವಾಗುತ್ತದೆ. ಆದರೆ ಈ ಕಾನೂನು ಜಾರಿಗೆ ಬಂದ ನಂತರ ಇದನ್ನು 1955–56ಕ್ಕೆ ವಿಧಿಸಬೇಕಾಗಿತ್ತು. ಆದರೆ ಈಗ 31-3-1955ರವರೆಗೂ ತೆರಿಗೆ ಬದ್ಧವಾಗಾಯಿತು . . .

Mr. SPEAKER.—The Act will come into force from 1st April 1955.

Sri K. PATTABHIRAMAN.—Yes: the year of income will be the previous year.

Mr. SPEAKER.—When the Act comes into force from the 1st of this month, it may be on any income that can be got by the agriculturist.

Sri K. PATTABHIRAMAN.—Mr. Speaker, my measure of gratitude would be immense if only that is confirmed by the Hon'ble the Chief Minister, and if I get an assurance that what he means by the income that is going to be computed and in respect of which tax will be levied, is that which is derived from crops, whether it be commercial crops or otherwise, which will be raised from 1st April 1955 and other incomes that are going to accrue thereafter; but I am afraid, from the wording of the Section that is employed in this Bill, it appears to me, subject to correction, that the year of collection will start from 1st of April and therefore, it will be an income that has actually accrued and the commercial crops that are actually raised before the 31st of March 1955. I would certainly seek a clarification and I shall be very glad if it is so. If I get a clarification immediately, that will shorten my anxiety and also confirm your clarification.

Mr. SPEAKER.—As I can read the clause, that is what I feel.

Sri J. MOHAMED IMAM.—On a point of order. The Hon'ble Member is addressing the Finance Minister directly and seeking some clarification. Is it not obligatory on the part of the Chief Minister to reply instead of sitting grim?

Sri K. PATTABHIRAMAN.—I concede this, Sir, that I am not entitled to compel him to reply. Still my anxiety prompts me to make an appeal. Any-way, I leave the matter there.

ಆದ್ದರಿಂದ ನಾನು ಹೇಳುವುದೇನೆಂದರೆ. ಇಲ್ಲಿರತಕ್ಕ ಪದಗಳ ಪ್ರಕಾರ ಏಪ್ರಿಲ್ 1ರಿಂದ ಈ ಶಾಸನ ಜಾರಿಗೆ ಬರತಕ್ಕಂಥಾದ್ದು ಎಂದು ಹೇಳುವಾಗ ಕಳೆದ ವರ್ಷದ ಎಂದರೆ ಮಾರ್ಚಿ 31ನೇ ತಾರೀಖಿನೊಳಗೆ ಆಗಿರತಕ್ಕ ಬೆಳೆ Commercial cropನಿಂದ ಬರತಕ್ಕ ವರಮಾನದ ಮೇಲೆ ತೆರಿಗೆ ವಸೂಲ್ ಮಾಡುವುದಕ್ಕೆ ಅವಕಾಶವಿರುತ್ತದೆ. ಅದು ಸರಿಯಲ್ಲ. ಆದರೆ ಅದರಿಂದ ಜನಗಳಿಗೆ ಎಷ್ಟು ತೊಂದರೆಯಾಗುತ್ತದೆಂದು ಯೋಚನೆ ಮಾಡಬೇಕು. ಅಂದರೆ 63ನೇ ಸೆಕ್ಷನ್ ಈ ತಕ್ಷಣ ಜಾರಿಗೆ ಕೊಡುವುದರಿಂದ ಈ ತರಹ ಕಷ್ಟಗಳುಂಟಾಗುತ್ತವೆ. ಯಾರಿಗೂ ಕೂಡ ಕಳೆದ ವರ್ಷ ಈ ಮಸೂದೆ ಬರುವ ನಿರೀಕ್ಷಣೆ ಇರಲಿಲ್ಲ ಮತ್ತು ಈ ರೀತಿಯಾದ ತೆರಿಗೆ ಕೊಡಬೇಕಾಗುತ್ತದೆ ಎನ್ನುವ ಗಮನ ಕೂಡ ಇರಲಿಲ್ಲ. ನಮ್ಮ ಜನ ಸಾಧಾರಣವಾಗಿ ಖರ್ಚುಗಳನ್ನಿಟ್ಟುಕೊಂಡು ಕೆಲಸ ಮಾಡಿರುತ್ತಾರೆ. ಏಕ್‌ದಂ ಈ ರೀತಿಯ ಒಂದು ನಿರ್ಬಂಧ ಬರುವ ಕಾರಣದಿಂದ ಅವರಿಗೆ ಬಹಳ ತೊಂದರೆಯಾಗುತ್ತದೆ. ನನ್ನ ಆಶಯ ಈ ರೀತಿ ಇದೆ: ಅದೇನೆಂದರೆ ಈ ಮಸೂದೆಯನ್ನು ಈ ವರ್ಷದಿಂದ ಎಂದರೆ 1-4-1955ರಿಂದ ಜಾರಿಗೆ ತರಬೇಕು ಎಂದಿರುವುದರಿಂದ ಶಾಸನ ಬಂದರೂ ಕೂಡ ಈ ವರ್ಷದ ಏಪ್ರಿಲ್ 1ನೇ ತಾರೀಖಿನ ತರುವಾಯ ಬರತಕ್ಕ ಪರಮಾನದ ಮೇಲೆ, ಬೆಳೆಯತಕ್ಕ ಬೆಳೆಗಳ ಮೇಲೆ ಈ ಶಾಸನದ ಪ್ರಕಾರ ತೆರಿಗೆ ವಸೂಲುಮಾಡತಕ್ಕದ್ದು ಎಂದು ಹೇಳಬೇಕು. ಹಾಗೇನಾದರೂ ಒಂದು ಅನುಮಾನವಿದ್ದು, ಅದರ ಉದ್ದೇಶವೂ ಹಾಗೆಯೇ ಇದ್ದರೆ ಮಾತ್ರ ವಿರೋಧವಾದಂಥ ಒಂದು ಕಾರ್ಯಾಚರಣೆಗೆ ಅವಕಾಶವಾಗುತ್ತದೆ. ಅದಕ್ಕೆ ಅವಕಾಶ ಕೊಡದೆ Select Committeeಯವರು ಮುಖ್ಯಮಂತ್ರಿಗಳು ಸ್ಪಷ್ಟೀಕರಿಸಿದ ಆಧಾರದ ಮೇಲೆ ಬದಲಾಯಿಸಬೇಕೆಂದು ನಾನು ಹೇಳುತ್ತೇನೆ. ಏಪ್ರಿಲ್ ಒಂದನೇ ತಾರೀಖಿಗೆ ಹಿಂದೆ ಕನಸು ಮನಸ್ಸಿನಲ್ಲೂ ಕೂಡ ಈ ರೀತಿಯ ಶಾಸನ ಬರುತ್ತದೆ ಎಂಬ ಭಾವನೆ ಸಹ ಇರಲಿಲ್ಲ. ಸಾಧಾರಣವಾಗಿ ರೈತ ತಾನು ಪ್ರತಿ ಬೆಳೆಗೂ ಖರ್ಚುಮಾಡಿದ ಲೆಖ್ಖಗಳನ್ನಿಟ್ಟಿರುವುದಿಲ್ಲ. ಆದ್ದರಿಂದ ಇವರಿಗೆ ಈ ಶಾಸನ ತಕ್ಷಣ ಜಾರಿಗೆ ತರುವುದರಿಂದ ತೊಂದರೆಯಾಗುತ್ತದೆ. ಇದರಲ್ಲಿನ ಅಧಿಕಾರಗಳನ್ನು ಡಿಕ್ಕಾಪಾಲಾಗಿ ಕೊಡತಕ್ಕದ್ದು ಕ್ಷೇಮವಲ್ಲ. ಆದುದರಿಂದ ನಾನು ಈ ಸ್ಪಷ್ಟವಾದ ಸಲಹೆಯನ್ನು ಮಾಡುತ್ತಿದ್ದೇನೆ. ಏಪ್ರಿಲ್ ಒಂದನೆ ತಾರೀಖಿನಿಂದ ಶಾಸನ ಜಾರಿಗೆ ಬರುವುದಾದರೂ ಕೂಡ ಈ ವರ್ಷದಲ್ಲಿ ಇನ್ನು ಮುಂದೆ ಆಗತಕ್ಕ ಬೆಳೆಗಳಿಗೆ ಅನ್ವಯವಾಗಬೇಕೇ ಹೊರತು ಕಳೆದ ವರ್ಷದ ಬೆಳೆಗಳಿಗೆ ಅನ್ವಯವಾಗುವುದಕ್ಕೆ ಕಾನೂನಿನಲ್ಲಿ ಅವಕಾಶವಿರಕೂಡದು. ದೇಶದ ಸ್ಥಿತಿ, ವಸ್ತುಸ್ಥಿತಿ ಇದನ್ನೆಲ್ಲಾ ಯೋಚನೆ ಮಾಡಿ ಸಭೆಯವರು ಇದನ್ನೆಲ್ಲಾ ಗಮನಿಸಿ ಕೆಲವು ಮಾರ್ಪಾಡುಗಳೊಡನೆ ಈ ಮಸೂದೆಯನ್ನು ಪಾಸ್ ಮಾಡಬೇಕೆಂದು ಹೇಳುತ್ತೇನೆ.

ನಿನ್ನೆಯ ದಿನ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ ಈಗಾಗಲೇ ಈ ಮಸೂದೆಯಲ್ಲಿ ತೆರಿಗೆ ಕೊಡುವವರ ಬಗ್ಗೆ ವಿನಾಯಿತಿ ಸ್ವಲ್ಪಮಟ್ಟಿಗೆ ತೋರಿಸಿರುವುದಾಗಿಯೂ, ಸಭೆಯವರು ಇನ್ನೂ ಯಾವದಕ್ಕಾದರೂ ವಿನಾಯಿತಿ ಕೊಡಬೇಕೆಂದು ಕೇಳಿಕೊಂಡರೆ ಅವುಗಳನ್ನೆಲ್ಲ ಕೂಡ ಸಾಧ್ಯವಾದಷ್ಟುಮಟ್ಟಿಗೂ ಕೊಡುವುದಕ್ಕೂ ಸಹ ತಯಾರಾಗಿದ್ದೇವೆ ಎಂದೂ ಒಂದು ಆಶ್ವಾಸನ ಕೊಟ್ಟಿದ್ದಾರೆ. ಈ ಸಭೆಯಲ್ಲಿ ಕೆಲವರು ಆಗಲೇ ಮಾತನಾಡಿ ತಮ್ಮ ಅಭಿಪ್ರಾಯಗಳನ್ನು ತಿಳಿಸುತ್ತಾ ಯಾವುಯಾವುದಕ್ಕೆ ವಿನಾಯಿತಿ ಕೊಡಬೇಕು ಎಂದು ಹೇಳಿದ್ದಾರೆ. ನಾನು ಸಭಾ ಸದಸ್ಯರಲ್ಲಿ ವಿಜ್ಞಾಪಿಸಿಕೊಳ್ಳುವುದೇನೆಂದರೆ, ಸದಸ್ಯರು ತಮ್ಮ ಅಭಿಪ್ರಾಯಗಳನ್ನು ತಿಳಿಸಬೇಕು. ಹಾಗೆ ಮಾಡದೆ ಈಗ ಬಂದಿರುವ ಅವಕಾಶವನ್ನು ಕಳೆದುಕೊಂಡರೆ ದೇವರು ಕೂಡ ಸಹಾಯಮಾಡುವುದಿಲ್ಲ.

ನನ್ನ ಅಭಿಪ್ರಾಯವನ್ನು ನಾನು ಆಗಲೇ ಸ್ಪಷ್ಟವಾಗಿ ಹೇಳಿದ್ದೇನೆ. ಈ ಮಸೂದೆ ಈ ಕಾಲಕ್ಕೆ ಬೇಕಾಗಿಲ್ಲ ಎಂದು ನನ್ನ ಅಭಿಪ್ರಾಯ. ಇದರಲ್ಲಿ 20 ಲಕ್ಷ ರೂಪಾಯಿ ಬರುತ್ತದೆ ಎಂದು ನಿರೀಕ್ಷಣೆ ಮಾಡಿದ್ದಾರೆ. ಆದರೆ ಇದರಲ್ಲಿ ಖಂಡಿತವಾಗಿಯೂ 20 ಲಕ್ಷ ರೂಪಾಯಿಗಳ ನಿರೀಕ್ಷೆ ನಿಜವಾಗಲಾರದು ಎಂದು ಮಾತ್ರ ಹೇಳುತ್ತೇನೆ. ಯಾವಾಗಲೂ ಈ ಹಣಕಾಸಿನ ಮಸೂದೆಗಳಿಗೆ ಈಕಡೆ ಕುಳಿತಿರತಕ್ಕ ಜನ ವಿರೋಧ ಮಾಡಿದರೆ ಕೋಪ ಬರುವುದು ಸ್ವಾಭಾವಿಕ. ಸರ್ಕಾರವನ್ನು ನಡೆಸತಕ್ಕ ಜವಾಬ್ದಾರಿ ಹೊತ್ತಿರುವವರಿಗೆ ಈ ಹಣಕಾಸಿನ ಮಸೂದೆಗಳನ್ನು ವಿರೋಧಿಸಿದಾಗ ಮನಸ್ಸಿಗೆ ವ್ಯಾಕುಲವಾಗುವುದು ಸಹಜ. ಆದರೆ ಇದು ದೇಶದಲ್ಲಿ ಬಹಳ ಕಳವಳವನ್ನುಂಟುಮಾಡುತ್ತದೆಂದು ನನಗೆನ್ನಿಸುತ್ತದೆ ಆದರೂ ಈ ಸಂದರ್ಭದಲ್ಲಿ ಇಷ್ಟು ಅಲ್ಪವಾದಂಥ 5-10 ಲಕ್ಷ ರೂಪಾಯಿ ಬರುವ ಕಾರಣಕ್ಕಾಗಿ ಇಷ್ಟು ದೊಡ್ಡದಾದ ಶಾಸನ ತಂದು ಅದರಂತೆ ಕೆಲಸಮಾಡುವುದು ಬಹಳ ಕಷ್ಟ. ಒಂದು ಮಾತು ಹೇಳುವುದಾದರೆ ಈಗಿರುವ ಭೂಕಂದಾಯ ಪದ್ಧತಿಯನ್ನು ಬದಲಾವಣೆಮಾಡುವ ಒಂದು ಶಾಸನವನ್ನು ಮಾಡಬೇಕೆಂದು ವಾದಿಸಿದವರಲ್ಲಿ ನಾನೂ ಒಬ್ಬ. ಈಗಿರುವ ಕಂದಾಯ ಪದ್ಧತಿ ಬದಲಾವಣೆಯಾಗಿ, ಕ್ರಾಂತಿಕಾರಕವಾದ ಬದಲಾವಣೆಯಾಗಿ, ಕೇವಲ ವರಮಾನದ ಮೇಲೆ ಶಾಸ್ತ್ರೋಕ್ತವಾದ ರೀತಿಯಲ್ಲಿ ತೆರಿಗೆ ನಿಷ್ಕರ್ಷೆ ಮಾಡತಕ್ಕಂಥ ಒಂದು ನೀತಿಯನ್ನು ಜಾರಿಗೆ ತರಬೇಕೆಂದು ನಾವು ಆಶೆಪಟ್ಟಿದ್ದೇವೇ ಹೊರತು ಒಂದು ಕಡೆ ಕಂದಾಯ ಹೆಚ್ಚುತ್ತಾ ಇರುವಾಗ ವರಮಾನದ ಮೇಲೂ ತೆರಿಗೆಯನ್ನು ಹಾಕಿ ಎನ್ನುವ ದ್ವಿಮುಖವಾದ ವಸೂಲಾತಿ ಪದ್ಧತಿಯನ್ನು ನಾವು ಖಂಡಿತವಾಗಿಯೂ ನಿರೀಕ್ಷಿಸಿರಲಿಲ್ಲ. ನಾನು ಒಟ್ಟಿನಲ್ಲಿ ಇಷ್ಟು ಮಾತ್ರ ಹೇಳುತ್ತೇನೆ. ಈ ರೀತಿಯಾಗಿ ಮಾರ್ಪಾಡು ಮಾಡಬೇಕಾದದ್ದು ಅಗತ್ಯವಿಲ್ಲದೇಹೋದರೆ ಜನಗಳಿಗೆ ಅಸಮಾಧಾನವುಂಟಾಗುತ್ತದೆ, ತೊಡಕುಗಳು ಜಾಸ್ತಿಯಾಗುತ್ತವೆ. ಈ ಮಾನ್ಯ ಸಭೆಯಲ್ಲಿ ಅನೇಕರು ಬೇರೆ ಬೇರೆ ವಸ್ತುಗಳಿಗೆ ಸಂಬಂಧಪಟ್ಟ ವಿಚಾರವನ್ನು ಬಹಳ ಚೆನ್ನಾಗಿ ತಿಳಿದವರಿದ್ದಾರೆ. ಒಟ್ಟಿನಲ್ಲಿ ಇದರಲ್ಲಿ ಮಾರ್ಪಾಟುಗಳಿಲ್ಲದೆ ಹಾಗೆಯೇ ಇದ್ದರೆ ಅಷ್ಟು ಚೆನ್ನಾಗಿ ಕಾಣುವುದಿಲ್ಲ. ರೈತರಿಗೂ ಬಹುಮಟ್ಟಿಗೆ ಒಳ್ಳೆಯದಾಗುವುದಿಲ್ಲ. ಇಷ್ಟು ಹೇಳಿ ತಮ್ಮಗಳ ಔದಾರ್ಯಕ್ಕಾಗಿ ತಮ್ಮನ್ನು ವಂದಿಸುತ್ತೇನೆ.

ಶ್ರೀ ಕೆ. ಪಂಚಾಕ್ಷರಯ್ಯ (ಅರಸೀಕೆರೆ).—ಸ್ವಾಮಿ, ಈ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ವಿಷಯದಲ್ಲಿ ನಾನು ನನ್ನ ಬಡ್ಜೆಟ್ ಭಾಷಣದಲ್ಲಿ ಇದು ಉಚಿತವಾದದ್ದಲ್ಲ ಎಂದು ತಿಳಿಸಿದ್ದೇನೆ. ಕೇವಲ 15—20 ಲಕ್ಷ ರೂಪಾಯಿಗಳ ವರಮಾನಕ್ಕಾಗಿ ಇವೊತ್ತು ದೇಶಾದ್ಯಂತವೂ ಜನರಲ್ಲಿ ಒಂದು ರೀತಿಯ ಅಸಮಾಧಾನವನ್ನುಂಟುಮಾಡತಕ್ಕ ಸಂದರ್ಭವನ್ನು ಒದಗಿಸಿಕೊಳ್ಳುವುದು ಅಧಿಕಾರದಲ್ಲಿರುವ ಕಾಂಗ್ರೆಸ್ ಪಕ್ಷಕ್ಕೆ ಒಳ್ಳೆಯ

ದಲ್ಲವೆಂದು ನನ್ನ ಧೃಢವಾದ ಅಭಿಪ್ರಾಯ. "ನಮ್ಮ ದೇಶದ ಭಾರಿ ಬಜೆಟ್‌ನಲ್ಲಿ 15—20 ಲಕ್ಷ ರೂಪಾಯಿಗಳನ್ನು ಯಾವುದರಲ್ಲಾದರೂ ಉಳಿಸಿಕೊಳ್ಳುವುದಕ್ಕೆ ಅವಕಾಶವಿಲ್ಲವೇ? ಅನೇಕ ಬಾಬುಗಳಲ್ಲಿ ನಮಗೆ ಕಂಡ ಹಾಗೆ ನಮ್ಮ ಇಚ್ಛೆಗೆ ವಿರೋಧವಾಗಿ ಅನೇಕ ರೀತಿಯಲ್ಲಿ ಹಣ ವ್ಯಯವಾಗುತ್ತಿದೆ. ಅದನ್ನೆಲ್ಲ ಉಳಿತಾಯ ಮಾಡಿದ್ದರೆ 15—20 ಲಕ್ಷ ರೂಪಾಯಿಗಳನ್ನು ಹೊಂದಿಸುವುದಕ್ಕೆ ಆಗುತ್ತಿರಲಿಲ್ಲವೆ?" ಎಂಬ ಪ್ರಶ್ನೆಯನ್ನು ಸುಲಭವಾಗಿ ದೇಶಾದ್ಯಂತದಿಂದ ಜನರು ಕೇಳುತ್ತಾರೆ. ಇದರ ಪ್ರತಿಕ್ರಿಯೆಯನ್ನು ನಾವುಗಳು ಯೋಚನೆ ಮಾಡಬೇಕು. ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಇದನ್ನು ಒಂದು ತಾತ್ವಿಕ ದೃಷ್ಟಿಯಿಂದ ನೋಡಬೇಕೆಂದು ಹೇಳಿದರು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವರು ಹೇಳಿದಂತೆ ಯಾವಾಗ ನಾವು socialistic pattern of society ನಮಗೆ ಬೇಕು ಎಂಬುದಾಗಿ ಒಂದು ತೀರ್ಮಾನಕ್ಕೆ ಬಂದಿದ್ದೇವೆಯೋ ಆಗ ಹೆಚ್ಚು ವರಮಾನ ಇರತಕ್ಕವರಿಂದ ಹಣವನ್ನು ತೆಗೆದುಕೊಂಡು ಅದನ್ನು ಜನತೆಯ ಉಪಯೋಗಕ್ಕೆ ಖರ್ಚು ಮಾಡಬೇಕಾದದ್ದು ನ್ಯಾಯ ಮತ್ತು ಧರ್ಮ. ಅದನ್ನು ನಾವೂ ಒಪ್ಪಿಕೊಂಡಿದ್ದೇವೆ. ಅದನ್ನು ಒಪ್ಪಿಕೊಳ್ಳುವಾಗಲೂ ಸಮಯೋಚಿತವಾಗಿ ಸಮಯ, ಕಾಲ, ಸನ್ನಿವೇಶಗಳನ್ನು ನಾವು ಅರ್ಥ ಮಾಡಿಕೊಂಡು ಮುಂದುವರಿಯಬೇಕೆಂದೂ ಇತ್ತು. ಆದರೆ ಈ ರೀತಿ ಮಾಡುವಾಗ ಆದಾಯ ತೆರಿಗೆಯೂ ಸಹ ಇದರಲ್ಲಿ ಒಂದು ಎಂದು ಹೇಳಿದ್ದಾರೆ. ಇದನ್ನು ಬಿಟ್ಟುಬಿಟ್ಟು ಇತರ ಯಾವುದಾದರೂ ತೆರಿಗೆಗಳನ್ನು ಆರಿಸಿಕೊಂಡು ಸರ್ಕಾರಕ್ಕೆ ವರಮಾನ ಬರುವ ರೀತಿಯಲ್ಲಿ ಮಾಡಿದ್ದರೆ, ವ್ಯವಸಾಯ ಮಾಡಿಕೊಂಡಿರುವವರಿಗೆ ದೇಶದಲ್ಲಿ ಬಹಳ ಸಂತೋಷವೆನಿಸುತ್ತಿತ್ತು. ಇದನ್ನು ನಾನು ವಿಧಿಯಿಲ್ಲದೆ ಬಹಳ ಒತ್ತಾಯಪೂರ್ವಕವಾಗಿ ಹೇಳಬೇಕಾಗಿದೆ.

ಈ ತೆರಿಗೆಯನ್ನು ಹಾಕುವುದು ಅಗತ್ಯವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಆದರೆ ನಾವು ಕೇಂದ್ರದಿಂದ ಸಹಾಯವನ್ನು ಅಪೇಕ್ಷಿಸಿದ್ದರೆ ನಮ್ಮ ದೇಶಕ್ಕೆ ಬೇಕಾದ ಸಹಾಯ ಅವರಿಂದ ಬರುತ್ತಿರಲಿಲ್ಲವೇ? ಅಥವಾ ನಮ್ಮ ದೇಶದಲ್ಲಿನ ವರಮಾನದ ಬಾಬುಗಳನ್ನೆಲ್ಲ exhaust ಮಾಡಿದ್ದೇವೆಯೇ ಎಂದು ಪ್ರಶ್ನೆ ಕೇಳುತ್ತೇನೆ. ನಾವು ಏನೇ ಆದರೂ ತಾತ್ವಿಕ ದೃಷ್ಟಿಯಿಂದ ವ್ಯವಸಾಯ ವರಮಾನ ತೆರಿಗೆ ಹಾಕಲೇಬೇಕೆಂದು ಒಂದು ದೃಷ್ಟಿಯಿಂದ ನಿರ್ಧರಿಸಿದರೂ ಇನ್ನೂ ಕೊಂಚಕಾಲ ಕಳೆದನಂತರ ಈ ತೆರಿಗೆ ಬಂದಿದ್ದರೆ ಉತ್ತಮವೆನಿಸುತ್ತಿತ್ತು. ಆದರೆ ಈ ಬಿಲ್ ಈಗ ಬಂದಿದೆ, ಇದು ಅನಿವಾರ್ಯ. ಈ ದೃಷ್ಟಿಯಿಂದ ಈ ವಿಷಯದಲ್ಲಿ ನನ್ನ ಅಭಿಪ್ರಾಯವನ್ನು ಅಷ್ಟಕ್ಕೇ ನಿಲ್ಲಿಸುತ್ತೇನೆ.

ಇನ್ನು ಷೆಡ್ಯೂಲಿನಲ್ಲಿ ತೆಂಗಿನ ತೋಟಕ್ಕೆ 6 ಎಕರೆಗಳ exemption ಎಂದು ಕೊಟ್ಟಿದ್ದೀರಿ. ಮತ್ತೆ 3½ ಸಾವಿರ ರೂಪಾಯಿಗಳ ವರಮಾನದವರೆಗೂ ವಿನಾಯಿತಿ ಕೊಟ್ಟಿದ್ದೀರಿ. ಅದರ ಮೇಲ್ಪಟ್ಟ ವರಮಾನದಮೇಲೆ ಮಾತ್ರ ತೆರಿಗೆ ಕೊಡಬೇಕಾಗುತ್ತದೆ ಎಂದು ನಮೂದಿರುತ್ತದೆ. ವರ್ತಕರು, ವ್ಯಾಪಾರಿಗಳು, ನೆರಳಿನಲ್ಲಿದ್ದು ದುಡಿಯುತಕ್ಕವರು, ದುಡ್ಡಿನ ಬಲದಿಂದ ದುಡಿಯುತಕ್ಕವರು, ಇಂಥವರುಗಳಿಗೆ 4,200 ರೂಪಾಯಿಗಳವರೆಗೂ (ಖರ್ಚು ಜಾತಾ) ವರಮಾನ ತೆರಿಗೆ ಕೊಡಲು exemption ಮೊಬಲಗು ಎಂದು ನಿರ್ಧರವಾಗಿದೆ. ಅದೇ ರೈತನಾದವನು, ಹೆಂಗಸರು, ಮಕ್ಕಳುಮರಿಯಾದಿಯಾಗಿ ಮಣ್ಣಿನ ಜೊತೆಗೆ ಮಣ್ಣಾಗಿ ಮಳೆ ಬಿಸಿಲೆನ್ನದೆ ದುಡಿಯುವವನಿಗೆ 3,500 ರೂಪಾಯಿಗಳ ವಿನಾಯಿತಿ ತೋರಿಸಿದ್ದೀರಿ. ಯಾವಾತನು ಇವೊತ್ತಿನ ದಿವಸ ಕಾಯಕಷ್ಟ ಮಾಡುತ್ತಾನೋ, ಯಾವಾತನು ದಿನವೆಲ್ಲ ಕಷ್ಟಪಟ್ಟು ದುಡಿದು ಅರ್ಜನೆ ಮಾಡುತ್ತಾನೋ ಅಂಥವನಿಗೆ 3,500 ರೂಪಾಯಿಗಳ ವಿನಾಯಿತಿ ನಿಗದಿ ಮಾಡಿದ್ದೀರಿ. ಇದು ಸಾಲದು. ಹೈದರಾಬಾದಿನಲ್ಲಿ 10 ಸಾವಿರ ರೂಪಾಯಿ, ರಾಜಾಸ್ಥಾನದಲ್ಲಿ 5 ಸಾವಿರ ರೂಪಾಯಿ ಹೀಗೆ ಒಂದೊಂದು ಪ್ರಾಂತದಲ್ಲಿ ಒಂದೊಂದು ರೀತಿಯಾಗಿ ಈ ವಿನಾಯಿತಿ ಮೊಬಲಗನ್ನು ನಿಗದಿ ಮಾಡಿದ್ದಾರೆ. ಅದಕ್ಕೋಸ್ಕರವಾಗಿ ನಮ್ಮ ಸರ್ಕಾರದವರಲ್ಲಿ ಕೇಳುವುದೇನೆಂದರೆ, ನಮ್ಮ ಸಂಸ್ಥಾನದಲ್ಲಿ ಕಡಿಮೆ ಎಂದರೆ 5 ಸಾವಿರ ರೂಪಾಯಿಗಳ ವಿನಾಯಿತಿ ನಿಗದಿ ಮಾಡಬೇಕು. ಮತ್ತು 1,500 ರೂಪಾಯಿ ವಜಾ ಮಾಡಿ ಉಳಿದ ಹಣದ ಮೇಲೆ ತೆರಿಗೆಯನ್ನು ವಸೂಲ್ಮಾಡಬೇಕೆಂದು ಹೇಳಿದ್ದೀರಿ. ಈ ಮೊಬಲಗನ್ನು 1,500 ರೂಪಾಯಿಗಳಿಂದ ಕಡೆಯ ಪಕ್ಷ 2,500 ರೂಪಾಯಿಗಳಿಗಾದರೂ ಹೆಚ್ಚಿಸಬೇಕು ಎಂದು ಸೂಚನೆ ಮಾಡುತ್ತೇನೆ.

ಇನ್ನೊಂದು ವಿಚಾರ: ಈ ತೆರಿಗೆ ಕೊಡುವ ಸಂಬಂಧದಲ್ಲಿ ಲೆಕ್ಕವಿಲ್ಲದೆ ಇರತಕ್ಕವರಿಗೆ compound ಮಾಡಿಕೊಳ್ಳತಕ್ಕ ಸಂದರ್ಭದಲ್ಲಿ 6 ಎಕರೆಗಳಿಗೆ ವಿನಾಯಿತಿ ಕೊಟ್ಟಿದ್ದೀರಿ. ತೆಂಗಿನ ತೋಟಗಳನ್ನು ಮಾಡಬೇಕಾದರೆ ಇತರ ಪೈರು ನೆಡುವಂತೆ ಸುಮಾರು ಒಂದು ಗೇಣಿಗೆ ಒಂದರಂತೆ ನೆಡುವುದಿಲ್ಲ. ಈ ರೀತಿಯಾಗಿ ಎಕರೆ ಒಂದಕ್ಕೆ 30 ರಿಂದ 40 ಗಿಡಗಳನ್ನು ಮಾತ್ರ ಬೆಳೆಸುವುದಕ್ಕೆ ಸಾಧ್ಯ. ಒಂದು ಎಕರೆಯ yield ಏನು ಬರುತ್ತದೆಂದರೆ ವರ್ಷವೊಂದಕ್ಕೆ 500 ರಿಂದ 1,500 ಕಾಯಿಗಳವರೆಗೂ ಫಲ ಕೊಡುತ್ತದೆ. ಆದ್ದರಿಂದ ನಾವು ಸರಾಸರಿ ಎಕರೆ ಒಂದಕ್ಕೆ 1,000 ಅಥವಾ 1,100 ಕಾಯಿ ಲೆಕ್ಕವಿಟ್ಟುಕೊಳ್ಳಬಹುದು. ಇವೊತ್ತು 6 ಎಕರೆಗಳ exemption ಕೊಟ್ಟಿರುವುದಕ್ಕೆ 6,000—7,000 ಕಾಯಿ ಆಗುತ್ತದೆ. ಈಗಿರುವ ತೆಂಗಿನಕಾಯಿ ಬೆಲೆ ಎಂದರೆ 1,100 ಕಾಯಿಗೆ 120—130 ರೂಪಾಯಿಗಳು ಮಾತ್ರ. ಅಂದರೆ 6 ಎಕರೆಗಳಿಗೂ ಸುಮಾರು 700—750 ರೂಪಾಯಿಗಳ ವರಮಾನ ಬರುತ್ತದೆಂದು ಅಂದಾಜು ಹಾಕಬಹುದು. ಲೆಕ್ಕದಲ್ಲಿ 3,500 ರೂಪಾಯಿಗಳ exemption ಕೊಟ್ಟು compounding ವಿಷಯ ಬಂದಾಗ 6 ಎಕರೆ ಮಾತ್ರ ವಿನಾಯಿತಿ ಕೊಟ್ಟಿದ್ದೀರಿ. ಇದು ಸಮಂಜಸವಾಗಿದೆಯೇ ಎಂದು ನೋಡುವುದಾದರೆ ಇಲ್ಲವೆಂದು ಧಾರಾಳವಾಗಿ ಹೇಳಬಹುದು. ಇದರಿಂದ ಮುಖ್ಯವಾಗಿ ಯಾರಿಗೋಸ್ಕರ ಈ ವಿನಾಯಿತಿ ದೊರೆಯಬೇಕೋ, ಯಾರು ಲೆಕ್ಕಪತ್ರಗಳನ್ನು ಇಡದೆ ವಿವರಗಳನ್ನಿಡದೆ compound ಮಾಡಿಕೊಳ್ಳುವುದಕ್ಕೆ ಒಳಪಡುತ್ತಾರೆಯೊ ಅವರಿಗೆ ಅನ್ಯಾಯವಾಗುತ್ತದೆ. ಆದುದರಿಂದ ಈ ತೆಂಗಿನಕಾಯಿ ವ್ಯವಹಾರಕ್ಕೆ ಕೊಟ್ಟಿರುವ ವಿನಾಯಿತಿಯನ್ನು 6 ಎಕರೆಗಳಿಂದ ಕಡೆಯಪಕ್ಷ 35 ಎಕರೆಗಳಿಗೆ ಹೆಚ್ಚಿಸಿದರೆ ಈ ಹೊತ್ತಿನ ಲೆಕ್ಕಾಚಾರದಲ್ಲಿ 3,500 ರೂಪಾಯಿಗಳಿಗೆ ಸರಿಹೊಂದಬಹುದಾದ ವಿನಾಯಿತಿ ದೊರೆತಂತಾಗುತ್ತದೆ. ಆದ್ದರಿಂದ 6 ಎಕರೆಗಳ ವಿನಾಯಿತಿಯನ್ನು ತೆಂಗಿನ ತೋಟಗಳ ವಿಚಾರದಲ್ಲಿ 35 ಎಕರೆ ಮಾಡಬೇಕು.

4-30 P.M.

ಆಮೇಲೆ, ಆರು ಎಕರೆಯಿಂದ 12 ಎಕರೆಗಳವರೆಗೂ ಎಕರೆಗೆ 12 ರೂಪಾಯಿನಂತೆ ವಸೂಲು ಮಾಡಬೇಕೆಂದು ಹೇಳಿದ್ದೀರಿ. ಇದು ತುಂಬ ಜಾಸ್ತಿಯಾಯಿತು. ಏಕೆಂದರೆ

(ಶ್ರೀ ಕೆ. ಪಂಚಾಕ್ಷರಯ್ಯ.)

ಒಂದು ಎಕರೆಯಿಂದ ನೂರು ರೂಪಾಯಿ ವರಮಾನ ಪಡೆಯಬೇಕಾದರೂ ಖರ್ಚು ಬಹಳ ಜಾಸ್ತಿಯಾಗುತ್ತದೆ. ಆದ್ದರಿಂದ 12 ರೂಪಾಯಿಗಳೆಂದು ಗೊತ್ತು ಮಾಡಿರತಕ್ಕ ದರವನ್ನು ಐದು ರೂಪಾಯಿಗೆ ಇಳಿಸಬೇಕೆಂದು ನಾನು ವಿನಯ ಪೂರ್ವಕವಾಗಿ ಸಲಹೆ ಮಾಡುತ್ತೇನೆ.

ಕೊನೆಯದಾಗಿ, ಈ ಸಭೆಗೆ ತುಂಬ ವ್ಯಸನವುಂಟು ಮಾಡಿರತಕ್ಕ ವಿಷಯವೆಂದರೆ, ನಮ್ಮ ರೈತರನ್ನು ಅಸೆಸಿಂಗ್ ಅಧಿಕಾರಿಗಳ ವಶಕ್ಕೆ ಒಪ್ಪಿಸಬೇಕಾಗಿದೆಯೆಲ್ಲಾ ಎಂಬುದು, ಈ ತೆರಿಗೆಯ ಹಣವನ್ನು ಕೊಟ್ಟರೂ ಕೊಡಬಹುದು. ಆದರೆ ಅಸೆಸಿಂಗ್ ಅಧಿಕಾರಿಗಳಿಂದ ರೈತರಿಗೆ ಉಂಟಾಗಬಹುದಾದ ನೋವನ್ನು ಯೋಚಿಸಿಕೊಂಡರೆ ಬಹಳ ಭಯವಾಗುತ್ತದೆ. ಇದೇ ದೇಶದ ಎಲ್ಲಾ ಜನರಿಗೂ ಹೆಚ್ಚು ಕಳವಳವನ್ನುಂಟುಮಾಡಿದೆ. ತೆರಿಗೆಗಿಂತಲೂ ಇದು ಹೆಚ್ಚು ನೋವನ್ನುಂಟುಮಾಡುವ ವಿಷಯ. ಆದ್ದರಿಂದ ಸೆಲೆಕ್ಟ್ ಕಮಿಟಿಯವರು ದೀರ್ಘವಾಗಿ ಆಲೋಚನೆ ಮಾಡಿ ಅಧಿಕಾರಿಗಳಿಂದ ಆಗಬಹುದಾದ ಕಿರುಕುಳವನ್ನು ತಪ್ಪಿಸುವುದಕ್ಕೆ ಸಾಧ್ಯವಾದ ಎಲ್ಲ ಪ್ರಯತ್ನಗಳನ್ನೂ ಮಾಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ—ಅನುಸೂಚಿತ ಜಾತಿಗಳು).—ಅಧ್ಯಕ್ಷರೇ, ಈಗಾಗಲೇ ಅನೇಕ ಮಾನ್ಯ ಸದಸ್ಯರು ಈ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಬಿಲ್ಲಿನ ವಿಚಾರವಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮುಖ್ಯವಾಗಿ ಯಾರಿಗೇ ಆಗಲಿ ಕಂದಾಯ ಹಾಕಬೇಕಾದರೆ ಬಹಳ ವ್ಯಥೆಯಾಗುತ್ತದೆ, ಅತೃಪ್ತಿಯೂ ಆಗುತ್ತದೆ. ಕಾರಣ ಇಷ್ಟೆ. ತೆರಿಗೆ ಕೊಡತಕ್ಕವರಿಗೆ ಯಾವಾಗಲೂ ನೋವುಂಟಾಗುವುದು ಸಹಜ. ಆದರೂ ಈ ಬಿಲ್ಲಿನ ಉದ್ದೇಶವನ್ನು ನಾವು ಗಮನಿಸಬೇಕು. ಸಮಾಜದ ಏರುಪೇರುಗಳನ್ನು ಸರಿಮಾಡುವುದಕ್ಕೆ ಇದು ಸಹಾಯಕವಾಗಿರುವುದಲ್ಲದೆ, ನಮ್ಮ ಯೋಜನೆಗಳಿಗೆ ಹಣ ಸಹಾಯಮಾಡುವುದಾಗಿದೆ. ಈ ದೃಷ್ಟಿಯಿಂದಲೇ ಕೆಲವು ಮಾನ್ಯ ಸದಸ್ಯರುಗಳು ಹೇಳಿದ್ದಾರೆ, ಇದನ್ನು ಕೇವಲ 20 ಲಕ್ಷ ರೂಪಾಯಿಗಳವರೆಗೆ ವರಮಾನ ಕೊಡುವಂತೆ ಅಂದಾಜು ಮಾಡಿದೆ. ವಾಸ್ತವವಾಗಿ ಅಷ್ಟೂ ಬರಲಾರದು. ಇನ್ನೂ ಹೆಚ್ಚಿಗೆ ಕಂದಾಯ ಹಾಕಿ ಎಲ್ಲಾ ಬಾಬುಗಳಿಗೂ ಕಂದಾಯ ವಿಧಿಸುವುದಕ್ಕೆ ಮನಸ್ಸುಮಾಡಿ ಜಾರಿಗೆ ತಂದಿದ್ದರೆ ಚೆನ್ನಾಗಿತ್ತೆಂದು ಸಹ ಹೇಳಿದರು. ಹೋದ ವರ್ಷ ನಮಗೆಲ್ಲರಿಗೂ ಗೊತ್ತಿರುವಂತೆ ಕೆಲವಾರು ತೆರಿಗೆಗಳನ್ನು ಹಾಕಬೇಕೆಂದು ಹೇಳಿ ಒಂದು ಮಸೂದೆಯನ್ನು ತಂದಾಗ, ಅದರಿಂದ ರೈತನಿಗೆ ಅನಾನುಕೂಲವಾಗುತ್ತದೆಂದು ಹೇಳಿ ಸಭೆಯವರು ಅಭಿಪ್ರಾಯ ವ್ಯಕ್ತಪಡಿಸಿದ್ದರ ಮೇಲೆ ಅದನ್ನು ಸರ್ಕಾರದವರು ವಾಪಸು ತೆಗೆದುಕೊಳ್ಳಬೇಕಾಗಿ ಬಂದಿದ್ದಂತೆ ಈ ವರ್ಷವೂ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಎಂದು ಹೇಳಿ ತೆರಿಗೆ ಹಾಕಬೇಕೆಂದು ತಂದಿರುವ ಮಸೂದೆಯಿಂದ ರೈತರಿಗೆ ಅನಾನುಕೂಲವಾಗುತ್ತದೆಂದು ಹೇಳಿ ಇದನ್ನು ಇನ್ನೂ ಸ್ವಲ್ಪ ನಿಧಾನವಾಗಿ ತಂದಿದ್ದರೆ ಚೆನ್ನಾಗಿತ್ತೆಂದು ಕೆಲವರು ವಾದಿಸಿದರು. ಅವರ ವಾದಕ್ಕೇ ನಾವು ಪುರಸ್ಕಾರ ಕೊಡುವುದಾದರೆ, ನಮಗೆ ಇನ್ನು ಬೇರೆ ತೆರಿಗೆ ಹಾಕತಕ್ಕ ಯಾವ ಬಾಬೂ ಸಹ ಕಾಣುವುದಿಲ್ಲ. ದೇಶದ ಮುಂದೆ ಪಂಚವಾರ್ಷಿಕ ಯೋಜನೆ ಆಗತಕ್ಕದ್ದಿದೆ, ಜೊತೆಗೆ ವಿದ್ಯಾಭ್ಯಾಸ ಸುಧಾರಣೆ ಜಾರಿಗೆ ಬಂದಿದೆ. ಸಾಲದಕ್ಕೆ, ಪ್ರಶ್ನೋತ್ತರಗಳ ಕಾಲದಲ್ಲಿ ಅನೇಕ ರೀತಿಯ ಕಟುವಾದ ಪ್ರಶ್ನೆಗಳನ್ನು ಹಾಕಿ ಅನೇಕ ಕೆಲಸ ಕಾರ್ಯಗಳಾಗಬೇಕಾಗಿವೆಯೆಂದು ಹೇಳಿ ಸರ್ಕಾರದ ಮುಂದೆ ಕೋರಿಕೆಗಳನ್ನಿಡುತ್ತಿದ್ದಾರೆ. ಇಷ್ಟೆಲ್ಲಾ ಕೆಲಸಗಳನ್ನು ಮಾಡಿಕೊಡಬೇಕೆಂದು ಕೇಳುತ್ತಿರುವಂತೆ ಯಾವುದಾದರೊಂದು ರೀತಿಯಿಂದ ಆದಾಯ ಬರತಕ್ಕ ಮಾರ್ಗವನ್ನು ಕಲ್ಪಿಸಿಕೊಡದೆಹೋದರೆ, ಈ ಕೆಲಸ ಕಾರ್ಯಗಳನ್ನು ಮಾಡುವುದು ಹೇಗೆ ಸಾಧ್ಯ ಎಂಬುದನ್ನು ನಾವು ಯೋಚಿಸಬೇಕಾಗಿದೆ. ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ಎಂಬುದನ್ನು ಸ್ವಲ್ಪಮಟ್ಟಿಗಾದರೂ, ಈ ಕಂದಾಯವನ್ನು ಹಾಕುವುದರಿಂದ ಸಾಧಿಸಬಹುದಾಗಿದೆಯೆಂದು ಮಾನ್ಯ ಮಂತ್ರಿಗಳೇ ಹೇಳಿದ್ದಾರೆ. ಇದನ್ನಾದರೂ ನಾವು ಗಮನದಲ್ಲಿಟ್ಟುಕೊಂಡರೆ, ಮಾನ್ಯ ಸದಸ್ಯರು ಕೆಲವರು ಹೇಳಿದಂತೆ ಕೆಲವು ಜನರಿಗೆ ತೊಂದರೆಯಾಗುತ್ತದೆಯಾದರೂ ಇದನ್ನು ಒಪ್ಪಿಕೊಳ್ಳುವುದು ಸೂಕ್ತ. ಅಲ್ಲದೆ, ಬಹುತೇಕ ಜನರಿಗೆ ಇದರಲ್ಲಿ ವಿನಾಯಿತಿ ಸೂಚಿಸಿದೆ. ಯಾವ ಜನರು ಕಂದಾಯವನ್ನು ಕೊಡಬೇಕೋ ಅವರಿಗೆ ಆದಷ್ಟುಮಟ್ಟಿಗೆ ತೊಂದರೆಯಾಗದಂತೆ ವಸೂಲು ಮಾಡುವ ಮಾರ್ಗವನ್ನು ಇಲ್ಲಿ ಸೂಚಿಸಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ತೆಂಗು ಮುಂತಾದ ತೋಟಗಾರರಿಗೆ ಮತ್ತು ಇತರ ವ್ಯಾಪಾರದ ಬೆಳೆಗಳನ್ನು ಮಾಡುವವರಿಗೆ, ಆರು ಎಕರೆಗಳವರೆಗೂ ಈ ತೆರಿಗೆ ಕೊಡಬೇಕಾಗಿಲ್ಲವೆಂದು ಹೇಳಿದ್ದಾರೆ. ಅಂದ ಮೇಲೆ, ನಮ್ಮ ದೇಶದಲ್ಲಿ ಆರು ಎಕರೆಗಳಿಗೆ ಮೇಲ್ಪಟ್ಟ ಪ್ರದೇಶದಲ್ಲಿ commercial crops ಬೆಳೆಯತಕ್ಕ ರೈತರು ಎಷ್ಟು ಜನರಿದ್ದಾರೆಂದು ಲೆಕ್ಕಹಾಕುವುದಾದರೆ, ಶ್ರೀ ದೇವರಾಜ ಅರಸ್‌ರವರು ಹೇಳಿದಂತೆ, ಬಹಳ ಕಡಮೆ ಜನ ಇದ್ದಾರೆ. ಶ್ರೀ ಕೆ. ಪಟ್ಟಾಭಿರಾಮ್‌ರವರು ಮೆಣಸಿನಕಾಯಿಗೆ ವಿನಾಯಿತಿ ಕೊಡಬೇಕೆಂದು ಹೇಳಿದರು. ಆರು ಎಕರೆಗಳಲ್ಲಿ ಮೆಣಸಿನಕಾಯಿ ಬೆಳೆಸುವಂಥ ಜನ ಎಷ್ಟು ಜನರಿದ್ದಾರೆಂಬುದನ್ನು ನೋಡಿದರೆ, ಅಂಥವರು ಬಹಳ ಕಡಮೆ ಜನ. ಒಬ್ಬ ಸಾಮಾನ್ಯ ರೈತನೇನಿದ್ದರೂ ತನ್ನ ಜೀವನಕ್ಕೆ ಬೇಕಾದಷ್ಟು ಮಾತ್ರ ವರ್ಷ ವರ್ಷವೂ ಬೆಳೆದುಕೊಳ್ಳುತ್ತಾನೆ. ಸ್ವಲ್ಪ ಹೆಚ್ಚಿಗೆ ಬೆಳೆದರೆ ಸಂತೆಗಳಲ್ಲಿ ಮಾರಿಕೊಳ್ಳುತ್ತಾನೆ. ಅಂಥವನಿಗೇನೂ ಇದರಿಂದ ತೊಂದರೆಯಾಗುವುದಿಲ್ಲ. ಯಾವ ಮನುಷ್ಯ ವ್ಯಾಪಾರದೃಷ್ಟಿಯಿಂದ ಇದನ್ನೇ ಒಂದು ಕಸಬಾಗಿ ಮಾಡಿಕೊಂಡು ಈ ಬೆಳೆಯನ್ನು ಮಾಡುವುದಕ್ಕೆ ತೊಡಗುತ್ತಾನೋ ಅವನ ಮೇಲೆ ಮಾತ್ರ ಈ ಕಂದಾಯ ಬೀಳುತ್ತದೆ. ಅದು ಸಹಜ. ಅದೂ ಇಷ್ಟೇ ಬೀಳಬೇಕೆಂದು ನಿಗದಿ ಮಾಡಿದ್ದಾರೆ. ಹಾಗೆ ನಿಗದಿಮಾಡಿರುವುದು ಸ್ವಲ್ಪ ಹೆಚ್ಚಾಗಿ ಇರಬಹುದು. ಆದ್ದರಿಂದ ಸೆಲೆಕ್ಟ್ ಕಮಿಟಿಯವರು ಈ ತೆರಿಗೆಯ ಮೊಬಲಗನ್ನು ಪುನರ್ವಿಮರ್ಶೆ ಮಾಡಿ, ಸುಲಲಿತವಾದ ರೀತಿಯಲ್ಲಿ ಮತ್ತು ಹೆಚ್ಚಿನ ಆದಾಯಬರುವ ರೀತಿಯಲ್ಲಿ ಈ ಮಸೂದೆಯನ್ನು ತಿದ್ದುಪಡಿಮಾಡಬೇಕೆಂದು ಹೇಳಿ ಈ ಮಸೂದೆಯನ್ನು ಸ್ವಾಗತಿಸುತ್ತೇನೆ.

*ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—ಅಧ್ಯಕ್ಷರೇ, ಈ ಬಿಲ್ಲು ಅವಶ್ಯಕವೇ ಎಂದು ಯೋಚನೆಮಾಡಿದರೆ, ನನ್ನ ದೃಷ್ಟಿಯಲ್ಲಿ ಅದಕ್ಕೇನೂ ಅಂಥ ಅವಶ್ಯಕತೆಯಿಲ್ಲವೆಂದು ತೋರುತ್ತದೆ. ಏಕೆಂದರೆ, ಇದರಿಂದೇನು ಉತ್ಪತ್ತಿ ಬರುತ್ತದೆ ಎಂದುಕೊಂಡಿದ್ದಾರೋ ಆ ಉತ್ಪತ್ತಿ ಬರುವ ಹಾಗೆ ಕಾಣುವುದಿಲ್ಲ. ಕಾರಣ ಇಷ್ಟೆ: ವ್ಯವಸಾಯಗಾರ ದೇಶದ ಬೆನ್ನುಮೂಳೆಯೆಂದು ಹಿಂದಿನಿಂದಲೂ ನಾವು ಭಾವಿಸಿದ್ದೆವು. ಈಗ ಏತಕ್ಕೋ ಕಾಣೆ ಆ ಬೆನ್ನುಮೂಳೆಯೇ ಮುರಿದುಹೋಗುವ ಸ್ಥಿತಿಗೆ ಬರುತ್ತಿದೆ. ಈ ಅಸೆಂಬ್ಲಿಯಲ್ಲಿ ನಡೆದಿರತಕ್ಕ ನಡೆವಳಿಕೆಗ

ಳನ್ನು ನೋಡಿದರೆ, ಸಾಮಾನ್ಯವಾಗಿ ವ್ಯವಸಾಯಕ್ಕೆ ಸಂಬಂಧಪಟ್ಟಂಥ ಜಾಗಗಳ ಮೇಲ್ಲೆಯೇ ಕಾನೂನು ನಡೆವಳಿಕೆಗಳು ಹೆಚ್ಚಿಗೆ ನಡೆಯುತ್ತಿರುವುದು ಕಂಡುಬರುತ್ತಿದೆ. ಟೆನೆನ್ಸಿ ಬಿಲ್ಲು ಬಂತು, ಅದರಿಂದ ಜಮೀನ್ದಾರರಿಗೆ, ಗುತ್ತಿಗೆಗೆ, ಕೊಟ್ಟವರಿಗೆ ಎಷ್ಟು ಉತ್ಪತ್ತಿ ಬರುತ್ತಿತ್ತೋ ಅದು ಕಡಮೆಯಾಯಿತು. ಅರ್ಧಭಾಗ ಬರಬೇಕೆಂದಿದ್ದುದು ಈಗ 1/3 ಭಾಗಕ್ಕೆ ಇಳಿಯಿತು, ಜೊತೆಗೆ ಗುತ್ತಿಗೆಗೆ ಜಮೀನು ಕೊಡುವವರು ಒಂದು ಗೊತ್ತಾದ ಪರಮಾವಧಿಯ ಪರಿಮಿತಿಯ ಮೇಲೆ ಜಮೀನನ್ನು ಇಟ್ಟುಕೊಳ್ಳಕೂಡದೆಂದು ಕಾನೂನು ಮಾಡಿದ್ದೀರಿ.

ಶ್ರೀ ಕಡಿದಾಳ್ ಮಂಜಪ್ಪ.—ಕಾಲವೇ ಕೆಟ್ಟುಹೋಗಿದೆ.

ಶ್ರೀ ವಿ. ವೆಂಕಟಪ್ಪ.—ಈ ಕಾಲದಲ್ಲಿ ವಾಸಮಾಡುವ ಮನುಷ್ಯರು ಕೆಟ್ಟವರು. ನಾವು ಕೆಟ್ಟರೆ ಕಾಲ ಕೆಡುತ್ತದೆ.

ಹೆಚ್ಚು ಉತ್ಪತ್ತಿ ಬರುವವರಿಂದ ಹೆಚ್ಚು ಹಣ ತೆಗೆದುಕೊಳ್ಳುವುದು ನ್ಯಾಯ ಎಂಬ ವಾದವನ್ನು ಯಾರೂ ವಿರೋಧಮಾಡುವ ಸ್ಥಿತಿಯಲ್ಲಿಲ್ಲ. ಆದ್ದರಿಂದ 'ವ್ಯವಸಾಯಗಾರರಿಗೆ ಹೆಚ್ಚಿಗೆ ಉತ್ಪತ್ತಿ ಬರುವಹಾಗಿದ್ದರೆ ಅವರಿಗೆ ಅನ್ವಯಿಸುತ್ತದೆ; ಹೆಚ್ಚಿಗೆ ಇರುವವರಿಂದ ಈ ಉತ್ಪತ್ತಿ ಬರುತ್ತದೆ' ಎಂದು ಹೇಳಿದರು. ಆದರೆ, ಆ ರೀತಿ ಬರಲಾರದು. ಏಕೆಂದರೆ, ಅನೇಕರು ಈ ಕಾನೂನು ಜಾರಿಗೆ ಬಾರದೆಇದ್ದರೂ ಕೂಡ ಈಗಾಗಲೇ ಜಮೀನುಗಳನ್ನು ಮಾರಿಕೊಳ್ಳಲು ಪ್ರಯತ್ನಪಟ್ಟಿದ್ದಾರೆ. ಅದನ್ನು ನೀವು ತಪ್ಪಿಸುವುದಕ್ಕಾಗುವುದಿಲ್ಲ. ಅಂದಮೇಲೆ ಈ ಕಾನೂನನ್ನು ಯಾರಿಗೆ ಅನ್ವಯಿಸಬೇಕು? ಇಷ್ಟು ಸಾವಿರಕ್ಕಿಂತ ಹೆಚ್ಚಿಗೆ ಬರುವವರಿಗೆ, ಇಷ್ಟು ಎಕರೆಗಳಿಗೆ ಹೆಚ್ಚಿಗೆ ಜಮೀನಿರುವವರಿಗೆ ಈ ಕಾನೂನನ್ನು ಅನ್ವಯಿಸುತ್ತೇವೆಂದು ಹೇಳುತ್ತೀರಿ. ಆದರೆ ಅಂಥವರೊಬ್ಬರಾದರೂ ನಿಮಗೆ ಸಿಕ್ಕುವುದೇ ಕಷ್ಟ. ಆದ್ದರಿಂದ ಈ ಕಾನೂನಿನಿಂದ ಎಷ್ಟು ಉತ್ಪತ್ತಿ ಬರಬಹುದೆಂದು ನಿರೀಕ್ಷಿಸಿದ್ದೀರೋ ಅಷ್ಟು ಬರುವುದಿಲ್ಲ. ಆದ್ದರಿಂದ ಸಮಗ್ರವಾಗಿ ಯೋಚನೆಮಾಡಿ, ಶ್ರೀ ಪಟ್ಟಾಭಿರಾಮನ್‌ರವರು ಹೇಳಿದಹಾಗೆ, ವ್ಯವಸಾಯಗಾರರಿಗೆ ಅನ್ವಯಿಸುವಂತೆ ಏನೇನು ವಿಷಯಗಳಿವೆಯೋ ಅವುಗಳನ್ನೆಲ್ಲಾ scientific ಆಗಿ investigate ಮಾಡಿ ಒಂದೇಸಲ ಸೂಕ್ತವಾದ ರೀತಿಯಲ್ಲಿ ಒಂದು ಕಾನೂನು ತಂದರೆ ಸರಿಹೋಗುತ್ತದೆ; ನಮಗೂ ಒಂದು ತೃಪ್ತಿ ಸಮಾಧಾನ; ಇಲ್ಲಿಗೇ ಎಲ್ಲ ಮುಗಿಯಿತಪ್ಪಾ ಎಂದು ತಾಳ್ಮೆಯಿಂದಿರಬಹುದು. ಹಾಗಿಲ್ಲದೆ, ಈ ರೀತಿ ಒಂದೊಂದಾಗಿ ಬರುತ್ತಿದ್ದರೆ ಮನುಷ್ಯನಿಗೆ ನೆಮ್ಮದಿ ಎಲ್ಲಿರುತ್ತದೆ? ಈ ರೀತಿ ಪದೇ ಪದೇ ನೆಮ್ಮದಿಗೆ ಭಂಗತರುವುದು ಸರಿಯಲ್ಲ. ನೀವು ಯಾವ ಲೆಕ್ಕಾಚಾರ ಹಾಕಿ ಇವುಗಳನ್ನೆಲ್ಲಾ ತರುತ್ತಿದ್ದೀರೆಂಬುದೇ ಗೊತ್ತಾಗುವುದಿಲ್ಲ. 3,50 ರೂಪಾಯಿಗಳಿಗೆ ಮೇಲ್ಪಟ್ಟು ಬರುವವರಿಗೆ ಮಾತ್ರ ಇದು ಅನ್ವಯಿಸುತ್ತದೆಂದು ಹೇಳುತ್ತಾರೆ. ಇನ್ನೊಂದುಕಡೆ 6 ಎಕರೆ ತೋಟವಿರುವವನಿಗೆ ಮಾತ್ರ ಅನ್ವಯಿಸುವುದಿಲ್ಲವೆನ್ನುತ್ತಾರೆ. 6 ಎಕರೆ ತೋಟವಿರುವವನಿಗೆ 3,500 ರೂಪಾಯಿ ಬರುತ್ತಿದೆಯೇ? ಈ ರೀತಿ ತೋಟವಿರುವವರಿಗೆ ಇದು ಅನ್ವಯಿಸಬಾರದೆಂದು ಹೇಳುತ್ತಾರೆ. ಹಾಗಿದ್ದರೆ ತೋಟದಿಂದ 3½ ಸಾವಿರ ರೂಪಾಯಿ ಬರುವುದಿಲ್ಲವೆಂದು ಲೆಕ್ಕಹಾಕಿ ಹೇಳಿದ್ದಾರೆಯೆ? ಇಲಾಖೆಯವರನ್ನು ವಿಚಾರಿಸಿ ಯೋಚನೆಮಾಡಿ, ಉತ್ಪತ್ತಿ ಎಷ್ಟು ಬರಬಹುದು, ವಿನಾಯಿತಿ ಎಷ್ಟು ಕೊಡಬಹುದು ಎಂದು ತಾರತಮ್ಯ ದೃಷ್ಟಿಯಿಂದ ಪರಿಶೀಲಿಸಬೇಕು. ಜಮೀನು ಹೆಚ್ಚಾಗಿದ್ದ ಮಾತ್ರಕ್ಕೇ ಹೆಚ್ಚಾಗಿ ಬೆಳೆಯುತ್ತಾರೆಂದು ಭಾವಿಸಬಾರದು. ನಾನೂ ಮತ್ತು ಲಿಂಗದೇವರು ಆಲ್ ಇಂಡಿಯಾ ಕೋಕನಟ್ ಕಮಿಟಿಯಲ್ಲಿ ಏನು ನಡೆಯುತ್ತದೆಂದು ನೋಡಲು ಹೋಗಿದ್ದೆವು. ನಮ್ಮ ದೇಶದಲ್ಲಿ ತೆಂಗಿನಕಾಯಿ ಸಾಕಾದಷ್ಟು ಬೆಳೆಯುತ್ತಿಲ್ಲ, ಅದನ್ನು ಹೆಚ್ಚುಮಾಡುವುದಕ್ಕೆ ಏನು ಅನುಕೂಲ ಬೇಕೋ ಅದನ್ನು ಕಲ್ಪಿಸಬೇಕು ಎಂಬ ಉದ್ದೇಶದಿಂದ ಆ ಸಮಿತಿಯವರು ಪ್ರಯತ್ನಪಡುತ್ತಿದ್ದರು. ಅವರು ಕಾಸರಗೋಡಿನಲ್ಲಿ ಒಂದು ಕ್ಷೇತ್ರವನ್ನಿಟ್ಟುಕೊಂಡಿದ್ದಾರೆ. ಅಲ್ಲಿ ಒಂದೇ ಕಡೆ 160 ಎಕರೆ ಪ್ರದೇಶದಲ್ಲಿ ತೆಂಗಿನ ಮರಗಳನ್ನು ಬೆಳೆಸಿದ್ದಾರೆ. ಕಳೆದ ಮೀಟಿಂಗ್ ಅಲ್ಲಾಯಿತು. ಅಲ್ಲೇನಾಗುತ್ತದೆಂಬುದನ್ನು ನೋಡಲು ನಾವು ಹೋಗಿದ್ದೆವು. ಖರ್ಚೇನು ಉತ್ಪತ್ತಿಯೇನು ಎಂದು ನೋಡಿದರೆ ಅವರ ಉತ್ಪತ್ತಿಗಿಂತ ಖರ್ಚೇ ಎಷ್ಟೋ ಹೆಚ್ಚಾಗಿದೆ. ಅವರು ಬುದ್ಧಿವಂತರೆಂದು ನಾವು ಭಾವಿಸಿದ್ದೆವು. ಆದರೆ ವಿಷಯ ತಿಳಿದ ಮೇಲೆ ಆ ಭಾವನೆ ಅಳಿಸಿಹೋಯಿತು. ನಿಜವಾದ ಪರಿಸ್ಥಿತಿ ಆ ರೀತಿ ಇರುವಾಗ ಇಂಡಿಯಾ ಸರ್ಕಾರದವರು ಕೊಬ್ಬರಿಯ ಮೇಲೆ ತೆರಿಗೆ ಹಾಕಬೇಕೆಂದು ಒಂದು ಸೂಚನೆಯನ್ನು ಅಲ್ಲಿಗೆ ಕಳುಹಿಸಿದ್ದರು. ನಾನು ಲಿಂಗದೇವರು ಹೀಗೆ ಎರಡು ಮೂರು ಜನ ವ್ಯವಸಾಯಗಾರರ ಪರವಾಗಿ ಅಲ್ಲಿದ್ದೆವು ಉಳಿದವರೆಲ್ಲಾ ಎಕ್ಸ್‌ಪರ್ಟ್ಸ್, ಇಂಡಿಯಾ ಸರ್ಕಾರದ ಟೆಕ್ನಿಕಲ್ ಪೀಪಲ್ ಮುಂತಾದವರು. ಅವರೆಲ್ಲರ ಅಭಿಪ್ರಾಯ ಸಾಧಾರಣವಾಗಿ, ಅದರ ಮೇಲೆ ತೆರಿಗೆ ಹೆಚ್ಚಿಸಿದರೆ ಬೆಲೆ ಹೆಚ್ಚಿ ಸಾಕಾದಷ್ಟು ಸಿಕ್ಕುತ್ತಿಲ್ಲವೆಂದು ಹೇಳುತ್ತಿರುವಾಗ ದೊರೆಯುತ್ತಿರುವುದೂ—ದೊರೆಯದೆ ಹೋಗುತ್ತದೆ, ಹೆಚ್ಚು ಭಾರಹಾಕುವುದು ಸರಿಯಲ್ಲ ಎಂಬುದಾಗಿತ್ತು. ಈಗ ದರ ಹಿಂದೇನಿತ್ತೋ ಅದಕ್ಕಿಂತ ಬಹಳ ಕಡಮೆಯಾಗಿದೆ. ಮಾನ್ಯ ಮಿತ್ರರು ಹೇಳಿದ ಹಾಗೆ, ಈಗ 120 ರಿಂದ 130 ರೂಪಾಯಿವರೆಗೆ ದರವಿದೆ. 300 ರೂಪಾಯಿ ಇದ್ದಾಗ ಏಕೆ ದರ ಇಳಿಸಲು ಸಾಧ್ಯವಿಲ್ಲವೆಂಬುದು ಗೊತ್ತೇ ಇದೆ. ವ್ಯವಸಾಯಗಾರರು ಕೊಡುವ ಕೂಲಿಯನ್ನು ಕಡಿಮೆ ಮಾಡಲು ಅವರಿಗೆ ಶಕ್ತಿಯಿಲ್ಲ. ಮಿನಿಮಮ್ ವೇಜಸ್ ಆಕ್ಟ್ ಆಗಬೇಕೆಂದಿದೆ. ವ್ಯವಸಾಯದ ಬೆಳೆ ಕಡಿಮೆಯಾಗಿದೆ, ಬೆಲೆಗಳು ಇಳಿಯುತ್ತಿವೆ, ಎಂದು ಹೇಳಿದರೂ ಕೂಲಿ ಕಡಿಮೆಯಾಗಿಲ್ಲ. ಉತ್ಪತ್ತಿ ಎಷ್ಟಾಗುತ್ತದೆಯೋ ಅದಕ್ಕೆ ತಕ್ಕಷ್ಟು ಖರ್ಚು ಆಗಲೇಬೇಕು. ಈಗ ಕಾಫಿ ಮತ್ತು ಅಡಿಕೆ ಬೆಳೆಯ ವಿಚಾರದಲ್ಲಿ ಎಷ್ಟುಮಟ್ಟಿಗೆ ಕಷ್ಟವಿದೆ ಎಂಬುದನ್ನು ಹೇಳಿದರು. ಈ ವಿಷಯಗಳೆಲ್ಲವನ್ನೂ ನಾವು ಹೇಳುವುದು ಸಾಧ್ಯವಿಲ್ಲ. ತಾವು ಪರಿಮಿತಿ ಇಟ್ಟಿದ್ದೀರಿ. ಈ ವರಮಾನ ತೆರಿಗೆಯನ್ನು ಯಾವರೀತಿ ಹಾಕಬೇಕು, ಇಂಡಸ್ಟ್ರೀಸ್ ಎಂದು ಪರಿಗಣಿಸಿ ಹಾಕಬೇಕೆ ಅಥವಾ ವ್ಯವಸಾಯ ಎಂದು ಪರಿಗಣಿಸಿ ಹಾಕಬೇಕೆ ಹೇಗೆ ಎಂದು ಕೆಲವರು ಕೇಳಿದರು. ಲೇವಾದೇವಿ ಮಾಡುವ ಸಂದರ್ಭದಲ್ಲಿ ಮಿನಿಮಮ್ ಸಂಪಾದನೆ 4,3 0 ರೂಪಾಯಿ ಇಟ್ಟರೆ ಅದು ಕಷ್ಟವಿಲ್ಲದ ಸಂಪಾದನೆ. ವ್ಯವಸಾಯಮಾಡಿ ಸಂಪಾದಿಸುವುದು ಖಚಿತವಾಗಿ ನಿಗದಿಯಾದ ಆದಾಯವಲ್ಲ. ಮಾವಿನ ಫಸಲನ್ನು ಈ ತೆರಿಗೆಯ ಪಟ್ಟಿಯಲ್ಲಿ ಸೇರಿಸಲಾಗಿದೆ. ಕ್ಲೋಸ್‌ಪೇಟೆ ತಾಲ್ಲೂಕಿನಲ್ಲಿ ಬಹಳ ದೊಡ್ಡ ಮಾವಿನ ತೋಟಗಳಿವೆ. ಅಲ್ಲಿ ಒಂದು ವರ್ಷ 6-7 ಸಾವಿರ ರೂಪಾಯಿ ಉತ್ಪತ್ತಿ ಬಂದರೆ ಇನ್ನೊಂದು ವರ್ಷ 500 ರೂಪಾಯಿ ಸಹ ಬರುವುದಿಲ್ಲ. ಹೀಗಾದರೆ ಹೇಗೆ ತೆರಿಗೆ ಕೊಡುವುದು? ಲೆಖ್ಖ ಬರೆದುಕೊಂಡು ಹೋಗುವವರು, ಹೋದ ವರ್ಷ 7,00 ರೂಪಾಯಿ ಉತ್ಪತ್ತಿ ಆಗಿದೆ, ಈ ವರ್ಷ 700 ರೂಪಾಯಿ ಆಗಿದೆಯೆಂದರೆ, ಅದನ್ನು ನಂಬುವುದು

(ಶ್ರೀ ಪಿ. ವೆಂಕಟಪ್ಪ.)

ಹೇಗೆ ಎಂದು ಕೇಳುತ್ತಾರೆ. ಏನು ಹೇಳಿದರೂ ಅವರು ಒಪ್ಪುವುದಿಲ್ಲ, ಒಂದೆರಡು ಸಾವಿರ ರೂಪಾಯಿ ಹೆಚ್ಚು ಕಡಿಮೆಯಾದರೆ ಪರವಾಗಿಲ್ಲ, ಆದರೆ ಹೀಗೆ ಐದಾರು ಸಾವಿರ ರೂಪಾಯಿ ವ್ಯತ್ಯಾಸವಾದರೆ ಏನು ಮಾಡುವುದು ? ಆಲೂಗಡ್ಡೆ ಫಸಲು ಒಂದೊಂದು ಸಲ ಪೂರ್ಣವಾಗಿ ಹೋಗಿಬಿಡುತ್ತದೆ. ಕಷ್ಟವನ್ನು ತಪ್ಪಿಸಬೇಕೆಂಬ ಉದ್ದೇಶ ಮಾನ್ಯ ಮುಖ್ಯಮಂತ್ರಿಗಳಿಗೆ ಕೂಡ ಇದೆ. ಹೋದಸಲ ಅಗ್ರಿಕಲ್ಚರಲ್ ಇಕ್ಕಂ ಮೇಲೆ ಇಕ್ಕಂಟ್ಯಾಕ್ಸ್ ಹಾಕಿದರೆ ಈ ವಿಧವಾದ ತೊಂದರೆ ಯಾಗುತ್ತದೆಂದು ಅವರೇ ಹೇಳಿದ್ದರು. ಆದರೂ ಈಗ ವಿಧಿಯಿಲ್ಲದೆ ಎಂದಾದರೂ ಒಂದು ದಿವಸ ಇದು ಬಂದೇ ಬರುತ್ತದೆ, ಹಾಕಲೇಬೇಕು ಎಂಬ ದೃಷ್ಟಿಯಿಂದ ಹಾಕಿದ್ದಾರೆ. ಆದರೆ ಕಷ್ಟವೇನಾಗುತ್ತದೆಂಬುದನ್ನು ಸ್ವಲ್ಪ ಮಟ್ಟಿಗೆ ತಿಳಿದು ಪರಿಹಾರ ಮಾಡಿದರೆ ಒಳ್ಳೆಯದು. ಬಾಳೆಯಹಣ್ಣಿನ ಮೇಲೂ ಈ ತೆರಿಗೆ ಹಾಕಿದ್ದಾರೆ. ಮಾವಿನ ಫಸಲಿಗೆ ಏನುಕಷ್ಟವಿದೆಯೋ ಬಾಳೆಯ ಫಸಲಿಗೂ ಅದೇ ಕಷ್ಟವಿದೆ ; ಗಾಳಿ ಬೀಸಿದರೆ ಬಾಳೆ ಗಿಡಗಳು ಮಗಚಿ ಹೋಗುತ್ತವೆ. ಮಳೆ ಚೆನ್ನಾಗಿ ಆದರೆ ಪರವಾಗಿಲ್ಲ. ಇಲ್ಲದಿದ್ದರೆ ಎಲೆಕೂಡ ಸಿಕ್ಕುವುದಿಲ್ಲ.

1955ನೆಯ ಇಸವಿ ಏಪ್ರಿಲ್ 1ನೆಯ ತಾರೀಖಿನಿಂದ ಈ ಕಾನೂನು ಜಾರಿಗೆ ಬಂದರೂ ಇದರ ಹಿಂದಿನ ವರ್ಷ ಅಂದರೆ 1955ನೆಯ ಇಸವಿ ಮಾರ್ಚಿ ಕೊನೆಯ ವರೆಗೆ ತೆರಿಗೆ ಕೊಡಬೇಕಾಗುತ್ತದೆ. ಇದು ಸೂಕ್ತವಲ್ಲ. ಇದನ್ನು ಸರಿಪಡಿಸಬೇಕು. ಈ ವರ್ಷ ಬರುವ ಉತ್ಪತ್ತಿ ಮತ್ತು ಮುಂದಿನ ವರ್ಷ ಬರುವ ಬೆಳೆ ಇದಕ್ಕೆ ಮಾತ್ರ ಅನ್ವಯಿಸುವ ಹಾಗೆ ಇರಬೇಕೇ ಹೊರತು ಹಿಂದಿನದಕ್ಕೆ ಅನ್ವಯಿಸುವ ಹಾಗೆ ಇರಬಾರದು. ವ್ಯವಸಾಯಗಾರರ ದೃಷ್ಟಿಯಿಂದ ಈ ಬಿಲ್ಲು ಈಗ ತಂದಿರುವ ರೀತಿಯಲ್ಲಿ ಅನಾವಶ್ಯಕವೇನೋ ಎಂದು ನನಗೆನ್ನಿಸುತ್ತದೆ

*ಶ್ರೀ ಬಿ. ರಾಚಯ್ಯ (ಯಳಂದೂರು—ಅನುಸೂಚಿತ ಜಾತಿಗಳು.)—ಸ್ವಾಮಿ ವ್ಯವಸಾಯ ಉತ್ಪನ್ನಗಳಮೇಲೆ ಆದಾಯ ತೆರಿಗೆಯನ್ನು ಹಾಕುವುದಕ್ಕೆ ಮಂಡಿಸಿರುತಕ್ಕಂಥ ಈ ಮಸೂದೆಯನ್ನು ಸಮರ್ಥಿಸುತ್ತಾ ಒಂದೆರಡು ವಿಷಯಗಳನ್ನು ಈ ಸಭೆಯ ಮತ್ತು ತಮ್ಮ ಗಮನಕ್ಕೆ ತರಬೇಕೆಂದಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಈ ಮಸೂದೆಯನ್ನು ಮಂಡಿಸುವಾಗ ಒಂದೆರಡು ವಿಷಯಗಳನ್ನು ತಿಳಿಸಿದರು. "ಪಂಚವಾರ್ಷಿಕ ಯೋಜನೆಯ ಪ್ರಕಾರ ನಾವು 8 ಕೋಟಿ ರೂಪಾಯಿಗಳನ್ನು ತೆರಿಗೆಯ ರೂಪದಲ್ಲಿ ವಸೂಲುಮಾಡಬೇಕಾಗಿದೆ, ಈಗಾಗಲೇ ಹಾಕಿರುವ ತೆರಿಗೆಯಿಂದ 3 ಕೋಟಿ ರೂಪಾಯಿಗಳು ಬಂದಿವೆ, ಇನ್ನೂ 5 ಕೋಟಿ ರೂಪಾಯಿಗಳನ್ನು ಹೊಸ ತೆರಿಗೆ ಮೂಲಕ ಸರ್ಕಾರದ ಬೊಕ್ಕಸಕ್ಕೆ ನಾವು ತೆಗೆದುಕೊಳ್ಳಬೇಕಾಗಿದೆ" ಎಂದು ಹೇಳಿದರು. ನಮ್ಮ ಸಂಸ್ಥಾನದಲ್ಲಿ ಯಾವ ಯಾವ ರೀತಿಯಲ್ಲಿ ತೆರಿಗೆಗಳನ್ನು ಹಾಕಿ ಸರ್ಕಾರದ ಬೊಕ್ಕಸಕ್ಕೆಹಣ ಬರಮಾಡಿಕೊಳ್ಳಬಹುದೋ ಅದನ್ನು ಮಾಡಿ ಆ ಸಾಧನ ಸಂಪತ್ತುಗಳೆಲ್ಲಾ ಮುಗಿದು ಹೋದಮೇಲೆ ಇಂಡಿಯಾ ಸರ್ಕಾರದ ಬಳಿಗೆ ಹೋಗಿ ಗ್ರಾಂಟು ಅಥವಾ ಸಾಲವನ್ನು ಕೇಳಲು ಅವಕಾಶವಿದೆ. ಹಾಗಿಲ್ಲದಿದ್ದರೆ ಬಹುಶಃ ನಾವಲ್ಲದಿದ್ದರೆ ಇಂಡಿಯಾ ಸರ್ಕಾರದವರಾದರೂ ಒಂದಲ್ಲ ಒಂದು ರೀತಿಯಲ್ಲಿ ತೆರಿಗೆ ಹಾಕಲು ಅವಕಾಶವಾಗುತ್ತದೆ. ಅಲ್ಲದೆ ಸುಮಾರು 12 ಸಂಸ್ಥಾನಗಳಲ್ಲಿ ಈ ತೆರಿಗೆಯನ್ನು ಈಗಾಗಲೇ ಹಾಕಿದ್ದಾರೆ. ಕೆಲವು ಸಂಸ್ಥಾನಗಳಲ್ಲಿ ಸೂಪರ್‌ಟ್ಯಾಕ್ಸನ್ನು ಕೂಡ ಹಾಕಿದ್ದಾರೆ. ನಾವು ಅದಕ್ಕೆ ಕೈ ಹಾಕದೆ ಅಗ್ರಿಕಲ್ಚರಲ್ ಇಕ್ಕಂಟ್ಯಾಕ್ಸ್ ಮಾತ್ರ ಹಾಕಿದ್ದೇವೆ. ಇಡೀ 12 ಸಂಸ್ಥಾನಗಳಲ್ಲಿ 3,000 ರೂಪಾಯಿಗಳ ಮಿನಿಮಮ್ ಇರುವಾಗ ನಾವು ಅದನ್ನು 3,500 ರೂಪಾಯಿಗಳಿಗೆ ಹೆಚ್ಚಿಸಿ ತೆರಿಗೆ ವಿಧಿಸುವುದರಿಂದ ಸಾಮಾನ್ಯವಾಗಿ ಬಡಜನರಿಗೆ ಹೆಚ್ಚಿನ ರೀತಿಯಲ್ಲಿ ನೇರವಾಗಿ ಇದು ಹೊರೆಯಾಗುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಸಮಾಜವಾದ ತತ್ವದ ತಳಹದಿಯಮೇಲೆ ಆರ್ಥಿಕ ಪರಿಸ್ಥಿತಿಯನ್ನು ಸರಿಪಡಿಸುವುದಕ್ಕೆ, ಏರುಪೇರಿರುವುದನ್ನು ಕ್ರಮಪಡಿಸುವುದಕ್ಕೆ, ಹೆಚ್ಚುತೆರಿಗೆಯನ್ನು ಹೊರುವುದಕ್ಕೆ ಯಾರಿಗೆ ಶಕ್ತಿ ಇದೆಯೋ ಮತ್ತು ಹೆಚ್ಚು ಉತ್ಪತ್ತಿಯನ್ನು ಮಾಡಿಕೊಳ್ಳಲು ಯಾರಿಗೆ ಅವಕಾಶವಿದೆಯೋ ಅವರಮೇಲೆ ತೆರಿಗೆ ಹಾಕುವುದು ಸೂಕ್ತ ಎಂಬ ತತ್ವದ ಮೇಲೆ ಇದನ್ನು ಹಾಕಿರುವುದರಿಂದ ಸಾಮಾನ್ಯವಾಗಿ ಇಡೀ ಜನತೆಯ ಮೇಲೆ, ದೇಶದಾದ್ಯಂತ ಇರುವ ಜನರ ಮೇಲೆ ಇದು ಬೀಳುವುದಿಲ್ಲ, ಕೇವಲ ಐದಾರು ಸಾವಿರ ಜನರಮೇಲೆ ಬೀಳುತ್ತದೆ, ಎಂದು ಹೇಳಿದಿರಿ. ಇದನ್ನು ನಾನು ಸಮರ್ಥನೆಮಾಡುತ್ತೇನೆ.

ಲೆಕ್ಕಪತ್ರ ಇಡುವುದಕ್ಕೆ ಬಹಳ ತೊಂದರೆ ಇದೆ, ಅದನ್ನು ತಪ್ಪಿಸಬೇಕೆಂದು ಮಾನ್ಯ ಸದಸ್ಯರು ಅನೇಕರು ಹೇಳುತ್ತಿದ್ದಾರೆ. ಲೆಕ್ಕಪತ್ರವಿಡುವುದಕ್ಕೆ ಸಾಧ್ಯವಿಲ್ಲದಿದ್ದರೆ ಏನು ತೆರಿಗೆ ವಿಧಿಸಬಹುದೆಂದು 63ನೆಯ ಸೆಕ್ಷನ್ ಪ್ರಕಾರ ಅರ್ಜಿ ಹಾಕಬಹುದು. ಮಿನಿಮಮ್ 6 ಎಕರೆ, 3,000 ರೂಪಾಯಿ ಉತ್ಪತ್ತಿ ಎಂದಿರುವುದನ್ನು ಇನ್ನೂ ಸ್ವಲ್ಪ ತೆಂಗು ಮುಂತಾದ ಬೆಳೆಗಳ ವಿಚಾರದಲ್ಲಿ ಹೆಚ್ಚಿಸಬೇಕು. ಎಕರೇಜ್ ಲಿಮಿಟ್ಟನ್ನು ಹೆಚ್ಚಿಸಬೇಕು ಎಂದು ಸೂಚಿಸುತ್ತೇನೆ. ಅಗ್ರಿಕಲ್ಚರಲ್ ಇಕ್ಕಂಟ್ಯಾಕ್ಸ್ ಮಿನಿಮಮ್ 3,500 ರೂಪಾಯಿ ಏನಿದೆಯೋ ಅದನ್ನು ಒಂದು ಫ್ಯಾಮಿಲಿಗೆ ಸಂಬಂಧಪಟ್ಟಂತೆ ಅವಿಭಕ್ತ ಕುಟುಂಬಕ್ಕೆ 7,000 ರೂಪಾಯಿಗಳವರೆಗೆ ನಿವ್ವಳ ಆದಾಯ ಬರುವವರಿಗೆ ಈ ತೆರಿಗೆ ಅನ್ವಯಿಸುವುದಿಲ್ಲ ಎಂದು ಕೂಡ ಸ್ಪಷ್ಟಪಡಿಸಿದ್ದಾರೆ. ಅಲ್ಲದೆ ಇಲ್ಲಿ ಬರುವ ಉತ್ಪತ್ತಿ ಕೇವಲ 20 ಲಕ್ಷ ರೂಪಾಯಿ. ಆದ್ದರಿಂದ ಈ ಸಂದರ್ಭದಲ್ಲಿ ಅನಾವಶ್ಯಕವೋ ಏನೋ ಎಂದು ಹೇಳಿದರು ಒಂದುಸಾರಿ ತೆರಿಗೆಯನ್ನು ಅಥವಾ ಕಂದಾಯವನ್ನು ಹೆಚ್ಚಿಸುವುದಕ್ಕೆ ಬಂದಾಗ ಸಾಧ್ಯವಿಲ್ಲವೆಂದು ಹೇಳುತ್ತಾರೆ. ಇನ್ನೊಂದುಸಾರಿ ಅಗ್ರಿಕಲ್ಚರಲ್ ಇಕ್ಕಂಟ್ಯಾಕ್ಸ್ ಸಾಮಾನ್ಯವಾಗಿ ಯಾರಿಗೆ ಉತ್ಪನ್ನ ಜಾಸ್ತಿ ಇದೆಯೋ ಯಾರು ಹೊರಲು ಸಾಧ್ಯವಿದೆಯೋ ಅವರಮೇಲೆ ಹಾಕುವುದಕ್ಕೆ ವಿರೋಧಮಾಡುತ್ತಾರೆ." ತೆರಿಗೆ ಹಾಕುವುದಕ್ಕೆ ಅವಕಾಶವಿಲ್ಲವೆಂದರೆ ಕೈಕೊಂಡಿರುವ ಯೋಜನೆಗಳನ್ನು ಬಿಟ್ಟುಬಿಡಬೇಕಾಗುತ್ತದೆ. ಒಂದುಕಡೆ ಯೋಜನೆ ಕಾರ್ಯಗತಮಾಡಬೇಕೆಂದು ವಾದಿಸುತ್ತಾರೆ ; ಹಾಗೆ ಕಾರ್ಯಗತಮಾಡಬೇಕಾದರೆ ಸರ್ಕಾರಕ್ಕೆ ಹಣ ಬರಬೇಕು ಮತ್ತು ಉತ್ಪತ್ತಿಯಾದ ಹಣ ಸದ್ವಿನಿಯೋಗವಾಗಬೇಕು. ಹೀಗೆ ಬಂದ ತೆರಿಗೆಯಲ್ಲಿ ಇಕ್ಕಂಟ್ಯಾಕ್ಸ್ ಆಫೀಸರುಗಳನ್ನು ಸೃಷ್ಟಿಮಾಡುತ್ತಾ ಹೋದರೆ ಕೇವಲ 1-2 ಲಕ್ಷ ರೂಪಾಯಿ ಅದಕ್ಕೇ ವಿನಿಯೋಗವಾಗಬಹುದೆಂಬ ಒಂದು ಅನುಮಾನವಿದೆ.

5 P.M.

ಈ ಫೈನಾನ್ಷಿಯಲ್ ಮೆಮೊರಾಂಡಂನಲ್ಲಿ.—

"The Act is proposed to be administered by the Revenue Department and except a sum of Rs.50,000 per annum for the additional ministerial staff and other miscel-

laneous expenditure, no other expenditure is expected to be incurred."

ಎಂದು ಹೇಳಿದ್ದೀರಿ. ಈಗ ರೆವಿನ್ಯೂ ಡಿಪಾರ್ಟ್‌ಮೆಂಟಿನ ಮುಖಾಂತರ ಕೂಡ ಈ ತೆರಿಗೆಯನ್ನು ವಸೂಲುಮಾಡುವುದಕ್ಕೆ ಅವಕಾಶವಿದೆ. ಅಲ್ಪಸ್ವಲ್ಪ ಖರ್ಚುಮಾಡಬೇಕಾಗಿದೆ ಎಂದು ಹೇಳಿದ್ದೀರಿ ; ಅದನ್ನು ಕೂಡ ಕಡಿಮೆಮಾಡುವುದು ಅಗತ್ಯ ಎಂದು ಹೇಳಿ ಸಂದರ್ಭದಲ್ಲಿ ಸೂಚಿಸುತ್ತೇನೆ.

ಲೆಕ್ಕಪತ್ರಗಳನ್ನು ಬರೆಯುವುದಕ್ಕೆ ಬದಲಾಗಿ Part I ನಲ್ಲಿ ಕೆಲವು ವಿವರಣೆಗಳನ್ನು ಕೊಟ್ಟಿದ್ದೀರಿ. ಅದರಲ್ಲಿ flat-rate ಎಂದು ಹೇಳಿ 100 ಎಕರೆ ಮೇಲೆ ಇದ್ದರೆ ಇಷ್ಟು ತೆರಿಗೆ ಕೊಡಬೇಕು, ಕಮರ್ಷಿಯಲ್ ಕ್ರಾಪ್ ಆದರೆ ಇಷ್ಟು ತೆರಿಗೆ ಕೊಡಬೇಕು ಎಂದು ಹೇಳಿ ನಿಗದಿಮಾಡಿದರೆ ಒಳ್ಳೆಯದು, ಲೆಕ್ಕಪತ್ರಗಳನ್ನು ಬರೆಯುವುದರಷ್ಟು ತೊಡಕಾಗಲಾರದು. ಮತ್ತು ಸರ್ಕಾರಕ್ಕೂ ಕೂಡ ಸುಲಲಿತವಾಗಿ ಹಣ ವಸೂಲುಮಾಡುವುದಕ್ಕೆ ಒಂದು ಒಳ್ಳೆಯ ವ್ಯವಸ್ಥೆ ಮಾಡಿದಹಾಗಾಗುತ್ತದೆ ಎಂದು ಹೇಳಿ, ಈ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಬಿಲ್ಲು ಕೇವಲ ಬಡವರಮೇಲೆ ಬೀಳದೆ ಯಾರಿಗೆ ಉತ್ಪನ್ನಮಾಡಲು ಶಕ್ತಿ ಇದೆಯೋ ಮತ್ತು ಯಾರು ಹೆಚ್ಚಿನ ಲಾಭ ಪಡೆಯುತ್ತಾರೋ ಅವರಮೇಲೆ ಬೀಳುವುದಾಗಿರುವುದರಿಂದ ಇದು ನಮ್ಮ ಸಮಾಜವಾದದ ತತ್ವಕ್ಕನುಗುಣವಾಗಿದೆ ಎಂದು ಹೇಳಿ, ಈ ಮಸೂದೆಯನ್ನು ಸಮರ್ಥಿಸುತ್ತೇನೆ.

ಶ್ರೀ ಕೆ. ಲಕ್ಕಪ್ಪ (ಚನ್ನರಾಯಪಟ್ಟಣ).—ಕಮರ್ಷಿಯಲ್ ಕ್ರಾಪ್ಸ್‌ಮೇಲೆ ತೆರಿಗೆ ಹಾಕಬೇಕು ಎಂದು ಹೇಳಿ ಯೋಚನೆಮಾಡಿದ್ದೀರಿ. ಕಳೆದಸಾರಿ ಈ ತೆರಿಗೆಯನ್ನು ಹಾಕಬೇಕು ಎಂದು ಯೋಚನೆಮಾಡಿದಾಗ ಒಂದು ಶಾಸ್ತ್ರೀಯವಾದ ಕ್ರಮವನ್ನು ಅನುಸರಿಸದೇ ತೆರಿಗೆ ಹಾಕುವುದು ಒಳ್ಳೆಯದಲ್ಲ ಎಂತಲೂ ಮತ್ತು ಕಾಫಿ, ಕಾರ್ಡಮಂ ಪ್ಲಾಂಟೇಷನ್‌ಗಳ ಮೇಲೆ ಫ್ಲ್ಯಾಟ್‌ರೇಟ್‌ಮೇಲೆ ಕಂದಾಯ ಹಾಕಬೇಕೆಂತಲೂ ಯೋಚನೆಮಾಡಲಾಗಿತ್ತು. ಮನಸ್ಸಿಗೆ ಬಂದ ರೀತಿಯಲ್ಲಿ ಕಂದಾಯವನ್ನು ಹಾಕುವುದ ಸೂಕ್ತವಲ್ಲ, ಸರ್ವಸಮ್ಮತವಾದ ರೀತಿಯಲ್ಲಿ ಕಂದಾಯವನ್ನು ಹಾಕಬೇಕು ಎಂದು ಹೇಳಿ ಕಳೆದಸಾರಿ ಪ್ರಸ್ತಾಪಮಾಡಿದ್ದೇವೆ ಅದರ ಪ್ರಕಾರ ಈ ಸಾರಿ ತಾವು ಯೋಚನೆಮಾಡಿರುವುದೇನೋ ಸಾಧುವಾದ ಕ್ರಮವಾಗಿ ಕಾಣುತ್ತಿದೆ; ಆದರೆ ಇದನ್ನು ಅನುಷ್ಠಾನಕ್ಕೆ ತರುವ ಮುನ್ನ ಬಹಳ ದೀರ್ಘವಾಗಿ ಯೋಚನೆಮಾಡಿ ಇದನ್ನು ನಾವು ಕಾರ್ಯಗತಮಾಡಬೇಕಾಗಿದೆ. ಈಗತಾನೆ ಗೊತ್ತಾಗಿರುವಂತೆ ಈ ಮಸೂದೆಯನ್ನು ಸೆಲೆಕ್ಟ್‌ಕಮಿಟಿಗೆ ಕಳುಹಿಸಿ ಅವರು ಎರಡು ಮೂರು ದಿವಸದಲ್ಲೇ ಎಂದರೆ 16ನೇ ತಾರೀಖಿನ ಒಳಗಾಗಿ ಅವರ ವರದಿಯನ್ನು ಈ ಸಭೆಯಮುಂದೆ ಇಡಬೇಕಾಗಿದೆ. ಇದರಿಂದ ಏನು ತೋರುತ್ತದೆ ಎಂದರೆ ಅವಸರ ಅವಸರವಾಗಿ ಎಲ್ಲವನ್ನೂ ಪರಿಶೀಲನೆಮಾಡಿ ಎರಡು ಮೂರು ದಿವಸಗಳಲ್ಲೇ ಸೆಲೆಕ್ಟ್ ಕಮಿಟಿಯವರು ಅವರ ವರದಿಯನ್ನು ಕೊಟ್ಟು ಈ ಅಧಿವೇಶನದಲ್ಲೇ ಈ ಮಸೂದೆ ಯನ್ನು ಪಾಸ್‌ಮಾಡಿಸಬೇಕೆಂಬ ಮನೋಭಾವ ಸರ್ಕಾರದವರಿಗೆ ಇರುವಹಾಗೆ ಇದೆ. ಈ ರೀತಿ ಸರವಾಗಿ ಮಾಡುವುದು ಖಂಡಿತವಾಗಿಯೂ ಸಾಧುವಾದ ಅವಸರ ಅವ ಮಾರ್ಗವಲ್ಲ. ಈಗಾಗಲೇ ಅನೇಕ ಜನ ಸದಸ್ಯರು ಸೂಚನೆಮಾಡಿರುವಂತೆ ಅನೇಕ ಕ್ಲಿಷ್ಟವಾದ ಸಮಸ್ಯೆಗಳು ಬರುವ ಸನ್ನಿವೇಶ ಇದೆ ಎಂಬುದು ಎಲ್ಲರಿಗೂ ತಿಳಿದ ವಿಷಯ.

ನಾವು ಇದನ್ನು ಇನ್ನೂ ದೀರ್ಘವಾಗಿ ಪರಿಶೀಲನೆ ಮಾಡಿದ್ದೇ ಆದರೆ, ಇನ್ನೂ ಅನೇಕ ಸಮಸ್ಯೆಗಳು ಉದ್ಭವಿಸುವ ಹಾಗೆ ಕಾಣುತ್ತದೆ. ಇದನ್ನು ಎಲ್ಲರ ಮನಸ್ಸಿಗೂ ಒಪ್ಪುವಹಾಗೆ ಮತ್ತು ಎಲ್ಲರಿಗೂ ಒಂದು ಸಮಜಾಯಿಷಿ ಕೊಡತಕ್ಕಂಥ ರೀತಿಯಲ್ಲಿ ಈ ಬಿಲ್ಲನ್ನು ತಯಾರಿಸಬೇಕಾಗಿದೆ. ಈ ಕಾರಣಗಳಿಂದ ನಾವು ಈಗಲೇ ಈ ಬಿಲ್ಲನ್ನು ಈ ಅಧಿವೇಶನದಲ್ಲೇ ಮುಗಿಸುವುದಕ್ಕೆ ಬದಲಾಗಿ ಮುಂದಿನ ಅಧಿವೇಶನದ ವೇಳೆಗೆ ತಂದು ಆಗ ಈ ಬಿಲ್ಲನ್ನು ಸರ್ಕಾರದವರು ಪಾಸ್‌ಮಾಡಿಸಬಹುದು. ಹಾಗೆ ಮಾಡದೆ ನಾವು ಆತುರ ಆತುರದಲ್ಲಿ ಇದನ್ನು ಪಾಸ್‌ಮಾಡಿಬಿಟ್ಟರೆ ನಾವು ಮುಂದೆ ಇನ್ನೂ ಅನೇಕ ತೊಡಕುಗಳಿಗೆ ಸಿಕ್ಕಿಕೊಳ್ಳುತ್ತೇವೆಂದು ನಾನು ತಿಳಿಸಲಿಚ್ಛಿಸುತ್ತೇನೆ ನಾನಾ ದೃಷ್ಟಿಯಿಂದ ಇದನ್ನು ನಾವು ಪರಿಶೀಲನೆಮಾಡಲು ಪ್ರಯತ್ನಿಸಿದಾಗ ನಾನಾ ತೊಂದರೆಗಳಿರುವುದು ಎದ್ದು ಕಾಣುತ್ತದೆ. ರೈತರು ಈ ಖರ್ಚುವೆಚ್ಚಗಳ ಮತ್ತು ಆದಾಯ ಲೆಕ್ಕಪತ್ರಗಳನ್ನಿಡಬೇಕೆಂದರೆ ಅವರಿಗೆ ತುಂಬ ಕಷ್ಟವಿದೆ. ಅವರು ಅನೇಕ ಕಷ್ಟಗಳಿಗೆ ಸಿಕ್ಕಿಕೊಳ್ಳುತ್ತಾರೆ. ಇದರಲ್ಲಿ ಎರಡು ದೊಡ್ಡ ತೊಡಕುಗಳಿವೆ. ಒಂದನೆಯದು ಕೆಲವು ದೊಡ್ಡ ರೈತರಬಗ್ಗೆ ಲೆಕ್ಕಪತ್ರಗಳನ್ನಿಡುವುದರಲ್ಲಿ ಪಟೇಲ್ ಶ್ಯಾನುಭೋಗರು ಹೆಚ್ಚುಕಡಿಮೆಮಾಡುವುದಕ್ಕೆ ಅವಕಾಶವಿದೆ. ಆದುದರಿಂದ ಈ ತೊಂದರೆಯನ್ನು ಪರಿಹರಿಸಲು ಒಂದು ಸರ್ಥ ರ್ಜ್‌ಮೂಲಕ ತೆರಿಗೆ ಹಾಕಿದರೆ ಈ ತೊಂದರೆಗಳಿಂದ ಪಾರಾಗಬಹುದೆಂದು ಶ್ರೀ ಡಿ. ದೇವರಾಜ ಅರಸರು ಹೇಳಿದರು. ಆದರೆ ನಾನು ಹೇಳುತ್ತೇನೆ, ಹಾಗೆ ಮಾಡುವುದು ಸರಿಯಲ್ಲ ಎಂದು. ಇದನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ಹೀಗೆ ಮಾಡಿದರೆ ಹೆಚ್ಚು ಜಮೀನುಳ್ಳ ರೈತರು ತಮಗೆ ತೆರಿಗೆ ಬೀಳದ ರೀತಿಯಲ್ಲಿಅವರು ತಪ್ಪಿಸಿಕೊಳ್ಳುವುದಕ್ಕೆ ಅವಕಾಶವಿದೆ. ಆದರೆ ಬಡರೈತನಿಗೆ ಈ ಕಾನೂನಿನಲ್ಲಿ ರಿಯಾಯಿತಿ ಇಲ್ಲ. ಹತ್ತಾರು ಎಕರೆ ಜಮೀನನ್ನಿಟ್ಟುಕೊಂಡಿರತಕ್ಕಂಥ ಬಡರೈತನಿಗೂ ಮತ್ತು ನೂರಾರು ಎಕರೆ ಜಮೀನಿಟ್ಟುಕೊಂಡಿರತಕ್ಕಂಥ ದೊಡ್ಡ ಜಮೀನ್ದಾರನಿಗೂ ಇಬ್ಬರಿಗೂ ಒಂದೇ ರೀತಿಯಲ್ಲಿ ಕಾನೂನನ್ನು ಉಪಯೋಗಿಸಲಾಗಿದೆ. ಇದು ಸರಿಯಾದುದಲ್ಲ. ಇದಕ್ಕೆ ಬೇರೆ ಮತ್ತೊಂದು ಸರಿಯಾದ ಮಾರ್ಗವನ್ನು ಕಂಡುಹಿಡಿಯಬೇಕಾಗಿದೆ. ಈಗ ತಾವು ಈ ಬಿಲ್ಲಿನಲ್ಲಿ ಸೂಚಿಸಿರುವ ಪ್ರಕಾರ ಎಲ್ಲರೂ ಲೆಕ್ಕಗಳನ್ನಿಡಲೇಬೇಕಾಗಿದೆ. ಆದರೆ ಈ ತೊಂದರೆಯಿಂದ ಪಾರಾಗುವುದಕ್ಕೆ ಈಗ ಕಾಂಪೌಂಡುಮಾಡಿಕೊಳ್ಳತಕ್ಕಂಥ ಒಂದು ಅವಕಾಶವನ್ನು ಕೊಟ್ಟಿದ್ದಾರೆ. ಈ ಒಂದು ಪರಿಮಿತಿಯೊಳಗೆ ಬರತಕ್ಕವರಿಗೆ ಪರವಾಇಲ್ಲ; ಇನ್ನುಳಿದವರೆಲ್ಲಾ ಈ ಲೆಕ್ಕಪತ್ರಗಳನ್ನಿಡಲೇಬೇಕಾಗುತ್ತದೆ. ಅವರು ಈ ನಾನಾ ತೊಂದರೆಗಳಿಂದ ಪಾರಾಗುವುದಕ್ಕೆ ಅವಕಾಶವೇ ಇಲ್ಲ. ಆದಕಾರಣ ಯಾರಿಗೆ ಎಷ್ಟೆಷ್ಟೇ ಜಮೀನಿರಲಿ ಈ ಬಗ್ಗೆ ಒಂದು ಸ್ಲಾಬ್ ಸಿಸ್ಟಂನ್ನು ಏರ್ಪಡಿಸಿ 100 ಎಕರೆಯೊಳಗಿರತಕ್ಕಂಥ ರೈತರೆಲ್ಲಾ ಎಕರೆ ಒಂದಕ್ಕೆ ಈ ರೇಟ್ ಪ್ರಕಾರ ಎಂತಲೂ ಮತ್ತು 100 ಎಕರೆಗಳಿಗೆ ಮೇಲ್ಪಟ್ಟಂಥ ಜಮೀನ್ದಾರರುಗಳಿಗೆಲ್ಲ ಒಂದು ಎಕರೆಗೆ ಇಂತಿಷ್ಟು ರೇಟಿನ ಪ್ರಕಾರ ಕೊಟ್ಟು ಕಾಂಪೌಂಡ್ ಮಾಡಿಕೊಳ್ಳಬಹುದೆಂದು ಮಾಡಿದರೆ ಆಗ ಜನರು ಈ ಲೆಕ್ಕಪತ್ರಗಳನ್ನಿಡತಕ್ಕಂಥ ತೊಂದರೆಯಿಂದ ಪಾರಾಗಬಹುದೆಂದು ನನಗೆ ತೋರುತ್ತದೆ. ಈ ಒಂದು ರೀತಿಯಲ್ಲಿ ಸರ್ಕಾರದವರು ತಮಗೆ ಬರಬೇಕಾದಂಥ ಆದಾಯ ತಮಗೆ ಸರಿಯಾಗಿ ಸಂದಾಯವಾಗತಕ್ಕಂಥ ಒಂದು ಸರಳವಾದ ಮಾರ್ಗವನ್ನು ಕಂಡುಹಿಡಿಯತಕ್ಕದ್ದು

(ಶ್ರೀ ಕೆ. ಲಕ್ಕಪ್ಪ.)

ಒಳ್ಳೆಯದು. ಸರ್ಕಾರದವರು ಈ ರೀತಿಯಾಗಿ ಒಂದು ಕ್ರಮವನ್ನು ಜಾರಿಗೆ ತಂದರೆ ಆಗ ಜನರು ಈ ಪಟೇಲ್ ಶ್ಯಾನುಭೋಗರುಗಳ ಕೈವಾಡದಿಂದ ತಪ್ಪಿಸಿಕೊಳ್ಳಲು ಅವಕಾಶವಾಗುತ್ತದೆ. ಹೀಗೆ ನಾವು ಯಾವುದಾದರೂ ಒಂದು ಮಾರ್ಗವನ್ನು ಕಂಡುಹಿಡಿದು ಈ ರೈತರನ್ನು ಆ ಪಟೇಲ್ ಶ್ಯಾನುಭೋಗರ ಕೈಯಿಂದ ತಪ್ಪಿಸಲೇ ಬೇಕು. ಆದರೆ ಈಗ ಇರತಕ್ಕಂಥ ರೀತಿಯಲ್ಲಿ ರೈತ ಎಷ್ಟು ಎಕರೆಗಳಿಗೆ ಈರುಳ್ಳಿ ಬೆಳೆ ಇಟ್ಟಿದ್ದಾನೆ, ಎಷ್ಟು ಎಕರೆಗೆ ಕಬ್ಬು ಹಾಕಿದ್ದಾನೆ, ಎಷ್ಟು ಎಕರೆಗಳಲ್ಲಿ ತೆಂಗು ಇದೆ ಮತ್ತು ಒಂದು ಎಕರೆಗೆ ಈ ಪ್ರತಿಯೊಂದು ಬೆಳೆ ಯಲ್ಲೂ ಎಷ್ಟೆಷ್ಟು ಉತ್ಪತ್ತಿ ಬರುತ್ತದೆಎನ್ನುವುದನ್ನೆಲ್ಲ ಪಟೇಲ್ ಶ್ಯಾನುಭೋಗರೇ ಈ ಲೆಕ್ಕ ಇಡಬೇಕಾಗಿದೆ. ಹೀಗಾದರೆ ರೈತ ಅವರ ಹಿಡಿತಕ್ಕೆ ಸಂಪೂರ್ಣ ವಾಗಿ ಸಿಕ್ಕಿಕೊಂಡಹಾಗಾಯಿತು; ಹೀಗಾದರೆ ರೈತನಿಗೆ ತುಂಬ ತೊಂದರೆಯಾಗಬಹುದು. ಅವರು ನಾಲ್ಕು ಎಕರೆ ಜಮೀನಿನಷ್ಟು ಎನ್ನು ವುದರ ಬದಲು ಎಂಟು ಎಕರೆ ಜಮೀನಿನಷ್ಟು ಎಂದು ರಿಪೋರ್ಟ್ ಮಾಡಬಹುದು. ಅಥವಾ ಹೆಚ್ಚು ಬೆಳೆಯಾಗಿದ್ದವರಿಗೆ ರಿಯಾಯಿತಿ ತೋರಿಸುವ ಸಲುವಾಗಿ ಕಡಿಮೆ ಸಹ ರಿಪೋರ್ಟ್ ಮಾಡುವುದಕ್ಕೆ ಅವ ಕಾಶವಿದೆ. ಇದನ್ನು ತಪ್ಪಿಸಬೇಕಾದರೆ, ಅವರ ಪ್ರಭಾ ವವನ್ನು ಇಲ್ಲಿ ಕಡಿಮೆಮಾಡಬೇಕಾದರೆ ಒಂದು ಮಾರ್ಗ ವನ್ನು ನಾವು ಕಂಡುಹಿಡಿಯಬೇಕಾಗುತ್ತದೆ. ಹೀಗೆ ಅವರು ಪಹಣಿ ಬರೆಯತಕ್ಕ ಕಾಲದಲ್ಲಿ ಜಮೀನಿನಲ್ಲಿ ಎಷ್ಟು ಉತ್ಪತ್ತಿಯಾಗಿದೆ ಎಂದು ತೀರ್ಮಾನಮಾಡತಕ್ಕ ಕಾಲದಲ್ಲಿ ಪಂಚಾಯಿತಿಗಳ ಸದಸ್ಯರು ಹಾಜರಿರ ಬೇಕು ಮತ್ತು ಅವರ ಸಮ್ಮುಖದಲ್ಲಿಯೇ ಪಹಣಿ ಬರೆಯ ಬೇಕು. ಪಂಚಾಯಿತಿಗಳಿಗೆ ಇನ್ನೂ ಹೆಚ್ಚಿನ ಅಧಿಕಾರ ವನ್ನು ಬೇಕಾದರೂ ಕೊಡಬೇಕು. ಈ ರೀತಿ ಮಾಡಿದರೆ ಆಗ ಶ್ಯಾನುಭೋಗರು ಸುಳ್ಳು ಪಹಣಿ ಬರೆಯುವುದಕ್ಕೆ ಅವಕಾಶವಾಗುವುದಿಲ್ಲ.

*ಒಬ್ಬ ಸದಸ್ಯರು.—ಈಗಲೂ ಆ ಪದ್ಧತಿ ಇದೆ. ಪಂಚಾ ಯಿತಿ ಸದಸ್ಯರು ಬರುವುದೇ ಇಲ್ಲ. ಶ್ಯಾನುಭೋಗರು ಪಂಚಾಯಿತಿ ಸದಸ್ಯರ ಮನೆಗಳಿಗೆ ಹೋಗಿ ರುಜುಮಾ ಡಿಸಿಕೊಂಡು ಪಂಚಾಯಿತಿಯವರು ಒಪ್ಪಿಗೆಮಾಡಿದ್ದಾರೆ ಎಂದು ಲೆಕ್ಕವನ್ನು ಕೊಡುತ್ತಾರೆ.

ಶ್ರೀ ಕೆ. ಲಕ್ಕಪ್ಪ.—ಆದರೆ ಆ ವಿಚಾರಕ್ಕೂ ಇದಕ್ಕೂ ಬಹಳ ವ್ಯತ್ಯಾಸವಿದೆ. ಇದರಲ್ಲಿ ರೈತನು ಹಣವನ್ನು ಕೊಡತಕ್ಕ ಒಂದು ಸಮಸ್ಯೆ ಇರುವುದರಿಂದ ಪಂಚಾಯಿತಿ ಮೆಂಬರುಗಳನ್ನು ಮುಂದಿಟ್ಟುಕೊಂಡು ತೀರ್ಮಾನ ತೆಗೆದುಕೊಳ್ಳುವುದಾದರೆ ರೈತರಿಗೆ ಸಹಾಯವಾಗು ತ್ತದೆ ಪಂಚಾಯಿತರು ಇದರಲ್ಲಿ ಖಂಡಿತ ಸಹಕರಿಸು ತ್ತಾರೆಂದು ನನಗನ್ನಿಸುತ್ತದೆ. ಈ ರೀತಿ ರಿಕಾರ್ಡ್ ಮಾಡತಕ್ಕ ಸಂದರ್ಭದಲ್ಲಿ ಪಂಚಾಯಿತಿದಾರರ ಸಮ್ಮುಖದಲ್ಲಿ ಮಾಡಿ, ಅಥವಾ ಪಂಚಾಯಿತಿದಾರರು ಮಾಡಿದ ತೀರ್ಮಾನದ ಮೇಲೆ ಸರ್ಕಾರಕ್ಕೆ ಒಂದು ರಿಪೋರ್ಟ್ ಸಲ್ಲಿಸತಕ್ಕ ವ್ಯವಸ್ಥೆ ಮಾಡಿದರೆ ಈ ಹೊಡೆತದಿಂದ ರೈತರು ತಪ್ಪಿಸಿಕೊಳ್ಳುವುದಕ್ಕೆ ಅವಕಾಶವಿದೆ ಎಂದು ನಾನು ಸೂಚಿಸಬಯಸುತ್ತೇನೆ.

ನಮ್ಮ ಮಾನ್ಯ ಮುಖ್ಯಮಂತ್ರಿಗಳು ನಿನ್ನೆಯ ದಿನ ಮಾತನಾಡತಕ್ಕ ಸಂದರ್ಭದಲ್ಲಿ "ಈ ವ್ಯಾಪಾರೋದ್ಯಮ ಗಳಿಂದ ಹೆಚ್ಚು ಸಂಪಾದನೆ ಮಾಡತಕ್ಕ ಜನಗಳ ಮೇಲೆ ಮತ್ತು ಕೈಗಾರಿಕೆಗಳಲ್ಲಿ ಹೆಚ್ಚು ಆದಾಯವನ್ನು ಪಡೆಯತಕ್ಕ ಜನಗಳ ಮೇಲೆ ಆದಾಯ ತೆರಿಗೆಯನ್ನು ಹಾಕಿದ್ದೇವೆ, ಆದರೆ ಹೆಚ್ಚು ಆದಾಯವನ್ನು ಪಡೆಯು ತ್ತಿರತಕ್ಕ ರೈತರ ಮೇಲೆ ಈ ರೀತಿ ಆದಾಯ ತೆರಿಗೆ ಯನ್ನು ತಂದಿದ್ದೇವೆ. ಅದನ್ನು ತಪ್ಪಿಸುವುದಕ್ಕಾಗುವು ದಿಲ್ಲ. ವ್ಯವಸಾಯದಿಂದ ಹೆಚ್ಚು ಆದಾಯವನ್ನು ಪಡೆಯುವ ರೈತರೂ ಸಹ ಆದಾಯ ತೆರಿಗೆಯನ್ನು ಕೊಡಬೇಕಾದದ್ದು ನ್ಯಾಯವಾದುದು" ಎಂದು ತಮ್ಮ ಭಾಷಣದಲ್ಲಿ ವಾದ ನಡೆಸಿದ್ದಾರೆ. ಹಾಗೆ ವಾದ ಮಾಡುವಾಗ ಒಂದು ವಿಷಯವನ್ನು ಅವರು ಮರೆತಿರುವಂತೆ ನನಗೆ ತೋರುತ್ತದೆ. 3,500 ರೂಪಾಯಿಗಳಿಗೆ ಮೇಲ್ಪಟ್ಟು ಆದಾಯವನ್ನು ಪಡೆಯ ತಕ್ಕ ಯಾವ ರೈತನಿದ್ದಾನೆಯೋ ಅವನು ಸರ್ವೇಸಾಧಾರಣವಾಗಿ ಆ ಪ್ರಾಂತದಲ್ಲಿ ಸ್ವಲ್ಪ ಶ್ರೀಮಂತನಾಗಿರುತ್ತಾನೆಂದು ನಾವು ಭಾವಿಸಬಹು ದಾಗಿದೆ. ಅಂಥ ರೈತನು ತನಗೆ ಬಂದಿರತಕ್ಕ ಆದಾಯದ ಮೇಲೆ, ವ್ಯವಸಾಯದ ಬಾಬಿನಿಂದ ಬಂದಿರಬಹುದಾದ ಆದಾಯವನ್ನು ಸಹ ಸೇರಿಸಿಕೊಂಡು ಒಂದು ಆದಾಯದ ತೆರಿಗೆಯನ್ನು ಕೊಡುತ್ತಿರುತ್ತಾನೆ. ಅದರ ಜೊತೆಗೆ ಈ Agricultural Income Tax ಸಹ ಕೊಡಬೇಕಾದಂಥ ಪ್ರಮೇಯ ಬರುತ್ತದೆ. ಈಗ ವ್ಯಾಪಾರೋದ್ಯಮಗಳಲ್ಲಿ ಮತ್ತು ಕೈಗಾರಿಕೆಗಳಲ್ಲಿ ತೊಡಗಿರುವವರು ಒಂದು ಆದಾಯ ತೆರಿಗೆ ಮಾತ್ರ ಕೊಡುತ್ತಾರೆ. ಅದೇ ರೈತನಾದರೆ 'ಈಗಾಗಲೇ ಕೊಡುತ್ತಿರುವ ಆದಾಯ ತೆರಿಗೆಯ' ಜೊತೆಗೆ ವ್ಯವಸಾಯದಿಂದ ಹೆಚ್ಚಿಗೆ ಉತ್ಪನ್ನ ಮಾಡುವುದರ ಮೇಲೂ ತೆರಿಗೆ ಕೊಡಬೇಕು. ಹೀಗೆ ರೈತ ಎರಡು ಆದಾಯ ತೆರಿಗೆಗಳನ್ನು ಕೊಡಬೇಕಾದ ಪರಿಸ್ಥಿತಿ ಬರುತ್ತದೆ. ಆವಾಗ ಅವನ ಆರ್ಥಿಕ ಸ್ಥಿತಿಯನ್ನು ಎಷ್ಟರಮಟ್ಟಿಗೆ ಕುಂಠಿತಮಾಡಿದ ಹಾಗಾಗುತ್ತದೆಂಬು ದನ್ನು ನಾವು ಯೋಚನೆಮಾಡಿ ಅದಕ್ಕೆ ಸಾಕಾದಷ್ಟು protection ಈ ಬಿಲ್ಲಿನಲ್ಲಿ ಕೊಡತಕ್ಕದ್ದು ಸೂಕ್ತ. ಈ ಬಿಲ್ಲನ್ನು ಸೆಲೆಕ್ಟ್ ಕಮಿಟಿಯವರು ಪರಿಶೀಲನೆ ಮಾಡತಕ್ಕ ಸಂದರ್ಭದಲ್ಲಿ ದೀರ್ಘವಾಗಿ ವಿಚಾರಮಾಡಿ ಅವರಿಗೆ affect ಆಗದ ರೀತಿಯಲ್ಲಿ ವ್ಯವಸ್ಥೆಯಾಗ ಬೇಕು ಎಂದು ನಾನು ಮನವಿಮಾಡಿಕೊಳ್ಳುತ್ತೇನೆ. ಇವೆಲ್ಲವನ್ನೂ ಸೆಲೆಕ್ಟ್ ಕಮಿಟಿಯವರು ದೀರ್ಘವಾಗಿ ಯೋಚನೆಮಾಡಿ ಯಾರಿಗೂ ಇದರಿಂದ ತೊಂದರೆಯಾಗದ ರೀತಿಯಲ್ಲಿ, ರೈತರ ಆರ್ಥಿಕಸ್ಥಿತಿ ಕುಂಠಿತವಾಗದ ರೀತಿ ಯಲ್ಲಿ, ವ್ಯವಸ್ಥೆಮಾಡಬೇಕು. ಸೆಲೆಕ್ಟ್ ಕಮಿಟಿಯವರು ಈ ಮಸೂದೆಯನ್ನು ಪರಿಶೀಲಿಸುವಾಗ ಖಂಡಿತವಾಗಿಯೂ ರೈತನ ಹಿತವನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಇವೆಲ್ಲವನ್ನೂ ನಾವು ಕೂಲಂಕಷವಾಗಿ ಪರಿಶೀಲನೆ ಮಾಡಿದ ಮೇಲೆ ನಿಜವಾಗಿಯೂ ಸರ್ಕಾರದವರು ಹೇಳಿರುವ ಹಾಗೆ 20 ಲಕ್ಷ ರೂಪಾಯಿ ಗಳ ಆದಾಯ ಬರುತ್ತದೆಯೇ ಎಂಬುದನ್ನು ನೋಡಿ ದರೆ, ಖಂಡಿತವಾಗಿಯೂ ಬರಲಾರದು ಎಂದೆನಿಸುತ್ತದೆ. ಇಲ್ಲಿ ತೋರಿಸಿರುವ ಹಾಗೆ 6 ಎಕರೆ ಜಮೀನುಗಳ ವರೆಗೂ; ಕಾಫಿ, ಏಲಕ್ಕಿ ವಿಷಯಗಳಲ್ಲಿ 18 ಎಕರೆಗಳ ವರೆಗೂ ವಿನಾಯಿತಿ ಕೊಟ್ಟಿದ್ದಾರೆ. ಇದನ್ನು ತಾವು ಖಂಡಿತ ಜಾಸ್ತಿ ಮಾಡಲೇಬೇಕಾಗುತ್ತದೆ, ಏಕೆಂದರೆ ಇದು ತೀರ ಕಡಿಮೆ. ಜಾಸ್ತಿ ಮಾಡಿದ ಮೇಲೆ ನಿಮಗೆ ಸಾಕಷ್ಟು ಉತ್ಪತ್ತಿ ಬರುತ್ತದೆಯೇ ನೋಡಬೇಕು. ಕಾಫಿ, ಏಲಕ್ಕಿ, ಟೀ ತೋಟಗಳಿಗೆ ಇನ್ನೂ ಹೆಚ್ಚಿನ ವಿನಾ ಯಿತಿ ಕೊಡಲೇಬೇಕು. ಇದೆಲ್ಲಾ ಮಾಡಿದ ಮೇಲೆ ನೀವು ನಿರೀಕ್ಷಿಸಿದಹಾಗೆ 20 ಲಕ್ಷ ರೂಪಾಯಿಗಳು ಬರು ವುದಿಲ್ಲ. ಅಷ್ಟು ಬರದಿದ್ದ ಮೇಲೆ ಈ ಮಸೂದೆಯನ್ನು ಕೈಬಿಡುವುದು ಲೇಸೆಂದು ನಾನು ಸೂಚಿಸುತ್ತೇನೆ.

*ಶ್ರೀ ಬಿ. ವಿ. ನಾರಾಯಣರೆಡ್ಡಿ (ಬಾಗೇಪಲ್ಲಿ_ಗುಡಿ ಬಂಡೆ).—ಅಧ್ಯಕ್ಷರೇ, ಈ ಸಂದರ್ಭದಲ್ಲಿ ಕಬ್ಬಿನ ವಿಚಾರದಲ್ಲಿ ಮಾತ್ರ ಒಂದೆರಡು ಮಾತುಗಳ

* Asterisk indicates that the speeches and remarks have not been revised by the Member concerned.

ನ್ನಾಡಲು ಇಷ್ಟಪಡುತ್ತೇನೆ. ಕಬ್ಬು ನಮ್ಮ ಪ್ರದೇಶದಲ್ಲಿ ಹೆಚ್ಚಾಗಿ ಬೆಳೆದರೂ, ಅಲ್ಲಿ ಯಾವ ಸಕ್ಕರೆ ಕಾರ್ಖಾನೆಗಳೂ ಇಲ್ಲ. ಸಕ್ಕರೆ ಕಾರ್ಖಾನೆಯಿರುವ ಕಡೆಗಳಲ್ಲಿ ಬೆಳೆಯುವ ಕಬ್ಬಿನ ಬೆಳೆಗೂ, ನಮ್ಮ ಕಡೆಯಲ್ಲಿ ಮಾಡುವ ಕಬ್ಬಿನ ಬೆಳೆಗೂ ವ್ಯತ್ಯಾಸವಿದೆ. ಏಕೆಂದರೆ, ಸಕ್ಕರೆ ಕಂಪೆನಿಯಿರುವ ಪ್ರದೇಶದಲ್ಲಾದರೆ, ಅಲ್ಲಿ ಬೇಕಾದಷ್ಟು ನಾಲಾ ಅನುಕೂಲಗಳಿವೆ. ನಮ್ಮ ಕಡೆಯಲ್ಲಾದರೋ lift irrigation ನಿಂದ ಕಷ್ಟಪಟ್ಟು ಬೆಳೆಸಬೇಕಾಗಿದೆ. ನಾಲಾ ಭಾಗದಲ್ಲೂ 12 ತಿಂಗಳ ಬೆಳೆ ಅದು; ನಮ್ಮ ಕಡೆಯಲ್ಲೂ ಅದು 12 ತಿಂಗಳ ಬೆಳೆ. ಆದರೆ ನಮಗೆ ವಿಪರೀತ ಖರ್ಚಿದೆ. ಬಿತ್ತನೆಯಿಂದ ಹಿಡಿದು, ಕಳೆಕೀಳುವುದು, ಕಡಿದು ಗಾಣ ಮಾಡುವುದು ಮುಂತಾಗಿ ಪ್ರತಿಯೊಂದಕ್ಕೂ ಹೆಚ್ಚಿನ ಶ್ರಮಪಡಬೇಕಾಗಿದೆ. ನಾಲಾ ಕೆಳಗಿನ ಪೈರಿನಂತೆ ಸುಮ್ಮನೆ ಫ್ಯಾಕ್ಟರಿಗೆ ಹೊತ್ತುಕೊಂಡು ಹೋಗುವುದಲ್ಲ. ಕಬ್ಬನ್ನು ಕಡಿದು ಒಂದು-ಒಂದೂವರೆ ತಿಂಗಳ ವರೆಗೂ ಒಂದೊಂದು ಗಾಣಕ್ಕೂ 20-25 ಜನರು ನಿಂತು ರಾತ್ರಿ ಹಗಲು ಕಷ್ಟಬಿದ್ದು ಬೆಲ್ಲ ಮಾಡಬೇಕಾಗಿದೆ. ಈ ಎಲ್ಲ ಖರ್ಚಿನ ಜೊತೆಗೆ ವ್ಯಾಪಾರ ಮಾಡುವ ಖರ್ಚು ಬೇರೆ. ಕಬ್ಬಿನ ವ್ಯವಸಾಯಕ್ಕೆ ಮಣಕ್ಕೆ 1 ರೂ. 2 ಆಣೆ ಬೀಳುತ್ತದೆ. ಬೆಲ್ಲ ಮಾಡುವುದಕ್ಕೆ 1 ರೂ. 2 ಆಣೆ ಬೀಳುತ್ತದೆ. ಹೀಗಾಗಿ ಮಣಕ್ಕೆ 2 ರೂ. 4 ಆಣೆ ಬಿದ್ದರೆ, ಈಗಿನ ಧಾರಣೆ ಕೂಡ 2 ರೂ. 4 ಆಣೆ ಇದೆ. ಅನೇಕ ಕಬ್ಬಿನ ಬೆಳೆಗಾರರು ನಷ್ಟಬಿದ್ದು ಈಚೆಗೆ ಕಬ್ಬನ್ನು ಬೆಳೆಯುವುದನ್ನೇ ಕೈಬಿಟ್ಟಿದ್ದಾರೆ. ಹೀಗಿರುವಾಗ ಇದರ ಮೇಲೆ ತೆರಿಗೆ ಹಾಕಹೊರಟಿದ್ದೀರಿ. ನಾನೇನೂ ನೀವು ಅಗ್ರಿಕಲ್ಚರಲ್ ಟ್ಯಾಕ್ಸ್ ತಂದಿರುವುದಕ್ಕೆ ವಿರೋಧ ಮಾಡುತ್ತಿಲ್ಲ. ನೀವು ಅನುಸರಿಸುತ್ತಿರುವ ಅವಿವೇಕದ ನೀತಿಯನ್ನು ನೋಡಿ ನನಗೆ ಸಂಕಟವಾಗುತ್ತದೆ. ಏನು ಬುದ್ಧಿಯುಪಯೋಗಿಸುತ್ತಾರೋ ಅರ್ಥವೇ ಆಗುವುದಿಲ್ಲ. ಬಜೆಟ್ ಭಾಷಣದಲ್ಲಿ ನೋಡಿದರೆ ದರಗಳು ಕಡಿಮೆಯಾಗಿರುವುದನ್ನು ಮನಗಂಡು ರೈತರಿಗೆ ನಷ್ಟವಾಗುವುದನ್ನು ತಪ್ಪಿಸುವಂತೆ ಕಾರ್ಯಕ್ರಮಗಳನ್ನು ಕೈಕೊಳ್ಳುತ್ತೇವೆಂದು ಹೇಳುತ್ತೀರಿ. ಕೇಂದ್ರ ಸರ್ಕಾರದವರೂ ಏನೇನೋ ಪ್ರಯತ್ನ ಮಾಡುತ್ತಿದ್ದಾರೆಂದು ಹೇಳಿದಿರಿ. ಡಾ॥ ನಾಗನಗೌಡರು ಬೆಲ್ಲದ ರಫ್ತಿಗೆ ಅವಕಾಶ ಕೊಟ್ಟಿದೆಯೆಂದು ಒಂದು ಪ್ರೆಸ್ ನೋಟನ್ನೂ ಕೂಡ ಹೊರಡಿಸಿದ್ದಾರೆ. ಇಷ್ಟೆಲ್ಲಾ ರೈತರು ಕಷ್ಟದಲ್ಲಿದ್ದಾರೆಂಬುದನ್ನು ತಿಳಿದಿದ್ದರೂ, ಈಗ ನೋಡಿದರೆ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಎಂದು ತಂದಿದ್ದೀರಿ. Income ಎಂದರೇನೆಂಬುದನ್ನು ಅರ್ಥಮಾಡಿಕೊಂಡು ಮಾಡುತ್ತಿದ್ದಾರೆಯೇ? ಅಥವಾ ಅದನ್ನು ಅರ್ಥ ಮಾಡಿಕೊಳ್ಳತಕ್ಕ ಬುದ್ಧಿಯೇ ಇಲ್ಲವೇ? Our Chief Minister is known for his humour and temper. ಅವರೇನು ಲೆಕ್ಕ ಹಾಕಿಕೊಂಡು ಇದನ್ನು ಏಪ್ರಿಲ್ ಒಂದನೆಯ ತಾರೀಖಿನಿಂದ ಜಾರಿಗೆ ಬರುವಹಾಗೆ ಮಾಡಿದ್ದಾರೋ ಕಾಣೆ. April first is known for fooling.

Mr. SPEAKER.—Those words should not be used here.

ಶ್ರೀ ಬಿ. ವಿ. ನಾರಾಯಣರೆಡ್ಡಿ.—'April fool' ಎಂದು ಕರೆಯುವುದು ಸ್ವಾಭಾವಿಕ. ಇವರು ಮಾಡಿರುವುದೂ ಅವರ temper ಗೆ ಅನುಗುಣವಾಗಿದೆ ಅಷ್ಟೆ. ಅವರು ಇದರಿಂದ 20 ಲಕ್ಷ ರೂಪಾಯಿಗಳು ಬರುತ್ತದೆಂದು ಹೇಳಿದ್ದಾರೆ. ಹಣ ಬೇಕೆಂದರೆ ಹೀಗೇಕೆ ಮಾಡಬೇಕು? ಮೈಸೂರು ದೇಶದಲ್ಲಿ ಒಂದು ಕೋಟಿ ಜನರಿದ್ದಾರೆ. ಓಟರುಗಳ ಪಟ್ಟಿಯಿಟ್ಟುಕೊಂಡು ತಲೆಗಂದಾಯ ಹಾಕಿದರೆ 25 ಲಕ್ಷ ರೂಪಾಯಿ ಸುಲಭವಾಗಿ ಬಂದುಬಿಡುತ್ತದೆ. ಆ ರೀತಿ ಮಾಡಿದರಾದರೂ ಪರವಾಯಿಲ್ಲ. ಅದಿಲ್ಲದೆ, ಸುಮ್ಮನೆ ಸಿಕ್ಕಾಪಟ್ಟೆ ಆದಾಯ ಬರುತ್ತದೆಂದು ಲೆಕ್ಕಹಾಕಿ ವಿಧಿಸುವುದು ನ್ಯಾಯವಲ್ಲ. ಲಕ್ಷಾಂತರ ರೂಪಾಯಿಗಳ ವರಮಾನ ಬರುತ್ತಿದ್ದರೂ, ಆ ಬೆವರು ಸುರಿಸಿ ಕಷ್ಟಪಟ್ಟು ಸಂಪಾದನೆ ಮಾಡುವ ರೈತನ ಕೈಕೆಳಗೆ ಹೋಗಿ ಕೈಕಟ್ಟಿ ನಿಲ್ಲುವುದೇಕೆ? ಒಂದುಕಡೆ, ಅವನಿಗೆ ಏನೋ ಸೌಕರ್ಯ ಮಾಡುತ್ತೇವೆಂದು ಹೇಳುತ್ತೀರಿ, ಜೊತೆಗೆ ಈ ತೆರಿಗೆಯನ್ನು ಬೇರೆ ಸೇರಿಸುತ್ತೀರಿ. ಇಷ್ಟು ಮಾತ್ರ ಹೇಳಿ, ನಮ್ಮ ಕಡೆಯಲ್ಲಿ ಬೆಲ್ಲದ ವಿಷಯದ ಮಟ್ಟಿಗಾದರೂ ಈ ತೆರಿಗೆ ಹಾಕಬಾರದೆಂದು ಹೇಳಿ ಮುಗಿಸುತ್ತೇನೆ.

ಶ್ರೀ ಟಿ. ಎಲ್. ಮೂಡಲಗಿರಿಗೌಡ (ಕುಣಿಗಲ್).—ಈಗ ನಮ್ಮ ಮುಂದಿರತಕ್ಕಂಥ ಅಗ್ರಿಕಲ್ಚರಲ್ ಇನ್‌ಕಂ-ಟ್ಯಾಕ್ಸ್ ಬಿಲ್ಲಿನಮೇಲೆ ಚರ್ಚೆ ನಡೆದಿರುವುದನ್ನು ನೋಡಿದರೆ ಬಹುತೇಕ ಅನೇಕ ಸದಸ್ಯರು ಇದರಲ್ಲಿರತಕ್ಕ ಅನೇಕ ನ್ಯೂನತೆಗಳ ವಿಷಯದಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಸಾಮಾನ್ಯವಾಗಿ ನಮ್ಮ ದೇಶದಲ್ಲಿ, ಈಗಾಗಲೇ ಎದುರುಪಕ್ಷದ ನಾಯಕರು ತಿಳಿಸಿರುವ ಹಾಗೆ, ವ್ಯವಸಾಯ ಪದ್ಧತಿಯ ಜೀವನದಿಂದ ಯಾರೂ ಉತ್ತಮವಾದಂಥ ಜೀವನವನ್ನು ನಡೆಸುವುದಕ್ಕೆ ಸಾಧ್ಯವಿಲ್ಲ. ನಮ್ಮ ದೇಶದಲ್ಲಿ ವ್ಯವಸಾಯದಿಂದ ಹೆಚ್ಚಿನ ಉತ್ಪತ್ತಿಯನ್ನು ಪಡೆದು ಜೀವನವನ್ನು ನಡೆಸುತ್ತಿದ್ದಾರೆಂದು ಯಾರೂ ಹೇಳುವ ಹಾಗಿಲ್ಲ ಎಂಬುದನ್ನು ಅವರೂ ತಿಳಿಸಿದ್ದಾರೆ. ಈಗಾಗಲೇ ಅಂಕಿ ಅಂಶಗಳಲ್ಲಿ ತಿಳಿಸಿರುವ ಹಾಗೆ, ಕೇವಲ ಶೇಕಡ ಐದು ಆರು ಮಂದಿ ಮಾತ್ರ ವ್ಯವಸಾಯದಿಂದ ಹೆಚ್ಚಿನ ಉತ್ಪತ್ತಿಯನ್ನು ಪಡೆಯುತ್ತಿದ್ದಾರೆ. ಬಹುಸಂಖ್ಯೆಯ ಜನರು ಚಿಕ್ಕ ಹಿಡುವಳಿದಾರರಾಗಿದ್ದಾರೆ. ವ್ಯವಸಾಯ ಮಾಡತಕ್ಕವರ ಸಂಖ್ಯೆ ನಮ್ಮಲ್ಲಿ ಜಾಸ್ತಿಯೆಂದು ಅನೇಕರು ವ್ಯಕ್ತಪಡಿಸಿದ್ದಾರೆ. ಹಿಂದಿನಿಂದಲೂ ಕೂಡ ಒಂದಾಣೆ ಅಥವಾ ಅರ್ಧಾಣೆ ಜಮೀನಿನ ಮೇಲೆ ಯಾವುದೇ ರೂಪದಲ್ಲಿ ಕಂದಾಯವನ್ನು ಹಾಕಿದರೂ ಕೂಡ ಅದನ್ನು ಹೊರತಕ್ಕ ಶಕ್ತಿ ನಮ್ಮ ಜನರಿಗಿಲ್ಲ, ಅದನ್ನು ಕೊಡಲು ಶಕ್ತಿವಂತರಾಗಿಲ್ಲ, ಹಾಕಕೂಡದು ಎಂದು ಈ ಸಭೆಯಲ್ಲೂ ಮತ್ತು ಹಿಂದಿನ ಸಭೆಗಳಲ್ಲೂ ವಿರೋಧವಮಾಡಿದ್ದಾರೆ.

ಹೀಗೆ ಇವೊತ್ತಿನ ದಿವಸ ನಮ್ಮ ದೇಶದ ಮಳೆ ಬೆಳೆಗಳ ಪರಿಸ್ಥಿತಿ ತೆಗೆದುಕೊಂಡರೂ ಕೂಡ ವರ್ಷ ವರ್ಷಕ್ಕೆ, ಕಾಲ ಕಾಲಕ್ಕೆ, ಸ್ಥಳದಿಂದ ಸ್ಥಳಕ್ಕೆ ಬಹಳ ವ್ಯತ್ಯಾಸವಿದೆ. ಒಂದು ಜಿಲ್ಲೆಯಲ್ಲಿ ಒಂದೊಂದು ತಾಲ್ಲೂಕಿನಲ್ಲಿ ಒಂದೊಂದು ತರಹ ಮಳೆಗಳಾಗತಕ್ಕದ್ದು ಇವೆ. ಒಂದು ತಾಲ್ಲೂಕಿನ, ಒಂದು ಹೋಬಳಿಯಲ್ಲಿ ಚೆನ್ನಾಗಿ ವ್ಯವಸಾಯವಾದರೆ ಅದೇ ತಾಲ್ಲೂಕಿನ ಇನ್ನೊಂದು ಹೋಬಳಿಯಲ್ಲಿ ಬೆಳೆಯೆಲ್ಲಾ ಹೊರಟೇಹೋಗಿರುತ್ತದೆ. ಹೀಗೆ ನಮ್ಮ ದೇಶದಲ್ಲಿ ಸಾಮಾನ್ಯವಾಗಿ ಎಲ್ಲಾ ಕಡೆಯೂ ಒಂದೇ ರೀತಿಯಾದಂಥ ಬೆಳೆ ಬಂತು ಎನ್ನತಕ್ಕ ಪರಿಸ್ಥಿತಿ ಯಾವಾಗಲೂ ಇಲ್ಲ ಎಂಬುದನ್ನು ಅನೇಕರು ತಿಳಿಸಿದ್ದಾರೆ. ಹೀಗಿರುವಾಗ, ಇಂಥ ಪರಿಸ್ಥಿತಿಯಲ್ಲಿ ವ್ಯವಸಾಯದಿಂದ ಬರತಕ್ಕ ಉತ್ಪನ್ನದಮೇಲೆ ವರಮಾನ ತೆರಿಗೆಯನ್ನೂ ಹಾಕತಕ್ಕದ್ದು ಸರಿಯೇ ಎಂಬುದನ್ನು ಇವೊತ್ತಿನ ದಿವಸ ಯೋಚನೆ ಮಾಡಬೇಕಾಗುತ್ತದೆ. ಶ್ರೀಮಾನ್ ಪಟ್ಟಾಭಿರಾಮನ್‌ರವರು ಇದನ್ನು ತರಬಾರದಾಗಿತ್ತು, ತಂದದ್ದು ಸರಿಯಿಲ್ಲ ಎಂದು ತಿಳಿಸಿದರು. ಆದರೆ ಅವರು ತಿಳಿಸುವಾಗ ಈ ಒಂದು ತೆರಿಗೆಯನ್ನು ಯಾವ ಒಂದು ನೀತಿಯ ಮೇಲೆ ತರಬಾರದಾಗಿತ್ತು, ಇದು ಯಾವ ನೀತಿಗನುಗುಣವಾಗಿಲ್ಲ ಎಂಬುದನ್ನು ತಿಳಿಸಿದ್ದರೆ ಚೆನ್ನಾಗಿರುತ್ತಿತ್ತು.

ಶ್ರೀ ಕೆ. ಪಟ್ಟಾಭಿರಾಮನ್.—ಅದನ್ನು ಸ್ಪಷ್ಟಪಡಿಸಿದ್ದೇನೆ. ಗುಂಡಪ್ಪಗೌಡರ ಸಮಿತಿಯಲ್ಲಿ ಇದು ಪೂರ್ಣವಾಗಿ ಚರ್ಚೆ ಮಾಡಿದೆ.

ಶ್ರೀ ಟಿ. ಎನ್. ಮುಡಲಗಿರಿಗೌಡ.—ಗುಂಡಪ್ಪಗೌಡರ ಸಮಿತಿಯಲ್ಲಿ ನಾನು ಕೆಲಸ ಮಾಡಿದ್ದೇನೆ. ಯಾವ ನೀತಿಯ ಮೇಲೆ ತೆರಿಗೆ ಹಾಕಬೇಕೆಂಬುದನ್ನು ತಿಳಿಸಿದ್ದಾರೆ ಎಂದು ಹೇಳಿದರು. ಆದರೆ ಇತ್ತೀಚೆಗೆ ಪ್ಲಾನಿಂಗ್ ಕಮಿಷನ್‌ರವರ ವರದಿ ಬಂದ ಮೇಲೆ ಅವರ ವರದಿಯಲ್ಲಿ ಯಾವ ನೀತಿಯನ್ನನುಸರಿಸಿ ತೆರಿಗೆಗಳನ್ನು ಹಾಕಬೇಕೆಂದು ಸೂಚನೆಮಾಡಿದ್ದೇವೆಯೋ ಅದರ ಪ್ರಕಾರ ಅನೇಕ ಸಂಸ್ಥಾನಗಳಲ್ಲಿ ತೆರಿಗೆಗಳನ್ನು ವಿಧಿಸಿ ಜಾರಿಗೆ ತಂದಿದ್ದಾರೆ. ವಿಶೇಷವಾದ ಉತ್ಪನ್ನ ಬರತಕ್ಕಂಥ ಜನ ಸ್ವಲ್ಪವಾಗಿದ್ದರೂ ಕೂಡ, ಸಮಾಜದಲ್ಲಿ ಸರಿಸಮಾನತೆ ಇರಬೇಕು, ದೇಶದಲ್ಲಿ ಒಬ್ಬನೇ ಒಬ್ಬ ಮನುಷ್ಯ ಪ್ರಬಲನಾಗಿದ್ದರೆ ಅಥವಾ ಹೆಚ್ಚು ಆರಾಮ ಹೊಂದಿದವನಾಗಿದ್ದರೆ ಅದು ಸಮಾಜಕ್ಕೆ ವಿರೋಧವಾಗಿರುತ್ತದೆ. ಆದ್ದರಿಂದ ಒಂದು ಸಮಾಜ ನೀತಿಯ ದೃಷ್ಟಿಯಿಂದ ಹೆಚ್ಚು ಉತ್ಪನ್ನ ಬರತಕ್ಕವರ ಮೇಲೆ ಈ ತೆರಿಗೆಯನ್ನು ಹಾಕತಕ್ಕದ್ದು ಸರಿಯಲ್ಲವೇ ಎಂಬುದನ್ನು ಇವತ್ತು ಯೋಚನೆ ಮಾಡಬೇಕಾಗಿದೆ. ಎಷ್ಟೇ ನಾವು ವಾದ ಮಾಡಿದರೂ ಕೂಡ ಹೆಚ್ಚು ಉತ್ಪನ್ನ ಬರತಕ್ಕವರ ಮೇಲೆ ಕಂದಾಯವನ್ನು ವಿಧಿಸಬೇಕು, ವಿಧಿಸಿ ಅದನ್ನು ಪಡೆದು ಅದರಿಂದ ಸಮಾಜಕ್ಕೆ ಒಂದು ಉಪಯೋಗವಾಗುವಂತೆ ಮಾಡಬೇಕು ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. ಹೀಗಿರುವಾಗ ಇದರಲ್ಲಿರತಕ್ಕ ಯಾವ ಮಾರ್ಗವನ್ನು ಅನುಸರಿಸಿದ್ದೀರೋ ಆ ಮಾರ್ಗ ಸರಿಯಾಗಿಲ್ಲ, ಅದನ್ನು ಮಾರ್ಪಾಡು ಮಾಡಬೇಕು ಎಂಬುದನ್ನು ಪ್ರತಿಯೊಬ್ಬರೂ ತಿಳಿಸಿದ್ದಾರೆ. ಇವೊತ್ತಿನ ದಿವಸ ಸೆಲೆಕ್ಟ್ ಕಮಿಟಿಯವರ ಜವಾಬ್ದಾರಿ ಬಹಳ ಜಾಸ್ತಿಯಾಗಿದೆ. ಅವರು ಇದುವರೆಗೂ ಸಭೆಯಲ್ಲಿ ಏನು ಚರ್ಚೆ ನಡೆದಿದೆ, ಯಾವ ಯಾವ ವಿಷಯಗಳ ಮೇಲೆ ಹೆಚ್ಚಾಗಿ ಸದಸ್ಯರ ಟೀಕೆ, ಟಿಪ್ಪಣಿಗಳು ಬಂದಿವೆ ಮತ್ತು ಜನರಿಗೆ ಇದರಿಂದ ಎಷ್ಟು ತೊಂದರೆಯಾಗುತ್ತದೆ ಎಂಬುದನ್ನು ಕೂಡ ಅವರು ಯೋಚನೆ ಮಾಡಬೇಕಾಗಿದೆ. ಈಗ ಶ್ರೀಮಾನ್ ಪಟ್ಟಾಭಿರಾಮನ್‌ರವರು ಹೇಳಿರತಕ್ಕ ಒಂದು ವಿಷಯ ಬಹಳ ಮುಖ್ಯವಾದದ್ದು. ಹಿಂದಿನ ವರ್ಷದ ಆದಾಯದ ಮೇಲೆ ತೆರಿಗೆ ಹಾಕಬೇಕು ಎಂಬ ಒಂದು ಕ್ಲಾಸ್ ಏನಿದೆ ಅದಕ್ಕೆ ಹೆಚ್ಚು ಗಮನ ಕೊಟ್ಟು ಪರಿಶೀಲನೆ ಮಾಡಬೇಕು. ಅದು ಬಹಳ ಮುಖ್ಯವಾದ ವಿಷಯ. ಅನಂತರ ಇದುವರೆಗೂ ಯಾವ ಯಾವ ಬೇಸಾಯವನ್ನು ಮಾಡಿರತಕ್ಕವರಿಗೆ ಏನೇನು ಕಷ್ಟಗಳು ಇವೆ ಎಂಬುದನ್ನು ಮಾನ್ಯ ಸದಸ್ಯರುಗಳು ತಿಳಿಸಿದ್ದಾರೆ. ಆದರೂ ಕಾಫಿ ಬೆಳೆಯತಕ್ಕವರ ಕಷ್ಟ ಅಡಿಕೆ ಬೆಳೆಯುವವರಿಗೆ ಅಷ್ಟು ಗೊತ್ತಿಲ್ಲದೆ ಇರಬಹುದು. ಅಡಿಕೆ ಬೆಳೆಯುವವರಿಗೆ ತೆಂಗಿನ ವ್ಯವಸಾಯ ಮಾಡತಕ್ಕವರ ಕಷ್ಟ ಗೊತ್ತಿಲ್ಲದೆ ಇರಬಹುದು. ವ್ಯವಸಾಯಗಾರರು ಪ್ರತಿಯೊಬ್ಬರಿಗೂ ಆಯಾ ವ್ಯವಸಾಯದಲ್ಲಿ ಕಷ್ಟಗಳು ಇವೆ ಎಂಬುದನ್ನು ಎಲ್ಲ ಸದಸ್ಯರಿಗೂ ತಿಳಿಸಿದ್ದೇವೆ. ಇಲ್ಲಿ ಕೊಟ್ಟಿರತಕ್ಕಂಥ ಷೆಡ್ಯೂಲ್ ಏನಿದೆ ಈ ಷೆಡ್ಯೂಲ್‌ನಲ್ಲಿ 3,500 ರೂಪಾಯಿಗಳಿಗಿಂತ ಮೇಲೆ ಬರತಕ್ಕವರಿಗೆ ರೂಪಾಯಿನಲ್ಲಿ 6 ಕಾಸು ಎಂದು ಏನು ಮಾಡಿದ್ದೀರಿ ಅದು ಸರಿಯಲ್ಲ. ನಮ್ಮ ದೇಶದಲ್ಲಿ 3 ವರ್ಷಕ್ಕೆ, 5 ವರ್ಷಕ್ಕೆ ಒಂದೊಂದು ಸಲ ಮಳೆ ಬೆಳೆ ಹೆಚ್ಚುಕಡಿಮೆ ಆಗಿ ಕ್ಷಾಮ ಪರಿಸ್ಥಿತಿ ಒದಗುತ್ತ ಇರುವುದರಿಂದ ಇವೊತ್ತು ನಾವು ಏನು ಒಂದು ನಿಗದಿ ಮಾಡುತ್ತೇವೋ ಅದರಿಂದ ಮುಂದೆ ಜನಗಳಿಗೆ ತೊಂದರೆ ಆಗುತ್ತದೆ. ಆ ರೀತಿ ಆಗಬಾರದು, ಹಾಗೆ ಆದರೆ ಅದಕ್ಕೆ ಪರಿಹಾರವನ್ನು ಕೊಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಅದಕ್ಕೆ ಒಂದು ಉದಾಹರಣೆಯನ್ನು ತಮ್ಮ ಮುಂದೆ ಇಡುತ್ತೇನೆ. ಸೇಲ್ಸ್ ಟ್ಯಾಕ್ಸ್ ಮಸೂದೆ ಬಂದಾಗ ಕಡಲೆಕಾಯಿ ವಿಷಯದಲ್ಲಿ ಸಭೆಯ ಅಭಿಪ್ರಾಯ ಒಂದು ರೀತಿಯಾಗಿ ಬಂತು. ರೂಲ್ಸ್ ಮಾಡುವಾಗ ಸ್ವಲ್ಪ ಬದಲಾವಣೆ ಆಗಬೇಕಾಗಿ ಬಂದದ್ದರಿಂದ ಪುನಃ ಸಭೆಯನ್ನು ಕೇಳಲೇಬೇಕಾಯಿತು. ಹೀಗಾಗುವುದರಿಂದ ಎಷ್ಟು ಶೀಘ್ರವಾಗಿ ಅವುಗಳಿಗೆ ಪರಿಹಾರ ದೊರಕಬೇಕೋ ಅಷ್ಟು ಶೀಘ್ರವಾಗಿ ದೊರಕುವುದಿಲ್ಲ. ಹೀಗಿರುವಾಗ ನಾಳೆ ದಿವಸ ಕಾಲ ವ್ಯತ್ಯಸ್ತವಾಗಿ ಜನಗಳಿಗೆ ಪರಿಹಾರ ದೊರಕಬೇಕೆಂದರೆ ಕಷ್ಟವಾಗುತ್ತದೆ. ಆದ್ದರಿಂದ ನಾವು ಕೊಡತಕ್ಕ ಪ್ರತಿಯೊಂದು ಸಲಹೆಯನ್ನು ಕೂಡ ಸೆಲೆಕ್ಟ್ ಕಮಿಟಿಯವರು ಕೂಲಂಕಷವಾಗಿ ಮತ್ತು ತೀವ್ರವಾಗಿ ಯೋಚನೆ ಮಾಡಬೇಕು. ಒಂದು ಕಡೆ ರೈತ ಬೆಳೆಯತಕ್ಕ ಪದಾರ್ಥಗಳಿಗೆ ಧಾರಣೆ ಬಿದ್ದಿದೆ. ಮತ್ತೊಂದು ಕಡೆ ಅವನಿಗೆ ಅತ್ಯಾವಶ್ಯಕವಾಗಿ ಬೇಕಾಗಿರತಕ್ಕ ಎತ್ತು, ಕರು, ಮತ್ತೊಂದು ಮಗದೊಂದು ಎಲ್ಲದಕ್ಕೂ ಧಾರಣೆ ಏರುತ್ತಿದೆ. ಹೀಗಿರುವಾಗ ಯಾವ ರೀತಿಯಲ್ಲಿ ವಿಧಿಸಿದರೆ ಅವನಿಗೆ ತೊಂದರೆ ಕಡಿಮೆ ಆದೀತು ಎಂಬುದನ್ನು ಸೆಲೆಕ್ಟ್ ಕಮಿಟಿಯವರು ಯೋಚನೆ ಮಾಡಬೇಕು.

ಸಾಮಾನ್ಯವಾಗಿ ಲೆಕ್ಕ ಇಡತಕ್ಕ ಪದ್ಧತಿ ಜಾರಿಯಲ್ಲಿ ಬಂದಿದೆ. ವರ್ತಕರು ಲೆಕ್ಕ ಇಡುತ್ತಾ ಇದ್ದಾರೆ ಕೆಲವು ಸದಸ್ಯರು ಲೆಕ್ಕ ಇಡತಕ್ಕ ಪದ್ಧತಿಯಿಂದ ಬಹಳ ಕಷ್ಟವಾಗುತ್ತದೆ ಎಂದು ಹೇಳುತ್ತಾ ಇದ್ದಾರೆ. ಸಾಮಾನ್ಯವಾಗಿ ಮೊದಲಿನಿಂದಲೂ ಲೆಕ್ಕ ಇಡತಕ್ಕ ಪದ್ಧತಿ ಇಲ್ಲದೆ ಇರತಕ್ಕ ಈ ಒಂದು ಗುಂಪು ಏನಿದೆ ಇವರು ಲೆಕ್ಕ ಇಡತಕ್ಕ ಪದ್ಧತಿಗೆ ಸಿಕ್ಕಿಕೊಂಡರೆ ಇವರನ್ನೂ ಶೋಷಣೆಗೆ ಗುರಿಮಾಡಿದಂಥ ಸಂದರ್ಭ ಬರುತ್ತದೆ. ಲೆಕ್ಕ ಇಡದಹಾಗೆ ಬೇಕಾದರೆ ನಾಲ್ಕಲ್ಲ ಹತ್ತು ರೂಪಾಯಿ ಮಾಡಲು ಜಾಸ್ತಿ ಹಾಕಿ ಯಾವುದಾದರೂ ಒಂದು ಮಾರ್ಗವನ್ನು ಗೊತ್ತು ಮಾಡಿ. ಹಾಗೆ ಮಾಡದಿದ್ದರೆ ಈ ಮಸೂದೆಗೆ ಪುರಸ್ಕಾರ ದೊರೆಯುವುದಿಲ್ಲ. ತಾವು ಈ ಮಸೂದೆಯನ್ನು ಮಂಡಿಸಿರುವುದರಲ್ಲಿ ನಮ್ಮ ಅಭ್ಯಂತರವೇನೂ ಇಲ್ಲ. ಆದರೆ ಈ ಮಸೂದೆಯಿಂದ ರೈತರನ್ನು ಹೆಚ್ಚು ಕಷ್ಟಕ್ಕೆ ಸಿಕ್ಕಿಸಬಾರದು ಎಂಬುದು ಅನೇಕರ ಅಭಿಪ್ರಾಯವಾಗಿರುವುದರಿಂದ ಸೆಲೆಕ್ಟ್ ಕಮಿಟಿಯ ಮಾನ್ಯ ಸದಸ್ಯರು ಇದನ್ನು ಪರಿಶೀಲನೆ ಮಾಡಿ ಅವರನ್ನು ಹೆಚ್ಚು ಕಷ್ಟಕ್ಕೆ ಸಿಕ್ಕಿಸದ ರೀತಿಯಲ್ಲಿ ಈ ಮಸೂದೆಯನ್ನು ತಯಾರು ಮಾಡುತ್ತಾರೆ ಎಂದು ನಂಬಿಕೆಯಿಟ್ಟು ಇದನ್ನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು-ಮೂಡಿಗೆರೆ).—ಸ್ವಾಮಿ, ಈಗ ಸರ್ಕಾರದವರು......

ಶ್ರೀ ಜೆ. ಮಹಮ್ಮದ್ ಇಮಾಂ.—ಈ ಸಭೆಯ ಮುಂದಿನ ಕಾರ್ಯಕಲಾಪಗಳ ಬಗ್ಗೆ ಯಾವ ರೀತಿ ನಿರ್ಧರಿಸಿರುತ್ತಾರೆಂಬುದೇ ಗೊತ್ತಾಗಲಿಲ್ಲ.

ಅಧ್ಯಕ್ಷರು.—ಈ ಬಿಲ್ಲಿನ ಮೇಲೆ ಚರ್ಚೆಯು ನಾಳೆಗೂ ಮುಂದುವರಿಯುತ್ತದೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಸರ್ಕಾರದವರು ಈಗಾಗಲೇ ತಿಳಿಸಿರುವ ಪ್ರಕಾರ ನಾಳೆ ಗೋಲ್ಡ್ ಡ್ಯೂಟಿ ಕಮಿಟಿಯ ವರದಿಯನ್ನು ಚರ್ಚೆಗೆ ತೆಗೆದುಕೊಳ್ಳಬೇಕಾಗುತ್ತದೆ. ಆದಕಾರಣ...... ....

5-30 P.M.

SRI H. SIDDAVEERAPPA (Minister for Home and Industries).—As already

scheduled, it is better that preference be given for discussion on the Report on Gold Duty Committee tomorrow, Sir.

Mr. SPEAKER.—I have no objection. It must be settled between the Industries Minister and the Finance Minister.

Sri H. SIDDAVEERAPPA.—The point is this. Yesterday you were pleased to say that if it is necessary, we can have a night session. We are prepared to sit for any length of time. I am appealing to the Chair. As you know, everyone of us is hard-pressed for time; every minute has become so important. It is not the intention of the Government to curtail discussion, as has been made clear more often than once. There are precedents elsewhere also that in discussing financial and other important measures, in order to save the time of this House, according to your discretion you may regulate the timings. At any rate, we on the Treasury Bench are prepared to sit as long as it is necessary. After all, as you were pleased to observe yesterday, this is just the first stage and first stage is not the last stage. We now send this Bill to the Select Committee and when the Bill comes back from the Select Committee in the second stage, if the House so feels, nothing prevents them from throwing it out. Then comes the final stage of taking up the Bill clause by clause. So, this is not the be-all and end-all. This is just the commencement. I think such of the Hon'ble Members who want to have their full say, and very full say, will have many more opportunities than one. Therefore, I humbly appeal to you to regulate the time and see that the programme as appointed is as far as possible adhered to. I make this appeal in the interest of the business of the House and also in the interest of the Treasury Bench. I make a special appeal to you to enable the Government to move the Report for consideration tomorrow as already scheduled.

Mr. SPEAKER.—It all depends upon the Hon'ble Members. If we can sit late, both today and tomorrow we can finish. It is not much. There are instances in other Assemblies where Hon'ble Members have sat even in Lok Sabha till 12 o'clock midnight; of course, not at all times.

Dr. R. NAGAN GOWDA (Minister for Agriculture).—Sir, both yesterday evening and this morning, this Bill was discussed at length and it was understood that we should be able to send this to the Select Committee today. I think it will be better if we sit a little bit late this evening.

Mr. SPEAKER.—It will be quite possible, if we sit till 7-30 P.M., to finish discussion on this Bill and send it to the Select Committee.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಸ್ವಾಮಿ, ನಾನು ಈ ಹಿಂದೆ ಬಡ್ಜೆಟ್ ಮೇಲೆ ಭಾಷಣ ಮಾಡುತ್ತಾ, ಸರ್ಕಾರದವರು ಈ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಬಿಲ್ಲನ್ನು ಜಾರಿಗೆ ತರುವುದರಿಂದ ರೈತರಿಗೆ ಎಷ್ಟು ಕಷ್ಟ-ನಷ್ಟಗಳುಂಟಾಗುತ್ತವೆಂಬುದನ್ನು ಪ್ರಸ್ತಾಪ ಮಾಡಿದ್ದೆನು. ಆದರೆ ಈಗ ನಮ್ಮ ಸರ್ಕಾರದವರು ಈ ಮಸೂದೆಯನ್ನು ಪಾಸ್ ಮಾಡಿಸಿ ಜಾರಿಗೆ ತರುವುದರಿಂದ ನಮ್ಮ ಸರ್ಕಾರಕ್ಕೆ ಸುಮಾರು 20 ಲಕ್ಷ ರೂಪಾಯಿಗಳು ಬರಬಹುದೆಂದು ಹೇಳಿದ್ದಾರೆ. ಆದರೆ ನನ್ನ ದೃಷ್ಟಿಯಲ್ಲಿ ಅಷ್ಟೂ ಕೂಡ ಬರಲಾರದೆಂದು ಹೇಳುತ್ತೇನೆ. ಇದರಿಂದ ಸರ್ಕಾರಕ್ಕೂ ಫಾಯಿದೆಯಿಲ್ಲ; ರೈತನಿಗೂ ಅನುಕೂಲವಿಲ್ಲ. ಆದರೆ ರೈತನಿಗೆ ತುಂಬ ಅನಾನುಕೂಲವುಂಟಾಗುತ್ತದೆ. ಆದರೆ ಈದಿವಸ ಒಬ್ಬ ರೈತನಿಗೆ 5 ಸಾವಿರ 10 ಸಾವಿರ ರೂಪಾಯಿಗಳ ವರಮಾನ ಈ ಈರುಳ್ಳಿ-ಬೆಳ್ಳುಳ್ಳಿ ಶಾಮಂತಿಗೆ ಹೂ ಇತ್ಯಾದಿ ಬೆಳೆಗಳಿಂದ ಬರಬೇಕಾಗಿದ್ದರೆ ಆ ರೈತರು ಎಷ್ಟು ಸಾವಿರ ಎಕರೆಗಳಲ್ಲಿ ವ್ಯವಸಾಯಮಾಡಬೇಕಾಗಿದೆ ಎಂಬುದನ್ನು ನಾವೀಗ ಗಮನಕ್ಕೆ ತೆಗೆದುಕೊಳ್ಳಬೇಕಾಗಿದೆ. ಅದೇ ರೀತಿ ಈ ಅಡಕೆ, ಕಾಫಿ ಮತ್ತು ಏಲಕ್ಕಿ ಇವುಗಳ ವಿಚಾರದಲ್ಲೂ ಜಮೀನಿನ ಪರಮಾವಧಿ ವಿಸ್ತೀರ್ಣ ಎಷ್ಟಿರಬೇಕೆಂಬುದನ್ನು ತಿಳಿದುಕೊಳ್ಳಬೇಕು. ಅಂತೂ ಸರ್ಕಾರದವರು ಯಾವ ಬಿಲ್ಲನ್ನೇ ತರಲಿ ರೈತನಿಗೆ ಒಂದು ಹೊರೆ ಜಾಸ್ತಿಯಾಗುತ್ತದೆಯೇ ವಿನಾ ಅವನಿಗೇನೂ ಲಾಭವಿರುವುದಿಲ್ಲ. ಮೊದಲು ಒಂದು ಟೆನೆನ್ಸಿ ಬಿಲ್ ಎಂದು ಹೇಳಿ ಅದನ್ನು ತಂದರು ಅದಾಯಿತು, ಈಗ ಈ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಬಿಲ್ ಎಂದು ಇದನ್ನು ತಂದಿದ್ದಾರೆ. ಆದರೆ ಈ ಹಿಂದೆ ಕಂಟ್ರೋಲ್ ಆಜ್ಞೆಗಳಿದ್ದಾಗಂತೂ ಆ ಅಧಿಕಾರಿಗಳ ಹೊಡೆತಕ್ಕೆ ರೈತರು ಸಿಕ್ಕಿಕೊಂಡು ತುಂಬ ನರಳಿದ್ದಾರೆ. ಏನೋ ಈ ದಿವಸವಾದರೂ ಆ ಕಂಟ್ರೋಲ್ ಆಜ್ಞೆಗಳೆಲ್ಲಾ ಹೋಗಿರುತ್ತವೆ, ರೈತರು ಇನ್ನಾದರೂ ಸುಖದಿಂದಿರಬಹುದೆಂದು ಅಂದುಕೊಳ್ಳುತ್ತಿರುವಾಗ ತಾವು ಪುನಃ ರೈತರನ್ನು ಮತ್ತೆ ಈ ಅಧಿಕಾರಿಗಳ ಕೈಗೆ ಕೊಟ್ಟು-ಇವರು ಮತ್ತೆ ಆ ಟೇಬಲ್ ಬಾಗಿಲುಗಳನ್ನು ಕಾಯುವಂಥ ಪರಿಸ್ಥಿತಿಗೆ ದಾರಿಮಾಡುತ್ತಿರುವಂತೆ ಕಾಣುತ್ತಿದೆ. ಸರ್ಕಾರದವರಿಗೇನೋ ಒಂದು ಉತ್ಪತ್ತಿ ಬೇಕಾಗಿದೆ. ಆದರೆ ಇದರಿಂದ ರೈತಾಪಿ ಜನರಿಗೆ ಎಷ್ಟು ತೊಂದರೆಯಾಗುತ್ತದೆ ಎಂಬುದನ್ನು ನಾವೀಗ ಆಲೋಚನೆ ಮಾಡಬೇಕಾಗಿದೆ. ರೈತರಿಗೆ ಈ ಕಾನೂನಿನಿಂದ ಅನೇಕ ತೊಂದರೆಗಳುಂಟಾಗುತ್ತವೆ. ಹಾಗೆ ಏನೇನು ತೊಂದರೆಗಳುಂಟಾಗಬಹುದೆಂಬುದರ ಬಗ್ಗೆ ನಾನೀಗ ಕೆಲವನ್ನು ತಿಳಿಸಲಿಚ್ಛಿಸುತ್ತೇನೆ. ಮೊಟ್ಟ ಮೊದಲನೆಯದಾಗಿ ಕಾಫಿ ಬೆಳೆ ವಿಚಾರವಾಗಿ

(ಶ್ರೀಮತಿ ಬಿ. ಎಲ್. ಸುಬ್ಬಮ್ಮ.)

ಮಾತನಾಡಬೇಕೆಂದಿದ್ದೇನೆ. ಈ ಕಾಫಿ ಬೆಳೆ ವಿಚಾರದಲ್ಲಿ ಬಹಳ ಕಾಲದಿಂದಲೂ ನಾವು ಸರ್ಕಾರಕ್ಕೆ ಒಂದಲ್ಲ ಒಂದು ರೀತಿಯಲ್ಲಿ ಮನವಿಗಳನ್ನು ಸಲ್ಲಿಸುತ್ತಲೇ ಬಂದಿದ್ದೇವೆ. ಈಗೇನೋ ಈ ಕಾಫಿ ವ್ಯವಸಾಯಗಾರರ ಸ್ಥಿತಿ ಕೊಂಚ ಸುಧಾರಿಸಿದೆ. ಆದರೆ ಇವರ ಗತಿ ಆ 1939ರಲ್ಲಿ ಏನಾಗಿತ್ತು ಎಂಬುದನ್ನು ಯಾರೂ ನೋಡಲಿಲ್ಲ. ಸ್ವಾಮಿ, 1939-40ರಲ್ಲಿ ಈ ಕಾಫಿ ಬೆಳೆಯು ಮದ್ರಾಸ್ ಪ್ರಾವಿನ್ಸಿನಲ್ಲಿ 47,964 ಎಕರೆಗಳಲ್ಲಿ ನಡೆಸಲಾಗುತ್ತಿತ್ತು, ಆಗ ನಮ್ಮ ಮೈಸೂರಿನಲ್ಲಿ ಈ ಕಾಫಿ ವ್ಯವಸಾಯ 95,739 ಎಕರೆಗಳಲ್ಲಿ ನಡೆಯುತ್ತಿತ್ತು. ಕೊಡಗಿನಲ್ಲಿ 37,470 ಎಕರೆಗಳಲ್ಲಿ ಕಾಫಿ ವ್ಯವಸಾಯ ನಡೆಸುತ್ತಿದ್ದರು. ಆದರೆ ಈ ಹೊತ್ತು ಅಂದರೆ 1953ಕ್ಕೆ ಮದ್ರಾಸಿನಲ್ಲಿ ಕಾಫಿ ಬೆಳೆಯು 99,770 ಎಕರೆಗಳಿಗೆ ಏರಿವೆ. ಆದರೆ ಮೈಸೂರಿನಲ್ಲಿ ಇದರ ವ್ಯಾಪ್ತಿ ಹೆಚ್ಚುವುದಕ್ಕೆ ಬದಲಾಗಿ 90,380 ಎಕರೆಗಳಿಗೆ ಇಳಿದಿದೆ. ಕೊಡಗಿನಲ್ಲಿ ಇದು 47,940 ಎಕರೆಗಳಿಗೆ ಏರಿದೆ. ಹೀಗೆ ನಮ್ಮ ಮೈಸೂರಿನಲ್ಲಿ ಈ ದಿವಸ ಈ ಕಾಫಿ ವ್ಯವಸಾಯ ಕಡಿಮೆಯಾಗುತ್ತಿರುವುದರ ಜೊತೆಗೆ ಬೆಳೆಯೂ ಸಹ ಬಹಳ ಇಳಿಮುಖವಾಗುತ್ತಿದೆ. ಮೊದಲು ನಮ್ಮ ಸಂಸ್ಥಾನದಲ್ಲಿ 76,271 ಟನ್ ಕಾಫಿ ಉತ್ಪತ್ತಿಯಾಗುತ್ತಿದ್ದುದು ಈ ದಿವಸ ಬಹಳ ಇಳಿದು ಹೋಗಿದೆ. ಇನ್ನೂ ಇಳಿಯುತ್ತಲೇ ಇದೆ. ಆದರೆ ಈ ಕಾಫಿ ಪ್ಲಾಂಟರುಗಳೆಲ್ಲಾ ಯಾವಾಗಲೂ ಕಾರಿನಲ್ಲೇ ತಿರುಗಾಡುತ್ತಾರೆ. ಒಳ್ಳೆ ಬಟ್ಟೆಬರೆಗಳನ್ನು ಹಾಕಿಕೊಳ್ಳುತ್ತಿದ್ದಾರೆ. ಆದ್ದರಿಂದ ಇವರು ಲಕ್ಷಾಧಿಕಾರಿಗಳೆಂದು ತಾವೇನಾದರೂ ಭಾವಿಸಿದ್ದರೂ ಭಾವಿಸಿರಬಹುದು. ಆದರೆ ನಿಜಾಂಶ ಹಾಗಿಲ್ಲ; ಅವರೆಲ್ಲರೂ ಬಹಳ ಚಿಂತಾಕ್ರಾಂತರಾಗಿದ್ದಾರೆ. ಟನ್ ಒಂದಕ್ಕೆ ನಾವೀಗ 120 ರೂಪಾಯಿಗಳ ತೆರಿಗೆಯನ್ನು ಕೊಡುತ್ತಿದ್ದೇವೆ; ಆದಾಗ್ಯೂ ಈ ತಹಾವರೆಗೂ ಈ ಎಕರೇಜ್ ಮೇಲೆ ಡಿವಿಡೆಂಡನ್ನು ಹಂಚಿರುವುದಿಲ್ಲ. ಹಂಡ್ರಡ್ ವೈಟ್ ಒಂದಕ್ಕೆ 21 ರೂಪಾಯಿಗಳ ಎಕ್ಸೈಜ್ ಡ್ಯೂಟಿಯನ್ನು ಕೊಡುತ್ತಿದ್ದೇವೆ. ಆದರೆ ನಮ್ಮ ಮೈಸೂರು ಸರ್ಕಾರಕ್ಕೆ ಇದನ್ನು ಕೊಟ್ಟಿಲ್ಲ ಎಂದು ಹೇಳಬಹುದು. ಕೇಂದ್ರ ಸರ್ಕಾರದವರಿಗೆ ನಾವು ಮಣ ಒಂದಕ್ಕೆ 21 ರೂಪಾಯಿಗಳ ಪ್ರಕಾರ ಎಕ್ಸೈಜು ಸುಂಕವನ್ನು ಕೊಟ್ಟಿದ್ದೇವೆ. $12\frac{1}{2}$ ರೂಪಾಯಿಗಳ ಸೇಲ್ಸ್ ಟ್ಯಾಕ್ಸನ್ನು ಕೊಟ್ಟಿದ್ದೇವೆ. ಇದರ ಜೊತೆಗೆ 3 ರೂಪಾಯಿಗಳ ಆಕ್ಟ್ರಾಯಿ ಬೇರೆ ಕೊಡಬೇಕು. ಕಾಫಿ ಬೋರ್ಡಿಗೆ 10 ರೂಪಾಯಿಗಳು; ಎಕ್ಸ್‌ಪೋರ್ಟ್ ಡ್ಯೂಟಿ 20 ರೂಪಾಯಿಗಳು ಹೀಗೆಲ್ಲಾ ಕೊಡುತ್ತಿದ್ದೇವೆ. ಹೀಗೆಲ್ಲಾ ಇದೆ. ಅಂತೂ ಈ ದಿವಸ ಈ ಕಾಫಿ ವ್ಯವಸಾಯಗಾರರ ಸ್ಥಿತಿ ಬಹಳ ಚಿಂತಾಜನಕವಾಗಿದೆ. 1930ರಲ್ಲಿ ಕಾಫಿ ಬೆಲೆ ಪೂರಾ ಇಳಿದು ಹೋಗಿತ್ತು. ಮಣಕ್ಕೆ $3\frac{1}{2}$ ರೂ. ಪ್ರಕಾರ ಮಾರಾಟ ಮಾಡಿದ್ದಾಯಿತು. ಹೀಗಾದರೆ ಅವರು ಉಳಿಯುತಕ್ಕ ಬಗೆ ಹೇಗೆ ! ಬಾಕಿ ವ್ಯವಸಾಯಗಾರರಿಗೂ ಈ ಕಾಫಿ ವ್ಯವಸಾಯಗಾರರಿಗೂ ಬಹಳ ತಾರತಮ್ಯವಿದೆ. ಈ ದಿವಸ ಈ ಸಭೆಯಲ್ಲಿ ಯಾರಾದರೂ 10 ಎಕರೆ ಕಾಫಿ ತೋಟ ಉಳ್ಳಂಥವರು ಇದ್ದಿದ್ದರೆ ಆಗ ಅವರಿಗೆ ಈ ಕಾಫಿ ವ್ಯವಸಾಯಗಾರರ ತೊಂದರೆಗಳೇನೆಂಬುದು ಗೊತ್ತಾಗುತ್ತಿತ್ತು.

ಕಾಫಿ ಪ್ಲಾಂಟರುಗಳ ವಿಷಯ ತಿಳಿದಿಲ್ಲ. 10 ಎಕರೆ ಕಾಫಿತೋಟವು ಮಂತ್ರಿಗಳಿಗಿದ್ದರೆ ಅದರ ಖರ್ಚು ಗೊತ್ತಾಗುತ್ತದೆ.

ಶ್ರೀ ಡಿ. ದೇವರಾಜಅರಸ್.—ಕಾಫಿ ತೋಟ ಮಾಡತಕ್ಕವರ ಅಳಿಯಂದಿರಿದ್ದಾರೆ.

ಶ್ರೀಮತಿ ಬಿ ಎಲ್. ಸುಬ್ಬಮ್ಮ.—ಕಾಫಿತೋಟದಲ್ಲಿರತಕ್ಕಂಥ ಮಗಳಿದ್ದರೆ ಗೊತ್ತಾಗುತ್ತಿತ್ತು, ಅಳಿಯಂದಿರಾಗಿದ್ದರೆ ಪ್ರಯೋಜನವಿಲ್ಲ.

ಶ್ರೀ ಜೆ. ಮಹಮ್ಮದ್ ಇಮಾಂ.—ಅಳಿಯಂದಿರಿದ್ದರೆ ಮನೆ ತೊಳೆಯುವರು.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಮೈಸೂರು ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ಜಯಲಕ್ಷ್ಮಿ ಬ್ಯಾಂಕ್ ಇವುಗಳಲ್ಲಿನ ಲೆಕ್ಕಗಳನ್ನು ನೋಡಿದರೆ ಎಲ್ಲ ಪ್ಲಾಂಟರುಗಳೂ ಸಾಲ ಮಾಡಿರುವುದು ತಿಳಿಯುತ್ತದೆ. 1940ನೇ ಇಸವಿಯಲ್ಲಿ ಬೆಳೆ ಹಾಳಾದಾಗ ಹೆಂಗಸರ ಮೈಮೇಲಿನ ಚಿನ್ನ ಮಾರಿದರು, ಮನೆಗಳನ್ನು ಮಾರಿದರು. ಕಾಫಿಗೆ ದರಬಂದಾಗ ಸಾಲಸೋಲಗಳನ್ನು ತೀರಿಸುತ್ತಾರೆ. ಸರ್ಕಾರದವರು ಹೊರಗಡೆ export ಮಾಡುವುದಕ್ಕೆ ಅವಕಾಶಕೊಟ್ಟ ಮೇಲೆ ಸ್ವಲ್ಪ ಚೇತರಿಸಿಕೊಂಡರು. ಆದುದರಿಂದ ಕಾಫಿ ಬೆಳೆಯುವವರ ಸ್ಥಿತಿ ಏನಾಗಿದೆ ಎಂದು ತಾವೇ ಯೋಚನೆಮಾಡಬೇಕು. ಏನಾದರೂ ಬರಲಿ, ಕಾಫಿ ಬೆಳೆಯುವವರಿದ್ದಾರೆಂದು ಅವರನ್ನು ತೋರಿಸುತ್ತಾರೆ. ಮಲೆನಾಡು ಜಿಲ್ಲೆಯಲ್ಲಿ ಆಸ್ಪತ್ರೆ, ಸ್ಕೂಲು, ಯಾವುದನ್ನು ತೆಗೆದುಕೊಂಡರೂ ಸಹ ಅವನ್ನು ಕಾಫಿ ಪ್ಲಾಂಟರುಗಳು ಮಾಡಿದ್ದಾರೆಯೇ ಹೊರತು ಸರ್ಕಾರದವರು ಏನೂ ಮಾಡಿಲ್ಲವೆಂದು ಧಾರಾಳವಾಗಿ ಹೇಳಬಹುದಾಗಿದೆ. ಕಾಫಿಪ್ಲಾಂಟರುಗಳು ದೇಶಕ್ಕೆ ಉದಾರವಾಗಿ ಸಹಾಯ ಮಾಡುವ ಮನೋಭಾವವುಳ್ಳವರಾಗಿದ್ದಾರೆಯೇ ಹೊರತು ಬ್ಲಾಕ್‌ಮಾರ್ಕೆಟ್ ಮಾಡಬೇಕೆಂದಿಲ್ಲ. ಆದುದರಿಂದ ಕಾಫಿ ಬೆಳೆಯುವವರ ಸ್ಥಿತಿಯಲ್ಲಿ ಸರ್ಕಾರದವರು ಸ್ವಲ್ಪ ನಿಗಾ ಇಟ್ಟುಕೊಳ್ಳಬೇಕು.

ಈಗ ತಾವು ತೆರಿಗೆ ಹಾಕುವುದು ದೇಶದ ದೃಷ್ಟಿಯಲ್ಲಿ ಸರಿಯಾಗಿರಬಹುದು. ಆದರೆ ಈ ಮಧ್ಯೆ ಕೇಂದ್ರ ಸರ್ಕಾರದವರು ಈ ಕಾಫಿ ವಿಚಾರದಲ್ಲಿ ಇದು ವ್ಯವಸಾಯಕ್ಕೂ ಸಂಬಂಧಪಡುವುದಿಲ್ಲ, ಕೈಗಾರಿಕೆಗೂ ಸಂಬಂಧಪಡುವುದಿಲ್ಲವೆಂದು ಇನ್ನೊಂದು General Income-tax ಹಾಕಬೇಕೆಂಬ proposal ಮಾಡಿದ್ದಾರೆಂದೂ ಕೇಳುತ್ತೇನೆ. ಇದನ್ನು ನೋಡಿದರೆ, ಕಾಫಿ ಬೆಳೆಯುವವರಿಗೆ ಖಂಡಿತವಾಗಿಯೂ ಕೊಡಲಿಪೆಟ್ಟು ಬಿದ್ದ ಹಾಗಾಗುತ್ತದೆ. ಇನ್ನು ಹತ್ತು ವರ್ಷಗಳಲ್ಲಿ ಕಾಫಿ ಬೆಳೆಯ ಸ್ಥಿತಿ ಏನಾಗುತ್ತದೆ ಎಂಬುದು ಸರ್ಕಾರದವರು ಯೋಚನೆ ಮಾಡಬೇಕಾದ ವಿಷಯವಾಗಿದೆ. ಆದುದರಿಂದ ಸರ್ಕಾರದವರು ಈಗ ಆದಾಯತೆರಿಗೆ ಹಾಕಬೇಕೆಂದು ಯಾವ ಮಸೂದೆಯನ್ನು ತಂದಿದ್ದಾರೋ ಅದು ಈಗಲೇ ಚರ್ಚೆಯಾಗಿ, ನಾಳೆಬೆಳಿಗ್ಗೆ ಸೆಲೆಕ್ಟ್ ಕಮಿಟಿಗೆ ಹೋಗಿ ನಾಳಿದ್ದು ಬಿಲ್ ಪಾಸ್ ಆಗಬೇಕು ಎಂದರೆ ಬಹಳ ಕಷ್ಟವಿದೆ. ಒಂದೊಂದು ಕ್ಲಾಜನ್ನೂ ವಿಮರ್ಶೆಮಾಡಬೇಕು. ಇದು ರೈತರ ಮೇಲೆ ತೆರಿಗೆ ಬೀಳತಕ್ಕ ವಿಷಯ! ಇದು ಬಹಳ ದೊಡ್ಡ ಸಮಸ್ಯೆಯಾಗಿರುವುದರಿಂದ ಇದನ್ನು ಕೂಲಂಕಷವಾಗಿ ವಿಮರ್ಶೆ ಮಾಡಬೇಕಾಗಿದೆ.

ಕೊನೆಯದಾಗಿ ಈ ಮಸೂದೆಯನ್ನು ಪಾಸುಮಾಡಿ ಅದನ್ನು ಜಾರಿಗೆ ತರುವುದಕ್ಕೆ ಅಧಿಕಾರಿಗಳಿಗೆ ವಹಿಸಿದರೆ ಅವರಿಂದ ಪ್ಲಾಂಟರುಗಳಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಸರ್ಕಾರದವರು ಇದನ್ನು ಹಾಕುವಾಗ ಬಹಳ ದೀರ್ಘವಾಗಿ ವಿಮರ್ಶೆಮಾಡಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಶಿವನಂಜೇಗೌಡ (ಮೈಸೂರು ತಾಲ್ಲೂಕು).—ಅಧ್ಯಕ್ಷರೇ, ಇಂದಿನದಿನ ನಮ್ಮ ಮಾನ್ಯ ಸದಸ್ಯರುಗಳು ಮಾಡಿದ ಭಾಷಣವನ್ನು ಕೇಳಿದೆ. ನಾನು ಇದರಲ್ಲಿ ಭಾಗವಹಿಸಬಾರದೆಂದು ಇದ್ದೆ. ಆದರೆ ಸದಸ್ಯರ ಭಾಷಣಗಳನ್ನು ಕೇಳಿದನಂತರ ಈ ಚರ್ಚೆ ಸ್ವಲ್ಪ ವಿಚಿತ್ರವಾಗಿ ಕಾಣುತ್ತ ಇರುವುದರ ದೆಸೆಯಿಂದ ಕೆಲವು ಮಾತುಗಳನ್ನಾಡಬೇಕೆಂದು ಮನಸ್ಸುಮಾಡಿದ್ದೇನೆ.

ಈ ಸರ್ಕಾರ ಪ್ರಜೆಗಳೇ ಪ್ರಭುಗಳು ಎಂದು ತಿಳಿದುಕೊಂಡಿರತಕ್ಕ ಸರ್ಕಾರ. ಅದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಯಾರು ಸಂಬಳ ಪಡೆಯುತ್ತಾರೆಯೋ ಅಂಥವರ ಬಾಲವನ್ನು ಹಿಡಿದುಕೊಂಡು ಅನೇಕರು ಬರುತ್ತಾರೆ, ಆದರೂ ರೈತರನ್ನು ಯಾರೂ ಕೇಳುವವರೇ ಇಲ್ಲ ಎಂದು ಸಭಾನಾಯಕರಾದ ಮಾನ್ಯ ಮುಖ್ಯ ಸಚಿವರು ಹೇಳಿದ್ದಾರೆ. ಸಭೆಯೆಲ್ಲಾ ಅದನ್ನು ಕೇಳಿದೆ. ಅಂದಮೇಲೆ ಸರ್ಕಾರಕ್ಕೆ ಪ್ರಜೆಗಳ ಮೇಲೆ ಪ್ರೀತಿ, ವಿಶ್ವಾಸ, ಆದರ ಎಲ್ಲವೂ ಇದೆ ಎಂದು ಮನದಟ್ಟಾಗಿದೆ. ಸರ್ಕಾರದವರು ಎಲ್ಲವನ್ನೂ ವಿಮರ್ಶೆ ಮಾಡಿಕೊಂಡೇ ಈ ಮಸೂದೆಯನ್ನು ತಂದಿದ್ದಾರೆ. ಇದರ ವಿಚಾರದಲ್ಲಿ ಸರ್ಕಾರದವರಕಡೆ ಕೈತೋರಿಸಿ ಮಾತಾಡುವುದು ಬಹಳ ವಿಚಿತ್ರವಾಗಿ ಕಾಣುತ್ತದೆ. ಈ ಮಸೂದೆಯನ್ನು ತಂದಿರುವುದರ ಉದ್ದೇಶವಾದರೂ ಏನು ಎಂಬುದನ್ನು ನೋಡಬೇಕು. ಹೆಚ್ಚು ಶ್ರೀಮಂತರಾಗಿರತಕ್ಕವರು, ಹೆಚ್ಚು ವರಮಾನ ಬರತಕ್ಕವರು, ಇಂಥವರ ಮೇಲೆ ಈ ತೆರಿಗೆ ಬೀಳುತ್ತದೆ. ಇದು ಉತ್ತಮವಾದ ಮಾರ್ಗ. ದೇಶಾದ್ಯಂತವೆಲ್ಲ ಕಂದಾಯದ ಹೊರೆಯನ್ನು ಹೆಚ್ಚಿಸುವಂತೆ ಮಾಡಿದರೆ ಅದು ಪ್ರತಿಯೊಬ್ಬ ಬಡ ರೈತನ ಮೇಲೆಯೂ ಬೀಳುತ್ತದೆ. ಸರ್ಕಾರದವರು ಎಷ್ಟು ಒಳ್ಳೆಯದನ್ನು ಮಾಡಿದರೂ ದೇಶದಲ್ಲಿ ಈ ರೀತಿ ಕಂದಾಯವನ್ನು ಹೆಚ್ಚಿಸಿದ್ದಾರೆಂಬ ಪ್ರಚಾರಮಾಡುತ್ತಾ ಹೋದರೆ ಸರ್ಕಾರಕ್ಕೆ ಕಾಂಗ್ರೆಸ್ಸಿನಿಂದಲೇ ಸ್ವಲ್ಪ ಕಷ್ಟವಾಗಬಹುದು. ಒಂದು ವಿಚಾರಮಾಡೋಣ. ಸಾರ್ವತ್ರಿಕವಾಗಿ ಕಂದಾಯವನ್ನೇನಾದರೂ ಹೆಚ್ಚು ಮಾಡಿದರೆ ಈಗ ತಂದಿರುವ ಮಸೂದೆಯ ಪ್ರಕಾರ ಎಷ್ಟು ಹಣ ಬರುತ್ತದೆಯೆಂದು ನಿರೀಕ್ಷೆಮಾಡಿದ್ದೇವೆಯೋ ಅದಕ್ಕಿಂತಲೂ ಹೆಚ್ಚು ಬರುತ್ತದೆ ಎಂದು ಯೋಚನೆಮಾಡೋಣ. ಆಗ, ಇದರಿಂದ ಬಡ ರೈತರಿಗೆ ತೊಂದರೆಯಾಯಿತು, ಕಂದಾಯದ ಹೊರೆಯನ್ನು ಹೆಚ್ಚುಮಾಡಿದರು ಎಂಬ ಪ್ರಚಾರ ಪ್ರಾರಂಭವಾಗಿ ಸರ್ಕಾರವನ್ನು ಜನರು ಅಲ್ಲಗಳೆಯುವುದಕ್ಕೆ ಹೊರಡುತ್ತಾರೆ. ನಮ್ಮ ಹಳ್ಳಿಗಾಡಿನಲ್ಲಿರತಕ್ಕ ಜನ ಸಾಮಾನ್ಯವಾಗಿ ಕಡಿಮೆ ವರಮಾನ ಬರುವವರು. ಅವರಲ್ಲಿ ಈ ರೀತಿ ಸಮಾಚಾರಗಳು ಹರಡಿದರೆ ಅವರು ತಪ್ಪು ತಿಳಿವಳಿಕೆ ಹೊಂದುತ್ತಾರೆ. ಆದರೆ ಈಗ ತಂದಿರುವ ಕಾನೂನಿನಿಂದ ಬಡರೈತರಿಗೆ ಯಾವ ವಿಧವಾದ ತೊಂದರೆಯೂ ಆಗರಾರದು. ಶ್ರೀಮಂತರಾಗಿರುವವರು, 20 ಸಾವಿರ 30 ಸಾವಿರ ಹೀಗೆ ವರಮಾನ ಬರತಕ್ಕವರಿಗೆ ಮಾತ್ರ ಈ ಕಾನೂನು ಅನ್ವಯಿಸುವಂತೆ ತಂದಿದ್ದಾರೆ. ದೇಶಕ್ಕೋಸ್ಕರ, ದೇಶದ ಉದ್ಧಾರಕ್ಕೋಸ್ಕರ ಸಂತೋಷದಿಂದ, ತೃಪ್ತಿಯಿಂದ ಕೊಡಬೇಕು. ಹಾಗೆ ದ ಮಾತ್ರಕ್ಕೆ ಈ ಬಿಲ್ಲಿನಲ್ಲಿರತಕ್ಕ ಎಲ್ಲ ಅಂಶಗಳನ್ನೂ ನಾನೂ ಒಪ್ಪಿಕೊಳ್ಳುತ್ತೇನೆ ಎಂದಲ್ಲ. ಸೆಲೆಕ್ಟ್ ಕಮಿಟಿಗೆ ಒಳ್ಳೆ ಒಳ್ಳೆಯವರನ್ನೇ ಆರಿಸಿ ಇದರಲ್ಲಿ ಬೇಕಾದ ತಿದ್ದುಪಡಿಗಳನ್ನು ಮಾಡುವುದಕ್ಕೆ ಅವಕಾಶವಿದೆ. ಅವರಿಗೆ ನಮ್ಮ ಸಲಹೆಗಳನ್ನು ಕೊಡಬಹುದು. ಹೀಗಿರುವಾಗ ಸರ್ಕಾರವನ್ನು ಸುಮ್ಮನೆ ದೂಷಣೆ ಮಾಡುವುದು ನ್ಯಾಯವಲ್ಲ.

ದೇಶಕ್ಕೆ ಉಪಕಾರವಾಗುವಂತಹ ಕೆಲಸಗಳನ್ನು ಮಾಡಲು ಇಂಡಿಯಾ ಸರ್ಕಾರದವರು ಏನೇನೋ ಸ್ಕೀಂಗಳನ್ನು ತಯಾರಿಸಿ ಅದಕ್ಕೆ ಇಷ್ಟು ಹಣ ಕೊಡಬೇಕು ಎಂದು ಮಾಡಿದ್ದಾರೆ. ನಾವು ಇಷ್ಟು ಹಣ ಕೊಡುತ್ತೇವೆ, ನೀವು ಇಷ್ಟು ಕೊಡಬೇಕು ಎಂದು ಹೇಳುತ್ತಾರೆ. ನೀವೂ ಕೊಟ್ಟರೆ ಅವರೂ ಕೊಟ್ಟು ಸಹಾಯ ಮಾಡುತ್ತಾರೆ. ಇಲ್ಲದೆ ಇದ್ದರೆ ಅವರಿಂದ ಸಹಾಯಾರ್ಥವಾಗಿ ಬರತಕ್ಕ ಹಣ ಬರುವುದಿಲ್ಲ. ಬರುವ ಹಣವನ್ನು ಬಿಡಬೇಕೇ ಅಥವಾ ತೆಗೆದುಕೊಳ್ಳಬೇಕೇ ಎಂಬುದು ಯೋಚನೆಮಾಡಬೇಕಾದ ವಿಚಾರ. ಈ ಸಂದರ್ಭದಲ್ಲಿ ಒಂದು ಮಾತು ಹೇಳಿದರೆ ತಪ್ಪಾಗಲಾರದು. ಹಿಂದೆ ದೇಶವನ್ನು ಉದ್ಧಾರಮಾಡುತ್ತೇವೆ, ದೇಶದಲ್ಲಿ ಜನರ ಸೌಕರ್ಯಗಳು ಏನೇನು ನಡೆಯಬೇಕೋ ಅವನ್ನು ಮಾಡುತ್ತೇವೆ, ದೇಶದಲ್ಲಿ ಪ್ರಗತಿ ಕಾರ್ಯಗಳು ಏನೇನು ನಡೆಯಬೇಕೋ ಅವುಗಳೆಲ್ಲವನ್ನೂ ಸಾಧನೆಮಾಡಬೇಕೆಂದು ಹೇಳುವ ಬಾಯಿಯಲ್ಲಿ, ಅವರಿಂದ ದುಡ್ಡು ತೆಗೆದುಕೊಂಡು ಖರ್ಚುಮಾಡದೆ ಮಾಡಿ ಎಂದು ಹೇಳುವುದು ಯಾವ ನ್ಯಾಯ! ದೇಶದ ಅಭಿವೃದ್ಧಿಕಾರ್ಯಗಳಿಗೆ ಹಣ ಖರ್ಚುಮಾಡಿ ದೇಶವನ್ನು ಉತ್ತಮ ಸ್ಥಿತಿಗೆ ತರಬೇಕಾದದ್ದು ನಮ್ಮ ಕರ್ತವ್ಯ, ಅದಕ್ಕೆ ಬೇಕಾದ ಹಣವನ್ನೂ ಸಹ ಒದಗಿಸಬೇಕಾದದ್ದು ಧರ್ಮ. ಹೀಗೆಮಾಡಿ ದೇಶವನ್ನು ಉದ್ಧಾರಮಾಡಿ ಮಾಡಬೇಕೆಂದರೆ ಇಲ್ಲದಸಲ್ಲದ ಮಾತುಗಳನ್ನು ಹೇಳುವುದು ನ್ಯಾಯವಾದದ್ದಲ್ಲ. ಸರ್ಕಾರದವರು ಈ ಅಂಶಗಳೆಲ್ಲವನ್ನೂ ಯೋಚನೆಮಾಡಿಯೇ ಈ ಬಿಲ್ಲನ್ನು ತಂದಿರುತ್ತಾರೆ. ಅಂಕಿಅಂಶಗಳ ಆಧಾರದ ಮೇಲೆ ಎಲ್ಲವನ್ನೂ ಹೇಳಬೇಕೆಂದರೆ ನನಗೆ ನಾನು ಓದತಕ್ಕ ಪುಸ್ತಕ ಕೊಡಲಿಲ್ಲ. ಈಗ ಯಾರು ಯಾರು ಬೆಳೆಯನ್ನು ಬೆಳೆಯುತ್ತಾರೆಯೋ ಅವರೆಲ್ಲ ರೈತರೇ, ನಾನೂ ಸಹ ರೈತನೇ. ಈ ತೆರಿಗೆ ವಸೂಲಿಗೆ ಯಾರು ಹೋಗುತ್ತಾರೆಯೋ ಅವರ ಬೆದರಿಕೆಗೆ ಈ ರೈತಾಪಿ ಜನ ತುತ್ತಾದರೆ ಕಷ್ಟ. ಅದು ತಪ್ಪಿ ಸುಲಲಿತವಾಗಿ ನಡೆದುಕೊಂಡು ಬರುವಂತಹ ರೀತಿಯಲ್ಲಿ ಮಾಡಬೇಕು. ದೇಶದ ಉದ್ಧಾರಕ್ಕೋಸ್ಕರ ಹಣವನ್ನು ಶೇಖರಣೆ ಮಾಡಬೇಕಾದ ತತ್ವವನ್ನು ಎಲ್ಲರೂ ಒಪ್ಪಿದ್ದಾರೆಂದು ಭಾವಿಸುತ್ತೇನೆ.

ಈ ಮಸೂದೆಯಲ್ಲಿರುವ ತತ್ವವನ್ನು ಒಪ್ಪಿಕೊಳ್ಳಬೇಕಾದದ್ದು ಧರ್ಮ. ಇದನ್ನು ಎಲ್ಲರೂ ದಯವಿಟ್ಟು ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ. ಸೆಲೆಕ್ಟ್ ಕಮಿಟಿಗೆ ಈ ಮಸೂದೆ ಹೋಗುವುದು ಬಹಳ ಒಳ್ಳೆಯದು. ಅವರು ಸದಸ್ಯರುಗಳು ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ಎಲ್ಲವನ್ನೂ ಪರಿಶೀಲನೆಮಾಡಿ ಸೂಕ್ತ ತಿದ್ದುಪಡಿಗಳನ್ನು ಮಾಡಿ ಜನಗಳಿಗೆ ಕಷ್ಟವಾಗದ ರೀತಿಯಲ್ಲಿ ಇದನ್ನು ಸಭೆಯ ಮುಂದೆ ತರುತ್ತಾರೆಂದು ನಂಬಿದ್ದೇನೆ. ದೇಶಕ್ಕೋಸ್ಕರ ಹಣವನ್ನು ವಸೂಲ್ಮಾಡತಕ್ಕುದ್ದು ಒಳ್ಳೆಯದೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀಮತಿ ಬಳ್ಳಾರಿ ಸಿದ್ಧಮ್ಮ (ದಾವಣಗೆರೆ).—ಅಧ್ಯಕ್ಷರೆ, ನಾನು ಈ ದಿವಸ ಈ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಬಿಲ್ಲನ್ನು ಮನಃಪೂರ್ವಕವಾಗಿ ಅನುಮೋದಿಸುತ್ತೇನೆ. ಏಕೆಂದರೆ, ನಾವು ಅನೇಕ ಸಂದರ್ಭಗಳಲ್ಲಿ ನಮ್ಮ ದೇಶಕ್ಕೆ ಆಗಬೇಕಾದ ವಿಷಯಗಳನ್ನು ಕೇಳುತ್ತಿರುವುದು ಸ್ವಭಾವಿಕವಾಗಿದೆ; ಹಾಗೆ ಕೇಳುತ್ತಲೂ ಇದ್ದೇವೆ. ಮತ್ತು ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ನಾವು ಮಾಡಬೇಕಾಗಿದೆ. ಅದಕ್ಕಾಗಿ ಅಗ್ರಿಕಲ್ಚರಲ್ ಟ್ಯಾಕ್ಸನ್ನು ಹಾಕದೆ ಇದ್ದರೆ ವಿಧಿಯೇ ಇಲ್ಲವೆಂದು ಹೇಳಿ ನಮ್ಮ ಮುಂದೆ ಈ ಬಿಲ್ಲನ್ನು ಇಟ್ಟಿರುವುದು ನ್ಯಾಯವಾಗಿದೆ. ಅದು ಸಂತೋಷವೇ.

(ಶ್ರೀಮತಿ ಬಳ್ಳಾರಿ ಸಿದ್ದಮ್ಮ.)

ಆದರೆ ಅದನ್ನು ತರಬೇಕಾದರೆ ಸರಿಯಾದ ಸಮಯ
ಬೇಕಾಗಿತ್ತು; ರೀತಿ ಸರಿಯಾಗಬೇಕಾಗಿತ್ತು ಎಂಬು
ದೊಂದೇ ನಮಗಿರುವ ಕೊರತೆ. ವಾಸ್ತವವಾಗಿ ಅದು
ಬರುವುದರಿಂದೇನೂ ತೊಂದರೆಯಿಲ್ಲ. ಈ ತೆರಿಗೆ
ಕೊಡುವುದಕ್ಕೂ ನಮ್ಮ ಅಡ್ಡಿಯಿಲ್ಲ. ಆದರೆ ಅಗ್ರಿಕಲ್ಚ
ರಲ್ ಟ್ಯಾಕ್ಸ್ ವಸೂಲಿಗೆ ಬರುತ್ತಾರೆಂದರೇ ನಮಗೆಲ್ಲ
ಭಯವಾಗುತ್ತದೆ. ಏಕೆಂದರೆ ಇಂಥ ಟ್ಯಾಕ್ಸ್‌ಗಳ
ವಿಚಾರ ತಿಳಿದುಕೊಂಡಿದ್ದೇವೆ. ನಮ್ಮ
ಚಿತ್ರದುರ್ಗದ ಜಿಲ್ಲೆ ವ್ಯಾಪಾರಸ್ಥರ ದೇಶ. ಅಲ್ಲಿ ಇನ್
ಕಂಟ್ಯಾಕ್ಸ್‌ನವರು ಬಂದರೆ ದರ ದರೋಡೆಕೋರರು
ಬಂದರು ಎಂದು ಭಾವಿಸುತ್ತಾರೆ. ಅಷ್ಟು ಹೆದರು
ತ್ತಾರೆ ಅವರನ್ನು ಕಂಡರೆ! ವಾಸ್ತವವಾಗಿಯೂ
ಆ ಪರಿಸ್ಥಿತಿಯಿದೆ. ಇನ್‌ಕಂಟ್ಯಾಕ್ಸ್‌ನವರು ಮೆಟ್ಟಿಲು
ಹತ್ತಿದರೆಂದರೆ ಗಡಗಡ ನಡುಗುತ್ತಾರೆ. ಈ ವಿಷಯ
ದಲ್ಲಿ ಎಷ್ಟೋ ಜನ ಬಂದು ತಮ್ಮ (ಶ್ರೀ ಸಿದ್ದವೀರಪ್ಪ
ನವರ) ಹತ್ತಿರವೇ ಅರಿಕೆಮಾಡಿಕೊಂಡಿದ್ದಾರೆ. ನೀವು
ಚಾಪೆ ಕೆಳಗೆತೂರಿದರೆ ರಂಗೋಲೆ ಕೆಳಗೆ ತೂರುವಂತಹ
ವರ್ತಕರಿದ್ದಾರೆ. ಅಂಥವರು ಇವರ ಕೈಯಲ್ಲಿ ಸಿಕ್ಕಿ
ತೆಂದರೆ ನಡಗುತ್ತಾರೆ. ಹೀಗಿರುವಾಗ ಬಡ ಬೋರೇ
ಗೌಡನ ಮೇಲೆ ಈ ತೆರಿಗೆಯನ್ನು ಹಾಕುತ್ತೀರಲ್ಲಾ;
ತೋಳನ ಕೈಯಲ್ಲಿ ಕುರಿಯನ್ನು ಕೊಟ್ಟಹಾಗೆ ಆ ರೈತ
ನನ್ನು ಈ ಇನ್‌ಕಂಟ್ಯಾಕ್ಸ್ ಅಧಿಕಾರಿಗಳ ಕೈಗೆ ಹಾಕು
ತ್ತೀರಲ್ಲಾ. ಇದು ಬೇಡ. ನಿಜವಾಗಿ ಬಡರೈತರೂ
ಬ್ಬರೂ ಉಳಿಯುವುದಿಲ್ಲ. ನ್ಯಾಯವಾಗಿ ರೀ ಸರ್ವೆ
ಮಾಡಿ; ರೈತರು ತೆರಿಗೆ ಕೊಡಬೇಕಾಗಿದ್ದರೆ ತೆರಿಗೆ
ಹಾಕಿ, ನ್ಯಾಯವಾಗಿ ಕೊಡುತ್ತಾರೆ. ದೇಶಾಭಿಮಾನ
ಅವರಿಗೂ ಇಲ್ಲವೇ? ಅವರೂ ಖಂಡಿತ ಅವರ ಶಕ್ತಿಗನು
ಗುಣವಾಗಿ ಕೊಡುತ್ತಾರೆ. ಶ್ರೀಮಂತರು ಎಷ್ಟು
ಕೊಡುವುದಕ್ಕೆ ಸಾಧ್ಯ ಎಂಬುದನ್ನು ನೋಡಿ ಹಾಕಿ;
ಬಡವರು ಎಷ್ಟು ಕೊಡಬಹುದೆಂಬುದನ್ನು ನೋಡಿ
ಹಾಕಿ. ಆ ಪ್ರಕಾರ ತಿದ್ದುಪಡಿಮಾಡಿ ಈ ಬಿಲ್ಲನ್ನು
ತಂದರೆ ಎಲ್ಲರಿಗೂ ರಕ್ಷಣೆ ಇರುತ್ತದೆ. ಮಾನ್ಯ ಮುಖ್ಯ
ಮಂತ್ರಿಗಳೇ ಹೇಳಿದ್ದಾರೆ. 'ಇನ್ನೂ ಕೆಲವು ಭಾಗ
ಗಳಲ್ಲಿ ಕೇಳಿಕೊಂಡರೆ concession ಕೊಡುತ್ತೇವೆ'
ಎಂದು. ಈಗ ಇಲ್ಲಿ ಈರುಳ್ಳಿ, ಬೆಳ್ಳುಳ್ಳಿಗೆಲ್ಲಾ ವಿಧಿಸಿ
ದ್ದಾರೆ, ಇದು ಸರಿಯಲ್ಲ. ಬಡವರ ಜೀವನಕ್ಕೆ ಅವಶ್ಯಕ
ವಾದ ಸಾಮಾನುಗಳು ಇವು. ಬೆಳ್ಳುಳ್ಳಿಯು ಬಡವರ
ಕಸ್ತೂರಿ. ಶ್ರೀಮಂತರಾದರೆ ಕಸ್ತೂರಿಯನ್ನು ಕೊಳ್ಳ
ಬಲ್ಲರು. ಬಡವರ ಬಾಣಂತಿಯರಿಗೆ ಪರಮೌಷಧಿ
ಇದು. ಈ ಹೊತ್ತು ಹಳ್ಳಿಯಲ್ಲಿ ಒಂದು ಬೆಳ್ಳುಳ್ಳಿಗೆಡ್ಡೆ
ಅನೇಕ ಬಡ ಸಂಸಾರಗಳ ಪ್ರಾಣವನ್ನುಳಿಸುತ್ತಿದೆ.
ಇಂಥಾದ್ದಕ್ಕೆ ತೆರಿಗೆ ಎಲ್ಲಾದರೂ ಉಂಟೆ! ಇಂಥದ್ದು
ಮಾಡಬೇಡಿ. ಸರಿಯಾದ ರೀತಿಯಲ್ಲಿ ತಿದ್ದುಪಡಿಮಾಡಿ
ತನ್ನಿ. ಈ ಹೊತ್ತು ರೈತರಿಗೇನು ಬೇಕಾಗಿದೆ?
ಬೆಳ್ಳುಳ್ಳಿ, ಈರುಳ್ಳಿ, ಉಪ್ಪು, ಹುಣಸೇಹಣ್ಣು, ಸೊಪ್ಪು—
ಇವುಗಳೇ ಅವರ ಆಹಾರ. ಅಕ್ಕಿ, ಜೋಳ ಬಿಟ್ಟಿದ್ದೇ
ವೆಂದು ಹೇಳಿ ಇವರುಗಳ ಮೇಲೆ ಕೈಮಾಡುವುದೆ?

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಅಂಥ ಬಡ ರೈತ
ರಿಗಿಂತ ಜಾಸ್ತಿ ಬೆಳೆಯುವವರ ಮೇಲೆ ಮಾತ್ರ ಹಾಕು
ತ್ತಾರೆ.

6 P.M.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಈ ಹೊತ್ತು ಹಾಗೆ
ಹೇಳಬೇಡಿ. ನಾಳೆ ನಿಮ್ಮ ಮಾತು ನಿಮಗೇ ಬಂಧನ
ವಾಗುತ್ತದೆ.

ಅಲ್ಲದೆ, ಈಗ ಹೇಗಿದ್ದರೂ ಟೆನೆನ್ಸಿ ಕಾನೂನನ್ನು
ಜಾರಿಗೆ ಕೊಟ್ಟಿದ್ದೀರಿ. ಈಗ ನಿಮ್ಮ ಆಕ್ಟಿನ ಪ್ರಕಾರವೂ
5 ಎಕರೆ, 10 ಎಕರೆಗಳನ್ನು ಮಿನಿಮಂ ಎಂದಿಟ್ಟು
ಕೊಂಡು ವಿನಾಯಿಸಿದ್ದೀರಿ. ಸ್ವಲ್ಪಕಾಲ ತಡೆದರೆ
ಟೆನೆನ್ಸಿ ಕಾನೂನಿನ ಪ್ರಕಾರ ಎಲ್ಲರ ಜಮೀನು ಅಷ್ಟಕ್ಕೇ
ಬರುತ್ತದೆ. ತನ್ನಷ್ಟಕ್ಕೇ ತಾನೆ ಎಲ್ಲರಿಗೂ ಜಮೀನು
ಹಂಚಿಕೆಯಾಗಿ ಎಲ್ಲರಿಗೂ ಸುಖವಾಗುತ್ತದೆ. ಆಗ
ನೀವು ಇಂಥ ಏನು ಕಾನೂನು ತಂದರೂ ನಮಗೆ ಭಯ
ವಿಲ್ಲ. ಈಗಲಾದರೋ ಇತ್ತಕಡೆ ಟೆನೆನ್ಸಿ ಆಕ್ಟ್
ಜಾರಿಗೆ ಕೊಡುತ್ತೀರಿ, ಜೊತೆಯಲ್ಲೇ ಅತ್ತಕಡೆ
Income tax ಒಂದು ಹೇಳಿ ತರುತ್ತೀರಿ. ಅದರಲ್ಲೂ
ಕೂಸು ಹುಟ್ಟುವುದಕ್ಕೆ ಮೊದಲೇ ಕುಲಾವಿ
ಬಂದಹಾಗೆ ಈ ತೆರಿಗೆಯನ್ನು ಹೋದ ವರ್ಷದಿಂ
ದಲೇ ವಸೂಲುಮಾಡುತ್ತೇವೆನ್ನುತ್ತೀರಿ; ನಮ್ಮಂಥ
ತಿಳಿಯದಿರುವವರನ್ನು ಹಿಡಿದು ಹಿಂದಿನಿಂದ ಲೆಕ್ಕ
ಕೊಡಿ ಎಂದು ಹೇಳಿದರೆ ಹೇಗೆತಾನೆ ಕೊಡು
ತ್ತಾರೆ? ಇಂಥ ಕಾನೂನನ್ನು ಯಾವ ಮಹಾ
ರಾಯರು ತಂದರೋ ಅವರಿಗೆ ನಮಸ್ಕಾರ!
ಮೇಲಾಗಿ ಹತ್ತಿಗೆ, ಕಡಲೆಕಾಯಿಗೆ ತೆರಿಗೆ ಹಾಕಿದ್ದಾರೆ.
ನಮ್ಮ ಕಡೆ ಹತ್ತಿ, ಕಡಲೆಕಾಯಿಗಳೇ ಮುಖ್ಯವಾದ
ಬೆಳೆಗಳು. ಇವುಗಳನ್ನು ಬಿಟ್ಟರೆ ಕುರಿಯ ತುಪ್ಪಟ ಇದೆ.
ಇನ್ನು ಬೇರೆ ಪೈರುಗಳಾವುದೂ ಇಲ್ಲ. ಹತ್ತಿಯ
ಬೆಳೆಯಲ್ಲೂ M.A. V ಎಂಬುದನ್ನು ನಮ್ಮ ಕಡೆ ರೂಢಿಗೆ
ತಂದಿದ್ದಾರೆ. ಅದನ್ನು ಹಂಚಿರುವ ರೈತರು ಕಾನೂನು
ಪ್ರಕಾರ ಒಂದು ಮಿಶ್ರಬೀಜ ಇಲ್ಲದಂತೆ ಬಿತ್ತನೆ ಮಾಡ
ಬೇಕು. ಹಾಗೆ ಮಾಡಿದರೇನೆ ಅವರಿಗೆ ಸರಿಯಾದ
ದರ ಕೊಡುತ್ತಾರೆ. ಇಲ್ಲದಿದ್ದರೆ ಅವರಿಗೇನೂ ಗಿಟ್ಟು
ವುದಿಲ್ಲ. ಹೀಗಾಗಿ ಈ M. A. V ನ್ನು ಎಷ್ಟೇ ಮಾಡ
ದರೂ ಒಂದು ಸಾರಿಯೂ ಆ ಬೆಲೆ ಸಿಕ್ಕುವುದಿಲ್ಲ.
ಇಷ್ಟೆಲ್ಲ ಕಷ್ಟಬಿದ್ದು ಪೈರು ಮಾಡುತ್ತಿರುವಾಗ ಅದಕ್ಕೆ
ಈ ತೆರಿಗೆ ಹಾಕಿದ್ದಾರೆ. ಇನ್ನು ಕಡಲೆಕಾಯಿನ
ವಿಷಯ ಹೇಳುವುದಾದರೆ ನಮ್ಮ ಕಡೆ ಯಾರೂ ಇದನ್ನು
ಹೆಚ್ಚಿಗೆ ಪ್ರದೇಶದಲ್ಲಿ ಹಾಕುವುದಿಲ್ಲ. 10–15 ಎಕರೆ
ಇರುವ ದೊಡ್ಡಮನುಷ್ಯರು ಕೂಡ 2–3 ಎಕರೆಗಳಿಗೆ
ಮಾತ್ರ ಕಡಲೆಕಾಯಿ ಹಾಕಿ ಬಾಕಿ ಪ್ರದೇಶಕ್ಕೆ ಹತ್ತಿ
ಯನ್ನೋ ಬೇರೆ ದವಸಧಾನ್ಯಗಳನ್ನೋ ಹಾಕುತ್ತಾರೆ.
ಅಂಥವರಿಂದ ನಿಮಗೇನು ದುಡ್ಡು ಸಿಕ್ಕುತ್ತದೆ! ಆದ್ದ
ರಿಂದ ಸರ್ಕಾರದವರು ಇಂಥವುಗಳ ಮೇಲೆ ಹಾಕ
ಬೇಕೆಂದು ಹೇಳಿ ಹಿಂಸೆ ಮಾಡುವುದಕ್ಕಿಂತ ಬಿಡುವುದು
ಒಳ್ಳೆಯದು. ಅಲ್ಲದೆ, ಈಗ ಈ ಬಿಲ್ಲಿನಲ್ಲಿ ವಿನಾಯಿಸಿ
ರುವ ವಿಸ್ತೀರ್ಣವೂ ಬಹಳ ಕಡಮೆ. 10 ಎಕರೆ ತರೀ
ಜಮೀನನ್ನು ಬಿಡಬೇಕು. 5 ಎಕರೆ ಬಾಗಾಯಿತು
ಜಮೀನನ್ನು ಬಿಡಬೇಕು. ಹಾಗೆಯೇ 20 ಎಕರೆ ಖುಷ್ಕಿ
ಯಾದರೂ ಬಿಡಬೇಕಾಗುತ್ತದೆ. ಆದ್ದರಿಂದ ಇದಕ್ಕೆಲ್ಲ
ಏರ್ಪಾಡು ಮಾಡುವಂತೆ ಈ ಬಿಲ್ಲನ್ನು ತಿದ್ದುಪಡಿಮಾಡಿ
ತರಬೇಕೆಂದು ಹೇಳಿ ಮುಗಿಸುತ್ತೇನೆ.

ಕೊನೆಯದಾಗಿ ಹೂವಿನ ಮೇಲೆ ಹಾಕಿರುವುದನ್ನು
ಸ್ವಲ್ಪ ಹೇಳಬೇಕಾಗಿದೆ. ಮನುಷ್ಯನಿಗೆ ಏನಿಲ್ಲದಿದ್ದರೂ
ಭಗವಂತನ ಸ್ಮರಣೆಮಾಡಿ ಅವನ ಮೇಲೆ ಒಂದು
ಹೂವು ಹಾಕಲೆಂದು ಹೇಳುತ್ತೇವೆ. ಇಂದು ಅಂಥ
ಹೂವಿನ ವಿಷಯದಲ್ಲಿ ತೆರಿಗೆ ಹಾಕಿದ್ದೀರಲ್ಲಾ. ಇದ
ರಿಂದೇನು ದೊಡ್ಡ ಲಾಭ ಬರುತ್ತದೆಯೋ ನನಗಂತೂ
ಅರ್ಥವಾಗುವುದಿಲ್ಲ. ಹೂವು ಇರುವುದೇ ಇಂಥ
ಮುಖ್ಯ ವಿಷಯಕ್ಕಾಗಿರುವಾಗ, ಇದಕ್ಕೇಕೆ ಹಾಕ
ಬೇಕೋ ಕಾಣೆ. ಹಣ ಬೇಕೆಂದರೆ, ಅನಾವಶ್ಯಕವಾಗಿ
ಕೆಲವು ಬಾಬುಗಳಿಗೆ ತಾವು ಖರ್ಚುಮಾಡುತ್ತಿದ್ದೀ
ರಲ್ಲಾ ಅದನ್ನೇಕೆ ವಜಾಮಾಡಕೂಡದು ಎಂದು ಹೇಳಿ
ನಾನು ಮುಗಿಸುತ್ತೇನೆ.

ಶ್ರೀ ಸಿ. ಟಿ. ಹನುಮಂತಯ್ಯ (ಪಾವಗಡ-ಅನು
ಸೂಚಿತ ಜಾತಿಗಳು).—ಅಧ್ಯಕ್ಷರೇ, ಈಗ ಸರ್ಕಾರದವರು

ನಮ್ಮ ಮುಂದೆ ಮಂಡಿಸಿರತಕ್ಕ ಈ ಬಿಲ್ಲಿಗೆ ನಾನು ಪೂರ್ಣ ಬೆಂಬಲ ಕೊಡಬೇಕಾಗಿದೆ. ಆದರೂ ಕೂಡ ಕೆಲವು ತಿದ್ದುಪಡಿಗಳು ಇದರಲ್ಲಿ ಆಗಬೇಕಾದ್ದಿವೆ. ಹಳ್ಳಿಗಾಡಿನಲ್ಲಿ ಕಷ್ಟಬಿದ್ದು ಬೇಸಾಯಮಾಡಿ ಜೀವಿಸುವ ರೈತರು ನಮ್ಮನ್ನಿಲ್ಲಿಗೆ ವೋಟು ಕೊಟ್ಟು ಕಳುಹಿಸಿದ್ದಾರೆ. ಹಿಂದೆಯೂ ಇದೇ ರೀತಿಯ ಬಿಲ್ಲು ಈ ಸಭೆಯ ಮುಂದೆ ಬಂದಿತ್ತು. ಆಗಲೂ, ಇದು ರೈತನಿಗೆ ಹೊರೆಯಾಗುತ್ತದೆ, ಟ್ಯಾಕ್ಸ್ ಹಾಕಬೇಡಿ ಎಂದು ಕೇಳಿಕೊಂಡಿದ್ದರ ಮೇಲೆ ನೀವು ವಾಪಸು ತೆಗೆದುಕೊಂಡಿರಿ. ಈ ಟ್ಯಾಕ್ಸ್ ವಸೂಲಿಗಳ ಅನುಭವ ನಮಗಿದೆ. ಹಿಂದೆ ಕಂಟ್ರೋಲ್ ಹಾಕಿದ್ದಿರಿ. ಅಧಿಕಾರವರ್ಗದವರ ಕೈಗೆ ರೈತರು ಸಿಕ್ಕಿಬಿದ್ದು ಸತ್ತು ಹೋಗಿದ್ದರು. ಈಗ ಹೊಗೆಸೊಪ್ಪಿನ ತೆರಿಗೆ ಹಾಕಿದ್ದೀರಲ್ಲಾ ಅದರಿಂದ ಏನೇನು ಕಷ್ಟವಾಗಿದೆಯೆಂಬುದನ್ನು ಹೇಳುವುದಕ್ಕಾಗುವುದಿಲ್ಲ. ರೈತರಿಗೆ ಲೆಕ್ಕ ಇಡುವುದಕ್ಕೆ ಬರುವುದಿಲ್ಲ. ಅವನಿಗೆ ಓದು ಬರಹ ಬಾರದು. 100ಕ್ಕೆ 60 ಜನರು ಅವಿದ್ಯಾವಂತರು. ಇಂಥ ಪರಿಸ್ಥಿತಿಯಲ್ಲಿ ಆ ಬಡರೈತರು ಹೇಗೆ ಗುಮಾಸ್ತರನ್ನಿಟ್ಟುಕೊಳ್ಳುವುದು ?

ಈಗಿರುವ ಮಂತ್ರಿಗಳು ಅಧಿಕಾರಕ್ಕೆ ಬಂದಮೇಲೆ ಕಂಟ್ರೋಲನ್ನು ತೆಗೆದರೆಂದು ಒಳ್ಳೆಯ ಹೆಸರು ಬಂದಿದೆ. ಆದರೆ ಒಂದು ರೀತಿಯಲ್ಲಿ ತೆಗೆದು ಇನ್ನೊಂದು ರೀತಿಯಲ್ಲಿ ಹೊರೆ ಹೊರಿಸುವುದಾದರೆ ಹಿಡಿ ಬಿತ್ತಿ ಖಂಡುಗ ಬೆಳೆಯುವ ರೈತನ ಗತಿಯೇನು ? ದೇವರಹಾಗಿರುವ ರೈತ ವಿದ್ಯಾವಂತನಲ್ಲ. ಹೀಗಿರುವಾಗ ಆಲೂಗೆಡ್ಡೆ ಬೆಳೆದರೆ ತೆರಿಗೆ, ಮೆಣಸಿನಕಾಯಿ ಬೆಳೆದರೆ ತೆರಿಗೆ ಕೊಡಬೇಕೆಂದರೆ ಇದು ನ್ಯಾಯವೇ ? ತಿನ್ನುವ ಆಹಾರ ಪದಾರ್ಥಗಳಾದ ಈರುಳ್ಳಿ, ಮೆಣಸಿನಕಾಯಿ ಮುಂತಾದುವುಗಳ ಮೇಲೆ ತೆರಿಗೆ ಹಾಕಿದರೆ ಜನರಿಗೆ ತುಂಬ ಕಷ್ಟವಾಗುತ್ತದೆ. ಸೆಲೆಕ್ಟ್ ಕಮಿಟಿಗೆ ಈ ಬಿಲ್ಲು ಹೋಗುತ್ತದೆಂದು ಹೇಳುತ್ತಾರೆ. ಆ ಸಮಿತಿಯವರು ಇದನ್ನೆಲ್ಲಾ ಪರಿಶೀಲಿಸಿ ರೈತರಿಗೆ ಯಾವ ವಿಧವಾದ ತೊಂದರೆಯೂ ಇದರಿಂದ ಆಗದಹಾಗೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಗ್ರಾಮಾಧಿಕಾರಿಗಳ ಕೈಗೆ ಸಿಕ್ಕಿ ರಾಯರುಗಳಿಗೆ ಫೀಸು ತೆತ್ತು ಇದರಿಂದ ಬರುವ ಕಷ್ಟದಿಂದ ಪಾರಾಗುವುದಕ್ಕೆ ಬಹಳ ಕಷ್ಟವಾಗುತ್ತದೆ. ರೈತರಿಗೆ ಉತ್ತೇಜನಕೊಟ್ಟು ಹೆಚ್ಚಾಗಿ ಬೆಳೆಯಿರಿ ಎಂದು ಹೇಳುವಾಗ ಈ ತೆರಿಗೆಗಳನ್ನು ಹೇರುವುದು ನ್ಯಾಯವೇ ? ಹಿಂದೆ ಎಚ್. ಎಸ್. ಲೆಕ್ಕ ಬರೆಯುವಾಗ ಗ್ರಾಮಾಧಿಕಾರಿಗಳು ಪ್ರತಿಫಲಾಪೇಕ್ಷೆಯಿಂದ ತಮ್ಮ ಇಷ್ಟದಂತೆ ಬರೆದು ರೈತರಿಗೆ ಬಹಳ ಕಿರುಕುಳ ಕೊಟ್ಟರು. ಗ್ರಾಮಾಧಿಕಾರಿಗಳ ಕೈಗೆ ಸಿಕ್ಕಿ ರೈತ ನೊಂದು ನಮ್ಮನ್ನೆಲ್ಲಾ ದೂರುವುದಕ್ಕೆ, ಆಕ್ಷೇಪಣೆ ಮಾಡುವುದಕ್ಕೆ ಮಾರ್ಗವಾಗುತ್ತದೆ. ಆದ್ದರಿಂದ ಸೆಲೆಕ್ಟ್ ಕಮಿಟಿಯಲ್ಲಿ ವಿದ್ಯಾವಂತರೂ, ಮೇಧಾವಿಗಳೂ ಇರುವುದರಿಂದ ಇದನ್ನೆಲ್ಲಾ ವಿಚಾರಮಾಡಿ ಬಿಲ್ಲನ್ನು ಪೂರ್ಣವಾಗಿ ಪರಿಶೀಲಿಸಿ, ಇನ್ನೂ ಸ್ವಲ್ಪ ಕಾಲವಾದರೂ ಚಿಂತೆ ಇಲ್ಲ, ಅವಸರದಲ್ಲಿ ಅಂಗೀಕಾರಮಾಡದೆ, ಜನರು, ಸರ್ಕಾರ ಮಾಡಿರುವುದು ನ್ಯಾಯವಾಗಿದೆ, ಒಪ್ಪಬಹುದು, ಕಷ್ಟವಿಲ್ಲ, ಎಂದು ಹೇಳುವ ರೀತಿಯಲ್ಲಿ ತಿದ್ದುಪಡಿಮಾಡಿ ಸಭೆಯ ಮುಂದೆ ತರಬೇಕೆಂದು ಸಲಹೆಮಾಡುತ್ತೇನೆ.

ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ವ್ಯವಸಾಯ ವರಮಾನ ತೆರಿಗೆಯ ಈ ಬಿಲ್ಲನ್ನು ನಮಗೆ ಸುಮಾರು ನಾಲ್ಕು ಐದು ದಿವಸಗಳ ಹಿಂದೆ ಕೊಟ್ಟರು. ಇದರಿಂದ ಸರ್ಕಾರ ಎಷ್ಟು ಕೆಳಮಟ್ಟದಲ್ಲಿದೆಯೆಂಬುದು ಕಂಡುಬರುತ್ತದೆ. ಸರ್ಕಾರದ ಬೊಕ್ಕಸ ಜಾಗ್ರತೆ ತುಂಬಿದರೆ ತಮ್ಮ ಇಚ್ಛಾನುಸಾರ ಯಾವ ರೀತಿ ಖರ್ಚು ಮಾಡಿದರೂ ಕೇಳುವವರಿಲ್ಲ ಎಂದು ದಬ್ಬಾಳಿಕೆಯಿಂದ ಈ ಮಸೂದೆಯನ್ನು ತಂದಿರುವ ಹಾಗೆ ಕಾಣುತ್ತದೆ. ಇಷ್ಟು ಅವಸರವಾಗಿ ಈ ಮಸೂದೆಯನ್ನು ತಂದಿರುವುದಕ್ಕೆ ಕಾರಣವೇನೆಂಬುದು ನಮಗೆ ಗೊತ್ತಾಗಿದೆ. ಸೆಲೆಕ್ಟ್ ಸಮಿತಿಗೆ ಹೋದಮೇಲೆ ಹೇಗಿದ್ದರೂ ಪಾಸಾಗುತ್ತದೆಂಬುದು ಅವರ ಭಾವನೆ. ದೇಶದಲ್ಲಿ ರೈತರ ಕಷ್ಟವೇನು, ಅದನ್ನು ಹೇಗೆ ಪರಿಹಾರ ಮಾಡಬೇಕು ಎಂಬುದನ್ನು ಯೋಚನೆ ಮಾಡದೆ ತೆರಿಗೆ ಹಾಕಿ ಸರ್ಕಾರದ ಬೊಕ್ಕಸವನ್ನು ತುಂಬುವುದು ಸರಿಯಾದ ರೀತಿಯಲ್ಲ. ಸರ್ಕಾರಕ್ಕೆ ಹಣದ ಮುಗ್ಗಟ್ಟು ಇರುವುದರಿಂದ ಈ ತೆರಿಗೆ ಹಾಕಿದೆಯೆಂದು ಹೇಳಿದ್ದಾರೆ. ಆದರೆ ಸರ್ಕಾರದ ಖರ್ಚು ಕಡಮೆಮಾಡಿ ಈ ತೆರಿಗೆಯಿಂದ ಉತ್ಪತ್ತಿಯಾಗಬಹುದಾದ 20 ಲಕ್ಷ ರೂಪಾಯಿಗಳನ್ನುಳಿಸಲು ಸಾಧ್ಯವಿದೆ ಎಂಬುದನ್ನು ಯೋಚನೆಮಾಡಿಲ್ಲ. ಅನೇಕ ಬಾಬುಗಳಿಂದ ಹಣ ಉಳಿಸಬಹುದೆಂದು ಬಡ್ಜೆಟ್ ಭಾಷಣದಲ್ಲಿ ಅನೇಕರು ಹೇಳಿದ್ದಾರೆ. ಪುನಃ ಹೇಳಬೇಕಾದದ್ದು ಅನಾವಶ್ಯಕ. ಹೊಸ ತೆರಿಗೆ ಮಸೂದೆಯನ್ನು ತರುವುದಕ್ಕೆ ಆರು ತಿಂಗಳು ಪೂರ್ವಭಾವಿಯಾಗಿ ಸಾರ್ವಜನಿಕರ ಗಮನಕ್ಕೆ ಮೈಸೂರು ಗೆಜೆಟ್ಟಿನ ಮೂಲಕ ತರುವ ಪದ್ಧತಿಯನ್ನನುಸರಿಸುವುದು ಉತ್ತಮ. ಹಾಗೆ ಎಲ್ಲ ಜನರ ಅಭಿಪ್ರಾಯ ಪಡೆದು ಸರ್ಕಾರ ಈ ತೆರಿಗೆ ಹಾಕಬೇಕಾಗಿತ್ತು. ತನ್ನ ಬಡ್ಜೆಟ್ಟನ್ನು ಸರಿಪಡಿಸಿಕೊಳ್ಳಲು ಸರ್ಕಾರಕ್ಕೇ ಎಷ್ಟೋ ಕಷ್ಟವಿದೆ ಎಂದು ಈ ಮಸೂದೆಯಲ್ಲೇ ತಿಳಿಸಿರುವಾಗ, ಬಡ ಸಂಸಾರಿಗಳು ತಮ್ಮ ಬಡ್ಜೆಟ್ಟನ್ನು ಸರಿಪಡಿಸಿಕೊಳ್ಳುವುದಕ್ಕೆ ಅವರಿಗೆ ಎಷ್ಟು ಕಷ್ಟವಿದೆ ಎಂಬುದನ್ನು ಸರ್ಕಾರ ಮತ್ತು ಸರ್ವ ಸದಸ್ಯರೂ ಯೋಚನೆ ಮಾಡಬೇಕು. 1951ನೆಯ ಇಸವಿ ಏಪ್ರಿಲ್ ಒಂದನೆಯ ತಾರೀಖು ಹಿಂದಿನ ಲೆಕ್ಕಪತ್ರ ತಯಾರಿಸಬೇಕೆಂದು ಹೇಳಿದೆ. ರೈತರಲ್ಲಿ ಹೆಚ್ಚುಮಂದಿ ಅವಿದ್ಯಾವಂತರಿದ್ದಾರೆ. ಅವಿದ್ಯಾವಂತರಾದ ರೈತರು ಲೆಕ್ಕಪತ್ರವಿಡಲು ಕಷ್ಟವಿದೆ. ಅವರಿಗೆ ಗುಮಾಸ್ತರ ನೆರವು ಅಗತ್ಯ. ಆದರೆ ಅವರಿಗೆ ಅಕೌಂಟೆಂಟರ ಸಂಬಳ ಕೊಡಲು ಸಾಧ್ಯವೆ ? ಯಾರೂ ಈ ಮಸೂದೆ ಬೇಡವೆಂದು ಹೇಳುವುದಿಲ್ಲ. ಆದರೆ ಈ ಸನ್ನಿವೇಶದಲ್ಲಿ ರೈತರಲ್ಲಿ ವಿದ್ಯಾವಂತರ ಸಂಖ್ಯೆ ಎಷ್ಟಿದೆ, ಜನಜೀವನದ ಮಟ್ಟ, ರೈತರ ಸಾಲ ಎಷ್ಟು ? ಅವರ ಉತ್ಪತ್ತಿಯೇನು ಎಂಬುದನ್ನು ಸರ್ವೆ ಮಾಡಿದ್ದೀರಾ ? ಎಷ್ಟು ಮಂದಿ ರೈತರಿಗೆ ತೆರಿಗೆ ಕೊಡಲು ಸಾಧ್ಯವಿದೆ ಎಂಬ ವಿಚಾರದಲ್ಲಿ ಅಂಕಿಅಂಶಗಳನ್ನು ಶೇಖರಿಸಿ ಅನಂತರ ಉತ್ಪತ್ತಿ ಪಡೆಯಲು ಈ ಮಸೂದೆಯನ್ನು ತಂದಿದ್ದರೆ ಒಪ್ಪಬಹುದಾಗಿತ್ತು, 20 ಲಕ್ಷ ರೂಪಾಯಿ ಈ ಮಸೂದೆಯಿಂದ ಸರ್ಕಾರಕ್ಕೆ ಉತ್ಪತ್ತಿ ಬರಬಹುದು ಎಂದು ಎಕರೆಯ ಮೇಲೆ ಲೆಕ್ಕಮಾಡಿರುವುದು ಸರಿಯಿಲ್ಲ.

"Commercial Crops" ಹಣದ ಬೆಳೆ ಬೆಳೆಯಬೇಕೆಂದು ದೇಶಾದ್ಯಂತ ಬಹಳ ದಿವಸಗಳಿಂದ ಹೇಳುತ್ತಿದ್ದಾರೆ. ರೈತನ ಜೀವನಮಟ್ಟ ಹೆಚ್ಚಬೇಕಾದರೆ ಆಹಾರ ಪದಾರ್ಥ ಮಾತ್ರ ಬೆಳೆದರೆ ಸಾಲದು, ಹಣದ ಬೆಳೆ (commercial crops or cash crops) ಬೆಳೆಯಬೇಕು. ಅವಕಾಶವಿದೆ ಎಂದು ಹಣದ ಬೆಳೆ ಬೆಳೆದರೆ ಆಹಾರ ಪದಾರ್ಥದ ಬೆಳೆ ಬೆಳೆದಾಗ ತಗಲುವ ವೆಚ್ಚವನ್ನು ಸರಿದೂಗಲು ಇಂಡಿಯಾ ದೇಶದ ಅರ್ಥಶಾಸ್ತ್ರ (Economics of India) ಸಾರಿದೆ. ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಇದನ್ನು ಹೇಳುತ್ತಲೇ ಇದ್ದಾರೆ. ಅದಕ್ಕೆ ಸಂಬಂಧಪಟ್ಟ ಪುಸ್ತಕಗಳನ್ನಾದರೂ ತೆಗೆದುಬಿಟ್ಟರೆ ಒಳ್ಳೆಯದು. ಅಡಿಕೆ, ತೆಂಗು, ಕಡಲೇಕಾಯಿ, ಹೊಗೆಸೊಪ್ಪು

(ಶ್ರೀ ಯು. ಎಂ. ಮಾದಪ್ಪ.)

ಮುಂತಾದ ಪದಾರ್ಥಗಳು ನಮ್ಮ ಸಂಸ್ಥಾನದಿಂದ ಎಷ್ಟು ರಫ್ತಾಗುತ್ತವೆ, ಅವುಗಳ ಆಮದು ಎಷ್ಟು ಎಂಬುದನ್ನು ಕೂಡ ತಿಳಿಸಿಲ್ಲ. ತೆರಿಗೆ ಹಾಕುವಾಗ ಯಾವ ಪದಾರ್ಥಗಳ ಮೇಲೆ ತೆರಿಗೆ ಹಾಕಿದರೆ ಸಂಸ್ಥಾನದಲ್ಲಿ ಬೆಳೆಯುವವರಿಗೆ ಆಮದಾಗುವ ಅದೇ ಪದಾರ್ಥದ ಪೈಪೋಟಿಯಿಂದ ತೊಂದರೆಯಾಗುತ್ತದೆ ಎಂಬ ತತ್ವವನ್ನು ಯೋಚನೆಮಾಡದೆ ಈ ಮಸೂದೆಯನ್ನು ತರುವುದು ಅಷ್ಟು ಸಾಧುವಾದುದಲ್ಲ.

ಅಡಿಕೆ ಮತ್ತು ತೆಂಗಿನಕಾಯಿ ಸಂಸ್ಥಾನಕ್ಕೆ ಸಾಕಾದಷ್ಟು ಬೆಳೆಯುತ್ತಿಲ್ಲ. ಮಲಬಾರಿನಿಂದ ಆಮದುಮಾಡಿಕೊಳ್ಳುತ್ತಿದ್ದೇವೆ. ಹೊರಗಿನವರು ಸಂಸ್ಥಾನದಲ್ಲಿ ಬೆಳೆಯುವ ತೆಂಗಿನಕಾಯಿ ಮಾರಾಟದ ಮೇಲೆ ಹೆಚ್ಚು ಪೈಪೋಟಿಮಾಡುವುದನ್ನೂ ಸಹ ನೋಡಬಹುದು. ಅವರ ಜೊತೆಯಲ್ಲಿ ಕಾಂಪಿಟಿಷನ್ನಿಗೆ ನಿಲ್ಲಲು ನಮ್ಮವರಿಗೆ ಶಕ್ತಿಯಿಲ್ಲ. ಹೊರಗಿನವರಿಗೆ ಉತ್ಪತ್ತಿಗೆ ತಗಲುವ ಖರ್ಚು (cost of production) ಕಡಮೆ, ಟ್ರ್ಯಾನ್ಸ್‌ಪೋರ್ಟ್ ಅನುಕೂಲತೆಯಿದೆ. ನಮ್ಮಲ್ಲಿ cost of production ಹೆಚ್ಚು. ಮಾರ್ಕೆಟಿಂಗ್ ಅನುಕೂಲವಿಲ್ಲ. ಮೈಸೂರಿನಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ ಇದೆ. ತೆಂಗಿನಕಾಯಿ ಅಳತೆಮಾಡಲು ಒಂದು ಬಳೆ ಬೇರೆ ಮಾಡಿದ್ದಾರೆ. ಬಳೆಯಲ್ಲಿ ತೆಂಗಿನಕಾಯಿ ನುಗ್ಗಿದರೆ ಆಚೆಗೆ ಎಸೆಯುತ್ತಾರೆ. ಹೀಗೆ ಫಜೀತಿ ಬಹಳವಾಗಿದೆ, ಅಲ್ಲಿ ವೈಟ್ಸ್ ಅಂಡ್ ಮೆಷರ್ಸ್ ಸರಿಯಾಗಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಈ ವಿಷಯದಲ್ಲಿ ನಿಗಾ ಕೊಟ್ಟಿಲ್ಲ. ಅನ್ಯಾಯವಾಗುತ್ತಿದೆ. ಅಧಿಕಾರಿಗಳಿಗೆ ಹೆಚ್ಚು ಅಧಿಕಾರ ಕೊಟ್ಟರೆ ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು ಹೇಳಿದ್ದಹಾಗೆ ಅದರಿಂದ ಆಗುವ ತೊಂದರೆ ಅಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯಲ್ಲ.

ಹೊರಗಡೆಯಿಂದ ಬರತಕ್ಕ ಪದಾರ್ಥಗಳು ಹೆಚ್ಚು ಸಂಸ್ಥಾನದಲ್ಲಿ ಬೆಳೆಯುತಕ್ಕ ಅದೇ ಪದಾರ್ಥಗಳ ಮೇಲೆ ಈ ತೆರಿಗೆಯನ್ನು ಹಾಕುವುದು ಅಷ್ಟು ಸೂಕ್ತ ಮಾರ್ಗವಲ್ಲ. ಅದು ಅರ್ಥಶಾಸ್ತ್ರಕ್ಕೆ ವಿರುದ್ಧವಾದುದೆಂದು ಒತ್ತಿ ಹೇಳಬೇಕಾಗಿದೆ. ನಮ್ಮಲ್ಲಿ ಬೆಳೆಯತಕ್ಕ ಪದಾರ್ಥಗಳು ನಮ್ಮ ದೇಶಕ್ಕೆ ಸಾಕಾಗುವಷ್ಟು ಇಲ್ಲ. ಅಂತಹ ನಮ್ಮ ಸಂಸ್ಥಾನದಲ್ಲಿ ಬೆಳೆಯುವ ಪದಾರ್ಥಗಳ ಮೇಲೆ ತೆರಿಗೆ ಹಾಕುವುದಾದರೆ ನಮ್ಮ ಸಂಸ್ಥಾನದಲ್ಲಿ ಬೆಳೆಯುವವರನ್ನು discourage ಮಾಡಿದಂತಾಗುತ್ತದೆ. ಅಲ್ಲದೆ, ಹೊರಗಡೆಯಿಂದ ಬರತಕ್ಕ ಮಾಲುಗಳ ಜೊತೆಯಲ್ಲಿ ಪೈಪೋಟಿಮಾಡಲು ಬಹಳ ಕಷ್ಟವೆಂದು ಮೊದಲೇ ತಿಳಿಸಿದ್ದೇನೆ. ಈ ವಿಷಯವನ್ನು ಸರ್ಕಾರ ಯೋಚನೆ ಮಾಡದೆ ವರಮಾನದ ದೃಷ್ಟಿಯಿಂದ ತತ್ವವನ್ನು ಕೈಬಿಟ್ಟು, ದೇಶದ ರೈತರ ಹಿತವನ್ನು ಕೈಬಿಟ್ಟು ಸರ್ಕಾರದ ಹಿತವನ್ನೇ ರೈತರ ಹಿತ ಎಂಬ ತತ್ವವನ್ನು ಅನುಸರಿಸಿದಂತಿದೆ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ.

ತೆಂಗು ಮತ್ತು ಅಡಿಕೆ International Products ಆಗಿವೆ. ನಮ್ಮ ದೇಶ ಇದರಲ್ಲಿ ಸ್ವಯಂ ಪರಿಪೂರ್ಣತೆ ಹೊಂದಿಲ್ಲ. ಕೇಂದ್ರ ಸರ್ಕಾರ ಇದಕ್ಕಾಗಿ subsidy ಕೊಟ್ಟು ಇವುಗಳನ್ನು ಹೆಚ್ಚಿಗೆ ಬೆಳೆಸಬೇಕು ಎಂದು ಪ್ರಯತ್ನ ನಡೆಸುತ್ತಿದ್ದಾರೆ. ನಮ್ಮ ರೈತರ ಮನೋಭಾವನೆ ಹೇಗಿದೆಯೆಂದರೆ ಏನಾದರೂ ಕಾನೂನಿನ ಕಿರುಕುಳವಿದ್ದರೆ ಆ ಬೆಳೆ ಬೆಳೆಯುವುದನ್ನೇ ಬಿಟ್ಟುಬಿಡುತ್ತಾರೆ. ಹೊಗೇಸೊಪ್ಪು ನಮ್ಮ ತಾಲ್ಲೂಕಿನಲ್ಲಿ ಬೆಳೆಯುತ್ತಾ ಇರಲಿಲ್ಲ. ಪಿರಿಯಾಪಟ್ಟಣದ ತಾಲ್ಲೂಕಿನಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಹೊಗೇಸೊಪ್ಪಿನ ಮೇಲೆ ಹಾಕಿದ penalty ಮತ್ತು ಶಿಕ್ಷೆಯನ್ನು ನೋಡಿ ಇತ್ತೀಚೆಗೆ ನಂಜನಗೂಡು ಸಬ್ ಡಿವಿಜನ್ ರೈತರು ಹೊಗೇಸೊಪ್ಪನ್ನು ಬೆಳೆಯುವುದನ್ನು ಬಿಟ್ಟರು. Cash crops ಕಡಿಮೆಯಾಗಿ food crops ಬೆಳೆಯುವುದಕ್ಕೆ ಅವಕಾಶವಾಗುತ್ತಿದೆ. ಆಹಾರ ಪದಾರ್ಥದ ಕೊರತೆ ಇದ್ದಾಗ Cash crops ಬೆಳೆಯುವುದನ್ನು ಕಡಿಮೆಮಾಡಿದ್ದರೆ ಒಳ್ಳೆಯದಾಗುತ್ತಿತ್ತು. ಈಗ ಆಹಾರದ ಕೊರತೆ ಇಲ್ಲ, ಆಹಾರ ಧಾನ್ಯಗಳನ್ನು ಹೆಚ್ಚಾಗಿ ಬೆಳೆಯುತ್ತಿದ್ದೇವೆ ಎಂಬುದನ್ನು ಒಪ್ಪಿಕೊಂಡಿದ್ದೇವೆ. ಹೊಗೇಸೊಪ್ಪು ಬೆಳೆಯುವುದೇ ಬೇಡ, ಈ ಕಷ್ಟವೂ ಬೇಡ, ರಾಗಿ ಬೆಳೆದರೆ, ಜೋಳ ಬೆಳೆದರೆ ಖರ್ಚು ಕಡಿಮೆ, ಯಾರಿಗೂ ಕೈಮುಗಿಯುವಹಾಗಿಲ್ಲ ಎಂದು ಹೇಳಿ ಹೊಗೇಸೊಪ್ಪು ಬೆಳೆಯುವುದನ್ನೇ ರೈತರು ಬಿಡುತ್ತಿದ್ದಾರೆ.

Commercial Crops ಮೇಲೆ ಹೀಗೆ ಹೆಚ್ಚಿಗೆ ತೆರಿಗೆ ಹಾಕಬಾರದು. ಸಾರ್ವಜನಿಕರಿಗೆ ಇದರಿಂದ ಯಾವ ರೀತಿಯೂ ತೊಂದರೆ ಆಗದೆ ಇರಲಿ ಎಂಬುದನ್ನು ಮತ್ತೆ ಒತ್ತಿ ಹೇಳುತ್ತೇನೆ. ತೆಂಗು ಮತ್ತು ಅಡಿಕೆ by-products ವಿಷಯದಲ್ಲಿ ಸರ್ಕಾರ ಎಷ್ಟರಮಟ್ಟಿಗೆ ಉತ್ತೇಜನ ಕೊಡುತ್ತಾರೆ ಎಂಬುದು ಗೊತ್ತಾಗುವುದಿಲ್ಲ. ನಮ್ಮ ಸಂಸ್ಥಾನದಲ್ಲಿ ತೆಂಗಿನ ನಾರು, ತೆಂಗಿನ ಕರಟ ಮತ್ತು ಎಣ್ಣೆ—ಈ ಕೈಗಾರಿಕೆಗಳ ಜೀರ್ಣೋದ್ಧಾರದ ವಿಷಯದಲ್ಲಿ ಸರ್ಕಾರ ಯಾವ ವಿಧವಾದಂಥ ನಿರ್ಧಾರವನ್ನೂ ತೆಗೆದುಕೊಂಡಿಲ್ಲ. ನಮ್ಮ ಸಂಸ್ಥಾನದಲ್ಲಿ ಸಾಕಷ್ಟು ಎಣ್ಣೆ ಉತ್ಪತ್ತಿ ಇಲ್ಲ; ಹೊರಗಡೆಯಿಂದ ತರಿಸಿಕೊಳ್ಳುತ್ತಿದ್ದೇವೆ. ಒಂದು ಕಂಪೆನಿ ಮಾಡಬೇಕು, ಮೈಸೂರುಡಿಸ್ಟ್ರಿಕ್ಟಿನಲ್ಲಿ ವ್ಯವಸಾಯಗಾರರನ್ನು Shareholders ಆಗಿ ಮಾಡಬೇಕೆಂದು ಪ್ರಯತ್ನಪಟ್ಟರೂ ಹಣವಿಲ್ಲದೆ ಇರುವಾಗ ಸರ್ಕಾರ ಯಾವುದನ್ನೂ ಯೋಚನೆ ಮಾಡದೆ emotionನಿಂದ ಇಂತಹ ತೆರಿಗೆ ಹಾಕುವುದು ಒಳ್ಳೆಯದಲ್ಲ. Schedule para (2) Class I ಮತ್ತು Class IIನಲ್ಲಿ ನಮೂದು ಮಾಡಿರುವುದರಲ್ಲಿ ಬಹಳ ವ್ಯತ್ಯಾಸವಿದೆ. ಅಂತರ ಬಹಳ ಜಾಸ್ತಿ ಇದೆ.

ಅಲ್ಲಿ ಹೀಗಿದೆ:—

Class I: Rs.

(a) not exceeding 6 acres.. Nil
(b) exceeding 6 acres but not exceeding 12 acres. 12
(c) exceeding 12 acres but not exceeding 18 acres. 15

Class II:

(a) not exceeding 18 acres Nil
(b) exceeding 18 acres but not exceeding 36 acres. 4
(c) exceeding 36 acres but not exceeding 54 acres. 5

ಇಷ್ಟು ಅಜಗಜಾಂತರ ವ್ಯತ್ಯಾಸ ಏತಕ್ಕೆ ಮಾಡಿದ್ದಾರೆಂದು ಗೊತ್ತಾಗುವುದಿಲ್ಲ. ಇದನ್ನು ಸರಿಯಾದ ಅಂತರದಲ್ಲಿಡುವುದು ಉತ್ತಮ ಎಂದು ಹೇಳಬಯಸುತ್ತೇನೆ. Exemption Limitನ್ನು 10 ಸಾವಿರಕ್ಕೆ ಇಡುವುದು ಉತ್ತಮವೆಂದು ತಿಳಿದುಕೊಂಡಿದ್ದೇನೆ. Accounts ಇಡುವ ವಿಚಾರದಲ್ಲಿ ರೈತರಿಗೆ ಬಹಳ ತೊಂದರೆಯಾಗುತ್ತದೆ. ಇದನ್ನು ಕೂಲಂಕಷವಾಗಿ

ಯೋಚನೆಮಾಡಿ ಅನಂತರ ಈ ಬಿಲ್ಲನ್ನು ತರಬೇಕು ಎಂದು ಒತ್ತಾಯಪಡಿಸುತ್ತೇನೆ.

*ಶ್ರೀ ವಿ. ಮಾಸಿಯಪ್ಪ (ಹಿರಿಯೂರು).—ಸ್ವಾಮಿ, ವ್ಯವಸಾಯದ ವರಮಾನ ತೆರಿಗೆ ಮಸೂದೆಯನ್ನು ಸರ್ಕಾರದವರು ಮಂಡಿಸಿರತಕ್ಕಂಥ ಬಗ್ಗೆ ವಿಪುಲವಾಗಿರತಕ್ಕಂಥ ಚರ್ಚೆ ಈಗಾಗಲೇ ನಡೆದಿದೆ. ಈ ಮಸೂದೆ ಬಗ್ಗೆ ನನಗೆ ತಿಳಿದಿರತಕ್ಕ ಕೆಲವು ಅಭಿಪ್ರಾಯಗಳನ್ನು ಮತ್ತು ನಾನು ಇದರಲ್ಲಿ ಕಂಡುಕೊಂಡಿರತಕ್ಕಂಥ ಕೆಲವು ಲೋಪದೋಷಗಳನ್ನೂ ಈ ಸಮಯದಲ್ಲಿ ಸಭೆಯ ಗಮನಕ್ಕೆ ತರುವುದು ಅಗತ್ಯವೆಂದು ತಿಳಿದುಕೊಂಡಿದ್ದೇನೆ. ಈ ಮಸೂದೆ ಪರಿಶೀಲನೆ ಮಾಡತಕ್ಕ ಸಂದರ್ಭದಲ್ಲಿ ನನ್ನ ಭಾಷಣವನ್ನು 2–3 ಭಾಗಗಳಾಗಿ ವಿಭಾಗಮಾಡತಕ್ಕದು ಅಗತ್ಯವೆಂದು ನನಗನ್ನಿಸುತ್ತದೆ. ಮುಖ್ಯವಾಗಿ ಮೊದಲನೆಯದು ಈ ಮಸೂದೆಯ ಮೂಲ ಉದ್ದೇಶ ಮತ್ತು ಇದರ ಹಿನ್ನೆಲೆ ಏನು ಎನ್ನುವುದನ್ನು ಸ್ವಲ್ಪ ಪರಿಶೀಲನೆ ಮಾಡತಕ್ಕಂಥಾದ್ದು ಆಗತ್ಯ. ಇದನ್ನು ಮಂಡಿಸಿರತಕ್ಕ ಸಂದರ್ಭದಲ್ಲಿ ಹಣಕಾಸಿನ ಸಚಿವರು ಮಾಡಿರುವ ಭಾಷಣದಲ್ಲಿ "ದೇಶದಲ್ಲಿ ನಾನಾ ಅಭಿವೃದ್ಧಿ ಕಾರ್ಯಗಳಿಗೆ ಹಣ ಬೇಕಾಗಿರುವುದರಿಂದ ದೇಶದ ಎಲ್ಲಾ ಪ್ರಜೆಗಳೂ ನಾನಾ ವಿಧವಾಗಿ ಅವರವರ ಶಕ್ತ್ಯಾನುಸಾರವಾಗಿ ಅವರವರ ವರಮಾನದ ಮೇಲೆ ಸ್ವಲ್ಪಭಾಗವನ್ನು ಕೊಡುವುದು ಅಗತ್ಯ. ನಮ್ಮ ಅಭಿವೃದ್ಧಿ ಕಾಮಗಾರಿಗಳಿಗೆ ಕೇಂದ್ರ ಸರ್ಕಾರದ ಸಹಾಯವನ್ನು ಪಡೆಯುವುದಕ್ಕಿಂತ ಮುಂಚೆ ನಮ್ಮ ದೇಶದಲ್ಲಿರತಕ್ಕಂಥ ವರಮಾನದ ಬಾಬುಗಳನ್ನೆಲ್ಲಾ ಮೊದಲು ಪರಿಶೀಲನೆ ಮಾಡಿ ಅವುಗಳಿಂದ ಬರಬಹುದಾದ ವರಮಾನಗಳನ್ನು ಗಣನೆಗೆ ತೆಗೆದುಕೊಂಡು ಅನಂತರ ಹೆಚ್ಚಿನ ಸಹಾಯಕ್ಕಾಗಿ ಕೇಂದ್ರ ಸರ್ಕಾರಕ್ಕೆ ಹೋಗತಕ್ಕಂತಹ ಆವಶ್ಯಕತೆ ಇದೆ. ಹೊಸದಾಗಿ ಈ ವರಮಾನದ ಬಾಬುಗಳನ್ನು ನಾವು ನಮ್ಮ ದೇಶದಲ್ಲಿಯೇ ಉಪಯೋಗಿಸಿಕೊಂಡಿದ್ದೇವೆಯೇ ಎನ್ನತಕ್ಕಂಥ ಪ್ರಶ್ನೆ ನಮ್ಮ ಮುಂದೆ ಬರುವುದರಿಂದ ಈ ಒಂದು ಮಸೂದೆಯನ್ನು ತರಬೇಕಾದ ಅವಶ್ಯಕತೆ ಬಂತು" ಎಂದು ಅವರು ತಿಳಿಸಿದ್ದಾರೆ. ಇದರಲ್ಲಿರತಕ್ಕ ಮೂಲ ಉದ್ದೇಶವನ್ನು ನಾವು ಒಪ್ಪಿಕೊಳ್ಳಬಹುದು. ದೇಶಾಭಿವೃದ್ಧಿ ಕಾಮಗಾರಿಗಳಿಗೆ ಹಣ ಬೇಕು ಎಂದು ಹೇಳತಕ್ಕಂಥ ಸಂದರ್ಭದಲ್ಲಿ ಹಣವನ್ನು ಯಾರುಯಾರಿಗೆ ಎಷ್ಟೆಷ್ಟರಮಟ್ಟಿಗೆ ಶಕ್ತಿ ಇದೆಯೋ ಅಷ್ಟು ಪ್ರಮಾಣದಲ್ಲಿ ಅವರು ಸಹಕರಿಸಿ ಕೊಡತಕ್ಕಂಥಾದ್ದು ಅವಶ್ಯಕ. ಇದರಲ್ಲಿ ವಾದವಿವಾದ ಮಾಡತಕ್ಕದ್ದು ಸರಿಯಲ್ಲ. ಆದರೆ ಒಂದು ಮುಖ್ಯವಾದ ಅಂಶವನ್ನು ನಾವು ಪರಿಶೀಲನೆ ಮಾಡುವುದಾದರೆ ವ್ಯವಸಾಯದ ವರಮಾನದ ತೆರಿಗೆಯನ್ನು ವ್ಯವಸಾಯಗಾರರೂ ಕೆಲಸಗಾರರೂ ಕೊಡಬೇಕು ಎನ್ನುವ ಸನ್ನಿವೇಶ ಇದೆ. ನಾಲ್ಕು ವರ್ಷಗಳ ಕೆಳಗೆ ಸರ್ಕಾರದವರು ವ್ಯವಸಾಯಗಾರರ ಮೇಲೆ ಯಾವ ತೆರಿಗೆಯನ್ನು ಹಾಕಿದರೂ ಅವರು ಕೊಡುವುಕ್ಕೆ ಸಿದ್ಧರಾಗಿದ್ದರು. ಈಗಿನ ಪರಿಸ್ಥಿತಿ ನೋಡಿದರೆ ವ್ಯವಸಾಯದ ಎಲ್ಲಾ ಧಾರಣೆಗಳೂ ಕೂಡ ದಿನೇ ದಿನೇ ಕಡಿಮೆಯಾಗುತ್ತಿವೆ ಎಂದು ಸರ್ಕಾರದವರು ಹೇಳಬಹುದು. "ವ್ಯವಸಾಯವನ್ನು ಅಭಿವೃದ್ಧಿಗೆ ತರುವುದಕ್ಕೋಸ್ಕರ ನಾವು ನಾನಾ ಅಭಿವೃದ್ಧಿ ಕಾಮಗಾರಿಗಳನ್ನು ಎಂದರೆ, ನೀರಾವರಿ, ವಿದ್ಯುಚ್ಛಕ್ತಿ ಕಾಮಗಾರಿಗಳನ್ನು ತೆಗೆದುಕೊಂಡಿದ್ದೇವೆ. ಅದಕ್ಕೋಸ್ಕರ ಹಣ ಬೇಕಾಗಿದೆ, ಅದು ಎಲ್ಲಿಂದ ಬರಬೇಕು" ಎಂದು, ಅವರು ಕೇಳಬಹುದು. ನಿಜ. ಒಪ್ಪಿಕೊಳ್ಳುತ್ತೇನೆ, ಸರ್ಕಾರದವರಿಗೆ ನಾವು ಋಣಿಗಳಾಗಿದ್ದೇವೆ. ಅವರು ಕೈಕೊಂಡಿರುವ ಯೋಜನೆಗಳು ಯಾವುವೂ ಈ ದಿವಸ ಫಲಪ್ರದವಾಗುವ ಸ್ಥಿತಿಗೆ ಬಂದಿಲ್ಲ. ಯಾವ ನೀರಾವರಿ ಕಾಮಗಾರಿಗಳೂ ರೈತನ ವರಮಾನವನ್ನು ಹೆಚ್ಚಿಸತಕ್ಕ ಪರಿಸ್ಥಿತಿಗೆ ಬಂದಿಲ್ಲ. ಯಾವ ವಿದ್ಯುಚ್ಛಕ್ತಿ ಕಾಮಗಾರಿಗಳಾದರೂ ರೈತನ ವರಮಾನವನ್ನು ದ್ವಿಗುಣ ಅಥವಾ ತ್ರಿಗುಣಗೊಳಿಸತಕ್ಕಂಥ ಮಟ್ಟಕ್ಕೆ ಬಂದಿಲ್ಲ. ಸರ್ಕಾರದವರು ರೈತನ ಜೀವನಮಟ್ಟವನ್ನು ಹೆಚ್ಚುಮಾಡುವುದಕ್ಕೆ ಮೊದಲನೆ ಪಂಚವಾರ್ಷಿಕ ಯೋಜನೆ ಮತ್ತು ಎರಡನೆ ಪಂಚವಾರ್ಷಿಕ ಯೋಜನೆ ಮುಗಿದ ಮೇಲೆ Irrigation ಮತ್ತು Agriculture develop ಆಗಿ ವರಮಾನ ಉತ್ತಮವಾದಾಗ ರೈತನಿಗೆ ಒಂದು confidence ಬರುತ್ತದೆ, ಆ ಸಂದರ್ಭದಲ್ಲಿ ಇಂತಹ ಯಾವುದೋ ಒಂದು ವಿಧವಾದಂಥ ತೆರಿಗೆ ಹಾಕುವುದನ್ನು ತಂದಿದ್ದರೂ ಕೂಡ ಸೂಕ್ತವೆಂದು ಪ್ರತಿಯೊಬ್ಬರೂ ಸಂತೋಷದಿಂದ ಒಪ್ಪಿಕೊಳ್ಳುತ್ತಿದ್ದರೆಂದು ನನಗನ್ನಿಸುತ್ತದೆ. ಇನ್ನೊಂದು ವಿಚಾರವನ್ನು ಈ ಸಂದರ್ಭದಲ್ಲಿ ಹೇಳಬಹುದು. ಅನೇಕ ಸದಸ್ಯರುಗಳು ಆಗಲೇ ತಿಳಿಸಿದ ಹಾಗೆ ಯಾವ ಯಾವ ವಿಧವಾದಂಥಾ ತೆರಿಗೆಗಳು ಬರುತ್ತವೋ ಎಂದು ಕಾದುನೋಡುತ್ತಿದ್ದಾರೆ. ಕಳೆದ ಸಾಲಿನಲ್ಲಿ ಸಭೆಯ ಮುಂದೆ ಬಂದಿರತಕ್ಕ Land Revenue Taxation ಕಂದಾಯವನ್ನು ಹೆಚ್ಚುಮಾಡತಕ್ಕ ಮಸೂದೆಗಳು ಏನಾದವು ಎಂಬುದು ಇನ್ನೂ ಇತ್ಯರ್ಥವಾಗಲಿಲ್ಲ ಮತ್ತು ಇದರ ಜೊತೆಗೆ Land Revenue Resettlement ಎಲ್ಲಾ ಭಾಗದಲ್ಲೂ introduce ಮಾಡಬೇಕು ಎಂದು ಕೆಲವು ತಾಲ್ಲೂಕುಗಳಲ್ಲಿ ತೆಗೆದುಕೊಂಡಿದ್ದಾರೆ. ಅದರ ಪರಿಣಾಮವಾಗಿ Survey ಮತ್ತು Resettlement ಆದ ಮೇಲೆ ಕಂದಾಯವನ್ನು ಇತ್ಯರ್ಥಮಾಡುವುದು, ಹೆಚ್ಚಿಸತಕ್ಕಂಥಾದ್ದು, ಇಲ್ಲವೇ ಕಡಮೆಮಾಡುವುದು ತೀರ್ಮಾನವಾಗುತ್ತದೆ. ಆ ರೀತಿ ಸರ್ವೆ ಆದ ತಕ್ಷಣ ಆಗತಕ್ಕ ಪರಿಣಾಮವನ್ನು ಇವೊತ್ತಿನವರೆಗೂ ಸರ್ಕಾರದವರಾಗಲಿ ಅಥವಾ ಸರ್ವೆ ಕಮೀಷನರ್ ಆಗಲಿ ಎಲ್ಲಿ ಸರ್ವೆ ಸೆಟಲ್‌ಮೆಂಟ್ introduce ಮಾಡಬೇಕು ಎಂದು ತೆಗೆದುಕೊಂಡಿದ್ದಾರೋ ಅಲ್ಲಿ ಸರ್ಕಾರದವರು ಕಂದಾಯದ ವಿಚಾರವಾಗಿ ಯಾವ ನೀತಿಯನ್ನಿಟ್ಟುಕೊಂಡಿದ್ದಾರೆ ಎನ್ನುವುದನ್ನು ತಿಳಿಸಿಲ್ಲ. ಎಷ್ಟರಮಟ್ಟಿಗೆ ಹೆಚ್ಚಾಗಬಹುದು ಎಂದು ಅವರಿಗೆ ಖಚಿತವಾಗಿಲ್ಲ. ಆದ್ದರಿಂದ ಕಂದಾಯದ ಹೊರೆ ಒದ್ದ ಮೇಲೆ ಪುನಃ ಈ ತೆರಿಗೆ ಹೊರೆಯೂ ಬಿದ್ದರೆ ಆಗ ಧಾರಣೆವಾಸಿಗಳು ಬೀಳುವ ಸಂದರ್ಭದಲ್ಲಿ ರೈತರಿಗೆ ಹೊರಲಾರದಂಥ ತೆರಿಗೆ ಆಗಬಹುದು. ಈಗ Survey and Resettlement ಆದ ಮೇಲೆ ಕಂದಾಯ ಹೆಚ್ಚಿಗೆ ಆಗಬಹುದು ಎಂಬ ಶಂಕೆ ಅವರ ಮನಸ್ಸಿನಲ್ಲಿದೆ ಎಂದು ಹೇಳುತ್ತೇನೆ. ಇನ್ನೊಂದು ಅಂಶ. ಮೈಸೂರು ಸರ್ಕಾರ ಮತ್ತು ಕೇಂದ್ರ ಸರ್ಕಾರದವರನ್ನೊಳಗೊಂಡು ಹೇಳುವುದಾದರೆ, ನೀರಾವರಿ, ವಿದ್ಯುಚ್ಛಕ್ತಿ ಕಾಮಗಾರಿಗಳನ್ನು ಕೈಕೊಳ್ಳುವ ಮೂಲಕ ಸಹಾಯಮಾಡುವಷ್ಟು ಭಾಗವನ್ನು ಬಿಟ್ಟರೆ ನೇರವಾಗಿ ಭೂಮಿಯಿಂದ ಬರತಕ್ಕ ಉತ್ಪತ್ತಿಯನ್ನು ಹೆಚ್ಚುಮಾಡುವುದಕ್ಕೆ ಏನೇನು ಅಗತ್ಯ ಸಹಾಯ ಬೇಕೋ ಎಂದರೆ ಭೂಮಿಯನ್ನು ಉಳುವುದಕ್ಕೆ ಉತ್ತಮವಾದ ಸಾಧನಗಳು ಮತ್ತು ಗೊಬ್ಬರವನ್ನು ಸರಿಯಾದ ರೀತಿಯಲ್ಲಿ ಒದಗಿಸುವುದಕ್ಕೆ, ಬೆಳೆಗಳಿಗೆ ಬರತಕ್ಕ ರೋಗರುಜಿನೆಗಳನ್ನು ತಡೆಗಟ್ಟುವುದಕೆ ಸಾಕಷ್ಟು ಸಹಾಯವನ್ನು ಇವೊತ್ತಿನವರೆಗೂ ಮಾಡುವುದಕ್ಕೆ ಮನಸ್ಸುಮಾಡಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಈ ವಿಚಾರವನ್ನು ಈ ಮಾನ್ಯ ಸಭೆಯ ಮುಂದೆ ಬಡ್ಜೆಟ್ ಪರಿಶೀಲನೆ ಮಾಡತಕ್ಕಂಥ

(ಶ್ರೀ ವಿ. ಮುನಿಯಪ್ಪ.)

ಸಂದರ್ಭದಲ್ಲಿ ಅನೇಕ ಸಲ ತಿಳಿಸಿದ್ದೇವೆ. ವ್ಯವಸಾಯದ ಬೆಳೆಯನ್ನು ಉತ್ತಮಪಡಿಸುವುದಕ್ಕೆ ಮಾರ್ಕೆಟ್ ಮಾಡಲು ತಕ್ಕ ವ್ಯವಸ್ಥೆ ಮಾಡಬೇಕು. ರೈತನು ಏನು ಕೇಳಿದರೂ ಕೊಡುವುದಕ್ಕೆ ಸಿದ್ಧನಾಗಿದ್ದಾನೆಂದು ಪದೇ ಪದೇ ಹೇಳಿದ್ದೇನೆ. ಇದಕ್ಕೋಸ್ಕರ ಸರ್ಕಾರದವರು ಮಾಡುತ್ತಾ ಇರತಕ್ಕಂಥ ಖರ್ಚಿನ ಹಣ ಬಹಳ ಕಡಮೆ ಮತ್ತು ಇವೊತ್ತಿನವರೆಗೂ ಈ ಬಾಬಿಗೆ ಹೆಚ್ಚಿಗೆ ನಿಗಾ ಕೊಟ್ಟಿಲ್ಲ. ಇಷ್ಟಾದರೂ ಕೂಡ ಸರ್ಕಾರದವರು ರೈತನಿಂದ ಹೆಚ್ಚಿಗೆ ಹಣ ಕೊಡಬೇಕೆಂದು ಕೇಳುತ್ತಿದ್ದಾರೆ. ಸರ್ಕಾರದವರು ಎಷ್ಟರಮಟ್ಟಿಗೆ ಹಣಸಹಾಯ ಮಾಡಿದ್ದಾರೆಂಬುದನ್ನು ನಾವು ಈ ದಿವಸ ಪರಿಶೀಲನೆ ಮಾಡಬೇಕಾಗಿದೆ. ಒಂದೇ ಒಂದು ಕಾರಣದಿಂದ ಈ ಮಸೂದೆಯನ್ನು ಒಪ್ಪಿಕೊಳ್ಳಬಹುದು. ಈ ಮಸೂದೆಯಲ್ಲಿರತಕ್ಕಂಥ ತತ್ವವನ್ನು ಒಪ್ಪಿಕೊಂಡಿರುವುದರಿಂದ ಅಷ್ಟರಮಟ್ಟಿಗೆ ಸ್ವಾಗತಕೊಡಲು ಒಂದು ವಿಚಾರವನ್ನು ತಿಳಿಸಬೇಕಾಗಿದೆ. ಕೇಂದ್ರ ಸರ್ಕಾರದವರು ಎಲ್ಲಾ ಹಣದ ಹಿಡಿತವನ್ನು ಹಿಡಿದುಕೊಂಡಿರುವುದರಿಂದ ಎಷ್ಟರಮಟ್ಟಿಗೆ ಪ್ರಾಂತ ಸರ್ಕಾರದವರಿಗೆ ಆ ಹಣವನ್ನು ಉಪಯೋಗಿಸುವುದಕ್ಕೆ ಶಕ್ತಿ ಇದೆಯೋ ಅಷ್ಟರಮಟ್ಟಿಗೆ ಆ ಹಣವನ್ನು ಉಪಯೋಗಿಸುವುದಕ್ಕೆ ಅಧಿಕಾರವಿದೆ ಎಂಬುದನ್ನು ಅನೇಕ ಸಂದರ್ಭಗಳಲ್ಲಿ ಪತ್ರಿಕೆಗಳಲ್ಲಿ ನೋಡಿದ್ದೇವೆ. ಇದರಲ್ಲಿ ಪ್ರತಿಯೊಂದು ಪ್ರಾಂತಕ್ಕೂ ಕೇಂದ್ರ ಸರ್ಕಾರದವರು ವಿಲೇಮಾಡತಕ್ಕ ಹಣದ ಅಂಕಿಅಂಶಗಳನ್ನು ನೋಡಿದರೆ, ಮೈಸೂರು ಸಂಸ್ಥಾನಕ್ಕೆ ಅನೇಕ ಬಾಬುಗಳಿಂದ ಬರುತ್ತಾ ಇರತಕ್ಕ ಹಣ ಬಹಳ ಕಡಮೆ ಎಂಬುದು ಗೊತ್ತಾಗುತ್ತದೆ. ಆದ್ದರಿಂದ ಕೇಂದ್ರ ಸರ್ಕಾರದವರ ಹತ್ತಿರ ಒಂದು ಭಿಕ್ಷಾಪಾತ್ರೆಯನ್ನು ಹಿಡಿದುಕೊಂಡು ಹೋಗಬೇಕಾಗಿಲ್ಲ. ಪ್ರಾಂತಗಳಿಗೆ ಅಜನ್ಮಸಿದ್ಧವಾದ ಹಕ್ಕು ಇದ್ದೇ ಇದೆ. ರಾಜ್ಯಾಂಗದಲ್ಲಿರುವ ಪ್ರಕಾರ ಎಷ್ಟು ಅಧಿಕೃತವಾಗಿದೆಯೋ ಅಷ್ಟನ್ನೂ ಕೇಳಿ ತೆಗೆದುಕೊಳ್ಳುವ ಹಕ್ಕು ಇರುವುದರಿಂದ ಅದನ್ನು ತೆಗೆದುಕೊಂಡು ಸರ್ಕಾರದವರಿಗೆ ಕಡಮೆ ಬಿದ್ದಿರತಕ್ಕ ಶಕ್ತಿಯನ್ನು ಬಲಪಡಿಸಿಕೊಳ್ಳುವುದಕ್ಕೆ ಈ ಮಸೂದೆಯು ಅವಶ್ಯಕತೆಯೆಂದು ಹೇಳುತ್ತಾ ಇರುವುದರಿಂದ ಅದಕ್ಕೋಸ್ಕರ ಸಂತೋಷದಿಂದ ಈ ಮಸೂದೆಗೆ ಸ್ವಾಗತ ಬಯಸಬಹುದಾಗಿದೆ.

ಇನ್ನು ಈ ಮಸೂದೆಯನ್ನೊಳಗೊಂಡಿರತಕ್ಕಂಥ ಕಾಲಂಗಳಲ್ಲಿ ಹೇಳಿರತಕ್ಕಂಥ ಅಂಕಿ ಅಂಶಗಳನ್ನು ಪರಿಶೀಲನೆ ಮಾಡುವಾಗ ಎರಡು ವಿಷಯಗಳನ್ನು ಹೇಳಬೇಕಾಗಿದೆ. ಈಗ ವರಮಾನ ತೆರಿಗೆ ಹಾಕುತ್ತಿದ್ದಾರೆ. ಆದರೆ ಈಗ ಈ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸನ್ನು ವಿಧಿಸುವಾಗ ಆತನಿಗೆ ಇಷ್ಟೇ ಲಾಭ ಬಂತು ಎನ್ನುವುದನ್ನು ತಿಳಿಸುವುದಕ್ಕೆ ಕಷ್ಟ ಕಂಡಾಗ ಆತನು ಅಧಿಕಾರಿಗಳಲ್ಲಿ ಹೋಗಿ ತನ್ನ ಕಷ್ಟವನ್ನು ಹೇಳಿಕೊಂಡರೆ ಮತ್ತು ಆ ಲೆಕ್ಕಚಾರಗಳನ್ನೆಲ್ಲಾ ಇಡತಕ್ಕ ಬಗ್ಗೆ ತನಗಿರತಕ್ಕಂಥ ಅಶಕ್ತಿಯನ್ನು ರೈತ ಹೇಳಿಕೊಂಡರೆ ಆಗ ಇಲಾಖೆಯವರೊಂದಿಗೆ ತಾನು ರಾಜಿ ಮಾಡಿಕೊಂಡು ಬಂದು ಒಟ್ಟು ಮೊತ್ತ ಕೊಡತಕ್ಕಂಥ ವ್ಯವಸ್ಥೆಯನ್ನು ಏರ್ಪಾಡು ಮಾಡಿದ್ದಾರೆ. ಹೀಗೆ ಒಂದು ಅನುಕೂಲವನ್ನು ಕಲ್ಪಿಸಿರುವುದಕ್ಕಾಗಿ ನಾನು ಸರ್ಕಾರದವರನ್ನು ಅಭಿನಂದಿಸುತ್ತೇನೆ. ಆದರೆ ಈ ಹಣವನ್ನು ನಿಗದಿ ಮಾಡತಕ್ಕ ವಿಚಾರದಲ್ಲಿ ಸ್ವಲ್ಪ ವ್ಯತ್ಯಾಸವಾಗಿದೆ. ಜನರಲ್ ಇನ್‌ಕಂಟ್ಯಾಕ್ಸಿನಲ್ಲಿ ವಿನಾಯಿತಿ ಪರಿಮಿತಿಯನ್ನು 4,200 ರೂಪಾಯಿಗಳವರೆಗೂ ಕೊಟ್ಟಿದ್ದಾರೆ. ಆ ಜನರಲ್ ಲೈನಿನಲ್ಲಿ ಆ ಇನ್‌ಕಂ ಮಟ್ಟದವರೆಗೆ ಯಾವ ತೆರಿಗೆಯನ್ನೂ ಕೊಡಬೇಕಾಗಿಲ್ಲ. ಆದರೆ ತಾವು ಈ ವ್ಯವಸಾಯಗಾರರ ವಿಚಾರದಲ್ಲಿ ಬಹಳ ತಾರತಮ್ಯ ತೋರಿಸಿದಂತೆ ಕಾಣುತ್ತದೆ. ರೈತನಾದವನು ಕಷ್ಟಪಟ್ಟು ವ್ಯವಸಾಯ ಮಾಡಿ, ಬಿಸಿಲಿನಲ್ಲಿ ಬೆಂದು, ಬೆಂಡಾಗಿ, ಮನೆಮಕ್ಕಳೆಲ್ಲಾ ಬಳಲಿ ವ್ಯವಸಾಯ ಮಾಡಿ ಏನೋ ಸ್ವಲ್ಪ ಆದಾಯ ಬರತಕ್ಕಂಥ ಸೂಚನೆಗಳನ್ನು ಕಾಣತಕ್ಕ ಸಂದರ್ಭದಲ್ಲಿ ತಾವು ಆ ಜನರಲ್ ಇನ್‌ಕಂಟ್ಯಾಕ್ಸ್ ಕೊಡತಕ್ಕವರಿಗೆ 4,200 ರೂಪಾಯಿಗಳವರೆಗೂ ವಿನಾಯಿತಿ ಕೊಟ್ಟಿರುವಾಗ ಈ ವ್ಯವಸಾಯಗಾರರಿಗೆ ಕನಿಷ್ಠಪಕ್ಷ ಈ ವಿನಾಯಿತಿ ಪರಿಮಿತಿಯನ್ನು 5,000 ರೂ.ಗಳಿಗಾದರೂ ನಿರ್ಧರಮಾಡಬಹುದಾಗಿತ್ತು. ತಾವು ಆ ರೀತಿ ಮಾಡಿದ್ದಲ್ಲಿ ನಾನು ಅದನ್ನು ನ್ಯಾಯವೆಂದು ಹೇಳುತ್ತಿದ್ದೆನು. ಈಗ ತಾವು ಎಲ್ಲಿ ಸಾಮಾನ್ಯವಾಗಿ ವರಮಾನ ಬರತಕ್ಕಂಥ ಖಾತ್ರಿ ಇದೆಯೋ ಅಲ್ಲಿ ಜಾಸ್ತಿ ವಿನಾಯಿತಿಗೆ ಅವಕಾಶವಿತ್ತು, ಎಲ್ಲಿ ವರಮಾನ ಬರತಕ್ಕದ್ದು ನಂಬಿಕೆಯಿಲ್ಲವೋ ಅಲ್ಲಿ ಈ ತೆರಿಗೆ ವಿನಾಯಿತಿಯನ್ನು ತಗ್ಗಿಸಿರುವುದು ತೀರ ಅಸಮಂಜಸವಾಗಿದೆ. ಜನರಿಗೆ ಈ ವ್ಯವಸಾಯೋದ್ಯಮದಲ್ಲಿ ಪೂರಾ ಅಪನಂಬಿಕೆಯಾಗಿ ಯಾರೂ ಧೈರ್ಯದಿಂದ ಈ ಉದ್ಯಮಕ್ಕೆ ಪ್ರವೇಶ ಮಾಡುವುದೇ ಕಷ್ಟ. ಅಂಥದ್ದರಲ್ಲಿ ತಾವೀಗ, ಈ ರೀತಿ ಅವರ ಮೇಲೊಂದು ತೆರಿಗೆ ಹೇರಿಬಿಟ್ಟರೆ ಬಹಳ ತೊಂದರೆಯಾಗುತ್ತದೆ. ಸರ್ಕಾರದವರು ಈ ವ್ಯವಸಾಯೋದ್ಯಮದಲ್ಲಿ ತೊಡಗತಕ್ಕಂಥ ಜನಗಳಿಗೆ ಒಂದು ಪ್ರೋತ್ಸಾಹ ನೀಡಬೇಕಾಗಿತ್ತು. ಅದಕ್ಕೆ ಬದಲಾಗಿ ಜನಗಳು ಗಾಬರಿ ಹೊಂದುವಂತೆ ಮಾಡಿದ್ದೀರಿ. ಜನರಲ್ ಇನ್‌ಕಂಟ್ಯಾಕ್ಸ್ ಕೊಡತಕ್ಕವರಿಗೆ ತಾವು 4,200 ರೂಪಾಯಿಗಳ ತನಕ ವಿನಾಯಿತಿ ಕೊಟ್ಟಿರುವಾಗ ತಾವು ಹೇಗೆ ಈ ವ್ಯವಸಾಯಗಾರರಿಗೆ 3,500 ರೂಪಾಯಿಗಳ ವಿನಾಯಿತಿಯೇ ಸಾಕೆಂದು ನಿರ್ಧರ ಮಾಡಿದಿರೋ ಅದು ನನಗೆ ಗೊತ್ತಾಗುವುದಿಲ್ಲ. ಈ ವಿನಾಯಿತಿ ಪರಿಮಿತಿಯನ್ನು ಕನಿಷ್ಠಪಕ್ಷ 5,000 ರೂಪಾಯಿಗಳಿಗಾದರೂ ಏರಿಸಬೇಕೆಂದು ನಾನು ಸಲಹೆ ಮಾಡುತ್ತೇನೆ.

6-30 P.M.

ಇನ್ನು ರಾಜಿ ಮಾಡಿಕೊಳ್ಳತಕ್ಕಂಥ ಸಂದರ್ಭದಲ್ಲಿ ಯಾವ ರೀತಿ ಮತ್ತು ಎಷ್ಟರಮಟ್ಟಿಗೆ, ಮತ್ತು ಒಂದು ಎಕರೆಗೆ ಎಷ್ಟು ವಿನಾಯಿತಿ ಕೊಡಬಹುದು ಎಂಬುದನ್ನು ನಾವೀಗ ನಿರ್ಧಾರ ಮಾಡಬೇಕಾಗಿದೆ. ಈ ದಿವಸ ತಾವು ಯಾವ ಯಾವ ಬೆಳೆಗಳಿಗೆ ಎಷ್ಟೆಷ್ಟು ತೆರಿಗೆಯನ್ನು ವಿಧಿಸಬೇಕೆಂದು ಮಾಡಿದ್ದೀರಿ, ಅದನ್ನು ಯಾವ ಅಂಕಿಅಂಶಗಳ ಆಧಾರದ ಮೇಲೆ ತೀರ್ಮಾನ ಮಾಡಿದ್ದೀರಿ ಎನ್ನುವುದನ್ನು ಈ ಮಾನ್ಯ ಸಭೆಗೆ ತಿಳಿಸಬೇಕೆಂದು ಅನೇಕ ಮಾನ್ಯ ಸದಸ್ಯರುಗಳು ಕೇಳಿದ್ದಾರೆ. ಈಗ ಸಂಸ್ಥಾನದ ನಾನಾ ಭಾಗಗಳಿಂದ ಬಂದಿರತಕ್ಕಂಥ ಸದಸ್ಯರೆಲ್ಲರೂ ಏನೇನು ವಿಷಯಗಳನ್ನು ತಿಳಿಸಿರುತ್ತಾರೆಂಬುದನ್ನು ನಾವೆಲ್ಲರೂ ಕೇಳಿದ್ದೇವೆ. ಇದರಲ್ಲಿ ಅನೇಕರು ತಮ್ಮ ತಮ್ಮ ಅನುಭವಪೂರಿತವಾದಂಥ ಸಲಹೆಗಳನ್ನಿತ್ತಿದ್ದಾರೆ. ಈಗ ತಾವು ಈ ಫುಡ್ ಕ್ರಾಪ್‌ಗಳು ಯಾವು ಯಾವವು ಎಂಬುದರ ಬಗ್ಗೆ ಕೊಟ್ಟಿರತಕ್ಕ ಡೆಫಿನಿಷನ್ ಪ್ರಕಾರ ಹೋದರೆ ಇದರಲ್ಲಿ ಅನೇಕ ತೊಂದರೆಗಳು ಬರುತ್ತವೆ. ಇದರ ಹಾಗೆ ಈ 'ಕಮರ್ಷಿಯಲ್ ಕ್ರಾಪ್ಸ್'ಗಳ ಡೆಫಿನಿಷನ್ ಕೂಡ ಸರಿಯಾಗಿಲ್ಲ. ರೈತನು ಯಾವ ಸಾಮಾನುಗಳನ್ನೇ ಆಗಲಿ ಮಾರ್ಕೆಟ್ಟಿಗೆ ತೆಗೆದು ಹೋಗಿ ವ್ಯಾಪಾರ ಮಾಡಿದರೆ ಅವೆಲ್ಲಾ ಕಮರ್ಷಿಯಲ್ ಕ್ರಾಪುಗಳಾಗುತ್ತವೆಂದು ಭಾವಿಸಿರುವಂತೆ ಕಾಣುತ್ತದೆ.

ದಿವಸ ಮಂಡ್ಯ ಮತ್ತು ಮೈಸೂರು ಜಿಲ್ಲೆಯಲ್ಲಿ ರೈತ ಸಾಗುವಳಿ ಮಾಡುತ್ತಿದ್ದಾನೋ ಅದೆಲ್ಲಾ ದೆ ಆಹಾರ ಸಾಮಾಗ್ರಿಗಳೆಂದು ಪರಿಗಣಿಸ ಗುತ್ತು, ಆದರೆ ಈ ದಿವಸ ಅವುಗಳನ್ನೆಲ್ಲಾ ತಾವು ರ್ಷಿಯಲ್ ಕ್ರಾಪ್ಸ್‌ಗಳೆಂದು ಭಾವಿಸಬಹುದು. ಗೆ ಹಿಂದೆ ಯಾವ ಒಂದು ಪ್ರದೇಶದಲ್ಲಿ ಆಹಾರ ಮಾಗ್ರಿಗಳನ್ನು ಬೆಳೆಸಲಾಗುತ್ತಿತ್ತೋ ಅಲ್ಲಿ Money ps ಗಳನ್ನು ಬೆಳೆಯುತ್ತಿರಬಹುದು. ಹೀಗೆ ಗಳು ಅದಲುಬದಲಾಗಬಹುದು. ಇನ್ನು ಕೆಲವು ಕಮರ್ಷಿಯಲ್ ಕ್ರಾಪುಗಳಿಲ್ಲದಿದ್ದಾಗ್ಯೂ ಅವು ನ್ನು ಸೇರಿಸಿ ತೆರಿಗೆ ವಿಧಿಸುತ್ತಾರೆ. ಇದು ನ್ಯಾಯ ದುದಲ್ಲ. ಇದು ಅಷ್ಟು ಸಮರ್ಪಕವಾಗಿದೆಯೆಂದು ನು ಹೇಳಲಾರೆ. ಈಗ ಈ ಬಿಲ್ಲಿನಲ್ಲಿ ಹೇಳಿರುವ ಾರ ದ್ರಾಕ್ಷಿ ಹಣ್ಣಿನ ತೋಟ, ಸೇಬು, ದಾಳಿಂಬ, ್ಯಾದಿ, ತೋಟಗಳನ್ನೆಲ್ಲಾ ಕೈ ಬಿಟ್ಟುಬಿಟ್ಟಿದ್ದಾರೆ. ಗಳಿಗೆ ಬರುವಂಥ ವರಮಾನ ಬಹಳವಾಗಿರುತ್ತದೆ. ರೆ ಹೂ, ಮೆಣಸಿನಕಾಯಿ, ಈರುಳ್ಳಿ, ಬೆಳ್ಳುಳ್ಳಿ ್ಯಾದಿಗಳೆಲ್ಲಾ ಸ್ವಲ್ಪ ಹೆಚ್ಚು ಕಡಮೆ ಬಡವರ ಾರ ವಸ್ತುಗಳೆಂದು ಹೇಳಬಹುದು, ಈ ಬೆಳೆ ನ್ನು ತಾವು ಈ ತೆರಿಗೆ ಪಟ್ಟಿಯಿಂದ ವಜಾ ಡಿಬಿಡಬಹುದು.

ಶ್ರೀ ಜೆ. ಮಹಮ್ಮದ್ ಇಮಾಂ.—ಮೆಣಸಿನ ಕಾಯಿ ನ್ನು ಸಾಕಷ್ಟು ಉಪಯೋಗಿಸದಿದ್ದರೆ ಅನಿಮಿಯಾ ುತ್ತದೆಂದು ಹೇಳುತ್ತಾರೆ.

ಶ್ರೀ ವಿ. ಮಾಸಿಯಪ್ಪ.—ಹೀಗೆ ತಾವೀಗ ಕೈಬಿಡ ಾದ ಕೆಲವು ಬೆಳೆಗಳನ್ನು ಸೇರಿಸಿಕೊಂಡು, ಸಿಕೊಳ್ಳಬೇಕಾದಂಥ ಬೆಳೆಗಳನ್ನು ಸೇರಿಸಿ ಳದೆ ಕೈ ಬಿಟ್ಟಿದ್ದೀರಿ. ಈ ವಿಚಾರವನ್ನು ಸೆಲೆಕ್ಟ್ ತಿಯವರು ಚೆನ್ನಾಗಿ ಪರಿಶೀಲನೆ ಮಾಡಬೇಕು. ರ ಯಾವ ಬೆಳೆಗಳಿಗೆ ವಿನಾಯಿತಿ ಕೊಡ ದು, ಯಾವ ಬೆಳೆಗಳ ಮೇಲೆ ತೆರಿಗೆ ವಿಧಿಸ ದೆಂಬ ಬಗ್ಗೆ ನಾನು ಒಂದೆರಡು ಸಲಹೆ ್ನೀಯಲು ಅಪೇಕ್ಷೆಪಡುತ್ತೇನೆ. ಇದರಂತೆಯೇ ಕಾಂಪೌಂಡಿಂಗ್ ವಿಚಾರದಲ್ಲಿ ಸಹ ಎಷ್ಟು ರೇಜ್ ಏನು ಎನ್ನುವುದನ್ನೂ ಪರಿಶೀಲನೆ ಡಬೇಕಾಗಿದೆ. ರೈತನು ಈ ಹೊತ್ತು ತಾನು ಯುವಂಥ ವಸ್ತುಗಳ ಮತ್ತು ಉತ್ಪಾದನೆ ದತಕ್ಕಂಥ ಪದಾರ್ಥಗಳ ಖರ್ಚು ಏನಾಗುತ್ತದೆ ುದನ್ನು ವ್ಯವಸಾಯದ ಇಲಾಖೆಯ ಅಂಕಿ ಅಂಶ ದ ನಿರ್ಧರಮಾಡಿದರೆ ಹೀಗೆ ತಾವು ಈ Cost of duction ಎಷ್ಟಾಗುತ್ತದೆಂಬುದನ್ನು ಲೆಕ್ಕಹಾಕಿ ಡುವುದಾದರೆ ಇವುಗಳ ಉತ್ಪನ್ನದ ಖರ್ಚು ಬಹಳ ಯೆಂಬುದು ಗೊತ್ತಾಗುತ್ತದೆ. ಈ ದಿವಸ ತಾವು ು ಎಕರೆಯಲ್ಲಿ ಬೆಳೆಯುತಕ್ಕಂಥ ಅಡಕೆ, ಕಬ್ಬು, ು, ಇತ್ಯಾದಿ ಕೆಲವು ಬೆಳೆಗಳಿಗೆ ಎಷ್ಟು ಖರ್ಚು ದೆ, ಆ ರೈತನ ಸಂಸಾರಕ್ಕೆ ಏನು ಖರ್ಚಿದೆ, ು ಈ ವ್ಯವಸಾಯೋದ್ಯಮಕ್ಕೆ ನೇಮಿಸಿಕೊಂಡಿರ ಂಥ ಆಳುಗಳಿಗೆ ಏನು ಸಂಬಳ ಕೊಡುತ್ತಿದ್ದಾನೆ, ುವುದನ್ನೆಲ್ಲಾ ಲೆಕ್ಕಕ್ಕೆ ತೆಗೆದುಕೊಂಡರೆ ಆ ರೈತನ ವರಮಾನಕ್ಕೂ ಸರ್ಕಾರದವರು ವಿನಾಯಿತಿ ಬೇಕಾಗುತ್ತದೆ. ಈ ವಿಚಾರಗಳನ್ನೆಲ್ಲಾ ಈಗ ರ್ಕಾರದವರು ಕೂಲಂಕಷವಾಗಿ ವಿಚಾರಮಾಡಿ ಡಿದ್ದಾರೆಯೇ ಎಂದು ಕೇಳುತ್ತೇನೆ. ಇದರಲ್ಲಿ ಒಂದು ಬಹಳ ಮುಖ್ಯವಾದ ಅಂಶವನ್ನು ಟ್ಟಿದ್ದಾರೆ ಈಗ ಸಾಧಾರಣವಾಗಿ ಈ ಜನರಲ್ ಂಟ್ಯಾಕ್ಸನ್ನು ವಿಧಿಸುವಾಗ ಅಂದರೆ ಜನಗಳ ಮೇಲೆ ಹಾಕತಕ್ಕ ವರಮಾನ ತೆರಿಗೆಯನ್ನು ನಿರ್ಧರ ಮಾಡುವ ಕಾಲದಲ್ಲಿ ಮೂಲ ಬಂಡವಾಳದ ಮೇಲೆ ಪ್ರತಿ ಒಂದು ವರ್ಷವೂ ಬರತಕ್ಕ ಆದಾಯದಲ್ಲಿ ಒಂದು ಭಾಗವನ್ನು ಡಿಪ್ರಿಷಿಯೇಷನ್ ಫಂಡ್ ಎಂಬುದಾಗಿ ಹೇಳಿ ಮೂಲ ಬಂಡವಾಳಕ್ಕೆ ಸರಿಬರುವ ತನಕ ಒಂದು ಫಂಡನ್ನು ತೆಗೆಯುತ್ತಾ ಹೋಗುತ್ತಾರೆ. ಅದೇ ರೀತಿಯಾಗಿ ರೈತಾಪಿ ಉದ್ಯಮದಲ್ಲಿ ಕೂಡ ತಾವು ರೈತನ ವ್ಯವಸಾಯದ ಸಾಧನಗಳ ಮೇಲೆ ಹಾಕ ತಕ್ಕಂಥ ಮತ್ತು ಆಳು, ಎತ್ತು, ಇತ್ಯಾದಿಗಳ ಮೇಲೆ ಮಾಡತಕ್ಕ ಖರ್ಚನ್ನು ಕೂಡಿಡಲು ತಾವು ಏಕೆ ಇವರಿಗೂ ಒಂದು ವಿನಾಯಿತಿ ಕೊಡಬಾರದು ? ಹೋಗಲಿ ಭೂಮಿ ಮೇಲೆ, ಹಾಕಿರತಕ್ಕಂಥ ಬಂಡವಾಳ ಕ್ಕಾದರೂ ವಿನಾಯಿತಿ ಕೊಟ್ಟಿದ್ದೀರಾ ? ಇನ್ನು ತಾವು ಈ ಬಿಲ್ಲಿನಲ್ಲಿ ಹೇಳಿರುವಂತೆ ಇದು ಈ ವರ್ಷದ ಏಪ್ರಿಲ್ ಒಂದರಿಂದಲೇ ದೇಶವಾದ್ಯಂತವೂ ಜಾರಿಗೆ ಬರತಕ್ಕದ್ದಾಗಿದೆ. ಈ ದಿವಸ ಆ ಹೊಗೆಸೊಪ್ಪಿನ ವಿಚಾರ ತೆಗೆದುಕೊಂಡರೆ ಅದರ ಮೇಲೆ ಈಗಾಗಲೇ ಅನೇಕ ರೂಪದಲ್ಲಿ ತೆರಿಗೆಗಳನ್ನು ತೆರುತ್ತಿರುತ್ತಾರೆ. ಜಮೀನಿನ ಆಬಾದಿಗೋಸ್ಕರವಾಗಿ ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಬೇಕಾಗಿದೆ, ಇಷ್ಟೆಲ್ಲಾ ಖರ್ಚುಗಳು ಮತ್ತು ಕಷ್ಟಕಾರ್ಪಣ್ಯಗಳಿದ್ದಾಗ್ಯೂ ಪುನಃ ಈ ಬೆಳೆಯ ಮೇಲೆ ಈ ಒಂದು ತೆರಿಗೆಯನ್ನೂ ಹಾಕಿರುತ್ತೀರಿ. ಆದರೆ ಇಂಥ ಸಂದರ್ಭಗಳಲ್ಲೆಲ್ಲಾ ಆದಾಯವನ್ನು ಗಣನೆಗೆ ತೆಗೆದುಕೊಳ್ಳುವಾಗ ಈ ಖರ್ಚುವೆಚ್ಚಗಳನ್ನೆಲ್ಲಾ ಕೈಬಿಡದೆ ಲೆಕ್ಕಕ್ಕೆ ತೆಗೆದು ಕೊಳ್ಳುವಂತೆ ತಾವು ಸೆಲೆಕ್ಟ್ ಸಮಿತಿಯವರಿಗೆ ಸೂಚನೆಕೊಡಬೇಕೆಂದು ಹೇಳುತ್ತೇನೆ. ಇನ್ನೂ ಕೆಲ ಕೆಲವು ಬೆಳೆಗಳಿವೆ. ತಾವು ಕೆಲವು ಬೆಳೆಗಳನ್ನು ಪಾರ್ಟ್ I ಮತ್ತು ಪಾರ್ಟ್ IIರಲ್ಲಿ ನಮೂದು ಮಾಡಿದ್ದೀರಿ. ಅವುಗಳಲ್ಲಿ ಕೂಡ ಬಹಳ ವ್ಯತ್ಯಾಸವಿದೆ. ಒಂದು ಷೆಡ್ಯೂಲಿನಲ್ಲಿ ತೆಂಗಿನ ಬೆಳೆ ಹೇಳಿದ್ದೀರಿ. ಮತ್ತೊಂದರಲ್ಲಿ ಕಡಲೆಕಾಯಿ ಬೆಳೆ ವಿಚಾರ ಹೇಳಿದೆ. ಈಗ ಅನೇಕರು ತೆಂಗಿನ ತೋಟದಲ್ಲಿ ತೆಂಗಿನಬೆಳೆ ಯೊಂದನ್ನೇ ಅಲ್ಲದೆ ಆ ತೋಟದಲ್ಲಿ ಇತರ ಬೆಳೆಗಳನ್ನೂ ಬೆಳೆಯುತ್ತಾರೆ. ಹೀಗೆ ಅನೇಕ ಕಡೆಗಳಲ್ಲಿ ಮಿಕ್ಸೆಡ್ ಕ್ರಾಪುಗಳನ್ನು ಬೆಳೆಯುತ್ತಿದ್ದಾರೆ ಇಂಥ ಸನ್ನಿವೇಶ ಗಳಲ್ಲಿ ತಾವು ಈ ತೆರಿಗೆಯನ್ನು ಯಾವ ರೀತಿ ನಿರ್ಧರಿ ಸುತ್ತೀರಿ ಎನ್ನುವುದನ್ನು ವಿಶದಪಡಿಸಿಲ್ಲ. ಇದೇ ರೀತಿ ಯಾಗಿ ಇನ್ನೂ ಕೆಲವು ಮುಖ್ಯಾಂಶಗಳು ಅಂದರೆ ಪೇಜ್ 40 ರಲ್ಲಿ " Provided that no agricultural income-tax shall be payable (1) on a total agricultural income which is less than Rs. 3,5)0 or . ." ಎಂದು ಹೇಳಿದ್ದಾರೆ. ಅಂದರೆ 3,5 0ರೂಪಾಯಿಗಳವರೆಗೂ ವಿನಾಯಿತಿ ಕೊಟ್ಟ ಹಾಗಾಯಿತು. ಇನ್ನು ಎರಡನೆಯದಾಗಿ ಕೊನೆಯಲ್ಲಿ Provisoದಲ್ಲಿ ಹಿಂದೂ ಜಾಯಿಂಟ್ ಫ್ಯಾಮಿಲಿಗೆ 7,000 ರೂಪಾಯಿಗಳ ವರಮಾನಕ್ಕೂ ಸಹ ವಿನಾಯಿತಿ ಕೊಡಲಾಗಿದೆ. ಸಿಂಗಲ್ ಹಿಂದೂ ಫ್ಯಾಮಿಲಿಗೆ ಅಂದರೆ ಕೊಟ್ಟಿರತಕ್ಕಂಥ ವಿನಾಯಿತಿಯ ಎರಡರಷ್ಟು ಹಿಂದೂ ಅವಿಭಕ್ತ ಕುಟುಂಬಕ್ಕೆ ಕೊಟ್ಟಹಾಗಾಯಿತು. ಇನ್ನು ಕೆಲವು ಬೆಳೆಗಳಿಗೆ 6ಎಕರೆಗಳ ತನಕ ವಿನಾಯಿತಿ ಕೊಟ್ಟು ಮತ್ತೆ ಕೆಲವು ಬೆಳೆಗಳಿಗೆ 18 ಎಕರೆ ವರೆಗೂ ವಿನಾಯಿತಿ ತೋರಿಸಿದ್ದೀರಿ. ಇದು ಪೂರಾ ಅಸ ಮಂಜಸವಾಗಿದೆ. ಹಣ ದ್ವಿಗುಣವಾದರೆ ಜಮೀನೂ ಕೂಡ ಅಷ್ಟೇ ದ್ವಿಗುಣವಾಗಬೇಕು. . . . . .

Mr. SPEAKER.—That point has been stated by more than one speaker. It

(MR. SPEAKER.)

is equal to the money exemption that is given.

ಶ್ರೀ ಪಿ. ಮಾಸಿಯಪ್ಪ—ಅದನ್ನು ಒಪ್ಪಿಕೊಳ್ಳುತ್ತೇನೆ. ಹಾಗೆ ಒಪ್ಪಿಕೊಳ್ಳುವ ಸಂದರ್ಭದಲ್ಲಿ ನೇಚರ್ ಆಫ್ ಕ್ರಾಪ್ಸ್‌ನ್ನು ತೆಗೆದುಕೊಳ್ಳೋಣ. ಅನಂತರ ಇನ್ನೂ ಕೆಲವು ಅಂಶಗಳಿವೆ. ಅವುಗಳನ್ನೂ ಕೂಡ ನಿಗದಿ ಮಾಡಬೇಕಾದದ್ದು ತುಂಬಾ ಅವಶ್ಯಕ ಎಂದು ಹೇಳುತ್ತೇನೆ. ಒಂದು ವೇಳೆ ಒಬ್ಬ ರೈತನು ಆತನಿಗೆ ಕಾಂಪೌಂಡಿಂಗ್ ಮಾಡಿಕೊಳ್ಳಲು ಇಷ್ಟವಿಲ್ಲದಿದ್ದ ಪಕ್ಷಕ್ಕೆ ರೈತನು ಲೆಕ್ಕಗಳನ್ನು ಒಂದು ಸುಲಭವಾದ ಮಾರ್ಗದಲ್ಲಾದರೂ ಇಡಬೇಕಾಗುತ್ತದೆ. ಹೀಗೆ ಈತನು ಇಡತಕ್ಕಂಥ ಲೆಕ್ಕದ ಆಧಾರದ ಮೇಲೆ ಆ ರೈತನ ವಾರ್ಷಿಕ ಆದಾಯವನ್ನು ಪಟೇಲ್ ಶ್ಯಾನುಭೋಗರಿಬ್ಬರೂ ಸೇರಿ ಬರವಣಿಗೆ ನಡೆಸಬೇಕೆಂದು ತಾವು ಈ ಬಿಲ್ಲಿನಲ್ಲಿ ಆ ರೆವಿನ್ಯೂ ಅಧಿಕಾರಿಗಳಿಗೆ ಯಾವ ನಿರ್ಬಂಧವನ್ನೂ ಹಾಕಿರುವುದಿಲ್ಲ. ಹೀಗೆ ರೈತ ಮತ್ತು ಪಟೇಲ್ ಶ್ಯಾನುಭೋಗರು ಇಷ್ಟು ಜನರೂ ಸೇರಿ ತಯಾರಿಸತಕ್ಕಂಥ ಲೆಕ್ಕವನ್ನು ನಾವು ಅಧಿಕೃತವೆಂದು ಹೇಳಬೇಕಾಗಿದೆ. ಇದಕ್ಕೇನಾದರೂ ಒಡಂಬಡಿಕೆ ಆಗದಿದ್ದರೆ, ಆಗ ಸರ್ಕಾರದವರು ರೈತನನ್ನು ಕೋರ್ಟಿನ ಮುಂದೆ ಎಳೆದುಕೊಂಡುಹೋಗಿ, ಆತನಿಗೆ ಶಿಕ್ಷೆ ಕೊಡಿಸಲು ಈ ಬಿಲ್ಲಿನಲ್ಲಿ ಅವಕಾಶಮಾಡಿದೆ. ಇದೇ ತರಹ ಶಿಕ್ಷೆಗಳನ್ನು ಇತರ ಕಾನೂನಿನಲ್ಲೂ ನಮೂದಿಸಿರುವುದರಿಂದ ಈ ಕಾನೂನಿನಲ್ಲೂ ಆ ತರಹ ಒಂದು ಪೀನಲ್ ಪ್ರಾವಿಜನ್ ಇರಬೇಕೆಂಬುದಾಗಿ ಸರ್ಕಾರದವರು ಜಸ್ಟಿಫೈ ಮಾಡಿಕೊಂಡಿದ್ದಾರೆ. ಆದರೆ ಈ ವಿಚಾರದಲ್ಲಿ ತುಂಬಾ ವಿನಾಯಿತಿ ಕೊಡಬೇಕಾದದ್ದು ಅವಶ್ಯಕವೆಂದು ನಾನು ತಿಳಿದುಕೊಂಡಿದ್ದೇನೆ.

ಇದನ್ನು ಜಾರಿಗೆ ಕೊಡುವುದರಿಂದ ಸ್ವಲ್ಪಮಟ್ಟಿಗೆ ರೈತರ ಮೂಲಾಧಾರವಾದ co-operative farming ಪದ್ಧತಿಗೆ ಧಕ್ಕೆ ಬರಬಹುದು. Co-operative farming ಅಥವಾ collective farming institutions ಇದ್ದರೆ, ಅವಕ್ಕೆ ಇದರಿಂದ ತೊಂದರೆಯಾಗದೆ ಆ ಸಹಕಾರ ತತ್ವಗಳ ಆಧಾರದಮೇಲೆ ರೈತರು ವ್ಯವಸಾಯವನ್ನು ಮುಂದುವರಿಸುವುದಕ್ಕೆ ಅವಕಾಶವಿರಬೇಕು. ಸೆಲೆಕ್ಟ್ ಕಮಿಟಿಯವರು ಇದನ್ನು ಪರಿಶೀಲನೆ ಮಾಡತಕ್ಕ ಸಂದರ್ಭದಲ್ಲಿ ಈ ವಿಷಯಗಳನ್ನು ಗಮನದಲ್ಲಿಟ್ಟು ಕೊಳ್ಳಬೇಕು ಎಂದು ಹೇಳುತ್ತೇನೆ. ಒಟ್ಟಿನಲ್ಲಿ ಈ ಮಸೂದೆಯನ್ನು ಸ್ವಾಗತಿಸುತ್ತೇನೆ.

ಶ್ರೀ ಟಿ. ಸಿ. ಬಸಪ್ಪ (ತರೀಕೆರೆ).—ಸ್ವಾಮಿ, ಮಾನ್ಯ ಮುಖ್ಯಮಂತ್ರಿಗಳು ಈ ಮಸೂದೆಯನ್ನು ಸಭೆಯ ಮುಂದೆ ಮಂಡಿಸುತ್ತ ಈಗ ಖೋತಾ ಬಿದ್ದಿರುವ ಹಣವನ್ನು ಭರ್ತಿ ಮಾಡುವುದಕ್ಕೆ ಈ ಮಸೂದೆಯನ್ನು ನಮ್ಮ ಮುಂದೆ ತಂದಿದ್ದೇವೆಂದು ಹೇಳಿದರು. ಈ ವಿಚಾರದಲ್ಲಿ ಈಗಾಗಲೇ ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿ ಈ ಮಸೂದೆಯ ಬಗ್ಗೆ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ನಮ್ಮ ಮುಂದಿರತಕ್ಕ ಈ ಆದಾಯ ತೆರಿಗೆ ಮಸೂದೆ ಶಾಸ್ತ್ರೋಕ್ತವಾಗಿದೆ. ಆರ್ಥಿಕ ತತ್ವಗಳ ಆಧಾರದಮೇಲೆ ನೋಡಿದರೂ ಸಹ ಆದಾಯ ತೆರಿಗೆ ಬಹಳ ಉತ್ತಮವಾದುದು, ಇದು ಉಳಿದ ಎಲ್ಲಾ ತೆರಿಗೆಗಳಿಗಿಂತಲೂ ಬಹಳ ಶಾಸ್ತ್ರೋಕ್ತವಾದುದೆಂದು ಒಪ್ಪಬೇಕಾಗಿದೆ. ಶ್ರೀಮಾನ್ ಕೆ. ಪಟ್ಟಾಭಿರಾಮನ್‌ರವರು ಹೇಳಿದಹಾಗೆ, ಒಂದು ಜಮೀನಿನಮೇಲೆ ಕಂದಾಯವಿಧಿಸಬೇಕು ಇಲ್ಲದಿದ್ದರೆ ವರಮಾನ ತೆರಿಗೆ ವಿಧಿಸಬೇಕು. ಒಂದು ಜಮೀನಿನ ವಿಷಯದಲ್ಲಿ ಅದು ತರಿ ಜಮೀನೇ ಖುಷ್ಕಿ ಜಮೀನೇ, ಬಾಗಾಯಿತು ಜಮೀನೇ ಎಂಬುದನ್ನು ನೋಡಿಕೊಂಡು ಆ ಜಮೀನುಗಳಲ್ಲಿ ಬರಬಹುದಾದ ಅಂದಾಜು ಉತ್ಪತ್ತಿಯಮೇಲೆ ಕಂದಾಯ ವಿಧಿಸಿದ್ದಾರೆ. ಅಂದಮೇಲೆ ಈ ಕಂದಾಯ ಮತ್ತು ವರಮಾನ ತೆರಿಗೆ ಇವೆರಡನ್ನೂ ವಿಧಿಸುವುದರಿಂದ ದ್ವಿಗುಣ ತೆರಿಗೆ ವಿಧಿಸಿದಂತಾಗುತ್ತದೆ. Flat rateನ ಮೇಲೆ ಕಂದಾಯ ಅಥವಾ basic tax ವಿಧಿಸಿ ಅನಂತರ ಆದಾಯ ತೆರಿಗೆ ಹಾಕಿದರೆ ಶಾಸ್ತ್ರೋಕ್ತವಾಗಿ ಆಗುತ್ತದೆ ಎಂದು ಎಲ್ಲರೂ ಹೇಳುತ್ತಿರುವ ಮತ್ತು ಒಪ್ಪುವ ವಿಚಾರ.

ವರಮಾನ ತೆರಿಗೆಯನ್ನು ನಮ್ಮಮೇಲೆ, ರೈತರೆಲ್ಲರ ಮೇಲೆ ವಿಧಿಸುವ ವಿಚಾರದಲ್ಲಿ ನಾನು ಕೆಲವು ವಿಚಾರಗಳನ್ನು ಹೇಳಬೇಕಾಗಿದೆ. ಈ ತೆರಿಗೆ ಶಾಸ್ತ್ರೋಕ್ತವಾಗಿದೆ ಎಂದು ಅನೇಕರು ಹೇಳಿದರು. ಹಳ್ಳಿಗಳಲ್ಲಿ ಈಗ ಎಷ್ಟು ಜನ ವಿದ್ಯಾವಂತರಿದ್ದಾರೆಂದರೆ ಶೇಕಡ 8 ಅಥವಾ 9ರ ಮೇಲೆ ಇಲ್ಲ. ಈ ರೀತಿ ವಿದ್ಯಾವಂತರಲ್ಲದಿರುವವರ ಮೇಲೆ ಈ ವರಮಾನ ತೆರಿಗೆಯನ್ನು ವಿಧಿಸುವುದು ಕಾಲೋಚಿತವೇ ? ಇವೊತ್ತು ದೇಶದಲ್ಲಿ ಬೆಳೆಯತಕ್ಕ ಬೆಳೆಗಳಿಗೆ ಒಂದು ನಿರ್ದಿಷ್ಟವಾದ ಬೆಲೆಯನ್ನು ಗೊತ್ತುಮಾಡಿ ಅವನಿಗೆ ನ್ಯಾಯವಾದ ಸೌಕರ್ಯವನ್ನು ಕಲ್ಪಿಸಿಕೊಡದೆ ಇದ್ದಪಕ್ಷದಲ್ಲಿ ಈ ವರಮಾನ ತೆರಿಗೆಯನ್ನು ಹಾಕುವುದು ಶಾಸ್ತ್ರೋಕ್ತವೆ? ಹಳ್ಳಿಗಾಡುಗಳಲ್ಲಿ ಸ್ಕೂಲುಗಳನ್ನು ಕೊಡಿ ಎಂದು ಕೇಳಿ ದರೆ ನೀವು ಅರ್ಧಹಣ ಕೊಟ್ಟರೆ ನಾವೂ ಕೊಡುತ್ತೇವೆ ಎಂದು ಹೇಳಿ ಬೆಂಗಳೂರು ಮುಂತಾದ ಕಡೆಗಳಲ್ಲಿ ಸರ್ಕಾರದವರೇ ಎಲ್ಲ ಖರ್ಚುಗಳನ್ನೂ ವಹಿಸಿಕೊಂಡು ಅನೇಕ ಸೌಲಭ್ಯಗಳನ್ನು ಕೊಟ್ಟಿರಬೇಕಾದರೆ, ಹಳ್ಳಿಗಾಡಿನಲ್ಲಿ ಇರತಕ್ಕಂಥವರಮೇಲೆ ಈ ವರಮಾನ ತೆರಿಗೆಯನ್ನು ಹಾಕುವುದು ಶಾಸ್ತ್ರೀಯವೆ? ಅಂದಮೇಲೆ ಈ ವಿಚಾರವನ್ನು ಅವಸರವಾಗಿ, ಎರಡು ಮೂರು ದಿವಸಗಳಲ್ಲಿ ಇಡೀ ದೇಶದ ಆರ್ಥಿಕ ವ್ಯವಸ್ಥೆಯನ್ನು, ಇಡೀ ದೇಶದ ಒಂದು ರೀತಿ ನೀತಿಯನ್ನು ಮಾರ್ಪಾಡು ಮಾಡತಕ್ಕ ವಿಶೇಷ ತರಹವಾದ ಕಾನೂನನ್ನು ಮಾಡಿ ಜಾರಿಗೆ ತಂದರೆ ಜನಗಳಿಗೆ ಸಹ ಕಷ್ಟವಾಗುತ್ತದೆ, ಭಯಂಕರವಾದ ಪರಿಸ್ಥಿತಿಯುಂಟಾಗುತ್ತದೆ ಎಂದು ನನಗನ್ನಿಸುತ್ತದೆ. ಈ ಉಡುಗೊರೆಯನ್ನು ತೆಗೆದುಕೊಂಡು ನಾವು ನಮ್ಮ ನಮ್ಮ ಹಳ್ಳಿಗಳಿಗೆ ಹೋದರೆ ಜನ ನಮ್ಮನ್ನು ಹೇಗೆ ಸ್ವಾಗತಿಸುತ್ತಾರೆ ? ರೈತರು ಈಗಾಗಲೇ ನಮ್ಮ ವಿಚಾರದಲ್ಲಿ ಅನೇಕ ರೀತಿ ಹೇಳಿಕೊಳ್ಳುತ್ತಿದ್ದಾರೆ. "ಅನೇಕ ತೆರಿಗೆಗಳು, ಭೂಸಮಸ್ಯೆ ವಿಚಾರಗಳಲ್ಲಿ ಅನೇಕ ಮಾರ್ಪಾಡುಗಳನ್ನು ಮಾಡುವುದಕ್ಕೆ ಹೊರಟಿದ್ದಾರೆ. ಒಂದು ನಿರ್ದಿಷ್ಟವಾದ ಕಾನೂನುಮಾಡುತ್ತಿಲ್ಲ. ಹೋದಸಲ ಬಂದಾಗ Tenancy Bill, Land Revenue Revision, Ceiling Limit ಇಂತಹ ಅನೇಕ ಸುಧಾರಣೆಗಳನ್ನು ತಂದಿರಿ. ಇವೆಲ್ಲವೂ ರೈತನಿಗೇ ಮೀಸಲೋ ! ಇನ್ನು ಯಾರಿಗೂ ಈ ತರಹ ಕಾನೂನುಗಳನ್ನು ಅನ್ವಯಿಸುವಂತೆ ಮಾಡಲು ಸಾಧ್ಯವಿಲ್ಲವೋ ? ತಾವು ceiling limit ಬೇರೆ fix ಮಾಡುವುದಕ್ಕೆ ಷುರು ಮಾಡಿದ್ದೀರಿ. ಯಾರಿಗೆ ನಿರ್ದಿಷ್ಟವಾದ ಉತ್ಪತ್ತಿ ಬರುತ್ತದೆಯೋ, ಯಾರಿಗೆ ಒಂದು guaranteed income ಬರುತ್ತದೆಯೋ, ಅಂಥವರನ್ನೆಲ್ಲ ಬಿಟ್ಟು ಬಿಟ್ಟು ಹಳ್ಳಿಗಳಲ್ಲಿ ಕೆಲಸಮಾಡುವ ರೈತನಮೇಲೆ ವರಮಾನ ತೆರಿಗೆ ಹಾಕುವುದು ತಪ್ಪು ಎಂದು ನನಗನ್ನಿಸುತ್ತದೆ. ಮತ್ತೆ ಇದರಿಂದ ಆಗತಕ್ಕ ಸಾಧಕಬಾಧಕಗಳನ್ನು ಈಗಾಗಲೇ ಮಾನ್ಯ ಸದಸ್ಯರು ತಿಳಿಸಿದ್ದಾರೆ. ನಾನು ಪುನಃ ಅವುಗಳನ್ನೇ ಹೇಳಲು ಇಷ್ಟಪಡುವುದಿಲ್ಲ. ಈಗಾಗಲೇ ಶ್ಯಾನುಭೋಗರ ಮತ್ತು ಇತರ ಅಧಿಕಾರಿಗಳ ಕಿರುಕುಳಗಳಿಗೆ ರೈತ

ಸಿಕ್ಕಿ ನರಳುವುದೇ ಸಾಕಾಗಿದೆ ಇನ್ನು ಈ ವರಮಾನ ತೆರಿಗೆಯ ಅಧಿಕಾರಿಗಳ ಕೈಗೆ ಸಿಕ್ಕಿ ನರಳುವ ಸ್ಥಿತಿಗೆ ತಂದು ರೈತರ ಕೋಪತಾಪಗಳಿಗೆ ನಮ್ಮನ್ನು ಒಳಗು ಮಾಡಬೇಡಿ. ನಾವು ನಮ್ಮ constituenciesಗೆ ಹೋಗುವುದಕ್ಕೆ ಸಾಧ್ಯವಿಲ್ಲವೆಂದು ಒಂದೇ ಮಾತಿನಲ್ಲಿ ಹೇಳುತ್ತೇನೆ.

ಈಗ ಈ ಮಸೂದೆಯ ವಿಚಾರದಲ್ಲಿ ನಾನು ಹೇಳಬೇಕಾದರೆ, ಸರ್ಕಾರಕ್ಕೆ ಅಭಿವೃದ್ಧಿಕಾರ್ಯಗಳಿಗಾಗಿ ಹಣಬೇಕು; ನಾವು ಕೊಡುವುದಕ್ಕೆ ಸಿದ್ಧವಾಗಿದ್ದೇವೆ. ಕಂದಾಯ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳುವುದಿಲ್ಲ. ನೀವು ವರಮಾನದಮೇಲೆ ಯಾವ ತೆರಿಗೆ ಹಾಕಬೇಕು ಎಂದು ವಾದಿಸಿದ್ದೀರೋ, ಸೆಕ್ಷನ್ 63ರ ಪ್ರಕಾರ composition ಎಂದು ಏನು ಹೇಳಿದ್ದೀರೋ, ಅದೇರೀತಿ ಒಂದು ಷೆಡ್ಯೂಲ್ ತಯಾರು ಮಾಡಬೇಕು. ಅದರ ಪ್ರಕಾರ ಸಂಸ್ಥಾನದಲ್ಲಿ ಮೂರೂವರೆ ಸಾವಿರ ರೂಪಾಯಿ Exemption limit ಇಟ್ಟುಕೊಂಡಿದ್ದೀರಿ. ಆ ಲಿಮಿಟ್ ಪ್ರಕಾರ ಪ್ರತಿಯೊಂದು ಬಾಬಿನಲ್ಲೂ ಯಾವ ಯಾವುದಕ್ಕೆ ಎಷ್ಟು ವಿನಾಯಿತಿಕೊಡಬೇಕೋ ಅಷ್ಟನ್ನು ಕೊಟ್ಟು ಅದರಮೇಲೆ Income-tax ಹಾಕಬೇಕು. Income ಬಂದರೆ ಕೊಡುವುದಕ್ಕೆ ಸಿದ್ಧವಾಗಿದ್ದೇವೆ. ಆದರೆ ಒಂದು ವಿಷಯ. ಶ್ಯಾನುಭೋಗರ ಕಿರುಕುಳ, ಅಧಿಕಾರಿಗಳ ಕಿರುಕುಳ ತಪ್ಪಿಸಿದರೆ ಬಹಳ ಅನುಕೂಲವಾಗುತ್ತದೆ. ಆದ್ದರಿಂದ ಈ Income-tax ಅಧಿಕಾರಿಗಳ ಕೈಗೆ, ಶ್ಯಾನುಭೋಗರ ಕೈಗೆ ರೈತರು ಸಿಕ್ಕಿ ನರಳದಂತೆ, ತೊಂದರೆಪಡದಂತೆ ಮಾಡಿದರೆ ಶಾಶ್ವತವಾಗಿ ತಮ್ಮನ್ನು ನೆನೆಸಿಕೊಳ್ಳುತ್ತಾರೆ.

ಈಗ ನಾವುಗಳೆಲ್ಲ ಇಷ್ಟು ಹೇಳಿದಮೇಲೂ ಸಹ ಈ ಸಭೆಯವರು ಈಗ ತಂದಿರುವ Income-Tax ಬಿಲ್ಲನ್ನು ಪಾಸ್‌ಮಾಡಬೇಕೆಂದು ತೀರ್ಮಾನಿಸಿದ ಪಕ್ಷದಲ್ಲಿ ಇದರಲ್ಲಿರತಕ್ಕ ಕೆಲವು ನ್ಯೂನತೆಗಳನ್ನು ಸರಿಪಡಿಸಬೇಕು. Income-tax Act ನಲ್ಲಿ earned income ಗೆ ಅವಕಾಶಕೊಟ್ಟಿದ್ದಾರೆ. ಇದರಲ್ಲಿ ಅಂಥದಕ್ಕೆ ಅವಕಾಶಕೊಟ್ಟಿಲ್ಲ. Income-tax Actನಲ್ಲಿ ಒಂದು Insurance ಮಾಡಿದ್ದ ಪಕ್ಷದಲ್ಲಿ ಅದಕ್ಕೆಲ್ಲ ವಿನಾಯಿತಿ ಕೊಡಲು ಅವಕಾಶವಿದೆ. ಈಗ ನಮ್ಮ ಮುಂದೆ ತಂದಿರುವ ಈ ಮಸೂದೆಯಲ್ಲಿಯೂ ಸಹ ಇದಕ್ಕೆ ಅವಕಾಶಕೊಡಬೇಕಾದದ್ದು ನ್ಯಾಯವೆಂದು ಸೂಚನೆ ಕೊಡುತ್ತೇನೆ. Schedule Parts I and II ತೆಗೆದುಕೊಂಡರೆ, ಈಗ ಇರುವಹಾಗೆಯೇ ಅದನ್ನು ಮಾನ್ಯಸಭೆಯವರು ಒಪ್ಪಬಾರದು. ಈ ರೀತಿಯ ಹೆಚ್ಚು ದರದ ಷೆಡ್ಯೂಲ್ ಇಡೀ ದೇಶದಲ್ಲೆಲ್ಲೂ ಇಲ್ಲ ಎಂದು ಹೇಳಬಹುದಾಗಿದೆ. ಕೊಡಗು ದೇಶವನ್ನು ತೆಗೆದುಕೊಂಡರೆ ಮೊದಲನೆ ಐದುಸಾವಿರಕ್ಕೆ ಆರು ಕಾಸುಗಳಂತೆಯೂ ಮತ್ತು ಪರಮಾವಧಿ ತೆರಿಗೆ ಅಂದರೆ, 50 ಸಾವಿರಕ್ಕೆ ಮೇಲ್ಪಟ್ಟು ಮೂರು ಆಣೆಗಳಂತೆಯೂ ಇದೆ. ಅದೇ ನಮ್ಮಲ್ಲಿ 25 ಸಾವಿರ ವರಮಾನಕ್ಕೆ 4 ಆಣೆ ಇದೆ. ನಮ್ಮಲ್ಲಿರುವ ಈ ಷೆಡ್ಯೂಲನ್ನೂ ಸಹ revise ಮಾಡಬೇಕೆಂದು ಹೇಳುತ್ತೇನೆ. ಷೆಡ್ಯೂಲಿನ 2ನೇ ಭಾಗದಲ್ಲಿ 6 ಎಕರೆ, 18 ಎಕರೆ ಎಂದು ಕೊಟ್ಟಿದೆ. ಅದನ್ನು ಯಾವ ಆಧಾರದಮೇಲೆ fix ಮಾಡಿದರೋ ಗೊತ್ತಾಗುವುದಿಲ್ಲ. 3,500 ರೂಪಾಯಿ ಮತ್ತು 7,000 ರೂಪಾಯಿ ಎಂದು limit fix ಮಾಡಿ ವಿನಾಯಿತಿ ಕೊಟ್ಟಿದ್ದೀರಿ. ಅದೇ ಆರು ಎಕರೆ ಜಮೀನಿನಲ್ಲಿ ಎಷ್ಟು ವರಮಾನಬರುತ್ತದೆಂದು ಹೇಳಿದರೆ ಒಪ್ಪಿಕೊಳ್ಳಬಹುದು. ಯಾವಯಾವ ಬಾಬಿನಮೇಲೆ ಎಷ್ಟೆಷ್ಟು limit fix ಮಾಡಬೇಕು ಎಂಬುದನ್ನು ನಮ್ಮ ಸೆಲೆಕ್ಟ್ ಸಮಿತಿಯವರು ಯೋಚನೆಮಾಡಿ ತೀರ್ಮಾನಕ್ಕೆ ಬರುವ ಸಂದರ್ಭದಲ್ಲಿ ರೈತನ ಕಷ್ಟಸುಖಗಳನ್ನು ಚೆನ್ನಾಗಿ ಅರಿತು ತೀರ್ಮಾನಮಾಡಬೇಕೆಂದು ಸೂಚನೆಕೊಡುತ್ತೇನೆ.

ಇನ್ನೊಂದೇನೆಂದರೆ, ಅವಸರವಸರವಾಗಿ ಇವೊತ್ತು ಇದನ್ನು ತಂದು, ನಾಳೆಯೇ ಸೆಲೆಕ್ಟ್ ಕಮಿಟಿಯವರು ಪರಿಶೀಲಿಸಿ ಆ ಮಾರುದಿನವೇ ಇದು ಪುನಃ ಈ ಸಭೆಯ ಮುಂದೆ ಪಾಸ್ ಆಗಿ ಕಾನೂನು ಆಗಬೇಕು ಎಂದು ಯಾಕೆ ಇಷ್ಟು ಆತುರಪಡುತ್ತಿದ್ದಾರೋ ಗೊತ್ತಾಗಿಲ್ಲ. ಇದರಬಗ್ಗೆ ತಕರಾರುಗಳು, ಸಲಹೆಗಳು ವಗೈರೆ ಇವೆಯೇ ಎಂದು ತಿಳಿಯಲು ನಮ್ಮ ಮುಂದೆ ಮೊದಲು ತಂದು, ಎಲ್ಲರ ಸಲಹೆಗಳನ್ನೂ ತೆಗೆದುಕೊಂಡು ಸ್ವಲ್ಪ ನಿಧಾನವಾಗಿ ಯೋಚನೆಮಾಡಿತರಬೇಕಾಗಿತ್ತು. ಇದು ಹೆಚ್ಚುಮಾರ್ಪಾಡಾಗಬೇಕಾದ ಕಾನೂನು. ಇದನ್ನು ಇಷ್ಟು ಅವಸರವಾಗಿ ಜಾರಿಗೆ ತರುವುದಕ್ಕಿಂತ ನಿಧಾನವಾಗಿ ಕೂಲಂಕಷವಾಗಿ ಚರ್ಚೆಮಾಡಿ ಒಂದು ತೀರ್ಮಾನಕ್ಕೆ ಬರುವುದಕ್ಕೆ ಅನುಕೂಲವಾಗಲು ಈ ಮುಂದಿನ ಅಧಿವೇಶನದಲ್ಲಿ ತರುವುದು ಒಳ್ಳೆಯದು ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ತತ್ವದ ವಿಷಯದಲ್ಲಿ ಇಲ್ಲಿಯವರೆಗೆ ಭಿನ್ನಾಭಿಪ್ರಾಯ ಬಂದಿಲ್ಲ. Details ನಲ್ಲಿ ಸ್ವಲ್ಪ ಹೆಚ್ಚುಕಡಿಮೆ ಇರುವುದನ್ನು ಸೆಲೆಕ್ಟ್ ಕಮಿಟಿಯಲ್ಲಿ ಪರಿಶೀಲನೆಮಾಡಿ ಬದಲಾವಣೆಗಳನ್ನು ಮಾಡಬಹುದು.

*ಶ್ರೀ ಹೆಚ್.ಎಂ. ಚನ್ನಬಸಪ್ಪ (ಪಿರಿಯಾಪಟ್ಟಣ).—ಮಾನ್ಯ ಅಧ್ಯಕ್ಷರೇ, ಬಹಳ ಪ್ರಾಮುಖ್ಯವಾದ ಸಮಸ್ಯೆಗೆ ಸಂಬಂಧಪಟ್ಟ ಈ ಒಂದು ಮುಖ್ಯವಾದ ಶಾಸನದ ವಿಷಯದಲ್ಲಿ ಬಹಳ ವಿಪುಲವಾದ ಚರ್ಚೆಯಾಗಿದೆ, ಅದರ ವಿಷಯದಲ್ಲಿ ಅರ್ಥಶಾಸ್ತ್ರವನ್ನು ತಿಳಿದುಕೊಂಡಿರತಕ್ಕವರನೇಕರು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಇದುವರೆಗೂ ಭಾಷಣಗಳನ್ನು ಮಾಡಿರುವವರು ಏನೇನು ವಿಷಯಗಳನ್ನು ಹೇಳಿದ್ದಾರೋ ಅವುಗಳನ್ನು ಪುನಃ ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಮೂಲತತ್ವ ಈ ಭೂಮಿಯ ಮೇಲೆ ಹಾಕತಕ್ಕ ಕಂದಾಯವನ್ನು ಪುನರ್ವಿಮರ್ಶೆಮಾಡಿ ರೈತನಿಗೆ ನ್ಯಾಯ ದೊರಕಿಸಿ ಕೊಡಬೇಕೆನ್ನುವುದು ಬಹಳ ಮುಖ್ಯವಾದುದು. ಇದರಿಂದ ಹಣ ಹೇರಳವಾಗಿ ಉತ್ಪನ್ನವಾಗುತ್ತದೆ, ನಮಗೆ ಬೇಕಾದಷ್ಟು ಹಣಬೇಕು, ಆದ್ದರಿಂದ ಈ ಶಾಸನವನ್ನು ತಂದಿದ್ದೇವೆ ಎಂದು ಸರ್ಕಾರದವರೂ ಅನೇಕ ಮಾನ್ಯ ಸದಸ್ಯರೂ ಹೇಳಿದರು. ಇದು ಸಾಧ್ಯವಿಲ್ಲವೆಂದು ನನ್ನ ಅಭಿಪ್ರಾಯ. ಯಾಕೆಂದರೆ ಈ ಶಾಸನದಿಂದ 20 ಲಕ್ಷ ರೂಪಾಯಿಗಳ ಆದಾಯ ಬರುತ್ತದೆ ಎಂದು ನಿರೀಕ್ಷೆ ಮಾಡಿದ್ದಾರೆ. ನಾವು ಕೈಗೊಂಡಿರುವ ಯೋಜನೆಗಳನ್ನು ಕಾರ್ಯಗತಮಾಡಬೇಕಾದರೆ ಈ 20 ಲಕ್ಷ ರೂಪಾಯಿಗಳಿಂದ ಅಷ್ಟು ಮಹತ್ತರವಾದ ಸಹಾಯವಾಗುವುದಿಲ್ಲ. ಈಗಿರತಕ್ಕ ಸ್ಥಿತಿಯಲ್ಲಿ 20 ಲಕ್ಷ ರೂಪಾಯಿಗಳು ಸಹ ಬರುವುದು ಸಾಧ್ಯವಿಲ್ಲವೆಂದು ನನ್ನ ಅಭಿಪ್ರಾಯ. ಅದೇನೇ ಇರಲಿ ಈಗಿರತಕ್ಕ ಸ್ಥಿತಿಯಲ್ಲಿ ರೈತನ ಮೇಲೆ ಈ ರೀತಿಯ ತೆರಿಗೆ ಹಾಕುವುದು ಸಾಧುವೇ ಎನ್ನುವುದನ್ನು ಯೋಚನೆಮಾಡಬೇಕು. ತಿಂಗಳಿಗೆ 300 ರೂಪಾಯಿ ಸಂಬಳ ಬರತಕ್ಕ ಒಬ್ಬ ಮನುಷ್ಯನ ಉತ್ಪತ್ತಿ ವರ್ಷಕ್ಕೆ 3,600 ರೂಪಾಯಿಗಳಾಗುತ್ತವೆ. ಅಂಥವನು ಸರ್ಕಾರಕ್ಕೆ ಒಂದು ಬಿಡಿಕಾಸನ್ನೂ ಸಹ ಕೊಡದೆ ಸರ್ಕಾರದಿಂದ ಒದಗಬಹುದಾದ ಎಲ್ಲ ವಿಧವಾದ ಸೌಕರ್ಯಗಳನ್ನೂ ಪಡೆಯುತ್ತಾನೆ ಎನ್ನುವುದು ನಿರ್ವಿವಾದವಾದ ಅಂಶ. (Hear hear) ಒಬ್ಬ ರೈತ ಒಂದು ಎಕರೆ ತರಿ ಜಮೀನು ಅಥವಾ ಖುಷ್ಕಿ

(ಶ್ರೀ ಹೆಚ್. ಎಂ. ಚನ್ನಬಸಪ್ಪ.)

ಜಮೀನು ಇರತಕ್ಕವನು ಆ ಜಮೀನಿನಲ್ಲಿ ವರ್ಷದಲ್ಲಿ ಒಂದು ತಿಂಗಳು, ಎರಡು ತಿಂಗಳು, ಮೂರು ತಿಂಗಳು ಅಥವಾ ಆರು ತಿಂಗಳಿಗೆ ಆಗುವಷ್ಟು ದವಸವನ್ನು ಬೆಳೆಯುತ್ತಿದ್ದರೂ ಕೂಡ ಅಂಥವನು ಮಾತ್ರ ಒಂದು ರೂಪಾಯಿನಿಂದ ಹಿಡಿದು 15 ರೂಪಾಯಿಗಳವರೆಗೂ ಕಂದಾಯವನ್ನು ತೆರುತ್ತಿದ್ದಾನೆ ಎನ್ನುವುದೂ ಸಹ ನಿರ್ವಿವಾದವಾದಂಥ ಅಂಶ. It is a matter which is not disputable. ನಾನು ಆ ವಿಷಯವನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ಈ ತೆರಿಗೆಗಳು fundamental canons of taxation ತೆರಿಗೆ ಹಾಕಬೇಕಾದ ಮೂಲಭೂತವಾದ ತತ್ವಗಳಿಗೆ ಅನುಗುಣವಾಗಿಯೇ ಎನ್ನುವುದನ್ನು ಯೋಚನೆಮಾಡಿ ಇಲ್ಲವೆಂದು ಹೇಳಬಹುದಾಗಿದೆ. ಹೀಗಿರುವಾಗ ಇದನ್ನು ಪುನರ್ವಿಮರ್ಶೆಮಾಡಿ ರೈತನಿಗೆ ನ್ಯಾಯವಾದ ರೀತಿಯಲ್ಲಿ, ಯಾವನಿಗೆ ಶಕ್ತಿ ಇದೆಯೋ ಅಂಥವನು ಮಾತ್ರ ತೆರಿಗೆಯನ್ನು ಕೊಡಬೇಕೆಂಬುದನ್ನು ಮಾಡಬೇಕು. ಈ ಧ್ಯೇಯವನ್ನಿಟ್ಟುಕೊಂಡು ಕಾನೂನನ್ನು ಬದಲಾವಣೆ ಮಾಡುವುದು ಕಷ್ಟವಿಲ್ಲ. ಮತ್ತು ಅದನ್ನು ಕಾರ್ಯರೂಪಕ್ಕೆ ತರತಕ್ಕಂಥದ್ದು ಸೂಕ್ತವಾದದ್ದು. ಈ ಸದುದ್ದೇಶಗಳನ್ನಿಟ್ಟುಕೊಂಡು ಈ ಮಸೂದೆಯನ್ನು ತರುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ.

7 P.M.

ಇವರಿಂದ ಹೊರಡತಕ್ಕ ಫಲಿತಾಂಶಗಳು ಅನೇಕ ತೊಂದರೆಗಳಿಗೆ ಜನರನ್ನು ಈಡುಮಾಡಬಹುದು. ಅದನ್ನು ನಾನೂ ಒಪ್ಪುತ್ತೇನೆ ಆದರೆ, ಮೂಲತತ್ವವೇನೆಂಬುದನ್ನು ಗಮನಿಸಬೇಕು. ಕೇವಲ ಹಣದಾಸೆಗೆ ಈ ಮಸೂದೆಯನ್ನು ತಂದಿದ್ದಾರೆಂಬುದು ಸರಿಯಲ್ಲ. ಆ ದೃಷ್ಟಿಯಿಂದ ತರಬೇಕೆಂದಿದ್ದರೆ, ಬಹಳ ಸುಲಭವಾಗಿ ಒಂದು ರೂಪಾಯಿಗೆ ಎರಡಾಣೆ ಸರ್ಚಾರ್ಜ್ ಮಾಡಿದ್ದರೇ ಸಾಕಾಗಿತ್ತು; 20 ಲಕ್ಷ ರೂಪಾಯಿಗಳು ಬರುತ್ತಿತ್ತು. ಅಥವಾ Slab system ತಂದು ಹತ್ತು ರೂಪಾಯಿ ಕಂದಾಯ ಕೊಡತಕ್ಕವರಿಗೆ ಮನ್ನಾ ಮಾಡಿ, ಅದರ ಮೇಲೆ ಕೊಡತಕ್ಕವರಿಗೆ ಒಂದು ರೂಪಾಯಿ ಹಾಕಿದ್ದರೆ ಇನ್ನೂ ಹೆಚ್ಚಿಗೆ ಬರುತ್ತಿತ್ತು. ಆದರೆ ತತ್ವಶಃ ಅದನ್ನು ಅಂಗೀಕಾರ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿ, ಸಮತಾವಾದವನ್ನು ಅಂಗೀಕಾರ ಮಾಡಿ ಅದಕ್ಕನುಗುಣವಾಗಿ ಒಂದು ವ್ಯವಸ್ಥೆ ಮಾಡಬೇಕೆಂದು ಹೊರಟಿರುವಾಗ, ಯಾರಿಗೆ ತೆರಿಗೆ ಕೊಡುವುದಕ್ಕೆ ಶಕ್ತಿಯಿದೆಯೋ, ಯಾರು ವಾಸ್ತವವಾಗಿ ವರಮಾನ ಪಡೆಯುತ್ತಿದ್ದಾರೋ ಅಂಥವರು ಮಾತ್ರ ತೆರಿಗೆ ಕೊಡಬೇಕು, ಯಾರು ದುರ್ಬಲರು, ಯಾರಿಗೆ ಸಂಪಾದನೆ ಇಲ್ಲ ಅಂಥವರು ಕೊಡಬೇಕಾದ್ದಿಲ್ಲವೆಂದು ಒಂದು ತತ್ವವನ್ನು ಪ್ರತಿಪಾದನೆಮಾಡಿ ಈ ಶಾಸನವನ್ನು ತಂದಿದ್ದಾರೆಂದು ನಾನು ತಿಳಿದಿದ್ದೇನೆ. ಇದು ಸಮತಾವಾದಿಗಳಿಗೆ ಪ್ರಿಯವಾದುದು.

ಒಬ್ಬ ಸದಸ್ಯರು.—ಈ ಸಮತಾವಾದವನ್ನು ನಾವು ಒಪ್ಪುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾರು ಸಮತಾವಾದದ ತತ್ವವನ್ನು ಅಂಗೀಕಾರ ಮಾಡಿದ್ದರೋ, ಅವರ ಮೂಲತತ್ವಕ್ಕೆ ಇದು. . .

ಶ್ರೀ ಎಲ್. ಸಿದ್ದಪ್ಪ (ಚನ್ನಗಿರಿ).—ಸಮತಾವಾದದ ತತ್ವವನ್ನು ಈ ರೀತಿಯಲ್ಲಿ ಆಚರಣೆಗೆ ತರಬೇಡಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಮತಾವಾದದ ತತ್ವಪ್ರಿಯರಿಗೆ ವಾಸ್ತವವಾಗಿಯೂ ಈ ಶಾಸನದ ತತ್ವ ಬಹಳ ಪ್ರಿಯವಾದುದು. ಇದನ್ನು ಅವರು ಪ್ರತಿಪಾದನೆ ಮಾಡುವಾಗ, ನಮ್ಮ ಸಮತಾವಾದಿ ಸ್ನೇಹಿತರು ಮಾತನಾಡಿದ್ದನ್ನು ನಾನು ಕುತೂಹಲದಿಂದ ಕೇಳಿದೆ. ಶ್ರೀ ಮಾರ್ಕ ಇಮಾಂರವರು ಮಾತನಾಡುವಾಗ ಕೆಲವು ಅಂಶಗಳನ್ನು ಹೊರಗೆಡಹಿದ್ದಾರೆ. ಅವರೇನು ಹೇಳಿದರೆಂಬುದನ್ನು ಒಂದೆರಡು ಮಾತುಗಳಲ್ಲಿ ಮಾತ್ರ ಹೇಳುತ್ತೇನೆ. "ದೇಶದಲ್ಲಿ ಇಂದಿನ ದಿವಸ ಪ್ರಜೆಗಳ ಮೇಲೆ ಮಹತ್ತರವಾದ ತೆರಿಗೆ ಹಾಕಿದೆ; ಇದರಮೇಲೆ ಇನ್ನೂ ತೆರಿಗೆ ಹಾಕುವುದು ಸರಿಯಲ್ಲ" ಎಂದು ಅವರು ಹೇಳಿದರು. ಅವರು ಹೇಳಿದ ಈ ವಿಷಯ ಹೊರಗಡೆ ಪ್ರಚಾರವಾದಾಗ ಏನು ಅಭಿಪ್ರಾಯ ಕೊಡುತ್ತದೆಂಬುದನ್ನು ಯೋಚನೆಮಾಡಿ. ಈಗಾಗಲೇ ಸರ್ಕಾರ ಬಹುವಾಗಿ ತೆರಿಗೆ ಹಾಕಿದೆ. ಕಾಂಗ್ರೆಸ್ ಸರ್ಕಾರ ತೆರಿಗೆಗಳನ್ನು ಯಥೇಚ್ಛವಾಗಿ ಬೆಳೆಸಿಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಎಂದು ಜನ ತಿಳಿಯುವುದಕ್ಕೆ ಅವಕಾಶವಾಗುತ್ತದೆ. ಆ ಭಾವನೆ ಬರಬಾರದು. ಈ ಬಗ್ಗೆ ಅಂಕಿ ಅಂಶಗಳನ್ನು ನೋಡುವುದಾದರೆ, ಈ ಹೊತ್ತಿನ ದಿವಸ ಮೈಸೂರು ದೇಶದಲ್ಲಿ ತೆರಿಗೆ ಎಷ್ಟರಮಟ್ಟಿಗಿದೆಯೆಂಬುದನ್ನು ದೇಶಕ್ಕೂ ಈ ಸಭೆಗೂ ತಿಳಿಸಬಯಸುತ್ತೇನೆ. ಭರತಖಂಡದಲ್ಲಿರುವ 16 ಸಂಸ್ಥಾನಗಳ ಪೈಕಿ ಹೈದರಾಬಾದಿನಲ್ಲಿ ಹೆಚ್ಚಿನ ತೆರಿಗೆಯ ಹೊರೆಯಿದೆ. ತಲೆ ಒಂದಕ್ಕೆ ರೂ. 11-2-0 ಯಷ್ಟಿದೆ. ಬೊಂಬಾಯಿನಲ್ಲಿ 10-4-0 ಯಿದೆ. ಪೆಪ್ಸುವಿನಲ್ಲಿ 10-2-0, ಮಧ್ಯಪ್ರದೇಶದಲ್ಲಿ 10-1-0, ತಿರುವಾಂಕೂರಿನಲ್ಲಿ 9-3-0, West Bengal ನಲ್ಲಿ 9-1-0. ರಾಜಾಸ್ಥಾನದಲ್ಲಿ 7-9-0, ಮದ್ರಾಸಿನಲ್ಲಿ 6-8-0, ಕೊನೆಯದಾಗಿ ಮೈಸೂರಿನಲ್ಲಾದರೋ ಕೇವಲ 6-5-0 ಮಾತ್ರ.

ಇದರಿಂದ, ಅವರು ಹೇಳಿದ ಮಾತು ಸತ್ಯವಲ್ಲವೆಂದು ಬಹಳ ವಿನಯದಿಂದ ಅವರಿಗೂ ಮತ್ತು ಈ ಸಭೆಗೂ ಮತ್ತು ಆ ಮೂಲಕ ದೇಶಕ್ಕೂ ತಿಳಿಸುತ್ತೇನೆ.

Sri U. M. MADAPPA.—*Per capita* income differs from *per capita* tax.

Sri H. M. CHANNABASPPA.—*Per capita* expenditure on Social Services also I will give.

Per capita expenditure is 17·6. So we have been taxing our people much lower than many of the other States in India.

ಪರಿಸ್ಥಿತಿ ಹೀಗಿರುವಾಗ ಮಾನ್ಯ ವಿರೋಧ ಪಕ್ಷದ ಮುಖಂಡರು ದೇಶಕ್ಕೆ ತಿಳಿಯುವ ಹಾಗೆ "ನಮ್ಮ ದೇಶದಲ್ಲಿ ಕಂದಾಯದ ಹೊರೆ ಯಥೇಚ್ಛವಾಗಿದೆ, ಅದರ ಮೇಲೆ ಇದನ್ನು ಒಂದನ್ನೂ ಹಾಕಿರುವುದು ಗಾಯದ ಮೇಲೆ ಬರೆ ಇಟ್ಟ ಹಾಗೆ ಇದೆ" ಎಂದು ತಪ್ಪುಭಾವನೆ ಬರುವಂತೆ ಭಾಷಣ ಮಾಡುವುದು ಸರಿಯಲ್ಲವೆಂದು ಹೇಳುತ್ತೇನೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ (ಮಳವಳ್ಳಿ).—ತಮ್ಮ ಪಕ್ಷದಲ್ಲೂ ಅನೇಕ ಜನ ಹಾಗೆಯೇ ಹೇಳಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾರೇ ಹೇಳಲಿ, ಅವರದು ತಪ್ಪು ಭಾವನೆಯೆಂದು ಹೇಳುತ್ತೇನೆ.

ಅದೇನೇ ಇರಲಿ, ಶ್ರೀ ಮಾರ್ಕ ಇಮಾಂರವರು ಅನೇಕ ಉಪಯುಕ್ತ ಸಲಹೆಗಳನ್ನು ಕೊಡುತ್ತಾರೆಂದು ನಾನು ನಂಬಿದ್ದೆ; ಆದರೆ ಅವರು ಅಂಥ ಯಾವ ಸಲಹೆಗಳನ್ನೂ ಕೊಡಲಿಲ್ಲ. ಈ ಬಿಲ್ಲಿನಲ್ಲಿರುವ ತತ್ವ ಬಹಳ ಒಳ್ಳೆಯದು. ಆ ತತ್ವವನ್ನು ಒಪ್ಪದೆ ಇದ್ದರೆ ಅವರು ಯಾವ ಪಕ್ಷಕ್ಕೆ ಸೇರಿದ್ದಾರೋ ಆ ಪಕ್ಷಕ್ಕೆ ಅನ್ಯಾಯ

ಮಾಡಿದಂತಾಗುತ್ತದೆ. ಆ ತತ್ವವನ್ನು ಪ್ರತಿಪಾದನೆ ಮಾಡಿಯೂ; ಜಾರಿಗೆ ಕೊಡಬೇಕಾದರೆ 'ಇದು ಸರಿಯಲ್ಲ' ಈಗ ತಂದಿರತಕ್ಕ ಶಾಸನದ ರಚನೆ ಸರಿಯಲ್ಲವೆಂದು ಹೇಳಿದರು. ಒಂದು ವೇಳೆ ರಚನೆ ಸರಿಯಾಗಿಲ್ಲದಿದ್ದರೆ ಬದಲಾವಣೆ ಮಾಡೋಣ; ಅದರಲ್ಲಿ ಭಿನ್ನಾಭಿಪ್ರಾಯವಿಲ್ಲ. ತತ್ವವನ್ನು ಅಂಗೀಕಾರ ಮಾಡಿದಮೇಲೆ ಉಳಿದದ್ದೆಲ್ಲಾ it is a matter of detail. ಯಾವಯಾವ ರೀತಿ ಬದಲಾವಣೆಮಾಡಬೇಕೆಂಬುದನ್ನು ಅವರೇ ಹೇಳಬಹುದಾಗಿತ್ತು. ಅದನ್ನು ಮಾಡದೆ, ಸುಮ್ಮನೆ ಇದು ಸರಿಯಲ್ಲ, ದೇಶದಲ್ಲಿ ಬಡವರ ಮೇಲೆ ಕಂದಾಯದ ಹೊರೆ ಹೆಚ್ಚಾಗುತ್ತದೆ, ಕಾಂಗ್ರೆಸ್ ಸರ್ಕಾರ ಬಂದಮೇಲೆ ತೆರಿಗೆಗಳನ್ನು ಜಾಸ್ತಿಮಾಡಿ ಜನರ ಕಷ್ಟವನ್ನು ಹೆಚ್ಚಿಸುತ್ತಿದ್ದಾರೆ ಎನ್ನುವುದು ಸಾಧುವಲ್ಲ. ತತ್ವವನ್ನು ಅವರು ಒಪ್ಪಿದಮೇಲೆ, ಯಾವಯಾವ ಕ್ಲಾಜುಗಳನ್ನು ಬದಲಾವಣೆ ಮಾಡಬೇಕಾಗಿತ್ತು, ಯಾವ ಯಾವ ಕ್ಲಾಜುಗಳು ಜನರ ಹಿತಸಾಧನೆ ಮಾಡುವುದಿಲ್ಲವೊ, ಅಂಥ ಕ್ಲಾಜುಗಳಿಗೆ ಇಂಥಿಂಥ ಬದಲಾವಣೆಗಳನ್ನು ಮಾಡಬೇಕು ಎಂದು ಒಂದು ರಚನಾತ್ಮಕವಾದ ಸಲಹೆ ಮಾಡಿದ್ದರೆ ವಾಸ್ತವವಾಗಿಯೂ ಈ ಸಭೆ ಹಾಗೂ ದೇಶವೇ ಅವರನ್ನು ಅಭಿನಂದಿಸುತ್ತಿತ್ತು. ಅಂಥ ಒಂದು ಸಲಹೆ ನಾನು ಕಂಡಂತೆ ಅವರಿಂದ ಬರಲಿಲ್ಲ. ಅವರು ಮಾಡಿದ್ದೇನು? ನಾನು ಆಗಲೇ ಹೇಳಿದ ಹಾಗೆ 'fisbing in troubled waters' ಎನ್ನುವಂತೆ, ಸುಮ್ಮನೆ ಪಾಲಿಸಿ ಒಳ್ಳೆಯದಲ್ಲವೆಂದು ಹೇಳುವುದು ಸೂಕ್ತವಲ್ಲ. ದೇಶದಲ್ಲಿ ತೆರಿಗೆ ಹಾಕಬೇಕಾದರೆ ಒಂದು ವಿಧಾಯಕವಾದ ರೀತಿಯಲ್ಲಿ, ಒಂದು ತತ್ವಾನುಷ್ಠಾನ ಮಾಡಿಕೊಂಡು ಶಾಸ್ತ್ರೀಯವಾಗಿ ಹಾಕಬೇಕೆಂದು ಒಪ್ಪಿಕೊಂಡ ಮೇಲೆ ತೆರಿಗೆ ಹಾಕತಕ್ಕದ್ದೇ ಸರಿಯಲ್ಲವೆಂದು ಹೇಳುವುದು ವಾದವಲ್ಲ.

ಅಲ್ಲದೆ, ಭೂಕಂದಾಯದ ವಿಷಯ ದಲ್ಲಿ ಹಿಂದೆ ಅಕ್ಬರ್ ಮಹಾಶಯನು ರಾಜ್ಯಭಾರ ಮಾಡುತ್ತಿದ್ದಾಗಿನಿಂದಲೂ ಅನೇಕ ಬದಲಾವಣೆಗಳಾಗಿವೆ. ತೋದರಮಲ್ಲನು ಒಂದು ರೀತಿಯಲ್ಲಿ ಶಾಸ್ತ್ರೀಯವಾಗಿ ಬದಲಾವಣೆ ಮಾಡಿದನು. ಅದಾದ ಮೇಲೆ ನಾನಾಫಡ್ನವೀಸನು ಬಂದಾಗ ಮತ್ತೊಮ್ಮೆ ಬದಲಾವಣೆಯಾಯಿತು. ಅಲ್ಲಿಂದೀಚೆಗೆ ಶಿವಪ್ಪನಾಯಕನ ಶಿಸ್ತು ಎಂದು ಹೇಳಿ, ಆ ಕಾಲದಲ್ಲಿ ಒಂದು ಕ್ರಾಂತಿಕಾರಕವಾದ ಬದಲಾವಣೆಯಾಯಿತು. ಭೂಮಿಯಲ್ಲಿ ಉತ್ಪನ್ನವಾದಂಥ ಫಸಲನಲ್ಲಿ ಒಂದು ಭಾಗವನ್ನು ಖರ್ಚಿಗೆ ತೆಗೆದು ಉಳಿಕೆಯ ಭಾಗದಲ್ಲಿ ಸರ್ಕಾರಕ್ಕೂ ರೈತನಿಗೂ ಹಂಚಿಕೆಯಾಗಬೇಕೆಂದು ಆತನು ಹೇಳಿದನೇ ವಿನಾ ಭೂಮಿಯನ್ನು ರೈತ ಪಡೆದಾಕ್ಷಣ ಕಂದಾಯವನ್ನು ಹಾಕಬೇಕಾದ್ದಿಲ್ಲವೆಂದು ಯಾರೂ ಹೇಳಲಿಲ್ಲ. ಈ ತತ್ವವನ್ನು ಇವೊತ್ತಲ್ಲ, ಅವೊತ್ತೇ ಶಿವಪ್ಪನಾಯಕನು ಪ್ರತಿಷ್ಠಾಪನೆ ಮಾಡಿದ್ದಾನೆ. ಅದೇ ರೀತಿಯಾಗಿ ಶಾಸ್ತ್ರೀಯವಾಗಿ ನಡೆದುಕೊಂಡೂ ಬಂದಿತು. ಈಚೆಗೆ ಇಂಗ್ಲೀಷರು ಬಂದ ಮೇಲೆ ರೈತರು ಬೆಳೆಯಲಿ ಬೆಳೆಯದಿರಲಿ' ಎಕರೆಗೆ ಇಷ್ಟು, ಎಂದು flat rate ನ್ನು ಹಾಕಿದರು. ಇದರಿಂದಾಗಿ, ಇವೊತ್ತಿನ ದಿವಸ ರೈತನಿಗೇ ಆದಾಯ ಬರಲಿ ಅಥವಾ ಇಲ್ಲದಿರಲಿ, ಅವನಿಗೆ ಸ್ಕೂಲುಗಳ, ಆಸ್ಪತ್ರೆಗಳ, ರಸ್ತೆಗಳ ಪ್ರಯೋಜನವಿರಲಿ, ಇಲ್ಲದಿರಲಿ, ಒಂದು ಗುಂಟೆ ಜಮೀನಿದ್ದರೆ ನಾಲ್ಕಾಣೆಯನ್ನು ಸರ್ಕಾರಕ್ಕೆ ಕೊಡಬೇಕಾಗಿ ಬಂದಿದೆ. ಅಂತೆಯೇ ನಾಲ್ಕು ಸಾವಿರ ರೂಪಾಯಿಗಳ ಉತ್ಪತ್ತಿ ಬೇರೆ ರೀತಿಯಲ್ಲಿ ಬಂದರೂ ಒಂದಾಣೆಯನ್ನು ಕೂಡ ಸರ್ಕಾರಕ್ಕೆ ಕೊಡದೆ ಎಲ್ಲ ಪ್ರಯೋಜನಗಳನ್ನೂ ಹೊಂದುವ ಅನೀತಿ ಕೂಡ ಈಗ ಇದೆ. ಇದು ಅನೀತಿ ಎಂಬುದನ್ನು ವಿರೋಧ ಪಕ್ಷದ ಮಾನ್ಯ ಸದಸ್ಯರೂ ಒಪ್ಪಿಕೊಳ್ಳಲೇಬೇಕು. ಅದನ್ನು ಬದಲಾವಣೆ ಮಾಡಬೇಕೆಂದು ಹೇಳಿ ಈಗ ಸರ್ಕಾರದವರು ಯಾವ ರೈತನಿಗೆ ಉತ್ಪತ್ತಿ ವಾಸ್ತವವಾಗಿ ಆಗುತ್ತದೋ ಅವನು ಮಾತ್ರ ತೆರಿಗೆ ಕೊಡಬೇಕೆಂಬುದನ್ನು ಸ್ಥಾಪನೆ ಮಾಡುವುದಕ್ಕೆ ಹೊರಟಿದ್ದಾರೆ. ಇದೇ ಮೊಟ್ಟಮೊದಲನೆಯ ಹಂತ. ಮಾನ್ಯ ಭೀಮಪ್ಪನಾಯಕರು ಸಂಕ್ಷೇಪವಾಗಿ ಈ ವಿಷಯವನ್ನು ಹೇಳಿದ್ದಾರೆ. ಇದು ವಾಸ್ತವಾಂಶ. ಮುಂದೆ ಅದು ಬರುತ್ತದೆ. ಒಂದು ಉತ್ಪತ್ತಿಯ ಮೇಲೆ ಎರಡು ತೆರದ, ನಾಲ್ಕು ತೆರದ ತೆರಿಗೆಗಳನ್ನು ಹಾಕುವುದು ಶಾಸನಕ್ಕೆ ವಿರೋಧ, ರಾಜ್ಯಾಂಗಕ್ಕೆ ವಿರೋಧವಾಗುತ್ತದೆಯೆಂಬ ಪರಿಸ್ಥಿತಿ ಬರುತ್ತದೆ. ಈಗ ಈ ಶಾಸನದಿಂದ ದೇಶದಲ್ಲಿ ಏನಾಗುತ್ತದೆಯೆಂಬುದನ್ನು ಎಲ್ಲ ಜನರೂ ತಿಳಿಯಬೇಕು. ಈಗಲೂ ಯಾರು 3,500, ರೂಪಾಯಿಗಳಿಗೆ ಮೇಲ್ಪಟ್ಟು ಸಂಪಾದನೆ ಮಾಡುತ್ತಾರೋ, ಅಂಥವರ ಕೂಗಿದೆಯೇ ವಿನಾ ಉತ್ಪನ್ನವಿಲ್ಲದವರಿಗೆ ಸಣ್ಣಪುಟ್ಟ ರೈತರಿಗೆ, ಬಡಬಗ್ಗರಿಗೆ ಇದು ತಗಲತಕ್ಕದ್ದಲ್ಲವೆಂಬುದು ಸರ್ವವಿದಿತವಾಗಿದೆ. ಹೀಗಿರುವಾಗ ರೈತರಿಗೆ ಕಷ್ಟವೆಂದರೇನು? ಸ್ವಲ್ಪ ಮಟ್ಟಿಗೆ ಕಷ್ಟವಿರಬಹುದು ನಿಜ. ಜಾರಿಗೆ ಕೊಡುವಾಗ ತೊಂದರೆಗಳೂ ಕಿರುಕುಳಗಳೂ ಆಗಬಹುದು. ಇನ್‌ಕಂಟ್ಯಾಕ್ಸ್ ಅಧಿಕಾರಿಗಳು ಬಂದರೆಂದರೇ ಜನರು ಗಡಗಡ ನಡುಗುತ್ತಾರೆಂದು ಸಿದ್ದಮ್ಮನವರು ಹೇಳಿದ್ದೂ ವಾಸ್ತವಾಂಶ. ಇಂಥ ಲೋಪದೋಷಗಳಿರುವುದರಿಂದ, ಇಂಥ ಕಿರುಕುಳಗಳು ಜನರಿಗೆ ಆಗುತ್ತಿರುವುದನ್ನು ನೋಡಿ ಈ ಶಾಸನ ಏನು ಮಾಡೀತೋ ಎಂದು ರೈತರು ಹೆದರುವುದು ವಾಸ್ತವ. ಇದು ಸರ್ಕಾರದವರಿಗೂ ಒಂದು ಸೂಚನೆ. ಈ ಸೂಚನೆಯನ್ನು ತೆಗೆದುಕೊಳ್ಳದಿದ್ದರೆ ಸರ್ಕಾರ ಎದ್ದು ಹೋಗುತ್ತದೆ. ಇದನ್ನು ಸರ್ಕಾರದದರು ಗಮನಿಸಬೇಕು.

ಶ್ರೀ ಎರ್. ಸಿದ್ದಪ್ಪ.—ಇಂಥ ಕಾನೂನು ತಂದರೇ ಎದ್ದು ಹೋಗುತ್ತದೆ!

ಶ್ರೀ ಎಚ್. ಎಂ. ಚನ್ನಬಸಪ್ಪ.—ತಮ್ಮಂಥ ಅರಿತವರು, ಮೂಲ ತತ್ವಗಳನ್ನು ಒಪ್ಪಿರುವವರು ಯಾವ ತೆರದಲ್ಲಿರಬೇಕೆಂಬುದನ್ನು ಅಪ್ಪಣೆ ಕೊಡಿಸಬೇಕು. ಈಗ ಮೈಸೂರು ಸರ್ಕಾರದವರು ಈ ಮಸೂದೆಯನ್ನು ಮಾಡುವುದರಿಂದ ಆಗತಕ್ಕ ಅನಾಹುತಗಳನ್ನು ನೋಡಿ, ಉಂಟಾಗಬಹುದಾದ ಕಿರುಕುಳಗಳನ್ನು ಅನ್ಯಾಯಗಳನ್ನು ಕಂಡು, ನಮ್ಮ ರೈತರಿಗೆ ಮಹತ್ತರವಾದ ತೊಂದರೆಯಾಗುತ್ತದೆಂಬ ಭಯ ಮಾನ್ಯ ಸದಸ್ಯರನ್ನು ಆವರಿಸಿಕೊಂಡಿದೆ. ಆದರೆ ಈ ಮಸೂದೆಯ ಪ್ರಕಾರ ಯಾರು ಶಕ್ತರಾಗಿದ್ದಾರೋ ಅವರು ಕಂದಾಯ ಕೊಡಬೇಕೆಂಬುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಆದ್ದರಿಂದ ಈ ಕಿರುಕುಳಗಳನ್ನು ಯಾವರೀತಿ ತೆಗೆಯಬೇಕೆಂಬ ವಿಷಯದ ಬಗ್ಗೆ ಸೆಲೆಕ್ಟ್ ಕಮಿಟಿಗೆ ಸೂಚನೆ ಕೊಟ್ಟು ಇಂಥಿಂಥ ಮಾರ್ಪಾಡುಗಳಾಗಬೇಕೆಂದು ತಿಳಿಸಿದರೆ, ಸೆಲೆಕ್ಟ್ ಕಮಿಟಿಯವರು ವಾಸ್ತವವಾಗಿಯೂ ಅದನ್ನು ನಿರಾಕರಣೆಮಾಡುವುದಿಲ್ಲ. ಏಕೆಂದರೆ, ಅವರು ಆ ರೀತಿ ನಿರಾಕರಣೆಮಾಡಿದ ಪಕ್ಷದಲ್ಲಿ ಅವರ ವರದಿಯನ್ನು ವಿರೋಧಮಾಡತಕ್ಕ ಹಕ್ಕು ಈ ಸಭೆಗಿದೆ. ಸರ್ಕಾರದವರ ಆಶಯವಾದರೂ ಅನಕ್ಷರಸ್ಥರಾದ ರೈತರಿಗೆ ಇಲ್ಲದ ಕಿರುಕುಳಗಳನ್ನು ಕೊಟ್ಟು ಅವರಿಗೆ ತೊಂದರೆಯನ್ನುಂಟುಮಾಡಬೇಕೆಂಬ ಅಭಿಪ್ರಾಯದಿಂದ ಕೂಡಿಲ್ಲವೆಂದು ನಾನು ಖಂಡಿತವಾಗಿ ಹೇಳುತ್ತೇನೆ. ಅದು ಸಾಧ್ಯವೂ ಇಲ್ಲ. ಏಕೆಂದರೆ, ಪ್ರಜೆಗಳಿಂದ ಚುನಾಯಿತರಾಗಿ ಬಂದು ಪ್ರಜೆಗಳಿಗೆ ಕಿರುಕುಳ ಕೊಡುವ ಶಾಸನವನ್ನು ಮಾಡುವುದಕ್ಕೆ ಈ ಪ್ರಜಾ

(ಶ್ರೀ ಎಚ್. ಎಂ. ಚನ್ನಬಸಪ್ಪ.)

ಪ್ರಭುತ್ವ ಯುಗದಲ್ಲಿ, ಪ್ರಜಾಪ್ರಭುತ್ವ ಸರ್ಕಾರಕ್ಕೆ ಎಂದಿಗೂ ಸಾಧ್ಯವಿಲ್ಲ. ಹಾಗೆ ಮಾಡಿದ ಪಕ್ಷದಲ್ಲಿ ಆ ಸರ್ಕಾರ ಅಧಿಕಾರವನ್ನು ಬಿಟ್ಟು ಹೋಗುವುದಕ್ಕೆ ಸಿದ್ಧವಾಗಿರಬೇಕಾಗುತ್ತದೆ. ಇವೊತ್ತಿನ ಪರಿಸ್ಥಿತಿಯಲ್ಲಿ ಯಾರಿಗೂ ಕಂದಾಯವನ್ನು ಕೊಡತಕ್ಕ ಶಕ್ತಿಯಿದೆಯೋ ಅಂಥವರು ಮಾತ್ರ ಕಂದಾಯ ಕೊಡುವ ಏರ್ಪಾಡನ್ನು ಮಾಡಿದರೆ ಇಡೀ ಜನತೆಯೇ ನಮ್ಮನ್ನು ಶ್ಲಾಘಿಸುತ್ತದೆ.

ನಿನ್ನೆಯ ದಿವಸವೇ, ನಾನು ಈ ಕಾನೂನಿನಿಂದಾಗ ತಕ್ಕ ಕಿರುಕುಳಗಳನ್ನು ಕಡಿಮೆಮಾಡಬೇಕೆಂದು ಹೇಳಿ ಸರ್ಕಾರದವರನ್ನು ಬಹಳ ವಿನಯದಿಂದ ಪ್ರಾರ್ಥನೆ ಮಾಡಿಕೊಂಡಿದ್ದೇನೆ. ಮತ್ತು ಮಾನ್ಯ ಸದಸ್ಯರೂ ಅನೇಕ ಸೂಚನೆಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಮುಖ್ಯವಾದುವು ಎರಡು ಮೂರು. ಯಾವ ಯಾವ ಖರ್ಚು ಬಾಬುಗಳನ್ನು ಅವನ ಉತ್ಪತ್ತಿಯಿಂದ ಕಳೆಯಬೇಕೆಂದು ಕಾನೂನಿನಲ್ಲಿ ವಿಧಾಯಕವಾಗಿದೆ. ಹಾಗೆಯೇ ಅವನ ಉತ್ಪತ್ತಿಯ ಭಾಗಗಳನ್ನೆಲ್ಲಾ ಬಹಳ ಉದಾರತೆಯಿಂದ ಹಾಕಿದ್ದಾರೆ. ಖರ್ಚು ಬಾಬುಗಳನ್ನು ಉತ್ಪತ್ತಿಯಲ್ಲಿ ಕಳೆದರೆ ಎಷ್ಟು ಉತ್ಪನ್ನವೆಂಬುದು ಗೊತ್ತಾಗುತ್ತದೆ. ಇದು 3,500 ರೂಪಾಯಿಗಳಿಗೆ ಮೇಲ್ಪಟ್ಟಿದ್ದರೆ ಮಾತ್ರ ಹಾಕುವುದರಿಂದ ಅಂಥವರು ಮೈಸೂರು ಸಂಸ್ಥಾನದಲ್ಲಿ ಬಹಳ ವಿರಳವೆಂದೇ ಹೇಳಬೇಕು.

ಈ ಮಸೂದೆಯಲ್ಲಿ ನ್ಯೂನಾತಿರಿಕ್ತಗಳೇನಿವೆಯೆಂಬುದನ್ನು ಅನೇಕರು ತಿಳಿಸಿದ್ದಾರೆ, ನಾನೂ ಸಹ ತಿಳಿಸಿದ್ದೇನೆ. ಸೆಲೆಕ್ಟ್ ಕಮಿಟಿಯವರು ಅವನ್ನು ಪರಿಶೀಲಿಸಿ ಸೂಕ್ತ ಮಾರ್ಪಾಡು ಮಾಡಬಹುದು.

Mr. SPEAKER.—The Hon'ble Member has already taken 20 minutes.

Sri H. M. CHANNABASAPPA.—Sir, I am touching on salient points only. Otherwise the country will go with the impression that the Congress Government is doing harm. Hon'ble Members on the Opposition have spoken in a misleading manner, and they are saying that the poor man is taxed. I can definitely say that the taxation in Mysore State is 6·5 per cent while in various other States the taxation is one and a half times more.

Sri J. MOHAMED IMAM.—May I know if the Hon'ble Member can refer me to any authorised book where this information could be found?

Sri H. M. CHANNABASAPPA.—I invite the Hon'ble Member's attention to the Finance Commission's Report which is just published. I thought Sri Imam had seen it.

Mr. SPEAKER.—Yes, the Hon'ble Member may make his suggestions now.

Sri H. M. CHANNABASAPPA.—Sir, as the Chair itself pointed out, since I am on the Select Committee, I do not like to go into details. I only wanted to disabuse the minds of the people from an impression which is sought to be created that the Congress Government is trying to tax people who are already over-taxed. A wrong impression is sought to be created about this Bill which is proposed with a laudab'e object of implementing the idea of socialistic pattern of society. We do not want to tax a man unless he has got an income. Today, we are taxing a man although he may not have an income. We want to meet out equity and justice to the poor raiyat.

ಶ್ರೀ ಬಸಪ್ಪನವರು ಈ ವಿಚಾರದಲ್ಲಿ ಒಂದು ಒಳ್ಳೆಯ ವಿಷಯವನ್ನು ಹೇಳಿದರು. 18 ಎಕರೆಯ ಮೇಲೆ ಅಥವಾ ಯಾವುದಾದರೂ ಒಂದು ನಿರ್ದಿಷ್ಟವಾದ ಏಕರೇಜ್ ಮೇಲೆ ಪಡೆದಿರುವವರು ಲೆಕ್ಕವಿಟ್ಟುಕೊಳ್ಳಬಹುದು ಎಂದು ಹೇಳಿದರು. ಇಟ್ಟುಕೊಳ್ಳದಿದ್ದರೆ ಒಂದು ಫ್ಲ್ಯಾಟ್ ರೇಟ್ ಪ್ರಕಾರ ಕಾಂಪೌಂಡ್ ಮಾಡಿಕೊಳ್ಳಬೇಕೆಂದು ಇದೆ. ಈಗ ಕೆಲವಕ್ಕೆ 54 ಎಕರೆ ಮ್ಯಾಗ್ಜಿಮಂ, ಕೆಲವಕ್ಕೆ 36 ಎಕರೆ ಮ್ಯಾಗ್ಜಿಮಂ ಇದೆ. ಇದನ್ನು ದ್ವಿಗುಣಮಾಡಿ ರೈತರಿಗೆ ಲೆಕ್ಕವಿಡುವುದನ್ನು ತಪ್ಪಿಸಿದರೆ ಬಹುಶಃ ಕಷ್ಟ ಬರುವುದಿಲ್ಲ. ಈ ತೆರಿಗೆ ವಿಧಿಸುವ ಮತ್ತು ವಸೂಲು ಮಾಡುವ ವಿಧಾನದಲ್ಲಿ ಮಾನ್ಯ ಸದಸ್ಯರು ಕೊಟ್ಟ ಎಲ್ಲ ಸಲಹೆಗಳನ್ನೂ ಸೆಲೆಕ್ಟ್ ಕಮಿಟಿಯವರು ಮನಸ್ಸಿನಲ್ಲಿಟ್ಟು ಜನರಿಗೆ ಯಾವ ವಿಧವಾದ ಕಿರುಕುಳವೂ ಆಗದ ರೀತಿಯಲ್ಲಿ ಇದನ್ನು ಪುನರಾಲೋಚನೆ ಮಾಡಿ ಈ ಸಭೆಯ ಮುಂದೆ ತಂದಪಕ್ಷದಲ್ಲಿ ವಾಸ್ತವವಾಗಿ ದೇಶದಲ್ಲಿ ಆಗುತ್ತಿರುವ ಅನ್ಯಾಯವನ್ನು ತಡೆಗಟ್ಟಿದಂತಾಗುತ್ತದೆ, ಉತ್ಪತ್ತಿ ಸಾಕಷ್ಟಿಲ್ಲದಿರುವ ಬಡವರನ್ನು ಅನ್ಯಾಯದಿಂದ ಪಾರುಮಾಡಿದಂತಾಗುತ್ತದೆ ಎಂದು ಅತ್ಯಂತ ವಿನಯದಿಂದ ನಿವೇದನೆ ಮಾಡಿಕೊಳ್ಳುತ್ತೇನೆ.

ಶ್ರೀ ಟಿ. ಹನುಮಯ್ಯ (ಹಿರಿಯೂರು—ಅನುಸೂಚಿತ ಜಾತಿಗಳು).—ಮಾನ್ಯ ಅಧ್ಯಕ್ಷರೇ, ಈ ಮಸೂದೆಯ ಸಾಧಕ ಬಾಧಕಗಳನ್ನು ಮಾತ್ರ ಹೇಳುತ್ತೇನೆ. ಸಾಮಾನ್ಯವಾಗಿ ಗ್ರಾಮಾಂತರಗಳಲ್ಲಿ ವಾಸಮಾಡುವ ರೈತರು ಕಂಟ್ರೋಲ್ ಹೋಯಿತು, ನಮ್ಮ ಸರ್ಕಾರ ಬಹಳ ಒಳ್ಳೆಯ ಕೆಲಸಮಾಡಿತು ಎಂದು ಬಹಳ ಸುಖವಾಗಿ ನಿದ್ರೆ ಮಾಡುತ್ತಿದ್ದರು. ಆದರೆ ಈ ವರಮಾನ ತೆರಿಗೆ ಹಾಕಿದ್ದಾರೆಂದು ಕೇಳಿದ ಕೂಡಲೆ ಜನರು ಗಾಬರಿಯಾಗಿ ಸಿಟಿಗಳಲ್ಲಿ ಯಾವ ಲಾಯರುಗಳನ್ನು ಗೊತ್ತು ಮಾಡಿಕೊಳ್ಳಬೇಕಾಗುತ್ತದೋ ಏನೋ ಎಂದು ಭಯಪಡುತ್ತಿದ್ದಾರೆ. ನಮ್ಮ ದೇಶ ಮಾದರಿ ದೇಶವಾಗಬೇಕೆಂದು ಅನೇಕರು ಹೇಳುತ್ತಿರುವಾಗ ನಮ್ಮ ಅದೃಷ್ಟವಶಾತ್ ಪಾಶ್ಚಾತ್ಯ ದೇಶಗಳಿಗೆ ಹೋಗಿ ಪರಿಣತರಾಗಿ ಬಂದಿರುವ ಡಾ॥ ನಾಗನಗೌಡರು ನಮ್ಮ ವ್ಯವಸಾಯ ಶಾಖೆಯ ಮಂತ್ರಿಗಳಾಗಿರುವಾಗ ವ್ಯವಸಾಯದ ಉತ್ಪನ್ನಗಳ ಮೇಲೆ ತೆರಿಗೆ ಹಾಕಿರುವುದನ್ನು ನೋಡಿದರೆ ಬಹಳ ವ್ಯಸನವಾಗುತ್ತದೆ. ಸರ್ಕಾರದವರು ನಡೆಸುವ ಬೊಬ್ಬೂರು ಫಾರಂನಿಂದ ಎಷ್ಟು ಆದಾಯ ಬರುತ್ತಿದೆಯೆಂದು ನೋಡಿದರೆ ಪ್ರತಿವರ್ಷವೂ ಕೂಡ ನಷ್ಟವಾಗುತ್ತಾ ಇದೆ. ಅಲ್ಲಿ ಪ್ರತಿಯೊಂದು ಕೆಲಸವನ್ನೂ ಕೂಡ ಕೂಲಿ ಮೂಲಕ ಮಾಡಿಸುತ್ತಿದ್ದಾರೆ. ಹಾಗಿರುವಾಗ, ಈ ದಿವಸ ವ್ಯವಸಾಯ ಮಾಡುವ ರೈತರು ಹೆಂಡತಿ ಮಕ್ಕಳ ಸಮೇತ ಜಮೀನಿಗೆ ಹೋಗಿ ಹಗಲೂ ರಾತ್ರಿ ದುಡಿದು ಹೊಟ್ಟೆ ಬಟ್ಟೆಗೆ ಸಾಲದೆ ಒದ್ದಾಡಿಕೊಂಡು ಕಷ್ಟಜೀವನದಿಂದ ಪಟ್ಟಣ

ವಾಸಗಳಲ್ಲಿರುವ ಜನರಿಗೆ ಆಹಾರಪದಾರ್ಥ ಮತ್ತು ಇತರ ವಸ್ತುಗಳನ್ನು ಒದಗಿಸುತ್ತಿರುವಾಗ ಅವರಿಗೆ ತೆರಿಗೆ ಹಾಕುವುದು ಯಾವ ನ್ಯಾಯ? ವ್ಯವಸಾಯ ಶಾಖೆಯ ಮಂತ್ರಿಗಳು ಪಾಶ್ಚಾತ್ಯ ದೇಶಗಳಲ್ಲಿ ಪ್ರವಾಸ ಮಾಡಿ ಅಲ್ಲಿ ಎಷ್ಟುಮಟ್ಟಿಗೆ ವ್ಯವಸಾಯ ನಡೆಯುತ್ತಿದೆ, ಜನರು ವ್ಯವಸಾಯದಲ್ಲಿ ಎಷ್ಟು ಮುಂದುವರೆದಿದ್ದಾರೆ ಎಂಬುದನ್ನು ಮನಗಂಡಿದ್ದಾರೆ. ನಮ್ಮ ದೇಶದಲ್ಲಿ ಎರಡು ಮೂರು ವರ್ಷಗಳಿಂದ ಆಹಾರ ಸಮಸ್ಯೆ ಸ್ವಲ್ಪ ಉತ್ತಮವಾಗಿದ್ದರೂ ಈ ದಿವಸ ರೈತರು ಯಾವ ಸ್ಥಿತಿಯಲ್ಲಿದ್ದಾರೆಂಬುದನ್ನು ಗಮನಿಸಬೇಕು. ಈಗ ಒಂದು ಮಣ ಬೆಲ್ಲದ ಬೆಲೆ 2 ರೂ. 8 ಆಣೆ ಆಗಿದೆ. ಒಂದೂವರೆ ವರ್ಷ ನೀರುಕಟ್ಟಿ, ಗೊಬ್ಬರ ಹಾಕಿ, ಆಲೆಮನೆ ಹಾಕಿ ಬೆಲ್ಲ ತಯಾರಿಸಿದರೆ ಅದರ ಖರ್ಚು ಸಹ ಗಿಟ್ಟುವುದಿಲ್ಲ. ವ್ಯವಸಾಯಗಾರನ ಪರಿಸ್ಥಿತಿ ಉತ್ತಮವಾಗಿಲ್ಲದಿರುವ ಈ ಸಮಯದಲ್ಲಿ ಯಾವಾಗಲೂ ಕೂಡ- ಸರ್ಕಾರದ ಬೆನ್ನುಮೂಳೆಯೆಂದು ಹೇಳುತ್ತಿರುವ ರೈತನ ಮೇಲೆ ಈ ತೆರಿಗೆಯನ್ನು ಹಾಕುವುದು ಸೂಕ್ತವಲ್ಲ. ನನಗೆ ತಿಳಿದ ಮಟ್ಟಿಗೆ ಎಚ್. ಎಸ್. ಫಾರಂ ಲೆಕ್ಕವನ್ನು ಹಿಂದೆ ಬರೆಯುತ್ತಿದ್ದಾಗ ರೈತ, ಶ್ಯಾನುಭೋಗರು ಮತ್ತು ಆಫೀಸರುಗಳ ಕಿರುಕುಳಕ್ಕೆ ಸಿಕ್ಕಿ ಬಹಳ ತೊಂದರೆಗೀಡಾಗಿದ್ದನು. ನಮ್ಮ ದೇಶದಲ್ಲಿ ಮುಕ್ಕಾಲುಭಾಗ ವ್ಯವಸಾಯಗಾರರಿದ್ದಾರೆ. ಅವರಲ್ಲಿ ವಿದ್ಯಾವಂತರು ಬಹಳ ಕಡಮೆಯಾಗಿರುವುದರಿಂದ ವ್ಯವಸಾಯಗಾರರಿಗೆ ಲೆಕ್ಕಪತ್ರವಿಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ಮಸೂದೆಯನ್ನು ಪುನರಾಲೋಚಿಸಿ ಸೂಕ್ತವಾದ ರೀತಿಯಲ್ಲಿ ತಿದ್ದುಪಡಿಮಾಡತಕ್ಕದ್ದು ಬಹಳ ಅಗತ್ಯ. ಏಕೆಂದರೆ ವ್ಯವಸಾಯದಿಂದಲೇ ನಮ್ಮ ದೇಶದಲ್ಲಿ ಅನೇಕರು ಜೀವನಮಾಡುತ್ತಿದ್ದಾರೆ. ಅವರು ನಿರಾಶರಾಗಿ ತೊಂದರೆಗೀಡಾಗಬಾರದು. ಹಿಂದೆ ಕಂಟ್ರೋಲಿದ್ದಾಗ ಐದು ಸೇರು ಕಾಳನ್ನು ತೆಗೆದುಕೊಂಡು ಹೋಗುವುದಕ್ಕೂ ಕೂಡ ಭಯಪಡುತ್ತಿದ್ದರು, ಸ್ವಲ್ಪ ತೆಗೆದುಕೊಂಡು ಹೋದರೂ ಜುಲ್ಮಾನೆ ತೆರಬೇಕಾಗುತ್ತಿತ್ತು. ಈ ದಿವಸ ವ್ಯವಸಾಯಗಾರರ ಮೇಲೆ ತೆರಿಗೆ ಹಾಕುತ್ತಾರೆಂದು ತಿಳಿದರೆ ದೊಡ್ಡ ರೈತರಾಗಲಿ ಅಥವಾ ಸಣ್ಣ ರೈತರಾಗಲಿ ಅನೇಕರು ವ್ಯವಸಾಯವನ್ನೇ ಮಾಡುವುದಿಲ್ಲ. ಒಂದೆರಡು ಎಕರೆಯಿರುವವರೂ ಕೂಡ ಕಬ್ಬು ಮುಂತಾದ ಒಳ್ಳೆ ಬೆಳೆಗಳನ್ನಿಡುತ್ತಾರೆ. ಈ ತೆರಿಗೆ ಹಾಕುವುದಾದರೆ ಖಂಡಿತ ಲೆಕ್ಕವಿಡುವುದಕ್ಕೂ ಬಹಳ ಕಷ್ಟವಾಗುತ್ತದೆ. ಈ ರೀತಿ ಗ್ರಾಮಾಂತರಗಳಲ್ಲಿ ತೆರಿಗೆ ಹಾಕಿ 20 ಲಕ್ಷ ರೂಪಾಯಿಗಳ ಆದಾಯವನ್ನು ಪಡೆಯುವುದಕ್ಕೆ ಬದಲಾಗಿ ಹಿಂದೆ ನಾನು ಅನೇಕ ವೇಳೆ ಹೇಳಿದಂತೆ ಬುದ್ಧಿವಂತ ಜನಾಂಗವೇನಿದೆಯೋ ಅವರ ಮೇಲೆ ತೆರಿಗೆ ಹಾಕಿ ಈ ಹಣವನ್ನು ಗಳಿಸಬಹುದು. ಉದಾಹರಣೆಗೆ ಹೋಟಲುಗಳು ಬೇಕಾದಷ್ಟಿವೆ. ಬೆಂಗಳೂರು ಸಿಟಿಯಲ್ಲಿರುವ ಹೋಟಲುಗಳನ್ನು ಹರಾಜು ಮಾಡಿದರೆ ಸಾಧಾರಣವಾಗಿ ಹತ್ತು ಲಕ್ಷ ರೂಪಾಯಿ ವಸೂಲಾಗುತ್ತದೆ. ರೈಲ್ವೆ ಸ್ಟೇಷನ್, ಕಚೇರಿಗಳು, ಶಾಸನ ಸಭೆ ನಡೆಯುವ ಸ್ಥಳ ಮುಂತಾದ ಕಡೆಗಳಲ್ಲಿರುವ ಹೋಟಲುಗಳನ್ನು ಹರಾಜು ಹಾಕಿದರೆ ಬೇಕಾದಷ್ಟು ಹಣ ವಸೂಲಾಗುತ್ತದೆ. ಹೀಗೆ ಬುದ್ಧಿವಂತರು ಯಾರಿರುತ್ತಾರೋ ಅವರ ತಲೆಯ ಮೇಲೆ ತೆರಿಗೆ ಹೆಚ್ಚಾಗಿ ಹಾಕದೆ ಹಳ್ಳಿಗಾಡುಗಳಲ್ಲಿ ಕಷ್ಟಪಟ್ಟು ಹಗಲೂ ರಾತ್ರಿ ಚೆನ್ನಾಗಿ ದುಡಿದು ಪ್ರಜೆಗಳಿಗೆ ಆಹಾರಪದಾರ್ಥಗಳನ್ನು ಒದಗಿಸುತ್ತಿರುವವರ ಮೇಲೆ ಸರ್ಕಾರ ಇಂಥ ಹೊರೆ ಹೊರಿಸುವುದು ನ್ಯಾಯವಲ್ಲ. ಆದ್ದರಿಂದ ಮಾನ್ಯ ವ್ಯವಸಾಯ ಮಂತ್ರಿಗಳು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಪುನರಾಲೋಚನೆ ಮಾಡಿ ಈ ಮಸೂದೆಯನ್ನು ತಿದ್ದುಪಡಿಮಾಡಿ ರೈತರಿಗೆ ತೊಂದರೆಯಿಲ್ಲದಿರುವ ಹಾಗೆ ಮಾಡಿದರೆ ಸರ್ಕಾರವನ್ನು ಖಂಡಿತ ಹೊಗಳುತ್ತಾರೆ. ಕಂಟ್ರೋಲ್ ತೆಗೆದಮೇಲೆ ಸಮೃದ್ಧಿಯಾಗಿ ಬೆಳೆಯಾಗಿದ್ದರೂ ದರಗಳು ಕಡಮೆಯಾಗಿ ತೊಂದರೆಯಾಗಿದೆ. ಈ ತೆರಿಗೆ ಹಾಕಿದರೆ ದೇಶದಲ್ಲಿರುವ ವ್ಯವಸಾಯಗಾರರಿಗೆ ಧಕ್ಕೆ ಬರುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು ಪುನರಾಲೋಚನೆ ಮಾಡಿ ರೈತರಿಗೆ ತೊಂದರೆಯಾಗದಂತೆ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

*ಶ್ರೀ ಬಿ ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಈ ಬಿಲ್ಲಿನ ವಿಚಾರದಲ್ಲಿ ಅನೇಕರು ಮಾತನಾಡಿದ್ದಾರೆ. ನಾನು ಮಾತನಾಡಬೇಕಾದ ಆವಶ್ಯಕತೆಯಿಲ್ಲ ಎಂದಿದ್ದೆ. ಆದರೆ ಶ್ರೀ ಚೆನ್ನಬಸಪ್ಪನವರು ಸಮತಾವಾದದ ಸೋಗಿನಲ್ಲಿ ಸದಸ್ಯರ ಮನಸ್ಸಿನ ಸೈಕಾಲಜಿಯನ್ನು ಬದಲಾಯಿಸೋಣವೆಂದು ಹೊರಟಿದ್ದನ್ನು ನೋಡಿ ಒಂದೆರಡು ಮಾತು ಹೇಳಬೇಕಾಯಿತು. ಹುಲಿಯ ಚರ್ಮ ಹೊದ್ದಿರುವ ನರಿಯನ್ನು ನೋಡಿ ಮೋಸ ಹೋಗಬಾರದೆಂದು ಎಚ್ಚರಿಕೆ ಕೊಡಬೇಕಾಗಿದೆ. ಸಮತಾವಾದದ ತತ್ವ ನಮಗೂ ಗೊತ್ತಿದೆ. ನಾವೂ ಅದನ್ನು ಆಚರಿಸಲು ಪ್ರಯತ್ನ ಮಾಡುತ್ತಿದ್ದೇವೆ. ಈ ಬಿಲ್ಲಿನಲ್ಲಿ ಅವರು ಯಾವುದಾದರೂ ಒಂದು ಕಾಲಂನಲ್ಲಾದರೂ ಸಮತಾವಾದದ ತತ್ವವನ್ನು ತೋರಿಸಬಲ್ಲರೆ? ನಾನು ಛಾಲೆಂಜ್ ಮಾಡುತ್ತೇನೆ. ಈಗಿರುವ ಭೂ ಕಂದಾಯ ಪದ್ಧತಿ ಸರಿಯಾಗಿಲ್ಲ; ಸುಮ್ಮನೆ ಜನರ ಮೇಲೆ ಆರ್ಬಿಟ್ರರಿಯಾಗಿ ಕಂದಾಯ ಹೊರಿಸಿರುವುದು ಸರಿಯಲ್ಲ ಎಂದು ನಾವು ಮೊದಲಿಂದಲೂ ಹೇಳುತ್ತಿದ್ದೇವೆ. ಈಗ ಕೋಲಾರದಲ್ಲಿ ಎಕರೆಗೆ 3 ರೂಪಾಯಿ ಇನ್ನೊಂದು ಕಡೆ 4 ಆಣೆ ಒಂದು ಕಡೆ ಇರುವುದು ಸರಿಯಿಲ್ಲ. ನಮ್ಮ ದೇಶದಲ್ಲಿ ಸರಾಸರಿ 3 ಎಕರೆಯುಳ್ಳವರು ಸುಮಾರು 5 ಲಕ್ಷ ಜನರಿದ್ದಾರೆ. ಅಂಥವರಿಗೆ ಬೆಳೆ ಸರಿಯಾಗಿ ಆಗದೆ ಕಂದಾಯ ಕೊಡಲು ಸಹ ಶಕ್ತಿಯಿಲ್ಲ. ಅಂಥವರಿಗೆ ಸಾಧ್ಯವಾದಮಟ್ಟಿಗೆ ತೆರಿಗೆ ಹೊರೆ ತಪ್ಪಿಸಬೇಕೆಂದು ಅನೇಕ ವರ್ಷಗಳಿಂದ ಕೇಳುತ್ತಿದ್ದೇವೆ. ಈ ದಿವಸದವರೆಗೂ ಕಾಂಗ್ರೆಸ್ ತತ್ವ ಕೂಡ ಇದೇ ಎಂದು ನಾನು ಭಾವಿಸಿದ್ದೆ. ಆದರೆ ಈಗ ತಂದಿರುವ ಕಾನೂನನ್ನು ನೋಡಿದರೆ ಆ ಭಾವನೆ ಮಾಯವಾಗಲು ಅವಕಾಶವಾಗಿದೆ. ಈ ಮಸೂದೆ ಸಮತಾವಾದಕ್ಕನುಗುಣವಾಗಿದೆಯೆಂದು ಮುಖ್ಯ ಮಂತ್ರಿಗಳು ಹೇಳಿದರು. ಈಗ ಕೆಲವು ಹಣಕಾಸಿನ ಬೆಳೆಗಳೆಂದು ವಿಂಗಡಿಸಿದ್ದಾರೆ; ಆದರೆ ಯಾವ ಆಧಾರದಮೇಲೆ ವಿಂಗಡಿಸಿದರೆಂದು ಕೇಳಬೇಕಾಗಿದೆ. ರಾಗಿ ಬತ್ತ ಮುಂತಾದುವುಗಳಂತೆ ಮೆಣಸಿನಕಾಯಿ, ಈರುಳ್ಳಿ ಮುಂತಾದುವೂ ಸಹ ಆಹಾರ ಪದಾರ್ಥಗಳಲ್ಲವೆ? ಅನೇಕರು ಶ್ರೀರಂಗಪಟ್ಟಣದ ಹತ್ತಿರ 400-500 ಎಕರೆ ಗದ್ದೆ ಪಡೆದಿದ್ದಾರೆ. 5 ಸಾವಿರಪಲ್ಲ ಬತ್ತ ಬರುವವರಿದ್ದಾರೆ. ಅವರ ವಿಚಾರದಲ್ಲಿ ಸರ್ಕಾರ ಯಾವ ಕಾನೂನನ್ನೂ ಮಾಡಿಲ್ಲ. ಅವರಿಗೆ ಒಂದು ಲಕ್ಷ ರೂಪಾಯಿ ವರಮಾನ ಬರುತ್ತದೆ. ಅವರನ್ನು ಬಿಟ್ಟು 6 ಎಕರೆ ತೆಂಗು, 18 ಎಕರೆ ಕಾಫಿ ಬೆಳೆಯುವವರ ಮೇಲೆ ಮಾತ್ರ ಈ ತೆರಿಗೆ ಹಾಕಿದ್ದಾರೆ. ಹೀಗೆ ವ್ಯತ್ಯಾಸ, ಡಿಸ್ಕ್ರಿಮಿನೇಷನ್ ಮಾಡಬಾರದು. ಸಮತಾವಾದ ತತ್ವವನ್ನು ನಿಜವಾಗಿ ತಿಳಿದುಕೊಂಡಿರುವುದಾದರೆ ಮನುಷ್ಯನ ಆರ್ಥಿಕಸ್ಥಿತಿ ಉತ್ತಮವಾಗುವುದಕ್ಕೆ, ಯಾವ ಮನುಷ್ಯನೇ ಆಗಲಿ ತನ್ನ ಜೀವನ ನಡೆಸಿಕೊಳ್ಳುವುದಕ್ಕೆ, ತನ್ನ ಸ್ಥಿತಿಗತಿ ಮೇಲ್ಪಡಿಸಿಕೊಳ್ಳುವುದಕ್ಕೆ ಅವಕಾಶವಿರಬೇಕು. ದೇಶಕ್ಕೆ ಸಾಕಾದಷ್ಟು ಅನ್ನ, ಬಟ್ಟೆ, ವಸತಿ ಒದಗಿಸಬೇಕು. ಇದೆ

(ಶ್ರೀ ಬಿ. ಹುಚ್ಚೇಗೌಡ.)

ಕ್ಕೆಲ್ಲಾ ಪ್ರತಿಯೊಬ್ಬರಿಗೂ ಅವಕಾಶ ಮಾಡುವುದು ಸಮತಾವಾದ ಎಂದು ನಾನು ತಿಳಿದುಕೊಂಡಿದ್ದೇನೆ.

7-30 P.M.

ಈ ರೀತಿ ಒಬ್ಬ ಒಂದು ಬೆಳೆ ಬೆಳೆದು ಲಕ್ಷಾಧೀಶ್ವರ ನಾದರೆ ಅವನನ್ನು ಮಾತನಾಡಿಸಕೂಡದು, ಅದೆ ಇನ್ನೊಬ್ಬ $3\frac{1}{2}$ ಸಾವಿರ ರೂಪಾಯಿ ಮಾತ್ರ ತೆಗೆದು ಕೊಂಡರೂ ಕೂಡ ಅವನಿಗೆ ತೆರಿಗೆ ಹಾಕಬೇಕು ಎನ್ನುವುದು ಇದು ಒಂದು ಹೊಸ novelty. ಇದನ್ನು ಹೊಸದಾಗಿ ಕಲಿಸುವುದಕ್ಕೆ ಪ್ರಯತ್ನಮಾಡುತ್ತ ಇದ್ದೀರಿ. ಇನ್ನೊಂದು ವಿಷಯ ಏನೆಂದರೆ, ನಮ್ಮ ದೇಶ ದಲ್ಲಿ ಜನಗಳ ಸ್ಥಿತಿ ಎಷ್ಟುಮಟ್ಟಿಗೆ ಇದೆ ಎಂಬುದನ್ನು ಪ್ರತಿಯೊಬ್ಬರೂ ಹೇಳಿದರು. ಆಹಾರ ಪದಾರ್ಥ ಮನುಷ್ಯನಿಗೆ ಬೇಕು. ಮೊನ್ನೆ ಒಂದು ಸಾರಿ ರೈತನ ವಿಚಾರ ಹೇಳಿದ್ದಕ್ಕೆ ಸಭೆಯಲ್ಲಿ ಅನೇಕರು ನಕ್ಕರು. ಅವನು ಅನುಕೂಲವಾಗಿದ್ದಾನೆ ಎಂದು ಅವರ ಭಾವನೆ ಇರಬಹುದು. ಅನುಕೂಲವಾಗಿರುವವರೂ ಇರ ಇರಬಹುದು. ಅನಾನುಕೂಲ ಇರುವವರೂ ಇರ ಬಹುದು. ಒಂದು ವೇಳೆ ಇವರಿಗೆ ವಿನಾಯಿತಿ ಕೊಡುವುದಾದರೆ ಎಲ್ಲರಿಗೂ ವಿನಾಯಿತಿಕೊಡ ಬೇಕಾದದ್ದು ನ್ಯಾಯ, ಇದು ಸಮತಾವಾದ ತತ್ವಕ್ಕೆ ಅನುಗುಣವಾಗಿರುತ್ತದೆ ಎಂದು ಹೇಳುತ್ತಾರೆ. ಸರ್ಕಾರದವರಿಗೆ ದುಡ್ಡುಬರಬೇಕು ಅದಕ್ಕೆ ಕಂದಾಯ ಹಾಕುತ್ತಾರೆ. ಹಾಕಲಿ, ಇದನ್ನು ಮೆರಿಟ್ ಮೇಲೆ ಮಾತನಾಡೋಣ. ಅದನ್ನು ಬಿಟ್ಟು ಸಮಾಜ ವಾದಕ್ಕೆ ಸರಿಯಾಗಿದೆ ಹಾಗೆ ಹೀಗೆ ಎನ್ನುವುದು ಅಭಾಸವಾಗುತ್ತಿದೆ. ಈ ರೀತಿ ದುರಭಿಪ್ರಾಯಗಳನ್ನು ಜನಗಳಲ್ಲಿ ಮೂಡಿಸಬಾರದು. ಇನ್ನು ಕೆಲವು ಕಾರಣ ಗಳನ್ನು ಹೇಳಿದರು. ಸರ್ಕಾರದವರು ಕಂದಾಯ ಹಾಕಬೇಕೆಂದರೆ ನಮ್ಮ ಆಕ್ಷೇಪಣೆ ಇಲ್ಲ. ಒಪ್ಪಿಕೊಳ್ಳು ತ್ತೇನೆ. ಆದರೆ ಆ ರೀತಿ ವಸೂಲು ಮಾಡಿಕೊಂಡ ಹಣ ಸರಿಯಾಗಿ ವಿನಿಯೋಗವಾಗುತ್ತಿದೆಯೇ ಇಲ್ಲವೇ ಎಂಬುದು ಅನೇಕ ಮಾನ್ಯ ಸದಸ್ಯರಲ್ಲಿ ಬಂದಿರತಕ್ಕ ಸಂದೇಹ. ಉದಾಹರಣೆಗೆ ಎಜುಕೇಷನ್ ಸೆಸ್ ಹಾಕಿದರು. ನಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಒಂದು ಪ್ರೈಮರಿ ಸ್ಕೂಲು ಕೂಡ ಹೊಸದಾಗಿ ಆಗಿಲ್ಲ ಏನು ಮಾಡುವುದು? ಅದೇ ರೀತಿ ಹೆಲ್ತ್ ಸೆಸ್ ಹಾಕಿದರು. ನಾಲ್ಕೈದು ಮೈಲಿ ದೂರದಲ್ಲಿ ಒಂದು ಆಸ್ಪತ್ರೆಗೆ ಗತಿಇಲ್ಲದಿದ್ದರೆ ಏಕೆ ಕೊಡಬೇಕು ! ವಿಧಿಯಿಲ್ಲದೆ ಕೊಡುತ್ತಾ ಇದ್ದೇವೆ. 1913ರಲ್ಲಿ ಎಜ್ಯುಕೇಷನ್ ಸೆಸ್ ಹಾಕಿದರು, ಇವೊತ್ತು ಕೂಡ ಆ ಆರ್ಡರ್‌ನಲ್ಲಿ ಇದೆ. ಹಾಕುವಾಗ ಇದ್ದಂಥ ಉದ್ದೇಶ ಪ್ರಾಥಮಿಕ ಶಾಲೆಗಳನ್ನು ತೆಗೆಯುವುದು ಮತ್ತು ನಿರ್ಬಂಧವಾಗಿ, ವಿದ್ಯಾಭ್ಯಾಸವನ್ನು ಮುಫ ತ್ತಾಗಿಕೊಡುವುದನ್ನು ಜಾರಿಗೆ ತರುವುದು ಎಂದು ಹೇಳಿ ಅದಕ್ಕೋಸ್ಕರವೇ ಆ ಹಣ earmark ಮಾಡಿ ತೆಗೆದು ಕೊಂಡರು. ನಮ್ಮ ಏಳಿಗೆಗಾಗಿ ಇವೊತ್ತು ಒಂದು ರೂಪಾಯಿ ಸಂಪಾದಿಸಿದರೆ ನಾಳೆ ಎರಡು ರೂಪಾಯಿ ಸಂಪಾದಿಸುವ ಶಕ್ತಿ ಬರಬಹುದು ಎಂಬ ಭರವಸೆಯ ಮೇಲೆ ಜನಗಳು ಈ ಸೆಸ್ಸನ್ನು ಕೊಡುತ್ತಾ ಬಂದಿ ದ್ದಾರೆ. ಜನರ ಏಳಿಗೆಯೇ ಆಗದೆ, ಅವರ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳದಿದ್ದರೆ ತಾವು ವಿಧಿಸತಕ್ಕ ತೆರಿಗೆಗಳನ್ನು ಕೊಡಲು ಅವರು ಶಕ್ತರಾಗುವುದಿಲ್ಲ. ಹೀಗಾದರೆ ಏನು ಪ್ರಯೋಜನ ! ಇದೇ ರೀತಿ ಮಾನ ನಿರೋಧವಾಡುತ್ತೇವೆ ಎಂದು ಹೇಳಿ ಸೇಲ್ಸ್‌ಟ್ಯಾಕ್ಸ್ ಹಾಕಿದಿರಿ. ಆದರೆ ಕುಡಿಯುವುದು ಮಾತ್ರ ತಪ್ಪಲಿಲ್ಲ. ಹೀಗಾಗಿ ಸರ್ಕಾರದವರು ಯಾವ ಒಂದು ಉದ್ದೇಶ ಇಟ್ಟುಕೊಂಡು ಹೊರಡುತ್ತೀರೋ ಆ ಉದ್ದೇಶ ಖಂಡಿತ ವಾಗಿಯೂ ನೆರವೇರಿಲ್ಲ. ಆದ್ದರಿಂದ ತಮ್ಮ ಉದ್ದೇಶ ಕಾರ್ಯಗತಮಾಡಿಯೇ ಮಾಡುತ್ತೇವೆ ಎಂಬುದನ್ನು ಸ್ಪಷ್ಟಪಡಿಸಬೇಕು. ಬೇಕಾದರೆ ಇನ್ನೂ ಹೆಚ್ಚುಕಂದಾಯ ಹಾಕಿ. ಆದರೆ ಆ ರೀತಿ ತೆಗೆದುಕೊಂಡ ಹಣವನ್ನು ಪಾತ್ರ ಸಾರ್ಥಕಮಾಡಬೇಕು. ಈಗ ತಾವೇನೋ ಜನಗಳ ಮೇಲೆ ತೆರಿಗೆ ಹಾಕಿ ಅವರಿಂದ ವಸೂಲುಮಾಡಿಕೊ ಳ್ಳುತ್ತಾ ಇದ್ದೀರೋ, ಇಂಥ ಅನೇಕ ತೆರಿಗೆಗಳು ನಮ್ಮ ದೇಶಕ್ಕೆ ಬರದೇ ಕೇಂದ್ರ ಸರ್ಕಾರಕ್ಕೆ ಹೊರಟುಹೋ ಗುತ್ತಿವೆ. ಅವರಿಂದ ಎಷ್ಟುಮಟ್ಟಿಗೆ ಬರಮಾಡಿ ಕೊಂಡಾರು ? ಇನ್ನೊಂದು ವಾದ ಇದೆ, ಸ್ವಾಮಿ, ಕೋಟಿ ಗಟ್ಟಲೆ ರೂಪಾಯಿ ಸಂಪಾದನೆ ಮಾಡುವ ವರನ್ನು ತಾವು ಮಾತನಾಡಿಸುವುದೇ ಇಲ್ಲ. ಈ ರೀತಿ ಬಡಪಾಯಿಗಳ ಮೇಲೆ ತೆರಿಗೆ ಹಾಕುವುದರಿಂದ ಏನು ಪ್ರಯೋಜನ ? 1948 ರಿಂದ ಇಲ್ಲಿಯವರೆಗೂ ಎರಡು ಮೂರು ತೆರಿಗೆ ಮಸೂದೆಗಳನ್ನು ತಂದು ಅಂಗೀಕಾರ ಪಡೆದಿದ್ದೀರಿ. ಮಂತ್ರಿಗಳು ಹೇಳಿದಹಾಗೆ ಅವರು ಬಂದ ಮೇಲೆ $3\frac{1}{2}$ ಕೋಟಿ ರೂಪಾಯಿಗಳ ತೆರಿಗೆ ಹೆಚ್ಚಾಗಿ ಬರುವುದನ್ನು ಒಪ್ಪಿದ್ದೇವೆ. ಇದನ್ನೆಲ್ಲಾ ತಿಳಿದೂ ಕೂಡ ತೆರಿಗೆ ಕೊಡುವುದಕ್ಕೆ ವಿರುದ್ಧವಾಗಿದ್ದೇವೆಂದು ನಮ್ಮ ಮೇಲೆ ಅಪಾದನೆ ಮಾಡಿದರೆ ಖಂಡಿತದಾಗಿಯೂ ಅದು ತಪ್ಪಾಗುತ್ತದೆ. ಈ ತರಹ ಮಾಡಿ ಸಮತಾ ವಾದ ಜಾರಿಗೆ ತರುತ್ತೇವೆ ಎಂದು ಹೇಳಿದರೆ ಅದು ಶುದ್ಧ ಅಭಾಸ. ಅದರಲ್ಲಿ ಒಂದು ಎಳ್ಳಷ್ಟು ಕೂಡ ತಿರು ಳಿಲ್ಲ. ಈಗ ಸರ್ಕಾರದಲ್ಲಿ ಖರ್ಚಾಗುತ್ತಿರುವುದೇನಾ ದರೂ ಕಡಮೆಯಾಗಿದೆಯೇ ಎಂದರೆ ಇಲ್ಲ. ಖರ್ಚಾಗು ವಷ್ಟು ಆಗುತ್ತಲೇ ಇದೆ. ಬಡಪಾಯಿ ನೌಕರರಾದ ಪೋಲೀಸು ಕಾನ್‌ಸ್ಟೇಬಲ್‌ಗಳಿಗೆ ಒಂದು 5 ರೂಪಾಯಿ ಸಂಬಳ ಜಾಸ್ತಿ ಮಾಡಿ ಎಂದರೆ ಅದಕ್ಕೆ ದುಡ್ಡಿಲ್ಲ ಎನ್ನು ತ್ತೀರಿ. ಅದೇ 500, 600 ರೂಪಾಯಿಗಳನ್ನು ತೆಗೆದು ಕೊಳ್ಳತಕ್ಕ ಅಧಿಕಾರಿಗಳ ಹುದ್ದೆಯನ್ನು ಬೇಕಾದರೆ ಎಷ್ಟಾದರೂ ಸೃಷ್ಟಿಮಾಡುತ್ತೀರಿ. ಅವರಿಗೆ ಎಷ್ಟು ಬೇಕಾದರೂ ಸಂಬಳ ಜಾಸ್ತಿಮಾಡುತ್ತೀರಿ.

ಶ್ರೀ ಕೆ. ಹನುಮಂತಯ್ಯ.—ಎಲ್ಲಿ ಮಾಡಿದ್ದೇವೆ !

ಶ್ರೀ ಬಿ. ಹುಚ್ಚೇಗೌಡ.—ಎ.ಎಸ್.ಪಿ., ಡಿ.ಎಸ್.ಪಿ., ಡಿ. ಐ. ಜಿ. ಮತ್ತು ಐ. ಜಿ. ಇವರುಗಳಿಗೆಲ್ಲಾ ಮೊದಲು ಎಷ್ಟು ಸಂಬಳ ಇತ್ತು ? ಇವತ್ತು ಎಷ್ಟಿದೆ! ದೊಡ್ಡವರಿಗೆ ಜಾಸ್ತಿಮಾಡಿದ ಪ್ರಪೋರ್ಷನ್ನಿನಲ್ಲೇ ಬಡ ನೌಕರರಿಗೂ ಜಾಸ್ತಿ ಮಾಡಿದ್ದೇವೆ ಎಂದು ಎದೆ ಮುಟ್ಟಿ ಕೊಂಡು ಹೇಳಿ, ಒಪ್ಪಿಕೊಳ್ಳುತ್ತೇನೆ. ಪಬ್ಲಿಕ್‌ಸರ್ವಿಸ್ ಕಮಿಷನರಿಗೆ ಎಷ್ಟು ಸಂಬಳ ಕೊಡುತ್ತಾ ಇದ್ದೀರಿ ! ಒಬ್ಬ ಅತ್ಯಂತ ದೊಡ್ಡ ಅಧಿಕಾರಿಗೂ ಒಬ್ಬ ಕೆಳಮಟ್ಟದ ನೌಕರನಿಗೂ ಎಷ್ಟೆಷ್ಟು ಸಂಬಳ ಕೊಡುತ್ತಾ ಇದ್ದೀರಿ ! ಅವರವರಿಗೆ ಇರತಕ್ಕ ವ್ಯತ್ಯಾಸ ಏನು ಎಂಬುದನ್ನು ಹೋಲಿಸಿ ನೋಡಿ. ಇದರಲ್ಲಿ ಸಮಾಜವಾದ ಬರುವು ದಿಲ್ಲವೇ ! ಕಡಿಮೆ ಕೊಡುವುದೂ ಹೆಚ್ಚು ಕೊಡುವುದೂ ಪ್ರಶ್ನೆ ಅಲ್ಲ.

Sri K. HANUMANTHAIYA.—The Madras High Court Judge is paid Rs. 4,000. The Mysore High Court Judge is paid Rs.2,000. In the case of the Public Service Commission also the pay is like that.

ಶ್ರೀ ಬಿ. ಹುಚ್ಚೇಗೌಡ.—ಅಷ್ಟರಿಂದಲೇ justify ಮಾಡಿಕೊಳ್ಳಬಹುದು ಅಷ್ಟೆ. ಸಮಾಜವಾದದ ಮೇಲೆ justify ಮಾಡಿಕೊಳ್ಳುವುದಕ್ಕೆ ಹೋದರೆ ಅದನ್ನು ಒಪ್ಪುವುದಿಲ್ಲ. ಒಟ್ಟಿನಲ್ಲಿ ನಿಮಗೆ ದುಡ್ಡು ಬೇಕು,

ತೆರಿಗೆ ಹಾಕುತ್ತೀರಿ, ವಸೂಲು ಮಾಡುತ್ತೀರಿ. ಅದು ಮುಖ್ಯ. ಒಬ್ಬ ಇಂಡಸ್ಟ್ರಿಯಲಿಸ್ಟ್ 1½ ಕೋಟಿ ರೂಪಾಯಿಗಳಿಗೆ ಮೇಲ್ಪಟ್ಟು ಸಂಪಾದನೆಮಾಡಬಹುದು. ಒಬ್ಬ ಅಧಿಕಾರಿ 25ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಸಂಬಳ ತೆಗೆದುಕೊಳ್ಳಬಹುದು. ಅವರನ್ನು ಮಾತನಾಡಿಸುವುದಿಲ್ಲ. ರೈತರಿಗೆ ಮಾತ್ರ ಏಕೆ ಇದನ್ನು ಅನ್ವಯಿಸುತ್ತೀರಿ? ನಾವು ಹೇಳುವುದು ಇಷ್ಟೆ. ಸರ್ವರನ್ನೂ ಸಮಭಾವನೆಯಿಂದ ನೋಡಬೇಕು.

ಈಗ ಅಡಿಕೆ ತೆಗೆದುಕೊಳ್ಳೋಣ. ಅದನ್ನು ಕಮರ್ಷಿಯಲ್ ಕ್ರಾಪ್ ಎಂದು ಹಾಕಿದ್ದೀರಿ. ನಮ್ಮ ಇಂಡಿಯಾದೇಶಕ್ಕೆ 31 ಲಕ್ಷ ಟನ್ ಅಡಿಕೆ ಬೇಕು. ನಾವು 20 ಲಕ್ಷ ಟನ್ ಬೆಳೆಯುತ್ತೇವೆ. 11 ಲಕ್ಷ ಟನ್ನನ್ನು ಹೊರಗಡೆಯಿಂದ ತರಿಸುತ್ತೇವೆ. ಸರ್ಕಾರದವರು ನಿಜವಾಗಿಯೂ ದೇಶದ ಹಿತದೃಷ್ಟಿಯಿಂದ ಮತ್ತು ರೈತರ ಹಿತದೃಷ್ಟಿಯಿಂದ ಎಷ್ಟು ಬೇಕಾದರೂ ದುಡ್ಡು ಕೊಟ್ಟು ಹೊರಗಿನಿಂದ ಆಮದಾಗುವುದನ್ನು ನಿಲ್ಲಿಸಬೇಕಾದದ್ದು ಸರ್ಕಾರದವರ ಕರ್ತವ್ಯ.

ಇದೇ ರೀತಿ ಈ ಹೊತ್ತು ಸೌತ್ ಕೆನರಾ ಮತ್ತು ಸಿಂಹಳ ದ್ವೀಪದಿಂದ ತೆಂಗಿನಕಾಯಿ ಮತ್ತು ಕೊಬ್ಬರಿ ತರಿಸುತ್ತಿದ್ದೇವೆ. ಸುಮಾರು ವರ್ಷಂಪ್ರತಿ 2 ಲಕ್ಷ ಟನ್ ವರೆಗೂ ಆಮದು ಮಾಡಿಕೊಳ್ಳುತ್ತಿದ್ದೇವೆ.

Mr. SPEAKER.—But the Central Government and the Mysore Government are also taking interest and effective measures to increase production in all directions.

ಶ್ರೀ ಬಿ. ಹುಚ್ಚೇಗೌಡ.—ಅದನ್ನೇ ನಾನೂ ಹೇಳುತ್ತಿರುವುದು. ಮದ್ರಾಸಿನಲ್ಲಿ, ನೋಡಿ, ಅವರು ಎಷ್ಟರ ಮಟ್ಟಿಗೆ ಪ್ರೋತ್ಸಾಹ ಕೊಡುತ್ತಿದ್ದಾರೆ! ಆದರೆ ನಮ್ಮ ಮೈಸೂರಿನಲ್ಲಿ ಅಂಥ ಪ್ರೋತ್ಸಾಹಗಳೇನೂ ಇಲ್ಲ. ಈಗ ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು ತಿಳಿಸಿರುವ ಹಾಗೆ ಕಾಫಿ ವ್ಯವಸಾಯಗಾರರು ಬರತಕ್ಕಂಥ ಉತ್ಪತ್ತಿಯಲ್ಲಿ ಶೇಕಡ 30ರಷ್ಟನ್ನು ತೆರಿಗೆ ರೂಪದಲ್ಲಿ ಈಗಾಗಲೇ ತೆರುತ್ತಿದ್ದಾರೆ. ಅಂದ ಮೇಲೆ ತಾವೀಗ ಆ ಉತ್ಪತ್ತಿಯಲ್ಲಿ ಇನ್ನುಳಿಯತಕ್ಕ ಶೇಕಡ 70ರಷ್ಟು ಆದಾಯದ ಮೇಲೆ ತೆರಿಗೆ ವಿಧಿಸಬೇಕಾಗಿದೆ. ಈ ಹಿಂದೆ ತಾವು ಹೋಟೇಲ್ ಮಾಲೀಕರ ಮೇಲೆ ತೆರಿಗೆ ಹಾಕುವಾಗ ಆ ಹೋಟಲುಗಳನ್ನು ಇಡಲು ಕಟ್ಟತಕ್ಕಂಥ ಕಟ್ಟಡ ಇತರ ಖರ್ಚು ವೆಚ್ಚಗಳನ್ನೆಲ್ಲಾ ತೆಗೆದುಕೊಂಡು ಆ ಬಂಡವಾಳದ ಮೇಲೆ ಏನು ಆದಾಯ ಬರುತ್ತದೆಂಬುದನ್ನು ಕಂಡು ಹಿಡಿದು ಅದಕ್ಕೆ ಸರಿಯಾಗಿ ಒಂದು ತೆರಿಗೆ ಹಾಕಿದ ಹಾಗೆ ಇಲ್ಲಿಯೂ ಮಾಡಬೇಕು. ಒಂದೊಂದಕ್ಕೂ ಒಂದೊಂದು ಬಿಲ್ಲನ್ನು ತಯಾರಿಸುವುದು ಸರಿಯಾದದ್ದಲ್ಲ. ಎಲ್ಲಾ ಜನರ ಆದಾಯ ಮತ್ತು ಅವರ ವೆಚ್ಚಗಳೇನೆಂಬುದನ್ನು ನಿರ್ಧರ ಮಾಡಿ ಎಲ್ಲರಿಗೂ ಅನ್ವಯಿಸತಕ್ಕಂಥ ಒಂದೇ ಒಂದು ಬಿಲ್ಲನ್ನು ತಂದಿದ್ದರೆ ಚೆನ್ನಾಗಿತ್ತು. ತಾವು ಹೀಗೆ ಒಂದು ತೆರಿಗೆಯನ್ನು ಹಾಕತಕ್ಕಬಗ್ಗೆ ಒಂದು ಬೆಳೆಯನ್ನು ಕಮರ್ಷಿಯಲ್ ಕ್ರಾಪ್ ಎಂದು ಕರೆಯಬಹುದು. ಆದರೆ ನಾವೀದಿವಸ ನಮ್ಮ ದೇಶದಲ್ಲಿ ಜನರಿಗೆ ನಿರುದ್ಯೋಗ ತಪ್ಪಿಸಲು ಈ ಒಂದು ಮಾರ್ಗವನ್ನು ಅವರಿಗೆ ಹುಡುಕಿ ಕೊಟ್ಟಿದ್ದೇವೆ. ಎಲ್ಲಾ ದೇಶಗಳಲ್ಲಿಯೂ ರೈತನು ಮತ್ತು ಈ ನಿರುದ್ಯೋಗಿಗಳ ಸಮಸ್ಯೆಯನ್ನು ನೀಗಲು ಕೋಟ್ಯಾಂತರ ರೂಪಾಯಿಗಳನ್ನು ವೆಚ್ಚಮಾಡುತ್ತಿದ್ದಾರೆ. ಆದರೆ ನಮ್ಮ ದೇಶದಲ್ಲಿ ಇವರೆಲ್ಲಾ ಇವರ ಕಾಲಮೇಲೆ ನಿಂತುಕೊಳ್ಳಲು ಅವರಿಗೆ ಮತ್ತೊಬ್ಬರಿಂದ ಯಾವ ಸಹಾಯವೂ ಇಲ್ಲ. ಪ್ರಪಂಚದಲ್ಲಿರತಕ್ಕಂಥ ನಾನಾ ದೇಶಗಳಲ್ಲಿ ಈ ವ್ಯವಸಾಯ ಮಾಡತಕ್ಕಂಥ ಜನಸಂಖ್ಯೆ ಶೇಕಡ 17ರಿಂದ 22 ಇದ್ದರೆ ಹೆಚ್ಚಾಯಿತು. ನಮ್ಮ ದೇಶದಲ್ಲಿ ವ್ಯವಸಾಯ ಮಾಡತಕ್ಕವರ ಸಂಖ್ಯೆ ಶೇಕಡ 75ರ ಮೇಲಿದ್ದಾರೆ ಹೀಗೆಲ್ಲಾ ಇರುವುದರಿಂದ ನಾವು ಈ ವಿಚಾರದಲ್ಲಿ ಪ್ರತಿಯೊಂದು ಅಂಶವನ್ನೂ ಕೂಲಂಕಷವಾಗಿ ಪರಿಶೀಲನೆ ಮಾಡತಕ್ಕದ್ದು ಸೂಕ್ತ. ಅನೇಕ ಮಾನ್ಯ ಸದಸ್ಯರು ಈಗಾಗಲೇ ಈ ವಿಚಾರ ಹೇಳಿದ್ದಾರೆ. ಇದೇ ರೀತಿ ಹೇಳುತ್ತಾ ಕ್ಲಾಜ್ 2 ರಲ್ಲಿ (ಎಫ್) ಭಾಗದಲ್ಲಿ ಅಡಕ ಮಾಡಿರತಕ್ಕಂಥ ಐಟಂನ್ನು ಸಂಪೂರ್ಣವಾಗಿ ತೆಗೆದು ಹಾಕಬೇಕೆಂದು ಹೇಳಿದ್ದಾರೆ. ಆ ಕ್ಲಾಜ್ (ಕೆ) ನಲ್ಲಿ ಹೀಗೆ ಹೇಳಿದೆ:—

> "(k) any interest paid in the previous year on any amount borrowed and actually spent on the land on which the agricultural income is derived:
>
> Provided that the need for borrowing was *bona fide* having regard to the assets of the assessee at the time:
>
> Provided further that the interest allowed under this clause *shall be limited to six per cent* on an amount equivalent to twenty-five per cent of the agricultural income from the land in that year ;"

ಇದೇ ರೀತಿ ಆ ಬಡ್ಡಿಕೊಡತಕ್ಕ ವಿಚಾರದಲ್ಲಿ ಬೇರೆ ಶೇಕಡ 6ಕ್ಕಿಂತ ಜಾಸ್ತಿ ಇರಬಾರದೆಂದು ಮಾತ್ರ ಹೇಳಿದ್ದಾರೆಯೇ ಹೊರತು ಆ ರೀತಿ ಶೇಕಡ 6ಕ್ಕೆ ಮೇಲ್ಪಟ್ಟು ಸಾಲ ತೆಗೆಯಲೇ ಕೂಡದೆಂದು ತಾವು ಕಾನೂನು ಏನಾದರೂ ಮಾಡಿದ್ದೀರಾ? ಇಷ್ಟೇ ಅಲ್ಲದೆ ಹಾಗೆ ಎತ್ತುವಂಥ ಸಾಲ ಬೇರೆ ಬೋನಾ ಫೈಡಿ ಸಾಲವಾಗಿರಬೇಕೆಂದು ಬೇರೆ ಹೇಳಿದ್ದಾರೆ. ನ್ಯಾಯವಾದಂಥ ಕಾರಣಗಳಿಲ್ಲದೆ ರೈತನು ಎಂದೂ ಸಾಲಕ್ಕೆ ಹೋಗುವುದಿಲ್ಲ. ಈ ದಿವಸ ಇನ್‌ಪೋರ್ಟೆನ್ಸ್ ಮಾಡಿರತಕ್ಕವರೆಲ್ಲರಿಗೂ ಅವರು ಕೂಡಿಡತಕ್ಕಂಥ ಮೊಬಲಗಿನಲ್ಲಿ 1/6 ಭಾಗಕ್ಕೆ ತೆರಿಗೆ ವಿನಾಯಿತಿ ಕೊಟ್ಟಿದ್ದಾರೆ. ಇವರ ವಿಚಾರದಲ್ಲೂ ಸರ್ಕಾರದವರು ಆ ವಿನಾಯಿತಿಯನ್ನು ತೋರಿಸಲೇಬೇಕು. ಇದೇ ರೀತಿ ಆ ಪ್ಲಾಂಟೇಷನ್ನಿನವರಿಗೂ ಕೂಡ ವಿನಾಯಿತಿ ಕೊಡಬೇಕಾಗಿದೆ. ಈ ಬಿಲ್ಲು ಇನ್ನೂ ಆ ಸಲೆಕ್ಟ್ ಸಮಿತಿಯವರ ಪರಿಶೀಲನೆಗೆ ಹೋಗತಕ್ಕದಾಗಿರುವುದರಿಂದ ನಾನಿನ್ನು ಹೆಚ್ಚು ಮಾತನಾಡಲು ಅಪೇಕ್ಷಿಸುವುದಿಲ್ಲವೆಂದು ಹೇಳಿ ನನ್ನ ಭಾಷಣವನ್ನು ಪೂರೈಸುತ್ತೇನೆ.

ಶ್ರೀ ಎಸ್. ಸಿದ್ದಪ್ಪ (ಪಾಗಡಿ).—ಸ್ವಾಮಿ ಅಧ್ಯಕ್ಷರೇ, ನಮ್ಮ ನಾಯಕರು ಈ ಬಿಲ್ಲನ್ನು ತರುವುದಕ್ಕೆ ಮುಂಚೆ ಇದರಲ್ಲಿರತಕ್ಕಂಥ ಅಂಶಗಳ ಬಗ್ಗೆ ಪೂರ್ಣ ಪರಿಶೀಲನೆಗಳನ್ನು ಮಾಡಿದನಂತರವೇ ಈಗ ಈ ಬಿಲ್ಲನ್ನು ನಮ್ಮ ಮುಂದೆ ತಂದಿದ್ದಾರೆ. ಆದರೆ ಇದರಲ್ಲಿ ಸರ್ಕಾರಕ್ಕೂ ಅಷ್ಟು ಆದಾಯಕರವಾದ ಮಾರ್ಗವಿದ್ದಂತೆ ಕಂಡು ಬರುತ್ತಿಲ್ಲ. ಅದೇ ರೀತಿ ಪ್ರಜೆಗಳಿಗೂ ಕೂಡ ಈ ಮಸೂದೆಯ ರೂಪರೇಖೆಗಳು ಸರಿಯಾಗಿದ್ದಂತೆ ಕಾಣ ಬರುತ್ತಿಲ್ಲ. ಈಗ ಈ ಮಸೂದೆ ಇರತಕ್ಕಂಥ ಪರಿಸ್ಥಿತಿಯಲ್ಲಿ ರೈತರಿಗೆ ತುಂಬ ಕಿರುಕುಳ ಮತ್ತು ತೊಂದರೆಗಳಾಗುತ್ತವೆ. ಆದ ಕಾರಣ ತಾವು ಇದನ್ನು ಸ್ವಲ್ಪ ಬದಲಾವಣೆ ಮಾಡಬೇಕಾಗಿದೆ. ಸ್ವಾಮಿ, ಮೈಸೂರು

(ಶ್ರೀ ಎಸ್. ಸಿದ್ದಪ್ಪ.)

ದೇಶಕ್ಕೆ ಪ್ರಜಾ ಸರ್ಕಾರ ಬರುವುದಕ್ಕೆ ಮುಂಚೆ ನಮ್ಮ ನಾಯಕರುಗಳೆಲ್ಲಾ ದೇಶಕ್ಕೆ ಸ್ವಾತಂತ್ರ ಬಂದಮೇಲೆ ರೈತರಿಗೆಲ್ಲಾ ಕುಂಭಾಭಿಷೇಕ ಮಾಡಿಸುತ್ತೇವೆಂದು ಭರವಸೆ ಕೊಟ್ಟಿದ್ದರು. ದೇಶಾದ್ಯಂತವೂ ರಸ್ತೆಗಳನ್ನು ಮಾಡಿಸುತ್ತೇವೆ, ದೇಶದಲ್ಲಿರತಕ್ಕಂಥ ಕೆರೆಗಳನ್ನೆಲ್ಲಾ ಜೀರ್ಣೋದ್ಧಾರ ಮಾಡಿಸುತ್ತೇವೆ, ವಿದ್ಯಾಭ್ಯಾಸದಲ್ಲಿ ನೂತನ ಪದ್ಧತಿಗಳನ್ನು ಜಾರಿಗೆ ತರುತ್ತೇವೆ, ಸಂಸ್ಕೃತಿ ಪ್ರಚಾರಮಾಡಿ ರೈತರ ಏಳಿಗೆಯನ್ನು ಸಾಧಿಸುತ್ತೇವೆ, ನಮ್ಮ ಇಡೀ ಜನಾಂಗವನ್ನೆಲ್ಲಾ ತಿಳಿವಳಿಕೆಯುಳ್ಳ ಜನಾಂಗವನ್ನಾಗಿ ಮಾಡುತ್ತೇವೆಂದು ಹೀಗೆಲ್ಲಾ ನೂರಾರು ಭರವಸೆಗಳನ್ನು ಕೊಟ್ಟಿದ್ದರು. ಎಲ್ಲಕ್ಕಿಂತಲೂ ಮಿಗಿಲಾಗಿ ಹರಿಜನೋದ್ಧಾರ ಮಾಡುತ್ತೇವೆಂದು ಬೇರೆ ಹೇಳಲಾಗಿತ್ತು. ಆದರೆ ಈ ಮಹತ್ಕಾರ್ಯಗಳನ್ನೆಲ್ಲಾ ಮಾಡಬೇಕಾದರೆ ದುಡ್ಡು ಬೇಕೆ ಬೇಕು ಎಂದು ಹೇಳಿದರೆ ಮಾನ್ಯ ಸದಸ್ಯರೆಲ್ಲರೂ ಇದನ್ನು ಒಪ್ಪಿಕೊಳ್ಳಲೇ ಬೇಕು. ಆದರೆ ಈ ದಿವಸ ಈ ಮಸೂದೆಯ ಬಗ್ಗೆ ವಿರೋಧ ಪಕ್ಷದ ಮಾನ್ಯ ಸದಸ್ಯರು ರೈತರಿಗೆ ಏನು ಹೇಳಿದ್ದಾರೋ ಅದು ಸರಿಯೆ ಅಥವ ತಪ್ಪೋ ಎನ್ನತಕ್ಕ ಪ್ರಶ್ನೆಯ ಗೋಜಿಗೇ ನಾನೀಗ ಹೋಗುವುದಿಲ್ಲ. ಅವರು ಆ ರೀತಿ ಟೀಕೆಮಾಡುವುದಕ್ಕೆ ಅವರ ಉದ್ದೇಶವೇನಿದೆ ಎಂಬುದನ್ನು ನಾನೀಗ ಚರ್ಚೆಮಾಡಲು ಇಷ್ಟಪಡುವುದಿಲ್ಲ. ಆದರೆ, ಎಂದೂ ಬಾರದಿರುವಂಥ ಒಂದು ಪ್ರಸಂಗ ಈ ದಿವಸ ನಮ್ಮ ಮುಂದೆ ಬಂದಿದೆ ಎಂದು ಮಾತ್ರ ನಾನು ಮಹಾಜನರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ನಮಗೆ ದುಡ್ಡೊಂದೇ ಪ್ರಾಮುಖ್ಯವಲ್ಲ. ಆದರೆ ಈಗ ಈ ಮಸೂದೆಯಲ್ಲಿರತಕ್ಕಂಥ ಲೋಪದೋಷಗಳೇನು, ನ್ಯೂನತೆಗಳೇನು, ಇದರಿಂದ ರೈತರಿಗಾಗತಕ್ಕ ತೊಂದರೆಗಳೇನೆಂಬುದನ್ನು ಕಂಡುಹಿಡಿದು ಇವುಗಳನ್ನು ಸರಿಪಡಿಸತಕ್ಕದ್ದು ಬಹಳ ಪ್ರಾಮುಖ್ಯವಾದುದೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಆದರೆ ಈ ದಿವಸ ನಮ್ಮ ದೇಶದಲ್ಲಿರತಕ್ಕಂಥ ರೈತರು ಈ ಇನ್‌ಕಂಟ್ಯಾಕ್ಸ್ ಬಗ್ಗೆ ಲೆಕ್ಕಗಳನ್ನಿಡಬೇಕೆಂದರೆ ನಿಜವಾಗಿಯೂ ಅವರಿಗೆ ಬಹಳ ಕಷ್ಟವಾಗುತ್ತದೆ. ಈ ವಿಚಾರವನ್ನು ನಮ್ಮ ನಾಯಕರೂ ಅರಿತಿದ್ದಾರೆ. ಈಗ ಈ ಬಿಲ್ಲಿನಲ್ಲಿ ತಿಳಿಸಿರುವ ಪ್ರಕಾರ 3,500 ರೂಪಾಯಿಗಳವರೆಗೆ ಮತ್ತು ಕೆಲವು ಕಮರ್ಷಿಯಲ್ ಕ್ರಾಪುಗಳಿಗೂ ಒಂದು ವಿನಾಯಿತಿಯನ್ನು ಕೊಡಲಾಗುವುದೆಂದು ಹೇಳಲಾಗಿದೆ. ಆದರೆ ಈ ತೊಂದರೆಗಳನ್ನೆಲ್ಲಾ ನಿವಾರಣೆ ಮಾಡಲು ನಾನೀಗ ಹೊಸರೂಪದ ಸಲಹೆಗಳನ್ನು ಕೊಡಲಿಚ್ಛಿಸುತ್ತೇನೆ. ಇದನ್ನು ಬೇರೆ ರೀತಿಯಲ್ಲಿ ಪರಿಶೀಲನೆ ಮಾಡಿದ್ದೇ ಆದರೆ ಇದು ತುಂಬ ಆಶಾದಾಯಕವಾದಂಥ ಮಾರ್ಗವೆಂದು ಕಂಡುಬರುತ್ತದೆ. ಇದರಿಂದ ಸರ್ಕಾರಕ್ಕೇನೋ 25 ಲಕ್ಷ ಚಿಲ್ಲರೆ ವರಮಾನ ಬರಬಹುದು. ಆದರೆ ಈ ದಿವಸ ಸರ್ಕಾರದಲ್ಲಿ ಖರ್ಚುವೆಚ್ಚಗಳು ದಿನೇ ದಿನೇ ಏರುತ್ತಿವೆ. ಜನರು ತಮಗೆ ತೆರಿಗೆ ಕೊಡುವುದಿಲ್ಲ ಎಂದು ಯಾರೂ ಹೇಳುತ್ತಿಲ್ಲ. ಆದರೆ ಇಲ್ಲಿ 'ಇನ್‌ಕಂಟ್ಯಾಕ್ಸ್' ಎನ್ನುವ ಪದ ಮಾತ್ರ ಇರಕೂಡದೆಂದು ಹೇಳುತ್ತಿದ್ದಾರೆ. ರೈತನು ಈ ಬಗ್ಗೆ ಲೆಕ್ಕ ಇಡಬೇಕೆಂದರೆ ಆತನಿಗೆ ತುಂಬ ತೊಂದರೆಯಾಗುತ್ತದೆ. ಈ ಲೆಕ್ಕಗಳ ಬಗ್ಗೆ ಸಮಜಾಯಿಷಿ ಕೊಡತಕ್ಕ ಕೆಲಸ ಪೂರಾ ಕಷ್ಟತರವಾದದ್ದು. ಇದರಿಂದ ಅವರಿಗೆ ತುಂಬ ಅನ್ಯಾಯಗಳಾಗುತ್ತವೆ. ಈ ವಿಚಾರಗಳನ್ನೆಲ್ಲಾ ನಮ್ಮ ನಾಯಕರು ಅರಿತಿದ್ದಾರೆ. ಆದರೆ ಈಗ ಈ ಬಿಲ್ಲು ಬಂದಿರುವ ರೀತಿ ಸರಿಯಾಗಿಲ್ಲವಾದ್ದರಿಂದ ಜನಗಳು ಇದನ್ನು ವಿರೋಧಿಸುತ್ತಿದ್ದಾರೆ. ಆದರೆ ದೇಶದಲ್ಲಿ ಪ್ರಜೆಗಳಿಗೋಸ್ಕರವಾಗಿ ಸರ್ಕಾರದವರು ಇನ್ನೂ ಅನೇಕವಾಗಿ ಕೆರೆ, ರಸ್ತೆ, ಬಾವಿ, ಆಸ್ಪತ್ರೆ, ಸ್ಕೂಲು ಮತ್ತು ಹಾಸ್ಟಲು ಇತ್ಯಾದಿಗಳನ್ನೆಲ್ಲಾ ಒದಗಿಸಬೇಕಾಗಿದೆ. ಆದಕಾರಣ ಅವರಿಗೆ ದುಡ್ಡಿನ ವರಮಾನ ತೀರ ಅಗತ್ಯ. ಅದಕ್ಕಾಗಿ ನಾವು ಹೀಗೆ ಟ್ಯಾಕ್ಸ್ ಹಾಕತಕ್ಕದ್ದನ್ನು ಒಪ್ಪಿಕೊಳ್ಳಲೇಬೇಕು. ಆದರೆ ಇದರಿಂದ ರೈತರುಗಳಿಗೆ ಕಿರುಕುಳ ಆಗಬಾರದು. ಈಗಾಗಲೇ ಅನೇಕ ರೈತರು ಸಾಲಸೋಲಗಳನ್ನು ಮಾಡಿಕೊಂಡು, ಅನೇಕರು ತಮ್ಮ ಆಸ್ತಿಗಳನ್ನೂ ಸಹ ಮಾರಾಟಮಾಡಿಕೊಂಡು ಬಹಳ ಹೀನಾವಸ್ಥೆಯಲ್ಲಿದ್ದಾರೆ. ಜೂಟಿ ಲೆಕ್ಕಗಳನ್ನು ಜೂಟಿ ಎಂದು ಹೇಳುವುದಿರಲಿ; ಸಾಚಾ ಲೆಕ್ಕಗಳನ್ನೂ ಕೂಡ ಜೂಟಿಲೆಕ್ಕ ಎಂದು ಹೇಳಿಬಿಡುತ್ತಾರೆ. ತೆಂಗಿನಕಾಯಿ ಬೆಲೆ ಮೊದಲು 300 ರೂಪಾಯಿಗಳಿದ್ದದ್ದು ಈಗ 200 ರೂಪಾಯಿಗಳಿಗೆ ಇಳಿಸಿದೆ.

ಸರ್ಕಾರದವರು ಯಾವುದಾದರೂ ಒಂದು ಹೊಸ ತೆರಿಗೆಯನ್ನು ಹಾಕುವುದರ ಮೂಲಕ ತಮಗಿರತಕ್ಕ ಕಷ್ಟವನ್ನು ಪರಿಹಾರ ಮಾಡಿಕೊಳ್ಳುವುದಕ್ಕೋಸ್ಕರ ಈ ಬಿಲ್ಲನ್ನು ತಂದಿದ್ದಾರೆ. ಇದು ಬಹಳ ಸಂತೋಷಕರವಾದದ್ದು. ಅನೇಕ ಸದಸ್ಯರು ಇದುವರೆಗೂ ಈ ಮಸೂದೆಯ ವಿಷಯವಾಗಿ ಪ್ರಸ್ತಾಪಮಾಡಿದ್ದಾರೆ. ಈಗ ತಂದಿರುವ Agricultural Income Tax ಎಂಬ ಪದಗಳನ್ನು ಬಿಟ್ಟು ಇನ್ನು ಯಾವುದಾದರೂ ಅವರಿಗೆ ಅಪಾಯವಾಗದ ರೀತಿಯಲ್ಲಿ ಇದನ್ನು ತರಬೇಕು ಎಂದು ಈ ಸಭೆಯ ಮೂಲಕ ನಮ್ಮ ನಾಯಕರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಪದಸರಣಿಯನ್ನು ಮಾರ್ಪಾಡು ಮಾಡುವುದಕ್ಕೆ ನಮ್ಮ ನಾಯಕರಿಗೆ ಅವಕಾಶವಿದೆ. ಅದು ಒಂದು ದೊಡ್ಡ ಕಾರ್ಯವಲ್ಲ. ಸರ್ಕಾರದವರು ಅಭಿವೃದ್ಧಿ ಕಾರ್ಯಗಳಿಗೆ ಖರ್ಚುಮಾಡುವುದಕ್ಕಾಗಿ ಈ ರೀತಿ ತೆರಿಗೆಗಳನ್ನು ವಿಧಿಸುತ್ತಿದ್ದಾರೆಯೇ ಹೊರತು ತಮ್ಮ ಮನೆ ತುಂಬಿಕೊಳ್ಳುವುದಕ್ಕಲ್ಲವೆಂಬುದು ಎಲ್ಲರಿಗೂ ತಿಳಿದಿರುವ ವಿಚಾರ. ಆದ್ದರಿಂದ ನಾನು ಇಷ್ಟು ಮಾತ್ರ ಹೇಳಬಯಸುತ್ತೇನೆ. ಅದೇನೆಂದರೆ ಈ ಪದಗಳ ಸರಣಿಯನ್ನು ಅಂದರೆ Income-tax ಎಂಬ ಹೆಸರನ್ನು ತಪ್ಪಿಸಿ ಬೇರೆ ರೂಪಾಂತರ ಗೊಳಿಸಿ ಇಂಥಿಂಥವರು ಇಷ್ಟಿಷ್ಟು ಮೊಬಲಗನ್ನು ಕೊಡಬೇಕೆಂದು ಒಂದು ತೆರಿಗೆಯನ್ನು ಹಾಕಿದರೆ ಸರ್ಕಾರಕ್ಕೆ ಸಲೀಸಾಗಿ ದುಡ್ಡು ಬರುತ್ತದೆ. ಇಷ್ಟು ಮಾತ್ರ ಹೇಳಿ ನಮ್ಮ ಸ್ಪೀಕರ್ ಸಾಹೇಬರು ನಾಲ್ಕೈದು ಸಲ ಅವಕಾಶ ಕೊಡದೆ ಇದ್ದರೂ ಕೂಡ ಮುಖ್ಯವಾಗಿ ಈಗ ಅವಕಾಶ ಕೊಟ್ಟಿದ್ದಕ್ಕೆ ಅವರನ್ನು ವಂದಿಸಿ, ನಮ್ಮ ನಾಯಕರಲ್ಲಿ ಮಾತ್ರ ಈ ಪದ ಸರಣಿ ಬದಲಾಯಿಸಿ ಎಂದು ವಿನಯದಿಂದ ಕೇಳಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಎಂ. ಮಾದಯ್ಯ (ನಂಜನಗೂಡು-ಅನುಸೂಚಿತ ಜಾತಿಗಳು).—ಸ್ವಾಮಿ, ಈ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ. ಇದರ ಮೇಲೆ ನಡೆದಿರತಕ್ಕ ಚರ್ಚೆಗಳನ್ನು ಜನ ಸಾಮಾನ್ಯರು ಅರಿತರೆ ನಾವುಗಳು ಈ ಸಭೆಯಲ್ಲಿ ಪುನಃ ಸೇರುತ್ತೇವೆಯೋ ಇಲ್ಲವೋ ಎಂಬ ಶಂಕೆಯುಂಟಾಗುತ್ತದೆ. ಇದಕ್ಕೆ ಕಾರಣವೇನೆಂದರೆ, ನಾವೆಲ್ಲ ಜನಸಾಮಾನ್ಯರ ಪ್ರತಿನಿಧಿಗಳಾಗಿ ಅವರ ಪ್ರೀತಿಗೆ ಪಾತ್ರರಾಗಿ ಬಂದಿರುವುದರಿಂದ ಅವರ ಹಿತಸಾಧನೆಯಾಗತಕ್ಕ ಕಾರ್ಯಗಳನ್ನು ಮಾಡುತ್ತಿದ್ದೇವೆಂದು ಅವರಿಗೆಲ್ಲ ಅರ್ಥವಾಗುವ ರೀತಿಯಲ್ಲಿ ನಮ್ಮ ಕೆಲಸ ಕಾರ್ಯಗಳಾಗುತ್ತಿಲ್ಲವೆಂದು ನನಗನ್ನಿಸುತ್ತದೆ.

ಅವರ ಹಿತಸಾಧನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ನಾವು ಮುನ್ನಡೆಯಬೇಕು.

ಶ್ರೀಮಾನ್ ಬಿ. ಹುಚ್ಚೇಗೌಡರು ಮಾತನಾಡುತ್ತ ಈ ಮಸೂದೆಯಲ್ಲಿ ಸಮತವಾದ ತತ್ವಕ್ಕೆ ಎಡೆ ಇದೆಯೇ ಮತ್ತು ಆರೀತಿ ಇದ್ದರೆ ಯಾರಾದರೂ ತೋರಿಸಿ ಎಂದು Challenge ಮಾಡಿದರು. ಮುಖ್ಯ ಮಂತ್ರಿಗಳು ಈ ಮಸೂದೆಯನ್ನು ಸಭೆಯಮುಂದೆ ಮಂಡಿಸುವಾಗ Socialistic pattern of society ಕಟ್ಟಬೇಕಾದರೆ ಬಡವರಿಗೂ ಮತ್ತು ಬಲ್ಲಿದರಿಗೂ ಇರತಕ್ಕ ಅಂತರ ಕಡಮೆಯಾಗಬೇಕು ಎನ್ನುವ ಉದ್ದೇಶದಿಂದ ಈ ಮಸೂದೆಯನ್ನು ತಂದಿದೆ ಎಂದು ಹೇಳಿದರು. ಇದರ ಪ್ರಕಾರ ಬಲ್ಲಿದರಿಂದ ಸ್ವಲ್ಪ ಹಣವನ್ನು ತೆರಿಗೆಯ ರೂಪದಲ್ಲಿ ತೆಗೆದುಕೊಂಡು ಬಡವರಿಗೆ ಬೇಕಾದ ಸೌಕರ್ಯಗಳನ್ನು ಮಾಡಲು ಮತ್ತು ಅವರಿಗೆ ಇರಬಹುದಾದ ಕುಂದುಕೊರತೆಗಳನ್ನು ನಿವಾರಿಸಲು ಅನುಕೂಲವಿದ್ದರೆ ಸಮತಾವಾದದ ಹಾದಿಯಲ್ಲಿ ಒಂದು ಹೆಜ್ಜೆ ಮುಂದೆ ಇಟ್ಟ ಹಾಗಾಗುವುದಿಲ್ಲವೆ? ಇದನ್ನು ಅವರು ಮನಸ್ಸಿನಲ್ಲಿಟ್ಟುಕೊಳ್ಳಬೇಕು.

ಶ್ರೀ ಇಮಾಂ ಸಾಹೇಬರು ವಾದಮಾಡುವಾಗ 3,500 ರೂಪಾಯಿ ಒಂದು ಸಂಸಾರಕ್ಕೆ ಬಹಳ ಕಡಿಮೆಯಾಗುತ್ತದೆ. ಅದರಂತೆ ತೆರಿಗೆ ಹಾಕಬೇಡಿ ಎಂದು ಹೇಳಲಿಲ್ಲ. ಅವರಾದರೂ ಸರ್ಕಾರಿ ಅಧಿಕಾರವರ್ಗದಲ್ಲಿರತಕ್ಕವರಿಗೆ ವರಮಾನ ಜಾಸ್ತಿಯಿರುತ್ತದೆ, ಅವರಿಗೆ ಒಂದು ನಿಗದಿಯಾದ ವರಮಾನ ಬರುತ್ತದೆ, ಅವರಿಗೆ ಬರುವ ವರಮಾನವನ್ನು ರೈತರ ವರಮಾನಕ್ಕೆ ಹೋಲಿಸಿ ನೋಡಿದರೆ ಅವರದೇ ಬಹಳ ಜಾಸ್ತಿಯಿರುತ್ತದೆ ಎಂದು ಮುಂತಾಗಿ ಹೇಳಿದರು. ಆ ವಾದದಲ್ಲಿ ಸಹ ಅಷ್ಟು ತಿರುಳಿಲ್ಲವೆಂದು ನನಗನ್ನಿಸುತ್ತದೆ. ಯಾಕೆಂದರೆ ಎಲ್ಲರೂ ಹೇಳುತ್ತಿರುವ ರೀತಿ ವರಮಾನ ನಿರ್ದಿಷ್ಟವಾಗಿ ತನ್ನ ಸಂಸಾರ ನ್ನು ನಡೆಸುವುದಕ್ಕೆ ಬೇಕಾದುದಕ್ಕಿಂತ ಜಾಸ್ತಿ ಯಾರಿಗೆ ಇರುತ್ತದೆಯೋ ಅಂತಹವರಿಗೆ ಮಾತ್ರ ಹಾಕಬೇಕು ಎನ್ನುವುದರಲ್ಲಿ ಒಂದು ನೀತಿ ಮತ್ತು ತತ್ವವಿದೆ. Ceiling limit fix ಮಾಡುವಾಗ ಹೈದರಾಬಾದಿನಲ್ಲಿರುವಂತೆ ಮಾಡಬೇಕು ಎಂದು ಕೆಲವರು ಹೇಳಿದರು. ಈ ವಿಚಾರವನ್ನು ಪರಿಶೀಲನೆಮಾಡಲು ಸೆಲೆಕ್ಟ್ ಕಮಿಟಿಯವರಿಗೆ ಬಿಡೋಣ. ಈ ವರಮಾನ ತೆರಿಗೆ ಕೊಡತಕ್ಕ ವಿಚಾರದಲ್ಲಿ ಹೆಚ್ಚಿಗೆ ವರಮಾನ ಬರತಕ್ಕದ್ದರಲ್ಲಿ ಸರ್ಕಾರಕ್ಕೆ ಸ್ವಲ್ಪ ಹಣವನ್ನು ತೆರಿಗೆಯ ರೂಪದಲ್ಲಿ ಯಾತಕ್ಕೆ ಕೊಡಬಾರದು ಎಂದು ಹೇಳುತ್ತೇನೆ. ಆದುದರಿಂದ ಇಂತಹ ಮಸೂದೆಯನ್ನು ಮಾವರಿ ಮೈಸೂರಿನಲ್ಲಿರತಕ್ಕ ನಾವುಗಳು ಸ್ವಾಗತಿಸಿ, ಪಾಸ್‌ಮಾಡಿ ಇದರಲ್ಲಿರತಕ್ಕ ತೊಂದರೆಗಳನ್ನು ನಿವಾರಣೆಮಾಡುವುದರಲ್ಲಿ ನಾವು ಯಾರಿಗೂ ಹಿಂದೆಬಿದ್ದಿಲ್ಲ. ಅದನ್ನೆಲ್ಲಾ ಸರಿಪಡಿಸೋಣ.

ಈ ಸಮಯದಲ್ಲಿ ಒಂದು ಮಾತು ಹೇಳುವುದಾದರೆ, ಸೆಲೆಕ್ಟ್ ಕಮಿಟಿಯವರಿಗೆ ಎಲ್ಲರೂ ಸಲಹೆ ಕೊಟ್ಟಿದ್ದಾರೆ. ನಾನಾದರೂ ಹೇಳುವುದೇನೆಂದರೆ, ಈ ಮಸೂದೆಯನ್ನು ಸೆಲೆಕ್ಟ್ ಕಮಿಟಿಯವರು scrutiny ಮಾಡುವಾಗ ಇದರಿಂದ ಆಗಬಹುದಾದ ತೊಂದರೆಗಳನ್ನು ತಪ್ಪಿಸುವುದು, ರೈತರಿಗಾಗುವ ಕಿರುಕುಳವನ್ನು ತಪ್ಪಿಸುವುದು ಇಷ್ಟನ್ನು ಮಾಡಬೇಕೇ ಹೊರತು ಈ ಬಿಲ್ ಶಾಸನವಾದಾಗ ಇದರಿಂದ ಸರ್ಕಾರಕ್ಕೆ ಬರಬಹುದಾದ ಆದಾಯಕ್ಕೆ ಕೊರತೆ ಯುಂಟಾಗಬಾರದೆಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು.

ಭಾರತದ ಸಂಸ್ಥಾನಗಳ ಪೈಕಿ ಹಲವು ಸಂಸ್ಥಾನಗಳಲ್ಲಿ ಇಂತಹ ಒಂದು ಶಾಸನ ಮಾಡಿರುವಾಗ ಮಾದರಿ ಮೈಸೂರು ಒಂದು ಹೆಜ್ಜೆಯನ್ನು ಹಾಕುತ್ತಿರುವಾಗ ಇಂಥ ಮಸೂದೆಯನ್ನು ನಾನಾ ಕಾರಣಗಳನ್ನು ಕೊಟ್ಟು ಈ ಬಿಲ್ ಶಾಸನವಾಗದಂತೆ ಹೊಡತಕ್ಕ ವಾದಸರಣಿ ಜಗತ್ತಿಗೇ ಕಾಣುತ್ತಿದೆ. ಅಂಥದಕ್ಕೆ ತಾವು ಅವಕಾಶ ಕೊಡಬಾರದೆಂದು ನಾನು ಹೇಳಬಯಸುತ್ತೇನೆ.

ತಮಗೆಲ್ಲ ಗೊತ್ತಿರುವಂತೆ Planning Commissionನವರು ಕೊಟ್ಟಿರತಕ್ಕಂಥ adviceನಲ್ಲಿ ವರಮಾನ ತೆರಿಗೆಯನ್ನು ವ್ಯವಸಾಯದಿಂದ ಬರತಕ್ಕ ವರಮಾನದ ಮೇಲೆ ಸಹ ಹಾಕಬೇಕೆಂದು ಸೂಚನೆ ಕೊಟ್ಟಿರುತ್ತಾರೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಆಗಾಗ ಹೇಳುತ್ತಿರುವ ರೀತಿಯಲ್ಲಿ ಒಂದು ರಾಜ್ಯಾಂಗದ ಚೌಕಟ್ಟಿನಲ್ಲಿ ಕೆಲಸ ಮಾಡುತ್ತ ಇರುವಾಗ State ಮತ್ತು Centre ಎಂಬ ವ್ಯತ್ಯಾಸವಾವುದನ್ನೂ ಸಹ ಮನಸ್ಸಿನಲ್ಲಿಟ್ಟುಕೊಳ್ಳದೆ ಒಂದೇ ರೀತಿ ಕೆಲಸ ಮಾಡಬೇಕು. Central Planning Commissionನವರು ಕೊಟ್ಟಿರುವ advice ಪ್ರಕಾರ Income-tax Billನ್ನು ಒಂದು ಶಾಸನ ಮಾಡಿ, ಭಾರತ ರಾಜ್ಯಾಂಗದ ಚೌಕಟ್ಟಿನಲ್ಲಿರುವ ಅನೇಕ ಸಂಸ್ಥಾನಗಳಲ್ಲಿ ಅನ್ವಯಿಸುವಂತೆ ಮಾಡಿ, agricultural income ಮೇಲೆ ತೆರಿಗೆಯನ್ನು ಹಾಕುತ್ತ ಇರುವಾಗ ನಾವು ಅದೇ ರೀತಿ ಮಾಡದೆ ಇದ್ದರೆ ಉಚಿತವಾಗುತ್ತದೆಯೇ ಎನ್ನುವುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು.

ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಮೈಸೂರಿನಲ್ಲಿ *per capita* taxation 6·5 ಎಂದು ಹೇಳಿದರು. ಇತರ ಎಲ್ಲ ಸಂಸ್ಥಾನಗಳಲ್ಲಿ ಇರುವುದಕ್ಕಿಂತಲೂ ಕಡಿಮೆಯಾಗಿ ನಮ್ಮ ಮೈಸೂರು ಸಂಸ್ಥಾನದಲ್ಲಿ ಕೊಡುತ್ತ ಇರುವುದರಿಂದ, ನಾವು ಈ ಬಿಲ್ಲನ್ನು ಸ್ವಾಗತಿಸಿ ಪಾಸ್ ಮಾಡದೆ ಇದ್ದರೆ ಒಂದು ವಿಧವಾದ ನಿರುತ್ಸಾಹವನ್ನು ಜನಸಾಮಾನ್ಯರಲ್ಲಿ ಉಂಟುಮಾಡುತ್ತೇವೆಂಬುದನ್ನು ಮಾತ್ರ ತಾವೆಲ್ಲರೂ ಮನಸ್ಸಿನಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತೇನೆ.

ಇಷ್ಟು ಹೇಳಿ, ವಿವರಗಳಿಗೆ ಹೋಗದೆ, ಈ ಬಿಲ್ಲನ್ನು ಸ್ವಾಗತಿಸುತ್ತಾ ಆದಷ್ಟು ಬೇಗನೆ ಇದನ್ನು ಶಾಸನ ಮಾಡಿ ಜಾರಿಗೆ ಬರುವ ರೀತಿಯಲ್ಲಿ ಈ ಸಭೆ ಕೆಲಸ ಮಾಡಬೇಕೆಂದು ನಾನು ಪ್ರಾರ್ಥಿಸುತ್ತೇನೆ.

8 P. M.

*ಶ್ರೀ ಎಚ್. ಕೆ. ಸಿದ್ದಯ್ಯ (ಬೇಲೂರು—ಅನುಸೂಚಿತ ಜಾತಿಗಳು).—ಸ್ವಾಮಿ, ಸರ್ಕಾರದವರು ನಮ್ಮ ಮುಂದಿಟ್ಟಿರುವ ಈ ಬಿಲ್ಲನ್ನು ಸ್ವಾಗತಿಸುತ್ತಾ ಎರಡು ಮೂರು ವಿಷಯಗಳನ್ನು ಮಾತ್ರ ಹೇಳಬಯಸುತ್ತೇನೆ. ಸಮಾಜದಲ್ಲಿ ಸಮತಾವಾದ ಬರಬೇಕು ಎಂದು ಬಾಯಲ್ಲಿ ಹೇಳುತ್ತಾ ಕಾರ್ಯತಃ ಆ ಪ್ರಶ್ನೆ ಮುಂದೆ ಬಂದಾಗ ಏನೇನೋ ಸಣ್ಣ ಪುಟ್ಟ ಕಿರುಕುಳಗಳನ್ನು ತಂದೊಡ್ಡತಕ್ಕ ಜನ ಇನ್ನೂ ನಮ್ಮ ದೇಶದಲ್ಲಿದ್ದಾರೆ. ಒಂದೊಂದು ಸಭೆಯಲ್ಲೂ ನಿಂತುಕೊಂಡು ಕಾಂಗ್ರೆಸ್ಸಿನವರು ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆಂದು ಹೇಳಿದರು, ಅವರು ಮಾಡಲಿಲ್ಲ, ನಾವು ಮಾಡುತ್ತೇವೆಂದು ಹೇಳುತ್ತಿದ್ದವರು, ಈಗ ಈ ಬಿಲ್ಲನ್ನು ತಂದರೆ ಇದರ ರಕ್ಕೆ ಪುಕ್ಕ ಎಲ್ಲವನ್ನೂ ಕಿತ್ತು ಏನೇನೋ ಮಾಡುವಂಥ ಜನ ಇನ್ನೂ ಇದ್ದಾರಲ್ಲಾ ಎಂದು ಹೇಳಿ ಬಹಳ ಆಶ್ಚರ್ಯವಾಗುತ್ತದೆ. ಏನೇ ಆಗಲಿ, ಈಗ ಸಮಾಜದ ಸಮತಾವಾದ ನಮ್ಮ ದೇಶದಲ್ಲಿ ಆಗದೇ ಹೋದರೆ, ಖಂಡಿತ ಬಡವರು ಉದ್ಧಾರವಾಗುವುದಿಲ್ಲ.

(ಶ್ರೀ ಎಚ್. ಕೆ. ಸಿದ್ದಯ್ಯ.)

ಈ ಬಿಲ್ಲಿನ ವಿಷಯದಲ್ಲಿ ನಾನು ನಿನ್ನೆಯಿಂದಲೂ ಕುಳಿತುಕೊಂಡು ಯೋಚನೆ ಮಾಡುತ್ತಿದ್ದೇನೆ. ಇಡೀ ಮೈಸೂರು ಸಂಸ್ಥಾನದಲ್ಲಿರತಕ್ಕ ಒಂದು ಕೋಟಿ ಜನಗಳಲ್ಲಿ ಒಂದು ಲಕ್ಷ ಜನಗಳಿಗಿಂತ ಹೆಚ್ಚು ಜನರ ಮೇಲೆ ಈ ತೆರಿಗೆ ಬೀಳುವುದಿಲ್ಲ. ವಾಸ್ತವವಾಗಿ ನೋಡಿದರೆ ಒಂದು ಲಕ್ಷ ಜನರ ಮೇಲೂ ಇದು ಬೀಳುವುದಿಲ್ಲ. ಆದ್ದರಿಂದ ಬಡವರ ಮೇಲೆ ಬೀಳುತ್ತದೆಂದು ನಮ್ಮ ಮಾನ್ಯ ಸದಸ್ಯರು ಹೇಳುತ್ತಿರತಕ್ಕ ವಾದ ಏನೂ ಸರಿಯಲ್ಲ. ಜಮೀನ್ದಾರರು ತಮಗೆಲ್ಲಿ ವೋಟುಕೊಡದೆ ಹೋಗುತ್ತಾರೋ ಎಂಬ ಭಯದಿಂದ ಅವರು ಹೇಳುತ್ತಾರೋ ಏನೋ. ಇಂಡಿಯಾ ಸರ್ಕಾರದವರಿಗೆ ಜಮೀನ್ದಾರರೇ ವೋಟು ಹಾಡಲಿಲ್ಲ. ಅಲ್ಲದೆ ನಮ್ಮ ಸರ್ಕಾರದವರು ಈ ಕಾನೂನನ್ನು ಮಾಡುವಾಗಲೂ ಜಮೀನ್ದಾರರನ್ನು ನೋಡಿ ವೋಟು ಮಾಡುವುದಿಲ್ಲ. 21 ವರ್ಷ ವಯಸ್ಸಿನವರೆಲ್ಲರೂ ವೋಟುಮಾಡಬಹುದೆಂದಿದೆ. 10–15 ಎಕರೆಯೊಳಗೆ ಜಮೀನಿರತಕ್ಕ ಸಾಮಾನ್ಯ ಜನರು ನಮ್ಮ ದೇಶದಲ್ಲಿ ವಿಪರೀತ ಜನ ಇದ್ದಾರೆ. ಆದ್ದರಿಂದ ಓಟು ಬರುವುದಿಲ್ಲವೆಂದು ಹೆದರಬೇಕಾಗಿಲ್ಲ. ಆದ್ದರಿಂದ ಧೈರ್ಯವಾಗಿ ಸಮಾಜದ ಸಮತಾ ವಾದವನ್ನು ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಮುಂದಿಟ್ಟಿರುವುದು ಬಹಳ ಸಂತೋಷ. ಇದೇ ರೀತಿ ಮುಂದೆಯೂ ಪ್ರತಿಯೊಂದು ವಿಧದಲ್ಲೂ ಸಮಾಜದ ಸಮತಾವಾದ ತತ್ವವನ್ನು ರೂಪಿಸುವುದಾದರೆ ಬಡವರಿಗೆ ಜಮೀನು ಹಂಚಿಕೆಯಾಗುವಂತೆ ಜಮೀನನ್ನು ಅವರೇ ಬಿಟ್ಟು ಕೊಡುತ್ತಾರೆ. ನಮ್ಮ ಸರ್ಕಾರದವರು ಇಂದು ಈ ತೆರಿಗೆಯನ್ನು ತಂದು ಇದುವರೆಗೆ ಹಿಂದಿನವರು ಏನನ್ನು ಸಾಧಿಸಲು ಪ್ರಯತ್ನ ಪಡುತ್ತಿದ್ದರೋ, ಸಮತಾವಾದವೆಂದು ಬಾಯಲ್ಲಿ ಏನು ಹೇಳುತ್ತಿದ್ದರೋ ಮತ್ತು ಆವಡಿ ಅಧಿವೇಶನದಲ್ಲಿ ಯಾವ ವಾಕ್ಯವನ್ನು ನುಡಿದಿದ್ದಾರೋ ಅದರ ಸಾಧನೆಯಲ್ಲಿ ಮೊದಲ ಹೆಜ್ಜೆಯನ್ನಿಟ್ಟಿದ್ದಾರೆಂದು ಹೇಳಬಹುದು. ಇದು ಈಗ ಮೈಸೂರು ದೇಶಕ್ಕೆ ಮೊದಲನೆಯ ತಳಹದಿಯಾಯಿತು. ಆದ್ದರಿಂದ ನಮ್ಮ ಸರ್ಕಾರದವರೂ ಮತ್ತು ಸೆಲೆಕ್ಟ್ ಸಮಿತಿಯವರೂ ಕೆಲವು ತಿದ್ದುಪಾಟುಗಳನ್ನು ಮಾಡಿಕೊಂಡು ಆದಷ್ಟು ಬೇಗನೆ ಜಾರಿಗೆ ತರುವ ಪ್ರಯತ್ನವನ್ನು ಮಾಡಬೇಕು. ಈ ಸಭೆಯವರೆಲ್ಲರೂ ಇದನ್ನು ಒಪ್ಪಿದ್ದಾರೆ. ಪೂರ್ತಿಯಾಗಿ ವಿರೋಧ ಮಾಡಿದವರೇ ಯಾರೂ ಇಲ್ಲ. ವಿರೋಧಪಕ್ಷದ ನಾಯಕರನ್ನೂ ಕೂಡ ನಾನು ಈ ವಿಷಯದಲ್ಲಿ ದೂರುವುದಿಲ್ಲ. ಅವರದೂ ಸಮಾಜವಾದದ ತತ್ವವೇ ಆದ್ದರಿಂದ ಅವರೂ ತಮ್ಮ ಮೈಯ ಮೂಳೆ ರಕ್ತ ಎಲ್ಲವನ್ನೂ ಸೇರಿಸಿ ಈ ಬಿಲ್ಲನ್ನು ಪಾಸುಮಾಡುವುದಕ್ಕೆ ಸಹಾಯ ಮಾಡುತ್ತಾರೆಂದು ನಂಬಿ ಅವರಿಗೂ ನಾನು ನಮಸ್ಕಾರ ಮಾಡುತ್ತೇನೆ. ಪುನಸ್ಸರ್ಕಾರದವರು ತಂದಿರತಕ್ಕ ಈ ಬಿಲ್ಲಿಗೆ ಕೆಲವು ತಿದ್ದುಪಾಟುಗಳನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಸಣ್ಣ ರೈತರ ಮೇಲೆ ಯಾವುದೂ ತೊಂದರೆ ಬರದ ಹಾಗೆ ಕಮಿಟಿಯಲ್ಲಿ ತಿದ್ದುಪಾಟುಮಾಡಿ ಅದನ್ನು ಸಭೆಗೆ ತಂದು ಬೇಗನೆ ಮಂಜೂರುಮಾಡಬೇಕೆಂದು ಹೇಳಿ ಈ ಮಸೂದೆಯನ್ನು ಸಭೆಯ ಮುಂದೆ ಮಂಡಿಸಿದ ಮುಖ್ಯ ಮಂತ್ರಿಗಳಿಗೂ, ಅಧ್ಯಕ್ಷರಿಗೂ ನಾನು ನಮಸ್ಕಾರ ಮಾಡಿ ಮುಗಿಸುತ್ತೇನೆ.

*ಶ್ರೀ ಕೆ ಹನುಮಂತಯ್ಯನವರು.—ಅಧ್ಯಕ್ಷರೆ, ಈ ಸಭೆಯ ಮಾನ್ಯ ಸದಸ್ಯರು ಬಹು ಕಾಲ ಈ ಮಸೂದೆಯನ್ನು ಚರ್ಚೆ ಮಾಡಿದ್ದಾರೆ. ಕಾಲಾತೀತವಾದರೂ ಕೂಡ ಕುಳಿತು ಸಾವಧಾನದಿಂದ ಸಮಗ್ರವಾಗಿ ಈ ಪ್ರಶ್ನೆಯನ್ನು ಪರಿಶೀಲಿಸಿದ್ದಾರೆ. ಇದೊಂದು ಶುಭಸೂಚನೆ. ದೇಶದ ಆಗುಹೋಗುಗಳಲ್ಲಿ ಅವರಿಗೆಷ್ಟು ಆಸಕ್ತಿಯಿದೆಯೆಂಬುದಕ್ಕೆ ಇದೊಂದು ಸಾಕ್ಷಿ.

ಈ ದಿವಸ ನಾನು ಉತ್ತರ ಕೊಡಬೇಕಾದ ಅಂಶಗಳೇನೂ ನನಗೆ ಕಾಣಲಿಲ್ಲ. ಪ್ರತಿಯೊಂದು ವಿಷಯಕ್ಕೂ ಕೂಡ ನಾನು ಸಮಂಜಸವಾದ ಭಾಷಣವನ್ನು ಪ್ರಾರಂಭದಲ್ಲೇ ಮಾಡಿದ್ದೇನೆ. ಪುನಃ ಉತ್ತರವೇನಾದರೂ ನಾನು ಕೊಡಬೇಕಾದರೆ ಆ ವಾದಗಳನ್ನೇ ಪುನಃ ಹೇಳಬೇಕಾಗುತ್ತದೆ, ಅಷ್ಟೆ.

ನನಗೆ ಒಂದು ಮಾತ್ರ ಚಿಂತೆಯಿದೆ. ಅನೇಕಮಾನ್ಯ ಸದಸ್ಯರು ಈ ಮಸೂದೆಯನ್ನು ವಿರೋಧಿಸಿ ಮಾತನಾಡುವಾಗ, ನಾನು ಏನು ವಾದವನ್ನು ಸಭೆಯ ಮುಂದಿಟ್ಟೆನೋ, ಆ ವಾದವನ್ನೇ ಪ್ರಸ್ತಾಪ ಮಾಡದೆ ತಮ್ಮ ಮನಸ್ಸಿನಲ್ಲಿ ಏನು ಭಾವನೆಗಳಿದ್ದುವೋ ಅವುಗಳನ್ನೇ ಮತ್ತೆ ಮತ್ತೆ ಪ್ರಸ್ತಾಪ ಮಾಡಿದ್ದಾರೆ. ಅದರಿಂದ ನನಗನ್ನಿಸುತ್ತದೆ, ನಾನು ಹೇಳಿದ ವಾದದಲ್ಲಿ ಸತ್ಯವಿದೆ, ಅದಕ್ಕೆ ಅವರಿಗೆ ಪ್ರತ್ಯುತ್ತರ ಕೊಡುವುದಕ್ಕೆ ಸಾಧ್ಯವಿರಲಿಲ್ಲ, ಆದಕಾರಣ ಅವರು ತಮ್ಮದನ್ನೇ ಹೇಳೋಣ ಎಂದು ಮನಸ್ಸು ಮಾಡಿದ್ದಂತೆ ಕಾಣುತ್ತದೆ.

ಒಬ್ಬ ಮಾನ್ಯ ಸದಸ್ಯರು ವಿವರಣಾ ಮೂಲಕವಾಗಿ ಒಂದು ಪ್ರಶ್ನೆ ಕೇಳಿದರು. ಈ ತೆರಿಗೆ ಮೈಸೂರು ದೇಶದಲ್ಲಿ ಎಷ್ಟು ಜನರಮೇಲೆ ಬೀಳಬಹುದೆಂದು ಕೇಳಿದರು. ಅದು ಒಳ್ಳೆಯ ಪ್ರಶ್ನೆ. ಶ್ರೀಮಾನ್ ಸಿದ್ದಯ್ಯನವರು ಒಂದು ಲಕ್ಷ ಪ್ರಜೆಗಳಾಗಬಹುದೆಂದು ಹೇಳಿದರು. ಅಷ್ಟೂ ಆಗುವುದಿಲ್ಲ. ನಮ್ಮ ರೆವಿನ್ಯೂ ಇಲಾಖೆಯ ಅಧಿಕಾರವರ್ಗದವರು ಶೇಖರಿಸಿರತಕ್ಕ ಅಂಕಿಅಂಶಗಳ ವರದಿಗಳಿಂದ ಲೆಕ್ಕಹಾಕಿ ಹೇಳಿರುವುದರ ಪ್ರಕಾರ ಸುಮಾರು 20,000 ದಿಂದ 30,000 ದಷ್ಟು ಮಂದಿಗೆ ಮಾತ್ರ ಇದು ಅನ್ವಯಿಸುತ್ತದೆಂದು ಗೊತ್ತಾಗುತ್ತದೆ. ವ್ಯವಸಾಯಗಾರರೆನ್ನುವ ಸುಮಾರು 80 ಲಕ್ಷ ಜನರ ಪೈಕಿ, ಇದು ಬಹುಶಃ 20,000ಕ್ಕೆ ಮೀಂಚಿ 30,000ಕ್ಕೆ ಒಳಗಿರತಕ್ಕ ಸಂಖ್ಯೆಗೆ ಮಾತ್ರ ಅನ್ವಯಿಸುತ್ತದೆ. ಈ ಸಂಖ್ಯೆಯಲ್ಲಿ ಶ್ರೀಮಾನ್ ಇಮಾಂ ಸಾಹೇಬರು, ಹುಚ್ಚೇಗೌಡರು ಇಂಥವರು ಇದ್ದಾರೆ. ಆದ್ದರಿಂದ ಸ್ವಾಭಾವಿಕವಾಗಿಯೇ ಅವರು 'ಏನಪ್ಪಾ, ಕಾಟಬಂತಪ' ಎಂದು ಮನಸ್ಸಿನಲ್ಲಂದುಕೊಂಡಿದ್ದರೂ ಅದು ಕ್ಷಮಾರ್ಹವೇ.

ಶ್ರೀ ಎಲ್. ಸಿದ್ದಪ್ಪ (ಚನ್ನಗಿರಿ).—ಎಷ್ಟುಮನೆಗಳು ಒಡೆಯುತ್ತವೆ, ಈ ಬಿಲ್ಲಿನಿಂದ ?

ಶ್ರೀ ಕೆ. ಹನುಮಂತಯ್ಯ.—ಒಡೆದರೂ ಇನ್ನೊಂದು ವಿಧದಲ್ಲಿ ಸರ್ಕಾರಕ್ಕೆ ಆದಾಯ ಬಂದೇ ಬರುತ್ತದೆ, ಸರ್ಕಾರ ಪ್ರಜೆಗಳ ಸೇವೆಯಲ್ಲಿ ತೊಡಗಿ, ಸಮಾಜದಲ್ಲಿ ಒಂದು ಸಮತಾ ಭಾವನೆಯನ್ನು ಉಂಟುಮಾಡಬೇಕೆಂದು ಪ್ರಯತ್ನಪಟ್ಟಿರುವಾಗ ಒಂದು ದೃಷ್ಟಿಯಿಂದ ತೆರಿಗೆಯನ್ನು ತಪ್ಪಿಸಿಕೊಳ್ಳುವುದಕ್ಕೆ ಹೋದರೂ ಇನ್ನೊಂದು ದೃಷ್ಟಿಯಿಂದ ತೆರಿಗೆ ಕೊಡಬೇಕಾಗಿ ಬಂದೇ ಬರುತ್ತದೆ.

ಈ ದಿವಸ ಪೂರ್ಣ ಚರ್ಚೆಯಾದಾಗ ಅನೇಕ ಸಲಹೆಗಳನ್ನು ಮಾನ್ಯ ಸದಸ್ಯರು ಮಾಡಿರುತ್ತಾರೆ. ಅವುಗಳನ್ನೆಲ್ಲಾ ನಾನು ಬರೆದುಕೊಂಡಿದ್ದೇನೆ. ನಾನು ಮೊದಲೇ ಭಾಷಣಮಾಡುವಾಗ ಹೇಳಿದ ಹಾಗೆ ನಾನೇನೂ ಈ ಬಿಲ್ಲಿನ ವಿಷಯದಲ್ಲಿ ಇದೇ ರೀತಿ ಮಾಡಬೇಕು, ಅದೇ ರೀತಿ ಮಾಡಬೇಕು ಎಂದು ಪಂಥ ಹಿಡಿದಿಲ್ಲ. ತತ್ವಗಳನ್ನು ಮಾತ್ರ ಪ್ರತಿಪಾದನೆ ಮಾಡಿದೆ. ಅವುಗಳನ್ನು ಅಂಗೀಕಾರಮಾಡಿ ಅವು ಸುಗಮವಾಗಿ ಜಾರಿಗೆ ಬರುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೋ

ಅದನ್ನು ಕೈಕೊಳ್ಳೋಣ ಎಂದು ಹೇಳಿದ್ದೇನೆ ಆ ಸೂಚನೆಗಳಿಗೆಲ್ಲಾ ಈ ದಿವಸವೇ ಉತ್ತರ ಕೊಟ್ಟರೆ ನನ್ನ ಮನಸ್ಸು ಈ ವಿಷಯದಲ್ಲಿ ಒಂದು ನಿರ್ದಿಷ್ಟ ಅಭಿಪ್ರಾಯಕ್ಕೆ ಬಂದುಬಿಟ್ಟಿದೆಯೆಂದು ಅರ್ಥವಾಗುತ್ತದೆ. ಆ ರೀತಿ ಅರ್ಥಮಾಡಿಕೊಂಡು ಸೆಲೆಕ್ಟ್ ಕಮಿಟಿಯಲ್ಲಿ ಕುಳಿತುಕೊಂಡರೆ ಕೆಲಸ ಸುಗಮವಾಗುವುದಿಲ್ಲ. ಎಲ್ಲರ ಮನಸ್ಸಿನಲ್ಲೂ ದೇಶಾಭಿವೃದ್ಧಿ ಕಾರ್ಯಗಳು ಚೆನ್ನಾಗಿ ಆಗಬೇಕು, ಸಮರ್ಪಕವಾಗಿ ಆಗಬೇಕು, ಅದಕ್ಕೆ ಬೇಕಾದಷ್ಟು ಹಣವನ್ನು ಒದಗಿಸಬೇಕು ಎಂಬುದೇ ಆಗಿದೆ. ಈ ವಿಷಯದಲ್ಲಿ ಎಲ್ಲರೂ ಒಂದೇ ಅಭಿಪ್ರಾಯವುಳ್ಳವರಾಗಿರುವುದರಿಂದ, ಈ ಸೂಚನೆಗಳನ್ನು ಆ ದೊಡ್ಡ ದೃಷ್ಟಿಯಿಂದ ಪರಿಶೀಲನೆಮಾಡಿದರೆ ಎಲ್ಲ ಪರಿಹಾರವಾಗುತ್ತದೆಂದು ನಾನು ನಂಬಿದ್ದೇನೆ.

ಆದ್ದರಿಂದ ಸಭೆಯು ಅಪ್ಪಣೆ ಬೇಡಿ ಈ ದಿವಸ ಈ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಒಪ್ಪಿಸಬೇಕಾಗಿದೆ. ಇದಕ್ಕೆ ತಾವು ಅನುಮತಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

Mr. SPEAKER.—The question is :

"That the Mysore Agricultural Income-Tax Bill, 1955, be taken into consideration."

The motion was adopted.

Motion to refer.

Sri K. HANUMANTHAIYA.—Sir, I move :

"That the Mysore Agricultural Income-Tax Bill, 1955, be referred to a Select Committee consisting of the following members with a direction to report by the 18th April 1955 :

Sri Kadidal Manjappa, Srimathi B. L. Subbamma, Sri C. H. Lingadevaru, Sri A. Bheemappa Naik, Sri R. Chennigaramiah, Sri M. Madiah, Sri H. M. Channabasappa, Sri N. C. Nagiah Reddy, Sri S. R. Nagappa Setty, Sri B. Narayanaswamy, Sri N. Huchmasthy Gowda, Sri S. Srinivasa Iyengar, Sri B. P. Nagaraja Murthy, Sri B. Rachiah and the mover."

Mr. SPEAKER.—The question is :

"That the Mysore Agricultural Income-tax Bill, 1955, be referred to a Select Committee consisting of the following members with a direction to report by the 18th April 1955 :

Sri Kadidal Manjappa, Srimathi B. L. Subbamma, Sri C. H. Lingadevaru, Sri A. Bheemappa Naik, Sri R. Chennigaramiah, Sri M. Madiah, Sri H. M. Channabasappa, Sri N. C. Nagiah Reddy, Sri S. R. Nagappa Setty, Sri B. Narayanaswamy, Sri N. Huchmasty Gowda, Sri S. Sreenivasa Iyengar, Sri B. P. Nagaraja Murthy, Sri B. Rachiah.

The motion was adopted.

Mr. SPEAKER.—Under Rule 56 of the Rules of Procedure, the Chief Minister and the Minister for Law will also be members of the Select Committee.

Under Rule 57(1) I appoint the Chief Minister as the Chairman of the Committee.

The House will now rise and meet at 12 tomorrow.

The House adjourned at Fifteen Minutes past Eight of the Clock to meet again at Twelve of the Clock on the Friday, 15th April 1955.

WD 4508—GPB—550—24-9-55.

MYSORE LEGISLATIVE ASSEMBLY.

FORTY-SECOND DAY.

Friday, 15th April 1955.

The House met in the Assembly Hall Old Public Offices, Bangalore, at Twelve of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS.

Tanning and Shoe-making Centres.

Q.—756. Sri T. HANUMIAH (Hiriyur—Scheduled Castes).—

Will the Government be pleased to state :—

(*a*) the total amount of leather goods imported each year from outside the State; finished and unfinished articles from 1950-51 onwards with a tabular form ;

(*b*) number and names of tanning centres and shoe-making centres in the State ;

(*c*) the amount of the Central Government grant given for the above purposes from 1950-51 onwards ;

(*d*) the amounts of grants sanctioned to the above institutions, each year ?

A.—Sri H. SIDDAVEERAPPA (Minister for Home and Industries).—

(*a*) A statement showing the total quantities of leather goods imported into the State both by rail and road during the years 1950-51, 1951-52 and 1952-53 is given below. As the collection of railborne trade statistics has been discontinued from 1st April 1953, similar figures are not available for the subsequent years :—

Name of the article	*1950-51 Qty. in Rly. Mds.*	*1951-52 Qty. in Rly. Mds.*	*1952-53 Qty. in Rly. Mds.*
1 Unmanufactured leather.	2,379	10,392	1,162
2 Manufactured leather excluding boots and shoes.	1,459	1,369	844
3 Boots and shoes	5,449	4,857	3,143
Total ...	9,287	16,618	5,149

(*b*) One Tannery Centre at Hulikunte. One Leather Stitching Centre at Birur.

(*c*) Rs. 47,300 during 1954-55 towards—(1) the expansion of the Tannery Centre and the introduction of Leather stitching at Hulikunte, (2) the starting of Tannery and Leather Stitching Centre at Pavagada and (3) a Leather Stitching Centre at Doddasiddavvanahalli and (4) establishment of a Controlling Section attached to the Mysore Chrome Tanning Co., Ltd., at Bangalore for marketing facilities.

(SRI H. SIDDAVEERAPPA.)

(*d*)—

	Tannery, Hulikunte			Leather Stitching Centre, Birur		
	Rs.	a.	p.	Rs.	a.	p.
1950-51 ...	2,329	11	10	...		
1951-52 ...	2,142	13	8	...		
1952-53 ...	2,294	11	10	1.335	8	7
1953-54 ...	2,599	10	9	2,399	9	0
1954-55 ...	2,055	0	6	1,186	1	9
	(till the end of February 1955)			(till the end of December 1954)		

ಶ್ರೀ ಟಿ. ಹನುಮಯ್ಯ.—ಸರ್ಕಾರದ ಹೋಂ ಡಿಪಾರ್ಟ್‌ಮೆಂಟಿಗೆ ಎಂದರೆ ಪೋಲೀಸ್, ರಿಜರ್ವ್ ಇತ್ಯಾದಿ ಇಲಾಖೆಗಳಿಗೆ ಹೊರಗಡೆಯಿಂದ ಈ ಸಾಮಾನು ಗಳನ್ನು ಎಷ್ಟು ತರಿಸುತ್ತಿದ್ದೀರಿ ?

ಶ್ರೀ ಎಚ್. ಸಿದ್ಧವೀರಪ್ಪ.—ನಮ್ಮ ಇಲಾಖೆಗಳಿಗೆ ಎಷ್ಟೆಷ್ಟು ಅಗತ್ಯವಿದೆಯೋ ಅಷ್ಟನ್ನು ಮಾತ್ರ ತರಿಸಿ ಕೊಳ್ಳುತ್ತೇವೆ.

ಶ್ರೀ ಟಿ. ಹನುಮಯ್ಯ.—ಇವುಗಳನ್ನು ಖರೀದಿ ಮಾಡಲು ಎಷ್ಟು ಮೊಬಲಗು ಬೇಕಾಗುತ್ತದೆ ?

ಶ್ರೀ ಎಚ್. ಸಿದ್ಧವೀರಪ್ಪ.—ಆ ಪ್ರಶ್ನೆಯನ್ನು ತಾವು ಕೇಳಿರಲಿಲ್ಲ. ಆದಾಗ್ಯೂ ನಮ್ಮ ಪೋಲೀಸ್ ಇಲಾಖೆಗೆ ಸುಮಾರು ಎರಡು ಲಕ್ಷ ರೂಪಾಯಿಗಳ ಮಾಲು ಬೇಕಾಗಬಹುದು ಎಂದು ಕಾಣುತ್ತದೆ.

ಶ್ರೀ ಟಿ. ಹನುಮಯ್ಯ.—ಈ ಎರಡು ಲಕ್ಷ ರೂಪಾಯಿ ಗಳ ಸಾಮಾನುಗಳನ್ನೂ ಪರದೇಶದಿಂದಲೇ ತರಿಸಿ ಕೊಳ್ಳುತ್ತಿದ್ದೀರೋ ?

ಶ್ರೀ ಎಚ್. ಸಿದ್ಧವೀರಪ್ಪ.—ನಮ್ಮಲ್ಲಿ ನಮಗೆ ಬೇಕಾದ ಸಾಮಾನುಗಳು ಯಾವುವು ತಯಾರಾಗುತ್ತಿ ವೆಯೋ ಅವುಗಳನ್ನು ಇಲ್ಲೇ ಕೊಂಡು ಕೊಂಡು ನಮ್ಮಲ್ಲಿ ದೊರೆಯದೆ ಇರತಕ್ಕಂಥ ಸಾಮಾನುಗಳನ್ನು ಮಾತ್ರವೇ ಹೊರಗಡೆಯಿಂದ ತರಿಸಲಾಗುತ್ತಿದೆ.

ಶ್ರೀ ಟಿ. ಹನುಮಯ್ಯ.—ಚಿತ್ರದುರ್ಗದಲ್ಲಿ ಒಂದು ಚರ್ಮ ಹದ ಮಾಡುವ ಕಂಪೆನಿ ಇದೆ ಎನ್ನುವುದು ಸರ್ಕಾರದವರ ಅವಗಾಹನೆಗೆ ಬಂದಿದೆಯೇ ?

ಶ್ರೀ ಎಚ್. ಸಿದ್ಧವೀರಪ್ಪ.—ಎಲ್ಲಿ, ದೊಡ್ಡಸಿದ್ದವ್ವನ ಹಳ್ಳಿಯಲ್ಲೇ ?

ಶ್ರೀ ಟಿ. ಹನುಮಯ್ಯ.—ಚಿತ್ರದುರ್ಗದಲ್ಲಿರುವು ದನ್ನು ಕೇಳುತ್ತಿದ್ದೇನೆ.

Sri H. SIDDAVEERAPPA.—That is a Joint Stock Company which is not functioning now.

ಶ್ರೀ ಟಿ. ಹನುಮಯ್ಯ.—ಈ ಟ್ಯಾನಿಂಗ್ ಕಂಪೆನಿ ಗಳನ್ನು ಇನ್ನೂ ಅನೇಕ ಕಡೆಗಳಲ್ಲಿ ಪ್ರಾರಂಭಿಸತಕ್ಕ ಬಗ್ಗೆ ಸರ್ಕಾರದವರು ಏನಾದರೂ ಆಲೋಚನೆ ಮಾಡಿದ್ದೀರಾ ?

ಶ್ರೀ ಎಚ್. ಸಿದ್ಧವೀರಪ್ಪ.—ಈಗಾಗಲೇ ಈ ಟ್ಯಾನಿಂಗ್ ಕಂಪೆನಿಗಳನ್ನು ಅನೇಕ ಕಡೆ ಪ್ರಾರಂಭ ಮಾಡಿದ್ದೇವೆ. ಅಂಥ ಅಗತ್ಯ ಕಂಡುಬಂದರೆ ಇನ್ನೂ ಕೆಲವನ್ನು ಪ್ರಾರಂಭ ಮಾಡಲು ಪ್ರಯತ್ನಿಸ ಲಾಗುವುದು.

ಶ್ರೀ ಟಿ. ಹನುಮಯ್ಯ.—ಈಗ ತಾವು ಈ ದೊಡ್ಡ ಸಿದ್ದವ್ವನಹಳ್ಳಿಯಲ್ಲಿ ಬರಿ ಒಂದು ಚರ್ಮ ಹೊಲಿಯುವ ಕೇಂದ್ರವನ್ನು ಮಾತ್ರ ತೆರೆಯಬೇಕೆಂದು ಆಲೋಚಿಸ ಲಾಗಿದೆ ಎಂದು ಹೇಳಿದ್ದೀರಿ. ಅಲ್ಲಿ ಈ ಟ್ಯಾನಿಂಗ್ ಕೆಲಸವನ್ನು ಏಕೆ ಕೈಗೊಳ್ಳಬಾರದು ?

ಶ್ರೀ ಎಚ್. ಸಿದ್ಧವೀರಪ್ಪ.—ಅಗತ್ಯವಿದೆಯೆಂದು ಕಂಡುಬಂದರೆ ಮಾಡೋಣ.

Sri Mulka GOVINDA REDDY.—May I know the number of pairs of shoes and chappals manufactured in the State of Mysore ?

Sri H. SIDDAVEERAPPA.—I am sorry I cannot give you the figures.

Sri Mulka GOVINDA REDDY.—May I know the number of shoes and chappals that is imported into the State of Mysore ?

Sri H. SIDDAVEERAPPA.—I can only say that quite a large percentage is also imported from other parts of India. But some percentage of it has been manufactured in Mysore also as the Hon'ble Member is aware of.

Sri Mulka GOVINDA REDDY.—Are the Government aware that 70 per cent or 80 per cent of the people go without chappals in the Mysore State ?

Sri H. SIDDAVEERAPPA.—Sir, I have not collected any statistical figures to show how many people are wearing shoes, how many people are wearing chappals and how many are going bare-footed. I think it all depends upon the economic condition in the country. Generally, in the rural parts, a man may be poor but still he does not move about without having a pair of chappals.

Sri Mulka GOVINDA REDDY.—What programme the Government have to increase the manufacture of chappals so that one pair of chappal is given to every one in the State of Mysore ?

Sri H. SIDDAVEERAPPA.—We have not taken it as a National Industry.

ಶ್ರೀ ವಿ. ಮಸಿಯಪ್ಪ.—ಈಗ ತಾವು ಈ ಹ್ಯಾಂಡ್ ಲೂಂ ಮತ್ತು ಖಾದಿ ಕೈಗಾರಿಕೆಗಳಿಗೆ ಹೇಗೆ ಒಂದು ಪ್ರೋತ್ಸಾಹ ಕೊಡುತ್ತಿದ್ದೀರೋ, ಅದರಂತೆಯೇ ಈ ಸಾಮಾನುಗಳಿಗೂ ಕೂಡ ಈ ಆಸ್ಪತ್ರೆ, ಪೋಲೀಸ್ ಇತ್ಯಾದಿ ಇಲಾಖೆಗಳಿಗೆಲ್ಲಾ ಬೇಕಾದಂಥ ಸಾಮಾನು ಗಳನ್ನೆಲ್ಲಾ ನಮ್ಮ ಲೆದರ್ ಇಂಡಸ್ಟ್ರಿಯಲ್ ಕಂಪೆನಿ ಗಳಿಂದಲೇ ಕೊಂಡುಕೊಳ್ಳುವಂತೆ ಏರ್ಪಾಡು ಮಾಡು ವುದು ಸೂಕ್ತವಲ್ಲವೇ ?

ಶ್ರೀ ಎಚ್. ಸಿದ್ಧವೀರಪ್ಪ.—ಈಗ ಇದೇ ರೀತಿಯಾಗಿ ಮಾಡಬೇಕೆಂದು ನಾವು ಆ ಸ್ಟೋರ್ಸ್ ಪರ್ಚೇಸ್

ಕಮಿಟಿಗೆ ತಿಳಿಸಿದ್ದೇವೆ. As I have stated, the Police Department have been instructed that even though the cost is a little more, whatever is manufactured in Mysore will have to be purchased provided the quality is also kept up. I may tell the Hon'ble Member that with a particular Co-operative Society in Malavalli, I have placed orders for giving a large number of pairs of chappals and we have paid some capital in advance also so that they may manufacture and give the articles. We gave them work for nearly six to eight months and so, the policy of the Government is to encourage whoever comes forward.

Sri M. PALANIYAPPAN.—Have the Government given any protection to local industries ?

Sri H. SIDDAVEERAPPA.—I do not know what kind of protection is envisaged by the Hon'ble Member.

Sri M. PALANIYAPPAN.—In view of the enormous quantities of leather goods being imported into the Mysore State, is it not a fact that the local industry is dying out ?

Sri H. SIDDAVEERAPPA.—I am not aware of it.

Sri M. PALANIYAPPAN.—In view of the fact that no proper encouragement is given to local industries by just increasing rate of outside products, this trade is suffering a lot ?

Sri H. SIDDAVEERAPPA.—I cannot have any protective duty or thing like that. India is one and whatever things come here are bound to find a place in all the markets. I cannot stop if other parts of India manufacture cheaper articles and sell them in Mysore.

Sri M. PALANIYAPPAN.—As in the case of handloom cloth, will you just contemplate putting some duty on these imported goods and thus give protection to the local manufactured goods ?

Sri H. SIDDAVEERAPPA.—That is a matter which comes within the purview of the Centre.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈಗ ನಮ್ಮ ಸೀಮೆಯಲ್ಲಿ ಚರ್ಮ ಹದ ಮಾಡುವ ಸೆಂಟರುಗಳು ಎಷ್ಟಿವೆ ?

ಶ್ರೀ ಎಚ್. ಸಿದ್ದವೀರಪ್ಪ.—ಕೊರಟಗೆರೆ ತಾಲ್ಲೂಕು ಹ ಲಕುಂಟೆಯ ಲ್ಲಿ ಒಂದಿದೆ; ಬೀರೂರಿನಲ್ಲೂ ಒಂದು ಕೇಂದ್ರ ಇವೆ. ಇನ್ನು ದೊಡ್ಡಸಿದ್ದವ್ವನ ಹಳ್ಳಿಯಲ್ಲಿ ಒಂದನ್ನು ಪ್ರಾರಂಭಿಸಬೇಕೆಂದಿದ್ದೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈ ಕೈಗಾರಿಕೆಗಳನ್ನು ಉತ್ತಮಪಡಿಸುವುದಕ್ಕೆ ಏನು ಏರ್ಪಾಡು ಮಾಡಿದ್ದೀರಿ ? ಅವರಿಗೆ ಸಾಕಾದಷ್ಟು ಹಣ ಸಹಾಯ ಮಾಡಿ ಪ್ರೋತ್ಸಾಹ ಕೊಡಬೇಕಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪ.—ಎಷ್ಟು encouragement ಬೇಕೋ ಅಷ್ಟು ಕೊಡಬೇಕಾದ್ದು ಸರ್ಕಾರದ ಕರ್ತವ್ಯ. ಕಾರಣವೇನೆಂದರೆ ಇದರ ಪ್ರತಿಫಲವೆಲ್ಲ Scheduled Castes ಜನರಿಗೆ ಹೋಗುತ್ತದೆ. ಅದೇ ಉದ್ದೇಶದಿಂದಲೇ Chrome Tanning ಕಂಪೆನಿಗೆ ಸಾಲ ಸಹ ಕೊಟ್ಟು ಕೆಲಸ ಮಾಡಿಸುತ್ತಿದ್ದೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈ ಉದ್ಯಮವನ್ನು ಹೆಚ್ಚು ಉತ್ತಮಗೊಳಿಸಿದರೆ ನಿಮ್ಮ ವರ್ಗದವರಿಗೆ ಇದರಿಂದ ಹೆಚ್ಚು ಉತ್ಪತ್ತಿಯಾಗುವುದರಿಂದ ಇದನ್ನು ಉತ್ತಮಪಡಿಸಲು ಯೋಚನೆ ಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಯೋಚನೆ ಮಾಡುತ್ತೇವೆ.

ಶ್ರೀ ಎಸ್. ಗೋಪಾಲಗೌಡ.—ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ರಸ್ತೆಯಲ್ಲಿ ಒಂದು Leather Industry ಇದೆ ಎನ್ನುವುದು ಸರ್ಕಾರಕ್ಕೆ ಗೊತ್ತಿಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪ.—ಹೊಳಲ್ಕೆರೆ ರಸ್ತೆಯಲ್ಲಿ ಒಂದು ಕಾರ್ಖಾನೆ ಇದೆ. ಅದು ಈಗ ಕೆಲಸ ಮಾಡುತ್ತಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಇದರಲ್ಲಿ ಸರ್ಕಾರದವರು ಏನಾದರೂ ಷೇರುಗಳನ್ನು ತೆಗೆದುಕೊಂಡಿದ್ದಾರೆಯೇ ?

Sri H. SIDDAVEERAPPA.—I want notice.

ಶ್ರೀ ಮುದ್ದುರಾಮಯ್ಯ.—Chrome Tanning ಕಂಪೆನಿಯಲ್ಲಿ tanning section ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಏನಾದರೂ improvement ಮಾಡಬೇಕೇ ಎಂದು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಮುದ್ದುರಾಮಯ್ಯ.—ಈ ಕೈಗಾರಿಕೆಯನ್ನು ಅಭಿವೃದ್ಧಿಪಡಿಸುವುದಕ್ಕೆ ಕೈಕೊಂಡಿರುವ ಯೋಜನೆಗಳೇನು ?

ಶ್ರೀ ಎಚ್. ಸಿದ್ದವೀರಪ್ಪ.—ಅಲ್ಲಿ ಸರಿಯಾದ staff appoint ಮಾಡಿದ್ದೇವೆ. Foreman, Tannerymen, ಇತ್ಯಾದಿ ಇದ್ದಾರೆ. ಚರ್ಮವನ್ನು ಕೊಂಡುಕೊಳ್ಳುವುದಕ್ಕೆ ದುಡ್ಡು provide ಮಾಡಿದ್ದೇವೆ. ಅಲ್ಲಿ ಬಂದ ಚರ್ಮವನ್ನು ತೆಗೆದುಕೊಂಡು ಹದ ಮಾಡುತ್ತಾರೆ. Tanning Charges ಸಹ ಕಡಿಮೆ ದರದಲ್ಲಿವೆ. ಇನ್ನೂ ಸರಿಯಾಗಿ improve ಮಾಡುವುದಕ್ಕೆ ಏನಾದರೂ ಮುಖ್ಯವಾದ ಕಾರ್ಯಗಳಿದ್ದರೆ ಯೋಚನೆ ಮಾಡುತ್ತೇವೆ.

ಶ್ರೀ ಮುದ್ದುರಾಮಯ್ಯ.—ತಂಗಡಿಚಕ್ಕೆ ಸಿಗದೆ ಬಹಳ ತೊಂದರೆಯಾಗಿ ಹದ ಮಾಡುವ ಕೆಲಸ ಸರಿಯಾಗಿ ನಡೆಯದೆ ಇರುವುದರಿಂದ ತಂಗಡಿಚಕ್ಕೆ ಸರಿಯಾಗಿ ಸಿಗುವಂತೆ ಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ತಂಗಡಿಚಕ್ಕೆ ನಷ್ಟೇ ಮಾಡಲು ಒಂದು Co-operative Society ಇದೆ. ಅವರಿಂದ ತರಿಸುವುದಕ್ಕೆ ಯೋಚನೆ ಮಾಡುತ್ತಿದ್ದೇವೆ. ಇವರಿಗೇ ಏನಾದರೂ ಒಂದು area allot ಮಾಡಬೇಕಾದರೆ ಯೋಚನೆ ಮಾಡೋಣ.

ಶ್ರೀ ಆರ್. ಅನಂತರಾಮನ್.—ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪೆನಿಯಲ್ಲಿ ಸರ್ಕಾರದವರು ಏನಾದರೂ ಷೇರು ತೆಗೆದುಕೊಂಡಿದ್ದಾರೆಯೇ?

Sri H. SIDDAVEERAPPA.—I believe we have got about 10 per cent of the shares.

ಶ್ರೀ ವಿ. ವೆಂಕಟಪ್ಪ.—ಚನ್ನಪಟ್ಟಣದಲ್ಲಿ ಚರ್ಮ ಹದ ಮಾಡುವುದಕ್ಕೆ ಒಂದು ಕಟ್ಟಡ ಕಟ್ಟಿಸಿದ್ದೀರಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್.

ಶ್ರೀ ವಿ. ವೆಂಕಟಪ್ಪ.—ಚನ್ನಪಟ್ಟಣದಲ್ಲಿ ಚರ್ಮ ಹದ ಮಾಡುವುದಕ್ಕೋಸ್ಕರ ಒಂದು ಕಟ್ಟಡ ಕಟ್ಟಿಸಿದ್ದು, ಅಲ್ಲಿ ಕೆಲಸ ನಡೆಯುತ್ತಿಲ್ಲವೆಂದು ಆ ಕಟ್ಟಡವನ್ನು ಬೇರೆ ಕೆಲಸಗಳಿಗೆ ಕೊಡಬೇಕೆಂದು ಇರುವುದು ನಿಜವೆ?

Sri H. SIDDAVEERAPPA.— I will look into it. I will see why it is so.

ಶ್ರೀ ಎಂ. ಚಿಕ್ಕಲಿಂಗಯ್ಯ.—ಚರ್ಮದ ಕೆಲಸ ಮಾಡುವವರು shoes ತಯಾರು ಮಾಡುವವರು, ಬಂಡವಾಳಕ್ಕಾಗಿ ಬೇರೆಯವರ ಹತ್ತಿರ ಹಣ ತೆಗೆದುಕೊಂಡು ಅವರ ಕೆಲಸಗಳನ್ನು ಮಾಡುತ್ತಿದ್ದಾರಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಸರ್ಕಾರದವರು ಒಂದು ಸರ್ವೆ ಮಾಡಿ ಇವರಿಗೆ ಸ್ವತಂತ್ರವಾಗಿ ಕೆಲಸ ಮಾಡಲು ಅವಕಾಶ ಕಲ್ಪಿಸಿಕೊಡುತ್ತೀರಾ?

Sri H. SIDDAVEERAPPA.—Let them form into some co-operatives; I am prepared to advance loans and see that they work properly.

Sri Sydney A. THOMAS.—Are Government aware that enough skin is not available due to the anti-cow slaughter Acts?

(*The Minister was keeping silent.*)

Sri Sydney A. THOMAS.—I want an answer, Sir.

Sri H. SIDDAVEERAPPA.—My keeping quiet is the answer. (*Laughter*).

Sri Sydney A. THOMAS.—I want to know how Government are going to remedy this and help those people?

Sri H. SIDDAVEERAPPA.—Sir, we have got any number of skins of animals who die a natural death.

Power Supply from Sira to Maranagere.

Q.—717. Sri B. N. RAME GOWDA (Sira).—

Will the Government be pleased to state:—

(*a*) whether an estimate was sanctioned to supply power from Sira to Maranagere in Sira Taluk;

(*b*) if so, when?

A.—Sri Kadidal MANJAPPA (Minister for Revenue and Public Works) [on behalf of DR. R. NAGAN GOWDA (Minister for Agriculture)].—

(*a*) No.

(*b*) Does not arise in view of answer to (*a*).

ಶ್ರೀ ಬಿ. ಎನ್. ರಾಮೇಗೌಡ.—ಸೀರ್‍ಯದಿಂದ ಮಾರನಗೆರೆಗೆ ಮಧ್ಯೆ 40 ಪಂಪು ಸೆಟ್ಟುಗಳಿಗೆ 1953-54ನೆ ಇಸವಿಯಲ್ಲಿ ಎಸ್ಟಿಮೆಂಟ್ ಆಗಿರಲಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ. ನಮಗೆ ಬಂದಿರುವ ವರದಿ ಪ್ರಕಾರ 3 ಜನ ಮಾತ್ರ ಅಪ್ಲಿಕೇಷನ್ ಹಾಕಿದರು. ಖರ್ಚು ಬಹಳ ಜಾಸ್ತಿ ಆಗುವುದರಿಂದ ಹೆಚ್ಚು ಜನ ಅಪ್ಲಿಕೇಷನ್‌ದಾರರು ಬಂದರೆ ತಮ್ಮ ಮನವಿಯನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡಬಹುದೆಂದು ಇಲಾಖೆಯವರು ಹೇಳಿದ್ದಾರೆ.

ಶ್ರೀ ಬಿ. ಎನ್. ರಾಮೇಗೌಡ.—1953-54ನೇ ಸಾಲಿನ ಬಡ್ಜೆಟ್ಟಿನಲ್ಲಿ 3 ಲಕ್ಷ ರೂಪಾಯಿ ಇದಕ್ಕೆ ಸರ್ಕಾರದವರು ಮಂಜೂರು ಮಾಡಿ, ಒಂದು ಲಕ್ಷ ರೂಪಾಯಿಗಳನ್ನು ಆ ವರ್ಷದ ಖರ್ಚಿಗಾಗಿ allot ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

Sri Kadidal MANJAPPA.—I want notice.

N.E.S. Block (Starting in T.-Narsipur Kasaba Hobli).

Q.—858. Sri S. SRINIVASA IYENGAR (T.-Narasipur).—

Will the Government be pleased to state:—

(*a*) whether it was proposed to start a N.E.S. Block in T.-Narasipur Taluk in the year 1952 or 1953;

(*b*) whether it has come to their notice that Sosale and Kasaba hoblis are undeveloped areas in respect of inter-village communications, etc.;

(*c*) whether they would consider the question of starting a N.E.S. Block in Kasaba Hobli at least in the year 1955-56?

A.—Sri Kadidal MANJAPPA (Minister for Revenue and Public Works) [on behalf of DR. R. NAGAN GOWDA (Minister for Agricultnre)].—

(*a*) No.

(*b*) Yes.

(c) The suggestion will be considered while allotting new National Extension Service Blocks.

Sri S. SRINIVASA IYENGAR.—May I know when these new National Extension Blocks will be allotted ?

Sri Kadidal MANJAPPA.—Perhaps next year or in the middle of this year.

Mr. SPEAKER.—Next question, question No. 827 ; Sri Mulka Govinda Reddy is permitted to put the question.

Road between Chikkanaikanahally and Banasandra.

Q.—827. Sri Mulka GOVINDA REDDY (Chitaldrug) [On behalf of Sri B. Hutche Gowda (Turuvekere)].—

Will the Government be pleased to state :—

(a) whether it has come to their notice that the road between Chikkanaikanahally and Banasandra is very bad with deep pits and scours on account of abnormal traffic of Manganese ore ;

(b) whether it is not a fact that about 14 bus services (including Government Buses) pass through Chikkanaikanahally Town and there is the constant danger to life and property of the passengers owing to the very bad nature of the road ;

(c) whether it is not necessary to provide cement concreting to this road for 11 miles from Banasandra to Chikkanaikanahally Town instead of proposed Block-topping, since this could not stand the heavy Manganese ore traffic ?

A.—Sri Kadidal MANJAPPA (Minister for Revenue and Public Works).—

(a) It was bad but has since been improved.

(b) The road is trafficable.

(c) No.

Sri Mulka GOVINDA REDDY.—May I know the number of buses that ply on Banasandra–Chikkanaikanahally Road per day ?

Sri Kadidal MANJAPPA.—I want notice, Sir.

Sri Mulka GOVINDA REDDY.—May I know the tonnage of manganese ore that is carried every day on this road ?

Sri Kadidal MANJAPPA.—I am told that there is heavy traffic on this road; but, I do not know the tonnage.

Sri Mulka GOVINDA REDDY.—May I know the number of lorries that ply on this road ?

Sri Kadidal MANJAPPA.—Even for that I require notice.

Sri Mulka GOVINDA REDDY.—Will the Government seriously consider the question of cement concreting this road ?

Sri Kadidal MANJAPPA.—We have seriously considered and come to the conclusion that this road should be block-topped.

Sri Mulka GOVINDA REDDY.—Do Government collect any contribution from the mine owners for the use of this road, Sir ?

Sri Kadidal MANJAPPA.—I do not think so.

Neelagarahalla stream in Harapanahalli Town (Deviation work).

Q.—836. Sri Ijari SIRASAPPA (Harapanahalli).—

Will the Government be pleased to state :—

(a) whether they are aware that a stream Neelagarahalla runs across right in the middle of Harapanahalli Town ;

(b) whether they are aware of any proposals to deviate this stream on the outskirts of the town ;

(c) whether they are aware that plans and estimates were prepared for this deviation of the stream and got ready under the Madras Government ;

(d) whether they are aware that this work was sanctioned by Government of Madras ;

(e) if so, why it was not taken up and the causes for the delay ;

(f) whether the Government sanction and execute this deviation of the stream as the stream causes damage to the Town ?

A.—Sri Kadidal MANJAPPA (Minister for Revenue and Public Works).—

(*a*) Yes.

(*b*) Yes.

(*c*) Yes.

(*d*) The Madras Government did not sanction the estimate.

(*e*) Does not arise in view of reply to (*d*).

(*f*) This will be considered.

Sri Ijari SIRASAPPA.—Is it known to the Government that this representation is pending since about 25 years before the Government ?

Sri Kadidal MANJAPPA.—I do not know that, but I am told that the Madras Government had a proposal to deviate this stream.

Sri Ijari SIRASAPPA.—May I know when this estimate was prepared by the Madras Government ?

Sri Kadidal MANJAPPA.—We have no information. But, recently the Public Works Department of this State has prepared an estimate for Rs. 48,000 and it is being scrutinised in the Divisional Office at Bellary.

Sri Ijari SIRASAPPA.—Is it known to the Government that during floods this stream causes great havoc to the town ?

Sri Kadidal MANJAPPA.—It is true and a number of people are put to hardship.

Sri Ijari SIRASAPPA.—At the same time, is it known to Government that Malaria is increasing because of the flowing of this stream in the midst o the town ?

Sri Kadidal MANJAPPA.—That is also partly true.

Sri Ijari SIRASAPPA.—In view of these facts, will the Government assure us that this work would be taken up early, Sir ?

Sri Kadidal MANJAPPA.—Unless we get the estimate, I am not in a position to say when we are going to take up the work. I am told that the Panchayet Board had agreed to pay one-fourth of the quota of the total estimate. I do not know whether they are now agreeable to share the cost as they had agreed once. Anyhow, the matter would be very sympathetically considered.

Sri Ijari SIRASAPPA.—The Hon'ble Minister just now said that the estimate was prepared and it is before the department.

Sri Kadidal MANJAPPA.—Yes; but, there is that question of the Panchayet agreeing to share the one-fourth of the cost.

Sri Ijari SIRASAPPA.—If they come forth to share one-fourth of the cost, will the Government be pleased to take it up immediately ?

Sri Kadidal MANJAPPA.—I have already said that in the absence of the estimate, I cannot say definitely when we are going to take up the work. Anyway, the matter will be considered very sympathetically, Sir.

Badanakere Channels, Sidlaghatta Taluk (Repairs).

Q.—874. Sri G. PAPANNA (Sidlaghatta-Chickballapur).—

Will the Government be pleased to state :—

(*a*) the present condition of the two important channels of Badanakere in Sidlaghatta Taluk ;

(*b*) whether the channels have been repaired at any time ?

A.—Sri Kadidal MANJAPPA (Minister for Revenue and Public Works).—

(*a*) Fairly good.

(*b*) Yes.

ಶ್ರೀ ಜಿ. ಪಾಪಣ್ಣ.—(ಬಿ) ಪ್ರಶ್ನೆಗೆ ಉತ್ತರವಾಗಿ 'ರಿಪೇರಿಯಾಗಿದೆ' ಎಂದು ಉತ್ತರ ಬಂದಿದೆ. ಹಿಂದೊಮ್ಮೆ ಇದೇ ಪ್ರಶ್ನೆ ಕೇಳಿದ್ದಕ್ಕೆ ಎರಡು ವರ್ಷದ ಕೆಳಗೆ ರಿಪೇರಿಯಾಗಿದೆಯೆಂದು ಹೇಳಿ ಎಷ್ಟು ಹಣ ಖರ್ಚಾಗಿದೆಯೆಂದು ತಿಳಿಸಿದ್ದಿರಿ. ಆದರೆ, 'ಆ ಸ್ಥಳಕ್ಕೆ ಹೋಗಿನೋಡಿ; ರಿಪೇರಿಯಾಗಿಲ್ಲ; ಹಣ ದುರುಪಯೋಗವಾಗಿದೆ' ಎಂದು ಕಾಗದ ಬರೆದಿದ್ದಕ್ಕೆ ಕಾಲುವೆಗೆ ಎನ್ನುವುದಕ್ಕೆ ಬದಲಾಗಿ ಕಟ್ಟೆಗೆ ಎಂದು ಭಾವಿಸಿ ಉತ್ತರ ಕೊಟ್ಟಿದ್ದರು ಎಂದು ತಿಳಿಸಿದರು. ಈಗ ಪುನಃ ಮೊದಲಿನಂತೆಯೇ ರಿಪೇರಿಯಾಗಿದೆಯೆಂದು ಉತ್ತರ ಕೊಟ್ಟಿದ್ದೀರಲ್ಲಾ ?

ಶ್ರೀ ಕಡಿದಾಳ್ ಮಂಜಪ್ಪ.—ಯಾವಾಗಲೋ ರಿಪೇರಿಯಾಗಿರಬೇಕು. ಈಗ ಪುನಃ 24,000 ರೂಪಾಯಿಗಳಿಗೆ ರಿಪೇರಿಯ ಬಗ್ಗೆ ಎಸ್ಟಿಮೇಟ್ ತಯಾರಾಗಿದೆ. ಅದು ಸೂಪರಿಂಟೆಂಡಿಂಗ್ ಇಂಜಿನಿಯರ ಆಫೀಸಿನಲ್ಲಿದೆ.

ಶ್ರೀ ಜಿ. ಪಾಪಣ್ಣ.—ಕಾಲುವೆ ರಿಪೇರಿಯಾಗಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಕಾಲುವೆ ಮತ್ತು ಮಡಬಾಯಿ ರಿಪೇರಿಯಾಗಿವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಕೆಲಸ ಮಾಡದೆ ಖರ್ಚು ಹಾಕಿದ್ದಾರೇ ?

ಶ್ರೀ ಕಡಿದಾಳ್ ಮಂಜಪ್ಪ.—ಹೋದಸಾರಿ annual repairs ಬಗ್ಗೆ ಖರ್ಚಾಗಿಲ್ಲವೆಂದು ಹೇಳಿದ್ದರು. ಪುನಃ enquiry ಮಾಡಿ ರಿಪೋರ್ಟ್ ತರಿಸಿಕೊಂಡು, ರಿಪೋರ್ಟಿನ ವಿದ್ಯಮಾನವನ್ನು ಕಾಗದದಲ್ಲಿ ಬರೆದ 'ಕಾಲುವೆಗೆ ಅಲ್ಲ' 'ಕಟ್ಟೆ ರಿಪೇರಿ ಬಗ್ಗೆ' ಎಂದು ತಿಳಿಸಿದ್ದೇವೆ.

Anecut across Dandavathi River near Kuppagaddi, Sorab Taluk.

*Q.—877 Sri MALLIKARJUNAPPA GOWDA (Sorab—Shikaripur).—

Will the Government be pleased to state:—

(a) the year in which an estimate has been prepared for the construction of an anecut across the Dandavathi River near Kuppagaddi in Sorab Taluk;

(b) the amount of the estimate;

(c) the extent of land and the number of villages that will get irrigational facilities by this project (information in respect of dry and wet lands to be furnished);

(d) the reason for not yet starting the works ?

A.—Sri Kadidal MANJAPPA (Minister for Revenue and Public Works).—

(a) The original estimate was prepared in 1949. It is now being revised.

(b) About Rs. 42 lakhs.

(c) Out of a total irrigable area of 8,000 acres, 4,500 acres are tank-fed wet, 500 acres rain-fed wet and 3,000 acres are dry lands.

(d) The work has yet to receive sanction.

ಶ್ರೀ ಮಲ್ಲಿಕಾರ್ಜುನಪ್ಪಗೌಡ.—ಈ ಕಾಂಗಾರಿಯನ್ನು ಯಾವಾಗ ಮಂಜೂರು ಮಾಡಿ ಕೆಲಸವನ್ನು ಪ್ರಾರಂಭ ಮಾಡುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಇದನ್ನು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಬೇಕೆಂದು ಯೋಚನೆ ಮಾಡಿದ್ದೇವೆ.

Bridge on Varada River in Sorab-Jade Road (Construction).

Q.—878 Sri MALLIKARJUNAPPA GOWDA (Sorab-Shikaripur).—

Will the Government be pleased to state:—

(a) the year in which the construction of a bridge to Varada River in Sorab-Jade Road in Sorab Taluk has been sanctioned;

(b) the amount of the original estimate;

(c) the amount spent annually so far;

(d) the time by which the work may be completed ?

A.—Sri Kadidal MANJAPPA (Minister for Revenue and Public Works).—

(a) In April 1947.

(b) Rs. 2,92,000.

(c)—

		Rs.	a.	p.
1948-49	...	62,640	12	0
1949-50	...	33,020	13	0
1950-51	...	67,232	9	0
1951-52	...	41,453	15	5
1952-53	...	30,658	8	3
1953-54	...	39,601	8	0
1954-55	...	23,611	13	0
		2,98,219	14	8

(d) By March 1956.

ಶ್ರೀ ಮಲ್ಲಿಕಾರ್ಜುನಪ್ಪಗೌಡ.—9 ವರ್ಷಗಳಾಗಿದೆಯಲ್ಲಾ, ಇಷ್ಟು ವರ್ಷ ಸುಸ್ತಿಯಾಗಿರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಆ ಪ್ರದೇಶ ಮಲೆನಾಡಾಗಿರುವುದೇ ಮೂಲಕಾರಣ. ಕಂಟ್ರಾಕ್ಟರುಗಳು ಜಾಗ್ರತೆ ಕೆಲಸಮಾಡದಿರುವುದು, ಸಾಮಾನುಗಳು ವಗ್ಗೈರೆ ಸಿಕ್ಕದಿರುವುದು ಇನ್ನೊಂದು ಕಾರಣ. ಈಗ ಕೆಲಸ ಬಹಳಮಟ್ಟಿಗೆ ಮುಗಿದಿದೆ. ಇನ್ನು ನಾಲ್ಕೈದು ತಿಂಗಳೊಳಗೆ ಮುಗಿಯಬಹುದೆಂಬ ನಿರೀಕ್ಷೆಯಿದೆ.

Alalasandra Venkatapura Tank in Koratagere Taluk (Restoration).

Q.—910. Sri R. MUDDURAMIAH (Koratagere-Madhugiri).—

Will the Government be pleased to state:—

(a) whether estimates have been prepared for the restoration of Alalasandra Venkatapura tank in the Koratagere Taluk;

(b) if so, when this tank work will be started ?

A.—Sri Kadidal MANJAPPA (Minister for Revenue and Public Works).—

(*a*) Yes.

(*b*) After the estimate is sanctioned.

ಶ್ರೀ ಆರ್. ಮುದ್ದುರಾಮಯ್ಯ.—ಈ ಕೆರೆಗೆ ತಯಾರಾಗಿರತಕ್ಕ ಅಂದಾಜು ಮೊಬಲಗು ಎಷ್ಟು ?

ಶ್ರೀ ಕಡಿದಾಳ್ ಮಂಜಪ್ಪ.—ಒಂದು ಲಕ್ಷ ಐವತ್ತ ನಾಲ್ಕು ಸಾವಿರ.

ಶ್ರೀ ಆರ್. ಮುದ್ದುರಾಮಯ್ಯ.—ಈ ಕೆರೆಯ ಕೆಲಸ ವನ್ನು ತೆಗೆದುಕೊಳ್ಳುವುದರಿಂದ ಆ ಪ್ರದೇಶದ ಜನರಿಗೆ ಎಷ್ಟು ಅನುಕೂಲವಾಗುತ್ತದೆಂಬುದು ತಮಗೆ ಗೊತ್ತಿ ದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—162 ಎಕರೆ ಜಮೀನು ಮಾಲೀಕರಿಗೆ ಅನುಕೂಲವಾಗುತ್ತದೆ.

ಶ್ರೀ ಆರ್. ಮುದ್ದುರಾಮಯ್ಯ.—ಜಾಗ್ರತೆ ಮಾಡು ತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—Irrigation Enquiry ನಡೆಯುತ್ತಿದೆ. Enquiry ಆಗಿ ಎಸ್ಟಿಮೇಟ್ ಬಂದ ನಂತರ ಮಾಡುತ್ತೇವೆ.

Coir Industry in Kellodu in Hosadurga Taluk.

Q.—768. Sri G. BASAPPA (Hosadurga).—

Will the Government be pleased to state—

(*a*) whether they had promised to start coir industry at Kellodu in Hosadurga Taluk;

(*b*) the action taken in the matter ?

A.—Sri H. SIDDAVEERAPPA (Minister for Home and Industries).—

(*a*) Yes.

(*b*) The starting of the Centre has already been sanctioned. As a building for locating the Centre was not readily available, an estimate for constructing a new building for the purpose has also been sanctioned. A site has been selected and action is being taken to put up the building and also to purchase the necessary equipment and appoint the required staff.

ಶ್ರೀ ಜಿ. ಬಸಪ್ಪ.—ಈ ಅಂದಾಜ ಮಂಜೂರಾಗಿ ಈಗಾಗಲೇ ಎಷ್ಟು ವರ್ಷವಾಯಿತು ?

ಶ್ರೀ ಎಚ್. ಸಿದ್ದವೀರಪ್ಪ.—ಸ್ವಲ್ಪ ದಿವಸಗಳ ಕೆಳಗೆ.

ಶ್ರೀ ಜಿ. ಬಸಪ್ಪ.—ಕಳೆದ ಬಡ್ಜೆಟ್ ಅಧಿವೇಶನದಲ್ಲಿ 2,000 ಚಿಲ್ಲರೆ ಮೊಬಲಗಿಗೆ ಅಂದಾಜು ಮಂಜೂರಾಗಿ ಸೈಟ್ ಇಲ್ಲದೆ ಕೆಲಸ ನಿಧಾನವಾಗಿದೆಯೆಂದು ಹೇಳಿದ್ದಿರಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಅಕ್ವಿಸಿಷನ್ ಗಲಾಟೆ ಇತ್ತು. ಈಗ ಅಕ್ವಿಸಿಷನ್ ಕ್ರಮ ಆಗಿದೆ. ಕೆಲಸ ಬೇಗ ತೆಗೆದುಕೊಳ್ಳುತ್ತಾರೆ.

Sri G. BASAPPA.—Action is being taken to put up the building and also to purchase the necessary equipment and appoint the required staff ಎಂದು ಹೇಳಿದ್ದೀರಿ. ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ಎಸ್ಟಿಮೇಟ್ ಸ್ಯಾಂಕ್ಷನ್ ಆಗಿದೆ ; ಬೇಗ ಮಾಡುತ್ತೇವೆ.

ಶ್ರೀ ಬಿ. ಚಿಕ್ಕಣ್ಣ.—ಈ ಕೈಗಾರಿಕೆಗೆ ಅವಶ್ಯಕವಾದ ಯಂತ್ರೋಪಕರಣಗಳಿಗೆ ಏರ್ಪಾಡು ಮಾಡಿದ್ದೀರಾ ?

ಶ್ರೀ ಎಚ್ ಸಿದ್ದವೀರಪ್ಪ.—ಬಿಲ್ಡಿಂಗ್ ಆದಮೇಲೆ ಮಾಡುತ್ತೇವೆ. It is a test pilot plant, ಅದಕ್ಕೆ ಬೇರೆ ಸರ್ವೆ ನಡೆಯುತ್ತಿದೆ.

ಶ್ರೀ ಬಿ. ಚಿಕ್ಕಣ್ಣ.—Coir Industry ಬೋರ್ಡಿನಿಂದ ರಿಪೋರ್ಟ್ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಬಂದಿಲ್ಲ.

ಶ್ರೀ ಟಿ. ಹನುಮಯ್ಯ.—Coir Industryಗೆ ಹಿರಿಯೂರು ತಾಲ್ಲೂಕು ಲಾಯಖ್ಖಾಗಿದೆಯೆಂದು ಹೇಳಿದ್ದಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಒಂದೆರಡು ಕಡೆ Cocoanut Committeeಯವರು ಹೇಳಿದರು, ಮೈಸೂರಿನಲ್ಲಿ ಸೌಕರ್ಯಗಳು ಸಾಲದು ಎಂದು. ಈಗ test plant ಹಾಕಿ ನೋಡುತ್ತಿದ್ದೇವೆ.

ಶ್ರೀ ಟಿ. ಹನುಮಯ್ಯ.—ಕೇಂದ್ರ ಸರ್ಕಾರದವರು ಇದನ್ನು ಸರ್ವೆಮಾಡಿ ನೋಡಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಅವರು ದೇಶದ ಎಲ್ಲಾ ಕಡೆಯಲ್ಲೂ ಮಾಡುತ್ತಿದ್ದಾರೆ. ಈಗ ಒಂದು definite Scheme ಪ್ರಕಾರ ಹೊಸದುರ್ಗ ತಿಪಟೂರುಗಳಲ್ಲಿ ಪರಿಶೀಲನೆ ಮಾಡುತ್ತಿದ್ದಾರೆ. ಅದನ್ನು ನೋಡಬೇಕು.

ಶ್ರೀ ಟಿ. ಹನುಮಯ್ಯ.—ಹಿರಿಯೂರು ತಾಲ್ಲೂಕಿನಲ್ಲಿ ಸ್ಥಾಪನೆ ಮಾಡಿದರೆ ಯಶಸ್ವಿಯಾಗಿ ನಡೆಯುತ್ತದೆಂದು ಸರ್ಕಾರದವರು ಯೋಚನೆ ಮಾಡುತ್ತಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಆ ಆಲೋಚನೆ ಮಾಡೋಣ. ಒಂದೆರಡು ಕಡೆ successful ಆದರೆ ನೋಡೋಣ.

ಶ್ರೀ ವಿ. ಮಸಿಯಪ್ಪ.—ಹಿರಿಯೂರು ತಾಲ್ಲೂಕಿನಲ್ಲಿ Coir Industryಯನ್ನು Small scale ನಲ್ಲಿ ಶುರು ಮಾಡಬೇಕೆಂದು ಹೇಳಿ ಇಲಾಖೆಯ ಪರಿಣಿತರು ಬಂದು ಸರ್ವೆ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

Mr. SPEAKER.—I believe this question refers only to Hosadurga.

ಶ್ರೀ ಎಚ್. ಸಿದ್ದವೀರಪ್ಪ.—ಮಾಡಿದ್ದಾರೆ. ಮತ್ತು ಅವರು ಕೊಟ್ಟಿರುವ proposalsನಲ್ಲಿ, Coir Industryಯು ಫಲಪ್ರದವಾಗಿ ನಡೆಯಬೇಕಾದರೆ Water facilities ಸರಿಯಾಗಿರಬೇಕೆಂದು ಹೇಳುತ್ತಿದ್ದಾರೆ. ಅದರಮೇಲೆ Testಗಾಗಿ Cottage Industry basis ಮೇಲೆ ಮೊದಲು ಹೊಸದುರ್ಗ ಆಮೇಲೆ ತಿಪಟೂರಿನಲ್ಲಿ ಮಾಡಬೇಕೆಂದಿದ್ದೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಕಡೂರು ತಾಲ್ಲೂಕಿನಲ್ಲಿ ನೀರು ಬೇಕಾದಷ್ಟಿದೆ. ಅಲ್ಲಿ ಸರ್ವೆ ಮಾಡಿಸಿದ್ದೀರಾ ?

ಅಧ್ಯಕ್ಷರು.—ಆಗಲೇ ಒಮ್ಮೆ ಕೇಳಿದ್ದೀರಿ.

ಶ್ರೀ ವಿ. ವೆಂಕಟಪ್ಪ.—ಸ್ವಾಮಿ, ಒಂದು ವಿಷಯ ತಮ್ಮ ಗಮನಕ್ಕೆ ತರಬೇಕಾಗಿದೆ. ಈ ಪ್ರಶ್ನೆಗಿಂತ ಮುಂಚೆ ಕಳುಹಿಸಿದ ಪ್ರಶ್ನೆಗಳಿಗೆ ಉತ್ತರ ಬರದೆ ಹಾಗೆಯೇ ಉಳಿದಿವೆ. ಆಗಲೇ ಈಚೆಗೆ ಬಂದಿರುವ ಪ್ರಶ್ನೆಗಳಿಗೆ ಉತ್ತರಗಳನ್ನು ಕಳುಹಿಸಿಕೊಡುತ್ತಿದ್ದಾರೆ. ಇದಕ್ಕೆ ಕಾರಣವೇನು ?

ಅಧ್ಯಕ್ಷರು.—ಅದರ ಬಗ್ಗೆ ಕಾಗದ ಬರೆಯುತ್ತಿದ್ದೇವೆ.

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಪ್ರಶ್ನೆಗಳಿಗೆ ಉತ್ತರ ಕೊಡಬೇಕಾದರೆ ತಾಲ್ಲೂಕುಗಳಿಂದ, ಜಿಲ್ಲೆಗಳಿಂದ ತರಿಸಿ ಕೊಡಬೇಕಾಗುತ್ತದೆ. ಇನ್ನು ಕೆಲವು ಪ್ರಶ್ನೆಗಳಿಗೆ ಸೆಕ್ರೆಟೇರಿಯಟ್ಟಿನಲ್ಲಿರತಕ್ಕ ಸಾಮಗ್ರಿಗಳಿಂದಲೇ ಉತ್ತರ ಕೊಡಬಹುದಾಗಿರುತ್ತದೆ. ಆದ್ದರಿಂದ ತಾಲ್ಲೂಕುಗಳಿಂದ, ಜಿಲ್ಲೆಗಳಿಂದ ತರಿಸಿಕೊಡಬೇಕೆಂದರೆ ಕಷ್ಟವಾಗುತ್ತದೆ.

Mr. SPEAKER.—The point is that the questions were sent about one month ago or two months ago, but so far answers have not been furnished. There cannot be so much of delay unless they are withheld for good reasons.

Sri Kadidal MANJAPPA.—The delay has occurred not in all cases, Sir. Wherever it was possible they have furnished the information. But if there is any peculiar difficulty for getting necessary information, there must be delay. We will enquire into the matter.

ಶ್ರೀ ಬಿ. ಎಂ. ಶೀನಪ್ಪ.—ಈವೊತ್ತು ಮೊದಲನೆಯ ಪ್ರಶ್ನೆ ನನ್ನ ಹೆಸರಿನಲ್ಲಿದೆ. ಅದನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ರೂಲ್ಸ್ ಪ್ರಕಾರ ಒಂದು ಪ್ರಶ್ನೆಯನ್ನು ಒಂದು ಸಾರಿಯಲ್ಲದೆ ಎರಡನೆ ಸಾರಿ ಕರೆಯುವುದಕ್ಕೆ ನನಗೆ ಅಧಿಕಾರವಿದೆ. ಮೂರನೆಯ ಸಾರಿ ಕರೆಯಬೇಕಾದರೆ ಸಭೆಯವರನ್ನು ಕೇಳಬೇಕು ; ನನಗೆ ಅಧಿಕಾರವಿಲ್ಲ. I do not want to create a bad precedent. If the House permits I will take up.

(*The House gave consent*).

Iron Racks for Khadi Emporium (Purchase).

Q.—675. Sri B. M. SEENAPPA (Cubbonpet).—

Will the Government be pleased to state :—

(a) whether it is a fact that for the purchase of iron racks required for the use of the recently opened Khadi Emporium the concerned Department sent in an indent with details of sizes and quantity to the Stores Purchase Committee ;

(b) whether the S. P. C. called for tenders in respect of these racks furnishing details of sizes and quantity as made available by the Department ;

(c) whether the quotations received in response to the S. P. C. Tender Notifications were referred to the Department by the S. P. C. with the direction to accept the lowest tender as per rules and to return the records ;

(d) whether it is a fact that on the reply received from the Department to the S. P. C. Secretary's reminder, the Secretary, S. P. C., observed by another communication to the Department that they had placed an order revising the size, quantity and quality and that the rate accepted by the Department was fourteen times over and above the S.P.C.'s rate and that as per rules it was the S.P.C. that had to place the order and that the S. P. C. cannot agree to the order placed by the Department especially in regard to the rate ;

(e) whether the connected records will be placed on the Table ?

A.—Sri H. SIDDAVEERAPPA (Minister for Home and Industries).—

(a) Yes.

(b) Yes.

(c) Yes.

(d) The Stores Purchase Committee had observed that the price paid was excessive on a mistaken impression and incorrect knowledge of facts. But when correct facts were furnished the Stores Purchase Committee approved of the transaction as the price paid was only according to the rates approved by the Stores Purchase Committee and as the supply was also from a firm in the Stores Purchase Committee approved list.

(e) Not considered necessary.

ಶ್ರೀ ಬಿ. ಎಂ. ಶೀನಪ್ಪ.—ಇಲಾಖೆಯವರು ಟೆಂಡರನ್ನು ಕರೆಯುವುದಕ್ಕೆ ನೋಟಿಫಿಕೇಷನ್ ಏನಾದರೂ ಹೊರಡಿಸಿದ್ದರೇ ? ಅಥವಾ ಪತ್ರಿಕೆಯಲ್ಲಿ ಏನಾದರೂ ಪ್ರಕಟಪಡಿಸಿದ್ದರೇ ?

ಶ್ರೀ ಎಚ್. ಸಿದ್ದವೀರಪ್ಪ.—ಆ ವಿವರ ನನ್ನಲ್ಲಿಲ್ಲ.

ಶ್ರೀ ಬಿ. ಎಂ. ಶ್ರೀನಪ್ಪ.—ಸ್ಪೆಸಿಫಿಕೇಷನ್ನನ್ನು ಬದಲಾವಣೆ ಮಾಡಬೇಕಾದರೆ Departmental Headನ ಅಪ್ಪಣೆ ತೆಗೆದುಕೊಂಡು ತಾನೇ ಬದಲಾವಣೆ ಮಾಡಬೇಕು ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಬಿ. ಎಂ. ಶ್ರೀನಪ್ಪ.—ಆ ರೀತಿ ಅವರು ತೆಗೆದುಕೊಂಡಿದ್ದರೇ ?

ಶ್ರೀ ಎಚ್. ಸಿದ್ದವೀರಪ್ಪ.—ನನಗೆ ಬಂದಿರತಕ್ಕ ರಿಪೋರ್ಟಿನಲ್ಲಿ ಡೈರೆಕ್ಟರು ಹೋಗಿ ಕೆಲವು Firms ನೋಡಿ, ಅವಡಿಯೊಳಗೆ ಯಾವರೀತಿ cloth emporiumನಲ್ಲಿ display ಮಾಡಿದ್ದಾರೆಂಬುದನ್ನು ನೋಡಿ uniform glass almirahs ಇದ್ದರೆ ಅನುಕೂಲವೆಂದು ಹೇಳಿ ಆರ್ಡರ್ ಕೊಟ್ಟಿದ್ದಾರೆಂದೂ, ಅದರಮೇಲೆ ಮೊದಲು ಕೊಟ್ಟಿದ್ದ ಆರ್ಡರ್ ಇಲ್ಲವೆಂದು ಭಾವಿಸಬೇಕೆಂದೂ ಹೇಳಿ ಸ್ಟೋರ್ಸ್ ಪರ್ಚೇಸ್ ಕಮಿಟಿಗೆ ತಿಳಿಸಿದಮೇಲೆ, ಸ್ಟೋರ್ಸ್ ಪರ್ಚೇಸ್ ಕಮಿಟಿಯವರು ಡೈರೆಕ್ಟರವರು ಮಾಡಿದ್ದನ್ನು ratify ಮಾಡಿದ್ದಾರೆಂದು ವರದಿ ಬಂದಿದೆ.

12-30 P.M.

ಶ್ರೀ ಬಿ. ಎಂ. ಶ್ರೀನಪ್ಪ.—ಟೆಂಡರ್ ಕಾಲ್ ಫಾರ್ ಮಾಡುವುದಕ್ಕೆ ಇಲಾಖಾ ಮುಖ್ಯಾಧಿಕಾರಿಗಳ ಪರ್ಮಿಷನ್ ಬೇಕಲ್ಲವೆ ? ಅದನ್ನು ತೆಗೆದುಕೊಂಡಿದ್ದಾರೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಟೆಂಡರ್ ಕಾಲ್‌ಫಾರ್ ಮಾಡುವವರು ಎಸ್. ಪಿ. ಸಿ. ನವರು. ಇಲಾಖೆಯವರು ಇಂಥ ಮಾಲು ಬೇಕೆಂದು ಇಂಡೆಂಟ್ ಕೊಡುತ್ತಾರೆ. ಅದನ್ನು ನೋಡಿ ಟೆಂಡರ್ ಕಾಲ್‌ಫಾರ್ ಮಾಡಿಕೊಳ್ಳುವವರು ಎಸ್. ಪಿ. ಸಿ. ನವರು.

ಶ್ರೀ ಬಿ. ಎಂ. ಶ್ರೀನಪ್ಪ.—ಎಸ್. ಪಿ. ಸಿ. ಯಿಂದ ಬಂದಿರುವ ಕೊನೆಯ ಎರಡು ಕಾಗದಗಳನ್ನು ದಯವಿಟ್ಟು ಓದುತ್ತೀರಾ ?

Sri H. SIDDAVEERAPPA.—That is in the nature of the correspondence. I have not got those papers readily available.

ಶ್ರೀ ಬಿ. ಎಂ. ಶ್ರೀನಪ್ಪ.—ದರ 14 ರಷ್ಟು ಹೆಚ್ಚಾಗಿದೆ, ಅದನ್ನು ಒಪ್ಪುವುದಕ್ಕಾಗುವುದಿಲ್ಲ ಎಂದು ಸೆಕ್ರೆಟರಿ ಕಾಗದದಲ್ಲಿ ಬರೆದಿದ್ದಾರೆಂದು ಒಪ್ಪಿದ್ದಾರೆ. 14 ರಷ್ಟು ಹೆಚ್ಚಾಗಿ ಕೊಡಲು ಯಾರು ಪರ್ಮಿಷನ್ ಕೊಟ್ಟರು ?

ಅಧ್ಯಕ್ಷರು.—ಎಲ್ಲಿ ಒಪ್ಪಿದ್ದಾರೆ !

ಶ್ರೀ ಬಿ. ಎಂ. ಶ್ರೀನಪ್ಪ.—ದಯವಿಟ್ಟು ಇದಕ್ಕೆ ಸಂಬಂಧಪಟ್ಟ ಫೈಲನ್ನು ಟೇಬಲ್‌ಮೇಲೆ ಇಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಪೂರ್ತಿಯಾಗಿ ಇಡುವುದಕ್ಕಾಗುವುದಿಲ್ಲ; ರೆಲವೆಂಟ್ ಪೇಪರ್ಸ್ ಇಡುತ್ತೇನೆ.

Sri K. PUTTASWAMY.—What was the reason for accepting such an exaggerated rate as 14½ times over and above the rate, Sir ?

Sri H. SIDDAVEERAPPA.—I have already said, Sir. First of all an enquiry was sent according to certain specifications. Afterwards the Director of Rural Industrialisation Scheme visited several firms in the City with a view to study how the cloth emporia are generally equipped to attractively display the goods. He found during his inspection that the uniform steel racks and counters and glass almirahs are preferable to partly wooden and partly steel racks. Then he made this fact known to the Stores Purchase Committee. Therefore quotations were called for. The firms, it appears, were given an opportunity of quoting and subsequently the S.P.C. was requested to ratify the orders passed; they have examined the question and they are pleased to ratify the action taken by the Director.

Sri K. PUTTASWAMY.—May I understand that no thought was given to these purchases at the time when quotations were called for for the first time ?

Sri K. S. VASAN.—For a daily rated workman, the minimum wage now is one rupee for an unskilled surface worker and Rs. 1-4-0 for an unskilled underground worker. The maximum for an unskilled worker according to the award is Rs. 1-4-0 at the surface and Rs. 1-8-0 underground. The cost of living in Kolar Gold Fields is as high as in Bangalore. Yet, the workers in well-establised industrial concerns here, in the Binny Mills, the Raja Mill and the Minerva Mill get even now more than what the Kolar Gold Fields workers get in respect of dearness allowance. If we are really serious in seeing that this industry should be treated as a national asset and if we do not get cheated again by Messrs. John Taylor & Sons who are here not for any humanitarian purpose but only to take as much as they want, we must be firm in our resolve. They have already taken enough and swindled more. The Chief Minister was saying that we should not use such words here. I do not know how else I can characterise the looting and robbery carried on in Kolar Gold Fields for the past 80 years. It appears to me that the only way open to us, and the effective method to prevent all these abuses, is to straightway legislate, take over the concerns and run them as a national asset. Mere appointment of some Governmental nominees on the Board of Management is of no use at all. I would request the Hon'ble Member Sri Huchmasthi Gowda who was for some time Director, to state his own experience when he was there as a member of the Board of Management. I would suggest therefore that, as it is the policy of the Government now to associate organized labour with the management of industrial concerns, Kolar Gold Fields Trade Unions also are of age now and they may be associated with the Board of Management and the Government should more and more rely on the workers and the other labouring technical personnel than on the Management alone for the revenues of the State.

Finally, I only hope that the justified anxiety on the part of the Government for augmenting their revenues from Kolar Gold Fields Mines should not under any circumstance be allowed to come in the way of the revenues being used either by the Government or by the Mining Companies for raising the living standards of those who labour, that is, workers. I appeal to all members to wholeheartedly support this Report and strengthen the hands of the Government to take a bold stand with regard to Kolar Gold Fields Mines. Thank you.

Sri V. M. MASCARENHAS (St. John's Hill).—My first duty is to

(SRI V. M. MASCARENHAS.)

thank the members of this Committee for their very valuable Report and also the Minister for Industries for elucidating yesterday afternoon for nearly three hours the substance of this Report in unmistakable terms. In my opinion, I feel that the first mistake committed by the Government was in entering into an Agreement with these Mining Companies in 1949 in the way they have done To say the least, I call that Agreement unhappy and unwise. If in the year 1900, that far-sighted and venerable statesman Sir K. Seshadri Aiyar thought it best that the Government of Mysore should have nothing to do with the net surplus or net profit of a Company, nay, when he denied even taking a sliding scale on declared dividends, it is very strange that 50 years later the Government not only gave up that policy, a policy which had stood in good stead for 50 years, and entered into a new agreement of which the main sum and substance was the phrase 'net surplus'. I would like to tell the House as to how the Agreement begins. I think many have already read it. The preamble to the Agreement reads as follows :

> "Whereas the Lessees have agreed that in consideration of the Government of Mysore repealing the existing Gold Duty Act they will pay to the Lessors a contribution based on profits . . . ."

It is clear therefore from that one statement that the Government of Mysore definitely hoped for a revenue and the Mining Companies on their part indirectly promised that once the Gold Duty was repealed, the Government of Mysore would not be denied their proper share or their quantum of profit in the shape of net surplus. We now come to the first item of the Agreement:

> "The Lessees will take all possible action to see that working costs are kept low by enforcing economy wherever possible."

This sentence has special significance in the year 1949. It is unfortunate that the Government of the time did not wish to add to that one sentence a phrase to say "working expenses", as understood in the year 1949. Otherwise, this sentence has no meaning and it is exactly what the Mining Companies have taken advantage of to-day, because to-day they turn round and say that their working expenses are as low as possible, while actually they are 63 per cent higher than in 1949. Legally, the Mining Companies are in perfect justification to say so but morally the Government of Mysore can turn round and say that the spirit of the Agreement is not only vitiated but it has been nullified. Sri Thomas said this morning in trying to appeal to the House that we should not in the interests of the workers and the mines themselves take a very hostile or unfriendly attitude to the mines. He went on saying that if out of a total revenue of Rs. 150 lakhs, 146 lakhs which was workers' wages bill was deducted, there was left for the Government of Mysore a bare Rs. 4 lakhs which would not be enough to meet the 5 per cent extra duty of the royalty which the Government will levy. But he forgot to tell us why suddenly in 1950 the Mining Companies in spite of their promises to the Government of Mysore thought of accentuating every item of expenditure, beginning from the pension fund, increase of salaries to the covenanted staff, increase of salaries to their workers. Well, I am not at all against the workers being given a living wage. Everybody knows that what the worker at Kolar Gold Fields gets is hardly a living wage. I know from the early days of 1910, over a number of years, and I know in the year 1939, 1940 and during the war when the Mining Companies were minting money as it were, the workers at Kolar Gold Fields were given bare 8 annas for a surface worker and 9 annas for an underground worker, a worker who is not sure of seeing the morning if he goes down in the pit in night. If this is the heartless way in which the Mining Companies have treated these workers while the declared dividends have ranged from 22 to 150 per cent, how suddenly in 1950 these

Mining Companies became generous, very considerate, humanitarian, the reasons are obvious. The only motive was not the love for the workers, it was to see how best they could reduce the revenues going to the Mysore Government under that peculiar phrase 'net surplus'. As we now see, it has been exemplified and my own feeling in the matter is, the Companies knew exactly what was in store when in 1949 the Government of Mysore accepted this Agreement. I will not enter into the details because already two days have passed. I only wish to say this. What is the next thing to be done? That is far more important. One thing is very clear. The Committee has made a recommendation. It is open for this House to accept it or not. From the trend of the talk for the last two days I have seen that members have unanimously said that the mere recommendation of the Committee, namely, increase of the gold duty from 5 to 10 per cent does not solve the problem and may not take the Government of Mysore very far. I fully believe in that attitude. To-day, the running of the mines is in the hands of the Mining Companies. The Government of Mysore has only the right to collect royalty. Barring that, I do not think there is any kind of control that the Government of Mysore can inflict or hope to exercise on the Mining Companies. When that is the situation, the Mining Companies standing firmly on their ground will try their very best to fight every inch of ground before they yield. Well, we should tell them that we are not worried. Our patience is at an end and we cannot bear it any longer. It is for them to come to us and tell us that they are sorry for what has happened in the past, that they will make amends in the future and if that is their attitude, they could bring forth definite proposals. I am happy to find in this connection that the Hon'ble Minister in his concluding remarks said that he would be prepared to meet them and see how best a remedy could be obtained. If this is impossible, then we accept the challenge and come what may, the mines will be taken over by the State and if the worst happens and we do not have the correct type of personnel to run it, does not matter: let the mines remain closed for a short time; the gold will be in the bowels of Mother Earth. A day will come when we will be able to train our young men who will one day go there and take up the entire management and from that day onwards, a new era will come to Mysore whereby the gold that we have been for the last 80 years sending away to Europe, America and other countries through these Mining Companies shall remain the property of Mysore, and, thus the prosperity of Mysore and its citizens will be guaranteed.

*ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಸ್ವಾಮಿ, ಇದುವರೆಗೂ ಮಾತನಾಡಿದಂಥ ನನ್ನ ಮಾನ್ಯ ಸಹೋದರರುಗಳೆಲ್ಲರೂ ಬರಿ ಇಂಗ್ಲೀಷಿನಲ್ಲೇ ಮಾತನಾಡಿದ್ದಾರೆ. ಆದರೆ ನನಗೆ ಎಲ್ಲೋ ಅಲ್ಲಲ್ಲೆ ಕೆಲ ಕೆಲವು ಮುಖ್ಯ ವಿಚಾರಗಳು ಮಾತ್ರ ಗೊತ್ತಾದವು. ಅದು ಏನೇ ಇರಲಿ, ಮೊಟ್ಟಮೊದಲನೆಯದಾಗಿ ಈ ದಿವಸ ಈ ಬಂಗಾರದ ಗಣಿಗೆ ಸಂಬಂಧಿಸಿರುವಂಥ ವರದಿಯನ್ನು ಈ ಸಭೆಯಮುಂದೆ ತಂದುದಕ್ಕಾಗಿ ನಾನು ನಮ್ಮ ಮಾನ್ಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಇಲ್ಲಿಯತನಕವೂ ನಮ್ಮ ದೇಶ ಚಿನ್ನವನ್ನು ಬೆಳೆಯತಕ್ಕಂಥ ದೇಶ ಎಂದು ನಾವೆಲ್ಲರೂ ಹೇಳಿಕೊಳ್ಳುತ್ತಿದ್ದೆವು. ಆದರೆ ಆ ಫಲ ನಮ್ಮ ಕೈಬಿಟ್ಟು ಹೋಗಿತ್ತು. ಆ ಚಿನ್ನದ ಹೊಳೆಯೆಲ್ಲಾ ಪರದೇಶಕ್ಕೆ ಹರಿದುಹೋಗುತ್ತಿತ್ತು. ಅದನ್ನು ಈ ದಿವಸ ತಡೆಯಲು ಒಂದು ಹೊಸ ಮಾರ್ಗವನ್ನು ಕಂಡು ಹಿಡಿಯಲು ಪ್ರಯತ್ನಿಸುತ್ತಿದ್ದಾರೆ. ಆದುದರಿಂದ ಇದನ್ನು ಆದಷ್ಟು ಬೇಗ ಆಗು ಮಾಡಬೇಕೆಂದು ಹೇಳುತ್ತೇನೆ. ಇದನ್ನು ಹೇಳುತ್ತ ನಾನು ಎರಡು ಮಾತುಗಳನ್ನಾಡಬೇಕೆಂದು ಇಷ್ಟಪಟ್ಟಿದ್ದೇನೆ—ಈ ಎರಡು ದಿವಸಗಳಿಂದಲೂ ನಡೆದಿರುವಂಥ ಚರ್ಚೆಯಲ್ಲಿ ಈ ಭಂಗಾರದ ಗಣಿಯ ವ್ಯವಹಾರದಲ್ಲಿ ಏನೇನು ಅನಿವಾರ್ಯಗಳು ಬಂದಿದ್ದವು, ಅವುಗಳ ಬಗ್ಗೆ ನಮ್ಮ ಸರ್ಕಾರ ಯಾವ ರೀತಿ ವರ್ತಿಸಿದೆ ಎನ್ನತಕ್ಕಂಥ ಕೆಲ ಕೆಲವು ಮುಖ್ಯಾಂಶಗಳ ಬಗ್ಗೆ ಈ ಚರ್ಚೆ ನಡೆಯುತ್ತಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಈ ಚರ್ಚೆಯಲ್ಲಿ ನನಗೆ ತಿಳಿದುಬಂದಂಥ ಕೆಲ ಕೆಲವು ವಿಚಾರಗಳ ಬಗ್ಗೆ ನನ್ನ ಮನಸ್ಸಿಗೆ ಪೂರಾ ನೋವುಂಟಾಗಿದೆ. ಚಿನ್ನ ತೆಗೆಯುವಂಥ ಗಣಿಯೇ ನಮ್ಮ ದೇಶದಲ್ಲಿರುವಾಗ ನಮ್ಮ ದೇಶದ ಜನರಿಗೆ ಇದರಿಂದ ಯಾವ ಸುಖ ದೊರೆಯಬೇಕಾಗಿತ್ತೋ ಅದು ದೊರೆಯದೆ ಹೋಗಿ ನಮ್ಮ ದೇಶ ಇಂದು ಇಂಥ ಕಷ್ಟನಷ್ಟಗಳಿಗೆಲ್ಲಾ ಈಡಾಗಬೇಕಾಗಿ ಬಂತಲ್ಲಾ ಎಂದು ನೊಂದಮನಸ್ಸಿನಿಂದ ನಾನೀಗ ಮಾತನಾಡುತ್ತಿದ್ದೇನೆ. ಪರದೇಶದಿಂದ ಬೇರೆ ಜನಗಳು ನಮ್ಮ ದೇಶಕ್ಕೆ ಬಂದು ಈ ಗಣಿಯಿಂದ ಏನೇನು ಅನುಕೂಲ ಪಡೆದಿದ್ದಾರೆ, ಅವರು ಎಷ್ಟು ಆಸ್ತಿಯನ್ನು ಸಂಪಾದನೆ ಮಾಡಿಕೊಂಡಿರುತ್ತಾರೆಂದು ನಮ್ಮ ಸಭೆಯಲ್ಲಿ ಮಾನ್ಯ ಸದಸ್ಯರೊಬ್ಬರು ಕೇಳಿದ್ದಕ್ಕೆ, ಅವರ ಸೀಮೆಯಲ್ಲಿ ಅವರು ಮಾಡಿಕೊಂಡಿರುವ ಆಸ್ತಿಅಂತ ಏನಾದರೂ ಇದ್ದರೆ ಅವು ಕೇವಲ ಮೇಜು, ಕುರ್ಚಿ, ಬೆಂಚುಗಳೆಂದು

(ಶ್ರೀಮತಿ ಬಳ್ಳಾರಿ ಸಿದ್ದಮ್ಮ.)

ಸರ್ಕಾರದವರು ತಿಳಿಸಿದರೆಂಬುದಾಗಿ ಶ್ರೀಮಾನ್ ಇಮ್ಲಾಂಸಾಹೇಬರ್ ನಿನ್ನೆ ತಿಳಿಸಿದರು. ನಮ್ಮ ದೇಶದ ಜನ ಬಲು ಹುಷಾರಿ ಎಂದು ನಾವೂ ತಿಳಿದುಕೊಂಡಿದ್ದೆವು. ಇತರರೂ ಹಾಗೆಯೇ ಹೇಳುತ್ತಿದ್ದಾರೆ. ಇಂಥಾ ಹುಷಾರಿ ಜನಗಳಿದ್ದಾಗ್ಯೂ ಅವರೇನು ಮಂಕುಬೂದಿಯನ್ನು ಇವರಿಗೆ ಉರುಬಿದರೋ ಅದು ಗೊತ್ತಾಗುವುದಿಲ್ಲ. ಅವರು ಎಂಟು ಸಾವಿರ ಮೈಲಿಗಳ ದೂರದಿಂದ ಬಂದು ಇಲ್ಲಿ 10-15 ಸಾವಿರ ಅಡಿ ಭೂಮಿಯ ಕೆಳಗೆ ಹೋಗಿ ಕೆಲಸ ಮಾಡತಕ್ಕಂಥ ನಮ್ಮ ಸೀಮೆಯ ಜನಗಳಿಗೆ ಎಂಟು ಆಣೆ ಹತ್ತು ಆಣೆ ಕೂಲಿ ಕೊಟ್ಟು, ನಮ್ಮ ದೇಶದ ಜನಗಳಿಗೆ ಬಾಯಿಕಟ್ಟಿ ಪರದೇಶಕ್ಕೆ ನಮ್ಮ ಚಿನ್ನವನ್ನೊಯ್ಯಲು ಹೀಗೆ ಒಂದು ಅವಕಾಶ ಕೊಡತಕ್ಕಂಥ ಬುದ್ಧಿಯನ್ನು ನಮ್ಮವರಿಗೆ ದೇವರು ಏಕೆ ಉಂಟುಮಾಡಿದನೋ! ಇವರಿಗೇಕೆ ಅಂಥ ಬುದ್ಧಿ ಬಂತೋ ನಾಕಾಣೆ. ಆ ಪರದೇಶದ ಜನರು ನಮ್ಮ ಕೈಗೆ ಮಣ್ಣು—ಕಬ್ಬಿಣ ಕೊಟ್ಟು ನಮ್ಮ ಚಿನ್ನವನ್ನು ಅವರ ಸೀಮೆಗೆ ಒಯ್ಯುತ್ತಿದ್ದಾರೆ. ಏನೋ ಇಲ್ಲಿಯತನಕ ಆದದ್ದು ಆಗಿಹೋಯಿತು. ಅದೇನೋ ಎಲ್ಲಿಗೋ ಹೋದದ್ದು ಹಿಂದಕ್ಕೆ ಬರುವುದಿಲ್ಲ ಎಂದು ಹೇಳುತ್ತಾರಲ್ಲ—ಅದರಂತೆಯೇ ಇದೂ ಕೂಡ ಆಗಿದೆ. ಆದರೆ ಈಗ ನನಗೆ ಹೊಳೆಯುತ್ತಿರುವುದು "ಅಪ್ಪನ ಕೂಡ ಉಂಡರೂ ಒಂದೇ ಅವ್ವನಕೂಡ ಉಂಡರೂ ಒಂದೇ" ಎನ್ನುವಂತೆ ಈ ಗಣಿಯ ಆಡಳಿತವನ್ನು ನೀವಾದರೂ ವಹಿಸಿಕೊಳ್ಳಿ, ಇಲ್ಲವೇ ಕೇಂದ್ರ ಸರ್ಕಾರವಾದರೂ ವಹಿಸಿಕೊಳ್ಳಲಿ. ಈ ಬಗ್ಗೆ ಆದಷ್ಟುಬೇಗ ಒಂದು ತೀರ್ಮಾನಕ್ಕೆ ಬಂದು, ಇದರ ಬಗ್ಗೆ ತಾವು ಯಾವ ರೀತಿ ಶಾಸನವನ್ನು ಮಾಡಬೇಕೋ ಆ ರೀತಿ ಮಾಡಿ ಇದನ್ನು ಕೈಗೆ ತೆಗೆದುಕೊಳ್ಳುವ ಕಾರ್ಯವನ್ನು ತಾವು ತೀವ್ರವಾಗಿ ಆಲೋಚಿಸಬೇಕೆಂದು ಹೇಳುತ್ತೇನೆ. ಇದರಿಂದ ಸುಖವೇ ಬರಲಿ ಅಥವಾ ಕಷ್ಟವೇ ಬರಲಿ ತಾವು ಎರಡರಲ್ಲಿ ಒಂದು ನಿರ್ಧಾರಮಾಡಲೇಬೇಕಾಗಿದೆ. ಈ ಹಿಂದೆ ದೇಶಕ್ಕೆ ಸ್ವಾತಂತ್ರ್ಯ ತರುವಾಗ ದೇಶದ ಹಿತಕ್ಕಾಗಿ ತನು ಮನ ಧನಗಳನ್ನೆಲ್ಲಾ ಸೂರೆ ಮಾಡಿದಂಥವರು ಈ ದಿವಸ ಈ ಸಭೆಯಲ್ಲಿರುತ್ತಾರೆ. ಆಗಿಗಿಂತ ಹೆಚ್ಚಿನ ಕಷ್ಟಗಳೇನೂ ಈಗ ಬರಲಾರವು. ಇದೂ ಕೂಡ ನಮ್ಮೆಲ್ಲರ ಕರ್ತವ್ಯ. ಏನ್ನಾದರೂ ಮಾಡಿ ನಮ್ಮ ಆಸ್ತಿಯನ್ನು ಉಳಿಸಿಕೊಳ್ಳಲು ನಾವು ಪ್ರಯತ್ನ ಮಾಡಲೇಬೇಕು.

ಇನ್ನು ಆ ಗಣಿಯಲ್ಲಿ ಕೆಲಸಮಾಡತಕ್ಕಂಥ ಕೂಲಿಗಾರರ ಬಗ್ಗೆ ಕೇವಲ 10 ಆಣೆ 12 ಆಣೆ ಕೂಲಿ ಕೊಡುತ್ತಿದ್ದಾರೆಂದು ಹೇಳಿದರು. ಇದೆಂಥ ಅನ್ಯಾಯ? ಕೋಟಿಗಟ್ಟಲೆ ಆದಾಯ ಪಡೆಯುತ್ತಿದ್ದರೂ ಆ ಬಡಪಾಯಿಗಳಿಗೆ ಇಷ್ಟೊಂದು ಅನ್ಯಾಯ ಮಾಡುವುದೇ? ಈ ದಿವಸ ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ನಾವು ಕೂಲಿಗೆ ಬರತಕ್ಕಂಥ ಜನರಿಗೆ ದಿನಕ್ಕೆ ಒಂದು ರೂಪಾಯಿ ಕೂಲಿ ಕೊಟ್ಟು ಒಂದು ಹೊತ್ತಿನ ಊಟವನ್ನು ಸಹ ಹಾಕಬೇಕಾಗಿದೆ. ಹೀಗಿರುವಾಗ ಆ ಗಣಿಗಳಲ್ಲಿ 10 ಸಾವಿರ ಅಡಿಗಳ ಕೆಳಗೆ ಹೋಗಿ ಕೆಲಸಮಾಡತಕ್ಕಂಥ ಜನರು ಹೀಗೆ ತಮ್ಮ ಪ್ರಾಣದ ಮೇಲಿನ ಆಸೆಯನ್ನೆಲ್ಲಾ ತೊರೆದು ಕೆಲಸಕ್ಕೆ ಹೋಗಿದ್ದಾರೆ! ಹಾಗೆ 10 ಸಾವಿರ ಅಡಿಗಳ ಕೆಳಗೆ ಹೋಗಬೇಕೆಂದು ಹೇಳಿದ್ದನ್ನು ಕೇಳಿದರೆ ನನಗೆ ಇಲ್ಲೇ ಪೂರಾ ಭಯವಾಗುತ್ತಿದೆ. ಹೀಗಿದ್ದಾಗ್ಯೂ ಅವರು ಅಲ್ಲಿ ಹೀಗೆ ಕೇವಲ 8-10 ಆಣೆಗಳ ಕೂಲಿಗಾಗಿ ಬರಬೇಕಾಗಿದ್ದರೆ ಅವರೆಲ್ಲ ತಮ್ಮ ಪ್ರಾಣಗಳ ಮೇಲಿನ ಆಸೆಯನ್ನು ತೊರೆದು ಕೆಲಸಕ್ಕೆ ಬರುವ ಮುನ್ನ ತಮ್ಮ ಹೆಂಡತಿ ಮಕ್ಕಳಿಗೆಲ್ಲಾ ಒಂದೇ ಸಾರ್ತಿ ಹೇಳಿಬಿಟ್ಟು ಬಂದಿರುತ್ತಾರೆಂದು ಕಾಣುತ್ತದೆ! ಅವರಿಗೆ ಹೀಗೆ ಅನ್ಯಾಯ ಮಾಡಬಾರದು. ಆದರೆ ನಾವು ಆ ಬ್ರಿಟಿಷ್‌ನವರನ್ನು ಬಹಳ ದಯಾಳುಗಳು ಎಂದು ಭಾವಿಸಿದ್ದೆವು. ಅವರನ್ನು ನಾವು ಹೇಗೆ ದಯಾಳುಗಳು ಎಂದು ತಿಳಿದುಕೊಂಡಿದ್ದೇವೋ ಅದರಂತೆ ಅವರು ನಮಗೆ ದೇಶವನ್ನು ಬಿಟ್ಟುಕೊಟ್ಟುಹೋದರು. ಈಗಲೂ ಕೂಡ ಅವರು ಅದೇ ರೀತಿ ಈ ಗಣಿಯನ್ನು ಸಹ ನಮ್ಮನ್ನು ಕಷ್ಟಕ್ಕೆ ಗುರಿಮಾಡದ ಹಾಗೆ ನಮಗೆ ಬಿಟ್ಟುಕೊಟ್ಟು ಹೋಗುತ್ತಾರೆಂದು ನಾನು ನಂಬಿದ್ದೇನೆ. ಆದರೆ ಈಗ ಈ ವರದಿಯನ್ನು ಸಭೆಯ ಮುಂದೆ ಮಂಡಿಸಿರತಕ್ಕಂಥ ನಮ್ಮ ಮಾನ್ಯ ಗೃಹಮಂತ್ರಿಗಳೂ ಸಹ ಬಹಳ ಜೋರಾದವರೇನೆ. ಇಲ್ಲದಿದ್ದರೆ ಇಂಥ ವರದಿಯನ್ನು ಸಭೆಯ ಮುಂದೆ ತರಲು ಬೇರೆಯವರಿಗೆ ಆಗುತ್ತಿರಲಿಲ್ಲ. ಈಗ ಸರ್ಕಾರದವರು ಈ ಬಗ್ಗೆ ಕೇಂದ್ರದೊಡನೆ ವ್ಯವಹಾರಮಾಡಿ ಕೂಡಲೆ ಈ ಗಣಿಯನ್ನು ಅವರಿಂದ ಬಿಡಿಸಿಕೊಳ್ಳಲು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಆದರೆ ಈ ಹಿಂದೆ ಇದ್ದಂಥ ಆ ಗೋಲ್ಡ್ ಡ್ಯೂಟಿ ಆಕ್ಟನ್ನು ಅಬಾಲಿಷ್ ಮಾಡಿದರು ಎಂದು ಹೇಳಿದ್ದನ್ನು ಕೇಳಿದರೆ ನನಗಂತೂ ತುಂಬ ವ್ಯಸನವಾಗುತ್ತದೆ. ಇದು ಇಡೀ ದೇಶಕ್ಕೆ ಸೇರಿರುವಂಥ ಒಂದು ಸಂಪತ್ತು. ಈ ದಿವಸ ಈ ಮಂತ್ರಿಮಂಡಲವಿರಬಹುದು; ನಾಳೆ ಮತ್ತೊಂದು ಮಂತ್ರಿಮಂಡಲ ಬರಬಹುದು. ಯಾರೇ ಬರಲಿ ದೇಶದ ಸಂಪತ್ತನ್ನು ಅಲಕ್ಷ್ಯಮಾಡಬಾರದು. ಯಾರೇ ಆಗಲಿ ತಪ್ಪುಮಾಡಿದ್ದನ್ನು ತಪ್ಪು ಎಂದು ಒಪ್ಪಿಕೊಳ್ಳಬೇಕು. ಹಾಗೆ ತಪ್ಪುಮಾಡಿದ್ದರೂ ಅದ ನಾನಲ್ಲ ಅಂತ ಹೇಳುವುದಕ್ಕೆ ಹೋದರೆ ಕೆಸರಿನಲ್ಲಿ ಬಿದ್ದಿರುವ ಮನುಷ್ಯ ಹೊರಗಡೆಗೆ ಬರಲು ಹೊರಳಾಡಿದರೆ ಅವನು ಮತ್ತಷ್ಟು ಆ ಕೆಸರಿನೊಳಕ್ಕೆ ಹೋಗುತ್ತಾನೆ. ಆದುದರಿಂದ ಸರಿಯಾಗಿರುವುದನ್ನು ಸರಿಯೆಂದು ಹೇಳಬೇಕು, ತಪ್ಪಾದ್ದನ್ನು ತಪ್ಪು ಎಂದು ಹೇಳಲೇಬೇಕು. ಯಾರು ಯಾವ ಕೆಲಸವನ್ನೇ ಮಾಡಲಿ ನಮ್ಮ ಚಿನ್ನ ನಮ್ಮ ದೇಶಕ್ಕೆ ಉಳಿಯುವಂತೆ ಮಾಡಬೇಕಾದ್ದು ಮುಖ್ಯವಾದದ್ದು. ಈಗಲಾದರೂ ತಾವು ಇದನ್ನು ಬೇಗ ಕೈಗೊಳ್ಳದಿದ್ದರೆ ಇನ್ನು 8-10 ವರ್ಷಗಳಲ್ಲಿ ನಮ್ಮ ಹೆಂಗಸರು ಮಕ್ಕಳ ಕೊರಳಿನಲ್ಲಿರುವ ಮಾಂಗಲ್ಯದ ಚಿನ್ನವೂ ಸಹ ಪರದೇಶಕ್ಕೆ ಹೋಗಿ ಕೊನೆಗೆ ಇವರ ಕೊರಳಿಗೆ ಮರದ ತಾಳಿಗಳು ಬೀಳಬೇಕಾದೀತು. ಆದುದರಿಂದ ನಾನೀಗ ತಮ್ಮಲ್ಲಿ ಅತಿ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ: ಈ ಗಣಿಯ ಸಂಪೂರ್ಣಾಡಳಿತವನ್ನು ನಮ್ಮ ಸರ್ಕಾರ ಈ ಮೊದಲಿಂದಲೇ ಕೈಗೊಳ್ಳಲು ಪ್ರಯತ್ನಿಸಬೇಕಾಗಿತ್ತು; ಆದರೆ ಅದು ಈಗಾಗಲೇ ಬಹಳ ನಿಧಾನವಾಗಿದೆ; ಆದ್ದರಿಂದ ಈ ವಿಚಾರದಲ್ಲಿ ಕೇಂದ್ರ ಸರ್ಕಾರದೊಡನೆ ವ್ಯವಹಾರಮಾಡಿ ಆದಷ್ಟುಬೇಗ ಈ ಗಣಿಯ ಸಂಪೂರ್ಣಾಡಳಿತವನ್ನು ನಮ್ಮ ಸರ್ಕಾರ ಕೈಗೊಳ್ಳಬೇಕೆಂದು ಹೇಳಿ ನಾನು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

*Sri P. R. RAMAIYA.—Sir, at the outset, let me join in the warm congratulations that are given to our Home Minister for the able way in which he has placed the case before us. Sir, we were indeed ignorant as to what

had been going on in this matter. From the time the Gold Duty was abolished, there was a misgiving in the country that the country and the State were deprived of their dues in a very hasty manner. Sir, if you observe the comments that appeared in the Press and the opinion that was expressed outside the Legislature, the country doubted the wisdom of the Government in abolishing that duty. Sir, there were men who were prophetic enough to say that it was an unwise step and it would land the Government in troubled waters. Sir, that prophesy has come true. From the time that this new Ministry assumed office and when the financial situation in the country demanded that they have to explore every avenue of revenue, they looked into the question and doubts were expressed in this House also if the agreement was being worked by the Mines according to the terms they agreed to. As a result, this Committee was appointed and the Terms of Reference are very clear. It is stated there: "examination of the position arising out of the Argeement of 20th February 1949 between the Mining Companies and the Government" and "measures to ensure improvement in the returns from the Mining Industry." Sir, we are concerned with the last item, namely "improvement in the returns from the Mining Industry." Sir, this Report is a very valuable document and it is a historic document. I am glad to inform this House that this Report has become one of All-India importance because the Mining Companies in Mysore are not merely of All-India importance but of world importance, because wherever the Gold Mines are, the world is interested in them and naturally the world over, every mining expert, every financier is interested in the working of the Kolar Gold Fields Mines and so naturally this Report which brings into light so many things which were hidden under the ground is becoming one of All-India importance. Sir, I do not want to traverse the ground which other members have traversed. Sir, I am glad to find that the debate in this House has gone on in a very admirable manner. Every one either on the side of the Government or in the Opposition has agreed to the findings of the Report. Sir, we need not go now into facts and figures. But I would like to ask this House to see how the mining authorities have reacted. Instead of honourably co-operating with the Committee, they have non-co-operated. They have assumed a very superior attitude saying that they have sent their reply and there is nothing more for them to add. Is this an attitude that we can commend ? This is an attitude which is highly unwarranted, which ought to be condemned by this House. Nothing would have been lost if they had come and appeared before the Committee; on the other hand they would have gained. Mr. Sydney Thomas said that great nations have joined together and solved very important problems in a very friendly way. Very well; is that attitude shown by the Company ? Sir, to add insult to the injury, they question the very authority of the Government to constitute the Committee. This is the height of, what I should say, impertinence. Government has sovereign authority. The Legislature is the sovereign authority. It is out of grace, out of kindness that we went out of the way in 1949 and entered into an agreement with them. Sir, I do not understand the mind behind this attitude. They thought that Government would yield to them and would go on bended knees to them. Sir, I am glad that this House has taken the right attitude. In the rejoinder they have given, they have used terms of expression which are very ungentlemanly, which are unbecoming of a company which supposes to represent a very enlightened nation. Perhaps, they are far behind the times; they do not know that the World has advanced very much. The same England which ruled this country for over 100 years joined its hands with the representatives of this country and transferred the power in a gentlemanly manner. To-day England and India are great friends. When such is the case, how is it that these Kolar Gold Field Companies are far behind the times and do not understand that

(Sri P. R. RAMIAH.)

they are living in a modern period, in a very enlightened period ? Sir, they should be taught a lesson ; they should be made to realise what their position is.

Coming to the Report, Sir, the Committee has placed before us some suggestions and it is the unanimous opinion of the Committee that the continuance of the agreement in the present form will not serve any useful purpose. I am sure the House unanimously agrees to this view. The suggestion of the Committee, namely, to revise the agreement in a suitable manner may be looked into if the Company comes with a chastened attitude. They have already learnt what the attitude of the House is in the matter. If they do not come with a chastened attitude, the other alternative is, to scrap the agreement and take over the Mines ourselves. With the resources at our hands and with the help of the Indian Financial Corporation, we can float a Company and work the concern.

Sir, lastly, I appeal to the Government to take a very bold attitude and the Company may be made to learn where they are. If they are not prepared to come with a chastened attitude, the way is clear : the agreement should be scrapped and the mines taken over.

*ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ, ನಮ್ಮ ಮುಂದೆ ಇಟ್ಟಿರುವ ಈ ವರದಿಯನ್ನು ತಯಾರುಮಾಡಿರುವ ಕಮಿಟಿಯವರಿಗೆ ಮೊದಲನೆಯದಾಗಿ ಸಂಪೂರ್ಣವಾಗಿ ಅಭಿನಂದನೆಗಳನ್ನು ಅರ್ಪಿಸಬೇಕಾಗಿದೆ. ಈ ವರದಿಯನ್ನು ಓದಿದಮೇಲೆ ನಿಜವಾಗಿಯೂ ನಮ್ಮ ದೇಶದಲ್ಲಿ Gold Mining Companies ಯಾವ ರೀತಿ ಕೆಲಸಮಾಡುತ್ತಿವೆ, ಇದರಿಂದ ದೇಶಕ್ಕೆ ಒದಗಬಹುದಾದ ಸಾಧಕ ಬಾಧಕಗಳೇನು ಎನ್ನುವುದನ್ನು layman, ಎಂದರೆ ಯಾವ ವಿಚಾರವೂ ಗೊತ್ತಿಲ್ಲದೆ ಇರತಕ್ಕ ಮನುಷ್ಯನಿಗೆ ಕೂಡ ಅರ್ಥವಾಗುವ ರೀತಿಯಲ್ಲಿ ಈ ಚಿನ್ನದ ಗಣಿಗಳಿಗೆ ಸಂಬಂಧಪಟ್ಟ ಸರ್ವತೋಮುಖವಾದ ಎಲ್ಲಾ ಸಮಸ್ಯೆಗಳನ್ನೂ ಕೂಲಂಕಷವಾಗಿ ಈ ವರದಿಯಲ್ಲಿ ಅವರು ಪ್ರಸ್ತಾಪ ಮಾಡಿದ್ದಾರೆ ಮತ್ತು ಅಂಕಿ ಅಂಶಗಳ ಆಧಾರದಮೇಲೆ ಕೆಲವು remarks ಕೂಡ ಬರೆದಿಟ್ಟಿದ್ದಾರೆ. ಅದಕ್ಕಾಗಿಯೂ ಸಹ ಅವರನ್ನು ಸಂಪೂರ್ಣವಾಗಿ ಅಭಿನಂದಿಸುತ್ತೇನೆ.

1949ನೆ ಇಸವಿಯಿಂದೀಚೆಗೆ, Mining Companyಯವರಿಗೂ ಸರ್ಕಾರಕ್ಕೂ ಆದಂಥ ಒಂದು ಒಪ್ಪಂದದ ಪರಿಣಾಮವಾಗಿ ನಮ್ಮ ದೇಶಕ್ಕೆ ಬರುತ್ತಿದ್ದ Gold Duty ಬರದೆ ತೊಂದರೆಯಾದ ಪ್ರಯುಕ್ತ, ಬರತಕ್ಕ ವರಮಾನ ಸಂಪೂರ್ಣವಾಗಿ ನಿಂತುಹೋದ ಪ್ರಯುಕ್ತ, ಸರ್ಕಾರದವರು ಸ್ಥಿರ ಮನಸ್ಸುಮಾಡಿಕೊಂಡು ಈ ಸಮಿತಿಯನ್ನು ನೇಮಕಮಾಡಿ ಕೂಲಂಕಷವಾಗಿ ಈ ವಿಷಯವನ್ನು ಪರಿಶೀಲನೆ ಮಾಡಬೇಕೆಂದು ಮಾಡಿದ್ದು ತುಂಬ ಸಾರ್ಥಕವಾದ ಹಾಗಾಯಿತು. ವರದಿಯಲ್ಲಿ ನಮೂದಿಸಿರತಕ್ಕ ಕೆಲವು ವಿಷಯಗಳ ವಿಚಾರವಾಗಿ ಪ್ರಸ್ತಾಪಮಾಡಿ ಕಂಪೆನಿಯವರು ಉತ್ತರವನ್ನು ಕಳುಹಿಸಿದ್ದಾರೆ. ಅದನ್ನು ಕೂಡ ನಾನು ಕುತೂಹಲದಿಂದ ಕೂಲಂಕಷವಾಗಿ ಓದಿದ್ದೇನೆ. ಅಷ್ಟು ದೊಡ್ಡ ಜವಾಬ್ದಾರಿಯುಳ್ಳ ಕಂಪೆನಿಯನ್ನು ವಿನಾಕಾರಣ ಈ ಮಹಾಸಭೆಯಲ್ಲಿ ಟೀಕೆಮಾಡಬೇಕಾದರೆ ಅವರ ಅಭಿಪ್ರಾಯಗಳೇನಿವೆ, ಅವರ ಕಷ್ಟನಿಷ್ಠುರಗಳೇನು, ಅವರಿಗೆ ನಿಜವಾಗಿ ಕಷ್ಟವಿದೆಯೇ ಇಲ್ಲವೇ, ಅವರು ಹೇಳತಕ್ಕದ್ದೇನಿದೆ, ಇದನ್ನೆಲ್ಲಾ ತಿಳಿಯಬೇಕೆಂಬ ಉದ್ದೇಶದಿಂದ ನಾನು Mining ಕಂಪೆನಿಗಳವರಿಂದ ಬಂದಿರತಕ್ಕ ಜವಾಬನ್ನು ಓದಿದ್ದೇನೆ. ಅವರ ಜವಾಬಿನಲ್ಲಿ ಎರಡು ಮುಖ್ಯವಾದ ಕಾರಣಗಳನ್ನು ತೋರಿಸಿದ್ದಾರೆ. ಒಂದು working cost ಜಾಸ್ತಿಯಾಗಿದೆ ಮತ್ತು 1949ನೆ ಇಸವಿಯಲ್ಲಿ ಸರ್ಕಾರಕ್ಕೂ ಕಂಪೆನಿಗೂ ಆದ ಒಪ್ಪಂದದ ಕಾಲದಲ್ಲಿದ್ದ ಒಂದು ಔನ್ಸ್ ಚಿನ್ನದ ಬೆಲೆ ಕಡಿಮೆಯಾಗುತ್ತಾ ಬಂದು ಈಗ ಶೇಕಡ 25ರಷ್ಟು ಕಡಮೆಯಾಗಿದೆ. ಆದ್ದರಿಂದ sharing in profit ಎಂದು ತೀರ್ಮಾನವಾಗಿದ್ದಾಗ್ಯೂ ಆ profitನಲ್ಲಿ share ಮಾಡಿ ಸರ್ಕಾರಕ್ಕೆ ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಇದನ್ನು ನಾವು anticipate ಮಾಡಲಿಲ್ಲ. 1949ನೆ ಇಸವಿಯಲ್ಲಿ agreement ಮಾಡಿಕೊಳ್ಳತಕ್ಕ ಕಾಲದಲ್ಲಿ ಈರೀತಿಯಾಗಿ ಚಿನ್ನದ ಧಾರಣೆ ಮಾರುಕಟ್ಟೆಯಲ್ಲಿ ಇಳಿದುಹೋಗುತ್ತದೆನ್ನುವ ವಿಚಾರ anticipate ಮಾಡಿರಲಿಲ್ಲ. ನಾವೂ ಮಾಡಲಿಲ್ಲ, ಸರ್ಕಾರದವರೂ ಮಾಡಲಿಲ್ಲ, ಆದಕಾರಣ ಇವೊತ್ತಿನ ದಿವಸ ನಾವು ಸರ್ಕಾರಕ್ಕೆ ಕೊಡಬೇಕಾದ ಲಾಭದಲ್ಲಿನ ಭಾಗವನ್ನು ಕೊಡುವುದಕ್ಕೆ ಸಾಧ್ಯವಾಗಲಿಲ್ಲವೆಂದು ಹೇಳಿದ್ದಾರೆ. ಚಿನ್ನಧ ಧಾರಣೆ ಇಳಿದು ಹೋಗಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. Cost ಯಾವ ರೀತಿ increase ಆಗಿದೆಯೆಂದು ವರದಿಯಲ್ಲಿ ಸಂಪೂರ್ಣವಾಗಿ ಕೊಟ್ಟಿದ್ದಾರೆ. ಈಗಲೇ ಅಂಕಿಅಂಶಗಳು ಎಲ್ಲರಿಗೂ ಗೊತ್ತಿರುವುದರಿಂದ ನಾನು ಮತ್ತೆ ಮತ್ತೆ ಅದನ್ನು ವಿಮರ್ಶೆ ಮಾಡಬೇಕಾದ ಪ್ರಮೇಯವಿಲ್ಲ. ಆದರೆ ಈ ಅಂಕಿಅಂಶಗಳಿಂದ ನಮಗೆ ಗೊತ್ತಾಗತಕ್ಕ ಒಂದು ಮುಖ್ಯ ವಿಚಾರವೇನೆಂದರೆ 1949ನೆ ಇಸವಿಯಲ್ಲಿ cost of production ಏನಿತ್ತು ಮತ್ತು 1953ನೇ ಇಸವಿಯಲ್ಲಿ ಯಾವ ರೀತಿ ಹೆಚ್ಚಾಗಿದೆ ಎನ್ನುವುದು. ಈ cost of productionನಲ್ಲಿ fixed cost ಮತ್ತು variable cost ಎಂದು ಎರಡು ಭಾಗಮಾಡಿದ್ದಾರೆ. Fixed costನಲ್ಲಿ Administration ಮತ್ತು Central Administration ಎಂದು ಎರಡು heads ಇವೆ. ಅದರಲ್ಲಿ Mysore Mines, Champion Reef Mines ಮತ್ತು Nandydroog Mines ಈ ಮೂರು ಗಣಿಗಳಲ್ಲೂ ಕೂಡ 1949 ಇಸವಿಯಲ್ಲಿದ್ದ ಖರ್ಚಿಗೂ 1950ನೆ ಇಸವಿಯಲ್ಲಿನ ಖರ್ಚಿಗೂ ಹೋಲಿಸಿದರೆ ಬಹಳವಾಗಿ ಹೆಚ್ಚು ಮಾಡಿದ್ದಾರೆ. Mysore Minesನಲ್ಲಿ 1949ರಲ್ಲಿ 3,28,000 ರೂಪಾಯಿ ಎರಡು ಬಾಬುಗಳಲ್ಲೂ ಖರ್ಚಾಗುತ್ತಿದ್ದುದನ್ನು 1953ರಲ್ಲಿ 9,30,000 ರೂಪಾಯಿಗಳಿಗೆ ಏರಿಸಿದ್ದಾರೆ. ಅದೇರೀತಿಯಾಗಿ Champion Reef Minesನಲ್ಲಿ 1949ರಲ್ಲಿ 3,39,000 ರೂಪಾಯಿ ಇದ್ದುದನ್ನು 1953ರಲ್ಲಿ 8,88,000 ರೂಪಾಯಿಗಳಿಗೆ ಏರಿಸಿದ್ದಾರೆ. ನಂದೀದುರ್ಗ ಗಣಿಗಳಲ್ಲಿ 3,66,000

ರೂಪಾಯಿ ಇದ್ದದ್ದನ್ನು 1953ರಲ್ಲಿ 8,47,000 ರೂಪಾಯಿಗಳಿಗೆ ಏರಿಸಿದ್ದಾರೆ. ಹೀಗೆ ಈ ಎರಡು ಬಾಬುಗಳಲ್ಲಿಯೂ ಮೂರು ಗಣಿಗಳಿಂದಲೂ ಸೇರಿ ಹೆಚ್ಚಾಗಿ ರತಕ್ಕದ್ದು 15,82,000 ರೂಪಾಯಿಗಳು. ಅದೇ ರೀತಿಯಾಗಿ ಈ variable costs ಎನ್ನುವುದರಲ್ಲಿ mining ಮತ್ತು labour ಎಂಬ ಎರಡು ಬಾಬುಗಳನ್ನೂ ಒಟ್ಟಿಗೆ ಸೇರಿಸಿದ್ದಾರೆ. ಇದರಲ್ಲಿ ಕಾರ್ಮಿಕರಿಗೆ ಅನುಕೂಲವಾಗುವ ರೀತಿಯಲ್ಲಿ cost ಹೆಚ್ಚಾಗಿದೆಯೇ ಎಂದು ನೋಡಿದರೆ ಅದೇನೂ ಕಾಣುವುದಿಲ್ಲ. 1949ನೆಯ ಇಸವಿಯಲ್ಲಿ ಮೂರು ಕಂಪೆನಿಗಳಿಂದಲೂ ಸೇರಿ ಒಟ್ಟು 1,52,73,000 ರೂಪಾಯಿ mines and labour charges ಇದ್ದುದ್ದು 1953ನೆ ಇಸವಿಯಲ್ಲಿ 179,92,000 ರೂಪಾಯಿ ಖರ್ಚು ಆಗಿದೆ. ಎಂದರೆ ಸುಮಾರು 27,19,000 ರೂಪಾಯಿ ಮಾತ್ರ mining and labour chargesಗೋಸ್ಕರ ಹೆಚ್ಚಿಗೆ ಖರ್ಚಾಗುತ್ತಿದೆಯೆಂದು ಗೊತ್ತಾಗುತ್ತಿದೆ. ಇದರಿಂದ ನಮಗೇನು ತೋರುತ್ತದೆ ಎಂದರೆ ಲೇಬರರ್ಸ್ ಎಂದು ಯಾರಿಗೆ ಹೇಳುತ್ತೇವೋ ಅವರಿಗಾಗಿ ಹೆಚ್ಚಾಗಿ ಖರ್ಚು ಮಾಡಿರುವುದು ಕಂಡುಬರುವುದಿಲ್ಲ. ಬರೀ ಕವೆನೆಂಟಡ್ ಸ್ಟ್ಯಾಫ್ ಎಂದು ಕರೆಯುವ ಅಧಿಕಾರ ವರ್ಗಕ್ಕೆ ಪ್ರಾವಿಡೆಂಟ್ ಫಂಡ್ ವಗೈರೆ ಹೆಚ್ಚಾಗಿ ಕೊಡಲು ವರ್ಷಕ್ಕೆ 15-16 ಲಕ್ಷ ರೂಪಾಯಿಗಳು ಖರ್ಚಾಗುತ್ತವೆ. ಹೀಗೆ ವರ್ಕಿಂಗ್ ಕಾಸ್ಟ್ ಏರಿಸದೇ ಇದ್ದರೆ ಒಂದು ಷೇರು ಅದರಲ್ಲಾದರೂ ಬರುವುದಕ್ಕೆ ಅವಕಾಶವಾಗುತ್ತಿತ್ತು. 1949ನೆಯ ಇಸವಿಯಲ್ಲಿ ಗೋಲ್ಡ್ ಡ್ಯೂಟಿ ಆಕ್ಟನ್ನು ವಜಾಮಾಡಿ ಒಂದು ಒಪ್ಪಂದ ಮಾಡಿಕೊಳ್ಳುವುದಕ್ಕೆ ಕೆಲವು ಮುಖ್ಯವಾದ ಕಾರಣಗಳಿವೆ. ನಾನು ನಿನ್ನೆಯಿಂದಲೂ ಬಹಳ ಕುತೂಹಲದಿಂದ ಇದರ ವಿಚಾರವನ್ನು ಸರಿಯಾಗಿ ತಿಳಿಯಬೇಕೆಂದು ಮಾನ್ಯ ಸದಸ್ಯರು ಹೇಳಿದ್ದನ್ನೆಲ್ಲಾ ಕೂಲಂಕಷವಾಗಿ ಕೇಳಿದೆ. ಅಲ್ಲದೆ 1949ನೆಯ ಇಸವಿಯಲ್ಲಿ ಗೋಲ್ಡ್ ಡ್ಯೂಟಿ vary ಮಾಡುವಾಗ ಸಂಬಂಧಪಟ್ಟ ಆಕ್ಟನ್ನು ಮಂಡಿಸಿದ ಸಚಿವರು ಏನು ಹೇಳಿದ್ದಾರೆಂಬುದನ್ನು ನಿನ್ನೆ ರಾತ್ರಿಯೆಲ್ಲಾ ಓದಿದೆ. ಆಗ ಅವರ ಮುಖ್ಯವಾದ ಒಂದು ಧ್ಯೇಯವೇನಿತ್ತು ಎಂದರೆ 1949ರವರೆಗೆ ಗೋಲ್ಡ್ ಡ್ಯೂಟಿ ಆಕ್ಟ್ ಏನಿತ್ತೋ ಅದರಿಂದ ಕಂಪನಿಗೆ ನಷ್ಟವಾಗುತ್ತದೆ, ಬಹಳ ತೊಂದರೆಯಾಗುತ್ತದೆ, ಅದು ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಾಗುತ್ತಿಲ್ಲ, ಅದರ ಲಾಂಗೆವಿಟಿ ಆಫ್ ಲೈಫ್‌ಗೆ ಅವಕಾಶವಾಗುವುದಿಲ್ಲ, ಅದು ಬೇಗ ಮುಗಿದುಹೋಗಬಹುದು, ಇತ್ಯಾದಿ ಇತ್ಯಾದಿ ವಿಷಯಗಳನ್ನು 1941ರಿಂದಲೂ ಕಂಪೆನಿಯವರು ಹೇಳಿಕೊಂಡು ಬಂದಿದ್ದಾರೆ. ಇದು ವರದಿಯಲ್ಲಿದೆ. 1945ರಲ್ಲಿ ಸರ್ಕಾರ ಅಮೆಂಡ್‌ಮೆಂಟ್ ತಂದಿರುವುದಕ್ಕೆ ಇದೇ ಕಾರಣ. ಏನೇ ಆಗಲೀ ಆಗ ಸರ್ಕಾರಕ್ಕೆ ಕೆಲವು ಕಾರಣಗಳಿದ್ದುವು. ಆಗಿನ ಮಾನ್ಯ ಸಚಿವರು ಮುಖ್ಯವಾಗಿ ಈ ವಿಚಾರದಲ್ಲಿ 'ನಾವು ಲಾಭ ಷೇರು ಮಾಡುವ ಷೇರು ಹೋಲ್ಡರು ಅಥವಾ ಭಾಗಸ್ಥರು ಆಗುತ್ತೇವೆ, ಆದರಿಂದ ಈಗ ಬರುವ ಉತ್ಪತ್ತಿ ಅಂದರೆ ಗೋಲ್ಡ್ ಡ್ಯೂಟಿ ಏನಿದೆಯೋ ಅದು ಯಾವಾಗಲಾದರೂ ಕಡಮೆಯಾಗಬಹುದು. ಈಗ ಅದಕ್ಕೆ ರಿಲೀಫ್ ಕೇಳುತ್ತಿದ್ದಾರೆ, ನಾವು ಪಾರ್ಟ್‌ನರ್ಸ್ ಆದರೆ ಅವರಿಗೆ ಬರುವ ಲಾಭದಲ್ಲಿ ಒಂದು ದೊಡ್ಡ ಷೇರು ಸಿಕ್ಕುತ್ತದೆ, ಆದ್ದರಿಂದ ರಿಪೀಲ್ ಮಾಡಿ ಹೊಸ ಒಪ್ಪಂದ ಮಾಡಿಕೊಳ್ಳಲು ಒಪ್ಪಿದ್ದಾರೆ' ಎಂದು ಹೇಳಿದರು. ಮತ್ತು ಹೈಗ್ರೇಡ್ ಓರನ್ನು ವರ್ಕ್ ಮಾಡುತ್ತಾರೆ, ಲೋ ಗ್ರೇಡ್ ಓರನ್ನು ಹಾಗೆಯೇ ಬಿಟ್ಟುಬಿಡುವುದರಿಂದ ಬಹಳ ಕಾಲ ಕಂಪೆನಿ ಉಳಿಯುವುದಿಲ್ಲ, ಬೇಗ ಅವರಿಗೆ ಬರುವ ಫಾಯಿದೆಯನ್ನು ತೆಗೆದುಕೊಂಡು ಹೋಗುತ್ತಾರೆ, ಅನೇಕ ವರ್ಷ ಆ ಸಂಸ್ಥೆಯ ಜೀವ ಉಳಿಯುವುದಿಲ್ಲ ಎಂದು ಮುಖ್ಯ ಕಾರಣವನ್ನು ತಿಳಿಸಿದರು. ಅಲ್ಲದೆ ಇಂಡಿಯನೈಜೇಷನ್ ಇತ್ಯಾದಿ ವಿಚಾರವನ್ನು ಹೇಳಿದರು. ಆದರೆ ಅವರೇನು ಒಂದು ಉದಾತ್ತ ಧ್ಯೇಯದಿಂದ ಮತ್ತು ಸದುದ್ದೇಶದಿಂದ ಇದೆಲ್ಲವನ್ನೂ ರಿಪೀಲ್ ಮಾಡಿ ಅಗ್ರಿಮೆಂಟಿಗೆ ಬಂದರೆ ಅನುಕೂಲವಾಗುತ್ತದೆಂದು ಉದ್ದೇಶಪಟ್ಟರೋ ಆ ಉದ್ದೇಶ ಈ ದಿವಸ ನಮಗೆ ಕಾಣುವ ರೀತಿಯಲ್ಲಿ ಸಫಲವಾಗಲಿಲ್ಲ. ಈ ಅಗ್ರಿಮೆಂಟ್ ಆದಮೇಲೆ ಕಂಪೆನಿಯವರು ಸರ್ಕಾರಕ್ಕೆ ಸರಿಯಾದ ವರಮಾನ ಬರುವುದಕ್ಕೆ ಕೂಡ ಅಡ್ಡಿ ಬರುವ ರೀತಿಯಲ್ಲಿ ಕೆಲಸ ಮಾಡಿರುವುದು ಸ್ವಯಂ ವೇದ್ಯವಾಗಿದೆ. ಮಾನ್ಯ ಸದಸ್ಯರೂ ಕೂಡ ಚೆನ್ನಾಗಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ವರದಿಯಲ್ಲೂ ಕೂಡ ಈ ಅಗ್ರಿಮೆಂಟಿನಿಂದ ಈಗಿರುವ ರೀತಿಯಲ್ಲಿ ಯಾವ ಸಹಾಯವೂ ಆಗುವುದಿಲ್ಲ. ಇದನ್ನು ವರ್ಕ್ ಮಾಡುವುದಕ್ಕೆ ಸಹ ಸಾಧ್ಯವಾಗಲಿಲ್ಲ ಎಂದು ಹೇಳಿದ್ದಾರೆ. ಈ ಎಲ್ಲಾ ದೃಷ್ಟಿಯಿಂದ ಈಗಿರುವ ಅಗ್ರಿಮೆಂಟನ್ನು ಬದಲಾವಣೆಮಾಡಿ ಒಂದು ಹೊಸ ಒಪ್ಪಂದಕ್ಕೆ ಬರಬೇಕಾಗುತ್ತದೆ. ಈ ಹೊಸ ಒಪ್ಪಂದಕ್ಕೆ ಬರಬೇಕಾದರೆ ಕಂಪೆನಿಯವರ ಒಪ್ಪಿಗೆಯಾಗಬೇಕು. ಅವರು ಒಪ್ಪದಿದ್ದರೆ ನಾವು ರಾಷ್ಟ್ರೀಕರಣ ಮಾಡಬೇಕಾಗುತ್ತದೆ. ಶ್ರೀಮಾನ್ ಮರಿಯಪ್ಪನವರು ಮಾತನಾಡುತ್ತಾ, ಈಗ ರಾಷ್ಟ್ರೀಕರಣ ಮಾಡುವುದಕ್ಕಿಂತ ಸ್ನೇಹಭಾವದಿಂದ ಒಂದು ಒಪ್ಪಂದ ಮಾಡಿಕೊಂಡರೆ ಉತ್ತಮವಲ್ಲವೇ, ಅದು ಜಾಣ್ಮೆಯೆಂದು ಕಾಣುತ್ತದೆ ಎಂದು ಹೇಳಿದರು. ಆದರೆ ಈಗಿರತಕ್ಕ ಅಗ್ರಿಮೆಂಟ್ ಪ್ರಕಾರ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅದರ ಪ್ರಕಾರ 3 ಕಾಸೂ ಬರುವುದಿಲ್ಲ, ಬರುವ ಆದಾಯವನ್ನು ಹೆಚ್ಚಿಸಲು ಬೇರೆ ರೀತಿಯ ಒಪ್ಪಂದ ಮಾಡಿಕೊಂಡೇ ತೀರಬೇಕು, ಎಂದು ಸಮಿತಿಯವರು ಅಭಿಪ್ರಾಯಪಟ್ಟಿದ್ದಾರೆ. ಈಗ ಕಂಪನಿ ಕೊಡುತ್ತಿರುವ ಶೇಕಡ 5ರಷ್ಟು ರಾಯಲ್ಟಿಯನ್ನು ಶೇಕಡ 10ಕ್ಕೆ ಹೆಚ್ಚಿಸಬೇಕೆಂದು ಸಮಿತಿಯವರು ಮಾಡಿರುವ ಸಿಫಾರ್ಸನ್ನು ಒಪ್ಪಿದರೆ ಕಂಪೆನಿಯನ್ನು ಮುಚ್ಚುತ್ತೇವೆಂದು ಕಂಪೆನಿಯವರು ಹೇಳುತ್ತಿದ್ದಾರೆ. ಒಂದು ಕಡೆ ದೇಶಾಭಿವೃದ್ಧಿಗಾಗಿ ರಾಯಲ್ಟಿ ಹೆಚ್ಚು ಮಾಡುವುದಕ್ಕೆ ಅವಕಾಶವಿಲ್ಲ ಇನ್ನೊಂದು ಕಡೆ ಕಂಪೆನಿ ಮುಚ್ಚುತ್ತೇವೆಂದು ಹೇಳುತ್ತಿದ್ದಾರೆ. ಇದು ಯಾವ ರೀತಿ ತೀರ್ಮಾನವಾಗಬೇಕೋ ಅರ್ಥವಾಗುವುದಿಲ್ಲ. ಬಂದಷ್ಟೇ ಬರಲಿ, ಹೇಗಾದರೂ ಕೆಲಸ ನಡೆಯಲಿ ಎಂದು ಹೇಳುವುದು ಸೂಕ್ತವಲ್ಲ. ಹೊಸ ಒಪ್ಪಂದಕ್ಕೆ ಬಂದು ಸ್ವಲ್ಪ ಹೆಚ್ಚಾಗಿ ಕೊಡುವುದಾದರೆ ಏಕೆ ಒಪ್ಪಬಾರದು ಎಂದು ಮಾನ್ಯ ಮಿತ್ರರು ಕೇಳಿದರು. ಅದು ಮುಖ್ಯವಾದ ಪ್ರಶ್ನೆಯಲ್ಲ. ಶ್ರೀ ಶ್ರೀನಿವಾಸನ್‌ರವರು ಈಗ ಹೇಳಿದ ಹಾಗೆ, ರಾಷ್ಟ್ರೀಕರಣ ಮಾಡಬೇಕೆಂಬ ಉದ್ದೇಶವನ್ನು ಸರ್ಕಾರ ಇಟ್ಟುಕೊಳ್ಳಲೇಬೇಕು ಮತ್ತು ಅದನ್ನು ಮಾಡಲೇಬೇಕಾಗುತ್ತದೆ. ಹೊರಗಡೆಯಿಂದ ಬಂದಿರುವ ಜನರಿಗೆ ನಮ್ಮ ದೇಶದ ಉತ್ಪತ್ತಿಯನ್ನು ತೆಗೆದುಕೊಂಡು ಹೋಗುವುದಕ್ಕೆ ಇನ್ನುಮೇಲಾದರೂ ಅವಕಾಶ ಕೊಡಬಾರದು. ಆದಕಾರಣ ಇರುವ ಒಪ್ಪಂದವನ್ನು ಮುಂದುವರಿಸೋಣ ಎಂದು ಹೇಳುವುದು ಖಂಡಿತ ಜಾಣ್ಮೆಯಲ್ಲ, ನ್ಯಾಯವಲ್ಲ. ಆದ್ದರಿಂದ ರಾಷ್ಟ್ರೀಕರಣ ಮಾಡಬೇಕಾದ್ದೇ ನಮ್ಮ ಗುರಿಯಾಗಿರಬೇಕು. ಅದಕ್ಕೆ ನಮಗೆ ಟೆಕ್ನಿಕಲ್ ಸಿಬ್ಬಂದಿ ಇಲ್ಲ.

(ಶ್ರೀ ಡಿ. ದೇವರಾಜ ಅರಸ್.)

ನಮ್ಮ ಜನರಿಗೆ ಆ ವಿಚಾರ ಗೊತ್ತಾಗಿಲ್ಲ, ಈ ದಿವಸ ಆ ಕೆಲಸ ಮಾಡಲು ಸಾಧ್ಯವೇ ಅಂದರೆ, ಸರ್ಕಾರಕ್ಕೆ ನಾವು ಹೇಳುವುದು ಅವರು ಧೈರ್ಯಮಾಡಬೇಕು ಎಂದು. ರಾಷ್ಟ್ರೀಕರಣ ಮಾಡಬೇಕೆಂಬ ಅಭಿಪ್ರಾಯವನ್ನು ಖಚಿತವಾಗಿ ಈ ದಿವಸದಿಂದಲೇ ತೀರ್ಮಾನಮಾಡಿ. ಈ ವರ್ಷದಲ್ಲಿ ಅಥವಾ 4-5 ವರ್ಷಗಳಾದರೂ ಅನತಿ ದೂರದಲ್ಲಿ ಸರ್ಕಾರದವರು ರಾಷ್ಟ್ರೀಕರಣಮಾಡಿ ಸಂಪೂರ್ಣ ಜವಾಬ್ದಾರಿ ವಹಿಸಿಕೊಂಡು ತಾವೇ ಸ್ವತಃ ಈ ಕಂಪೆನಿಯನ್ನು ನಡೆಸುವುದಕ್ಕೆ ಜನರಿಗೆ ಯಾವ ತರಪೇತು ಬೇಕೋ ಅದನ್ನೆಲ್ಲಾ ಕೊಟ್ಟು, ತಕ್ಕ ಆಸಕ್ತಿ ವಹಿಸಬೇಕು. ಸರ್ಕಾರಕ್ಕೆ ಈ ವಿಚಾರದಲ್ಲಿ ಜವಾಬ್ದಾರಿ ಕೂಡ ಇದೆ. ಇದಕ್ಕೆ ಮಾನ್ಯ ಸಭೆಯ ಸಂಪೂರ್ಣ ಬೆಂಬಲ ಸಹಾ ಇದೆ. ಕೊನೆಯದಾಗಿ ರಾಷ್ಟ್ರೀಕರಣವಾಗಬೇಕೆಂಬುದನ್ನು ಸಮರ್ಥನೆಮಾಡಿ ಒಂದು ಮಾತನ್ನು ಕೌಟಿಲ್ಯರ ಅರ್ಥಶಾಸ್ತ್ರದಿಂದ ಹೇಳುತ್ತೇನೆ. ಕೌಟಿಲ್ಯರ "ಅರ್ಥಶಾಸ್ತ್ರ ರಚಿತವಾದುದು ಸುಮಾರು ಕ್ರಿ.ಪೂ. 300ನೇ ವರ್ಷದಲ್ಲಿ, ಅಂದರೆ 2200 ವರ್ಷಗಳ ಕೆಳಗೆ; ಆ ಪುಸ್ತಕದಲ್ಲಿ ಕೌಟಿಲ್ಯರು ಅಥವಾ ಚರಿತ್ರಾರ್ಹವಾದ ಮತ್ತೊಂದು ಹೆಸರನ್ನು ಪಡೆದಿದ್ದ - ಚಾಣಕ್ಯರು ಚಂದ್ರಗುಪ್ತನ ಕಾಲದಲ್ಲಿ ಪ್ರಧಾನಿಯಾಗಿದ್ದವರು ಹೇಳಿರುವುದನ್ನು ಡಾ॥ ಶಾಮಶಾಸ್ತ್ರಿಯವರು ಇಂಗ್ಲೀಷಿಗೆ ತರ್ಜುಮೆ ಮಾಡಿದ್ದಾರೆ. ಕೌಟಿಲ್ಯರ ಅರ್ಥಶಾಸ್ತ್ರದಲ್ಲಿ "The Government shall keep as state monopoly both mining and commerce" ಎಂದು ಹೇಳಿದ್ದಾರೆ. ಇದನ್ನೇ ಸಮರ್ಥನೆ ಮಾಡಿ ಇನ್ನೊಂದು ಮಾತನ್ನು ಈ ರೀತಿ ಹೇಳಿದ್ದಾರೆ.— "Mines are source of treasury. From treasury comes the power of Government." 2290 ವರ್ಷಗಳ ಹಿಂದೆ ಕೌಟಿಲ್ಯರು ಹೇಳಿರುವ ಮಾತು ಈ ದಿವಸಕ್ಕೂ ನಿಜವಾಗಿ ಅನ್ವಯಿಸುತ್ತಿದೆ. ಈ ಮಾತಿನ ಆಧಾರದಮೇಲೆ ಸರ್ಕಾರದವರು ಈ ವಿಷಯದಲ್ಲಿ ಮುಂದುವರಿಯಬೇಕು, ಪರಿಶೀಲಿಸಬೇಕು ಎಂದು ನಾನು ಅಪೇಕ್ಷಿಸುತ್ತೇನೆ.

(Sri S. Gopala Gowda rose.)

Mr. SPEAKER.—There is no time for the Hon'ble Member to speak. I request him to sit down. He knows the trend of the opinion of the House. There are no two opinions in the matter.

Sri S. GOPALA GOWDA (Sagar-Hosanagar).—In the morning I had requested the Hon'ble Speaker to give me a chance.

Mr. SPEAKER.—Even now, I would give. I have personally no objection. But you know the opinion of the House already.

Sri S. GOPALA GOWDA.—But I want to put forth my views on the Report and on the recommendation of the Hon'ble Minister.

Sri H. SIDDAVEERAPPA.—I do not think there will be much difference between what the Hon'ble Member wishes to say and what has already been said by Hon'ble Members.

Sri S. GOPALA GOWDA.—But still there is difference in the angle of approach.

Sri H. SIDDAVEERAPPA.—I would request the Hon'ble Member to close within five minutes.

Sri S. GOPALA GOWDA.—What can I say in five minutes ? ಮೈಸೂರು ದೇಶದ ಇತಿಹಾಸದಲ್ಲಿ ಮತ್ತು ಈ ಅಸೆಂಬ್ಲಿ ಇತಿಹಾಸದಲ್ಲಿ ಇದೊಂದು ದೊಡ್ಡ ಘಟನೆಯೆಂದು ನಾನು ತಿಳಿದುಕೊಂಡಿದ್ದೇನೆ. ಈ ಒಂದು ಸಮಸ್ಯೆಯನ್ನು ನಾವು ಚೆನ್ನಾಗಿ ಅರ್ಥ ಮಾಡಿಕೊಂಡರೆ ಬಹುಶಃ ನಮ್ಮ ದೇಶದ ಎಲ್ಲಾ ಆರ್ಥಿಕ ಸಮಸ್ಯೆಗಳ ಬಹುಭಾಗವನ್ನು ಅರ್ಥ ಮಾಡಿಕೊಂಡ ಹಾಗಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಈ ಸಮಸ್ಯೆ ಬಹಳ ಪ್ರಾಮುಖ್ಯವಾದುದು. ನೀವು ಈ ದಿನ ಈ ಸಮಸ್ಯೆಯ ಬಗ್ಗೆ ಅವಸರದಿಂದ ಈ ರೀತಿ ವರ್ತಿಸುತ್ತಿರುವುದರಿಂದ ಹೇಳಬೇಕಾದ್ದನ್ನು ಸ್ಪಷ್ಟವಾಗಿ ಹೇಳಲು ಬಹಳ ಕಷ್ಟವಾಗಿದೆ. ಹಿನ್ನೆಲೆಯಿಲ್ಲದೆ ಹೇಳಿದರೆ ಏನೂ ಗೊತ್ತಾಗುವುದಿಲ್ಲ, ಏಕೆ ಹೇಳಿದೆನೆಂದು ನಾನೇ ಒಂದು ಪ್ರಶ್ನೆಯನ್ನು ಹಾಕಿಕೊಳ್ಳುವ ಸಂದರ್ಭ ಕೂಡ ಬರುತ್ತದೆ. ಈಗ ಮೈಸೂರು ಸರ್ಕಾರದವರು ನೇಮಿಸಿದ್ದ ಸಮಿತಿಯು ನಮ್ಮ ಕೈಗಾರಿಕಾ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಈ ಗಣಿಗಳ ವಿಷಯದಲ್ಲಿ ಉತ್ತಮವಾದ ಅಂಕಿ. ಅಂಶಗಳಿಂದ ಕೂಡಿದ ಒಂದು ವರದಿಯನ್ನು ಸಭೆಗೆ ಒಪ್ಪಿಸಿದೆ ಮತ್ತು ಈ ಸಂಬಂಧದಲ್ಲಿ ಎಲ್ಲಾ ಮಾನ್ಯ ಸದಸ್ಯರೂ ಕೂಡ ಒಂದು ವರದಿಯನ್ನು ಕೊಟ್ಟು ಮಾನ್ಯ ಮಂತ್ರಿಗಳು ತಮ್ಮ ಸುದೀರ್ಘವಾದ ಭಾಷಣದಲ್ಲಿ ಅಂಕಿ ಅಂಶಗಳೊಂದಿಗೆ ಕೆಲವು ವಿಷಯಗಳನ್ನು ಸಭೆಯ ಗಮನಕ್ಕೆ ತಂದು ಕಂಪೆನಿಯ ಪೂರ್ಣ ಇತಿಹಾಸವನ್ನು ಮತ್ತು ಈ ದಿವಸ ಯಾವ ರೀತಿ ಇದೆಯೆಂಬುದನ್ನೂ ತಿಳಿಸಿದ್ದಾರೆ. ಆದ್ದರಿಂದ ಅವರು ದೇಶಕ್ಕೆ ಒಂದು ದೊಡ್ಡ ಉಪಕಾರ ಮಾಡಿದ್ದಾರೆಂದು ಭಾವಿಸಿದ್ದೇನೆ. ಆದರೆ ಈ ದಿನ ಬಹಳ ದುಃಖದಿಂದ ಹೇಳಬೇಕಾದ ಅಂಶವೇನೆಂದರೆ, ಇಂಡಿಯಾ ದೇಶಕ್ಕೆ ಇನ್ನೂ ಶಾಪ ವಿಮೋಚನೆಯಿಲ್ಲವೆಂದು ಕಾಣುತ್ತದೆ. ಸ್ವಾತಂತ್ರ್ಯವನ್ನು ಕಷ್ಟಪಟ್ಟು ಸಂಪಾದನೆ ಮಾಡಿದ್ದೇವೆ. ಆದರೆ ಯಾರಿಗೆ ಆ ಸ್ವಾತಂತ್ರ್ಯದ ಫಲ ದೊರಕಬೇಕಾಗಿತ್ತೋ ಅದು ದೊರಕದಿರುವುದು ನಮ್ಮ ದೇಶದ ದೌರ್ಭಾಗ್ಯ. ಬ್ರಿಟಿಷರು ನಮ್ಮ ದೇಶದಲ್ಲಿ ನೆಲೆಸುವುದಕ್ಕೆ ಅವಕಾಶ ಕೊಟ್ಟು ಅವರ ರಾಜ್ಯ ಬಹಳ ಕಾಲ ಇರುವುದಕ್ಕೆ ಅವಕಾಶ ಕೊಟ್ಟು ಪುನಃ ಸ್ವಾತಂತ್ರ್ಯ ಬಂದ ಮೇಲೂ ಕೂಡ ಅವರ ಪ್ರಭಾವ ಇನ್ನೂ ಉಳಿಯಲು ಅವಕಾಶ ಮಾಡಿರುವುದು ಸರಿಯಲ್ಲ. ಸ್ವಾತಂತ್ರ್ಯ ಬಂದ ಮೇಲೂ ಇವರ ಸ್ಥಿತಿ ಉತ್ತಮ ಆಗಲು ಇನ್ನೂ ಅವಕಾಶವಾಗಿದೆ. ರಾಜಕೀಯ ಸ್ವಾತಂತ್ರ್ಯ ಬಂದರೂ ಕೂಡ ಇನ್ನೂ ಆರ್ಥಿಕ ಸ್ವಾತಂತ್ರ್ಯ ಬಂದಿಲ್ಲ. ಇದು ಬರುವುದಕ್ಕಾಗಿ ಎಂಟು ಅಮೂಲ್ಯವಾದ ವರ್ಷಗಳನ್ನು ಕಾಂಗ್ರೆಸ್ ಸರ್ಕಾರ ಕಳೆದುಕೊಂಡಿದೆ. ದೇಶದಲ್ಲಿ ಬಡತನ ಹೆಚ್ಚುವುದಕ್ಕೆ ಕಾರಣವಾಗಿದೆಯೇ ಹೊರತು ಇನ್ನೇನೂ ಪ್ರಯೋಜನ ಅಷ್ಟಾಗಿ ಲಭಿಸಿಲ್ಲ. ಈ ದಿವಸ ಪಂಚವಾರ್ಷಿಕ ಯೋಜನೆ ವಗೈರೆಮಾಡಿ

ಬಡಜನರ, ತೆರಿಗೆ ಕೊಡುವುದಕ್ಕೆ ಯೋಗ್ಯತೆಯಿಲ್ಲದಿರುವ ಜನರ ಮೇಲೆ ತೆರಿಗೆಯನ್ನು ಹಾಕುತ್ತಿರುವುದು ಮುಂದುವರಿಯುತ್ತಿದೆ.

ಇವೊತ್ತು ನಮ್ಮ ದೇಶದ ಬಂಡವಾಳದಲ್ಲಿ ಸುಮಾರು ಶೇಕಡ 60ರಷ್ಟು ಪರದೇಶದ ಬಂಡವಾಳ ಇದೆ. ಈ ಪರದೇಶದ ಬಂಡವಾಳಕ್ಕೆ ಯಾವ ಒಂದು ಸೀಮಾ ಕ್ಷೇತ್ರವೂ ಇಲ್ಲದೇಹೋಗಿದ್ದ ಪಕ್ಷಕ್ಕೆ ಏನಾಗುತ್ತದೆ ಎಂದರೆ, ಇಂಡಿಯಾ ದೇಶಕ್ಕೆ ನಷ್ಟವಾಗುತ್ತದೆ, ಲಾಭದೃಷ್ಟಿ ಇರುವುದಿಲ್ಲ. ಆದ್ದರಿಂದ ಇವೊತ್ತು ಲಾಭದೃಷ್ಟಿಯಿಂದ ನಮ್ಮ ದೇಶದಲ್ಲಿ ಕೆಲಸ ಜರುಗುತ್ತಾ ಇಲ್ಲ. ಮತ್ತು ಪರದೇಶಕ್ಕೆ ಈ ಲಾಭಗಳನ್ನು ತೆಗೆದುಕೊಂಡು ಹೋಗುವುದು ನಿಂತಿಲ್ಲ. ಅದನ್ನು ನಿಲ್ಲಿಸುವ ಶಕ್ತಿ ನಮ್ಮ ದೇಶದಲ್ಲಿ ಇತ್ತು. ಆ ಕಾಲವನ್ನು ಕಳೆದು ಇವೊತ್ತೂ ಕೂಡ ಅದೇ ಪರಿಸ್ಥಿತಿಯನ್ನು ಮುಂದುವರಿಯುವಂತೆ ಮಾಡಿದ್ದೀರಿ. ಅವೊತ್ತು ನಮ್ಮಲ್ಲಿದ್ದಂಥ Gold dutyಯನ್ನು ರಿಪೀಲ್ ಮಾಡುವಾಗ ಆ ಕಂಪೆನಿಯವರ ಮಾತಿಗೆ ಮರುಳಾಗಿ, ದೇಶದ ಆದಾಯವನ್ನು ಕಳೆದುಕೊಂಡದ್ದೂ ಅಲ್ಲದೆ, ಒಂದು ಅಗ್ರಿಮೆಂಟನ್ನು ಕೂಡ ಮಾಡಿಕೊಂಡು ಅದರ ಮುಖಾಂತರ ಇವೊತ್ತು ಉದ್ಭವವಾಗಿರುವ ಅದರ ನೆರಳಿನಲ್ಲಿ ನರಳಾಡುತ್ತಾ ಇದ್ದೇವೆ ಎಂದು ಹೇಳಬೇಕಾಗಿದೆ. ಮತ್ತು ಅವರು ತಮ್ಮ ರಿಪೋರ್ಟಿನಲ್ಲಿ ಇದು ಅರ್ಬಿಟ್ರೆರಿ ಮೆಷರ್ ಎಂದು ಹೇಳುತ್ತಾ ಇದ್ದಾರೆ. ನಾವು ಒಪ್ಪಿಕೊಂಡಿರುವ ಹಾಗೆ ಸರ್ಕಾರದವರಿಗೆ ಎಲ್ಲಾ ಹಕ್ಕೂ ಇದೆ. ಅವರು ಕಮಿಟಿಯನ್ನು ರಚನೆ ಮಾಡುವುದು ಸೂಕ್ತವಾಗಿದೆ. ಏಕೆಂದರೆ, ನಮಗೆಲ್ಲಾ ಅಲ್ಲಿ ಏನು ನಡೆಯುತ್ತಿದೆ ಎಂಬುದು ತಿಳಿಯದೇ ಹೋದರೆ, ದೇಶದ ಸಂಪತ್ತು ಹೇಗಿದೆ, ಯಾರಾರು ಅನುಭವಿಸುತ್ತಾ ಇದ್ದಾರೆ, ಎನ್ನುವುದನ್ನು ತಿಳಿದುಕೊಳ್ಳುವುದು ಸಾಧ್ಯವಾಗುವುದಿಲ್ಲ. ಅದು ಸಾಧ್ಯವಾಗಿಲ್ಲ ಎಂದರೆ ಅದು ಒಣ ಅಭಾಸದ ಮಾತಾಗುತ್ತದೆ. ಆದ್ದರಿಂದ ಇವೊತ್ತು ನಾವು ಈ ವಿಷಯಗಳನ್ನೆಲ್ಲಾ ತಿಳಿದುಕೊಂಡಿರುವುದರಿಂದ ನಮಗೆ ಇವೊತ್ತು ಒಂದು ಶಕ್ತಿ ಬಂದಿದೆ. ಒಟ್ಟಿನಲ್ಲಿ "Knowledge is power" ಎಂಬಂತೆ, ನಮಗೆ ಈಗ ಏನು ನಡೆಯುತ್ತಿದೆ ಎಂಬುದು ಗೊತ್ತಾಗಿರುವುದರಿಂದ, ಮುಂದೆ ಏನು ಹೆಜ್ಜೆ ತೆಗೆದುಕೊಳ್ಳಬೇಕೆಂಬುದು ತಿಳಿದಂತಾಗಿದೆ. ಈಗ ಕೆಲವರು ಹೇಳಿರುವ ಹಾಗೆ ಇವೊತ್ತು ನಮಗೆ ಬರೀ ರಾಯಲ್ಟಿ ಬರಬೇಕು ಎಂದಾಗಲಿ ಅಥವಾ ಹಣ ಇನ್ನೂ ಹೆಚ್ಚಿನ ಭಾಗದಲ್ಲಿ ಸಲ್ಲಬೇಕೆಂದಾಗಲಿ ನಾವು ನಿರೀಕ್ಷಿಸುತ್ತಾ ಇಲ್ಲ. ಇದರಲ್ಲಿ ದೇಶದ ಬಹಳ ದೊಡ್ಡ ಆರ್ಥಿಕ ಸಮಸ್ಯೆ ಅಡಕವಾಗಿದೆ. ನಿರ್ದಿಷ್ಟವಾದ ನೀತಿಯನ್ನು ಅನುಸರಿಸಬೇಕಾಗುತ್ತದೆ. ಬರೀ ಮೈಸೂರು ಸರ್ಕಾರದವರೇ ಒಂದು ಸ್ವತಂತ್ರವಾದ ನಿಲುವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಗವರ್ನ್‌ಮೆಂಟ್ ಆಫ್ ಇಂಡಿಯಾ ಲೆವಲ್‌ನಲ್ಲಿ ತೀರ್ಮಾನವಾಗಬೇಕು, ಇದು ಪ್ರಾದೇಶಿಕ ಸಮಸ್ಯೆ ಅಲ್ಲ, ರಾಷ್ಟ್ರೀಯ ಸಮಸ್ಯೆ ಕೂಡ ಅಲ್ಲ, ಅಂತರರಾಷ್ಟ್ರೀಯ ಸಮಸ್ಯೆ ಇದರಲ್ಲಿ ಅಡಗಿದೆ. ಆದ್ದರಿಂದ ಈ ವಿಷಯವನ್ನು ಕೇಂದ್ರ ಸರ್ಕಾರದವರಿಗೆ ತಿಳಿಸಿ ಈ ವಿಷಯದಲ್ಲಿ ಈ ಮೈನಿಂಗ್ ಕಂಪೆನಿಗಳಿಂದ ಬರಬೇಕಾದ ಹಣ ಬರಮಾಡಿಕೊಳ್ಳುವುದು ಒಂದೇ ಅಲ್ಲ, ಮೈನಿಂಗ್‌ನ್ನೂ ಸರ್ಕಾರ ತಾನೇ ನಡೆಸಿಕೊಂಡು ಹೋಗುವುದಕ್ಕೆ ಏನೇನು ಕೆಲಸಗಳಾಗಬೇಕೋ ಅವುಗಳನ್ನೆಲ್ಲಾ ಕಾನೂನು ರೀತ್ಯಾ ಮಾಡಿಕೊಳ್ಳಬೇಕು. ಇಲ್ಲದೇ ಹೋದರೆ ದೇಶದ ಜನತೆಯ ಬಡತನ ಮತ್ತಷ್ಟು ಹೆಚ್ಚಾಗುವುದಲ್ಲದೆ ರಾಜಕೀಯದ ಅನೇಕ ಗೊಂದಲಗಳಿಗೂ ಕೂಡ ನಾವು ಗುರಿಯಾಗಬೇಕಾಗುತ್ತದೆ. ನಾನು ಮೊದಲೇ ಹೇಳಿದ ಹಾಗೆ ಈ ಬಂಡವಾಳಶಾಹೀ ಪದ್ಧತಿ, ಸಾಮ್ರಾಜ್ಯ ಶಾಹೀ ಪದ್ಧತಿ ನಮ್ಮ ದೇಶವನ್ನು ಬಹಳವಾಗಿ ಶೋಷಣೆ ಮಾಡಿದೆ. ಅಂಥಾ ಶೋಷಣೆ ನಿಲ್ಲಬೇಕಾದರೆ ಸರ್ಕಾರ ಒಂದು ಧೈರ್ಯವಾದ ಹೆಜ್ಜೆಯನ್ನು ತೆಗೆದುಕೊಳ್ಳಬೇಕು. ಆ ರೀತಿ ಮಾಡುವಾಗ ದೇಶದಲ್ಲಿರತಕ್ಕಂಥ ರಾಷ್ಟ್ರಪ್ರೇಮಿಗಳು ಪರದೇಶದವರು ಬಂಡವಾಳ ಹಾಕಿ ನಮ್ಮ ದೇಶದಲ್ಲಿ ಈ ರೀತಿ ಶೋಷಣೆ ಮಾಡುತ್ತಿರುವುದನ್ನು ಮುಂದುವರಿಸುವುದಕ್ಕೆ ಅವಕಾಶ ಕೊಡಬಾರದು, ಇದನ್ನು ಆದಷ್ಟು ಜಾಗ್ರತೆ ಕೊನೆಗಾಣಿಸಿ ನಮ್ಮ ದೇಶದ ಹಿತವನ್ನು ಮತ್ತು ಜನತೆಯ ಹಿತವನ್ನು ರಕ್ಷಿಸಬೇಕು ಮತ್ತು ಏನಾದರೂ ನಿಲುವನ್ನು ತೆಗೆದುಕೊಳ್ಳುವಾಗ ಕೂಲಿಗಾರರ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ಸರ್ಕಾರದವರು ಒಂದು ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

Sri H. SIDDAVEERAPPA.—Sir, I have heard with great attention and I am indeed thankful to the Hon'ble Members for the very kind references they have made about the work of this Committee. I am also thankful to them for the way in which they made references to the part played by this Committee in placing the facts before this House and through this House before the country. It is good to be told by one's own countrymen that we have done some good work. These words are there and I am sure they will stand in good stead when this Government propose to take future course of action in settling this rather difficult problem.

Sir, I am very happy to find that there are no two opinions in this House and that all sides of the House are one in echoing the sentiments expressed in this Report, *viz.*, that the Agreement has not worked in the interests of the State, barring of course the solitary voice of my esteemed friend Sri Sydney A. Thomas. The reasons are obvious. I am not blaming him. He has expressed what possibly or presumably may be the view of the Mining Companies regarding this Report. I therefore feel it would be better if I answer the several points raised by him in his speech. The first point he raised was about the contractual obligation. So far as contractual obligation is concerned, any assurance given by any party must be honoured but it should not be forgotten that it should not be one-way traffic only. There must be mutual observance of the

(SRI H. SIDDAVEERAPPA.)

terms of the contract or the agreement, call it by whatever name you like. Therefore, I have never suggested, nor the Committee has suggested in any one of its recommendations, that there must be expropriation or things of that sort. We all know we are dealing with a foreign concern. What restrains me in expressing my feelings in the matter is largely due to the fact that we are dealing with a foreign company and that there are international matters involved, and I for one would not be a party to any kind of expression which would alienate the feelings of foreigners or any foreign firm in this country. After all we know the high and lofty sentiments expressed by our Prime Minister on the floor of the Parliament so far as foreign companies are concerned. Today in India for various developmental works we do attract a lot of foreign capital. Foreign investment is forthcoming. What has been stated by the Prime Minister has been accepted by this country; any friendly nation may come forward to invest any money in this country provided the object is to help this country, and the object is that the benefit that has to be derived should be mutual. So far as that position is concerned, we follow the advice tendered by the Prime Minister on the floor of the Parliament. But what is required is, while so doing, the companies also must feel that they owe an obligation to the State or the country in which they are operating. They should not lose sight of this very obvious fact as expressed by the Hon'ble Members of this House and through the House by this State. If what is stated on the floor of this House is an expression of the feelings in this country, the Companies would do well to reconsider their attitude and even now it is not too late for them to make proper amends While so saying, I agree with what has been expressed by my friend Sri Vasan that we should not do anything in a hurry; I do agree with him that whatever steps we have to take should not be guided by the mentality of a Bania as it were, to get a few rupees more. That is not the idea. There are certain basic ideas, *viz.*, the interest of this nation. Government would not be a party to compromise with any of the principles which would vitally affect the interests of this nation. So far as this position is concerned, I am sure, there are no two opinions anywhere. No doubt it is true the Government as the owner of the property do expect some more money. The Government do feel that if mining companies are not able to pay, who would be able to pay? If they have increased their expenditure, they have themselves to blame for it and I have already stated that they themselves have landed into this unfortunate position by doing things which they ought not to have done. They could have thought, not once, but twice, before they increased their expenditure.

Sri Davey's Award is there. I have just today received a report—rather not a very happy report,—that the labourers numbering about 8,000 have gone on strike. It is because they feel on one side that they have not been squarely dealt with. As I have made it clear, I am not entering into the merits or the demerits of the case as put forward by the labourers. They feel they have been left in the lurch. The owner of the mines, *i.e.*, the Mysore Government feel they have not been fairly dealt with. Who is it that is responsible for this muddled state of affairs? This unhappy state of affairs is a matter which everyone has now to look into. But the fact is there that all is not well in the working of these mines as you find today. Sri Sydney A. Thomas said: what will be the position if you ask the royalty to be doubled under the present circumstances? I would say that if the position so arises, there must be sacrifice on all sides. There cannot be sacrifices only on the side of Government. As I have already said, there are three parties: one is the Government, the other is the labour, the real people who produce wealth from the earth, and the third is the Management. You must apportion the sacrifices in such a manner as not to be detrimental to the interests of anybody.

Sir, he gave certain figures. I need not refer to them once again. He argued by stating, that there is hardly anything left in Mysore Mines after making a provision for all these things. Please note, it is very significant, he has made provision for dividends also. In the case of Mysore Mines, he says taking the figures of 1953 what will be left over will be only 0·6 lakh and in the Champion Reef 1·7 lakhs will be left and in Nandydroog Minies 6·1 lakhs. He says if extra royalty as recommended by this Committee is to be recovered, wherefrom they are to get the money? I am sorry, he is not here. This will be my reply to the statement made by Sri Sydney A Thomas. The figures for 1955 as given to Government Directors are placed in juxtaposition with the actuals of 1953 as shown below:—

> 1955 estimate, production estimates for Mysore are: 2·40 lakhs tons; whereas in 1953 they produced only 1·88 lakhs tons.

That means in 1955 they propose to produce 52,000 tons more than what they actually produced in 1953. Likewise in Champion Reef, in 1955 the estimates of production are 1·95 lakhs tons, 1953 actuals 1·39 lakhs tons. The increase will be 0·56 lakh.

In Nandydroog Mines the estimates for 1955 are 2·52 lakhs tons. In 1953 the actuals are 2·17 lakhs tons, increase = 0·35 lakh tons. Therefore proportionate percentage of increase is:

Mysore	...	27½ per cent.
Champion Reefs	...	40 per cent.
Nandydroog	...	16 per cent.

The income will be as follows:—

According to 1955 estimates, the Mysore Mines will get Rs. 178·86 lakhs. That means they will produce gold worth so much.

Champion Reef	...	Rs. 168·36 lakhs.
Nandydroog	...	Rs. 181·50 lakhs.

Whereas the actuals for 1953 would be:

Mysore Mines	...	Rs. 161·30 lakhs.
Champion Reefs	...	Rs. 125·20 lakhs.
Nandydroog	...	Rs. 150·10 lakhs.

The increase from each of these mines will be: Mysore will produce gold worth Rs. 17.56 lakhs more than they actually produced in 1953. Champion Reefs 43·16 lakhs worth of gold more than they actually produced in 1953 and Nandydroog 31·40 lakhs.

Sir, this amply justifies my remarks made yesterday that their production programme is always based on what they want. In other words, I know how much money they have got in particular years. I know why they have increased the cost of production. I need not enter into the merits of the case. But this amply proves—the justification of my statement made yesterday. These people have the capacity of adjusting their production programme in such a manner as to get as much money as they want in a particular year. I am not in any way blaming them for increasing the production tonnage as they have budgeted for 1955. If they can so manage, what is it that prevented them from satisfying the just and legitimate demands of the Mysore Government? I wish my friend Sri Thomas will certainly go into these figures.

I also made another statement yesterday that productiton programme is adjusted according to the price of gold. I substantiate that position a little further. In 1949 the price per fine ounce was Rs. 306 per fine oz. Mysore production was as follows:

Mysore Mine	...	1,65,510
Champion Reef	...	99,240
Nandydroog	...	1,29,153

Whereas in 1950-51 (for 15 months) when the price was Rs. 303:

Mysore Mine produced	..	2,01,780
Champion Reef	...	1,75,200
Nandydroog Mines	...	2,18,556

Hon'ble Members will see that there is increase in tonnage and production as there is slight decrease in price structure. In 1951 for nine months when the price was ruling at 297, take again the production. They produced 1,46,300 tons in Mysore Mines. Champion Reef produced 1,30,760 tons and Nandydroog Mines produced 1,57,050

(SRI H. SIDDAVEERAPPA.)

tons. Although these figures are for nine months, take the general average for 1950 and 1951 for all the 24 months.

Mysore Mines produced 1,74.040 tons as against 1,65,510 tons in 1949. Champion Reef produced 1,52,980 tons as against 99,240 tons in 1949. Nandydroog Mines produced 1,87,803 tons as against 1,29,153 tons in 1949.

Likewise, I can give figures for 1952, 1953 and 1954 just to substantiate the position, namely, the production programme has been tagged on to suit the requirements. The following are the figures :—

Year	Price per oz.	Production		
		Mysore	*Champion*	*Nandydroog*
1952	237	2,07,029	1,48,890	2,28,082
1953	229	1,88,286	1,39,200	2,16,673
1954	239	2,19,300	1,77,200	2,32,300

As I have already said, if royalty is increased, production will have to go up and longevity may be reduced. That may be the argument which may be advanced. The answer will be, by a slight reduction in longevity, the other benefit the Government and the country will get will be more than compensated and for developmental works we do want funds. Therefore, I feel there is not much substance in that kind of contention by the Companies. Sri Thomas said, 'How are you going to improve the uneconomic state of Mysore Mines ?' My own answer would be, if new capital is to be invested, they will have to do it. If capital is wanted in this country, this country will be prepared to subscribe and get the necessary capital for working those mines. More than anything else, I do feel that one day or the other there will have to be a single unitary control and one management for all these mines. That is coming nearer and nearer. My friend, Sri Vasan, in his own way, said : ' What is the change of Mangement here ? A in one room handing over management to A sitting in another room. That is all the difference that we find.'' Therefore we need not get unduly alarmed by the prospects of any of these mines being closed. There is nothing to be worried, nothing that should make us seriously think about it. Sri Thomas said: " What ! There is overdraft in Banks and we did not declare dividends in one of the mines.'' We have to reply to that point; it is a very important point. It will have to be noticed that even if there is an overdraft, it is not strictly due to increased cost. It may be for various other reasons. For instance, it may be, as has been attributed, for the purchase of capital store, including stores for stock-piling and for various other reasons. These overdrafts could have been avoided if the Rupee Companies had been given a fairer start with the liquid resources retained in London and expenditure properly controlled. I do not think that it requires any further explanation in this behalf. It is sufficient for me to state that there is not much substance in what has been said by my friend, Sri Thomas.

There are certain points raised, I believe, by Sri Mariappa in the morning. I want to make only a factual correction in this behalf. Sri Mariappa said that when there was an Agreement for a short period between 1935 and 1940, in clause 3, at page 105, it is to be found :

> " The Lessors hereby covenant with the Lessees that during the residue of the term granted by the existing Lease the Lessors shall not in exercise of their Governmental or other powers levy or impose any special taxation on Kolar Gold.''

I wish here to refer to the earlier paragraph also. This interim agreement is in the interests of the State. This interim agreement was entered into for the period between 1934 and 1940 because the new lease would come into existence in 1940. If one sees, according to this interim agreement, the State got substantial money, about Rs. 53 lakhs. In other words, this interim agreement for a period of

five years was meant to benefit the lessor and not the lessee. What is it that it gave us? It gave these years an additional royalty at two-thirds of the amount. According to this agreement, I will read only that particular clause :

> "On any amount distributable as an interim dividend as and when made payable a payment on account shall be made at rates equivalent to two-thirds of the rates mentioned in the second part of the second Schedule to the form of Lease set out in the Schedule hereto which rates shall (for this purpose) vary in accordance with the variation in the proportion which the total amount of such dividend bears to the total paid-up capital of the Lesses."

Therefore, the analogy is not, in my opinion, very happy.

With regard to the production statements, various figures have been given as to how the working costs have increased. I invite attention of the Hon'ble Members to Statements 12 to 18, pages 86 to 98 of the Report and various other statements which go to show how the cost of production has incresed from the beginning.

ಶ್ರೀ ಕಡಿದಾಳ್ ಮಂಜಪ್ಪ.—ಅವನು ಒಂದುವೇಳೆ ಅಲ್ಲಿ ಆರುಕಾಸು ಸೇಲ್ಸ್ ಟಾಕ್ಸನ್ನು ಕೊಡುವುದನ್ನು ತಪ್ಪಿಸಿಕೊಂಡು ಇಲ್ಲಿಗೆ smuggle ಮಾಡಿದರೆ, ಇಲ್ಲಿ ಒಂದೇ ಕಾಸು ಸೇಲ್ಸ್ ಟಾಕ್ಸ್ ಕೊಟ್ಟು ಮಾರಿ ಲಾಭ ಹೊಂದಬಹುದು, ಅದಕ್ಕೆ ಅವಕಾಶವಾಗುತ್ತದೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಕಳ್ಳಸಾಗಾಣಿಕೆಯ ಮಾತುಬೇಡ. ಏನೇ ಮಾಡಿದರೂ ಕಳ್ಳತನ ಮಾಡುವುದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಸೇಲ್ಸ್ ಟಾಕ್ಸ್ ಮೈಸೂರು ದೇಶದಲ್ಲಿ ಕಡಮೆ ಇರುವುದರಿಂದ, ಇಪ್ಪತ್ತು ಸಾವಿರ ರೂಪಾಯಿ ವ್ಯಾಪಾರ ಮಾಡುವ ಹೋಲ್‌ಸೇಲ್ ವರ್ತಕ ಇನ್ನು ಮೇಲೆ ಇನ್ನೂ ಹೆಚ್ಚಿಗೆ ಮಾಲು ತಂದು ವ್ಯಾಪಾರಮಾಡಿ ತನ್ನ turnover ಜಾಸ್ತಿ ಮಾಡಿದರೆ ಹೆಚ್ಚಿಗೆ ನಮಗೆ ವರಮಾನ ಬರುವಂತಾಗುವುದಿಲ್ಲವೇ? ಈಗ ಅಲ್ಲಿಂದ ಎಷ್ಟು ಕಳುಹಿಸುತ್ತಾರೋ ಅದಕ್ಕೆ ನಾಲ್ಕರಷ್ಟು ಇನ್ನು ಮುಂದೆ ಕಳುಹಿಸುತ್ತಾರೆ.

ಶ್ರೀ ಕಡಿದಾಳ್ ಮಂಜಪ್ಪ.—ನಾಲ್ಕರಷ್ಟು ಕಳಹಿಸುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಅಲ್ಲದೆ, ಹೊರಗಿನವನು ಒಂದೇಕಾಸು ಸೇಲ್ಸ್‌ಟಾಕ್ಸ್ ಕೊಟ್ಟು ನಮ್ಮ dealers ಜೊತೆಗೆ compete ಮಾಡುತ್ತಾನೆ.

Sri V. M. MASCARENHAS (St. John's Hill).—May I say a word, Sir? Today our sales-tax in Mysore is only one pie in a rupee and in Madras there was no sales-tax on the beedis. Now the Madras Government is very keen in levying tax on the beedis, *viz.*, six pies in a rupee. The Madras dealer will dump his beedis in Mysore and pay sales-tax to that extent, and thereby we will be getting more revenue to the Government. Today about ¾th of the beedi trade is in the hands of the Madras merchants. If we levy this sales-tax, do you mean to say that we should not get 75 per cent sales-tax from outsiders?

ಶ್ರೀ ಡಿ. ದೇವರಾಜಅರಸ್ (ಹುಣಸೂರು).—ಮದ್ರಾಸಿನಲ್ಲಿ ತಯಾರಾಗುವ ಬೀಡಿಯ ¾ ಭಾಗ ಮೈಸೂರಿನಲ್ಲಿ ಖರ್ಚಾಗುತ್ತಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

Mr. SPEAKER.—Motion moved:

"That the Mysore Sales Tax (Second Amendment) Bill, 1955, be taken into consideration."

*ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, ಈಗತಾನೆ ಮಾನ್ಯ ಸಚಿವರು ಈಗ ಈ ಬೀಡಿ ಇತ್ಯಾದಿಗಳ ಮೇಲೆ ಇಲ್ಲಿಯ ತನಕ ಇದ್ದಂಥ ಒಂದುಕಾಸಿನ ತೆರಿಗೆಯ ಬದಲಾಗಿ ಅದನ್ನು ಮೂರುಕಾಸುಗಳಿಗೆ ಹೆಚ್ಚಿಸಬೇಕೆಂದು ಈಗ ತಿದ್ದುಪಡಿಯನ್ನು ತರಲಾಗಿದೆ ಎಂದು ಹೇಳಿದ್ದಾರೆ. ಆದರೆ ದೇಶದಲ್ಲಿರತಕ್ಕಂಥ ಇನ್ನೂ ಇತರ ಎಷ್ಟೋ ಸಾಮಾನುಗಳಮೇಲೆ ಹೀಗೆ ತೆರಿಗೆ ವಿಧಿಸಲು ಅವಕಾಶ ವಿದ್ದಾಗ್ಯೂ ಅವುಗಳಬಗ್ಗೆ ಯಾವ ಒಂದು ಮಸೂದೆ ಯನ್ನೂ ತರದೆ ಕೇವಲ ಈ ಬೀಡಿಗಾಗಿ ಈಗ ಇದನ್ನು ತಂದಿದ್ದಾರೆ. ಇದರಿಂದ ದೇಶದಲ್ಲಿ ಈ ದಿವಸ ಈ ಬೀಡಿಸುತ್ತುವ ಕೈಗಾರಿಕಯುವರಿಗೆ ತುಂಬ ತೊಂದರೆ ಯಾಗುತ್ತದೆಂದು ನಾನೀಗ ಈ ಮಾನ್ಯಸಭೆಗೆ ತಿಳಿಸಬೇಕಾಗಿದೆ. ಈಗ ತಾನೆ ನಮ್ಮ ಮಾನ್ಯ ಸಚಿವರು ನಮ್ಮ ದೇಶದಲ್ಲಿ ಕನ್‌ಸ್ಯೂಂ ಆಗ ತಕ್ಕಂಥ ಬೀಡಿಯ ಪ್ರಮಾಣದಲ್ಲಿ ಕೇವಲ ನಾಲ್ಕನೆ ಒಂದು ಭಾಗದಷ್ಟು ನಮ್ಮ ಮೈಸೂರಿನಲ್ಲಿ ತಯಾ ರಾಗುತ್ತಿದೆ ಎಂದು ಹೇಳಿದರು. ಹಾಗೇ ಇಟ್ಟು ಕೊಳ್ಳೋಣ. ಈಗ ನಮ್ಮ ಮೈಸೂರಿಗೆ ಈ ಬೀಡಿ ಸುತ್ತಲು ಹೊಗೇಸೊಪ್ಪು ಹೊರಗಡೆಯಿಂದ ಬರುವು ದಿಲ್ಲ. ಬೀಡಿಸುತ್ತುವುದಕ್ಕೆ ಪ್ರಸಿದ್ಧಿಹೊಂದಿದಂಥ ಹೊಗೆಸೊಪ್ಪು ತಯಾರಾಗುವುದು ಗುಜರಾತ್ ಮತ್ತು ನಿಪ್ಪಾಣಿ ಇತ್ಯಾದಿ ಪ್ರದೇಶದಲ್ಲಿ. ಅಲ್ಲಿಂದ ನಮ್ಮ ಸೀಮೆಗೆ ಆ ಸೊಪ್ಪು ಬರುವುದು ಬಹಳ ಕಡಿಮೆ. ನಮ್ಮ ಸೀಮೆಯಲ್ಲಿ ಬೆಳೆಯಲಾಗುತ್ತಿರುವ ಹೊಗೇ ಸೊಪ್ಪಿನ ಧಾರಣೆಗೂ ಮತ್ತು ಗುಜರಾತು ಮತ್ತು ನಿಪ್ಪಾಣಿ ಪ್ರದೇಶದಲ್ಲಿ ಬೆಳೆಯುವ ಹೊಗೆಸೊಪ್ಪಿನ ಧಾರಣೆಗೂ ಬಹಳ ಏರುಪೇರಿದೆ. ನಮ್ಮ ಹೊಗೆ ಸೊಪ್ಪಿಗಿಂತ ಆ ಹೊಗೆ ಸೊಪ್ಪಿಗೆ ಬೆಲೆ ಜಾಸ್ತಿ. ಇದಕ್ಕಾಗಿ ಈ ದಿವಸ ನಮ್ಮ ಹೊಗೆಸೊಪ್ಪೇ ಮದ್ರಾಸ್ ಇತ್ಯಾದಿ ಕಡೆಗಳಿಗೆಲ್ಲಾ ಬೀಡಿಸುತ್ತಲು ಹೋಗುತ್ತಿದೆ. ಇನ್ನು ಕೆಲವರು ಅಲ್ಲಿ ಬೆಳೆಯುವಂಥ ಹೊಗೆಸೊಪ್ಪಿ ನಿಂದಲೇ ಬೀಡಿಗಳನ್ನು ತಯಾರಿಸುತ್ತಿದ್ದಾರೆ. ಆದರೆ ಈಗ ಈ ಬೀಡಿಗಳನ್ನು ತಯಾರುಮಾಡಲು ಅತ್ಯಗತ್ಯ ವಾಗಿ ಬೇಕಾಗಿರುವಂಥ ತೂಬರೆ ಎಲೆಗಳು ಮದ್ರಾಸಿಗೂ ಮತ್ತು ನಮ್ಮ ಮೈಸೂರಿಗೂ ಹೈದರಾ ಬಾದಿನಿಂದ ಬರಬೇಕಾಗಿದೆ. Just as paper is required to manufacture cigarette, the leaves of a particular tree called "thupra" tree are required to manufacture beedis. ಈ ದಿವಸ ಈ ತೂಬರೆ ಎಲೆಗಳ ಗಿಡಗಳು ನಮ್ಮ ದೇಶದ ಕಾಡಿನಲ್ಲಿ ಅಷ್ಟಿಷ್ಟು ಬೆಳೆಯ ಬಹುದು. ಈ ಗಿಡಗಳನ್ನು ಅಭಿವೃದ್ಧಿಪಡಿಸುವುದ ಕ್ಕಾಗಿ ನಮ್ಮ ಸರ್ಕಾರದವರು ಯಾವ ಪ್ರಯತ್ನ ಗಳನ್ನೂ ಮಾಡುವುದಿಲ್ಲ. ಇಷ್ಟೇ ಅಲ್ಲದೆ ನಮ್ಮ ಮೈಸೂರಿನಲ್ಲಿ ಬೀಡಿ ಸುತ್ತಲು ಇರುವಂಥ ದೊಡ್ಡ ದೊಡ್ಡ ಕಾರ್ಖಾನೆಗಳೂ ಕೂಡ ಬಹಳ ವಿರಳ. ಅಂಥ ದೊಡ್ಡ ಕಾರ್ಖಾನೆಗಳು ಮೂರು ನಾಲ್ಕು ಇದ್ದರೆ ಹೆಚ್ಚಾಯಿತು. ನಮ್ಮ ದೇಶದಲ್ಲಿ ಇದೊಂದು ಗೃಹ ಕೈಗಾರಿಕೆಯಂತೆ ನಡೆಯುತ್ತಿದೆ. ನಮ್ಮಲ್ಲಿ ಈಗ ಈ ಬೀಡಿಸುತ್ತಲು ಒಂದೊಂದು ಅಂಗಡಿಯವರು ಕೇವಲ 10-20 ಮಣ ಹೊಗೆಸೊಪ್ಪನ್ನು ಮಾತ್ರ ಕೊಂಡು ಕೊಳ್ಳುತ್ತಿದ್ದಾರೆ. ಇಲ್ಲಿ ತಯಾರಿಸುತ್ತಿರುವುದೆಲ್ಲಾ ತೀರ ಕಡಮೆ ದರ್ಜೆಯ ಬೀಡಿಗಳು, ಇವುಗಳ ಮಾರಾಟ ಸಹ ಎಲ್ಲೆಲ್ಲಿ ಈ ಬೀಡಿಗಳು ಈಗ ಚಲಾ ವಣೆಗೆ ಬಂದಿರುತ್ತವೆಯೋ ಅಲ್ಲೇ ಇವುಗಳಿಗೆ ಗಿರಾಕಿ ಇರುವುದು. ಬೇರೆಕಡೆಗೆ ಇವುಗಳನ್ನು ತೆಗೆದು ಕೊಂಡು ಹೋದರೆ ಯಾರೂ ಇವನ್ನು ಕೊಂಡು ಕೊಳ್ಳುವುದಿಲ್ಲ. ಈಗ ತಾನೆ ಮಾನ್ಯ ಮಂತ್ರಿಗಳು ಮದ್ರಾಸಿನಲ್ಲಿ ಮೂರು ಕಾಸು ತೆರಿಗೆ ಈ ಬೀಡಿಗಳ ಮೇಲೆ ಹಾಕಲಾಗಿತ್ತು, ಅದನ್ನೀಗ ಆರುಕಾಸುಗಳಿಗೆ ಹೆಚ್ಚಿಸಿದ್ದಾರೆ ಎಂದು ಹೇಳಿದರು.

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಹೇಳಲಿಲ್ಲ. ಮದ್ರಾಸ್ ಸರ್ಕಾರದವರು ಈಗತಾನೆ ಹೊಸದಾಗಿ ಮದ್ರಾಸಿನಲ್ಲಿ ಈ ಬೀಡಿಗಳಮೇಲೆ ಆರುಕಾಸು ತೆರಿಗೆ ಹಾಕಲು ಶಾಸನಸಭೆಯವರಿಂದ ಅಂಗೀಕಾರ ಪಡೆದಿದ್ದಾರೆ ಎಂದು ಹೇಳಿದೆ.

ಶ್ರೀ ಡಿ. ದೇವರಾಜ ಅರಸ್.—ಹಾಗಿದ್ದರೆ ಅಲ್ಲಿ ಹಾಗೆ ಆರುಕಾಸು ತೆರಿಗೆ ಹಾಕಿದ್ದರೆ ತಾವೂ ಸಹ ಅದೇರೀತಿ ಇಲ್ಲಿಯೂ ಆರುಕಾಸು ತೆರಿಗೆಯನ್ನೇ ಹಾಕ ಬೇಕೆಂದು ತಾವೂ ಸಹ ತಿದ್ದುಪಡಿಯನ್ನು ತರಬಹು ದಾಗಿತ್ತಲ್ಲ? ಈಗ ತಾವೇಕೆ ಮೂರು ಕಾಸುಗಳೆಂದು ಹೇಳಿದ್ದೀರಿ?

Sri Kadidal MANJAPPA.—The only point is whether the State can take some revenue.

Sri J. MOHAMED IMAM.—So you want money?

Sri Kadidal MANJAPPA.—That is the primary consideration.

ಶ್ರೀ ದೇವರಾಜ ಅರಸ್.—ಹಾಗೆ ಮಾನ್ಯಸಚಿವರು ಕೇವಲ ಸಂಸ್ಥಾನಕ್ಕೆ ದುಡ್ಡಿನ ವರಮಾನ ಒಂದು ಬಂದರೆ ಸಾಕು, ಯಾರು ಸತ್ತರೇನು ಎಂದು ಹೇಳುವು ದಾದರೆ ಅದಕ್ಕೆ. . . .

ಶ್ರೀ ಕಡಿದಾಳ್ ಮಂಜಪ್ಪ.—ಇದನ್ನು ಯಾರಾದರೂ ಸಾಯಬೇಕೆಂಬ ಉದ್ದೇಶದಿಂದಲೇನೂ ತಂದಿಲ್ಲ. ಮದ್ರಾಸಿನಲ್ಲಿ ಈಗ ಆರುಕಾಸು ತೆರಿಗೆಯನ್ನು ಹಾಕಿ ದ್ದಾರೆ. ಇಲ್ಲಿ ಇಲ್ಲಿಯತನಕ ಒಂದುಕಾಸು ತೆರಿಗೆ

(ಶ್ರೀ ಕಡಿದಾಳ್ ಮಂಜಪ್ಪ.)

ಮಾತ್ರ ಹಾಕಲಾಗಿತ್ತು. ಅದನ್ನೀಗ ಮೂರುಕಾಸುಗಳಿಗೆ ಹೆಚ್ಚಿಸಿದರೆ ಸಾಕೆಂದು ಹೇಳಿದ್ದೇವೆ. ಅಷ್ಟೇ ಹೊರತು ಮತ್ತೇನೂ ಇಲ್ಲ.

ಶ್ರೀ ಡಿ. ದೇವರಾಜ ಅರಸ್.—ಈ ಹಿಂದೆ ತಾವು ಇಲ್ಲಿ ಈ ಕೈಗಾರಿಕೆಯವರಿಗೆ ಮೂರುಕಾಸು ತೆರಿಗೆ ಹಾಕಿದ್ದಿರಿ. ಆಗ ಇವರಿಗೆ ಅದರಿಂದ ಬಹಳ ತೊಂದರೆಯಾಗುತ್ತದೆ, ಕೊನೆಗೆ ಅನೇಕರು ಈ ಕೈಗಾರಿಕೆಯನ್ನು ಬಿಟ್ಟುಬಿಡಬೇಕಾಗುತ್ತದೆ ಎಂದು ಈ ಮಾನ್ಯ ಸಭೆಯಲ್ಲಿ ಬಹಳವಾಗಿ ವಾದಮಾಡಿದ್ದರಿಂದ ತಾವು ಹಿಂದೆ ಈ ತೆರಿಗೆಯನ್ನು ಮೂರುಕಾಸಿನಿಂದ ಒಂದುಕಾಸಿಗೆ ಇಳಿಸಿದ್ದಿರಿ. ಈಗ ಮತ್ತೆ ತಾವು ಮದ್ರಾಸಿನಲ್ಲಿ ಆರುಕಾಸನ್ನು ಹಾಕಿರುವುದರಿಂದ ಇಲ್ಲಿಯ ತೆರಿಗೆಯನ್ನು ಮೂರುಕಾಸಿಗೆ ಹೆಚ್ಚಿಸಿದ್ದೇವೆಂದು ಹೇಳುತ್ತಿರುವುದರಿಂದ ಈಗ ಮತ್ತೆ ಅವರಿಗೆ ತೊಂದರೆಯನ್ನು ತಾವು ತಿಳಿದೂ ತಿಳಿದೂ ಕೊಟ್ಟಹಾಗೆ ಆಗುತ್ತದೆ ಎಂದು ನಾವು ಹೇಳುತ್ತಿದ್ದೇವೆ. ತಾವು ಈ ಹಿಂದೆ ಈ ತೆರಿಗೆಯನ್ನು ಹಾಕಲು ಕಾರಣವೇನಿತ್ತು ಎಂಬ ಬಗ್ಗೆ ತಿಳಿಸುತ್ತ ಇಲ್ಲಿಯ ಸರಕು ಅಲ್ಲಿಗೆ ಹೋಗುವುದು ತಪ್ಪುತ್ತದೆ—ಅಲ್ಲಿಂದ ಮಾಲು ಇಲ್ಲಿಗೆ ಬರುವುದು ತಪ್ಪುತ್ತದೆ, ಅದಕ್ಕಾಗಿ ಈ ತೆರಿಗೆಯನ್ನು ಈಗ ಹಾಕಲೇಬೇಕಾಯಿತು ಎಂದು ಹೇಳಿದ ಜವಾಬು ಸರಿಯಾದದ್ದಲ್ಲ. ನಮಗೆ ದುಡ್ಡು ಬೇಕಾಗಿತ್ತು ಅದಕ್ಕಾಗಿ ನಾವೀಗ ಈ ತಿದ್ದುಪಡಿಯನ್ನು ತಂದಿದ್ದೇವೆ, ಎಂದು ಹೇಳಿದ್ದರೆ ನಾವು ಆಗ ಒಂದುವೇಳೆ ಒಪ್ಪಿದ್ದರೂ ಒಪ್ಪಿಕೊಳ್ಳಬಹುದಾಗಿತ್ತು. ಆದರೆ ತಾವು ಈ ತೆರಿಗೆ ಹಾಕಲು ಹೇಳಿರತಕ್ಕಂಥ ಕಾರಣಗಳಿಗೂ ಈಗ ಹೇಳುತ್ತಿರುವಂಥ ಕಾರಣಕ್ಕೂ ಬಹಳ ವ್ಯತ್ಯಾಸವಿದೆ. ಇಷ್ಟೇ ಅಲ್ಲದೆ ದೇಶದಲ್ಲಿ ಹೀಗೆ ಕೇವಲ ದುಡ್ಡು ಒಂದನ್ನು ವಸೂಲ್ಮಾಡುವುದರಲ್ಲೇ ತಮ್ಮ ಜವಾಬ್ದಾರಿಯೆಲ್ಲಾ ಮುಗಿಯಲಿಲ್ಲ. ತಾವು ಯಾವಾಗ ಈ ಉದ್ಯಮಗಳಿಂದ ಹೀಗೆ ದುಡ್ಡನ್ನು ವಸೂಲ್ಮಾಡಿಕೊಳ್ಳುತ್ತೀರೋ ಆಗ ಈ ಉದ್ಯಮಗಳ ಅಭಿವೃದ್ಧಿಯ ಜವಾಬ್ದಾರಿಯನ್ನು ಕೂಡ ವಹಿಸಲೇಬೇಕಾಗುತ್ತದೆ. ಇದು ತಮ್ಮ ಕರ್ತವ್ಯ. ಈ ಉದ್ಯಮಗಳನ್ನು ಅಭಿವೃದ್ಧಿಗೆ ತರಬೇಕಾಗಿರುವುದು ತಮ್ಮ ದೃಷ್ಟಿಯಲ್ಲಿದ್ದರೆ ತಾವು ಇವುಗಳ ವಿಚಾರದಲ್ಲಿ ಬಹಳ ಸಹಾನುಭೂತಿಯಿಂದ ವರ್ತಿಸಬೇಕಾಗುತ್ತದೆ. ಈ ವಿಚಾರಗಳನ್ನೆಲ್ಲಾ ಸರ್ಕಾರ ಮತ್ತೊಮ್ಮೆ ಕೂಲಂಕಷವಾಗಿ ಪರಿಶೀಲನೆ ಮಾಡುವದು ಒಳ್ಳೆಯದು. ಈಗ ಯಾರು ಯಾರು ಒಂದುಕಾಸು ತೆರಿಗೆ ಕೊಡುತ್ತಿದ್ದಾರೋ ಅಂಥವರಿಂದ ಮಾತ್ರ ಮೂರುಕಾಸು ತೆರಿಗೆಯನ್ನು ವಸೂಲ್ಮಾಡಬೇಕೆಂದು ತಿಳಿಸಲಾಗಿದೆ ಎಂದು ಹೇಳಿದ್ದೀರಿ. ಈ ಹಿಂದೆಯೇ ಬಹಳ ತೊಂದರೆಯಾಗುತ್ತದೆ ಎಂದು ಹೇಳಲಾಗಿತ್ತು. ಇದು ಒಂದು ಗೃಹಕೈಗಾರಿಕೆಯೋಪಾದಿಯಲ್ಲಿ ನಮ್ಮ ಸೀಮೆಯಲ್ಲಿ ನಡೆದುಕೊಂಡು ಬಂದಿದೆ. ಆದ್ದರಿಂದ ಇದರಮೇಲೆ ಯಾವ ತೆರಿಗೆಯನ್ನೂ ಹಾಕಬಾರದೆಂದು ಈ ಮಾನ್ಯಸಭೆಯಲ್ಲೇ ಈ ಹಿಂದೆ ತೀರ್ಮಾನವಾಗಿತ್ತು. ಆಗ ಈ ಉದ್ಯಮಕ್ಕೆ ಒಂದು ರಿಯಾಯಿತಿಯನ್ನು ಕೊಡತಕ್ಕದ್ದು ತೀರ ಆವಶ್ಯಕ ಎಂದು ಕಂಡುಬಂದುದರಿಂದ ಇದರ ಮೇಲೆ ಹಾಕಲಾಗಿದ್ದಂಥ ತೆರಿಗೆಯನ್ನು ಒಂದು ಕಾಸಿಗೆ ಇಳಿಸಿದ್ದಾಯಿತು. ಪುನಃ ತಾವೀಗ ಈ ತಿದ್ದುಪಡಿಯನ್ನು ತಂದು ಇದನ್ನು ಸಭೆಯ ಮುಂದೆ ಮಂಡಿಸುವಾಗ, ಇದು ಸ್ಮಗರ್ ಆಗಿ ಹೋಗುತ್ತದೆ, ಅದನ್ನು ತಡೆಗಟ್ಟಬೇಕೆಂಬ ಉದ್ದೇಶದಿಂದ ಈಗ ಈ ತಿದ್ದುಪಡಿಯನ್ನು ತರಲಾಗಿದೆ ಎಂದು ತಾವು ಏನೊಂದು ಕಾರಣವನ್ನು ಹೇಳಿದಿರೋ ಅದರ ಪ್ರಕಾರ ತಾವೀಗ ಈ ತೆರಿಗೆಯನ್ನು ಮೂರುಕಾಸಿಗೆ ಹೆಚ್ಚಿಸಿದ್ದರಿಂದ ಆ unauthorised movementನ್ನು ತಪ್ಪಿಸಿದಂತೆ ಆಗಲಿಲ್ಲ. ಈಗೇನೂ ಆರೀತಿ ಇದರ unauthorised movement ಜಾಸ್ತಿಯಾಗಿಲ್ಲ. ಹಾಗೆ ಜಾಸ್ತಿಯಾಗತಕ್ಕಂಥ ಸಂಭವಗಳು ಕಂಡುಬಂದಾಗ ಬೇಕಾದರೆ ಇದನ್ನು ನಾವು ಅಲೋಚನೆ ಮಾಡಬಹುದು. ಈಗ ಸದ್ಯಕ್ಕೆ ಇದು ಬೇಕಾಗಿಲ್ಲ. ಅದುದರಿಂದ ತಾವು ಇದನ್ನು ಪುನಃ ಪರಿಶೀಲನೆ ಮಾಡತಕ್ಕದ್ದು ಅಗತ್ಯವೆಂದು ಹೇಳುತ್ತೇನೆ.

ಇನ್ನು ಈ ಬೀಡಿಗಳ ಮಾರಾಟ ತೆಗೆದುಕೊಂಡರೆ ಅಕ್ಕಿ, ರಾಗಿ ಇತ್ಯಾದಿ ಧಾನ್ಯಗಳಂತೆ ಇವುಗಳನ್ನು ಎಲ್ಲಿ ಬೇಕಾದರೂ ಮಾರಾಟಮಾಡಬೇಕೆಂದರೆ ಅದು ಸಾಧ್ಯವಾಗುವುದಿಲ್ಲ. ಕೆಲಕೆಲವು ಬೀಡಿಗಳನ್ನು ಇಂಥಿಂಥ ಮಾರುವ ಕಟ್ಟೆಗೆ ತೆಗೆದುಕೊಂಡು ಹೋದರೇನೆ ಅವುಗಳನ್ನು ಮಾರಾಟಮಾಡಲು ಸಾಧ್ಯವಿದೆ ಇಲ್ಲದಿದ್ದರೆ ಇಲ್ಲ ಎನ್ನುವುದು ನಿರ್ಧರವಾಗಿದೆ. ಈಗ ಉದಾಹರಣೆಗೆ ಹೇಳುವುದಾದರೆ ಈ 555 ಮತ್ತು ಪ್ಲೇಯರ್ಸ್ ಎಂಬ ಸಿಗರೇಟುಗಳನ್ನೇ ಕೆಲವರು ಹೇಗೆ ಹೆಚ್ಚುಹೆಚ್ಚಾಗಿ ಉಪಯೋಗಿಸುತ್ತಿದ್ದಾರೋ ಹಾಗೇ ಕೆಲಕೆಲವುಕಡೆ ಕೆಲಕೆಲವು ಬೀಡಿಗಳು ಮಾತ್ರ ಪ್ರಾಶಸ್ತ್ಯಕ್ಕೆ ಬಂದಿರುತ್ತವೆ. ಅಂಥ ಬೀಡಿಗಳನ್ನು ಜನರು ಸೇದುತ್ತಾರೆಯೆ ಹೊರತು ಬೇರೆ ಬೀಡಿಗಳನ್ನು ಅವರು ಉಪಯೋಗಿಸುವುದಿಲ್ಲ. ಆದುದರಿಂದ ಕೇವಲ ಪ್ರಾಶಸ್ತ್ಯಕ್ಕೆ ಬಂದಿರತಕ್ಕಂಥ ಬೀಡಿಗಳು ಮಾತ್ರ ಹೊರಗಡೆ ಹೋಗಲು ಸಾಧ್ಯವಿದೆಯೇ ಹೊರತು ಎಲ್ಲಾ ಬೀಡಿಗಳೂ ಸಿಕ್ಕಿದಂತೆ ಖರ್ಚಾಗಲು ಅವಕಾಶವೇಇಲ್ಲ. ಈಗ ಉದಾಹರಣೆಗೆ ಹೇಳುವುದಾದರೆ, ಮಂಗಳೂರು ಗಣೇಶಮಾರ್ಕಿನ ಬೀಡಿಗಳು ಮೈಸೂರಿಗೆ ಬರುತ್ತವೆ. ಅದು ಆ ಬೀಡಿಯ ಪ್ರಾಶಸ್ತ್ಯದಿಂದಲೇ ಹೊರತು ಮತ್ತೊಂದು ಕಾರಣವಿಲ್ಲ. ಆದರೆ ಅದೇ ರೀತಿ ನಮ್ಮ ಬೀಡಿಗಳು ಮದ್ರಾಸಿಗೆ ಹೋಗಲು ಸಾಧ್ಯವಿಲ್ಲ. ಯಾವಾಗ ಆ ಬೀಡಿಗಳಿಗೆ ಹೀಗೆ ತೆರಿಗೆ ಹೆಚ್ಚಾಗಿ ಬೆಲೆ ಜಾಸ್ತಿಯಾಗುತ್ತದೋ ಆಗ ಜನರು ತಮ್ಮ ಸ್ಥಳದ ಬೀಡಿಗಳನ್ನೇ ಸೇದಲು ಮನಸ್ಸು ಮಾಡುತ್ತಾರೆ. ಹೆಚ್ಚಿಗೆ ದುಡ್ಡು ಕೊಟ್ಟು ಆ ಬೀಡಿಗಳನ್ನು ಯಾರೂ ಸೇದುವುದಕ್ಕೆ ಹೋಗುವುದಿಲ್ಲ. ಆದರೆ ಆ ಒಂದೇ ರಖಮಿನ ಬೀಡಿಗಳನ್ನು ಸೇದುವುದಕ್ಕೆ ಯಾರು ಅಭ್ಯಾಸವಿಟ್ಟುಕೊಂಡಿರುತ್ತಾರೋ ಅಂಥವರು ಮಾತ್ರ ಅವುಗಳನ್ನು ಕೊಂಡುಕೊಳ್ಳುತ್ತಾರೆ. ಈ ಕಾರಣಗಳಿಂದ ಇತರ ಧಾನ್ಯಗಳನ್ನು ನಾವು ಎಲ್ಲಿ ಬೇಕಾದರೂ ಮಾರಾಟ ಮಾಡುವಂತೆ ಈ ಬೀಡಿಗಳನ್ನು ಮಾರಾಟಮಾಡಲು ಸಾಧ್ಯವಿಲ್ಲ. ಈಗ ಮಾನ್ಯ ಸಚಿವರು ಹೇಳಿರುವಂತೆ ಮದ್ರಾಸಿನಲ್ಲಿ ಮೂರುಕಾಸಿನಿಂದ ಆರುಕಾಸಿಗೆ ತೆರಿಗೆಯನ್ನು ಅವರು ಹೆಚ್ಚಿಸಿದ್ದಾರೆಂದು ಇಟ್ಟುಕೊಂಡರೆ. . .

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಹೇಳಲಿಲ್ಲ. ಇಲ್ಲಿಯುವರೆಗೂ ಮದ್ರಾಸಿನಲ್ಲಿ ಈ ಬೀಡಿಗಳಮೇಲೆ ತೆರಿಗೆಯನ್ನು ಎಗ್ಜೆಂಪ್ಟ್ ಮಾಡಿತ್ತು. ಈಗ ಅಲ್ಲಿ ಆರುಕಾಸು ತೆರಿಗೆ ಹಾಕಿದ್ದಾರೆ. ಆದರೆ ನಾವೀಗ ಇಲ್ಲಿ ಅದನ್ನು ಒಂದುಕಾಸಿನಿಂದ ಮೂರುಕಾಸಿಗೆ ಹೆಚ್ಚಿಸಿದ್ದೇವೆ ಎಂದು ಮಾತ್ರ ಹೇಳಿದೆ.

ಶ್ರೀ ಡಿ. ದೇವರಾಜ ಅರಸ್.—ಆಗಲಿ. ಹೀಗೆ ತಾವು ತೆರಿಗೆಯನ್ನು ಹೆಚ್ಚಿಸಿದ್ದರಿಂದ ಈ ಅನ್‌ಆಥರೈಸ್ಡ್ ಮೂವ್‌ಮೆಂಟನ್ನು ಹೇಗೆ ತಡೆಗಟ್ಟಲು ಸಾಧ್ಯವಾಗುತ್ತದೆ? ತಮ್ಮ ಉದ್ದೇಶವನ್ನು ತಾವು ಇದರಿಂದ ಹೇಗೆ ಸಾಧನೆಮಾಡಿಕೊಳ್ಳುತ್ತೀರಿ? ಈ ಅನ್‌ಆಥರೈಸ್ಡ್

ಮೂವ್‌ಮೆಂಟನ್ನು ತಪ್ಪಿಸಲು ಮದ್ರಾಸಿನಲ್ಲಿ ಹಾಗೆ ಅವರು ಈ ತೆರಿಗೆಯನ್ನು ವಿಧಿಸಿಲ್ಲ. ಆದ್ದರಿಂದ ತಾವು ಇಲ್ಲಿ ಈ ಮೂರುಕಾಸು ತೆರಿಗೆಯನ್ನು ಹಾಕಿ ಜನರಿಗೇಕೆ ತೊಂದರೆಕೊಡುತ್ತೀರಿ? ಈ ತೆರಿಗೆಯನ್ನು ತಾವು ಹೆಚ್ಚಿಸಲು ಹೇಳಿರತಕ್ಕಂಥ ಕಾರಣ ಸರಿಯಾದದ್ದಲ್ಲ ಅನ್ನತಕ್ಕದ್ದನ್ನು ತಾವೀಗ ಒಪ್ಪಲೇಬೇಕಾಗಿದೆ. ತಮಗೆ ಉತ್ಪತ್ತಿಬರಬೇಕೆಂಬುದೇನೋ ಸರಿ. ಆದರೆ ಈ ಬೀಡಿಗಳನ್ನು ಸುತ್ತಲು ನಮ್ಮ ಮೈಸೂರಿನಲ್ಲಿ ಅಂಥ ದೊಡ್ಡದೊಡ್ಡ ಕಂಪೆನಿಗಳಾವುವೂ ಇರುವುದಿಲ್ಲ. ಸಿಗರೇಟ್ ಇತ್ಯಾದಿಗಳನ್ನು ಅಧಿಕಪ್ರಮಾಣದಲ್ಲಿ ತಯಾರಿಸುತ್ತಿರುವಂತೆ ಇಲ್ಲಿ ಯಾರೂ ಈ ಬೀಡಿಗಳನ್ನು ತಯಾರು ಮಾಡುತ್ತಿಲ್ಲ. ಇಲ್ಲಿರತಕ್ಕದ್ದೆಲ್ಲಾ ಮೂರು ನಾಲ್ಕು ದೊಡ್ಡ ಫ್ಯಾಕ್ಟರಿಗಳು ಮಾತ್ರ. ಈ ದಿವಸ ಈ ಬೀಡಿಕೈಗಾರಿಕೆಯು ನಮ್ಮ ಸಂಸ್ಥಾನದಲ್ಲಿ ಒಂದು ಗೃಹಕೈಕಾರಿಕೆಯೋಪಾದಿಯಲ್ಲಿದ್ದು ಅನೇಕ ಚಿಕ್ಕಪುಟ್ಟಸಂಸಾರಗಳಿಗೆ ಜೀವನಾಧಾರಕ್ಕೆ ಇದೊಂದು ಮಾರ್ಗವಾಗಿರುತ್ತದೆ. ಆದುದರಿಂದ ಈ ಹಿಂದೆ ಇದ್ದಂತೆ ಆ ಮಾಮೂಲು ಒಂದು ಕಾಸು ತೆರಿಗೆಯೇನಿತ್ತೋ ಅದನ್ನೇ ಈಗಲೂ ಇಟ್ಟುಕೊಂಡರೆ ಒಳ್ಳೆಯದಾಗುತ್ತದೆಂದು ನಾನು ಸಲಹೆ ಮಾಡುತ್ತೇನೆ. ಹಾಗಾದರೆ ಈ ಬೀಡಿಗಳು ಇಲ್ಲಿಂದ ತಾವು ಹೇಳಿದಂತೆ ಸ್ಮಗಲ್ ಆಗುವುದಕ್ಕೆ ಅವಕಾಶವಿಲ್ಲ; ಮದ್ರಾಸಿನಲ್ಲಿ ತಯಾರಾಗತಕ್ಕಂಥ ಬೀಡಿಗಳು ಕೂಡ ಹಾಗೆ ಇಲ್ಲಿಗೆ ಬರಲು ಅವಕಾಶವಿಲ್ಲ. ಈಗ ಮದ್ರಾಸಿನಲ್ಲಿ ಅವರು ತೆರಿಗೆಯನ್ನು ಜಾಸ್ತಿಮಾಡಿದ್ದಾರೆಂದು ಇಲ್ಲಿಯೂ ಜಾಸ್ತಿಮಾಡಬೇಕೆಂದರೆ ಈ ಕೈಗಾರಿಕೆಗೆ ತುಂಬ ಧಕ್ಕೆಯನ್ನುಂಟುಮಾಡಿದ ಹಾಗಾಗುತ್ತದೆ. ಮದ್ರಾಸಿನಿಂದ ಇಲ್ಲಿಗೆ ಮಾರಾಟಮಾಡಲು ಬೀಡಿಗಳು ಬರುತ್ತವೆ ಎಂಬ ಒಂದು ಊಹೆಯಮೇಲೆ ಈ ತೆರಿಗೆಯನ್ನು ಹೀಗೆ ಹೆಚ್ಚಿಸಲು ತಮಗೆ ಅಂಥ ಆಧಾರಗಳು ಯಾವುವೂ ಇರುವುದಿಲ್ಲ. ತಾವು ಈಗ ನಮ್ಮ ದೇಶದಲ್ಲಿ ಈ ಬೀಡಿಗೆ ಟ್ಯಾಕ್ಸನ್ನು ಹೆಚ್ಚಿಸದೆ ಕೈಬಿಟ್ಟರೆ ನಮ್ಮ ದೇಶದ ಬೀಡಿ ಕೈಗಾರಿಕೆಗೆ ತಾವು ಒಂದು ಹೆಚ್ಚಿನ ಪ್ರೋತ್ಸಾಹ ನೀಡಿದಂತಾಗುವದು ಮತ್ತು ಈ ಬೀಡಿಗಳು ಹೊರಗಡೆ ಹೋದರೆ ಅದರಿಂದ ತಮಗೆ ಇನ್ನೂ ಹೆಚ್ಚಿನ ಆದಾಯ ಬರುತ್ತದೆ. ನಮ್ಮ ಸ್ಟೇಟಿನಲ್ಲಿ ಬೀಡಿಗಳನ್ನು ಸುತ್ತಲು ಹದಮಾಡದೆ ಹೊಗೇಸೊಪ್ಪನ್ನು ಬಳಸುತ್ತಾರೆ. ಮದ್ರಾಸ್ ಇತ್ಯಾದಿ ಕಡೆಗಳಿಗೆಲ್ಲಾ ಹದಮಾಡಿದ ಹೊಗೆಸೊಪ್ಪು ಬೇಕಾಗಿದೆ.

2 P.M.

ನಮ್ಮ ಧೇಶದಲ್ಲಿ ಲಕ್ಷಾಂತರ ಜನರು ಹೊಗೇಸೊಪ್ಪು ಬೆಳೆಯುತ್ತಾರೆ. ತಮಗೆ ಗೊತ್ತಿದ್ದಹಾಗೆ ಎರಡು ತರಹ ಹೊಗೇಸೊಪ್ಪನ್ನು ಬೆಳೆಯುತ್ತಾರೆ. ಲೋಕಪ್ರಖ್ಯಾತಿಯಾದ ವರ್ಜಿನಿಯಾ ಹೊಗೇಸೊಪ್ಪನ್ನು ನಮ್ಮ ದೇಶದಲ್ಲಿ ಬೆಳೆಯುತ್ತಾರೆ. ವರ್ಜಿನ್ಯಾ ಹೊಗೇಸೊಪ್ಪನ್ನು ಸಿಗರೇಟಿಗೆ ಮಾತ್ರ ಉಪಯೋಗಿಸುತ್ತಾರೆ. ಇನ್ನೊಂದನ್ನು ತಿನ್ನುವುದಕ್ಕೋಸ್ಕರವೂ ಮತ್ತು ಬೀಡಿ ಮಾಡುವುದಕ್ಕೂ ಉಪಯೋಗಿಸುತ್ತಾರೆ. ಬೀಡಿಗೆ ಹಾಕತಕ್ಕಂಥ ಹೊಗೇಸೊಪ್ಪಿನಿಂದ ನಶ್ಯವನ್ನು ತಯಾರುಮಾಡುತ್ತಾರೆ. ಹೊಗೇಸೊಪ್ಪಿನಲ್ಲಿ ಬೇರೆ ಬೇರೆ methods of curing ಇದೆ. ಒಂದುತರಹ curing ಮಾಡಿದರೆ ಆ ಹೊಗೇಸೊಪ್ಪನ್ನು ನಶ್ಯ ತಯಾರಿಸುವುದಕ್ಕೆ ಉಫಯೋಗಿಸಬಹುದು, ಅಥವಾ ಬೀಡಿ ತಯಾರುಮಾಡುವುದಕ್ಕೆ ಉಪಯೋಗಿಸಬಹುದು. ಹೊಗೇ ಸೊಪ್ಪಿನಿಂದ ಒಂದು ಭಾಗದ ದುಡ್ಡು ನಮ್ಮ ದೇಶದ ರೈತರಿಗೆ ಬರುತ್ತಾ ಇದ್ದರೆ ಇನ್ನು ಹೆಚ್ಚಿಗೆ ಭಾಗದ ದುಡ್ಡು ಹೊರಗೆ ಬೀಡಿ ತಯಾರುಮಾಡುವವರಿಗೆ ಹೋಗುತ್ತದೆ. ಕಾಲಕ್ರಮೇಣ ಇದನ್ನು ತಪ್ಪಿಸಬೇಕಾದರೆ ನಮ್ಮ ದೇಶದಲ್ಲಿ ಬೆಳೆಯುವ ಬೀಡಿ ಸೊಪ್ಪನ್ನು ಇಲ್ಲಿ ಉಪಯೋಗಿಸಿಕೊಂಡು ಬೀಡಿಯನ್ನು ತಯಾರುಮಾಡುವುದಕ್ಕೆ ಉತ್ತೇಜನ ಕೊಡಬೇಕಾದುದು ಸರ್ಕಾರದ ಕರ್ತವ್ಯ. ಹೈದರಾಬಾದ್ ದೇಶದಿಂದ ಎಲೆಯನ್ನು ಇಲ್ಲಿ ಬೀಡಿ ತಯಾರುಮಾಡುವವರು ತರಿಸುತ್ತಿದ್ದಾರೆ. ಅದು ತಪ್ಪುವಂತೆ ಮಾಡಿದರೆ ಬೀಡಿಯನ್ನು ಕಡಿಮೆ ದರದಲ್ಲಿ ತಯಾರುಮಾಡಿ ಮಾರಾಟಮಾಡುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಸರ್ಕಾರದವರು ನಮ್ಮ ಕಾಡುಗಳಲ್ಲಿ ತೂಬರೆ ಗಿಡಗಳನ್ನು ಬೆಳೆಯುವುದಕ್ಕೆ ಹೆಚ್ಚು ಪ್ರಯತ್ನ ಮಾಡಬೇಕು ಮತ್ತು ಅದಕ್ಕೆ ಉತ್ತೇಜನ ಕೊಡಬೇಕು. ಹಾಗೆ ಮಾಡಿದರೆ ಈ ಬೀಡಿಯಮೇಲೆ ಮೂರು ಕಾಸು ತೆರಿಗೆ ಹಾಕಿ ಅದರಿಂದ 70 ಸಾವಿರ ರೂಪಾಯಿಗಳ ಉತ್ಪತ್ತಿ ಬರುವುದಕ್ಕೆ ಬದಲಾಗಿ 10 ಲಕ್ಷ ರೂಪಾಯಿಗಳವರೆಗೂ ಉತ್ಪತ್ತಿ ಈ ತೂಬರೆ ಗಿಡಗಳನ್ನು ನಮ್ಮಲ್ಲಿ ಬೆಳೆಸುವುದರಿಂದ ಬರುತ್ತದೆ ಎಂದು ಸಲಹೆ ಮಾಡುತ್ತೇನೆ. ಆದ್ದರಿಂದ ಮೂರು ಕಾಸನ್ನು ತೆಗೆದು ಒಂದು ಕಾಸು ಇಡುವುದು ಒಳ್ಳೆಯದೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ.

*Sri S. SRINIVASA IYENGAR (T.-Narasipur).—Sir, I oppose this Bill. The contention of the Government as contained in the Statement of Objects and Reasons are not borne out by the clauses of the Bill. I will just read what the Government have stated in Statement of Objects and Reasons. They say: "It is therefore desirable that the rates of tax in Mysore also should be on a par with those in Madras for preventing the unauthorised movement of these goods into Madras to the detriment of honest dealers, and for augmenting the revenues of the State." The clauses of the Bill provide for a levy of sales-tax of three pies in the rupee while in Madras it is six pies in the rupee and therefore the rates of levy are not on a par.

Sri Kadidal MANJAPPA.—The Hon'ble Member is confining himself to beedis.

Sri S. SRINIVASA IYENGAR.—To that extent, I am glad that the Government have admitted that the Bill is not in order. Secondly, Sri Mascarenhas was informing me that by raising this levy to that of Madras, the industry in Mysore State would thrive. Otherwise there would be unfair competition. Since there is a difference in rate, that competition still exists. Sir, the third thing is, as he rightly puts it, prior to April 1955, sales-tax was being levied at three pies in the rupee. It is a fact.

(SRI S. SRINIVASA IYENGAR.)

When the amendment was introduced, an amendment to amend the sales-tax, I was one of those who fought for the abolition of sales-tax on beedis. While the list was being compiled for schedule III, we insisted that beedi should be found there on the ground that beedi was exempted in Madras. Government then said that they were levying a charge of one pie in the rupee and that they may be permitted to do so. Now we find, just because we gave them an opportunity, they are over-burdening that industry which is run like a cottage industry. If the sales-tax is enhanced, if a particular trader is giving Rs. 50 today, he will have to pay Rs. 150. Even in enhancement there must be reason. It should not be three times. I think it will hit hard the cottage industry in rural parts. They said—"We exempted arecanut because we considered it to be a poor man's food". . . .

Sri Kadidal MANJAPPA.—It is not a correct argument. It was because we were deriving only a few thousands of rupees. Moreover, merchants were put to large inconveniences, and most of it was being exported outside Mysore.

Sri S. SRINIVASA IYENGAR.—If the contention is that they exempted arecanut because Government would get only a few thousands and therefore it was not worth the trouble, I would put it this way. Just now, Government said that they would be getting 1½ lakhs more than what they get under the new Act. Without the enhancement the normal income is Rs. 80,000 or not more than Rs. 60,000 if one pie is levied. By the proposed enhanced levy the Government would get 1½ lakhs, *i.e.*, Rs. 80,000, more. Even then considering beedi to be a common man's pleasure, a sacrifice of Rs. 80,000 is worth it. Therefore, I submit that beedi should be completely exempted and brought under the exemption list.

*ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಸ್ವಾಮಿ, ಮಾನ್ಯ ಸಚಿವರು ಈ ಸಭೆಮುಂದೆ ತಂದಿರತಕ್ಕಂಥ ಮೈಸೂರು ಸೇಲ್ಸ್ ಟ್ಯಾಕ್ಸ್ Second Amendment Billನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ಇದರ ಉದ್ದೇಶಗಳನ್ನು ಈಗಾಗಲೇ ಮಂತ್ರಿಗಳು ವಿವರಿಸಿದ್ದಾರೆ. ಅವುಗಳನ್ನು ನಾನು absurd ಎಂದು ಹೇಳಬೇಕಾಗಿದೆ. ಅವು ಕಾರಣಗಳೇ ಅಲ್ಲ. ಅವರು ಹೇಳಿದ ರೀತಿಯಲ್ಲಿ ಅವುಗಳನ್ನು ಕಾರಣಗಳೆಂದು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಅವುಗಳಿಂದ ತದ್ವಿರುದ್ಧವಾದ ಪರಿಣಾಮವುಂಟಾಗುತ್ತದೆ. ಅವರು ಇದು honest dealersಗೆ ಅನುಕೂಲ ಮಾಡುತ್ತದೆಯೆಂದು ಹೇಳಿದ್ದಾರೆ. Dishonest dealersಗೆ ಅನುಕೂಲ ಮಾಡುತ್ತಾರೆ ಎನ್ನುವ ಮಾತಿಗೆ ಆ ಶಬ್ದವನ್ನು ಹಾಕಿದ್ದಾಗಿದೆ. Honest dealersಗೆ ರಕ್ಷಣೆ ಕೊಡುವ ಉದ್ದೇಶದಿಂದ ಈ ಬಿಲ್ಲನ್ನು ತಂದಿಲ್ಲವೆಂಬುದು ಮೇಲೆ ಎದ್ದು ಕಾಣುತ್ತದೆ. ಸರ್ಕಾರದವರಿಗೆ ಹಣ ಬೇಕು, ಆದ್ದರಿಂದ ಇದುವರೆಗೆ ಮೂರು ಕಾಸು ಕೊಡುತ್ತಿದ್ದುದನ್ನು ಈಗಲೂ ಅದೇ ರೀತಿ ತೆಗೆದುಕೊಳ್ಳುವುದು ನ್ಯಾಯ, ಒಂದು ಕಾಸಿಗೆ ತಿದ್ದುಪಡಿ ಮಾಡುವುದರಿಂದ ಸರ್ಕಾರದ ಆದಾಯವನ್ನು ಕಳೆದುಕೊಂಡಿದ್ದಾರೆಂಬುದು ಒಂದೇ ಕಾರಣವಾಗಿದೆ. ಆದ್ದರಿಂದ ಸರ್ಕಾರದವರು ಯಾವುದಾದರೂ ನೆಪ ಕೊಟ್ಟು ಮೂರು ಕಾಸು ತೆರಿಗೆಯನ್ನು ಉಳಿಸಿಕೊಳ್ಳಬೇಕು ಎನ್ನುವ ಪ್ರಯತ್ನ ಮಾಡುತ್ತಿದ್ದಾರೆ ಎಂಬುದು ನಮಗೆಲ್ಲಾ ಚೆನ್ನಾಗಿ ಗೊತ್ತಾಗುತ್ತದೆ. ಬೀಡಿಯ ವಿಷಯದಲ್ಲಿ ಸರ್ಕಾರದವರಿಗೆ ಅಷ್ಟಾಗಿ ಮಾಹಿತಿ ಇದ್ದ ಹಾಗೆ ಕಂಡುಬರಲಿಲ್ಲ. ಇದು ಒಂದು ದೊಡ್ಡ ಗೃಹ ಕೈಗಾರಿಕೆ. ಸಹಸ್ರಾರು ಜನರು ಈ ಬೀಡಿಯನ್ನು ಕಟ್ಟಿ ಮಾರಾಟಮಾಡಿ ಅವರ ಜೀವನವನ್ನು ಮಾಡುತ್ತಿದ್ದಾರೆ. ಇಂತಹ ಒಂದು ಕೈಗಾರಿಕೆಗೆ ಪ್ರೋತ್ಸಾಹ ಕೊಡಬೇಕಾದದ್ದು ಸರ್ಕಾರದ ಕರ್ತವ್ಯ ಮತ್ತು ಈ ಕೈಗಾರಿಕೆಗೆ ರಕ್ಷಣೆ ಕೂಡ ಕೊಡಬೇಕು. ನಾನು ಬರೀ ಸೇದುವವರ ದೃಷ್ಟಿಯಿಂದ ನೋಡುತ್ತಾ ಇಲ್ಲ. ಸೇದುವವರನ್ನು ಹೆಚ್ಚಿಗೆ ಮಾಡಬೇಕೆಂದು ಹೇಳುತ್ತಾ ಇಲ್ಲ. ಇವೊತ್ತು ಎಷ್ಟು ಜನ ಈ ಕೈಗಾರಿಕೆಯನ್ನು ಅವಲಂಬಿಸಿ ತಮ್ಮ ಜೀವನವನ್ನು ಮಾಡುತ್ತಿದ್ದಾರೋ ಅವರಿಗೆ ಒಂದು ನೆರವನ್ನು ಕೊಡಬೇಕಾದದ್ದು ಮತ್ತು ಅವರಿಗೆ ರಕ್ಷಣೆ ಕೊಡಬೇಕಾದದ್ದು, ಉತ್ತೇಜನ ಕೊಡಬೇಕಾದುದು ಸರ್ಕಾರದ ಕರ್ತವ್ಯವಾಗಿರುತ್ತದೆ. ಹೊರಗಡೆ ಮದ್ರಾಸ್ ಪ್ರಾಂತದಲ್ಲಿ ಬೀಡಿಗೆ ತೆರಿಗೆಯನ್ನು ಜಾಸ್ತಿ ಮಾಡಿದ್ದಾರೆ. ಆದ್ದರಿಂದ ನಾವು ಜಾಸ್ತಿ ಮಾಡಬೇಕಾಗುತ್ತದೆ; ಇಲ್ಲದಿದ್ದರೆ ಇಲ್ಲಿಂದ ಹೊರಗಡೆ ಹೋಗುವ ಸಂದರ್ಭ ಇರುತ್ತದೆಂದು ವಾದ ಮಾಡುತ್ತಿದ್ದಾರೆ. ಆ ವಾದದಲ್ಲಿ ಯಾವ ತಿರುಳೂ ಇಲ್ಲ. ಮೈಸೂರು ಸಂಸ್ಥಾನದಿಂದ ಹೊರಗಡೆಗೆ ನನಗೆ ಗೊತ್ತಿದ್ದ ಹಾಗೆ ಅಷ್ಟಾಗಿ ಬೀಡಿಗಳು ಹೋಗುತ್ತಾ ಇಲ್ಲ. ಅದಕ್ಕೆ ಬದಲಾಗಿ ಹೊರ ಪ್ರಾಂತಗಳಿಂದಲೇ ನಮ್ಮ ಸಂಸ್ಥಾನಕ್ಕೆ ಬಹಳವಾಗಿ ಬೀಡಿಗಳು ಬರುತ್ತಾ ಇವೆ. ಈ ರೀತಿಯಾಗಿ ಹೊರಗಡೆಯಿಂದ ಬರತಕ್ಕ ಬೀಡಿ ಸ್ಪರ್ಧೆಯನ್ನು ಎದುರಿಸಬೇಕಾದರೆ ಈಗ ಬಹಳ ಕಷ್ಟವಾಗಿದೆ. ಮಾನ್ಯ ಸಚಿವರು ಈಗಾಗಲೇ ಹೇಳಿರುವಹಾಗೆ, ಮದ್ರಾಸ್ ಪ್ರಾಂತದಲ್ಲಿ ಕೂಲಿ ಕಡಿಮೆ ಇದೆ. ಮೈಸೂರು ಸಂಸ್ಥಾನದಲ್ಲಿ ಕೂಲಿ ಜಾಸ್ತಿ ಕೊಡಬೇಕು ಎಂಬ ಕಾರಣದಮೇಲೆ ಈ ರೀತಿ ಸ್ಪರ್ಧೆ ಇರಲು ಕಾರಣವಾಗಿದೆ. ಇದನ್ನು ಸಮಗ್ರವಾಗಿ ನೋಡಿದರೆ ಹೊರಗಡೆಯಿಂದ ತರಿಸಿಕೊಳ್ಳುವ ತಂಬಾಕಿನಮೇಲೆ ಎಕ್ಸೈಜು ಸುಂಕದ ಹೊರೆ ಈಗಾಗಲೆ ಬಹಳವಾಗಿ ಆಗಿಬಿಟ್ಟಿದೆ. ಇಷ್ಟು ಎಕ್ಸೈಜು ಸುಂಕವನ್ನು ಕಟ್ಟಿಕೊಂಡು ಹೊರಗಡೆಯಿಂದ ಬೀಡಿ ಎಲೆಗಳನ್ನು ತರಿಸಿಕೊಂಡು ತಂಬಾಕನ್ನು ಕೊಂಡುಕೊಂಡು ನಮ್ಮ ಸ್ಟೇಟ್‌ನಲ್ಲಿ ಬೀಡಿ ತಯಾರುಮಾಡಿದರೆ ಅದರಿಂದ ನಷ್ಟ ಬಹಳ ಕಮ್ಮಿ ಬರುತ್ತದೆ. ಒಂದು ಸಾವಿರ ಬೀಡಿ

ಯನ್ನು ಮಾರಿದರೂ ಮೂರು ಆಣೆ ನಷ್ಟ ಸಿಕ್ಕುವುದು ಕಷ್ಟವಾಗುತ್ತದೆ. ಬೀಡಿಯ ದರವನ್ನು ಏರಿಸುವುದಕ್ಕೆ ಸಾಧ್ಯವಿಲ್ಲ. ಇದು ತೀರ ಬಡವರು ಸೇದತಕ್ಕಂಥ ವಸ್ತುವಾಗಿದೆ. ಇಂತಹ ಕೈಗಾರಿಕೆಗೆ ಉತ್ತೇಜನ ಕೊಡುವುದಕ್ಕೆ ಅಥವಾ ರಕ್ಷಣೆ ಕೊಡುವುದಕ್ಕೆ ಬದಲಾಗಿ ಸರ್ಕಾರದವರು ಈ ರೀತಿಯಾಗಿ ಒಂದೇಸಲ ಒಂದು ಕಾಸು ಇರುವುದನ್ನು ಮೂರು ಕಾಸುಗಳಿಗೆ ಏರಿಸುತ್ತಾ ಇರುವುದು ಯಾವ ದೃಷ್ಟಿಯಿಂದಲೂ ಸೂಕ್ತವಲ್ಲ. ಈ ಮಸೂದೆಯನ್ನು ಸರ್ಕಾರದವರು ವಾಪಸ್ಸು ತೆಗೆದುಕೊಳ್ಳುವುದು ಅವರಿಗೆ ಬಹಳ ಗೌರವಯುತವಾದುದೆಂದು ಹೇಳುತ್ತೇನೆ. ಈ ತೆರಿಗೆ ಹಾಕುವುದರಿಂದ ಬೀಡಿಯ ದರ ಹೆಚ್ಚಾಗಬಹುದು. ಸಿಗರೇಟಿನ ದರಗಳನ್ನು ಮೊನ್ನೆ ಪುನಃ ಹೆಚ್ಚಿಸಿದುದರಿಂದ ಸಿಗರೇಟ್ ಕೊಂಡುಕೊಂಡು ಸೇದುವುದು ಕಷ್ಟವಾಗಿದೆ. ನಮ್ಮಂತಹವರನ್ನು ಬೀಡಿ ಸೇದುವ ಪರಿಸ್ಥಿತಿಗೆ ಸರ್ಕಾರ ತಳ್ಳಿದೆ. ಅದಕ್ಕೆ ದುಃಖವಿಲ್ಲ. ಈ ಸಂದರ್ಭದಲ್ಲಿ ಯಾವುದೋ ಒಂದು ಚಿತ್ರದಲ್ಲಿ ಒಂದು ಹಾಡು ಇರುವುದು ಜ್ಞಾಪಕಕ್ಕೆ ಬರುತ್ತದೆ. ಅದು ಏನೆಂದರೆ "ಕಾಲೇಪಾರ್, ಪೀಲೇ ಬೀಡಿ, ಬಚಾಲೆ ಘರ್ ಕೀಷಾರ್" ಎಂಬುದು. ಎಲೆ ಅಡಿಕೆ ಹಾಕಿಕೊಳ್ಳುವುದು, ಬೀಡಿ ಸೇದುವುದು, ಮನೆ ಕೀರ್ತಿ ಉಳಿಸುವುದು, ಅಷ್ಟೇ ಅಲ್ಲದೆ ಇನ್ನೇನೋ ದೊಡ್ಡ ದೊಡ್ಡ ಕೆಲಸಗಳನ್ನು ಮಾಡುವುದಕ್ಕೆ ಅವನಲ್ಲಿ ಹಣಕಾಸಿನ ಯೋಗ್ಯತೆ ಇರುವುದಿಲ್ಲ. ಆದ್ದರಿಂದ ಬಡವರಿಗೆ ಬಂಧು ಆಗಿರತಕ್ಕಂಥ ಬೀಡಿಯ ಮೇಲೆ ಸರ್ಕಾರ ತೆರಿಗೆ ಹಾಕಿ ಮೈಸೂರು ಸಂಸ್ಥಾನದಲ್ಲಿರತಕ್ಕಂಥ ಅನೇಕ ಬೀಡಿ ಕೈಗಾರಿಕೆಗಳನ್ನು ಮುಚ್ಚುವುದಕ್ಕೆ ಅವರು ಕಾರಣರಾಗಿದ್ದಾರೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಜನರ ಆರೋಗ್ಯ ಹೆಚ್ಚಾಗುತ್ತದೆ. Productivity ಹೆಚ್ಚಾಗುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಈಗ ನಮಗೆ ಗೊತ್ತಿದ್ದ ಹಾಗೆ ಗಣೇಶ ಬೀಡಿ ಎನ್ನುವುದು ಒಂದು ದೊಡ್ಡ ಸಂಸ್ಥೆ. ಆ ಬೀಡಿ ಮೈಸೂರು ಸಂಸ್ಥಾನದಲ್ಲಿ ಬಹಳವಾಗಿ ಖರ್ಚಾಗುತ್ತದೆ. ಹೀಗೆ 30ನೇ ನಂಬರ್ ಬೀಡಿ ಹೆಚ್ಚಿಗೆ ಖರ್ಚಾಗುತ್ತಿದೆ. ಹೀಗೆ ಬೀಡಿಗಳಲ್ಲಿ ಅನೇಕ ತರಹ ಬೀಡಿಗಳಿವೆ. ಈಚೆಗೆ ಕಾಂಗ್ರೆಸ್ ಬೀಡಿ, ಕಾಳಹಸ್ತಿ ಬೀಡಿ ಎಂದು ಬೇರೆ ಇವೆ. ಹೊರಗಡೆಯಿಂದ ಬರತಕ್ಕ ಬೀಡಿಗಳೊಡನೆ ನಮ್ಮ ಬೀಡಿಗಳು ಸ್ಪರ್ಧಿಸಿ ನಿಲ್ಲುವುದು ಕಷ್ಟವಾಗಿದೆ. ಹೀಗಿರುವಲ್ಲಿ ಇಲ್ಲಿ ತೆರಿಗೆ ಇನ್ನೂ ಜಾಸ್ತಿ ಮಾಡಿದರೆ ಹೊರಗಿನವರಿಗೆ ಇನ್ನೂ ಹೆಚ್ಚಿನ ಅನುಕೂಲವಾಗುತ್ತದೆ. ಅವರು competition ಹೆಚ್ಚಿಸುತ್ತಾರೆ. ನಮ್ಮ ಸಂಸ್ಥಾನದ ಕೆಲಸಗಾರರಿಗೆ, ವ್ಯಾಪಾರಗಾರರಿಗೆ ತೊಂದರೆಯಾಗುತ್ತದೆ. ಈ ವಿಷಯವಾಗಿ ಸರ್ಕಾರದವರೇಕೆ ಪರಿಶೀಲನೆ ಮಾಡುವುದಿಲ್ಲವೋ ನನಗಂತೂ ಗೊತ್ತಾಗುವುದಿಲ್ಲ. ಅವರು ಹೇಳತಕ್ಕ logic, ಅವರು ಕೊಡತಕ್ಕ ಕಾರಣ ಮತ್ತು ವಿವರಣೆಗಳಿಗೆ ಇದರಿಂದ ವಿರುದ್ಧವಾದ ಪರಿಣಾಮಗಳಾಗುತ್ತವೆ. ಇದನ್ನು ಸರ್ಕಾರದವರು ಮನಗಾಣಬೇಕು. ಈಗ ನಮ್ಮ ದೇಶದಲ್ಲಿ ಬೀಡಿ ಕೈಗಾರಿಕೆಯಿಂದ ಜೀವನ ಮಾಡುತ್ತಿದ್ದಾರೆ. ದಿವಸಕ್ಕೆ ನಮ್ಮಲ್ಲಿ 25 ಲಕ್ಷ ಬೀಡಿ ಸೇದುತ್ತಾರೆಂದಿಟ್ಟುಕೊಂಡರೂ ಒಬ್ಬೊಬ್ಬರಿಗೆ ಹತ್ತು ಬೀಡಿಯಂತೆ ಎರಡು ಕೋಟಿ ಐವತ್ತು ಲಕ್ಷ ಬೀಡಿಗಳನ್ನು ಸೇದುತ್ತಾರೆಂದು ಹೇಳಬಹುದು. ಇಷ್ಟು ಹೆಚ್ಚು ಜನ ನಮ್ಮಲ್ಲಿ ಬೀಡಿ ಸೇದುತ್ತಿರುವಾಗ ಈ ಕೈಗಾರಿಕೆಗೆ ರಕ್ಷಣೆ ಕೊಡಬೇಕೆಂದು ಹೇಳಿ ಸಮಿತಿಯವರು ಒಂದು ಕಾಸು ಹಾಕಬೇಕೆಂದು ಹೇಳಿದರೆ. . . .

ಶ್ರೀ ಕಡಿದಾಳ್ ಮಂಜಪ್ಪ.—ಸಮಿತಿಯವರು ಬೀಡಿಯ ವಿಚಾರದಲ್ಲಿ ಬದಲಾವಣೆ ಮಾಡಬೇಕೆಂದು ಹೇಳಲಿಲ್ಲ; ಮದ್ರಾಸಿನಲ್ಲಿ ಬೀಡಿಗೆ exemption ಇದೆ, ಇಲ್ಲಿ ಒಂದು ಕಾಸಿದ್ದರೆ ಸಾಕು ಎಂದು ಹೇಳಿದರು. ಈಗ ಮದ್ರಾಸಿನಲ್ಲಿ Exemption ಮಾಡಿಲ್ಲ, ಅದಕ್ಕೆ ಬದಲು ಆರು ಕಾಸು ವಿಧಿಸುತ್ತಾರೆ. ಅಷ್ಟಿರುವಾಗ ನಮ್ಮಲ್ಲಿ ಮೂರು ಕಾಸು ಮಾತ್ರ ಕೊಡಿ ಎಂದು ಹೇಳುತ್ತಿದ್ದೇವೆ.

ಶ್ರೀ ಎಸ್. ಗೋಪಾಲಗೌಡ.—ಆ ವಾದವೇ ನನಗೆ ಹಿಡಿಸುವುದಿಲ್ಲ. ಏಕೆಂದರೆ, ಆ ವಾದದಲ್ಲಿ Reasonನ್ನೇ ಕಾಣುವುದಿಲ್ಲ. ಸುಮ್ಮನೆ ನೀತಿ ಬೋಧನೆ, ಗುರಿ ಬೇರೆ. ಅಂತೂ ಹಣ ಬರಬೇಕೆಂಬುದು ನಿಮಗೆ. ಯಾರಿಗೆ ಏನೇ ಕಷ್ಟವಾಗಲಿ, ನಷ್ಟವಾಗಲಿ ನಿಮ್ಮ ಉದ್ದೇಶ, ಬರತಕ್ಕ ಹಣ ಬಂದೇ ಬರಬೇಕು ಎಂಬುದು ನಿಮ್ಮ ಆಸೆ. ಎಲ್ಲಿಂದಲೇ ಆಗಲಿ ಖಜಾನೆಗೆ ದುಡ್ಡು ಬಂದರೆ ಆಯಿತೆಂಬುದು ನಿಮ್ಮ ನೀತಿ. ಹೀಗಾದರೆ ಬೀಡಿ ಸೇದುವವರು ಯಾರೂ ಕಾಂಗ್ರೆಸ್ಸಿಗೆ ವೋಟು ಮಾಡುವುದಿಲ್ಲ. ಸುಮಾರು 25 ಲಕ್ಷ ವೋಟುಗಳು ಕಾಂಗ್ರೆಸ್ಸಿಗೆ ತಪ್ಪಿ ಹೋಗುತ್ತವೆ. ಈ ದೃಷ್ಟಿಯಿಂದಲಾದರೂ. . . .

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಮಕ್ಕಳು ಬೀಡಿ ಸೇದುವುದನ್ನು ತಪ್ಪಿಸಿದರಲ್ಲ ಎಂದು ಹೇಳಿ ಇನ್ನೂ ಹೆಚ್ಚು ಜನ ವೋಟು ಕೊಡುತ್ತಾರೆ.

ಶ್ರೀ ಎಸ್. ಗೋಪಾಲಗೌಡ.—ತೆರಿಗೆ ಜಾಸ್ತಿ ಮಾಡಿ ತಮ್ಮ ಮಕ್ಕಳಿಗೆ ಬೀಡಿ ಸೇದದಿರುವಂತೆ ಮಾಡುವುದಕ್ಕೆ ಸರ್ಕಾರ ಸಹಾಯ ಮಾಡಿತು ಎಂದು ಹೇಳಿ ವೋಟನ್ನು ಸರ್ಕಾರಕ್ಕೇ ಕೊಡೋಣವೆಂದು ಹೇಳಿ ಕೊಡುತ್ತಾರೆ ಎಂದು ಹೇಳಿದರು. ಮಕ್ಕಳಿಗೆ ವೋಟು ಮಾಡುವ ಅಧಿಕಾರವಿರುವುದಿಲ್ಲ. ಅವರಿಗೆಷ್ಟು ತೊಂದರೆಯಾಗುತ್ತದೆಯೆಂಬುದನ್ನು ಕೂಡ ಅವರು ಮರೆಯುವದಿಲ್ಲವೆಂಬುದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ಇವೊತ್ತು ಎಷ್ಟೋ ಜನ ಬೀಡಿ ಕೈಗಾರಿಕೆ ನಡೆಸುವ ಮಾಲೀಕರು ನಮ್ಮ ದೇಶದಲ್ಲಿದ್ದಾರೆ. ನಮ್ಮ ಮಾನ್ಯ ಮಂತ್ರಿಗಳಿಗೆ ಗೊತ್ತಿರುವ ಹಾಗೆ ತೀರ್ಥಹಳ್ಳಿಯಲ್ಲಿಯೇ ಖಾದರ್ ಸಾಹೇಬರೆಂಬ ಬೀಡಿ ಮಾಲೀಕರು ಹಿಂದೆ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಎಷ್ಟೋ ಸಹಾಯ ಮಾಡಿದರು. ಇಂದು ಅವರು. . .

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯರು ಖಾದರ್ ಸಾಹೇಬರನ್ನು ನನ್ನ ಮೇಲೆ ಎತ್ತಿ ಕಟ್ಟುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಪರಿಸ್ಥಿತಿ ಯಾವ ರೀತಿ ಯಿದೆಯೆಂಬುದನ್ನು ಹೇಳಿದೆನೇ ಹೊರತು ಎತ್ತಿ ಕಟ್ಟಬೇಕೆಂದು ಹೇಳುತ್ತಿಲ್ಲ. ಏಕೆಂದರೆ ಬೀಡಿಯವರು ಬಹಳ ವರ್ಷದಿಂದ ಕಾಂಗ್ರೆಸ್ಸಿಗೆ ಸಹಾಯ ಮಾಡುತ್ತಾ ಬಂದಿದ್ದಾರೆ. ಬೀಡಿ ಕೈಗಾರಿಕೆಯವರಿಗೂ ಬಹಳ ಖರ್ಚುಗಳಿವೆ. ಅವರು ಕೂಲಿ ಕೊಟ್ಟುಕೊಂಡು ಹೋಗಬೇಕು. ಎಲೆಗಳನ್ನು ಆರಿಸಬೇಕು. ಅನೇಕ ವೇಳೆ ಎಲೆಗಳಿಗೆ ಬೆಂಕಿ ಬೀಳುವುದೂ ಉಂಟು. ಇವೊತ್ತು ಕಷ್ಟದೆಶೆಯಲ್ಲಿರತಕ್ಕ ಈ ಕೈಗಾರಿಕೆಗೆ ಉತ್ತೇಜನ ಕೊಡಬೇಕೆಂದು ಹೇಳಿ ತೆರಿಗೆಯನ್ನು ಒಂದು ಕಾಸು ಮಾಡಬೇಕೆಂದು ಸಲಹೆ ಮಾಡಿದ್ದರೆ, ಒಂದು ಕಾಸು ಇರುವುದನ್ನು ಒಂದಕ್ಕೆ ಮೂರರಷ್ಟು ಏರಿಸಿದ್ದಾರೆ. 50 ರೂಪಾಯಿ ತೆರಿಗೆ ಕೊಡುತ್ತಿದ್ದವನು ಇನ್ನು ಮೇಲೆ 150 ರೂಪಾಯಿ ಕೊಡಬೇಕಾಗಿ ಬರುತ್ತದೆ. ತಂಬಾಕಿನ ಬೆರೆ ಜಾಸ್ತಿಯಾಗಿದೆ, ಅದಕ್ಕೆ ಸುಂಕ ಬೇರೆ ಹೆಚ್ಚು ಮಾಡಿದೆ, ಎಲೆಗಳನ್ನು ತರಿಸುವು

(ಶ್ರೀ ಎಸ್. ಗೋಪಾಲಗೌಡ.)

ದಕ್ಕೆ ಕೂಲಿಗಾರರಿಗೆ ಜಾಸ್ತಿ ದರಗಳನ್ನು ಕೊಡಬೇಕಾಗಿದೆ. ಮೈಸೂರಿನಲ್ಲಿ ಬೀಡಿ ಕೆಲಸಗಾರರು ಮುಷ್ಕರ ಹಿಡಿದಿದ್ದಾರೆ. ಹೀಗೆಯೇ ಅನೇಕ ಕಡೆ ಮುಷ್ಕರಗಳಾಗುತ್ತಿವೆ! ಹೀಗೆಲ್ಲಾ ಆಗಿ ಬೀಡಿ ಕೈಗಾರಿಕೆಯವರು ಅನೇಕ ಕಷ್ಟಗಳಿಗೆ ಗುರಿಯಾಗಿದ್ದಾರೆ. ಅಲ್ಲದೆ ಬೀಡಿಯನ್ನು ಯಾರು ಕಟ್ಟುತ್ತಾರೆ ಎಂದರೆ, ಮನೆಯಲ್ಲಿರತಕ್ಕ ಹೆಂಗಸರು. ಈ ಗೃಹ ಕೈಗಾರಿಕೆಯಿಂದ ಅನೇಕರಿಗೆ ಕೆಲಸ ಸಿಕ್ಕಿದೆ. ಹೀಗಿರುವಾಗ ಈ ಮಸೂದೆ ಕಾನೂನಾದರೆ ನಿಜವಾಗಿಯೂ ಅನೇಕ ಬಡ ಸಂಸಾರಗಳಿಗೆ ಹೊಡೆತ ಬೀಳುತ್ತದೆ. ಹೊರಗಡೆಯವರಿಗೆ ನಮ್ಮ ಜನರಮೇಲೆ ಪೈಪೋಟಿ ನಡೆಸಿ ತಮ್ಮ ವ್ಯಾಪಾರ ಹೆಚ್ಚುಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಈಗ ಗೋವಾದಲ್ಲಿ ಹೇಗಿದೆಯೆಂಬುದನ್ನು ನೋಡಬಹುದು. ಸಿಗರೇಟು ಬೀಡಿ ಎಲ್ಲವೂ ಕಮ್ಮಿ ದರಕ್ಕೆ ಅಲ್ಲಿ ಸಿಕ್ಕುತ್ತಿವೆ. ಇದರಿಂದಾಗಿ ಅಲ್ಲಿಂದ ಬಹಳ ಮಟ್ಟಿಗೆ smuggle ಆಗುತ್ತದೆ. ಹೊರಗಡೆಯಿಂದ ಗೋವಾದಲ್ಲಿ ಹೋಗಿ ಯಾರೂ ವ್ಯಾಪಾರ ಮಾಡುವುದಕ್ಕಾಗುವುದೇ ಇಲ್ಲ. ಅಲ್ಲಿ ಸುಂಕ ಇಲ್ಲದಿರುವುದರಿಂದ ಹೆಚ್ಚಿನ ವ್ಯಾಪಾರ ನಡೆಯುತ್ತದೆ. ಅಲ್ಲಿನ ಜನರಿಗೆ ತಮ್ಮ ಕೈಗಾರಿಕೆಗಳನ್ನು ರೂಢಿಸಿಕೊಳ್ಳಲು ಬಹಳ ಅನುಕೂಲವಾಗಿದೆ. ಅಂಥದನ್ನು ಮಾಡುವುದನ್ನು ಬಿಟ್ಟು ನಮ್ಮ ಸರ್ಕಾರದವರು ಏನೋ ಹಣ ಬರುತ್ತದೆಂದು ಮಾಡುತ್ತಿದ್ದಾರೆ. ನಮ್ಮ ಕೈಗಾರಿಕೆಗೆ ಧಕ್ಕೆ ಬರುತ್ತದೆಂಬುದನ್ನು ನೋಡುತ್ತಿಲ್ಲ. ಈ ಮಸೂದೆಯನ್ನು, ಖಂಡಿತವಾಗಿಯೂ ವಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇಲ್ಲಿ ಎರಡನೆಯ ಪ್ಯಾರಾದಲ್ಲಿ ಇನ್ನೊಂದು ತೆರಿಗೆಯನ್ನು ಹೇಳಿದೆ.

	Rate of tax
Part II. "Cigarettes which are sold by the first dealer at less than three pies per cigarette and are to be sold at any retail point to the consumer at not more than 3 pies per cigarette.	Three pies in the rupee of such turnover.
5. Cigars and cheroots which are sold by the first dealer at less than 2 annas per cigar or cheroot and are to be sold at any retail point to the consumer at not more than 2 annas per cigar or cheroot."	Do

ಎಂದು ಹೇಳಿದೆ.

ಸಾಮಾನ್ಯ ಬೀಡಿ ಬಿಟ್ಟರೆ, ಜನ ಹೆಚ್ಚಿಗೆ ಸೇದುವುದು ಸಿಗರೇಟು—ಸಿಸರ್ಸ್, ಎಲಿಫೆಂಟ್, ಬೇರ್ಸ್, ಇಂಥವು. ಯಾವುದೇ ಆಗಲಿ ಮೂರು ಕಾಸಿಗೆ ಕಮ್ಮಿಯಾಗಿ ಮಾರಾಟವಾಗುವ ಯಾವ ಸಿಗರೇಟೂ ಸಿಕ್ಕುವುದಿಲ್ಲ. ಎಕ್ಸೈಸ್ ಸುಂಕ ಜಾಸ್ತಿಯಾಗಿ ಸಿಗರೇಟಿನ ದರವೂ ಜಾಸ್ತಿಯಾಗಿದೆ. ಮೂರು ಕಾಸಿಗೆ ಕಮ್ಮಿ ಇರತಕ್ಕ ಸಿಗರೇಟು ಮತ್ತು 51ನೆಯ ಕ್ಲಾಜಿನಲ್ಲಿ ಹೇಳಿರುವ ಷಿರೂಟ್—ಇದು ಸಾಮಾನ್ಯ ಜನರು ಸೇದತಕ್ಕದ್ದು. ಸ್ಪೆನ್ಸರ್ ಮುಂತಾದ ಸಿಗರೇಟ್‌ಗಳೆಲ್ಲಾ ಸಾಮಾನ್ಯ ಜನರು ಸೇದತಕ್ಕವಲ್ಲ. ಸಾಮಾನ್ಯ ಜನರು ಷಿರೂಟ್ ಸೇದುತ್ತಾರೆ. ಇದಕ್ಕೆ ಕೂಡ ತೆರಿಗೆಯನ್ನು ಡಬ್ಬಲ್ ಮಾಡಿದ್ದಾರೆ. ಇದರಿಂದಲೂ ಕೈಗಾರಿಕೆಗೆ ಹೊಡೆತ ಬೀಳುತ್ತಿದೆ. ಇದರಿಂದ ಸಿಟಿಯವರಿಗೆ ಹೆಚ್ಚಿಗೆ ಕಷ್ಟವಾಗುತ್ತದೆ. ಈ ಕಾರಣದಿಂದ ಸರ್ಕಾರದವರು ಮತ್ತೆ ಪರ್ಯಾಲೋಚನೆ ಮಾಡಬೇಕು. ಕೇವಲವಾಗಿ, ಮದ್ರಾಸ್ ಸರ್ಕಾರದವರು ಮಾಡುತ್ತಾರೆಂದು ಹೇಳಿ ನಾವು ಮಾಡುವುದು ಸರಿಯಲ್ಲ. ಹೋದ ಸಲ ತೆರಿಗೆ ಹಾಕಿದಾಗ ಒಂದು ವಾದ ಹಿಡಿದರು. ಯಾವ ವಾದ ತಮ್ಮ ಮನಸ್ಸಿಗೆ ಅನುಕೂಲವಾಗಿ ಬರುತ್ತದೋ ಅದನ್ನು ತೆಗೆದುಕೊಂಡು ಬಾಕಿ ವಾದವನ್ನು convenient ಆಗಿ ಮರೆತುಬಿಡುತ್ತಾರೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ನೀವೂ ಹಾಗೆಯೇ ಮಾಡುತ್ತೀರಿ.

ಶ್ರೀ ಎಸ್. ಗೋಪಾಲಗೌಡ.—ನಾವು ಹಾಗೆ ಹೇಳುತ್ತಿಲ್ಲ. ಮದ್ರಾಸ್ ಜನರು ಮಾಡಿದ್ದನ್ನು ನಾವು ತೆಗೆದುಕೊಳ್ಳೋಣ. ಆದರೆ ಕಾಪಿ ಮಾಡಬೇಕೆಂಬ ಮನೋಭಾವ ಹೋಗಬೇಕು.

ಶ್ರೀ ಕಡಿದಾಳ್ ಮಂಜಪ್ಪ.—ಪ್ರತಿಸಾರಿಯೂ ತಾವೇಕೆ ಬೊಂಬಾಯಿ ಟೆನೆನ್ಸಿ ಆಕ್ಟನ್ನೇ quote ಮಾಡುತ್ತೀರಿ ?

ಶ್ರೀ ಎಸ್. ಗೋಪಾಲಗೌಡ.—ಯಾವುದರಲ್ಲಿ ನ್ಯಾಯವಿದೆಯೋ ಅದನ್ನು ಅನುಸರಿಸುವುದರಲ್ಲಿ ಯಾವ ತಪ್ಪೂ ಇಲ್ಲ. ಆದರೆ ಇನ್ನೊಬ್ಬರನ್ನು ಅನುಸರಿಸುವುದು aping ಆಗಕೂಡದು. ಅಲ್ಲಿ ಬರೀ ಪಂಚೆಯಲ್ಲೇ ಓಡಾಡುತ್ತಾರೆಂದು ಹೇಳಿ ನಾವೂ ಲುಂಗಿಯನ್ನೇ ಉಡಬೇಕೆಂದು ಹೇಳುವುದು ಸರಿಯಲ್ಲ. ಆದ್ದರಿಂದ ಮದ್ರಾಸಿನಲ್ಲಿ ಮಾಡಿದ್ದನ್ನೆಲ್ಲಾ ಮಾಡಬೇಕೆಂದು ಸರ್ಕಾರ ತೋರಿಸುತ್ತಿರುವ ಮನೋಭಾವನೆಯನ್ನು ಬಿಟ್ಟು, ಜನರಿಗೆ ಹೆಚ್ಚಿನ ಉಪಯೋಗವಿದೆಯೇ, ಅದನ್ನು ಹಾಕಬೇಕಾದ ಅಗತ್ಯವಿದೆಯೇ ಎಂಬುದನ್ನು ಪರಿಶೀಲನೆಮಾಡಿ ಈ ಮಸೂದೆಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇದನ್ನು ತರುವುದರಿಂದ ಬಹಳ ತೊಂದರೆಯಾಗುತ್ತದೆ. ನಮ್ಮ ಸಂಸ್ಥಾನಕ್ಕೂ ಅಷ್ಟಾಗಿ ಹಣ ತರದೆ ಇದ್ದರೂ ಕಿರುಕುಳ ಪರಮಾವಧಿಯನ್ನು ಮುಟ್ಟಿ ನಮ್ಮ ಕೈಗಾರಿಕೆಗಳು ನಶಿಸಿಹೋಗುತ್ತವೆಂದು ಹೇಳಿ ಮುಗಿಸುತ್ತೇನೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಸ್ವಾಮಿ, ಈಗ ತಂದಿರತಕ್ಕ ತಿದ್ದುಪಡಿಯ ವಿಷಯದಲ್ಲಿ ನಾನು ಕೆಲವು ವಿಚಾರಗಳನ್ನು ಸರ್ಕಾರದವರ ಗಮನಕ್ಕೆ ತರಬೇಕೆಂದಿದ್ದೇನೆ. ಮದ್ರಾಸಿನಲ್ಲಿ ಆರುಕಾಸು ಮಾಡಿದ್ದಾರೆ, ಮೈಸೂರು ಸಂಸ್ಥಾನದಲ್ಲಿ ಒಂದು ಕಾಸಿದ್ದುದನ್ನು ಮೂರುಕಾಸಿಗೆ ಜಾಸ್ತಿಮಾಡಿದ್ದಾರೆಂದು ಹೇಳಿದರು.

ಶ್ರೀ ಕಡಿದಾಳ್ ಮಂಜಪ್ಪ.—ಮದ್ರಾಸಿನಲ್ಲಿ ಇದುವರೆಗೆ ಬೀಡಿಗೆ ಇರಲಿಲ್ಲ. ಈಗ ಆರುಕಾಸು ಹಾಕಬೇಕೆಂದು ಕಾನೂನು ಮಾಡಿದ್ದಾರೆ.

ಶ್ರೀ ಎಸ್. ಸಿದ್ದಪ್ಪ.—ಏನೇ ಆಗಲಿ ಬೀಡಿಗಳ ಮೇಲೆ ತೆರಿಗೆ ಹೆಚ್ಚಿಸಬೇಕೆಂಬುದೇ ಉದ್ದೇಶ. ಬೀಡಿಯೆಂಬುದು, ನನಗೆ ತಿಳಿದಿರುವಮಟ್ಟಿಗೆ ಮತ್ತು ಸರ್ಕಾರದ ಅಧಿಕಾರಿಗಳಿಗೂ ಮತ್ತು ಈ ಸಭೆಯ ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿರುವಹಾಗೆ, ಬಡವರ ಜೀವನದ ವ್ಯವಸ್ಥೆಯಾಗಿದೆ. ಗೃಹ ಕೈಗಾರಿಕೆಯೆಂದು ಹೇಳಿ ನಾವೇನು ಹತ್ತು ಜಿಲ್ಲೆಗಳಲ್ಲೂ ಪ್ರಚಾರಕ್ಕೆ ತಂದಿದ್ದೇವೋ ಅದರಿಂದಾಗಿ ನಮ್ಮ ದೇಶದಲ್ಲಿ

ಗೃಹಕೈಗಾರಿಕೆಗಳು ಹೆಚ್ಚಬೇಕು, ಬಡವರ ಜೀವನದ ಮಟ್ಟ ಹೆಚ್ಚಬೇಕೆಂಬ ತತ್ವವನ್ನು ಪ್ರತಿಪಾದನೆ ಮಾಡುತ್ತಿದ್ದೇವೋ, ಈಗ ಈ ಬಿಲ್ಲನ್ನು ತರುವುದರಿಂದ, ಆ ಪ್ರತಿಪಾದಿತ ತತ್ವಕ್ಕೆಲ್ಲಿ ಕಳಂಕ ಬರುತ್ತದೆಯೋ ಎಂಬ ದೃಷ್ಟಿಯಿಂದ ನಾನು ಮಾತನಾಡುತ್ತಿದ್ದೇನೆ. ಏಕೆಂದರೆ, ಸಂಸ್ಥಾನದ ಒಂದುಕೋಟಿ ಜನಸಂಖ್ಯೆಯಲ್ಲಿ ಲಕ್ಷೋಪಲಕ್ಷ ಜನ ಬಡವರು ಇದರಿಂದ ಜೀವನ ಮಾಡುತ್ತಿದ್ದಾರೆ. ಹೆಂಗಸರಾದಿಯಾಗಿ ಈ ಕೈಗಾರಿಕೆಯನ್ನು ಪ್ರತಿಯೊಂದು ಊರಿನಲ್ಲಿಯೂ ಮಾಡುತ್ತಿದ್ದಾರೆ. ಹೊರಗಡೆಯಲ್ಲಿ ಹೋಗಿ ಕೆಲಸಮಾಡಲು ಅವಕಾಶವಿಲ್ಲದ ಹೆಂಗಸರು ಒಂದೊಂದು ಕುಟುಂಬದಲ್ಲೂ ಈ ಬೀಡಿಯ ಕೈಗಾರಿಕೆಯನ್ನು ನಡೆಸುತ್ತಿದ್ದಾರೆ. ಅವರು ಈಗಾಗಲೇ ಲೈಸೆನ್ಸ್ ಫೀಯನ್ನೂ ಕೊಡುತ್ತಿದ್ದಾರೆ. ಅವರು ಉಪಯೋಗಿಸುವ ಹೊಗೆಸೊಪ್ಪಿನ ಮೇಲೆ ಬೇರೆ ತೆರಿಗೆ ಬಿದ್ದಿದೆ. ಹೀಗಿರುವಾಗ ಈ ಬಡ ಜನರಮೇಲೆ ಇನ್ನೂ ತೆರಿಗೆ ಬೀಳುವಂತೆ ಮಾಡಿ ಅವರ ಜೀವನವನ್ನು ಕುಂಠಿತಗೊಳಿಸಿ ಅವರನ್ನು ಪರಿತಪಿಸುವಂತೆ ಮಾಡುವುದು ನ್ಯಾಯವಲ್ಲವೆಂಬ ದೃಷ್ಟಿಯಿಂದ ಈ ಬಿಲ್ಲಿನ ಸಾಧಕ ಬಾಧಕಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೆ. ಒಂದು ಲೆಕ್ಕಾಚಾರ ಹಾಕೋಣ. ಲೆಕ್ಕಾಚಾರದಮೇಲೆ ತೆರಿಗೆ ಹಾಕುವ ಪದ್ಧತಿ ನಮ್ಮಲ್ಲಿ ಯಾವಾಗಲೂ ಇದೆ. ಮದ್ರಾಸಿನಲ್ಲಿ ತೆರಿಗೆ ಹೆಚ್ಚಿಸಿದ್ದಾರೆ, ಮೈಸೂರಿನಲ್ಲಿ ಕಡಮೆಯಿದೆಯೆಂದು ಮದ್ರಾಸಿನಿಂದ ಇಲ್ಲಿಗೆ ಬರುತ್ತಾರೆ ಎಂದು ಹೇಳಿದರು. ಈಗ ಅಲ್ಲಿ ತೆರಿಗೆ ಹೆಚ್ಚಿಗೆ ಇರುವುದರಿಂದ ಹಾಲಿ ನಮ್ಮಲ್ಲಿ ಹತ್ತು ಲಕ್ಷ ರೂಪಾಯಿಗಳ ಮಾಲು ಖರ್ಚಾಗುತ್ತಿದ್ದರೆ, ಇನ್ನುಮೇಲೆ 20 ಲಕ್ಷ ರೂಪಾಯಿಗಳು ಖರ್ಚಾಗುವಂತಾಗುತ್ತದೆ. 10 ಲಕ್ಷ ರೂಪಾಯಿಗಳ ಬೀಡಿ ಮಾರಾಟವಾಗುತ್ತಿದ್ದುದು 20 ಲಕ್ಷ ರೂಪಾಯಿಗಳ ಬೀಡಿ ಮಾರಾಟವಾಗುವುದಕ್ಕವಕಾಶವಾಗುತ್ತದೆ. ಇದರಿಂದಾಗಿ ಬಡಜನರಿಗೆ ಪ್ರೋತ್ಸಾಹ ಕೊಟ್ಟಂತಾಯಿತು. ನಮ್ಮ ದೇಶಕ್ಕೆ ಹೆಚ್ಚು ಉತ್ಪತ್ತಿ ಬರುವುದಕ್ಕೆ ಅವಕಾಶವಾಯಿತು. ಈ ಅಂಶವನ್ನೂ ಸರ್ಕಾರದವರು ಆಲೋಚನೆ ಮಾಡಬೇಕು.

2-30 P.M.

ಈ ಟ್ಯಾಕ್ಸನ್ನು ಹಾಕುವಾಗ ತಾವು ಈ ಹೊಗೆಸೊಪ್ಪಿಗೇ ಬೇರೆ, ಬೀಡಿಗೇ ಬೇರೆ, ಬೀಡಿ ಸುತ್ತುವುದಕ್ಕೇ ಬೇರೆ, ಬೀಡಿ ಮಾರಾಟಕ್ಕೇ ಬೇರೆ ಹೀಗೆ ನಾಲ್ಕೈದು ವಿಧದಲ್ಲಿ ತೆರಿಗೆ ಹಾಕುತ್ತಿದ್ದೀರಿ. ಇದು ಸರಿಯಾದದ್ದಲ್ಲ. ಇದು ಬಡವರ ವಸ್ತು. ಅನೇಕರು ಊಟಮಾಡಿ ಅಜೀರ್ಣವಾಗಿರುವಾಗ ಈ ಬೀಡಿ ಸೇದತಕ್ಕಂಥ ವಾಡಿಕೆಯುಂಟು. ಈಗಾಗಲೆ ಅನೇಕ ನನ್ನ ಮಾನ್ಯ ಸ್ನೇಹಿತರು ಈ ವಿಚಾರವನ್ನು ತಿಳಿಸಿರುತ್ತಾರೆ. ಇದು ಸಾರ್ವಜನಿಕರು ಉಪಯೋಗಿಸತಕ್ಕಂಥ ವಸ್ತುವಾಗಿದೆ. ತಮಗೆ ಇದರಿಂದ ಈಗ ಒಂದೂವರೆ ಲಕ್ಷ ರೂಪಾಯಿಗಳ ವರಮಾನ ಬರಬಹುದೆಂದು ತಿಳಿಸೋಣವಾಗಿದೆ. ಆದರೆ ನಾವು ಈಗಾಗಲೇ ಇದರ ಮೇಲೆ ಒಂದು ಕಾಸು ತೆರಿಗೆಯನ್ನು ಹಾಕಿದ್ದೇವೆ. ಅದಕ್ಕಾಗಿ ಅವರಿಗೆ ಎಷ್ಟೆಷ್ಟು ಕಷ್ಟನಷ್ಟಗಳಾಗಿರುತ್ತೆಂಬುದನ್ನು ಅವರೀಗ ಸರ್ಕಾರದವರ ಮುಂದೆ ಒಂದು ಮನವಿಮಾಡಿಕೊಳ್ಳಲು ತಾವು ಅವರಿಗೊಂದು ಅವಕಾಶವನ್ನೂ ಸಹ ಕೊಟ್ಟಿಲ್ಲ. ತಾವು ಟ್ಯಾಕ್ಸ್ ಹಾಕುವುದೇನೋ ಹಾಕುತ್ತೀರಿ. ಆದರೆ ಇದರಿಂದ ಅನೇಕ ಟೀಕೆ ಟಿಪ್ಪಣಿಗಳಿಗೆ ಸರ್ಕಾರ ಗುರಿಯಾಗಬೇಕಾಗುವುದು. ಈ ದಿವಸ ಅನೇಕರು ಬೀಡಿ ಗಡಂಗುಗಳನ್ನಿಟ್ಟುಕೊಂಡು, ಒಂದೊಂದರಲ್ಲೂ 200-300 ಜನರು ತಮ್ಮ ಜೀವನೋಪಾಯವನ್ನು ಪಡೆದುಕೊಂಡು, ಈ ಕಸಬನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಇದರ ಸಾಧಕ ಬಾಧಕಗಳನ್ನು ತಾವು ಸಂಪೂರ್ಣವಾಗಿ ಇನ್ನೊಮ್ಮೆ ಪರಿಶೀಲನೆ ಮಾಡಬೇಕಾದದ್ದು ಯುಕ್ತ ಮತ್ತು ಆ ರೀತಿ ಮಾಡಿದ ನಂತರ ತಾವು ಒಂದು ನಿರ್ಧಾರಕ್ಕೆ ಬರಬೇಕಾದದ್ದು ಧರ್ಮ ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—One point I want to bring to the notice of the House. I don't plead on behalf of the Government for the imposition of this tax, but one thing is to be considered. So many members plead that our industry would collapse or suffer. If there is no taxation or imposition of any sales-tax and if there is a vast difference between the prices prevailing here and outside, there will be a greater temptation for smuggling. Suppose that happens. They will try to under-sell it. In that case, don't you think that our merchants or the manufacturers will suffer? Ultimately they will come to trouble.

Sri V. M. MASCARENHAS—In fact, the Madras manufacturer will kill the Mysore manufacturer.

Mr. SPEAKER.—I don't plead on behalf of the Government for the imposition of this taxation. But this point may be considered by the House.

Sri J. MOHAMED IMAM.—The remedy will be worse than the disease. If they really want to improve the local industry, they must exempt the local industry from the levy of sales-tax and tax beedis that are imported from other places.

Sri Kadidal MANJAPPA.—I am surprised to hear this plea for making discrimination against the constitutional provisions. It cannot be done. Between two citizens dealing in the same commodity, you cannot apply different rates or exempt a particular individual or one class of individuals. It will be discriminatory. I am a lawyer of 15 years' standing. I have consulted the legal opinion also

ಶ್ರೀ ಟಿ. ಹನುಮಯ್ಯ (ಹಿರಿಯೂರು—ಅನುಸೂಚಿತ ಜಾತಿಗಳು).—ಸ್ವಾಮಿ, ನಮ್ಮ ಮಾನ್ಯ ಮಂತ್ರಿಗಳು ಇಂಥ ಒಂದು ತಿದ್ದುಪಡಿಯನ್ನು ತಂದಿದ್ದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಈಗಾಗಲೇ ಮಾತನಾಡಿರುವಂಥ ಅನೇಕ ಜನ ಮಾನ್ಯ ಸದಸ್ಯರುಗಳು ಈ ಬೀಡಿಸುತ್ತುವುದು ಒಂದು ಗೃಹಕೈಗಾರಿಕೆ,

(ಶ್ರೀ ಟಿ. ಹನುಮಯ್ಯ.)

ಇದನ್ನು ಕಾಪಾಡಿಕೊಂಡು ಬರಬೇಕು, ಇದರಮೇಲೆ ಈ ತೆರಿಗೆಗಳನ್ನು ಹಾಕಿದರೆ ಈ ಕಸಬಿನಿಂದ ಜೀವನ ಮಾಡತಕ್ಕವರಿಗೆ ಬಹಳ ತೊಂದರೆಯಾಗುತ್ತದೆ ಎಂದು ಹೇಳಿದರು. ಆದರೆ ನಮ್ಮ ದೇಶದಲ್ಲಿ ಈ ಹಿಂದೆ ಇಂಥ ಯಾವ ಬೀಡಿ ಕಾರ್ಖಾನೆಗಳೂ ಇರಲಿಲ್ಲ. ಆಗ ಜನರಿಗೆ ಜೀವನ ನಡೆಸಲು ಯಾವ ತೊಂದರೆಯೂ ಇರಲಿಲ್ಲ. ನಮ್ಮ ಹಿಂದಿನವರೆಲ್ಲಾ ಎಕ್ಕೆ ಎಲೆಯಲ್ಲಿ ತುಂಬಾಕನ್ನು ಹಾಕಿ ಚುಟ್ಟಾ ಕಟ್ಟಿಕೊಂಡು ಸೇದುತ್ತಿದ್ದರು. ಆಗಿನ ಕಾಲದಲ್ಲಿ ಇಂಥ ಚುಟ್ಟಗಳನ್ನು ಸೇದುತ್ತಿದ್ದವರು ಯಾರೆಂದರೆ—ಕೇವಲ 80 ವರ್ಷಗಳ ವಯಸ್ಸಿನ ಮುದುಕರುಗಳು ಮಾತ್ರ ಸೇದುತ್ತಿದ್ದರು. ಈಗಲಾದರೋ ಯಾವ ಹುಡುಗನ ಬಾಯಲ್ಲಿ ನೋಡಿದರೂ ಈ ಬೀಡಿಗಳೇ ಇರುತ್ತವೆ. ಹೀಗೆ ಹುಡುಗರೆಲ್ಲಾ ಬೀಡಿ ಸೇದಲು ಪ್ರಾರಂಭಿಸಿರುವುದರಿಂದ ಈ ದಿವಸ ಅವರ ಆರೋಗ್ಯ ಕೆಡುತ್ತಿದೆ. ಇದಕ್ಕಾಗಿ ಸರ್ಕಾರದವರು ಕೆಲವು ಕಾನೂನುಗಳನ್ನು ಕೂಡ ಮಾಡಿದ್ದಾರೆ. ಆದರೇನೂ ಅವುಗಳಿಂದ ಪ್ರಯೋಜನವಾಗಿಲ್ಲ. ಹೀಗಾಗಿ ಈ ದಿವಸ ನಮ್ಮ ಯುವಕ ಜನಾಂಗ ಅತಿಯಾಗಿ ಈ ಬೀಡಿ-ಸಿಗರೇಟುಗಳನ್ನು ಸೇದುವುದಕ್ಕೆ ಪ್ರಾರಂಭಿಸಿರುವುದರಿಂದ ಇಂಥ ತರುಣರಿಂದ ಜನನವಾಗತಕ್ಕ ಮಕ್ಕಳು ಮರಿಗಳಾದರೋ ಅವರು ಸಾಕಷ್ಟು ದೃಢಕಾಯರಾಗಿರುವುದಿಲ್ಲ. ಅವರಲ್ಲಿ ಧೈರ್ಯ ಸ್ಥೈರ್ಯಗಳಿರುವುದಿಲ್ಲ. ಹೀಗಾಗಿ ನಮ್ಮ ಮುಂದಿನ ಜನಾಂಗ ಬಹಳ ಕ್ಷೀಣಗತಿಯನ್ನೈದುತ್ತಿದೆ. ಆದುದರಿಂದ ತಾವು ಇದರ ಬಗ್ಗೆ ಈಗ ತೆರಿಗೆಯನ್ನು ಹೆಚ್ಚಿಸಿರುವುದು ಸಾಧುವಾದದ್ದಾಗಿದೆ. ಈಗಿನ ಜನಾಂಗ ಈ ಸೇದುವುದನ್ನು ಒಂದು ಪ್ಯಾಷನ್ನಾಗಿ ಆಚರಣೆಗೆ ತಂದಿದೆ. ಆದ್ದರಿಂದ ಹೀಗೆ ತೆರಿಗೆಯನ್ನು ಹೆಚ್ಚಿಸಿದ್ದರಿಂದಲಾದರೂ ಕೆಲವರು ಈ ಸೇದುವ ಅಭ್ಯಾಸವನ್ನು ಬಿಟ್ಟು ಬಿಡಲು ಅವಕಾಶವಿದೆ. ಇಷ್ಟೇ ಅಲ್ಲದೆ, ಸ್ವಾಮಿ, ನಮಗೆ ಈ ಬೀಡಿ ಸಿಗರೇಟುಗಳನ್ನು ಸೇದತಕ್ಕಂಥಾ ಅಗತ್ಯವೇ ಇಲ್ಲ. ನಾವು ವಾಸಮಾಡುತ್ತಿರುವ ದೇಶ ಬಹಳ ಉಷ್ಣದೇಶ. ಇಂಗ್ಲೆಂಡ್—ಅಮೇರಿಕಾ ಇತ್ಯಾದಿ ದೇಶದ ಜನಗಳಿಗಾದರೆ—ಅವು ಶೀತ ದೇಶಗಳಾದ್ದರಿಂದ ಅವರಿಗೆ ಅಲ್ಲಿ ಈ ಬೀಡಿ-ಚುಟ್ಟ ಸಿಗರೇಟು ಇತ್ಯಾದಿಗಳ ಅಗತ್ಯವಿರಬಹುದು. ಇಲ್ಲಿ ಈಗಾಗಲೇ ಮಾತನಾಡಿದ ಕೆಲವು ಸದಸ್ಯರು ಅಜೀರ್ಣವಾದಾಗ ಕೆಲವರು ಈ ಬೀಡಿ ಸೇದಸತಕ್ಕಂಥ ಒಂದು ಅಭ್ಯಾಸವಿದೆ ಎಂದು ಹೇಳಿದರು. ಆದರೆ ಬಡವರಾಗಿರತಕ್ಕವರಿಗೆ ಹಾಗೆ ಅಜೀರ್ಣವಾಗತಕ್ಕಂಥ ಸಂದರ್ಭಗಳೇ ಇರುವುದಿಲ್ಲ. ಅವರು ಬೆಳಗಾದರೆ ಕೆಲಸಕ್ಕೆ ಬಗ್ಗಬೇಕಾಗಿರುತ್ತದೆ. ಅವರಿಗೆಲ್ಲಾ ಅಗತ್ಯವಾಗಿ ಬೇಕಾಗಿರುವುದು ಅಡಕೆ-ವೀಳ್ಯದೆಲೆ ಮಾತ್ರ. ಇಷ್ಟರಲ್ಲೇ ಅವರು ತೃಪ್ತರಾಗುತ್ತಾರೆ. ಅಷ್ಟೇನೂ ಅವರಿಗೆ ಈ ಬೀಡಿ-ಸಿಗರೇಟುಗಳ ಅಗತ್ಯವಿರುವುದಿಲ್ಲ. ಆದಕಾರಣ ಇದೊಂದು ಗೃಹ ಕೈಗಾರಿಕೆ, ಇದರಮೇಲೆ ತೆರಿಗೆ ಹಾಕಿದರೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಬಡ ಜನಗಳಿಗೆಲ್ಲಾ ತೊಂದರೆಯಾಗುತ್ತದೆಂದು ಹೇಳಿದ ವಾದ ಸರಿಯಾದದ್ದಲ್ಲ. ಮೊದಲಿಂದಲೂ ಈ ಕೈಗಾರಿಕೆಯನ್ನು ಅಭಿವೃದ್ಧಿಪಡಿಸಿಕೊಂಡು ಬಂದಿರತಕ್ಕಂಥ ಜನಗಳಿಗೆ ಈಗ ತೆರಿಗೆ ಹಾಕಿದರೆ ಅವರ ಜೀವನೋಪಾಯಕ್ಕೆ ತುಂಬ ತೊಂದರೆಯಾಗುತ್ತದೆ ಎಂದು ಹೇಳಿದ್ದನ್ನು ನಾನು ಒಪ್ಪಲಾರೆ. ಈಗ ಸರ್ಕಾರದವರು ತಂದಿರತಕ್ಕ ತಿದ್ದುಪಡಿ ಸಮಯೋಚಿತವಾಗಿದೆ ಮತ್ತು ದೇಶದ ಹಿತದೃಷ್ಟಿಯಿಂದಲೂ ಕೂಡ ಬಹಳ ಆವಶ್ಯಕವಾಗಿದೆ ಎಂದು ಹೇಳುತ್ತೇನೆ. ಈ ಒಂದು ಪ್ರಯತ್ನದಿಂದ ದೇಶದಲ್ಲಿ ಬೀಡಿ ಸೇದತಕ್ಕವರ ಸಂಖ್ಯೆ ಬಹಳ ಕಡಿಮೆಯಾಗುತ್ತದೆ. ಆದುದರಿಂದ ಈಗ ಸರ್ಕಾರದವರು ತಂದಿರತಕ್ಕ ತಿದ್ದುಪಡಿಯಿಂದ ದೇಶಕ್ಕೆ ಕ್ಷೇಮ ಉಂಟಾಗುವ ಸೂಚನೆಗಳಿರುವುದರಿಂದ ನಾನು ಇದನ್ನು ಹೃತ್ಪೂರ್ವಕವಾಗಿ ಸಮರ್ಥಿಸುತ್ತೇನೆ.

*ಶ್ರೀ ಎಚ್. ಕೆ. ಶಿವರುದ್ರಪ್ಪ (ಗುಂಡ್ಲುಪೇಟೆ-ಹೆಗ್ಗಡದೇವನಕೋಟೆ).—ಸ್ವಾಮಿ, ಈ ತಿದ್ದುಪಡಿ ಮಸೂದೆಯನ್ನು ಸಭೆಯಮುಂದೆ ಮಂಡಿಸತಕ್ಕ ಕಾಲದಲ್ಲಿ ಮಾನ್ಯ ಮಂತ್ರಿಗಳು ಮದ್ರಾಸಿನಲ್ಲಿ ಈಗ ಈ ಬೀಡಿಗಳಮೇಲೆ ತೆರಿಗೆಯನ್ನು ಜಾಸ್ತಿಮಾಡಿದ್ದಾರೆ, ಆ ರೇಟಿಗನುಗುಣವಾಗಿ ನಮ್ಮಲ್ಲಿಯೂ ಈ ಬೀಡಿಗಳು ಮಾರಾಟವಾಗುವಂತೆ ಮಾಡತಕ್ಕ ಬಗ್ಗೆ ನಾವೂ ಕೂಡ ಇಲ್ಲಿ ಈಗ ಈ ಬೀಡಿಯಮೇಲೆ ಹಾಕಿರತಕ್ಕಂಥ ತೆರಿಗೆಯನ್ನು ಹೆಚ್ಚುಮಾಡಬೇಕಾಗಿದೆ ಎಂದು ಹೇಳಿದರು. ಮತ್ತು ಇದರಿಂದ ಸರ್ಕಾರಕ್ಕೂ ಕೂಡ ವರಮಾನ ಹೆಚ್ಚುತ್ತದೆ ಎಂದು ಹೇಳಿದ್ದಾರೆ. ಆದರೆ ಈಗ ಮದ್ರಾಸಿನಲ್ಲಿ ಒಂದು ರೂಪಾಯಿಗೆ ಆರುಕಾಸು ತೆರಿಗೆಯನ್ನು ಹಾಕಿದ್ದಾರೆ. ನಮ್ಮ ಮೈಸೂರಿನಲ್ಲಿ ಈಗ ಒಂದು ಕಾಸು ತೆರಿಗೆ ಇದ್ದುದನ್ನು ಮೂರು ಕಾಸಿಗೆ ಹೆಚ್ಚಿಸಬೇಕೆಂದು ಹೇಳಿರುವುದು ಮಾನ್ಯ ಮಂತ್ರಿಗಳು ತಿಳಿಸಿರುವಂಥ ಕಾರಣಕ್ಕೆ ಇದು ವಿರೋಧವಾಗಿದೆ. ಈಗಾಗಲೇ ಮಾತನಾಡಿರುವಂಥ ಶ್ರೀ ಸೋಲೂರು ಸಿದ್ದಪ್ಪನವರು ಈ ಹಿಂದೆ ಈ ಬೀಡಿಗಳ ಮೇಲೆ ಒಂದು ರೂಪಾಪಾಯಿಗೆ ಒಂದು ಕಾಸು ತೆರಿಗೆಯನ್ನು ಹಾಕಿದ್ದಾಗ ನಮ್ಮ ದೇಶದಲ್ಲಿ ಈ ಬೀಡಿಗಳಿಗೆ ಹೆಚ್ಚಿನ ಗಿರಾಕಿಗಳಿದ್ದರೆಂದು ಹೇಳಿದರು. ಈಗಲೂ ಅದೇ ರೀತಿ ಇಟ್ಟುಕೊಂಡರೆ ನಮ್ಮ ಗಿರಾಕಿಗಳು ಇನ್ನೂ ಹೆಚ್ಚುವುದಕ್ಕೆ ಅವಕಾಶವಿದೆ. ಆದರೆ ಈಗ ತಾವು ಇಲ್ಲಿಯ ಬೀಡಿಗಳಿಗೆ ತೆರಿಗೆ ಹಾಕಿದರೆ ನಮ್ಮ ಕೈಗಾರಿಕೆಗೆ ಬಹಳ ಧಕ್ಕೆ ಬರುತ್ತದೆ. ಈ ಹಿಂದೆ ಮದ್ರಾಸಿನಲ್ಲಿ ಈ ತೆರಿಗೆ ಇಲ್ಲದ್ದರಿಂದ ಆ ಮಂಗಳೂರು ಬೀಡಿಗಳು ನಮ್ಮ ದೇಶಕ್ಕೆ ಹೆಚ್ಚಿಗೆ ಬರುತ್ತಿದ್ದವು. ಆಗ ನಮ್ಮ ದೇಶದ ಕೈಗಾರಿಕೆ ಬಹಳ ಧಕ್ಕೆಯುಂಟಾಗಿತ್ತು. ಆದ್ದರಿಂದ ತಾವೀಗ ನಮ್ಮ ಬೀಡಿಗಳಿಗೆ ಇಲ್ಲಿ ತೆರಿಗೆ ಹೆಚ್ಚಿಸಿದರೆ ನಮ್ಮ ಕೈಗಾರಿಕೆಗೆ ಎರಡು ಕಡೆಗಳಿಂದಲೂ ಧಕ್ಕೆಯನ್ನುಂಟು ಮಾಡಿದ ಹಾಗೆ ಆಗುತ್ತದೆ. ಈ ದಿವಸ ನಮ್ಮ ದೇಶದ ಮಾಲಿಗೆ ಹೊರಗಡೆಯ ಗಿರಾಕಿ ಜಾಸ್ತಿ ಆದರೆ ಆಗ ನಮಗೆ ಈ ಟ್ಯಾಕ್ಸಿಗಿಂತಲೂ ಹೆಚ್ಚಾಗಿ ಅಂದರೆ ದ್ವಿಗುಣ-ತ್ರಿಗುಣವಾಗಿ ಹೆಚ್ಚು ಸೇಲ್ಸ್ ಟಾಕ್ಸ್ ರೂಪವಾಗಿ ಆದಾಯ ಬರಲು ಅವಕಾಶವಿರುತ್ತದೆ. ಆಗ ನಮಗೆ ಈ ರೂಪವಾಗಿ ಬರಬೇಕಾಗಿದ್ದಂಥ ವರಮಾನ ಬೇರೆ ರೂಪದಲ್ಲಿ ಬಂದಹಾಗಾಯಿತು. ಆದುದರಿಂದ ಈಗ ತಂದಿರತಕ್ಕಂಥ ತಿದ್ದುಪಡಿ ಸರಿಯಾದ್ದುದಲ್ಲವೆಂದು ಕಾಣುತ್ತದೆ. ಈ ದಿವಸ ಆ ಮಂಗಳೂರು ಗಣೇಶ ಮಾರ್ಕಿನ ಬೀಡಿಗಳು ಮಾರುಕಟ್ಟೆಯಲ್ಲಿ ಒಂದು ಕಟ್ಟಿಗೆ ಎರಡೂವರಾಣೆಯ ಪ್ರಕಾರ ಬಿಕರಿಯಾಗುತ್ತಿವೆ. ಇವುಗಳಮೇಲೆ ಈಗ ಸೇಲ್ಸ್ ಟ್ಯಾಕ್ಸ್ ಮತ್ತು ತೆರಿಗೆ ಇತ್ಯಾದಿಗಳನ್ನು ಹಾಕುವುದರಿಂದ ಇದಕ್ಕೆ ಒಂದೂಕಾಲು ಕಾಸು ತೆರಿಗೆ ಹಾಕಬೇಕಾಗುತ್ತದೆ. ಅಂದರೆ ಒಂದೂಕಾಲು ಕಾಸನ್ನು ಹಾಕುವುದಕ್ಕಾಗುವುದಿಲ್ಲ. ಅದಕ್ಕೆ ಎರಡು ಕಾಸುಗಳನ್ನೇ ಹಾಕಬೇಕಾಗಿದೆ. ಅಂದರೆ ಎರಡು ಕಾಸು ತೆರಿಗೆಯನ್ನು ಕೂಡ ಹಾಕುವುದಕ್ಕಾಗುವುದಿಲ್ಲ. ಆಗ ಮೂರು ಕಾಸನ್ನೇ ಹಾಕಬೇಕಾಗುತ್ತದೆ. ಅಲ್ಲಿಗೆ ಅದರ ಬೆಲೆ ಒಂಭತ್ತು ಕಾಸು ಜಾಸ್ತಿ ಮಾಡಿದಂತಾಯಿತು. ಇದನ್ನು ಕೊಂಡುಕೊಂಡುಹೋಗಿ ಮಾರಾಟ ಮಾಡ

ತಕ್ಕವರು ನೂರಕ್ಕೆ ಹತ್ತರಷ್ಟು ನಫೆ ಸೇರಿಸಿ ಮಾರಾಟ ಮಾಡಬೇಕಾಗುತ್ತದೆ. ಆದುದರಿಂದ ಹೀಗೆ ತಾವು ತೆರಿಗೆಯನ್ನು ಹೆಚ್ಚಿಸುವುದರಿಂದ ಅನುಕೂಲವಾಗುತ್ತದೆಯೋ ಅಥವಾ ಅನಾನುಕೂಲವಾಗುತ್ತದೆಯೋ ಅನ್ನುವುದನ್ನು ಮತ್ತೊಮ್ಮೆ ಪರಿಶೀಲನೆಮಾಡಿ ತರಬೇಕಾದದ್ದು ಯುಕ್ತವೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri V. M. MASCARENHAS.—Unfortunately, the trend of the argument has gone from the proper objects of the Bill to something else. There has been a contention that the Mysore beedi manufacturer will suffer by the increase of rate from one pie to three pies. I beg to differ from this standpoint for the simple reason that, as it is, 75 per cent of the beedi trade in Mysore is in the hands of outsiders. To-morrow when we retain the sales-tax of one pie while Madras is having sales-tax of six pies, the tendency will be for a heavy influx of Madras beedies coming into the State.

Sri K. PATTABHIRAMAN.—If the cost of production of the Mysore dealer now at one pie is such as to give him only one-third of the market and two-thirds of the market is already controlled by the non-Mysorean dealer, the cost of production being increased by this addition of 2 pies—how does this comparison stand as regards the Mysore dealer ?

Sri V. M. MASCARENHAS.—You have forgotten one important thing. The Madras dealer who is now paying one pie would have to pay 3 pies tomorrow.

Sri K. PATTABHIRAMAN.—What about the Mysore dealer ? His cost of production goes up by 2 pies.

Sri V. M. MASCARENHAS.—Mysore will keep the same one pie and allow the Madras dealer to dump his beedies.

Sri K. PATTABHIRAMAN.—That is merely the *status quo*.

Sri V. M. MASCARENHAS.—Hitherto in Madras there was no sales-tax and the Madras manufacturer, in spite of one pie in Mysore, was dumping the beedies. If to-day Madras inflicts sales-tax of 6 pies and Mysore retains one pie, what is the result of beedi trade ? As it is, the beedi manufacturers in Madras, specially the South Canara people, are dumping beedies in Mysore. If you don't bring any kind of parity between the sales-tax in Madras and the sales-tax in Mysore, but retain the sales-tax at one pie in Mysore, I am sure the increase in Madras beedi will go up to 90 per cent; so that the object that we should try to help the Mysore beedi manufacturer you will not be able to fulfil, but you will be doing the most irreparable harm to our manufacturers. When this subject came up for discussion at the time the Sales Tax Committee took up this question, there was the representation from the beedi manufacturers; they first pleaded for a higher taxation on Madras beedies as compared to Mysore beedies. As it was viewed by legal experts that it was against the Constitution, it was dropped. Then I think they only pleaded for this, that, as far as possible, the sales-tax in Madras and Mysore should remain the same. We gave them other facilities like removal of sales-tax on *thupra* leaves, on thread and some other facilities and thereby helped the local manufacturers. I can assure the Hon'ble House that if we retain one pie tax that is in force, while Madras goes on raising it to six pies, the Mysore manufacturer will not only be hit hard and Mysore will not only lose revenue, but the Mysore beedi trade will practically be at a stand-still.

*Sri Mulka GOVINDA REDDY (Chitaldrug).—Sir, I have to oppose the Mysore Sales Tax (Second Amendment) Bill. Last year, when a similar Bill was placed before this Assembly for its approval, the Minister then pleaded that the Madras Government had introduced an amendment to the Sales-tax Act in Madras whereby the rates of tax were increased on varieties of cigarettes and when members of this Assembly pleaded that since beedi was an article which was used by the poor people in the State and when Madras was levying this tax. . . .

Sri Kadidal MANJAPPA.—There is no question of levying fresh tax in the case of beedis. The beedi manufacturer was paying since 1948 at the rate of six pies. But it is only last year on the ground that there was

(SRI KADIDAL MANJAPPA.)
exemption in Madras, Hon'ble Members pleaded that the tax should be reduced.

Sri Mulka GOVINDA REDDY.—Not only on the ground that Madras was not levying any tax on beedi, but also on the ground that it was an article used by a good number of people and used specially by the poorer sections of the people, and that it was not reasonable for the Government to continue to levy tax on beedis. And, we pleaded that the Government of Mysore should follow suit with regard to the taxation on beedi as in Madras. We also stated that when one State introduced sales-tax on certain articles, it was not necessary that the neighbouring State should also follow suit.

Sir, last year, this tax was introduced in Madras and the same tax was introduced and levied in Mysore, but in Bombay and Hyderabad, they did not follow suit. Again, now the Minister says that Madras have revised their attitude towards beedis and have introduced six pies levy of sales-tax on beedis and that they have also enhanced the rate of sales-tax on cigarettes. Again, Sir, the neighbouring States of Hyderabad and Bombay are not contemplating to increase the sales-tax that is prevailing in those areas. In Hospet a packet of cigarettes will cost about 13 annas, but in Muradabad it costs about 10 annas. There is that disparity. I really cannot understand why this Government of Mysore should become His Master's Voice of Madras.

Sir, the tobacco grower has been hit hard. There are huge stocks of tobacco lying with the grower not only in Mysore but also in Andhra. Several representations were made to the Government of India that the tobacco grower should be protected. The Government of India, I understand, are taking some steps to give some protection to the tobacco grower and help him. When such is the case, the levy of tax that the Government of Mysore want to, is going to hit hard the tobacco grower. It is not only going to hit hard the grower but it is also going to hit hard the beedi manufacturing industry in Mysore State. There are, I understand, 40,000 persons who are engaged in the manufacture of beedis in Mysore State. Sri Devaraj Urs has pointedly made out a case that it is a cottage industry and this industry is not in the hands of a few people as some people may imagine. It is an industry which has spread into the villages, into the homes—the women folk in the homes manufacture these beedis. By levying this tax on beedis, it is going to hit hard this industry and it will so happen that some of the proprietors of small concerns may have to close down, thereby depriving so many thousands of people who are working in this industry for their livelihood. On every pound of tobacco used by the beedi manufacturers, they are paying a central excise duty of 14 annas per pound in advance and they are subjected to income-tax, sales-tax and other local taxes.

The Hon'ble Minister was telling us that most of the beedis are imported from Madras. He was not making a correct statement when he said that most of the beedis that are used in Mysore State are imported from Madras. They are imported from Madras as well as from Bombay. We know, Sir, that beedis manufactured in some areas in Dharwar district are imported into Davangere and other places. By increasing the levy of tax at 300 per cent, Government hopes to enhance its revenues by 1½ lakhs of rupees. I can infer that they were getting Rs. 75,000 as sales-tax on beedies. When worked out, the figures show that about 1,44,00,000 worth of beedis are used in Mysore State. So much so, it gives an indication that a large number of people in Mysore State are using beedies. By levying the enhanced tax on beedies, it is going to hit hard on the poorman's pleasure.

Sir, clause (2) of section 2 also—I would like to oppose. At present "cigarettes which are sold by the first dealer at less than three pies per cigarette and are to be sold at any retail point to the consumer at not more than 3 pies per cigarette" and again "cigars and cheroots which are sold by the first dealer at less than 2 annas per cigar or cheroot and are to

be sold at any retail point to the consumer at not more than two annas per cigar or cheroot"—In this also, they want to increase the levy from three pies to $\frac{1}{8}$ per cent of such turnover. It means that they want to increase it by 200 per cent. Sir, the cigarettes that are going to be taxed under these two categories are cheap cigarettes which are used by labourers, middle-class people and poor people. When such is the case, is it reasonable and ethical on the part of the Government to tax the already over-burdened people with this new levy? Sir, it may be that the manufacturers of these cigarette companies are making huge profits. If Government has the will, the desire and the courage to tax those people, let them levy property tax or let them levy turnover tax or if they have got the boldness, let them nationalise these so called India Limited companies, this Imperial Tobacco Company, which has got its factories in Bangalore and Calcutta. They are making crores of rupees. If these Beedies are the industries you are levying tax on, you are levying tax on the poor man and you want to extinguish him. If you have got the courage, if you want to stand by the people and if you want to serve the people, here is an industry. Take it over and you can make huge profits if you have the courage to do it.

ಶ್ರೀ ಟಿ. ಎಲ್. ಮೂಡಲಗಿರಿಗೌಡ (ಕುಣಿಗಲು) — ಸ್ವಾಮಿ, ಮೈಸೂರು ಸೇಲ್ಸ್ ಟ್ಯಾಕ್ಸ್ amendment ಬಿಲ್ಲಿನ ಮೇಲೆ ಮಾತನಾಡುತ್ತಾ ಬೀಡಿಯ ಮೇಲೆ ಒಂದು ಕಾಸಿನಿಂದ ಮೂರು ಕಾಸಿಗೆ ತೆರಿಗೆಯನ್ನು ಏರಿಸ ಬೇಕು ಎನ್ನುವ ವಿಚಾರದಲ್ಲಿ ಅನೇಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಹಾಗೆ ವ್ಯಕ್ತಪಡಿಸುವಾಗ ಅದು ಬಡವರ Luxuryಗೋಸ್ಕರವಾಗಿ ಉಪಯೋಗಿಸತಕ್ಕಂಥ ವಸ್ತು ಎಂದು ವಾದವನ್ನು ಮಾಡಿದ್ದಾರೆ. ಆಮೇಲೆ Cottage Industry ruin ಆಗುತ್ತದೆಯೆಂದು ಹೇಳಿದ್ದಾರೆ. ಈಗಾಗಲೇ ಶ್ರೀ ವ್ಯಾಸ್ಕರ್‌ನ್ಯಾಸ್‌ರವರು ಕೊಟ್ಟಿರತಕ್ಕಂಥ ಉತ್ತರ ಸಮಂಜಸವಾಗಿದ್ದರೂ ಕೂಡ ಅವರ ಮನಸ್ಸಿಗೆ ಹಿಡಿಸಿಲ್ಲವೆಂದು ನನಗನ್ನಿಸುತ್ತದೆ. ಈ ಸಭೆಯಲ್ಲಿ ನಾನು ಸ್ವಲ್ಪ ಜವಾಬ್ದಾರಿಯನ್ನು ಅರಿತು ಮಾತನಾಡ ಬೇಕೆಂದು ನಿಂತಿದ್ದೇನೆ. ಅನೇಕರು ಹೊಗೆಸೊಪ್ಪು, ಬೀಡಿಎಲೆ, ಇವುಗಳ ವಿಷಯವಾಗಿ ಅನುಭವ ಇರುವವರು ಅವರ ಅನುಭವವನ್ನು ಹೆಚ್ಚಿಗೆ ತಿಳಿಸಿದ್ದಾರೆ. ಇದು ವರೆಗೆ ಇಲ್ಲಿ ನಡೆದಿರುವ ಚರ್ಚೆಯಲ್ಲಿ ನಮ್ಮ ದೇಶದಲ್ಲಿ consumeಆಗತಕ್ಕ ಬೀಡಿ $\frac{3}{4}$ ಭಾಗ ಹೊರಗಡೆ ಯಿಂದ ಬರತಕ್ಕ ವಸ್ತು ಎಂದು ಹೇಳಿದರು. ಹೀಗೆ ಒಂದು ರೂಪಾಯಿನಲ್ಲಿ 12 ಆಣೆಯಷ್ಟು ಹೊರಗಡೆ ಯಿಂದ ಬರತಕ್ಕ ವಸ್ತುವಿನ ಮೇಲೆ ತೆರಿಗೆ ಒಂದು ಕಾಸಿನಿಂದ ಮೂರುಕಾಸಿನವರೆಗೂ ಏರಿಸಿದರೆ ನಮ್ಮ ಕೈಗಾರಿಕೆಗೆ ಯಾವರೀತಿ ನಷ್ಟವೊದಗುತ್ತದೆ ಮತ್ತು ಆ ವಾದವನ್ನು ಹೇಗೆ ಸಮರ್ಥಿಸುತ್ತೀರಿ ಎಂಬುದು ನನಗೆ ಅರ್ಥವಾಗುವುದಿಲ್ಲ. ಈ Cottage Industry ಇತ್ತೀಚೆಗೆ ಬಂದಿರತಕ್ಕದ್ದಲ್ಲ; ನೂರಾರು ವರ್ಷಗಳಿಂದ ನಡೆದುಬಂದಿರತಕ್ಕದ್ದು. ನೂರಾರು ವರ್ಷಗಳಿಂದ ನಡೆದುಬಂದಿರತಕ್ಕಂಥ Cottage industry ಎಷ್ಟು ಬದಲಾವಣೆಯಾಗಬೇಕೋ ಅಷ್ಟು ಆಗಲೇ ಬೇಕಾಗಿದೆ.

3 P. M.

ಇದಕ್ಕಿಂತಲೂ ಇನ್ನೂ ಹೆಚ್ಚಾಗಿ developಆಗುತ್ತದೆಂಬ ನಿರೀಕ್ಷಣೆ ನಮಗಂತೂ ಇಲ್ಲ. ಈಗಾಗಲೇ ಮಾನ್ಯ ಸದಸ್ಯರು ತಿಳಿಸಿರುವಹಾಗೆ ಯಾವುದು ಉತ್ತಮ ವಾದುದು ಎಂದು ನಮಗೆ ಅಭಿರುಚಿ ಉಂಟಾಗುತ್ತದೆಯೋ ಅದನ್ನು ಉಪಯೋಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆಯೇ ಹೊರತು ನಮ್ಮ ಮನೆಯಲ್ಲೇ ತಯಾರಾಗತಕ್ಕ ಬೀಡಿಯನ್ನು ಉಪಯೋಗಿಸಬೇಕೆಂದು ಹೇಳುವ ಜನ ಕಡಮೆ. ಆದ್ದರಿಂದ ಈ ತೆರಿಗೆಹಾಕಿದ್ದರಿಂದ ನಮ್ಮ ಕೈಗಾರಿಕೆಗೆ ಧಕ್ಕೆಯಾಗುತ್ತದೆಂದು ಹೇಳುವ ವಾದದಲ್ಲಿ ತಿರುಳಿಲ್ಲವೆಂದು ನಾನು ತಿಳಿಸಬೇಕಾಗಿದೆ. ವ್ಯಾಸ್ಕರ್‌ನ್ಯಾಸ್‌ರವರು ಹೇಳಿದಹಾಗೆ, ಮದ್ರಾಸಿನಲ್ಲಿ ಆರುಕಾಸಿಗೆ ಏರಿಸಿ, ಇಲ್ಲಿ ಒಂದು ಕಾಸನ್ನೇ ಇಟ್ಟು ಕೊಂಡಿದ್ದರೆ, ಅಲ್ಲಿ ತಯಾರಾದಂಥ ಮಾಲನ್ನು ಇಲ್ಲಿಗೆ dumpಮಾಡಿ ಪಕ್ಕದ ಸರ್ಕಾರದವರೂ ರೆವಿನ್ಯೂ ಕಳೆದುಕೊಳ್ಳುವುದಲ್ಲದೆ, ನಮ್ಮ ಕೈಗಾರಿಕೆಗೆ ಸಹ ಧಕ್ಕೆಯಾಗುತ್ತದೆಂಬುದನ್ನು ನಾವು ತಿಳಿದುಕೊಳ್ಳ ಬೇಕಾದ್ದು ಅವಶ್ಯಕ.

ಆಮೇಲೆ ಬೀಡಿಯು ಬಡವರ pleasure (ಸುಖದಾಯಕ ವಸ್ತು) ಎಂದು ಹೇಳುವ ವಾದ ಬಂತು. ಅದಕ್ಕೆ ಅಷ್ಟು ಸಮರ್ಥನೆಯೂ ಬರಲಿಲ್ಲ. ಅಲ್ಲದೆ, ನಾವು ನೋಡಿರುವ ಹಾಗೆ, ಈ ಮಾನ್ಯ ಸಭೆಯ Opposition ಲೀಡರಾದ ಶ್ರೀ ಇಮಾಂರವರೂ ಬೀಡಿಯನ್ನೇ ಸೇದುತ್ತಾರೆ. ಸಿಗರೇಟ್ ಸೇದಿದರೆ ಅಷ್ಟು ಹಿತವಿಲ್ಲವೆಂದು ಹೇಳುತ್ತಾರೆ. ಆದ್ದರಿಂದ ಬರೀ ಬಡವರೇ ಬೀಡಿ ಸೇದುತ್ತಾರೆ ಇನ್ನು ಯಾರೂ ಅದನ್ನು ಸೇದುವುದಿಲ್ಲವೆಂದು ಹೇಳುವುದರಲ್ಲಿ ತಿರುಳಿಲ್ಲ. ಆದ್ದರಿಂದ ಶ್ರೀ ಗೋಪಾಲಗೌಡರು ಬೀಡಿ ಸೇದ ತಕ್ಕವರ ಬೆಂಬಲವನ್ನು ಪಡೆಯುವುದಕ್ಕೆ ಹೊರಟು, ಬೀಡಿ ಸೇದದೆ ಇರತಕ್ಕವರನ್ನೂ ಸೇದುವಂತೆ ಮಾಡಿ ಈ ದಿಸಿ ದುರಭ್ಯಾಸವನ್ನು ಪ್ರಚಾರ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿರುವಂತೆ ಕಾಣುತ್ತದೆ. ಹೀಗೆ ಅವರು ಹೆಂಡವನ್ನು ಕುಡಿಯುವುದನ್ನು ತಪ್ಪಿಸುವುದು ಬೇಡ, ಹೆಂಡ ಬೇಕು, ಬೀಡಿ ಕುಡಿಯುವುದನ್ನು ತಪ್ಪಿಸುವುದು ಬೇಡ, ಬೀಡಿ ಕುಡಿಯುವುದು ಬೇಕು ಎಂದು ಹೇಳುತ್ತಾ ಈ ದುರಭ್ಯಾಸಗಳನ್ನು ಉಳಿಸಿಕೊಳ್ಳುವುದಕ್ಕೆ ಹೊರಟಿದ್ದಾರೆಂದು ಗೊತ್ತಾಗುತ್ತವೆ. ನಮಗಾದರೋ ಜನರ ನೀತಿಯ ಮಟ್ಟವನ್ನು ಅಭಿವೃದ್ಧಿಪಡಿಸುವುದು ನಮ್ಮ ಧರ್ಮ. ದುರಭ್ಯಾಸಕ್ಕೆ ಇನ್ನಷ್ಟು ಪ್ರೋತ್ಸಾಹ ಕೊಟ್ಟು ಜನತೆಯ ನೈತಿಕ ಮಟ್ಟವನ್ನು ಕೆಳಕ್ಕಿಳಿಸುವುದು ಸರಿಯಲ್ಲ.

Sri Mulka GOVINDA REDDY.—It is not proper that he should go on misrepresenting what Sri Gopala Gowda said, Sir.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ನಾನು ಅವರು ಏನನ್ನು ತಮ್ಮ ವಾದದಲ್ಲಿ ಹೇಳಿದರೋ ಅದೇ ವಾದವನ್ನು ಉದಹರಿಸಿ ಹೇಳುತ್ತಿದ್ದೇನೆಯೇ ಹೊರತು ಅವರನ್ನು misrepresentಮಾಡುತ್ತಿಲ್ಲ. ನ್ಯಾಯವಾಗಿ ಹೇಳುವುದಾದರೆ, ಅಲ್ಲಿ (ಮದ್ರಾಸಿನಲ್ಲಿ) ಆರುಕಾಸನ್ನು ವಿಧಿಸುವಾಗ ಅವರ ಮಾಲು ಇಲ್ಲಿಗೆ ಬರದಂತೆ ತಡೆಗಟ್ಟಿ ನಮ್ಮ ದೇಶದ ಕೈಗಾರಿಕೆಯನ್ನು ಹೆಚ್ಚಿಸಬೇಕು ಅಭಿವೃದ್ಧಿ ಪಡಿಸಬೇಕೆಂದು ಹೇಳಿ ಅದಕ್ಕೆ ಸೂಕ್ತ ಮಾರ್ಗಗಳನ್ನು ಅವರು ಸೂಚಿಸಬೇಕಾಗಿತ್ತು. ಈ ತೆರಿಗೆಯನ್ನೂ ಆ ಮಟ್ಟಕ್ಕೆ ಏರಿಸಿ ಎಂದು ಹೇಳಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತು.

ಶ್ರೀ ಎಸ್. ಗೋಪಾಲಗೌಡ.—ಇದು ತಿರುವು ಮರುವು ನೀತಿ!

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಆದುರಿಂದ ನಮ್ಮ ದೇಶದ ಕೈಗಾರಿಕೆಗೆ ಧಕ್ಕೆ ಬರುವ ರೀತಿಯಲ್ಲಿ ಇದನ್ನು ಮಾಡಿದ್ದೇವೆಂದು ಹೇಳುತ್ತಾ, ಹೊರಗಡೆಯಿಂದ ಬರತಕ್ಕ ಸಾಮಾನುಗಳಮೇಲೂ ತೆರಿಗೆ ಹಾಕುವುದು ಬೇಡ ಎಂದು ಹೇಳುವುದು, ಅದೇ ಸಂದರ್ಭದಲ್ಲಿ ಬಾವಿ, ರಸ್ತೆಗಳು ಸ್ಕೂಲುಗಳು ಮುಂತಾದವು ಬೇಕೆಂದು ವಾದಿಸುವುದು ನ್ಯಾಯವೇ? ಹೀಗೆ ಹೇಳುತ್ತಿದ್ದರೆ ನಾವು ದೇಶದ ಹಿತದೃಷ್ಟಿಯಿಂದ ಜನರ ಹಿತ ದೃಷ್ಟಿಯಿಂದ ಮಾತನಾಡುತ್ತಿರುತ್ತೇವೆಯೇ ಎಂಬುದನ್ನು ಯೋಚಿಸಬೇಕು. ಅಲ್ಲದೇ ಬೀಡಿ ಸೇದತಕ್ಕ ಅಭ್ಯಾಸವಿರುವವರು ಒಂದು ಕಾಸು ತೆರಿಗೆಯಿದ್ದರೂ ಸೇದುತ್ತಾರೆ, ಮೂರುಕಾಸಿದ್ದರೂ ಸೇದುತ್ತಾರೆ. ಜೊತೆಗೆ, ಈಗಲೂ ಒಂದು ಬೀಡಿ ಬಂಡಲ್‌ಗೆ ಒಂದು ರೂಪಾಯಿ ಇದ್ದರೆ ಅದಕ್ಕೆ ತೆರಿಗೆಯನ್ನು ಒಂದು ಕಾಸನ್ನೇ ಹಾಕುತ್ತಿಲ್ಲ. ಮೂರು ಕಾಸನ್ನೇ ವಿಧಿಸುತ್ತಿದ್ದಾರೆ. ಒಂದು ಕಾಸನ್ನೇ ವಿಧಿಸಿದ್ದರೂ ಮೂರು ಕಾಸನ್ನೇ ವಸೂಲು ಮಾಡುತ್ತಿರುವಾಗ ನಾವೇ ಏಕೆ ಮೂರು ಕಾಸಿಗೆ ಏರಿಸಕೂಡದು? ಅಲ್ಲದೆ 1½ಲಕ್ಷ ರೂಪಾಯಿಗಳನ್ನು ಮಾತ್ರ ಈ ಬಾಬಿನಿಂದ ನಿರೀಕ್ಷಿಸುತಿದ್ದೇವೆ. ಜನ ಸಾಮಾನ್ಯರಿಗೆ ಇದೇನೂ ಹೆಚ್ಚು ಹೊರೆಯಾಗುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ನೀವು ಎಷ್ಟೇ ಮಾತನಾಡಿದರೂ 25 ಲಕ್ಷ ವೋಟುಗಳು ಹೋಗಿಯೇ ಹೋಗುತ್ತವೆ.

ಶ್ರೀ ಕಡಿದಾಳ್ ಮಂಜಪ್ಪ.—ನಾವು ವೋಟಿಗಾಗಿ ಕೆಲಸ ಮಾಡುತ್ತಿಲ್ಲ.

ಶ್ರೀ. ಟಿ. ಎಚ್. ಮೂಡಲಗಿರಿಗೌಡ.—ಈಗ ನಾವು ವಸೂಲು ಮಾಡುತ್ತಿರುವುದು ಬೀಡಿ ಕೈಗಾರಿಕೆಯ ಮಾಲೀಕರು ವಸೂಲು ಮಾಡುತ್ತಿರುವುದರಲ್ಲಿ ಸಾಮಾನ್ಯವಾಗಿ ಅರ್ಧಭಾಗ ಮಾತ್ರ. ನಾವು ಇದುವರೆಗೂ ಒಂದು ಕಾಸು ಹಾಕುತ್ತಿದ್ದೆವು. ಮದ್ರಾಸಿನಲ್ಲಿ ಏನೂ ಇಲ್ಲವೆಂದು ಹೇಳುವಾಗ ನಾವು ಒಂದು ಕಾಸು ಹಾಕಿ ಹೊರಗಿನ ಪೈಪೋಟಿಯನ್ನು ತಡೆಗಟ್ಟಬೇಕೆಂದು ಮಾಡಿದ್ದೆವು. ಈಗ ಮದ್ರಾಸಿನವರು ಆರುಕಾಸು ತೆರಿಗೆ ಹಾಕಿರುವುದರಿಂದ ನಾವು ಅದಕ್ಕೆ ತಕ್ಕ ಕಾರ್ಯಕ್ರಮವನ್ನು ಕೈಕೊಂಡು ಹೊರಗಿನ ಪೈಪೋಟಿಯನ್ನು ತಡೆಗಟ್ಟಿ ನಮ್ಮ ಕೈಗಾರಿಕೆಗೆ encouragement ಕೊಡಬೇಕಾದುದು ಅವಶ್ಯಕ. ಅಲ್ಲದೆ, ಎಲೆ, ಹೊಗೆಸೊಪ್ಪು ಮುಂತಾದವುಗಳ ವಿಷಯದಲ್ಲಿ ಉತ್ತಮವಾದ ಪದಾರ್ಥಗಳನ್ನು ತರಿಸಿಕೊಟ್ಟು ಸರ್ಕಾರದವರು ಅವರಿಗೆ ಸಹಾಯಮಾಡಿ, ಈ ಕೈಗಾರಿಕೆಯಲ್ಲಿ ಕೆಲಸ ಮಾಡುವವರಿಗೆ ಹೆಚ್ಚಿನ ಕೂಲಿ ಬರುವಂತೆ ಕಡಮೆ ದರ್ಜೆಯ ಬೀಡಿಗಳು ತಯಾರಾಗುವುದನ್ನು ತಪ್ಪಿಸಿ ಉತ್ತಮ ದರ್ಜೆಯ ಬೀಡಿಗಳ ಬರುವುದಕ್ಕೆ ಉತ್ತೇಜನ ಕೊಡಬೇಕಾಗಿದೆ. ಹೊರಗಡೆಯಿಂದ ಬರತಕ್ಕ ಬೀಡಿಗಳನ್ನು ತಡೆಗಟ್ಟುವುದಕ್ಕೆ ಸರಿಯಾಗಿ ಇಲ್ಲಿನ ಬೀಡಿಗಳನ್ನೂ ಉತ್ತಮಪಡಿಸಬೇಕು. ಬೀಡಿಗಳು ಚೆನ್ನಾಗಿಲ್ಲದಿದ್ದರೆ, ಕಾಸಿಗೆ 16 ಬೀಡಿಯೆಂದರೂ ಯಾರು ಕೊಂಡುಕೊಳ್ಳುವುದಿಲ್ಲ. ಉತ್ತಮದರ್ಜೆಯದಾದರೆ ಆಣೆಗೊಂದು ಬೀಡಿಯಾದರೂ ಕೊಂಡುಕೊಳ್ಳುತ್ತಾರೆ. ಹಾಗೆ ನಾವು ಉತ್ತಮಪಡಿಸಿಕೊಡುವಂಥ ರೀತಿಯಲ್ಲಿ ಕೆಲಸಮಾಡಬೇಕೆಂದಿರುವಾಗ, ಇವೊತ್ತಿನ ದಿವಸ ಒಂದು ಕಾಸಿದ್ದುದನ್ನು ಮೂರು ಕಾಸು ಮಾಡಿದರೆ ಈ ಗೃಹಕೈಗಾರಿಕೆ ನಶಿಸಿಹೋಗುತ್ತದೆಂದು ಹೇಳುವುದರಲ್ಲಿ ತಿರುಳಿಲ್ಲವೆಂದು ಹೇಳುತ್ತೇನೆ.

ಈ ದೃಷ್ಟಿಯಿಂದ ನೋಡುವುದಾದರೆ ಈಗ ನಾವು ಹಾಕಿರುವ ಮೂರು ಕಾಸು ಸರಿಯಾಗಿದೆ. ಈ ಬಿಲ್ಲಿನ ಮೇಲೆ ಮಾತನಾಡುತ್ತಾ ಶ್ರೀಮಾನ್ ದೇವರಾಜ ಅರಸ್‌ನವರು ಒಂದು ಉತ್ತಮವಾದ ಸಲಹೆಯನ್ನು ಮಾಡಿದರು. ಬೀಡಿ ಕೈಗಾರಿಕೆಯವರಿಗೆ ಅವಶ್ಯಕವಾದ ತೂಪರದೆಲೆಯು ನಮ್ಮ ದೇಶದಲ್ಲಿ ಎಲ್ಲಿ ಚೆನ್ನಾಗಿ ಬೆಳಸಬಹುದೆಂಬುದನ್ನು ಕಂಡುಹಿಡಿದು ಅದನ್ನು ಬೆಳೆಸಲು ತಕ್ಕ ಉತ್ತೇಜನವನ್ನು ಕೊಡಬೇಕೆಂದು ಹೇಳಿದರು. ಇದನ್ನೂ ನಾವು ಪರಿಶೀಲಿಸೋಣ. ಈಗ ಹೊರಗಡೆಯಿಂದ ಎಲೆ ತರಿಸಿದರೆ ಅವರಿಗೇನು ಖರ್ಚು ಬೀಳುತ್ತಿದೆ, ನಾವೇ ಬೆಳೆಸಿದರೆ ಅನುಕೂಲವಾಗುವುದಿಲ್ಲವೇ ಎಂಬುದನ್ನು ನೋಡೋಣ. ಇದೆಲ್ಲವನ್ನೂ ಗಮನಕ್ಕೆ ತೆಗೆದುಕೊಂಡು ನಮ್ಮ ಬೀಡಿಯವರು ಹೊರಗಡೆಯವರೊಡನೆ compete ಮಾಡುವಂತೆ ಮಾಡಬೇಕು. ಇದೆಲ್ಲಾ ಮಾಡಬೇಕಾದರೆ ಸರ್ಕಾರದವರು ತಕ್ಕ ಏರ್ಪಾಡುಗಳನ್ನು ಮಾಡಬೇಕಾಗುತ್ತದೆ. ಆದ್ದರಿಂದ ಕಮ್ಮಿ ತೆರಿಗೆ ಕೊಡುವುದರಿಂದ ಏನೂ ಪ್ರಯೋಜನ ಇವರಿಗೆ ಆಗುವುದಿಲ್ಲ. ಈಗಲೂ ಬೀಡಿ ಮಾಲೀಕರು ಕೂಲಿಯವರಿಗೆ ಕಮ್ಮಿ ಕೂಲಿಯನ್ನೇ ಕೊಡುತ್ತಾ ತಾವು ಹೆಚ್ಚಿಗೆ ನಫೆ ಹೊಂದುತ್ತಿದ್ದಾರೆ. ಆದ್ದರಿಂದ ಈ ತೆರಿಗೆ ಹಾಕುವುದರಿಂದ ಕೂಲಿಗಾರರಿಗೇನೂ ಧಕ್ಕೆ ಬರುವುದಿಲ್ಲವೆಂದು ನಾನು ಹೇಳುತ್ತೇನೆ. ಏನಿದ್ದರೂ ಶ್ರೀಮಾನ್ ಮುಲ್ಕ ಗೋವಿಂದರೆಡ್ಡಿಯವರೂ ಮತ್ತು ಗೋಪಾಲಗೌಡರೂ ತಮ್ಮ ಅಪಪ್ರಚಾರದಿಂದ. . . .

ಶ್ರೀ ಎಸ್. ಗೋಪಾಲಗೌಡ.—ಶ್ರೀಮಾನ್ ಗೋಪಾಲಗೌಡರೂ ಮತ್ತು ಗೋವಿಂದರೆಡ್ಡಿಯವರೂ ಅಪಪ್ರಚಾರ ಮಾಡುತ್ತಿದ್ದಾರೆಂದು ಹೇಳುತ್ತಿದ್ದಾರೆ. That is not fair.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಇದರಿಂದ ಸಾಮಾನ್ಯ ಜನತೆಗೆ ಏನೂ ತೊಂದರೆಯಾಗುವುದಿಲ್ಲ. ಇದರಿಂದ ಬರತಕ್ಕ ಆದಾಯದಿಂದ ಸಾಮಾನ್ಯ ಜನತೆಗೆ ಹೆಚ್ಚಿನ ಪ್ರಯೋಜನ ಅನುಕೂಲ ಲಭಿಸುತ್ತದೆಯೇ ಹೊರತು ನಷ್ಟವಾಗುವುದಿಲ್ಲವೆಂದು ಹೇಳುತ್ತೇನೆ. ಆದ್ದರಿಂದ ಮಾನ್ಯ ಸದಸ್ಯರು ಈ ಬಿಲ್ಲಿನ ವಿಷಯದಲ್ಲಿ ನಿಧಾನವಾಗಿ, ಸಾವಧಾನದಿಂದ ನಿಷ್ಪಕ್ಷಪಾತವಾಗಿ ಯೋಚನೆ ಮಾಡಿ ಒಂದು ತೀರ್ಮಾನಕ್ಕೆ ಬರಬೇಕೇ ಹೊರತು ಸುಮ್ಮನೆ ಬಡವರಿಗೆ ತೊಂದರೆಯಾಗುತ್ತದೆಂದು ಯೋಚನೆ ಮಾಡಬಾರದೆಂದು ಹೇಳುತ್ತೇನೆ.

The House rose for Lunch at Ten Minutes past Three of the Clock and re-assembled at Forty Minutes past Three of the Clock.

[MR. SPEAKER in the Chair.]

*ಶ್ರೀ ಜೆ. ಮಹಮ್ಮದ್ ಇಮಾಂ.—ಸ್ವಾಮಿ, ರೆವಿನ್ಯೂ ಮಂತ್ರಿಗಳು ತಂದಿರುವ ಬೀಡಿಗಳ ಮೇಲೆ ಹಾಕಿರತಕ್ಕ ಸುಂಕವನ್ನು ಹೆಚ್ಚಿಸುವ ಬಿಲ್ಲನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ಒಂದು ವಿಷಾದವೇನೆಂದರೆ, ಈ ಸರ್ಕಾರದವರಿಗೆ ಒಂದು ನೀತಿಯಿಲ್ಲ, ಒಂದು ಸ್ತಿಮಿತವಾದ ಬುದ್ಧಿಯಿಲ್ಲ. ಅವರಿಗಿರುವುದೆಲ್ಲಾ ಒಂದೇ ಧ್ಯೇಯ. ಮಂತ್ರಿಗಳೇ ಹೇಳಿದ್ದಾರೆ, ನಮಗೆ ಏನು ಕೆಲಸ ಮಾಡುವುದಕ್ಕೂ ಹಣ ಬೇಕು ಎಂದು. ಆದ್ದರಿಂದ ಸರ್ಕಾರಕ್ಕೆ ಹಣ ಬರಮಾಡಿಕೊಳ್ಳುವುದೊಂದೇ guiding principle. ಅಷ್ಟೇಹೊರತು, ತಾವು ಕೈಕೊಳ್ಳುವ ಬಿಲ್ಲಿನಿಂದ ಪ್ರಜೆಗಳಿಗೆ ಹೊರೆಯಾಗುತ್ತದೆಯೇ, ದೇಶಕ್ಕೇನಾದರೂ ತೊಂದರೆಯಾಗುತ್ತದೆಯೇ, ಆ ಕೈಗಾರಿಕೆಗೇನಾದರೂ ಧಕ್ಕೆ ಬರುತ್ತದೆಯೇ ಎಂಬ ಯೋಚನೆಯನ್ನೇ ಮಾಡುವುದಿಲ್ಲ. ಅವರ ಕಸಬೇ ಇದು. ಕಾಂಗ್ರೆಸ್ ಸರ್ಕಾರ ಬಂದಿರುವುದೇ ರೈತರ ಮೇಲೆ ಸುಂಕಗಳ ಸುರಿಮಳೆಯನ್ನೇ ಅಲ್ಲ ಗುಡುಗ ಮಿಂಚುಗಳನ್ನೂ ತರುವುದಕ್ಕೆ.

ನನ್ನ ಮಾನ್ಯ ಸ್ನೇಹಿತರಾದಂಥ ಶ್ರೀ ಪಿ. ಆರ್. ರಾಮಯ್ಯನವರು ಹೇಳಿದ್ದು ಸರಿಯಾದ್ದಲ್ಲ. ಗ್ರಾಮಾಂತರ ಪ್ರದೇಶಗಳಲ್ಲೇ ಆಗಲಿ ಅಥವಾ ನಗರ ಪ್ರದೇಶಗಳಲ್ಲೇ ಆಗಲಿ ಈ ಬೀಡಿ ಬಹಳ ಅಗತ್ಯವಾದಂಥ ವಸ್ತುವಾಗಿದೆ.

ಶ್ರೀ ಪಿ. ಆರ್. ರಾಮಯ್ಯ.—ಅಂಥ ಇದರ ಅಗತ್ಯವೇನೂ ಇಲ್ಲ.

ಶ್ರೀ ಜೆ. ಮಹಮ್ಮದ್ ಇಮಾಂ.—ಇರಲಿ. ಶ್ರೀ ಪಿ. ಆರ್. ರಾಮಯ್ಯನವರೊಬ್ಬರೇನೋ ಬೀಡಿ ಸೇದುವುದಿಲ್ಲ. But the factories are there. ಈ ವಸ್ತುವನ್ನು ವ್ಯಾಪಾರಮಾಡತಕ್ಕವರೇ ಅಲ್ಲದೆ ಪ್ರತಿಯೊಬ್ಬ ರೈತನೂ ಸಹ ಉಪಯೋಗಿಸುವುದುಂಟು. ಆದರೆ ಈಗತಾನೆ ನಾನು ಈ ಸರ್ಕಾರಕ್ಕೆ ಒಂದು ಸ್ತಿಮಿತವಾದ ಬುದ್ಧಿಯಿಲ್ಲ ಎಂದು ಏತಕ್ಕಾಗಿ ಹೇಳಿದೆನೆಂದರೆ, ಈ ಕಳೆದ ಮೂರು ವರ್ಷಗಳಿಂದಲೂ ಈ ಸರ್ಕಾರ ಹಾಕಿರುವಷ್ಟು ಕಂದಾಯವನ್ನು ಹಿಂದೆ ಯಾವ ಸರ್ಕಾರವೂ ಹಾಕಿಲ್ಲ. ಈ ಹಿಂದೆ ಹೊಗೆಸೊಪ್ಪಿನಮೇಲೆ ಆಗಲೇ ನಾವು ಎಕ್ಸೈಜ್ ಡ್ಯೂಟಿಯನ್ನು ಹಾಕಿದ್ದೇವೆ. ಆದಾದನಂತರ ಬೀಡಿ; ಸಿಗರೇಟುಗಳಮೇಲೆ ಒಂದು ಸ್ಪೆಷಲ್ ಟ್ಯಾಕ್ಸನ್ನು ಬೇರೆ ಹಾಕಿದ್ದೇವೆ. ಮದ್ರಾಸ್ ಸರ್ಕಾರದವರು ಅಲ್ಲಿ ಇವುಗಳಮೇಲೆ ತೆರಿಗೆ ಹಾಕಿದ್ದಾರೆಂದು ನಾವೂ ಸಹ ಇಲ್ಲಿ ಈ ಬೀಡಿ, ಸಿಗರೇಟುಗಳಮೇಲೆ ತೆರಿಗೆಯನ್ನು ವಿಧಿಸಿದ್ದರಿಂದ ಎಂಟು ಆಣೆ, ಆರು ಆಣೆ ಇದ್ದಂಥ ಸಿಗರೇಟ್ ಪ್ಯಾಕುಗಳ ಬೆಲೆ ಒಂದು ರೂಪಾಯಿಗೆ ಏರಿತು. ಇಷ್ಟೆಲ್ಲಾ ಆದನಂತರ ಪುನಃ ಇವುಗಳ ಮೇಲೆ ಸೇಲ್ಸ್ ಟ್ಯಾಕ್ಸ್ ಎಂದು ಬೇರೆ ಇನ್ನೊಂದು ತೆರಿಗೆ ವಿಧಿಸಲಾಯಿತು. ಈ ದಿವಸ ಪುನಃ ಮಾನ್ಯ ಮಂತ್ರಿಗಳು ಮತ್ತೊಂದು ತೆರಿಗೆ ಮಸೂದೆಯನ್ನು ಈ ದಿವಸ ತಂದಿದ್ದಾರೆ. ಆ ಸೇಲ್ಸ್ ಟ್ಯಾಕ್ಸ್ ತೆರಿಗೆ ಎನ್ನುವುದೂ ಕಳೆದ ಬಡ್ಜೆಟ್ ಅಧಿವೇಶನದಲ್ಲಿ ಚರ್ಚೆಯಾಗಿ ಮೊನ್ನೆತಾನೆ ಜಾರಿಗೆ ಬಂದಿದೆ. ಆ ದಿವಸ ನೇಮಕಮಾಡಲಾಗಿದ್ದ ತೆರಿಗೆ ಸಮಿತಿಯವರು ಈ ಬೀಡಿ ಕೈಗಾರಿಕೆಗೆ ಸರಿಯಾದ ಉತ್ತೇಜನ ಕೊಡಬೇಕೆಂದು ಹೇಳಿರುತ್ತಾರೆ.

ಶ್ರೀ ಕಡಿದಾಳ್ ಮಂಜಪ್ಪ.—ತಾವು ಹೇಳಿದ ಆ ಸಮಿತಿ ಯಾವುದು ?

ಶ್ರೀ ಜೆ. ಮಹಮದ್ ಇಮಾಂ.—ನಾನು ಹೇಳಿದ್ದು ಆ ನಿಮ್ಮ ಸೇಲ್ಸ್ ಟ್ಯಾಕ್ಸ್ ಸಮಿತಿ. The fact is there.

Sri Kadidal MANJAPPA.—It is an incorrect statement. The Committee did not meddle with the levy with regard to beedi.

ಶ್ರೀ ಜೆ. ಮಹಮ್ಮದ್ ಇಮಾಂ.—ಹೀಗೆ ಟ್ಯಾಕ್ಸ್ ಹಾಕಿ ಎಂದು ಅವರೇನೂ ಹೇಳಲಿಲ್ಲ. ಇದೊಂದು ಲೋಕಲ್ ಇಂಡಸ್ಟ್ರಿಯಂತಿದ್ದು ಸಂಸ್ಥಾನಾದ್ಯಂತ ಸುಮಾರು 50 ಸಾವಿರ ಜನಗಳಿಗೆ ಇದೊಂದು ಗೃಹ ಕೈಗಾರಿಕೆಯಾಗಿರುತ್ತದೆ. ಈ ದಿವಸ ಅನೇಕ ಬಡ ಸಂಸಾರಗಳು ಮೈಸೂರು ನಗರ, ಬೆಂಗಳೂರು ನಗರ, ದಾವಣಗೆರೆ—ಶಿರಾ ಇತ್ಯಾದಿ ಸ್ಥಳಗಳಲ್ಲಿ ತಮ್ಮ ಜೀವನೋಪಾಯವನ್ನು ಈ ಒಂದು ಕಸಬಿನಿಂದ ನಡೆಸಿಕೊಂಡು ಬರುತ್ತಿವೆ. ಹೀಗೆ ಸಂಸ್ಥಾನದ ನಾನಾ ಭಾಗಗಳಲ್ಲಿ ಈ ಕಸುಬು ಜನರ ಜೀವನಾಧಾರವಾಗಿದೆ. ಮೊಟ್ಟಮೊದಲನೆಯದಾಗಿ ಈ ಬೀಡಿಗಳಮೇಲೆ ಒಂದು ಪೈ ತೆರಿಗೆಯನ್ನು ಹಾಕಿದರು. ಆದಾಗ್ಯೂ ಆ ಕಾನೂನು ಇಲ್ಲಿಯವರೆಗೂ ಇನ್ನೂ ಜಾರಿಗೆ ಬಂದೇ ಇರಲಿಲ್ಲ. ಅದು ಇನ್ನೂ ಮೊನ್ನೆತಾನೆ effectಗೆ ಕೊಟ್ಟರು. ಅಂತು ಈ ಒಂದು ಕಾನು ತೆರಿಗೆ ವಿಧಿಸಬೇಕೆಂಬ ಆಕ್ಟನ್ನು ಬಹಳ ಕಷ್ಟಪಟ್ಟು ಜಾರಿಗೆ ತಂದರು. ಆದರೆ ಹೀಗೆ ಜಾರಿಗೆ ತಂದ ಕಾನೂನು ಯಾವ ರೀತಿ ಕೆಲಸ ಮಾಡುತ್ತಿದೆ, ಇದರಿಂದ ಸಾಧಕ ಬಾಧಕಗಳೇನುಂಟಾಗಿವೆ ಎಂಬುದನ್ನು ಇನ್ನೂ ಪರಿಷ್ಕಾರ ಮಾಡಿ ನೋಡಬೇಕೆಂದಿರುವಾಗಲೇ ಅದಕ್ಕೆ ಈಗ ಪುನಃ ಮತ್ತೊಂದು ಅಮೆಂಡ್‌ಮೆಂಟನ್ನು ತಂದಿದ್ದಾರೆ.

It is an inconsistent policy. This is to be very much condemned. Any Act should be given a fair trial.

ಹೀಗೆ ಯಾವುದಾದರೊಂದು ಮಸೂದೆಯನ್ನು ಸ್ಟಾಚ್ಯೂಟ್ ಬುಕ್ಕಿನಲ್ಲಿ ತರುವಾಗ ಅದಕ್ಕೆ ಸಾಕಷ್ಟು ಅವಕಾಶ ಕೊಟ್ಟು ಅದಕ್ಕೆ ಒಂದು ಫೇರ್ ಟ್ರಯಲ್ ಕೊಡದೆಯೇ, ಆ ಆಕ್ಟ್ ಸಂಪೂರ್ಣವಾಗಿ ಜಾರಿಗೆ ಬಾರದಿದ್ದಾಗ್ಯೂ ತಾವು ಹೀಗೆ ಆ ಆಕ್ಟಿಗೊಂದು ತಿದ್ದುಪಡಿ ತರುವುದು ಯಾವ ನ್ಯಾಯ ! ಜನರಿಗೆ ಈ ಆಕ್ಟಿನಿಂದ ಏನಾದರೂ ಸುಖವಾಗಿದೆಯೇ ಅಥವಾ ಕಷ್ಟವಾಗಿದೆಯೇ ಎನ್ನುವುದೊಂದನ್ನೂ ನೋಡದೆ ಕೇವಲ ಆಕ್ಟ್ ಜಾರಿಗೆ ಬಂದ ಒಂದು ತಿಂಗಳ ಅವಧಿಯೊಳಗಾಗಿಯೇ ಮತ್ತೊಂದು ಅಮೆಂಡ್‌ಮೆಂಟನ್ನು ತಂದಿದ್ದಾರೆ !

ಈ ನಮೂನೆಯ ಆಕ್ಟ್ ಮದ್ರಾಸಿನಲ್ಲಿ ಜಾರಿಗೆ ಬಂದಿದೆ, ಬೊಂಬಾಯಿ ಪ್ರಾಂತ್ಯದಲ್ಲಿ ಜಾರಿಗೆ ಬಂದಿದೆ, ಎಂದು ಹೇಳಿರುತ್ತಾರೆ. ಈ ಒಂದು ಕಾರಣ ಹೇಳಿ ಇದನ್ನು ಇಲ್ಲಿಯೂ ಜಾರಿಗೆ ತರಲಾಗಿದೆ ಎಂದು ಈ ಮಸೂದೆಯಲ್ಲಿ ಹೇಳಿದ್ದಾರೆ. Have you not got your own independent policy, your own independent discretion ? You must judge it from the point of view of your own State.

ಅದನ್ನೆಲ್ಲಾ ಕೈಬಿಟ್ಟು ಈಗ ಬರಿ ಮದ್ರಾಸ್ ವಿಚಾರ ಒಂದನ್ನು ಮಾತ್ರ ಹೇಳಿದ್ದಾರೆ. ಹೀಗೆ ಮಾಡಿದರೆ ತಾವೇನೂ ಬೃಹಸ್ಪತಿಗಳೆಂದು ಹೇಳಿಸಿಕೊಳ್ಳಲಾರಿರಿ. ಈಗ ನಮ್ಮ ಸೀಮೆಯ ಸುತ್ತಮುತ್ತಲೂ ಇರತಕ್ಕ ಹೈದರಾಬಾದ್ ಮತ್ತು

(ಶ್ರೀ ಜೆ. ಮಹಮ್ಮದ್ ಇಮಾಂ.)

ಬೊಂಬಾಯಿ ಇತ್ಯಾದಿ ಪ್ರಾಂತ್ಯಗಳಲ್ಲಿರತಕ್ಕಂಥ ಟ್ಯಾಕ್ಸ್ ಪಾಲಸಿಯನ್ನು ತಾವು ಅನುಸರಿಸಿದಮೇಲೆ ಆ ಪ್ರಾಂತ್ಯ ಸರ್ಕಾರಗಳು ಅನುಸರಿಸುತ್ತಿರುವಂಥ ಇತರ ನೀತಿಗಳನ್ನೂ ಕೂಡ ನಮ್ಮ ಸರ್ಕಾರ ಏಕೆ ಅನುಸರಿಸಬಾರದು ? Bombay people, I think, are a very sympathetic people. ಈ ತೆರಿಗೆಯನ್ನು ಬೊಂಬಾಯಿ ಮತ್ತು ಹೈದರಾಬಾದಿನಲ್ಲಿ ಏಕೆ ಹಾಕಲಿಲ್ಲ ? ಬೊಂಬಾಯಿನಿಂದ ಇಲ್ಲಿಗೆ ಬೀಡಿ ಬರುವುದಿಲ್ಲ ಎಂದು ಹೇಳುತ್ತಿದ್ದಾರೆ. ಈ ದಿವಸ ಆ ಸರ್ಕಾರಗಳೊಂದೂ ಇಂಥ ತೆರಿಗೆ ಹಾಕಿರುವುದಿಲ್ಲವಾದ್ದರಿಂದ ಮದ್ರಾಸ್ ಪ್ರಾಂತ್ಯವೊಂದನ್ನು ಈಗ ಉದಾಹರಣೆಗಾಗಿ ತಿಳಿಸಿದ್ದಾರೆ. ನಾಳೆ ಒಂದುವೇಳೆ ಇಂಥ ತೆರಿಗೆಯನ್ನು ಈ ಮದ್ರಾಸು ಸರ್ಕಾರವಾಗಲಿ ಅಥವಾ ಬೊಂಬಾಯಿ ಸರ್ಕಾರವೇ ಆಗಲಿ ಅಥವಾ ಹೈದರಾಬಾದ್ ಸರ್ಕಾರವೇ ಆಗಲಿ ವಿಧಿಸದೆ ಇದ್ದಾಗ್ಗೂ—ಕುಂಭಕೋಣದಲ್ಲಿ ಒಂದು ತೆರಿಗೆ ವಿಧಿಸಿದ್ದಾರೆ ಅಂದರೆ ಆಗ ನೀವೂ ಕೂಡ ಆ ತೆರಿಗೆಯನ್ನು ಇಲ್ಲಿ ಹಾಕಬಹುದಲ್ಲ ? ಹೀಗೆ ಮಾಡುತ್ತಾ ಹೋದರೆ 'ದಪ್ಪನೆ ಮನುಷ್ಯರನ್ನು ಹಿಡಿದು ಶೂಲಕ್ಕೆ ಹಾಕಿ' ಎಂದು ಹೇಳಿದಹಾಗಾಗುತ್ತದೆ.

This is not the kind of policy that should be adopted by the Government. Any Act that has been brought into vogue must be given a fair trial. Even without giving it a fair trial, they want to enhance the tax. ಹಾಗಾದರೆ ನಾಳೆಯ ದಿವಸ ತಾವು ಒಂದೊಂದು ಸರ್ಕಾರದ ಒಂದೊಂದು ಉದಾಹರಣೆ ಹೇಳಿ ಎಲ್ಲ ವಸ್ತುಗಳ ಮೇಲೂ ತೆರಿಗೆಹಾಕಿಬಿಡಿ. ಪ್ರತಿಯೊಂದು ಸ್ಟೇಟಿನವರೂ ಒಂದೊಂದು ವಸ್ತುಗಳಮೇಲೆ ತೆರಿಗೆ ಹಾಕಿಯೇ ಹಾಕಿರುತ್ತಾರೆ. ಮದ್ರಾಸಿನಿಂದ ನಮ್ಮ ಸ್ಟೇಟಿಗೆ ಬೀಡಿಗಳೇನೂ ಅಷ್ಟು ಹೆಚ್ಚಿಗೆ ಬರುವುದಿಲ್ಲ. ನಮ್ಮ ಸಂಸ್ಥಾನದಲ್ಲಿ ಈ ತೆರಿಗೆಯಿಂದ ಈ ವ್ಯಾಪಾರವೇ ಹಾಳಾಗಿಹೋಗುತ್ತದೆ. ಇದೆಲ್ಲಾ ಒಂದು ಮುಖ್ಯವಾದಂಥ ಬಡವರ ಕಸಬು. ಆದರೆ ಈ ಕಸಬಿನ ಪುರೋಭಿವೃದ್ಧಿಗೆ ತಾವೇನು ಕಾರ್ಯಕ್ರಮವನ್ನು ಕೈಗೊಂಡಿದ್ದೀರಿ ? ಹೀಗೆಲ್ಲಾ ಮಾಡುವುದರಿಂದ ನಮ್ಮ ಸೀಮೆಯಲ್ಲಿ ಈ ಕೈಗಾರಿಕೆ ಬಿದ್ದುಹೋಗುತ್ತದೆಯೆ ಹೊರತು ಹೊರಗಡೆಯಿಂದ ಯಾರೂ ಇದನ್ನು ಅಷ್ಟಾಗಿ ತರಿಸುವುದಿಲ್ಲ. ತಾವು ಇಲ್ಲಿ ಇದರ ಅಭಿವೃದ್ಧಿಗಾಗಿ ಏನುಮಾಡಿದ್ದೀರಿ ? ಅಲ್ಲಿಂದ ಬೀಡಿಗಳನ್ನು ತಂದು ತಂದು ಇಲ್ಲಿ ಡಂಪ್ ಮಾಡಿಬಿಡುತ್ತಾರೆಂದು ಹೇಳುತ್ತಿದ್ದಾರೆ. ಹಾಗೆ ಹೊರಗಡೆಯಿಂದ ಈ ದಿವಸ ಬೀಡಿ ಎಲ್ಲಿಂದ ಬರುತ್ತದೆಯೆಂದರೆ ಮಂಗಳೂರು ಮತ್ತು ಕಾಳಹಸ್ತಿ, ಇತ್ಯಾದಿ ಎರಡು ಮೂರುಕಡೆಗಳಿಂದ ಬಂದರೆ ಹೆಚ್ಚಾಯಿತು. ಆದರೆ ಹಾಗೆ ಏತಕ್ಕಾಗಿ ಅಲ್ಲಿಂದ ಬೀಡಿಗಳನ್ನ ಜನ ತರಿಸುತ್ತಿದ್ದಾರೆ ? ಅದಕ್ಕೆ ಕಾರಣವಿಷ್ಟೆ. ಇಲ್ಲಿ ಬೀಡಿ ಕಟ್ಟತಕ್ಕಂಥ ಜನಗಳ ಸಂಖ್ಯೆ ಕಡಿಮೆ. ಮತ್ತು ಈ ಬೀಡಿಸುತ್ತಲು ಬೇಕಾದ ತೂಬರೆ ಎಲೆ ಹೊರಗಡೆಯಿಂದಲೇ ಬರಬೇಕಾಗಿದೆ. ಹೊರಗಡೆಯಿಂದ ಈ ಸಾಮಾನುಗಳನ್ನು ತರಿಸಿ ಇಲ್ಲಿ ತಂಬಾಕು ತಯಾರು ಮಾಡಿ ಬೀಡಿ ಸುತ್ತಬೇಕಾದರೆ ಇವುಗಳ cost of production ಜಾಸ್ತಿಯಾಗುತ್ತದೆ. ಹೊರಗಡೆಯವರಿಗೆ ಈ cost of production ಬಹಳ ಕಮ್ಮಿ ಯಾಗಿರುತ್ತದೆ. ಹೀಗಾಗಿ ಇತರ ಎಲ್ಲಾ ದೇಶದವರ ಸಾಮಾನುಗಳಮೇಲೆ ಪೈಪೋಟಿ ಮಾಡಲು ಅವರಿಗೆ ಬೇಕಾದಹಾಗೆ ಅವಕಾಶವಿದೆ. ಅವರಿಗೆ ಯಾವಭಾಗದಲ್ಲೂ ಲುಕ್ಸಾನಾಗಲು ಅವಕಾಶವಿಲ್ಲ. ಅವರ ಮೇಲೆ ಒಂದುವೇಳೆ ಅಲ್ಲಿನ ಸರ್ಕಾರ ತೆರಿಗೆ ಹಾಕಿದರೂ ಅವರು ತೆರುವ ಚೈತನ್ಯವನ್ನು ಹೊಂದಿದ್ದಾರೆ. ಹೀಗಾಗಿ ನಮ್ಮ ಸರ್ಕಾರ, ಈ ದಿವಸ ಅವರು ಅಲ್ಲಿ ತೆರಿಗೆ ಹಾಕಿದ್ದಾರೆ, ಆದುದರಿಂದ ನಾವೂ ಸಹ ಇಲ್ಲಿ ತೆರಿಗೆ ಹಾಕಬೇಕೆಂಬ ಮನೋಭಾವವನ್ನಿಟ್ಟುಕೊಂಡಿರುವುದನ್ನು ನೋಡಿದರೆ, ಅಲ್ಲಿ ಅವರಿಗೆ ಒಂದು ಕಣ್ಣು ಹೋಗಿರುವುದರಿಂದ ಇಲ್ಲಿ ನಮ್ಮ ಎರಡು ಕಣ್ಣುಗಳೂ ಹೋಗಲಿ ಎಂದು ಹೇಳಿದಹಾಗಾಯಿತು. ನಮ್ಮ ದೇಶದಲ್ಲಿ ಈ ಕೈಗಾರಿಕೆಯಿರುವುದೆಲ್ಲಾ ಬಹಳ ಕಮ್ಮಿ ಪ್ರಮಾಣದಲ್ಲಿದೆ. ತಾವು ಹೇಳುವಂತೆ ಬೇಕಾದರೆ ಹೊರಗಡೆಯಿಂದ ನಮ್ಮ ಮೈಸೂರು ಸೀಮೆಗೆ ಬರತಕ್ಕ ಬೀಡಿಗಳನ್ನು ತಡೆಗಟ್ಟಿ, ಇಲ್ಲಿನ ಕೈಗಾರಿಕೆಯನ್ನು ಅಭಿವೃದ್ಧಿಗೆ ಬರುವಂತೆ ಮಾಡಿರಿ. It is an inevitable evil which you cannot avoid. ಹೀಗೆ ಇದರ ಉತ್ಪನ್ನ ಜಾಸ್ತಿ ಆದರೆ, they can effectively check the inflow of the beedis coming from other States. ಆಗ ತಾವು ಇದರಮೇಲೆ ಬೇಕಾದರೆ ಮೂರು ಕಾಸು ತೆರಿಗೆ ಹಾಕಿದರೂ ಪರವಾಇಲ್ಲ. ಹಾಗೆ ಮಾಡದೆ, 'Penny wise pound foolish' ಅನ್ನುವಂತೆ ಮಾಡಬಾರದು. ಇದರಿಂದ ತಮ್ಮ ಲೆಕ್ಕಾಚಾರವೇನೇ ಇರಲಿ ಒಂದು ಲಕ್ಷಕ್ಕೆ ಮೇಲ್ಪಟ್ಟು ವರಮಾನ ಬರಬಾರದು. ಆದರೆ ಈ ಉದ್ಯೋಗದಲ್ಲಿ ಈ ದಿವಸ 50-60 ಸಾವಿರ ಜನರು ತೊಡಗಿದ್ದಾರೆ. ಹೀಗೊಂದು ತೆರಿಗೆ ವಿಧಿಸುವ ನೆಪದಿಂದ ಇಷ್ಟೊಂದು ಜನಗಳ ಜೀವನಕ್ಕೆ ತಾವು ಧಕ್ಕೆ ಉಂಟುಮಾಡುವಂಥ ಒಂದು ಪ್ರಯತ್ನಕ್ಕೆ ಕೈಹಾಕುತ್ತಿದ್ದೀರಿ. ತಮ್ಮ ಪ್ರಯತ್ನ ಈ ಸ್ಥಳೀಯ ಕೈಗಾರಿಕೆಗೆ ಕಲ್ಲುಹಾಕಿ ಹೊರಗಡೆಯ ಕೈಗಾರಿಕೆಗೆ ಉತ್ತೇಜನ ಕೊಟ್ಟಂತೆ ಇದೆ. ಇರತಕ್ಕಂಥ ವಾಸ್ತವಾಂಶಗಳನ್ನು ಹೇಳಿದರೆ ನಮ್ಮ ಕೆಲವು ಸ್ನೇಹಿತರು ಅಪಪ್ರಚಾರ ಮಾಡುತ್ತೀರಿ ಎಂದು ಹೇಳುತ್ತಾರೆ. ಹಾಗೆ ಅವರು ಯಾವಾಗಲೂ ಒಂದ ಸ್ಲೋಗನನ್ನು ಹೇಳುವುದು ಅವರ ಅಭ್ಯಾಸವಾಗಿಹೋಗಿದೆ. ಅವರ ನೀತಿಯೇನೆಂಬುದರ ಬಗ್ಗೆ ಯಾರೇನೂ ಪ್ರಚಾರ ಮಾಡಬೇಕಾದ್ದಿಲ್ಲ. ಈ ವರೆಗೆ ಅವರು ವಿಧಿಸಿರುವ ಸುಮಾರು 32 ತೆರಿಗೆಗಳೇ ಅವರ ನೀತಿ-ನಿಯಮಗಳನ್ನು ಪ್ರಚಾರ ಮಾಡುತ್ತಿವೆ. ಹಾಗೆ ಆ ಒಂದು ನಿಂದನೆಯಿಂದ ತಮ್ಮನ್ನು ಮರೆಮಾಡಿಕೊಳ್ಳಲು ಅವರು ನಮ್ಮಗಳ ಮೇಲೆ ಅಪಪ್ರಚಾರ ಮಾಡುತ್ತಿದ್ದಾರೆ. ಯಾವ ಪಾರ್ಟಿಗೆ ಅಪಪ್ರಚಾರ ಮಾಡಬೇಕು, ಯಾವ ಪಾರ್ಟಿಯಮೇಲೆ ಅಪಪ್ರಚಾರ ಮಾಡಬಾರದೆಂಬುದನ್ನು ಈ ಸರ್ಕಾರ ವಿಧಿಸಿರತಕ್ಕ ತೆರಿಗೆಗಳೇ ಹೇಳುತ್ತವೆ. ಈಗ ನಾನು ನಮ್ಮ ಸರ್ಕಾರದವರಿಗೆ ತಿಳಿಸಬೇಕಾಗಿರುವುದೇನೆಂದರೆ ಈಗ ಅವರು ತಂದಿರುವ ತಿದ್ದುಪಡಿಯನ್ನು ಜಾರಿಗೆ ಕೊಡುವುದು ಏನೂಬೇಕಾಗಿಲ್ಲ. ಈಗಾಗಲೇ ನಾವು ಈ ಸಾಮಾನುಗಳ ಮೇಲೆ ಒಂದು ರೂಪಾಯಿಗೆ ಒಂದು ಕಾಸಿನಂತೆ ಹಾಕಿರುವ ತೆರಿಗೆ ಏನಿದೆಯೋ ಅದನ್ನೇ ಟ್ರೈಮಾಡಿ ನೋಡೋಣ. ಈ ದಿವಸ ಹೊರಗಡೆಯಿಂದ ನಮ್ಮ ಸ್ಟೇಟಿಗೆ ಎಷ್ಟು ಬೀಡಿ ಬರುತ್ತದೆ ಅನ್ನುವುದರ ಬಗ್ಗೆ ನಮ್ಮ ಸರ್ಕಾರದಲ್ಲಿ ಯಾವ ಅಂಕಿ ಅಂಶಗಳೂ ಇರುವುದಿಲ್ಲ. ಈಗಾಗಲೇ ನಾವು ವಿಧಿಸಿರುವ ತೆರಿಗೆಯಿಂದ ನಮ್ಮ ಸೀಮೆಗೆ ಹೊರಗಡೆಯಿಂದ ಬರತಕ್ಕಂಥ ಬೀಡಿಗಳು ಜಾಸ್ತಿಯಾಗುತ್ತದೆಯೇ ಅಥವಾ ನಮ್ಮ ಈ

ಲೋಕಲ್ ಇಂಡಸ್ಟ್ರಿ ಕಡಿಮೆಯಾಗುತ್ತದೆಯೋ ಏನು ಎನ್ನುವುದನ್ನು ನೋಡದೆ ಈಗ ಏಕಾಏಕಿ ಇದನ್ನು ಬದಲಾಯಿಸುವುದು ನ್ಯಾಯವಾದದ್ದಲ್ಲ. ಇಷ್ಟೇ ಅಲ್ಲದೆ ನಮ್ಮ ಸರ್ಕಾರವನ್ನು ನಡೆಸತಕ್ಕಂಥ ಪಾರ್ಟಿಯವರು ತಾವು ಯಾವಾಗ್ಲೂ ಬಡವರ ಸ್ನೇಹಿತರೆಂದು ಬೇರೆ ಹೇಳಿಕೊಳ್ಳುತ್ತಿದ್ದಾರೆ. ಹಾಗೆ ಹೇಳಿಕೊಂಡು ಅವರು ಆ ಬಡವರನ್ನೆಲ್ಲಾ ಹೀಗೇನೊ ಉದ್ಧಾರ ಮಾಡುವುದು ? ಹೀಗೆ ಮಾಡಿದರೆ ನಮ್ಮ ಸೀಮೆಯಲ್ಲಿರತಕ್ಕ ಬಡತನವನ್ನು ಹೇಗೆ ಹೋಗಲಾಡಿಸುತ್ತಾರೆ ? ರಸ್ತೆಯಲ್ಲಿ ಡಬ್ಬದ ಪೆಟ್ಟಿಗೆ ಹೊತ್ತುಕೊಂಡು 'ಬೊಂಬಾಯಿ ಮದ್ರಾಸ್‌ನೋಡಿ' ಎಂದು ಹೇಳುತ್ತಿದ್ದಾರಲ್ಲಾ ಅವರ ಹಾಗೆ ಇವರೂ ಸಹ ಅಂಗೈಯ್ಯಲ್ಲೇ ಕೈಲಾಸ ತೋರಿಸುತ್ತೇವೆ, ವೈಕುಂಠ ತೋರಿಸುತ್ತೇವೆ, ಈಶ್ವರನನ್ನೇ ತೋರಿಸುತ್ತೇವೆ ಎಂದು ಪ್ರಚಾರಗಳನ್ನು ಮಾಡಿರುತ್ತಾರೆ. ಆದರೆ ಈ ಕೈಗಾರಿಕೆ ನಮ್ಮ ಬಡಜನರಿಗೆ ಬಹಳ ಅಗತ್ಯವಾಗಿ ಬೇಕಾದುದಾಗಿದೆ. ಇದು ಬಡವರ ಕೈಗಾರಿಕೆ. ಈ ಕಸಬಿನಿಂದ ಈ ದಿವಸ ಅನೇಕ ಬಡಸಂಸಾರಗಳು ತಮ್ಮ ಜೀವನವನ್ನು ನಡೆಸಿಕೊಳ್ಳುತ್ತಿವೆ. ಹೀಗಿರುವಾಗ ತಾವು ಏಕ್‌ದಂ ತೆರಿಗೆ ಜಾಸ್ತಿ ಮಾಡಿದರೆ ಅವರೆಲ್ಲರಿಗೂ ತುಂಬ ತೊಂದರೆಯಾಗುತ್ತದೆ.

4 P.M.

Only poor people use beedis. ಹೋದ ವರ್ಷ ಸಿಗರೇಟಿಗೆ ಆರು ಆಣೆ ತೆರಿಗೆ ಹಾಕಿದಾಗ Chief Minister ಇಮಾಂ ಸಾಹೇಬರಿಂದ ಆರು ಆಣೆ ಹೆಚ್ಚಾಗಿ ವಸೂಲು ಮಾಡುತ್ತಾರೆಂದು ತಿಳಿಸಿದರು. ಅದಕ್ಕೆ ನಾನು ಹೇಳಿದೆ, ಸಿಗರೇಟು ಬೇಡ, ಬೀಡಿ ಸಾಕು ಎಂದು. ಸಿಗರೇಟಿನ ಮೇಲೆ ತೆರಿಗೆ ಹಾಕಿದಮೇಲೆ ಬೀಡಿ ವ್ಯಾಪಾರ ವಿಪರೀತವಾಗಿದೆ. ಇದು ಬಹಳ ಬಡವರ ಮೇಲೆ ಬೀಳುವ ತೆರಿಗೆ. ಆದ್ದರಿಂದ ಇದನ್ನು ಇಷ್ಟು light hearted ಆಗಿ ಮಾಡಬೇಡಿ. ಕೆಲವು ವರ್ಷಗಳು ಈಗ ಇರುವಂತೆ ನಡೆಯಲಿ. ಅನಂತರ ಸಾಧಕ ಬಾಧಕಗಳನ್ನು ನೋಡೋಣ. ಈಗ ಪ್ರಸಕ್ತ ಬಿಲ್ಲನ್ನು ವಾಪಸ್ಸು ತೆಗೆದುಕೊಳ್ಳಲಿ, ಇದು Money Bill ಆದುದರಿಂದ Highness approval ಬೇಕು.

ಅಧ್ಯಕ್ಷರು.—ಬಂದಿದೆ.

ಶ್ರೀ ಜಿ. ಮಹಮ್ಮದ್ ಇಮಾಂ.—ಎರಡನೆಯದು; ಸರ್ಕಾರದವರು ಇಂತಹ ಮುಖ್ಯವಾದ ಬಿಲ್ಲನ್ನು tail end of the sessionನಲ್ಲಿ ತರುವುದು ಸರಿಯಲ್ಲ. ಇಂತಹ Money Bill ಮೊದಲು ಬರಬೇಕು. Shall I call it a ruse or a trick adopted by the Government to hustle through this Bill now ? Why did they not bring it at the beginning ?

Sri Kadidal MANJAPPA.—What difference does it make ?

ಶ್ರೀ ಜಿ. ಮಹಮ್ಮದ್ ಇಮಾಂ.—ಒಂದು programme ಪ್ರಕಾರ ನಡೆಯುವುದಿಲ್ಲ. ಇದನ್ನು ನಾವು study ಮಾಡಿಲ್ಲ. ಈಗ pass ಮಾಡಿ ಎಂದು ಹೇಳುತ್ತೀರಿ. ತಮಗೆ brute majority ಇದೆ, ಪಾಸ್ ಮಾಡುತ್ತೀರಿ. ಇಂತಹ Money Billಗಳಿಗೆ sufficient time ಕೊಡಬೇಕು. ಜನರಿಗೆ intimation ಕೊಡಬೇಕು. ಅವರು ಬಂದು represent ಮಾಡುವ ಹಾಗೆ ಇರಬೇಕು. It is a popular Government. The Government must consult the Profession. ಬೀಡಿ Manufacturers, Representativeಗಳನ್ನು ಕರೆಸಿ ಅವರಿಗೆ ಏನು ತೊಂದರೆಗಳಾಗುತ್ತವೆ ಎಂಬುದನ್ನು ತಿಳಿದು ಮುಂದುವರಿಸಿದರೆ ಉತ್ತಮ. ಆದರೆ ಒಬ್ಬರನ್ನೂ ಈ ವಿಷಯ ಕೇಳುವುದಿಲ್ಲ. ಎಂದೋ ಒಂದು ದಿವಸ ಬಿಲ್ಲನ್ನು ಮಾಡುವುದು, ಇಲ್ಲಿ ಕುಳಿತುಕೊಂಡು ಪಾಸ್‌ಮಾಡಿ ಎಂದು ಹೇಳುವುದು. ಅವರ representativeಗಳನ್ನು ಕೇಳೋಣ ಎಂದರೆ ನಮಗೆ ಸಮಯವಿಲ್ಲವೆಂದು ಹೇಳುವುದು. So they are simply hustling through an important measure which they are going to make permanent in the State. Before it is given a trial, ಶೇಕಡ $3\frac{1}{8}$ ಕೊಡಬೇಕು ಎಂದು ಹೇಳುತ್ತಾರೆ. Local industriesಗೆ encourage ಮಾಡಬೇಕು ಎಂದು ಹೇಳುವ ತತ್ವಕ್ಕೆ ಇದು ಸರಿಹೊಂದುವುದಿಲ್ಲ. Let them fix a slab rate according to the turnover. ವ್ಯಾಪಾರ 10 ಸಾವಿರದಿಂದ 30 ಸಾವಿರದ ರೂಪಾಯಿಗಳವರೆಗೆ ಇದ್ದರೆ ಆಗ 1 ರೂಪಾಯಿಗೆ 1 ಕಾಸು ತೆರಿಗೆ ಹಾಕಬಹುದು.

But if it is a company like Ganesha Beedi Company and the turnover exceeds 1 lakh or 2 lakhs, let it be 3 pies. If it is 6 lakhs, let it be six pies. This will be an effective way of preventing import from other States. All the beedi manufacturers in our State are poor and their turnover does not exceed ten to fifteen thousand rupees. So, why don't you fix a slab rate system on the turnover basis ? If the turnover is one lakh and below, let the rate be one pie ; if it exceeds one lakh and less than three lakhs, 3 pies ; if it is above 3 lakhs, let it be 0-1-6. If you apply the same rate, whether it is a small or a big turnover, the persons whose turnovers are large will survive and all the small people will vanish. These matters should be thought over leisurely. My complaint is that the Government is very hasty ; and, in their greed and enthusiasm to get as much money as possible, they hustle through and afterwards repent.

So, Sir, on this ground, I oppose this Bill.

ಶ್ರೀ ಕಡಿದಾಳ್ ಮಂಜಪ್ಪ.—ಅಧ್ಯಕ್ಷರೇ, ಈ ಮಸೂದೆಯ ಮೇಲೆ ಮಾತನಾಡಿದ ಮಾನ್ಯಸದಸ್ಯರ ಅಭಿಪ್ರಾಯಗಳನ್ನು ಬಹಳ ಎಚ್ಚರಿಕೆಯಿಂದ ಮತ್ತು ಕುತೂಹಲದಿಂದ ಕೇಳಿದ್ದೇನೆ. ತೆರಿಗೆ ಹಾಕುವಾಗ ಯಾರೇ ಆಗಲಿ, ತೆರಿಗೆಯನ್ನು ಕೊಡುತ್ತೇವೆಂದು ಮಸೂದೆಯನ್ನು ಸ್ವಾಗತಿಸಿ ಸಂತೋಷವಾಗಿ ಒಪ್ಪುವುದಿಲ್ಲ.

Sri K. PATTABHIRAMAN.—That is a stock argument. There is nothing new in it.

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲಿಯೂ ಅನುಕೂಲ ಬೇಕು ಎಂದು ಹೇಳುವುದು stock argument ಎಂದು ಹೇಳುತ್ತೇನೆ. ಕೆರೆ ನಿರ್ಮಾಣದ ಪ್ರಶ್ನೆ ಬಂದಾಗ ಆ ತಾಲ್ಲೂಕಿಗೆ ಏನು ಮಾಡಿದ್ದಾರೆ, ಈ ತಾಲ್ಲೂಕಿಗೆ ಏನು ಮಾಡಿದ್ದಾರೆ ಎಂಬ ಪ್ರಶ್ನೆಗಳು ಸುರಿಮಳೆ ಆಗುತ್ತವೆ. ಕೆರೆಗಳ ಜೀರ್ಣೋದ್ಧಾರ ಪ್ರಶ್ನೆ ಬಂದಾಗ ಅಲ್ಲಿ ನಿಧಾನವಾಗುತ್ತದೆ, ಇಲ್ಲಿ ನಿಧಾನವಾಗುತ್ತದೆ ಎಂಬ ವಾದವನ್ನು ಮುಂದಿಡುತ್ತಾರೆ. ಕುಡಿಯುವ ನೀರಿನ ಭಾವಿಗಳನ್ನು ಹಳ್ಳಿಗಳ ಕಡೆ ಏರ್ಪಾಡು ಮಾಡುವುದಕ್ಕೆ ಸರ್ಕಾರದವರು ಲಕ್ಷ್ಯ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಸ್ಕೂಲುಗಳನ್ನು ಸಾಕಾದಷ್ಟು ಸಂಖ್ಯೆಯಲ್ಲಿ ಮಂಜೂರುಮಾಡಿಲ್ಲ ಎಂದು ನಾನಾ ರೀತಿಯಲ್ಲಿ ಸರ್ಕಾರದವರು ಕರ್ತವ್ಯಲೋಪವನ್ನು ಮಾಡಿದ್ದಾರೆಂದು ವಾದವನ್ನು ಹೂಡುತ್ತಾರೆ. ಆದರೆ ತೆರಿಗೆ ಹಾಕುವ ಪ್ರಶ್ನೆ ಬಂದಾಗ್ಯೆ ತೆರಿಗೆಯಿಂದ ಬಡವರಿಗೆ ತೊಂದರೆಯಾಗುತ್ತದೆ, ಬೀಡಿ ಸೇದುವವರಿಗೆ ತೊಂದರೆಯಾಗುತ್ತದೆ, ಕೆಲಸ ಮಾಡುವವರಿಗೆ ತೊಂದರೆಯಾಗುತ್ತದೆ, ಬೀಡಿ ತಯ್ಯಾರುಮಾಡುವವರಿಗೆ ತೊಂದರೆಯಾಗುತ್ತದೆಂದು ಮುಂತಾಗಿ ವಾದ ಮಾಡುತ್ತಾರೆ. ಹೀಗೆ ಬಡವರ ಹೆಸರನ್ನು ಉಪಯೋಗಿಸಿಕೊಂಡು ಪ್ರತಿಯೊಂದು ಸಂದರ್ಭದಲ್ಲೂ ಕೂಡ ವಾದಮಾಡುವುದು ಸರಿಯಲ್ಲ. ಶ್ರೀ ಎಸ್. ಗೋಪಾಲಗೌಡರು ಮತ್ತು ಇತರ ಮಿತ್ರರು ಈ ಮಸೂದೆಯನ್ನು ಸರ್ಕಾರದವರು ಜಾರಿಗೆ ತಂದರೆ ಕಾಂಗ್ರೆಸ್ ಪಕ್ಷಕ್ಕೆ ಬರತಕ್ಕ ಓಟಿನಲ್ಲಿ ಶೇಕಡ 25 ರಷ್ಟನ್ನು ಅವರು ಕಳೆದುಕೊಳ್ಳುತ್ತಾರೆಂದು ಹೇಳಿದರು. ಓಟಿಗೋಸ್ಕರವಾಗಿ ಕಾಂಗ್ರೆಸ್ ಪಕ್ಷದವರು ಕೆಲಸಮಾಡುತ್ತಾ ಇಲ್ಲ. ದೇಶದ ಸೌಖ್ಯವನ್ನು ಲಕ್ಷ್ಯದಲ್ಲಿಟ್ಟುಕೊಂಡು ಓಟು ಬರಲಿ ಅಥವಾ ಬಾರದೆ ಇರಲಿ ಅವರು ಮಾಡತಕ್ಕ ಕೆಲಸವನ್ನು ನಿಷ್ಪಕ್ಷಪಾತವ್ವಾಗಿ ಮಾಡಬೇಕು ಎಂದು ಅವರು ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ ಎಂಬುದಾಗಿ ಅವರಿಗೆ ನಾನು ವಿನಯಪೂರ್ವಕವಾಗಿ ಅರಿಕೆಮಾಡಿಕೊಳ್ಳುತ್ತೇನೆ. 1948 ನೇ ಇಸವಿಯಿಂದ ಬೀಡಿಯಮೇಲೆ ಮಾರಾಟ ತೆರಿಗೆಯನ್ನು ವಿಧಿಸುತ್ತಿದ್ದೇವೆ. ಇದುವರೆಗೆ ರೂಪಾಯಿ ಒಂದಕ್ಕೆ ಮೂರುಕಾಸಿನ ತೆರಿಗೆಯನ್ನು ಬೀಡಿ ವ್ಯಾಪಾರಿಗಳು ಕೊಡುತ್ತಿದ್ದಾರೆ. ಕಳೆದ ವರ್ಷ ಈ sales-tax ಕಾನೂನನ್ನು ವಿಮರ್ಶೆಮಾಡುವುದಕ್ಕೋಸ್ಕರ ನನ್ನ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ನೇಮಕವಾಯಿತು. ಆ ಸಮಿತಿಯವರು ಬೀಡಿಯ ವಿಚಾರದಲ್ಲಿ ವಿಧಾಯಕ ಮಾಡಿದ ತೆರಿಗೆಯನ್ನು ಆಗ ಕಡಿಮೆಮಾಡಬೇಕು ವಜಾಮಾಡಬೇಕು ಎಂಬ ಸಲಹೆಯನ್ನು ಸರಕಾರದ ಮುಂದೆ ಇಟ್ಟಿರಲಿಲ್ಲ. ಆದರೆ ಈ ಸಮಿತಿಯ ಶಿಫಾರ್ಸುಗಳಿಗೆ ಅನುಸಾರವಾಗಿ ಮಸೂದೆ ತಯಾರಾಗಿ ಈ ಮಾನ್ಯ ಸಭೆಯ ಮುಂದೆ ಬಂದಾಗ ಕೆಲವು ಮಾನ್ಯಸದಸ್ಯರು ಮದ್ರಾಸಿನಲ್ಲಿ ಬೀಡಿಗೆ ಯಾವ ತೆರಿಗೆಯನ್ನೂ ಹಾಕಿಲ್ಲ, ಅಲ್ಲಿ ಬೀಡಿಗೆ ವಿನಾಯತಿ ಕೊಟ್ಟಿದ್ದಾರೆ, ಆದ್ದರಿಂದ ಇಲ್ಲಿ ತೆರಿಗೆಯನ್ನು ಹಾಕಿದರೆ ಮದ್ರಾಸಿನಿಂದ ಬರತಕ್ಕ ಬೀಡಿಯಿಂದ ಪೈಪೋಟಿಯನ್ನು ತಡೆಗಟ್ಟುವುದು ಕಷ್ಟವಾಗುತ್ತದೆ, ಈ ಕಾರಣದಿಂದ ಕಡಿಮೆಮಾಡಬೇಕೆಂದು ಹೇಳಿದರು. ಅದು ನಿಜವೆಂದು ನಂಬಿ ಸ್ಥಳದಲ್ಲಿ ಬೀಡಿ ತಯಾರು ಮಾಡತಕ್ಕವರು ಸ್ವಲ್ಪ ಅನುಕೂಲ ಪಡೆದರೂ ಪಡೆಯಲಿ ಎಂದು ಸರ್ಕಾರದವರು ಒಂದು ಕಾಸು ತೆರಿಗೆ ಹಾಕುವುದನ್ನು ಒಪ್ಪಿಕೊಂಡರೂ ಈಗ ಮದ್ರಾಸ್ ಸರ್ಕಾರದವರು ಬೀಡಿಯಮೇಲೆ ರೂಪಾಯಿ ಆರು ಕಾಸಿನಂತೆ ತೆರಿಗೆಯನ್ನು ಹಾಕಬೇಕು ಎಂದು ತೀರ್ಮಾನಮಾಡಿ ಆ ಬಗ್ಗೆ ಶಾಸನಸಭೆಯ ಮಂಜೂರಾತಿಯನ್ನು ಪಡೆದಿದ್ದಾರೆ. ಮದ್ರಾಸಿನಲ್ಲಿ ರೂಪಾಯಿಗೆ ಆರ ಕಾಸಿನ ತೆರಿಗೆಯನ್ನು ಕೊಡುವುದನ್ನು ತಪ್ಪಿಸುವುದಕ್ಕೋಸ್ಕರ ಅಲ್ಲಿಯ ಬೀಡಿ ತಯಾರುಮಾಡತಕ್ಕವರು ಮತ್ತು ವರ್ತಕರು ಮೈಸೂರು ಮಾರ್ಕೆಟ್ ಚೆನ್ನಾಗಿದೆ ಎಂದು ಮೈಸೂರಿಗೆ ಬೀಡಿಯನ್ನು ರವಾನೆಮಾಡುವ ಅವಕಾಶವಿದೆ. ಇಲ್ಲಿಗೆ export ಮಾಡಿದರೆ ಅವರಿಗೆ ಹೇಗೆ ಅನುಕೂಲವಾಗುತ್ತದೆ ಎಂದು ಒಬ್ಬರು ಮಿತ್ರರು ಕೇಳಿದರು. ಒಂದುವೇಳೆ ಮಂಗಳೂರು ಬೀಡಿಯನ್ನು ಇಲ್ಲಿಗೆ direct ಆಗಿ export ಮಾಡಿದರೆ ಅವರು ಕೊಡತಕ್ಕದ್ದು ಒಂದು ಕಾಸು. ಒಂದು ಕಾಸು ತೆರಿಗೆಕೊಟ್ಟು ತಮ್ಮ ಮಾಲನ್ನು ಇಲ್ಲಿ ಬಿಕರಿಮಾಡುವುದು ಅನುಕೂಲವೆಂದು ಅವರು ಸ್ವಾಭಾವಿಕವಾಗಿ ಭಾವಿಸುತ್ತಾರೆ. ಅಲ್ಲಿ ಆರು ಕಾಸಿನ ತೆರಿಗೆ ಕೊಟ್ಟು ಮಾರಾಟಮಾಡುವ ಪೈಪೋಟಿ ಜಾಸ್ತಿಯಾಗುತ್ತಿದೆ ಎಂಬುದನ್ನು ಅವರು ಮರೆಯಬಾರದು. ಒಂದುವೇಳೆ ಒಬ್ಬರು dealer ಆಗಿದ್ದರೆ ಆರು ಕಾಸು ತೆರಿಗೆ ಕೊಟ್ಟು ಪುನಃ export ಮಾಡುವುದಕ್ಕೆ ಪ್ರಯತ್ನ ಮಾಡುವುದಿಲ್ಲ. If he is an ordinary dealer who has already purchased goods from Mangalore, he will not venture to export goods into Mysore State after paying 6 pies in the rupee in Madras. ಕೆಲವು ಮಾನ್ಯಮಿತ್ರರು ಮೂರು ಕಾಸಿನ ಬದಲು ಆರು ಕಾಸನ್ನು ಹಾಕಬಹುದು ಎಂದು ಹೇಳಿದರು. ಒಂದು ಗುಟ್ಟನ್ನು ಹೇಳುವುದಾದರೆ, ಇಲಾಖೆಯವರು ಆರು ಕಾಸನ್ನು propose ಮಾಡಿದ್ದರು. ನಾನು ಯೋಚನೆಮಾಡಿಬಿಟ್ಟು ಮಂಗಳೂರು ಮತ್ತು ಇತರ ಕಡೆಗಳಿಂದ ಬೀಡಿ ಇಲ್ಲಿಗೆ ಬರುವಾಗ tax ಮೂರು ಕಾಸು ಹಾಕಿದರೆ ಆತನಿಗೆ ರವಾನೆ ಖರ್ಚು ಮತ್ತು tax ಸೇರಿ ಆರು ಕಾಸು ಬೀಳಬಹುದು ಮತ್ತು ನಮ್ಮ ಸ್ಥಳದಲ್ಲಿ ಬೀಡಿ ತಯಾರುಮಾಡತಕ್ಕವರಿಗೆ ಸ್ವಲ್ಪ ಅನುಕೂಲವಾಗಲಿ ಎಂದು ಆರು ಕಾಸನ್ನು ಹಾಕುವುದಕ್ಕೆ ಬದಲಾಗಿ ಮೂರು ಕಾಸು ಹಾಕಬೇಕೆಂದು ಯೋಚನೆಮಾಡಿದೆ. ಈಗ ನಡೆದಿರುವ ವಾದ ನೋಡಿದರೆ ನನ್ನ ಯೋಚನೆ ತಪ್ಪೇ ಎಂದು ಅನ್ನಿಸುತ್ತದೆ. ಮಾನ್ಯಮಿತ್ರರಾದ ಶ್ರೀ ಮುಲ್ಕ ಗೋವಿಂದರೆಡ್ಡಿಯವರಿಗೆ ಬಡವರ ಮೇಲೆ ಮತ್ತು ಬೀಡಿ ತಯಾರುಮಾಡತಕ್ಕ ಜನರಮೇಲೆ ಎಷ್ಟು ಮಮತೆ ಇದೆಯೋ ಅಷ್ಟೇ ಮಮತೆ ಈ ಕಡೆ ಇರತಕ್ಕ ಸದಸ್ಯರಿಗೂ ಇದೆಯೆಂದು ಅವರಲ್ಲಿ ಅರಿಕೆಮಾಡಿಕೊಳ್ಳುತ್ತೇನೆ. ಹೋದ ವರುಷ ಬೀಡಿ ಸಂಬಂಧವಾಗಿ ಇದೇ ವಾದವನ್ನು ಸರ್ಕಾರದ ಮುಂದೆ ಇಟ್ಟಿದ್ದರು. ಮದ್ರಾಸಿನಲ್ಲಿ ಬೀಡಿಗೆ ತೆರಿಗೆಯಿಲ್ಲ, ಇಲ್ಲಿ ನಾವು ತೆರಿಗೆ ಹಾಕಿದರೆ ಅವರ ಪೈಪೋಟಿ ತಡೆದುಕೊಳ್ಳುವುದಕ್ಕೆ ಕಷ್ಟವಾಗುತ್ತದೆ, ಆದ್ದರಿಂದ ತೆರಿಗೆಯನ್ನು ವಜಾಮಾಡಿ ಎಂದು ಹೇಳಿದರು. ಈಗ ಮದ್ರಾಸಿನಲ್ಲಿ ತೆರಿಗೆ ಮೂರು ಕಾಸು ಅಲ್ಲ. ಆರು ಕಾಸನ್ನು ಹಾಕಿದ್ದಾರೆ. ಅನೇಕ ಮಾನ್ಯಸದಸ್ಯರಿಗೆ ಗೊತ್ತಿರುವಂತೆ ಮೈಸೂರಿನಲ್ಲಿ ಖರ್ಚಾಗತಕ್ಕ ಬೀಡಿಗಳು ಬಹುಪ್ರಮಾಣದಲ್ಲಿ ಬೇರೆಕಡೆಗಳಿಂದ ಬರುತ್ತವೆ. ಆದ್ದರಿಂದ ತೆರಿಗೆಯನ್ನು ಹಾಕಿದರೆ ಬೇರೆ ಕಡೆಯಿಂದ ಯಾರು ಮಾಲನ್ನು ಕಳುಹಿಸುತ್ತಾರೋ ಅವರ ಮೇಲೆ ಹೆಚ್ಚು ತೆರಿಗೆ ಬೀಳುತ್ತದೆ. ಅವರು ಮೂರು ಕಾಸು ತೆರಿಗೆ ಕೊಡುವ ಜೊತೆಗೆ ರವಾನೆ ಚಾರ್ಜನ್ನು ಕೂಡ ವಹಿಸಿಕೊಳ್ಳಬೇಕಾಗುತ್ತದೆ. ಆದ್ದರಿಂದ ಸರ್ಕಾರದವರಿಗೆ ಸ್ವಲ್ಪ ವರಮಾನ ಬರುವುದಲ್ಲದೆ

ಅದರ ಜೊತೆಗೆ Local Manufacturers ಪೈಪೋಟಿ ಕಡಿಮೆಯಾಗುತ್ತದೆ ಎಂದು ಬಹಳ ವಿನಯಪೂರ್ವಕವಾಗಿ ಅರಿಕೆಮಾಡಿಕೊಳ್ಳುತ್ತೇನೆ. ಬೀಡಿ ವ್ಯಾಪಾರಸ್ಥರಿಗೆ ಕಿರುಕುಳ ಜಾಸ್ತಿ ಆಗುತ್ತದೆ ಎಂಬ ವಾದವನ್ನು ಮಾನ್ಯಸದಸ್ಯರೊಬ್ಬರು ಈ ಸಭೆಯ ಮುಂದೆ ಇಟ್ಟರು. ಈಗಾಗಲೇ ತೆರಿಗೆಕೊಡುತ್ತಿದ್ದಾರೆ. ಇತ್ತೀಚಿನವರೆಗೆ ಮೂರು ಕಾಸಿನ ಮೇರೆಗೆ ಕೊಡುತ್ತಿದ್ದರು. ಆದರೆ ಏಪ್ರಿಲ್ ಒಂದರಿಂದ ಒಂದು ಕಾಸು ಕೊಡುತ್ತಿದ್ದಾರೆ. ಆದ್ದರಿಂದ ತೆರಿಗೆ ಕೊಡುವ ಜವಾಬ್ದಾರಿ ತಪ್ಪುವುದಿಲ್ಲ. ಇಲ್ಲಿಯವರೆಗೆ ಏನೇನು ಕಿರುಕುಳಗಳು, ತೊಂದರೆಗಳು, ಅನುಕೂಲತೆಗಳು ಇದ್ದವೋ ಅವು ಇನ್ನು ಮುಂದೆಯೂ ಇರುತ್ತವೆ. ಕಿರುಕುಳಗಳು ಜಾಸ್ತಿಯಾಗುವುದಿಲ್ಲ. ಶ್ರೀ ಶ್ರೀನಿವಾಸಅಯ್ಯಂಗಾರ್‌ರವರು ಮಾತನಾಡುವಾಗ ಈ ಮೈಸೂರಿನಲ್ಲಿರುವ ಕಾರ್ಖಾನೆಗಳಿಗೂ ಮತ್ತು ಈ ಮಸೂದೆಯಲ್ಲಿ ಅಡಗಿರತಕ್ಕ ನಿಬಂಧನೆಗಳಿಗೂ ಸಂಬಧವಿಲ್ಲವೆಂದು ಹೇಳಿದರು. ಬೀಡಿಯ ವಿಚಾರದಲ್ಲಿ ಅದು ಇಲ್ಲದಿರಬಹುದು. ಆದರೆ ಸೀಗರೇಟ್ ವಿಚಾರದಲ್ಲಿ ಆ ರೀತಿಯಿದೆ. ಬೀಡಿಯ ವಿಚಾರದಲ್ಲೂ ಕೂಡ ನಾನು 6 ಕಾಸು ಇದ್ದದ್ದನ್ನು 3 ಕಾಸಿಗೆ ಇಳಿಸಿದ್ದರಿಂದ ಸ್ವಲ್ಪಮಟ್ಟಿಗೆ ಈ ಬಿಲ್ಲಿನ ಧ್ಯೇಯೋದ್ದೇಶಗಳ ವಿವರಣೆಯಲ್ಲಿ par ಎಂದು ಹೇಳಿರುವುದಕ್ಕೆ ತದ್ವಿರುದ್ಧವಾಗಿದೆ.

300 per cent increase ಆಗಿದೆಯೆಂದು ಕೆಲವರು ಹೇಳಿದರು. ಇದುವರೆಗೂ 3 ಕಾಸನ್ನು ಕೊಡುತ್ತಲೇ ಇದ್ದರು ; ವಸೂಲು ಮಾಡುತ್ತಲೇ ಇದ್ದರು. ಇವೊತ್ತಿನವರೆಗೂ 3 ಕಾಸಿನಂತೆ ಕೊಡುತ್ತಿದ್ದವರಿಗೆ ಈಗ ಅದೇ ತೆರಿಗೆ ಇರಲಿ ಎಂದು ಹೇಳಿದರೆ ಶೇಕಡ 300 ಹೆಚ್ಚಿಸಿದಂತಾಗುವುದಿಲ್ಲ. ಹೊಸದಾಗಿ ತಿದ್ದುಪಡಿಯಾದ ಆಕ್ಟ್ ಪ್ರಕಾರ ವಸೂಲಾಗತಕ್ಕ ದರಗಳನ್ನು ಗಣನೆಗೆ ತೆಗೆದುಕೊಂಡರೆ ಮಾತ್ರ ಆ ರೀತಿ ಆಗುತ್ತದೆ. ಮನುಷ್ಯ ಒಂದು ಯಂತ್ರವಲ್ಲ. ಯಂತ್ರವಾಗಿದ್ದರೆ ಶಾಶ್ವತವಾದ ಕಾನೂನೊಂದನ್ನು ಮಾಡಿ ಬದಲಾವಣೆಗೆ ಅವಕಾಶವಿಲ್ಲದಂತೆ ಮಾಡಬಹುದಾಗಿತ್ತು. ಮಾನವ ಸ್ವಭಾವ ಈಗಿರುವ ರೀತಿಯಲ್ಲಿರುವವರೆಗೂ ಯಾವ ಕಾನೂನೇ ಆಗಲಿ ಶಾಶ್ವತವಾಗಿರುವುದಿಲ್ಲ. ಕಾಲಧರ್ಮಕ್ಕನುಸಾರವಾಗಿ ಅದು ಬದಲಾವಣೆಯಾಗಲೇಬೇಕು. ಮಾನ್ಯ ಮಿತ್ರರಾದ ಮುಲ್ಕ ಗೋವಿಂದರೆಡ್ಡಿಯವರು ಒಂದು ನಿಲುವಳಿ ಸೂಚನೆಯನ್ನು ತಂದಿದ್ದರು. ನೆಲಗಡಲೆಯ ವಿಚಾರದಲ್ಲಿ ಜನರಿಗೆ ತೊಂದರೆಯಾಗಿ ರೂಲ್ಸ್‌ಮಾಡಿರುವುದರಿಂದ ಅದನ್ನು ತಿದ್ದುಪಡಿ ಮಾಡಬೇಕೆಂಬುದೇ ಅವರ ಸೂಚನೆಯ ಸಾರಾಂಶವಾಗಿದೆ.

Sri Mulka GOVINDA REDDY.—My contention was that under the rule making power the clause that was introduced by the Government was repugnant to the spirit of the Act and was repugnant to the expressed wish of the legislature.

Sri Kadidal MANJAPPA.—Whatever may be his contention, the change is there. The rules were framed in accordance with the provisions contained in the Act. If the gentleman unreasonably contends that it is not so, what can I do ? At present the Minister is not drafting the legislation ; the experts are draftng the legislation.

Sri Mulka GOVINDA REDDY.—We are seeing the fate of legislative enactments and how they are being received in the Legislative Council.

Sri Kadidal MANJAPPA.—All right ; we will test it.

ಆದ್ದರಿಂದ ಕಾನೂನುಗಳ ಅವಶ್ಯಕತೆ ಬಿದ್ದಾಗ ತಿದ್ದುಪಡಿ ಮಾಡಲೇಬೇಕು. ತಮ್ಮ ಸಲಹೆಯ ಪ್ರಕಾರ ನೆಲಗಡಲೆಕಾಯಿನ ಮಾರಾಟಕ್ಕೆ ಸಂಬಂಧಪಟ್ಟ ವಿಚಾರವನ್ನೂ ಕೂಡ ಸರ್ಕಾರದವರು ಪರಿಶೀಲನೆ ಮಾಡುತ್ತಿದ್ದಾರೆ. ಆ ಬಗ್ಗೆ ಒಂದು ಮಸೂದೆಯನ್ನು ತಯಾರು ಮಾಡಬೇಕೆಂದು ಮಾಡಿದ್ದೇವೆ. ಯಾವ ವಿಚಾರದಲ್ಲೇ ಆಗಲಿ, ತಾವೇ ಆಗಲಿ, ಕಾನೂನು ರಚಿಸತಕ್ಕವರೇ ಆಗಲಿ ಬೃಹಸ್ಪತಿಗಳಲ್ಲ. ಯಾವುದೋ ಸನ್ನಿವೇಶದಲ್ಲಿ ಕಾನೂನು ಮಾಡುತ್ತೇವೆ. ಸನ್ನಿವೇಶ ಬದಲಾವಣೆಯಾದ ಹಾಗೆ ಬದಲಾವಣೆ ಮಾಡಬೇಕಾಗುತ್ತದೆ. ಅದಕ್ಕೆ ಸರ್ಕಾರದವರಿಗೆ ಬುದ್ಧಿ ಸ್ಥಿಮಿತವಾಗಿಲ್ಲವೆಂದು ಹೇಳುವುದು ಸರಿಯಲ್ಲ. ಶ್ರೀಮರ್ಾ ಇಮಾಂಸಾಹೇಬರು ಮಂತ್ರಿಗಳಾಗಿದ್ದರು. ನಾನು ಆಗ ಸದಸ್ಯನಾಗಿದ್ದೆ. ಅದರಮೇಲೆ ತಿದ್ದುಪಡಿಗಳನ್ನು ತಂದು ಆ ಯುದ್ಧಕಾಲದಲ್ಲೇ ಅವರು ಎಷ್ಟೋ ಬದಲಾವಣೆಗಳನ್ನು ಮಾಡುತ್ತಿದ್ದರು. ಆಗ್ಯೆ ತಿದ್ದುಪಡಿಗಳು ಒಂದರಮೇಲೊಂದು ಕೊನೆ ಮೊದಲೇ ಇಲ್ಲದೆ ಬರುತ್ತಿದ್ದವು.

ಶ್ರೀಮರ್ಾ ಇಮಾಂರವರು.—ಇಲ್ಲ, ಇಲ್ಲ. ನಮ್ಮ ಕಾಲದಲ್ಲಿ, ಒಂದು ಕಾನೂನು ಮಾಡಿದರೆ ಹತ್ತು ವರ್ಷಗಳಾದರೂ ತಿದ್ದುಪಡಿ ಮಾಡುತ್ತಿರಲಿಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ದೇಶದಲ್ಲಿ ಏನೇ ಬದಲಾವಣೆಯಾದರೂ ತಾವು ನೋಡಬೇಕಾದದ್ದೇ ಇರುತ್ತಿರಲಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಅವರ ಕಾಲದಲ್ಲಿ ನಾವು ಹೇಳುವುದೆಲ್ಲಾ ಅರಣ್ಯರೋದನ. ನಾವಾದರೋ ಯಾವುದಾದರೂ ಮಸೂದೆ ತರಬೇಕಾದರೆ ಬಹಳ ಯೋಚನೆಮಾಡಿ ತರುತ್ತೇವೆ. ಆಗಿನ ಕಾಲದಲ್ಲಿ ಯಾವ ಯೋಚನೆಯೂ ಇರುತ್ತಿರಲಿಲ್ಲ. ಮನಸ್ಸಿಗೆ ಬಂದಹಾಗೆ ಕಾನೂನು ಮಾಡುತ್ತಿದ್ದರು.

ಶ್ರೀ ಜೆ. ಮಹಮ್ಮದ್ ಇಮಾಂ.—ಈಗ ಸೆಕ್ರೆಟೆರಿಯವರೇ ಎಲ್ಲವನ್ನೂ ಮಾಡುತ್ತಿದ್ದಾರೆ. You are in the hands of the Secretaries.

A MEMBER.—Slab system ?

ಶ್ರೀ ಕಡಿದಾಳ್ ಮಂಜಪ್ಪ.—ಒಂದು ಪದಾರ್ಥಕ್ಕೇ ಹೊಸದಾಗಿ Slab system ತರುವುದಕ್ಕಾಗುವುದಿಲ್ಲ. ಈಗ Slab system ಹಾಕಿರುವುದು Multi-pointಗೆ, ಅದನ್ನು ಇದಕ್ಕೂ ಅನ್ವಯಿಸಿದರೆ ತಂಬಾಕಿನವರಿಗೆ ತೊಂದರೆಯಾಗುತ್ತದೆ.

ಒಟ್ಟಿನಲ್ಲಿ ಬಹುಜನರ ಅಭಿಪ್ರಾಯದಲ್ಲಿ ಈ ಮಸೂದೆ ಚೆನ್ನಾಗಿದೆಯೆಂದು ಹೊರಪಟ್ಟಿದೆ. ಬೀಡಿ ಸೇದುವ ಜನರು ಇದುವರೆಗೆ ಎಷ್ಟು ಖರ್ಚುಮಾಡುತ್ತಿದ್ದರೋ ಅದಕ್ಕಿಂತ ಹೆಚ್ಚೇನೂ ಖರ್ಚುಮಾಡಬೇಕಾದ್ದಿಲ್ಲ. 1948ನೆಯ ಇಸವಿಯಿಂದ ಇದೇ ಪ್ರಕಾರ ಕೊಡುತ್ತಲೇ ಬಂದಿದ್ದರು. ಅದು ತಿದ್ದುಪಡಿಯಾಗಿ ಒಂದು ಕಾಸು ಎಂದು ಮಾಡಲಾಗಿತ್ತು. ಮದರಾಸಿನಲ್ಲಿ exempt ಮಾಡಿದ್ದಾರೆಂದು ಹೇಳಿ ನಮ್ಮಲ್ಲಿಯೂ ಕಡಮೆ ಮಾಡಬೇಕೆಂದು ವಾದ ಬಂದಿತ್ತು. ಈಗ ಮದರಾಸಿನವರು ಬೀಡಿಯನ್ನು exempt ಮಾಡದೆ

(ಶ್ರೀ ಕಡಿದಾಳ್ ಮಂಜಪ್ಪ.)

6 ಕಾಸುಗಳನ್ನು ವಿಧಿಸಿದ್ದಾರೆ. ಹೀಗಿರುವಾಗ ನಾವು 3 ಕಾಸನ್ನಾದರೂ ಕೊಡಿ ಎಂದು ಕೇಳುತ್ತಿದ್ದೇವೆ ಅಷ್ಟೆ. ಇದು ನ್ಯಾಯವಾಗಿದೆ. ತಾವಿದನ್ನು ಒಪ್ಪಿಕೊಳ್ಳಬೇಕು. ತಾವು ವಾದ ಮಾಡಬೇಕು ಎಂಬ ಮನಸ್ಸಿನಿಂದ ತಾವೇ ಬಡವರ ಪ್ರತಿನಿಧಿಗಳೆಂದು ತಿಳಿದು ವಾದ ಮಾಡಕೂಡದು. ಬಡವರ ಮೇಲೆ ನಮಗೂ ಮಮತೆಯಿದೆ. ಬಡತನದಿಂದಲೇ ಬಂದವರನೇಕರು ಇಲ್ಲಿದ್ದಾರೆ. ಆದ್ದರಿಂದ ಸೂಕ್ತವಾದ ಈ ಮಸೂದೆಯನ್ನು ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ.

Mr. SPEAKER.—Tha question is:

"That the Mysore Sales Tax (Second Amendment) Bill, 1955, be taken into consideration."

The motion was adopted.

Mr. SPEAKER.—Clauses of the Bill. Clause 2. The question is:

"That Clause 2 stand part of the Bill."

The motion was adopted.

Clause 2 was added to the Bill.

Mr. SPEAKER.—Clause 1, Title and Preamble. The question is:

"That Clause 1, title and preamble stand part of the Bill."

The motion was adopted.

Clause 1, the Title and the Preamble were added to the Bill.

Motion to pass.

Sri Kadidal MANJAPPA.—Sir, I move:

"That the Mysore Sales Tax (Second Amendment) Bill, 1955, be passed."

Mr. SPEAKER.—The question is:

"That the Mysore Sales-Tax (Second Amendment) Bill, 1955 be passed.

The motion was adopted.

MADRAS TOBACCO (TAXATION OF SALES AND REGISTRATION) (MYSORE AMENDMENT) BILL, 1955.

Motion to consider.

Sri Kadidal MANJAPPA (Minister for Revenue and Public Works).—Sir, I beg to move:

"That the Madras Tobacco (Taxation of Sales and Registration) (Mysore Amendment) Bill, 1955 be taken into consideration."

Sir, this is a measure similar to the one which we have just now passed. In Madras, the Madras Sales-Tax was in force and the rates which were being levied have been enhanced; on account of the amendment made in the Madras Act, by the Madras Government. Therefore in order to enhance the rate to be at par with the rates in Mysore, this Bill has been introduced.

Mr. SPEAKER.—Motion moved:

That the Madras Tobacco (Taxation of Sales and Registration) (Mysore Amendment) Bill, 1955 be taken into consideration.

Sri Mulka GOVINDA REDDY (Chitaldrug).—I want one clarification. After the merger of Bellary, what were the rates prevailing in Madras, Sir?

Sri Kadidal MANJAPPA.—I shall read the relevant provision in the Madras Tobacco (Taxation of Sales and Registration) Act, 1953, as in force in Bellary District."

"On sales of cigarettes not falling under sub-clause (1) above, the rates of tax shall be as follows.—

(i) On cigarettes which are sold by the person taxed at less than six pies per cigarette and are to be sold at the retail point to the consumer at not more than six pies per cigarette.	Ten per cent of the turnover.
(ii) On cigarettes which are sold by the person taxed at less than nine pies per cigarette, and are to be sold at retail point to the consumer at not more than nine pies per cigarette.	Twenty per cent of the turnover.
(iii) On sales of cigarettes not falling under items (i) or (ii) above.	Thirty per cent of the turnover."

In the case of beedi, it was exempt from taxation till the amendment was passed recently in Madras.

Sri Mulka GOVINDA REDDY.—On cigarettes which are sold by the person taxed at less than 3 pies per cigarette and are to be sold at the retail point to the consumer at not more than 3 pies per cigarette—was that exempted, Sir ?

Sri Kadidal MANJAPPA.—It was not exempted but they were paying at a lesser rate.

Sri Mulka GOVINDA REDDY.—What were the rates prevailing in Mysore State after the merger and before 1st April 1955 on all these varieties, Sir ?

Sri Kadidal MANJAPPA.—These rates you can find in the schedule annexed to the Act of 1954.

> " Three pies in the rupee and in case of cigarettes which are sold by the first dealer at less than 6 pies per cigarette and are to be sold at any retail point to the consumer at not more than 6 pies per cigarette—10 per cent of such turnover."

Sri Mulka GOVINDA REDDY.—Why did they not bring an amendment to bring the rates that were prevailing in Bellary at par with those that were prevailing in Mysore before first of April ?

Sri Kadidal MANJAPPA.—The amendment Bill has been just now passed to keep the rates at par. This Bill has been introduced not with the previous rates.

Sri Mulka GOVINDA REDDY.—The rate of tax that people in Bellary were paying on these cigarettes, *i.e.*, item (i) were different from those that the people in Mysore were paying.

Sri Kadidal MANJAPPA.—There was slight variation between the rates. Now the intention is to introduce as early as possible the Mysore Sales Tax Act. But in the meanwhile, it is necessary that there should be similarity in the rates between Bellary and rest of the areas in Mysore.

Mr. SPEAKER.—The question is :

> " That the Madras Tobacco (Taxation of Sales and Registration) (Mysore Amendment) Bill, 1955 be taken into consideration."

The motion was adopted.

Mr. SPEAKER.—There is no amendment to this Bill. Clauses 2 and 3.

The question is:

> " That Clauses 2 and 3 stand part of the Bill."

The motion was adopted.

Clause 2 and 4 were added to the Bill.

Mr. SPEAKER.—Clause 1, Title and Preamble.

The question is:

> " That Clause 1, the Title and the Preamble stand part of the Bill."

The motion was adopted.

Clause 1, the Title and the Preamble were added to the Bill.

Motion to pass.

Sri Kadidal MANJAPPA.—Sir I move:

> " That the Madras Tobacco (Taxation of Sales and Registration) (Mysore Amendment) Bill, 1955, be passed."

Mr. SPEAKER.—The question is :

> " That the Madras Tobacco (Taxation of Sales and Registration) (Mysore Amendment) Bill, 1955, be passed."

The motion was adopted.

MYSORE SALES TAX (AMENDMENT) BILL, 1955.

Motion to consider.

4-30 P. M.

Sri Kadidal MANJAPPA (Minister for Revenue and Public Works).—I beg to move :

> " That the Mysore Sales Tax (Amendment) Bill, 1955, as reported by the Select Committee, be taken into consideration."

(SRI KADIDAL MANJAPPA.)

This Bill was considered at length on the floor of this House. This had been referred to the Select Committee. The Select Committee after considering the suggestions made on the floor of the House and after considering all the clauses have made slight changes in some of the provisions of the Bill. The Bill provides for the appointment of an Appellate Tribunal. That has been welcomed by the business community. It also provides for certain changes in the existing Act. I do not think there is any controversy in regard to the provisions of this Bill because it has been considered at length by the Select Committee.

The changes made by the Select Committee are: while levying an advance tax it should only be collected at the expiry of the month or quarter to which the tax relates. That is in relation to clause 4. In regard to the revisional powers of the Commissioner, it has been provided that this power should not be exercised by the Commissioner before the expiry of 60 days in the case of an appealable order. In clause 16, a slight change is made to compel the assessing authority to modify or amend the assessment order in accordance with the decision of the Appellate Tribunal. In regard to the provision which relates to the levy of fees, the Select Committee thought that it would be correct if the minimum is fixed at Rs. 20 and the maximum at Rs. 200. These are the changes made. As regards the other provisions, no change is made. On the whole, this measure is very useful and it is in the interests of the business community. I am sure the House will wholeheartedly approve the measure.

Mr. SPEAKER.—Motion moved:

"That the Mysore Sales Tax (Amendment) Bill, 1955, as reported by the Select Committee, be taken into consideration."

Sri G. BASAPPA (Hosadurga).—Why do you want a Deputy Commissioner for that?

Sri Kadidal MANJAPPA.—It is open to the Government to appoint a part-time officer of the Government to be a member of the Board. If there is not sufficient work there is no need for an officer of the status of the Deputy Commissioner. At the same time I agree with the Hon'ble Member that there should be a provision.

*ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ. ನರಸೀಪುರ).—ಈ ಬಿಲ್ಲನ್ನು ನಾನು ವಿರೋಧಿಸುತ್ತೇನೆ. ಈ ಕ್ಲಾಜ್ 4ರಲ್ಲಿ ಸೇಲ್ಸ್ ಟ್ಯಾಕ್ಸನ್ನು ವಸೂಲ್ಮಾಡತಕ್ಕ ಅಧಿಕಾರ ಹೇಳಿದ್ದಾರೆ. ಆದರೆ ಸೇಲ್ಸ್ ಟ್ಯಾಕ್ಸ್ ಎಂಬ ಪದದ ಅರ್ಥ ತೆರಿಗೆ ವಸೂಲ್ಮಾಡುವುದೆಂದಿದ್ದಾಗ್ಯೂ—ಅದನ್ನು ವ್ಯಾಪಾರ ಆದನಂತರ ವಸೂಲ್ಮಾಡಬೇಕು. ಆದರೆ . . . .

ಶ್ರೀ ಕಡಿದಾಳ್ ಮಂಜಪ್ಪ.—ಈವರೆಗೆ ಈ ಸೇಲ್ಸ್-ಟ್ಯಾಕ್ಸ್ ಎಂಬ ಒಂದು ಪದದ ಮೇಲೆ ಎರಡು-ಮೂರು ಘಂಟೆಗಳಿಂದಲೂ ವಾದಮಾಡಿರುತ್ತೀರಿ. ಈಗ ಈ ಪದವನ್ನು ಸೆಲೆಕ್ಟ್ ಸಮಿತಿಯವರು ಕೂಲಂಕಷವಾಗಿ ವಿಮರ್ಶೆಮಾಡಿ ಅನಂತರ ಅವರು ಇದಕ್ಕೆ ಈ ರೀತಿ ಒಂದು proviso ಇದ್ದರೆ ಏನೂ ತೊಂದರೆ ಆಗುವುದಿಲ್ಲ ಎಂದು ಸೇರಿಸಿದ್ದಾರೆ. ಟರ್ನ್ಓವರ್ ಆಧಾರದ ಮೇಲೆ ಈ ತೆರಿಗೆಯನ್ನು ವಸೂಲ್ಮಾಡಬಹುದೆಂದು ಹೇಳಿದ್ದಾರೆ. ಒಂದು ವರ್ಷದ ತೆರಿಗೆಯ ಆಧಾರದ ಮೇಲೆ ಮುಂದಿನ ಸಾಲಿನಲ್ಲಿ ಆ ತೆರಿಗೆ ವಸೂಲ್ಮಾಡಿದರೆ ಅದರಿಂದೇನೂ ಅಷ್ಟು ಬಾಧಕವಾಗಲಾರದು. According to the practice and the procedure in vogue, sales-tax is being collected in advance pending final assessment, not before the accrual of the turnover. If the Hon'ble Member has in his mind that the Government is going to collect sales-tax before there is a turnover, it is not correct. We only collect at the end of the month after there is a turnover; we only collect at the end of the quarter after the turnover, not before that. It may be at the end of the month or the quarter. Even according to the existing practice, we do not collect the tax before there is a turnover. On account of the decision of the Madras High Court, we are seeking to regularise the procedure. That is all. There will not be any change in the existing method and nobody need have any apprehension in his mind that the Government is going to adopt altogether a novel method of collecting tax in advance.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—11ನೆಯ ಕ್ಲಾಜಿನಲ್ಲಿ ಒಂದು ಕಡೆ ಈ ಬಗ್ಗೆ ತಾವೊಂದು proviso ಇಟ್ಟುಕೊಂಡಿದ್ದೀರಿ. ಹಾಗೆ ಒಂದು ಕಡೆ ಇಟ್ಟುಕೊಂಡಿದ್ದರೂ ಪುನಃ ಏತಕ್ಕೆ ಮತ್ತೊಂದು ಕಡೆ ಈ proviso ಇರಬೇಕೆಂದು ಹೇಳುತ್ತಿದ್ದೀರಿ? ಇದಕ್ಕೆ ಟೈಂ ಲಿಮಿಟ್ಟೇನಾದರೂ ಉಂಟೆ?

Sri Kadidal MANJAPPA.—According to the Board of Revenue Bill which you were pleased to pass only recently, all

pending cases before Government will be transferred to the Board for disposal. If the party chooses to have his case adjudicated upon by the Appellate Tribunal, he must be given an opportunity. Whether he wants the case to be disposed of by the Appellate Tribunal or by the Revenue Board, it is only an alternative remedy given to him because till to-day he never dreamt that there would be any tribunal or a Revenue Board. Therefore, it is but right that he should be given an option in the matter.

*Sri Mulka GOVINDA REDDY (Chitaldrug).—Regarding this Bill, I definitely and specifically point out that though they may try to provide an opportunity for the assessee to prefer an appeal to the Revenue Board instead of to the Appellate Tribunal, there is no such specific provision mentioned in this Bill. According to the provision of this Bill, section 11 definitely states that if any person does not want his petition to be disposed of by the Appellate Tribunal, it may be disposed of by the Commissioner or the State Government as the case may be.

But in this particular case, it shall be disposed of by the Commissioner or the State Government and no option is provided to the assessee to prefer his appeal.

Sri Kadidal MANJAPPA.—I may remind the Hon'ble Member that the Commissioner and the Government refer the case to the Revenue Board, after the Revenue Board Bill becomes law.

Sri Mulka GOVINDA REDDY.—According to the wording of this, it says:

> "Provided that if within the thirty days aforesaid, the applicant intimates in writing to the State Government or the Commissioner, as the case may be, that he does not desire the application to be disposed of by the Appellate Tribunal, the application shall be disposed of by the Commissioner or the State Government, as the case may be, as if this Act had not been passed."

So, it is definitely and specifically stated that it shall be disposed of by the Commissioner or the State Government. Instead of giving room to the Government or the Commissioner to seek to this provision, a specific provision giving an opportunity to the assessee to prefer an appeal to the Revenue Board will be more welcome.

Sri Kadidal MANJAPPA.—I suppose the Hon'ble Member has not gone through the provisions contained in the Revenue Board Bill. There, the Commissioner means the Revenue Board with reference to appeals and revision. Government means the Revenue Board. So the Commissioner and the Government mentioned here refer to the Revenue Board. I may assure my Hon'ble friend that we are going to constitute the Reveenu Board shortly and Government is not anxious to dispose of these cases.

Mr. SPEAKER.—The question is:

> "That the Mysore Sales Tax (Amendment) Bill, 1955, as reported by the Select Committee be taken into consideration."

The motion was adopted.

Mr. SPEAKER.—Clauses. There are no amendments. I will put clauses 2 to 12.

> "That Clauses 2 to 12 stand part of the Bill."

The motion was adopted.

Clauses 2 to 12 were added to the Bill.

Mr. SPEAKER.—Clause 1. Title and Preamble. The question is:

> "That Clause 1, the Title and the Preamble stand part of the Bill."

The motion was adopted.

Clause 1, the Title and the Preamble were added to the Bill.

Motion to pass.

Sri Kadidal MANJAPPA.—Sir, I move that the Mysore Sales-Tax (Amendment) Bill, 1955, as reported by the Select Committee, be passed.

Mr. SPEAKER.—The question is:

"That the Mysore Sales-Tax (Amendment) Bill, 1955, as reported by the Select Committee, be passed."

The motion was adopted.

Mr. SPEAKER.—Tomorrow, discussion on the Fact Finding Committee Report will be resumed. I will let you know the time required, tomorrow.

Sri K. HANUMANTHAIYA (Chief Minister).—And also we may have to sit overtime.

Mr. SPEAKER.—The House will rise and meet tomorrow at 12 NOON.

The House adjourned for the day at Forty-five Minutes past Four of the Clock to meet again on Tuesday, the 19th April 1955 at Twelve of the Clock.

WD 4508—GPB—550—1-10-55

MYSORE LEGISLATIVE ASSEMBLY

FORTY-FIFTH DAY.

Tuesday, 19th April 1955.

The House met in the Assembly Hall, Old Public Offices, Bangalore, at Twelve of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS.

Veterinary Dispensaries in Kudligi Taluk.

Q.—708. Sri KOTRA BASAVANA GOUD (Kudligi).—

Will the Government be pleased to state :—

whether they will open a Veterinary Dispensary in each of the firka head-quarters of the Kudligi Taluk ?

A.—Dr. R. NAGAN GOWDA (Minister for Agriculture).—

No.

ಶ್ರೀ ಕೊಟ್ರ ಬಸವನಗೌಡ.—ಪಶುವೈದ್ಯಶಾಲೆಯನ್ನು ಸ್ಥಾಪಿಸುವುದರಲ್ಲಿ ಸರ್ಕಾರದ Policy ಏನು?

ಡಾ॥ ಆರ್. ನಾಗನಗೌಡ.—ಲಿನ್‌ಲಿತ್‌ಗೋ ಕಮಿಷನ್ ರಿಪೋರ್ಟಿನ ಪ್ರಕಾರ ಪ್ರತಿ 25 ಸಾವಿರ ಜಾನುವಾರುಗಳಿಗೆ ಒಂದು ಆಸ್ಪತ್ರೆ ಇರಬೇಕು ಎಂದು ಇದೆ. ಮೈಸೂರಿನಲ್ಲಿ 27 ಸಾವಿರ ಜಾನುವಾರುಗಳಿಗೆ ಒಂದು ಆಸ್ಪತ್ರೆ ಇದೆ. ಆದರೆ ಈ ರೇಟ್ ಬಳ್ಳಾರಿಗೆ ಅನ್ವಯಿಸುವುದಿಲ್ಲ.

ಶ್ರೀ ಕೊಟ್ರ ಬಸವನಗೌಡ.—ಅದು ಅನ್ವಯಿಸಬೇಕಾದರೆ ಎಷ್ಟು ವರ್ಷಗಳು ಬೇಕಾಗುತ್ತವೆ?

ಡಾ॥ ಆರ್. ನಾಗನಗೌಡ.—ಕೂಡ್ಲಿಗಿ ತಾಲ್ಲೂಕಿನಲ್ಲಿ 96 ಸಾವಿರ ಜಾನುವಾರುಗಳು ಇವೆ. ಈಗ ಅಲ್ಲಿ ಒಂದು Minor dispensary ಮತ್ತು ಇನ್ನೊಂದು Touring dispensary ಎಂದು ಎರಡಿವೆ. ಈ ವರುಷ ಈ ಎರಡು institutions ಗಳನ್ನು regular ತಾಲ್ಲೂಕ್ ಡಿಸ್ಪೆನ್ಸರಿಗಳನ್ನಾಗಿ ಮಾಡಬೇಕು ಎಂದು ಇದ್ದೇವೆ. ಇನ್ನೂ ಎರಡು ಬೇಕಾಗುತ್ತವೆ. ಮುಂದಕ್ಕೆ ಮಾಡಬೇಕು. ಈಗ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಕೊಟ್ರ ಬಸವನಗೌಡ.—96 ಸಾವಿರ ಜಾನುವಾರುಗಳು ಇವೆಯೆಂದು ಹೇಳಿದಿರಿ. ಅವುಗಳಲ್ಲಿ sheep and goats ಸೇರಿವೆಯೋ?

ಡಾ॥ ಆರ್. ನಾಗನಗೌಡ.—Dispensary ಏರ್ಪಾಡು ಮಾಡುವಾಗ Cattle Population ಮಾತ್ರ ಲೆಖ್ಖಕ್ಕೆ ತೆಗೆದುಕೊಳ್ಳುತ್ತಾರೆ; sheep ಮತ್ತು goats ಅದರೊಳಗೆ ಸೇರುವುದಿಲ್ಲ.

ಶ್ರೀ ಕೊಟ್ರ ಬಸವನಗೌಡ.—ಹೊಸಹಳ್ಳಿಯಲ್ಲಿ Touring Hospital open ಮಾಡುತ್ತೀರಾ?

ಡಾ॥ ಆರ್. ನಾಗನಗೌಡ.—ಕೂಡ್ಲಿಗಿಯಲ್ಲಿ ಒಂದು ಮತ್ತು ಕೊಟ್ಟೂರಿನಲ್ಲಿ ಇರುವ ಒಂದು Touring Dispensaryಯನ್ನು regular dispensaryಗಳಾಗಿ ಮಾಡುತ್ತೇವೆ. ಹೊಸಹಳ್ಳಿಯಲ್ಲಿ dispensary ಪ್ರಾರಂಭ ಮಾಡುವ ವಿಷಯನನ್ನು ಮುಂದಕ್ಕೆ ಆಲೋಚನೆ ಮಾಡಬೇಕು.

ಶ್ರೀ ಎಸ್. ಪರಮೇಶ್ವರಪ್ಪ.—ತಾಲ್ಲೂಕಿನಲ್ಲಿ ಎರಡು dispensary ಏರ್ಪಡಿಸಿದಂತಾಯಿತು ಅಲ್ಲವೆ?

ಡಾ॥ ಆರ್. ನಾಗನಗೌಡ.—ಈ ತಾಲ್ಲೂಕಿನಲ್ಲಿ ಎರಡು dispensary ಇಡುವ ಲೆಖ್ಖಾಚಾರವಿಲ್ಲ. ಜಾನುವಾರು ಎಷ್ಟು ಇವೆ, ಅವಕ್ಕೆ ತಕ್ಕಂತೆ ಎರಡು ಅಥವಾ ಮೂರು ಆಸ್ಪತ್ರೆಗಳು ಬೇಕೇ ಎಂಬುದನ್ನು ನೋಡಿ ಕ್ರಮೇಣ ಹೆಚ್ಚಿಸುತ್ತಾ ಹೋಗಬೇಕು.

ಶ್ರೀ ಟಿ. ಸಿ. ನಂಜುಂಡಯ್ಯ.—1955-56ನೇ ಇಸವಿಯಲ್ಲಿ ಎಷ್ಟು ಜಾನುವಾರು dispensaryಗಳನ್ನು ಪ್ರಾರಂಭ ಮಾಡಬೇಕೆಂದು ಇದ್ದೀರಿ?

Dr. R. NAGAN GOWDA.—I should like to have notice for that.

Committee to Select Films.

Q.—860. Sri S. SRINIVASA IYENGAR (T.-Narasipur).—

Will the Government be pleased to state :—

whether there is any committee to select films fit for exhibition in the theatres in Mysore State ?

A.—Sri H. SIDDAVEERAPPA (Minister for Home and Industries).—

There is no committee in Mysore State for this purpose. The Central Board of Film Censors and the Regional Boards certify the films for exhibition throughout India.

Sri S. SRINIVASA IYENGAR.—Sir, may I know in which region Mysore State has been grouped ?

*Sri H. SIDDAVEERAPPA.—I believe Madras.

Sri S. SRINIVASA IYENGAR.—Is the Censor Board a nominated body or an elected body, Sir ?

Sri H. SIDDAVEERAPPA.—I think it is a nominated body.

Sri S. SRINIVASA IYENGAR.—Is the Government of Mysore represented on that Board ?

Sri H. SIDDAVEERAPPA.—There is no representation to the Government as such, on the Board. So far as I see from the list, I do not think there is anybody from Mysore represented.

Sri S. SRINIVASA IYENGAR.—Will the Government consider the question of having the interests of Mysore State represented on that Board ?

Sri H. SIDDAVEERAPPA.—I just don't know what Mysore interests are there. That Board is there for the purposes of having films censored throughout India, operated under a single Act. But if the Hon'ble Member can let me know what are the Mysore interests, I can consider the feasibility or otherwise of it.

Sri S. SRINIVASA IYENGAR.—The Regional Board is a nominated body and there are some members on that Board. Why should not the interests of Mysore State, the interests of exhibitors and the interests of the public, be also represented on that Board ?

Sri H. SIDDAVEERAPPA.—Before I can put up that question, I must be satisfied that the interests of Mysore State are jeopardised by the existence of that Board.

Sri S. SRINIVASA IYENGAR.—Will the Government at least now go to the question and see whether it has been jeopardised ?

Sri H. SIDDAVEERAPPA.—Yes, I will examine that, Sir.

Wells in Malavalli Taluk.

Q.—677. Sri B. P. NAGARAJA MURTHY (Malavalli).—

Will the Government be pleased to state :—

(*a*) the number of wells (both general and depressed class) that have been sanctioned by them since April 1952 up to now in Malavalli Taluk ;

(*b*) the number of wells that have been completed ;

(*c*) the names of the villages where such wells have been sanctioned or sunk ?

A.—Sri T. CHANNIAH (Minister for Public Health and Local Self-Government).—

(*a*) One during 1953-54 and four during 1954-55.

(*b*) Nil.

(*c*) 1953-54 Adikarnataka well at Settihalli.

1954-55 Adikarnataka well at Gowdagere.

1954-55 Uttama well at Honakola.

1954-55 Uttama well at Karigowdanadoddi.

1954-55 Uttama well at Panchanakeradoddi.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಈ ಐದು ಬಾವಿಗಳೂ ನ್ಯಾಷನಲ್ ಎಕ್ಸ್‌ಟೆನ್ಷನ್ ಬ್ಲಾಕುಗಳ ಮುಖಾಂತರ ಆಗಿವೆಯೋ ಅಥವಾ ಪ್ರತ್ಯೇಕವಾಗಿ ಆಗಿವೆಯೋ ?

ಶ್ರೀ ಟಿ. ಚನ್ನಯ್ಯ.—ಪ್ರತ್ಯೇಕವಾಗಿ ಆಗಿವೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—1952ನೆಯ ಸಾಲಿನಿಂದ ಎಷ್ಟು ಗ್ರಾಮಗಳಲ್ಲಿ ಬಾವಿಗಳಿಲ್ಲ, ಎಷ್ಟಕ್ಕೆ ಬಾವಿಗಳ ಅವಶ್ಯಕತೆಯಿದೆಯೆಂದು ರಿಪೋರ್ಟ್ ತರಿಸಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ರಿಪೋರ್ಟ್ ತರಿಸಿಕೊಂಡಿಲ್ಲ. ಇನ್ನೂ ಕೆಲವು ಗ್ರಾಮಗಳಲ್ಲಿ ನೀರಿನ ಬಾವಿಗಳನ್ನು ತೋಡಿಸುವ ಅವಶ್ಯಕತೆಯಿದೆ. ಈ ಎರಡು ವರ್ಷ ಕಾಲದಲ್ಲಿ ಉಳಿದ ಗ್ರಾಮಗಳಿಗೂ ನೀರಿನ ಬಾವಿಗಳನ್ನು ಒದಗಿಸಿಕೊಡುತ್ತೇವೆಂದು ಹೇಳುತ್ತೇನೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಹೊಸದಾಗಿ ಈ ಬಾವಿಗಳನ್ನು ತೆಗೆಯುವಾಗ ಡಿಪ್ರೆಸ್‌ಡ್‌ಕ್ಲಾಸಿನವರ ಕಾಲೊನಿಯನ್ನೂ ಸೇರಿಸಿಕೊಂಡು ಎಲ್ಲರಿಗೂ ಒಟ್ಟಿಗೆ ಆಗುವಂತೆ ಬಾವಿಗಳನ್ನು ತೋಡುವ ಹಾಗೆ ಮಾಡಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಆ ರೀತಿ ಕೊಟ್ಟಿಲ್ಲ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಆ ರೀತಿ ಕೊಡುವುದು ಸೂಕ್ತವಲ್ಲವೇ ?

ಶ್ರೀ ಟಿ. ಚನ್ನಯ್ಯ.—ಗ್ರಾಮಸ್ಥರೆಲ್ಲರೂ ಸೂಕ್ತವೆಂದು ಹೇಳಿ ಒಗ್ಗಟ್ಟಾಗಿ ಬಂದು ಹೇಳಿದರೆ ಅಂಥ ಸಂದರ್ಭದಲ್ಲಿ ಏರ್ಪಾಡು ಮಾಡಲಾಗುತ್ತದೆ.

---

* Asterisk indicates that the remarks or speeches have not been revised by the Member concerned

Roads in Malavalli Taluk.

Q.—678. Sri B. P. NAGARAJA MURTHY (Malavalli).—

Will the Government be pleased to state:—

(*a*) the lenght and the estimate of the new roads sanctioned in Malavalli Taluk for the last 5 years, *i.e.*, since 1950 under State Fund and District Fund; the names of those roads;

(*b*) the number of instances where the estimates have been sanctioned or the Government have promised sanction but where the works have not yet been taken or completed, the reasons for the same;

(*c*) the length of such road that has been already formed during the above period; and

(*d*) the amount spent on those roads;

(*e*) the names of those roads ?

A.— Sri T. CHANNIAH (Minister for Public Health and Local Self-Government).—

(*a*) State Fund Roads—Nil.

District Fund Roads.

Miles	Furlongs	
5	2½	Rs. 13780.

1. Road from Nage Gowdanadoddi to Hebbani *via* Chotanahalli.

2. Approach road—Mysore-Banga lere road to Malavalli-Marehalli.

(*b*) The two roads sanctioned have been completed.

(*c*)	Miles	Furlongs
	5	2½

(*d*) Rs. 13,780 (in all).

(*e*) *Vide* reply to clause (*a*).

ಶ್ರೀ ಬಿ. ಪಿ. ನಾಗರಾಜಮೂರ್ತಿ.—ತಾವು ಹಿಂದೆ ಒಂದು ಪ್ರಶ್ನೆಗೆ ಉತ್ತರವಾಗಿ ಭೂವಳಿ ಪುರಿಗಾಲ ರಸ್ತೆ ಡಿಸ್ಟ್ರಿಕ್ಟ್ ಬೋರ್ಡಿಗೆ ಸೇರಿದೆಯೆಂದು ಹೇಳಿದ್ದೀರಿ. ಈಗ ಇಲ್ಲಿ ಕೊಟ್ಟಿರುವ ಉತ್ತರವನ್ನು ನೋಡಿದರೆ ಹಾಗೆ ಅರ್ಥವಾಗುವುದಿಲ್ಲವಲ್ಲ.

ಶ್ರೀ ಟಿ. ಚನ್ನಯ್ಯ.—ಅದನ್ನು ವಿಚಾರಿಸುತ್ತೇನೆ.

Well in Kestur Village (Construction of Approach Road)

Q.—742. Sri. B. C. NANJUNDAIYA (Kora).—

Will the Government be pleased to state :—

(*a*) whether it is a fact that there is only one drinking water well in Kestur Village for a population of nearly 2,000.

(*b*) whether it is a fact that the said well is in the middle of the Amanikere Tank;

(*c*) whether it is a fact that it is almost impossible for the villagers to get water, when the tank is full or three-fourths filled;

(*d*) whether it is a fact that the villagers are requesting the Government from a long time to have an approach for the well;

(*e*) the action taken so far in this regard ?

A.— Sri T. CHANNIAH (Minister for Public Health and Local Self-Government).—

(*a*) There are one Government and seven private wells.

(*b*) No.

(*c*) No.

(*d*) Yes.

(*e*) An approach has been formed out of Village Panchayet and Distress Relief funds.

ಶ್ರೀ ಬಿ. ಸಿ. ನಂಜುಂಡಯ್ಯ.—(*a*) ಪ್ರಶ್ನೆಗೆ ಉತ್ತರವಾಗಿ ಒಂದು ಸರ್ಕಾರಿ ಭಾವಿಯೂ, 7 ಖಾಸಗೀ ಭಾವಿಗಳೂ ಇವೆಯೆಂದು ಹೇಳಿದ್ದೀರಿ. ಅಲ್ಲದತಕ್ಕ 7 ಖಾಸಗೀ ಭಾವಿಗಳೂ ಉಪ್ಪುನೀರಿನ ಭಾವಿಗಳೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಬಂದಿದೆ.

ಶ್ರೀ ಬಿ. ಸಿ. ನಂಜುಂಡಯ್ಯ.—(ಬಿ) ಮತ್ತು (ಸಿ) ಪ್ರಶ್ನೆಗಳಿಗೆ ಉತ್ತರವಾಗಿ 'ನಿಜವಲ್ಲ' ವೆಂದು ಉತ್ತರ ಹೇಳಿದ್ದೀರಿ. (ಇ) ಪ್ರಶ್ನೆಯಲ್ಲಿ "ಗ್ರಾಮ ಪಂಚಾಯತಿ ಮತ್ತು ಕ್ಷಾಮ ನಿವಾರಣಾ ನಿಧಿಯ ಮೊಬಲಗಿನಿಂದ ಒಂದು ಅಪ್ರೋಚ್ ರಸ್ತೆಯನ್ನು ಏರ್ಪಡಿಸಲಾಗಿದೆ" ಯೆಂದು ಹೇಳಿದ್ದೀರಿ. ಆ Approach ರಸ್ತೆ ಮಾಡಿಸಿದ್ದರೂ ಒಂದು Causeway ಕಟ್ಟಿಸದೆ ಇದ್ದರೆ. ಪ್ರಯೋಜನವಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಒಂದು Causeway ಕೂಡ 55–56ರಲ್ಲಿ ಕಟ್ಟಿಸಬೇಕೆಂದು ಒಂದು Proposal ಇದೆ.

ಶ್ರೀ ಬಿ. ಸಿ. ನಂಜುಂಡಯ್ಯ,—ಆ ಪ್ರಪೋಸಲ್ಲನ್ನು ದಯವಿಟ್ಟು ಸ್ಯಾಂಕ್ಷನ್ ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಪ್ರಪೋಸಲ್ ಬಂದಿದೆ. ವಿಮರ್ಶೆ ಮಾಡಿ ನೋಡುತ್ತೇವೆ.

Sravanabelagola-Hirisave Road (Construction of culverts and causeways)

Q.—845. Sri K. LAKKAPPA (Channarayapatna).—

Will the Government be pleased to state:—

(*a*) whether they are aware that the earth work of a road from Sravanabelagola to Hirisave has been done by Scouts and villagers ;

(*b*) the steps that have been taken to put up culverts and causeways on this road and also to metalling the same ?

A.—Sri T. CHANNIAH (Minister for Public Health and Local Self-Government).—

(*a*) Yes.

(*b*) The completion of this road with necessary culverts and causeways at an estimated cost of Rs. 20,000 is proposed to be taken up under the Local Development Works Scheme during the current year (*i. e.*, 1955-56),

ಶ್ರೀ ಕೆ. ಲಕ್ಕಪ್ಪ.—ಈ ರಸ್ತೆಗಾಗಿ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನವರು ಕಲ್ವರ್ಟ್ಸ್ ಮತ್ತು ಕಾಸ್ವೇಸ್‌ಗಳಿಗಾಗಿ 80,000 ರೂಪಾಯಿಗಳ ಎಸ್ಟಿಮೇಟನ್ನೂ, ಮೆಟಲ್ ಮಾಡುವುದಕ್ಕೆ 60,000 ರೂಪಾಯಿಗಳ ಎಸ್ಟಿಮೇಟನ್ನೂ, ಒಟ್ಟು 1,40,000 ರೂಪಾಯಿಗಳ ಎಸ್ಟಿಮೇಟ್ ತಯಾರು ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಒಂದು ಲಕ್ಷ ರೂಪಾಯಿನ ಒಂದು ಎಸ್ಟಿಮೇಟನ್ನು ಹಿಂದೆ ತಯಾರು ಮಾಡಿ ಅದಕ್ಕೆ ಹೆಚ್ಚು ಹಣ ಒದಗಿಸಬೇಕಾದ ಸಂದರ್ಭ ಬಂದಿದೆ ಯೆಂದು ಹೇಳಿ, ಅಷ್ಟು ಬೇಕಾಗಿಲ್ಲವೆಂದು, 20,000 ರೂಪಾಯಿಗಳ ಒಂದು ಅಂದಾಜು ತಯಾರುಮಾಡಿ ಕಲ್ವರ್ಟ್ಸ್ ಮತ್ತು ಕಾಸ್ವೆ ಈ ಎರಡಕ್ಕೆ ಸಂಬಂಧ ಪಟ್ಟಂತೆ ಮಾತ್ರ ಕಳುಹಿಸಬೇಕೆಂದು ಸಂಬಂಧಪಟ್ಟ ಇಲಾಖಾಧಿಕಾರಿಗಳಿಂದ ಒಂದು proposalನ್ನು call for ಮಾಡಿದ್ದೇವೆ.

ಶ್ರೀ ಕೆ. ಲಕ್ಕಪ್ಪ.—ಬರೀ ಪ್ರಪೋಸಲ್ಸ್ ಮಾತ್ರವೋ ಅಥವಾ 20,000 ರೂಪಾಯಿಗೆ ಎಸ್ಟಿಮೇಟ್ ಏನಾದರೂ ತಯಾರಾಗಿದೆಯೂ ?

ಶ್ರೀ ಟಿ. ಚನ್ನಯ್ಯ.—20,000 ರೂಪಾಯಿಗಳಿಗೊಂದು ಎಸ್ಟಿಮೇಟ್ ಕಳುಹಿಸಿ ಕೊಡುತ್ತಾರೆಂದು ವರದಿ ಬಂದಿದೆ. ಇನ್ನೂ ಬಂದಿಲ್ಲ.

ಶ್ರೀ ಕೆ. ಲಕ್ಕಪ್ಪ.—ಎಸ್ಟಿಮೇಟ್ ತಯಾರಾದ ಕೂಡಲೆ ಸ್ಯಾಂಕ್ಷನ್ ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಅದನ್ನು local development works ನಲ್ಲಿ ಸೇರಿಸಿ ಆ ಕೆಲಸವನ್ನು ಪೂರೈಸ ಬೇಕೆಂದು ಮಾಡಿದ್ದೇವೆ, ಮಾಡುತ್ತೇವೆ.

Labour Colony at Srirampur.

Q.—880. Sri V. R. NAIDU (Malleswaram).—

Will the Government be pleased to state :—

(*a*) from how many years people are living in the Labour Colony at Srirampur ;

(*b*) whether they are aware that the residents of this colony are very poor ;

(*c*) whether the land on which this colony is built belongs to the Corporation or the Government ;

(*d*) whether it has come to their notice that these people are undergoing hardship for want of drinking water, roads, light and sanitary facilities ;

(*e*) whether they have contemplated to give these sites to the people living thereon free of charges ?

A.—Sri T. CHANNIAH (Minister for Public Health and Local Self-Government).—

(*a*) About 20 years.

(*b*) Yes.

(*c*) Belongs to the Corporation.

(*d*) Roads, street lights and public taps and public latrines are provided.

(*e*) No.

ಶ್ರೀ ವಿ. ಆರ್. ನಾಯ್ಡು.—ಶ್ರೀರಾಮಪುರದ ಲೇಬರ್ ಕಾಲೊನಿಯಲ್ಲಿ ಜನರು ಎಷ್ಟು ವರ್ಷಗಳಿಂದ ವಾಸ ಮಾಡುತ್ತಿದ್ದಾರೆ ?

ಶ್ರೀ ಟಿ. ಚನ್ನಯ್ಯ.—20 ವರ್ಷಗಳಿಂದ ಎಂದು ಹೇಳಿದೆ.

ಶ್ರೀ ವಿ. ಆರ್ ನಾಯ್ಡು.—ಒಂದೊಂದು ಮನೆಗೆ ಎಷ್ಟು ಖರ್ಚಾಗಿದೆಯೆಂದು ಸರ್ಕಾರದವರು ತಿಳಿದು ಕೊಂಡಿದ್ದಾರೆಯೇ ?

ಶ್ರೀ ಟಿ. ಚನ್ನಯ್ಯ.—ತಿಳಿದು ಕೊಂಡಿದ್ದಾರೆ.

ಶ್ರೀ ವಿ. ಆರ್. ನಾಯ್ಡು.—ಶ್ರೀರಾಮಪುರದ ಲೇಬರ್ ಕಾಲೊನಿಯಲ್ಲಿರುವ ಮನೆಗಳನ್ನು ಕಟ್ಟು ವುದಕ್ಕೆ ಬಂಡವಾಳ ಎಷ್ಟು ಬಿದ್ದಿದೆಯೆಂಬುದನ್ನು ಹೇಳುತ್ತೀರಾ ?

ಶ್ರೀ ಟಿ. ಚನ್ನಯ್ಯ.—ತಿಳಿದು ಹೇಳುತ್ತೇನೆ.

ಶ್ರೀ ವಿ. ಆರ್. ನಾಯ್ಡು.—ಈ ಪ್ರಶ್ನೆಗೆ ನೋಟೀಸ್ ಕೊಟ್ಟಿದ್ದೇ ತಾವು ತಿಳಿದು ಹೇಳಬೇಕೆಂದಲ್ಲವೇ ? ಅವರುಗಳು ಅಲ್ಲಿ ಎಷ್ಟು ವರ್ಷಗಳಿಂದ ವಾಸ ಮಾಡುತ್ತಿದ್ದಾರೆಂಬುದನ್ನಾದರೂ ಹೇಳುತ್ತೀರಾ ?

ಶ್ರೀ ಟಿ. ಚನ್ನಯ್ಯ.—20 ವರ್ಷಗಳೆಂದು ಉತ್ತರದಲ್ಲೇ ಹೇಳಿದೆ.

ಶ್ರೀ ವಿ. ಆರ್. ನಾಯ್ಡು.—ಸರ್ಕಾರದವರೇ 12 ವರ್ಷಕ್ಕೆ ಮೇಲ್ಪಟ್ಟ ಕಾಲವಾದ ಮೇಲೆ ಬಡವರಿಗಾಗಿ ಕಟ್ಟಿರುವ ಈ ಕಾಲೊನಿ ಮನೆಗಳನ್ನು ಅವರಿಗೆ ಉಚಿತವಾಗಿ ಬಿಟ್ಟು ಕೊಡಬೇಕೆಂದು ಕಾನೂನು ಮಾಡಿದ್ದಾರಲ್ಲವೇ ?

ಶ್ರೀ ಟಿ. ಚನ್ನಯ್ಯ.—ಆರೀತಿ ಕಾನೂನು ಮಾಡಿಲ್ಲ.

ಶ್ರೀ ವಿ. ಆರ್. ನಾಯ್ಡು.—ಅಲ್ಲಿ ವಾಸಮಾಡುತ್ತಿರುವವರು 20 ವರ್ಷಗಳಿಂದಲೂ ವಾಸ ಮಾಡುತ್ತಿದ್ದಾರೆಂಬುದು ತಮಗೆ ಗೊತ್ತಿದೆ. 12 ವರ್ಷಕ್ಕೆ ಮೇಲ್ಪಟ್ಟು ಇದ್ದರೆ ರಾಜ್ಯಾಂಗದ ವಿಧಿಯ ಪ್ರಕಾರ ಆ ಮನೆಗಳನ್ನು ಅವರಿಗೆ ಕೊಡಬೇಕೆಂದು ಕಾನೂನಿದೆ. ಅಲ್ಲದೆ, ಈಗ ಅಲ್ಲಿರತಕ್ಕ ಕಾರ್ಮಿಕರು ಬಾಡಿಗೆಯ ರೂಪದಲ್ಲಿ ಕಟ್ಟಡಕ್ಕೆ ಎಷ್ಟು ಬೆಲೆಯಾಗಿದೆಯೋ ಅದಕ್ಕೆ ಹತ್ತರಷ್ಟು ಕೊಟ್ಟಿದ್ದಾರೆ. ಆದ್ದರಿಂದ ಆ ಬಡವರಿಗೆ ಆ ಮನೆಗಳನ್ನು ಉಚಿತವಾಗಿ ಬಿಟ್ಟು ಕೊಡುವುದರಲ್ಲಿ ಸರ್ಕಾರದವರಿಗಿರುವ ಅನಾನುಕೂಲವೇನು ?

ಶ್ರೀ ಟಿ. ಚನ್ನಯ್ಯ.—ಕಾರ್ಪೊರೇಷನ್ನಿಗೆ ಸಂಬಂಧಪಟ್ಟ ಜಮೀನು ಅದು. ಆದ್ದರಿಂದ ಅದನ್ನು ಅವರಿಗೆ ಕನ್ಸೆಷನ್ ಪ್ರಕಾರ ಕೊಟ್ಟು ಗುಡಿಸಲುಗಳನ್ನು ಕಟ್ಟಿಸುವ ಜವಾಬ್ದಾರಿಯನ್ನು ಸರ್ಕಾರದವರಿಗೆ ವಹಿಸಿ ಶಿಫಾರಸು ಮಾಡಿದರೆ, ಅದನ್ನು ಪರಿಶೀಲನೆ ಮಾಡಲಾಗುತ್ತದೆ.

ಶ್ರೀ ವಿ. ಆರ್. ನಾಯ್ಡು.—ಕಾರ್ಪೊರೇಷನ್ನಿಂದ ಆರೀತಿ ಮನವಿ ಬಂದಮೇಲೆ ಕೂಡಲೆ ಯಾರು ಅಲ್ಲಿ ವಾಸಮಾಡುತ್ತಿದ್ದಾರೋ ಆ ಕಾರ್ಮಿಕರಿಗೆ ಕೊಡಬೇಕೆಂದು ಹೇಳಿ ಸರ್ಕಾರದವರೇನಾದರೂ ಸಹಾಯ ಮಾಡುತ್ತಾರೆಯೋ ?

ಶ್ರೀ ಟಿ. ಚನ್ನಯ್ಯ.—ಕಾರ್ಪೊರೇಷನ್ನಿಂದೇನಾದರೂ ಶಿಫಾರಸು ಬಂದರೆ ಸರ್ಕಾರದವರು ಸಹಾನುಭೂತಿಯಿಂದ ಪರೀಶೀಲನೆ ಮಾಡುತ್ತಾರೆ.

ಶ್ರೀ ವಿ. ಆರ್. ನಾಯ್ಡು.—ಈಗ ಅಲ್ಲಿರುವವರೆಲ್ಲರೂ ಬಹಳ ಬಡವರೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೋ ?

ಶ್ರೀ ಟಿ. ಚನ್ನಯ್ಯ.—ಬಹುಭಾಗ ಜನರು ಬಡವರೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆ.

ಶ್ರೀ ವಿ. ಆರ್. ನಾಯ್ಡು.—ಬಡವರೆಂದರೆ ಸರ್ಕಾರದವರು ಏನು ಅರ್ಥ ಮಾಡಿಕೊಂಡಿದ್ದಾರೆ ?

(ಉತ್ತರವಿಲ್ಲ)

Sri R. ANANTARAMAN.—Is it not a fact that the tenants of these houses are urging the Corporation to sell these houses at reasonable instalment basis ?

Sri T. CHANNIAH.—Government are not aware of that, Sir.

Sri R. ANANTARAMAN.—If that is the case, will the Government recommend to the Corporation authorities so that they may sell those houses for a reasonable upset price ?

Mr. SPEAKER.—Government have already stated that if the proposal came from the Corporation, they would consider it favourably, but not now.

Atchkat irrigated under Rampura and Hullahalli Canals in Nanjangud Taluk.

Q.—685. Sri M. LINGANNA (Nanjangud).—

Will the Government be pleased to state :—

(*a*) the total atchkat that was proposed to be irrigated under Rampura and Hullahalli canals in Nanjangud Taluk at the time when the canals were dug ;

(*b*) the total acreage now being cultivated under the above two canals ?

A.—Sri Kadidal MANJAPPA (Minister for Revenue and Public Works).—

		acres.
(*a*)	(i) Rampur Channel ...	6,600
	(ii) Hullahalli Channel...	6,700
(*b*)	Rampur Channel ...	6,720
	Hullahalli Channel ...	7,250

Sri M. LINGANNA.—What are the additional facilities that the Government have given to increase the volume of water, Sir, as it is borne out by the answer that more lands are brought under irrigation ?

Sri Kadidal MANJAPPA.—The existing facilities are being continued.

Sri M. LINGANNA.—Has it come to the notice of Government that because additional land was being brought under cultivation, the raiyats have felt the difficulty to get as much water as they need for cultivation ?

Sri Kadidal MANJAPPA.—The additional acreage that is brought under cultivation is very little when compared to the extent. Therefore there is no need for giving them any additional relief.

Sri M. LINGANNA.—Has it come to the notice of the Government that during the last agricultural season there was a lot of difficulty felt by the atchkatdars of Hullahalli Channel, Sir ?

Sri Kadidal MANJAPPA.—Some difficulties are being felt in some areas.

Sri M. LINGANNA.—I am putting this specific question. Was it during the last agricultural season that reports were made and even Press statements

(SRI M. LINGANNA.)

were issued by responsible people stating that the raiyats were in difficulty because of the inadequacy of water in both the canals; what action has the Government taken to remove the inadequacy of supply of water Sir ?

Sri Kadidal MANJAPPA.—Nature should come to our rescue. If it is a question of repair of channel, we are taking steps to repair the channels.

Sri M. LINGANNA.—Has it come to the notice of Government that because the bund at the Rampur itself is not up to the height as is required ?

Sri Kadidal MANJAPPA.—I want notice.

Sri M. LINGANNA.—Will the Government consider the possibility of raising the bund at the original anecut itself ?

Sri Kadidal MANJAPPA.—I have already issued instructions to the concerned authorities to take all possible steps to alleviate the difficulties.

Sri M. LINGANNA.—May I know whether the Government would remove all the silt from these canals or whether they have issued instructions to desilt both the canals ?

Sri Kadidal MANJAPPA.—I have already answered that I have issued instructions in the matter.

Sri M. LINGANNA.—Have you received any report from the department concerned as to the action taken in pursuance of the instructions they have issued ?

Sri Kadidal MANJAPPA.—I want notice.

Sri K. PUTTASWAMY.—May I know what was the chief cause for scarcity of water when the extent of land for which the Nala was intended was almost the same as that extent that has been brought under cultivation ?

Sri Kadidal MANJAPPA.—I am told, the chief cause was scarcity of water.

Sri K. PUTTASWAMY.—Is it not put forward that the channel was long under disrepair and that was the chief cause ?

Sri Kadidal MANJAPPA.—I issued necessary instructions then and there and I was told by the concerned Engineers that all steps had been taken at that time and recently I have issued once again instructions to the concerned Engineer to take all necessary steps to repair the channel.

Sri K. PUTTASWAMY.—What was the reason for such long neglect ?

Sri Kadidal MANJAPPA.—It is not neglect. It is mainly due to the scarcity of water.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಸ್ವಾಮಿ, ಈ ಹುಲ್ಲಹಳ್ಳಿ ನಾಲೆಯನ್ನು ತೆಗೆಸುವಾಗ ಇದರ ಹಿಂದೆ 7,500 ಎಕರೆಗಳಿಗೆ ಖಾಯಂ ತರಿ ಜಮೀನಿಗೆ ಸಾಕಾಗುವಷ್ಟು ನೀರು ಸರಬರಾಯಿ ಮಾಡತಕ್ಕ ಬಗ್ಗೆ ತಾವು ಇದನ್ನು ಡಿಸೈನ್ ಮಾಡಿದ್ದಿರಾ?

Sri Kadidal MANJAPPA.—I thought so.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ ಹಿಂದೆ ಈ ನಾಲಾ ಕೆಳಗೆ ತರೀ ವ್ಯವಸಾಯಕ್ಕೆ ಬರತಕ್ಕಂಥ ಅಚ್ಚುಕಟ್ಟು 6,500 ಎಕರೆಗಳೆಂದಿತ್ತು. ಈಗ ಅದು 7,250 ಎಕರೆಗೆ ಏರಿಹೋಗಿದೆ. ಆದ್ದರಿಂದ ತಾವು ಮೊದಲು ಈ ನಾಲೆಯನ್ನು ಕೊಡುವಾಗ 7,500 ಎಕರೆಗಳಿಗೂ ಅಂದಾಜು ಮಾಡಲಾಗಿತ್ತೇ ಹೇಗೆ?

Sri Kadidal MANJAPPA.—When the channel was excavated, it was designed properly.

Mr. SPEAKER.—I think even then it was designed for higher capacity.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈಗ ಸರ್ಕಾರದವರು ಈ ನಾಲೆಯನ್ನು ಮೊದಲು ಡಿಸೈನ್ ಮಾಡುವಾಗ ಹೀಗೆ ಮುಂದೆ ಹೆಚ್ಚು ಅಚ್ಚುಕಟ್ಟಾಗುತ್ತದೆ ಎನ್ನುವ ನಿರೀಕ್ಷಣೆಮೇಲೆ ಆಗಲೇ ಈ 7,500 ಎಕರೆಗಳಿಗೂ ಆಗುವಂತೆ ಈ ನಾಲೆಯನ್ನು ಡಿಸೈನ್ ಮಾಡಿದರೋ ಅಥವಾ ಹಿಂದೆ ಇದ್ದಂಥ ಅಚ್ಚುಕಟ್ಟಿಗೆ ತಕ್ಕ ಹಾಗೆ ಡಿಸೈನ್ ಮಾಡಿದರೋ ಎನ್ನುವುದನ್ನು ತಿಳಿಸಿದರೆ ಮುಂದಿನ ಉಪಪ್ರಶ್ನೆಗಳನ್ನು ಹಾಕಲು ಅನುಕೂಲವಾಗುತ್ತದೆ.

Sri Kadidal MANJAPPA.—I want notice for this question.

Obalapura Tank, Parasurampura Hobli, Challakere Taluk (restoration).

Q.—695. Sri V. MASIYAPPA (Hiriyur).—

Will the Government be pleased to state:—

(*a*) whether there is a breached tank near Obalapura in Parasurampura Hobli, Challakere Taluk ;

(*b*) how long it is since it was breached ;

(*c*) whether representations have been made to Government for the restoration of this tank ;

(*d*) whether there is any other source of irrigation to this village except this?

A.—Sri Kadidal MANJAPPA (Minister for Revenue and Public Works).—

(*a*) No.
(*b*) Does not arise.
(*c*) No.
(*d*) Yes.

Sri V. MASIYAPPA.—In this there is a mistake with regard to the name of the village 'Obalapura'. It should have been 'Obanahalli'. I take it as Obanahalli and put supplementaries.

Mr. SPEAKER.—But the Government may not be in possession of answers.

Sri V. MASIYAPPA.—Does not matter. Is it not a fact that the Minister for Public Works visited the place Survarnahalli when the people of Obanahalli represented to him about the breached tank?

Sri Kadidal MANJAPPA.—I visited Challakere Taluk 1½ years ago. I don't remember.

Sri V. MASIYAPPA.—Is it not a fact that when you visited that place, representations were made and petitions also presented to you?

Sri Kadidal MANJAPPA.—I don't remember.

Sri V. MASIYAPPA.—Is it not a fact that the local Public Works Department authorities there said that since the construction or the repair of this tank would affect Parasurampura tank, this could not be done?

Sri Kadidal MANJAPPA.—If it is Obanahalli, I am unable to answer any supplementaries.

ಶ್ರೀ ವಿ. ಮಸಿಯಪ್ಪ.—ಈಗ ಈ ಪರಶುರಾಮಪುರದ ಹೋಬಳಿಯಲ್ಲಿ ಶಿಡ್ಲಹಳ್ಳಿ ಕೆರೆಗೆ ಇದರಿಂದ ಯಾವ ತೊಂದರೆಯೂ ಆಗದಿರುವುದರಿಂದ ಈ ಓಬನಹಳ್ಳಿ ಕೆರೆಯನ್ನು ತಾವು ಜಾಗ್ರತೆ ರಿಪೇರಿ ಮಾಡಿಸಲು ಏರ್ಪಾಡು ಮಾಡುತ್ತೀರಾ?

Sri Kadidal MANJAPPA.—I do not know anything about that Obanahalli.

Anecut across Shimsha near Belthur, Malavalli Taluk.

Q.—736. Sri M. CHIKKALINGIAH (Malavalli—Scheduled Castes).—

Will the Government be pleased to state:—

(*a*) whether it is a fact that proposals have been called for to put up an Anecut near Belthur Village, Malavalli Taluk, across the Shimsha River;

(*b*) if so, the extent that can be brought under irrigable area in Halagur Hobli;

(*c*) the cost of proposed anecut, if any estimate has been proposed;

(*d*) how long it will take to complete the anecut for the benefit of the people of Halagur Hobli?

A.—Sri Kadidal MANJAPPA (Minister for Revenue and Public Works).—

(*a*) Yes.
(*b*) About 2,000 acres.
(*c*) The estimate has not yet been prepared.
(*d*) This cannot be stated until after the investigations are completed.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ಮಳವಳ್ಳಿ ತಾಲ್ಲೂಕಿನಲ್ಲಿರುವ ಬೆಳತೂರು ಗ್ರಾಮ ಬಹಳ ಬೆಂಗಾಡು ಪ್ರದೇಶದಲ್ಲಿದೆ ಎನ್ನುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ನಮ್ಮ ದೇಶವೇ ಒಂದು ಬಡತನದ ದೇಶ. ನಮ್ಮ ದೇಶದಲ್ಲಿ ಅನೇಕ ಹಳ್ಳಿಗಳು ಹೀಗೆ ಬೆಂಗಾಡು ಪ್ರದೇಶದಲ್ಲಿರುತ್ತವೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಇಂಥ ಬೆಂಗಾಡು ಗ್ರಾಮಗಳ ಅನುಕೂಲಕ್ಕಾಗಿ ತಕ್ಕ ಯೋಜನೆಯನ್ನು ಸಿದ್ಧಗೊಳಿಸಲು ತಾವೇನಾದರೂ ಒಂದು ಸರ್ವೆ ಪರಿಶೀಲನೆ ನಡೆಸಿದ್ದೀರಾ? ಈ ಬಗ್ಗೆ ಯಾರಿಂದಲಾದರೂ ಸರ್ಕಾರಕ್ಕೆ ವರದಿ ಬಂದಿದೆಯೇ?

Sri Kadidal MANJAPPA.—Surveys are being conducted.

Handloom Co-operative Societies in Chamarajanagar Taluk. (Financial Aid to Weavers.)

Q.—450. Sri U. M. MADAPPA (Chamarajanagar).—

Will the Government be pleased to state:—

(*a*) the number of Handloom Weavers' Co-operative Societies in Chamarajanagar Taluk?

(*b*) whether the Government would give financial aid to the Handloom Weavers through the said Societies;

(SRI U. M. MADAPPA.)

(*c*) if so, the extent of amount given to them during the years 1953-54 and 1954-55 ?

A.—Sri H. SIDDAVEERAPPA (Minister for Home and Industries).—

(*a*) Two—(1) Devanga Neige 'Handloom Weavers' Co-operative Society, Chamarajanagar, (2) The Chowdeswari Weavers' Co-operative Society, Ramasamudra.

(*b*) Financial aid and other assistance to Handloom Weavers is being given from the Mill Cess Fund through Co-operative Societies which are Production *cum* Sales Societies. Of the two Societies referred to above, only the Societies at Ramasamudra is a Production *cum* Sales Society and it is receiving assistance from the Mill Cess Fund. The other Society at Chamarajanagar will be entitled to such assistance only if it converts itself into a Production *cum* Sales Society.

(*c*) Yarn of the value of Rs. 558-8-0 and Rs. 712-7-0 was supplied to the Ramasamudra Society on credit basis, during 1953-54 and 1954-55 respectively, by the Provincial Society from its funds. (The Mill Cess Fund Schemes for grant of loans, supply of accessories, etc., will be in full operation only from this year).

ಶ್ರೀ ಯು. ಎಂ. ಮಾದಪ್ಪ.—ತಾವು ಈ ಚೌಡೇಶ್ವರಿ ನೆಯ್ಗೆ ಸಹಕಾರ ಸಂಘಕ್ಕೆ ನೂಲನ್ನು ಸಾಲದ ರೂಪವಾಗಿ ಕೊಡಲಾಗುತ್ತಿದೆ ಎಂದು ಹೇಳಿದ್ದೀರಿ. ಹೀಗೆ ತಾವು ಪ್ರತಿವರ್ಷವೂ ಎಷ್ಟೆಷ್ಟು ಜನರಿಗೆ ಈ ನೂಲನ್ನು ಕೊಡುತ್ತಿದ್ದೀರಿ ?

*ಶ್ರೀ ಎಚ್. ಸಿದ್ದವೀರಪ್ಪ.—ಈಗ ಎಷ್ಟು ಜನರು ಆ ಕಸಬನ್ನು ಅವಲಂಬಿಸಿದ್ದಾರೋ ಮತ್ತು ಅಲ್ಲಿನ ಆವಶ್ಯಕತೆ ಎಷ್ಟಿರುತ್ತದೆಯೋ ಅಷ್ಟನ್ನು ಮಾತ್ರ ಈಗ ಅಲ್ಲಿಗೆ ಸರಬರಾಯಿ ಮಾಡುತ್ತಿದ್ದೇವೆ.

ಶ್ರೀ ಯು. ಎಂ. ಮಾದಪ್ಪ.—ಈಗ ಈ ಸಂಘದಲ್ಲಿ ಎಷ್ಟು ಜನ ಷೇರುಹೋಲ್ಡರುಗಳಿದ್ದಾರೆ ?

ಶ್ರೀ ಎಚ್. ಸಿದ್ದವೀರಪ್ಪ.—ಆ ಅಂಕಿ ಅಂಶಗಳೆಲ್ಲಾ ಈಗ ಸದ್ಯಕ್ಕೆ ನನ್ನಲ್ಲಿಲ್ಲ.

ಶ್ರೀ ಯು. ಎಂ. ಮಾದಪ್ಪ.—ಹಾಗಾದರೆ ಈಗ ತಾವು ಯಾವ ತತ್ವದ ಮೇಲೆ ಈ ನೂಲನ್ನು ಹಂಚುತ್ತಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ಈಗ ಅಲ್ಲಿ ಯಾರಾರಿಗೆ ಈ ನೂಲಿನ ಆವಶ್ಯಕತೆ ಎಷ್ಟೆಷ್ಟಿದೆಯೋ ಅದಕ್ಕೆ ತಕ್ಕಂತೆ ಹಂಚಿಕೆಮಾಡಲಾಗುತ್ತಿದೆ.

ಶ್ರೀ ಯು. ಎಂ. ಮಾದಪ್ಪ.—ಹಾಗಿದ್ದರೆ ಈಗ ಯಾರುಬೇಕಾದರೂ ಈ ಸಂಘದಲ್ಲಿ ಕೆಲಸ ಮಾಡುತ್ತಿದ್ದರೆ ಅಂಥವರಿಗೆಲ್ಲಾ ಧಾರಾಳವಾಗಿ ತಾವು ನೂಲನ್ನು ಒದಗಿಸುವಂತೆ ಆ ಸಂಘಕ್ಕೆ ಸೂಚನೆ ಕೊಟ್ಟಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಅದರ ಆವಶ್ಯಕತೆ ಎಷ್ಟಿದೆಯೋ ಅದರ ಪ್ರಕಾರ ಹಂಚಿಕೆ ಮಾಡುತ್ತೇವೆ.

ಶ್ರೀ ಯು. ಎಂ. ಮಾದಪ್ಪ.—ತಾವು ಹಾಗಿದ್ದರೆ ಅವರಿಗೆ 1953 ಮತ್ತು 1954ರಲ್ಲಿ ಕೇಳಿದ್ದಕ್ಕಿಂತ ಕಡಮೆ ಸಾಲ ಮಂಜೂರು ಮಾಡಿದ್ದೀರಿ. ಎಂದರೆ ಅವರು ಐದು ಸಾವಿರ ಕೇಳಿದ್ದರೆ ತಾವು ಮೂರು ಸಾವಿರ ಮಾತ್ರ ಮಂಜೂರು ಮಾಡಿದ್ದೀರಿ. ಹೀಗೆ ಕಡಮೆ ಮಂಜೂರು ಮಾಡಲು ಕಾರಣವೇನು ?

ಶ್ರೀ ಎಚ್. ಸಿದ್ದವೀರಪ್ಪ.—ಅವರು ಯಾವಾಗಲೂ ಕೇಳಿದಷ್ಟನ್ನೇ ಕೊಡುವುದಿಲ್ಲ ಎಂದು ಸ್ವಲ್ಪ ಜಾಸ್ತಿಯಾಗಿಯೇ ಕೇಳುತ್ತಾರೆ. ಅದಕ್ಕೋಸ್ಕರ ನಾವು ಅಷ್ಟಾದರೆ ಸಾಕಾಗಬಹುದೆಂದು ಮಂಜೂರು ಮಾಡಿದೆವು. ಇನ್ನೂ ಬೇಕಾಗಿದ್ದರೆ ಕೊಡೋಣ.

ಶ್ರೀ ಯು. ಎಂ. ಮಾದಪ್ಪ.—ಈಗ ಆ ಸಂಘದ ಆಶ್ರಯದಲ್ಲಿ ಎಷ್ಟು ಜನರು ಕೆಲಸ ಮಾಡುತ್ತಿದ್ದಾರೋ, ಎಷ್ಟು ಜನರು ಈ ಸಂಘವನ್ನೇ ಅವಲಂಬಿಸಿಕೊಂಡಿದ್ದಾರೋ, ಆ ಸಂಖ್ಯೆಗನುಗುಣವಾಗಿ ಅವರು ಸಾಲ ಕೇಳಿರುತ್ತಾರೆಯೇ ಹೊರತು ಜಾಸ್ತಿಯಾಗಿ ಕೇಳುವುದಿಲ್ಲ. ಆದ್ದರಿಂದ ಅವರಿಗೆ ಜಾಸ್ತಿ ಸಹಾಯಬೇಕೆಂದು ಕೇಳಿದರೆ ಕೊಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಈಗ ಅವರಿಗೆ ಮುಖ್ಯವಾಗಿ ಬೇಕಾಗಿರುವುದು ನೂಲು. ಅದನ್ನು ಅವರಿಗೆ ಈಗ ಪ್ರಾಂತೀಯ ಸಂಘದವರು ಅವರ ಫಂಡಿನಿಂದ ಸರಬರಾಯಿ ಮಾಡುತ್ತಿದ್ದಾರೆ. ಅವರಿಗೆ ವರ್ಕಿಂಗ್ ಕ್ಯಾಪಿಟಲ್ಲಿಗೆ ಎಷ್ಟು ಹಣ ಬೇಕೋ ಅಷ್ಟನ್ನು ಸಾಲವಾಗಿ ಕೊಡಬೇಕೆಂದು ಕೇಳಿದ್ದಾರೆ. ಆದ್ದರಿಂದ ಈ ಸಾಲವನ್ನು ಆ ಜನಸಂಖ್ಯೆಯ ಮೇಲೆ ಕೊಡುವುದಿಲ್ಲ. I do not think there is much difficulty provided you show the need. I have got plenty of money. I just do not know how to spend it.

ಶ್ರೀ ಯು. ಎಂ. ಮಾದಪ್ಪ.—ಆ ಪ್ರಾಂತೀಯ ಸಂಘದವರ ಮೂಲಕ ತಮ್ಮಲ್ಲಿಗೆ ಎಷ್ಟು ಸಾಲದ ಅಪ್ಲಿಕೇಷನ್‌ಗಳು ಬರುತ್ತವೆಯೋ ಆ ಆಧಾರದ ಮೇಲೆ ಈ ಸಾಲವನ್ನು ಮಂಜೂರು ಮಾಡುವುದು ಒಳ್ಳೆಯದಲ್ಲವೇ ?

Sri H. SIDDAVEERAPPA.—If You establish your claim for getting more funds, we shall direct the Provincial Co-operative Society to help you.

Sri Mulka GOVINDA REDDY.—Has the Provincial Co-operative Society framed any rules governing the distribution of financial aid to these societies ?

Sri H. SIDDAVEERAPPA.—I suppose they strictly adhere to the rules. Unless I hear to the contrary, I persume so.

Sri Mulka GOVINDA REDDY.—What is the amount that the Central Handloom Weavers Society received as financial aid from the Government of India ?

Sri H. SIDDAVEERAPPA.—Actually we have got Rs. 20 lakhs at our disposal. The amount spent is only a fraction of it.

Sri Mulka GOVINDA REDDY.—Is the amount that is received from the Government of India non-lapsable?

Sri H. SIDDAVEERAPPA.—Yes; we have requested to make it non-lapsable. They have generously agreed to it.

QUESTIONS FOR ANSWERS ON THE DAY
(but not taken up)

Bridge across Suvarnavathi along Doddarayapet and Kagalavadi Road.

Q.—682. Sri B. RACHIAH (Yelandur—Scheduled Castes).—

Will the Government be pleased to state:—

(*a*) whether it is not a fact that an estimate was prepared for construction of a bridge across the River Suvarnavathi along Doddarayapet and Kagalavadi road near Alur;

(*b*) whether it is not a fact that Rs. 50,000 was provided in the budget estimates for 1950-51.

(*c*) whether a revised estimate has been prepared recently with a lesser cost;

(*d*) the cost of the revised estimate;

(*e*) whether this revised estimate has been sanctioned;

A.—Sri T. CHANNIAH (Minister for Public Health and Local Self-Government).—

(*a*) Yes.

(*b*) A grant of Rs. 25,000 was provided.

(*c*) Yes. The revised estimate is for a high level causeway.

(*d*) Rs. 11,580.

(*e*) No.

Major and Minor Tanks in Magadi Taluk.

Q.—709. Solur SIDDAPPA (Magadi).—

Will the Government be pleased to state:—

(*a*) the number of major and minor tanks in Magadi Taluk (hobliwise figures may be furnished);

(*b*) out of these how many are repaired and how many not repaired for the last three years (hobliwise figures may be furnished);

(*c*) the number of applications received for improvement of major and minor tanks which are not repaired and the number of tanks in respect of which estimates have been prepared (hobliwise information may be given)?

A.—Sri Kadidal MANJAPPA (Minister for Revenue and Public Works).—

(*a*) *Name of Hobli.*	*No. of Major Tanks.*	*No. of Minor Tanks.*
Magadi ...	4	47
Madabalu ...	2	26
Solur ...	3	47
Thavarekere ...	1	49
Thippasandra ...	5	22
Kudur ...	7	39

(SRI KADIDAL MANJAPPA.)

(b) Name of Hobli.		Tanks repaired.		Tanks not repaired.	
		Major	Minor	Major	Minor
Magadi	...	1	1	...	12
Madabalu	...	...	5	...	7
Solur	...	...	7	...	36
Thavarekere	...	...	11	...	28
Thippasandra	...	1	1	...	4
Kudur	...	...	1	2	9

N.B.—The remaining 18 Major Tanks and 108 Minor Tanks do not require to be repaired, as they are in good condition.

(c) 79.		No. of petitions.	Tanks for the restoration of which estimates are prepared.	
			Major	Minor
Magadi	...	5	...	1
Madabalu	...	9	...	1
Solur	...	16	...	4
Thavarekere	...	24	...	5
Thippasandra	...	12	...	1
Kudur	...	13	2	6

Kembalu Muttanakatte Tank, Bagur Village, Channarayapatna (Restoration).

Q.—870. SRI B. CHIKKANNA (Javagal).—

Will the Government be pleased to state :—

(*a*) when the bund of the Kembalu Muttanakatte tank, Bagur Hobli, Channarayapatna Taluk, was breached ;

(*b*) whether any estimate for its repair has been prepared ?

A.—SRI KADIDAL MANJAPPA (Minister for Revenue and Public Works).—

(*a*) About 50 years ago.

(*b*) Yes.

Villages having Wells in Kadur Taluk.

Q.—905. SRI Y. M. CHANDRASEKHARIAH (Kadur).—

Will the Government be pleased to state :—

(*a*) the number of villages in the Kadur Taluk ;

(*b*) the number of bechirak villages among these ;

(*c*) the number of villages among these having drinking water wells ?

A.—SRI T. CHANNIAH (Minister for Public Health and Local Self-Government).—

(*a*) 307.

(*b*) 66.

(*c*) 137.

Business of the House

MR. SPEAKER.—The next item on the agenda is discussion on the Report of the Fact Finding Committee. I want to bring it to the notice of the Hon'ble Members that there may be a large number of speakers and therefore, I want to limit the time so that almost all the members who are desirous of speaking may have chances.

SRI J. MOHAMED IMAM (Jagalur).—The Leader of the House is not here.

I would like to know what is the procedure to be adopted and how many days are set apart. I don't agree to the suggestion for limiting the time. This is a subject in which every member has to do full justice and has to express whatever he has to say. Limiting the time means not giving fair chance to every member to express what he feels about the subject. As a matter of fact, every one of us feels very strongly about it. So, if time is wanted we can ask Government to extend the time for one or two days. If time is limited, it will be very difficult for us to deal with the subject.

12-30 P. M.

Sri A. V. NARASIMHA REDDY (Bangalore South).—We are speaking on a very vital matter. I therefore request the Chair to give such time as every Hon'ble Member requires and see that as many days are allowed as are required for the debate on this subject.

Mr. SPEAKER.—If we allow even a week, I do not think it is possible to finish.

Sri B. V. NARAYANA REDDY (Bagepalli-Gudibanda).—If it is not a week, let it be a month. We are going to make the history of the State.

Mr. SPEAKER.—Speeches that are going to be made from now onwards will have a lot of repetition. If we avoid that, I think we can finish soon.

MYSORE AGRICULTURAL INCOME-TAX BILL, 1955.

Presentation of Select Committee Report.

*ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).— Fact Finding ಸಮಿತಿಯ ವರದಿ ಮೇಲೆ ಮಾತನಾಡುವುದಕ್ಕೆ ಮುಂಚೆ, ಮೈಸೂರು ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಬಿಲ್ಲಿನ Select Committee ವರದಿಯನ್ನು ಆ ಸಮಿತಿಯ Chairman ಇಲ್ಲದೇ ಇರುವುದರಿಂದ ಈ ಸಭೆ ಮುಂದೆ ಮಂಡಿಸುವುದಕ್ಕೆ ನಾನು ಅಪ್ಪಣೆ ಬೇಡುತ್ತೇನೆ.

Sri J. MOHAMED IMAM (Jagalur).—I raise a point of order. Can a Member deputise for a Minister ?

Mr. SPEAKER.—A Member of the Committee can do it.

*Sri J. MOHAMED IMAM.—Where is the authorisation ? Has the Chief Minister given a letter that he should be deputised ? This is the first time that such a thing is happening. A colleague may move it. But a member deputising for the Chief Minister or any Minister—this is the first time that such a thing is happening. One Minister may delegate power to another Minister. But I do not know if the Hon'ble Member has been delegated that power of moving the motion.

*Sri H. SIDDAVEERAPPA (Minister for Home and Industries).—The rules say that it must be a member of the Select Committee.

Sri J. MOHAMED IMAM.—I suggest that the Chief Minister be here so that he may move it.

Mr. SPEAKER.—He is not here. The rules provide for the other members to present the Report. There is nothing wrong in presenting it.

Sri J. MOHAMED IMAM.—Apart from that it would have been advantageous to the House if the Chief Minister who is in charge, were to be here, to explain the salient features of the changes.

Mr. SPEAKER.—It is not now. But it will be done at the consideration stage.

Sri N. HUCHMASTHY GOWDA.—Sir, on behalf of the Chairman of the Committee, I beg to present the Report of the Select Committee on the Mysore Agricultural Income-tax Bill, 1955.

Sri M. LINGANNA (Nanjangud).—I want to know whether time had been extended for the presentation of the Report.

*Sri Mulka GOVINDA REDDY (Chitaldrug).—Sir, I would like to know the ruling of the Chair on the point raised by Sri Linganna. The Select Committee report on this Agricultural Income-tax Bill was to have been presented to the House yesterday, and no time was extended. I was absent for the first fifty minutes yesterday in the beginning. I would like to know whether any time extension was given.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಿನ್ನೆ ಸಾಯಂಕಾಲ ಸಮಿತಿಯ ಕೆಲಸಕಾರ್ಯಗಳು ಮುಗಿಯುವುದರೊಳಗಾಗಿ, ಈ ಅಸೆಂಬ್ಲಿಯ ಕಾರ್ಯ ಕಲಾಪಗಳು ಆಖೈರು ಆಗಿದ್ದುದರಿಂದ, ಅಧ್ಯಕ್ಷರ

(ಶ್ರೀ ಎಚ್. ಹುಚ್ಚಮಾಸ್ತಿಗೌಡ.)

ಅಪ್ಪಣೆ ಪಡೆದು ಈ ವರದಿಯನ್ನು ಸಭೆಯ ಮುಂದೆ ಇಡುತ್ತೇನೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಈ ಸಭೆ ಅಪ್ಪಣೆ ಕೊಡದೆ ಇದ್ದರೆ, ಅದನ್ನು ಒಂದು ದಿವಸ ಮುಂಚೆ ಯಾತಕ್ಕೆ ತೆಗೆದುಕೊಳ್ಳಲಿಲ್ಲ? Chairmanಇಲ್ಲದಿದ್ದರೆ ಒಬ್ಬ ಮೆಂಬರು ವರದಿ ಮಂಡಿಸಬಹುದು ಎಂದು ಈ ರೀತಿ ಹೊಸ ನಿಯಮಗಳನ್ನು ಅನುಸರಿಸುವುದಾದರೆ ನಾನು ಏನು ಹೇಳುವುದಕ್ಕೂ ಆಗುವುದಿಲ್ಲ.

Mr. SPEAKER.—So far as the previous matter is concerned, under rule 68 (1) any member of the Select Committee can present the Report.

Sri Mulka GOVINDA REDDY.—The point is whether any extension of time was given. He was pleading that it might be condoned.

*Sri A. BHEEMAPPA NAIK (Molakalmuru).—Sir, I was about to submit that the power under rule 68 is given to the Speaker to permit. Since the Committee meeting was over yesterday evening, today, this is the earliest time to present the Report. Therefore, there is no question of any objection being tenable.

*Sri M. LINGANNA —Here, of course, the question as to the admissibility or otherwise of the Bill or the far-reaching powers of the Speaker are not questioned. The question here is that the Mover of Report of the Select Committee did not seek permission of the Chair to introduce the Bill to the effect that he could not present it yesterday.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—"ಅಪ್ಪಣೆ ಪಡೆದು" ಎಂದು ಆಗಲೇ ಸ್ಪಷ್ಟವಾಗಿ ಹೇಳಿದ್ದೇನೆ.

Sri M. LINGANNA.—It was only when Sri Mulka Govinda Reddy took objection that the Hon'ble Member sought for permission. He never sought permission earlier to present the report. Now, after moving the presentation motion, he has stated that he had formally requested the Chair outside the House to place the Report today before the House. I am afraid that such a procedure may not be conducive to good parliamentary procedure. We have no objection to his presenting the Report with the permission of the Chair. We are not afraid to discuss the Report of the Select Committee. By raising this particular point, we are not putting any obstacle to proceed with the discussions on the Select Committee Report. Here is a point where the mover has not sought the permission regularly from the Chair to introduce the Report of the Select Committee though time had lapsed. That is entirely in the hands of the Chair to decide. As far as my knowledge goes, there is nothing provided in the procedure to regularise such lacunae either by the Chairman of the Select Committee or any other member of the Select Committee.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಪ್ರಾರಂಭದಲ್ಲೇ ಈ ವರದಿಯನ್ನು ಮಂಡಿಸುವುದಕ್ಕೆ ಅಪ್ಪಣೆ ಕೊಡಬೇಕೆಂದು ಸೂಚನೆ ಮಾಡಿದ್ದೆ.

*Sri M. MADIAH (Nanjangud—Scheduled Castes).—Regarding the point of order, when the Hon'ble Member who presented the Select Committee Report did so with the permission of the Chair to present the same, nobody took objection that he did not seek permission. The presentation of the Report of the Select Committee is included in the agenda for today. The Hon'ble Member of the Select Committee sought for your permission to present the Report. So, there is no point of order raised by Sri Linganna.

Mr. SPEAKER.—The point is this. The objection raised is that the Hon'ble Member who presented the Report of this Bill did not seek the permission of the Chair and did not make a statement to that effect. Of course, he sought my permission before. It would have been better if he had made that statement in the House. Since the House adjourned before five o'clock yesterday, I have permitted him to present it today.

DEBATE ON THE FACT FINDING COMMITTEE REPORT.

*ಶ್ರೀ ಎಚ್. ಸಿ. ನಾಗಯ್ಯರೆಡ್ಡಿ (ಗೋರಿಬಿದನೂರು).—ಸರ್ಕಾರದವರು Fact Finding ಕಮಿಟಿಯ ವರದಿ ಮೇಲೆ ಒಂದು motion ಇಟ್ಟಿಲ್ಲ. ಅಥವಾ ಒಂದು formal resolution ಇಟ್ಟಿಲ್ಲ. ನೀವು ನೀವು ಕಿತ್ತಾಡಿಕೊಳ್ಳಿ ಎಂದು ಈ ವರದಿಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಇದರಿಂದ ನಮಗೆ ಏನು ಪ್ರಯೋಜನವಾಗುತ್ತದೋ ಗೊತ್ತಾಗುವುದಿಲ್ಲ. ಪತ್ರಿಕೆಗಳಲ್ಲಿ ಬರುತ್ತದೆ ಎಂದು ನಾವು ಇಲ್ಲಿ ಮಾತನಾಡುತ್ತಿದ್ದೇವೆ. ನಮ್ಮ ಅಭಿಪ್ರಾಯಗಳನ್ನು ಇಲ್ಲಿ ಹೇಳುವುದಾದರೆ ಅದನ್ನು ಕೇಳುವವರು ಯಾರು

ಎನ್ನುವುದು ನನಗೆ ಅರ್ಥವಾಗುವುದಿಲ್ಲ. ಈ ಸಭೆಯ ಸಮಯ ಬಹಳ ಅಮೂಲ್ಯವಾದುದು. ಇದನ್ನು ಏತಕ್ಕೆ ಹೀಗೆ ವ್ಯಥಾ ಕಳೆಯಬೇಕೋ ಗೊತ್ತಿಲ್ಲ. If it is in the form of a resolution then we can express our views which could be conveyed to the Commission. ಆದ ಕಾರಣ ಈ ವರದಿಯ ಚರ್ಚೆಗೆ ಏತಕ್ಕೆ ಹೆಚ್ಚು ಕಾಲ ತೆಗೆದುಕೊಳ್ಳಬೇಕೋ ಗೊತ್ತಿಲ್ಲ. If they are very fond of hearing their own voice, ನನ್ನ ಆಕ್ಷೇಪಣೆ ಏನೂ ಇಲ್ಲ.

ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮೂರು).—ಈ ರಿಪೋರ್ಟೇ ಅಲ್ಲದೆ ಕೆ.ಜಿ.ಎಫ್. ಮತ್ತು ಮೈನಿಂಗ್ ಕಂಪೆನಿಗಳ ರಿಪೋರ್ಟೂ ಕೂಡ ಇದೇ ರೀತಿ ಚರ್ಚೆ ಮಾಡಲ್ಪಟ್ಟಿತು. ಆಗಲೂ ಏನೂ ನಿರ್ಣಯವನ್ನು ಸಭೆಯ ಮುಂದಿಟ್ಟಿರಲಿಲ್ಲ. ಅದರಮೇಲೆ ಚರ್ಚೆ ನಡೆಯಿತು. ಮುಂದೆ ಅದರ ವಿಚಾರದಲ್ಲಿ ಏನು ಬೇಕಾದರೂ ಮಾಡುವುದಕ್ಕೆ ಅವಕಾಶವಿದೆ. ಆದ್ದರಿಂದ ಈ ರಿಪೋರ್ಟಿನಮೇಲೂ ಚರ್ಚೆ ನಡೆಸುವುದರಲ್ಲೇನೂ ತಪ್ಪಿಲ್ಲ. ಚರ್ಚೆಯಾದ ನಂತರ, ಮುಂದೇನು ಮಾಡಬೇಕು, ಒಂದು ನಿರ್ಣಯ ವನ್ನಿಡಬೇಕಾಗಿದೆಯೇ ಎಂಬುದನ್ನು ತೀರ್ಮಾನ ಮಾಡಬಹುದು. It is left to the House later to decide. But so far as the discussions are concerned, the subject is on the agenda and we ought to discuss.

Mr. SPEAKER.—Anyhow there is limited time at our disposal. Therefore, I would request the Hon'ble Members to be very brief and also refer to relevant points and not the points which were already covered by some members.

Sri V. VENKATAPPA (Channapatna).—It is only for today or tomorrow also?

Mr. SPEAKER.—I think we have to sit even after 5 o'clock sometimes.

Sri V. VENKATAPPA.—Are we discussing the Report only today or tomorrow also?

Mr. SPEAKER.—It is to be seen. I may tell you tomorrow.

Sri J. MOHAMED IMAM (Jagalur).—I have got a very strong objection, Sir. I would like to know who is the Minister in-charge of this Report? Last time it was introduced by Dr. Nagan Gowda, he is absent; and the Chief Minister who is in overall charge of everything, he is absent and the other three Ministers who are present here are helpless.

Sri Kadidal MANJAPPA (Minister for Revenue and Public Works).—I very strongly object to the words spoken by the Leader of the Opposition, Sir.

Sri J. MOHAMED IMAM.—I think the Chief Minister must answer all these questions and his absence handicaps a good deal. At least Dr. Nagan Gowda must be present because it is he who introduced this Report. Somebody must be here to give authoritative answers.

Sri H. SIDDAVEERAPPA (Minister for Home and Industries).—The agenda had provided for discussion for tomorrow also.

*ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ಸ್ವಾಮಿ, ಈ ಸಭೆಯ ಮುಂದಿರತಕ್ಕ ರಾಜ್ಯಗಳ ಪುನರ್ವಿಂಗಡಣಾ ಸಂಬಂಧದಲ್ಲಿ ನೇಮಕವಾಗಿದ್ದ ಅಂಕಿ ಅಂಶಗಳ ಪರಿಶೀಲನಾ ಸಮಿತಿಯವರು ಕೊಟ್ಟಿರುವ ವರದಿಯನ್ನು ಪರಿಶೀಲಿಸುವಾಗ ಯಾವ ಉದ್ವೇಗಗಳಿಗೂ ಅವಕಾಶ ಕೊಡದೆ, ಅಂಕಿ ಅಂಶಗಳಿಂದ ಯಾವ ತೀರ್ಮಾನಕ್ಕೆ ಬರುವುದಕ್ಕೆ ಸಾಧ್ಯವೋ ಅಂಥ ಅಭಿಪ್ರಾಯಗಳನ್ನೇ ವ್ಯಕ್ತಪಡಿಸಬೇಕಾದದ್ದು ಅತ್ಯಗತ್ಯ. ಕೆಲವು ಸಮಯದಲ್ಲಿ ಮಾತನಾಡುವಾಗ ಉದ್ರೇಕಕ್ಕೆ ಅವಕಾಶಕೊಟ್ಟು ಅಂಕಿ ಅಂಶಗಳಿಂದ ಯಾವ ಅರ್ಥ ಹೊರಬೀಳುವುದಿಲ್ಲವೋ ಆ ಅರ್ಥವನ್ನು ಹೇಳುವ ಸಂಭವ ಕೂಡ ಕೆಲವುವೇಳೆ ಬಂದಿದೆ. ಆದರೂ ಈ ಸಭೆಯ ಮುಂದೆ ಹಿಂದೆ ಎರಡು ದಿನಗಳು ಚರ್ಚೆಯಾದಾಗ ವ್ಯಕ್ತವಾದ ಅಭಿಪ್ರಾಯ ದೇಶದಲ್ಲಿ ಈ ಅಂಕಿ ಅಂಶಗಳಿಂದ ಯಾವ ತೀರ್ಮಾನಕ್ಕೆ ಬರಬಹುದೆಂಬುದಕ್ಕೆ ಬಹುಮಟ್ಟಿಗೆ ಸಾಧಕವಾಗಿತ್ತೆಂದು ನಾನು ಭಾವನೆ ಮಾಡುತ್ತೇನೆ. ಈ ಸಮಿತಿಯನ್ನು ಸರ್ಕಾರದವರು ರಚಿಸುವುದಕ್ಕೆ ಪೂರ್ವಭಾವಿಯಾಗಿ ನಮ್ಮ ಮುಂದೆ ಖಚಿತವಾದ ಅಂಕಿ ಅಂಶಗಳು ಇರಲಿಲ್ಲ. ಚರಿತ್ರೆಯ ಆಧಾರದಮೇಲೆ ನಮ್ಮ ನಮ್ಮ ಮನೋಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದೆವು. ಆದರೆ, ಸರ್ಕಾರದವರು ಈ ಸಮಿತಿಯನ್ನು ರಚಿಸಿ, ಸಮಿತಿಯ ವರದಿ ಬಂದಮೇಲೆ ಪರಿಸ್ಥಿತಿ ಬದಲಾವಣೆಯಾಗಿದೆಯೆಂದು ನಾನು ತಿಳಿಯುತ್ತೇನೆ. ಈ ಸಮಿತಿಯಲ್ಲಿದ್ದ ಸದಸ್ಯರು ಮತ್ತು ಅಧ್ಯಕ್ಷರು ಆಡಳಿತದಲ್ಲಿ ಅನುಭವವುಳ್ಳವರಾಗಿದ್ದು ಒಂದು ತುಲನಾತ್ಮಕ ದೃಷ್ಟಿಯಿಂದ ಅಂಕಿ ಅಂಶಗಳನ್ನು ಆರಿಸಿ ಒಂದು ವರದಿಯ ರೂಪದಲ್ಲಿ ನಮಗೆ ಕೊಟ್ಟು ಹೆಚ್ಚಿನ ಉಪಕಾರ ಮಾಡಿದ್ದಾರೆಂದು ನಾನು ಭಾವಿಸುತ್ತೇನೆ. ಈ ವರದಿಯಲ್ಲಿ ಪ್ರಸ್ತಾಪ ಮಾಡಿರುವ ವಿಷಯಗಳು ನಾವು ತೀರ್ಮಾನಕ್ಕೆ ಬರುವುದಕ್ಕೆ ಬಹಳ ಅನುಕೂಲವಾಗಿವೆ. ಇದರಲ್ಲಿರುವ ವಿಷಯಾನುಕ್ರಮಣಿಕೆಯನ್ನು ನೋಡಿದರೆ, ಎರಡನೆಯ ಮತ್ತು ಮೂರನೆಯ ಅಧ್ಯಾಯಗಳಲ್ಲಿ ಭೂಗೋಳ ಶಾಸ್ತ್ರಕ್ಕೆ ಸಂಬಂಧಪಟ್ಟಿದ್ದನ್ನು ಬಿಟ್ಟರೆ, ಮಿಕ್ಕ ಭಾಗಗಳಲ್ಲಿ ಸಂಚಾರ ಮಾರ್ಗಗಳು, ವಿದ್ಯಾಭ್ಯಾಸ, ವೈದ್ಯಸಹಾಯ, ಜನಾರೋಗ್ಯ ರಕ್ಷಣೆ, ವ್ಯವಸಾಯ, ಪಶುಪಾಲನೆ, ಸಹಕಾರ, ಗ್ರಾಮಾಭಿವೃದ್ಧಿ, ನಿರಾವರಿ, ವಿದ್ಯುಚ್ಛಕ್ತಿ, ಪ್ರಕೃತಿ ಸಂಪತ್ತು, ಪಾಂಚವಾರ್ಷಿಕ ಯೋಜನೆ ಮುಂತಾದ ವಿಷಯಗಳಿಗೆ ಸಂಬಂಧಪಟ್ಟಂತೆ ಆದಾಯ, ವೆಚ್ಚ ಮತ್ತು ಆಡಳಿತ ಸಂಬಂಧವಾದ ಸಮಸ್ಯೆಗಳನ್ನು ಕೊಟ್ಟಿದೆ. ಈ ಅಧ್ಯಾಯಗಳಲ್ಲಿ ಯಾವ ಯಾವ ಭಾಗಗಳನ್ನು ಯಾವ ವಾಗ್ವಾದಕ್ಕೂ ಅವಕಾಶವಿಲ್ಲದೆ ಕನ್ನಡ ಪ್ರದೇಶವೆಂದು ಹೇಳಬಹುದೋ ಆ ಭಾಗಗಳನ್ನು ತೆಗೆದುಕೊಂಡು, ಆ ಭಾಗಗಳಿಂದ ಎಷ್ಟು ಉತ್ಪತ್ತಿಯಿದೆ, ಎಷ್ಟು ಖರ್ಚಿದೆ, ಅಲ್ಲಿ ಜನೋಪ

(ಶ್ರೀ ಕೆ. ಪುಟ್ಟಸ್ವಾಮಿ.)

ಯುಕ್ತವಾದ ಸೌಲಭ್ಯಗಳು ಎಷ್ಟರಮಟ್ಟಿಗಿವೆ, ಒಂದು ಪಕ್ಷ ಅವು ಮೈಸೂರು ಸಂಸ್ಥಾನಕ್ಕೆ ಸೇರುವುದಾದರೆ ಉದ್ಭವಿಸಬಹುದಾದ ಸಮಸ್ಯೆಗಳೇನು, ಮೈಸೂರು ಸಂಸ್ಥಾನದಲ್ಲಿರುವಷ್ಟುಮಟ್ಟಿಗೆ ಬೇರೆಕಡೆ ಸೌಲಭ್ಯಗಳನ್ನೇರ್ಪಡಿಸಬೇಕಾದರೆ ಎಷ್ಟು ಹಣ ಖರ್ಚು ಮಾಡಬೇಕಾಗುತ್ತದೆಂಬ ವಿಚಾರಗಳನ್ನೆಲ್ಲಾ ಪ್ರಸ್ತಾಪ ಮಾಡಿದ್ದಾರೆ.

ಈ ವಿಚಾರವನ್ನು ಚರ್ಚೆ ಮಾಡುವಾಗ ಬಹು ಮುಖ್ಯವಾಗಿ ಪತ್ರಿಕೆಯಲ್ಲಿ ಬಂದಿದ್ದಂಥ ಮೂರು ಲೇಖನಗಳನ್ನು ಪ್ರಸ್ತಾಪ ಮಾಡಿದರೆ ಅನುಚಿತವಾಗಲಾರದು. ಇವು ಶ್ರೀ S. R. ಕಂಠಿಯವರು ಬರೆದಿರುವ ಲೇಖನಗಳು. ಸರ್ಕಾರದಿಂದ ನಿಯಮಿತವಾದ ಒಂದು ಸಮಿತಿಯನ್ನು ನೆರೆಹೊರೆಯ ಸರ್ಕಾರಗಳಿಂದ ಅಧಿಕೃತವಾದ ಅಂಕಿ ಅಂಶಗಳನ್ನು ಶೇಖರಣೆಮಾಡಿ ತಮ್ಮ ಅಭಿಪ್ರಾಯವನ್ನು ಅಂಕಿ ಅಂಶಗಳ ಆಧಾರದಮೇಲೆ ಒಂದು ನಿರ್ದಿಷ್ಟ ರೂಪದಲ್ಲಿ ವರದಿಯ ಮೂಲಕ ಕೊಟ್ಟಿದ್ದರೆ, ಅದಕ್ಕಿಂತಲೂ ಹೆಚ್ಚಿನ ರೀತಿಯಲ್ಲಿ ಪತ್ರಿಕೆಗಳಲ್ಲಿ ಬಂದಿದ್ದಂಥ ಈ ಲೇಖನಗಳಿಗೆ ಮಾನ್ಯತೆಕೊಟ್ಟು ಈ ಸಭೆಯಲ್ಲಿ ಕೆಲವು ಭಾಷಣಗಳಾಗಿವೆ. ಆದ್ದರಿಂದ ಈ ವರದಿಯನ್ನು ಪರಿಶೀಲನೆ ಮಾಡುವಾಗ ನಾವು ಶ್ರೀ ಕಂಠಿಯವರ ಅಭಿಪ್ರಾಯವನ್ನೂ ಕೂಡ ಇಲ್ಲಿ ಉಲ್ಲೇಖಿಸಬೇಕಾಗಿರುವುದು ಅನಿವಾರ್ಯವಾಗಿದೆ.

ಮೊದಲನೆಯದಾಗಿ ಒಂದು ದೊಡ್ಡ ಸಮಸ್ಯೆಯನ್ನು ಶ್ರೀ ಕಂಠಿಯವರು ಎತ್ತಿದ್ದಾರೆ. ಆ ಶೇಷಾದ್ರಿ ಸಮಿತಿಯವರು ತಮ್ಮ ವರದಿಯಲ್ಲಿ "ನಮ್ಮ ಅಭಿಪ್ರಾಯದ ಪ್ರಕಾರ ಕನ್ನಡ ಪ್ರದೇಶವೆಂದು ಸ್ಪಷ್ಟವಾಗಿ ತಿಳಿಯಬಹುದಾದ ಪ್ರದೇಶದ ವಿಸ್ತೀರ್ಣ 42,827 ಚದರ ಮೈಲಿಗಳು, ಈ ಪ್ರದೇಶದ ಒಟ್ಟು ಜನ ಸಂಖ್ಯೆ ಒಂದು ಕೋಟಿ 67 ಲಕ್ಷ ಚಿಲ್ಲರೆ; ಇದರಪೈಕಿ 70,10,896 ಮಂದಿಗಳು ಕನ್ನಡ ಭಾಷೆಯನ್ನು ತಮ್ಮ ಮಾತೃಭಾಷೆಯನ್ನಾಗಿ ಆಡುತ್ತಾರೆಂದು ಹೇಳಬಹುದು" ಎಂದು ಹೇಳಿದ್ದಾರೆ. ಇಷ್ಟನ್ನು ಮಾತ್ರ ನಿರ್ದಿಷ್ಟವಾಗಿ ಕನ್ನಡ ಪ್ರದೇಶವೆಂದು ಹೇಳಬಹುದೆಂದು ತಿಳಿಸಿದ್ದಾರೆ. ಈ ವಿಷಯವನ್ನು ಶ್ರೀ ಕಂಠಿಯವರು: "ಸರಿಯಲ್ಲ, ಈ ಸಮಿತಿಯವರು ಬಹಳ ಅನ್ಯಾಯ ಮಾಡಿದ್ದಾರೆ, ಆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿಯವರು ರಾಜ್ಯಪುನರ್ನಿರ್ಮಾಣ ಸಮಿತಿಯವರಿಗೆ ಒಪ್ಪಿಸಿರತಕ್ಕಂಥ ವರದಿಯಲ್ಲಿ 52 ಸಾವಿರದ 500 ಚದರ ಮೈಲಿ ವಿಸ್ತೀರ್ಣ ಉಳ್ಳದಾಗಿದ್ದು ಸುಮಾರು ಎರಡು ಕೋಟಿ ಚಿಲ್ಲರೆ ಪ್ರಜಾಸಂಖ್ಯೆ ಇರುವಷ್ಟು ಕರ್ನಾಟಕ ಭಾಗ ಆಗುತ್ತದೆ" ಎಂದು ತಿಳಿಸಿದ್ದಾರೆ. ಶೇಷಾದ್ರಿ ಸಮಿತಿಯವರು ಈ ವಿಷಯಗಳನ್ನೆಲ್ಲಾ ಪರಿಶೀಲನೆ ಮಾಡುವಾಗ ಒಂಬತ್ತು ಸಾವಿರ ಚದರ ಮೈಲಿ ಪ್ರದೇಶದಲ್ಲಿರತಕ್ಕಂಥ ಸುಮಾರು 23 ಲಕ್ಷ ಪ್ರಜಾ ಸಂಖ್ಯೆಯುಳ್ಳ ಬೇರೆ ಪ್ರಾಂತ್ಯಗಳು ಇದಕ್ಕೆ ಸಂಬಂಧಪಡುವುದಿಲ್ಲವೆಂದು ಭಾವಿಸಿಕೊಂಡು, ಶ್ರೀ ಕಂಠಿಯವರು ಈ ಸಮಿತಿಯವರು ಈ ವಿಚಾರದಲ್ಲಿ ಬಹಳ ಅನ್ಯಾಯ ಮಾಡಿದ್ದಾರೆ ಎಂದು ಹೇಳಿದ್ದಾರೆ. ನಾವು ಈ ವರದಿಯಲ್ಲಿರುವ ಮೊದಲನೆಯ ಅಧ್ಯಾಯವನ್ನು ನೋಡಿದರೆ ಹಿಂದೆ ಯಾವುದೋ ಒಂದು ಭಾವನೆಯಿಂದ ಮಾಡಿರತಕ್ಕಂಥ ಉದ್ದೇಶಕ್ಕಾಗಿ ಈಗ ಈ ಪ್ರಾಂತ್ಯಗಳನ್ನೆಲ್ಲಾ ಒಟ್ಟು ಕೂಡಿಸಬೇಕೆಂಬ ಒಂದು ವಾದವನ್ನು ಹೂಡಿದ್ದಾರೆ. ಆದರೆ ಇವರು ಹೂಡಿರತಕ್ಕಂಥ ವಾದ ಸತ್ಯಾಂಶಕ್ಕೆ ಬಹಳ ದೂರವಾಗಿದೆ. ಶೇಕಡ 1, 1½ ಯಿಂದ ಹಿಡಿದು ಶೇಕಡ 15ರವರೆಗೂ ಕನ್ನಡ ಭಾಷೆಯನ್ನಾಡತಕ್ಕಂಥ ಜನಗಳಿರುವ ಭಾಗವನ್ನೆಲ್ಲಾ ಕನ್ನಡ ಪ್ರದೇಶವೆಂದೂ, ಅವುಗಳೆಲ್ಲಾ ಕರ್ನಾಟಕಕ್ಕೆ ಸೇರಬೇಕು ಎಂದೂ ವಾದ ಹೂಡಿದ್ದಾರೆ.

ಶ್ರೀ ಎ. ಭೀಮಪ್ಪನಾಯಕ್.—ಹಾಗೆ ಶ್ರೀ ಕಂಠಿಯವರು ಎಲ್ಲಿ ಶೇಕಡ ಒಂದರಿಂದ ಹದಿನೈದರ ತನಕ ಮಾತನಾಡತಕ್ಕಂಥ ಭಾಗವೆಲ್ಲಾ ಕನ್ನಡ ಪ್ರದೇಶವೆಂದು ಪರಿಗಣಿಸಬೇಕು ಎಂದು ಹೇಳಿದ್ದಾರೆ? ಹಾಗೆ ಅವರು ಎಲ್ಲಿ ಹೇಳಿದ್ದಾರೆ ಎಂಬುದಕ್ಕೆ ತಾವು ಸ್ವಲ್ಪ ಅವರ ಬರವಣಿಗೆಯನ್ನೇ ಓದಿದರೆ ಬಹಳ ಅನುಕೂಲವಾಗುತ್ತದೆಯಲ್ಲವೇ?

Sri J. MOHAMED IMAM.—When the member is not in the House to defend himself, it is the duty of the speaker to give all relevant facts so that they may be appreciated by the members of the House. There is no use of simply giving imaginary description.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ಸ್ವಲ್ಪ ಸಹನೆಯಿಂದಿದ್ದರೆ ನಾನು ಎಲ್ಲದಕ್ಕೂ ಅಂಕಿ ಅಂಶಗಳನ್ನು ಕೊಡಬಲ್ಲೆ. ನಾನು ಯಾವಾಗಲೂ ನಿರಾಧಾರವಾದಂಥ ಮಾತುಗಳನ್ನು ಹೇಳತಕ್ಕಂಥವನಲ್ಲ, ಅಂಥ ನಿರಾಧಾರವಾದ ಹೇಳಿಕೆಯನ್ನು ಕೊಡುವುದಕ್ಕೆ ನಾನು ಸಿದ್ಧವಾಗಿಯೂ ಇಲ್ಲ. ತಾವುಗಳೆಲ್ಲರೂ ದಯವಿಟ್ಟು 169ನೆಯ ಪೇಜನ್ನು ಓದಿನೋಡಿ, ತಮಗೇ ಗೊತ್ತಾಗುತ್ತದೆ. ಗುಲ್ಬರ್ಗ ಜಿಲ್ಲೆಯಲ್ಲಿರುವ ತಂಡೂರ್ ಮತ್ತು ಕೋಡಂಗಲ್‌ನಲ್ಲಿ ಕನ್ನಡ ಮಾತನಾಡತಕ್ಕಂಥವರ ಶೇಕಡಾವಾರು ಸಂಖ್ಯೆ 1·1 ಇದೆ. ಬಿದರೆ ಡಿಸ್ಟ್ರಿಕ್ಟಿನಲ್ಲಿರುವ ನಿಲಂಗದಲ್ಲಿ ಕನ್ನಡ ಮಾತನಾಡತಕ್ಕಂಥವರ ಸಂಖ್ಯೆ ಶೇಕಡ 6 ಇದೆ, ಮತ್ತು ಅಹಮದ್‌ಪುರದಲ್ಲಿ ಶೇಕಡ 1·3 ಇದೆ. ರಾಯಚೂರು ಜಿಲ್ಲೆಯಲ್ಲಿರುವ ಗದ್ವಾಲ್ ಮತ್ತು ಅಲಂಪುರ ಪ್ರದೇಶದಲ್ಲಿ ಕನ್ನಡ ಮಾತನಾಡತಕ್ಕಂಥವರ ಶೇಕಡಾವಾರು ಸಂಖ್ಯೆ 2·5 ಇದೆ. ಸೊಲ್ಲಾಪುರ ಜಿಲ್ಲೆಯಲ್ಲಿರುವ ಸಾಂಗೋಲ, ಮಲಸಿರಸ ಇತ್ಯಾದಿ ತಾಲ್ಲೂಕುಗಳಲ್ಲಿ ಕನ್ನಡ ಮಾತನಾಡತಕ್ಕಂಥವರ ಸಂಖ್ಯೆ ಶೇಕಡ 1·5 ಇದೆ. ಮತ್ತು ಅದೇ ಜಿಲ್ಲೆಯ ಮಾಧಾ, ಕರ್ಮಾಳ ಮತ್ತು ಮೋಹಳ ತಾಲ್ಲೂಕುಗಳಲ್ಲಿ ಕನ್ನಡ ಮಾತನಾಡತಕ್ಕಂಥವರ ಜನಸಂಖ್ಯೆ ಶೇಕಡ 0·6 ಇದೆ. ಹೀಗೆಲ್ಲಾ ವಾಸ್ತವಾಂಶವಿರುವುದಾಗಿ ಈ ವರದಿಯಲ್ಲಿ ತಿಳಿಸಿದ್ದಾರೆ. ಇನ್ನು ಆ ಸಾಂಗೋಲ, ಮಾಲಸಿರಸ, ಪಂಡರಾಪುರ ಮತ್ತು ಮಂಗಳವಾಡ ತಾಲ್ಲೂಕುಗಳಲ್ಲಿ ಪೌರಪ್ರದೇಶದಲ್ಲಿ ಕನ್ನಡ ಮಾತನಾಡತಕ್ಕಂಥವರ ಶೇಕಡಾವಾರು ಸಂಖ್ಯೆ 1·5 ಇದೆಯೆಂತಲೂ, ಮಾಧಾ ಮತ್ತು ಕರ್ಮಾಳ, ಮೋಹಳ ತಾಲ್ಲೂಕುಗಳಲ್ಲಿ ಕನ್ನಡ ಮಾತನಾಡತಕ್ಕವರ ಸಂಖ್ಯೆ ಶೇಕಡ 0·8 ಇದೆಯೆಂದೂ ತಿಳಿಸಿದ್ದಾರೆ. ಕೊಲ್ಹಾಪುರ ಜಿಲ್ಲೆಯ ಕೆಲವು ಪೌರ ಪ್ರದೇಶಗಳಿರುವ ಸ್ಥಳದಲ್ಲಿ ಈ ಕನ್ನಡ ಮಾತನಾಡುವವರ ಸಂಖ್ಯೆ ಶೇಕಡ 13·1 ಇದೆ. ಹಾಗೆ ನಾನು ಯಾವಾಗಲೂ ಅಂಕಿ ಅಂಶಗಳಿಲ್ಲದೆ ಮಾತನಾಡತಕ್ಕವನಲ್ಲ.

ಶ್ರೀ ಎ. ಭೀಮಪ್ಪನಾಯಕ್.—ಈಗ ತಾವು ಓದಿದ್ದೆಲ್ಲಾ ಆ ಶೇಷಾದ್ರಿ ಸಮಿತಿ ವರದಿಯೇ ಹೊರತು ಶ್ರೀ ಕಂಠಿಯವರ ವರದಿಯನ್ನಲ್ಲ. ನಾನು ತಮಗೆ ಕೇಳಿದ್ದು ಶ್ರೀ ಕಂಠಿಯವರೇನಾದರೂ ತಾವಾಗಲೇ ಹೇಳಿದಂತೆ ಎಲ್ಲಿ ಆ ರೀತಿ ತಿಳಿಸಿದ್ದಾರೆ ಎನ್ನುವುದನ್ನು ಓದಿಹೇಳಿ ಎಂದು. ಆದ್ದರಿಂದ ಈಗ ತಾವು ಓದಿದ್ದು ಶ್ರೀ ಕಂಠಿಯವರ ಹೇಳಿಕೆಯಲ್ಲ ಅಲ್ಲವೇ?

Sri K. PUTTASWAMY.—I have not yielded to my Hon'ble friend. I can only yield on a point of order or when the Speaker calls me to resume my seat. Let it be clearly understood by my friend Sri Bheemappa Naik. Let him not go under the impression that he can cow down the members.

ಈಗ ಯಾವ ಮಾನ್ಯ ಸದಸ್ಯರು ನಾನು ಯಾವ ಅಂಕಿ ಅಂಶಗಳ ಆಧಾರವೂ ಇಲ್ಲದೆ ಮಾತನಾಡುತ್ತಿದ್ದಾರೆಂದು ತಿಳಿದುಕೊಂಡಿದ್ದಾರೋ ಅವರು ಮತ್ತೊಮ್ಮೆ ಈ ಶೇಷಾದ್ರಿ ಸಮಿತಿಯ ವರದಿಯಲ್ಲಿರತಕ್ಕಂಥ ಮೊದಲನೆಯ ಅಧ್ಯಾಯವೊಂದನ್ನೇ ಚೆನ್ನಾಗಿ ಓದಿದರೆ—ಆಗ ಅವರು ಇಷ್ಟೊಂದು ಕಳವಳವನ್ನು ವ್ಯಕ್ತಪಡಿಸುವುದಕ್ಕೆ ಅವಕಾಶವಿರುತ್ತಿರಲಿಲ್ಲವೆಂದು ನಾನು ಹೇಳುತ್ತೇನೆ.

ಇನ್ನು ಎರಡನೆಯದಾಗಿ ನಾಲ್ಕನೆಯ ಅಧ್ಯಾಯದಲ್ಲಿ ಸಂಚಾರ ಮಾರ್ಗಗಳ ವಿಚಾರವಾಗಿ ಪ್ರಸ್ತಾಪ ಮಾಡಿದ್ದಾರೆ. ಈ ಸಂಚಾರ ಮಾರ್ಗಗಳ ವಿಷಯವಾಗಿ ಮಾತನಾಡುತ್ತ ಮೊದಲೇ ನಾನು ಹೇಳಿರತಕ್ಕಂಥ ವಿಚಾರದಲ್ಲಿ ಮುಖ್ಯವಾಗಿ ಒಂದು ಅಂಶವನ್ನೀಗ ನಾನು ಈ ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ಮೊದಲನೆಯ ಅಧ್ಯಾಯದ ಕೊನೆಯ ಭಾಗದಲ್ಲಿ ಈ ಸಮಿತಿಯವರು ಹೇಳಿರತಕ್ಕದ್ದು ಹೀಗಿದೆ. "ಮೇಲ್ಕಂಡ ಸರ್ವೆ ಪರಿಶೀಲನೆಯಿಂದ, ಸರಹದ್ದುಗಳನ್ನು ಎಷ್ಟೇ ಜಾಗರೂಕತೆಯಿಂದ ನಿರ್ಧರಿಸಿದರೂ, ಭಾಷಾವಾರು ಆಧಾರದ ಮೇಲೆ ಜನರನ್ನು ವರ್ಗಾಯಿಸುವಂತೆ ನಾವು ಉದ್ದೇಶಿಸಿದ ಹೊರತು ಬೇರೆ ಬೇರೆ ಭಾಷೆಗಳನ್ನಾಡತಕ್ಕ ಅಲ್ಪಸಂಖ್ಯಾತರನ್ನು ಬಿಟ್ಟು ಬಿಡುವುದಕ್ಕೆ ಸಾಧ್ಯವಿಲ್ಲವೆಂಬುದು ನಮಗೆ ಸ್ಪಷ್ಟವಾಗಿ ಕಂಡುಬರುತ್ತದೆ. ಭಾಷಾವಾರು ಆಧಾರದಮೇಲೆ ಪ್ರದೇಶಗಳ ಪುನರ್ವಿಂಗಡಣೆಯ ಸಮಸ್ಯೆಯನ್ನು ಬಗೆಹರಿಸುವುದು ನಾವು ಭಾವಿಸುವಷ್ಟು ಸುಲಭ ಸಾಧ್ಯವಾದ ಸಮಸ್ಯೆಯಲ್ಲವೆಂಬುದು ನಮಗೆ ವ್ಯಕ್ತವಾಗುವುದು" ಎಂದು ಹೇಳಿದ್ದಾರೆ. ಇಷ್ಟು ಹೇಳಿದಮೇಲೆ ಈ ಸಮಿತಿಯವರು ಇನ್ನು ಈ ಸಂಚಾರ ಮಾರ್ಗಗಳ ವಿಚಾರವಾಗಿ, ಯಾವ ಯಾವ ಭಾಗಗಳಲ್ಲಿ ಎಷ್ಟೆಷ್ಟು ಸಂಚಾರ ಸೌಲಭ್ಯಗಳಿವೆ ಎನ್ನುವುವನ್ನು ಪರಿಶೀಲನೆ ಮಾಡಿದ್ದಾರೆ. ಈ ವಿಚಾರದಲ್ಲಿಯೂ ಸಮಿತಿಯವರು ಸಾಕಷ್ಟು ಅಂಕಿ ಅಂಶಗಳನ್ನು ನಮಗೆ ಒದಗಿಸಿದ್ದಾರೆ. ಪೇಜು 50ರಲ್ಲಿ ಇದನ್ನೆಲ್ಲಾ ಒಂದು ಗ್ರಾಫ್ ಮೂಲಕ ತಿಳಿಸಿದ್ದಾರೆ. ಹೈದರಾಬಾದ್, ಬೊಂಬಾಯಿ, ಮದ್ರಾಸು, ಕೊಡಗು ಇತ್ಯಾದಿ ಕನ್ನಡ ಪ್ರದೇಶಗಳಲ್ಲಿ ಪ್ರತಿ 100 ಚದರ ಮೈಲಿಗೆ ಎಷ್ಟು ಉದ್ದದ ರಸ್ತೆಯಿದೆಯೆಂಬುದನ್ನು ತಿಳಿಸಿದ್ದಾರೆ. ಹೈದರಾಬಾದಿನ ಕನ್ನಡ ಪ್ರದೇಶದಲ್ಲಿ ಪ್ರತಿ 100 ಚದರ ಮೈಲಿ ಪ್ರದೇಶಕ್ಕೆ ಶೇಕಡ 8·3 ಮೈಲಿಗಳಷ್ಟು ಉದ್ದದ ರಸ್ತೆಯಿರುತ್ತದೆಯೆಂದು ತಿಳಿಸಿದ್ದಾರೆ. ಬೊಂಬಾಯಿ ಪ್ರಾಂತ್ಯದಲ್ಲಿ ಪ್ರತಿ 100 ಚದರ ಮೈಲಿಗಳಿಗೂ ಶೇಕಡ 26·6 ಮೈಲಿಗಳಷ್ಟು ರಸ್ತೆ ಇದೆ. ಮದ್ರಾಸ್, ಸೌತ್_ಕ್ಯಾನರ, ಕೊಡಗು ಇತ್ಯಾದಿ ಪ್ರಾಂತ್ಯಗಳಲ್ಲಿ ಪ್ರತಿ 100 ಚದರ ಮೈಲಿಗಳಿಗೂ 26 ಮೈಲಿಗಳಷ್ಟು ರಸ್ತೆಯಿದೆ. ಆದರೆ ನಮ್ಮ ಮೈಸೂರಿನಲ್ಲಿ ಪ್ರತಿ 100 ಚದರ ಮೈಲಿಗೆ 36 ಮೈಲಿಗಳ ರಸ್ತೆಯಿರುತ್ತದೆ. ಹೀಗೆಲ್ಲಾ ಈ ಸಮಿತಿಯವರು ಅನೇಕ ವಿಷಯಗಳನ್ನು ಪರಿಶೀಲನೆ ಮಾಡಿದ್ದಾರೆ. ಅಂದರೆ ನಮ್ಮ ಮೈಸೂರು ದೇಶದಲ್ಲಿರುವಷ್ಟು ಸಂಚಾರ ಸೌಲಭ್ಯಗಳು ನಮ್ಮ ನೆರೆಹೊರೆಯ ಪ್ರಾಂತ್ಯಗಳಲ್ಲಿರುವುದಿಲ್ಲ ಎನ್ನುವುದು ಈ ವರದಿಯಿಂದ ನಮಗೆ ವ್ಯಕ್ತಪಡುತ್ತದೆ. ಆದರೆ ಈ ದಿವಸ ನಮ್ಮ ಮೈಸೂರಿನಲ್ಲಿರುವಷ್ಟೇ ಈ ಸಂಚಾರ ಸೌಲಭ್ಯಗಳನ್ನು ನಾವು ಇತರ ಪ್ರಾಂತ್ಯಗಳಲ್ಲಿ ನಡೆಸಬೇಕಾಗಿದ್ದರೆ ಎಷ್ಟು ಹಣವನ್ನು ಖರ್ಚು ಮಾಡಬೇಕಾಗುತ್ತದೆ ಎನ್ನುವುದನ್ನೂ ಕೂಡ ಈ ಸಮಿತಿಯವರೇ ತಿಳಿಸಿದ್ದಾರೆ.

1 P.M.

ರಸ್ತೆ ಸೌಕರ್ಯಗಳ ವಿಷಯದಲ್ಲಿ ಮೈಸೂರು ಸಂಸ್ಥಾನದ ಮಟ್ಟಕ್ಕೆ ಬರಬೇಕಾದರೆ ಹೈದರಾಬಾದ್ ಸಂಸ್ಥಾನದ ಕನ್ನಡ ಪ್ರದೇಶದಲ್ಲಿ 5,069 ಮೈಲಿಗಳಷ್ಟು ಉದ್ದವಾಗುವ ಹೊಸ ರಸ್ತೆಗಳನ್ನು, ಬೊಂಬಾಯಿ ರಾಜ್ಯದಲ್ಲಿರುವ ಕನ್ನಡ ಪ್ರದೇಶದಲ್ಲಿ 3,245 ಮೈಲಿಗಳಷ್ಟು ಉದ್ದದ ಹೊಸ ರಸ್ತೆಗಳನ್ನು ಏರ್ಪಡಿಸಬೇಕಾಗುವುದು. ಹೈದರಾಬಾದ್ ಸಂಸ್ಥಾನದಲ್ಲಿರುವ ಕನ್ನಡ ಪ್ರದೇಶದಲ್ಲಿ ಹೊಸ ರಸ್ತೆಗಳನ್ನು ಏರ್ಪಡಿಸುವುದಕ್ಕೆ 760 ಲಕ್ಷ ರೂಪಾಯಿ ಮೊಬಲಗೂ, ಬೊಂಬಾಯಿ ರಾಜ್ಯದಲ್ಲಿರುವ ಕನ್ನಡ ಪ್ರದೇಶದಲ್ಲಿ ಹೆಚ್ಚಿಗೆ ಹೊಸ ರಸ್ತೆಗಳನ್ನು ಏರ್ಪಡಿಸುವುದಕ್ಕೆ 486 ಲಕ್ಷ ರೂಪಾಯಿಯ ಮೊಬಲಗೂ ಮತ್ತು ಮದರಾಸು ರಾಜ್ಯದಲ್ಲಿರುವ ಕನ್ನಡ ಪ್ರದೇಶದಲ್ಲಿ ಹೆಚ್ಚಿಗೆ ಹೊಸ ರಸ್ತೆಗಳನ್ನು ಏರ್ಪಡಿಸುವುದಕ್ಕೆ 60 ಲಕ್ಷ ರೂಪಾಯಿ ಮೊಬಲಗೂ ಬೇಕಾಗುವುದು ಮತ್ತು ಈ ರೀತಿ ಹಣವನ್ನು ಒದಗಿಸುವುದಲ್ಲದೆ ರಸ್ತೆಗಳನ್ನು ಸಾಲು ಸಾಲು ಒಳ್ಳೆಯ ರೀತಿಯಲ್ಲಿ ದುರಸ್ತು ಮಾಡಿ ಇಟ್ಟುಕೊಳ್ಳುವುದಕ್ಕೂ ಕೂಡ ಹಣವನ್ನು ಒದಗಿಸಬೇಕಾಗಿದೆ, ಈ ಬಾಬಿನಲ್ಲಿ ಯಥೇಚ್ಛವಾಗಿ ರಸ್ತೆ ಸೌಕರ್ಯವನ್ನು ಒದಗಿಸುವುದಕ್ಕೆ ಹಣವನ್ನು ಒದಗಿಸಬೇಕಾಗುತ್ತದೆ. ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಾ ಶ್ರೀಮಾರ್ಕಂಡಿಯವರು "ಸುಮಾರು 1,000 ಮೈಲಿ ಹಳ್ಳಿಗಳ ರಸ್ತೆಯನ್ನು ಬಿಟ್ಟುಬಿಟ್ಟಿದ್ದಾರೆ, ಈ ಹಳ್ಳಿಗಳ ರಸ್ತೆಗಳನ್ನು ಬಿಟ್ಟು ಬಿಡದೇ ಇದ್ದರೆ ಪ್ರತಿ 100 ಚದರ ಮೈಲಿಗೆ ಇರತಕ್ಕಂಥ ರಸ್ತೆ ಸಂಖ್ಯೆ ಇನ್ನೂ ಹೆಚ್ಚುತ್ತಾ ಇತ್ತು, ಈ ಅಂಶವನ್ನು ಬಿಟ್ಟು ಕಮಿಟಿಯವರು ವರದಿ ಮಾಡಿದ್ದಾರೆ, ಇದರಿಂದ ಅನ್ಯಾಯವಾಗಿದೆ" ಎಂದು ಅವರು ಹೇಳಿದ್ದಾರೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಅನ್ಯಾಯವಾಗಿದೆಯೆಂದು ಹೇಳಲಿಲ್ಲ. My question is this. When he makes a certain statement, he must substantiate it. A gentleman's statement must not be misquoted.

ಶ್ರೀ ಕೆ. ಪುಟ್ಟಸ್ವಾಮಿ —ಏನು ಬರೆದಿದ್ದಾರೆ ಎಂಬುದನ್ನು ಓದಿ ಹೇಳಬೇಕೋ? ಅದನ್ನು ಪ್ರಸ್ತಾಪನೆ ಮಾಡುತ್ತಾ "ಈ 1,000 ಮೈಲಿಗಳನ್ನು ಸೇರಿಸಿರಬೇಕಾಗಿತ್ತು. ಸೇರಿಸಿದ್ದರೆ ಇನ್ನೂ ಹೆಚ್ಚಿನ ಸಂಚಾರ ಸೌಕರ್ಯಗಳು ಇರುತ್ತಿತ್ತೆಂದು ಗೊತ್ತಾಗುತ್ತದೆ" ಎಂದು ಹೇಳಿದ್ದಾರೆ. ಆದರೆ ಒಂದು ವಿಚಾರವನ್ನು ಅವರು ಮರೆತಿದ್ದಾರೆ. ಮೈಸೂರು ದೇಶದಲ್ಲಿ ಇರತಕ್ಕಂಥ ಹಳ್ಳಿಗಳಿಗೆ ಹೋಗತಕ್ಕಂಥ Inter-Village Communications roads ಕೂಡ ಆ ಲೆಖ್ಖದಿಂದ ಬಿಟ್ಟು 36·7 ಮೈಲಿ ಇದೆ ಎಂದು ಹೇಳುತ್ತಾರೆಯೇ ವಿನಾ, ಅದನ್ನು ಸೇರಿಸಿಕೊಂಡಿದ್ದರೆ ಮೈಸೂರು ದೇಶದಲ್ಲಿ 36 ಮೈಲಿ ಬದಲು ಇನ್ನೂ ಹೆಚ್ಚು ಇರತ್ತಿತ್ತು. ಆದ್ದರಿಂದ ಶ್ರೀಮಾರ್ಕಂಡಿಯವರು ಹೇಳಿರತಕ್ಕಂಥ ವಾದದಲ್ಲಿ ಯಾವ ತಿರುಳೂ ಇಲ್ಲ. ಅಲ್ಲಿ ಗ್ರಾಮಾಂತರ ರಸ್ತೆಗಳು ಸರಿಯಾದ ಸ್ಥಿತಿಯಲ್ಲಿ ಇಲ್ಲ ಎನ್ನುವುದು ಕಾಣುತ್ತದೆ. ಒಂದು ಪಕ್ಷ ಇದ್ದಿದ್ದರೂ ಕೂಡ

(ಶ್ರೀ ಕೆ. ಪುಟ್ಟಸ್ವಾಮಿ.)

ಮೈಸೂರು ದೇಶದಲ್ಲಿ ಇರತಕ್ಕಂಥ ಗ್ರಾಮಾಂತರ ರಸ್ತೆಗಳನ್ನು ಬಿಟ್ಟುಬಿಟ್ಟಿರುವುದರಿಂದ ಒಂದಕ್ಕೊಂದು ಹೋಲಿಕೆ ಮಾಡುವಾಗ ಮೈಸೂರು ದೇಶ ಮತ್ತು ಹೊರಭಾಗದ ಕನ್ನಡ ದೇಶದ ಹೋಲಿಕೆಯಲ್ಲಿ ಯಾವ ಅಂತರವನ್ನೂ ಉಂಟು ಮಾಡಲಲ್ಲ.

Sri U. M. MADAPPA (Chamarajanagar).—On a point of information. May I put some question ?

Sri K. PUTTASWAMY.—It depends on the nature of the interruption.

Mr. SPEAKER.—He does not tolerate interruption—only from the Hon'ble Member, Sri T. N. Mudalagiri Gowda (*Laughter*).

ಶ್ರೀ ಕೆ. ಪುಟ್ಟಸ್ವಾಮಿ.—ಇನ್ನು ದೇಶದಲ್ಲಿರತಕ್ಕಂಥ ವಿದ್ಯಾಭ್ಯಾಸ, ವೈದ್ಯಸಹಾಯ ಮತ್ತು ಜನಾರೋಗ್ಯ ರಕ್ಷಣೆ ಇದು ಬಹಳ ಮುಖ್ಯವಾದುವು. ಈ ಸಭೆಯಲ್ಲಿ ಈ ವಿಚಾರವಾಗಿ ಅನೇಕಸಾರಿ ನಾವು ಸರ್ಕಾರವನ್ನು ಆಕ್ಷೇಪಣೆ ಮಾಡುತ್ತಿದ್ದೇವೆ. ಸುಮಾರು ಒಂದು ಲಕ್ಷ 40 ಸಾವಿರ ಪ್ರಜಾಸಂಖ್ಯೆ ಇರತಕ್ಕಂಥ ಚನ್ನಪಟ್ಟಣ ತಾಲ್ಲೂಕಿನಲ್ಲಿ ಒಂದೇ ಆಸ್ಪತ್ರೆ ಇದೆ. ಹಾಗೆ ಸಾಕಾದಷ್ಟು ಸೌಲಭ್ಯವನ್ನು ನಮ್ಮಲ್ಲಿ ಏರ್ಪಡಿಸಿಕೊಡುವುದಕ್ಕೆ ಆಗಿಲ್ಲ ಎನ್ನುವ ವಿಚಾರ ಈ ಸಭೆಯಲ್ಲಿ ಎಷ್ಟೋ ಸಾರಿ ಬಂದಿದೆ. ಇಷ್ಟೆಲ್ಲಾ ಇದ್ದರೂ ಕೂಡ ಮೈಸೂರು ದೇಶಕ್ಕೂ ಹೊರಗಡೆಯ ಭಾಗಕ್ಕೂ ಯಾವ ರೀತಿ ಹೋಲಿಕೆಯಾಗಿದೆ ಎಂಬುದನ್ನು ನೋಡಬೇಕು. ಒಂದು ಪಕ್ಷ ಮೈಸೂರು ದೇಶದಲ್ಲಿ ಇರತಕ್ಕಂಥ ಸೌಲಭ್ಯವನ್ನು ಹೊರಗಡೆ ಒದಗಿಸಬೇಕಾದರೆ ಎಷ್ಟು ಖರ್ಚು ಮಾಡಬೇಕಾಗುತ್ತದೆ ಎನ್ನುವುದನ್ನು ಕೂಡ ನಾವು ಲೆಖ್ಖ ಹಾಕಿಕೊಳ್ಳಬೇಕಾಗುತ್ತದೆ. ಈಗ ಹೈದರಾಬಾದ್ ದೇಶದಲ್ಲಿ ಸುಮಾರು ಒಂದು ಲಕ್ಷ ಪ್ರಜಾಸಂಖ್ಯೆಗೆ 1·1 ಆಸ್ಪತ್ರೆ ಇದೆ. ಬೊಂಬಾಯಿನಲ್ಲಿ 1·6 ಇದೆ. ಮದ್ರಾಸ್‌ನಲ್ಲಿ 2 ಇದೆ. ಕೊಡಗಿನಲ್ಲಿ 7 ಇದೆ. ಮೈಸೂರು ದೇಶದಲ್ಲಿ 5·3 ಇದೆ.

ವೈದ್ಯ ಸಹಾಯದ ವಿಚಾರದಲ್ಲಿ, ಮೈಸೂರು ಸಂಸ್ಥಾನದ ಹಂತಕ್ಕೆ ಬರಬೇಕಾದರೆ ಜನ ಸಂಖ್ಯೆಯ ಸಾಂದ್ರತೆಯಲ್ಲಿ ಕಂಡುಬರತಕ್ಕ ವ್ಯತ್ಯಾಸಗಳು, ವಾಯುಗುಣದ ಪರಿಸ್ಥಿತಿಗಳು ಮತ್ತು ಇತರ ಅಂಶಗಳನ್ನು ಗಣನೆಗೆ ತೆಗೆದುಕೊಂಡು ವಿಷಯನ್ನು ಪರಿಶೀಲಿಸಿದಲ್ಲಿ ರಾಯಚೂರು, ಬಿದರೆ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ನಾಲ್ಕರಷ್ಟು, ಬೊಂಬಾಯಿ ರಾಜ್ಯದ ಕನ್ನಡ ಪ್ರದೇಶಗಳಲ್ಲಿ ಮತ್ತು ದಕ್ಷಿಣ ಕರ್ಣಾಟಕದಲ್ಲಿ ಕನಿಷ್ಠ ಪಕ್ಷ ಎರಡರಷ್ಟು, ವೈದ್ಯ ಸಹಾಯದ ಸೌಲಭ್ಯಗಳನ್ನು ಹೆಚ್ಚಿಸಬೇಕಾದ ಅವಶ್ಯಕತೆಯು ಇರುವುದಾಗಿ ಕಂಡುಬಂದಿದೆ. ರಾಯಚೂರು, ಬಿದರೆ ಮತ್ತು ಗುಲ್ಬರ್ಗ ಈ ಪ್ರದೇಶಗಳಲ್ಲಿ ಹೊಸ ಡಿಸ್ಟ್ರಿಕ್ಟ್ ಆಸ್ಪತ್ರೆಗಳನ್ನು ಕಟ್ಟಬೇಕಾಗಿದೆ. ಈಗ ಆಸ್ಪತ್ರೆಗಳಲ್ಲಿರುವ ಚಿಕಿತ್ಸಾ ಸಲಕರಣೆಗಳು ತೃಪ್ತಿಕರವಾಗಿಲ್ಲ. ಹಾಲಿ ಇರತಕ್ಕ ಡಿಸ್ಪೆನ್ಸರಿಗಳಿಗೂ ಮತ್ತು ಹೊಸದಾಗಿ ಏರ್ಪಡಿಸಬೇಕಾಗಿರುವ ಡಿಸ್ಪೆನ್ಸರಿಗಳಿಗೂ ಸೂಕ್ತವಾದ ಕಟ್ಟಡಗಳನ್ನು ಕಟ್ಟಬೇಕಾಗಿದೆ. ಡಿಸ್ಟ್ರಿಕ್ಟ್ ಆಸ್ಪತ್ರೆಗಳನ್ನು ಕಟ್ಟಿ ಅವುಗಳನ್ನು ಸಜ್ಜುಗೊಳಿಸಲು 20 ಲಕ್ಷ ರೂಪಾಯಿಗಳೂ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ 120 ಹೆಚ್ಚಿಗೆ ಡಿಸ್ಪೆನ್ಸರಿಗಳನ್ನು ಏರ್ಪಡಿಸಲು ಅವುಗಳಿಗೆ ಕಟ್ಟಡಗಳನ್ನು ಕಟ್ಟಲು 24 ಲಕ್ಷ ರೂಪಾಯಿಗಳೂ ಬೇಕಾಗುವುದೆಂದು ಅಂದಾಜು ಮಾಡಲಾಗಿದೆ.

ಈ ಆಸ್ಪತ್ರೆಗಳನ್ನು ನಡೆಯಿಸಿಕೊಂಡುಬರುವುದರಿಂದ ವೈದ್ಯ ಸಹಾಯಕ್ಕಾಗಿ ಈ ಮೂರು ಡಿಸ್ಟ್ರಿಕ್ಟುಗಳಾಗಿ ಒದಗಿಸುವ ವಾರ್ಷಿಕ ವೆಚ್ಚವನ್ನು 20 ಲಕ್ಷ ರೂಪಾಯಿಗಳಷ್ಟು ಹೆಚ್ಚಿಸಬೇಕಾಗುವುದು. ಸಾರ್ವಜನಿಕರ ಆರೋಗ್ಯಕ್ಕೆ ಸಂಬಂಧಪಟ್ಟ ಸೌಲಭ್ಯಗಳನ್ನು ಉತ್ತಮಗೊಳಿಸಲು, ಈ ಸಂಬಂಧದಲ್ಲಿ ಹಾಲಿ ವೆಚ್ಚವಾಗುತ್ತಿರುವ ಮೊಬಲಗನ್ನು ಐದು ಲಕ್ಷ ರೂಪಾಯಿಗಳಷ್ಟು ಹೆಚ್ಚಿಸಬೇಕಾಗಿದೆಯೆಂದು ನಾವು ಭಾವಿಸುತ್ತೇವೆ.

ಮುಂಬಯಿ ರಾಜ್ಯದ ಕನ್ನಡ ಪ್ರದೇಶಗಳಲ್ಲಿ ಪರಿಸ್ಥಿತಿಯು ಎಷ್ಟೋ ಉತ್ತಮವಾಗಿದೆ. ಆದರೂ ವೈದ್ಯ ಸಹಾಯದ ವಿಚಾರದಲ್ಲಿ ಮೈಸೂರು ರಾಜ್ಯದ ಮಟ್ಟವನ್ನು ಮುಟ್ಟಲು ಈಗ ಹಾಲಿ ಇರತಕ್ಕ ಸಂಸ್ಥೆಗಳ ಸಂಖ್ಯೆಯನ್ನು ಎರಡರಷ್ಟಕ್ಕೆ ಹೆಚ್ಚಿಸಬೇಕಾಗಿದೆ. ಅಂದರೆ, 80 ಹೊಸ ಡಿಸ್ಪೆನ್ಸರಿಗಳನ್ನು ಏರ್ಪಡಿಸಬೇಕಾಗಿದೆ. ಇದರಿಂದ ಈ ಹೊಸ ಡಿಸ್ಪೆನ್ಸರಿಗಳಿಗೆ ಕಟ್ಟಡಗಳನ್ನು ಕಟ್ಟುವುದಕ್ಕಾಗಿಯೂ ಮತ್ತು ಅವುಗಳಲ್ಲಿ ವೈದ್ಯಕೀಯ ಉಪಕರಣಗಳನ್ನು ಸಜ್ಜುಗೊಳಿಸುವುದಕ್ಕಾಗಿಯೂ 16 ಲಕ್ಷ ರೂಪಾಯಿಗಳಷ್ಟು ಹೆಚ್ಚಿಗೆ ವೆಚ್ಚವೂ ಮತ್ತು ಸದರಿ ಡಿಸ್ಪೆನ್ಸರಿಗಳನ್ನು ನಡೆಯಿಸಿಕೊಂಡು ಬರುವುದಕ್ಕಾಗಿ ಸುಮಾರು 16 ಲಕ್ಷ ರೂಪಾಯಿಗಳಷ್ಟು ಹೆಚ್ಚಿಗೆ ವಾರ್ಷಿಕ ಆವೃತ್ತ ವೆಚ್ಚವೂ ತಗಲುವುದಾಗಿದೆ. ಹೀಗೆ ಮೈಸೂರು ದೇಶದ ಹೊರಗಡೆ ಇರತಕ್ಕ ಕನ್ನಡ ಭಾಗಗಳಲ್ಲಿ ವೈದ್ಯಕೀಯ ಸೌಲಭ್ಯ ಸಾಕಷ್ಟು ಇಲ್ಲ. ನಮ್ಮಲ್ಲಿಯೂ ಸಾಕಷ್ಟು ಇಲ್ಲ. ಇಲ್ಲಿ ನೋಡಿದರೆ ಪರಿಸ್ಥಿತಿ ಒಂದು ವಿಧದಲ್ಲಿ ಶೋಚನೀಯವಾಗಿದೆ ಎಂದು ಹೇಳಬಹುದು. ಮೈಸೂರು ದೇಶ ದೊಡ್ಡದಾಗಿ ಹೊರಗಡೆ ಇರತಕ್ಕಂಥ ಭಾಗಗಳು ಮೈಸೂರು ದೇಶಕ್ಕೆ ಸೇರದೆ ಇದ್ದರೆ ಬಹುಕಾಲದವರೆಗೆ ಈಗ ಇರತಕ್ಕಂಥ ಮೈಸೂರು ದೇಶದಲ್ಲಿ ಇಲ್ಲಿಯೂ ಕೂಡ ಒಂದು ಹೊಸ ಆಸ್ಪತ್ರೆಯನ್ನು ಕಟ್ಟಿಸುವುದಾಗಲಿ ಅಥವಾ ಇರತಕ್ಕಂಥ ಆಸ್ಪತ್ರೆಗಳಿಗೆ ಉಪಕರಣಗಳನ್ನು ಒದಗಿಸುವುದಾಗಲಿ ಡಾಕ್ಟರುಗಳು ಇಲ್ಲದೇ ಇರತಕ್ಕಂಥ ಅನೇಕ ಆಸ್ಪತ್ರೆಗಳಿಗೆ ಡಾಕ್ಟರುಗಳನ್ನು ಒದಗಿಸುವುದಾಗಲಿ ಕನಸಿನ ಮಾತಾಗಿದೆ. ಆದ್ದರಿಂದ ವೈದ್ಯಕೀಯ ದೃಷ್ಟಿಯಿಂದ ನೋಡಿದರೆ ಮೈಸೂರು ದೇಶದಲ್ಲಿರತಕ್ಕಂಥ ಜನಸ್ತೋಮಕ್ಕೆ ಸರಿಯಾದಂಥ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಕೊಡಬೇಕಾಗಿದ್ದರೆ ಅದರ ಭಾರವನ್ನು ಹೊತ್ತಿರತಕ್ಕಂಥ ಇಂತಹ ಸಭೆ ಮೈಸೂರು ದೇಶ ವಿಸ್ತೃತವಾಗಬೇಕು ಎಂದು ತೀರ್ಮಾನಕ್ಕೆ ಬರಬೇಕಾದರೆ ಬಹಳ ದೀರ್ಘವಾಗಿ ಯೋಚನೆ ಮಾಡಬೇಕು. ಆದ್ದರಿಂದ ಮೈಸೂರು ದೇಶದ ಜನರಿಗೆ ವೈದ್ಯಕೀಯ ಕ್ಷೇಮ ಸೌಲಭ್ಯ ಬಹಳ ವರ್ಷದವರೆಗೂ ದೊರೆಯುವುದಿಲ್ಲ ಎನ್ನುವುದು ಇದರಿಂದ ಕಾಣುತ್ತದೆ. ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಾ ಶ್ರೀಮಾನ್ ಎಸ್. ಆರ್. ಕಂಠಿಯವರು "ಮುಂಬಯಿಯಲ್ಲಿರತಕ್ಕಂಥ ಕನ್ನಡ ಜಿಲ್ಲೆಗಳಲ್ಲಿ subsidised dispensary ಇವೆ, ಆ subsidised dispensaryಗಳನ್ನು ಲೆಖ್ಖಕ್ಕೆ ತೆಗೆದುಕೊಂಡಿಲ್ಲ" ವೆಂದು ಹೇಳಿದರು. Subsidised dispensary ಅಂದರೆ ನಮ್ಮ ಮೈಸೂರಿನಲ್ಲಿ ಮತ್ತು ಬೆಂಗಳೂರಿನಲ್ಲಿ ಆಯುರ್ವೇದ ಔಷಧಿ ಉತ್ತೇಜನ ಕೊಡುವುದಕ್ಕಾಗಿ ಡಾಕ್ಟರುಗಳಿಗೆ grant ಕೊಡುತ್ತಾರೆ. ಹಾಗೆಯೇ ಮುಂಬಯಿಯಲ್ಲಿ Allopathic doctorsಗೂ ಕೊಡುತ್ತಾರೆ. ಬೇರೆ ಗ್ರಾಮಾಂತರಗಳಲ್ಲಿ ಅಂತಹವರಿಗೆ dispensary

ಗಳನ್ನು ನಡೆಸುವುದಕ್ಕೋಸ್ಕರ ಸ್ವಲ್ಪ ಗ್ರಾಂಟನ್ನು ಕೊಡುತ್ತಾರೆ. ಅಲ್ಲಿ Grant-in-aid dispensariesಗಳೂ ಇರುತ್ತವೆ.

Sri J. MOHAMED IMAM.—For the information of the House, these subsidised dispensaries are much better than our regular hospitals.

ಶ್ರೀ ಕೆ. ಪುಟ್ಟಸ್ವಾಮಿ.—ಯಾರು ಯಾರಿಗೆ ಯಾವ ವೈದ್ಯ ಬೇಕೋ ಅದನ್ನು ಹೇಳುವುದು ಕಷ್ಟ. ಕೆಲವರಿಗೆ ಯಾವ ವೈದ್ಯವೂ ಹಿಡಿಯುವುದಿಲ್ಲ. ಇರುವ ವಿಚಾರ ಚರ್ಚೆ ಮಾಡಿದ್ದಾರೆ. ಅವು ಇಲ್ಲದಿದ್ದರೆ grant ಕೊಡುತ್ತಿರಲಿಲ್ಲ; grant ಕೊಡದಿದ್ದರೆ ದೇಶದಲ್ಲಿ ಗ್ರಾಂಟ ಕೊಡತಕ್ಕ subsidyಯಿಂದ ಒಬ್ಬ ಡಾಕ್ಟರ್ ಒಂದು ಹಳ್ಳಿಯಲ್ಲಿ ದಿನವೂ ಜೀವನಮಾಡಿಕೊಳ್ಳುವಹಾಗಿದ್ದರೆ ಅದನ್ನು ಸರ್ಕಾರಿ ಆಸ್ಪತ್ರೆಯೆಂದು ಕರೆಯುತ್ತಿದ್ದರು. ಅದು ಸರ್ಕಾರದ ಆಸ್ಪತ್ರೆಯಲ್ಲ; ಉಚಿತವಾದ ಚಿಕಿತ್ಸೆಯೂ ಇಲ್ಲ. ಬಡವರಾದರೂ ಕೂಡ ಏನಾದರೂ ಪಾತ್ರೆಯನ್ನು ಗಿರಿವಿ ಇಟ್ಟು ಔಷಧೋಪಚಾರಗಳನ್ನು ಪಡೆದು ಗುಣಮುಖವಾಗಬೇಕೇ ವಿನಾ subsidised ಆಸ್ಪತ್ರೆ ಸರ್ಕಾರ ಸ್ಥಾಪಿಸಲ್ಪಟ್ಟ ಸಾರ್ವಜನಿಕರ ಉಪಯೋಗಕ್ಕಾಗಿ ಅವಕಾಶವಾಗುವಂಥ ಆಸ್ಪತ್ರೆಯಾಗುವುದಿಲ್ಲ. ಆದ್ದರಿಂದ subsidised ಆಸ್ಪತ್ರೆಗಳನ್ನು ತೆಗೆಯದಿದ್ದರೆ, ಅದು ಒಂದು ಲಕ್ಷ ಪ್ರಜಾಸಂಖ್ಯೆಗೆ 4·6 ಆಗುತ್ತದೆ. 1·6 ಬದಲು 4·6 ಆಗುತ್ತದೆ. ಅದನ್ನು ಗಮನಕ್ಕೆ ತೆಗೆದುಕೊಂಡಿಲ್ಲ ಎಂದು ಹೇಳುತ್ತೇನೆ.

ಅದನ್ನು ಗಮನಕ್ಕೆ ತೆಗೆದುಕೊಳ್ಳುವುದು ಸಾಧ್ಯವಿಲ್ಲದ ಮಾತು. ಯಾವ ದೃಷ್ಟಿಯಿಂದಲೂ ಕೂಡ ಆ ಆಸ್ಪತ್ರೆಗಳನ್ನು ಸಾರ್ವಜನಿಕರ ಉಪಯೋಗಕ್ಕಿರತಕ್ಕ ಆಸ್ಪತ್ರೆಗಳೆಂದು ಪರಿಗಣಿಸುವುದಕ್ಕಾಗುವುದಿಲ್ಲ. ಒಂದು ವೇಳೆ ವಾದಕ್ಕಾಗಿ ಅವುಗಳನ್ನು ಆಸ್ಪತ್ರೆಗಳೆಂದು ಒಪ್ಪುವುದಾದರೆ ಅಂಥ ಗ್ರಾಂಟ್ ಇನ್ ಏಡ್ ಆಸ್ಪತ್ರೆಗಳು ಬೇಕಾದಷ್ಟಿವೆ.

ಶ್ರೀ ಎ. ಭೀಮಪ್ಪನಾಯಕ್.—ಬೇಕಾದಷ್ಟಿವೆ!

ಶ್ರೀ ಕೆ. ಪುಟ್ಟಸ್ವಾಮಿ.—ಶ್ರೀ ಭೀಮಪ್ಪನಾಯಕರು ವ್ಯಂಗ್ಯವಾಗಿ ಬೇಕಾದಷ್ಟಿವೆಯೆಂದು ಹೇಳಿದ ಮಾತ್ರಕ್ಕೇ ಇರುವುದೇನೂ ವ್ಯತ್ಯಾಸವಾಗುವುದಿಲ್ಲ. ಮೈಸೂರು ದೇಶದಲ್ಲಿ, ಒಂದು ದೃಷ್ಟಿಯಿಂದ ನೋಡುವುದಾದರೆ, ಬಹಳ ಹೆಸರಾದಂಥ ಡಾಕ್ಟರುಗಳು ಪ್ರಖ್ಯಾತರಾದ ಆಯುರ್ವೇದ ಯುನಾನಿ ಪಂಡಿತರುಗಳಿದ್ದಾರೆ. ಒಂದೊಂದು ಆಸ್ಪತ್ರೆಗಳನ್ನೇ ಸ್ಥಾಪನೆ ಮಾಡುವುದಕ್ಕೆ ಸಹಾಯ ಮಾಡಿದಂಥ ಡಾಕ್ಟರುಗಳೂ ಇದ್ದಾರೆ. ಆದ್ದರಿಂದ ಈ ಆಸ್ಪತ್ರೆಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗಿಲ್ಲ. ಸರ್ಕಾರದ ಮೂಲಕ ಸ್ಥಾಪನೆಯಾದ ಆಸ್ಪತ್ರೆಗಳನ್ನು ಪರಿಶೀಲನೆ ಮಾಡಬೇಕೇ ಹೊರತು ಇಂಥ ಆಸ್ಪತ್ರೆಗಳನ್ನೆಲ್ಲಾ ಲೆಕ್ಕಕ್ಕೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಈ ರೀತಿ ಪರಿಶೀಲನೆ ಮಾಡುವುದಾದರೆ ಮೈಸೂರು ದೇಶದಲ್ಲಿ ಒಂದು ಲಕ್ಷ ಪ್ರಜಾಸಂಖ್ಯೆಗೆ 5.5 ಆಸ್ಪತ್ರೆಗಳಿದ್ದರೆ ಮದ್ರಾಸ್, ಬೊಂಬಾಯಿ ಮತ್ತು ಹೈದರಾಬಾದ್ ಕರ್ಣಾಟಕದಲ್ಲಿ ಸೇಕಡ 1½ ಯಷ್ಟು ಕೂಡ ಇಲ್ಲ. ಆ ಪ್ರದೇಶಕ್ಕೆ ಬೇಕಾದಂಥ ಆಸ್ಪತ್ರೆಗಳನ್ನು ಒದಗಿಸಬೇಕಾದರೆ ಎಷ್ಟು ಖರ್ಚಾಗುತ್ತದೆಂಬುದನ್ನು ಸಮಿತಿಯವರು ತಮ್ಮ ವರದಿಯಲ್ಲಿ ಸೂಚಿಸಿದ್ದಾರೆ.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ತೆರಿಗೆ ಹಾಕಿದರಾಯಿತು.

ಶ್ರೀ ಕೆ. ಪುಟ್ಟಸ್ವಾಮಿ.—ಶ್ರೀ ರಾಮಯ್ಯನವರು ಪಕ್ಕದಲ್ಲೇ ಕುಳಿತುಕೊಂಡು ತೆರಿಗೆ ಹಾಕಿದರಾಯಿತು ಎಂದು ಹೇಳುತ್ತಾರೆ. ಈಗಲೂ ಅಲ್ಲಿ ತೆರಿಗೆ ಇದೆ. ಅಲ್ಲಿ ತೆರಿಗೆ ಇಲ್ಲದೆ ಇಲ್ಲ. ಇನ್ನು ಮತ್ತೆ ತೆರಿಗೆ ಹಾಕುವುದು ಹೇಗಿರುತ್ತದೆಂದರೆ, ನಮ್ಮ ಕಡೆಯಲ್ಲಿ 'ವರಿ' ವಸೂಲು ಮಾಡುವುದು ಎಂದು ಹೇಳಿ ಬಡವರಾಗಲಿ, ಬಲ್ಲಿದರಾಗಲಿ, ಶ್ರೀಮಂತರಾಗಲಿ ಗರೀಬರಾಗಲಿ ಒಬ್ಬೊಬ್ಬರೂ ಐದು ರೂಪಾಯಿಗಳನ್ನು ಕೊಡಬೇಕೆಂದರೆ, ಒಬ್ಬರನ್ನೂ ಬಿಡದೆ ವಸೂಲು ಮಾಡಿ ಬಿಡುತ್ತಾರೆ. ಭೀಮಪ್ಪನಾಯಕರಂಥ ದೊಡ್ಡ ದೊಡ್ಡ ಒಕ್ಕಲಿಗರೂ ಐದು ರೂಪಾಯಿ ಕೊಡಬೇಕು ಬಡವರೂ ಐದು ರೂಪಾಯಿ ಕೊಡಬೇಕು. ಅದರಂತೆ ನಾಳೆ ಈ ಪ್ರದೇಶಗಳು ಮೈಸೂರಿಗೆ ಸೇರಿ ಅಲ್ಲಿಗೆ ಆಸ್ಪತ್ರೆಗಳನ್ನು ಕೊಡಬೇಕಾದಾಗ ಹೊಸದಾಗಿ ಕಂದಾಯ ಹಾಕಬೇಕಾಗುತ್ತದೆ.. ಈಗಾಗಲೇ ದೇಶದಲ್ಲಿ ಯಾವ ಯಾವ ಕಂದಾಯವಿದೆ ಯಾವ ಯಾವ ಕಂದಾಯ ಹಾಕಬಹುದು ಎಂಬುದನ್ನು ನೋಡುವುದಾದರೆ, ನಮ್ಮ ಮೈಸೂರಿಗೆ ಸಂಬಧಪಟ್ಟಂತಿರುವ ಸ್ಟೇಟ್ ಲಿಸ್ಟಿನಲ್ಲಿರುವ 17 ಕಂದಾಯಗಳಲ್ಲಿ 16 ಕಂದಾಯಗಳನ್ನು ಈಗಾಗಲೇ ಹಾಕಿದೆ. ಒಂದು ಕಂದಾಯ ಮಾತ್ರ ಬಾಕಿ ಇದೆ. ಅದು ತಲೆಗಂದಾಯ! ಈ ತಲೆಗಂದಾಯ ಹಾಕುವ ಹೊತ್ತಿಗೆ ಶ್ರೀ ಹುಚ್ಚೇಗೌಡರೂ, ನಾವು ಎಲ್ಲಿರುತ್ತೇವೋ ಗೊತ್ತಿಲ್ಲ. ಈ ತಲೆಗಂದಾಯವನ್ನು ವಿಧಿಸಿದಲ್ಲಿ, 1955 ನೆಯ ಇಸವಿಯಲ್ಲಿದ್ದ ಮೈಸೂರಿನ ಪ್ರದೇಶಕ್ಕೆ ಅನ್ವಯವಾಗತಕ್ಕದ್ದಲ್ಲ ಎಂದು ಹೇಳುವುದಕ್ಕೆ ರಾಜ್ಯಾಂಗ ಅಡ್ಡಿ ಬರುತ್ತದೆ. ತಲೆಗೆಲ್ಲಾ ಒಂದೇ ನಾವು ಹಾಕಬೇಕಾಗುತ್ತದೆ. ಮೈಸೂರು ದೇಶದ ಜನರ ತಲೆ ಬೋಳಿಸಿ ಹೋಗುತ್ತದೆ. ಅದರಲ್ಲೇನೂ ಅನುಮಾನವಿಲ್ಲ.

ಒಬ್ಬ ಸದಸ್ಯರು.—ಬೋಳಿಸಿದರೆ clean ಆಗಿರುತ್ತದೆ.

ಶ್ರೀ ಕೆ. ಪುಟ್ಟಸ್ವಾಮಿ.—'ಕ್ಲೀನ್' ಎಂದರೆ ಕನ್ನಡದಲ್ಲಿ ಚೊಕ್ಕಟ ಎಂದು. ಮೈಸೂರಿನವರು ಚೊಕ್ಕಟವಾಗುತ್ತಾರೆ!

ಮೈಸೂರು ದೇಶದಲ್ಲಿ ವಿದ್ಯಾಭ್ಯಾಸ ನೋಡೋಣ. ಇದಕ್ಕೂ ಅಂಕಿ ಅಂಶಗಳನ್ನು ಶೇಖರಿಸಿ ನಮ್ಮ ಮುಂದಿಟ್ಟಿದ್ದಾರೆ.

ಒಬ್ಬ ಸದಸ್ಯರು.—ಅದು ಎಲ್ಲರಿಗೂ ಗೊತ್ತೇ ಇದೆ.

ಶ್ರೀ ಕೆ. ಪುಟ್ಟಸ್ವಾಮಿ.—ಆ ಅಂಕಿ ಅಂಶಗಳನ್ನು ಕೊಟ್ಟಿರುವುದು, ನಾವಿಲ್ಲಿ ಪ್ರತಿಯೊಬ್ಬರೂ ನಮ್ಮ ನಮ್ಮ ಯೋಗ್ಯತೆಗನುಸಾರವಾಗಿ ಒಂದು ತೀರ್ಮಾನಕ್ಕೆ ಬರಬಹುದೆಂದು ಇದನ್ನು ಕೊಟ್ಟಿದ್ದಾರೆ. ನಮಗೆ ತೋರಿದ ಬೆಳಕಿನ ಮೇಲೆ ನಮ್ಮ ಅಭಿಪ್ರಾಯವನ್ನು ಹೇಳಬಹುದು. ಹಾಗಿಲ್ಲದಿದ್ದರೆ ಇಷ್ಟೊಂದು ಜನ ಸದಸ್ಯರು ಈ ಒಂದೇ ವಿಚಾರದ ಮೇಲೆ ಭಾಷಣ ಮಾಡಬೇಕಾದ ಅಗತ್ಯವೇ ಇರಲಿಲ್ಲ. ನಮ್ಮ ನಮ್ಮ ಸಂಸ್ಕೃತಿ, ನಮ್ಮ ನಮ್ಮ ತಿಳಿವಳಿಕೆ ನಮ್ಮ ನಮ್ಮ ಕಾಲಕ್ಕನುಗುಣವಾದ ಅಭಿಪ್ರಾಯವನ್ನು ನಾವು ರೂಪಿಸುತ್ತೇವೆ. ಶ್ರೀ ಭೀಮಪ್ಪನಾಯಕರು ಒಂದು ರೀತಿ ಅಭಿಪ್ರಾಯ ಕೊಡಬಹುದು. ನಾನೇ ಒಂದು ಅಭಿಪ್ರಾಯ ಕೊಡಬಹುದು. ಭೀಮಪ್ಪನಾಯಕರಿಗೆ ನಾನು ಹೇಳುವ ವಾದ ಆಪ್ಯಾಯಮಾನವಾಗಿಲ್ಲದಿರಬಹುದು; ನನ್ನ ವಾದ ನನ್ನ ಮಗನಿಗೂ ಆಪ್ಯಾಯಮಾನವಾಗಿಲ್ಲದಿರಬಹುದು. ಅಂದ ಮಾತ್ರಕ್ಕೆ ನನ್ನ ಅಭಿಪ್ರಾಯ ಹೇಳಲಿಕ್ಕೆ ನನಗೆ ಹಕ್ಕಿಲ್ಲವೆಂದಲ್ಲ.

(ಶ್ರೀ ಕೆ. ಪುಟ್ಟಸ್ವಾಮಿ.)

ಈ ರಿಪೋರ್ಟಿನಲ್ಲಿ ಕೊಟ್ಟಿರುವ ಪ್ರಕಾರ ಅಕ್ಷರಸ್ಥರ ಸಂಖ್ಯೆ ನೋಡೋಣ. ಶೇಕಡಾವಾರು ಅಂಕಿಗಳನ್ನು ಎಲ್ಲರಿಗೂ ಅರ್ಥವಾಗುವ ಹಾಗೆ ಕೊಟ್ಟಿದ್ದಾರೆ. ಜೊತೆಗೆ ಒಳ್ಳೆಯ ಚಿತ್ರಗಳನ್ನು ಬರೆದು ಹೆಚ್ಚಿಗೆ ಶ್ರಮವಿಲ್ಲದೆ ಅರ್ಥ ಮಾಡಿಕೊಳ್ಳಲು ಸಹಾಯ ಮಾಡಿದ್ದಾರೆ. ಹೀಗೆ ಅಂಕಿ ಅಂಶಗಳನ್ನು ಸಂಗ್ರಹಿಸಲು ನೇಮಿಸಿದ್ದ ಒಂದು ಪರಿಣತರ ಸಮಿತಿಯು, ಅನುಭವಶಾಲಿಗಳನ್ನು ಒಳಗೊಂಡಂಥ ಸಮಿತಿಯು, ನೆರೆಯ ಸರ್ಕಾರಗಳಿಂದ ಅಂಕಿ ಅಂಶಗಳನ್ನು ಶೇಖರಿಸಿ ತಂದು ಕೊಟ್ಟರೆ ಆ ಅಂಕಿ ಅಂಶಗಳು ನಿಜವಲ್ಲ, ಸಮಿತಿಯ ವರದಿಯು ತಪ್ಪು ಆಧಾರಗಳ ಮೇಲೆ ರಚಿತವಾಗಿದೆಯೆಂದು ಹೇಳಿದರೆ, ಅವರ ವಾದವನ್ನು ಒಪ್ಪುವುದಕ್ಕಾಗುತ್ತದೆಯೇ? ಈ ವರದಿಯನ್ನು ಹಾಗಾದರೆ guess work ಎಂದು ಹೇಳುವುದಕ್ಕಾಗುತ್ತದೆಯೇ? Guess work ಎನ್ನುವುದು ಕಾದಂಬರಿಕಾರನು ಊಹೆಯನ್ನು ಕೆಲಸ ಮಾಡುವುದಕ್ಕೆ ಬಿಟ್ಟು ತಾನು ಕಾಣಬಹುದಾದ್ದನ್ನು ಬರೆಯುವುದು. ಇದು ಅಂಥದಲ್ಲ. ಕಾಗದ ಪತ್ರಗಳಿಂದ ಹೊರಬೀಳತಕ್ಕ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಈ ಅಂಕಿ ಅಂಶಗಳನ್ನು ಒಪ್ಪದೆ ಇದ್ದಮೇಲೆ ಈ ಸಭೆಯಲ್ಲಿ ಬರತಕ್ಕ ಯಾವ ಅಂಕಿ ಅಂಶಗಳನ್ನೂ ಒಪ್ಪುವುಧಕ್ಕಾಗುವುದಿಲ್ಲ. ಈ ಸಭೆಯಲ್ಲಿ ಅನೇಕ ವಿಷಯಗಳ ಸಂಬಂಧದಲ್ಲಿ ಅಂಕಿ ಅಂಶಗಳನ್ನು ಮಂತ್ರಿಗಳು ಒದಗಿಸುತ್ತಾರೆ. ಅವುಗಳನ್ನು ಒಪ್ಪುವುದಕ್ಕಾಗುವುದಿಲ್ಲವೆಂದು ಬಿಟ್ಟರೆ, ಫೈಸಲ್ ಆಯಿತು. ಇದನ್ನು ನೋಡಿದರೆ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ನಮ್ಮ ಸ್ನೇಹಿತರೊಬ್ಬರಿದ್ದರು. ಅವರು ಸ್ವಲ್ಪ ಮುಂಗೋಪಿ. ಅವರು ಯಾವಾಗಲೂ ವಾದ ಮಾಡುವುದು ಸ್ವಲ್ಪ ಹೆಚ್ಚು. ವಾದ ಮಾಡುವುದರಲ್ಲಿ ಸ್ವಲ್ಪ ಸೋಲಾಗುತ್ತದೆ ಎಂದು ಕಂಡುಬಂದರೆ ಇದ್ದಕ್ಕಿದ್ದ ಹಾಗೆ ರೇಗಿಬಿದ್ದು ಕಿಡಿಕಿಡಿಯಾಗುತ್ತಿದ್ದರು. ಕೊನೆಗೆ ಅವರ ವಾದ ಸರಣಿ ಎಲ್ಲಿಗೆ ಹೋಗುತ್ತಿತ್ತೆಂದರೆ ಅವರ ಮುಂದೆ ಮೇಜಿದ್ದರೆ, "ನಾನು ಇಲ್ಲವೆಂದು ಹೇಳುತ್ತೇನೆ, ನೀನು ಹೇಗೆ ಇದೆಯೆಂದು ಸಾಧಿಸುತ್ತೀಯೆ? ನಿನಗೆ sense ಇಲ್ಲವೆಂದು ಹೇಳುತ್ತೇನೆ, ಹೇಗೆ ಇದೆಯೆಂದು ರುಜುವಾತು ಮಾಡುತ್ತೀಯೆ" ಎಂದೆಲ್ಲಾ ಕೇಳುವಷ್ಟು ಮಟ್ಟಿಗೆ ಹೋಗುತ್ತಿತ್ತು. ಇಲ್ಲಿಯೂ ಕೆಲವರು ಹೀಗೆ ವಾದ ಮಾಡುತ್ತಿರುತ್ತಾರೆ; ಕೊನೆಗೆ ವಾದಕ್ಕೆ ಯಾವುದೂ ಸಿಕ್ಕದೆ ಇದ್ದಾಗ, ಅಥವಾ ವಾದದಲ್ಲಿ ಸೋಲಾಗುವ ಸಂದರ್ಭ ಬಂದಾಗ ಅಥವಾ ತಾವು ಯಾವುದು ಸರಿಯೆಂದು ನಂಬಿ ಭವ್ಯ ಭವನವನ್ನು ಕಟ್ಟುತ್ತಿರುತ್ತಾರೋ ಅದರ ಬುಡ ಭದ್ರವಲ್ಲವೆಂದು ಗೊತ್ತಾದಾಗ ಆ ಸನ್ನಿವೇಶದಿಂದ ತಪ್ಪಿಸಿಕೊಳ್ಳುವುದಕ್ಕೆ ಇದಕ್ಕಿಂತ ಸುಲಭವಾದ ಮಾರ್ಗ ಬೇರೆ ಇಲ್ಲ. ಅದೇ ರೀತಿ ಈ ಅಂಕಿ ಅಂಶಗಳ ವರದಿಯನ್ನು ಚರ್ಚೆ ಮಾಡುವುದೇ ಸರಿಯಲ್ಲ, ಆ ಸಮಿತಿಯಲ್ಲಿದ್ದ ಸದಸ್ಯರು ಸರಿಯಾಗಿ ಪರಿಶೀಲನೆ ಮಾಡಿಲ್ಲ, ಅವರು ಪರಿಶೀಲನೆ ಮಾಡಿರುವ ಪುಸ್ತಕಗಳನ್ನು ನಮ್ಮ ಎದುರಿಗೆ ತಂದು ತೋರಿಸಿದ ಹೊರತು ನಾವು ಒಪ್ಪುವುದಕ್ಕಾಗುವುದಿಲ್ಲ ಎಂದು ಹೇಳುವ ವಾದವನ್ನು ನಾನಂತೂ ಒಪ್ಪುವುದಕ್ಕಾಗುವುದಿಲ್ಲ. ಇಂಥ ವಾದವನ್ನು ಹೂಡಿ ಬಿಟ್ಟರೆ ಏನು ಮಾಡೋಣ? ಹೈದರಾಬಾದಿನಲ್ಲಿ ಶೇಕಡ 8.49 ಅಕ್ಷರಸ್ಥರಿದ್ದಾರೆಂದರೆ, ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಶೇಕಡ 28 ಇದ್ದಾರೆ ಎಂದು ಹೇಳಿದರೆ ಏನು ಮಾಡುವುದಕ್ಕಾಗುತ್ತದೆ. ಬೊಂಬಾಯಿನಲ್ಲಿ ಶೇಕಡ 22.3 ಮದರಾಸಿನಲ್ಲಿ ಶೇಕಡ 23 ಕೊಡಗಿನಲ್ಲಿ ಶೇಕಡ 27.2 ಮೈಸೂರಿನಲ್ಲಿ ಶೇಕಡ 20.6 ಅಕ್ಷರಸ್ಥರಿದ್ದಾರೆಂದು ಹೇಳಿದ್ದಾರೆ. ಇದನ್ನೆಲ್ಲಾ ಹೇಳಿದರೂ ನಾನು ಯಾವುದನ್ನೂ ಸಾಧಿಸಲಿಲ್ಲವೆಂದು ಅವರು ಭಾವನೆ ಮಾಡುವುದಾದರೆ, ಅವರು ಅವರ ಅಭಿಪ್ರಾಯವನ್ನೇ ಇಟ್ಟುಕೊಳ್ಳುವುದರಲ್ಲಿ ನನ್ನ ಯಾವ ಅಡ್ಡಿ ಆಕ್ಷೇಪಣೆಯೂ ಇಲ್ಲ.

ಇನ್ನು ಸ್ವಲ್ಪ ಅಂಕಿ ಅಂಶಗಳನ್ನು ನೋಡೋಣ. ಹೈದರಾಬಾದಿನಲ್ಲಿ ಶೇಕಡ 8.49 ಅಕ್ಷರಸ್ಥರಿದ್ದಾರೆ. ಇವರನ್ನು ಮೈಸೂರಿನವರ ಮಟ್ಟಕ್ಕೆ ತರಬೇಕಾದರೆ ನಾವು ಎಷ್ಟು ಹಣವನ್ನು ಖರ್ಚು ಮಾಡಬೇಕಾಗುತ್ತದೆ, ಎಷ್ಟೊಂದು ಸ್ಕೂಲುಗಳನ್ನು ಸ್ಥಾಪನೆ ಮಾಡಬೇಕಾಗುತ್ತದೆ, ಅಲ್ಲಿ ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸಕ್ಕಾಗಿ ಸುಮಾರು 150 ಲಕ್ಷ ರೂಪಾಯಿಗಳನ್ನು ಹೆಚ್ಚಿಗೆ ಒದಗಿಸಬೇಕಾಗುತ್ತದೆಂಬುದನ್ನು ನೋಡಿ. ಕಾಲೇಜುಗಳನ್ನು ಹೆಚ್ಚಿಗೆ ಏರ್ಪಡಿಸುವುದರಿಂದ 10 ಲಕ್ಷ ರೂಪಾಯಿಗಳಷ್ಟು ಹೆಚ್ಚು ಮೊಬಲಗನ್ನು ಖರ್ಚು ಮಾಡಬೇಕಾಗುತ್ತದೆಂದು ಅವರು ಹೇಳಿದ್ದಾರೆ. ಅಲ್ಲದೆ, ರಾಜ್ಯಾಂಗ ಶಾಸನದಲ್ಲಿ ಎಲ್ಲ ಮಕ್ಕಳಿಗೂ ಕಡ್ಡಾಯವಾದ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕೊಡಬೇಕೆಂದು ಹೇಳಿದೆ.

1-30 P.M.

ಈಗ ನಾವು ನಮ್ಮ ಮೈಸೂರು ದೇಶದಲ್ಲಿ ಈ ಕಂಪಲ್‌ಸರಿ ಅಟೆಂಡೆನ್ಸನ್ನು ಜಾರಿಗೆ ತಂದುದರ ಪರಿಣಾಮವಾಗಿ ನಮ್ಮ ಜನಗಳಿಗೆ ನಾವು ಈ ಮಟ್ಟದವರೆಗೂ ವಿದ್ಯಾಭ್ಯಾಸವನ್ನು ಕೊಡಲು ಸಾಧ್ಯವಾಗಿದೆ. ನಾವು ನಮ್ಮ ಸರ್ಕಾರಕ್ಕೆ ಇನ್ನೂ ಸ್ವಲ್ಪಮಟ್ಟಿಗೆ ಈ ವಿದ್ಯಾಭ್ಯಾಸದ ಮಟ್ಟವನ್ನು ಹೆಚ್ಚಿಸಬೇಕೆಂದು ಕೇಳಿದ್ದಕ್ಕೆ—ಇದಕ್ಕಿಂತಲೂ ಹೆಚ್ಚಿನ ಮಟ್ಟದಲ್ಲಿ ವಿದ್ಯಾಭ್ಯಾಸ ನಡೆಸಬೇಕಾದರೆ ಅದಕ್ಕೆ ಇನ್ನೂ ಹೆಚ್ಚಿನ ಹಣವನ್ನು ಖರ್ಚು ಮಾಡಬೇಕಾಗುತ್ತದೆಂದು ಹೇಳಿ ಅದನ್ನು ನಮ್ಮ ಸರ್ಕಾರದವರು ಕೈಬಿಟ್ಟು ಬಿಟ್ಟರು. ಆದರೆ ಈ ದಿವಸ ದೇಶದಲ್ಲಿರತಕ್ಕ ಎಲ್ಲ ಮಕ್ಕಳಿಗೂ ಒತ್ತಾಯ ಶಿಕ್ಷಣವನ್ನು ಕೊಡಬೇಕಾದುದು ಅತ್ಯಗತ್ಯವಾಗಿದೆ. ಆದಾಗ್ಯೂ ಇದನ್ನು ನಿರ್ಧಾರಮಾಡಲು ನಮಗಿನ್ನೂ ಸಾಧ್ಯವಾಗಿಲ್ಲ. ಈಗ ನಮ್ಮ ಸರ್ಕಾರದವರಿಗೆ ವರ್ಷಕ್ಕೆ ಸುಮಾರು 40-45 ಹೊಸ ಪ್ರೈಮರಿ ಸ್ಕೂಲುಗಳನ್ನು ಸಹ ಮಂಜೂರು ಮಾಡುವುದಕ್ಕೆ ಸಾಧ್ಯವಿಲ್ಲದಂತಾಗಿದೆ. ಈಗಾಗಲೇ ಬಳ್ಳಾರಿ ಜಿಲ್ಲೆ ಮೈಸೂರಿಗೆ ಸೇರಿರುತ್ತದೆ ಅವರನ್ನೆಲ್ಲಾ ನಾವು ಸ್ವಾಗತಮಾಡಿದ್ದೇವೆಂದು ಹೇಳಿದ್ದಾರೆ. ಆದರೆ ಈ ಹಿಂದೆ ನಾನು ಈ ವಿಚಾರದಲ್ಲಿ ಮಾತನಾಡುತ್ತಿದ್ದಾಗ ಅವರಿಗೆ ನನ್ನ ಸ್ವಾಗತವಿರಲಿಲ್ಲ. ಅವರಾಗಿ ಅವರೇ ಬಂದಿದ್ದಾರೆ. ಈಗ ಅವರೂ ನಮ್ಮವರೇ ಆಗಿದ್ದಾರೆ. ಇದರಿಂದ ಸ್ವಾಮಿ, ಈಗ ಎರಡು ವರ್ಷಗಳಲ್ಲಿಯೇ ಏನು ಪರಿಣಾಮವುಂಟಾಗಿದೆ ಎನ್ನುವುದನ್ನು ಈಗಾಗಲೇ ನಾವೆಲ್ಲರೂ ನೋಡಿರುತ್ತೇವೆ. ಈ ಮೂರು ವರ್ಷಗಳಲ್ಲಿ ಒಂದು ಗ್ರಾಮಾಂತರ ಪ್ರದೇಶಕ್ಕಾಗಲಿ ಹೊಸದಾಗಿ ಒಂದು ಸ್ಕೂಲನ್ನು ಕೊಡುವುದಕ್ಕೆ ಆಗಿಲ್ಲ. ಹೀಗಾಗಿ ಈ ಕಳೆದ ಒಂದೂವರೆ ವರ್ಷದಿಂದಲೂ ಒಂದೇಸಮನಾಗಿ ನಮ್ಮ ವಿದ್ಯಾ ಇಲಾಖೆಯಲ್ಲಿರತಕ್ಕ ಸಂಪತ್ತೆಲ್ಲಾ—ಅಂದರೆ ಸಿಬ್ಬಂದಿ, ಸಾಮಾನು, ಇತ್ಯಾದಿ ಸೌಕರ್ಯಗಳೆಲ್ಲಾ ಆ ಬಳ್ಳಾರಿ ಜಿಲ್ಲೆಗೇ ಹರಿದುಹೋಗುತ್ತಿವೆ. ನಮ್ಮ ದೇಶಕ್ಕೆ ಎಳ್ಳಷ್ಟೂ ಸೌಕರ್ಯವಿಲ್ಲದಂತೆ ಆಗಿದೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ವರಮಾನ ಎಲ್ಲೆಲ್ಲಿಂದ ಬರುತ್ತಿದೆಯೋ ಅಲ್ಲಿಗೆಲ್ಲಾ ಹಣವನ್ನು ಪುನಃ ಹಂಚುತ್ತಿದ್ದಾರೆ; ಅಷ್ಟೇ ಹೊರತು ಮತ್ತೇನೂ ವಿಶೇಷವಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಹಾಗೆ ಒಂದು ಪಕ್ಷಪಾತ ಮಾಡಿದ್ದಾರೆಂದೇನೂ ನಾನು ಹೇಳುತ್ತಿಲ್ಲ. ಆದರೆ ಇದರಿಂದಾಗತಕ್ಕ ಮುಖ್ಯ ಪರಿಣಾಮವೇನೆಂಬುದನ್ನು ಗಮನಿಸಬೇಕಾಗಿದೆ. ಆದರೆ ಇದೇ ರೀತಿಯಾಗಿ ನಮ್ಮ ಮೈಸೂರಿಗೆ ಮತ್ತೆ ಇತರ ಭಾಗಗಳೇನಾದರೂ ಸೇರಬೇಕಾದರೆ, ಅಗ ಆ ಹೊಸ ಪ್ರದೇಶಗಳೆಲ್ಲಾ ಈಗ ಮೈಸೂರು ಅನುಭವಿಸುತ್ತಿರುವಂಥ ಸೌಲಭ್ಯಗಳನ್ನು ಪಡೆದ ಹೊರತು, ಈ ಮೈಸೂರಿಗೆ ಯಾವ ಹೊಸ ಸೌಲಭ್ಯಗಳನ್ನು ಕಾಣಲೂ ಅವಕಾಶ ವಿರಲಾಗದೆಂದು ಗೊತ್ತಾಗುತ್ತದೆ. ಇದರಿಂದ ಮೈಸೂರಿನ ಜನ ಸೌಲಭ್ಯಗಳನ್ನು ಇನ್ನು ಮುಂದಕ್ಕೆ ಮರೆಯಬೇಕಾಗುತ್ತದೆ.

ಇನ್ನು ಪಶುವೈದ್ಯಶಾಲೆಗಳ ವಿಚಾರ. ಈ ವಿಚಾರದಲ್ಲಿಯೂ ಕೂಡ ಇತರ ಎಲ್ಲಾ ಪ್ರಾಂತಗಳಿಗಿಂತಲೂ ನಮ್ಮ ಮೈಸೂರು ಮುಂದುವರಿದಿದೆ. ಅದರೆ ಈ ದಿವಸ ಹಳ್ಳಿಗಾಡಿನಿಂದ ಬರುತ್ತಿರುವ 'ಜನರು ಜನರ ಆಸ್ಪತ್ರೆ ಕೊಡುವುದು ಸ್ವಲ್ಪ ನಿಧಾನವಾದರೂ ಚಿಂತೆಯಿಲ್ಲ-ಮೊದಲು ದನಗಳ ಆಸ್ಪತ್ರೆಯನ್ನು ಮಂಜೂರು ಮಾಡಿಕೊಡಿ' ಎಂದು ಕೇಳುತ್ತಿದ್ದಾರೆ. ಈ ದಿವಸ ಮೈಸೂರು ಸಂಸ್ಥಾನದಲ್ಲಿ 28,207 ಜಾನುವಾರುಗಳಿಗೆ ಒಂದೊಂದು ಆಸ್ಪತ್ರೆಯಿದ್ದಂತೆ ವ್ಯಕ್ತಪಟ್ಟಿದೆ. ಈಗತಾನೆ ಒಂದು ಪ್ರಶ್ನೆಗೆ ಉತ್ತರ ಕೊಡುತ್ತ ಮಾನ್ಯ ಸಚಿವರು 25 ಸಾವಿರ ಜಾನುವಾರುಗಳಿಗೆ ಒಂದು ಆಸ್ಪತ್ರೆ ಇದ್ದರೆ ಸಾಕೆಂದು ಹೇಳಿದ್ದಾರೆ. ನಾವು ಈಗೀಗ ಆ ತುದಿ ಮೆಟ್ಟಲು ಹತ್ತಿ ಹತ್ತಿರಕ್ಕೆ ಬರುತ್ತಿದ್ದೇವೆ. ಹೈದರಾಬಾದಿನಲ್ಲಿ ಪ್ರತಿ 43,570 ರಾಸುಗಳಿಗೆ ಒಂದೊಂದು ಆಸ್ಪತ್ರೆಯಿದೆ. ಬೊಂಬಾಯಿ ಪ್ರಾಂತ್ಯದಲ್ಲಿ 44,245 ಜಾನುವಾರುಗಳಿಗೆ ಒಂದು ಆಸ್ಪತ್ರೆಯಿರುತ್ತದೆ, ಮದರಾಸಿನಲ್ಲಿ ಅಂದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 111,342 ಜಾನುವಾರುಗಳಿಗೊಂದರಂತೆ ಆಸ್ಪತ್ರೆಯಿರುತ್ತದೆ. ಕೊಡಗಿನಲ್ಲಿ 10,000 ಜಾನುವಾರುಗಳಿಗೆ ಒಂದು ಆಸ್ಪತ್ರೆಯಂತೆ ಆಸ್ಪತ್ರೆಗಳಿರುತ್ತವೆ. ಇದರಿಂದ ನಮಗೇನು ಗೊತ್ತಾಗುತ್ತದೆಯೆಂದರೆ, ಪಶುವೈದ್ಯಸೌಲಭ್ಯಗಳಲ್ಲಿ ಕೂಡ ನಮ್ಮ ಮೈಸೂರು ಸಂಸ್ಥಾನದಷ್ಟು ಹೊರಗಡೆಯ ಪ್ರದೇಶಗಳು ಮುಂದುವರಿದಿಲ್ಲವೆಂದು ತಿಳಿದು ಬರುತ್ತದೆ. ನಮ್ಮಲ್ಲಿ ಈ ವೈದ್ಯ ಸೌಲಭ್ಯಗಳೇನೋ ಸ್ವಲ್ಪ ಅನುಕೂಲವಾಗಿಯೇ ಇರುತ್ತವೆ. ನಾವಿನ್ನೂ ಸ್ವಲ್ಪ ಹೆಚ್ಚಿನ ಪ್ರಯತ್ನಪಟ್ಟರೆ ನಾವು ಈ ಬಾಬಿನಲ್ಲಿ ಆ ಗುರಿಯನ್ನು ಬೇಗ ಮುಟ್ಟಬಹುದು. ಏನೋ ಒಂದು ವಾದಕ್ಕೋಸ್ಕರವಾಗಿ ವಾದ ಮಾಡಬೇಕೆಂಬ ಉದ್ದೇಶದಿಂದ ಆ ಪ್ರಾಂತ್ಯಗಳಲ್ಲಿ ಈ ಜಾನುವಾರುಗಳಿಗೆ ಕಾಯಿಲೆಯೇ ಬರುವುದಿಲ್ಲ ಎಂದು ಒಂದು ವಾದ ಮಾಡುತ್ತಿದ್ದಾರೆ. ಅಷ್ಟೇ ಅಲ್ಲದೆ ಈ ಮದರಾಸ್, ಬೊಂಬಾಯಿ, ಹೈದರಾಬಾದ್ ಸರ್ಕಾರಗಳು ಆ ಪ್ರದೇಶಗಳನ್ನೆಲ್ಲಾ ಉಪೇಕ್ಷೆಮಾಡಿದ್ದಾರೆಂದು ಬೇರೆ ಹೇಳುತ್ತಿದ್ದಾರೆ. ಹೀಗೆಲ್ಲಾ ಹೇಳುತ್ತಾ ಅವರು ಈ ಭಾಗಗಳ ಅಭಿವೃದ್ಧಿಗೆ ಸಾಕಷ್ಟು ಗಮನಕೊಡದೆ ಹೋದುದರಿಂದಲೂ, ಈ ಭಾಗಗಳೆಲ್ಲಾ ಹರಿದು ಹಂಚಿ ಹೋಗಿರುವ ಕಾರಣದಿಂದಲೂ ಈ ಪ್ರದೇಶಗಳು ಬೇರೆ ದೇಶದಮಟ್ಟಕ್ಕೆ ಬರಲು ಸಾಧ್ಯವಾಗಲಿಲ್ಲ ಎಂದು ಹೇಳುತ್ತಿದ್ದಾರೆ. ಹೀಗೆ ಇವರು ಮಾಡುತ್ತಿರುವ ವಾದಗಳು ಒಂದಕ್ಕೊಂದು ವಿರೋಧವಾಗಿರುತ್ತವೆ. ಇದನ್ನೆಲ್ಲಾ ನಾವು ಪರಿಶೀಲನೆಮಾಡಿ ನೋಡಿದರೆ ನಮ್ಮ ಸಂಸ್ಥಾನ ಬೇಕಾದಷ್ಟು ಹಣವನ್ನು ಈ ಬಾಬಿಗಾಗಿ ಖರ್ಚುಮಾಡಿ ಈ ಆಸ್ಪತ್ರೆ ಸೌಕರ್ಯಗಳನು ಂಟುಮಾಡಿದೆಯೆಂಬುದು ಗೊತ್ತಾಗುತ್ತದೆ. ಇದೇ ಸಂಬಂಧದಲ್ಲ ರಾಯಲ್ ಕಮಿಷನ್ನಿನವರು ಏನು ಹೇಳಿದ್ದಾರೆಂಬುದರ ಬಗ್ಗೆ 78ನೇ ಪುಟದಲ್ಲಿ ಹೀಗೆ ಹೇಳಿದ್ದಾರೆ: "ವ್ಯವಸಾಯದ ಸಂಬಂಧದಲ್ಲಿ ನಿಯೋಜಿಸಲಾದ ರಾಯಲ್ ಕಮಿಷನ್ನಿನವರು ಪ್ರತಿ 25,000 ದನಗಳಿಗೆ ಒಂದು ಪಶುವೈದ್ಯಶಾಲೆ ಇರತಕ್ಕದ್ದೆಂದು ನಿಖರಮಾಡಿದ್ದಾರೆ. ಹೈದರಾಬಾದ್‌ನಲ್ಲಿರತಕ್ಕ ಕನ್ನಡ ಜಿಲ್ಲೆಗಳಲ್ಲಿ 31 ಸಂಚಾರ ಮಾಡತಕ್ಕ ಬಿಲೆಟ್ ಆಸ್ಪತ್ರೆಗಳಿವೆ. ಬಹುಮಟ್ಟಿಗೆ ಇವು ಚಲಿಸುವ ಆಸ್ಪತ್ರೆಗಳಾದುದರಿಂದ ಸ್ಥಿರವಾಗಿರುವ ಪಶುವೈದ್ಯಶಾಲೆಗಳಷ್ಟು ಸೌಕರ್ಯಗಳನ್ನು ಒದಗಿಸಲು ಅವುಗಳಿಗೆ ಸಾಧ್ಯವಿರುವುದಿಲ್ಲ. ಅದೇ ರೀತಿಯಲ್ಲಿಯೇ ಬೊಂಬಾಯಿ ರಾಜ್ಯದ ಕನ್ನಡ ಡಿಸ್ಟ್ರಿಕ್ಟುಗಳಲ್ಲಿಯೂ ಸ್ಥಳೀಯ ಸಂಸ್ಥೆಗಳವರು ನಡೆಸಿಕೊಂಡು ಬರುತ್ತಿರುವ 32 ಡಿಸ್ಪೆನ್ಸರಿಗಳೂ, ಐದು ಸಣ್ಣ ಡಿಸ್ಪೆನ್ಸರಿಗಳೂ ಮತ್ತು ಆರು ಸ್ಟಾಕ್‌ಮೆನ್ ಸೆಂಟರುಗಳೂ ಇರುತ್ತವೆ. ಸರ್ಕಾರದ ಡಿಸ್ಪೆನ್ಸರಿಗಳು 31 ಮಾತ್ರ ಇರುತ್ತವೆ. ಗೊತ್ತುಪಡಿಸಿರುವ ಮಟ್ಟವನ್ನು ಮುಟ್ಟಬೇಕಾದರೆ ಮೊದಲು ಸಂಚಾರದ ಡಿಸ್ಪೆನ್ಸರಿಗಳನ್ನೂ, ಡಿಸ್ಟ್ರಿಕ್ಟ್ ಬೋರ್ಡು ಡಿಸ್ಪೆನ್ಸರಿಗಳನ್ನೂ ಮತ್ತು ಸ್ಟಾಕ್‌ಮೆನ್ ಡಿಸ್ಪೆನ್ಸರಿಗಳನ್ನೂ ತೆಗೆದುಹಾಕಿ ಅವುಗಳ ಜಾಗದಲ್ಲಿ ಖಾಯಂ ಆದ ಪಶುವೈದ್ಯಶಾಲೆಗಳನ್ನು ಏರ್ಪಡಿಸುವುದೂ ಮತ್ತು ಅವುಗಳ ಸಂಖ್ಯೆಯನ್ನು ಇಮ್ಮಡಿಯಾಗಿ ಹೆಚ್ಚಿಸುವುದೂ ಆವಶ್ಯಕ. ಇದರಿಂದ ಬಂಡವಾಳದ ವೆಚ್ಚದ ಬಾಬ್ತು, ಕಟ್ಟಡಗಳಿಗಾಗಿಯೂ ಮತ್ತು ಸಲಕರಣೆಗಳಿಗಾಗಿಯೂ 10 ಲಕ್ಷ ರೂಪಾಯಿಗಳನ್ನು ಮತ್ತು ಅವುಗಳನ್ನು ಸುರಕ್ಷಿತವಾಗಿ ನಡೆಸಿಕೊಂಡು ಬರುವುದಕ್ಕಾಗಿ ಮೂರುವರೆ ಲಕ್ಷ ರೂಪಾಯಿಗಳ ಆವೃತ್ತ ವೆಚ್ಚವನ್ನೂ ಒದಗಿಸಬೇಕಾಗುವುದು" ಎಂಬುದಾಗಿ ತಿಳಿಸಿದ್ದಾರೆ. ಹೀಗೆ ಪ್ರತಿಯೊಂದು ಬಾಬಿನಲ್ಲೂ ನಮ್ಮ ದೇಶ ಈ ದಿವಸ ನಡೆಸಿರತಕ್ಕಂಥ ಜನೋಪಯುಕ್ತ ಬಾಬುಗಳು ಯಾವುವಿವೆಯೋ ಅವುಗಳನ್ನೆಲ್ಲಾ ಪರಿಶೀಲನೆಮಾಡಿ ನೋಡಿದ್ದೇ ಆದರೆ, ಈ ನಮ್ಮ ಮೈಸೂರಿನ ಮಟ್ಟಕ್ಕೆ ಇತರ ಹೊರಗಿನ ಭಾಗಗಳನ್ನು ತರಬೇಕಾಗಿದ್ದರೆ ನಾವು ಕೋಟ್ಯಂತರ ರೂಪಾಯಿಗಳನ್ನು ಖರ್ಚುಮಾಡಬೇಕಾಗಿರುತ್ತದೆಂಬುದಾಗಿ ಕಂಡುಬರುತ್ತದೆ. ಈಗ ನಮ್ಮ ದೇಶದಲ್ಲಿ ಏನು ಸೌಲಭ್ಯಗಳನ್ನು ಸರ್ಕಾರ ತನ್ನ ಪ್ರಜೆಗಳಿಗೆ ಒಸಗಿಸುತ್ತಿದೆಯೋ ಅವುಗಳನ್ನು ಇನ್ನು ಮುಂದೆ ಮುಂದುವರಿಸಿಕೊಂಡು ಬರುವುದಕ್ಕೂ ಬಹಳ ಕಷ್ಟವಾಗುತ್ತಿದೆ ಮತ್ತು ಅವುಗಳನ್ನು ಉಳಿಸಿಕೊಳ್ಳಲು ಮತ್ತಷ್ಟು ಕಷ್ಟವಿದೆ.

ಇನ್ನು ಸಹಕಾರದ ವಿಚಾರವಾಗಿಯೂ ಅಂಕಿ ಅಂಶಗಳನ್ನೊದಗಿಸಿದ್ದಾರೆ. ಈ ಸಹಕಾರ ಸಂಘಗಳ ವಿಚಾರದಲ್ಲಿ ಬೇರೆ ಪ್ರದೇಶಗಳಲ್ಲಿ ಇಲ್ಲಗಿಂತಲೂ ಹೆಚ್ಚು ಸಂಸ್ಥೆಗಳಿರುತ್ತವೆಂಬುದಾಗಿ ಹೇಳಿದ್ದಾರೆ. ಹೀಗೆ ಈ ಸಮಿತಿಯವರು ಇದ್ದ ವಿಚಾರಗಳನ್ನು ಇದ್ದ ಹಾಗೆಯೇ ತಿಳಿಸಿದ್ದರೂ ಕೂಡ ಈ ಸಮಿತಿಯವರು ನಿಜಾಂಶವನ್ನು ಹೇಳಿರುವುದಿಲ್ಲ ಎಂದು ಹೇಳುತ್ತಿದ್ದಾರೆ. ಆದರೆ ಯಾವ ವಿಚಾರವಾಗಿ ನಿಜಾಂಶವನ್ನು ಹೇಳಿಲ್ಲ ಎನ್ನುವುದನ್ನು ಮಾತ್ರ ತಿಳಿಸುತ್ತಿಲ್ಲ. ಹೀಗೆ ಎಲ್ಲೆಲ್ಲಿ ಇವರು ಮಾಡತಕ್ಕವಾದಕ್ಕೆ ಈ ಸಮಿತಿಯವರ ವಾದ ಸರಿಯಾಗಿ ಇವರ ಅಭಿಪ್ರಾಯಗಳನ್ನೇ ಪ್ರತಿಬಿಂಬಿಸುವುದಿಲ್ಲವೋ ಅಲ್ಲೆಲ್ಲಾ ಈ ಮಾನ್ಯ ಸದಸ್ಯರುಗಳು ಈ

(ಶ್ರೀ ಕೆ ಪುಟ್ಟಸ್ವಾಮಿ.)

ಸಮಿತಿಯವರ ಅಭಿಪ್ರಾಯದ ಮೇಲೆ ಎಗರಿ ಬಿದ್ದಿದ್ದಾರೆ: ಈ ಮೈಸೂರಿನ ಪ್ರಗತಿಯ ಬಗ್ಗೆ ಕೆಲವು ಮಾನ್ಯ ಸದಸ್ಯರು ವಾದವಮಾಡುತ್ತ ಈ ಅಭಿವೃದ್ಧಿ ಕಾರ್ಯಗಳೆಲ್ಲಾ "ಬಾರೋಡ್ ಕ್ಯಾಪಿಟಲ್ ಮೇಲೆ ನಡೆಸಲಾಗುತ್ತಿದೆ' ಎಂದು ಒಂದು ವಾದ ಮಾಡಿದ್ದಾರೆ. ಆದರೆ ಹೀಗೆ ಹೇಳಿರತಕ್ಕದ್ದು ಸತ್ಯಾಂಶಕ್ಕೆ ದೂರವಾಗಿದೆ. ಈ ಜನೋಪಯುಕ್ತ ಕಾರ್ಯಗಳನ್ನೆಲ್ಲಾ ನಮ್ಮ ಸರ್ಕಾರ ಹೊರಗಡೆಯಿಂದ ಎಲ್ಲಿಂದಲೋ ಸಾಲ ಮಾಡಿ ತಂದ ಕ್ಯಾಪಿಟಲ್ ಮೇಲೆ ಈ ಕಾರ್ಯಗಳೊಂದನ್ನೂ ಮಾಡಿಲ್ಲ ನಮ್ಮ ದೇಶದ ಹಣದಿಂದಲೇ ನಡಿಸಲ್ಪಟ್ಟಿರುತ್ತವೆಂಬುದು ಕನ್ನಡಿ ಹಿಡಿದಹಾಗೆ ಕಾಣುತ್ತದೆ. ಹೀಗೆ ನಮ್ಮ ಮೈಸೂರು ಪ್ರಗತಿ ಮಾರ್ಗದಲ್ಲಿ ಅಕ್ಷಯಪಾತ್ರೆಯೋಪಾದಿಯಲ್ಲಿ ತನ್ನ ಕೆಲಸ ಕಾರ್ಯಗಳನ್ನು ನೆರವೇರಿಸಿಕೊಂಡು ಬರುತ್ತಿದ್ದಾಗ್ಗ್ಯೂ ಕೆಲವು ಮಾನ್ಯ ಸದಸ್ಯರು ಪಕ್ಷಪಾತ ಭಾವನೆಯಿಂದ ಈ ಕಾರ್ಯಗಳೆಲ್ಲಾ ಹೊರಗಡೆಯಿಂದ ಸಾಲ ಮಾಡಿ ತಂದಂಥ ಕ್ಯಾಪಿಟಲ್ ಮೇಲೆ ನಡೆಸಲ್ಪಟ್ಟಂಥವುಗಳಾಗಿರುತ್ತವೆಂದು ಓದಿ, ಅದರಮೇಲೆ ವ್ಯಾಖ್ಯಾನ ಮಾಡಿ ಈ ಸಮಿತಿಯವರು ಸರಿಯಾಗಿ ಕೆಲಸಮಾಡಿಲ್ಲ ಎಂದು ಹೇಳಿರುತ್ತಾರೆ. ಹೀಗೆ ಅವರು ಮಾಡಿರತಕ್ಕಂಥ ವಾದಗಳಲ್ಲೇನೂ ಹುರುಳಿಲ್ಲ.

ಇನ್ನು ನೀರಾವರಿ ಮತ್ತು ವಿದುಚ್ಛಕ್ತಿ ವಿಚಾರ. ಬಹುಶಃ ಈ ವಿಚಾರದಲ್ಲಿ ಅಷ್ಟೇನೂ ಹೆಚ್ಚಿನ ವಾದ ಮಾಡಬೇಕಾಗಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಈ ದಿವಸ ಮೈಸೂರಿನಲ್ಲಿ ಉತ್ಪತ್ತಿಯಾಗುತ್ತಿರುವ ವಿದ್ಯುಚ್ಛಕ್ತಿಯನ್ನು ನಮ್ಮ ದೇಶ ಒಂದಕ್ಕೇ ಅಲ್ಲದೆ ಅಕ್ಕಪಕ್ಕದ ದೇಶಗಳಿಗೂ ಕೂಡ ಒದಗಿಸುತ್ತಿದ್ದೇವೆ. ಈ ದಿವಸ ಮೈಸೂರು ದೇಶ ಇಷ್ಟು ಪ್ರಗತಿಗೆ ಬರಬೇಕಾಗಿದ್ದರೆ ಮೈಸೂರಿನಲ್ಲಿ ಉತ್ಪತ್ತಿಯಾಗುತ್ತಿರುವ ವಿದ್ಯುಚ್ಛಕ್ತಿಯೇ ಮುಖ್ಯಕಾರಣ. ಆದರೆ ನಮ್ಮ ಸರ್ಕಾರಕ್ಕೆ ಯಾವ ಅಂಥ ಬಲವತ್ತರವಾದ ಕಾರಣಗಳಿದ್ದವೋ ನನಗೆ ಅದು ತಿಳಿಯದು, ಅಂತೂ ನಮ್ಮ ಸರ್ಕಾರ ಈ ದಿವಸ ವಿದ್ಯುಚ್ಛಕ್ತಿಯನ್ನು ಬೊಂಬಾಯಿ, ಮದರಾಸ್ ಇತ್ಯಾದಿ ಪ್ರಾಂತ್ಯಗಳಿಗೆ ಒದಗಿಸುವ ಒಪ್ಪಂದಕ್ಕೆ ಒಪ್ಪಿಕೊಂಡಿದೆ. ಈಗಾಗಲೇ ವಿದ್ಯುಚ್ಛಕ್ತಿಯನ್ನೂ ಹೊರಗಡೆಗೆ ಕೊಡುತ್ತಿದ್ದಾರೆ. ಆದರೆ ನಾನು ಅಭಿಪ್ರಾಯ ಪಡತಕ್ಕ ರೀತಿಯಲ್ಲಿ ಈ ಪವರನ್ನೂ ಸಹ ನಮ್ಮ ಮೈಸೂರಿನ ಹಿತ ದೃಷ್ಟಿಯಿಂದ ಹೊರಗಿನವರಿಗೆ ಕೊಡಬಾರದಾಗಿತ್ತೆಂದು ಹೇಳುತ್ತೇನೆ.

ಇನ್ನು ನೀರಾವರಿ ಯೋಜನೆಗಳ ವಿಚಾರ: ಈ ಬಗ್ಗೆ ಮೈಸೂರು ಬಹಳ ಮುಂದುವರಿದಿದೆ. ಆದರೆ ಹೊರಗಡೆ ಬಾಕಿ ಪ್ರದೇಶಗಳಲ್ಲಿ ಅಂಥಾ ಹೇಳಿಕೊಳ್ಳುವಂಥ ನೀರಾವರಿ ಯೋಜನೆಗಳು ಯಾವುವೂ ಇಲ್ಲ. ಈ ನಮ್ಮ ಮೈಸೂರಿನಲ್ಲಿ ಈ ನೀರಾವರಿ ಯೋಜನೆಗಳೂ ಮತ್ತು ವಿದ್ಯುಚ್ಛಕ್ತಿಯೂ ಇಷ್ಟೊಂದು ಯಥೇಷ್ಟವಾದ ರೀತಿಯಲ್ಲಿ ದೊರೆಯುವಹಾಗೆ ಮಾಡಲು ನಮ್ಮ ಪೂರ್ವಿಕರು ಇದಕ್ಕೆಲ್ಲಾ ಬಹಳ ತ್ಯಾಗಮಾಡಿದ್ದಾರೆ. ಹಿಂದೆ ಈ ಸಂಸ್ಥಾನದ ಉತ್ಪತ್ತಿ ಕೇವಲ ಮೂರು ಕೋಟಿ ರೂಪಾಯಿಗಳಿತ್ತು ಅಂಥ-ಕಾಲದಲ್ಲೇ ಕೃಷ್ಣರಾಜಸಾಗರ ಅಣೆಕಟ್ಟನ್ನು ಕಟ್ಟಲು ನಮ್ಮ ಸರ್ಕಾರ ಹಣವನ್ನು ಒದಗಿಸಿತು. ಹೀಗೆ ಬಹಳ ತ್ಯಾಗದಿಂದ ಮತ್ತು ಬಹಳ ಕಷ್ಟದಿಂದ ನಾವು ಈ ಆಸ್ತಿಯನ್ನು ರೂಢಿಸಿದ್ದೇವೆ. ಬೇರೆಕಡೆ ಈ ಆಸ್ತಿ ರೂಢಿಸಿಲ್ಲ. ಕೆಲವು ಕಡೆ ಸೌಲಭ್ಯ ಇರಬಹುದು. ಕೆಲವು ಕಡೆ ಸೌಲಭ್ಯ ಇಲ್ಲದೆ ಇರಬಹುದು. ಈ ಆಸ್ತಿಯನ್ನು ರೂಢಿಸಬೇಕಾದರೆ ಎಷ್ಟು ಖರ್ಚು ತಗಲುತ್ತದೆ. ಎಷ್ಟೊಂದು ಕಷ್ಟವಾಗುತ್ತದೆ ಎನ್ನುವುದನ್ನು ವಿಸ್ತಾರವಾಗಿ ವರ್ಣಿಸಬೇಕಾಗಿಲ್ಲ. ಪ್ರಕೃತಿ ಸಂಪತ್ತು ಮತ್ತು ಕೈಗಾರಿಕೆಗಳಲ್ಲಿಯೂ ಕೂಡ ನಮ್ಮ ದೇಶ ಮುಂದುವರಿದ ದೇಶ. ವಿದ್ಯುಚ್ಛಕ್ತಿ ಸುಲಭವಾಗಿ ಸಿಕ್ಕುತ್ತಾ ಇರುವುದರಿಂದ ಅನೇಕ ಕೈಗಾರಿಕೆಗಳನ್ನು ಸ್ಥಾಪನೆಮಾಡಿದ್ದೇವೆ. ಇಂಡಿಯಾ ದೇಶದಲ್ಲಿ ಮೈಸೂರುದೇಶ ಈಗಾಗಲೇ ಮುಂದುವರಿದಂಥ ದೇಶ. ಹೊರಗಡೆ ಕನ್ನಡ ಮಾತನಾಡತಕ್ಕ ಜಿಲ್ಲೆಗಳಲ್ಲಿ ಇಷ್ಟು ಕೈಗಾರಿಕೆಗಳಿಲ್ಲ. ಅಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕಾದರೆ, ಅದಕ್ಕೆ ಬೇಕಾದಂಥ ವಿದ್ಯುಚ್ಛಕ್ತಿ, ಅದಕ್ಕೆ ಬೇಕಾದಂಥ ಸಿಬ್ಬಂದಿ ಅದನ್ನೆಲ್ಲಾ ಒದಗಿಸಿ ಅಲ್ಲಿಯೂ ಕೂಡ ಕೈಗಾರಿಕೆಗಳನ್ನು ಅಭಿವೃದ್ಧಿಗೆ ತರಬೇಕಾದರೆ ಅದಕ್ಕೂ ಬಹಳವಾಗಿ ಹಣ ಖರ್ಚಾಗುತ್ತದೆ.

ಇನ್ನು ನಮ್ಮಲ್ಲಿರತಕ್ಕಂಥ ಪ್ರಕೃತಿ ಸಂಪತ್ತಿನ ವಿಚಾರ. ಪ್ರಕೃತಿ ಸಂಪತ್ತನ್ನು ಮೈಸೂರು ದೇಶದ ಜೊತೆಯಲ್ಲಿ ಹೋಲಿಸಿದರೆ ಅಲ್ಲಿಯ ಪ್ರಕೃತಿ ಸಂಪತ್ತು ಯಾವ ಹೋಲಿಕೆಗೂ ಬಾರದಂತಿದೆ. South Canara ಜಿಲ್ಲೆಯನ್ನು ಬಿಟ್ಟರೆ ಬೇರೆ ಯಾವ ಜಿಲ್ಲೆಯಲ್ಲೂ ಯಾವ ಸಂಪತ್ತೂ ಇಲ್ಲ.

A MEMBER.—What about minerals ?

ಶ್ರೀ ಕೆ. ಪುಟ್ಟಸ್ವಾಮಿ.—ಇನ್ನು Minerals ವಿಚಾರ ಪ್ರಸ್ತಾಪ ಮಾಡುತ್ತೇನೆ. ಅಲ್ಲಿರತಕ್ಕಂಥ ಖನಿಜ ಸಂಪತ್ತು ಯಾವುದು ಇದೆ ಎನ್ನುವುದನ್ನು ಖಚಿತವಾಗಿ ಶೋಧನೆಮಾಡಿಲ್ಲ. ಖನಿಜ ಸಂಪತ್ತು ಇರಬಹುದು ಎನ್ನುವ ರೀತಿಯಲ್ಲಿದೆ. ಮೈಸೂರು ದೇಶವನ್ನೊಳಗೊಂಡಂಥ ಕರ್ನಾಟಕ ಖನಿಜ ಸಂಪತ್ತಿನ ವಿಷಯದಲ್ಲಿ ಇಂಡಿಯಾ ದೇಶದಲ್ಲಿ ಎರಡನೆಯದಾಗಿದೆ ಎಂದು ಹೇಳುವುದಕ್ಕೆ ಅವಕಾಶವಿದೆ. ಕನ್ನಡ ಮಾತನಾಡುವ ಇತರ ಭಾಗಗಳಲ್ಲಿ ಯಾವ ಯಾವ ಖನಿಜ ಸಂಪತ್ತು ಇದೆ ಎನ್ನುವುದು ಗೊತ್ತಿಲ್ಲ.

ಇನ್ನು ಆದಾಯ ವೆಚ್ಚದ ವಿಚಾರ. ಆದಾಯ ವೆಚ್ಚದ ವಿಚಾರದಲ್ಲಿ ಶ್ರೀವರ್ಮಾ ಕಂಠಿಯವರು "ಈ ವರದಿಯಲ್ಲಿ ಅನೇಕ ಅಂಶಗಳನ್ನು ಬಿಟ್ಟಿದ್ದಾರೆ. ಕೊಟ್ಟಿರುವ ಅಂಕಿ ಅಂಶಗಳು ಸರಿಯಾದುವಲ್ಲ" ಎಂದು ಅವರು ಪತ್ರಿಕೆಯಲ್ಲಿ ಬರೆದಂಥ ಲೇಖನದಲ್ಲಿ ಹೇಳಿದ್ದಾರೆ. ಹೈದರಾಬಾದ್, ಗುಲ್ಬರ್ಗ, ರಾಯಚೂರು, ಬಿದರೆ, ಬೆಳಗಾಂ, ಬಿಜಾಪುರ, ಧಾರ್ವಾಡ, ಉತ್ತರ ಕನ್ನಡ, ದಕ್ಷಿಣಕನ್ನಡ, ಕೊಡಗು, ಈ ಪ್ರಾಂತಗಳಲ್ಲಿ 97,16,485 ರೂಪಾಯಿಗಳು ಉತ್ಪತ್ತಿ; ಖರ್ಚು 10,79,61,485 ರೂಪಾಯಿಗಳು; ಇದರಿಂದ ಸಾಲದೇ ಬರುವ ಹಣ ಇಲ್ಲ ಸುಮಾರು 1,07,96,629 ರೂಪಾಯಿಗಳು; ಸರಾಸರಿ ಖರ್ಚಾಗುತ್ತಾ ಇರತಕ್ಕಂಥಾದ್ದು, ತಲಾ ಒಂದಕ್ಕೆ ಎಷ್ಟು ಎಂಬುದನ್ನು ತಾವು ನೋಡಿ. ಹೈದರಾಬಾದಿನಲ್ಲಿ ಶೇಕಡ 6 ರೂಪಾಯಿ, ಬೊಂಬಾಯಿನಲ್ಲಿ ಶೇಕಡ 14 ರೂಪಾಯಿ, ಮೈಸೂರಿನಲ್ಲಿ ಶೇಕಡ 20 ರೂಪಾಯಿ ಚಿಲ್ಲರೆ. ಈಗ ಶೇಕಡ 6 ರೂಪಾಯಿ, ಶೇಕಡ 14 ರೂಪಾಯಿಯಂತೆ ಅಷ್ಟೊಂದು ಕನಿಷ್ಠ ಮಿತಿಯಲ್ಲಿ ಖರ್ಚು ಮಾಡುತ್ತಿದ್ದರೂ, ಆದಾಯ ವೆಚ್ಚದ ಪರಿಣಾಮ ಏನೆಂದರೆ 1 ಕೋಟಿ 7 ಲಕ್ಷ ರೂಪಾಯಿಗಳಷ್ಟು ಖೋತಾ ಆಗಿದೆ. ಅಂಕಿ ಅಂಶಗಳನ್ನು ಪರಿಶೀಲನಮಾಡದೆ, ಅವರು ಇಲ್ಲೂ ಖೋತಾ ಎಂದು ಹೇಳುವುದು ಸರಿಯಲ್ಲ. ಮೈಸೂರಿನಲ್ಲಿ Capital expenditure ಬಗ್ಗೆ ಎಷ್ಟು ಖರ್ಚುಮಾಡುತ್ತಿದ್ದೇವೆಂಬುದನ್ನು ನೋಡಬೇಕು. ಅಲ್ಲಿರತಕ್ಕಂಥ ಪಾಠಶಾಲೆಗಳು, ಅಲ್ಲಿರತಕ್ಕಂಥ ಆಸ್ಪತ್ರೆಗಳು, ಅಲ್ಲಿರ

ತಕ್ಕಂಥ ರಸ್ತೆಗಳು, ಅಲ್ಲಿಗೆ ಬೇಕಾಗಿರತಕ್ಕಂಥ ರಕ್ಷಣೆ ಮತ್ತು ಸಾರ್ವಜನಿಕ ನೆಮ್ಮದಿ ವಗ್ಗೈರೆ ಇವಕ್ಕೋಸ್ಕರ ಖರ್ಚು ಮಾಡತಕ್ಕದ್ದು 10,79,00,000 ರೂಪಾಯಿಗಳು ಚಿಲ್ಲರೆ. ಅವುಗಳಿಗೆ ಬರತಕ್ಕ ಆದಾಯ 9 ಕೋಟಿ 71 ಲಕ್ಷ ರೂಪಾಯಿಗಳು ಚಿಲ್ಲರೆ. ಇಷ್ಟರಿಂದಲೇ 1 ಕೋಟಿ 7 ಲಕ್ಷ ಖೋತಾ ಆಗುತ್ತದೆ. ಆದರೆ ಮೈಸೂರು ದೇಶದಲ್ಲಿ ಇರುವಹಾಗೆ ಪಾಠಶಾಲೆಗಳು, ಉದ್ದವಾದ ರಸ್ತೆಗಳು, ಆಸ್ಪತ್ರೆಗಳು ಮತ್ತು ಜನಾರೋಗ್ಯ ರಕ್ಷಣೆ, Public Health Units ಇವನ್ನೆಲ್ಲಾ ಏರ್ಪಾಡು ಮಾಡಿದರೆ ಎಷ್ಟು ಖೋತಾ ಆಗುತ್ತದೆ ಎಂಬುದನ್ನು ಊಹೆ ಮಾಡುವುದಕ್ಕೂ ಕೂಡ ಕಷ್ಟವಾಗುತ್ತದೆ. ಇನ್ನೂ ಹತ್ತು ಕೋಟಿ ಒದಗಿಸಿದರೂ ಕೂಡ ಅವನ್ನೆಲ್ಲಾ ನಾವು ಮಾಡುವುದಕ್ಕಾಗುತ್ತದೆಯೋ ಇಲ್ಲವೋ.

ದಕ್ಷಿಣ ಕನ್ನಡವನ್ನು ಬಿಟ್ಟು, ಒಟ್ಟಿನಲ್ಲಿ ಸುಮಾರು 108 ಲಕ್ಷ ರೂಪಾಯಿಗಳು ಕೊರತೆಯಾಗಿರುವುದು ಕಂಡುಬರುತ್ತದೆ. ಸಾಮಾಜಿಕ ಕಾರ್ಯಗಳಿಗೂ ಮತ್ತು ರಾಷ್ಟ್ರೀಯ ನಿರ್ಮಾಣ ಕಾರ್ಯಗಳಿಗೂ, ಅದರಲ್ಲೂ ಹೈದರಾಬಾದ್ ರಾಜ್ಯದಲ್ಲಿ ವೆಚ್ಚವನ್ನು ಹೆಚ್ಚಿಸುವುದರಿಂದ ಬರುವ ವರ್ಷಗಳಲ್ಲಿ ಕೊರತೆ ಮೊಬಲಗು ಇನ್ನು ಹೆಚ್ಚಾಗಲೇ ಬೇಕಾಗಿದೆ.

ವೆಚ್ಚವು ಒಬ್ಬೊಬ್ಬರ ವಿಷಯದಲ್ಲಿ ಎಷ್ಟೆಷ್ಟು ಬೀಳುವುದೆಂದು ಲೆಕ್ಕಮಾಡಿದರೆ ಅದು 1952-53ನೆಯ ಸಾಲಿನಲ್ಲಿ ಹೈದರಾಬಾದಿನ ಕನ್ನಡ ಡಿಸ್ಟ್ರಿಕ್ಟುಗಳಲ್ಲಿ 6.00 ರೂಪಾಯಿಗಳಾಗುವುದೆಂದೂ ಬೊಂಬಾಯಿನ ಕನ್ನಡ ಡಿಸ್ಟ್ರಿಕ್ಟುಗಳಲ್ಲಿ 14·65 ರೂಪಾಯಿಗಳಾಗುವುದೆಂದೂ ಕೊಡಗಿನಲ್ಲಿ 34·16 ರೂಪಾಯಿಗಳಾಗುವುದೆಂದೂ ಮತ್ತು ಮೈಸೂರಿನಲ್ಲಿ 19·86 ರೂಪಾಯಿಗಳಾಗುವುದೆಂದೂ ಗೊತ್ತಾಗುತ್ತದೆ.

1950-51ನೆಯ ಸಾಲಿನಿಂದ 1952.53ನೆಯ ಸಾಲಿನವರೆಗೆ ಮೂರು ವರ್ಷಗಳಲ್ಲಿ ಉಂಟಾದ ಬಂಡವಾಳದ ವೆಚ್ಚವು ಹೈದರಾಬಾದಿನ ಮತ್ತು ಮುಂಬಯಿಯ ಕನ್ನಡ ಡಿಸ್ಟ್ರಿಕ್ಟುಗಳಲ್ಲಿ 15,43,45,000 ರೂಪಾಯಿಗಳಾಗುವುದು; ಹೈದರಾಬಾದಿನಲ್ಲಿ 11,23,72,000 ರೂಪಾಯಿಗಳೂ ಮತ್ತು ಮುಂಬಯಿಯಲ್ಲಿ 4,19,73,000 ರೂಪಾಯಿಗಳೂ ಆಗುವುದು. ಈಬಾಬ್ತಿ ವೆಚ್ಚದ ಬಹುಭಾಗವನ್ನು ಹೈದರಾಬಾದಿನಲ್ಲಿರುವ ತುಂಗಭದ್ರಾ ಯೋಜನೆಗಾಗಿ ವಿನಿಯೋಗಿಸಲಾಯಿತೆಂದು ಸುಲಭವಾಗಿ ಊಹಿಸಬಹುದಾಗಿದೆ. ಅಂತೆಯೇ ಈ ಬಂಡವಾಳ ವೆಚ್ಚದ ಅರ್ಧಭಾಗವನ್ನು ಮುಂಬಯಿಯ ಘಟಪ್ರಭ ಯೋಜನೆಗಾಗಿ ವಿನಿಯೋಗಿಸಿರಬೇಕೆಂದೂ ಊಹಿಸಬಹುದಾಗಿದೆ. ಇದಕ್ಕೆ ಮೇಲ್ಪಟ್ಟು ಎಷ್ಟು ವೆಚ್ಚವು ವರಮಾನವನ್ನು ಕೊಡುವಂತಹ ಕೆಲಸಗಳಿಗಾಗಿಯೂ, ಎಷ್ಟು ವೆಚ್ಚವು ಸಮಾಜಾಭಿವೃದ್ಧಿ ಕಾರ್ಯಗಳಿಗಾಗಿಯೂ ಆಗಿದೆ ಯೆಂಬುದನ್ನು ಹೇಳುವುದಕ್ಕೆ ಸಾಧ್ಯವಿರುವುದಿಲ್ಲ. ಕೇವಲ ದೊಡ್ಡ ದೊಡ್ಡ ನೀರಾವರೀ ಮತ್ತು ವಿದ್ಯುಚ್ಛಕ್ತಿ ಯೋಜನೆಗಳನ್ನೇ ಪರಿಗಣಿಸುವುದಾದರೆ ಸದ್ಯದ ಅಂದಾಜುಗಳ ಮೇರೆಗೆ ತುಂಗಭದ್ರ ನೀರಾವರೀ ಯೋಜನೆಯ ಸಂಬಂಧದಲ್ಲಿ 11 ಕೋಟಿ ರೂಪಾಯಿಗಳ ವೆಚ್ಚವೂ ಮತ್ತು ತುಂಗಭದ್ರ ಹೈಡ್ರೋ-ಎಲೆಕ್ಟ್ರಿಕ್ ಯೋಜನೆಯ ಸಂಬಂಧದಲ್ಲಿ 4 ಕೋಟಿ ರೂಪಾಯಿಗಳ ವೆಚ್ಚವೂ, ರಾಜಾಲ ಬಂಡ ಯೋಜನೆಯ ಸಂಬಂಧದಲ್ಲಿ ಒಂದು ಕೋಟಿ ರೂಪಾಯಿಗಳ ವೆಚ್ಚವೂ ಮತ್ತು ಘಟಪ್ರಭ ಯೋಜನೆಯ ಸಂಬಂಧದಲ್ಲಿ ಮೂರು ಕೋಟಿ ರೂಪಾಯಿಗಳ ವೆಚ್ಚವೂ ಆಗುವುದಾಗಿದೆ. ಇದಕ್ಕೆ ಮುಂಬಯಿಯ ಕನ್ನಡ ಡಿಸ್ಟ್ರಿಕ್ಟುಗಳಲ್ಲಿ ಜೋಗ್ ವಿದ್ಯುಚ್ಛಕ್ತಿಯ ಸಂಬಂಧದಲ್ಲಿ ಆಗುವ ವೆಚ್ಚವನ್ನು ಸೇರಿಸಿಕೊಳ್ಳಬೇಕಾಗಿದೆ. ಸಮಾಜ ಕಾರ್ಯಗಳಿಗೆ ತಗಲುವ ವೆಚ್ಚವನ್ನು ಬಿಟ್ಟು ಒಟ್ಟಿನಲ್ಲಿ ಸರಾಸರಿ ಸುಮಾರು 20 ಕೋಟಿ ರೂಪಾಯಿಗಳು ವೆಚ್ಚವಾಗುವುದಾಗಿದೆ. ತುಂಗಭದ್ರ ಯೋಜನೆಯ ಆಶ್ರಯದ ಪ್ರದೇಶದ ಅಭಿವೃದ್ಧಿಗಾಗಿ ತಗಲಬಹುದಾದ ವೆಚ್ಚವನ್ನು ಇದರಲ್ಲಿ ಸೇರಿಸಿರುವುದಿಲ್ಲ. ಹೀಗೆ ನಾವು ಮೈಸೂರನ್ನು ವಿಸ್ತಾರವಾಗಿ ಮಾಡುವುದರಿಂದ ಇನ್ನೂ ಹೆಚ್ಚಿನ ಸಾಲವನ್ನು ಕೂಡ ಹೊರಬೇಕಾಗುತ್ತದೆ. ಅದರಿಂದ ಲಾಭ ಯಾವಾಗ ಬರುತ್ತದೋ ಏನೋ! ಅದುವರೆಗೆ ನಮ್ಮ ಸ್ಥಿತಿ ಹೇಗಿರುತ್ತದೋ ದೇವರೇ ಬಲ್ಲ. ಆಡಳಿತಕ್ಕೆ ಸಂಬಂಧವಾಗಿ ಏನೇನು ಸಮಸ್ಯೆಗಳು ಉದ್ಭವವಾಗಬಹುದೋ ಗೊತ್ತಿಲ್ಲ. ಆದಾಯ ವೆಚ್ಚದ ಸಂಬಂಧವಾಗಿ ಇನ್ನೊಂದು ಮಾತು ಹೇಳಬೇಕಾಗಿದೆ. ಶ್ರೀಮಾನ್ ಕಂಠಿಯವರು ಅವರು ಬರೆದಂಥ ಲೇಖನದಲ್ಲಿ "ಎಷ್ಟೋ ಅಂಶಗಳನ್ನು ಬಿಟ್ಟು ಬಿಟ್ಟಿದ್ದಾರೆ. ಮತ್ತು ಎಷ್ಟು ಅಂಕಿ ಅಂಶಗಳು ಸಿಕ್ಕಿವೆಯೋ ಅಷ್ಟನ್ನೇ ಗಮನಕ್ಕೆ ತೆಗೆದುಕೊಂಡದ್ದರಿಂದ ಇಷ್ಟೊಂದು ಹೆಚ್ಚಿನ ರೀತಿಯಲ್ಲಿ ಖೋತಾ ಆಗಿದೆ" ಯೆಂದು ಹೇಳಿದರು. ಅವರು ಯಾವು ಯಾವುದನ್ನು ಬಿಟ್ಟಿದ್ದಾರೆ ಎಂಬುದನ್ನು ಹೇಳಿದ್ದಾರೆ. ಅವರು "Interest earnings, Contribution from railway lending of Police," ಅಂದರೆ ರೈಲ್ವೆಗೆ ಆಯಾಪ್ರಾಂತ ಸರಹದ್ದಿನಲ್ಲಿ ಕೊಟ್ಟಿರತಕ್ಕ ಪೋಲೀಸ್ ಸಿಬ್ಬಂದಿಯಿಂದ ಬರತಕ್ಕ ಹಣ, receipts in respect of superannuation, receipts in respect of Stationery and Printing, receipts on road transport, receipts from the Government of India from Community and Development Projects, receipts in respect of Grow More Food and other Agricultural schemes ಮತ್ತು Union Excise, ಇವನ್ನೆಲ್ಲಾ ಬಿಟ್ಟು ಬಿಟ್ಟಿದ್ದಾರೆ" ಎಂದು ಹೇಳಿದ್ದಾರೆ. ಆದರೆ ನಾವು ಈ ವರದಿಯನ್ನು ನೋಡಿ ಯಾವುದಾದರೂ ಈ ರೀತಿ ಬಿಟ್ಟು ಬಿಟ್ಟಿದ್ದಾರೆಯೇ ಎಂಬ ಆಲೋಚನೆ ಮಾಡೋಣ. ಆಯಾ ಡಿಸ್ಟ್ರಿಕ್ಟಿನ Administration ನಲ್ಲಿ ಯಾವ ಯಾವ ಬಾಬಿನಲ್ಲಿ ಏನೇನು ಉತ್ಪನ್ನ ಬರುತ್ತದೋ, ಯಾವ ಯಾವ ಬಾಬಿನಲ್ಲಿ ಏನೇನು ಖರ್ಚಾಗುತ್ತದೋ, ಅದನ್ನೆಲ್ಲಾ Accountant-General ಆಫೀಸಿನವರು ಡಿಸ್ಟ್ರಿಕ್ಟ್‌ವಾರು ವಿಂಗಡನೆ ಆಗಿರತಕ್ಕಂಥ ಅಂಕಿ ಅಂಶಗಳನ್ನು ಒದಗಿಸಿದ್ದಾರೆ. ಹಾಗಿದ್ದರೂ ಕೂಡ ಅಂಕಿ ಅಂಶಗಳನ್ನು ರಿಪೋರ್ಟಿನಲ್ಲಿ ಬಿಟ್ಟು ಬಿಟ್ಟಿದ್ದಾರೆ ಎಂದು ಹೇಳುವುದು ತದ್ವಿರುದ್ಧವಾಗುತ್ತದೆ. ಯಾವುದನ್ನೂ ಬಿಟ್ಟಿಲ್ಲ. ಆದಾಯದ ಹುಟ್ಟುವಳಿಯ ಅಂಕಿಗಳಲ್ಲಿ ವರಮಾನದ ತೆರಿಗೆಯ ಮತ್ತು ಸೆಂಟ್ರಲ್ ಎಕ್ಸೈಜು ಸುಂಕಗಳ ಹಣದ ಶೇಖರಣೆಯಿಂದ ಬಂದ ಭಾಗದ ಮೊಬಲಗೂ ಸೇರಿರುತ್ತದೆ. ರಾಜ್ಯ ಸರ್ಕಾರದ ಆದಾಯ ತೆರಿಗೆಯಲ್ಲಿ ಶೇಕಡ 80 ಭಾಗವನ್ನು ಜನಸಂಖ್ಯೆಯ ಆಧಾರದ ಮೇರೆಗೆ ಡಿಸ್ಟ್ರಿಕ್ಟುಗಳಿಗೆ ಹಂಚಲಾಗಿದೆ ಮತ್ತು ಉಳಿದ ಶೇಕಡ 20 ಭಾಗವನ್ನು ವಸೂಲಾಗುವ ಮೊಬಲಗಿಗೆ ಅನುಸಾರವಾಗಿ ಹಂಚಲಾಗಿದೆ. ಸೆಂಟ್ರಲ್ ಎಕ್ಸೈಜು ಮತ್ತು ಹೊಗೇಸೊಪ್ಪಿನ ತೆರಿಗೆಗಳನ್ನು ಜನಸಂಖ್ಯೆಯ ಆಧಾರದ ಮೇರೆಗೆ ಹಂಚಲಾಗಿದೆ.

ಪ್ರಾಮುಖ್ಯತೆಗನುಸಾರವಾಗಿ ಹುಟ್ಟುವಳಿಯ ಸಾಧನ ಸಂಪತ್ತುಗಳು ಯಾವುವೆಂದರೆ :—ಆದಾಯ

(ಶ್ರೀ ಕೆ. ಪುಟ್ಟಸ್ವಾಮಿ.)

ತೆರಿಗೆ, ಜಮೀನು ಕಂದಾಯ, ಇತರ ತೆರಿಗೆಗಳು ಮತ್ತು ಸುಂಕಗಳು, ಅರಣ್ಯಗಳು, ಸ್ಟಾಂಪುಗಳು, ಮತ್ತು ವಿದ್ಯಾಭ್ಯಾಸ; ಉತ್ತರ ಕನ್ನಡದಲ್ಲಿ, ಆ ಡಿಸ್ಟ್ರಿಕ್ಟಿನ ಒಟ್ಟು ಹುಟ್ಟುವಳಿಯಲ್ಲಿ ಸುಮಾರು ಶೇಕಡ 75 ಭಾಗವು ಅರಣ್ಯಗಳಿಂದ ಬಂದ ಹುಟ್ಟುವಳಿಯೇ ಆಗಿದೆ.

ಈಗ ವೆಚ್ಚದ ಅಂಕಿ ಅಂಶಗಳ ಕಡೆಗೆ ಗಮನ ಕೊಡುವುದಾದರೆ, ರಾಷ್ಟ್ರಾಭಿವೃದ್ಧಿ ಕಾರ್ಯಗಳು ಮತ್ತು ಸಾಮಾಜಿಕ ಕೆಲಸ ಕಾರ್ಯಗಳ ಸಂಬಂಧದಲ್ಲಿ ವಿದ್ಯಾಭ್ಯಾಸವು ಪ್ರಥಮಸ್ಥಾನವನ್ನು ಪಡೆಯುತ್ತಿದೆ. ಮತ್ತು ವಿದ್ಯಾಭ್ಯಾಸಕ್ಕಾಗಿ ಒಟ್ಟು ವೆಚ್ಚದಲ್ಲಿ ಸುಮಾರು ಶೇಕಡ 33 ಭಾಗವನ್ನು ಖರ್ಚುಮಾಡಲಾಗಿದೆಯೆಂದು ನಮಗೆ ತಿಳಿದು ಬರುತ್ತದೆ. ಒಟ್ಟುವೆಚ್ಚದಲ್ಲಿ ವೈದ್ಯ ಸಹಾಯ, ಜನಾರೋಗ್ಯ ರಕ್ಷಣೆಯ ಇಲಾಖೆಗಳ ಸಂಬಂಧದಲ್ಲಿ ಸುಮಾರು ಶೇಕಡ 7 ಭಾಗವನ್ನು, ವ್ಯವಸಾಯ, ಪಶುಪಾಲನೆ, ಮತ್ತು ಪರಸ್ಪರ ಸಹಕಾರದ ಸಂಬಂಧದಲ್ಲಿ ಸುಮಾರು ಶೇಕಡ 12 ಭಾಗವನ್ನು ಮತ್ತು ಕೈಗಾರಿಕೆಗಳ ಸಂಬಂಧದಲ್ಲಿ ಸುಮಾರು ಶೇಕಡ ಒಂದು ಭಾಗವನ್ನು ಖರ್ಚುಮಾಡಲಾಗಿದೆ. ಈ ಆಡಳಿತ ಸಂಬಂಧದಲ್ಲಿ ಏನೇನು ಸಮಸ್ಯೆ ಉತ್ಪನ್ನವಾಗುತ್ತದೆ ಎಂಬುದನ್ನು ಹೇಳಿದ್ದಾರೆ. ಈ ಆಡಳಿತ ಸಮಸ್ಯೆಯನ್ನು ನಾವು ಪರಿಶೀಲನೆ ಮಾಡುವ ಪೂರ್ವಭಾವಿಯಾಗಿ ನಮ್ಮ ದೇಶದಲ್ಲಿ ನಮ್ಮ ನೌಕರರಿಗೆ ಕೊಡತಕ್ಕಂಥ ಸಂಬಳ ಸಾರಿಗೆಗಳನ್ನು ನಾವು ಪರ್ಯಾಲೋಚನೆ ಮಾಡೋಣ. ಈಗಾಗಲೇ ನಾವು ಕೊಡುತ್ತಾ ಇರತಕ್ಕಂಥ ಸಂಬಳ ಸಾರಿಗೆಗಳು 8 ಕೋಟಿಗೆ ಮೀರಿದೆ. ಇದನ್ನೇ ನಮಗೆ ಕೊಡುವುದಕ್ಕೆ ಸಾಧ್ಯವಿಲ್ಲ; ಸಿಬ್ಬಂದಿಯನ್ನು ಕಡಿಮೆ ಮಾಡಬೇಕು ಎನ್ನುವವಾದವನ್ನು ಕೂಡ ನಾವು ಕೇಳುತ್ತಿದ್ದೇವೆ. ಅದಕ್ಕೆ ಸರಿಯಾಗಿ ಆಡಳಿತ ದೃಷ್ಟಿಯಿಂದ ಈಗ ಇರತಕ್ಕಂಥ ಸಿಬ್ಬಂದಿ ಸಾಲದು. ಎಲ್ಲರಮೇಲೂ ಕೆಲಸದ ಹೊರೆ ಹೆಚ್ಚಾಗಿದೆ. ಕಾರ್ಯ ಚಟುವಟಿಕೆಗಳು ವಿಸ್ತಾರವಾಗಿ ಆಗಿವೆ. ದೇಶದಲ್ಲಿ ಅಭಿವೃದ್ಧಿ ಕಾರ್ಯಗಳು ಬಹಳವಾಗಿ ನಡೆಯುತಿ ವೆ. ಈ ಕೆಲಸಕಾರ್ಯಗಳನ್ನೆಲ್ಲಾ ನಿರ್ವಹಿಸಬೇಕಾದರೆ ಈಗ ಇರತಕ್ಕಂಥ ಸಿಬ್ಬಂದಿ ಸಾಲದು ಎಂದು ಮತ್ತೊಂದುವಾದವನ್ನು ಕೇಳುತ್ತಿದ್ದೇವೆ. ನನ್ನ ಅಭಿಪ್ರಾಯದಲ್ಲಿಯೂ ಕೂಡ, ಸಿಬ್ಬಂದಿ ಹೆಚ್ಚಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಹೆಚ್ಚಾಗಿಲ್ಲ ಎಂದು ನನ್ನ ಭಾವನೆ. ಇಲಾಖೆಗಳಲ್ಲಿ ಇರತಕ್ಕಂಥ ಕೆಲಸದ ಹೊರೆ ಹೆಚ್ಚು ಕಡಿಮೆ ಇರಬಹುದು. ಬಹುಶಃ ಈ ವಿಚಾರವನ್ನು ಪರಿಶೀಲನೆ ಮಾಡಿ ಸಾಧ್ಯವಾದಷ್ಟು ಕೆಲಸವನ್ನು ಎಲ್ಲರಮೇಲೂ ಇರುವ ಹಾಗೆ ಹಂಚಬೇಕಾಗುತ್ತದೇ ವಿನಾ ಇಂತಹ ಒಂದು ಇಲಾಖೆಯಲ್ಲಿ ಹೆಚ್ಚು ನೌಕರರು ಇದ್ದಾರೆ. ಅವರನ್ನು ತೆಗೆಯಬಹುದು ಎನ್ನುವ ವಿಚಾರವಿಲ್ಲ. ಇಂತಹ ಪರಿಸ್ಥಿತಿ ಜೊತೆಗೆ ಕೊಡುತ್ತಾ ಇರುವ ಸಂಬಳ ಸಾರಿಗೆ ಕೂಡ ನಾವು ಪರಿಶೀಲನೆ ಮಾಡಬೇಕು. ಮೈಸೂರು ದೇಶದಲ್ಲಿ ಕೊಡುತ್ತಾ ಇರತಕ್ಕಂಥ ಸಂಬಳ ಸಾರಿಗೆಗಳನ್ನು ಬೇರೆ ಯಾವ ಪ್ರಾಂತಕ್ಕೇ ಹೋಲಿಸಿದರೂ ಕೂಡ ಕನಿಷ್ಠ. ಆದರೆ ನಮ್ಮ ಸರ್ಕಾರೀ ನೌಕರರು ಮಾಡುತ್ತಾ ಇರತಕ್ಕಂಥ ಕೆಲಸ ಯಾವ ರೀತಿಯಿಂದಲೂ ಕೂಡ ಬೇರೆಯವರಿಗಿಂತ ಕನಿಷ್ಠ ದರ್ಜೆಯದಲ್ಲ.

2 P.M.

ನಮ್ಮಲ್ಲಿರತಕ್ಕ ಇಂಜಿನಿಯರುಗಳು ನಾವು ಎಷ್ಟೇ ಅವರು ಮಾಡತಕ್ಕ ಕೆಲಸ ಕಾರ್ಯಗಳಲ್ಲಿ ಅತೃಪ್ತರಾಗಿದ್ದರೂ, ನಮ್ಮ ಇಂಡಿಯಾ ದೇಶದ ಇತರ ಕಡೆಯವರಿಗಿಂತ ಅತ್ಯುತ್ತಮವಾದ ತರಪೇತನ್ನು ಪಡೆದಿರುವವರೂ, ಶಕ್ತರೂ ಆಗಿದ್ದಾರೆಂಬುದರಲ್ಲಿ ಅನುಮಾನವಿಲ್ಲ. ಇಂಡಿಯಾ ಸರ್ಕಾರದವರು ಕೈಕೊಂಡಿರತಕ್ಕ ಅನೇಕ ದೊಡ್ಡ ಯೋಜನೆಗಳಲ್ಲಿ ನಮ್ಮ ದೇಶದ ಇಂಜಿನಿಯರುಗಳಿದ್ದಾರೆ. ಈಗಲೂ ಮೈಸೂರು ದೇಶದಲ್ಲಿರತಕ್ಕ ಎಂಜಿನಿಯರುಗಳು, ಮೈಸೂರು ವಿಶ್ವವಿದ್ಯಾನಿಲಯದ ಪದವೀಧರರೆಂದ ಮಾತ್ರಕ್ಕೇ ಅವರಿಗೆ ಕೆಲಸ ಸುಲಭವಾಗಿ ದೊರೆಯುತ್ತದೆ. ನಾವು ಸಂಬಳವನ್ನು ಕಡಮೆಯಾಗಿ ಕೊಡುತ್ತಿದ್ದೇವೆ, ಉತ್ತಮವಾದ ಕೆಲಸ ಮಾಡಿಸುತ್ತಿದ್ದೇವೆ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಇಷ್ಟು ದಕ್ಷತೆಯಿದ್ದಮೇಲೆ I.A.S. ನವರೇಕೆ ಬೇಕಾಗಿತ್ತು ?

ಶ್ರೀ ಕೆ. ಪುಟ್ಟಸ್ವಾಮಿ.—ನಮ್ಮ ಹುಚ್ಚೇಗೌಡರಿಗೆ ಎಷ್ಟು ಹೇಳಿದರೂ, "ಗೋರ್ಕಲ್ಲ ಮೇಲೆ ಮಳೆಗರದಂತೆ". 1950ನೆಯ ಇಸವಿಯಿಂದಲೂ ನಾನೂ I.A.S. ಮತ್ತು ಫೈನಾನ್ಸಿಯಲ್ ಇಂಟೆಗ್ರೇಷನ್ ವಿಚಾರವಾಗಿ ಬಹಳ ಉದ್ದವಾದ ಭಾಷಣಗಳನ್ನು ಮಾಡಿದ್ದೇನೆ. ಮಾನ್ಯರಾದ ಎಚ್. ಸಿ. ದಾಸಪ್ಪನವರು Black Board ಮೇಲೆ ಬರೆದು ಹೇಳುವಂತೆ ಹೇಳಿದ್ದಾರೆ. ಅವೊತ್ತಿನಿಂದಲೂ ಶ್ರೀಮಾನ್ ಹುಚ್ಚೇಗೌಡರು ಕೇಳುತ್ತಲೇ ಇದ್ದಾರೆ. ಅವರಿಗೆ ಹೇಳಿದ್ದನ್ನು ಅರ್ಥಮಾಡಿಕೊಳ್ಳುವ ಶಕ್ತಿಯಿದೆ ಯೆಂಬುದು ನನಗೆ ಗೊತ್ತು. ಆದರೂ ತಿಳಿದೂ ತಿಳಿದೂ, ತಿರುಗಿ ಪುನಃ ಪುನಃ ಹೀಗೆ ಕೇಳುತ್ತಿದ್ದರೆ ಏನು ಹೇಳಲಿ !

ಶ್ರೀ ಬಿ. ಹುಚ್ಚೇಗೌಡ.—ನೀವು ಅದ ಅದನ್ನೇ ಹೇಳುತ್ತಿದ್ದೀರಿ. ನಾವೂ ಅದೇ ಅದೇ ವಿಚಾರವನ್ನು ಕೇಳುತ್ತಿದ್ದೇವೆ.

ಶ್ರೀ ಕೆ. ಪುಟ್ಟಸ್ವಾಮಿ.—ಈಗ ಬಂದಿರತಕ್ಕ ಜಾಡ್ಯ ನಾವು ಹೇಳಿದ್ದೇ ಹೇಳುವುದು ನೀವು ಕೇಳಿದ್ದೇ ಕೇಳುವುದು. ಒಂದುಸಾರಿ ಹೇಳಿದ್ದನ್ನು ಅವರು ತಿಳಿದುಕೊಂಡಿದ್ದರೆ ಚೆನ್ನಾಗಿತ್ತು. ಬಹುಶಃ ಇದು ಅಸೆಂಬ್ಲಿ ಸದಸ್ಯರ ಜಾಡ್ಯವೆಂದು ಕಾಣುತ್ತದೆ.

ಇನ್ನು ಬಾಕಿ ಸಂಬಳಸಾರಿಗೆಗಳನ್ನು ನೋಡೋಣ. ಅಲ್ಲಿ ಗುಮಾಸ್ತರುಗಳಿಗೆ, ಜವಾನರಿಗೆ ಎಷ್ಟೆಷ್ಟು ಕೊಡುತ್ತಾರೆಂದು ನೋಡೋಣ. ಮೊದಲನೆಯ ದರ್ಜೆಯ ಗುಮಾಸ್ತರಿಗೆ ಹೈದರಾಬಾದಿನಲ್ಲಿ 170 ರೂಪಾಯಿನಿಂದ 320 ರೂಪಾಯಿಗಳವರೆಗಿದೆ. ಇಲ್ಲಿ ನಮ್ಮ ಅಮಲ್ದಾರರಿಗೆ ಇರುವ ಗ್ರೇಡು ಕೂಡ 300ರ ಮೇಲೆ ಹೋಗುವುದಿಲ್ಲ. ಆಕ್ಟೋಬರ್ ಸಾಲಿನಲ್ಲಿ ಅವರಿಗೆ 300 ರೂಪಾಯಿ ಬರುತ್ತದೆ. ಬೊಂಬಾಯಿಯಲ್ಲಿ ಇದೇ ಕ್ಲಾರ್ಕಿಗೆ 100 ರೂಪಾಯಿನಿಂದ 160 ರೂಪಾಯಿನ ವರಗಿದೆ. ಮದ್ರಾಸಿನಲ್ಲಿ 100ರ ರಿಂದ 190 ರೂಪಾಯಿನವರೆಗಿದೆ. ಮೈಸೂರಿನಲ್ಲಾದರೋ 60-5-90-6-130-10-180 ಮತ್ತು 60-5-90-6-150. ಅನೇಕರಿಗೆ 180 ರೂಪಾಯಿಗಳು ಕೂಡ ಬರುವುದಿಲ್ಲ. ನಮ್ಮ ಸ್ಕೇಲು ಹೀಗಿದೆ. ಇನ್ನು ಎರಡನೆಯ ದರ್ಜೆ ಕ್ಲಾರ್ಕ್‌ಗಳನ್ನು ನೋಡಿದರೆ ಹೈದರಾಬಾದಿನಲ್ಲಿ 105 ರಿಂದ 170ರ ವರೆಗಿದೆ. ಮದ್ರಾಸಿನಲ್ಲಿ 50 ರೂಪಾಯಿನಿಂದ 100 ರೂಪಾಯಿನ ವರೆಗಿದೆ. ಬೊಂಬಾಯಿನಲ್ಲಿ 106 ರೂಪಾಯಿನಿಂದ 130ರ ವರೆಗಿದೆ. ನಮ್ಮಲ್ಲಾದರೊ 45-3-60-4-100 ಮತ್ತು 40-2-50-3-80 ಇದೆ. ಹೀಗಿರುವಾಗ ನಾವು ಅವರೊಡನೆ ಸೇರಿದರೆ ಏನು ಮಾಡಬೇಕೆಂಬ ಒಂದು ಸಮಸ್ಯೆ ಬರುತ್ತದೆ. ಈಗಾಗಲೇ ನಮ್ಮಲ್ಲಿರುವ ನೌಕರರು ಸಂಬಳ ಸಾರಿಗೆಗಳು ಸಾಕಾದಷ್ಟಿಲ್ಲವೆಂದು ಹೇಳುತ್ತಿದ್ದಾರೆ. ಹೀಗಿರು

ವಾಗ್ ಇಲ್ಲಿನವರೂ ಅಲ್ಲಿನವರೂ ಒಂದಾದ ಮೇಲೆ ಒಂದೇ ಸರ್ಕಾರದಲ್ಲಿ ಒಂದೇ ಕೆಲಸ ಮಾಡುತ್ತಿದ್ದರೂ ಒಬ್ಬೊಬ್ಬರಿಗೆ ಒಂದೊಂದು scale ಕೊಡುವುದಕ್ಕಾಗುವುದಿಲ್ಲ. ಎಲ್ಲರಿಗೂ ಕಡಮೆ ಮಾತೋಣವೆಂದರೆ ಈ ಕಾಲದಲ್ಲಿ ನಾನ್ ಗೆಜೆಟೆಡ್ ಅಸೋಸಿಯೇಷನ್ ಮುಂತಾದುವುಗಳಿರುವಾಗ ಕಡಮೆ ಮಾಡುವುದು ಬಹಳ ಕಷ್ಟ.

ಇನ್ನು ಮೂರನೆಯ ದರ್ಜೆಯ ಪೋಲೀಸ್ ಕಾನ್‌ಸ್ಟೇಬಲ್‌ಗಳನ್ನು ತೆಗೆದುಕೊಳ್ಳೋಣ. ಹೈದರಾಬಾದಿನಲ್ಲಿ ಪೋಲೀಸ್ ಕಾನ್‌ಸ್ಟೇಬಲ್‌ಗಳಿಗೆ 30 ರೂಪಾಯಿಗಳಿಂದ 50 ರೂಪಾಯಿ ಕೊಡುತ್ತಿದ್ದಾರೆ. ಬೊಂಬಾಯಿನಲ್ಲಿ 35ರಿಂದ 50 ಬರುತ್ತಿದೆ. ನಮ್ಮಲ್ಲಿ 30 ರೂಪಾಯಿನಿಂದ 40 ರೂಪಾಯಿನವರೆಗಿದೆ. ಇನ್ನು ಪ್ರೈಮರಿಸ್ಕೂಲಿನ ಉಪಾಧ್ಯಾಯರುಗಳ ವಿಷಯ ತೆಗೆದುಕೊಳ್ಳುವುದಾದರೆ, ಮೈಸೂರು ದೇಶದ ನೌಕರರಲ್ಲಿ 65 ಪಾಲು ಜನ ಉಪಾಧ್ಯಾಯರೇ ಆಗಿದ್ದಾರೆ. ಈಗ ಸಹಸ್ರಾರು ಸಂಖ್ಯೆಯಲ್ಲಿ ಪಾಠಶಾಲೆಗಳೂ, ಉಪಾಧ್ಯಾಯರುಗಳೂ ಆಗಿ ಎಲ್ಲಾ ಮಕ್ಕಳೂ ಸ್ಕೂಲಿಗೆ ಹೋಗಬೇಕಾದರೆ ಇನ್ನೂ ಒಂದು ಲಕ್ಷ ಉಪಾಧ್ಯಾಯರುಗಳಾದರೂ ಸಾಲದು. ಅಷ್ಟು ಜನರನ್ನು ಹೊಸದಾಗಿ ನೇಮಿಸಿಕೊಂಡರೆ ಏನು ಸಂಬಳ ಸಾರಿಗೆಗಳನ್ನು ಕೊಡಬೇಕಾಗುತ್ತದೆಂಬುದನ್ನು ನೀವೇ ನೋಡಿ. ಹೈದರಾಬಾದಿನಲ್ಲಿ 35 ರೂಪಾಯಿಗಳಿಂದ 50 ರೂಪಾಯಿಗಳವರೆಗೂ ಸಂಬಳ ಕೊಡುತ್ತಿದ್ದಾಲೆ. ಬೊಂಬಾಯಿನಲ್ಲಿ 40-1-50-65-2½-90 ಸ್ಕೇಲಿದೆ. ಮದ್ರಾಸಿನಲ್ಲಿ 30-1-50 ಇದೆ. ಮೈಸೂರಿನಲ್ಲಿ 25-1-50 ಇದೆ. ನಾವೇನಾದರೂ ಅಲ್ಲಿನ ಸ್ಕೇಲುಗಳನ್ನೇ ಕೊಡಬೇಕೆಂದರೆ ನಮ್ಮ ಖರ್ಚು ಶೇಕಡ 25 ಭಾಗದಷ್ಟು ಜಾಸ್ತಿಯಾಗುತ್ತದೆ. ಈಗಿರುವ 8 ಕೋಟಿ ರೂಪಾಯಿಗಳ ಸಿಬ್ಬಂದಿ ಖರ್ಚು 10 ಕೋಟಿಗೆ ಏರುತ್ತದೆ. ನಮ್ಮ ನೌಕರರಿಗೆ ಕೊಡತಕ್ಕ ಹಣದ ಖರ್ಚೇ ಹೆಚ್ಚಿಗೆಯಾಗುತ್ತದೆ. ಇನ್ನು ನೆರಹೊರೆ ಪ್ರಾಂತ್ಯಗಳವರಿಗೆ ಮೈಸೂರಿನಲ್ಲಿರತಕ್ಕ ಸೌಲಭ್ಯಗಳನ್ನೇರ್ಪಡಿಸಿ ಅಲ್ಲಿರತಕ್ಕ ಸಂಬಳ ಸಾರಿಗೆಗಳನ್ನು ಕೊಡುವುದು ಬಹಳ ಕಷ್ಟ.

ಇದಕ್ಕೆ ಶ್ರೀ ಕಂಠಿಯವರು ಹೇಳಿದ್ದಾರೆ, ಇದು ಬಹಳ ಕಷ್ಟವಾದರೂ, ಮುಂದೆ ಬರತಕ್ಕ ಸರ್ಕಾರದವರು ನಿರ್ವಹಿಸಬೇಕಾದ ಜವಾಬ್ದಾರಿ. ಹಿಂದೆ ಬಳ್ಳಾರಿ ನಮಗೆ ಸೇರಿದಾಗ ನಿರ್ವಹಿಸಲಿಲ್ಲವೇ ! ಸಿವಿಲ್ ಸ್ಟೇಷನ್ ನಮ್ಮೊಡನೆ ಸೇರಿದಾಗ ನಿರ್ವಹಿಸಲಿಲ್ಲವೇ ! ಇದನ್ನೂ ಹಾಗೆಯೇ ನಿರ್ವಹಿಸಬೇಕು ಎಂದು ಹೇಳಿದ್ದಾರೆ. ಆದರೆ, ಹೇಗೆ ನಿರ್ವಹಿಸುವುದೋ ನನಗೆ ಗೊತ್ತಾಗುವುದಿಲ್ಲ. ಈಗಾಗಲೇ ಆ ಭಾರದಿಂದ ಬೆನ್ನು ಬಗ್ಗುತ್ತಿದೆ. ಈ ಭಾರವೂ ಜೊತೆಗೆ ಸೇರಿದರೆ ಬೆನ್ನು ಮುರಿದುಹೋಗುತ್ತದೆ ಅಷ್ಟೆ.

Mr. SPEAKER.—Hon'ble Member has taken one and half hours. He should give chance to others.

Sri K. PUTTASWAMY.—I do not want to give a feeling that I am taking the time of the House unnecessarily ; if it is the intention of the Hon'ble Speaker that I should stop, I have no objection to resume the seat. ಪುನರುಕ್ತಿಯ ದೋಷಕ್ಕೆ ನಾನು ಗುರಿಯಾಗಿದ್ದರೆ ತಾವು ನನ್ನ ವಿಚಾರದಲ್ಲಿ ಏನು ಬೇಕಾದರೂ ಹೇಳಬಹುದಾಗಿತ್ತು.

Mr. SPEAKER.—I will leave it to the Hon'ble Members to decide. If one member takes more than one and a half hours, I will leave it to the House to decide whether it will be possible to finish this debate within one day.

Sri K. PUTTASWAMY.—I shall finish in a few minutes.

ಒಟ್ಟಿನಲ್ಲಿ, ಮೈಸೂರು ದೇಶ ವಿಸ್ತರಣೆಯಾದಾಗ, ನಾವು ಎಷ್ಟು ಹಣ ಕೊಡಬೇಕಾಗುತ್ತದೆ, ಎಷ್ಟು ಸೌಲಭ್ಯಗಳನ್ನು ಅವರಿಗೆ ಒದಗಿಸಿ ಕೊಡಬೇಕಾಗುತ್ತದೆ, ಆದಕ್ಕೆಲ್ಲಾ ಹಣವನ್ನು ಯಾವ ರೀತಿ ಒದಗಿಸಿ ಕೊಡಬೇಕು ಎಂಬುದೇ ಒಂದು ಮುಖ್ಯವಾದ ಪ್ರಶ್ನೆ. ಕಂಠಿಯವರೇನೋ ಸುಲಭವಾಗಿ ಹೇಳಿಬಿಟ್ಟಿದ್ದಾರೆ. ಅದನ್ನು ನಾವು ನಂಬುವುದಾದರೆ ನಂಬಿಕೊಳ್ಳಬಹುದು ಅಷ್ಟೆ. Central Aid Assured ಎಂದು ಹೇಳಿ

> "Central Aid Assured.—
>
> The Committee have calculated that a new State will have to spend 17 crores of rupees on Tungabhadra and other Hydro Electric Schemes. . . . The new State will have to spend more on some of them. That need not dishearten us. The Centre will come to our aid and one can be sure that it will come. Already some money has been granted as loan from the Centre for the High Level Canal of the Tungabhadra. Just as the Central Government has advanced loan for further expansion of the Jog Project, they will do so in the case of Ghataprabha." Besides we cannot forget the division of assets and liabilities. We do not take only the liability but we will have a claim on the assets also. As good businessmen we know that the assets will be not merely what he has stated but what all he has to receive and what he actually possesses."

ಎಂದು ಸೂಚಿಸಿದ್ದಾರೆ. ಅವರು ಹೇಳಿದಂತೆ assets ಎಂಬುವುಗಳು ಯಾವುವು, ಎಷ್ಟು ಎಂಬುದನ್ನು ಆಲೋಚನೆ ಮಾಡೋಣ. ಆಯಾ ಪ್ರಾಂತ್ಯದಲ್ಲಿ ಇಲ್ಲದಿರತಕ್ಕ assets ಯಾವುದನ್ನೂ ಯಾರೂ ಕೊಡುವುದಕ್ಕಾಗುವುದಿಲ್ಲ. ಅಲ್ಲಿರತಕ್ಕ assets ಎಂದರೆ, ಒಂದು ಘಟಪ್ರಭಾ, ಇನ್ನೊಂದು ತುಂಗಭದ್ರಾ ಯೋಜನೆ. ಈ ಯೋಜನೆಗಳು assets ಆಗುತ್ತವೆಯೇ ? ಅವುಗಳನ್ನು assets ಎಂದು ಭಾವಿಸಬೇಕೆಂದರೆ ಅದನ್ನು ಅಷ್ಟು ಸುಲಭವಾಗಿ ನಂಬುವುದಕ್ಕಾಗುವುದಿಲ್ಲ. ತುಂಗಭದ್ರಾ ಕಟ್ಟು ಮುಗಿಯುತ್ತಿದೆಯೆಂದರೆ ಆಯಿತೇ? ಆ ಅಣೆಕಟ್ಟಿನ ಕೆಲಸ ಇನ್ನೂ ಆಗಬೇಕಾಗಿದೆ. ಕಾಲುವೆ ಆಗಿ ಆ ಪ್ರಾಂತ್ಯ ಅದರ

(SRI K. PUTTASWAMY.)

ಸೌಲಭ್ಯ ಪಡೆಯಬೇಕಾದರೆ ಎಷ್ಟು ಕಾಲ ಹಿಡಿಯುತ್ತದೆಂಬುದನ್ನು ಮಂಡ್ಯ ಪ್ರಾಂತ್ಯದಿಂದ ಬಂದ ನಾನು ಚೆನ್ನಾಗಿ ತಿಳಿದುಕೊಳ್ಳಬಲ್ಲೆ. ಹತ್ತು ವರ್ಷಗಳ ಕಾಲ ಆ ಪ್ರಾಂತ್ಯದಲ್ಲಿ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಜನ ಮುಂದೆ ಬರಲಿಲ್ಲ.

ಅಲ್ಲಿಯ ಜನಗಳಿಗೆ ಈ ನೀರಿನ ಆವಶ್ಯಕತೆ ಅಷ್ಟಾಗಿ ಬೇಕಾಗಿಲ್ಲ. ಅವರೇ ಅಷ್ಟಿಷ್ಟು ಪ್ರಯತ್ನ ಮಾಡಿ ನೀರು ಸರಬರಾಯಿ ಮಾಡಿಕೊಳ್ಳುತ್ತಿದ್ದಾರೆಂದು ಹೇಳಿದ್ದಾರೆ. ಆದರೆ ನಾನು ತಿಳಿದುಕೊಂಡಿರುವ ಹಾಗೆ ರೈತರಿಗೆ ಅಷ್ಟೊಂದು ಶಕ್ತಿಯೂ ಇರುವುದಿಲ್ಲ ; ಮತ್ತು ಆ ಪ್ರದೇಶವೆಲ್ಲಾ ಎರೆಮಣ್ಣಿನ ಭೂಮಿಯಾಗಿರುವುದರಿಂದ ಅದಕ್ಕೆ ನೀರು ಸರಬರಾಯಿ ಹೆಚ್ಚಿಗೆ ಬೇಕಾಗುವುದರಿಂದ ಅಲ್ಲಿ ನೀರು ಸರಬರಾಯಿಗೆ ಪೂರಾ ಅಭಾವವಿರುವುದರಿಂದ ಜನರು ಈ ವ್ಯವಸಾಯದ ಕಸಬನ್ನು ಅವಲಂಬಿಸಲು ಮುಂದೆ ಬರುತ್ತಿಲ್ಲ. ಜನರು ಎಷ್ಟೇ ಪ್ರಯತ್ನ ಪಟ್ಟರೂ ಒಂದು ಸಾವಿರ ಎಕರೆಗಳಿಗೆ ಮೇಲ್ಪಟ್ಟು ನೀರನ್ನು ಸರಬರಾಯಿ ಮಾಡಿಕೊಳ್ಳಲಾರರು. ಆದರೆ ಈ ದಿವಸ ಆ ಪ್ರದೇಶಗಳಿಗೆಲ್ಲಾ ಯಥೇಷ್ಟವಾಗಿ ನೀರಿನ ಸರಬರಾಯಿ ಮಾಡಬೇಕಾಗಿದ್ದರೆ ವಿಶೇಷವಾಗಿ ಹಣವನ್ನು ವ್ಯಯ ಮಾಡಬೇಕಾಗಿರುತ್ತದೆ. ಹಾಗೆ ಮಾಡಿದರೆ ಆ ಪ್ರದೇಶಗಳನ್ನೆಲ್ಲಾ ಅಭಿವೃದ್ಧಿಗೆ ತರಬಹುದು. ಆದರೆ ಶ್ರೀಮಾರ್ಕ ಕಂಠಿಯವರು ಈ ನಮ್ಮ ದೇಶದಲ್ಲಿ ನಡೆಸಲ್ಪಡುತ್ತಿರುವ ಪ್ರತಿಯೊಂದು ಯೋಜನೆಗೂ ಕೇಂದ್ರದಿಂದ ಧನಸಹಾಯ ಪಡೆದು ಆ ಬಂಡವಾಳದಿಂದಲೇ ಈ ಕೆಲಸಗಳನ್ನೆಲ್ಲಾ ಮುಂದುವರಿಸುತ್ತಿದ್ದ ಹಾಗೆ ಹೇಳಿದ್ದಾರೆ. ಆದರೆ ಆ ಕೇಂದ್ರದ ಸಹಾಯವಿಲ್ಲದೇನೇ ನಮ್ಮ ಸರ್ಕಾರ ಎಷ್ಟೋ ದಿನವಹಿ ನಡೆಸಬೇಕಾದಂಥ ಕೆಲಸ ಕಾರ್ಯಗಳಿಗಾಗಿ ಹಣವನ್ನು ವೆಚ್ಚ ಮಾಡುತ್ತಿದೆ.

ಇನ್ನು ಅವರು ಈ ಆಡಳಿತ ಸಮಸ್ಯೆ ವಿಚಾರದಲ್ಲಂತೂ ಪ್ರಬಲವಾದ ಕಾರಣಗಳನ್ನೇ ಹೇಳಿದ್ದಾರೆ. ''ಈ ದಿವಸ ನಮ್ಮ ಸಂಸ್ಥಾನಕ್ಕೆ ಅಕ್ಕಪಕ್ಕದಲ್ಲಿರುವ ಕೆಲವು ಕನ್ನಡ ಪ್ರಾಂತ್ಯಗಳಿಗೆ ಈ ಹೈ ಕೋರ್ಟು ಮತ್ತು ಇತರ ಸರ್ಕಾರಿ ಮುಖ್ಯ ಕಛೇರಿಗಳಿರುವುದು ಬೊಂಬಾಯಿನಲ್ಲಿ. ಬಡವರಾಗಿರತಕ್ಕಂಥ ಜನರು ಸರ್ಕಾರದೊಡನೆ ವ್ಯವಹಾರ ನಡೆಸಬೇಕಾಗಿದ್ದರೆ ಆ ಸ್ಥಳ ಬಹಳ ದೂರವಾಗಿರುತ್ತದೆ. ಇದಕ್ಕೆಲ್ಲಾ ಸರ್ಕಾರದವರು ಸೂಕ್ತವಾದಂಥ ಸೌಲಭ್ಯಗಳನ್ನೇರ್ಪಡಿಸಿಲ್ಲ. ಹೀಗೆಲ್ಲಾ ಮಾಡಿ ಆ ಪ್ರದೇಶಗಳನ್ನು ಆ ಸರ್ಕಾರಗಳು ಕಡೆಗಣ್ಣಿನಿಂದ ನೋಡುತ್ತಿವೆ. ಆದ್ದರಿಂದ ಆ ಪ್ರದೇಶಗಳ ಜನರಿಗೆ ಈ ದಿವಸ ತುಂಬ ತೊಂದರೆಗಳಿವೆ. ಈ ನಾನಾ ಕಾರಣಗಳಿಂದ ಆ ಪ್ರದೇಶಗಳೆಲ್ಲಾ ಈಗ ಮೈಸೂರಿಗೆ ಸೇರಿದರೆ ಈ ತೊಂದರೆಗಳೆಲ್ಲಾ ಪರಿಹಾರವಾಗುತ್ತವೆ '' ಎಂದು ಈ ಒಂದು ವಾದವನ್ನು ಬೇರೆ ಎತ್ತಿದ್ದಾರೆ. ಹೀಗೆ ಅವರು ಮಾಡಿರತಕ್ಕಂಥ ವಾದವನ್ನೇ ನಾವು ನಮ್ಮ ಮೈಸೂರಿಗೆ ಹೋಲಿಕೆ ಹಾಕಿ ಹೇಳುವುದಾದರೆ ಈ ದಿವಸ ಈ ಬೆಂಗಳೂರು ಕೂಡ ಎಲ್ಲಾ ಸರ್ಕಾರಿ ಕೋರ್ಟು-ಕಛೇರಿಗಳಿಗೂ ಕೇಂದ್ರಸ್ಥಾನವಾಗಿದೆಯೆಂದೂ, ಈ ದಿವಸ ಆ ಮಾನ್ಯ ಮಿತ್ರರು ಯಾವ ಅಂಕಿ ಅಂಶಗಳ ಆಧಾರದ ಮೇಲೆ ಬೊಂಬಾಯಿ ನಗರಕ್ಕೆ ಕಕ್ಷಿಗಾರರು ಓಡಾಡಲು ಹೇಗೆ ತೊಂದರೆಯುಂಟಾಗುತ್ತಿದೆಯೆಂದು ಹೇಳಿದ್ದಾರೋ ಅದೇ ರೀತಿ ಮುಂದೆ ಮತ್ತೊಂದು ವಾದ ಮಾಡಿ, ಅದಕ್ಕೆಲ್ಲಾ ಬೇಕಾದ ಹಾಗೆ ಅಂಕಿ ಅಂಶಗಳನ್ನೊದಗಿಸಿ, ಆ ಬೊಂಬಾಯಿ ಪ್ರಾಂತ್ಯದಿಂದ ನಮ್ಮ ಮೈಸೂರಿಗೆ ಸೇರಲಿಚ್ಛಿಸಿರುವ ಪ್ರಾಂತ್ಯಗಳಿಗೆ ಈ ಬೆಂಗಳೂರು ನಗರ ಬಹಳ ದೂರವಾಗುತ್ತದೆ, ಅದಕ್ಕಾಗಿ ಆಯಾ ಪ್ರದೇಶಗಳ ಕೇಂದ್ರವಾಗಿರುವ ಒಂದು ಸ್ಥಳದಲ್ಲಿ ಒಂದು ಹೈಕೋರ್ಟ್ ಬೆಂಚನ್ನು ಏರ್ಪಡಿಸಿ, ಇಲ್ಲವೇ ಈ ರೆವಿನ್ಯೂ ಬೋರ್ಡ್ ಮತ್ತು ಹೈ ಕೋರ್ಟುಗಳಿಗೆ ಬಹಳ ದೂರ ಪ್ರದೇಶದಿಂದ ಬರತಕ್ಕಂಥ ಕಕ್ಷಿಗಾರರಿಗೆ ತೊಂದರೆ ತಪ್ಪಿಸುವ ಸಲುವಾಗಿ, ಆಗಿಂದಾಗ್ಗೆ ಈ ಕೋರ್ಟುಗಳೇ ಅಲ್ಲಿಗೆ ಭೇಟಿ ಕೊಡುವಂತೆಯಾದರೂ ಮಾಡಲೇಬೇಕಾಗುತ್ತದೆ ಎಂದು ಈಗಾಗಲೇ ಈ ಸಮಿತಿ ವರದಿಯಲ್ಲೇ ಅಡಕ ಮಾಡಿರುವ ಪ್ರಕಾರ, ಕೇಳಿದರೂ ಕೇಳಬಹುದು. ಹೀಗೆ ಈಗ ಆ ಬೊಂಬಾಯಿಗೆ ಅನ್ವಯಿಸಿ ಹೇಳಿರತಕ್ಕಂಥ ವಾದ ಮುಂದೆ ಮೈಸೂರಿಗೂ ಬಂದ ಪಕ್ಷದಲ್ಲಿ ಶೀಘ್ರವಾಗಿ ಇನ್ನೊಂದು ಪ್ರಮಾದ ಉದ್ಭವಿಸಿತೆಂತಾಗಲಿ ಅಥವಾ ಅದೊಂದು ಈ ಕರ್ಣಾಟಕ ಪ್ರಾಂತ್ಯ ನಿರ್ಮಾಣಕ್ಕೆ ಅಡ್ಡಿ ಎಂತಾಗಲಿ ಹೇಳುವುದಕ್ಕಾಗುವುದಿಲ್ಲವೆಂದು ಶ್ರೀಮಾರ್ಕ ಕಂಠಿಯವರು ಹೇಳಿದ್ದಾರೆ. ಸ್ವಾಮಿ, ಹೀಗೆ ಸಾರ್ವಜನಿಕರ ನೆಮ್ಮದಿಯನ್ನು ಕಾಪಾಡುವುದೇ ಬಹಳ ಕಷ್ಟಕರವಾದದ್ದು. ಇದಕ್ಕೆ ಪೋಲೀಸ್ ವ್ಯವಸ್ಥೆ ಕೂಡ ಬಹಳ ಬಲವಾಗಿರಬೇಕು. ಮತ್ತು ಆ ಪೋಲೀಸ್ ವ್ಯವಸ್ಥೆ ಸಾಕಷ್ಟು ಹತ್ತಿರದಲ್ಲಿರಬೇಕು. ಆಯಾ ಕಮಿಷನರ ಛಾರ್ಜಿನಲ್ಲಿರುವ ಪ್ರದೇಶಗಳ ಆಡಳಿತವನ್ನು ಅವರು ದಕ್ಷತೆಯಿಂದ ನಿರ್ವಹಿಸಿ, ಆ ಪ್ರದೇಶದಲ್ಲಿರುವ ಸಾರ್ವಜನಿಕರಿಗೆ ನೆಮ್ಮದಿಯನ್ನುಂಟುಮಾಡಬೇಕಾಗಿದ್ದರೆ ಆ ಕಮಿಷನರ ಹತೋಟಿಯಲ್ಲಿ ಸಾಕಷ್ಟು ಸಂಖ್ಯೆಯ ದಕ್ಷತೆಯಿಂದ ಕೂಡಿದ ಶಸ್ತ್ರಸಜ್ಜಿತ ಪೋಲೀಸ್ ದಳವನ್ನು ಇಡದೆ ಹೋದರೆ ಸಾರ್ವಜನಿಕರ ನೆಮ್ಮದಿಯನ್ನು ಕಾಪಾಡಲು ತುಂಬ ತೊಂದರೆಯಾಗುತ್ತದೆಂದು ಈ ಸಮಿತಿಯವರೇ ತಿಳಿಸಿದ್ದಾರೆ. ಆದರೆ ಈ ವಿಚಾರ ಅಷ್ಟೇನೂ ಗಮನಾರ್ಹವಾದುದಲ್ಲವೆಂದೂ, ಮೈಸೂರು ವಿಸ್ತಾರವಾಗುವುದರಿಂದ ಅಂಥ ತೊಂದರೆಗಳೇನೂ ಆಗುವುದಿಲ್ಲ- ಇದರಿಂದ ಇನ್ನೂ ಹೆಚ್ಚಿನ ಅನುಕೂಲವಾಗುತ್ತದೆ ಎಂದು ಹೇಳುತ್ತಿದ್ದಾರೆ. ಈಗ ಇರತಕ್ಕಂಥ ಮೈಸೂರು ದೇಶ ಹೀಗೆಯೇ ಇರದೆ ಇನ್ನೂ ಹೆಚ್ಚು ವಿಸ್ತಾರವಾದರೆ ಈಗ್ಗಿಂತಲೂ ಮುಂದೆ ಹೆಚ್ಚಿನ ಲಾಭವಿದೆ ಎಂಬ ಒಂದು ಪ್ರಬಲವಾದ ಕಾರಣವನ್ನು ಎತ್ತಿದ್ದಾರೆ. ಅಂದರೆ ಅವರ ಈ ದಿವಸ ಈ ಮೈಸೂರು ದೇಶ ಇನ್ನೂ ಹಿಂದುಳಿದಿದೆ ಮೈಸೂರು ದೇಶದ ಜನಗಳು ಹಿಂದುಳಿದಿದ್ದಾರೆ ಎನ್ನುವ ಭಾವನೆಯಿಂದಲೇನಾದರೂ ಹೀಗೆ ಹೇಳಿದ್ದಾರೆಯೋ ಏನು ಎನ್ನುವುದೇ ಅರ್ಥವಾಗುತ್ತಿಲ್ಲ. ಏತಕ್ಕೆಂದರೆ ಮೈಸೂರು ಬೇರೆ ಪ್ರಾಂತ್ಯಗಳ ಭಾಗಗಳೊಡನೆ ಸೇರಿಕೊಂಡರೆ ಇದರ ಅಭಿವೃದ್ಧಿ ಹೆಚ್ಚಾಗುವುದೇ ಅಲ್ಲದೆ ಜನರಿಗೆ ಇನ್ನೂ ಹೆಚ್ಚಿನ ಸೌಲಭ್ಯಗಳು ಇದರ ವಿಸ್ತಾರದಿಂದ ಲಭಿಸುತ್ತವೆಂದು ಹೇಳುತ್ತಿರುವುದರಿಂದ ನಾನು ಇದನ್ನು ಹೇಗೆ ಅರ್ಥ ಮಾಡಿಕೊಳ್ಳಬೇಕೋ ಅದೇ ಗೊತ್ತಾಗುವುದಿಲ್ಲ. ಆದರೆ, ಈ ಮಾನ್ಯ ಸಭೆಯಲ್ಲಿ ಈ ಅಂಕಿ ಅಂಶಗಳ ವರದಿಯ ಬಗ್ಗೆ ಮೊದಲು ಭಾಷಣವನ್ನು ಪ್ರಾರಂಭಿಸಿದಂಥ ಶ್ರೀಮಾರ್ಕ ಮಹಮದ್ ಇಮಾಂರವರು ಭಾಷಣ ಮಾಡುತ್ತ ''ಮೈಸೂರು ದೇಶ ಮುಂದುವರಿದಂಥ ದೇಶ, ಬಾಕಿ ಪ್ರಾಂತ್ಯಗಳೆಲ್ಲಾ ಹಿಂದೆ ಬಿದ್ದಿವೆ ; ಬೊಂಬಾಯಿ ಮತ್ತು ಮದರಾಸ್ ಸರ್ಕಾರಗಳು ಈ ಭಾಗಗಳನ್ನೆಲ್ಲಾ ಕಡೆಗಣ್ಣಿನಿಂದ ನೋಡುತ್ತಿವೆ ; ಆ ಜನರಿಗೆಲ್ಲಾ ಬಹಳ ಅನ್ಯಾಯವಾಗಿದೆ ; ಆದುದರಿಂದ ಕನ್ನಡಿಗರಾದ ನೀವೇ ಆ ನಿಮ್ಮ ಕನ್ನಡಿಗರಿಗೆ ಅನು

ಕೂಲ ನೀಡಬೇಕು" ಎಂದು ತಿಳಿಸಿದ್ದಾರೆ. ಇದೆಲ್ಲಾ ಬಹಳ ಪ್ರಾಮುಖ್ಯವಾದಂಥ ವಿಚಾರಗಳು. ಆದುದರಿಂದಲೇ ಈ ದಿವಸ ನಮ್ಮ ಸರ್ಕಾರ ಈ ಬಗ್ಗೆ ಶೇಖರಣೆ ಮಾಡಿರತಕ್ಕಂಥ ಅಂಕಿ ಅಂಶಗಳನ್ನು ನಮ್ಮ ಮುಂದಿಟ್ಟು ಅವುಗಳನ್ನು ಈ ಮಾನ್ಯ ಸಭೆ ಪರಿಶೀಲನೆ ಮಾಡಬೇಕೆಂದು ಹೇಳಿದ್ದಾರೆ. ಅಷ್ಟೇ ಅಲ್ಲದೆ ಈ ಸಭೆಯ ಮೊಟ್ಟ ಮೊದಲನೆಯ ಪ್ರಾರಂಭದ ದಿವಸವೇ ನಮ್ಮ ರಾಜಪ್ರಮುಖರು ತಮ್ಮ ಭಾಷಣದಲ್ಲಿ ಪ್ರಜೆಗಳ ಕ್ಷೇಮಾಭಿವೃದ್ಧಿ ಹೆಚ್ಚುವುದಕ್ಕೆ ಅವಕಾಶವಿದ್ದರೇನೇ ಈ ಸರಹದ್ದುಗಳನ್ನು ಬದಲಾವಣೆ ಮಾಡಬಹುದು, ಇಲ್ಲವಾದರೆ ಹಾಗೆ ಬದಲಾವಣೆ ಮಾಡುವುದು ಅಷ್ಟು ಉಚಿತವಾದ್ದಲ್ಲ ಎಂದು ಅಪ್ಪಣೆ ಕೊಡಿಸಿದ್ದಾರೆ. ಆದುದರಿಂದ ನಾನೀಗ ಕೇಳಬೇಕಾದದ್ದು, ಹಾಗೆ ಮೈಸೂರು ವಿಸ್ತೀರ್ಣದಲ್ಲಿ ಹೆಚ್ಚಿದರೆ ಜನರಿಗೆ ಅದೇ ದಾಮಾಷದಲ್ಲಿ ಸೌಲಭ್ಯಗಳೂ ಹೆಚ್ಚುತ್ತವೆಯೇ ಎಂದು. ಆದರೆ ಈ ದಿವಸ ನಮ್ಮ ಮೈಸೂರು ದೇಶಕ್ಕೆ ಏನೇನು ಕೊರತೆಗಳಿವೆಯೋ ಇವುಗಳೆಲ್ಲಾ ಮೈಸೂರು ವಿಸ್ತಾರವಾದರೆ ನಿವಾರಣೆಯಾಗುತ್ತವೆಯೇ ಅಥವಾ ಇನ್ನೂ ಉಲ್ಬಣವಾಗುತ್ತವೆಯೇ ಎನ್ನುವ ಅಂಶವನ್ನು ಯಾರೂ ಪ್ರಸ್ತಾಪ ಮಾಡಿಲ್ಲ. ಆದರೆ ಸಾವಿರಾರು ಮೈಲಿ ಸಮುದ್ರ ಕರಾವಳಿ ಇರುವಂತೆ ಆಗುತ್ತದೆಂದು ಮಾತ್ರ ಹೇಳಿದ್ದಾರೆ. ಆದರೆ ಈ ಸಮುದ್ರ ಸಂಚಾರಣೆಯ ವಿಚಾರ ಈ ದಿವಸ ಸಂಸ್ಥಾನ ಸರ್ಕಾರಗಳಿಗೆ ಸೇರಿರುವುದಿಲ್ಲ. ಇದು ಕೇಂದ್ರ ಸರ್ಕಾರಕ್ಕೇ ಸೇರಿರುತ್ತದೆ. ಆದುದರಿಂದ ಇಂಥ ಅವಕಾಶಗಳನ್ನು ಪಡೆದುಕೊಂಡು ಅನುಕೂಲ ಹೊಂದತಕ್ಕಂಥ ಸನ್ನಿವೇಶವಿರುವುದು ಬರಿ ಕನ್ನಡಿಗರಿಗೊಬ್ಬರಿಗೇ ಅಲ್ಲ. ಅದು ಎಲ್ಲರಿಗೂ ಇದೆ. ಇತರರಿಗೆ ಪ್ರತಿಬಂಧಕ ಮಾಡಿ ನಾವೊಬ್ಬರೇ ಅನುಕೂಲ ಹೊಂದಬೇಕೆಂಬ ಬಗ್ಗೆ ರಾಜ್ಯಾಂಗದ ಪ್ರಕಾರ ಅಂಥ ಅವಕಾಶವಿರುವುದಿಲ್ಲ. ಈ ರೀತಿಯ ಸೌಲಭ್ಯಗಳನ್ನು ಹೊಂದಲು ಎಲ್ಲರಿಗೂ ಸರಿಸಮಾನವಾದ ಅವಕಾಶಗಳಿರುತ್ತವೆ. ಹಾಗಿಲ್ಲದೆ ಅದು ಅವರೊಬ್ಬರಿಗೆ ಮಾತ್ರ ಅನುಕೂಲವಾಗುವುದಾಗಿದ್ದರೆ ಅವರೇ ಅದನ್ನು ಇಟ್ಟುಕೊಳ್ಳಲಿ.

Sri J. MOHAMED IMAM.—May I seek a clarification and guidance from the Chair? Shall I take this as precedent? The Hon'ble Member has taken 1½ hours and there are a number of other members anxious to speak.

Mr. SPEAKER.—I will tell you after he closes his speech. The Hon'ble Member will close his speech.

ಶ್ರೀ ಕೆ. ಪುಟ್ಟಸ್ವಾಮಿ.—ನಾನು ಮಾತನಾಡುತ್ತಿದ್ದಾಗ ಹೀಗೇಕೆ ಇವರು ಪ್ರತಿಭಟಿಸಬೇಕು? ಇವರು ಮಾತನಾಡುತ್ತಿದ್ದಾಗ ನಾನೇನಾದರೂ ಹೀಗೆ ಮಾತನಾಡಿದ್ದರೆ ಇವರ ಪ್ರತಿಭಟನೆಯನ್ನು ನಾನೂ ಒಪ್ಪಿಕೊಳ್ಳುತ್ತಿದ್ದೆ. ಅವರು ಮಾತನಾಡಲು ಮೂರು ಘಂಟೆಗಳ ಕಾಲವನ್ನು ತೆಗೆದುಕೊಂಡಿದ್ದಾರೆ. To correct him, I took only one hour and 15 minutes. Because I am a member belonging to the ruling party, I can be excused.

Mr. SPEAKER.—Always, members belonging to the ruling party must take less time.

ಶ್ರೀ ಕೆ. ಪುಟ್ಟಸ್ವಾಮಿ.—ಆದಕಾರಣ ಹೀಗೆ ವಿಸ್ತಾರಮಾಡುವುದರಿಂದ ಮೈಸೂರು ದೇಶಕ್ಕೆ ಯಾವ ಹೆಚ್ಚಿನ ಸೌಲಭ್ಯಗಳೂ ಕೂಡ ದೊರೆಯುವುದಿಲ್ಲ. ಇರುವ ಸೌಲಭ್ಯಗಳೇ ಇನ್ನೂ ಮೊಟಕಾಗುತ್ತವೆ. ಈ ಸಮಿತಿಯ ಅಭಿಪ್ರಾಯದಿಂದ ಇದು ಖಚಿತವಾಗಿ ವ್ಯಕ್ತವಾಗುತ್ತಿದೆ. ಮುಂದೆ ಈ ಮೈಸೂರು ದೇಶದ ವಿಸ್ತರಣೆಯಿಂದ ನಿವಾರಣೆ ಮಾಡುವುದಕ್ಕೆ ಆಗದಿರುವಂಥ ಅನೇಕ ಸಮಸ್ಯೆಗಳು ಹುಟ್ಟುತ್ತವೆ. ಇನ್ನು ಸೈಜಬಲ್ ಯೂನಿಟ್ ಆಗುತ್ತದೆಯೇ ಎನ್ನತಕ್ಕ ಬಗ್ಗೆ 2 ಕೋಟಿ ಪ್ರಜಾಸಂಖ್ಯೆ ಆಗುತ್ತದೆ. 60-70 ಸಾವಿರ ಚದರಮೈಲಿ ವಿಸ್ತೀರ್ಣವುಳ್ಳದ್ದು. ಸೈಜಬಲ್ ಆಗುತ್ತದೆಯೇ ಎಂದು ಕೇಳುತ್ತೇನೆ? ಹಾಗೆ ಹೇಳುವುದಕ್ಕಾದರೂ ಇತಿ ಮಿತಿಯೇ ಬೇಡವೇ? ಒಂದು ಅಳತೆಯೇ ಬೇಡವೇ? ಈಗಾಗಲೆ ಮೈಸೂರಿನಲ್ಲಿ ಒಂದು ಕೋಟಿ ಪ್ರಜಾಸಂಖ್ಯೆಯಿದೆ. ಈ ದಿವಸ ಮೈಸೂರಿಗೆ ತನಗೆ ಬೇಕಾದಂಥಾ ಸೌಕರ್ಯಗಳನ್ನೆಲ್ಲಾ ಕಲ್ಪಿಸಿಕೊಳ್ಳುವಂಥ ಶಕ್ತಿಯಿದೆ. ಅಂಥ ಸೌಕರ್ಯಗಳಿವೆ. ಹೀಗೆ ಸಂಸ್ಥಾನ ಚಿಕ್ಕದಾದ್ದರಿಂದ ಯಾವ ಭಾಗದಲ್ಲಿ ಇದಕ್ಕೆ ನಷ್ಟವಾಗಿದೆ ಎನ್ನುವುದೇ ಗೊತ್ತಾಗುವುದಿಲ್ಲ. ಇನ್ನು ಈ ಸಮಿತಿಯವರು ಒಪ್ಪಿಸಿರತಕ್ಕ ವರದಿಯಲ್ಲಿ ಕೊಡಗಿಗೆ ಸಂಬಂಧಪಟ್ಟಂಥ ಅಂಕಿಅಂಶಗಳೂ ಕೂಡ ಇರುತ್ತವೆ. ಆ ಅಂಕಿಅಂಶಗಳನ್ನು ನಮ್ಮ ಮೈಸೂರು ಸಂಸ್ಥಾನಕ್ಕೆ ಹೋಲಿಸಿದರೆ ನಮ್ಮ ಮೈಸೂರು ದೇಶಕ್ಕಿಂತ ಸ್ವಲ್ಪ ಮುಂದಿದೆ-ಎಂದು ಗೊತ್ತಾಗುತ್ತದೆ. ಹೀಗೆ ದೇಶ ಚಿಕ್ಕದಾಗಿದ್ದಷ್ಟೂ ತನಗೆ ಬೇಕಾದ ಸೌಲಭ್ಯಗಳನ್ನು ಬೇಗ ಒದಗಿಸಿಕೊಳ್ಳಲು ಅನುಕೂಲವಾಗಿರುತ್ತದೆಯಾದಕಾರಣ ದೇಶಗಳು ಎಷ್ಟು ಚಿಕ್ಕದಾಗಿದ್ದರೆ ಅಷ್ಟೂ ಅನುಕೂಲವೆಂದು ಹೇಳುತ್ತೇನೆ. ಈ ದಿವಸ ಮೈಸೂರು ಸಂಸ್ಥಾನದಲ್ಲಿ ಒಂದು ಕೋಟಿ ಪ್ರಜಾಸಂಖ್ಯೆ ಇದೆ. ವಿಸ್ತೀರ್ಣದಲ್ಲಿ ಸುಮಾರು 34 ಸಾವಿರ ಚದರಮೈಲಿ ಇದೆ. ಇದನ್ನು ಒಂದು ಚಿಕ್ಕದೇಶವೆಂದು ಇಲ್ಲಿಯವರೆಗೆ ಯಾರೂ ಹೇಳಿಲ್ಲ. ಇದನ್ನು ಮುಂದೆ 70 ಸಾವಿರ ಚದರಮೈಲಿಗಳಿಗೆ ಹೆಚ್ಚಿಸಿ ಎರಡುಕೋಟಿ ಪ್ರಜಾಸಂಖ್ಯೆಯನ್ನೊಳಗೊಂಡಾಗ ಒಂದೊಂದು ಭಾಗದಲ್ಲಿ ಒಂದೊಂದು ರೀತಿಯಾಗಿದ್ದು ಇದನ್ನು ನಿರ್ವಹಣೆಮಾಡಲು ಮುಂದೆ ತುಂಬ ಕಷ್ಟವಾಗುತ್ತದೆ. ಆದ್ದರಿಂದ ಯಾವ ದೃಷ್ಟಿಯಿಂದಲೇ ಆಗಲಿ ಈಗ ಇರುವಂಥ ಮೈಸೂರು ಸೀಮೆಯ ಸರಹದ್ದನ್ನು ಯಾವರೀತಿಯಲ್ಲೂ ಬದಲಾಯಿಸುವುದಕ್ಕೆ ನಾನು ಖಂಡಿತ ಒಪ್ಪುವುದಿಲ್ಲ.

2-30 P.M.

***Sri T. SIDDALINGAIYA** (Dodballapur).—I have been watching the debate on this question so far. I feel it is a very simple problem made knotty unnecessarily. If some of our friends had cared to take a full view of the problem, I do not think it would have led to so much controversy. I believe we have very great responsibility in the matter. Therefore, I wish that we take a comprehensive view of this question of re-organisation rather than criticise each subject on its own individual merit. Mr. Kanti's contribution is very helpful in the

(SRI T. SIDDALINGAIYA.)

solution of this subject. The Fact Finding Committee certainly have taken great pains, have gone round and collected so many facts and figures and embodied them in the form of brochure. We must be very grateful to them. It is a magnificent document. But, yet, we have to see its limitations. The Committee had toured two weeks throughout the Kannada speaking areas outside Mysore. Within that two weeks, period what amount of personal or any other experience or knowledge has come to be gathered, we can well imagine. Not that I am in any way expressing my dissatisfaction at the report. I have got very great respect for every one of them. Sri Seshadri was a Professor of mine and he was succeeded by Sir S. Radhakrishnan as Professor of Philosophy in Maharaja's College, Mysore. And, other members of the Committee have all been great personal friends of mine. I am very proud that they have produced a document which is very useful in the decision of this problem. My ambition is that I should also contribute something towards the solution of the problem. I have some personal knowledge of these things. It may be useful as a sort of contribution to the debate. My qualification is, I think it will also be appreciated, something worth mentioning.

I have been connected personally with Karnataka for the last twenty years. I had been the Vice-President of the K.P.C.C. I have toured all the districts consequently. I was also the President of the Jamkhandi State Congress for about 3½ years. Sri Jathi, who is the Deputy Minister of Bombay Government, was one of the Secretaries. I have visited almost all places in the Karnataka outside Mysore. Therefore, I can claim to some personal knowledge of these things and I would also be very happy to give expression to them for the best consideration of this House.

Since this Report consists of so many facts and figures, it is easy for any body to pick up any one of them and make comments. Sri Seshadri's report is magnificent, as I said. But in the nature of the thing, it cannot be a perfect report. Human life is a very complex thing. Life cannot be made into a report. Unless some of us see the people and the country in those areas, we are likely to get a wrong notion and go on opposing the unification. I wish very much, instead of this committee, the Government had arranged to give facilities to all the members of this House to tour those areas and come to definite conclusions. Then I am sure members would have welcomed (*Interruption*). Even today it is not too late. Sri Imam who is also, I believe, very familiar with those Kannada speaking areas, will endorse when I say that those areas are probably, apparently, very backward. Enough material is there for criticising them. But they are only apparently so backward. But really, I believe, they are very much better off. I do not want to argue vehemently. These are certain factors which have to be taken into consideratian in the decision of a big human problem. This Report contains all facts and figures about the physical aspects of the country. But the one thing which the Report has left out, probably because it was not contained in the scope of the terms of reference, is the human, spiritual, cultural and patriotic aspects. They are more important than all the physical aspects, about which they have collected facts and figures. These facts go a long way in giving us a knowledge of the physical aspects of life. This is concerning, as I said, a great problem of our country.

We were all united in fighting for our independence. We used Mahatma Gandhi's weapon of *ahimsa* to get it. We wanted economic prosperity for our country, removal of all poverty, illiteracy and slavery and all the evils of society. When we got this political freedom our duty was to use the same weapon for the betterment of our own people. Towards that end, the Government of India under Pandit Jawaharlal have started so many schemes and we have been able to see the beginning of the fruits of these plans. But that is not sufficient. Immediately after getting political independence, our

desire was that the country must be distributed according to the languages. This idea of distributing the country on the basis of language was not new. Since the beginning of the dynamic propaganda for independence, since the entry of Mahatma Gandhi into politics, it was understood that the country must be divided upon the basis of language if the country was to improve and prosper. That was taken as the first principle. The British Government kept all these things mixed up for their own political advantage. That was the attack against the British Government and we very rationally and very sanely wanted that the country should be distributed upon the basis of language so that all people might be united in their service to the country. No country can thrive except by thinking in its own language. Language is a very important problem. If Japan today has prospered, has progressed scientifically better than any European or American country, it is, because their genius is in their language. Therefore, to think in the language of our mother tongue, of our country, of our regions, is a great asset for our own mental, intellectual and spiritual progress. Therefore, the basis upon which these States have to be formed was fixed up by the Indian National Congress under the guidance of Mahatma Gandhi forty years ago and this basis came to be acknowledged, accepted and also used as a weapon for getting independence from the British Government. We wanted the country to be distributed on this basis. The British were guilty of not doing so. That was the great argument against the British. After coming into power, the first thing should have been to distribute the country on this basis. But I do not know what the human problems are in the way. Since we got power, the problem has become a bit acute. Before we got power, we were unanimously demanding that the country should be distributed upon the basis of language. After we got freedom . . . .

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ತಾವು Constituent Assembly ಯಲ್ಲಿ ಹಿಂದೆ ಇದ್ದಾಗ ಏತಕ್ಕೆ ಈ ವಿಷಯವನ್ನು ಎತ್ತಿ ಮಾತನಾಡಲಿಲ್ಲ ?

ಶ್ರೀ ಟಿ. ಸಿದ್ದಲಿಂಗಯ್ಯ.—ಯಾವ ಪ್ರಶ್ನೆಗೂ ಜವಾಬನ್ನು ಕೊಡುವುದಕ್ಕೆ ತಯಾರಾಗಿದ್ದೇನೆ. Do you want me to yield, Sir ?

Mr SPEAKER.—No. Please continue.

Mr. T. SIDDALINGAIYA.—I am prepared to receive all questions and answer them to the satisfaction of the questioners now only, as they come up. I have no objection, of course, with the permission of the Speaker.

Mr. Huchmasthy Gowda's question is really very appropriate. As to why it was not discussed in the Constituent Assembly, I am not responsible. Anyway the question was discussed.

Sri. J. MOHAMED IMAM.—Which Constituent Assembly ?

Sri T. SIDDALINGAIYA.—Our own. Did you refer to the Indian Constituent Assembly ?

Sri. N. HUCHMASTHY GOWDA.—Indian Constituent Assembly.

Sri T. SIDDALINGAIYA.—There it was discussed, I believe. More important than that was the discussion that took place in our own Constituent Assembly. In the course of the three or four troublous years immediately after we got power, times were very dangerous. Things were going in an alarming way after the partition of the country. After partition very great problems had to be faced. Therefore in preparing the Constitution, certainly, some kind of latitude had to be given. I think, we all know the advantage of having made a good Constitution very quickly. Remember Pakistan, you will see the advantages of having gone through the whole process of making the Constitution and quickly implementing it on the 26th January 1950; the country is stable; we are all settled and enjoying the fruits of peace.

Sri G. A. THIMMAPPA GOWDA (Arkalgud).—Even now there are greater and graver problems before the country.

Sri T. SIDDALINGAIYA.—I am very glad that my friend raised that question. I have no objection to answer him provided the Speaker gives me permission. The problems are there: there would have been more problems, but the problems are nothing

(SRI T. SIDDALINGAIYA.)

to compare with what Pakistan has to face. Life itself is a problem. I think, it can never be solved. There is nobody who has solved the life's problem except Buddha and he has solved it for himself. He has shown the way for others. Only one great man was ever born who showed the way to solution. But the whole humanity was not relieved. Therefore, these problems are eternal, just as politics are enernal. We can never know where we stand, whether on this side or on that side. Therefore I say, life itself is full of complexities and we have to conquer them it by struggling. There will be no time to say at any time in our life that we have solved all the problems and therefore, we will rest on our laurels. These problems, as they come, we have got to face them and solve them. I submit that these problems of our country could not be settled simply at the making of the Constitution. Today we have seen the Constitution itself is being amended according to the needs of the hour. We have been seeing now what has been done in the Lok Sabha during the last one or two weeks. Therefore there is no such sacred thing which cannot be altered. But the principles of life are unalterable, immutable. We should not look at this problem only from the point of individuals or communities or professional needs. There are so many divisions in our life. We will not look at these problems from the point of any of these narrow visions. I would say, we are humane. The whole world today is in the grips of fear. We are all proud that the world has progressed, but progressed only toward nuclear warfare which may end in the destruction of the entire globe. We may be proud of making atom bombs and further splitting of atoms; we may be proud of making fertilizers out of ammonium sulphate; we may be proud of so many things, but this is not progress. The real progress is in trying to see that all the human beings come together and live like one family. Today we are under the shadow of great international fear. Today we have read in the papers also how Asiatic Countries and African Countries have joined together to guarantee peace to the whole world. How much fear is dangling in the minds of the West, we can only imagine. Here on this side of the globe, we have got a philosophy of peace and non-violence. We depend upon something like God and Vedantha. We feel a kind of peace. But in the West, they may have all the necessities of life, luxuries of life, yet they are full of fear. Therefore in our country the principles of life are quite different from those of any other country.

Mahatma Gandhi wanted to build the country on the basis of language for the betterment of our people, for the betterment of administration of our people, for the improvement of our culture and for promotion of unity and harmony among all the people.

SRI G. A. THIMMAPPA GOWDA.—He has also stated that there is no unanimity.

SRI T. SIDDALINGAIYA.—That is very good. Wherever there is no unanimity on any principle, I think, we must bring unanimity; we have to persuade them, we have to make them see the truth by explaining. I am not using any hot language when I say, we have to make them see the principle of truth. I say, we must persuade them, and bring them round. After all, we have got all the differences, but are we not pulling together? These difference s are passing, they are all temporary. But the real substance in all of us is one and we have to see how we unite for the good of the country and humanity and not see only these figures. Dissect them petal by petal and spoil the rose. I say the comprehensive outlook will certainly make us feel more sympathetic in our approach to the problem. We have to solve these problems somehow. In Mysore,—we are all proud of Mysore,—we have got great achievement to our credit. Mysore can build industries can build very good administration and can develop agriculture.

SRI B. V. NARAYANA REDDY (Bagepalli—Gudibanda).—What is your opinion with regard to the people who are Telugu people in Mysore?

Sri T. SIDDALINGAIYA.—My friend Sri Reddy puts that question. If I answer him, probably I will be side-tracking this question. I am sure my friend has got perfect liberty in putting that question which is relevant to this subject. However, I will answer him.

We have got great regard for them, I say the basis of distribution or reorganisation of the State even on the principle of Mahatma Gandhi and Indian National Congress is that we should have mutual respect and live together. I am prepared to go and live in Andhra with the same affection as you are prepared to live in Karnataka. We cannot get away from each other. There is no room for any difference in these border areas. Certainly, I see the difficulty, but we must somehow solve. Whatever clear cut areas there may be, they may be put into one State, but whatever is not clear, certainly there will be a Commission and we must abide by its decision.

Sri B. V. NARAYANA REDDY.—You are speaking about Kannada speaking people who want all facilities in their mother tongue. What about the Telugu people? What is your opinion about Telugu people?

Sri H. M. CHANNABASAPPA (Periyapatna).—Kannada speaking people go to Kannada country.

Sri T. SIDDALINGAIYA.—I do not know how to answer these questions. I would be very glad if Sri Channabasappa gives me an opportunity to answer the question of Sri Narayana Reddy. I am still on my legs. I know that it is a sort of interjection which he is putting.

Now, I shall proceed to answer Sri Reddy's interjection. I believe, these difficulties arise in the course of distribution of the various parts on the basis of language. People cannot split up the country and the country cannot be so clearly demarcated as to say only such and such people must live on this side of the land and the others must go to the other side. It cannot be done like this; we are all Indians. Re-organization on the basis of language does not mean that all people speaking one language, wherever they might be living, must be put into water-tight compartments, if I have understood my friend clearly. He may put the questions later on. But with regard to his enquiry about the border areas, I might say, that a Boundary Commission will be appointed and such disputes will have to be settled on democratic basis, whether some people will have to live on this side or that side. These questions are very complex. In such question, humans factors are to be counted as they come and settled. Sometimes we have to yield or somebody will have to yield. There is no such fine sharp edge between one State and another. We request them to be with us. In Mysore, we have got a really great privilege to have so many Telugu speaking people with us. We all enjoy their company. We welcome them. We have been together for several decades. I have always thought Sri Reddy as a very nice friend in spite of so many things he has done. Personally I must say, Sri Govinda Reddy and myself—are very good friends. They are all Telegu speaking people. But I do not think they have been motivated with any evil purpose in making an attack against me.

These problems, as I submitted, are really complex. They cannot be cut with a razor and settled. Even the human nature itself is bristling with troubles. Therefore we have to meet across the table, discuss them and come to some unnderstanding. Somebody must yield, may be on this side or that side. Therefore to say that population may be transferred,—I think, that was considered as a childish idea and given up during those days of partition between India and Pakistan. We need not talk about that aspect of it just now. If there is any trouble, certainly, the Boundary Commission will be bound to settle those questions and they may be kept pending. But today what we are thinking, or taking decisions upon, or are expressing our opinion is with regard to the main areas of the Kannada language. The undisputed areas may be put together into one State. I think all are agreed about this aspect except on the reasons of economic or some fiscal factors.

Sri K. HANUMANTHAIYA (Chief Minister).—All are not agreed and under no circumstances we are prepared to break up Mysore State.

Sri T. SIDDALINGAIYA.—I think everybody knew that; everybody is very clear in his mind and there is nobody who wants to break up Mysore State at all; not even Sri Narayana Reddy.

Sri B. V. NARAYANA REDDY.—Do you want the other people to come and join us?

3 P.M.

Sri T. SIDDALINGAIYA.—Sri Reddy in his vehemence always speaks like that, but he does not mean. . . .

Sri B. V. NARAYANA REDDY.—I mean what I say.

Sri T. SIDDALINGAIYA.—Too much assertion takes away the meaning of what you say.

Sri B. V. NARAYANA REDDY.—You allow me to stand on my own assertion.

Sri T. SIDDALINGAIYA.—I will explain your mind. You don't know your own mind.

Sri B. V. NARAYANA REDDY.—Sir, it is a very bad aspersion.

Sri Mulka GOVINDA REDDY (Chitaldrug).—It is an uncalled for and unwarranted statement from the speaker.

Sri B. V. NARAYANA REDDY.—It must be expunged from the proceedings. I request the Speaker to do it.

Mr. SPEAKER.—He will explain what he means. It should not be misunderstood. The member will explain what he means. It does not mean anything bad.

Sri B. V. NARAYANA REDDY.—He is saying something which he does not himself know.

Sri T. SIDDALINGAIYA.—I am sorry, Sri Narayana Reddy.

Sri Mulka GOVINDA REDDY.—Such insulting remarks cannot be tolerated.

Sri T. SIDDALINGAIYA.—As the Hon'ble Speaker has said, I am capable of explaining myself without wounding your feelings.

Sri B. V. NARAYANA REDDY.—What is the good of his explaining? He seems to say that I do not know my own mind. I would like to say that he does not know his mind and that he may be sent to some other place fo psychological treatment.

Mr. SPEAKER.—Therefore, interruptions also are no good.

Sri T. SIDDALINGAIYA.—I am very sorry that my friend should have misunderstood my words. I said very freely. Sometimes we speak in a violent language. It may be that we make some mistakes. I do not know why my friend should have taken it so seriously and jumped at me. There is nothing at all. I am sorry if I have wounded the feelings of my friend. I apologise to him. What I mean is, our friendship is so cordial that we can speak for each other, we can know each other's mind. He can interpret his mind; he can interpret my mind. I have no objection. I won't be upset. I won't be in any way wounded. You can interpret. This is only a kind of cordiality about which there should be no mistake.

Sri B. V. NARAYANA REDDY.—We are quits.

Sri T. SIDDALINGAIYA.—I am glad my friend says 'quits'.

Mr. SPEAKER.—Does the Hon'ble Member require more time?

Sri T. SIDDALINGAIYA.—Yes.

Mr. SPEAKER.—The House will now rise for Lunch and meet at 3-35 P.M.

The House rose for Lunch at Five Minutes past Three of the Clock and met again at Thirty-seven Minutes past Three of the Clock.

[MR. SPEAKER in the Chair.]

Sri T. SIDDALINGAIYA.—Mr. Speaker, Sir, I am very sorry that a few remarks of mine caused some kind of pain to my friends. It was far from my mind. I sincerely state that if I say anything on the floor of this House, I never do that with the intention of wounding anybody's feelings. I do not want to gain anything by rousing the passions or by playing upon facts or figures or pricks or interjections. I seriously and very humbly submit that if I can win over by my arguments, I will advance them, not for the purpose of arguing, but for the

purpose of winning over people ; if my words are able to convince them, I will argue my points, least with the intention of gaining anything by hurting anybody's feelings. If there are differences, certainly we must get on with our differences. Whether countries are divided or undivided, human relations must always be happy. Believing in such feelings, I submit that none of my brothers here should mistake my words. I say what I have got to say.

Hassan District.—7 District Board High Schools.				
1 District Board High School, Basavapatna.	8-7-1950	19-7-1948 Sri B V. Suryanarayana Rao, B.Sc., B.T.	Confirmed ...	President, District Board (Confirmation approved by Government).
2 District Board High School, Royarkoppal.	1949	6-7-1951 Sri Sivarudrappa, B.A. ...	(Not confirmed) Local candidate.	President, District Board.
3 District Board High School, Gorur.	9-7-1948	27-7-1951 Sri H. R. Gurupadappa, B.A., B.T.	(Not confirmed)... Local candidate	President, District Board.
4 District Board High School, Nuggehalli.	3-7-1949	14-2-1955 Sri S. Srinivasa Iyengar, B.A.	Not confirmed ...	Do
5 District Board High School, Dodda Metikurke.	30-7-1948	4-8-1948 Sri N. Krishna Moorthy, B.Sc. LL.B.	Confirmed ...	Do and (Confirmation approved by Government).
6 District Board High School, Yeslur.	1950	6-7-1949 Sri H. Shama Rao, B.A., B.T.	Confirmed ...	Do
7 District Board High School, Alur.	9-7-1950	18-9-1953 Sri A. N. Shiva Moorty, B.A., B.L.	(Not confirmed) ... Local candidate	President, District Board.
Chickmagalur District—6 District Board High Schools.				
1 District Board High School, Narasimharajapura.	1-9-1950	*Vacant*		Only in-charge arrangements have been made.

2 District Board High School, Panchanahalli.	10-7-1950		Do		Do
3 District Board High School, Shivane.	13-7-1950		Do		Do
4 District Board High School, Sakrepatna.	16-6-1952		Do		Do
5 District Board High School, Sringeri.	1-8-1953		Do		Do
6 District Board High School Ajjampura.	2-7-1953		Do		Do
Shimoga District—6 District Board High Schools.					
1 District Board High School, Anandapuram.	11-8-1952	11-8-1952	Sri A. R. Vasudevachar, B.Sc., B.T.	Reverted ...	President, District Board.
2 District Board High School, Kogalur.	7-8-1951	1-1-1953	Sri G. M. Murigappa	Not confirmed ...	Do
3 District Board High School, Kulambi-Kundur.	6-8-1951	10-8-1951	Sri N. Rama Rao, M.A., B.T.	Not confirmed; lent from the Ml. High School.	District Board President.
4 District Board High School, Megaravalli.	16-9-1950	16-9-1950	Sri R. S. Madhava Rao, M.Sc., (Resigned on 1-6-1951).	...	Do
5 District Board High School, Santebennur.	16-9-1948	16-9-1948	Sri S. P. Virupakshappa lent from the Education Department.	Not confirmed ...	...
6 District Board High School, Tyavanige.	18-10-1948	18-7-1953 7-6-1951	Sri N. Kittappa Gowda, B.A. Sri K.R. Manjanath, M.Sc.	Ag. Head Master. Do ...	...
Mandya District—2 District Board High Schools.					President, District Board.
1 District Board High School, Aghalaya.	11-7-1951	13-8-51	Sri N. K Gundappa, B.A.	...	Retired teacher re-appointed: services terminated.

(SRI A. G. RAMACHANDRA RAO.)

STATEMENT—(*contd*).

(a) Names of District Board High Schools	(b) The date and the year in which these schools were opened	(c) Date on which the Head Master of each High School was appointed	(d) Of the number of Head Masters confirmed and the number of Head Masters not confirmed and reverted (Confirmed) (Not confirmed) (Reverted)	(e) Who appointed Head Master of each High School and who confirmed him
2 District Board High School, Santhebachalli	8-7-1952	Sri K. Hanumantha Rao, B.A., B.T.	Lent official ...	Since reverted.
Bangalore District—one District Board High School.				
1 District Board High School, Varthur.	18-7-1949	18-8-1954 Sri N. Venkataramanappa, B.A.	...	Retired Head Master, re-appointed.
Kolar District—3 District Board High Schools.				
1 District Board High School, Gudibanda.	4-7-1949	4-7-1949 Sri H. P. Ramanathan. Lent official.	...	President, District Board.
2 District Board High School, Bagepalli.	11-8-1948	23-9-1950 Sri A. R. Hanumanthachar, B.A., B.T.	Confirmed ...	President, District Board. Confirmation approved by Government.
3 District Board High School, Srinivasapura.	5-7-1948	10-1-1955 Sri H. P. Narayana Rao, M.A. (Hons.).	...	Retired Head Master, re-appointed.

Chitaldrug District—5 District Board High Schools.					
1 District Board High School, Kodaganur.	20-9-1948	10-8-1950	Sri B. L. Ramachand ra-sastry, B.Sc., B.T.	Confirmed ...	President, District Board. Confirmation approved by Government.
2 District Board High School, Srirampur.	20-6-1950	20-6-1950	Sri C. S. Subbasastry, B.A. (Hons.)	Confirmed ..	Do
3 District Board High School, Parasurama-pura.	13-7-1951	14-7-1949	Sri N. S. Kengaramiah, B.Sc.	Reverted ...	President, District Board. Confirmation approved by Government.
4 District Board High School, Malebennur.	Do	13-8-1951	Sri N. S. Anantha Rao, B.Sc., B.T.	Not confirmed ...	Do
5 District Board High School, Maradihalli.	12-8-1948	25-10-1951	Sri G. K. Seshachala Rao, B.Sc., B.T.	Do ...	Do
Mysore District—10 District Board High Schools.					
1 District Board High School, Saragur.	June 1949	21-7-1949	Sri R. K. Srinivasiah, B.A., B.T.	Confirmed ...	President, District Board. Confirmation approved by the Government.
2 District Board High School, Bettadapura.	Do	10-8-1949	Sri B. V. Nanjundiah, B.A., B.T.	Confirmed ...	D
3 District Board High School, Periyapatna.	Do	28-7-1949	Sri C. B. Narasimha Murthy, B.A., B.T.	Do ...	Do
4 District Board High School, Kabbahalli.	Do	29-7-1949	Sri H. Ramasastry, B.A., B.T.	Do ...	Do
5 District Board High School, Bannur.	Do	2-8-1949	Sri K. Devaraja Iyengar, B.A., B.T.	Reverted ...	Do
	June 1950	3-2-1953	Sri H. Krishnaiyengar, M.A., B.T.	...	Retired Officer of the Education Department re-employed.

(SRI A. G. RAMACHANDRA RAO.)

STATEMENT—*concld.*

	(a) Names of District Board High Schools	(b) The date and the year in which these schools were opened	(c) Date on which the Head Master of each High School was appointed		(d) Of the number of Head Masters confirmed and the number of Head Masters not confirmed and reverted (Confirmed) (Not confirmed) (Reverted)	(e) Who appointed Head Master of each High School and who confirmed him
6	District Board High School, Ravandur.	June 1950	6-7-1950	Sri D. Krishnamurthy, B.Sc., B.T.	Not confirmed ...	President, District Board.
7	District Board High School, Devanur.	Do	3-7-1950	Sri A. P. Krishna Rao, M.A., B.T.	Do ...	Do
8	District Board High School, Talkad.	Do	20-7-1950	Sri Y. Gururaja, B.A., B.T.	Do ...	Do
9	District Board High School, Kuderu.	Do	8-11-1954	Sri R. S. Subbaraya, B.Sc., B.T.	Do ...	Do
10	District Board High School, Chunchanakatte.	8-6-1952	20-11-1952	Sri B. Subbannachar, B.Sc., B.T.	...	Do Retired officer re-employed.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಹೆಡ್‌ಮಾಸ್ತರುಗಳನ್ನು ಯಾವ ರೀತಿ appoint ಮಾಡಿಕೊಳ್ಳಬೇಕು ಎಂಬುದಕ್ಕೆ ಸರ್ಕಾರದವರು ಸೂಚನೆ ಕೊಟ್ಟಿದ್ದಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಡಿಸ್ಟ್ರಿಕ್ಟ್ ಬೋರ್ಡಿನ ಪ್ರೆಸಿಡೆಂಟರೇ ಪ್ರತಿಕೆಲಸಕ್ಕೂ ಲಾಯಖ್ಖಾದವರನ್ನು appoint ಮಾಡಿಕೊಳ್ಳುತ್ತಾರೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಡಿಸ್ಟ್ರಿಕ್ಟ್ ಬೋರ್ಡಿನವರು ಲಾಯಕ್ಕಾಗಿದ್ದವರನ್ನು ತಾನೇ appoint ಮಾಡುವುದು ?

ಶ್ರೀ ಎ ಜಿ. ರಾಮಚಂದ್ರರಾವ್.—ಅದನ್ನು ಗಮನಕ್ಕೆ ತೆಗೆದುಕೊಂಡು ಆ ರೀತಿ appoint ಮಾಡುತ್ತಾರೆಂದು ಸರ್ಕಾರದ ಭಾವನೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಹಾಗೆ appoint ಮಾಡಿದಂಥವರೆಲ್ಲರನ್ನೂ ಅವರು confirm ಮಾಡಿದ್ದಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರಿಶೀಲನೆಗೆ ಬಂದಾಗ, appointment ಮಾಡುವಾಗ ಕ್ರಮಬದ್ಧವಾಗಿ ನಡೆದಿದೆಯೇ ಎಂಬುದನ್ನು ನೋಡಿ ಮಾಡುತ್ತೇವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಸರಿಯಾಗಿ ನಡೆದಿದೆಯೇ ಇಲ್ಲವೇ ಎಂಬುದನ್ನು ಯಾವ ಯಾವ ವಿಷಯದ ಮೇಲೆ ನೋಡುತ್ತೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವರ qualification, ಅವರ ಅನುಭವ, ಅವರು ಮಾಡಿರತಕ್ಕಂಥ service, ಈ ಮೂರು ವಿಷಯಗಳನ್ನು ಗಮನಿಸುತ್ತೇವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಅವರ ಅರ್ಹತೆ, ಮಾಡಿರತಕ್ಕಂಥ ಕೆಲಸ, ಅನುಭವ ಇವುಗಳನ್ನು ಗಣನೆ ಮಾಡಿ ನಾಲಾಯಕ್ಕಾದವರು ಎಂಬ ಅಭಿಪ್ರಾಯಕ್ಕೆ ಬಂದಿದ್ದಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.— Public Service Commissionಗೆ refer ಮಾಡಿ ಅವರ ಅಭಿಪ್ರಾಯ ತೆಗೆದುಕೊಂಡು ತೀರ್ಮಾನ ಮಾಡುತ್ತೇವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಅವರ ಸರ್ವಿಸ್, ಅವರ ಅನುಭವ, ಮತ್ತು ಅವರ ಕೆಲಸ ಕಾರ್ಯಗಳನ್ನು Public Service Commission ರವರು ಗಣನೆಗೆ ತೆಗೆದುಕೊಂಡಿದ್ದಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸರ್ಕಾರ ಅವೆಲ್ಲವನ್ನೂ ಗಣನೆಗೆ ತೆಗೆದುಕೊಂಡು ಮಾಡಬೇಕು. ಹಾಗೆಯೇ ಮಾಡಿದ್ದಾರೆಂದು ನನ್ನ ಅಭಿಪ್ರಾಯ.

Mr. SPEAKER.—If the Hon'ble Member can give an instance they will be able to find out.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಹೀಗೆ ತುಮಕೂರು ಜಿಲ್ಲೆಯಲ್ಲಿ appoint ಮಾಡಿಕೊಂಡಿರತಕ್ಕಂಥ ಹೆಡ್‌ಮಾಸ್ಟರ್ ಎಲ್ಲರನ್ನೂ revert ಮಾಡಿರುವ ಉದ್ದೇಶವೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—Public Service Commission ಅಭಿಪ್ರಾಯದ ಪ್ರಕಾರ ಆ ರೀತಿ revert ಮಾಡಲಾಯಿತು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಯಾವ ಅಭಿಪ್ರಾಯದ ಮೇಲೆ ಆ ರೀತಿ revert ಮಾಡಿದ್ದಾರೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವರಿಗೆ ಇನ್ನೂ ಅನುಭವ ಕಡಿಮೆಯಾಗಿದೆ ಎನ್ನುವ ಅಭಿಪ್ರಾಯದ ಮೇಲೆ ಹಾಗೆ ಮಾಡಲಾಯಿತು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಡಿಸ್ಟ್ರಿಕ್ಟ್ ಬೋರ್ಡ್‌ನಿಂದ ಅವರ ಅನುಭವ ಮತ್ತು ಕೆಲಸ ಕಾರ್ಯಗಳ ವಿಷಯದಲ್ಲಿ ಏನಾದರೂ Public Service Commission ಅವರು ರಿಪೋರ್ಟ್ ತರಿಸಿಕೊಂಡಿದ್ದಾರೆಯೇ ?

Sri A. G. RAMACHANDRA RAO.—I do not know about that.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—District Boardನಲ್ಲಿ ಕೆಲಸ ಮಾಡತಕ್ಕಂಥ ಹೆಡ್‌ಮಾಸ್ತರುಗಳು ಚೆನ್ನಾಗಿ ಕೆಲಸ ಮಾಡಿದ್ದಾರೆ ಎಂದು ಡಿಸ್ಟ್ರಿಕ್ಟ್ ಬೋರ್ಡಿನವರು recognise ಮಾಡಿದ್ದರೂ ಕೂಡ, Public Service Commission ಅವರು ಅವರನ್ನು revert ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಹನುಮಂತಯ್ಯ.—Public Service Commission ಅಭಿಪ್ರಾಯಕ್ಕೂ District Boardನ ಅಭಿಪ್ರಾಯಕ್ಕೂ ವ್ಯತ್ಯಾಸ ಬಂದರೆ Public Service Commission ಅಭಿಪ್ರಾಯ ಜಾರಿಗೆ ಬರುತ್ತದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—Public Service Commission ಅಭಿಪ್ರಾಯಕ್ಕೂ ಮತ್ತು District Board ಅಭಿಪ್ರಾಯಕ್ಕೂ ವ್ಯತ್ಯಾಸ ಬಂದಾಗ ಸರ್ಕಾರದವರು ಪ್ರವೇಶ ಮಾಡುವುದು ಸೂಕ್ತವಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—Public Service Commission ಅನ್ನು Constitution ಪ್ರಕಾರ ಈ ಕೆಲಸಕ್ಕೋಸ್ಕರ ನೇಮಕ ಮಾಡಿರುವಾಗ, ಏನಾದರೂ ಬಹಳ ಅನ್ಯಾಯವಾಗಿದೆ ಎಂಬುದು ಕಂಡುಬಾರದಿದ್ದರೆ, ನಾವು ಪ್ರವೇಶ ಮಾಡುವುದಿಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಅನ್ಯಾಯವಾಗಿದೆ ಎಂಬುದನ್ನು ಸರ್ಕಾರದ ಗಮನಕ್ಕೆ ತಂದರೆ ಆಗ ಸರ್ಕಾರದವರು ಪ್ರವೇಶ ಮಾಡುತ್ತಾರೆಯೆ ?

ಶ್ರೀ ಕೆ. ಹನುಮಂತಯ್ಯ.—ಯಾವುದಾದರೂ ಒಂದು instanceನಲ್ಲಿ ಬಹಳ ಅನ್ಯಾಯವಾಗಿದೆಯೆಂದು ತಾವು ಹೇಳಿದರೆ ವಿಚಾರ ಮಾಡುತ್ತೇನೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಬಾಗೇಪಲ್ಲಿಯಲ್ಲಿ ಶ್ರೀ ಎ. ಆರ್. ಹನುಮಂತಾಚಾರ್ ಎಂಬವರು ಹೈಸ್ಕೂಲಿನಲ್ಲಿ ಉತ್ತಮವಾದ ಕೆಲಸ ಮಾಡುತ್ತಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಅಭಿಪ್ರಾಯದ ಮಾತು.

ಶ್ರೀ ಬಿ. ವಿ. ನಾರಾಯಣರೆಡ್ಡಿ.—Results ತೆಗೆದು ನೋಡಿದರೆ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆಂಬುದು ಗೊತ್ತಾಗುತ್ತದೆ. ಅವರಿಗೆ increment ಕೊಡದೆ ನಿಲ್ಲಿಸಿದ್ದಾರೆ. ಕಾರಣವೇನು ?

ಶ್ರೀ ಎ. ಜಿ. ರಾಮಚಂದ್ರರಾವ್.— Increment ವಿಷಯ ಪರಿಶೀಲನೆ ಮಾಡುತ್ತೇವೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಅನ್ಯಾಯವಾಗಿದ್ದರೆ ಸರಿಪಡಿಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅನ್ಯಾಯವಾಗಿದೆ ಎಂದು ಗೊತ್ತಾದರೆ ಸರಿಪಡಿಸುತ್ತೇವೆ.

ಶ್ರೀ ಬಿ. ಹುಚ್ಚೇಗೌಡ.—ಹೆಡ್‌ಮಾಸ್ತರುಗಳು ಆರು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.— ಇರಬಹುದು.

ಶ್ರೀ ಬಿ. ಹುಚ್ಚೇಗೌಡ.—ಆರು ವರ್ಷಗಳಿಂದ ಆಗುತ್ತಿರುವ ಕೆಲಸ ಕಾರ್ಯಗಳನ್ನು D.P.I. ಹೋಗಿ inspect ಮಾಡಿದ ರಿಪೋರ್ಟ್‌ಗಳನ್ನು ತರಿಸಿ ಕೊಂಡು ನೋಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ನಾವು ನೋಡ ಲಿಲ್ಲ. Public Service Commission ಅದನ್ನು ನೋಡಿರಬೇಕು.

ಶ್ರೀ ಬಿ. ಹುಚ್ಚೇಗೌಡ.—ಈಗ 1951 ರಿಂದ ಇಲ್ಲಿಯುವರೆಗೂ appoint ಮಾಡಿರುವವರನ್ನು confirm ಮಾಡಬೇಕು ಎಂದು ಸರ್ಕಾರೀ ಆರ್ಡರ್ ಬಂದಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿವೆ.

ಶ್ರೀ ಬಿ. ಹುಚ್ಚೇಗೌಡ.—ಅದೇ ರೀತಿ ಆ ಆರ್ಡರ್ ಪ್ರಕಾರ ಖಾಯಂ ಮಾಡುವುದಕ್ಕೆ ಅವರಿಗೆ ಅಧಿಕಾರ ವಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—1951 ರ ಹಿಂದೆ appoint ಆಗಿದ್ದರೆ ಈ ಆರ್ಡರ್ ಪ್ರಕಾರ ಖಾಯಂ ಮಾಡಲಾಗುತ್ತದೆ. ಅಲ್ಲಿಂದ ಈಚೆಗೆ appoint ಆಗಿ ದ್ದರೆ Public Service Commission ಅವರ opinion ತೆಗೆದುಕೊಳ್ಳಬೇಕು.

Industrial Schools.

Q.—814. Sri A. BHEEMAPPA NAIK (Molakalmuru).—

Will the Government be pleased to state :—

(*a*) the present activities pursued in each of the industrial schools in the State ;

(*b*) whether they have contemplated to convert them as centres for rural industrial scheme now working in the State ;

(*c*) whether they consider the feasibility of handing over the administration of these schools to the authorities of rural industrialisation scheme ?

A.—Sri H. SIDDAVEERAPPA (Minister for Home and Industries).—

(*a*) Please see the note appended below.

(*b*) No.

(*c*) Not considered feasible.

[*Vide* REPLY TO CLAUSE (*a*).]

Training is given in the following subjects in the several Institutions.

Sl. No.	*Names of schools*		*Subject*
1	Industrial School, Channapatna		(1) Carpentry (2) Nature Imitation Art (3) Lacquerware (4) Arts (Paintings) (5) Smithy and Machine Shop (6) Leather Stitching
2	Industrial School, Chitaldrug		(1) Carpentry (2) Weaving and Dyeing
3	Do	Chikmagalur	(1) Carpentry and Smithy
4	Do	Chikballapur	(1) Carpentry and Weaving
5	Do	Shimoga	(1) Carpentry (2) Smithy and Machine Shop
6	Do	Sagar	(1) Carpentry (2) Smithy and Sandalwood Carving
7	Do	Dodballapur	(1) Carpentry and Weaving
8	Do	Nelamangala	(1) Weaving and Lacquerware
9	Do	for Girls, Channapatna.	(1) Tailoring (2) Embroidery (3) Zari and Nakki (4) Knitting and Agarbatthi
10	Do	for Women, Tumkur	(1) Tailoring (2) Weaving (3) Cloth Printing and Agarbatthi manufacturing.

1 P.M.

Sri A. BHEEMAPPA NAIK.—What are the industries that the Rural Industrialisation Scheme has proposed to start?

Sri H. SIDDAVEERAPPA.—Quite a number of them depending upon the enlargement of the circumstances of the locality, whatever industry is feasible and practicable in that area that will be taken up. We have not got any hard and fast rule as to what industry can be started.

Sri A. BHEEMAPPA NAIK.—Have you trained personnel to start industries from A to Z that you just proposed?

Sri H. SIDDAVEERAPPA.—Wherever we have personnel and the necessary equipment we do it.

Sri A. BHEEMAPPA NAIK.—Would not these Industrial Schools be a good centre to train the personnel so that they might be of some use in these rural areas to work as guides?

Sri H. SIDDAVEERAPPA.—I am given to understand that there are certain practical difficulties, so far Government have not done. It will be examined.

Sri A. BHEEMAPPA NAIK.—What I am saying is, can you not train these workers as rural industrial workers, as guides in these schools; would you kindly examine this question?

Sri H. SIDDAVEERAPPA.—That will be examined, Sir.

Mr. SPEAKER.—Question time is over. Now the next item on the agenda.

ಶ್ರೀ ಎಸ್. ಸಿದ್ದಪ್ಪ.—ಸ್ವಾಮಿ, ನನ್ನ ಪ್ರಶ್ನೆ ಬಾಕಿಯಿದೆ.

ಅಧ್ಯಕ್ಷರು.—ನಾನು ಕರೆದಾಗ ತಾವಿರಲಿಲ್ಲ.

ಶ್ರೀ ಎಸ್. ಸಿದ್ದಪ್ಪ.—ಹಿಂದೆ ಇಲ್ಲದಿರುವವರಿಗೆ ಆಮೇಲೆ ಅವಕಾಶ ಕೊಟ್ಟಿಲ್ಲವೇ?

ಅಧ್ಯಕ್ಷರು.—ಅದು ಪ್ರಶ್ನೋತ್ತರಕಾಲದೊಳಗೆ ಇದ್ದರೆ.

ಶ್ರೀ ಎಸ್. ಸಿದ್ದಪ್ಪ.—ಈ ಸಭೆಯಲ್ಲಿ ಪ್ರಶ್ನೆಗಳು ಪ್ರಾರಂಭವಾದಲಾಗಾಯಿತು ಮುಗಿಯುವವರೆಗೂ ಮಧ್ಯೆ ಹಾಜರಿಲ್ಲದ ಸದಸ್ಯರಿಗೆ ಅನಂತರ ಮತ್ತೆ ಎರಡು ಪ್ರಶ್ನೆ ಹಾಕುವುದಕ್ಕೆ ಅವಕಾಶಕೊಟ್ಟಿರುವ ಸಂದರ್ಭಗಳಿಲ್ಲವೇ?

ಅಧ್ಯಕ್ಷರು.—ಒಂದು ಘಂಟೆಯೊಳಗಾಗಿದ್ದರೆ ಅವಕಾಶ ಕೊಡುತ್ತಿದ್ದೆ.

ಶ್ರೀ ಎಸ್. ಸಿದ್ದಪ್ಪ.—ಇದು ಅತಿ ಮುಖ್ಯವಾದ ಪ್ರಶ್ನೆ; ನಾಳೆಯದಿವಸವಾದರೂ ಈ ಪ್ರಶ್ನೆಗೆ ಅವಕಾಶ ಕೊಡುತ್ತೀರಾ?

(No answer.)

QUESTIONS FOR ANSWERS ON THE DAY

(but not taken up).

High School, Hoskote Town (Construction of Compound Walls).

Q.—492. Sri H. T. PUTTAPPA (Hoskote-Anekal—Scheduled Castes).—

Will the Government be pleased to state:—

(*a*) the reason for not erecting a suitable compound wall to the High School building at Hoskote Town;

(*b*) whether this compound wall would be erected now at least as promised on several occasions previously?

Sri A. G. RAMACHANDRA RAO (Minister for Law and Education).—

(*a*) The Municipal Council is not in a position to meet the cost.

(*b*) The Government is not aware of any promises made but will be considered.

Afforestation Programme.

Q.—711. Sri Solur SIDDAPPA (Magadi).—

Will the Government be pleased to state:—

(*a*) the extent of forest lands available in the State;

(*b*) of the above, the extent of vacant land;

(*c*) whether trees would be planted in these vacant lands and forests developed;

(*d*) the amount required for this afforestation programme?

A.—Dr. R. NAGAN GOWDA (Minister for Agriculture).—

(*a*) 5,285·65 sq. miles.

(*b*) The extent of vacant lands cannot be stated with definiteness. However, at a rough estimate the vacant lands form about 10 per cent of the total area.

(*c*) A good portion of the vacant areas are being afforested annually

(DR. R. NAGAN GOWDA.)

both under regular conservation programme as well as under the Five-Year Plan.

(*d*) For 1955-56, a sum of Rs. 3·75 lakhs is budgeted to be spent.

PAPERS LAID ON THE TABLE.

Sri K. HANUMANTHAIYA (Chief Minister):—Sir, I beg to lay on the Table the list of promises made by Government during July-August Session, 1953, Budget Session, 1954 and October 1954 of the Legislative Assembly and the action taken thereon.

Business of the House.

*Sri J. MOHAMED IMAM (Jagalur).—Before we proceed to the actual business of the House, I would like to take advantage of the presence of the Leader of the House and ascertain from him the future business of this House. With regard to the discussion on the Fact Finding Committee Report, I would like to have an indication as to the procedure that would be adopted by the Government, including the discussion today. Are we merely discussing the Report or are we taking any decision? I would request the Government to give us an idea as to the procedure that would be adopted and what will be the result of our discussion; whether the discussion will end or the House is going to come to any decision? We shall be grateful if the Leader of the House gives us some indication.

Sri Mulka GOVINDA REDDY (Chitaldrug).—I would like to add one more suggestion, Sir. The Report that we are discussing is a very important one and quite a number of members have not spoken. They are really anxious to express their views. Such opportunities come once in a lifetime. It is but right that as many members as would like to speak should be allowed to express their unfettered views. If all of them want to express their views, all of them may be given chance to speak. I would therefore suggest that three days should be set apart for discussing this Report from today.

*Sri K. HANUMANTHAIYA (Leader of the House).—Sir, if the Hon'ble Members want to discuss this Report, I have no objection; if everyone of them wants to have an opportunity, I have no objection either. If the House is prepared to sit longer and also work overtime that would be the correct way of exhaustively discussing this Report. So far as Government business is concerned, it is all of very urgent nature; whatever days are allotted for that purpose must be adhered to. Tomorrow we have to consider the Finance Bill. Therefore, according to the programme that has already been announced and circulated, we have to do Government business from tomorrow onwards. After the Government business concludes, you may fix such number of days as are necessary for discussing this Report, Sir. So far as Government are concerned, the Leader of the Opposition has rightly said what would be the position after this report is discussed. I would be able to say something at the end of discussion, Sir.

DISCUSSION ON FACT FINDING COMMITTEE REPORT—(*contd.*)

Mr. SPEAKER.—I want to bring to the notice of the Hon'ble Members that too much of interruption or interjections will spoil the continuity of the speech and consequently there will be delay in completing the ideas. Therefore I would request Hon'ble Members, if they want to ask any questions, to ask them after the speech is concluded. They can ask for any information required by them with the permission of the Chair. The members cannot rise all of a sudden and retort. These things should be avoided when the speech is going on. I have received some complaints in the form of suggestions from some Hon'ble Members that too many interruptions will spoil the continuity of the speeches.

ಶ್ರೀ ಕೆ. ಪಟ್ಟಾಭಿರಾಮನ್ (ಕೋಲಾರ).—ಮಾನ್ಯ ಸಭಾಪತಿಗಳೇ, ತಮ್ಮ ಔದಾರ್ಯದಿಂದ, ನನ್ನ ನಾಲ್ಕು ಮಾತುಗಳನ್ನು ಮುಂದುವರಿಸುವ ಮುನ್ನ

ಒಂದೆರಡು ವಿಷಯಗಳನ್ನು ಸ್ಪಷ್ಟಪಡಿಸುವುದು ಉಚಿತವೆನಿಸುತ್ತದೆ. ಏನೆಂದರೆ, ಈ ರೀತಿಯಾಗಿ ಭಾರತ ದೇಶವನ್ನು ಪುನರ್ವ್ಯವಸ್ಥೆ ಮಾಡತಕ್ಕಂಥ ಮಹತ್ಕಾರ್ಯದಲ್ಲಿ ನಾವು ತೊಡಗಿರುವಾಗ ಭಾಷೆಗೆ ಯಾವ ರೀತಿ ಪ್ರಾಧಾನ್ಯ ಕೊಡಬೇಕು, ಈ ಚೌಕಟ್ಟಿನಲ್ಲಿ ಭಾಷೆಯ ಸ್ಥಾನವೇನು ಎಂಬುದರ ಬಗ್ಗೆ ನನ್ನ ನಿಲುವನ್ನು ಮೊದಲಿನಿಂದಲೂ ಸ್ಪಷ್ಟಪಡಿಸುತ್ತಲೇ ಇದ್ದೇನೆ.

ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರಂ).—ಒಂದು information ಅನ್ನು ಮಾನ್ಯ ಅಧ್ಯಕ್ಷರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಈ ವಿಷಯ ದೇಶಕ್ಕೆ ಸಂಬಂಧಪಟ್ಟ ಮುಖ್ಯವಾದ ಪ್ರಶ್ನೆಯಾಗಿರುವುದರಿಂದ, ಈ ವಿಷಯದಮೇಲೆ ಚರ್ಚೆ ನಡೆಯುತ್ತಿರುವಾಗ running commentary ನಡೆಯಲು ಏರ್ಪಾಡು ಮಾಡಬೇಕೆಂದು ನಾನು ಸೂಚನೆ ಮಾಡುತ್ತೇನೆ.

Mr. SPEAKER.—No commentary is necessary inside the House.

ಶ್ರೀ ಕೆ. ಪಟ್ಟಾಭಿರಾಮ್.—ಇವತ್ತಿನ ದಿವಸವೂ ನಾನು ಅದೇ ನಿಲುವನ್ನು ಈ ಸಭೆಯ ಮುಂದಿಡುತ್ತಿದ್ದೇನೆ. ಇಂದು ಫಸಲಾಲಿ ಕಮಿಷನ್ನಿನವರು ಭಾರತ ದೇಶದ ಎಲ್ಲಾ ಭಾಗಗಳಲ್ಲೂ ಸಂಚಾರ ಮಾಡಿ ಇದನ್ನು ಪುನರ್ವ್ಯವಸ್ಥೆ ಮಾಡತಕ್ಕ ಮಹತ್ಕಾರ್ಯದಲ್ಲಿ ತೊಡಗಿದ್ದಾರೆ. ಅವರಿಗೆ ಈ ಮೈಸೂರು ಅಥವಾ ಮೈಸೂರಿಗೆ ಸೇರಬೇಕೆಂದಿರುವ ಪ್ರದೇಶಗಳ ಪುನರ್ನಿರ್ಮಾಣದ ಪ್ರಶ್ನೆ ತಮ್ಮ ಆ ಅಗಾಧ ಕಾರ್ಯವನ್ನು ನಡೆಸತಕ್ಕದ್ದರಲ್ಲಿ ಕೇವಲ ಪ್ರಾಸಂಗಿಕವಾಗಿ ಬಂದಿದೆ. ಇಡೀ ಹಿಂದೂ ದೇಶದಲ್ಲಿ ಹಿಮಾಚಲದಿಂದ ಹಿಡಿದು ಕನ್ಯಾಕುಮಾರಿಯವರೆಗೂ ನೋಡಿ, ಈ ಇಡೀ ಪ್ರಶ್ನೆಗೆ ಸಂಬಂಧಪಟ್ಟ ಮೂಲಭೂತವಾದ ವಿಷಯಗಳನ್ನು ಮನಸ್ಸಿಗೆ ತಂದುಕೊಂಡು, ಅದಕ್ಕೆ ಸರಿಹೋಗುವ ರೀತಿಯಲ್ಲಿ ಸಂಸ್ಥಾನಗಳ ಪುನರ್ವಿಂಗಡಣೆ ಮಾಡುವುದು ಅಗತ್ಯ. ಆ ರೀತಿ ಮಾಡುವಾಗ, ಆ ರೀತಿ ಪುನರ್ವ್ಯವಸ್ಥೆ ಮಾಡುವುದು ಅನಿವಾರ್ಯವೆಂದು ಹೇಳಿದಮೇಲೆ ಯಾವುದಾದರೊಂದು ರೀತಿಯಲ್ಲಿ ಪುನರ್ವ್ಯವಸ್ಥೆ ಮಾಡುವುದು ಅಗತ್ಯ. ಇದಕ್ಕೆ ಅನೇಕ ವಿಧಾನಗಳಿರಬಹುದು. ಪೂರ್ವದಲ್ಲಿ ನೋಡಿದರೆ, ನದಿಯನ್ನೇ ಎಲ್ಲೆ ಕಟ್ಟು ಮಾಡಿಕೊಂಡು ಇತ್ತಕಡೆ ಒಂದು ಪ್ರಾಂತ್ಯ ಅತ್ತಕಡೆ ಒಂದು ಪ್ರಾಂತ್ಯವೆಂದು ವಿಂಗಡಿಸಿಕೊಳ್ಳುವುದು ಸ್ವಾಭಾವಿಕವಾಗಿತ್ತು. ಅಥವಾ ದೈವಿಕವಾಗಿ ಯಾವುದಾದರೂ ಒಂದು ಪರ್ವತವಿದ್ದರೆ, ಆ ಪರ್ವತವನ್ನೇ ಒಂದು ಗಡಿಯಾಗಿಟ್ಟುಕೊಳ್ಳುತ್ತಿದ್ದರು. ಆದರೆ ಈಗಿನ ಕಾಲದಲ್ಲಿ ಒಂದು ಹೊಸ ದೃಷ್ಟಿಯಿಂದ ಗಡಿನಿರ್ಧಾರ ಮಾಡುವುದನ್ನು ನೋಡಬೇಕಾಗಿದೆ. ಯುದ್ಧ ಮುಂತಾದ ಸಂದರ್ಭಗಳಲ್ಲಿ ಒಂದು ನದಿಯೇ ಆಗಲಿ, ಪರ್ವತವೇ ಆಗಲಿ ಮನುಷ್ಯನಿಗೆ ದಾಟಲು ಅಸಾಧ್ಯವಾದುದು. ಮನುಷ್ಯ ಪ್ರಯತ್ನಕ್ಕೆ ಮಿಂಚಿದ್ದೆಂಬುದು ಇಲ್ಲ. ಆದ್ದರಿಂದ ಎಲ್ಲೆಗಳನ್ನು ಒಂದು ಹೊಸವಿಧಾನದಲ್ಲಿ ಮಾಡಿ ಸಂಸ್ಥಾನಗಳನ್ನು ಪುನಃ ವಿಂಗಡಣೆ ಮಾಡುವುದು ಅತ್ಯಗತ್ಯ. ಈ ಕಾರಣದಿಂದ ಭಾರತ ದೇಶದಲ್ಲಿ ಗಡಿಗಳನ್ನು ನಿರ್ಧಾರ ಮಾಡುವಾಗ ಬಂದರು, ರೇವು, ನದಿ, ಪರ್ವತಗಳು ಅಷ್ಟು ಪ್ರಾಮುಖ್ಯವಾದ ಪಾತ್ರವಹಿಸುವುದಿಲ್ಲ. ಆದ್ದರಿಂದ ಒಟ್ಟಿನ ಹಿಂದೂಸ್ಥಾನದ ದೃಷ್ಟಿಯಿಂದ ನೋಡಿದರೆ ಸರ್ವಾಂಗ ಸುಂದರವಾದ, ಭದ್ರವಾದ, ಭವ್ಯವಾದ ಹಿಂದೂಸ್ಥಾನವನ್ನು ಕಟ್ಟುವ ಕಾಲದಲ್ಲಿ, ಇಂಡಿಯಾ ದೇಶ ಎಲ್ಲೆಲ್ಲಿ ಹೇಗಿದೆ, ಎಲ್ಲಿ ಕೊರೆ ಕೊರೆಯಬಹುದು ಎಂದು ಯೋಚನೆ ಮಾಡಿ ಎಲ್ಲೆಕಟ್ಟುಗಳನ್ನು ನಿರ್ಧಾರ ಮಾಡುವ ಕಾಲದಲ್ಲಿ ಭಾಷೆಯೊಂದುವುದು ಬಹಳ ಹಿತಕರವಾಗಿ ಸ್ವಾಭಾವಿಕವಾಗಿ ಬರುತ್ತದೆ. ಆಡಳಿತ ದೃಷ್ಟಿಯಿಂದ ಭಾಷೆಯ ಪ್ರಯೋಗ ಹೆಚ್ಚಿನ ಸಹಾಯಕವಾಗಿರುತ್ತದೆ. ಅಂದ ಮಾತ್ರಕ್ಕೇ ಭಾಷೆಯೊಂದನ್ನೇ ಪ್ರಾಧಾನ್ಯವಾಗಿಟ್ಟುಕೊಂಡು ಮಿಕ್ಕೆಲ್ಲಾ ಕಾರಣಗಳನ್ನೂ ಮೂಲೆಗೊತ್ತಿ ಭಾಷೆಗೇ ಶರಣು ಹೊಂದಿ ಅದರಂತೆ ಪುನರ್ವಿಂಗಡಣೆ ಮಾಡುವುದೂ ಹಿತಕರವಾದದ್ದಲ್ಲ: ಅನಿವಾರ್ಯವಾಗಿ ಪುನರ್ವಿಂಗಡಣೆ ಮಾಡಬೇಕೆಂದು ಬಂದಾಗ ಹೆಚ್ಚಿನ ಪ್ರಾಧಾನ್ಯವನ್ನು ಭಾಷೆಗೆ ಕೊಡಬೇಕೆಂಬ ನಿಲುವನ್ನು ಮಾತ್ರ ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ. ಅದನ್ನೇ ನಾನೀಗ ಸಭೆಯ ಮುಂದೆಯೂ ಇಡುತ್ತಿರುವುದು.

ಎರಡನೆಯದಾಗಿ ನಾವು ಈ ರೀತಿ ನೋಡುವಾಗ ಮೈಸೂರು ಸಂಸ್ಥಾನದ ಸ್ಥಿತಿಗತಿಗಳನ್ನು ನೋಡುವುದಾದರೆ, ಮೈಸೂರು ಸಂಸ್ಥಾನದ ಹಿತ ರಕ್ಷಣೆ ಮಾಡಬೇಕಾದರೆ ಹಾಗೂ ಮೈಸೂರಿನ ಭಾಷೆಯನ್ನು ಕಾಪಾಡಬೇಕಾದರೆ ಇದರ ಗಡಿಯನ್ನು ವಿಸ್ತಾರ ಮಾಡಲೇ ಬೇಕಾಗಿದೆ; ಕರ್ಣಾಟಕಗಳು ಒಟ್ಟುಗೂಡಬೇಕಾಗಿದೆ. ಅದು ವಿಸ್ತಾರವಾಗತಕ್ಕದು ಅತ್ಯಗತ್ಯವೆಂದು ನನ್ನ ಅಲ್ಪ ದೃಷ್ಟಿಗೆ ಕಾಣುತ್ತದೆ. ಅದನ್ನೇ ನಾನೀಗ ಸಭೆಯ ಮುಂದಿಡುತ್ತಿದ್ದೇನೆ. ನಾನು ನಿನ್ನೆಯೇ ಕಾರಣಗಳನ್ನು ಕೊಟ್ಟು ಇದರ ಅವಶ್ಯಕತೆ ಎಷ್ಟಿದೆಯೆಂಬುದನ್ನು ತಿಳಿಸಿದ್ದೇನೆ. ರೇವು ಪಟ್ಟಣದ ಕಾರಣ, ಕಾವೇರಿ ತುಂಗಭದ್ರಾ ನದಿಗಳಿಗೆ ಸಂಬಂಧಪಟ್ಟ ಯೋಜನೆಗಳ ಕಾರಣಗಳನ್ನು ಕೊಟ್ಟು-ಇವೆಲ್ಲಾ ಒಂದೇ ಪ್ರಾಂತ್ಯಕ್ಕೊಳಪಟ್ಟಿದ್ದರೆ ಎಷ್ಟು ಚೆನ್ನಾಗಿರುತ್ತದೆ, ಎಷ್ಟು ಸಹಾಯಕವಾಗಿರುತ್ತದೆ ಹಾಗೂ ಚಾರಿತ್ರಕವಾಗಿಯೂ ಸರಿ ಹೋಗುತ್ತದೆಂಬುದನ್ನು ತಿಳಿಸಿದ್ದೇನೆ. ಅನೇಕ ಆಡಳಿತಗಳಿಗೆ ಸೇರಿರುವುದರಿಂದ ತೊಡಕುಗಳು ಬರುವುದು ಸ್ವಾಭಾವಿಕ. ಒಂದೇ ಆಡಳಿತ ಚೌಕಟ್ಟಿನಲ್ಲಿರುವಂತೆ ಮಾಡುವುದರಿಂದ ಎಷ್ಟು ಅನುಕೂಲವಾಗುತ್ತದೆಂಬುದನ್ನು ಕಾವೇರಿ ನಿರಾವರಿ ಯೋಜನೆಯ ಉದಾಹರಣೆಯನ್ನು ಕೊಟ್ಟು ನಾನು ವಿವರಿಸಿದ್ದೇನೆ. ಅಷ್ಟೇ ಅಲ್ಲದೆ, ಹಿಂದೆ ಇದೇ ಅಸೆಂಬ್ಲಿಯಲ್ಲಿ ಆಂಧ್ರ ಮಸೂದೆ ನಮ್ಮ ಮುಂದೆ ಬಂದಾಗ ತುಂಗಭದ್ರಾ ಯೋಜನೆಯನ್ನು ಕಾರ್ಯಗತ ಮಾಡುವ ಸಂದರ್ಭದಲ್ಲಿ ನಾವು ಯಾವ ರೀತಿ ಯೋಚನೆ ಮಾಡಿದೆವೆಂಬುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಕಟ್ಟಕಡೆಯಲ್ಲಿ ಮಾನ್ಯ ಸದಸ್ಯರು ಒಂದು ಒಪ್ಪಿಗೆಗೆ ಬಂದು ಏಕಾಭಿಪ್ರಾಯದಿಂದ ಆಡಳಿತ ದೃಷ್ಟಿಯಿಂದ ಒಂದು ಮ್ಯಾನೇಜ್‌ಮೆಂಟಿಗೆ ಬಿಡಬೇಕೆಂದು ಅಂಗೀಕರಿಸಿ ದ್ದಾಯಿತು. ಅದರ ಉದ್ದೇಶವೇನಿತ್ತೆಂಬುದು ತಮಗೆ ಗೊತ್ತಿದೆ. ಆಡಳಿತ ದೃಷ್ಟಿಯಿಂದ ಇಂಥ ಮಹತ್ ಕಾರ್ಯವನ್ನು ಮಾಡಬೇಕಾದ ಸಂದರ್ಭದಲ್ಲಿ ಒಂದು ಆಡಳಿತಕ್ಕೊಳಪಟ್ಟಿದ್ದರೆ ಅನುಕೂಲವಾಗಿರುತ್ತದೆ.

ಈ ಕಾರಣದಿಂದ ನಾವು ಫಸಲಾಲಿ ಕಮಿಷನ್ ಮುಂದೆ ಅಭಿಪ್ರಾಯ ಹೇಳುವಾಗ ಇಡೀ ಹಿಂದೂಸ್ಥಾನದ ಚಿತ್ರವನ್ನಿಟ್ಟುಕೊಂಡು ಹೇಳಬೇಕಾಗಿದೆ. ಈ ಮೂಲ ಭೂತ ವಿಷಯಗಳನ್ನು ಮನಗಂಡು ಒಂದು ಸಂಸ್ಥಾನ ಹೀಗಿರಬೇಕು, ಒಂದು ಸಂಸ್ಥಾನದ ಲಕ್ಷಣವೇನು, viable unit ಎಂಬುದೇನು ಎಂಬುದನ್ನು ನಿರ್ಧರಿಸಬೇಕು. ಇಂಡಿಯಾ ದೇಶದ ಈಗಿನ ಪರಿಸ್ಥಿತಿಯಲ್ಲಿ, ಹಾಗೂ ವಿಶ್ವದ ಪರಿಸ್ಥಿತಿಯಲ್ಲಿ, viable units, ಆಡಳಿತ ದೃಷ್ಟಿಯಿಂದ ಸರಿಯಾದ administrative units, ಇರುವುದು ಎಷ್ಟು ಅವಶ್ಯಕವಾಗಿದೆಯೆಂಬುದು ಏಷ್ಯಾಖಂಡದ ಸುತ್ತಮುತ್ತಲೂ ಈಗ ಇರುವ ಪರಿಸ್ಥಿತಿಯನ್ನು ನೋಡಿದರೆ ಗೊತ್ತಾಗುತ್ತದೆ.

(ಶ್ರೀ ಕೆ. ಪಟ್ಟಾಭಿರಾಮನ್.)

ಆದ್ದರಿಂದ ಮೈಸೂರು, ಕರ್ಣಾಟಕ, ಮತ್ತೊಂದು ಮಗದೊಂದು ಎಂದು ಈ ರೀತಿಯಾಗಿ ಯೋಚನೆ ಮಾಡುವುದಕ್ಕೆ ಬದಲಾಗಿ ಮೂಲತಃ ಇಂಡಿಯಾ ದೇಶವನ್ನು ಯಾವ ರೀತಿ ವಿಂಗಡಿಸಬೇಕೆಂಬದನ್ನು ಯೋಚನೆ ಮಾಡಬೇಕು. ಈಗ ಒಂದು ಆಡಳಿತಕ್ಕೊಳಪಟ್ಟಿದ್ದ ಮಾತ್ರಕ್ಕೇ ಅವುಗಳೆಲ್ಲವನ್ನೂ ಒಂದಾಗಿಯೇ ಇಡಬೇಕೆಂದಿಲ್ಲ. ಬೇರೆಬೇರೆ ಪ್ರಾಂತ್ಯಗಳಾಗಿ ವಿಕೇಂದ್ರೀಕರಿಸಿ ಬೇರೆಬೇರೆ ಸರ್ಕಾರಗಳನ್ನು ಮಾಡತಕ್ಕದ್ದೂ ಅನಿವಾರ್ಯ. ಹೀಗಿರುವಾಗ ನಾವು ನಮ್ಮ ಸಂಸ್ಥಾನದ ಸ್ಥಿತಿಯೇನು, ಅದರ ರೂಪವೇನಿರಬೇಕು, ಎಷ್ಟು ಜನರು ಇಲ್ಲಿರಬೇಕು ಮತ್ತು ಏನೇನು ಸೌಕರ್ಯಗಳಿರಬೇಕೆಂಬುದನ್ನು ಪರಿಶೀಲಿಸುವಾಗ ನಾವು ಕೇವಲ ನಮ್ಮ ಸಂಸ್ಥಾನ ವಿಚಾರವನ್ನು, ನಮ್ಮ ಸಂಸ್ಥಾನದ ಯೋಗಕ್ಷೇಮವನ್ನು ನೋಡತಕ್ಕದ್ದಲ್ಲ; ಹತ್ತಾರು ವರ್ಷಗಳ ದೃಷ್ಟಿ ನಮ್ಮ ಮುಂದಿರಬೇಕಾಗುತ್ತದೆ.

ಹೀಗೆ ಈ ದಿವಸ ನಾವು ಪ್ರತಿಯೊಂದು ಸಂಸ್ಥಾನವನ್ನೂ ಈ ಆಧಾರದಮೇಲೆ ತಾಳೆ ಹಾಕಿ ನಿರ್ಧರ ಮಾಡುತ್ತಹೋದರೆ ಕೆಲವುಕಡೆ ಒಂದು ಭಾಷೆಯನ್ನಾಡತಕ್ಕ ಜನರ ಸಂಖ್ಯೆ ಸ್ವಲ್ಪ ಹೆಚ್ಚಾಗಿರಬಹುದು, ಇತರ ಭಾಷೆಗಳನ್ನಾಡತಕ್ಕವರ ಸಂಖ್ಯೆ ಸ್ವಲ್ಪ ಕಮ್ಮಿಯಾಗಿರಬಹುದು. ಅದು ಏನೇ ಇರಲಿ, ಹೀಗೆ ಅಭಿವೃದ್ಧಿಗೆ ಬಾರದಿರುವ ಪ್ರದೇಶಗಳು ಎಲ್ಲೆಲ್ಲಿರುತ್ತವೆಯೋ ಅಂಥವುಗಳ ಸಂಪದಭಿವೃದ್ಧಿಯನ್ನೂ ಮತ್ತು ಆ ಪ್ರದೇಶಗಳ ಇತರ ಅಭಿವೃದ್ಧಿಯನ್ನೂ ಈಗ ಯಾವ ಪ್ರದೇಶಗಳು ಅಭಿವೃದ್ಧಿಗೆ ಬಂದಿರುತ್ತವೆಂದು ಪರಿಗಣಿಸಲಾಗಿದೆಯೋ ಅಂಥ ಪ್ರದೇಶಗಳ ಮಟ್ಟಕ್ಕೆ ಸರಿಸಮಾನವಾಗುವಂತೆ ಅವುಗಳನ್ನೂ ಏಳಿಗೆಗೆ ತರಬೇಕೆಂದು ಒಂದು ದೃಢವಾದ ಮನೋನಿಶ್ಚಯವನ್ನು ನಮ್ಮ ಭಾರತ ಸರ್ಕಾರದವರು ಇಟ್ಟುಕೊಂಡಿದ್ದಾರೆ. ಆದುದರಿಂದ ಅವರು ಈ ಕಾರ್ಯವನ್ನು ಖಂಡಿತ ಮಾಡಿಯೇ ಮಾಡುತ್ತಾರೆ. ಅದು ಆಗಿಯೇ ಆಗುತ್ತದೆ. ಈ ಪ್ರಶ್ನೆಯನ್ನು ನಾವು ಈ ದಿವಸ ಆ ಒಂದು ದೃಷ್ಟಿಯಿಂದ ನೋಡಬೇಕೆಂದು ನಾನು ಈ ಮಾನ್ಯ ಸಭೆಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಒಂದು ದೃಷ್ಟಿಯನ್ನು ನಾವುಗಳು ಈ ದಿವಸ ನಮ್ಮ ಮನಸ್ಸಿನಲ್ಲಿಟ್ಟುಕೊಂಡು ಆಲೋಚನೆ ಮಾಡಿದಲ್ಲಿ ಈಗಿರತಕ್ಕ ನಮ್ಮ ಮೈಸೂರು ಹೀಗೆಯೇ ಉಳಿಯಬೇಕೇ ಅಥವಾ ಇದಿನ್ನೂ ಸವಿಸ್ತಾರವಾಗಿ ಬೆಳೆಯಬೇಕೇ ಅಥವಾ ಹಾಗೆ ಬೆಳೆಯುವಂಥ ಅವಕಾಶ ಇರಲೇಬಾರದೇ, ಅಥವಾ ಹಾಗೆ ಸವಿಸ್ತಾರವಾಗತಕ್ಕಂಥ ವಿಶಾಲ ಮೈಸೂರನ್ನು ನಾವು ಇನ್ನೂ ಹೆಚ್ಚು ಅಭಿವೃದ್ಧಿ ಪಡಿಸುವುದಕ್ಕೆ ಸಾಧ್ಯವಾಗುವುದಿಲ್ಲವೇ? ಎನ್ನತಕ್ಕಂಥ ಈ ನಾನಾ ಪ್ರಶ್ನೆಗಳನ್ನು ತೆಗೆದುಕೊಂಡು ಪರಿಶೀಲನೆ ಮಾಡುತ್ತಾ ಹೋದರೆ, ನನ್ನ ಅಭಿಪ್ರಾಯದಪ್ರಕಾರ, ಮುಂದೆ ಇದರ ರೂಪರೇಖೆಗಳು ಹೇಗಿರಬೇಕು, ನಮ್ಮ ಮೈಸೂರು—ಮೈಸೂರಾಗಿಯೇ ಉಳಿಯಬೇಕೇಅಥವಾ ಇದು ಬೇರೆ ಇನ್ನಾವ ರೂಪ ತಾಳಬಹುದು ಎನ್ನತಕ್ಕ ಬಗ್ಗೆ ನನ್ನ ಅಭಿಪ್ರಾಯವನ್ನು ನಾನೀಗ ತಿಳಿಸುತ್ತೇನೆ.

ಮೊಟ್ಟಮೊದಲನೆಯದಾಗಿ, ನಾವು ಈ ಪ್ರಾಂತ್ಯಗಳ ಪುನರ್ವಿಂಗಡಣೆಯ ಸಂಬಂಧವಾಗಿ ಪ್ರತಿಯೊಂದು ಭಾಗವೂ ಒಂದು ಅನುಕೂಲವಾದ ಅಡ್ಮಿನಿಸ್ಟ್ರೇಟೀವ್ ಯೂನಿಟ್ಟಾಗಿರುವಂತೆ ಮಾಡಬೇಕೆಂದು ಏನು ಹೇಳುತ್ತಿದ್ದೇವೆಯೋ ಆ ಒಂದು ಭಾವನೆಯಿಂದ ಹೇಳುವುದಾದರೆ, ಇದನ್ನು ಆ ಒಂದು ಆಡಳಿತ ಸೌಕರ್ಯ ದೃಷ್ಟಿಯಿಂದಲೂ ಕೂಡ ಪುನರ್ವಿಂಗಡಣೆ ಮಾಡತಕ್ಕದ್ದು ಅತ್ಯಗತ್ಯ ಎಂದು ಹೇಳುತ್ತೇನೆ. ನಾನು ಈ ಮಾತುಗಳನ್ನು ಹೇಳುತ್ತಿರುವಾಗ ಪ್ರತಿಯೊಂದೊಂದು ಅಂಶವನ್ನೂ ತೆಗೆದುಕೊಂಡು ಹೋಲಿಕೆ ಹಾಕಿ ಹೇಳುತ್ತಾ ಬರಬಹುದು. ಮೊಟ್ಟಮೊದಲನೆಯದಾಗಿ ನಾವು ಈಗ ಒಂದು ಸಂಸ್ಥಾನ ಎಂದರೆ ಅದು ಹೇಗಿರಬೇಕು; ಎಷ್ಟಿರಬೇಕು, ಒಂದು ಅಡ್ಮಿನಿಸ್ಟ್ರೇಟಿವ್ ಯೂನಿಟ್ಟಾಗಿರಬೇಕು ಎಂದರೆ ಆಡಳಿತದ ಸೌಕರ್ಯ ದೃಷ್ಟಿಯಿಂದ ಅದು ಯಾವ ರೀತಿಯಿದ್ದರೆ ಆ ಪ್ರದೇಶ ಒಂದು ಆಡಳಿತದ ಚೌಕಟ್ಟಿನಲ್ಲಿದ್ದು ಉತ್ತಮ ದರ್ಜೆ ಆಡಳಿತ ನಡೆಯುವಂತೆ ಇರಬೇಕಾಗಿದ್ದರೆ—ಆ ಅಡ್ಮಿನಿಸ್ಟ್ರೇಟಿವ್ ಯೂನಿಟ್ ಎನ್ನುವ ಪ್ರದೇಶ ಎಷ್ಟಿರಬೇಕು ಎನ್ನುವ ಮೂಲಭೂತ ಪ್ರಶ್ನೆಯನ್ನು ನಾವು ಮೊದಲು ನಿರ್ಧರಮಾಡಬೇಕಾಗಿದೆ. ಈ ದಿವಸ ಇಡೀ ಇಂಡಿಯಾ ದೇಶದಲ್ಲಿ ಸುಮಾರು 28 ಸಂಸ್ಥಾನಗಳಿವೆ. ಈಗ ಅವುಗಳನ್ನು ಎ. ಬಿ. ಸಿ. ಮತ್ತು ಡಿ. ಎಂಬುದಾಗಿ ನಾಲ್ಕು ವಿಭಾಗ ಮಾಡಿದ್ದಾರೆ. ಈ ಹೊತ್ತು ಹೀಗೆ ಈ ಸಂಸ್ಥಾನಗಳೆಲ್ಲಾ ಏನೊಂದು ರೀತಿಯಾಗಿ ಮೂರು-ನಾಲ್ಕು ರೀತಿಗಳಲ್ಲಿ ಚಿತ್ರಚಿತ್ರವಾದಂಥ ದೃಷ್ಟಿಯಲ್ಲಿ ಕಾಣುತ್ತಿವೆಯೋ ಇಂಥ ಒಂದು ಸಮಸ್ಯೆಯನ್ನು ನಾವೀಗ ನಮ್ಮ ಗಮನದಲ್ಲಿಟ್ಟುಕೊಂಡು ಈ ಮೂಲ ಪ್ರಶ್ನೆಯನ್ನು ಪರಿಶೀಲನೆ ಮಾಡಬೇಕಾಗಿದೆ. ಒಂದು ಆಡಳಿತ ಸೌಕರ್ಯ ದೃಷ್ಟಿಯಿಂದ ಎಂದರೆ ನಾವೆಲ್ಲರೂ ಈ ದಿವಸ ಏನೊಂದು ವಯಬಲ್ ಯೂನಿಟ್ ಎಂದು ಹೇಳುತ್ತಿದ್ದೇವೆಯೋ ಅಂಥ ವಯಾಬಲ್ ಯೂನಿಟ್ಟುಗಳಲ್ಲಿಯೇ ಈ ದಿವಸ ಕೆಲ ಕೆಲವು ಬಹಳ ದೊಡ್ಡದಾಗಿದ್ದು ಮತ್ತೆ ಕೆಲವು ಬಹಳ ಚಿಕ್ಕದಾಗಿರುತ್ತವೆ. ಆದಕಾರಣ ನಾವೀದಿವಸ ಈ ಎಲ್ಲಾ ಪ್ರಾಂತ್ಯಗಳನ್ನೂ ಒಂದು ಹೊಸ ಮಾದರಿಯಲ್ಲಿ ಪುನರ್ವಿಂಗಡಣೆ ಮಾಡಬೇಕೆಂದಿದ್ದೇವೆ. ಎಲ್ಲೆಲ್ಲಿ ಏನೇನು ಕೊರತೆಗಳಿವೆ, ಎಲ್ಲೆಲ್ಲಿ ಏನೇನು ಅನುಕೂಲತೆಗಳಿರುತ್ತವೆ ಎನ್ನುವುದನ್ನೆಲ್ಲಾ ನೋಡಿಕೊಂಡು, ಕೆಲಕೆಲವು ಭಾಗಗಳನ್ನು ಕೆಲಕೆಲವು ಭಾಗಗಳೊಂದಿಗೆ ವಿಲನೀಕರಣ ಮಾಡಲೇಬೇಕಾಗಿರುತ್ತದೆ. ಹೀಗೆ ಮಾಡಬೇಕಾದಲ್ಲಿ ಕೆಲಕೆಲವು ದೇಶದ ಕೆಲಕೆಲವು ಭಾಗಗಳನ್ನು ಒಡೆಯಲೇಬೇಕಾಗುತ್ತದೆ. ಕೆಲವು ದೇಶಗಳಿಗೆ ಕೆಲಕೆಲವು ಹೊಸ ಭಾಗಗಳನ್ನು ಸೇರಿಸಲೇಬೇಕಾಗುತ್ತದೆ. ಈ ಒಂದು ಅಂಶವನ್ನು ನಾವುಗಳೆಲ್ಲರೂ ಮನಸ್ಸಿನಲ್ಲಿಟ್ಟುಕೊಳ್ಳಬೇಕಾಗಿದೆ.

ಇನ್ನೊಂದು ವಿಚಾರವೇನೆಂದರೆ: ಈ ದಿವಸ ನಮ್ಮ ಭಾರತದಲ್ಲಿ 14 ಬೇರೆ ಬೇರೆ ಮುಖ್ಯ ಭಾಷೆಗಳು ಇರುತ್ತವೆಯೆಂದು ನಾವು ರಾಜ್ಯಾಂಗದಲ್ಲೂ ಅಡಕ ಮಾಡಿ ಇವುಗಳನ್ನು ಅಂಗೀಕಾರ ಮಾಡಿಕೊಂಡಿದ್ದೇವೆ. ಈ ಹದಿನಾಲ್ಕು ಭಾಷೆಗಳಲ್ಲಿ ಕನ್ನಡ ಭಾಷೆಯೂ ಒಂದಾಗಿದೆ. ಈ ಒಂದು ಕಾರಣದಿಂದಲೂ ಕೂಡ ಈ ರಾಜ್ಯಗಳ ಪುನರ್ವಿಂಗಡಣೆಯ ಕಾಲದಲ್ಲಿ ಈ ಭಾಷೆಗಳ ಆಧಾರಕ್ಕೆ ಒಂದು ಪ್ರಾಧಾನ್ಯತೆ ಕೊಡಲೇಬೇಕೆಂಬ ಒಂದು ಮುಖ್ಯ ಪ್ರಶ್ನೆಯನ್ನು ಒಂದು ಮೂಲಭೂತ ನಿರ್ಣಯದ ರೂಪದಲ್ಲಿ ಬಹಳ ಕಾಲದ ಹಿಂದೆಯೇ ತಂದು ಅದಕ್ಕೂ ಮಾನ್ಯತೆ ಕೊಡಲೇಬೇಕೆಂಬುದಾಗಿ ನಮ್ಮವರೆಲ್ಲರೂ ಒಪ್ಪಿಕೊಂಡಿದ್ದಾರೆ. ಹೀಗೆಂದ ಮಾತ್ರಕ್ಕೇ ಈ ದಿವಸ ಉತ್ತರ ಪ್ರದೇಶದಲ್ಲಿ 8 ಕೋಟಿ ಪ್ರಜಾಸಂಖ್ಯೆಯಿದ್ದು—ಅವರೆಲ್ಲರೂ ಹಿಂದೀ ಭಾಷೆಯೊಂದನ್ನೇ ಮಾತನಾಡತಕ್ಕಂಥ ಪ್ರಜಾಸಂಖ್ಯೆಯಾಗಿದ್ದರೂ—ಅಂದರೆ—ಏಕ ಭಾಷೆ, ಏಕ ಲಿಪಿಯನ್ನು ಬರೆಯುತ್ತಿರುವಂಥ ಜನಾಂಗವಾಗಿದ್ದಾಗ್ಯೂ, ಅದು ಆಡಳಿತದೃಷ್ಟಿಯಿಂದ ಅಂದರೆ ಆಡಳಿತ ಸೌಕರ್ಯಕ್ಕಾಗಿ ಆ ದೇಶವನ್ನೂ ಸಹ ಈಗ ಮೂರು-ನಾಲ್ಕು ಭಾಗಗಳನ್ನಾಗಿ ಒಡೆಯಲೇ

ಬೇಕಾಗಿರುತ್ತದೆ. ಹೀಗೆ ಮಾಡತಕ್ಕದ್ದು ಅನಿವಾರ್ಯ. ಆ ಕಾಲದಲ್ಲಿ ಇದು ಆಗಬೇಕೇ ಅಥವಾ ಬೇಡವೇ ಎನ್ನುವ ಪ್ರಶ್ನೆಯೇ ಅಲ್ಲಿ ಬರುವುದಿಲ್ಲ. ಆಡಳಿತದೃಷ್ಟಿಯಿಂದ ಹೇಳುವುದಾದರೆ ಖರ್ಚು ವೆಚ್ಚಗಳು ಎಷ್ಟೇ ಹೆಚ್ಚಾಗಲಿ ಅಥವಾ ಕಡಮೆಯಾಗಲಿ ಹೀಗೆ ಮಾಡಲೇ ಬೇಕಾಗಿ ಬರುತ್ತದೆ. ಈ ಒಂದು ದೃಷ್ಟಿಯಿಂದ ನಾವೀಗ ನಮ್ಮ ಮೈಸೂರಿನ ವಿಚಾರವನ್ನು ನೋಡುವುದಾದರೆ, ಈಗ ಇರತಕ್ಕಂಥ ನಮ್ಮ ಮೈಸೂರು ಸಂಸ್ಥಾನ ಹೀಗೆಯೇ ಇರಬೇಕೇ, ಅಂದರೆ ಮೈಸೂರು ಸಂಸ್ಥಾನ ಈಗ ಎಷ್ಟಿದೆಯೋ ಅಷ್ಟೇ ಇನ್ನು ಮುಂದಕ್ಕೂ ಉಳಿಯಬೇಕೇ ಅಥವಾ ಇದು ಇನ್ನೂ ಸವಿಸ್ತಾರವಾಗಬೇಕೇ ಎನ್ನತಕ್ಕ ಬಗ್ಗೆ ನಾವೀದಿವಸ ನಮ್ಮ ಮೈಸೂರಿನ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ, ಈ ಸಂಸ್ಥಾನವನ್ನು ಇನ್ನೂ ಜಾಸ್ತಿ ಮಾಡುವುದಕ್ಕೆ ಅವಕಾಶವಿದೆಯೆಂದೂ ಮತ್ತು ಹಾಗೆ ಜಾಸ್ತಿ ಮಾಡುವುದರಿಂದ ಮುಂದಕ್ಕೆ ಇನ್ನೂ ಒಳ್ಳೆಯದಾಗುತ್ತದೆಂದೂ ಹೇಳಲೇಬೇಕಾಗಿರುತ್ತದೆ. ಯಾವ ಯಾವ ಭಾಗ ಇದಕ್ಕೆ ಸೇರಬೇಕು, ಎಷ್ಟೆಷ್ಟು ಸೇರಬೇಕು ಎನ್ನುವ ವಿಷಯ ಬೇರೆ. ಆ ಗೋಜಿಗೆ ನಾನೀಗ ಪ್ರವೇಶ ಮಾಡುವುದಿಲ್ಲ. ಆದರೆ ಈ ಹಿಂದೆಯೇ ನಾನು ಈ ಬಗ್ಗೆ ಕೆಲವು ವಿಚಾರಗಳನ್ನು ಹೇಳಿದ್ದೇನೆ. ಅವುಗಳನ್ನೇ ಈಗಲೂ ನಾನು ಹೇಳುತ್ತಿದ್ದೇನೆ. ಸಾಮಾನ್ಯವಾಗಿ ಒಂದು ಭಾಷೆಯನ್ನಾಡತಕ್ಕಂಥ ಜನರೆಲ್ಲಾ ಒಂದಾಗಿರಬೇಕು ಎನ್ನುವಂಥ ಒಂದು ಅಭಿಪ್ರಾಯ ಸ್ವಾಭಾವಿಕವಾಗಿ ಬಂದುದಾಗಿದೆ. ಹಾಗೆ ಒಂದು ಭಾಷೆಯನ್ನಾಡತಕ್ಕಂಥ ಜನರು ಒಂದುಕಡೆ ಸೇರಿದರೆ—ಒಂದು ಕಡೆ ಮಾತನಾಡಲು ಕುಳಿತರೆ, ಎಂದರೆ ಇಂಥ ಮಹಾ ಸಭೆಗಳಲ್ಲಿ ಬಂದು ಕುಳಿತುಕೊಂಡಾಗ ಒಬ್ಬರಿಗೊಬ್ಬರು ಹೇಳತಕ್ಕ ಅಭಿಪ್ರಾಯಗಳನ್ನು ಸರಿಯಾಗಿ ಅರ್ಥಮಾಡಿಕೊಂಡು ಅವರು ತಮ್ಮ ಕೆಲಸಕಾರ್ಯಗಳನ್ನು ಸಾಗಿಸಿಕೊಂಡು ಹೋಗಲು ಒಂದು ಸದವಕಾಶವಿರುತ್ತದೆ, ಹಾಗೆ ಮಾಡಿದರೆ ಪ್ರತಿಯೊಬ್ಬರಲ್ಲಿಯೂ ಒಂದು ಆತ್ಮೀಯತೆ ಬೆಳೆಯಲು ಅವಕಾಶವಾಗುತ್ತದೆ ಎನ್ನುವುದೇ ಇದರಲ್ಲಿರತಕ್ಕಂಥ ಒಂದು ಮುಖ್ಯಾಂಶ ಮತ್ತು ಇದೇ ನನ್ನ ಮೂಲ ಆಸೆ. ಆದರೆ ನಾವು ಈ ದಿವಸ ಭಾಷಣಗಳನ್ನು ಮಾಡಬೇಕಾಗಿದ್ದರೆ ಇಂಗ್ಲಿಷ್ ಭಾಷೆಯನ್ನು ಬಳಸುತ್ತಿದ್ದೇವೆ. ಕಾರಣವೇನೆಂದರೆ ಈ ದಿವಸ ಈ ಇಂಗ್ಲಿಷ್ ಭಾಷೆ ಅನ್ನುವುದು ನಮ್ಮ ರಾಜಕೀಯ ಮತ್ತು ಆಡಳಿತಭಾಷೆಯಾಗಿರುವುದೇ ಆಗಿದೆ. ಇಂಥ ಈ ಒಂದು ಪರಿಸ್ಥಿತಿಯನ್ನು ಆದಷ್ಟು ಬೇಗ ತಪ್ಪಿಸಿ, ಆಯಾ ಪ್ರಾಂತ್ಯಗಳ ಆಡಳಿತವನ್ನು ಆಯಾ ದೇಶಭಾಷೆಗಳಲ್ಲೇ ನಡೆಸುವಂಥ ಒಂದು ಏರ್ಪಾಡನ್ನು ಜಾರಿಗೆ ತರಬೇಕೆಂದು ಬಹಳ ಹಿಂದಿನಿಂದಲೂ ನಾವೆಲ್ಲರೂ ಹೇಳುತ್ತಲೇ ಬಂದಿದ್ದೇವೆ. ಸರ್ಕಾರದವರು ನಡೆಸತಕ್ಕಂಥ ಆಡಳಿತ ಎಂಥದು ಎನ್ನುವುದು ಒಬ್ಬ ಸಾಮಾನ್ಯ ಮನುಷ್ಯನಿಗೂ ಅರ್ಥವಾಗುವಹಾಗೆ ಇರಬೇಕಾಗಿದ್ದರೆ ಆಯಾ ದೇಶಭಾಷೆಗೆ ಪ್ರಾಧಾನ್ಯತೆಯಿರಲೇಬೇಕಾಗುತ್ತದೆ. ಹಾಗೆ ಮಾಡುವುದರಿಂದ ಒಬ್ಬೊಬ್ಬರಲ್ಲೂ ಇರತಕ್ಕಂಥ ಭಿನ್ನಾಭಿಪ್ರಾಯಗಳು ದೂರವಾಗಿ ಆಡಳಿತ ಸುಲಲಿತವಾಗಿ ನಡೆಯಲು ಅವಕಾಶ ಉಂಟಾಗುತ್ತದೆ. ಈ ದಿವಸ ಸರ್ಕಾರ ನಡೆಸುತ್ತಿರುವಂಥ ಪದ್ಧತಿಯಲ್ಲಿ ಸರ್ಕಾರಕ್ಕೂ ಮತ್ತು ಪ್ರಜೆಗಳಿಗೂ ಒಂದು ಅಂತರ ಏರ್ಪಾಡಾಗಿದೆ. ಇಂಥ ಒಂದು ಅಂತರವೇನಿದೆಯೋ ಇದು ಆದಷ್ಟು ಬೇಗ ಹೋಗಲೇಬೇಕಾಗಿರುತ್ತದೆ.

ಈ ನಾನಾ ಕಾರಣಗಳಿಂದಲೇ ನಾವೀದಿವಸ ಒಂದು ಭಾಷೆಗೆ ಸಂಬಂಧಪಟ್ಟ ಪ್ರದೇಶಗಳೆಲ್ಲಾ ಒಂದಾಗಬೇಕು ಎಂದು ಹೇಳುತ್ತಿದ್ದೇವೆಯೇ ಹೊರತು ಇದಕ್ಕೆ ಮತ್ತೆ ಯಾವ ಕಾರಣವೂ ಇರುವುದಿಲ್ಲ. ಆದರೆ ನಾನು ಹೀಗೆ ಹೇಳಿದರೂ ಕೂಡ ಈ ದಿವಸ ಕನ್ನಡ ಮಾತನಾಡತಕ್ಕಂಥ ಪ್ರದೇಶಗಳು ಎಲ್ಲೆಲ್ಲಿರುತ್ತವೆಯೋ ಅಂಥ ಎಲ್ಲಾ ಪ್ರದೇಶಗಳನ್ನೂ ಅಥವಾ ಈ ಕನ್ನಡ ಭಾಷೆಯನ್ನಾಡತಕ್ಕಂಥ ಜನರು ಎಲ್ಲೆಲ್ಲಿದ್ದಾರೋ ಅವರೆಲ್ಲರನ್ನೂ ಒಂದುಕೂಡಿಸಬೇಕೆಂದಾಗಲಿ ಅಥವಾ ಅಂಥ ಒಂದು ರಾಷ್ಟ್ರವನ್ನು ನಿರ್ಮಾಣಮಾಡುವುದಕ್ಕಾಗಲಿ ಸಾಧ್ಯವಾಗಲಾರದು. ಎಲ್ಲೆಲ್ಲಿ ಈ ಕನ್ನಡ ಭಾಷೆಯೇ ಒಂದು ಪ್ರಾಧಾನ್ಯ ಭಾಷೆಯಾಗಿ ಉಳಿದುಕೊಂಡು ಬಂದಿರುತ್ತದೆಯೋ ಅಂಥ ಪ್ರದೇಶಗಳೆಲ್ಲ ಒಂದು ಆಡಳಿತ ಸೌಕರ್ಯಕ್ಕೆ ಅನುಕೂಲವಾಗಿರುವಂತೆ ಎಲ್ಲೆಲ್ಲಿ ಸೌಕರ್ಯಗಳಿರುತ್ತವೆಯೋ ಅಂಥ ಪ್ರದೇಶಗಳ ಅಕ್ಕಪಕ್ಕದಲ್ಲಿರುವ ಪ್ರದೇಶಗಳಲ್ಲಿ ವಿಲೀನಕರಣವಾಗಲು ಒಂದು ಅವಕಾಶವಿರಲಿ ಅನ್ನುವುದೇ ನನ್ನ ಅಭಿಪ್ರಾಯ. ಆದರೆ ನನ್ನ ಮನಸ್ಸಿನಲ್ಲಿ ಈಗ ಇನ್ನೊಂದು ಪ್ರಶ್ನೆಯುದ್ಭವಿಸಿದೆ. ಹೀಗೆ ಒಂದು ಭಾಷೆಯನ್ನಾಡತಕ್ಕಂಥ ಜನರೆಲ್ಲಾ ಒಂದಾಗಬೇಕೆಂಬ ಬಗ್ಗೆ ಈ ದಿವಸ ಜನರಲ್ಲಿ ಒಂದು ಭಾವನೆ ಇರುವುದಿಲ್ಲ. ಆದಾಗ್ಗೂ ಈಗ ಮೈಸೂರು ಸಂಸ್ಥಾನಕ್ಕೆ ಅಕ್ಕಪಕ್ಕದಲ್ಲಿರುವ ಕೆಲವು ಪ್ರದೇಶಗಳು ಸೇರಿ ಮೈಸೂರು ವಿಸ್ತಾರವಾಗಬೇಕೆಂದು ಹಲವರು ಹೇಳುತ್ತಿದ್ದಾರೆ. ಇದೇ ಸಮಯದಲ್ಲಿ ಕೇಂದ್ರ ಸರ್ಕಾರದವರಿಂದ ರಚಿಸಲ್ಪಟ್ಟಿರುವ ಫಜ್ಲಾಲಿ ಸಮಿತಿಯವರೂ ಕೂಡ ದೇಶಾದ್ಯಂತವೂ ಸಂಚಾರಮಾಡಿ ಯಾವ ಯಾವ ಭಾಗ ಯಾವ ಯಾವ ಭಾಗಕ್ಕೆ ಹೊಂದಾಣಿಕೆಯಾದೀತು ಎನ್ನುವ ಪ್ರಶ್ನೆಯನ್ನು ಕೂಲಂಕಷವಾಗಿ ವಿಮರ್ಶೆ ಮಾಡಿಕೊಂಡು ಆ ಬಗ್ಗೆ ಜನಾಭಿಪ್ರಾಯವನ್ನು ಬೇರೆ ಶೇಖರಣೆ ಮಾಡಿಕೊಂಡು ಹೋಗಿದ್ದಾರೆ. ಅಂದ ಮೇಲೆ ಆ ಸಮಿತಿಯವರು ಅಂಗೀಕರಿಸುವಂಥ ಪ್ರದೇಶಗಳಲ್ಲಿರುವ ಜನರು ಯಾರುಯಾರು ನಮ್ಮ ಮೈಸೂರಿಗೆ ಸೇರಲು ಇಷ್ಟಪಡುತ್ತಾರೋ, ಎಂದರೆ ಯಾರೊಬ್ಬರ ಒತ್ತಾಯವೂ ಇಲ್ಲದೆ ಅವರಾಗಿಗೆಯೇ ಅವರು ಸೇರುವುದಕ್ಕೆ ಇಷ್ಟಪಟ್ಟರೆ, ಅಂಥವರನ್ನು ಸೇರಿಸಿಕೊಳ್ಳಲು ನಮ್ಮ ರಾಜ್ಯಾಂಗದಲ್ಲಿ ಒಂದು ಅವಕಾಶವನ್ನು ನಾವು ಈಗಾಗಲೇ ಕಲ್ಪಿಸಿಕೊಂಡಿರುತ್ತೇವೆ. ಈ ಒಂದು ದೃಷ್ಟಿಯಿಂದಲೂ ಕೂಡ ನಾವು ಆ ಹೊರಗಿನ ಪ್ರದೇಶಗಳಲ್ಲಿರತಕ್ಕಂಥ ಕನ್ನಡಿಗರನ್ನು ನಮ್ಮೊಂದಿಗೆ ಸೇರಿಸಿಕೊಳ್ಳಲೇಬೇಕಾಗಿರುತ್ತದೆ. ಇದಕ್ಕನುಸಾರವಾಗಿ ಬೊಂಬಾಯಿ ಪ್ರಾಂತ್ಯದಲ್ಲಿರುವ ಅನೇಕ ಜನರು "ನಮಗೆ ಇಲ್ಲಿ ಬಹಳ ತೊಂದರೆಗಳಿರುತ್ತವೆ; ನಮಗೆ ಅನೇಕ ಕಷ್ಟನಷ್ಟಗಳುಂಟಾಗಿರುತ್ತವೆ; ನಮಗೆ ತುಂಬಾ ಅನ್ಯಾಯವಾಗುತ್ತಿದೆ" ಎಂದು ಹೇಳಿ ಈ ದಿವಸ ನಮ್ಮ ಮೈಸೂರು ಸಂಸ್ಥಾನಕ್ಕೆ ಸೇರಿಕೊಳ್ಳಲು ಇಷ್ಟವುಳ್ಳವರಾಗಿದ್ದಾರೆ. ಆದರೆ ಈ ರೀತಿಯಾಗಿ ಅವರು ಈ ದಿವಸ ಹೇಳುತ್ತಿರುವುದಕ್ಕೆ ಕಾರಣವಾದರೂ ಪ್ರಾಯಶಃ ಅವರು ಈ ನಮ್ಮ ಮೈಸೂರು ಆಡಳಿತಕ್ಕೆ ಒಳಪಟ್ಟರೆ ಆಗಲಾದರೂ ತಾವು ಇಲ್ಲಿ ಸುಖವಾಗಿರಲು ಒಂದು ಅವಕಾಶ ಸಿಕ್ಕೀತೇನೋ ಎನ್ನುವಂಥಾ ಒಂದು ಸದ್ಭಾವನೆಯಿಂದ ಹೇಳುತ್ತಿದ್ದಾರೆಯೇ ಶಿವಾಯಿ ಅದರಲ್ಲಿ ಮತ್ತೇನೂ ವಿಶೇಷವಿಲ್ಲ. ಇಷ್ಟೇ ಹೊರತು ನಾನಾದರೂ ಈ ದಿವಸ ಆ ಬೊಂಬಾಯಿ ಸರ್ಕಾರದವರನ್ನು ಕುರಿತು 'ನೀವು ಇವರಿಗೆಲ್ಲಾ ಬಹಳ ಅನ್ಯಾಯ ಮಾಡಿದ್ದೀರಿ, ನೀವು ಇವರಿಗೆ ತೊಂದರೆ ಮಾಡಿದ್ದೀರಿ'

(ಶ್ರೀ ಕೆ. ಪಟ್ಟಾಭಿರಾಮನ್)

ಎಂದು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಇದೆಲ್ಲಾ ನಾವು ನಾವುಗಳೇ ನಮ್ಮ ನಮ್ಮ ಅಂತಃಕರಣಗಳಿಗೆ ಹೇಳಿಕೊಳ್ಳುವಂಥ ವಿಚಾರ. ನಾವು ಇಷ್ಟು ದಿವಸವೂ ಭುಜಕ್ಕೆ ಭುಜಕೊಟ್ಟು ಹೋರಾಟ ನಡೆಸಿ, ಆತ್ಮಾರ್ಪಣೆಗಳನ್ನು ಮಾಡಿ, ಸ್ವರಾಜ್ಯ ಸ್ಥಾಪನೆ ಮಾಡಿದ್ದು ಹೀಗೆ ಇಂಥ ವಿಷಯಗಳಿಗೆಲ್ಲಾ ಗುದ್ದಾಟ ಮಾಡುವುದಕ್ಕಾಗಿ ಅಲ್ಲ. ಈ ದಿವಸ ನಾನು ಬೊಂಬಾಯಿ ಪ್ರಾವಿನ್ಸಿನಲ್ಲಿರುವ ಬೇರೆ ಭಾಷೆಯನ್ನಾಡತಕ್ಕ ನಾಲ್ಕು ಜಿಲ್ಲೆಗಳು ಮೈಸೂರಿಗೆ ಸೇರಿಕೊಳ್ಳುವುದರಿಂದ ಮುಂದೆ ಒಳ್ಳೆಯದಾಗುತ್ತದೆಂದೂ ಅಥವಾ ಮದ್ರಾಸ್ ಪ್ರಾವಿನ್ಸಿನಲ್ಲಿರುವ ಕೆಲವು ಭಾಗದ ಜನರು ನಮ್ಮ ಮೈಸೂರಿಗೆ ಸೇರಬೇಕೆಂದು ಹೇಳಿ ಹೀಗೆ ಮಾಡುವುದರಿಂದ ಎಲ್ಲರಿಗೂ ಒಳ್ಳೆಯದಾಗುತ್ತದೆ ಉತ್ತಮವಾದಂಥ ಒಂದು ವಾತಾವಣರ ಉಂಟಾಗುತ್ತದೆ ಎಂದೂ ಹೇಳುವಾಗ, ಈ ಪ್ರಶ್ನೆಯನ್ನು ಅಂಕಿ-ಸಂಖ್ಯೆಗಳಮೇಲೆ ಹೋಲಿಕೆ ಹಾಕಿ, ಈ ಪ್ರಶ್ನೆಯಿಂದ ನಮಗೆ ಲಾಭವೇ ಅಥವಾ ನಷ್ಟವೇ ಎಂದು ಲೆಕ್ಕ ಹಾಕುವುದಕ್ಕೆ ಹೋದರೆ, ಅದೊಂದು ಉತ್ತಮವಾದ ಮಾರ್ಗವಲ್ಲ. ಒಂದು ದೇಶದಲ್ಲಿ ಇತರ ಜನಾಂಗಗಳಿದ್ದು—ಆ ಭಾಗಗಳೆಲ್ಲಾ ಒಂದೇ ಸಮನಾಗಿ, ಸತತವಾಗಿ, ಅಭಿವೃದ್ಧಿಗೆ ಬರುತ್ತಿದ್ದು, ಮತ್ತೆ ಕೆಲವು ಭಾಗದಲ್ಲಿರುವ ಮತ್ತೊಂದು ಜನಾಂಗದವರು ದಿನದಿನಕ್ಕೂ ಹಿಂದುಳಿದು ಹೋಗುತ್ತಿದ್ದರೆ, ಅಂಥ ಹಿಂದುಳಿದ ಪ್ರದೇಶದಲ್ಲಿ ಎಷ್ಟೋ ಪ್ರಭಾವಶಾಲಿಗಳಾದ ಜನ ದ್ದರೂ ಆ ಪ್ರದೇಶಗಳು ಮಾತ್ರ ಅಭಿವೃದ್ಧಿಗೆ ಬರಲಾರವು ಮತ್ತು ಹಾಗೆ ಅಭಿವೃದ್ಧಿಗೆ ಬರುವುದಕ್ಕೆ ಅವಕಾಶವೇ ಇರುವುದಿಲ್ಲವೆಂದು ಹೇಳುತ್ತಿರುವಾಗ, ನಾವು ಅವರು ಹೇಳತಕ್ಕದ್ದರ ಬಗ್ಗೆ ಯಾವ ಅನುಮಾನವನ್ನು ಪಡಲಿಕ್ಕೂ ಸಹ ಕಾರಣವಿರುವುದಿಲ್ಲ, ಅಂಥಾದ್ದಕ್ಕೆ ಅವಕಾಶವೇ ಇಲ್ಲ. ಈ ದಿವಸ ನಾವು ಆ ಬೊಂಬಾಯಿ ಪ್ರಾವಿನ್ಸಿನಲ್ಲಿ ಕನ್ನಡ ಮಾತನಾಡತಕ್ಕ ಜನರಿರುವ ಭಾಗವನ್ನು ಇತರ ಭಾಷೆಯನ್ನಾಡತಕ್ಕ ಜನರಿರುವ ಭಾಗಕ್ಕೆ ಹೋಲಿಸಿ ನೋಡಿದರೆ, ಆ ಜನರ ಅಭಿವೃದ್ಧಿಗೂ ಈ ಕನ್ನಡಿಗರ ಅಭಿವೃದ್ಧಿಗೂ ಏನು ವಿರುಪೇರಾಗಿದೆ ಎನ್ನುವುದನ್ನು ಗಮನಿಸಿದರೆ, ಆಗ ಆ ಜನರು ಹೇಳುವುದು ನ್ಯಾಯ ಎನ್ನತಕ್ಕದ್ದೂ ಗೊತ್ತಾಗುತ್ತದೆ. ಈಗ ನಾವು ಕೊಡಗಿನ ಉದಾಹರಣೆಯನ್ನೇ ತೆಗೆದುಕೊಳ್ಳೋಣ. ಆ ದೇಶದಲ್ಲಿರತಕ್ಕ ಜನರು ಬಹಳ ದಿವಸಗಳಿಂದಲೂ ಮೈಸೂರಿಗೆ ಸೇರಲು ಇಷ್ಟವುಳ್ಳವರಾಗಿರುತ್ತೇವೆಂದು ಹೇಳುತ್ತಿದ್ದಾರೆ. ಆ ರೀತಿಯಾಗಿ ಅವರ ಶಾಸನ ಸಭೆಯಲ್ಲಿ ಕೂಡ ತೀರ್ಮಾನ ಮಾಡಿದ್ದಾರೆ. ಆದರೆ ಈ ದಿವಸ ಅಧಿಕಾರ ವರ್ಗದವರು ಆ ದೇಶದ ಜನಾಭಿಪ್ರಾಯಕ್ಕೆ ವಿರೋಧವಾಗಿ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದಾರೆ. ಈ ವಿಚಾರದಲ್ಲಿ ಯಾರ ಅಭಿಪ್ರಾಯವೇನೇ ಇರಲಿ, ಯಾರ ಭಾವನೆ ಏನೇ ಇರಲಿ, ಅವರನ್ನು ಒತ್ತಾಯಪಡಿಸಿ ನಮ್ಮ ಮೈಸೂರಿಗೆ ನೀವೂ ಕೂಡ ಸೇರಲೇಬೇಕು ಎಂದು ನಾನು ಹೇಳತಕ್ಕವನಾಗಿಲ್ಲ. ಇಷ್ಟು ಮಾತ್ರ ಹೇಳಬಲ್ಲನೇ ಹೊರತು ನಾನು ಎಂದಿಗೂ ಈ ಮೈಸೂರು ವಿಸ್ತಾರವಾಗುವುದೇ ಬೇಡ ಎಂದು ಖಂಡಿತ ಹೇಳುವುದಿಲ್ಲ. ಮೈಸೂರು ವಿಸ್ತಾರವಾಗಲೇಬೇಕು ನಮ್ಮ ದೇಶದ ನೆರೆಹೊರೆಯ ಪ್ರಾಂತ್ಯಗಳಲ್ಲಿ ಒಂದೇ ಭಾಷೆ ಆಡತಕ್ಕ ಜನರು ಮಾತ್ರ, ಯಾವ ತೊಂದರೆಯಾಗಲಿ ಅಥವಾ ಯಾವ ಅನಾನುಕೂಲವಾಗಲೀ ಇರುವುದಿಲ್ಲವೆಂದು ಹೇಳತಕ್ಕಂಥ ಜನರು ಯಾರಿರುತ್ತಾರೋ ಅಂಥವರು ಮಾತ್ರ ನಮ್ಮ ದೇಶಕ್ಕೆ ಸೇರಿಕೊಳ್ಳಲು ಒಂದು ಅವಕಾಶವಿರಲಿ ಎಂದು ಮಾತ್ರ ನಾನು ಹೇಳಲಿಚ್ಛಿಸುತ್ತೇನೆ. ಹೀಗೆ ಮೊದಲಿಂದಲೂ ಒಂದು ಜನಾಂಗ, ಒಂದು ಭಾಷೆ, ಒಂದು ದೇಶವಾಗಿದ್ದಂಥ ಸನ್ನಿವೇಶವು ಕಾರಣಾಂತರಗಳಿಂದ ಮಧ್ಯೆ ಒಡೆದುಹೋಗಿ ಬೇರೆಯವರಂತೆ ಬಾಳುತ್ತಿದ್ದ ಜನಗಳು ಈ ದಿವಸ ತಾವೇತಾವಾಗಿ ಬಂದು ನಮ್ಮೊಡನೆ ಸೇರಿಕೊಂಡು ಬಾಳುತ್ತೇವೆಂದು ಕೇಳುತ್ತಿರುವಾಗ ಅದಕ್ಕೆ ನಾವೇಕೆ ಆಗಬಾರದೆಂದು ಹೇಳಬೇಕು? ಒಂದು ವೇಳೆ ಈ ದಿವಸ ಬೊಂಬಾಯಿ ಪ್ರಾವಿನ್ಸಿಗೆ ಸೇರಿರತಕ್ಕಂಥ ನಾಲ್ಕು ಜಿಲ್ಲೆಗಳು 'ನಾವು ಬೊಂಬಾಯಿ ಪ್ರಾಂತ್ಯದಲ್ಲಿರುವುದಕ್ಕೆ ಆಗುವುದಿಲ್ಲ' ಎಂದು ಹೇಳಿದರೆ, ಹಾಗೆ ಆ ಜನರು ಆ ಸರ್ಕಾರದ ಆಡಳಿತದಲ್ಲಿರುವುದಕ್ಕೆ ವಿರೋಧಮಾಡಿದರೆ, ಹಾಗೆ ನೀವು ಮಾಡಲೇ ಕೂಡದೆಂದು ಅವರಮೇಲೆ ಯಾರೂ ಕೂಡ ಒಂದು ಒತ್ತಾಯ ಹಾಕುವುದಕ್ಕೆ ಆಗುವುದೂ ಇಲ್ಲ. ಈ ಪ್ರಜಾಪ್ರಭುತ್ವ ಸರ್ಕಾರದ ನೀತಿಯೇ ಹಾಗಿದೆ. ಹಾಗೊಂದುವೇಳೆ ಆ ಜನರು ಆ ಬೊಂಬಾಯಿ ಪ್ರಾಂತ್ಯದಲ್ಲಿರುವುದಿಲ್ಲವೆಂದು ಹೇಳಿದರೆ ನಮಗೆ ನಾವೇ ಒಂದು ಪ್ರಶ್ನೆಯನ್ನು ಹಾಕಿಕೊಂಡು ಈ ದಿವಸ ಅವರು ಎಲ್ಲಿಗೆ ಸೇರಲು ಸಾಧ್ಯವಿದೆ ಎನ್ನುವುದನ್ನು ಆಲೋಚನೆ ಮಾಡೋಣ. ಹೀಗೊಂದು ವಿಷಯವನ್ನು ನಾವೇ ಪ್ರಶ್ನೆ ಹಾಕಿಕೊಂಡು ಯೋಚಿಸಿದಲ್ಲಿ ಅವರು ತಮ್ಮ ಅಕ್ಕಪಕ್ಕದ ರಾಜ್ಯವಾದ ಮೈಸೂರಿಗೇ ಸೇರಬೇಕಾಗಿರುತ್ತದೆ. ಇದು ವಿನಾ ಅವರಿಗೆ ಬೇರೆ ಗತ್ಯಂತರವೇ ಇಲ್ಲವೆಂಬುದು ಎಲ್ಲರಿಗೂ ತಿಳಿಯುತ್ತದೆ. ಹೀಗಾಗುವುದೇ ಸೌಜನ್ಯವಾದದ್ದು ಎಂಬುದು ತಾನೇ ಎದ್ದು ಕಾಣುತ್ತಿದೆ. ಅಂದಮೇಲೆ ಆಗ ಈಗಿರತಕ್ಕ ಮೈಸೂರೇ ಮುಂದೆಯೂ ಮೈಸೂರಾಗಿ ಉಳಿಯಬೇಕೆಂದರೆ . . . .

ಶ್ರೀ ಶಿವನಂಜೇಗೌಡ (ಮೈಸೂರು ತಾಲ್ಲೂಕು).—ಹಾಗಾದರೆ ಈ ದಿವಸ ನನಗೂ ನಮ್ಮ ಹಳ್ಳಿಯನ್ನು ಬಿಟ್ಟು ಈ ಬೆಂಗಳೂರಿಗೇ ಬರಬೇಕೆಂಬ ಇಷ್ಟವಿದೆ. ಅದನ್ನೂ ತಾವು ಆಗಲೀ ಎಂದೆ ಹೇಳುತ್ತೀರಾ ?

ಶ್ರೀ ಕೆ. ಪಟ್ಟಾಭಿರಾಮನ್.—ಹಾಗಾದರೆ ತಾವು ನಾನು ಹೇಳತಕ್ಕಂಥ ವಿಷಯವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲವೆಂಬುದಾಗಿ ಗೊತ್ತಾಗುತ್ತಿದೆ. ಬೊಂಬಾಯಿ ಪ್ರಾವಿನ್ಸಿಗೆ 'ಸೇರಿರತಕ್ಕಂಥ ನಾಲ್ಕು ಜಿಲ್ಲೆಗಳು ಈ ದಿವಸ ಮೈಸೂರಿಗೆ ಸೇರಬೇಕೆಂದು ಹೇಳಿದರೆ—ಇದರ ಅರ್ಥ ಅಲ್ಲಿರತಕ್ಕಂಥ ಜನಗಳೆಲ್ಲಾ ಇಲ್ಲಿಗೆ ಬಂದು ಬಿಡುತ್ತಾರೆ; ಆ ಜನರೆಲ್ಲರೂ ಅವರಿಗೆ ಅಲ್ಲಿ ಇರತಕ್ಕಂಥ ಮನೆ-ಮಠ, ಆಸ್ತಿ-ಪಾಸ್ತಿಗಳನ್ನೆಲ್ಲಾ ಅಲ್ಲೇ ಬಿಟ್ಟು ಬಿಟ್ಟು, ಇಲ್ಲಿಗೆ ಬರುತ್ತಾರೆಂಬುದಾಗಿ ತಾವು ಭಾವಿಸಬಾರದು. ಆ ರೀತಿ ಯಾರೂ ಮಾಡುವುದಿಲ್ಲ. ಹೀಗೆ ಹೇಳುವುದರ ಅಭಿಪ್ರಾಯವೇನೆಂದರೆ, ಇಲ್ಲಿಯವರೆಗೂ ಅವರು ಆ ಬೊಂಬಾಯಿ ಸರ್ಕಾರದ ಆಡಳಿತಕೊಳಪಟ್ಟಿದ್ದರು. ಆದರೆ ಇನ್ನು ಮುಂದೆ ಅವರು ನಮ್ಮ ಮೈಸೂರು ಸರ್ಕಾರದ ಆಡಳಿತಕ್ಕೆ ಒಳಪಡುತ್ತಾರೆ. ಇಷ್ಟು ಶಿವಾಯಿ ಅವರು ಯಾರೂ, ತಾವು ಭಾವಿಸಿರುವ ಪ್ರಕಾರ, ಅಲ್ಲಿಂದ ವಲಸೆ ಹೊರಟು ಬರುತ್ತಾರೆಂದು ನಾನು ಹೇಳುತ್ತಿಲ್ಲ. ಈ ಆಡಳಿತದ ವಿಚಾರವನ್ನಾದರೂ ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ—ಈ ಒಂದು ಪ್ರಶ್ನೆಯನ್ನು ತಾವುಗಳೇ ಕೊಂಚ ಸಾವಧಾನದಿಂದ ಪರ್ಯಾಲೋಚಿಸಿ ನೋಡಿದರೆ, ಈ ಹೊತ್ತು ಆ ಜನರು ಕೇಳುತ್ತಿರುವುದು ಅವರಿಗಿರತಕ್ಕಂಥ ಒಂದು ನ್ಯಾಯವಾದ ಹಕ್ಕು ಎನ್ನುವುದು ತಮಗೇ ವೇದ್ಯವಾಗುತ್ತದೆ. ಅದರಲ್ಲಿ ಒಂದು

ದೊಡ್ಡ ವೈಶಿಷ್ಟ್ಯ ಬೇರೆ ಇದೆ. ಈ ವೈಶಿಷ್ಟ್ಯ ವೇನೆಂಬುದನ್ನು ನಿನ್ನೆ ದಿವಸ ಶ್ರೀ ಟಿ. ಸಿದ್ದಲಿಂಗಯ್ಯನವರು ಬಹಳ ಚೆನ್ನಾಗಿ ವರ್ಣನೆ ಮಾಡಿದ್ದಾರೆ. ಅದಕ್ಕಿಂತಲೂ ಚೆನ್ನಾಗಿ ಹೇಳಲು ನನಗೆ ಸಾಧ್ಯವಾಗಲಾರದು. ಈ ಹೊತ್ತು ಆ ಪ್ರದೇಶದ ಜನರು ನಮ್ಮ ಆಡಳಿತಕ್ಕೆ ಏತಕ್ಕೆ ಸೇರಲು ಇಷ್ಟಪಡುತ್ತಿದ್ದಾರೆ ಎಂದು ಕೇಳಿದರೆ, ಆ ಆಡಳಿತದಲ್ಲೇ ಅವರು ಉಳಿದರೆ ಅವರು ಎಷ್ಟೇ ಸಮರ್ಥರಾಗಿದ್ದಾಗ್ಯೂ ಮತ್ತು ಅವರು ಎಷ್ಟೇ ಪ್ರಭಾವಶಾಲಿಗಳಾಗಿದ್ದಾಗ್ಯೂ ಅವರು ಅವರ ಅಭಿವೃದ್ಧಿಯನ್ನು ಅಲ್ಲಿ ಸಾಧಿಸುವುದಕ್ಕಾಗುವುದಿಲ್ಲವೆಂದೂ, ಅವರು ಆ ಕಾರಣದಿಂದ ಈ ದಿವಸ ನಮ್ಮ ಮೈಸೂರಿನ ಆಡಳಿತಕ್ಕೊಳ್ಳಪಟ್ಟರೆ ಅವರ ಹಿತಸಾಧನೆಗಳೆಲ್ಲಾ ಸುಗಮವಾಗಿ ನಡೆಯ ಅವಕಾಶವಾದೀತೇನೋ ಎಂಬ ಒಂದು ಆಶೆ ಆಕಾಂಕ್ಷೆಯಿಂದಲೂ ಹೀಗೆ ಹೇಳುತ್ತಿದ್ದಾರೆ. ಈ ದಿವಸ ಆ ಪ್ರಾಂತ್ಯದಲ್ಲಿ ಅನ್ಯಭಾಷೆಗಳ ಗಡಿಬಡಿಯಲ್ಲಿ ಅವರ ಅಭಿವೃದ್ಧಿ ಕುಂಠಿತವಾಗಿದೆ. ಅವರಿಗೆ ನ್ಯಾಯವಾಗಿ ದೊರಕಬೇಕಾಗಿದ್ದ ಹಕ್ಕು ಬಾಧ್ಯತೆಗಳು ಅವರಿಗೆ ಇಲ್ಲಿಯತನಕ ದೊರೆತಿಲ್ಲ. ಈ ಕಾರಣಗಳಿಂದ ಅವರು ಈ ದಿವಸ ನಮ್ಮ ಮೈಸೂರು ಸರ್ಕಾರದ ಆಡಳಿತಕ್ಕೆ ಸೇರಬೇಕೆಂಬುದಾಗಿ ಇಷ್ಟಪಡುತ್ತಿದ್ದಾರೆ. ವಿಚಾರ ಹೀಗಿರುವಾಗ, ನಾವು ಈ ದಿವಸ ಈ ಪ್ರಶ್ನೆಯನ್ನು ಕಾಸಿನ ದೃಷ್ಟಿಯಿಂದ ನೋಡಿ, ನಮಗೆ ಇದರಿಂದ ನಷ್ಟ ಉಂಟಾಗುತ್ತದೆ, ಆದಕಾರಣ ಅವರು ಎಷ್ಟೇ ತೊಂದರೆಗಳಿದ್ದರೂ ಅಲ್ಲಿಯೇ ಇರಲಿ, ನಾವು ಸುಖವಾಗಿ ಇಲ್ಲಿಯೇ ಇರೋಣ ಎಂದು ಹೇಳತಕ್ಕ ವಾದ ಮುಂದೆ ಎಲ್ಲಿ ಹೋಗುತ್ತದೆ ಎನ್ನುವುದನ್ನೂ ನಾವು ಗಮನಿಸಬೇಕಾಗಿದೆ. ಸ್ವರಾಜ್ಯ ಬಂದನಂತರ ದೇಶದಲ್ಲಿರತಕ್ಕಂಥ ಪ್ರತಿಯೊಂದು ಜನಾಂಗಕ್ಕೂ ಸರಿಸಮಾನವಾದಂಥ ಹಕ್ಕು ಬಾಧ್ಯತೆಗಳಿರಬೇಕೆಂಬುದು ವಿಧಿಯಾಗಿದೆ. ಆ ಪ್ರದೇಶದ ಜನರೂ ಸಹ ಸ್ವರಾಜ್ಯ ಸ್ಥಾಪನೆಗಾಗಿ ಭುಜಕ್ಕೆ ಭುಜ ಕೊಟ್ಟು ಹೋರಾಟ ನಡೆಸಿದ್ದಾರೆ. ತ್ಯಾಗ-ಬಲಿದಾನಗಳನ್ನು ಮಾಡಿದ್ದಾರೆ. ಇಲ್ಲಿಯತನಕ ಅವರು ನಾನಾ ಕಷ್ಟಗಳನ್ನು ಅನುಭವಿಸಿದ್ದಾಯಿತು. ಈ ದಿವಸ ನಮಗೆ ಸ್ವಾತಂತ್ರ್ಯ ಬಂದಿದೆ. ಇನ್ನಾದರೂ ನಮ್ಮ ಬಾಳು ಅಷ್ಟಿಷ್ಟು ಹಸನಾಗಲಿ ಎಂದು ಅವರು ತಮ್ಮ ಕಷ್ಟಸುಖಗಳನ್ನು ಹೇಳಿಕೊಳ್ಳುತ್ತಿರುವಾಗ ಅವರ ಹಕ್ಕುಬಾಧ್ಯತೆಗಳನ್ನು ಅವರಿಗೆ ಕೊಡಲೇಬೇಕಾಗುತ್ತದೆ. ಇದು ಸರ್ಕಾರದವರ ಜವಾಬ್ದಾರಿಗೆ ಸೇರಿರತಕ್ಕಂಥ ವಿಷಯ. ಈಗ ಆ ಬಳ್ಳಾರಿ ಜಿಲ್ಲೆಯ ಏಳು ತಾಲ್ಲೂಕುಗಳನ್ನು ಏತಕ್ಕಾಗಿ ಅವರು ನಮ್ಮ ಮೈಸೂರಿಗೇ ಸೇರಿಸಿದರು ! ಆ ಭಾಗವನ್ನು ನಾವುಗಳು ಯಾರೂ ಕೇಳಿರಲಿಲ್ಲ. ಆ ಪ್ರಶ್ನೆಯನ್ನು ನಮ್ಮ ಮುಖ್ಯ ಮಂತ್ರಿಗಳೇ ಈ ಸಭೆಯಮುಂದೆ ತಂದರು. ಆ ಬಳ್ಳಾರಿ ಜಿಲ್ಲೆ ಮತ್ತು ಅದರ ಏಳು ತಾಲ್ಲೂಕುಗಳು ಎಲ್ಲಿಗೆ ಸೇರತಕ್ಕದ್ದು ನ್ಯಾಯವಾದದ್ದು ಎನ್ನುವ ಅಂಶವನ್ನು ಕೇಂದ್ರ ಸರ್ಕಾರದವರೇ ನಿರ್ಧಾರಮಾಡಿ, ಅವರಿಗೆ ನ್ಯಾಯ ಸಮ್ಮತವಾಗಿ ತೋರಿಬಂದ ಪ್ರಕಾರ, ಮೈಸೂರಿನವರ ಒಪ್ಪಿಗೆ ಅದಕ್ಕೆ ಇದೆಯೇ ಅಥವಾ ಇಲ್ಲವೇ ಎನ್ನತಕ್ಕ ಪ್ರಶ್ನೆಗಳೊಂದನ್ನೂ ಕೇಳದೆ; ಅವರಾಗಿ ಅವರೇ ಆ ಭಾಗಗಳನ್ನು ನಮ್ಮ ದೇಶಕ್ಕೆ ಸೇರಿಸಿಕೊಟ್ಟರು. ಹಾಗೆ ಅವರು ಭಾವಿಸಿರುವಾಗ, "ಆ ಜನರು ನಮ್ಮ ದೇಶಕ್ಕೆ ಬೇಡ, ಅವರೆಲ್ಲ ಆಂಧ್ರಕ್ಕೇ ಹೋಗಲಿ" ಎಂದು ಹೇಳತಕ್ಕ ಪದಗಳೇನಿವೆಯೋ ಅವುಗಳು ನನ್ನ ಮನಸ್ಸಿಗೆ ಅಷ್ಟು ಹಿತವಾಗಿ ಕಾಣುವುದಿಲ್ಲ.

1-30 P.M.

ಇವೊತ್ತು ದೇಶ ಪುನರ್ವ್ಯವಸ್ಥೆಯಾಗಬೇಕಾದರೆ ಎಲ್ಲರೂ ಸೇರಿ ಇದನ್ನು ಮಾಡಬೇಕಾಗಿದೆ. ಈಗ ಕನ್ನಡಿಗರು ನಾಲ್ಕೈದು ಭಾಷೆಗಳು ಮಾತನಾಡುವ ಭಾಗದಲ್ಲಿದ್ದುಕೊಂಡು ನಮಗೆ ಅನ್ಯಾಯವಾಗಿದೆ ಎಂದು ಹೇಳುತ್ತಿದ್ದಾರೆ. ಅಂತಹವರು ಸೇರಬೇಕೆಂದು ಹೇಳುತ್ತಿದ್ದಾರೆಯೇ ವಿನಾ ನಾವು ಹೆಚ್ಚಿನ ಭಾಗವನ್ನು ಮೈಸೂರಿಗೆ ಸೇರಿಸಬೇಕೆಂದು ಹೇಳುತ್ತಾ ಇಲ್ಲ. ಬೊಂಬಾಯಿನ ಮಾತುಂಗದಲ್ಲಿ ಕನ್ನಡ ಮಾತನಾಡುವವರು ಇರುವ ಪ್ರದೇಶವನ್ನು ಮೈಸೂರಿನ ಆಡಳಿತಕ್ಕೆ ಸೇರಿಸಬೇಕೆಂದು ಹೇಳುತ್ತಿಲ್ಲ. ಅಥವಾ ಅದನ್ನು ಸೇರಿಸಿಕೊಳ್ಳಿ ಎಂದು ವಾದಮಾಡುತ್ತಾ ಇಲ್ಲ. ಶ್ರೀಮಾನ್ ಸಿದ್ದಲಿಂಗಯ್ಯನವರು ಕನ್ನಡ ಮಾತನಾಡುವವರನ್ನು ಲಂಡನ್, ಬೊಂಬಾಯಿ, ಕಲ್ಕತ್ತಾ, ಜಂಷದ್‌ಪುರಗಳಲ್ಲಿ ನೋಡಿದೆನೆಂದು ಹೇಳಿದರು. ಎಲ್ಲೆಲ್ಲಿ ಕನ್ನಡ ಮಾತನಾಡುವವರು ಇದ್ದಾರೋ ಆ ಭಾಗವನ್ನೆಲ್ಲಾ ಸೇರಿಸಬೇಕು ಎಂದು ಶ್ರೀಮಾನ್ ಸಿದ್ದಲಿಂಗಯ್ಯನವರು ವಾದಿಸುತ್ತಾ ಇಲ್ಲ. ಒಂದು ಪ್ರಾಂತದಲ್ಲಿ ಸೇರಿಕೊಂಡು ಅದಕ್ಕೆ ಹೊಂದಿಕೊಂಡಿರತಕ್ಕಂಥ ಕನ್ನಡ ಜನ ನಮಗೆ ಬೇಕಿಲ್ಲ. ಇದು ಜನರನ್ನು ಸ್ಥಳಾಂತರ ಮಾಡುವ ಪ್ರಶ್ನೆಯಲ್ಲ, ಜನರು ಊರು ಬಿಟ್ಟು ಬರುವುದಿಲ್ಲ. ಅವರು ಇದ್ದಲ್ಲಿಯೇ ಇರುತ್ತಾರೆ. ಅವರು ಈಗಿರುವ ಆಡಳಿತಕ್ಕೆ ಒಳಪಡದೆ ಬೇರೆ ಆಡಳಿತದಲ್ಲಿ ಇರಬೇಕು. ಮೈಸೂರಿನ ಆಡಳಿತವನ್ನು ಮೆಚ್ಚಿಕೊಂಡು ಮೈಸೂರಿಗೆ ಸೇರುತ್ತೇವೆ ಎಂದು ಸಂತೋಷಪಡುವವರಲ್ಲಿ ನಾನು ಒಬ್ಬ. ಆ ರೀತಿ ಅವರವರಾಗಿ ಬರುವ ಕಾಲದಲ್ಲಿ ಬರಬೇಡಿ ಎನ್ನುವ ವಾದ ಸರಿಯಾಗಿ ಕಾಣುವುದಿಲ್ಲ. ಕರ್ಣಾಟಕ ಪ್ರೊವಿನ್ಷಿಯಲ್ ಕಾಂಗ್ರೆಸ್ ಸಮಿತಿಯವರು ಅಂಕಿ ಸಂಖ್ಯೆಗಳನ್ನು ಅನೇಕ ರೀತಿಯಲ್ಲಿ ಕ್ರೋಡೀಕರಿಸಿ ಭಾವೀ ಕರ್ಣಾಟಕವಾಗಬೇಕೆಂದು ತೀರ್ಮಾನ ಮಾಡಿದ್ದಾರೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಸ್ಪಷ್ಟಪಡಿಸಬೇಕಾಗಿದೆ. ಚಾರಿತ್ರಿಕ ದೃಷ್ಟಿಯಿಂದ ಆ ಭಾಗ ಸೇರಬೇಕು ಈ ಭಾಗ ಸೇರಬೇಕು ಅಲ್ಲಿ ಕನ್ನಡ ಮಾತನಾಡತಕ್ಕಂಥವರು ಜಾಸ್ತಿ ಇದ್ದಾರೆ, ಇವನ್ನೆಲ್ಲಾ ಸೇರಿಸಬೇಕು, ಇವನ್ನೆಲ್ಲಾ ಮೈಸೂರಿನಲ್ಲಿ ಅಂತರ್ಗತಮಾಡಬೇಕು ಎಂಬ ಒಂದು ಪ್ರೇರೇಪಣೆಯುಂಟಾಗಿದೆ. ಕನ್ನಡಭಾಷೆಯಾಡತಕ್ಕ ಜನರು ಎಲ್ಲರೂ ಸೇರಿದರೆ ಆಗ ಸೌಖ್ಯವಾಗುತ್ತದೆ, ಭಾವೀ ಕರ್ಣಾಟಕದಲ್ಲಿ ಎರಡು ಕೋಟಿಗಿಂತಲೂ ಹೆಚ್ಚು ಜನ ಸೇರುವ ಹಾಗಾಗುತ್ತದೆ ಎಂದು ಹೇಳುತ್ತಿದ್ದಾರೆ. ಇದು ಸರಿಯೋ ತಪ್ಪೋ ಎಂಬುದು ಬೇರೆ ಪ್ರಶ್ನೆ. ಇದು ಫಸಲಾಲಿ ಸಮಿತಿಯವರು ಯೋಚನೆ ಮಾಡತಕ್ಕ ವಿಚಾರ. ಈ ಸಂಧರ್ಭದಲ್ಲಿ ಭಾರತ ದೇಶದ ಇನ್ನೊಂದು ಚಿತ್ರವನ್ನು ತಮ್ಮ ಮುಂದೆ ತರುವುದು ಅಗತ್ಯ. ಇವೊತ್ತು ಕೇಂದ್ರ ಸರ್ಕಾರದ ನೀತಿ ಹೇಗಿದೆ ಎಂಬುದನ್ನು ಯೋಚನೆಮಾಡೋಣ. ಅದಷ್ಟು ಜಾಗ್ರತೆಯಾಗಿ ಈ ದೇಶ ಸರ್ವತೋಮುಖವಾಗಿ ಅಭಿವೃದ್ಧಿಯಾಗಬೇಕೆಂಬುದು ಕೇವಲ ಪ್ರಾಂತೀಯ ಸರ್ಕಾರಗಳಿಗೆ ಮಾತ್ರ ಸೇರಿದ್ದು ಕೇಂದ್ರ ಸರ್ಕಾರಕ್ಕೆ ಸೇರಿದ್ದಲ್ಲ ಎನ್ನುವ ನೀತಿ ಮಾಯವಾಗುತ್ತಿದೆ. Finance Minister ಈ ಸಲ ಬಡ್ಜೆಟ್ಟನ್ನು ಮಂಡಿಸುವಾಗ ಮಾತನಾಡತಕ್ಕ ಸಂದರ್ಭದಲ್ಲಿ ಉಚಿತವಾದ ಒಂದು ಮಾತನ್ನು ಬಹಳ ಚೆನ್ನಾಗಿ ಆಡಿದ್ದಾರೆ. ಯಾವುದಾದರೂ ಜವಾಬ್ದಾರಿ ಕೆಲಸವಾಗಬೇಕಾದರೆ, ಅಭಿವೃದ್ಧಿ ಕಾರ್ಯವಾಗಬೇಕಾದರೆ, ಒಂದು ಮಹತ್ವ ಯೋಜನೆಯಾಗಬೇಕಾದರೆ ಎಲ್ಲರೂ ಸೇರಿ

(ಶ್ರೀ ಕೆ. ಪಟ್ಟಾಭಿರಾಮನ್.)

ಕೆಲಸಮಾಡಬೇಕು. ಜನರು ಹಿಂದೆ ಏತಕ್ಕೆ ಸ್ವರಾಜ್ಯ
ಬೇಕು ಎಂದು ಕೇಳುತ್ತಾ ಇದ್ದರು? ಜನಜೀವನದ
ಮಟ್ಟ ಹೆಚ್ಚಿಸಬೇಕು, ಬಡತನ ಜಾಸ್ತಿಯಾಗುತ್ತಿರು
ವುದು ಹೋಗಬೇಕು, ದೇಶದಲ್ಲಿ ಕಲ್ಯಾಣವಾಗಬೇಕು,
ಸರ್ವತೋಮುಖವಾದ ಅಭಿವೃದ್ಧಿ ಆಗಬೇಕು, ಸಂಪ
ದಭಿವೃದ್ಧಿಯಾಗಬೇಕು, ಇವೆಲ್ಲಾ ಆಗಲು ಸ್ವರಾಜ್ಯ
ಬೇಕು ಎಂದು ಹೇಳುತ್ತಿದ್ದರು. ಬೇರೆ ದೇಶಗಳಲ್ಲಿರುವ
ಸಂದರ್ಭಗಳಿಗೂ ನಮ್ಮ ದೇಶಗಳಲ್ಲಿರುವ ಸಂದರ್ಭ
ಗಳಿಗೂ ವ್ಯತ್ಯಾಸವಿದೆ. ಕೇಂದ್ರ ಸರ್ಕಾರದ ಜವಾ
ಬ್ದಾರಿ ಈ ವಿಚಾರದಲ್ಲಿ ಬಹಳ ಹೆಚ್ಚಾಗಿದೆ. 20-30
ವರ್ಷಗಳಿಂದಲೂ ಒಂದು ಕೆರೆಯನ್ನು ಕಟ್ಟಲು ಪ್ರಾಂತ
ಸರ್ಕಾರಗಳಿಗೆ ಕಷ್ಟವಾಗಿದೆ. ಈ ರೀತಿ ದೇಶದಲ್ಲಿರುವ
ಪ್ರತಿ ಭಾಗದ ಸರ್ವತೋಮುಖ ಬೆಳವಣಿಗೆಗೆ ಕೇವಲ
ಪ್ರಾಂತ ಸರ್ಕಾರದ ಜವಾಬ್ದಾರಿ ಮಾತ್ರ ಎನ್ನುವ
ಕಲ್ಪನೆಯನ್ನು ಬಿಟ್ಟರೆ ಬಹಳ ಒಳ್ಳೆಯದು ನಮ್ಮ
ಕ್ಷೇಮ ಇದರಿಂದ ಸಾಧಿಸಿದಂತಾಗುತ್ತದೆ. ಕೇಂದ್ರ
ಸರ್ಕಾರ, ಪ್ರಾಂತ ಸರ್ಕಾರ ಇವೆರಡೂ ಹೊಂದಿ
ಕೊಂಡು ಇಡೀ ಭಾರತ ದೇಶದ ಸರ್ವತೋಮುಖವಾದ
ಬೆಳವಣಿಗೆ ಯಾವ ರೀತಿ ಆಗಬೇಕೆಂಬ ಬಗ್ಗೆ ಒಂದು
ಯೋಜನೆ ಹಾಕಿಕೊಂಡು Five-Year ಅಥವಾ Ten-
Year Planನಲ್ಲಿಟ್ಟುಕೊಂಡು ಕೆಲಸಮಾಡಿದರೆ ದೇಶಕ್ಕೆ
ಅನುಕೂಲನಾಗುತ್ತದೆ. ಇದು ಅಂತರ್ಗತವಾದ
ಮೂಲಭೂತ ಪ್ರಶ್ನೆ. ಒಂದು ವೇಳೆ ಬೊಂಬಾಯಿ
ಪ್ರದೇಶದ ನಾಲ್ಕು ಜಿಲ್ಲೆಗಳು ವಿದ್ಯಾಭ್ಯಾಸ ವಿಚಾರ
ದಲ್ಲಿ ಬಹಳ ಕೆಳಮಟ್ಟದಲ್ಲಿದ್ದರೆ ನಮ್ಮ ಮಟ್ಟಕ್ಕೆ
ಅವರನ್ನು ತರಬೇಕಾದರೆ ಇಂಡಿಯಾ ಸರ್ಕಾರದ
ಜವಾಬ್ದಾರಿ ಇದರಲ್ಲಿರುತ್ತದೆ. ಇಲ್ಲವೇ ಯಾವು
ದಾದರೂ ಒಂದು ಸರ್ಕಾರದ ಜವಾಬ್ದಾರಿ ಇದ್ದೇ
ಇರುತ್ತದೆ. ಆದ್ದರಿಂದ ಈ ಸರ್ಕಾರದ ಜವಾಬ್ದಾರಿ
ಸಹಾ ಇರುತ್ತದೆ. ಇದಕ್ಕೆ ಅಷ್ಟಾಗಿ ಯೋಚನೆಮಾಡ
ಬೇಕಾಗಿಲ್ಲ. ಎಲ್ಲವೂ ಅಭಿವೃದ್ಧಿಯಾಗಬೇಕೆಂಬ
ಒಂದು ದೊಡ್ಡ ಚಿತ್ರವನ್ನು ನಾವು ಹಾಕಿಕೊಳ್ಳ
ಬೇಕು. ಇವರು ನಮ್ಮವರು, ಅವರು ಬೇರೆಯವರು
ಎಂಬ ಭಾವನೆ ಬೆಳೆಸತಕ್ಕದ್ದು ಸರಿಯಲ್ಲ.

ಇನ್ನೊಂದು ವಿಚಾರ. ಕೇಂದ್ರದಲ್ಲಿರುವ ಲೋಕ
ಸಭೆ ಮತ್ತು Council of Statesನಲ್ಲಿ ಪ್ರಾತಿನಿಧ್ಯ
ಯಾವ ರೀತಿ ಇದೆ ಎಂಬುದನ್ನು ಸ್ವಲ್ಪ ಯೋಚನೆ
ಮಾಡೋಣ. ಉತ್ತರ ಪ್ರದೇಶದಿಂದ ಬರತಕ್ಕಂಥ
ಪ್ರತಿನಿಧಿಗಳನ್ನು ಸಣ್ಣ ಸಂಸ್ಥಾನಗಳ ಪ್ರತಿನಿಧಿ
ಗಳೊಡನೆ ಹೋಲಿಸಿದರೆ ಅವರು ಬಹುಮತದಲ್ಲಿರು
ತ್ತಾರೆ. ಒಂದು ದೃಷ್ಟಿಯಿಂದ ದಕ್ಷಿಣ ಹಿಂದೂ
ಸ್ಥಾನಕ್ಕೆ ಅನ್ಯಾಯವಾಗುತ್ತದೆ ಎಂಬ ಮಾತು ನಿಜ
ವಾಗಿದ್ದರೆ ಅಥವಾ ಜನರಲ್ಲಿ ಆ ರೀತಿ ಭಾವನೆ ಲವ
ಲೇಶವಾದರೂ ಇದ್ದರೆ ಅದಕ್ಕೆ ಕಾರಣ ಉತ್ತರ
ಹಿಂದೂಸ್ಥಾನದಲ್ಲಿ ಹೆಚ್ಚಿನ ಜನಸಂಖ್ಯೆ ಇದ್ದು ಅವರ
ವರ ಸ್ಥಿತಿಗತಿಗಳಿಗನುಗುಣವಾಗಿ ಅವರಿಗೆ ಹೆಚ್ಚಿನ
ಪ್ರಾತಿನಿಧ್ಯ ಲೋಕ ಸಭೆಯಲ್ಲಿ ದೊರೆಯುವುದರಿಂದ.
ಇದರಲ್ಲಿ ಮೂಲಭೂತವಾದ ಪ್ರಶ್ನೆ ಏನೆಂದರೆ, ಎಲ್ಲಾ
ಸಂಸ್ಥಾನಗಳಿಗೂ ಸಮಾನವಾದ ಪ್ರಾತಿನಿಧ್ಯ ಕೇಂದ್ರ
ಪಾರ್ಲಿಮೆಂಟಿನಲ್ಲಿರುವುದು ಅತ್ಯಗತ್ಯ. ಸಂಯುಕ್ತ
ಸಂಯೋಜನಾ ಸಂಸ್ಥೆಯೇ ಇದರ ಮೂಲ ತತ್ವ.
ಇದು ಆಗಬೇಕಾದರೆ ಸಂಸ್ಥಾನದ ಪುನರ್ವಿಂಗಡಣೆ
ಯಾಗಬೇಕು. ಜನಸಂಖ್ಯೆಯ ವಿಚಾರದಲ್ಲಿ ಸಮಾನತೆ
ಹೊಂದಿರುವ ಸಂಸ್ಥಾನಗಳನ್ನು ನಿರ್ಮಾಣಮಾಡಿ
ಒಂದೊಂದು ಸಂಸ್ಥಾನಕ್ಕೂ ಸಮಾನವಾದ ಪ್ರಾತಿ
ನಿಧ್ಯವು ಕೇಂದ್ರ ಸಭೆಗಳಲ್ಲಿದ್ದರೆ ಆಗಲೇ ದೇಶಕ್ಕೆ
ಕ್ಷೇಮವಾಗುತ್ತದೆ. ಈ ರೀತಿ ಪ್ರಾತಿನಿಧ್ಯ ಸ್ವರೂಪ
ವಾದಂಥ ಸರ್ಕಾರ ವ್ಯವಸ್ಥೆಯಾಗಬೇಕಾಗುತ್ತದೆ.
ಆಗ ಭಾರತ ದೇಶದಲ್ಲಿ ಸಂತೋಷವುಂಟಾಗುತ್ತದೆ.
ಈ ರೀತಿ ಮಾಡದೇ ಹೋದರೆ ದೇಶದಲ್ಲಿ ಅಶಾಂತಿ
ವುಂಟಾಗುವುದು ಖಚಿತ ಮತ್ತು ಅನಿವಾರ್ಯ. ಈ
ಕಾರಣದಿಂದಲೂ ಕೂಡ $1\frac{1}{2}$ ಕೋಟಿಯಿಂದ ಎರಡು
ಕೋಟಿ ಜನರನ್ನು ಬೇರೆ ಬೇರೆ ಇಡುವುದು ಸಾಧ್ಯವಿಲ್ಲ.
ಈ ಒಂದೇ ಕಾರಣದಿಂದ ಕೇಂದ್ರದಲ್ಲಿ ಎಲ್ಲಾ
ಸಂಸ್ಥಾನಗಳಿಗೂ ಸಮಾನವಾದ ಪ್ರಾತಿನಿಧ್ಯ
ದೊರೆಯುವಂತೆ ಎಲ್ಲಾ ಸಂಸ್ಥಾನಗಳನ್ನು ಬೇಗನೆ
ಪುನರ್ವಿಂಗಡನೆಮಾಡುವುದು ಮತ್ತು ಆ ರೀತಿ ಒಂದು
ಫೆಡರಲ್ ವ್ಯವಸ್ಥೆ ಮಾಡುವುದು ಫಸಲಾಲಿ ಸಮಿತಿ
ಯವರ ಒಂದು ಮೂಲ ಕರ್ತವ್ಯ.' ಈಗ ದಕ್ಷಿಣ ಹಿಂದೂ
ಸ್ಥಾನದಲ್ಲಿ ಕೇಂದ್ರದಲ್ಲಿ ಸಮಾನವಾದ ಪ್ರಾತಿನಿಧ್ಯ
ತಮಗೆ ಬರುತ್ತಾ ಇಲ್ಲವೆಂಬ ಒಂದು ದೊಡ್ಡ ಕೂಗು
ಇದೆ. "ದಕ್ಷಿಣ ಹಿಂದೂಸ್ಥಾನಕ್ಕೆ ದೊರೆಯಬೇಕಾದಂಥ
ನ್ಯಾಯ ದೊರೆಯುತ್ತಾ ಇಲ್ಲವೆಂಬ ಕೂಗು ಇದೆ.
ಅದನ್ನು ಅಷ್ಟಾಗಿ ತೃಣೀಕರಿಸುವ ಅಥವಾ ಅಲ್ಲಗಳೆ
ಯುವ ಹಾಗಿಲ್ಲ. ಇದು ಸರಿಹೋಗಬೇಕಾದರೆ ಒಂದು
ಸಂಯುಕ್ತ ವ್ಯವಸ್ಥೆಯ ರಾಜ್ಯಾಂಗವಾಗಬೇಕು. ಈಗ
A, B, C ಎಂಬುದಾಗಿ ಮೂರು ತರಹ ಸಂಸ್ಥಾನ
ಗಳನ್ನು ಇಟ್ಟುಕೊಳ್ಳುವುದಕ್ಕೆ ಸಾಧ್ಯವಿದೆಯೇ ಎಂಬ
ದೊಡ್ಡ ಪ್ರಶ್ನೆ ಎಲ್ಲ ಮಾನ್ಯ ಸಭೆಗಳ ಮುಂದೆಯೂ ಇದೆ
ಎಂಬುದು ಇದನ್ನು ಒಂದು ವಿಶಾಲ ದೃಷ್ಟಿಯಿಂದ
ಯೋಚನೆ ಮಾಡುವಾಗ ಅರ್ಥವಾಗುತ್ತದೆ. ಈ
ರೀತಿ ಇದು ಒಂದು ದೊಡ್ಡ ಪ್ರಶ್ನೆಯಾಗಿರುವಾಗ
ನಾವು ಮೈಸೂರಿನವರು ಬೇರೆ ಎಂದು ಹೇಳುವುದಕ್ಕೆ
ಬದಲಾಗಿ ಒಂದು ದೊಡ್ಡ ಚಿತ್ರದ ಮಧ್ಯೆ ಸೇರಿ
ಕೊಂಡು, ಅಂದರೆ ಒಂದು ಸರ್ವಾಂಗ ಸುಂದರ
ವಾದಂಥ ಹಿಮವತ್ಪರ್ವತದಿಂದ ಹಿಡಿದು ಕನ್ಯಾ
ಕುಮಾರಿಯವರೆಗೆ ಇರುವ ಅನೇಕ ಅಂಗಾಂಗಗಳಲ್ಲಿ
ಮೈಸೂರು ಒಂದು ಅಂಗವಾಗಿದ್ದುಕೊಂಡು,
ಕಂಗೊಳಿಸುವುದು ಬಹಳ ಚೆನ್ನಾಗಿರುತ್ತದೆ. ಹಾಗೆ
ಮಾಡಿದರೆ ಸರ್ವಾಂಗ ಸುಂದರವಾದಂಥ ಭಾರತ
ಮಾತೆಗೆ ಮೈಸೂರು ಒಂದು ಮುಕುರದ ಹಾಗೆ,
ಒಂದು ರತ್ನದ ಹಾಗೆ, ಒಂದು ಸರ್ವಾಂಗ ಸುಂದರ
ವಾದ ಭವ್ಯ ಚಿತ್ರವನ್ನು ಮಾಡುವುದಕ್ಕೆ ಫಸಲಾಲಿ
ಸಮಿತಿಯವರು ಹೊರಟಿದ್ದಾರೆ. ಇಂಡಿಯಾ ದೇಶದ
ಭೂಪಟವನ್ನು ಸ್ವಲ್ಪ ನೋಡಿದರೆ, ಭಾವೀಕರ್ಣಾ
ಟಕ ಮತ್ತು ವಿಶಾಲ ಮೈಸೂರು—ಯಾವ ಪದವನ್ನು
ಉಪಯೋಗಿಸಿದರೂ ನನ್ನ ಕಲ್ಪನೆಯಲ್ಲಿ ವ್ಯತ್ಯಾಸ
ಕಾಣುವುದಿಲ್ಲ—ಬಹಳ ಪ್ರಾಮುಖ್ಯವಾದ ಭಾಗ.
ನಮ್ಮ ಭವಿಷ್ಯದೇಶ ಉನ್ನತವಾಗಿ ಬೆಳೆದು,
ಮೈಸೂರು ದೇಶ, ವಿಸ್ತಾರ ಮೈಸೂರು, ವಿಶಾಲ
ಮೈಸೂರು ಆಗುವುದು ಅಗತ್ಯ. ಈ ವೈಶಾಲ್ಯ
ಬರುವಾಗ ಭಾಷಾದೃಷ್ಟಿಯಿಂದ ನೆರೆಹೊರೆಯಲ್ಲಿರತಕ್ಕ
ಭಾಗವನ್ನು ಸೇರಿಸುವುದು ಒಳ್ಳೆಯದು. ಈ ವಿಚಾರ
ದಲ್ಲಿ ಒಂದು ಮಾತ್ರ ಹೇಳಬಲ್ಲೆ. ನನಗೆ ತೋರುವ
ಹಾಗೆ, ಈಗಿನ ಸ್ಥಿತಿಗತಿಗಳನ್ನು ನೋಡಿದರೆ, ದೇಶದ
ಕೂಗು ನೋಡಿದರೆ, ಈ ರೀತಿಯಾಗಿ ಪುನರ್ವ್ಯವಸ್ಥೆ
ಯಾಗುವುದು ಅನಿವಾರ್ಯವೆಂದು ಕಾಣುತ್ತದೆ. ಹೀಗೆ
ಮಾಡುವುದು ಬುದ್ಧಿವಂತಿಕೆಯೆಂದು ಕಾಣುತ್ತದೆ.
ವೈಯಕ್ತಿಕವಾದ ಅಭಿಪ್ರಾಯ ಏನೇ ಇರಲಿ, ಕಾಲ
ಧರ್ಮ ಹೀಗೆ ಇರುವಾಗ ಒಂದು ಪ್ರಯೋಗವನ್ನು
ಆಗುಮಾಡಿ ನೋಡೋಣ. ಮೊದಲಿನಿಂದಲೂ ನಮ್ಮ
ದೇಶ ಒಂದು composite State ಅಂದರೆ ಅನೇಕ
ಪ್ರಾಂತಗಳಿಂದ ಅನೇಕ ತರಹ ಜನ ಉತ್ತರ ಹಿಂದೂ

ಸ್ಥಾನದಲ್ಲಿ ಮತ್ತು ದಕ್ಷಿಣ ಹಿಂದೂಸ್ಥಾನದಲ್ಲಿದ್ದಂಥ ಜನಸ್ತೋಮ ಇಲ್ಲಿಗೆ ಬಂದು ನೂರಾರು ವರ್ಷಗಳಿಂದ ಈ ಸಂಸ್ಥಾನ ಬೆಳೆದುಕೊಂಡು ಬಂದಿದೆ ಎಂದು ಮುಖ್ಯ ಮಂತ್ರಿಗಳು ಹೇಳಿ ಹೆಮ್ಮೆ ಪಟ್ಟರು. ಅದು ನಿಜವೆಂದು ನಾನು ಒಪ್ಪಿಕೊಳ್ಳುತ್ತೇನೆ. ನಮ್ಮ ಹೆಮ್ಮೆ ಹೋಗದ ಹಾಗೆ ನಮ್ಮ ಗುಣವನ್ನುಳಿಸಿಕೊಳ್ಳುವ ರೀತಿಯಲ್ಲಿ ನಮ್ಮ ಸಂಸ್ಥಾನವನ್ನು ಬೆಳೆಸುವುದಕ್ಕೆ ಅವಕಾಶವುಂಟು. ಪ್ರಾಯಶಃ ಭೂಗರ್ಭದಲ್ಲಿ ಅಡಗಿರತಕ್ಕಂಥ ಸಂಪತ್ತು ಏನಿದೆ ಎಂದು ಹೇಳುವುದು ಬಹಳ ಕಷ್ಟ. ರಿಪೋರ್ಟನ್ನು ನೋಡಿದರೆ ನಮ್ಮ ಮನಸ್ಸಿನಲ್ಲಿ ಭಾಸವಾಗುತ್ತದೆ. ಸ್ಕೂಲುಗಳಿಲ್ಲ, ರಸ್ತೆಗಳಿಲ್ಲ ಎಂದು ಹೇಳುತ್ತಿದ್ದಾರೆ. ಇದು ಸರಿಯೇ ತಪ್ಪೇ ಎಂದು ನಾನು ಹೇಳುವುದಿಲ್ಲ. ಅದಕ್ಕಿಂತ ಜಾಸ್ತಿಯಾಗಿ ಈಗತಾನೇ ಕೆಲಸ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ, ಐದಾರು ವರ್ಷಗಳ ಹಿಂದೆಯೇ ಈ ಮಾತುಗಳನ್ನು ಹೇಳಿದ್ದರೆ ಒಪ್ಪಿಕೊಳ್ಳಬಹುದಿತ್ತು. ಆದರೆ ಐದಾರು ವರ್ಷಗಳಲ್ಲಿ ಈ ಮಹಾ ಪ್ರಯತ್ನಗಳನ್ನು ಮಾಡಿ ಪಾಂಚವಾರ್ಷಿಕ ಯೋಜನೆಗಳನ್ನು ಹಾಕಿಕೊಂಡು ದೇಶವನ್ನು ಕಟ್ಟಲಿಕ್ಕೆ ಹೊರಟಿದ್ದಾರೆ. ಕೆಲವು ಕಡೆ ಅಭಿವೃದ್ಧಿ ಕಾರ್ಯಗಳು ಜಾಗ್ರತೆಯಾಗಿವೆ, ಕೆಲವು ಕಡೆ ನಿಧಾನವಾಗಿವೆ. ಹಾಗೆ ಆಗುವುದು ಸ್ವಾಭಾವಿಕ. ಇಂತಹ ಮಹತ್ಕಾರ್ಯದಲ್ಲಿ ನಾವು ಕೆಲಸಮಾಡುವಾಗ ಯಾರೇ ಆಗಲೀ ಜನಗಳ ಆಕಾಂಕ್ಷೆಗಳಿಗೆ ವಿರೋಧವಾಗಿ ಹೋಗುವುದು, ಈಗಿನ ಕಾಲಕ್ಕೆ ಸರಿಹೊಂದುವುದಿಲ್ಲ. ವೈಯಕ್ತಿಕ ಅಭಿಪ್ರಾಯಗಳನ್ನು ಬ್ಬತ್ತಟ್ಟಿಗೆ ಇಟ್ಟು ಇಡೀ ಚಿತ್ರವನ್ನು ಮನಸ್ಸಿನಲ್ಲಿಟ್ಟುಕೊಂಡು ಕೆಲಸಮಾಡುವುದು ಅನಿವಾರ್ಯವೆಂದು ತೋರುತ್ತದೆ. ನಿನ್ನೆ ಬೆಳಿಗ್ಗೆ ಮುಖ್ಯ ಮಂತ್ರಿಗಳ ಹೇಳಿಕೆಯನ್ನು ಒಂದೊಂದಾಗಿ ಓದುತ್ತಾ ಬಂದೆ. ಒಂದು ಕಡೆ ಬಹಳ ಚೆನ್ನಾಗಿ ಹೇಳಿದ್ದಾರೆ. ಗದುಗಿನ ವೀರನಾರಾಯಣನನ್ನು ನೋಡಿ ಈ ಭಾಗ ನಮ್ಮ ಮೈಸೂರಿಗೆ ಸೇರುವುದಾದರೆ ಯಾರು ಬೇಡ ಎಂದು ಹೇಳುತ್ತಾರೆ ಇನ್ನೊಂದು ಕಡೆ ಲಕ್ಷ್ಮೀನಾರಾಣಪ್ಪನನ್ನು ನೋಡಿ ಈ ಭಾಗ ಮೈಸೂರಿಗೆ ಸೇರುವುದಾದರೆ ಯಾರು ಬೇಡ ಎಂದು ಹೇಳುತ್ತಾರೆ ಎಂಬುದಾಗಿ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಮಧ್ಯೆ ಕೆಲವು ತೊಡಕುಗಳು ಇರಬಹುದು. ಊರಿಂದೂರಿಗೆ ಎಷ್ಟು ದೂರ ಆಗುತ್ತದೆ ಎಂಬ ಪ್ರಶ್ನೆ ಬರುತ್ತದೆ. ಶ್ರೀ ಲಿಂಗಣ್ಣನವರಿಗೆ ಒಂದು ಪ್ರಶ್ನೆಯನ್ನು ಹಾಕುತ್ತೇನೆ. ಬೆಂಗಳೂರಿಗೂ, ಸಾಗರ ತಾಲ್ಲೂಕಿನ ಕಡೆಯ ಗ್ರಾಮಕ್ಕೂ ಎಷ್ಟು ದೂರವಾಗುತ್ತದೆ ! ಬೆಂಗಳೂರಿನಿಂದ ಸುಮಾರು 300 ಮೈಲಿ ದೂರವಾಗಬಹುದು. ಈ ಕಾಲದಲ್ಲಿ ಈ ರೀತಿ ದೂರವಿರುವುದು ಹೆಚ್ಚಲ್ಲ. ಆದ್ದರಿಂದ ಸಂಸ್ಥಾನಗಳ ಪುನರ್ವಿಂಗಡಣೆಯಾಗುವುದು ಅಗತ್ಯ ಮತ್ತು ಅನಿವಾರ್ಯವಾಗಿದೆ. ಆಗ ಭಾಷೆ ಪ್ರಾಧಾನ್ಯವಾಗುವುದು ಸಹಜ. ನಾನು ಒಂದು ತತ್ವದಲ್ಲಿ ನಂಬಿಕೆ ಇಟ್ಟುಕೊಂಡಿದ್ದೇನೆ. ಸಾಮಾನ್ಯ ಮನುಷ್ಯನಿಗೆ ಸಹಾಯಕವಾಗುವ ಒಂದು ಮೂಲಭೂತ ಸ್ಥಿತಿಯು ಸರ್ಕಾರದ ಪದ್ಧತಿಯಲ್ಲಿ ಬರಬೇಕು ಎಂಬುದಾಗಿ ಸತತವಾಗಿ ದೇಶದಲ್ಲಿ ಕಷ್ಟ ಪಟ್ಟಿದ್ದೇವೆ. ಅದೇ ಸ್ವದೇಶೀ ಸರ್ಕಾರ, ಅದೇ ಸ್ವರಾಜ್ಯವೆಂದು ಹೇಳಬಹುದು. ಮಹಾತ್ಮ ಗಾಂಧಿಯವರು ಅದಕ್ಕೆ ಸಮರ್ಥನೆ ಕೊಟ್ಟಿದ್ದಾರೆ. ಪಂಡಿತ್ ಜವಹರ್‌ಲಾಲ್ ನೆಹರೂ ಅವರಿಗೂ ಶ್ರೀ ಎಸ್. ನಿಜಲಿಂಗಪ್ಪನವರಿಗೂ ಆಗಿರತಕ್ಕ ಪತ್ರ ವ್ಯವಹಾರ ನೋಡಿದ್ದೇವೆ. ಪಂಡಿತ್ ಜವಹರ್‌ಲಾಲ್ ನೆಹರೂ ಅವರು ದೇಶದ ನಾಡಿ ಪರೀಕ್ಷೆ ಮಾಡಿದ್ದಾರೆ. ಅದರಂತೆ ಈ ದಿವಸ ಪ್ರಾಂತಗಳ ಪುನರ್ವಿಂಗಡಣೆಯಾಗಬೇಕು. ಈ ರೀತಿ ಆಗಬೇಕಾದ ಕಾಲದಲ್ಲಿ ವೈಯಕ್ತಿಕ ಅಭಿಪ್ರಾಯವೇನೇ ಇರಲಿ ಅದನ್ನು ಮೂಲೆಗೆ ಒತ್ತರಿಸಿ ವಿಶಾಲ ಮೈಸೂರು ಆಗಬೇಕು. ಶ್ರೀ ಎ. ಭೀಮಪ್ಪ ನಾಯಕರು Constituent Assembly ಯಲ್ಲಿ ಒಂದು ನಿರ್ಣಯವನ್ನು ತಂದು Greater Mysore ವಿಶಾಲ ಮೈಸೂರು ಆಗಬೇಕು ಎಂಬ ಕಲ್ಪನೆ ಕೊಟ್ಟರು. ಆ ಕೀರ್ತಿ ಅವರಿಗೆ ಸಲ್ಲಲಿ, ನನಗೆ ಸಂತೋಷ. ಈ ವಿಶಾಲ ಚಿತ್ರವನ್ನು ಮನಸ್ಸಿನಲ್ಲಿಟ್ಟುಕೊಂಡು ಕಾಲಗತಿಗೆ ಸರಿಯಾಗಿ ಹೊಂದಿಕೊಂಡು, ಮೈಸೂರು ಮೊದಲಿನಿಂದಲೂ ಇತರ ಸಂಸ್ಥಾನಗಳಿಗೆ ಆದರ್ಶವಾಗಿ ಬೆಳೆದುಕೊಂಡು ಬಂದಿರುವ ಹಾಗೆ ಈಗಲೂ ಮೈಸೂರಿನ ವಿಧಾನ ಸಭೆಯವರು ಆ ಸ್ಥಾನವನ್ನು ಬೇರೆಯವರಿಗೆ ಬಿಟ್ಟುಕೊಡಬಾರದು ಎಂದು ಹೇಳಿ, ನನಗೆ ಔದಾರ್ಯವನ್ನು ತೋರಿಸಿದ ತಮಗೂ ಮತ್ತು ಈ ಸಭೆಯವರಿಗೂ ನಾನು ಋಣಿ ಎಂದು ಹೇಳಿ, ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ).—ಅಧ್ಯಕ್ಷರೇ, ಈ ಮಾನ್ಯಸಭೆಯ ಮುಂದೆ ಚರ್ಚೆಗಿರತಕ್ಕ ವಿಷಯ ಮೈಸೂರು ಸರ್ಕಾರದವರು ನಿಯಮಿಸಿದ್ದಂಥ ಅಂಕಿಅಂಶಗಳ ಸಮಿತಿಯವರು ನಮ್ಮ ಮುಂದೆ ಒದಗಿಸಿರತಕ್ಕ ವರದಿ. ಈ ಅಂಕಿಅಂಶಗಳನ್ನು ನಮಗೆ ಒದಗಿಸಿರತಕ್ಕದ್ದು ಕೂಡ ಕೇಂದ್ರ ಸರ್ಕಾರದವರು ಪ್ರಾಂತ್ಯ ಪುನರ್ವಿಂಗಡಣಾ ಸಂಬಂಧದಲ್ಲಿ ನೇಮಿಸಿದ್ದಂಥ ಫಸಲಾಲಿ ಕಮಿಷನ್ನಿನವರು ನಮ್ಮ ಸಂಸ್ಥಾನದ ವಿಷಯದಲ್ಲಿ ಹಾಗೂ ಅಕ್ಕಪಕ್ಕದ ಭೂಭಾಗಗಳ ವಿಷಯದಲ್ಲಿ ಯಾವ ರೀತಿಯ ಪರಿವರ್ತನೆಯನ್ನು ಅಥವಾ ಪುನರ್ವಿಂಗಡಣೆಯನ್ನು ಮಾಡಬೇಕೆಂಬುದಕ್ಕೆ ಸಹಾಯಕವಾಗಿ ಸಾಕ್ಷ್ಯಸಾಹಿತ್ಯವನ್ನು ಪಡೆಯುವುದಕ್ಕೆ ಪ್ರಯತ್ನಪಡುತ್ತಿರುವ ಸನ್ನಿವೇಶದಲ್ಲಿ ನಮ್ಮ ಸರ್ಕಾರದವರು ನಮ್ಮ ಈ ಮಾನ್ಯ ಸಭೆಯ ಸದಸ್ಯರಿಗೆ ಹೆಚ್ಚಿನ ಅಂಕಿಅಂಶಗಳಿಂದ ಕೂಡಿದಂಥ ಮತ್ತು ಆಧಾರಭೂತವಾದಂಥ ರೀತಿಯಲ್ಲಿ ಅವರುಗಳು ಒಂದು ಅಭಿಪ್ರಾಯವನ್ನು ಕೊಡುವುದಕ್ಕೆ ಒಂದು ಸಮಿತಿಯನ್ನು ನೇಮಿಸಿ, ಅವರು ಈ ದಿವಸ ನಮ್ಮ ಮುಂದೆ ಅಂಕಿಅಂಶಗಳ ಒಂದು ವರದಿಯನ್ನು ಇಟ್ಟಿದ್ದಾರೆ. ಈ ವರದಿಯ ಚರ್ಚೆಯ ಸಮಯದಲ್ಲಿ ನಾವು ಈ ಶಾಸನಸಭೆಯ ಕಾನೂನುಗಳ ಚೌಕಟ್ಟಿನಲ್ಲಿ ಮಾತನಾಡಬೇಕಾದರೆ ಕೇವಲ ನಮ್ಮ ಅಭಿಪ್ರಾಯವನ್ನು ಈ ಅಂಕಿಅಂಶಗಳ ವಿಷಯಕ್ಕೆ ಮಾತ್ರ ಸಂಬಂಧಿಸಿದಂತೆ ಹೇಳಬೇಕಾಗುತ್ತದೆ. ಆದರೂ ಈವರೆಗೆ ಮಾತನಾಡಿರತಕ್ಕ ಮಾನ್ಯ ಸಭಾಸದಸ್ಯರ ಭಾಷಣಗಳನ್ನು ನೋಡಿದುದೇ ಆದರೆ, ಅನೇಕರು ಅವರ ಚರ್ಚೆಯನ್ನು, ಅವರ ಅಭಿಪ್ರಾಯಗಳನ್ನು ಈ ಅಂಕಿಅಂಶಗಳ ವಿಷಯಕ್ಕೇ ಹೊಂದಿಸದೆ, ಬೇರೆ ಯಾವಯಾವ ಉದ್ದೇಶಗಳನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದರೋ ಅದನ್ನೆಲ್ಲಾ ಸೇರಿಸಿ ಈ ಸಭೆಯಲ್ಲಿ ಹೇಳಿದ್ದಾರೆ. ಆದ್ದರಿಂದ ನಾನೂ ಕೂಡ ನನ್ನ ಅಭಿಪ್ರಾಯವನ್ನು ತಿಳಿಸಬೇಕಾಗಿರುವ ಈ ಸಮಯದಲ್ಲಿ ಪ್ರಾಸಂಗಿಕವಾಗಿ ಕೆಲವು ಹಿನ್ನೆಲೆಗಳನ್ನು ಹೇಳಬೇಕಾದ್ದಂತೂ ಅನಿವಾರ್ಯ. ಈ ದೃಷ್ಟಿಯಿಂದ ನಾನು ಕೆಲವು ಅಂಕಿಅಂಶಗಳನ್ನು ತಿಳಿಸಬೇಕಾಗಿದೆ.

ಮಾನ್ಯ ಸಭಾಪತಿಗಳೇ, ಇಲ್ಲಿ ಮಾತನಾಡಿದ ಕಾಂಗ್ರೆಸ್ಸಿನ ಶಾಸನಸಭಾ ಸದಸ್ಯರು ಕೆಲವರು ಹಾಗೂ ಈ ಸಭೆಯಲ್ಲಿರತಕ್ಕ ವಿರೋಧಪಕ್ಷದ ಸದಸ್ಯರು ಎಲ್ಲರೂ ಕೂಡ ನಮಗೆ ಬೆರಳಿಟ್ಟು ತೋರಿಸುತ್ತಿರುವುದು ಕಾಂಗ್ರೆಸ್ಸಿನ ನಿಲುವು ಹೀಗಿದೆ, ಕಾಂಗ್ರೆಸು ಭಾಷೆಗಳ ಮೇಲೆ ಪ್ರಾಂತ್ಯಗಳ ರಚನೆಗೆ ಒಪ್ಪಿಕೊಂಡಿದೆ

(ಶ್ರೀ ಎ. ವಿ. ನರಸಿಂಹರೆಡ್ಡಿ.)

ಆದ್ದರಿಂದ ಅದನ್ನು ಕಾಂಗ್ರೆಸ್ಸಿನವರು ಆಡಳಿತ ಮಾಡುತ್ತಿರುವಾಗ ವಿರೋಧಮಾಡುವುದು ನೈತಿಕ ವಾಗಿ ಒಪ್ಪಿಗೆಯಾಗುವುದಿಲ್ಲ ಎಂಬುದು. ಅವರೆಲ್ಲರೂ ಈ ರೀತಿ ಹೇಳುವಾಗ, 1947 ರ ಹಿಂದೆ ಕಾಂಗ್ರೆಸ್ಸಿನವರು ಯಾವ ನಿಲುವನ್ನಿಟ್ಟುಕೊಂಡಿದ್ದರೋ ಅದನ್ನು ಹೇಳುತ್ತಿದ್ದಾರೆಯೇ ಹೊರತು ಅಲ್ಲಿಂದೀಚೆಗೆ ವಿಷಯಗಳು ಹೇಗೆ ಬದಲಾವಣೆಯಾಗಿವೆ ಯೆಂಬುದನ್ನು ಅವರು ತಿಳಿಸುವುದಕ್ಕೆ ಪ್ರಯತ್ನ ಮಾಡಲಿಲ್ಲ. ಮುಖ್ಯವಾದದ್ದು, ನಮ್ಮ ಕಾಂಗ್ರೆಸ್ಸಿನವರು 1953 ನೆಯ ಇಸವಿಯಲ್ಲಿ ಜನವರಿ ತಿಂಗಳಿನಲ್ಲಿ ನಾನಲ್ ನಗರದಲ್ಲಿ ನಡೆದಂಥ ಕಾಂಗ್ರೆಸ್ ಮಹಾಧಿವೇಶನದಲ್ಲಿ ಪ್ರಾಂತ್ಯವಿಂಗಡಣೆಗೆ ಸಂಬಂಧಪಟ್ಟಂತೆ ಮಾಡಿರುವ ನಿರ್ಣಯ. ಅಲ್ಲಿಯತನಕ ಹಿಂದೆ ಕಾಂಗ್ರೆಸ್ ಸಂಸ್ಥೆಗಳು ಕೇಂದ್ರ, ಹಾಗೂ ಪ್ರಾಂತೀಯ ಸಂಸ್ಥೆಗಳು ಯಾವ ನಿಲುವನ್ನು ತೆಗೆದುಕೊಂಡಿದ್ದವೋ ಆ ನಿಲುವನ್ನು ಬದಲಾಯಿಸಿರುವುದು ಆ ನಿರ್ಣಯದಲ್ಲಿ ನಮಗೆ ಕಾಣುತ್ತದೆ. ಅದನ್ನು ನಾನು ಸೂಕ್ಷ್ಮವಾಗಿ ಒತ್ತಿಹೇಳಬಯಸುತ್ತೇನೆ. ಅಲ್ಲಿಯವರೆಗೆ ಭಾಷಾವಾರಾಗಿ ಪ್ರಾಂತ್ಯರಚನೆ ಮಾಡುತ್ತೇವೆಂದು ಹೇಳಿ ಯಾವ ನಿರ್ಣಯನ್ನು ಒಪ್ಪಿಕೊಂಡಿದ್ದರೋ ಆ ನಿರ್ಣಯವು ಪುನರ್ವಿಮರ್ಶೆಯಾಗಿ ಕಾಂಗ್ರೆಸ್ಸಿನವರು ಆ ನಿಲುವನ್ನು ಬದಲಾಯಿಸಿಕೊಂಡಿದ್ದಾರೆ. ಆದ್ದರಿಂದ ನಾನಲ್ ನಗರದಲ್ಲಿ ಆದಂಥ ನಿರ್ಣಯದ ಮುಖ್ಯಾಂಶಗಳನ್ನು ನಾವು ಗಮನಿಸಬೇಕು. ಅದರಲ್ಲಿ ಅವರು ಭಾಷಾವಾರು ಪ್ರಾಂತ್ಯರಚನೆಯ ಹೆಸರು ಬಿಟ್ಟು ಪ್ರಾಂತ್ಯಗಳ ಪುನರ್ವಿಂಗಡಣೆಯೆಂಬ ಹೊಸ ಹೆಸರನ್ನಿಟ್ಟರು. ಈ ವಿಷಯವನ್ನು ಏಕೆ ಹೇಳುತ್ತಿದ್ದೇನೆಂದರೆ, ಕಾಂಗ್ರೆಸ್ಸಿನವರು ಸ್ವಾತಂತ್ರ್ಯ ಚಳವಳಿಯ ಕಾಲಗಳಲ್ಲಿ ಜನತೆಯ ಬೆಂಬಲವನ್ನು ಗಳಿಸುವುದಕ್ಕೆ ಕಾಂಗ್ರೆಸ್ ಸಂಸ್ಥೆಗಳನ್ನು ಆಯಾ ಪ್ರಾಂತ್ಯಗಳ ಭಾಷೆಯಮೇಲೆ ಹೆಸರಿಟ್ಟು ಕರೆದರು. ಹೀಗೆಮಾಡಿದ್ದು, ಕಾಂಗ್ರೆಸ್ಸಿನವರು ಅಧಿಕಾರಕ್ಕೆ ಬಂದಮೇಲೆ ಬಹು ರೀತಿಯಲ್ಲಿ ಅಥವಾ ಭಿನ್ನಾಭಿಪ್ರಾಯ ಬಗ್ಗೆ ರೀತಿಯಲ್ಲಿ ತಮ್ಮ ನಿಲುವನ್ನು ಬದಲು ಮಾಡಿದ್ದಾರೋ ಎಂಬ ಅನುಮಾನ ಬರುವುದಕ್ಕೆ ಅವಕಾಶವಾಯಿತು. ಆ ಅನುಮಾನಕ್ಕೆ ಇನ್ನೂ ಹೆಚ್ಚಾಗಿ ಕಾರಣವಾದುದು, ನಾನಲ್ ನಗರದಲ್ಲಿ ಕಾಂಗ್ರೆಸ್ಸಿನ ನಿರ್ಣಯದಲ್ಲಿ ಹಿಂದಿನಿಂದ ಬಂದಂಥ ನಿಲುವನ್ನು ಆ ದಿವಸ ಬದಲಾವಣೆ ಮಾಡಿದ್ದು. ಆ ನಿರ್ಣಯದಲ್ಲಿ, ಪ್ರಾಂತ್ಯಪುನರ್ವಿಂಗಡಣೆಯನ್ನು ಆಡಳಿತದ ದೃಷ್ಟಿಯಿಂದ, ಆರ್ಥಿಕ ದೃಷ್ಟಿಯಿಂದ ಮತ್ತು ಮುಖ್ಯಪಟ್ಟಣದಿಂದ ಎಷ್ಟು ದೂರದ ವೈಶಾಲ್ಯತೆಯನ್ನು ಒಂದು ಪ್ರಾಂತ್ಯ ಹೊಂದಿದ್ದರೆ ಆಡಳಿತ ಬಗಿಯಾಗಿ ಚೆನ್ನಾಗಿ ನಡೆಯುತ್ತದೆಂಬುದಕ್ಕೆ ಪ್ರಾಧಾನ್ಯ ಕೊಟ್ಟು ಅದರ ಜೊತೆಗೆ ಭಾಷೆಯನ್ನೂ ಕೂಡ ಪರಿಶೀಲನೆಗೆ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಅಲ್ಲಿಗೆ ಕೇಂದ್ರದ ನಿಲುವು ಬದಲಾವಣೆಯಾದಂತೆ ಕಾಂಗ್ರೆಸ್ ಸಂಸ್ಥೆಗಳ ನಿಲುವೂ ಕೂಡ ಬದಲಾವಣೆಯಾದ ಹಾಗೆ ನಾವು ಯೋಚನೆ ಮಾಡಬೇಕಾಗುತ್ತದೆ.

ನಮ್ಮ ಮಾನ್ಯಮಿತ್ರರು ಕಾಂಗ್ರೆಸ್ಸಿನ ಬೀರೂರಿನ ನಿರ್ಣಯ, ಮೈಸೂರು ಕಾನ್ಸ್ಟಿಟ್ಯುಯೆಂಟ್ ಅಸೆಂಬ್ಲಿ ನಿರ್ಣಯ—ಇವುಗಳೆಲ್ಲವನ್ನೂ ಹೇಳಿದ್ದಾರೆ. ಅವೆಲ್ಲವೂ ನಿಜ. ಆದರೆ ಅವುಗಳೆಲ್ಲವನ್ನೂ ಮಾಡಿದಾಗ ದೇಶದಲ್ಲಿ ಭಿನ್ನಾಭಿಪ್ರಾಯವಿದ್ದೇ ಇತ್ತು, ಯಾರೂ ಇಲ್ಲವೆಂದು ಹೇಳುವುದಿಲ್ಲ. ನಾಲ್ಕೈದು ಜನರ ಒಂದು ಸಮಿತಿ ಮಾಡಿ ಅವರು ಹೇಗೋ ಒಮ್ಮತಕ್ಕೆ ಬರಬೇಕೆಂಬ ಒಂದು ನಿರ್ಣಯವನ್ನು ಮಾಡಿರುವುದು ನಿಜ. ಅಂಥಾದ್ದನ್ನು ಈ ಹೊತ್ತು ನಮ್ಮ ಕಣ್ಣಿಗೆತ್ತಿ ತೋರಿಸಿ, "ಈ ರೀತಿಯಾಗಿ ನಿರ್ಣಯಗಳನ್ನು ಸರ್ವಾನುಮತದಿಂದ ಅಂಗೀಕಾರ ಮಾಡಿದ್ದೀರಿ, ನಿಮ್ಮಲ್ಲಿ ಭಿನ್ನಾಭಿಪ್ರಾಯವಿಲ್ಲ, ಆದ್ದರಿಂದ, ಅದರಿಂದ ಒಂದು ಹೆಜ್ಜೆ ಹಿಂದಕ್ಕೂ ಹೋಗಬಾರದು" ಎಂದು ಹೇಳುತ್ತಿದ್ದಾರೆ. ಆದರೆ ಆ ನಿರ್ಣಯಗಳು ಚರ್ಚೆಯಾದ ಸಮಯಗಳಲ್ಲಿದ್ದಂತಹ ಮಾನ್ಯಮಹನೀಯರೆಲ್ಲರಿಗೂ ಅದರ ಗುಟ್ಟು ಏನೆಂಬುದು ಗೊತ್ತು. ಹಿಂದೆ, ಶ್ರೀ ಎಸ್. ಚನ್ನಯ್ಯನವರು, ನಿಜಲಿಂಗಪ್ಪನವರು ಮತ್ತು ನಾರಾಯಣಗೌಡರು ಇದ್ದಂತಹ ಒಂದು ಸಮಿತಿಯೂ ಕೂಡ ಉತ್ತರ ಕರ್ಣಾಟಕ ಪ್ರದೇಶದಲ್ಲೆಲ್ಲಾ ಪ್ರವಾಸಮಾಡಿ ಬಂದು ಅವರೂ ಕೂಡ ಮೈಸೂರನ್ನೊಳಗೊಂಡ ಕರ್ಣಾಟಕವಾಗುವುದು ಅವಶ್ಯಕವೆಂದು ಹೇಳಿದ್ದಾರೆಂದು ಹೇಳಿದರು. ನಾನು ಅವರ ಸಂಗಡ ಮಾತನಾಡಿದ್ದೇನೆ. ಅವರನ್ನು ಈ ವಿಷಯದಲ್ಲಿ ಪ್ರಶ್ನಿಸಿದಾಗ ಈ ಮಾನ್ಯಸಭೆಯ ಕೆಲವು ಸದಸ್ಯರೂ ಇದ್ದರು. ಅವರು ಹೇಳಿದರು, "ನಾವು ಒಮ್ಮತಕ್ಕೆ ಬರುವುದಕ್ಕೆ ಸಾಧ್ಯವಿಲ್ಲದೆ ಹೋದದ್ದರಿಂದ, ಈ ವಿಷಯವನ್ನು ವ ಎಂದಕ್ಕೆ ಹಾಕುವುದಾದರೆ, ಒಂದು ರೀತಿಯಲ್ಲಿ unanimous ಆದ ತೀರ್ಪನ್ನು ಕೊಡುವುದು ಯುಕ್ತವೆಂದು ಹೇಳಿ ಹೀಗೆ ಕೊಡಬೇಕಾಯಿತು. ನಾನಂತೂ dissenting note ನ್ನು ಕೊಡಬೇಕೆಂದು ಯೋಚನೆಮಾಡಿದ್ದೆ. ಆದರೆ ಎಲ್ಲರೂ dissenting note ಕೊಡುವುದು ಚೆನ್ನಾಗಿರುವುದಿಲ್ಲವೆಂದು ಹೇಳಿದುದರ ಮೇಲೆ, ಈ ವಿಷಯವನ್ನೇನಾದರೂ ಅನಿರೀಕ್ಷಿತ ಕಾಲ ಮುಂದಕ್ಕೆ ಹಾಕುವುದಾದರೆ, ಒಮ್ಮತ ಅಭಿಪ್ರಾಯವನ್ನು ಕೊಡಬೇಕಾದದ್ದು ಸೂಕ್ತವೆಂದು ತಿಳಿದು ಮಾಡಿದೆವು" ಎಂದು.

ಈ ನಮ್ಮ ಮಿತ್ರರು ಆ ನಿರ್ಣಯಕ್ಕೆ ಇಷ್ಟೊಂದು ಮಹತ್ವವನ್ನು ಕೊಟ್ಟರೂ ಕೂಡ, ಅದರಲ್ಲಿ ವಾಸ್ತವಾಂಶವಿದ್ದರೆ, ಆ ದಿವಸವೇ ಆ ನಿರ್ಣಯ ಅಂಗೀಕಾರವಾದ ರೀತ್ಯಾ ಆ ಬಗ್ಗೆ ಕಾರ್ಯಕ್ರಮ ಪ್ರಾರಂಭವಾಗಬೇಕಾಗಿತ್ತು; ಆ ರೀತಿ ಆಗಲಿಲ್ಲ. ಆ ವಿಷಯವನ್ನೇ ಅನಿರ್ದಿಷ್ಟಕಾಲ ಮುಂದಕ್ಕೆ ಹಾಕಿದರು. ಇದಕ್ಕೆ ಕಾರಣವೇನೆಂಬುದು ಅವರ ಒಡನಾಡಿಗಳಾದಂತಹ ಎಲ್ಲರಿಗೂ ಗೊತ್ತಿದೆ. ಆ ನಿರ್ಣಯದ ವಿಚಾರವಾಗಿ ಪ್ರಾಸಂಗಿಕವಾಗಿ ನಾನು ಒಂದು ವಿಷಯ ಹೇಳಬೇಕೆಂದಿದ್ದೇನೆ.

ಈ ಹೊತ್ತು ಮೈಸೂರು ದೇಶದಲ್ಲಿ ಬಹಳ ಪ್ರಮುಖವಾದ, ಅಂಶವೆಂದರೆ, ಮೈಸೂರಿನ ಎಲ್ಲೆಕಟ್ಟು ಹಿಗ್ಗಬೇಕೆ ಬೇಡವೇ ಎಂಬುದು. ಈ ವಿಷಯವನ್ನು ಮಾತನಾಡುವಾಗ, ಹಾಗೂ ಜನಗಳ ಪ್ರತಿನಿಧಿಗಳಾಗಿ ಬಂದು ಮಾತನಾಡುವಾಗ, ಶ್ರೀ ಕೆ. ಪುಟ್ಟಸ್ವಾಮಿಯವರು ಹೇಳಿದಹಾಗೆ, ನಾವು ವೈಯಕ್ತಿಕವಾಗಿ ಏನೂ ಹೇಳಕೂಡದು. "ನಾವು ಜನಗಳ ಪ್ರತಿನಿಧಿಗಳು; ನಮ್ಮ ನಮ್ಮ ಕ್ಷೇತ್ರಗಳಲ್ಲಿ ಜನಗಳ ಅಭಿಪ್ರಾಯವೇನಿದೆಯೆಂಬುದನ್ನು ಗ್ರಹಿಸಿ, ಆ ತಿಳಿವಳಿಕೆ ಇಟ್ಟುಕೊಂಡು ಅದರಮೇಲೆ ಜನರ ಅಭಿಪ್ರಾಯ ಹೇಳುತ್ತಿದ್ದೇವೆ". ಎಂದು ಹೇಳುವುದಾದರೆ, "ನಮ್ಮ constituency ಯಲ್ಲಿ ಇದೇ ಅಭಿಪ್ರಾಯವಿದೆ"ಯೆಂದು ನಮ್ಮ ಮುಂದಿಡುವುದಾದರೆ ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಈ ಹೊತ್ತು ಮೈಸೂರು ಸಂಸ್ಥಾನದಲ್ಲಿ ಒಂದೇ ಬಗೆಯ ಪ್ರಚಾರ ನಡೆದಿದೆ. ಎಲ್ಲ ಕನ್ನಡ ಭಾಗಗಳೂ ಸೇರಿದಂಥ ಒಂದು ಕರ್ಣಾಟಕವಾಗಬೇಕು ಎಂದು ಹೇಳಿ ಈ ವಿಷಯದಲ್ಲಿ ಆಸಕ್ತಿಯುಳ್ಳ ಜನ ಯಥೇಚ್ಛವಾಗಿ ದೇಶದಲ್ಲಿ ಪ್ರಚಾರ ನಡೆಸಿದ್ದಾರೆ. ಆದರೆ ದೇಶದಲ್ಲಿ

ವಾಸ್ತವಿಕವಾಗಿ ಇರತಕ್ಕ ಪರಿಸ್ಥಿತಿಯನ್ನು ನೋಡಿದರೆ ಬಹಳ ಹೆಚ್ಚಿನ ಜನ ಈ ಪ್ರಾಂತ್ಯ ವಿಂಗಡಣಾ ವಿಷಯ ಮುಂದಿನ ಚುನಾವಣೆಗೆ ಹೋಗಲಿ, ಮುಂದಿನ ಚುನಾವಣೆಗೆ ಚುನಾವಣಾ ಪ್ರಣಾಳಿಕೆಯಾಗಿಟ್ಟುಕೊಂಡು ದೇಶದ ಮುಂದೆ ಹೋಗೋಣ ಎಂಬ ಅಭಿಪ್ರಾಯವುಳ್ಳವರಾಗಿದ್ದಾರೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ನಾವೀಗ ಮಾತನಾಡಬೇಕಾದರೆ ನಾವು ತಾಲ್ಲೂಕು ಪ್ರತಿನಿಧಿಗಳೆಂದು ತಿಳಿದುಕೊಂಡೇ ಮಾತನಾಡುತ್ತಿದ್ದೇವೆ. ಆದ್ದರಿಂದ ಅವರು ಈ ರೀತಿಯಾಗಿ ತಪ್ಪು ಅಭಿಪ್ರಾಯ ಬರುವಂತೆ ಹೇಳಕೂಡದು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಅವರು ಹೇಳಿದ್ದಕ್ಕೆ ಸೂಕ್ಷ್ಮವಾಗಿ ಉತ್ತರ ಹೇಳಿ ಅಲ್ಲಿಗೇ ಬಿಡುತ್ತೇನೆ. ನಾವು ಕಳೆದಸಾರಿ ಚುನಾವಣೆಗೆ ನಿಂತಾಗ ಪ್ರಾಂತ್ಯಗಳ ಪುನರ್ವಿಂಗಡಣಾ ಸಮಸ್ಯೆ ನಮ್ಮ ಮುಂದಿರಲಿಲ್ಲ. ಜನತೆಗೆ ಅದು ಗೊತ್ತಿರಲಿಲ್ಲ. ಆ ಬಗ್ಗೆ ಅಂಕಿ ಅಂಶಗಳ ವಿಷಯವನ್ನು ಜನತೆಯಲ್ಲಿ ಪ್ರಚಾರಮಾಡಿ ಅವರ ಅಭಿಪ್ರಾಯವನ್ನು ಸಂಗ್ರಹಣೆ ಮಾಡಿದರೆ, ಆಗ ಜನಗಳ ಮನೋಭಾವ ಯಾವ ರೀತಿಯಿರುತ್ತದೆ, ಜನರ reaction ಯಾವ ರೀತಿ ಇರುತ್ತದೆಂದು ಸೂಕ್ಷ್ಮವಾಗಿ ಆಲೋಚನೆ ಮಾಡುವುದಾದರೆ, ನಾನು ಖಂಡಿತವಾಗಿ ಹೇಳುತ್ತೇನೆ, ಅದು ಮಾನ್ಯ ಸದಸ್ಯರು ವ್ಯಕ್ತಪಡಿಸಿರುವ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಬಹುದು. ಆದ್ದರಿಂದ ಈ ವಿಷಯವನ್ನು ಜನತೆಗೆ ತಿಳಿಸದೆ ನಾವು ತೀರ್ಮಾನ ಮಾಡುವುದು ಸೂಕ್ತವಲ್ಲ. ಸರ್ಕಾರದವರು ಈ ವಿಷಯವನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಆದ್ದರಿಂದ ಫಸಲಾಲಿ ಸಮಿತಿಯವರು ಈ ಪ್ರಾಂತ್ಯವಿಂಗಡಣಾ ಸಮಸ್ಯೆಯನ್ನು ಮುಂದಿನ ಮಹಾ ಚುನಾವಣೆಗಳವರೆಗೆ ಮುಂದಕ್ಕೆ ಹಾಕಲಿ. ಅಥವಾ ಈ ಮಧ್ಯೆಯೇ ಈ ವಿಷಯವನ್ನೇ ಒಂದು ಚುನಾವಣಾ ಪ್ರಣಾಳಿಕೆಯಾಗಿಟ್ಟು . . .

2 P.M.

Sri M. LINGANNA (Nanjangud).—I rise to a point of order. The matter before us for discussion is the Report of the Seshadri Committee and the facts and figures given there. Nowhere is it said in the Report that the consensus of opinion should be taken by means of referendum here or elsewhere. That is not a matter relevant to the facts given in this Report. My friend Sri Narasimha Reddy is going away from . . .

Sri K. HANUMANTHAIYA (Chief Minister).—There is no point of order. Let there be free discussion, since what I said and what Sri Nijalingappa said also are not in the Report. Therefore, let us not be hasty and bring such a point of order. Let there be free discussion.

Sri M. LINGANNA.—Was I hasty in raising a point of order?

Mr. SPEAKER.—The discussion has gone on not only on the Report of the Fact-Finding Committee, but even otherwise.

Sri M. LINGANNA.—I had a right to draw the attention of the Chair to that particular point.

ಶ್ರೀ ಎ. ವಿ. ನರಸಿಂಹರೆಡ್ಡಿ.—ಆದುದರಿಂದ ಇದು ಹೀಗೆ ಒಂದು ಕೋಟಿ ಜನತೆಯ ಮೇಲೆ ಒಂದು ಪರಿಣಾಮವನ್ನುಂಟುಮಾಡತಕ್ಕಂಥ ಸಮಸ್ಯೆಯಾಗಿರುವುದರಿಂದ ಇದರ ಮಹತ್ವ ಪರಿಣಾಮ ಜನತೆಯ ಮೇಲೆ ಯಾವ ರೀತಿ ಪರಿಣಮಿಸುತ್ತದೆ ಎನ್ನತಕ್ಕಂಥ ವಿಚಾರವನ್ನೆಲ್ಲಾ ಜನತೆಗೆ ತಿಳಿಸಿ ಅವರ ಒಪ್ಪಿಗೆಯನ್ನು ಪಡೆದುಕೊಳ್ಳದೆ ನಾವುಗಳೇ ಇಲ್ಲಿ ಕುಳಿತು ಈ ಪ್ರಶ್ನೆಯನ್ನು ತೀರ್ಮಾನಮಾಡತಕ್ಕದ್ದು ಅಷ್ಟೇನೂ ಬುದ್ಧಿವಂತಿಕೆಯ ಕೆಲಸವಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಇಲ್ಲಿಗೆ ಮೂರು ದಿವಸಗಳಿಂದಲೂ ನಮ್ಮ ಸದಸ್ಯರನೇಕರು ಈ ಸಭೆಯಲ್ಲಿ ಮಾತನಾಡಿರುತ್ತಾರೆ. ಅವರೆಲ್ಲರೂ ಏನು ಹೇಳಿದ್ದಾರೋ ಅದೆಲ್ಲವೂ ಕೇವಲ ವೈಯಕ್ತಿಕ ಅಭಿಪ್ರಾಯಗಳೇ ಹೊರತು ಅವು ಸಾರ್ವಜನಿಕರ ಅಭಿಪ್ರಾಯಗಳಲ್ಲ. ಎಲ್ಲರು ಹೇಳಿರುವುದೂ ವೈಯಕ್ತಿಕ ಅಭಿಪ್ರಾಯಗಳೇ; ಜನರ ಅಭಿಪ್ರಾಯವೇನಿರುತ್ತೆಂಬುದನ್ನು ಅವರು ತಿಳಿದುಕೊಂಡಿಲ್ಲ. ಆದಾಗ್ಯೂ ಅವರು ಮಾತನಾಡುವಾಗ ಅವರ ಮನೋಭಾವ ಅವರ ವಿನಾ ಮಿಕ್ಕವರು ಮಾತನಾಡತಕ್ಕದ್ದೆಲ್ಲಾ ದೇಶದಲ್ಲಿರುವ ಜನತೆಯ ಅಭಿಪ್ರಾಯವನ್ನು ಪ್ರತಿಬಿಂಬಿಸುವುದಿಲ್ಲ ಎಂದು ಹೇಳುವ ಮಟ್ಟದಲ್ಲಿ ಮಾತನಾಡಿದ್ದಾರೆ. ಆದರೆ ಅವರು ಹಾಗೆ ಮಾತನಾಡಲು ಅವಕಾಶಕೊಡದೆ ಅದನ್ನು ಸಭಾಧ್ಯಕ್ಷರಾದ ತಾವು ತಡೆಗಟ್ಟಬೇಕಾಗಿತ್ತು. ಈ ದಿವಸ ಯಾರು ಈ ಕನ್ನಡ ಮಾತನಾಡತಕ್ಕಂಥ ಜನರಿರುತ್ತಾರೋ ಅವರೆಲ್ಲರೂ ಮೈಸೂರಿಗೆ ಸೇರಬೇಕು ಆ ಕನ್ನಡ ಭಾಷೆಯನ್ನಾಡತಕ್ಕಂಥ ಜನರೆಲ್ಲಾ ಒಂದಾಗಬೇಕು ಎಂದು ಹೇಳತಕ್ಕ ಜನಗಳಲ್ಲೇ ಎರಡು ಅಭಿಪ್ರಾಯಗಳನ್ನುಳ್ಳ ಜನರೂ ಸೇರಿರುತ್ತಾರೆ. ಒಂದು ಕಡೆ ಒಂದು ಗುಂಪಿನವರು ಈ ಕನ್ನಡ ಭಾಷೆ ಆಡತಕ್ಕಂಥ ಜನಗಳೆಲ್ಲಾ ಒಟ್ಟಾಗಿ ಒಂದೇ ಕಡೆ ಸೇರಿದರೆ ಆಗ ಈ ಮೈಸೂರು ಒಂದು ಸರ್ವಾಂಗಸುಂದರವಾದ ರಾಜ್ಯವಾಗುತ್ತದೆ ಎನ್ನತಕ್ಕಂಥ ಜನರೂ ಇದ್ದಾರೆ. ಹೀಗೆ ಮಾಡಿದಲ್ಲಿ ಮೈಸೂರಿಗೆ ಧಕ್ಕೆ ಬರುತ್ತದೆಯೆಂದು ಹೇಳತಕ್ಕ ಜನರೂ ಇದ್ದಾರೆ. ಹೀಗೆ ಜನರಲ್ಲಿ ಈ ಎರಡು ಅಭಿಪ್ರಾಯಗಳೂ ಇರುತ್ತವೆ. ಈಗ ಯಾರು ಈ ಅಖಂಡ ಕರ್ಣಾಟಕ ರಾಜ್ಯ ಸ್ಥಾಪನೆಯಾಗಬೇಕೆಂದು ಹೇಳುತ್ತಿದ್ದಾರೋ ಅವರು ಹೇಳತಕ್ಕದ್ದೆಲ್ಲಾ ಪಟ್ಟಭದ್ರವಂತೆ; ಇತರರು ಹೇಳತಕ್ಕಂಥಾದ್ದು ಅಷ್ಟು ಪಟ್ಟಭದ್ರವಾದದ್ದಲ್ಲ ಎಂಬುದಾಗಿ ಅನೇಕ ಕಡೆಗಳಲ್ಲಿ ಹೇಳಿದ್ದಾರೆ. ಈ ರೀತಿ ಹೇಳತಕ್ಕಂಥ ವಾದ ಬಹಳ ಕಹಿಯಾದದ್ದು. ಹೀಗೆಲ್ಲಾ ಈ ಸಮಸ್ಯೆಯನ್ನು ಅವರು ಮುಂದುವರಿಸಲು ಪ್ರಯತ್ನಪಡತಕ್ಕದ್ದು ಸರಿಯೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ಜನತೆಯ ಹಿತವನ್ನು ಮನಸ್ಸಿನಲ್ಲಿಟ್ಟುಕೊಳ್ಳದೆ ಯಾರೂ ಮಾತನಾಡುವುದಿಲ್ಲ. ಒಬ್ಬೊಬ್ಬರಿಗೂ ಒಂದೊಂದು ರೀತಿಯ ಹಿತಸಾಧನೆ ಮಾಡಬೇಕೆಂಬ ಉದ್ದೇಶವಿರುತ್ತದೆ. ಈ ದಿವಸ ಈ ಕನ್ನಡ ಮಾತನಾಡತಕ್ಕ ಜನಗಳೆಲ್ಲಾ ಒಂದು ಗುಂಪಾಗಿ ಒಟ್ಟು ಕೂಡಿದರೆ, ಅವರೆಲ್ಲಾ ಈ ಮೈಸೂರಿನ ಜನಗಳ ಜೊತೆಗೆ ಸೇರಿದರೆ, ಆಗ ಈ ಮೈಸೂರಿನ ಜನತೆಗೆ ತುಂಬ ಅನುಕೂಲವಾಗುತ್ತದೆ,

(ಶ್ರೀ ಎ. ವಿ. ನರಸಿಂಹರೆಡ್ಡಿ.)

ಎಂದು ಹೇಳುತ್ತಿದ್ದಾರೆ. ''ಈ ದಿವಸ ನಮ್ಮ ಮೈಸೂರಿಗೆ ಸೇರಲು ಇಷ್ಟಪಡುತ್ತಿರುವಂಥ ಪ್ರದೇಶಗಳಲ್ಲಿ ಖನಿಜಸಂಪತ್ತು ಹೇರಳವಾಗಿದೆ. ಅರಣ್ಯ ಸಂಪತ್ತಿದೆ. ಸಮುದ್ರತೀರ ನಮಗೆ ಸಿಕ್ಕುತ್ತದೆ. ಆದುದರಿಂದ ಮುಂದೆ ನಾವೆಲ್ಲರೂ ಐಶ್ವರ್ಯದಿಂದ ತುಂಬಿ ಓಲಾಡಬಹುದು'' ಎಂದು ಹೇಳುತ್ತಿದ್ದಾರೆ. ಹೀಗೆ ಒಟ್ಟುಗೂಡುವುದರಿಂದ ನಾವೆಲ್ಲರೂ ವಿದ್ಯಾವಂತರಾಗಬಹುದು, ನಮಗೆಲ್ಲರಿಗೂ ಯಥೇಷ್ಟವಾಗಿ ಕೆಲಸ ಕಾರ್ಯಗಳು ಸಿಕ್ಕುತ್ತವೆಂದು ಹೇಳುತ್ತಿದ್ದಾರೆ. ನಮ್ಮ ದೇಶದಲ್ಲಿ ತುಂಬಿರುವಷ್ಟು ಪ್ರಕೃತಿ ಸೌಂದರ್ಯ ಹೊರಗಡೆ ಮತ್ತೆಲ್ಲಿಯೂ ಇರುವುದಿಲ್ಲವೆಂದು ಆ ಶೇಷಾದ್ರಿ ಸಮಿತಿಯ ವರದಿಯಲ್ಲಿ ಬರೆದಿರತಕ್ಕದ್ದನ್ನು, ಅದು ಸರಿಯಾಗಿಲ್ಲ ಎಂದು ಹೇಳುವ ಮಟ್ಟಕ್ಕೆ ಹೋಗಿ ಅವರು ಭಾಷಣಗಳನ್ನು ಮಾಡಿದ್ದಾರೆ. ಆದರೆ ಅವರು ಹಾಗೆ ಹೇಳತಕ್ಕದ್ದೆಲ್ಲಾ ನ್ಯಾಯಬದ್ಧವಾದದ್ದು ಮತ್ತು ದೇಶಪ್ರೇಮದಿಂದಲೇ ಹೇಳಿದಂಥ ಮಾತುಗಳೆಂದು ಅವರು ರುಜುವಾತು ಮಾಡಿ ಕೊಟ್ಟಾಗ ನಾನು ಆ ಅಭಿಪ್ರಾಯಗಳೆಲ್ಲಾ ಸರಿಯೆಂದು ಒಪ್ಪಿಕೊಳ್ಳುತ್ತೇನೆ. ಆದರೆ ನಾವುಗಳು ಹೇಳತಕ್ಕಂಥ ಅಭಿಪ್ರಾಯ ಒಂದಾಗಿದ್ದರೆ ಅವರು ಬೇರೊಂದು ಭಾವನೆಯಿಟ್ಟುಕೊಂಡು ಮಾತನಾಡುತ್ತಿದ್ದಾರೆ. ಇತ್ತೀಚೆಗೆ ಬಳ್ಳಾರಿ ಜಿಲ್ಲೆ ಮೈಸೂರಿಗೆ ಸೇರಿದ ಮೇಲೆ ಇಲ್ಲಿಯ ಜನಸಂಖ್ಯೆ ಒಂದು ಕೋಟಿಗೆ ಮುಟ್ಟಿದೆ. ಈ ದಿವಸ ಭಾರತದಲ್ಲಿರತಕ್ಕಂಥ ಇತರ ಸಂಸ್ಥಾನಗಳೊಂದಿಗೆ ನಮ್ಮ ಮೈಸೂರನ್ನು ಹೋಲಿಸಿ ನೋಡಿದರೆ ನಮ್ಮ ಸಂಸ್ಥಾನ ಅನೇಕ ವಿಷಯಗಳಲ್ಲಿ ಇತರ ಸಂಸ್ಥಾನಗಳಿಗಿಂತಲೂ ಹೆಚ್ಚು ಅಭಿವೃದ್ಧಿಹೊಂದಿದೆ ಎಂಬುದು ಎಲ್ಲರಿಗೂ ಗೊತ್ತಾಗುತ್ತದೆ. ಈ ದೇಶದ ಜನರೆಲ್ಲಾ ಬಹಳವಾಗಿ ಕಷ್ಟಪಟ್ಟು, ಅನೇಕ ತೆರಿಗೆಗಳನ್ನು ಕೊಟ್ಟು, ಈ ದೇಶವನ್ನು ಕಟ್ಟಿದ್ದಾರೆ. ಹೀಗೆ ನಮ್ಮ ಮೈಸೂರು ಸಂಸ್ಥಾನ ಅನೇಕ ವಿಚಾರಗಳಲ್ಲಿ ಇತರ ಪ್ರಾಂತ್ಯಗಳಿಗಿಂತಲೂ ಮುಂದುವರಿದಿದೆ. ನಮ್ಮ ಜನರ ತ್ಯಾಗ ಬಲದಾನದಿಂದ ಈ ದೇಶದ ಸಂಪತ್ತನ್ನು ಬೆಳೆಸಿಕೊಂಡು ಬರಲಾಗಿದೆ. ಹೀಗೆ ಬೆಳೆಸಿಕೊಂಡು ಬಂದಿರತಕ್ಕಂಥ ಸಂಪತ್ತನ್ನು ನಮ್ಮ ಮಕ್ಕಳು ಮರಿಗಳು ಸುಖದಿಂದ ಅನುಭವಿಸಿಕೊಂಡು ಬರಲಿ ಎಂದು ಮಾಡಿದ್ದ ಪ್ರಯತ್ನಗಳಿಗೆಲ್ಲಾ ಮುಂದೆ ಈ ವಿಸ್ತರಣೆಯಿಂದ ತೊಂದರೆ—ಅಡ್ಡಿ ಅಡಚಣೆಗಳುಂಟಾಗುತ್ತವೆಂದು ನಾವು ಹೇಳುತ್ತಿದ್ದರೆ, ಅವರು ಈ ವಿಚಾರವನ್ನು ನಾವು ನಮ್ಮ ಪಟ್ಟಭದ್ರತೆಯ ದೃಷ್ಟಿಯಿಂದ ಹೀಗೆಲ್ಲಾ ಹೇಳುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಈಗಾಗಲೇ ನಮ್ಮ ಮೈಸೂರು ಸಂಸ್ಥಾನದಲ್ಲಿ ನಡೆದ ನಮ್ಮ ಕಾಂಗ್ರೆಸ್ ಅಧಿವೇಶನದಲ್ಲಿ ಈ ಪ್ರಶ್ನೆಯ ಬಗ್ಗೆ ಜನರು ಬಹಿರಂಗವಾಗಿ ಟೀಕೆ ಮಾಡಿದ್ದಾರೆ; ಆದರೆ ಈ ವಿಚಾರದಲ್ಲಿ ಯಾರೇ ಆಗಲಿ ಹಾಗೆಲ್ಲಾ ಬಹಿರಂಗವಾಗಿ ಮಾತನಾಡಬಾರದೆಂದು ಶಾಸನ ಸಭಾ ಸದಸ್ಯರುಗಳಿಗೆ ಒಂದು ಆದೇಶವನ್ನು ಕೊಟ್ಟಿದ್ದರು. ಆದರೆ ಈ ಏಕೀಕರಣಕ್ಕೆ ಅನುಗುಣವಾಗಿರತಕ್ಕಂಥ ನನ್ನ ಮಾನ್ಯ ಸ್ನೇಹಿತರನೇಕರು ಇದಕ್ಕೆ ಅನುಕೂಲವಾಗಿರುವಂಥ ಒಂದು ವಾದವನ್ನೇ ದೇಶಾದ್ಯಂತವೂ ಯಥೇಷ್ಟವಾಗಿ ಪ್ರಚಾರ ಮಾಡಿದ್ದಾರೆ. ಇನ್ನೊಂದು ರೀತಿಯಲ್ಲಿ ವಾದ ಮಾಡತಕ್ಕಂಥ ಜನರು ಯಾರಿದ್ದಾರೋ ಅವರೆಲ್ಲಾ ಸುಮ್ಮನೆ ಇದ್ದಾರೆ. ಹೀಗಿರುವಾಗ ಈ ದಿವಸ ಭಾಷಣಮಾಡತಕ್ಕಂಥ ಕಾಲದಲ್ಲಿ ಕೆಲವು ಮಾನ್ಯ ಸದಸ್ಯರು ಈ ವಿಚಾರದ ಬಗ್ಗೆ ನಮ್ಮ ಮೈಸೂರು ದೇಶದಲ್ಲಿ ಯಾರೊಬ್ಬರ ವಿರೋಧವೂ ಇಲ್ಲ ಎಂದು ಹೇಳುವುದಕ್ಕೆ ಪ್ರಾರಂಭಮಾಡಿದ್ದಾರೆ. ಆದರೆ ಈ ದಿವಸ ಮೈಸೂರಿನ ಪ್ರಜಾಸಂಖ್ಯೆಯಲ್ಲಿ ಶೇಕಡ 75ರಷ್ಟು ಮಂದಿ ಈ ಮೈಸೂರಿನ ಎಲ್ಲೆ ಕಟ್ಟುಗಳು ಈಗ ಯಾವ ರೀತಿ ಇವೆಯೋ ಅವು ಹಾಗೆಯೇ ಉಳಿಯಬೇಕೇ ಹೊರತು ಅವುಗಳು ಎಷ್ಟು ಮಾತ್ರಕ್ಕೂ ದೊಡ್ಡದಾಗಲು ಅವರು ಒಪ್ಪುವುದಿಲ್ಲ.

A MEMBER.—Question.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈಗ ಇದು ನನ್ನ ಖಚಿತವಾದ ಅಭಿಪ್ರಾಯ. ಈಗ ನಾವು ಹೇಳತಕ್ಕದ್ದಾದರೂ ಅವರವರ ಕ್ಷೇತ್ರದಲ್ಲಿ ಏನು ಜನರಿದ್ದಾರೋ ಅಂಥವರ ಅಭಿಪ್ರಾಯವನ್ನು ಅವಲಂಬಿಸಿರುವಂಥಾದ್ದಾಗಿದೆ. ಈ ದಿವಸ ಮೈಸೂರು ಪ್ರಜೆಗಳಿಗೆ ಅವರ ಹಿತರಕ್ಷಣೆಯಲ್ಲಿ ಏನಾದರೂ ಹೆಚ್ಚು ಕಡಮೆಯಾದಲ್ಲಿ ಅದಕ್ಕೆಲ್ಲಾ ಸ್ವಲ್ಪಮಟ್ಟಿಗೆ ನಾವೇ ಕಾರಣರು. ಈ ದಿವಸ ಈ ಸಮಸ್ಯೆ ಉಲ್ಬಣವಾಗಬೇಕಾಗಿದ್ದರೆ ಅದಕ್ಕೆಲ್ಲಾ ನಮ್ಮ ನಾಯಕರೇ ಕಾರಣಕರ್ತರು. ಕೆಲವು ಸಂದರ್ಭಗಳಲ್ಲಿ ಈ ರಾಜ್ಯ ವಿಸ್ತಾರವಾಗಬೇಕೆಂದು ವಾದ ಮಾಡತಕ್ಕಂಥ ಜನರ ಹೇಳಿಕೆಗಳಿಗೆ ನಮ್ಮ ನಾಯಕರು ಮನಸೋತು ಬಿಟ್ಟಿರುವುದೂ ಸಹ ಒಂದು ಕಾರಣವಾಗಿದೆ. ಈ ವಿಚಾರದಲ್ಲಿ ನಮ್ಮ ನಾಯಕರುಗಳು ನಿರ್ದಿಷ್ಟವಾದಂಥ ಅಭಿಪ್ರಾಯವನ್ನು ಇಲ್ಲಿಯವರೆಗೂ ಹೇಳುತ್ತಲೇ ಬಂದಿಲ್ಲ. ಆದರೆ ನಮ್ಮ ಅಕ್ಕಪಕ್ಕದಲ್ಲಿ ಕುಳಿತುಕೊಂಡಿರತಕ್ಕವರೇ ಹಾಗೆಲ್ಲಾ ಹೇಳುತ್ತಿರುವಾಗ ಅವರ ಮನಸ್ಸಿನಲ್ಲಿ ಏನಿದೆಯೆಂಬುದನ್ನು ನಾನು ಹೇಳಲಾರೆ. ಅವರೆಲ್ಲಾ ಯಾವ ದೃಷ್ಟಿಯನ್ನಿಟ್ಟು ಹೀಗೆ ರಾಜ್ಯ ವಿಸ್ತಾರವಾಗಬೇಕೆಂದು ಹೇಳುತ್ತಿದ್ದಾರೋ ಅದು ನನಗೆ ಗೊತ್ತಾಗುವುದಿಲ್ಲ. ಆದರೆ ಈ ದಿವಸ ಒಂದು ಕೋಟಿ ಜನರು ತಮ್ಮ ತ್ಯಾಗ—ಬಲಿದಾನಗಳಿಂದ ಕಟ್ಟಿರತಕ್ಕಂಥ ಈ ದೇಶದಲ್ಲಿ ಮುಂದೆ ನಮ್ಮ ಜನಗಳಿಗೇನಾದರೂ ತೊಂದರೆ ಬಂದರೆ ಅದಕ್ಕೆಲ್ಲಾ ಇವರೇ ಕಾರಣಕರ್ತರು. ಈ ಹೊತ್ತು ನಾವು ಈ ನಮ್ಮ ಶಾಸನ ಸಭೆಯ ವಿಷಯವನ್ನೇ ತೆಗೆದುಕೊಳ್ಳೋಣ. ಈ ಮಾನ್ಯ ಸಭೆಯಲ್ಲಿ 105 ಜನ ಸದಸ್ಯರಿದ್ದಾರೆ. ಇದರಲ್ಲಿ ಸುಮಾರು 65 ಮಂದಿ ಈ ದೇಶ ಬದಲಾವಣೆಯಾಗುವುದು ಖಂಡಿತ ಬೇಡ ಎಂದು ಹೇಳತಕ್ಕವರಿದ್ದಾರೆ.

Sri J. MOHAMED IMAM (Jagalur).—Question.

ಶ್ರೀ ಎ. ವಿ. ನರಸಿಂಹರೆಡ್ಡಿ.—ಎಂಟು ಹತ್ತು ಜನರು ಹಾಗೂ ಹೀಗೂ ಇದ್ದಾರೆ. ಅದಿರಲಿ. ಈವರೆಗೆ 25 ಜನರು (ಸದಸ್ಯರು) ಖಂಡಿತ ಆಗಲೇಬೇಕೆಂದು ಹೇಳಿದ್ದಾರೆ. ಆದರೆ ನಾನೀಗ ಹೇಳುತ್ತಿರುವುದು ಈ ದೇಶ ಖಂಡಿತ ಬದಲಾವಣೆಯಾಗುವುದು ಬೇಡವೆಂದು ಯಾರು ಹೇಳುತ್ತಿದ್ದಾರೋ ಅವರ ಪರವಾಗಿ ಮಾತ್ರ ಹೇಳುತ್ತಿದ್ದೇನೆ. ಈ ವಿಚಾರವಾಗಿ ಈ ಮಾನ್ಯ ಸಭೆಯವರ ಅಭಿಪ್ರಾಯವಾದರೂ ಏನಿರುತ್ತದೆ ಎನ್ನುವುದನ್ನು ಯಾವುದಾದರೂ ಒಂದು ರೂಪವಾಗಿ ತೆಗೆದುಕೊಳ್ಳೋಣ ಎಂದರೆ ಅದು ಸಾಧ್ಯವಾಗುತ್ತಿಲ್ಲ. ಆದರೆ ದೇಶವನ್ನು ಪ್ರತಿಬಿಂಬಿಸುವ ಜನಾಭಿಪ್ರಾಯವನ್ನು ಹೇಳುವುದಾದರೆ, ಈ ಮೈಸೂರು ಸಂಸ್ಥಾನದ ಎಲ್ಲೆ ಕಟ್ಟುಗಳು ಸ್ವಲ್ಪವೂ ಬದಲಾವಣೆಯಾಗಬಾರದೆಂಬ ಬಗ್ಗೆ ಬಹುಮತವಿದೆಯೆಂದು ಹೇಳುತ್ತೇನೆ. ಆದರೆ ಈ ದಿವಸ ಯಾರು ಹಾಗೆ ದೇಶಗಳು ವಿಶಾಲವಾಗಬಾರದೆಂದು ಹೇಳುತ್ತಿದ್ದಾರೋ ಅಂಥವರಲ್ಲಿ ಕೆಲವರು ಈ ಹಿಂದೆ ನಮ್ಮ ಸರ್ಕಾರದವರು ಈ ಸಭೆಯ ಮುಂದೆ ಆ ಆಂಧ್ರ ಮಸೂದೆಯನ್ನು ಚರ್ಚೆಗೆ ತಂದಿದ್ದಂಥ ಕಾಲದಲ್ಲಿ

ಅದನ್ನು ವಿರೋಧಿಸಿರತಕ್ಕಂಥವರೂ ಇದ್ದಾರೆ. ಈ ಬಗ್ಗೆ ನಮ್ಮ ನೆಹರೂ ಅವರೇ ಪಾರ್ಲಿಯಮೆಂಟಿನಲ್ಲಿ ಒಂದು ಹೇಳಿಕೆ ಕೊಟ್ಟಿದ್ದಾರೆ. ಹಾಗೆ ಆ ಮಹಾ ನಾಯಕರು ಒಂದು ಹೇಳಿಕೆಯನ್ನು ಕೊಟ್ಟಿದ್ದರಿಂದ ಅವರ ಹೇಳಿಕೆಯನ್ನು ವಿರೋಧಿಸುವುದು ಸರಿಯಾದುದಲ್ಲವೆಂದು ಭಾವಿಸಿ, ನಮ್ಮಲ್ಲಿ ಒಳಗೆ ಎಷ್ಟೋ ಅತೃಪ್ತಿ ಅಸಮಾಧಾನಗಳಿದ್ದರೂ ನಾವು ಆ ದಿವಸ ಆ ಬಳ್ಳಾರಿಯ ಜನರನ್ನು ಆಹ್ವಾನಿಸಲು ಅವಕಾಶಕೊಟ್ಟೆವು. ಈ ದಿವಸ ಈ ದೇಶಗಳು ವಿಶಾಲವಾಗಬೇಕೆಂದು ಹೇಳಿದಂಥ ವಿಚಾರದಲ್ಲಿ ನಾವುಗಳೇನಾದರೂ ವಿರೋಧಿಸಿ ಮಾತನಾಡಿಬಿಟ್ಟರೆ ನಾಳೆ ದಿವಸ ಆ ನೆಹರೂ ಅವರು ಏನನ್ನುತ್ತಾರೋ ಎನ್ನತಕ್ಕಂಥ ಒಂದು ಅಧಿಕವಾದ ಭಯದಿಂದ ಕೆಲವರು ಇದನ್ನು ವಿರೋಧಿಸಲು ಹಿಂದು ಮುಂದು ನೋಡುತ್ತಿದ್ದಾರೆ. ಆದರೆ ಹಾಗೆ ಮಾಡುವುದು ಸದಸ್ಯರಾದವರ ಒಂದು ಕರ್ತವ್ಯಲೋಪ. ಈ ದಿವಸ ನಮ್ಮ ಸರ್ಕಾರದವರು ಈ ಪ್ರಾಂತ್ಯಗಳ ಪುನರ್ವಿಂಗಡಣೆಯ ಸಂಬಂಧವಾಗಿ ಒಂದು ಅಂಕಿ ಅಂಶಗಳ ಸಮಿತಿಯನ್ನು ನೇಮಕ ಮಾಡಿದ್ದಾರೆ. ಆ ವರದಿ ಈಗ ನಮ್ಮ ಸಭೆಯ ಮುಂದೆ ಬಂದು ಆ ಬಗ್ಗೆ ಚರ್ಚೆಗಳೂ ಕೂಡ ನಡೆದಿರುತ್ತವೆ. ಈ ಸಂಬಂಧವಾಗಿ ಕೇಂದ್ರ ಸರ್ಕಾರದಿಂದ ರಚಿಸಲ್ಪಟ್ಟಿರುವ ಆ ಫಜ್ಲಾಲಿ ಸಮಿತಿಗೆ ನಮ್ಮ ಸರ್ಕಾರದವರು ಈ ವಿಚಾರದಲ್ಲಿ ಏನಾದರೂ ಒಂದು ವರದಿಯನ್ನೊಪ್ಪಿಸುತ್ತಾರೆಯೇ ಎನ್ನತಕ್ಕ ಬಗ್ಗೆ ನಮ್ಮ ಸರ್ಕಾರದವರು ಅಂಥ ಯಾವ ವರದಿಯನ್ನೂ ಒಪ್ಪಿಸುವುದಿಲ್ಲವೆಂಬುದಾಗಿ ಈಗಾಗಲೇ ಪತ್ರಿಕೆಗಳಲ್ಲಿ ಹೊರಬಿದ್ದಿದೆ. ಈ ಹಿಂದೆ ಆ ಫಜ್ಲಾಲಿ ಸಮಿತಿಯವರು ನಮ್ಮ ಸಂಸ್ಥಾನಕ್ಕೆ ಬಂದಿದ್ದಾಗಲೂ ಸಹ ಅನೇಕರು ಆ ಸಮಿತಿಯ ಮುಂದೆ ತಮ್ಮ ಅಭಿಪ್ರಾಯಗಳೇನಿದ್ದುವೋ ಅವುಗಳನ್ನು ವ್ಯಕ್ತಪಡಿಸುವುದಕ್ಕಿದ್ದಂಥ ಅವಕಾಶವನ್ನೂ ಸಹ ಆಗ ಕಳೆದುಕೊಂಡಿದ್ದಾರೆ. ಆದರೆ ಈ ದಿವಸ ನಮ್ಮ ಸರ್ಕಾರದವರು ಈ ವಿಚಾರದಲ್ಲಿ ಮೈಸೂರಿನವರ ಬಹುಮತ ಎತ್ತಕಡೆಗಿದೆ ಎನ್ನುವುದನ್ನು ನಾವು ಆ ಸಮಿತಿಗೆ ತಿಳಿಸುವುದಿಲ್ಲವೆಂದು ಹೇಳಿಬಿಟ್ಟಿದ್ದಾರೆ. ದೇಶದ ಮುಂದೆ ಇಂಥ ಒಂದು ದೊಡ್ಡ ಸಮಸ್ಯೆ ಎದ್ದು ನಿಂತಿರುವಾಗ ನಾವುಗಳು ಯಾರೇ ಆಗಲಿ ನಮ್ಮ ನಮ್ಮಗಳ ಜವಾಬ್ದಾರಿಯೇನಿರುತ್ತದೆಯೋ ಅದಕ್ಕನುಸಾರವಾಗಿ ವರ್ತಿಸದೆ, ಅದಕ್ಕೆ ಹೆದರಿ ನಾವು ನಮ್ಮ ಜವಾಬ್ದಾರಿಯನ್ನೇ ತಪ್ಪಿಸಿಕೊಳ್ಳಲು ಅಥವಾ ಅದರಿಂದ ನುಸುಳಿಕೊಂಡು ಹೋಗಲು ಪ್ರಯತ್ನ ಮಾಡುವುದು ಅಷ್ಟು ಸರಿಯಾದುದಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ದೇಶದಲ್ಲಿರತಕ್ಕಂಥ ಜನರ ಪ್ರತಿನಿಧಿಗಳಾಗಿ ನಾವೀ ದಿವಸ ದೇಶದ ಜವಾಬ್ದಾರಿಯನ್ನು ಹೊತ್ತು ಇದರ ಆಡಳಿತ ನಡೆಸುತ್ತಿರುವಾಗ, ನಾವು ಇಂಥ ವಿಚಾರದಲ್ಲಿ ಜನಗಳ ನಿಜವಾದ ಅಭಿಪ್ರಾಯ ಏನಿದೆಯೆಂಬುದನ್ನು ಸರಿಯಾಗಿ ಪ್ರತಿಬಿಂಬಿಸಬೇಕಾದದ್ದು ನಮ್ಮೆಲ್ಲರ ಜವಾಬ್ದಾರಿ ಮತ್ತು ನಮ್ಮೆಲ್ಲರ ಆದ್ಯಕರ್ತವ್ಯವೆಂದು ನಾನು ತಿಳಿದುಕೊಂಡಿದ್ದೇನೆ. ಈ ಒಂದು ಅಭಿಪ್ರಾಯದಿಂದಲೇ ನಮ್ಮ ಸರ್ಕಾರ ಆ ಒಂದು ಸಮಿತಿಯನ್ನು ಕೂಡ ನೇಮಕ ಮಾಡಿದ್ದು. ಆ ಪ್ರಕಾರವೇ ಆ ಸಮಿತಿಯವರು ನಮ್ಮ ಅಕ್ಕಪಕ್ಕದ ಪ್ರಾಂತ್ಯಗಳಿಗೆಲ್ಲಾ ಹೋಗಿ ಅಲ್ಲಿ ಅಧಿಕೃತವಾಗಿ ದೊರೆದಂಥ ಅಂಕಿ ಅಂಶಗಳನ್ನೆಲ್ಲಾ ಶೇಖರಣೆ ಮಾಡಿಕೊಂಡು, ಅನಂತರ ಆ ಬಗ್ಗೆ ಒಂದು ಸಂಪೂರ್ಣ ವರದಿಯನ್ನೇ ತಯಾರಿಸಿ ಸರ್ಕಾರಕ್ಕೆ ಒಪ್ಪಿಸಿದ್ದಾರೆ. ಆ ವರದಿಯು ಈ ಸಭೆಯ ಮುಂದೆ ಚರ್ಚೆಗೆ ಬಂದಾಗ ಅನೇಕರು ಅದನ್ನು ಟೀಕೆಮಾಡಿ ಮಾತನಾಡಿದ್ದಾರೆ. ಈ ಮಾನ್ಯ ಸಭೆಯ ಸದಸ್ಯರಲ್ಲೊಬ್ಬರಾದ ಶ್ರೀಮಾನ್ ಕೆ. ಪಟ್ಟಾಭಿರಾಮ್‌ರವರಂಥ ಮಾನ್ಯ ಸದಸ್ಯರೂ ಕೂಡ ಈ ದಿವಸ ಸಭೆಯ ಮುಂದಿರತಕ್ಕ ಶೇಷಾದ್ರಿ ಸಮಿತಿಗೆ ಎಷ್ಟು ಬೆಲೆ ಕೊಡಬಹುದೋ ಅದಕ್ಕಿಂತಲೂ ಹೆಚ್ಚಿನ ಬೆಲೆಯನ್ನೂ ಮತ್ತು ಪ್ರಾಶಸ್ತ್ಯವನ್ನೂ ಆ ಶ್ರೀಮಾನ್ ಕಂಠಿಯವರ ವರದಿಗೆ ಕೊಡಬಹುದು ಎಂದು ಈ ಶಾಸನ ಸಭೆಯಲ್ಲೇ ಹೇಳಿರತಕ್ಕದ್ದು ನನಗೆ ತುಂಬ ಆಶ್ಚರ್ಯವಾಗಿದೆ. ಈ ಶೇಷಾದ್ರಿ ಸಮಿತಿಯವರು ಶೇಖರಣೆ ಮಾಡಿರತಕ್ಕಂಥ ಅಂಕಿ ಅಂಶಗಳೇನಿವೆಯೋ ಅವು ಆ ಶ್ರೀಮಾನ್ ಕಂಠಿಯವರ ಅಂಕಿ ಅಂಶಗಳಿಗಿಂತಲೂ ಕಡಮೆ ಎಂದು ಹೇಳಿದ್ದಾರೆ. ಯಾರೂ ಒಬ್ಬ ವ್ಯಕ್ತಿ ದೊಡ್ಡವರು ಅಲ್ಲ ಎಂದು ಹೇಳುವುದಿಲ್ಲ. ಸರ್ಕಾರದವರೂ ಕೂಡ ಅಂಕಿ ಅಂಶಗಳನ್ನು ಪ್ರಶ್ನೆಮಾಡುವುದಕ್ಕೆ ಹೊರಟರೆ, ಅಂತಹ ಸದಸ್ಯರ ವಿಷಯದಲ್ಲಿ ಏನು ಅಭಿಪ್ರಾಯ ಇಟ್ಟುಕೊಳ್ಳಬೇಕೆಂಬುದನ್ನು ಜನತೆಗೆ ಬಿಡಬೇಕಾಗುತ್ತದೆ. ''ಮದುವೆಯಲ್ಲಿ ಗಂಡು ಕೆಂಪು ಇರುವುದು, ಹೆಣ್ಣು ಕಪ್ಪಗೆ ಇರುವುದು ಮುಖ್ಯವಲ್ಲ; ಊಟದ ವ್ಯವಸ್ಥೆ, ಹಣ ಕಾಸು ಮುಖ್ಯವಲ್ಲ; ತಾಯಿ ತಂದೆಗಳ ಒಪ್ಪಿಗೆ ಮುಖ್ಯವಲ್ಲ; ಗಂಡು ಹೆಣ್ಣಿನ ಒಪ್ಪಿಗೆ ದೊಡ್ಡದಲ್ಲ. ಎಲ್ಲಕ್ಕೂ ದೊಡ್ಡದಾಗಿ ಒಂದು ತತ್ವವಿದೆ. Ethical Principle ತೆಗೆದುಕೊಂಡು ಈ ವಿಷಯವನ್ನು ಪರಿಶೀಲನೆ ಮಾಡಬೇಕು'' ಎಂದು ಶ್ರೀ ಸಿದ್ದಲಿಂಗಯ್ಯನವರು ಹೇಳಿದರು. ಒಂದು ಸಮಾಜ ಜೀವನವಾಗಲೀ ಅಥವಾ ಒಂದು ವಿವಾಹಿತ ಜೀವನವಾಗಲಿ ಪರಸ್ಪರ ಅನುಕೂಲಕ್ಕೆ ಇರುವುದಾಗಿದೆ. ಈ ಪ್ರಪಂಚದಲ್ಲಿ ಸಿಕ್ಕದೇ ಇರುವುದು ಮುಂದಿನ ಪ್ರಪಂಚದಲ್ಲಿ ಸಿಕ್ಕುತ್ತದೆ ಎಂದು ಸಮಾಧಾನ ಪಡುವುದು ಸರಿಯಲ್ಲ ಎಂದು ನಾನು ಹೇಳುತ್ತೇನೆ. ಆದ್ದರಿಂದ ಈ ತರಹ ಉದಾಹರಣೆ ಕೊಟ್ಟು, ನಮ್ಮಲ್ಲಿ ಇವೊತ್ತು ಮೈಸೂರು ಜನತೆಗೆ ಎಷ್ಟು ತೊಂದರೆ ಇದ್ದರೂ ನಾವು ಒಂದು ತತ್ವವನ್ನು ಇಟ್ಟುಕೊಳ್ಳೋಣ, ಎಲ್ಲ ಜನಗಳನ್ನೂ ಕರೆದುಕೊಳ್ಳೋಣ, ತೊಂದರೆಗಳನ್ನು ಅನುಭವಿಸುವುದನ್ನು ಗಣನೆಗೆ ತೆಗೆದು ಕೊಳ್ಳುವುದು ಬೇಡ,—ಎಂದರೆ ನಾನು ಆ ವಾದವನ್ನು ಒಪ್ಪುವುದಿಲ್ಲ. ಅಂಕಿ ಅಂಶಗಳನ್ನೆಲ್ಲಾ ತಿಳಿಸಿದ್ದಾರೆ, ಬೇರೆ ಭಾಗಗಳು ಮೈಸೂರಿಗೆ ಸೇರಿದರೆ ಕೇವಲ ಸಿಬ್ಬಂದಿಗಾಗಿ ವರ್ಷಕ್ಕೆ ಇಪ್ಪತ್ತು ಕೋಟಿಗೂ ಮೀರಿದಂತೆ ಹಣ, ಸಂಬಳ ಸಾರಿಗೆಗಳನ್ನು upgrade ಮಾಡುವುದಕ್ಕೆ ಕೊಡಬೇಕು ಎಂದು ಹೇಳಿದ್ದಾರೆ. ಹಾಗೇನೇ ಅಠಾರಾ ಕಛೇರಿಯಲ್ಲಿ ಇತರ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಬೇಕು ಎಂದು ಹೇಳಿದ್ದಾರೆ. ಎಲ್ಲಾ ಕನ್ನಡ ಪ್ರಾಂತಗಳನ್ನೂ ನಮ್ಮ ಜೊತೆಗೆ ಸೇರಿಸಿಕೊಂಡರೆ ಸಾವಿರಾರು ವರ್ಷ ತೀರಿಸದೆ ಇರತಕ್ಕ ಸಾಲಗಾರರು ಆಗುತ್ತೇವೆ ಎಂದು ಹೇಳಬೇಕಾಗಿದೆ. ಬಳ್ಳಾರಿ ಸ್ನೇಹಿತರನ್ನು ಸೇರಿಸಿ ಕೊಂಡರೆ ಅಲ್ಲಿ ಒಂದು ದೊಡ್ಡ ಅರಣ್ಯ ಸಂಪತ್ತು ಇದೆ, ಖನಿಜ ಸಂಪತ್ತು ಇದೆ, ತುಂಗಭದ್ರಾ ಅಣೆಕಟ್ಟು ಇದೆ ಎಂದು ಹೇಳಿದರು. ನಾನು ಆ ಪ್ರದೇಶಗಳಿಗೆ ಹೋಗಿದ್ದೆ. ವಿಜಯನಗರದ ಕರ್ಣಾಟಕ ಸಾಮ್ರಾಜ್ಯಕ್ಕೆ ಮೂಲಭೂತವಾದದ್ದು ನಮಗೆ ಸೇರಿದೆ. ಆದರೆ ಡಾ|| ನಾಗನಗೌಡರ ಪ್ರದೇಶದ ಕಾಡುಗಳಲ್ಲಿರುವ ಮರಗಳಿಗೆ ಕೊಂಬೆಗಳೇ ಇಲ್ಲ. ತೋಳಿನಷ್ಟು ದಪ್ಪದ ಮರಗಳು! ಹಸುರು ಹುಲ್ಲೇ ಬೆಳೆಯುವುದಿಲ್ಲ. ಇದು ಅಲ್ಲಿನ ಅರಣ್ಯ ಸಂಪತ್ತು. ಎರಡನೆಯದು ತುಂಗಭದ್ರಾ ಅಣೆಕಟ್ಟು ಸೇರುತ್ತದೆ ಎಂದರು. ಸೇರಿದೆ ನಿಜ. ಈಗಾಗಲೇ ನಮಗೆ ಸಂಬಂಧಪಟ್ಟ ಪ್ರದೇಶದಲ್ಲಿ ಅಣೆಕಟ್ಟಿನ ಖರ್ಚಿನಲ್ಲಿ ಸುಮಾರು ನಲವತ್ತು

(ಶ್ರೀ ಎ. ವಿ. ನರಸಿಂಹರೆಡ್ಡಿ)

ಕೋಟಿ ರೂಪಾಯಿಗಳಷ್ಟು ಸಾಲ ನಮಗೆ ಸೇರಿಕೊಂಡಿದೆ. ಅದಕ್ಕೆ ಇಪ್ಪತ್ತು ಲಕ್ಷ ಬಡ್ಡಿ ಕೊಡಬೇಕಾಗುತ್ತದೆ. ಅಸಲು ತೀರಿಸುವುದಕ್ಕೇ ಆಗುವುದಿಲ್ಲ. ಅಲ್ಲಿರತಕ್ಕ ನೀರಾವರಿ ಕಾರ್ಯಕ್ರಮ ತೆಗೆದುಕೊಂಡರೆ . . . .

ಶ್ರೀ ಜೆ. ಮಹಮ್ಮದ್ ಇಮಾಂ.—ನಲವತ್ತು ಕೋಟಿ ರೂಪಾಯಿ ಸಾಲ ತೆಗೆದುಕೊಂಡಿದ್ದಾರೆ, ತುಂಗಭದ್ರಾ Project ನಿಂದ ನಲವತ್ತು ಕೋಟಿ ರೂಪಾಯಿ ಸಾಲ ಜಾಸ್ತಿ ಬಂದಿದೆ ಎಂದು ಹೇಳಿದರು.

Sri N. C. NAGAIAH REDDY (Gauribidanur).—Unless you prove to the contrary, it is correct.

ಶ್ರೀ ಎ. ವಿ. ನರಸಿಂಹರೆಡ್ಡಿ.—ಬಳ್ಳಾರಿ ಏಳು ತಾಲ್ಲೂಕ್‌ಗಳು ನಮಗೆ ಸೇರಿ ಅದರಿಂದ ಏನು ಪರಿಣಾಮವಾಗುತ್ತದೆ ಎಂಬುದನ್ನು ಸ್ವಲ್ಪ ಹೇಳುತ್ತೇನೆ. ಇವೊತ್ತು ತುಂಗಭದ್ರಾ project ಮುಗಿದು ನಾಲೆಗಳು ಮಾಡಿ ವ್ಯವಸಾಯಕ್ಕೆ ನೀರು ಕೊಡುವುದಕ್ಕೆ ತಯಾರಾಗಿದ್ದಾರೆ. ಆದರೆ ಜನರು ನೀರು ತೆಗೆದುಕೊಂಡು ಬೆಳೆ ಬೆಳೆಯುವುದಕ್ಕೆ ತಯಾರಾಗಿಲ್ಲ. ಅವರಿಗೆ Bulldozers ತೆಗೆದುಕೊಂಡು ಹೋಗಿ ಅವರು ಹೊಂದಿರತಕ್ಕ ಭೂಮಿಯನ್ನು ಮಟ್ಟಮಾಡಿ ನೀರು ಬಿಡಬೇಕು ಎಂದು ಹೇಳುತ್ತಿದ್ದಾರೆ. ಇದು ಜನಗಳಲ್ಲಿ ಸಹಕಾರಮನೋಭಾವನೆ ಇರುವುದು ತೋರಿಸುತ್ತದೆ. ಒಂದು ಕುದುರೆಗೂ ಒಂದು ವಾನರಕ್ಕೂ ಜೊತೆಹಾಕಿ ತೆಗೆದುಕೊಂಡು ಹೋದ ಹಾಗಾಗುತ್ತದೆ. ವಾನರ ಹೋಗದೆ ಕುದುರೆ ಹೋಗುವಹಾಗಿಲ್ಲ, ಕುದುರೆ ಕಟ್ಟಿಕೊಂಡವರು ಮಧ್ಯೆ ಇರಬೇಕು. ಹೀಗೆ ಆಗಿದೆ ನಮ್ಮ ಪರಿಸ್ಥಿತಿ. ಬಳ್ಳಾರಿಯಿಂದ ಬರತಕ್ಕ ಅರವತ್ತು ಲಕ್ಷ ರೂಪಾಯಿಗಳ ಆದಾಯದ ಮೇಲೆ ಖರ್ಚು ಮಾಡಬೇಕಾಗಿದೆ. ಅದೇ ಅರವತ್ತು ಲಕ್ಷ ರೂಪಾಯಿಗಳನ್ನು ಇತರ ಪ್ರದೇಶಗಳಲ್ಲಿ ಖರ್ಚುಮಾಡಿದ್ದರೆ ಹೊಸ ಕೆರೆಗಳನ್ನು ಒಂದೊಂದು ಲಕ್ಷ ರೂಪಾಯಿನಲ್ಲಿ ಕಟ್ಟಿಸುವುದಕ್ಕೆ ಖರ್ಚು ಮಾಡಬಹುದು. ಆರ್ಥಿಕ ವಿಚಾರವನ್ನು ಗಣನೆಗೆ ತೆಗೆದುಕೊಳ್ಳಬೇಕು. ಯಾವಾಗಲೂ ಅವರು ಹೇಳುವುದು ತತ್ವ ಮತ್ತು ಆದರ್ಶ; ಸೂಕ್ತವಾಗಿರುವಾಗ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಅಂತಹ ತತ್ತ್ವದ ಜೊತೆಗೆ ಎಲ್ಲರ ಸೌಭಾಗ್ಯವನ್ನೂ ಮಾಡಿಕೊಂಡು ಹೋಗುವುದಕ್ಕೆ ಆಗುತ್ತದೆಯೋ ಎಂಬುದನ್ನು ಯೋಚನೆ ಮಾಡಬೇಕು. ಇವೊತ್ತು ಆರುನೂರು ಮೈಲಿಗಳ ದೂರ ಲೆಖ್ಖವಿಲ್ಲ, ಮೋಟಾರು ಕಾರುಗಳಿವೆ ಏರೋಪ್ಲೇನ್‌ಗಳಿವೆ ಎಂದು ಹೇಳಿದರು. ಆಂಧ್ರದ ಉದಾಹರಣೆ ತೆಗೆದುಕೊಂಡರು. ಆಂಧ್ರ ಎಲ್ಲಾ ತೆಲುಗು ಮಾತನಾಡತಕ್ಕ ಪ್ರದೇಶದ ಪ್ರಾಂತ್ಯವಲ್ಲ. ಅದು ಸರಿಯಾದ ಉದಾಹರಣೆಯಲ್ಲ. ಒಟ್ಟುಗೂಡಿದ್ದ ಮದ್ರಾಸ್ ಪ್ರಾಂತ್ಯ ಆಡಳಿತಕ್ಕೆ ಬಹಳ ವಿಶಾಲವಾದುದು, ಆದ್ದರಿಂದ ಈ ಪ್ರದೇಶಕ್ಕೆ ಸರಿಯಾದ ಆಡಳಿತ ಸೌಲಭ್ಯಗಳು ಸಿಕ್ಕಿಲ್ಲ, ಆಡಳಿತ ಮೇಲ್ವಿಚಾರಣೆಗೆ ಗಮನ ಸಳೆಯುವುದಕ್ಕೆ ಆಗಿಲ್ಲ, ಅಥವಾ ಬಹುದೂರ ಪ್ರದೇಶಗಳಿಗೆ ಸಂಪರ್ಕ ಇಟ್ಟುಕೊಂಡು ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕೆ ಆಗುವುದಿಲ್ಲ, ಎಂಬ ಕಾರಣಗಳಿಗಾಗಿ ಮದ್ರಾಸನ್ನು ವಿಭಾಗ ಮಾಡಿದರು. ಇಲ್ಲದಿದ್ದರೆ ಖಂಡಿತವಾಗಿಯೂ ಅವರ ಜನಗಳ ಆಶೋತ್ತರಗಳನ್ನು ಈಡೇರಿಸುವುದಕ್ಕೆ ಆಗುತ್ತಿರಲಿಲ್ಲ. ಹಿಂದೆ ಶ್ರೀ ಪಟ್ಟಾಭಿರಾಮಯ್ಯರವರ ಜೊತೆಯಲ್ಲಿ ಈ ವಿಷಯವನ್ನು ಮಾತನಾಡಿದ್ದೇನೆ. ಆಗ ಅವರು ಒಂದು ಮಾತನ್ನು ಹೇಳಿದರು. ಅದೇ ವಿಷಯವನ್ನು ಪ್ರಾಂತ ಪುನರ್ವಿಂಗಡನೆ ಸಮಿತಿಯ ಮುಖಂಡರೂ ಹೇಳಿದರು. ಏನದು ಎಂದರೆ, ಮೈಸೂರು ಇರುವಹಾಗೆ ಇರತಕ್ಕಂಥಾದ್ದು ಒಂದು ವಿಧದಲ್ಲಿ ಸರಿಹೋದರೂ ಆರ್ಥಿಕ ವಿಷಯವನ್ನು ಪ್ರಬಲವಾಗಿ ಹೇಳುವುದು ಸರಿಹೋಗುವುದಿಲ್ಲ, ತಾತ್ವಿಕವಾಗಿ ಹೇಳುವುದಾದರೆ ಯಾವುದೇ ಒಂದು ಸಂಸ್ಥಾನ ಪುನರ್ವಿಂಗಡನೆಯಾದಮೇಲೆ, ಅದರ ಮುಖ್ಯ ಪಟ್ಟಣ ಇನ್ನೂರು ಮೈಲಿದೂರ ಇರಬಾರದು, ಅದರ ಜನಸಂಖ್ಯೆ ಎಷ್ಟಾದರೂ ಆಗಲಿ ಮಧ್ಯ ಭಾಗದಲ್ಲಿ ಮುಖ್ಯ ಪಟ್ಟಣವಿರಬೇಕು, ಇನ್ನೂರು ಮೈಲಿಗೆ ಮೀರದಂತೆ ಎಲ್ಲೆ ಕಟ್ಟು ಇರುವ ಪ್ರದೇಶವನ್ನು ವಿಂಗಡಿಸಿ ಒಂದೊಂದು ಪ್ರಾಂತವನ್ನು ಮಾಡುವುದರಿಂದ ಸೊಗಸಾದ ಆಡಳಿತವಾಗುತ್ತದೆ, ಆರೀತಿ ತಾತ್ವಿಕವಾಗಿ ಮಾಡಬೇಕು—ಎಂದು ಒಂದು ಸಲಹೆ ಮಾಡಿದರು. ಆ ಸಲಹೆಗೆ ನಿಜವಾಗಿಯೂ ನಾನು ಕೃತಜ್ಞನಾಗಿದ್ದೇನೆ. ಆರನೂರು ಮೈಲಿಯಿಂದ ಎಂಟುನೂರು ಮೈಲಿವರೆಗೆ ದೂರ ಇದ್ದರೂ, ಈಗ ವಾಯುವೇಗದಲ್ಲಿ ಓಡಾಡುವುದಕ್ಕೆ ಸೌಲಭ್ಯವಿರುವುದರಿಂದ ಎಲ್ಲ ಜನರೂ ಒಂದು ಕಡೆ ಸೇರಿಬಿಡೋಣ ಎಂದು ವಾದ ಮಾಡುತ್ತಿದ್ದಾರೆ. ಅವರು ಅಭಿಪ್ರಾಯವನ್ನು ಬದಲಾಯಿಸುವ ವಿಷಯಕ್ಕೆ ನಿಜವಾಗಿ ಅವರಿಗೆ ಹಕ್ಕಿದೆ. ಅದನ್ನು ಮಾಡಿಕೊಳ್ಳಬಹುದು. ಆದರೆ ಇವೊತ್ತು ಮೈಸೂರು ಸರ್ವತೋಮುಖವಾಗಿ ಅಭಿವೃದ್ಧಿ ಹೊಂದಿ ಇಲ್ಲಿನ ಜನ ನೆಮ್ಮದಿಯಿಂದ ಚೆನ್ನಾಗಿ ಬೆಳೆಯುತ್ತಾ ಇರುವುದಾದರೆ, ಅದು ಸಂಸ್ಥಾನದಲ್ಲಿರತಕ್ಕ ಸೌಲಭ್ಯಗಳಿಂದ ಎಂದು ಹೇಳುತ್ತೇನೆ. ಇಲ್ಲಿನ ಭೂಭಾಗ ಮುವತ್ತೆರಡು ಸಾವಿರ ಚದರ ಮೈಲಿಗಳು. ಇದು ಜನಾದರಣೀಯವಾದ ರಾಜರ ಆಡಳಿತಕ್ಕೆ ಒಳಪಟ್ಟು, ದೇಶಪ್ರೇಮಿಗಳಿಂದ ಕೂಡಿದ್ದಂಥ ಸಿಬ್ಬಂದಿ ವರ್ಗದವರು ತಮ್ಮ ವೈಯಕ್ತಿಕವಾದ ಅನುಕೂಲಗಳನ್ನು ಬದಿಗಿಟ್ಟು ಜನತೆಯ ಸಹಕಾರವನ್ನು ತೆಗೆದುಕೊಂಡು ಈ ದೇಶವನ್ನು ಕಟ್ಟಿರುವುದೇ ಈ ದೇಶ ಮುಂದುವರಿಯುವುದಕ್ಕೆ ಕಾರಣ. ಈ ರೀತಿ ಇವೊತ್ತು ಮೈಸೂರು ಮುಂದುವರಿಯಬೇಕಾಗಿದ್ದರೆ, ಇದರ ಆಡಳಿತ ವಿಚಕ್ಷಣೆಯಿಂದ ಜನ ಸಾಮಾನ್ಯರ ನಿಕಟ ಸಂಪರ್ಕವನ್ನು ಹೊಂದಿರುವುದೇ ಕಾರಣ, ಮತ್ತು ಈ ದೇಶದ ಭೂಭಾಗ ವೈಶಾಲ್ಯದಿಂದ ಕೂಡದೆ ಇರುವುದರಿಂದ ಸಾಧ್ಯವಾಗಿದೆ ಎಂದು ನನ್ನ ಭಾವನೆ. ಪ್ರಾಂತ ಪುನರ್ವಿಂಗಡನೆಯ ಸಮಿತಿಯವರು ಮೈಸೂರನ್ನು ಆದರ್ಶವನ್ನಾಗಿಟ್ಟುಕೊಂಡು ಪ್ರಾಂತಗಳ ಪುನರ್ವಿಂಗಡನೆ ಮಾಡುವುದಾದರೆ ಆಗ ಎಲ್ಲಾ ಕಾಲಕ್ಕೂ ನಿಲ್ಲತಕ್ಕಂಥ ಮತ್ತು ದೇಶದ ಏಳಿಗೆಗೆ ಸಹಾಯವಾಗತಕ್ಕಂಥ ಸಂಸ್ಥಾನಗಳನ್ನು ಮಾಡಬಹುದು. ಇವೊತ್ತು ಉತ್ತರ ಪ್ರದೇಶದ ವಿಷಯವನ್ನು ಪ್ರಸ್ತಾಪ ಮಾಡುತ್ತಾ ಎಂಟುಕೋಟಿ ಜನಗಳು ಅಲ್ಲಿ ಇದ್ದಾರೆಂದು ಹೇಳಿದರು. ಇಷ್ಟು ಜಾಸ್ತಿ ಜನಗಳು ಇರುವುದರಿಂದ ಈಗ ಅಲ್ಲಿನ ಜನಗಳು ಯಾವ ವಿಧದಲ್ಲಿಯೂ ಮುಂದುವರಿಯುವುದಕ್ಕೆ ಸಾಧ್ಯವಾಗಿಲ್ಲ. ಆಡಳಿತ ಇದೆಯೋ ಇಲ್ಲವೇ ಎನ್ನುವ ಅರಿವು ಕೂಡ ಕೆಲವು ಭಾಗದ ಜನರಿಗೆ ಆಗಿಲ್ಲ. ಜೊತೆಗೆ ಇನ್ನೂ ಅಲ್ಲಿ ಆಡಳಿತದ ಬಿಕ್ಕಟ್ಟು ಎಷ್ಟರಮಟ್ಟಿಗೆ ನಡೆಯುತ್ತಿದೆ ಎಂಬುದನ್ನು ಪತ್ರಿಕೆಗಳಲ್ಲಿ ಬರತಕ್ಕ ವಿಷಯಗಳಿಂದ ನೋಡುತ್ತೇವೆ. ಆದ್ದರಿಂದ, ಅಲ್ಲಿ ಎಂಟು ಕೋಟಿ ಜನರು ಇರುವಾಗ ಇಲ್ಲಿ ಎರಡು ಕೋಟಿ ಮೂರು ಕೋಟಿ ಆಗುವುದರಲ್ಲಿ ಏನು ತೊಂದರೆ ಎನ್ನುವ ವಾದ ಸರಿ ಹೋಗುವುದಿಲ್ಲ. ಅಭಿವೃದ್ಧಿ ಕಾರ್ಯಗಳ ವಿಷಯದಲ್ಲಿ ಮತ್ತು ಎಲ್ಲಾ ಬಾಬುಗಳಲ್ಲಿಯೂ ಅರ್ಥಿಕ ಏರುಪೇರು ಆಗಿರುವ ಎಲ್ಲಾ ಪ್ರದೇಶಗಳನ್ನೂ ಒಟ್ಟುಗೂಡಿಸುವುದರಿಂದ ಸರಿಹೋಗುವುದಿಲ್ಲ

ವೆಂದು ಹೇಳುತ್ತೇನೆ. ಮಿಕ್ಕ ಕನ್ನಡ ಪ್ರದೇಶಗಳನ್ನು ಆ ಭಾಗದ ಜನರ ಹಿತದೃಷ್ಟಿಯಿಂದ ಒಂದು ಪ್ರಾಂತ್ಯವನ್ನಾಗಿ ವಿಂಗಡಿಸಿ ಅಲ್ಲಿ ಹೆಚ್ಚಿನ ಆರ್ಥಿಕ ನೆರವನ್ನು ಕೊಟ್ಟು ಮತ್ತು ಅಕ್ಕಪಕ್ಕದ ನಾವುಗಳು ಒಂದು ಸಹಾಯದ ಕೈಯನ್ನು ನೀಡಿ ಅವರೆಲ್ಲರೂ ಒಂದು wartime effortನ್ನು ಮಾಡಿದ ಹೊರತು, ಅವರು ಖಂಡಿತವಾಗಿಯೂ ಎಂದಿಗೂ ಮೈಸೂರಿನ ಸೀಮೆಗೆ ಬಂದು ಸೇರುವುದಾಗಲಿ, ಅಥವಾ ಇತರ ಪ್ರದೇಶಗಳು ಮೈಸೂರು ಸಂಸ್ಥಾನಕ್ಕೆ ಸೇರಿ ಎಲ್ಲವೂ ಒಂದು ಸರ್ವಾಂಗ ಸುಂದರವಾಗುವಂಥ ಪ್ರದೇಶವಾಗುವ ರೀತಿಯಲ್ಲಿ ಆ ಪ್ರದೇಶಗಳ ರೂಪವನ್ನು ನಾವು ಪರಿವರ್ತನೆ ಮಾಡುವುದಾಗಲಿ ಖಂಡಿತವಾಗಿಯೂ ಸಾಧ್ಯವಿಲ್ಲ. ಆದ್ದರಿಂದ ನಾನು ಹೇಳುವುದೂ ಕೂಡ ಆ ಪ್ರದೇಶವನ್ನು ಒಂದು ಪ್ರಾಂತವನ್ನಾಗಿ ಮಾಡಿ ಎಂದು. ಕನ್ನಡ ಭಾಷೆ ಬೆಳೆಯುವ ವಿಷಯದಲ್ಲಿ ಯಾರ ಅಭ್ಯಂತರವೂ ಇಲ್ಲ. ರೆಡ್ಡಿಗಳದ್ದು ತೆಲುಗು ಮಾತೃಭಾಷೆ, ಅವರಿಗೆ ಕನ್ನಡ ಪ್ರೇಮವಿಲ್ಲ, ಆದ್ದರಿಂದ ಈ ವಿಷಯದಲ್ಲಿ ಅವರಿಗೆ ವಿರೋಧಮಾಡುವ ಮನೋಭಾವನೆ ಇದೆ, ಎಂದು ಕೆಲವರಲ್ಲಿ ಒಂದು ಅಭಿಪ್ರಾಯವಿದೆ. ಅದು ತೀರತಪ್ಪು. ನಾವು ಹುಟ್ಟಿದ್ದು, ನಾವು ಪೋಷಿತರಾಗಿರತಕ್ಕಂಥಾದ್ದು, ನಾವು ಕುಳಿತಿರತಕ್ಕಂಥಾದ್ದು ಕನ್ನಡ ನಾಡು. ನಾವು ಈಗ ಬಳಸತಕ್ಕಂಥಾದ್ದು, ಕನ್ನಡ ಭಾಷೆ. ಎಲ್ಲರಿಗಿಂತಲೂ ಹೆಚ್ಚಾಗಿ ನಾವು ಕನ್ನಡ ಭಾಷೆ ಬೆಳೆಯುವ ವಿಷಯದಲ್ಲಿ ಅಭಿಮಾನವನ್ನು ಹೊಂದಿದ್ದೇವೆ.

2-30 P.M.

ಆದ್ದರಿಂದ ನಮ್ಮ ಮನೋಭಾವವನ್ನು ಪ್ರಶ್ನಿಸುವುದಕ್ಕೆ ಹೋಗುವುದು ಅನಾವಶ್ಯಕ. ಆದ್ದರಿಂದ ಮೈಸೂರು ಮೈಸೂರಾಗಿಯೇ ಇರಬೇಕೆಂದು ನಾವು ಹೇಳಿದರೆ, ಅವರು ಈ ಮನೋಭಾವಕ್ಕೆ ಬಣ್ಣ ಕಟ್ಟುವುದು ದಯವಿಟ್ಟು ನಿಲ್ಲಬೇಕೆಂದು ಹೇಳುತ್ತೇನೆ. ಕನ್ನಡ ಭಾಷೆಗೇ ಆಗಲಿ, ಕನ್ನಡನಾಡಿಗೇ ಆಗಲಿ ಧಕ್ಕೆ ಬಾರದಂಥ ರೀತಿಯಲ್ಲಿ ಕನ್ನಡ ಪ್ರಾಂತ್ಯಗಳನ್ನು ನಿರ್ಮಿಸುವುದು ಸಾಧ್ಯವಿದೆ. ಈ ದೃಷ್ಟಿಯಿಂದ ಸರ್ಕಾರದವರು ಅವರ ಅಭಿಪ್ರಾಯವನ್ನು ಕೊಡುವ ಪಕ್ಷಕ್ಕೆ ಕೊಡಬೇಕೆಂದೂ ಮತ್ತು ಪ್ರಾಂತ ಪುನರ್ವಿಂಗಡಣಾ ಸಮಿತಿಯವರು ಇಲ್ಲಿನ ಜನರ ಅಭಿಪ್ರಾಯವನ್ನು ತಿಳಿದುಕೊಳ್ಳಬೇಕೆಂದು ಸೂಚನೆ ಕೊಡಬೇಕೆಂದೂ ನಾನು ಮತ್ತೊಮ್ಮೆ ನೆಹ್ರೂಅವರಿಗೆ ಒಂದು ಕೋರಿಕೆ ಸಲ್ಲಿಸುತ್ತೇನೆ. ನೆಹ್ರೂಅವರು ಈ ವಿಷಯದಲ್ಲಿ ಯಾವುದೊಂದು ತೀರ್ಮಾನವನ್ನೂ ಕೂಡ ಸ್ಟೇಟ್ಸ್ ರಿ-ಆರ್ಗನೈಸೇಷನ್ ಸಮಿತಿಯವರು ಇಲ್ಲಿಗೆ ಬರುವವರೆಗೂ ಕೊಡಕೂಡದೆಂದು ನನ್ನ ಆಶಯ ಮತ್ತು ನಮ್ಮ ಕ್ಷೇತ್ರದ ಆಶಯ ಎಂದು ಹೇಳುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಅಧ್ಯಕ್ಷರೇ, ಈಗ ಮೂರು ನಾಲ್ಕು ದಿನಗಳಿಂದಲೂ ಮಾತನಾಡಿರತಕ್ಕ ನನ್ನ ಮಾನ್ಯ ಸ್ನೇಹಿತರು ಹೇಳಿರತಕ್ಕ ವಾದಗಳನ್ನು ಕೇಳಿದ್ದೇನೆ. ಈ ವಾದಗಳನ್ನು ಸಾಮಾನ್ಯವಾಗಿ ಎರಡು ಭಾಗ ಮಾಡಬಹುದು. ಒಂದು, ಮೈಸೂರು ಬಹಳ ಉನ್ನತ ಸ್ಥಿತಿಯಲಿದೆ; ವಿದ್ಯಾಭ್ಯಾಸ, ಆರೋಗ್ಯ, ವ್ಯವಸಾಯ, ಪಶುವೈದ್ಯ ಇತ್ಯಾದಿ ಇತ್ಯಾದಿ ಎಲ್ಲಾ ವಿಚಾರಗಳಲ್ಲೂ ಹಾಗೂ ಕೈಗಾರಿಕಾ ವಿಚಾರದಲ್ಲೂ ಬಹಳ ಮುಂದುವರಿದಿದೆ; ಆ ಮಟ್ಟಕ್ಕೆ ಕರ್ಣಾಟಕದ ಇತರ ಭಾಗಗಳನ್ನು ತರಬೇಕಾದರೆ, ಸರ್ಕಾರದವರು ಆ ಭಾಗಕ್ಕೆ ಹೆಚ್ಚು ಹಣ ಖರ್ಚು ಮಾಡಬೇಕಾಗುತ್ತದೆ, ಎಂಬುದು. ಅಂದರೇನಾಯಿತು? ಆ ಹಣದಷ್ಟು ಇಲ್ಲಿ ಉಪಯೋಗವಾಗುವುದು ಕಡಮೆಯಾಗುತ್ತದೆ; ಮತ್ತು, ಇಲ್ಲಿರತಕ್ಕ ಪರಿಣತರು ಅಲ್ಲಿ ಕೆಲಸ ಮಾಡಿ, ಅವರು ಈ ಮಟ್ಟಕ್ಕೆ ಬರುವವರೆಗೂ ಇಲ್ಲಿನ ಕೆಲಸ ಕಾರ್ಯಗಳಿಗೆ ಅವರ ನೆರವು ಸಿಕ್ಕದೆ ಸ್ವಲ್ಪ ಕುಂದಕ ಬರುತ್ತದೆಂಬ ಧೋರಣೆ ಅವರ ಭಾಷಣದಿಂದ ವ್ಯಕ್ತವಾಗುತ್ತದೆ. ಈ ಪ್ರಕಾರ, ಅವರ ಮಟ್ಟವೇ ಬೇರೆ, ಇವರ ಮಟ್ಟವೇ ಬೇರೆ, ಮಟ್ಟ ಸರಿಹೋಗಲಿ ಎನ್ನುವುದು ಕೆಲವರ ವಾದವಾಗಿದೆ.

ಮತ್ತೆ ಕೆಲವರು ಸ್ನೇಹಿತರು, ಇದು ಅಗಾಧವಾದ ಸಂಪತ್ತುಳ್ಳ ಪ್ರದೇಶ, ಇನ್ನೂ ಉಪಯೋಗಿಸಿಕೊಂಡಿಲ್ಲ ಅಷ್ಟೆ; ಕಾರಣ, ಅವಕಾಶ ವಿರಲಿಲ್ಲ; ನಾನಾ ಆಡಳಿತಕ್ಕೊಳಪಟ್ಟಿದ್ದರಿಂದ ಕರ್ಣಾಟಕದ ಬೆಳವಣಿಗೆಗೆ ಗಮನ ಕೊಡದೆ ಅಲ್ಲಿರತಕ್ಕ ಖನಿಜ ಸಂಪತ್ತು, ಭೂ ಸಂಪತ್ತು ರೂಢಿಸಲ್ಪಟ್ಟಿಲ್ಲ; ಅಲ್ಲಿ ಹರಿಯುತಕ್ಕ ಕಾಳಿ ನದಿಗೆ ಅಡ್ಡಗಟ್ಟಿ ವಿದ್ಯುಚ್ಛಕ್ತಿಯ ಉತ್ಪಾದನೆಯನ್ನು ಕೂಡ ಕೈಕೊಂಡಿಲ್ಲ; ಹೀಗೆ ಎಲ್ಲವೂ ಹಾಗೆಯೇ ಉಳಿದಿದೆ; ಇದನ್ನೀಗ ನಾವು ಕೈಗೆ ತೆಗೆದುಕೊಂಡು ಅಭಿವೃದ್ಧಿಪಡಿಸಿದರೆ ಬೇಕಾದಷ್ಟು ಅನುಕೂಲವಾಗುತ್ತದೆ; ನಮಗೆ ಎಷ್ಟು ಹಣ ಖೋತಾ ಬರುತ್ತದೆಂದು ನಿರೀಕ್ಷಣೆ ಮಾಡಿವೆಯೋ ಅಷ್ಟು ಖೋತಾ ಆಗುವುದಿಲ್ಲ; ಇನ್ನೂ ಉತ್ಪತ್ತಿಯೇ ಜಾಸ್ತಿಯಾಗಬಹುದು; ಇದರ ಜೊತೆಗೆ ಮೈಸೂರಲ್ಲದ ಕನ್ನಡ ಮಾತನಾಡುವ ಜನರು ಬಹಳ ಬಿಕ್ಕಟ್ಟಿನ ಪ್ರಸಂಗದಲ್ಲಿದ್ದಾರೆ; ಕೊನೆಯ ಪಕ್ಷ ಅವರು ಎರಡು ಮೂರು ಸರ್ಕಾರಗಳಿಗೆ ಒಳಪಟ್ಟಿದ್ದಾರೆ; ಹೀಗೆ ಬೇರೆ ಬೇರೆ ಸರ್ಕಾರಗಳಲ್ಲಿ ಸ್ವಲ್ಪ ಸ್ವಲ್ಪ ಜನ ಇದ್ದುಕೊಂಡು ಆ ಸರ್ಕಾರಗಳ ಮುಂದೆ ತಮ್ಮ ಕಷ್ಟ ಸುಖಗಳನ್ನಿಡುವುದಕ್ಕೆ ಸಾಕಷ್ಟು ಸಂಖ್ಯಾಬಲವಿಲ್ಲದೆ ಹಿಂದುಳಿದಿದ್ದಾರೆ; ಈ ದೃಷ್ಟಿಯಿಂದ ಹಾಗೂ ಭಾಷಾ ಪ್ರೇಮದಿಂದ ಒಂದ ಭಾಷೆ ಮಾತನಾಡುವವರೆಲ್ಲರನ್ನೂ ವಿಶ್ವಾಸದಿಂದ ಔದಾರ್ಯದಿಂದ ಒಟ್ಟುಗೂಡಿಸುವುದಕ್ಕೆ ಅವಕಾಶ ಮಾಡಬೇಕೆಂಬ ಅಭಿಪ್ರಾಯವನ್ನು ಹೊರಪಡಿಸಿ ಮಾತನಾಡಿದ್ದಾರೆ.

ಈ ಎರಡು ತರದ ಸ್ನೇಹಿತರು ಮಾತನಾಡುವಾಗಲೂ ನಾನು ಕುತೂಹಲದಿಂದ ಕೇಳಿದ್ದೇನೆ. ಅವರು ಹೇಳುವಾಗ ಅದೇ ಸರಿಯೆಂದು ಕಾಣುತ್ತದೆ, ಇವರು ಹೇಳುವಾಗ ಇದೂ ಸರಿಯೆಂದು ಕಾಣುತ್ತದೆ ನಿಜವಾಗಿಯೂ ಈ ಎರಡು ವಾದದಲ್ಲೂ ತಿರುಳಿದೆ. ಆದರೆ ಈ ಪ್ರಶ್ನೆಯನ್ನು ನಾವು ವಿಮರ್ಶೆ ಮಾಡುವಾಗ ಈ ತೆರದಲ್ಲಿ ವ್ಯಾಪಾರ ದೃಷ್ಟಿಯಿಂದಾಗಲಿ, ಅಥವಾ ಲಾಭ ನಷ್ಟದ ದೃಷ್ಟಿಯಿಂದಾಗಲಿ, ಅವರು ಹಿಂದಿದಾರೆ, ನಾವು ಮುಂದಿದ್ದೇವೆ, ಅವರು "ನಾವು ಹಿಂದಿದ್ದೇವೆ" ಎಂದು ನಮ್ಮಲ್ಲಿಗೆ ಬಂದು ದೀನವೃತ್ತಿಯಲ್ಲಿ ಕೇಳಿಕೊಳ್ಳುತ್ತಿದ್ದಾರೆ ಎಂದಾಗಲಿ ವಾದವನ್ನು ಮುಂದುವರಿಸುವುದು ಸರಿಯೇ ಹಾಗೂ ಅಗತ್ಯವೇ ಎನ್ನುವುದನ್ನು ಯೋಚನೆ ಮಾಡಬೇಕು. ನಮ್ಮ ಮುಂದಿರುವ ಪ್ರಶ್ನೆಯೇನು, ನಾವು ಹಿಡಿಯತಕ್ಕ ವಾದವೇನು, ಆ ವಾದಕ್ಕೆ ಇದೆಲ್ಲಾ ಅಗತ್ಯವೇ! ಎಂದು ನಾನು ಕೇಳುತ್ತೇನೆ. ಅಂದ ಮಾತ್ರಕ್ಕೇ ಈ ಅಂಕಿ ಅಂಶಗಳಲ್ಲಿ ತಿರುಳಿಲ್ಲ, ನಾವು ಅವುಗಳನ್ನು ಉದಾಸೀನ ಮಾಡಬಹುದು ಎಂಬ ಭಾವನೆಯಿಂದ ನಾನು ಮಾತನಾಡುತ್ತಿಲ್ಲ. ಏಕೆಂದರೆ, ಸರ್ಕಾರ ಆಡಳಿತ ನಡೆಸುವಾಗ ಈ ವಿಷಯಗಳನ್ನು ಗಮನಿಸಲೇಬೇಕಾಗುತ್ತದೆ. ಎಲ್ಲಾ ಪ್ರಾಂತ್ಯಗಳಲ್ಲೂ ಅನುಕೂಲವಾದ ಹಣಕಾಸಿನ ವ್ಯವಸ್ಥೆಯಿದೆಯೇ ಎಂಬುದನ್ನು ನೋಡಲೇಬೇಕು. ಆದ್ದರಿಂದ ಆಯವ್ಯಯ ಯಾವುದನ್ನೂ ಗಮನಿಸದೆ ಕೆಲಸ ಮಾಡಬೇಕೆಂಬುದು ನಮ್ಮ ಆಶಯವಲ್ಲ.

(ಶ್ರೀ ಎಚ್. ಕೆ. ವೀರಣ್ಣಗೌಡ.)

ಆದರೆ, ಮೈಸೂರು ಸಂಸ್ಥಾನದ—ಮೈಸೂರು ಸಂಸ್ಥಾನವೇ ಏಕೆ, ಎಲ್ಲ ಸಂಸ್ಥಾನಗಳ ಗಡಿ ವಿಸ್ತಾರವಾಗಬೇಕೇ ಬೇಡವೇ, ಆಗಬೇಕಾದರೆ ಎಷ್ಟು ಮಟ್ಟಿಗೆ ಆಗಬೇಕು ಎಂಬ ಪ್ರಶ್ನೆಯ ಮೇಲೆ ಮಾತನಾಡುವಾಗ ಹೀಗೆ ಕೀಳು-ಮೇಲು, ಸಂಪದ್ಯುಕ್ತವಾದದ್ದು ದರಿದ್ರಾವಸ್ಥೆಯಲ್ಲಿರುವುದು,— ಇವುಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾದ ಅಗತ್ಯವಿಲ್ಲವೆಂದು ನನಗೆನ್ನಿಸುತ್ತದೆ. ಹಾಗಾದರೆ ಯಾವ ಅಂಶಗಳನ್ನು ನಾವು ಮುಖ್ಯವಾಗಿ ಗಮನಿಸಬೇಕೆಂಬ ಪ್ರಶ್ನೆ ಬರುತ್ತದೆ. ನಾನು ತಿಳಿದುಕೊಂಡಿರುವ ಮಟ್ಟಿಗೆ, ಮೊದಲನೆಯದು ಆಡಳಿತ ದೃಷ್ಟಿ ಆಡಳಿತ ಬಿಗಿಯಾಗಿದ್ದು ಜನರಿಗೆ ಹಿತಕರವಾಗಿದ್ದು, ಆಕ್ಷೇಪಣೆಗೆ ಗುರಿಯಾಗದ ರೀತಿಯಲ್ಲಿ ಆದಾಯಕ್ಕೆ ತಕ್ಕಹಾಗೆ ಜನರಿಗೆ ಸೌಕರ್ಯವನ್ನುಂಟುಮಾಡುವುದಕ್ಕೆ ಪ್ರಯತ್ನ ಮಾಡಬೇಕಾದರೆ ಎಷ್ಟು ಪ್ರದೇಶ ಇರಬೇಕೆಂಬುದನ್ನು ನೋಡಬೇಕು. ಇದನ್ನು, ಶ್ರೀಮಾನ್ ಪಟ್ಟಾಭಿರಾಮನ್‌ರವರು ಹೇಳಿದ ಹಾಗೆ, ಯಾವ ಅಳತೆಕೋಲಿನಿಂದಲೂ ನಿಗದಿ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಮುಖ್ಯವಾಗಿ ಎಷ್ಟು ಪ್ರದೇಶವಿದ್ದರೆ ನಮ್ಮ ಕೆಲಸ ಸುಸೂತ್ರವಾಗಿ ನಡೆಯುತ್ತದೆಂಬುದರ ದೃಷ್ಟಿಯಿಂದ ನಾವು ಮಾತನಾಡಬೇಕೇ ಹೊರತು ಇತರ ಕರ್ಣಾಟಕದವರು ಹಿಂದುಳಿದಿದ್ದಾರೆ, ಅವರನ್ನು ಎತ್ತುವುದಕ್ಕೆ ಹೋಗಬೇಕೆಂಬ ಭಾವನೆಯಿಂದ ಮಾತನಾಡುವುದು ಸರಿಯಲ್ಲ. ಅವರನ್ನು ಎತ್ತುವುದಕ್ಕೆ ಹೋದರೆ ನಾವೇ ಕುಗ್ಗಿ ಹೋಗಬಹುದು. ಅಲ್ಲದೆ, ಆ ಸ್ನೇಹಿತರೂ ಕೂಡ "ನಾವು ತೀರಾ ಕೆಟ್ಟು ಹೋಗಿದ್ದೇವೆ, ನಮ್ಮ ನೆರವಿಗೆ ಬನ್ನಿ" ಎಂದು ಅಂಗಲಾಚಿ ನಮ್ಮನ್ನು ಬೇಡುತ್ತಿಲ್ಲ. ಜೊತೆಗೆ, ಅವರು ಹಿಂದೆ ಬೀಳುವುದಕ್ಕೂ ಬೇರೆ ಬೇರೆ ಕಾರಣಗಳಿದ್ದುವು. ಅವರು ಬೇರೆ ಬೇರೆ ಸರ್ಕಾರಗಳಿಗೊಳಪಟ್ಟಿದ್ದರು. ಆ ಸರ್ಕಾರಗಳು ಇವರನ್ನು ಉದಾಸೀನ ಮಾಡುತ್ತಿದ್ದರೂ ಇವರಿಗೆ ಸಾಕಷ್ಟು ಸಂಖ್ಯಾಬಲವಿಲ್ಲದ ಕಾರಣ ಅವರಿಗೆ ಪರಿಹಾರ ಮಾರ್ಗವಿರಲಿಲ್ಲ. ಮದ್ರಾಸಿನಲ್ಲಿ ಕೆಲವರು, ಬೊಂಬಾಯಿ ಪ್ರಾಂತ್ಯದಲ್ಲಿ ಕೆಲವರು, ಹೈದರಾಬಾದ್ ಪ್ರಾಂತ್ಯದಲ್ಲಿ ಕೆಲವರು ಇದ್ದುಕೊಂಡು ಶಾಸನ ಸಭೆಗಳಲ್ಲಿ ಹೆಚ್ಚು ಸಂಖ್ಯಾಬಲವನ್ನು ಸಂಪಾದನೆ ಮಾಡುವುದಕ್ಕಾಗತ್ತಿರಲಿಲ್ಲವೆಂಬುದೂ ನಿಜ. ಈಗ ಆ ಪರಿಸ್ಥಿತಿಯಿಲ್ಲ. ಈ ದಿವಸ ಹೈದರಾಬಾದು, ಮದರಾಸು, ಬೊಂಬಾಯಿ ಎಲ್ಲವೂ ಇಂಡಿಯಾ ಸರ್ಕಾರದ ಆಡಳಿತಕ್ಕೊಳಪಟ್ಟಿದೆ. ಬಹುಮಟ್ಟಿನ ಕಾನೂನು ಕಟ್ಟಳೆಗಳೆಲ್ಲಾ ಒಂದೇ ತೆರದಲ್ಲಿ ನಡೆಯುತ್ತವೆ. ಕೆಲವು ವಿಚಾರಗಳಲ್ಲಿ ಮಾತ್ರ ಸ್ಥಳದ ಸನ್ನಿವೇಶಗಳಿಗೆ ಮಾತ್ರ ಕಾನೂನು ಬದಲಾವಣೆ ಮಾಡಬಹುದೇ ಹೊರತು ಮೂಲಭೂತವಾದ ಕಾನೂನುಗಳೆಲ್ಲಾ ಒಂದೇ ರೀತಿಯಾಗಿವೆ. ಹೀಗಿರುವಾಗ ಈ ಸರ್ಕಾರಕ್ಕೆ ಸೇರಿದರೆ ಉದ್ಧಾರವಾಗುತ್ತದೆ, ಆ ಸರ್ಕಾರಕ್ಕೆ ಸೇರಿದರೆ ಅಧೋಗತಿಗೆ ಹೋಗುತ್ತದೆ ಎಂಬ ಭಯವನ್ನು ಯಾರೂ ಇಟ್ಟುಕೊಳ್ಳಬೇಕಾಗಿಲ್ಲ. ಹಾಗೆ ಇಟ್ಟುಕೊಳ್ಳುವುದೂ ಸರಿಯಲ್ಲ. ಹಾಗೆಯೇ, ಆ ಪ್ರದೇಶ ಮೈಸೂರಿಗೆ ಸೇರಿದರೆ ಸಮುದ್ರತೀರ ಸಿಕ್ಕುತ್ತದೆ; ಅದರಿಂದ ಒಂದು ಬಂದರು ಕಟ್ಟಿಕೊಳ್ಳಬಹುದು; ಅಲ್ಲಿ ಖನಿಜ ಸಂಪತ್ತಿದೆ, ಅದನ್ನು ಅಲ್ಲಿಂದ ಇಲ್ಲಿಗೆ ಹೊತ್ತುಕೊಂಡು ಬಂದು ಅವರನ್ನು ಉದ್ಧಾರ ಮಾಡುತ್ತೇವೆಂಬ ಭಾವನೆಯನ್ನು ಯಾರೂ ಇಟ್ಟುಕೊಳ್ಳಬೇಕಾಗಿಯೂ ಇಲ್ಲ. ಖನಿಜ ಸಂಪತ್ತು ಹೆಚ್ಚಿಗೆ ಇದ್ದರೆ ಅದನ್ನು ಸರಿಯಾಗಿ exploit ಮಾಡಿದರೆ ಯಾವ ಸರ್ಕಾರವಾದರೂ ಚೆನ್ನಾಗಿ ನಡೆದೇ ನಡೆಯುತ್ತದೆ.

ಆದ್ದರಿಂದ ಆ ಎಲ್ಲವಾದವನ್ನೂ ಬಿಟ್ಟು, ನಾನು ಹೇಳುವ ಹಾಗೆ, ಆಡಳಿತ ದೃಷ್ಟಿಯಿಂದ ಮಾತ್ರ ಈ ಸಮಸ್ಯೆಯನ್ನು ನೋಡುವುದಾದರೆ, ನಾವು ಈ ಹೊತ್ತು ನಮ್ಮ ಇಂದಿನ ಅನುಭವವನ್ನು ಮರೆಯುವ ಹಾಗಿಲ್ಲ. ನಿನ್ನೆ ಮಾತನಾಡುತ್ತಾ ಒಬ್ಬ ಮಾನ್ಯ ಸದಸ್ಯರು ಹೇಳಿದ್ದಾರೆ, ಕೊಡಗು ಇಷ್ಟು ಅಭಿವೃದ್ಧಿಗೆ ಬರುವುದಕ್ಕೆ ಕಾರಣ ಅದು ಚಿಕ್ಕ ಸಂಸ್ಥಾನ ಆಗಿರುವುದರಿಂದ ಮೂಲೆ ಮೂಲೆಗೂ ಗಮನ ಕೊಡುವುದಕ್ಕೆ ಅವಕಾಶವಿದೆ; ಅವರು ಹೆಚ್ಚು ವಿದ್ಯಾಭ್ಯಾಸ ಮತ್ತು ಇತರ ಸೌಕರ್ಯಗಳನ್ನು ಹೊಂದುವುದಕ್ಕೆ ಅವಕಾಶವಿದೆಯೆಂದು ಹೇಳಿದ್ದಾರೆ. ಆ ಮಾತನ್ನು ಅಲ್ಲಗಳೆಯುವ ಹಾಗೂ ಇಲ್ಲ. ಈ ಹೊತ್ತು ಮೈಸೂರು ಸಂಸ್ಥಾನ ಒಂದು ಮಟ್ಟವನ್ನು ಮುಟ್ಟಿರಬೇಕಾದರೆ ಅದಕ್ಕೆ ಕಾರಣ ಅದು ಒಂದು ಹಿಡಿತಕ್ಕೆ ಒಂದು ಆಯಕಟ್ಟಿಗೆ ಒಳಪಟ್ಟು ಅತಿ ದೊಡ್ಡದೂ ಆಗಿರದೆ ಅತಿ ಚಿಕ್ಕದೂ ಆಗಿರದೆ ಸಮಪ್ರಮಾಣದ ದೇಶವಾಗಿರುವುದರಿಂದಲೇ ಈ ರೀತಿ ಹೆಚ್ಚು ಗಮನಕೊಡುವುದಕ್ಕೆ ಸಾಧ್ಯವಾಯಿತು ; ಹಾಗಿಲ್ಲದೆ ಅದು ತೀರ ದೊಡ್ಡ ಪ್ರದೇಶವಾಗಿದ್ದರೆ ಮದರಾಸಿನಲ್ಲಿ ಬೊಂಬಾಯಿನಲ್ಲಿ ಕೇಳುತ್ತಿರುವಂಥ ಕೂಗು ಇಲ್ಲೂ ಕೇಳಿಬರುತ್ತಿತ್ತು ಎಂಬುದು ನಿಜ. ಆದ್ದರಿಂದ ಇವೆರಡು ವಾದಗಳನ್ನೂ ನಾವು ಗಮನದಲ್ಲಿಟ್ಟುಕೊಳ್ಳಬೇಕೆಂದು ನನಗನ್ನಿಸುತ್ತದೆ. ಅಲ್ಲದೆ ಇನ್ನೊಂದು ಅಂಶವನ್ನೂ ನಾವಿಲ್ಲಿ ಗಮನಿಸಬಹುದಾಗಿದೆ. ಇವೊತ್ತು ಇಂಡಿಯಾ ದೇಶದಲ್ಲಿ ಅರ್ಧಭಾಗದಷ್ಟು ಮಾತ್ರ ಅಮೆರಿಕಾ ಸಂಯುಕ್ತ ಸಂಸ್ಥಾನದ ಪ್ರದೇಶ ಇದೆಯೆಂಬುದನ್ನು ಗಮನಿಸಬೇಕು. ಹೀಗಿದ್ದರೂ ಇಂಡಿಯಾ ದೇಶದಲ್ಲಿರುವುದು 22 ಸಂಸ್ಥಾನಗಳು ; ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಾದರೋ ಸುಮಾರು 49 ಸಂಸ್ಥಾನಗಳಿವೆ. ಈ ದೇಶದ ಅರ್ಧದಷ್ಟಿರುವ ಪ್ರದೇಶದಲ್ಲಿ ಈ ದೇಶದಲ್ಲಿರತಕ್ಕ ಸಂಸ್ಥಾನಗಳಿಗೆ ಎರಡರಷ್ಟು ಸಂಖ್ಯೆಯಷ್ಟು ಸಂಸ್ಥಾನಗಳು !

ಇದರ ಜೊತೆಗೆ ಇನ್ನೊಂದು ಪರಿಸ್ಥಿತಿ ನಮ್ಮಲ್ಲಿದೆ. ಕೊಡಗು ಹಿಮಾಚಲ ಪ್ರದೇಶದಂಥ ಸಣ್ಣ ಸಣ್ಣ ಸಂಸ್ಥಾನಗಳು ಒಂದು ಕಡೆ ಇವೆ ; ಇನ್ನೊಂದು ಕಡೆ ಮಧ್ಯಭಾರತದಂಥ 8 ಕೋಟಿ ಜನರಿರುವ ಭಾರಿ ಪ್ರದೇಶಗಳಿವೆ. ಈ ವ್ಯತ್ಯಾಸವನ್ನು ಬದಲಾಯಿಸುವುದೂ ಅಗತ್ಯ. ಇವೊತ್ತು ಇದರಿಂದೇನಾಗಿದೆಯೆಂಬುದನ್ನು ನೋಡಬಹುದು. ಶ್ರೀಮಾನ್ ಪಟ್ಟಾಭಿರಾಮನ್‌ರವರು ಹೇಳಿದಹಾಗೆ, ಒಂದು ಸಂಸ್ಥಾನದಿಂದ 8 ಕೋಟಿ ಪ್ರಜೆಗಳ ಪ್ರತಿನಿಧಿಗಳಾಗಿ 48 ಜನ ಹೋಗುವುದು, ಇನ್ನೊಂದು ಸಂಸ್ಥಾನದಿಂದ 6 ಜನರೇ ಹೋಗಿ ಪಾರ್ಲಿಮೆಂಟಿನಲ್ಲಿ ಕುಳಿತುಕೊಂಡು ಕಷ್ಟಸುಖಗಳನ್ನು ಹೇಳಿದರೆ ಏನು ಪ್ರಯೋಜನವಾದೀತು ? ಈಗಿನ ಡೆಮಾಕ್ರಸಿಯಲ್ಲಿ ಯಾರಿಗೆ ಹೆಚ್ಚಿಗೆ ಸಂಖ್ಯಾಬಲವಿದೆಯೋ ಯಾರ ಮತ ಹೆಚ್ಚಿಗೆ ಇರುತ್ತದೆಯೋ ಅವರ ಮಾತು ನಡೆಯುತ್ತದೆಂಬುದು ನಿಜ. ಆದ್ದರಿಂದ ಅಂಥ ಏರುಪೇರುಗಳಿಗೆ ಅವಕಾಶವಿಲ್ಲದಂತೆ ಕೇಂದ್ರ ಪಾರ್ಲಿಮೆಂಟಿನಲ್ಲಿ ಸಮನಾಗಿ ಹಕ್ಕುಬಾಧ್ಯತೆಗಳನ್ನು ದೊರೆಯುವಂತೆ ಮಾಡಬೇಕಾದರೆ ಏನು ಮಾಡಬೇಕೆಂಬುದನ್ನೂ ಇವೊತ್ತು ಮೈಸೂರು ವಿಸ್ತಾರವಾಗಬೇಕೇ ಎಂಬ ಪ್ರಶ್ನೆ ಬಂದಾಗ ಯೋಚನೆ ಮಾಡಬೇಕಾದದ್ದು ಅವಶ್ಯಕ. ಸುಮ್ಮನೆ ಏಕೀಕರಣವಾಗಬೇಕೆಂದು ಹೇಳಿ ಇತರ ಪ್ರದೇಶಗಳನ್ನು ಒಂದೆಡೆಗೆ ಸೇರಿಸುವುದರಿಂದೇನೂ ಪ್ರಯೋಜನವಿಲ್ಲ. ಆದ್ದರಿಂದ ಆ ಭಾವನೆಯಿಂದ ನಾವೀಗ ಮಾತನಾಡಬೇಕಾಗಿಲ್ಲ.

ಈಗ ನಮ್ಮ ಹಿಂದಿನ ಅನುಭವವನ್ನು ನೋಡುವುದಾದರೆ, ಮೈಸೂರು ಸಂಸ್ಥಾನ ಅನೇಕ ವರ್ಷಗಳಿಂದ ಇದೇ ಎಲ್ಲೆಕಟ್ಟಿನಲ್ಲಿದೆ. ಇಲ್ಲಿ ಎಲ್ಲವೂ ಸರ್ವಸಮರ್ಪಕವಾಗಿವೆಯೆಂದು ಹೇಳದೇಯಿದ್ದರೂ. ತಕ್ಕಮಟ್ಟಿಗೆ ಚೆನ್ನಾಗಿಯೇ ನಡೆದುಕೊಂಡು ಬಂದಿದೆ. ಆಡಳಿತ ವ್ಯವಸ್ಥೆ ಸುಭದ್ರವಾಗಿದೆಯೆನ್ನಬಹುದು. ಅಂದಮಾತ್ರಕ್ಕೆ ಮೈಸೂರಿನ ಎಲ್ಲೆಕಟ್ಟು ಹೀಗೆಯೇ ಇರಬೇಕೆಂದು ನನ್ನ ಉದ್ದೇಶವಲ್ಲ. ಈ ಪ್ರಶ್ನೆ ಅನೇಕ ವರ್ಷಗಳಿಂದ ಚರ್ಚೆಯಾಗುತ್ತಿದೆಯೆಂದು ನನಗೆ ಗೊತ್ತು. ಮೈಸೂರು ಸಂಸ್ಥಾನದ ರಾಜ್ಯಾಂಗ ಶಾಸನವನ್ನು ರಚನೆ ಮಾಡಬೇಕೆಂದಿದ್ದ ಸಮಯದಲ್ಲೂ ಈ ಪ್ರಶ್ನೆ ಬಂದು ಅಲ್ಲಿಯೂ ಒಂದು ಅಭಿಪ್ರಾಯಕ್ಕೆ, ಒಂದು ತೀರ್ಮಾನಕ್ಕೆ ಬಂದಿದ್ದರು. ಮೈಸೂರಿನ ವೈಶಿಷ್ಟ್ಯ ಹೀಗೆಯೇ ಇರಬೇಕು, ಅದರ ಜೊತೆಗೆ ಆಡಳಿತ ಸೌಕರ್ಯದ ದೃಷ್ಟಿಯಿಂದ ಇನ್ನಾವುದಾದರೂ ಪ್ರದೇಶ ನಮ್ಮೊಡನೆ ಸೇರುವುದು ಅವಶ್ಯಕವೆಂದು ಆಡಳಿತಗಾರರು ಅಭಿಪ್ರಾಯ ಪಡುವುದಾದರೆ ಹಾಗೆ ಮಾಡಬಹುದು ಎಂಬರ್ಥಬರುವ ನಿರ್ಣಯವಾಗಿತ್ತು.

ಈಗ ನಾವು ಈ ಬಳ್ಳಾರಿಯ ವಿಚಾರವನ್ನೇ ತೆಗೆದುಕೊಳ್ಳೋಣ. ಈ ಬಳ್ಳಾರಿ ಜಿಲ್ಲೆಯನ್ನು ಮೈಸೂರಿಗೆ ಸೇರಿಸಿಕೊಡಿ ಎಂದು ಯಾರೂ ಕೇಳಲಿಲ್ಲ. ಆದಾಗ್ಗೂ ಅದನ್ನು ಈಗ ನಮ್ಮ ಮೈಸೂರಿಗೇ ಸೇರಿಸಲಾಗಿದೆ. ಅದಕ್ಕೆ ಕಾರಣವೇನೆಂದರೆ, ಆ ಬಳ್ಳಾರಿ ಜಿಲ್ಲೆಯು ಅತ್ತ ಆಂಧ್ರಕ್ಕೂ ಇತ್ತ ಮದರಾಸಿಗೂ ಮಧ್ಯದಲ್ಲಿದ್ದು ಅದು ಆ ಮದರಾಸಿಗೂ ಮತ್ತು ಆಂಧ್ರ ದೇಶಗಳೆರಡಕ್ಕೂ ಬಹಳ ದೂರ ಪ್ರದೇಶವಾಗಿದ್ದುದರಿಂದಲೂ ಮತ್ತು ಈ ಪ್ರದೇಶ ನಮ್ಮ ಮೈಸೂರಿಗೆ ಸಮೀಪದಲ್ಲಿದ್ದುದರಿಂದಲೂ ಅಂದರೆ ಮೈಸೂರಿನ ಒತ್ತಿಗೆ ಇದ್ದುದರಿಂದಲೂ ಇದನ್ನು ನಮ್ಮ ಮೈಸೂರಿಗೆ ಸೇರಿಸಿದರು. ಈಗ ಮಂಗಳೂರು ಜಿಲ್ಲೆಯಿದೆ. ಅದರ ವಿಚಾರವೂ ಹೀಗೆಯೇ ಇರುತ್ತದೆ! ಹೀಗೆ ಏನೋ ಆಡಳಿತ ಸೌಕರ್ಯ ದೃಷ್ಟಿಯಿಂದ ಅದನ್ನೂ ಮೈಸೂರಿಗೇ ಸೇರಿಸಬೇಕಾಗುತ್ತದೆಂದು ಹೇಳಿದರೆ, ಅದಕ್ಕೆಲ್ಲಾ ಯಾರು ಬೇಡ ಎನ್ನುತ್ತಾರೆ ? ಇಂಥಾದ್ದಕ್ಕೆ ಯಾರ ಅಭ್ಯಂತರವೂ ಇರಬಾರದು. ಅಲ್ಲದೆ ಇಂಥ ಸನ್ನಿವೇಶಗಳು ಉದ್ಭವವಾದಾಗ ಅದನ್ನು ತಡೆಗಟ್ಟುವುದಕ್ಕೆ ಯಾರಿಂದಲೂ ಸಾಧ್ಯವಾಗುವುದಿಲ್ಲ. ಅಂಥ ಭಾಗಗಳೆಲ್ಲಾ ಸೇರಿಕೊಂಡು ಒಂದು ಆಡಳಿತಕ್ಕೆ ಒಳಪಡಲೇಬೇಕಾಗುತ್ತದೆ. ಇಂದಲ್ಲ ನಾಳೆ ಹೀಗೆ ಆಗಿಯೇ ಆಗುತ್ತದೆ. ಆದರೆ ಈ ಒಂದು ಅಭಿಪ್ರಾಯದ ಮೇಲೆ ಕರ್ಣಾಟಕ ಏಕೀಕರಣ ಆಗಲೇಬೇಕೆಂಬ ಪ್ರಶ್ನೆ ಉದ್ಭವಿಸುವುದಿಲ್ಲವೆಂದಾಗಲಿ ಅಥವಾ ಇಂಥ ಒಂದು ಪ್ರಶ್ನೆಗೆ ಅವಕಾಶವಿಲ್ಲವೆಂದಾಗಲಿ ಹೇಳಿದರೆ ಅವರನ್ನು ನೀವು ಭಾಷಾಭಿಮಾನಿಗಳಲ್ಲ, ದೇಶಾಭಿಮಾನಿಗಳಲ್ಲ ಎಂದು ಹೇಳುವುದಕ್ಕಾಗುವುದಿಲ್ಲವೆಂದು ನನ್ನ ಮನಸ್ಸಿಗೆ ಅನ್ನಿಸುತ್ತಿದೆ. ಅಷ್ಟೇ ಅಲ್ಲದೆ, ಈ ಸಂಸ್ಥಾನಗಳಾದರೂ ಕೂಡ ವಿಪರೀತ ದೊಡ್ಡದಾದರೆ ಆಗ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಆಡಳಿತದ ಬಿಗಿ ಕಡಮೆಯಾಗುತ್ತದೆ ಎನ್ನುವುದು ನನ್ನ ಅನುಭವದ ಮಾತು.

ಈ ಸಭೆಯಮುಂದೆ ಬಡ್ಜೆಟ್ಟನ್ನು ಮಂಡಿಸಿದಾಗ ಬಡ್ಜೆಟ್ಟಿನ ಮೇಲೆ ನಾನು ಭಾಷಣಮಾಡುತ್ತ ಪ್ರಜಾಪ್ರಭುತ್ವವನ್ನು ಕುರಿತು ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇನೆ. ಈ ಪ್ರಜಾಪ್ರಭುತ್ವದಲ್ಲಿ ಆಡಳಿತವು ಶುದ್ಧಿ ಹೊಂದಬೇಕಾಗಿದ್ದರೆ ಆಡಳಿತ ವಿಭಾಗಗಳು ಏನಿವೆಯೋ ಅವು ಆದಷ್ಟೂ ಚಿಕ್ಕವುಗಳಾಗಿರಬೇಕು, ಆಡಳಿತದಲ್ಲಿರಬಹುದಾದ ಕುಂದು ಕೊರತೆಗಳಿಗೆಲ್ಲ ಪ್ರಜಾಪ್ರಭುತ್ವ ಪದ್ಧತಿಯೇ ಒಂದು ದಿವ್ಯೌಷಧಿಯಲ್ಲವೆಂದು ನಾನು ಹೇಳಿದ್ದೇನೆ. ಆದರೆ ಯಾರು ಈ ಪ್ರಜಾಪ್ರಭುತ್ವ ಪದ್ಧತಿಯನ್ನು ರೂಢಿಸಿದರೋ ಮತ್ತು ಯಾರು ಇದನ್ನು ಆಚರಣೆಯಲ್ಲಿ ತಂದರೋ ಅಂಥ ನಮ್ಮ ಆ ಹಿರಿಯರುಗಳಾಗಲೀ ಅಥವಾ ಇನ್ನಾವ ಪರಿಣತರುಗಳಾಗಲಿ ಈ ಪದ್ಧತಿಗಿಂತ ಉತ್ತಮವಾದ ಇನ್ನೊಂದು ಪದ್ಧತಿಯನ್ನು ಇಲ್ಲಿಯವರೆಗೆ ಕಂಡುಹಿಡಿದಿಲ್ಲ. ಆದ್ದರಿಂದ ಈ ದಿವಸವೂ ಸಹ ನಾವು ಈ ಆಡಳಿತ ಪದ್ಧತಿಗೇ ಅಂಟಿಕೊಂಡಿರುತ್ತೇವೆ. ಇನ್ನೂ ಉತ್ತಮವಾದುದು ಯಾವುದು ಎನ್ನುವುದನ್ನು ಮುಂದೆ ಕಂಡು ಹಿಡಿಯಬೇಕಾಗಿದೆ. ಈ ದಿವಸ ಈ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಇರತಕ್ಕಂಥ ಏರುಪೇರುಗಳೂ, ಅವ್ಯವಸ್ಥೆಗಳೂ, ಲಂಚಕೋರತನ, ಸ್ವಜನ ಪಕ್ಷಪಾತ, ಇತ್ಯಾದಿಗಳ ಅವಾಂತರವಂತೂ ದೇವರಿಗೇ ಪ್ರೀತಿಯಾಗಬೇಕು. ಹೀಗಿರುವಲ್ಲಿ ಸಂಸ್ಥಾನಗಳು ಅತಿ ವಿಸ್ತಾರವಾದಂಥ ದೊಡ್ಡ ರಾಜ್ಯಗಳಾದಲ್ಲಿ ಆಗ ಆಡಳಿತವನ್ನು ನಡೆಸುವುದಕ್ಕೆ ಬಹಳ ಕಷ್ಟವಾಗುತ್ತದೆ. ಈಗಿರತಕ್ಕಂಥ ರಾಜ್ಯಭಾರ ಕ್ರಮದಲ್ಲಿ ಈಗಾಗಲೇ ಒಂದು ನೈಜವಾದ ಆಡಳಿತ ಪದ್ಧತಿಗೆ ಅವಕಾಶವೇ ಇಲ್ಲದೆ—ಎಲ್ಲಿ ನೋಡಲಿ ಸ್ವಜನಾಭಿಮಾನ, ಪಕ್ಷಪಾತ ಭಾವನೆ, ಮೋಸ, ವಂಚನೆಗಳೇ ತುಂಬಿ ತುಳುಕುತ್ತಿರುವಾಗ, ದೇಶಗಳೂ ದೊಡ್ಡದಾದ ಪಕ್ಷದಲ್ಲಿ ಆಗ ಈ ದೌರ್ಜನ್ಯಗಳೆಲ್ಲಾ ಮತ್ತಷ್ಟು ಜಾಸ್ತಿಯಾಗಿ ಜನತೆಯ ಹಿಂಸೆಗೆ ಕಾರಣವಾಗುತ್ತದೆ. ಆದುದರಿಂದ ದೇಶ ಅತಿ ದೊಡ್ಡದಾದ ಮಾತ್ರಕ್ಕೆ ಅದರಲ್ಲಿರತಕ್ಕ ಜನರು ಸುಖದಿಂದ ನೆಮ್ಮದಿಯಿಂದ ಬಾಳುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ನಾವು ದೇಶಗಳನ್ನು ಎಷ್ಟೇ ವಿಸ್ತರಿಸುತ್ತೇವೆಂದು ಹೇಳಿದರೂ ಅವು ಕಾಂಪ್ಯಾಕ್ಟ್ ಆದ ಯೂನಿಟ್ಟುಗಳಾಗಿರಬೇಕು ಎನ್ನುವುದೇ ನನ್ನ ವಾದದ ಮುಖ್ಯ ಗುರಿ.

ಇನ್ನು ನಾವೀಗ ಈ ಭಾಷಾವಾರು ಪ್ರಾಂತ್ಯರಚನೆಗಳಿಂದ ಮುಂದೆ ನಮಗೆಲ್ಲಾ ಅನುಕೂಲವಾಗುತ್ತದೆಯೇ ಅಥವಾ ಅನಾನುಕೂಲವಾಗುತ್ತದೆಯೇ ಎನ್ನುವುದನ್ನು ಸ್ವಲ್ಪ ಆಲೋಚನೆಮಾಡಿ ನೋಡೋಣ. ಈಗ ಉತ್ತರ ಹಿಂದೂಸ್ಥಾನದಲ್ಲಿ ಹಿಂದೀ ಭಾಷೆಯಲ್ಲಿ ಮಾತನಾಡತಕ್ಕಂಥ ಜನಗಳು ಯಾರುಯಾರಿದ್ದಾರೋ ಅವರೆಲ್ಲರೂ ಒಂದು ಆಡಳಿತಕ್ಕೆ ಒಳಪಡಬೇಕೆ ಎಂಬ ಒಂದು ಅಂಶವನ್ನು ನಾವೀಗ ಸ್ವಲ್ಪ ವಿಚಾರ ಮಾಡೋಣ. ಈ ಭಾಷೆಯನ್ನು ಮಾತನಾಡತಕ್ಕವರೆಲ್ಲರನ್ನೂ ನೀವು ಒಂದು ಆಡಳಿತಕ್ಕೇ ಒಳಪಡಬೇಕು ಎಂದು ಹೇಳುವುದಾದರೆ ಆಗ ಉತ್ತರ ಇಂಡಿಯಾ ದೇಶದಲ್ಲಿರತಕ್ಕಂಥವರೆಲ್ಲಾ ಒಂದು ಆಡಳಿತಕ್ಕೊಳಪಟ್ಟು ಉತ್ತರ ಇಂಡಿಯಾ ದೇಶವೆಲ್ಲಾ ಒಂದೇ ಸಂಸ್ಥಾನವಾಗಿರಬೇಕೆಂದು ಹೇಳಿದಹಾಗೆ ಆಗುತ್ತದೆ. ಹಾಗೆ ಅಂಥ ಒಂದು ದೊಡ್ಡ ದೇಶವೇರ್ಪಟ್ಟಾಗ ಏನಾಗುತ್ತದೆಂದು ಹೇಳಿದರೆ, ಉತ್ತರ ಇಂಡಿಯಾಕ್ಕೆಲ್ಲಾ ಒಂದು ಪಾರ್ಲಿಯಮೆಂಟ್ ಮತ್ತು ದಕ್ಷಿಣ ಇಂಡಿಯಾಕ್ಕೆಲ್ಲಾ ಒಂದು ಪಾರ್ಲಿಯಮೆಂಟ್ ಇರಬೇಕಾಗಿ ಬರುತ್ತದೆ. ಆಗ ದೇಶಕ್ಕೆ ಖರ್ಚುವೆಚ್ಚಗಳು ಜಾಸ್ತಿಯಾಗುತ್ತವೆ. ಈ ಒಂದು ಕಾರಣದಿಂದ ನಾನು ಒಂದು ಭಾಷೆಯನ್ನಾಡತಕ್ಕಂಥ ಜನರೆಲ್ಲಾ ಒಂದೇ ಆಡಳಿತಕ್ಕೊಳಪಡಬೇಕೆಂದು ಹೇಳುವುದು ಅಷ್ಟು ಸರಿಯಾದದ್ದಲ್ಲವೆಂದು ಹೇಳುತ್ತೇನೆ. ಹಾಗೆ ನೋಡುವುದಾದರೆ, ಈ ದಿವಸ ಯಾವ ಒಂದು ಪ್ರಾಂತ್ಯದಲ್ಲಿಯೇ ಆಗಲಿ, ಎಲ್ಲಿ ನೋಡಲಿ, ಖಚಿತವಾಗಿ ಒಂದೇ ಒಂದು ಭಾಷೆಯನ್ನಾಡತಕ್ಕಂಥ ಜನರಿರುವುದಿಲ್ಲ. ನಮಗೆಲ್ಲರಿಗೂ ಗೊತ್ತಿರುವ ಹಾಗೆ, ಈ ಕನ್ನಡ ಭಾಷೆಯನ್ನಾಡತಕ್ಕಂಥ ಜನಗಳು ನಾನಾ ದೇಶಗಳಲ್ಲಿದ್ದಾರೆ. ಕನ್ನಡ ಮಾತ

(ಶ್ರೀ ಎಚ್. ಕೆ. ವೀರಣ್ಣಗೌಡ.)

ನಾಡತಕ್ಕಂಥ ಜನರು ಮದರಾಸಿನಲ್ಲಿದ್ದಾರೆ; ಬೊಂಬಾಯಿ ಪ್ರಾಂತ್ಯದಲ್ಲಿದ್ದಾರೆ; ಹೈದರಾಬಾದಿನಲ್ಲಿದ್ದಾರೆ; ಕೊಡಗಿನಲ್ಲಿದ್ದಾರೆ. ಹೀಗೆ ಎಲ್ಲೆಲ್ಲಿ ಕನ್ನಡ ಮಾತನಾಡತಕ್ಕ ಜನಗಳಿದ್ದಾರೋ ಅವರೆಲ್ಲರೂ ಒಂದು ಆಡಳಿತಕ್ಕೊಳಪಡಬೇಕೆಂದು ಹೇಳಿದರೆ ಇದು ಸಾಧ್ಯವಾಗತಕ್ಕ ಮಾತೇ? ಇದು ಖಂಡಿತ ಸಾಧ್ಯವಾಗತಕ್ಕ ಮಾತಲ್ಲ. ಉದಾಹರಣೆಗೆ ಹೇಳುವುದಾದರೆ, ಹೈದರಾಬಾದಿನಲ್ಲಿರತಕ್ಕಂಥ ಕನ್ನಡ ಜನರೆಲ್ಲಾ ಮೈಸೂರಿಗೆ ಸೇರಿಕೊಳ್ಳಬೇಕು, ತೆಲುಗು ಮಾತನಾಡತಕ್ಕಂಥವರೆಲ್ಲಾ ಆಂಧ್ರಕ್ಕೇ ಸೇರಬೇಕು, ಮರಾಠಿ ಮಾತನಾಡತಕ್ಕವರೆಲ್ಲಾ ಮಹಾರಾಷ್ಟ್ರಕ್ಕೇ ಹೋಗಬೇಕು ಎಂದು ಹೇಳಿದರೆ ಆಗ ಅಲ್ಲಿ ಯಾವ ಹೈದರಾಬಾದೂ ಇರುವುದಿಲ್ಲ; ಹಾಗೂ ಒಂದು ವೇಳೆ ಇದು ಆಗಲೇಬೇಕೆಂದು ಹೇಳಿದರೆ, ಹಾಗೆ ಆಗತಕ್ಕಂಥ ಕಾಲ ಒದಗಿಬಂದರೆ ಅದು ಅದರ ಪಾಡಿಗೆ ಅದೇ ಆಗುತ್ತದೆ. ಅಂದಮೇಲೆ ಈ ದಿವಸ ಇಷ್ಟು ಆತುರ ಆತುರವಾಗಿ "ನಾವೂ-ನೀವೂ ಒಂದಾಗಿ ಸೇರಿಕೊಳ್ಳೋಣ" ಎಂದು ಹೇಳುವುದಕ್ಕೆ ಕಾರಣವಾದರೂ ಏನು? ಮದರಾಸ್ ಪ್ರಾಂತ್ಯದಲ್ಲಿರುವ ಕನ್ನಡಿಗರೂ ಮತ್ತು ಬೊಂಬಾಯಿ ಪ್ರಾಂತ್ಯದಲ್ಲಿರುವ ಕನ್ನಡಿಗರೂ ವಾಸಮಾಡುತ್ತಿರುವ ಪ್ರದೇಶಗಳನ್ನೆಲ್ಲಾ ಒಂದಾಗಿ ಸೇರಿಸಿ, ಆ ಭಾಗಗಳನ್ನೆಲ್ಲಾ ಒಂದು ಆಡಳಿತಕ್ಕೊಳಪಡಿಸಬೇಕೆಂದು ಹೇಳುತ್ತಿರುವುದರ ಉದ್ದೇಶವೇನಿದೆಯೆಂಬುದರ ಬಗ್ಗೆ ನಮ್ಮ ಸ್ನೇಹಿತರನೇಕರು "ಹಾಗೆ ಮಾಡುವುದರಿಂದ ನಮಗೆ ಆಡಳಿತ ಖರ್ಚುವೆಚ್ಚಗಳು ಕಡಮೆಯಾಗುತ್ತವೆ, ಆ ಭಾಗಗಳಲ್ಲಿ ಹೆಚ್ಚಿನ ಖನಿಜ ಸಂಪತ್ತಿದೆ, ಅಲ್ಲಿ ಅರಣ್ಯ ಸಂಪತ್ತಿದೆ, ನದಿಗಳು ವಿಶೇಷವಾಗಿರುತ್ತವೆ, ಅದರಿಂದ ನೀರಾವರಿ ಕಾಂಗಾರಿಗಳನ್ನು ಬೆಳಸಲು ಹೆಚ್ಚು ಅವಕಾಶವಿದೆ, ನಾನಾ ಕಾರಣಗಳಿಂದ ನಮಗೆ ಮುಂದೆ ಹೆಚ್ಚಿನ ಅನುಕೂಲತೆಗಳೂ—ಸೌಲಭ್ಯಗಳೂ ಇದರಿಂದ ಉಂಟಾಗುತ್ತವೆ, ಆ ದೇಶದಲ್ಲಿರತಕ್ಕಂಥ ಜನರೆಲ್ಲಾ ಬಹಳ ಕಷ್ಟಪಟ್ಟು ಕೆಲಸ ಮಾಡತಕ್ಕಂಥ ಜನರಾಗಿರುತ್ತಾರೆ, ಇವರೆಲ್ಲರೂ ಒಂದು ಆಡಳಿತಕ್ಕೊಳಪಟ್ಟರೆ ನಮಗೆಲ್ಲಾ ಅನುಕೂಲವಾಗುತ್ತದೆ" ಎಂದು ಹೇಳುತ್ತಿದ್ದಾರೆ. ಆದರೆ ನನಗೆ ಹೊಳೆಯುತ್ತಿರುವ ಪ್ರಕಾರ, ಈ ಮೈಸೂರನ್ನು ಮೈಸೂರಿನಪಾಡಿಗೆ ಬಿಟ್ಟುಬಿಟ್ಟು ಇನ್ನುಳಿದ ಕನ್ನಡ ಭಾಗಗಳು ಯಾವವಿವೆಯೋ ಅಂಥವುಗಳನ್ನೆಲ್ಲಾ ಸುಲಭವಾಗಿ ಒಂದುಗೂಡಿಸುವುದಕ್ಕೆ ಯಾವುವು ಸಾಧ್ಯವೋ ಅವುಗಳನ್ನು ಒಂದುಗೂಡಿಸುವುದಕ್ಕೆ ಯಾರ ಅಭ್ಯಂತರವೂ ಇರಲಾರದೆಂದು ನಾನು ತಿಳಿದುಕೊಂಡಿದ್ದೇನೆ. ಹೀಗೆ ನಾನು ಹೇಳುತ್ತಿರುವಾಗ, ನನಗೆ ಭಾಷಾಭಿಮಾನವಿಲ್ಲ, ನಾನು ದೇಶಾಭಿಮಾನಿಯಲ್ಲ ಎಂದು ಹೇಳುವಂಥ ಜನರು ಸಾಮಾನ್ಯವಾಗಿ ಇದ್ದೇ ಇರುತ್ತಾರೆ. ಕನ್ನಡ ಮಾತನಾಡತಕ್ಕವರು ಅವರು ಎಲ್ಲಿಯೇ ಇರಲಿ ಅವರೆಲ್ಲ ಒಂದೇ ಎಂದು ಹೇಳುತ್ತಿರುವುದು ಅಷ್ಟು ಸರಿಯಾಗಿಲ್ಲ. ಅದರಲ್ಲೂ ಹಲವಾರು ವ್ಯತ್ಯಾಸಗಳಿದ್ದೇ ಇರುತ್ತವೆ. ನಡೆ-ನುಡಿ, ಆಚಾರ-ವಿಚಾರ ಇತ್ಯಾದಿ ವ್ಯವಹಾರಗಳಲ್ಲಿ ಅನೇಕ ವ್ಯತ್ಯಾಸಗಳಿರುತ್ತವೆ. ನಾನು ಉತ್ತರ ಕರ್ಣಾಟಕದ ಅನೇಕ ಕಡೆ ಹೋಗಿ ನೋಡಿದ್ದೇನೆ. ಒಂದೆರಡು ಉದಾಹರಣೆಗಳನ್ನು ಈಗ ತಿಳಿಸಲಿಚ್ಛಿಸುತ್ತೇನೆ. ಅದರಿಂದ ಈ ನಡೆ-ನುಡಿಗಳಲ್ಲಿ ಹೇಗೆ ವ್ಯತ್ಯಾಸವಿರುತ್ತದೆ ಎನ್ನುವುದು ಗೊತ್ತಾಗುತ್ತದೆ. ನಮ್ಮ ಮಹಾರಾಜರೋ ಅಥವಾ ಮುಖ್ಯ ಮಂತ್ರಿಗಳೋ ಆ ಪ್ರಾಂತಕ್ಕೆ ಒಂದಾವರ್ತಿ ಹೋಗಿದ್ದಾಗ ಸ್ನಾನದ ಕೊಠಡಿಯಲ್ಲಿ ನೀರು ನಿಂತು ಹೋಗಿತ್ತಂತೆ. ಅಲ್ಲಿದ್ದ ಜವಾನನನ್ನು ಕುರಿತು ನಲ್ಲಿಯಲ್ಲಿ ನೀರಿಲ್ಲವಲ್ಲಯ್ಯ ಎಂದಾಗ "ನಳ ಬಂದದರಿ" ಎಂದು ಅವನು ಉತ್ತರ ಹೇಳಿದನಂತೆ. "ಇಲ್ಲಕಾಣಯ್ಯ, ನೀರು ಬರುತ್ತಿಲ್ಲ" ಎಂದು ಪುನಃ ಹೇಳಲು, "ಅರೆ, ನಳ ಬಂದದರಿ" ಎಂದು ಮತ್ತೆ ಹೇಳಿದನಂತೆ. ಆತನ ಅಭಿಪ್ರಾಯ ಗ್ರಹಿಸಿ ಮೈಸೂರಿನವರು, ಓಹೋ, ನೀರು ನಿಂತುಹೋಗಿದೆಯೋ ಎಂದು ಕೇಳಿದುದಕ್ಕೆ "ನಿಂತಿದೆಯೋ, ಕುಂತಿದೆಯೋ, ಬಂದ್ ಅದೆ" ಎಂದನಂತೆ! ಹೀಗೆ ಪರಸ್ಪರ ಅರ್ಥವಾಗದಂಥ ಪದಗಳು ಎಷ್ಟೋ ಇವೆ. ಹೀಗೆ ಅವರೊಂದು ರೀತಿಯ ಪದಗಳನ್ನೂ ನಾವೊಂದು ರೀತಿಯ ಪದಗಳನ್ನೂ ಉಪಯೋಗಿಸುತ್ತಾ ಹೋದರೆ ಈ ಭಾಷಾ ಸಮಸ್ಯೆ ಹರಿಯಿತೆಂದು ಹೇಗೆ ಹೇಳುವುದು? ಭಾಷಾಪ್ರೇಮವಿರುತ್ತದೆಯೆಂದು ಹೇಳಿದಮಾತ್ರಕ್ಕೇ ಕನ್ನಡಭಾಷೆಯನ್ನಾಡತಕ್ಕ ಜನರ ಭಾಷೆಯ ಶೈಲಿಯೆಲ್ಲಾ ಒಂದೇ ಆಗಿರುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಈ ಹಿಂದೆ ನಾನು ವಿದ್ಯಾರ್ಥಿಯಾಗಿದ್ದಾಗ ಕನ್ನಡ ಪತ್ರಿಕೆಯೊಂದರಲ್ಲಿ ಒಂದು ಪ್ರಕಟಣೆ (ಅಡ್ವರ್‌ಟೈಸ್‌ಮೆಂಟ್) ಓದಿದ ಜ್ಞಾಪಕವಿದೆ. ಅದು ಹೇಗಿತ್ತೆಂದರೆ ಕಿರ್ಲೋಸ್ಕರ ಬಂಧುಗಳ—"ಐರ ನನಳದ ಕಾಟಾಗಳು—ಅತಿ ಅಗ್ಗದ ಕಿಮ್ಮತ್ತಿಗೆ ದೊರೆಯುತ್ತವೆ" ಎಂದಿತ್ತು.

Sri J. MOHAMED IMAM.—You forget it is pure Kannada as opposed to Mysore Kannada.

ಶ್ರೀ ಎಚ್. ಕೆ. ವೀರಣ್ಣಗೌಡ.—ಹೀಗೆ ಭಾಷೆಯಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳು ಇದ್ದೇ ಇರುತ್ತವೆ. ಈ ದಿವಸ ನಂಜನಗೂಡು ಪ್ರಾಂತ್ಯದಲ್ಲಿ ಆಡತಕ್ಕಂಥ ಕನ್ನಡ ಭಾಷೆಗೂ ಮತ್ತು ಬೆಂಗಳೂರಿನಲ್ಲಿ ಆಡತಕ್ಕಂಥ ಕನ್ನಡ ಭಾಷೆಗೂ ಅಲ್ಪಸ್ವಲ್ಪ ವ್ಯತ್ಯಾಸವಿದ್ದೇ ಇದೆ. ಹಿಂದಿನಕಾಲದಲ್ಲಿ ಯಾರೋ ಒಬ್ಬ ಅಧಿಕಾರಸ್ಥರು ತಮ್ಮ ಮನೆಯಲ್ಲಿ ಒಬ್ಬ ಉತ್ತರ ದೇಶದಕಡೆಯ ಮನುಷ್ಯನನ್ನು ಕೆಲಸಕ್ಕೆ ಇಟ್ಟುಕೊಂಡಿದ್ದರಂತೆ ಒಂದು ದಿವಸ ಅವರ ಮನೆಯಲ್ಲಿ ಹಾಸುತ್ತಿದ್ದ ಜಮಖಾನ ಸ್ವಲ್ಪ ಧೂಳಾಗಿದ್ದುದರಿಂದ ಅಮ್ಮನವರು ಆಳಿಗೆ ಆ ಜಮಖಾನೆಯನ್ನು ಹೊರಗಡೆಗೆ ತೆಗೆದುಕೊಂಡುಹೋಗಿ ಸ್ವಲ್ಪ ಒದರಿಕೊಂಡು ಬಾ, ಎಂದು ಹೇಳಿದ್ದಕ್ಕೆ ಆ ಜವಾನನು ಮಿಕಿಮಿಕಿ ಅವರನ್ನು ನೋಡುತ್ತಾ ನಿಂತುಬಿಟ್ಟನಂತೆ. ಕಾರಣ ಅವರು ಏನು ಹೇಳುತ್ತಾರೆಂಬುದೇ ಆ ಆಳಿಗೆ ಅರ್ಥವಾಗಲಿಲ್ಲ. ಪುನಃ ಅಮ್ಮನವರು ಆತನಿಗೆ 'ಮತ್ತೊಂದಾವರ್ತಿ ಅದನ್ನೇ ಹೇಳಲು ಆ ಜವಾನನು ಆ ಜಮಖಾನೆಯನ್ನು ಹೊರಗೆ ತೆಗೆದುಕೊಂಡು ಹೋಗಿ ಜಮಖಾನ, ಜಮಖಾನ ಎಂದು ಕೂಗುವುದಕ್ಕೆ ಷುರು ಮಾಡಿದನಂತೆ! ಅಷ್ಟುಹೊತ್ತಿಗೆ ಸಾಹೇಬರೂ ಬಂದರು. ಆಗ ಅವರು ಈ ಆಳು ಕೂಗಿಕೊಳ್ಳುತ್ತಿದ್ದುದನ್ನು ಕಂಡು "ಹೀಗೇಕೆ ಕೂಗಿಕೊಳ್ಳುತ್ತಿದ್ದೀಯೇ?" ಎಂದು ಕೇಳಿದರಂತೆ. ಅದಕ್ಕೆ ಆ ಜವಾನನು ಹೀಗೆ ಕೂಗಿಕೊಳ್ಳಬೇಕೆಂದು ಅಮ್ಮಅವರೇ ಹೇಳಿದರೆಂದು ತಿಳಿಸಿದನಂತೆ. ಆಗ ಸಾಹೇಬರು ಓಹೋ ಆ ಮಾತು ಈತನಿಗೆ ಅರ್ಥವಾಗದೆ ಹೀಗೆ ಮಾಡುತ್ತಿರಬಹುದೆಂದು ತಿಳಿದುಕೊಂಡು ಒದರು ಎಂದರೆ ಝಾಡಿಸು ಎಂದು ಹೇಳಿಕೊಟ್ಟರಂತೆ. ಹೀಗೆ ಭಾಷೆಯಲ್ಲಿ ಎರಡೂ ಕನ್ನಡವೇ ಆಗಿದ್ದರೂ ಸ್ವಲ್ಪ ವ್ಯತ್ಯಾಸವಿದ್ದೇ ಇದೆ. ಇದೇ ರೀತಿ ಭಾಷೆ ಒಂದಾದರೂ ಈ ಆಚಾರ-ವಿಚಾರ-ವ್ಯವಹಾರಗಳಲ್ಲಿ ಮತ್ತು ನಡೆ-ನುಡಿಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳಿದ್ದೇ ಇರುತ್ತವೆ. ಹೀಗೆ ವ್ಯತ್ಯಾಸಗಳಿರುತ್ತವೆ ಎಂದು ನಾನು ಹೇಳಿದರೆ "ನಿಮಗೆ ಭಾಷಾಭಿಮಾನವಿಲ್ಲ" ಎಂದು

ಹೇಳಬಾರದು. ಆ ಪ್ರದೇಶಗಳೆಲ್ಲಾ ನಮಗೆ ಸೇರದೆ ಇದ್ದಮಾತ್ರಕ್ಕೆ ಅಲ್ಲಿ ನನಗೆ ಯಾರೂ ಸ್ನೇಹಿತರೇ ಇಲ್ಲವೆಂತಲೇ? ಆ ಪ್ರದೇಶದಲ್ಲಿಯೂ ನನಗೆ ಬಹಳ ಆಪ್ತ ಸ್ನೇಹಿತರು ಇದ್ದಾರೆ. ನಾನೂ ಅವರೂ ಸಹೋದರರಂತೆಯೇ ಇದ್ದೇವೆ; ಇನ್ನು ಮುಂದೆಯೂ ಹಾಗೆಯೇ ಇರುತ್ತೇವೆ. ಆ ಜನಗಳು ಅಲ್ಲಿಯೇ ಈಗ ಅಭಿವೃದ್ಧಿಗೆ ಬರುತ್ತಿದ್ದಾರೆ. ಅವರು ನಮ್ಮ ಜೊತೆಗೆ ಸೇರದಿದ್ದರೆ ಅವರು ಅಭಿವೃದ್ಧಿಗೇ ಬರುವುದಿಲ್ಲ ಎಂದು ಹೇಳುವುದು ಅದೊಂದು ಭ್ರಮೆ. ಆದಕಾರಣ ಈ ದಿವಸ ಒಂದ್ಯ ಭಾಷೆಯನ್ನಾಡತಕ್ಕಂಥ ಜನಗಳೆಲ್ಲಾ ಮತ್ತು ಅವರಿರತಕ್ಕಂಥ ಪ್ರದೇಶಗಳೆಲ್ಲಾ ಒಂದಾಗಬೇಕು ಎಂದು ಹೇಳುವುದಾದರೆ ಇದಕ್ಕೆ ಎಲ್ಲ ಜನರ ಮನಸ್ಸುಗಳೂ ಒಂದಾದರೆ ಮತ್ತು ಎಲ್ಲರ ಮನಸ್ಸನ್ನೂ ಒಲಿಸಿಕೊಂಡರೆ ಈ ಕಾರ್ಯ ಆಗಿಯೇ ಆಗುತ್ತದೆ. ಹೀಗೆ ಎಲ್ಲರ ಮನಸ್ಸೂ ಒಂದಾದರೇನೇ ಇದು ಸಾಧ್ಯ. ಹಾಗಿಲ್ಲದೆ ಬರಿ ಒಂದು ವಾದಮಾಡಿ ಈ ಸಮಸ್ಯೆಯನ್ನು ಗೆಲ್ಲುತ್ತೇವೆಂದು ಹೇಳಿದರೆ ಅದು ಸಾಧ್ಯವಾಗದ ಮಾತು ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಟಿ. ಸಿದ್ದಲಿಂಗಯ್ಯ (ದೊಡ್ಡಬಳ್ಳಾಪುರ).—ಹಾಗೆಯೇ ಈಗ ಭಾವನೆಯಿಟ್ಟುಕೊಂಡು ಮಾತನಾಡಬೇಕೆಂದು ಎಲ್ಲರೂ ಹೇಳುತ್ತಿದ್ದಾರೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಈ ದಿವಸ ಕನ್ನಡ ಮಾತನಾಡತಕ್ಕಂಥ ಜನಗಳು ಎಲ್ಲೆಲ್ಲಿದ್ದಾರೋ ಅವರೆಲ್ಲರೂ ಒಂದಾಗಬೇಕು ಎಂದು ಹೇಳಿದರೆ ಹಾಗೆ ಅವರೆಲ್ಲರೂ ಒಂದಾಗುವುದಕ್ಕೆ ಸಾಧ್ಯವಿದೆಯೇ? ಹಾಗೆ ಮಾಡುವುದು ಯೋಗ್ಯವಾದುದ್ದೇ? ಎನ್ನುವ ಸಮಸ್ಯೆ ನಮ್ಮ ಮುಂದೆ ಉದ್ಭವಿಸುತ್ತದೆ. ವಿಶಾಲ ಕರ್ಣಾಟಕಕ್ಕೂ ಮೈಸೂರು ಮಹಾರಾಜರನ್ನೇ ಒಪ್ಪಿಕೊಳ್ಳುತ್ತೇವೆ, ಬೆಂಗಳೂರೇ ರಾಜಧಾನಿಯಾಗಿರಲು ಒಪ್ಪಿಕೊಳ್ಳುತ್ತೇವೆ ಎಂದು ಉತ್ತರ ಕರ್ಣಾಟಕದ ಕೆಲವು ಮಂದಿ ಸ್ನೇಹಿತರು ಹೇಳುತ್ತಾರೆ. "ಈ ವಿಚಾರಗಳೆಲ್ಲಾ ಹೀಗೆಯೇ ಆಗಬೇಕು; ಇದನ್ನೆಲ್ಲಾ ನಾವು ಒಪ್ಪಿಕೊಂಡಿದ್ದೇವೆ" ಎಂದು ಹೇಳುವುದಕ್ಕೆ ನಾವು ಯಾರು? ಅವರು ಯಾರು? ಈ ಕಾಲದಲ್ಲಿ ರಾಜಮಹಾರಾಜರುಗಳಿಂದ ರಾಜ್ಯಗಳು ಕೈಬಿಟ್ಟು ಹೋಗುತ್ತಿರುವಾಗ ಈ ವಿಚಾರಗಳೆಲ್ಲಾ ಹೇಗೆ ಆಗಬೇಕೆಂದು ಹೇಳುವುದಕ್ಕೆ ಅವರಾರು? ನಾವಾರು? ಈ ದಿವಸ ಬೆಂಗಳೂರು ನಗರ "ಸೀಟ್ ಆಫ್ ಕ್ಯಾಪಿಟಲ್" ಆಗಿದೆ. ನಾಳೆ ಈ "ಸೀಟ್ ಆಫ್ ಕ್ಯಾಪಿಟಲ್"ನ್ನು ಇಲ್ಲಿಂದ ತೆಗೆದು ಬೇರೆ ಕಡೆಗೆ ಬದಲಾವಣೆ ಮಾಡಬೇಕಾಗುತ್ತದೆಂದು ಹೇಳುವುದಾದರೆ ಅದನ್ನು ಆಗುವುದಿಲ್ಲವೆಂದು ಹೇಳುವುದಕ್ಕಾಗುತ್ತದೆಯೇ? ನಾಳೆ ಹುಬ್ಬಳ್ಳಿ ಬೇಕಾದರೂ ಸೀಟ್ ಆಫ್ ಗಾರ್ವ್ಮೆಂಟ್ ಆಗಬಹುದು. ಇಲ್ಲವೇ ಧಾರವಾಡ ಬೇಕಾದರೂ ಆಗಬಹುದು. ಈ ದಿವಸ ನಾವು ಈ ಏಕೀಕರಣವಾಗಲೇಬೇಕೆಂದು ಹೇಳಿದರೆ ಮತ್ತು ಅದಕ್ಕೆ ಒಪ್ಪಿಕೊಂಡರೆ ನಾಳೆ ಈ ಬೆಂಗಳೂರು ಕ್ಯಾಪಿಟಲ್ ಆಗಿರುವುದು ತಪ್ಪಿಹೋಗಲೇ ಬೇಕಾಗುತ್ತದೆ.

ಒಬ್ಬ ಸದಸ್ಯರು.—ಹಾಗಾದರೆ ಈ ದಿವಸ ಕಟ್ಟುತ್ತಿರುವ ವಿಧಾನಸೌಧ ಏನಾಗುತ್ತದೆ?

ಮತ್ತೊಬ್ಬ ಸದಸ್ಯರು.—ಒಂದು ಮ್ಯೂಜಿಯಂ ಆಗುತ್ತದೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ (ಬಾಗೆಪಲ್ಲಿ-ಗುಡಿಬಂಡೆ).—ಹಾಗಾದರೂ ಆಗಬಹುದು. ಅಥವಾ ಈದಿವಸ ಆ ವೆಸ್ಟ್‌ಮಿನ್‌ಸ್ಟರ್ ಅಬ್ಬೆ ಎನ್ನತಕ್ಕಂಥಾದ್ದರಲ್ಲಿ ದೊಡ್ಡ ದೊಡ್ಡವರುಗಳು ಯಾರಾದರೂ ಸತ್ತುಹೋದರೆ ಅಂಥವರನ್ನೆಲ್ಲಾ ಅಲ್ಲೇ ಹೂಳುತ್ತಾರಂತೆ! ಆ ಪದ್ಧತಿಯ ಪ್ರಕಾರ ನಾವೂ ಸಹ ಇಲ್ಲಿ ಹಾಗೆ ಮಾಡಿದರೆ ಅನುಕೂಲವಾಗುವುದಿಲ್ಲವೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇಲ್ಲಿಯ ಹವಾಗುಣವೇನೋ ಬಹಳ ಚೆನ್ನಾಗಿದೆ. ಅಷ್ಟುಮಾತ್ರಕ್ಕೆ ಇದನ್ನು ಬದಲಾವಣೆ ಮಾಡುವುದೇ ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಈ ಹಿಂದೆ ಇಂಡಿಯಾ ಸರ್ಕಾರದ ಸೀಟ್ ಆಫ್ ಕ್ಯಾಪಿಟಲ್ ಕಲ್ಕತ್ತಾದಲ್ಲಿತ್ತು. ಅಲ್ಲಿ ಹವಾ ಬಹಳ ಚೆನ್ನಾಗಿದೆ. ವಾಸಮಾಡುವುದಕ್ಕೆ ಅದೆಷ್ಟು ಸೊಗಸಾದ ಸ್ಥಳ! ಆದಾಗ್ಯೂ ಇಂಡಿಯಾ ದೇಶದ ಕ್ಯಾಪಿಟಲ್ ನಗರವನ್ನು ಅಲ್ಲಿಂದ ಡೆಲ್ಲಿಗೆ ಬದಲಾವಣೆ ಮಾಡಲಾಯಿತು. ಡೆಲ್ಲಿಯಲ್ಲಿ ಯಾವ ರೇವು ಪಟ್ಟಣವೂ ಇಲ್ಲ. ಈ ಒಂದು ಭವಿಷ್ಯವನ್ನು ಈಗ ನಾವು ನಮ್ಮ ದೃಷ್ಟಿಯಲ್ಲಿಟ್ಟುಕೊಂಡು ಮೈಸೂರಿನ ಭವಿಷ್ಯವನ್ನು ದೀರ್ಘವಾಗಿ ಪರಿಶೀಲನೆ ಮಾಡಬೇಕಾಗಿದೆ. ಈ ದಿವಸ ನಾವೆಲ್ಲರೂ ಕನ್ನಡ ಮಾತನಾಡತಕ್ಕಂಥ ಜನರು ಎಲ್ಲೆಲ್ಲಿದ್ದಾರೋ ಅವರೆಲ್ಲರೂ ಒಂದಾಗಬೇಕೆಂದು ಹೇಳುತ್ತಿರುವ ಹಾಗೆ, ಈ ದಿವಸ ತೆಲುಗು ಮಾತನಾಡತಕ್ಕವರೆಲ್ಲ ಎಲ್ಲೆಲ್ಲಿದ್ದರೂ ಅವರೆಲ್ಲರೂ ಒಂದಾಗಬೇಕೆಂದು ಶ್ರೀ ಬಿ. ವಿ. ನಾರಾಯಣರೆಡ್ಡಿಯವರೂ ಶ್ರೀ ಮುಲ್ಕ ಗೋವಿಂದರೆಡ್ಡಿಯವರೂ ಕೇಳಿದರೆ ಅದಕ್ಕೆ ನಾವೇಕೆ ಅವರನ್ನು ಪರ್ಯಾಯವಾಗಿ ಭಾವಿಸಬೇಕು? ಆನೇಕಲ್ಲಿನಿಂದ ಹಿಡಿದು ಪಾವಗಡದವರೆಗೂ ಒಂದು ಗೆರೆಯನ್ನು ಎಳೆದುಬಿಟ್ಟರೆ ಅದರ ಪೂರ್ವಕ್ಕಿರುವ ಪ್ರದೇಶವೆಲ್ಲಾ ಆಂಧ್ರಕ್ಕೆ ಸೇರಬೇಕೆಂದು ಕೇಳಿದರೆ ನಾವೇಕೆ ಅದನ್ನು ಒಪ್ಪಿಕೊಳ್ಳಬಾರದು? ಹಾಗೆ ಒಪ್ಪಿಕೊಳ್ಳದೆ ಇದ್ದರೆ "ಮಾಸೊಮ್ಮೇ ಮಾಸೊಮ್ಮು, ಮಾಸೊಮ್ಮೇ ಮಾಸೊಮ್ಮು" ಎಂದು ಹೇಳಿದ ಹಾಗಾಗುತ್ತದೆ. ಕನ್ನಡ ಮಾತನಾಡುವವರು ಒಂದೇ ಆಗಬೇಕು. ತೆಲುಗು ಮಾತನಾಡುವವರು ನಮ್ಮಿಂದ ಹೊರಗೆ ಹೋಗುವುದಕ್ಕೆ ಅವಕಾಶ ಕೊಡುವುದಿಲ್ಲ. ಶ್ರೀ ಮುಲ್ಕ ಗೋವಿಂದರೆಡ್ಡಿಯವರೂ ಮತ್ತು ಶ್ರೀ ನಾರಾಯಣ ರೆಡ್ಡಿಯವರೂ ತಪ್ಪು ಮಾತನಾಡುತ್ತಾರೆಂದು ಹೇಳುವುದು ಯಾವ ನ್ಯಾಯ? ಕಲ್ಯಾಣನಗರ, ಕೋಲಾರದ ಬಹುಭಾಗ, ತುಮಕೂರು ಸ್ವಲ್ಪ, ಚಿತ್ರದುರ್ಗ ಸ್ವಲ್ಪ, ಭಾಗವನ್ನು ಬಿಟ್ಟುಕೊಡುವುದಕ್ಕೆ ಮೈಸೂರಿನ ಜನತೆ ಒಪ್ಪುವುದಾದರೆ ಈ ಪ್ರಶ್ನೆಯನ್ನು ಇವೊತ್ತು ಯೋಚನೆ ಮಾಡಬಹುದು.

3 P. M.

ಆದರೆ ಇದು ಬದಲಾವಣೆ ಆಗುವುದಿಲ್ಲ, ಈಗ ಇದ್ದ ಹಾಗೆಯೇ ಇರುತ್ತದೆ ಎಂದು ಹೇಳುವುದಿಲ್ಲ. ಹೈದರಾಬಾದ್ ಒಡೆದು ಬೇರೆ ಬೇರೆ ಪ್ರಾಂತಗಳಿಗೆ ಸೇರುವುದಾದರೆ, ಆಡಳಿತ ದೃಷ್ಟಿಯಲ್ಲಿ ಕನ್ನಡ ಮಾತನಾಡುವ ಜನರಿರುವ ಪ್ರದೇಶವೆಲ್ಲ ಒಂದೇ ಆಡಳಿತಕ್ಕೆ ಸೇರುವುದು ಸೂಕ್ತ ಎಂದು ಕಂಡರೆ, ಆಗ ಪ್ರಜಾಪ್ರತಿನಿಧಿಗಳು ಆಗಬಹುದು ಎಂದು ಒಪ್ಪಿಕೊಂಡರೆ, ಅಂಥ ಸಂದರ್ಭದಲ್ಲಿ ಇದು ಕಾರ್ಯಗತವಾಗುವುದು. ಆಗ Capital ಬದಲಾವಣೆಯಾಗಲೇ ಬೇಕಾಗುವುದು. ಅದು ಹುಬ್ಬಳ್ಳಿಗೋ, ಧಾರವಾಡಕ್ಕೋ ಹೋಗಬೇಕೆಂದಾದರೆ ಅದನ್ನು ತಪ್ಪಿಸಲು ಸಾಧ್ಯವಿಲ್ಲ. ಅಂಥ ಸಂದರ್ಭದಲ್ಲಿ ಆಂಧ್ರಕ್ಕೆ ಸೇರುವ ಭಾಗ ಸೇರಲೇ ಬೇಕಾಗುತ್ತದೆ. ಆದುದರಿಂದ ನಾನು ಹೇಳುವುದು, ಅದುವರೆಗೆ ನಾವು ಸ್ವಲ್ಪ ತಾಳೋಣ. ಆತುರಪಡುವುದು ಬೇಡ. ಕರ್ಣಾಟಕ ಏಕೀಕರಣ ಬೇಕು ಎಂದು ಯಾರಾದರೂ ಹೇಳಿದ ಮಾತ್ರಕ್ಕೆ

(ಶ್ರೀ ಎಚ್. ಕೆ. ವೀರಣ್ಣಗೌಡ.)

ಹೆಚ್ಚಾಗಿ ಸಂತೋಷ ಪಡುವುದೂ ಬೇಡ, ಎಂದರೆ, ಕ್ರೂರ ದೃಷ್ಟಿಯಿಂದ ಎದ್ದು ಹೊಡೆಯುತ್ತಾರೋ ಎನ್ನುವಂತೆ ಮಾಡುವುದೂ ಸರಿಯಲ್ಲ. ಕರ್ಣಾಟಕ ಏಕೀಕರಣವಾಗಬೇಕೆಂದು ಹೇಳುವ ಉತ್ತರ ಕರ್ಣಾಟಕದ ಶ್ರೀ ಅಂಬಲಿಯವರಿಗೆ ನನ್ನನ್ನು ಕಂಡರೆ ದ್ವೇಷವೇನೂ ಇಲ್ಲ. ನಮ್ಮಿಬ್ಬರಿಗೂ ಪರಸ್ಪರ ಸ್ನೇಹವೂ ವಿಶ್ವಾಸವೂ ಇದೆ. ಅದು ಮುಂದೆಯೂ ಉಳಿದುಕೊಂಡು ಬರುತ್ತದೆ, ಕಿತ್ತು ಹೋಗುವುದಿಲ್ಲ. ಈ ಅಖಿಲ ಕರ್ಣಾಟಕಕ್ಕೋಸ್ಕರ ಬಿಸಿಬಿಸಿ ವಾತಾವರಣ ಕಲ್ಪಿಸಿಕೊಂಡು ಇದನ್ನು ಚರ್ಚಾಸ್ಪದ ವಿಷಯವನ್ನಾಗಿ ಮಾಡಿಕೊಂಡು ದೊಡ್ಡದಾಗಿ ಬೆಳೆಸುವುದು ಸೂಕ್ತವಲ್ಲವೆಂದು ನನ್ನ ಅಭಿಪ್ರಾಯ.

ಇನ್ನೊಂದು ವ್ಯಸನಕರವಾದ ವಿಷಯವೆಂದರೆ, ಈ ಪ್ರಶ್ನೆಯ ಚರ್ಚೆಯಲ್ಲಿ ಕೋಮುವಾರು ಭಾವನೆ ಇದೆ ಎಂದು ಅನೇಕರು ಆರೋಪಣೆ ಮಾಡುತ್ತಿದ್ದಾರೆ. ಅದು ನನ್ನ ಮನಸ್ಸಿಗೆ ಬಹಳ ನೋವಾಗುತ್ತದೆ. ಕರ್ಣಾಟಕ ಏಕೀಕರಣವಾಗಬೇಕು ಎಂದು ಹೇಳುವವರಿಗೆ ದೇಶಾಭಿಮಾನವಿಲ್ಲವೆಂದು ಹೇಳುವುದಿಲ್ಲ. ಅಂತೆಯೇ ಅದು ಆಗಕೂಡದು ಎಂದು ಹೇಳುವವರಿಗೂ ದೇಶಾಭಿಮಾನ ಇಲ್ಲವೆಂದು ಒಪ್ಪುವುದಕ್ಕಾಗುವುದಿಲ್ಲ. ಕನ್ನಡ ಭಾಷೆಯಲ್ಲಿ ನಮ್ಮೆಲ್ಲರಿಗೂ ಅಭಿಮಾನವಿದೆ. ಕನ್ನಡ ಭಾಷೆಗೆ ಕೆಲವರು ತಮ್ಮ ಕೈಲಾದ ಸೇವೆ ಸಲ್ಲಿಸಿದ್ದಾರೆ. ಕರ್ಣಾಟಕ ಏಕೀಕರಣಕ್ಕೆ ವಿರೋಧವಾಗಿದ್ದ ಮಾತ್ರಕ್ಕೆ ಭಾಷಾಭಿಮಾನವಿಲ್ಲ, ದೇಶಾಭಿಮಾನವಿಲ್ಲವೆಂದು ಹೇಳುವುದು ಸರಿಯಲ್ಲ. ಅವರಿಗೆ ಹಾಗೆ ಹೇಳಲು ಸ್ವಾತಂತ್ರ್ಯವಿರಬಹುದು. ಅಂಥವರು ಹೇಳಿದ ಮಾತ್ರಕ್ಕೇ ನಾನು ಖಿನ್ನನಾಗುವುದಿಲ್ಲ. ಆದರೆ ಇಂತಹ ಆರೋಪಣೆಯನ್ನು ಮಾಡಿ ಕೋಮುವಾರು ಭಾವನೆಯ ಬಣ್ಣ ಕಟ್ಟಿ ಟೀಕೆ ಮಾಡುವುದಕ್ಕೆ ಅವಕಾಶವುಂಟಾಗುವುದು ಬಹಳ ವ್ಯಸನಕರ. ವಾಸ್ತವಾಂಶವಾದ ಸ್ಥಿತಿಗೆ ಕಣ್ಣು ಮುಚ್ಚಿಕೊಂಡು ಇರುವುದಕ್ಕೆ ಆಗುವುದಿಲ್ಲ. ಕೋಮುವಾರು ಭಾವನೆ ಬಹಳ ದಿವಸ ದೇಶದಲ್ಲಿ ಇರುವುದಿಲ್ಲ. ನಾನು ಕಂಡ ಹಾಗೆ ಅದು ಅಳಿಸಿ ಹೋಗುತ್ತಿದೆ. ಅಸ್ಪೃಶ್ಯತಾ Untouchability ಭಾವನೆ ಶಿಕ್ಷಾರ್ಹವನ್ನಾಗಿ ಮಾಡಿರುವಾಗ ಕೋಮುವಾರು ಭಾವನೆಯಿಂದ ರಾಜ್ಯಾಡಳಿತ ನಡೆಸುವುದಕ್ಕೆ ಸಾಧ್ಯವೇ, ಅದಕ್ಕೆ ಕಾನೂನಿನಲ್ಲಿ ರಾಜ್ಯಾಂಗದಲ್ಲಿ ಅವಕಾಶವಿದೆಯೇ ಎಂಬುದನ್ನು ಯೋಚನೆ ಮಾಡಬೇಕು. ಆದ್ದರಿಂದ ಕರ್ಣಾಟಕ ಏಕೀಕರಣ ಬೇಕು ಎಂದು ಒಂದು ಕೋಮಿನವರೂ ಬೇಡ ಎಂದು ಇನ್ನೊಂದು ಕೋಮಿನವರೂ, ಕೋಮುವಾರು ಭಾವನೆಯಿಂದ ಮಾತನಾಡುತ್ತಾರೆ ಎನ್ನುವುದು ತಪ್ಪು ಅಭಿಪ್ರಾಯವೆಂದು ಮಾತ್ರ ಹೇಳುತ್ತೇನೆ. ಬಳ್ಳಾರಿ ಹೇಗೆ ಆಡಳಿತ ದೃಷ್ಟಿಯಿಂದ ಮೈಸೂರಿಗೆ ಸೇರಿದೆಯೋ ಹಾಗೆಯೇ ಕೇಂದ್ರ ಸರ್ಕಾರದವರು ನೇಮಕ ಮಾಡಿರುವ ಕಮಿಷನ್ ಅವರು ಯಾವುದಾದರೂ ಒಂದು ಭಾಗ ಇಂಥ ಆಡಳಿತಕ್ಕೆ ಸೇರಬೇಕು ಎಂದು ತೀರ್ಮಾನ ಮಾಡಿದರೆ ಆಡಳಿತ ದೃಷ್ಟಿಯಿಂದ ಹಾಗೆ ಮಾಡಬಹುದು. ಉಳಿದ ಕನ್ನಡ ಮಾತನಾಡತಕ್ಕ ಭಾಗಗಳು ಒಂದು ಪ್ರತ್ಯೇಕ ಸರ್ಕಾರವನ್ನು ಏರ್ಪಡಿಸಿಕೊಳ್ಳಬಹುದು. ಕರ್ಣಾಟಕ ಏಕೀಕರಣ ಸಾಧ್ಯವಿಲ್ಲ ಎಂದು ಹೇಳುವುದಿಲ್ಲ. ಎಂದಾದರೂ ಆಗಬಹುದು. ನಮ್ಮ ಮಕ್ಕಳ ಕಾಲದಲ್ಲಿ ಆಗಬಹುದು. ಆಗ ಸುಲಭವಾಗುತ್ತದೆ. ಮದರಾಸ್ ಅಧಿಪತ್ಯ ಎರಡು ಭಾಗವಾದಾಗ ಕೆಲವು ಅಧಿಕಾರಿಗಳು ಎಲ್ಲಿರಬೇಕು ಎಂದರೆ ಮದರಾಸು ಸರ್ಕಾರದಲ್ಲೇ ಉಳಿಯಬೇಕೇ ಅಥವಾ ಆಂಧ್ರ ಸರ್ಕಾರಕ್ಕೆ ಹೋಗಬೇಕೇ ಎಂಬ ಪ್ರಶ್ನೆ ಉದ್ಭವಿಸಿತು. ಆದರೆ ಕರ್ಣಾಟಕ ಏಕೀಕರಣವಾದಾಗ ಅಂತಹ ತೊಡಕುಗಳು ಉದ್ಭವಿಸುವುದಿಲ್ಲ. ಅಲ್ಲಲ್ಲಿ ಇರತಕ್ಕ ಅಧಿಕಾರಿಗಳು ಇದ್ದೇ ಇರುತ್ತಾರೆ. ಎರಡು ಶಾಸನ ಸಭೆಗಳೂ (Legislatures) ಎರಡು ಮಂತ್ರಿ ಮಂಡಲಗಳೂ ಒಂದಾಗುತ್ತವೆ. ಅವು ಬೇರೆ ಬೇರೆಯಾಗಿ ಎಷ್ಟು ಕಾಲವಿರುತ್ತದೋ ಅಷ್ಟು ಅವಕಾಶ ಕೊಟ್ಟು ಆಮೇಲೆ ಬೇರೆ ಬೇರೆ ಭಾಗಗಳು ಒಂದಾಗಬೇಕು ಎಂದು ಉದ್ದೇಶಪಟ್ಟರೆ ಆಗ General Election ನಲ್ಲಿ ಎಲ್ಲರೂ ಸೇರಿ ಒಂದೇ ಶಾಸನ ಸಭೆಯನ್ನು ಆರಿಸಿದರೆ ಆಗ ಆ ಶಾಸನ ಸಭೆ ಒಂದೇ ಮಂತ್ರಿಮಂಡಲ ಮಾಡಿಕೊಳ್ಳಬಹುದು. ಅಧಿಕಾರ ವರ್ಗದವರು ಎಷ್ಟೆಷ್ಟು ಇರುತ್ತಾರೋ ಅಷ್ಟೇ ಇರುತ್ತಾರೆ. ಅಧಿಕಾರ ವರ್ಗದಲ್ಲಿ ಬಹಳ ವ್ಯತ್ಯಾಸವಾಗುವುದಿಲ್ಲ. ಆದ್ದರಿಂದ ಇದು ಸುಲಭವಾಗಿ ಕಾರ್ಯಕ್ರಮದಲ್ಲಿ ಆಗತಕ್ಕದ್ದು, ಬಲವಂತದಿಂದ ಮಾಘಸ್ನಾನ ಮಾಡಿಸಬಾರದು ಎಂದು ಕೇಳಿಕೊಳ್ಳುತ್ತೇನೆ. ಅಂತಹ ಮಾಘಸ್ನಾನದಿಂದ ಪುಣ್ಯ ಬರುತ್ತದೆಯೇ ಎಂಬ ಸಂದೇಹವೂ ಉಂಟಾಗುತ್ತದೆ! ಇಷ್ಟು ಹೊತ್ತಿಗೆ ಮಾಘಸ್ನಾನ ಮಾಡಿದರೆ ಪುಣ್ಯ ಬರುತ್ತದೆ ಎಂಬ ಭಾವನೆಯಿಂದ ಮಾಡಿದರೆ ಸಂತೋಷವೇ ಹೊರತು ಕಂಬಳಿ ಹೊದ್ದುಕೊಂಡು ಮಲಗಿರುವವರನ್ನು ಕಾವೇರಿ ನದಿಯಲ್ಲಿ ತಳ್ಳಿ ಸ್ನಾನ ಮಾಡಿಸಿದರೆ, ಅದರಿಂದ ಪ್ರಯೋಜನವಿಲ್ಲ, Canvass ಮಾಡತಕ್ಕ ಅಗತ್ಯವಿಲ್ಲ. ಕಾಲಾವಕಾಶ ಕೊಡಬೇಕು. ಕನ್ನಡ ಮಾತನಾಡತಕ್ಕವರು ಮೈಸೂರು ದೇಶಕ್ಕೆ ಸೇರಬೇಕಾದ ಅಗತ್ಯವಿದ್ದರೆ, ಫಜಲಾಲಿ ಸಮಿತಿಯವರು ಆ ರೀತಿ ಒಪ್ಪುವುದಾದರೆ, ಆಗಬಹುದು. ನನ್ನ ಸ್ನೇಹಿತರು ಅಕ್ಟೋಬರ್ ತಿಂಗಳ ಹೊತ್ತಿಗೆ ಮಂಗಳೂರು ಮೈಸೂರಿಗೆ ಸೇರುತ್ತದೆಂದು ಹೇಳುತ್ತಿದ್ದಾರೆ. ಅದು ನಿಜವಿದ್ದರೆ ಸಂತೋಷ. ಮದರಾಸ್ ಆಡಳಿತಕ್ಕೂ ಮಂಗಳೂರಿಗೂ ಈಗ ಬಹು ದೂರ. ಹೊಸದಾಗಿ ಕನ್ನಡ ಪ್ರಾಂತ ನಿರ್ಮಾಣವಾದರೆ ಮಂಗಳೂರು ಅಲ್ಲಿಗೆ ಸೇರಿದರೂ ಸೇರಬಹುದು. ಬಳ್ಳಾರಿ ಬೇರೆ, ಇದು ಬೇರೆ ಎಂಬ ಭಾವನೆಯಿಂದ ನಾನು ಮಾತನಾಡುತ್ತಾ ಇಲ್ಲ. ಆಡಳಿತ ದೃಷ್ಟಿಯಿಂದ ಸುಮಾರು ಒಂದು ಕೋಟಿ ಜನ ಇರುವ ಪ್ರದೇಶಕ್ಕೆ 6-8 ಜನ ಮಂತ್ರಿಗಳು ಇರುವುದೂ 100-120 ಜನ Assembly ಸದಸ್ಯರು ಇರುವುದೂ ಒಂದು Compact body ಆಗುತ್ತದೆ. ಇಬ್ಬರು I. G. P., ಇಬ್ಬರು Director of Public Instruction, ಎರಡು ಶಾಸನ ಸಭೆಗಳು, ಎರಡು ಮಂತ್ರಿಮಂಡಲಕ್ಕೆ ಬಹಳ ಖರ್ಚಾಗುತ್ತದೆ ಎಂದು ಒಬ್ಬರು ಹೇಳಿದರು. ಒಂದು ಶಾಸನ ಸಭೆಯಲ್ಲಿ 100 ಜನ ಇದ್ದರೆ ಅದರಷ್ಟು ಇನ್ನೊಂದು ಭಾಗ ಸೇರಿದರೆ 200 ಜನ ಸದಸ್ಯರಿರುತ್ತಾರೆ. ಬೆಳಗಾಂ ಜಿಲ್ಲೆಯಿಂದ ಬೆಂಗಳೂರಿಗೆ ಬರಬೇಕಾದರೆ, ಅವರಿಗೆ T. A. ಕೊಡಬೇಕಾದರೆ ಖರ್ಚು ಜಾಸ್ತಿ ಆಗುವುದಿಲ್ಲವೇ? ಈಗ ಮೈಸೂರು ಸಂಸ್ಥಾನದಲ್ಲಿ I. G. P.ಗೆ 1,500 ರೂಪಾಯಿ ಸಂಬಳವನ್ನು ಕೊಡುತ್ತಾರೆ. ಹಿಂದೆ ಮದ್ರಾಸ್ I. G. P.ಗೆ 3 ಸಾವಿರ ರೂಪಾಯಿ ಸಂಬಳ ಕೊಡುತ್ತಿದ್ದರು. ಅದೇ ರೀತಿ Director of Public Instructionಗೆ ಕೊಡುತ್ತಿದ್ದರು. ಮೈಸೂರು ಸಂಸ್ಥಾನದಲ್ಲಿ 6-7 ಮಂತ್ರಿಗಳು ಇದ್ದರೆ, ಮದರಾಸಿನಲ್ಲಿ ಹತ್ತಾರು ಜನ ಮಂತ್ರಿಗಳು ಇದ್ದಾರೆ. ಯಥಾ ಪ್ರಕಾರ ಅದೇ ರೀತಿ top heavy administration ಆಗುವುದಿಲ್ಲವೇ? ಒಬ್ಬ ದೊಡ್ಡ ಮನುಷ್ಯರು ಹೇಳಿದರು "You fellows, you want

to be big men in your little holes'' ಎಂದು. ಅವರ ಜೊತೆಗೆ ಏತಕ್ಕೆ ಜಗಳ ಮಾಡುವುದು, ಅವರ ವಾದ ಒಪ್ಪಿಕೊಳ್ಳದೇ ಇದ್ದರೆ ಅವರಿಗೆ ಬಹಳ ಕೋಪ ಬರುತ್ತದೆ ಎಂದು ನಾನು ಸುಮ್ಮನಿದ್ದೆ. ಇದರಲ್ಲಿ ಓಟು ತೆಗೆದುಕೊಂಡಿದ್ದರೂ ಚೆನ್ನಾಗಿತ್ತು. ಸಂತೋಷ ಪಡುವವರು ಒಂದು ಕಡೆ ಇದ್ದರೆ ಅನುತಾಪ ಪಡುವವರು ಇನ್ನೊಂದು ಕಡೆ ಇರುತ್ತಾರೆ. ತಾತ್ಕಾಲಿಕವಾಗಿ ಮೈಸೂರು ಸಂಸ್ಥಾನದ Constituent Assembly ಏನು ತೀರ್ಮಾನ ಕೊಟ್ಟಿದೆಯೋ ಅಂದರೆ ಆಡಳಿತದ ಸೌಕರ್ಯದ ದೃಷ್ಟಿಯಿಂದ ಅಕ್ಕಪಕ್ಕದ ಪ್ರದೇಶ ಸೇರಬೇಕಾದರೆ, ಆಗಬಹುದು. ಉದಾಹರಣೆಗೆ ಕೊಳ್ಳೇಗಾಲ ಸೇರಬೇಕು ಎಂದು ಹೇಳುತ್ತಾರೆ. ಹಾಗೆಯೇ ಇನ್ನೂ ಕೆಲವು ಅಕ್ಕಪಕ್ಕದ ಪ್ರದೇಶಗಳು ಮೈಸೂರಿಗೆ ಸೇರಬಹುದು. ಉಳಿದಿರುವ ಭಾಗಗಳೆಲ್ಲ ಒಂದು ಸಂಸ್ಥಾನವಾಗಿ ಇನ್ನೊಂದು ಶಾಸನ ಸಭೆ ಮತ್ತು ಮಂತ್ರಿಮಂಡಲ ಏರ್ಪಡಿಸಿ ಒಂದೆರಡು general elections ವರೆಗೆ ಇವುಗಳ ಅನುಕೂಲ, ಸೌಕರ್ಯ ಅನುಭವಗಳನ್ನು ತೆಗೆದುಕೊಂಡು, ಆಮೇಲೆ ಒಂದೇ general election ಮಾಡಿ, ಒಂದು ಆಡಳಿತ ಏರ್ಪಾಡು ಮಾಡಲು ಬಹಳ ಸುಲಭವಾಗುತ್ತದೆ. ಈ ರೀತಿ ಅವಕಾಶವುಂಟುಮಾಡಿ ಕೊಡಬೇಕೇ ಹೊರತು ಅದನ್ನು ಬಹಳ ವಿವಾದಾಸ್ಪದವಾಗಿ ವಿಚಾರ ಮಾಡಿ ಜನಗಳಲ್ಲಿ ದ್ವೇಷಾಸೂಯೆಗೆ ಅವಕಾಶ ಕೊಡಬಾರದು ಎಂದು ಅರಿಕೆ ಮಾಡಿಕೊಳ್ಳುತ್ತೇನೆ.

Mr. SPEAKER.—Now, the House will rise for lunch and meet at 3-40 P. M.

The House adjourned for Lunch at Fifteen Minutes past Three of the Clock and re-assembled at Forty five minutes past Three of the Clock.

[MR. DY. SPEAKER in the Chair)].

*ಶ್ರೀ ಎಚ್. ಎಂ ಚನ್ನಬಸಪ್ಪ (ಪೆರಿಯಾಪಟ್ಟಣ).—ನಮ್ಮ ಸಂಸ್ಥಾನವನ್ನು ಬಡಾವಣೆ ಮಾಡಬೇಕೇ ಬೇಡವೇ ಎನ್ನತಕ್ಕ ಪ್ರಶ್ನೆ ಬಹಳ ದಿವಸಗಳಿಂದ ಚರ್ಚೆಯಾಗುತ್ತಿದೆ. ಅದು ಕರ್ಣಾಟಕದ ಏಕೀಕರಣ ಸಮಸ್ಯೆಯೊಂದಿಗೆ ಹೊಂದಿಕೊಂಡು ಬಹಳ ದಿವಸಗಳಿಂದ ವಿಮರ್ಶೆಯಾಗುತ್ತಿದೆ. ಈ ಸಮಸ್ಯೆಯ ವಿಷಯದಲ್ಲಿ ಸುಮಾರು 1908 ನೆಯ ಇಸವಿಯಿಂದ ನಮ್ಮ ಸಂಸ್ಥಾನದಲ್ಲಿ ವಿಮರ್ಶೆ ಮಾಡತಕ್ಕ ಶಕ್ತಿಯುಳ್ಳ ಜನ, ಪ್ರಭಾವಶಾಲಿಗಳಾದ ಜನ ಯಾವಯಾವ ರೀತಿಯಲ್ಲಿ ಯಾವಯಾವ ಕಾಲದಲ್ಲಿ ಏನೇನು ಅಭಿಪ್ರಾಯ ಕೊಟ್ಟಿದ್ದಾರೆಂಬುದನ್ನು ನಾನು ಓದಿದ್ದೇನೆ. ಇದರಿಂದ ನನಗೆ ಗೊತ್ತಾಗುತ್ತದೆ, 1947 ನೆಯ ಇಸವಿಯಿಂದ ಹಿಂದಕ್ಕೆ ಅಭಿಪ್ರಾಯ ಒಂದು ರೀತಿಯಲ್ಲಿ ಕ್ರೋಡೀಕೃತವಾಗಿತ್ತು. ಆದರೆ, ಅದೇ ಜನ 1947 ನೆಯ ಇಸವಿಯಿಂದೀಚೆಗೆ ಒಂದೊಂದು ವಿಧದಲ್ಲಿ ತಮ್ಮ ಅಭಿಪ್ರಾಯಗಳನ್ನು ಸಕಾರಣಗಳಿಗಾಗಿಯೋ ಅಥವಾ ಕಾರಣವಿಲ್ಲದೆಯೋ ಬದಲಾವಣೆ ಮಾಡಿಕೊಂಡು ಬರುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಇದಕ್ಕೆ ಕಾರಣಗಳೇನೆಂಬುದನ್ನು ಸ್ವಲ್ಪ ವಿಮರ್ಶೆಮಾಡುವುದು ಅವಶ್ಯಕ; ಆದರೆ ಅದಕ್ಕೆ ಈಗ ಕಾಲವಿಲ್ಲ. ಅದೇನೇ ಇರಲಿ, ಆರ್ಶೇಯದಿಂದ ವಿಧಾಯಕವಾಗಿರತಕ್ಕ ಗಡಿಗಳು ಭಾರತದಲ್ಲಿ ಬದಲಾವಣೆಯಾಗಿವೆಯೋ ಇಲ್ಲವೇ ಎಂಬುದು ಮೂಲ ಪ್ರಶ್ನೆ. ಸನ್ನಿವೇಶಗಳ ಮತ್ತು ಪರಿಸ್ಥಿತಿಗಳ ಪರಿಣಾಮವಾಗಿ ಅನೇಕ ಸಂಸ್ಥಾನಗಳ ಗಡಿಗಳು ನಿರ್ಧಾರವಾದುವು. ಕಾಲ, ದೇಶ, ವರ್ತಮಾನ, ಪರಿಸ್ಥಿತಿಗಳಿಗನುಗುಣವಾಗಿ ಅವು ಬದಲಾವಣೆ ಹೊಂದುತ್ತಾ ಬಂದಿವೆ. ಆದ್ದರಿಂದ ಈಗ ಗಡಿಯು ನಿರ್ಧಾರವನ್ನು ಮಾಡುವಾಗ, ಈ ಹೊತ್ತು ನಾವು ಗಡಿ ನಿರ್ಧಾರ ಮಾಡಿಬಿಟ್ಟರೆ ಎಲ್ಲಾ ಕಾಲಕ್ಕೂ ಅದು ಸರಿಹೋಗುತ್ತದೆಂಬ ನಂಬಿಕೆಯನ್ನು ಯಾರೂ ಇಟ್ಟುಕೊಳ್ಳಬೇಕಾದದ್ದು ಅನಾವಶ್ಯಕ. ಇದುವರೆಗೆ ಇದ್ದಂಥ ಪರಿಸ್ಥಿತಿ ಈ ಗಿಲ್ಲ, ಇಂಗ್ಲಿಷರು ರಾಜ್ಯಭಾರವನ್ನು ಕೈಗೆ ತೆಗೆದುಕೊಂಡಮೇಲೆ ಗಡಿಯ ನಿರ್ಧಾರವನ್ನು ತಮಗೆ ಸೂಕ್ತ ತೋರಿದ ರೀತಿಯಲ್ಲಿ, ಅವರ ಆಡಳಿತಕ್ಕೆ, ಅವರ ನೀತಿಗೆ ಅನುಗುಣವಾಗಿ ನಿರ್ಧಾರ ಮಾಡಿಕೊಂಡು ರಾಜ್ಯಭಾರ ಮಾಡಿಕೊಂಡು ಬಂದರು. ಅವರಿಂದ ಅಧಿಕಾರ ಭಾರತೀಯರಿಗೆ ಬಂದಮೇಲೆ ಈ ಸಂಸ್ಥಾನಗಳ ಎಲ್ಲೆಕಟ್ಟುಗಳು ಇದ್ದಂತೆಯೇ ಇರಬೇಕೆ ಅಥವಾ ನಮ್ಮ ಹಿತದೃಷ್ಟಿಯಿಂದ ಹೊಸಪರಿಸ್ಥಿತಿಗೆ ಹೊಂದಿಕೊಳ್ಳುವ ರೀತಿಯಲ್ಲಿ ಮಾರ್ಪಾಟು ಮಾಡಬೇಕೆ ಎಂಬುದು ಮೂಲಭೂತವಾದ ಪ್ರಶ್ನೆ. ಭಾರತ ಸ್ವತಂತ್ರವಾದ ಕೂಡಲೇ ಕ್ರಾಂತಿಕಾರಕವಾದ ಬದಲಾವಣೆಗಳು ಈ ಮಾರ್ಗದಲ್ಲಿ ಆಗಿವೆ. ಅದಕ್ಕೆ ಉದಾರಣೆ ನಾನು ಈಗ ಹೇಳಬೇಕಾಗಿಲ್ಲ. ಸುಮಾರು 562 ಸಂಸ್ಥಾನಗಳನ್ನು ಇಂಗ್ಲಿಷರು ತಮ್ಮ ಹಿತದೃಷ್ಟಿಯಿಂದ ನಿರ್ಮಾಣಮಾಡಿ ಬೆಳೆಸಿಕೊಂಡು ಬಂದಿದ್ದಂಥವನ್ನು. ಅವು ಭಾರತದ ಹಿತಕ್ಕೆ ಧಕ್ಕೆ ತರುತ್ತವೆಂಬ ಅಭಿಪ್ರಾಯದಿಂದ ಕೇಂದ್ರ ಸರ್ಕಾರದವರು ಅದಲು ಬದಲು ಮಾಡಿ, ಯಾವರೀತಿ ಮಾರ್ಪಾಟು ಮಾಡಿದರೆ ದೇಶದ ಹಿತದೃಷ್ಟಿಯಿಂದ ಒಳ್ಳೆಯದೋ ಆ ರೀತಿ ಮಾಡಿಬಿಟ್ಟರು. ಮತ್ತೆ, ಹೈದರಾಬಾದಿನ ಪ್ರಶ್ನೆ ಬಂದಾಗ ಹೈದರಾಬಾದಿನ ಪ್ರಜೆಗಳಿಗೆ ತಮ್ಮ ಭವಿಷ್ಯವನ್ನು ನಿರ್ಧಾರಮಾಡಿಕೊಳ್ಳುವ ಕಾಲವಿತ್ತು. ಆದರೆ, ಜನಗಳ ಮತ ತೆಗೆದುಕೊಂಡು ಅದನ್ನು ನಿರ್ಧಾರಮಾಡಬೇಕೇ ಬೇಡವೇ ಎಂಬ ಪ್ರಶ್ನೆ ಬಂದಾಗ ಹೈದರಾಬಾದು ಭಾರತದೊಳಗೆ ಇರಬೇಕೆಂಬುದು ಅವಶ್ಯಕವಾದದ್ದರಿಂದ, ಆ ಸಂಬಂಧದಲ್ಲಿ ಪೋಲೀಸ್ action ಕೈಗೊಂಡು ತನ್ಮೂಲಕ ಅದನ್ನು ಭಾರತದಲ್ಲಿ ಉಳಿಸಿಕೊಳ್ಳಲಾಯಿತು. ಇನ್ನು ಕಾಶ್ಮೀರದ ಪ್ರಶ್ನೆಯನ್ನು ತೆಗೆದುಕೊಳ್ಳೋಣವಾಗಲಿ. ಕೋಟಿಗಟ್ಟಲೆ ಹಣವನ್ನು ಕಾಶ್ಮೀರಕ್ಕಾಗಿ ಭಾರತ ಖರ್ಚುಮಾಡಿದೆ. ಮುಂದೆ ಮಾಡುವುದಕ್ಕೂ ಸಿದ್ಧವಿದೆ. ಇದರ ಮೂಲ ಉದ್ದೇಶವೇನೆಂದರೆ, ನಾವು ಈಗ ತೆಗೆದುಕೊಳ್ಳುವ ಕಾರ್ಯಕ್ರಮದಿಂದ ರಾಷ್ಟ್ರದ ಹಿತಸಾಧನೆಯಾಗುತ್ತದೆಯೋ ಇಲ್ಲವೇ ಎಂಬುದೇ ಹೊರತು ಮತ್ತೆ ಬೇರೆಯಲ್ಲ. ಹೀಗೆಯೇ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲೂ ನಾನಾರೀತಿಯ ಕ್ರಾಂತಿಕಾರಕವಾದ ಬದಲಾವಣೆಗಳನ್ನು ಮಾಡಲು ತೊಡಗಿದ್ದೇವೆ. ಪ್ರತಿ ದಿವಸವೂ ಆ ಕೆಲಸದಲ್ಲಿ ನಿರತರಾಗಿದ್ದೇವೆ. ಹೀಗಿರುವಾಗ ಇವೊತ್ತಿನದಿವಸ ಪ್ರಾಂತಗಳ ಪುನರ್ವಿಂಗಡಣೆಯಾಗಬೇಕೇ ಇಲ್ಲವೇ ಎಂಬ ಪ್ರಶ್ನೆಯನ್ನು ನಾವು ಪರಿಶೀಲಿಸಬೇಕಾಗಿದೆ.

ನಿನ್ನೆ ಮತ್ತು ಈ ದಿನ ಮಾನ್ಯ ಸ್ನೇಹಿತರು ಬಹಳ ಸ್ವಾರಸ್ಯವಾಗಿ ಭಾಷಣಗಳನ್ನು ಮಾಡಿ ತಮ್ಮ ಅಭಿಪ್ರಾಯಗಳನ್ನು ಚೆನ್ನಾಗಿ ಚಿತ್ರಿಸಿದ್ದಾರೆ. ಮಾನ್ಯ ಶ್ರೀ ಕೆ. ಪುಟ್ಟಸ್ವಾಮಿಯವರು ಮೈಸೂರು ಬಿಟ್ಟು ಉಳಿದ ಕರ್ಣಾಟಕ ಭಾಗಗಳ ಪರಿಸ್ಥಿತಿಗಳನ್ನು ಸಭೆಯ ಮುಂದಿಟ್ಟು, ಅವು ಬಹಳ ಕನಿಷ್ಠ ಪರಿಸ್ಥಿತಿಯಲ್ಲಿವೆ,

(ಶ್ರೀ ಎಚ್. ಎಂ. ಚನ್ನಬಸಪ್ಪ.)

ಅವುಗಳನ್ನು ಮೈಸೂರಿಗೆ ಸೇರಿಸತಕ್ಕದ್ದು ಮೈಸೂರಿನವರ ಹಿತದೃಷ್ಟಿಯಿಂದ ಸರಿಯಲ್ಲವೆಂದು ಹೇಳಿದ್ದಾರೆ. ಅವರು ಹೇಳಿದರಲ್ಲೂ ತಪ್ಪಿಲ್ಲ. ಮಾನ್ಯ ಸ್ನೇಹಿತರಾದ ಸಿದ್ದಲಿಂಗಯ್ಯನವರು, "ಈ ಅಂಕಿಅಂಶಗಳ ಅಧಾರ ಬೇಡ; ನಾವು Human aspect ನಿಂದ ಈ ಪ್ರಶ್ನೆಯನ್ನು ನೋಡಬೇಕು; ಆ ಜನಗಳು ಬಹಳ ಕಷ್ಟದಲ್ಲಿದ್ದಾರೆ; ಕರ್ಣಾಟಕ ಹರಿದು ಹಂಚಿಹೋಗಿದೆ; ನಮ್ಮ ಸಂಸ್ಕೃತಿ ಬೆಳೆಯಬೇಕು; ಆದ್ದರಿಂದ ನಾವು ಕರ್ಣಾಟಕವನ್ನು ಅಗತ್ಯವಾಗಿ ಮಾಡಬೇಕು" ಎಂಬ ಧಾಟಿಯಲ್ಲಿ ಈ ಏಕೀಕರಣ ಪ್ರಶ್ನೆಯನ್ನು ಪ್ರಸ್ತಾಪಿಸಿದರು. ಮತ್ತು ಮಾನ್ಯ ಪಟ್ಟಾಭಿರಾಮ್ ಅವರು ಅವರ ಉಜ್ವಲವಾದ ಧಾಟಿಯಲ್ಲಿ ಮೂಲ ವಿಷಯಗಳು ಕೆಲವನ್ನು ಪ್ರಸ್ತಾಪಿಸಿದರು. ಇವೆಲ್ಲವನ್ನೂ ಕ್ರೋಢೀಕರಿಸಿ ಶ್ರೀಮಾನ್ ವೀರಣ್ಣಗೌಡರು "ಕರ್ಣಾಟಕದ ಏಕೀಕರಣದ ಪ್ರಶ್ನೆಯನ್ನು ತೆಗೆದುಕೊಳ್ಳಬೇಕಾದದ್ದು ವಾಸ್ತವ, ಆದರೆ ಈಗ ಬೇಡ; ಮುಂದೇನಾದರೂ ಅಭಿಪ್ರಾಯ ಬಂದರೆ ಆಗಬಹುದು" ಎಂಬ ಧೋರಣೆಯನ್ನು ಅವರು ತೋರಿಸಿದರು. "ಸದ್ಯಕ್ಕೆ ಮೈಸೂರನ್ನೂ ಅಕ್ಕಪಕ್ಕದ ರಾಷ್ಟ್ರಗಳನ್ನೂ ಸೇರಿಸಿ ಒಂದು ಕರ್ಣಾಟಕಮಾಡಿ; ಉಳಿದ ಕನ್ನಡ ಭಾಗಗಳನ್ನೇ ಸೇರಿಸಿ ಇನ್ನೊಂದು ಕರ್ಣಾಟಕ ಮಾಡಿ. ಒಂದುವೇಳೆ ನಮ್ಮ ಮಕ್ಕಳ—ಮೊಮ್ಮಕ್ಕಳ ಕಾಲದಲ್ಲಿ ಅವರಿಬ್ಬರೂ ಸೇರಬೇಕೆಂದು ಇಷ್ಟಪಟ್ಟು ಆ ಎರಡು ಸಂಸ್ಥಾನಗಳ ಶಾಸನ ಸಭೆಗಳವರೂ ಒಪ್ಪಿ ಒಬ್ಬರನ್ನೇ ತಮ್ಮ ನಾಯಕರಾಗಿಟ್ಟುಕೊಳ್ಳಬೇಕೆಂದು ಅಭಿಪ್ರಾಯಪಟ್ಟರೆ ಮಾಡಿಕೊಳ್ಳುವುದಕ್ಕೆ ಬಿಡೋಣ" ಎಂದು ಅವರು ಸೂಚಿಸಿದರು. ಈ ಅಭಿಪ್ರಾಯಕ್ಕೂ ಸಕಾರಣವಿಲ್ಲವೆಂದು ಹೇಳುವ ಗೋಜಿಗೆ ನಾನು ಹೋಗುವುದಿಲ್ಲ. ಏಕೆಂದರೆ ಕಷ್ಟಗಳು ಎರಡರಲ್ಲೂ ತುಂಬಿವೆ. ಏಕೀಕರಣವಾಗಬೇಕೆಂಬ ಅಭಿಪ್ರಾಯವುಳ್ಳವರೂ ತಮಗೆ ಯಾವಯಾವ ಅಂಕಿಅಂಶಗಳು ಬೇಕೋ ಅವುಗಳನ್ನು ಮಾತ್ರ ತೆಗೆದುಕೊಂಡು ವಾದಮಾಡಬಹುದು. ಕೂಡದು ಎನ್ನುವವರೂ ಅದಕ್ಕೆ ತಕ್ಕ ಅಂಶಗಳನ್ನು ಕೊಟ್ಟು ವಾದಮಾಡಬಹುದು. ಆದರೆ ನಮ್ಮ ಮುಂದಿರುವ ಪ್ರಶ್ನೆ ಒಂದು ಗಡಿಯನ್ನು ನಿರ್ಧಾರಮಾಡತಕ್ಕದ್ದು ಭಾರತದ ನಕ್ಷೆಯನ್ನು ಭಾರತದ ಹಿತದೃಷ್ಟಿಯಿಂದ ಯಾವರೀತಿ ಬರೆಯಬೇಕೆಂದು ನಿರ್ಧಾರಮಾಡುವ ಕಾಲದಲ್ಲಿ ಈ ಅಂಕಿಅಂಶಗಳನ್ನು ತೆಗೆದುಕೊಂಡು ಎಷ್ಟು ಆಸ್ಪತ್ರೆಗಳಿವೆ, ಅದರಲ್ಲಿ ದನಗಳ ಆಸ್ಪತ್ರೆಯೆಷ್ಟು, ಮನುಷ್ಯರ ಆಸ್ಪತ್ರೆಯೆಷ್ಟು, ರಸ್ತೆಗಳು ಎಷ್ಟಿವೆ, ಸ್ಕೂಲುಗಳು ಎಷ್ಟಿವೆ, ಎಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು ಬರೆಯುವುದು ಸರಿಯೆ ಎಂಬುದನ್ನು ಯೋಚನೆ ಮಾಡತಕ್ಕದ್ದು ಅಗತ್ಯ. ಹೈದರಾಬಾದು ಭಾರತದಲ್ಲಿರಬೇಕೆಂದು ಅಭಿಪ್ರಾಯಪಟ್ಟು police action ತೆಗೆದುಕೊಂಡಾಗ ಹೈದರಾಬಾದಿನಲ್ಲಿ ಸ್ಕೂಲುಗಳೆಷ್ಟಿದ್ದವು ಕಾಲೇಜುಗಳೆಷ್ಟಿದ್ದವು ಎಂದು ಲೆಕ್ಕ ಹಾಕಲಿಲ್ಲ. ಅವರ ದೃಷ್ಟಿಕೋಣವೇ ಬೇರೆಯಿತ್ತು. ಹೈದರಾಬಾದು ಭಾರತದಲ್ಲಿಲ್ಲದಿದ್ದರೆ ಭಾರತಕ್ಕೆ ಧಕ್ಕೆ ಬರುತ್ತದೆ, ಎಂದು ಹೇಳಿ ಅಲ್ಲಿನ ಪರಿಸ್ಥಿತಿ ಕನಿಷ್ಠವೇ ಆಗಿರಲಿ ಅಥವಾ ಉಚ್ಚವೇ ಆಗಿರಲಿ ಭಾರತಕ್ಕೆ ಅದು ಅವಶ್ಯಕವೆಂದು ಹೇಳಿ ಒಂದೇ ಧ್ಯೇಯದಿಂದ ಕೆಲಸಮಾಡಿದರು. ಅದೇ ರೀತಿ ಇಂದು ಕಾಶ್ಮೀರದಲ್ಲಿ ಬೇಕಾದಷ್ಟು ಐಶ್ವರ್ಯ ತುಂಬಿ ತುಳುಕಾಡುತ್ತಿದೆಯೆಂದು ಹೇಳಿ ಭಾರತ ಸರ್ಕಾರದವರು ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿಲ್ಲ.

ಇದು ಒಂದು ಅಭಿಪ್ರಾಯ. ಇದೇ ಸಂದರ್ಭದಲ್ಲಿ, ಕನ್ನಡ ಮಾತನಾಡತಕ್ಕ ಜನಗಳು ಒಂದು ಕಡೆ ಸೇರಿ ಒಂದು ರಾಜ್ಯಭಾರಕ್ಕೆ ಒಳಪಡಬೇಕೆಂದು ಹೇಳುವಾಗ, ಆ ಭಾಗಗಳಲ್ಲಿರುವ ಕನ್ನಡ ಮಾತನಾಡದಿರುವ ಜನಗಳ ಗತಿಯೇನು ಎಂಬುದೂ ಯೋಚನೆಮಾಡತಕ್ಕ ವಿಷಯ. ಇವರಂತೆಯೇ ತಮಿಳರು, ತೆಲುಗರು, ಕೊಂಕಣರು ತಾವು ತಾವು ಮಾತನಾಡತಕ್ಕ ಕ್ಷೇತ್ರಗಳನ್ನು ಏರ್ಪಾಡು ಮಾಡಿಕೊಳ್ಳುವ ಹಕ್ಕೂ ಅವರಿಗಿದೆ. ಹೀಗಿರುವಾಗ ಭಾಷೆಯನ್ನು ಮೂಲಾಧಾರವಾಗಿಟ್ಟುಕೊಂಡು ರಾಜ್ಯವನ್ನು ಪುನರ್ವಿಂಗಡಣೆ ಮಾಡುವುದು ಸರಿಯೇ, ದೇಶದ ಹಿತ ದೃಷ್ಟಿಯಿಂದ ಅನುಕೂಲವಾಗುತ್ತದೆಯೇ ಎಂಬುದನ್ನು ಸ್ವಲ್ಪ ಯೋಚನೆಮಾಡೋಣ. ನಾವು ಎಷ್ಟೇ ವಿಶೇಷ ರೀತಿಯ ಏರ್ಪಾಡುಗಳನ್ನು ಮಾಡಿ ವಿಶೇಷ ಬುದ್ಧಿವಂತಿಕೆಯನ್ನು ಉಪಯೋಗಿಸಿದರೂ linguistic minorities ಅಂದರೆ ಭಾಷೆಗಳನ್ನಾಡತಕ್ಕ ಜನರಲ್ಲಿ ಅಲ್ಪ ಸಂಖ್ಯಾತ ಜನ ಇದ್ದೇ ಇರುತ್ತಾರೆ. ಆದ್ದರಿಂದ ಭಾಷೆಯನ್ನು ಮೂಲಾಧಾರವಾಗಿಟ್ಟುಕೊಂಡು ಮಾಡುವುದಾದರೆ ಸ್ವಲ್ಪ ಕಷ್ಟಗಳು ಬಂದೇ ಬರುತ್ತವೆ. ಆರು ಕೋಟಿ 32 ಲಕ್ಷ ಜನರಿರುವ ಉತ್ತರ ಪ್ರದೇಶವನ್ನು ಭಾಷಾವಾರು ಪ್ರಾಂತ್ಯವಾಗಿ ರಚಿಸಬೇಕೆಂದರೆ ಅಲ್ಲಿಯೂ ಹೀಗೆಯೇ ಇರುತ್ತದೆ. ಜೊತೆಗೆ ಇನ್ನೂ ಕೆಲವು ಪ್ರದೇಶಗಳನ್ನು ಸೇರಿಸಬೇಕಾಗಿರುತ್ತದೆ. ಆಗ್ಗೆ ಆಡಳಿತಕ್ಕೆ ಅನುಕೂಲವಾಗಿರುತ್ತದೆಯೇ ಎಂಬ ಮೂಲಭೂತವಾದ ಪ್ರಶ್ನೆ ಬರುತ್ತದೆ. ಅದರಂತೆಯೇ ಕೊಡಗಿನಲ್ಲಿ ಕನ್ನಡ ಮಾತನಾಡುವ ಜನರಿದ್ದಾರೆ. ಹೀಗಿರುವಾಗ ಕೊಡಗು ಹಾಗೆಯೇ ಇರಬೇಕೇ ಎಂಬ ಪ್ರಶ್ನೆಯಿದೆ. ಮಾನ್ಯ ಪಟ್ಟಾಭಿರಾಮ್ ಅವರು ಮಾತನಾಡುವಾಗ "ನಾವು ಯಾರನ್ನೂ ಬಲೋದ್ಬಂದಿ ಮಾಡುವುದಿಲ್ಲ. ಅವರವರ ಅಭಿಪ್ರಾಯಕ್ಕನುಗುಣವಾಗಿ ರಾಜ್ಯ ಪುನರ್ವಿಂಗಡಣೆ ಮಾಡಬೇಕೆ?" ಎಂದು ಹೇಳಿದರು. ಹಾಗೆ ಮನಸ್ಸಿನಲ್ಲಿಟ್ಟುಕೊಂಡರೆ ಅದು ಯಾವುದೂ ಆಗದ ಮಾತು. ರಾಜ್ಯವನ್ನು ಪುನರ್ವಿಂಗಡಣೆ ಮಾಡುವಾಗ ಪ್ರತಿಯೊಬ್ಬರನ್ನೂ ಕೇಳಿ ಅವರ ಅಭಿಪ್ರಾಯಕ್ಕನುಗುಣವಾಗಿ ಪುನರ್ವಿಂಗಡಣೆ ಮಾಡುವುದಕ್ಕೆ ಹೊರಟರೆ ಅದು wild goose chase ಆಗುತ್ತದೆ ಅಷ್ಟೆ. ತಮಗೇ ಗೊತ್ತಿರುವಂತೆ ಕೊಡಗಿನಲ್ಲಿ $2\frac{1}{2}$ ಲಕ್ಷ ಜನ ಚಾಮರಾಜನಗರ, ಯಳಂದೂರಿಗೆ ಸೇರಿದವರಿದ್ದಾರೆ. ನಾಳೆ ಆ ಎರಡೂವರೆ ಲಕ್ಷ ಜನವೇ ತಾವೇ ಒಂದು ಶಾಸನ ಸಭೆ, ಒಬ್ಬ ಚೀಫ್ ಕಮಿಷನರು, ಒಬ್ಬ ಚೀಫ್ ಸೆಕ್ರೆಟೆರಿಯವರನ್ನು ಇಟ್ಟುಕೊಳ್ಳುತ್ತೇವೆಂದು ಹೇಳಿದರೆ, ಇದೆಲ್ಲಾ ಮಕ್ಕಳು ಆಟವಾಡುವಾಗ ಮನೆ ಕಟ್ಟಿಕೊಳ್ಳುತ್ತೇವೆ ಎಂದು ಹೇಳಿಕೊಳ್ಳುವಂತಾಗುತ್ತದೆ. ಇನ್ನೂ 50 ವರ್ಷಗಳ ಕಾಲಕೊಟ್ಟು ಆ ಮೇಲೆ ಕೊಡಗು ಹೀಗೆಯೇ ಇರಲೇ ಅಥವಾ ಪುನರ್ವಿಂಗಡಣೆಯಾಗಬೇಕೇ ಎಂದು ಕೇಳಿದರೆ ಅವರು ಹೀಗೆಯೇ ಇರಲೆಂದೇ ಹೇಳುತ್ತಾರೆ.

ಒಬ್ಬ ಸದಸ್ಯರು.—ಚೆನ್ನಾಗಿ ಮಾಡಿಕೊಂಡಿದ್ದಾರೆ!

ಶ್ರೀ ಎಚ್. ಎಂ. ಚನ್ನಬಸಪ್ಪ.—ಚೆನ್ನಾಗಿ ಮಾಡಿಕೊಂಡಿದ್ದಾರೆ, ನಿಜ. ಆದರೆ ಅದೇ ಕಾರಣದ ಮೇಲೆ ಮೈಸೂರು ಜಿಲ್ಲೆಯವರು ತಾವು ಎಲ್ಲವನ್ನೂ ಚೆನ್ನಾಗಿ ಮಾಡಿಕೊಂಡಿದ್ದೇವೆಂದು ಹೇಳಿ ಸ್ವತಂತ್ರವಾಗಿರುತ್ತೇವೆಂದು ಕೇಳಿದರೆ ಅವರಿಗೆ ಸ್ವತಂತ್ರ ಸರ್ಕಾರ ಕೊಡುವುದಕ್ಕಾಗುತ್ತದೆಯೇ? ಅದು ಎಂದೂ ಸಾಧ್ಯವಾಗುವುದಿಲ್ಲ. ಆದ್ದರಿಂದ ಇಂಥ ಒಂದು ಬೃಹತ್ ಸಮಸ್ಯೆಯನ್ನು ಬಗೆ ಹರಿಸುವಾಗ ಪ್ರತಿಯೊಬ್ಬರನ್ನೂ ಕೇಳಿ ಅವರವರ ಅಭಿಪ್ರಾಯಕ್ಕನುಗುಣವಾಗಿ ನಾವು ಕೆಲಸ ಮಾಡಬೇಕೆಂದು ಹೊರಟರೆ, ನಾನು ಮೊದಲೇ

ಹೇಳಿದಂತೆ, wild goose chase ಆಗುತ್ತದೆ. ಯಾವ ಕೆಲಸವೂ ಆಗುವುದಿಲ್ಲ. ಇವೊತ್ತು ಇಂಡಿಯಾ ದೇಶದಲ್ಲಿರುವ 562 ಸಂಸ್ಥಾನಗಳನ್ನು ಒಟ್ಟುಗೂಡಿಸಿ ಪುನರ್ವಿಂಗಡಣೆ ಮಾಡುವಾಗ ಪ್ರತಿಯೊಂದು ಸಂಸ್ಥಾನಗಳ ರಾಜ ಮಹಾರಾಜರುಗಳನ್ನೂ ಅಲ್ಲಿನ ಶಾಸನ ಸಭೆಗಳವರನ್ನೂ ಕೇಳಿ ಮಾಡುತ್ತೇವೆಂದಿದ್ದರೆ ಆಗ Steel man of India ಎಂದು ಕರೆಸಿಕೊಳ್ಳುವ ದಿವಂಗತ ವಲ್ಲಭ್ಭಾಯ್ ಪಟೇಲ್‌ರವರು ಇಂಡಿಯಾ ದೇಶದ ಈಗಿನ ನಕ್ಷೆಯನ್ನು ಬರೆಯುವುದಕ್ಕೆ ಸಾಧ್ಯವಾಗುತ್ತಿತ್ತೆ ? ಎಂದು ನಾನು ಕೇಳುತ್ತೇನೆ. ಕೆಲವು ಮಹತ್ತರವಾದ ವಿಷಯಗಳನ್ನು ನಾವೇ ಪರಿಶೀಲನೆ ಮಾಡಿ ದೇಶದ ಹಿತ ದೃಷ್ಟಿಯಿಂದ ಕಾರ್ಯಗತ ಮಾಡಿದ ಪಕ್ಷಕ್ಕೇ ಏನಾದರೂ ಸಾಧನೆ ಯಾಗುತ್ತದೆಯೇ ಹೊರತು ಇಲ್ಲದಿದ್ದರೆ ಆಗುವುದಿಲ್ಲ. ಜನರು ಇಷ್ಟಪಡಲಿ ಇಷ್ಟಪಡದಿರಲಿ ಅದನ್ನು ಮಾಡಲೇಬೇಕಾಗುತ್ತದೆ. ಅಂದ ಮಾತ್ರಕ್ಕೇ ಜನರ ಅಭಿಪ್ರಾಯವನ್ನು Road Roll ಮಾಡಬೇಕೆಂದು ದಿಲ್ಲ.

4 P.M.

ಮುಖಂಡರಾದಂಥವರಿಗೆ, ದೇಶದ ಜನಗಳ ಹಿತವನ್ನು ಕಾಪಾಡತಕ್ಕಂಥ ಜನಗಳಿಗೆ, ದೇಶದ ರೂಪುರೇಖೆಗಳನ್ನೂ ಮತ್ತು ಇದರ ಭವಿಷ್ಯವನ್ನೂ ಮನಸ್ಸಿನಲ್ಲಿಟ್ಟುಕೊಂಡು ಕಾರ್ಯ ನಡೆಸತಕ್ಕಂಥವರಿಗೆ ಈ ಸಮಸ್ಯೆಯನ್ನು ಬಿಡಿಸಲು ಶಕ್ತಿಯಿಲ್ಲವೆಂದು ಹೇಳಿ ಈ ದೇಶಗಳ ಪುನರ್ವಿಂಗಡಣೆಯ ಪ್ರಶ್ನೆಯನ್ನು ಸಾರ್ವಜನಿಕರ ಮುಂದೆ ಓಟಿಗೆ ಹಾಕಿ ಈ ಬಗ್ಗೆ ನಿಮ್ಮ ಅಭಿಪ್ರಾಯವೇನಿದೆ ಎಂದು ಕೇಳಿದರೆ ಆ ಲಕ್ಷಾಂತರ ಜನರು ಏನು ಅಭಿಪ್ರಾಯ ಕೊಡಲಿಕ್ಕೂ ಸಾಧ್ಯವಾಗುವುದಿಲ್ಲ. ಆ ಸಾಮಾನ್ಯ ಜನರಿಗೆಲ್ಲಾ ಇಂಥ ವಿಷಯಗಳು ತಿಳಿಯುವುದಿಲ್ಲವೆಂತಲೇ ತಮ್ಮಂಥ ನೂರಾರು ಜನ ಸದಸ್ಯರಿಗೆ ಅವರು ತಮ್ಮ ಓಟುಗಳನ್ನು ಕೊಟ್ಟು ಚುನಾವಣೆ ಮಾಡಿ ಕಳುಹಿಸಿದ್ದಾರೆ. ಹೀಗಿದ್ದರೂ, ತಾವು ಈ ದಿವಸ ಆ ಜನರೆಲ್ಲಾ ನಮಗೆ ಈ ಪ್ರಶ್ನೆಯನ್ನು ಬಗೆಹರಿಸುವುದಕ್ಕಾಗಿಯೇನು ಓಟುಕೊಟ್ಟು ಕಳುಹಿಸಲಿಲ್ಲ—ಇದಕ್ಕಾಗಿಯೇನೂ ನಾವು ಇಲ್ಲಿಗೆ ಚುನಾವಣೆ ಹೊಂದಿ ಬಂದಿಲ್ಲ ಎಂದು ಹೇಳಿದರೆ ಅದೊಂದ ದೊಡ್ಡತಪ್ಪಾಗುತ್ತದೆ. ಅದಕ್ಕಾಗಿ ನಮ್ಮ ಆ ಚುನಾವಣೆ ಘೋಷಣೆಯಲ್ಲಿ ಏನು ಹೇಳಿದ್ದಾರೆ ಎನ್ನುವುದನ್ನು ತಾವು ಮತ್ತೊಮ್ಮೆ ಓದಿ ನೋಡಿ ; ಅದರಲ್ಲಿ ಹೀಗೆ ಹೇಳಿದ್ದಾರೆ :

"A demand for redistribution of Provinces on the linguistic basis has been persistently made in the South and West of India. The Congress expressed itself in favour of linguistic provinces many years ago. A decision on this question ultimately depends upon the wishes of the people concerned. While linguistic provinces have undoubtedly a certain cultural and other importance, there are other factors also—such as economic, administrative and financial, which have to be taken into consideration. Where such a demand represents the agreed views of the people concerned, the necessary steps prescribed by the Constitution including the appointment of a Boundary Commission should be taken."

ಹೀಗೆ ಆ ಚುನಾವಣಾ ಘೋಷಣೆಯಲ್ಲಿ ಭಾಷಾವಾರು ಆಧಾರವನ್ನೂ ಸಹ ಗಮನದಲ್ಲಿಟ್ಟುಕೊಂಡು ಈ ರಾಜ್ಯಗಳನ್ನು ಪುನರ್ವಿಂಗಡಣೆ ಮಾಡಲಾಗುವುದೆಂದು ಹೇಳಿದೆ. ಹೀಗಿರುವಾಗ ಜನರು ಒಂದು ವಿಚಾರದಲ್ಲಿ ನಮಗೆ ಓಟ್ ಕೊಟ್ಟು ಕಳುಹಿಸಿಲ್ಲ ಎಂದು ಹೇಳುವುದು ಸರಿಯಲ್ಲ. ಈದಿವಸ ದೇಶದ ಜವಾಬ್ದಾರಿಯನ್ನು ಹೊತ್ತಿರುವಂಥ ಜನರು ನಾವೆಲ್ಲರೂ ಒಂದು ಹೊಂದಾವಣಿಕೆಯಿಂದ ಬಾಳಬೇಕೆಂದು ಜನಾಭಿಪ್ರಾಯ ಪಡುತ್ತದೆಯೆಂದು ಹೇಳಿದರೆ ಆಗ ಸರ್ಕಾರದವರು ಈ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಲೇಬೇಕೆಂದು ಹೇಳಿದ್ದಾರೆ. ಅಂದರೆ ಈ ಪ್ರಶ್ನೆಯನ್ನು ಯಾರು ನಿರ್ಧರಿಸಬೇಕಾಗಿರುತ್ತದೆ ಅಂದರೆ ಯಾರು ಜನರ ಪ್ರತಿನಿಧಿಗಳಾಗಿ ಆರಿಸಿ ಬಂದಿದ್ದಾರೋ ಅಂಥವರೇ ಈ ಪ್ರಶ್ನೆಯನ್ನು ನಿರ್ಧರಿಸಬೇಕಾಗಿದೆ. ಹೀಗೆ ಮಾಡಿದ್ದನ್ನು ಅನುಭವಿಗಳು ಒಪ್ಪಲೇಬೇಕಾಗಿರುತ್ತದೆ. ಆದಕಾರಣ ನಾವು ಇದರ ಹಿನ್ನೆಲೆಯನ್ನು ನಮ್ಮೆಲ್ಲರ ಗಮನದಲ್ಲಿಟ್ಟುಕೊಂಡು ಇನ್ನು ಮುಂದಕ್ಕೆ ನಮ್ಮ ದೇಶ ಯಾವರೀತಿ ಇರಬೇಕು, ಈ ದೇಶಗಳನ್ನು ನಾವು ಯಾವ ಆಧಾರದ ಮೇಲೆ ಪುನರ್ವಿಂಗಡಣೆ ಮಾಡಬೇಕು, ಎಲ್ಲಿಯವರೆಗೆ ಮಾಡಬಹುದು, ಎನ್ನುವುದನ್ನು ನಮ್ಮ ಮುಖ್ಯ ಗುರಿಯನ್ನಾಗಿಟ್ಟುಕೊಳ್ಳಬೇಕೇ ಹೊರತು ಇಂಥ ಮಹತ್ತರವಾದಂಥ ವಿಷಯವನ್ನು ಯಾರೇ ಆಗಲಿ ತಮ್ಮ ಒಂದು ಕೇವಲ ಗೌರವ ಅಥವ ಪ್ರತಿಷ್ಠೆಗಳಿಗಾಗಿ ಖಂಡಿತ ಮಾಡತಕ್ಕದ್ದು ಸರಿಯಲ್ಲ ಎನ್ನುವುದೇ ನನ್ನ ವಾದ. ನಾನು ಹೀಗೆ ಮಾತನಾಡುವಾಗ ನಮ್ಮ ಮುಖ್ಯಗುರಿಯೆಲ್ಲಾ ಈ ರಾಜ್ಯಾಡಳಿತದ ಅನುಕೂಲಕ್ಕೆ ಹಾಗೆ ಇರಬೇಕೆಂದು ಹೇಳಿದ್ದರೆ ಇದರಲ್ಲಿ ಅನೇಕ ವಿಷಯಗಳು ಸೇರಿಕೊಂಡಿರುತ್ತವೆ. ಇದರಲ್ಲಿ ಆ ಭಾಷೆ ಎನ್ನತಕ್ಕಂಥಾದ್ದೂ ಕೂಡ ಅಡಗಿದೆ. ಅಷ್ಟೇ ಅಲ್ಲದೆ ಅಧಿಕಾರ, ಸಂಪತ್ತು ಮತ್ತು ದೇಶದ ಪ್ರಾತಿನಿಧ್ಯ ಇವುಗಳೆಲ್ಲಾ ಸೇರಿರುತ್ತವೆ. ಹೀಗೆ ಈ ಮೂರು ಸಂಪತ್ತುಗಳೂ ಇಡೀ ಸಮಗ್ರ ಭಾರತದಲ್ಲಿ ಎಲ್ಲರಿಗೂ ಸರಿಸಮಾನವಾದಂಥ ರೀತಿಯಲ್ಲಿ ಹಂಚಿಕೆಯಾಗಬೇಕು. ಇವುಗಳ ಹಂಚಿಕೆಯ ವಿಷಯದಲ್ಲಿ ಯಾರೊಬ್ಬರಿಗೂ ಅನಾನುಕೂಲವಾಗುವಂತೆ ಯಾರೂ ಕೆಲಸ ಮಾಡಬಾರದು. ಮುಖ್ಯವಾಗಿ ಆಡಳಿತಾನುಕೂಲದ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ನಾವೆಲ್ಲರೂ ಕೆಲಸ ಮಾಡಬೇಕಾಗಿದೆ ಈ ಆಡಳಿತಾನುಕೂಲವೆಂದರೆ ಇದರಲ್ಲಿ ಸೇರಿರತಕ್ಕದ್ದು ಈ ಭಾಷೆಯೊಂದೇ ಏನು ? ಇದೊಂದೇ ಅಲ್ಲ. ಇನ್ನೂ ಅನೇಕ ವಿಷಯಗಳು ಸೇರಿರುತ್ತವೆ. ಈ ನಾನಾ ಅಂಶಗಳನ್ನು ನಾವೀಗ ದೃಷ್ಟಿಯಲ್ಲಿಟ್ಟುಕೊಂಡು, ಈ ನಮ್ಮ ಮೈಸೂರು ಮುಂದಕ್ಕೆ ಹೇಗಿರಬೇಕು . ಅಥವಾ ಈ ನಮ್ಮ ಮೈಸೂರು ಮುಂದೆಯೂ ಹೀಗೆ ಇರಬೇಕೇ ಅಥವಾ ಇದನ್ನು ಬದಲಾವಣೆ ಮಾಡಬೇಕಾಗಿದ್ದರೆ ಯಾವ ರೀತಿ ಬದಲಾವಣೆ ಮಾಡಬೇಕು ಎನ್ನುವುದನ್ನೆಲ್ಲಾ ನಾವೀಗ ಪರ್ಯಾಲೋಚಿಸಬೇಕಾಗಿದೆ. ಆದರೆ ಈ ಹಿಂದೆ ಆ ಜೆ. ವಿ. ಪಿ. ವರದಿ ಮತ್ತು ಧಾರ್ ಸಮಿತಿಯ ವರದಿಗಳಲ್ಲಿ ಕಂಡುಬರುವಂಥ ಹಿಂದಿನ ಕಾಂಗ್ರೆಸ್ ಧೋರಣೆಗೂ ಮತ್ತು ಈಗಿನ ಕಾಂಗ್ರೆಸ್ ಧೋರ

(ಶ್ರೀ ಎಚ್. ಎಂ. ಚನ್ನಬಸಪ್ಪ.)

ಣೆಗೂ ಸ್ವಲ್ಪ ವ್ಯತ್ಯಾಸವಾಗಿದೆ. ಈ ಹಿಂದೆ ಈ ರಾಜ್ಯಗಳೆಲ್ಲಾ ಭಾಷಾವಾರು ಆಧಾರದ ಮೇಲೆ ಪುನರ್ವಿಂಗಡಣೆಯಾಗಬೇಕೆಂದು ಪ್ರಾಂತೀಯ ಕಾಂಗ್ರೆಸ್ ಸಂಸ್ಥೆಗಳೂ ಮತ್ತು ಅಖಿಲಭಾರತ ಕಾಂಗ್ರೆಸ್ ಸಂಸ್ಥೆಯೂ ನಿರ್ಧಾರ ಮಾಡಿರುತ್ತವೆ. ಆ ರೀತಿ ಇದ್ದಂಥ ಅಭಿಪ್ರಾಯಗಳು ಈಗ ಅಲ್ಪ ಸ್ವಲ್ಪ ಬದಲಾವಣೆ ಹೊಂದುತ್ತಾ ಬಂದಿವೆ. ಹೀಗೆ ಬದಲಾವಣೆ ಹೊಂದಿರತಕ್ಕದ್ದು ಸೂಕ್ತವೇ ಅಲ್ಲವೇ ಎನ್ನುವುದನ್ನು ನಿರ್ಧಾರ ಮಾಡಬಹುದು. ಆದರೆ ಈಗ ಅದಕ್ಕೆಲ್ಲಾ ಕಾಲವಿಲ್ಲ. ಆಡಳಿತ ಸೂತ್ರವನ್ನು ವಹಿಸಿಕೊಂಡಿರತಕ್ಕವರು ಇದನ್ನು ಜಾರಿಗೆ ಕೊಡಬೇಕಾಗಿ ಬಂದಾಗ ಕಷ್ಟಪರಂಪರೆಗಳು ಬರುತ್ತವೆಂತಲೋ ಏನೋ ಒಂದ ಯೋಚನೆ ಮಾಡಿ ಈ ಕೆಲವು ಬದಲಾವಣೆಗಳನ್ನು ಮಾಡಿರುತ್ತಾರೆಂದು ಕೆಲವರು ಅಭಿಪ್ರಾಯ ಪಡುತ್ತಿದ್ದಾರೆ. ಹೀಗೆ ಏನೇನೋ ಕೆಲವು ಕಾರಣಗಳಿಂದ ಹಿಂದೆ ಸಂಕಲ್ಪ ಮಾಡಿದ್ದಂಥ ಅಭಿಪ್ರಾಯಗಳಿಗೆ ಕೊಂಚ ಬದಲಾವಣೆಗಳನ್ನು ಈಗ ಮಾಡಿಕೊಂಡು ಬಂದಿದ್ದಾರೆ. ಆದರೆ ಸಾಮಾನ್ಯವಾಗಿ ಯಾರು ಅಧಿಕಾರಾರೂಢರಾದಂಥ ಜನಗಳಿರುತ್ತಾರೋ ಅವರು ಈ ಬದಲಾವಣೆಗಳೆಲ್ಲಾ ಆಗಲೇ ಕೂಡದೆಂದು ಹೇಳುವುದೇ ಜಾಸ್ತಿ. ಆ ರೀತಿ ಅವರು ಹೇಳತಕ್ಕದ್ದು ಸ್ವಾಭಾವಿಕ. ಆದರೆ ಹೀಗೆ ಹೇಳತಕ್ಕದ್ದೇನೂ ಒಂದು ರಾಜಕೀಯ ಮುಂದಾಲೋಚನೆಯಲ್ಲ. ಆದರೆ ಈ ರಾಜ್ಯಾಡಳಿತ ಹೀಗೆಯೇ ಇದ್ದರೆ ಇದು ಮುಂದೆಯೂ ನಮಗೇ ಸಿಕ್ಕಬಹುದು ಎನ್ನತಕ್ಕಂಥ ಉದ್ದೇಶದಿಂದ ಹಾಗೆ ಅವರು ಹೇಳಬಹುದು. ಇಂಥಾದ್ದಕ್ಕೆ ಮುಖ್ಯವಾದಂಥ ಉದಾಹರಣೆಯೆಂದರೆ ಆ ಕೊಡಗುದೇಶವೊಂದೇ ಸಾಕು. ಆ ಕೊಡಗು ದೇಶದ ಶಾಸನ ಸಭೆಯಲ್ಲೇ ಹಿಂದೆ ಆ ದೇಶಗಳ ವಿಲೀನೀಕರಣಕ್ಕೆ ಅವರು ನಿರ್ಣಯ ಮಾಡಿ ತೀರ್ಮಾನ ಮಾಡಿದ್ದಾರೆ. ಅಲ್ಲಿಯ ಜನರು ಈಗಲೂ ಇದಕ್ಕೆ ತುಂಬ ಆಲೋಚನೆ ಮಾಡುತ್ತಲೇ ಇದ್ದಾರೆ. ಆದರೂ ಅಲ್ಲಿನ ಅಧಿಕಾರವರ್ಗದವರು ಆದೇಶವನ್ನು ನಮ್ಮ ಮೈಸೂರಿಗೆ ಸೇರಿಸಲು ಒಪ್ಪುತ್ತಿಲ್ಲ. ಅದಕ್ಕೆ ಇರತಕ್ಕಂಥ ಕಾರಣವೇನೆಂದರೆ ಆ ಮಂತ್ರಿ ಮಂಡಳದವರ ಅಭಿಪ್ರಾಯದಲ್ಲಿ ದೇಶದ ಹಿತಕ್ಕಿಂತಲೂ ಆ ಅಧಿಕಾರಿಗಳ ಹಿತಸಾಧನೆಯೇ ಪ್ರಾಮುಖ್ಯವಾದುದೆಂದು ಅವರು ಭಾವಿಸಿರುವಂತೆ ಕಾಣುತ್ತದೆ. ಆದರೆ ಇಂಥ ಸಂದರ್ಭದಲ್ಲಿ ಮಾನಗಾಣಬೇಕಾದದ್ದು ದೇಶದ ಹಿತ ಪ್ರಾಮುಖ್ಯವಾದದ್ದೇ ಹೊರತು ದೇಶದಲ್ಲಿ ಅಧಿಕಾರಮಾಡತಕ್ಕಂಥ ಜನರ ಹಿತಸಾಧನೆ ಅಷ್ಟು ಪ್ರಾಮುಖ್ಯವಾದುದಲ್ಲ ಎಂದು ಹೇಳಿದರೆ ಇದಕ್ಕೆ ತಾವೆಲ್ಲರೂ ಒಪ್ಪುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ. ದೇಶಗಳು ಪುನರ್ವಿಂಗಡಣೆ ಆಗುವ ಕಾಲದಲ್ಲಿ ದೇಶದ ಹಿತವನ್ನು ನಾವುಗಳೆಲ್ಲರೂ ಮುಖ್ಯವಾಗಿ ಗಮನಿಸಬೇಕೇ ಹೊರತು ಈ ಪ್ರಶ್ನೆಯಿಂದ ಮುಂದೆ ನಮಗೇನು ತೊಂದರೆಯಾಗುತ್ತದೆ, ನಮ್ಮ ಜನಗಳಿಗೇನು ತೊಂದರೆಯಾಗುತ್ತದೆ, ಎನ್ನತಕ್ಕಂಥ ಸಂಕುಚಿತ ದೃಷ್ಟಿಯಿಂದ ನೋಡತಕ್ಕಂಥ ಪ್ರಶ್ನೆಯಲ್ಲ ಇದು. ಈ ಪ್ರಶ್ನೆಯನ್ನು ನಾವೀದಿವಸ ಇಡೀ ಸಮಗ್ರ ಭಾರತದಲ್ಲಿರತಕ್ಕಂಥ 36ಕೋಟಿ ಜನರ ಸುಖ-ಸಂಪತ್ತುಗಳಿಗೆ ಕಾರಣವಾಗಿರತಕ್ಕಂಥ ಪ್ರಶ್ನೆಯಾಗಿರುತ್ತೆಂಬುದಾಗಿ ಪರ್ಯಾಲೋಚನೆ ಮಾಡತಕ್ಕಂಥಾದ್ದು ಸೂಕ್ತ ಮತ್ತು ನ್ಯಾಯ. ಹೀಗಲ್ಲದೆ ಅಲ್ಲಿ ಆಸತ್ರೆಗಳ ಸಂಖ್ಯೆ ಕಡಮೆಯಿದೆ; ರಸ್ತೆಗಳು ಕಡಮೆ ಇವೆ. ನೀ ಸೌಕರ್ಯ ಸಾಲದು; ಇತರ ಸಂಪತ್ತುಗಳೂ ಕಡಿಮೆಯಿವೆ; ಕನ್ನಡ ಜನರೆಲ್ಲಾ ಒಂದಾಗಬೇಕೆಂದರೆ 13ಕೋಟಿಗೆ ಬರುತ್ತದೆ; ಇದರಿಂದ ನಮ್ಮ ದೇಶಕ್ಕೆ ತುಂಬ ಕಷ್ಟವಾಗುತ್ತದೆ. ಇತ್ಯಾದಿ ಅಂಕಿ ಅಂಶಗಳನ್ನು ನಾವು ಗಮನದಲ್ಲಿಟ್ಟುಕೊಂಡು ಈ ಹೊಸ ರಾಜ್ಯಗಳನ್ನು ನಿರ್ಮಾಣ ಮಾಡುತ್ತೇವೆಂದರೆ ನಾವು ಖಂಡಿತ ಈ ಭಾರತದ ಹಿತಸಾಧನೆಯನ್ನು ಮಾಡುವುಕ್ಕಾಗುವುದಿಲ್ಲ ಎಂದು ನನ್ನ ಮನಸ್ಸಿಗನ್ನಿಸುತ್ತದೆ. ಈ ಸಭೆಯಲ್ಲಿ ಕೆಲವರು ಭಾಷಣ ಮಾಡುತ್ತಿರುವಾಗ ಆ ಭಾಷಣಗಳನ್ನು ಕೇಳಿ ನನಗೆ ಇದೇನು ಆ ಒರಿಸ್ಸಾ, ಬಿಹಾರ್ ಮತ್ತು ಮಧ್ಯಪ್ರದೇಶಗಳ ದೊಡ್ಡ ದೊಡ್ಡ ಜಮೀನ್ದಾರರು ಆ ಜಮೀನ್ದಾರಿ ಪದ್ಧತಿಯನ್ನು ರದ್ದುಗೊಳಿಸಬೇಕೆಂದು ಹೇಳಿದಂಥ ಕಾಲದಲ್ಲಿ ಏನೊಂದು ಪಿತೂರಿ ಹೂಡಿದ್ದರೋ ಆ ಸನ್ನಿವೇಶವೇ ಇಲ್ಲಿಯೂ ಉದ್ಭವಿಸಿತೇನೋ ಎನ್ನುವ ಹಾಗೆ ಸನ್ನಿವೇಶ ನನ್ನ ಜ್ಞಾಪಕಕ್ಕೆ ಬಂತು. ಅದೇರೀತಿ ನಮ್ಮ ಮೈಸೂರಿನಲ್ಲೂ ಈ ಇನಾಂದಾರರಿಂದ ಈ ರಾಜ್ಯವನ್ನು ಕಿತ್ತುಕೊಳ್ಳಬಾರದೆಂದು ಹೇಳುತ್ತಿದ್ದಾರೇನೋ ಎಂದು ನನಗೆ ಆ ವಿಷಯ ಕೂಡಲೇ ಜ್ಞಾಪಕಕ್ಕೆ ಬಂತು. ಕೆಲವರು ಮಾಡುತ್ತಿರುವ "ವಾದವನ್ನು ನೋಡಿದರೆ ಅಲ್ಲೆಲ್ಲಾ ಸ್ಕೂಲುಗಳ ಸಂಖ್ಯೆ ಕಮ್ಮಿ; ನಮ್ಮ ಮೈಸೂರು ನೂರಾರು ವರ್ಷಗಳಿಂದಲೂ ಒಂದು ಚೌಕಟ್ಟಿನಲ್ಲಿ ಕೆಲಸಮಾಡಿಕೊಂಡು ನಾವು ಮುಂದುವರಿಯುತ್ತ ಬಂದಿದ್ದೇವೆ; ಆದಕಾರಣ ಈ ಸಂಸ್ಥಾನವನ್ನು ಯಾರೂ ಯಾವ ರೀತಿಯಲ್ಲೂ ಬದಲಾವಣೆ ಮಾಡಕೂಡದು" ಎನ್ನತಕ್ಕಂಥ ವಾದವನ್ನು ಒಂದು ದೇಶ ಪ್ರೇಮದಿಂದಲೇ ಮಾಡಿದ್ದಾರೆಂದು ಹೇಳುವುದಾದರೆ ಅದಕ್ಕೂ ನಾನು ಪುರಸ್ಕಾರ ಕೊಡುತ್ತೇನೆ. ಆದರೆ ಅಂಥ ಅವರ ಆ ಒಂದು ದೇಶ ಪ್ರೇಮವೇನಿದೆಯೋ ಅದು ಕೇವಲ ಈ ಮೈಸೂರು ಒಂದಕ್ಕಿದ್ದರೆ ಸಾಲದು. ಆ ಪ್ರೇಮ ಇಡೀ ಭರತಖಂಡಕ್ಕೆಲ್ಲಾ ಇದ್ದರೇನೇ ಅದಕ್ಕೆ ಒಂದು ಮಾನ್ಯತೆ ಇದೆ; ಇಲ್ಲದಿದ್ದರೆ ಇಲ್ಲ. ಹೀಗೆ ಈ ಪ್ರಶ್ನೆಯನ್ನು ಒಂದು ವಿಶಾಲಭಾವನೆಯಿಂದ ಪರಿಶೀಲನೆ ಮಾಡದೆ, ಹಿಂದುಳಿದಿರತಕ್ಕಂಥ ಭಾಗಗಳೆಲ್ಲಾ ಅವು ಹಾಗೆಯೇ ಇರಲಿ, ನಾವು ಮಾತ್ರ ಹೀಗೆಯೇ ಇರೋಣ; ಹೊರಗಡೆಯಿಂದ ಯಾರೂ ನಮ್ಮ ಮನೆಗೆ ಬರಲೇಕೂಡದು ಎಂದು ಹೇಳತಕ್ಕ ವಾದ ಸರಿಯಲ್ಲ. ಆದರೆ ಅದು ಹಾಗೇ ಇರಲಿ-ಇದು ಹೀಗೆಯೇ ಇರಲಿ ಎಂದು ನಾವು ಹೇಳಬಹುದು. ಆದರೆ ಇಡೀ ಭಾರತ ಹೇಗಿರಬೇಕೆಂಬ ಬಗ್ಗೆ ಅಂಕಿ ಅಂಶಗಳನ್ನು ಸೂಚಿಸಿರುವಾಗ ನಾವು ಹೇಳತಕ್ಕದ್ದು ಎಲ್ಲಿ ಉಳಿಯುತ್ತದೆ? ಈ ದಿವಸ ಆ ಮೈಸೂರು ಮತ್ತು ಕೊಡಗು ಈ ಎರಡು ದೇಶಗಳಿಂದಲೂ ಇಬ್ಬಿಬ್ಬರು ಪ್ರತಿನಿಧಿಗಳು ಪಾರ್ಲಿಮೆಂಟಿಗೆ ಬಂದರೆ ಅವರು ಎಷ್ಟೇ ಪ್ರಭಾವಶಾಲಿಗಳಾಗಿರಲಿ, ಅವರು ಎಷ್ಟೇ ಘಟ್ಟಿಗರಾಗಿರಲಿ, ಅವರು ಆ 500 ಜನರ ಮುಂದೆ ಏನು ಮಾಡಬಲ್ಲರು? ಅವರಿಗೆ ಕೊಡತಕ್ಕಂಥ ಟಿ. ಎ. ಮತ್ತು ಡಿ. ಎ. ಗಳು ವೃಥಾ ಖರ್ಚು ಮಾಡಿದಂತೆಯೇ ಹೊರತು ಅದರಿಂದೇನೂ ಸಾರ್ಥಕವಿಲ್ಲ. ನಾನೂ ಯುದ್ಧಕ್ಕೆ ಹೋಗಿದ್ದೆ ಎನ್ನುವ ಹಾಗೆ ಆಗುತ್ತದೆ. ಅಂಥ ದೊಡ್ಡ ಸಭೆಗಳಲ್ಲಿ ಕಡಮೆ ಸಂಖ್ಯೆಯಲ್ಲಿರತಕ್ಕ ಪ್ರತಿನಿಧಿಗಳು ಅಂಥ ತಮ್ಮ ಪ್ರಭಾವವನ್ನು ಬೇರಿ ಯಾವ ಕೆಲಸವನ್ನೂ ಮಾಡುವುದಕ್ಕಾಗುವುದಿಲ್ಲ. ಈ ಪ್ರಜಾಪ್ರಭುತ್ವಾಡಳಿತದಲ್ಲಿ ಆಡಳಿತ ಪದ್ಧತಿಯು ಉತ್ತಮಗೊಳ್ಳಬೇಕಾಗಿದ್ದರೆ ಎಷ್ಟು ಜನ ಸದಸ್ಯರಿದ್ದರೆ ಅಷ್ಟೂ ಅನುಕೂಲ. ಕೆಲಸ ಅಷ್ಟು ಚೆನ್ನಾಗಿ ಆಗುತ್ತದೆ. ಆದರೆ ಈ ದಿವಸ ನಮ್ಮ ಮೈಸೂರಿನಿಂದ ಪಾರ್ಲಿಮೆಂಟಿಗೆ 13ಜನ ಸದಸ್ಯರು ಹೋಗುತ್ತಿದ್ದಾರೆ. ಅಲ್ಲಿರತಕ್ಕಂಥ ಆ

500 ಜನ ಅತ್ಯಂತ ಪ್ರಭಾವಶಾಲಿಗಳಾಗಿರುವಾಗ ಇವರೇನುಮಾಡುವುದಕ್ಕೆ ಸಾಧ್ಯವಿದೆ ? ಇದೆಲ್ಲಾ ಬಹಳ ಕಷ್ಟವಾದಂಥ ಕೆಲಸ, ನಮ್ಮ ಜನರು ಅಲ್ಲಿ ಪ್ರಭಾವ ಬೀರುವುದಕ್ಕೆ ಬಹಳ ಕಷ್ಟವಿದೆ. ಈ ದಿವಸ ಉತ್ತರ ಪ್ರದೇಶದಿಂದ ಪಾರ್ಲಿಮೆಂಟಿಗೆ ಸುಮಾರು 84 ಜನ ಸದಸ್ಯರು ಬರುತ್ತಿದ್ದಾರೆ. 48 ಜನ ಸದಸ್ಯರು ಬೀಹಾರಿನಿಂದ ಬರುತ್ತಿದ್ದಾರೆ. ಈ ಎರಡು ಪ್ರಾಂತ್ಯಗಳೂ ಒಂದಾಗಿ ಎಂಥ ಸಮಸ್ಯೆ ಬಂದರೂ ಇವು ಮತ್ತೊಂದಕ್ಕೆ ಡಿಕ್ಟೇಟ್ ಮಾಡುವಂಥ ಸ್ಥಿತಿಯಲ್ಲಿರುತ್ತವೆ. ಪರಿಸ್ಥಿತಿ ಹೀಗಿರುವಾಗ ಈ ದಿವಸ ಉತ್ತರ ಭಾರತಕ್ಕೂ ಮತ್ತು ದಕ್ಷಿಣ ಭಾರತಕ್ಕೂ ಈ ಒಂದು ಸೌಲಭ್ಯದಲ್ಲಿ ಧಕ್ಕೆ ಬಂದಿರುತ್ತದೆಯೆಂದು ಅನೇಕ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಈ ಒಂದು ಧಕ್ಕೆ ಹೇಗೆ ನಿವಾರಣೆಯಾಗಬೇಕೆಂಬುದೇ ಈಗ ನಮ್ಮ ಮುಂದಿರತಕ್ಕಂಥ ಮುಖ್ಯ ಪ್ರಶ್ನೆ. ಇದರ ನಿವಾರಣೆಗೋಸ್ಕರವಾಗಿಯೇ ನಮ್ಮೆಲ್ಲರ ಅಭಿಪ್ರಾಯವೂ ನಮಗೆ ಸಾಕಷ್ಟು ಪ್ರಾತಿನಿಧ್ಯ ಆ ಪಾರ್ಲಿಮೆಂಟಿನಲ್ಲಿ ಇಲ್ಲವೆಂದು ಹೇಳಿದರೆ ತಾವು ಅದಕ್ಕೆ ಒಪ್ಪುತ್ತೀರೆಂದು ಭಾವಿಸಿದ್ದೇನೆ. ಶ್ರೀಮಾನ್ ಕೆ. ಪಟ್ಟಾಭಿರಾಮಾರವರು ನಿನ್ನೆಯದಿವಸ ಹೇಳಿದ ಹಾಗೆ ಒಂದು ಕೋಟಿಗಿಂತಲೂ ಪ್ರಜಾ ಸಂಖ್ಯೆ ಹೆಚ್ಚಾದರೂ ಆಗಲಿ ಅಥವಾ ಕಡಿಮೆಯಾದರೂ ಆಗಲಿ ಇದು ಭಾಷಾ ಆಧಾರದ ಮೇಲೆ ಆಗಬೇಕೆಂಬುದೂ ಸಹ ಒಂದು ಮೂಲಾಧಾರವಾದಂಥ ಅಂಶವಾಗಿದೆ. ಆದರೆ ಇಲ್ಲಿ ತೆಲುಗರು ಸೇರಿಕೊಂಡಿದ್ದಾರೆ—ಅವರೇಕೆ ಬೇರೆಕಡೆಗೆ ಹೋಗಬಾರದೆಂಬ ಒಂದು ಕೊಂಕನ್ನು ಯಾರೂ ತೆಗೆಯುವ ಹಾಗಿಲ್ಲ. ಏತಕ್ಕೆಂದರೆ ಅವರೂ ಮತ್ತು ನಾವೂ ಅನೇಕ ಶತಮಾನಗಳಿಂದಲೂ ಹೊಂದಿಕೊಂಡು ಒಬ್ಬೊರಿಗೊಬ್ಬರು ವಿಶ್ವಾಸದಿಂದ ಬಾಳುತ್ತಾ ಬಂದಿದ್ದೇವೆ. ಅವರು ಮಧ್ಯ ಕಾಲದಲ್ಲೇನೂ ಬಂದಂಥವರಲ್ಲ. ಈ ದಿವಸ ಅವರು ಬೇರೆ ಹೋದರೆ ನಮಗೆ ಅವರು ಬಹಳ ಅಹಿತವನ್ನು ಬಗೆದಂತೆ ಆಗುವುದು. ಅವರೂ ನಾವೂ ಅನೇಕ ವರ್ಷಗಳಿಂದ ಅಣ್ಣ ತಮ್ಮಂದಿರೋಪಾದಿಯಲ್ಲಿ ಬೆಳೆದುಕೊಂಡು ಬಂದಿದ್ದೇವೆ. ಆದರೆ ಈ ಪ್ರದೇಶದಲ್ಲಿ ಹಾಗೆ ಎಷ್ಟು ಜನಾಂಗಗಳು ಬೆಳೆದುಕೊಂಡು ಬಂದಿದ್ದಾಗ್ಯೂ ದೇಶಭಾಷೆ ಮಾತ್ರ ಕನ್ನಡದಲ್ಲೇ ಇರುತ್ತದೆ. ಈ ದಿವಸವೂ ಸಹ ಈ ಸಭೆಯ ಕಾರ್ಯಕಲಾಪಗಳೆಲ್ಲಾ ಕನ್ನಡದಲ್ಲೇ ನಡೆಯುತ್ತವೆ. ಹೀಗೆ ಒಂದು ಭಾಷೆಯಲ್ಲಿ ನಾವು ಮಾತನಾಡುತ್ತಿದ್ದರೆ ಮತ್ತೊಬ್ಬರಿಗೆ ನಾವೇನು ಹೇಳುತ್ತಿದ್ದೇವೆ ಎನ್ನುವುದು ಚೆನ್ನಾಗಿ ಅರ್ಥವಾಗಬೇಕು. ಈ ದಿವಸ ಈ ಸಭೆಯಲ್ಲಿ ಮಾತನಾಡತಕ್ಕಂಥ ಅನೇಕ ಸದಸ್ಯರು ಕನ್ನಡದಲ್ಲಿ ಮಾತನಾಡದೆ ಬೇರೊಂದು ಭಾಷೆಯಲ್ಲಿ ಮಾತನಾಡುವುದಕ್ಕೆ ಪ್ರಾರಂಭಮಾಡಿದ್ದಲ್ಲಿ ಈ ಸಭೆಯಲ್ಲಿ ಇಷ್ಟೊಂದು ಜನರು ಕುಳಿತಿರುವುದಕ್ಕೆ ಅವಕಾಶವೇ ಇರುತ್ತಿರಲಿಲ್ಲ. ಎಲ್ಲರೂ ಎದ್ದು ಯಾವಾಗಲೋ ಕಾಫಿ ಕುಡಿಯುವುದಕ್ಕೆ ಹೊರಟು ಹೋಗುತ್ತಿದ್ದರು. ಹೀಗೆ ಹೇಳುವಾಗ ನನಗೆ ಒಂದು ಅನುಭವ ಜ್ಞಾಪಕಕ್ಕೆ ಬರುತ್ತದೆ. ನಾನು ಪ್ರಥಮತಃ A.I.C.C. ಸದಸ್ಯನಾಗಿ ಆವಡಿ ಕಾಂಗ್ರೆಸ್ಸಿಗೆ ಹೋದಾಗ, ಅಲ್ಲಿ ಮಾತನಾಡಿದಂತಹ ಮಹಾಜನಗಳು ಎಲ್ಲರೂ ಕೂಡ ಹಿಂದಿಯಲ್ಲಿ ಮಾತನಾಡಲು ಷುರುಮಾಡಿದ ಮೇಲೆ ನಾನೂ ನನ್ನ ಮಿತ್ರರಾದಂಥ ಶ್ರೀ ಕಡಿದಾಳ್ ಮಂಜಪ್ಪನವರೂ ಕುಳಿತುಕೊಂಡು ಹೀಗೂ ಹಾಗೂ ನೋಡುತ್ತಿದ್ದೆವು. ನನಗೆ ಅರ್ಥವಾಗಲಿಲ್ಲ. ನಮ್ಮ ದೇಶದಲ್ಲಿ ಸ್ವಲ್ಪ ಮಟ್ಟಿಗೆ ವಿಷಯಗಳನ್ನು ತಿಳಿದುಕೊಂಡಿದ್ದೇನೆಂದು ಇದ್ದೆನು. ಆದರೆ ಏನೂ ತಿಳಿದುಕೊಂಡಿಲ್ಲ ಎನ್ನುವ ಭಾವನೆ ಆಗ ಉಂಟಾಯಿತು. ಅದಕ್ಕೋಸ್ಕರವೇ ಭಾರತಾದ್ಯಂತ ಹಿಂದೀ ಅವಶ್ಯಕ ಮತ್ತು ಭಾರತದ ಹಿತದೃಷ್ಟಿಯಿಂದ ಎಲ್ಲರಿಗೂ ಹಿಂದಿಯನ್ನು ಕೆಲವು ವರ್ಷಗಳಲ್ಲಿ ಬೋಧೆ ಮಾಡಬೇಕು ಎಂದು ತೀರ್ಮಾನ ಮಾಡಿರುವುದು ಸರಿಯೆಂದು ತಿಳಿದುಕೊಂಡೆ. ಆಡಳಿತವನ್ನು ಯಶಸ್ವಿಯಾಗಿ ನಡೆಸುವುದಕ್ಕೂ ಸಾಮಾನ್ಯ ಜನರಿಗೆ ಆಡಳಿತ ವಿಷಯ ತಿಳಿಯುವುದಕ್ಕೂ ಮತ್ತು ಪ್ರಜಾಪ್ರಭುತ್ವವನ್ನು ಯಶಸ್ವಿಯಾಗಿ ಮಾಡುವುದಕ್ಕೂ ಭಾಷೆ ಬಹು ಪ್ರಾಮುಖ್ಯವಾದ ವಸ್ತು ಎನ್ನುವುದು ನಿರ್ವಿವಾದವಾದುದು ಎಂದಾಕ್ಷಣ ಭಾಷೆಯ ಆಧಾರದಮೇಲೆ ಸರ್ವವನ್ನೂ ನಿರ್ಮಾಣ ಮಾಡಬೇಕು ಎನ್ನುವುದು ಸರಿಯಲ್ಲ. ಭಾರತದ ಮುಖಂಡರು, ಧಾರ್‌ಸಮಿತಿಯವರು ರಿಪೋರ್ಟ್‌ಕೊಟ್ಟಮೇಲೆ J.V.P. ಕಮಿಟಿ ನಿರ್ಮಾಣ ಮಾಡಿ, ಆ ಕಮಿಟಿಯವರು ರಿಪೋರ್ಟ್ ಕೊಟ್ಟಿದ್ದಾರೆ. J.V.P. ಕಮಿಟಿಯವರು ರಿಪೋರ್ಟ್ ಏನು ಕೊಟ್ಟಿದ್ದಾರೋ ಅದನ್ನು ವಿಮರ್ಶೆಮಾಡುವುದು ಅತ್ಯಾವಶ್ಯಕ. ಆಮೇಲೆ ನಾನಲ್‌ನಗರದ ತೀರ್ಮಾನದ ವಿಚಾರವನ್ನು ಕೂಡ ನಮ್ಮ ಸ್ನೇಹಿತರು ಹೇಳಿದರು. ನಾನಲ್ ನಗರದಲ್ಲಿ ಮಾಡಿದ ತೀರ್ಮಾನ, ಹಿಂದೆ ಕಾಂಗ್ರೆಸ್ಸಿನವರು ಮಾಡಿದ ತೀರ್ಮಾನ ಎಲ್ಲವನ್ನೂ ಕೂಡ ಅರಿತು ಮಾಡಿದ್ದು. ಇದನ್ನು 1953ನೇ ಇಸವಿಯಲ್ಲಿ ಮಾಡಿದರು. In January 1953, at its Hyderabad Annual Session, the Congress adopted a resolution to the effect that apart from Andhra, no linguistic State should be formed for the time being, while reaffirming the Congress stand in favour of the linguistic States, the resolution said that the question of forming other States must be shelved for some time. ಇದರ ಉದ್ದೇಶವೇನು ? ಎಂದರೆ, ಆಂಧ್ರವನ್ನು ನಿರ್ಮಾಣಮಾಡಿದ ಮೇಲೆ ಭಾಷೆಯ ಅಧಾರದ ಮೇಲೆ ಸದ್ಯದಲ್ಲಿ ಯಾವ ಭಾಷಾವಾರು ಪ್ರಾಂತವನ್ನು ನಿರ್ಮಾಣಮಾಡುವುದೂ ಅನಗತ್ಯ ಎಂಬುದು. ಕಾರಣ ದೇಶಕ್ಕೆ ಗೊತ್ತಿದೆ. ಆಂಧ್ರಪ್ರಾಂತ ನಿರ್ಮಾಣ ಮಾಡುವುದಕ್ಕೆ ಹಿಂದುಮುಂದು ನೋಡದೆ overnight decision ಕೊಟ್ಟಿದ್ದು ಭಾರತಸರ್ಕಾರದವರು ಮಾಡಿದ ಮಹಾತಪ್ಪು ಎಂದು ನನ್ನ ಅಲ್ಪನ ಮನಸ್ಸಿಗೆ ಎನ್ನಿಸುತ್ತದೆ. ಅದರಿಂದ ಏನಾಯಿತು ಎಂದರೆ, ಸ್ವಾಭಾವಿಕವಾಗಿಯೇ, ಸರಿಯೋ ತಪ್ಪೋ, ಭಾಷಾವಾರು ಆಧಾರದಮೇಲೆ ಪ್ರಾಂತಗಳನ್ನು ನಿರ್ಮಾಣ ಮಾಡಬೇಕೆಂದು ಅದರಮೇಲೆ ವ್ಯಾಮೋಹ ಇರುವ ಜನರಿಗೆ ರಾಷ್ಟ್ರದಮೂಲೆಮೂಲೆಗಳಲ್ಲಿ ಪ್ರಚಾರಮಾಡುವುದಕ್ಕೆ ಅವಕಾಶ ಕೊಟ್ಟಂತಾಯಿತು. ಹೀಗಾಗಿ ತೆಲುಗರು ವಿಶಾಲವಾಗಬೇಕು ಎಂದು ಹೇಳುತ್ತಾರೆ. ಕರ್ಣಾಟಕ ನಾಳೆಯೇ ಆಗಬೇಕು ಎಂದು ಹೇಳುವವರೂ ಇದ್ದಾರೆ. ಮಾನ್ಯನಾಯಕರು ಪತ್ರಿಕೆಯಲ್ಲಿ ಅಮರಣಾಂತ ಉಪವಾಸ ಮಾಡುವುದಕ್ಕೆ ತಯಾರಾಗಿದ್ದಾರೆಂದು ಹೇಳಿದ್ದಾರೆ. ನಾಳೆ ಕರ್ಣಾಟಕ ಪ್ರಾಂತ ರಚನೆಯಾಗುತ್ತದೆ. ಆಗ ಶ್ರೀಮಾನ್ ಭೀಮಪ್ಪನಾಯಕರು ಪ್ರಾಣವನ್ನು ಕೊಡುವುದಕ್ಕೆ ಸಿದ್ಧರಾಗಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಅವರು ಹೇಳಿದ್ದನ್ನು ನಿಮಗೆ ಹೇಳಿದನೇ ಹೊರತು ಅದು ನನ್ನ ಒಂದು ಹೇಳಿಕೆಯಲ್ಲ. ಅದು ಏನೇ ಇರಲಿ ಜನ ಪ್ರಾಣಬಿಡುತ್ತಾರೆಂದು ಪ್ರಾಂತಗಳನ್ನು ನಿರ್ಮಾಣ ಮಾಡುವುದು ಸರಿಯಲ್ಲ. ನೂರಾರುಜನ ಪ್ರಾಣಬಿಡ

(ಶ್ರೀ ಎಚ್. ಎಂ. ಚನ್ನಬಸಪ್ಪ.)

ಬಹುದು. ಹೀಗೆ ಮಾಡುವುದರಿಂದ ಇವೊತ್ತಿನ ದಿವಸ ಅನೇಕರ ಪ್ರಾಣಬಿಡುತ್ತಾರೆಂದು ಶ್ರೀಮಾನ್ ಭೀಮಪ್ಪ ನಾಯಕರು ಹೇಳಿದರು.

ಉಪಾಧ್ಯಕ್ಷರು.—ಹಾಗೆ ಯಾರು ಹೇಳಿದರು? Vehemence ಏತಕ್ಕೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆಮರಣಾಂತ ಉಪವಾಸಮಾಡುತ್ತಾರಂತೆ. ಅದು ಏನೇ ಆಗಲಿ, ಭಾರತಸರ್ಕಾರ ಅನುಸರಿಸುತ್ತಿರುವ ನೀತಿ ಸರಿಯಲ್ಲ ಎಂದು ಹೇಳಿದೆನೇ ಹೊರತು ಮತ್ತೆ ಬೇರೆಯಲ್ಲ. ಇತರ ಕಡೆಗಳಿಂದ ಮಹಾರಾಷ್ಟ್ರದವರು, ಕನ್ನಡಿಗರು ಇವರೆಲ್ಲರೂ ಮೇಲೆ ಎದ್ದು ಬಿಡುತ್ತಾರೆ ಎಂದು ಮನಗಂಡು ನಾನಲ್ಲ ನಗರದಲ್ಲಿ ಜನರ ಮನಸ್ಸಿನ ಪ್ರವಾಹವನ್ನು ತಡೆಗಟ್ಟಬೇಕೆಂದು ಆ ನಿರ್ಣಯ ಮಾಡಿದರೇ ವಿನಾ ಅನ್ಯಥಾ ಅಲ್ಲ. ಕೆಲವುಕಾಲ ಭಾಷಾವಾರು ಚಳುವಳಿಯನ್ನು ನಿಲ್ಲಿಸಿ ಎಂಬುದು ಒಳ್ಳೆಯ ವಿವೇಕಯುತವಾದ ತೀರ್ಮಾನ. ಅವರ ಮನಸ್ಸಿನಲ್ಲಿ ಏನಿತ್ತು ಎಂಬುದನ್ನು ಮುಂದೆ ಮಾಡಿದ ಕಾರ್ಯಕ್ರಮದಿಂದ ತಿಳಿಯಬಹುದಾಗಿದೆ. ಅದು ಕೇವಲ ಆಂಧ್ರಪ್ರಾಂತ ನಿರ್ಮಾಣಮಾಡುವ ಪ್ರಸಂಗ. ಭರತಖಂಡದಲ್ಲಿ ಯಾವಯಾವ ಪ್ರಾಂತಗಳನ್ನು ಪುನರ್ವಿಂಗಡನೆ ಮಾಡಿದರೆ ದೇಶಕ್ಕೆ ಹಿತಸಾಧನೆಯಾಗುತ್ತದೆ ಎಂಬುದನ್ನು ನಿರ್ಧಾರಮಾಡಿ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ ಎಂಬ ಬಗ್ಗೆ ಇವೊತ್ತಿನ ದಿವಸ ತೀರ್ಮಾನ ತೆಗೆದುಕೊಂಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಅದಕ್ಕೆ ಅನುಗುಣವಾಗಿ ಭಾರತಸರ್ಕಾರದವರು ರಾಷ್ಟ್ರದ ಪುನರ್ವಿಂಗಡನಾ ಸಮಿತಿಯನ್ನು ಏರ್ಪಾಡುಮಾಡಿ, ಆ ಸಮಿತಿಯು ಈಗ ರಾಷ್ಟ್ರದ ಮೂಲೆಮೂಲೆಗೂ ಸುತ್ತಿ, ಜನಗಳ ಅಭಿಪ್ರಾಯವನ್ನು ತಿಳಿದುಕೊಂಡು ಯಾವರೀತಿ ಪುನರ್ವಿಂಗಡನೆ ಮಾಡಿದರೆ ದೇಶಕ್ಕೆ ಹಿತಸಾಧನೆ ಮಾಡಿದಂತಾಗುತ್ತದೆ ಎನ್ನುವ ವಿಚಾರದಲ್ಲಿ ತೀರ್ಮಾನ ಕೊಡಲಿದ್ದಾರೆ. ಈಗ ಮೈಸೂರಿನ ಜನ ಇದುವರೆಗೆ ತಮ್ಮ ಅಭಿಪ್ರಾಯಗಳನ್ನು ಯಾವರೀತಿ ವ್ಯಕ್ತಪಡಿಸಬೇಕು ಎನ್ನುವ ಬಗ್ಗೆ ಯಾವ ವಿಧವಾದ ತೀರ್ಮಾನವನ್ನೂ ಈ ಸಭೆ ತೆಗೆದುಕೊಂಡಿಲ್ಲ. ನಾನಾಗಲಿ ಮಾನ್ಯಸಭೆಯ ಸದಸ್ಯರಾಗಲಿ ಈ ಮಹತ್ತರ ವಿಷಯದಲ್ಲಿ ತೀರ್ಮಾನ ತೆಗೆದುಕೊಳ್ಳುವುದಕ್ಕೋಸ್ಕರ ರಿಪೋರ್ಟಿನಲ್ಲಿ ಕಂಡಂಥ ಅಂಕಿಅಂಶಗಳು ಅವಶ್ಯಕವೆಂದು ನಾನಂತೂ ತಿಳಿದಿರಲಿಲ್ಲ. ಇದು ಅಪ್ರಕೃತ ಏನೂ ಪ್ರಯೋಜನವಿಲ್ಲವೆಂದು ಹೇಳುವುದಿಲ್ಲ; ಏತಕ್ಕೆಂದರೆ ಯಾವಯಾವ ಸಂಸ್ಥಾನಗಳಲ್ಲಿ ಎಷ್ಟು ಪ್ರಜಾಸಂಖ್ಯೆ ಇತ್ತು, ಪೂರ್ವದಲ್ಲಿ ಎಷ್ಟೆಷ್ಟು ಸ್ಕೂಲುಗಳಿದ್ದುವು,—ಎಷ್ಟೆಷ್ಟು ಆಸ್ಪತ್ರೆಗಳಿದ್ದುವು ಎಂಬ ವಿಷಯಗಳನ್ನು academic interest ದೃಷ್ಟಿಯಿಂದ ಕುಳಿತುಕೊಂಡು ಈ ವರದಿಯನ್ನು ಓದಬಹುದು. ಈ ಸಮಿತಿಯವರು ಕೊಟ್ಟಂಥ ಅಂಕಿಅಂಶಗಳ ಆಧಾರಗಳಲ್ಲಿ ಒಂದನ್ನೂ ಕೂಡ ನಾನು ಈ ನನ್ನ ವಾದಕ್ಕೆ ಉಪಯೋಗಿಸುವುದು ಅನಾವಶ್ಯಕವೆಂದು ತಿಳಿದುಕೊಂಡಿದ್ದೇನೆ. ಮೊದಲೇ ಹೇಳಿದ ಹಾಗೆ, ಅಂಕಿಅಂಶಗಳ ಸತ್ಯಾಂಶವನ್ನು ಒಪ್ಪಿಕೊಳ್ಳುತ್ತೇನೆ. ಅದರ ಜೊತೆಗೆ ಇನ್ನೂ ಸತ್ಯಾಂಶಗಳು ಇರಬಹುದು. ಆದರೆ ರಾಷ್ಟ್ರದ ಪುನರ್ವಿಂಗಡನೆ ಮಾಡುವುದಕ್ಕೆ ಇದು ಸಾಧನವಲ್ಲ ಎಂದು ಮಾತ್ರ ನಾನು ಹೇಳುತ್ತಾ ಇರುವುದು. ಅಂಕಿಅಂಶಗಳನ್ನು ನಾವು ಆಧಾರವಾಗಿಟ್ಟುಕೊಂಡು ಬೃಹತ್ ಸಮಸ್ಯೆಗಳನ್ನು ಸಾಧನೆ ಮಾಡುವುದಕ್ಕೆ ಆಗುವುದಿಲ್ಲ. It is a fight between the haves and have-nots. ನಾನು ಹಿಂದೆ ಇನ್ನೊಂದು ಸಂದರ್ಭದಲ್ಲಿ ಹೇಳಿದಂತೆ, ಜಮೀನ್ದಾರರು ಇನಾಮನ್ನೆಲ್ಲಾ ಆಕ್ರಮಣಮಾಡಿ ಅನುಕೂಲವಾಗಿದ್ದಾರೆ, ಅವರಿಗೆ ಏನೂ ಕೊಡಕೂಡದು ಎಂಬ tenantsಗಳ ವಾದಕ್ಕೆ ಇಳಿದ ಹಾಗಾಗುತ್ತದೆ. ರಾಷ್ಟ್ರದ ಬೃಹತ್ ಸಮಸ್ಯೆಗಳನ್ನು ಸಣ್ಣಪುಟ್ಟ ಸಮಸ್ಯೆಗಳ ಮಟ್ಟಕ್ಕೆ ಇಳಿಸಬಾರದು ಎಂದು ನನ್ನ ವಾದ. "ನಾವು ಬಹಳ ಚೆನ್ನಾಗಿದ್ದೇವೆ, ನಮ್ಮ ರಾಷ್ಟ್ರ ಚಿಕ್ಕದು, ರಸ್ತೆಗಳು ಸಣ್ಣವು, ದುಡ್ಡು ಸಾಕು, ಸಂತುಷ್ಟರಾಗಿದ್ದೇವೆ, ಎಂದು ಕೊಡಗಿನವರು ಹೇಳುತ್ತಾರೆ. ಇವತ್ತಿನದಿವಸ ಕೊಡಗು ರಾಜ್ಯದಲ್ಲಿ ಒಂದು ಸರ್ಕಾರ ರಾಜ್ಯಭಾರ ಮಾಡಿಕೊಂಡು ಹೋಗುವುದು ಸರಿಯೆಂದು ಒಪ್ಪುವುದಾದರೆ ನಾನು ಅದಕ್ಕೆ ವಾದ ಮಾಡುವುದಿಲ್ಲ. ನಾಳೆ 2 ಲಕ್ಷ, 3 ಲಕ್ಷ, 5 ಲಕ್ಷ ಪ್ರಜಾಸಂಖ್ಯೆಗಳಿರುವ 10 (C) ಸ್ಟೇಟ್‌ಗಳಿಗೆ ಒಂದು ರಾಜ್ಯಭಾರ, ಒಂದು ಶಾಸನಸಭೆ ಇರಬೇಕು, ಎಂದು ಒಪ್ಪಿಕೊಳ್ಳುವುದಾದರೆ ನನ್ನ ಅಭ್ಯಂತರವಿಲ್ಲ. ಆದರೆ ಈ ವಿಚಾರವನ್ನು ವಿಮರ್ಶೆ ಮಾಡುವ ಶಕ್ತಿ ಇರುವ ಜನರು ಅದು ಸರಿಯೆಂದು ಹೇಳುವಷ್ಟು ದೂರ ಹೋಗುವುದಿಲ್ಲ ಎಂದು ನನ್ನ ಅಭಿಪ್ರಾಯ. ಇಂತಹ ಸಣ್ಣಪುಟ್ಟ ರಾಷ್ಟ್ರಗಳು ರದ್ದಾಗಬೇಕು ಎಂಬ ಅಭಿಪ್ರಾಯ ಇದ್ದ ಮೇಲೆ ದೊಡ್ಡ ರಾಷ್ಟ್ರಗಳೂ ಕೂಡ ಸಣ್ಣದು ಆಗಬೇಕು ಎಂಬುದು ನ್ಯಾಯವೆಂದು ಒಪ್ಪಿದಮೇಲೆ, viable State ಹೀಗಿರಬೇಕು ಎನ್ನುವುದನ್ನು ಚಿತ್ರಿಸುವುದೇ ನನ್ನ ಕರ್ತವ್ಯ. ಕೆಲವರು 1 ಕೋಟಿ ಜನರಿದ್ದರೆ ಬಹಳ ಚೆನ್ನಾಗಿರುತ್ತದೆ, ಆಗ್ಗೆ ಅದು ಚಿಕ್ಕ ಪ್ರದೇಶವಾಗಿರುವುದರಿಂದ ರಾಜ್ಯಭಾರ ಚೆನ್ನಾಗಿ ನಡೆಯುತ್ತದೆ ಎಂದು ಹೇಳಬಹುದು. ಇದರಲ್ಲಿ ಸತ್ಯಾಂಶವಿದೆಯೋ ಇಲ್ಲವೋ ಎಂಬುದನ್ನು ನಾನು ಹೇಳುವುದಿಲ್ಲ. ಇನ್ನು ಕೆಲವರು $1\frac{1}{2}$ ಕೋಟಿ ಜನರಿದ್ದರೆ ಸಾಕು ಎಂದೂ ಇನ್ನು ಕೆಲವರು 2 ಕೋಟಿ, 3-4 ಕೋಟಿ ಇರಬಹುದು ಎಂದೂ ಹೇಳಬಹುದು. ಒಟ್ಟಿನಲ್ಲಿ ಅದು ಅಭಿಪ್ರಾಯದ ಮಾತು.

ಒಬ್ಬ ಸದಸ್ಯರು.—ನಿಮ್ಮ ಅಭಿಪ್ರಾಯವೇನು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯಸ್ನೇಹಿತರಿಗೆ ನನ್ನ ಅಭಿಪ್ರಾಯ ಏನು ಎಂಬುದನ್ನು ನಾನು ಹೇಳತಕ್ಕ ಧೋರಣೆಯಿಂದ ಊಹೆಮಾಡುವುದಕ್ಕೆ ಸಾಧ್ಯ; ಇಲ್ಲದಿದ್ದರೆ ಸ್ವಲ್ಪ ತಡೆಯಿರಿ. ಅವರ ಸಂಶಯಕ್ಕೆ ಕಾರಣವಿಲ್ಲ. 1949ನೇ ಇಸವಿಯಲ್ಲಿ ಬೀರೂರಿನಲ್ಲಿ ಶ್ರೀಮಾನ್ ದಿವಾಕರ್‌ರವರ ಅಧ್ಯಕ್ಷತೆಯಲ್ಲಿ ನಡೆದ ಇಡೀ ಸಂಸ್ಥಾನದ ಗ್ರಾಮಾಧಿಕಾರಿಗಳ ಸಮ್ಮೇಳನದಲ್ಲಿ ರಾಜ್ಯಪುನರ್ವಿಂಗಡನೆಯ ವಿಷಯದಲ್ಲಿ ಭಾಷಣ ಮಾಡಿದೆ. ಅಲ್ಲಿಂದ ಈಚೆಗೆ ನಾನು ಬೇರೆ ಯಾವ ಭಾಷಣವನ್ನೂ ಮಾಡಿಲ್ಲ. ಅದನ್ನು ತಮ್ಮ ದೃಷ್ಟಿಯಲ್ಲಿಟ್ಟುಕೊಂಡರೆ ಚನ್ನಬಸಪ್ಪನವರ ಅಭಿಪ್ರಾಯ ಏನು ಎಂಬುದು ಗೊತ್ತಾಗುತ್ತದೆ. ಅಲ್ಲಿ ನಾನು ಏನು ಹೇಳಿದೆನೆಂದು ತಿಳಿದಿದ್ದರೆ ತಮಗೆ ಇನ್ಯಾವ ಅನುಮಾನಕ್ಕೂ ಎಡೆ ಇರುತ್ತಿರಲಿಲ್ಲವೆಂದು ಹೇಳುತ್ತೇನೆ. ಅದು ಪ್ರಿಂಟ್ ಆಗಿದೆ. ನನ್ನ ಭಾಷಣದ ಪುಸ್ತಕ ಸಿಕ್ಕುತ್ತದೆ. ತಾವು ನೋಡಬಹುದು. ಅದರಲ್ಲಿ ಏನು ಹೇಳಿದೆನೆಂದರೆ, "ಅನಂತ ಕಷ್ಟಕಾರ್ಪಣ್ಯಗಳು ದೇಶದಮುಂದೆ ಇರುವಾಗ, ದೊಡ್ಡದೊಡ್ಡ ಸಮಸ್ಯೆಗಳು, ಅಂದರೆ ಆಹಾರ ನಿಯಂತ್ರಣ, ಲಂಚಕೋರತನ ಮುಂತಾದ ಬೃಹತ್ ಸಮಸ್ಯೆಗಳು ದೇಶವನ್ನು ಆವರಿಸಿದ ಕಾಲದಲ್ಲಿ ಭಾಷಾವಾರು ಪ್ರಾಂತ ರಚನೆ, ತಕ್ಷಣ ಜರೂರಾಗಿ ಆಗಬೇಕೆಂದು ಹೇಳುವ ನೀತಿ ಸರಿಯಲ್ಲ. ಕರ್ಣಾಟಕ ಸಮಸ್ಯೆ, ಭಾಷಾವಾರು ಪ್ರಾಂತ

ರಚನಾ ಸಮಸ್ಯೆ ಬಹಳ ದೊಡ್ಡದು. ಅದನ್ನು ಈಗ ಸದ್ಯದಲ್ಲಿ ಯೋಚನೆ ಮಾಡುವಷ್ಟು ದೂರ ಹೋಗತಕ್ಕ ಪರಿಸ್ಥಿತಿಯಲ್ಲಿ ಸಹ ನಾವೂ ಇಲ್ಲ. ಅದು ಒಳ್ಳೆಯದಿರಬಹುದು, ಕೆಟ್ಟದ್ದು ಇರಬಹುದು. ಅದನ್ನು ಯೋಚನೆ ಮಾಡಬೇಕಾದರೆ ದೇಶದಲ್ಲಿ ಸುಖಶಾಂತಿ ನೆಲಸಬೇಕು. ಲಂಚಕೋರತನ ಕಡಿಮೆಯಾಗಬೇಕು. ಆಹಾರ ನಿಯಂತ್ರಣ ಹೋಗಬೇಕು. ಶಾಂತಿವಾತಾವರಣದಲ್ಲಿ ಕಲೆತು ದೇಶವನ್ನು ಯಾವರೀತಿ ಪುನರ್ವಿಂಗಡನೆ ಮಾಡಬೇಕು ಎನ್ನುವ ಬೃಹತ್ ಸಮಸ್ಯೆಯನ್ನು ಬಿಡಿಸೋಣ'' ಎಂದು ಹೇಳಿದೆ. ಅಷ್ಟೇ ಅಲ್ಲದೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಕಾಲಕ್ರಮೇಣ ಹೇಗೆ ಭಾಷಾವಾರು ಪ್ರಾಂತರಚನೆ ಆಗಬೇಕು ಎನ್ನುವ ಬಗ್ಗೆ ಪ್ರಸ್ತಾಪಮಾಡಿ "ಸಾಮಾನ್ಯ ಜನರ ಸೇವೆಮಾಡಿ ಅವರ ಮನಸ್ಸಿಗೆ ಈ ವಿಷಯವನ್ನು ಹಚ್ಚಿಸಿ ಅವರ ಅಭಿಪ್ರಾಯ ಏನಿದೆ ಎಂಬುದನ್ನು ಕ್ರೋಢೀಕರಿಸಿ'' ಎಂದು ಹೇಳಿದ್ದೇನೆ. ಆ ದಿವಸ ಏನು ಹೇಳಿದ್ದೇನೋ, ಅದನ್ನು ತಾವು ಸರಿಯಾಗಿ ತಿಳಿದುಕೊಂಡಿದ್ದೀರಿ, ಎಂದು ತಿಳಿದಿದ್ದೇನೆ. ಇವೊತ್ತೂ ಕೂಡ ನಾನು ಹೇಳುವದನ್ನು ಮೊದಲೇ ಹೇಳಿದೆ. ಪ್ರಾಂತಗಳ ಪುನರ್ವಿಂಗಡನೆ ಕೇವಲ ಪ್ರತಿಷ್ಠೆಗೋಸ್ಕರ ಮತ್ತು ವ್ಯಾಮೋಹಕ್ಕೋಸ್ಕರ ಮಾಡತಕ್ಕದ್ದಲ್ಲ, ಸಮಾನವಾದ ಹಂಚಿಕೆ ರೀತಿಯಲ್ಲಿ ಆಗಬೇಕು, ಪ್ರಾತಿನಿಧ್ಯ ಎಲ್ಲರಿಗೂ ಸಮರ್ಪಕವಾಗಿ ಹಂಚಿಕೆಯಾಗಬೇಕು ಎಂದು ಹೇಳಿದೆ. ಅದರ ಜೊತೆಗೆ ಪ್ರಜಾನುಕೂಲ ಚೆನ್ನಾಗಿರಬೇಕು. ಹೀಗಿರುವಾಗ ನಿಮ್ಮ ಅಭಿಪ್ರಾಯ ಏನು, ನಮ್ಮ ಅಭಿಪ್ರಾಯ ಏನು ಎಂದು ಕೇಳಿದರೆ ನಾನು ಏನು ಹೇಳಲಿ?

Mr. DEPUTY SPEAKER.—At least, in order to minimise the time, it is better that you do not repeat the arguments advanced by other Hon'ble Members.

Sri H. M. CHANNABASAPPA.—But I do not want them to misunderstand me.

Mr. DEPUTY SPEAKER.—You can straightaway come to the point.

Sri H. M. CHANNABASAPPA.—But if any doubt arises—in that case I will not be clearing the same. I wish to clear their doubt. ಒಂದು ಬಾವಿಯಲ್ಲಿ ಒಂದು ಕಪ್ಪೆ ಇರುತ್ತದೆ. ಈ ಮೂಲೆಯಿಂದ ಆ ಮೂಲೆಗೆ ಅದು ನೆಗೆದು ರಾಜ್ಯವೆಲ್ಲಾ ಇಷ್ಟೆ; ಪ್ರಪಂಚವೆಲ್ಲಾ ಇಷ್ಟೇ ಎಂದು ಹೇಳುತ್ತದೆ. ಆ ಕಪ್ಪೆಯಂತೆ ನಾವು ಆಗಬಾರದು. ನಮ್ಮ ದೃಷ್ಟಿಯಲ್ಲಿ ಭಾರತವನ್ನಿಟ್ಟುಕೊಂಡು ಈ ಎಲ್ಲೆಕಟ್ಟುಗಳನ್ನು ನಿರ್ಧಾರ ಮಾಡಬೇಕು. ಅದನ್ನು ಮಾಡುವಾಗ ಮೈಸೂರಿನ ವಿಷಯವನ್ನು ಮಾತ್ರ ತಿಳಿದುಕೊಂಡು ಅಥವಾ ಪಕ್ಕದಲ್ಲಿರುವ ಕೊಡಗನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಒಂದು ಅಭಿಪ್ರಾಯಕ್ಕೆ ಬರುವುದಾದರೆ ಆಗ್ಗೆ ನಮ್ಮ ಅಭಿಪ್ರಾಯ ಬಹಳ ಸಂಕುಚಿತವಾದ ಅಭಿಪ್ರಾಯವೆಂದು ನಾನು ತಿಳಿಸಬೇಕಾಗುತ್ತದೆ. ಆದ್ದರಿಂದ ಭಾರತಾದ್ಯಂತ ಇರುವ ಸಕಲ ರಾಷ್ಟ್ರಗಳನ್ನೂ ಗಮನದಲ್ಲಿಟ್ಟುಕೊಂಡು ಎಲ್ಲ ಭಾಗಗಳಿಗೂ ಅನ್ವಯಿಸುವ ರೀತಿಯಲ್ಲಿ ನಿರ್ಧಾರ ಮಾಡಬೇಕೇ ವಿನಾ ಮೈಸೂರನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಂಡು ನಾವೇ ಕಷ್ಟದಲ್ಲಿದ್ದೇವೆ, ನಮ್ಮ ಗಡಿ ಇಷ್ಟೇ ಇರಲಿ ಎಂದು ಹೇಳಿದರೆ ಮೈಸೂರಿನವರನ್ನು ಸ್ವಾರ್ಥಾಭಿಮಾನಿಗಳೆಂದು ತಿಳಿದುಕೊಳ್ಳಬೇಕಾಗುತ್ತದೆ. ಇದನ್ನು ತಿಳಿಸುವುದಕ್ಕೆ Fact Finding Committeeಯವರ ವರದಿಯನ್ನು ತೋರಿಸುವುದರ ಬದಲು, ಇಡೀ ಭಾರತದಲ್ಲಿ ನಾನಾ ಮೂಲೆಗಳಲ್ಲಿರುವ ವಿಷಯಗಳನ್ನು ಕೊಟ್ಟಿದ್ದರೆ ಈ ಸಮಸ್ಯೆಯನ್ನು ತೀರ್ಮಾನ ಮಾಡುವುದಕ್ಕೆ ಸಹಕಾರಿಯಾಗಿರುತ್ತಿತ್ತು.

ಅಲ್ಲದೆ, ಇದನ್ನು ಮಾಡುವುದಕ್ಕೆ ಅಧಿಕಾರವನ್ನು ಈ ಸಭೆಗೆ ಕೂಡ ಕೊಟ್ಟಿಲ್ಲ. ಜನತೆಗೂ ಆ ಅಧಿಕಾರ ಕೊಟ್ಟಿಲ್ಲ. ಆದ್ದರಿಂದ ರಾಜ್ಯಾಂಗವನ್ನು ನಿರ್ಮಾಣ ಮಾಡುವಾಗ ಅವರ ಮನಸ್ಸಿನಲ್ಲಿ ಏನಿತ್ತೆಂಬುದನ್ನು ತಾವೇ ಊಹೆ ಮಾಡಬಹುದಾಗಿದೆ. ರಾಜ್ಯಾಂಗದ ಮೂರನೆಯ ಆರ್ಟಿಕಲ್‌ನಲ್ಲಿ ಏನಿದೆಯೆಂದರೆ, ಯಾವ ಯಾವ ರಾಷ್ಟ್ರಗಳ ಗಡಿಗಳನ್ನು ಬದಲಾವಣೆ ಮಾಡಬೇಕೆಂದಿದೆಯೋ ಅಂಥ ರಾಷ್ಟ್ರಗಳ ಶಾಸನ ಸಭೆಗಳ ಅಭಿಪ್ರಾಯವನ್ನು ಮಾತ್ರ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ, ಅಷ್ಟೆ. ಮೈಸೂರಿನ ರಾಜ್ಯಾಂಗ ಸಭೆಯಲ್ಲಿ ನಾನೂ ಒಬ್ಬ ಸದಸ್ಯನಾಗಿದ್ದೆ. ಅಲ್ಲಿ ನಾನು ನೋಡಿರುವಂತೆ ಶಾಸನ ಸಭೆಗಳು ಈ ವಿಷಯದಲ್ಲಿ ತೀರ್ಮಾನ ತೆಗೆದುಕೊಳ್ಳಬಹುದೆಂದು ಹೇಳಿಲ್ಲ. ಅವರ ಅಭಿಪ್ರಾಯ ಮಾತ್ರ ತೆಗೆದುಕೊಂಡು ಭಾರತಾಧ್ಯಕ್ಷರು ಒಂದು ಬಿಲ್ಲನ್ನು ಪಾರ್ಲಿಮೆಂಟಿನ ಮುಂದೆ ಇಡಬೇಕೆಂದ ಹೇಳಿದೆ. ಅಂದರೇನರ್ಥ? ಇಂಥ ದೊಡ್ಡ ಸಮಸ್ಯೆಯನ್ನು ತೀರ್ಮಾನ ಮಾಡುವಾಗ ಅಲ್ಲಲ್ಲಿನ ಸಣ್ಣಪುಟ್ಟ ಶಾಸನ ಸಭೆಗಳು ತೀರ್ಮಾನ ತೆಗೆದುಕೊಳ್ಳಬಹುದೆಂದರೆ ರಾಷ್ಟ್ರದ ಹಿತವನ್ನು ಸಾಧನೆ ಮಾಡುವುದಕ್ಕಾಗುವುದಿಲ್ಲವೆಂದರಿತು, ಅವರ ಅಭಿಪ್ರಾಯವನ್ನು ಮಾತ್ರ ತೆಗೆದುಕೊಂಡು ತಾವು ಅಲ್ಲಿ ಕುಳಿತು ಸಮಗ್ರ ದೃಷ್ಟಿಯಿಂದ ರಾಷ್ಟ್ರದ ಹಿತಸಾಧನೆಯ ದೃಷ್ಟಿಯಿಂದ ಯಾವ ರೀತಿ ಮಾಡಬೇಕೆಂಬುದನ್ನು ತೀರ್ಮಾನ ಮಾಡುವ ಅಧಿಕಾರವನ್ನು ತಾವೇ ಇಟ್ಟುಕೊಂಡರು. ಆದ್ದರಿಂದ ಆ ರಾಜ್ಯಾಂಗ ನಿರ್ಮಾಪಕರ ಮನೋಧೋರಣೆಯೇನಿತ್ತೆಂಬುದನ್ನು ತಿಳಿದು ನಾವಿಂದು ಕೆಲಸ ಮಾಡಬೇಕಾಗಿದೆ. ಇಂದು ನಾವು ರಾಷ್ಟ್ರದ ಹಿತಸಾಧನೆಗಾಗಿ ವಿಶಾಲ ದೃಷ್ಟಿಯಿಂದ ನಮ್ಮ ಅಭಿಪ್ರಾಯವನ್ನು ಕೊಡದೆ ಇದ್ದರೆ ನಮ್ಮ ಅಭಿಪ್ರಾಯಗಳಿಗೆ ಮನ್ನಣೆ ದೊರೆಯುವುದಿಲ್ಲವೆಂಬುದನ್ನು ನಾವು ಪೂರ್ವಭಾವಿಯಾಗಿ ಊಹಿಸಬಹುದು. ಕೇವಲ ಮೈಸೂರು, ಮಂಗಳೂರು, ಕೊಡಗು ಇವುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವು ಹೇಳಿದರೆ ಏನೂ ಪ್ರಯೋಜನವಿಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಅವರೂ ರಾಷ್ಟ್ರದ ದೃಷ್ಟಿಯಿಂದಲೇ ಹೇಳುತ್ತಿದ್ದಾರೆ.

Sri H. M. CHANNABASAPPA.—I thank you very much; you have reminded me. ಆ ದೃಷ್ಟಿಯಿಂದ ನೋಡುವುದಾದರೆ, ಒಂದು ಕೋಟಿಗೆ ಒಂದು ರಾಷ್ಟ್ರವಾಗಬೇಕೆಂದರೆ ಅದನ್ನೇ ಎಲ್ಲಾ ರಾಷ್ಟ್ರಗಳಿಗೂ ಅನ್ವಯಿಸಬೇಕು. ಆಗ್ಗೆ ಉತ್ತರ ಪ್ರದೇಶವನ್ನು ಆರು ರಾಷ್ಟ್ರಗಳಾಗಿ ವಿಂಗಡಿಸಬೇಕಾಗುತ್ತದೆ; ಬೊಂಬಾಯಿ ಪ್ರಾಂತ್ಯವನ್ನು ನಾಲ್ಕು ರಾಷ್ಟ್ರವಾಗಿ ಮಾಡಬೇಕಾಗಿ ಬರುತ್ತದೆ. ಇದನ್ನು ಮಾಡಬೇಕಾದರೆ, ಕೇಂದ್ರ ಸರ್ಕಾರದ ಪಾರ್ಲಿಮೆಂಟಿನಲ್ಲಿ ಕುಳಿತು ಎಲ್ಲಾ ದೇಶಗಳ ವಿಷಯಗಳನ್ನೂ ತಿಳಿದುಕೊಂಡಿರುವ ಸದಸ್ಯರು ಮತ್ತು ಪರಿಣತರು ಯೋಜನೆ ಮಾಡಿ

(SRI H. M. CHANNABASAPPA)

ಆರು ಭಾಗಗಳಾಗಿ ಮಾಡುವುದು ಸರಿಯೇ, ಅದರ ಸಾಧಕ ಬಾಧಕಗಳೇನು ಎಂಬದನ್ನು ನೋಡಿ ಮಾಡಬೇಕಾಗುತ್ತದೆ. ಆದ್ದರಿಂದ ಇವೆಲ್ಲವನ್ನೂ ದೃಷ್ಟಿಯಲ್ಲಿಟ್ಟುಕೊಂಡು ಒಂದು ಕೋಟಿ ಸಂಖ್ಯೆ ಸರಿಯೇ ಎರಡು ಕೋಟಿ ಸರಿಯೇ ಎಂದು ಅವರು ಹೇಳಬೇಕೇ ಹೊರತು ಇಲ್ಲಿ ನಾವು ಹೇಳುವುದಲ್ಲ.

Sri G. A. THIMMAPPA GOWDA—I congratulate you for the amount of love you have for the country, but only I want you to see that all the interests are safeguarded all over the country.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಮೊದಲೇ ಹೇಳಿದಂತೆ, ಇದು ವ್ಯಾಮೋಹ ಮಾಡುವ ವಿಷಯವಲ್ಲ. ಸಂದರ್ಭಗಳು ಹೀಗಿರುವಾಗ ಭಾಷಾವಾರು ವ್ಯಾಮೋಹದ ಮೇಲೆ ಹೋಗತಕ್ಕವರಿಗೆ ನಾನು ವಿನಯಪೂರ್ವಕವಾಗಿ ಈ ಅರಿಕೆ ಮಾಡಿಕೊಳ್ಳುತ್ತೇನೆ. ಅವರು ತಮ್ಮ ವ್ಯಾಮೋಹವನ್ನು ಸ್ವಲ್ಪ ಕಡಮೆ ಮಾಡಲಿ. ಭಾಷಾವಾರು ವ್ಯಾಮೋಹದ ಮೇಲೆಯೇ ಮಾಡುವುದಾದರೆ ದೇಶ ಅಲ್ಲೋಲ ಕಲ್ಲೋಲವಾಗುತ್ತದೆಂಬುದನ್ನು ತಿಳಿಯಬೇಕು. ದೇಶದಲ್ಲಿ ಆಭಾಸವಾಗುತ್ತದೆ. The approach to this problem is not to divide the country on the basis of language and language alone, and it is not going to be possible also, and it is beset with great difficulties. ಇದರಿಂದೇನಾಗುತ್ತದೆಂದರೆ, ಅನ್ಯ ಭಾಷೆಯಾಡತಕ್ಕ ಜನರನ್ನು ಉಪೇಕ್ಷೆಗೊಳಿಸಿ ಅವರನ್ನು ನಮ್ಮ ಮೇಲೆ ಕೆಡಿಸಿಕೊಂಡಂತಾಗುತ್ತದೆ. ನಿನ್ನೆ ದಿವಸ ಮಾನ್ಯ ಬಿ. ವಿ. ನಾರಾಯಣರೆಡ್ಡಿಯವರು ಒಂದು ಪ್ರಶ್ನೆ ಕೇಳಿದರು. ನಾವೆಲ್ಲಾ ಎಲ್ಲಿ ಹೋಗುವುದು? ನೂರಾರು ವರ್ಷಗಳು ಸ್ನೇಹದಿಂದ ಮೈಸೂರು ದೇಶದಲ್ಲಿದ್ದೂ ಈಗ ನಾವು ರಾಜ್ಯಬಿಟ್ಟು ಹೋಗಬೇಕೆಂಬುದು ಇದರ ಅರ್ಥವೇ? ಎಂದು ಕೇಳಿದರು. ಆದ್ದರಿಂದ ಅವರುಗಳ ಹಿತವನ್ನೂ ನಾವು ರಕ್ಷಣೆ ಮಾಡತಕ್ಕದ್ದು ಬಹಳ ಅವಶ್ಯಕವಿದೆ. ಭಾಷೆಯ ಮೂಲಾಧಾರವನ್ನಿಟ್ಟುಕೊಂಡು ಮಾಡಿದರೆ ಅವರಿಗೂ ಅಪನಂಬಿಕೆ ಬರುತ್ತದೆ. ನಾಳೆ ಇಲ್ಲಿರುವ ತಮಿಳರು ತೆಲುಗರ ಗತಿಯೇನಾಗುತ್ತದೋ ಎಂದು ಅವರ ಮನಸ್ಸಿನಲ್ಲೂ ಕಳವಳವುಂಟಾಗುತ್ತದೆ. ಆದ್ದರಿಂದ ಅವರು ಯಾವ ಆಧಾರದಮೇಲೆಯೇ ಮಾಡಲಿ ಅವರಿಗೂ ಕ್ಷೇಮವಿದೆಯೆಂಬ ಪೂರ್ಣ ನಂಬಿಕೆಯಿರುವಂತೆ ಮಾಡಬೇಕೇ ವಿನಾ ಅವರಿಗೆ ಅಪನಂಬಿಕೆಯುಂಟು ಮಾಡುವಂತೆ ಮಾಡಿದರೆ ರಾಷ್ಟ್ರಕ್ಕೇ ಅಪಘಾತ ಮಾಡಿದಂತಾಗುತ್ತದೆಂದು ನಾನು ನಿವೇದನೆ ಮಾಡಿಕೊಳ್ಳುತ್ತೇನೆ.

ಕೊನೆಯದಾಗಿ ನಾನು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುವುದಿಷ್ಟೆ. ಉತ್ತರ ಕರ್ಣಾಟಕದವರು ಅನೇಕ ವರ್ಷಗಳಿಂದ "ನಾವು ಮೈಸೂರಿಗೆ ಸೇರಬೇಕು, ಕರ್ಣಾಟಕ ಪ್ರಾಂತ್ಯರಚನೆ ಮಾಡಬೇಕು" ಎಂದು ಪ್ರೀತಿ ವಿಶ್ವಾಸಗಳಿಂದ ನಾನಾ ರೀತಿಯಲ್ಲಿ ಒತ್ತಡಗಳನ್ನು ಮೈಸೂರಿನವರ ಮೇಲೆ ತರುತ್ತಿದ್ದಾರೆ. ಅಂದಾಕ್ಷಣ ಅವರ ದೇಶದಲ್ಲಿ ಅವರಿಗೆ ಯಾವುದೋ ಒಂದು ವಿಧವಾದ ಅಸಾಧಾರಣ ಕಿರುಕುಳವಿದೆ, ಅಲ್ಲಿ ವಾಸಮಾಡುವುದಕ್ಕಾಗುವುದಿಲ್ಲವೆಂದಲ್ಲ.

4-30 P.M.

ಇದೇನೂ ಅಂಥ ಒಂದು ಮುಖ್ಯವಾದ ಪ್ರಶ್ನೆಯಲ್ಲ. ಒಂದು ವೇಳೆ ಆ ರೀತಿ ಎಲ್ಲಿಯಾದರೂ ಅಭಿವೃದ್ಧಿಗೆ ಬಾರದ ಪ್ರದೇಶಗಳಿದ್ದರೆ ಅಂಥ ಅಂಡರ್ ಡೆವಲಪ್ಡ್ ಮತ್ತು ಅನ್‌ಡೆವಲಪ್ಡ್ ಏರಿಯಾಗಳನ್ನು ಅಭಿವೃದ್ಧಿಗೆ ತರತಕ್ಕಂಥ ಜವಾಬ್ದಾರಿಯನ್ನು ಆ ಕೇಂದ್ರ ಸರ್ಕಾರವೇ ಹೊತ್ತಿದೆ. ಅವರು ಇದನ್ನು ಇಡೀ ಭಾರತಾದ್ಯಂತವೂ ಗಮನಿಸಿ ಇದಕ್ಕೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅವುಗಳನ್ನು ಕೈಗೊಳ್ಳುತ್ತಾರೆ. ಈ ವಿಚಾರ ಅವರ ಗಮನದಲ್ಲೂ ಇದೆ. ಹೀಗೆ ಇಂಥ ವಿಚಾರಗಳೆಲ್ಲಾ ಈ ದಿವಸ ಯಾರ ಜವಾಬ್ದಾರಿಗೆ ಬಿದ್ದಿವೆಯೋ ಅಂಥವರು ಅಂದರೆ, ಸರ್ಕಾರದವರು ಈ ಕೆಲಸಗಳನ್ನೆಲ್ಲಾ ಮಾಡಿಯೇ ಮಾಡುತ್ತಾರೆ. ಹಾಗೆ ಎಲ್ಲರಿಗೂ ಅನುಕೂಲತೆಗಳನ್ನು ಮಾಡಿಕೊಡತಕ್ಕದ್ದು ಸರ್ಕಾರದವರ ಜವಾಬ್ದಾರಿಯಾಗಿರುತ್ತದೆ. ಅಂಥ ಒಂದು ದೊಡ್ಡ ನಂಬಿಕೆಯನ್ನು ಜನತೆ ಅವರಲ್ಲಿಟ್ಟುಕೊಂಡಿದೆ. ಆದರೆ ಶ್ರೀ ಎಚ್. ಕೆ. ವೀರಣ್ಣಗೌಡರು ಹೇಳಿದಂಥ ವಾದವನ್ನು ನಾವು ಒಪ್ಪುವುದಕ್ಕೆ ಈ ದಿವಸ ಅವಕಾಶವಿಲ್ಲ. ಇಂಗ್ಲೀಷ್ ಸರ್ಕಾರವೇ ಇದ್ದಿದ್ದರೆ ಅವರ ವಾದವನ್ನು ನಾವು ಒಪ್ಪಬಹುದಾಗಿತ್ತು. ಆದರೆ ಈ ದಿವಸ ಇರತಕ್ಕ ಸರ್ಕಾರ ಆ ಹಿಂದಿನ ಇಂಗ್ಲೀಷ್ ಸರ್ಕಾರವಲ್ಲ. ಈ ದಿವಸ ಆಡಳಿತ ವಹಿಸಿಕೊಂಡಿರುವಂಥ ಆ ನಮ್ಮ ಸರ್ಕಾರವೇನಿದೆಯೋ ಅದು ದೇಶದಲ್ಲಿ ಎಲ್ಲೆಲ್ಲಿ ಪ್ರದೇಶಗಳು ಹಿಂದುಳಿದಿವೆಯೋ ಅಥವಾ ನಿರೀಕ್ಷಿಸಿದ ಮಟ್ಟಕ್ಕೆ ಅಭಿವೃದ್ಧಿ ಹೊಂದಿಲ್ಲವೋ ಅಂಥ ಪ್ರತಿಯೊಂದು ಭಾಗವನ್ನೂ ಅವರು ಅಭಿವೃದ್ಧಿಗೆ ತಂದೇ ತರುತ್ತಾರೆಂಬ ವಿಚಾರದಲ್ಲಿ ಯಾರಿಗೂ ಅಂಥ ಯಾವ ಅನುಮಾನಕ್ಕೂ ಎಡೆಯಿಲ್ಲ. ಈ ದಿವಸ ನಾನಾ ಪ್ರದೇಶಗಳಲ್ಲಿರತಕ್ಕಂಥ ಜನರು ನಮ್ಮ ಮೈಸೂರಿಗೆ ಬಂದು ಸೇರಬೇಕಾಗಿದ್ದರೆ ಅದಕ್ಕೇನು ಆಧಾರ ಅಂದರೆ ಅವರು ಈ ಭಾಷೆಯ ಮೂಲಾಧಾರದಮೇಲೆ ಸೇರಬೇಕಾಗುತ್ತದೆಂದು ಹೇಳಿದ್ದಾರೆ. ಹೀಗಾದರೆ ದೇಶಕ್ಕೆ ಒಳ್ಳೆಯದಾಗುತ್ತದೆ, ಇದರಿಂದ ರಾಷ್ಟ್ರದ ಸಮಗ್ರ ಭಾಗಗಳಲ್ಲೂ ಹಿಂದುಳಿದಿರತಕ್ಕಂಥ ಪ್ರದೇಶಗಳು ಅಭಿವೃದ್ಧಿಗೆ ಬಂದಹಾಗೆ ಆಗುತ್ತದೆ ಎಂದು ಜನರೆಲ್ಲಾ ಹೇಳುತ್ತಿದ್ದಾರೆ. ಹಾಗಾಗುವುದಾದರೆ ಇದನ್ನು ಬೇಡ ಎಂದು ನಾವೇಕೆ ಹೇಳಬೇಕು? ಈ ಉದ್ದೇಶದ ಮುಖ್ಯ ಗುರಿ ಹೀಗಿರುವಾಗ ಶ್ರೀ ವೀರಣ್ಣಗೌಡರು ಈ ರಾಜ್ಯಗಳ ಪುನರ್ವಿಂಗಡಣೆಯಾದಲ್ಲಿ ನಮ್ಮ ಮೈಸೂರು ವಿಸ್ತಾರವಾದರೆ ನಮ್ಮ ಮೈಸೂರಿನ ಜನಸಂಖ್ಯೆ ಒಂದು ಕೋಟಿ ಇರುವುದರ ಜೊತೆಗೆ ಮತ್ತೊಂದು ಕೋಟಿ ಜನರು ಬಂದು ಸೇರಿದಂತಾಗುತ್ತದೆಂದು ಹೇಳಿ ದೇಶದಲ್ಲಿ ಒಂದು ಜಿಜ್ಞಾಸೆ ಹುಟ್ಟಿಸತಕ್ಕಂಥ ಮತ್ತು ಜನರಲ್ಲೊಂದು ಕ್ರೋಧ ಹುಟ್ಟಿಸತಕ್ಕಂಥ ಒಂದು ಕೆಟ್ಟ ವಾತಾವರಣವನ್ನು ಹುಟ್ಟಿಸುವುದು ಒಳ್ಳೆಯದಲ್ಲ ಎಂದು ನಾನು ತಿಳಿಸಲಿಚ್ಛಿಸುತ್ತೇನೆ. ಆದರೆ ಹೀಗೆ ರಾಜ್ಯಗಳು ಪುನರ್ವಿಂಗಡಣೆಯಾದ ತರುವಾಯ ಪ್ರತಿಯೊಂದು ದೇಶದ ಜನಸಂಖ್ಯೆ ಏನು ಎರಡುಕೋಟಿ ಇರಬೇಕೆ, ಮೂರುಕೋಟಿಯಿರಬೇಕೇ ಅಥವಾ ಒಂದೇ ಒಂದು ಕೋಟಿಯಿರಬೇಕೇ ಎನ್ನತಕ್ಕಂಥ ಪ್ರಶ್ನೆಯನ್ನು ತೀರ್ಮಾನ ಮಾಡುವ ಜವಾಬ್ದಾರಿ ನಮ್ಮ ಮೈಸೂರಿಗೆ ಸೇರಿದ್ದಲ್ಲ. ಇದು ಸಮಗ್ರಭಾರತಕ್ಕೆ ಅನ್ವಯಿಸತಕ್ಕಂಥ ಪ್ರಶ್ನೆಯಾಗಿದೆ. ಈ ದಿವಸ ಆ ಕೇಂದ್ರ ಸರ್ಕಾರದವರು ನೇಮಿಸಿರತಕ್ಕಂಥ ರಾಜ್ಯಗಳ ಪುನರ್ನಿರ್ಮಾಣ ಸಮಿತಿ ಯಾವುದಿದೆಯೋ ಆ ಫಜ಼್ಲಾಲಿ ಸಮಿತಿಯವರು ಈ ಪ್ರಶ್ನೆಯನ್ನು ಯಾವ ರೀತಿ ತೀರ್ಮಾನ ಮಾಡು

ತ್ತಾರೋ ಇದು ಆ ರೀತಿ ನಿಲ್ಲುತ್ತದೆ. ಆ ಸಮಿತಿಯವರು ಈಗಾಗಲೇ ದೇಶಾದ್ಯಂತವೂ ಸಂಚಾರ ಮಾಡಿ ಜನರ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ಈ ದೇಶಗಳ ಜನಸಂಖ್ಯೆ ಏನು ಒಂದು ಕೋಟಿಯಿರಬೇಕೇ ಅಥವಾ ಎರಡು ಕೋಟಿಯಿರಬೇಕೇ ಎನ್ನತಕ್ಕಂಥ ಅಂಶಗಳನ್ನೆಲ್ಲಾ ತೀರ್ಮಾನಿಸಲು ಡೆಲ್ಲಿಯಲ್ಲಿ ಕುಳಿತಿದ್ದಾರೆ. ಅವರು ತೀರ್ಮಾನಮಾಡಿ ಕೇಂದ್ರಕ್ಕೆ ಒಂದು ವರದಿಯನ್ನು ಒಪ್ಪಿಸುವುದರಲ್ಲಿದ್ದಾರೆ. ಎಲ್ಲವೂ ಆ ಸಮಿತಿಯವರ ಶಿಫಾರ್ಸಿಗನುಸಾರವಾಗಿ ಹೋಗುತ್ತದೆ. ಈ ದಿವಸ ನಾನಿಲ್ಲಿ ಕುಳಿತುಕೊಂಡು ಈ ನಮ್ಮ ಸಂಸ್ಥಾನದ ಜನಸಂಖ್ಯೆ 2 ಕೋಟಿಗಿಂತಲೂ ಜಾಸ್ತಿಯಾಗಬಾರದೆಂದು ತೀರ್ಮಾನ ಮಾಡಿಕೊಂಡರೂ ನಾಳೆ ಆ ಸಮಿತಿಯವರು ಮೂರುಕೋಟಿ ಇರಲೇ ಬೇಕೆಂದು ಹೇಳಿದರೆ ನಾವು ಅದಕ್ಕೆ ಒಪ್ಪಲೇ ಬೇಕಾಗುತ್ತದೆಂದು ಹೇಳುವಾಗ, ಹೀಗೆಲ್ಲಾ ಅನವಶ್ಯಕವಾಗಿ ವಿರೋಧಿಗಳಿಗೆ ಎಡೆಕೊಡತಕ್ಕಂಥ ರೀತಿಯಲ್ಲಿ ಮಾತನಾಡತಕ್ಕದ್ದು ಸರ್ವಥಾ ಸರಿಯಾದುದಲ್ಲ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Sri A. V. NARASIMHA REDDY.—On a point of information. I want to know whether discussion on the Report of the Fact-Finding Committee would be extended by another day or two.

Mr. DEPUTY SPEAKER.—I think it has already been understood that this discussion would continue after the official business is over.

Sri K. HANUMANTHAIYA.—I have already stated this morning that as per the programme, Government Business must be gone through. After the conclusion of the Government Business, I have no objection if the House wants to sit longer for this purpose.

Sri A. BHEEMAPPA NAIK.—Does it mean that we would be sitting on the 25th and 26th as well ?

Sri K. HANUMANTHAIYA.—So far as this discussion is concerned, there is no time limit. We can sit even for a month.

*ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ—ಅನುಸೂಚಿತ ಜಾತಿಗಳು).—ಸ್ವಾಮಿ, ಈ ಒಂದೆರಡು ದಿವಸಗಳಿಂದಲೂ ಈ ಮಾನ್ಯ ಸಭೆಯ ಮುಂದೆ ಯಾವ ಒಂದು ವಿಷಯವು ಬಹಳ ದೀರ್ಘವಾಗಿಯೂ ಮತ್ತು ಕೂಲಂಕಷವಾಗಿಯೂ ಚರ್ಚೆಯಾಗುತ್ತಿದೆಯೋ ಅಂಥ ವಿಷಯದಲ್ಲಿ ಈ ಮಾನ್ಯ ಸಭೆಯ ಸದಸ್ಯರನೇಕರು ತಮ್ಮ ತಮ್ಮ ಅಭಿಪ್ರಾಯಗಳನ್ನು ಈಗಾಗಲೇ ವ್ಯಕ್ತಪಡಿಸಿದ್ದಾರೆ. ಆದರೆ ವಿಧವಿಧವಾದಂಥ ಅಭಿಪ್ರಾಯಗಳು ಈಗ ಹೊರಬಿದ್ದಿರುತ್ತವೆ. ಆದರೆ ನಾನು ಈ ವಿಚಾರದಲ್ಲಿ ಅಂಥ ಅನುಮಾನಾಸ್ಪದವಾದಂಥ ರೀತಿಯಲ್ಲಿ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಈ ವಿಚಾರದಲ್ಲಿ ನನ್ನ ನಿರ್ದಿಷ್ಟವಾದ ಮತ್ತು ನಿಷ್ಪಕ್ಷಪಾತವಾದಂಥ ಅಭಿಪ್ರಾಯವೇನಿರುತ್ತೆಂಬ ಬಗ್ಗೆ ಈಗ ಈ ಮಾನ್ಯ ಸಭೆಯಮುಂದೆ ನಾನು ಎರಡು ಮಾತನಾಡಲು ಇಷ್ಟವುಳ್ಳವನಾಗಿದ್ದೇನೆ.

ಸ್ವಾಮಿ, ರಾಜಪ್ರಮುಖರ ಭಾಷಣದಲ್ಲಿ ಸಹ ಈ ವಿಚಾರದಲ್ಲಿ ಅವರೂ ಕೆಲವು ಮಾತುಗಳನ್ನು ಹೇಳಿದ್ದಾರೆ. ಅಂದರೆ ಈ ರಾಜ್ಯಗಳ ಪುನರ್ವಿಂಗಡಣೆಯು ಸಮಸ್ಯೆ ಎನ್ನತಕ್ಕಂಥದು ಬಹಳ ಪ್ರಾಮುಖ್ಯವಾದ ಸಮಸ್ಯೆಯಾಗಿರುವುದರಿಂದ ಈ ವಿಚಾರದಲ್ಲಿ ಎಲ್ಲ ಅಂಶಗಳನ್ನೂ ಕೂಲಂಕಷವಾಗಿ ವಿಮರ್ಶೆಮಾಡಿ ಅನಂತರ ಅಭಿಪ್ರಾಯಗಳನ್ನು ವ್ಯಕ್ತಪಡಿಸತಕ್ಕದ್ದು ಬಹಳ ಯುಕ್ತವಾದುದೆಂದು ಅವರು ಅಪ್ಪಣೆಕೊಡಿಸಿದ್ದಾರೆ. ಆದರೆ ಈ ದಿವಸ ನಮ್ಮ ಮುಂದಿರತಕ್ಕಂಥ ಸಮಸ್ಯೆ ಬರಿ ಭಾಷಾವಾರು ಪ್ರಾಂತ್ಯಗಳ ನಿರ್ಮಾಣ ಒಂದಕ್ಕೆ ಸಂಬಂಧಪಟ್ಟಂಥ ಸಮಸ್ಯೆಯಾಗಿಲ್ಲ. ಈ ರಾಜ್ಯಗಳನ್ನು ಬರಿ ಆ ಒಂದು ಆಡಳಿತ ದೃಷ್ಟಿಯಿಂದ ಪುನರ್ವಿಂಗಡಣೆ ಮಾಡಬೇಕೆಂಬ ವಿಷಯವೂ ಅಲ್ಲ. ಆದರೆ ಈ ಎರಡು ವಿಷಯಗಳೂ ಒಂದಕ್ಕೊಂದು ಹೊಂದಾವಣಿಕೆಯಾಗತಕ್ಕಂಥ ಮಾರ್ಗಯಾವುದಿದೆಯೋ ಅದನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾತನಾಡತಕ್ಕದ್ದು ಬಹಳ ಮುಖ್ಯವಾದದ್ದು ಮತ್ತು ಯುಕ್ತವಾದದ್ದು ಎಂದು ನಾನು ತಿಳಿದುಕೊಂಡಿದ್ದೇನೆ. ಈ ಕೆಲವು ಕಾರಣಗಳಮೇಲೆ ಈ ಹೊತ್ತು ನಮ್ಮ ಭಾರತದಲ್ಲಿ ಆಸೇತುಹಿಮಾಚಲದಿಂದ ಹಿಡಿದು ಕನ್ಯಾಕುಮಾರಿವರೆಗೂ ಒಂದೇ ಒಂದು ರಾಜ್ಯವಾಗುತ್ತದೆಯೆಂದು ಹೇಳತಕ್ಕದ್ದು ಅಷ್ಟು ಸುಲಭವಾದ ಮಾತಲ್ಲ. ಕಳೆದ 60 ವರ್ಷಗಳಿಂದಲೂ ನಮ್ಮ ದೇಶದ ಮಹಾನಾಯಕರುಗಳು ಅನೇಕ ರೀತಿಯಲ್ಲಿ ಕಷ್ಟಗಳನ್ನು ಅನುಭವಿಸಿ ಶ್ರಮಪಟ್ಟು ರಕ್ತಪಾತಕ್ಕೆ ಎಡೆಗೊಡದೆ ಈ ದೇಶವನ್ನು ನಮಗೆ ಸಂಪಾದನೆ ಮಾಡಿಕೊಟ್ಟಿದ್ದಾರೆ. ನಮಗೆ ಅನೇಕ ಸೌಲಭ್ಯಗಳನ್ನು ಒದಗಿಸಿ ಕೊಟ್ಟಿದ್ದಾರೆ. ಆದರೆ ಈಗ ರಾಜ್ಯಗಳನ್ನು ಸಂಪಾದಿಸುವುದು ಎಷ್ಟು ಸುಲಭ ಎಂದು ತಾವೇನು ತಿಳಿದುಕೊಂಡಿದ್ದೀರೋ ಅದು ಅಷ್ಟು ಸುಲಭವಾದ ಮಾತಲ್ಲ. ತಾವು ಹಿಂದಿನ ಚರಿತ್ರೆಗಳನ್ನು ತೆಗೆದು ಓದಿ ನೋಡಿದರೆ ಹಿಂದಿನ ಕಾಲದಲ್ಲಿ ಈ ರಾಜಮಹಾರಾಜರುಗಳು ಮತ್ತು ಚಕ್ರವರ್ತಿಗಳಾಗಿದ್ದಂಥವರು ಒಂದು ಅಂಗುಲ ಭೂಮಿಯ ಸಂಪಾದನೆಗಾಗಿ ಎಷ್ಟೆಷ್ಟು ಹೋರಾಟ ಮಾಡಿದ್ದಾರೆ, ಎಂಥೆಂಥ ಕಷ್ಟಗಳನ್ನು ಅನುಭವಿಸಿದ್ದಾರೆ, ಎಷ್ಟೆಷ್ಟು ರಕ್ತಪಾತಗಳುಂಟಾಗಿರುತ್ತವೆ, ಎನ್ನುವುದನ್ನು ನಾವು ಮನಗಾಣಬಹುದು. ಆದರೆ ನಾವು ಏನೋ ಈ ದಿವಸ ಇಂಥ ಒಂದು ದೊಡ್ಡ ದೇಶವನ್ನು ಅಹಿಂಸಾತ್ಮಕ ರೀತಿಯಲ್ಲಿ ಸಂಪಾದಿಸಿದ್ದೇವೆಂದು ಒಂದು ಭಾವನೆಯಿಂದ ಈ ಸಂಬಂಧದಲ್ಲಿ ಬಹಳ ಲಘುವಾಗಿ ಚರ್ಚೆಗಳಾಗುತ್ತಿರುವಂತೆ ನನಗೆ ಭಾಸವಾಗುತ್ತಿದೆ. ಆದರೆ ಯಾರೂ ಅಷ್ಟು ಲಘುವಾಗಿ ಇಂಥ ವಿಚಾರಗಳಲ್ಲಿ ಮಾತನಾಡಬಾರದು. ಅಷ್ಟು ಸುಲಭವಾಗಿ ಹೇಳತಕ್ಕಂಥ ವಿಚಾರವಲ್ಲ ಇದು ಎಂದು ನಮ್ಮ ನಾಯಕರಾಗಿರತಕ್ಕಂಥ ಜವಹರಲಾಲ್ ನೆಹ್ರೂ ಅವರೇ ಹೇಳಿದ್ದಾರೆ. ಅಂದರೆ ಅವರು ಇದೊಂದು ಬಹಳ ಪ್ರಾಮುಖ್ಯವಾದಂಥ ಪ್ರಶ್ನೆಯೆಂಬುದನ್ನು ಅರಿತಿರುತ್ತಾರೆ. ಈ ಹಿಂದೆ ಭಾರತದಲ್ಲಿದ್ದಂಥ ದೇಶಗಳೇನು ಹರಿದು ಹಂಚಿ ಹೋಗಿರುತ್ತವೆಯೋ ಅಂಥ ಒಂದು ದುರ್ಘಟನೆಗೆ ಈ ದಿವಸ ಅವಕಾಶ ಕೊಡಕೂಡದೆಂದು ಈಗ ಅವರು ಈ ದೇಶಗಳನ್ನೆಲ್ಲಾ ಮತ್ತೆ ಆಡಳಿತ ಸೌಕರ್ಯದ ದೃಷ್ಟಿಯಿಂದ ಪುನರ್ರಚನೆ ಮಾಡತಕ್ಕದ್ದು ಉಚಿತವಾದುದೆಂಬುದನ್ನು ಮನಗಂಡಿದ್ದಾರೆ. ಆದುದರಿಂದಲೇ ಅವರೀ ದಿವಸ ಈ ರಾಜ್ಯಗಳ ಪುನರ್ವಿಂಗಡಣೆಯ ಪ್ರಶ್ನೆ ಬಹಳ ಮಹತ್ವದ ಪರಿಣಾಮ ಉಳ್ಳದ್ದೆಂದು ಭಾವಿಸಿರುತ್ತಾರೆ. ಈ ಕಾರ್ಯವನ್ನು ನೆರವೇರಿಸಿಕೊಡುವುದಾಗಿ ಕೇಂದ್ರ ಸರ್ಕಾರದವರು ವಾಗ್ದಾನ ಮಾಡಿದ್ದಾರೆ. ಅದಕ್ಕನುಸಾರವಾಗಿ ಈಗಾಗಲೇ ಅವರು ಆ ಹೈಪವರ್ ಸಮಿತಿಯನ್ನೂ ಸಹ ನೇಮಕಮಾಡಿ

(ಶ್ರೀ ಎಂ. ಚಿಕ್ಕಲಿಂಗಯ್ಯ.)

ದ್ದಾರೆ. ಅವರು ಈ ದಿವಸ ಈ ರಾಜ್ಯಗಳ ಪುನರ್ವಿಂಗಡಣೆ ವಿಚಾರದಲ್ಲಿ ಈ ಭಾಷಾವಾರು ಸಮಸ್ಯೆಯನ್ನು ಕೂಡ ಬಹಳ ಮುಖ್ಯವಾದಂಥ ಒಂದು ಅಂಶವನ್ನಾಗಿಟ್ಟುಕೊಂಡಿದ್ದಾರೆ. ಹೀಗಿರುವಾಗ ಈ ಕರ್ಣಾಟಕ ಪ್ರಾಂತ್ಯ ನಿರ್ಮಾಣದ ಪ್ರಶ್ನೆ ಆ ದೊಡ್ಡ ಪ್ರಶ್ನೆಯಲ್ಲಿ ಒಂದು ಭಾಗವೆಂದು ನಾವು ಭಾವಿಸಬಹುದು. ಈ ಎಲ್ಲಾ ಸಮಸ್ಯೆಗಳನ್ನೂ ಆ ಸಮಿತಿಯವರು ಕೂಲಂಕಷವಾಗಿ ಪರಿಶೀಲನೆಮಾಡಿ ಇಂಡಿಯಾ ಸರ್ಕಾರಕ್ಕೆ ಒಂದು ವರದಿಯನ್ನೊಪ್ಪಿಸಬೇಕೆಂದು ತಿಳಿಸಿದ್ದಾರೆ. ಈ ದಿವಸ ಈ ಭಾಷಾವಾರು ಪ್ರಾಂತ್ಯಗಳು ನಿರ್ಮಾಣವಾಗಬೇಕೆಂಬ ಕೂಗು ಭಾರತದಲ್ಲೆಲ್ಲಾ ಎದ್ದಿರುತ್ತದೆ. ಆ ಒಂದು ದೃಷ್ಟಿಯಿಂದಲೇ ಈ ದಿವಸ ಆ ಹೈಪವರ್ ಸಮಿತಿಯನ್ನು ನೇಮಕ ಮಾಡಲಾಗಿದೆ. ಆದರೆ, ನಮ್ಮ ಶ್ರೀ ಕೆ. ಪಟ್ಟಾಭಿರಾಮನ್‌ರವರು ಹೇಳಿದಂತೆ, ಆ ಇಡೀ ಭಾರತದ ಪ್ರಶ್ನೆಯಲ್ಲಿ ನಮ್ಮ ಮೈಸೂರೂ ಕೂಡ ಒಂದಾಗಿರಬಹುದು. ಈ ದೇಶಗಳ ಪುನರ್ವಿಂಗಡಣೆಯನ್ನು ಯಾರೇ ತೀರ್ಮಾನ ಮಾಡಿದರೂ ಕೊನೆಗೆ ವಾಸ್ತವಾಂಶಗಳ ಪರಿಸ್ಥಿತಿಯನ್ನು ಪರಿಶೀಲಿಸಿ ಈ ದೇಶಗಳ ಗಡಿಗಳನ್ನು ನಿರ್ಧರಿಸತಕ್ಕಂಥ ಅಧಿಕಾರ ಕಟ್ಟಕಡೆಗೆ ಆ ಬೌಂಡರಿ ಕಮಿಷನ್‌ನವರ ಕೈಲಿ ಉಳಿಯುತ್ತದೆಂದು ನಾನು ತಿಳಿದುಕೊಂಡಿದ್ದೇನೆ.

ಸ್ವಾಮಿ, ಪುನರ್ವಿಂಗಡಣೆ ಮಾಡುವ ಸಮಯದಲ್ಲಿ ನಾವು ತಾಳತಕ್ಕಂಥ ಧೋರಣೆ ಏನು ಇದೆ, ನಮ್ಮ ಕರ್ತವ್ಯ ಏನು ಇದೆ ಎಂಬುದನ್ನು ಪರಿಶೀಲನೆ ಮಾಡಿದ ಪಕ್ಷದಲ್ಲಿ, ಕೆಲವು ಮಹನೀಯರು ಚರ್ಚೆ ಮಾಡಿದ್ದರಲ್ಲಿ ಒಂದು vested interestನಿಂದ ಒಂದು ಹಿತ ದೃಷ್ಟಿಯಿಂದ ಈ ಸಮಸ್ಯೆಯನ್ನು ನೋಡುತ್ತಿದ್ದಾರೆ ಎಂಬುದನ್ನು ಪದೇ ಪದೇ ಒತ್ತಿ ಹೇಳುತ್ತಿದ್ದೇನೆ. ನಾನು ನಿರ್ದಾಕ್ಷಿಣ್ಯವಾಗಿ ಹೇಳುವ ಪಕ್ಷದಲ್ಲಿ ಈಗ ಒಂದು ತಪ್ಪು ಅಭಿಪ್ರಾಯ ಬಂದಿದೆ. ಅದೇನೆಂದರೆ ಸರ್ಕಾರದವರು ಇನ್ನೊಂದು ಜನಾಂಗದವರನ್ನು ಏನೋ ಒಂದು ರೀತಿ ಮೋಸಮಾಡಿ ಅಧಿಕಾರ ಸಂಪಾದಿಸಿಕೊಳ್ಳಬೇಕೆಂಬ ಮತ್ತು ಮೈಸೂರಿನವರು ಬೇರೆ ಕಡೆ ಸೇರುವುದರಿಂದ ಅಥವಾ ಬೇರೆ ದೇಶಗಳು ಮೈಸೂರಿಗೆ ಸೇರುವುದರಿಂದ ನಾವೇನನ್ನೋ ಕಳೆದುಕೊಳ್ಳುತ್ತಿದ್ದೇವೆ ಎಂಬ ಭಾವನೆ ಅನೇಕರಿಗೆ ಬಂದಿದೆ ಎಂದು ನಾನು ತಿಳಿಯುತ್ತೇನೆ. ನಿಜವಾಗಿಯೂ ಆ ಭಾವನೆ ದೇಶದ ಹಿತ ದೃಷ್ಟಿಯಿಂದ ಒಳ್ಳೆಯದಲ್ಲ. ಮೊದಲೇ ಹೇಳಿದ ಹಾಗೆ, ನಮ್ಮ ಮೈಸೂರಿನ ಹಿಂದಿನ ಚರಿತ್ರೆಯನ್ನು ನೋಡಿದರೆ ಅದು ಎಷ್ಟು ದೊಡ್ಡದಾಗಿತ್ತು, ದೇಶದ ಬೌಂಡರಿಯನ್ನು fix ಮಾಡಬೇಕಾದ ಪಕ್ಷದಲ್ಲಿ ಟಿಪ್ಪುಸುಲ್ತಾನ್ ಮೊದಲುಗೊಂಡು ರಾಜರುಗಳು ಎಷ್ಟು ಕಷ್ಟ ಪಟ್ಟಿದ್ದಾರೆ, ಮೈಸೂರು ರಾಜ್ಯವನ್ನು ವಾಪಸ್ಸು ತೆಗೆದುಕೊಳ್ಳಬೇಕಾದರೆ ಎಷ್ಟು ಕಷ್ಟಪಟ್ಟಿದ್ದಾರೆಂಬುದು ಗೊತ್ತಾಗುತ್ತದೆ. ದೇಶವನ್ನು ಭಾಗ ಮಾಡುವಾಗ ಅದನ್ನು ಒಂದು patriotic spiritನಲ್ಲಿ ಮಾಡಿದರೆ ಯಾವ ತರಹ ಭಾವನೆಯೂ ಕೂಡ ಕಲ್ಪನೆಯಾಗುವುದಿಲ್ಲವೆಂದು ತಿಳಿದುಕೊಂಡಿದ್ದೇನೆ. ಮೈಸೂರು ಮೈಸೂರಾಗಿ ಇರಬೇಕೇ ಅಥವಾ ಹೆಚ್ಚು ವಿಶಾಲವಾಗಬೇಕೇ ಎಂಬ ವಿಚಾರವನ್ನು ಒಂದೆರಡು ಮಾತಿನಲ್ಲಿ ಹೇಳುತ್ತೇನೆ. ಮೈಸೂರು ಮೈಸೂರಾಗಿಯೇ ಇರಬೇಕು ಎನ್ನುವ ತತ್ತ್ವವನ್ನು ನಾನು ಒಪ್ಪುವುದಿಲ್ಲ. ಮೈಸೂರು ಭರತಖಂಡದ ಒಂದು ಭಾಗವಾಗಿದೆ. ಆಡಳಿತ ದೃಷ್ಟಿಯಿಂದ ಹೇಳುವುದಾದರೂ ಕೂಡ ಒಂದಕ್ಕೊಂದಕ್ಕೆ Inter-relation ಇದ್ದೇ ಇದೆ. ಮೈಸೂರು ದೇಶದಲ್ಲಿ ದೆಹಲಿಯವರು ವಾಸ ಮಾಡುತ್ತಾರೆ. ದೆಹಲಿಯಲ್ಲಿ ಮೈಸೂರಿನವರು ವಾಸ ಮಾಡುತ್ತಾರೆ. ಕೇಂದ್ರ ಸರ್ಕಾರದವರು ಬೆಂಗಳೂರಿನ ಹವಾಗುಣ ಬಹಳ ಚೆನ್ನಾಗಿದೆಯೆಂದು ಈಗ ವಿಧಾನ ಸೌಧ ಕಟ್ಟಡ ಪೂರ್ತಿ ಆದಮೇಲೆ ಪಾರ್ಲಿಮೆಂಟ್ ಸಭೆಯನ್ನು ಬೆಂಗಳೂರಿನಲ್ಲಿ ನಡೆಸಿ ನಮ್ಮನ್ನು ಮೈಸೂರಿನಲ್ಲಿರುವ ಕ್ರಾಫರ್ಡ್ ಹಾಲಿಗೆ ಹೋಗಿ ಎಂದು ಹೇಳಬಹುದು.

ಶ್ರೀ ಜೆ. ಮಹಮ್ಮದ್ ಇಮಾಂ.—ವಿಧಾನ ಸೌಧ ಅಖಂಡ ಕರ್ಣಾಟಕಕ್ಕೋಸ್ಕರ ಕಟ್ಟಿಸಿರುವುದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ನಾನು ತಮ್ಮ ಜೊತೆಯಲ್ಲೇ ಇದ್ದೆ. ಅದು ನನಗೆ ಗೊತ್ತು. ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಯಾವ ಉದ್ದೇಶಕ್ಕೋಸ್ಕರ ವಿಧಾನ ಸೌಧವನ್ನು ಕಲ್ಪಿಸಿದ್ದಾರೆ ಎಂಬುದನ್ನು ವ್ಯಕ್ತಪಡಿಸದೇ ಇದ್ದರೂ ಕೂಡ ನಾಳೆ ಬೆಂಗಳೂರನ್ನು ಇಂಡಿಯಾದ ಮುಖ್ಯ ರಾಜಧಾನಿಯನ್ನಾಗಿ ಮಾಡಿಕೊಂಡು ವಿಧಾನ ಸೌಧವನ್ನು ಪಾರ್ಲಿಮೆಂಟ್ ಆಗಿ ಮಾಡಿಕೊಳ್ಳಬಹುದು. ಮತ್ತು ಈ ರೀತಿ ಬೆಳವಣಿಗೆಯಾಗಬಹುದು. ಆದ್ದರಿಂದ ಮೈಸೂರು ಮೈಸೂರಾಗಿಯೇ ಇರಬೇಕೆಂದು ಯೋಚನೆ ಮಾಡುವುದು ಅಷ್ಟು ಸೂಕ್ತವಲ್ಲ ಎಂದು ತಿಳಿದುಕೊಂಡಿದ್ದೇನೆ. ಇನ್ನೊಂದು ವಿಚಾರ ಹೇಳುವುದಾದರೆ ದೇಶದಲ್ಲಿ ಕೆಲವು ಕಡೆ ನಾವು ಕಷ್ಟಪಟ್ಟು ದೇಶದ ಸಂಪತ್ತು ಹೆಚ್ಚಾಗಿ ಮಾಡೋಣ ಎಂದರೆ ಜಮೀನೇ ಇಲ್ಲ. ಬಳ್ಳಾರಿ ಬಂದ ಮೇಲೆ ವಾತಾವರಣ ಎಷ್ಟು ಬದಲಾವಣೆಯಾಗಿದೆ, ಮೈಸೂರು ಯಾವ ರೀತಿ ವಿಶಾಲವಾಗುತ್ತದೆ, ಜನರ ಮನೋಭಾವನೆ ಯಾವ ರೀತಿ ಬದಲಾವಣೆಯಾಗಿದೆ ಎಂದು ಗೊತ್ತಾಗುತ್ತದೆ. ಕೆಲವು ಮಹನೀಯರು ಬಳ್ಳಾರಿ ಬಂದ ಮೇಲೆ ಹೆಚ್ಚಿಗೆ ಖರ್ಚಾಯಿತು ಎಂದು ಹೇಳಿದರು. ಆ ವಾದವನ್ನು ಖಂಡಿತ ಒಪ್ಪುವುದಿಲ್ಲ. ಪದೇಪದೇ ಬಳ್ಳಾರಿ ನಮಗೆ ಸೇರಿದ್ದರಿಂದ ಹೆಚ್ಚಿಗೆ ಖರ್ಚಾಯಿತು ಎಂದು ಹೇಳಿ ಅವರ ಮನಸ್ಸನ್ನು ನೋಯಿಸುವುದು ಧರ್ಮವಲ್ಲ. ನಮ್ಮ ದೇಶವನ್ನು ವಿಶಾಲ ಮಾಡಿ ಒಂದು administrative unit ಮಾಡುವುದಕ್ಕೋಸ್ಕರ ಇಂಡಿಯಾ ಸರ್ಕಾರದವರು ಬಳ್ಳಾರಿಯನ್ನು ಮೈಸೂರಿಗೆ ಸೇರಿಸಿದರು. ನಾವಾಗಿ ಕೇಳಿಕೊಂಡಿದ್ದಲ್ಲ. ಅದಾಗಿಯೇ ಬಂದಿರುವುದರಿಂದ ಪದೇಪದೇ ಖರ್ಚಾಯಿತು ಎಂದು ಹೇಳಿ ಅವರ ಮನಸ್ಸಿಗೆ ನೋವುಂಟುಮಾಡುವುದು ಸರಿಯಲ್ಲ ಎಂದು ತಿಳಿದುಕೊಂಡಿದ್ದೇನೆ. ಮುಂದೆ ನಮ್ಮ ಮೈಸೂರು ವಿಶಾಲವಾದ ಪಕ್ಷದಲ್ಲಿ ನಮ್ಮ ವಿಶಾಲ ಭಾವನೆ ಯಾವ ರೀತಿ ಬೆಳವಣಿಗೆ ಆಗುತ್ತದೆ ಮತ್ತು ಕೇಂದ್ರದಲ್ಲಿ ನಮ್ಮ ಪ್ರಾತಿನಿಧ್ಯ ಯಾವ ರೀತಿ ಇರುತ್ತದೆ, ಎಂಬುದನ್ನು ತಾವು ಯೋಚನೆ ಮಾಡಬೇಕು. ಪಂಚವಾರ್ಷಿಕ ಯೋಜನೆಯಲ್ಲಿ ಉತ್ತರ ಇಂಡಿಯಾಕ್ಕೆ ಹೆಚ್ಚಿಗೆ ಸೌಕರ್ಯಗಳಾಗಿವೆಯೆಂದೂ ದಕ್ಷಿಣ ಇಂಡಿಯಾಕ್ಕೆ ಕಡಿಮೆಯಾಗಿವೆಯೆಂದೂ ಕೇಂದ್ರ ಪಾರ್ಲಿಮೆಂಟ್‌ನಲ್ಲಿ ವಾದ ಮಾಡಿದ್ದಾರೆ. ಏತಕ್ಕೋಸ್ಕರ ಉತ್ತರ ಇಂಡಿಯಾಕ್ಕೆ ಹೆಚ್ಚಿಗೆ ಸೌಕರ್ಯವಾಯಿತು? ನಮಗೆ ಏತಕ್ಕೋಸ್ಕರ ಕಡಿಮೆ ಸೌಕರ್ಯಗಳು ದೊರೆತವು? ಇದನ್ನೆಲ್ಲಾ ನೋಡುವುದಾದರೆ ನಮ್ಮ ಪ್ರಾತಿನಿಧ್ಯದ ಕೂಗು ಸಾಮಾನ್ಯವಾಗಿ ಕೇಳುತ್ತಾ ಇಲ್ಲವೆಂದು ಹೇಳಿದರೆ ಅದು ಉತ್ಪ್ರೇಕ್ಷೆ ಆಗಲಾರದು. ಹೀಗಿರುವಾಗ ಒಂದು ವಿಶಾಲ ದೃಷ್ಟಿಯಿಂದಲೂ ಕೂಡ ಎರಡು ಕೋಟಿಗಿಂತ ಹೆಚ್ಚಾದ ಜನಸಂಖ್ಯೆ ಇದ್ದ ಪಕ್ಷದಲ್ಲಿ ಅದು ದೊಡ್ಡ ದೇಶವಾಗುವುದಲ್ಲದೆ ಕೇಂದ್ರದಲ್ಲಿ ನಮ್ಮ ಪ್ರಾತಿನಿಧ್ಯ ಕೂಡ ಜಾಸ್ತಿ ಆಗುತ್ತದೆ. ನಮ್ಮ ದೇಶದ ಆಗುಹೋಗುಗಳನ್ನು ಪಾರ್ಲಿಮೆಂಟ್‌ನಲ್ಲಿ ನಿರ್ಧರಿಸುವುದಕ್ಕೆ

ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ಕೂಡ ನಮ್ಮ ದೇಶಕ್ಕೆ ನಷ್ಟವಾಗುತ್ತದೆ ಎಂದು ನಾನು ತಿಳಿದುಕೊಂಡಿಲ್ಲ ಆಡಳಿತ ದೃಷ್ಟಿಯಿಂದ ಹೇಳುವುದಾದರೂ ಕೂಡ ಅಧಿಕಾರವರ್ಗ ದೂರದಲ್ಲಿದ್ದಷ್ಟೂ ವಾಸಿ. ಹತ್ತಿರದಲ್ಲಿದ್ದಷ್ಟೂ ಕೂಡ ಸಂಕುಚಿತ ಭಾವನೆಗಳು ಮತ್ತು ಸಣ್ಣ ಸಣ್ಣ ದೂರುಗಳು ಬರುತ್ತವೆ. ದೇಶ ವಿಶಾಲವಾಗಿದ್ದ ಪಕ್ಷದಲ್ಲಿ ಚೆನ್ನಾಗಿರುತ್ತದೆ. ಆಯಾ ದೇಶದ ಜನಗಳ ಜೊತೆಗೆ ಹೊಂದಿಕೊಂಡು ಆಯಾ ದೇಶಗಳ ವಿಚಾರಗಳಲ್ಲಿ ಕಷ್ಟಪಟ್ಟು ಕೆಲಸ ಮಾಡಿ ದೇಶವೆಲ್ಲಾ ಒಂದೇ ಎನ್ನುವ ಭಾವನೆಯನ್ನು ಹುಟ್ಟಿಸುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಆಡಳಿತ ದೃಷ್ಟಿಯಿಂದಲೂ ದೇಶ ವಿಶಾಲವಾಗಿರಬೇಕು ಎಂದು ಅಭಿಪ್ರಾಯ ಪಡುತ್ತೇನೆ. ಆದರೆ ಇದನ್ನು ದೊಡ್ಡದಾಗಿ ಮಾಡುವಾಗ ಯಾವ ರೀತಿ ದೊಡ್ಡದು ಮಾಡಬೇಕು, ಬೌಂಡರಿ ಯಾವ ರೀತಿ fix ಮಾಡಬೇಕು ಎಂಬ ವಿಷಯದಲ್ಲಿ ಶ್ರೀ ಕೆ. ಪಟ್ಟಾಭಿರಾಮರಾವ್‌ರವರು ಬಹುಸೂಕ್ತ ಸಲಹೆಗಳನ್ನು ಕೊಟ್ಟರು. ಒಂದು ವೇಳೆ ಭಾಷೆಯ ಆಧಾರವನ್ನು ಇಟ್ಟುಕೊಂಡು ಮಾಡದೇ ಇದ್ದರೂ ಕೂಡ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕು. ಬಟ್ಲರ್ ಬಂದರು ಬೇಕು ಎಂಬ ಬಹುದಿವಸದ ಬಯಕೆಯನ್ನು ಈಡೇರಿಸಿಕೊಳ್ಳಲು ಮತ್ತು ಅನುಕೂಲಗಳನ್ನು ನಾವು ಕಲ್ಪಿಸಿಕೊಳ್ಳಲು ಪ್ರಯತ್ನ ಪಡುವಾಗ ಅಕ್ಕ ಪಕ್ಕದ ಆಯಾದೇಶದವರೂ ನಮ್ಮ ದೇಶಕ್ಕೆ ಹೊಂದಿಕೊಂಡು ನಮ್ಮ ನಾಗರಿಕತೆಯನ್ನು ಅನುಸರಿಸಿಕೊಂಡು ನಮ್ಮ ದೇಶದ ಆಡಳಿತವನ್ನು ಹೊಂದಿಕೊಂಡು ಬಾಳುತ್ತೇವೆ ಎಂದು ಯಾರುಯಾರು ಪ್ರಯತ್ನ ಪಡುತ್ತಾರೋ, ಯಾರುಯಾರು ಇಚ್ಛೆ ಪಡುತ್ತಾರೋ ಅವರಿಗೆಲ್ಲಾ ಸಂಪೂರ್ಣ ಅವಕಾಶ ಕೊಟ್ಟು ಸೇರಿಸಿಕೊಳ್ಳುವುದರಲ್ಲಿ ಯಾವ ಅಭ್ಯಂತರವೂ ಇಲ್ಲ, ಯಾವ ತೊಂದರೆಯೂ ಇಲ್ಲವೆಂದು ತಿಳಿದುಕೊಂಡಿದ್ದೇನೆ. ಶೇಷಾದ್ರಿ ಸಮಿತಿಯವರು ನಮ್ಮ ದೇಶದಲ್ಲಿರತಕ್ಕ ಸ್ಥಿತಿಗತಿಗಳನ್ನು ಕೊಟ್ಟಿದ್ದಾರೆ, ಇದನ್ನು ಗಣನೆಗೆ ತೆಗೆದುಕೊಳ್ಳದೆ ಮೈಸೂರನ್ನು ವಿಶಾಲಮಾಡುವ ಪಕ್ಷದಲ್ಲಿ ನಮ್ಮ ಆರ್ಥಿಕ ಸ್ಥಿತಿ ಬಹಳ ಕೆಟ್ಟು ಹೋಗುತ್ತದೆ, ಕಂದಾಯ ಜಾಸ್ತಿ ಮಾಡಬೇಕಾಗುತ್ತದೆ, ತೆರಿಗೆಕೊಡಬೇಕಾಗುತ್ತದೆ ಎಂಬುದಾಗಿ ನಾನಾ ವಿಧವಾಗಿ ಕೆಲವರು ವಾದ ಮಾಡಿದ್ದಾರೆ. ನಿಜ, ಆದರೆ ಸ್ವಲ್ಪ ಯೋಚನೆ ಮಾಡೋಣ. ನಾವು ಎಲ್ಲಾ ಕೆಲಸ ಕಾರ್ಯಗಳನ್ನೂ ಕೂಡ ಮಾಡಬೇಕಾದರೆ ನಮ್ಮ ದೇಶದಲ್ಲಿ ಆಗುವ ಉತ್ಪತ್ತಿಯ ಮೇಲೆ ನಾವು depend ಆಗಿದ್ದೇವೆಯೇ? ಪ್ರತಿಯೊಂದಕ್ಕೂ ಸಹಾಯಮಾಡಿ, ಸಹಾಯಮಾಡಿ ಎಂದು ಕೇಳುತ್ತಿಲ್ಲವೇ? ಪಾಂಚವಾರ್ಷಿಕ ಯೋಜನೆಯನ್ನು ಯಶಸ್ವಿಯಾಗಿ ಮಾಡಲು ಕೇಂದ್ರ ಸರ್ಕಾರವನ್ನು ದಿಕ್ಕು ಪಾಲಾಗಿ ಕೇಳುತ್ತಾ ಇಲ್ಲವೇ? ಕೇಂದ್ರ ಸರ್ಕಾರದವರು ನಮಗೆ ಬೇಕಾದ ಸಹಾಯವನ್ನು ಮಾಡುತ್ತಾ ಇಲ್ಲವೇ? ಈಗ ಕೇಂದ್ರ ಸರ್ಕಾರದವರು ಗಡಿಗಳನ್ನು fix ಮಾಡಿ ಪ್ರಾಂತಗಳನ್ನು ಪುನರ್ನಿರ್ಮಾಣ ಮಾಡಿದ ಪಕ್ಷದಲ್ಲಿ ನಮ್ಮ ಮೈಸೂರು ದೇಶದ ಆರ್ಥಿಕ ಸ್ಥಿತಿಗತಿಗಳು ಉತ್ತಮವಾಗಿ ಇಂಡಿಯಾ ದೇಶದಲ್ಲಿ ಬಹು ಮುಖ್ಯವಾದ ಪ್ರಾಂತವಾಗುತ್ತದೆಂಬುದು ಖಂಡಿತ. ಆದ್ದರಿಂದ ನಾವೆಲ್ಲರೂ ಯೋಚನೆ ಮಾಡಬೇಕಾಗಿಲ್ಲ. ಕಂದಾಯ ಹೆಚ್ಚಿಗೆ ನಮ್ಮ ತಲೆಯ ಮೇಲೆಯೇ ಬೀಳುತ್ತದೆ ಎಂದು ಹೇಳುವ ಹಾಗಿಲ್ಲ. ಕಂದಾಯ ಸ್ವಲ್ಪ ಹೆಚ್ಚಿಗೆ ಹಾಕಬಹುದು. ನಮ್ಮ ದೇಶದ ಇವೊತ್ತಿನ ಸ್ಥಿತಿಯಲ್ಲಿ 4 ಕೋಟಿ deficit ಇದೆ. ಅದಕ್ಕೆ ಭಯಪಡುತ್ತೇವೆಯೇ? ಮೈಸೂರು ದೇಶಕ್ಕೆ ಸಾಲವಿದೆಯೆಂದು ಯೋಚನೆ ಮಾಡುತ್ತೇವೆಯೇ? ಆಗಬೇಕಾದ ಕೆಲಸಗಳು ಆಗಲೇ ಬೇಕು. Development Works ಮಾಡುವಾಗ ಸಾಲಮಾಡಬೇಕಾಗುತ್ತದೆ. Deficit ನೋಡಿಕೊಂಡು ಕೆಲಸ ಮಾಡಬಾರದು. ಅದೇ ರೀತಿಯಾಗಿ ದೇಶ ವಿಶಾಲವಾದರೂ ಅದೇ ದೃಷ್ಟಿಯನ್ನು ಇಟ್ಟುಕೊಳ್ಳಬೇಕು ಎಂದು ನಾನು ಈ ವಿಚಾರದಲ್ಲಿ ಸಲಹೆ ಕೊಡಬೇಕೆಂದು ಇಷ್ಟಪಡುತ್ತೇನೆ.

ಇನ್ನೊಂದು ವಿಚಾರ: ಈ ವಿಷಯ ಚರ್ಚೆಯಲ್ಲಿಯೇ ಮುಗಿಸಬೇಕೇ ಅಥವಾ ಇಲ್ಲಿಂದ ಏನಾದರೂ ಒಂದು ನಿರ್ಣಯ ಕಳುಹಿಸಬೇಕೆ? ಈ ಬಗ್ಗೆ ಕೇಂದ್ರ ಸರ್ಕಾರದವರು ಏನಾದರೂ ಹೇಳಿದ್ದಾರೆಯೇ? ಎಂಬ ಅನೇಕ ವಾದಗಳು ಬಂದಿದೆ. ಫಜಲಾಲಿ ಸಮಿತಿಯವರು ಬಂದಾಗ ನಮ್ಮ ಪಾರ್ಟಿಯವರು ಒಮ್ಮನಸ್ಸಿನಿಂದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಇನ್ನು ಕೆಲವರು ಅಭಿಪ್ರಾಯವನ್ನು ವ್ಯಕ್ತಪಡಿಸದೆ ಗೋಪ್ಯವಾಗಿ ಇನ್ನೂ ಇಟ್ಟು ಕೊಂಡಿದ್ದಾರೆಂದು ತಿಳಿದುಕೊಂಡಿದ್ದೇನೆ.

5 P.M.

ಆಡಳಿತ ಪಕ್ಷದವರು ತಮ್ಮ ಅಭಿಪ್ರಾಯ ತೆಗೆದುಕೊಳ್ಳದೆ ಸರ್ಕಾರದವರು ಯಾವುದೊಂದು ನಿರ್ದಿಷ್ಟವಾದ ಅಭಿಪ್ರಾಯವನ್ನೂ ಕೊಡಕೂಡದೆಂದು ಹೇಳಿದ್ದಾರೆಂದು ಒಂದು ಪತ್ರಿಕೆಯಲ್ಲಿ ಬಂದಿದೆ. ಅದರ ಮೇಲೆ ನಮ್ಮನ್ನು ಕೇಳಲಿ, ಬಿಡಲಿ, ಇಲ್ಲಿಂದ ರೆಸೊಲ್ಯೂಷನ್ ಹೋಗಲಿ, ಬಿಡಲಿ, ನಿರಾಶಾದಾಯಕವಾಗಿರಬೇಕಾಗಿಲ್ಲವೆಂದೂ ತಿಳಿಸಿದ್ದಾರೆ. ಇಂಥ ಸಂದರ್ಭದಲ್ಲಿ ನಮ್ಮ ಸರ್ಕಾರದವರು ಬುದ್ಧಿವಂತಿಕೆಯಿಂದ ಒಂದು ಸಮಿತಿಯನ್ನು ಮಾಡಿ ಈ ವಿಷಯದಲ್ಲಿ ಯಾವ ರೀತಿ ಅಂಕಿಅಂಶಗಳನ್ನು ಕೊಡಬೇಕೆಂದಿರುವಾಗ ಧೈರ್ಯವಾಗಿ ಸಮಿತಿಯವರು ಕೊಟ್ಟ ಅಂಕಿ ಅಂಶಗಳ ಆಧಾರದ ಮೇಲೆ ಮೈಸೂರನ್ನು ದೊಡ್ಡದು ಮಾಡಬೇಕೆಂದು ಇಂಡಿಯಾ ಸರ್ಕಾರದವರಿಗೆ ಸಲಹೆಮಾಡಬಹುದಿತ್ತು. ಈಗ ಆ ಅವಕಾಶವನ್ನು ಉಪಯೋಗಿಸಿಕೊಳ್ಳದಿದ್ದಮೇಲೆ ಏನೋ ಹೇಳಿ ಕೊಟ್ಟಿದ್ದರು ಎಂಬ ಅಭಿಪ್ರಾಯ ಬರುತ್ತದೆ. ಆದರೂ ಫಜಲಾಲಿ ಕಮಿಷನ್ನಿನವರಿಗೆ ಆಗಲೇ ಗೊತ್ತಿದೆ. ಬಹುಮತದ ಅಭಿಪ್ರಾಯ ದೇಶ ವಿಸ್ತಾರವಾಗಬೇಕು, ಒಂದು administrative unit ಆಗಬೇಕು ಎಂಬ ಅಭಿಪ್ರಾಯ ಅವರಿಗೂ ಬಂದಿದೆಯೆಂದು ನಾನು ತಿಳಿದಿದ್ದೇನೆ. ಎರಡು ಕರ್ಣಾಟಕಗಳೂ ಒಗ್ಗಟ್ಟಾಗಿ ಬಾಳುವುದು ಒಳ್ಳೆಯದೆಂದು ಬಹುಮತದ ಅಭಿಪ್ರಾಯವಾಗಿದೆ. ಅನೇಕ ಮಹನೀಯರು ಇದಕ್ಕಾಗಿ ಪ್ರಯತ್ನ ಪಡುತ್ತಿದ್ದಾರೆ. ನನ್ನ ಅಭಿಪ್ರಾಯಕ್ಕೆ ಇಲ್ಲಿ ಬಹಳ ಜನ ಬೆಲೆ ಕೊಡುತ್ತಾರೆಂಬ ಭರವಸೆ ನನಗಿದೆ.

Sri K. HANUMANTHAIYA.—The member may continue his speech tomorrow, Sir.

Mr. DEPUTY SPEAKER.—The Hon'ble Member can continue his speech tomorrow after the official business is over. Now the House will rise and meet tomorrow at 12 o'clock.

The House adjourned at two minutes past Five of the Clock to meet again at Twelve of the Clock on Thursday, the 21st April 1955.

MYSORE LEGISLATIVE ASSEMBLY

FORTY-SEVENTH DAY

Thursday, 21st April 1955.

The House met in the Assembly Hall, Old Public Offices, Bangalore, at Twelve of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS.

Hiduvali Banjar in Sorab Taluk.

Q.—879. Sri MALLIKARJUNAPPA GOWDA (Sorab—Shikaripur).—

Will the Government be pleased to state :—

(*a*) the extent of "Hiduvali Banjar" in the Sorab Taluk;

(*b*) of them the extent of wet, dry and garden lands?

A.—Sri Kadidal MANJAPPA (Minister for Revenue and Public Works).—

(*a*) 54,039 acres.

(*b*) The information is not available.

ಶ್ರೀ ಮಲ್ಲಿಕಾರ್ಜುನಪ್ಪಗೌಡ.—ಸ್ವಾಮಿ, ನನ್ನ (ಬಿ) ಪ್ರಶ್ನೆಗೆ ಉತ್ತರವಾಗಿ ವಿವರಗಳು ದೊರೆಯು ವಂತಿಲ್ಲ ಎಂದು ಉತ್ತರ ಕೊಟ್ಟಿದ್ದೀರಿ. ಈ ವಿವರಗಳು ಏಕೆ ದೊರೆಯಲಿಲ್ಲ ?

ಶ್ರೀ ಕಡಿದಾಳ್ ಮಂಜಪ್ಪ.—ಆ ಅಂಕಿಅಂಶಗಳನ್ನೆಲ್ಲಾ ಶೇಖರಣೆ ಮಾಡುವುದಕ್ಕೆ ಬಹಳ ಕಾಲ ಬೇಕಾಗುತ್ತದೆ. ಆದುದರಿಂದ ನಿಧಾನವಾಗುತ್ತದೆಂದು ಹೀಗೆ ಹೇಳಲಾಗಿದೆ.

ಶ್ರೀ ಮಲ್ಲಿಕಾರ್ಜುನಪ್ಪಗೌಡ.—54,039 ಎಕರೆ ಬಂಜರ್ ಭೂಮಿ ಇದೆಯೆಂದು ತಾವೇ ಉತ್ತರ ಕೊಟ್ಟಿದ್ದೀರಿ. ಹೀಗೆ ಇಷ್ಟೊಂದು ವಿಸ್ತೀರ್ಣದ ಜಮೀನು ಪಾಳು ಬಿದ್ದು ಹೋದರೆ ಇದರಿಂದ ದೇಶದ ಉತ್ಪನ್ನಕ್ಕೆ ಧಕ್ಕೆ ಬಂದು ಸರ್ಕಾರಕ್ಕೆ ಲುಕ್ಸಾನಾಗುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು ; ತಾವು ಹೇಳತಕ್ಕದ್ದೂ ನಿಜ. ಆದರೆ ಸರ್ಕಾರದವರು ಸಹ ಈ ಹಿಂದೆಯೇ ಈ ವಿಚಾರಗಳನ್ನೆಲ್ಲಾ ಪರಿಶೀಲನೆ ಮಾಡಿದ್ದಾರೆ. ಇಂಥಾದ್ದನ್ನೆಲ್ಲಾ ತಡೆಗಟ್ಟುವುದಕ್ಕಾಗಿಯೇ ಫ್ಯಾಲೋ ಲ್ಯಾಂಡ್ ಆಕ್ಟನ್ನು ಜಾರಿಗೆ ತರಲಾಗಿದೆ. ಅದರ ಪ್ರಕಾರ ಈಗ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ. ಆದಾಗ್ಯೂ ನಿರೀಕ್ಷಿಸಿದ್ದಷ್ಟು ಪ್ರಯೋಜನಗಳು ಕಂಡುಬರುತ್ತಿಲ್ಲ.

ಶ್ರೀ ಮಲ್ಲಿಕಾರ್ಜುನಪ್ಪಗೌಡ.—ಹಾಗಾದರೆ ಇದನ್ನು ತಡೆಗಟ್ಟಲು ತಾವು ಮತ್ತೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಈ ಆಕ್ಟನ್ನೇ ಬದಲಾವಣೆ ಮಾಡಬೇಕೆಂದು ಆಲೋಚನೆ ಮಾಡುತ್ತಿದ್ದೇವೆ.

Sri K. PUTTASWAMY.—In what aspect is the Fallow Land Act found inadequate to meet the situation ?

ಶ್ರೀ ಕಡಿದಾಳ್ ಮಂಜಪ್ಪ.—ಈಗಿರತಕ್ಕಂಥ ಆಕ್ಟ್ ಪ್ರಕಾರ ಅಂಥ ಜಮೀನುಗಳನ್ನು ಸರ್ಕಾರದವರೇ ತೆಗೆದುಕೊಳ್ಳಬೇಕೆಂದಿದೆ. ಹಾಗೆ ಸರ್ಕಾರದವರು ಆ ಜಮೀನುಗಳನ್ನು ತೆಗೆದುಕೊಂಡನಂತರ ಒಂದು ನೋಟೀಸನ್ನು ಹೊರಡಿಸಿದನಂತರ ಆಗ ಯಾರು ಮುಂದೆ ಬರುತ್ತಾರೋ ಅಂಥ ಗೇಣೀದಾರನಿಗೆ ಆ ಭೂಮಿಯನ್ನು ಹಂಗಾಮಿ ಸಾಗುವಳಿಗೆ ಕೊಡಬೇಕೆಂದಿದೆ. ಆದರೆ, ಸಾಮಾನ್ಯವಾಗಿ ರೈತರು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗಿ ಹಂಗಾಮಿ ವ್ಯವಸಾಯ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಹೀಗಾಗಿ ಆ ಜಮೀನುಗಳನ್ನು ಈಗ ಖಾಯಂ ಆಗಿಯೆ ವಿಲೇವಾರಿ ಮಾಡಬೇಕಾಗಿರುತ್ತದೆ. ಇಂಥ ತೊಂದರೆ ಇದೆ.

ಶ್ರೀ ಎಸ್. ಸಿದ್ದಪ್ಪ.—ಈಗ ತಾವು ಇಲ್ಲಿ ಸೂಚಿಸಿರುವಂಥ 54 ಸಾವಿರ ಚಿಲ್ಲರೆ ಎಕರೆ ಬಂಜರ್ ಜಮೀನಿನಲ್ಲಿ ರೈತರು ತಮ್ಮ ದನಕರುಗಳಿಗೆ ಹುಲ್ಲಿಗಾಗಿ ಬಿಟ್ಟುಕೊಂಡಿರುವಂಥ ಪ್ರದೇಶವನ್ನೂ ಸೇರಿಸಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅವರು ಅವರ ದನಕರುಗಳಿಗೂ ಕೂಡ ಹೇರಳವಾಗಿ ಜಮೀನನ್ನು ಬಿಟ್ಟುಕೊಂಡಿದ್ದಾರೆ.

ಶ್ರೀ ಎಸ್. ಸಿದ್ದಪ್ಪ.—ಜನರಿಗೆ ಎಷ್ಟರಮಟ್ಟಿಗೆ ಅನುಕೂಲ ಮಾಡಬೇಕೋ ಅಷ್ಟೇ ಮಟ್ಟದಲ್ಲಿ ದನಕರುಗಳಿಗೂ ಅನುಕೂಲ ಮಾಡಬೇಕೆಂಬ ಮನೋಭಾವ ಸರ್ಕಾರದವರಿಗಿದೆಯೇ ? ಹಾಗಿದ್ದರೆ ಅವರ ದನಕರುಗಳಿಗೆ ಸಾಕಾಗುವಷ್ಟು ಭೂಮಿಯನ್ನು ರೈತರು ಬಂಜರ್ ಬಿಟ್ಟುಕೊಳ್ಳಲು ತಾವು ಅವಕಾಶ ಮಾಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಎಷ್ಟೆಷ್ಟು ರಾಸುಗಳಿಗೆ ಎಷ್ಟೆಷ್ಟು ಜಮೀನನ್ನು ಗೋಮಾಳದ ರೂಪದಲ್ಲಿ ಬಿಡಬೇಕೆಂದು ನಿರ್ಧರಮಾಡಲಾಗಿದೆಯೋ ಅಷ್ಟೇ ದಾಮಾಷದಲ್ಲಿ ಇಲ್ಲಿಯೂ ಒಂದು ಅವಕಾಶವಿರುವ ರೀತಿಯಲ್ಲಿ ಮುಂದೆ ಈ ಕಾನೂನನ್ನು ಬದಲಾವಣೆ ಮಾಡುವಾಗ ಸೇರಿಸಬೇಕೆಂದು ಆಲೋಚಿಸಿದ್ದೇವೆ.

Low Grade Officials in Revenue Department, Chikmagalur District.

Q.—906. Sri Y. M. CHANDRASEKHARIAH (Kadur).—

Will the Government be pleased to state :—

(*a*) the number of low grade Officials belonging to the Revenue Department in the Taluk and District offices of the Chikmagalur District ;

(*b*) of these, how many are permanent ;

(*c*) how many are not permanent ;

(*d*) how many have been given increments ;

(*e*) how many have been asked to refund the increments drawn by them ?

A.—Sri Kadidal MANJAPPA (Minister for Revenue and Public Works).—

(*a*) 229.
(*b*) 83.
(*c*) 146.
(*d*) 143.
(*e*) 14.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಚಿಕ್ಕಮಗಳೂರು ಜಿಲ್ಲೆಯಲ್ಲಿ ತಾಲ್ಲೂಕು ಮತ್ತು ಜಿಲ್ಲಾಕಸಬೆಗಳಲ್ಲಿ ಕೆಲಸಮಾಡತಕ್ಕ 229 ಜನ ನಾನ್‌ಗೆಜೆಟೆಡ್ ನೌಕರರ ಪೈಕಿ ಕೇವಲ 83 ಜನರು ಮಾತ್ರ ಖಾಯಂ ಆಗಿದ್ದು ಇನ್ನುಳಿದ 146 ಜನ ನೌಕರರು ಈವರೆಗೂ ಖಾಯಂ ಆಗದಿರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ವೇಕೆನ್ಸಿಗಳಿದ್ದರೆ ಅವರನ್ನೂ ಖಾಯಂಮಾಡಬಹುದಾಗಿತ್ತು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—7-8 ವರ್ಷಗಳಿಗೆ ಮೇಲ್ಪಟ್ಟ ಒಂದೇ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದಾಗ್ಯೂ 229 ಸ್ಥಾನಗಳಿರುವ ಕಡೆಯಲ್ಲಿ ಬರೀ 83 ಜನರು ಮಾತ್ರ ಖಾಯಂ ಆಗಿರಬೇಕಾಗಿದ್ದರೆ ಇನ್ನು ಹಂಗಾಮಿಯಾಗಿ ಕೆಲಸ ಮಾಡತಕ್ಕಂಥ ಈ ನೂರಾರು ಜನರಿಗೆ ಕೆಲಸ ಖಾಯಂ ಆಗಲು ಅವಕಾಶ ಹೇಗೆ ಸಿಕ್ಕುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—ಈ ವಿಚಾರವನ್ನು ಅನೇಕರು ಅನೇಕಸಾರಿ ನನ್ನ ಗಮನಕ್ಕೆ ತಂದಿದ್ದಾರೆ. ಈ ವಿಚಾರಗಳನ್ನೆಲ್ಲಾ ಕೂಲಂಕಷವಾಗಿ ವಿಚಾರಮಾಡಿ ಒಂದು ತಪಶೀಲ್ ವರದಿಯನ್ನು ಕಳುಹಿಸಬೇಕೆಂದು ಬರೆದಿದ್ದೇನೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಹಾಗೆ ಸ್ವಲ್ಪ ಹೆಚ್ಚುಕಮ್ಮಿಯಾಗಿದೆ ಎನ್ನುವುದು ನನ್ನ ಗಮನಕ್ಕೆ ಬಂದಿದೆ. ಅದನ್ನು ವಿಚಾರಮಾಡುತ್ತೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ತಾವು ಇಂಕ್ರಿಮೆಂಟ್ ಕೊಟ್ಟಿರತಕ್ಕ 143 ಜನರ ಪೈಕಿ ಕೇವಲ 14 ಜನಗಳಿಗೆ ಮಾತ್ರ ಅವರು ಪಡೆದಿರತಕ್ಕ ಇಂಕ್ರಿಮೆಂಟುಗಳನ್ನು ವಾಪಸ್ ಕೊಡಬೇಕೆಂದು ಹೇಳಿದ್ದೀರಿ. ಇದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಕಾನೂನಿಗೆ ವಿರೋಧವಾಗಿ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕಾಗಿ ಹಾಗೆ ಮಾಡಿರಬಹುದು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ವರ್ಷಂ ಪ್ರತಿ ಈ ಸರ್ಕಾರಿ ಲೆಕ್ಕಗಳು ಆಡಿಟ್ ಆಗುತ್ತಿರುವುದು ನಿಜವೇ ?

ಶ್ರೀ ಕಡಿದಾಳ್ ಮಂಜಪ್ಪ.—ಸರಿಯಾದ ಅರ್ಹತೆ ಪಡೆಯದಿದ್ದವರು ಹಾಗೆ ಇಂಕ್ರಿಮೆಂಟ್‌ಗಳನ್ನು ಪಡೆದಿದ್ದರೆ ಅವರು ಅದನ್ನು ಹಿಂದಕ್ಕೆ ಕೊಡಬೇಕಾಗುತ್ತದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ತಾ॥ 23-5-1949ರಲ್ಲಿ ಒಂದಾವರ್ತಿ ಆಡಿಟ್ ಮಾಡಿದನಂತರ ಪುನಃ ಎರಡನೆಯಾವರ್ತಿಗೆ ತಾ॥ 3-5-1950 ರಲ್ಲಿ ಆಡಿಟ್ ಮಾಡಿದನಂತರ ಸರ್ಕಾರದವರು ಆ ಇಂಕ್ರಿಮೆಂಟುಗಳನ್ನು ಅವರಿಗೆ ಕೊಡತಕ್ಕದ್ದೇ ಸರಿಯೆಂದು ಹೇಳಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—1949ರಲ್ಲಿ ಕೊಟ್ಟಿದ್ದಂಥ ಇಂಕ್ರಿಮೆಂಟುಗಳನ್ನು ಇತ್ತೀಚೆಗೆ ಕಿತ್ತುಕೊಳ್ಳಲು ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಈ ವಿಚಾರಗಳನ್ನೆಲ್ಲಾ ಪುನರ್ವಿಮರ್ಶೆ ಮಾಡುವುದಕ್ಕೆ ಹೇಳಿದ್ದೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ತಾವು ಹೀಗೆ ಮಾಡುವುದರಿಂದ ಆ ಬಡನೌಕರರಿಗೆ ತುಂಬ ತೊಂದರೆಯಾಗುತ್ತದೆಯಾದಕಾರಣ ಅವರಿಗೆ ಕೊಡಲಾಗಿದ್ದ ಇಂಕ್ರಿಮೆಂಟುಗಳನ್ನು ಅವರಿಗೇ ಬಿಟ್ಟುಕೊಡುವಂತೆ ಆಜ್ಞೆ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಈಗಲೇ ನಾನು ಏನನ್ನೂ ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ. ಇದನ್ನು ಪುನಃ ವಿಮರ್ಶೆ ಮಾಡುತ್ತೇನೆಂದು ಮಾತ್ರ ಹೇಳಬಲ್ಲೆ.

Takavi Loans to Harijans (Remittance).

ಈಗ ಸುಮಾರು 6-7 ಘಂಟೆಗಳ ಕಾಲ ಕುಳಿತು ಕೂಲಂಕಷವಾಗಿ ಎಲ್ಲ ಅಂಶಗಳನ್ನೂ ವಿಮರ್ಶೆ ಮಾಡಿ ಒಂದು ಒಮ್ಮತವಾದ ರಿಪೋರ್ಟನ್ನು ಕೊಟ್ಟಿದ್ದಾರೆ. ಸರ್ವದೃಷ್ಟಿಯಿಂದಲೂ, ಮನುಷ್ಯನ ಕೈಯಲ್ಲಿ ಆದಷ್ಟು ಸಮರ್ಪಕವಾದ ದೃಷ್ಟಿಯಿಂದ ಈ ಮಸೂದೆಯನ್ನು ರಚಿಸಿದ್ದಾರೆ ಎಂಬುದಕ್ಕೆ ಈ ಒಮ್ಮತವಾದ ರಿಪೋರ್ಟ್ ಸಾಕ್ಷಿ. Income-taxನ್ನು meticulous mathematically accurate ಆಗಿ ಮಾಡುವುದಕ್ಕಾಗುವುದಿಲ್ಲ. ವರ್ಷವರ್ಷಕ್ಕೆ ಸಂಬಳ ಸಾರಿಗೆ ಬಂದ ಹಾಗೆ ಇಷ್ಟೇ ವರಮಾನ ಒಂದು ಭೂಮಿಯಿಂದ ಬರುತ್ತದೆ ಎಂದು ಹೇಳಿ ನಿಗದಿ ಮಾಡುವುದಕ್ಕೆ ಸಾಧ್ಯವಿಲ್ಲ. ಒಂದು ವರ್ಷ ಚೆನ್ನಾಗಿ ಬೆಳೆ ಆಗಬಹುದು, ಒಂದು ವರ್ಷ ಬೆಳೆ ಆಗದೆ ಇರಬಹುದು. ಆದ್ದರಿಂದ ವರಮಾನ ಎನ್ನತಕ್ಕಂಥಾದ್ದೇ ಅನಿಶ್ಚಯವಾಗಿರುವಾಗ ಅದರ ಆಧಾರದ ಮೇಲೆ ತಯಾರಾಗತಕ್ಕಂಥ ಯಾವ ಕಾನೂನೂ ಕೂಡ ಕಾನೂನಿನ ದೃಷ್ಟಿಯಿಂಥ ಮತ್ತು ವ್ಯವಹಾರ ದೃಷ್ಟಿಯಲ್ಲಿ ಪರಿಪೂರ್ಣವಾಗಿರುವುದಕ್ಕೆ ಅಸಾಧ್ಯ. ಸಂಬಳ ಸಾರಿಗೆಗಳು ಇಷ್ಟೇ ಎಂದು ಖಚಿತವಾಗಿ ಗೊತ್ತಿರುವುದರಿಂದ ಲೆಖ್ಖ ಹಾಕಿ ಎಷ್ಟು ರಿಯಾಯಿತಿ ಕೊಡಬೇಕು, ಎಷ್ಟು ವರಮಾನ ಕೊಡಬೇಕು ಎಂಬುದನ್ನು ಕಂಡುಹಿಡಿಯಬಹುದು. This agricultural income in the very nature of things is a varying factor. Therefore the Bill has necessarily to partake in the nature of variableness. ಈ ಮಸೂದೆಯಲ್ಲಿ ಏನಾದರೂ ಲೋಪದೋಷಗಳಿದ್ದರೆ ಅದು ಅನಿವಾರ್ಯವಾದ ಲೋಪದೋಷಗಳೇ ಹೊರತು, ಮನುಷ್ಯನ ಪ್ರಯತ್ನಕ್ಕೆ ಮೀರಿದವೇ ಹೊರತು, ಉದ್ದೇಶ ಪೂರ್ವಕವಾಗಿ ಲೋಪದೋಷಗಳನ್ನು ಇಲ್ಲಿ ಶೇಖರಿಸಿ ಇಟ್ಟಿಲ್ಲ. ಮತ್ತೊಂದು ವಿಷಯವನ್ನು ಈ ಸಭೆಯವರು ಅವಗಾಹನೆಗೆ ತೆಗೆದುಕೊಳ್ಳಬೇಕು. ಇದು Constitution ಪ್ರಕಾರ Finance Bill ಆಗುತ್ತದೆ. ವರ್ಷ ವರ್ಷವೂ ಕೂಡ ಇದನ್ನು ನಾವು ಪುನರ್ವಿಮರ್ಶೆ ಮಾಡಬೇಕಾದ ಅಗತ್ಯವುಂಟಾಗುತ್ತದೆ. ಆದರಲ್ಲೂ ಇದನ್ನು ಹೊಸದಾಗಿ ತೆಗೆದು ಕೊಂಡಿದ್ದೇವೆ. Agricultural Income-tax ಎಂಬುದು ಮೈಸೂರು ದೇಶಕ್ಕೆ ಹೊಸದು. ಇಲ್ಲಿ ಇದರಿಂದ ಕಷ್ಟವುಂಟಾಗುತ್ತದೆ. ಇಲ್ಲಿ ಕೆಲವರು ವರಮಾನ ಕೊಡದೆ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ಸಮರ್ಪಕವಾಗಿ ಸರ್ಕಾರಕ್ಕೆ ಸಾಕಷ್ಟು ಹಣ ಒದಗಿ ಜನರಿಗೆ ಇದರಿಂದ ಕಿರುಕುಳವಾಗದ ರೀತಿಯಲ್ಲಿ ಈ ಮಸೂದೆಯನ್ನು ಇನ್ನೂ ಸಮರ್ಪಕವಾಗಿ ಬದಲಾವಣೆ ಮಾಡಬೇಕಾಗಿದೆ. ಈ ವರ್ಷ ಈ ಕಾನೂನು ಯಾವ ರೀತಿ ಕೆಲಸ ಮಾಡಿದೆ ಎಂಬುದನ್ನು ಕಾದು ನೋಡಬೇಕು. ಆ ರೀತಿ ಪಡೆದ ಅನುಭವದಿಂದ ಪುನಃ ನಾವು ತಿದ್ದುಪಡಿಗಳನ್ನು ಈ ಮಸೂದೆಗೆ ತರಬೇಕಾಗುತ್ತದೆ. ಈ ದಿವಸವೇ ಸರ್ವಸಮರ್ಪಕವಾಗಿ ಮಾಡುವುದಕ್ಕೆ Select Committeeಗೆ ಸಾಧ್ಯವಾಗುವುದಿಲ್ಲ. ಯಾರಿಗೂ ಸಾಧ್ಯವಾಗುವುದಿಲ್ಲ. ಆದ್ದರಿಂದ ಮಾನ್ಯ ಸಭಾ ಸದಸ್ಯರು ತಾಳ್ಮೆಯಿಂದ ಈ ಕಾನೂನು ಒಂದು ವರ್ಷ ಯಾವ ರೀತಿ ಕೆಲಸ ಮಾಡುತ್ತದೆ ಎಂಬುದನ್ನು ಕಾದು ನೋಡಬೇಕು. ಹಾಗೆ ಕಾದು ನೋಡಿ ಮುಂದೆ ಬರತಕ್ಕ ಬಡ್ಜೆಟ್ ಅಧಿವೇಶನದಲ್ಲಿ ಲೋಪದೋಷಗಳನ್ನು ಪರಿಹಾರ ಮಾಡುವುದಕ್ಕೆ ಮಾರ್ಗವನ್ನು ನಾವೆಲ್ಲರೂ ಕಂಡುಹಿಡಿದು ಕೆಲಸ ಮಾಡೋಣ. ಒಂದುವೇಳೆ ಒಂದು ವರ್ಷ ಕಾಯುವ ಉದ್ದೇಶ ಸರ್ಕಾರಕ್ಕೆ ಇಲ್ಲದಿದ್ದರೆ ಅಥವಾ ಹಾಗೆ ಕಾಯುವ ಉದ್ದೇಶ ಈ ಸಭೆಗೆ ಇಲ್ಲದಿದ್ದರೆ, ಇಂತಹ ಕಷ್ಟ ಬಂದರೆ ಏನು ಮಾಡುವುದು ಎಂಬುದು ಸ್ವಾಭಾವಿಕವಾಗಿ ಬರುತ್ತದೆ. ಅದಕ್ಕೋಸ್ಕರ ಮತ್ತೊಂದು clauseನ್ನು ಸೇರಿಸಿದ್ದಾರೆ. ಈ ಆಕ್ಟ್ ಜಾರಿಗೆ ಬಂದಾಗ ಏನಾದರೂ ಕಷ್ಟ ನಿಷ್ಠೂರಗಳು ಅಥವಾ ಕಾನೂನು ಲೋಪಗಳು ಉಂಟಾದರೆ, ಅದನ್ನು ಬಗೆಹರಿಸುವುದಕ್ಕೆ ಸರ್ಕಾರಕ್ಕೆ ಅಧಿಕಾರ ಈ ಕಾನೂನು ಪ್ರಕಾರವುಂಟಾಗುತ್ತದೆ. ಮಾನ್ಯ ಸದಸ್ಯರು ಈ ಕಾನೂನು ಜಾರಿಗೆ ತರತಕ್ಕಂಥ ಸಂದರ್ಭದಲ್ಲಿ ಏನಾದರೂ ಅನ್ಯಾಯವಾದರೆ, ಕಷ್ಟ ಒದಗಿದರೆ, ಅಧಿಕಾರಿಗಳು ಮತ್ತು ಸಂಬಂಧಪಟ್ಟ ಮಂತ್ರಿಗಳು ಆ ವಿಷಯಗಳನ್ನು ಗಮನಕ್ಕೆ ತೆಗೆದುಕೊಂಡು ಸರಿಪಡಿಸುವುದಕ್ಕೆ ಅವಕಾಶವನ್ನು ಈ ಮಸೂದೆಯಲ್ಲಿ ಉಂಟು ಮಾಡಿದೆ. ಆದ್ದರಿಂದ ಮಾನ್ಯ ಸಭಾ ಸದಸ್ಯರು ಸರ್ವಾನುಮತದಿಂದ Select Committeeಯವರು ತಮ್ಮ ಮುಂದೆ ಇಟ್ಟಿರುವ ಮಸೂದೆಯನ್ನು ಒಪ್ಪಿ ಸರ್ಕಾರಕ್ಕೂ ದೇಶಕ್ಕೂ ಸಹಾಯ ಮಾಡುತ್ತೀರೆಂದು ನಾನು ನಂಬಿದ್ದೇನೆ.

*Sri R. CHENNIGARAMIAH (Koratagere-Madhugiri—Scheduled Castes).—I want some clarification. In page 42, in proviso (1) it is stated; "on a total agricultural income which is less than Rs. 4,200" What the Chief Minister stated in the course of the speech is the correct decision of the Select Committee. As it is printed here, it is not quite clear. I would like to know what exactly is the meaning conveyed. What is printed here is: if one gets less than Rs. 4,200, he is not liable to tax, but if he gets Rs. 4,200, he is liable to tax. But according to the decision arrived at in the Select Committee, it is only those persons who get more than Rs. 4,200, that are liable to tax.

Sri K. HANUMANTHAIYA.—If he gets Rs. 4,200, what is the position—is that to be clarified ?

Sri R. CHENNIGARAMIAH.—Yes, Sir. He is not liable to pay tax if he gets an income of Rs. 4,200. That was the decision. Even in the Indian Income-Tax Act also, it is the case—under Rs. 4,200 or 4,200, he is not taxed.

Secondly, on the same page, the second proviso, No. (1) reads: "The agricultural income-tax payable shall in no case exceed one-half of the amount by which total agricultural income exceeds Rs. 4,200 or Rs. 8,400, as the case may be." It does not convey the correct meaning. I would like to know the correct meaning.

Sri A. V. NARASIMHA REDDY (Bangalore—South).—The difficulty is due to adding the word 'total' in both the places. If you remove that word 'total' in the schedule (1) to (7), it will be all right.

Mr. SPEAKER.—Motion moved :

"That the Mysore Agricultural Income-Tax Bill, 1955, as reported by the Select Committee, be taken into consideration."

*ಶ್ರೀ ಜೆ. ಮಹಮ್ಮದ್ ಇಮಾಂ (ಜಗಳೂರು).—ಅಧ್ಯಕ್ಷರೇ, Select Committeeಯಿಂದ ಬಂದಿರುವ ಈ ವರದಿಯ ವಿಷಯವಾಗಿ ನನ್ನ ಕೆಲವು ಅಭಿಪ್ರಾಯಗಳನ್ನು ಕೊಡುವುದು ನನ್ನ ಕರ್ತವ್ಯವೆಂದು ಭಾವಿಸಿದ್ದೇನೆ. Finance Ministerರವರು ಈ ಮಸೂದೆಯನ್ನು ತಂದಾಗ ಈ ಸಭೆಯ ಅನೇಕ ಸದಸ್ಯರು ಈ ಮಸೂದೆ ಅನಾವಶ್ಯಕ, ಇದರಿಂದ ಸರ್ಕಾರಕ್ಕೆ ಬರುವ ವರಮಾನ ಕಡಿಮೆ, ಆದರೆ ರೈತರಿಗೆ ಮತ್ತು ಪ್ರಜೆಗಳಿಗೆ ಕಿರುಕುಳ ಜಾಸ್ತಿ ಎಂಬುದಾಗಿ ಅಭಿಪ್ರಾಯಪಟ್ಟರು. ಆದರೂ ಇದು ಸೆಲೆಕ್ಟ್ ಕಮಿಟಿಗೆ ಒಪ್ಪಿಸಲ್ಪಟ್ಟಿತು. ನಿಜ್, ಸೆಲೆಕ್ಟ್ ಕಮಿಟಿಯವರು ಈ ಮಸೂದೆಯ ವಿಷಯವಾಗಿ ಬಹಳವಾಗಿ ಚರ್ಚಿಸಿ, ಈ ಮಸೂದೆಯು ಜಾರಿಗೆ ಬಂದರೆ ಅದರಿಂದ ಆಗಬಹುದಾದ ತೊಂದರೆಗಳನ್ನೂ ಕಿರುಕುಳಗಳನ್ನೂ ಸಾಧ್ಯವಾದಷ್ಟು ಕಡಿಮೆ ಮಾಡಿದ್ದಾರೆ. ಆದರೆ ಇದರಿಂದ ನಮ್ಮ ಪಾರ್ಟಿಯ ಮೊದಲಿನ ವಿರೋಧವು ಹೋಗುವುದಿಲ್ಲ. ಸಾಧಾರಣವಾಗಿ ಹೊಸ ತೆರಿಗೆಯನ್ನು ಹಾಕಲೇಕೂಡದು ಮತ್ತು ಹೊಸ ತೆರಿಗೆಯನ್ನು ಹಾಕಿದರೆ ದೇಶಕ್ಕೆ ಮತ್ತು ಜನರಮೇಲೆ ತೆರಿಗೆಯ ಭಾರವು ಜಾಸ್ತಿಯಾಗುತ್ತದೆ. ಇದರಿಂದ ಕಿರುಕುಳ ಜಾಸ್ತಿಯಾಗುತ್ತದೆ. ಅವರಿಗೆ ಕೊಡುವ ಶಕ್ತಿ ಇಲ್ಲವೆಂಬ ವಿರೋಧ ಇದ್ದೇ ಇದೆ. ಆದರೆ ಈಗ ತಂದಿರುವ ರೀತಿಯಲ್ಲಿ ಏನು ಸಾಧಕ ಭಾಧಕಗಳಾಗಿವೆ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಮೊದಲನೆಯದು ಏನು ಎಂದರೆ ಸೆಲೆಕ್ಟ್ ಕಮಿಟಿಯವರು ಇದರಲ್ಲಿರತಕ್ಕಂಥ ತೊಂದರೆಗಳನ್ನು ಅಷ್ಟು ಕಡಿಮೆ ಮಾಡಿದರೂ ಅಥವಾ Agricultural Income-tax exemption limit ಹೆಚ್ಚಾಗಿ ಮಾಡಿದರೂ, 100 ಎಕರೆ ವಿನಾಯಿತಿ ಆಗಿದ್ದರೂ ಸಹ ರೈತರಿಗೆ ಬರುವ ತೊಂದರೆ ತಪ್ಪುವುದಿಲ್ಲ. 100 ಎಕರೆಗಿಂತ ಹೆಚ್ಚಾಗಿ ಇರುವ ಪ್ರತಿಯೊಬ್ಬ ರೈತನೂ ಲೆಖ್ಖಪತ್ರ, ರಶೀದಿ, ಮುಂತಾದುವನ್ನು ಇಡಲೇಬೇಕಾಗುತ್ತದೆ.

ಸರ್ಕಾರಕ್ಕೆ ಬರುವ ಕೆಲವು ಲಕ್ಷ ರೂಪಾಯಿಗಳಿಗಾಗಿ, ಜನಗಳಮೇಲೆ, ರೈತರಮೇಲೆ ಲೆಕ್ಕಗಳನ್ನಿಡತಕ್ಕ, ಅವರಿಗೆ ಭೀತಿಯನ್ನುಂಟುಮಾಡತಕ್ಕ ಒಂದು ದೊಡ್ಡ ಜವಾಬ್ದಾರಿಯನ್ನು, ದೊಡ್ಡ ಹೊರೆಯನ್ನು ಹೊರಿಸಿದ್ದೀರಿ.

Mr. SPEAKER.—It does not apply to all agriculturists.

Sri J. MOHAMED IMAM.—But yet, all the raiyats are entirely at their mercy; there is scope for harassment. ನೂರು ಎಕರೆ ಮೇಲ್ಪಟ್ಟಿರುವವರೆಲ್ಲರೂ ಇಡಬೇಕು. ಇದರಿಂದಾಗಿ ಎಲ್ಲರೂ ಹೊಸದಾಗಿ ಸಿಬ್ಬಂದಿಯನ್ನು ನೇಮಿಸಬೇಕು. ಈ ಆಕ್ಟ್ ಬಂದಮೇಲೆ ಹೊಸದಾಗಿ ನೀವು ಟ್ಯಾಕ್ಸ್ ಕಲೆಕ್ಟರುಗಳನ್ನೂ, ಟ್ಯಾಕ್ಸ್ ಇನ್ಸ್ಪೆಕ್ಟರುಗಳನ್ನೂ ನೇಮಿಸುವವರಾಗಿದ್ದೀರಿ. ಇಂಥ ಚಿಕ್ಕ ಚಿಕ್ಕ ಅಧಿಕಾರಿಗಳ ಕೈಗೆ ರೈತರನ್ನು ಬಲಿ ಕೊಡುತ್ತಿದ್ದೀರಲ್ಲಾ ! They will be at their mercy. ಎಷ್ಟು ರಿಯಾಯಿತಿ ಕೊಟ್ಟರೂ ರೈತರಿಗೆ ತೊಂದರೆ ಇದ್ದೇ ಇರುತ್ತದೆ. ರೈತರಾದರೋ ಎಷ್ಟು ಬೇಕಾದರೂ ತ್ಯಾಗಮಾಡುವುದಕ್ಕೆ ಸಿದ್ಧರಾಗಿದ್ದಾರೆ. ಹೊಟ್ಟೆಗಿಲ್ಲದಿದ್ದರೂ 10 ರೂಪಾಯಿಗಳನ್ನು ಸರ್ಕಾರಕ್ಕೆ ತೆಗೆದುಕೊಳ್ಳಿ ಎಂದು ಕೊಟ್ಟಾರು. ಆದರೆ ಅವರು 'ಯಾವುದಕ್ಕೂ ಲೆಕ್ಕಪತ್ರಗಳನ್ನಿಡಬೇಕು, ಚಿಕ್ಕ ಚಿಕ್ಕ ಅಧಿಕಾರಿಗಳ ಹಿಂದೆ ತಿರುಗಬೇಕು, ಅವರು ಹೇಳಿದಂತೆ ಕೇಳಬೇಕು ಎಂದರೆ ಒಂದು ರೀತಿಯ harassment ಆಗುತ್ತದೆ. You know the present state of affairs at the time of the collection of sales tax.

There are three kinds of taxes which expose an ordinary man to harassment and unnecessary trouble. First one is the Indian Income-tax, the second one is the Sales Tax and the third one is this Agricultural Income-tax. In all these three cases you expect an ordinary person, an ordinary merchant, or an ordinary industrialist or an ordinary raiyat to maintain accounts. This is a great harassment. Secondly, they will be exposed to the dangers of being fleeced, to the danger of being extorted for petty things and they will be at the mercy of the petty officers and officials. So what is more, the trouble and the obligation you are imposing on the raiyats is inversely proportionate to the income the Government is getting. After all by the levy of Agricultural Income-tax,

taking into consideration the list of exemption, I will tell you the income you will get will be very little. Sir, it is proposed to levy income-tax only on those who own hundred acres and more. Let us see how many such holdings are there and how many raiyats are with so much holdings. If you take the statistics as given in the first Five-Year Plan in the State of Mysore "people holding 100 acres and above, they form only 0·2 per cent, that is, 37,900 acres." This is the area in Mysore. So, I may tell you the income that you can get will be very little but on the other hand the harassment and the dangers to which the people are exposed correspondingly will be much bigger. And secondly, Sir, it is proposed under the Act to establish a big establishment, and to form a separate Department known as the Agricultural Income-tax Department. It is further provided therein to appoint the Commissioner of Agricultural Income-tax, Deputy Commissioners of Agricultural Income-tax and District Agricultural Income-tax Officers and correspondingly there must be Agricultural Income-tax Inspectors and the connected establishments. You will have to create a big department irrespective of the income. The volume of work will be the same as in the case of Sales Tax Department or the Indian Income-tax Department. So, all the income you get, I am sure, most of it, will be eaten away by the new department and by the new officers that you are creating. Well, Sir, let the Finance Minister give an idea to this House, after this exemption as to what is the income that he is deriving. You are going to get the income only from the persons who are holding ·2 per cent. This legislation will be in the nature of teasing the people rather than getting substantial revenue to the Government; and whatever revenue is to be derived will be consumed by the number of officers you will have to create to administer this department.

Sir, the Chief Minister said in his speech that the Select Committee has recommended that so far as coffee and other allied crops are concerned, they are major crops and the growers of such crops must be able to pay this tax and they have to pay this year alone. I think I must say this is not at all equitable and you will not be treating them fairly. Well, Sir, now supposing if you ask them to produce accounts, I am sure many of them have not got authorised accounts because they were not required to keep the accounts accurately. Their account will be a subject-matter of dispute. They will be entirely under the mercy of the Income-tax Officer. He can disbelieve their accounts, he can say that the accounts kept are not at all worthy of credence. The raiyats never expected that the tax would be levied on them and many of them have not kept accounts. Now at this stage if you want to give retrospective effect to this measure and if you want them to produce accurate accounts, how can they do it? Thus they will be put to unnecessary trouble and harassment. And for the non-production of accounts, you have provided for a penal clause which provides for the levy of penalty and such an order is not at all appealable. There is one more injustice caused under section 30, that no appeal shall lie in respect of assessment under sub-section 4 of section 16. So, when they will not produce account, the Income-tax Officer levies arbitrarily and it is not appealable. To ask them to pay a tax which has been determined arbitrarily is really unfair and such a discrimination is not at all fair. Like others, they must also be given exemption. The Finance Minister seems to be only after money irrespective of the consequences. He does not care for justice or equity or goodwill. What he wants is only money whether it causes injustice or hardship or whether it works out injurious to the raiyats, they are unmindful of their position. Equity, justice and fairplay must have good sway. Treat them like others. You must give them sufficient warning to maintain accounts. Since you are going to pass this measure, you give them warning to maintain accounts regularly and in proper form and according to the rules, when rules are framed under this Bill and the procedure

(SRI J. MOHAMED IMAM.)

under which the accounts have to be kept are prescribed. That procedure has not been intimated to them. So, he can disbelieve all their accounts. I would request you to give them proper warning in proper time. If you give them one year's time, they will maintain proper accounts and during next year you can scrutinise their accounts and levy tax. Simply because you have provided the amount in the Budget, the Government is not justified in asking them to pay the tax from first April 1955 alone.

1 P. M.

I am sure this is an inequitable measure, I am sure the Finance Minister will agree to drop this measure and enforce this taxation from next year or enforce the collection of tax from the next year.

Regarding rates, the Chief Minister or the Finance Minister is always fond of comparing Mysore with Madras. He does not want to compare this State with other States. Let me compare the rates prevailing in Mysore with those of Coorg regarding coffee. In Coorg up to Rs. 25,000 it is only two annas and above Rs. 50,000 it is four annas, whereas here for Rs. 25,000 it is four annas and above Rs. 25,000 it is five and half annas. So, why don't you adopt the rates prevailing in Coorg who are our immediate neighbours? After all, the conditions between the two kinds of plantations are not very different. On the other hand, I may tell you Coorg plantations are more productive and give better yield than the coffee plantations of the State of Mysore. Anyhow it is the duty of the Mysore State to adopt the rates prevailing in Coorg rather than to adopt the rates prevailing in Madras State.

ಶ್ರೀ ಬಿ. ರಾಚಯ್ಯ (ಎಳಂದೂರು—ಅನುಸೂಚಿತ ಜಾತಿಗಳು).—ಕೊಡಗಿನಲ್ಲಿ ಎಲ್ಲಾ ಆಹಾರ ಧಾನ್ಯಗಳ ಮೇಲೂ ಈ ತೆರಿಗೆಯನ್ನು ಹಾಕಿದ್ದಾರಂತೆ.

ಶ್ರೀ ಜೆ. ಮಾಹಮ್ಮದ್ ಇಮಾಂ.—ಇಲ್ಲಿಯೂ ಸಹ ಅದೇರೀತಿ ಭತ್ತ-ರಾಗಿ ಇತ್ಯಾದಿಗಳ ಮೇಲೆಲ್ಲಾ ಹಾಕಲಿ. I am speaking of coffee. Up to Rs. 25,000 in Coorg it is only two annas whereas here it is four annas, above Rs. 25,000, it is five annas. Above Rs. 50,000 in Coorg it is four annas; from Rs. 25,000 to Rs. 50,000 it is two annas. Here the rates are nearly double.

Another thing is, many Hon'ble Members may remember that when the Bill came up for consideration there was a suggestion to delete many crops from "agricultural commodities." It was suggested to delete chillies, coconut, onion, and garlic because they are more or less akin to food crops and they are of everyday need and they are essential commodities. But still the Select Committee have thought it fit instead of deleting these, to add many more items including til, mulberry and other crops. What I would like to know is this. The economic problem and economic conditions attended with these crops must be studied; for example mulberry. I do not know much about mulberry. I never cultivated mulberry. Before levying the tax, have the Government ascertained the economic position of the crop of mulberry? Mulberry is connected with silk production. What is the position, of silk? Are the people growing mulberry thriving? What about those who purchase mulberry and rear silk? So far as I know, silk industry is very much on the downward trend and it is facing a very serious competition against artificial silk and many silk dealers and others complain that they are hard hit. Before levying tax it is the duty of the Government to ascertain that the mulberry industry and silk industry are not killed. Off hand they should not levy on any commercial crop, which may hit the industry or the people concerned. I raised one serious objection last year regarding cotton, groundnut and other things. This is not the time to levy Agricultural Income-Tax. This is the time when prices of all commodities are going down very considerably. The ryots are not getting even half the amount that they were getting during the last year. They are very hard hit and at this time if you go on levying this Agricultural Tax even on big ryots they will be very hard hit and you will be undermining the entire economic and social structure.

There are some other clauses which I cannot understand; for example, we have provided in the Select Committee Report that rent derived from the houses which are in the agricultural holding must also be subjected to Agricultural Income-Tax. It may be remembered that income from the rent of the house is also subjected to Indian Income-Tax; for example a person may have half-a-dozen houses in his garden or in his land which he has let out and that rent is subjected to Indian Income-tax he is paying and again you have provided under this Act that he has to pay Agricultural Income-tax also.

Sri K. HANUMANTHAIYA.—He will be exempted. We considered that point in the Select Committee. It does not come for double taxation as you say.

Sri J. MOHAMED IMAM.—Anyhow, that is to be remembered.

Sri A. G. RAMACHANDRA RAO (Minister for Law and Education).—In the proviso that has been brought under the explanation there, unless you are receiving rent you won't be taxed.

Sri J. MOHAMED IMAM.—I think you will have to make an exemption.

Sri K. HANUMANTHAIYA.—As I said, the Select Committee considered this aspect. We came to the conclusion that it does not come under the Indian Income-tax Act. If for any reason it is subjected to double taxation, the Government under the power they have taken under that clause will exempt that income.

Sri J. MOHAMED IMAM.—Again chapter II, clause 3, sub-clause (2). This clause is very confusing. It requires re-drafting and it has to be a little more clear. It deals with both commercial crops and non-commercial crops which are not included under the income.

> "Where there is included in the total agricultural income of an assessee any income exempted from agricultural income-tax by or under the provisions of this Act, the agricultural income-tax payable by the assessee shall be an amount bearing to the total amount of the agricultural income-tax which would have been payable on the total agricultural income had no part of it been exempted, the same proportion as the unexempted portion of the total agricultural income bears to the total agricultural income."

I cannot clearly understand the implications of the meaning of this para. It is in what proportion or how are you going to deal with commercial and non-commercial crops? It requires a little more clear exposition. I may say that is not properly worded.

Sri A. G. RAMACHANDRA RAO.—In (e) "commercial crop" has been defined; therefore there canot be any doubt.

Sri J. MOHAMED IMAM.—I do not properly understand the meaning of this para clause (3), sub-clause (2). Again coming to exemptions, it is true the Select Committee has recommended that exemption from the payment o the tax may be given to all person whose income is Rs. 4,200 or who own property to the extent of hundred acres. So I understand from this and it is quite clear that all those who are in possession and who are the owners of hundred acres, irrespective of the income, need not pay any income-tax and in the case of Hindu undivided family, it is double. The exemption is given up to 200 acres. I have sent an amendment regarding this. This concession will apply to those or it will benefit those who are governed by Hindu Joint Family, but there are others who are similarly situated, both economically and socially, who are not governed by Hindu Law but who are governed by personal law. So again how are those people to be treated in order to avoid discrimination? I will speak more when that amendment itself is taken up. Anyhow, the whole of this will have to be reconsidered and what action is to be taken regarding those families who are not governed by Hindu Joint Families. I think you will have to extend a similar concession to them also.

(SRI J. MOHAMED IMAM.)

Classification of the crops into first class and second class, third class—there are eight classes here also. There may be some injustice by mis-classification. Cocoanut, mulberry and also coffee are classified under third class. While classifying these crops under various groups it is very necessary that the Government ascertains the price and cost of each crop, the yield per acre. I may say this has been done arbitrarily from information available. But they must get authenticated information regarding the yield per acre and the income every acre would fetch under every one of those crops. It is quite possible that a crop might have been over-valued and included, in which case it will be a great hardship. There is a general feeling that cocoanut ought not to have been included under third class. The representatives of the coffee plantations also say that if coffee is included under third class it will be a great injustice to them. What I would suggest is, before classifying, the Government should have a thorough knowledge of the return and the yield each crop would bring and the income from each acre. I personally feel that this Bill when put into effect, will result, more in harassment and trouble to the ryots rather than bringing in more income to the Government. It will only result in the creation of another big department and swelling up the expenditure of the Government. With these observations I close my speech.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಸ್ವಾಮಿ, Agricultural Income-tax ಮಸೂದೆ ಸೆಲೆಕ್ಟ್ ಕಮಿಟಿಯಿಂದ ತಿದ್ದುಪಡಿಯಾಗಿ ಬಂದಿರತಕ್ಕಂಥಾದ್ದು ಸರ್ವರಿಂದಲೂ ಸ್ವಾಗತಿಸಲ್ಪಡಲು ಅರ್ಹವಾಗಿದೆ. ಈ Agricultural Income-taxನ ಮೇಲೆ Tax ಹಾಕುವ ವಿಷಯದಲ್ಲಿ ಸಭೆಯಲ್ಲಿ ಬಹುಭಾಗ ಚರ್ಚೆಯಾಯಿತು. ಆ ಚರ್ಚೆಯಾದ ಕಾಲದಲ್ಲಿ ಅನೇಕ ಮಾನ್ಯ ಸದಸ್ಯರು ಈ ತೆರಿಗೆಯಿಂದ ಆಗತಕ್ಕಂಥ ಮಸೂದೆಯಿಂದ ಯಾವರೀತಿಯಾದಂಥ ತೊಂದರೆಗಳು ರೈತರಿಗೆ ಸಂಭವಿಸುತ್ತವೆ ಎಂಬುದನ್ನು ತಿಳಿಸಿ ಅದನ್ನು ನಿವಾರಣೆ ಮಾಡುವುದಕ್ಕೋಸ್ಕರವಾಗಿ ಅನೇಕ ಸಲಹೆಗಳನ್ನು ಕೊಟ್ಟರು. ಆ ಸಲಹೆಗಳೆಲ್ಲವನ್ನೂ ಈ Select Committeeಯವರು ಕೂಲಂಕಷವಾಗಿ ವಿಮರ್ಶೆಮಾಡಿ ಬಹಳ ದೂರ ದೃಷ್ಟಿಯಿಂದ ಕೂಡಿದ ಮತ್ತು ಸಹಾನುಭೂತಿಯಿಂದ ಕೂಡಿದ ಸಲಹೆಗಳನ್ನು ಮಾಡಿದ್ದಾರೆ. ಈ Agricultural Income-tax ಎಂಬುದು ನಮ್ಮ ಮೈಸೂರು ಸಂಸ್ಥಾನಕ್ಕೆ ಹೊಸದು. ಇದು ಹೊಸದಾದಾಗ್ಯೂ ನಾವು ನೂತನವಾದಂಥ ಒಂದು ಸಮಾಜವನ್ನು ನಿರ್ಮಾಣ ಮಾಡುವ ಸಂದರ್ಭದಲ್ಲಿ ಜನರ ವರಮಾನಗಳನ್ನು ಒಂದು ರೀತಿಯಾಗಿ ಕ್ರಮಪಡಿಸುವುದರಲ್ಲಿ ಇಂತಹ ತೆರಿಗೆ ಅತ್ಯಂತ ಅವಶ್ಯಕವಾದುದು. ಈ ತೆರಿಗೆಯ ಹಿಂದೆ ಇರತಕ್ಕಂಥ ಮನೋಭಾವವನ್ನು ನಾವು ಚೆನ್ನಾಗಿ ಗ್ರಹಿಸಬೇಕು. ಯಾವ ರೈತನು ತೆರಿಗೆಯನ್ನು ಕೊಡಲು ಸಮರ್ಥನಲ್ಲವೋ ಅಂತಹವನ ಮೇಲೆ ಈ ತೆರಿಗೆಯನ್ನು ಹಾಕಿಲ್ಲ. ಹಾಕುವುದೂ ಇಲ್ಲ. ಯಾವ ರೈತನಿಗೆ ಚೈತನ್ಯವಿದೆಯೋ ಅಂತಹ ರೈತನ ಮೇಲೆ ಈ ತೆರಿಗೆಯನ್ನು ಹಾಕಿದ್ದಾರೆ. ಪ್ರಾರಂಭದಲ್ಲಿ ಲಿಮಿಟ್ಟನ್ನು 3,500 ರೂಪಾಯಿ ಎಂದು ಮಾಡಿದ್ದರು. ಇದನ್ನು ವಿಮರ್ಶೆಮಾಡಿ ಈಗ ಸಾಮಾನ್ಯವಾದಂಥ Income-tax ಗೆ ಯಾವ limitನ್ನು ವಿಧಿಸಿದೆಯೋ ಅದರ limitಗೆ ತರಬೇಕೆಂಬುದಾಗಿ 4,200 ರೂಪಾಯಿಗೆ ಇದನ್ನು ಬದಲಾಯಿಸಿದ್ದಾರೆ. ಈ ಬದಲಾವಣೆಯು ಅತ್ಯಂತ ಸಹಾನುಭೂತಿಯಿಂದ ಕೂಡಿದೆ ಮತ್ತು ಈಗಿನ ಸ್ಥಿತಿಯಲ್ಲಿ ಚೈತನ್ಯ ಇಲ್ಲದೆ ಇರತಕ್ಕಂಥ ರೈತರಿಗೆ ಈ ಕಾನೂನು ಅನ್ವಯಿಸಬಾರದು, ಚೈತನ್ಯ ಇರುವವರಿಗೆ ಮಾತ್ರ ಅನ್ವಯಿಸಬೇಕು ಎಂಬ ಉದ್ದೇಶದಿಂದ ಈ ತಿದ್ದುಪಡಿಯನ್ನು ತಂದಿದ್ದಾರೆ. ಆಮೇಲೆ joint families 7 ಸಾವಿರ ಇದ್ದುದನ್ನು 8,400 ರೂಪಾಯಿನ limitಗೆ ಏರಿಸಿದ್ದೇವೆ. ಇದು ಬಹಳ ರಿಯಾಯಿತಿಯಿಂದ ಕೂಡಿದೆ. ನಾವು ತೆರಿಗೆಯನ್ನು ಹಾಕಬೇಕಾದರೆ ತೆರಿಗೆಯನ್ನು ಕೊಡತಕ್ಕಂಥವರ ಸಾಮರ್ಥ್ಯವನ್ನು ನೋಡಿ ಹಾಕಬೇಕಾಗುತ್ತದೆ. ಈ ಸಾಮರ್ಥ್ಯವನ್ನು ವಿಮರ್ಶೆಮಾಡಿ ಈ ಸೆಲೆಕ್ಟ್ ಕಮಿಟಿಯವರು ಈ ತಿದ್ದುಪಡಿಯನ್ನು ತಂದಿದ್ದಾರೆ. ಅದಲ್ಲದೆ Section 63ರ ಪ್ರಕಾರ ಈ ಲೆಖ್ಖವನ್ನು ಇಡಲು ಸಾಧ್ಯವಿಲ್ಲದೆ ಹೋದವರಿಗೆ ಒಂದು ರಿಯಾಯಿತಿ ದರದಲ್ಲಿ ಒಪ್ಪಂದ ಮಾಡಿಕೊಂಡು ಎಷ್ಟು ಕಂದಾಯ ಕೊಡಬೇಕು ಎಂಬುದನ್ನು ನಿರ್ಧರಿಸುವಷ್ಟು ಅವಕಾಶವನ್ನು ಕೊಟ್ಟಿದ್ದಾರೆ. ಈ ರಿಯಾಯಿತಿ ಕೂಡ ಈ ಸೆಲೆಕ್ಟ್ ಕಮಿಟಿಯಲ್ಲಿ ಇನ್ನೂ ಹೆಚ್ಚಿನ ಸಹಾನುಭೂತಿಯಿಂದ ವಿಮರ್ಶೆಗೆ ಒಳಗಾಗಿ ಇನ್ನೂ ಉದಾರವಾದಂಥ ತಿದ್ದುಪಡಿಯಿಂದ ಕೂಡಿದೆ. ಆದ್ದರಿಂದ ಈ ಮಸೂದೆಯು ತಿದ್ದುಪಡಿಯಾಗಿ ಬಂದಿರುವ ಪ್ರಕಾರ ರೈತರಿಗೆ ಹೆಚ್ಚು ಕಷ್ಟವನ್ನು ಕೊಡುವ ರೀತಿಯಲ್ಲಿ ಇಲ್ಲ. ಆದರೆ ಒಂದು ಮಾತನ್ನು ಹೇಳಬೇಕಾಗುತ್ತದೆ. ಈ ಮೈಸೂರು ಅಗ್ರಿಕಲ್‌ಚರಲ್ ಇನ್‌ಕಂ ಟ್ಯಾಕ್ಸ್ ಕಾನೂನನ್ನು ಚಲಾವಣೆ ಮಾಡುವುದರಲ್ಲಿ ಆದಷ್ಟು ಮಟ್ಟಿಗೆ ಈ ಕಾನೂನನ್ನು ಚಲಾಯಿಸತಕ್ಕಂಥ ಅಧಿಕಾರಿಗಳು ರೈತರಿಗೆ ತೊಂದರೆಯಾಗದಂತೆ, ಅವರ ಮನಸ್ಸಿಗೆ ಬಹಳ ಹಿಂಸೆಯಾಗದಂತೆ ಇದನ್ನು ಆಚರಣೆಗೆ ತರಬೇಕಾಗಿದೆ. ಸಾಮಾನ್ಯವಾಗಿ, general income-tax ಅಧಿಕಾರ ಚಲಾವಣೆ ಆಗುವ ರೀತಿಯಲ್ಲಿ Assesseeಗಳಿಗೆ ಅನೇಕ ರೀತಿಯಾದಂಥ ಹಿಂಸೆಗಳು ಆಗುತ್ತಾ ಇವೆ. ಈ ಹಿಂಸೆಗಳನ್ನು ಆಗಾಗ್ಗೆ Incometax Commissionerರವರಿಗೆ ಮಾತ್ರ, ಇತರರಿಗೆ Chamber of Commerce ಮತ್ತು ಇತರ ವರ್ತಕರು ತಿಳಿಸುತ್ತಲೇ ಇದ್ದಾರೆ. ನನ್ನ ಅಭಿಪ್ರಾಯದಲ್ಲಿ ಈ ಕಾನೂನು ಸರಿಯಾಗಿ ಕೆಲಸ ಮಾಡಬೇಕಾದರೆ ಸರಿಯಾದಂಥ ಸಂಘಗಳು ಗ್ರಾಮದಲ್ಲಿ ಏರ್ಪಾಡಾಗಿ ರೈತರಿಗೆ ಸರಿಯಾದಂಥ ಮಾರ್ಗದರ್ಶನವನ್ನು ಮಾಡಬೇಕಾಗುತ್ತದೆ. ಈ ಕಾನೂನು ಹೊಸದು,

ಇದರಲ್ಲಿರತಕ್ಕಂಥ ಕಲಮುಗಳನ್ನು ಅಕ್ಷರಶಃ ಜಾರಿಗೆ ತಂದರೆ ಬಹಳ ಕಷ್ಟವಾಗುತ್ತದೆ. ಎರಡನೆ ಅಧ್ಯಾಯದಲ್ಲಿ ಐದನೆ ಕಲಮು ಇದೆ. ಇದು ಬಹಳ ಮುಖ್ಯವಾದಂಥ ಕಲಮು. ಇದರಿಂದ ರೈತರಿಗೆ ಮತ್ತು Assessceಗಳಿಗೆ ಹಿಂಸೆಯಾಗಬಹುದು. ಆದ್ದರಿಂದ ಈ ಕಲಮನ್ನು ಜಾರಿಗೆ ತರುವುದರಲ್ಲಿ ಬಹಳ ಉದಾರತೆಯಿಂದ ವರ್ತಿಸಬೇಕು ಎಂಬುದಾಗಿ ನಾನು ಸೂಚಿಸುತ್ತೇನೆ. ಈ ತಿದ್ದುಪಡಿಯಲ್ಲಿ ಕೆಲವು ಸಾಮಾನುಗಳನ್ನು ಬಿಟ್ಟು ಮತ್ತೆ ಕೆಲವು ಹೊಸ ಸಾಮಾನುಗಳನ್ನು ಸೇರಿಸಿದ್ದಾರೆ. ಹೂವುಗಳ ಮೇಲೆ ತೆರಿಗೆ ಹಾಕಬೇಕು ಎಂಬುದಾಗಿ ಮೊದಲು ಯೋಚನೆ ಮಾಡಿದರು, ಅದನ್ನು ಈಗ ಬಿಟ್ಟುಬಿಟ್ಟಿರತಕ್ಕಂಥಾದ್ದು ಬಹಳ ಸೂಕ್ತವಾದುದು. ಸಾಮಾನ್ಯವಾಗಿ ಜನರು ತೆರಿಗೆಯನ್ನು ಹೂವಿನ ಮೇಲೂ ಕೂಡ ಹಾಕಿದರಲ್ಲಾ ಎಂದು ಆಕ್ಷೇಪಣೆ ಮಾಡುತ್ತಿದ್ದರು. ನಮ್ಮ ಸ್ನೇಹಿತರು ಹೇಳುತ್ತಾರೆ, ಮನೆಯಲ್ಲಿ ಹೆಂಗಸರೆಲ್ಲ ಬಹಳ ಗಲಾಟೆ ಮಾಡಿದರು ಎಂದು. ಆದ್ದರಿಂದ ನೂರಕ್ಕೆ ಅರ್ಧ ಭಾಗಕ್ಕಿಂತ ಹೆಚ್ಚಿಗೆ ಹೆಂಗಸರು ಇದ್ದಾರೆ. ಅವರು ಉಪಯೋಗಿಸಬಹುದಾದಂಥ ಸಾಮಾನಿನ ಮೇಲೆ ತೆರಿಗೆ ಬೀಳದೆ ಇರುವುದು ಬಹಳ ಸಂತೋಷವಾದ ವಿಷಯ. ಕೊತ್ತಂಬರಿ ಬೀಜ, ದ್ರಾಕ್ಷಿ, ಮುಣ್ಚರಿ, ಪೆಪ್ಪರ್, ಎಳ್ಳು, ಇವುಗಳ ಮೇಲೆ ತೆರಿಗೆ ಹಾಕಿದ್ದಾರೆ; ಆದರೆ ಹುಣಿಸೆಹಣ್ಣಿನಮೇಲೆ ಮಾತ್ರ ತೆರಿಗೆ ಹಾಕಲಿಲ್ಲ. ಹುಳಿ, ಉಪ್ಪು, ಕಾರ, ತಿನ್ನುವ ಶರೀರ ನಮ್ಮದು. Chillies ಮೇಲೆ ಹಾಕಿದ್ದಾರೆ. ಆಮೇಲೆ ಕೆಲವರು ಪ್ರಜಾ ಸೋಷಿಯಲಿಸ್ಟ್ ಪಾರ್ಟಿಯವರು ಉಪ್ಪಿನ ಮೇಲೆ ಹಾಕಬೇಕು ಎಂದು ಹೇಳುತ್ತಿದ್ದಾರೆ. ಆದ್ದರಿಂದ ಹುಣಿಸೆ ಹಣ್ಣಿನಮೇಲೆ ಹಾಕಿದರೆ ಬಹಳ ಚೆನ್ನಾಗಿರುತ್ತದೆ. ಸ್ವಲ್ಪ ಹುಳಿ, ಉಪ್ಪು, ಕಾರ, ಕಡಿಮೆ ತಿನ್ನಬಹುದು. ಆಗ ಸಾತ್ವಿಕ ಗುಣ ಹೆಚ್ಚಾಗುತ್ತದೆ, ತಾಮಸಗುಣ ಕಡಿಮೆಯಾಗುತ್ತದೆ. ಆದ್ದರಿಂದ ಹುಳಿ, ಉಪ್ಪು, ಕಾರದಮೇಲೆ ಕಂದಾಯ ಹಾಕಿದರೆ ಆಗಬಹುದು. ಈ ವಿಚಾರವನ್ನು ಆಧ್ಯಾತ್ಮಿಕ ದೃಷ್ಟಿಯಿಂದ ಹೇಳುತ್ತಿದ್ದೇನೆ. ಸಾತ್ವಿಕ ಗುಣ ಹೆಚ್ಚಾಗಬೇಕಾದರೆ, ರಜೋಗುಣ ಕಡಿಮೆಯಾಗಬೇಕಾದರೆ ಹುಳಿಯಮೇಲೆ ಮುಖ್ಯವಾಗಿ ತೆರಿಗೆಯನ್ನು ಹಾಕಬೇಕು. ಅವರು ಬೇಡ ಎಂದರೆ ಬಿಟ್ಟುಬಿಡಿ, ಸ್ವಾಮಿ. ಒಟ್ಟಿನಲ್ಲಿ ಮಸೂದೆ ತಿದ್ದುಪಡಿ ಆಗಿರತಕ್ಕಂಥ ರೀತಿಯಲ್ಲಿ ಮೊದಲು ಅರಿಕೆ ಮಾಡಿಕೊಂಡಂತೆ ಜಾರಿ ಮಾಡುವುದರಲ್ಲಿ ಬಹಳ ಉದಾರತೆಯಿಂದ ಮತ್ತು ಸಹಾನುಭೂತಿಯಿಂದ ವಿಮರ್ಶೆ ಮಾಡಬೇಕು. ಏತಕ್ಕೆಂದರೆ ಲೆಖ್ಖ ಇಡುವ ವಿಷಯದಲ್ಲಿ ಒಂದು ಮಾತು ಇದೆ. ಲೆಖ್ಖ ಇಡಲು ಬರುವುದಿಲ್ಲ ಎಂದು ರೈತರು ಹೇಳುತ್ತಿದ್ದಾರೆ. ಅವರಿಗೆ ಅಭ್ಯಾಸವಿಲ್ಲ. ನಾನು ಸ್ವಲ್ಪ ರೈತರ ಕೂಡ ವ್ಯವಹಾರ ಮಾಡಿದ್ದೇನೆ. ನಾನೂ ಸ್ವಲ್ಪ ವ್ಯವಸಾಯ ಮಾಡಿದ್ದೇನೆ. ನಾನೂ ಕೂಡ ನಮ್ಮ ತಂದೆ ವ್ಯವಸಾಯ ಮಾಡುತ್ತಾ ಇದ್ದಾಗ ಜಮೀನಿಗೆ ನೀರು ಬಿಡುವ ಕೆಲಸ ಮಾಡುತ್ತಿದ್ದೆ. ಪುನಃ ಜಮೀನು ಇಟ್ಟುಕೊಂಡು ಸ್ವಂತವಾಗಿ ಉಳಬೇಕೆಂಬ ಆಶೆ ಇದೆ. ತಾವು ಆ ಆಶೆಯನ್ನು ಈಡೇರಿಸಿ ಕೊಟ್ಟರೆ ಮಾಡುತ್ತೇನೆ. ಆದ್ದರಿಂದ ಲೆಖ್ಖ ಬರೆಯುವುದು ಬಹಳ ಒಳ್ಳೆಯ ಪದ್ಧತಿ. ರೈತರಿಗೆ ಲೆಖ್ಖವನ್ನು ಇಡಲು ಹೊಸದಾಗಿ ಅಭ್ಯಾಸ ಮಾಡಿಸಿದರೆ ಒಳ್ಳೆಯದು. ಎಲ್ಲರಿಗೂ ವಿದ್ಯಾಭ್ಯಾಸ ಬರಬೇಕೆಂದು ಹೇಳುತ್ತಿದ್ದಾರೆ. ಎಲ್ಲರೂ ಲೆಖ್ಖ ಇಡಬೇಕು. ಪೂರ್ವಿಕರು ಚೆನ್ನಾಗಿ ಲೆಖ್ಖ ಇಟ್ಟುಕೊಂಡಿರುತ್ತಿದ್ದರು. ಅಧುನಿಕರು ಲೆಖ್ಖ ಇಡುತ್ತಿಲ್ಲ. ಮೂರು ಕಾಸು ಆರು ಕಾಸೂ ಸಹ ಪೂರ್ವಿಕರಿಗೆ ಲೆಖ್ಖ ಇಡುವುದಕ್ಕೆ ಗೊತ್ತಿದೆ. ಅವರು ಜೀವನವನ್ನು ಒಂದು ಲೆಖ್ಖಾಚಾರವಾಗಿ ನಡೆಸುತ್ತಿದ್ದರು. ಆದ್ದರಿಂದ ಲೆಖ್ಖ ಇಡುವುದು ಬಹಳ ಒಳ್ಳೆಯದು. ಲೆಖ್ಖ ಇಡುವುದಿಲ್ಲವೆಂದು ಎಷ್ಟು ದಿವಸ ಹೇಳಬಹುದು? ಲೆಖ್ಖ ಇಡಲೇಬೇಕಾಗುತ್ತದೆ. ಯಾವನೋ ಒಬ್ಬ Agricultural Income-tax ಆಫೀಸರು ಬಂದು ಇಷ್ಟು ಆದಾಯವಿದೆ ಎಂದರೆ ಅಷ್ಟಿಲ್ಲ ಲೆಖ್ಖನೋಡಿ ಎಂದು ಹೇಳಬೇಕಾಗುತ್ತದೆ. ಲೆಖ್ಖ ಇಡುವುದು ಮೈಗೂ ಒಳ್ಳೆಯದು, ದೇಶಕ್ಕೂ ಒಳ್ಳೆಯದು. ಲೆಖ್ಖ ಇಡತಕ್ಕ ವಿಷಯದಲ್ಲಿ ಸರ್ಕಾರದವರು ಆಲೋಚನೆಮಾಡಿ, ನಮೂನೆಗಳನ್ನು ಮಾಡಿಸಿ ಸೂಕ್ತ ಸಲಹೆಗಳನ್ನು ಕೊಟ್ಟು ಮಾಡಿದರೆ ಅದು ಒಳ್ಳೆಯದು ಮತ್ತು ಹೇಗೆ ತೆರಿಗೆ ಹಾಕಿ ಎಷ್ಟು ಹಣವನ್ನು ವಸೂಲು ಮಾಡಬಹುದೋ, ದೇಶಕ್ಕೆ ಎಷ್ಟು ಉಪಕಾರ ಮಾಡಬಹುದೋ ಹಾಗೆಯೇ ಲೆಖ್ಖ ಬರೆಯುವ ವಿಷಯದಲ್ಲಿ ರೈತರಿಗೆ ಹೆಚ್ಚಿಗೆ ಉಪಕಾರ ಮಾಡಬಹುದು.

1-30 P.M.

ನನ್ನ ಸ್ನೇಹಿತರು ಕೇಳುತ್ತಿದ್ದಾರೆ, ನಮ್ಮಲ್ಲಿ ಎಷ್ಟು ಜನ ವಿದ್ಯಾವಂತರಿದ್ದಾರೆ, ಎಂದು, ನೂರಕ್ಕೆ ನೂರು ಜನರನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂದೇ ಈ ತೆರಿಗೆಯನ್ನು ಹಾಕಿರುವುದು.

ಅದಿರಲಿ, ಲೆಕ್ಕ ಬರೆಯುವ ವಿಚಾರದಲ್ಲಿ ನನ್ನದೊಂದು ಸಲಹೆಯಿದೆ. ಹಾಲಿ ಕೆಲವು Non-official ಸಂಸ್ಥೆಗಳವರು ಕೆಲವು ಫಾರಮುಗಳನ್ನಿಟ್ಟಿದ್ದಾರೆ. ಆ ರೀತಿಯಾಗಿ ಕೆಲವು ಫಾರಂಗಳನ್ನು ಜಾರಿಗೆ ತರಲು ಶ್ರೀ ಕರಿಗೌಡರು, ತಿಮ್ಮಪ್ಪಗೌಡರಂಥವರು ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಅಂಥ ಫಾರಮ್ಮುಗಳಿದ್ದರೆ ರೈತರು ಬರೆಯುವುದಕ್ಕೂ ಸುಲಭವಾಗಿರುತ್ತದೆ.

ಒಟ್ಟಿನಲ್ಲಿ ಈ ಮಸೂದೆ ಸ್ವಾಗತಾರ್ಹವಾಗಿದೆ. ಸಭೆಯವರು ಅದನ್ನು ಒಪ್ಪಿಕೊಳ್ಳಬೇಕೆಂದು ನಾನು ಸೂಚಿಸುತ್ತೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಸ್ವಾಮಿ, ಸಾಮಾನ್ಯವಾಗಿ ಇಲ್ಲಿರುವ ಶಾಸನಸಭಾ ಸದಸ್ಯರಲ್ಲಿ 100 ಜನರಲ್ಲಿ 25 ಜನರೂ ಜಮೀನ್ದಾರರಲ್ಲವೆಂದು ನನ್ನ ಭಾವನೆ. ಅದರಲ್ಲೂ ಜಮೀನನ್ನು ಮಾಡತಕ್ಕವರು, ಜಮೀನಿನ ಕಷ್ಟಸುಖಗಳನ್ನು ಅರಿತಿರುವವರು 25 ಜನರೂ ಇಲ್ಲವೆನ್ನಬಹುದು.

ಶ್ರೀ ಕಡಿದಾಳ್ ಮಂಜಪ್ಪ (ರೆವೆನ್ಯೂ ಮತ್ತು ಮುಜರಾಯಿ ಇಲಾಖೆಯ ಮಂತ್ರಿಗಳು).—ಈಗ ಬಂದಿರುವ ಕಷ್ಟ ಅದೇ. ಜಮೀನ್ದಾರರನ್ನು ನಮ್ಮ ಗಮನದಲ್ಲಿಟ್ಟು ನಾವು ವಾದ ಮಾಡಿದರೆ ಪ್ರಪಂಚದಲ್ಲಿ ಅಪಕೀರ್ತಿಗೆ ಗುರಿಯಾಗಬೇಕಾಗುತ್ತದೆ. ಏನೆಂದರೆ, ಜಮೀನ್ದಾರರು, ತಮ್ಮ ಮೇಲೆ ತೆರಿಗೆ ಹಾಕುವುದಕ್ಕೆ ಒಪ್ಪುವುದಿಲ್ಲ, ಇನ್ನು ಯಾರಮೇಲಾದರೂ ತೆರಿಗೆ ಹಾಕುವುದಾದರೆ ಕೈಎತ್ತುತ್ತಾರೆ ಎಂದು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಹೀಗೆ 75 ಜನ ಜಮೀನಿಲ್ಲದಿರುವವರೇ ಇಲ್ಲಿದ್ದಾರೆ. ಏನಾದರೂ ಹಾಳಾಗಲಿ ಎಂದು ಯಾವ ಯಾವ ಯಾವುಗಳ ಮೇಲೆ ಹಾಕಿದ್ದಾರೆ ನೋಡಿ. ಕಂದಾಯಗಳನ್ನೇನೋ ಕೊಡಬೇಕು ನಿಜ. ಕೊಡಕೂಡದೆಂಬ ಉದ್ದೇಶವೇನೂ ನಮಗಿಲ್ಲ. ಏಕೆಂದರೆ ನಾವು ಪತ್ರಿಯೊಂದುಸಲ ಮಾತನಾಡುವಾಗಲೂ ಕೆರೆ, ಕಟ್ಟೆ, ಬಾವಿಗಳನ್ನು ಕೇಳುತ್ತಿರುತ್ತೇವೆ. ಆದರೂ ರೈತರ ಕಷ್ಟಸುಖಗಳೇನು ಎಂಬುದನ್ನು ನೋಡಿ ತೆರಿಗೆ ಹಾಕಬೇಕು. ಶ್ರೀ ರಾಮಯ್ಯನವರಿಗೆ ಬಹುಶಃ ಜಮೀನಿಲ್ಲವೆಂದು ಕಾಣುತ್ತದೆ.

(ಶ್ರೀ ವೈ. ಎಂ. ಚಂದ್ರಶೇಖರಯ್ಯ.)

ಆದ್ದರಿಂದಲೇ ಅವರು ಈ ರೀತಿ ಮಾತನಾಡಿದರು. ರಾಗಿಯು ಗಿಡವೋ ಮರವೋ ಎಂಬುದನ್ನು ಕೂಡ ತಿಳಿಯದ ಜನರೂ ಇರುವುದರಿಂದಲೇ ಈ ರೀತಿ ಹೇಳುತ್ತಾರೆ. ಬೆಳ್ಳುಳ್ಳಿ ಪೈರಿನ ಜಮೀನಿನ ವಿಷಯದಲ್ಲಿ 10 ಎಕರೆ ಮಾತ್ರ ಬಿಟ್ಟಿದ್ದಾರೆ. ಅನೇಕರಿಗೆ ಬೆಳ್ಳುಳ್ಳಿ ವ್ಯವಸಾಯದ ಅನುಭವ ಕಡಮೆ. ಅನೇಕ ಜನ ಬೆಳ್ಳುಳ್ಳಿಯನ್ನೇ ತಿನ್ನುವುದಿಲ್ಲ. ಬ್ರಾಹ್ಮಣರಿಗೆ ಇದಾಗದು. ಆದರೂ ನಮ್ಮ ಪೂರ್ವಿಕರು ಬೆಳ್ಳುಳ್ಳಿಯನ್ನು ಕಸ್ತೂರಿ ಎಂದು ಭಾವಿಸಿದ್ದರು. ಎಷ್ಟೇ ಚೆನ್ನಾಗಿ ಬೆಳೆ ಮಾಡಿದರೂ ಒಂದು ಎಕರೆಗೆ 30 ಮಣ ಬರುತ್ತದೆ. ಮಣಕ್ಕೆ $1\frac{3}{4}$ ರೂಪಾಯಿನಿಂದ 2 ರೂಪಾಯಿನವರೆಗೆ ಅದರ ದರ. ಆದ್ದರಿಂದ ಒಂದು ಎಕರೆಗೆ 60 ರೂಪಾಯಿ ಬಂತು. ಒಂದು ಎಕರೆಗೆ 60 ರೂಪಾಯಿಗಳಂತೆ ಬಂದರೆ ಎಷ್ಟು ಎಕರೆಗಳನ್ನು ಬಿಡಬೇಕಾಗುತ್ತದೆಂದು ಸೆಲೆಕ್ಟ್ ಕಮಿಟಿಯವರೂ ಕೂಡ ಯೋಚನೆ ಮಾಡಲಿಲ್ಲವೆಂದು ಕಾಣುತ್ತದೆ. ಅಲ್ಲದೆ ಈರುಳ್ಳಿ, ಬೆಳ್ಳುಳ್ಳಿ ಎರಡೂ ಒಟ್ಟಿಗೆ ಬೆಳೆಯತಕ್ಕದ್ದು. ಅಂಥದರಲ್ಲಿ ಈರುಳ್ಳಿಯನ್ನು 4 ನೆಯ ಕ್ಲಾಸ್ ಮಾಡಿದ್ದಾರೆ, ಬೆಳ್ಳುಳ್ಳಿಯನ್ನು 6 ನೆಯ ಕ್ಲಾಸ್ ಮಾಡಿದ್ದಾರೆ. ಇದೇ ರೀತಿ ಎಷ್ಟು ಬಿಡಬೇಕು ಎಂಬುದನ್ನು ಆಲೋಚನೆ ಮಾಡಬೇಕಾದದ್ದು ಸರ್ಕಾರದವರ ಮುಖ್ಯ ಕರ್ತವ್ಯ. ಸಾಮಾನ್ಯ ಸಂಸಾರಕ್ಕೆ 4,200 ರೂಪಾಯಿಗಳವರೆಗೂ ಬಿಡಬೇಕಾದರೆ ಎಷ್ಟು ಎಕರೆ ಬಿಡಬೇಕಾಗುತ್ತದೆ, ಹಾಗೆಯೇ ಒಟ್ಟು ಕುಟುಂಬಕ್ಕೆ ಎಷ್ಟು ಬಿಡಬೇಕಾಗುತ್ತದೆಂಬುದನ್ನು ಸರಿಯಾಗಿ ಲೆಕ್ಕ ಹಾಕಬೇಕೆಂದು ಹೇಳುತ್ತೇನೆ. ಈ ಸಂದರ್ಭದಲ್ಲಿ ಕಬ್ಬಿನ ವಿಷಯ ಸ್ವಲ್ಪ ಹೇಳಬೇಕು. ಕಬ್ಬಿಗೆ 20 ಎಕರೆಗಳವರೆಗೂ ಬಿಟ್ಟಿದ್ದೀರಿ. ಮಂಡ್ಯ ಪ್ರಾಂತ್ಯದ ವಿಚಾರ ಬಿಟ್ಟು ಬಾಕಿ ಪ್ರಾಂತ್ಯಗಳಲ್ಲಿ ಕಬ್ಬಿನ ಬೆಳೆ ಯಾವ ರೀತಿ ಇರುತ್ತದೆಂಬುದನ್ನು ಸ್ವಲ್ಪ ತಮ್ಮ ಗಮನಕ್ಕೆ ತರುತ್ತೇನೆ.

Sri A. BHEEMAPPA NAIK (Molakalmuru).—Sir, There seems to be one mistake with regard to garlic. Sir, the onions and garlic were put in the 4th class. But unfortunately they have been separated now. Onions are put in the 4th class and garlic is put in the 6th class. Hence this difference. Otherwise there would not have been any difference at all. The Hon'ble the Chief Minister knows as the Chairman of the Select Committee that onions and garlic were put together. I do not know why they are now separated. Perhaps it must be a mistake. Sri Chandrasekharaiya is right in saying that this comes under the same thing as onions, Sir. If it is wrong, it is not too late to correct.

ಶ್ರೀ ಕೆ. ಹನುಮಂತಯ್ಯ.—ಆಗಬಹುದು ; ಎರಡನ್ನೂ ಜೊತೆಯಲ್ಲೇ ಸೇರಿಸೋಣ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.— ಕಬ್ಬಿಗೆ 20 ಮೂರು ಅಡಿಗೆ ಬೆಲ್ಲ ಬರುತ್ತದೆ. ಅಂದರೆ ಸುಮಾರು 30 ಮಣ ಆಗುತ್ತದೆ. ಈಗಿನ ಧಾರಣೆಯಂತೆ $1\frac{3}{4}$–2 ರೂಪಾಯಿ ಪ್ರಕಾರ ಲೆಕ್ಕ ಹಾಕಿದರೆ ಒಂದು ಎಕರೆಗೆ 90–100 ರೂಪಾಯಿಗಳನ್ನು ಸಂಪಾದನೆ ಮಾಡುವುದೂ ಬಹಳ ಕಷ್ಟ. ಈ ಹಣದಲ್ಲಿ ಗಾಣದವರಿಗೆ $\frac{3}{4}$ ಪಾಲಿನಷ್ಟು ಹೋಗುತ್ತದೆ. ಅದರಲ್ಲೂ ಈಗ ನಮ್ಮ ಕಡೆ ಗಾಣ ಆಡುವವರಿಗೆ ಕೂಲಿ ಕೊಡುವುದಕ್ಕೂ ಹಣವಿಲ್ಲದೆ ಅನೇಕರು ಕಬ್ಬಿನ ಗದ್ದೆಗೆ ಬೆಂಕಿ ಹಾಕಿದ್ದಾರೆ. ಇಂಥ ಸಂದರ್ಭದಲ್ಲಿ ಆತ ತೆರಿಗೆ ಕೊಡು ಎಂದರೆ ಏನು ಕೊಟ್ಟಾನು ?

ಶ್ರೀ ಕೆ. ಹನುಮಂತಯ್ಯ.—ಖರ್ಚು ಹುಟ್ಟದೆ ಇದ್ದರೆ ಯಾವ ತೆರಿಗೆಯನ್ನೂ ಕೊಡಬೇಕಾಗಿಯೇ ಇಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಅದು ಹೇಗಾಗುತ್ತದೆ ? ಗದ್ದೆಯಲ್ಲಿ ಕಬ್ಬಿರುತ್ತದೆ ದು ಶ್ಯಾನುಭೋಗರು ಬರೆದಿರುತ್ತಾರೆ. ಅದರಂತೆ ತೆರಿಗೆ ಕೊಡಬೇಕಾಗಿ ಬಂದೇಬರುತ್ತದೆ. ಅಷ್ಟೇಕೆ ; ಮೊನ್ನೆ ತಾನೆ ನಮ್ಮ ಸ್ನೇಹಿತರೊಬ್ಬರ ಕಾಗದ ಬರೆದಿರುತ್ತಾರೆ. ಈಗಾಗಲೇ ಪಟೇಲ್ ಶ್ಯಾನುಭೋಗರುಗಳು ರೈತರಿಗೆ ಹೇಳಿಬಿಟ್ಟಿದ್ದಾರಂತೆ, ಎಲ್ಲರೂ ಲೆಕ್ಕ ಕೊಡಬೇಕು, ಖರ್ಚು ಪಟ್ಟಿ ಒದಗಿಸಬೇಕು ಎಂದು ಹೇಳುತ್ತಾ ಕಿರುಕುಳ ಮಾಡುವುದಕ್ಕೆ ಕೈಹಾಕಿದ್ದಾರಂತೆ. ಈ ರೀತಿಯಾಗಿ ಕಿರುಕುಳ ಮಾಡುವುದಕ್ಕೆ ಹೋದರೆ ರೈತರು ಯಾವ ರೀತಿ ಬದುಕುವುದಕ್ಕಾಗುತ್ತದೆ ? ರೈತರನ್ನು ಇಂಥ ಕಿರುಕುಳಗಳಿಂದ ವಿಮುಕ್ತರಾಗಿ ಮಾಡಬೇಕು ; ಬೇಕಾದರೆ ನಮ್ಮ ಜಮೀನುಗಳನ್ನೆಲ್ಲಾ ಸರ್ಕಾರದವರಿಗೇ ಬರೆದುಕೊಟ್ಟು ಬಿಡುತ್ತೇವೆ, ಅವರೇ ನಮಗೆ ಬೇಕಾದಷ್ಟನ್ನು ಕೊಟ್ಟು . . .

ಶ್ರೀ ಕೆ. ಹನುಮಂತಯ್ಯ.—ಸ್ವಾಮಿ, ತಾವು ಮಾಡಿದ offerನ್ನು ನಾನು ಒಪ್ಪುತ್ತೇನೆ. ತಮ್ಮ ಆಸ್ತಿಯೆಲ್ಲವನ್ನೂ ಬಿಟ್ಟುಕೊಟ್ಟರೆ, ಯಾವ ತೆರಿಗೆಯನ್ನೂ ಹಾಕುವುದಿಲ್ಲ. ಆಗ ನಿಮ್ಮ ತಂಟೆಗೇ ಯಾರೂ ಬರುವುದಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಅದೇಕೆ, ಕಾಫೀ ತೋಟಗಳನ್ನೆಲ್ಲಾ ನ್ಯಾಷನಲೈಸ್ ಮಾಡಿ ನೀವೇ ತೆಗೆದುಕೊಳ್ಳಿ. ಅವರ ಕಷ್ಟ ಸುಖಗಳನ್ನು ಬಲ್ಲವರು ಅವರ ವಿಷಯವನ್ನು ಹೇಳಬೇಕು ಅಷ್ಟೆ. ಅಲ್ಲಿನ ಮಳೆ, ಜಿಗಣೆಗಳ ಕಾಟದ ಮಧ್ಯೆ ಕಾಫಿ ಬೀಜ ಆರಿಸಿ ಎಷ್ಟು ಕಷ್ಟಪಡುತ್ತಿದ್ದಾರೆಂಬದನ್ನು ನೀವು ನೋಡಬೇಕು. ಸುಮ್ಮನೆ ಪ್ರತಿಯೊಬ್ಬರನ್ನೂ ಲೆಕ್ಕವಿಡಬೇಕೆಂದರೆ ಬಹಳ ಕಷ್ಟವಾಗುತ್ತದೆ. ಇದನ್ನೆಲ್ಲಾ ನೋಡಿಕೊಂಡು ಯಾವ ರೀತಿ ವಸೂಲು ಮಾಡಬೇಕೆಂಬುದನ್ನು ನೋಡಿಕೊಳ್ಳುವುದಕ್ಕೆ ಒಂದು ಕಮಿಟಿ ಮಾಡಬೇಕು. ಇಲ್ಲದಿದ್ದರೆ ಪಟೇಲ್ ಶಾನುಭೋಗರು ಪ್ರತಿಯೊಬ್ಬರಿಗೂ ಕಿರುಕುಳ ಕೊಡುತ್ತಾರೆ. ಅನೇಕರಿಗೆ ತೊಂದರೆಯಾಗುತ್ತದೆ. ದೇಶಕ್ಕೆ ಕೆಟ್ಟ ಹೆಸರು ಬರುತ್ತದೆ. ಕಿರುಕುಳ ತಪ್ಪಿಸಬೇಕಾದರೆ ಈ ವರುಷ ಆದ ಮೇಲೆ ನೋಡೋಣ, ಮೊದಲನೆ ವರ್ಷ ಯಾವ ರೀತಿ ಪರಿಣಾಮವಾಗುತ್ತದೆಂಬುದನ್ನು ನೋಡೋಣ ಎಂದು ಮುಖ್ಯ ಮಂತ್ರಿಗಳು ಹೇಳಿದರು. ಒಂದು ಸಾರಿ ಹಾಕಿದ ಮೇಲೆ, ಇನ್ನು ಬಿಡುವ ಪ್ರಶ್ನೆಯೆಲ್ಲಿ ಬಂತು ? ಇನ್ನೂ ವರ್ಷ ವರ್ಷ ಜಾಸ್ತಿಯಾಗುತ್ತದೆ. ಕೇಳಿದರೆ, ಕೆರೆ, ಕಟ್ಟೆ ಬೇಕೆಂದು ಕೇಳುತ್ತೀರಲ್ಲಾ, ಅದಕ್ಕೆ ಹಣ ಬೇಕು ಎನ್ನುತ್ತಾರೆ. ಆದ್ದರಿಂದ ಒಂದು ಸಾರಿ ಬಿದ್ದ ಮೇಲೆ

ದವರು ಬ್ಯಾಂಕುಗಳಲ್ಲಿ ಸಾಲವಂದಿಗರಾಗಿದ್ದಾರೆ. ಕೆಲವರೇನೋ ಶ್ರೀಮಂತರಿರಬಹುದು. ಎರಡು ಸಾವಿರ ಪಲ್ಲ ಬತ್ತ ಬೆಳೆಯುವ ಮನುಷ್ಯ ಯಾವ ತೆರಿಗೆಯೂ ಕೊಡಬೇಕಾಗಿಲ್ಲದೆ ಸುಪ್ಪತ್ತಿಗೆಯ ಮೇಲೆ ಸುಖವಾಗಿರಬಹುದು. ಅದೇ 20 ಮಣ ಕಾಫಿ ಬೆಳೆಯುವವನಿಗೆಷ್ಟು ಕಷ್ಟ! ಯಾವಾಗ ಸರ್ಕಾರದವರು 4,200 ರೂಪಾಯಿಗಳಿಗೆ ಮೇಲ್ಪಟ್ಟು ಬರುವ ಜಮೀನ್ದಾರರೆಲ್ಲರೂ ಅನುಕೂಲಸ್ಥರು, ತೆರಿಗೆ ಕೊಡಬಲ್ಲರು ಎನ್ನುವದನ್ನು ಭಾವಿಸಿದರೋ ಆಗ್ಗೆ 4,200 ರೂಪಾಯಿಗಳ ಮೇಲೆ ವರಮಾನವುಳ್ಳ ಪ್ರತಿಯೊಬ್ಬರ ಮೇಲೆಯೂ ಹಾಕಿ.

ಶ್ರೀ ಎ. ಭೀಮಪ್ಪನಾಯಕ್.—ಆಹಾರ ಧಾನ್ಯದ ತೆರಿಗೆ ಹಾಕದಿರುವುದಕ್ಕೆ ಕಾರಣವೇನೆಂದರೆ. . . .

Mr. SPEAKER.—Just I want to bring to the notice of the Hon'ble Member that the procedure adopted should be strictly adhered to. The Hon'ble Member can reply to the points later on. Without the permission of the Speaker no members should intervene and reply.

Sri A. BHEEMAPPA NAIK.—With your permission I intervened, Sir. Because I was a member of the Select Committee, therefore, with your permission I wanted to tell him.

Mr. SPEAKER.—I have no objection, but you can reply to his speech separately.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ನನಗೆ ಈ ವಿಷಯದಲ್ಲಿ ಇನ್ನೂ ಹೆಚ್ಚಿಗೆ ಮಾತನಾಡಬೇಕೆಂದು ಆಸೆಯಿದೆ. ಇಂಗ್ಲೀಷ್ ಸರಿಯಾಗಿ ತಿಳಿಯದಿರುವುದರಿಂದ ಇದರಲ್ಲಿರುವ ಕೆಲವು points ಮೇಲೆ ಮಾತ್ರ ಮಾತನಾಡುತ್ತೇನೆ. ಸರ್ಕಾರದವರು ಈಗ ತೆರಿಗೆ ವಸೂಲು ಮಾಡಲು ಗೊತ್ತುಮಾಡಿರತಕ್ಕ ವಿಧಾನ ಬಹಳ ಕಳವಳಕ್ಕೆಡೆ ಕೊಟ್ಟಿದೆ. ಈಗ ಸದ್ಯದಲ್ಲೇ ತಾವು ಈ ಕಾನೂನನ್ನು ಜಾರಿಗೆ ಕೊಡುವುದರಲ್ಲಿದ್ದೀರಿ. ಆದ್ದರಿಂದ ಇವೊತ್ತೇ ನಾನು ತಮಗೆ ಮನವಿ ಮಾಡಿಕೊಳ್ಳುತ್ತೇನೆ. ಜಾರಿಗೆ ಕೊಟ್ಟಾಗ ಉಂಟಾಗುವ ತೊಂದರೆಗಳನ್ನು ಗ್ರಾಮಸ್ಥರು ಬಂದು ತಮಗೆ ಅಹವಾಲು ಹೇಳಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಮಂತ್ರಿಗಳು ಪ್ರವಾಸ ಹೋದ ಕಾಲದಲ್ಲಿ ಜನಗಳಿಂದ ಬರುವಂಥ ಅಹವಾಲುಗಳಿಗೆ ಹೆಚ್ಚಿಗೆ ನಿಗಾ ಕೊಡಬೇಕೆಂದು ಹೇಳುತ್ತೇನೆ. ಏಕೆಂದರೆ ನಾನು ಆಗಲೇ ಹೇಳಿದ ಹಾಗೆ ಹಿಂದೆ ಕಂಟ್ರೋಲ್ ಇದ್ದಾಗ ಯಾವ ರೀತಿ ಕಿರುಕುಳವುಂಟಾಗುತ್ತಿತ್ತೋ ಅದಕ್ಕೆ ಇಮ್ಮಡಿಯಾದ ಪ್ರಮಾಣದಲ್ಲಿ ಕಿರುಕುಳ ಇನ್ನು ಮೇಲೆ ಉಂಟಾಗುತ್ತದೆಂಬುದನ್ನು ತಾವು ಗಮನಿಸಬೇಕು. ಸರ್ಕಾರದವರೇನೋ 20 ಎಕರೆಗಳ ಒಳಗಿದ್ದರೆ ಅವರ ತಂಟೆಗೇ ಬರುವುದಿಲ್ಲವೆಂದು ಇಲ್ಲೇನೋ ಹೇಳುತ್ತೀರಿ, ಆದರೆ ತೆರಿಗೆ ವಿಧಿಸಬೇಕಾದರೆ ಉತ್ಪತ್ತಿಯನ್ನು ಹೆಚ್ಚು ಕಡಮೆ ತೋರಿಸಿ ಕಿರುಕುಳಕ್ಕೆ ಆಸ್ಪದವಾಗುತ್ತದೆ. ಆದ್ದರಿಂದ ಈಗಲೆ ನಿಖರವಾಗಿಯೊಂದು ಗ್ರಾಮದಲ್ಲೂ ಒಂದು ಕಮಿಟಿ ಮಾಡಿ ವಸೂಲಿ ಮಾಡಲು ನೋಟೀಸ್ ಕೊಡಬೇಕಾದರೆ, ಯಾರಾರಿಗೆ ಕೊಡಬೇಕೆಂಬುದನ್ನು ಅವರು ನಿಷ್ಕರ್ಷೆ ಮಾಡುವಂತೆ ಏರ್ಪಡಿಸಬೇಕು. ಹಾಗಿಲ್ಲದೆ, ಸುಮ್ಮ ಸುಮ್ಮನೆ ನೋಟೀಸುಗಳನ್ನು ಕೊಡುವುದಕ್ಕೆ ಅವಕಾಶ ಕೊಟ್ಟರೆ ರೈತರು ಹಾಳಾಗುತ್ತಾರೆ. ಅವರು ವೃಥಾ ಲಾಯರುಗಳನ್ನು ಜೊತೆಗೆ ಕರೆದುಕೊಂಡು ಕೋರ್ಟು ಕಚೇರಿಗೆ ತಿರುಗಬೇಕಾಗುತ್ತದೆ. ಲಾಯರುಗಳಿಗೆ ಚೆನ್ನಾಗಿ ಕಾಫಿ, ದೋಸೆ, ಇವನಿಗೆ ಒಣರೊಟ್ಟಿ; ಅವರಿಗೆ ಮಸಾಲೆ ದೋಸೆ; ಇವನಿಗೆ ಮನೆಯಿಂದ ತೆಗೆದುಕೊಂಡು ಹೋಗಿದ್ದ ರೊಟ್ಟಿ ಬುತ್ತಿ. ಹಿಂದೆ ಕಂಟ್ರೋಲ್ ಇದ್ದಾಗ ಆ ಫುಡ್ ಕೇಸುಗಳು ಯಾವ ರೀತಿ ಆಗುತ್ತಿದ್ದವೋ ಈಗಲೂ ಅದೇ ರೀತಿ ತೊಂದರೆ ಆಗುತ್ತದೆ. ಈ ಕಾನೂನು ಜಾರಿಗೆ ಬಂದರೆ ಒಬ್ಬೊಬ್ಬ ರೈತನೂ ರೊಟ್ಟಿ ಬುತ್ತಿ ಕಟ್ಟಲೇಬೇಕಾಗುತ್ತದೆ. ಎರಡು ಮೂರು ಕೋರ್ಟುಗಳನ್ನು ತಿರುಗಲೇಬೇಕಾಗುತ್ತದೆ. ಮಧ್ಯೆ ಈ ಪೂಟ್ ಲಾಯರುಗಳನ್ನು ಬೇರೆ ಇಟ್ಟುಕೊಳ್ಳಲೇಬೇಕಾಗುತ್ತದೆ. ಏತಕ್ಕೆಂದರೆ ಈ ದಿವಸ ರೈತನು ಅನಕ್ಷರಸ್ಥ. ಹೀಗಾಗಿ ರೈತ ರೊಟ್ಟಿ ಬುತ್ತಿ ತಿಂದರೆ ಈ ಮಧ್ಯಸ್ಥಗಾರ ಮಸಾಲೆ ದೋಸೆ ಕೇಳುತ್ತಾನೆ. ಈ ದಿವಸ ಈ ಬಿಲ್ಲನ್ನು ಸರ್ಕಾರದವರು ಎಷ್ಟೇ ಬುದ್ಧಿವಂತಿಕೆಯಿಂದ ಮಾಡಿದರೂ ನಾಳೆ ರೈತನಿಗಂತೂ ಕಿರುಕುಳ ತಪ್ಪುವುದಿಲ್ಲ. ಆದರೆ ಈ ಬಿಲ್ಲನ್ನು ಯಾವ ರೂಪದಲ್ಲೇ ಆಗಲಿ ಸರ್ಕಾರ ಜಾರಿಗೆ ತರುವುದರಲ್ಲಿ ಸರ್ಕಾರದವರ ಉದ್ದೇಶವೇನೋ ಒಳ್ಳೆಯದಾಗಿದ್ದರೂ, ಶ್ರೀಮಂತರಿಗೆ ತಾವು ತೆರಿಗೆ ಹಾಕಿದರೆ ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಆದರೆ ಈ ರೈತಾಪಿವರ್ಗಕ್ಕೆ ಹಾಕಿದ ಪಕ್ಷಕ್ಕೆ ನನಗಂತೂ ಆ ನನ್ನ ಕ್ಷೇತ್ರದವರು ಏನು ಹೇಳುತ್ತಾರೋ ಎನ್ನತಕ್ಕಂಥಾ ಯೋಚನೆ ನನ್ನನ್ನು ಹಗಲೂ-ರಾತ್ರಿ ಎಡಬಿಡುವುದಿಲ್ಲ. ಆದರೆ ಸಾಮಾನ್ಯವಾಗಿ ಇಲ್ಲಿ ಸೇರಿರತಕ್ಕಂಥ ಅನೇಕ ಜನ ಮಾನ್ಯ ಸದಸ್ಯರಿಗೆ ಆ ಹಳ್ಳಿಗಳಲ್ಲಿ ಜನರ ಕಾಟ ಹೇಗಿರುತ್ತೆಂಬುದನ್ನು ಅನುಭವಿಸಿರುತ್ತಾರೆ. ಈ ಸಭೆಯ ಕಾರ್ಯ ಕಲಾಪಗಳನ್ನು ಪೂರೈಸಿಕೊಂಡು ನಾವು ನಮ್ಮ ಕ್ಷೇತ್ರಗಳಿಗೆ ವಾಪಸ್ಸು ಹೋದಾಗ ನಮಗಂತೂ ತುಂಬ ಕಿರುಕುಳ ಕೊಡುತ್ತಾರೆ. ನೀವು ಕೊಟ್ಟಂಥ ವಾಗ್ದಾನಕ್ಕೆ ವ್ಯತಿರಿಕ್ತವಾಗಿ ನಡೆದಿದ್ದೀರೆಂದು ಹಂಗಿಸುತ್ತಾರೆ. ಇದರಿಂದ ದೇಶಕ್ಕೆ ಮುಂದೆ ಬಹಳ ಅನುಕೂಲವಾಗುತ್ತದೆ, ಅಂದರೆ ಅವರಾರೂ ಒಪ್ಪುವುದಿಲ್ಲ. ಈ ದಿವಸ ಕೊಡಗಿನಲ್ಲಿ ಕಾಫಿ ಮೇಲೆ ರೂಪಾಯಿ ಒಂದಕ್ಕೆ ನಾಲ್ಕಾಣೆ ಮಾತ್ರ ತೆರಿಗೆ ವಿಧಿಸಿದ್ದಾರೆ. ನಮ್ಮ ಸರ್ಕಾರದವರು ಇಲ್ಲಿ ರೂಪಾಯಿ ಒಂದಕ್ಕೆ ಐದೂವರಾಣೆವರೆಗೂ ತೆರಿಗೆ ಹಾಕಿದ್ದಾರೆ. ಆದರೆ ನಮ್ಮ ಸಂಸ್ಥಾನದಲ್ಲಿ ಅಡಕೆ, ತೆಂಗು, ಕಾಫಿ ಮತ್ತು ಏಲಕ್ಕಿ ಹೆಚ್ಚಾಗಿ ಬೆಳೆಯುತ್ತಿರುವುದು ಕೇವಲ ಮೂರು ಜಿಲ್ಲೆಗಳಲ್ಲಿ ಮಾತ್ರ. ಹೀಗೆ ಇಷ್ಟೊಂದು ಅಧಿಕ ಪ್ರಮಾಣದ ತೆರಿಗೆಯನ್ನು ಈ ಮೂರು ಜಿಲ್ಲೆಯವರು ಕೊಡಬೇಕಾಗಿದ್ದರೆ ಅವರೇನು ನಿಮ್ಮ ಹಣವನ್ನು ತಿಂದಿದ್ದಾರೆ? ಅಥವಾ ಆ ಮೂರು ಜಿಲ್ಲೆಯವರು ಏನು ಅಂಥ ಪಾಪಮಾಡಿದ್ದಾರೆ? ಈ ಬಿಲ್ಲಿನಿಂದ ಮೂರು ಲಕ್ಷವೇ ಬರಲಿ ಅಥವಾ ಮೂರು ಸಾವಿರವೇ ಬರಲಿ, ಆದರೆ ಸರ್ಕಾರದವರು ಎಲ್ಲರನ್ನೂ

(ಶ್ರೀ ವೈ. ಎಂ. ಚಂದ್ರಶೇಖರಯ್ಯ.)

ಯಲ್ಲಿ ಈ ರಿಯಾಯಿತಿಗಳನ್ನು ಕೊಡಬೇಕು. ಇಲ್ಲಿಯ ವರೆಗೂ ಈ ಅಡಿಕೆ, ತೆಂಗು ಇತ್ಯಾದಿ ಆಸ್ತಿಗಳನ್ನು ಇಟ್ಟುಕೊಂಡಿದ್ದವರೆಲ್ಲಾ ಸಾಲಕ್ಕೆ ತುತ್ತಾಗಿ ಬಹಳ ಕಷ್ಟದಲ್ಲಿದ್ದಾರೆ. ಈ ದಿವಸ ತಾವು ಅವರ ಮೇಲೆ ಹೀಗೆಲ್ಲಾ ತೆರಿಗೆ ಹಾಕಿದ್ದೇ ಆದರೆ ಅವರು ಹೊರಗಡೆ ಎಲ್ಲಾದರೂ ಸಾಲಮಾಡಿ ದುಡ್ಡು ತಂದು ಅದನ್ನು ತಮ್ಮ ಜೊಕ್ಕಸಕ್ಕೆ ತುಂಬ ಬೇಕಾಗಿರುತ್ತದೆ. ಇನ್ನು ಈ ವರ್ಷವೇ ಈ ಆಕ್ಟ್ ಜಾರಿಗೆ ಬರಬೇಕೆಂದು ಹೇಳುತ್ತಿರುವಾಗ ಇದರಿಂದ ಅನೇಕ ಅನ್ಯಾಯಗಳೂ, ಅಕ್ರಮಗಳೂ ಉಂಟಾಗುತ್ತವೆ. ಹೀಗೆ ಏಕ್‌ದಂ ತಾವು ಒಂದು ಕಾನೂನನ್ನು ಜಾರಿಗೆ ತರುವುದರಿಂದ ರೈತಾಪಿ ವರ್ಗಕ್ಕೆ ಎಷ್ಟು ಕಷ್ಟ ನಷ್ಟಗಳುಂಟಾಗುತ್ತವೆ ಎನ್ನುವುದನ್ನು ಆಲೋಚನೆ ಮಾಡಬೇಡವೇ? ಈಗ ತಾವು ಏನೊಂದು ರಿಯಾಯಿತಿಗಳನ್ನು ಕೊಟ್ಟರೆ ಈ ಮಸೂದೆ ಬಹಳ ಉತ್ತಮ ರೀತಿಯಲ್ಲಿ ಕೆಲಸಮಾಡಬಲ್ಲದೆಂದು ತೀರ್ಮಾನಮಾಡಿದ್ದೀರೋ. ಅದು ಅಷ್ಟೇ ಸಾಲದು. ಅದಕ್ಕೆ ನನ್ನ ಸಲಹೆ ಈ ರೀತಿಯಿದೆ: ಈ ತೆರಿಗೆಯನ್ನು ವಿಧಿಸತಕ್ಕ ಸಂಬಂಧದಲ್ಲಿ ಪ್ರತಿಯೊಂದು ಗ್ರಾಮಕ್ಕೂ ಒಂದೊಂದು ಪ್ರತ್ಯೇಕವಾದ ಕಮಿಟಿಯಿರಬೇಕು. ಪ್ರತಿಯೊಂದು ಹಳ್ಳಿಯಲ್ಲೂ ಈ ದಿವಸ ಎರಡು ಪಾರ್ಟಿಗಳಿದ್ದೇ ಇರುತ್ತವೆ. ಇದರ ಜೊತೆಗೆ ಗ್ರಾಮದಲ್ಲಿರತಕ್ಕಂಥ ಆ ಅಧಿಕಾರಿಗಳು ಅಂದರೆ ಪಟೇಲ್, ಶ್ಯಾನುಭೋಗರುಗಳು ಈ ಪಹಣಿ ಬರೆಯುವಾಗ ಯಾರು ರಾಗಿ ಬೆಳೆಯುನ್ನಿಟ್ಟಿರುತ್ತಾರೋ ಅಂಥವರಿಗೆ ಕೊತ್ತಂಬರಿ ಬೆಳೆಯಿಟ್ಟಿರುತ್ತಾರೆಂದೂ, ಕೊತ್ತಂಬರಿ ಬೆಳೆಯನ್ನು ಯಾರು ಇಟ್ಟಿರುತ್ತಾರೋ ಅಂಥವರೆಲ್ಲಾ ಬೇರೊಂದು ಬೆಳೆಯನ್ನಿಟ್ಟಿರುತ್ತಾರೆಂದೂ 'ಬರೆದಿದ್ದಂಥಾ ನಿದರ್ಶನಗಳನ್ನು ಅನೇಕವೇಳೆ ನಾನೇ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದಿದ್ದೇನೆ; ಅವರಿಗೆ ಅಜಮಾಯಿಷಿ ಬಗ್ಗೆ ತೋರಿಸಿಯೂ ಇದ್ದೇನೆ. ಇದೆಲ್ಲಾ ಹಿಂದಿನಿಂದಲೂ ನಡೆದುಕೊಂಡು ಬಂದಿರತಕ್ಕಂಥ ರಾಜ್ಯಭಾರದ ವಿತರಣೆ. ಈ ದಿವಸವೂ ಸಹ ಗ್ರಾಮಗಳಲ್ಲಿ ಆ ಪಟೇಲ್, ಶ್ಯಾನುಭೋಗರುಗಳೇ ರಾಜ್ಯಭಾರ ನಡೆಸುತ್ತಿದ್ದಾರೆ. ರೈತರಿಗೆ ಈ ಪಟೇಲ್, ಶ್ಯಾನುಭೋಗರ ಕಷ್ಟವನ್ನು ತಪ್ಪಿಸಿಕೊಂಡರೆ ಆಯಿತೆಂದು ಹೇಳುವ ಹಾಗೆ ಇಲ್ಲ. ಇವರ ಮೇಲೆ ಆ ಶೇಕ್‌ದಾರರು ಬೇರೆ ಇದ್ದಾರೆ. ಈ ಮೂರು ಜನರಿಗೂ ರೈತರನ್ನು ಹೇಗೆ ಕಷ್ಟಕ್ಕೆ ಗುರಿಮಾಡಿ ಅವರನ್ನು ಹೇಗೆ ಖರ್ಚಿಗೆ ಗುರಿಪಡಿಸಬಹುದು ಎನ್ನುವುದು ಚೆನ್ನಾಗಿ ಗೊತ್ತಿದೆ. ನಾವು ಈ ದಿವಸ ದೇಶದ ಹಿತದೃಷ್ಟಿಯಿಂದ ಈ ತೆರಿಗೆಯನ್ನು ಹಾಕತಕ್ಕದ್ದು ಒಂದು ಕಡೆಗೆ ಇರಲಿ; ಆ ಹಳ್ಳಿಗಳಲ್ಲಿ ಇರತಕ್ಕಂಥ ಸನ್ನಿವೇಶಗಳೇನೆಂಬುದನ್ನು ಗಮನಿಸದೆ ಇದಕ್ಕೆ ನಾವು ಕೈಹಾಕುವ ಪಕ್ಷದಲ್ಲಿ ಆ ಜನರು ಟ್ಯಾಕ್ಸ್ ಕೊಡುವುದರ ಜೊತೆಗೆ ಅವರ ಮನೆಗಳೆಲ್ಲಾ ನೆಲಸಮವಾಗಿ ಹೋಗುತ್ತವೆ. ಈ ಹಿಂದೆ ಆ ಆಹಾರದ ಹತೋಟಿಗಳಿದ್ದಾಗಲೂ ಸಹ ಅನೇಕ ಜನ ರೈತರು ಈ ಅಧಿಕಾರಿಗಳ ಹೊಡೆತಕ್ಕೆ ಸಿಕ್ಕಿ ಅನೇಕ ರೀತಿಯಲ್ಲಿ ತೊಂದರೆಪಟ್ಟು ಹಾಳಾಗಿ ಹೋಗಿದ್ದಾರೆ. ಕೆಲವು ಸಂದರ್ಭಗಳಲ್ಲಿ 4-5 ಸಾವಿರದವರೆಗೂ ಖರ್ಚು ಮಾಡಬೇಕಾದಂಥ ಪ್ರಸಂಗಗಳೂ ಆಗ ಒದಗಿದ್ದವು. ಅನೇಕ ಹೇಮಾಹೇಮಿ ಲಾಯರುಗಳೇ ಆ ಕೇಸುಗಳನ್ನು ನಡೆಸಿದ್ದಾರೆ. ಈ ದಿವಸ ತಾವು ಟೆನೆನ್ಸಿ ಆಕ್ಟನ್ನು ಬೇರೆ ಜಾರಿಗೆ ತರಬೇಕೆಂದಿದ್ದೀರಿ. ಇದಕ್ಕಾಗಿ ಯಾರೂ ಕಳ್ಳ ಲೆಕ್ಕವನ್ನಿಡಬೇಕಾಗಿಲ್ಲ. ಆದರೆ ತಾವು ಅತ್ತಕಡೆ ಟೆನೆನ್ಸಿ ಆಕ್ಟ್ ಇತ್ತಕಡೆ ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್ ಆಕ್ಟ್ ಎರಡನ್ನೂ ಜಾರಿಗೆ ತಂದು ಬಿಟ್ಟರೆ ಅಲ್ಲಿಗೆ ರೈತರ ಬಾಳು ಪೂರೈಸಿತು. ಈ ದಿವಸ ನಮ್ಮ ಮೈಸೂರು ಸಂಸ್ಥಾನದಲ್ಲಿ ಶೇಕಡ 90 ರಷ್ಟು ರೈತರಿಗೆ ಸುಳ್ಳು ಹೇಳುವುದು ಬರುವುದಿಲ್ಲ. ಅಂಥ ಸುಳ್ಳನ್ನು ಹೇಳತಕ್ಕವರಿದ್ದರೆ ಶೇಕಡ 10 ಇರಬಹುದು. ನಮ್ಮ ದೇಶದ ಆಡಳಿತ ಅಂಥವರಿರುವುದರಿಂದಲೇ ಇನ್ನೂ ಸುಗಮವಾಗಿ ನಡೆಯುತ್ತಿದೆ, ಅವರಿಗೆ ಈ ದಿವಸ ಈ ಸಭೆಗೆ ಕೂಡ ಬಂದು ಮಾತನಾಡಲು ಅವಕಾಶವಿದೆ. ಸ್ವಾಮಿ, ನಾನು ಇದಕ್ಕೆ ಒಂದು ಉದಾಹರಣೆಯಾಗಿ ಹೇಳಬೇಕೆಂದರೆ, ದೇಶೋದ್ಧಾರಮಾಡುತ್ತೇವೆಂದು ಹೇಳಿ ನಾವೀದಿವಸ ಈ ಸಭೆಗೆ ಬಂದು ಇಲ್ಲಿ ಕುಳಿತು ಹೀಗೆ ಮಾಡಿದಾಗ ದೇಶವು ಉನ್ನಪ್ತಾ ಎಂದು ಅಂದರೆ ನಾವು ತಿನ್ನತಕ್ಕಂಥ ಅನ್ನ ಖಂಡಿತ ಮೈಹತ್ತುವುದಿಲ್ಲ. ರೈತನನ್ನು ಕಷ್ಟದಿಂದ ಪಾರುಮಾಡತಕ್ಕಂಥ ಭಾರ ಸರ್ಕಾರದಮೇಲೆ ಬಿದ್ದಿದೆ. ಈಗಾಗಲೇ ಅನೇಕ ಜನ ಮಾನ್ಯ ಸದಸ್ಯರು ಹೇಳಿರುವಂತೆ ಅವರನ್ನು ಕಷ್ಟದಿಂದ ಪಾರುಮಾಡತಕ್ಕಂಥ ಭಾರ ಆ ಪಟೇಲ್-ಶ್ಯಾನುಭೋಗರು ಮತ್ತು ಶೇಕದಾರರ ಕೈಲಿಲ್ಲ. ತಾವು ಹೇಳಿರತಕ್ಕ ಪ್ರಕಾರ ಈ ಅಗ್ರಿಕಲ್‌ಚರಲ್ ಇನ್‌ಕಮ್ ಯಾರಿಗೆ 4,200 ರೂಪಾಯಿಗಳ ಒಳಗೆ ಇರುತ್ತದೋ ಅಂಥ ರೈತರಿಗೆ ಸರ್ಕಾರದವರಿಂದ ಒಂದು ನೋಟೀಸ್ ಕೂಡ ಹೋಗಬಾರದು, ಏನಾದರೂ ಹಾಗೆ ಒಂದು ನೋಟೀಸ್ ಹೋಯಿತು ಎಂದು ಹೇಳಿದರೆ ರಾತ್ರಿಯೆಲ್ಲಾ ಮನೆಯಲ್ಲಿ ಗಂಡ-ಹೆಂಡತಿಯರಿಬ್ಬರೂ ಅಳುತ್ತಿರುತ್ತಾರೆ. ಇಂಥಾದ್ದಕ್ಕೆಲ್ಲಾ ಅವಕಾಶವಿರಬಾರದು. ಈಗಾಗಲೇ ಶ್ರೀ ಮಹಮ್ಮದ್ ಇಮಾಂರವರು 'ತಾವೆಲ್ಲರೂ ಶ್ರೀ ಕೆ. ಹನುಮಂತಯ್ಯನವರು-ಇಂದ್ರ-ಚಂದ್ರ, ಇವರಿಗೇ ನಾವೆಲ್ಲರೂ ಓಟ್ ಕೊಡಬೇಕು ಎಂದು ಹೇಳಿ ಕೊಟ್ಟಿದ್ದೀರಿ; ಅದಕ್ಕೇ ಅವರು ಈ ರೀತಿ ಮಾಡುತ್ತಿದ್ದಾರೆ' ಎಂದು ಹೇಳಿದ್ದಾರೆ. ಈವರೆಗೆ ಸರ್ಕಾರದವರು ಏನೊಂದು ಭರವಸೆಯನ್ನು ನೀಡಿದ್ದಾರೋ ಅದಕ್ಕನುಸಾರವಾಗಿ, ರೈತರಿಗೆ ಅಗತ್ಯವಾಗಿ ಬೇಕಾಗಿರುವಂಥ, ಕೆರೆಕಟ್ಟೆಗಳೂ, ಬಾವಿಗಳೂ, ರಸ್ತೆಗಳೂ ಇತ್ಯಾದಿ ಅನುಕೂಲಗಳನ್ನೆಲ್ಲಾ ಮಾಡಿಯೇ ತೀರಬೇಕು. ಇದರಿಂದ ಯಾವ ರೈತನಿಗೂ ಕಿರುಕುಳ ಬರಬಾರದು. ಸಾಮಾನ್ಯವಾಗಿ ದೊಡ್ಡ ಶ್ರೀಮಂತರ ಮೇಲೆ ಯಾರೂ ಬೀಳುವುದಕ್ಕೆ ಹೋಗುವುದಿಲ್ಲ. ಅವರನ್ನು ಕಂಡರೆ ಎಲ್ಲರಿಗೂ ಗೌರವವಿದೆ. ಪ್ರತಿಯೊಬ್ಬರಿಗೂ ತಮ್ಮ ತಮ್ಮ ಗೌರವವನ್ನು ಕಾಪಾಡಿಕೊಳ್ಳುವುದಕ್ಕೆ ಅವಕಾಶವಿರಬೇಕು. ಜಮೀನ್ದಾರನಿಗಿರತಕ್ಕ ಕಷ್ಟಗಳೇನೆಂಬುದನ್ನು ಜಮೀನ್ದಾರರು ಮಾತ್ರ ಬಲ್ಲರು. ಈ ದಿವಸ ಆ ರೈತನ ಕ್ಷೇಮದ ಬಗ್ಗೆ ಸರ್ಕಾರದವರ ಮೇಲೆ ಬಹಳ ಜವಾಬ್ದಾರಿ ಬಿದ್ದಿದೆ. ದೇಶಾದ್ಯಂತವೂ ಇರತಕ್ಕಂಥ ಕೋಟ್ಯಂತರ ಜನರ ಜವಾಬ್ದಾರಿಯನ್ನು ಹೊತ್ತಿರುವಂಥ ಸರ್ಕಾರ ಮತ್ತು ಈ ಮಾನ್ಯ ಶಾಸನ ಸಭಾ ಸದಸ್ಯರು ಈ ದಿವಸ ಬಹಳ ದೀರ್ಘವಾಗಿ ಆಲೋಚನೆಮಾಡಿ ಇದನ್ನು ನಿರ್ಧರಿಸಬೇಕಾಗಿದೆ. ಒಟ್ಟಿನಲ್ಲಿ ರೈತನಿಗಿರತಕ್ಕ ತೊಂದರೆಗಳೇನೇನಿರುತ್ತವೆಯೋ ಅವುಗಳನ್ನು ಕಮ್ಮಿಮಾಡಬೇಕೆಂದು ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಈ ದಿವಸ ನಾವು ಈ ತೆರಿಗೆ ಮಸೂದೆಗೆ ನಮ್ಮ ಅನುಮತಿಯನ್ನು ಕೊಟ್ಟೆವೆಂದರೆ ನಾಳೆ ಪ್ರತಿಯೊಂದು ದಿನಸಿಯಮೇಲೂ ಮೆಣಸಿನಕಾಯಿ ಮೊದಲುಗೊಂಡು ತೆರಿಗೆ ಬೀಳುತ್ತದೆ. ತಾವು ಈ ಕಾನೂನನ್ನು ಜಾರಿಗೆ ತರುವಂತೆ ಆ ಟೆನೆನ್ಸಿ ಕಾನೂನನ್ನು ಜಾರಿಗೆ ಕೊಡಿ. ಈಗಂತೂ ಯಾವ ರೂಪದಲ್ಲಿಯಾದರೂ ತಾವು ತೆರಿಗೆ ಹಾಕಲೇಬೇಕಾಗಿದೆ. ಈ ವಿಚಾರವನ್ನು

ಮ್ಮ ರಾಜಪ್ರಮುಖರೂ ಸಹ ತಮ್ಮ ಭಾಷಣದಲ್ಲಿ
ಪ್ಪಣಿ ಕೊಡಿಸಿದ್ದಾರೆ ಮುಖ್ಯ ಮಂತ್ರಿಗಳೂ ಸಹ
ೇಶದ ಕ್ಷೇಮಾಭಿವೃದ್ಧಿಯನ್ನು ಮುಂದುವರಿಸಬೇಕಾ
ದ್ದರೆ, ದೇಶದಲ್ಲಿ ಸುಭಿಕ್ಷ ನೆಲಸಬೇಕಾಗಿದ್ದರೆ
ರ್ಕಾರ ಹಣವನ್ನು ಖರ್ಚು ಮಾಡಲೇಬೇಕು ಎಂದು
ೇಳಿದ್ದಾರೆ. ಸಾಧ್ಯವಾದಮಟ್ಟಿಗೂ ಸರ್ಕಾರ
ಡೆಸುವಂಥ ಕೆಲಸ ಕಾರ್ಯಗಳನ್ನು ಅದು ನಡೆಸಲಿ.
ದರ ಖರ್ಚುವೆಚ್ಚಗಳಿಗೆ ನಾವು ಭಾಗಿಗಳಾಗಿಯೇ
ಗುತ್ತೇವೆ. ಆದರೆ, ಸರ್ಕಾರದವರು ಒಬ್ಬರಿಗೊಂದು
ುತ್ತೊಬ್ಬರಿಗೆ ಮತ್ತೊಂದು ರೀತಿಯಾಗಿ ನೋಡ
ಾರದು. ಈ ದಿವಸ ನಮ್ಮ ಸರ್ಕಾರ ಏಲಕ್ಕಿ,
ಾಫಿ, ಇತ್ಯಾದಿ ತೋಟಗಾರರ ವಿಚಾರದಲ್ಲಿ ಬಹಳ
ಠಿಣದಿಂದ ವರ್ತಿಸಿದೆ. ಆ ತೋಟಗಾರರ ಕಷ್ಟ
ಷ್ಟೇ ಎಂದು ಹೇಳುವುದಕ್ಕಾಗುವುದಿಲ್ಲ. ಏಲಕ್ಕಿ
ೋಟಗಳಲ್ಲಿ ನಾಗರಹಾವಿನ ಕಾಟ ಬೇರೆ ಇರುತ್ತದೆ.
ನಾಗರಹಾವುಗಳ ಜೊತೆಗೆ ಮಿಡಿನಾಗರ ಎಂದು
ಂದು ಜಾತಿಯ ಹಾವು ಬೇರೆ ಇರುತ್ತವೆ. ಹೀಗೆಲ್ಲಾ
ಾನಾ ತೊಂದರೆಗಳಿವೆ. ಒಟ್ಟಿನಲ್ಲಿ ಹೇಳುವುದಾದರೆ
ಕಾಫಿ ಮತ್ತು ಏಲಕ್ಕಿ ತೋಟಗಾರರ ತೊಂದರೆ
ನೆಂಬುದು ಆ ಪರಮಾತ್ಮನಿಗೇ ಗೊತ್ತಾಗಬೇಕು.
ದೇ ರೀತಿಯ ತೊಂದರೆಗಳು ಮಲೆನಾಡಿನಲ್ಲಿ
ಡಕೆ ತೋಟಗಾರರಿಗೂ ಇರುತ್ತವೆ. ಬಹುಶಃ
ಮ್ಮ ಮಂತ್ರಿಗಳು ಯಾರಿಗೂ ಈ ಅಡಕೆ ತೋಟ ಇದ್ದ
ಾಗೆ ಕಾಣುವುದಿಲ್ಲ. ಒಂದು ವರ್ಷಕ್ಕೆ ಬರತಕ್ಕಂಥ
ಡಕೆ ವರಮಾನವೆಷ್ಟು ಮತ್ತು ಒಂದು ವರ್ಷಕ್ಕೆ ಆ
ಡಕೆ ತೋಟಗಳಿಗೆ ಮತ್ತು ಅಡಕೆ ರೇಖೆಗಾಗಿ ಎಷ್ಟು
ರ್ಚುಮಾಡಬೇಕಾಗಿದೆ ಎನ್ನತಕ್ಕಂಥ ಲೆಕ್ಕಾಚಾರ
ಾಡಿ ನೋಡಿದಾಗಲೇ ಈ ತೋಟಗಾರರ ಬಂಡವಾಳ
ೊತ್ತಾದೀತು. ಒಂದು ಅಡಕೆ ತೋಟ ಬೆಳೆಸು
ುದಕ್ಕೆ ಎಷ್ಟು ಹಣ ಖರ್ಚು ಮಾಡಬೇಕೆಂಬುದು
ಾರಿಗೂ ಗೊತ್ತಾಗುವುದಿಲ್ಲ. ಒಂದು ತೋಟ
ೆಳೆಸಲು ಎಷ್ಟು ವರ್ಷಕಾಲ ವ್ಯಥೆ ಪಡಬೇಕು ಎನ್ನು
ುದನ್ನು ಮೊದಲು ಆಲೋಚಿಸಬೇಕಾಗಿದೆ. ಈ ದಿವಸ
ಾವು ದೇಶದಲ್ಲಿರತಕ್ಕಂಥ ಎಲ್ಲಾ ಪ್ರದೇಶಗಳಿಗೂ
ಂದೇ ರೀತಿಯ ಕಾನೂನು ಮಾಡುವುದಕ್ಕಾಗು
ುದಿಲ್ಲ. ಹಗಲೂ-ರಾತ್ರಿ ಒಂದೇ ಸಮನಾಗಿ ಮಳೆ
ುರಿಯತಕ್ಕಂಥ ಮಲೆನಾಡಿದೆ; ಅಂಥ ಮಲೆನಾಡಿಗೂ
ುತ್ತು ಮೈದಾನಕ್ಕೂ ಒಂದೇ ರೀತಿಯ ಕಾನೂನು
ಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಹಾಗೆ ಎಲ್ಲಾ
ಪ್ರದೇಶಗಳಿಗೂ ಒಂದೇ ಕಾನೂನು ಮಾಡತಕ್ಕಂಥಾದ್ದು
ನ್ಯಾಯವೂ ಅಲ್ಲ. ತಾವು ಕಾಫಿ ಮೇಲೆ ಹಾಕಬಹು
ದಾದಂಥ ಮಾಗ್ಜಿಮಂ ತೆರಿಗೆ ಎಂದರೆ ನಾಲ್ಕು ಆಣೆ
ಗಳಿಗೂ ಮೇಲೆ ಹೋಗಬಾರದು. ಕಾಫಿ ಬೆಳೆಗೆ
ಕೊಟ್ಟಿರತಕ್ಕಂಥ ಜಮೀನು ವಿನಾಯಿತಿಯನ್ನು ಇನ್ನೂ
ಜಾಸ್ತಿಮಾಡಬೇಕು. ಏಲಕ್ಕಿಗೆ ಈಗ ಹಾಕಿರುವ ತೆರಿಗೆ
ಬಹಳ ವಿಪರೀತವಾಯಿತು. ಈ ದಿವಸ ಮಣ
ಒಂದಕ್ಕೆ ಸುಮಾರು 250-300 ರೂಪಾಯಿಗಳ
ಧಾರಣೆಯಿರಬಹುದು. ಆದರೆ ಆ ಬೆಳೆ ಎಂಥಾದ್ದು
ಅದನ್ನು ವ್ಯವಸಾಯಮಾಡಲು ಎಷ್ಟು ರೀತಿಯಲ್ಲಿ
ತೊಂದರೆಗಳಿರುತ್ತವೆ ಎನ್ನುವುದನ್ನು ಮೊದಲು
ಯೋಚಿಸಬೇಕಾಗಿದೆ. ತಾವು ಈ ತೆರಿಗೆ ಹಾಕುವ
ಮುನ್ನ ಆ ಮಲೆನಾಡಿನ ಅಭಿವೃದ್ಧಿಯನ್ನು ಯೋಚಿಸ
ಬೇಕಾದದ್ದು ಬಹಳ ಮುಖ್ಯವಾದಂಥ ವಿಷಯ. ಈ
ಮಲೆನಾಡಿನ ಅಭಿವೃದ್ಧಿಗೆ ಪ್ರಥಮ ಸ್ಥಾನ ಕೊಡ
ಬೇಕೆಂದು ಇಂಡಿಯಾ ಸರ್ಕಾರದವರೇ ಹೇಳಿದ್ದಾರೆ.
ಮಲೆನಾಡಿನಲ್ಲಿ ಆಗಬೇಕಾದಂಥ ಕೆರೆಕಟ್ಟೆಗಳಿಗೆ
ಮೊದಲು ಹಣವನ್ನು ಮೀಸಲಾಗಿಡಬೇಕೆಂದು ನಮ್ಮ
ಸರ್ಕಾರಕ್ಕೆ ಇಂಡಿಯಾ ಸರ್ಕಾರದವರು ತಿಳಿಸಿದ್ದಾರೆ.
ಅಂದರೆ ಈ ನಮ್ಮ ಮಲೆನಾಡಿನವರ ಕಷ್ಟವೆಷ್ಟಿದೆ ಎನ್ನು
ವುದು ಅವರಿಗೂ ಸಹ ವೇದ್ಯವಾಗಿದೆ. ಈ ಕಾರಣ
ದಿಂದ ನಮ್ಮ ಸರ್ಕಾರ ಈ ದಿವಸ ಆ ಮಲೆನಾಡಿನ
ಅಭಿವೃದ್ಧಿಗೆ ಹೆಚ್ಚಿನ ರಿಯಾಯಿತಿಗಳನ್ನು ಕೊಡ
ಬೇಕೆಂದು ಹೇಳಿ ಸರ್ಕಾರದವರಲ್ಲಿ ಪ್ರಾರ್ಥಿಸಿಕೊಂಡು
ಯಾವ ಯಾವ ರೈತನಿಗೆ 4,200 ರೂಪಾಯಿಗಳ
ತನಕ ವರಮಾನವಿರುತ್ತದೆಯೋ ಅಂಥವರಿಗೆ ಒಂದು
ನೋಟೀಸ್ ಕೂಡ ಹೋಗಬಾರದು; ಹಾಗೆ
ಮತ್ತೊಮ್ಮೆ ಈ ಕಾನೂನನ್ನು ವಿಮರ್ಶೆಮಾಡಿ ತರ
ಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿ
ಸುತ್ತೇನೆ.

2 P.M.

ಶ್ರೀ ಬಿ. ಎಚ್. ಬೋರಣ್ಣಗೌಡ (ಬೇಲೂರು).—ಸ್ವಾಮಿ, ಈಗ ಸಭೆಯ ಮುಂದೆ ಚರ್ಚೆಯಾಗುತ್ತಿರುವಂಥ ಮಸೂದೆಯನ್ನು ನಾನು ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಬೇಕೆಂದು ನಿಂತಿದ್ದೇನೆ. ಈಗ ಈ ಬೆಳೆಗಳಲ್ಲಿ ಕೆಲವು ಬಹಳ ಆದಾಯ ಬರತಕ್ಕಂಥ ಬೆಳೆಗಳಿರುತ್ತವೆ. ಈ ಕಾರಣದಿಂದ ಸರ್ಕಾರದವರು ಈ ದಿವಸ ಹೀಗೆ ಅಧಿಕ ಆದಾಯ ಬರುವಂಥ ಬೆಳೆಗಾರರು ತಮಗೆ ಬರತಕ್ಕಂಥ ಅಧಿಕ ಆದಾಯದಲ್ಲಿ ಸ್ವಲ್ಪ ಭಾಗವನ್ನು ಸರ್ಕಾರಕ್ಕೆ ಏಕೆ ಕೊಡಬಾರದು ಎನ್ನತಕ್ಕ ಅಭಿಪ್ರಾಯದಿಂದ ಈ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಎಂಬತಕ್ಕಂಥ ಮಸೂದೆಯನ್ನು ಸಭೆಯ ಮುಂದೆ ಮಂಡಿಸಿದ್ದಾರೆ. ಬಹಳ ಸಂತೋಷ. ಹೆಚ್ಚಿಗೆ ಅನುಕೂಲವಾಗಿರತಕ್ಕಂಥವರಮೇಲೆ ಈ ತೆರಿಗೆ ಬೀಳುತ್ತದೆ ಅನುಕೂಲಸ್ಥರಾಗಿರತಕ್ಕಂಥವರಿಂದ ಹೀಗೆ ತೆರಿಗೆಯನ್ನು ಬರಮಾಡಿಕೊಳ್ಳಬೇಕೆಂಬುದೇ ಸರ್ಕಾರದ ಉದ್ದೇಶವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಯಾವ ತರಹ ತೊಂದರೆಗೂ ಅವಕಾಶಕೊಡದಂತೆ, ತೊಂದರೆ ಬಂದರೂ ಕೂಡ ಅದಕ್ಕೆ ಬಲಿಯಾಗದೆ ಅಂಥಾದ್ದಕ್ಕೆ Remission ಕೊಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಕೆಲವು ಸಂದರ್ಭಗಳಲ್ಲಿ ಅವರು ತೋರಿಸಿರತಕ್ಕ ದರ ಬಹಳ ಹೆಚ್ಚಾಗಿದೆ. ಇವೊತ್ತು ಕೊಡಗಿನಲ್ಲಿ ಬಹಳ ಹೆಚ್ಚಾಗಿ ಕಾಫಿ ಬೆಳೆ ಆಗುತ್ತಿದೆ. ಒಂದು ಎಕರೆಗೆ 40 ಮಣದಿಂದ 50 ಮಣದವರೆಗೆ ಬೆಳೆಯುವ ತೋಟಗಳನ್ನು ನಾವು ನೋಡಿದ್ದೇವೆ. ಅಂತಹ ತೋಟಗಳಲ್ಲಿ ನಾವು ಹೇರಳವಾಗಿ ಬೆಳೆ ಬೆಳೆದರೂ ಕೂಡ 15 ಲಕ್ಷ ರೂಪಾಯಿಗಳು Agriculture Income-tax ನಿಂದ ಬರುತ್ತದೆ ಎಂದು ಮುಖ್ಯ ಮಂತ್ರಿಗಳು ಹೇಳಿದರು. ಇಲ್ಲಿ ಕೊಡಗಿನ ವಿಸ್ತೀರ್ಣಕ್ಕಿಂತ ಮೂರರಷ್ಟು ಎಕರೆಗಳು ಇವೆ. ಕಾಫಿ ತೋಟದಿಂದ ಎಷ್ಟು ಬರಬಹುದು ಎಂದು ಯೋಚನೆ ಮಾಡುವಾಗ ಇವೊತ್ತು ತೆರಿಗೆ ಹಾಕಿರುವ ರೀತಿಯಲ್ಲಿ ನಾನು ಸ್ವಲ್ಪ ವಿವರಣೆ ಕೊಡಬೇಕೆಂದು ಬಯಸುತ್ತೇನೆ. ಈಗ ತಾವು ವಿವರಣೆ ಕೊಟ್ಟ ಪ್ರಕಾರ 150 ಎಕರೆ ಇರತಕ್ಕಂಥಾದ್ದಕ್ಕೆ ನಾಲ್ಕು ರೂಪಾಯಿನಂತೆ ಕೊಡಬೇಕಾಗಿ ಬರುತ್ತದೆ. 150 ರಿಂದ 2-0 ಎಕರೆ ಇರುವುದಕ್ಕೆ ಆರು ರೂಪಾಯಿಯಂತೆ ಕೊಡಬೇಕಾಗುತ್ತದೆ. 500 ಎಕರೆ ಇರುವವರು ತಕ್ಷಣ ಆರು ರೂಪಾಯಿನಿಂದ ಹತ್ತು ರೂಪಾಯಿ ವರೆಗೆ ಕೊಡಬೇಕಾಗಿದೆ. 750 ಎಕರೆ ಇರುವವರು 14 ರೂಪಾಯಿ ಕೊಡಬೇಕಾಗುತ್ತದೆ. 1,250 ಎಕರೆ ಇರತಕ್ಕಂಥವರು ಒಂದು ಎಕರೆಗೆ 24 ರೂಪಾಯಿಯಂತೆ ಕೊಡಬೇಕಾಗುತ್ತದೆ. 5,000

(ಶ್ರೀ ಬಿ. ಎಸ್. ಬೋರಣ್ಣಗೌಡ.)

ಎಕರೆಗಳಿಗೆ ಮೇಲ್ಪಟ್ಟು ಇರುವವರು 36 ರೂಪಾಯಿ ಕೊಡಬೇಕಾಗುತ್ತದೆ. ಹೀಗೆ ಅವರು ಕೊಡುತ್ತಾ ಹೋದರೆ . . . .

Sri K. HANUMANTHAIYA.—What you say refers only to compounding. ಲೆಕ್ಕಕೊಟ್ಟು ಆದಾಯ ಬರಲಿಲ್ಲ ಎಂದು ತೋರಿಸಿದರೆ ಒಂದುಸಾವಿರ ಎಕರೆ ಇದ್ದರೂಕೂಡ ಒಂದು ಕಾಸೂ Income-tax ಕೊಡಬೇಕಾಗಿಲ್ಲ. ಕಾಫೀಪ್ಲಾಂಟರ್ಸ್, ಟೀ ಪ್ಲಾಂಟರ್ಸ್ ಬಹಳ ಬುದ್ಧಿವಂತರು. ಒಂದುವೇಳೆ ಲೆಕ್ಕತೋರಿಸಿ Income-tax ಕೊಡಬೇಕಾಗಿಲ್ಲ ಎಂದರೆ ಲೆಕ್ಕವನ್ನು ತೋರಿಸಿಯೇ ತೋರಿಸುತ್ತಾರೆ. ಲೆಕ್ಕ ಇಡದೆ compounding ಮಾಡುವುದರಲ್ಲಿ ಈ ರೇಟ್ ಇದೆಯೇ ಹೊರತು ಲೆಕ್ಕವನ್ನು ತೋರಿಸುವುದಕ್ಕೂ ಅವಕಾಶವಿದೆ. ಲೆಕ್ಕ ತೋರಿಸದೆ Income-tax ಕೊಡುತ್ತೇವೆಂದು ಯಾರೂ ಮುಂದೆ ಬರುವುದಿಲ್ಲ. ಆದ್ದರಿಂದ ಲೆಕ್ಕವಿಡದೆ ಇರತಕ್ಕ ಸಂದರ್ಭದಲ್ಲಿ ಏನು ಮಾಡುತ್ತಾರೆಂಬುದನ್ನು ನೀವು ವಾದಮಾಡುತ್ತಿದ್ದೀರಿ. ಲೆಕ್ಕವನ್ನು ಇಟ್ಟೇ ಇಡುತ್ತಾರೆ. ಲೆಕ್ಕವನ್ನು ತೋರಿಸುತ್ತಾರೆ. ಆದಾಯ ಬಾರದೇ ಇದ್ದರೆ ಅವರು ಇಷ್ಟುಹಣ ಕೊಡಲೇಬೇಕಾಗಿ ಬರುವುದಿಲ್ಲ. Therefore you are representing only one side of the picture and that too in a contingency of accounts not being kept.

ಶ್ರೀ ಬಿ. ಎಸ್. ಬೋರಣ್ಣಗೌಡ.—ಮಾನ್ಯ ಮುಖ್ಯ ಸಚಿವರು ಹೇಳಿದರು, ದೊಡ್ಡ Planters Income-tax ಕೊಡುವವರು ಲೆಕ್ಕ ಇಟ್ಟೇ ಇಡುತ್ತಾರೆ, ಲೆಕ್ಕ ಇಡದೇ ಇದ್ದ ಸಂದರ್ಭದಲ್ಲಿ ಈ ರೇಟ್ ಕೊಡಬೇಕಾಗುತ್ತದೆ, ಲೆಕ್ಕ ಇಟ್ಟಿದ್ದ ಸಂದರ್ಭದಲ್ಲಿ ಇಷ್ಟು ತೆರಿಗೆ ಬೀಳುವುದಿಲ್ಲ ಎಂದು. ಒಳ್ಳೆಯದು, ಸ್ವಾಮಿ, ಅದನ್ನು ಒಪ್ಪಿಕೊಳ್ಳುತ್ತೇನೆ.

Sri K. HANUMANTHAIYA.—A person who roughly maintains accounts will not certainly go in for this flat rate of composition. He will certainly take advantage of the provision. The general rule is—he must produce accounts. Only in cases where accounts are not maintained, this will come into operation.

ಶ್ರೀ ಬಿ. ಎಸ್. ಬೋರಣ್ಣಗೌಡ.—ಲೆಕ್ಕ ಹೇಗೆ ಇಡುವುದೆಂದು Income-tax ಕೊಡತಕ್ಕಂಥವರಿಗೆ ಗೊತ್ತಾಗುತ್ತದೆ. Sales-Tax ಕೊಡತಕ್ಕಂಥವರಿಗೆ ಲೆಕ್ಕ ಇಡುವುದು ಏನು ಗೊತ್ತಾಗುತ್ತದೆ?

Sri K. HANUMANTHAIYA.—As the Hon'ble Member knows income-tax and sales-tax and other taxes have come to stay. It is not as though Agricultural Income-tax has opened a fresh avenue of trouble.

ಶ್ರೀ ಬಿ. ಎಸ್. ಬೋರಣ್ಣಗೌಡ.—ಈಗ Income-tax ಮತ್ತು Sales-Tax ಕೊಡುವವರು ಹೇಗೆ ಕೊಡುತ್ತಾರೆಂಬುದು ಸರ್ಕಾರ ನಡೆಸತಕ್ಕಂಥವರಿಗೆ ಗೊತ್ತಾಗುವುದಿಲ್ಲ, ಅಧಿಕಾರಿಗಳಿಗೆ ಗೊತ್ತಾಗುತ್ತದೆ. ಅಧಿಕಾರಿಗಳು ಬಹಳ ನಿಪುಣರು ಇರುತ್ತಾರೆ. ಹೇಗೆ ವಸೂಲುಮಾಡುತ್ತಾರೆಂದು ವಾಸ್ತವಿಕವಾಗಿ ಗೊತ್ತಿದ್ದ ಪಕ್ಷದಲ್ಲಿ ಅವರಿಗೆ ಅದರ ಕಷ್ಟಸುಖ ಗೊತ್ತಾಗುತ್ತದೆ ಎಂದು ಹೇಳುತ್ತೇನೆ. ಯಾವ ತರಹ ಲೆಕ್ಕ ಇಡಬೇಕು ಎನ್ನುವುದಕ್ಕೆ ಒಂದು ಔಷಧಿ ಅಂಗಡಿಯನ್ನು ಉದಾಹರಣೆಗೆ ತೆಗೆದುಕೊಳ್ಳಿ. ಅಲ್ಲಿ 10 ಸಾವಿರ ರೂಪಾಯಿ ವ್ಯಾಪಾರ ಇರಬಹುದು ಎಂದು Sales-Tax ನಿಗದಿ ಮಾಡಿಕೊಂಡಿರಬಹುದು. ಅವರು ಸರಿಯಾಗಿ ಲೆಕ್ಕ ಇಟ್ಟಿಲ್ಲ ಎಂದರೆ ಯಾರು ಉತ್ತರ ಸರಿಯಾಗಿದೆ ಎಂದು ಹೇಳುವವರು? ದೊಡ್ಡ ಪ್ಲಾಂಟರುಗಳ ಹತ್ತಿರಹೋಗಿ ನೀವು ಲೆಕ್ಕ ತಪ್ಪುಬರೆದಿದ್ದೀರಿ, ನೀವು ಸರಿಯಾಗಿ ಬರೆದಿಲ್ಲ ಎಂದರೆ ಅದ ಸರಿಯೆಂದು ವಾದಮಾಡುವುದಕ್ಕೆ ನಮ್ಮ ಕೈಯಲ್ಲಿ ಆಗುತ್ತದೆಯೇ! ನಾವು ವಾದಮಾಡಿದರೆ ಅದನ್ನು ಒಪ್ಪುತ್ತಾರೆಯೇ ಎಂಬುದನ್ನು ನಾನು ತಮ್ಮ ಮುಂದೆ ಇಡುತ್ತಾ ಇರುವುದು.

ಶ್ರೀ ಕೆ. ಹನುಮಂತಯ್ಯ.—ಅದನ್ನು ಒಪ್ಪದೇ ಇದ್ದಾಗ Deputy Commissionerಗೆ Appeal provide ಮಾಡಿದ್ದೇವೆ. Revenue Boardಗೂ Appeal ಇದೆ. These are well-known methods of redress and they are provided in the Bill.

ಶ್ರೀ ಬಿ. ಎಸ್. ಬೋರಣ್ಣಗೌಡ.—ಈಗ ತಾವು ಉತ್ತರ ಕೊಡಿಸೋಣವಾಯಿತು. ಸರಿಯಾದ ರೀತಿಯಲ್ಲಿ ವ್ಯವಸ್ಥೆಮಾಡದೆ ಬೆಳೆ ಹೋದಕಾಲದಲ್ಲಿ remission ಕೊಡುವುದಕ್ಕೆ ಏರ್ಪಾಡು ಮಾಡುತ್ತಾರೆಂದು ಹೇಳಿದರು. ಬೆಳೆ ಹೋಗಿದೆಯೆಂದು ರಿಪೋರ್ಟ್ ಮಾಡುವವರು ಯಾರು?

ಶ್ರೀ ಕೆ. ಹನುಮಂತಯ್ಯ.—Income-tax ವಸೂಲುಮಾಡುವ ರೀತಿಯನ್ನು ಮನಸ್ಸಿನಲ್ಲಿ ತೆಗೆದುಕೊಂಡರೆ ಆ ಭಯಕ್ಕೆ ಕಾರಣವಿಲ್ಲ. ಶ್ಯಾನುಭೋಗರು ಪಹಣಿಲೆಕ್ಕ ಬರೆದಾಕ್ಷಣಕ್ಕೆ ಅದರಮೇಲೆ ತೆರಿಗೆ ವಸೂಲು ಮಾಡುವ ಹಾಗಿದ್ದರೆ ಕಷ್ಟಬರುತ್ತಿತ್ತು. ಪಹಣಿಲೆಕ್ಕ ಈ ಚಿತ್ರದಲ್ಲಿ ಬರುವುದಿಲ್ಲ. ಮೊದಲು ನೋಟೀಸ್ ಕೊಟ್ಟ ತಕ್ಷಣ Assessee ರೈತರು ನಮಗೆ ಇಷ್ಟು ಬೆಳೆ ಆಯಿತು, ಇಷ್ಟು ಆದಾಯ ಬಂತು ಎಂದು ಮೊಟ್ಟಮೊದಲು ಅವರು ಕೊಡುವುದೇ ಆಧಾರ. ತಪ್ಪು ಸರಿ ಇದ್ದರೆ ಸ್ಥಳ ಪರೀಕ್ಷೆಮಾಡಿ ಇನ್ನೊಂದು ಲೆಕ್ಕದಲ್ಲಿ ನೋಡುತ್ತಾರೆ. ಶ್ಯಾನುಭೋಗರು ಲೆಕ್ಕ ಬರೆಯುತ್ತಾರೆ. ಅದರ ಆಧಾರದಮೇಲೆ ವಿಧಾಯಕ ಮಾಡುತ್ತಾರೆ.

ಶ್ರೀ ಬಿ. ಎಸ್. ಬೋರಣ್ಣಗೌಡ.—ಈಗ ಕಾಫಿ ಬೆಳೆಯುವವರು, ಕಾಫಿ ಬೋರ್ಡಿಗೆ ಮೊದಲು ಇಷ್ಟು ಬೆಳೆ ಆಗಬಹುದೆಂದು ಅಂದಾಜು ಕೊಡುತ್ತಾರೆ. ಬೆಳೆ ಆಗಿ Pick ಮಾಡಿದಮೇಲೆ ಅವರು ಇಷ್ಟೇ pick ಮಾಡಿದೆವು, ಇಷ್ಟೇ ಬೆಳೆ ಆಯಿತು ಎಂದು ಲೆಕ್ಕ ಇಟ್ಟುಕೊಂಡು Depotಗೆ surrender ಮಾಡಬೇಕು. ಇಷ್ಟೆಲ್ಲಾ ಕೇಂದ್ರ ಸರ್ಕಾರದವರು ವಿಧಾಯಕ ಮಾಡಿದ್ದಾರೆ. ಎಷ್ಟೋ ಜನ ಏನೇನೋ ಮಾಡುತ್ತಾರೆ, ಎಲ್ಲೋ ಹೋಗುತ್ತಾರೆ, ಹೇಗೋ ವ್ಯಾಪಾರವಾಗುತ್ತದೆ. ಕೇಂದ್ರ ಸರ್ಕಾರದವರಿಗೆ ಲೆಕ್ಕ ಕೊಡುವುದಕ್ಕಿಂತ ಹೆಚ್ಚಿಗೆ ವ್ಯಾಪಾರಮಾಡಿಕೊಳ್ಳುತ್ತಾರೆ. ಆದ್ದರಿಂದ ಸಾಧಾರಣವಾಗಿ ಯಾವುದಾದರೂ ಒಂದು ಕಾನೂನು ಮಾಡಿದರೆ ಆ ಕಾನೂನಿನಿಂದ ನುಣಚಿಕೊಳ್ಳುವ ಭಾವನೆ ಎಲ್ಲರಿಗೂ ಇರುತ್ತದೆ. ಈ ತರಹ ಇರಕೂಡದು. ಕಾನೂನಿಗೆ ಎಲ್ಲರೂ ಸರಿಸಮಾನವಾಗಿ ಬಾಧ್ಯರು ಆಗಬೇಕು ಎಂಬುದೇ ನಮ್ಮ ಉದ್ದೇಶ. ಲೆಕ್ಕ ಇಟ್ಟು ಬೆಳೆ ಆಗಿಲ್ಲ ಎಂದು ಹೇಳಿ ಇಷ್ಟೇ ಕೊಡುತ್ತೇವೆ ಎಂದರೆ ಆಗ ನಮಗೆ ಕಡಿಮೆ ಆದಾಯ ಬರುತ್ತದೆ ಎಂದು ಹೇಳುತ್ತಾರೆ. ಸಾಧಾರಣವಾಗಿ

,000 ಮಣ ಕಾಫಿ ಬೆಳೆಯುವವರು Crop esti- ate 1,500 ಮಣವೆಂದು ಹೇಳಬಹುದು ; ಎಂದೂ offee Planters ಆ ರೀತಿ ಹೇಳುವುದಕ್ಕೆ ಆಗುವು ಲ್ಲ. ಯಾವಾಗಲೂ ಕಾಫಿ ಬೆಳೆ ಇಷ್ಟಾಯಿತು ಎಂದು orrect ಆಗಿ ಕೊಟ್ಟೇ ತೀರಬೇಕಾಗುತ್ತದೆ. ಯಾವ ೀತಿಯೂ ಮೋಸಮಾಡುವುದಕ್ಕೆ ಆಗುವುದಿಲ್ಲ. ಇನ್ನು ಲಕ್ಕಿ ಸ್ಥಿತಿಗತಿಗಳನ್ನು ತೆಗೆದುಕೊಳ್ಳೋಣ. ಏಲಕ್ಕಿ ಳೆ ಏನು ಸ್ಥಿತಿಯಲ್ಲಿದೆ ಎಂದರೆ ಒಂದು ಪರೇಲ್ ಆಟ ಡಿದ ಹಾಗೆ ಇದೆ.

ಶ್ರೀ ಕೆ. ಹನುಮಂತಯ್ಯ.—ಪರೇಲ್ ಆಟ ಆಡ ಾರದು, ನ್ಯಾಯವಾಗಿ Income-tax ಕೊಡಲಿ ಎಂದು ನಾನು ಹೇಳುವುದು.

ಶ್ರೀ ಬಿ. ಎಚ್. ಬೋರಣ್ಣಗೌಡ.—ಮಳೆಬಂದ ಕಾಲ ವಲ್ಲಿ ಬೆಳೆ ಬಂತು ಎಂದರೆ ಸಾಧಾರಣವಾಗಿ ಬೆಳೆ ಚೆನ್ನಾಗಿ ಬರುತ್ತದೆ. ರೇವತಿ ಮಳೆ ಬಾರದೆ ಹೋದರೆ, ಅದರ ಹಿಂದಿನ ಎರಡು ಮೂರು ಮಳೆ ಬಾರದೇಹೋದರೆ, ಅಲ್ಲಿಗೆ ಏಲಕ್ಕಿ ಬೆಳೆ ಹೋಯಿತು. ಮಳೆಯನ್ನೇ ನೆನಸಿಕೊಂಡು ಜಪಮಾಡುವ ಪ್ಲಾಂಟರ್ಸ್ ಸ್ಥಿತಿ ಎಷ್ಟು ಚೆನ್ನಾಗಿದೆಯೆಂದು ತಾವು ನೋಡಬೇಕು. ನನಗೆ ಕಂಡಹಾಗೆ ಸಾಧಾರಣವಾಗಿ ಕೊಡಗಿನಲ್ಲಿ ಕಾಫಿ ಮತ್ತು ಏಲಕ್ಕಿ ಬೆಳೆಗೆ ಯಾವ ದರದಂತೆ ಹಾಕಿ ದ್ದಾರೋ ಆ ದರಕ್ಕಿಂತ ಹೆಚ್ಚಿಗೆ ಹಾಕುವುದು ಸೂಕ್ತ ವಲ್ಲವೆಂದು ಸಲಹೆ ಕೊಡುತ್ತೇನೆ. ಕೊಡಗಿನಲ್ಲಿ ಏಲಕ್ಕಿ ವ್ಯಾಪಾರವಾಗುವುದಿಲ್ಲ. ಕೊಡಗಿನಲ್ಲಿ ಬೆಳೆದ ಏಲಕ್ಕಿ ಸಕಲೇಶಪುರದ ಮಾರ್ಕೆಟ್ಟಿಗೆ ಬಂದು ಬೇರೆ ಕಡೆಗೆ ಹೋಗುವುದರಿಂದ ಕೊಡಗಿನಲ್ಲಿ Agriculture Income-tax ಕೊಡುವವರು ಇಲ್ಲಿಗೆ ತಂದು ಮಾರು ತ್ತಾರೆ. ಆದ್ದರಿಂದ ಏಲಕ್ಕಿ ಮತ್ತು ಕಾಫಿ ಬೆಳೆಗೆ ಎಷ್ಟು ಖರ್ಚು ಎಂಬುದನ್ನು ಯೋಚನೆಮಾಡಿಕೊಂಡು ಮಾಡಬೇಕು. ಮದರಾಸಿನಲ್ಲಿ ಯಾವರೀತಿ ಇದೆಯೋ ಅದರಂತೆ ನಾವು ಅನುಸರಿಸೋಣ ಎಂದು ಹೇಳಿದರು. ನಮ್ಮ ಪಕ್ಕದಲ್ಲಿರುವ ಪ್ರಾಂತ್ಯದವರು, ಮಾನ್ಯ ಮಿತ್ರರು ಹೇಳಿದಹಾಗೆ, ಯಾವರೀತಿ Agricultural Income-taxನ್ನು ಹಾಕಿ ದೇಶದ ಅಭಿವೃದ್ಧಿ ಕಾರ್ಯ ಕ್ಕೋಸ್ಕರ ಹಣ ಸಂಪಾದನೆ ಮಾಡಬೇಕೆಂದು ಯೋಚಿ ಸಿದ್ದಾರೋ ಅದೇ ರೀತಿಯನ್ನು ನಾವು ಅನುಸರಿಸಿದರೆ ನಮಗೆ ಇರತಕ್ಕಂಥ ತೊಂದರೆಗಳು ಬಹಳ ಕಡಿಮೆ ಯಾಗುತ್ತವೆ. ಆದಕಾರಣ ಕಾಫಿ ಮತ್ತು ಏಲಕ್ಕಿ ಯನ್ನು 3ನೇ ದರ್ಜೆಗೆ ಸೇರಿಸಬೇಕೆಂದು ತಮ್ಮಲ್ಲಿ ವಿಜ್ಞಾಪಿಸಿಕೊಂಡು ನನ್ನ ಭಾಷಣವನ್ನು ಮುಗಿಸು ತ್ತೇನೆ.

ಶ್ರೀ ಕೆ. ಪಂಚಾಕ್ಷರಯ್ಯ (ಅರಸೀಕೆರೆ).—ಸ್ವಾಮಿ, Agricultural Income-tax ಬಿಲ್ಲನ್ನು ಸಭೆ ಯಲ್ಲಿ ಮಂಡಿಸಿದಾಗ ಇದು ಅಗತ್ಯವಿರಲಿಲ್ಲ ಎಂದು ನನ್ನ ಅಭಿಪ್ರಾಯವನ್ನು ತಿಳಿಸಿದ್ದೆ. ಹಾಗೆ ನಾನು ಸೂಚನೆ ಮಾಡುತ್ತಾ 3,500 ರೂಪಾಯಿಯಿಂದ 5,000 ರೂಪಾಯಿಗಳವರೆಗೂ exemption ಇರ ಬೇಕು ಎಂದು ಸೂಚಿಸಿದ್ದೆ. ಅನಂತರ ನಮ್ಮ ಅಭಿ ಪ್ರಾಯಗಳನ್ನು ಕ್ರೋಡೀಕರಿಸಿ ಸೆಲೆಕ್ಟ್ ಕಮಿಟಿಯು ವರ ರಿಪೋರ್ಟ್ ನಮ್ಮ ಮುಂದೆ ಇದೆ. ಅದರಲ್ಲಿ ಪೂರ್ಣ ತೃಪ್ತಿ ಆಗದೇ ಇದ್ದರೂ ಸಹ ತಕ್ಕಮಟ್ಟಿಗೆ ಸಮಾಧಾನವಾಗುವ ರೀತಿಯಲ್ಲಿ ಬಹುಮಟ್ಟಿಗೆ ತೊಂದ ರೆಗಳನ್ನು ನಿವಾರಣೆಮಾಡಿ ನಮ್ಮ ಮುಂದೆ ರಿಪೋ ರ್ಟನ್ನು ಇಟ್ಟಿದ್ದಾರೆ. ಒಂದೆರಡು ತಿದ್ದುಪಡಿಗಳು ಇದರಲ್ಲಿ ಆಗಬೇಕೆಂದು ಸೂಚಿಸುತ್ತೇನೆ. Coconut ಸಂಬಂಧವಾಗಿ 25 ಎಕರೆಯನ್ನು exempt ಮಾಡಿದ್ದಾರೆ, ಅದು ಖಂಡಿತ ಸಾಲದು. ಲೆಖ್ಖಾಚಾರ ಹಾಕುವಾಗ ಅಧಿಕಾರಿಗಳು ಅಂಕಿ ಸಂಖ್ಯೆಯನ್ನು ಸರಿಯಾಗಿ ಸರ್ಕಾರಕ್ಕೆ ಒದಗಿಸಿಲ್ಲ. ಮತ್ತು ಧಾರಣೆ ವಿಷಯದಲ್ಲಿ ಅವರು ಹಿಂದೆ ಇದ್ದ ಯಾವುದೋ ಒಂದು ಧಾರಣೆಯನ್ನು ಲೆಖ್ಖಾಚಾರ ಹಾಕಿ ಇವೊತ್ತಿನ ಧಾರ ಣೆಗೆ ಹೊಂದಿಕೊಂಡಿಲ್ಲದಂಥ ರೀತಿಯಲ್ಲಿ ಹಾಕಿದ್ದಾರೆ. ಈ ರೀತಿ ತಪ್ಪು ಲೆಖ್ಖಾಚಾರ ಹಾಕಿ ಖರ್ಚುವೆಚ್ಚಗಳನ್ನು ಸಾಕಷ್ಟು ರೀತಿಯಲ್ಲಿ ಗಣನೆಗೆ ತೆಗೆದುಕೊಂಡಿಲ್ಲವೆಂದು ಮಾತ್ರ ಹೇಳಬೇಕಾಗಿದೆ. ಅನಂತರ 66ನೇ sub-clause (a)ನಲ್ಲಿ ಒಂದು ಸಣ್ಣದಾದಂತಹ Amendment ಸಹ ಬೇಕು ಎಂದು ನನ್ನ ಅಭಿಪ್ರಾಯ. ಅದರಲ್ಲಿ ಈ ರೀತಿ ಹೇಳಿದೆ:

> "64—(*a*) in respect of perennial crops, the extent of land containing only plants or trees which have not reached the age of yielding crop shall, for purposes of composition of agricultural income-tax be excluded from the total extent of land of any person."

ಇದರಲ್ಲಿ ಎಷ್ಟು ಎಕರೆ ಬರುತ್ತದೆ ಎಂದು ಲೆಖ್ಖಾಚಾರ ಮಾಡಲು ಅಧಿಕಾರಿಗಳಿಗೆ ನಿರ್ದಿಷ್ಟವಾದ ಒಂದು ಸೂಚನೆ ಕೊಡುವುದಕ್ಕೋಸ್ಕರ ತೆಂಗಿನಮರದ ವಿಷಯ ದಲ್ಲಿ 40 ಫಲ ಬಿಡತಕ್ಕ ಮರಗಳಿಗೆ ಒಂದು ಎಕರೆಯಾಗಿ ಪರಿಗಣಿಸಬೇಕೆಂದು ಸೂಚಿಸುತ್ತೇನೆ.

ಶ್ರೀ ಕೆ. ಹನುಮಂತಯ್ಯ.—ಅದನ್ನು ತಾವು ಹೇಳು ವುದು ಸರಿಯಾಗಿದೆ. ಎಕರೆ ಎಂದಾಕ್ಷಣಕ್ಕೆ ಅಕಸ್ಮಾ ತ್ತಾಗಿ ಒಂದು ಎಕರೆ ಜಮೀನಿನಲ್ಲಿ 10-15 ಮರಗಳಿ ದ್ದರೂ ಅದನ್ನು 40 ಮರಗಳು ಇರುವ ಎಕರೆ ಎಂದು ಹೇಳುವುದಕ್ಕಾಗುವುದಿಲ್ಲ. Prescribed rules ಮಾಡುತ್ತಾರೆ. ಸರ್ಕಾರೀ ಅಧಿಕಾರಿಗಳಿಗೆ 40 ಗಿಡ ಗಳು ಇದ್ದರೆ ಅದನ್ನು ಒಂದು ಎಕರೆಯೆಂದು ಭಾವಿಸಿ ಎಂದು ರೂಲ್ಸ್ ಮಾಡುತ್ತೇವೆ. ಅದನ್ನು ಬಿಟ್ಟು ತಾವು ಹೇಳಿದ ಹಾಗೆ ಒಂದು ಎಕರೆಯಲ್ಲಿ ಒಂದು ತೆಂಗಿನ ಮರವಿರಲಿ, ಹತ್ತು ತೆಂಗಿನಮರವಿರಲಿ ಅದನ್ನು ಒಂದು ಎಕರೆ ತೆಂಗಿನಮರವೆಂದು ಭಾವಿಸುವುದಕ್ಕಾಗುವು ದಿಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ.—ಅದೂ ಒಂದು ಕಾರಣ. ಉದಾಹರಣೆಗೆ, ಒಬ್ಬ ರೈತನಿಗೆ 1,200 ತೆಂಗಿನಗಿಡ ಇವೆಯೆಂದು ಭಾವಿಸೋಣ. 1,200 ಗಿಡಗಳಿಗೆ ಸ್ವಲ್ಪ ಹೆಚ್ಚುಕಡಮೆ 30 ಎಕರೆ ಜಾಗ ಬೇಕಾಗುತ್ತದೆ. 30 ಎಕರೆಗೂ ಒಟ್ಟಿಗೆ ಅವನು ತೆಂಗಿನ ಸಸಿಗಳನ್ನು ಹಾಕುವುದಿಲ್ಲ. ಮುಂಚೆ ಸ್ವಲ್ಪ ಹಾಕುತ್ತಾನೆ. ಕೆಲವು ವರ್ಷಗಳು ಕಳೆದ ಮೇಲೆ ಇನ್ನು ಸ್ವಲ್ಪ ಹಾಕುತ್ತಾನೆ. ಹೀಗೆಯೇ ಮಾಡಿಕೊಂಡು ಕೆಲವಾರು ವರ್ಷಗಳಲ್ಲಿ 1,200 ಸಸಿಗಳನ್ನೂ ಬರ್ತಿಮಾಡಿರುತ್ತಾನೆ. ಆದ್ದ ರಿಂದ ಲೆಕ್ಕಕ್ಕೇನೋ 30 ಎಕರೆಗಳಷ್ಟು ಭಾಗದಲ್ಲಿ ತೆಂಗಿನಗಿಡಗಳನ್ನು ಹಾಕಿದ್ದರೂ ಸಸಿಗಳಿರುವುದು (ಫಲಕೊಡದೇ ಇರತಕ್ಕವು) 200 ಮಾತ್ರ ಎಂದು ಭಾವಿಸೋಣ. ಈ ಫಲ ಕೊಡದೇ ಇರುವ ಸಸಿಗಳನ್ನು ಒಟ್ಟಿನ ತೋಟದ 1,200 ಗಿಡದಲ್ಲಿ ವಜಾ ಮಾಡದೇ ಹೋದರೆ ಎಕರೆಗೆ 40 ತೆಂಗಿನ ಗಿಡಗಳಂತೆ ಲೆಖ್ಖಾ ಚಾರವನ್ನು ಹಿಡಿದು ಅಧಿಕಾರಿಗಳು ಅಸೆಸ್‌ಮೆಂಟ್ ಮಾಡುತ್ತಾರೆ. ನೀವು 25 ಎಕರೆಗಳವರೆಗೆ ಮಾತ್ರ Exemption ಕೊಟ್ಟಿರುವುದರಿಂದ ಅವನು ನಿಮ್ಮ ಅಧಿಕಾರಿಗಳ ಅಸೆಸ್‌ಮೆಂಟಿಗೆ ಒಳಗಾಗಬೇಕಾಗು ತ್ತದೆ. ಆದ್ದರಿಂದ ಅವನಿಗೆ ನ್ಯಾಯವಾಗಿ ನೋಡಿದರೆ

(ಶ್ರೀ ಕೆ. ಪಂಚಾಕ್ಷರಯ್ಯ.)

40 × 5 = 200 ತೆಂಗಿನ ಗಿಡಗಳು ಅಥವಾ 5 ಎಕರೆ ಜಮೀನು ವಜಾಮಾಡಿದರೆ—ಅವನು Assessmentಗೆ ಒಳಗಾಗುವುದಿಲ್ಲ. ಅಷ್ಟು ಎಕರೆಗಳಷ್ಟು Exemption ಕೊಡಬೇಕಾಗುತ್ತದೆ. ಇಂಥ ಸಂದರ್ಭಗಳಲ್ಲಿ ಅವನಿಗೆ Exemption ಕೊಡುತ್ತೀರಾ ಅಥವಾ ಅವನೂ Compoundingಗೆ ಬರುತ್ತಾನೆಯೇ ಎಂಬ ಬಗ್ಗೆ ನಿರ್ದಿಷ್ಟ ಸೂಚನೆ ಕೊಡದೆಹೋದರೆ ಬಹಳ ತೊಂದರೆಯಾಗುತ್ತದೆ.

*ಶ್ರೀ ಎ. ಭೀಮಪ್ಪನಾಯಕ್.—ಎಷ್ಟು ಎಕರೆಗಳಿದ್ದರೂ ಫಲಬಿಡದೆ ಇದ್ದರೆ ತೆರಿಗೆ ಕೊಡುವುದಿಲ್ಲ. ಆ ಅಂಶವನ್ನು (a) ಕ್ಲಾಜಿನಲ್ಲಿ ಸ್ಪಷ್ಟವಾಗಿ ಹೇಳಿದೆ. ಅಲ್ಲಿ ಹೇಳಿದೆ:

> (*a*) in respect of perennial crops, the extent of land containing only plants or trees which have not reached the age of yielding crop shall, for purposes of composition of agricultural income-tax, be excluded from the total extent of land of any person;"

Even if it is hundred acres and if it does not yield, it is excluded. Therefore his contention is not correct.

ಶ್ರೀ ಕೆ. ಹನುಮಂತಯ್ಯ.—ತಮ್ಮ ಅನುಮಾನ ನಿವಾರಣೆಗಾಗಿ ಸರ್ಕಾರದ ಪರವಾಗಿ ಈ ವಿವರಣೆ ಕೊಡಬಯಸುತ್ತೇನೆ. ತೆಂಗಿನಮರದ ವಿಷಯದಲ್ಲಿ 40 ಫಲ ಬಿಡತಕ್ಕ ತೆಂಗಿನ ಮರಗಳಿರುವ ಪ್ರದೇಶವನ್ನು ಒಂದು ಎಕರೆಯೆಂದು ಪರಿಗಣಿಸತಕ್ಕದ್ದೆಂದು ನಾನು ಹೇಳುತ್ತೇನೆ. ಅಂದಮೇಲೆ, ಫಲ ಬಿಡಲಿ, ಇಲ್ಲದಿರಲಿ, 40 ಗಿಡಕ್ಕೆ ಒಂದು ಎಕರೆಯೆಂದು ಪರಿಗಣಿಸುವುದಿಲ್ಲ. ಈ ಅಂಶವನ್ನು ರೂಲ್ಸ್‌ನಲ್ಲಿ ಸೇರಿಸುತ್ತೇವೆಂದು ನಾನು ಭರವಸೆ ಕೊಡುತ್ತೇನೆ.

ಶ್ರೀ ಕೆ. ಪಂಚಾಕ್ಷರಯ್ಯ.—ಆ ಮೇಲೆ, ಮೂರನೆಯ ಭಾಗದಲ್ಲಿ, Lumpsum rates of composition of agricultural income-tax ಎಂಬುದರಲ್ಲಿ ತೆರಿಗೆ ದರಗಳನ್ನು ವಿಧಿಸಿರುವುದು ಸ್ವಲ್ಪ ಸರಿಯಾಗಿಲ್ಲ. Part I ನಲ್ಲಿ 4,200 ರೂಪಾಯಿಗಳವರೆಗೂ Exemption ಕೊಟ್ಟು, ಅದರ ಮೇಲೆ ವರಮಾನ ಬರುತ್ತಿದ್ದರೆ, ಆ ವರಮಾನದಲ್ಲಿ ಮೊದಲನೆಯ 1,500 ರೂಪಾಯಿಗಳಿಗೆ ಏನೂ ಚಾರ್ಜ್ ಮಾಡದೆ ಬಾಕಿ ಮೊಬಲಗಿಗೆ ಮಾತ್ರ ಚಾರ್ಜ್ ಮಾಡುತ್ತಾರೆ. ಅದೇ Part III ನಲ್ಲಾದರೆ, Part I ನಲ್ಲಿನಂತೆ, ಮೊದಲನೆಯ groupಗೆ ಚಾರ್ಜ್ ಮಾಡದೆ ಬಿಟ್ಟಿಲ್ಲ. Part III ನಲ್ಲಿ ಮೊದಲನೆಯ ಗ್ರೂಪಿಗೇ 1-0-0 ರೂಪಾಯನ್ನೂ ವಿಧಿಸಿದ್ದಾರೆ. ಆದ್ದರಿಂದ Part III ನಲ್ಲಿ ಮೊದಲನೆಯ ಭಾಗದಲ್ಲಿ Basic Exemptionನನ್ನು ಕೊಡುವಂತೆ ಮಾಡಬೇಕಾದದ್ದು ನ್ಯಾಯ. ಇದಕ್ಕೆ ಅವಕಾಶ ಮಾಡಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಷಯವೇನೆಂದರೆ, Part I ನಲ್ಲಿ "On the first 1,500 of the total agricultural income, on the next 3,500 of the total agricultural income" ಎಂದು ಹಾಕಿದೆ. Part IIIನಲ್ಲಾದರೋ, "not exceeding 150 acres, exceeding 150 acres but not exceeding 250 acres." ಎಂದು ಹೇಳಿದೆ. ಈ ಭಾಗದಲ್ಲಿಯೂ ಕೂಡ ಮೊದಲನೆಯ ಭಾಗದಲ್ಲಿನಂತೆ "on the first, on the next" ಈ ರೀತಿ ಸೇರಿಸಬೇಕೆಂದು ಹೇಳುತ್ತೇನೆ.

ಇದಾದಮೇಲೆ, ಇನ್ನೊಂದು ಸೂಚನೆಯನ್ನು ಅಗತ್ಯವಾಗಿ ನಾನು ಮಾಡಬೇಕಾಗಿದೆ. ಈ ಮಸೂದೆ ಅಭಿಪ್ರಾಯದ ಪ್ರಕಾರ ಅನುಕೂಲಸ್ಥರಾಗಿರುವವರು, ಶ್ರೀಮಂತರು ತೆರಿಗೆ ಕೊಡುವಂತೆ ಮಾಡಬೇಕಾದ್ದೇನೋ ನ್ಯಾಯ. ಆದರೆ, ತೆರಿಗೆ ಭಾರ ಬೀಳುವಾಗ, ಅಧಿಕಾರಿಗಳು ಈ ಬಿಲ್ಲನ್ನು ಜಾರಿಯಲ್ಲಿ ತರುವಾಗ ಅನೇಕ ಜನ income-tax ಕೊಡಬೇಕಾಗಿಲ್ಲದಿರುವವರಿಗೂ ಸಹ ತೊಂದರೆಯುಂಟುಮಾಡತಕ್ಕ ಸಂಭವವಿದೆ. ಇದರ ನಿವಾರಣೆಗಾಗಿ ರೈತರಲ್ಲಿ ಯಾರು ಲೆಕ್ಕವಿಡುವುದಕ್ಕೆ ಸಾಧ್ಯವಿಲ್ಲವೋ, ಯಾರು ಅಜ್ಞಾನಿಗಳಾಗಿದ್ದಾರೋ ಅವರಿಗೆ ತೊಂದರೆ ಆಗದಂತೆ ರೂಲ್ಸ್‌ನಲ್ಲಿ ತಕ್ಕ ಏರ್ಪಾಡು ಮಾಡಬೇಕು. ಯಾವುದೇ ಅಧಿಕಾರಿಯಾಗಲಿ, ಯಾರಿಗೆ income-tax ಬೀಳಬಾರದೋ ಅಂಥ ರೈತನ ವಿಷಯದಲ್ಲಿ ಯಾವ ಕಾರಣದಿಂದಲೂ ನೋಟೀಸ್ ವಗೈರೆ ಕೊಟ್ಟು ಅನಾವಶ್ಯಕವಾಗಿ ತೊಂದರೆಗೀಡು ಮಾಡಿದರೆ ಅಂಥ ಅಧಿಕಾರಿಯನ್ನು ನಿರ್ದಯವಾಗಿ ಶಿಕ್ಷೆಮಾಡುತ್ತೇವೆಂದು ರೂಲ್ಸ್‌ನಲ್ಲಿ ಸೇರಿಸಬೇಕೆಂದು ನಾನು ಸೂಚನೆ ಕೊಡುತ್ತೇನೆ.

ಇಷ್ಟು ಹೇಳಿ ನಾನು ಈ ಸೆಲೆಕ್ಟ್ ಕಮಿಟಿಯ ವರದಿಯನ್ನು ಸ್ವಾಗತಿಸುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪ (ಪೆರಿಯಾಪಟ್ಟಣ).—ಸರ್ಕಾರದ ಪರವಾಗಿ ಮಾನ್ಯ ಮಂತ್ರಿಗಳು ಒಂದು ಮಾತು ಹೇಳಿದರು. ಆ ಬಗ್ಗೆ ಒಂದು ವಿವರಣೆಯನ್ನು ನಾನು ಕೇಳಬಯಸುತ್ತೇನೆ. ಒಂದು ಎಕರೆಯೆಂದರೆ, 40 ಕಾಯಿಬಿಡುವ ಮರಗಳಿರುವ ಪ್ರದೇಶವೆಂದು ಪರಿಗಣಿಸುತ್ತೇವೆಂದು ಹೇಳಿದರು. ಈ ಆಧಾರದಮೇಲೆ ನಿಬಂಧನೆಗಳನ್ನು ರಚಿಸುವುದಾಗಿಯೂ ಹೇಳಿದರು. ಹೀಗೆ ಮಾಡುವುದಾದರೆ, ಒಬ್ಬ ಮನುಷ್ಯ, ಹತ್ತಿರ ಹತ್ತಿರ ಗಿಡಗಳನ್ನು ಹಾಕಿ 60 ಗಿಡಗಳನ್ನು ಹಾಕಿ ಅವೆಲ್ಲಾ ಫಲಕ್ಕೆ ಬರಬಹುದು. ಹೀಗೆ ಮಾಡಿ ದೂರ ದೂರ ಹಾಕಿ 30 ಎಕರೆಗಳಲ್ಲಿ ಹಾಕತಕ್ಕಷ್ಟನ್ನು ಹತ್ತಿರ ಹತ್ತಿರವೇ ಹಾಕಿ 20 ಎಕರೆಗಳಲ್ಲೇ ಹಾಕಿದ್ದರೆ, ಈ ರೀತಿ ಮರದಮೇಲೆ ಲೆಕ್ಕಹಾಕಿ ವಿಧಿಸುವುದು ಕಷ್ಟವಾಗುತ್ತದೆಂದು ನಾನು ಹೇಳಬಯಸುತ್ತೇನೆ.

ಶ್ರೀ ಕೆ. ಹನುಮಂತಯ್ಯ.—ಆ ರೀತಿ ಅನುಮಾನವುಂಟಾದಾಗ ರೈತನಿಗೆ ಅನುಕೂಲವಾಗುವ ಹಾಗೆ ರೂಲ್ಸ್ ಮಾಡೋಣ.

ಶ್ರೀ ಕೆ. ಪಂಚಾಕ್ಷರಯ್ಯ.—ಸ್ವಾಮಿ, ತೆಂಗಿನ ಗಿಡಗಳನ್ನು ಹಾಕುವುದರಲ್ಲಿ ನಿರ್ದಿಷ್ಟವಾಗಿ ಎಕರೆಗೆ 40 ಗಿಡಗಳನ್ನೇ ಹಾಕಬೇಕೆಂದಿದೆ. ಅದಕ್ಕಿಂತ ಜಾಸ್ತಿ ಹಾಕಿದರೆ ಫಲ ಬಿಡುವುದಿಲ್ಲ. ಕಡಿಮೆ ಹಾಕಿದರೆ ನಷ್ಟವಾಗುತ್ತದೆ.

Sri K. HANUMANTHAIYA.—I assure the House that whenever there is doubt, the construction will be in favour of the assessee.

*ಶ್ರೀ ಜಿ. ಪಾಪಣ್ಣ (ಶಿಡ್ಲಘಟ್ಟ-ಚಿಕ್ಕಬಳ್ಳಾಪುರ).—ಅಧ್ಯಕ್ಷರೇ, ಈಗ ನಮ್ಮ ಮುಂದಿರುವ ವರದಿಯ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಇದರಪ್ರಕಾರ ಲೆಕ್ಕ ಇಟ್ಟು, 4,200 ರೂಪಾಯಿಗಳಿಗೆ ಹೆಚ್ಚಿಗೆ ಆದಾಯ ಬರುತ್ತದೆಂದು ಗೊತ್ತಾದರೆ ತೆರಿಗೆ ಹಾಕುವುದಕ್ಕೂ, ಅದಕ್ಕೆ ಕಡಿಮೆ

ಬರುತ್ತಿದ್ದರೆ ವಿನಾಯಿತಿ ಕೊಡುವುದಕ್ಕೂ ಅವಕಾಶವಿದೆ. ಲೆಕ್ಕವಿಡದೆ ಇದ್ದರೆ, ಎಕರೆಗೆ ಇಷ್ಟು ಎಂದು ಹೇಳಿ ಕಂದಾಯ ಕೊಡುವುದಕ್ಕೆ ಮಾತ್ರ ಅವಕಾಶ ಮಾಡಿದೆ. ಇದನ್ನು ನೋಡಿದರೆ ಕೇವಲ ಪ್ಲಾಂಟೇಷನ್ ಮುಂತಾಗಿ ಎಲ್ಲಿ ಸರಿಯಾದ ಲೆಕ್ಕಗಳನ್ನಿಟ್ಟು ಲೆಕ್ಕ ಕೊಡಬಹುದೋ ಅವರು ವಿನಾಯಿತಿ ಪಡೆಯುವುದಕ್ಕೆ ಅವಕಾಶವಾಗುತ್ತದೆಯೇ ಹೊರತು, ಬೇರೆಯವರು ಲೆಕ್ಕ ಕೊಡುವುದಕ್ಕೂ ಆಗುವುದಿಲ್ಲ, ಒಂದುವೇಳೆ ಕೊಡುವುದಕ್ಕೆ ಪ್ರಯತ್ನಪಟ್ಟರೂ ಅಧಿಕಾರಿಗಳನ್ನು ತೃಪ್ತಿಪಡಿಸುವುದಕ್ಕೂ ಸಾಧ್ಯವಾಗುವುದಿಲ್ಲ. ಏಕೆಂದರೆ, ಒಬ್ಬ ಅಧಿಕಾರಿಗೆ ಸೇರಿದ ಒಂದು ಪ್ರದೇಶದಲ್ಲಿ ಗೊಬ್ಬರ ಗಾಡಿಗೆ ಎರಡು ರೂಪಾಯಿಗಳಿರಬಹುದು. ಅವನಿಗೆ ಸೇರಿದ ಇನ್ನೊಂದು ಪ್ರದೇಶದಲ್ಲಿ ಅದೇ ಒಂದು ಗಾಡಿಗೆ ಹತ್ತು ರೂಪಾಯಿ ಇರಬಹುದು. ಹೀಗಿರುವಾಗ ಯಾವರೀತಿ ಲೆಕ್ಕವಿಟ್ಟು ಅಧಿಕಾರಿಗಳಿಗೆ ತೃಪ್ತಿಪಡಿಸುವುದಕ್ಕಾಗುತ್ತದೆ? ಅದರಲ್ಲೂ ಕೆಲವು ಬೆಳಗಳಿವೆ, ಆಲೂಗೆಡ್ಡೆ, ಈರುಳ್ಳಿ ಮುಂತಾದುವು. ಅವುಗಳಿಗೆ ಒಂದೊಂದು ದಿವಸ ಒಂದೊಂದು ಬೆಲೆಯಿರುತ್ತದೆ. ಒಂದು ದಿವಸಕ್ಕೂ ಇನ್ನೊಂದು ದಿವಸಕ್ಕೂ ಸೇಕಡ 50 ಹೆಚ್ಚು ಕಡಮೆ ಇರುತ್ತದೆ. ಅವನು ಇಂಥದೇ ಬೆಲೆಗೆ ಮಾರಿದನೆಂದು ಸಾಧಿಸುವುದು ಹೇಗೆ ? ಜೊತೆಗೆ ಆಲೂಗೆಡ್ಡೆ ಮುಂತಾದ ಬೆಳೆಗಳು ಸರಿಯಾಗಿ ಆಗುವುದೇ ಕಷ್ಟ. ನೆಟ್ಟ ದಿವಸ ಸ್ವಲ್ಪ ಮಳೆಬಂದರೂ ಪೂರ್ತಿ ಬೆಳೆಯಲ್ಲಾ ನಾಶವಾಗುತ್ತದೆ.

ಈ ಬಿಲ್ಲಿನಲ್ಲೇನೋ ಕ್ರಿಮಿಕೀಟಗಳು ಅಥವಾ ರೋಗಗಳು ತಗಲಿ ಪೈರು ನಷ್ಟವಾದಾಗ ತಕ್ಕ ಪರಿಹಾರ ಪಡೆಯುವುದಕ್ಕೆ ಅವಕಾಶವಿದೆ. ಆದರೆ ಕಾರ್ಯತಃ ಹೇಗೆ ನಡೆಯುತ್ತದೆಂದು ಯೋಚನೆಮಾಡಿದರೆ ಅಂಥ ಪರಿಹಾರಗಳನ್ನು ಕೂಡ ತೆಗೆದುಕೊಳ್ಳುವುದು ಬಹಳ ಕಷ್ಟವಾಗುತ್ತದೆ. ಅಲ್ಲಿಗೇನಾಯಿತು ? ರೈತರುಗಳೇನಿದ್ದರೂ compound ಮಾಡುವುದಕ್ಕೆ ಕೊಟ್ಟಿರುವ ಅವಕಾಶವನ್ನು ಮಾತ್ರ ಉಪಯೋಗಿಸಿಕೊಳ್ಳಬೇಕಾಗುತ್ತದೆ. ಹಾಗೆ compound ಮಾಡಿಕೊಳ್ಳುವುದರಲ್ಲಿ ತನಗೆ ಆದ ಕಷ್ಟನಷ್ಟಗಳನ್ನು ಸರ್ಕಾರದವರ ಗಮನಕ್ಕೆ ತಂದು ಪರಿಹಾರ ಪಡೆಯುವುದಕ್ಕೆ ಅನೇಕ ತೊಂದರೆಗಳಿವೆ. ಆ ತೊಂದರೆಗಳನ್ನು ಪರಿಹಾರ ಮಾಡುವುದಕ್ಕೆ ಏನು ಬದಲಾವಣೆಗಳನ್ನು ಈ ಮಸೂದೆಯಲ್ಲಿ ಮಾಡಬೇಕೋ ಅದನ್ನು ಮಾಡಬೇಕೆಂದು ಹೇಳುತ್ತೇನೆ.

ಈ ಮಸೂದೆಯಲ್ಲಿ ಆಹಾರದ ಬೆಳೆಗಳು, ದುಡ್ಡಿನ ಬೆಳೆಗಳು ಎಂದು ಎರಡು ಭಾಗ ಮಾಡಿದ್ದಾರೆ. ಆದರೆ ಯಾವ ಆಧಾರದ ಮೇಲೆ ಹೀಗೆ ವಿಂಗಡಿಸಿದ್ದಾರೆಯೋ ನನಗೆ ಗೊತ್ತಾಗುವುದಿಲ್ಲ. ಬತ್ತ ಆಹಾರದ ಬೆಳೆಯಂತೆ ; ಆಲೂಗೆಡ್ಡೆಯಾದರೆ ರೊಕ್ಕದ ಬೆಳೆಯಂತೆ ! ಅಂದರೆ, ಆಲೂಗೆಡ್ಡೆಯನ್ನು ಯಾರೂ ತಿನ್ನುವುದಿಲ್ಲವೆಂತಲೇ ? ನೂರಾರು ಎಕರೆಗಳಷ್ಟು ಜಮೀನುಗಳನ್ನು ನಾಲೆಯ ಕೆಳಗೆ ಇಟ್ಟುಕೊಂಡು ಸಾವಿರಾರು ರೂಪಾಗಳ ವರಮಾನ ಪಡೆಯುತ್ತಿದ್ದರೂ ಅವರಮೇಲೆ ತೆರಿಗೆ ವಿಧಿಸುವುದಿಲ್ಲ !

ಶ್ರೀ ಕೆ. ಹನುಮಂತಯ್ಯ.—ಆ ರೀತಿ ಮಾಡಿರತಕ್ಕದ್ದರಲ್ಲಿ ಒಂದು ಉದ್ದೇಶವಿದೆ. ಈಗ ನಿಮಗೆಲ್ಲಾ ಗೊತ್ತಿರುವಹಾಗೆ ಹೆಚ್ಚಿಗೆ ಜಮೀನಿರುವವರಿಗೆ ಅನೇಕ ರೀತಿಯಲ್ಲಿ ಕಷ್ಟಬರುತ್ತಿದೆ. ಜಮೀನುಗಳ ವಿಷಯದಲ್ಲಿ ಇನ್ನೊಂದು ಬಿಲ್ ಸಹ ಈ ಸಭೆಯ ಮುಂದಿದೆ. ಅದರ ಪ್ರಕಾರ ಪರಮಾವಧಿ ಜಮೀನು ಎಷ್ಟು ಒಬ್ಬ ಮನುಷ್ಯನ ಹತ್ತಿರ ಇರಬಹುದೆಂದು ಗೊತ್ತುಮಾಡಲಿದೆ. ಈ ಪ್ರಕಾರ ಕ್ರಾಂತಿಕಾರಕವಾದ ಬದಲಾವಣೆಗಳು ಜಮೀನು ಪದ್ಧತಿಯ ವಿಚಾರದಲ್ಲಿ ಬರುತ್ತವೆ. ಆಗ್ಗೆ ಸಾವಿರ ಎಕರೆ, ಎರಡುಸಾವಿರ ಎಕರೆಗಳಿರುವಂಥವರು ಇರುವುದೇ ಅಸಂಭವವಾಗುತ್ತದೆ.

ಶ್ರೀ ಜಿ. ಪಾಪಣ್ಣ.—ಕೋಲಾರ ಜಿಲ್ಲೆಯಲ್ಲಿ ಒಬ್ಬ ಐದು ಎಕರೆ ಜಮೀನಿಟ್ಟುಕೊಂಡು ಆಲೂಗೆಡ್ಡೆ ಹಾಕುವವನಾಗಿದ್ದರೆ ಸಾಕು, ಅವನು ತೆರಿಗೆ ಕೊಡಬೇಕಾಗಿ ಬರುತ್ತದೆ. ಆದ್ದರಿಂದ ಬತ್ತದ ಬೆಳೆ ಮಾಡುವವರಿಗೂ ಹಾಕಬೇಕಾಗಿತ್ತೆಂದು ನಾನು ಹೇಳುತ್ತೇನೆ. ಈಗ ನೀವು ಬೆಳೆಗಳನ್ನು ವಿಂಗಡಣೆ ಮಾಡಿರುವ ವಿಧಾನದಲ್ಲಿ ಇಂಥ ಅನೇಕ ಲೋಪದೋಷಗಳಿವೆ. ಮೊದಲು ನಮ್ಮ ಮುಂದಿಟ್ಟಿದ್ದ ಮಸೂದೆಯಲ್ಲಿ ಹಿಪ್ಪುನೇರಳೆ ಸೇರಿರಲಿಲ್ಲ. ಈಗ ಅದನ್ನೂ ಸೇರಿಸಿದೆ. ಇದನ್ನು ನೋಡಿದರೆ ಸೆಲೆಕ್ಟ್ ಕಮಿಟಿಯಲ್ಲಿ ಹಿಪ್ಪುನೇರಳೆಯ ವ್ಯವಸಾಯ ವಿಷಯದಲ್ಲಿ ಅನುಭವವಿದ್ದವರು ಅದನ್ನು ಪ್ರತಿನಿಧಿಸುವವರು ಯಾರೂ ಇರಲಿಲ್ಲವೆಂದು ಕಾಣುತ್ತದೆ.

ಶ್ರೀ ಕೆ. ಹನುಮಂತಯ್ಯ.—ಇದ್ದರು. ಆ ಕ್ಷೇತ್ರವನ್ನು ಪ್ರತಿನಿಧಿಸುವವರೂ ಸೆಲೆಕ್ಟ್ ಕಮಿಟಿಯಲ್ಲಿ ಭಾಗವಹಿಸಿದ್ದರು.

ಶ್ರೀ ಜಿ. ಪಾಪಣ್ಣ.—ಇದ್ದರೆ ಅವರು ಇದರ ಕಷ್ಟಸುಖಗಳನ್ನು ಹೇಳುತ್ತಿದ್ದರು. ಈಗಾಗಲೆ ಈ ನಮ್ಮ ಕೈಗಾರಿಕೆ ಕಷ್ಟದಶೆಯಲ್ಲಿರುವುದನ್ನು ಕಂಡು ಸರ್ಕಾರದವರು ಅದಕ್ಕೆ ರಕ್ಷಣೆ ಕೊಡುತ್ತಿದ್ದಾರೆ. ಈ ಬಗ್ಗೆ ಏರ್ಪಾಡಾಗಿದ್ದ ಸೆಲೆಕ್ಟ್ ಕಮಿಟಿಯು ಈ ಕೈಗಾರಿಕೆಯ ಖರ್ಚುವೆಚ್ಚಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ, ಅನಂತರ ನಮ್ಮ ದೇಶಕ್ಕೆ ಬರುವ ರೇಷ್ಮೆಯ ಮೇಲೆ ತೆರಿಗೆಹಾಕಿ ನಮಗೆ ರಕ್ಷಣೆ ಕೊಟ್ಟಿದ್ದಾರೆ. ಇಂಥ ರಕ್ಷಣೆಯನ್ನು ಕೇಂದ್ರ ಸರ್ಕಾರದವರೇ ದಯಪಾಲಿಸಿ ನಮ್ಮಲ್ಲಿ ರೇಷ್ಮೆಯ ಉತ್ಪತ್ತಿ ಖರ್ಚನ್ನು ಕಡಮೆ ಮಾಡುತ್ತೇವೆಂದು ಭರವಸೆ ಕೊಟ್ಟಿರುವಾಗ ನೀವು ಮಾಡುತ್ತಿರುವುದು ತದ್ವಿರುದ್ಧವಾಗಿದೆ. ಈ ರೀತಿಯ ತೆರಿಗೆ ಹಾಕಿ ಈ ಕೈಗಾರಿಕೆಯನ್ನು ಇಳಿಮುಖವಾಗಿ ಮಾಡುವುದಕ್ಕೆ ಪ್ರಯತ್ನಪಟ್ಟಿರುವುದು ಬಹಳ ಶೋಚನೀಯ ವಿಷಯ, ಅದೂ ಅಲ್ಲದೆ, ಮಳೆಯ ಆಶ್ರಯದಲ್ಲಿ ಬೆಳೆಯತಕ್ಕ ಹಿಪ್ಪುನೇರಳೆಯನ್ನು 3ನೆಯ ತರಗತಿಗೂ, ನೀರಾವರಿಯಿಂದ ಬೆಳೆಯತಕ್ಕ ಹಿಪ್ಪುನೇರಳೆಯನ್ನು 6ನೆಯ ತರಗತಿಗೂ ಸೇರಿಸಿದ್ದಾರೆ. ಕೇಂದ್ರ ಟ್ಯಾರಿಫ್ ಬೋರ್ಡಿನವರು ಹೇಳಿದಂತೆ ಒಂದು ಪೌಂಡ್ ಬೆಳೆಯ ಬೇಕಾದರೆ Rainfed ಪ್ರದೇಶದಲ್ಲಿ ಎಷ್ಟು ಜಾಗ ಬೇಕಾಗುತ್ತದೋ ಅದಕ್ಕಿಂತ ಕಡಿಮೆ ಪ್ರದೇಶದಲ್ಲಿ ನೀರಾವರಿ ಅನುಕೂಲತೆಯಿಂದ ಬೆಳೆಯುತ್ತಾರೆ. ಇದನ್ನು ಸರ್ಕಾರದವರು ಬಹುಶಃ ಗಮನಿಸಿಲ್ಲವೆಂದು ಕಾಣುತ್ತದೆ. ಇದನ್ನು ಈಗಲಾದರೂ ಪರ್ಯಾಲೋಚಿಸಿ ರಿಯಾಯಿತಿ ಕೊಡಬೇಕೆಂದು ಹೇಳುತ್ತೇನೆ.

ಮತ್ತೊಂದು ವಿಷಯ. ಅವಿಭಕ್ತ ಕುಟುಂಬದ ವಿಷಯದಲ್ಲಿ ವಿಭಕ್ತ ಕುಟುಂಬಗಳಿಗೆ ಎಷ್ಟು ರಿಯಾಯಿತಿ ಬಿಟ್ಟಿದ್ದಾರೋ ಅದಕ್ಕೆ ಎರಡರಷ್ಟು ಮಾತ್ರ ಕೊಟ್ಟಿದ್ದಾರೆ. ನಮ್ಮ ಕಡೆಯಲ್ಲಿ ನೋಡುವುದಾದರೆ, 100 ಮಂದಿಗಿಂತಲೂ ಹೆಚ್ಚು ಜನಗಳಿರುವ ಕುಟುಂಬಗಳಿವೆ. ಇಂಥ ಸಂದರ್ಭಗಳಿರುವಾಗ ಅವರು ಮಾಡಿರುವುದು ಸರಿಯೇ? ಅವರುಗಳು ಹಾಗೆಯೇ ಒಟ್ಟಿಗೆ ಇದ್ದುಕೊಂಡು ನಿಮಗೆ ಟ್ಯಾಕ್ಸ್ ಕೊಡಬೇಕೇ, ಅಥವಾ ಈ ಟ್ಯಾಕ್ಸ್ ಬಂದಿತೆಂದು ಬೇರೆ ಬೇರೆ ಜೀವನ ಮಾಡುವುದಕ್ಕೆ ಪ್ರಾರಂಭಿಸಬೇಕೇ ? ಆದ್ದರಿಂದ ಇಂಥ ತೆರಿಗೆ

(ಶ್ರೀ ಜಿ. ಪಾಪಣ್ಣ.)

ಗಳನ್ನು ಹಾಕುವಾಗ ನಮ್ಮ ಸಮಾಜ ರಚನೆಗೆ ಧಕ್ಕೆ ಬರದಂತೆ ಮಾಡುವುದು ನಮ್ಮ ಕರ್ತವ್ಯ.

2-30 P. M.

ಈಗ ನಮ್ಮ ಸಭೆಯ ಮುಂದೆ ಮಂಡಿಸಿರತಕ್ಕಂಥ ಮಸೂದೆಗೂ ಮತ್ತು ಆ ಗೇಣಿ ಕಾನೂನಿನಲ್ಲಿ ಹೇಳಿರತಕ್ಕಂಥ ಅಭಿಪ್ರಾಯಗಳಿಗೂ ಒಂದಕ್ಕೊಂದು ವ್ಯತ್ಯಾಸವಾಗಿದೆ. ಆ ಗೇಣಿ ಕಾನೂನಿನಲ್ಲಿ ಒಬ್ಬ ರೈತನ ಹಿಡುವಳಿ ಎಷ್ಟರವರೆಗಿರಬೇಕೆಂಬ ವಿಚಾರದಲ್ಲಿ ಒಂದಕ್ಕೆ ನಾಲ್ಕರಷ್ಟು ಪರಮಾವಧಿ ಜಮೀನಿರಬಹುದೆಂದು ಹೇಳಿದ್ದರೆ ಈ ದಿವಸ ಈ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಬಿಲ್ಲಿನಲ್ಲಿ ಅದನ್ನು ಎರಡರಷ್ಟಕ್ಕೆ ಇಳಿಸಿದ್ದಾರೆ. ಇದರಿಂದ ದೊಡ್ಡ ದೊಡ್ಡ ಸಂಸಾರಿಗಳಿಗೆ ಬಹಳ ಅನ್ಯಾಯವಾಗಿರುತ್ತದೆ. ಇಷ್ಟು ವಿಚಾರವನ್ನು ಹೇಳಿ ಈ ಮಸೂದೆಯನ್ನು ಸೂಕ್ತ ರೀತಿಯಲ್ಲಿ ತಿದ್ದುಪಡಿ ಮಾಡಿ ತರಬೇಕೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ..

ಶ್ರೀ ಯು.ಯಂ. ಮಾದಪ್ಪ (ಚಾಮ ರಾಜನಗರ).—ಸ್ವಾಮಿ, ಈ ಮಸೂದೆಯು ಸೆಲೆಕ್ಟ್ ಸಮಿತಿಯ ಮುಂದೆ ಹೋಗುವುದಕ್ಕೆ ಮುಂಚೆ ಕೆಲವು ಪದಾರ್ಥಗಳನ್ನು ಬೆಳೆಯುತಕ್ಕವರಿಗೆ ಮಾತ್ರ ಈ ತೆರಿಗೆ ಹಾಕಲಾಗುತ್ತದೆಂದು ನಿರ್ಧರಿಸಲಾಗಿತ್ತು. ಆದರೆ ಮೊದಲು ಯಾವ ಬೆಳೆಗಳ ಮೇಲೆ ತೆರಿಗೆ ಹಾಕಬೇಕೆಂದು ನಿರ್ಧರ ಮಾಡಲಾಗಿತ್ತೋ ಅಷ್ಟೇ ಅಲ್ಲದೆ ಜೊತೆಗೆ ಮತ್ತೆ ಕೆಲವು ಬೆಳೆಗಳ ಮೇಲೆ ತೆರಿಗೆ ಹಾಕಬೇಕೆಂದು ಹೇಳಿದೆ.

ರೇಷ್ಮೆ ಬೆಳೆಯ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳ ಬಯಸುತ್ತೇನೆ. ರೇಷ್ಮೆ ಒಂದು ಗೃಹ ಕೈಗಾರಿಕೆ ಎನ್ನುವುದು ತಮಗೆಲ್ಲರಿಗೂ ತಿಳಿದಿರುವ ವಿಚಾರ ಆಗಿದೆ. ಆದರೆ ಸರ್ಕಾರ ಈ ವ್ಯವಸಾಯಕ್ಕೆ ಸಾಕಷ್ಟು ಉತ್ತೇಜನ ಕೊಡದೆ, ಒಂದು ಹೊಸ ತೆರಿಗೆಯನ್ನು ಹೇರಿ ಈ ಗೃಹಕೈಗಾರಿಕೆಗೆ ಧಕ್ಕೆಯನ್ನುಂಟು ಮಾಡಬೇಕೆಂಬುದೇ ಸರ್ಕಾರದ ನೀತಿ ಮತ್ತು ಉದ್ದೇಶವಿದ್ದಂತೆ ಕಾಣುತ್ತದೆ. ಸಂಸ್ಥಾನದಲ್ಲಿ ಸುಮಾರು ಎರಡು ಲಕ್ಷ ಸಂಸಾರಗಳಿಗೆ ಈ ಕೈಗಾರಿಕೆ ಜೀವನಾಡಿಯಾಗಿದೆ. ಶ್ರೀ ಮರಿಯಪ್ಪನವರು ಒಂದು ಸೂಕ್ತವಾದಂಥ ತಿದ್ದುಪಡಿಯನ್ನು ತರುತ್ತಾರೋ ಅಥವಾ ಇಲ್ಲವೋ ಎಂಬ ಅನುಮಾನದ ಸಂದಿಗ್ಧದಲ್ಲಿ ನಾನು ಮಾತನಾಡುವುದಕ್ಕೆ ನಿಂತಿದ್ದೇನೆ. ಆದರೆ ಹೀಗೆ ಮಾತನಾಡತಕ್ಕವರು ತಾವೇ ಏಕೆ ಒಂದು ಅಮೆಂಡ್‌ಮೆಂಟನ್ನು ತರಬಾರದೆಂದು ಯಾರಾದರೂ ನನ್ನನ್ನು ಕೇಳ ಬಹುದು. ಅದರೆ ಶ್ರೀ ಟಿ. ಮರಿಯಪ್ಪನವರು ತಂದರೆ ಅದು ಬೇಗ ಕಾರ್ಯಗತವಾಗಬಹುದೆಂದೂ ಮತ್ತು ಅವರ ಪಾರ್ಟಿಯೂ ಸಹ ದೊಡ್ಡದಾಗಿರುವುದರಿಂದ ಅವರಿಗೆ ಒಂದು ಹೆಚ್ಚಿನ ಅವಕಾಶವಿದೆ ಎಂದೂ ನಾನೇ ತಿದ್ದುಪಡಿತರತಕ್ಕದನ್ನು ನಿಲ್ಲಿಸಿದ್ದೇನೆ. ರೇಷ್ಮೆ ಕೈಗಾರಿಕೆ ಮತ್ತು ವ್ಯವಸಾಯದ ವಿಚಾರದಲ್ಲಿ ಒಂದು ಹೊಸ ನೀತಿಯನ್ನು ಹೇಳಿದ್ದಾರೆ. ಇಂದತೂ ತೀರಾ ಹಾಸ್ಯಾಸ್ಪದವಾಗಿದೆ. ಸೇಲ್ಸ್ ಟ್ಯಾಕ್ಸನ್ನು ರೇಷ್ಮೆಗೂಡಿನ ಮೇಲೆ ಹಾಕಬಾರದೆಂದು ಹೇಳಿ, ರೇಷ್ಮೆ ಹುಳುವಿಗೆ ಆಹಾರವಾದ ಉಪ್ಪನೇರಳೆ ಬೆಳೆಯಮೇಲೆ ತೆರಿಗೆ ಹಾಕುವುದು ಖಂಡಿತ ಸರಿಯಾದದ್ದಲ್ಲ. ಮೈಸೂರು, ಬೆಂಗಳೂರು, ಕೋಲಾರ ಇತ್ಯಾದಿ ಕೆಲವು ಜಿಲ್ಲೆಗಳಲ್ಲಿ ಇದು ಮುಖ್ಯ ಗೃಹ ಕೈಗಾರಿಕೆಯಾಗಿದೆ. ರೇಷ್ಮೆ ಕೈಗಾರಿಕೆಗೆ ಮೊದಲನೆಯ ಮುಟ್ಟುಗೋಲು ಅಂದರೆ ಆರ್ಟಿಫಿಷಿಯಲ್ ಸಿಲ್ಕ್ ಬಂದಿದ್ದು. ಎರಡನೆಯ ಮುಟ್ಟುಗೋಲು ಈ ತೆರಿಗೆ ಹಾಕಿರುವುದು. ರೇಷ್ಮೆ ಕೈಗಾರಿಕೆಯಲ್ಲಿ ನಿರತರಾಗಿರುವ ಜನರ ಜೀವನದ ಮಟ್ಟವನ್ನು ಹೆಚ್ಚುಮಾಡಲು ಎಲ್ಲಾ ವಿಧದಲ್ಲಿಯೂ ಸಹಾಯ ನೀಡಬೇಕಾದದ್ದು ಅತ್ಯಗತ್ಯವೆಂಬುವನ್ನು ಕೇಂದ್ರ ಸರ್ಕಾರ ಮತ್ತು ಎಲ್ಲಾ ಪ್ರಾಂತೀಯ ಸರ್ಕಾರಗಳೂ ಒಪ್ಪಿಕೊಂಡಿವೆ. ಆದರೆ ಸರ್ಕಾರದಿಂದ ಈ ಕೈಗಾರಿಕೆಗೆ ಸಾಕಷ್ಟು ಸಹಾಯ ಸಹಕಾರ ಇಲ್ಲ. ಹೀಗಿದ್ದರೂ ಈ ಬೆಳೆಯ ಮೇಲೆ ಸರ್ಕಾರ ಈ ತೆರಿಗೆಯನ್ನು ಹಾಕುವುದು ಖಂಡಿತ ಸಾಧುವಲ್ಲ. ಆರ್ಟಿಫಿಷಿಯಲ್ ಸಿಲ್ಕ್ ನಮ್ಮ ದೇಶದಲ್ಲಿ ಪೌಂಡ್ ಒಂದಕ್ಕೆ 35 ರೂಪಾಯಿಗಳವರೆಗೆ ಮಾರಾಟವಾಗುತ್ತಿದೆ. ನಮ್ಮ ರೇಷ್ಮೆ ಧಾರಣೆ ದಿನೇ ದಿನೇ ಇಳಿ ಮುಖವಾಗುತ್ತಿದೆ. ಈ ವಿಷಯದಲ್ಲಿ ನಾವು ಸರ್ಕಾರದ ಮುಂದೆ ಅನೇಕಾವರ್ತಿ ಪ್ರಾರ್ಥನೆಗಳನ್ನು ಮಾಡಿಕೊಂಡಿದ್ದಾಯಿತು. ರೇಷ್ಮೆ ವಿಚಾರದಲ್ಲಿ ಒಂದು ಸ್ಥಿಮಿತವಾದ ಬೆಲೆಯನ್ನೇ ಕಾಣದಿರುವಾಗ ರೈತರ ಮೇಲೆ ಈ ತೆರಿಗೆ ಹೊರೆಯನ್ನು ಹೊರಿಸತಕ್ಕದ್ದು ನ್ಯಾಯವಾದದ್ದಲ್ಲ. ರೇಷ್ಮೆ ವ್ಯವಸಾಯಗಾರರು ಬೆಳೆಯುತಕ್ಕ ರೇಷ್ಮೆಯನ್ನು ಮಾರಾಟ ಮಾಡಲು ಒಂದು ಸರಿಯಾದ ಮಾರ್ಕೆಂಟಿಂಗ್ ವ್ಯವಸ್ಥೆ ಕೂಡ ಇರುವುದಿಲ್ಲ.

*ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಮತ್ತು ಔದ್ಯೋಗಿಕ ಶಾಖೆಗಳ ಮಂತ್ರಿಗಳು).—ಆ ಮಾರ್ಕೆಟಿಂಗ್ ವ್ಯವಸ್ಥೆಗೋಸ್ಕರವಾಗಿ 10 ಲಕ್ಷ ರೂಪಾಯಿಗಳನ್ನು ತೆಗೆದಿಡಲಾಗಿದೆ.

ಶ್ರೀ ಯು. ಎಂ. ಮಾದಪ್ಪ.—ವೀವಿಂಗ್ ಸೊಸೈಟಿಗಳ ಬಗ್ಗೆಯೂ 10 ಸಾವಿರ ರೂಪಾಯಿಗಳನ್ನು ತೆಗೆದಿಟ್ಟಿದ್ದಾರೆ. ಆದರೆ ನಾನೀಗ ಹೇಳುತ್ತಿರುವುದೆಲ್ಲಾ ಚರ್ಕಾ ರೇಷ್ಮೆಯ ವಿಚಾರ.

ಶ್ರೀ ಹೆಚ್. ಸಿದ್ದವೀರಪ್ಪ.—ಆ ರೆಗ್ಯುಲೇಟೆಡ್ ಮಾರ್ಕೆಟ್‌ಗಳನ್ನು ಸ್ಥಾಪಿಸತಕ್ಕ ಬಗ್ಗೆ ಕೇಂದ್ರ ಸಿಲ್ಕ್ ಸಮಿತಿಯವರು ದುಡ್ಡನ್ನು ಕೊಟ್ಟಿದ್ದಾರೆ.

ಶ್ರೀ ಯು. ಎಂ. ಮಾದಪ್ಪ.—ಹಾಗೆ ದ್ರವ್ಯ ಸಹಾಯ ದೊರೆತಿದ್ದರೂ ತಾವೇಕೆ ಇನ್ನೂ ಆ ವ್ಯವಸ್ಥೆಯನ್ನು ಏರ್ಪಾಡು ಮಾಡಲಿಲ್ಲವೆಂದು ಕೇಳುತ್ತೇನೆ ? ಮಾನ್ಯ ಮಂತ್ರಿಗಳು ಇಷ್ಟೆಲ್ಲಾ ಹೇಳುತ್ತಿದ್ದರೂ ನಮ್ಮ ರೇಷ್ಮೆ ಬೆಲೆ ಇಳಿಮುಖವಾಗುತ್ತಿರುವುದನ್ನು ತಪ್ಪಿಸಲು ಏಕೆ ಸಾಧ್ಯವಾಗುತ್ತಿಲ್ಲ ? 35 ರೂಪಾಯಿ ಧಾರಣೆ ಇರುವುದು ಮುಂದೆ ಪೌಂಡಿಗೆ 25 ವರೆಗೂ ಇಳಿಯಬಹುದೆಂದು ಹೇಳುವುದಕ್ಕೆ ಅವಕಾಶವಿದೆ.

ಶ್ರೀ ಎಚ್. ಸಿದ್ದವೀರಪ್ಪ.—ಸಂದರ್ಭಾನುಸಾರ ಪೌಂಡ್ ಒಂದಕ್ಕೆ 25 ರೂ ಪಾಯಿಗಳು ಆದರೂ ಆಗುತ್ತದೆ, ಇಲ್ಲವೇ 75 ರೂಪಾಯಿಗಳಾದರೂ ಆಗುತ್ತದೆ. ಈ ವಸ್ತುವೇ ಅಂಥಾದ್ದು.

ಶ್ರೀ ಯು. ಎಂ. ಮಾದಪ್ಪ.—ತಾವು ಮೂರು ವರ್ಷಗಳ ಒಂದು ಸರಾಸರಿಯನ್ನು ತೆಗೆದುಕೊಂಡರೆ ಅದರ ಆರ್ಥಿಕ ಪರಿಸ್ಥಿತಿ ಯಾವ ಮಟ್ಟದಲ್ಲಿದೆ ಏನ್ನುವುದು ತಮಗೇ ವೇದ್ಯವಾಗುತ್ತದೆ. ನಾನಾ ಪ್ರದೇಶಗಳಿಂದ ಈ ಸಿಲ್ಕ್ ನಮ್ಮ ದೇಶಕ್ಕೆ ಬರುತ್ತಿದೆ.

Sri H. SIDDAVEERAPPA.—My friend knows about the Tariff Commission. ಆ ಟ್ಯಾರಿಫ್ ಬೋರ್ಡಿನವರು ಇಷ್ಟು ಬೆಲೆ ಇರತಕ್ಕದ್ದು ಒಂದು ಎಕನಾಮಿಕ್ ಪ್ರೈಸ್ ಎಂದು ನಿರ್ಧರ ಮಾಡಿದ್ದಾರೆ. ಈ ದಿವಸ ಚಲಾವಣೆಯಲ್ಲಿರತಕ್ಕಂಥ ಧಾರಣೆಗಳು ಅವರು ನಿಗದಿ ಮಾಡಿರತಕ್ಕಂಥ ಬೆಲೆಗಳಿಗಿಂತಲೂ ಕೆಳಗೆ ಹೋಗಿಲ್ಲ. ಹಾಗೆ ಕೆಳಗೆ ಹೋದಾಗ ಬೇಕಾದರೆ ಕೇಳಿ, ಆಗ ಹೇಳುತ್ತೇನೆ.

ಶ್ರೀ ಯು. ಎಂ. ಮಾದಪ್ಪ.—ಹೀಗೆಲ್ಲಾ ಹೇಳುತ್ತಿದ್ದರೂ ಸರ್ಕಾರ ಏಕೆ ಹೀಗೆ ಮಾಡುತ್ತಿದೆ ಎನ್ನುವುದೇ ನನಗೆ ತುಂಬ ಶೋಚನೀಯವಾಗಿದೆ. ಈಗಾಗಲೇ ಆ ಚರಕಾ ರೇಷ್ಮೆಯ ಬೆಲೆ 4-5 ರೂಪಾಯಿಗಳತನಕ ಇಳಿದು ಹೋಗಿದೆ.

ಶ್ರೀ ಟಿ. ಮರಿಯಪ್ಪ (ಮೈಸೂರು ಉತ್ತರ).—ಈಗ ಬಜಾರಿನಲ್ಲಿ ಒಂದು ಪೌಂಡ್ ರೇಷ್ಮೆ ಗೂಡಿಗೆ ಬೆಲೆ ಏನಿದೆ ?

ಶ್ರೀ ಯು. ಎಂ. ಮಾದಪ್ಪ.—ಒಂದು ರೂಪಾಯಿ ಒಂದಾಣೆ ಇದೆ ಎಂದು ಹೇಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.— ಟ್ಯಾರಿಫ್ ಬೋರ್ಡಿನವರು ನಿರ್ಧರಿಸಿರುವಂಥ ಬೆಲೆ ಒಂದು ರೂಪಾಯಿ ಆರಾಣೆ ಆರು ಪೈಗಳೋ ಏನೋ ಇರಬೇಕು.

ಶ್ರೀ ಯು. ಎಂ. ಮಾದಪ್ಪ.—ಅಲ್ಲಿಗೆ ಈ ದಿವಸದ ಮಾರ್ಕೆಟ್ ಧಾರಣೆ ಅವರು ನಿರ್ಧರಿಸಿರತಕ್ಕ ಬೆಲೆಗಿಂತಲೂ ಕಡಮೆಯಿದೆ ಎನ್ನುವುದನ್ನು ತಾವೂ ಒಪ್ಪಿಕೊಂಡ ಹಾಗಾಯಿತು.

Sri H. M. CHANNABASAPPA.—I would like to submit that the levying of this agricultural income-tax arises only when he makes a profit, but when he loses, this taxation does not arise at all.

ಶ್ರೀ ಯು. ಎಂ. ಮಾದಪ್ಪ.—ಅದಕ್ಕೇ ನಾನು ಹೇಳುತ್ತಿರುವುದು ಇದರ ಉತ್ಪತ್ತಿ ಯಾವ ರೀತಿಯಿದೆ ಎನ್ನುವುದನ್ನೇ ಕಂಡುಹಿಡಿಯಲು ತುಂಬ ಕಷ್ಟವಾಗಿರುವಾಗ ಶ್ರೀಮಾನ್ ಚೆನ್ನಬಸಪ್ಪನವರೂ ಸಹ ಹಾಗೆ ಹೇಳಿದ್ದಕ್ಕಾಗಿ ನಾನು ವ್ಯಥೆ ಪಡಬೇಕಾಗಿದೆ. ಇಲ್ಲಿಯವರೆಗೂ ರೈತರ ಪರವಾಗಿ ಬಹಳವಾಗಿ ಹೋರಾಟ ಮಾಡುತ್ತಿದ್ದ ಶ್ರೀಮಾನ್ ಚೆನ್ನಬಸಪ್ಪನವರೇ ಈ ರೀತಿ ಇಷ್ಟೊಂದು ಏಕ್‌ದಂ ಬದಲಾವಣೆಯಾಗಿರತಕ್ಕದ್ದನ್ನು ನೋಡಿದರೆ ನನಗಂತೂ ಬಹಳ ಆಶ್ಚರ್ಯವಾಗುತ್ತಿದೆ. ಈ ವಿಷಯದಲ್ಲಿ ನಮ್ಮಲ್ಲಿರತಕ್ಕ ಜನರು ಅನೇಕ ಬಾರಿ ಇದಕ್ಕೆ ಸಂಬಂಧಪಟ್ಟ ಮಂತ್ರಿಗಳಲ್ಲಿ ಅಂದರೆ ಶ್ರೀಮಾನ್ ಎಚ್. ಸಿದ್ದವೀರಪ್ಪನವರಲ್ಲಿ ವಿನಂತಿ ಮಾಡಿಕೊಂಡಿದ್ದಾರೆ. ಮತ್ತು ನಂಜನಗೂಡಿನಲ್ಲಿ ಒಂದು ಮಾರ್ಕೆಟಿಂಗ್ ವ್ಯವಸ್ಥೆಯನ್ನು ಏರ್ಪಾಡು ಮಾಡಿಕೊಡಬೇಕೆಂದು ಕೇಳಿಕೊಂಡಿದ್ದಾರೆ. ಜನರು ಏನು ಹೇಳಿದ್ದಾರೆಂಬುದೂ ಕೂಡ ನನಗಿನ್ನೂ ಚೆನ್ನಾಗಿ ಜ್ಞಾಪಕದಲ್ಲಿದೆ. ಜನರು ಮಾನ್ಯ ಮಂತ್ರಿಗಳನ್ನು ಉದ್ದೇಶಿಸಿ ಮಾತನಾಡುತ್ತಿದ್ದಾಗ "ತಾವೇನೋ ಈಗ ನಮ್ಮ ಹತ್ತಿರದಲ್ಲಿದ್ದೀರಿ, ಆಗಲಿ ಎಂದು ಹೇಳುತ್ತಿದ್ದೀರಿ. ಆದರೆ ದೂರ ಹೋದ ಮೇಲೆ ಇದನ್ನು ತಾವು ಖಂಡಿತ ಮರೆಯಬಾರದು" ಎಂದು ಹೇಳಿದ್ದರೆ. ತಾವು ಮೊದಲು ಆ ರೈತರಿಗೆ ಅಗತ್ಯವಾಗಿ ಬೇಕಾದ ಅನುಕೂಲತೆಗಳೇನಿವೆಯೋ ಅವುಗಳನ್ನು ಮಾಡಿಕೊಡಿ, ಅನಂತರ ತಾವು ಈ ತೆರಿಗೆಯನ್ನು ಹಾಕಿ; ಆಗ ಇದಕ್ಕೆ ನಾನು ಬೇಡವೆಂದು ಹೇಳುವುದಿಲ್ಲ. ಹೀಗೆ ತಾವು ಮೊದಲು ಸಹಾಯ ಮಾಡಿ ಹೆಚ್ಚಿನ ಹೂ, ಹಣ್ಣುಗಳು ಈ ಉದ್ಯಮದಲ್ಲಿ ಬಿಡುವ ಹಾಗೆ ಮಾಡಿದರೆ ತಮಗೆ ಕೊಯ್ಯುವುದಕ್ಕೂ ಅವಕಾಶವಿರುತ್ತದೆ. ಆದರೆ ಆ ರೀತಿ ಏನೊಂದು ಸಹಾಯವನ್ನೂ ಮಾಡದೆ ಇರುವಾಗ ಯಾರೋ ಏನೋ ಮಾಡಿ ಒಂದು ಉತ್ಪತ್ತಿ ಪಡೆಯುತ್ತಿದ್ದಾನೆಂದು ಹೇಳಿ ಆತನ ಮೇಲೆ ಹೀಗೊಂದು ತೆರಿಗೆ ವಿಧಿಸತಕ್ಕದ್ದು ಯಾವ ನ್ಯಾಯ ! ಈ ತಹಲ್‌ವರೆಗೆ ಸರ್ಕಾರದವರು ಈ ರೈತಾಪಿ ವರ್ಗಕ್ಕೆ ಸಾಕಷ್ಟು ಅನುಕೂಲತೆಗಳನ್ನು ಕಲ್ಪಿಸಿಕೊಟ್ಟಿಲ್ಲ. ಅವರಿಗೆ ತಾವು ಅವರ ಬೆಳೆಗೆ ಒಂದು ನಿಗದಿಯಾದ ಬೆಲೆ ಸಿಕ್ಕುವ ಹಾಗೆ ಯಾವ ಏರ್ಪಾಡನ್ನೂ ಮಾಡಿಲ್ಲ. ಆರ್ಟಿಫಿಷಿಯಲ್ ಸಿಲ್ಕು ನಮ್ಮ ದೇಶಕ್ಕೆ ಬರುತ್ತಿದ್ದರೂ ಅದನ್ನು ತಾವು ತಡೆಗಟ್ಟುತ್ತಿಲ್ಲ. ಇದನ್ನು ಮೊದಲು ತಡೆಗಟ್ಟಬೇಕೆಂದೂ ಮತ್ತು ಇನ್ನು ಹತ್ತು ವರ್ಷಗಳ ಅವಧಿಯವರೆಗೂ ಈ ಮಲ್ಬರಿ ಮೇಲೆ ಯಾವ ವಿಧವಾದ ತೆರಿಗೆಯನ್ನೂ ಹಾಕಬಾರದೆಂದೂ ಹೇಳಿ ನಾನು ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಟಿ. ಸಿ. ಬಸಪ್ಪ (ತರೀಕೆರೆ).—ಸ್ವಾಮಿ, ಈ ವರಮಾನ ತೆರಿಗೆ ಹಾಕತಕ್ಕ ವಿಚಾರದಲ್ಲಿ ಮುಖ್ಯವಾಗಿ ಇಲ್ಲಿಯವರೆಗೆ ಮಾತನಾಡಿರತಕ್ಕಂಥ ಮಾನ್ಯ ಸದಸ್ಯರೆಲ್ಲರೂ ಸ್ವಲ್ಪ ಹೆಚ್ಚು ಕಡಮೆ ಈ ದಿವಸ ಈ ತೆರಿಗೆ ಯಾರ ಯಾರ ಮೇಲೆ ಬೀಳುತ್ತದೆ, ಅವರಿಗೆ ಯಾವ ಯಾವ ತರಹ ಕಿರುಕುಳ ಮತ್ತು ತೊಂದರೆಗಳುಂಟಾಗಬಹುದು ಎನ್ನತಕ್ಕದ್ದನ್ನು ಹೇಳಿರುತ್ತಾರೆ. ಆದುದರಿಂದ ನಾನೀಗ ಮತ್ತೆ ಅದನ್ನೇ ಪುನಃ ಒತ್ತಿ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಈಗ ಸಭೆಯ ಮುಂದೆ ಮಂಡಿಸಿರತಕ್ಕಂಥ ಬಿಲ್ಲಿನಲ್ಲಿ ಈ ವರಮಾನ ತೆರಿಗೆ ವಿಧಿಸತಕ್ಕ ಬಗ್ಗೆ ಸ್ಲ್ಯಾಬ್ ಸಿಸ್ಟಂ ಎಂದು ಒಂದು ಪದ್ಧತಿಯನ್ನು ಬೇರೆ ಹೇಳಿದ್ದಾರೆ. ಈ ಸ್ಲ್ಯಾಬ್ ಸಿಸ್ಟಂ ಎನ್ನುವುದು ನನಗೆ ತಿಳಿದ ಮಟ್ಟಿಗೆ ಅವರು ಕೊಡಬೇಕಾದಂಥ ಇನ್‌ಕಂಟ್ಯಾಕ್ಸಿನ ಬಗ್ಗೆ ಒಂದು ಸ್ಲ್ಯಾಬ್ ರೇಟನ್ನು ಹಾಕತಕ್ಕದ್ದು ಎಂದು ತಿಳಿದುಕೊಂಡಿದ್ದೇನೆ. ಈಗ ನಾನು ಹಾಕಿರತಕ್ಕಂಥ ಲೆಕ್ಕಾಚಾರದ ಪ್ರಕಾರ ಸ್ಲ್ಯಾಬ್ ರೇಟ್ Income-tax ಗಿಂತ ಸ್ವಲ್ಪ ಯಾವಾಗ್ಲೂ ಕಡಮೆ ಇರುವುದಕ್ಕೆ ಬದಲಾಗಿ ಜಾಸ್ತಿಯಾಗಿರುವಂತೆ ಕಂಡುಬಂದಿದೆ. ಈ ರೆಗ್ಯುಲರ್ ಇನ್‌ಕಂಟ್ಯಾಕ್ಸ್ ರೇಟಿನ ಪ್ರಕಾರ 25,000 ರೂಪಾಯಿಗಳ ವರಮಾನವಿರತಕ್ಕವರಿಗೆ ಹಾಕತಕ್ಕಂಥಾ ತೆರಿಗೆ ಮೊಬಲಗು 3,234 ರೂಪಾಯಿ ಆರಾಣೆ ಆಗುತ್ತದೆ. ಒಬ್ಬ ಮನುಷ್ಯನಿಗೆ 72 ಎಕರೆ ಅಡಿಕೆ ತೋಟವಿದ್ದರೆ ಆತನಿಗೆ 25 ಸಾವಿರ ರೂಪಾಯಿಗಳ ವರಮಾನ ಬರಬಹುದೆಂದು ಭಾವಿಸಿ ಆತನಿಂದ ಟ್ಯಾಕ್ಸನ್ನು ವಸೂಲ್ಮಾಡಿದರೆ ಅದು ತಮ್ಮ ಲೆಕ್ಕಾಚಾರದ ಪ್ರಕಾರ 3,234 ರೂಪಾಯಿ ಆರಾಣೆ ಆಗುತ್ತದೆ. ಈಗ ತಾವು ಈ ಲೆಕ್ಕಾಚಾರಗಳಾವುದನ್ನೂ ಮಾಡದಂತೆ ವಿಧಿಸಿರುವ ಸ್ಲ್ಯಾಬ್ ಸಿಸ್ಟಂ ಪ್ರಕಾರ ಇದು 3,600 ರೂಪಾಯಿಗಳಾಗುತ್ತದೆ; Income-tax 3,334-6-0 ರೂಪಾಯಿಗಳಾಗುತ್ತದೆ. ಅಂದರೆ slab rate ಜಾಸ್ತಿಯಾದ ಹಾಗಾಗುತ್ತದೆ. ಈಗ ರೈತನಿಗೆ Income-tax ನಿಂದ ಇದ್ದಂಥ ಅನುಕೂಲ ಇದರಲ್ಲಿ ಇದೆಯೇ ಎಂಬ ಬಗ್ಗೆ ಸರ್ಕಾರದವರು ಯೋಚನೆ ಮಾಡಿ, Income-tax ಎಷ್ಟೇ ಆಗಲಿ slab rate ನಲ್ಲಿ ಸ್ವಲ್ಪ ರಿಯಾಯಿತಿಯಲ್ಲಿ ಮಾಡಿ ಕೊಟ್ಟರೆ ರೈತನಿಗೆ ಅನುಕೂಲ. ಈ ಬಗ್ಗೆ ಸರಕಾರದವರು ಯೋಚನೆ ಮಾಡಬೇಕು. ಆಮೇಲೆ, ಸೆಕ್ಷನ್ 3ರ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಬಹಳ ವಿವರಗಳನ್ನು ಕೊಟ್ಟಿದ್ದಾರೆ. ಎಲ್ಲ ವಸ್ತುಗಳ ಮೇಲೆ ಹಾಕಿದ್ದರೆ ನಾವೇನೂ ಯೋಚನೆ ಮಾಡುತ್ತಿರಲಿಲ್ಲ. ಮಲೆನಾಡಿನ ವಿಷಯದಲ್ಲಿ ಮುಖ್ಯ ಮಂತ್ರಿಗಳಿಗೆ ಬಹಳ ಅಭಿಮಾನವೆಂದು ಕಾಣುತ್ತದೆ. ಅವರು ಅಡಿಕೆ, ತೆಂಗು, ಕಾಫಿ, ಏಲಕ್ಕಿ, ಮೆಣಸು, ಇವುಗಳ ಮೇಲೆ ತೆರಿಗೆ ಕೊಡಬೇಕೆಂದು Provision ಸೇರಿಸಿದ್ದಾರೆ. ಅದಕ್ಕೆ ಅವರು ಕಾರಣಗಳನ್ನು ಕೊಟ್ಟಿದ್ದಾರೆ. ಬಾಕಿ ದಿನಸಿಗಳ ವಿಚಾರದಲ್ಲಿ ಲೆಖ್ಖ ಸಿಕ್ಕುವುದಿಲ್ಲ, ಆದ್ದರಿಂದ ಈ ವರ್ಷ ಈ ದಿನಸಿಗಳ ಮೇಲೆ

(ಶ್ರೀ ಟಿ. ಸಿ. ಬಸಪ್ಪ.)

ಮಾತ್ರ ಮತ್ತು ಜಮೀನಿನ ಮೇಲೆ ಮಾತ್ರ ಹಾಕಲು ಕಾರಣಗಳನ್ನು ತೋರಿಸಿದ್ದಾರೆ. ಇದು discrimination ಅಲ್ಲವೇ? ಈ ವರ್ಷಕ್ಕೆ ಹೀಗೆ ಕೆಲವರ ಮೇಲೆ ಮಾತ್ರ ಹಾಕಿಬಿಟ್ಟು ಇನ್ನು ಕೆಲವರಿಗೆ exemption ಕೊಡುವುದು ಅಷ್ಟು ಉಚಿತವಲ್ಲ ಎಂದು ನನ್ನ ಸೂಚನೆ.

ಶ್ರೀ ಕೆ. ಹನುಮಂತಯ್ಯ.—ಬೆಂಗಳೂರು, ತುಮಕೂರು, ಡಿಸ್ಟ್ರಿಕ್ಟುಗಳಲ್ಲಿ ಈಗ ತೆಂಗಿನ ಕಾಯನ್ನು ಬೆಳೆಯುತ್ತಾರೆ. ಅದ್ದರಿಂದ ಯಾವ ತಾರತಮ್ಯವನ್ನೂ ತೋರಿಸಿಲ್ಲ.

ಶ್ರೀ ಟಿ. ಸಿ. ಬಸಪ್ಪ.— ತೆರಿಗೆ ಹೆಚ್ಚಾಗಿ ತೆಂಗು, ಕಾಫಿ ಮತ್ತು ಅಡಿಕೆ ಮೇಲೆ ಬೀಳುತ್ತದೆ. ಈ ವರುಷ ಯಾತರ ಮೇಲೆ ಜಾಸ್ತಿ ತೆರಿಗೆ ವಸೂಲು ಆಗುತ್ತದೆ ಎನ್ನುವ ವಿಚಾರ ಅವರಿಗೆ ಗೊತ್ತಾಗುತ್ತದೆ. Garlic ಮತ್ತು onion ಮೇಲೆ ತೆರಿಗೆ ಲೆಖ್ಖ ಕೊಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ Compounding ನಿಬಂಧನೆ ಪ್ರಕಾರ ವಸೂಲು ಮಾಡಬೇಕಾಗುತ್ತದೆ. ಈ ವರ್ಷಕ್ಕೆ ಒಂದು Proviso ಹಾಕಿಕೊಂಡು ಬಾಕಿಯವರಿಂದಲೂ ಯಾರು ಯಾರಿಂದ ಎಷ್ಟೆಷ್ಟು ವಸೂಲು ಮಾಡಬೇಕೆಂದು ನಿಯಮ ಮಾಡಿದ್ದರೆ ಅದು ಸರಿಯಾಗುತ್ತಿತ್ತು. ಅದನ್ನು ಬಿಟ್ಟು ಕೆಲವರ ಮೇಲೆ ಮಾತ್ರ ತೆರಿಗೆ ಹಾಕುವುದು ನ್ಯಾಯವಾದುದಲ್ಲ. 1956ನೇ ಇಸವಿಯಿಂದ effectಗೆ ಕೊಟ್ಟರೆ ಎಲ್ಲರಿಗೂ ಸರಿಸಮಾನವಾಗಿ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್ (ಹುಣಸೂರು).—ಬಾಕಿ ಬೆಳೆಗಳ ಲೆಖ್ಖ ಹೇಗೆ ಸಿಕ್ಕುತ್ತದೆ? ಮೆಣಸಿನ ಕಾಯಿ ಬೆಳೆ ತೆಗೆದು ಭೂಮಿಯನ್ನು ಉತ್ತುಬಿಟ್ಟಿದ್ದರೆ, ಎಷ್ಟು ಎಕರೆ ಮೆಣಸಿನಕಾಯಿ ಹಾಕಿದ್ದರು ಎಂಬುದನ್ನು ಹೇಳುವುದಕ್ಕಾಗುತ್ತದೆಯೇ?

ಶ್ರೀ ಟಿ. ಸಿ. ಬಸಪ್ಪ.—ಹೋದವರುಷ ಬೆಳೆದಿದ್ದಂತೆ ಈ ವರುಷ ಹೇಗೆ ಲೆಖ್ಖ ಸಿಕ್ಕುತ್ತದೆ ಎಂದರೆ ಯಾವ ಯಾವ ಎಕರೆಯಲ್ಲಿ ಏನೇನು ಬೆಳೆದಿದ್ದಾರೆ ಎಂಬುದಕ್ಕೆ ಲೆಖ್ಖವಿದೆ. ಆದ್ದರಿಂದ Income-tax ಗೆ ಬದಲು Compounding ಮೇಲೆ ಈ ವರ್ಷ ತೆರಿಗೆಯನ್ನು ವಸೂಲುಮಾಡುವುದಕ್ಕೆ ಅವಕಾಶವಿತ್ತು. ಈಗ ಅದೇ ರೀತಿಯಾಗಿ, ಅಡಿಕೆ, ತೆಂಗು, ಕಾಫಿ, ಇವುಗಳ ವಿಚಾರದಲ್ಲಿ ಲೆಕ್ಕ ಸಿಕ್ಕುತ್ತದೆ. ತೆಂಗಿನ ವಿಚಾರದಲ್ಲಿ ಇರುವ ಕಷ್ಟಗಳಲ್ಲಿ ಅನೇಕ ಸದಸ್ಯರು ಈಗಾಗಲೇ ವರ್ಣಿಸಿದ್ದಾರೆ. ಇದರಮೇಲೆ slab rate ನ ಪ್ರಕಾರ ಕೊಟ್ಟರೆ Income-tax ಜಾಸ್ತಿಯಾಗುತ್ತದೆ. ಆದ್ದರಿಂದ ಇದರ ಬಗ್ಗೆ ಸರ್ಕಾರದವರು ಸಹಾನುಭೂತಿಯಿಂದ ಯೋಚನೆಮಾಡಿ ಇಲ್ಲಿ 1956 ನೇ ಇಸವಿಯಿಂದ ಆದರೂ ಈ ತೆರಿಗೆ ಜಾರಿಗೆ ಬರುವಹಾಗೆ ಮಾಡಿದರೆ ಎಲ್ಲರಿಗೂ ಸರಿಸಮಾನವಾಗಿ ತೆರಿಗೆ ಹಾಕಿದ ಹಾಗಾಗುತ್ತದೆ ಎಂದು ಈ ಬಗ್ಗೆ ನಾನು ಸೂಚನೆ ಕೊಡುತ್ತೇನೆ.

Section (5)ರಲ್ಲಿ Earned Income ವಿಚಾರದಲ್ಲಿ General Income-tax Provision ಇದೆ. ರೈತನು ತನ್ನ ಜಮೀನಿನಲ್ಲಿ ಬಿಸಿಲು ಮಳೆ ಎನ್ನದೆ ಹಗಲು ರಾತ್ರಿ ಕೆಲಸಮಾಡುವವನು. ಹೀಗಿರುವುದರಿಂದ earned income ಬಗ್ಗೆ ರಿಯಾಯಿತಿ ಕೊಡಬೇಕಾದುದು ನ್ಯಾಯ. ಕಂದಾಯ ಹಾಕಬೇಕಾದರೆ assessee ಏನು ಲೆಕ್ಕ ಕೊಡುತ್ತಾನೋ ಅದೇ ಆಧಾರದ ಮೇಲೆ Income-tax ವಿಧಿಸತಕ್ಕದ್ದು ಎಂದು ಮುಖ್ಯಮಂತ್ರಿಗಳು ಹೇಳಿದರು. Assessee ಲೆಕ್ಕ ಕೊಟ್ಟಮೇಲೆ Income-tax ಆಫೀಸರಿಗೆ ಎಷ್ಟೆಷ್ಟು ಎಕರೆ ಬೆಳೆ ಆಗಿದೆ ಎಂಬ ವಿಚಾರದಲ್ಲಿ ಒಂದು ಆಧಾರಬೇಕಾಗುತ್ತದೆ. ಈ ಆಧಾರವನ್ನು ಹೆಚ್ಚು ಕಡಿಮೆ ಎಲ್ಲರೂ ಸಹ ಪಹಣಿ ಲೆಕ್ಕದಮೇಲೆ ನಂಬಿಕೊಳ್ಳಬೇಕಾಗುತ್ತದೆ. Income-tax ಇಲಾಖೆಯವರು ನಾವು ಕೊಡುವ ಲೆಕ್ಕವನ್ನು ನಂಬುವುದಿಲ್ಲ. 10 ರೂಪಾಯಿ ಒಂದು ಗಾಡಿಗೊಬ್ಬರಕ್ಕೆ ಕೊಟ್ಟಿದ್ದರೆ 5 ರೂಪಾಯಿ ಗಾಡಿಗೊಬ್ಬರವೆಂದು ಹೇಳಬಹುದು.

ಶ್ರೀ ಕೆ. ಹನುಮಂತಯ್ಯ.—ನಿಮ್ಮ ವಿಷಯದಲ್ಲಿ ಸರ್ಕಾರೀ ಅಧಿಕಾರಿಗಳಿಗೆ ಅಷ್ಟು ಅನುಮಾನವಿಲ್ಲ.

ಶ್ರೀ ಟಿ. ಸಿ. ಬಸಪ್ಪ.—ನಮ್ಮ ವಿಷಯದಲ್ಲಿ ಶ್ರೀ ಕೆ. ಹನುಮಂತಯ್ಯನವರಿಗೆ ಅನುಮಾನವಿಲ್ಲದಿದ್ದರೆ ಕೆಳಮಟ್ಟದ ಅಧಿಕಾರಿಗಳು ರೈತರಿಗೆ ಕಿರುಕುಳ ಕೊಡುವ ವಿಚಾರದಲ್ಲಿ ವರ್ಣನೆ ಮಾಡಬೇಕಾಗಿದೆ. ಪಹಣಿಲೆಕ್ಕ ಬರೆಯುವಾಗ ಇವರಿಗೆ ಸರ್ಕಾರದವರು ಸಾಕಾದಷ್ಟು ಅವಕಾಶವನ್ನುಂಟುಮಾಡಿ ಕೊಡಬೇಕು. ಶ್ಯಾನುಬೋಗರು ಪಹಣಿ ಬರೆಯಬೇಕಾದರೆ ಈಗಿನ ರೆವಿನ್ಯೂ ರೂಲ್ಸ್ ಪ್ರಕಾರ ಪಂಚಾಯಿತಿದಾರರನ್ನು ಇಟ್ಟುಕೊಂಡು ಬರೆಯಬೇಕು ಎಂದಿದೆ. ಆದರೆ ಶ್ಯಾನುಬೋಗರು ದಾರಿಯಲ್ಲಿ ಯಾರಾದರೂ ಸಿಕ್ಕಿದರೆ, ಅವರಿಂದ ರುಜುಮಾಡಿಸಿಕೊಳ್ಳುತ್ತಾರೆ. ಈ ಆಧಾರದ ಮೇಲೆ ಪಹಣಿಲೆಕ್ಕಕ್ಕೂ Assessee ಲೆಕ್ಕಕ್ಕೂ ವ್ಯತ್ಯಾಸ ಬಂದಪಕ್ಷದಲ್ಲಿ ಪಹಣಿಲೆಕ್ಕವನ್ನು ಮಾತ್ರ ನಂಬಬೇಕಾಗುತ್ತದೆ. ಅದು documentary evidence ಆಗುತ್ತದೆ. ಆದ್ದರಿಂದ ಪಹಣಿಗಳನ್ನು ಬರೆಯಬೇಕಾದರೆ ಪಟೇಲ, ಶ್ಯಾನುಬೋಗ, ವಿಲೇಜ್ ಪಂಚಾಯಿತಿ ಚೇರ್‌ಮನ್ ಮತ್ತು ಪಂಚಾಯಿತಿಯಿಂದ ಮೂರು ಜನರನ್ನೊಳಗೊಂಡಂಥ ಒಂದು ಸಮಿತಿಯನ್ನು ಮಾಡಿ ಅವರು ಪಹಣಿ ಲೆಕ್ಕಗಳನ್ನು ಒಪ್ಪಿದ ಪಹಣಿ ಮೇಲೆ ಸರಿಯಾದ Publication ಕೊಟ್ಟು ಅನಂತರ ಲೆಕ್ಕವನ್ನು ಮಾಡಬೇಕೆಂದು ಸಲಹೆ ಕೊಡುತ್ತೇನೆ. ಅಡಿಕೆ ಸಸಿಗಳಿಗೆ 5-6 ವರ್ಷವಾಗಿದ್ದರೆ exemption ಇದೆ. ಆದರೆ ಪಹಣಿಲೆಕ್ಕದಲ್ಲಿ ಅಡಿಕೆ ಪೈರು ಇದೆ ಎಂದು ಬರೆದಿದ್ದರೆ ಮುಂಥಿನವರ್ಷ tax ಕೇಳಲು ಅವರಿಗೆ documentary evidence ಇದೆ ಎಂದು ವಾದಿಸುವುದಕ್ಕೆ ಅವಕಾಶವಿದೆ. ಆದ್ದರಿಂದ ನಾನು ಹೇಳಿದಂತೆ ಮಾಡಿದರೆ ನಿಜವಾಗಿ ರೈತರಿಗೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ.

Section 30ರಲ್ಲಿ Appeal against assessmentಗೆ ಅವಕಾಶವಿದೆ. Section 64 ರಲ್ಲಿ Composition of Agricultural Income-tax ವಿಚಾರವಿದೆ. ಇದರಲ್ಲಿ First class 100 ಎಕರೆಗಳಿಗೆ ಮತ್ತು ದಾಮಾಷಾ ಪ್ರಕಾರ ಅದರಂತೆ ಬಾಕಿ ಕ್ಲಾಸು ಎಕರೆಗಳಿಗೆ exemption ಇದೆ. Exemption limit fix ಮಾಡಬೇಕಾದರೆ ಸರಿಯಾದ formulaದ ಮೇಲೆ ನಿಗದಿ ಮಾಡಬೇಕು. ಆಫೀಸರಿಗೆ ಇದರ ಬಗ್ಗೆ application ಕೊಟ್ಟಾಗ ಅವರು ಒಪ್ಪಿದ ಪಕ್ಷದಲ್ಲಿ exemption ಅವಕಾಶವಿದೆ. ಅವರು ಒಪ್ಪದೇ ಇದ್ದಪಕ್ಷದಲ್ಲಿ ಅದರ ಮೇಲೆ Appeal ಹೋಗಲು ಅವಕಾಶವಿಲ್ಲ.

Section 64 ರ Appeal ನ್ನು Section 30 ರಲ್ಲಿ ಸೇರಿಸಿಲ್ಲ. Appeal ಮಾಡುವುದಕ್ಕೆ ಅವಕಾಶವಿರಬೇಕು. 100 ಎಕರೆ groundnut ಎಂದು ಹೇಳಿದರೆ ಅವರು 105 ಎಕರೆ ಎಂದು ಲೆಕ್ಕ ತೆಗೆದುಕೊಂಡು ನೋಟೀಸ್ ಕೊಟ್ಟರೆ ಆಫೀಸರ ತೀರ್ಮಾನ ಬೈಡಿಂಗ್ ಆಗಿರುತ್ತದೆ. ಅದರಮೇಲೆ Appeal ಇಲ್ಲ. ಆದ್ದರಿಂದ Section 30 ರಲ್ಲಿ 64 ರ ಮೇಲೆ Appeal ಮಾಡಲು ಅವಕಾಶವಿರಬೇಕು ಎಂದು ನನ್ನ

ಸಲಹೆಯನ್ನು ಸರ್ಕಾರದ ಮುಂದೆ ಇಡುತ್ತೇನೆ. ಇದು ಬಹಳ ನ್ಯಾಯವಾದುದು. ಅದು ಇಲ್ಲದ ಪಕ್ಷದಲ್ಲಿ ಬಹಳ ತೊಂದರೆಯಾಗುತ್ತದೆ. Section 30 ರಲ್ಲಿ 41 ಆದಮೇಲೆ "64" ಎಂಬುದನ್ನು ಸೇರಿಸಬೇಕು ಎಂದು ನಾನು ಸಲಹೆ ಕೊಡುತ್ತೇನೆ.

ಸ್ವಾಮಿ, Schedule Part ಒಂದರ ವಿಚಾರದಲ್ಲಿ, ಈಗಾಗಲೇ ಅನೇಕ ಮಾನ್ಯ ಸದಸ್ಯರು Coorg Income-tax ದರಗಳಿಗೂ ಮತ್ತು ನಮ್ಮ Income-tax ದರಗಳಿಗೂ ವ್ಯತ್ಯಾಸವಿದೆ ಎಂದು ಹೇಳಿದ್ದಾರೆ. ಈ ವಿಚಾರದಲ್ಲಿ ಹೆಚ್ಚಿಗೆ ಹೇಳುವುದಿಲ್ಲ. ಮುಖ್ಯ ಮಂತ್ರಿಗಳು "ನಮ್ಮಲ್ಲಿ exemption limit 4,200 ರೂಪಾಯಿಗಳನ್ನು ಮಾಡಿದ್ದೇವೆ, ಆ ಸೌಲಭ್ಯ ಕೊಡಗಿನಲ್ಲಿ ಇಲ್ಲ, ಮತ್ತು ಬೇರೆ ಕೆಲವು ಪ್ರಾಂತಗಳಲ್ಲಿಯೂ ಇಲ್ಲ" ಎಂದು ಹೇಳಿದ್ದಾರೆ. ಆದ್ದರಿಂದ ಈಗ ಹಾಕಿರುವ ರೇಟನ್ನು ಒಪ್ಪಿಕೊಳ್ಳಬಹುದೆಂದು ಸಲಹೆ ಮಾಡುತ್ತೇನೆ. ಕೊನೆಯಪಕ್ಷ 5 ಆಣೆ ತೆಗೆದು ಬಿಟ್ಟು 4 ಆಣೆ ಮಾಡಿದರೆ ಅದರಿಂದ ರೈತರಿಗೆ ಸ್ವಲ್ಪ ಅನುಕೂಲವಾಗುತ್ತದೆ, ಎಂದು ಸಲಹೆಯನ್ನು ಕೊಡುತ್ತೇನೆ. Part ಎರಡು Schedule ವಿಚಾರದಲ್ಲಿ ಕೆಲವು ವಿಷಯಗಳನ್ನು ಹೇಳಬೇಕೆಂದಿದ್ದೇನೆ. Second Clause ನಲ್ಲಿ Coriander and Til ಇದೆ. ಕೊತ್ತುಂಬರಿ ಎಕರೆಗೆ 3 ಪಲ್ಲವಾಗುತ್ತದೆ. 25 ರೂಪಾಯಿ ರೇಟ್ ಇಟ್ಟುಕೊಂಡರೂ 75 ರೂಪಾಯಿ ಆಗುತ್ತದೆ. ಖರ್ಚು 30 ರೂಪಾಯಿಗಿಂತ ಕಡಿಮೆ ಇಲ್ಲದೆ ಆಗುತ್ತದೆ. ಎಕರೆಗೆ 45 ರೂಪಾಯಿ ಲಾಭ ಬಂದರೆ, 93 ಎಕರೆ exemption ಕೊಡಬೇಕಾಗುತ್ತದೆ. ಸೆಲೆಕ್ಟ್ ಕಮಿಟಿಯವರು ಯಾವ ರೀತಿ ಎಳ್ಳಿಗೆ ಬೆಲೆ ಗೊತ್ತುಮಾಡುತ್ತಾರೋ ಗೊತ್ತಿಲ್ಲ. ಕೊತ್ತುಂಬರಿ ಬೆಳೆ ವಿಚಾರ ಗೊತ್ತಿದೆ. ಕಾಲಕ್ಕೆ ಸರಿಯಾಗಿ ಮಳೆ ಆದರೆ ಸರಿಹೋಯಿತು, ಇಲ್ಲದಿದ್ದರೆ ಕೊತ್ತುಂಬರಿ ಎಕರೆಗೆ 3 ಪಲ್ಲ ಆಗುವುದಿಲ್ಲ. 3 ಪಲ್ಲವಾದರೂ ಒಂದು ಎಕರೆಗೆ 45 ರೂಪಾಯಿಗಿಂತ ಜಾಸ್ತಿ ಲಾಭ ದೊರೆಯುವುದಿಲ್ಲ. ಅಂದಮೇಲೆ 93 ಎಕರೆ exemption limit ಇರಬೇಕು. ಆದ್ದರಿಂದ ಅದನ್ನು first class ಗೆ ಸೇರಿಸಬೇಕೆಂದು ನನ್ನ ಸಲಗೆ.

ಸ್ವಾಮಿ, ಅಡಿಕೆ ವಿಚಾರದಲ್ಲಿಯೂ ಸಹ ಸ್ವಲ್ಪ ಸರಕಾರದವರ ಗಮನಕ್ಕೆ ತರಬೇಕೆಂದು ಇಷ್ಟಪಡುತ್ತೇನೆ. ಒಂದು ಎಕರೆಗೆ Average 20 ಮಣದ ಮೇಲೆ ಆಗುವುದಿಲ್ಲ. ಸರಾಸರಿ 25 ರೂಪಾಯಿ ರೇಟ್ ಇಟ್ಟುಕೊಂಡರೆ 500 ರೂಪಾಯಿ ಉತ್ಪತ್ತಿ ಆಗುತ್ತದೆ. Tax, manure, plantation labour ಮತ್ತು curing ಖರ್ಚನ್ನು ಸೇರಿಸಿಕೊಂಡರೆ 300 ರೂಪಾಯಿಗಳಿಗೆ ಕಡಿಮೆಯಾಗುವುದಿಲ್ಲ. ಎಕರೆಗೆ 200 ರೂಪಾಯಿ ಮಾತ್ರ net income ಬರುತ್ತದೆ. 21 ಎಕರೆ exemption ಕೊಡಬೇಕಾಗುತ್ತದೆ. ಆದರೆ ಈಗ 12 ಎಕರೆ ಮಾತ್ರ exemption ಕೊಟ್ಟಿದ್ದಾರೆ. ಕೊಳೆ ರೋಗ ಬಂದರೆ ಅಡಿಕೆ ಬೆಳೆ ಆಗುವುದಿಲ್ಲ. ನಮ್ಮಲ್ಲಿ ರೈತ ಎಷ್ಟೋ ಕಷ್ಟಪಡಬೇಕಾಗುತ್ತದೆ. ಅವನಿಗೆ ಸಹಾನುಭೂತಿ ತೋರಿಸಿ 12 ಎಕರೆಯಿಂದ ಕನಿಷ್ಠಪಕ್ಷ 20 ಎಕರೆವರೆಗಾದರೂ ಏರಿಸಬೇಕು ಎಂದು ಸಲಹೆಯನ್ನು ತಮ್ಮ ಮುಂದೆ ಇಡುತ್ತೇನೆ.

ಕೊನೆಯಲ್ಲಿ slab rate ವಿಚಾರ. ಈಗಿರುವ ಪ್ರಕಾರ "not exceeding 150 acres 1 rupee per acre ಮತ್ತು exceeding 250 acres ಎರಡು ರೂಪಾಯಿಗಳು ಎಂದು ಇದೆ. Part ಒಂದರಲ್ಲಿ money value ಲೆಕ್ಕಕ್ಕೆ ತೆಗೆದುಕೊಂಡರೆ on the first Rs. 1,500 ಏನೂ ತೆರಿಗೆ ತೆಗೆದುಕೊಳ್ಳುವುದಿಲ್ಲ. On the next Rs. 3,500 ಆರುಕಾಸಿನಂತೆಯೂ, on the next Rs. 5,000 ಒಂದು ಆಣೆಯಂತೆಯೂ ತೆರಿಗೆ ವಸೂಲು ಮಾಡುತ್ತಾರೆ. ಆದರೆ slab rate ನಲ್ಲಿ, exceeding 150 acres and not exceeding 250 acres 1½ ರೂಪಾಯಿ ಹಾಕುತ್ತಾರೆ. ಆದರೆ money value ಮೊದಲನೇ 3½ ಸಾವಿರಕ್ಕೆ 6 ಕಾಸಿನಂತೆಯೂ 5 ಸಾವಿರಕ್ಕೆ ಮೇಲ್ಪಟ್ಟು 1½ ಯಷ್ಟು ವಸೂಲು ಮಾಡುತ್ತಾರೆ. 150 ಎಕರೆಗಳಿದ್ದರೆ 1⅓ ರೂಪಾಯಿ ಕೊಡಬೇಕೆಂದು ಮಾಡಿದ್ದೀರಿ. ಆದ್ದರಿಂದ ನನ್ನ ಸಲಹೆ ಏನೆಂದರೆ: ಒಂದನೆಯ ಷೆಡ್ಯೂಲಿನಲ್ಲಿ ಗೊತ್ತುಮಾಡಿರುವಂತೆ on the first 100 acres, on the next 200 acres, ಈ ರೀತಿ ಗೊತ್ತುಮಾಡಿ ಮೊದಲನೆಯ ಹಂತದಲ್ಲಿ ಒಂದು ರೂಪಾಯಿಯನ್ನೂ, ಎರಡನೆಯ ಹಂತದಲ್ಲಿ ಒಂದೂವರೆಯನ್ನೂ, ಆಮೇಲೆ ಎರಡು ರೂಪಾಯಿಗಳನ್ನೂ ವಿಧಿಸಬೇಕೆಂದು ಹೇಳುತ್ತೇನೆ. ಆಗ್ಗ income-tax ವಿಧಿಸುವುದರಲ್ಲಿ ಎರಡು ವಿಧಾನಗಳಲ್ಲಿ ಕಂಡುಬರುವ ವ್ಯತ್ಯಾಸ ಹೋಗಿ ಸಂಬಂಧಪಟ್ಟ ಸ್ಲಾಬ್‌ಗಳಲ್ಲಿ ದರ ಸರಿಹೋಗುತ್ತದೆ. ಈ ರೀತಿ ಬದಲಾವಣೆ ಮಾಡಬೇಕೆಂದು ಹೇಳಿ ಮುಗಿಸುತ್ತೇನೆ.

Mr. SPEAKER.—The House will now rise for lunch and meet again at 3-30 P.M.

The House adjourned for Lunch at Three of the Clock and reassembled at Thirty Minutes past Three of the Clock.

[MR. SPEAKER in the Chair.]

*Sri M. LINGANNA (Nanjangud).—Sir, the Agricultural Income-tax Bill has been reported back by the Select Committee with far-reaching changes thereunder. At the time when the Bill was introduced, it was agreed that the discussion should be ended on that very day itself and should be referred to the Select Committee; and the principles of the Bill itself should not be discussed and it could not be discussed threadbare in reference to certain items of taxes that the lands were subject to. Sir, everyone of us are aware that the Government has set up a Special Survey Department for purposes of resurvey and settlement. Sir, whenever lands either wet, dry, or garden are resurveyed, it is a well-known factor that the Government of the day would call for fresh proposals of land revenue. As everyone of us know, the land revenue in the State of

(SRI M. LINGANNA.)

Mysore is not uniform. It was assessed or surveyed and the land assessment was fixed some 30 years ago and the Government, of course, to their credit are hastening resurvey of the lands of the three classes that I mentioned; and I believe within one year or even earlier than that the Survey Department is going to submit their proposal to the Government in regard to the actual result of resurvey of all classes of land. In addition to the proposals, they would submit also further changes or alterations in regard to land revenue. We know that the obtaining rate of land revenue in Harihar is quite different from either of Chamarajanagar or Yelandur. So also in certain strips of Mysore like Kolar, they are having different rates of land revenue. My beloved friend Sri Pattabhiraman says that the obtaining rate of land revenue in Kolar is the highest.

Sir, after the proposals of the Survey Department are received, I submit that the Hon'ble Chief Minister or the Revenue Minister would enhance the land revenue either on wet, dry, or garden. So also, Sir, we are almost on the eve of thinking rationalising the land revenue that is obtaining today in the State in regard to all these classes of land. That being the case, Sir now, we have thought that the agricultural produce, mainly commercial crops, should be subject to agricultural income-tax and that is the main proposal of this Bill. When the Bill was introduced some crops were not defined as agricultural crops and they were not brought under the definition clause which enumerates the number of crops that would be subject to income-tax under the proposed Bill. But now it has emerged out of the hands of the Select Committee. If we go through the list of the members of the Select Committee, they are men of experience and also men who know the difficulties of the agriculturists. The Bill has emerged out with additional crops being brought under the purview of this particular Bill. To name a few, even coriander (ಕೊತ್ತಂಬರಿ) mulberry, pepper, thil, these four items of crops have been brought into the fold of this taxation measure. I believe the previous speakers had dwelt largely on this new items of crops that have been sought to be taxed. But I want to confine myself with regard to two items of crops like coriander and mulberry. With regard to mulberry, Sir, a friend of mine who hails from Mysore District, was very enthusiastic and also he was good enough to tell that most of the people who undertake to mulberry cultivation would not be subject to this taxation, because in his opinion the exemption limit of acreage is too wide that none of the agriculturists who raise mulberry would be subject to the agricultural income tax.

Sir, mulberry grown by the agriculturists, from my point of view, is not a commercial crop. Mulberry is grown in the fields and when the leaves are taken out of the mulberry trees and when they are fed into the particular worm which produces the silk then it gets the productive value. And also with regard to the assessment of the mulberry trees, it is a matter to which we have to give our consideration. Everyone of us know that acreage of mulberry is almost the unit or almost the basis on which probably the assessing authority may try to impose the tax or try to assess the work or the value of the mulberry garden. In regard to the assessment, the officer who goes over there may say that a particular acreage of mulberry may fetch so many thousands or so many hundreds of rupees. But from practical experience the mulberry that is grown actually does not or may not yield the income on which the tax is assessed; and also we have to think what kind of officers that are employed by the provision of this particular Bill in whom the authority to assess is vested. It is the revenue officers who are called upon to assess, who are called upon to collect the income tax. Here, Sir, usually the head of the taluk is the Amildar and the Revenue Inspector and down to the shanbhogue. This is the vehicle which

the Government tries to use in order to collect the tax and we know from past experience what hardship we have had in regard to the Harvest Order of 1948.. We know how far and to what extent the assessment made by the Shanbhogues or the Patels concerned is correct in regard to the yield of a particular type of land, for example, paddy fields or jola fields. We know the history of assessment since 1948 till we abolished the Harvest Order, 1948 of Mysore. Here the agriculturist who usually indulges in this particular mulberry plantation, and for that matter, every type of agriculturist, will not be a literate man, and will not be in a position to know what the assessing authority has put down in his order sheet. Also he will not be in a position to contest the assessing authority. From this point of view, the assessing authority being given an overall power, it is a very difficult matter for the agriculturist to bear and we are again taking back or putting back the agriculturist class into the good old days of 1948 when the Harvest Order was ruling the land and we know every one of the agriculturists is afraid of either the Shanbhogue or the Revenue Inspector and also we know the havoc that the ration cards played in those old days and also the food depots and the repercussions that they had on the morale of the public at that particular period when we had rationing all over the State and when we had the Harvest Order all over the State. Once again we are taking back the population or taking back the State into the year of 1948, into the year when the Harvest Order was ruling the State.

Mr. SPEAKER.—The principles of the Bill have been accepted. We are now discussing the Report of the Select Committee. Therefore, there is no use in going back. You can only say now what changes can be effected.

Sri M. LINGANNA.—I am coming to that. Here is a happy amendment in regard to the deletion of mulberry, garlic, til and onion. I believe this amendment would be wholeheartedly supported and accepted by the Treasury Bench. There is some reason also why we should accept this amendment, because garlic is a food material. Grapes are not grown in such abundance in the State of Mysore, though they are very sour to the taste and even mulberry is a crop which cannot be assessed properly and the difficulty to which we are subjecting the ryots would be too big. Also in regard to til, I am of the opinion that it should be excluded from being subject to agricultural income-tax.

ಶ್ರೀ ಕೆ. ಹನುಮಂತಯ್ಯ.—ಮಲೆನಾಡಿನವರು ಏನು ಹೇಳುತ್ತಾರೆ ಕೇಳಿ?

Sri M. LINGANNA.—Whenever a legislation is brought forward, I believe that the State of Mysore should be looked upon as a composite one. It is not that we have to balance the malnad as against the maidan. Here certain articles are included, like onion, garlic and grapes. I refer to the amendment tabled by Sri Mariappa and Sri Venkatappa. Of course, they have laboured a lot over this Report and they have given some good amendments which are worthy of consideration. I am glad some of the flowers like *Savanthige* have been wisely and advisedly omitted by the Select Committee.

With regard to provision No. 3 in the Report of the Select Committee, I most earnestly appeal to the Chief Minister to consider the effect of retaining the clause as it was and as it is reported by the Select Committee. It lays down that the tax is to be collected retrospectively "...... commencing from the 1st April 1955, in accordance with and subject to the provisions of this Act, on the total agricultural income of the previous year of every person." So if we have to pass this provision as it is without a proper amendment,—of course they have said that only certain commercial crops will be subject to this particular kind of taxation, the previous years' income-tax should be collected and the rest will be exempted,—the difficulty will be so much and even the assessing authority will be given a lot of scope and it will give a lot of room for corruption also because with ample powers for composition given under section 64 and also with ample power being given to the assessing authority like the revenue inspector and the

(SRI M. LINGANNA.)

shanbhogue, what the Government have got in its mind, *i.e.*, to collect more taxes on the commercial crops, will be defeated. I therefore submit most earnestly that at least we have to make an amendment by which taxes would be recoverable at the end of the year and to that effect another amendment is also moved by Sri T. Mariappa and Sri V. Venkatappa and it is also an amendment which we have to consider carefully. There also if you were to accept the amendment, the restrospective effect of provision No. 3 will be completely taken away and Government will be given powers to collect agricultural income-tax at the end of the financial year. That is the sum and substance of the amendment moved. So in regard to clause 3, I most earnestly appeal to the Finance Minister to consider this provision and bring a suitable amendment if possible or accept the amendment that is moved by these two friends.

With regard to groundnut, I am entirely opposed to groundnut being subject to income-tax. I would request the Government to subject each and every one of the commercial crops to income-tax provided they come out with the scheme that whenever the price of the agricultural produce goes down, they would give grant-in-aid just as they gave in 1947. With that assurance, if the Government were to tax every kind of commercial crop, I have no objection. For that matter, if the price of the agricultural produce were to go down, there is none to safeguard the interests of the poor agriculturist. The cost of production goes on increasing every day and the rate to be fetched for the agricultural produce would be going down every day, but on the other hand there is none to protect the interests of the agriculturist. Even the Finance Minister knows about the history of the price of this particular commodity 'groundnut'. In the course of my budget speech once I said that the price of groundnut had fallen so low that some of the agriculturists were forced to take back the crops raised in the land. Such is the pitiable position of this particular commodity and even now the position has not improved. When the price of the groundnut is coming down, I ask the Finance Minister whether it is reasonable to call upon this class of people to pay agricultural income-tax on this commodity. Now I earnestly feel that this particular clause wherein groundnut is being included to be taxed, should be deleted. Of course, when the prices go up and when the stability of the market in regard to groundnut is secured with the kind cooperation of the Central Government, I have no objection to this particular clause being re-introduced. So I submit that groundnut should be deleted and clause 3 should be so changed that the retrospective effect that is being contemplated under that particular clause would be changed and some of the crops that have been once again brought into the Bill should be deleted as per the amendment moved by my friends Sri T. Mariappa and Sri Venkatappa.

*ಶ್ರೀ ಬಿ. ವಿ. ನಾರಾಯಣರೆಡ್ಡಿ (ಬಾಗೇಪಲ್ಲಿ-ಗುಡಿಬಂಡೆ).—ಸ್ವಾಮಿ, ಅಧ್ಯಕ್ಷರೇ ನಾನೇನೂ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಒಂದು ಪ್ರಶ್ನೆಯನ್ನು ಮಾತ್ರ ಕೇಳಬೇಕಾಗಿದೆ: ಈಗ ಈ ಬಿಲ್ಲಿನಲ್ಲಿ ಕಬ್ಬಿನ ಮೇಲೂ ತೆರಿಗೆ ಹಾಕಬೇಕೆಂದು ಹೇಳಿದ್ದಾರೆ. ಬೆಲ್ಲ ಮಾಡತಕ್ಕಂಥ ಕಬ್ಬಿನ ಮೇಲೂ ಈ ತೆರಿಗೆ ವಿಧಿಸುತ್ತಾರೋ ?

ಶ್ರೀ ಕೆ. ಹನುಮಂತಯ್ಯ.—ಕಬ್ಬಿನಿಂದ ಬೆಲ್ಲವನ್ನಾದರೂ ಅವರು ಉತ್ಪತ್ತಿ ಮಾಡಿಕೊಳ್ಳಬಹುದು. ಇಲ್ಲವೇ ಸಕ್ಕರೆಯನ್ನಾದರೂ ತಯಾರು ಮಾಡಿಕೊಳ್ಳಬಹುದು.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಆ ಸಲೆಕ್ಟ್ ಸಮಿತಿಯಲ್ಲಿದ್ದವರೆಲ್ಲಾ ನಿಮ್ಮ ಪಾರ್ಟಿಯವರೇ ಆಗಿರುತ್ತಾರೆ; ನಮ್ಮ ಪರವಾಗಿ ಯಾರೂ ಅದರಲ್ಲಿರಲಿಲ್ಲ. ಆದರೆ ಇದರ ವಿಷಯವೇನು, ಬೆಲ್ಲ ಮಾಡುವುದಕ್ಕೆ ಎಷ್ಟು ಕಷ್ಟನಷ್ಟಗಳಿರುತ್ತವೆ ಎನ್ನುವುದನ್ನು ಯಾರೂ ಆಲೋಚನೆ ಮಾಡಿದಂತೆ, ಕಾಣುತ್ತಿಲ್ಲ. ಆ ಬೆಳೆಯೇನೋ ಒಂದು ದೊಡ್ಡ ಆದಾಯದ ಬೆಳೆಯಂತೆ ಕಾಣಬಹುದು. ಆದರೂ ಅದರಿಂದ ರೈತರಿಗೆ ಯಾವ ಆದಾಯವೂ ಇಲ್ಲ. ಆ ಬೆಳೆಗಾಗಿ ಖರ್ಚು ಮಾಡಿದ ಹಣವನ್ನು ಎಷ್ಟೇ ಕಷ್ಟಪಟ್ಟರೂ ವಾಪಸ್ಸು ಪಡೆಯುವುದಕ್ಕೆ ಸಾಧ್ಯವಿಲ್ಲದಂತಾಗಿದೆ. ಆದರೆ ನಮ್ಮ ಪ್ರಾಂತ್ಯದಲ್ಲಿ ಹಾಗೊಂದು ವೇಳೆ ಸಕ್ಕರೆ ಕಾರ್ಖಾನೆಯಾದರೂ ಇದೆಯೋ ಅಂದರೆ ಅದೂ ಕೂಡ ಇಲ್ಲ. ಅದಕ್ಕೆ ತಕ್ಕಂಥ ಸೌಕರ್ಯಗಳೂ ಸಹ ಅಲ್ಲಿ ಇರುವುದಿಲ್ಲ. ನನ್ನ ಕಾನ್ಸ್ಟಿಟ್ಯುಯೆನ್ಸಿಯಲ್ಲಿ ಇತರ ಬೆಳೆಗಳನ್ನು ಎಂದರೆ ಈ ಆನಿಯನ್, ಪೊಟ್ಯಾಟೋ ಇತ್ಯಾದಿಗಳನ್ನು ಬೆಳೆಯುವುದಕ್ಕಾಗುವುದಿಲ್ಲ. ಕಬ್ಬನ್ನೇ ಬೆಳೆಯಬೇಕು. ಈ ದಿವಸ ಅಲ್ಲಿ ರೈತ ಭೂಮಿಗೆ ನೀರು ಹಾಯಿಸಿ ಉತ್ತು ಕಬ್ಬನ್ನು ನಾಟಿ ಹಾಕಿ ಆ ಬೆಳೆ ಕೈ ಸೇರುವ ತನಕ ನೀರನ್ನು ಹೊಡೆದು

ಅದನ್ನು ಬೆಳೆಯಬೇಕಾಗಿದೆ. ಅನಂತರ ಬೆಲ್ಲ ಮಾಡು ಮಾಡುವುದಕ್ಕೆ ಬೇರೆ ಖರ್ಚುಗಳಿವೆ. ಆದರೆ ಇಷ್ಟೆಲ್ಲಾ ಆದನಂತರ ಆ ಸರಕನ್ನು ಮಾರ್ಕೆಟ್ಟಿಗೆ ತೆಗೆದು ಕೊಂಡು ಹೋದರೆ ಅಲ್ಲಿ ಖರ್ಚಾಗುವುದಾದರೂ ಎಷ್ಟು? ಯಾವ ಧಾರಣೆ ಇದೆ? ಒಂದು ಮಣ ಬೆಲ್ಲದ ತಯಾರಿಕೆಗೆ 'ರೂ. 2-8-0 ಖರ್ಚಾದರೆ ಈ ದಿವಸ ಮಾರ್ಕೆಟ್ಟಿನಲ್ಲಿ ಅದಕ್ಕಿರುವ ಬೆಲೆ ರೂ. 2-4-0 ಅಥವಾ ರೂ. 2-5-0. ಪರಿಸ್ಥಿತಿ ಹೀಗಿರುವಾಗ ತಾವು ಅದರ ಮೇಲೆ ಈ ತೆರಿಗೆ ಬೇರೆ ಹಾಕುವುದು ಅಂದರೆ ಯಾವ ನ್ಯಾಯ? ಇದು ಖಂಡಿತ ಸರಿಯಾದ್ದಲ್ಲ. ಹೀಗೆಲ್ಲಾ ಅನ್ಯಾಯವಾಗಿ ಆ ರೈತರನ್ನು ತಾವೇಕೆ ಕಷ್ಟಕ್ಕೆ ಗುರಿಮಾಡುತ್ತೀರಿ? ಈಗ ತಾವು ಕಬ್ಬಿನ ಮೇಲೇನೋ ಇಷ್ಟು ಟನ್ ಎಂದು ಹೇಳಿ ತೂಕ ಮಾಡಿ ಅದಕ್ಕೆ ಟ್ಯಾಕ್ಸ್ ಹಾಕುತ್ತೀರಿ. ಆದರೆ ಬೆಲ್ಲ ಮಾಡಿದರೆ ಆಗ ಅದರ ಮೇಲೆ ಹೇಗೆ ತೆರಿಗೆ ವಿಧಿಸುತ್ತೀರಿ?

4 P.M.

ಬೆಲ್ಲದ ಮೇಲೆ ಯಾವ ರೀತಿ ನಿಗದಿ ಮಾಡುತ್ತೀರಿ ಎಂದು ಕೇಳಬೇಕಾಗಿದೆ? ಎಕರೆಗೆ ಇಷ್ಟು ಮಣ ಬೆಲ್ಲ ಆಗುತ್ತದೆ ಎಂಬುದನ್ನು ನಿಗದಿ ಮಾಡಿದರೆ ಒಂದು ಕಡೆ ಆಗುವ ಬೆಲ್ಲಕ್ಕೂ ಇನ್ನೊಂದು ಕಡೆ ಆಗುವ ಬೆಲ್ಲಕ್ಕೂ ಎಂಟು ಆಣೆಯಿಂದ ಒಂದು ರೂಪಾಯಿನ ವರೆಗೆ ವ್ಯತ್ಯಾಸ ಇರುತ್ತದೆ. ಆಮೇಲೆ ಬೆಲೆ ನಿಗದಿ ಮಾಡುವಾಗ ನಾವು $2\frac{1}{2}$ ರೂಪಾಯಿಗೆ ಮಾರಿದ್ದರೆ $3\frac{1}{2}$ ರೂಪಾಯಿಗೆ ಮಾರಿದ್ದೇವೆ ಎಂದು ಹೇಳಿದರೆ ಆಗ ಏನು ಮಾಡುವುದು? ಒಂದು ಮಾರ್ಕೆಟಿಂಗ್ ಸೊಸೈಟಿ ಅಥವಾ banking concern ಮಾರುವ ಹಾಗಿಲ್ಲದಿದ್ದರೆ, Mandy merchant ಕೈಯ್ಯಲ್ಲಿ ಕೊಟ್ಟು ಬರಬೇಕಾಗುತ್ತದೆ. ಒಟ್ಟಿನಲ್ಲಿ ರೈತರಿಗೆ ಇದರಿಂದ ಆಗತಕ್ಕ harassment ಹೇಗೆ ತಪ್ಪಿಸಬೇಕು ಎಂಬುದು ಯೋಚನೆ ಮಾಡಬೇಕಾದ ವಿಷಯ. ಈ ರೀತಿ ಮಾಡಬಹುದು. ಬೆಲ್ಲಕ್ಕೆ ನಾಲ್ಕು ರೂಪಾಯಿ ರೇಟ್ ಇದ್ದರೆ ಇಷ್ಟು ಕೊಡಬೇಕು ಎಂಧು ಹೇಳಬೇಕು, $2\frac{1}{2}$ ರೂಪಾಯಿನೊಳಗೆ ಮಾರಾಟ ಮಾಡಿದ್ದರೆ ಖಂಡಿತವಾಗಿ ಅದರ ಮೇಲೆ ತೆರಿಗೆ ಹಾಕಬಾರದು. ರೇಟನ್ನು ಹೆಚ್ಚಿಗೆ ತೋರಿಸಿ ಇಷ್ಟು ಹಣಲಾಭ ಬರುತ್ತದೆಂದು ತೆರಿಗೆ ಹಾಕಿದರೆ ಅದರಿಂದ ಅನುಕೂಲವಾಗುವುದಿಲ್ಲ. ಇದನ್ನು ಖಂಡಿತವಾಗಿ ಯೋಚನೆ ಮಾಡಬೇಕು. ಎಷ್ಟೋ ಜನರಿಗೆ ಅನುಕೂಲವಾಗಬೇಕು. ತೆರಿಗೆ ಕೊಡುವುದು ಬೇಡ ಎನ್ನುವ ಉದ್ದೇಶವಲ್ಲ. ಒಬ್ಬ ರೈತ 10 ಎಕರೆ ಕಬ್ಬು ಹಾಕಿ ಗೊಬ್ಬರ ಹಾಕಿ ಮುತುವರ್ಜಿವಹಿಸಿ ಹೆಚ್ಚಿಗೆ ಕಬ್ಬು ಬೆಳೆದರೆ ಮತ್ತೊಬ್ಬ ರೈತ ಏತಕ್ಕೆ ಅಷ್ಟು ಬೆಳೆಯಲಿಲ್ಲ ಎಂದು ವಾದಿಸುವುದು ಸರಿಯಲ್ಲ. ಒಬ್ಬ ರೈತ ಸೋಮಾರಿಯಾಗಿರುತ್ತಾನೆ. ಚೆನ್ನಾಗಿರುವವನು ಇನ್ನೊಬ್ಬನಿರುತ್ತಾನೆ. ಆಗ ಹೇಗೆ ಇದನ್ನು ನಿಗದಿ ಮಾಡುತ್ತೀರಿ? ನಾನು ಹೇಳುವುದು ಬೆಲ್ಲದ ರೇಟಿನ ಮೇಲೆ levy ಮಾಡಬೇಕೇ ಹೊರತು ಬರೀ ಕಬ್ಬಿನ ಮೇಲೆ ಲೆವಿ ಮಾಡಿದರೆ ಆಗ ಮೊಟ್ಟಮೊದಲು ಲೆಕ್ಕ ಬರೆಯುವವರ ಅವಶ್ಯಕತೆ ಬರುತ್ತದೆ, ಆದ್ದರಿಂದ ಬೆಲ್ಲದ ವಿಚಾರದಲ್ಲಿ ಅದರ ರೇಟಿನ ಮೇಲೆ ಹಾಕಬೇಕು ಎಂದು ಹೇಳುತ್ತೇನೆ.

*ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—ಸ್ವಾಮಿ, ಮುಖ್ಯ ಮಂತ್ರಿಗಳು ಬಹಳ ಚತುರರು ಎಂಬುದರಲ್ಲಿ ಏನೂ ಅನುಮಾನವೇ ಇಲ್ಲ, ಸಂಶಯವೂ ಇಲ್ಲ. ಏಕೆಂದರೆ ಮೊದಲು ಈ ಬಿಲ್ಲನ್ನು ತಂದಾಗ ನಾವು ಯಾವ ಅಭಿಪ್ರಾಯಕ್ಕೂ ಬಂದಿರಲಿಲ್ಲ. ಸಭೆಯವರು ಏನು ಹೇಳುತ್ತಾರೋ ಅದನ್ನು ನೋಡಿ ಅದಕ್ಕೆ ತಕ್ಕ ಬಿಲ್ಲನ್ನು ಈಗ ಮಾಡಿದ್ದಾರೆ. 3,500 ರೂಪಾಯಿ Minimum ಇದ್ದುದನ್ನು ಈ ಸಭೆಯಲ್ಲಿ 4,200 ರೂಪಾಯಿ ಮಾಡಬೇಕೆಂದು ಹೇಳಿದಂತೆ ಹೆಚ್ಚಿಸಿದ್ದಾರೆ. ಹೀಗೆ ಅನೇಕ ವಿಷಯಗಳಲ್ಲಿ ತಿದ್ದುಪಡಿ ಮಾಡಿದ್ದಾರೆ. ಅದೇ ಬುದ್ಧಿವಂತಿಕೆಯೆನ್ನುವುದು. ಮೊದಲು ಸ್ವಲ್ಪ ಹೆಚ್ಚಿಗೆ ಹಾಕಿ ಬಿಡುವುದು; ಈ ಸಭೆಯಲ್ಲಿ ತೆರಿಗೆ ಹೆಚ್ಚಿಗೆ ಹಾಕಿದ್ದಾರೆಂದು ಮಾತನಾಡುತ್ತಾರೆ; ಆಗ ಸ್ವಲ್ಪ ಸದಸ್ಯರು ಹೇಳಿದಂತೆ ಅನುಸರಿಸೋಣ ಎಂದು ಆಮೇಲೆ ಕಡಿಮೆ ಮಾಡುವುದು—ಇದು ನಿಜವಾಗಿಯೂ ಚತುರತೆಯಿಂದಲೂ ಒಳ್ಳೆಯ ದೃಷ್ಟಿಯಿಂದಲೂ ಮತ್ತು ಬಹಳ ಬುದ್ಧಿವಂತಿಕೆಯಿಂದಲೂ ಮಾಡಿದ್ದಾರೆಂಬುದನ್ನು ತೋರಿಸುತ್ತದೆ. ಬಿಲ್ಲಿನಲ್ಲಿ ಸೇರದೆ ಇರತಕ್ಕಂಥ ಕೆಲವು ಬೆಳೆಗಳನ್ನು ಈಗ ಇದರಲ್ಲಿ ಸೇರಿಸಿದ್ದಾರೆ. ಹಾಗೆ ಸೇರಿಸಿರುವುದು ಸರಿಯೋ ತಪ್ಪೋ ಹೇಳುವುದು ಕಷ್ಟವಾಗಿದೆ.

ಅಧ್ಯಕ್ಷರು.—ತಾವು ಇದರ ಬಗ್ಗೆ Amendment ಕೊಟ್ಟಿದ್ದೀರಿ.

ಶ್ರೀ ವಿ. ವೆಂಕಟಪ್ಪ.—ಅವನ್ನು ಬಿಟ್ಟು ಬಿಡಬೇಕೆಂದು Amendment ಕೊಟ್ಟಿದ್ದೇನೆ. ಅದರ ಗತಿ ನೋಡಬೇಕು.

ಶ್ರೀ ಜೆ. ಮಹಮ್ಮದ್ ಇಮಾಂ.—ತಾವು Ruling ಪಾರ್ಟಿಗೆ ಸೇರಿದವರು; ನೀವೇ ಈ ರೀತಿ ಹೇಳಿದರೆ ಹೇಗೆ?

ಶ್ರೀ ವಿ. ವೆಂಕಟಪ್ಪ.—Move ಮಾಡಿದಾಗ ನೋಡೋಣ. ಇದರಲ್ಲಿ Mulberryಯನ್ನು ಸೇರಿಸಿದ್ದಾರೆ.

ಅಧ್ಯಕ್ಷರು.—ತಿದ್ದುಪಡಿಯನ್ನು ಮಂಡಿಸುವುದಾದರೆ ಆಗ ಇದನ್ನು ಹೇಳಬಹುದು; otherwise it will be repetition of argument.

ಶ್ರೀ ವಿ. ವೆಂಕಟಪ್ಪ.—25 ಎಕರೆ ಬಿಡಬಹುದು ಎಂದು ಸೂಚಿಸಿದ್ದಾರೆ. ಆದ್ದರಿಂದ ಅವರು ಸುಲಭವಾಗಿ ಏನು ಉತ್ತರ ಹೇಳಬಹುದೆಂದರೆ, "25 ಎಕರೆಗಿಂತ ಹೆಚ್ಚಿಗೆ Mulberry ಯಾರು ಬೆಳೆಯುತ್ತಾರೆ? ಆದ್ದರಿಂದ ನೀವು ಏತಕ್ಕೆ ಒದ್ದಾಡುತ್ತೀರಿ?" ಎಂದು ಹೇಳಬಹುದು. ನಿಜವಾಗಿ 25 ಎಕರೆ ಬೆಳೆಯುವುದು ಅಪರೂಪ. ಆದರೆ ಎಷ್ಟೆಷ್ಟು ಎಕರೆ ಬೆಳೆಯುತ್ತಾರೆಂದು ಹೇಳಿದರೆ ಸ್ವಲ್ಪ ಅರ್ಥವಾಗುತ್ತದೆ.

ಅಧ್ಯಕ್ಷರು.—ಪ್ರತಿಯೊಂದು ತಾಲ್ಲೂಕಿಗೂ ಬೇರೆ ಬೇರೆ ಕೊಡಬಹುದಾಗಿತ್ತು.

ಶ್ರೀ ವಿ. ವೆಂಕಟಪ್ಪ.—ಅವರ ಸುಲಭ ತಮ್ಮ ಸುಲಭ ನೋಡಿಕೊಂಡರೆ ಆಗುವುದಿಲ್ಲ. ಎಂಟು ಗುಂಟೆಗಳ ಕೆಳಗೆ 24 ಗುಂಟೆಗಳು ಎಂದು ಹೀಗೆ ಒಂದೊಂದನ್ನೂ ಲೆಕ್ಕ ಹಾಕಿಕೊಂಡು ಹೋದರೆ ಬಹಳ ಕಷ್ಟವಾಗುತ್ತದೆ. ತಾವು ತಿಳಿದುಕೊಂಡಿರುವಷ್ಟು ಸುಲಭವಲ್ಲ. ನನಗೆ ಅದನ್ನು ಅರ್ಥಮಾಡಿಕೊಂಡು ಒಂದೊಂದಕ್ಕೆ ಎಷ್ಟಾಗುತ್ತದೆ ಎಂಬುದನ್ನು ಕಂಡು ಹಿಡಿಯಲು ಸ್ವಲ್ಪ ಕಷ್ಟವಾಗುತ್ತದೆ. ಇದು ರೈತನಿಗೆ ಗೊತ್ತಾಗುವುದಿಲ್ಲ. ಎಷ್ಟು ಎಕರೆ Mulberry ಹಾಕಿದೆ ಎಂದು ನೋಟೀಸ್ ಕೊಟ್ಟರೆ ಏನು ಮಾಡಬೇಕು? ಲೆಕ್ಕ ಸರಿ ಮಾಡಿಕೊಂಡು ಹೋಗಲೇಬೇಕು. ಅದು ಅರ್ಥವಾಗದೇ ಇದ್ದರೆ, ಯಾರು ಹೇಳಿಕೊಡುತ್ತಾರೆ? ಲಾಯರ್ ಹತ್ತಿರ ಹೋಗಬೇಕು. ಅವರು ಹೋಗಿ ಹೇಳಬೇಕೇ ಹೊರತು ಬೇರೆಯವರು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. 25 ಎಕರೆ ಬೆಳೆಯುವುದಿಲ್ಲ ಎಂದು ಹೇಳುತ್ತೇನೆ. ಹಾಗಾದರೆ ಇದನ್ನು ಏತಕ್ಕೆ ಸೇರಿಸಬೇಕು ಎನ್ನುವುದು ಅರ್ಥವಾಗಿಲ್ಲ. ಬಿಟ್ಟು ಬಿಟ್ಟಿದ್ದರೆ ಸುಖವಾಗಿತ್ತು. Silk industries

(ಶ್ರೀ ವಿ. ವೆಂಕಟಪ್ಪ.)

ಬಹಳ ಕಷ್ಟ ದೆಸೆಯಲ್ಲಿದೆ. ಸರ್ಕಾರ protection ಕೊಟ್ಟರೂ ಈ ಕೈಗಾರಿಕೆ ಸರಿಯಾದ ಸ್ಥಿತಿಗೆ ಬಂದಿಲ್ಲ. ಅದಕ್ಕೆ ಏನು ಅನುಕೂಲಬೇಕೋ ಅದನ್ನು ಮಾಡಿ ಕೊಡುತ್ತೇವೆ ಎಂದು ಸರಕಾರದವರು ಹೇಳುತ್ತಾ ಇರುವಾಗ, ಟಾರಿಫ್ ಬೋರ್ಡಿನ ರೇಟಿಗಿಂತ ಕಡಿಮೆ ಆದಾಗ ಲುಕ್ಸಾನು ಆಗುತ್ತದೆ ಎಂದು ಹೇಳುವಾಗ, Mulberry ಮೇಲೆ ತೆರಿಗೆ ಹಾಕುವುದು ನನಗೆ ಅರ್ಥವಾಗುವುದಿಲ್ಲ. ಆದ್ದರಿಂದ Industries Minister ಮತ್ತು Finance Minister ಈ ವಿಚಾರದಲ್ಲಿ ಮಾತನಾಡಿ ಕೊಂಡು ಇದನ್ನು ಸೇರಿಸಿದಂತೆ ಕಾಣುವುದಿಲ್ಲ. ಇದರ ಪರಿಸ್ಥಿತಿ ಹೇಗಿದೆ ಎಂದರೆ ಒಂದು ಪೌಂಡು ಗೂಡಿಗೆ ಒಂದು ಕಾಸು ಹೆಚ್ಚಿಗೆ ಮಾಡಿದರೆ ತೊಂದರೆಯಾಗುತ್ತದೆ ಎಂದು ಸರ್ಕಾರಕ್ಕೆ ಮನವಿಗಳನ್ನು ಮಾಡಿದ್ದರಿಂದ ಅದನ್ನು ಆದಷ್ಟುಮಟ್ಟಿಗೆ ಹೋಗಲಾಡಿಸುವುದಕ್ಕೆ ಯೋಚನೆ ಮಾಡುತ್ತೇವೆಂದು ಸರ್ಕಾರದವರು ಹೇಳಿರುವಾಗ, Mulberryಮೇಲೆ ತೆರಿಗೆ ಹಾಕುತ್ತೇವೆ ಎಂದು ಹೇಳತಕ್ಕದ್ದು ನಿಜವಾಗಿ ಅಷ್ಟು ಸರಿಯಾಗಿ ಕಾಣುವುದಿಲ್ಲ. ಕಾಫಿಗೂ ಟೀಗೂ ವ್ಯತ್ಯಾಸ ಮಾಡಿದ್ದಾರೆ. Estates Coffee ವಿಷಯ ಅಷ್ಟಾಗಿ ನನಗೆ ಗೊತ್ತಿಲ್ಲ.

ಶ್ರೀ ಕೆ. ಹನುಮಂತಯ್ಯ.—ಕಾಫಿ ಎಸ್ಟೇಟ್ ಕೊಂಡುಕೊಳ್ಳಿ.

ಶ್ರೀ ವಿ. ವೆಂಕಟಪ್ಪ.—ಒಂದು ವಿಷಯ ತಲೆ ಎತ್ತಿಕೊಂಡು ಬಂದಿದೆ. ಕಾಫಿ ಎಸ್ಟೇಟಿನವರ ಪರಿಸ್ಥಿತಿ ಹೇಗಿತ್ತು ಎಂಬುದನ್ನು ನಾವು ಸ್ವತಃ ನೋಡದೇ ಇದ್ದರೂ ನಮ್ಮ ಜೊತೆಯಲ್ಲಿ ಕೆಲವು ಕಾಫಿ ಪ್ಲಾಂಟರ್ಸ್ ಇದ್ದವರ ಸ್ಥಿತಿ ಏನಾಯಿತು ಎಂಬುದು ಗೊತ್ತಿದೆ. ಅವರಲ್ಲಿ ಉಳಿದುಕೊಂಡಿರುವವರು ಕಡಿಮೆ. ಅನೇಕರು estates owners ಎಂದುಕೊಂಡಿರುವವರಿಗೆ ಏನೂ ಇಲ್ಲದ ಪರಿಸ್ಥಿತಿ ಒದಗಿದೆ. ಏನೋ ಹಣ ಸಂಪಾದನೆ ಮಾಡಬೇಕು ಎಂದು ಸರ್ಕಾರಕ್ಕೆ ಆಸೆ ಇದೆ. ಕಾಫಿ ಪ್ಲಾಂಟರ್ಸ್‌ಗೆ ಪೂರ್ಣವಾಗಿ ಇದರಿಂದ ತೊಂದರೆಯಾಗದೆ ಇರುವ ರೀತಿಯಲ್ಲಿ ಈ ತೆರಿಗೆಯನ್ನು ವಿಧಿಸಬೇಕು. ಪ್ಲಾಂಟರ್ಸ್ ವಿಷಯ ಗೊತ್ತಿದ್ದವರು ಯಾರು ಯಾರು ಇದ್ದಾರೋ ಅವರೆಲ್ಲರೂ ಇದರಿಂದ ಬಹಳ ಮಟ್ಟಿಗೆ ತೊಂದರೆಯಾಗುತ್ತದೆ ಎಂದು ಹೇಳುತ್ತಿದ್ದಾರೆ. ಆದ್ದರಿಂದ ಎಷ್ಟರಮಟ್ಟಿಗೆ ಸುಲಭವಾಗಿ ಕೊಡುವುದಕ್ಕೆ ಸಾಧ್ಯವಾಗುತ್ತದೆಯೋ ಅಷ್ಟರಮಟ್ಟಿಗೆ ಅನುಕೂಲ ಮಾಡಿಕೊಟ್ಟರೆ ಒಳ್ಳೆಯದು. ನಮ್ಮ ದೇಶದಲ್ಲಿ ಸ್ವಲ್ಪ ಹೆಚ್ಚು ಸಂಪಾದನೆ ಮಾಡತಕ್ಕ ಜನರು ಇದ್ದರೆ, ಅದರಿಂದ ದೇಶಕ್ಕೆ ಕೇಡು ಆಗುವುದಿಲ್ಲ. ಆದ್ದರಿಂದ, ಸ್ವಲ್ಪ ಹೆಚ್ಚಿಗೆ ಬೆಳೆಯುತ್ತಾರೆ ಎಂದುಕೊಂಡರೆ ಬೇಕಾದಷ್ಟು ಉತ್ಪನ್ನ ಮಾಡಲಿ ಎನ್ನುವ ದೃಷ್ಟಿಯಿಂದ ನೀವು ಅವರನ್ನು ನೋಡತಕ್ಕದ್ದು ಒಳ್ಳೆಯದು ಎಂದು ತೋರುತ್ತದೆ. Accounts ಕೊಡತಕ್ಕ ವಿಷಯದಲ್ಲಿ, ಕೊಡುವುದಕ್ಕೆ ಆಗದೇ ಇದ್ದರೆ Compound ಮಾಡಬಹುದು ಎಂದು ಮಾಡಿದ್ದಾರೆ. ಅದರಲ್ಲಿ ಯಾವ ವರ್ಷ ಲೆಕ್ಕ ಇಡುವುದಕ್ಕೆ ಆಗಲಿಲ್ಲವೋ ಆ ವರ್ಷ ಮಾತ್ರ compound ಮಾಡುವುದಕ್ಕೆ ಅರ್ಜಿ ಹಾಕಿ 'ಇಂಥ ಕಷ್ಟವಾಗಿದೆ, ಇದರಿಂದ ತೆರಿಗೆ ಕೊಡಲಿಲ್ಲ' ಎಂದು ಹೇಳುವುದಕ್ಕೆ ಬದಲು, ಲೆಕ್ಕ ಇಡುವುದಕ್ಕೆ ಆಗದೆ ಇದ್ದ ಸಂದರ್ಭದಲ್ಲಿ compound ಮಾಡಿಕೊಳ್ಳುವುದಕ್ಕೆ ಏರ್ಪಾಡು ಮಾಡಿದರೆ ಅದರಂತೆ ಕೊಟ್ಟುಕೊಂಡು ಹೋಗುತ್ತಾನೆ. ಲೆಕ್ಕ ಇಡುವುದಕ್ಕೆ ಆಗಿಲ್ಲ ಎಂದು ಹೇಳಿದರೆ ಅದನ್ನು compound ಮಾಡುವುದಕ್ಕೆ ಏತಕ್ಕೆ ಅವಕಾಶವಿರಬಾರದು?

Section 64 (5) ರಲ್ಲಿ ಹೀಗಿದೆ :—

"(5) The permission granted under sub-section 3 shall be in force for the year for which it is granted."

ಒಂದು ವರ್ಷಕ್ಕೆ ಮಾತ್ರ permission ಕೊಡಬಹುದು ಎಂದು ಇದೆ. ಪ್ರತಿ ವರ್ಷ apply ಮಾಡಿದರೆ ಕೊಡುತ್ತಾರೆ ಎಂದು ಹೇಳುವಹಾಗಿಲ್ಲ. ಪ್ರತಿವರ್ಷವೂ apply ಮಾಡುವುದು ಅನಾವಶ್ಯಕ. ಈ ರೀತಿ ತೊಂದರೆ ಇದೆ. Accounts ಕೊಡುವುದಕ್ಕೆ ಆಗುವುದಿಲ್ಲ, compound ಮಾಡಿಕೊಳ್ಳಬೇಕು ಎಂದರೆ ಆ ರೀತಿ ಮಾಡಿಕೊಳ್ಳುವುದಕ್ಕೆ ಅವಕಾಶ ಇರುವುದು ಒಳ್ಳೆಯದು.

Mr. SPEAKER.—I think it is always to the advantage of the assessee.

Sri K. HANUMANTHAIYA.—This method is favourable to the assessee.

ಅಧ್ಯಕ್ಷರು.—ನನಗೆ ಎಷ್ಟು ದಿವಸ compound ಮಾಡಿಕೊಡಬೇಕೋ ಅಷ್ಟು ದಿವಸ ಹಾಗೆ ಕೊಡುತ್ತೇನೆ. ಇಲ್ಲದಿದ್ದರೆ ಲೆಕ್ಕ ಕೊಡುತ್ತೇನೆ.

ಶ್ರೀ ಕೆ. ಹನುಮಂತಯ್ಯ.—ವರ್ಷೇ ವರ್ಷೇ ಕಂದಾಯ ವಸೂಲು ಮಾಡಬೇಕೆಂದಿರುವುದರಿಂದ ಯಾವ ಧಾರಣೆಯಲ್ಲಿ ವಸೂಲು ಮಾಡಬೇಕೆಂಬುದನ್ನು ಪ್ರತಿ ವರ್ಷವೂ ಹೇಳಬೇಕು.

Mr. SPEAKER.—And the Government should not refuse his application.

ಶ್ರೀ ವಿ. ವೆಂಕಟಪ್ಪ.—ಆಮೇಲೆ, ಒಂದಕ್ಕಿಂತ ಹೆಚ್ಚು commercial crop ಬೆಳೆದರೆ, ಅದಕ್ಕೆರಡರಷ್ಟು ತೆರಿಗೆ ಹಾಕಬೇಕೆಂದು ಇಲ್ಲಿ ಸೂಚನೆಯಿದೆ. ಇದರಿಂದ ಬಹಳ ಕಷ್ಟವಾಗುತ್ತದೆ. ಮೊದಲನೆಯ argument ಇದಕ್ಕೂ ಅನ್ವಯಿಸುತ್ತದೆ. ಅಲ್ಲದೆ ಇನ್ನೊಂದು ವಿಷಯವೇನೆಂದರೆ, ಸಣ್ಣ ಸಣ್ಣ ಬೆಳೆಗಳಾದ ಈರುಳ್ಳಿ, ಬೆಳ್ಳುಳ್ಳಿ, ಎಳ್ಳು ಮುಂತಾದುವುಗಳನ್ನು ಹೊಸದಾಗಿ ಬೇರೆ ಸೇರಿಸಿದ್ದೀರಿ. ಇವುಗಳು ಎಲ್ಲಿ ಹೆಚ್ಚಿಗೆ ಬೆಳೆಯುತ್ತವೆಯೋ ಗೊತ್ತಿಲ್ಲ. ನಮ್ಮ ಕಡೆಯಲ್ಲೆಲ್ಲಾ ಇವುಗಳನ್ನು ಅಲ್ಲಲ್ಲೇ ಸ್ವಲ್ಪ ಸ್ವಲ್ಪ ಹಾಕಿಕೊಂಡಿರುತ್ತಾರೆ ಅಷ್ಟೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಒಟ್ಟು 62,000 ಎಕರೆಗಳಲ್ಲಿ ಎಳ್ಳು ಬೆಳೆಯುತ್ತದೆಂದು ಲೆಕ್ಕ ಕೊಟ್ಟಿದ್ದಾರೆ.

ಶ್ರೀ ವಿ. ವೆಂಕಟಪ್ಪ.—ಇರಬಹುದು ; ಒಂದೊಂದು ಹಳ್ಳಿಯಲ್ಲೂ ಅರ್ಧ ಎಕರೆ, ಒಂದು ಎಕರೆ ಬೆಳೆಯುವುದನ್ನು ಸೇರಿಸಿಕೊಂಡರೆ ಒಟ್ಟು ದೇಶದಲ್ಲಿ 62,000 ಎಕರೆಗಳಿವೆಯೆಂದು ಭಾವಿಸುವುದು ಸರಿಯೇ? ಎರಡು ಬೆಳೆ ಎಂದರೆ, ಎಷ್ಟೋ ಜನರು ಎಳ್ಳು ಕಡ್ಲೆಕಾಯಿ ಎರಡನ್ನೂ ಹಾಕುತ್ತಾರೆ. ಅಂಥವುಗಳಿಗೆ ಅದು ಅನ್ವಯಿಸುತ್ತದೆಂತಲೇ? ಮಂತ್ರಿಗಳೇನೋ ಸಾಕಾದಷ್ಟು exemption ಕೊಟ್ಟಿದ್ದೇವೆಂದು ಹೇಳಬಹುದು. Exemption ಕೊಟ್ಟಿದ್ದರೂ, ತೊಂದರೆ, ಕಿರುಕುಳ ತಪ್ಪುವುದಿಲ್ಲ. ಅದಕ್ಕೆ ಅವಕಾಶವಿಲ್ಲದಂತೆ ಮಾಡಬೇಕೆಂದು ನಾನು ಹೇಳುತ್ತೇನೆ.

Mr. SPEAKER.—But it will hurt many if this item is not included. So many will plead that that item is not included.

ಶ್ರೀ ವಿ. ವೆಂಕಟಪ್ಪ.—ಸುಮ್ಮನೆ ಕೆಲವರನ್ನು ಸಮಾಧಾನಪಡಿಸಬೇಕೆಂದು ಹೇಳಿ ಮಿಕ್ಕವರನ್ನು ತೊಂದರೆ ಪಡಿಸುವುದು ಸರಿಯಲ್ಲ. ಒಬ್ಬರು ಇನ್ನೊಬ್ಬರಮೇಲೆ ಹೊಟ್ಟೆಕಿಚ್ಚುಪಡುತ್ತಾರೆಂಬ ದೃಷ್ಟಿಯಿಂದ ಯಾವುದರಿಂದ ಏನೂ ಆದಾಯ ಬರುವುದಿಲ್ಲವೋ ಅಂಥದನ್ನು ಬೆಳೆಯುವವರಮೇಲೂ ಹಾಕುವುದು ಸರಿಯಲ್ಲ. ಏನೂ ಬರದೆ ಇದ್ದರೂ ಕಿರುಕುಳ ತಪ್ಪಿಸುವುದು ಅವಶ್ಯಕ. ಸಾಮಾನ್ಯವಾಗಿ ಈರುಳ್ಳಿ ಬೆಳ್ಳುಳ್ಳಿಯನ್ನು ಬೇರೆ ಪೈರುಗಳ ಜೊತೆಯಲ್ಲಿ ಅಲ್ಪಸ್ವಲ್ಪ ಹಾಕಿ ಕೊಂಡಿರುವುದನ್ನು ನಮ್ಮ ಕಡೆಯಲ್ಲಿ ನೋಡಿದ್ದೇನೆ ಅಷ್ಟೆ. ಕೋಲಾರದ ಕಡೆಯಲ್ಲಿ ಹೇಗೆ ಬೆಳೆಯುತ್ತಾರೋ ಕಾಣೆ. ಅಂಥದನ್ನು ದೊಡ್ಡದಾಗಿ ಒಂದು commercial crop ಎಂದು ಪರಿಗಣಿಸುವುದು ಸರಿಯಲ್ಲ. ಎಲ್ಲಾ ಕಡೆಯಲ್ಲೂ ಇದೇನೋ ಅಲ್ಪಸ್ವಲ್ಪ ಬೆಳೆಯುತ್ತದೆಂದಿದ್ದರೂ, ನಾನೇಕೆ ಹೇಳುತ್ತಿದ್ದೇನೆಂದರೆ, ಹಳ್ಳಿಗಾಡಿನಲ್ಲಿ ಅನೇಕರು ತಿಳಿವಳಿಕಸ್ಥರಲ್ಲ; ವಿದ್ಯಾವಂತರಲ್ಲ. ಆದ್ದರಿಂದ ಕಿರುಕುಳಗಳಿಗೆ ಅವಕಾಶವಿರುತ್ತದೆ. ಹಿಂದೊಮ್ಮೆ ನೀವೇ ಕಿರುಕುಳವಾಗುತ್ತದೆಂದು ಹೇಳಿ agricultural income-tax ಹಾಕಲಿಲ್ಲವೆಂದು ಹೇಳಿದ್ದೀರಿ. ಅಂಥದರಲ್ಲಿ ಈಗ ನೀವೇ ಹಾಕಿದ್ದೀರಿ. ದೊಡ್ಡದೊಡ್ಡವರಿಗೆ ಹಾಕಿದರೂ ಪರವಾಯಿಲ್ಲ. ಸಣ್ಣಸಣ್ಣ ಜನಗಳಿಗೆ ಇದರಿಂದ ಕಿರುಕುಳಗಳಾಗುತ್ತವೆ. ಸರ್ಕಾರದವರ ಗಮನಕ್ಕೆ ಅಂಥ ಸಂದರ್ಭಗಳನ್ನು ತಂದರೆ ಸರಿಮಾಡುತ್ತೇವೆಂದು ಹೇಳಬಹುದು. ಆದರೆ ಇಲ್ಲಿಯವರೆಗೂ ಆ ಬಡಜನರಿಗೆ ಬರತಕ್ಕ ಯೋಗ್ಯತೆಯಿದೆಯೇ? ಅವರು ಅಲ್ಲೇ ಹೇಗೋ ಸರಿಮಾಡಿಕೊಳ್ಳಬೇಕು. ಆದ್ದರಿಂದ ಇಂಥ ಸಣ್ಣ ಸಣ್ಣ ವಿಷಯಗಳಲ್ಲಿ exemption ಕೊಟ್ಟು ಕಿರುಕುಳ ತಪ್ಪಿಸುವುದು ನ್ಯಾಯ.

ಇನ್ನು ಲೆಕ್ಕದ ವಿಷಯ. ಮೂರು ವರ್ಷದ ಲೆಕ್ಕ ಕೊಡಬೇಕಾಗುತ್ತದೆಂದು ಇಲ್ಲಿ ಸೂಚನೆ ಮಾಡಿದ್ದಾರೆ. ಹಾಗೆ ಲೆಕ್ಕವಿಡುವುದು ಕಷ್ಟ. ಲೆಕ್ಕವೇ ಇಟ್ಟಿಲ್ಲವೆಂದು complain ಮಾಡುತ್ತಿರುವಾಗ, ಈ ವರ್ಷ ಮೂರು ವರ್ಷದ ಲೆಕ್ಕ ಕೊಡಿ ಎಂದು ಹೇಳಿದರೆ ಹೇಗೆ ಮಾಡುವುದೋ ನನಗೆ ಅರ್ಥವಾಗುವುದಿಲ್ಲ. ಈ ವರ್ಷ ತಾನೆ ಈ ಆಕ್ಟ್ ಬಂದಿದೆ. ಲೆಕ್ಕವೇ ಯಾರೂ ಇಟ್ಟಿರುವುದಿಲ್ಲ. ಆದ್ದರಿಂದ ಈ ವರ್ಷ ಈ ಬಗ್ಗೆ ಏನೂ ಮಾಡಬೇಡಿರಿ. ಈ ವರ್ಷದ ಉತ್ಪತ್ತಿಯಮೇಲೆ 1956ನೇ ಮಾರ್ಚಿ ಆಖೈರಿಗೆ ಲೆಕ್ಕ ಹಾಕಿ ವಸೂಲು ಮಾಡುವುದು ನ್ಯಾಯವೆಂದು ತೋರುತ್ತದೆ. ಇದೇ ವಿಷಯವನ್ನು ಸಭೆಯವರನೇಕರು ತಿಳಿಸಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳೇಕೋ ಏನೂ ಖಚಿತವಾಗಿ ಹೇಳಲಿಲ್ಲ. "ಧ್ರುವ ಪೈರುಗಳಿರುವವರಿಗೆ ಮಾತ್ರ ಇದು ಹೆಚ್ಚಿಗೆ ಅನ್ವಯಿಸುತ್ತದೆ, ಮಿಕ್ಕವರೆಲ್ಲರೂ ಲೆಕ್ಕ ಕೊಡತಕ್ಕ ಪರಿಸ್ಥಿತಿ ಬರುವುದಿಲ್ಲ, ಎಸ್ಟೇಟುಗಳನ್ನು, ತೋಟಗಳನ್ನಿಟ್ಟಿರುವವರು ಸಾಧಾರಣವಾಗಿ ಲೆಕ್ಕ ಇಟ್ಟೇ ಇರುತ್ತಾರೆ, ಆದ್ದರಿಂದ ಇದು ಸರಿಯಾಗಿದೆ" ಯೆಂದು ಹೇಳಿದರು. ಆದಾಯವನ್ನೇನೋ ನಮಗೆ ಬಂದ ಪದಾರ್ಥಗಳ ಬೆಲೆಯ ಮೇಲೆ ಹೇಳಬಹುದು. ಆದರೆ, ವ್ಯವಸಾಯದ ಖರ್ಚು ಕಳೆದು ಉಳಿದದ್ದನ್ನು ತೆಗೆದುಕೊಳ್ಳಬೇಕೆಂದಿರುವುದು. ಯಾರೂ ಸಾಮಾನ್ಯವಾಗಿ ಆಗಾಗ್ಗೆ ಎಷ್ಟುಖರ್ಚು ಮಾಡಿದ್ದೇವೆಂದು ಲೆಕ್ಕ ವಿಡುವುದಿಲ್ಲ. ಹೀಗಿರುವಾಗ, ಅವರಿಗೆ, ನೀವು ಇಷ್ಟು ಬೆಳೆದಿದ್ದೀರಿ, ಇಷ್ಟು ಹಣ ತೆರಿಗೆಯಾಗಿ ಕೊಡಬೇಕು ಎಂದು ಹೇಳಿದರೆ ಹೇಗೆ? ಆದ್ದರಿಂದ ಮುಂದಿನ ವರ್ಷದಿಂದ ವಸೂಲು ಮಾಡುವಂತೆ ಏರ್ಪಡಿಸಬೇಕೆಂದು ಹೇಳಿ ಮುಗಿಸುತ್ತೇನೆ.

*ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು ಉತ್ತರ).—ಸ್ವಾಮಿ, ಅಧ್ಯಕ್ಷರೇ, ಈ ಮೈಸೂರು ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಬಿಲ್ಲನ್ನು ಸ್ವಾಗತಿಸುತ್ತಾ ನಾಲ್ಕಾರು ವಿಷಯಗಳನ್ನು ಸರ್ಕಾರದವರ ಗಮನಕ್ಕೆ ನಾನು ತರಲಿಚ್ಛಿಸುತ್ತೇನೆ. ದೇಶದಲ್ಲಿ ವ್ಯವಸಾಯದಿಂದ ಬರತಕ್ಕ ಹೆಚ್ಚಿನ ಆದಾಯದಮೇಲೆ ಸರ್ಕಾರದವರು ತೆರಿಗೆ ಕೊಡಬೇಕೆಂದು ಹೇಳಿ ಈ ಮಸೂದೆಯನ್ನು ತಂದಿದ್ದಾರೆ. ವಾಸ್ತವವಾಗಿ ರೈತನಿಗೆ ಎಷ್ಟರಮಟ್ಟಿಗೆ ಆದಾಯ ಬರುತ್ತದೆಂಬುದನ್ನು ನಿಮ್ಮ ಗಮನಕ್ಕೆ ತರುವ ಉದ್ದೇಶದಿಂದ ಒಂದು ಸಮಾಚಾರವನ್ನು ನಾನು ತಿಳಿಸಬಯಸುತ್ತೇನೆ. ನಮ್ಮ ಇಡೀ ಬೆಂಗಳೂರು ಡಿಸ್ಟ್ರಿಕ್ಟನ್ನು ಪರಿಶೀಲಿಸುವುದಾದರೆ ವ್ಯವಸಾಯದಿಂದ ಜೀವನ ಮಾಡುವವರಾಗಿ ಕಾರನ್ನು ಇಟ್ಟುಕೊಂಡಿರುವವರು ಸುಮಾರು ಐದು ಜನರು ಮಾತ್ರ ಇರಬಹುದೆಂದರೆ ಅತಿಶಯೋಕ್ತಿಯಲ್ಲ. ಬಾಕಿಯವರಾರಿಗೂ ಕಾರನ್ನಿಡುವ ಇಚ್ಛೆಯಿಲ್ಲವೆಂದಲ್ಲ. ಮಾರ್ಕೆಟ್ ದರಗಳಲ್ಲಿ Slump ಬಂದು ಜನಗಳಲ್ಲಿ ಹಣವೇ ಇಲ್ಲ. ಇಂಥ ಸಂದರ್ಭದಲ್ಲಿ ನೀವು ಈ ತೆರಿಗೆಯನ್ನು ಬೇರೆ ಹಾಕಿದ್ದೀರಿ.

ಅದರಲ್ಲೂ Commercial crop ಗಳೆಂದು classify ಮಾಡಿರುವ ರೀತಿ ನೀತಿಯೇ ಸರಿಯಾಗಿಲ್ಲ. ದುರದೃಷ್ಟವಶಾತ್ ಸೆಲೆಕ್ಟ್ ಕಮಿಟಿಯಲ್ಲಿ ಬೆಂಗಳೂರು ಡಿಸ್ಟ್ರಿಕ್ಟಿನವರಾಗಿ ಯಾರೊಬ್ಬರೂ ಇಲ್ಲದೆ, ಇಲ್ಲಿ ಬೆಳೆಯತಕ್ಕ Commercial ಬೆಳೆಗಳನ್ನು ಸರಿಯಾಗಿ classify ಮಾಡಿಲ್ಲವೆಂದು ಹೇಳಬೇಕಾಗಿದೆ ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಆಲೂಗೆಡ್ಡೆ, ಈರುಳ್ಳಿ ಬೆಳೆಗಳಿಂದ ರೈತರು ಎಷ್ಟರಮಟ್ಟಿಗೆ ಉನ್ನತ ಸ್ಥಿತಿಗೆ ಬಂದಿದ್ದಾರೆಂದು ಸರ್ಕಾರದವರು ಭಾವಿಸಿದ್ದಾರೋ ಗೊತ್ತಿಲ್ಲ. ಆಲೂಗೆಡ್ಡೆ, ಈರುಳ್ಳಿಯನ್ನು 4ನೆಯ ಕ್ಲಾಸಿಗೆ ಸೇರಿಸಿ ಎರಡು ಎಕರೆಗಳನ್ನು ಮಾತ್ರ exempt ಮಾಡಿದ್ದಾರೆ. ಇವತ್ತಿನ ದಿವಸ ಆಲೂಗೆಡ್ಡೆಯನ್ನು ಕಿತ್ತು ವಿಂಗಡಿಸುವ ಖರ್ಚಿನಷ್ಟು ದುಡ್ಡು ಇನ್ನಾವ ಬೆಳೆಗೂ ಬೀಳುವುದಿಲ್ಲ. ಅಂಥದರಲ್ಲಿ ಅವುಗಳ ವಿಷಯದಲ್ಲಿ 2-3 ಎಕರೆಗಳನ್ನು ಮಾತ್ರ exempt ಮಾಡಿದ್ದು ನ್ಯಾಯವಲ್ಲ. ಒಬ್ಬೊಬ್ಬ ಕೂಲಿಯಾಳಿಗೂ 20-30 ರೂಪಾಯಿಗಳನ್ನು ಖರ್ಚು ಮಾಡಬೇಕಾಗಿಬರುತ್ತದೆ. ಅದರಲ್ಲೂ ಒಂದೊಂದು ಸಾರಿ ಎರಡು ಮೂರು ವರ್ಷ ಏನೂ ಬರುವುದಿಲ್ಲ. ಕೆಂಗೇರಿಯಲ್ಲಿ ಯಾರದೋ ಎರಡು ಎಕರೆಯಲ್ಲಿ ಬೆಳೆದಿರುವ ಪೈರನ್ನು ತೋರಿಸಿ ಅದೇ ಲೆಕ್ಕ ಇಟ್ಟುಕೊಂಡು, ಅವರು 18 ಎಕರೆಯಿಂದ 15,000 ರೂಪಾಯಿಗಳನ್ನು ಪಡೆದಿದ್ದಾರೆಂದು ಹೇಳಿ ಎರಡು ಎಕರೆಗಳ ಮಿನಿಮಂ ಗೊತ್ತುಮಾಡಿದ್ದೀರಲ್ಲಾ, ಇದು ಸರಿಯೇ? ಮುಂಚೆ ತಂದಿದ್ದ ಬಿಲ್ಲಿನಲ್ಲಿ ಇದು ಇರಲಿಲ್ಲ. ಈಗಲೂ ಇದನ್ನು ಕೈಬಿಟ್ಟು ಮೊದಲಿನ ಬಿಲ್ಲಿನಲ್ಲಿ ಇದ್ದಂತೆಯೇ ಇರಬೇಕೆಂದು ಹೇಳುತ್ತೇನೆ.

ಅಲ್ಲದೆ Commercial crops ಪ್ರತಿಯೊಂದಕ್ಕೂ ಒಂದು ರಕ್ಷಣೆಯನ್ನು ಸರ್ಕಾರದವರು ಒದಗಿಸಬೇಕು. ಮಾನ್ಯ ಸಚಿವರಾದ ಸಿದ್ದವೀರಪ್ಪನವರೇ "ರೆಗ್ಯುಲೇಟೆಡ್ ಮಾರ್ಕೆಟ್‌ಗಳ ವ್ಯವಸ್ಥೆ ಮಾಡಿಲ್ಲ, ತೂಕ ಸರಿಯಾಗಿಲ್ಲ, ಕಮರ್ಷಿಯಲ್ ಕ್ರಾಪ್ಸ್‌ನಿಂದ ಬರತಕ್ಕ ಆದಾಯದಲ್ಲಿ ಹೆಚ್ಚಿನ ಭಾಗ ಮಧ್ಯಸ್ಥಗಾರರಿಗೆ ಹೋಗುತ್ತಿದೆ" ಎಂದು ಹೇಳಿದ್ದಾರೆ. ತಾವು ಇದು

(ಶ್ರೀ ಕೆ. ವಿ. ಬೈರೇಗೌಡ.)

ವರೆಗೂ ಈ ವಿಚಾರದಲ್ಲಿ ಯಾವ ಏರ್ಪಾಡನ್ನೂ ಮಾಡಿಲ್ಲ. Commercial crops ಬೆಳೆಯುತಕ್ಕ ರೈತರುಗಳು ಬೆಂಗಳೂರು ಮತ್ತು ಕೋಲಾರ ಡಿಸ್ಟ್ರಿಕ್ಟ್‌ಗಳಲ್ಲಿ ಬಹುವಾಗಿ ಇರಿಗೇಷನ್ ಪಂಪುಗಳನ್ನಿಟ್ಟುಕೊಂಡು ವ್ಯವಸಾಯ ಮಾಡುತ್ತಿದ್ದಾರೆ. ಅವರು ಉಪಯೋಗಿಸತಕ್ಕ ಪವರಿಗೆ ಯೂನಿಟ್ ಒಂದಕ್ಕೆ 1½ ಆಣೆ ವಸೂಲುಮಾಡುತ್ತಿದ್ದೀರಿ. ಆದ್ದರಿಂದ ಅವರಿಗೆ ಸಾಕಷ್ಟು ರಿಯಾಯಿತಿ ತೋರಿಸದಿದ್ದರೆ ಬಹಳ ತೊಂದರೆಗೊಳಗಾಗುತ್ತಾರೆ. ಆದ್ದರಿಂದ ಬೆಳ್ಳುಳ್ಳಿ, ಈರುಳ್ಳಿ, ಆಲೂಗೆಡ್ಡೆಯ ವಿಷಯದಲ್ಲಿ ಹೆಚ್ಚಿಗೆ Exemption ಕೊಡುವ ವ್ಯವಸ್ಥೆ ಮಾಡಬೇಕು. ಅಲ್ಲದೆ ಅವರು ಬೆಳೆದಂಥ ಪದಾರ್ಥಗಳಿಗೆ ಸರಿಯಾಗಿ ಮಾರ್ಕೆಟ್ ಸಿಕ್ಕುವಂತೆ ಮಾಡಬೇಕು. ಮಂಡಿಪೇಟೆಯಲ್ಲಿ ಇಂದು ಆಗುತ್ತಿರತಕ್ಕ ಅನ್ಯಾಯ ಅನೀತಿಗಳನ್ನು ತಡೆಯುವುದಕ್ಕೆ ಮೊದಲು ಏರ್ಪಾಡು ಮಾಡಬೇಕು. ತೆರಿಗೆಯನ್ನು ಕೊಡುವುದಕ್ಕನುಸಾರವಾಗಿ ರಕ್ಷಣೆ, ಅನುಕೂಲಗಳನ್ನೂ ಸರ್ಕಾರದವರು ಮಾಡಿಕೊಡಬೇಕಾದದ್ದು ಧರ್ಮ.

*Sri T. MARIAPPA (Mysore City North).—May I know whether this Bill would be taken up tomorrow also in view of its importance—at least for half an hour?

Mr. SPEAKER.—The Hon'ble Member knew that we have postponed the discussion of the Fact Finding Committee Report on account of the urgency of this Bill. We shall continue the discussion.

Sri T. MARIAPPA.—Nevertheless even on the first day we were given only two days. Is it possible to arrive at a decision so soon? At least from the point of educating the public, it would be better to discuss it further before it is put to House clause by clause.

Mr. SPEAKER.—I have no objection.

Sri J. MOHAMED IMAM.—I think we are closing by Five o'clock. There are amendments also to this Bill. I do not think we will be able to finish them before Five o'clock today. I request the Chair to allot one or two hours for this Bill on the next day also.

Mr. SPEAKER.—Hon'ble Member knows how much we are pressed for time.

Sri T. MARIAPPA.—Sir, majority of the members have got an engagement after Five O'clock. Therefore we have to leave the place at 4-45 today. Hence I request you kindly to allot some more time tomorrow also.

Sir, I am one of those who believe that the levy of agricultural income tax has become almost inevitable in the present context of events. But the whole measure is new to our State and new to the agriculturists who had escaped this levy all these years. There were very good reasons for not taxing the agricultural income for all these years. As the Finance Minister puts it, the income from agriculture is almost the variable factor, nobody can be very certain about its income and even to gather income, the agriculturist or the cultivator will be under a great deal of stress and strain and if he gathers enough income, he must indeed be thankful to the Creator. That was the very reason why the tax on the agricultural income was delayed all these years.

Sir, as ideas have been changing there is an opinion prevailing now in the highest circle, particularly, the Planning Commission, that the disparity even in the rural areas must be brought down. It is in pursuance of this policy that the Planning Commission has been suggesting to the State Governments that they should undertake the levy of agricultural income-tax.

4-30 P.M.

In a State like Mysore where paramount ryotwari is the principle, agricultural income-tax must have very little significance. So far as a large number of ryots are concerned, it should not in fact touch them and they must be made to feel that the hand of taxation is not heavy on them. As Hon'ble Member Sri Venkatappa put it, though the intention of Government may be very good or laudable, in the very process of implementation of this Act, unfortunately, even the smaller men could not escape the pin pricks of the tax gatherers. It is true the Select Committee has tried to minimise or has tried to mitigate the small pin pricks of this measure. When compared to the original Bill, certain amendments or certain modifications have been made in the interests of the assessee, but, by and large the Bill as amended by Select Committee has not gone far to mitigate these little pin pricks. I fail to understand the reason

why certain new commodities have been added to the list of commercial crops. Is it because that certain interests which were taxed pleaded for the inclusion of other interests as well? I am unable to make out. Because even the reason adduced by the Select Committee does not make it very clear. Nevertheless I would plead and plead with all earnestness that the perishable crops should be excluded from the purview of this Act. A commodity like onion and garlic should certainly be excluded from this list. Even potatoes should be excluded. (*A Member:* Why not fruits) Fruits certainly. I am taking commodities only as an illustration. Therefore, as Sri Venkatappa put it, when it is sought to be made out that some of these things do not come under the purview of this Act, there is particularly no meaning in including these very commodities under the Schedule attached to this Act. Take the case of Madras and Andhra. Twice attempts have been made to include some of these commercial crops and twice they were omitted. Only in the case of plantation crops, the question is whether it could be expected that they could keep accounts. If there is certainty of getting certain income then they could think of getting taxation income. I thought over this matter with regard to the plantation crop. In regard to the classification given in Part II of the Schedule there is no reason or logic. It is arbitrary and it cannot but be arbitrary having regard to the nature of the information that the permanent officials must have supplied to Government.

Take only one example. Take the distinction between coffee and tea. I have some experience in regard to both coffee and tea. I have seen tea plantations manufacturing tea and also coffee plantations. I was also on the Coffee Board. Take the two cases. The disparity is not so great as is sought to be made out in this. Coffee is brought under class 3. Therefore 25 acres are exempted from taxation on the ground that a man who possess at least 25 acres will not be able to make more than Rs. 4,200. On the other hand, in the case of tea, 24 guntas $\times$10 = 240 guntas that is 6 acres, what a disparity? 1 : 4. If the Government were in possession of all the information with regard to the gross and net income of tea and coffee estates they would not have allowed this wide disparity between coffee and tea. It is true that of late tea fetches a little more money. Three years ago most of the tea estates in Assam had been closed down because they were not able to make even the cost of production and about 28,000 labourers had been thrown out. Perhaps the House is aware, at least some of the members are aware, that the Government of India had come to the rescue and particularly the Minister for Commerce and Industry of the Government of India had to make special efforts to obtain a good market in England. There are two Bodies which could protect coffee and tea—Coffee Board and Tea Board. On account of these two Boards alone the commercial crops are fetching good income. Therefore the wide disparity between coffee and tea cannot be supported by any known facts. I would plead very vehemently with the Finance Minister that the disparity should be removed; tea at least must be stepped up ; 12 acres of tea. Not even 50: 50. On the other hand the disparity of 25 acres is there; about 18 or 20 acres of tea. Nevertheless you can put it at 12 acres; the disparity is not so wide as is sought to be made out in Part II. The classification of land in Part II is not logical; it is not based on any scientific data; it is rough, arbitrary. Perhaps the information was not available; the Government could not come to any scientific conclusion. Take again the 8th class. I fail to understand how grapes could be put in the 8th class as compared to tea. The net income of any grape garden cannot in any case exceed Rs. 800 to 1,000 a year. I was interested in grape cultivation. I went round grape gardens and ultimately came to the conclusion that there is more risk in grape gardens, more than in any other crop. I have seen an estate one year ago. It was good luck

(SRI T. MARIAPPA.)

or ill luck to take my big brother Sri Bheemappa Naik. We went to that estate, the first crop was so nice in 1954. I beg of all members to go and see the estate this year. The first crop is good, the second crop is practically not so good, the third crop is bad. Sri Narayana Reddy has seen it. We will not be able to get even the cost of cultivation this year. The reason is the cost of cultivation is great. Almost each plant has to be tended as if it is a child. It is such a delicate plant; therefore it should not be put in the 8th class; at least 4 acres should be exempted in the case of grape gardens.

Many Hon'ble Members have said with regard to the lumpsum rates. Even here with regard to the table of rates given, there is no logic about it. At best they put it down arbitrarily. I for one thought that in the case of composition there would be more concession in favour of the assessee because, as all of us have understood, they are illiterate; they are ignorant, they should not be subject to harassment at the taluk and village level, leave alone the district level. At least if they are not subject to harassment at the taluk and village level, they should certainly thank their stars and thank the Government. Therefore here, instead of giving more concessions as Sri T. C. Basappa has made out, they have been urged to pay more than what they would actually pay under the regular income-tax rate. Here again I would plead with the Finance Minister that, as in the case of rates in Part (I) of the Schedule, the same form is used here allowing at least 50 acres as not being taxable. Instead of "exceeding 100 and not exceeding 250" we could use the same form "on the next 100 acres; on the next 100 acres" like this. And even if the tax is a little higher, it does not much matter. What is now important is the equitable way of taxing the agriculturist. Sir, there is another matter which I would like to bring to the notice of the Finance Minister. That is clause 15—Return of Income.

"Every person whose total agricultural income during the previous year exceeded the maximum amount which is not chargeable to agricultural income-tax shall furnish to the Agricultural Income-tax Officer so as to reach him before the 1st June every year a return in the prescribed form and verified in the prescribed manner, setting forth his total agricultural income during the previous year . . . ."

As you know, people in the rural areas are not well-versed with the provisions of income-tax law. Therefore if a small amendment can be brought about saying that if in the opinion of the income-tax officer, a person's income is taxable, a demand notice must be issued asking a particular person to submit his return. Failure to submit a return entails certain penalties. Instead, we want the Government or the Agricultural-Income-tax Officer to send a notice stating that his income is estimated at so and so and that he should submit a return. "Every person whose total agricultural income during the previous year exceeded the maximum amount which is not chargeable to agricultural income-tax shall furnish to the Agricultural Income-tax Officer so as to reach him before the 1st June every year a return in the prescribed form . . ."

Sri K. HANUMANTHAIYA.—So, you want a demand notice to be sent.

Sri T. MARIAPPA.—If such a notice is sent he will at least be aware of this. If he fails to submit the return, "if any person has not furnished a return within the time allowed by or under sub-section (1) or sub-section (2), or, having furnished a return under any of those sub-sections. . ." he will be penalised. Then the Agricultural Income-tax Officer will be empowered to make an assessment. Particularly in the rural areas where people are not well-versed in the intricacies of law, it is much safer and much better that demand notice is served.

Sri J. MOHAMED IMAM.—Then there is one difficulty. When the Agricultural Income-tax Officer begins to serve notice, he will be bound to serve such notices on every agriculturist.

Sri T. MARIAPPA.—Not necessary. It is served only on those whose income is to be taxed. He can roughly know those whose income is to be taxed. Soon after this Bill is passed, they will immediately take a census. Today the Income-tax Department of the Government of India have got their eye on everybody.

Mr. SPEAKER.—That was what the Income-tax Department was doing before, when it was in the hands of the Mysore Government.

Sri T. MARIAPPA.—Exactly. I need not deal in detail about the real hardship caused under clause 35, which states that it is open to the officer to re-open the question for the preceding three years. Here again, Sir, the safeguard should be for the innocent, for the *bona fide* agriculturist who is prepared to pay the taxable amount, but for some reason or other, he might not have noticed it. . . . .

Sri A. BHEEMAPPA NAIK.—Regarding serving of the notice, is it not provided in section 15? Clause 2 of section 15 provides for serving of such a notice by the Agricultural Income-tax Officer if the income is more than the taxable limit.

Sri T. MARIAPPA.—The sub-clause provides for such a notice for the return of income only. If you please read it. . . .

Sri A. BHEEMAPPA NAIK.—You please go through it.

Sri T. MARIAPPA.—I want a notice to be served and not exactly a reminder.

Sri A. BHEEMAPPA NAIK.—But the notice precedes his sending the return.

Sri T. MARIAPPA.—It is a statutory obligation to send the return as per 15 (1). Because he is not able to understand, it is much better that a notice is sent.

Sri A. BHEEMAPPA NAIK.—That is provided in clause 2 of 15.

Sri T. MARIAPPA.—Perhaps the Hon'ble Member has not understood me. It is true that a return has to be sent even without a notice. Suppose a man fails to file the return in time. Then the difficulty is. . . .

Sri K. HANUMANTHAIYA.—Notice of demand is referred to in section 29. You are referring to assessment notice and not demand notice.

Sri H. M. CHANNABASAPPA.—Clause 1 of section 15 requires the assessee to submit a return. *Suo motu* a person has to file a return if his income is more than Rs. 4,200. In case he fails to submit a return, clause 2 operates. The officer will issue a notice. Therefore the purpose is served there by clause 2.

Sri T. MARIAPPA.—Where is the purpose served in clause 2? Suppose a man fails to file the return. . . .

Sri P. R. RAMAIYA (Basavanagudi).—There is sub-section 3 which reads: "If any person has not furnished a return. . . . he may furnish a return. . . . at any time before the assessment is made." There is sub-section 2 also. Therefore either 3 or 2—both act.

Sri T. MARIAPPA.—He has to submit a report in the beginning itself.

Sri H. M. CHANNABASAPPA.—If such a provision is provided, then the Agricultural Income tax Officer has to issue notice to all.

Sri T. MARIAPPA.—I want all people whose income is likely to be taxed to be reminded.

Sri K. HANUMANTHAIYA.—So far as your point is concerned, it is conceded in clause 2. If there is any doubt, under the rule-making power, we can clarify that situation.

Sri. T. MARIAPPA.—Sir, another point that I would like to urge is in the case of rates. Because it is the first time that we are introducing such a measure, it is much better that we adopt the rates adopted by the Coorg Government. The maximum rate there is four annas, and it is always open to us to revise. Therefore, when for the first time we are introducing agricultural income-tax, I plead with the Finance Minister to adopt the rate of four annas. One more point and

(SRI T. MARIAPPA.)

I have done. I plead with regard to the income that is likey to be derived from the co-operative farming societies. I very earnestly urge that the Government should consider the case of the co-operative farming societies. All of them should be exempted from payment of agricultural income-tax, at least for a definite period, say three, four or five years. This would encourage more and more land-owners to come together and try to improve or step up production. In many cases, these co-operative societies have been shown a great deal of concession and given all encouragement so that they could take firmer root in the soil. Even the Planning Commission have been advocating the formation of co-operative farming societies in the land. It is much better we take a step forward and see that agricultural income-tax is not levied for a definite period of years on co-operative farming societies, and on plantation crop or commercial crop as they would have to pay additional agricultural income-tax.

5 P.M.

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಈಗಾಗಲೇ ಎಲ್ಲಾ ಬೆಳೆಗಳ ಮೇಲೂ ಚರ್ಚೆಯಾಗಿ ಯಾವಯಾವ ಬೆಳೆಗಳಮೇಲೆ ತೆರಿಗೆ ಹಾಕಬೇಕೆಂದು ಹೇಳಿದ್ದೇವೆ. ಆದ್ದರಿಂದ ಇನ್ನು ಚರ್ಚೆಯನ್ನು "ಅಖೈರ್" ಮಾಡಬೇಕೆಂದು ನಾನು ಸೂಚಿಸುತ್ತೇನೆ.

Mr. SPEAKER.—Yes, I have no objection if the House so desires.

(The members expressed their consent, by their silence.)

Sri K. HANUMANTHAIYA.—The House has kindly agreed to listen to me ; I will now beign. ಸ್ವಾಮಿ . . . .

ಶ್ರೀ ಜಿ. ಬಸಪ್ಪ (ಹೊಸದುರ್ಗ).— ಒಂದು ವಿಷಯ ತಿಳಿದುಕೊಳ್ಳಬೇಕು, ಸ್ವಾಮಿ. 'Assessing ಆಫೀಸರವರು satisfy ಆದಾಗ, ರಿಟರ್ನ್ ಮೇಲೆ ಎಷ್ಟು ತೆರಿಗೆ ಕೊಡಬೇಕೆಂಬುದನ್ನು ನಿರ್ಧಾರ ಮಾಡುತ್ತಾನೆಂದು ಹೇಳಿದೆ. ಹೀಗೆ satisfy ಮಾಡಿಕೊಳ್ಳಬೇಕಾದರೆ, ಜಮೀನಿನಮೇಲೆ ಪೈರಿದ್ದಾಗ ಮಾಡಿಕೊಳ್ಳುತ್ತಾರೆಯೇ? ಎಂಬುದನ್ನು ತಿಳಿಸಬೇಕು.' ಏಕೆಂದರೆ, ಲೆಕ್ಕ ಕೊಡುವುದು ಜೂನ್ ಆಖೈರಿಗೆ. ಅಷ್ಟು ಹೊತ್ತಿಗೆ ಪೈರೆಲ್ಲಾ ಕಟಾವಾಗಿ ಪುನಃ ರೈತನು ಉಳುಮೆಮಾಡುತ್ತಿರುತ್ತಾನೆ. ಅಂಥ ಸಂದರ್ಭದಲ್ಲಿ ಅವರನ್ನು satisfy ಮಾಡುವುದು ಹೇಗೆ? ಆದ್ದರಿಂದ standing crop ಇದ್ದಾಗಲೇ satisfy ಮಾಡಿಕೊಳ್ಳಬೇಕೆಂದು ರೂಲ್ಸ್‌ನಲ್ಲಿ ಗೊತ್ತುಮಾಡದೆ ಹೋದರೆ ಬಹಳ ಕಷ್ಟವಾಗುತ್ತದೆ.

*ಶ್ರೀ ಕೆ. ಹನುಮಂತಯ್ಯ.—ಸ್ವಾಮಿ, ಮಾನ್ಯ ಸದಸ್ಯರುಗಳು ಮಾಡಿರತಕ್ಕ ಟೀಕೆಗಳೆಲ್ಲಕ್ಕೂ ಈ ಮೊದಲೇ ನಾನು ಉತ್ತರ ಕೊಟ್ಟಿದ್ದೇನೆ. ಉತ್ತರ ಕೊಟ್ಟಿದ್ದರೂ ಕೂಡ ಅದೇ ವಿಷಯಗಳನ್ನು ಪುನಃ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಈಗ ಮತ್ತೆ ನಾನು ಉತ್ತರ ಕೊಡಬೇಕೆಂದರೆ ಮೊದಲು ಹೇಳಿದ ವಿಷಯಗಳನ್ನೇ ಪುನಃ ಬೇರೆ ಭಾಷೆಯಲ್ಲಿ ಹೇಳಬೇಕಾಗುತ್ತದೆ, ಅಷ್ಟೇ. ಆದ್ದರಿಂದ ದ್ವಿರುಕ್ತಿಯಾದರೆ ದಯವಿಟ್ಟು ಕ್ಷಮಿಸಬೇಕೆಂದು ಹೇಳಿ ನಾನು ಸಭೆಯನ್ನು ಕೇಳಿಕೊಳ್ಳುತ್ತೇನೆ.

ಶ್ರೀಮಾನ್ ಇಮಾಂ ಸಾಹೇಬರು ಹಿಂದೆ ಮಂತ್ರಿಗಳಾಗಿದ್ದವರು, ಈಗ Leader of the Opposition ಆಗಿರತಕ್ಕವರು. ಮುಂದೆ ಅವರ party ಗೆದ್ದರೆ ಮುಖ್ಯಮಂತ್ರಿಗಳೂ ಆಗತಕ್ಕವರು. ಇಂಥ ಸದಸ್ಯರು, ಮತ್ತು ಇಷ್ಟು ಅನುಭವವುಳ್ಳ ಸದಸ್ಯರು ಅಧಿಕಾರಿಗಳ ವಿಷಯದಲ್ಲಿ ಈ ತೆರನಾಗಿ ಮಾತನಾಡುವುದು ಸೂಕ್ತವೇ ಎಂಬುದನ್ನು ಅವರು ಈ ಸಭೆಯಿಂದ ಹೋಗಿ ರೂಮಿನಲ್ಲಿ ಕುಳಿತುಕೊಂಡಾಗ ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಅಧಿಕಾರಿಗಳು ಕಿರುಕುಳ ಕೊಡುತ್ತಾರೆ, ಲಂಚ ಕೇಳುತ್ತಾರೆ ಎಂದೆಲ್ಲಾ ಅವರಂಥವರು ಮಾತನಾಡತಕ್ಕದ್ದು ಸರಿಯೇ ಎಂಬುದು ಒಂದು ದೊಡ್ಡ ಪ್ರಶ್ನೆ. ಯಾವ ಅಧಿಕಾರಿಯೇ ಆಗಲಿ ಅವರು ಸರ್ಕಾರದ ನೌಕರರು. ಸರ್ಕಾರದ ಸೇವಕರು. ಸಂಬಳ ಸಾರಿಗೆಗಳ ದೃಷ್ಟಿಯಿಂದಲೂ ಅವರ ಮೇಲಿನ ಹತೋಟಿ ಸರ್ಕಾರಕ್ಕಿದೆ. ತಪ್ಪುಮಾಡಿದರೆ ಶಿಕ್ಷಿಸತಕ್ಕ ಹತೋಟಿ ಸರ್ಕಾರಕ್ಕಿದೆ. ಇಂಥ ಸರ್ಕಾರದ ಮೇಲೆ ಸಂಪೂರ್ಣ ಸ್ವಾಮ್ಯ ಹೊಂದಿದೆ ಈ ಸಭೆ. ಈ ರೀತಿಯ ಸ್ವಾಮ್ಯವನ್ನು ಕೈಯಲ್ಲಿಟ್ಟುಕೊಂಡು ಬೇಕಾದ ಶಿಕ್ಷೆ ಕೊಡುವುದಕ್ಕೂ, ಇನ್ನೂ ಇತರ ವಿಧದಲ್ಲಿ ಪಾಠ ಕಲಿಸುವುದಕ್ಕೂ ಅಧಿಕಾರವಿಟ್ಟುಕೊಂಡಿರುವಾಗ ಈ ಪ್ರಕಾರ ಮಾತಿನಲ್ಲಿ ಅವರನ್ನು ಹೀಯಾಳಿಸತಕ್ಕದ್ದು ಈ ಸರ್ಕಾರದ ಪದ್ಧತಿಗೆ, ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿದೆ. ಇನ್ನು ಮುಂದಾದರೂ ಮಾನ್ಯ ಸದಸ್ಯರುಗಳು ಸರ್ಕಾರದ ಅಧಿಕಾರಿಗಳಿಂದ ಎಲ್ಲ ಕಿರುಕುಳಗಳೂ ಉಂಟಾಗುತ್ತವೆಂದು ಉತ್ಪ್ರೇಕ್ಷೆ ಅಲಂಕಾರಗಳಿಂದ ಭಾಷಣಮಾಡುವುದನ್ನು ಬಿಟ್ಟರೆ ಈ ಸಭೆಗೂ ಭೂಷಣ ಬರುತ್ತದೆ. ಸರ್ಕಾರಿ ಅಧಿಕಾರಿಗಳು assessment ವಿಚಾರದಲ್ಲಾಗಲಿ, ಇನ್ನೊಂದು ವಿಚಾರದಲ್ಲಾಗಲಿ, ತಪ್ಪು ಮಾಡಿದರೆ ಆ ತಪ್ಪುಗಳನ್ನು ಹೊರಗೆಡಹುವುದಕ್ಕೆ ಈಗಿರುವಷ್ಟು ಸೌಲಭ್ಯಗಳು ಇನ್ನಾವ ಕಾಲದಲ್ಲೂ ಇರಲಿಲ್ಲ. ಏನಾದರೂ ಅಧಿಕಾರಿಗಳು ಸ್ವಲ್ಪ ಅಚಾತುರ್ಯ ಮಾಡಿದನೆಂದು ಅನುಮಾನ ಬಂದರೆ, 'Letters to the Editor' ಎಂದು 20 ಕಾಗದಗಳು ಬಂದುಬಿಡುತ್ತವೆ. ಮಾನ್ಯ ಸದಸ್ಯರೇ ಬೇಕಾದ ಪ್ರಶ್ನೆಗಳನ್ನು ಕೇಳುವುದಕ್ಕೆ ಹಕ್ಕಿದೆ. ಈ ಎಲ್ಲ ಹಕ್ಕುಬಾಧ್ಯತೆಗಳೂ ನಿಮಗಿರುವಾಗ ಏಟು ಬೀಳುವುದಕ್ಕೆ ಮೊದಲು ಕಣ್ಣಲ್ಲಿ ನೀರು ಸುರಿಸತಕ್ಕ ಹೆಂಗಸರ ಹಾಗೆ ಮಾಡುವುದು ಸರಿಯಲ್ಲ. ಎಲ್ಲವನ್ನೂ ಮಂತ್ರಿಗಳು ರಕ್ಷಣೆ ಮಾಡುತ್ತಾರೆನ್ನುವುದೂ ಈ ಸಭೆಯ ಗೌರವ ಪ್ರತಿಷ್ಠೆಗಳಿಗೆ ಅನುಗುಣವಾಗಿಲ್ಲ. ಸರ್ಕಾರದ ಅಧಿಕಾರಿಗಳು ಬೇಕೆಂದು ಲೆಕ್ಕ ಕೇಳುವುದಕ್ಕೆ ಹೋಗಿ ಲಂಚ ತೆಗೆದುಕೊಳ್ಳುತ್ತಾರೆ ಎಂಬುದು ವಿಷಯವನ್ನೇ ಮಥನಮಾಡಿಕೊಳ್ಳದ, ಸರ್ಕಾರದ ಪದ್ಧತಿಯನ್ನೇ ಅರ್ಥಮಾಡಿಕೊಳ್ಳದ ಮನುಷ್ಯರು ಹೇಳತಕ್ಕ ವಾದಗಳು.

ಅಲ್ಲದೆ, ಸರ್ಕಾರಿ ಅಧಿಕಾರಿಗಳಿಗೂ ಬಹಳಕಷ್ಟವಿದೆ. ಯಾರೂಕೂಡ ಸಂತೋಷವಾಗಿ ಲೆಕ್ಕಕೊಡುವುದಿಲ್ಲ. ತೆರಿಗೆ ಕೊಡುವುದಕ್ಕೆ ಅಷ್ಟು ಸುಲಭವಾಗಿ ಮನಸ್ಸು ಬರುವುದಿಲ್ಲ. ಆದ್ದರಿಂದ ಒಂದು ನಿಷ್ಠುರವಾದ ಕೆಲಸವನ್ನು ಸರ್ಕಾರದ ಅಧಿಕಾರಿಗಳೂ ಮಾಡಬೇಕಾಗಿದೆ; ನಾನೂ ಕೂಡ ಮಾಡಬೇಕಾಗಿದೆ. ನನಗೆ ತಾನೆ ಈ ತೆರಿಗೆ ಹಾಕುವುದರಲ್ಲೇನು ಸಂತೋಷವಿದೆ? ಇಷ್ಟು ನಿಷ್ಠುರವಾದ ಮಸೂದೆಯನ್ನ ತಮ್ಮ ಮುಂದೆ ತಂದು ನಾನೇಕೆ ಟೀಕೆಗಳಿಗೊಳಗಾಗಬೇಕೆಂಬುದು ನನ್ನನ್ನೂ ಭಾಧಿಸುತ್ತಿದೆ. ಆದರೂ ಕರ್ತವ್ಯ ಪರಿಪಾಲನೆಯ ದೃಷ್ಟಿಯಿಂದ ಇದನ್ನು ಮಾಡಲೇಬೇಕೆಂದು ಎಲ್ಲರೂ ಹೇಳುತ್ತಾರೆ. ಕಾನೂನನ್ನು ತಾವೇ ಮಾಡಿದಮೇಲೆ ಅದನ್ನು ಜಾರಿಗೆ ತರುವುದು ಸರ್ಕಾರಿ ಅಧಿಕಾರಿಗಳ ಕರ್ತವ್ಯ. ಕರ್ತವ್ಯ ಲೋಪ ಮಾಡಿದರೆ ಅವರನ್ನು ತಾವೇ ಆಕ್ಷೇಪಿಸುತ್ತೀರಿ. ಆದ್ದರಿಂದ, ಅವರು ತಮ್ಮ ಕರ್ತವ್ಯವನ್ನು ಸರಿಯಾಗಿ ಮಾಡಬೇಕು ಎಂದು ವಾದ ಮಾಡಿದ್ದರೆ ನಾನು ಸಂತೋಷಪಡುತ್ತಿದ್ದೆ. ತೆರಿಗೆಗಳೆಂಬವು ಸರ್ಕಾರ ಇರುವವರೆಗೆ ಇದ್ದೇ ಇರುತ್ತವೆ. ಈಗಾಗಲೇ Income-tax, Sales-tax ಎಂಬವು ಜಾರಿಗೆ ಬಂದಿವೆ. ಅವುಗಳಲ್ಲಿ ಏನೇನು ಕಿರುಕುಳಗಳಿವೆಯೋ ಅಷ್ಟು ಕಿರುಕುಳಗಳು ಈ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ತೆರಿಗೆಯಿಂದ ಉಂಟಾಗುವುದಿಲ್ಲವೆಂದು ಹೇಳಬಹುದು. ಸಾಧ್ಯವಾದಷ್ಟುಮಟ್ಟಿಗೆ ಸೆಲೆಕ್ಟ್ ಕಮಿಟಿಯವರು ಎಲ್ಲವನ್ನೂ ಪರಿಶೀಲನೆಮಾಡಿ ಮಾಡಿದ್ದಾರೆ. ಈ ದಿವಸ ನಾನು Finance Minister ಆಗಿ ವಾದ ಮಾಡುತ್ತಿಲ್ಲ. ಎಲ್ಲ ಹಿತಗಳನ್ನೂ, ಎಲ್ಲ ಪಕ್ಷಗಳನ್ನೂ ಒಳಗೊಂಡ ಸೆಲೆಕ್ಟ್ ಸಮಿತಿಯು ಏನು ಮಾಡಿದೆಯೋ ಅದನ್ನು ಪ್ರಜಾಪ್ರಭುತ್ವ ತತ್ವಕ್ಕನುಗುಣವಾಗಿ ನಾನು ಒಪ್ಪಿಕೊಂಡಿದ್ದೇನೆ. ಅವರು ಮಾಡಿದ ಅನೇಕ ಸೂಚನೆಗಳು ನನಗೆ ಒಪ್ಪಿಗೆಯಾಗದೆ ಇದ್ದರೂ, ಸೆಲೆಕ್ಟ್ ಕಮಿಟಿಯಲ್ಲಿ ಸರ್ವಾನುಮತ ಬಂದಾಗ ಅದಕ್ಕೆ ತಲೆ ಬಾಗಿದ್ದೇನೆ. ನಾನೀಗ ಸೆಲೆಕ್ಟ್ ಕಮಿಟಿಯವರ ಅಭಿಪ್ರಾಯಗಳನ್ನು ಪ್ರತಿಪಾದಿಸುತ್ತೇನೆಯೇ ಹೊರತು ನಾನು ಇದರಲ್ಲಿ ಯಾವುದನ್ನೂ ಬಿಟ್ಟುಕೊಡುವುದಕ್ಕೆ ಅಥವಾ ಇಟ್ಟುಕೊಳ್ಳುವುದಕ್ಕೆ ಮನಸ್ಸು ಮಾಡುವಹಾಗಿಲ್ಲ. ಏನು ಬದಲಾವಣೆಗಳನ್ನು ಮಾಡಬೇಕಾದರೂ ಮುಂದೆ ಸೆಲೆಕ್ಟ್ ಕಮಿಟಿಯವರ ಆಲೋಚನೆಗೆ ಮತ್ತೆಕೊಟ್ಟು ಅವರ ಅಭಿಪ್ರಾಯವನ್ನು ತೆಗೆದುಕೊಳ್ಳುವುದು ಸತ್ಸಂಪ್ರದಾಯ. ಒಂದುವೇಳೆ ಅದು formal ಆಗಿ ಇಲ್ಲದಿರಬಹುದು; informal ಆಗಿಯಾದರೂ ಕೇಳಬೇಕಾಗುತ್ತದೆ. ಒಂದು ಅನುಭವ ಹೇಳುತ್ತೇನೆ. ಆ ದಿವಸ ಮಾಡಿದ ಸಲಹೆಗಳು ಅನೇಕವು ಒಳ್ಳೆಯ ಸಲಹೆಗಳಾಗಿದ್ದವು. ಶ್ರೀಮಾನ್ ವೆಂಕಟಪ್ಪನವರು, ಇಮಾಂರವರು, ಮರಿಯಪ್ಪನವರು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ವೀರಾವೇಶ ತಾಳಿ ಮಾತನಾಡಿದ ಚಂದ್ರಶೇಖರಯ್ಯನವರು ಅನೇಕ ಒಳ್ಳೆಯ ಅಂಶಗಳನ್ನು ಹೇಳಿದ್ದಾರೆ.

ತಾವು ಈಗ ಈ ಮಸೂದೆಯನ್ನು ಪಾಸ್ ಮಾಡಿದ ಮೇಲೆ ಇದು ಯಾವರೀತಿಯಾಗಿ ಕೆಲಸ ಮಾಡುತ್ತದೆ; ಮುಂದೆ ಇದರಿಂದ ಏನೇನು ಸಮಸ್ಯೆಗಳು ಉದ್ಭವಿಸುತ್ತವೆ, ರೈತರಿಗೆ ಏನು ಕಷ್ಟಗಳು ಸಂಭವಿಸುತ್ತವೆ ಎನ್ನುವುದರ ಬಗ್ಗೆ ಶನಃ ಇದನ್ನು ಪರಿಶೀಲನೆ ಮಾಡುವುದಕ್ಕೆ ಮತ್ತೂ ಒಂದು ಅವಕಾಶವಿದೆ. ಆ ಅವಕಾಶವನ್ನು ಉಪಯೋಗಿಸಿಕೊಂಡು ಮುಂದಿನ ಆಗಸ್ಟ್ ತಿಂಗಳಲ್ಲಿ ಮತ್ತೊಂದು ಸಭೆ ಸೇರುತ್ತದೆ, ಆಗ ಅದಕ್ಕೆಲ್ಲಾ ಸೂಕ್ತ ತಿದ್ದುಪಡಿಗಳನ್ನು ತಂದು ಅವುಗಳನ್ನೆಲ್ಲಾ ಸರಿಪಡಿಸುವುದಕ್ಕೆ ಅವಕಾಶವಿದೆ. ಆದರೆ ಇದರಲ್ಲಿ ನನ್ನ ಸ್ವಂತ ಪ್ರತಿಷ್ಠೆಯೇನೂ ಇರುವುದಿಲ್ಲ. ಪ್ರಜೆಗಳ ಪ್ರತಿಷ್ಠೆಯೇ ಈ ಶಾಸನ ಸಭೆಯ ಪ್ರತಿಷ್ಠೆ. ಈ ಶಾಸನ ಸಭೆಯ ಪ್ರತಿಷ್ಠೆಯೇ ಸರ್ಕಾರದ ಪ್ರತಿಷ್ಠೆ. ಸರ್ಕಾರದ ಪ್ರತಿಷ್ಠೆಯೇ ದೇಶದ ಪ್ರತಿಷ್ಠೆ. ಆದಕಾರಣ ಹಾಗೆ ಏನಾದರೂ ಅನಾನುಕೂಲಗಳು ಇದರಿಂದ ಉಂಟಾದ ಪಕ್ಷದಲ್ಲಿ ಅಂಥ ಆವಶ್ಯಕತೆ ಬಿದ್ದರೆ ಆಗಸ್ಟ್ ತಿಂಗಳಿನಲ್ಲಿ ಸೇರತಕ್ಕಂಥ ಅಧಿವೇಶನದಲ್ಲಿ ಈ ಬಗ್ಗೆ ತಿದ್ದುಪಡಿಗಳನ್ನು ತಂದು ಅದನ್ನು ಸರಿಪಡಿಸಬಹುದು. ಆದರೆ ಈ ದಿವಸ ಈ ಮಸೂದೆಯಲ್ಲಿ ಹೇಳಿರತಕ್ಕಂಥ ವಿಷಯಗಳನ್ನು ಬದಲಾವಣೆ ಮಾಡತಕ್ಕಂಥ ಯಾವ ಒಂದು ತಿದ್ದುಪಡಿಯನ್ನೂ ನಾನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆ ಸೆಲೆಕ್ಟ್ ಸಮಿತಿಯಲ್ಲಿ ಅಷ್ಟೊಂದು ಜನರು ಸೇರಿ ತೀರ್ಮಾನ ಮಾಡಿರತಕ್ಕದ್ದನ್ನು ನಾನೊಬ್ಬ ಒಪ್ಪಿಕೊಳ್ಳಲು ಸಿದ್ಧನಾಗಿಲ್ಲ.

ಶ್ರೀ ಮಹಮ್ಮದ್ ಇಮಾಂರವರು ತಾವು ಇದಕ್ಕೆ ಒಂದು ಪ್ರತ್ಯೇಕ ಡಿಪಾರ್ಟ್‌ಮೆಂಟನ್ನು ನೇಮಕ ಮಾಡಬೇಕಾಗುತ್ತದೆಂದು ಹೇಳಿದರು. ಆದರೆ ಹಾಗೆ ಮಾಡುವುದು ಅನಾವಶ್ಯಕ. ಹಾಗೆ ಅನಾವಶ್ಯಕವಾಗಿ ಇದಕ್ಕೊಂದು ಪ್ರತ್ಯೇಕ ಇಲಾಖೆಯನ್ನು ರಚಿಸಬೇಕೆಂಬ ಆಸೆ ನನಗಿಲ್ಲ. ಇದಕ್ಕಾಗಿಯೇ ಅಂಥ ಒಂದು ಪ್ರತ್ಯೇಕ ಸಿಬ್ಬಂದಿಯನ್ನೂ ಸಹ ನೇಮಕಮಾಡಬೇಕೆಂಬ ಆಸೆ ಸರ್ಕಾರಕ್ಕಿರುವುದಿಲ್ಲ. ಅಂಥದಕ್ಕೆ ಅವಕಾಶವೂ ಸಹ ಇರುವುದಿಲ್ಲ. ಹಾಗೆ ಸಂಸ್ಥಾನಾದ್ಯಂತವೂ ಈ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಕೊಡತಕ್ಕಂಥವರ ಸಂಖ್ಯೆ ಎಷ್ಟಿದೆಯೆಂಬುದನ್ನು ಪರಿಗಣಿಸಿ ನೋಡುವುದಾದರೆ ಪ್ರತಿಯೊಂದು ತಾಲ್ಲೂಕಿನಲ್ಲೂ ಎಂಟು-ಹತ್ತು ಜನರಿಗೆ ಜಾಸ್ತಿ ಇರಲಾರರೆಂದು ಹೇಳಬಹುದು. ತಾವು ಈ ತೆರಿಗೆ ವಿಧಿಸಲು ಹೇಳಿರತಕ್ಕಂಥ ಸ್ಕೀಮನ್ನು ನೋಡಿದರೆ ಇದು ತಮಗೆ ವೇದ್ಯವಾಗುತ್ತದೆ. ಒಂದೊಂದು ಸಬ್ ಡಿವಿಜನ್ನಿಗೆ ಒಬ್ಬ ಸ್ಪೆಷಲ್ ಗುಮಾಸ್ತೆಯನ್ನು ನೇಮಕ ಮಾಡಿದರೆ ಇದಕ್ಕೆ ಸಾಕಾಗಬಹುದೆಂದು ನನ್ನ ನಂಬಿಕೆ. ಒಂದುವೇಳೆ ಒಂದು ತಾಲ್ಲೂಕಿನಲ್ಲಿ ಐವತ್ತು ಜನ ಅಸೆಸೀಸ್ ಸಿಕ್ಕಿದರೂ ಕೂಡ ಇದಕ್ಕಾಗಿ ಒಂದು ಪ್ರತ್ಯೇಕ ಸಿಬ್ಬಂದಿಯನ್ನು ನೇಮಕ ಮಾಡಲು ಅವಕಾಶವಿಲ್ಲ. ಅಂಥ ಕಠಿಣ ಪ್ರಸಂಗ ಬಂದಾಗ್ಗೆ ಒಂದೊಂದು ಸಬ್-ಡಿವಿಜನ್ ಆಫೀಸರ ಕೈಕೆಳಗೆ ಈ ಬಾಬಿಗಾಗಿಯೇ ಒಬ್ಬ ಪ್ರತ್ಯೇಕ ಗುಮಾಸ್ತನನ್ನು ನೇಮಿಸಿದರೆ ಸಾಕೆಂದು ತೀರ್ಮಾನ ಮಾಡಿದ್ದೇವೆ ಮತ್ತು ಈಗಾಗಲೇ ಈ ಬಗ್ಗೆ ಬಡ್ಜೆಟ್ಟಿನಲ್ಲಿ ಐವತ್ತು ಸಾವಿರ ರೂಪಾಯಿಗಳನ್ನು ತೆಗೆದಿಡಲು ಅವಕಾಶ ಮಾಡಿದ್ದೇವೆ. ಈ ಮೊಬಲಗನ್ನು ಇನ್ನೂ ಕಡಮೆ ಮಾಡಬೇಕೆಂಬ ಆಸೆ ನನಗಿದೆ. ಈ ದಿವಸ ಈ ರೆವಿನ್ಯೂ ಮತ್ತು ಎಕ್ಸೈಜ್ ಸೆಸ್ಸುಗಳನ್ನು ವಸೂಲ್ಮಾಡಲು ಯಾವ ಅಧಿಕಾರಿಗಳು ಇದ್ದಾರೆಯೋ ಅವರಿಗೇ ಈ ಇನ್‌ಕಂಟ್ಯಾಕ್ಸನ್ನೂ ಕೂಡ ವಸೂಲ್ಮಾಡುವ ಅಧಿಕಾರವಿದೆ. ಆದಕಾರಣ ಇದಕ್ಕಾಗಿಯೇ ಪ್ರತ್ಯೇಕ ಇನ್‌ಕಂಟಾಕ್ಸ್ ಅಧಿಕಾರಿಗಳನ್ನು ನೇಮಕ ಮಾಡಬೇಕಾದಂಥ ಅವಕಾಶವೇನೂ ಇಲ್ಲವೆಂದು ನಾನು ತಮ್ಮೆಲ್ಲರಲ್ಲೂ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಶ್ರೀ ವೈ. ಎಂ. ಚಂದ್ರಶೇಖರಯ್ಯನವರು ಮತ್ತು ಶ್ರೀ ಟಿ. ಸಿ. ಬಸಪ್ಪನವರು ಇತ್ಯಾದಿ ಕೆಲವು ಮಾನ್ಯ ಸದಸ್ಯರುಗಳು ಮಲೆನಾಡಿನವರ ಮೇಲೆ ಮಾತ್ರ ಹೆಚ್ಚಿನ ಕಂದಾಯ ಹಾಕಿದ್ದೀರಿ, ಆ ಮೂರು ಜಿಲ್ಲೆಗಳವರ ಮೇಲೆ ತಾವು ಇಷ್ಟೊಂದು ತೆರಿಗೆ ಹೊರಿಸುವುದು ಯಾವ ನ್ಯಾಯ ಎಂದು ವಾದ ಮಾಡಿದ್ದಾರೆ. ಆದರೆ ಇದೊಂದು ಅಂಥ ಸರಿಯಾದ ವಾದವೆಂದು

(ಶ್ರೀ ಕೆ. ಹನುಮಂತಯ್ಯ.)

ಹೇಳುವುದಕ್ಕಾಗುವುದಿಲ್ಲ. ಈ ದಿವಸ ಈ ಮಸೂದೆಯಲ್ಲಿ ಹೇಳಿರುವ ಪ್ರಕಾರ ಮಲೆನಾಡಿನವರಾಗಲಿ ಅಥವಾ ಮೈದಾನ ಸೀಮೆಯವರಾಗಲಿ ಎಲ್ಲರೂ ಒಂದೇ ಪ್ರಕಾರವಾಗಿ ತೆರಿಗೆಯನ್ನು ಕೊಡಬೇಕಾಗಿದೆ. ಮಲೆನಾಡಿನವರು ಹೇಗೆ ಕೊಡುತ್ತಾರೋ ಹಾಗೆಯೇ ಈ ದಿವಸ ಈ ಬೆಂಗಳೂರು ಮತ್ತು ಮೈಸೂರಿನಲ್ಲಿರತಕ್ಕಂಥ ಜನರೂ ತೆರಿಗೆ ಕೊಡುತ್ತಿದ್ದಾರೆ. ಈ ದಿವಸ ಈ ತೆರಿಗೆ ವಿಧಿಸಿರತಕ್ಕಂಥ ಬೆಳೆಗಳೇನಿವೆಯೋ ಕೆಲವು ಮಲೆನಾಡಿನಲ್ಲಿ ಹೆಚ್ಚಾಗಿದ್ದರೆ ಮತ್ತೆ ಕೆಲವು ಬೆಳೆಗಳು ಅಂದರೆ ತೆಂಗು, ಅಡಕೆ ತೋಟಗಳು ತುಮಕೂರು, ಬೆಂಗಳೂರು ಜಿಲ್ಲೆಗಳಲ್ಲೂ ಇರುತ್ತವೆ. ಮತ್ತೆ ಕೆಲವು ಜಿಲ್ಲೆಗಳಲ್ಲಿ ಹೇರಳವಾಗಿ ಈ ಹಿಪ್ಪಲಿ ನೇರಳೆ ಸೊಪ್ಪನ್ನು ಬೆಳೆಯಲಾಗುತ್ತಿದೆ. ಇನ್ನು ಸಾಧಾರಣವಾಗಿ ಪ್ರತಿಯೊಂದು ಜಿಲ್ಲೆಯಲ್ಲೂ ಕಬ್ಬು, ಈರುಳ್ಳಿ-ಬೆಳ್ಳುಳ್ಳಿ-ಕಡಲೇಕಾಯಿ ಇತ್ಯಾದಿ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಹೀಗೆ. ಇಷ್ಟು ಬೆಳೆಗಳು ಎಲ್ಲಾ ಡಿಸ್ಟ್ರಿಕ್ಟುಗಳಲ್ಲೂ ಬೆಳೆಯತಕ್ಕಂಥವು. ಆದ್ದರಿಂದ ಯಾವ ಡಿಸ್ಟ್ರಿಕ್ಟಿನ ದೃಷ್ಟಿಯಿಂದಲೂ ಈ ಮಸೂದೆಯಲ್ಲಿ ಪಕ್ಷಪಾತವನ್ನು ತೋರಿಸಿಲ್ಲ ಎಂದು ಮನಗಂಡಿದ್ದೇನೆ, ಶ್ರೀ ಮಾದಪ್ಪನವರು ರೇಷ್ಮೆ ಗೃಹಕೈಗಾರಿಕೆಗೆ ರಕ್ಷಣೆ ಕೊಡಬೇಕು ಎನ್ನತಕ್ಕ ವಾದವನ್ನು ಹೂಡಿದರು ಶ್ರೀ ವಿ. ವೆಂಕಟಪ್ಪನವರು ಅದೇ ಅರ್ಥ ಬರುವಹಾಗೆ ವಾದಿಸಿದ್ದಾರೆ. ಅದರಲ್ಲಿ ಸತ್ಯಾಂಶ ಇಲ್ಲದೇ ಇಲ್ಲ. ಅದೂಕೂಡ ಗೋಪ್ಯವಿಲ್ಲ. ನಾನು ಮೊಟ್ಟಮೊದಲು mulberry ಎನ್ನುವದನ್ನು ಸೇರಿಸಿರಲಿಲ್ಲ. ಯಾವ ಕಾರಣಕ್ಕೋಸ್ಕರ ಅದನ್ನು ಸೇರಿಸಿಲ್ಲ ಎಂಬುದನ್ನು ನನ್ನ ಪೀಠಿಕಾ ಭಾಷಣದಲ್ಲಿ ಹೇಳಿದ್ದೆ. ಆದರೆ Select Committee ಯವರು ಸಮಾಲೋಚನೆ ಮಾಡಿ ಈ ಬೆಳೆಯನ್ನು ಸೇರಿಸಬೇಕು ಎಂದು ಹೇಳಿದಾಗ ಅವರ ಅಭಿಮತಕ್ಕೆ ನಾನು ತಲೆಬಾಗಿ ಸೇರಿಸಿದ್ದೇನೆ. Select Committee ಯವರೂ ಕೂಡ ಒಂದು ಉದಾರ ದೃಷ್ಟಿಯಿಂದ ಈ ವಿಷಯದಲ್ಲಿ ವರ್ತಿಸಿದ್ದಾರೆ. ಶ್ರೀ ವಿ. ವೆಂಕಟಪ್ಪನವರು ಹೇಳಿದ ಹಾಗೆ, ನೀರಾವರಿ ಆಗತಕ್ಕ ಭಾಗದಲ್ಲಿ ಹತ್ತು-ಹನ್ನೆರಡು ಎಕರೆ, ಮಳೆ ಬೆಳೆ ಆಗತಕ್ಕ ಪ್ರದೇಶದಲ್ಲಿ ಇಪ್ಪತ್ತು ಇಪ್ಪತ್ತೈದು ಎಕರೆ exemption ಕೊಟ್ಟಿದ್ದಾರೆ. ತಾವೇ ಹೇಳಿರುವಹಾಗೆ ಬಹುಶಃ ಈ ರೇಷ್ಮೆ ವ್ಯವಸಾಯ ಮಾಡುವವರ ಸಂಖ್ಯೆಯಲ್ಲಿ ನೂರರಲ್ಲಿ ತೊಂಬತ್ತು ಮಂದಿಗೆ ಇದು ಅನ್ವಯಿಸುವುದಿಲ್ಲ. ಮಿಕ್ಕವರಿಗೆ ಅನ್ವಯಿಸುತ್ತದೆ. ಇವು ಸರ್ಕಾರೀ ಫಾರಂ ಇರಬಹುದು, private ಮಲ್‌ಬರಿ ಫಾರಮ್ಸ್ ಇರಬಹುದು. ಇಂತಹವರಿಗೆ ಅನ್ವಯಿಸುತ್ತದೆ. ಶಕ್ತಿ ಇದ್ದವರು ಕೊಡಲಿ ಗೃಹ ಕೈಗಾರಿಕೆ ರಕ್ಷಣೆ ಮಿಕ್ಕವರೆಗೆ ಸಂಪೂರ್ಣ ದೊರೆತಿದೆ. It is not a big industry; Sri Mariappa will easily understand. ನೀರಾವರಿ ಪ್ರದೇಶದಲ್ಲಿ ಹತ್ತು ಎಕರೆಗೆ ಕಡಿಮೆ ಮಳೆ ಆಗತಕ್ಕ ಪ್ರದೇಶದಲ್ಲಿ ಇಪ್ಪತ್ತೈದು ಎಕರೆಗೆ ಕಡಿಮೆ ಮಲ್‌ಬೆರಿ ಬೆಳೆಗೆ exemption ಕೊಟ್ಟಿರುವುದರಿಂದ ಶ್ರೀ ಮಾದಪ್ಪನವರ ಮನಸ್ಸಿನಲ್ಲಿ ಗೃಹ ಕೈಗಾರಿಕೆಗೆ ಏನು ರಕ್ಷಣೆ ದೊರೆಯಬೇಕು ಎಂದು ಇದೆಯೋ ಅದು ಸಂಪೂರ್ಣವಾಗಿ ದೊರೆತಿದೆ ಎಂಬುದು ಭಾಸವಾಗುತ್ತದೆ. ಈ ದಿವಸ ರೇಷ್ಮೆ ಒಂದು ದುಸ್ಥಿತಿಯಲ್ಲಿದ್ದರೆ ಇದಕ್ಕೆ ಯಾರೂ ಕಾರಣರಲ್ಲ. ನಮ್ಮ ದೇಶದಲ್ಲಿ ಸರ್ಕಾರವಾಗಲಿ ಸಾರ್ವಜನಿಕರಾಗಲಿ ಎಷ್ಟು ಉತ್ತೇಜನ ಕೊಡಬಹುದೋ ಅಷ್ಟು ಕೊಡುತ್ತಿದ್ದಾರೆ. ಅದಕ್ಕೆ ಮೂಲಕಾರಣ ಎಲ್ಲರಿಗೂ ಗೊತ್ತಿದೆ. ಹೊರಗಡೆಯಿಂದ ರೇಷ್ಮೆ ಬರುತ್ತಾ ಇರುವಾಗ ಅದರ ಜೊತೆಯಲ್ಲಿ ಸ್ಪರ್ಧೆ ಮಾಡಲು ಶಕ್ತಿ ಇಲ್ಲದೆ ಈ ದುಸ್ಥಿತಿಗೆ ಬಂದಿದೆ. War-time ನಲ್ಲಿ ಜಪಾನ್ ಮತ್ತು ಚೈನಾ ರೇಷ್ಮೆ ಬರುವುದು ನಿಂತುಹೋದಾಗ ಅವರ ಬೆಲೆ ತನ್ನಷ್ಟಕ್ಕೆ ತಾನೇ ಏರಿಹೋಯಿತು. The only effective way of safeguarding this industry is complete protection against foreign competition. ಈ ರೀತಿ ಮಾಡುವುದಕ್ಕೆ ಹೋದರೆ ಕೈಮಗ್ಗದವರು ಸೇರಿಕೊಂಡು ನಮಗೆ artificial ರೇಷ್ಮೆ ತರಿಸದೇ ಇದ್ದರೆ ನಮ್ಮ ಕಸಬು ನಿಂತುಹೋಗುತ್ತದೆ ಎಂದು ತೂಗಾಡುತ್ತಾರೆ. ಈ ವರ್ಷ ಅವರ ಕೂಗಿಗೂ ಇವರ ಕೇಳಿಕೆಗೂ ಸಮನ್ವಯಮಾಡಿ ಸೆಂಟ್ರಲ್ ಸಿಲ್ಕ್ ಬೋರ್ಡಿನವರು ಎಷ್ಟು ಪ್ರಮಾಣದಲ್ಲಿ artificial silk import ಮಾಡಬೇಕೋ ಅಷ್ಟನ್ನು ಮಾಡುತ್ತೇವೆ ಎಂದು ಹೇಳಿದ್ದಾರೆ. ಆದ್ದರಿಂದ the real enemy of silk industry is artificial silk.

ಶ್ರೀ ಇಮಾಂ ಮತ್ತು ಅನೇಕ ಮಾನ್ಯ ಸದಸ್ಯರು ಈ ಮಸೂದೆಯನ್ನು ಬೇರೆ ಪ್ರಾಂತಗಳ ಮಸೂದೆಗಳಿಗೆ ಹೋಲಿಸುವಾಗ ಬರೀ ಕೊಡಗಿನ ವಿಷಯವನ್ನು ತೆಗೆದುಕೊಳ್ಳುತ್ತಾರೆ. ನಾನು ಪೀಠಿಕಾ ಭಾಷಣದಲ್ಲಿ ಹೇಳಿದಂತೆ, ಈಗಾಗಲೇ ಹನ್ನೆರಡು ಸಂಸ್ಥಾನದಲ್ಲಿ ಏನಿದೆ ಎಂದರೆ Income-tax ಜೊತೆಗೆ Super-tax ಹಾಕಿ Commercial crops ಮೇಲೆಯೇ ಅಲ್ಲದೆ ಎಲ್ಲಾ ಬೆಳೆಗಳಿಗೂ ಕೂಡ Agriculture Income-tax ಹಾಕಿದ್ದಾರೆ. ಆದರೆ ಎಷ್ಟೊಂದು ರಿಯಾಯಿತಿ ತೋರಿಸಿದ್ದೇವೆ ಎಂದು ಹೇಳಿದರೂ ಕೂಡ, ಮಿಕ್ಕ ಹನ್ನೆರಡು ಪ್ರಾಂತಗಳನ್ನು ಬಿಟ್ಟುಬಿಟ್ಟು ಕೊಡಗಿನದೇ ಒಂದೇ ವಿಷಯವನ್ನು ತೆಗೆದುಕೊಳ್ಳುತ್ತಾರೆ. ಕೆಲವು ದೃಷ್ಟಿಯಿಂದ ಕೊಡಗಿಗಿಂತಲೂ ಇಲ್ಲಿ ಹೆಚ್ಚಿಗೆ ರಿಯಾಯಿತಿ ತೋರಿಸಿದ್ದಾರೆ. ಮೊದಲು 3,500 ರೂಪಾಯಿಗಳ ವರೆಗೆ exemption limit ಇತ್ತು. ನಾವು ಈಗ 4,200 ರೂಪಾಯಿಗಳವರೆಗೂ ಅದನ್ನು ಏರಿಸಿದ್ದೇವೆ. ಆದ್ದರಿಂದ ಈ ಮಸೂದೆ ಎಲ್ಲಾ ಸಂಸ್ಥಾನಗಳಲ್ಲಿರತಕ್ಕಂಥ Agricultural Incometax Actಗಿಂತಲೂ ವ್ಯವಸಾಯಗಾರರಿಗೆ ಬಹಳ ಸಹಕಾರಿಯಾಗಿದೆ ಎಂದೂ ಮತ್ತು ಇದನ್ನು ಪರಿಶೀಲನೆ ಮಾಡಿದರೆ ಪ್ರತಿಯೊಬ್ಬರಿಗೂ ಕೂಡ ಆ ರೀತಿ ಕಂಡೇ ಕಾಣುತ್ತದೆ ಎಂದೂ ನನ್ನ ಅಭಿಪ್ರಾಯ. ಆದ್ದರಿಂದ ಈ ಮಸೂದೆಯಲ್ಲಿ ನಾವು ಮಂಡಿಸುತ್ತಾ, ಇರತಕ್ಕ Agricultural Income-taxನಿಂದ ಇತರ ಪ್ರಾಂತಗಳಲ್ಲಿ ಇರತಕ್ಕ planters ಮತ್ತು ವ್ಯವಸಾಯಗಾರರಿಗಿಂತಲೂ ಇಲ್ಲಿ ಹೆಚ್ಚು ತೆರಿಗೆ ಕೊಡಬೇಕಾಗುತ್ತದೆ ಎಂದು ಯಾರಾದರೂ ವಾದಿಸಿದರೆ ಅದು ಸುಮ್ಮನೆ ವಾದಕ್ಕೆ ವಾದವೇ ಹೊರತು ಅದರಲ್ಲಿ ಸತ್ಯಾಂಶ ಏನೂ ಇಲ್ಲ. On the other hand, they have to be thankful that the Mysore Government through this Bill is the least exacting so far as this Income-tax is concerned. ಈ ದಿವಸ ನಾನು ಎಷ್ಟು ರಿಯಾಯಿತಿ ತೋರಿಸಿದರೂ ಕೂಡ ಮನಸ್ಸನ್ನು ಬೇಜಾರು ಪಡಿಸಿಕೊಂಡರೆ, ಅದರಿಂದ ನಿರಾಶೆಯನ್ನು ಹೊಂದಿದರೆ, ಮುಂದಿನವರ್ಷ ಮತ್ತಷ್ಟು ಹೆಚ್ಚಿಸಬೇಕಾಗುತ್ತದೆ. ಇಬ್ಬರು ಮಾನ್ಯ ಸದಸ್ಯರು ಈ Assessment ಮಾಡುವುದಕ್ಕೆ ಒಂದು ಕಮಿಟಿ ಮಾಡಬೇಕೆಂದು ಹೇಳಿದರು. ಇದನ್ನು ಬಹುಶಃ ಸಭೆಯವರು ಒಪ್ಪುವುದಿಲ್ಲವೆಂದು ಕಾಣುತ್ತದೆ. ಹಳ್ಳಿಯಲ್ಲಿ ಪಂಚಾಯಿತಿಯಿಂದ ಇಬ್ಬರನ್ನು elect ಮಾಡಿ, Chairman, ಪಟೇಲರು, ಶ್ಯಾನುಬೋಗರು ಇವ

ರೆಲ್ಲಾ ಕುಳಿತುಕೊಂಡು ಒಂದು Assessment ನಿಗದಿ ಮಾಡತಕ್ಕ ಪದ್ಧತಿ ಯಾವದೇಶದಲ್ಲಿಯೂ ಯಾವ ಕಾಲದಲ್ಲಿಯೂ ಇಲ್ಲ.

Sri T. C. BASAPPA.—It is not an assessment. ಪಹಣಿ ಲೆಖ್ಖ ಬರೆಯುವದು ಎಂದು ಹೇಳಿದೆ.

ಶ್ರೀ ಕೆ. ಹನುಮಂತಯ್ಯ.—ಆದ್ದರಿಂದ ಈ ವಿಚಾರದಲ್ಲಿ ಒಂದು ಕಮಿಟಿಮಾಡಿ ತಾವು ಹೇಳತಕ್ಕಂಥ ಕೆಲಸವನ್ನು ಮಾಡುವುದು ಕಷ್ಟವಾಗುತ್ತದೆ.

ಆದರೆ, ಒಬ್ಬೊಬ್ಬರು ಬರೆದುದನ್ನೇ ಆಧಾರವಾಗಿಟ್ಟುಕೊಂಡು ಅನ್ಯಾಯವಾಗುತ್ತದೆಂಬ ಶಂಕೆಯಿದ್ದರೆ ಆ ಶಂಕೆಯನ್ನು ನಿವಾರಣೆ ಮಾಡುವುದಕ್ಕೆ ರೂಲ್ಸ್‌ನಲ್ಲಿ ಏನಾದರೂ ಏರ್ಪಾಡು ಮಾಡೋಣ.

ಈ ತೆರಿಗೆ ಹಾಕಿರುವುದರಲ್ಲಿ ಇನ್ನೊಂದು ಗುಟ್ಟಿದೆ. ಆ ದಿವಸ ಅದನ್ನು ಹೇಳಲಿಲ್ಲ. ಇನ್‌ಕಂಟಾಕ್ಸ್ ಆಗಲಿ ಸೇಲ್ಸ್ ಟ್ಯಾಕ್ಸ್ ಆಗಲಿ, ನಾವೇನು ಹಾಕಿದರೂ, ಅವರೇನೋ ತಾವು ಕೈಯಿಂದ ಕೊಡುವ ಹಾಗೆ ಕೂಗಾಡಿದರೂ, ವಾಸ್ತವವಾಗಿ ನೋಡಿದರೆ, they transfer it on to the consumer. ಕೈಗಾರಿಕೆಯ ಮೇಲೆ ತೆರಿಗೆ ಹಾಕಿದರೆ ಅದನ್ನು ಕೊಂಡುಕೊಳ್ಳತಕ್ಕವನಿಗೆ ಹೊರಿಸುತ್ತಾರೆ. ಹಾಗೆಯೇ ಕಾಫಿಯ ಮೇಲೆ ತೆರಿಗೆ ಹಾಕಿದರೆ, ಕಾಫಿ ಕುಡಿಯುವವನು ಜಾಸ್ತಿ ಬೆಲೆ ಕೊಡಬೇಕಾಗಿ ಬರುತ್ತದೆ ಅಷ್ಟೆ.

ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ).—ಅದು correct position ಅಲ್ಲ. ಅಗ್ರಿಕಲ್ಚರಲ್ ಇನ್‌ಕಂಟಾಕ್ಸ್ ಹಾಕಿದರೆ ಅದನ್ನು ಮಾರಾಟಗಾರ ಕೊಡುವುದಿಲ್ಲ. ಬಂದ ಆದಾಯದಲ್ಲಿ ವ್ಯವಸಾಯಗಾರನೇ ಕೊಡಬೇಕಾಗುತ್ತದೆ. ಆದ್ದರಿಂದ ಅವನ್ನು consumerಗಳಿಂದ collect ಮಾಡಿಕೊಳ್ಳಲು ಅವಕಾಶವೇ ಇಲ್ಲವಲ್ಲ.

ಶ್ರೀ ಕೆ. ಹನುಮಂತಯ್ಯ.—ಆದರೂ that will be imperceptibly transferred to the consumer. Agricultural income-taxನ ಬಹುಭಾಗ ಹೀಗೆಯೇ ಆಗುತ್ತದೆ. ಆದರೆ Sales-tax ವಿಷಯದಲ್ಲಿ ಯಾವ ಪ್ರಮಾಣದಲ್ಲಿ ಈ ಹೊರೆ consumer ಮೇಲೆ ಬೀಳುತ್ತದೆಯೋ ಅಷ್ಟರಮಟ್ಟಿಗೆ ಈ ಟ್ಯಾಕ್ಸ್ ಬೀಳದಿರಬಹುದು. ಮುಕ್ಕಾಲು ಭಾಗ ಆ ರೀತಿಯೇ ಆಗುತ್ತದೆಂದು ಹೇಳಬಲ್ಲೆ.

Sri Mulka GOVINDA REDDY (Chitaldrug).—On a point of order Sir. The programme for today was put down as follows:—

"(b) Consideration of Bill.—

(i) The Mysore Agricultural Income-Tax Bill, 1955.

(ii) also to move that the Bill be passed.

3. Discussion on the Report of the Fact Finding Committee (States Reorganisation)—(*continued*)."

Rule 131 (2) read as follows:—

"(2) at any time after the introduction in the Assembly of a Finance Bill, the Speaker may allot a day or days, jointly or severally, for the completion of all or any of the stages involved in the passage of the Bill by the Assembly and when such allotment has been made the Speaker shall at five o'clock on the allotted day or, as the case may be, the last of the allotted days forthwith put every question necessary to dispose of all the outstanding matters in connection with the stage or stages for which the day or days have been allotted."

So, according to rule 131 (2) this is a Finance Bill. A ruling was already given by the Chair that this was a Finance Bill and I am referring to rule 131 (2) and the day allotted is today and therefore at five o'clock this Bill should have been put to vote and now that the Bill has not been put to vote, the Bill has lapsed.

Sri K. HANUMANTHAIYA.—Sir, my friend Sri Mulka Govinda Reddy has a speciality in bringing up untenable points of order. Granting that his argument is sound that this is a Finance Bill, I leave it for your definition whether this is a Finance Bill or not. Granting even that this is a Finance Bill, you will remember, Sir, the other day this very point arose whether time should be fixed or not and you deliberately stated "I do not want to fix time and that the discussion may proceed according to the wishes of the House." Therefore his point of order does not arise. His point of order would have arisen if you had fixed time and then departed from the fixed time.

Sri S. SRINIVASA IYENGAR (T.-Narasipur).—The time has been fixed by you, Sir. You consulted the House whether we had to close the discussion on the Bill or to continue and after that you were pleased to say that the Hon'ble Chief Minister can reply. And so it is deemed that time has been fixed by you, and since the time has been fixed, rule 131 automatically applies.

Mr. SPEAKER.—I am sorry. I have not fixed the time at any time so far as this Bill is concerned. I only asked whether they would close the

(MR. SPEAKER.)

discussion of the Bill. I have not fixed any date for the completion of the Bill.

Sri J. MOHAMED IMAM.—So are we to understand that discussion on the Bill would continue tomorrow also ?

Mr. SPEAKER.—It is not yet known, even though it was discussed at length. Under Rule 131 of the Rules of Procedure this is a Financial Bill, but I have not fixed any day for the discussion or consideration or for putting the clauses. Therefore, it does not arise now.

Sri. Mulka GOVINDA REDDY.—I am not questioning the ruling of the Chair, but in the List of Business for the 21st April 1955, it has been definitely put down 'That the Bill be passed.'

Mr. SPEAKER.—It is mentioned so in the Agenda, but on that account it cannot be said that it should come about on that day alone.

ಶ್ರೀ ಕೆ. ಹನುಮಂತಯ್ಯ.—ಆದುದರಿಂದ ಸ್ವಾಮಿ, ಕಾಫಿ ಪ್ಲಾಂಟರ್ಸ್‌ಗಳಾಗಲಿ ಯಾರೇ ಆಗಲಿ ಅವರೆಲ್ಲರ ಜವಾಬ್ದಾರಿಯನ್ನೂ ನಮ್ಮ ಕೈಯಲ್ಲೇ ಕೊಟ್ಟುಬಿಡುತ್ತೇವೆಂದು ಹೇಳಿದರೂ ಅವರ ಆರೋಪಣೆ ಸರಿಯಲ್ಲ. ನಾನೀಗ ಈ ವಿಚಾರಗಳಲ್ಲಿ ಎಲ್ಲವನ್ನೂ ಲೆಕ್ಕಹಾಕಿ ಹೇಳುವುದಕ್ಕೆ ಅವಕಾಶವಿಲ್ಲ. ಈ ದಿವಸ ಯಾವ ತೆರಿಗೆಯನ್ನೇ ಹಾಕಲಿ ಅದು ಕೊನೆಗೆ ಬಳಸತಕ್ಕವರ ಮೇಲೆಯೇ ಬೀಳುತ್ತದೆ. ನಾನು ಇಲ್ಲಿಯವರೆಗೆ ಏನೇನು ಪ್ರಾಮುಖ್ಯವಾದಂಥ ವಿಷಯಗಳಿದ್ದವೋ ಅವುಗಳ ಬಗ್ಗೆ ಮತ್ತು ಮಾನ್ಯ ಸದಸ್ಯರು ಎತ್ತಿದಂಥ ಅನುಮಾನಗಳಿಗೆ ಅವಕಾಶವಿದ್ದಂಥ ಎಲ್ಲಾ ವಿಚಾರಗಳ ಬಗ್ಗೆಯೂ ಉತ್ತರ ಕೊಟ್ಟಿದ್ದೇನೆ; ಮತ್ತು ಭರವಸೆಯನ್ನೂ ಸಹ ಹೇಳಿದ್ದೇನೆ. ಎಂದರೆ ಈ ಬಿಲ್ಲು ಅಕ್ಟಾಗಿ ಜಾರಿಗೆ ಬಂದಮೇಲೆ, ಆಚರಣೆಯಲ್ಲಿ ಏನಾದರೂ ಅಂಥ ಕಷ್ಟಗಳು ಅಥವಾ ತೊಂದರೆಗಳುಂಟಾದ ಪಕ್ಷದಲ್ಲಿ ಅವುಗಳನ್ನು ಪರಿಹಾರ ಮಾಡುವುದಕ್ಕೆ ಮುಂದಿನ ಅಧಿವೇಶನದಲ್ಲಿ ಆ ಬಗ್ಗೆ ಸೂಕ್ತ ತಿದ್ದುಪಡಿಗಳನ್ನು ತರುವುದಕ್ಕೆ ಅವಕಾಶವಿದೆ ಎನ್ನುವುದನ್ನೂ ಕೂಡ ಹೇಳಿದ್ದೇನೆ. ಈ ಮಾನ್ಯ ಸಭೆಯ ಸದಸ್ಯರು ಈ ತೆರಿಗೆ ಹಾಕತಕ್ಕ ಬಗ್ಗೆ ಸ್ಲ್ಯಾಬ್ ರೇಟನ್ನು ಹಾಕಬೇಕೆಂದೂ, ಎಕರೆಗಳ ಮೇಲೆ ಅದನ್ನು ವಿಧಿಸಬೇಕೆಂದೂ ಇತ್ಯಾದಿ ಕೆಲವು ಸಲಹೆಗಳನ್ನು ಕೊಟ್ಟಿದ್ದರು. ಈ ವಿಚಾರಗಳನ್ನೆಲ್ಲಾ ನಾನು ಸೆಲೆಕ್ಟ್ ಸಮಿತಿಯವರೊಂದಿಗೆ ಸಮಾಲೋಚನೆ ಮಾಡಿದ್ದೇನೆ. ಆದರೆ ಅಂಥ ಆವಶ್ಯಕತೆ ಬಿದ್ದರೆ ಮುಂದಿನ ಅಧಿವೇಶನದಲ್ಲಿ ಯಾವ ತಿದ್ದುಪಡಿಗಳನ್ನು ಬೇಕಾದರೂ ತರುವುದಕ್ಕೆ ಅವಕಾಶವಿದೆಯೆಂದು ಹೇಳಿದ್ದೇನೆ. ಇನ್ನು ಶ್ರೀಮಾನ್ ವಿ. ವೆಂಕಟಪ್ಪನವರು ನಾನು ಇದನ್ನು ಒಂದು ಚತುರತೆಯನ್ನು ಉಪಯೋಗಿಸಿ ಮಾಡಿದ್ದೇನೆಂದು ಹೇಳಿದರು. ಆದರೆ ಈ ವಿಷಯಗಳೇನೇ ಇರಲಿ, ನಾನು ಈಗ ಇಷ್ಟು ಮಾತ್ರ ಹೇಳಲಿಚ್ಛಿಸುತ್ತೇನೆ. ಸರ್ಕಾರಿ ಕಾರ್ಯಕಲಾಪಗಳು ಚೆನ್ನಾಗಿ ನಡೆಯಬೇಕಾದರೆ ಎಲ್ಲಾ ಸದಸ್ಯರೂ ಇದನ್ನು ಒಪ್ಪಿಕೊಳ್ಳಲೇಬೇಕಾಗಿದೆ. ರಾಷ್ಟ್ರಾಭಿವೃದ್ಧಿಗೆ ಹೆಚ್ಚು ಹಣದ ಅಗತ್ಯವಿದೆ ಎನ್ನುವುದನ್ನು ತಾವುಗಳು ಎಲ್ಲರೂ ಒಪ್ಪಿಕೊಂಡೇ ಇರುತ್ತೀರಿ. ಈ ದಿವಸ ಈ ಪಾಂಚವಾರ್ಷಿಕ ಯೋಜನೆಯನ್ನು ಯಾವ ಮಹನೀಯರು ಮಾಡಿದರೋ ಅವರ ಮೇಲೆ ಈ ನಾನಾ ಕಾರ್ಯಗಳನ್ನು ಸಂಪೂರ್ಣಗೊಳಿಸುವಂಥ ಜವಾಬ್ದಾರಿಬಿದ್ದಿದೆ. ಎಂಟು ಕೋಟಿ 80 ಲಕ್ಷ ರೂಪಾಯಿಗಳ ಕಂದಾಯವನ್ನು ಎತ್ತಬೇಕೆಂದು ಹಿಂದಿನ ಮಂತ್ರಿಮಂಡಲದವರು ನಿಗದಿಮಾಡಿದ್ದಾರೆ. ಅವರು ದೇಶಕ್ಕೆ ಕೊಟ್ಟಿರುವ ಒಂದು ವಾಗ್ದಾನವನ್ನು ಪರಿಪೂರ್ಣ ಮಾಡತಕ್ಕ ಕಹಿ ಕೆಲಸ, ನಿಷ್ಠುರದ ಕೆಲಸ ನನಗೆ ಬಂದಿದೆ. ಈರೀತಿ ದೇಶಕ್ಕೆ ಸರಕಾರ ಮತ್ತು ಈ ಸಭೆ ಮಾಡಿರತಕ್ಕ ವಾಗ್ದಾನವೇನಿದೆಯೋ ಅದನ್ನು ಪರಿಪಾಲನೆ ಮಾಡುವುದರಲ್ಲಿ ಏನಾದರೂ ಚತುರತೆ ಉಪಯೋಗಿಸಿದ್ದರೆ ಅದು ಸ್ವಾರ್ಥಕ್ಕಲ್ಲ; ದೇಶ ಸೇವೆಗೋಸ್ಕರ ಅರ್ಪಣೆಯಾಗಿದೆ ಮತ್ತು ದೇಶಕ್ಕೋಸ್ಕರ ವಿನಿಯೋಗವಾಗಿದೆ ಎಂದು ಮಾತ್ರ ಹೇಳುತ್ತೇನೆ.

Mr. SPEAKER.—The question is:

"That the Mysore Agricultural Income-tax Bill, 1955, as reported by the Select Committee be taken into consideration."

The motion was adopted.

Mr. SPEAKER.—We shall now take up the Bill clause by clause.

Sri J. MOHAMED IMAM.—I beg to submit that the amendments may be taken up tomorrow, because they are important amendments. Since the Chair has not fixed the time, there is scope for further discussion. Now, it is late.

Mr. SPEAKER.—I will leave it to the House.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ತಿದ್ದುಪಡಿ ಕಳುಹಿಸಿರುವ ಪಟ್ಟಿಯನ್ನು ನೋಡಿದರೆ ತಿದ್ದುಪಡಿ ಕಳುಹಿಸಿರತಕ್ಕಂಥ ಮಹನೀಯರಲ್ಲಿ ಅನೇಕರು ಆಸಕ್ತಿ ಇಲ್ಲದೆ ಎದ್ದುಹೋಗಿದ್ದಾರೆ. ಈ ದಿವಸವೇ ಇದನ್ನು ಚರ್ಚೆಗೆ ತೆಗೆದುಕೊಂಡು ಪಾಸ್ ಮಾಡಬಹುದು.

Sri J. MOHAMED IMAM.—That is important. Those that have sent amendments might have gone for other reasons. We cannot hustle through the amendments.

Sri K. HANUMANTHAIYA.—As you have rightly said, you may ascertain the wishes of the House and act accordingly.

Sri J. MOHAMED IMAM.—It is not the House exactly that fixes the time. The Chair has already given a ruling that it has not fixed the time. So there is scope for taking up the amendments

tomorrow. They are very important amendments. We can adjourn for today.

Mr. SPEAKER.—Hon'ble Members who have sent in the amendments are not willing to move. It is evident. They did not even press for those amendments. It is evident.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ವಿಷಯ ಚರ್ಚೆಗೆ ಬಂದಾಗ 6 ಘಂಟೆಯವರೆಗೂ ಈ ಚರ್ಚೆಯನ್ನು ಮುಂದುವರಿಸಬಹುದು ಎಂದು ಹೇಳಿದ್ದೀರಿ. ಆಸಕ್ತಿ ಇದ್ದಿದ್ದರೆ, ತಿದ್ದುಪಡಿ ಕಳುಹಿಸಿದವರೇ ಹಾಜರಿದ್ದು ಅವಕಾಶ ತೆಗೆದುಕೊಳ್ಳುತ್ತಿದ್ದರು.

Mr. SPEAKER.—We need not plead on their behalf.

Sri J. MOHAMED IMAM.—We will take it up tomorrow. I do not like this Bill to be hustled through. My complaint is we are hustling through this Bill. The amendments are important. We want to see that Government accepts them. What can we do within ten or fifteen minutes? Privilege has to be given to this House. Of course Government is anxious to cut short the business to suit their convenience. But it is the Chair's duty to see to the convenience of the Members.

Mr. SPEAKER.—Shall I take the opinion of the House?

Sri Mulka GOVINDA REDDY.—It is a right of the members. It cannot be curtailed. The right guaranteed. . . .

Mr. SPEAKER.—What is the right?

Sri Mulka GOVINDA REDDY.—The right is to move an amendment. So many members have to move amendments. Sri Madappa, Sri Imam and others have sent in their amendments.

Mr. SPEAKER.—I will give chances to all Hon'ble Members to move their amendments. Owing to pressure of work and time, we will have to take up these amendments now.

Sri Mulka GOVINDA REDDY.—At 5-30, we have an engagement. Generally, it is understood that the House closes at five. Therefore we have accepted an engagement to attend the function. So we cannot sit any longer.

Mr. SPEAKER.—Every day, if this is the case, it is very difficult to push through the appointed business.

Sri K. HANUMANTHAIYA.—You will see that the Government work has come to a stand-still for the last two months. After all the House is interested in the expeditious disposal of business. If we go at this rate, we will not be able to finish.

Sri J. MOHAMED IMAM.—It is not fair on the part of the Leader of the House to lay a charge against us like this. We have been very co-operative. Many days we have had sittings till 6 and 8 o'clock. In view of the importance of the work before us we are reiterating that the amendments should be taken up tomorrow. In spite of this if the Government insists, they can carry on.

Sri D. DEVARAJ URS.—As we see the amendments, except one sent by the Leader of the Opposition, all the other amendments are sent by our party men. When our party men themselves are not willing to move—this is evident from the fact that none of them are here—the only amendment that will come up before the House is that of the Leader of the Opposition. If he so chooses, he may move that amendment. It is obvious, Sir, that no other Hon'ble Member who has moved amendments is either here nor does he want to move the amendment.

Mr. SPEAKER.—There is only one amendment. It won't take more than five minutes.

Sri J. MOHAMED IMAM.—One hour or two, you can set apart tomorrow.

Mr. SPEAKER.—If the Leader of the Opposition agrees, it is very easy.

Sri J. MOHAMED IMAM.—I have got genuine reasons for not taking it up today. I have to make some study. I am afraid I cannot do justice within these few minutes. It involves a great principle. Tomorrow if you set apart one hour, it will be very easy. If the Government grudges this, let them take the responsibility.

Sri H. M. CHANNABASAPPA.—I do not understand the responsibility of the Hon'ble Leader of the Opposition. We have all got to see that. . . .

Sri J. MOHAMED IMAM.—I will leave it to you. If the Chair so desires, it can take up the Bill. We have no objection. Or if the Chair so desires, one hour may be set apart tomorrow for discussion on this Bill.

Sri K. HANUMANTHAIYA.—So far as Government business is concerned, it has to be done in consultation with the Leader of the House. I do not suppose there is any difference of opinion. I do not want to attribute motives to the Opposition. As they state, they have co-operated in the work. Now we are at the tail-end of the session. It is impossible for me to agree to postpone the consideration of the Bill. As Hon'ble Members have pointed out, there is one amendment and there is no purpose served by postponing the debate.

5-30 P.M.

Sri J. MOHAMED IMAM.—I will leave it to the Leader of the House, to his own privilege. When he is not accommodating, I will leave the matter between the Leader of the House and yourself.

Mr. SPEAKER.—I want all the members to co-operate.

Sri J. MOHAMED IMAM.—When he is not co-operating, we will all stage a walk out.

(At this stage the Leader of the Opposition along with his party left the House.)

ಶ್ರೀ ಕೆ. ಹನುಮಂತಯ್ಯ.—Thank you. ಅವರು ಬೇಕೆಂದೇ ಹೀಗೆ ಮಾಡುತ್ತಾರೆ.

ಶ್ರೀ ಎಸ್. ಗೋಪಾಲಗೌಡ.—'ನಾವು ಬೇಕೆಂತಲೇ ಹೋಗುತ್ತೇವೆ'ಂದು ಅವರು ಮಾಡಿದ Remark ಸರಿಯಲ್ಲ.

Mr. SPEAKER.—I want to know the opinion of the House whether to continue the discussion or not ?

MEMBERS.—We shall continue the discussion, Sir.

Mr. SPEAKER.—Sri Madappa and some other members who had sent in notices of amendments are not present. Therefore there are no amendments to clausse 2 to 63.

The question is :

"That Clauses 2 to 63 stand part of the Bill."

The motion was adopted.

Clause 2 to 63 were added to the Bill.

Mr. SPEAKER.—There is an amendment to be moved by Sri N. Huchmasthy Gowda to Clause 64 of the Bill.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಮಿ, ನನ್ನ ತಿದ್ದುಪಡಿ ಈ ರೀತಿಯಿದೆ:

"In illustration (4) for the word 'garlic' the words and brackets 'tobacco (Virginia)' shall be substituted."

ಇದಕ್ಕೆ ಹೆಚ್ಚು ವಿವರಣೆ ಅನವಶ್ಯಕ. ಅದು ಸ್ಪಷ್ಟವಾಗಿದೆ. ಮಾನ್ಯ ಮಂತ್ರಿಗಳು ದಯವಿಟ್ಟು ಒಪ್ಪಿಕೊಳ್ಳಬೇಕು.

Mr. SPEAKER.–Amendment moved:

"That in illustration (4) for the word "garlic" the words and brackets "tobacco (Virginia)" shall be substituted."

Sri K. HANUMANTHAIYA.—I accept the amendment Sir.

Mr. SPEAKER.—The question is :

"That in illustration (4) for the words 'garlic' the words and brackets 'tobacco (Virginia)' shall be substituted."

The motion vas adopted.

Mr. SPEAKER.—The question is :

"That Clause 64 as amended stand part of the Bill.

The motion was adopted.

Clause 64 as amended was included in the Bill.

Mr. SPEAKER.—Schedule. Sri G. Puttaswamy has sent an amendment to the Schedule.

Sri K. HANUMANTHAIYA.—He is not moving his amendment, Sir.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನನ್ನ ತಿದ್ದುಪಡಿ ಈ ರೀತಿಯಿದೆ. ಅದನ್ನು ಮಂಡಿಸುತ್ತೇನೆ:

"In the first proviso to Part I for the words and figure "is less than Rs. 4,200", the words and figure "does not exceed Rs. 4,200" shall be substituted."

ಇದರ ಉದ್ದೇಶ ಇಷ್ಟೆ. ಈಗಿರತಕ್ಕ ಪದಗಳ ಅರ್ಥ ಸ್ಪಷ್ಟವಾಗಿದ್ದರೂ ಕೂಡ ಇನ್ನೂ ಹೆಚ್ಚು ಸ್ಪಷ್ಟ ಮಾಡಬೇಕೆಂಬುದೇ ನನ್ನ ಉದ್ದೇಶ. ಈ ಸಭೆಯ ಮಾನ್ಯ ಸದಸ್ಯರೊಬ್ಬರು ಸ್ವಲ್ಪ ಅನುಮಾನ ಸೂಚಿಸಿದ್ದರಿಂದ ನಾನು ಈ ತಿದ್ದುಪಡಿಯನ್ನು ಸೂಚಿಸಿದ್ದೇನೆ. ಇಂಡಿಯನ್ ಇನ್‌ಕಂಟ್ಯಾಕ್ಸ್ ಆಕ್ಟಿನಲ್ಲೂ ಇದೇ ರೀತಿ

ಪದ ಪ್ರಯೋಗವಿರುವುದರಿಂದ ಇದನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—Amendment moved :

"That in Schedule in the first proviso to Part I for the words and figure "is less than Rs. 4,200", the words and figure "does not exceed Rs. 4,200" shall be substituted."

Sri K. HANUMANTHAIYA.—I accept the amendment, Sir.

Mr. SPEAKER.—The question is :

"That in the Schedule in the first proviso to Part I for the words and figure "is less than Rs. 4,200" the words and figure "does not exceed Rs. 4,200 shall be substituted."

The motion was adopted.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ನನ್ನ ತಿದ್ದುಪಡಿ ಇದು:

"In Part II under the heading Fourth Class after the words 'chillies (non-irrigated)' the word 'garlic' shall be inserted and under the heading Sixth Class the word 'garlic' shall be omitted.'"

ಅದನ್ನು ಮಂಡಿಸುತ್ತೇನೆ. ಈರುಳ್ಳಿಯಲ್ಲಿರತಕ್ಕ ಉತ್ಪತ್ತಿಗಿಂತ ಬೆಳ್ಳುಳ್ಳಿಗೆ ಹೆಚ್ಚಿಗೆ ಬರುವುದಿಲ್ಲವೆಂದು ಕೆಲವು ಮಾನ್ಯ ಸದಸ್ಯರು ಸಲಹೆ ಮಾಡಿದ್ದರ ಮೇಲೆ, ಬೆಳ್ಳುಳ್ಳಿ ಆರನೆಯ ಕ್ಲಾಸಿನಲ್ಲಿರುವುದನ್ನು ತೆಗೆದು ನಾಲ್ಕನೆಯ ಕ್ಲಾಸಿನಲ್ಲಿ ಈರುಳ್ಳಿ ಜೊತೆಗೆ ಸೇರಿಸಬೇಕೆಂದು ಇದನ್ನು ತಂದಿದ್ದೇನೆ. ಇದನ್ನು ದಯವಿಟ್ಟು ಒಪ್ಪಿಕೊಳ್ಳಬೇಕು.

Mr. SPEAKER.—Amendment moved :

"That in Part II under the heading Fourth Class after the words 'chillies (non-irrigated)' the word 'garlic' shall be inserted and under the heading Sixth Class the word 'garlic' shall be omitted."

Sri K. HANUMANTHAIYA.—I accept the amendment Sir.

Mr. SPEAKER.—The question is :

"That in Part II under the heading Fourth Class after the words 'chillies (non-irrigated)' the word 'garlic' shall be inserted and under the heading Sixth Class the word 'garlic' shall be omitted."

The motion was adopted.

Mr. SPEAKER.—The question is :

"That the Schedule as amended stand part of the Bill."

The motion was adopted.

The Schedule, as amended, was added to the Bill.

Mr. SPEAKER.—Clause 1. The question is :

"That Clause 1 stand part of the Bill."

The motion was adopted.

Clause 1 was added to the Bill.

Mr. SPEAKER.—Title and Preamble. The question is :

"That the Title and the Preamble stand part of the Bill.

The motion was adopted.

The Title and the Preamble were added to the Bill.

Motion to pass.

Sri K. HANUMANTHAIYA.—I move :

"That the Mysore Agricultural Income-tax Bill, 1955, as amended, be passed."

Mr. SPEAKER.—The question is :

"That the Mysore Agricultural Income-tax Bill, 1955, as amended, be passed."

The motion was adopted.

Mr. SPEAKER.—The House will now rise for the day and meet at 12 NOON tomorrow.

The House adjourned at Thirty-seven Minutes past Five of the Clock to meet again at Twelve of the Clock on Friday, the 22nd April 1955.

WD 4508—GPB—550—5-10-55

MYSORE LEGISLATIVE ASSEMBLY.

FORTY-EIGHTH DAY.

Friday, the 22nd April 1955.

The House met in the Assembly Hall, Old Public Offices, Bangalore, at Twelve of the Clock.

MR. SPEAKER (SRI H. S. RUDRAPPA, B.Sc., LL.B.) in the Chair.

Development Grants to Villages in Kolar District.

Q.—74. **Sri G. NARAYANA GOWDA** (Mulbagal-Srinivaspur).—

Will the Government be pleased to state :—

the names of villages that have received grants for development in Kolar District during the last two years (information to be furnished taluk-wise)?

A.—**Sri T. CHANNIAH** (Minister for Public Health and Local Self-Government).—

Please see Statement appended.

List of Villages which received grants for development in the Kolar District.

I. Kolar Taluk.—

1 Settihalli
2 Kyalanur
3 Vemagal
4 Narasapura
5 Kondatti
6 Madivala
7 Mudavadi
8 Petechamanahalli
9 Jaderi
10 Thoti
11 Gangapura
12 Cholaghatta
13 Yedahalli
14 Veeranahalli
15 Arenaganahalli
16 Seesandra
17 Hollamballi
18 Kattigenahalli
19 Hodalavadi
20 Gaddekannur

II. Bangarpet Taluk.—

1 Tamatamakanahalli
2 Ghatmadamangala
3 Kamasandra
4 Budikote
5 Vatrakunte
6 Thoppanahalli
7 Nadimpalli
8 S. Kote
9 Byatarayanahalli
10 Koppa
11 Bethamangala
12 Kongarahalli
13 Mageri
14 Madamangala
15 Kadiregowdanakote
16 Doddur Karapanahalli
17 Bydahalli

III. Srinivasapur Taluk.—

1 Nulpura
2 Yeldur
3 Pulgurkote
4 Kolthur
5 Lakshmipura
6 Nambihalli
7 Manchinamelakote
8 Chirakorapalli
9 Koosandra
10 Pathamotakapally
Sri B. NARAYANASWAMY.—The newsprint is used for newspapers and when newspapers themselves are the Central Subject, newsprint also should be treated as a Central subject; and as such the point is whether this legislature has got power to levy tax on a Central subject. That is a point which we have to consider. Secondly, Sir, on this news print when it is directly imported, no sales-tax is levied. Whereas when it is purchased from a direct dealer, it is being taxed. Would this be reasonable I would like to ask. My friend Sri P. R. Ramaiya just now submitted that sales-tax is not levied on newsprint in Madras, being an imported stuff from foreign countries. If that is the case, would it look reasonable for this House or for this Government to levy sales-tax on this commodity? That is a point for this House and also by the Revenue Minister to consider. The Central Government has not levied any excise duty on newsprint. As such, it is not desirable to levy sales-tax on newsprint. Because it is the intension of all of us here and also of the Government to encourage and to be more considerate towards newspapers; and that is the main reason why newsprint has been exempted from levy of excise duties or even the commodities that are being directly imported from foreign countries. My friend Sri Ramaiya has tried his best to advance his argument, though not for himself, atleast for the sake of other Proprietors of Dailies by having brought his amendment and has thus gone to their rescue. I think Sri Ramaiay's amendment deserves great consideration at the hands of Government.

Sri P. R. RAMAIYA.—I have not yet moved my amendment, Sir.

Sri B. NARAYANASWAMY.—Anyhow, Sir, this levy of sales-tax on newsprint would certainly hit hard upon small dailies that are being issued in Mysore State. There are small papers which deserve great consideration at the hands of the Government. I would request the Hon'ble Minister to kindly examine the question of not to levy sales-tax on newsprint and to omit this commodity from the purview of this Bill.

*Sri R. ANANTARAMAN (Chamarajpet).—Mr. Speaker, Sir, my friend Sri P. R. Ramaiya and also Sri Narayanaswamy have supported the fact that sales-tax on newsprint may kindly be deleted. In this particular case, I want

(SRI R. ANANTARAMAN.)

to know what is the sales-tax recoverable under this item. I learn, it will not be more than Rs. 50,000 to Rs. 60,000 at the rate of one anna. Now if it is reduced to 6 pies, it will be Rs. 20,000 or Rs. 25,000 only. In view of this small income out of this item, I would request the Government to see that this tax is deleted from the bill.

Sir, ours is a young democracy, we want to see more newspaper readers. If the tax is levied on the newsprint, there will be very few newspaper readers. And I may tell you, Sir, in Bangalore City, so many dailies came up in the beginning but now hardly 50 per cent of them are running, mostly under loss. Excepting one or two newspapers which are run by big firms, others are running under a loss. Newspapers from outside, of course, they are being run by big managements. Our local dailies would certainly suffer on account of the imposition of sales-tax It is better to omit this provision. It would not be nice to levy tax for the sake of Rs. 20,000 or Rs. 25,000.

Mr. SPEAKER.—Now the Minister will reply.

Sri Kadidal MANJAPPA.—Sir, I was listening to the arguments advanced by some Hon'ble Members urging for the abolition of sales-tax in respect of newsprint. I have also heard the very same Hon'ble Members arguing for the need for restoration of tanks and for conferring small amenities in their respective constituencies. My friend Sri Bheemappa Naik just an hour ago, he was pleading that the projects in Molakalmuru taluk have not been taken up in large numbers. If it was possible, I could have as well argued in favour of newspaper editors or proprietors. I can be as sympathetic as the Hon'ble members are towards the newspaper concerns. Sir, the administration has to run. The Hon'ble Member Sri P. R. Ramaiya must be thankful to Government that, after taking into consideration the request made by him and the other Hon'ble Members, we have proposed to reduce the tax by 50 per cent. After taking into consideration the request made by some members, the Government had thought of reducing the tax. But now here is a plea for complete abolition of the tax.

Sri P. R. RAMAIYA.—I wish to correct the Hon'ble Minister. I have always pleaded for exemption but not for reduction to 50 per cent or 25 per cent.

Sri Kadidal MANJAPPA.—Personally I can plead for exemption of all commodities from the levy of sales-tax. Why should a poor agriculturist be taxed? Why should the consumers be taxed? This kind of argument can be advanced in the case of any other commodity. Therefore, I would earnestly appeal to the Hon'ble Members to be satisfied with the concession that the Government has thought of giving to the newspaper proprietors.

Sri Imam pointed out that the levy of sales-tax on groundnut is against the provisions of the Constitution. In the Constitution it has been laid down that it is open to the Parliament to enact a law prohibiting the levy of taxes in respect of certain goods which are essential to the life of the community. The Parliament has, in accordance with constitutional provisions, passed an Act called the Essential Goods and Declaration of Taxes on Sale or Purchase Act, 1952. No doubt, I quite see that edible oil is exempted from the payment of tax under this Act. But in the case of this commodity, *viz.*, the groundnut, it was subject to tax long before the Act came into force.

Further, we have taken the permission of the President to levy sales-tax on groundnut. We are going to lose considerable amount of revenue if groundnut is also exempted in addition to the edible oils. The Sales-tax Committee, after considering all the aspects of the case, has recommended that edible oil may be exempted and that groundnut may be taxed at a single point. The amending Act which provides for the levy of purchase tax on groundnut has received the assent of the President and there is no constitutional difficulty for levying purchase tax in the case of groundnut. It is perfectly in accordance with the Constitution.

Mr. SPEAKER.—It is provided in sub-clause (3). Unless they obtain

the permission of the President, they cannot levy the tax.

Sri J. MOHAMED IMAM.—With due deference to the President, when it is provided in the Constitution and when the Parliament has passed an Act exempting this article, there was no need to obtain the permission or the assent of the President.

Sri Kadidal MANJAPPA.—I am sorry, the Hon'ble Member has not gone through the provisions in the Constitution carefully. I have no objection to read the relevant portion :

> "Article 286 (3). No law made by the Legislature of a State imposing, or authorising the imposition of, a tax on the sale or purchase of any such goods as have been declared by Parliament by law to be essential for the life of the community shall have effect unless it has been reserved for the consideration of the President and has received his assent."

This provision is very clear. We are not imposing the tax on groundnut for the first time. With due deference to the wishes of the Hon'ble Members I have brought forward a Bill to remove certain difficulties and now the very same members are advancing arguments for the exemption of this commodity from the levy of sales-tax. It is a very fine argument. It was stated that in Madras the levy on newsprint is 3 pies per lb. But the Hon'ble Members must not forget that in Madras the levy is at multi-point and not at single point. There the tax levied is 3 pies per rupee at multi-point. Here it is at single point.

Sri P. R. RAMAIYA.—I request the Minister to kindly listen to one point, Sir.

	Rate of tax.
(1) In the case of every dealer whose total turnover is Rs. 7,500 and above, but not exceeding Rs. 10,000.	Rs. 25 per annum.
(2) In the case of every dealer whose total turnover exceeds Rs. 10,000 but does not exceed Rs. 25,000.	The rate specified in item (1) on the turnover not exceeding Rs. 10,000 and two pies in the rupee on the turnover exceeding Rs. 10,000.
(3) In the case of every dealer whose total turnover exceeds Rs. 25,000.	The rate specified in item (2) on the turnover not exceeding Rs. 25,000 and three pies in the rupee on the turnover exceeding Rs. 25,000.

Sir, in Madras this commodity is not taxed on the turnover basis. But here if you tax the newsprint on turnover basis, it would be Re. 0-0-3. Here you have brought it under Schedule I under single point and have levied six pies. Is it justified, Sir? I would request you kindly to follow at least the Madras practice.

Sri Kadidal MANJAPPA.—It is too late to consider all those suggestions now. With great difficulty I was able to introduce this Bill today in order to meet the wishes of the Hon'ble Members who pleaded for the paper industry. I cannot consider any other suggestion. It is open to the Hon'ble Member to approve of the Bill or not.

Sri P. R. RAMAIYA.—I do not want the Minister to speak in such dogmatic manner.

Sri Kadidal MANJAPPA.—It is not dogmatism. I am not levying sales-tax for my personal benefit, it is for the State I am levying this tax.

Sri P. R. RAMAIYA.—Here I only pointed out the practice obtaining in Madras and in Mysore. In Madras the levy is at 3 pies, and here it would be 6 pies and at single point. It was my duty to point out. The Hon'ble Minister need not think otherwise in this matter.

Sri Kadidal MANJAPPA.—All these points were considered by the Sales Tax Committee and they came to the conclusion that tax should be levied at

(SRI KADIDAL MANJAPPA.)

single point on paper which includes newsprint also. Therefore, it is too early to consider the question of shifting this commodity from the single point levy to the multi-point levy. We may consider it at a later stage. At one stage the merchant community were complaining that the multi point levy was causing them a good deal of trouble and that we should resort to single point. If we resort to single point, now they turn round and say that we should go back to the multi-point. It is quite easy to say, but it is difficult for the Government to change it as and when the merchants come forward with a specific argument.

It was argued that small Papers would be hit hard on account of this levy. This argument applies to all other commodities and all other dealers. If big proprietors import new print from Madras, the person who sends the goods will have to pay sales-tax and that will be an additional charge so far as the purchaser is concerned.

Sri P R RAMAIYA.—I will read the relevant Article of the Constitution—286 (i) (b) :—

> " In the course of the import of the goods into, or export of the goods out of, the territory of India."

" in the course of the import of the goods into..."; how can you tax?

Sri Kadidal MANJAPPA.—But when it is delivered here, that transaction can be taxed and the person who has sold the goods will be liable to pay the tax according to the Supreme Court decision. My friend Sri B. Narayanaswamy argued that it is a Central subject and the State Ligsla ure has no jurisdiction to levy the tax. With due respect, I must tell him that newsprint is not a Central subject and we have got legislative competence to levy tax.

Sri B. NARAYANASWAMY.—Every newspaper has to go along wi h newsprint and every newspaper h s been exempted or it becomes the Central subject. How can a State Legislature enter into newsprint which goes along with newspapers? They are to be considered together.

Sri Kadidal MANJAPPA.—I am submitting that even in Madras the Government is levying sales-tax on newsprint and this commodity does not come under the Union List. We have got perfect legislative competence concerning this commodity. If this argument can be stretched a bit further, it is quite possible to argue that ink and other articles required for printing should be exempted. Therefore, I submit in conclusion that the proposals placed before the House are reasonable and are acceptable.

Mr. SPEAKER.—The question is :

> " That the Mysore Sales Tax (Third Amendment) Bill, 1955 be taken into consideration."

The motion was adopted.

Mr. SPEAKER.—Now clauses of the Bill. Sri P. R. Ramaiya has sent in an amendment in respect of Clause 6. Does he intend to move it?

Sri P. R. RAMAIYA.—In view of the remarks made by the Revenue Minister, I don't think my moving an amendment serves any purpose. I don't move it.

Mr. SPEAKER.—Clauses 2 to 6. The question is :—

> "That Clauses 2 to 6, both inclusive, stand part of the Bill."

The motion was adopted.

Clauses 2 to 6, both inclusive, were added to the Bill.

Mr. SPEAKER.—Clause 1. The question is :—

> " That Clause 1 stand part of the Bill."

The motion was adopted.

Clause 1 was added to the Bill.

Mr. SPEAKER.—Title and Preamble. The question is :

> " That the Title and the Preamble stand part of the Bill."

The motion was adopted.

The Title and the Preamble were added to the Bill.

Motion to pass.

Sri Kadidal MANJAPPA.—I beg to move :

> " That the Mysore Sales Tax (Third Amendment) Bill, 1955 be passed."

Mr. SPEAKER.—Motion moved:

"That the Mysore Sales Tax (Third Amendment) Bill, 1955 be passed."

Sri P. R. RAMAIYA.—Before it is put to vote, I wish to appeal to the Revenue Minister. Now as it stands, it may go, but we should take the earliest occasion to consider this question again and decide in favour of newspapers.

Sri Kadidal MANJAPPA.—I am not in a position to make a definite statement at this stage. It is a question of fiscal policy. I will have to consult the Chief Minister.

Mr. SPEAKER.—The question is:

"That the Mysore Sales Tax (Third Amendment) Bill, 1955 be passed."

The Motion was adopted.

Sri J. MOHAMED IMAM.—It is necessary, I think, that this should be given effect to immediately. Is it necessary to send it to the President for obtaining his assent?

Sri Kadidal MANJAPPA.—As I understand, there will not be any need for sending it for the assent of the President because we are not changing the rate of levy. Anyhow, we will try to give effect to it as early as possible.

Sri P. R. RAMAIYA.—Recently, the Lok Sabha has passed a Bill where they have included several commodities under essential commodities item; they have brought in many commodities and I wish to say that newsprint is also one such thing brought under essential commodities' section. Therefore, I don't think the Government of Mysore can straightaway have the pleasure of levying this tax.

Mr. SPEAKER.—What the Minister says is this, that there is no new tax contemplated in the Bill to obtain the consent of the President; it is only a reduction. In the case of groundnut it is only a question of changing the incidence of taxation.

Sri P. R. RAMAIYA.—It is not reduction for the first time. A new tax is imposed upon newsprint. Therefore, I say this is a matter which is under the compentence of the President, not merely of this Government.

DISCUSSION ON THE FACT FINDING COMMITTEE REPORT (*Contd.*)

Mr. SPEAKER.—Now the next item of business, discussion on the Fact Finding Committee Report. Sri M. Chikkalingaiah may continue his speech.

*ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ-ಅನುಸೂಚಿತ ಜಾತಿಗಳು).—ಸ್ವಾಮಿ, ನಾನು ಹಿಂದಿನ ದಿನ ಮಾತನಾಡುತ್ತಿರುವಾಗ ಈ ರಾಜ್ಯಗಳ ಪುನರ್ವಿಂಗಡಣೆಯ ವಿಚಾರದಲ್ಲಿ ನಾವು ಒಂದು ಉದಾರ ಮನಸ್ಸಿನಿಂದಲೂ ಮತ್ತು ಈ ಪ್ರಶ್ನೆಯನ್ನು ಒಂದು ದೇಶದ ಹಿತದೃಷ್ಟಿಯಿಂದ ವಿಮರ್ಶೆಮಾಡುತ್ತಿರುವಂಥ ಕಾಲದಲ್ಲಿ ಈ ಮಹಾ ಪ್ರಶ್ನೆಯನ್ನು ಅಷ್ಟು ಸುಲಭವಾಗಿ ಆಗಲಿ ಅಥವಾ ಲಘುವಾಗಿಯಾಗಲಿ ವಿಚಾರಮಾಡಬಾರದು ಎಂದು ಹೇಳುವಷ್ಟು ಹೊತ್ತಿಗೆ ಆ ದಿವಸ ಕಾಲ ಮುಗಿಯಿತು. ಈಗಾಗಲೇ ಮಾತನಾಡಿರತಕ್ಕಂಥ ಸದಸ್ಯರ ಪೈಕಿ ಕೆಲವರು ನಮ್ಮ ಮೈಸೂರು ಈಗಿರುವಂಥ ಮೈಸೂರು ಮುಂದಕ್ಕೂ ಉಳಿಯಬೇಕೆಂದು ಹೇಳಿದ್ದಾರೆ. ಇನ್ನುಳಿದವರು ಈಗಿರತಕ್ಕಂಥ ಮೈಸೂರು ಇನ್ನೂ ವಿಶಾಲವಾಗಬೇಕು ಎಂದು ಹೇಳಿದ್ದಾರೆ. ನಮ್ಮ ಮಂಡ್ಯಾಜಿಲ್ಲೆಯಿಂದ ಬಂದಿರತಕ್ಕಂಥ ಮುಖಂಡರಾದಂಥ ಶ್ರೀಮಾನ್ ಎಚ್. ಕೆ. ವೀರಣ್ಣಗೌಡರ ವಿಷಯದಲ್ಲಿ ನನಗೆ ತುಂಬ ಗೌರವವಿದೆ. ಅವರು ಸ್ವಾತಂತ್ರ್ಯಕ್ಕಾಗಿ ತುಂಬ ಶ್ರಮಿಸಿದವರ ಪೈಕಿ ಒಬ್ಬರಾಗಿದ್ದಾರೆ. ಆದರೆ ಇಂಥವರ ಬಾಯಲ್ಲಿ ಆ ರೀತಿ ಡೋಲಾಯಮಾನವಾದಂಥ ಒಂದು ಹೇಳಿಕೆ ಹೊರಬೀಳುತ್ತದೆಂದು ನಾನು ಖಂಡಿತ ತಿಳಿದಿರಲಿಲ್ಲ. ಅವರು ಲೋಕಾಭಿರಾಮವಾಗಿ ಕೆಲವು ಭಾಷೆಗಳ ವಿಚಾರವನ್ನು ಪ್ರಸ್ತಾಪಿಸುತ್ತಾ ಉತ್ತರ ದೇಶದ ಕೆಲವು ಕನ್ನಡ ಭಾಷೆಯ ಪದಗಳನ್ನು ಹೇಳಿ ಅನಂತರ ಇಲ್ಲಿ ನಮ್ಮ ದೇಶದ ಭಾಷೆ ಹೇಗಿದೆ ಎನ್ನುವುದನ್ನು ಪ್ರಸ್ತಾಪಮಾಡಿ, ಹಾಗೆ ಒಂದಕ್ಕೊಂದಕ್ಕೆ ಸ್ವಲ್ಪ ವ್ಯತ್ಯಾಸವಿದ್ದೇ ಇರುತ್ತದೆಂದು ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ನಾನು ಹೇಳುತ್ತೇನೆ, ಈಗ ನಮ್ಮ ಮೈಸೂರಿನಲ್ಲಿ ಆಡತಕ್ಕಂಥ ಕನ್ನಡಕ್ಕೂ ಹೊರಗಡೆಯವರಾಡತಕ್ಕಂಥ ಕನ್ನಡಕ್ಕೂ ವ್ಯತ್ಯಾಸವಿರತಕ್ಕದ್ದು ಹಾಗಿರಲಿ, ನಮ್ಮ ಮೈಸೂರು ಸಂಸ್ಥಾನದಲ್ಲೇ ಮೈಸೂರು ಮಂಡ್ಯಾ ಜಿಲ್ಲೆಗಳವರು ಆಡತಕ್ಕಂಥ ಕನ್ನಡ ಭಾಷೆಗೂ ಮತ್ತು ದಾವಣಗೆರೆಯ ಪ್ರಾಂತ್ಯದಲ್ಲಿರತಕ್ಕಂಥ ಜನರು ಆಡತಕ್ಕಂಥ ಕನ್ನಡ ಭಾಷೆಗೂ ಬಹಳ ವ್ಯತ್ಯಾಸವಿದೆ. ಹೀಗೆ ಒಂದೊಂದು ಕಡೆ ಒಂದೊಂದು ರೀತಿ ಇರುತ್ತದೆ. ಪಟ್ಟಣದಲ್ಲಿರತಕ್ಕವರಾಡುವ ಭಾಷೆಗೂ ಮತ್ತು ಹಳ್ಳಿಯಲ್ಲಿರತಕ್ಕವರು ಆಡುವ ಭಾಷೆಗೂ ಸ್ವಲ್ಪ ವ್ಯತ್ಯಾಸವಿದ್ದೇ ಇದೆ. ಆದರೆ ಹೀಗೆ ಇರತಕ್ಕಂಥ ಈ ಸಣ್ಣ ವಿಚಾರವನ್ನೇ ಒಂದು ಆಧಾರವಾಗಿಟ್ಟುಕೊಂಡು ಮಾತನಾಡುವುದು ಎಷ್ಟರಮಟ್ಟಿಗೆ ಈ ಪ್ರಶ್ನೆಗೆ ಅನ್ವಯಿಸುತ್ತದೆ ಅಥವಾ ಇಲ್ಲ ಎನ್ನುವಂಥ ವಿಚಾರಕ್ಕೆ ನಾನೀಗ ಪ್ರವೇಶಮಾಡದೆ ಇದನ್ನು ಇಲ್ಲಿಗೇ ಬಿಟ್ಟುಬಿಡುತ್ತೇನೆ.

Sri H. K. VEERANNA GOWDH (Maddur).—It only shows your standard of understanding my speech.

ಶ್ರೀ ಎಂ. ಚಿಕ್ಕಲಿಂಗಯ್ಯ.—ನಾನು ಆ ವಿಚಾರವನ್ನು ಮೊದಲೇ ಹೇಳಿದ್ದೇನೆ. ಈ ವಿಷಯದಲ್ಲಿ ಅಷ್ಟಾಗಿ ಕಾಮೆಂಟ್‌ಮಾಡುವುದು ಸೂಕ್ತವಲ್ಲ ಎಂದೇ

(ಶ್ರೀ ಎಂ. ಚಿಕ್ಕಲಿಂಗಯ್ಯ.)

ಹೇಳಿ ಅದನ್ನಾಗಲೇ ಕೈ ಬಿಟ್ಟಿದ್ದೇನೆ. ಆದರೆ ಅವರು ಮುಂದುವರಿದು ಮಾತನಾಡುತ್ತಾ ಎರಡು ಕರ್ಣಾಟಕಗಳಾಗಲಿ ಎಂದು ಹೇಳಿದ್ದಾರೆ. ಅಲ್ಲದೆ ಹೊರಗಡೆ ಇರತಕ್ಕಂಥ ಕನ್ನಡ ಜನರು ಇನ್ನೂ ಮುಂದುವರಿಯಬೇಕಾಗಿದೆ ಎಂದು ಬೇರೆ ಹೇಳಿದ್ದಾರೆ. ಆದರೆ ಕಾಲಸ್ಥಿತಿ ಹೇಗೆಯೇ ಇರುತ್ತದೆಂದು ಹೇಳುವುದಕ್ಕಾಗುವುದಿಲ್ಲ. 1947ನೆಯ ಆಗಸ್ಟ್ 15ರಲ್ಲಿದ್ದಂಥ ಕಾಲ ಈ ದಿವಸ ಇಲ್ಲ. ಈಗ ನಾವುಗಳೆಲ್ಲರೂ ಸ್ವತಂತ್ರರಾಗಿದ್ದೇವೆ. ಸ್ವರಾಜ್ಯ ಸ್ಥಾಪನೆಯಾಗಿದೆ. ಈ ದಿವಸ ದೇಶದಲ್ಲಿರತಕ್ಕಂಥ ಪ್ರತಿಯೊಬ್ಬರಿಗೂ ಅವರವರ ಹಕ್ಕುಬಾಧ್ಯತೆಗಳನ್ನು ಕಾಪಾಡುವುದಾಗಿ ರಾಜ್ಯಾಂಗದಲ್ಲಿ ಭರವಸೆ ಕೊಡಲಾಗಿದೆ ಎನ್ನುವುದನ್ನು ಯಾರೂ ಮರೆಯುವುದಿಲ್ಲವೆಂದು ತಿಳಿದುಕೊಂಡಿದ್ದೇನೆ. ಆದರೆ ನಮಗೆ ಹೀಗೆ ಸ್ವಾತಂತ್ರ್ಯ ಬಂದ ನಂತರ ಬಳ್ಳಾರಿ ನಮ್ಮ ಮೈಸೂರಿಗೆ ಇಷ್ಟು ಶ್ರಮಪಡದ ಹಾಗೆ ಬಂದು ಸೇರುತ್ತದೆಂದು ನಾನಂತೂ ಭಾವಿಸಿರಲಿಲ್ಲ. ಆ ಕೇಂದ್ರ ಸರ್ಕಾರದವರು ಈ ಸಂಬಂಧವಾಗಿ ನಮ್ಮನ್ನು ಒಂದು ಮಾತೂ ಕೇಳದೆ ಅದನ್ನು ಮೈಸೂರಿಗೆ ಸೇರಿಸಿಕೊಟ್ಟಿದ್ದಾರೆ. ನಮ್ಮ ಭರತಖಂಡದಲ್ಲಿ ಇಂಥ ಒಂದು ಯೂನಿಟ್ ಇಲ್ಲಿಗೆ 300—400 ವರ್ಷಗಳಿಂದಲೂ ಆಗಿರಲಿಲ್ಲ. ಅಂಥ ಒಂದು ಪರಿಸ್ಥಿತಿ ಇಂದು ಲಭ್ಯವಾಗಿದೆ. ದೇಶದಲ್ಲಿ ಇಂಥ ವಿಚಾರಗಳಲ್ಲಿ ಒಂದು ತಿಕ್ಕಾಟ ಇಟ್ಟುಕೊಂಡಿದ್ದರೆ ರಾಜ್ಯಭಾರವಾಡುವುದಕ್ಕೆ ಬಹಳ ಕಷ್ಟವಾಗುತ್ತದೆಂಬುದನ್ನು ತಿಳಿದುಕೊಂಡು ಮುಂದಿನ ಆಡಳಿತವು ಸುಗಮವಾಗಿ ನಡೆದು ರಾಷ್ಟ್ರಾಭಿವೃದ್ಧಿ ಕೆಲಸಗಳು ಸರ್ವತೋಮುಖವಾಗಿ ನಡೆಯಲಿ ಎಂದೇ ಈಗ ಆಂಧ್ರರ ಮನವಿಯನ್ನು ಲಾಲಿಸಿ ಅವರ ಇಷ್ಟದ ಪ್ರಕಾರವೇ ಆ ಆಂಧ್ರ ರಾಜ್ಯವನ್ನು ನಿರ್ಮಿಸಿದ್ದಾರೆ. ಆ ಒಂದು ಭಾಷಾ ಅಭಿಮಾನದ ಮೇಲೆಯೇ ಈಗ ಯಾವಯಾವ ಪ್ರದೇಶಗಳು ಆಂಧ್ರಕ್ಕೆ ಸೇರಬೇಕೋ ಅವುಗಳನ್ನು ಆಂಧ್ರಕ್ಕೆ ಸೇರಿಸಿ, ಉಳಿದ ಕನ್ನಡ ಭಾಗಗಳನ್ನು ನಮ್ಮ ಮೈಸೂರಿಗೆ ಸೇರಿಸಿರುತ್ತಾರೆ. ಈ ದಿವಸವೂ ಸಹ ಆಂಧ್ರರು ಇನ್ನೂ ಕೆಲ ಕೆಲವು ಭಾಗಗಳು ತಮಗೆ ಬರಬೇಕಾಗಿದೆಯೆಂದೂ, ಆ ಭಾಗಗಳನ್ನೆಲ್ಲಾ ಸೇರಿಸಿ ಆ ಮೂಲಕ ಒಂದು ವಿಶಾಲಾಂಧ್ರ ಪ್ರಾಂತ್ಯ ನಿರ್ಮಾಣಮಾಡಬೇಕೆಂದೂ ಅನೇಕ ರೀತಿಯಲ್ಲಿ ಒತ್ತಾಯಪಡಿಸುತ್ತಿರುವಂಥ ವಿಚಾರ ಅನೇಕ ಮಾನ್ಯ ಸದಸ್ಯರುಗಳಿಗೆ ಗೊತ್ತಿದೆ. ಈ ವಿಷಯ ಇಡೀ ದೇಶಕ್ಕೂ ಗೊತ್ತಿದೆ. ಆಂಧ್ರಕ್ಕಿಂತಲೂ ಹಿಂದೆಯೇ ಈ ಕರ್ಣಾಟಕ ಪ್ರಾಂತ್ಯ ನಿರ್ಮಾಣವಾಗಬೇಕಾಗಿತ್ತು. ಜನರು ಬಹಳ ಹಿಂದಿನಿಂದಲೂ ಇದಕ್ಕೆ ಒತ್ತಾಯಮಾಡುತ್ತಲೇ ಬಂದಿದ್ದಾರೆ. ಅದಕ್ಕಾಗಿಯೇ ನಾವೀಗ ಈ ಪ್ರಶ್ನೆಯನ್ನು ಪರಿಶೀಲನೆ ಮಾಡಬೇಕಾಗಿದೆ. ಈ ದಿವಸ ಆಂಧ್ರರು ತಮ್ಮ ರಾಜ್ಯಸ್ಥಾಪನೆಗಾಗಿ ಹರಪ್ರಯತ್ನಗಳನ್ನೆಲ್ಲಾ ಮಾಡುತ್ತಿರುವಾಗ ಅದೇ ರೀತಿ ಈ ನಮ್ಮ ಮೈಸೂರಿಗೆ ಸಂಬಂಧಪಟ್ಟಂಥ ರಾಜ್ಯಗಳಾವುವೆಯೋ ಅವುಗಳೆಲ್ಲಾ ತಾವೇ ತಾವಾಗಿ ಬಂದು ಸೇರಿ ಒಂದು ರಾಜ್ಯವಾಗಬೇಕೆಂದು ಕೇಳುತ್ತಿರುವಂಥ ಕಾಲದಲ್ಲಿ, ನಾವು ಈಗಲೇ ಇದಾಗುವುದು ಬೇಡ, ಇನ್ನೂ ಸ್ವಲ್ಪಕಾಲ ಈ ಪ್ರಶ್ನೆಯನ್ನು ಹಿಂದಕ್ಕಿಡೋಣ, ಎನ್ನತಕ್ಕಂಥ ಮಾತುಗಳನ್ನಾಡುವುದರಲ್ಲಿ ಅರ್ಥವಿಲ್ಲ. ಯಾವ ರೂಪವಾಗಿಯೇ ಆಗಲಿ ಈಗ ಈ ಪ್ರಶ್ನೆಗೆ ಸಕಾಲವಲ್ಲ ಎಂದು ಹೇಳತಕ್ಕಂಥ ಮಾತುಗಳೆಲ್ಲಾ ಹುರುಳಿಲ್ಲದ ಮಾತುಗಳು. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕೆಂದೆನಿಸುತ್ತಿದೆ. ಅದನ್ನು ವೈಯಕ್ತಿಕವಾಗಿಯೇನೂ ಹೇಳುತ್ತಿಲ್ಲ. ಈ ಕರ್ಣಾಟಕ ಪ್ರಾಂತ್ಯ ನಿರ್ಮಾಣವಾದಲ್ಲಿ ನಾವೀಗ 1951ನೆಯ ಜನಗಣತಿಯ ಪ್ರಕಾರ, ಕರ್ಣಾಟಕ ಪ್ರಾಂತ್ಯದಲ್ಲಿ ಸುಮಾರು 40 ಲಕ್ಷಕ್ಕೂ ಮೇಲ್ಪಟ್ಟ ನಿಮ್ನ ತರಗತಿಯವರಿರುತ್ತೇವೆ. ಅವರಿಗೀಗ ಈ ಚುನಾವಣೆಗಳಲ್ಲಿ ಬೇರೆ ರಿಜರ್ವೇಷನ್ ಇದೆ.

2-30 P.M.

ಒಂದು ವೇಳೆ ಮುಂದಿನ general election ಹೊತ್ತಿಗೆ ಕರ್ಣಾಟಕಕ್ಕೆ ಪ್ರತ್ಯೇಕವಾಗಿ el ction ನಡೆದಪಕ್ಷದಲ್ಲಿ ಇದರಿಂದ ಸ್ವಲ್ಪ ಹೆಚ್ಚು ಕಡಿಮೆ ಆಗಬಹುದೆಂಬ ವದಂತಿ ಇದೆ. ನಿಮ್ನ ವರ್ಗದವರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಅಧಿಕಾರವನ್ನು ವಹಿಸಿಕೊಳ್ಳಬಹುದು ಎನ್ನುವ ಶಂಕೆ ಇದ್ದ ಪಕ್ಷದಲ್ಲಿ, ಒಂದುವೇಳೆ ಆ ರೀತಿ ಕರ್ಣಾಟಕ ರಾಜ್ಯ ನಮ್ಮ ಕೈಗೆ ಬರುವಪಕ್ಷದಲ್ಲಿ, ಇಡೀ ಭರತಖಂಡಕ್ಕೆ ಕಲ್ಯಾಣದ ದಿವಸವೆಂದು ಭಾವಿಸಿಕೊಳ್ಳಬಹುದು. ನಾವು ಇರತಕ್ಕಂಥ ಆರ್ಥಿಕಸ್ಥಿತಿ ಮತ್ತು ಆರ್ಥಿಕ ಮುಗ್ಗಟ್ಟು ಇದರಿಂದ ಮೇಲ್ಮಟ್ಟಕ್ಕೆ ಸದ್ಯದಲ್ಲಿ ಬರುತ್ತೇವೋ ಇಲ್ಲವೋ ಅಥವಾ ಇನ್ನೂ ಒಂದು ಶತಮಾನವಾಗುತ್ತದೋ ಎಂಬುದು ಯೋಚನೆ ಮಾಡಬೇಕಾದ ವಿಷಯ. ಆದ್ದರಿಂದ ನಾನು ಈಗ ಅಂತಹ ಆಶೆಯಿಂದ ಅಥವಾ ಕೋಮುವಾರು ಭಾವನೆಯಿಂದ ಕರ್ಣಾಟಕರಾಜ್ಯವಾಗಬೇಕು ಎಂದು ಹೇಳುತ್ತಾ ಇಲ್ಲ. ತಾನಾಗಿ ಬರತಕ್ಕ ರಾಜ್ಯವನ್ನು ಏತಕ್ಕೆ ನಿಧಾನಿಸಬೇಕು ? ತಡಮಾಡಬೇಕು ? ಹೀಗೆ ಮಾಡುವುದರಿಂದ ನಮಗೆ ಸಹಾಯವಾಗುತ್ತದೆಯೇ ಎನ್ನುವ ವಿಚಾರವನ್ನು ಸ್ವಲ್ಪ ಯೋಚನೆ ಮಾಡಬೇಕು. ಆದುದರಿಂದ ದೇಶದ ಹಿತದೃಷ್ಟಿಯಿಂದ ಮೈಸೂರು ವಿಸ್ತಾರ ಆಗಬೇಕೆಂಬ ಅಭಿಪ್ರಾಯವನ್ನು ಸರ್ವಾನುಮತದಿಂದ ಕೊಡಬೇಕು ಎಂದು ನಾನು ಒತ್ತಾಯಪೂರ್ವಕವಾಗಿ ಈ ಸಮಯದಲ್ಲಿ ಈ ಸಭೆಯನ್ನು ಕೇಳಿಕೊಳ್ಳುತ್ತೇನೆ. ಕೆಲವರು ಮೈಸೂರಿಗೆ ಸೇರಲು ಇಷ್ಟಪಡುವುದಿಲ್ಲ ಎಂದು ಹೇಳಿದರು. ಈ ಸಂದರ್ಭದಲ್ಲಿ ಕೊಡಗಿನವರು ಮೈಸೂರು ಸಂಸ್ಥಾನಕ್ಕೆ ಸೇರುವುದಿಲ್ಲ, ಎಂಬ ಮಾತನ್ನು ಹೇಳಿದರು. ಕೊಡಗಿನವರು ಈಗ ಉತ್ತಮ ಸ್ಥಿತಿಯಲ್ಲಿರಬಹುದು ಅಥವಾ ಅವರು ಎಲ್ಲಾ ಭಾಗದಲ್ಲೂ ಅಭಿವೃದ್ಧಿಯನ್ನು ಹೊಂದಿರಬಹುದು, ಆದರೆ ನಾನು ಒಂದು ವಿಷಯವನ್ನು ಕೇಳುತ್ತೇನೆ. ಕೊಡಗಿನವರು ಅಭಿವೃದ್ಧಿ ಸ್ಥಿತಿಗೆ ಬಂದು ಅವರ ಕಾಲಮೇಲೆ ಅವರು ನಿಂತುಕೊಂಡಿದ್ದಾರೆಯೇ ! ಕೊಡಗು ದೇಶದ ವಿಚಾರವನ್ನು ನೋಡುವುದಾದರೆ ಅವರು ಭತ್ತ, ಕಾಫಿಯನ್ನು ಬೆಳೆಯಬಹುದು. ಆದರೆ ಬಾಕಿ ಪದಾರ್ಥಗಳನ್ನು ಮೈಸೂರು ಸಂಸ್ಥಾನದಿಂದಲೇ ಯಥೇಚ್ಛವಾಗಿ ತೆಗೆದುಕೊಂಡು ಹೋಗಬೇಕಾಗಿದೆ. Food control ಬಂದಾಗ ಈ ವಿಚಾರ ಕೂಲಂಕಷವಾಗಿ ಚರ್ಚೆಯಾಗಿ ಯಾವ ರೀತಿ ಕೊಡಗಿನವರು ಇತರ ದೇಶಗಳ ಮೇಲೆ ಅವಲಂಬಿಸಿದ್ದಾರೆ ಬಂದು recordನಲ್ಲಿದೆ. ಯಾವ ದೇಶವೇ ಆಗಲಿ ಸ್ವಾತಂತ್ರ್ಯವಾಗಿ ತನ್ನಷ್ಟಕ್ಕೆ ತಾನೆ ಬದುಕುತ್ತದೆ ಎನ್ನುವ ವಿಷಯವನ್ನು ನಾವು ಒಪ್ಪಿಕೊಳ್ಳಬಾರದು. ಕೊಳ್ಳೇಗಾಲ ಮತ್ತು ಇತರ ಸ್ಥಳಗಳು ತಾವಾಗಿಯೇ ನಮ್ಮ ಜೊತೆಗೆ ಬರತಕ್ಕಂಥ ಪ್ರಯತ್ನಪಡುತ್ತಿರುವಾಗ ಅವನ್ನು ಏತಕ್ಕೆ ಬಿಡಬೇಕು ? ಈಕಡೆ ಉತ್ತರಕರ್ಣಾಟಕದವರು ಬಹಳ ಉತ್ಸಾಹದಿಂದ ನಮ್ಮೊಡನೆ ಸಹಕರಿಸಿ, ಕಷ್ಟ ಬಂದರೆ ಭಾಗಿಗಳಾಗೋಣ, ಅನುಕೂಲ ಸಂಪತ್ತು ಬಂದರೆ ಒಟ್ಟಿಗೆ ಅನುಭವಿಸೋಣ ಎಂಬ ಮನೋಭಾವಗಳಿಂದ voluntary ಆಗಿ ಮುಂದೆ ಬಂದು ಅಭಿಪ್ರಾಯವನ್ನು ಸೂಚಿಸುತ್ತಿರುವಾಗ ಏತಕ್ಕೋಸ್ಕರ ಆ ಅಭಿಪ್ರಾಯವನ್ನು

ಉದಾಸೀನಭಾವದಿಂದ ಕಾಣಬೇಕು? ಹುಚ್ಚುಹೊಳೆ ಹರಿಯುತ್ತಿರುವಾಗ ಹೂವಿನ ದಂಡೆ ಎಲ್ಲಿ ನಿಲ್ಲುತ್ತವೆ? ಈಗ ಒಳ್ಳೆ ಕಾಲ ಬಂದಿದೆ. ಆ ಕಾಲವನ್ನು ಉಪಯೋಗಿಸಿಕೊಂಡಪಕ್ಷದಲ್ಲಿ ಮಾನ್ಯ ಸಭೆಗೆ ಗೌರವ ಮತ್ತು ಘನತೆ ಉಂಟಾಗುವುದಲ್ಲದೆ, ಹಾಗೆಯೇ ನಮ್ಮ ಕಾಲದಲ್ಲಿ ರಾಜ್ಯವನ್ನು ಸಂಪಾದಿಸಿದ್ದೇವೆ ಎಂಬ ಸಂತೋಷ ಮತ್ತು ಹೆಮ್ಮೆ ಉಂಟಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನೊಂದು ವಿಷಯ: ನಮ್ಮ ಈಗ ಇಂಡಿಯಾ ದೇಶವನ್ನು ಮೂರು ಭಾಗಗಳನ್ನಾಗಿ ವಿಂಗಡಿಸಿದ್ದಾರೆ. ದಿವಂಗತರಾದ ವಲ್ಲಭಭಾಯ್ ಪಟೇಲರವರು 562 ಸಂಸ್ಥಾನಗಳನ್ನು ಕಿತ್ತುಹಾಕಿ ಕೆಲವು ಸಂಸ್ಥಾನಗಳನ್ನು ಇತರ ದೇಶಗಳೊಂದಿಗೆ ಮಿಳಿತಮಾಡಿ ಅವರು ಸ್ವತಂತ್ರವಾಗಿ ಮತ್ತು ಸು ವಾಗಿ ಬೆಳೆಯುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಾಗ ಕೆಲವರು ಅವನ್ನು ಪ್ರಶ್ನೆ ಮಾಡಿದರು. ನಮ್ಮ ಇಂಡಿಯಾ ದೇಶದಲ್ಲಿಂತಕಂಥ ರಾಜರುಗಳನ್ನು ಮಟ್ಟಹಾಕಿ ರಾಜಾಸನಗಳನ್ನು ತೊಡೆದುಹಾಕಿದ್ದಾರೆಂದು ಹೇಳಿದರು. ಆಗ ಅವರು ರಾಜರ ಮನೆತನಗಳನ್ನಾಗಲಿ ರಾಜರುಗಳನ್ನಾಗಲಿ ತೊಡೆದುಹಾಕಿಲ್ಲ. ರಾಜರ ಕಿರೀಟಗಳಲ್ಲಿರುವ ರತ್ನದ ಕೊಳೆಯನ್ನು ತೆಗೆದು ಆ ಕಿರೀಟವು ಪ್ರಕಾಶಮಾನವಾಗಿ ಬೆಳಗಲಿ ಎನ್ನುವ ಸ್ಥಿತಿಗೆ ತಂದಿದ್ದೇವೆ. ಏನಾದರೂ ಈ ವಿಚಾರವನ್ನು ಅವರು ವ್ಯಕ್ತಪಡಿಸಿರುವುದು ತಮಗೆ ಗೊತ್ತಿರಬಹುದು. ದೇಶದ ಹಿತದೃಷ್ಟಿಯಿಂದ ಆಡಳಿತಸೌಕರ್ಯಗಳಿಗೋಸ್ಕರ A B C ಎಂದು ಮೂರು ಭಾಗಗಳಾಗಿ ವಿಂಗಡಿಸಿ ಅಂತಹ 28 ಸ್ಟೇಟುಗಳನ್ನು ಮಾಡಿದ್ದಾರೆ. A B C ಎಂಬ ಭಾಗಗಳು ಆಡಳಿತದೃಷ್ಟಿಯಿಂದ ಇರಕೂಡದು, ಇಡೀ ಭರತಖಂಡದಲ್ಲೇ A B C ಎಂಬ ವ್ಯತ್ಯಾಸವಿಲ್ಲದೆ ಪ್ರತಿಯೊಂದು ಸ್ಟೇಟ್ ಸಮಭಾಗವಾಗಿ ಎಲ್ಲಾ ವಿಧದಲ್ಲೂ ಎಂದರೆ, ಪ್ರಜಾಸಂಖ್ಯೆ, ಆರ್ಥಿಕ ಸ್ಥಿತಿ, ಇವೆಲ್ಲವನ್ನೂ ವಿಭಾಗ ಮಾಡಿ ಒಂದೇ ಸಮವಾದಂಥ ನಿರ್ದಿಷ್ಟವಾದ ಬೌಂಡರಿಯನ್ನು ಏರ್ಪಡುಮಾಡಿ A B C ಸ್ಟೇಟುಗಳನ್ನು abolish ಮಾಡಬೇಕೆಂದು ಕೇಂದ್ರ ಸರ್ಕಾರದವರಿಗೆ ಫಜಲಾಲಿ ಸಮಿತಿಯವರು ಅವರ ವರದಿಯಲ್ಲಿ ಸೂಚಿಸುತ್ತಾರೆ ಎಂದು ನಾನೂ ನಂಬಿದ್ದೇನೆ. ನಮ್ಮ ಮುಂದಿರುವ ಸಮಿತಿಯ ವರದಿಯಲ್ಲಿ ಕೊನೆಯ ಒಂದು ಭಾಗದಲ್ಲಿ ಆಡಳಿತ ದೃಷ್ಟಿಯಿಂದ ಒಂದು ಸಲಹೆಯನ್ನು ಕೊಟ್ಟಿರುತ್ತಾರೆ. ಕರ್ಣಾಟಕ ಪ್ರಾಂತ್ಯ ಮಾಡಿದರೆ ಅದು ಬಹಳ unwieldy ಆಗುತ್ತದೆ, 600 ಮೈಲಿ ದೂರವಿರುತ್ತದೆ, ಆಡಳಿತ ದೃಷ್ಟಿಯಿಂದ ಇದ್ದರೂ ಸರಿಯಾಗಿಲ್ಲ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಚಿಂತೆ ಇಲ್ಲ, ಆಡಳಿತದಲ್ಲಿ District Headquarters ದೂರವಾಗಿದ್ದರೆ ಅನುಕೂಲ ಎಂದು ನನ್ನ ಅನುಭವದಲ್ಲಿ ಹೇಳುತ್ತೇನೆ. ಉದಾಹರಣೆಗೆ ಹೇಳುವ ಪಕ್ಷದಲ್ಲಿ ಈಗಿರತಕ್ಕಂಥ ನಮ್ಮ ಮೈಸೂರು ದೇಶದ ಅನೇಕ ಡಿಸ್ಟ್ರಿಕ್ಟುಗಳು, ತಾಲ್ಲೂಕುಗಳು Sub-Divisionಗಳು ಬಹಳ ಚಿಕ್ಕಚಿಕ್ಕವಾಗಿವೆ. ಈಗ ಒಬ್ಬ ಅಮಲ್ದಾರರು ಒಂದು ತಾಲ್ಲೂಕಿಗೆ ಬಂದಪಕ್ಷದಲ್ಲಿ ಎರಡು-ಮೂರು ದಿವಸಗಳ ಕಾಲ ಅವರು ಅಲ್ಲಿಯೇ ಇದ್ದರೆ ತಿರುಗಿ Sub-Division Officer ಆಗಿ ಅದೇ ತಾಲ್ಲೂಕಿಗೆ ಬರುತ್ತಾರೆ. Sub-Divisionನಲ್ಲಿ ಕೆಲವು ಕಾಲದವಾದ ಮೇಲೆ ಡೆಪ್ಯುಟಿ ಕಮೀಷನರ್ ಆಗಿ ಅದೇ ಡಿಸ್ಟ್ರಿಕ್ಟಿಗೆ ಬರುತ್ತಾರೆ. ಆದರೆ ನನ್ನ ಅಭಿಪ್ರಾಯದಲ್ಲಿ ಒಬ್ಬ ಆಫೀಸರು ಒಂದು ಸಾರಿ ಒಂದು ತಾಲ್ಲೂಕಿಗೆ ಅಥವಾ ಡಿಸ್ಟ್ರಿಕ್ಟಿಗೆ ಬಂದು ಕೆಲವು ಕಾಲ ಅಧಿಕಾರ ಮಾಡಿದ ಮೇಲೆ ತಿರುಗಿ ಅವರ ಅಧಿಕಾರ ಅವಧಿಯೊಳಗೆ ಅವರು ಡಿಸ್ಟ್ರಿಕ್ಟಿಗೆ ಪುನಃ ಬರಬಾರದು ಎಂಬುದಾಗಿದೆ. ಈಗಿರುವುದಕ್ಕಿಂತ ಡಿಸ್ಟ್ರಿಕ್ಟಿಗೆ ಸ್ವಲ್ಪ ವಿಶಾಲ Jurisdiction ಇದ್ದರೆ, ಡಿಸ್ಟ್ರಿಕ್ಟುಗಳ ಸಂಖ್ಯೆ ಜಾಸ್ತಿ ಇದ್ದರೆ ಈ ರೀತಿ ಮಾಡುವುದಕ್ಕೆ ಅವಕಾಶವಾಗುತ್ತದೆಯೇ ಹೊರತು ಇಲ್ಲದಿದ್ದರೆ ಆಗುವುದಿಲ್ಲ.

(Disturbance)

Mr. SPEAKER.—I have already brought to the notice of the Hon'ble Members that every Hon'ble Member must be heard patiently. They should give a patient hearing. There are too many interruptions.

ಶ್ರೀ ಎಂ. ಚಿಕ್ಕಲಿಂಗಯ್ಯ.—ಸ್ವಾಮಿ, ಶ್ರೀ ಸಿದ್ಧಲಿಂಗಯ್ಯನವರು ನಮ್ಮ ಮೈಸೂರು ದೇಶದ ಕನ್ನಡಿಗರ ವೈಶಿಷ್ಟತೆಯನ್ನೂ, ಹೊರದೇಶದಲ್ಲಿ ಕನ್ನಡಿಗರಿಗೆ ಇರುವ ಗೌರವ ಮತ್ತು ಕನ್ನಡಿಗರು ನಮ್ಮ ದೇಶದ ಭಿವೃದ್ಧಿಯನ್ನು ಯಾವರೀತಿ ನಿರೀಕ್ಷಣೆಮಾಡುತ್ತಿದ್ದಾರೆ ಮತ್ತು ಒಂದು Unification of Karnataka ಎಂದರೆ, ಈ ವಿಶಾಲ ಕನ್ನಡರಾಜ್ಯ ಸ್ಥಾಪನೆಯಾಗುತ್ತದೆ ಎಂದು ಪರದೇಶದಲ್ಲಿಯೂ ಕೂಡ ಬಹಳ ಆತುರವಾಗಿ ನೋಡುತ್ತಿದ್ದಾರೆ ಎಂಬ ವಿಷಯವನ್ನೂ ವ್ಯಕ್ತಪಡಿಸಿದರು. ಅಲ್ಲದೆ, ಇದು ಒಂದು ಸುಸಮಯ, ಈ ಸುಸಮಯ ಬಂದಿರುವುದನ್ನು ಉಪಯೋಗಿಸಿಕೊಂಡು ನಾವು ಸರ್ವಾನುಮತದಿಂದ ಯಾವ ಭಿನ್ನಾಭಿಪ್ರಾಯವೂ ಇಲ್ಲದೆ ರಾಜ್ಯ ವಿಸ್ತರಣೆ ಮಾಡಿಕೊಳ್ಳುವುದಕ್ಕೆ ಒಪ್ಪಿಕೊಳ್ಳಬೇಕು ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು. ಈಗ ಶ್ರಮಪಟ್ಟು ರಾಜ್ಯವನ್ನು ಸಂಪಾದಿಸತಕ್ಕದ್ದು ನಮಗೇ ಅಲ್ಲ ಮುಂದಿನ ನಮ್ಮ ಪೀಳಿಗೆಗೆ. ಹಾಗೆ ಮಾಡಿದರೆ ನಮ್ಮ ಮಕ್ಕಳ ಮತ್ತು ಮೊಮ್ಮಕ್ಕಳ ಜೀವನವನ್ನು ಕಲ್ಪಿಸುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಆ ರೀತಿ ದೇಶ ವಿಸ್ತರಣೆಯಾದಪಕ್ಷದಲ್ಲಿ ಹೆಚ್ಚಿನ ಜನಸಂಖ್ಯೆಗೆ ಅವಕಾಶವಾಗಿ ಬರಬರುತ್ತಾ ಗೌರವ ಜಾಸ್ತಿಯಾಗುವ ದೆಸೆಯಿಂದ ಆರ್ಥಿಕ ದೃಷ್ಟಿಯಿಂದಲೂ, ರಾಜಕೀಯ ದೃಷ್ಟಿಯಿಂದಲೂ ಮತ್ತು ಇತರ ದೃಷ್ಟಿಯಿಂದಲೂ ಹೆಚ್ಚಿನ ಅನುಕೂಲವುಂಟಾಗುತ್ತದೆ ಎಂದು ಹೇಳುತ್ತೇನೆ. ನಾನು ಹೆಚ್ಚಿಗೆ ಭಾಷಣಮಾಡಲು ಇಷ್ಟಪಡುವುದಿಲ್ಲ. ಅನೇಕ ಮಹನೀಯರು ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆಂದು ತಿಳಿದುಕೊಂಡಿದ್ದೇನೆ. ಒಟ್ಟಿನಲ್ಲಿ ಹೇಳುವುದಾದರೆ, ದೇಶದ ಹಿತದೃಷ್ಟಿಯಿಂದ ನಮಗೆ ಸುಲಲಿತವಾಗಿ ಹೆಚ್ಚಿಗೆ ಬರತಕ್ಕಂಥ ರಾಜ್ಯವನ್ನು ನಾವು ಬೇಡವೆಂದು ಹೇಳುವುದು ಖಂಡಿತವಾಗಿಯೂ ಸೂಕ್ತವಲ್ಲ. ನಾನು ಹಿಂದೆ ಹೇಳಿದಹಾಗೆ, ಹಿಂದಿನ ಕಾಲದಲ್ಲಿ ರಾಜರುಗಳು ರಾಜ್ಯವನ್ನು ಸಂಪಾದಿಸಲು ಎಷ್ಟು ಶ್ರಮಪಡುತ್ತಿದ್ದರು, ಎಷ್ಟು ರಕ್ತಪಾತವಾಗುತ್ತಿತ್ತು, ಒಂದೊಂದು ಹೆಜ್ಜೆಗೂ ಎಷ್ಟು ತೊಂದರೆಗಳನ್ನು ಅನುಭವಿಸಬೇಕಾಗಿತ್ತು ಎಂಬುದನ್ನು ಯೋಚನೆಮಾಡಬೇಕು.

ಶ್ರೀ ಡಿ. ದೇವರಾಜ್ ಅರಸ್ (ಹುಣಸೂರು).—ತಾವು ಯಾವ ಶತಮಾನದಲ್ಲಿ ಇದ್ದೀರಿ?

ಶ್ರೀ ಎಂ. ಚಿಕ್ಕಲಿಂಗಯ್ಯ.—ಜನರಿಗೆ ತಿಳಿವಳಿಕೆ ಬರಲಿ, ಜ್ಞಾನ ಬರಲಿ ಎಂದು ಸಂಸ್ಕೃತಿ ಪ್ರಸಾರ ಮಾಡುತ್ತಿದ್ದೀರಿ. ಹಾಗೆಯೇ ರಾಜ್ಯಸ್ಥಾಪನೆ ವಿಚಾರದಲ್ಲೂ ಪುರಾಣದ ವಿಚಾರವನ್ನು ತಮ್ಮ ಕಿವಿಯಲ್ಲಿ ಇಡಬೇಕೆಂಬುದೇ ನನ್ನ ಉದ್ದೇಶ. ಕುರುಕ್ಷೇತ್ರದಲ್ಲಿ ಪಾಂಡವರಿಗೂ ಮತ್ತು ಕೌರವರಿಗೂ ಯಾವ ರೀತಿ

(ಶ್ರೀ ಎಂ. ಚಿಕ್ಕಲಿಂಗಯ್ಯ.)

ರಾಜ್ಯಸಂಪಾದನೆಯ ವಿಷಯದಲ್ಲಿ ಜಿಜ್ಞಾಸೆ ನಡೆಯಿತು ಮತ್ತು ಶ್ರೀ ಕೃಷ್ಣಪರಮಾತ್ಮನು ಸಂಧಾನಕ್ಕೆ ಹೋದಾಗ ಕೌರವನು ತಾನು ಬದುಕಿರುವವರೆಗೆ ಐದು ಗ್ರಾಮವಲ್ಲ ಒಂದು ಗ್ರಾಮವಲ್ಲ ಒಂದು ಸೂಜಿ ಊರುವಷ್ಟು ಜಾಗವನ್ನೂ ಕೊಡುವುದಿಲ್ಲವೆಂದು ಹೇಗೆ ಛಲ ಮತ್ತು ಹಟ ತೋರಿಸುತ್ತಿದ್ದನು ಎಂಬುದು ತಮಗೆಲ್ಲರಿಗೂ ಗೊತ್ತಿರುವ ವಿಷಯ. ನಮ್ಮ ಮುಂದಿನ ಪೀಳಿಗೆಯವರಿಗಾಗಿ 50-100 ವರ್ಷಗಳವರೆಗೂ ನಮ್ಮ ಪೂರ್ವಿಕರು ಶ್ರಮಪಟ್ಟು, ರಕ್ತಪಾತವಿಲ್ಲದೆ ಇಷ್ಟೊಂದು ರಾಜ್ಯವನ್ನು ಸಂಪಾದಿಸಿಕೊಟ್ಟಿದ್ದಾರೆ. ತಾವಾಗಿಯೇ ನಿಮ್ಮ ಕಾರ್ಯನೀತಿ ಹೀಗಿರಬೇಕು ಎಂದು ನಮಗೆ ಜ್ಞಾಪಕಕೊಡುತ್ತಿದ್ದಾರೆ. ಆ ತತ್ವ ದೃಷ್ಟಿಯಿಂದ ಈ ರಾಜ್ಯ ವಿಶಾಲವಾಗಬೇಕು. ದೊಡ್ಡದು ಮಾಡಬೇಕು ಎಂದು ಹೇಳುತ್ತೇನೆ. ನಾನು ಇದನ್ನು ಹೇಳಿದ್ದು ಪುರಾಣ ಸಂಸ್ಕೃತಿಯನ್ನು ಹೇಳುವುದಕ್ಕೋಸ್ಕರವಲ್ಲ. ನಾನು ಮೊದಲೇ ತಿಳಿಸಿದಹಾಗೆ, ಒಂದು ಕೋಮಿನ ಭಾವನೆಯಿಂದಲಾಗಲಿ ಅಥವಾ ಒಂದು ಅಧಿಕಾರದ ಆಶೆಯಿಂದಲಾಗಲಿ ಇದನ್ನು ಹೇಳುತ್ತಾ ಇಲ್ಲ. ನಿರ್ದಾಕ್ಷಿಣ್ಯವಾಗಿ ಮತ್ತು ನಿಷ್ಪಕ್ಷಪಾತವಾಗಿ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದೇನೆ. ಇಷ್ಟು ಕಾಲಾವಕಾಶವನ್ನು ನನಗೆ ಈ ಸಂದರ್ಭದಲ್ಲಿ ಕಲ್ಪಿಸಿಕೊಟ್ಟಿದ್ದಕ್ಕಾಗಿ ಮಾನ್ಯ ಸಭೆಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಡಿ. ದೇವರಾಜ್ ಅರಸ್.—ಸ್ವಾಮಿ, ನಮ್ಮ ಮುಂದೆ ಇರತಕ್ಕಂಥ ರಾಜ್ಯಗಳ ಪುನರ್ವಿಂಗಡನೆಗೆ ನೇಮಕವಾಗಿದ್ದಂಥ ಪರಿಶೀಲನಾ ಸಮಿತಿಯ ವರದಿಯ ಮೇಲೆ ಈಗ ಅನೇಕ ದಿವಸಗಳಿಂದ ಮಾಡಿರತಕ್ಕಂಥ ಭಾಷಣಗಳನ್ನು ನಾನು ಬಹಳ ಕುತೂಹಲದಿಂದ ಕೇಳಿದ್ದೇನೆ. ಆ ಭಾಷಣಗಳನ್ನು ಮಾಡತಕ್ಕಂಥ ಕಾಲದಲ್ಲಿ ಅನೇಕ ಮಾನ್ಯ ಸದಸ್ಯರು ಅಂಕಿಅಂಶಗಳು ತಾವು ಹಿಂದೆ ಹೊಂದಿರತಕ್ಕಂಥ ಅಭಿಪ್ರಾಯಗಳಿಗೆ ಅನುಗುಣವಾಗಿದ್ದಾಗ ಅವು ಸರಿ ಎಂದೂ, ತಮ್ಮ ಪೂರ್ವಭಾವಿಯಾದ ಅಭಿಪ್ರಾಯಕ್ಕೆ ಅವು ಹೊಂದಿಲ್ಲದಿದ್ದರೆ ಆ ಅಂಕಿಅಂಶಗಳು ಚೆನ್ನಾಗಿಲ್ಲವೆಂದೂ ಅಥವಾ ಅನೇಕ ತಪ್ಪುಗಳಿಂದ ಕೂಡಿವೆಯೆಂದೂ ಅಥವಾ ಒಂದುವೇಳೆ ಸರಿಯಾಗಿದ್ದರೂ ಅವುಗಳನ್ನು ಗಮನಿಸಬೇಕಾಗಿಲ್ಲವೆಂದೂ ಇತ್ಯಾದಿ ಇತ್ಯಾದಿಯಾಗಿ ಟೀಕೆ ಮಾಡಿದ್ದಾರೆ. ಎಲ್ಲದಕ್ಕಿಂತ ಹೆಚ್ಚಿಗೆ ಆಶ್ಚರ್ಯವನ್ನುಂಟುಮಾಡತಕ್ಕಂಥ ಟೀಕೆ ಯಾರದು ಎಂದರೆ ನನ್ನ ಪರಮಮಿತ್ರರಾದ ಶ್ರೀ ಚೆನ್ನಬಸಪ್ಪನವರದು. ಈ ವಿಷಯದಲ್ಲಿ ಏಕೆ ಅಷ್ಟು ಆಶ್ಚರ್ಯವುಂಟಾಯಿತು ಎಂದರೆ, ಈ ಮಾನ್ಯ ಸಭೆಯಲ್ಲಿ ಬಹುಶಃ ಯಾವುದೊಂದು ವಿಚಾರದಮೇಲೆ ಮಾತನಾಡಬೇಕಾದರೂ ಕೂಡ ಅಂಕಿಅಂಶಗಳ ಆಧಾರದಮೇಲೆ ಮಾತನಾಡುವವರು ಯಾರಿಲ್ಲದಿದ್ದರೂ ಕೂಡ ಶ್ರೀ ಚೆನ್ನಬಸಪ್ಪನವರು ಮಾತ್ರ ಪ್ರತಿಯೊಂದು ವಿಷಯದಲ್ಲೂ ಅಂಕಿಅಂಶಗಳಿಲ್ಲದೆ ಮುಂದಕ್ಕೆ ಹೋಗುವುದಿಲ್ಲ. ಮೊನ್ನೆ ಟೆನೆನ್ಸಿ ಬಿಲ್ಲಿನ ಸಂಬಂಧದಲ್ಲಿ ಅವರು ಕೊಟ್ಟಿರತಕ್ಕ ಅಂಕಿಅಂಶಗಳನ್ನು ಸವಿಸ್ತಾರವಾಗಿ ತಿಳಿದುಕೊಳ್ಳಬೇಕಾದರೇ ಒಂದು ವಾರ ಬೇಕಾಗುತ್ತದೆ. ಹೀಗೆ ಅಷ್ಟೊಂದು ಎಲ್ಲಾ ಸಮಸ್ಯೆಗಳ ಮೇಲೂ ಅಂಕಿಅಂಶಗಳು ಇದ್ದೇ ಇರಬೇಕು, ಅದರ ಆಧಾರದಮೇಲೆಯೇ ಪ್ರತಿಯೊಂದು ಕಾನೂನೂ ರಚಿಸಬೇಕೆಂದು ಹೇಳುವ ಮಹನೀಯರು ಈ ಸಂಬಂಧದಲ್ಲಿ ಇರುವ ಅಂಕಿಅಂಶಗಳ ವಿಚಾರದಲ್ಲಿ ಮಾತ್ರ ಅವು ಸತ್ಯವಾಗಿದ್ದರೂ ಇರಬಹುದು. ಆದರೆ, ಅಷ್ಟು ಗಮನಕ್ಕೆ ತೆಗೆದುಕೊಳ್ಳಬೇಕಾಗಿಲ್ಲವೆಂದು ಹೇಳಿದರು. ಅವರಂತೆಯೇ ಇನ್ನೂ ಕೆಲವು ಮಹನೀಯರು ಅಂಕಿಅಂಶಗಳು ಬೇಕಿಲ್ಲ ಎಂದು ಹೇಳಿದರು. ಬಡ್ಜೆಟ್ಟು ಮಾಡಬೇಕಾದರೆ ಅಂಕಿಅಂಶಗಳು ಬೇಕು; ದೇಶದ ಯಾವ ಕೆಲಸಗಳನ್ನು ಮಾಡಬೇಕಾದರೂ ಅಂಕಿಅಂಶಗಳು ಬೇಕೇ ಬೇಕು. ಒಂದು ಸಣ್ಣ ಅಣೆಕಟ್ಟು ಕಟ್ಟಬೇಕಾದರೂ ಅಂಕಿಅಂಶಗಳು ಬೇಕು. ಹೀಗಿರುವಾಗ ಈ ಕೆಲಸದಲ್ಲಿ ಮಾತ್ರ ಅಂಕಿಅಂಶಗಳು ಬೇಕಿಲ್ಲವೆಂದು ಹೇಳುವ ವಾದ ನನಗರ್ಥವಾಗುವುದಿಲ್ಲ.

ಅಂದಮೇಲೆ, ಈ ಅಂಕಿಅಂಶಗಳನ್ನು ನಾವು ನಿಧಾನವಾಗಿ ಪರಿಶೀಲನೆ ಮಾಡಿದ್ದೇ ಆದರೆ, ಈ ವರದಿಯನ್ನು ಕೊಟ್ಟಿರತಕ್ಕಂಥ ಮಹನೀಯರು ಯಾರೂ ಕೂಡ ಕರ್ಣಾಟಕ ಏಕೀಕರಣವೇ ಆಗಲಿ, ಭಾಷಾವಾರು ಪ್ರಾಂತ್ಯವೇ ಆಗಲಿ ಅದರ ಸಂಬಂಧದಲ್ಲಿ ವಿರೋಧಿಗಳೂ ಅಲ್ಲ; ಪರವಾದವರೂ ಅಲ್ಲ. ಅಂಥ ಯಾವ ಮನೋಭಾವದಿಂದಲೂ ಅಂಕಿಅಂಶಗಳನ್ನಿಟ್ಟಿಲ್ಲ; ಮತ್ತು ಕೊನೆಯ ಪುಟದಲ್ಲಿ ಯಾವ ಯಾವ ಆಧಾರಗಳಮೇಲೆ ಅಂಕಿಅಂಶಗಳನ್ನು ಶೇಖರಿಸಿದ್ದಾರೆಂಬುದನ್ನು ಹೇಳಿದ್ದಾರೆ. ಸಂಬಂಧಪಟ್ಟ ಸರ್ಕಾರಗಳ ಬಳಿಯಿರುವ ಪುಸ್ತಕಗಳನ್ನೆಲ್ಲಾ ಹುಡುಕಿ ವಿಷಯಗಳನ್ನು ಸಂಗ್ರಹಿಸಿ ಅಂಕಿಅಂಶಗಳನ್ನು ಇದ್ದದ್ದನ್ನು ಇದ್ದಹಾಗೆ ನಮ್ಮ ಮುಂದಿಟ್ಟಿದ್ದಾರೆ. ಈ ಎಲ್ಲ ಕಾರಣಗಳಿಂದ ಈ ಅಂಕಿಅಂಶಗಳೆಲ್ಲಾ ಸರಿಯಿಲ್ಲವೆಂದು ವಾದಿಸುವುದು ಸಾಧುವಲ್ಲ.

ಇನ್ನು ಈ ಅಂಕಿಅಂಶಗಳ ಆಧಾರದಮೇಲೆ ನಾವು ಯಾವ ಪ್ರಶ್ನೆಯನ್ನು ಬಗೆಹರಿಸಬೇಕೋ, ಯಾವ ವಿಚಾರದಲ್ಲಿ ಅಭಿಪ್ರಾಯ ಕೊಡಬೇಕೋ ಅದನ್ನು ಸ್ವಲ್ಪ ವಿಮರ್ಶೆಮಾಡಿ ನೋಡೋಣ. ಸ್ವಾಮಿ, ಇಂಡಿಯಾ ದೇಶದಲ್ಲಿ ಅನೇಕ ವರ್ಷಗಳಿಂದ, ಅಂದರೆ ಸ್ವರಾಜ್ಯ ಬರುವುದಕ್ಕೆ ಪೂರ್ವಭಾವಿಯಾಗಿಯೂ ಕೂಡ ಇಂಡಿಯಾ ದೇಶದ ಕಾಂಗ್ರೆಸ್ಸು ಪ್ರಾಂತಗಳನ್ನು ಭಾಷೆಯ ಮೇಲೆ ಪುನರ್ವಿಂಗಡಣೆ ಮಾಡಬೇಕೆಂದು ಹೇಳಿದ್ದು ವಾಸ್ತವಾಂಶ. ಅದನ್ನು ಈಗಾಗಲೇ ಮಾತನಾಡಿದ ಅನೇಕ ಮಾನ್ಯ ಸದಸ್ಯರು ಉದಹರಿಸಿ ಅಖಿಲಭಾರತ ಕಾಂಗ್ರೆಸ್ಸು ನ್ಯಾಷನಲ್ ಕಾಂಗ್ರೆಸ್ಸಿನ ಧ್ಯೇಯಗಳಿಗನುಸಾರವಾಗಿ ನಡೆಯುತ್ತಿಲ್ಲ, ತಮ್ಮ ಮಾತುಗಳನ್ನೇ ಬದಲಾಯಿಸಿಕೊಂಡರು ಇತ್ಯಾದಿಯಾಗಿ ಅನೇಕ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಅದು ಸರಿಯಿಲ್ಲ. ನಾನೂ ಕೂಡ ಅದಕ್ಕೆ ಸಂಬಂಧಪಟ್ಟ ಸಾಹಿತ್ಯಗಳನ್ನು ಓದಿದ್ದರಲ್ಲಿ ಅಖಿಲ ಭಾರತ ಕಾಂಗ್ರೆಸ್ಸು, ನ್ಯಾಷನಲ್ ಕಾಂಗ್ರೆಸ್ಸು ತನ್ನ ಧ್ಯೇಯಗಳನ್ನು ಬದಲಾಯಿಸಿಕೊಂಡಿಲ್ಲ. ಭಾಷಾವಾರು ಪ್ರಾಂತ್ಯಗಳಾಗಬೇಕೆಂಬ ವಿಚಾರವಲ್ಲಿ ಫಜಲಾಲಿ ಕಮಿಷನ್ನು ನೇಮಕವಾಗಿರುವುದರಲ್ಲಿ ಇಂಥಿಂಥ ಆಧಾರಗಳಮೇಲೆ ಗಡಿಗಳನ್ನು ನಿರ್ಧಾರಮಾಡಬೇಕೆಂದು ನಮೂದು ಮಾಡಿದ್ದಾರೆ. ಅವೇನೆಂದರೆ, ಭಾಷೆಯ ಆಧಾರ, ಆಡಳಿತ ಸೌಕರ್ಯ, ಭೌಗೋಳಿಕವಾಗಿ ಯಾವಯಾವ ಪ್ರದೇಶ ಸೇರಬೇಕಾದ್ದು ಅವಶ್ಯಕ— ಇವುಗಳನ್ನೆಲ್ಲಾ ನೋಡಿ ಪುನರ್ವಿಂಗಡಣೆ ಮಾಡಬೇಕೆಂದು ಹೇಳಿದಾಗ ಭಾಷೆಯನ್ನು ಬಿಟ್ಟುಬಿಡಬೇಕೆಂದು ಅರ್ಥವಲ್ಲ.

ಮತ್ತೊಂದು ಸ್ವಾರಸ್ಯವಾದ ವಿಚಾರವೇನೆಂದರೆ, ಭಾಷೆಯ ಆಧಾರದಮೇಲೆ ಪ್ರಾಂತ್ಯ ವಿಂಗಡಣೆಯಾಗಬೇಕಾದ ಸಮಸ್ಯೆ ಉತ್ತರ ಇಂಡಿಯಾಕ್ಕಿಂತಲೂ ದಕ್ಷಿಣ ಇಂಡಿಯಾದಲ್ಲಿ ಹೆಚ್ಚಾಗಿದೆ. ಉತ್ತರ ಇಂಡಿಯಾದಲ್ಲಿ ಫಜಲಾಲಿ ಕಮಿಷನ್ನಿಗೆ ಇರತಕ್ಕ ಕೆಲಸ, ಭಾಷೆಯ ಆಧಾರದ ಮೇಲೆ ಯಾವಯಾವ ಪ್ರಾಂತ್ಯಗಳನ್ನು ಪುನ

ವಿಂಗಡಣೆ ಮಾಡಬೇಕು ಎಂಬುದಲ್ಲ. ಅಲ್ಲಿ ಹಿಂದೀ ಆಧಾರದಮೇಲೆ ಒಂದುಗೂಡಿಸುವುದಲ್ಲ, ಅದನ್ನು ಹಂಚಬೇಕಾಗಿದೆ. ಒಂದಿರುವುದನ್ನು ಎರಡು ಮಾಡಬೇಕಾಗುತ್ತದೆ; ಎರಡಿರುವುದನ್ನು ಮೂರು ಮಾಡಬೇಕಾಗಿದೆ. ದಕ್ಷಿಣ ಇಂಡಿಯಾವಲ್ಲಾದರೋ, ಹೆಸರೇನಾದರೂ ಇರಲಿ, ಯಾವುದೇ ದೃಷ್ಟಿಕೋಣದಿಂದ ಪ್ರಾಂತ್ಯ ವಿಂಗಡಣೆ ಮಾಡಬೇಕಾದರೂ ಭಾಷೆಯನ್ನೂ ಒಂದು ಆಧಾರವಾಗಿಟ್ಟುಕೊಂಡು ವಿಂಗಡಣೆ ಮಾಡಬೇಕಾಗಿ ಬಂದೇಬರುತ್ತದೆ. ಪ್ರಾಂತ್ಯಗಳು ಈಗ ನೇರವಾಗಿರಲಿ ಬಿಡಲಿ, ಕಾರಣಾಂತರದಿಂದ, ಅದು ಚಾರಿತ್ರಿಕವಾಗಿಯೇ ಆಗಲಿ ಇನ್ನಾವ ಕಾರಣದಿಂದಲೇ ಆಗಲಿ ಈಗಿರುವ ಮದ್ರಾಸ್ ಪ್ರಾಂತ್ಯ, ಬೊಂಬಾಯಿ ಪ್ರಾಂತ್ಯ ತಿರುವಾಂಕೂರು-ಕೊಚ್ಚಿನ್ ಪ್ರಾಂತ್ಯಗಳು ಎರಡು ಮೂರು ಭಾಷೆಗಳನ್ನಾಡುವ ಜನರನ್ನೊಳಗೊಂಡಿರುವುದರಿಂದ ಮತ್ತು ಈಗಾಗಲೇ ಭಾಷೆಯ ಆಧಾರದ ಮೇಲೆ ವಿಂಗಡಣೆ ಮಾಡುವುದಕ್ಕೆ ಒಬ್ಬರಿಗೆ ಒಪ್ಪಿಗೆ ಕೊಟ್ಟಿರುವುದರಿಂದ, ಇತರರಿಗೂ ಅವರವರ ಭಾಷೆಗನುಸಾರವಾಗಿ ಬೇರೆ ಪ್ರಾಂತ್ಯ ಮಾಡಿಕೊಳ್ಳಲಿಕ್ಕೆ ಅವಕಾಶ ಕೊಟ್ಟೇಕೊಡಬೇಕು. ಫಜಲಾಲಿ ಕಮಿಷನ್‌ನವರೂ ಕೂಡ ಬೇರೆ ರೀತಿಯಲ್ಲಿ ವಿಂಗಡಣೆ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತೇನೆ.

ಹೀಗೆ ಭಾಷೆಗಳಮೇಲೆ ಪುನರ್ವಿಂಗಡಣೆ ಮಾಡಬೇಕಾದ ಕಾಲದಲ್ಲಿ ನಮ್ಮ ಮುಂದಿರುವ ಸಮಸ್ಯೆ ಏನೆಂದರೆ, ಮೈಸೂರಿಗೆ ಸಂಬಂಧಪಟ್ಟಂತಿರುವ ಪ್ರದೇಶ ಈಗ ಇದ್ದ ಹಾಗೆಯೇ ಇರಬೇಕೇ ಅಥವಾ ವಿಸ್ತಾರವಾಗಬೇಕೇ ಅಥವಾ ಇದಕ್ಕೆ ಕನ್ನಡ ಮಾತನಾಡತಕ್ಕ ಇತರ ಪ್ರದೇಶಗಳು ಅಂದರೆ ಬೊಂಬಾಯಿನಲ್ಲಿರತಕ್ಕ 3–4 ಡಿಸ್ಟ್ರಿಕ್ಟ್‌ಗಳು, ಹೈದರಾಬಾದಿನಲ್ಲಿರತಕ್ಕ 3–4 ಡಿಸ್ಟ್ರಿಕ್ಟ್‌ಗಳು ಜೊತೆಗೆ ಮದ್ರಾಸಿನ ದಕ್ಷಿಣ ಕನ್ನಡ ಜಿಲ್ಲೆ, ಕೊಳ್ಳೇಗಾಲ ಮುಂತಾದುವೆಲ್ಲಾ ಸೇರಿ ಅಖಂಡ ಕರ್ಣಾಟಕ ಅಥವಾ ಕರ್ಣಾಟಕ ಏಕೀಕರಣವಾಗಬೇಕೇ ಎಂಬುದು. ಈ ಸಮಸ್ಯೆಯನ್ನು ಬಗೆಹರಿಸಬೇಕಾಗಿದೆ. ಈ ವಿಷಯದಲ್ಲಿ ನಾವು ಜವಾಬ್ದಾರಿಯಿಂದ ಯಾವ ರೀತಿ ಮಾಡಬೇಕೆಂದು ಹೇಳಿ ಸಲಹೆ ಮಾಡಬೇಕಾಗಿದೆ.

ಮಾನ್ಯ ಪಟ್ಟಾಭಿರಾಮನ್‌ರವರು ಮಾತನಾಡುತ್ತಾ, ಈ ಪ್ರಶ್ನೆ ಮೈಸೂರಿಗೆ ಸಂಬಂಧಪಟ್ಟ ಹಾಗೆಯೇ ಇಲ್ಲ, ಇಡೀ ಇಂಡಿಯಾ ದೇಶದಲ್ಲಿರತಕ್ಕ ಪ್ರಾಂತ್ಯಗಳನ್ನು ಪುನರ್ವಿಂಗಡಣೆ ಮಾಡಬೇಕಾದ ಕಾಲದಲ್ಲಿ, ಮೈಸೂರಿನಲ್ಲಿ ಎಷ್ಟು ಜನರಿರಬೇಕು, ಒಂದು ಕೋಟಿ ಜನರಿರಬೇಕೇ ಎರಡು ಕೋಟಿ ಜನರಿರಬೇಕೇ ಎಷ್ಟು ಚದರಮೈಲಿಗಳ ವಿಸ್ತೀರ್ಣವಿರಬೇಕೆಂಬ ಪ್ರಶ್ನೆಯೇ ಬರುವುದಿಲ್ಲ, ಇಂಡಿಯಾ ದೇಶದ ಚಿತ್ರಪಟ ಇಟ್ಟುಕೊಂಡು ಅದಕ್ಕೆಲ್ಲಾ ಅನ್ವಯಿಸುವಂತೆ ಯೋಚನೆ ಮಾಡಬೇಕಾಗಿ ಬರುತ್ತದೆ. ಈ ದೃಷ್ಟಿಯಿಂದ ಮೈಸೂರಿಗೆ ಈ ಕನ್ನಡ ಮಾತನಾಡುವ ಪ್ರದೇಶಗಳು ಸೇರಬೇಕು ಎಂಬ ಅರ್ಥದಲ್ಲಿ ಮಾತನಾಡಿದರು.

ಆದರೆ, ಅದೇ ಒಂದು ಆಧಾರವಾಗಿಟ್ಟುಕೊಂಡು ಮೊದಲು ಸ್ವಲ್ಪ ವಿಮರ್ಶೆ ಮಾಡುವುದಾದರೆ, ಕರ್ಣಾಟಕ ಏಕೀಕರಣವಾಗಬೇಕೆಂದು ಹೇಳುವವರು ಈ ಎರಡು ಕೋಟಿ ಜನರೂ ಏಕೆ ಒಂದಾಗಿರಕೂಡದೆಂದು ಒಂದು ವಾದ ಹೂಡಬಹುದು. ಜನಗಣನೆಯ ಲೆಕ್ಕದ ಪ್ರಕಾರ ಹೆಚ್ಚು ಕಡಮೆ ಎರಡು ಕೋಟಿ ಚಿಲ್ಲರೆ ಕನ್ನಡಿಗರಾಗುತ್ತಾರೆ. ಆದ್ದರಿಂದ ಎರಡು ಕೋಟಿ ಜನ ಒಂದು ಪ್ರಾಂತ್ಯದಲ್ಲಿರಬೇಕೆಂದು ಹೇಳುವುದಾದರೆ ಕರ್ಣಾಟಕ ಏಕೀಕರಣವಾಗಬೇಕು. ಈ ರೀತಿಯಾಗಿ ಹೇಳಿದರೆ ಇದು ಸಾಧನೆಯಾಗುತ್ತದೆಂಬ ದೃಷ್ಟಿಯಿಂದ ಒಂದೊಂದು ಪ್ರಾಂತ್ಯದಲ್ಲಿ ಎರಡು ಕೋಟಿ ಇರಲಿ ಎಂಬುದು ಒಂದು ವಾದ. ಇನ್ನೊಂದು ದೃಷ್ಟಿಯಿಂದ ಒಂದು ಕೋಟಿಯೇ ಒಂದು ಪ್ರಾಂತ್ಯದಲ್ಲಿರಬೇಕು, ಮೈಸೂರನ್ನೇ ಒಂದು ಯೂನಿಟ್ಟಾಗಿ ಇಟ್ಟುಕೊಂಡರೆ ಎಲ್ಲಾ ಪ್ರಾಂತ್ಯಗಳನ್ನೂ ಮೈಸೂರಿನ ಆಧಾರದ ಮೇಲೆಯೇ ವಿಂಗಡಣೆ ಮಾಡಬಹುದೆಂದು ಹೇಳಿ ಮೈಸೂರು ಇದ್ದ ಹಾಗೆಯೇ ಇರಲೆಂಬುದು ಇನ್ನೊಂದು ವಾದ. ಎರಡು ಕೋಟಿಯೇ ಇರಬೇಕೆಂದು ಬ್ರಹ್ಮಲಿಪಿಯನ್ನು ಯಾರೂ ಬರೆದಿಲ್ಲ. ಅಥವಾ ಒಂದು ಕೋಟಿಯೇ ಇರಬೇಕೆಂದು ಯಾರೂ ಬ್ರಹ್ಮಲಿಪಿ ಬರೆಯಬೇಕಾಗಿಲ್ಲ. ಇವೆಲ್ಲಾ Real Problems ಯಾವ ರೀತಿಯಿವೆಯೋ ಅದರ ಮೇಲೆ ಹೋಗುತ್ತದೆ. ಆದ್ದರಿಂದ Realities ಇರತಕ್ಕದ್ದನ್ನು ನೇರವಾಗಿ ಎದುರಿಸಿ ಮಾತನಾಡುವುದಾದರೆ, 6½–7 ಕೋಟಿಯಷ್ಟಿರುವ ಒಂದು ದೊಡ್ಡ ಪ್ರಾಂತ್ಯವನ್ನು ವಿಭಾಗ ಮಾಡುವಾಗ ಎರಡು ಕೋಟಿಯೇ ನಿಗದಿಮಾಡಬೇಕೆಂದೆಲ್ಲಿದೆ? ಒಂದು ವೇಳೆ ಒಂದು ಪ್ರಾಂತ್ಯ ಒಂದು ಕಡೆಯಿಂದ ಇನ್ನೊಂದು ಕಡೆಯವರೆಗೆ ಒಂದು ಸಾವಿರ ಮೈಲಿ ಉದ್ದ ಇರುವುದಾದರೆ ಅದನ್ನು ನಾಲ್ಕೈದು ಭಾಗ ಮಾಡಿದರೆ ಅದರಲ್ಲಿ ತಪ್ಪೇನು! ಅಥವಾ ಅಮೇರಿಕಾ ದೇಶದಲ್ಲಿ ಮಾಡಿರುವಂತೆ ಭೂಪಟ ಇಟ್ಟುಕೊಂಡು ಹಾಗೊಂದು ಮೈಲಿಗೆ ಹೀಗೊಂದು ಮೈಲಿಗೆ ಗೆರೆಗಳನ್ನೆಳೆದು ಮಧ್ಯೆ ಬರುವ ಚೌಕಟ್ಟಿನ ಪ್ರದೇಶದಲ್ಲಿರುವುದನ್ನೇ ಒಂದು ಪ್ರಾಂತ್ಯವೆಂದು ಹೇಳುವುದಾದರೆ ಈ ರೀತಿ ಒಂದು ಕೋಟಿ ಎರಡು ಕೋಟಿ, ಎನ್ನುವ ಪ್ರಶ್ನೆಯೇ ಬರುವುದಿಲ್ಲ. ಇದೂ ಒಂದು ರೀತಿ. ಅಂತೂ ಯಾವುದೇ ನೀತಿ ಮಾಡಲಿ, ಈ ಸಮಸ್ಯೆ ಹೀಗೆ ನಾನಾ ರೀತಿಯಲ್ಲಿರುವಾಗ ಯಾರೊಬ್ಬರೂ ಎರಡು ಕೋಟಿಯೇ ಇರಲಿ, ಅಥವಾ ಒಂದು ಕೋಟಿಯೇ ಇರಬೇಕೆಂದು ಹೇಳುವ ಹಾಗಿಲ್ಲ. ಎರಡು ಕೋಟಿ ಇರಬೇಕೆಂದರೂ ಇರಬೇಕಾಗುತ್ತದೆ ಒಂದು ಕೋಟಿ ಇರಬೇಕೆಂದರೂ ಇರಬೇಕಾಗುತ್ತದೆ. ಆದ್ದರಿಂದ ಇದೇ ಸರಿಯೆಂದು ಹೇಳುವುದು ಜಾಣ್ಮೆಯ ಮಾತಾಗುವುದಿಲ್ಲ. ಹಾಗಾದರೆ ಮೈಸೂರು ಪ್ರಾಂತ್ಯ ಈಗ ಇದ್ದ ಹಾಗೆಯೇ ಇಟ್ಟುಕೊಂಡಿರುವುದಕ್ಕೆ ಸಾಧ್ಯವೇ ಅಂದರೆ ಅದು ಸಾಧ್ಯವಾಗುವುದಿಲ್ಲವೆಂದು ನನಗೂ ಅರ್ಥವಾಗುತ್ತದೆ. ಯಾವ ಪ್ರಾಂತ್ಯವನ್ನೇ ಆಗಲಿ ಅದಕ್ಕೆ ಸ್ವಲ್ಪವೂ ಸೇರಿಸದೇ ಹಾಗೆಯೇ ಇಟ್ಟುಕೊಳ್ಳುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಹೀಗಿರುವಲ್ಲಿ ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ ಕರ್ಣಾಟಕ ಪ್ರಾಂತ್ಯ ಒಂದಾಗಬೇಕು, ಬಾಕಿ ಪ್ರಾಂತ್ಯಗಳು ಇಲ್ಲಿಗೆ ಸೇರಬೇಕೆಂದು ಹೇಳುವಾಗ ಇದರ ಸಾಧಕ ಬಾಧಕಗಳನ್ನು ಯೋಚನೆ ಮಾಡಬೇಕಾದದ್ದು ಸರಿಯಾಗಿದೆ. ಈ ಸಂದರ್ಭದಲ್ಲಿ ಸಾಧಕ ಬಾಧಕಗಳನ್ನು ಯೋಚನೆ ಮಾಡುವುದೇ ಬೇಡ, ಅದನ್ನು ತಾತ್ವಿಕ ದೃಷ್ಟಿಯಿಂದಲೇ Sentimental ಆಗಿಯೇ ಯೋಚಿಸಬೇಕು, ಅಂಕೆ ಅಂಶಗಳು ಬೇಡ, ಮೈಸೂರು ದೇಶಕ್ಕೆ ಒಳ್ಳೆಯದಾಗುತ್ತದೆಯೆಲ್ಲ ಎಂಬ ಲಾಭ ನಷ್ಟದ ದೃಷ್ಟಿ ಬೇಡ, ಕನ್ನಡಿಗರೆಲ್ಲಾ ಒಂದೇ ಎಂಬ ಭಾವನೆಯಿಂದ ತೊಂದರೆಯಾದರೂ ಆಗಲಿ ಮುಂದಾದರೂ ಸುಖವಾಗುತ್ತದೆಂದು ಹೇಳಿ ಈ ಸಮಸ್ಯೆಯನ್ನು ಯೋಚಿಸಬೇಕು, ನಮ್ಮ ಅಣ್ಣ ತಮ್ಮಂದಿರು ನಮ್ಮ ಜೊತೆಯಲ್ಲಿ ಸೇರಬೇಕು ಎಂದು ಮುಂತಾಗಿ ಕೆಲವು ಅಭಿಪ್ರಾಯಗಳನ್ನು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರು ಕೆಲವರು ಸೂಚಿಸಿದ್ದಾರೆ.

3 P.M.

ಸ್ವಾಮಿ, ನಾನು ನಮ್ಮ ದೇಶದ ಕಷ್ಟ ಸುಖಗಳೇನೇ ಇರಲಿ ಕರ್ಣಾಟಕ ಪ್ರಾಂತ್ಯವಾಗಲೇ ಬೇಕು ಎಂಬು

(ಶ್ರೀ ಎಂ. ಚಿಕ್ಕಲಿಂಗಯ್ಯ.)

ದ್ದಾಗಿ- ಇಷ್ಟಪಡತಕ್ಕ ಜನರಪೈಕಿ ನಾನು ಒಬ್ಬನಾಗಿಲ್ಲ ಎಂದು ಹೇಳುತ್ತೇನೆ. ಮೈಸೂರನ್ನೊಳಗೊಂಡ ಕರ್ಣಾಟಕವಾಗಬೇಕೆ ಅಥವಾ ಮೈಸೂರು ಹಾಗೆಯೇ ಉಳಿಯಬೇಕೆ ? ಎಂಬುದು ಸುಮಾರು ಎರಡು ಕೋಟಿ ಜನಗಳಿಗೆ ಸಂಬಂಧಪಟ್ಟಂಥ ಪ್ರಶ್ನೆಯಾಗಿದೆ. ಈಗ ಮೈಸೂರು ಇರುವಷ್ಟೇ ಆದರೆ ಆಗ ಇದು ಒಂದು ಕೋಟಿ ಜನರ ಸಮಸ್ಯೆಯಾಗುತ್ತದೆ. ಅನೇಕ ವರ್ಷಗಳಿಂದಲೂ ಈ ಮೈಸೂರನ್ನು ಇಂಥ ಸ್ಥಿತಿಯಲ್ಲಿ ಇಟ್ಟುಕೊಂಡು, ಇದನ್ನು ಇಷ್ಟರ ಮಟ್ಟಿಗೆ ಬೆಳೆಸಿಕೊಂಡು ಬಂದಿರತಕ್ಕ ಜನರ ಅಭಿಪ್ರಾಯ ಯಾವ ರೀತಿಯಿದೆ ಎನ್ನುವುದನ್ನು-ತೆಗೆದುಕೊಳ್ಳದೆ- ನಮ್ಮ-ಅಭಿಪ್ರಾಯವೇ ಶ್ರೇಷ್ಠವಾದ್ದು, ಒಳ್ಳೆಯದು ಎಂತ ಹೇಳಿಕೊಂಡು ಈ ಪ್ರಾಂತ್ಯಗಳ ಪುನರ್ವಿಂಗಡಣೆಯನ್ನು ಮಾಡುವುದಕ್ಕಾಗುವುದಿಲ್ಲ. ಆದರೆ ಈಗ ಅನೇಕ ಮಾನ್ಯಸದಸ್ಯರು ಏನು ಹೇಳಿರುತ್ತಾರೋ ಅದು ಅನೇಕರಿಗೆ ಹಿಡಿಸದೆ ಇರಬಹುದು ಎಂದು ಹೇಳಬಹುದು. ಆದರೆ ಈ ಹಿಂದೆ ಆ ಪ್ರಾಂತ್ಯಗಳ ಪುನರ್ವಿಂಗಡಣೆ ಸಮಿತಿಯವರು ನಮ್ಮ ದೇಶಕ್ಕೆ ಬಂದಿದ್ದಾಗ್ಗೆ ಅವರಿಗೆ ಅನೇಕ ಪ್ರತಿನಿಧಿಗಳನ್ನು ನಮ್ಮ ದೇಶ ಯಾವರೀತಿ ಇರಬೇಕು ಅನ್ನತಕ್ಕ ಬಗ್ಗೆ ಅನೇಕ ಅಭಿಪ್ರಾಯಗಳನ್ನು ಸೂಚಿಸಿರುತ್ತಾರೆ. ಅನೇಕ ಕಾಂಗ್ರೆಸ್ ಸಂಸ್ಥೆಗಳೂ ಕೂಡ ಅನೇಕ ವರದಿಗಳನ್ನು ಆ ಸಮಿತಿಯವರಿಗೆ ಒಪ್ಪಿಸಿವೆ, ಹೀಗೆ ಈ ಪ್ರಶ್ನೆಯು ಒಂದು ಮಟ್ಟಕ್ಕೆ ಬಂದಿರುವಾಗ ಈ ರೀತಿಯಾಗಿ ನಾವು ಒಂದು ವಾದವಿವಾದಕ್ಕೆ ಇಟ್ಟುಕೊಳ್ಳುವುದು ಸರಿಯಾದದ್ದಲ್ಲವೆಂದೂ ಮತ್ತು ಇಂಥ ವಿಚಾರದಲ್ಲಿ ಒಂದು ಪ್ಲೆಬಿಸೈಟನ್ನೆತ್ತುವುದೆಂದರೇನು ಅರ್ಥ, ಓಟ್ಸ್ ತೆಗೆದುಕೊಳ್ಳುವುದೆಂದರೇನು ಅರ್ಥ, ಇದೆಲ್ಲಾ ಒಂದು ಮೂರ್ಖತನ ಎಂಬುದಾಗಿಯೂ ಶ್ರೀಮಾನ್ ಚೆನ್ನಬಸಪ್ಪನವರು ಹೇಳಿದರು.

Mr. SPEAKER.—Does the Hon'ble Member intend to take more time?

Sri D. DEVARAJ URS.—Yes.

Mr. SPEAKER.—The House will rise for lunch and meet at 3-30.

The House adjorned for Lunch at Two Minutes past Three of the Clock and met again at Thrirty-two Minutes past Three of the Clock.

[MR. SPEAKER. in the Chair].

ಶ್ರೀ ಡಿ. ದೇವರಾಜೇ ಅರಸ್.—ಈಗ ನಮ್ಮ ಮಾನ್ಯ ಸಭೆಯಲ್ಲೇ, ಸ್ವಾಮಿ, ನಮ್ಮ ಮೈಸೂರು ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಭಿಪ್ರಾಯ ಈ ವಿಚಾರದಲ್ಲಿ ಈಗ ಯಾವ ರೀತಿ ಇದೆ, ಹಿಂದೆ ಯಾವರೀತಿ ಇತ್ತು ಎನ್ನುವುದನ್ನು ಸದಸ್ಯರು ವ್ಯಕ್ತಪಡಿಸಿದ್ದಾರೆ. ಕರ್ಣಾಟಕ ಏಕೀಕರಣ ವಾಗಲೇಬೇಕೆಂಬ ಬಗ್ಗೆ ನಮ್ಮ ಪ್ರಾಂತೀಯ ಕಾಂಗ್ರೆಸ್ ಕಮಿಟಿಯವರು ಒಂದು ನಿರ್ಣಯವನ್ನೇ ಪಾಸ್-ಮಾಡಿರುತ್ತಾರೆಂದು ಕೂಡ ಈಗ ಮಾತನಾಡಿರತಕ್ಕಂಥ ಮಾನ್ಯ ಸದಸ್ಯರುಗಳೆಲ್ಲಾ ತಿಳಿಸಿರುತ್ತಾರೆ. ಪ್ರಶ್ನೆ ಸ್ವರಾಜ್ಯ ಬಂದಮೇಲೆ ಮತ್ತಷ್ಟು ಸುಲಭವಾಗಿ ತೀರ್ಮಾನ ವಾಗುವಂತೆ ಕಾಣುತ್ತಿತ್ತು. ಆದರೆ ಈಗ ಇದೊಂದು ಜಟಿಲ ಪ್ರಶ್ನೆಯಾಗಿ ಪರಿಣಮಿಸಿದೆ. ಆದಕಾರಣ ಇಂಥ ಒಂದು ಮುಖ್ಯ ಪ್ರಶ್ನೆಯನ್ನು ಪರಿಶೀಲನೆ ಮಾಡಲು ಆಲ್‌ಇಂಡಿಯಾ ಕಾಂಗ್ರೆಸ್ ಸಮಿತಿಯವರು ಎಲ್ಲಾ ಪ್ರಾಂತ್ಯಗಳನ್ನೂ ಭಾಷಾವಾರು ಆಧಾರದ ಮೇಲೆ ರಚನೆ ಮಾಡತಕ್ಕದ್ದಾಗಿದ್ದರೆ ಇದು ಇಡೀ ಭರತಖಂಡಕ್ಕೆ ಅನ್ವಯಿಸತಕ್ಕಂಥ ಪ್ರಶ್ನೆಯಾದುದರಿಂದ ಇದನ್ನು ಮುಂದೆ ಯಾವ ರೀತಿ ಮಾಡಬೇಕಾಗಿದೆ, ಯಾವ ವಿಧಾನವನ್ನು ಅನುಸರಿಸಬೇಕು, ದೇಶಾದ್ಯಂತವೂ ಇರುವ ಕಾಂಗ್ರೆಸ್ ಸದಸ್ಯರುಗಳು ಈ ವಿಚಾರದಲ್ಲಿ ಏನು ಅಭಿಪ್ರಾಯ ಪಡುತ್ತಿದ್ದಾರೆ, ಇದು ಜಟಿಲವಾದಂಥ ಪ್ರಶ್ನೆ, ನಮಗೆ ಸ್ವಾತಂತ್ರ್ಯ ಬಂದಮೇಲೆ ನಮ್ಮ ರಾಜ್ಯಗಳು ಯಾವ ರೀತಿ ಇರಬೇಕೆಂಬ ಬಗ್ಗೆ ಈ ಹಿಂದೆಯೇ ನಾವು ನಿರ್ಣಯಗಳನ್ನು ಪಾಸ್ ಮಾಡಿದ್ದೇವೆ ಆದರೆ ಈಗ ಯಾವ ಅಭಿಪ್ರಾಯಗಳಿರುತ್ತವೆ ಎನ್ನುವುದರ ಬಗ್ಗೆ ಶೇಖರಣೆ ಮಾಡುತ್ತಿದ್ದಾರೆ. ಆದರೆ ಹೀಗೆಲ್ಲಾ ಮಾಡುವುದು ಸರಿಯಾದದ್ದಲ್ಲ, ಈಗ ಪುನಃ ಜನರ ಅಭಿಪ್ರಾಯವನ್ನೇನೂ ಕೇಳಬೇಕಾಗಿಲ್ಲ ಎಂದು ಮಾನ್ಯ ಸದಸ್ಯರು ಕೆಲವರು ವಾದಮಾಡುತ್ತಿದ್ದಾರೆ. ಆದರೆ ಈ ಚರ್ಚೆ ಇಲ್ಲಿ ಷುರುವಾದ ಮೇಲೆ ಈ ಏಕೀಕರಣ ಪ್ರಶ್ನೆಯ ಸಂಬಂಧದಲ್ಲಿ ಪರವಾಗಿಯೂ ಮತ್ತು ವಿರೋಧವಾಗಿಯೂ ಭಾಷಣಗಳಾಗಿರುವುದು ತಮಗೆಲ್ಲರಿಗೂ ಗೊತ್ತೇ ಇದೆ. ಅಂದ ಮೇಲೆ ಇದರ ವಿಚಾರದಲ್ಲಿ ಭಿನ್ನಾಭಿಪ್ರಾಯವಿದೆ ಎಂಬುದು ಗೊತ್ತಾಗುತ್ತದೆ. ಹೀಗೆ ಸದಸ್ಯರಲ್ಲೇ ಭಿನ್ನಾಭಿಪ್ರಾಯಗಳಿರುವಾಗ, ಈ ವಿಚಾರದಲ್ಲಿ ನೇರವಾದಂಥ ಮತ್ತು ನಿರ್ದಿಷ್ಟವಾದಂಥ ರೀತಿಯಲ್ಲಿ ಜನರನ್ನೇ ಕೇಳಿ, ಇದರಿಂದ ನಮ್ಮ ದೇಶದ ಜನರ ಹಿತಸಾಧನೆಯಾಗುತ್ತದೆಯೇ ಅಥವಾ ಇಲ್ಲವೇ ಎನ್ನತಕ್ಕ ಬಗ್ಗೆ ಜನರನ್ನೇ ಕೇಳಬೇಕು ಎಂದು ಹೇಳುವುದರಲ್ಲಿ ತಪ್ಪೇನಿದೆ ? ಈ ದಿವಸ ಈ ಪ್ರಶ್ನೆ ಒಂದುಕೋಟಿ ಜನರಿಗೆ ಸಂಬಂಧಪಟ್ಟಿರತಕ್ಕದ್ದಾಗಿದ್ದರೂ ಕೂಡ, ಅವರು ಹಿತಸಾಧನೆಯ ಕಡೆಗೆ ಲಕ್ಷ್ಯವಿಡದೆ, ಇಲ್ಲಿಗೆ 20ನೇ ಶತಮಾನಕ್ಕೆ ಹಿಂದೆ ಯಾವುದೋ ಒಬಿಗಾಯಿನ ಕಾಲದಲ್ಲಿ ಗಂಡೂ, ಹೆಣ್ಣೂ ಒಪ್ಪಿದ್ದರು, ಆದ್ದರಿಂದ ಈಗ ಆ ಒಪ್ಪಂದದಂತೆ ಲಗ್ನವಾಗಲೇಬೇಕೆಂದು ಹೇಳುತ್ತಿದ್ದಾರೆ. ಆದರೆ ತಾವು ಈಗ ಆ ರೀತಿ ಜನರನ್ನೆಲ್ಲಾ ಕೇಳುವುದಕ್ಕೆ ಕಾಲವಿದೆಯೇ, ನಾವು ಇನ್ನೂ ಆ ಫಜ್ಲಾಲಿ ಸಮಿತಿಯವರಿಗೆ ನಮ್ಮ ಅಭಿಪ್ರಾಯವನ್ನು ತಿಳಿಸುವುದಕ್ಕೆ ಅವಕಾಶವಿದೆಯೇ, ಇದಕ್ಕೆಲ್ಲಾ ಕಾಲವಿದೆಯೇ ಎಂದು ತಾವುಗಳು ಕೇಳಬಹುದು. ಈಗ ಇದಕ್ಕೆಲ್ಲಾ ಕಾಲವಿಲ್ಲದೇ ಇರಬಹುದು. ನಮ್ಮ ಮೈಸೂರು ದೇಶ ವಿಸ್ತಾರವಾಗಬಹುದು. ಆದರೆ ಹಾಗೆ ಅಕ್ಕಪಕ್ಕದ ದೇಶಗಳು ಸೇರಿಬಿಟ್ಟುಗೂಡಬೇಕಾಗಿದ್ದರೆ ಅದಕ್ಕೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ಈಗ ಆಡಳಿತವರ್ಗದವರು ತರಿಸಿಕೊಂಡಿರತಕ್ಕಂಥ ಉದ್ದೇಶವಾದರೂ ಇದರ ಸಾಧಕಬಾಧಕಗಳೇನು ಅನ್ನುವುದನ್ನು ಚರ್ಚೆಮಾಡಬೇಕು ಅನ್ನುವುದೇ ಆಗಿದೆ. ಆದರೆ ಈ ಅಂಕಿಅಂಶಗಳ ವರದಿಯಲ್ಲಿ ಇದರ ಸಾಧಕಬಾಧಕಗಳ ಬಗ್ಗೆ ಏನು ಹೇಳಿದ್ದಾರೆ ಎನ್ನುವುದನ್ನು ನಾನೀಗ ಚಾಪ್ಟರ್ ಬೈ ಚಾಪ್ಟರ್, ಹೇಳುವುದಕ್ಕೆ ಇಷ್ಟಪಡುವುದಿಲ್ಲ.

Sri H.M. CHANNABASAPPA (Periyapatna).—If the Hon'ble Member were to yield, I would like to make this submission as a matter of fact, a personal explanation, because he has made a reference to me Article 3 makes it very clear. The best brains of India have sat at the Constituent Assembly

and decided that decisions on such important matters as these should be taken not by referendum but by the best brains sitting at the top and having in view the overall picture of what constitutes the best in the interests of the country. Therefore, I say it is not too big a matter to be decided by referendum.

ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, ಈ ರೆಫರಂಡಂ ಎನ್ನುವುದನ್ನು ಈಗೇನೂ ನಾವು ಜನರಿಂದ ಪಡೆಯಬೇಕಾಗಿಲ್ಲ. ನಾವೆಲ್ಲರೂ ಈ ಹಿಂದೆ ನಮ್ಮೆಲ್ಲರ ಮಹಾ ಚುನಾವಣೆ ಕಾಲದಲ್ಲಿ ಜನರನ್ನು ನೀವು ಇಂಥಿಂಥಾ ಕಾರಣಗಳಿಗೋಸ್ಕರವಾಗಿಯೇ ನಮಗೆ ಓಟುಗಳನ್ನು ಕೊಡಬೇಕಾಗಿರುತ್ತೆಂದೂ, ನಾವು ಕರ್ಣಾಟಕ ಪ್ರಾಂತ್ಯ ನಿರ್ಮಾಣ ಮಾಡುತ್ತೇವೆಂದೂ ಹೇಳಿ ಜನರಿಂದ ಚುನಾವಣೆ ಹೊಂದಿ ಬಂದಿರುವ ಕಾರಣದಿಂದ ನಾವೀಗ ಈ ವಿಚಾರದಲ್ಲಿ ಮತ್ತೊಮ್ಮೆ ಜನರ ಅಭಿಪ್ರಾಯವನ್ನೇನೂ ಕೇಳಬೇಕಾಗಿಲ್ಲ ಎಂಬುದಾಗಿ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ನಾನು ಹೇಳುತ್ತಿರುವ ಅಭಿಪ್ರಾಯವೇ ಅದು.

ಶ್ರೀ ಡಿ. ದೇವರಾಜ ಅರಸ್.—ಹಾಗೆ ಇದೊಂದು ದೊಡ್ಡ ಪ್ರಶ್ನೆಯಲ್ಲ ಎಂದು ಆಗಿದ್ದರೆ ಆಗ ಇದನ್ನು ಕೇಂದ್ರದವರೇ ಯಾರನ್ನೂ ಕೇಳದೆ ಅವರೇ ಮಾಡಬಹುದಾಗಿತ್ತಲ್ಲ. ಆದರೆ ಅವರು ಹಾಗೆ ಮಾಡಲಿಲ್ಲ. ಅಂದವೇಳೆ ದೇಶದ ಪ್ರತಿನಿಧಿಗಳ ಅಭಿಪ್ರಾಯವನ್ನು ಸರಿಪಡಿಸಿಕೊಂಡಾಕ್ಷಣಕ್ಕೆ ಅದನ್ನು ಮಾಡಿಯೇ ತೀರಬೇಕೆಂದು ಯಾವ ಸಿದ್ಧಾಂತವೂ ಇಲ್ಲ.

ಶ್ರೀ ಎಚ್.ಎಂ. ಚೆನ್ನಬಸಪ್ಪ.—ನಮ್ಮೆಲ್ಲರ ಅಭಿಪ್ರಾಯಗಳೇನೇ ಇರಲಿ, ನಮಗೆ ಇದರ ಬಗ್ಗೆ ಇಷ್ಟವಿರಲಿ, ಇಲ್ಲದೇ ಇರಲಿ, ಇದರ ಕೊನೆಯ ತೀರ್ಮಾನದ ಅಧಿಕಾರ ಪಾರ್ಲಿಮೆಂಟಿನವರ ಕೈಯ್ಯಲ್ಲಿದೆ ಎನ್ನುವುದನ್ನು ತಾವುಗಳು ಯಾರೂ ಮರೆಯಬಾರದು.

ಶ್ರೀ ಡಿ. ದೇವರಾಜ ಅರಸ್.—ಆದರೆ ಈಗ ನಾವು ಇದರ ಪರವಾಗಿ ಮಾತನಾಡುತ್ತಿದ್ದೇವೆಯೇ ಅಥವಾ ವಿರೋಧವಾಗಿ ಮಾತನಾಡುತ್ತಿದ್ದೇವೆಯೇ ಎನ್ನುವುದು ಬೇರೆ ವಿಚಾರ. ಆ ಕೇಂದ್ರ ಸರ್ಕಾರದವರು ಈ ಬಗ್ಗೆ ನಿಮ್ಮೆಲ್ಲರ ಅಭಿಪ್ರಾಯವೇನಿರುತ್ತೆಂದು ಕೇಳುತ್ತಾರೆ ಎಂದು ನಾವು ತಿಳಿದಿದ್ದೆವು. ಹಾಗೆ ನಮ್ಮೆಲ್ಲರ ಅಭಿಪ್ರಾಯವನ್ನು ಅವರು ಕೇಳಬೇಕಾಗಿಲ್ಲವೆಂದು ಹೇಳುವಪಕ್ಷಕ್ಕೆ ಆ ಆಂಧ್ರ ಬಿಲ್ಲನ್ನು ಈ ಸಭೆಯ ಮುಂದೆ ಚರ್ಚೆಗಾಗಿ ಏಕೆ ತರಬೇಕಾಗಿತ್ತು ? ಅದನ್ನೂ ಅವರೇ ಮಾಡಬಹುದಾಗಿತ್ತಲ್ಲ. ಆದರೆ ಇಂಥ ವಿಚಾರಗಳಲ್ಲಿ ಕೇಂದ್ರ ಸರ್ಕಾರದವರು ಏನೇ ಮಾಡಿರಲಿ ಅದನ್ನೆಲ್ಲಾ ಅವರು ನಮ್ಮೆಲ್ಲರ ಇಷ್ಟದ ಪ್ರಕಾರವೇ ಮಾಡಿದ್ದಾರೆ.

Sri H. M. CHANNABASAPPA.—I never said that the views of the Legislature would be disregarded. It will be given its due weight, but in spite of it, if the people sitting at the top, that is, in the Parliament, consider, in spite of your opinion, that a certain thing is good in the interests of the country, nothing prevents them from acting accordingly, whether on the lines suggested by the House or otherwise. That is what I said.

ಶ್ರೀ ಡಿ. ದೇವರಾಜ ಅರಸ್.—ಆದರೆ ಅಂಥ ಸಂದರ್ಭವಿನ್ನೂ ಬಂದಿಲ್ಲ. ಈಗ ಅವರು ಕೇಳಿದ್ದಾರೆ. ಆದುದರಿಂದಲೇ ಈಗ ನಮ್ಮ ಸರ್ಕಾರದವರು ಇದನ್ನೆಲ್ಲಾ ನಮ್ಮ ಮುಂದೆ ಇಟ್ಟಿದ್ದಾರೆ. ಇಲ್ಲಿ ಬರತಕ್ಕಂಥ ಅಭಿಪ್ರಾಯ ಯಾವ ರೀತಿ ಇರುತ್ತದೆಯೋ ಅದರ ಪ್ರಕಾರ ಅವರು ಮುಂದುವರಿಯಬೇಕೆಂದಿದ್ದಾರೆ. ಆದರೆ ನಾವೀಗ ಈ ಅಂಕಿ ಅಂಶಗಳ ವರದಿಯ ಬಗ್ಗೆ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕಾಗಿದೆ. ಆದರೆ ನಾವು ಈಗ ಈ ವರದಿಯಲ್ಲಿ ಹೇಳಿರತಕ್ಕಂಥ ವಿಚಾರಗಳನ್ನು ಪರಿಶೀಲಿಸಿದರೆ—ಬೊಂಬಾಯಿ, ಮದ್ರಾಸ್ ಮತ್ತು ಹೈದರಾಬಾದ್ ಪ್ರಾಂತ್ಯಗಳಲ್ಲಿರತಕ್ಕಂಥ ಕನ್ನಡ ಜನರಿರುವ ಪ್ರದೇಶಗಳನ್ನೆಲ್ಲಾ ಸೇರಿಸಿಕೊಳ್ಳುವುದರಿಂದ ನಮ್ಮ ಸರ್ಕಾರದ ಆಡಳಿತದಲ್ಲಿ ಏನೇನು ಏರುಪೇರುಗಳಾಗಬಹುದು, ಇದರಿಂದ ಹಣಕಾಸಿನ ದೃಷ್ಟಿಯಿಂದ ಯಾವ ರೀತಿ ತೊಂದರೆಯಾಗುತ್ತದೆ, ಇದರಿಂದ ಮೈಸೂರು ಸರ್ಕಾರಕ್ಕೆ ಖೋತಾಬರುವ ಮೊಬಲಗೆಷ್ಟಾಗುತ್ತದೆ ಇತ್ಯಾದಿ ಅಂಶಗಳನ್ನೆಲ್ಲಾ ಈ ವರದಿಯಲ್ಲಿ ಸೂಚಿಸಿದ್ದಾರೆ. ನಾವೀಗ ಈ ನಮ್ಮ ದೇಶವನ್ನು ದೊಡ್ಡದಾಗಿ ಮಾಡಬೇಕೆಂಬುದು ಜನರ ಹಿತದೃಷ್ಟಿಯಿಂದ ಲಾಭವೇ ಅಥವಾ ನಷ್ಟವೇ ಎನ್ನುವುದನ್ನು ನಾವು ಪರಿಶೀಲಿಸಿ ಹೇಳುವುದಾದರೆ ಇದರಿಂದ ನಮಗೆ ತೊಂದರೆ ಆಗುತ್ತದೆ ಎಂದು ಹೇಳಲೇಬೇಕಾಗುತ್ತದೆ. ಆದರೆ ನಾನೀಗ ಆ ತೊಂದರೆಗಳೇನು ಎನ್ನುವುದನ್ನು ಡೀಟೇಲ್ ಆಗಿ ಹೇಳುವುದಕ್ಕೆ ಹೋಗುವುದಿಲ್ಲ. ನಮಗೆ ಹಾಲಿ ಇರತಕ್ಕಂಥ ಅನುಕೂಲಗಳು ಕಡಮೆಯಾಗುತ್ತವೆ ಇಲ್ಲವೇ ಅವುಗಳನ್ನು ಕುಂಠಿತಗೊಳಿಸಬೇಕಾಗುತ್ತದೆಯೆಂದು ವರದಿಯಲ್ಲೇ ತಿಳಿಸಿದ್ದಾರೆ. ವರದಿಯಲ್ಲಿ ಹೀಗೆ ತಿಳಿಸಿದ್ದರೂ ಕೂಡ ಈ ಪ್ರಶ್ನೆಯನ್ನು ನಾವು ಈ ಲಾಭ-ನಷ್ಟಗಳ ದೃಷ್ಟಿಯಿಂದ ನೋಡಬೇಕಾಗಿಲ್ಲ ಎಂದು ಮಾನ್ಯ ಸದಸ್ಯರುಗಳು ಹೇಳುತ್ತಿದ್ದಾರೆ. ಆ ದಿವಸ ಆ ಬೊಂಬಾಯಿ ಪ್ರಾಂತ್ಯದಲ್ಲಿರತಕ್ಕಂಥ ಕನ್ನಡ ಪ್ರದೇಶವೆಲ್ಲಾ ಮೈಸೂರಿಗೆ ಸೇರಬೇಕೆಂದು ಹೇಳುತ್ತಿರುವ ಕಾರಣವಾದರೂ ಏನು? ಆ ಪ್ರದೇಶಗಳು ಆ ಸರ್ಕಾರದ ಆಡಳಿತದಲ್ಲಿರುವುದರಿಂದ ಆ ಜನರಿಗೇನೂ ಲಾಭವಾಗುತ್ತಿಲ್ಲ. ಆ ಸರ್ಕಾರ ಅವರನ್ನು ಕಡೆಗಣ್ಣಿನಿಂದ ನೋಡುತ್ತಿದೆ; ಆದುದರಿಂದ ಆ ಜನರು ನಮ್ಮ ಮೈಸೂರಿನ ಆಡಳಿತಕ್ಕೊಳಪಟ್ಟರೆ ಅವರಿಗೆ ಅನುಕೂಲವಾಗುತ್ತದೆ ಎಂದು ಹೇಳುತ್ತಿರುವಾಗ ಆ ಜನರು ಇಲ್ಲಿಗೆ ಬರುತ್ತಿರುವುದು ಆ ಲಾಭದ ದೃಷ್ಟಿಯಿಂದಲೇ ಎಂದೂ, ಅಲ್ಲಿರುವುದು ನಷ್ಟದೃಷ್ಟಿಯಿಂದ ಬೇಡ ಎಂದೂ ಹೇಳಿದಹಾಗಾಯಿತು. ಈ ರೀತಿಯಾಗಿ ಅವರು ಇಲ್ಲಿಗೆ ಬಂದು ಸೇರುತ್ತಿರುವಾಗ ನಾವು ಇದನ್ನು ಲಾಭ-ನಷ್ಟಗಳ ದೃಷ್ಟಿಯಿಂದ ಮಾತನಾಡುವುದು ಬೇಡ ಎಂದು ಹೇಳುತ್ತಾರೆ. ಇದು......

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಈ ಪ್ರಶ್ನೆಯನ್ನು ಲಾಭ-ನಷ್ಟಗಳ ದೃಷ್ಟಿಯಿಂದ ಅವರು ನೋಡಿದರೂ ತಪ್ಪೇ, ನಾವು ನೋಡಿದರೂ ತಪ್ಪೇ ಈ ಪ್ರಶ್ನೆಯನ್ನು ಎಲ್ಲರೂ ಇಡೀ ರಾಷ್ಟ್ರಾಭಿವೃದ್ಧಿಯ ದೃಷ್ಟಿಯಿಂದ ನೋಡಬೇಕಾಗಿದೆ ಎಂದು ನಾನು ಹೇಳಿದೆ. ಈ ಪ್ರಶ್ನೆಯನ್ನು ಯಾರೇ ನೋಡಲಿ ಇದನ್ನು ಲಾಭ-ನಷ್ಟಗಳ ದೃಷ್ಟಿಯಿಂದ ನೋಡಿದರೆ ಅದು ತಪ್ಪಾಗುತ್ತದೆ ಎನ್ನುವುದೇ ನನ್ನ ಗುರಿ.

ಶ್ರೀ ಡಿ. ದೇವರಾಜ ಅರಸ್.—ರಾಷ್ಟ್ರದ ಹಿತ ಬೇರೆ ಇಲ್ಲ, ಎಲ್ಲಾ ಹಿತಗಳೂ ಈ ಆಧಾರದ ಮೇಲೇ ನಿಂತಿರುತ್ತವೆ.—ಹೀಗೆ ಈ ಪ್ರಶ್ನೆಯನ್ನು ಈ ಲಾಭ-ನಷ್ಟಗಳ ದೃಷ್ಟಿಯಿಂದ ನೋಡುವುದು ಬೇಕಾಗಿಲ್ಲ ಎಂದು ಹೇಳುವುದರ ಜೊತೆಗೆ ಮತ್ತೆ

(ಶ್ರೀ ಡಿ. ದೇವರಾಜ ಅರಸ್.)

ಏನೇನು ವಿಚಾರಗಳನ್ನು ಈಗ ಮಾತನಾಡಿರತಕ್ಕಂಥ ಮಾನ್ಯ ಸದಸ್ಯರುಗಳು ಹೇಳಿದ್ದಾರೆ ಎಂದರೆ: ಈ ನಮ್ಮ ಮೈಸೂರಿನ ಸಮಸ್ತ ಜನತೆಯೂ ಅಖಂಡ ಕರ್ಣಾಟಕ ಸ್ಥಾಪನೆಯಾಗತಕ್ಕದ್ದನ್ನು ಸ್ವಾಗತಿಸುತ್ತಿದೆಯೆಂದೂ, ಇದರಿಂದ ಭಾವಿ ಮೈಸೂರಿಗೆ ಬಹಳ ಅನುಕೂಲವಾಗುತ್ತದೆಯೆಂದೂ, ಈಗ ಈ ಭೂಲೋಕ ಸ್ವರ್ಗಲೋಕವಾಗಿಲ್ಲ, ಈಗ ಈ ಕರ್ಣಾಟಕ ಪ್ರಾಂತ್ಯ ನಿರ್ಮಾಣವಾದರೆ ಈ ಭೂಲೋಕವೆಲ್ಲಾ ಸ್ವರ್ಗಲೋಕವಾಗುತ್ತದೆ ಎನ್ನುವಹಾಗೆ ಅವರು ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತಾರೆ. ಆದರೆ ಈ ದಿವಸ ಈ ನಮ್ಮ ಮೈಸೂರಿನ ಒಂದು ವಿಶೇಷ ವೈಶಿಷ್ಟ್ಯವೇನಿರುತ್ತದೆ ಎನ್ನುವುದರ ಬಗ್ಗೆ ಈ ಮೈಸೂರನ್ನು ಇತರ ಪ್ರಾಂತ್ಯಗಳಿಗೆ ಹೋಲಿಸಿ ನೋಡಿದರೆ ಈ ನಮ್ಮ ಮೈಸೂರಿನ ಜನತೆ ಹೆಚ್ಚು ಅಭಿವೃದ್ಧಿ ಹೊಂದಿದೆ. ನಮ್ಮ ಆಡಳಿತ ಒಂದು ಸುವ್ಯವಸ್ಥೆಯಿಂದ ನಡೆದುಕೊಂಡು ಬರುತ್ತಿದೆ. ಈ ವಿಷಯಗಳನ್ನು ನಾವು ಹೇಳುವುದು ಬೇಡ, ಅನೇಕ ದೊಡ್ಡ ದೊಡ್ಡ ಮಹನೀಯರುಗಳೇ ಹೇಳಿದ್ದಾರೆ.

ಒಂದು ವೇಳೆ ಇವೊತ್ತಿನ ದಿವಸ ಕರ್ಣಾಟಕ ಪ್ರಾಂತ್ಯ ಆಗಬೇಕು ಎನ್ನುವ ದೃಷ್ಟಿಯಿಂದ ನಮ್ಮನ್ನು ನಾವೇ ತೆಗಳಿಕೊಳ್ಳುವುದಾದರೆ ಅಂಥವರಿಗೆ ನಾನು ಏನೂ ಹೇಳುವುದಕ್ಕಾಗುವುದಿಲ್ಲ. ಹೊರಗಿನಿಂದ ಬಂದ ಎಲ್ಲಾ ದೊಡ್ಡ ಮನುಷ್ಯರೂ ಮೈಸೂರು ದೇಶದ ಆಡಳಿತ ಎಲ್ಲಾ ಪ್ರಾಂತಗಳಿಗಿಂತಲೂ ಸುವ್ಯವಸ್ಥಿತವಾಗಿ ನಡೆದುಕೊಂಡು ಬಂದಿದೆ, ಇಲ್ಲಿ ಎಲ್ಲಾ ವಿಚಾರಗಳಲ್ಲೂ ಆಗಿರುವ ಪ್ರಗತಿಯನ್ನು ಬೇರೆ ದೇಶಗಳಿಗೆ ಹೋಲಿಸಿ ನೋಡಿದರೆ ಮೈಸೂರು ಬಹಳ ಮುಂದುವರಿದಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಮೈಸೂರಿನಲ್ಲಿ ಏನು ವೈಶಿಷ್ಟ್ಯವಿದೆ ಎಂದು ಕೆಲವರು ಪ್ರಶ್ನೆಮಾಡಿದರು. ನಾನು ಹೇಳುತ್ತೇನೆ, ಮೈಸೂರಿನಲ್ಲಿ ಒಂದು ವೈಶಿಷ್ಟ್ಯವಿದೆ. ಅದೇನೆಂದರೆ ಭಾಷೆಗಳ ಮೇಲೆ ಪ್ರಾಂತಗಳು ಪುನರ್ವಿಂಗಡನೆಯಾಗಬೇಕು ಎಂದು ಹೇಳತಕ್ಕಂಥ ಕಾಲದಲ್ಲಿ ಬೊಂಬಾಯಿಯಲ್ಲಿರತಕ್ಕಂಥ ಜನರು, ಮದರಾಸಿನಲ್ಲಿರತಕ್ಕಂಥ ಜನರು, ಅಥವಾ ಹೈದರಾಬಾದಿನಲ್ಲಿರತಕ್ಕಂಥ ಜನರು ನೂರಾರು ವರ್ಷಗಳಿಂದ ಇದ್ದಂಥ ಪ್ರಾಂತಗಳಲ್ಲಿರುವುದಕ್ಕೆ ತಯಾರಾಗಿಲ್ಲದೆ ಅಲ್ಲಿ ಬಹಳ ಕಷ್ಟಪಡುತ್ತಿದ್ದು ಮತ್ತು ಅಲ್ಲಿಯ ಸರ್ಕಾರದವರು ಅವರನ್ನು ಕಡೆಗಣ್ಣಿನಲ್ಲಿ ನೋಡುತ್ತಿರುವುದರಿಂದ ಅವರು ಬೇರೆ ಪ್ರಾಂತಕ್ಕೆ ಸೇರಬೇಕು ಎನ್ನುತ್ತಿದ್ದಾರೆ. ಮೈಸೂರಿನಲ್ಲಿ ಕನ್ನಡಿಗರೂ ಅಲ್ಲದೆ, ಬೇರೆ ಭಾಷೆ ಮಾತನಾಡತಕ್ಕ ಅಂದರೆ ತಮಿಳರೂ, ತೆಲುಗರೂ ಇದ್ದಾರೆ. ಅವರು ಮೈಸೂರು ದೇಶದಲ್ಲಿರುವುದಕ್ಕೆ ಕಷ್ಟವಾಗಿದೆ, ಈ ದೇಶವನ್ನು ಬಿಟ್ಟು ಹೋಗುತ್ತೇವೆ ಎಂದು ಹೇಳುತ್ತಾರೆಯೇ? ತೆಲುಗರು ಆಂಧ್ರಪ್ರಾಂತವಾಗಿದೆ, ಅಲ್ಲಿಗೆ ಹೋಗುತ್ತೇವೆ ಎಂದು ಹೇಳುತ್ತಾರೆಯೇ? ಇಲ್ಲ. ಅದೇ ವೈಶಿಷ್ಟ್ಯ ಇಲ್ಲಿರುವುದು. ಆ ವೈಶಿಷ್ಟ್ಯ ಇಲ್ಲದೇಹೋದ ಪಕ್ಷದಲ್ಲಿ ಆಂಧ್ರಪ್ರಾಂತರಚನೆಯಾದ ಕಾಲದಲ್ಲಿ ಇಲ್ಲಿ ತೆಲುಗು ಮಾತನಾಡತಕ್ಕ ಜನರು ಆಂಧ್ರಕ್ಕೆ ಹೋಗುತ್ತೇವೆ ಎಂದೇ ಹೇಳಬಹುದಾಗಿತ್ತು. ಮೈಸೂರು ಇದ್ದಹಾಗೆ ಇದ್ದಿದ್ದರೆ ಅವರು ಕನ್ನಡಿಗರಾಗಿಲ್ಲದೆ ಹೋದರೂ, ಮಾತೃಭಾಷೆ ತೆಲುಗು ಆಗಿದ್ದರೂ ಆಂಧ್ರರಿಗೆ ಬೇರೆ ರಾಜ್ಯ ಮಾಡಿದರೂ ಕೂಡ ಇಲ್ಲ ಅಂತಹ ವೈಶಿಷ್ಟ್ಯವಿರುವುದರಿಂದ ಆ ವೈಶಿಷ್ಟ್ಯಕ್ಕೆ ಮಾರುಹೋಗಿ ಇಲ್ಲಿಯೇ ಇರುತ್ತೇವೆಂದು ಹೇಳುವುದೇ ಇಲ್ಲಿಯ ವೈಶಿಷ್ಟ್ಯ. ಭಾಷೆಯ ಆಧಾರದ ಮೇಲೆ ಕನ್ನಡ ಭಾಗಗಳೆಲ್ಲಾ ಒಂದಾಗಿ ಸೇರುವುದಾದರೆ ಆಗ ಶ್ರೀ ಮುಲ್ಕ ಗೋವಿಂದ ರೆಡ್ಡಿಯವರು ಹೋಗುತ್ತಾರೆ. ಇಲ್ಲದಿದ್ದರೆ ಇಲ್ಲ. ನನಗೆ ತಿಳಿದಮಟ್ಟಿಗೆ ಇದುವರೆಗೆ ಅವರು ಬಿಟ್ಟುಹೋಗುತ್ತೇನೆಂದು ಹೇಳಿಲ್ಲ. ಸ್ವಾಮಿ. ನಮ್ಮ ಮೈಸೂರು ದೇಶದ ವೈಶಿಷ್ಟ್ಯ ಈ ರೀತಿಯಾಗಿದೆ. ನಮ್ಮ ಪ್ರಾಂತದಲ್ಲಿ ಇಲ್ಲದೇ ಇರುವ ಜನರನ್ನು ಸಹೋದರರೆಂದು ಪ್ರೀತಿಸಬೇಕು ಎಂದು ಕೆಲವರು ವಾದಮಾಡಿದ್ದಾರೆ. ಆದರೆ ಇಲ್ಲಿ ಇರುವ ಸಹೋದರರನ್ನು ಪ್ರೀತಿಸಿ ಇಲ್ಲಿರುವಹಾಗೆ ಮಾಡಬೇಕಾದರೆ ನಾವು ಯಾವ ರೀತಿ ಮುಂದುವರಿಯಬೇಕು, ಎಂದು ಹೇಳತಕ್ಕಂಥಾದ್ದು ನಮ್ಮ ಮುಂದಿರುವ ಪ್ರಶ್ನೆ. ಸ್ವಾಮಿ, ಶ್ರೀಮಾನ್ ಗೋಪಾಲಗೌಡರು ಮಾತನಾಡುತ್ತಾ ನಾವು ಕರ್ಣಾಟಕಪ್ರಾಂತ ಮಾಡತಕ್ಕ ಕಾಲದಲ್ಲಿ ತೆಲುಗರು ಮತ್ತು ತಮಿಳರು ಬೇರೆಯಾಗಿ ಹೋಗುವುದಕ್ಕೆ ಇಚ್ಛೆಪಟ್ಟರೆ ಬಿಟ್ಟುಹೋಗುವುದಕ್ಕೆ ಅವಕಾಶ ಕೊಡೋಣ, ಹೋದರೂಹೋಗಲಿ ಎನ್ನುವ ತರಹ ಹೇಳಿದರು. ಕರ್ಣಾಟಕ ಪ್ರಾಂತ ಬೇಡ ಎನ್ನತಕ್ಕಂಥ ಜನರು ಬಹಳ ಸಂಕುಚಿತ ಮನೋಭಾವದಿಂದ ಹಾಗೆ ಮಾತನಾಡುತ್ತಾರೆ ಎಂಬುದಾಗಿ ಅವರು ಬಹಳ ಸ್ವಾರ್ಥಪರತೆಯಿಂದ ಹೇಳಿದರು. ಇದು ಕೂಡದು. ಬಹಳ ದೂರದೃಷ್ಟಿಯಿಂದ ಈ ಸಮಸ್ಯೆಯನ್ನು ನೋಡಬೇಕು ಎಂದು ಅವರೇ ವಾದಮಾಡಿದ್ದಾರೆ. ನೂರಾರು ವರ್ಷಗಳಿಂದ ಬಂದಿರತಕ್ಕಂಥ ನಮ್ಮ ಸ್ನೇಹಿತರು ನಮ್ಮನ್ನು ಬಿಟ್ಟು ಹೊರಟು ಹೋಗುತ್ತಾರೆಂದು ಹೇಳಿದರೆ ನಾವು ಸುಲಭವಾಗಿ ಒಪ್ಪಿಕೊಂಡುಬಿಡೋಣ. ಇದುವರೆಗೆ ನಮ್ಮ ಜೊತೆಯಲ್ಲಿ ಬೆಳೆದು ನಮ್ಮ ಕಷ್ಟಸುಖಗಳನ್ನು ಅನುಭವಿಸಿ ದೇಶವು ಒಂದು ಪ್ರಗತಿ ಮಟ್ಟವನ್ನು ಮುಟ್ಟುವುದಕ್ಕೆ ಮತ್ತು ಅಭಿವೃದ್ಧಿಗೆ ಬರುವುದಕ್ಕೆ ಭಾಗಿಗಳಾದ ಸಹೋದರರನ್ನು ಬಿಟ್ಟುಬಿಡಬೇಕೆಂಬ ಮನೋಭಾವವುಳ್ಳ ಜನರು ಕನ್ನಡ ಪ್ರಾಂತ್ಯ ಬೇಡ ಎಂದು ಹೇಳುವವರು ಸಂಕುಚಿತ ಮನೋಭಾವದಿಂದ ಕೂಡಿದ್ದಾರೆಂದು ಹೇಳಿದರೆ ನನಗೆ ಅರ್ಥವಾಗುವುದಿಲ್ಲ. ಮೈಸೂರು identity ಯನ್ನು ಕಳೆದುಕೊಂಡು ಬಿಡುತ್ತದೆ, ಈ ರೀತಿಯಾಗಿ ಭಾಷಾವಾರು ಪ್ರಾಂತಗಳು ಆಗಬಾರದು ಎಂದು ಹೇಳಿದರೆ, ಕೆಲವು ಮಾನ್ಯ ಸದಸ್ಯರು ಯಾವ ರೀತಿಯಾಗಿ identity ಕಳೆದುಕೊಳ್ಳುತ್ತದೆಯೆಂದು ಕೇಳಿದರು. ಭಾಷೆಗಳ ಆಧಾರದ ಮೇಲೆ ಪ್ರಾಂತಗಳು ರಚನೆಯಾಗಬೇಕಾದರೆ; ಒಂದು ಭಾಷೆ ಮಾತನಾಡತಕ್ಕಂಥ ಜನರು ಒಂದೇ ಪ್ರಾಂತದಲ್ಲಿರಬೇಕೆಂದು ಹೇಳುವುದಾದರೆ ನಮ್ಮ constitutionನಲ್ಲಿ ನಮೂದುಮಾಡಿರತಕ್ಕಂಥ 14 ಭಾಷೆಗಳಿಗೆ ತಕ್ಕ ಹಾಗೆ 14 ಪ್ರಾಂತಗಳು ಆಗಬೇಕಾಗಿವೆ. ಈಗ ಸದ್ಯದಲ್ಲಿ ಈ ರೀತಿ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಎಲ್ಲರೂ ಒಪ್ಪಬೇಕಾಗಿದೆ. ಅದನ್ನು ಒಪ್ಪುವಹಾಗಿದ್ದರೆ ಇಂಡಿಯಾ ದೇಶದಲ್ಲಿ ಅದೇ ರೀತಿ ಮಾಡುತ್ತಿದ್ದರು. ದೊಡ್ಡ ಪ್ರಾಂತವನ್ನು ಚಿಕ್ಕದಾಗಿ ಮಾಡಬೇಕು ಎಂದು ವಾದಮಾಡುತ್ತಾರೆ. ಹಾಗ ಹಿಂದೀ ಮಾತನಾಡುವ ಜನರು ಎಲ್ಲರೂ ಒಂದೇ ಪ್ರಾಂತ್ಯದಲ್ಲಿರುವುದಕ್ಕೆ ಸಾಧ್ಯವೇ? ಒಂದೇ ಭಾಷೆ ಮಾತನಾಡತಕ್ಕಂಥ ಜನರು ಒಂದು ಪ್ರಾಂತ್ಯಕ್ಕಿಂತ ಹೆಚ್ಚಾಗಿ ಇದ್ದರೆ ಇರಬಹುದು. ಅದಕ್ಕೆ ಏನೂ ಅಡ್ಡಿ ಇಲ್ಲ. ಈ ವರದಿಯಲ್ಲಿ ಕೊನೆಯದಾಗಿ ಒಂದು ಭೂಪಟವನ್ನು ಕೊಟ್ಟಿದ್ದಾರೆ. ಈ ಭೂಪಟವನ್ನು ನೋಡಿದರೆ ನಾವು ಕರ್ಣಾಟಕ ಪ್ರಾಂತವನ್ನು ಭಾಷೆಯ ಆಧಾರದ ಮೇಲೆ ರಚಿಸುವಾಗ ಮೈಸೂರು ಈಗ ಇರತಕ್ಕಂಥ ಅಸ್ತಿತ್ವವನ್ನು ಉಳಿಸಿಕೊಳ್ಳಬಹುದು ಮತ್ತು ಬೇರೆ

ಇನ್ನೊಂದು ಕರ್ಣಾಟಕ ಪ್ರಾಂತ ಆಗುವುದಕ್ಕೂ ಕೂಡ ಅವಕಾಶವಿದೆ ಎಂದು ಗೊತ್ತಾಗುತ್ತದೆ. ಹೈದರಾಬಾದಿನಲ್ಲಿ ಕರ್ಣಾಟಕಕ್ಕೆ ಸೇರಿದಂಥ ಡಿಸ್ಟ್ರಿಕ್ಟುಗಳೆಲ್ಲವೂ ಸೇರಿ ತುಂಗಭದ್ರಾ ನದಿಯಿಂದ ಆಚೆಗೆ ಇರುವ ಪ್ರದೇಶಗಳನ್ನು ಒಂದು ಕರ್ಣಾಟಕ ಪ್ರಾಂತವಾಗಿ ಮಾಡಬಹುದು. ಮತ್ತು ತುಂಗಭದ್ರಾನದಿಯಿಂದ ಈಚೆಗೆ ಇರುವ ಪ್ರದೇಶಗಳನ್ನು ಇನ್ನೊಂದು ಕರ್ಣಾಟಕ ಪ್ರಾಂತವನ್ನಾಗಿ ಬೇರೆಗಡನೆ ಮಾಡಬಹುದು. ಭೌಗೋಳಿಕವಾಗಿ ಕೆಲವು ಭಾಗಗಳು ಮೈಸೂರಿಗೆ ಸೇರುವುದಕ್ಕೆ ಅನುಕೂಲತೆ ಇದೆ. ಅವುಗಳನ್ನೂ ಕೂಡ ಬಣ್ಣಹಾಕಿ ತೋರಿಸಿದ್ದಾರೆ, ಅಂದರೆ, ದಕ್ಷಿಣ ಕನ್ನಡ, ಕೊಡಗು, ಕೊಳ್ಳೇಗಾಲ, ಈ ಪ್ರಾಂತಗಳು ಮೈಸೂರಿಗೆ ಭೌಗೋಳಿಕವಾಗಿ ಸೇರಬಹುದು. ಆಗ ಶ್ರೀಮಾನ್ ಕೆ. ಪಟ್ಟಾಭಿರಾಮರ್ರವರು "ನಮ್ಮ ದೇಶದ ವ್ಯಾಪಾರದ ಅಭಿವೃದ್ಧಿಗೆ ಧಕ್ಕೆಯಾಗಿದೆ, ತೊಂದರೆಯಾಗಿದೆ, ಆದ್ದರಿಂದ ಬಂದರು ಬರುವುದರಿಂದ ಮೈಸೂರಿಗೆ ಬೇಕಾದಷ್ಟು ಅನುಕೂಲವಾಗುತ್ತದೆ" ಎಂದು ವಾದಮಾಡಿರುವುದಕ್ಕೆ ಈ ಪ್ರದೇಶಗಳನ್ನು ಸೇರಿಸಿಕೊಳ್ಳುವುದರಿಂದ ಸಮರ್ಥನೆ ದೊರೆತಹಾಗಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆ ಸೇರುವುದರಿಂದ ಮಂಗಳೂರು ಬಂದರೂ ಕೂಡ ನಮ್ಮ ರಾಜ್ಯಕ್ಕೆ ಸಿಕ್ಕುತ್ತದೆ. ಈ ರೀತಿಯಾಗಿ ಎರಡು ಕರ್ಣಾಟಕಗಳನ್ನು ಮಾಡುವುದಕ್ಕೆ ಅವಕಾಶವಿದೆಯೆಂದು ಶ್ರೀಮಾನ್ ವೀರಣ್ಣಗೌಡರು ಏನು ಸೂಚನೆ ಮಾಡಿದ್ದಾರೋ ಅದನ್ನು ನಾನು ಸ್ಪಷ್ಟೀಕರಿಸುತ್ತೇನೆ. ಕನ್ನಡ ಭಾಷೆ ಮಾತನಾಡುವವರು ಒಂದೇ ಪ್ರಾಂತದಲ್ಲಿರಬೇಕು, ಎರಡು ಪ್ರಾಂತಗಳು ಆಗಕೂಡದು. ಹಾಗೆ ಮಾಡಿದರೆ ಇದನ್ನು ಒಡೆದುಹಾಕಿದ ಹಾಗೆ ಆಗುತ್ತದೆ ಎಂದು ಹೇಳುವುದು ವಿಚಿತ್ರವಾದ ವಾದ. "ಶಾಂತಂ ಪಾಪಂ" ಎಂದು ಕಿವಿಮುಚ್ಚಿಕೊಳ್ಳಬೇಕು ಎಂದು ಯಾರೂ ತಿಳಿಯಬೇಕಾಗಿಲ್ಲ. ಇದು ಹೊಸದು ಅಲ್ಲ. ಕನ್ನಡ ಪ್ರಾಂತಗಳು ಆಗಬೇಕೆಂದು ಯಾವ ಯಾವ ಮುಖಂಡರು ಹೇಳುತ್ತಿದ್ದಾರೋ ಅವರೇ ಎರಡು ಪ್ರಾಂತಗಳಾದರೂ ಆಗಬಹುದೆಂದು ಹೇಳಿರುವುದನ್ನು ತಮ್ಮ ಮುಂದೆ ಉದಹರಿಸುತ್ತೇನೆ. "Replies and Memorandum to the Linguistic Provinces Commission by Representatives and Associations of Madras Karnataka ಎಂಬುದು ಒಂದು ಪುಸ್ತಕವಿದೆ. ಮದ್ರಾಸ್ ಕರ್ಣಾಟಕದಲ್ಲಿ ಒಂದು questionnaire ಕಳುಹಿಸಿ ಕರ್ಣಾಟಕ ಯಾವ ರೀತಿಯಾಗಬೇಕು ಎಂದು ಸತ್ತಾರು ಪ್ರಶ್ನೆಗಳನ್ನು ಕೇಳಿದ್ದಕ್ಕೆ ಉತ್ತರವಾಗಿ ಒಂದು ಕಡೆ ಶ್ರೀಮಾನ್ ಕೆ. ಆರ್. ಕಾರಂತ್‌ರವರು ಈ ರೀತಿ ಹೇಳಿದ್ದಾರೆ :

"But with or without Mysore, United Karnataka must have a new province. Otherwise, its people cannot have any decent existence. With Mysore, Bangalore will be the capital and without Mysore Hubli or Dharwar. If the former, not much extra capital need be spent. With the latter also the smallest capital need be spent. Some portion of the cost should be met from the reserve funds and contributions of Madras and Bombay Governments. The rest by a loan. Anyway not much should or need be spent."

ಆ ಮೇಲೆ ಇನ್ನೊಂದು ವಾದ ಏನು ಇದೆ ಎಂದರೆ...

ಶ್ರೀ ಇಜಾರಿ ಸಿರಿಸಪ್ಪ (ಹರಪನಹಳ್ಳಿ).—It gives a wrong opinion. ಮೈಸೂರು ಸಂಸ್ಥಾನದಲ್ಲಿರುವವರು ಒಪ್ಪದೆ ಬೇರೆ ಸರ್ಕಾರದಲ್ಲಿರುವವರು ಬರುವುದಕ್ಕೆ ಸಾಧ್ಯವಿಲ್ಲ, ಮೈಸೂರು ಮುಂದೆ ಬಂದಾಗ ಸೇರಿಸಿಕೊಳ್ಳೋಣ ಎಂದು ಹೇಳಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಅವರು ಹತ್ತಾರು ಪ್ರಶ್ನೆಗಳನ್ನು ಕೇಳಿದ್ದಾರೆ. ಒಂದು ವೇಳೆ ಮೈಸೂರು ಸೇರದೆ ಹೋದರೆ, ಹೈದರಾಬಾದ್ ಸೇರದೆ ಹೋದರೆ ಹೀಗಾದರೂ ಮಾಡೋಣ ಎಂದು ಹೇಳಿದ್ದಾರೆ. ನಾನು ಬೇರೆ ತರಹ quote ಮಾಡಿಲ್ಲ. ಶ್ರೀಮಾನ್ ಕಾರಂತ್‌ರವರು ಏನು ಹೇಳಿದ್ದಾರೋ ಅದನ್ನೇ ತಮ್ಮ ಮುಂದೆ ಇಟ್ಟಿದ್ದೇನೆ. ನಾವು ಎರಡು ಕರ್ಣಾಟಕ ಪ್ರಾಂತಗಳನ್ನು ಮಾಡುವುದಕ್ಕೆ ಹೋದರೆ ಚಿಕ್ಕದಾಗುತ್ತದೆ. ಮತ್ತು ಆಡಳಿತ ದೃಷ್ಟಿಯಿಂದ ನೋಡಿದರೆ ಬಹಳ ತೊಂದರೆಯಾಗುತ್ತದೆ. ಚಿಕ್ಕದಾಗಿರಬಾರದು, ವಿಶಾಲವಾಗಿರಬೇಕು. ಸಾವಿರಮೈಲಿ ಉದ್ದವಿರಬೇಕು. ಎಂಬುದಾಗಿ ಹೇಳಿದರು. ಅವರೇ ಒಂದು ಮಾತನ್ನು ಹೀಗೆ ಹೇಳಿದ್ದಾರೆ. "Close and intensive development in a smaller province will mean more progress."

Sri L. C. Pais, B.A. B.L., M.L.A., Ex-Parliamentary Secretary, Local Administration, Government of Madras and Elected Chairman of the Mangalore Municipality, ಅವರು ಇದೇ ತರಹ ಪ್ರಶ್ನೆಗೆ ಹೀಗೆ ಉತ್ತರವನ್ನು ಕೊಟ್ಟಿದ್ದಾರೆ :

"Even if the States do not join, the creation of the Province cannot be put off. The States may come in later. ...The cost of the creation of a new capital could be met from out of the capital allocations that are bound to be made to the new Province by the parent States."

ಶ್ರೀ ಪಾಂಗಾಳ್ ಲಕ್ಷ್ಮೀನಾರಾಯಣ ನಾಯಕ್, ಪ್ರೆಸಿಡೆಂಟ್, ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿ, ಸೌತ್ ಕೆನರಾರವರು ಹೀಗೆ ಹೇಳಿದ್ದಾರೆ :

"As far as we know the Revenue calculated on the basis of 1945–46 basis comes to Rs. 10·15 crores and the expenses to Rs. 8·7 crores in the British Karnatak alone, leaving a surplus of 1·8 crores. The only two remaining States are Mysore and Hyderabad. Even if these two States are not willing to join the new province, the revenue, population and size of the remaining portion still warrant the creation of a new province."

ಆದ್ದರಿಂದ, ಎರಡು ಕರ್ಣಾಟಕವಾಗಬೇಕೆಂದು ಹೇಳತಕ್ಕದ್ದು ವಿಚಿತ್ರವೂ ಅಲ್ಲ; ಹೊಸದೂ ಅಲ್ಲ. ಹಿಂದಿನಿಂದಲೂ, ಇದು ಸಾಧ್ಯವಿಲ್ಲದೇ ಹೋದರೆ,

(ಶ್ರೀ ಡಿ. ದೇವರಾಜ ಅರಸ್.)

ಅಥವಾ ಒಂದು ಪ್ರಾಂತ್ಯ ಮಾಡಿಕೊಳ್ಳಬೇಕೆಂದು ಹೇಳಿ ಕರ್ನಾಟಕ ಪ್ರಾಂತ ಮುಖಂಡರನೇಕರು ಆ ವಾದ ವನ್ನೇ ಎತ್ತಿ ಹೇಳಿದ್ದಾರೆ.

4 P.M.

ಒಬ್ಬ ಸದಸ್ಯರು.—ಆಗದೇಹೋದರೆ ತಾನೆ!

ಶ್ರೀ ಡಿ. ದೇವರಾಜ ಅರಸ್.—ಹೌದು, ಮತ್ತು ಅದಕ್ಕೆ ಸಮರ್ಥನೆಯಾಗಿ ಅಂಕಿ ಅಂಶಗಳನ್ನೂ ಬೇಕಾದರೆ ಕೊಡುತ್ತೇನೆ.

Sri J. MOHAMED IMAM (Jagalur).—On a point of clarification. United Karnataka was one of the issues included in the Congress Manifesto last time. I will show you if you want.

ಶ್ರೀ ಡಿ. ದೇವರಾಜ ಅರಸ್.—ಸರಿ, ಸ್ವಾಮಿ; ಮೈಸೂರಿನಲ್ಲಿರತಕ್ಕ ಜನರೆಲ್ಲರೂ ಕೂಡ ಅವರನ್ನು ಸೇರಿಸಿಕೊಳ್ಳೋಣ ಎಂದು ಅಪೇಕ್ಷೆಪಟ್ಟರೆ ಸೇರೋಣ. ಈ ಮಾನ್ಯ ಸಭೆಗೆ ಗೊತ್ತಿರುವಂತೆ, ಅದು ಸಾಧುವಲ್ಲ, ಅದರಿಂದ ನಮಗೆ ತೊಂದರೆಯಾದೀತು, ಅಲ್ಲದೆ, ನಮ್ಮ ಸ್ನೇಹಿತರಾದ ತೆಲುಗರು ಬೇರೆ ಪ್ರಾಂತ್ಯಕ್ಕೆ ಹೋಗುತ್ತೇವೆಂದು ಹೇಳಿ ಷುರು ಮಾಡಿದರೆ ಬಹಳ ಕಷ್ಟವಾಗುತ್ತದೆ, ಎಂದು ಅನೇಕರು ಹೇಳಿದ್ದಾರೆ. ಆದ್ದರಿಂದ ಬೇರೆ ಪ್ರಾಂತ್ಯ ಮಾಡಲೆಂದು ಹೇಳುವುದು ವಿಚಿತ್ರವಲ್ಲವೆಂದು ಹೇಳುತ್ತೇನೆ. ವಿಸ್ತೀರ್ಣ ತೆಗೆದುಕೊಂಡರೂ, ಹಾಲಿ ನಮ್ಮಲ್ಲಿರುವುದು 32,000 ಚದರ ಮೈಲಿ, ಇದರ ಜೊತೆಗೆ ಹೊಸದಾಗಿ ಬರುವ ಭಾಗವನ್ನು ತೆಗೆದುಕೊಂಡರೆ ಇನ್ನೂ 42,000 ಚದರ ಮೈಲಿ ಸೇರಿಸಿದಂತಾಗುತ್ತದೆ. ಇದಿಷ್ಟು ಒಟ್ಟಿಗೆ ಇರುವ ಬದಲು, ಈಗಿರುವ 32,000 ಚದರ ಮೈಲಿಗಳ ಜೊತೆಗೆ ಮಂಗಳೂರು, ದಕ್ಷಿಣ ಕನ್ನಡ, ಕೊಡಗು, ಕೊಳ್ಳೇಗಾಲ–ಇವುಗಳನ್ನು ಮಾತ್ರ ಸೇರಿಸುವುದಾದರೆ ಇನ್ನು 4–5 ಸಾವಿರ ಚದರ ಮೈಲಿಗಳು ಸೇರಿದಂತಾಗುತ್ತದೆ. ಅಲ್ಲಿಗೆ ಇನ್ನೊಂದು ಪ್ರಾಂತ್ಯದಲ್ಲೂ ಹೆಚ್ಚು ಕಡಮೆ 38,000 ಚದರ ಮೈಲಿಗಳು ಉಳಿಯುತ್ತವೆ. ಜನಸಂದಣಿ ತೆಗೆದುಕೊಂಡರೂ ಇಲ್ಲಿಯೂ ಒಂದು ಕೋಟಿ ಜನ ಇರುತ್ತಾರೆ; ಅಲ್ಲಿಯೂ 90 ಲಕ್ಷ ಜನಸಂದಣಿಯಿದ್ದು ಸಾಕಷ್ಟಾಗುತ್ತದೆ. ಈ ರೀತಿಯಾಗಿ ಕರ್ನಾಟಕವೆಂಬ ಹೊಸ ಪ್ರಾಂತ್ಯ ನಿರ್ಮಾಣ ಮಾಡುವುದರಿಂದ ತಪ್ಪೇನೂ ಆಗುವುದಿಲ್ಲ. ಅದು ಸಾಧುವಾದ ಮಾರ್ಗವೆಂದು ನಾನು ಭಾವಿಸುತ್ತೇನೆ. ಶ್ರೀಮಾನ್ ಇಮಾಂರವರು 'ನೀವು ಒಪ್ಪದೇ ಹೋದರೆ' ಎಂದು ಒಂದು ಅನುಮಾನ ಹೇಳಿದರು. ಈಗ, ಒಪ್ಪುವುದಿಲ್ಲವೆಂಬುದು ತಮಗೆಲ್ಲಾ ಕಣ್ಣೆದುರಿಗೆ ಕಾಣುತ್ತಲೇ ಇದೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಯಾರು ಹೇಳಿದ್ದಾರೆ?

ಶ್ರೀ ಡಿ. ದೇವರಾಜ ಅರಸ್.—ಅದು ಸ್ವಯಂ ವಿದಿತವಾದ ಮಾತು. ಸುಮ್ಮನೆ ಎಲ್ಲರೂ ಒಪ್ಪುತ್ತಾರೆಂದು' ಹೇಳಿಕೊಂಡರೆ ಏನಾದೀತು ? 'ಬಹುಭಾಗದ ಜನರು ಒಪ್ಪುತ್ತಾರೆ, ಕೆಲವರು ಮಾತ್ರ ಒಪ್ಪುತ್ತಿಲ್ಲ' ಎಂದು ಅನೇಕರು ಹೇಳುತ್ತಿದ್ದಾರೆ. 'ಬಹುಭಾಗ ಜನ ಒಪ್ಪುತ್ತಿಲ್ಲ, ಕೆಲವರು ಮಾತ್ರ ಒಪ್ಪುತ್ತಾರೆ' ಎಂದು ನಾನು ಹೇಳುತ್ತೇನೆ. ಈ ಎರಡು ವಾದಗಳನ್ನೂ ತೀರ್ಮಾನಮಾಡುವವರು ಯಾರು ? ಇದಕ್ಕೆ ಸಂಬಂಧಪಟ್ಟ ಜನರು ತೀರ್ಮಾನಿಸಬೇಕು ಅಷ್ಟೆ; ಹೈಪವರ್ ಕಮಿಷನ್ನಿನವರಲ್ಲ. ಫ್ಯಾಕ್ಟ್ ಫೈಂಡಿಂಗ್ ಕಮಿಟಿಯಲ್ಲ. ಹತ್ತು ಜನರು ಹೋಗಿ 'ಬೇಕು' ಎಂದು ಹೇಳುವುದು, ಇನ್ನೂ ಹತ್ತು ಜನರು ಹೋಗಿ 'ಬೇಡ' ಎಂದು ಹೇಳುವುದು ಸರಿಯಲ್ಲ. ಯಾರಿಗೆ ಇದು ಅನ್ಯಾಯಸುತ್ತದೆಯೋ, ಯಾರಿಗೆ ತೊಂದರೆಯಾಗುತ್ತದೆಯೋ ಅವರನ್ನೇ ಕೇಳೋಣ. ರೆಫರೆಂಡಂ ಇಲ್ಲದಿದ್ದರೆ, ಈ Issue ಮೇಲೆ ನಾಳೆ ಚುನಾವಣೆಗೆ ನಿಲ್ಲೋಣ.

Sri J. MOHAMED IMAM.—On a point of clarification.

ಹಿಂದೆಲ್ಲಾ ಮೊದಲಿನಿಂದಲೂ ಕಾಂಗ್ರೆಸ್ಸಿನವರು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಅಖಂಡ ಕರ್ನಾಟಕ ಪ್ರಶ್ನೆಯನ್ನು ಸೇರಿಸಿಕೊಂಡೇ ಬಂದಿದ್ದಾರೆ. 1946ನೆಯ ಇಸವಿಯಿಂದಲೂ ಅದನ್ನು ಕಾಣಬಹುದು.

ಶ್ರೀ ಡಿ. ದೇವರಾಜ ಅರಸ್.—ಇನ್ನೊಂದು ವಿಚಾರವನ್ನು ನಾನು ಈ ಸಂದರ್ಭದಲ್ಲಿ ಮಾತನಾಡಬೇಕಾಯಿತು. ಕರ್ನಾಟಕ ವಾದಿಗಳಾದಂಥ ಮಾನ್ಯ ಸ್ನೇಹಿತರನೇಕರು ಈ ವಿಚಾರವನ್ನು ನನ್ನಲ್ಲಿ ಪ್ರಸ್ತಾಪಮಾಡಿದ್ದಾರೆ. ನಾನೂ ಕೂಡ ಅವರೊಡನೆ ಚರ್ಚೆಮಾಡಿದ್ದೇನೆ. ಇಂಥ ಒಂದು ಬಿಕ್ಕಟ್ಟು ದೇಶದಲ್ಲಿರುವಾಗ ಯಾವ ಜನರಿಗೆ ಒಳ್ಳೆಯದಾಗುತ್ತದೆಂದು ಹೇಳುತ್ತೇವೆಯೋ ಅವರನ್ನೇ ನೇರವಾಗಿ ಕೇಳೋಣ ಎಂದು ನಾನು ಸೂಚನೆ ಕೊಟ್ಟಾಗಲೆಲ್ಲಾ ಅವರು, ಬಿಡಿಬಿಡಿ, ಅದು ಮಾತ್ರ ಕೂಡದು ಎಂದು ಹೇಳುತ್ತಲಿದ್ದಾರೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಯಾರು ಹೇಳಿದರು!

ಶ್ರೀ ಡಿ. ದೇವರಾಜ ಅರಸ್.—ನೀವೇ ಸಾಕ್ಷಿ. ನೀವೆ ಈಗ ಒಪ್ಪಿಕೊಳ್ಳುತ್ತಿಲ್ಲವಲ್ಲ. ಯಾವಾಗಲೂ ಮೈಸೂರು ದೇಶದಲ್ಲಿ ಚುನಾವಣೆ ನಡೆದಾಗ ಕರ್ನಾಟಕ ಪ್ರಾಂತ್ಯ ಮಾಡುತ್ತೇವೆ ಅಥವಾ ಮೈಸೂರನ್ನೂ ಬಾಕಿ ಕನ್ನಡ ಪ್ರಾಂತ್ಯಗಳನ್ನೂ ಸೇರಿಸಿ ಈ ಪ್ರಾಂತ್ಯವನ್ನು ದ್ವಿಗುಣ ಮಾಡುತ್ತೇವೆಂದು ಹೇಳಿಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ (ಅರಸೀಕೆರೆ).—Include ಆಗಿದೆ.

ಶ್ರೀ ಡಿ. ದೇವರಾಜ ಅರಸ್.—Include ಆಗಿದ್ದರೂ ಆಗಿರಬಹುದು. ಆದರೆ ನಮ್ಮ ನಮ್ಮ constituency ಯೊಳಗೆ 'ಹೇಳಿದ್ದೇವೆಂದು' ಹೇಳಲಿ, ನೋಡೋಣ. ವಾಸ್ತವಾಂಶ ಹೀಗಿರುವಾಗ, ಬಹುಭಾಗದ ಜನ ಒಪ್ಪದಿರುವಾಗ.........

MEMBERS.—Question Question !!!

ಶ್ರೀ ಡಿ. ದೇವರಾಜ ಅರಸ್.—ನಾನು challenge ಮಾಡುತ್ತೇನೆ. ಯಾರು ಮುಂದೆ ಬಂದು ಹೇಳುತ್ತಾರೆ ನೋಡೋಣ!

Sri M. LINGANNA (Nanjangud).—I rise to a point of privilege, Sir. ಮಾನ್ಯ ಅರಸ್ ರವರು ಅಷ್ಟು ಬಿರುಸಾಗಿ ಮಾತನಾಡುವುದು ಪಾರ್ಲಿಮೆಂಟರಿ ಸಂಪ್ರದಾಯಕ್ಕನುಗುಣವಾಗಿಲ್ಲ. There are rulings and precedents in the Parliment to the effect that even gestures or challenges have been construed as threats and it would be unparliamentary; and of course we can reply in a jocular manner. To say "I will give a challenge" to the member showing a fist like this is unparlimentary.

ಶ್ರೀ ಡಿ. ದೇವರಾಜ ಅರಸ್.—ಹೌದು, ಶ್ರೀ ಲಿಂಗಣ್ಣನವರ ಹಾಗೆ 'ಪಿಸ್ ಪಿಸ್' ಎಂದು ಮಾತನಾಡುವುದಕ್ಕೆ ನನಗೆ ಬರುವುದಿಲ್ಲ. ಯಾವಾಗಲೂ ಗಟ್ಟಿ

ಯಾಗಿಯೇ ಮಾತನಾಡುವುದು ನಮ್ಮ ಸ್ವಭಾವ. ಆದರೆ, ಅವರು ನಮ್ಮ ಹಳ್ಳಿಯ ಜನರ ಮನಃಪರಿವರ್ತನೆಯಾಗಬೇಕೆಂದು ಹೇಳಿದರು. ಹಳ್ಳಿಯ ಜನರ ಮನಃಪರಿವರ್ತನೆಯಿಂದ ಇದು ಆಗುವುದಾದರೆ ಮಾಡಬಹುದು. ಈಗಂತೂ ಮನಃಪರಿವರ್ತನೆಯಾಗಿಲ್ಲ. ಮಹಾತ್ಮಾಗಾಂಧಿಯವರೇ ಭಾಷಾವಾರು ಪ್ರಾಂತ್ಯವಾಗಬೇಕೆಂದು ಹೇಳುತ್ತಿದ್ದರು, ಅವರ ತತ್ವವನ್ನೇ ಇವರು ಪ್ರತಿಪಾದಿಸುತ್ತಿಲ್ಲ, ಅದಕ್ಕೆ ವಿರೋಧವಾಗಿ ಕಾಂಗ್ರೆಸ್ಸಿನವರು ಹೋಗುತ್ತಿದ್ದಾರೆ ಎಂದು ಕೆಲವರು ಹೇಳಿದರು. ಭಾಷಾವಾರು ಪ್ರಾಂತ್ಯವೇ ಆಗಲಿ ಯಾವುದೇ ಆಗಲಿ ಜನರು ಒಪ್ಪದೆ ಇದ್ದಾಗ ಮಾಡಬೇಡಿ ಎಂದು ಮಹಾತ್ಮಾಗಾಂಧಿಯವರೇ ಹೇಳಿದ್ದಾರೆ. ಅವರು, ಯಾವುದನ್ನೂ ಅಹಿಂಸೆಯಿಂದರೇ ಸಾಧನೆಮಾಡಬೇಕೆಂದು ಕೂಡ ಬೋಧನೆಮಾಡಿದ್ದಾರೆ. ಹೀಗಿರುವಾಗ, ಜನರು ಒಪ್ಪಲಿ ಬಿಡಲಿ ಒಪ್ಪಿದ್ದಾರೆಂದು ಹೇಳಿಕೊಂಡು ಮಾಡಬೇಕೆಂದು ಅವರು ಎಂದೂ ಹೇಳಲಿಲ್ಲ. ಮೈಸೂರು ದೇಶದಲ್ಲಿ, ಕಾರಣ ಏನೇ ಇರಲಿ, ಒಂದು ಭಾಗದ ಜನಕ್ಕೆ ಒಂದು ಶಂಕೆ, ಒಂದು ಅನುಮಾನ, ಇದರಿಂದ ತೊಂದರೆಯಾಗುತ್ತದೆ ಎಂಬ ಮನೋಭಾವ ಇರತಕ್ಕ ಕಾಲದಲ್ಲಿ ಏನಾದರೂ ಆಗಲಿ ಎಲ್ಲರೂ ಒಟ್ಟಾಗಬೇಕು ಎಂದು ಅವರ ಮೇಲೆ impose ಮಾಡಬೇಕೆಂದು ಹೇಳುವ ಮನೋಭಾವ ಸರಿಯಲ್ಲ. ಜನಗಳ ಮನಸ್ಸಿನಲ್ಲಿರುವ ಈ ಶಂಕೆ ನಿವಾರಣೆಯಾದಾಗ ಮಾತ್ರ ಎಲ್ಲಾ ಪ್ರಾಂತ್ಯಗಳನ್ನೂ ಒಂದುಗೂಡಿಸುವುದಕ್ಕೆ ಸಾಧ್ಯವೇ ಹೊರತು ಇಲ್ಲದಿದ್ದರೆ ಸಾಧ್ಯವಿಲ್ಲ. ಅವರ ಮನೋಭಿಪ್ರಾಯವನ್ನೂ ಅರಿತುಕೊಳ್ಳಬೇಕು. ಅದು ಬಿಟ್ಟು ಏನೇ ಆಗಲಿ, ಕೋಲಾರ ಡಿಸ್ಟ್ರಿಕ್ಟೇ ಹೋಗಲಿ ಬೆಂಗಳೂರು ಡಿಸ್ಟ್ರಿಕ್ಟು, ತುಮಕೂರು ಡಿಸ್ಟ್ರಿಕ್ಟಿನ ಕೆಲವು ಭಾಗ ಇಲ್ಲದಿದ್ದರೂ ಪರವಾಗಿಲ್ಲ, ನಾವೆಲ್ಲ ಒಂದಾಗೋಣವೆಂದರೆ ನನಗೆ ಇನ್ನೂ ಅನುಮಾನ ಜಾಸ್ತಿಯಾಗುತ್ತದೆ.

ಒಬ್ಬ ಸದಸ್ಯರು.—ಯಾರೂ ಹಾಗೆ ಹೇಳಲಿಲ್ಲ.

ಶ್ರೀ ಡಿ. ದೇವರಾಜೇ ಅರಸ್.—ಭಾಷೆಯ ಮೇಲೆ ಆಗಬೇಕೆಂದು ಹೇಳಿದರೆ ಆಗ ಹಾಗೆಯೇ ಆಗುತ್ತದೆ. ಭಾಷೆಯ ಪ್ರಕಾರ ಹೋಗುವುದಾದರೆ ತೆಲುಗು ಮಾತನಾಡುವವರಿಗೂ ಬೇರೆಯಾಗುವುದಕ್ಕೆ ಅವಕಾಶಕೊಟ್ಟೆ ಕೊಡಬೇಕಾಗುತ್ತದೆ. ಆ ಜನಗಳು ಹೋಗುವುದಕ್ಕೆ ಇಷ್ಟಪಟ್ಟರೆ ಬಿಟ್ಟುಬಿಡೋಣ ಎಂದು ಹೇಳುವುದರಲ್ಲಿ ಅರ್ಥವೇನು ?

ಅಧ್ಯಕ್ಷರು.—ಯಾರೂ ಹೇಳಲಿಲ್ಲವೆಂದು ಹೇಳುತ್ತಾರೆ.

ಶ್ರೀ ಡಿ. ದೇವರಾಜೇ ಅರಸ್.—ಭಾಷೆಯ ಆಧಾರದ ಮೇಲೆ ಏಕೀಕರಣವಾಗಬೇಕೆಂದು ಹೇಳಿದರೆ. ಈ ಸಮಸ್ಯೆ ಉದ್ಭವಿಸಿಯೇ ಉದ್ಭವಿಸುತ್ತದೆ.

ಶ್ರೀ ಮುಲ್ಕ ಗೋವಿಂದರೆಡ್ಡಿ (ಚಿತ್ರದುರ್ಗ).—ನಾವೆಲ್ಲಾ ಹೇಳಿದ್ದೇವೆ, ಒಂದು ಭಾಷೆಯ ಆಧಾರದ ಮೇಲೆ ರಾಜ್ಯಕಟ್ಟಬೇಕೆಂದು ಹೇಳುವಾಗ ನಾವು ಇಲ್ಲಿರತಕ್ಕುದು ನ್ಯಾಯವೂ ಅಲ್ಲ, ನಾವು ಇರುವುದೂ ಇಲ್ಲ.

ಶ್ರೀ ಡಿ. ದೇವರಾಜೇ ಅರಸ್.—ಈ ರೀತಿಯಮಾತು ಹೊರಗಡೆಯೂ ಬಂದಿದೆ. ಆಂಧ್ರ ಬಿಲ್ಲನ್ನು ಚರ್ಚೆ ಮಾಡುವಾಗ ಕೂಡ ಇದನ್ನು ಹೇಳಿದ್ದಾರೆ. ಇದರಿಂದ ತೊಂದರೆಯಾಗುತ್ತದೆಂದು ನನ್ನ ಭಾವನೆ.

ಕೊನೆಯದಾಗಿ ಹೇಳುವುದಾದರೆ, ಭಾಷೆಯ ಅಧಾರದ ಮೇಲೆ ಪ್ರಾಂತ್ಯವನ್ನು ಮಾಡುವುದರಿಂದ ಮುಂದೇನೋ ಒಳ್ಳೆಯದಾಗುತ್ತದೆಂದು ಹೇಳಿದರು. ಬೇರೆ ಬೇರೆ ಭಾಷೆಯನ್ನಾಡತಕ್ಕ ಅನೇಕ ಜನರಿದ್ದು, ಮಾನ್ಯ ಮಂತ್ರಿಗಳು ಹೇಳಿದ ಹಾಗೆ, ಮೈಸೂರು ದೇಶ ಒಂದು Composite State ಆಗಿದೆ. ಹೀಗೆ Composite State ಆಗಿರುವುದರಿಂದ ನಮಗೆ ಆಗಿರತಕ್ಕ ತೊಂದರೆಯೇನು ? Composite State ಹೋಗಿ ಏಕ ಭಾಷೆಯ-ದೇಶವಾದರೆ ಬರತಕ್ಕ ಒಳ್ಳೆಯದೇನು ? ಈಗ ನಮ್ಮ ಮುಂದೆ ದೊಡ್ಡ ವಿಧಾನ ಸೌಧ ಕಟ್ಟುತ್ತಿದ್ದೇವೆ. ಹೀಗೆಯೇ ಇನ್ನೂ ಅನೇಕ ದೊಡ್ಡ ದೊಡ್ಡ ಯೋಜನೆಗಳನ್ನು ಕೈಕೊಂಡು ನಡೆಸುತ್ತಿದ್ದೇವೆ. ಎಲ್ಲೆಲ್ಲಿ ಹೋಗಿ ನೋಡಲಿ ತಮಿಳರು ತೆಲುಗರೇ ಆ ಕೆಲಸ ಕಾರ್ಯಗಳಲ್ಲಿ ಹೆಚ್ಚುಭಾಗ ಮಾಡುತ್ತಿರುತ್ತಾರೆ. ಇಂಥ ಸಮಯದಲ್ಲಿ ಪ್ರಾಂತ್ಯಗಳನ್ನು ಭಾಷೆಯ ಮೇಲೆ ಕಟ್ಟಬೇಕೆಂದು ಹೇಳಿ ಅವರೆಲ್ಲರೂ ಹೊರಟು ಹೋದರೆ ಹೋಗಲಿ ಎಂದು ಹೇಳುವುದು ನನಗರ್ಥವಾಗುವುದಿಲ್ಲ. ಹಿಂದಿನಿಂದ ಬಂದ ಸಹೋದರರನ್ನು ಉಳಿಸಿಕೊಳ್ಳುವುದಕ್ಕಾದರೂ ಇದ್ದದ್ದು ಹಾಗೆಯೇ ಇರಲಿ. ಒಂದು ವೇಳೆ ಇರತಕ್ಕ ಪ್ರಾಂತ್ಯವನ್ನು ಸ್ವಲ್ಪ ಜಾಸ್ತಿ ಮಾಡುವುದು ಅಖಿಲ ಭಾರತ ದೃಷ್ಟಿಯಿಂದ ಸರಿಯೆಂದು ತೋರುವುದಾದರೆ ಆ ರೀತಿ ಪ್ರಾಂತ್ಯಗಳನ್ನು ಸೇರಿಸುವುದರಿಂದ ಅಭ್ಯಂತರವೇನಿಲ್ಲ. ಅದೇ ಪ್ರಕಾರ ಹಿಂದೆ ಕಾನ್ಸ್ಟಿಟ್ಯುಯಂಟ್ ಅಸೆಂಬ್ಲಿಯಲ್ಲಿ ಒಂದು ನಿರ್ಣಯವನ್ನು ಕೂಡ ಮಾಡಿತ್ತು. ಆದ್ದರಿಂದ ಆ ರೀತಿ ಮಾಡುವುದು ಆ ನಿರ್ಣಯಕ್ಕೂ ಅನುಗುಣವಾಗಿರುತ್ತದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಸ್ವಾಮಿ, ಈ ಸಭೆಯ ಮುಂದಿರತಕ್ಕ ಕರ್ಣಾಟಕ ಪ್ರಾಂತ್ಯರಚನೆ ಅಥವಾ State Re-organisation ಸಂಬಂಧವಾಗಿ ಇರತಕ್ಕ ಅಂಕಿ ಅಂಶಗಳ ಮೇಲೆ ಮಾತನಾಡುವುದಕ್ಕೆ ಮುಂಚೆ ಒಂದು ಗಮನಾರ್ಹವಾದ ವಿಷಯವನ್ನು ನಾನು ಸೂಚಿಸಬೇಕಾಗಿದೆ. ನಾವು ಈ ಸಂದರ್ಭದಲ್ಲಿ ಮೈಸೂರಿಗೆ ಸಂಬಂಧಪಟ್ಟಂತೆ ಮಾತ್ರವಾಗಿ ಚರ್ಚೆ ನಡೆಸಿದರೆ ನಮ್ಮ ಚರ್ಚೆ ಅಷ್ಟು ವಿಶಾಲ ಭಾವನೆಯಿಂದ ಕೂಡಿದ ಚರ್ಚೆಯಾಗಲಾರದು. ಆದ್ದರಿಂದ ಮೈಸೂರಿನ ಸೌಖ್ಯವನ್ನು ಮಾತ್ರ ನಾವು ಪರಿಗಣಿಸುವುದು ಒಳ್ಳೆಯದಲ್ಲ. ಕೆಲವರು ಹೇಳಿದರು, ಹಾಗಿದ್ದರೆ ಪ್ಲೆಬಿಸೈಟ್ ತೆಗೆದುಕೊಳ್ಳಿ ; ಭಾಷಾವಾರು ರೀತ್ಯಾ ಪ್ರಾಂತ್ಯ ರಚನೆಯಾಗಬೇಕೇ ಎಂಬುದನ್ನು ಆ ಮೂಲಕ ನಿರ್ಧರಿಸಿ ಎಂದು. ಆದರೆ, ಆ ರೀತಿಯಲ್ಲಿ ಮೈಸೂರಿನಲ್ಲಿ ಮಾತ್ರ ಪ್ಲೆಬಿಸೈಟ್ ತೆಗೆದುಕೊಳ್ಳಬೇಕೇ ಅಥವಾ ಕರ್ಣಾಟಕ ಪ್ರಾಂತ್ಯಕ್ಕೆ ಸೇರಿದ ಎಲ್ಲ ಪ್ರಾಂತ್ಯದಲ್ಲೂ ಪ್ಲೆಬಿಸೈಟ್ ತೆಗೆದುಕೊಳ್ಳಬೇಕೇ ಎಂಬುದು ಪಾರ್ಲಿಮೆಂಟಿಗೆ ಸಂಬಂಧಪಟ್ಟ ವಿಷಯ. ಪಾರ್ಲಿಮೆಂಟಿನವರು, ನಿಜವಾಗಿಯೂ ಆ ದಿಕ್ಕಿನಲ್ಲಿ ಯೋಚನೆ ಮಾಡುವುದಾದರೆ, ಅಥವಾ ಕೇಂದ್ರ ಸರ್ಕಾರದವರು ಪ್ಲೆಬಿಸೈಟ್ ತೆಗೆದುಕೊಳ್ಳುವುದರಿಂದ ಈ ಪ್ರಶ್ನೆಯನ್ನು ಬಗೆಹರಿಸಬೇಕೆಂದು ಇಂಡಿಯಾ ದೇಶದ ಪ್ರಜೆಗಳ ಹಿತದೃಷ್ಟಿಯಿಂದ ಯೋಚನೆ ಮಾಡುವುದಾದರೆ, ಆಗ್ಗೆ ಕನ್ನಡ ಪ್ರಾಂತ್ಯದ ಎಲ್ಲ ಭಾಗದಲ್ಲೂ ಪ್ಲೆಬಿಸೈಟ್ ತೆಗೆದುಕೊಂಡರೆ ಈ ವಿಷಯದಲ್ಲಿ ಒಂದು ಮೆಜಾರಿಟಿ ಬರುತ್ತದೆಂದು ನನ್ನ ಭಾವನೆ. ಹಾಗಿಲ್ಲದೆ ಮೈಸೂರಿನಲ್ಲಿ ಮಾತ್ರ ಪ್ಲೆಬಿಸೈಟ್ ತೆಗೆದುಕೊಳ್ಳಬೇಕೆನ್ನುವುದು ನ್ಯಾಯವಲ್ಲವೆಂದು ನಾನು ಒತ್ತಿ ಹೇಳುತ್ತೇನೆ.

ಇಷ್ಟು ಹೇಳಿದ ಮೇಲೆ, ನಾನು ಭಾಷೆಗೆ ಪ್ರಾಧಾನ್ಯ ಕೊಡುವ ವಿಷಯದಲ್ಲಿ ಒಂದು ಮಾತ್ರ ಹೇಳುತ್ತೇನೆ. ಭಾಷೆಯ ಆಧಾರದ ಮೇಲೆ ಭಾಷಾವಾರು ಪ್ರಾಂತ್ಯವಾಗುವುದು ಬೇಡ ಎಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ಈ ಪ್ರಶ್ನೆಯನ್ನು ಸಾಮಾಜಿಕ, ರಾಜಕೀಯ, ಆರ್ಥಿಕದೃಷ್ಟಿಯಿಂದ ಮಾಡಬೇಕೆಂದು

(ಶ್ರೀ ಯು. ಎಂ. ಮಾದಪ್ಪ.)

ಹೇಳಿದರೂ ಭಾಷೆಗೆ ಪ್ರಾಧಾನ್ಯ ಇರಲೇಬೇಕು. ಅಂದರೆ ನಾನಾದರೂ ಈ ಭಾಷೆಯೊಂದರ ಪ್ರಾಧಾನ್ಯತೆಯ ಮೇಲೆ ಇದನ್ನು ಮಾಡಬೇಕೆಂದು ಹೇಳುತ್ತಿಲ್ಲ. ಇದನ್ನು ನಾನಾ ದೃಷ್ಟಿಯಿಂದ ಪರಿಶೀಲಿಸಿ ಇದರಿಂದ ತುಂಬ ಅನುಕೂಲವಿದೆಯೆಂದು ನಾನೀಗ ಇದನ್ನು ಪ್ರತಿಪಾದಿಸುತ್ತಿದ್ದೇನೆ. ಪ್ರತಿಯೊಂದು ರಾಜಕೀಯ ಪಕ್ಷಗಳೂ ಭಾಷಾವಾರು ಪ್ರಾಂತ್ಯರಚನೆಯ ವಿಚಾರದಲ್ಲಿ ರೆಸಲ್ಯೂಷನ್‌ಗಳನ್ನು ಪಾಸ್‌ಮಾಡಿ ಅವುಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ನಮ್ಮ ಭಾರತದಲ್ಲಿ ಹದಿನಾಲ್ಕು ಮುಖ್ಯ ಭಾಷೆಗಳಿರುತ್ತವೆ ಎಂಬುದನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಅದಕ್ಕನುಸಾರವಾಗಿಯೇ ನಾವೆಲ್ಲರೂ ಭಾಷಾವಾರು ಪ್ರಾಂತ್ಯಗಳು ರಚನೆಯಾಗಬೇಕೆಂದು ಹೇಳುತ್ತಿದ್ದೇವೆ. ಈ ರೀತಿ ರಾಜ್ಯಗಳ ಪುನರ್ವಿಂಗಡಣೆ ಆಗಲೇಬೇಕೆಂಬ ವಿಚಾರವನ್ನು ನಮ್ಮ ಅಖಿಲಭಾರತ ಕಾಂಗ್ರೆಸ್ ಸಂಸ್ಥೆಯವರು ಬಹಳ ಹಿಂದೆಯೇ ಹೇಳಿದ್ದಾರೆ. ಅಷ್ಟೇ ಅಲ್ಲದೆ ಮೊನ್ನೆ ತಾನೆ ನಡೆದ ಜನರಲ್ ಎಲೆಕ್ಷನ್ ಸಂಬಂಧದಲ್ಲಿ ಕಾಂಗ್ರೆಸ್ ಎಲೆಕ್ಷನ್ ಮ್ಯಾನಿಫೆಸ್ಟೋ ಪ್ಯಾರಾ 28ರಲ್ಲಿ ಹೀಗೆ ಹೇಳಿದ್ದಾರೆ:

Para 28 of the Congress Election Manifesto, 1952:

"A demand for redistribution of Provinces on a linguistic basis has been persistently made in the South and the rest of India. The Congress expressed itself in favour of linguistic provinces many years ago. A decision on this question ultimately depends upon the wishes of the people concerned. While linguistic regions have undoubtedly a certain cultural and other importance, there are other factors also, such as economic, administrative and financial, which have to be taken into consideration."

Sri G. A. THIMMAPPA GOWDA (Arkalgud).—It depends upon the wishes of the people.

Sri U. M. MADAPPA.—Yes.

"Where such a demand represents the agreed views of the people concerned, necessary steps prescribed by the Constitution including the appointment of a Boundary Commission should be taken."

ಇನ್ನು ಈ ವಿಚಾರದಲ್ಲಿ ಜನರ ಅಭಿಪ್ರಾಯವೇನಿದೆ ಅದನ್ನು ಎಷ್ಟರಮಟ್ಟಿಗೆ ಶೇಖರಣೆಮಾಡಬಹುದು ಎನ್ನತಕ್ಕ ವಿಚಾರದಲ್ಲಿ ನನ್ನ ಅಭಿಪ್ರಾಯವೇನಿದೆಯೆಂಬುದನ್ನು ತಮ್ಮ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಈಗಾಗಲೇ ಕಾಂಗ್ರೆಸ್ ಸಂಸ್ಥೆಯವರು ಅನೇಕ ವೇಳೆ ಭಾಷಾವಾರು ಪ್ರಾಂತ್ಯ ರಚನೆ ವಿಚಾರವಾಗಿ ರೆಸಲ್ಯೂಷನ್‌ಗಳನ್ನು ಪಾಸ್‌ಮಾಡಿದ್ದಾರೆ. ಅದರ ಜೊತೆಗೆ ಕಳೆದ ಮಹಾಚುನಾವಣೆ ಸಂಬಂಧದಲ್ಲಿ ಕಾಂಗ್ರೆಸ್ ಪಕ್ಷದ ಧೋರಣೆ ಭಾಷಾವಾರು ಪ್ರಾಂತ್ಯಗಳ ನಿರ್ಮಾಣ ಮಾಡುವುದರಲ್ಲಿ ಯಾವ ರೀತಿ ಇದೆ ಎನ್ನತಕ್ಕದ್ದನ್ನು ಕೂಡ ಎಲೆಕ್ಷನ್ ಮ್ಯಾನಿಫೆಸ್ಟೋ 28ನೆ ಪ್ಯಾರಾದಲ್ಲಿ ತಿಳಿಸಿ, ಜನರಿಂದ ಮತವನ್ನು ಗಳಿಸಿಕೊಂಡು, ಚುನಾಯಿತರಾಗಿ ಬಂದು ಇಲ್ಲಿ ಕುಳಿತಿರುವಂಥ ನೀವುಗಳು ಈ ದಿವಸ ಭಾಷಾವಾರು ಪ್ರಾಂತ್ಯವಾಗಲೇಬೇಕೆಂಬ ಅಭಿಪ್ರಾಯವಿದೆ ಎಂದು ಹೇಳುವುದಕ್ಕೆ ಸಾಕಷ್ಟು ಎವಿಡೆನ್ಸ್ ಇದೆಯೆಂಬುದು ನಿರ್ವಿವಾದವಾದಂಥ ವಿಷಯ. ಈ ವಿಚಾರದಲ್ಲಿ ಮದ್ರಾಸ್ ಕಾಂಗ್ರೆಸ್‌ನವರೊಂದು ರೆಸಲ್ಯೂಷನ್ನನ್ನು ತಾ॥ 28-3-1938ರಲ್ಲಿ ಪಾಸ್‌ಮಾಡಿದ್ದಾರೆ. ಅದೇ ರೀತಿಯಾಗಿ ಬೊಂಬಾಯಿ ಪ್ರಾಂತ್ಯದ ಕಾಂಗ್ರೆಸ್‌ನವರೂ ಸಹ ತಾ॥ 5-4-1938ರಲ್ಲಿ ಒಂದು ರೆಸಲ್ಯೂಷನ್ ಪಾಸ್‌ಮಾಡಿದ್ದಾರೆ. ಪುನಃ ಮದ್ರಾಸ್ ಲೆಜಿಸ್ಲೇಟೀವ್ ಅಸೆಂಬ್ಲಿಯಲ್ಲಿ ತಾ॥ 1-4-1941ರಲ್ಲಿ ಒಂದು ನಿರ್ಣಯವನ್ನು ಈ ವಿಚಾರದಲ್ಲಿ ತಂದು ಅದನ್ನು ಆಗ ಅಂಗೀಕಾರಮಾಡಿದ್ದಾರೆ. ಮತ್ತೊಮ್ಮೆ ಮದ್ರಾಸ್ ಪ್ರಾಂತ್ಯದ ಜನರು ಈ ಭಾಷಾವಾರು ಪ್ರಾಂತ್ಯ ನಿರ್ಮಾಣ ಬೇಗ ಆಗಲೇಬೇಕೆಂದು ತಾ॥ 22-4-1949ರಲ್ಲಿ ಒತ್ತಾಯಮಾಡಿದ್ದಾರೆ. ಅಂದ ಮೇಲೆ ಅಲ್ಲಿಯ ಜನರು ಪ್ರಾಂತ್ಯ ಪುನರ್ವಿಂಗಡಣೆಯು ಭಾಷಾವಾರು ಆಧಾರದ ಮೇಲೆಯೇ ಆಗಬೇಕೆಂದು ಹೇಳುವುದನ್ನು ಸಂಪೂರ್ಣವಾಗಿ ಒಪ್ಪಿಕೊಂಡಿದ್ದಾರೆಂದಾಯಿತು. ಇನ್ನು ಮೈಸೂರು ದೇಶದ ಜನರ ವಿಚಾರ ಈ ಬಗ್ಗೆ ಯಾವ ರೀತಿಯಿದೆ ಅನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಮೈಸೂರಿನಲ್ಲಿ ಕಾನ್‌ಸ್ಟಿಟ್ಯೂಯೆಂಟ್ ಅಸೆಂಬ್ಲಿಯಿದ್ದಾಗ ಆ ಸಭೆಯವರೂ ಮತ್ತು ಇದೇ ಸಭೆಯವರೆಲ್ಲರೂ ಏಕೀಕರಣವಾಗಲೇಬೇಕೆಂದೂ, ಗ್ರೇಟರ್ ಮೈಸೂರು ಆಗಬೇಕೆಂದೂ ನಿರ್ಣಯವನ್ನು ತಂದು ಪಾಸ್ ಮಾಡಿದ್ದಾರೆ. ಈ ಭಾಷಾವಾರು ಪ್ರಾಂತ್ಯಗಳ ನಿರ್ಮಾಣ ಸಾಧುವಾದದ್ದು ಮತ್ತು ಅನುಕೂಲವಾದದ್ದು ಎನ್ನುವುದನ್ನು ಅನೇಕ ತತ್ವಜ್ಞಾನಿಗಳೂ ಮತ್ತು ರಾಜಕಾರಣಿಗಳೂ ಒಪ್ಪಿಕೊಂಡಿದ್ದಾರೆ.

K.P.C.C.ಯವರು ಪ್ರಾಂತ್ಯ ಪುನರ್ವಿಂಗಡಣಾ ಸಮಿತಿಗೆ ಒಪ್ಪಿಸಿರುವ ಮೆಮೋರಾಂಡದಲ್ಲಿ 11ನೇ ಪುಟದಲ್ಲಿ ಈ ಕೆಳಗೆ ಕಂಡಂತೆ ಹೇಳಿದ್ದಾರೆ:—

"In 1948, the Constituent Assembly of Mysore passed the Aims and Objectives Resolution wherein it was clearly stated that 'there shall be provision in the Constitution for the integration of the neighbouring areas with Mysore in such manner as may be mutually agreed upon between the areas concerned and Mysore, in accordance with the provisions that may be laid down by the Constitution for India in this behalf. The State in matters lying within the sphere of its own jurisdiction shall be free to agree according to its own discretion with the neighbouring State units in matters of common interest."

Indian Constitution ಅಲ್ಲಿ Article 3 ರಲ್ಲಿ ಹೀಗೆ ಹೇಳಿದ್ದಾರೆ :

"Parliament may by law—

(*a*) form a new State by separation of territory from any State or by uniting two or more states or part of states or by uniting any territory to a part of any State;

(*b*) increase the area of any state;

(*c*) diminish the area of any state;

(*d*) alter the boundaries of any state;

(*c*) alter the name of any state."

ಈ ವಿಚಾರವನ್ನು ಈಗಾಗಲೇ ಶ್ರೀಮಾನ್ ಎಚ್. ಎಂ. ಚೆನ್ನಬಸಪ್ಪನವರೂ ಈ ಸಭೆಯ ಗಮನಕ್ಕೆ ತಂದಿದ್ದಾರೆ. ಈ ಅಂಶವನ್ನು ಇಂಡಿಯಾ ಸರ್ಕಾರದವರು ಅಂಗೀಕಾರ ಮಾಡುವುದಕ್ಕೆ ಅವರಿಗೆ ಸಂಪೂರ್ಣ ಅಧಿಕಾರವಿದೆ. ಆದಾಗ್ಯೂ ಈ ಸಭೆಯ ಅಭಿಪ್ರಾಯವೇನಿದೆ ಎನ್ನುವುದನ್ನು ಕೇಳಿದ್ದರೂ, ನಮ್ಮಗಳ ಅಭಿಪ್ರಾಯವನ್ನು ಕೇಳದೇನೇ ಇದನ್ನು ಅಂಗೀಕಾರಮಾಡುವಂಥ ಅಧಿಕಾರ ಈ ದಿವಸ ಆ ಪಾರ್ಲಿಮೆಂಟಿಗೆ ಸೇರಿದೆ ಎನ್ನತಕ್ಕಂಥಾ ವಿಚಾರವನ್ನು ನಾನೀಗ ಈ ಮಾನ್ಯ ಸಭೆಯ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಮೈಸೂರು, ಬೊಂಬಾಯಿ, ಮದ್ರಾಸ್ ಇತ್ಯಾದಿ ಪ್ರಾಂತ್ಯಗಳಲ್ಲಿರುವ ಎಲ್ಲಾ ಕನ್ನಡಿಗರ ಅಭಿಪ್ರಾಯವೂ ಒಂದೇ ಪ್ರಾಂತ್ಯದಲ್ಲಿ ವಾಸಮಾಡಬೇಕೆಂಬುದಾಗಿದೆ. ಸಂಬಂಧಪಟ್ಟ ಸರ್ಕಾರಗಳೂ ಕೂಡ ಇದಕ್ಕೆ ಒಪ್ಪಿವೆ. ಈ ಪ್ರಶ್ನೆ ಕೇವಲ ಕರ್ಣಾಟಕ ಪ್ರಾಂತ್ಯ ನಿರ್ಮಾಣ ಒಂದಕ್ಕೇ ಸಂಬಂಧಪಟ್ಟಿರುವುದಿಲ್ಲ. ಇಡೀ ಭಾರತಕ್ಕೇ ಸಂಬಂಧಿಸತಕ್ಕ ಪ್ರಶ್ನೆಯಾಗಿದೆ. ಈ ಹಿಂದೆ ರಾಜಕೀಯ ಕ್ರಾಂತಿಗಳುಂಟಾದಮೇಲೆ ದೇಶಕ್ಕೆ ಸ್ವಾತಂತ್ರ್ಯ ಬಂದೊಡನೆಯೇ ಆ ಹೋರಾಟದಲ್ಲಿ ಭಾಗಿಗಳಾಗಿದ್ದಂಥ ಪ್ರತಿಯೊಬ್ಬ ಮುಖಂಡರೂ ಭಾಷಾವಾರು ಪ್ರಾಂತ್ಯಗಳನ್ನು ನಿರ್ಮಾಣಮಾಡುವುದಾಗಿ ಹೇಳಿರುತ್ತಾರೆ. ಈಗಾಗಲೇ ಉತ್ತರ ಇಂಡಿಯಾದಲ್ಲಿ ಈ ಭಾಷಾವಾರು ಪ್ರಾಂತ್ಯಗಳ ಪ್ರಶ್ನೆ ಪೂರೈಸಿದೆ. ಅಲ್ಲಿ ಅದರ ಹವ್ಯಾಸವಿರುವುದಿಲ್ಲ. ಒರಿಸ್ಸಾ, ಉತ್ತರಪ್ರದೇಶ, ಬಂಗಾಳ, ಬೀಹಾರ್—ಇತ್ಯಾದಿ ಪ್ರಾವಿನ್ಸುಗಳೆಲ್ಲವೂ ಈ ಭಾಷಾವಾರು ತಳಹದಿಯ ಮೇಲೆ ನಿರ್ಮಾಣವಾಗಿರುತ್ತವೆ ಅಲ್ಲಿ ಹಾಗೆ ಮಾಡಿರುವಾಗ ದಕ್ಷಿಣ ಇಂಡಿಯಾದಲ್ಲಿ ಆ ರೀತಿ ಮಾಡುವುದಕ್ಕೆ ಅಡ್ಡಿ ಇರುವುದಿಲ್ಲ. ಕೇಂದ್ರಸರ್ಕಾರ ಉತ್ತರ ಇಂಡಿಯಾಕ್ಕೇ ಒಂದು ರೀತಿ ನೀತಿಯನ್ನೂ, ದಕ್ಷಿಣ ಭಾರತಕ್ಕೇ ಬೇರೆ ರೀತಿ ನೀತಿಯನ್ನೂ ಅನುಸರಿಸುತ್ತಿರುವುದರಿಂದ ತುಂಬಾ ವ್ಯತ್ಯಾಸ ಉಂಟಾಗಿದೆ. ಉತ್ತರ ಇಂಡಿಯಾದಲ್ಲಿ ಭಾಷಾವಾರು ಪ್ರಾಂತ್ಯಗಳ ನಿರ್ಮಾಣಕ್ಕೆ ಅವಕಾಶ ಕೊಟ್ಟು, ದಕ್ಷಿಣ ಭಾರತಕ್ಕೆ ಅದೇ ರೀತಿಯ ಅವಕಾಶಕೊಡದಿರುವುದೇ ಇಷ್ಟೆಲ್ಲಾ ಗೊಂದಲಕ್ಕೆ ಕಾರಣವಾಗಿದೆಯೆಂದು ಹೇಳುತ್ತೇನೆ. ಭಾಷಾವಾರು ಆಧಾರದ ಮೇಲೆಯೇ ಆಂಧ್ರ ಪ್ರಾಂತ್ಯವನ್ನು ನಿರ್ಮಾಣಮಾಡಿದರು. ಆಗ ಅಲ್ಲಿ ಉಳಿದ ಕನ್ನಡ ಪ್ರದೇಶಗಳನ್ನೆಲ್ಲಾ ಮೈಸೂರಿಗೆ ಸೇರಿಸಿದರು. ಆಗ ಪಾರ್ಲಿಯಮೆಂಟಿನ ಮುಂದೆ ಕೇಂದ್ರ ಸರ್ಕಾರದವರು ತಂದಿದ್ದ ಮಸೂದೆಯಲ್ಲಿ ಭಾಷಾವಾರು ಪ್ರಾಂತ್ಯಗಳ ನಿರ್ಮಾಣವನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಶ್ರೀ ನೆಹರು ಅವರು ಈ ರೀತಿ ಹೇಳಿದ್ದಾರೆ :

"Prime Minister Nehru referring to the appointment of the States Reorganization Commission in Parliament said that the language and culture of an area have an undoubted importance, that they present a matter of living, which is common to that area."

ಭಾಷೆಗೆ ಅಷ್ಟು ಪ್ರಾಧಾನ್ಯತೆ ಕೊಡುವುದು ಬೇಡ ಎಂದು ಕೆಲವರು ಹೇಳುತ್ತಿರುವುದರಿಂದ ಈ ವಿಷಯಗಳನ್ನೆಲ್ಲಾ ತಿಳಿಸುತ್ತಿದ್ದೇನೆ. ಆದರೆ ಭಾಷಾವಾರು ಪ್ರಾಂತ್ಯ ನಿರ್ಮಾಣವಾಗಬೇಕೆಂದು ಹೇಳಿದರೆ ಅದು ಏಕಭಾಷಾ ರಾಜ್ಯವಾಗಿಯೇ ಇರಬೇಕೆಂದಲ್ಲ ಎನ್ನುವುದನ್ನು ತಾವೆಲ್ಲರೂ ಗಮನದಲ್ಲಿಡಬೇಕು. ಏಕ ಭಾಷೆಯನ್ನೇ ಆರಿಸಿ ರಾಜ್ಯ ಮಾಡುತ್ತಾರೆಂದು ಯಾರೂ ತಿಳಿದುಕೊಳ್ಳಬಾರದು. ಹಾಗೂ ಅದೇ ಅಭಿಪ್ರಾಯವನ್ನು ಮನಸ್ಸಿನಲ್ಲಿಟ್ಟುಕೊಳ್ಳುವುದಾದರೆ ಅದು ಅವರ ತಪ್ಪು ಭಾವನೆಯಾಗುತ್ತದೆಂದು ಹೇಳುತ್ತೇನೆ. ಇಷ್ಟೆಲ್ಲವನ್ನು ಹೇಳಿದ ಮೇಲೆ ನಾನೊಂದು ಮಾತನ್ನು ಹೇಳಬಯಸುತ್ತೇನೆ. ಭಾಷೆ ಮಾನವನನ್ನು ಪ್ರಾಣಿವರ್ಗದಿಂದ ಬೇರೆ ಮಾಡತಕ್ಕಂಥ ಒಂದು ಸಾಧನ. ಭಾಷೆ ಒಬ್ಬರ ಮನಸ್ಸಿನಲ್ಲಿರುವ ಅಭಿಪ್ರಾಯವನ್ನು ಮತ್ತೊಬ್ಬರಿಗೆ ತಿಳಿಸುವ ಒಂದು ಸಾಧನ.

Hobbes ಕಾಲದಲ್ಲಿ ಜನಗಳ ಪರಿಸ್ಥಿತಿ ಈ ಕೆಳಗೆ ಕಂಡಂತಿತ್ತು:

"Man is essentially selfish, is moved to action not by his int lle t or reason but by his aptitudes, desires and passions. Th life of man is solitary, poor and nasty."

ಭಾಷೆಗೆ ಪ್ರಾಮುಖ್ಯತೆ ಇಲ್ಲದ ಕಾಲವದು. ಆ ಕಾಲದಲ್ಲಿ ಅಷ್ಟೊಂದು ದುರಂತಗಳು ಆಗಿದ್ದಾಗ್ಯೂ ಈ ಹೊತ್ತು ಕೆಲವರು ಆ ಭಾಷೆ ಆಧಾರದ ಮೇಲೆ ನಾವು ರಾಜ್ಯಗಳನ್ನು ನಿರ್ಮಾಣಮಾಡಬೇಕಾಗಿಲ್ಲವೆಂದು ಹೇಳುತ್ತಿರುವುದು ನನಗೆ ಬಹಳ ಆಶ್ಚರ್ಯವನ್ನುಂಟುಮಾಡಿದೆ. ರೂಸೋ ಕಾಲಕ್ಕೆ ಬಂದರೆ ಅವರು ಹೀಗೆ ಹೇಳಿದ್ದಾರೆ:

"It emonstrates once and for all that the will is the source of the bas s of the State, that Government depends upon the consent of the gov ned"

ಅಂದರೆ, ಜನರ ಅಭಿಪ್ರಾಯದ ಮೇಲೆ ರಚಿಸಲ್ಪಡುವಂಥ ರಾಜ್ಯಗಳೇ ಬಹಳ ಶ್ರೇಷ್ಠವಾದಂಥವುಗಳು ಎಂದು ಹೇಳಿದ ಹಾಗಾಯಿತು.

4-30 P.M.

ಆಯಾ ಪ್ರಾಂತ್ಯದಲ್ಲಿರತಕ್ಕ ಜನರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಭಾಷೆಯೇ ಸಾಧನ. ಹಾಗೆ ಅವರು ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳಲು ಭಾಷೆಯೇ ಸಾಧನ. ಇದನ್ನು ಒಂದು ಉದಾಹರಣೆ ಮೂಲಕ ಹೇಳಿದರೆ ಅರ್ಥವಾಗುತ್ತದೆ. ಈಗ ಇಲ್ಲಿ ಕುಳಿತಿರತಕ್ಕಂಥ ಸದಸ್ಯರೆಲ್ಲರೂ ಪ್ರಜಾ ಪ್ರಭು

(ಶ್ರೀ ಯು. ಎಂ. ಮಾದಪ್ಪ.)

ಶ್ವದ ತಳಹದಿಯಮೇಲೆ ಚುನಾವಣೆಯಾಗಿ ಬಂದಿರುವವರು. ನಾವೆಲ್ಲರೂ ಬೇರೆ ಬೇರೆ ಭಾಷೆಗಳನ್ನು ಆಡುವವರಾಗಿದ್ದ ಪಕ್ಷದಲ್ಲಿ ಈ ಸಭೆ ಒಂದು ಪ್ರಾಣಿ ಪ್ರದರ್ಶನಾಲಯವಾಗುತ್ತಿರಲಿಲ್ಲವೇ? ಒಬ್ಬರ ಭಾಷೆ ಮತ್ತೊಬ್ಬರಿಗೆ ಅರ್ಥವಾಗದೆ ಹೋಗುತ್ತಿತ್ತು. ಹಿಂದೆ ಮದ್ರಾಸ್ ಅಸೆಂಬ್ಲಿಯೊಳಗೆ ತಮಿಳರು, ತೆಲುಗರು, ಕನ್ನಡಿಗರು, ಹೀಗೆ ಮೂರು ಭಾಷೆಗಳನ್ನು ಆಡುವ ಸದಸ್ಯರು ಸೇರಿ ಒಂದು ಪ್ರಾಣಿ ಪ್ರದರ್ಶನಾಲಯದಂತಿತ್ತು. ಆದ್ದರಿಂದ ರೊಸೋ ಹೇಳಿರುವ 'General will' ಕಾರ್ಯಗತವಾಗಬೇಕಾಗಿದ್ದರೆ, ಪ್ರಜಾಪ್ರಭುತ್ವ ನಡೆಯಬೇಕಾಗಿದ್ದರೆ, ಭಾಷೆಯ ಆಧಾರದ ಮೇಲೆ ನಡೆಯಬೇಕೆಂದು ಹೇಳುತ್ತೇನೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಹಾಗಾದರೆ House of the People ಒಂದು ಮೃಗಾಲಯವೇ?

ಶ್ರೀ ಯು. ಎಂ. ಮಾದಪ್ಪ.—ಒಂದು nation ಆಗಬೇಕಾಗಿದ್ದರೆ common language ಬೇಕು, common history ಬೇಕು, common culture ಬೇಕು ಎಂದು ತಾವು ಓದಿರಬಹುದು. ಅದಕ್ಕಾಗಿಯೇ ಹಿಂದಿಯನ್ನು ರಾಷ್ಟ್ರಭಾಷೆಯಾಗಿ ಮಾಡಲು ಭಾರತ ಸರ್ಕಾರ ಪ್ರಯತ್ನಪಡುತ್ತಿರುವುದು. ಆಡಳಿತ ದೃಷ್ಟಿಯಿಂದ ಮಾಡುತ್ತಿಲ್ಲವೆಂದು ಕೆಲವರು ಗೊಣಗುಟ್ಟುತ್ತಿದ್ದಾರೆ. ಆದರೆ ಇದು ಆಡಳಿತಕ್ಕೆ ಯೋಗ್ಯವಾದ ರಾಜ್ಯವೆಂದು ಹೇಳುತ್ತಾರೆ. ಕನ್ನಡ ಮಾತನಾಡತಕ್ಕ ಪ್ರದೇಶಗಳೆಲ್ಲವನ್ನೂ ಒಟ್ಟುಗೂಡಿಸಿ ಅದನ್ನು ಕರ್ಣಾಟಕವೆಂದೇ ಕರೆಯಲಿ ಅಥವಾ ಮೈಸೂರು ಎಂದೇ ಕರೆಯಲಿ ಯಾವ ಹೆಸರಿಲ್ಲಾದರೂ ಕರೆದು ಒಂದು ಪ್ರಾಂತವನ್ನು ಮಾಡಿ ಅದಕ್ಕೆ ಒಂದು ಆಡಳಿತ ಯಂತ್ರವನ್ನು ನಿರ್ಮಿಸಿದ್ದೇ ಆದರೆ ಅದು ಆಡಳಿತಕ್ಕೆ ಯೋಗ್ಯವಾದ ರಾಷ್ಟ್ರವಾಗುತ್ತದೆಂದು ಪ್ರತಿಪಾದಿಸಲು ಸಿದ್ಧನಾಗಿದ್ದೇನೆ. ಸಾಮಾನ್ಯವಾಗಿ ಕರ್ನಾಟಕ ಪ್ರಾಂತವು ತಾವುಗಳೆಲ್ಲರೂ ತಿಳಿದಂತೆ ಸುಮಾರು ಎರಡು ಕೋಟಿ ಜನಸಂಖ್ಯೆಯಿಂದ ಕೂಡಿದ ಪ್ರದೇಶವಾಗುತ್ತದೆ. ಈಗಿನ ಹೈದರಾಬಾದ್ ಸ್ಟೇಟ್‌ಗಿಂತ ಸ್ವಲ್ಪ ಜಾಸ್ತಿಯಾಗಬಹುದು. ಅಥವಾ ಬೊಂಬಾಯಿ ಸಂಸ್ಥಾನಕ್ಕಿಂತ ಸ್ವಲ್ಪ ಕಡಿಮೆಯಾಗಬಹುದು. ಆದ್ದರಿಂದ ಇದು ಆಡಳಿತಕ್ಕೆ ಯೋಗ್ಯವಾಗುತ್ತದೆ. ಉತ್ತರಪ್ರದೇಶವನ್ನು ತೆಗೆದುಕೊಳ್ಳಿ; ಎಲ್ಲರಿಗೂ ಗೊತ್ತಿರುವಂತೆ ಪಾರ್ಲಿಮೆಂಟಿನಲ್ಲಿ ಬಹುಸಂಖ್ಯಾ ಪ್ರತಿನಿಧಿಗಳನ್ನು ಹೊಂದಿರತಕ್ಕಂಥ ರಾಜ್ಯ. ಸಾಮಾನ್ಯವಾಗಿ ಪಾರ್ಲಿಮೆಂಟಿನಲ್ಲಿ ಯಾವ ಕಾನೂನು ಪಾಸಾದರೂ ಅದು ಯು. ಪಿ. ಪ್ರತಿನಿಧಿಗಳಿಂದ ಪಾಸ್‌ಮಾಡಿದ ಕಾನೂನು ಎಂದು ಹೇಳಿದರೆ ತಪ್ಪಾಗಲಾರದು. ಅವರು ಬಹುಮತದಿಂದ ಅಲ್ಲಿರುವುದರಿಂದ ಏನು ಕಾನೂನು ಪಾಸುಮಾಡಿದರೂ ಆ ಪ್ರಾಂತದ ಪ್ರತಿನಿಧಿಗಳು ಒಪ್ಪಿದ ಕಾನೂನು ಆಗುತ್ತದೆ.

Sri V. VENKATAPPA (Channapatna).—How can you prevent it?

ಶ್ರೀ ಯು. ಎಂ. ಮಾದಪ್ಪ.—ಸ್ವಲ್ಪ ನಿಧಾನಿಸಿ, ನಾನು ಹೇಳುವುದನ್ನು ಕೇಳಿದರೆ ಅರ್ಥವಾಗುತ್ತದೆ. ಕರ್ಣಾಟಕ ಪ್ರಾಂತ ರಚನೆಯಾದ ಪಕ್ಷದಲ್ಲಿ ಯು. ಪಿ. ಯನ್ನು ಬಿಟ್ಟರೆ ಮುಂದೆ ಅದು ಎರಡನೇ ವಿಶಾಲವಾದ ಪ್ರಾಂತವಾಗುತ್ತದೆ ಎಂದು ಹೇಳುತ್ತೇನೆ. ಆಂಧ್ರ ಪ್ರಾಂತವನ್ನು ರಚನೆಮಾಡುವಾಗ ಆಡಳಿತ ಯಂತ್ರವನ್ನು ನಿರ್ಮಿಸಿದಂತೆ ಇಲ್ಲಿ ನಿರ್ಮಿಸಬೇಕಾದ ಅಗತ್ಯವಿಲ್ಲ. ಮೈಸೂರಿನಲ್ಲಿ ಆಡಳಿತ ಯಂತ್ರವಿದೆ. ಮೈಸೂರಿನಲ್ಲಿ ಒಂದು ಯೂನಿವರ್ಸಿಟಿ ಇದೆ, ಕರ್ಣಾಟಕದಲ್ಲೂ ಒಂದು ಯೂನಿವರ್ಸಿಟಿ ಇದೆ. ಇವೆರಡೂ ಸೇರಿದರೆ ಒಂದು ಯೂನಿವರ್ಸಿಟಿ ಆಗುತ್ತದೆ. ಹೆಚ್ಚಿಗೆ ಬದಲಾವಣೆಗಳನ್ನು ಮಾಡಬೇಕಾಗಿಲ್ಲ. ಬಳ್ಳಾರಿ ಯಾವರೀತಿ ನಮ್ಮ ಮೈಸೂರಿನ ಕೈಸೇರಿತೋ ಅದೇ ರೀತಿ ಉಳಿದ ಕನ್ನಡ ಭಾಗಗಳು ಮೈಸೂರಿನ ಕೈಸೇರುವುದರಲ್ಲಿ ಏನೂ ಅನುಮಾನವಿಲ್ಲ. ಆದ್ದರಿಂದ ಇದು ಆಡಳಿತಕ್ಕೆ ಯೋಗ್ಯವಾದ ಒಂದು ಪ್ರಾಂತವಾಗುತ್ತದೆ ಎಂಬುದಾಗಿ ನಾನು ನಿಸ್ಸಂದೇಹವಾಗಿ ಹೇಳಬಲ್ಲೆ. ಇಷ್ಟಾದನಂತರ ಈ ಕಮಿಟಿಯನ್ನು ಸರ್ಕಾರದವರು ರಚಿಸಿದಾಗಲೇ, ಸರ್ಕಾರದವರು ಹೊರಡಿಸಿದ ಆಜ್ಞೆಯನ್ನು ನೋಡಿದರೆ ಈ ವಿಚಾರದಲ್ಲಿ ಸರ್ಕಾರದ ಅಭಿಪ್ರಾಯವೇನಿತ್ತು ಎಂಬುದು ಅರ್ಥವಾಗುತ್ತದೆ. ಭಾಷೆಯ ಆಧಾರದ ಮೇಲೆ ಪ್ರಾಂತ ರಚನೆ ಆಗಬೇಕು ಎಂಬುದು ಅದರಲ್ಲಿ ಸ್ಪಷ್ಟವಾಗಿದೆ. ಅವರು ಅದನ್ನು ಒಪ್ಪಿಕೊಂಡಿದ್ದಾರೆ. ಭಾಷೆ ಆಧಾರದಮೇಲೆ ಅವರ ವರದಿಯು ತಯಾರು ಆಗಬೇಕೆಂದು ಅವರು Term of referenceನಲ್ಲಿ ತಿಳಿಸಿದ್ದಾರೆ. ಮೊಟ್ಟ ಮೊದಲನೆಯದು terms of referenceನಲ್ಲಿ ಸರ್ಕಾರದ ಉದ್ದೇಶ ಹೀಗೆ ಇದೆಯೆಂದು ಕಾಣುತ್ತದೆ. ಮುಂದೆ ಇತರ ಕನ್ನಡ ಭಾಗಗಳು ಸೇರುವಾಗ ತಾವು ಮಾಡತಕ್ಕ ಕೆಲಸಗಳೇನೆಂಬುದನ್ನು ತಿಳಿದುಕೊಳ್ಳಬೇಕೆಂದು ಅವರು ಹೇಳಿದ್ದಾರೆಯೇ ವಿನಾ ಅದನ್ನು ವಿರೋಧಿಸಬೇಕು ಎನ್ನುವ ಪ್ರಶ್ನೆ ಸರ್ಕಾರದವರಲ್ಲಿ ಇಲ್ಲ ಎಂಬುದು ಇದರಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. Terms of referenceನ್ನು ತಾವು ಗಮನಿಸಬೇಕು. ಕನ್ನಡಭಾಷೆ ಮಾತನಾಡತಕ್ಕ ಪ್ರದೇಶದ ವಿಷಯವನ್ನು ಮತ್ತು development relating to education, medical, public health, rural development, industries, irrigation and power, ಈ ವಿಚಾರ ಕೇಳಿದ್ದಾರೆ. ಅದೂ ಅಲ್ಲದೆ availability of natural resources"ನ್ನೂ ಕೇಳಿದ್ದಾರೆ. ಅವರು ಹೀಗೆ ಕೇಳಿರುವಾಗ ನಾವು ಬರೀ development ವಿಷಯ ಒಂದನ್ನೇ ಗಮನಕ್ಕೆ ತೆಗೆದುಕೊಳ್ಳಬಾರದು. ನಮ್ಮ ಸಂಸ್ಥಾನದಲ್ಲಿ ಒಂದೊಂದು ಡಿಸ್ಟ್ರಿಕ್ಟಿನಲ್ಲಿ ಆದ development‌ನ್ನು ತೆಗೆದುಕೊಳ್ಳುವುದಾದರೆ ಅದು ಅಲ್ಲಿ ಆವ ರೀತಿಯಲ್ಲಿ ಇದೆ; ಒಂದೊಂದು ಡಿಸ್ಟ್ರಿಕ್ಟನ್ನು ಹೀಗೆ ಕೈಬಿಡುವುದಕ್ಕೆ ಎಷ್ಟೋ ಕಾರಣಗಳಿವೆ. ಉದಾಹರಣೆಗೆ ನಮ್ಮ ಸಂಸ್ಥಾನದಲ್ಲಿ percentage of literacy ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲೂ ಮತ್ತು ತಾಲ್ಲೂಕಿನಲ್ಲೂ ಇಷ್ಟೇ ಇದೆ ಎಂಬುದನ್ನು ತೆಗೆದುಕೊಂಡರೆ ಅಲ್ಲಿಗಿಂತ ಕನಿಷ್ಠಪಕ್ಷ ನಮ್ಮಲ್ಲೂ ಕಾಣಬಹುದೋ ಏನೋ! ನಮ್ಮ ಚಾಮರಾಜನಗರ ತಾಲ್ಲೂಕನ್ನೇ ತೆಗೆದುಕೊಳ್ಳಿ; ಅಲ್ಲಿ ಸುಮಾರು 140ಸಾವಿರ ಜಾನುವಾರುಗಳು ಇವೆ. ಅಷ್ಟು ಜಾನುವಾರುಗಳಿಗೆ ಎರಡೇ Veterinary ಆಸ್ಪತ್ರೆಗಳಿವೆ. ಆದ್ದರಿಂದ ನಾವು ಹಿಂದುಳಿದಿರುವುದರಲ್ಲಿ ಕಡಿಮೆಯಿಲ್ಲ. ನಮ್ಮಲ್ಲೂ ಆ ರೀತಿ ಇದೆ. ಈ ಒಂದು ಪ್ರದೇಶವನ್ನು ತೆಗೆದುಕೊಳ್ಳುವುದಾದರೆ ಸರ್ವತೋಮುಖವಾದ ಬೆಳವಣಿಗೆ ಯಾವ ಸಂಸ್ಥಾನದಲ್ಲೂ ಮತ್ತು ಯಾವ ಪ್ರದೇಶದಲ್ಲೂ ಇದೇ ರೀತಿಯಾಗಿಲ್ಲ. ಆ ರೀತಿ ಸರ್ವತೋಮುಖವಾದ ಬೆಳವಣಿಗೆ ಆಗಬೇಕೆಂದು ಪ್ರಯತ್ನಪಡುತ್ತಿದ್ದಾರೆ. ಪಾಂಚವಾರ್ಷಿಕ ಯೋಜನೆಗಳನ್ನು ಅದಕ್ಕಾಗಿ ಮಾಡುತ್ತಿದ್ದಾರೆ. ಎರಡನೇ ಪಾಂಚವಾರ್ಷಿಕ ಯೋಜನೆಯನ್ನು ಮಾಡುವುದರಲ್ಲಿದ್ದಾರೆ. National Extension Scheme Development Blocks,

Community Projects ಇವೆಲ್ಲಾ ತೆಗೆದುಕೊಂಡು ಕೆಲಸಮಾಡುತ್ತಿದ್ದಾರೆ. ಹೀಗೆಲ್ಲಾ ಇದ್ದರೂ ವರದಿಯಲ್ಲಿ ಬರೀ ರೆವಿನ್ಯೂ ಮತ್ತು expenditure ವಿಷಯ ಮಾತ್ರ ಹೇಳಿಬಿಟ್ಟು ತಾತ್ಕಾಲಿಕವಾಗಿ ನಡೆಯುವ ಬೆಳವಣಿಗೆಯನ್ನು ಪಾಂಚವಾರ್ಷಿಕ ಯೋಜನೆಯ ಶಿರೋನಾಮೆಯಲ್ಲಿ ಬೇರೆ ಹೇಳಿದ್ದಾರೆ. ಈಗ ಪಾಂಚವಾರ್ಷಿಕ ಯೋಜನೆಯಲ್ಲಿ ನಡೆದಿರುವ ಅಭಿವೃದ್ಧಿಯನ್ನು ತೆಗೆದು ನೋಡುವುದಾದರೆ ಆಗದೆ ಇರುವ ಅಭಿವೃದ್ಧಿ ಆಗಿದೆಯೇ ಎಂಬುದನ್ನು ಕಾಣಬಹುದು. Revenue ಮತ್ತು Expendi ure ವಿಷಯವನ್ನು ತೆಗೆದುಕೊಳ್ಳುವುದಾದರೂ ಹೈದರಾಬಾದ್ ಕನ್ನಡ ಪ್ರದೇಶದಲ್ಲಿ surplus ಇದೆ, ಬೊಂಬಾಯಿ ಕನ್ನಡ ಪ್ರದೇಶದಲ್ಲಿ deficit ಇದೆ ಎಂದು ಹೇಳಿದ್ದಾರೆ. South Canaraದಲ್ಲಿ ಲೆಕ್ಕಪತ್ರಗಳು ಸಿಕ್ಕದೇ ಇರುವುದರಿಂದ ಅಲ್ಲಿ ಹೇಗೆ ಎಂಬುದನ್ನು ಕಂಡುಹಿಡಿಯುವುದಕ್ಕೆ ಸಾಧ್ಯವಾಗಲಿಲ್ಲವೆಂಬುದನ್ನು ಒಪ್ಪಿಕೊಂಡಿದ್ದಾರೆ. ಅಲ್ಲದೆ ಕೊಡಗಿನಲ್ಲಿ ಸುಮಾರು 23 ಸಾವಿರ ರೂಪಾಯಿಗಳು surplus ಇದೆಯೆಂದು ಒಪ್ಪಿಕೊಂಡಿದ್ದಾರೆ. ಅಲ್ಲಿಗೆ ಮೈಸೂರನ್ನು ಬಿಟ್ಟುಬಿಟ್ಟು ಒಟ್ಟು deficit ಸುಮಾರು ಒಂದು ಕೋಟಿ ಎಂಟು ಲಕ್ಷ ಎಂದು ಒಪ್ಪಿಕೊಂಡಿದ್ದಾರೆ. ಇದು 1951-52 ಮತ್ತು 1952-53 ಇಸವಿಗಳ ಲೆಕ್ಕದ ಪ್ರಕಾರ.

Sri J. MOHAMED IMAM.—Now it is a surplus Budget.

ಶ್ರೀ ಯು. ಎಂ. ಮಾದಪ್ಪ.—ಆದರೆ ನಮ್ಮ ಬಜೆಟ್ ನೋಡುವುದಾದರೆ ನಮ್ಮ ಖೋತಾ ಎಷ್ಟಿದೆಯೆಂಬುದು ತಮಗೇ ಗೊತ್ತು. 4½ ಕೋಟಿ ಡಿಫಿಸಿಟ್ ಇದೆ. ಇಷ್ಟು ಕಾರಣಗಳಿಂದ ನಮ್ಮ ಬಜೆಟ್ಟಿಗಿಂತ ಅವರದು sound ಆಗಿದೆಯೆಂದೇ ಹೇಳಬಹುದು. ಆಮೇಲೆ ನಮ್ಮಲ್ಲಿರತಕ್ಕ Capital Expenditure ನ್ನೂ ಅವರಲ್ಲಿರತಕ್ಕ Capital Expenditure ನ್ನೂ ಹೋಲಿಸಿ ನೋಡಿ. ಅಲ್ಲಿ Capital Expenditure ಬೇಕಾದಷ್ಟು ಆಗುತ್ತಿದೆ. ದೊಡ್ಡದೊಡ್ಡ ಪ್ರಾಜೆಕ್ಟುಗಳಾದ ತುಂಗಭದ್ರಾ, ಘಟಪ್ರಭ, ಮಲಪ್ರಭ ಮುಂತಾದುವುಗಳು ಭರದಿಂದ ಸಾಗುತ್ತಿವೆ. ಇದಕ್ಕಾಗಿ 15 ಕೋಟಿಗಳಷ್ಟು ಹಣ ಖರ್ಚಾಗಲಿದೆ. ಅವುಗಳೆಲ್ಲಾ ನಮಗೆ ಸೇರಿದರೆ ನಾವೆಷ್ಟು ಉನ್ನತಿಯ ಪ್ರಾಂತವಾಗುತ್ತೇವೆಂಬುದನ್ನು ನೋಡಬಹುದು. ಅಲ್ಲದೆ, ಕೆ. ಪಿ. ಸಿ. ಸಿ. ಯವರು ಕೊಟ್ಟಿರುವ ರಿಪೋರ್ಟನ್ನೂ ಸ್ವಲ್ಪ ನೋಡುವುದಾದರೆ, ಅವರು financial aspectನ ವಿಚಾರದಲ್ಲಿ ಹೇಳಿರುವುದು ಗಮನಾರ್ಹವಾಗಿದೆ.

As early as 1928, the Nehru Committee observed:

"Financially the position of Karnataka is very strong and even at present there is a considerable surplus in the British part of Karnataka. In 1948 again, presenting the case of Karnataka State before the Linguistic Provinces Commission, Dr. V.K.R.V. Rao has stated with full facts and figures that the Karnataka State would have a substantial surplus in the absence of complete prohibition and would have a small surplus even if total prohibition were imposed"

ಎಂದು ಹೇಳಿದ್ದಾರೆ. ಹೀಗಿರುವುದರಿಂದ ಇನ್ನು ಮುಂದೆ ಆಗತಕ್ಕ ಭವ್ಯ ಕರ್ಣಾಟಕ ಪ್ರಾಂತ್ಯದಲ್ಲಿ ಡಿಫಿಸಿಟ್ ಆಗಲಾರದೆಂದು ನಾನು ಹೇಳಬಲ್ಲೆ. ಅಲ್ಲದೆ, ನಮ್ಮಲ್ಲೀಗ ಏನು ತೆರಿಗೆ ಹಾಕಿದ್ದೇರಿ ಮತ್ತು ಏನು ಉತ್ಪತ್ತಿ ಬರುತ್ತಿದೆ ಹಾಗೂ ಅಲ್ಲಿ ಏನು ಉತ್ಪತ್ತಿಬರುತ್ತದೆ ಎಂಬುದನ್ನು ಈ ವರದಿಯಲ್ಲಿ ಹೇಳಿಲ್ಲ. ಸಾಲದ್ದಕ್ಕೆ ಅರಣ್ಯದಿಂದ ಬರತಕ್ಕ ಉತ್ಪತ್ತಿ ಬಹಳ ಹೆಚ್ಚಿನದಾಗಿತ್ತದೆಂದು ಹೇಳಬಹುದು. ನಮ್ಮಲ್ಲಿ standard forest area ಎಷ್ಟಿರಬೇಕೆಂದು ಕ್ಲಪ್ತವಾಗಿದೆಯೋ ಅದಕ್ಕಿಂತ ಬಹಳ ಕಡಮೆ ಇದೆ. ಹೀಗಿರುವಾಗ ಆ ಪ್ರದೇಶವೂ ನಮಗೆ ಸೇರಿದರೆ, ಎಷ್ಟು ಪ್ರದೇಶ ಕಾಡಿರಬೇಕೋ ಅಷ್ಟು ಪ್ರದೇಶವನ್ನು ನಾವು ಇಟ್ಟುಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ. ಇವೆಲ್ಲದರಿಂದಾಗಿ ಮುಂದೆ ರಚಿತವಾಗುವ ಪ್ರಾಂತ್ಯಕ್ಕೆ ಬಹಳ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಇನ್ನು ಅಲ್ಲಿನ ವಾಯುಗುಣ, ಪ್ರಕೃತಿ ಸಂಪತ್ತು ನೋಡುವುದಾದರೆ, ಇದೇ ರಿಪೋರ್ಟಿನಲ್ಲಿ ಹೇಳಿದ್ದಾರೆ:

"In respect of climate, topography, hydrocology and geological phenomena, there is hardly a region in India, possessing such a totality of favourable circumstances. In point of variety and abundance and superior quality, some of her resources, more particularly her food resources and commercial crops, are among the best in our country. Her power resources too, situated just where the modern industrialist would have liked them to be, are second to none in the whole of India"

ಇವುಗಳನ್ನು ಆ ಪ್ರಾಂತ್ಯದವರು ಇನ್ನೂ ಉಪಯೋಗಿಸಿಕೊಳ್ಳದಿರುವುದರಿಂದ ಆ ಪ್ರಾಂತದವರು ತಮ್ಮ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳುವುದಕ್ಕೆ ಅವಕಾಶವಾಗಿಲ್ಲ.

ಇನ್ನೊಂದು ಅಂಶವಿದೆ: ನಮ್ಮ ಸಂಸ್ಥಾನದಲ್ಲಿ ತಾವೆಲ್ಲರೂ ಹೇಳುತ್ತಿರುವ ಹಾಗೆ ಕೈಗಾರಿಕೆಗಳು ಮುಂದುವರಿದಿವೆ. ರಾಷ್ಟ್ರಾಡಳಿತ ನಡೆಸುವುದಕ್ಕೆ ಬಹಳ ಯೋಗ್ಯರು ಇಲ್ಲದಷ್ಟು ಆಡಳಿತ ಸೂತ್ರವನ್ನು ಚೆನ್ನಾಗಿ ನಡೆಸಿಕೊಂಡು ಬಂದದ್ದರಿಂದ ಮೈಸೂರು ಸಂಸ್ಥಾನ ಇಷ್ಟು ಉನ್ನತ ಸ್ಥಿತಿಗೆ ಬಂದಿದೆಯೆಂದು ನಾವೇ ಹೇಳುತ್ತಿದ್ದೇವೆ. ಇಂಥ ದಕ್ಷರಿದ್ದು ದೊಡ್ಡ ಪ್ರಾಂತ್ಯವನ್ನು ಆಳುವುದಕ್ಕೆ ಶಕ್ತರಾಗಿದ್ದೇವೆಂದು ಹೇಳಿಕೊಳ್ಳುವಾಗ, ನಾವು ಇನ್ನೂ ಸ್ವಲ್ಪ ದೊಡ್ಡ ಪ್ರಾಂತ್ಯ ಮಾಡಿಕೊಂಡರೆ ಆಳಲಾರೆವೆಂದು ಹೇಳಿಕೊಳ್ಳುವಂಥ ಹೇಡಿಗಳೇಕಾಗಬೇಕು? ಯಾವ ಪ್ರಾಂತ್ಯವಾದರೇನು, ಪ್ರಾಂತ್ಯವನ್ನು ಉನ್ನತ ಮಟ್ಟಕ್ಕೆ ತರುವುದು ಆಡಳಿತಗಾರನ ಕುರುಹು. ಕನ್ನಡಿಗರಲ್ಲಿ ಇಷ್ಟು ಹೇಡಿಯಾಗಿದ್ದವರು ಯಾರೂ ಇಲ್ಲ! ಎಂಥೆಂಥ ಕವಿಗಳು ಇಲ್ಲಿದ್ದರು! ನಮ್ಮ ಜನಗಳು, ಕನ್ನಡಿಗರು ಬಹಳ ವೀರರು; ನಾವಿಂದು ಕನ್ನಡ ಪ್ರಾಂತ್ಯ ಕಟ್ಟಬೇಕೆಂದಿದ್ದರೆ ಕರ್ಣಾಟಕದ ಸಾಹಿತ್ಯವನ್ನನುಸರಿಸಿ ಕಟ್ಟಬೇಕಾಗಿದೆ. ವಿದ್ಯಾರಣ್ಯ ಕವಿಗಳು ಇದ್ದ ನಾಡಿದು. ಅವರಿಗೆ ಗೌರವ ಸಲ್ಲಿಸುವುದಕ್ಕಾದರೂ

(ಶ್ರೀ ಯು. ಎಂ. ಮಾದಪ್ಪ.)

ಈ ಪ್ರಾಂತ್ಯವನ್ನು ನಾವು ಕಟ್ಟಬೇಕಾಗಿದೆ. ಕೃಷ್ಣದೇವರಾಯನು ಆಂಧ್ರ ಮತ್ತು ಕನ್ನಡ ನಾಡನ್ನು ಒಟ್ಟುಗೂಡಿಸಿ ಚಿರಕಾಲ ರಾಜ್ಯಭಾರ ನಡೆಸಿದ ನಾಡಿದು. ಅವರಲ್ಲಿ ಅನ್ಯೋನ್ಯ ಮನೋಭಾವನೆಯನ್ನು ಬೆಳೆಸಿದ ನಾಡಿದು. ಹೀಗಿರುವಾಗ ಒಂದು ಪ್ರಶ್ನೆಯನ್ನೆತ್ತಿ, ಕರ್ಣಾಟಕ ಪ್ರಾಂತ್ಯವಾದರೆ ಕೋಲಾರವೇನಾದರೂ ಹೊರಗೆಹೋಗುತ್ತದೆಯೇ? ಅವರ ಮನಸ್ಸು ಪರಿವರ್ತನೆಯಾಗುತ್ತದೆಯೇ? ಎಂದು ಕೇಳುವುದಕ್ಕೆ ಅವಕಾಶವಿಲ್ಲ. ನಮ್ಮ ಕನ್ನಡಿಗರು ವಿಶಾಲಮನೋಭಾವದವರು. ಆದ್ದರಿಂದ ಅವರಿಂದ ಯಾವ ಕಿರುಕುಳಗಳೂ ಒದಗುತ್ತವೆಂದು ಭಾವಿಸಕೂಡದು. ಹಿಂದೆ ಪುಲಿಕೇಶಿಯ ಕಾಲ ತೆಗೆದುಕೊಳ್ಳಿ. ಅವರು ಕನ್ನಡನಾಡನ್ನು ಎಷ್ಟು ಮುಂದಕ್ಕೆ ತಂದಿದ್ದಾರೆಂಬುದು ಗೊತ್ತಾಗುತ್ತದೆ. ಹೀಗಿರುವಾಗ ಕನ್ನಡ ಪ್ರಾಂತ್ಯ ಬೇಡ ಎಂದು ಹೇಳುವುದಕ್ಕೆ ಆಧಾರವೇ ಇಲ್ಲ. ಕನ್ನಡ ಪ್ರಾಂತ್ಯದ ಅಗತ್ಯವಿದೆಯೆಂದು ಒತ್ತಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ (ಶಿವಮೊಗ್ಗ).—ಅಧ್ಯಕ್ಷರೇ, ಅನೇಕ ಮಾನ್ಯ ಸದಸ್ಯರು ಮಾತನಾಡಿದ ವಾದವನ್ನು ಕೇಳಿದ್ದೇನೆ. ಬೊಂಬಾಯಿ, ಹೈದರಾಬಾದು, ಮದ್ರಾಸು ಪ್ರಾಂತ್ಯಗಳಲ್ಲಿರತಕ್ಕ ಕನ್ನಡಿಗರು ತಾವೊಂದು ರಾಷ್ಟ್ರವನ್ನು ಮಾಡಿಕೊಳ್ಳುವುದಕ್ಕೆ ಮೈಸೂರಿನ ಜನರನ್ನು ಪ್ರಚೋದನೆ ಮಾಡುವುದಕ್ಕೇನು ಕಾರಣವೋ ನನಗರ್ಥವಾಗುವುದಿಲ್ಲ. ಅಲ್ಲಿರತಕ್ಕ ಜನರು ತಮಗೆ ಬೇಕಾದ ಪ್ರಾಂತ್ಯ ನಿರ್ಮಾಣ ಮಾಡಿಕೊಳ್ಳುವುದರಲ್ಲಿ ಮೈಸೂರಿನ ಜನತೆಯನ್ನು ಇಬ್ಭಾಗ ಮಾಡಿ ತಮಾಷೆ ಮಾಡುತ್ತಿರುವಂತೆ ಕಾಣುತ್ತಿದೆ. ಮೈಸೂರಿನಲ್ಲಿ ಭಿನ್ನಾಭಿಪ್ರಾಯವಿದೆಯೆಂದಮೇಲೆ, ಅವರೇ ತಮಗೆ ಬೇಕಾದಂಥ ಒಂದು ಪ್ರಾಂತ್ಯನಿರ್ಮಾಣ ಮಾಡಿಕೊಳ್ಳುವುದಕ್ಕೆ ಸರಿಯೇ? ಅಥವಾ ಅವರೂ ನಮ್ಮ ಜೊತೆಯಲ್ಲಿ ಸೇರಿಕೊಂಡು ಒಂದಾಗೋಣ ಎನ್ನುವುದು ಸರಿಯೇ? ಕರ್ಣಾಟಕ ಪ್ರಾಂತ್ಯ ರಚನೆ ಮಾಡಬೇಕೆಂದು ಹೇಳಿ ಮೈಸೂರಿನವರು ಮದರಾಸ್ ಬೊಂಬಾಯಿನವರ ಜೊತೆಯಲ್ಲಿ ಸೇರಿಕೊಂಡು ಹೈದರಾಬಾದ್ ಸರ್ಕಾರದವರೊಡನೆ ಹೋರಾಡಿ ದೇಶ ಸಂಪಾದನೆ ಮಾಡುವುದಕ್ಕೆ ಕಾರಣಕರ್ತರೇಕಾಗಬೇಕು? ಬೇರೆ ಆಡಳಿತಕ್ಕೊಳಪಟ್ಟು ಒಂದೊಂದು ರೀತಿಯಲ್ಲಿ ಸರಿಯಾಗಿರುವ ಕಾಲದಲ್ಲಿ ನಾವು ಅಲ್ಲಿರತಕ್ಕ ಕನ್ನಡಿಗರನ್ನು ತಮ್ಮ ಪ್ರಾಂತದಿಂದ ಬೇರೆಯಾಗಲಿ, ನಮ್ಮ ಪ್ರಾಂತ್ಯಕ್ಕೆ ಸೇರಲಿ ಎಂದು ಹೇಳುವ ವಾದ ವಿಚಿತ್ರವಾಗಿದೆ. ಅವರು ಒಂದು ಸಂಸಾರ ಮಾಡಿಕೊಂಡಿರುವಾಗ, ಅವರು ತಮ್ಮ ಸುಖಕ್ಕಾಗಿ ತಾವು ಬೊಂಬಾಯಿಯಲ್ಲಿರುವುದಿಲ್ಲ ಎಂದು ನಿಂತುಕೊಂಡರೆ ನಾವು ಪರಿಶೀಲಿಸಬಹುದೇ ಹೊರತು, ಅವರು ಸಂಸಾರ ಚೆನ್ನಾಗಿ ನಡೆಸುತ್ತಿರುವಾಗ, ನಾವು ಹೋಗಿ ಅವರನ್ನು ಕುರಿತು 'ನೀವು ಬಿಟ್ಟುಬಿಡಿ' ಎಂದು ಹೇಳುವುದೇ? 'ಗಂಡ ಬೇಡ' ಎಂದು ಹೆಂಡತಿ ಹೇಳಿ ತಾನು ಬೇರೆ ಸಂಸಾರ ಮಾಡುತ್ತೇನೆ ಎಂದು ಸೋಡು ಚೀಟಿ ಕೊಟ್ಟರೆ ಆಗ ಮಾತ್ರ ನಾವು ಆಲೋಚಿಸಬಹುದು ಅಷ್ಟೆ. ಆ ಜನಾಂಗ ಬೊಂಬಾಯಿ ಶಾಸನ ಸಭೆಯಲ್ಲಿ ತಾವು ಪ್ರತ್ಯೇಕ ಪ್ರಾಂತ್ಯ ರಚನೆ ಮಾಡುತ್ತೇವೆಂದು ಹೋರಾಟ ಮಾಡಿದಾಗ ನಾವು ಪರಿಶೀಲನೆ ಮಾಡಬಹುದಾಗಿದೆಯೇ ಹೊರತು ಅದಕ್ಕೆ ಮುಂಚೆ ಅಲ್ಲಿನ ಜನರನ್ನು ನಾವೇಕೆ ಪ್ರಚೋದನೆ ಮಾಡಬೇಕೆಂಬ ಅಂಶವನ್ನು ನಾವು ಮನಗಾಣಬೇಕು. ಹಿಂದೆ ಕಾನ್‌ಸ್ಟಿಟ್ಯುಯೆಂಟ್ ಅಸೆಂಬ್ಲಿಯಲ್ಲಿ ಈ ಸಂಬಂಧದಲ್ಲಿ ಠರಾವುಗಳಾಗಿವೆ, ಕಾಂಗ್ರೆಸ್ಸಿನವರು ಹಿಂದೆಯೇ ಒಪ್ಪಿದ್ದಾರೆ ಎನ್ನುವುದು ಸರಿಯಲ್ಲ. ಮೈಸೂರು ಕಾನ್‌ಸ್ಟಿಟ್ಯುಯೆಂಟ್ ಅಸೆಂಬ್ಲಿಯಲ್ಲಿ ಆಗಿದ್ದ ಠರಾವುಗಳು ರದ್ದಾಗಿ ಹಿಂದೂಸ್ಥಾನದ ಕಾನ್‌ಸ್ಟಿಟ್ಯುಯೆಂಟ್ ಅಸೆಂಬ್ಲಿಯಿಂದ ಕರಡು ಬಂದು ಅದು ಪಾಸಾಗಿದೆಯೇ ಹೊರತು ಇಲ್ಲಿನ ಅಸೆಂಬ್ಲಿಯಲ್ಲಿ ತಯಾರಾದ ಒಂದು ನಿರ್ಣಯವೂ ಅಂಗೀಕೃತವಾಗಲಿಲ್ಲವೆಂಬುದನ್ನು ಮಾನ್ಯ ಸದಸ್ಯರು ಗಮನಿಸಬೇಕು. ಹೀಗಿರುವಾಗ ರದ್ದಾಗಿರುವ ಮೈಸೂರು ಕಾನ್‌ಸ್ಟಿಟ್ಯುಯೆಂಟ್ ಅಸೆಂಬ್ಲಿಯ ಕರಡು ಪ್ರತಿಯನ್ನಿಟ್ಟುಕೊಂಡು ನಾವೀಗ ಏಕೆ ಒದ್ದಾಡಬೇಕೋ ಗೊತ್ತಿಲ್ಲ.

ಆದುದರಿಂದ ಈ ವಿಚಾರದಲ್ಲಿ ಭಾರತರಾಜ್ಯಾಂಗದಲ್ಲಿ ನಡೆದಿರತಕ್ಕಂಥ ಘಟನಾವಳಿಗಳನ್ನು ನೋಡದೆ ನಮ್ಮ ಮೈಸೂರು ಕಾನ್‌ಸ್ಟಿಟ್ಯುಯೆಂಟ್ ಅಸೆಂಬ್ಲಿಯ ಪ್ರೊಸೀಡಿಂಗ್ಸ್‌ನ್ನು ಪರಿಶೀಲನೆ ಮಾಡಿ ನೋಡಿದರೆ ಅದು ಹೇಗೆ ಗೊತ್ತಾಗುತ್ತದೆ? ಮೈಸೂರು ದೇಶದಲ್ಲಿ ಈಗ ಸುಮಾರು ನಾನಾ ಭಾಷೆಗಳನ್ನಾಡತಕ್ಕಂಥ ಜನರೂ ಸಹ ಅಧಿಕಸಂಖ್ಯೆಯಲ್ಲಿರುತ್ತಾರೆ ನಮ್ಮ ಮೈಸೂರಿನಲ್ಲಿ ಈ ದಿವಸ ತಮಿಳು ಮಾತನಾಡತಕ್ಕಂಥ ಜನರು 20 ಲಕ್ಷಕ್ಕೂ ಜಾಸ್ತಿಯಾಗಿದ್ದಾರೆ ಎಂದರೆ ಅದು ತಪ್ಪಾಗಲಾರದು. ಅದೇ ರೀತಿ ತೆಲುಗು ಮಾತನಾಡತಕ್ಕವರೂ ಸಹ ಸುಮಾರು 20 ಲಕ್ಷ ಜನರಿರಬಹುದು. 1951ರ ಸೆನ್ಸಸ್ ಪ್ರಕಾರ ಇತ್ತೀಚೆಗೆ ನೋಡಿದರೆ ಈ ತಮಿಳರ ಸಂಖ್ಯೆ 17 ಲಕ್ಷಕ್ಕೆ ಬಂದಿದೆ. ಅನಂತರ ಈ ನಾಲ್ಕು ವರ್ಷಗಳಲ್ಲಿ ಬಂದಿರುವ ಜನ, ಈಗಿನ ಸೆನ್ಸಸ್‌ವರದಿ ಪ್ರಕಾರ ಸೇರಿದರೆ 20 ಲಕ್ಷವಾಗುತ್ತದೆ. ಪ್ರತಿಯೊಂದು ಜನಸಂಖ್ಯೆಯೂ ಶೇಕಡ 10ರಂತೆ ಜಾಸ್ತಿಯಾಗಿರುತ್ತದೆ. ಅಂದರೆ ಅಲ್ಲಿಗೆ ಈ ತಮಿಳರು ಮತ್ತು ತೆಲುಗರು ಈ ಜನಾಂಗಗಳ ಸಂಖ್ಯೆ ಹೊರಗಡೆಯಿಂದ ಬರದೆ ಇದ್ದಿದ್ದರೆ ನಮ್ಮ ಮೈಸೂರಿನ ಜನಸಂಖ್ಯೆ 92 ಲಕ್ಷಕ್ಕೆ ಹೇಗೆ ಬರುತ್ತಿತ್ತು?

Mr. SPEAKER.—According to 1941 Census it is 73·8 lakhs.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಅದಕ್ಕೆ 7 ಲಕ್ಷ ಸೇರಿಸಿದರೆ 79-80 ಲಕ್ಷ ಆಗುತ್ತದೆ. 1941ಕ್ಕೆ ಬಂದವರ ಸಂಖ್ಯೆ 5 ಲಕ್ಷಗಳು, 1951ಕ್ಕೆ 12 ಲಕ್ಷ ಜನರು ಬಂದಿದ್ದಾರೆ. ಹೀಗೆ ವರ್ಷಂಪ್ರತಿ ಹೊರಗಡೆಯಿಂದ ಬರತಕ್ಕವರನ್ನು ತಳವುಕಿತ್ತು ಹಿಡಿದು ತಳ್ಳುವುದಕ್ಕಾಗುತ್ತದೆಯೇ? ಆದರೆ ಹಾಗೆ ಆಗುವುದಿಲ್ಲ. ಈ ತೊಂದರೆಗಳೆಲ್ಲಾ ಇರುವುದರಿಂದಲೇ ಈ ದಿವಸ ನಮ್ಮ ಮೈಸೂರಿನಲ್ಲಿ ಸುಮಾರು ಶೇಕಡ 30ರಷ್ಟು ತಮಿಳರೂ, ಶೇಕಡ 20ರಷ್ಟು ತೆಲುಗರೂ, ಹೀಗೆ ಈ ಎರಡು ಜನಾಂಗಗಳೇ ನಮ್ಮ ದೇಶದ ಜನಸಂಖ್ಯೆಯಲ್ಲಿ ಶೇಕಡ 50ರಷ್ಟಾಗುತ್ತವೆ. ಕನ್ನಡ ಮಾತನಾಡತಕ್ಕಂಥ ಜನರೆಲ್ಲಾ ಶೇಕಡ 32ರಷ್ಟಾಗುತ್ತಾರೆ. ಹೀಗಿರುವುದರಿಂದ ಈ ದಿವಸ ಈ ಮೈಸೂರು ರಾಜ್ಯವನ್ನು ಭಾಷಾಧಾರದ ಮೇಲೆ ನಿರ್ಧರಿಸುವುದಕ್ಕಾಗುವುದಿಲ್ಲ. ಈಗಿರತಕ್ಕಂಥ ನಮ್ಮ ಮೈಸೂರು ರಾಜ್ಯ ಬಹಳ ಅಡಕವಾಗಿದೆ. ಇದನ್ನು ದೊಡ್ಡದು ಮಾಡಲು ಅವಕಾಶವೇ ಇಲ್ಲ. ಆ ನಮ್ಮ ಒಂದು ಗಡಿಯಲ್ಲಿ ಶರದ್ಗುತ್ತಿ ಹೋಬಳಿ ಗುಡ್ಡಗಾಡು ಪ್ರದೇಶ. ಇದೇರೀತಿ ಇಲ್ಲಿಂದ ಹೊಸನಗರ, ತೀರ್ಥಹಳ್ಳಿ ತಾಲ್ಲೂಕುಗಳವರೆಗೂ ಗುಡ್ಡಗಾಡುಗಳಿರುತ್ತವೆ. ನಮ್ಮ ಸಂಸ್ಥಾನದ ಉತ್ತರ ಮತ್ತು ಪಶ್ಚಿಮದ ಗಡಿಗಳೆರಡೂ ಗುಡ್ಡಗಾಡುಗಳ ಪ್ರದೇಶವಾಗಿರುತ್ತವೆ. ಹೀಗಿರುವುದರಿಂದಲೇ ಈ ಹಿಂದೆ ಗುಡ್ಡದಮೇಲಿರತಕ್ಕ ರಾಜ್ಯಕ್ಕೇ ಒಂದು ಆಡಳಿತವನ್ನೂ ಮತ್ತು ಗುಡ್ಡದ ಕೆಳಗಿನ ದೇಶಕ್ಕೇ ಒಂದು ಆಡಳಿತವನ್ನೂ ಇಡುವುದು ಸರಿಯಾದದ್ದೆಂದು ಮಾಡಿಟ್ಟಿದ್ದಾರೆ. ಹೀಗೆ ಆಡಳಿತಕ್ಕೆ ಪ್ರದೇಶಗಳನ್ನು ವಿಂಗಡಿಸದೆ ಇದ್ದಿದ್ದರೆ ಗುಡ್ಡದ ಕೆಳಗಿನ ಜನರು ಗುಡ್ಡದಮೇಲಕ್ಕೆ ಬರಲು ಬಹಳ ಕಷ್ಟವಾಗು

ತ್ತಿತ್ತು. ಅದೇ ರೀತಿ ಗುಡ್ಡದಮೇಲಿನ ಜನರಿಗೆ ಗುಡ್ಡದ ಕೆಳಗೆ ಹೋಗುವುದಕ್ಕೂ ಬಹಳ ಕಷ್ಟವಾಗುತ್ತಿತ್ತು. ಆದರೆ ತಾವು ಈ ದಿವಸ ಆ ಗುಡ್ಡದ ಕೆಳಗಿರತಕ್ಕಂಥ ಪ್ರದೇಶಗಳನ್ನೂ ಮತ್ತು ಗುಡ್ಡದ ಮೇಲಿರತಕ್ಕಂಥ ಪ್ರದೇಶಗಳನ್ನೂ ಒಂದೇ ಆಡಳಿತಕ್ಕೆ ತರುತ್ತೇವೆಂದು ನಮ್ಮ ಮೈಸೂರಿನ ಆಡಳಿತಕ್ಕೆ ಒಳಪಡಿಸಿದ ಭಾಗದಲ್ಲಿ ನಮ್ಮ ಮೈಸೂರಿನ ಆಡಳಿತ ಸರಿಯಾಗಿರಲಾರದು. ಹೀಗೆ ಯಾವ ಒಂದು ಅಡಚಣೆಗಳನ್ನೂ ಮನಸ್ಸಿಗೆ ಹಾಕಿಕೊಳ್ಳದೆ ಈ ರಾಜ್ಯಗಳನ್ನು ಬದಲಾವಣೆಮಾಡುವ ಪಕ್ಷಕ್ಕೆ ವಲ್ಲಭಭಾಯ್ ಪಟೇಲ್‌ರವರು ಈ ನಮ್ಮ ಮೈಸೂರನ್ನೂ ಆ ಮದ್ರಾಸಿಗೆ ಸೇರಿಸಿಬಿಡಿ ಎಂದು ಹೇಳಿದ್ದರೆ ಆಗಿಹೋಗುತ್ತಿತ್ತು. ಆದರೆ ಅವರು ಮೊದಲಿಂದಲೂ ನಮ್ಮ ಮೈಸೂರಿನ ರಾಜಮನೆತನದವರಿಗೆ ತುಂಬ ಗೌರವವನ್ನು ಕೊಟ್ಟುಕೊಂಡು ಇವರ ಇಷ್ಟದ ಪ್ರಕಾರವೇ ಈ ದೇಶದ ಆಡಳಿತ ನಡೆಸಿಕೊಂಡುಹೋಗುವುದಕ್ಕೆ ಅವಕಾಶ ಕೊಟ್ಟಿದ್ದರು. ಇನ್ನುಳಿದಂಥ ದೇಶದಲ್ಲಿದ್ದ ರಾಜಮನೆತನಗಳವರ ವಿಚಾರದಲ್ಲಿ ಅವರು ಸೂಕ್ತ ಕಾರ್ಯಕ್ರಮಗಳನ್ನು ಆಗಲೇ ಕೈಗೊಂಡಿರುತ್ತಾರೆ. ನಮ್ಮ ಭಾರತದಲ್ಲಿ ಸುಮಾರು 650 ಚಿಕ್ಕದು ಮತ್ತು ದೊಡ್ಡದಾದಂಥ ಸಂಸ್ಥಾನಗಳಿದ್ದವು. ಅವುಗಳ ಪೈಕಿ ಅನೇಕ ಸಂಸ್ಥಾನಗಳನ್ನು ತೆಗೆದುಹಾಕಿ ಅವುಗಳನ್ನು ಅಕ್ಕಪಕ್ಕದಲ್ಲಿದ್ದಂಥ ಪ್ರಾಂತ್ಯಗಳಿಗೆ ಸೇರಿಸಿಬಿಟ್ಟರು. ಅವರು ನಮ್ಮ ಮಹಾರಾಜರಿಗೆ ಕೊಟ್ಟಿದ್ದ ಸ್ಥಾನವೇ ಬೇರೆ. ಇತರ ರಾಜ-ಮಹಾರಾಜರುಗಳಂತೆ ಇವರೇನೂ ಲಂಡನ್ ಇತ್ಯಾದಿ ಪಾಶ್ಚಾತ್ಯ ರಾಷ್ಟ್ರಗಳಿಗೆ ಹೋಗಿ ಅಲ್ಲಿ ರೇಸ್ ಇತ್ಯಾದಿ ಜೂಜಾಟವಾಡಿಕೊಂಡು ಆಡಳಿತದಲ್ಲಿ ಅಶ್ರದ್ಧೆಯನ್ನೇನೂ ತೋರಿಸಿರಲಿಲ್ಲ. ನಮ್ಮ ಮೈಸೂರಿನ ವಿಚಾರವೂ ಕೂಡ ಒಂದುವೇಳೆ ಹಾಗೇ ಇದ್ದಿದ್ದರೆ, ಆಗ ಈ ಮೈಸೂರು ಜನರ ಅಭಿಪ್ರಾಯ ಬದಲಾಗಿ ಬೇರೆ ಪ್ರಾಂತದೊಡನೆ ಸೇರುತ್ತಿದ್ದೆವು. ಈಗ ನಾವು ಈ ಅಂಶವನ್ನೇ ತಲೆಗೆ ಹಚ್ಚಿಕೊಂಡು ನಾವೆಲ್ಲ ಹುಚ್ಚರಾಗುತ್ತೇವೆಂದು ನನಗೆ ಗೊತ್ತಾಗುತ್ತದೆ. ಆದರೆ ಈ ದಿವಸ ಇಲ್ಲಿ ಚರ್ಚೆಗಳಾಗುತ್ತಿರುವುದನ್ನು ನೋಡಿದರೆ ನೀಲಗಿರಿ, ಕೊಳ್ಳೇಗಾಲ ಇತ್ಯಾದಿ ಪ್ರಾಂತ್ಯಗಳೇ ನಮ್ಮ ಮೈಸೂರಿಗೇ ಸೇರಬೇಕೆಂದು ವಾದ ಮಾಡುತ್ತಿರುವುದನ್ನು ನೋಡಿದರೆ, ಅಲ್ಲಿ ಮರಾಠಿ-ಕನ್ನಡ ಎಂದು ಹೋರಾಟ ನಡೆಯುತ್ತಿದೆ. ಕನ್ನಡ ಬೋರ್ಡು ಹಾಕುವುದು ಕಷ್ಟವಾಗಿದೆ. ಬೊಂಬಾಯಿ ಪ್ರಾಂತ್ಯದಿಂದ ಕನ್ನಡಿಗರು ಬೇರೆಯಾಗಲು ಸಹ ತೊಂದರೆಗಳಿವೆ. ಆದರೆ ಹೀಗೆ ಮಾಡಲು ಮೈಸೂರಿನಲ್ಲಿರತಕ್ಕ ಎಲ್ಲಾ ಜನಗಳ ಸಹಕಾರವಿದೆಯೇ, ಆ ಪ್ರದೇಶಗಳೆಲ್ಲಾ ಕನ್ನಡ ಜನರಿರತಕ್ಕಂಥ ಪ್ರದೇಶಗಳು ಹೌದೇ ಅಥವಾ ಅಲ್ಲವೇ ಎನ್ನತಕ್ಕಂಥ ಪ್ರಶ್ನೆಗಳೆಲ್ಲಾ ಒಂದು ಕಡೆಗೆ ಇರಲಿ; ಈಗ ನಾವು ಆ ಪ್ರಾಂತ್ಯಗಳನ್ನು ನಮ್ಮ ಮೈಸೂರಿಗೆ ಸೇರಿಸಿಕೊಳ್ಳಬೇಕೇ ಅಥವಾ ಮೈಸೂರೇ ಆ ಪ್ರಾಂತ್ಯಗಳಿಗೆ ಸೇರಬೇಕೇ ಎನ್ನುವ ವಿಚಾರವೊಂದು ಬೇರೆ ಇದೆ. ಹಿಂದೆ ಮಹಾತ್ಮ ಗಾಂಧಿಯವರು ಮಹಾರಾಷ್ಟ್ರ ಮತ್ತು ಗುಜರಾತ್ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಕಮಿಟಿಗಳನ್ನು ರಚನೆ ಮಾಡತಕ್ಕಂಥ ಕಾಲದಲ್ಲಿ ಈ ಭಾಷಾವಾರು ಪ್ರಾಂತ್ಯಗಳ ನಿರ್ಮಾಣದ ವಿಚಾರ ಮಾತನಾಡಿ ಗುಜರಾತ್, ಮಹಾರಾಷ್ಟ್ರ ಮತ್ತು ಕರ್ನಾಟಕ ಪ್ರಾಂತ್ಯ ನಿರ್ಮಾಣಗಳ ವಿಚಾರ ಹೇಳಿದ್ದರು. ಅಂದರೆ ಆ ದಿವಸ ಅವರು ಬ್ರಿಟಿಷರನ್ನು ನಮ್ಮ ಇಂಡಿಯಾ ದೇಶದಿಂದ ಬಿಟ್ಟು ಹೊರಡುವಂತೆ ಮಾಡಬೇಕೆಂಬ ಉದ್ದೇಶದಿಂದ ಹಾಗೆ ಒಂದು ಅಭಿಪ್ರಾಯವನ್ನು ಸೂಚಿಸಿದ್ದರು. ಹೀಗೆ ಆ ಬ್ರಿಟಿಷರನ್ನು ದೇಶದಿಂದ ಹೊರಗೆ ಓಡಿಸುವಂಥ ಸಂದರ್ಭದಲ್ಲಿ ಉಪ್ಪಿನ ಸತ್ಯಾಗ್ರಹವನ್ನು ಕೂಡ ಮಾಡಿದರು. ಉಪ್ಪಿನ ಮೇಲೆ ತೆರಿಗೆ ಹಾಕಬಾರದೆಂದು ಹೇಳಿದರು. ಅಂದರೆ ಆ ದಿವಸ ಹಾಗೆ ಹೇಳಿದ್ದರು ಎನ್ನತಕ್ಕಂತ ಒಂದು ಕಾರಣದ ಮೇಲೆ ಈ ದಿವಸ ಈ ಉಪ್ಪಿನ ಮೇಲಿನ ತೆರಿಗೆ ಹಾಕುವುದನ್ನು ತಪ್ಪಿಸುವುದಕ್ಕೆ ಆಗುತ್ತದೆಯೇನು ? ಆ ದಿವಸ ಹಾಗೆ ಅವರು ಹೇಳಿರತಕ್ಕದ್ದೆಲ್ಲಾ ಈಗ ಒಂದು ಕಾರಣವಾಗುತ್ತದೆಯೇನು? ಈ ಹಿಂದೆ ಶ್ರೀ ಕೆ. ಚೆಂಗಲರಾಯರೆಡ್ಡಿಯವರು ಬೆಟರ್‌ಮೆಂಟ್ ಟ್ಯಾಕ್ಸನ್ನು ಹಾಕಬೇಕೆಂದು ಹೇಳಿದ್ದರು. ಆದರೆ ಈಗ ಅದನ್ನು ಹಾಕಬೇಕೆಂಬ ವಾದವೂ ಇದೆ, ಹಾಕಬಾರದೆಂಬ ವಾದವೂ ಇದೆ. ಈ ಕರ್ಣಾಟಕಪ್ರಾಂತ್ಯ ನಿರ್ಮಾಣದ ವಿಚಾರದಲ್ಲಿ 1947ಕ್ಕೆ ಹಿಂದೆಯೇ ಠರಾವುಗಳು ಪಾಸಾಗಿವೆ ಎಂದು ಹೇಳುತ್ತಿದ್ದಾರೆ. ಆದರೆ 1947ಕ್ಕೆ ಹಿಂದೆ ಯಾರು ಈ ಕರ್ಣಾಟಕವಾಗಬೇಕೆಂದು ಹೇಳುತ್ತಿದ್ದರೋ ಅವರೇ ಈಚೆಗೆ ಕರ್ಣಾಟಕ ಪ್ರಾಂತ್ಯ ಆಗುವುದು ಬೇಡ ಎಂದು ಹೇಳಿದ್ದಾರೆ. ಹಿಂದೆ ಯಾರು ಬೇಡವೆಂದು ಹೇಳಿದ್ದರೋ ಅವರೇ ಈಗ ಕರ್ಣಾಟಕ ಆಗಬೇಕೆಂದು ಹೇಳುತ್ತಿರುವವರು. ಇದು ಹಿಂದೆ ಹೇಳತಕ್ಕದ್ದೇ ಒಂದು ರೀತಿ ಈ ದಿವಸ ಹೇಳುತ್ತಿರುವುದೇ ಒಂದು ರೀತಿಯಾಗಿದೆ. ಆದರೆ ಕಾಲ ಬದಲಾವಣೆಯಾದ ಹಾಗೆಲ್ಲಾ ಜನರ ವೈಯಕ್ತಿಕ ಅಭಿಪ್ರಾಯಗಳೂ ಕೂಡ ಬದಲಾವಣೆ ಆಗುತ್ತದೆ. ಅದಕ್ಕೆ ನಾವು ಅವನ್ನು ಒತ್ತಾಯಪಡಿಸುವುದಕ್ಕಾಗುವುದಿಲ್ಲ. ಈಗ ನಮ್ಮ ದೇಶದ ಆದಾಯದಲ್ಲಿ ಶೇಕಡ 37ರಷ್ಟು ಎಕ್ಸೈಜ್ ರೆವಿನ್ಯೂನಿಂದ ಉತ್ಪತ್ತಿಯಾಗುತ್ತಿದೆ. ಭೂಕಂದಾಯದಿಂದ ಶೇಕಡ 17ರಷ್ಟು ವರಮಾನ ಬರುತ್ತಿದೆ. ಆದರೆ ಈ ಎಕ್ಸೈಜ್ ವರಮಾನವನ್ನು ರದ್ದುಪಡಿಸಿದನಂತರ ಆ ವರಮಾನವನ್ನು ಸರಿತೂಗಿಸಲು ಬೇರೆ ವರಮಾನ ಮಾರ್ಗಗಳೇ ಇಲ್ಲ. ಈ ಹಿಂದಿನ ಪಾಂಚವಾರ್ಷಿಕ ವರದಿಯಲ್ಲಿ ಹೇಳಿರುವ ಪ್ರಕಾರ ಬೊಂಬಾಯಿ ಮತ್ತು ಮದರಾಸ್ ಪ್ರಾಂತ್ಯಗಳ ಕನ್ನಡ ಪ್ರದೇಶಗಳಲ್ಲಿ ಅಷ್ಟೇನೂ ಹೆಚ್ಚಿನ ಹಣವನ್ನು ಖರ್ಚುಮಾಡಿರುವಹಾಗಿಲ್ಲ. ಆದರೆ ಇತ್ತೀಚೆಗೆ ತುಂಗಭದ್ರಾ ಯೋಜನೆಯ ಬಗ್ಗೆ ತಗುಲಿದ ಖರ್ಚು ವೆಚ್ಚಗಳ ಸಂಬಂಧದಲ್ಲಿ ನಮ್ಮ ಮೈಸೂರಿನ ಮೇಲೆ 35 ಕೋಟಿ ರೂಪಾಯಿಗಳ ಸಾಲವನ್ನು ಹೇರಿದ್ದಾರೆ. ಆದರೆ ಆ ನೀರಿನ ಉಪಯೋಗದಲ್ಲಿ ಅರ್ಧಕ್ಕೆ ಜಾಸ್ತಿಯಾಗಿ ಬೇರೆ ಪ್ರಾಂತ್ಯಗಳಿಗೆ ಹೋಗುತ್ತಿದೆ..............

(ಸಭೆಯಲ್ಲಿ ಗಲಾಟೆ)

ಹೀಗಿರುವಾಗ ಈ ಕನ್ನಡ ನಾಡನ್ನೆಲ್ಲಾ ಒಟ್ಟಾಗಿ ಸೇರಿಸಬೇಕೆಂದು ಹೇಳುವುದಕ್ಕೆ ಪ್ರತಿಯಾಗಿ ಎರಡು ಕನ್ನಡನಾಡುಗಳಾದರೆ ಏನು ಬಾಧಕ ಉಂಟಾಗುತ್ತದೆಯೋ ಅದು ನನಗೆ ಗೊತ್ತಾಗುತ್ತಿಲ್ಲ. ಆ ಜನರೆಲ್ಲರೂ ನಮ್ಮ ಮೈಸೂರಿಗೆ ಬಂದು ಸೇರಿದರೆ ಆ ಬಳಿಕ ನಮ್ಮ ದೇಶದ ಜನರು ಹೆಚ್ಚಿನ ಅನುಕೂಲ ಪಡೆಯುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಈ ದಿವಸ ನಾವಾಗಿಯೇ ಈ ಪ್ರಾಂತ್ಯಗಳನ್ನೆಲ್ಲಾ ನಮಗೆ ಸೇರಿಸಿಕೊಡಬೇಕೆಂದು ಆ ಕೇಂದ್ರಕ್ಕೆ ಒತ್ತಾಯಪಡಿಸಿದ ನಂತರ ಆ ಪ್ರದೇಶಗಳೆಲ್ಲಾ ಬಹಳ ಹಿಂದುಳಿದಿರುತ್ತವೆ, ಅವುಗಳ ಅಭಿವೃದ್ಧಿಗಾಗಿ ಹೆಚ್ಚಿಗೆ ಹಣಸಹಾಯಮಾಡಿ ಎಂದು ಕೇಂದ್ರ ಸರ್ಕಾರವನ್ನು ಕೇಳಿದರೆ ಅವರು ನೀವೇ ಸೇರಿಸಿಕೊಂಡಿದ್ದೀರಿ ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಅದಕ್ಕಾಗಿ ನಾವು ಈಗ ಎರಡು ಕರ್ಣಾಟಕಪ್ರಾಂತ್ಯಗಳನ್ನು ನಿರ್ಮಾಣ ಮಾಡಿದರೆ ಆಗ ಕೇಂದ್ರಸರ್ಕಾರದವರೇ ಹಣವನ್ನು ಖರ್ಚುಮಾಡಿ ಆ ಪ್ರದೇಶಗಳನ್ನೆಲ್ಲಾ ಅಭಿವೃದ್ಧಿಗೆ ತರುವುದಕ್ಕೆ ಅವಕಾಶವಿರುತ್ತದೆ.

(ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.)

5 P.M.

ಪಕ್ಕದ ಪ್ರಾಂತ್ಯದಲ್ಲಿ ಏನೇನು development works ಆಗಿವೆ ಎಂಬುದನ್ನು ನೋಡಿಕೊಂಡು ಅವರಂತೆ ಮಾಡಲು ಅವರು ಒಂದು ಪ್ರತ್ಯೇಕ ಸರ್ಕಾರವನ್ನು ರಚನೆಮಾಡಿಕೊಂಡು ಅವರ ಪ್ರದೇಶವನ್ನು ಅಭಿವೃದ್ಧಿಗೆ ತರುವುದಕ್ಕೆ ಸಾಧ್ಯವಾಗುತ್ತದೆ. ಅದಲ್ಲದೆ ಪಕ್ಕದ ಪ್ರಾಂತ್ಯಕ್ಕೆ ಸೇರಿದರೆ ಅವರ ಪ್ರದೇಶದಲ್ಲಿ development works ಆಗುತ್ತವೆಯೆಂದು ನಂಬುವುದಕ್ಕೆ ಸಾಧ್ಯವಾಗುವುದಿಲ್ಲ. ನಾಳೆ ದಿವಸ ಒಂದು ಕರ್ಣಾಟಕ ಪ್ರಾಂತ ಆಗುವುದಕ್ಕೆ ಅಭ್ಯಂತರ ಇಲ್ಲವೆಂದು ಒಪ್ಪುವುದಾದರೆ ಮೈಸೂರಿನ ಹೊರಗಡೆಯಿಂದ ಬಂದ 100 ಜನ ಸದಸ್ಯರು ಮೈಸೂರು ದೇಶದಲ್ಲಿರುವ 100 ಜನ ಸದಸ್ಯರ ಜೊತೆಗೆ ಸೇರಿ ಮಂತ್ರಿಮಂಡಳ ರಚಿಸುವುದಕ್ಕೆ ಏನೂ ತೊಂದರೆಯಾಗುವುದಿಲ್ಲ, Mys reans ಮತ್ತು Non-Mysoreans ಎಂದು ಈ ರೀತಿ ಹೋರಾಟ ನಡೆದರೆ ಸರ್ಕಾರ ಹೀಗೆ ಎರಡುಗುಂಪುಗಳಾಗಿ ಮೈಸೂರಿನ ಜನ ಉದ್ಧಾರವಾದ ಹಾಗೆ ಎಂದು ತಿಳಿದುಕೊಳ್ಳೋಣವೆ? ಆದ್ದರಿಂದ ಈ ರೀತಿಯಾದಂಥ ಭಿನ್ನಾಭಿಪ್ರಾಯವುಳ್ಳ ಜನರ ಜೊತೆಯಲ್ಲಿ ಸೇರಿಕೊಂಡು ಕ್ಷೇಮವಾದಂಥ ಸರ್ಕಾರ ಮೈಸೂರಿನಲ್ಲಿ ನಡೆಯುತ್ತದೆಯೆ? ಮುಂದಿನ ಜನರಿಗೆ ಇಂತಹ ವ್ಯಾಜ್ಯವು ಹುಟ್ಟುವಂತೆ ಮಾಡುವುದು ಸರಿಯಲ್ಲ. ಈಗ ಬೊಂಬಾಯಿ ನಗರದೊಳಗೆ statistics ಪ್ರಕಾರ ಐದು ಲಕ್ಷ ಕನ್ನಡಿಗರು ಇದ್ದಾರೆ ಎಂಬುದನ್ನು ನೋಡಿದ್ದೇನೆ. ಕನ್ನಡ ಪ್ರಾಂತ್ಯವಾದರೆ ಈ ಐದು ಲಕ್ಷ ಜನರ ಹಿತದೃಷ್ಟಿಯಿಂದ ಬೊಂಬಾಯಿನಗರದ ಸ್ವಲ್ಪ ಭಾಗವನ್ನು ಕರ್ಣಾಟಕಕ್ಕೆ ಸೇರಿಸುವುದು ಆಗುವುದೇ? ನಾವು ಬಂಗಾಳದಲ್ಲಿರತಕ್ಕಂಥ ಜನರನ್ನು ನೋಡಿದರೆ ಯಾವ ಪ್ರಾಂತದಲ್ಲೂ ಇಲ್ಲದಷ್ಟು Provincialism ಇದೆ, Non-Bengaleseನ್ನು ಯಾವ ಕಾರಣದಿಂದಲೂ encourage ಮಾಡುವುದಿಲ್ಲ. ಮಹಾರಾಷ್ಟ್ರದವನು ಮಹಾರಾಷ್ಟ್ರದವನಲ್ಲದವನನ್ನು encourage ಮಾಡುವುದಿಲ್ಲ. ಅಲ್ಲಿಯೂ Provincialism ಇದೆ. ಅಂತಹ ಸಂದರ್ಭವಿರುವಾಗ ಇಲ್ಲಿಯೂ ಈ ರೀತಿ ಭಾವನೆ ಬಂದರೆ Mysoreans ಇತರ ಪ್ರಾಂತಗಳಿಗೆ ಹೋಗಿ ಕೆಲಸ ಮಾಡತಕ್ಕಂಥ ಸಂದರ್ಭಗಳು ಖಂಡಿತವಾಗಿಯೂ ಕಡಿಮೆಯಾಗುತ್ತವೆ. ಮೈಸೂರು ಸ್ಟೇಟ್‌ನಲ್ಲಿ ಬೇರೆ ಪ್ರಾಂತಗಳಿಂದ ಬಂದು Contract ವ್ಯಾಪಾರ, ಉದ್ಯೋಗಗಳನ್ನು ಮಾಡುತ್ತಿದ್ದಾರೆ. ಈ ರೀತಿ ಕರ್ಣಾಟಕ ಪ್ರಾಂತವಾದರೆ ಇವರು ಕನ್ನಡ ದೇಶದ ಜನ, ಇವರು ಕನ್ನಡ ದೇಶದ ಜನರಲ್ಲ ಎಂಬ ಭಾವನೆ ಬಂದು ತಿಕ್ಕಾಟಗಳು ಬೆಳೆಯುವುದಕ್ಕೆ ಅವಕಾಶವಾಗಿ ಮೈಸೂರಿನವರಿಗೆ ಬೇರೆ ದೇಶದಲ್ಲಿ ಅನುಕೂಲಗಳು ಸಿಕ್ಕಲಾರದೆಂದು ಹೇಳುತ್ತೇನೆ. ಶ್ರೀಮಾನ್ ಚೆನ್ನಬಸಪ್ಪನವರು, ಸಂಪತ್ತು ಎಲ್ಲಾ ಪ್ರಾಂತಗಳಿಗೂ ಸಮನಾಗಿರುವಂತೆ ಆಡಳಿತ ಅನುಕೂಲತೆಗಳಿಗೆ ಅನುಗುಣವಾಗಿ ಪ್ರಾಂತ ವಿಂಗಡನೆ ಮಾಡಬೇಕು, ಪ್ರತಿಷ್ಠೆ ಕಾರ್ಯಗಳಿಗಾಗಿ ಪ್ರಾಂತವಿಂಗಡನೆ ಮಾಡಬೇಕಾಗಿಲ್ಲ ಎಂದು ಹೇಳಿದರು ಆಡಳಿತ ದೃಷ್ಟಿಯಿಂದ ಫಸಲಾಲಿ ಸಮಿತಿಯವರು ಮತ್ತು ಕೇಂದ್ರ ಸರ್ಕಾರದವರ ಖುದ್ದು ಯಾವ ಯಾವ ಪ್ರಾಂತಗಳನ್ನು ಮಾಡಬೇಕು ಎಂಬ ವಿಚಾರದಲ್ಲಿ ಕೂಲಂಕಷವಾಗಿ ಚರ್ಚೆ ಮಾಡಿ ಈ ರೀತಿ ಆಗಬೇಕೆಂದು ಸಲಹೆ ಕೊಟ್ಟರೆ ಅದನ್ನು ಶಿರಸಾವಹಿಸಿ ಅಂತೆಯೇ ಮಾಡೋಣ; ಬೇಡ ಎಂದು ಹೇಳುವುದಿಲ್ಲ. ವಾಸ್ತವವಾಗಿ ಈ ಪ್ರಶ್ನೆ ಕನ್ನಡ ನಾಡಿಗೆ ಮಾತ್ರ ಅನ್ವಯಿಸುವುದಿಲ್ಲ. ಗುಜರಾತಿ ಮಹಾರಾಷ್ಟ್ರ, ಬಂಗಾಳ, ಪಂಜಾಬು ಇತ್ಯಾದಿ ಎಲ್ಲಾ ಪ್ರಾಂತ್ಯಗಳಿಗೂ ಅನ್ವಯಿಸುತ್ತದೆ. ಅವೆಲ್ಲಕ್ಕಿಂತಲೂ ಮುಂಚೆಯಾಗಿ ವಿಶಾಲ ಮೈಸೂರನ್ನು ಮಾಡುತ್ತೇವೆಂದು ಹೇಳಿ ಹೋದರೆ ಅದರಲ್ಲಿ ಅರ್ಥವಿಲ್ಲ. ಫಸಲಾಲಿ ಸಮಿತಿಯವರು ಮತ್ತು ಕೇಂದ್ರ ಸರ್ಕಾರದವರು ಹೀಗೆ ಆಗಬೇಕೆಂದು ಮಾಡುವಾಗ ಮೈಸೂರಿನ ಎಲ್ಲಾ ಜನರು ಅದಕ್ಕೆ ವಿರೋಧಮಾಡಿ ಅದಕ್ಕೆ ಅಡ್ಡಿ ಆತಂಕಗಳನ್ನು ತಂದೊಡ್ಡುವುದಕ್ಕೆ ಆಗುವುದಿಲ್ಲವೆಂದು ಕಂಡು ಬರುತ್ತದೆ. ಪಾಕೀಸ್ತಾನದ ಆಡಳಿತವನ್ನು ನೋಡುವುದಾದರೆ ಅವರು ಬಂಗಾಳದಲ್ಲಿ ಭಾಷೆಗೋಸ್ಕರ ಹೋರಾಟ ಮಾಡುತ್ತಿದ್ದಾರೆ. ಅತ್ತಕಡೆ ಎಲ್ಲಾ Provinceಗಳನ್ನೂ ಸೇರಿಸಿ ಒಂದೇ Province ಮಾಡಬೇಕೆಂದು ಹೇಳುತ್ತಿದ್ದಾರೆ. ಈ ತರಹ ಆಡಳಿತವನ್ನು ಹೆಚ್ಚು ಕಡಿಮೆ ಮಾಡಿ ಒಂದುಕಡೆಯಿಂದ ತೆಗೆದು ಇನ್ನೊಂದು ಕಡೆ ಸೇರಿಸಿ ಈ ರೀತಿ ಏರು ಪೇರುಗಳನ್ನು ಖಂಡಿತವಾಗಿಯೂ ಮಾಡಕೂಡದೆಂದು ಹೇಳುತ್ತೇನೆ. ಶ್ರೀ ಎಸ್. ಕೆ. ಪಾಟೀಲ್‌ರವರು ಒಂದು ಸಂಸ್ಥೆಯನ್ನು ಮಾಡಿ ಈ ಭಾಷಾವಾರು ವಿಂಗಡಣೆಯನ್ನು 20 ವರ್ಷಗಳ ಕಾಲ ಮುಂದಕ್ಕೆ ತಳ್ಳಬೇಕು, ದೇಶದ ಹಿತದೃಷ್ಟಿಯಿಂದ ಕಾದಾಡಬಾರದು, ಬೌಂಡರಿಗಳನ್ನು ಇವೊತ್ತೇ ನಿಷ್ಕರ್ಷೆ ಮಾಡುವುದಕ್ಕೆ ಹೋಗಬಾರದು, ದೇಶದ ಹಿತದೃಷ್ಟಿಯಿಂದ 15—20 ವರ್ಷಗಳ ಕಾಲ ಈಗ ಇರುವಂತೆ ಇರಬೇಕು—ಎಂದು ಬಹಳ ಚೆನ್ನಾಗಿ ಫಸಲಾಲಿ ಸಮಿತಿಯವರ ಮುಂದೆ ವಾದಮಾಡಿದ್ದಾರೆ. ಈ ರೀತಿಯಾಗಿ ಪಕ್ಕದ ನೆರೆಹೊರೆಯ ಪ್ರಾಂತ್ಯಗಳಲ್ಲಿ ಅಶಾಂತಿ ಹುಟ್ಟಿ ಜನಗಳಲ್ಲಿ ತಿಕ್ಕಾಟವಾಗುವಂತೆ ಮಾಡುವುದು ಮತ್ತು ವೈಷಮ್ಯ ಹೆಚ್ಚುವಂತೆ ಮಾಡುವುದು ವ್ಯವಹಾರವಲ್ಲ. ದೇಶದ ಹಿತ ದೃಷ್ಟಿಯಿಂದ ಇನ್ನೂ ಕೆಲವುಕಾಲ ಇದೇ ಸ್ಥಿತಿ ಇದ್ದುಕೊಂಡು ಒಂದು ಬಲವಾದ ರಾಜ್ಯವಾಗಿ ಆರ್ಥಿಕ ದೃಷ್ಟಿಯಿಂದಲೂ ಉತ್ತಮ ಸ್ಥಿತಿ ಏರ್ಪಡಬೇಕು. ಇವೊತ್ತಿನ ದಿವಸ ಮೈಸೂರಿಗೆ ಜನರು ಕನ್ನಡ ಪ್ರಾಂತವಾಗಬೇಕು ಎಂಬುದನ್ನು ಸ್ವಾಗತಿಸುತ್ತಾ ವಿಶಾಲವಾದ ಮೈಸೂರು ಆಗಬೇಕೆಂದು ಹೇಳುವ ಮೊದಲು ಮೈಸೂರಿನ ಹೊರಗಡೆ ಇರತಕ್ಕಂಥ ಕನ್ನಡ ನಾಡಿನ ಜನರು ತಮ್ಮ ತಮ್ಮ ಸರ್ಕಾರಗಳಲ್ಲಿ ಹೋರಾಟ ನಡೆಸಿ ಒಂದು ಪ್ರಾಂತ ಮಾಡಿಕೊಂಡು ಅವರ ಪ್ರದೇಶಗಳಲ್ಲಿ ಪ್ರಗತಿಗಳನ್ನು ಸಾಧಿಸಿದರೆ ಆಗ ಸಾಧ್ಯವಾಗುತ್ತದೆ. ಹಾಗಿಲ್ಲದೆ ಮೈಸೂರಿನವರು ಅಲ್ಲಿಯ ಜನರನ್ನು ಪ್ರಚೋದನೆಮಾಡಿ ಹೋರಾಟ ಮಾಡಿದರೆ ನಿಮ್ಮ ಜೊತೆಯಲ್ಲಿ ಹೋರಾಟ ಮಾಡುತ್ತೇವೆಂದು ಭರವಸೆ ಕೊಡುವುದಾಗಲಿ ಮಾತನಾಡುವುದಾಗಲಿ ಸರಿಯಲ್ಲ. ತತ್ಕಾಲದಲ್ಲಿ ಯಾವ ವಿಷಯವನ್ನೂ ಕೂಡ ಪರಿಶೀಲನೆಮಾಡದೆ ಇನ್ನೂ ಕೆಲವು ಕಾಲ ಈಗ ಇದ್ದ ಹಾಗೆ ಇರುವುದು ಒಳ್ಳೆಯದೆಂದು ನಾನು ಹೇಳುತ್ತೇನೆ.

Mr. SPEAKER.—The House will now rise and meet at 8-30 A. M. to-morrow.

The House adjourned for the day at Five Minutes past Five of the Clock to meet again at Thirty Minutes past Eight of the Clock on Saturday, the 23rd April 1955.

WD 4508—GPB—550—6-10-55.

MYSORE LEGISLATIVE ASSEMBLY

FORTY-NINTH DAY

Saturday, 23rd April 1955.

The House met in the Legislative Assembly Hall, Old Public Offices, Bangalore, at Thirty Minutes past Eight of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS

Classification of Untouchability

Q.—886 Sri A. MUNIYAPPA (Sidlaghatta - Chikballapur—Scheduled Castes).—

Will the Government be pleased to state :—

whether the Depressed Class Special Officer of Kolar District has collected facts and figures regarding different kinds of untouchability prevailing in every taluk of the District and made suggestions for their remedy?

A.—Sri K. HANUMANTHAIYA (Chief Minister).—

No.

ಶ್ರೀ ಎ. ಮುನಿಯಪ್ಪ.—ನನ್ನ ಪ್ರಶ್ನೆಗೆ ಉತ್ತರವಾಗಿ 'ಇಲ್ಲ' ಎಂದು ಉತ್ತರ ಕೊಟ್ಟಿದ್ದೀರಿ. ಹಾಗಾದರೆ ಈ ಸ್ಪೆಷಲ್ ಆಫೀಸರ ಕೆಲಸ ಏನು ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವರಿಗೆ ಕೆಲಸ ನಿಗದಿಯಾಗಿದೆ. ಹರಿಜನರಿಗೆ, ಆದಿಕರ್ಣಾಟಕರಿಗೆ ಎಲ್ಲೆಲ್ಲಿ ಏನೇನು ತೊಂದರೆಯಿದೆ, ಜಮೀನು ಇತ್ಯಾದಿ ವಿಷಯಗಳಲ್ಲಿ ಅವರಿಗೇನು ಅನುಕೂಲತೆ ಮಾಡಿಕೊಡಬೇಕಾಗಿದೆಯೆಂಬುದನ್ನು ನೋಡಿ, ತೊಂದರೆಗಳನ್ನು ಪರಿಹಾರ ಮಾಡುವುದೂ, ಬೇಕಾದ ಅನುಕೂಲತೆಗಳನ್ನು ಮಾಡಿಕೊಡುವುದೂ ಅವರಿಗಿರತಕ್ಕ ಮುಖ್ಯವಾದ ಕೆಲಸವಾಗಿದೆ.

ಶ್ರೀ ಎ. ಮುನಿಯಪ್ಪ.—ಅಸ್ಪೃಶ್ಯತಾ ನಿವಾರಣೆಗೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುವಾಗ ಈ ಅಂಕಿ ಅಂಶಗಳನ್ನೂ ಸಂಗ್ರಹ ಮಾಡಿ ಒಂದು ಪರಿಹಾರೋಪಾಯವನ್ನು ಕಂಡುಹಿಡಿಯುವುದರಿಂದ ಹೆಚ್ಚಿನ ಉಪಯೋಗವಾಗುವುದಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಉಪಯೋಗವಾಗುವುದಿಲ್ಲವೆಂದು ಹೇಳುವುದಿಲ್ಲ, ಆದರೆ, ಅವರಿಗೀಗ ನಿಗದಿಯಾದ ಕೆಲಸ ಇದೆ. ಅದನ್ನು ಮಾಡುತ್ತಿದ್ದಾರೆ.

ಶ್ರೀ ಎ. ಮುನಿಯಪ್ಪ.—ರಾಜ್ಯಾಂಗದಲ್ಲಿ ಹೇಳಿರುವ ಪ್ರಕಾರ ಇನ್ನು ಉಳಿದಿರುವ ವರ್ಷಗಳಲ್ಲಿ ಹರಿಜನರನ್ನು ಸವರ್ಣ ಹಿಂದುಗಳ ಮಟ್ಟಕ್ಕೆ ಬರುವಂತೆ ಮಾಡಬೇಕಾದರೆ ಈ ಕೆಲಸ ಮಾಡುವುದು ಮುಖ್ಯವಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ಎ. ಮುನಿಯಪ್ಪ.—ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲಿಯೂ ಈ ವಿಚಾರದಲ್ಲಿ ಸ್ಪೆಷಲ್ ಆಫೀಸರು ಈ ಕೆಲಸವನ್ನು ಜರೂರಾಗಿ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಯೋಚನೆ ಮಾಡುತ್ತೇವೆ.

Samskritiprachar

Q.—9. Sri T. C. BASAPPA (Tarikere Constituency).—

Will the Government be pleased to state :—

(*a*) what the expenditure is under "Samskritiprachar" under the following heads for 1953-54 and 1954-55 (up to 1st January 1955) (figures to be given for each year separately):—

(i) for the Director and his office ;

(ii) for the Committee meetings ;

(iii) for T. A. and D. A. for Pracharaks ;

(iv) any other expenses in this behalf ;

(*b*) the amount drawn by each Pracharaka person till the end of December 1954 ?

A.—Sri A. G. RAMACHANDRA RAO (Minister for Law and Education).—

(*a*)	*1953-54*			*1954-55*		
	Rs.	a.	p.	Rs	a.	p.
(i)	13,522	10	0	6,537	1	0
(ii)	896 (D. A.)	11	0	(D.A.) 310	0	0

(SRI A. G. RAMACHANDRA RAO.)

Committee meetings :—

(1) Central Advisory Council for Literary and Cultural Development.
(2) Organisation Committee.
(3) Awards Committee.
(4) Planning Committee.
(5) *Ad-hoc* Committee.

Note.—Information regarding T. A. drawn by Mofussil members not readily available.

(iii) *1953-54*	*1954-55*
Rs. a. p.	Rs. a. p.
1,300 9 0	4,664 15 6
(Nine Districts)	(Nine Districts)
(iv) 1,976 9 6	5,223 12 0
(Nine Districts)	(Nine Districts)

(Incidental and Samskrithi Prachara Day celebration expenses, etc.)

(*b*) Information not readily available.

Samskrithi Prachar (Expenditure incurred)

Q.—176. Sri A. V. NARASIMHA-REDDY (Bangalore South).—

Will the Government be pleased to state :—

(*a*) the amount they have spent over Samskrithi Prachara in the State from March 1954 to December 1954;

(*b*) the amount spent on publications, arranging of meetings may be stated separately ;

(*c*) the amount paid by way of Honoraria to each Pracharaka from March 1954 to December 1954 ;

(*d*) the cost they have incurred by inviting Sri C. Rajagopalachari, Ex-Chief Minister of Madras to deliver the Samskrithi Prachara lecture in the State of Mysore during March 1954 and December 1954 ?

A.—Sri A. G. RAMACHANDRA RAO (Minister for Law and Education).—

	Rs.
(*a*) Rs. 65,500.	
(*b*) (i) Publications ...	14,283
(ii) Meetings ...	310 (D. A.)

(1) Central Advisory Council for Literary and Cultural Development.
(2) Organisation Committee.
(3) Awards Committee.
(4) Planning Committee.
(5) *Ad-hoc* Committee.

(*c*) Total amount paid to Pracharakas in nine Districts ...Rs. 6,745-15-3

Note.—Details of amount paid to each Pracharaka are not readily available.

(*d*) Rs. 400.

ಶ್ರೀ ಟಿ. ಸಿ. ಬಸಪ್ಪ.—(*a*) (ii) ಪ್ರಶ್ನೆಗೆ ಉತ್ತರವಾಗಿ 1954-55ನೆಯ ಸಾಲಿನಲ್ಲಿ 4,664 ರೂಪಾಯಿಗಳು ಖರ್ಚಾಗಿವೆಯೆಂದು ಹೇಳಿದ್ದೀರಿ, ಇದರ ಬಗ್ಗೆ ವಿವರವಾಗಿ ಇಂಥಿಂಥವರು ಇಷ್ಟಿಷ್ಟು draw ಮಾಡಿದ್ದಾರೆಂದು ವಿವರಗಳು ಬಂದಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಒಟ್ಟು ಆಯಾ ಕ್ಷೇತ್ರದಿಂದ ಎಷ್ಟು ಖರ್ಚಾಗಿದೆಯೆಂದು ಬಂದಿದೆ.

ಶ್ರೀ ಟಿ. ಸಿ. ಬಸಪ್ಪ.—ಅಂದರೆ, ಇಂಥಿಂಥವರು ಇಷ್ಟಿಷ್ಟು ಹಣವನ್ನು ತೆಗೆದುಕೊಂಡಿದ್ದಾರೆಂದು ಅಂಕಿಗಳು ಸಿಕ್ಕುವುದಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಡಿಸ್ಟ್ರಿಕ್ಟಿನಿಂದ ಇದು ಬಂದಿದೆ. ಅವರು ತಾಲ್ಲೂಕಿನಿಂದ ತರಿಸಿಕೊಡಬೇಕು. ಅದು ಬಂದಿಲ್ಲ.

ಶ್ರೀ ಟಿ. ಸಿ. ಬಸಪ್ಪ.—ಈ ಪ್ರಶ್ನೆಯನ್ನು ನಾನು ಮೂರು ತಿಂಗಳ ಹಿಂದೆಯೇ ಕಳುಹಿಸಿದ್ದೇನೆ. This is an important question. ಅಂಥದಕ್ಕೆ "information is not readily available" ಎಂದು ಹೇಳಿದರೆ ಹೇಗೆ ? Even now I request the Hon'ble Minister to furnish this information.

Sri A. G. RAMACHANDRA RAO.—Sir, there are, as the Hon'ble Member knows, ten Districts and for each there are about 8 to 10 taluks. This work is going on for sometime past and at least half a dozen persons will have to work. It comes to 600 names. If the Chair were to say that it is necessary, we will try to get the information.

Mr. SPEAKER.—At least furnish it for the information of the Hon'ble Member.

Sri T. C. BASAPPA.—May I know the number of Pracharaks in the State?

Mr. SPEAKER.—That was once furnished.

ಶ್ರೀ ಟಿ. ಸಿ. ಬಸಪ್ಪ.—ಈಗ ಪ್ರತಿಯೊಬ್ಬ ಪ್ರಚಾರಕರೂ ಉಪನ್ಯಾಸ ಮಾಡಿದಾಗ ಎಷ್ಟು ಜನರು ಹಾಜರಿದ್ದರು, ಯಾವಯಾವ subject ಮೇಲೆ ಭಾಷಣ ಮಾಡಿದರು ಎಂಬ ಬಗ್ಗೆ ತಮಗೆ ರಿಪೋರ್ಟ್ ಕಳುಹಿಸಿದ್ದಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪ್ರಚಾರಕರು ಕಳುಹಿಸಲು organise ಮಾಡುವವರು ಅದನ್ನೆಲ್ಲಾ ಕಳುಹಿಸುತ್ತಾರೆ.

ಶ್ರೀ ಟಿ. ಸಿ. ಬಸಪ್ಪ.—1954-55ರಲ್ಲಿ ಪ್ರತಿಯೊಂದು ಮೀಟಿಂಗಿನಲ್ಲಿಯೂ average attendance ಎಷ್ಟಿತ್ತೆಂಬುದನ್ನು ಹೇಳುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಟಿ. ಸಿ. ಬಸಪ್ಪ.—ಈ ಮೀಟಿಂಗ್‌ಗಳಲ್ಲಿ 8-10 ಜನರೂ ಇರುವುದಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಟಿ. ಸಿ. ಬಸಪ್ಪ.—ಹೋದವರುಷ ಎಷ್ಟು ಹಣ lapse ಆಯಿತು ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಹಳ lapse ಆಗಿದೆ.

ಶ್ರೀ ಟಿ. ಸಿ. ಬಸಪ್ಪ.—ಇನ್ನು ಮುಂದಾದರೂ ಈ ಹಣ ಜಾಗ್ರತೆ ಜಾಗ್ರತೆಯಾಗಿ ಖರ್ಚು ಮಾಡುವಂತೆ direction ಕೊಡುವುದಕ್ಕಾಗುತ್ತದೆಯೇ ?

(No answer).

ಶ್ರೀ ಎ. ವಿ. ನರಸಿಂಹರೆಡ್ಡಿ.—ಸಿ. ರಾಜಗೋಪಾಲಾಚಾರಿಯವರನ್ನು ಕರೆಸಿದ್ದಕ್ಕೆ 400 ರೂಪಾಯಿ ಖರ್ಚಾಯಿತು ಎಂದು ಹೇಳಿದ್ದೀರಿ. ಈ ಸಭೆ ಎಲ್ಲಿ ನಡೆಯಿತು ?

ಶ್ರೀ ಎ. ಜಿ. ರಾಮಚಂದ್ರರಾವ್.—ಬೆಂಗಳೂರಿನಲ್ಲಿ.

ಶ್ರೀ ಎ. ವಿ. ನರಸಿಂಹರೆಡ್ಡಿ—ಟೌನ್ ಹಾಲಿನಲ್ಲೇ ?

ಶ್ರೀ ಎ. ಜಿ. ರಾಮಚಂದ್ರರಾವ್—ಟೌನ್ ಹಾಲಿನಲ್ಲಿ ಎಂದು ಜ್ಞಾಪಕ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಅಲ್ಲಿ ಯಾರ್ಯಾರು ಹಾಜರಿದ್ದರೆಂಬುದನ್ನು ಹೇಳುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪಟ್ಟಿ ತರಿಸಿ ನೋಡಬೇಕು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಮಂತ್ರಿಗಳು, ಈ ಮಾನ್ಯಸಭೆಯ ಸದಸ್ಯರು, ಸರ್ಕಾರಿ ಅಧಿಕಾರಿಗಳು ಹೆಚ್ಚಿಗೆ ಇದ್ದರೆಂದು ಹೇಳಬಹುದಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವರೂ ಇದ್ದರು, ಇತರೇ ಸಾರ್ವಜನಿಕರೂ ಇದ್ದರು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಪ್ರತಿಯೊಂದು ಮೀಟಿಂಗಿಗೂ ಇಷ್ಟೇ ಹಣ ಖರ್ಚುಮಾಡಬೇಕೆಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಾಮಾನ್ಯವಾಗಿ ಹೆಚ್ಚಿಗೆ ಖರ್ಚು ಮಾಡಕೂಡದೆಂದು ಮಾಡಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಒಂದೊಂದು ಮೀಟಿಂಗಿಗೂ ಇಷ್ಟೇ ಖರ್ಚು ಮಾಡಬೇಕೆಂದು ನಿಗದಿ ಮಾಡಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಒಂದು ಮೀಟಿಂಗಿಗೆ ಇಷ್ಟುಕೊಡಬಹುದೆಂದಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಪ್ರಚಾರಕರಿಗೆ ಎಷ್ಟೆಷ್ಟು ಕೊಡಬೇಕೆಂದಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಂತಿಂಥವರಿಗೆ ಇಷ್ಟಿಷ್ಟು ಕೊಡಬೇಕೆಂದು ಷೆಡ್ಯೂಲ್ ಇದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಅದರಂತೆ ಒಬ್ಬ ಪ್ರಚಾರಕರಿಗೆ 200 ರೂಪಾಯಿಗಳನ್ನು ಕೊಡಬೇಕೆಂದು ಷೆಡ್ಯೂಲಿನಲ್ಲಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ನನಗೆ ಜ್ಞಾಪಕ ವಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಪ್ರಚಾರಕರಿಗೆ ಅಲ್ಲದೆ ಹಸ್ತಪತ್ರಿಕೆಗಳನ್ನು ಮುದ್ರಣ ಮಾಡುವುದಕ್ಕೆ ಬೇರೆ ಖರ್ಚು ಮಾಡಬೇಕಾಗಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು, ಬೇರೆ incidental expenditure ಕೂಡ ವಹಿಸಬೇಕಾಗುತ್ತದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಇಲ್ಲಿ ಒಂದು ಸಭೆಗೆ 400 ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಆ ರೀತಿ ಖರ್ಚು ಮಾಡುವುದಕ್ಕೆ ನಿಯಮಗಳಲ್ಲಿ ಅವಕಾಶವುಂಟೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಖರ್ಚಾಗಿರುವುದನ್ನು ಸರ್ಕಾರದವರೇ ಒಪ್ಪಿದ್ದಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ಸಂಸ್ಕೃತಿ ಪ್ರಚಾರ ಸಭೆಗಳಿಗೆ ಬರುತ್ತಿರುವ ಜನರನ್ನು ನೋಡಿದರೆ ಸಾಮಾನ್ಯವಾಗಿ ವಿದ್ಯಾವಂತರು, ಶಾಸನಸಭೆಯವರೇ ಬರುತ್ತಿರುವುದರಿಂದ, ಸಂಸ್ಕೃತಿ ಪ್ರಚಾರ ಬಹು ಮಟ್ಟಿಗೆ ವಿದ್ಯಾವಂತರಲ್ಲೇ ಆಗುತ್ತಿದೆಯೆಂದು ಹೇಳಬಹುದಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಲ್ಲಿಯೂ ಇದರ ಅವಶ್ಯಕತೆಯಿದೆಯೆಂದು ಹೇಳಬಹುದು.

Mr. SPEAKER.—I would have allowed you as many supplementaries as possible being put, but now there is no time.

Sri G. SIVAPPA.—May I know why the pracharaks of Kolar are made to deliver lectures in Bellary and the Pracharaks of Bellary are made to deliver lectures in Kolar and is it not desirable to take men from the very same place and put on this work ?

Sri A. G. RAMACHANDRA RAO.—It is desirable to get the best talents of each district available to other districts also.

ಶ್ರೀ ಟಿ. ಹನುಮಯ್ಯ.—ಈ ಸಂಸ್ಕೃತಿ ಪ್ರಚಾರಕರಿಗೆ ಗಂಟೆಯೊಂದಕ್ಕೆ ಎಷ್ಟು ಅಲೋಯನ್ಸ್ ಕೊಡುತ್ತಾರೆ ?

ಅಧ್ಯಕ್ಷರು.—ಒಂದು ಪ್ರಚಾರಕ್ಕೆ 20 ರೂಪಾಯಿಗಳನ್ನು ಕೊಡಲಾಗುತ್ತದೆಂದು ಹೇಳಿದ್ದಾರೆ.

ಶ್ರೀ ಟಿ. ಹನುಮಯ್ಯ.—ಮಂತ್ರಿಗಳಿಗೂ ಕೂಡ ಹೀಗೆ ಗಂಟೆ 1ಕ್ಕೆ 20 ರೂಪಾಯಿಗಳ ಸಂಬಳ ಸಂದಾಯವಾಗುತ್ತಿಲ್ಲ ಅನ್ನುವುದು ನಮ್ಮ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದೆಲ್ಲವನ್ನೂ ಲೆಕ್ಕಚಾರ ಹಾಕಿಕೊಂಡೇ ಕೊಡಲಾಗುತ್ತಿದೆ.

Teachers in District Board and Municipal High Schools.

Q.—201. Sri G. BASAPPA (Hosadurga).—

Will the Government be pleased to state:—

(*a*) the number of District Board and Municipal High Schools in the State;

(*b*) the number of teachers working in each of these schools;

(*c*) of these, how many are temporary hands and since how long they are working as such?

A.—Sri A. G. RAMACHANDRA RAO (Minister for Law and Education).—

(*a*) 121.

(*b*) Please see Statement below.

(*c*) (1) Please see Statement below.

(2) Please see Statement placed on the Table. (*Vide* the Legislature Library No. 13 L.A., 1955.)

Serial No.	Name and kind of School	(*b*) Number of teachers working in each of these schools	(*c*) (1)
	CITY DISTRICT, BANGALORE.		
	Municipal.—		
1	Corporation Boys' High School, Chamarajapet ...	15	...
2	Corporation Girls' High School, Gandhinagar ...	11	...
	District Board.—		
1	District Board High School, Varthur, Bangalore South.	8	...
	HASSAN DISTRICT, HASSAN.		
	Municipal.—		
1	Municipal High School, Arasikere ...	13	9
2	Do Saklespur ...	6	2
3	Do Arkalgud ...	6	2
4	Do Belur ...	6	3
5	Do Hassan ...	10	1
6	Do Holenarsipur ...	13	2
7	Do Konanur ...	7	2
	District Board.—		
1	District Board High School, Alur ...	6	5
2	Do Basavapatna ...	6	5
3	Do Doddametikurke ...	6	5
4	Do Gorur ...	6	3
5	Do Nuggehalli ...	6	5
6	Do Yeslur ...	6	5
7	Do Rayarakoppal ...	6	5
	CHITALDRUG DISTRICT, CHITALDRUG.		
	Municipal.—		
1	Municipal High School, Chitaldrug ...	9	...
2	Do Challakere ...	13	3
3	Do Davangere ...	17	8
4	Do Hiriyur ...	9	3
5	Do Harihar ...	11	1
6	Do Holalkere ...	7	3
7	Do Hosadurga ...	9	5
8	Do Jagalur ...	12	6

Serial No.	Name and kind of School		(b) Number of teachers working in each of these schools	(c) (1)
	District Board.—			
1	District Board High School, Malebennur	...	7	7
2	Do Maradihalli	...	6	6
3	Do Srirampur	...	7	7
4	Do Kodaganur	...	7	7
5	Do Parasurampura	...	6	6
	TUMKUR DISTRICT, TUMKUR.			
	Municipal.—			
1	Municipal High School, Gubbi	...	11	2
2	Do Turuvekere	...	10	2
3	Do Sira	...	15	3
4	Do Pavagada	...	11	1
	District Board.—			
1	District Board High School, Nagavalli	...	6	3
2	Do Godekere	...	5	3
3	Do Huliyar	...	5	4
4	Do Nonavinakere	...	4	1
5	Do Kadaba	...	5	2
6	Do Midigesi	...	5	3
7	Do Huliyurdurga	...	5	2
	CHIKMAGALUR DISTRICT, CHIKMAGALUR.			
	Municipal.—			
1	Municipal High School, Kadur	...	12	2
2	Do Birur	...	12	1
3	Do Tarikere	...	14	2
4	Do Koppa	...	9	4
	District Board.—			
1	District Board High School, Sringeri	...	5	4
2	Do Narasimharajapura	...	6	1
3	Do Sakrepatna	...	6	5
4	Do Shivane	...	5	2
5	Do Panchanahalli	...	8	4
6	Do Ajjampura	...	11	11
	CIVIL STATION, BANGALORE.			
	Municipal.—			
1	Municipal High School, Malleswaram	...	15	9
2	Do Tasker Town	...	22	11
3	Do Yelahanka	...	8	...

(SRI A. G. RAMACHANDRA RAO.)

Serial No.	Name and kind of School		(b) Number of teachers working in each of these schools	(c) (1)
	SHIMOGA DISTRICT, SHIMOGA.			
	Municipal.—			
1	Municipal High School, S.J.H.S., Bhadravati	...	14	3
2	Do Channagiri	...	8	3
3	Do Nyamathi	...	7	1
4	Do Honnali	...	7	1
5	Do Sagar	...	11	4
6	Do Sorab	...	5	3
7	Do Shiralkoppa	...	5	1
8	Do Shikaripur	...	6	2
	District Board.—			
1	District Board High School, Anandapuram	...	6	4
2	Do Kogalur	...	5	4
3	Do Kulambi-Kundur	...	5	4
4	Do Santhebennur	...	5	3
5	Do Megaravalli	...	5	1
6	Do Thyavanige	...	5	4
	KOLAR DISTRICT, KOLAR.			
	Municipal.—			
1	Municipal High School, Malur	...	13	2
2	Do Bangarpet	...	16	3
3	Do Chintamani	...	19	...
4	Do Mulbagal	...	13	4
5	Do Sidlaghatta.	...	8	2
6	Sanitary Board High School, K.G.F.	...	25	7
7	Do Girls' High School, K.G.F.	...	11	1
	District Board.—			
1	District Board High School, Srinivasapur	...	12	1
2	Do Bagepalli	...	7	1 (vacant)
3	Do Gudibanda	...	4	1 (vacant)
	MANDYA DISTRICT, MANDYA.			
	Municipal.—			
1	Municipal High School, Mandya	...	13	...
2	Do Maddur	...	13	2
3	Do Srirangapatna	...	8	1
4	Do Krishnarajapet	..	10	...
5	Do Malavalli	...	11	...
6	Do Belur	...	3	1
	District Board.—			
1	District Board High School, Aghalaya	...	5	2
2	Do Santhebachalli	...	4	...

Serial No.	Name and kind of School		(b) Number of teachers working in each of these schools	(c) (1)
	MYSORE DISTRICT, MYSORE.			
	Municipal.—			
1	Municipal High School,	Krishnarajanagar ...	16	3
2	Do	Saligrama ...	13	...
3	Do	Hunsur ...	11	1
4	Do	Yelandur ...	6	3
5	Do	Chamarajanagar ...	18	...
6	Do	Gundlupet ...	7	2
	District Board.—			
1	District Board High School,	Bettadapur ...	6	6
2	Do	Sargur ...	6	6
3	Do	Bannur ...	7	6
4	Do	Kabbahalli ...	6	6
5	Do	Periyapatna ...	6	4
6	Do	Ravandur ...	6	5
7	Do	Devanur ...	6	6
8	Do	Talkad ...	8	8
9	Do	Kuderu ...	6	6
10	Do	Chunchanakatte ...	6	6
	BANGALORE DISTRICT, BANGALORE.			
	Municipal.—			
1	Municipal High School,	Anekal ...	13	2
2	Do	Devanahalli ...	9	2
3	Municipal High School,	Doddaballapur ...	12	...
4	Do	Hosakcte ...	7	...
5	Do	Kanakapura ...	12	...
6	Do	Magadi ...	14	...
7	Do	Nelamangala ...	12	1
8	Do	Ramanagaram ...	16	...
9	Do	Thyamagondlu ...	12	6
10	Do	Vijayapura ...	7	...
	District Board.—			
	Nil.		...	...

Note.—Information regarding Bellary District is not readily available.

SRI G. BASAPPA.—Regarding Chitaldrug District, only three teachers are stated to be working temporarily in Kodaganur High School, whereas in the Appendix it has been stated that all the seven are temperarily working. Which is correct?

SRI A. G. RAMACHANDRA RAO.—At page 11, we have given the figures. For Chitaldrug District, there are seven employees and of these seven none has been made permanent. That I see.

SRI G. BASAPPA.—In the statement placed on the table, you have

(SRI G. BASAPPA.)

stated that only three teachers are working temporarily in Kodaganur High School.

Sri A. G. RAMACHANDRA RAO.—I will verify.

Sri G. BASAPPA.—As per the answers furnished to Question No. 509 with regard to District Board High Schools, Mysore District, it is stated that only four Head Masters have been confirmed, whereas here. . . .

Sri A. G. RAMACHANDRA RAO.—One thing I may submit. If I remember aright, it related to Head Masters. This time, teachers are included.

Sri T. C. BASAPPA.—In this statement furnished to-day, I see that out of six none has been confirmed. Why is this difference ?

Sri A. G. RAMACHANDRA RAO.—I will get that also verified.

Sri T. C. BASAPPA.—Who is the confirming authority for these teachers ?

Sri A. G. RAMACHANDRA RAO.—The Unit Officer is the confirming authority.

Sri T. C. BASAPPA.—Is it necessary that it should be ratified by the Government or the Public Service Commission ?

Sri A. G. RAMACHANDRA RAO.—In the case of Head Masters, it goes to the Government through the Director of Public Instruction.

Sri T. C. BASAPPA.—May I know the reason for more than one-third of the teachers working temporarily for more than 5 years ?

Sri A. G. RAMACHANDRA RAO.—The main reason is that they have not been recruited as per the P. S. C. Rules.

Sri T. C. BASAPPA.—Is it true that the percentage of confirmed teachers is less than in Government High Schools ?

Sri A. G. RAMACHANDRA RAO.—Not like that. In fact, in the case of some High Schools, it is more.

Rent paid for Educational Buildings.

Q.—312. **Sri G. SIVAPPA** (Holalkere).—

Will the Government be pleased to state :—

(*a*) the total amount paid by them to the private individuals in the form of building rent to accommodate educational institutions (schools and offices) each during 1953-54 ;

(*b*) how much of this amount is paid for the buildings in the rural area and urban area separately (both Corporation and City areas) ?

A.—**Sri A. G. RAMACHANDRA RAO** (Minister for Law and Education).—

(*a*) Rs. 2,65,219-0-0.

(*b*) (i) Rural.—Rs. 33,876-0-0.

(ii) Urban.—Rs. 2,31,343-0-0.

ಶ್ರೀ ಜಿ. ಶಿವಪ್ಪ.—ತಾವು ಇಲ್ಲಿ (ಬಿ) ಭಾಗಕ್ಕೆ ಕೊಟ್ಟಿರತಕ್ಕ ಉತ್ತರದಲ್ಲಿ ಗ್ರಾಮಾಂತರ ಪ್ರದೇಶಗಳಿಗೆ 33,876 ರೂಪಾಯಿಗಳನ್ನೂ ಮತ್ತು 2,31,343ರೂಪಾಯಿಗಳನ್ನು ಪಟ್ಟಣ ಪ್ರದೇಶಗಳಿಗೂ ಕೊಡಲಾಗಿದೆ ಅಂತ ಹೇಳಿದ್ದೀರಿ. ಆದರೆ ಸೇಕಡ 75 ರಷ್ಟು ಇರತಕ್ಕಂಥ ಗ್ರಾಮಾಂತರ ಪ್ರದೇಶಗಳಿಗೆ ಕಡಮೆ ಮೊಬಲಗನ್ನು ಅಂದರೆ ಸೇಕಡ 25 ರಷ್ಟನ್ನು ಒದಗಿಸಿ, ಇನ್ನು ಸೇಕಡ 25 ರಷ್ಟು ಇರುವ ಪಟ್ಟಣ ಪ್ರದೇಶಗಳಿಗೆ ಸೇಕಡ 75 ರಷ್ಟು ಮೊಬಲಗನ್ನು ಒದಗಿಸಿ, ಬಹಳ ಏರು ಪೇರು ಮಾಡಿರುತ್ತಾರೆ ಅನ್ನುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು ವ್ಯತ್ಯಾಸವಿದೆ. ಆದರೆ ಬಹಳ ದಿವಸಗಳಿಂದಲೂ ಹೀಗೆ ನಡೆದುಕೊಂಡು ಬರುತ್ತಿರುವುದರಿಂದ ಈಗಲೂ ಹಾಗೆ ನಡೆಸಿಕೊಂಡು ಬಂದಿದೆ.

Sri G. SIVAPPA.—While granting primary schools or middle schools, you insist upon villagers constructing the buildings, but while granting schools in the municipal area or city area, you yourself construct the buildings and at the same time also give grant to the schools ; is it advisable and proper on the part of the Government ?

Sri A. G. RAMACHANDRA RAO.—I do not see any impropriety. All this did not happen this year ; it happened in the course of 30 or 40 years.

ಶ್ರೀ ಜಿ. ಶಿವಪ್ಪ.—ಈಗ ಶಾಲೆಗಳನ್ನು ತಾವು ಹಳ್ಳಿಗಳಿಗೆ ಕೊಡಬೇಕಾದರೆ ಗ್ರಾಮದ ಜನರು ಕಟ್ಟಡಗಳನ್ನು ಒದಗಿಸಿಕೊಡಬೇಕೆಂಬ ನಿರ್ಬಂಧವನ್ನು ಹಾಕುತ್ತಿದ್ದೀರಿ. ಇದೇ ಸರ್ಕಾರದವರು ಆ ಪಟ್ಟಣದ ವಿಷಯದಲ್ಲೂ ಏಕೆ ನಿರ್ಬಂಧ ಮಾಡಬಾರದು ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ಪರ್ಯಾಲೋಚನೆ ಮಾಡುತ್ತೇವೆ.

ಶ್ರೀ ಜಿ. ದುಗ್ಗಪ್ಪ.—ಈ ಕಟ್ಟಡಗಳ ವಿಚಾರದಲ್ಲಿ ಸರ್ಕಾರದವರು ಎಷ್ಟು ದುಡ್ಡು ಕೊಡುತ್ತಾರೋ ಅಷ್ಟನ್ನೇ ಈ ಮುನಿಸಿಪಲ್ ಏರಿಯಾಗಳಲ್ಲಿಯೂ ಕೊಡಬೇಕೆಂದಿದೆಯೋ ?

ಶ್ರೀ ಎ. ಜಿ. ರಾಮಚಂದ್ರರಾವ್.—ಯಾವ ಯಾವ ಏರಿಯಾಕ್ಕೆ ಯಾವರೀತಿ ಆರ್ಡರ್ ಮಾಡುತ್ತಾರೋ ಅದನ್ನು ನೋಡಿಲ್ಲ.

ಶ್ರೀ ಟಿ. ಹನುಮಯ್ಯ.—ಈಗತಾನೆ ತಾವು ಈ ವಿಚಾರ 30 ವರ್ಷಗಳಿಗೂ ಮೇಲ್ಪಟ್ಟು ಹೀಗೇ ನಡೆದುಕೊಂಡು ಬರುತ್ತಿದೆ, ಆದುದರಿಂದ ಇನ್ನು ಮುಂದಕ್ಕೂ ಹೀಗೆ ನಡೆದುಕೊಂಡು ಬರಲಿ ಅಂತ ಹೇಳಿದ್ದು ಅದು ತಮ್ಮ ಅಭಿಪ್ರಾಯವೋ ಅಥವಾ ಸರ್ಕಾರದ ಅಭಿಪ್ರಾಯವೊ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲಿ ನನ್ನ ಸ್ವಂತ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಅವಕಾಶವಿಲ್ಲ. ಇರತಕ್ಕಂಥ ವಾಸ್ತವಾಂಶಗಳನ್ನು ಮಾತ್ರ ಹೇಳಿದೆ.

ಶ್ರೀ ಟಿ. ಹನುಮಯ್ಯ.—ತಾವು ಈ ಹಣವನ್ನು ವಿಲೇವಾರಿ ಮಾಡುವುದರಲ್ಲಿ ಹಳ್ಳಿಗಳಿಗೂ ಮತ್ತು ಪಟ್ಟಣಗಳಿಗೂ ಸೇಕಡ 75 ರಷ್ಟು ವ್ಯತ್ಯಾಸವಾಗಿದೆ ಅನ್ನುವುದನ್ನು ತಾವು ಒಪ್ಪುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ಒಪ್ಪುವುದಕ್ಕಾಗುವುದಿಲ್ಲ.

Hindi (Propagation).

Q.—731. Sri G. SIVAPPA (Holalkere).—

Will the Government be pleased to state:—

(*a*) the various steps they have taken to promote the spread of Hindi language ;

(*b*) whether they have received any assistance from Central Government to develop Hindi language ;

(*c*) if so, how the amount is spent ?

A.—Sri A. G. RAMACHANDRA RAO (Minister for Law and Education).—

(*a*) (1) Hindi is introduced in all High Schools as a compulsory subject of study. A pass in that subject is made compulsory. However, it is not a compulsory Public Examination subject.

(2) Hindi is provided wherever wanted as optional subject for the Middle School Classes.

(3) Organisations interested in the propagation and spread of Hindi in the State are encouraged by suitable annual grants. The following organisations are in receipt of grants :—

(i) Mysore Hindi Prachar Parishat, Bangalore, Rs. 1 000.

(ii) Mysore Riyasat Hindi Prachar Samithi, Bangalore, Rs. 1,000.

(iii) Mysore Hindi Sahitya Parishat, Bangalore, Rs. 2,500.

(iv) Hindi Mahavidyalaya, Bellary, Rs. 1,409.

(*b*) The Central Government has since approved and sanctioned the starting of Hindi Vidwan Course at the Government Training College for Men, Mysore, at a total cost of Rs. 21,165. The Government of India has also agreed to pay a moiety at 66 per cent of the charges. A sum of Rs. 7,645 has been sanctioned as the moiety for the year 1954-55. The Training Section has been ordered to commence from March 1955 for the Academic Session 1955.

(*c*) *Vide* reply to (*b*).

ಶ್ರೀ ಜಿ. ಶಿವಪ್ಪ.—ತಾವು (ಎ) ಗೆ ಉತ್ತರವಾಗಿ ಗ್ರ್ಯಾಂಟ್ ರೂಪವಾಗಿ ಹಣ ಸಹಾಯವನ್ನು ನೀಡಲಾಗುತ್ತಿದೆಯೆಂದು ಹೇಳಿದ್ದೀರಿ. ಈ ಹಣವೇನು ಕೇಂದ್ರ ಸರ್ಕಾರದ್ದೋ ಅಥವಾ ಸ್ಟೇಟ್ ಗೌರ್ನ್ಮೆಂಟಿನವರದೋ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನೂ ಉತ್ತರದಲ್ಲೇ ತಿಳಿಸಿದೆ ನೋಡಿ.

ಶ್ರೀ ಜಿ. ಶಿವಪ್ಪ.—ದಕ್ಷಿಣ ಭಾರತ ಹಿಂದೀ ಪ್ರಚಾರ ಪರಿಷತ್ತಿನವರ ವಿಚಾರದಲ್ಲಿ ಹೆಚ್ಚಿಗೆ ಹಣವನ್ನು ಖರ್ಚು ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಒತ್ತಾಯ ಪಡಿಸತಕ್ಕದ್ದೂ ಆವಶ್ಯಕವಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆದನ್ನೂ ಮಾಡಿದ್ದೇವೆ.

ಶ್ರೀ ಜಿ. ಶಿವಪ್ಪ.—ಇಲ್ಲಿ ತಾವು ಹಿಂದೀ ತರಗತಿಗಳನ್ನು ಸರ್ಕಾರೀ ಅಧಿಕಾರಿಗಳಿಗೆ ಪ್ರಾರಂಭ ಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇನ್ನೂ ಸರ್ಕಾರೀ ಅಧಿಕಾರಿಗಳಿಗೆ ಪಾರಂಭಮಾಡಿಲ್ಲ.

ಶ್ರೀ ಜಿ. ಶಿವಪ್ಪ.—I.A.S. Competition Examination ನಲ್ಲಿ ಹಿಂದಿಯನ್ನು ಐಚ್ಛಿಕ ಭಾಗವನ್ನಾಗಿ ಮಾಡಿ, ಕೇಂದ್ರ ಸರ್ಕಾರದವರು circular ಕಳುಹಿಸಿರತಕ್ಕದ್ದು ತಮ್ಮ ಅವಗಾಹನೆಗೆ ಬಂದಿದೆಯೇ :

ಶ್ರೀ ಎ. ಜಿ. ರಾಮಚಂದ್ರರಾವ್.—Delhi ಯೊಳಗೆ ಹಾಗೆ ಮಾಡಿದ್ದಾರೆ ಎಂಬುದು ಗೊತ್ತಿದೆ. I.A.S. ನವರು ಒಬ್ಬರು ಇಬ್ಬರು ಸ್ಟೇಟ್‌ನಲ್ಲಿರುವವರಿಗೆ ಹಾಗೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಜಿ. ಶಿವಪ್ಪ.—ವಿಧಾನ ಸಭೆಯಲ್ಲಿ ಹಿಂದಿಯಲ್ಲಿ ಮಾತನಾಡುವುದಕ್ಕೆ ಅಧಿಕಾರವಿದೆ. ಹಿಂದಿಯಲ್ಲಿ ಮಾತನಾಡುವ ಸಂದರ್ಭದಲ್ಲಿ ಅದನ್ನು ಬರೆದುಕೊಳ್ಳುವುದಕ್ಕೆ ವ್ಯವಸ್ಥೆಯನ್ನು ಮಾಡದೇ ಇರುವುದಕ್ಕೆ ಕಾರಣವೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಅತ್ಯಾವಶ್ಯಕವೆಂದು ಕಂಡುಬಂದರೆ ಏರ್ಪಾಡು ಮಾಡುತ್ತೇವೆ.

ಶ್ರೀ ಜಿ. ಶಿವಪ್ಪ.—ಮುಖ್ಯ ಮಂತ್ರಿಗಳು ಹೋದ ಸಾಲಿನಲ್ಲಿ ದೇವನಾಗರಿ script ನ್ನು 1954-55 ರಲ್ಲಿ ಪ್ರಾರಂಭ ಮಾಡುತ್ತೇವೆಂದು ಹೈದರಾಬಾದ್ ಹಿಂದೀ ಸಮ್ಮೇಳನಕ್ಕೆ ಸಂದೇಶ ಪೂರ್ವಕವಾಗಿ ಕಳುಹಿಸಿ ಕೊಟ್ಟಿದ್ದೇವೆಂದು ನನ್ನ ಪ್ರಶ್ನೆಗೆ ಉತ್ತರ ಕೊಟ್ಟಿರುವುದು ಗೊತ್ತಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗೆ ಹೇಳಲಿಲ್ಲ. Alternative ಲಿಪಿಯಾಗಿ ದೇವನಾಗರಿಯನ್ನು ಉಪಯೋಗಿಸುವುದಕ್ಕೆ ಅವಕಾಶ ಕೊಡುತ್ತೇವೆ ಎಂದು ಹೇಳಿದ್ದು ಜ್ಞಾಪಕವಿದೆ.

Hindi Teachers.

Q.—789. Sri R. ANANTARAMAN (Chamarajapet).—

Will the Government be pleased to state :—

(*a*) the number of Hindi Teachers appointed in all Middle Schools ;

(*b*) the requiste examinations that Hindi Teachers of Middle Schools are expected to pass ;

(*c*) salaries paid to these Hindi Teachers of the Middle Schools ;

(*d*) whether they are part-time or full-time teachers ?

A.—Sri A. G. RAMACHANDRA RAO (Minister for Law and Education).—

(*a*) 164.

(*b*) "Praveshic " Examination of Dakshina Bharata Hindi Prachar Sabha or " Uttama " Examinanion of Mysore Hindi Prachar Parishat or of the "Sahitya Praveshic" Examination of the Mysore Hindi Sahitya Parishat.

(*N.B.*-Hindi Visarada and Pracharak in Bellary District)

(*c*) Full-time teachers are appointed on Rs. 40 in grade Rs. 40-2-50-3-80. Part-time teachers are paid at Rs. 10 p.m. when they handle one class only and at Rs. 15 p.m. when more thano ne class is handled by them.

(*N.B.*—In Bellary, full-time teachers are appointed on Rs. 45 p.m. in the scale Rs. 45-3-60-2-90)

(*d*) Of the 164 Hindi teachers in Middle Schools, 9 are full-time teachers and the remaining are part-time teachers.

ಶ್ರೀ ಆರ್. ಅನಂತರಾಮನ್.—ಸ್ಕೂಲ್ಸ್‌ಗಳಲ್ಲಿ ಹಿಂದಿಯನ್ನು ಐಚ್ಛಿಕಭಾಷೆ, ಮತ್ತು compulsory ಭಾಷೆಯನ್ನಾಗಿ ಮಾಡಿರುವುದರಿಂದ full-time teachers ನೇಮಕಮಾಡುವುದು ಒಳ್ಳೆಯದಲ್ಲವೇ ?

Sri A. G. RAMACHANDRA RAO.—It depends upon the number of candidates in the institution.

ಶ್ರೀ ಆರ್. ಅನಂತರಾಮನ್.—ಬಳ್ಳಾರಿಯಲ್ಲಿ full-time ಉಪಾಧ್ಯಾಯರುಗಳನ್ನು ನೇಮಕಮಾಡಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಳ್ಳಾರಿಯಲ್ಲಿ ಮಾಡಿರಬಹುದು. ಇಲ್ಲಿಗೆ ಬಂದಿಲ್ಲ.

ಶ್ರೀ ಆರ್. ಅನಂತರಾಮನ್.—S.S.L.C. ಗೆ ಹಿಂದಿಯನ್ನು examination subject ನ್ನಾಗಿ ಯಾತಕ್ಕೆ ಮಾಡಿಲ್ಲ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕ್ರಮಕ್ರಮೇಣವಾಗಿ ಹೆಚ್ಚಿಸಿಕೊಂಡು ಹೋಗಬೇಕು ಎನ್ನುವ ಕಾರಣದಿಂದ ಮಾಡಿಲ್ಲ.

ಶ್ರೀ ಆರ್. ಅನಂತರಾಮನ್.—Compulsory ಮಾಡದೇ ಇರುವ ಕಾರಣದಿಂದ, ಹಿಂದೀ ಭಾಷೆಯಲ್ಲಿ ರುಚಿಯಿಲ್ಲ ಎಂದು ತಿಳಿಯೋಣವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ರುಚಿ ಇಲ್ಲ ಎಂದಲ್ಲ. Serious ಆಗಿಲ್ಲ ಎಂದು ಹೇಳಬಹುದು.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಹಿಂದೀ ಭಾಷೆಯಲ್ಲಿ ಪರಿಣತರೂ, ವಿದ್ವಾಂಸರಾಗಿರುವವರಿಗೆ ಯಾವ ಯಾವ ಪ್ರೋತ್ಸಾಹಗಳನ್ನು ಸರ್ಕಾರ ಕೊಡುತ್ತಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇನ್ನುಮೇಲೆ ಸರ್ಕಾರೀ ಕೆಲಸಕ್ಕೆ ಸೇರಬೇಕಾದರೆ ಹಿಂದೀ ಪರೀಕ್ಷೆ ಮಾಡಿರಬೇಕು ಎಂದು ಸರ್ಕಾರದವರು ಒಂದು rule ಪಾಸ್ ಮಾಡುತ್ತಾರೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಹಿಂದೀ ಪ್ರಚಾರದಿಂದ ರಾಷ್ಟ್ರಾಭಿಮಾನ ಜಾಸ್ತಿಯಾಗುತ್ತಿದೆ ಎಂಬುದು ಸರ್ಕಾರದವರು ತಿಳಿದಿದ್ದಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ತಿಳಿದಿದ್ದಾರೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಸಂಸ್ಥೆಗಳಿಗೆ grant ಕೊಡುವಾಗ ಯಾವ ಆಧಾರ ಇಟ್ಟುಕೊಂಡು grant ಕೊಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ಇದ್ದಾರೆ, ವಿದ್ಯಾಭ್ಯಾಸ ಹೇಗಿದೆ, Part-time ಅಥವಾ full-time teachers ಇದ್ದಾರೆಯೇ ಎಂಬುದನ್ನೆಲ್ಲಾ ನೋಡಿಕೊಂಡು ಕೊಡುತ್ತೇವೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಈ ಸಂಸ್ಥೆಗಳಿಗೆ ಒಂದು ಸಾವಿರ ಎರಡು ಸಾವಿರ ರೂಪಾಯಿಗಳನ್ನು ಯಾವ ಆಧಾರದ ಮೇಲೆ ಕೊಟ್ಟಿದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವರು ಮಾಡಿರತಕ್ಕ ಕೆಲಸ, ಮುಂದೆ ಮಾಡಬೇಕಾಗಿರುವ ಕೆಲಸದ estimate ಇಟ್ಟುಕೊಂಡು ಕೊಡುತ್ತೇವೆ.

ಶ್ರೀ ಬಿ. ಸಿ. ನಂಜುಂಡಯ್ಯ.—325 ಜನ ಮಿಡಲ್ ಸ್ಕೂಲುಗಳಲ್ಲಿ ಹಿಂದೀ part-time teachers ಆಗಿ 4-5 ವರ್ಷಗಳಿಂದ ಇದ್ದಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇರಬಹುದು.

ಶ್ರೀ ಬಿ. ಸಿ. ನಂಜುಂಡಯ್ಯ.—Part-time teachers ಗಳನ್ನು full-time teachers ಗಳನ್ನಾಗಿ ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವಶ್ಯಕತೆ ಕಂಡುಬಂದರೆ ಮಾಡುತ್ತೇವೆ.

Binnypet Primary School.

Q.—823. Sri D. VENKATESH (Gandhinagar).—

Will the Government be pleased to state :—

(*a*) whether they have received any application from the Management of Binny Mills for starting from 1st standard to 5th standard in their Primary School at Binnypet ;

(*b*) whether they would consider such application favourably ?

A.—Sri A. G. RAMACHANDRA RAO (Minister for Law and Education).—

(*a*) No.

(*b*) This does not arise in view of reply to clause (*a*) above.

Sri D. VENKATESH.—Are the Government aware that there are five hundred to seven hundred-first to sixth standard-primary school-going children at Binnypet, Bangalore City ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ನಮ್ಮ ಗಮನಕ್ಕೆ ಬಂದಿಲ್ಲ.

Sri D. VENKATESH.—Has it come to the notice of the Government that the Director of Public Instruction has refused to grant permission to open a primary school from the first to the fifth standard for those children ?

Sri A. G. RAMACHANDRA RAO.—It has not come to the notice of the Government and we will take note of that.

Sri D. VENKATESH.—If that is brought to your notice, will Government consider it favourably ?

Sri A. G. RAMACHANDRA RAO.—Yes.

Primary Schools in Hassan District.

Q.—865. Sri G. A. THIMMAPPA GOWDA (Arkalgud).—

Will the Government be pleased to state :—

(*a*) the total number of villages in Hassan District, and out of them the number of villages which have not been given Primary Schools (figures to be given talukwar) ;

(*b*) the number of villages from which people have agreed to give buildings, if schools are granted to them by the Government (the numbers may be given talukwar) ?

A.—Sri A. G. RAMACHANDRA RAO (Minister for Law and Education).—

(*a*).—

Name of Taluk	*Total No. of villages as per Census 1941.*
1. Hassan ...	365
2. Alur ...	158
3. Arsikere ...	316
4. Belur ...	342
5. Manjarabad (Sakleshpur) ...	264
6. Arkalgud ...	239
7. Hole-Narsipur ...	197
8. Channarayapatna.	363

Name of Taluk	*No. of villages which have not been given Primary Schools.*
1. Hassan ...	208
2. Alur ...	61
3. Arsikere ...	168
4. Belur ...	217
5. Manjarabad (Sakleshpur) ...	71
6. Arkalgud ...	139
7. Hole-Narsipur ...	131
8. Channarayapatna.	249

(*b*).—

Taluk	*No. of villages*
1. Hassan ...	10
2. Alur ...	2
3. Arsikere ...	4
4. Belur ...	2
5. Manjarabad (Sakleshpur) ...	1
6. Arkalgud ...	5
7. Hole-Narsipur ...	4
8. Channarayapatna.	7

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ಸಾಲಿನಲ್ಲಿ ಎಷ್ಟು ಪ್ರೈಮರಿ ಸ್ಕೂಲುಗಳನ್ನು ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ? ಮತ್ತು ಹಾಸನಕ್ಕೆ ಎಷ್ಟು ಕೊಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಈ ಸಾಲಿನಲ್ಲಿ ಸುಮಾರು 250 ಸ್ಕೂಲುಗಳನ್ನು ಪ್ರಾರಂಭ ಮಾಡಬೇಕೆಂದು ಇದೆ. Districtwar ವಿಂಗಡನೆ ಮಾಡಿಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈಗ ಎರಡು ಸಾವಿರ ಚಿಲ್ಲರೆ ಹಳ್ಳಿಗಳಲ್ಲಿ ಒಂದು ಸಾವಿರ ಚಿಲ್ಲರೆ ಹಳ್ಳಿಗಳಿಗೆ ಹಾಸನದಲ್ಲಿ ಪ್ರೈಮರಿ ಸ್ಕೂಲುಗಳನ್ನು ಕೊಟ್ಟಿಲ್ಲ. ಅದನ್ನು ನೋಡಿದರೆ ಪ್ರೈಮರಿ ಸ್ಕೂಲುಗಳನ್ನು ಧಾರಾಳವಾಗಿ ಕೊಡುವ ಅವಶ್ಯಕತೆ ಇದೆ ಎಂಬುದು ಗೊತ್ತಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಡ್ಜೆಟ್ಟಿನ ಮೇಲೆ ಚರ್ಚೆ ನಡೆದ ಕಾಲದಲ್ಲಿ 250 ಸ್ಕೂಲುಗಳನ್ನು ಪ್ರಾರಂಭಮಾಡುತ್ತೇವೆ ಎಂದು ಜವಾಬು ಕೊಟ್ಟಿದ್ದೇವೆ. ಇನ್ನೂ ಜಾಸ್ತಿ ಪ್ರಾರಂಭಮಾಡುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ತಾವು ಕಡ್ಡಾಯವಾಗಿ ಎಲ್ಲ ಗ್ರಾಮಗಳಲ್ಲೂ ಮೂರು ವರ್ಷ ಅಥವಾ ಐದು ವರ್ಷಗಳಲ್ಲಿ ಪ್ರೈಮರಿ ಸ್ಕೂಲುಗಳನ್ನು ಕೊಡಬೇಕಾದರೆ, ಎಲ್ಲಾ ಸಂಖ್ಯೆಯನ್ನೂ ಅವಲೋಕಿಸಿದರೆ, ಒಂದು ಸಾವಿರ ಹಳ್ಳಿಗಳಲ್ಲಿ ಐನೂರು ಹಳ್ಳಿಗಳಿಗೆ ಸ್ಕೂಲುಗಳಿಲ್ಲ. ಎಷ್ಟು ವರ್ಷಗಳಲ್ಲಿ ಎಲ್ಲಾ ಪ್ರೈಮರಿ ಸ್ಕೂಲುಗಳನ್ನೂ ಕೊಡುವುದಕ್ಕೆ ಸಾಧ್ಯವಾಗುತ್ತದೆ ಮತ್ತು ಅದಕ್ಕೆ ಏನು ಯೋಜನೆ ಕೈಗೊಳ್ಳಬೇಕು ಎಂಬುದನ್ನು ಯೋಚನೆ ಮಾಡಿದ್ದೀರಾ ?

Mr. SPEAKER.—There was a debate on this question and answers were given.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈಗ ಹೋಗುವ ವೇಗದಲ್ಲಿ ಇನ್ನು ಕೊಡಬೇಕಾಗಿರುವ ಸ್ಕೂಲುಗಳನ್ನು ಕೊಡಲು ಎಷ್ಟು ವರ್ಷಗಳು ಬೇಕಾಗುತ್ತವೆ ಎಂಬುದನ್ನು ನೋಡಿದರೆ ಬಹಳ ಶೋಚನೀಯವಾಗಿದೆ.

ಶ್ರೀ ಎ. ಜಿ. ರಾಮಚಂದ್ರರಾವ್.—ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಸ್ಕೂಲುಗಳನ್ನು ಕೊಡಲು ಸಾಧ್ಯವಿದ್ದರೆ ಹಾಗೆ ಕೊಡಲು ಸರ್ಕಾರದವರು ಸಂತೋಷಪಡುತ್ತಾರೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಇತರೇ ಬಾಬುಗಳಲ್ಲಿ ಖರ್ಚು ಮಾಡುವುದನ್ನು ನಿಲ್ಲಿಸಿ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಒದಗಿಸಿ ಹೆಚ್ಚಿಗೆ ಪ್ರೈಮರಿ ಸ್ಕೂಲುಗಳನ್ನು ಎಲ್ಲಾ ಹಳ್ಳಿಗಳಿಗೆ ಕೊಡಬೇಕಾದ್ದು ಅವಶ್ಯಕವಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವಶ್ಯಕವೆಂದು ಕಂಡು ಬರುತ್ತದೆ. ಅವಕಾಶವಿದ್ದರೆ ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ತಾವು ಕೊಟ್ಟಿರತಕ್ಕ ಸ್ಕೂಲುಗಳ ಸಂಖ್ಯೆಯಲ್ಲಿ ಮಂಜರಾಬಾದಿಗೆ ಅಷ್ಟು ಕಡಮೆ ಏತಕ್ಕೆ ಕೊಡೋಣವಾಗಿದೆ ? ಮಂಜರಾಬಾದಿಗೆ ಸ್ಕೂಲುಗಳನ್ನು ಕೇಳಲಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇನ್ನೂರ ಅರವತ್ತನಾಲ್ಕು ಗ್ರಾಮಗಳ ಪೈಕಿ ಎಪ್ಪತ್ತೊಂದು ಹಳ್ಳಿಗಳಿಗೆ ಮಾತ್ರ ಸ್ಕೂಲುಗಳನ್ನು ಕೊಟ್ಟಿಲ್ಲ. ಇದನ್ನು ನೋಡಿದರೆ ಹೆಚ್ಚಿನ ಪ್ರಮಾಣದಲ್ಲಿ ಸ್ಕೂಲು ಇದೆಯೆಂದು ಕಾಣುತ್ತದೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ನೂರ ತೊಂಭತ್ತು ಮೂರು ಹಳ್ಳಿಗಳಿಗೆ ಹೆಚ್ಚಿಗೆ ಸ್ಕೂಲುಗಳನ್ನು ಕೊಟ್ಟಿಲ್ಲ. ಅವರು ಬೇಡ ಎಂದು ಹೇಳಿದರೋ ಅಥವಾ ಅಲ್ಲಿ ದೊಡ್ಡ ಹಳ್ಳಿಗಳು ಇಲ್ಲವೋ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಾಧ್ಯವಾಗಿರುವಷ್ಟು ಕೊಟ್ಟಿದ್ದೇವೆ.

Hostels for Banajars, Korachars and Vaddars in Arsikere Town.

Q.—916. Sri K. PANCHAKSHARIAH (Arsikere).—

Will the Government be pleased to state :—

(*a*) the amounts of monetary help given by Government in 1951-52, 1952-53, 1953-54 and 1954-55 to (i) Banajara Hostel, (ii) Koracha, Korama Hostel and (iii) Vaddara Hostel in Arsikere Town;

(*b*) the amount given to each student;

(*c*) whether complaints about misuse of money in any of these hostels have been received ?

A.—Sri A. G. RAMACHANDRA RAO (Minister for Law and Education).—

(*a*)—

	1951-52	*1952-53*
	Rs.	Rs.
1. Banjara Hostel...	2,076	2,076
2. Koracha, Korama Hostel.	1,936	1,936
3. Vaddara Hostel...	2,960	2,960

	1953-54	*1954-55*
	Rs.	Rs.
1. Banjara Hostel...	2,076	2,636
2. Koracha, Korama Hostel.	1,936	1,936
3. Vaddara Hostel...	2,960	2,560

(*b*) Rs. 12 per boarder per mensem.

(*c*) No.

ಶ್ರೀ ಕೆ. ಪಂಚಾಕ್ಷರಯ್ಯ.—ಕೊರಚ, ಕೊರಮರ ಹಾಸ್ಟಲು, ವಡ್ಡರ ಹಾಸ್ಟಲು ಅರಸೀಕೆರೆಯಲ್ಲಿದೆ ಎಂಬುದು ಗೊತ್ತೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದೆಯೆಂದು ಇದರಿಂದ ಗೊತ್ತಾಗುತ್ತದೆ.

ಶ್ರೀ ಕೆ. ಪಂಚಾಕ್ಷರಯ್ಯ.—ತಾವು ಯಾವಾಗಲೂ ಅರಸೀಕೆರೆ ಮುಖಾಂತರ ಓಡಾಡುವುದು ಜಾಸ್ತಿ, ಆ ಹಾಸ್ಟಲುಗಳಿಗೆ ಹೋಗಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ನಾನು ಹೋಗಿಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ.—ಹಾಗಾದರೆ ರಿಪೋರ್ಟಿನಮೇಲೆಯೇ ತಾವು ಹೇಳುತ್ತಾ ಇರುವುದು ?

ಶ್ರೀ ಎ. ಜಿ. ರಾಮಚಂದ್ರರಾವ್. ಹೌದು. ರಿಪೋರ್ಟಿನಮೇಲೆಯೇ ಹೇಳುತ್ತಾ ಇರುವುದು.

ಶ್ರೀ ಕೆ. ಪಂಚಾಕ್ಷರಯ್ಯ.—1951-52, 1952-53, 53-54, ಸಾಲುಗಳಲ್ಲಿ ಈ ಮೂರು ಹಾಸ್ಟಲುಗಳಿಗೆ ಪ್ರತಿಯೊಂದಕ್ಕೂ ಒಂದೇ ತರನಾದ ಗ್ರಾಂಟು ಕೊಟ್ಟಿದ್ದೀರಿ. ಮೂರು ವರ್ಷಗಳಲ್ಲೂ ಈ ಮೂರು ಹಾಸ್ಟಲುಗಳಲ್ಲಿ ಒಂದೇ ಪ್ರಮಾಣದ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಇದ್ದರೋ ?

ಶ್ರೀ ಎ. ಜಿ. ರಾಮಚಂದ್ರರಾವ್.—ಒಂದೇ ಪ್ರಮಾಣದಲ್ಲಿ ಹಣ ಖರ್ಚಾಗುವುದರಿಂದ ಹಾಗೆ ಇದ್ದರೆಂದು ಗೊತ್ತಾಗುತ್ತದೆ.

ಶ್ರೀ ಕೆ. ಪಂಚಾಕ್ಷರಯ್ಯ.—ಹಾಗಾದರೆ ಬಣಜಾರ ಹಾಸ್ಟಲ ನಲ್ಲಿ ಎಷ್ಟು ವಿದ್ಯಾರ್ಥಿಗಳು 1951-52ನೇ ಸಾಲಿನಲ್ಲಿ ಇದ್ದರು ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಷ್ಟು ಇದ್ದಾರೆ ಎಂಬುದಕ್ಕೆ ನೋಟೀಸ್ ಬೇಕು.

ಶ್ರೀ ಕೆ. ಪಂಚಾಕ್ಷರಯ್ಯ.—52-53ನೇ ಸಾಲಿಗೆ ಕೊನೇ ಪಕ್ಷ ಅಂಕೆಗಳು ದೊರೆಯುತ್ತವೆಯೋ ?

ಅಧ್ಯಕ್ಷರು.—ಕೊಟ್ಟಿರುವ ಉತ್ತರ ಸರಿ ಇದೆ ಎಂದು ಅರ್ಥ. ಇಲ್ಲದಿದ್ದರೆ ಬೇರೆ ಪ್ರಶ್ನೆ ಕೇಳಿ.

ಶ್ರೀ ಕೆ. ಪಂಚಾಕ್ಷರಯ್ಯ.—ವಡ್ಡರ ಹಾಸ್ಟಲಿಗೆ ಪ್ರೆಸಿಡೆಂಟರು ಯಾರು ? ಸೆಕ್ರೆಟರಿ ಯಾರು ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್ ಬೇಕು.

ಅಧ್ಯಕ್ಷರು.—ಅಂಥ ಪ್ರಶ್ನೆಗಳಿಗೆ ಅವರು ಹೇಗೆ ಉತ್ತರ ಕೊಡುವುದು ? ತಾವು ಅದನ್ನು ಮೊದಲೇ ಕೇಳಬೇಕಾಗಿತ್ತು.

ಶ್ರೀ ಕೆ. ಪಂಚಾಕ್ಷರಯ್ಯ.—ಹಾಸ್ಟಲು ವಿಷಯ ಬಂದಾಗ ಸಾಮಾನ್ಯವಾಗಿ ಅದನ್ನು ಕೊಡಬೇಕಾಗಿತ್ತು. ಎಲ್ಲಾ ಹಾಸ್ಟಲುಗಳಿಗೂ ಪ್ರತಿಯೊಬ್ಬ boarderಗೆ ಹನ್ನೆರಡು ರೂಪಾಯಿಗಳು ತಿಂಗಳಿಗೊಂದಕ್ಕೆ ಕೊಡುವ ನಿಯಮ ಅನ್ವಯಿಸುತ್ತದೆಯೋ ?

Sri A. G. RAMACHANDRA RAO.—Depressed Class hostelಗಳಿಗೆಲ್ಲಾ ಅದು ಅನ್ವಯಿಸುತ್ತದೆ.

Railway Passes for Members of Parliament.

Q.—926. Sri C. H. LINGADEVARU (Chiknaikanahalli).—

Will the Government be pleased to state :—

(*a*) whether it has come to their notice that Members of Parliament have been issued railway passes;

(*b*) whether it has come to their notice that the Madras Government have stated that railway passes would be arranged to be issued to Members of the State Legislative Assembly ;

(*c*) whether they would recommend to the Central Government to grant railway passes to the Members of the Mysore Legislative Assembly to tour within the State only to enable them to acquaint themselves with the conditions in the State ?

A.—Sri A. G. RAMACHANDRA RAO (Minister for Law and Education).—

(*a*) Yes.

(*b*) No.

(*c*) The matter will be examined.

ಶ್ರೀ ಟಿ. ಸಿ. ಬಸಪ್ಪ.—ಮದ್ರಾಸ್ Assemblyಯಲ್ಲಿ ಈ ಬಗ್ಗೆ ಸರ್ಕಾರದವರು ಜಾಗ್ರತೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಒಪ್ಪಿಕೊಂಡಿರುವುದು ತಮ್ಮ ಗಮನಕ್ಕೆ ಬಂದಿದೆಯೋ ?

ಅಧ್ಯಕ್ಷರು.—"The matter will be examined" ಎಂದು ಹೇಳಿದ್ದಾರೆ.

Government Dichromate Factory.

Q.—784. Sri P. R. RAMAIYA (Basavangudi).—

Will the Government be pleased to state :—

(*a*) when the Government Dichromate Factory was started ;

(*b*) what was the capital invested on it;

(*c*) whether it has earned profit at any time and if so, how much ;

(*d*) the reasons for the deterioration of the Factory;

(*e*) whether there is any proposal to hand it over to the Mysore Chemicals and Fertilizers and if so, on what terms ;

(*f*) whether a concern, named The Union Housing and Industrial Corporation, sent any proposals in the matter of the disposal of the Factory ?

A.—Sri H. SIDDAVEERAPPA (Minister for Home and Industries).—

(*a*) The Government Dichromate Factory was started in 1940.

(*b*) The capital up to the end of March 1955 is Rs. 9,67,654.

(*c*) The concern earned profits during the war period as below :—

		Rs.
1942-43	...	364
1943-44	...	35,397
1944-45	...	29,409
1945-46	...	16,590

(*d*) Fall in demand for its products and due to competition prevailing in the market, as the Indian demand for the product is hardly 25 per cent of the total rated output. The Factory is besides situated in the interior away

(SRI H. SIDDAVEERAPPA.)
from the consuming centres like Madras, Bombay and Calcutta where manufacturers are producing similar products.

(e) Yes.

The assets of the factory are to be transferred to Mysore Chemicals and Fertilisers, Ltd., "on a Cash and Carry basis".

(f) No.

ಶ್ರೀ ಪಿ. ಆರ್. ರಾಮಯ್ಯ.—ಇದರೊಳಗೆ (c)ಗೆ ಉತ್ತರವಾಗಿ ಸದರೀ ಕಾರ್ಖಾನೆಯ ಶ್ರೇಣಿಗಳನ್ನು "Cash and carry basis" ಆಧಾರದ ಮೇಲೆ ಮೈಸೂರು ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ ಲಿಮಿಟೆಡ್ ಕಂಪೆನಿಗೆ ವರ್ಗಾಯಿಸಬೇಕಾಗಿದೆ ಎಂದು ಇದೆ. ಇದನ್ನು ಇನ್ನೂ ವರ್ಗಾಯಿಸಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಇದುವರೆಗೆ ವರ್ಗಾಯಿಸದೆ ಇರಬಹುದೆಂದು ಜ್ಞಾಪಕ.

ಶ್ರೀ ಪಿ. ಆರ್. ರಾಮಯ್ಯ.—Cash and carry basis ಎಂಬುದು American expression. ಈಗ ಸಾಮಾನ್ಯವಾಗಿ ಸಾಮಾನುಗಳನ್ನು ಎಷ್ಟು ತೆಗೆದುಕೊಳ್ಳುತ್ತಾರೋ ಅಷ್ಟು ದುಡ್ಡು ಕೊಟ್ಟು ತೆಗೆದುಕೊಂಡು ಹೋಗುವುದೋ ಅಥವಾ Piecemeal transaction ನಡೆಯುತ್ತದೋ?

ಶ್ರೀ ಎಚ್. ಸಿದ್ದವೀರಪ್ಪ.—ಸಂಸ್ಥೆಯಲ್ಲಿರತಕ್ಕ Assets ಮತ್ತು liabilities ಕೊಟ್ಟು ಬಿಟ್ಟು ಈಗ ಯಾವರೀತಿ ಇರುತ್ತದೋ ಮುಂದೆಯೂ ಅದೇ ರೀತಿ ನಡೆಸಿಕೊಂಡು ಹೋಗುವುದಕ್ಕೆ ಒಪ್ಪಿಸಿದೆ.

ಶ್ರೀ ಪಿ. ಆರ್. ರಾಮಯ್ಯ.—ಅವರು ಎಷ್ಟು ಹಣ ಕೊಡಬೇಕಾಗಿರುವುದು?

ಶ್ರೀ ಎಚ್. ಸಿದ್ದವೀರಪ್ಪ.—ಇನ್ನೊಂದು ಪ್ರಶ್ನೆ ಕೇಳಿ. ಇದಕ್ಕೆ ಆಮೇಲೆ ಜವಾಬು ಹೇಳುತ್ತೇನೆ.

9 A.M.

ಶ್ರೀ ಪಿ. ಆರ್. ರಾಮಯ್ಯ.—ಇದರಲ್ಲಿ ಎಷ್ಟು ಹಣ ಅವರು ಕೊಡಬೇಕು?

ಶ್ರೀ ಎಚ್. ಸಿದ್ದವೀರಪ್ಪ.—ಹಣ ಕೊಡಬೇಕಾದ್ದನ್ನು ಆ ಮೇಲೆ ತಿಳಿಸುತ್ತೇನೆ.

ಶ್ರೀ ಪಿ. ಆರ್. ರಾಮಯ್ಯ.—(f) ಪ್ರಶ್ನೆಗೆ, ಉತ್ತರವಾಗಿ 'No' ಎಂದು ಹೇಳಿದ್ದೀರಿ. ಅವರು ಕಾರ್ಖಾನೆಯನ್ನೇ ವಹಿಸಿಕೊಂಡು ಕೆಲಸಮಾಡುತ್ತೇವೆ, ಹೆಚ್ಚಿಗೆ ಆದಾಯ ಬರುವಂತೆ ಮಾಡುತ್ತೇವೆಂದು ಹೇಳಿ ಕಾಗದ ಬರದಿಲ್ಲವೇ?

ಅಧ್ಯಕ್ಷರು.—'ಇಲ್ಲ' ಎಂದು ಜವಾಬು ಕೊಟ್ಟಿದ್ದಾರಲ್ಲಾ.

ಶ್ರೀ ಪಿ. ಆರ್. ರಾಮಯ್ಯ.—ಅವರು ಕಾಗದ ಬರೆದಿದ್ದಾರೆಯೇ ಎಂಬುದನ್ನು ಸ್ವಲ್ಪ ತಿಳಿದು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೊಂದೇನೆಂದರೆ, ಅಲ್ಲಿರುವ ಲೇಬರುಗಳಿಗೆ ಡೈಕ್ರೋಮೇಟ್ ಫ್ಯಾಕ್ಟರಿಯನ್ನು ಮುಕ್ತಾಯ ಮಾಡುವಾಗ ಬೇರೆಕಡೆ ಕೆಲಸ ಕೊಡಿಸುತ್ತೇವೆಂದು ಭರವಸೆಕೊಟ್ಟಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಸಾಧ್ಯವಾದಷ್ಟು ಮಟ್ಟಿಗೆ retain ಮಾಡುವುದಕ್ಕೆ ಸಾಧ್ಯವೇ ನೋಡುತ್ತೇವೆ.

ಶ್ರೀ ಪಿ. ಆರ್. ರಾಮಯ್ಯ.—ಎಷ್ಟು ಜನರಿದ್ದಾರೆಂಬುದನ್ನು ಹೇಳುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಗೊತ್ತಿಲ್ಲ. ಅಲ್ಲಿಂದ ಅವರು transfer ಮಾಡಿದರೆ, ನಾವೂ ಎಷ್ಟು ಜನರನ್ನು transfer ಮಾಡುವುದಕ್ಕೆ ಸಾಧ್ಯವೋ ಅಷ್ಟು ಜನರನ್ನು transfer ಮಾಡುತ್ತೇವೆ. ಉಳಿದವರಿಗೆ ಬೇರೆಕಡೆ ಕೊಡುತ್ತೇವೆ.

Central Silk Board.

Q.—872. Sri G. PAPANNA (Sidlaghatta-Chickballapur).—

Will the Government be pleased to state:—

(a) the number of members on the Central Silk Board;

(b) of these, how many represent Mysore State;

(c) whether it is a fact that the Board has been entrusted with the work of getting silk from outside countries and distributing them;

(d) whether it is a fact that the suggestion made by our Government regarding the distribution of silk got from outside countries in the interest of the industry was not accepted;

(e) if so, the steps taken by Government.

A.—Sri H. SIDDAVEERAPPA (Minister for Home and Industries).—

(a) 36.
(b) 4.
(c) Yes.
(d) Yes.
(e) Government have again taken up the matter with the Central Silk Board.

ಶ್ರೀ ಜಿ. ಪಾಪಣ್ಣ.—ನಾಲ್ಕು ಸ್ಥಾನಗಳನ್ನು ಮಾತ್ರ ಮೈಸೂರು ಸಂಸ್ಥಾನಕ್ಕೆ ಕೊಟ್ಟಿದೆ. ಯಾವ ಆಧಾರದಮೇಲೆ,ಇದನ್ನು ನಿಗದಿ ಮಾಡಿದ್ದಾರೆ?

ಶ್ರೀ ಎಚ್. ಸಿದ್ದವೀರಪ್ಪ.—ನಾಲ್ಕೇ ಅಲ್ಲ; ಇನ್ನೂ ಹೆಚ್ಚಿಗೆ ಇದೆ. ನಾಮಿನೇಟೆಡ್ ಭಾಗದಲ್ಲಿ ನಾಲ್ಕು ಎಂದು ಹೇಳಿದೆ ಅಷ್ಟೆ. ಒಟ್ಟು ಮೈಸೂರಿನವರು ಇರತಕ್ಕವರು ಎಂಟು ಜನರು.

ಶ್ರೀ ಜಿ. ಪಾಪಣ್ಣ.—ಎಂಟು ಜನರೇ ಆದರೂ ಕಡಮೆಯಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—All-India Basis ಮೇಲೆ ಕೊಡಬೇಕು. ಮೈಸೂರಿಗೆ ತಕ್ಕಷ್ಟು ಪ್ರಾತಿನಿಧ್ಯ ಕೊಟ್ಟಿದೆ.

ಶ್ರೀ ಜಿ. ಪಾಪಣ್ಣ.—ಉತ್ಪತ್ತಿಯ ಆಧಾರದಮೇಲೆ ಕೊಡುತ್ತಾರೆಯೇ ಅಥವಾ ಇನ್ನ್ಯಾವುದಾದರೂ ಆಧಾರದಮೇಲೆ ಕೊಡುತ್ತಾರೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಆಯಾ ಪ್ರದೇಶದಲ್ಲಿ ಕೈಗಾರಿಕೆ ಎಷ್ಟರಮಟ್ಟಿಗೆ ಹರಡಿದೆ ಎಂಬುದನ್ನು ನೋಡಿ ಅದರಂತೆ ಕೊಡುತ್ತಾರೆ.

ಶ್ರೀ ಜಿ. ಪಾಪಣ್ಣ.—ಆ ಆಧಾರದಮೇಲೆ ಕೊಡುವು ದಾದರೂ ಇದಕ್ಕಿಂತ ಹೆಚ್ಚಿಗೆ ಕೊಡಬೇಕಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಅದಕ್ಕಿಂತ ಹೆಚ್ಚಿಗೆ ಕೊಡಬೇಕೆಂದರೆ, All-India Basis ಮೇಲೆ ಸಂಬಂಧಪಟ್ಟ ಆಕ್ಟಿನ ಪ್ರಕಾರ ಕೊಡಬೇಕಲ್ಲಾ ! ಬೋರ್ಡನ್ನು ರಚನೆ ಮಾಡುವಾಗ ನಾನಾ ಸರ್ಕಾರ ಗಳ ಸಲಹೆಯನ್ನು ಕೇಳುತ್ತಾರೆ.

ಶ್ರೀ ಜಿ. ಪಾಪಣ್ಣ.—ಆ ರೀತಿ ಸೆಂಟ್ರಲ್ ಸಿಲ್ಕ್ ಬೋರ್ಡ್ ಮಾಡುವಾಗ ನಮ್ಮ ಸರ್ಕಾರದವರ ಸಲಹೆ ತೆಗೆದುಕೊಂಡಿದ್ದಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ತೆಗೆದುಕೊಂಡಿದ್ದಾರೆ.

ಶ್ರೀ ಜಿ. ಪಾಪಣ್ಣ.—ಹೊರದೇಶದ ರೇಷ್ಮೆ ತರಿಸುವ ವಿಷಯದಲ್ಲಿ ನಿಮ್ಮ ಸಲಹೆಯನ್ನು ನಿರಾಕರಣೆ ಮಾಡಿ ದ್ದಾರೆಂದು ಹೇಳಿದ್ದೀರಿ. ಪುನಃ ಪತ್ರವ್ಯವಹಾರ ಮಾಡಿದ್ದಕ್ಕೆ ಉತ್ತರ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಬಂದಿಲ್ಲ.

ಶ್ರೀ ಎ. ಮುನಿಯಪ್ಪ.—ಮೈಸೂರಿನ ಎಂಟುಜನ ಮೆಂಬರುಗಳು ಯಾರ್ಯಾರು ?

ಶ್ರೀ ಎಚ್. ಸಿದ್ದವೀರಪ್ಪ.—ಶ್ರೀಗಳಾದ ಹೆಚ್. ಸಿದ್ದವೀರಪ್ಪ, ಕೆ. ಎಸ್. ನಂಜುಂಡಪ್ಪ, ಪುಟ್ಟಮಲ್ಲೇ ಗೌಡ, ಮುನಿಗೌಡ, ಎಸ್. ಕೇಶವಯ್ಯಂಗಾರ್, ರಾಚಯ್ಯ, ಶಿವನಂಜಪ್ಪ, ರಾಜಶೇಖರಮೂರ್ತಿ.

ಶ್ರೀ ಎ. ಮುನಿಯಪ್ಪ.—ಇವರು ಹಾಲಿ ಇರತಕ್ಕ ಮೆಂಬರುಗಳೇ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು, existing list.

ಶ್ರೀ ಎ. ಮುನಿಯಪ್ಪ.—ಬೇರೆ constitute ಆಗಿಲ್ಲವೇ ?

Sri H. SIDDAVEERAPPA.—I will ascertain and place on the table of the House.††

ಶ್ರೀ ಬಿ. ರಾಚಯ್ಯ.—ಈ re-consti tute ಆದ ಬೋರ್ಡಿನಲ್ಲಿ ಶ್ರೀ ವೈ. ಜಿ. ಪಾಪಣ್ಣನವರೂ ಇದ್ದಾರೆ ಅಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ನೋಡಿ ಹೇಳಬೇಕು.

ಶ್ರೀ ಬಿ. ರಾಚಯ್ಯ.—ರೇಷ್ಮೆಯಲ್ಲಿ ಹೆಚ್ಚಿಗೆ ಅನು ಭವ ಪಡೆದಿರುವವರಿಗೆ ಅಲ್ಲಿ ಸ್ಥಾನ ವಿರಬೇಕಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಅವರೂ ಇರಬೇಕು ; ರೇಷ್ಮೆ ಕೈಗಾರಿಕೆಯಲ್ಲಿ ಹೆಚ್ಚಿಗೆ ಪರಿಶ್ರಮ ವಿರುವವರೂ ಇರಬೇಕು.

ಶ್ರೀ ಎಚ್. ಟಿ. ಪುಟ್ಟಪ್ಪ.—ದೇವನಹಳ್ಳಿಯಲ್ಲಿ ರೇಷ್ಮೆ ಕೈಗಾರಿಕೆ ಎಲ್ಲಿದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ದೇವನಹಳ್ಳಿಯಲ್ಲಿದೆ ಯೆಂದು ಗೊತ್ತಾಗಿದೆ.

ಶ್ರೀ ಎಚ್. ಟಿ. ಪುಟ್ಟಪ್ಪ.—ಅದು ನಡೆಯು ತ್ತಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಸಮರ್ಪಕವಾಗಿ ನಡೆ ಯುತ್ತಿಲ್ಲವೆಂದು ವರದಿಯಿಂದ ಗೊತ್ತಾಗುತ್ತದೆ.

ಶ್ರೀ ಎಚ್. ಟಿ. ಪುಟ್ಟಪ್ಪ.—ಇತ್ತೀಚೆಗೆ ಅದಕ್ಕೆ ಸಾಲಕೊಟ್ಟಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್.

ಶ್ರೀ ಎಚ್. ಟಿ. ಪುಟ್ಟಪ್ಪ.—ಹೊಸಕೋಟೆ ತಾಲ್ಲೂಕಿ ನಲ್ಲಿ ಒಂದು ರೇಷ್ಮೆ ಕೈಗಾರಿಕಾ ಕಾರ್ಖಾನೆಯದೆ ಯಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಒಂದು ಇದೆಯೆಂದು ಗೊತ್ತಾಗಿದೆ.

ಶ್ರೀ ಎಚ್. ಟಿ. ಪುಟ್ಟಪ್ಪ.—ಅದರಲ್ಲೂ ಕೆಲಸ ಕಾರ್ಯ ಗಳು ನಡೆಯುತ್ತಿಲ್ಲವೆಂಬುದು ಸರ್ಕಾರದವರಿಗೆ ಗೊತ್ತಾಗಿದೆಯೇ ?

ಶ್ರೀ ಎಚ್. ಸಿದ ವೀರಪ್ಪ.—ಹೌದು, ಸಮರ್ಪಕ ವಾಗಿಲ್ಲವೆಂದು ಗೊತ್ತಾಗುತ್ತದೆ.

ಶ್ರೀ ಎಚ್. ಟಿ. ಪುಟ್ಟಪ್ಪ.—ಈ ಕಾರ್ಖಾನೆಯನ್ನು ಉತ್ತಮಪಡಿಸುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಕಾರ್ಖಾನೆಯಲ್ಲಿರ ತಕ್ಕವರು ಶ್ರದ್ಧೆ ವಹಿಸಬೇಕು, ಸರ್ಕಾರದವರು ಸಹಾಯ ಮಾಡುತ್ತಾರೆ.

ಶ್ರೀ ಆರ್. ಮುನಿಸ್ವಾಮಯ್ಯ.—ದೇವನಹಳ್ಳಿ ತಾಲ್ಲೂಕಿನಲ್ಲಿ ಒಂದು Granite Stone Industry ಯನ್ನು ಪ್ರಾರಂಭಿಸುವುದಕ್ಕೆ ಸಾಧ್ಯವಿಲ್ಲವೇ ?

Sri A. G. RAMACHANDRA RAO.—I do not think this Granite Industry refers to this question. It does not form part of silk industry.

Sri R. MUNISWAMIAH.—Sir, my supplementary is based on the question (a) "whether they are examining the question of establishing any industry in Devanahalli Taluk ;"

Sri A. G. RAMACHANDRA RAO.—No other industry has been investigated.

ಶ್ರೀ ಆರ್. ಮುನಿಸ್ವಾಮಯ್ಯ.—ಅದನ್ನು ಪರಿ ಶೀಲನೆ ಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರಿಶೀಲನೆ ಮಾಡಿಲ್ಲ.

ಶ್ರೀ ಕೆ. ವಿ. ಬೈರೇಗೌಡ.—ದೇವನಹಳ್ಳಿಯಲ್ಲಿ ರೇಷ್ಮೆ ಕೈಗಾರಿಕೆಯಿದೆಯೆಂದು ಹೇಳಿದಿರಿ. ಇದಕ್ಕೆ ಸರ್ಕಾರದ ಬಂಡವಾಳ ಎಷ್ಟು, ಷೇರು ಬಂಡವಾಳ ಎಷ್ಟು ?

ಶ್ರೀ ಎಚ್. ಸಿದ್ದವೀರಪ್ಪ.—ಸರ್ಕಾರದ ಬಂಡವಾಳ ಗೊತ್ತಿಲ್ಲ. Details ಬೇಕಾದರೆ ಆಮೇಲೆ ಹೇಳು ತ್ತೇನೆ. ದೇವನಹಳ್ಳಿಯಲ್ಲಿ Karnataka Filature Company with 32 persons ಇದೆಯೆಂದು ಗೊತ್ತಾಗಿದೆ. ಮಿಕ್ಕ Details ಗೊತ್ತಿಲ್ಲ.

Director of Rural Industrialisation (Building for office and residence).

Q.—912. Sri N. HUCHMASTHY GOWDA (Huliyurdurga).—

Will the Government be pleased to state :—

(*a*) the rent paid for the building in which the Office of the Director of Rural Industrialisation is located ;

(*b*) whether it is a fact that the Director of Rural Industrialisation is residing in the building ?

††*Vide* page 2683 for details.

A.—Sri H. SIDDAVEERAPPA (Minister for Home and Industries).—

(a) Rs. 650 per mensem.

(b) Yes.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಈ ಅಧಿಕಾರಿಗಳು ಎಷ್ಟು ದಿವಸದಿಂದ ಅಲ್ಲಿ ವಾಸಮಾಡುತ್ತಿದ್ದಾರೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಈಚೆಗೆ ಈ ಹೊಸ ಅಧಿಕಾರಿಗಳಾಗಿ ಬಂದಮೇಲೆ ಕೆಲವು ತಿಂಗಳಿಂದ ವಾಸಮಾಡುತ್ತಿದ್ದಾರೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ ರೀತಿ ಅವರು ಸರ್ಕಾರಿ ಕಟ್ಟಡದಲ್ಲಿರಬೇಕಾದರೆ ಪೂರ್ವಭಾವಿಯಾಗಿ ಅವರು ಸರ್ಕಾರದವರ ಅಪ್ಪಣೆ ಪಡೆದಿರಬೇಕಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಪಡೆದಿದ್ದಾರೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ರೂಲ್ಸ್‌ನಲ್ಲಿ ಅವಕಾಶವಿದೆಯೆಂದು ಮೇಲ್ಪಟ್ಟ ಅಧಿಕಾರಿಗಳನ್ನು ಕೇಳಿ ಹೋಗಿದ್ದರು. ಈಚೆಗೆ ಸರ್ಕಾರದವರ ಗಮನಕ್ಕೆ ಅದನ್ನು ತಂದಿದ್ದಾರೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಸರ್ಕಾರದವರು ಅವರಿಗೆ ಅಲ್ಲಿರುವುದಕ್ಕೆ ಅಪ್ಪಣೆ ಕೊಟ್ಟಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಯೋಚನೆ ಮಾಡುತ್ತಿದ್ದೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಅವರಿಂದ ಬಾಡಿಗೆ ವಸೂಲು ಮಾಡುತ್ತಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಾಡಿಗೆ ಬಿಟ್ಟುಕೊಡಿ, ಹೆಚ್ಚಿಗೆ ಕೆಲಸವಿದೆಯೆಂದು ಹೇಳುತ್ತಿದ್ದಾರೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ ರೀತಿ ಬಾಡಿಗೆಯಿಲ್ಲದೆ ಅಧಿಕಾರಿಗಳಿಗೆ ಎಲ್ಲಿಯಾದರೂ ಕೊಟ್ಟಿರುವ ಪದ್ಧತಿಯಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ರೂಲ್ಸ್‌ನಲ್ಲಿ ಅವಕಾಶವಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಯಾವ ಇಲಾಖೆಯಲ್ಲಾದರೂ ಒಂದು ಇಲಾಖೆಯ, ಮೊಖ್ತೇಸರಿಗೆ ಬಾಡಿಗೆಯಿಲ್ಲದೆ ಮನೆ ಕೊಟ್ಟಿರುವ ಪದ್ಧತಿಯಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಪದ್ಧತಿ ಇಲ್ಲ; ಆದರೂ, ಯಾರಿಗೆ ಹೆಚ್ಚಿಗೆ ಕೆಲಸವಿದೆಯೋ ಅವರಿಗೆ ಇರತಕ್ಕ ಪ್ರದೇಶದಲ್ಲೇ ಅವಕಾಶವಿದ್ದರೆ ಪರ್ಯಾಲೋಚಿಸಬೇಕಾಗುತ್ತದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಇವರಿಗೆ ಸೇರಿರತಕ್ಕ ಇಲಾಖಾ-ಕಚೇರಿಗಳು ಇನ್ನೂ ಅನೇಕ ಇವೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಆ ಆಫೀಸುಗಳನ್ನು ಇದೇ ಮನೆಯಲ್ಲಿ ಇಡುವುದಕ್ಕೆ ಅವಕಾಶವಿರಲಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವನ್ನು ಯೋಚನೆ ಮಾಡಬೇಕು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—Rationalisation of allowances ವಗೈರೆ ಮಾಡುವುದಕ್ಕೆ ಗೊತ್ತುಮಾಡಿದ್ದಂಥ ಸಮಿತಿಯವರು ಈ ರೀತಿಯಾಗಿ ಬಾಡಿಗೆಯಿಲ್ಲದೆ ಯಾವ ಅಧಿಕಾರಿಗಳಿಗೂ ಕಟ್ಟಡ ಕೊಡಕೂಡದೆಂದು ಶಿಫಾರಸು ಮಾಡಿರುವುದು ತಮಗೆ ಗೊತ್ತಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಾಧಾರಣವಾಗಿ ಆ ರೀತಿಯ ನಿಯಮವನ್ನನುಸರಿಸಬೇಕೆಂದು ಶಿಫಾರಸು ಮಾಡಿದ್ದಾರೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಹಾಗಾದರೆ, ಆ ವರದಿಯ ಆಧಾರದಮೇಲೆ ಸರ್ಕಾರದವರು ಇವರಿಂದ ಬಾಡಿಗೆಯನ್ನು ವಸೂಲು ಮಾಡುವುದಕ್ಕೆ ಏರ್ಪಾಡು ಮಾಡಿದ್ದಾರೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ವರದಿಯೂ ಇದೆ. ಅದರಂತೆ ರೂಲ್ಸಿನಲ್ಲಿ ಕೊಡುವುದಕ್ಕೆ ಅವಕಾಶವೂ ಇದೆ. ಆದ್ದರಿಂದ ಪರಿಶೀಲನೆ ಮಾಡಬೇಕು.

Sri V. M. MASCARENHAS.—Did this officer take the permission of the Government to occupy the building free of rent?

Sri A. G. RAMACHANDRA RAO.—I said the matter is under the consideration of Government.

Sri V. M. MASCARENHAS.—Did the officer take the permission of the Government before using it as a residential quarter?

Sri A. G. RAMACHANDRA RAO.—I believe he did not take prior permission since it was available; he has sought the permission.

Sri V. M. MASCARENHAS.—Is it true that this officer is out of Bangalore and the State for about 22 days of the month?

Sri A. G. RAMACHANDRA RAO.—Exigencies of work may have taken him outside.

Sri V. M. MASCARENHAS. You have stated that this officer is very busy and that he has to be very close to the work spot.

Sri A. G. RAMACHANDRA RAO.—His casual going out will not come in the way of normal business being carried on in that place and heavy work also being carried on.

Sri B. Y. NEELE GOWDA.—May I know whether this officer is an I.A.S. officer?

Sri A. G. RAMACHANDRA RAO.—Yes.

Sri B. Y. NEELE GOWDA.—May I know whether the Government took the permission of the Central Government to extend concession to this officer?

Sri A. G. RAMACHANDRA RAO.—We have not informed the Central Government.

Sri B. Y. NEELE GOWDA.—Is it not against the conduct of rules and is it not a violation of the rules?

Sri A. G. RAMACHANDRA RAO.—There may be certain irregularity; but it does not amount to violation.

Sri B. Y. NEELE GOWDA.—Are the Government pleased to recommend additional allowance to this officer ?

Sri A. G. RAMACHANDRA RAO.—I want notice for that.

ಶ್ರೀ ಎಚ್. ಕೆ. ವೀರಣ್ಣಗೌಡ.—ಈಗ ಆ ಕಟ್ಟಡಕ್ಕಾಗಿ ತಿಂಗಳಿಗೆ 650 ರೂಪಾಯಿಗಳ ಬಾಡಿಗೆಯನ್ನು ಕೊಡಲಾಗುತ್ತಿದೆ. ಹೀಗೆ ಬಾಡಿಗೆ ಕೊಡುತ್ತಿರುವಾಗ ಅವರು ಈ ಕಟ್ಟಡದಲ್ಲಿ ಎಷ್ಟು ಭಾಗದಲ್ಲಿ ವಾಸಮಾಡಿ ಕೊಂಡಿರುತ್ತಾರೋ ಅಷ್ಟಕ್ಕಾದರೂ ಅವರಿಂದ ಬಾಡಿಗೆಯನ್ನು ವಸೂಲ್ಮಾಡಬೇಕಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದಕ್ಕಾಗಲೇ ಉತ್ತರ ಹೇಳಿದ್ದೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಈಗಲಾದರೂ ಹಾಗೆ ಮಾಡುವುದಕ್ಕೆ ಏನು ತೊಂದರೆಯಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ಪರಿಶೀಲನೆ ಮಾಡಲಾಗುತ್ತದೆಂದು ಹೇಳಿದ್ದೇನೆ.

Sri T. C. BASAPPA.—What is the pay he is drawing now ?

Sri A. G. RAMACHANDRA RAO.—I think he is drawing Rs. 800. I am not definite.

ಶ್ರೀ ಜಿ. ಬಸಪ್ಪ.—ಈಗ ಆ ಕಟ್ಟಡಕ್ಕೆ ಕೊಡುತ್ತಿರುವ ಬಾಡಿಗೆ 650 ರೂಪಾಯಿಗಳೆಂದು ಹೇಳಲಾಗಿದೆ. ಈ 650 ರೂಪಾಯಿಗಳ ಬಾಡಿಗೆಯನ್ನು ಆ ಕಟ್ಟಡಕ್ಕೆ ರೆಂಟ್ ಕಂಟ್ರೋಲ್‌ರವರು ನಿಗದಿ ಮಾಡಿದ್ದಾರೋ ಅಥವಾ ಈ ಅಧಿಕಾರಿಗಳೇ ಅದನ್ನು ನಿಗದಿ ಮಾಡಿದ್ದಾರೋ ?

Sri A. G. RAMACHANDRA RAO.—I think it comes under the House Rent Control Act and that has been fixed by him.

ಶ್ರೀ ಜಿ. ಬಸಪ್ಪ.—ಹಾಗಾದರೆ ಈ ಬಾಡಿಗೆಯನ್ನು ಮೊಕರೂರ್‌ಮಾಡಿದ್ದು ಯಾವ ವರ್ಷ ? ಇತ್ತೀಚೆಗೆ ಯಾವಾಗಲಾದರೂ ಅದನ್ನು ಕಡಮೆಮಾಡಿದ್ದಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

Maralawadi-Hunasanahalli Forest Road.

Q.—692. Sri S. KARIAPPA (Virupakshapura).—

Will the Government be pleased to state :—

(*a*) whether the bad condition of the Maralawadi-Hunasanahalli forest road has come to their notice ;

(*b*) the steps they have taken to improve it ?

A.—Dr. R. NAGAN GOWDA (Minister for Agriculture).—

(*a*) Yes.

(*b*) Annual repairs are being done.

ಶ್ರೀ ಎಸ್. ಕರಿಯಪ್ಪ.—ಸರ್ಕಾರದವರು ಈ ರಸ್ತೆಯ ಸಾಲಾಬಾದ್ ಕಾಂಗಾರಿಯನ್ನು ಪ್ರತಿ ವರ್ಷವೂ ತಪ್ಪದಂತೆ ನಡೆಸುತ್ತಾ ಇದ್ದೀರಾ ?

ಡಾ॥ ಆರ್. ನಾಗನಗೌಡ.—ಈಗ ಈ ರಸ್ತೆಯನ್ನು ಫಾರೆಸ್ಟ್ ಪ್ರಾಡ್ಯೂಸ್‌ಗಳನ್ನು ಮಾತ್ರ ಸಾಗಿಸಲು ಉಪಯೋಗಿಸಲ್ಪಡುತ್ತದೆ. ಆದರೆ ಜನರ ಪ್ರಯಾಣಕ್ಕೆ ಈ ರಸ್ತೆ ಅಷ್ಟೇನೂ ಚೆನ್ನಾಗಿರುವುದಿಲ್ಲ.

ಶ್ರೀ ಎಸ್. ಕರಿಯಪ್ಪ.—ತಾವು ಈ ಸಾಲಾಬಾದ್ ಕಾಂಗಾರಿಗೋಸ್ಕರವಾಗಿ ಎಷ್ಟು ಮೊಬಲಗನ್ನು ಒದಗಿಸುತ್ತಿದ್ದೀರಿ ?

Dr. R. NAGAN GOWDA.—I do not have that information.

ಶ್ರೀ ಎಸ್. ಕರಿಯಪ್ಪ.—ಇದಕ್ಕಾಗಿ ಮೈಲಿಗಿಷ್ಟು ಅಂತ ಏನಾದರೂ ಹಣವನ್ನೊದಗಿಸುವಂಥ ವ್ಯವಸ್ಥೆ ಮಾಡಿರುತ್ತೀರಾ ?

ಡಾ॥ ಆರ್. ನಾಗನಗೌಡ.—ಫಾರೆಸ್ಟ್ ಇಲಾಖೆಯವರು ಎಷ್ಟರಮಟ್ಟಿಗೆ ಇದಕ್ಕಾಗಿ ಖರ್ಚುಮಾಡಬಹುದೋ ಅಷ್ಟನ್ನು ಮಾತ್ರ ಈಗ ಖರ್ಚು ಮಾಡುತ್ತಿದ್ದಾರೆ.

ಶ್ರೀ ಎಸ್. ಕರಿಯಪ್ಪ.—ಈಗ ಆ ರಸ್ತೆಯಲ್ಲಿ ಗಾಡಿ ಇತ್ಯಾದಿಗಳ್ಯಾವೂ ತಿರುಗಾಡುವುದಕ್ಕಾಗುತ್ತಿಲ್ಲ ಅನ್ನುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಈ ವರ್ಷದ ಮಳೆಗಾಲ ಕಳೆದ ಬಳಿಕ ಅದನ್ನು ಚೆನ್ನಾಗಿ ರಿಪೇರಿ ಮಾಡಿಸಬೇಕೆಂದು ಅಂದುಕೊಂಡಿದ್ದೇವೆ.

ಶ್ರೀ ಆರ್. ಮುನಿಸ್ವಾಮಯ್ಯ.—ಈ ರಸ್ತೆಯ ಕಾಂಗಾರಿಯನ್ನು ನಡೆಸತಕ್ಕವರು ಫಾರೆಸ್ಟ್ ಇಲಾಖೆಯವರೋ ಅಥವಾ ಪಿ. ಡಬ್ಲ್ಯು. ಡಿ. ಅವರೋ ?

ಡಾ॥ ಆರ್. ನಾಗನಗೌಡ.—ಫಾರೆಸ್ಟ್ ಇಲಾಖೆಯವರು.

ಶ್ರೀ ಆರ್. ಮುನಿಸ್ವಾಮಯ್ಯ.—ಆ ಫಾರೆಸ್ಟ್ ಇಲಾಖೆಯವರಿಗೆ ಈ ರಸ್ತೆ ಕಾಂಗಾರಿಯ ಟೆಕ್ನಿಕ್ ಏನು ಗೊತ್ತಿದೆ ?

ಡಾ॥ ಆರ್. ನಾಗನಗೌಡ.—ಆ ಪಿ. ಡಬ್ಲ್ಯು. ಡಿ. ಅವರಿಗೆ ಇರುವಷ್ಟು ಸೌಕರ್ಯಗಳು ಈ ಅರಣ್ಯ ಇಲಾಖೆಯವರಿಗೆ ಇಲ್ಲದಿದ್ದಾಗ್ಯೂ ಇವರು ಈ ರಸ್ತೆ ಇತ್ಯಾದಿಗಳ ಕಾಂಗಾರಿಯನ್ನು ನಡೆಸಬಲ್ಲರು.

Agricultural Colonies.

Q.—713. Sri SIDDIAH *alias* KUNNIAH (Gundlupet-Heggaddevanakote—Scheduled Castes).—

Will the Government be pleased to state :—

(*a*) the number of agricultural colonies in the State and which are they (Districtwar information be given) ;

(*b*) of these, the extent and namet of colonies started for the upliftmens of Scheduled Castes ;

(c) the names of places in Mysore District where the Government propose to open new agricultural colonies for Scheduled Castes ?

A.—Dr. R. NAGAN GOWDA (Minister for Agriculture).—

(a) Four—

Name of District		Places where the colonies are located.
Mandya	...	1 Nelamakanahalli. 2 Gowdagere. 3 Kalmuddanahalli (All the three in Malavalli Taluk).
Tumkur	...	1 Markonahalli Reservoir area, Kunigal Taluk.

(b) There is no colony exclusively for Depressed Classes. There is, however, a residential Agricultural Farming Society for Depressed Classes in Halaganahalli, Gauribidanur Taluk.

(c) There are no proposals for the present.

ಶ್ರೀ ಎಚ್. ಕೆ. ದ್ದಯ್ಯ.—ಈಗ ನಮ್ಮ ಸಂಸ್ಥಾನದಲ್ಲಿ ವ್ಯವಸಾಯದ ಕಾಲೋನಿಗಳ ಮತ್ತು ಕೋಆಪರೇಟೀವ್ ಸೊಸೈಟಿಗಳ ಸಂಖ್ಯೆ ಎಷ್ಟಿದೆ ?

ಡಾ॥ ಆರ್. ನಾಗನಗೌಡ.—20 ಕೋಆಪರೇಟಿವ್ ಸೊಸೈಟಿಗಳು ಮತ್ತು 4 ಅಗ್ರಿಕಲ್‌ಚರಲ್ ಕಾಲೋನಿಗಳೂ ಇವೆ.

ಶ್ರೀ ಬಿ. ರಾಚಯ್ಯ.—ಈಗ ತಾವು ಹೇಳಿದಂಥ ಅಗ್ರಿಕಲ್‌ಚರಲ್ ಕಾಲೋನಿಗಳಲ್ಲಿ ಪ್ರತಿಯೊಂದರಲ್ಲೂ ಎಷ್ಟೆಷ್ಟು ಜನರು ವಾಸ ಮಾಡುತ್ತಿದ್ದಾರೆ ?

ಡಾ॥ ಆರ್. ನಾಗನಗೌಡ.—ನೆಲಮಾಕನಹಳ್ಳಿಯ ಕಾಲೋನಿಯಲ್ಲಿ ಹತ್ತು ಜನರಿದ್ದಾರೆ. ಗೌಡಗೆರೆ ಕಾಲೋನಿಯಲ್ಲಿ ಹತ್ತು ಜನರು, ಕಲುಮುದ್ದೇನಹಳ್ಳಿ ಕಾಲೋನಿಯಲ್ಲಿ ಹತ್ತು ಜನರು, ಮಾರ್ಕೋನಹಳ್ಳಿಯಲ್ಲಿ ಹದಿನಾಲ್ಕು ಜನರೂ ಇದ್ದಾರೆ. ಹೀಗೆ ಮೆಂಬರ್ಸ್‌ಗಳಿದ್ದಾರೆ. ಮೊದಲನೆಯ ಮೂರು ಕಾಲೋನಿಗಳಲ್ಲಿ ವಾಸ ಮಾಡಿಕೊಂಡಿರತಕ್ಕವರಿಗೆಲ್ಲಾ ಜಮೀನಿನ ಟೈಟಲ್‌ನ್ನು ಕೊಡಬೇಕೆಂದು ತೀರ್ಮಾನವಾಗಿತ್ತು. ಈಗ ಅಲ್ಲಿ ವಾಸಮಾಡಲು ಅವರಿಗೆ ವಿಧಿಸಿರತಕ್ಕ ಷರತ್ತುಗಳ ಪ್ರಕಾರ ಅವರು ಅಲ್ಲಿ ವಾಸ ಮಾಡಬೇಕೆಂದೂ, ಅದಕ್ಕೆ ತಪ್ಪಿದಲ್ಲಿ ಅವರು ಆ ಕಾಲೋನಿಗಳನ್ನು ಬಿಟ್ಟು ಹೊರಡಬೇಕಾಗುತ್ತದೆಂದೂ ಅವರೆಲ್ಲರಿಗೂ ನೋಟಿಸ್ ಕೊಡಲಾಗಿದೆ.

ಶ್ರೀ ಬಿ. ರಾಚಯ್ಯ.—ಹಂಗಳದ ಹೋಬಳಿಯಲ್ಲಿ ಒಂದು ಅಗ್ರಿಕಲ್‌ಚರಲ್ ಕಾಲೋನಿಯನ್ನು ಏರ್ಪಾಡು ಮಾಡಬೇಕೆಂದು ಸರ್ಕಾರದವರೇನಾದರೂ ಉದ್ದೇಶವಿಟ್ಟುಕೊಂಡಿದ್ದಾರೆಯೇ ?

ಡಾ॥ ಆರ್. ನಾಗನಗೌಡ.—ನೋಟೀಸ್.

ಶ್ರೀ ಬಿ. ರಾಚಯ್ಯ.—ಚಾಮರಾಜನಗರ ತಾಲ್ಲೂಕು ಹೊಂಗಳಗ್ರಾಮ ಮತ್ತು ಹಂಚವಾಡಿ ಈ ಎರಡು ಗ್ರಾಮಗಳಲ್ಲಿ ಎರಡು ಅಗ್ರಿಕಲ್‌ಚರಲ್ ಕಾಲೋನಿಗಳನ್ನು ಸರ್ಕಾರದದರು ಮಾಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿರುತ್ತಾರೆಂಬುದು ನಿಜವಲ್ಲವೇ ? ಈ ಬಗ್ಗೆ ಈ ಗಾಗಲೆ ಅಲ್ಲಿ ಜಮೀನ್ ಇತ್ಯಾದಿಗಳನ್ನೆಲ್ಲಾ ಅಕ್ವಯಿರ್ ಮಾಡಿಕೊಂಡು, ರಿಜರ್ವ್ ಮಾಡಿಕೊಂಡು, ಆ ಬಗೆ ಸರ್ಕಾರಕ್ಕೆ ಒಂದು ವರದಿಯನ್ನು ಕೂಡ ಒಪ್ಪಿಸಿರುವುದು ತಮ್ಮ ಅವಗಾಹನೆಗೆ ಬಂದಿಲ್ಲವೆ ?

ಡಾ॥ ಆರ್. ನಾಗನಗೌಡ.—ನೋಟೀಸ್.

ಶ್ರೀ ಬಿ. ರಾಚಯ್ಯ.—ನಮ್ಮ ಶ್ರೀ ಚಿಕ್ಕಲಿಂಗಯ್ಯನವರು ಅಧಿಕಾರದಲ್ಲಿದ್ದಾಗಿನಿಂದ ಹಿಡಿದು ಈ ವರೆಗೂ ಈ ವಿಚಾರ ಇನ್ನೂ ಪೆಂಡಿಂಗ್‌ನಲ್ಲೇ ಇದೆ ಅನ್ನುವುದಾದರೂ ತಮ್ಮ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಆರ್. ಮುನಿಸ್ವಾಮಯ್ಯ.—ಆ ಗೌರಿಬಿದನೂರು ತಾಲ್ಲೂಕಿನಲ್ಲಿರುವ ಕಾರೆಗಹಳ್ಳಿ ಕಾಲೋನಿಯಲ್ಲಿ ಎಷ್ಟು ಜನಗಳಿದ್ದಾರೆ ?

ಡಾ॥ ಆರ್. ನಾಗನಗೌಡ.—ಅಲ್ಲಿ ಈಗ 43 ಡಿಪ್ರೆಸ್ಡ್ ಕ್ಲಾಸಿನ ಸಂಸಾರಗಳಿರುತ್ತವೆ.

ಶ್ರೀ ಆರ್. ಮುನಿಸ್ವಾಮಯ್ಯ.—ಈಗ ಆ ಸಂಸಾರಗಳಲ್ಲೇ ಎಡ-ಬಲದವರೆಂತ ಒಂದು ವಾದವನ್ನು ತಂದು ಹಾಕಿಕೊಂಡು ಅವರೆಲ್ಲರಲ್ಲೂ ತುಂಬಾ ವೈಷಮ್ಯ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ನಾನು ಹೋದ ವರ್ಷ ಅಲ್ಲಿಗೆ ಹೋಗಿದ್ದೆ. ಅಲ್ಲಿಯ ಕೆಲಸ ಕಾರ್ಯಗಳೆಲ್ಲಾ ಬಹಳ ಚೆನ್ನಾಗಿ ನಡೆಯುತ್ತಿದ್ದವು. ಆಗ ನನಗೆ ಜನರಲ್ಲಿ ಅಂಥ ಬೇಧಭಾವನೆಗಳಿದ್ದ ಹಾಗೆ ಏನೂ ಕಂಡುಬರಲಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ಇತ್ತೀಚೆಗೆ ಆ ರೀತಿ ಸನ್ನಿವೇಶ ಉಂಟಾಗಿದೆ. ಆ ವಿಚಾರ ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

ಡಾ॥ ಆರ್. ನಾಗನಗೌಡ.—ಸರ್ಕಾರದ ಗಮನಕ್ಕೇನೂ ಬಂದಿಲ್ಲ. ಅಂಥಾದ್ದೇನಾದರೂ ಇದ್ದರೆ ಆ ವಿಚಾರದಲ್ಲಿ ನಾವು ತಕ್ಕ ಚರ್ಯೆ ತಕ್ಕೊಳ್ಳುತ್ತೇವೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈಗ ನಮ್ಮ ಮಂಡ್ಯಾ ಜಿಲ್ಲೆಯಲ್ಲಿರತಕ್ಕಂಥ ಮೂರು-ನಾಲ್ಕು ಅಗ್ರಿಕಲ್‌ಚರಲ್ ಕಾಲೋನಿಗಳಲ್ಲಿ ಒಂದರಲ್ಲೂ ಜನರು ಸರಿಯಾಗಿ ವಾಸ ಮಾಡುತ್ತಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ನಾನು ಮಂಡ್ಯಾ ಜಿಲ್ಲೆಗೆ ಭೇಟಿ ಕೊಟ್ಟಿಲ್ಲ. ಬೇರೆ ಕಡೆಗಳಿಗೆಲ್ಲಾ ಮೂರು ನಾಲ್ಕಾವರ್ತಿ ಭೇಟಿ ಕೊಟ್ಟಿದ್ದೇನೆ. ಆದರೆ ಆ ವಿಚಾರಗಳ್ಯಾವೂ ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ನಾವು ಈ ಸಭೆಯ ಮುಂದೆ ಪದೇ ಪದೇ ಆ ನೆಲಮಾಕನಹಳ್ಳಿ ಇತ್ಯಾದಿ ಕಾಲೋನಿಗಳಲ್ಲಿ ಜನಗಳು ಸರಿಯಾಗಿ ವಾಸ ಮಾಡುತ್ತಿಲ್ಲವೆಂಬ ಅಂಶವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದರೂ, ತಾವು ಇದೇ ವಿವರಣೆಯನ್ನು ಯಾವಾಗ್ಲೂ ಕೊಡುತ್ತಿದ್ದೀರಿ ಅನ್ನುವದು ನಿಜವೇ ?

ಡಾ॥ ಆರ್. ನಾಗನಗೌಡ.—ಈಗಾಗಲೇ ನಾವು ನೋಟೀಸ್ ಕೊಟ್ಟಿದ್ದೇವೆ. ರೂಲ್ಸ್‌ಗಳನ್ನು ಉಲ್ಲಂಘನೆ ಮಾಡಿರತಕ್ಕವರ ಮೇಲೆ ಚರ್ಯೆ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈಗ ಸರ್ಕಾರದವರು ಆ ಜನರಿಗೆ ಏನೇನು ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿದ್ದಾರೋ ಅವುಗಳನ್ನೆಲ್ಲಾ ಅವರೀಗ ಉಪಯೋಗ ಮಾಡಿಕೊಳ್ಳುತ್ತಿದ್ದಾರೆಯೇ ?

ಡಾ॥ ಆರ್. ನಾಗನಗೌಡ.—ನೋಟೀಸಿನಲ್ಲಿ ವಾಯಿದೆ ಹಾಕಿ ಕೊಟ್ಟಿದ್ದೇವೆ. ಅದಕ್ಕೂ ಉಲ್ಲಂಘನೆ ಮಾಡಿದರೆ ಅವರ ಮೇಲೆ ಚರ್ಯೆ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈಗ ಅಲ್ಲಿ ವ್ಯವಸಾಯದ ಇಲಾಖೆಯವರು ನಾಲ್ಕು ಕಾಲೋನಿಗಳನ್ನು ಪ್ರಾರಂಭಿಸಿರುತ್ತಾರಲ್ಲವೆ ?

ಡಾ॥ ಆರ್. ನಾಗನಗೌಡ.—ಹೌದು.

District Banks.

Q.—715. Sri SIDDAIAH *alias* KUNNIAH (Gundlupet—Heggaddevanakote—Scheduled Castes).—

Will the Government be pleased to state :—

(*a*) the number and names of Banks they propose to open in several districts for offering short-term loans ;

(*b*) the total share amount collected so far (Districtwise figures to be given)?

A.—Dr. R. NAGAN GOWDA (Minister for Agriculture).—

(*a*) One District Co-operative Central Bank for each of the districts. There are now 10 District Co-operative Central Banks in the Mysore State including Bellary District.

(*b*) The total share amount collected by the District Co-operative Central Banks of Mysore State is Rs. 8,27, 625 as detailed below :—

District Co-operative Bank		*Rs.*
Mysore	...	69,750
Kolar	...	6,550
Chitaldrug	...	5,400
Tumkur	...	22,804
Chikmagalur	...	14,100
Bangalore	...	19,785
Hassan	...	73,949
Shimoga	...	63,439
Mandya	...	1,18,590
Bellary	...	4,33,258
Total	...	8,27,625

ಶ್ರೀ ಸಿದ್ದಯ್ಯ ಉರುಫ್ ಕುನ್ನಯ್ಯ.— ಈಗ ತಾವು ಯಾವ ಯಾವ ಜಿಲ್ಲೆಗಳಲ್ಲಿ ಡಿಸ್ಟ್ರಿಕ್ಟ್ ಕೋ-ಆಪರೇಟಿವ್ ಸೆಂಟ್ರಲ್ ಬ್ಯಾಂಕುಗಳನ್ನು ಏರ್ಪಾಡು ಮಾಡಿದ್ದೀರಿ ?

ಡಾ॥ ಆರ್. ನಾಗನಗೌಡ.—ಈಗ ನಾವು ನಾಲ್ಕು ಜಿಲ್ಲೆಗಳಲ್ಲಿ ಏರ್ಪಾಡು ಮಾಡಿದ್ದೇವೆ. ಇನ್ನೂ ಆರು ಜಿಲ್ಲೆಗಳಲ್ಲಿ ಏರ್ಪಾಡು ಮಾಡಲಾಗುತ್ತದೆ.

ಶ್ರೀ ಸಿದ್ದಯ್ಯ ಉರುಫ್ ಕುನ್ನಯ್ಯ.—ಈವರೆಗೆ ಎಷ್ಟು ಷೇರ್ ಮೊಬಲಗು ವಸೂಲಾಗಿದೆ ?

ಡಾ॥ ಆರ್. ನಾಗನಗೌಡ.—ನಾವು ಈಗ ಎರಡು ಲಕ್ಷ ರೂಪಾಯಿಗಳ ಷೇರ್ ಮೊಬಲಗನ್ನು ಕೊಡಿಸಬೇಕೆಂದು ಹೇಳಿದ್ದೇವೆ. ಈಗ ಮಂಡ್ಯಾ ಜಿಲ್ಲೆಯಲ್ಲಿ, 1,18,590 ರೂಪಾಯಿಗಳನ್ನೂ, ಶಿವಮೊಗ್ಗ ಜಿಲ್ಲೆಯಲ್ಲಿ 63,439 ರೂಪಾಯಿಗಳನ್ನೂ, ಹಾಸನ ಜಿಲ್ಲೆಯಲ್ಲಿ 73,949 ರೂಪಾಯಿಗಳನ್ನೂ ವಸೂಲ್ಮಾಡಿದ್ದಾರೆ. ಇನ್ನುಳಿದ ಇತರ ಜಿಲ್ಲೆಗಳಲ್ಲಿ ಷೇರ್ ಮೊಬಲಗನ್ನು ಕೊಡಿಸಲು ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಬಿ. ರಾಚಯ್ಯ.—ಈವರೆಗೆ ಈ ವಿಲೇಜ್ ಪಂಚಾಯಿತಿ ಛೇರ್‌ಮನ್‌ಗಳು ಎಷ್ಟು ಮೊಬಲಗನ್ನು ಈ ಫಂಡಿನ ಬಗ್ಗೆ ಉಪಯೋಗಿಸಿದ್ದಾರೆಂಬುದನ್ನು ಹೇಳುವುದಕ್ಕಾಗುತ್ತದೆಯೇ ?

ಡಾ॥ ಆರ್. ನಾಗನಗೌಡ.—ಅದನ್ನು ಹೇಳುವುದಕ್ಕಾಗುವುದಿಲ್ಲ,

ಶ್ರೀ ಬಿ. ರಾಚಯ್ಯ.—ವಿ. ಪಿ. ಫಂಡಿನಿಂದ ಬಹಳ ಹಣವನ್ನು ಈ ಷೇರ್ ರೂಪವಾಗಿ ಉಪಯೋಗಿಸಿದ್ದಾರೆ ಅನ್ನುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಇಲ್ಲ.

ಶ್ರೀ ಬಿ. ರಾಚಯ್ಯ.—Individual shares ಹೆಚ್ಚಿಗೆ ಮಾಡತಕ್ಕಂಥಾದ್ದು ಸೂಕ್ತವಲ್ಲವೇ ?

ಡಾ॥ ಆರ್. ನಾಗನಗೌಡ.—ಇದರೊಳಗೆ individual shares ಮಾಡಬೇಕೆಂದೂ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿರುವ ಪ್ರೈಮರಿ Co-operative Societyಗಳೂ ಇದರಲ್ಲಿ share ತೆಗೆದುಕೊಳ್ಳಬೇಕು ಎಂದು ಉದ್ದೇಶ,

ಶ್ರೀ ಬಿ. ರಾಚಯ್ಯ.—ಹಳ್ಳಿಗಾಡಿನಲ್ಲಿ ಜಮೀನು ಇಲ್ಲದೆ ಇರತಕ್ಕವರಿಂದ rural industrial schemeನ ಪ್ರಕಾರ share collect ಮಾಡುತ್ತಾರೆ. ಅದು ಇದರಲ್ಲಿ ಸೇರಿದೆಯೇ ?

ಡಾ॥ ಆರ್. ನಾಗನಗೌಡ.—ಅದು ಬೇರೆ.

Kodachadri Hill (Conversion as Hill Station).

Q.—723. Sri B. MADHAVACHAR (Bhadravati).—

Will the Government be pleased to state :—

(*a*) whether they have received any representation for developing Hill Station at Kodachadri ;

(*b*) if so, the action they have taken on the above representation ?

A.—Dr. R. NAGAN GOWDA (Minister for Agriculture).—

(*a*) Yes.

(DR. R. NAGAN GOWDA.)

(*b*) The proposal for converting 'Kodachadri Hill' as a 'Hill Station' has been deferred for the present owing to financial stringency.

ಶ್ರೀ ಬಿ. ಮಾಧವಾಚಾರ್.—ಸರ್ಕಾರಿ ಅಧಿಕಾರಿಗಳು ಯಾರಾದರೂ ಕೊಡಚಾದ್ರಿ ಬೆಟ್ಟಕ್ಕೆ ಹೋಗಿ ಅಲ್ಲಿನ ಸ್ಥಳ ವಗೈರೆ ನೋಡಿ. ಆ ವಿಷಯದಲ್ಲಿ ವರದಿ ಕಳುಹಿಸಿದ್ದಾರೆಯೇ?

ಡಾ॥ ಆರ್. ನಾಗನಗೌಡ.—ವರದಿ ಏನೂ ಬಂದಿಲ್ಲ. 1953ರಿಂದ ದುಡ್ಡಿನ ಅಭಾವ ಆಗಿದೆ. ಆದ್ದರಿಂದ ಕೆಲಸ ಮುಂದಕ್ಕೆ ಹಾಕೋಣ ಎಂದೇ ಮುಂದಕ್ಕೆ ಹಾಕಿದ್ದೇವೆ.

ಶ್ರೀ ಬಿ. ಮಾಧವಾಚಾರ್.—ಕೇಂದ್ರ ಸರ್ಕಾರದವರು ಪ್ರವಾಸಿ ಕೇಂದ್ರಗಳನ್ನು ಅಭಿವೃದ್ಧಿಪಡಿಸಬೇಕು, ಅವುಗಳನ್ನು ದೇಶಾದ್ಯಂತ ಹೆಚ್ಚಿಸಬೇಕು, ಈ ದೃಷ್ಟಿಯಿಂದ ಸ್ಥಾನೀಕ ಸರಕಾರಗಳಿಗೆ grant ಕೂಡ ಕೊಡುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಡಾ॥ ಆರ್. ನಾಗನಗೌಡ.—ಹಾಗೆಯೇ circular ಕೂಡ ಹೊರಡಿಸಿದ್ದಾರೆ. ಅದರ ಮೂಲಕ ಈ ಸ್ಕೀಮ್ ತಯಾರು ಮಾಡುವುದಕ್ಕೆ ಪ್ರಾರಂಭ ಮಾಡುತ್ತೇವೆ.

ಶ್ರೀ ಬಿ. ಮಾಧವಾಚಾರ್.—ಈ ಸ್ಥಳದ ಬಗ್ಗೆ ಪೂರ್ಣ ವಿವರವಾದ ವರದಿಗಳನ್ನು ಸ್ಥಳಾಧಿಕಾರಿಗಳು ತರಿಸಿಕೊಳ್ಳುತ್ತಿದ್ದಾರೆಯೇ?

ಡಾ॥ ಆರ್. ನಾಗನಗೌಡ.—ತರಿಸಿಕೊಳ್ಳುತ್ತಿದ್ದಾರೆ.

ಶ್ರೀ ಬಿ. ಮಾಧವಾಚಾರ್.—ಕೊಡಚಾದ್ರಿ ಬೆಟ್ಟಕ್ಕೆ ಹೋಗುವುದಕ್ಕೆ ಏನಾದರೂ ರಸ್ತೆ ಇದೆಯೇ?

ಡಾ॥ ಆರ್. ನಾಗನಗೌಡ.—ರಸ್ತೆ ನಾನು ನೋಡಿಲ್ಲ.

Mr. SPEAKER.—The Hon'ble Member can furnish the information.

ಶ್ರೀ ಬಿ. ಮಾಧವಾಚಾರ್.—ಈ Hill Station ಅಭಿವೃದ್ಧಿಪಡಿಸುವ ಬಗ್ಗೆ ಏನಾದರೂ ಪರಿಶೀಲನೆ ಮಾಡಿದ್ದೀರಾ? ಇಲ್ಲಿ ಹವಾ ಹೇಗಿರುತ್ತದೆ?

ಡಾ॥ ಆರ್. ನಾಗನಗೌಡ.—ಇಲ್ಲಿ ಹವಾ ಬಹಳ ಚೆನ್ನಾಗಿರುತ್ತದೆ ಎಂದು ಶ್ರೀಮಾನ್ ಮಾಧವಾಚಾರ್ಯರು 2-3 ಸಲ ಹೇಳಿದ್ದಾರೆ.

Amrit Mahal Cattle Graziers.

Q.—825. Sri B. HUTCHE GOWDA (Turuvekere).—

Will the Government be pleased to state :—

(*a*) the number of graziers employed to look after the Amrit Mahal Cattle in the State ;

(*b*) the scale of pay and allowance paid to graziers ;

(*c*) whether it is not a fact that these graziers are moving with these cattle from Halt to Halt ;

(*d*) whether they are paying them, (i) travelling allowances, (ii) daily batta for outside Halts and (iii) Malnad allowances while they stay in the interior most Malnad jungles for 4 to 6 months in the year ;

(*e*) whether these graziers have been supplied with tarpaulins and Kamblies to protect themselves against rain and cold during nights ?

A.—Dr. R. NAGAN GOWDA (Minister for Agriculture).—

(*a*) 32.

(*b*) Rs. 14—½—18 with Dearness Allowance of Rs. 17 per mensem.

(*c*) Yes.

(*d*) No.

(*e*) No. But when they are in the jungles, tarpaulins and zinc sheets are provided for use to protect themselves and calves against rains.

ಶ್ರೀ ಬಿ. ಹುಚ್ಚೇಗೌಡ.—(*c*) ಪ್ರಶ್ನೆಗೆ ಉತ್ತರವಾಗಿ ಹೌದು ಎಂದು ಹೇಳಿದ್ದೀರಿ. ಆದ್ದರಿಂದ ಪ್ರಯಾಣ ಮಾಡುವವರಿಗೆ ಸರ್ಕಾರೀ ರೂಲ್ಸಿನಂತೆ T. A. ಕೊಡಬೇಕಾದ್ದು ಧರ್ಮವಲ್ಲವೇ?

ಡಾ॥ ಆರ್. ನಾಗನಗೌಡ.—ಅವರಿಗೆ allowance ಬಗ್ಗೆ ಒಂದು ಏರ್ಪಾಡು ಮಾಡಿದೆ. ಆ graziers ಗೆ ಅದೇ ಪದ್ಧತಿಯಂತೆ ದಿನಗಳು ಹೋಗುತ್ತಾ ಇರುವುದರಿಂದ; ಆ ರೀತಿ ಜರುಗುತ್ತಿದೆ.

ಅಧ್ಯಕ್ಷರು.—T. A. Bill ಕಳುಹಿಸುವುದು ಕಷ್ಟವಾಗುತ್ತದೆ.

ಡಾ॥ ಆರ್. ನಾಗನಗೌಡ.—ಈಗ ಏನು ಏರ್ಪಾಡು ಮಾಡಿದೆಯೋ ಅದರಂತೆ ಅವರಿಗೆ ಕೊಡುತ್ತಾ ಇರುವುದು.

ಶ್ರೀ ಬಿ. ಹುಚ್ಚೇಗೌಡ.—ಇವರು ಮಲೆನಾಡಿನಲ್ಲಿ ಸರ್ವಿಸ್ಸು ಮಾಡುತ್ತಾರೆಯೇ ಅಲ್ಲವೇ?

ಡಾ॥ ಆರ್. ನಾಗನಗೌಡ.—ಹೌದು.

ಶ್ರೀ ಬಿ. ಹುಚ್ಚೇಗೌಡ.—ಮಲೆನಾಡು ಸರ್ವಿಸ್ಸಿನಲ್ಲಿ ಇತರ ನೌಕರರಿಗೆ ಕೊಡಬೇಕಾದ್ದನ್ನು ಇವರಿಗೂ ಕೊಡಬೇಕಾದ್ದು ನ್ಯಾಯವಲ್ಲವೇ?

ಡಾ॥ ಆರ್. ನಾಗನಗೌಡ.—ಅದನ್ನು ಪರಿಶೀಲನೆ ಮಾಡಬೇಕು.

ಶ್ರೀ ಬಿ. ಹುಚ್ಚೇಗೌಡ.—ಇವರು ರಾತ್ರಿ ಹಗಲು ದನಗಳನ್ನು ನೋಡಿಕೊಳ್ಳಬೇಕಾದ್ದು ಮತ್ತು ಮಳೆಯಲ್ಲಿ ಬಿಸಿಲಲ್ಲಿ ಇರಬೇಕಾದ್ದು ಕರ್ತವ್ಯವಲ್ಲವೇ?

ಡಾ॥ ಆರ್. ನಾಗನಗೌಡ.—ಹೌದು, ಅವರ ಕೆಲಸವೇ ಹಾಗೆ ಇದೆ. 10 ಘಂಟೆಗೆ ಹೋಗಿ 5 ಘಂಟೆಗೆ ಮನೆಗೆ ಬಂದರೆ, ದನಗಳ ಅವಸ್ಥೆ ಏನಾಗಬೇಕು?

ಶ್ರೀ ಬಿ. ಹುಚ್ಚೇಗೌಡ.—ಟಾರ್ಪಾಲಿನ್ ಕೊಟ್ಟಿದ್ದೀರಿ. ಆದರೆ ಅವರು ಮಳೆಯಲ್ಲಿ ನೆಂದರೆ ಅವರ ಅವಸ್ಥೆ ಏನಾಗಬೇಕು?

ಡಾ॥ ಆರ್. ನಾಗನಗೌಡ.—ಮಳೆಗಾಲದಲ್ಲಿ ಉಪಯೋಗಿಸಿಕೊಳ್ಳಲು ಟಾರ್ಪಾಲನ್ನು ಮತ್ತು ಜಿಂಕ್ ಷೀಟುಗಳನ್ನು ಕೊಟ್ಟಿದ್ದೇವೆ.

ಶ್ರೀ ಬಿ. ಹುಚ್ಚೇಗೌಡ.—ಒಬ್ಬರಿಗಾದರೂ ಕೊಟ್ಟಿದ್ದೀರಿ ಎಂಬುದಕ್ಕೆ ತಪ್ಪೇನಾದರೂ ತಿಳಿಸುತ್ತೀರಾ? ಇವತ್ತಿನವರಿಗೂ ಒಬ್ಬರಿಗೂ ಕೊಟ್ಟಿಲ್ಲ.

ಡಾ|| ಆರ್. ನಾಗನಗೌಡ.—ವಿಚಾರಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡ.—ಮಲೆನಾಡಿನಲ್ಲಿರುವವರಿಗೆ ಮಲೆನಾಡು allowance ಕೊಡುವುದಕ್ಕೆ ಸರ್ಕಾರದವರು ಹುಕುಂ ಮಾಡುತ್ತಾರೆಯೇ?

ಡಾ|| ಆರ್. ನಾಗನಗೌಡ.—ಅದನ್ನು ವಿಚಾರಿಸುತ್ತೇನೆ. ಒಂದೂ ನಾನು ಹೇಳುವುದಕ್ಕಾಗುವುದಿಲ್ಲ.

Gazetted Officers in the Electrical Department.

Q.—842. Sri Mulka GOVINDA REDDY (Chitaldrug).—

Will the Government be pleased to state:—

(*a*) the number and names of Gazetted Officers in the Electrical Department;

(*b*) the dates on which they were appointed along with their qualifications;

(*c*) whether any of them were sent abroad for foreign studies;

(*d*) whether promotions were made; if so, on what basis?

A.—Dr. R. NAGAN GOWDA (Minister for Agriculture).—

(*a*) and (*b*) Please see pages 227 to 234 of the Mysore Half-Yearly Civil List as corrected upto 1st October 1951 (copy placed on the Table).

(*c*) Yes.

(*d*) Promotions are made on the basis of seniority and merit.

ಶ್ರೀ ಬಿ. ಹುಚ್ಚೇಗೌಡ.—(*d*) ಪ್ರಶ್ನೆಗೆ ಬಡ್ತಿಗಳನ್ನು ಸೀನಿಯಾರಿಟಿ ಮತ್ತು ಯೋಗ್ಯತೆಗಳನ್ನು ಗಣನೆಗೆ ತೆಗೆದುಕೊಂಡು ಕೊಡುತ್ತೇವೆಂದು ಹೇಳಿದ್ದೀರಿ. ಬಡ್ತಿಗಳನ್ನು qualification ನೋಡಿಕೊಂಡು ಕೊಡುತ್ತೀರಾ? ಅಥವಾ ದಕ್ಷತೆ ನೋಡಿ ಕೊಡುತ್ತೀರಾ?

ಒಬ್ಬೊಬ್ಬರ individual case consider ಮಾಡಬೇಕಾದರೆ ಒಂದು ಸರ್ತಿ seniority consider ಮಾಡುವುದು, ಒಂದು ಸರ್ತಿ qualification, ಒಂದು ಸರ್ತಿ ಮೆರಿಟ್ consider ಮಾಡುವುದು—ಹೀಗೆ ಇಲಾಖೆಯಲ್ಲಿ ಮಾಮೂಲಾಗಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಡಾ|| ಆರ್. ನಾಗನಗೌಡ.—ಈ 3 ವಿಷಯಗಳನ್ನೂ ಒಟ್ಟಿಗೆ ತೆಗೆದುಕೊಳ್ಳಬೇಕು.

ಶ್ರೀ ಬಿ. ಹುಚ್ಚೇಗೌಡ.—ಒಂದೊಂದೂ ಹೀಗೆ arbitrary ಆಗಿ ಮಾಡಿದ್ದಾರೆ ಎಂದು ಅನೇಕ ದೂರುಗಳಿವೆ. ಇದಕ್ಕೋಸ್ಕರ ಸರ್ಕಾರದವರು ಸಮಿತಿ ನೇಮಿಸಿ, ಈ ಇಲಾಖೆಯಲ್ಲಿ ಹೆಚ್ಚು ಕಡಮೆ ಆಗಿರುವುದನ್ನು ಸರಿಮಾಡುವುದಕ್ಕೆ ಸಾಧ್ಯವೇ?

ಡಾ|| ಆರ್. ನಾಗನಗೌಡ.—ತಮಗೆ ಗೊತ್ತಿರುವ ಹಾಗೆ ಹೋದ ವರುಷ ಜನವರಿ 19 ನೇ ತಾರೀಖು ಒಂದು Government order ಹೊರಡಿಸಿ, ಅದರ ಮೇಲೆ allocation statement ತಯಾರು ಮಾಡಿಸಿ, ಆಮೇಲೆ ಅದನ್ನು Public Service Commission ಗೆ ಕಳುಹಿಸಿಕೊಟ್ಟಿದ್ದಾರೆ. ಅಲ್ಲಿಂದ ಬಂದ ಮೇಲೆ ಈ ರೀತಿ ಯಾವ complaints ಒಂದೂ ಇರುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಅನೇಕರಿಗೆ ಅನ್ಯಾಯವಾಗಿರುವುದನ್ನು ಸರಿಮಾಡುವುದಕ್ಕೆ ಭರವಸೆ ಕೊಡುತ್ತೀರಾ?

ಡಾ|| ಆರ್. ನಾಗನಗೌಡ.—ಅದು Public Service Commission ಗೆ ಹೋಗಿದೆ. The whole subject will be considered soon.

Edigere Forest of Yagati Hobli, Kadur Taluk.

Q.—904. Sri Y. M. CHANDRASEKHARIAH (Kadur).—

Will the Government be pleased to state:—

(*a*) the area in acres of Edigere Forest of Yagati Hobli in Kadur Taluk;

(*b*) the annual income from this forest;

(*c*) the annual expenditure on account of its establishment and maintenance;

(*d*) the number of landless people in the neighbouring villages who have requested for grant of lands from this forest:

(*e*) the number of villages without gomal the residents of which have requested grant of lands for gomal in this forest?

A.—Dr. R. NAGAN GOWDA (Minister for Agriculture).—

(*a*) 1,405·425 acres.

(*b*) Rs. 117-8-0.

(*c*) Rs. 504 on Establishment and Rs. 34-6-0 for maintenance.

(*d*) 46.

(*e*) None.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಕಡೂರು ತಾಲ್ಲೂಕಿನ ಎಡಿಗೆರೆ ಫಾರೆಸ್ಟ್ ತಾವು ನೋಡಿದ್ದೀರಾ?

ಡಾ|| ಆರ್. ನಾಗನಗೌಡ.—ನಾನು ನೋಡಿಲ್ಲ; ತಾವು ಕರೆದುಕೊಂಡು ಹೋಗಿಲ್ಲ. ನಾನು ನೋಡಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—Forestನಲ್ಲಿ ಹುಲ್ಲು ಇದೆ. ಗಿಡಗಳು ಇಲ್ಲ. ಮರ ಇಲ್ಲದೇ ಇರುವುದು ಫಾರೆಸ್ಟ್ ಹೇಗಾಗುತ್ತದೆ ?

ಡಾ॥ ಆರ್. ನಾಗನಗೌಡ.—ಪೂರ್ವಕ್ಕೆ ಗಿಡಗಳು ಇದ್ದುವು. ಅವುಗಳನ್ನು ರೈತರು ಕಡಿದುಬಿಟ್ಟರು. ಆದಕಾರಣ ಗಿಡಗಳು ಈಗ ಕಡಮೆ ಆಗಿರಬಹುದು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—(a) ಪ್ರಶ್ನೆಗೆ ಈ ಫಾರೆಸ್ಟ್ ವಿಸ್ತೀರ್ಣ 1405·425 ಎಕರೆಗಳು ಎಂದು ಕೊಟ್ಟಿದ್ದೀರಿ. ಅದರಿಂದ ಉತ್ಪತ್ತಿ ವರ್ಷಕ್ಕೆ 117½ ರೂಪಾಯಿಗಳೂ, ಸಿಬ್ಬಂದಿ ಖರ್ಚು 504 ರೂಪಾಯಿಗಳೂ ಮತ್ತು ಇತರ ಖರ್ಚು ರೂಪಾಯಿ 34—6—0 ಎಂದಿದೆ. ಹೀಗೆ ಸುಮಾರು 540 ರೂಪಾಯಿಗಳ ಖರ್ಚು ಇದೆ. Forestನಲ್ಲಿ ಕಾಡು ಇಲ್ಲದೇ ಇರುವುದರಿಂದ ಉಪಯೋಗವಿಲ್ಲ. ಖರ್ಚು ಜಾಸ್ತಿಯಾಗಿದೆ. ಹೀಗಿರುವಾಗ ಈ forest ಏತಕ್ಕೆ ಇಟ್ಟುಕೊಳ್ಳುವುದು ?

ಡಾ॥ ಆರ್. ನಾಗನಗೌಡ.—ಈಗ ಗಿಡಗಳು ಇಲ್ಲ. ಆದರೆ ಗಿಡಗಳನ್ನು ಹಾಕುವುದಕ್ಕೆ ಪ್ರಯತ್ನಮಾಡುತ್ತಿದ್ದೇವೆ. ಫಾರೆಸ್ಟ್ ಸ್ವಲ್ಪ ಕ್ಷೀಣದೆಶೆಗೆ ಬಂದಿದೆ. ಇದನ್ನು ಅಭಿವೃದ್ಧಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಫಾರೆಸ್ಟ್ ನಿಗಾ ನೋಡುವವರು ವರ್ಷೇವರ್ಷೇ ಹುಲ್ಲುಬನ್ನಿಯಿಂದ ಸಾವಿರಾರು ರೂಪಾಯಿಗಳನ್ನು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಇಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಇಲ್ಲಿ 40 ಜನ ಜಮೀನು ಕೊಡಬೇಕೆಂದು ಅರ್ಜಿಗಳನ್ನು ಹಾಕಿದ್ದಾರೆ. ಸುತ್ತುಮುತ್ತಲೂ ಜಮೀನು ಇಲ್ಲದೇ ಇರುವುದರಿಂದ ಆದಿಕರ್ನಾಟಕ ಮತ್ತು ಬೇರೆ ಜನರಿಗೆ ಮರಗಳು ಇಲ್ಲದೇ ಇರತಕ್ಕಂಥ ಪ್ರದೇಶದಲ್ಲಿ ಜಮೀನು ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಡಾ॥ ಆರ್. ನಾಗನಗೌಡ.—ಪಕ್ಕದಲ್ಲಿ 130 ಎಕರೆ ಜಮೀನು ಕೊಟ್ಟಿದ್ದಾರೆ ಎಂದು ನನಗೆ ವರದಿ ಬಂದಿದೆ. ಇನ್ನು ಉಳಿದ ಭಾಗವನ್ನು ಫಾರೆಸ್ಟ್ ಮಾಡಬೇಕು ಎಂದು ಇಟ್ಟುಕೊಂಡಿದ್ದಾರೆ. ಎಲ್ಲಾ forest ನ್ನು ಹೀಗೆ ಜನರಿಗೆ assign ಮಾಡಿದರೆ ಆ ಮೇಲೆ ಫಾರೆಸ್ಟ್ ಇಲ್ಲದ ಹಾಗಾಗುತ್ತದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಜಮೀನು ಇರುವವರಿಗೆ ಹುಲ್ಲನ್ನು ಹರಾಜು ಮಾಡಿದರೆ ಪ್ರತಿ ವರ್ಷವೂ ಆದಾಯ ಬರುತ್ತದೆ ಅಲ್ಲವೇ ?

ಡಾ॥ ಆರ್. ನಾಗನಗೌಡ.—Forestನಲ್ಲಿ free grazing ಮಾಡುವುದಕ್ಕೆ ಅಧಿಕಾರವಿದೆ. ಹುಲ್ಲು ಹರಾಜು ಮಾಡುವುದು ಸರಿಹೋಗುವುದಿಲ್ಲ.

ಶ್ರೀ ಸಿ. ಟಿ. ಹನುಮಂತಯ್ಯ.—ಕಡೂರಿನ ಅಜ್ಜಂಪುರ ಫಾರೆಸ್ಟ್‌ನಲ್ಲಿ ಸಾಗುವಳಿ ಮಾಡುವುದಕ್ಕೆ ಜಮೀನು ಬಿಟ್ಟು ಕೊಡಬೇಕು ಎಂದು ರೈತರು ಕೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಅನೇಕ ಫಾರೆಸ್ಟ್ ಪ್ರದೇಶಗಳನ್ನು ರೈತರಿಗೆ ಬಿಟ್ಟುಕೊಡಬೇಕೆಂದು ಅರ್ಜಿಗಳು ಬಂದಿವೆ.

ಶ್ರೀ ಸಿ. ಟಿ. ಹನುಮಂತಯ್ಯ.—ಪಕ್ಕದಲ್ಲಿರತಕ್ಕ ಫಾರೆಸ್ಟ್‌ನಲ್ಲಿ ನಂದಿ, ತೇಗ, ಹೆಬ್ಬಲಸು ಮುಂತಾದ ಮರಗಳು ಇಲ್ಲ, ಕಾಡುಮರಗಳು ಮಾತ್ರ ಇವೆ. ಅದನ್ನು ಬಿಟ್ಟು ಕೊಡಬೇಕೆಂದು ರೈತರು ಕೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಸರ್ಕಾರದ ಗಮನಕ್ಕೆ ಬಂದಿದೆ.

ಶ್ರೀ ಸಿ. ಟಿ. ಹನುಮಂತಯ್ಯ.—ಫಾರೆಸ್ಟ್ ಉಳಿಸಿಕೊಳ್ಳಬೇಕೆಂದು ಒತ್ತಾಯ ಸರ್ಕಾರಕ್ಕೆ ಪದೇಪದೇ ಬರುತ್ತಿದೆ ಅಲ್ಲವೇ ?

ಡಾ॥ ಆರ್. ನಾಗನಗೌಡ.—ಸಭೆ ಗಮನಕ್ಕೆ ಬರುತ್ತಿದೆ.

ಶ್ರೀ ಸಿ. ಟಿ. ಹನುಮಂತಯ್ಯ.—ಫಾರೆಸ್ಟ್ ವೃದ್ಧಿ ಮಾಡುವುದಕ್ಕೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ಈ ಸಭೆ ಹೇಳುತ್ತಾ ಇರುವುದು ಗೊತ್ತಿದೆಯೇ ?

ಡಾ॥ ಆರ್. ನಾಗನಗೌಡ.—ಇದಕ್ಕಾಗಿ 3½ ಲಕ್ಷ ರೂಪಾಯಿಗಳು ಖರ್ಚುಮಾಡುತ್ತಿದ್ದೇವೆ. ಫಾರೆಸ್ಟ್ Conservationಗೆ ನಾಲ್ಕು ಲಕ್ಷ ಕೊಡಬೇಕೆಂದು ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ.

9-30 A.M.

Pay Committee.

Q.—664. **Sri S. GOPALA GOWDA** (Sagar-Hosanagar).—

Will the Government be pleased to state :—

(*a*) the scales of pay and allowances of the officials working in different departments of the State ;

(*b*) the number of officials getting pay less than Rs. 25 per mensem and Rs. 50 per mensem (departmentalwar figures to be furnished) ;

(*c*) whether they will constitute a committee to examine the pay and allowances of officials ?

A.—**Sri A. G. RAMACHANDRA RAO** (Minister for Law and Education) [On behalf of SRI K. HANUMANTHAIYA (Chief Minister)].—

(*a*) and (*b*) Information so far received from the Heads of Departments is furnished in the Statements, placed on the Table of the House. (*Vide* No. 14 L.A. 1955).

(*c*) The question is under consideration.

ಶ್ರೀ ಎಸ್. ಗೋಪಾಲಗೌಡ.—ಈ ಪಟ್ಟಿ exhaustiveಅಲ್ಲ, ಅಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—Exhaustive list ಅಲ್ಲ.

ಶ್ರೀ ಎಸ್. ಗೋಪಾಲಗೌಡ.—ಇಲ್ಲಿ ಲೆಕ್ಕ ಕೊಟ್ಟಿರುವ ಪ್ರಕಾರ ಸುಮಾರು 25 ರೂಪಾಯಿಗೆ ಕಡಿಮೆ ಸಂಬಳ ಬರತಕ್ಕವರು 7,798 ಜನರೂ, 50 ರೂಪಾಯಿಗಿಂತ ಕಡಮೆ ಬರುವವರು 42,453 ಜನರೂ ಇದ್ದಾರೆ. 50 ರೂಪಾಯಿಗಳಿಗೂ ಕಡಮೆ ಸಂಬಳ

ಬರತಕ್ಕವರ ಸಂಬಳವನ್ನು ಕನಿಷ್ಠ ಪಕ್ಷ 50 ರೂಪಾಯಿಗಳಿಗಾದರೂ ಏರಿಸುವ ಬಗ್ಗೆ ಸರ್ಕಾರದವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ವಿಷಯ ಪರಿಶೀಲನೆಯಲ್ಲಿದೆ? ಯೋಚನೆ ಮಾಡುತ್ತೇವೆಂದು ಹೇಳಿದ್ದೇವೆ.

Mr. SPEAKER.—Short notice question by Sri S. Srinivasa Iyengar.

Sri A. G. RAMACHANDRA RAO.—Before taking up the short notice question, I would like to furnish the information with regard to Question No. 872 regarding the names of the nominees on the Silk Board.

The Mysore nominees are as follows:—

1. The Hon'ble the Minister for Home and Industries.
2. The Director of Sericulture.
3. Sri Y. G. Papanna.
4. Sri M. Rajasekharamurthy.

The following are the nominees of the Central Government :—

1. Sri N. G. Naik,
2. Sri K. N. Eswarsa,
3. Sri Shamsuddin Khan,
4. Sri H. S. Jaya Rao.

Six memebers have to be elected from the Parliament and their names have not yet been announced and we expect a few more nominees.

Mr. SPEAKER.—Short Notice Question No. 26.

Dr. R. NAGAN GOWDA.—I would request the Chair kindly to take up this short notice question on Monday as this question has come to me just now.

Mr. SPEAKER.—Yes, we shall take it up on Monday.

Postponed Questions.

Mr. SPEAKER.—The following questions had been postponed to enable the Government to furnish additional information. They will be taken up on Monday, 25th instant.

Question No. 205 by Sri T. Hanumiah regarding payment of Miras to Village officers.

Question No. 280 by Sri J. Mohamed Imam, regarding purchase of Motor Vehicles.

Question No. 322 by Sri K. Puttaswamy regarding the vacancies of Professors and Assistant Professors in University.

QuestionNo. 550 by Sri Chikkanna regarding repairs of some tanks in Channarayapatna and Arsikere Taluks.

Sri J. MOHAMED IMAM.—Will these questions be given preference on that day ?

Mr. SPEAKER.—These questions will be taken up after question time.

ಶ್ರೀ ಕೆ. ಪ್ರಭಾಕರ್.—Education Ministry ಯವರು ಸ್ಕಾಲರ್‌ಷಿಪ್ಪುಗಳನ್ನು ಯಾವ ಪ್ರಮಾಣದಲ್ಲಿ ಕೊಡುತ್ತಾರೆಂದು ಕೇಳಿದ್ದೇನೆ. ಈ ಸಭೆಯು ಮುಗಿಯುವುದರೊಳಗೆ ಅದನ್ನು ಒದಗಿಸುತ್ತಾರೆಯೇ?

ಅಧ್ಯಕ್ಷರು.—ತಮಗೆ ಕೊಡುತ್ತಾರೆಂದು ಹೇಳಿದ್ದಾರೆ. ತಾವೇ ಅವರಿಂದ ನೇರವಾಗಿ ತೆಗೆದುಕೊಳ್ಳಬಹುದು.

ಶ್ರೀ ಕೆ. ಪ್ರಭಾಕರ್.—ಈ ಸಭೆಯ information ಗಾಗಿ ಕೊಡುತ್ತೇವೆಂದು ಹೇಳಿದ್ದರು. ಅದರ ಮೇಲೇ ಕೇಳುತ್ತಿದ್ದೇನೆ.

(ಉತ್ತರವಿಲ್ಲ)

QUESTIONS FOR ANSWERS ON THE DAY

(but not taken up).

Government Silk Filatures at Kanakapura (Purchases of Gold Thread).

Q.—700. **Sri B. M. SEENAPPA** (Cubbonpet).—

Will the Government be pleased to state :—

(a) whether they are making purchases of gold thread required for the Government Silk Filatures at Kanakapura ;

(b) if so, the quantity, rate at which, amount and firms from which, these purchases have been made during the years 1952-53, 1953-54 and 1954-55 (full details may be given separately for each firm from which supply was obtained) ;

(c) of the quantity so purchased, what is the quantity locally manufactured within the State : and which are the firms from which such purchases were made (details of quantity, rate and amount during the years 1952-53, 1953-54 and 1954-55 may be given);

(SRI B. M. SEENAPPA.)

(*d*) whether these purchases were made through the Stores Purchase Committee after calling for tenders or whether the Factory or Filature itself called for quotations and made purchases direct ?

A.—Sri H. SIDDAVEERAPPA (Minister for Home and Industries).—

(*a*) Yes,

(*b*) *Year*		*Quantity*	*Rate*	*Firm*
			Rs. a. p.	Messrs. G. S. Siddaverappa B. S. Shankarappa, 4, Chowdeswari Temple Street, Bangalore-2.
1952-53	...	41 marcs	64 11 4 per marc	
1953-54	...	28 marcs	64 6 8 per marc	
1954-55	...	50 marcs	63 0 0 per marc	

(*c*) Nil.

(*d*) Purchases during 1952-53 and 1953-54 are direct but during 1954-55 the purchases are as L. I. contract No. 14359 of the Stores Purchase Committee.

High School admissions in K. G. F.

Q.—802. Sri K. S. VASAN (Kolar Gold Fields).

Will the Government be pleased to state:—

(*a*) whether they are aware that a large number of students seeking admissions to the High School classes this year in Kolar Gold Fields are stranded for want of accommodation in the existing High School ;

(*b*) whether they are aware that there is an immediate necessity of at least one more High School in the area;

(*c*) the action that they propose to take to provide seats to all those who seek admission ?

A.—Sri A. G. RAMACHANDRA RAO (Minister for Law and Education).—

(*a*) No.

(*b*) Yes.

(*c*) A new Boys' High School under private management has been opened at the place recently. This will meet with the demand for additional seats.

Silk Industry (Establishment in Devanahalli Taluk).

Q.—889. Sri H. T. PUTTAPPA (Hoskote-Anekal—Scheduled Castes).—

Will the Government be pleased to state :—

(*a*) whether they are examining the question of establishing any industry in Devanahalli Taluk ;

(*b*) whether there are no facilities to establish silk industry in Devanahalli Taluk ?

A.—Sri H. SIDDAVEERAPPA (Minister for Home and Industries).—

(*a*) No.

(*b*) Yes. The sericultural industry is already in existence in the Taluk.

Postponed Questions and Answers

Dr. R. NAGAN GOWDA (Minister for Agriculture).—Sir, I lay on the Table of the House replies to one question of October Session 1952, 4 questions of Budget Session, 1954 and 230 questions of October Session, 1954 which have been treated as postponed questions.††

Discussion on Fact Finding Committee Report (*Contd.*)

Sri V. M. MASCARENHAS (St. John's Hill).—Mr. Speaker, Sir, a student of Indian History is familiar with the rise and growth of the British

†† These are printed separately as a supplement to this volume.

Empire in India. He is also familiar how the Britishers under the name and style of the East India Company established business interests in this country, and thereafter conquered, then annexed vast tracts of land and then entered into treaty alliances with the Native Princes and thus formed a new Empire known as India. Sir, considering the circumstances under which the Britishers established the Indian Empire, it is obvious to anybody that no rational basis or any reasonable or sound principle was involved in making provinces and in forming States. It was, therefore, necessary when India became free that the Centre should view this question with the importance which it deserved and we therefore see the constitution of the States' Reorganisation Commission appointed last year.

Sir, one would ask therefore what are the terms of reference to this Reorganisation Commission—to re-organise the various States in India from the standpoint of administrative convenience, geographical contiguity and territorial re-adjustments on the basis of language. In the South, Sir, any casual observer can easily see that four important States could immediately be formed on this basis. Fortunately, people speaking the same language have grouped together in the south. On the West coast, Cochin and Travancore State with a strip of land, after Coimbatore running to a length of 200 miles to the north and on the western coast form the Kerala State. In the centre there is what is known as the Madras State which has a Tamil-speaking population, practically beginning from Coimbatore and ending at Madras. The Andhra State has already been formed and though few more territories are to be added to it, the formation of Andhra State is a *fait accompli* and there is nothing to trouble us here. The only territory now left over is the Karnatak State. It is unfortunate that the formation of the Karnataka State has given room for the largest amount of head-ache and thought.

Sir, considerable discussion has already taken place in this House on this question. There is one school of thought which has held fast to the Seshadri Committee Report which has given us various facts and figures, showing that Mysore would stand to lose if we should add any further territories to the existing territory. Well, their contention is that Mysore, for the last half a century, thanks to the benign rulers and the series of successive able Dewans, has progressed economically and industrially in every sense of the word. It is therefore not to our interest to take up neighbouring territories which are admittedly considered backward, particularly in the field of industries and economics and also as far as nation—building developments are concerned. They also contend that Mysore is a fairly big unit; and as it is, Government can be carried on without any detriment and without any need or help from the neighbouring areas. Sir, that this argument is very sound, it cannot be denied. But when we consider such an important subject like the States' Reorganisation, I would like to submit that facts and figures alone should not count, but history and tradition must also play a little part. What do I mean by history and tradition? It is nothing but a recollection of facts which have happened in this country, in Mysore State, in the neighbouring States and in the whole of Indian continent for the last 30 or 40 years on this subject of linguistic provinces or States' Reorganisation. I will not enter into very many details, but will only refer to a few important points. In the year 1916 the first meeting of the Karnatak was convened. Then in 1920 we have the first Karnatak Political Conference, then in 1927 you have the A.I.C.C. meeting in Bombay where the question of readjustment of provinces on linguistic basis was considered. In 1938 the Congress Working Committee resolved that as soon as independence came, the question of reorganisation of States must be given top priority. We have also the Birur conference, the Davanagere conference, the J.V.P. Report and a number of factors whereby we have historical evidence to show that this question of the formation of

(SRI V. M. MASCARENHAS.)

Karnataka has had a background. And it is in the light of that background, today we must consider how this question should be tackled.

Sir, many Hon'ble Members have stated that we stand to lose by becoming bigger. This is a matter which deserves our serious consideration. It is said by them that the neighbouring provinces (the blue book has given figures) have fewer cows and bullocks and buffaloes as compared to Mysore State, that they have fewer schools and fewer hospitals. I will not go into such details. Let us only remember that the tail ends of the province of Bombay on the one side, the tail ends of the Madras Province on the other side, have had, for reasons too well known to us, a step-motherly treatment from the provinces to which they belonged. The fault must be remedied. Let us not forget the history of Mysore itself. It has been said by many members that, 200 years ago, Mysore was not as it is today. Its borders reached Mangalore on the one side and Belagaum on the other side and up to Srirangam. So, even after the battle of Mysore in 1799, when for a short period the British Government in Mysore took over the Mysore State for purposes of administration, we had what is known as the Commission of Mysore which included then, Mysore, Coorg, and the whole of South Canara. So, Sir, the Mysore of today is definitely not the Mysore of the past. Mysore, we all know, had extended to areas beyond the ten districts. Therefore when neighbouring provinces have expressed a desire that we should all become one, it looks very strange why we should be hostile to this move. Many of us were in the Mysore Constituent Assembly in the year 1949. One of the objects of the Constituent Assembly was that we should, as far as possible, allow neighbouring areas to join Mysore. Well, consequently we have committed ourselves in a way to take up neighbouring areas as parts of Mysore. Instead of we taking up that question, the Centre has decided to organise the States and for this purpose it has appointed a Commission for making bigger States as the case may be, or smaller. In our case, it is bigger. This question should be discussed more dispassionately and without perhaps parochial outlook. With these general remarks I would like to point out that the new Karnataka State as envisaged, would have a population of about 2 crores. Two crores, I submit, is a very reasonable figure for the population of a State. On that basis, India would have about 18-19 States and I think that is also the limit that the Centre has placed.

Now coming to that statement that we would be having deficits by joining a neighbouring State, I would like to point out that the figures given by the Seshadri Committee Report are incomplete; firstly because they have not included Coorg, they have not included South Canara; of course, I do not blame them; perhaps for want of time. So the picture in that Report, in my opinion, is incomplete and to discuss at great length on a partial report or an incomplete report would, in my opinion, not be perfectly sound. Now let us see what the new areas that we have added on are. Coorg, on the western side, South Canara and North Canara and on the northern side Dharwar, Hubli, Bijapur and parts of Belgaum. (*A Member*: What about Hyderabad ?) Hyderabad question has not been settled. Unless it gets disintegrated, the question of our getting any territories of Hyderabad does not arise. We will discuss it ten years hence if all of us are alive. I may point out to this House how for the last 25-30 years Mysore State had been so anxious about bringing a Port like Bhatkal within the territory of Mysore. The elder members of this House are aware of the herculean efforts made by Sir M. Visvesvaraya to run the line from Shimoga to Bhatkal and also to take over Bhaktal as a harbour and to develop it as a Port. Here with the bigger Karnataka State, you have not only Bhatkal, but you have other Ports—one in the North Karwar and one in the South, Mangalore, and with a new Hassan-Mangalore railway line which is proposed and which will be accomplished within

the next 5 or 6 years, we can understand the good effect it would have on the trade of Mysore with this belt of 200 miles coast line running from Mangalore right up to Karwar. Moreover, I know definitely that the forest wealth of the Western Ghats in the immediate neighbourhood beyond Sagar on the one side up to Karwar is very rich, far richer than whatever forests we have had and most of them are lying unexplored. I will not go into the mineral wealth, because mineral wealth is in the bowels of the earth ; nobody has tried to find it out ; we will leave it aside, but the whole of the territory that is now in dispute is like a virgin soil unexplored, full of potentialities and it only wants the talent of Mysore, the brains of Mysore, its Engineers, its administrators and its galaxy of lawyers and other eminent men who have had 50 years of sound administrative experience to take up this territory and to see how best it could be developed. I personally believe that we may have in the earlier days a few handicaps, a few troubles, but considering that India is now to be considered as one organic whole, it is not possible to believe that one State could be richer than another and one State could be allowed to remain unhelped, to remain unsatisfied, to remain absolutely uncared for. It would not be possible. The Central Government would not be worth its name if it allowed any particular area or particular State to remain undeveloped. When that situation is there, the argument that we would suffer, that they would be handicaps to us, that they would be burdens to us for the rest of our lives, I do not think, holds water. It is this aspect I want Hon'ble Members to consider. We have agreed that provinces have to be re-formed and they can only be re-formed, other considerations apart, on the problem of language and when here we are having a neighbouring province of neighbouring area with a population of hardly a crore willing to join this State, I for one do not understand why there should be such a serious objection.

Another theory was put forward by a few members: 'We will remain where we are. Let them remain where they are. They can form a State of their own and let them be happy. Let us also be happy.' I for one do not understand that. The formation of a new State under these auspices would not only be very expensive but would not be feasible. We know what Andhra has gone through in forming a new State. Would we like our brother on the side of Mysore border to undergo hardships and difficulties and yet call them brothers? I for one would not. Though it may mean a little sacrifice, it may mean a little hardship to us, I would strongly request the Hon'ble Members of this House to consider this question in a more brotherly way than in mere rupees, annas and pies. (*Sri J. Mohamed Imam.—Hear, hear*)

Mr. SPEAKER.—I want to bring this to the notice of the Hon'ble Members. According to the new programme, time is very much limited and we have to make the best use of the time available to us. Therefore, I want to request Members to follow the example of Sri Mascarenhas. He has taken only 15 minutes.

Sri J. MOHAMED IMAM (Jagalur).—You presume it is definite.

Mr. SPEAKER.—It is definite. We have changed the programme four times and therefore there should be no change.

ಶ್ರೀ ಹೆಚ್. ಕೆ. ವೀರಣ್ಣಗೌಡ (ಮದ್ದೂರು).—ನೋಡೋಣ ಎಂದು ಹೇಳಬೇಡಿ. ಅಂತೂ ಬುಧವಾರ ಸಹ ಈ ಅಧಿವೇಶನವಿದೆ ಅನ್ನುವುದು ನಿಜವೋ? ಈ ವಿಚಾರ ಬಹಳ ಪ್ರಾಮುಖ್ಯವಾದದ್ದು. . . .

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಈ ವಿಚಾರದಲ್ಲಿ ಮಾತನಾಡುವುದಕ್ಕೆ ಎಲ್ಲರಿಗೂ ಕಾಲಾವಕಾಶ ಸಿಕ್ಕಬೇಕು. ಈ ವಿಚಾರದಲ್ಲಿ ಎಲ್ಲರ ಅಭಿಪ್ರಾಯವೇನಿದೆ ಅನ್ನುವುನ್ನು ತಿಳಿಸಲು ಅವಕಾಶವಿಲ್ಲದಂತೆ ಇದನ್ನು ಕಟ್ ಮಾಡುವುದು ಸರಿಯಾದ್ದಲ್ಲ.

ಅಧ್ಯಕ್ಷರು.—ಎಲ್ಲರಿಗೂ ಅವಕಾಶ ಸಿಕ್ಕಲಿ ಅಂತಲೇ ಕಾಲ ನಿಗದಿ ಮಾಡಿರುವುದು.

*ಶ್ರೀ ಡಿ. ಆರ್. ಕರಿಗೌಡ (ಹಾಸನ).—ಸ್ವಾಮಿ, ಈ ಪ್ರಾಂತ್ಯಗಳ ಗಡಿನಿರ್ಧಾರ ಸಮಿತಿಯುವರು ಈಗ ಇಂಡಿಯಾ ದೇಶದಲ್ಲಿರತಕ್ಕಂಥ ಪ್ರಾಂತ್ಯಗಳನ್ನೆಲ್ಲಾ ಪುನರ್ರಚನೆ ಮಾಡಲು ಪರಿಶೀಲನೆ ಮಾಡುತ್ತಿರುವ

* Indicates that the speeches and remarks have not been revised by the Member concerned.

(ಶ್ರೀ ಡಿ. ಆರ್. ಕರಿಗೌಡ.)

ಸಂದರ್ಭದಲ್ಲಿ ಬಂದಿರತಕ್ಕಂಥ ಮುಖ್ಯವಾದಂಥ ವಿಷಯಗಳನ್ನು ನಾನೀಗ ಈ ವಿಧಾನ ಸಭೆಯಲ್ಲಿ ಚರ್ಚೆ ಮಾಡುತ್ತಿರುವುದರಿಂದ ಈ ವಿಷಯಗಳೆಲ್ಲಾ ಬಹಳ ಪ್ರಾಮುಖ್ಯವಾದುವುಗಳೆಂದು ನಾವು ಪರಿಗಣಿಸಿ ಮಾತನಾಡಬೇಕಾಗಿದೆ. ಈಗಾಗಲೇ ಮಾತನಾಡಿರತಕ್ಕಂಥ ಕೆಲವು ಮಾನ್ಯ ಸದಸ್ಯರುಗಳು ಈ ಮೈಸೂರುರಾಜ್ಯವನ್ನು ವಿಶಾಲಗೊಳಿಸಬೇಕು; ಹೊರಗಡೆಯಿರತಕ್ಕಂಥ ಕನ್ನಡ ಮಾತನಾಡುವ ಜನರೆಲ್ಲರೂ ನಮ್ಮ ದೇಶಕ್ಕೆ ಬಂದು ಸೇರಿಕೊಳ್ಳಬೇಕೆಂದು ಹೇಳಿರುತ್ತಾರ. ನಮ್ಮ ಮೈಸೂರಿನ ಕೀರ್ತಿ, ಮೈಸೂರಿನ ಸಂಪತ್ತು, ಸಮಾಜದ ಉನ್ನತಿ, ಹಾಗೂ ನಮ್ಮ ಸಾಮಾಜಿಕ, ಅರ್ಥಿಕ, ಸಂಸ್ಕೃತಿಗಳು ಈ ದಿವಸ ಒಂದು ಉನ್ನತಮಟ್ಟದಲ್ಲಿರುವುದಕ್ಕೆ ಇದರ ಹಿನ್ನೆಲೆಯೇನು ಅನ್ನುವುದನ್ನು ನಾವು ಪೂರ್ಣವಾಗಿ ವಿಮರ್ಶೆ ಮಾಡಿ ನೋಡಿದರೆ—ನಮ್ಮ ರಾಜ್ಯ ಬಹಳ ಚಿಕ್ಕದಾಗಿದ್ದುದರಿಂದಲೇ ನಾವು ಬಹಳ ಕಾಲದಿಂದಲೂ ಇದರ ಅಭಿವೃದ್ಧಿಗೆ ಎಷ್ಟು ಹಣಬೇಕೋ ಅಷ್ಟನ್ನೂ ಒದಗಿಸಿಕೊಂಡು ಬಂದುದರಿಂದ ಈ ದಿವಸ ನಮ್ಮ ಸಂಸ್ಥಾನ ಒಂದು ಪ್ರೊಗ್ರೆಸೀವ್ ಸ್ಟೇಟಾಗಿ ಕೆಲಸ ಮಾಡಿಕೊಂಡು ಒಂದು ಉನ್ನತವಾದಂಥ ಸ್ಥಿತಿಯಲ್ಲಿದೆಯೆಂದು ಹೇಳಬೇಕಾಗಿದೆ. ಈಗ ಸಭೆಯ ಮುಂದೆ ಇರತಕ್ಕ \ ಶೇಷಾದ್ರಿ ಸಮಿತಿಯ ವರದಿ ಪ್ರಕಾರ ರಾಜ್ಯಗಳು ದೊಡ್ಡದಾದಷ್ಟೂ ತೊಂದರೆಗಳು ಜಾಸ್ತಿಯಾಗುತ್ತವೆ ಎನ್ನುವುದು ನಮಗೆಲ್ಲರಿಗೂ ಗೊತ್ತಾಗುತ್ತದೆ. ನಾವೆಲ್ಲರೂ ಬಹಳ ಕಾಲದಿಂದಲೂ ಈ ದೇಶಕ್ಕಾಗಿ ಬಹಳ ತ್ಯಾಗ ಮಾಡಿದ್ದೇವೆ. ಆದುದರಿಂದ ನಮ್ಮ ದೇಶ ಈ ದಿವಸ ಈ ಸ್ಥಿತಿಯಲ್ಲಿದೆ. ಸ್ವಾಮಿ, ಈಗಾಗಲೇ ಮಾತನಾಡಿರತಕ್ಕಂಥ ಅನೇಕ ಮಹನೀಯರು ಭಟ್ಕಲ್ ಬಂದರ್ ನಮ್ಮ ಮೈಸೂರಿಗೆ ಸೇರಿಸಲ್ಪಟ್ಟರೆ ಆಗ ನಮ್ಮ ಮೈಸೂರು ಬಹಳ ಅಭಿವೃದ್ಧಿಗೆ ಬರುತ್ತದೆ ಎಂದು ಹೇಳಿದ್ದಾರೆ, ಈ ದಿವಸ ಇಂಡಿಯಾ ದೇಶದಲ್ಲಿ ಎಷ್ಟೋ ಭಾಗಗಳು 'ಬಂದರುಗಳಿಲ್ಲದೆ ಅಭಿವೃದ್ಧಿಗೆ ಬಂದಿಲ್ಲ. ಆದಾಗ್ಯೂ ಹಾಗೆ ಆ ಪ್ರದೇಶಗಳು ಹಿಂದುಳಿದ ಪ್ರದೇಶಗಳಾಗಿದ್ದರೂ ಅಲ್ಲಿ ಈ ದಿವಸ ವ್ಯಾಪಾರಾಭಿವೃದ್ಧಿಯಾಗಿಲ್ಲವೇ ಅನ್ನುವುದನ್ನು ನಾವೇಕೆ ನೋಡಬಾರದು? ಆ ಭಟ್ಕಲ್ ಬಂದರ್ ಈ ದಿವಸ ನಮಗೆ ಸೇರಿಸಿದರೂ ಕೂಡ ನಮ್ಮ ಬೆಂಗಳೂರಿಗೆ ಅದು ಮದ್ರಾಸ್ ಬಂದರಿಗಿಂತಲೂ ದೂರವಾಗಿರುತ್ತದೆ. ಮದ್ರಾಸ್ ಬಂದರ್ ನಮಗೀಗ 200 ಮೈಲಿಗಳ ದೂರದಲ್ಲಿದೆ. ಆ 200 ಮೈಲಿಗಳ ಪ್ರದೇಶಕ್ಕೂ ಮೇಲ್ಪಟಂಥಾ ವಿಸ್ತೀರ್ಣ ಈಗ ಮೈಸೂರಿಗೆ ಸೇರಿಸಿದರೆ ಆ ಪ್ರದೇಶದ \ಅಭಿವೃದ್ಧಿಗಾಗಿ ನಾವೀಗ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗಿ ಬರುತ್ತದೆ. ಆದರೆ ನಮ್ಮ ಬಡ್ಜೆಟ್ ಈಗಾಗಲೇ ಖೋತಾ ಬಡ್ಜೆಟ್ಟಾಗಿದೆ. ಈಗ ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಹಳ್ಳಿ ಜನರಿಗೆ ಅತ್ಯವಶ್ಯಕವಾದಂಥ ಪಾಠಶಾಲೆಗಳು, ರಸ್ತೆ ಸೌಕರ್ಯಗಳು, ಆರೋಗ್ಯ ಅನುಕೂಲತೆಗಳು ಇತ್ಯಾದಿ ಸೌಕರ್ಯಗಳನ್ನು ಒದಗಿಸಲು ತುಂಬಾ ಅನಾನುಕೂಲವಾಗಿದೆ. ಈಗ ಪ್ರತಿ ವರ್ಷವೂ 5-10 ಸ್ಕೂಲುಗಳನ್ನು ಕೊಡುವುದಕ್ಕೂ ಸಾಧ್ಯವಾಗದೆ ಹೋಗಿದೆ. ಈ ದಿವಸ ಆ ಬಳ್ಳಾರಿ ಜಿಲ್ಲೆ ನಮಗೆ ಸೇರಿರುವುದರಿಂದ ಅವರು ಈ ವಿದ್ಯುಚ್ಛಕ್ತಿ ನೀರಾವರಿ ಅನುಕೂಲತೆಗಳು, ಆಸ್ಪತ್ರೆ, ಸ್ಕೂಲು, ರಸ್ತೆ ಇತ್ಯಾದಿಗಳನ್ನೇ ಕೇಳುತ್ತಿದ್ದಾರೆ. ಅವರಿಗೇನೇ ಈ ಅನುಕೂಲತೆಗಳನ್ನು ಕಲ್ಪಿಸಿಕೊಡಲು ನಮ್ಮ ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಹೀಗಿರುವಾಗ ನಮ್ಮ ಮೈಸೂರು ದೇಶಕ್ಕೆ ಇನ್ನೂ 7-8 ಜಿಲ್ಲೆಗಳನ್ನು ಸೇರಿಸಿ ಬಿಟ್ಟರೆ ಆಗ ಅವುಗಳ ಗತಿಯೇನಾಗಬೇಕಾದೀತು ಎನ್ನುವುದನ್ನು ನಾವೀಗ ಆಲೋಚನೆ ಮಾಡಬೇಕಾಗಿದೆ. ಈ ದಿವಸ ಬಳ್ಳಾರಿ ಜಿಲ್ಲೆಗೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕಾಗಿ ಬಂದುದರಿಂದ ನಮ್ಮ ದೇಶಕ್ಕೆ ಉಪಯೋಗಿಸ ಬೇಕಾಗಿದ್ದುದನ್ನೆಲ್ಲಾ ಅಲ್ಲಿಗೆ ಉಪಯೋಗಿಸಲಾಗುತ್ತಿದೆ. ಹೀಗಾಗಿ ನಾವೀಗ ಹಿಂದುಳಿಯುತ್ತಿದ್ದೇವೆ. ಆದರೆ ನಾವೆಲ್ಲರೂ ಒಂದಾಗಿ ಒಗ್ಗಟ್ಟಿನಿಂದ ನಡೆಯಬೇಕೆಂದು ಹೇಳುವುದೇನೋ ಬಹಳ ಒಳ್ಳೆಯ ಮಾತೇ. ಈ ಹಿಂದೆ 20—30 ಜನರು ಅಷ್ಟೇ ಏಕೆ, 50 ಜನರವರೆಗೂ ಅಣ್ಣತಮ್ಮಂದಿರು ಒಂದೇ ಸಂಸಾರದಲ್ಲಿ ವಾಸಮಾಡುತ್ತಿದ್ದರು. ಈ ದಿವಸ ಅಂಥ ಒಂದು ದೊಡ್ಡ ಸಂಸಾರದಲ್ಲಿ ಕೂಡ 10 ಜನರು ಸೇರಿ ಒಂದು ಕಡೆ ಇರುವುದಕ್ಕೆ ಆಗುತ್ತಿಲ್ಲ. ಈ ಹಿಂದೆ ಶ್ರೀ ವಿ. ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ಸ್ ಅಂಡ್ ವಿಲೇಜ್ ಪಂಚಾಯಿತಿಗಳ ಸಮಿತಿಯನ್ನು ನೇಮಕ ಮಾಡಿದ್ದರು. ಆಗ ಆ ಸಮಿತಿಯಲ್ಲಿ ಚರ್ಚೆಗಳಾಗುತ್ತಿದ್ದಾಗ ನಾಲ್ಕೈದು ಹಳ್ಳಿಗಳನ್ನು ಒಂದಾಗಿ ಸೇರಿಸಿ, ಅದನ್ನು ಒಂದು ಗ್ರೂಪ್ ಮಾಡಿ, ಆ ಸೆಂಟರುಗಳಿಗೆ ಒಬ್ಬೊಬ್ಬ ಸಕ್ರೆಟರಿಗಳನ್ನು ನೇಮಕ ಮಾಡಬೇಕೆಂದು ಹೇಳಿದ್ದಕ್ಕೆ 'ಶ್ರೀ ಎ. ಭೀಮಪ್ಪನಾಯಕರೂ ಹಾಗೆ ಒಂದು ಹಳ್ಳಿಯನ್ನು ಇನ್ನೊಂದು ಹಳ್ಳಿಗೆ ಸೇರಿಸಿ ಬಿಟ್ಟರೆ ತಲೆತಲೆಗಳ ಹೊಡೆದಾಟವಾಗುತ್ತದೆ, ಗ್ರಾಮಗಳಲ್ಲಿ ಪಾರ್ಟಿಯಾಗಿ- ಖೂನಾಖೂನಿಗಳಾಗುತ್ತವೆ ಎಂದು ಹೇಳಿದ್ದರು. ಆದರೆ ಈ ದಿವಸ ಅವರೇನೇ ಯಾರ್ಯಾರು ಪ್ರೀತಿಯಿಂದ ಇಷ್ಟಪಟ್ಟು ಸೇರಬೇಕೆಂದು ಹೇಳುತ್ತಾರೋ ಅಂಥವರು ಸೇರಿಕೊಂಡರೆ ಎಲ್ಲರಿಗೂ ಅನುಕೂಲವಾಗುತ್ತದೆ ಎಂದು ಹೇಳುತ್ತಿದ್ದಾರೆ. ಹೊರಗಡೆಯವರು ನಮ್ಮ ಜೊತೆಗೆ ಬಂದು ಸೇರಬೇಕೆಂಬುದು ಅವರ ಅನುಕೂಲಕ್ಕಾಗಿಯೇ ಎಂತಲೂ ಹೇಳುತ್ತಿದ್ದಾರೆ. ಆದರೆ ಹಾಗೆ ಅವರು ಕೇಳುವುದಕ್ಕಾದರೂ ಒಂದು ಸರಿಸಮಾನತೆ ಇರುವುದು ಬೇಡವೇ? ಅವರೂ ಸಹ ನಮ್ಮ ಹಾಗೆ ವಿದ್ಯೆ ಇತ್ಯಾದಿ ಇತರೇ ಎಲ್ಲಾ ಬಾಬುಗಳಲ್ಲಿಯೂ ಮುಂದುವರೆಯಲಿ, ಆನಂತರ ಒಂದಾಗುವ ವಿಚಾರ ನೋಡೋಣ. ಅಂದರೆ ಇಂಡಿಯಾ ಸರ್ಕಾರದವರು ಈ ದಿವಸ ಹಿಂದುಳಿದಿರುವಂಥ ಪ್ರದೇಶಗಳು ಯಾವ್ಯಾವಿರುತ್ತೆಯೋ ಅಂಥವುಗಳ 'ಅಭಿವೃದ್ಧಿಗಾಗಿ ಸಹಾಯ ನೀಡುತ್ತಾರೆ; ಅವರಿಂದ ಬೇಕಾದಷ್ಟು ಧನ ಸಹಾಯ ಪಡೆಯಬಹುದು ಎಂದು ಬೇರೆ ಹೇಳುತ್ತಿದ್ದಾರೆ.

10 A.M.

ಒಂದು ಉದಾಹರಣೆ ಕೊಡುತ್ತೇನೆ. ಮಂಗಳೂರು ಜಿಲ್ಲೆ ಮದ್ರಾಸ್ ದೇಶಕ್ಕೆ ಸೇರಿದೆ. ಈ ಜಿಲ್ಲೆಗೆ ವಿದ್ಯಾಭ್ಯಾಸ ಮತ್ತು ರಸ್ತೆಗಳು ಹೆಚ್ಚಿಗೆ ಬೇಕಾಗಿದ್ದರೆ ಅಲ್ಲಿನ ಜನರು ಜಗಳಮಾಡಿ ನ್ಯಾಯಕ್ಕೋಸ್ಕರ ಹೊಡೆದಾಡಿದ್ದರೆ ಆಗ ಮದ್ರಾಸ್ ಸರಕಾರದವರು ಅಭಿವೃದ್ಧಿಕಾರ್ಯಗಳನ್ನು ಕೈಗೊಳ್ಳುತ್ತಿದ್ದರು. ಹಾಗೆಯೇ ಹಿಂದುಳಿದ ಬೊಂಬಾಯಿ ಕರ್ನಾಟಕದಲ್ಲಿ Deputy Speakerರಂಥ ಮಹನೀಯರು ಇರುವಾಗ ಆ ಪ್ರದೇಶವನ್ನು ಅಭಿವೃದ್ಧಿ ಸ್ಥಿತಿಗೆ ತರುವುದಕ್ಕೆ ಎಷ್ಟೋ ವರುಷಗಳಿಂದ ಸಾಧ್ಯವಿಲ್ಲದಿದ್ದರೆ ನಾವು ಹೇಗೆ ಮಾಡಬೇಕು? ಅವರು ಕೇಂದ್ರ ಸರ್ಕಾರದಿಂದ ಬೇಕಾದಷ್ಟು ಹಣವನ್ನು ಹೊಂದಿ ಉನ್ನತ ಸ್ಥಿತಿಗೆ ಬಂದಮೇಲೆ ಅವರನ್ನು ನಮ್ಮ ದೇಶಕ್ಕೆ ಸೇರಿಸೋಣ.

ಶ್ರೀ ವೀರಣ್ಣಗೌಡರು ಮುಂದೆ 10 ವರ್ಷಗಳಾದ ಮೇಲೆ ಈ ವಿಚಾರವನ್ನು ಯೋಚನೆ ಮಾಡೋಣವೆಂದು ಹೇಳಿದ್ದಾರೆ. ಈಗ ಕೇಂದ್ರ ಸರ್ಕಾರದಿಂದ ಬೇಕಾದಷ್ಟು ಸಹಾಯವಾಗಿದೆ. ದೇಶ ಹೆಚ್ಚು ವಿಸ್ತರಿಸಿ ರಾಜಧಾನಿಯಿಂದ ದೂರ ಇದ್ದಷ್ಟು ಆದರಿಂದ ಅನುಕೂಲವಿಲ್ಲ. ಬೆಂಗಳೂರಿನಿಂದ ಶಿವಮೊಗ್ಗಾ ಡಿಸ್ಟ್ರಿಕ್ಟು 250 ಮೈಲಿ ದೂರದಲ್ಲಿದೆ. ಆದರೆ ರಸ್ತೆಗಳ ರಿಪೇರಿ ಆಗುತ್ತಲೇ ಇಲ್ಲ; ಅಲ್ಲಿ ಸ್ಕೂಲುಗಳೇ ಇಲ್ಲ. 250 ಮೈಲಿ ದೂರ ಇದ್ದಾಗ ರಾಜಧಾನಿಗೆ ಹೋಗಿ ಕೆಲಸ ಮಾಡಿಸಿಕೊಳ್ಳದೇ ಇದ್ದವರು 500 ಮೈಲಿ ದೂರ ಹೋಗಿ ಕೆಲಸವನ್ನು ಮಾಡಿಸಿಕೊಳ್ಳುತ್ತಾರೆಯೋ ಎಂದು ನನಗೆ ಅನುಮಾನವಾಗಿದೆ. ನಮ್ಮ ಸರ್ಕಾರ ಹೆಚ್ಚಿನ ಹೊರೆಯನ್ನು ಹೊತ್ತು ಎಲ್ಲಾ ನೋಡಿಕೊಳ್ಳುತ್ತೇವೆ ಎನ್ನುವುದಕ್ಕೆ ಬದಲಾಗಿ ಮೊದಲು ನಮ್ಮ ದೇಶವನ್ನು ಸರಿಮಾಡೋಣ. ಮಂಗಳೂರು, ಮಡಿಕೇರಿ, ಕೊಡಗುದೇಶ ಬಹಳ ಚಿಕ್ಕದಾಗಿರುವುದರಿಂದ ವಿದ್ಯಾಭ್ಯಾಸ ಎಷ್ಟು ಅಭಿವೃದ್ಧಿಗೆ ಬಂದಿದೆ, ಆಡಳಿತಕ್ರಮ ಹೇಗಿದೆ, ರಸ್ತೆಗಳು ಹೇಗಿವೆ, ಸ್ಕೂಲುಗಳು ಯಾವ ಮಟ್ಟದಲ್ಲಿವೆ ಎಂದು ನೋಡಿ. ಆದರೆ ಅವನ್ನು ನಮ್ಮ ಜೊತೆಗೆ ಸೇರಿಸಿದರೆ ಆಡಳಿತಕ್ಕೋಸ್ಕರ ಅನುಕೂಲವಾಗುತ್ತದೆ ಎಂದರೆ ಅದನ್ನು ಆಲೋಚನೆ ಮಾಡಬಹುದು. ಅಮೇರಿಕಾ ದೇಶವನ್ನು ಎಷ್ಟು ಭಾಗಗಳಾಗಿ ಮಾಡಿ administrative units ಮಾಡಿದ್ದಾರೆ ಎಂಬುದನ್ನು ನೋಡಿದರೆ ಮೈಸೂರು ದೇಶ ಈಗ ಎಷ್ಟು ಇದೆಯೋ ಅಷ್ಟೇ ಇರುವುದು ಸರಿ. ಬೇಕಾದರೆ ಮೈಸೂರು ದೇಶದ ಅಕ್ಕಪಕ್ಕದವರು, ಅಂದರೆ ಬಹಳ ಹತ್ತಿರದವರಾದ ಕೊಡಗು ಅಥವಾ ಮಂಗಳೂರನ್ನು ಸೇರಿಸಿಕೊಳ್ಳಿ. ಹೈದರಾಬಾದ್ ಪ್ರಾಂತ್ಯ ಒಡೆದುಹೋದ ದಿವಸ ಇತರ ಕನ್ನಡ ಪ್ರದೇಶಗಳನ್ನು ಸೇರಿಸುವ ಯೋಚನೆ ಮಾಡೋಣ.

ಶ್ರೀ ಬಿ. ಹುಚ್ಚೇಗೌಡ.—ಅಮೇರಿಕಾ ದೇಶ ಎಷ್ಟು ಭಾಗಗಳಾಗಿವೆ?

ಶ್ರೀ ಡಿ. ಆರ್. ಕರಿಗೌಡ.—48 ಭಾಗಗಳಾಗಿವೆ. ನಮ್ಮ ದೇಶದಲ್ಲಿರುವ 31 ಕೋಟಿಗೆ 31 ಪ್ರಾಂತಗಳಾಗಲಿ, ಯಾರು ಬೇಡವೆಂದು ಹೇಳುತ್ತಾರೆ? ನಮ್ಮ ಯೋಗ್ಯತೆಯಂತೆ ಎಷ್ಟು ಹೊರೆಯನ್ನು ಹೊರಬಲ್ಲವೋ ಅಷ್ಟನ್ನೂ ಹೊರೋಣ. ನಮ್ಮ ದೇಶವನ್ನು ಚೆನ್ನಾಗಿ ಮುಂದಕ್ಕೆ ತರುವುದಕ್ಕೆ ಇನ್ನು 10 ವರ್ಷಗಳ ಕಾಲವಾದರೂ ಬೇಕು. ಆದ್ದರಿಂದ ಮೈಸೂರು ದೇಶ ಇದ್ದಹಾಗೆಯೇ ಇರಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

Mr. SPEAKER.—Now the House will rise for lunch and meet at 10-30 A.M.

The House adjourned for Lunch at Two Minutes past Ten of the Clock and re-assembled at Thirty Minutes past Ten of the Clock.

[MR. SPEAKER in the Chair.]

ಶ್ರೀ ಪಿ. ಆರ್. ರಾಮಯ್ಯ.—ಸ್ವಾಮಿ, ಈ ಸಮಸ್ಯೆಯಮೇಲೆ ಸುಮಾರು ಐದು ದಿನಗಳಿಗಿಂತ ಜಾಸ್ತಿಯಾಗಿ ಚರ್ಚೆಯಾಗಿದೆ. ಇವತ್ತಿನ ದಿವಸ ಕೆಲವು ಸದಸ್ಯರು ತೋರಿಸಿರತಕ್ಕ ಕೆಲವು ಸಂಶಯಗಳಿಗೆ ಪರಿಹಾರ ರೂಪವಾಗಿ ಕೆಲವು ಮಾತುಗಳನ್ನು ಹೇಳಬೇಕೆಂದು ಇದ್ದೇನೆ. ಮೊಟ್ಟಮೊದಲನೆಯದಾಗಿ ಕರ್ಣಾಟಕ ಪ್ರಾಂತ ನಿರ್ಮಾಣದ ಸಮಸ್ಯೆ ಪ್ರತ್ಯೇಕವಾದುದಲ್ಲ. This is not an isolated problem. ಇವತ್ತಿನ ದಿವಸ ಸ್ವಾತಂತ್ರ್ಯ ಬಂದಮೇಲೆ ಭಾರತದ ನವ ನಿರ್ಮಾಣದಲ್ಲಿ ಪ್ರಾಂತಗಳ ಪುನರ್ವಿಂಗಡನಾ ಸಮಸ್ಯೆ ಸಂಬಂಧವಾಗಿ ಈ ಸಮಸ್ಯೆ ನಮ್ಮ ಕರ್ಣಾಟಕಕ್ಕೂ ನಮ್ಮ ಮೈಸೂರಿಗೂ ಸಂಬಂಧಿಸಿದೆ. ಆದ್ದರಿಂದ ನಾವು ಈ ಸಮಸ್ಯೆಯನ್ನು ಪರಿಶೀಲಿಸುವಾಗ ಒಂದು ಸಮಗ್ರವಾದ ದೃಷ್ಟಿಯಿಂದ ಪರಿಶೀಲಿಸಬೇಕು. We should take a comprehensive and perspective view of this problem. ನಾವು ಈ ಸಮಸ್ಯೆಯನ್ನು ಪರಿಶೀಲಿಸುವಾಗ ಇದರ ಹಿನ್ನೆಲೆ ಮತ್ತು ಮುಂದೆ ಆಗತಕ್ಕ ಪರಿಣಾಮ ಅವನ್ನೂ ಕೂಡ ನೋಡಬೇಕಾಗುತ್ತದೆ. ನಮ್ಮ ಇಂಡಿಯಾದ ರಾಜ್ಯಾಂಗ ರಚನೆಯಲ್ಲಿ ಹೀಗೆ ಹೇಳಿದ್ದಾರೆ.

> "We the people of India having solemnly resolved to constitute India into a sovereign democratic republic and to secure to all its citizens justice, social, economic and political, liberty of thought, expression, belief, faith and worship, equality of status and opportunity and to promote among them all fraternity, assuring the dignity of the individual and the unity of the nation. . . ."

ಇವತ್ತಿನ ದಿವಸ States' Reorganisation Commissionರವರು ತೆಗೆದುಕೊಂಡಿರತಕ್ಕಂಥ ಈ ದೊಡ್ಡ ಸಮಸ್ಯೆ ಏನೆಂದರೆ—

> "equality of status and of opportunity and to promote among them all fraternity, assuring the dignity of the individual and the unity of the nation."

ಎಲ್ಲರಿಗೂ ಸಮಾನವಾದಂಥ ಅವಕಾಶ ಮತ್ತು ಅಂತಸ್ತು, ವ್ಯಕ್ತಿಯ ಘನತೆ ಮತ್ತು ರಾಷ್ಟ್ರದ ಐಕಮತ್ಯ ಇವನ್ನು ಸಾಧಿಸತಕ್ಕಂಥಾದ್ದೇ ಇವತ್ತು ಈ ಪ್ರಾಂತಗಳ ಪುನರ್ವಿಂಗಡನೆಯ ಕಮಿಷನ್‌ರವರ ಮುಖ್ಯವಾದ ಉದ್ದೇಶ.

ಆಮೇಲೆ ಇದನ್ನು ಹೇಗೆ ಸಾಧಿಸಬೇಕು ಎನ್ನುವುದಕ್ಕೆ Constitution of India Part I, Article 3ರಲ್ಲಿ ಹೀಗೆ ಹೇಳಿದ್ದಾರೆ.

> "Parliament may by law—
>
> (*a*) from a new State by separation of territory from any State or by uniting two or more States or parts of States or by uniting any territorry to a part of any State;
>
> (*b*) increase the area of any State;

(ಶ್ರೀ ಪಿ. ಆರ್. ರಾಮಯ್ಯ.)

(*c*) diminish the area of any State;

(*d*) alter the boundaries of any State;

(*e*) alter the name of any State. . . .

Sri A. V. NARASIMHA REDDY (Bangalore-South).—It is a thing that is in existence. The whole thing is on record. There is no need to refer this here,

Mr. SPEAKER.—He can only refer to it.

Sri P. R. RAMAIYA.—I will only refer to it.

ನಮ್ಮ ಮಾನ್ಯ ಸ್ನೇಹಿತರು ಶ್ರೀ ನರಸಿಂಹ ರೆಡ್ಡಿಯವರು ಏತಕ್ಕೆ ನಾನು ಅದನ್ನು ಹೇಳುತ್ತಿದ್ದೇನೆ ಎಂಬುದನ್ನು ತೆರೆದ ಹೃದಯದಿಂದ ನೋಡಬೇಕು. ಮೈಸೂರು ದೊಡ್ಡದಾಗಿ ವಿಕಾಸ ಹೊಂದುವ ಆಲೋಚನೆಯನ್ನು ನಾವು ಮೈಸೂರಿನಲ್ಲಿ ವಿಚಾರಮಾಡುತ್ತಾ ಇದ್ದರೂಕೂಡ, ಈ ಸಮಸ್ಯೆಯನ್ನು ಇತರ ಶಾಸನ ಸಭೆಗಳೂ ಕೂಡ ಅಂದರೆ ಬೊಂಬಾಯಿ ಶಾಸನ ಸಭೆಯ ವರು, ಮದ್ರಾಸ್ ಶಾಸನ ಸಭೆಯವರು, ಹೈದರಾಬಾದ್ ಶಾಸನ ಸಭೆಯವರು, ಎಲ್ಲರೂ ಕೂಡ ಆಲೋಚನೆ ಮಾಡಲೇಬೇಕಾಗುತ್ತದೆ. ಒಂದುವೇಳೆ ಕರ್ಣಾಟಕ ಪ್ರಾಂತವಾಗಲು ಒಪ್ಪಿ ಒಂದು ಬಿಲ್ ತಯಾರಾದರೆ ಆಗ ಆಂಧ್ರ ಸ್ಟೇಟ್ ಏರ್ಪಾಟಾದ ಕಾಲದಲ್ಲಿ ಯಾವ ರೀತಿ ಪಾರ್ಲಿಮೆಂಟ್‌ನಲ್ಲಿ ಪರಿಶೀಲನೆಯಾಯಿತೋ, ಮದ್ರಾಸ್ ಮತ್ತು ಹೈದರಾಬಾದ್ ಅಸೆಂಬ್ಲಿಗಳಲ್ಲಿ ಯಾವ ರೀತಿ ಪರಿಶೀಲನೆಯಾಯಿತೋ, ಅದೇ ರೀತಿ ಈ ಸಮಸ್ಯೆಯನ್ನು ಅಖೈರಾಗಿ ತೀರ್ಮಾನ ಮಾಡಬೇಕಾದರೆ ಪುನಃ ಅದು ಈ ಸಭೆಗೆ ಬಂದೇ ಬರುತ್ತದೆ. ಆದ್ದರಿಂದ ಪ್ರಾಂತಗಳ ವಿಂಗಡನೆಗಳ ಒಂದು ನಕ್ಷೆಯನ್ನು ಚಿತ್ರಿಸಿ ಅದರಲ್ಲಿ ಮೈಸೂರು ಯಾವ ಸ್ವರೂಪವನ್ನು ತಾಳುತ್ತದೆ ಎಂಬುದು ಮುಂದೆ ನಿರ್ಧಾರವಾಗುವಾಗ, ಮೈಸೂರಿನವರು, ಬೊಂಬಾಯಿನವರು ಮತ್ತು ಇತರರು ವಿಮರ್ಶೆ ಮಾಡಬೇಕಾಗುತ್ತದೆ. ಇದರಲ್ಲಿ "ascertain the views of the Legislatures of the State" ಎಂದು ಹೇಳಿದ್ದಾರೆ. ಅಂದರೆ ಇತರರ ಅಭಿಪ್ರಾಯಗಳನ್ನು ತೆಗೆದುಕೊಳ್ಳಬೇಕೆಂದು ಇದೆ. ಪ್ರಾಂತಗಳ ಪುನರ್ವಿಂಗಡನೆಯ ಅಖೈರು ಜವಾಬ್ದಾರಿ ಇಂಡಿಯಾ ಸರ್ಕಾರದವರದು. ಇಂಡಿಯಾ ಸರ್ಕಾರದವರು ಈ ರೀತಿಯಾಗಿ ಪ್ರಾಂತಗಳ ಪುನರ್ವಿಂಗಡನೆಯಾಗಬೇಕು ಎಂದು ಮಾಡಿ ಅದನ್ನು ನಮ್ಮ ಮುಂದೆ ಇಟ್ಟಾಗ ಅದು ಸರಿಯೋ ಅಥವಾ ಸರಿಯಲ್ಲವೋ ಎಂದು ನಾವು ಹೇಳಬಹುದು. ಆದರೆ ಈ ವಿಚಾರದಲ್ಲಿ ಅಖೈರು ತೀರ್ಮಾನ ಅವರಿಗೇ ಸೇರಿದ್ದು ಆಗಿದೆ. ಆದರೂ ಕೂಡ ಅವರು democratic ರೀತಿಯಾಗಿ ಅದನ್ನು ವಿಮರ್ಶೆ ಮಾಡತಕ್ಕವರಾಗಿದ್ದಾರೆ. ಆದ್ದರಿಂದ ಈ ಸಮಸ್ಯೆಯನ್ನು ನಾವು ಆಲೋಚನೆ ಮಾಡಬೇಕಾದರೆ ಅಖಿಲ ಭಾರತದ ದೃಷ್ಟಿಯಿಂದ ನೋಡಬೇಕು. ನಮ್ಮ ಮಾನ್ಯ ಸ್ನೇಹಿತರನೇಕರು ಮೊದಲನೆಯದಾಗಿ ಒಂದು ಸಂದೇಹವನ್ನು ತೋರ್ಪಡಿಸಿದರು. ನಾವು ಪ್ರಾರಂಭದೆಸೆಯಲ್ಲಿರುವಾಗ ಮೈಸೂರಿನಲ್ಲಿ ಕರ್ಣಾಟಕದ ಇತರ ಭಾಗಗಳನ್ನೂ ಅಂದರೆ ಬೊಂಬಾಯಿನಲ್ಲಿರುವ ಕರ್ಣಾಟಕ ಡಿಸ್ಟ್ರಿಕ್ಟುಗಳನ್ನು ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆ ಮತ್ತು ಇತರ ಭಾಗಗಳನ್ನು ಸೇರಿಸಿಕೊಂಡರೆ ನಮ್ಮ ಹಣಕಾಸಿನ ಸ್ಥಿತಿ ಅಷ್ಟು ತೃಪ್ತಿಕರವಾಗಿರುವುದಿಲ್ಲ; ಈಗಲೇ ನಾವು ನಮ್ಮ ಪ್ರಾಂತದಲ್ಲಿರತಕ್ಕ ಜನಗಳ ಆಶೋತ್ತರಗಳನ್ನು ಈಡೇರಿಸಲು ಸಮರ್ಥರಾಗಿಲ್ಲ, ಆದ್ದರಿಂದ ಹಾಗೆ ಸೇರಿಸಿಕೊಳ್ಳಲು ನಮ್ಮ ಹಣಕಾಸಿನ ಸಾಮರ್ಥ್ಯ ಸಾಲದು ಎನ್ನುವ ಶಂಕೆಯನ್ನು ನಮ್ಮ ಶ್ರೀ ನರಸಿಂಹರೆಡ್ಡಿಯವರು ತೋರ್ಪಡಿಸಿದರು. ನಾವು ಈ ಪ್ರಾಂತವನ್ನು ನಿರ್ಮಾಣ ಮಾಡಲು ಒಪ್ಪಿಕೊಂಡರೆ ನಮ್ಮ ತಲೆಮೇಲೆ ಹೆಚ್ಚಿಗೆ ಭಾರ ಬೀಳುತ್ತದೆ ಎನ್ನುವ ಸಂದೇಹ ಬರುವುದು ಸಹಜವಾಗಿದೆ. ಆದರೆ ಇದಕ್ಕೆ ಪರಿಹಾರ ರೂಪವಾಗಿ ನಾನು ಹೇಳಬೇಕಾಗುತ್ತದೆ. ಇವತ್ತಿನ ಹಣಕಾಸಿನ ಜವಾಬ್ದಾರಿ ನಮ್ಮ ಮೇಲೆ ಇದ್ದರೂಕೂಡ ಪಂಡಿತ್ ಜವಹರ್‌ಲಾಲ್‌ರವರು ಹೇಳಿರತಕ್ಕ ಒಂದು ಮಾತನ್ನು ನಾನು ಈಗ ಹೇಳುತ್ತೇನೆ.

The Prime Minister referring to the appointment of the States Re-organisation Commission in Parliament said:

> "In considering the re-organisation of the States there are, however, other important factors which are also to be borne in mind. The first essential consideration is the preservation and strengthening of the unity and the security of India. Financial, economic and administrative considerations are also equally important not only from the point of view of each State, but of the whole Nation."

ಆದ್ದರಿಂದ ಇದನ್ನು ಒಂದು ಸಂಸ್ಥಾನದ ದೃಷ್ಟಿಯಿಂದ ನೋಡದೆ ಅಖಿಲಭಾರತ ದೃಷ್ಟಿಯಿಂದ ನೋಡಬೇಕಾಗಿದೆ. ಇವತ್ತಿನ ದಿವಸ ಅಖಿಲಭಾರತದವರು ಪ್ರಾಂತಗಳನ್ನು ಈ ರೀತಿಯಾಗಿ ಪುನರ್ವಿಂಗಡನೆ ಮಾಡಿದರೆ, ಹೆಚ್ಚಿಗೆ ಸಂಪತ್ತು ಅಭಿವೃದ್ಧಿಯಾಗುತ್ತದೆ, ಹೆಚ್ಚಿಗೆ ಅನುಕೂಲಗಳು ಉಂಟಾಗುತ್ತವೆ ಎಂದು ಅವರಿಗೆ ತೋರಿದರೆ, ಅಖಿಲಭಾರತಕ್ಕೆ ಇದರಿಂದ ಲಾಭವಾಗುತ್ತದೆ ಎಂದು ತೋರಿದರೆ, ಆಗ Not only from the point of view of each State but of the whole Nation ದೃಷ್ಟಿಯಿಂದ, ಇದನ್ನು ಮಾಡಬಹುದು.

ಇದಲ್ಲದೆ, ನಾನು ಒಂದು ವಿಷಯವನ್ನು ನಮ್ಮ ಸ್ನೇಹಿತರಿಗೆ ವಿನಯಪೂರ್ವಕವಾಗಿ ಹೇಳುತ್ತೇನೆ. ಇವತ್ತಿನ ದಿವಸ ಸ್ವಾತಂತ್ರ್ಯ ಬಂದಮೇಲೆ ಅಂದರೆ, 1947ರಿಂದ 8 ವರ್ಷ ನಾವು ಮೈಸೂರಿನಲ್ಲಿ ರಾಜ್ಯಭಾರ ಮಾಡಿಕೊಂಡು ಬಂದಿದ್ದೇವೆ; ಎಷ್ಟು ಬಾಬುಗಳಿಗೆ ನಾವು ಇಂಡಿಯಾ ಸರ್ಕಾರದವರಿಂದ ಹಣ ತೆಗೆದುಕೊಂಡಿಲ್ಲ? ಲೋನ್, ಸಬ್ಸಿಡಿಗಳೆಂದು ಎಷ್ಟು ಕೇಳಿಲ್ಲ? ಪ್ರತಿಯೊಂದು ಭಾಗಕ್ಕೂ ಅವರು ಭಾಗಿಯಾಗಬೇಕು. ಪ್ರತಿಯೊಂದು ಯೋಜನೆ ನಡೆಸುವುದಕ್ಕೂ ಅವರು ನಮಗೆ $\frac{1}{4}$ ಭಾಗಕೊಡಿ, $\frac{3}{4}$ ಭಾಗ ಕೊಡುತ್ತೇವೆಂದು ಮುಂದೆ ಬಂದಿದ್ದಾರೆ. ಹೀಗಿರು

ಹಾಗ ಈವತ್ತಿನದಿವಸ ಮೈಸೂರಿನವರು ಅಖಿಲ ಕರ್ಣಾಟಕ ಮಾಡಿಕೊಂಡಾಕ್ಷಣ ಎಲ್ಲಾ ಹೊರೆಯೂ ನಮ್ಮ ಮೇಲೆಯೇ ಬೀಳುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಇಂಡಿಯಾ ಸರ್ಕಾರದವರು ಇಡೀದೇಶದ ಅಭಿವೃದ್ಧಿಯ ಸಂಪೂರ್ಣ ಭಾರವನ್ನು ವಹಿಸಿಕೊಂಡಿದ್ದಾರೆ. ಇವೊತ್ತು ಒಂದು ಚಿಕ್ಕಹಳ್ಳಿಯಲ್ಲಿ ಕಷ್ಟಬಂದರೂ ಅದರ ವಿಚಾರವಾಗಿ ಪಾರ್ಲಿಮೆಂಟಿನಲ್ಲಿ ಪ್ರಶ್ನೆಗಳು ಬರುತ್ತವೆ. ಇಂದಿನ ನಮ್ಮ ರಾಜ್ಯಭಾರ ಯಾವರೀತಿಯಿದೆಯೆಂದರೆ ಪ್ರತಿಯೊಂದು ಕಡೆಯಲ್ಲೂ ಓಟು ಮಾಡುತ್ತೇವೆ. ಆದ್ದರಿಂದ ಇಂಡಿಯಾದೇಶದ ಯಾವ ಮೂಲೆಯಲ್ಲೇ ಆಗಲಿ ಏನೇ ತೊಂದರೆ ಸಂಭವಿಸಿದರೂ ಅದನ್ನು ಪಾರ್ಲಿಮೆಂಟಿನಲ್ಲಿ ಚರ್ಚೆಗೆ ತರಬಹುದು. ಆದಕಾರಣ ಎಲ್ಲವೂ ನಮ್ಮ ತಲೆಯ ಮೇಲೆಯೇ ಬೀಳುತ್ತದೆಂದು ನಾವು ಹೆದರಬೇಕಾಗಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ನಮಗೆ ಕೇಂದ್ರ ಸರ್ಕಾರದವರು ಹಣದ grants ಕೊಡುತ್ತಿರುವುದು, ಅವರು ನಮ್ಮಲ್ಲಿದ್ದಂಥ ರೈಲ್ವೆಗಳು ಮತ್ತು ಅದಕ್ಕೆ ಸಂಬಂಧಪಟ್ಟಂಥ ಆದಾಯದ ಇಲಾಖೆಗಳನ್ನು ವಹಿಸಿಕೊಂಡಿರುವುದರಿಂದ ಒಂದು agreement ಪ್ರಕಾರ ಕೊಡುತ್ತಿದ್ದಾರೆಯೇ ಹೊರತು ಸುಮ್ಮನೆ ಗ್ರ್ಯಾಂಟ್‌ಗಳನ್ನು ಕೊಡುತ್ತಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಶ್ರೀ ನರಸಿಂಹರೆಡ್ಡಿಯವರು ಇನ್ನೂ ಯುವಕರು. ಇನ್ನೂ ಪ್ರಪಂಚ ವ್ಯವಹಾರ, ಇತಿಹಾಸ ತಿಳಿದುಕೊಂಡಿದ್ದರೆ ಅವರಿಗೆ ಗೊತ್ತಾಗುತ್ತಿತ್ತು. ಇವತ್ತಿನ ದಿವಸ ಇಂಡಿಯಾ ದೇಶ ಒಂದು ಅಖಂಡ ರಾಷ್ಟ್ರ. ಮೈಸೂರಿನವರು ಮದ್ರಾಸಿನವರು, ಬೊಂಬಾಯಿನವರು, ಯಾರೇ ಆಗಲಿ ಎಲ್ಲರೂ ಭಾರತೀಯರು. ಆದ್ದರಿಂದ ನಾವು ಕೆಲವು ಕೆಲವು ಸಮಸ್ಯೆಗಳನ್ನು ಅಖಿಲಭಾರತ ದೃಷ್ಟಿಯಿಂದ ನೋಡುತ್ತಿದ್ದೇವೆ. ರೈಲ್ವೆಯನ್ನು ಕೇಂದ್ರ ಸರ್ಕಾರದವರು ವಹಿಸಿಕೊಂಡಿರುವುದಕ್ಕೆ ಕಾರಣವೇನೆಂದರೆ ಕೆಲಸ ಕಾರ್ಯಗಳು ಬೇಗ ನಡೆಯುವುದಕ್ಕೆ ಅನುಕೂಲವಾಗುತ್ತದೆ ಎಂದು ಅಷ್ಟೇಹೊರತು agreement ಮೇಲೆ ಇದನ್ನೆಲ್ಲಾ ನಡೆಸುತ್ತಿಲ್ಲ. ನಾವೆಲ್ಲಾ ಇಂಡಿಯಾ ಸರ್ಕಾರದವರೊಂದಿಗೆ agreement ಮಾಡಿಕೊಂಡಿದ್ದೇವೆಂದು ಹೇಳಕೂಡದು. ನಾವೆಲ್ಲಾ ಒಂದೇ, ಒಂದೇ ರಾಷ್ಟ್ರದವರು. ಇಂಡಿಯಾ ದೇಶದ ಪಾರ್ಲಿಮೆಂಟಿಗೆ ಅಖಿಲಭಾರತದ ಯೋಗಕ್ಷೇಮವನ್ನು ನೋಡತಕ್ಕ ಜವಾಬ್ದಾರಿಯಿದೆ. ಆದ್ದರಿಂದ ಪ್ರಾಂತ್ಯಗಳ ಪುನರ್ವಿಂಗಡಣೆಯ ಸಮಸ್ಯೆಯನ್ನು ಎಲ್ಲರ ಯೋಗಕ್ಷೇಮಕ್ಕಾಗಿ ಮಾಡತಕ್ಕದ್ದಾಗಿದೆ.

ಇನ್ನೊಂದೇನೆಂದರೆ, ನಾವು ಈ ಸಮಸ್ಯೆಯನ್ನು ಇಂದು ಕೇವಲ ಭಾಷಾದೃಷ್ಟಿಯಿಂದ ನೋಡುತ್ತಿದ್ದೇವೆ. ಈ ವಿಷಯದಲ್ಲಿ ಸ್ವಲ್ಪ ಸಂದೇಹಕ್ಕೆ ಆಸ್ಪದವಿದೆಯೆಂದು ಒಪ್ಪುತ್ತೇನೆ. ಭಾಷೆ ಮುಖ್ಯವಾದ್ದು ನಿಜ. ಆದರೆ ನನ್ನ ವಿಷಯವನ್ನೇ ಹೇಳುವುದಾದರೆ, ನಾನು ಮನೆಯಲ್ಲಿ ಮಾತನಾಡುವುದು ತಮಿಳು, ಹೊರಗೆ ಮಾತನಾಡುವುದು ಕನ್ನಡ; ತೆಲುಗನ್ನು ನಾನು ಚೆನ್ನಾಗಿ ಓದಬಲ್ಲೆ, ಆಂಧ್ರನಾಟಕ ನೋಡಿ ಸಂತೋಷ ಪಡಬಲ್ಲೆ, ಆಂಧ್ರ ಸಂಪರ್ಕವೂ ಹೆಚ್ಚಾಗಿದೆ. ಆದರೂ ಕೂಡ ಎಲ್ಲ ಭಾಷೆಗಳೂ ನನಗೆ ಒಂದೇ ಆಗಿವೆ. ಕನ್ನಡ ಆದರೇನು, ತೆಲುಗು ಆದರೇನು, ತಮಿಳಾದರೇನು, ಭಾಷೆಯ ಬೆಳವಣಿಗೆ ಹೇಗೆ ಆಗುತ್ತದೆಂಬುದನ್ನೂ ನೋಡಿ. 1903ನೆಯ ಇಸವಿಯಲ್ಲಿ ನನ್ನ cousin ಒಬ್ಬರು ನನ್ನನ್ನು ಗೌರಿಬಿದನೂರಿಗೆ ಕರೆದುಕೊಂಡು ಹೋದರು. ಒಂದು ದಿನ ಬಜಾರ್ ಬೀದಿಗೆ ಹೋಗಿ ಕೊಬ್ಬರಿ ಎಣ್ಣೆ ತರಲು ನಾನು ಹೋದೆ. ಕೊಬ್ಬರಿ ಎಣ್ಣೆ ಕೊಡಿ ಎಂದು ನಾನು ಅಂಗಡಿಯವನನ್ನು ಕೇಳಿದೆ. ಅವರಗೆ ಯಾರಿಗೂ ನನ್ನ ಭಾಷೆಯೇ ಅರ್ಥವಾಗಲಿಲ್ಲ. ಕೊನೆಗೆ ಕೊಬ್ಬರಿ ನೂನ ಎಂದು ಹೇಳಿಯೇ ಎಣ್ಣೆ ತೆಗೆದುಕೊಂಡು ಹೋಗಬೇಕಾಯಿತು. ಅಂಥ ಊರನ್ನು ಇಂದು ಹೋಗಿ ನೋಡಿ. ಎಲ್ಲರಿಗೂ ಈಗ ಅಲ್ಲಿ ಕನ್ನಡ ಚೆನ್ನಾಗಿ ಬರುತ್ತದೆ. ಭಾಷೆ ಈ ರೀತಿ ಬೆಳವಣಿಗೆ ಹೊಂದುತ್ತದೆ. ಆದ್ದರಿಂದ ದಕ್ಷಿಣ ಭಾರತದಲ್ಲಿ ಭಾಷೆಗಳ ಗೊಂದಲ ಇಲ್ಲವೇಇಲ್ಲ. ಪಾಕಿಸ್ಥಾನ್ ಮತ್ತು ಹಿಂದೂಸ್ಥಾನಗಳ ಮಧ್ಯೆ Two-Nation Theory ಬಂದು Transfer of population ಆಗಬೇಕೆಂದು ಹೇಳಿದಹಾಗೆ, ಇಲ್ಲಿ ಯಾವುದೇರೀತಿಯ ವಿಭಾಗ ಮಾಡಿದರೂ transfer of population ಮಾಡಬೇಕಾಗುವ ಅವಶ್ಯಕತೆಯೇನೂ ಇಲ್ಲ. ಈ ದೃಷ್ಟಿಯಿಂದ ಶೇಷಾದ್ರಿ ಕಮಿಟಿಯವರು 19ನೆಯ ಪುಟದಲ್ಲಿ ಒಂದು ಮಾತು ಹೇಳಿರುವುದರ ಅರ್ಥವನ್ನು ನೋಡಬೇಕು. ಆ ಮಹನೀಯರ ವಿಷಯದಲ್ಲಿ ನನಗೆ ಬಹಳ ಗೌರವವಿದೆ ಅವರೆಲ್ಲರೂ ನನ್ನ ಸ್ನೇಹಿತರು. ಎಲ್ಲರೂ ಮಾನ್ಯರು. ಏನಿದ್ದರೂ ಅವರ ಬರವಣಿಗೆಯಿಂದ ಒಂದು ರೀತಿಯ ಅನುಮಾನಕ್ಕಾಸ್ಪದವಾಗಿದೆಯೋ ಎಂದೆನಿಸುತ್ತದೆ. ಅವರು ಹೇಳಿದ್ದಾರೆ:

> "From the foregoing survey, it is obvious to us that however carefully boundaries may be drawn, the presence of linguistic minorities cannot be eliminated unless we contemplate an exchange of population on a linguistic basis. It appears to us that over-emphasis of linguistic considerations raises more problems than it is supposed to solve."

ಇಂಥ ಒಂದು presumptionನ್ನಿನಮೇಲೆ ಅವರ statement ಕೊಡುವುದಕ್ಕೆ ಅವಕಾಶವೇ ಇರಲಿಲ್ಲ. Transfer of population ಮಾಡಬೇಕೆಂದು ಯಾರೂ ಹೇಳಿರಲಿಲ್ಲ. ಏನೋ ಪಾಕಿಸ್ಥಾನದ ಮನೋಭಾವವನ್ನು ತಾಳಿ ಅವರು ಹೀಗೆ ಹೇಳಿದ್ದಾರೆ. ಈ ರೀತಿಯಾದ ಬರವಣಿಗೆಯಿಂದ ಅವರು ಬಹಳ ಮಟ್ಟಿಗೆ ತೊಂದರೆಯನ್ನುಂಟುಮಾಡಿದ್ದಾರೆ. ಇದೇ ಒಂದು ವಾಕ್ಯವನ್ನು ತೆಗೆದುಕೊಂಡು ಅನೇಕರು ಭೀತಿಯನ್ನು ಪ್ರದರ್ಶಿಸಿದ್ದಾರೆ. Transfer of populationನ್ನಿನ ಪ್ರಶ್ನೆಯೇ ಅಲ್ಲ. ಹಾಗಿರುವಾಗ ಏಕೆ ಅವರಿಗೆ ಇಂಥ ಕೆಟ್ಟಕನಸು ಬಂತೋ ನನಗೆ ಗೊತ್ತಿಲ್ಲ. ಈಗ ನಮ್ಮಲ್ಲಿ ಕರ್ಣಾಟಕ ಪ್ರಾಂತ್ಯವಾಗಬೇಕಾದರೆ transfer of population ಮಾಡಬೇಕಾಗಿರುವುದರ ಅವಶ್ಯಕತೆಯೆಲ್ಲಿ? ಅದ್ದರಿಂದ ಈ ಸಮಸ್ಯೆಯನ್ನು ಬಗೆ ಹರಿಸುವ ಕಾಲದಲ್ಲಿ ಆ ರೀತಿಯಾದ ಯಾವ ಭೀತಿಯನ್ನೂ ನಾವು ಪ್ರಕಟಿಸಬೇಕಾಗಿಲ್ಲ.

ಮತ್ತೊಂದು ವಿಷಯ ಹೇಳಿದರು. ನನ್ನ ಪರಮ ಮಿತ್ರರಾದ ಶ್ರೀಮಾನ್ ವೀರಣ್ಣಗೌಡರು ಆಡಿದ ಮಾತುಗಳನ್ನು ನಾನು ಬಹಳ ಕುತೂಹಲದಿಂದ ಕೇಳಿದೆ. "ಚಿತ್ರಗುಪ್ತ" ಎಂಬ ಪತ್ರಿಕೆಯ ಸಂಪಾದಕರಾದ ಅವರೇ ಒಂದು ಲೇಖನದಲ್ಲಿ ಕರ್ಣಾಟಕ ಏಕೀಕರಣವಾಗಬೇಕೆಂದು ಬಹಳವಾಗಿ ಬರೆದಿರುವುದನ್ನು

(ಶ್ರೀ ಪಿ. ಆರ್. ರಾಮಯ್ಯ.)

ನಾನು ನೋಡಿದ್ದೇನೆ. ಕನ್ನಡಿಗರೆಲ್ಲ ಸೇರಿ ಒಂದು ಪ್ರಾಂತ್ಯವಾಗಬೇಕೆಂದು ಅವರೂ ಕೂಡ ವಾದಿಸಿದ್ದಾರೆ. ಅಂಥವರು ಮೊನ್ನೆ ದಿವಸ ಮಾತನಾಡುವಾಗ ಮೈಸೂರೇ ಬೇರೆ ಇರಲಿ, ಇತರ ಕನ್ನಡಿಗರೇ ಬೇಕಾದರೆ ಬೇರೆ ಕರ್ಣಾಟಕ ಪ್ರಾಂತ್ಯ ಮಾಡಿಕೊಳ್ಳಲಿ ಎಂದು ಹೇಳಿದ್ದಾರಲ್ಲಾ! ಇದನ್ನು ನೋಡಿದರೆ, "ಕಿತನಾ ಬದಲ್ ಗಯಾ ಇನ್‌ಸಾನ್" ಎಂಬ ಸಿನಿಮಾ ಹಾಡು ನನಗೆ ಜ್ಞಾಪಕಕ್ಕೆ ಬರುತ್ತದೆ. ಸಂದರ್ಭಾನುಸಾರ ಮನುಷ್ಯ ಹೇಗೆ ಬದಲಾಯಿಸುತ್ತಾನೆಂಬುದು ಇದರಿಂದ ವ್ಯಕ್ತವಾಗುತ್ತದೆ. ಅವರೇ ಬೇರೆ ಪ್ರಾಂತ್ಯ ಮಾಡಿಕೊಳ್ಳಲೆಂದಾದರೆ ನಾವೇಕೆ ಅದನ್ನಿಲ್ಲಿ ಚರ್ಚೆ ಮಾಡಬೇಕು? ಅವರು ಬರುತ್ತೇವೆಂದು ಹೇಳುವುದರಿಂದ, ಅವರನ್ನು ಬನ್ನಿ ಎಂದು ಹೇಳುವುದಕ್ಕೆ ಅಥವಾ ಬೇಡ ಎಂದು ಹೇಳುವುದಕ್ಕೆ ನಾವಿಲ್ಲಿ ಸೇರಿದ್ದೇವೆ, ಅಷ್ಟೆ. ಅವರು ಬೇರೆ ಪ್ರಾಂತ್ಯ ಮಾಡಿಕೊಳ್ಳುವುದಕ್ಕೆ ನಮ್ಮ ಅನುಮತಿ ಏಕಿತ್ತು?

ಇನ್ನೊಂದೇನೆಂದರೆ, ಈ ಸಮಸ್ಯೆಯನ್ನು ಬಗೆಹರಿಸುವುದು ನಮ್ಮ ಕೈಯಲ್ಲಿಲ್ಲ. ಒಂದುವೇಳೆ ದುರದೃಷ್ಟವಶಾತ್ ಇಂಡಿಯಾ ಸರ್ಕಾರದವರು ಮಂಗಳೂರು, ಕೊಡಗು, ಧಾರವಾರ, ಬೀಜಾಪುರ, ಬೆಳಗಾಂ ಮುಂತಾದ undisputed ಆಗಿರುವ ಪ್ರದೇಶಗಳು ಯಾವಯಾವವು ಇವೆಯೋ ಅವೆಲ್ಲವನ್ನೂ ಸೇರಿಸಿ ಕರ್ಣಾಟಕ ಪ್ರಾಂತ್ಯ ಮಾಡಬೇಕೆಂದು ಹೇಳಿದರೆ, ಆಗ ಅವರು, ಅಂದು ಮೈಸೂರಿಗೆ ನಾವು ಬರುತ್ತೇವೆಂದು ಹೇಳಿದರೆ ಬೇಡ ಎಂದು ಹೇಳಿದರು, ಈಗ ತಾವೇ ಒಟ್ಟಿಗೆ ಸೇರಬೇಕಾಗಿ ಬಂತು ಎಂದರೆ ಒಂದು ರೀತಿಯ ಮನಃಕಷಾಯ ಬರುತ್ತದೆ. ಆದ್ದರಿಂದ ಮೈಸೂರಿಗೆ ಹೊರಗಿನವರು ಈಗ ಬರಬೇಕೇ ಬೇಡವೇ ಎಂಬ ಪ್ರಶ್ನೆಯನ್ನು ಸ್ವಲ್ಪ ದೀರ್ಘವಾಗಿ ಆಲೋಚನೆ ಮಾಡಬೇಕಾಗುತ್ತದೆ. ಶ್ರೀಮಾನ್ ವೀರಣ್ಣಗೌಡರು ಎರಡು ಪ್ರಾಂತ್ಯ ಮಾಡಿಕೊಳ್ಳಲೆಂದು ಹೇಳಿದರು. ಇನ್ನು ಕೆಲವರು ಮೂರು ಕರ್ಣಾಟಕ, ನಾಲ್ಕು ಕರ್ಣಾಟಕಗಳಾಗಲೆಂದು ಹೇಳಿದರು. . . .

ಒಬ್ಬ ಸದಸ್ಯರು.—ನಾಲ್ಕು ಕರ್ಣಾಟಕಗಳಾಗಲೆಂದು ಯಾರೂ ಹೇಳಲಿಲ್ಲ!

ಶ್ರೀ ಪಿ. ಆರ್. ರಾಮಯ್ಯ.—ಮೈಸೂರಿನ ಇತಿಹಾಸವನ್ನು ನೋಡುವುದಾದರೆ, 1899ರಲ್ಲಿ ಮೈಸೂರಿನ ವಿಸ್ತೀರ್ಣ ಇಷ್ಟಿತ್ತೇ! ಮೈಸೂರಿನ ಸುತ್ತಮುತ್ತಣ ಕೆಲವು ಪ್ರದೇಶಗಳು ಮಾತ್ರ ಮೈಸೂರಿಗೆ ಸೇರಿತ್ತು. ರಾಜಒಡೆಯರ ಕಾಲದಲ್ಲಿ ಶ್ರೀರಂಗಪಟ್ಟಣ ಸೇರಿತು. ಅದಕ್ಕೆ ಮುಂಚೆ ಹದಿನಾಡು ಗ್ರಾಮ ಮತ್ತು ಮೈಸೂರು—ಇವಿಷ್ಟೇ ಮೈಸೂರಾಗಿತ್ತು. ಟೀಪು ಮತ್ತು ಹೈದರ್ ಬಂದಮೇಲೆ ಮೈಸೂರು ವಿಸ್ತಾರವಾಯಿತು. ಆದ್ದರಿಂದ ಮೈಸೂರು, ಮೈಸೂರು ಅಂದುಕೊಂಡು ಚಿಕ್ಕದಾಗಿರಬೇಕೆಂದು ಹೇಳುವುದು ಸರಿಯಲ್ಲ. ಈಗ ಇನ್ನೂ ವಿಸ್ತಾರವಾಗುವ ಅವಕಾಶಬಂದಿದೆ. ಸಾಮಾನ್ಯ ಪ್ರಜೆಗಳಿಗೇನೂ ಇದರಿಂದ ತೊಂದರೆಯಿಲ್ಲ. ಇನ್ನೂ ಅನುಕೂಲಗಳೇ ಜಾಸ್ತಿ. ಹೇಗೆಂದರೆ, ಬಡ ಸ್ಕೂಲು ಮೇಷ್ಟ್ರುಗಳು, ವ್ಯಾಪಾರಿಗಳು, ಲಾಯರುಗಳು ಮತ್ತು ಇನ್ನೂ ಬೇರೆ ಬೇರೆಯವರಿಗೆಲ್ಲಾ ದೊಡ್ಡದಾಗಿ ಕರ್ಣಾಟಕವಾದರೆ ಜೀವನೋಪಾಯಕ್ಕೆ ಅನುಕೂಲವಾಗುತ್ತದೆ. ದೊಡ್ಡ ದೊಡ್ಡ ಜಮೀನ್ದಾರರ ವಿಷಯದಲ್ಲೇನೋ ಹೆಚ್ಚು ಬದಲಾವಣೆಯಾಗುವುದಿಲ್ಲ. ಬಾಕಿಯವರಿಗೆಲ್ಲಾ ವಿಸ್ತಾರ ಹೆಚ್ಚಾದರೆ ಹೆಚ್ಚಿಗೆ ಅಭಿವೃದ್ಧಿಗೆ ಅವಕಾಶವಾಗುತ್ತದೆ.

ಇನ್ನೊಂದು ವಿಷಯ. ಈ ಫ್ಯಾಕ್ಟ್ ಫೈಂಡಿಂಗ್ ಕಮಿಟಿಯವರ ವರದಿಯಲ್ಲಿ, ವಿದ್ಯಾಭ್ಯಾಸ, ಸೌಕರ್ಯ, ಸಂಚಾರ, ಮೆಡಿಕಲ್ ರಿಲೀಫ್, ಪಬ್ಲಿಕ್ ಹೆಲ್ತ್, Animal Husbandry, Rural Development, Irrigation, Power Supply, National Industries ಇತ್ಯಾದಿಗಳೆಲ್ಲವನ್ನೂ ವಿವರಿಸಿದ್ದಾರೆ. ಯಾವುದಾದರೂ ಒಂದು ದೇಶವನ್ನು ದೊಡ್ಡ ದೇಶವೆಂದು ಹೇಳಿದರೆ, ಆ ದೇಶದಲ್ಲಿ ಎಷ್ಟು ಬಾವಿಗಳಿವೆ, ಎಷ್ಟು ಪಶುವೈದ್ಯ ಶಾಲೆಗಳಿವೆ, ಎಷ್ಟು ಆಸ್ಪತ್ರೆಗಳಿವೆ ಎಂಬುದರ ಮೇಲೆ ಅದನ್ನು ಹೇಳಿರುವುದಲ್ಲ. ಅಲ್ಲಿರತಕ್ಕ ಜನರು ಎಂಥ ದೊಡ್ಡ ಮನುಷ್ಯರು, ಆ ದೇಶದ ಇತಿಹಾಸವೇನು, ಅಲ್ಲಿನ ನಾಗರೀಕತೆಯೇನು ಎಂಬುದರ ಮೇಲೆ ಹೋಗುತ್ತದೆ ಒಂದು ದೇಶದ ಖ್ಯಾತಿ. ಇಂಡಿಯಾ ದೇಶ ದೊಡ್ಡದು ಎಂದು ಹೇಳಿದರೆ ಇದರ ಸಂಸ್ಕೃತಿಯೇನು, ಎಂತೆಂತಹ ದೊಡ್ಡ ಮನುಷ್ಯರಿದ್ದಾರೆ ಎಂಬುದನ್ನು ಕೇಳಿ ಹೇಳುತ್ತಾರೆಯೇ ಹೊರತು ಇಲ್ಲಿನ ಕೆರೆ, ಕುಂಟೆ, ಬಾವಿಗಳನ್ನು ಕೇಳಿ ಹೇಳುವುದಿಲ್ಲ. ಗ್ರೀಸ್ ದೇಶವನ್ನು ದೊಡ್ಡ ದೇಶವೆನ್ನುವುದು ಅಲ್ಲಿದ್ದ ಸಾಕ್ರೆಟಿಸ್, ಪ್ಲೇಟೋ ಮುಂತಾದ ದೊಡ್ಡ ದೊಡ್ಡ ಮನುಷ್ಯರ ದೆಸೆಯಿಂದ. ಮೈಸೂರು ದೊಡ್ಡ ದೇಶವೆಂದರೆ, ವಿಶ್ವೇಶ್ವರಯ್ಯ ಮುಂತಾದವರು ಇಲ್ಲಿದ್ದರಿಂದ ಹೇಳುತ್ತಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಗ್ರೀಕ್ ಸಂಸ್ಥಾನದ ವಿಷಯವೆಲ್ಲಾ ಮಾನ್ಯ ಸದಸ್ಯರು ಉದಹರಿಸುತ್ತಿದ್ದಾರೆ. ಅವೆಲ್ಲಾ ಚಿಕ್ಕ ಚಿಕ್ಕ States ಆಗಿದ್ದುವೇ ಹೊರತು ದೊಡ್ಡ ದೊಡ್ಡ ಸಂಸ್ಥಾನವಾಗಿರಲಿಲ್ಲ. ಅಂಥವುಗಳನ್ನು ಮೈಸೂರಿಗೆ ಹೋಲಿಸುತ್ತಾರಲ್ಲಾ.

ಶ್ರೀ ಪಿ ಆರ್. ರಾಮಯ್ಯ.—ಅವು City States ಆಗಿರಬಹುದು. ಆದರೂ ಅದನ್ನು ಒಂದು ಚಿಕ್ಕ ಬಾವಿ; ಅದರೊಳಗೆ ಒಂದು ಕಪ್ಪೆಯಿತ್ತು ಎಂಬ ಭಾವನೆಯಿಂದ ನೋಡುವುದಿಲ್ಲ. ಅಲ್ಲಿ ಎಂಥೆಂಥ ದೊಡ್ಡ ಮನುಷ್ಯರು, ಅರಿಸ್ಟಾಟಲ್, ಪ್ಲೇಟೋ ಪೆರಿಕ್ಲಿಸ್, ಸಾಕ್ರೆಟಿಸ್ ಮುಂತಾದವರು ಇದ್ದರೆಂದು ಜನ ಅದನ್ನು ನೋಡುತ್ತಾರೆ. ಅವರಿಂದಾಗಿ ಅದೊಂದು ದೊಡ್ಡ ಊರಾಗಿದೆ. ಇವತ್ತಿನ ದಿವಸ ಮೈಸೂರು ಪ್ರಖ್ಯಾತಿ ಹೊಂದಿದೆ—ಏಕೆ? ಇಲ್ಲಿ ದೊಡ್ಡ ದೊಡ್ಡ ದಿವಾನರಿದ್ದರು; ಒಳ್ಳೆಯ ಸಂಸ್ಕೃತಿ ಇದೆ.

11 A.M.

ಇಷ್ಟೇ ಅಲ್ಲದೆ ನಮ್ಮ ಮೈಸೂರಿನ ವೈಶಿಷ್ಟ್ಯತೆಯನ್ನು ಎತ್ತಿ ಹಿಡಿದು, ಅದನ್ನು ಉಳಿಸಿ, ಬೆಳಸಿಕೊಂಡು ಬಂದವರಲ್ಲಿ ಶ್ರೀ ಶಂಕರಾಚಾರ್ಯರೂ, ಶ್ರೀ ರಾಮಾನುಜಾಚಾರ್ಯರೂ, ಶ್ರೀ ಬಸವೇಶ್ವರರೂ ಮತ್ತು ಇನ್ನೂ ಅನೇಕ ಜೈನಗುರುಗಳೂ ಇಂಥ ಮಹನೀಯರುಗಳೆಲ್ಲಾ ಬಹಳ ಪ್ರಖ್ಯಾತರಾಗಿದ್ದಾರೆ. ಶ್ರೀ ವಿದ್ಯಾರಣ್ಯರೂ ಕೂಡ ಬಹಳವಾಗಿ ಶ್ರಮಿಸಿದ್ದಾರೆ. ಇಂತಿಂಥ ಮಹನೀಯರುಗಳೆಲ್ಲಾ ಸೇರಿ ನಮ್ಮ ಮೈಸೂರಿನ ಕೀರ್ತಿಯನ್ನು ದೊಡ್ಡದನ್ನಾಗಿ ಮಾಡಿದ್ದಾರ. ಈ ಹಿಂದೆ ಈ ಮಹನೀಯರುಗಳೆಲ್ಲಾ ಸೇರಿ ಮಾಡಿದಂಥ ಆ ಕರ್ಣಾಟಕದ ಜನ ಎಲ್ಲಾ ಒಂದೇ ಕಡೆ ಬಂದು ಸೇರಿದರೆ ನಮ್ಮ ಮೈಸೂರಿನ ಕೀರ್ತಿ ಮುಂದಕ್ಕೆ ಇನ್ನೂ ದೊಡ್ಡದಾಗುತ್ತದೆ.

ಆದುದರಿಂದ ಸ್ವಾಮಿ, ಈ ಕರ್ಣಾಟಕ ಪ್ರಾಂತ್ಯ ನಿರ್ಮಾಣವಾದರೆ ಮೈಸೂರಿನ ಕೀರ್ತಿಯೂ ಜಾಸ್ತಿಯಾಗುತ್ತದೆ. ಜನರಿಗೆ ಬೇಕಾದಂಥ ಸೌಕರ್ಯಗಳೂ

ಕೂಡ ಜಾಸ್ತಿಯಾಗಿಯೇ ಆಗುತ್ತವೆ. ಈಗ ಒಂದು ಅಭಿಪ್ರಾಯ ಹೇಳಿರುವ ಪ್ರಕಾರ ನಮ್ಮ ಸಮಸ್ತ ಭಾರತದಲ್ಲಿರುವ ಜನಗಳಿಗೆಲ್ಲಾ ಈಗಾಗಲೇ ಕೇಂದ್ರ ಸರ್ಕಾರ ಮತ್ತು ಪ್ರಾಂತ್ಯ ಸರ್ಕಾರಗಳು ಕೈಗೊಂಡಿರುವ ಈ ಪ್ರಥಮ ಪಾಂಚವಾರ್ಷಿಕ ಮತ್ತು ಕೈಗೊಳ್ಳುವ ದ್ವಿತೀಯ ಪಾಂಚವಾರ್ಷಿಕ ಯೋಜನೆಗಳ ದೆಶೆಯಿಂದ ಇಡೀ ಕರ್ಣಾಟಕದ ಪ್ರತಿಯೊಂದು ಭಾಗಕ್ಕೂ ಅಗತ್ಯವಾಗಿ ಬೇಕಾಗಿರುವಂಥ ಎಲ್ಲಾ ಅನುಕೂಲತೆಗಳನ್ನೂ ಕಲ್ಪಿಸಿಯೇ ಕಲ್ಪಿಸಲಾಗುತ್ತದೆ. ಈ ಸ್ಕೂಲುಗಳು, ಆಸ್ಪತ್ರೆಗಳು, ರಸ್ತೆ ಇತ್ಯಾದಿಗಳೆಲ್ಲಾ ಆಗೇ ಆಗುತ್ತವೆ. ಇದಕ್ಕಾಗಿ ಯಾರೂ ಭೀತಿ ಪಡಬೇಕಾಗಿಲ್ಲ. ಈಗ ನನ್ನ ಕೈಲಿ "ಕರ್ಣಾಟಕ ದರ್ಶನ" ಎಂದು ಒಂದು ಪುಸ್ತಕವಿದೆ. ಈ ಪುಸ್ತಕದ ಒಂದನೆಯ ಛಾಪ್ಟರ್‌ನಲ್ಲಿ ಇರುವ ಕೆಲವು ವಿಚಾರಗಳನ್ನೀಗ ಈ ಮಾನ್ಯ ಸಭೆಯ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಈ ಲೇಖನದ ಹೆಸರು "ಇಂಡಸ್ಟ್ರೀಸ್ ಅಂಡ್ ಇಂಡಸ್ಟ್ರೀಸ್ ಆಫ್ ಕರ್ಣಾಟಕ" ಎಂದು. ಇದು ಶ್ರೀಮಾನ್ ಪಿ. ಎಚ್. ಕೃಷ್ಣರಾಯರಿಂದ ಬರೆಯಲ್ಪಟ್ಟಿದೆ. ಓದುತ್ತೇನೆ ಕೇಳಿ. ಶ್ರೀ ಶಿವನಂಜೇಗೌಡರು ಇದನ್ನು ದಯೆಯಿಟ್ಟು ಕೇಳಬೇಕು.

"Human resources are even more important than material resources. The Karnatak, in common with the rest of India, has vast man-power, but most of it is not technically trained and has not got the aid of mechanical power. The people should also be imbued with a spirit of enterprise and be encouraged by the State. Mysore had its share of industrialisation, as all the needed factors are present. The only area in Karnatak outside Mysore that has shown enterprise in Banking, Insurance and Industries is South Canara, particularly Udipi, where the "Maniapal Industries" in textile, pottery etc., have opened a new chapter. The transport services there, as already mentioned, are among the best organised. One of the strongest arguments advanced for the formation of the Karnatak State is that many areas have been neglected, because they are scattered and form the tail-end of States and have not received due attention for their development. Let us hope that the formation of the Karnatak State will make this neglect a thing of the past and will make Karnatak prosperous and thus add to the strength and prosperity of India."

ಸ್ವಾಮಿ, ಇನ್ನು ಕಡೆಯದಾಗಿ ಒಂದು ಮಾತು ಹೇಳುತ್ತೇನೆ—ಅನೇಕ ವರ್ಷಗಳಿಂದ ಈ ಕರ್ಣಾಟಕ ಪ್ರಾಂತ್ಯ ನಿರ್ಮಾಣವಾಗಲೇಬೇಕೆಂಬ ಆಸೆಯನ್ನೂ ಮತ್ತು ಇದು ಅದೇ ಆಗುತ್ತದೆಂಬ ನಂಬಿಕೆಯನ್ನು ಇಟ್ಟುಕೊಂಡಿದ್ದಂಥ ಅನೇಕ ದೊಡ್ಡ ದೊಡ್ಡ ಮನುಷ್ಯರು, ಮಹನೀಯರುಗಳು, ಕವಿಗಳು, ಮತ್ತು ಕಲಾವಿದರುಗಳು ತಮ್ಮ ಕನಸ್ಸಿನಲ್ಲಿ ಯಾವ ಒಂದು ರಾಜ್ಯ ನಿರ್ಮಾಣವಾಗಬೇಕೆಂದು ಹಂಬಲಿಸುತ್ತಿದ್ದರೋ ಅಂಥ ಒಂದು ರಾಜ್ಯ ನಿರ್ಮಾಣವಾಗಲು, ಅಂಥ ಅವರೆಲ್ಲರ ಒಂದು ಆಸೆ ಫಲಿಸುವಂಥ ಕಾಲ ಈ ದಿವಸ ಬಂದಿದೆ. ಇದರಲ್ಲಿ ಮೈಸೂರಿನ ಪಾತ್ರ ಬಹಳವಾಗಿದೆ. ಈ ಪಾತ್ರಕ್ಕೆಲ್ಲಾ ಈ ಮೈಸೂರೇ ಕೇಂದ್ರವಾಗಿರಬೇಕು. ಈ ದೇಶವನ್ನು ದೊಡ್ಡದನ್ನಾಗಿ ಮಾಡತಕ್ಕ ಇತಿಹಾಸದಲ್ಲಿ ಮೈಸೂರಿನವರ ಪಾತ್ರವೂ ಸೇರಿರಬೇಕೆಂದು ಹೇಳುತ್ತೇನೆ. ಈ ಮೈಸೂರಿನವರ ಪಾತ್ರವಿಲ್ಲದೆ ರಾಜ್ಯ ವಿಸ್ತಾರವಾದರೆ it will be the drama of Hamlet without Hamlet ಎನ್ನುವಹಾಗೆ ಆಗುತ್ತದೆ. ಇನ್ನು ಇದರ ಹಿನ್ನೆಲೆಯಾಗಿ ಎರಡು ಮಾತುಗಳನ್ನು ಹೇಳಬೇಕಾಗಿದೆ—ಈ ಹಿಂದೆ ಮೈಸೂರನ್ನೊಳಗೊಂಡ ಕರ್ಣಾಟಕದ ವಿಚಾರದಲ್ಲಿ ಏನು ಅಭಿಪ್ರಾಯವಿತ್ತು ಅನ್ನುವುದರ ಬಗ್ಗೆ ಹೀಗೆ ಹೇಳಿದ್ದಾರೆ.

"If Mysore had been willing to join the Union it could easily have formed a nucleus round which the Kannada-speaking districts of Madras and Bombay could be brought together and reared into an administratively convenient Province. . . ."

ಈ ರೀತಿಯಾಗಿ ಧಾರ್ ಸಮಿತಿಯವರು ಅಭಿಪ್ರಾಯವಿತ್ತಿದ್ದಾರೆ. ಇದೇ ವಿಷಯ ಜೆ.ವಿ.ಪಿ. ವರದಿಯಲ್ಲೂ ಬಂದಿದೆ. ಈ ಹಿಂದಿನಿಂದಲೂ 1947ರವರೆಗೂ ಕೂಡ ಅನೇಕ ಮಹನೀಯರು ಕಾಂಗ್ರೆಸ್ ಸಂಸ್ಥೆಯಲ್ಲಿರತಕ್ಕಂಥವರೂ ಸಹ ಹೇಳಿರುವುದಲ್ಲದೆ, ಅನೇಕ ಬರಹಗಾರರೂ, ಸಾಹಿತಿಗಳೂ ಈ ಕರ್ಣಾಟಕ ಪ್ರಾಂತ್ಯ ನಿರ್ಮಾಣವಾಗಲೇಬೇಕೆಂದು ಹೇಳಿರುತ್ತಾರೆ. ಆದರೆ 1947 ರಿಂದ ಇತ್ತೀಚೆಗೆ ನಮಗೆ ಸ್ವಾತಂತ್ರ್ಯ ಬಂದ ಮೇಲೆ ಜನರು ಈ ವಿಚಾರದಲ್ಲಿ ಸ್ವಲ್ಪಮಟ್ಟಿಗೆ ತಮ್ಮ ಅಭಿಪ್ರಾಯಗಳನ್ನು ಬದಲಾವಣೆ ಮಾಡಿಕೊಳ್ಳುತ್ತಿರುವುದು ಕಂಡುಬರುತ್ತಿದೆ. ಆದರೆ ನಾನು ಈಗ ಹೇಳುತ್ತಿರುವಂಥ ವಿಚಾರಗಳನ್ನೆಲ್ಲಾ ಒಂದು ಆಧಾರಪೂರ್ವಕವಾಗಿ ಹೇಳುತ್ತಿದ್ದೇನೆ. 1946ನೆಯ ನವಂಬರಿನಲ್ಲಿ ಶ್ರೀ ಕೆ. ಸಿ. ರೆಡ್ಡಿಯವರು ಈ ರೀತಿ ಹೇಳಿದ್ದಾರೆ.—

"In November 1946, on the 2nd and 3rd, the Annual Session of the Mysore Congress, held at Bangalore under the presidentship of Sri. K. C. Reddy, passed the following resolution :

'This Session of the Mysore Congress declares itself in favour of an early formation of a Karnataka Province comprising the present disrupted fragments under

(ಶ್ರೀ ಪಿ. ಆರ್. ರಾಮಯ್ಯ.)

various administrations. . . . This Session appeals to the people of all parts of Karnataka to give their full support to the formation of a province for Kannadigas'."

ಹೀಗೆ ಈ ವಿಚಾರ 1946ರಲ್ಲಿ ನಡೆದ ಅಧಿವೇಶನದಲ್ಲಿ ಶ್ರೀ ಕೆ. ಚಂಗಲರಾಯರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಿರ್ಣಯ ರೂಪವಾಗಿ ಬಂದು ತೀರ್ಮಾನವಾಗಿದೆ. 1947ರ ಮೇಲೂ ಸಹ ಅನೇಕ ಸಂದರ್ಭಗಳಲ್ಲಿ ಮೈಸೂರು ರಾಜ್ಯಾಂಗ ಸಭೆಯಿದ್ದಾಗಲೂ ಸಹ ಇದೇ ರೀತಿಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ಇದಕ್ಕೆ ಅನುಮತಿ ಕೊಡಲಾಗಿದೆ ಎನ್ನುವಂಥ ವಿಚಾರವನ್ನು ಈಗಾಗಲೇ ಅನೇಕ ಮಹನೀಯರು ಹೇಳಿರುತ್ತಾರೆ. ಈಗ ಒಟ್ಟಿನಲ್ಲಿ ಮೈಸೂರಿನಲ್ಲಿರತಕ್ಕಂಥ ಕನ್ನಡಿಗರ ಆದರಕ್ಕೆ ಅಕ್ಕಪಕ್ಕದಲ್ಲಿರುವ ಕನ್ನಡಿಗರು ಪಾತ್ರರಾಗಿರುವುದರಿಂದ ಆ ಕನ್ನಡ ಪ್ರದೇಶಗಳೆಲ್ಲಾ ಮೈಸೂರಿಗೆ ಸೇರಲೇಬೇಕೆಂದು ಹೇಳಿದ್ದಾರೆ. ಆದರೆ ಇತ್ತೀಚೆಗೆ ಜನರಲ್ಲಿ ಈ ಅಭಿಪ್ರಾಯಗಳು ಏನೊಂದು ಬದಲಾವಣೆಯನ್ನು ಅಲ್ಪಸ್ವಲ್ಪ ಹೊಂದುತ್ತಿದ್ದವೋ ಅಂಥಾದ್ದಕ್ಕೆ ಯಾವ ಅವಕಾಶವಾಗಲೀ ಅಥವಾ ಆಧಾರಗಳಾಗಲೀ ಇರುವುದಿಲ್ಲ.

"As the Mysore Congress stand has always been in favour of United Karnataka with His Highness the Maharaja of Mysore as the constitutional Head, the Committee recommends to the Working Committee that the formation of Akhila Karnataka Province is essential with the Maharaja of Mysore as the constitutional Head and Bangalore as its capital, but the time for implementation of the same is not opportune. . . .

(Sd.) A. G. Bandi Gowda
(Sd.) S. Channaiya
(Sd.) G. Narayana Gowda."

ಆದರೆ ಇತ್ತೀಚೆಗೆ ಕೆಲವರ ಅಭಿಪ್ರಾಯಗಳು ಸ್ವಲ್ಪಮಟ್ಟಿಗೆ ಬದಲಾವಣೆ ಆಗಿರುವುದಕ್ಕೆ ಕಾರಣವಿದೆಯೋ ಅಂತ ಕೇಳಿದರೆ, ಅದಕ್ಕೇನು ಹೇಳುತ್ತಿದ್ದಾರೆ ಅಂದರೆ, ಒಂದುವೇಳೆ ಆ ಹೊರಗಡೆಯಿರತಕ್ಕಂಥ ಕನ್ನಡ ಜನರೆಲ್ಲ ಬಂದು ನಮ್ಮ ಒಡನೆ ಸೇರಿಕೊಂಡರೆ ಆಗ ಮೈಸೂರಿನ ಪ್ರಗತಿಗೆ ಸ್ವಲ್ಪ ಕುಂಠಿತವಾಗಬಹುದೆಂಬ ಒಂದು ಅನುಮಾನವನ್ನು ವ್ಯಕ್ತಪಡಿಸುತ್ತಿದ್ದಾರೆ. ಆದರೆ ಅಂಥ ಅನುಮಾನಗಳಿಗೆ ಆಸ್ಪದವಿಲ್ಲ, ಆ ರೀತಿ ಅನುಮಾನಪಡುವುದಕ್ಕೆ ಕಾರಣವೂ ಸಹ ಇಲ್ಲ. ಇದನ್ನು ಆದಷ್ಟು ಬೇಗ ಮಾಡಲೇಬೇಕು. ನಿಧಾನವಾದ ಹಾಗೆಲ್ಲಾ ಅನುಮಾನಗಳು ತಲೆದೋರಬಹುದು. ನಮಗಾಗಲೇ ಸ್ವಾತಂತ್ರ್ಯ ಬಂದು ಬಹಳ ದಿವಸಗಳಾದುವು. 1947ರಲ್ಲೇ ಸ್ವಾತಂತ್ರ್ಯ ಬಂತು. ಈ ವಿಚಾರದಲ್ಲಿ ಕೇಂದ್ರ ಸರ್ಕಾರದವರು ನಿಧಾನ ಮಾಡಿದ್ದು ಬಹಳ ತೊಂದರೆಗೀಡಾಯಿತು. ಕಾನ್ಸ್ಟಿಟ್ಯೂಷನ್ನನ್ನು ಬರೆಯುವಾಗಲೇ ಇದನ್ನೆಲ್ಲಾ ತೀರ್ಮಾನ ಮಾಡಿದ್ದರೆ ಚೆನ್ನಾಗಿತ್ತು. ಆದರೆ ಇತ್ತೀಚೆಗೆ ನಮ್ಮ ಭಾರತ ಸರ್ಕಾರದವರಿಗೆ ಈ ಕಾಶ್ಮೀರದ ಸಮಸ್ಯೆ, ರೆಫ್ಯೂಜಿಗಳ ಸಮಸ್ಯೆ ಇತ್ಯಾದಿ ಕೆಲವು ದೊಡ್ಡ ಸಮಸ್ಯೆಗಳು ಉದ್ಭವಿಸಿದುವು. ಈ ಕೆಲವು ತೊಂದರೆಗಳು ಉದ್ಭವಿಸಿದ ಕಾರಣ 1947ರಲ್ಲಿ ನಮ್ಮ ಭಾರತ ಸರ್ಕಾರದವರು ಈ ಪ್ರಾಂತ್ಯಗಳ ಪುನರ್ವಿಂಗಡಣೆಯ ಕಾರ್ಯವನ್ನು ಇನ್ನೂ ಹತ್ತು ವರ್ಷಗಳ ಕಾಲಕ್ಕೆ ಮುಂದುವರಿಸೋಣ ಎಂದು ಹೇಳಿದರು. ಅದಕ್ಕನುಸಾರವಾಗಿ 1957ರ ಹತ್ತಿರದಲ್ಲಿದ್ದೇವೆ. ಈಗಾಗಲೇ ಕೇಂದ್ರ ಸರ್ಕಾರದವರು ಈ ಅವಧಿಯು ಪೂರೈಸುತ್ತಾ ಬಂದಿರುವುದನ್ನು ಗಮನಕ್ಕೆ ತಂದುಕೊಂಡು ಆ ಹೈಪವರ್ ಸಮಿತಿಯನ್ನು ನೇಮಕ ಮಾಡಿದ್ದಾರೆ. ಆ ಸಮಿತಿಯವರು ಭಾರತದಾದ್ಯಂತವೂ ತಿರುಗಿ ಜನಾಭಿಪ್ರಾಯಗಳನ್ನು ಶೇಖರಣೆಮಾಡಿ, ಈ ರಾಜ್ಯಗಳ ಪುನರ್ವಿಂಗಡಣೆಯ ಬಗ್ಗೆ ಸಧ್ಯದಲ್ಲೇ ಒಂದು ವರದಿಯನ್ನು ತಯಾರಿಸಿ, ಅದನ್ನು ಕೇಂದ್ರ ಸರ್ಕಾರಕ್ಕೆ ಇನ್ನು 1-2 ತಿಂಗಳಲ್ಲೇ ಒಪ್ಪಿಸುವುದರಲ್ಲಿದ್ದಾರೆ. ಹೀಗೆ ಈ ಹಿಂದೆ ನಮ್ಮ ಕೇಂದ್ರ ಸರ್ಕಾರದವರು ಏನೊಂದು ಮಾತನ್ನು ಈ ಕರ್ಣಾಟಕ ಪ್ರಾಂತ್ಯ ನಿರ್ಮಾಣದ ವಿಚಾರದಲ್ಲಿ ತಮ್ಮ ಬಾಯಿಂದ ಹೊರಡಿಸಿದ್ದರೋ ಅಂಥ ಮಾತನ್ನು ಈಗ ಕಾರ್ಯಗತ ಮಾಡುವಂಥ ಕಾಲ ಸಮೀಪಿಸುತ್ತ ಬಂದಿದೆ. ಈ ಕಾರ್ಯಗಳೆಲ್ಲಾ ಪೂರೈಸುವ ಹೊತ್ತಿಗೆ ಅವರು ಹೇಳಿದ್ದಂಥ 10 ವರ್ಷಗಳ ಅವಧಿಕೂಡ ಪೂರೈಸುತ್ತದೆ. ಆದರೆ ಅವರು ಈ ವಿಚಾರವನ್ನು ಇಲ್ಲಿಗೆ 10 ವರ್ಷಗಳ ಹಿಂದೆಯೇ ಮುಗಿಸಿದ್ದಿದ್ದರೆ ಆಗ ಈ ಜಿಜ್ಞಾಸೆಗಳೊಂದೂ ಬರುತ್ತಿರಲಿಲ್ಲ. ಕನ್ನಡದಲ್ಲಿ ಒಂದು ಗಾದೆಯಿದೆ—"ಆಲಸ್ಯಂ ಅಮೃತಂ ವಿಷಂ" ಎಂದು ಹೇಳಿದಹಾಗೆ ಈ ಪ್ರಶ್ನೆ ಸ್ವಲ್ಪ ಕಾಲವಿಳಂಬವಾದುದಕ್ಕೆ ಈ ಬಗ್ಗೆ ಅಲ್ಪಸ್ವಲ್ಪ ಭಿನ್ನಾಭಿಪ್ರಾಯಗಳು ತಲೆದೋರುವುದಕ್ಕೆ ಅವಕಾಶವಾಯಿತು. ಈ ಹಿಂದೆ ಕರ್ಣಾಟಕ ರಾಜ್ಯ ಅನ್ನುವುದು ಒಂದು ಭವ್ಯವಾದಂಥ ರಾಜ್ಯವಾಗಿತ್ತು. ಇಲ್ಲಿಯವರೆಗೂ ಅಂಥ ಭವ್ಯವಾದ ರಾಜ್ಯದ ಕನಸನ್ನು ಕಾಣುತ್ತಿದ್ದವರಿಗೆಲ್ಲ ಅದು ನಿಜವಾಗಿ ಕಾಣತಕ್ಕಂಥ ಸಂದರ್ಭವೀಗ ಒದಗಿದೆ. ಆ ಕರ್ಣಾಟಕದ ಆದರ್ಶತ್ವ ಎಷ್ಟು ಸೊಗಸಾದುದು ಎನ್ನುವುದಕ್ಕೆ ಮತ್ತು ಕರ್ಣಾಟಕ ಪ್ರಾಂತ್ಯ ನಿರ್ಮಾಣವಾದರೆ ಮುಂದೆ ಅದು ಯಾವರೀತಿ ಜನಗಳಿಗೆ ಒಳ್ಳೆಯದನ್ನು ಮಾಡಬಲ್ಲದು ಎನ್ನತಕ್ಕ ಬಗ್ಗೆ ಡಾಕ್ಟರ್ ಅನೆಬೆಸೆಂಟ್‌ರವರು ಹೀಗೆ ಹೇಳಿದ್ದಾರೆ :—

"If you want to know what India can do, we must know what India has done.

ನಾನು ಹೇಳುವುದು,

"If you want to know what Karnataka can do, you must know what Karnataka has done in the past."

ಹೀಗೆ ಹಿಂದೆ ಕರ್ಣಾಟಕ ರಾಜ್ಯ ಎನ್ನುವುದು ಒಂದು ಭವ್ಯವಾದ ರಾಜ್ಯವಾಗಿತ್ತು. ಈಗಲೂ ಸಹ ನಾವು ಆ ಜನರನ್ನೆಲ್ಲಾ ಪುನಃ ಒಟ್ಟುಗೂಡಿಸಿದರೆ ಪುನಃ ಅಂಥ ಭವ್ಯವಾದ ಪ್ರಾಂತ್ಯವನ್ನು ನಿರ್ಮಾಣ ಮಾಡುವುದಕ್ಕೆ ಸಾಧ್ಯವಿದ್ದೇ ಇದೆ. ಈ ಕರ್ಣಾಟಕ ದರ್ಶನ ಅನ್ನತಕ್ಕಂಥ ಪುಸ್ತಕದ ಒಂದನೆಯ ಭಾಗದಲ್ಲಿ ಹೀಗೆ ಹೇಳಿದ್ದಾರೆ. ಅದನ್ನೀಗ ನಾನು ಈ ಮಾನ್ಯ ಸಭೆಯ ಗಮನಕ್ಕೆ ತರುತ್ತೇನೆ.

"(1) Karnatak was one of the foremost powers in India from the earliest period of history and maintained its integrity till the advent of the British rule. It was conscious of its separate cultural unity till the fall of the Vijayanagara rule in 1565. But by the introduction of the Maratha sway in Karnatak the first foreign influence was thrust on the people of Karnatak, but it being a supporter of Hindu culture as a whole, its oppression was not felt though the nerve of Karnatak was not recognised at its worth ; (2) The Kannada language was spoken in the extensive region from the Kaveri to the Godavari and this vast territory was held under their sway, practically by the indigenous rulers of Karnatak, *i.e.*, the Chalukyas of Badami, the Rashtrakutas of Malkhed, the later Chalukyas of Kalyani, the Hoysala and Yadava rulers and lastly by the king of the Vijayanagara dynasties, *i.e.*, roughly during the past nine hundred years. Consequently the area presents a uniformity of culture, and unity of thought and aspirations in the social, religious and economic lives of the people. All the abovementioned royal families have been historically proved to be the original inhabitants of Karnatak speaking Kannada in their homes. But after the fall of the Vijayanagara empire, this homogeneity of administration was shattered and the imposition of the Maratha rule on Karnatak in the 17th century A.D.—though un-antagonistic in spirit and culturally wholesome—paved the way for the disregard of the necessity of linguistic uniformity for the cultural advancement of a country. Within a few decades, the whole of North Karnatak was overrun with bias for Marathi to the detriment of Kannada, the language of the soil; (3) The influence of Karnatak in the historical period spread to the Latamandala in Gujarat and the Vengivishaya in Andhra continuously for over 500 years. It may be noted that some of the Kannada families that settled in North India apparently during the political campaigns of the Rashtrakuta kings, Govinda III and Krishna III as well as of the Chalukya Vikramaditya VI, founded separate ruling dynasties in their new homes, to wit, the family of Nanyadeva of Nepal rulers and the Senas of Bengal.

Thus, it may be concluded that Karnatak was the most powerful political and cultural centre in India and maintained its international superiority until the decline of the Vijayanagara household in the 16th century A.D."

ಆದ್ದರಿಂದ ಕರ್ಣಾಟಕ ಗತವೈಭವ ಸ್ಮರಿಸಿಕೊಂಡರೆ ಆಗ ಕರ್ಣಾಟಕ ಪ್ರಾಂತ ಎಷ್ಟು ದೊಡ್ಡದಾಗಿತ್ತೋ ಇನ್ನು ಮುಂದೆಯೂ ಅಷ್ಟೇ ದೊಡ್ಡದಾಗಬೇಕು ಅಂದಾಕ್ಷಣ, ಬರೀ ಭಾಷಾ ದೃಷ್ಟಿಯಿಂದ ಪ್ರಾಂತ ನಿರ್ಮಾಣ ಮಾಡಬೇಕೆಂದು ನನ್ನ ಅಭಿಪ್ರಾಯವಲ್ಲ. ಎಲ್ಲಾ ಭಾಷೆಗಳೂ ಬೆಳೆಯಬೇಕು. ಒಂದು ಪ್ರಾಂತದ ಬಹು ಸಂಖ್ಯಾತ ಜನರು ಯಾವ ಭಾಷೆ ಮಾತನಾಡುತ್ತಾರೋ, ಅದೇ ಭಾಷೆ ಅಲ್ಲಿಯ ಶಾಸನ ಸಭೆಗಳ ಭಾಷೆಯಾಗುತ್ತದೆ. ಮೊನ್ನೆ ದಿವಸ ಕರ್ಣಾಟಕ ಪ್ರಾಂತದ ಅಧ್ಯಕ್ಷರಾದಂಥ ಶ್ರೀ ಅಂಬ್ಲಿಯವರಿಗೆ ಮೈಸೂರು ಸ್ಟೇಟ್ ಕಾಂಗ್ರೆಸ್ ಭವನದಲ್ಲಿ ಒಂದು ಪಾರ್ಟಿ ಕೊಟ್ಟರು. ಆ ಸಮಯದಲ್ಲಿ ಅವರು ಕೆಲವು ಮಾತುಗಳನ್ನು ಆಡಿದರು. ಅದನ್ನು ಕೇಳಿ ನನ್ನ ಕಣ್ಣಲ್ಲಿ ನೀರು ಬಂತು. ಅವರು ಈ ಸಭೆಗೆ ಬಂದು ಕನ್ನಡದಲ್ಲೇ ಪ್ರಶ್ನೆಗಳನ್ನು ಹಾಕುವುದನ್ನು, ಕನ್ನಡದಲ್ಲೇ ಉತ್ತರಗಳನ್ನು ಕೊಡುವುದನ್ನು, ಕನ್ನಡದಲ್ಲೇ ಭಾಷಣ ಮಾಡುವುದನ್ನು ನೋಡಿ ಅನೇಕ ದಿವಸಗಳಿಂದ ಕನ್ನಡ, ಕನ್ನಡ ಎಂದು ಹೃದಯದಲ್ಲಿ ಮರುಗುತ್ತ ಇರುವ ಅವರ ಹೃದಯ ನೀರಾಯಿತು ಮತ್ತು ಇಂತಹ ಕನ್ನಡ ಪ್ರಾಂತ್ಯವನ್ನು ಯಾವಾಗ ನೋಡಿಯೇವು, ಉತ್ತರ ಕರ್ಣಾಟಕದಲ್ಲಿರುವವರು ನಮ್ಮ ಶಾಸನ ಸಭೆಗಳಿಗೆ ಬಂದು ಕನ್ನಡ ಮಾತನಾಡುವುದನ್ನು ಯಾವಾಗ ಕೇಳಿಯೇವು, ಪ್ರಶ್ನೋತ್ತರಗಳು ಕನ್ನಡದಲ್ಲಿ ಯಾವಾಗ ಬಂದಾವು ಎಂದು ಮರುಗಿದರು. ನಾನು ಮದ್ರಾಸ್ ಶಾಸನಸಭೆ, ಬೊಂಬಾಯಿ ಶಾಸನ ಸಭೆಯಲ್ಲಿ ನಡೆವಳಿಕೆಗಳನ್ನು ನೋಡಿದ್ದೇನೆ. ಬೊಂಬಾಯಿ ಶಾಸನ ಸಭೆಯಲ್ಲಿರತಕ್ಕವರಲ್ಲಿ ಕನ್ನಡಿಗರು ಬಹಳ ಸ್ವಲ್ಪ ಜನ. ಅವರು ಕನ್ನಡದಲ್ಲಿ ಮಾತನಾಡುವುದಕ್ಕೆ ಷುರುಮಾಡಿದರೆ, ಗುಜರಾತಿ ಭಾಷೆ ಮಾತನಾಡುವವರು ಹೊರಗೆ ಹೊರಟುಹೋಗುತ್ತಾರೆ. ಮರಾಠಿಯಲ್ಲಿ ಮಾತನಾಡುವುದಕ್ಕೆ ಷುರುಮಾಡಿದರೆ ಬಾಕಿಯವರು ಹೊರಗೆ ಹೊರಟುಹೋಗುತ್ತಾರೆ. ಬೊಂಬಾಯಿ ಪ್ರಾಂತದ ಶಾಸನ ಸಭೆ ಈ ರೀತಿ ಇದೆ. ಆದ್ದರಿಂದ ಯಾವ ಪ್ರಾಂತದಲ್ಲಿ ಬಹು ಸಂಖ್ಯಾತ ಜನರು ಕನ್ನಡ ಭಾಷೆಯನ್ನು ಆಡುತ್ತಾರೋ ಅಂತಹ ಒಂದು ಪ್ರಾಂತ್ಯವಾಗಬೇಕು ಎಂದು ಹೇಳುತ್ತಿದ್ದಾರೆ.

(ಶ್ರೀ ಪಿ. ಆರ್. ರಾಮಯ್ಯ.)

ಆದ್ದರಿಂದ ಅವರು ಮೈಸೂರಿನವರ ವಿಷಯದಲ್ಲಿ ಬಹಳ ಒಳ್ಳೆಯ ಅಭಿಪ್ರಾಯ ಇಟ್ಟುಕೊಂಡಿದ್ದಾರೆ. ಭಯಪಡಬೇಡಿ, ಒಟ್ಟಿಗೆ ಸೇರಿ ಕೆಲಸ ಮಾಡೋಣ, ಕರ್ಣಾಟಕ ಪ್ರಾಂತವಾಗಲಿ ಎಂದು ಒಳ್ಳೆಯ ಮಮತೆಯಿಂದ ನಮ್ಮನ್ನು ಅವರು ಕೇಳಿಕೊಳ್ಳುತ್ತಿದ್ದಾರೆ.

ಇನ್ನೊಂದು ಮಾತು. ಅಮೇರಿಕಾದಲ್ಲಿ 48 ಸ್ಟೇಟ್‌ಗಳಿವೆ ಎಂದು ಹೇಳಿದರು. ಆದರೆ ಅಲ್ಲಿ ಇರತಕ್ಕಂಥಾದ್ದು ಒಂದೇ ಒಂದು ಭಾಷೆ. ಅಲ್ಲಿ ಆಡಳಿತ ಅನುಕೂಲಕ್ಕೋಸ್ಕರ 48 ಸ್ಟೇಟ್‌ಗಳನ್ನು ಮಾಡಿಕೊಂಡಿದ್ದಾರೆ. ಅಲ್ಲಿ ಈ ತರಹ ಭಾಷೆಯ ಗೊಂದಲವಿಲ್ಲ. ಆದರೆ Soviet Russia Multi-lingual area ಆಗಿದೆ, ಅಲ್ಲಿ linguistic Nationalities ಎಂಬುದಾಗಿ ಮಾಡಿಕೊಂಡಿದ್ದಾರೆ. ಆದ್ದರಿಂದ Soviet Russia ದಲ್ಲಿ ಭಾಷೆ ಮತ್ತು ಸಂಸ್ಕೃತಿಯನ್ನು ಕಾಪಾಡುವುದಕ್ಕೋಸ್ಕರ ಯಾವ ಪ್ರಾಂತದಲ್ಲಿ ಬಹು ಸಂಖ್ಯಾತ ಜನರು ಯಾವ ಭಾಷೆ ಆಡುತ್ತಾರೋ ಆ ಭಾಷೆಗೆ ಪ್ರಾಧಾನ್ಯತೆಕೊಟ್ಟು ಪ್ರಾಂತಗಳನ್ನು ಮಾಡಿದ್ದಾರೆ. ಇವೊತ್ತಿನ ದಿವಸ ಇಡೀ ಪ್ರಪಂಚದ ದೃಷ್ಟಿಯಿಂದ ನೋಡಿದರೂ ಕೂಡ ಅಖಿಲ ಪ್ರಪಂಚದಲ್ಲಿ ಯಾವ ಯಾವ ರಾಷ್ಟ್ರದವರು ಯಾವ ರೀತಿ ಪ್ರಾಂತಗಳನ್ನು ವಿಂಗಡನೆಮಾಡಿಕೊಂಡಿದ್ದಾರೆ ಎಂಬುದನ್ನು ನೋಡಿ. ಜರ್ಮನಿಯಲ್ಲಿ ಜರ್ಮನ್ ಭಾಷೆ ಇದೆ, ಫ್ರಾನ್ಸ್‌ನಲ್ಲಿ ಫ್ರೆಂಚ್ ಭಾಷೆ ಇದೆ. ಇಂಗ್ಲೆಂಡ್‌ನಲ್ಲಿ ಇಂಗ್ಲಿಷ್ ಭಾಷೆ ಇದೆ. ಯೂರೋಪಿನ ಯಾವ ದೇಶವನ್ನು ತೆಗೆದುಕೊಂಡರೂ ಅಲ್ಲಿ ಭಾಷೆಯ ಪ್ರಾಧಾನ್ಯತೆಯಮೇಲೆ ದೇಶವನ್ನು ಕಟ್ಟಿಕೊಂಡಿದ್ದಾರೆ. ಇವೊತ್ತಿನ ದಿವಸ ನಮ್ಮ ಕರ್ಣಾಟಕದ ಜನರನ್ನು ಎಲ್ಲಾ ಸೇರಿಸಿ ಕನ್ನಡ ಭಾಷೆಯನ್ನು ಮಾತನಾಡುವ ಜನರನ್ನು ಒಳಗೊಂಡಂಥ ಪ್ರಾಂತ ಆಗಬೇಕು. ಕನ್ನಡ ಸಂಸ್ಕೃತಿಗೆ ಆದರಣೆ ಬರಬೇಕು. ಕನ್ನಡಿಗರು, ಮೈಸೂರಿನವರು, ಇತರ ಪ್ರಾಂತ್ಯಗಳವರು ಎಂಬುದನ್ನು ಮರೆತುಬಿಟ್ಟು ಎಲ್ಲಾ ಒಟ್ಟಿಗೆ ಸೇರಿ ಒಂದು ದೊಡ್ಡ ಪ್ರಾಂತವನ್ನು ಮಾಡಿ, ಅಖಿಲ ಭಾರತದಲ್ಲಿ ಒಂದು ದೊಡ್ಡ ಸ್ಥಾನವನ್ನು ಸಂಪಾದಿಸೋಣ, ನಾವೆಲ್ಲರೂ ಭಾರತೀಯರು. ನಾವು ಮೈಸೂರಿನವರಾದರೂ ಮೊದಲು ಭಾರತೀಯರು ಎಂದು ತಿಳಿದು ಮುಂದುವರಿಯೋಣ. ಭಾರತದಲ್ಲಿ ಭಾಷೆಯ ಆಧಾರದಮೇಲೆ ಅಂದರೆ ಬಹು ಸಂಖ್ಯಾತರು ಯಾವ ಭಾಷೆ ಮಾತನಾಡುತ್ತಾರೋ ಆ ಆಧಾರದಮೇಲೆ, ಪ್ರಾಂತಗಳು ಆಗುವುದು, ಅಗತ್ಯವಿದೆ. ಇವೊತ್ತಿನ ದಿವಸ 2½ ಕೋಟಿ ಜನ ಮತ್ತು 47 ಸಾವಿರ ಚದುರ ಮೈಲಿ ಇರುವ ಒಂದು ಪ್ರಾಂತ್ಯವನ್ನು ಮಾಡಿಕೊಳ್ಳಬಹುದು. ಶ್ರೀ ವೀರಣ್ಣಗೌಡರು ಬೆಂಗಳೂರು ರಾಜಧಾನಿ ಮುಂದಕ್ಕೆ ಧಾರವಾಡಕ್ಕೆ ಹೋಗಬಹುದು ಎಂಬ ಒಂದು ಭೀತಿಯನ್ನು ಪ್ರದರ್ಶಿಸಿದರು. ಅಂಥ ಭೀತಿಗೆ ಎಡೆಯಿಲ್ಲ. ಬೆಂಗಳೂರು ಇಂಡಿಯಾದ Capital ಆಗಬೇಕು ಎಂದು ಹೇಳಿಕೊಳ್ಳುತ್ತಿರುವಾಗ ಕರ್ಣಾಟಕಕ್ಕೆ ಹುಬ್ಬಳ್ಳಿ ರಾಜಧಾನಿಯಾಗುತ್ತದೆ ಎಂದು ಹೇಳುವುದರಲ್ಲಿ ಸತ್ಯಾಂಶವಿಲ್ಲ. ನಮ್ಮ ಮಿತ್ರರು ಅನೇಕರು ಈ ವಿಚಾರದಲ್ಲಿ ಸ್ವಲ್ಪ ಭೀತಿ ತೋರಿಸಿದ್ದಾರೆ. ಅವರ ವಿಷಯದಲ್ಲಿ ನನಗೆ ಬಹಳ ಗೌರವವಿದೆ. ಅವರ ಹೃದಯವನ್ನು ಪರಿವರ್ತನೆ ಮಾಡುವುದಕ್ಕೆ ಏನಾದರೂ ಮಾಡಬೇಕೆಂದು ನಾನು ಪ್ರಯತ್ನಪಡುತ್ತಿದ್ದೇನೆ. ಇದರಿಂದ ಅವರ ಹೃದಯ ಪರಿವರ್ತನೆ ಆಗದಿದ್ದರೆ ಭಗವಂತನೇ ಅದನ್ನು ಮಾಡಬೇಕು. ಮಾನವನಿಗೆ ಸಾಧ್ಯವಿಲ್ಲ. ಭಗವಂತನೇ ಅವರ ಹೃದಯವನ್ನು ಪರಿವರ್ತನೆ ಮಾಡಿ ಮೈಸೂರು ಮತ್ತು ಇತರ ಪ್ರಾಂತಗಳು ಒಂದಾಗಿ ಸೇರಿ, ಕರ್ಣಾಟಕ ಭವ್ಯರಾಜ್ಯ ನಿರ್ಮಾಣವಾಗುವ ಹಾಗೆ ಈ ಸಭೆಯವರು ಅನುಮತಿ ಕೊಡಬೇಕೆಂಬುದಾಗಿ ಪ್ರಾರ್ಥಿಸುತ್ತೇನೆ.

*Sri M. PALANIYAPPAN (Ulsoor).—Now, we are discussing the facts placed by the Fact Finding Committee about the re-organisation of States. (*Interruption*). I will say what I want to say.

Mr. SPEAKER.—May I request the Hon'ble Member to be brief?

Sri M. PALANIYAPPAN.—This Committee has been constituted by the Government of Mysore to give correct salient figures about the developments made in other Kannada-speaking areas that are now forming parts and parcels of other provinces. Some of my friends have expressed that the Committee has not given correct support. But I would say that the Committee has given a correct picture of the position of the Kannadigas in those parts. Sir, this committee, with all responsible people, with men of wisdom and knowledge, have gone into detail. In respect of every detail that they have been asked to go into, they have given a report. As such, I do not think there is any reason why we should just say that the report is not correct. So, if you just take the facts as they are given in this picture, naturally it leads us to think that it is absolutely unnecessary to think why there should be a Karnataka. So when we see the conditions prevailing in other parts and the treatment imparted to Kannadigas in other parts of the States, it is really heart-burning to see what a step-motherly treatment these Kannadigas are getting in the hands of other Governments. So, as people from Mysore State who speak Kannada and since we have uniform language, it is but fair that we should extend a hand of friendship and welcome those friends who want to join us. Sir, we see today these Kannada-speaking people are so eager to join us, and I feel sorry or rather surprised that a long discussion is being continued here. This matter is prolonged for a long number of years and still it has not yet been finalised. I do not know whom I should blame for

this long delay, either the leaders of the Karnataka or the leaders of Mysore. If the leaders of Karnataka have not made an honest effort to form a Karnataka State, I think they should be blamed. If the leaders of Mysore State think that United Karnataka need not be formed, and the delay is due to them, the leaders of Mysore State should be blamed. But the present leader of the House, Hon'ble Sri K. Hanumanthaiya, is a man who has got a very good foresight and he is a man with full of wisdom. He said at Nanalnagar in January 1953 that the ice is cut and there should be linguistic provinces. Eight months after he made that statement, we saw the formation of Andhra Province, a province which was purely formed on the basis of language. Sir, some of my Hon'ble friends said that the formation of Andhra State was due not for linguistic reasons but from the point of administrative convenience. Sir, I beg to repudiate that statement on these grounds. The Central Government which has got its capital at New Delhi is able to administer from the Himalayas to Cape Comorin on one side and from Punjab to Bengal on the other. Sir, when a country could be administered throughout the length and breadth of India, is it difficult for a province to be administered from Vijayavada to Cape Comorin? The old Madras province including Andhra was being administered well for more than a century and a half. People have felt no difficulty so far as administration is concerned. But the reason for the formation of the Andhra province was this language problem, which was the main question. All Andhra people spoke Telugu. But the officers who went to rule them knew only Tamil or languages other than Telugu. So it was very difficult for those people to be able to move or to express their grievances or to get any aid from such officers. Because the population of Tamilians was greater in number, the officers who spoke Tamil were more in number. It was difficult for Telugu people to get what they wanted, to get all the amenities. So, it was absolutely necessary for these people to have a separate State, to have their own administration where they could have their own way of expressing things, to have their own administration in their own regional language. So the people of Andhra felt that it was a dire necessity to have a separate province separated from Madras. So, Sir, we see that the linguistic province of Andhra, a province for Telugu-speaking people was formed.

11-30 A.M.

And another argument was advanced to say that if the area was very big, it would not be possible to administer it. The Minister or the concerned authorities may not be able to tour all over the area and give proper administration. Sir, in these days when man is trying to control Nature, this distance is not the criterion. We have got means to travel thousands of miles in an hour and we can cover any distance within a short time. In fact, in those days when science had not advanced and we had no quick travelling facilities, it was difficult for the people to go to England. But if we make up our mind to-day to go to England, we have got such conveniences and facilities that we can reach England in a day or two. When we have controlled science to such an extent, the question of distance does not come in the way of expansion of territories.

Sir, the question of having two Karnatakas was also discussed. When people are anxious to join Mysore, I do not see any reason why we should not allow them to join us. Mysore is a progressive State. We have got the goodwill from all over India. In order to maintain that good name, we have to expand the boundaries of Mysore. Just like Bellary has joined us, we shall also extend our goodwill to other areas to join us. If we show such a gesture of goodwill, we shall maintain the fair name of Mysore State for ever and ever. Having two Karnatakas will be something like having two swords in one sheath and it would not be a profitable proposition.

Sir, one of the Hon'ble Members, Sri K. Puttaswamy has elaborately

(SRI M. PALANIYAPPAN.)

spoken on the under-developed areas of Karnatak State which want to join Mysore State. He just gave a long list of hospitals, veterinary dispensaries, and schools they have, roads and other things. These figures reveal only the state of affairs of those areas and it is to be regrerted that these areas are being neglected by the provinces to which they belonged. Now the time has come to us to go to their rescue by taking them into our fold, and develop those areas which are more backward than us. This argument may not be tenable to some of my Hon'ble friends. I would just like to bring one or two instances to their notice and convince them that those areas could be developed without any strain on our financial resources. The other day Sri Pandit Nehru, the Prime Minister, made a long statement about the importance of Indians in South Africa. Though the people of South Africa are there for several centuries, yet they belonged to Indian soil. They have gone and settled there. The treatment that is meted out to them in South Africa is very heart-burning one. So, our Prime Minister has gone to their rescue just because they are Indians. He has rightly felt that it was his duty to take up their cause and he is fighting for their cause. So also in Ceylon. You see the people there are all Tamilians. They are being ill-treated by the Ceylon Government and they are being driven out from Ceylon. Our Prime Minister has contacted the Prime Minister of Ceylon on this vital question of treatment of Indians in Ceylon and he has advised him not to treat the Indians in the way in which they are now being treated. Why has he done? Is it because they are connected with him? No. It is because they are Indians; because they speak our language and so on. Similarly if we see any Kannadiga is being treated badly by a non-kannadiga, it is but right to go to his rescue. They should be given a chance to join us. Therefore the formation of a Karnatāka State on linguistic basis is a feasible one. I would strongly urge that this Kannada State should be formed or the States should be reorganised on linguistic basis. It is going to be done and it is going to happen in the immediate future. Today we see in the State of Bombay, people speaking Marati, people who speak Hindi, people who speak Kannada and other languages. If we just go and see the Assembly of Bombay State, we can see the members speaking all kinds of languages. It is something like variety entertainment. What one man speaks may not be understood by another man. When such is the condition, how is it possible to impart justice to the people in a democratic State? We should think about it deeply. We should not have any caste, creed or colour except language. Language is the only media through which we should adjust our territory. A man who speaks Telegu or Kannada or any other language, should forget for a moment that he is a Brahmin or a Mudaliyar or a Naidu or a Vokkaligar. He should sink his differences that he is Kannadiga. In a secular State we should think all as one. We can never wipe out the caste system. It is but fair that in a secular State, when we have taken allegiance to the Constitution of India, wherein it has been clearly stated that there should be one race, one religion, it is but necessary that we should form a linguistic State. We had postponed this issue for the last 7 years. Now the time has come for every one of us to adjust ourselves and implement the provisions of the Constitution word by word and I would request every Hon'ble Member of this House to avoid all differences, if any, and to give consent for the formation of a Karnatak State.

Sir, with regard to the natural resources, we have got a lot of resources in these Kannada-speaking areas. Some friends have stated that by taking those areas, our State will have a huge deficit budget. I think those people are also to be taxed and none of those people who come from these Kannada areas refuse to pay any tax which may be imposed upon them. They are prepared to pay taxes just like other Mysoreans are paying. In order to develop those undeveloped

areas the people of those areas might be taxed, and those people would never stint to pay taxes.

Further, Sir, I may assure this Hon'ble House that the Kannada people will never demand locating the capital of Mysore either at Hubli, Dharwar or Davanagere except Bangalore City. Because Bangalore is a beautiful place and has a very salubrious climate. Those people will never try to shift the capital to Davanagere. In Bangalore, it is quite possible to have Parliamentary Sessions instead of Delhi. It is going to become one of the important Cities of the World. After the completion of the Vidhana Soudha, we will be having a very beautiful building. Naturally no Kannadiga would try to have the capital City in Davanagere. Let not my other friends think that Bangalore City would be completely neglected or ignored. On the other hand, every Kannadiga will have greater love and greater attraction for Bangalore than for Davanagere or Hubli.

Mr. SPEAKER.—Bangalore may attract even Delhi.

Sri M. PALANIYAPPAN.—Then we will have Delhi as our Capital. We shall expand Karnatak State up to Delhi. Less number of schools, hospitals or small dispensaries or maternity homes, are not the criterion to form a State. If we just make up our mind, tomorrow we can build any number of schools. In those places, we have got big business magnates, persons blessed with great wealth and people of philanthropic outlook. If we just approach them for constructions of these schools and dispensaries, they will be prepared to build any number of hospitals, high schools or dispensaries. Sir, when States like Hyderabad, Rajasthan, Travancore-Cochin, Mysore State have merged with the Union Government and when the Karnatak State is also formed, the question of big State would not exist independently. It is natural they should also join with us, because they cannot resist the current of feelings that is being exhibited by the people.

Further, I would just like to bring to you notice that by having a Karnatak State, we will be having a sea-port and we will have about 200 miles of sea-coast running on the borders of our State. By having a sea-port, we could improve our trade and commerce and we could have shipping facilities. We could have a shipyard in our State. We could also collect a lot of customs duty from the sea-port and thus augment our financial resources. Even without Karnataka and other things, we are already having a deficit of nearly Rs. 4 crores. After the inclusion of those areas, the deficit might be Rs. 5 crores, but that does not matter when compared to the advantages that would accrue to us by having those areas. If all the Kannadigas are joined together, we will be free to express our feelings in the same common mother tongue instead of speaking in Hindi, Gujarati or in any other language. In our democratic State we must have freedom to express our ideas in our own mother tongue. We cannot expect people to talk such and such language. When Bills or Acts are framed, it is for him to answer in his mother tongue or in his own language.

With these few words, I would earnestly appeal to every Hon'ble Member here to support the Karnatak movement for the reasons mentioned by me. We know that injustice is being done to these Kannada-speaking areas; it is but fair that we should take them into our fold and form a Karnatak State. . . .

*ಶ್ರೀ ಜಿ. ಎಸ್. ಬೊಮ್ಮೆಗೌಡ (ಮಂಡ್ಯ).—ಮಾನ್ಯ ಸಭಾಪತಿಗಳೇ, ಈ ದಿವಸ ನಮ್ಮ ಮುಂದಿರತಕ್ಕ ಶೇಷಾದ್ರಿ ಸಮಿತಿಯವರ ವರದಿಯಮೇಲೆ ಅನೇಕ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಆದರೆ, ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಮುಂಚಿತವಾಗಿ ನಾವು 32,000 ಚದರ ಮೈಲಿಯಲ್ಲಿರತಕ್ಕ ಮೈಸೂರಿನ ಮಾನವ ಕೋಟಿಯ ಪ್ರತಿನಿಧಿಗಳಾಗಿ ಆರಿಸಿ ಬಂದಿದ್ದೇವೆಂಬುದನ್ನು ಯಾವ ವಿಧದಲ್ಲೂ ಮರೆಯಬಾರದು. ಆ ರೀತಿ ಭಾವಿಸಿಕೊಂಡು ಮಾತನಾಡುತ್ತಾ, ಕೆಲವು ಸ್ನೇಹಿತರು ಮೈಸೂರು ಬಹಳ ಮಟ್ಟಿಗೆ ಪ್ರಗತಿ ಸಾಧಿಸಿದೆ, ಇಲ್ಲಿ ಬೇಕಾದಷ್ಟು ಅನುಕೂಲತೆಗಳಿವೆ, ಯಾರು ನಮ್ಮ ಜೊತೆಯಲ್ಲಿ ಸೇರಬೇಕೆಂದು ಹೇಳುತ್ತಾರೋ ಅವರು ಸೇರಿದರೆ ನಮ್ಮ ಪ್ರಗತಿ ಕುಂಠಿತವಾಗುತ್ತದೆಂದು ಅಭಿಪ್ರಾಯಪಡುತ್ತಿದ್ದಾರೆ. ಆದರೆ, ಮಾನ್ಯ ಸ್ನೇಹಿತರು ಹೇಳಿದಹಾಗೆ ಎಲ್ಲ ಅನುಕೂಲತೆಗಳೂ, ಐಶ್ವರ್ಯಗಳೂ ನಮಗಿದ್ದರೆ ಅವರನ್ನು ಸ್ವಾಗತಿಸುವವರಲ್ಲಿ ನಾನು

(ಶ್ರೀ ಜಿ. ಎಸ್. ಬೊಮ್ಮೇಗೌಡ.)

ಮೊದಲನೆಯವನಾಗುತ್ತಿದ್ದೆ. ಆದರೆ ಹಾಗೆ ಮಾಡಲು ಸಾಧ್ಯವಿಲ್ಲ. ನಾವು ಮುಖ್ಯವಾಗಿ ಯಾರ ಭವಿಷ್ಯವನ್ನು ನಿರ್ಧರಿಸಲು ಪ್ರತಿನಿಧಿಗಳಾಗಿ ಆರಿಸಿ ಬಂದಿದ್ದೇವೋ ಅವರ ಹಿತಚಿಂತನೆಯನ್ನು ನಾವು ಗಮನದಲ್ಲಿಡವೇಕು. ಮಾನ್ಯ ಸ್ನೇಹಿತರುಗಳಿಗೆಲ್ಲರಿಗೂ ಗೊತ್ತಿರುವಹಾಗೆ ಇಂದು ಪ್ರಶ್ನೋತ್ತರಗಳಕಾಲದಲ್ಲಿ ಪ್ರತಿಯೊಬ್ಬರೂ ತಮ್ಮ ತಮ್ಮ ಕೋಮಿಗೆ ಎಷ್ಟೆಷ್ಟು ಪ್ರಾತಿನಿಧ್ಯಕೊಟ್ಟಿದೆಯೆಂದು ಕೇಳಿ ಅದರ ಯುಕ್ತಾಯುಕ್ತತೆಯನ್ನು ಪ್ರಶ್ನಿಸುವುದನ್ನು ಕಂಡಿದ್ದೇವೆ. ಆದ್ದರಿಂದ ಮೂಲ ಕೋಮುಯಾವುದು, ಯಾವುದಕ್ಕೆ ಹೆಚ್ಚಿಗೆ ಪ್ರಾತಿನಿಧ್ಯ ದೊರಕಿಸಿಕೊಡಬೇಕೆಂಬುದನ್ನು ನಾವು ಈಗ ಪರಿಗಣಿಸಬೇಕಾಗಿದೆ. ನಮ್ಮ ದೇಶದಲ್ಲಿ ಕೆಲವರು ಸುಖದಲ್ಲೇ ಹುಟ್ಟಿ ಸುಖದಲ್ಲಿಯೇ ಬೆಳೆದು, ಸುಖದಲ್ಲಿ ತೇಲಾಡುತ್ತಿರುವುದನ್ನು ಕಾಣುತ್ತಿದ್ದೇವೆ. ಇನ್ನೊಂದು ಭಾಗದ ಜನರು ಕಷ್ಟದಲ್ಲಿ ಹುಟ್ಟಿ, ಕಷ್ಟದಲ್ಲಿ ಬೆಳೆದು, ಕಷ್ಟದಲ್ಲಿ ಸಾಯುತ್ತಿದ್ದಾರೆ. ಜೀವನದಲ್ಲಿ ಸುಖವೆಲ್ಲಿದೆಯೆಂದು ಕಾಣದಿರುವ ಬಹುಭಾಗದ ಜನ ನಮ್ಮ ದೇಶದಲ್ಲಿದ್ದಾರೆ. ನಮ್ಮವರು ಎಷ್ಟು ಕಷ್ಟಪಟ್ಟು ಈ ದೇಶವನ್ನು ಕಟ್ಟಿದ್ದಾರೆ ಅನ್ನುವುದನ್ನು ನಾವು ಪ್ರತಿಕ್ಷಣದಲ್ಲೂ ನೆನಸಿಕೊಳ್ಳಬೇಕಾಗಿದೆ. ಈ ದಿವಸದ ಪ್ರಶ್ನೆಯನ್ನು ನಾವು ನಿರ್ಧಾರಮಾಡಬೇಕಾಗಿದ್ದರೆ ಇದನ್ನು ಯಾವ ದೃಷ್ಟಿಯಿಂದ, ಯಾವ ರೀತಿಯಾಗಿ ಬಗೆಹರಿಸಿದರೆ ನಮಗೆ ಬರತಕ್ಕಂಥ ತೊಂದರೆಗಳೆಲ್ಲಾ ನಿವಾರಣೆ ಯಾಗುತ್ತವೆ. ಅನ್ನುವುದನ್ನು ನಾವೀಗ ಮುಖ್ಯವಾಗಿ ಪರ್ಯಾಲೋಚನೆ ಮಾಡಬೇಕಾಗಿದೆ. ಶ್ರೀ ಪಿ. ಆರ್. ರಾಮಯ್ಯನವರು ಇದರಬಗ್ಗೆ ಬಹಳವಾಗಿ ಹೇಳಿದ್ದಾರೆ. ಅಮೇರಿಕಾ ದೇಶದಲ್ಲಿ 18 ಕೋಟಿ ಜನಸಂಖ್ಯೆಯಿದ್ದರೂ ಅವರೆಲ್ಲರೂ ಒಂದೇ ಭಾಷೆಯಲ್ಲಿ ಮಾತನಾಡತಕ್ಕಂಥ ಜನರಾಗಿದ್ದಾರೆ—ಆದರೂ ಅಲ್ಲಿ ರಾಜ್ಯಾಡಳಿತದ ದೃಷ್ಟಿಯಿಂದ ಬೇರೆ-ಬೇರೆ ರಾಜ್ಯಗಳನ್ನು ಮಾಡಿದ್ದಾರೆ. ಹಾಗೆ ಒಂದು ಭಾಷೆಯನ್ನಾಡತಕ್ಕ ಜನರೆಲ್ಲಾ ಒಂದೇ ರಾಜ್ಯದಲ್ಲಿರಬೇಕೆಂದು ಹೇಳುವುದಾಗಿದ್ದರೆ ಆ ಅಮೆರಿಕಾ ದೇಶದಲ್ಲಿ ಈ ದಿವಸ ಆ 48 ಸ್ಟೇಟುಗಳು ಇರಬೇಕಾದ್ದಿರಲಿಲ್ಲ. ಒಂದು ಭಾಷೆ ಆಡತಕ್ಕವರೆಲ್ಲಾ ಒಂದೇಕಡೆ ಇರಬೇಕೆಂಬ ನಿಯಮವೇನೂ ಇಲ್ಲ. ನಮ್ಮ ಹಿರಿಯರಾದರೂ 'ಬದುಕಿ ಬಾಳಿದವರನ್ನೆಲ್ಲಾ ನೋಡಿ ನಾವೂ ಅವರಂತೆ ಬಾಳಬೇಕು' ಅಂತ ಹೇಳುತ್ತಿದ್ದರೇ ವಿನಾ ಒಂದು ಭಾಷೆಯಾಡತಕ್ಕವರೆಲ್ಲಾ ಒಂದೇಕಡೆ ಇರಬೇಕೆಂದೇನೂ ಹೇಳಿರುವುದಿಲ್ಲ. ಮುಂದೆ ನಮ್ಮ ರಾಜ್ಯಗಳನ್ನು ನಾವು ಅನುಷ್ಠಾನಕ್ಕೆ ತರುವಾಗ ನಾವು ನಮ್ಮ ಹಿರಿಯರು ಹೇಳುತ್ತಿದ್ದಂಥ ವಚನದ ಪ್ರಕಾರ ಮಾಡಬೇಕಾದ್ದು ನಮ್ಮೆಲ್ಲರ ಕರ್ತವ್ಯವಾಗಿದೆ. ಶ್ರೀ ಪಿ. ಆರ್. ರಾಮಯ್ಯನವರು ಹಿಂದೂ ಧರ್ಮ, ಹಿಂದೂ ಸಂಸ್ಕೃತಿಗಳ ವಿಚಾರವಾಗಿ ಬಹಳ ಹೇಳಿದರು. ಆದರೆ ಈ ದಿವಸವೂ ಸಹ ನಾವು ಯಾರೇ ಆಗಲಿ ಒಂದು ಒಳ್ಳೆಯ ಕಾರ್ಯವನ್ನು ಮಾಡಬೇಕೆಂದು ಹೇಳುವಕಾಲದಲ್ಲಿ ಒಂದು ಒಳ್ಳೆಯ ಶಕುನ ಅದಕ್ಕೆ ಆಗಬೇಕಾದ್ದು ಅಗತ್ಯ ಅನ್ನತಕ್ಕಂಥ ಒಂದು ಸಾಂಪ್ರದಾಯ ನಮ್ಮೆಲ್ಲರಲ್ಲೂ ಬೆಳೆದುಕೊಂಡು ಬಂದಿದೆ. ಆದರೆ ಈ ದಿವಸ ಇಲ್ಲಿ ಚರ್ಚೆನಡೆಯುತ್ತಿರುವ ಕಾಲದಲ್ಲಿ ಏನೇನು ಪದಗಳ ಪ್ರಯೋಗವಾಗುತ್ತಿವೆ, ಚರ್ಚೆಯು ಯಾವ ವಿರೋಧ ಮಟ್ಟದಲ್ಲಿ ನಡೆಯುತ್ತಿದೆ, ಯಾರಯಾರ ಮುಖ ಹೇಗೆ ಆಗಿರುತ್ತವೆ ಅನ್ನುವುದನ್ನು ನೋಡಿದರೆ ಇದರ ಲಕ್ಷಣ ಹೇಗಿದೆ ಅನ್ನುವುದು ಗೊತ್ತಾಗುತ್ತದೆ. ಈ ವಿಷಯವನ್ನು ಮಾತನಾಡುತ್ತಿರುವಾಗ ಹೀಗೆ ಭಿನ್ನಾಭಿಪ್ರಾಯಗಳು ಉದ್ಭವಿಸುವುದರಿಂದ ಈ ವಿಷಯ ಎಂಥಾದ್ದು ಅನ್ನುವುದನ್ನು ನಾವು ಪರಿಶೀಲನೆ ಮಾಡಬೇಕಾಗಿದೆ. ಈ ದಿವಸ ನಮ್ಮ ದೇಶದಲ್ಲಿರತಕ್ಕಂಥ ದೀನದರಿದ್ರತೆಯು ತೊಲಗುವವರೆಗೂ ಈ ಆಡಳಿತದ ವ್ಯವಸ್ಥೆಯು ಒಂದು ಅಚ್ಚುಕಟ್ಟಾದ ಚೌಕಟ್ಟಿನೊಳಗೇ ಇರಬೇಕಾದ್ದು ಅತ್ಯಗತ್ಯ. ಈಗಾಗಲೇ ನಮ್ಮ ದೇಶದ ಜನಸಂಖ್ಯೆ ಹೆಚ್ಚಾಗುತ್ತಾ ಬಂದಿದೆ. ಒಂದೊಂದು ಸಂಸಾರದಲ್ಲಿ ಎಷ್ಟೆಷ್ಟು ಜನರಿರಬೇಕು, ಈ ದಿವಸ ಪ್ರತಿಯೊಂದು ಸಂಸಾರದಲ್ಲೂ ಎಷ್ಟು ಜನಗಳಿರುತ್ತಾರೆ ಅನ್ನುವುದಕ್ಕೆ ಹೋಲಿಕೆ ಹಾಕಿ ನೋಡಿದರೆ ಒಂದಕ್ಕೊಂದಕ್ಕೆ ಅಜಗಜಾಂತರ ವ್ಯತ್ಯಾಸವಿದೆ. ಈ ದಿವಸ ಇಂಥ ಒಂದೊಂದು ದೊಡ್ಡ ಕುಟುಂಬದಲ್ಲಿ ಇರುವಂಥ ಪ್ರತಿಯೊಬ್ಬ ವ್ಯಕ್ತಿಯೂ ಹೊಟ್ಟೆತುಂಬಾ ಊಟಮಾಡಿಕೊಂಡು ವಾಸಮಾಡಲು ಆ ಕುಟುಂಬದಲ್ಲಿರತಕ್ಕವರೆಲ್ಲರಿಗೂ ಒಂದು ಸರಿಯಾದ ಸಂಪಾದನೆಯ ಮಾರ್ಗವಿದೆಯೇ ಅಂದರೆ ಅಂಥಾದ್ದು ಯಾವುದೂ ಇದ್ದಹಾಗೆ ಕಂಡುಬರುವುದಿಲ್ಲ. ಅದಕ್ಕಾಗಿಯೇ ಪ್ರತಿಯೊಂದು ದೊಡ್ಡದೊಡ್ಡ ಕುಟುಂಬವೂ ಈ ದಿವಸ ತಮ್ಮ ಜೀವನೋಪಾಯಕ್ಕಾಗಿ ಬಹಳ ಕಷ್ಟಪಡಬೇಕಾಗಿದೆ. ಆದಾಗ್ಯೂ ಈ ದಿವಸ ನಮ್ಮ ಸರ್ಕಾರದ ಆಡಳಿತ ಒಂದು ಚೌಕಟ್ಟಿನಲ್ಲಿರುವುದರಿಂದ ಈ ಸಂಸಾರಗಳೆಲ್ಲಾ ಬಹಳ ಕಷ್ಟದಿಂದ ಪ್ರಗತಿದಾಯಕವಾದ ಮಾರ್ಗದಲ್ಲಿ ನಡೆದುಕೊಂಡು ಬರುತ್ತಿರುವುದನ್ನು ನಾವೆಲ್ಲರೂ ನಮ್ಮ ಕಣ್ಣುಮುಂದೆ ಈ ದಿವಸ ನೋಡಬಹುದಾಗಿದೆ. ಈ ರಾಜ್ಯಗಳ ಪುನರ್ವಿಂಗಡಣೆಯ ವಿಚಾರದಲ್ಲಿ ಈಗಾಗಲೇ ನನ್ನ ಅನೇಕ ಮಾನ್ಯ ಸ್ನೇಹಿತರು ಅನೇಕ ಸಮಸ್ಯೆಗಳನ್ನು ಸಭೆಯಮುಂದಿಟ್ಟಿರುತ್ತಾರೆ. ಮತ್ತು ಕೆಲವು ಮಾನ್ಯ ಸದಸ್ಯರು ಇದನ್ನು ಏತಕ್ಕಾಗಿ ಹೀಗೆ ಒತ್ತಾಯ ಮಾಡುತ್ತಿದ್ದಾರೆ ಅನ್ನುವುದನ್ನೂ ಕೂಡ ತಿಳಿಸಿದ್ದಾರೆ. ಆದರೆ ಈ ದಿವಸ ಈ ಭಾಷಾ ದೃಷ್ಟಿಯಿಂದಲೇ ಅಗಲೀ ಅಥವಾ ಮತ್ಯಾವ ದೃಷ್ಟಿಯಿಂದಲೇ ಆಗಲೀ ಈ ಕರ್ಣಾಟಕ ಏಕೀಕರಣವಾಗಬೇಕೆಂದು ಹೇಳುತ್ತಿರುವ ವಿಚಾರದಲ್ಲಿ ನಿಮ್ಮ ಅಭಿಪ್ರಾಯವೇನೆಂದು ನಾವು ಜನರನ್ನು ಕೇಳಿದರೆ—ಒಬ್ಬ ಸಾಮಾನ್ಯ ಬಡವನಾಗಿರತಕ್ಕಂಥ ಮನುಷ್ಯ ಏನು ಹೇಳುತ್ತಾನೆಂದರೆ, ಸ್ವಾಮಿ; ದೇಶದಲ್ಲಿ ತಿನ್ನುವುದಕ್ಕೆ ಅನ್ನ, ಉಡುವುದಕ್ಕೆ ಬಟ್ಟೆ, ವಾಸಕ್ಕೆ ಮನೆ, ಇಷ್ಟಿದ್ದರೆ ನಮಗೆ ಸಾಕೇ ಹೊರತು ನಮಗೆ ಮತ್ತೇನೂ ಬೇಡ ಅಂತ ಹೇಳುತ್ತಾನೆ. ಈ ದಿವಸ ನಮ್ಮ ದೇಶದಲ್ಲಿರತಕ್ಕಂಥ ಜನರೆಲ್ಲಾ ಇದೇ ಅಭಿಪ್ರಾಯವನ್ನುಳ್ಳವರಾಗಿದ್ದಾರೆ. ನಮ್ಮ ದೇಶದಲ್ಲಿ ಜನತೆಯ ಅಭಿಪ್ರಾಯ ಹೀಗಿರುವಾಗ ಆ ಬ್ರಿಟಿಷರು ಇಲ್ಲಿ ಆಡಳಿತ ನಡೆಸುತ್ತಿದ್ದಾಗ ಅವರು ಈ ರಾಜ್ಯಗಳ ವಿಸ್ತೀರ್ಣದ ಒಂದು ವ್ಯಾಮೋಹಕ್ಕೆ ಹೇಗೆ ಗುಲಾಮರಾಗಿ ಬಲಿಬಿದ್ದಿದ್ದರೋ ಹಾಗೆ ನಾವೀಗ ಈ ಭಾಷಾಭಿಮಾನದ ವ್ಯಾಮೋಹಕ್ಕೆ ಬಲಿಬಿದ್ದು ಇದಕ್ಕೆ ನಾವು ಗುಲಾಮರಾಗಬಾರದು, ಅಂಥಾ ಸ್ಥಿತಿ ಬರಬಾರದು ಅಂತ ಅಭಿಪ್ರಾಯ ಪಡತಕ್ಕವರಲ್ಲಿ ನಾನೊಬ್ಬನಾಗಿದ್ದೇನೆ. ಆದರೆ ನನ್ನ ಅಭಿಪ್ರಾಯ ನಾವೇ ಬೇರೆ ಆ ಕನ್ನಡ ಬಂಧುಗಳೇ ಬೇರೆ ಅಂತ ಹೇಳುವುದಿಲ್ಲ. ನಮ್ಮ ಅವರ ಎಲ್ಲರ ಕ್ಷೇಮವೂ ಒಂದೇ. ಆದರೆ ಈ ದಿವಸ ನಾವು ಈ ಭಾಷಾ ಪ್ರಗತಿಗೋಸ್ಕರವಾಗಿಯೇ ಈ ಕರ್ಣಾಟಕ ರಾಜ್ಯ ಸ್ಥಾಪನೆ ಮಾಡುವುದಕ್ಕಾಗುವುದಿಲ್ಲ. ಸಿವಿಲ್ ಮತ್ತು ಕ್ರಿಮಿನಲ್ ವ್ಯಾಜ್ಯಗಳು ಒಂದೇ ಜಾತಿಗೆ ಸೇರದೇ ಇದ್ದಾಗ್ಯೂ ಇವುಗಳಲ್ಲಿ ವ್ಯತ್ಯಾಸವಿದ್ದರೂ ಈ ವ್ಯಾಜ್ಯಗಳನ್ನು ನಡೆಸತಕ್ಕಂಥ ಕೋರ್ಟುಗಳಲ್ಲಿ

ಯಾವ ವ್ಯತ್ಯಾಸವೂ ಇಲ್ಲ ಅಂತ ಹೇಳಿದಹಾಗೆ ಈ
ವಿಚಾರವೂ ಇರುತ್ತದೆ. ನಾವು ಈ ವಿಷಯವನ್ನು
ಇಷ್ಟೊಂದು ಕಡ್ಡಾಯವಾಗಿ ಒಪ್ಪಿಕೊಳ್ಳುವುದಕ್ಕಾಗು
ವುದಿಲ್ಲ. ಈ ರಾಜ್ಯಾಡಳಿತದ ಹಿತದೃಷ್ಟಿಯಲ್ಲಿ ಈಗಾ
ಗಲೇ ಶ್ರೀ ಡಿ. ದೇವರಾಜ ಅರಸ್ ನವರು ಹೇಳಿರು
ವಂತೆ ಆಡಳಿತದ ಪ್ರದೇಶ ಎಷ್ಟು ಚಿಕ್ಕದಾಗಿದ್ದರೆ
ಆಡಳಿತ ಅಷ್ಟೂ ಚೆನ್ನಾಗಿ ನಡೆದುಕೊಂಡು ಹೋಗಲು
ಅವಕಾಶವಾಗುತ್ತದೆ. ಇಂಥ ಪ್ರಾಮುಖ್ಯವಾದ
ವಿಷಯಗಳನ್ನು ಪರಿಗಣಿಸದೆ ಇಲ್ಲಿ ಹೇಗೆ ಪ್ರಕೃತಿ
ಸಂಪತ್ತಿದೆಯೋ ಅಲ್ಲಿಯೂ ಪ್ರಕೃತಿ ಸಂಪತ್ತಿದೆ ಅಂತ
ಹೇಳುತ್ತಿದ್ದಾರೆ. ಆದರೆ ಅಂಥ ಸಂಪತ್ ಸಾಧನಗಳ
ನ್ನೆಲ್ಲಾ ಮಾನವನ ಕಲ್ಯಾಣಕ್ಕಾಗಿ ಅಳವಡಿಸಿಕೊಂಡು,
ನಾವೂ, ಅವರೂ ಸೇರಿ ಅಭಿವೃದ್ಧಿ ಹೊಂದೋಣ ಅನ್ನ
ತಕ್ಕಂಥ ಮನೋಭಾವವೇನೋ ಬಹಳ ಅಮೋಘ
ವಾದದ್ದೇ ಹೌದು. ಆದರೆ ಅದಕ್ಕಾಗಿ ನಾವೀಗ
ಒಂದೊಂದು ರಾಜ್ಯದ ಎಲ್ಲೆಯನ್ನೂ ಕೇವಲ 50 ಲಕ್ಷ
ಕ್ಕಾಗಲೀ ಅಥವಾ 30 ಲಕ್ಷ ಜನಸಂಖ್ಯೆಗಾಗಲೀ
ಮಾಡುವುದು ಬೇಡ. ಆದರೆ ನಾವು ಈ ಹಿಂದೆ
ಸ್ವಾತಂತ್ರ್ಯ ಸಂಪಾದನೆಯ ಕಾಲದಲ್ಲಿ ಒಂದುಕೋಟಿ
ಪ್ರಜಾ ಸಂಖ್ಯೆಗೆ ಒಂದು ಸ್ಟೇಟ್ ಇರುವಂತೆ ಈ
ರಾಷ್ಟ್ರಗಳ ಪುನರ್ನಿರ್ಮಾಣ ಮಾಡೋಣವೆಂದು ಏನು
ನಾವುಗಳೊಂದು ಗುರಿಯನ್ನು ಇಟ್ಟುಕೊಂಡಿದ್ದೆವೋ
ಅದಕ್ಕನುಸಾರವಾಗಿ ಈಗ ನಡೆಯೋಣ. ಒಂದು
ಕೋಟಿ ಪ್ರಜಾ ಸಂಖ್ಯೆಗೆ ಒಂದು ರಾಜ್ಯವಿರತಕ್ಕದ್ದು
ಯುಕ್ತವೆಂಬುದಾಗಿ ಈಗ ಈ ಮಾನ್ಯ ಸಭೆಯೂ ಅಭಿ
ಪ್ರಾಯಪಟ್ಟಿದೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ (ಹೊಸಕೋಟೆ-
ಆನೇಕಲ್).—ಮಾನ್ಯ ಸಭಾಪತಿಗಳೇ, ಈಗ ಸಭೆಯ
ಮುಂದೆ ಚರ್ಚೆಗಾಗಿ ಇಟ್ಟಿರತಕ್ಕಂಥ ಈ ಶೇಷಾದ್ರಿ
ವರದಿಯ ಸಂಬಂಧದಲ್ಲಿ ಈಗ ಈ ನಮ್ಮ ಮೈಸೂರು
ದೇಶ ವಿಶಾಲವಾಗಬೇಕೇ ಅಥವಾ ಈ ನಮ್ಮ
ಮೈಸೂರು ಮುಂದೆಯೂ ಹೀಗೆಯೇ ಇರಬೇಕೇ ಅನ್ನು
ವುದು ಚರ್ಚೆಯಾಗುತ್ತಿದೆ. ಈ ವಿಷಯದಲ್ಲಿ ಈಗಾ
ಗಲೇ ಮಾತನಾಡಿರತಕ್ಕಂಥ ಮಾನ್ಯ ಸದಸ್ಯರುಗಳನೇ
ಕರು ಪರವಾಗಿಯೂ ಮತ್ತು ವಿರೋಧವಾಗಿಯೂ
ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರು
ತ್ತಾರೆ. ಆದರೆ ದೇಶ ವಿಶಾಲವಾಗಬೇಕೆಂಬ ಅಭಿ
ಪ್ರಾಯದಲ್ಲಿ ಕೆಲವು ಮಾನ್ಯ ಸದಸ್ಯರು ಭಿನ್ನಾಭಿಪ್ರಾ
ಯವನ್ನು ವ್ಯಕ್ತಪಡಿಸಿರುವುದು ಬಹಳ ಆಶ್ಚರ್ಯವಾಗಿ
ರುತ್ತದೆ. ಈ ದಿವಸ ಆಡಳಿತ ದೃಷ್ಟಿಯಿಂದಲೂ
ಕೂಡ ಮೈಸೂರು ವಿಶಾಲವಾದರೆ ಅಂಥ ಅಡಚಣೆ
ಗಳೇನೂ ಆಗುವುದಿಲ್ಲವೆಂಬುದನ್ನು ನಮ್ಮ ಇಂದಿನ
ಚರಿತ್ರೆಯೇ ಹೇಳುತ್ತದೆ ಈ ದಿವಸ ನಮ್ಮ ಜನರ
ಬೆಂಬಲ ಆ ಪಾರ್ಲಿಮೆಂಟಿನಲ್ಲಿ ಸಾಕಷ್ಟು ಇಲ್ಲದಿರುವು
ದರಿಂದ ನಾವು ನಮ್ಮ ದೇಶಾಭಿವೃದ್ಧಿಗೆ ಕೇಂದ್ರ
ಸರ್ಕಾರದಿಂದ ಸಾಕಷ್ಟು ಅನುಕೂಲತೆಗಳನ್ನು ಪಡೆ
ಯುವುದಕ್ಕಾಗದಿರುವುದೇ ದೇಶದ ದುರ್ಗತಿಗೆ ಮುಖ್ಯ
ಕಾರಣ. 500 ಜನರು ಇರತಕ್ಕಂಥ ಪಾರ್ಲಿಮೆಂಟಿ
ನಲ್ಲಿ ಮೈಸೂರಿನಿಂದ ಹೋಗತಕ್ಕಂಥವರ ಸಂಖ್ಯೆ
13-14 ಮಾತ್ರ ಇರುವುದರಿಂದ ಪಾರ್ಲಿಮೆಂಟಿನಲ್ಲಿ
ಸಾಕಷ್ಟು ಪ್ರಭಾವವನ್ನು ಬೀರುವುದಕ್ಕಾಗಿಲ್ಲ.
ಅದಕ್ಕೆ ಬದಲಾಗಿ ಈ ದಿವಸ ಆ ಪಾರ್ಲಿಮೆಂಟಿಗೆ
ನಮ್ಮ ದೇಶದಿಂದ 30-40 ಜನ ಸದಸ್ಯರು ಹೋಗಿ
ಕುಳಿತುಕೊಳ್ಳುವುದಕ್ಕೆ ಒಂದು ಅವಕಾಶ ಸಿಕ್ಕಿದೆ.
ಈಗ ನಮ್ಮ ದೇಶಾಭಿವೃದ್ಧಿ ಕಾರ್ಯಗಳು ಚೆನ್ನಾಗಿ
ನಡೆಯುವಂತೆ ಆ ಪಾರ್ಲಿಮೆಂಟ್ ಮುಂದೆ ಒತ್ತಾಯ
ಮಾಡಿ ಕೇಂದ್ರ ಸರ್ಕಾರದಿಂದ ಹೆಚ್ಚಿನ ಸಹಾಯ
ಗಳನ್ನು ಪಡೆಯುವುದಕ್ಕೆ ಅವಕಾಶವಿರುತ್ತಿತ್ತು. ಈ
ಒಂದು ಮುಖ್ಯ ಕಾರಣಕ್ಕಾಗಿ ವಿಶಾಲ ಮೈಸೂರು
ಆಗಲೇಬೇಕಾಗಿದೆ ಎಂದು ಹೇಳಬಹುದಾಗಿದೆ. ಆದರೆ
ಕೆಲವು ಮಹನೀಯರು ಈಗ ಸಧ್ಯಕ್ಕೆ ನಮ್ಮ ಮೈಸೂರು
ಹೀಗೆ ವಿಶಾಲವಾಗುವುದೇನೂ ಬೇಡ ; ಈಗ ಎಷ್ಟು
ವಿಸ್ತೀರ್ಣವಿದೆಯೋ ಅಷ್ಟೇ ಸಾಕು ; ವಿಸ್ತೀರ್ಣದಲ್ಲಿ
ಎಷ್ಟು ಚಿಕ್ಕದಾಗಿದ್ದರೆ ದೇಶ ಅಷ್ಟೂ ಬೇಗ ಬೇಗ
ಮುಂದುವರೆಯಲು ಸಾಧ್ಯವಾಗುತ್ತದೆ; ದೇಶ ವಿಲೀ
ನಿಕರಣವಾದರೆ ನಮ್ಮ ಜನರಿಗೆ ಅನುಕೂಲತೆಗಳು
ಮುಂದೆ ಕುಂಠಿತವಾಗಬಹುದು ಅನ್ನತಕ್ಕಂಥಾ ಒಂದು
ವಾದವನ್ನು ಈಗ ನಮ್ಮ ಮುಂದಿಟ್ಟಿದ್ದಾರೆ. ಆದರೆ
ಈ ವಿಷಯದಲ್ಲಿ ಈಗ ನನ್ನ ಅಭಿಪ್ರಾಯವೇನಿದೆ ಅನ್ನು
ವುದನ್ನು ನಾನೀಗ ಹೇಳಬಯಸುತ್ತೇನೆ. ಈ ದಿವಸ
ಮೈಸೂರು ದೇಶ ಬಹಳ ಬಾಬುಗಳಲ್ಲಿ ಮುಂದುವರೆ
ದಿದೆ, ಪ್ರಗತಿ ಹೊಂದಿದೆ. ವಿಸ್ತೀರ್ಣದಲ್ಲಿ ದೇಶ ಚಿಕ್ಕ
ದಾಗಿದ್ದುದರಿಂದ ನಮ್ಮ ಮೈಸೂರು ಇಷ್ಟು ಮುಂದು
ವರಿದಿದೆ ಅಂತ ಹೇಳಿದರೆ ನಾನು ಅದನ್ನು ಒಪ್ಪಲಾರೆ.
ಈ ಮೈಸೂರಿನ ಏಳಿಗೆಗಾಗಿ ಯದುವಂಶದ ರಾಜ
ಮನೆತನದವರು ಬಹಳ ಸಹಾಯ ಮಾಡಿದ್ದಾರೆ.
ಅಷ್ಟೇ ಅಲ್ಲದೆ ಹಿಂದಿನಿಂದಲೂ ಬಹಳ ದಕ್ಷರೂ ಮತ್ತು
ಚತುರರೂ ಆದಂಥ ದಿವಾನರುಗಳ ಆಡಳಿತಕ್ಕೆ ನಮ್ಮ
ದೇಶ ಒಳಪಟ್ಟಿದ್ದುದರಿಂದಲೂ ಈ ದಿವಸ ನಮ್ಮ
ಸಂಸ್ಥಾನ ಇಷ್ಟು ಪ್ರಗತಿ ಮಾರ್ಗದಲ್ಲಿರುವುದಕ್ಕೆ
ಕಾರಣವಾಯಿತೆಂದು ನನ್ನ ಅಭಿಪ್ರಾಯ. ಈ ನಮ್ಮ
ಮೈಸೂರು ದೇಶ ಈಗಿರುವುದಕ್ಕಿಂತಲೂ ಇನ್ನೂ ಸ್ವಲ್ಪ
ದೊಡ್ಡದಾಗಿದ್ದಿದ್ದರೆ ಆಗ ನಮ್ಮ ರಾಜಮನೆತನದವರು
ಈ ದೇಶವನ್ನು ಇಷ್ಟೊಂದು ಮುಂದಕ್ಕೆ ತರುತ್ತಿರಲಿಲ್ಲ
ಎಂದು ಹೇಳುವುದಕ್ಕಾಗುತ್ತಿರಲಿಲ್ಲ. ಹೀಗಿದ್ದರೂ ಈ
ನಮ್ಮ ಮೈಸೂರು ಈಗ ಇರುವುದಕ್ಕಿಂತಲೂ ಇನ್ನೂ
ದೊಡ್ಡದಾಗಿದ್ದಿದ್ದರೆ ಇದೇ ರೀತಿಯಾಗಿ ದೇಶವನ್ನು
ಪ್ರಗತಿ ಮಾರ್ಗದಲ್ಲಿ ತರುವುದಕ್ಕೆ ಸಾಧ್ಯವಾಗುತ್ತಿರ
ಲಿಲ್ಲವೆಂಬುದಾಗಿ ಆ ಶೇಷಾದ್ರಿ ಸಮಿತಿಯವರು ಹೇಳಿರ
ತಕ್ಕದ್ದರಲ್ಲಿ ಸತ್ಯಾಂಶವೆಷ್ಟರಮಟ್ಟಿಗಿದೆ ಅನ್ನುವುದನ್ನ
ನಾನೀಗ ಕೂಲಂಕಷವಾಗಿ ವಿಮರ್ಶೆ ಮಾಡುವುದಕ್ಕೆ
ಹೋಗುವುದಿಲ್ಲ. ಆದರೆ ಈ ವರದಿಯಲ್ಲಿ ಹೇಳಿರುವಂತೆ
ಎಲ್ಲಾ ವಿಷಯಗಳಲ್ಲೂ ನಮ್ಮ ಮೈಸೂರು ಮುಂದಿದೆ
ಅಂತ ಹೇಳಿರುವುದು ನಿಜವಲ್ಲ. ಆ ನಮ್ಮ ಹೊರಗಿರ
ತಕ್ಕಂಥಾ ಕನ್ನಡ ಪ್ರದೇಶಗಳಲ್ಲಿ ಈ ಶೇಷಾದ್ರಿ ಸಮಿ
ತಿಯ ವರದಿ ಎಷ್ಟು ಹೇಳಿದೆಯೋ ಅದಕ್ಕಿಂತಲೂ
ಹೆಚ್ಚಾಗಿ ಆ ಭಾಗಗಳು ವೈದ್ಯ ಸೌಕರ್ಯ ಮತ್ತು
ವಿದ್ಯಾಭ್ಯಾಸದಲ್ಲಿ ಮತ್ತು ಮಾರ್ಗಾನುಕೂಲತೆಗಳಲ್ಲಿ
ಮುಂದೆ ಹೋಗಿರುತ್ತವೆ. ವಿದ್ಯಾಭ್ಯಾಸ ಅನ್ನುವುದು
ದೇಶದ ನಾಗರೀಕತೆಯನ್ನು ಅಳತೆ ಮಾಡುವಂಥಾ
ಅಳತೆಗೋಲು. ನಮ್ಮ ದೇಶ ವಿದ್ಯಾಭ್ಯಾಸದಲ್ಲಿ
ಇಷ್ಟೆಲ್ಲಾ ಮುಂದುವರಿದಿದೆಯೆಂದು ಹೇಳಿಕೊಳ್ಳುತ್ತಿ
ದ್ದರೂ ಈ ದಿವಸ ನಮ್ಮ ಮೈಸೂರು, ಪಾಠಶಾಲೆಗೆ
ಹೋಗುತ್ತಿರುವಂಥ ಹುಡುಗರ ಸಂಖ್ಯೆಯಲ್ಲಿ ಇದು
ನಾಲ್ಕನೆಯ ಸ್ಥಾನವನ್ನಾಕ್ರಮಿಸಿದೆ. ನಾವು ಈ ದಿವಸ
ಇಲ್ಲಿ ಕೇವಲ ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸಕ್ಕೇ
ಹೆಚ್ಚು ಗಮನ ಕೊಡುತ್ತಿದ್ದೇವೆ, ಜನಸಾಮಾನ್ಯರಿಗೆ
ಇಲ್ಲಿ ಅಷ್ಟಾಗಿ ವಿದ್ಯಾಭ್ಯಾಸದ ಸೌಲಭ್ಯಗಳು
ದೊರೆಯುತ್ತಿಲ್ಲ. ಹೀಗೆಲ್ಲಾ ಇರುವುದರಿಂದ ನಮ್ಮ
ಸಂಸ್ಥಾನ ಈ ವಿದ್ಯಾಭ್ಯಾಸದಲ್ಲಿ ಅಷ್ಟೇನೂ ಮುಂದು
ವರೆದಿಲ್ಲ ಅಂತಲೇ ಹೇಳಬೇಕಾಗುತ್ತದೆ. ಇನ್ನು
ಸಾಮಾಜಿಕ ಮತ್ತು ಸೊಸೈಟಿಗಳ ವಿಚಾರವನ್ನು
ತೆಗೆದುಕೊಂಡರೆ, ನಮ್ಮ ಸಂಸ್ಥಾನ 4 ನೇ ಸ್ಥಾನ
ವನ್ನು ಪಡೆದಿದೆ. ಇನ್ನು ಈ ಖಾಸಗೀ ಕೈಗಾರಿಕೆಗಳ

(ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.)

ವಿಚಾರವನ್ನು ತೆಗೆದುಕೊಂಡರೆ ನಮ್ಮ ಮೈಸೂರಿಗಿಂತಲೂ ಉಳಿದ ಕರ್ಣಾಟಕ ಭಾಗಗಳೇ ಬಹಳ ಬೇಗ ಈ ಕೈಗಾರಿಕೆಗಳಲ್ಲಿ ಮುಂದುವರಿಯುತ್ತಿವೆಯೆಂದು ಹೇಳಬೇಕಾಗಿದೆ. ಈ ದಿವಸ ಈ ಮೈಸೂರಿನ ಕೈಗಾರಿಕೆಯೆಲ್ಲಾ ಬಹಳ ಮಟ್ಟಿಗೆ ಹೊರಗಿನವರ ಕೈವಾಡದಲ್ಲಿದೆ. ಇನ್ನು ಕೆಲವು ನಮ್ಮ ಸರ್ಕಾರದವರ ಆಶ್ರಯದಲ್ಲಿ ನಡೆದುಕೊಂಡು ಬರುತ್ತಿವೆ. ಹೀಗೆ ನಾವು ಇನ್ನೂ ಅನೇಕ ಬಾಬುಗಳಲ್ಲಿ ಮುಂದುವರಿಯದೆ ಇರುವ ಕಾರಣದಿಂದ, ಇಷ್ಟೆಲ್ಲಾ ಆಗಿದ್ದರೂ ನಾವು ಇನ್ನೂ ಹೆಚ್ಚಿನ ಅಭಿವೃದ್ಧಿಯನ್ನು ಪಡೆಯಬೇಕಾಗಿದ್ದರೆ ಅದು ಮೈಸೂರು ದೇಶ ವಿಶಾಲವಾಗದ ಹೊರತು ಖಂಡಿತ ಸಾಧ್ಯವಾಗಲಾರದು. ಹೀಗೆ ಒಂದು ದೇಶಾಭಿವೃದ್ಧಿಗೆ ಬಹು ಪ್ರಾಮುಖ್ಯವಾದಂಥ ವಿಷಯಗಳೇನಿರುತ್ತವೆಯೋ ಅವುಗಳನ್ನು ತೆರೆದ ಮನಸ್ಸಿನಿಂದ ಪರಿಶೀಲನೆ ಮಾಡದೆ ಈ ದಿವಸ ಯಾವ ಯಾವ ದೇಶಗಳು ಮುಂದುವರಿಯುತ್ತಿವೆಯೋ ಅವುಗಳೆಲ್ಲಾ ಹಾಗೇ ಮುಂದುವರೆಯುತ್ತಿರಲಿ, ಮತ್ತೆ ಯಾವ ಯಾವ ಭಾಗಗಳು ಅಭಿವೃದ್ಧಿಯಲ್ಲಿ ಹಿಂದೆ ಬಿದ್ದಿರುತ್ತವೆಯೋ ಅವುಗಳೆಲ್ಲಾ ಹಾಗೇ ಹಿಂದುಳಿದಿರಲಿ ಎಂದು ವಾದ ಮಾಡುವುದು ಖಂಡಿತ ನ್ಯಾಯವಾದ್ದಲ್ಲ ಮತ್ತು ಸರಿಯಾದ್ದಲ್ಲ. ಇಂಡಿಯಾ ದೇಶದಲ್ಲಿರುವಂಥ ಪ್ರತಿಯೊಂದು ಭಾಗವೂ ಅಭಿವೃದ್ಧಿ ಹೊಂದಬೇಕು, ಹಾಗಿಲ್ಲದೆ ಅಭಿವೃದ್ಧಿ ಹೊಂದಿರುವ ಭಾಗಗಳೆಲ್ಲಾ ಅಭಿವೃದ್ಧಿಗೆ ಬರಲಿ, ಬಾಕಿಯ ಪ್ರದೇಶಗಳೆಲ್ಲಾ ಹಾಗೇ ಹಿಂದೆ ಬಿದ್ದಿರಲಿ ಅನ್ನುವುದಾಗಿದ್ದರೆ, ಈ ದಿವಸ ಕೇಂದ್ರ ಸರ್ಕಾರ ಪಾಂಚವಾರ್ಷಿಕ ಯೋಜನೆಗಳೊಂದನ್ನೂ ಕೈಗೊಳ್ಳಬೇಕಾಗೇ ಇರಲಿಲ್ಲ. ಉಳಿದ ದೇಶಗಳಿಗೆಲ್ಲಕ್ಕೂ ನಮ್ಮ ಭಾರತ ಮಾದರೀ ದೇಶವಾಗಿರಬೇಕು ಅನ್ನುವಂಥ ಉದ್ದೇಶದಿಂದಲೇ ಈಗ ನಮ್ಮ ಭಾರತ ಸರ್ಕಾರದವರು ಈ ಪಾಂಚವಾರ್ಷಿಕ ಯೋಜನೆಯನ್ನು ಕೈಗೊಂಡಿರುತ್ತಾರೆ. ನಾನಾವಿಧವಾದಂಥ ಪ್ರಗತಿ ಮಾರ್ಗದ ಕಾರ್ಯಕ್ರಮಗಳು ಇಡೀ ಭಾರತದಲ್ಲೆಲ್ಲಾ ಹೇಗೆ ನಡೆಯುತ್ತಿವೆಯೋ ಹಾಗೆ ಆ ಮೈಸೂರನ್ನುಳಿದ ಕರ್ಣಾಟಕ ಪ್ರಾಂತ್ಯಗಳಲ್ಲಿಯೂ ನಡೆಯುತ್ತಿವೆ. ಇದರಿಂದ ಅನೇಕ ಅನುಕೂಲಗಳುಂಟಾಗುತ್ತವೆ. ಇನ್ನು ಈ ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಹಿಂದೆ ಉಳಿದಿರತಕ್ಕಂಥಾ ಕಾರ್ಯಗಳೆಲ್ಲಾ ಪೂರೈಸಿ, ಗ್ರಾಮಾಭಿವೃದ್ಧಿಗೆ ಹೆಚ್ಚಿನ ನಿಗಾ ಕೊಡಲಾಗುತ್ತದೆ. ಈಗಾಗಲೇ ನಾವು ಅನೇಕ ಕಡೆಗಳಿಗೆ ವಿದ್ಯುಚ್ಛಕ್ತಿಯನ್ನು ಕೊಟ್ಟಿರುತ್ತೇವೆ. ಇತರೇ ದೇಶಗಳಲ್ಲಿ ಈ ಗ್ರಾಮಾಭಿವೃದ್ಧಿ ಕಾರ್ಯಗಳಾದರೂ ಅವು ಅಭಿವೃದ್ಧಿಗೆ ಬರಲು ಎಷ್ಟೋ ವರ್ಷಕಾಲ ಹಿಡಿಯುತ್ತದೆ. ಆದರೆ ನಮ್ಮ ಕರ್ಣಾಟಕದಲ್ಲಿ ನಾವೇನೂ ಅಂಥಾ ಭಯಪಡಬೇಕಾದ ಪ್ರಮೇಯವಿಲ್ಲ. ಈಗಾಗಲೇ ನಮ್ಮ ಸರ್ಕಾರದವರು ಅಕ್ಕಪಕ್ಕದ ಪ್ರಾಂತ್ಯಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡಲು ಒಪ್ಪಿಕೊಂಡಿರುವುದು ಈ ಮಾನ್ಯ ಸಭೆಯ ಸದಸ್ಯರೆಲ್ಲರಿಗೂ ಗೊತ್ತೇ ಇದೆ. ಈ ದಿವಸ ಆ ಕೊಡಗಿನಲ್ಲಿ ಕೂಡ ಅಭಿವೃದ್ಧಿ ಕಾರ್ಯಗಳ ಬಗ್ಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಲು ಪಟ್ಟಿಯನ್ನು ತಯಾರಿಸಲಾಗುತ್ತಿದೆ. ಹೀಗೆ ಪ್ರತಿಯೊಂದು ಕಡೆಯಲ್ಲೂ ಈ ದೇಶಾಭಿವೃದ್ಧಿ ಕಾರ್ಯಗಳು ಚೆನ್ನಾಗಿ ನಡೆಸಲು ಪ್ರಯತ್ನಗಳಾಗುತ್ತವೆ. ಹೀಗಿರುವಾಗ ಕೆಲವು ಮಾನ್ಯ ಸದಸ್ಯರು ದೇಶಾಭಿವೃದ್ಧಿಗೆ ದೇಶದ ವಿಸ್ತೀರ್ಣ ಚಿಕ್ಕದಾಗಿದ್ದರೆ ಒಳ್ಳೆಯದೆಂದು ಅಭಿಪ್ರಾಯ ಪಟ್ಟಿರುವುದರಲ್ಲಿ ಅರ್ಥವಿಲ್ಲ. ಆಡಳಿತ ದೃಷ್ಟಿಯಿಂದ ನಾವು ಈ ಪ್ರಶ್ನೆಯನ್ನು ಪರಿಶೀಲಿಸುವುದಾದರೆ—ಒಂದು ದೇಶದ ಅಭಿವೃದ್ಧಿ ಕಾರ್ಯಗಳಿಗೆ ಬಹು ಮುಖ್ಯವಾದದ್ದು ಯಾವುದೆಂದರೆ ದೇಶ ಚಿಕ್ಕದಾಗಿರಬೇಕೆಂಬುದಲ್ಲ; ಅಲ್ಲಿಯ ಆಡಳಿತದಲ್ಲಿರುವ ಅಧಿಕಾರಿಗಳು, ಅಲ್ಲಿಯ ಸಾರ್ವಜನಿಕರೂ ಮತ್ತು ಅಲ್ಲಿರುವ ಸರ್ಕಾರ ಈ ಮೂವರೂ ಹೊಂದಾವಣಿಕೆಯಿಂದ ಅದನ್ನು ನಡೆಸಬೇಕಾಗಿದೆ. ಹಾಗೆ ಅದು ಹೊಂದಾವಣಿಕೆಯಿಂದ ನಡೆದರೆ ದೇಶ ಎಷ್ಟಿದ್ದರೂ ಅದರಿಂದ ಬಾಧಕವೇನೂ ಇಲ್ಲ. ಗ್ರಾಮದಲ್ಲಿ ಸರಿಯಾದ ಗ್ರಾಮಾಧಿಕಾರಿಗಳು ಬೇಕು. ವಯಸ್ಕರ ಮತದಾನದ ಪದ್ಧತಿ ಮೇಲೆ ಜನರಿಂದ ನೇರವಾಗಿ ಚುನಾಯಿತರಾದಂಥ ಸದಸ್ಯರು ಬಂದು ಈ ಶಾಸನ ಸಭೆಯಲ್ಲಿ ಕುಳಿತು ದೇಶದ ಆಡಳಿತವನ್ನು ನಡೆಸುತ್ತಿರುವಾಗ ದೇಶ ವಿಶಾಲವಾದರೆ ಅದರಿಂದೇನೂ ತೊಂದರೆಯಾಗುವುದಿಲ್ಲ. ಈ ದೃಷ್ಟಿಯಿಂದಲೂ ಸಹ ವಿಶಾಲ ಮೈಸೂರು ಆಗಲೇಬೇಕೆಂದು ಹೇಳಬೇಕಾಗಿರುತ್ತದೆ. ಕರ್ಣಾಟಕ ಮಾತೆಯ ಮಕ್ಕಳು ಎಲ್ಲರೂ ಒಂದುಗೂಡಬೇಕು. ಕರ್ಣಾಟಕವು 100 ವರ್ಷಗಳ ಹಿಂದೆ ಛಿದ್ರವಾಗಿರದೆ ಯಾವ ಒಂದು ವಿಸ್ತೀರ್ಣದಲ್ಲಿತ್ತೋ ಆ ಮಟ್ಟಕ್ಕೆ ಬರಬೇಕು. ಮೈಸೂರು ಪ್ರಜೆಗಳು ಮತ್ತು ಇತರ ಕರ್ಣಾಟಕದವರು ಒಂದಾಗಿ ಶ್ರೀರಂಗಪಟ್ಟಣದಿಂದ ಕೊಡಗಿನವರೆಗೂ ರಾಜ್ಯ ವಿಸ್ತರಿಸಿ ಮಂಗಳೂರನ್ನು ಬಂದರನ್ನಾಗಿಟ್ಟುಕೊಂಡು ಹೈದರಾಲಿಯು ರಾಜ್ಯಭಾರವನ್ನು ನಡೆಸಲಿಲ್ಲವೇ! ಉತ್ತರ ಕರ್ಣಾಟಕದವರು ಹೋಗಲು ಒಪ್ಪಲಿಲ್ಲ. ಮೈಸೂರಿನವರು ಹಾಗೆ ಹೋಗಲು ಒಪ್ಪಲಿಲ್ಲ. ನಮ್ಮನ್ನು ಬಿಟ್ಟುಹೋಗಲು ಒಪ್ಪಲಿಲ್ಲ. ಮೂರನೆಯವರ ಕುತಂತ್ರದಿಂದ ಅಂದರೆ ಬ್ರಿಟಿಷ್ ಸಾಮ್ರಾಜ್ಯಷಾಹಿಯ ಅಧಿಕಾರದಾಹದ ಒಂದು ರಾಜಕಾರಣದ ದೆಸೆಯಿಂದ ಈ ರೀತಿಯಾಗಿದೆ. ಹೀಗೆ ಹೊರಟುಹೋದಂಥ ಪ್ರದೇಶಗಳ ಅಣ್ಣತಮ್ಮಂದಿರು ಅವರಾಗಿ ಬಂದು ಇಲ್ಲಿ ಸೇರಬೇಕೆಂದು ಬಂದಿರುವಾಗ, ಎಣ್ಣೆ ಬಂದಾಗ, ಕಣ್ಣುಮುಚ್ಚಿಕೋ ಎಂದು ಹೇಳುವ ಹಾಗೆ, ಅದನ್ನು ನಾವು ವಿರೋಧಿಸುವುದು ನ್ಯಾಯವಲ್ಲವೆಂದು ನನ್ನ ಭಾವನೆ. ಈಗತಾನೆ ಮಾತನಾಡಿದ ಶ್ರೀ ಬೊಮ್ಮೇಗೌಡರು ಒಟ್ಟು ಕುಟುಂಬಗಳ ವಿಷಯವಾಗಿ ಮಾತನಾಡುತ್ತಾ ಒಂದು ಕುಟುಂಬವಿದ್ದರೆ ಒಳ್ಳೆಯ ಶ್ರೇಯಸ್ಕರದಿಂದ ಮುಂದುವರಿಯಬಹುದೆಂದು ಹೇಳಿದರು. ಇದನ್ನು ಕೇಳಿ ನನಗೆ ಬಹಳ ಆಶ್ಚರ್ಯವಾಯಿತು. ರೈತವರ್ಗದಲ್ಲಿ ಒಂದು ಕುಟುಂಬದಲ್ಲಿ ವ್ಯವಸಾಯ ಮಾಡುವವರು ಎಷ್ಟು ಜನರು ಹೆಚ್ಚಿಗೆ ಇರುತ್ತಾರೋ ಆ ಮನೆ ಅಷ್ಟು ಚೆನ್ನಾಗಿ ಅಭಿವೃದ್ಧಿಯಾಗುತ್ತದೆ. ಒಂಟಿ ಇದ್ದ ಕಡೆಗಳಲ್ಲಿ ಹೆಚ್ಚಿಗೆ ವ್ಯವಸಾಯ ಮಾಡುವುದಕ್ಕೆ ಅವಕಾಶವಿಲ್ಲ. ಯಾವಾಗಲೂ ಒಟ್ಟು ಕುಟುಂಬಗಳು ಅಭಿವೃದ್ಧಿಯಾಗುತ್ತವೆ. ಒಂಟಿ ಕುಟುಂಬದಲ್ಲಿರತಕ್ಕಂಥವರು ಚೆನ್ನಾಗಿ ಐಶ್ವರ್ಯವಂತರಾಗಲು ಅವಕಾಶವಿಲ್ಲವೆಂಬುದು ಎಲ್ಲರಿಗೂ ತಿಳಿದಿರತಕ್ಕ ವಿಷಯವಾಗಿದೆ. ಕರ್ಣಾಟಕ ಏಕೀಕರಣವಾಗಬೇಕು, ಭಾಷೆಯ ಪ್ರಾಧಾನ್ಯದ ಮೇಲೆ ದೇಶವಿಂಗಡನೆಯಾಗಬೇಕು ಎಂದು ಬಹಳ ಹಿಂದಿನಿಂದಲೂ ನಮ್ಮ ಕಾಂಗ್ರೆಸ್ಸಿನ ಹಿರಿಯರ ನಾಯಕರು ಮತ್ತು ಈ ಮಾನ್ಯಸಭೆಯ ನಾಯಕರು ತಮ್ಮ ಅಭಿಪ್ರಾಯಗಳನ್ನು ಹೊರಗೆಡವಿದ್ದಾರೆ. ಕರ್ಣಾಟಕ ಸಾಹಿತ್ಯ ಪರಿಷತ್ತಿನಲ್ಲಿ ಇದಕ್ಕಾಗಿ ಅನೇಕ ನಾಯಕರು ಅವಿಶ್ರಾಂತಿಯಾಗಿ ದುಡಿದಿದ್ದಾರೆ. ಅವರೆಲ್ಲರ ಆಶೀರ್ವಾದ ಬಲದಿಂದ ಕರ್ಣಾಟಕ ಪ್ರಾಂತ್ಯ ಸ್ಥಾಪನೆಯಾಗುವುದು ಖಂಡಿತ ಎಂದು ನನಗೆ ಭರವಸೆ ಇದೆ. ಇಂದಲ್ಲ ನಾಳೆಯಾದರೂ ಕರ್ಣಾ

ಟಕ ಪ್ರಾಂತ ಆಗಿಯೇ ಆಗುತ್ತದೆ. ಮೈಸೂರು ವಿಶಾಲವಾಗುವುದು ಬೇಡ ಎಂದು ಹೇಳುವವರೂ ಕೂಡ ಖಂಡಿತ ಈ ರೀತಿ ಕರ್ನಾಟಕ ಪ್ರಾಂತ ಆಗಲೇ ಕೂಡದು ಎಂದು ಹೇಳುತ್ತಾ ಇಲ್ಲ. ಅವರು ಹೇಳ ತಕ್ಕಂಥಾದ್ದು ಇನ್ನೂ 5-10 ವರ್ಷಗಳು ಆದಮೇಲಾಗಲಿ ; ಇನ್ನೂ ಕಾಲ ಸನ್ನಿಹಿತವಾಗಲಿ ಎಂದು ಹೇಳುತ್ತಿದ್ದಾರೆ. ಭಾಷಾವಾರು ಪ್ರಾಂತ ಬೇಡ ಎಂದ ಒಂದು ಕಡೆ ವಾದಮಾಡಿ ಪುನಃ ಅದೇ ರಾಗದಲ್ಲಿ ಭಾಷಾವಾರು ಆಗುವುದಾದರೆ ಉತ್ತರ ಕರ್ನಾಟಕ ಬೇರೆಯಾಗಲಿ, ದಕ್ಷಿಣ ಕರ್ನಾಟಕ ಬೇರೆಯಾಗಲಿ ಎಂದು ಹೇಳುತ್ತಾರೆ. ಇದರ ಅರ್ಥ ನನಗಂತೂ ಗೊತ್ತಾಗಲಿಲ್ಲ. ಒಟ್ಟಿನಲ್ಲಿ ಮೈಸೂರು ವಿಶಾಲವಾಗುವುದರಿಂದ ಪಾರ್ಲಿಮೆಂಟಿನಲ್ಲಿ ನಮ್ಮ ಸದಸ್ಯರ ಸಂಖ್ಯೆ ಸುಮಾರು 40 ರವರೆಗೆ ಹೆಚ್ಚಬಹುದು. ಆ 40 ಮಂದಿ, 500 ಜನರು ಇರುವ ಸಭೆಯಲ್ಲಿ ಇದ್ದರೆ ನಮ್ಮ ದೇಶಕ್ಕೆ ಆಗಬೇಕಾದ ಕಾರ್ಯಗಳ ಬಗ್ಗೆ ಸಹಕಾರ ಸೌಕರ್ಯಗಳನ್ನು ಪಡೆಯುವುದಕ್ಕೆ ಬಹಳ ಮಟ್ಟಿಗೆ ಅನುಕೂಲವಾಗುತ್ತದೆ. ಇಲ್ಲದೆ ಹೋದರೆ 10-12 ಮಂದಿ ಆ ಸಭೆಯಲ್ಲಿ ಕುಳಿತುಕೊಂಡು ಟೀಕೆ ಮತ್ತು ವಾದ ವಿವಾದಗಳನ್ನು ಮಾಡಿ ಎಷ್ಟೇ ಪ್ರಭಾವಶಾಲಿಗಳಾಗಿದ್ದರೂ ಅದು ಬೆಲೆ ಇಲ್ಲದೆ ಹೋಗುತ್ತದೆ. ಅದರಿಂದ ಅಷ್ಟು ಪ್ರಯೋಜನವಾಗುವುದಿಲ್ಲ. ಈ ವಿಚಾರದಲ್ಲಿ ಹೆಚ್ಚಿಗೆ ಹೇಳಬೇಕಾದ ಅವಶ್ಯಕತೆ ಮತ್ತು ಅಗತ್ಯ ಇಲ್ಲವೆಂದು ಭಾವನೆ ಮಾಡುತ್ತೇನೆ. ಉಳಿದ ಕರ್ನಾಟಕದವರು ನಮ್ಮ ಹಾಗೆ ಅಭಿವೃದ್ಧಿ ಹೊಂದಲಿ. ಅವರ ಅಭಿವೃದ್ಧಿಗೆ ಯಾರು ಅಡ್ಡಿ ಬರುತ್ತಾರೆ ? ಇದುವರೆಗೆ ಅಭಿವೃದ್ಧಿ ಏತಕ್ಕೆ ಆಗಿಲ್ಲವೆಂದು ಕೆಲವು ಮಾನ್ಯ ಸದಸ್ಯರು ಆಕ್ಷೇಪಣೆ ಎತ್ತಿದ್ದಾರೆ. ಬೊಂಬಾಯಿ ಪ್ರಾಂತದಲ್ಲಾಗಲೀ, ಹೈದರಾಬಾದ್ ಪ್ರಾಂತದಲ್ಲಾಗಲೀ, ಮದ್ರಾಸ್ ಪ್ರಾಂತದಲ್ಲಾಗಲೀ ಕನ್ನಡ ಮಾತನಾಡುವ ಜನರ ಸಂಖ್ಯೆಯು ಬಹಳ ಕಡಮೆ ಇದ್ದುದರಿಂದ ಇನ್ನೂ ಉಳಿದಿರುವವರ ಸಂಖ್ಯೆಯು ಬಹುಮತದಿಂದ ಇದ್ದು ಕನ್ನಡ ಮಾತನಾಡುವವರಿಗೆ ಬೇಕಾದಂಥ ಸೌಲಭ್ಯವನ್ನು ಪಡೆಯಲು ಅವಕಾಶವಾಗದೆ ಹೋದದ್ದೇ ಮುಖ್ಯ ಕಾರಣವಾಗಿ ಹಿಂದುಳಿದಿದ್ದಾರೆ. ಹಿಂದೆ ರಾಜ್ಯವನ್ನು ವಿಸ್ತರಣೆ ಮಾಡಲು ಅನೇಕ ಬಲಿದಾನಗಳನ್ನು ಮತ್ತು ಘೋರ ಯುದ್ಧಗಳನ್ನು ನಡೆಸಬೇಕಾಗಿತ್ತು, ಹಾಗಿರುವಾಗ ತಾನೇತಾನಾಗಿ ಆಗುವ ವಿಸ್ತಾರಕ್ಕೆ ಅಡ್ಡಿ ಬರಬಾರದು, ಅದು ನ್ಯಾಯವಲ್ಲ ಎಂದು ನನ್ನ ಭಾವನೆ. ಈ ರಾಜ್ಯವನ್ನು ವಿಸ್ತಾರಮಾಡಬೇಕು, ಈಗ ಆಗಿರುವ ಕೃತ್ರಿಮ ಎಲ್ಲೆಕಟ್ಟು ಬದಲಾವಣೆ ಆಗಬೇಕು ಎಂಬುದನ್ನು ಕೇಂದ್ರ ಸರ್ಕಾರದವರು ಮನಗಂಡು ಇದಕ್ಕಾಗಿ ಫಸಲಾಲಿ ಸಮಿತಿಯವರನ್ನು ನೇಮಕಮಾಡಿ, ಆ ಫಸಲಾಲಿ ಸಮಿತಿಯವರು ಈಗಾಗಲೇ ಪ್ರವಾಸಮಾಡಿ, ಪ್ರಜೆಗಳ ಪ್ರತಿನಿಧಿಗಳನ್ನು ಕಂಡು, ಅಂಕಿಅಂಶಗಳನ್ನು ಶೇಖರಣೆ ಮಾಡಿ, ಈ ವಿಚಾರದಲ್ಲಿ ಅವರ ಶಿಫಾರಸುಗಳನ್ನು ಕೇಂದ್ರ ಸರ್ಕಾರದ ಮುಂದೆ ಇಡುವವರಾಗಿದ್ದಾರೆ. ಅದರ ಪ್ರಕಾರವಾದರೂ ಕೂಡ ಮೈಸೂರು ವಿಶಾಲವಾಗಲೇಬೇಕು. ಕನ್ನಡಮಾತೆಯ ಮಕ್ಕಳು ಒಕ್ಕೂಟಕ್ಕೆ ಸೇರಲೇ ಬೇಕು. ಇದು ಆಗಲಿ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಬಿ. ಹುಚ್ಚೇಗೌಡ.—ಸ್ವಾಮಿ, ಈ ಶೇಷಾದ್ರಿ ಸಮಿತಿಯವರ ವರದಿಯನ್ನು ನಾವು ಪರಿಶೀಲನೆ ಮಾಡಬೇಕಾದರೆ ಮೊದಲನೆಯದಾಗಿ, ಇದರಲ್ಲಿ ಏನಾದರೂ ಪ್ರಯೋಜನವಿದೆಯೋ ಎಂಬುದನ್ನು ಕೂಡ ನಾವು ಯೋಚನೆ ಮಾಡಬೇಕು. ಶೇಷಾದ್ರಿ ಸಮಿತಿಯನ್ನು ಏತಕ್ಕೋಸ್ಕರ ನೇಮಕಮಾಡಿದರು ! ಯಾವಾಗ ಮಾಡಿದರು ! ಮಾಡಬೇಕಾದ ಅವಶ್ಯಕತೆ ಇತ್ತೇ ! ಈ ಸಮಿತಿ ನೇಮಕ ಮಾಡುವುದಕ್ಕೆ ಏನಾದರೂ ಈ ಸಭೆ ಅನುಮತಿ ಕೊಟ್ಟಿತ್ತೇ ? ಅಥವಾ ಫಸಲಾಲಿ ಸಮಿತಿಯವರು ಈ ಸಭೆಯ ಅಭಿಪ್ರಾಯವನ್ನು ಕೇಳಿದ್ದಾರೆಯೋ ? ಎನ್ನುವುದೂ ಕೂಡ ನನಗೆ ಅನುಮಾನವಾಗಿದೆ. ಅದೂ ಅಲ್ಲದೆ, ಕೇಂದ್ರ ಸರ್ಕಾರದವರು ಏರ್ಪಡಿಸಿದ ಈ ಪ್ರಾಂತ್ಯ ಪುನರ್ವಿಂಗಡನೆ ಸಮಿತಿಯವರು ಸ್ಥಳೀಯ ವಿದ್ಯಮಾನಗಳನ್ನು ತಿಳಿದುಕೊಳ್ಳುವುದಕ್ಕೋಸ್ಕರ ಕಳೆದವರ್ಷ ಇಲ್ಲಿಗೆ ಬಂದಾಗ್ಗೆ ಎಲ್ಲರಿಗೂ ಕೂಡ ಆಹ್ವಾನವನ್ನು ಇತ್ತಿದ್ದರು. ಈ ಸಂದರ್ಭದಲ್ಲಿ ನಮ್ಮ ದೇಶದ ಅನೇಕ ಮುಖಂಡರು ಮತ್ತು ಸಂಸ್ಥೆಗಳು ತಮ್ಮ ತಮ್ಮ ವರದಿಯನ್ನು ಅವರಿಗೆ ಸಲ್ಲಿಸಿದ್ದಾರೆ. ಆಗ್ಗೆ ಕಾಂಗ್ರೆಸ್ ಸಂಸ್ಥೆಯವರು ಮಾತ್ರ ಅಸಹಕಾರ ತೋರಿಸಿದ್ದರು. ಅವರು ಏತಕ್ಕಾಗಿ ಹಾಗೆ ಮಾಡಿದರೋ ನನಗೆ ಗೊತ್ತಾಗಲಿಲ್ಲ. ಏಕೆಂದರೆ, ಈ ಸಮಿತಿಯನ್ನು ಮಾಡಿರುವುದು ತಪ್ಪು ಎಂದು ಭಾವನೆ ಮಾಡಿದರೋ-ಅಥವಾ ಆ ಸಮಿತಿಗೆ ತಮ್ಮ ಅಭಿಪ್ರಾಯವನ್ನು ತಿಳಿಸುವುದರಿಂದ ಏನೂ ಪ್ರಯೋಜನವಿಲ್ಲ ಎಂದು ತಿಳಿದುಕೊಂಡರೋ ಎಂಬುದೇ ಒಂದು ಸಮಸ್ಯೆಯಾಗಿದೆ. ಕೇಂದ್ರ ಸರ್ಕಾರದವರು ಈ ಸಮಿತಿಯು ತನ್ನ ವರದಿಯನ್ನು ಜೂನ್ ತಿಂಗಳೊಳಗೆ ಕೊಟ್ಟುಬಿಡಬೇಕು ಎಂದು ಕಡ್ಡಾಯವಾಗಿ ಅಪೇಕ್ಷೆಪಟ್ಟಿದ್ದರು ಮತ್ತು ಅವರು ಒಂದು ತಿಂಗಳೊಳಗೆ ಆ ವರದಿಯನ್ನು ಒಪ್ಪಿಸುತ್ತಾರೆ ಎಂದು ನನಗೆ ವರ್ತಮಾನ ಬಂದಿದೆ. ಈಗ ಇಲ್ಲಿ ನಾವು ಈ ಸಮಿತಿಯ ಅಂಕಿಅಂಶಗಳನ್ನು ಗಣನೆಗೆ ತೆಗೆದುಕೊಂಡು ನಮ್ಮ ಅಭಿಪ್ರಾಯಗಳನ್ನು ವಿಮರ್ಶೆ ಮಾಡಿ ಒಂದು ತೀರ್ಮಾನಕ್ಕೆ ಬಂದರೆ ಅದರಿಂದ ಏನು ಪ್ರಯೋಜನವಾಗುತ್ತದೆ ಎಂಬುದು ನನಗೆ ಅರ್ಥವಾಗುವುದಿಲ್ಲ. ಅದೂ ಅಲ್ಲದೆ ನೀವು ಇದರಲ್ಲಿ ಏನಾದರೂ ಒಂದು ತೀರ್ಮಾನ ತೆಗೆದುಕೊಳ್ಳುತ್ತೀರೋ ಇಲ್ಲವೋ ಎಂಬುದನ್ನು ನಾನು ತಮ್ಮನ್ನು ಕೇಳಿಕೊಳ್ಳಬೇಕಾಗಿದೆ. ಇದರಮೇಲೆ ತೀರ್ಮಾನ ತೆಗೆದುಕೊಂಡರೆ ಆ ತೀರ್ಮಾನವನ್ನು ಯಾರ ಅವಗಾಹನೆಗೆ, ಯಾರ ತೀರ್ಮಾನಕ್ಕೆ ಕಳುಹಿಸಬೇಕೆಂಬುದನ್ನು ವಿವರಿಸಿದ್ದರೆ ಚೆನ್ನಾಗಿತ್ತು ಎಂಬುದು ನನ್ನ ಅಭಿಪ್ರಾಯ. ಇಂತಹ ವರದಿಯ ಮೇಲೆ ಈ ಸಭೆ 7 ದಿವಸ ತನ್ನ ಕಾಲವನ್ನು ಕಳೆದಿರುವುದನ್ನು ನೋಡಿದರೆ ಬಹಳ ಮಟ್ಟಿಗೆ ವಿಷಾದವಾಗುತ್ತದೆ. ಏತಕ್ಕೆಂದರೆ, ಏನೂ ಪ್ರಯೋಜನವಿಲ್ಲದೆ ಯಾರಿಗೂ ಬೇಡವಾದಂಥ ಮತ್ತು ಒಂದು ನಿರ್ಧಾರವಾದ ಉದ್ದೇಶವಿಲ್ಲದೆ ಚರ್ಚೆಮಾಡುವುದರಲ್ಲಿ ಏನೂ ಸಾರ್ಥಕವಿಲ್ಲವಲ್ಲ ಎಂದು ಶಂಕಿಸಬೇಕಾಗಿದೆ. ಆ ಸಮಿತಿಯ ಸದಸ್ಯರು ಬಹಳ ಶ್ರಮಪಟ್ಟು ಅಂಕಿಅಂಶಗಳನ್ನು ಸಂಗ್ರಹ ಮಾಡಿದ್ದಾರೆ. ಆದರೂ ಕೂಡ ಅವರು ಎಷ್ಟು ಸಾಧ್ಯವೋ ಅಷ್ಟು ಅಂಕಿಅಂಶಗಳನ್ನು ಸೇರಿಸಿದ್ದಾರೆ. ಮುಂದೆ ಯಾವುದಕ್ಕಾದರೂ ಒಂದು ತಕ್ಷಣ reference ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಅದು ಲೈಬ್ರರಿಯಲ್ಲಿರಬೇಕೆಂತಲೋ ?

ಶ್ರೀ ಬಿ. ಹುಚ್ಚೇಗೌಡ.—ಲೈಬ್ರೆರಿಯಲ್ಲಿರುವುದಕ್ಕೆ ಇದು ಸಾರ್ಥಕವೇ ಹೊರತು ಇನ್ನೇನೂ ಉಪಯೋಗಕ್ಕೂ ಬರುವುದಿಲ್ಲ. ನಾವು ಇಷ್ಟು ದಿವಸ ಚರ್ಚೆಮಾಡಿದ್ದು ವ್ಯರ್ಥಾಲಾಪ ಮಾಡಿದಂತಾಗಿದೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ (ಕುಣಿಗಲ್).—ಹಾಗಾದರೆ ತಾವು participate ಮಾಡದೆ ಇರಬಹುದು.

ಶ್ರೀ ಬಿ. ಹುಚ್ಚೇಗೌಡ.—ಅದು ನನ್ನ ಇಷ್ಟ. ವಿವೇಕವಿಲ್ಲದೆ ಮಾಡತಕ್ಕ ಕೆಲಸವನ್ನು ತೋರಿಸಿಕೊಡುವುದು ನಮ್ಮ ಕರ್ತವ್ಯ. ಭಾಷಾವಾರು ಪ್ರಾಂತ್ಯ ವಿಂಗಡನೆ ವಿಚಾರದಲ್ಲಿ ಎಲ್ಲರೂ ಕಾತರತೆ ವ್ಯಕ್ತ ಪಡಿಸುವುದು ಕೂಡ ಅನಾವಶ್ಯಕ. ಅದರಲ್ಲಿ ಅನಾವಶ್ಯಕವಾಗಿ ಉದ್ರೇಕಗೊಳ್ಳಲು ಕಾರಣವಿಲ್ಲ ಎಂದು ನನ್ನ ಅಭಿಪ್ರಾಯ. ಏತಕ್ಕೆಂದರೆ ಈಗ ಇಂಡಿಯಾ ದೇಶದಲ್ಲಿರತಕ್ಕ ಸಂಸ್ಥಾನಗಳನ್ನು ಯಾವ ಸೌಕರ್ಯದ ದೃಷ್ಟಿಯಿಂದಲಾಗಲಿ, ಆರ್ಥಿಕ ದೃಷ್ಟಿಯಿಂದಲಾಗಲಿ, ಭೌಗೋಳಿಕ ದೃಷ್ಟಿಯಿಂದಲಾಗಲಿ, ಅಥವಾ ಆಡಳಿತ ದೃಷ್ಟಿಯಿಂದಲಾಗಲೀ ವಿಂಗಡಿಸಿಲ್ಲ. ಹಿಂದೆ ಚಾರಿತ್ರಕ ಕಾರಣಗಳಿಂದ ರಾಜ್ಯಗಳು ಸ್ಥಾಪನೆಯಾಗಿವೆ. ಯಾವನು ತನ್ನ ಕತ್ತಿಯ ಶಕ್ತಿಯಿಂದ ದೇಶವನ್ನು ಆಕ್ರಮಿಸುತ್ತಿದ್ದನೋ, ಅದು ಅವನದಾಗಿತ್ತು. ಮಾರನೆಯ ದಿವಸ ಯಾವನು ಅವನಿಂದ ಕಿತ್ತು ಕೊಳ್ಳುತ್ತಿದ್ದನೋ, ಅದು ಅವನ ಅಧೀನದಲ್ಲಿ ಇರುತ್ತಿತ್ತು. ಇದಾದ ಮೇಲೆ ಇಂಡಿಯಾದೇಶ ಒಟ್ಟಿಗೆ ಇಂಗ್ಲಿಷರ ಕೈಕೆಳಗೆ ಬಂತು. ಹಾಗೂ ಹೀಗೂ ಇಂಗ್ಲಿಷರು ರಾಜ್ಯಗಳ ಸರಹದ್ದುಗಳನ್ನು ನಿಷ್ಕರ್ಷೆಮಾಡುವುದರಲ್ಲಿ ಸ್ವಲ್ಪ ಪಾತ್ರ ತೆಗೆದುಕೊಂಡರು. ಹಾಗೆ ಪ್ರಾಂತಗಳ ಗಡಿ ನಿಷ್ಕರ್ಷೆ ಮಾಡುವಾಗ ಅವರು ಆಡಳಿತ ದೃಷ್ಟಿಯನ್ನು ಮತ್ತು ಮಿಲಿಟರಿ ದೃಷ್ಟಿಯನ್ನು ಮುಖ್ಯವಾಗಿ ಗಮನದಲ್ಲಿಟ್ಟುಕೊಂಡರು. 562 ಸಂಸ್ಥಾನಗಳನ್ನು ದೇಶದಲ್ಲಿಟ್ಟುಕೊಂಡು ಮೂರನೆ ಒಂದು ಭಾಗವನ್ನು ಅವರಿಗೆ ಕೊಟ್ಟು ಮೂರನೆಯ ಎರಡು ಭಾಗಗಳನ್ನು ತಾವು ಇಟ್ಟುಕೊಂಡರು. ಇಂಡಿಯಾ ದೇಶವನ್ನು ಆಳಬೇಕಾದರೆ ಇಂಡಿಯಾ ದೇಶದಲ್ಲಿ ಕೆಲವರನ್ನು ಜಹಗೀರ್ದಾರರನ್ನಾಗಿಯೂ, ಇನ್ನು ಕೆಲವರನ್ನು ರಾಜರನ್ನಾಗಿಯೂ ಮತ್ತು ಮಹಾರಾಜರುಗಳನ್ನಾಗಿಯೂ ಮತ್ತು ಇನಾಮುದಾರರನ್ನಾಗಿಯೂ ಇಟ್ಟುಕೊಂಡರೆ, ಅವರ ಕೈಕೆಳಗೆ ಜನಗಳನ್ನು ಹದ್ದು ಬಸ್ತಿನಲ್ಲಿ ಇಟ್ಟುಕೊಳ್ಳುವುದು ಸುಲಭ ಎಂದು ತಿಳಿದು ಹಾಗೆ ಮಾಡಿದರು. ಒಂದು ಸಂಸ್ಥಾನಕ್ಕೂ ಮತ್ತೊಂದು ಸಂಸ್ಥಾನಕ್ಕೂ ಸಂಬಂಧವಿಲ್ಲದಂತೆ ಮಾಡಿದರು ಮತ್ತು ಸಮುದ್ರ ತೀರ ಸಂಸ್ಥಾನಗಳಿಗೆ ದೂರವಾಗಿರುವಂತೆ ಅವುಗಳ ವಿಸ್ತೀರ್ಣವನ್ನೂ ಕೂಡ ಕತ್ತರಿಸಿದರು. ಏತಕ್ಕೆಂದರೆ ನಮ್ಮ ಮೈಸೂರಿನ ಗಡಿ ಸಮುದ್ರಕ್ಕೆ ಹತ್ತು ಮೈಲಿದೂರ ಮಾತ್ರ ಉಳಿದುಕೊಂಡಿದೆ ಇಷ್ಟನ್ನೂ ತೆಗೆದು ಕೊಳ್ಳುವುದಕ್ಕೆ ನಮ್ಮ ಕೈಯಲ್ಲಾಗಲಿಲ್ಲ. ಇಂಡಿಯಾ ಸರ್ಕಾರದ ಜೊತೆಗೆ ಎಷ್ಟೋ ವರ್ಷಗಳಿಂದ ವಾದಮಾಡುತ್ತಾ ಬಂದೆವು. ಒಂದು ಸಮುದ್ರ ತೀರ ಇರುವ ಪಟ್ಟಣಬೇಕು ಎಂದು ಬಹುಮಟ್ಟಿಗೆ ಆ ಕಾಲದಲ್ಲಿ ಕೇಳಿಕೊಂಡರೂ ನಮಗೆ ಅದು ದೊರೆಯಲಿಲ್ಲ. ಅವರು ಈ ರಾಜ್ಯವನ್ನು ಹಂಚುವುದರಲ್ಲೂ ಒಂದೊಂದು ಭಾಷೆ ಮಾತನಾಡುವ ಜನರು ಒಟ್ಟಾಗದಂತೆ ಕೂಡ ಮಾಡಿದರು. ಇದೂ ಅಲ್ಲದೆ, ಉದಾಹರಣೆಗೆ ಕನ್ನಡ ಡಿಸ್ಟ್ರಿಕ್ಟು ತೆಗೆದುಕೊಳ್ಳೋಣ. ಅಲ್ಲಿ ರಾಷ್ಟ್ರೀಯ ಮನೋಭಾವನೆ ಜಾಸ್ತಿ ಬೆಳೆಯುತ್ತಾ ಬಂದು, ಬ್ರಿಟಿಷರಿಗೆ ಬಹಳ ಕಿರುಕುಳಕೊಟ್ಟರು. ಅದಕ್ಕಾಗಿ ಉತ್ತರ ಕನ್ನಡ ಬೇರೆ, ದಕ್ಷಿಣ ಕನ್ನಡ ಬೇರೆ ಎಂದು ಎರಡು ಭಾಗಗಳನ್ನಾಗಿ ಮಾಡಿ, ಉತ್ತರ ಕನ್ನಡವನ್ನು ಬೊಂಬಾಯಿಗೂ ದಕ್ಷಿಣ ಕನ್ನಡವನ್ನು ಮದರಾಸಿಗೂ ಸೇರಿಸಿದರು. ಇಷ್ಟರಿಂದಲೇ ಬ್ರಿಟಿಷರು ಈ ರಾಜ್ಯವನ್ನು ಆಡಳಿತ ಮತ್ತು ಮಿಲಿಟರಿ ದೃಷ್ಟಿಯಿಂದ ವಿಂಗಡನೆ ಮಾಡಿದರೆಂದು ನಾವು ತಿಳಿದುಕೊಳ್ಳಬಹುದು. ಈ ದೇಶದೊಡನೆ ತಮ್ಮ ಸಂಬಂಧವನ್ನು ಇಟ್ಟುಕೊಳ್ಳಲು ಈ ರೀತಿ ಹಂಚಿಕೆಮಾಡಿದರು. ಒಂದಕ್ಕೊಂದಕ್ಕೆ ಸಂಬಂಧವಿರಬಾರದು, ದೇಶದಲ್ಲಿ ರಾಷ್ಟ್ರ ಮನೋಭಾವನೆ ಉಂಟಾಗಬಾರದು ಎಂದು ಅವರಲ್ಲಿ ಒಂದು ದೊಡ್ಡ ಆಶೋತ್ತರವಿತ್ತು. ಅದಕ್ಕನುಗುಣವಾಗಿ ಅವರು ದೇಶವನ್ನು ಪುನರ್ವಿಂಗಡನೆ ಮಾಡಿಕೊಂಡು ಬಂದರು. ಭಾಷೆಯ ಆಧಾರದ ಮೇಲೆ ಸಂಸ್ಥಾನಗಳನ್ನು ವಿಂಗಡಿಸಬೇಕು ಎನ್ನುವ ಅಭಿಪ್ರಾಯ ಈಚೆಗೆ ದೇಶದಲ್ಲಿ ರಾಷ್ಟ್ರೀಯ ಮನೋಭಾವನೆ ಹೆಚ್ಚು ಆದ ಹಾಗೆ ಜನರಲ್ಲಿ ಮೂಡಿತು. ಇಂಡಿಯಾ ದೇಶದ ಪ್ರಾಂತಗಳ ಗಡಿಗಳನ್ನು ಆಡಳಿತಕ್ಕನುಗುಣವಾಗಿ ವಿಭಾಗಿಸಬೇಕು ಎಂಬ ವಿಚಾರದಲ್ಲಿ ಈ ಸಭೆಯಲ್ಲಿ ಯಾರದೂ ಕೂಡ ವಿರೋಧವಿಲ್ಲ. ಆದರೆ ಅದು ಯಾವ ರೀತಿ ಆಗಬೇಕು ಎನ್ನುವುದರಲ್ಲಿ ಮಾತ್ರ ವ್ಯತ್ಯಾಸವಿದೆ. ಈಗಿರತಕ್ಕ ಸರಹದ್ದುಗಳು ಬಹಳ ಕೃತ್ರಿಮವಾದುವು, ಯಾವ ಶಾಸ್ತ್ರೀಯ ಆಧಾರದ ಮೇಲೂ ನಿಂತಿಲ್ಲ ಎಂದು ಪ್ರತಿಯೊಬ್ಬರ ಅಭಿಪ್ರಾಯ. ಮೈಸೂರಿನಲ್ಲಿ ಆಡಳಿತ ಚೆನ್ನಾಗಿತ್ತು. ಅದು ನಮ್ಮ ಅದೃಷ್ಟ. ಆದರೆ ನಮ್ಮ ಸಹೋದರರು ಉತ್ತರ ಕರ್ನಾಟಕದಲ್ಲಿ 10-15 ಸಂಸ್ಥಾನಗಳ ಆಡಳಿತಕ್ಕೆ ಸಿಕ್ಕಿ ಅವರಿಗೆ ನಾಗರಿಕ ಮತ್ತು ಸುವ್ಯವಸ್ಥಿತವಾದ ಆಡಳಿತ ದೊರೆಯಲಿಲ್ಲ. ಇದು ಅವರ ದುರದೃಷ್ಟ. ಹೇಗೆಂದರೆ, ಒಂದು ಉದಾಹರಣೆ ಇದಕ್ಕೆ ಹೇಳುತ್ತೇನೆ. ಈಗ ಸುಮಾರು 30 ವರ್ಷಗಳ ಕೆಳಗೆ ನಾನು ಲಕ್ಷ್ಮೇಶ್ವರಕ್ಕೆ ಹೋಗಿದ್ದೆ. ಅಲ್ಲಿ ನಮಗೆ ವ್ಯಾಪಾರದ ಬಾಬ್ತು ಹಣ ಬರಬೇಕಾಗಿತ್ತು. ಮಿರಾಜ್ ಸಂಸ್ಥಾನಕ್ಕೆ ಸೇರಿದ ಊರು ಅದು. ಅಲ್ಲೊಬ್ಬರು ಮ್ಯಾಜಿಸ್ಟ್ರೇಟರಿದ್ದರು. ಅವರಿಗೆ ಮರಾಠಿ ವಿನಾ ಬೇರೆ ಭಾಷೆಯೇ ಬರುತ್ತಿರಲಿಲ್ಲ. ಒಂದಾನೊಂದು ದಿನ ಆ ಮ್ಯಾಜಿಸ್ಟ್ರೇಟರು ಹೋಟಲಿನಲ್ಲಿ ಸಿಕ್ಕಿದ್ದರು. 'ಏಕೆ ಬಂದಿರಿ' ಎಂದು ನಮ್ಮನ್ನು ಕೇಳಿದರು. ಬಾಕಿ ವಸೂಲಿಗಾಗಿ ಬಂದಿದ್ದೇವೆಂದು ನಾನು ಹೇಳಲು ಅವರು ಕೂಡಲೆ ಆ ಶೆಟ್ಟಿಯನ್ನು ಕರೆಸಿ 'ದುಡ್ಡು ಕೊಡುತ್ತೀಯೋ, ತುರಂಗಕ್ಕೆ ಹಾಕಿಸಲೋ' ಎಂದು ಕೇಳಿದರು. ಆ ವೈಶ್ಯರ ಸ್ಥಿತಿ ಚಿಂತಾಜನಕವಾಗಿತ್ತು. ನಮಗೆ ಅವರನ್ನು ನೋಡಿ ಪಶ್ಚಾತ್ತಾಪ ಬಂತು. ಕೊನೆಗೆ ನಾವೇ ಅವರು ತುರಂಗಕ್ಕೆ ಹೋಗುವುದೂ ಬೇಡ, ಹಣಕೊಡುವುದೂ ಬೇಡ ಎಂದು ಬಿಟ್ಟುಬಿಟ್ಟೆವು. ಅಲ್ಲಿನ ಆಡಳಿತ ಹಾಗಿತ್ತು. ನಮಗೆ ಸ್ವರಾಜ್ಯ ಬಂದ ಮೇಲೆ ಹಿಂದಿನ ಆ ಕಷ್ಟತಮವಾದ ಆಡಳಿತ ತಪ್ಪಿಸಿ ನಮ್ಮ ನೆರೆಹೊರೆಯವರೊಂದಿಗೆ ಸುಖವಾಗಿ ಬಾಳ್ವೆ ನಡೆಸಲು ತಕ್ಕ ವಾತಾವರಣವನ್ನು ಕಲ್ಪಿಸುವುದು ನಮ್ಮ ಕರ್ತವ್ಯ. ಹಾಗೆ ದೇಶವನ್ನು ವಿಸ್ತರಿಸಬೇಕೆಂದರೆ ಅತ್ತ ಕಡೆಯೇ ಏಕೆ ಹೋಗಬೇಕು ಎಂದು ಕೆಲವು ಸ್ನೇಹಿತರು ಕೇಳಿದರು. ಆಡಳಿತ ನಡೆಸಬೇಕಾದರೆ ಭಾಷೆಯೂ ಒಂದು ಮುಖ್ಯವಾದ ಅಂಶ. ಈಗ ಮದರಾಸಿನಲ್ಲಿ ನೋಡುವುದಾದರೆ, ಅಲ್ಲಿ ತಮಿಳೇ ಮುಖ್ಯ. ಕೇವಲ ನೂರಕ್ಕೆ 5-6 ಜನ ಮಾತ್ರ ಕನ್ನಡಿಗರಿದ್ದಾರೆ. ಅಲ್ಲಿನ ಶಾಸನ ಸಭೆಯಲ್ಲಿ ಕೇವಲ 5-6 ಜನ ಕನ್ನಡಿಗರ ಪರವಾಗಿ ಮಾತನಾಡಿದರೆ ಏನಾದರೂ ಆಗುತ್ತದೆಯೇ? ಮೈಸೂರಿಗೆ ನೆರೆಯಾಗಿರುವ ಪ್ರಾಂತ್ಯವಾಗಿದ್ದರೂ, 150 ಮೈಲಿ ದೂರದಲ್ಲಿರುವ ಮದ್ರಾಸಿನೊಂದಿಗೆ ಅವರೇಕೆ ಸೇರಬೇಕೋ ನನಗರ್ಥವಾಗುವುದಿಲ್ಲ.

ಅಲ್ಲದೆ, ಈಗ ನಮ್ಮ ದೇಶದಲ್ಲಿ ಗಡಿಗಳ ನಿರ್ಣಯಕ್ಕೆ ಇಂಡಿಯಾ ಸರ್ಕಾರದವರು ಪ್ರಯತ್ನಪಟ್ಟಿದ್ದಾರೆ. ಇದಕ್ಕಾಗಿ ಫಸಲಾಲಿ ಸಮಿತಿಯೆಂಬುದನ್ನು ಸೇರಿಸಿದ್ದಾರೆ. ಭಾಷಾವಾರು ತತ್ವಕ್ಕನುಗುಣವಾಗಿ ಆಂಧ್ರಪಾಂತ್ಯವಾಗಲೇ ರಚಿತವಾಗಿದೆ. ಆಂಧ್ರ

ಪ್ರಾಂತ್ಯವಾದ ಮೇಲೆ ಬಾಕಿ ಪ್ರಾಂತ್ಯಗಳೂ ಕೂಡ ಹೆಚ್ಚು ಕಡಮೆ ಈ ಪ್ರಾಂತ್ಯ ಪುನರ್ವಿಂಗಡಣೆಯ ಸಂಬಂಧದಲ್ಲಿ ಸರಹದ್ದುಗಳ ವ್ಯತ್ಯಾಸವನ್ನು ಹೊಂದಲೇಬೇಕು. ಈಗ ದಕ್ಷಿಣದಿಂದ ನೋಡುತ್ತಾ ಬಂದರೆ, ಮಲೆಯಾಳಿಗಳು ತಮಿಳರು ತಮ್ಮ ಹದ್ದು ಬಸ್ತು ಇಲ್ಲಿಯವರೆಗಿದೆಯೆಂದು ಹೇಳಿದ್ದಾರೆ; ಆಂಧ್ರರೂ ತಮ್ಮ ಹದ್ದು ಬಸ್ತು ಇಲ್ಲಿಯವರೆಗೆ ಇದೆಯೆಂದು ಹೇಳಿದ್ದಾರೆ. ಆದ್ದರಿಂದ ಇನ್ನುಳಿದಿರುವ ಕರ್ಣಾಟಕವನ್ನು ಸೇರಿಸಬಹುದಾದರೆ ನಾವು ಸೇರಿಸಿಕೊಳ್ಳಬೇಕಾಗಿದೆ. ಕರ್ಣಾಟಕದವರೂ ನಮ್ಮೊಡನೆ ಸೇರುವುದಕ್ಕೆ ಆಸೆಯುಳ್ಳವರಾಗಿದ್ದಾರೆ. ಹೀಗೆ ಎಲ್ಲ ಕಡೆಯಿಂದಲೂ ನಮಗೆ ಅನುಕೂಲವಾಗಿರುವಾಗ ನಾವೇಕೆ ಸೇರುವುದಕ್ಕೆ ಅಡ್ಡಿ ಬರಬೇಕೋ ಗೊತ್ತಿಲ್ಲ. ಆಡಳಿತ ಸೌಕರ್ಯ ದೃಷ್ಟಿಯಿಂದ ಇವೆಲ್ಲಾ ಆಗಬೇಕಾಗಿವೆ. ಈಗ ನಮ್ಮ ಜೋಗ್ ಫಾಲ್ಸನ್ನೇ ತೆಗೆದುಕೊಳ್ಳಿ. ನೀರು ಬೀಳುವ ಪ್ರದೇಶ ನಮ್ಮ ದೇಶದಲ್ಲಿದೆ. ನೀರು ಬಿದ್ದು ಹರಿಯುವ ಪ್ರದೇಶ ಬೊಂಬಾಯಿ ಸರ್ಕಾರಕ್ಕೆ ಸೇರಿದೆ. ಅಲ್ಲಿ ವಿದ್ಯುಚ್ಛಕ್ತಿ ತಯಾರಿಸುವುದಕ್ಕೆ ಬೊಂಬಾಯಿ ಸರ್ಕಾರದವರೊಡನೆ ಸಂಧಾನ ಮಾಡಬೇಕಾಯಿತು.

12 NOON.

ಈಗ ಮದರಾಸಿನವರಿಂದ ನಮಗೆ ಯಾವ ಯಾವ ರೀತಿಯಲ್ಲಿ ಎಷ್ಟೆಷ್ಟು ತೊಂದರೆಯಾಗುತ್ತಾ ಇದೆ ಅನ್ನುವುದನ್ನು ನಾವೆಲ್ಲರೂ ನೋಡುತ್ತಿದ್ದೇವೆ. ಆ ಒಂದು ಮೇಕೆದಾಟ್ ವಿಚಾರದಲ್ಲಿ ಇಷ್ಟು ತೊಂದರೆ ಬಂದಿದೆ. ಹೀಗೆ ದೇಶಗಳು ಬದಲಾಗಿದ್ದರೆ ದೇಶಾಭಿವೃದ್ಧಿಯ ಕೆಲಸ ಕಾರ್ಯಗಳಿಗೆ ಬಹಳ ಕಷ್ಟವುಂಟಾಗುತ್ತವೆ. ಹೀಗೆ ಅಂಥ ತೊಂದರೆಗಳಾವವೂ ಇಲ್ಲದೆ ಸ್ವಭಾವಸಿದ್ಧವಾಗಿ ದೇಶಾಭಿವೃದ್ಧಿಗೆ ಇಂಥ ತೊಡಕುಗಳೆಲ್ಲಾ ತಪ್ಪಿಹೋಗಿ ಅನುಕೂಲ ಉಂಟಾಗತಕ್ಕಂಥ ಸನ್ನಿವೇಶವಿರುವಾಗ ಅದೆಲ್ಲಾ ಆಗಬಾರದು ಎಂದು ಅದಕ್ಕೇಕೆ ಯಾರೇ ಆಗಲಿ ಅಡ್ಡಿಪಡಿಸಬೇಕು ? ಆದರೆ ಈಗ ನಮಗೆ ಮುಖ್ಯವಾಗಿ ಬೇಕಾಗಿರುವುದು ಈ ಮೈಸೂರಿನವರು ಹೆಚ್ಚಾಗಿ ಮುಂದುವರಿದಿದ್ದಾರೆಯೇ ಅಥವ ಮೈಸೂರಿನ ಹೊರಗಡೆಯಿರತಕ್ಕವರು ಹೆಚ್ಚು ಮುಂದುವರಿದಿದ್ದಾರೆಯೇ ಎನ್ನುವಂಥ ವಿಷಯವಲ್ಲ. ಆದುದರಿಂದ ನಾನೀಗ ಆ ಪ್ರಶ್ನೆಗೆ ಪ್ರವೇಶ ಮಾಡುವುದಿಲ್ಲ. ಇಡೀ ಭರತಖಂಡದಲ್ಲಿರತಕ್ಕವರೆಲ್ಲರಿಗೂ ಒಂದೇ ಸರಿಸಮಾನವಾದಂಥ ಸ್ಥಾನಮಾನಗಳೂ, ಅನುಕೂಲಗಳೂ ಇರಬೇಕೆಂದು ಹೇಳುತ್ತಿರುವ ಕಾಲದಲ್ಲಿ, ನಾವು, ಹೆಚ್ಚು ಅವರು ಕಡಮೆ ಅನ್ನುವಂಥ ವಿಚಾರ ಇದರಲ್ಲಿ ಬರುವುದಕ್ಕೆ ಅವಕಾಶವೇ ಇಲ್ಲ. ದೇಶದಲ್ಲಿರತಕ್ಕ ಯಾವ ಜನಾಂಗಕ್ಕೇ ಆಗಲಿ ಅನ್ನ, ಬಟ್ಟೆ, ವಸತಿ ಇತ್ಯಾದಿ ಸೌಕರ್ಯಗಳಿಗೆ ಅಭಾವವಿರಬಾರದೆಂದು ಹೇಳುತ್ತಿರುವಾಗ ಈ ದಿವಸ ಇವರೆಲ್ಲರೂ ಈ ಒಂದು ರೀತಿಯಲ್ಲಿ ವಾದ ಮಾಡುತ್ತಿರುವುದನ್ನು ನೋಡಿದರೆ ಇದು ಅವರಲ್ಲಿರತಕ್ಕಂಥ ಒಂದು ಸಂಕುಚಿತ ಭಾವನೆಯನ್ನು ತೋರಿಸತಕ್ಕದ್ದಾಗಿದೆಯೇ ಹೊರತು ಬೇರೆ ಏನೂ ಇಲ್ಲ. ನಾವೆಲ್ಲರೂ ಈ ದಿವಸ ಅಂಥಾ ಒಂದು ಪಣತೊಟ್ಟು ಯಾವ ಒಂದು ಕೋಮಿನವರೇ ಆಗಿರಲಿ, ಅವರು ಮತ್ತೆ ಯಾವ ದೇಶದವರೇ ಆಗಿರಲಿ, ಅವರೆಲ್ಲರಿಗೂ ಯಾವ ಒಂದು ಕೊರತೆಯೂ ಇರಬಾರದೆಂದು ಹೇಳಿ, ಅದಕ್ಕೆ ಏನೇನು ಉಪಾಯಗಳನ್ನು ಮಾಡಬೇಕೋ ಅದಕ್ಕನುಸಾರವಾಗಿಯೇ ಈಗ ಈ ಪಾಂಚವಾರ್ಷಿಕ ಯೋಜನೆಯನ್ನು ದೇಶಾದ್ಯಂತವೂ ಕೈಗೊಳ್ಳಲಾಗಿದೆ. ದೇಶದಲ್ಲಿ ಯಾವ ಒಂದು ಮೂಲೆಯಾಗಲಿ ಅದು ಮುಂದುವರಿಯದೆ ಹಿಂದುಳಿದಿದ್ದರೆ ಅಂಥ ಪ್ರತಿಯೊಂದು ಭಾಗವನ್ನೂ ಅಭಿವೃದ್ಧಿಗೆ ತರುತ್ತೇವೆಂಬುದಾಗಿ ಕೇಂದ್ರ ಸರ್ಕಾರದವರು ನಮಗೆಲ್ಲಾ ತುಂಬ ಭರವಸೆಯನ್ನು ಕೊಟ್ಟಿದ್ದಾರೆ. ಈ ದಿವಸವಾದರೋ ನಾವು ಪ್ರತಿಯೊಂದು ಬಾಬಿಗೂ ಆ ಕೇಂದ್ರ ಸರ್ಕಾರದವರ ಸಹಾಯವನ್ನು ಪಡೆಯಲೇಬೇಕಾಗಿದೆ. ಹೀಗಿರುವಾಗ ಯಾರು ಜಾಸ್ತಿ ಮುಂದುವರಿದಿದ್ದಾರೆ, ಯಾರು ಬಹಳ ಹಿಂದುಳಿದಿದ್ದಾರೆ ಎನ್ನುವುದನ್ನು ಚರ್ಚೆಮಾಡುವುದು ಅನವಶ್ಯಕ. ನಾವುಗಳು ಈ ಹಿಂದೆ ಎಲೆಕ್ಷನ್ ಕಾಲದಲ್ಲಿ ಜನರ ಮುಂದೆ ಏನೇನು ಹೇಳಿ ಅವರಿಗೆ ಆಶ್ವಾಸನವನ್ನು ಕೊಟ್ಟು ಬಂದಿರುತ್ತೇವೋ ಅಂಥ ಆಶ್ವಾಸನಗಳನ್ನೆಲ್ಲಾ ಈ ಅವಧಿಯಲ್ಲಿ ಈಡೇರಿಸಬೇಕು. ಇಲ್ಲವಾದರೆ ಮುಂದಿನ ಚುನಾವಣೆಗಳಲ್ಲಿ ಬಹಳ ಕಷ್ಟಕ್ಕೆ ಬರುತ್ತದೆ. ಈ ದಿವಸದ ಒಂದು ಇಂಗ್ಲೀಷ್ ಪೇಪರಿನಲ್ಲಿ ಹೀಗೆ ಹೇಳಿದ್ದಾರೆ.—

"The Kundah Project, in the Nilgiris District, which is estimated to cost about Rs. 40 crores is expected to generate at the initial stage, 180,000 K.W. In the final stage the production may go up to 375,000 K.W. In this connection, it may be noted that the Coorg Government are sponsoring the Barapole Project, approximately similar in size and generating capacity to the Kundah Project. The Planning Commission is now examining these two schemes.

Recently the Coorg Chief Minister came to Madras and had discussions with the Chief Minister of Madras and also the Public Works Minister of this State, in regard to the execution of the Barapole Project. He seems to have requested the Madras Government to give an assurance that they would consume sizable quantities of power produced by the Barapole project, as the Coorg State would not be in a position to consume all the power generated.

The Madras Government seems to have told the Coorg Chief Minister that they would not give any such assurance at this stage, particularly in view of the fact that they had decided to go ahead with the project in the Niligiris district. . ."

ಹೀಗಿದೆ. ಈಗಾಗಲೇ ಕೊಡಗಿನಲ್ಲಿ ನಲವತ್ತು ಕೋಟಿ ರೂಪಾಯಿಗಳ ಒಂದು ಪ್ರಾಜೆಕ್ಟನ್ನು ಹಿಂದೆಯೇ ಮಾಡಿದ್ದರು. ಅದರಿಂದ ಕೋಟ್ಯಾಂತರ ರೂಪಾಯಿಗಳ ಪವರ್ ಉತ್ಪತ್ತಿ ಆಗುತ್ತದೆ. ಆದರೆ, ಆ ದೇಶ ಬಹಳ ಚಿಕ್ಕದು. —ಅಷ್ಟೊಂದು

(ಶ್ರೀ ಬಿ. ಹುಚ್ಚೇಗೌಡ.)

ಷವರನ್ನೂ ಆ ದೇಶ ಹೇಗೆ ಉಪಯೋಗಿಸಲು ಸಾಧ್ಯವಿದೆ? ಆ ಪವರನ್ನೆಲ್ಲಾ ಅವರೇನು ಮಾಡಬೇಕು? ಅವರು ಅದನ್ನು ಪಕ್ಕದಲ್ಲಿರುವ ಮೈಸೂರಿನವರಿಗೇ ಕೊಡಬೇಕಾಗುತ್ತದೆ. ಆದರೆ ಈಗ ನಮ್ಮ ಹೊನ್ನೇಮರಡಿನಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಿದರೆ ನಾವು ಆ ಕೊಡಗಿಗೂ ಕೊಡಬೇಕಾದ್ದು ಅಗತ್ಯ. ಆದರೆ ಇದು ಬೇಗ ಕಾರ್ಯಗತವಾಗಬೇಕು. ಏತಕ್ಕೋಸ್ಕರ ಮದರಾಸ್ ಸರ್ಕಾರ ಹಾಗೆ ಕೇಳಿಕೊಳ್ಳಬೇಕು? ಅವರು ನಮಗೆ ಬೇಡ ಬೇಡ ಎಂದು ಹೇಳುತ್ತಾರೆ. ನಮ್ಮ ಹೊನ್ನೇಮರಡು ಕಿತ್ತುಕೊಳ್ಳುವುದಕ್ಕೆ ಬಂದರು. ಮೈಸೂರಿಗೆ ಇರುವುದೇ ಸಾಕು. ಕೊಡಗಿನವರಿಗೆ ಮಾಡಿಕೊಡಬೇಕು ಎಂದರೆ ಎಷ್ಟು ದುಡ್ಡು ಕೇಂದ್ರ ಸರ್ಕಾರದವರು ಕೊಡಬೇಕು? ಈ ಭಿನ್ನ ಅಧಿಕಾರಿಗಳನ್ನು ನೇಮಿಸಬೇಕಾದರೆ, establishment ಇಟ್ಟುಕೊಳ್ಳಬೇಕಾದರೆ ಅವರಿಗೆ ಶಕ್ತಿ ಇದೆಯೇ? ಒಂದು ವೇಳೆ establishment ಇಟ್ಟುಕೊಂಡರೆ, ನಾಳೆ ದಿವಸ ಆ establishmentನ್ನು ಹೇಗೆ adjust ಮಾಡಿಕೊಳ್ಳುತ್ತಾರೆ? ಇದನ್ನೆಲ್ಲಾ ಯೋಚನೆ ಮಾಡಬೇಕು. ಸಣ್ಣ ಸಣ್ಣ ಸಂಸ್ಥಾನಗಳಿದ್ದು ಅಲ್ಲಿ ಒಂದು ದೊಡ್ಡ project ಇದ್ದರೆ ಅದನ್ನು ಹೇಗೆ ಕೈಗೊಳ್ಳುವುದು? ಉದಾಹರಣೆಗೆ ಕೊಡಗು ಸಂಸ್ಥಾನಕ್ಕೆ ನಲವತ್ತು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ electricity ಕೊಡಲು ಸಾಧ್ಯವಿದೆ. ಹಾಗೆ ಮಾಡಿ ದೇಶಾಭಿವೃದ್ಧಿ ಮಾಡಲೇಬೇಕು. ಆದರೆ ಅದನ್ನು ಮಾಡುವುದಕ್ಕೆ ಶಕ್ತಿ ಇರುವುದಿಲ್ಲ. ಹೆಚ್ಚು ಕೈಗಾರಿಕೆಗಳ ಅನುಕೂಲತೆ ಇರುವಾಗ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಳ್ಳಬೇಕು. ಉತ್ತರ ಕರ್ನಾಟಕದವರಾಗಲಿ ಅಥವಾ ದಕ್ಷಿಣ ಕರ್ನಾಟಕದವರಾಗಲಿ ಎಲ್ಲರೂ ಕೂಡ ದೇಶದ ಅಭಿವೃದ್ಧಿ ಭಾವನೆಯಿಂದ ಕೆಲಸ ಮಾಡಬೇಕು. ನಾವು ಅವರಿಗಿಂತ ಒಂದು ವಿಧದಲ್ಲಿ ಹಿಂದುಳಿದಿದ್ದರೆ ಅವರು ಇನ್ನೊಂದು ವಿಧದಲ್ಲಿ ಮುಂದುವರಿದಿರಬಹುದು. ಅವನು ಕುಂಟಾದರೆ ಇನ್ನೊಬ್ಬ ಕುರುಡ. ಕುರುಡನ ಹೆಗಲಿನಮೇಲೆ ಕುಂಟನನ್ನು ಕುಳ್ಳಿರಿಸಿಕೊಂಡು ಹೋಗಲು ಇಬ್ಬರೂ ಒಬ್ಬರಿಗೊಬ್ಬರು ಸಹಾಯಕರಾದರೆ ಅದರಿಂದ ಅನುಕೂಲವಾಗುತ್ತದೆ. ನಮ್ಮ ದೇಶದಲ್ಲಿ ಭೂಸಂಪತ್ತು ಹೆಚ್ಚಾಗಿಲ್ಲ. ಒಂಭತ್ತು ಎಕರೆಯಂತೆ ಒಬ್ಬೊಬ್ಬನ ತಲೆಗೆ ಬರುತ್ತದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಜನಗಳನ್ನು ಅಲ್ಲಿಗೆ ಕಳುಹಿಸಿಕೊಡಬಹುದು.

ಶ್ರೀ ಬಿ. ಹುಚ್ಚೇಗೌಡ.—ಜನಗಳನ್ನು ಅಲ್ಲಿಗೆ ಕಳುಹಿಸಿಕೊಡುವುದಕ್ಕೆ ಬದಲಾಗಿ ಆ ಪ್ರದೇಶವನ್ನೇ ಇಲ್ಲಿಗೆ ತೆಗೆದುಕೊಳ್ಳಬಹುದು. ಹಿಂದುಳಿದವರನ್ನು ಹೊರಗೆ ಕಳುಹಿಸಬೇಕು, ಎಲ್ಲಿ ಉತ್ಪತ್ತಿ ಇಲ್ಲವೋ ಆ ಭಾಗ ಬೇಡ ಎಂದು ಹೇಳುವುದಾದರೆ, ನಮ್ಮ ದೇಶದಲ್ಲಿ ತುಮಕೂರು ಡಿಸ್ಟ್ರಿಕ್ಟ್, ಚಿತ್ರದುರ್ಗ ಡಿಸ್ಟ್ರಿಕ್ಟ್ ಮತ್ತು ಕೋಲಾರ ಡಿಸ್ಟ್ರಿಕ್ಟ್ deficit areas ಎಂದು ಹೇಳುತ್ತಾರೆ; ಹಾಗಾದರೆ ಈ ಮೂರನ್ನು ಕೈಬಿಟ್ಟುಬಿಡಲಿ. ಏಕೆಂದರೆ, ಅವು ಯಾರಿಗೂ ಬೇಕಿಲ್ಲ ಎನ್ನುತ್ತಾರೆ.

ಶ್ರೀ ಮುಲ್ಕ ಗೋವಿಂದರೆಡ್ಡಿ (ಚಿತ್ರದುರ್ಗ).—ಕರ್ಣಾಟಕ ಆಗಬೇಕಾದರೆ ಈ ರೀತಿ ಬಿಡಲೇ ಬೇಕಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡ.—ಅದು ಬಿಡಬೇಕಾದರೆ ಶ್ರೀ ಮುಲ್ಕ ಗೋವಿಂದರೆಡ್ಡಿಯವರು ತೆಲುಗಿನಲ್ಲಿ ಮಾತನಾಡಬೇಕು. ಅಪೊತ್ತಿನ ದಿವಸ ಬಿಡಬಹುದು. ಎಲ್ಲಿಯವರೆಗೆ ಕನ್ನಡ ಭಾಷೆಯಾಗಿರುತ್ತದೋ ಅಲ್ಲಿಯವರೆಗೆ ಆ ರೀತಿಯಾಗುವುದಿಲ್ಲ. ತಮಿಳರು ಮತ್ತು ತೆಲುಗರು ಇಪೊತ್ತಿನ ದಿವಸ ಅವರ ಭಾಷೆ ಎಲ್ಲಿ record ಆಗುತ್ತದೋ, ಅಲ್ಲಿಗೆ ಹೋಗಲೇಬೇಕು. ಇದನ್ನು ಅನುಕೂಲಕ್ಕೋಸ್ಕರ ಮಾಡಿಕೊಂಡಿರುವುದು. ಇದಕ್ಕೆ ಅಡ್ಡಿ ಆತಂಕಗಳನ್ನು ತರುವುದಾದರೆ ನಿವಾರಣೆ ಮಾಡಲು ಎಲ್ಲೆಲ್ಲಿಗೆ ಹೋಗಬೇಕೋ ಅಲ್ಲಲ್ಲಿಗೆ ಹೋಗಬೇಕಾಗುತ್ತದೆ. ಭಾಷೆಯ ಮೇಲೆ ಆಗಬಾರದು ಎಂಬುದು ನನ್ನ ಅಭಿಪ್ರಾಯ. ಭಾಷೆಯ ಮೇಲೆ ಯಾವತ್ತೂ ಆಗಬಾರದು. ಆದರೆ ಆಡಳಿತ ದೃಷ್ಟಿಯಿಂದ, ದೇಶದ ಆರ್ಥಿಕ ದೃಷ್ಟಿಯಿಂದ ಪ್ರಾಂತಗಳಿಗೆ ಈಗಿರತಕ್ಕ ಗಡಿಗಳು ಸರಿಯಲ್ಲ. ಸ್ವಾಭಾವಿಕವಾಗಿ ಗಡಿಗಳು ಎಲ್ಲಿಯವರೆಗೆ ಹೋಗಬೇಕೋ ಅಲ್ಲಿಯವರೆಗೆ ಹೋಗಬೇಕಾದದ್ದು ಅನಿವಾರ್ಯ. ಈಗಾಗಲೇ ಹೇಳಿದ ಹಾಗೆ ಸಣ್ಣ ಸಣ್ಣ ಸಂಸ್ಥಾನಗಳನ್ನು ಮಾಡುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರದವರು ಕೊಡಗು ಸರ್ಕಾರಕ್ಕೆ ಇದೇ ರೀತಿ subsidy ಕಟ್ಟಿಕೊಂಡು ಸರ್ಕಾರ ನಡೆಸುವುದಕ್ಕೆ ಸಾಧ್ಯವಿಲ್ಲ. 1—2½ ಲಕ್ಷ ಪ್ರಜೆಗಳು ಇರುವುದಕ್ಕೆ ಒಂದು ಆಡಳಿತ, ಇಬ್ಬರು ಮಂತ್ರಿಗಳು ಇಪ್ಪತ್ತೈದು ಶಾಸನ ಸಭಾ ಸದಸ್ಯರು, ಇವರಿಗೆ ಕೋರ್ಟು ಕಚೇರಿ ಇರಬೇಕಾದರೆ, ಅವರಿಗೆ ಎಷ್ಟರಮಟ್ಟಿನ ತಲೆಭಾರ ಆಗುತ್ತದೆ. Top-heavy administration ಆಗುತ್ತದೆ ಎಂಬುದನ್ನು ನೋಡಿ. ಅವರಿಗೆ ಇದು ನ್ಯಾಯವಾಗಿ ಕಾಣಬಹುದು. ಹಾಗೆ ನೋಡುವುದಕ್ಕೆ ಹೋದರೆ, ಪ್ರತಿಯೊಂದು ತಾಲ್ಲೂಕ್ ಆಡಳಿತವನ್ನು ತನ್ನದೇ ಮಾಡಿಕೊಳ್ಳಬೇಕು ಎಂದರೆ ಸಾಧ್ಯವಿಲ್ಲ. ಒಂದೊಂದು ಊರಿನವರು ಆಡಳಿತ ನಡೆಸಿಕೊಳ್ಳುತ್ತೇವೆಂದರೆ ಇಡೀ ದೇಶದ ಆಡಳಿತ ಹೇಗೆ ಆಗಬೇಕೋ ಅರ್ಥವಾಗುವುದಿಲ್ಲ.

12-30 P.M.

ಈ ಸಂದರ್ಭದಲ್ಲಿ ನಮ್ಮ ಮುಲ್ಕ ಗೋವಿಂದರೆಡ್ಡಿಯವರು ಒಂದು ಪ್ರಶ್ನೆ ಹಾಕಿದರು. ಅದಕ್ಕೆ ನಾನು ಹೇಳುವುದಿಷ್ಟೆ; ಅವರು ಭಾಷೆಯ ಮೇಲೆ ತಮ್ಮ ವಾದವನ್ನಿಟ್ಟರು. ನಾನು ಅವರಂತೆ ಭಾಷೆಯ ಮೇಲೆ ಹೇಳುವುದಿಲ್ಲ. ಅವರು ವಿಶಾಲಾಂಧ್ರ ಸಮಿತಿಗೆ ವೈಸ್ ಪ್ರೆಸಿಡೆಂಟರಾಗಿ ಅಲ್ಲಿದ್ದುಕೊಂಡ ಕೋಲಾರ ಡಿಸ್ಟ್ರಿಕ್ಟು ನಮಗೆ ಸೇರಬೇಕು, ಬೆಂಗಳೂರು ಜಿಲ್ಲೆಯ ಮೂರು ತಾಲ್ಲೂಕುಗಳು, ತುಮಕೂರು ಜಿಲ್ಲೆಯ 3 ತಾಲ್ಲೂಕುಗಳು ಚಿತ್ರದುರ್ಗದ ನಾಲ್ಕು ತಾಲ್ಲೂಕುಗಳು ಆಂಧ್ರಕ್ಕೆ ಸೇರಬೇಕೆಂದು ಹೇಳಿದ್ದಾರೆ. ಅದಕ್ಕಾಗಿಯೇ ಬೌಂಡರಿ ಕಮಿಷನ್ ಒಂದನ್ನು ಸ್ಥಾಪಿಸಬೇಕೆಂದೂ ಹೇಳುತ್ತಿದ್ದಾರೆ. ಇಂಡಿಯಾ ಸರ್ಕಾರದವರು ಬೌಂಡರಿ ಕಮಿಷನ್ ಮಾಡಿದ್ದಾರೆ. ಅವರೂ ಬರುವವರಾಗಿದ್ದಾರೆ. ಅದರಂತೆ ಬೌಂಡರಿ ಕಮಿಷನ್‌ನವರು ಬಂದು ಊರೂರಿಗೆ ಹೋಗಿ ಕೇಳಿಕೊಂಡು ಹೋಗುತ್ತಾರೆ. ಅಗ್ಗೆ ಕೋಲಾರದವರು ಹೋಗಬೇಕೆಂದಿದ್ದರೆ ಅವರಿಗೆ ಹೋಗುವುದಕ್ಕೆ ಬಿಡುತ್ತಾರೆ ಅಷ್ಟೆ. ಆದರೆ ಇವೊತ್ತಿನ ದಿವಸ ಆರೀತಿ ಕಮಿಷನ್ನಿನವರು ಊರು ಊರಿಗೂ ಬಂದು ಕೇಳುವಾಗ ಜನರು ಮೈಸೂರಿನಲ್ಲಿರುವುದಕ್ಕೆ ಇಷ್ಟಪಡುವುದಾಗಿ ಹೇಳುತ್ತಾರೋ ಅಥವಾ ಹೊರಗೆ ಹೋಗುವುದಕ್ಕೆ ಇಷ್ಟಪಡುತ್ತಾರೋ ಹೇಳುವುದಕ್ಕಾಗುವುದಿಲ್ಲ. ಮುಲ್ಕ ರೆಡ್ಡಿಯವರೇನೋ ಇಲ್ಲಿ ಹೇಳಬಹುದು, ಆದರೆ ಊರೂರಿಗೂ ಹೋಗಿ ಕೇಳಿದರೆ ಬೇರೆ ಅಭಿಪ್ರಾಯ ಬರಬಹುದು. ಆಂಧ್ರ

ಪ್ರಾಂತ್ಯ ಮಾಡಿ ಎಷ್ಟು ಕಷ್ಟ ಬಂದಿದೆಯೆಂಬುದು ಗೊತ್ತೇ ಇದೆ. ಇನ್ನೂ ಬಳ್ಳಾರಿಯನ್ನು ವಿಭಜನೆ ಮಾಡಬೇಕೆಂದು ಮಾಡುತ್ತಿದ್ದಾರೆ. ಬೌಂಡರಿ ಕಮಿಷನ್ ಕೂಡ ಬರುತ್ತದೆಂದು ಹೇಳುತ್ತಿದ್ದಾರೆ.

ಒಟ್ಟಿನಲ್ಲಿ ಹೇಳುವುದಾದರೆ, ಯಾರೇ ಆಗಲಿ ಮೈಸೂರಿಗೆ ಸೇರಬೇಕೆಂದಿದ್ದರೆ ಅದಕ್ಕೆ ನಮ್ಮದೇನೂ ಅಡ್ಡಿಯಿಲ್ಲವೆಂದು ನಾವು ನಮ್ಮ ಕಾನ್ಸ್ಟಿಟ್ಯುಯಂಟ್ ಅಸೆಂಬ್ಲಿಯಲ್ಲೇ ಹೇಳಿದ್ದೇವೆ. ಅಲ್ಲದೆ, ಇನ್ನೊಂದು ಭಾವನೆಯೂ ನಮ್ಮಲ್ಲಿರಬೇಕು. ಯಾರೇ ಆಗಲಿ, ಹೊರಗಿನವರು ತಾವು ಮೈಸೂರಿಗೆ ಸೇರಿ ಅಭಿವೃದ್ಧಿ ಗೊಳ್ಳಬೇಕು, ಒಟ್ಟಿಗೆ ಸೇರಿದರೆ ತಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುವುದಕ್ಕೆ ಸಾಧನ ಸಂಪತ್ತುಗಳು ದೊರೆಯುತ್ತವೆಂದು ಹೇಳಿಕೊಳ್ಳುತ್ತಿರುವಾಗ, ನಾವು ಸಂಕುಚಿತ ದೃಷ್ಟಿಯನ್ನು ಬಿಟ್ಟು ಉದಾತ್ತ ಭಾವನೆಯನ್ನು ತೋರಬೇಕು. ಈ ಕಡೆಯವರು ಬೇಡವೆಂದರೆ ಆ ಕಡೆಯವರೂ ಬೇಡವೆಂದರೆ, ಆ ಪ್ರದೇಶ ಏನಾಗಬೇಕು ? ರಾಜಾಸ್ಥಾನದಲ್ಲಿ ಏನೂ ಬೆಳೆಯುವುದಿಲ್ಲವೆಂದು ಹೇಳಿ ಅದನ್ನು ಬಿಟ್ಟುಬಿಡುತ್ತೇವೆಯೇ ? ನಮ್ಮ ದೇಶದಲ್ಲಿ ಹರಿಜನರು ಹಿಂದೆ ಬಿದ್ದಿದ್ದಾರೆಂದು ಎಲ್ಲರೂ ಹೇಳುತ್ತಿದ್ದೇವೆ. ಅವರನ್ನೀಗ ಮುಂದೆ ತರುವುದಕ್ಕೆ ನಾವು ಬದ್ಧರಾಗಿಲ್ಲವೇ ? ಅದೇ ರೀತಿ ಯಾವುದೇ ಪ್ರದೇಶ ಹಿಂದೆ ಬಿದ್ದಿದ್ದರೂ ಅದನ್ನು ಮುಂದಕ್ಕೆ ತರಬೇಕಾದ್ದು ನಮ್ಮ ಧರ್ಮ. ಶ್ರೀಮತಿ ಲಕ್ಷ್ಮಿದೇವಿರಾಮಣ್ಣರವರು ಹೇಳಿದಂತೆ ಅವರು ವಿದ್ಯಾಭ್ಯಾಸದಲ್ಲಿ ಹಿಂದೆ ಬಿದ್ದಿರಬಹುದು. ಆ ಅಂಕಿ ಅಂಶಗಳನ್ನು ನಾನು ಅಷ್ಟಾಗಿ ಗಣನೆಗೆ ತೆಗೆದುಕೊಳ್ಳುವುದಕ್ಕೂ ಆಗುವುದಿಲ್ಲ. ಏಕೆಂದರೆ ಸಮಿತಿಯವರು ಬರೆದಿರುವುದರಲ್ಲಿ ಬಹಳಮಟ್ಟಿಗೆ ಭಯವನ್ನು ಉಂಟುಮಾಡುವ ಕೆಲವು ಪದಗಳನ್ನು ಸೇರಿಸಿದ್ದಾರೆ. ಹಿಂದೆ ಸರ್ಕಾರದವರು ಸಿಂಧ್ ಪ್ರಾಂತ್ಯ, ಒರಿಸ್ಸಾ ಪ್ರಾಂತ್ಯಗಳನ್ನು ಭಾಷೆಯ ಮೇಲೆಯೇ ಮಾಡಲಿಲ್ಲವೇ ? ಮಾಡಿದಾಗ ಅವು ಕೊರತೆಯ ಪ್ರಾಂತ್ಯಗಳೇ ಆಗಿರಲಿಲ್ಲವೇ ? ಸರ್ಕಾರದವರು ಅವಕ್ಕೆ ಮುಂಚೆ ಮುಂಚೆ ಗ್ರಾಂಟ್ ಕೊಟ್ಟು ಸಹಾಯ ಮಾಡಿದರು. ಇವೊತ್ತಿನ ದಿವಸ ಅವುಗಳೆಲ್ಲಾ ಚೆನ್ನಾಗಿ ಸರ್ಕಾರ ನಡೆಸಿಕೊಂಡು ಹೋಗುತ್ತಿಲ್ಲವೇ ? ಈಗ ನಾನು ತಮಗೆ ಉದಾಹರಣೆಗಾಗಿ ಇನ್ನೊಂದು ವಿಚಾರ ಹೇಳುತ್ತೇನೆ. ಈಗ ನಮ್ಮ ದೇಶ ಬಹಳ ಅಭಿವೃದ್ಧಿಗೆ ಬಂದಿದೆ ಎಂದು ನಾವು ಹೇಳುತ್ತಿದ್ದೇವೆ. ಹೀಗಿದ್ದರೂ ನಾವು ಪ್ರತಿಯೊಂದು ಕೆಲಸಕಾರ್ಯಗಳಿಗೂ ಆ ಸೆಂಟರಿನವರಿಂದ ಗ್ರಾಂಟನ್ನು ಪಡೆಯದೆ ನಮ್ಮ ಕೆಲಸಕಾರ್ಯಗಳನ್ನು ಮುಂದುವರಿಸಲು ಸಾಧ್ಯವಾಗಿಲ್ಲ. ಹೀಗೆ ನಾವು ಪರರನ್ನು ಆಶ್ರಯಿಸಿಕೊಂಡ ಎಷ್ಟುದಿವಸ ಕೆಲಸಮಾಡಲು ಸಾಧ್ಯವಾದೀತು ? ನಮ್ಮಲ್ಲಿ ಈ ದಿವಸ ಈ ನೀರಾವರಿ ಯೋಜನೆಗಳು ಹೇಗೆ ಇವೆಯೋ ಅಲ್ಲಿಯೂ ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿದ್ದೇ ಇವೆ. ಆ ತುಂಗಭದ್ರಯೋಜನೆಯೊಂದರಿಂದಲೇ ಆ ರಾಯಚೂರು ಜಿಲ್ಲೆಯಲ್ಲಿ 5 ಸಾವಿರ ಎಕರೆಗಳು ಸಾಗುವಳಿಗೆ ಬಂದಿದೆ. ಇದೇರೀತಿ ಇನ್ನೂ ಅನೇಕ ಜಿಲ್ಲೆಗಳಲ್ಲಿ ಲಕ್ಷಾಂತರ ಎಕರೆಗಳ ಭೂಮಿ ನೀರು ಸಾಗಿಗೆ ಬಂದಿದೆ. ಆದುದರಿಂದ ಆ ಪ್ರದೇಶಗಳೇನೂ ಮುಂದುವರಿದೇ ಇಲ್ಲ ಎಂದು ಮಾಡತಕ್ಕ ವಾದ ಸರಿಯಾದ್ದಲ್ಲ. ಎಲ್ಲೆಲ್ಲಿ ಉಳತಕ್ಕಂಥ ಭೂಮಿ ಜಾಸ್ತಿಯಾಗಿದೆಯೋ ಅಂಥ ಕಡೆಗೆ ಜಮೀನಿಲ್ಲದಂಥ ಪ್ರದೇಶದಲ್ಲಿರುವ ಜನರನ್ನು ವರ್ಗಾಯಿಸಲೇ ಬೇಕಾಗುತ್ತದೆ. ಈ ದಿವಸ ಯಾರುಯಾರಿಗೆ ಜಮೀನು ಜಾಸ್ತಿಯಾಗಿತ್ತೋ ಅಂಥವರಿಂದ ಅವನ್ನೆಲ್ಲಾ ಕಿತ್ತುಕೊಂಡು ಯಾರುಯಾರಿಗೆ ಉಳಲು ಜಮೀನಿಲ್ಲವೋ ಅಂಥವರಿಗೆಲ್ಲಾ ಜಮೀನನ್ನು ಹಂಚುತ್ತಿರುವಂಥ ಕಾಲದಲ್ಲಿ, ಹೀಗೆಲ್ಲಾ ಹೇಳುವುದು ಸರಿಯಾದ್ದಲ್ಲ. ಹೊಟ್ಟೆಗಿಲ್ಲದೆ ಸಾಯುತ್ತಿರುವವರನ್ನು ಹಾಗೆ ನೋಡಿಕೊಂಡು ಸುಮ್ಮನೆ ಇರಲು ಯಾರಿಗೂ ಸಾಧ್ಯವಿಲ್ಲ.

ಅಧ್ಯಕ್ಷರು.—ಎಲ್ಲರನ್ನೂ ಒಂದೇ ಸಮಾನವಾದಂಥ ಭಾವನೆಯಿಂದ ನೋಡುವುದಕ್ಕೆ ಅವಕಾಶ ಮಾಡುತ್ತಿದ್ದೇವೆಂದು ಹೇಳಿದ್ದಾರಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ತಾವು ಆ ದಿವಸ ಜವಹರಲಾಲ್ ನೆಹ್ರೂ ಅವರು ಏನು ಹೇಳಿದ್ದಾರೆಂಬುದನ್ನು ಹೇಳಿದಾಗ್ಗೂ ತಾವು ಈ ದಿವಸ ಅದನ್ನು ಒಪ್ಪುತ್ತಿಲ್ಲ. ಮಹಾತ್ಮಗಾಂಧಿಯವರಾದರೂ ಹಾಗೆ ಅನುಮತಿಯಿಲ್ಲದೆ ಇರತಕ್ಕಂಥ ಜನಗಳನ್ನೆಲ್ಲಾ ಒಟ್ಟುಗೂಡಿಸಿ ಒಂದು ರಾಜ್ಯವನ್ನು ಎಂದಿಗೂ ಮಾಡಬಾರದೆಂದು ಹೇಳಿದ್ದಾರೆ. ಅಂದರೆ ನಿಮಗೆ ಅನುಕೂಲವಾಗುವುದಾದರೆ ಇಟ್ಟುಕೊಳ್ಳಿ, ಅನಾನುಕೂಲವಾಗುದಾದರೆ ಬಿಟ್ಟುಬಿಡಿ ಎಂದು ಹೇಳಿದ್ದಾರೆ. ಈ ದಿವಸ ಈ ಅಸೆಂಬ್ಲಿ ಸದಸ್ಯರ ಅಭಿಪ್ರಾಯವೂ ಕೂಡ ಹಾಗೆಯೇ ಇದೆ. ಆದರೆ ಈಗ ಕೆಲವು ಸದಸ್ಯರು ಉದಾಹರಣೆಗೆ ಆ ಕೊಡಗಿನಂಥ 10-20 ಸಾವಿರ ಜನಗಳಿರತಕ್ಕಂಥ ಭಾಗವನ್ನಾದರೆ ಸೇರಿಸಿಕೊಳ್ಳಬಹುದೆಂದು ಹೇಳಿದ್ದಾರೆ. ಈ ದಿವಸ ನಮ್ಮ ಮೈಸೂರು ಸಂಸ್ಥಾನ ಈ ಸ್ಥಿತಿಯಲ್ಲಿರುವುದಕ್ಕೆ ಕಾರಣವೇನೆಂದರೆ, ಇಲ್ಲಿಯ ಪ್ರಜಾಸಂಖ್ಯೆ ಒಂದು ಕೋಟಿಯೊಳಗೆ ಇದ್ದು ಬಹಳ ದಿವಸಗಳಿಂದಲೂ ಒಂದು ಹಿಡಿತವಾದಂಥ ಚೌಕಟ್ಟಿನಲ್ಲಿ ಆಡಳಿತ ನಡೆಸಿಕೊಂಡು, ನಾವು ನಮ್ಮದೇ ಆದಂಥ ಒಂದು ವೈಶಿಷ್ಟ್ಯವನ್ನು ಬೆಳಸಿಕೊಂಡು ಬಂದಿದ್ದರಿಂದ ಹೀಗಿರುತ್ತದೆ. ಇದನ್ನು ನಾವು ಈ ದಿವಸ ಬದಲಾವಣೆ ಮಾಡಬೇಕಾಗಿದ್ದರೆ ನಾವು ಈ ಪ್ರಶ್ನೆಯನ್ನು ಬಹಳ ದೀರ್ಘವಾಗಿ ಆಲೋಚನೆ ಮಾಡಬೇಕಾಗಿದೆ. ನಮ್ಮ ನಾಯಕರೂ ಕೂಡ ಇದನ್ನೇ ಹೇಳುತ್ತಿದ್ದಾರೆ. ಶ್ರೀಮನ್ಮಹಾರಾಜರವರೂ ಕೂಡ ತಮ್ಮ ಭಾಷಣದಲ್ಲಿ ಈ ಪ್ರಶ್ನೆಯಿಂದ ಬಹು ಭಾಗದ ಜನರಿಗೆ ಅನುಕೂಲವಾಗುವುದಾಗಿದ್ದರೆ ಮಾತ್ರವೇ ಇದನ್ನು ಮಾಡಬಹುದೆಂದು ಹೇಳಿರುತ್ತಾರೆ. ಇಷ್ಟೆಲ್ಲಾ ಇರುವಾಗ ಕೆಲವರು ಇದನ್ನು ಬಹಳ ಸುಲಭವಾಗಿ ಹೇಳುತ್ತಾರೆ, ಇದರಿಂದ ಬಹಳ ಸೌಲಭ್ಯಗಳುಂಟಾಗುತ್ತವೆಂದು. ಆದರೆ ಈ ದಿವಸ ಈ ಅಭಿಪ್ರಾಯಕ್ಕೆ ಶೇಕಡ 90ರಷ್ಟು ಜನರ ವಿರೋಧವಿದೆ ಎಂದು ಹೇಳು

(ಶ್ರೀ ಜಿ. ಎ. ತಿಮ್ಮಪ್ಪಗೌಡ)

ತ್ತಿದ್ದರೂ ಇನ್ನೂ ಶೇಕಡ 60ರಷ್ಟು ಜನರು ಏಕೀಕರಣವಾಗಬೇಕು ಎನ್ನತಕ್ಕವರಿದ್ದಾರೆ ಎಂದು ಹೇಳುತ್ತಿದ್ದಾರೆ. ಒಂದು ವೇಳೆ ಈ ಅಖಂಡ ಕರ್ಣಾಟಕವಾಗಬೇಕೆಂಬ ಬಗ್ಗೆ ಶೇಕಡ 55ರಷ್ಟು ಜನ ಒಪ್ಪಿಗೆ ಕೊಟ್ಟು ಇನ್ನು ಶೇಕಡ 45ರಷ್ಟು ಜನ ಒಪ್ಪಿಗೆ ಕೊಡದೆ ಹೋದರೆ ಆಗಲೂ ಇದಕ್ಕೆ ಬಹುಮತವಿದೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಏತಕ್ಕೆಂದರೆ, ಇದು ಬಹುಜನರ ಸೌಕರ್ಯ ಮತ್ತು ಅವರ ಹಣೆ ಬರಹವನ್ನು ನಿರ್ಧರಮಾಡತಕ್ಕಂಥ ವಿಚಾರವಾಗಿದೆ. ಆದುದರಿಂದ ಈ ಸಮಸ್ಯೆಯನ್ನು ಬಿಡಿಸಬೇಕಾಗಿದ್ದರೆ ಭಾಷೆಯ ಆಧಾರದ ಮೇಲೆ ಅಲ್ಲದೆ ಮತ್ತೆ ಯಾವ ಆಧಾರದ ಮೇಲೆ ಬಿಡಿಸಲು ಪ್ರಯತ್ನಪಟ್ಟಾಗ್ಯೂ ಜನರ ಅಭಿಪ್ರಾಯವನ್ನಂತೂ ಪಡೆಯಲೇಬೇಕಾಗಿದೆ. ಹಿಂದೆ ನಾನು ಲಾ ಕಾಲೇಜಿನಲ್ಲಿ ಓದುತ್ತಿದ್ದಾಗ ಒಂದ್ದಾವರ್ತಿ ಸಾವರ್‌ಕರ್ ಅವರು ಒಂದು ಮಾತನ್ನು ಹೇಳಿದ್ದರು, ಅದೀಗ ನನಗೆ ಜ್ಞಾಪಕಕ್ಕೆ ಬರುತ್ತಿದೆ.—ಆಗಿನ ಸನ್ನಿವೇಶದಲ್ಲಿ ದೇಶವಲ್ಲಿ ಹಿಂದೂ-ಮುಸ್ಲಿಂ ತಿಕ್ಕಾಟ ನಡೆಯುತ್ತಿತ್ತು. ಆಗ ಅವರು ಏನು ಹೇಳಿದರೆಂದರೆ—"ಈ ನಮ್ಮ ಇಂಡಿಯಾ ದೇಶದ ಚರಿತ್ರೆಯನ್ನು ನಾವು ನೋಡುವುದಾದರೆ ನಮ್ಮ ದುರ್ದೈವ ಎಷ್ಟೆಂದು ಹೇಳಿದರೂ ಸಾಲದಾಗಿದೆ. ಒಂದು ದೇಶದ ಆಡಳಿತವು ಯಾವಾಗ್ಗೂ ಆ ದೇಶದಲ್ಲಿರತಕ್ಕಂಥ ಮೆಜಾರ್ಟಿ ಕಮ್ಯುನಿಟಿಯವರ ಅಭಿಪ್ರಾಯದಂತೆ ಅವರನ್ನು ಒಪ್ಪಿಸಿಕೊಂಡು, ಅವರ ಒಪ್ಪಿಗೆ ಪ್ರಕಾರ ಆಡಳಿತ ನಡೆಸಬೇಕಾದದ್ದು ಯುಕ್ತ; ಆ ರೀತಿ ಎಲ್ಲಾ ದೇಶಗಳಲ್ಲೂ ನಡೆಯುತ್ತಿರುವಾಗ ಈ ನಮ್ಮ ಇಂಡಿಯಾ ದೇಶದಲ್ಲಿ ನಾವು ಈ ಮೈನಾರಿಟಿ ಕೋಮಿನವರಿಗೆ ಅವರ ಒಪ್ಪಿಗೆ ಪಡೆದು ರಾಜ್ಯಾಡಳಿತ ನಡೆಸಬೇಕೆಂದು ಹೇಳುತ್ತಿರುವುದನ್ನು ನೋಡಿದರೆ ಬಹಳ ವಿಚಿತ್ರವಾಗಿದೆ. ಅಷ್ಟೇ ಏಕೆ, ನಾವು ತಲೆಬಗ್ಗಿಸುವಂಥ ವಿಚಾರವಾಗಿದೆ ಇದು" ಎಂದು ಹೇಳುತ್ತಿದ್ದರು. ಅದೇ ರೀತಿ ಈ ದಿವಸ ದೇಶದಲ್ಲಿ ಬಹುಸಂಖ್ಯಾತರಾಗಿರತಕ್ಕಂಥ ಕೋಮಿನವರ ಅಭಿಪ್ರಾಯದ ಪ್ರಕಾರ ಈಗ ಈ ಭಾಷೆ ಆಧಾರದ ಮೇಲೆ ದೇಶ ಪುನರ್ವಿಂಗಡಣೆಯಾಗುವುದು ಬೇಡ, ನಮ್ಮ ಅಕ್ಕಪಕ್ಕದ ಜನರನ್ನು ನಮ್ಮ ದೇಶಕ್ಕೆ ಸೇರಿಸಿಕೊಳ್ಳಲು ಇದು ಸಕಾಲವಾಗಿಲ್ಲ ಎಂದು ಹೇಳುತ್ತಿರುವಾಗ, ಅದು ಹಾಗಲ್ಲ, ಅದು ಹೀಗಲ್ಲ ಎಂದು ಹೇಳುತ್ತಿರುವುದು ತುಂಬ ಶೋಚನೀಯವಾಗಿದೆ. ಈಗಲೂ ಕೂಡ ಶೇಕಡ 75ರಷ್ಟು ಜನರು ಇದು ಆಗಕೂಡದೆಂಬ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ. ದೇಶದಲ್ಲಿ ಈ ಬಗ್ಗೆ ಯಾವ ವಿಧವಾದ ಒಂದು ಪ್ರಚಾರ ಕೂಡ ಇಲ್ಲ. ಇದರಿಂದ ಮುಂದೆ ದೇಶಕ್ಕೆ ಏನೊಂದು ಭಯೋತ್ಪಾದನೆ ಇದೆಯೆಂಬ ಬಗ್ಗೆ ಜನರಿಗೆ ಯಾವ ತಿಳುವಳಿಕೆಯನ್ನೂ ಉಂಟುಮಾಡಿಲ್ಲ. ಈ ಪ್ರಾಂತ್ಯ ಪುನರ್ವಿಂಗಡಣೆಯ ವಿಚಾರದಲ್ಲಿ ನಮ್ಮ ನಾಯಕರುಗಳಿಗಾಗಲಿ ಅಥವಾ ಜನಗಳಿಗಾಗಲೀ ಯಾರೊಬ್ಬರ ಒಪ್ಪಿಗೆಯೂ ಇರುವುದಿಲ್ಲ. ಜನರನ್ನು ಕೇಳಿದರೆ ಅವರು ಅವರ ಆತ್ಮಸಾಕ್ಷಿಯಾಗಿ ಈಗ ನಮ್ಮ ಮೈಸೂರು ದೇಶ ಎಷ್ಟಿದೆಯೋ ಅಷ್ಟೇ ಇರಬೇಕೆಂದು ಹೇಳುತ್ತಾರೆ. ಜನಾಭಿಪ್ರಾಯ ಈ ರೀತಿ ಇದೆಯೆಂದು ನಾನು ಹೇಳುತ್ತೇನೆ.

ಶ್ರೀ ಟಿ. ಹನುಮಯ್ಯ (ಚಿತ್ರದುರ್ಗ—ಅನುಸೂಚಿತ ಜಾತಿಗಳು).—ಕೊಶ್ಚನ್?

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಹೌದು. ನೀವು ಆ ಚಿತ್ರದುರ್ಗ ಬಾರ್ಡರಿನಲ್ಲಿದ್ದೀರಿ. ನಿಮಗೆ ಬೇರೆ ಜನರ ನೋವು ಕಾಣಿಸುತ್ತಿಲ್ಲ. ಇದು enlightened self-interest ಎನ್ನುತ್ತೀರಿ. ನೀವು ಇತರರ ಅಭಿವೃದ್ಧಿ ಬಗ್ಗೆ ಹೊಟ್ಟೆಕಿಚ್ಚು ಪಡುವುದೂ ಬೇಕಾಗಿಲ್ಲ ಮತ್ತು ನಾವು ಅಂಥ ದಾನಶೂರಕರ್ಣರಾಗುವುದೂ ಬೇಡ. ಹೀಗೆ ರಾಜ್ಯಗಳ ಪುನರ್ವಿಂಗಡಣೆಯಾದಲ್ಲಿ ನಾವು ನಮ್ಮ ಕೆಲಸಕಾರ್ಯಗಳೇನಿವೆಯೋ ಮತ್ತು ನಮ್ಮ ನಾಡಿನ ಅಭಿವೃದ್ಧಿಸಾಧನೆಗಾಗಿ ನಾವು ಏನೇನು ಕೆಲಸಕಾರ್ಯಗಳನ್ನು ಕೈಕೊಳ್ಳಬೇಕಾಗಿದೆಯೋ ಅವುಗಳಿಗೆಲ್ಲಾ ಬಹಳ ಧಕ್ಕೆಯುಂಟಾಗುತ್ತದೆ. ಇಲ್ಲಿಯತನಕ ನಾವು ನಮ್ಮ ನಾಡಿನ ಮೇಲ್ಮೆಗಾಗಿ ಒಂದು ನಿರ್ದಿಷ್ಟವಾದ ಯೋಜನೆಯನ್ನು ಹಾಕಿಕೊಂಡು ಅದರ ಪ್ರಕಾರ 4-5 ವರ್ಷಗಳಲ್ಲಿ ಇಂತಿಷ್ಟು ಕೆರೆಗಳ ರಿಪೇರಿಯಾಗಬೇಕು, ಇಂಥಿಂಥ ಸ್ಥಳಗಳಿಗೆ ಪಾಠಶಾಲೆಗಳನ್ನೊದಗಿಸಬೇಕು ಎಂಬುದಾಗಿ ಇತ್ಯಾದಿ ಕಾರ್ಯಕ್ರಮವನ್ನು ಹಾಕಿಕೊಂಡಿರುತ್ತೇವೆ. ಹೀಗಿರುವಾಗ ಈ ರಾಜ್ಯಗಳ ಪುನರ್ವಿಂಗಡಣೆಯಾಗಬೇಕೆಂದು ಹೇಳಿದರೆ ಆಗ ನಮ್ಮ ಆದಾಯ ಕಮ್ಮಿಯಾಗಿ, ನಮ್ಮ ಖರ್ಚುವೆಚ್ಚಗಳ ಬಾಬುಗಳು ಜಾಸ್ತಿಯಾಗುತ್ತವೆ. ಆಗ ನಾವು ನಮ್ಮ ದೇಶದ ಅಭಿವೃದ್ಧಿಕಾರ್ಯಗಳನ್ನು 18-20 ವರ್ಷಗಳ ತನಕ ಹಿಂದಕ್ಕೆ ಹಾಕಬೇಕಾಗುತ್ತದೆ. ಅಂಗೈಲಿರುವ ಹುಣ್ಣಿಗೆ ಕನ್ನಡಿಬೇಕೇ ಎಂಬಂತೆ ನಾವು ನಮ್ಮ ಆದಾಯದಲ್ಲಿ ಸ್ವಲ್ಪ ಭಾಗವನ್ನು ಆ ಹಿಂದುಳಿದಿರುವಂಥ ಪ್ರದೇಶಗಳ ಬಗ್ಗೆ ಖರ್ಚು ಮಾಡಲೇಬೇಕಾಗುತ್ತದೆ. ಆಗ ನಮ್ಮ ಹಳ್ಳಿಗಾಡುಗಳ ಅಭಿವೃದ್ಧಿ ಕೆಲಸಗಳನ್ನು ನಿಲ್ಲಿಸಬೇಕಾಗುತ್ತದೆ. ಇಂಥ ಕಷ್ಟಗಳೆಲ್ಲಾ ಸಾಮಾನ್ಯವಾಗಿ ನಮ್ಮ ಮಿತ್ರರಾದಂಥ ಶ್ರೀ ಸಿದ್ದಪ್ಪನವರಿಗೆ ಗೊತ್ತಾಗುವುದಿಲ್ಲ. ನಾಳೆದಿವಸ ಆ ಹಿಂದುಳಿದ ಪ್ರಾಂತ್ಯಗಳವರು 'ನಮಗೆ ಕೆರೆ ಮಾಡಿಸಿಕೊಡಿ, ಒಂದು ರಸ್ತೆ ಮಾಡಿಸಿ ಕೊಡಿ' ಎಂದು ಕೇಳಬಹುದು. ಆದರೆ ನೋಡತಕ್ಕವರಿಗೇನೋ ಈ ವಿಚಾರಗಳೆಲ್ಲಾ ಚಿಕ್ಕಪುಟ್ಟ ವಿಚಾರಗಳೆಂದು ಕಾಣುವುದಾದರೂ ನಾವು ಈ ಅಂಶಗಳನ್ನೆಲ್ಲಾ ಗಣನೆಗೆ ತೆಗೆದುಕೊಳ್ಳಲೇಬೇಕಾಗುತ್ತದೆ. ಈ ಎಲ್ಲಾ ಕಾರಣಗಳಿಂದಲೂ ನಾವು ಆಯಾ ಪ್ರಾಂತ್ಯದ ಜನರ ಅಭಿಪ್ರಾಯ ಪಡೆಯದೆ ಯಾವ ಕೆಲಸಕ್ಕೇ ಆಗಲಿ ಹೀಗೆ ಕೈಹಾಕುವುದು ಅಷ್ಟು ಬುದ್ಧಿವಂತಿಕೆಯ ಕೆಲಸವಲ್ಲವೆಂದು ನಾನು ಹೇಳುತ್ತೇನೆ. ಭಾಷೆಯ ಆಧಾರದ ಮೇಲೆ ರಾಜ್ಯಗಳನ್ನು ನಿರ್ಮಾಣಮಾಡತಕ್ಕ ವಿಚಾರದಲ್ಲಿ ನನಗೆ ಒಂದಂಶ ಹೀಗೆ ಹೊಳೆಯುತ್ತಿದೆ:—ಏನೆಂದರೆ, ಈ ರೀತಿಯ ಏರ್ಪಾಡಿನಿಂದ ನಮ್ಮ ದೇಶದ ಸ್ವಾತಂತ್ರ್ಯದ ಭದ್ರತೆಗೆ ಬಹಳ ಧಕ್ಕೆ ಬರುತ್ತದೆ. ಈ ಬರಿ ಭಾಷೆಯೊಂದರ ವ್ಯಾಮೋಹಕ್ಕೊಳಗಾದರೆ ಜಾತಿ ಮತಗಳಲ್ಲಿ ಅನೈಕ್ಯಮತ್ಯ ಉಂಟಾಗಿ, ಜಾತಿ ಕಲಹಗಳು ಬೆಳೆಯಲು ಅವಕಾಶವಾಗುತ್ತದೆ. ಹೀಗೆಲ್ಲಾ ಮಾಡುವುದರಿಂದ ನಮ್ಮ ಸ್ವಾತಂತ್ರ್ಯಕ್ಕೇ ಚ್ಯುತಿ ಬರಬಹುದೋ ಏನೋ ಎಂದು ನನಗೆನಿಸುತ್ತದೆ. ಈ ದಿವಸ ಆ ಪಾಕೀಸ್ಥಾನದಲ್ಲಿ ಜನರು ಒಂದು ಮತಾಂಧತೆಯಿಂದ ಕೂಡಿದವರಾಗಿರುವುದರಿಂದ ಅಥವಾ religion ಮೇಲೆ ಕಟ್ಟಿದಂಥ ರಾಜ್ಯದಲ್ಲಿರುವುದರಿಂದ ಅನೇಕ ಅನಾಹುತಗಳಾಗಲು ಕಾರಣವಾಯಿತು. ಹೀಗೆ ಯಾವ ಒಂದು ಭಾಷೆಯ ಆಧಾರದ ಮೇಲೆ ಆಗಲಿ ರಾಜ್ಯ ಕಟ್ಟುವುದರಿಂದ ಅನೇಕ ತೊಂದರೆಗಳುಂಟಾಗಲು ಕಾರಣವಾಗುತ್ತದೆ. ಇದೇ ರೀತಿಯಾಗಿ ಈ ದಿವಸ ಬೆಂಗಾಲ್ ಮತ್ತು ಒರಿಸ್ಸಾ ಇತ್ಯಾದಿ ದೇಶಗಳಲ್ಲಿ ಭಾಷೆಯ ವಿಚಾರವಾಗಿ ಆಗಾಗ್ಗೆ ಕಚ್ಚಾಟಗಳು ಆಗುತ್ತಲೇ ಇವೆ. ಹೀಗೆಲ್ಲಾ ಅವರು ಈ ದಿವಸ ಎಷ್ಟು ಫೆನಾಟಿಕಲ್ ಆಗಿ ವರ್ತಿಸುತ್ತಿದ್ದಾರೆಂಬುದನ್ನು ನಾವು ಕೇಳುತ್ತಿದ್ದೇವೆ. ಆದುದರಿಂದ ಹೀಗಾದರೆ

ಇನ್ನೂ ಮುಂದಿನ 10 ವರ್ಷಗಳಲ್ಲಿ ಅಥವಾ 20 ವರ್ಷಗಳಲ್ಲಿ ಏನಾಗಬಹುದೆಂಬುದನ್ನು ನಾವು ನಮ್ಮ ದೃಷ್ಟಿಯಲ್ಲಿಟ್ಟುಕೊಂಡು ಕೆಲಸ ನಡೆಸಬೇಕಾದದ್ದು ಯುಕ್ತವೆಂದು ಭಾವಿಸುವ ಪಕ್ಷದಲ್ಲಿ ಈ ಭಾಷಾವಾರು ಪ್ರಾಂತ್ಯರಚನೆಗಳಾಗಲು ನಾವು ಯಾವಾಗ್ಗೂ ಅವಕಾಶಕೊಡಬಾರದೆಂದು ನನಗೆನಿಸುತ್ತದೆ. ಈಗ ಈ ಭಾಷೆಯ ಬೆಳವಣಿಗೆಗಾಗಿ ನಾವು ಅಷ್ಟೇನೂ ನಿಗಾ ಕೊಡಬೇಕಾಗಿಲ್ಲ ಎಂದು ಹೇಳುವುದಿಲ್ಲ. ಆದರೆ ಅಕ್ಕಪಕ್ಕದ ಪ್ರಾಂತ್ಯಗಳವರು ಅವರಿಗೆ ಭಾಷೆಯ ಅಭಿಮಾನವಿದ್ದರೂ ಬೇರೆ ರೂಪವಾಗಿ ಆಡಳಿತ ನಡೆಸಿಕೊಂಡು ಹೋಗುತ್ತಿದ್ದಾರೆ.

2 P.M.

ಈ ಭಾಷೆ ದೇಶದ ಸ್ವಾತಂತ್ರ್ಯಕ್ಕೆ ಮುಂದೆ ಒಂದು ಕುಂದಕ ತರಬಹುದೆಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು, ತತ್ಕಾಲದಲ್ಲಿ ಆಯಾ ಪ್ರಾಂತದ ಭಾಷೆಗಳು ಬೆಳೆದು, ಅವುಗಳಿಂದ ಆಯಾ ಪ್ರಾಂತ್ಯಗಳ ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಹೋದರೂ ಕೂಡ, ಮುಂದೆ permanent basisನ ಮೇಲೆ ಒಂದೇ ರಾಷ್ಟ್ರಭಾಷೆಯಾದ ಹಿಂದೀ ಭಾಷೆ ಇಂಡಿಯಾ ದೇಶದಲ್ಲೆಲ್ಲಾ ಹರಡಬೇಕಾಗಿದೆ. ದಕ್ಷಿಣ ಇಂಡಿಯಾದಲ್ಲಿ ಹಿಂದೀ ಭಾಷೆ 5 ವರ್ಷದೊಳಗೆ 10 ವರ್ಷದೊಳಗೆ ಕಡ್ಡಾಯವಾಗಿ ಕಲಿಯಬೇಕು. ಅದರ ಪ್ರಾಬಲ್ಯ ಎಲ್ಲಾ ಕಡೆಯೂ ಪ್ರಸಾರವಾಗಬೇಕು. ಪ್ರಾಂತಗಳ ಭಾಷೆಯ ಪ್ರಾಬಲ್ಯವನ್ನು ಹಿಂದಕ್ಕೆ ಇಡಬೇಕು ಮತ್ತು ಹಾಗೆ ಪ್ರಾಂತಗಳ ವಿಂಗಡನೆ ಮಾಡಬೇಕು. ಭಾಷೆಗಳ ಆಧಾರದಮೇಲೆ ಪ್ರಾಂತಗಳನ್ನು ಮಾಡಿಕೊಂಡರೆ ಏನಾಗುತ್ತದೆ ಎಂಬುದು ಡಿಲ್ಲಿಗೆ ಹೋದವರಿಗೆ ಅನುಭವವಿದೆ. ನಮ್ಮ ಸಭಾಪತಿಗಳಿಗೆ ಗೊತ್ತಿದೆ. ಒಂದೊಂದು ಭಾಷೆ ಮಾತನಾಡತಕ್ಕವರು ಒಂದೊಂದು ಕಡೆ ಕೂತುಕೊಂಡು ಅಲ್ಲಿ ಚರ್ಚೆಗೆ ಬರುವ ವಿಚಾರಗಳನ್ನು ಅವರವರ ಪ್ರಾಂತಗಳ ದೃಷ್ಟಿಯಲ್ಲಿ ನೋಡುತ್ತಾರೆ. ಹೀಗೆ ಪ್ರಾಂತೀಯ ಮನೋಭಾವನೆ ಬೆಳೆಯುತ್ತಾ ಹೋಗುತ್ತದೆ. ಅದಕ್ಕೆ ಅವಕಾಶ ಕೊಡಬಾರದು. ಬಲಯುತ ರಾಷ್ಟ್ರಗಳಾದ ಅಮೇರಿಕಾ ಮತ್ತು ಇಂಗ್ಲೆಂಡ್ ಮಟ್ಟಕ್ಕೆ ಬರಬೇಕಾದರೆ ಆ ರೀತಿ ಒಂದೇ ಭಾಷೆಯನ್ನು ಇಟ್ಟುಕೊಳ್ಳಬೇಕು. ಹಾಗೆ ಮಾಡದೇ ಹೋದರೆ ರಾಷ್ಟ್ರಪ್ರೇಮವುಂಟಾಗುವುದಿಲ್ಲ. ಆಯಾ ಪ್ರಾಂತದ ಅಂಧಪ್ರೇಮ ಬೆಳೆಯುತ್ತಾ ಹೋಗುತ್ತದೆ. ನಾಳೆಯ ದಿವಸ ಕೇಂದ್ರ ಸರ್ಕಾರ ಅಸಮರ್ಪಕವಾಗಿ, ನಾನಾ ಕಾರಣಗಳಿಂದ ಸಡಿಲವಾದ ಪಕ್ಷದಲ್ಲಿ ಸರ್ಪಗಳು ಚುಚ್ಚುವಂತೆ ಚುಚ್ಚುವುದಕ್ಕೆ ಪ್ರಾರಂಭ ಮಾಡುತ್ತೇವೆ.

ಶ್ರೀ ಕೆ. ಪಂಚಾಕ್ಷರಯ್ಯ (ಅರಸೀಕೆರೆ).—ತಾವು ಹಿಂದೀ ಮಾತನಾಡುವವರ ಜೊತೆಗೆ ಕುಳಿತುಕೊಳ್ಳುತ್ತಿದ್ದರೋ ಅಥವಾ ಕನ್ನಡ ಮಾತನಾಡುವವರ ಜೊತೆಗೆ ಕುಳಿತುಕೊಳ್ಳುತ್ತಿದ್ದರೋ ?

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಇಂಗ್ಲೀಷ್ ಮಾತನಾಡುವವರ ಜೊತೆಗೆ ಕುಳಿತುಕೊಳ್ಳುತ್ತಿದ್ದೆ. ಕನ್ನಡ ಭಾಗಗಳು ಬಹಳ ದೂರದಲ್ಲಿದ್ದುದರಿಂದ ಆಡಳಿತ ಸಮರ್ಪಕವಾಗಿಲ್ಲದೆ ಇರುವುದರಿಂದ ಆಗ ನಮ್ಮ ಜೊತೆಗೆ ಸೇರಬೇಕೆಂದು ಹೇಳುತ್ತಿದ್ದರು. ಇವೊತ್ತಿನ ದಿವಸ ಸನ್ನಿವೇಶ ಬೇರೆಯಾಗಿದೆ. ಏನೂ ಅನುಕೂಲ ಮಾಡಿಕೊಡದಿದ್ದರೆ ಕೊಟ್ರ ಬಸವನಗೌಡರಂಥವರು ಸುಮ್ಮನೆ ಇರುವುದಿಲ್ಲ. ಧಾರವಾಡ, ಹುಬ್ಬಳ್ಳಿಯಲ್ಲಿ ಇದ್ದವರಿಗೆ ಹಿಂದೆ ತೊಂದರೆಯಾಗಿದ್ದುದು ನಿಜ. ಇವೊತ್ತಿನ ದಿವಸ ಪ್ರಜಾಪ್ರಭುತ್ವ ಇದೆ. ಭಯ ಏತಕ್ಕೆ ಇರಬೇಕು ? ಇಡೀ ಇಂಡಿಯಾ ದೇಶಕ್ಕೆ ಒಂದೇ ಒಂದು Constitution ಇವೊತ್ತಿನ ದಿವಸ ಇದೆ. ಪ್ರತಿಯೊಬ್ಬ ಪ್ರಜೆಯೂ ಇಂಡಿಯಾದ ನೇರವಾದ ಪ್ರಜೆಯಾಗಿದ್ದಾನೆ. ಎಲ್ಲಾ ಹಕ್ಕುಬಾಧ್ಯತೆಗಳೂ ಪ್ರತಿಯೊಂದು ಮೂಲೆ ಮೂಲೆಯಲ್ಲಿರುವ ಪ್ರತಿಯೊಂದು ಕೋಮಿನ ಪ್ರತಿಯೊಬ್ಬ ವ್ಯಕ್ತಿಗೂ ಒಂದೇ ವಿಧವಾಗಿ ಇದೆ. ಅಂಥ ಹಕ್ಕುಭಾಧ್ಯತೆಗಳನ್ನು ಚಲಾಯಿಸುವುದಕ್ಕೆ ನಮಗೆ ಹಕ್ಕು ಇದೆ. ನಮ್ಮ ಕನ್ನಡ ಬಂಧುಗಳು ಬಹಳ ಕಷ್ಟದಲ್ಲಿದ್ದಾರೆಂದು ವ್ಯಥೆಯಿಂದ ಹೇಳಿದರು. ಅವರು ಕಷ್ಟದಲ್ಲಿ ಇಲ್ಲ. ದೊಡ್ಡ ದೊಡ್ಡ ಹುದ್ದೆಗಳಲ್ಲಿದ್ದಾರೆ. ಬೊಂಬಾಯಿ ಪ್ರಾಂತದ ಕರ್ಣಾಟಕದವರು ಉಪಮಂತ್ರಿಗಳಾಗಿದ್ದಾರೆ, ಮದರಾಸಿನಲ್ಲಿಯೂ ಆ ರೀತಿ ಒಳ್ಳೆಯ ಹುದ್ದೆಗಳಲ್ಲಿ ಇದ್ದಾರೆ. ಕರ್ಣಾಟಕದಿಂದ ಇಬ್ಬರು ಮಂತ್ರಿಗಳು ಇದ್ದಾರೆ.

ಶ್ರೀ ಜೆ. ಮುಹಮ್ಮದ್ ಇಮಾಂ.—ಸಮುದ್ರದ ನೆಂಟಸ್ತನ ಉಪ್ಪಿಗೆ ಬಡತನ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಸಮುದ್ರದ ಉಪ್ಪು ಪ್ರಸಿದ್ಧವಾದುದು. ಆದ್ದರಿಂದ ಅದರ ಭಯ ಕರ್ಣಾಟಕದವರಿಗೆ ಏನೂ ಇಲ್ಲ. ಅಕಸ್ಮಾತ್ತಾಗಿ ಪ್ರಾಂತಗಳ ಯಾವ ಭಾಗ ಹಿಂದುಳಿದಿದೆಯೋ ಅದನ್ನು ಅಭಿವೃದ್ಧಿ ಮಾಡುವುದಕ್ಕೆ ಕೋಟ್ಯಂತರ ರೂಪಾಯಿಗಳ ಸಹಾಯವನ್ನು ಕೇಂದ್ರದಿಂದ ತೆಗೆದುಕೊಂಡು ಮಾಡಬಹುದು. ಈ ಸಮಸ್ಯೆಯನ್ನು ಬಿಡಿಸಬೇಕಾದರೆ ಅನೇಕ ಎಡರು ತೊಡರುಗಳಿವೆ. ಇದು ಸಾಮಾನ್ಯವಾದ ಪ್ರಶ್ನೆಯಲ್ಲ. ಇಡೀ ದೇಶದ ಆಗು ಹೋಗುಗಳನ್ನು ನಿರ್ಧರಿಸಬೇಕಾಗಿದೆ. ಇದಕ್ಕೆ ಮೈಸೂರು ದೇಶದ ಬಹು ಸಂಖ್ಯಾತ ಜನರು ಮೊದಲಿನಿಂದಲೂ ವಿರೋಧವಾಗಿದ್ದಾರೆ. ಈ ಸಂದರ್ಭದಲ್ಲಿ ಅನೇಕ ಉದಾಹರಣೆಗಳನ್ನು ಕೊಟ್ಟಿದ್ದಾರೆ. ಕೆಲವರು 1949ರಲ್ಲಿ ಪ್ರಚಾರ ನಡೆಸುತ್ತಿದ್ದರು. ಅದೇನೆಂದರೆ ಡಿಲ್ಲಿಯೊಳಗೆ Constitution ರಚನೆಯಾಗುತ್ತಿದೆ, ಮೈಸೂರನ್ನು ಏನಾದರೂ ಮಾಡಿ ಕರ್ಣಾಟಕದಲ್ಲಿ ಸೇರಿಸಿಬಿಡುತ್ತಾರೆಂದು ಹೇಳುತ್ತಿದ್ದರು. ಆಗ ಮೈಸೂರು Representative Assemblyಯಲ್ಲಿ ಒಂದು special resolutionನನ್ನು ನಮ್ಮ ಸ್ನೇಹಿತರಾದ ಶ್ರೀ ಬಿ. ಎಲ್. ಗುಪ್ತರವರು ತಂದು ಸದ್ಯಕ್ಕೆ ಮೈಸೂರು ಇದ್ದಹಾಗೆ ಇರಬೇಕು, ಬೇರೆ ಪ್ರಾಂತದ ಜೊತೆಗೆ ಸೇರಿಸಕೂಡದು ಎಂದು ಒಂದು ನಿರ್ಣಯ ಮಾಡಿದರು. ಶ್ರೀಮತಿ ಲಕ್ಷ್ಮಿದೇವಿ ರಾಮಣ್ಣನವರು ಅದರಮೇಲೆ ಮಾತನಾಡಿದ್ದಾರೆ. ಇನ್ನೂ ಅನೇಕ ಸ್ನೇಹಿತರು ಮಾತನಾಡಿದ್ದಾರೆ. ಆ ನಿರ್ಣಯ ಸರ್ವಾನುಮತದಿಂದ ಪಾಸಾಯಿತು. ಕೇವಲ ಒಬ್ಬರು ಮಾತ್ರ ವಿರೋಧಮಾಡಿದರು. ಕಾಂಗ್ರೆಸ್ ಸಂಸ್ಥೆಯ ವಿಚಾರ ಸ್ವಲ್ಪ ಹೇಳುತ್ತೇನೆ. ಶ್ರೀ ಟಿ. ಸಿ. ಬಸಪ್ಪನವರು ಈ ವಿಚಾರದಲ್ಲಿ ಒಂದು ಸಬ್ಜೆಕ್ಟ್ ಚರ್ಚೆಗೆ ತಂದರೆ ಅದರಲ್ಲಿ ಕೆಲವರು ಆಗಬಹುದು ಎಂತಲೂ ಇನ್ನು ಕೆಲವರು ಆಗಬಾರದು ಎಂತಲೂ ಹೇಳುತ್ತಾರೆ. ಈ ಕಾಂಗ್ರೆಸ್ ಎಂಬುದು disciplineಗೆ ಒಳಗಾಗಿದ್ದುದರಿಂದ ಪಾರ್ಟಿಯಲ್ಲಿ ಚರ್ಚೆಗೆ ಬರುವುದು Assemblyಯಲ್ಲಿ ಚರ್ಚೆಗೆ ಬರುತ್ತದೆ. ಹಿಂದಿನ Assemblyಯಲ್ಲಿ ಬಹುಮತ ಇದಕ್ಕೆ ವಿರೋಧವಾಗಿತ್ತು. ಆದರೆ ಈ ಕಾಂಗ್ರೆಸ್ಸಿನಲ್ಲಿ split ಬರಬಾರದು, ಭಿನ್ನಾಭಿಪ್ರಾಯ ಇರಬಾರದು. ಈ ಸಮಸ್ಯೆಯನ್ನು ಒಗ್ಗಟ್ಟಿನಿಂದ ಎಲ್ಲಾ ಕೋಮಿನವರೂ ಭೇದವಿಲ್ಲದೆ ಬಗೆಹರಿಸಬೇಕಾಗಿದೆ. ಶ್ರೀ ಸೋಲೂರು ಸಿದ್ದಪ್ಪನವರು ನನಗೆ ಅಣ್ಣತಮ್ಮಂದಿರು

(ಶ್ರೀ ಜಿ. ಎ. ತಿಮ್ಮಪ್ಪಗೌಡ.)

ಇದ್ದ ಹಾಗೆ. ಅವರು ನನ್ನನ್ನು ಮಂತ್ರಿಗಳನ್ನಾಗಿ ಮಾಡುತ್ತೇನೆಂದು ಹೇಳುತ್ತಿದ್ದರು ಮತ್ತು ನನ್ನ ಹಿತವನ್ನು ಕೋರತಕ್ಕವರು. ಅಂತಹವರ ಸ್ನೇಹಕ್ಕೆ ಭಂಗ ಬರಬಾರದು. ಅಷ್ಟುಮಟ್ಟಿಗೆ ನನ್ನ ವಿಷಯದಲ್ಲಿ ಆಶೆ ಇಟ್ಟುಕೊಂಡಿರುವವರು ಹೊಡೆದಾಡುವಂತಾಗಬಾರದು. ಶ್ರೀ ಪಟ್ಟಾಭಿರಾಮಯ್ಯರವರು ಖಚಿತವಾಗಿ ಹೇಳಲಿಲ್ಲ. ಕಾಂಗ್ರೆಸ್ ಸಂಸ್ಥೆಯಲ್ಲಿ split ಉಂಟಾಗಬಾರದೆಂದು ಪ್ರತಿಯೊಂದು ಸಾರಿಯೂ ಇದನ್ನು ತಳ್ಳಿಹಾಕಿಕೊಂಡು ಬಂದರು. ಈಗ ಈ ವಿಚಾರ ಖಚಿತವಾಗಿ ಬಂದಿರತಕ್ಕ ಕಾಲದಲ್ಲಿ ಎಲ್ಲರೂ ಕೂಡ openಆಗಿ ಮಾತನಾಡುವುದಕ್ಕೆ ಷುರು ಮಾಡಿದ್ದೇವೆ. ಬೇಕು, ಬೇಡ ಎಂದು ಭಾಷಣ ಮಾಡಿದ್ದೇವೆ. ಕೆಲವರು ತಟಸ್ಥರಾಗಿದ್ದಾರೆ. ಇದಕ್ಕೆ ಅನೇಕ ರಾಜಕೀಯ ಕಾರಣಗಳಿವೆ. ಮುಂದೆ election ಆಗಿ ಏಕೀಕರಣವಾಗಬಹುದು, ತಮಗೆ ಅಲ್ಲಿ ಸೀಟ್ ಕೊಡಬಹುದು ಎಂದು ಅವರು ಬಹಳ ಹುಷಾರಾಗಿದ್ದಾರೆ. ನಾನು ಬಹಳವಾಗಿ ಯೋಚನೆ ಮಾಡಿ ನೋಡಿದರಲ್ಲಿ ನನ್ನ ಅಲ್ಪಬುದ್ಧಿಗೆ ಈ ರೀತಿ ತೋಚುತ್ತದೆ. ಆಡಳಿತ ದೃಷ್ಟಿಯಿಂದಲೂ, ರಾಜಕೀಯ ದೃಷ್ಟಿಯಿಂದಲೂ ಮತ್ತು ಇಂಡಿಯಾ ದೇಶದ ಐಕ್ಯತೆಯ ದೃಷ್ಟಿಯಿಂದಲೂ ಇದು ಸಕಾಲವಲ್ಲ. ಈ ಪ್ರಾಂತ್ಯಗಳ ಪುನರ್ವಿಂಗಡಣೆಯನ್ನು ಮಾನ್ಯ ಮುಖಂಡರುಗಳು ದೇಶದ ನಾಯಕರುಗಳು ಮತ್ತು ದೇಶದ ಜವಾಬ್ದಾರಿಯನ್ನು ಹೊತ್ತಿರತಕ್ಕಂಥವರು ಮತ್ತು ಫಸಲಾಲಿ ಸಮಿತಿಯವರು ದೀರ್ಘವಾದ ಆಲೋಚನೆ ಮಾಡುತ್ತಿದ್ದಾರೆ. ಮುಷ್ಕರ ಹೂಡುತ್ತೇವೆ, ಪ್ರಾಣ ಬಿಡುತ್ತೇವೆ, ಉಪವಾಸ ಮಾಡುತ್ತೇವೆ ಎಂದು ಹೇಳುವುದು ವಿಪರೀತವಾಗಿದೆ. ಇದು ಪ್ರಜಾಪ್ರಭುತ್ವದ ನೀತಿಗೆ ಅನುಸಾರವಾಗಿಲ್ಲ. ಈ ಎಲ್ಲ ಕಾರಣಗಳಿಂದಲೂ ಈ ಸಮಸ್ಯೆಯನ್ನು ಈಗ ತೆಗೆದುಕೊಳ್ಳಕೂಡದು. ಈಗ ಈ ಸಮಸ್ಯೆಯನ್ನು ಬಿಡಿಸುವುದಕ್ಕೆ ಹೋದರೆ ಅದರಿಂದ ಉಲ್ಬಣಾವಸ್ಥೆ ಉಂಟಾಗುತ್ತದೆ, ಕ್ಲಿಷ್ಟ ಸಮಸ್ಯೆಗಳು ಉಂಟಾಗುತ್ತವೆ, ದೇಶದ ಮುನ್ನಡೆಗೆ ಅಡ್ಡಿಯಾಗುತ್ತದೆ, ದೇಶದ ಆರ್ಥಿಕ, ಸಾಮಾಜಿಕ ರಾಜಕೀಯ, ಬೆಳವಣಿಗೆಗೆ ಕಲ್ಲು ಹಾಕಿದ ಹಾಗೆ, ಮುಳ್ಳು ಹಾಕಿದ ಹಾಗೆ ಆಗುತ್ತದೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಸಿ. ಟಿ. ಹನುಮಂತಯ್ಯ (ಪಾವಗಡ—ಅನುಸೂಚಿತ ಜಾತಿಗಳು).—ಸ್ವಾಮಿ, ಅಧ್ಯಕ್ಷರೇ, ಈ ಮಹಾ ಸಭೆಯ ಮಹನೀಯರುಗಳು ಮಾತನಾಡಿದುದನ್ನು ಚೆನ್ನಾಗಿ ಕೇಳಿದ್ದೇನೆ. ಕರ್ನಾಟಕ ಏಕೀಕರಣವಾಗಬೇಕು. ಒಂದಲ್ಲ ಒಂದು ರೀತಿಯಲ್ಲಿ ಆಗಿಯೇ ಆಗುತ್ತದೆ ಎಂದು ನನ್ನ ಭಾವನೆ.

"ಧರಣಿ ಮಂಡಲ ಮಧ್ಯದೊಳಗೆ ಮೆರೆವದ್ವೈವತ್ತಾರು ಕರ್ನಾಟ ದೇಶದಿ ಇರುವ ಕಾಳಿಂಗನೆಂಬ ಗೊಲ್ಲನ ಪರಿಯನಾನೆಂತು ಪೇಳ್ವೆನು" ಎಂಬ ವಿಶಾಲ ಕರ್ನಾಟಕವಾದರೆ, ನಮ್ಮ ಮಹಾರಾಜರು ಕರ್ನಾಟಕ ಸಿಂಹಾಸನಾಧೀಶ್ವರರಾಗುತ್ತಾರೆ. ಆಗ ನಮ್ಮ ಭಾವನೆ ದೊಡ್ಡದಾಗುತ್ತದೆ, ದೇಶ ದೊಡ್ಡದಾಗುತ್ತದೆ, ಸಂಪತ್ತು ಹೆಚ್ಚುತ್ತದೆ, ದೇಶಾಭಿವೃದ್ಧಿಯಾಗುತ್ತದೆ. ದೇಶದಲ್ಲಿ ಆಡಳಿತ ಸೂತ್ರಗಳನ್ನು ವಹಿಸಿಕೊಂಡಿರುವವರು ಹೆಚ್ಚಿನ ವಿಶಾಲ ಮನೋಭಾವನೆಯಿಂದ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ, ನಮ್ಮ ಶ್ರೀಮನ್ಮಹಾರಾಜರವರ ಧರ್ಮ ಕೀರ್ತಿಯು ಹೆಚ್ಚುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ಹಿಂದೆ ನಮ್ಮ ರಾಜ್ಯ ತಿರುಪತಿ, ಕಂಚಿ, ಕಾಳಹಸ್ತಿ ದೇಶಗಳನ್ನೆಲ್ಲಾ ಒಳಗೊಂಡಿತ್ತು. ಟಿಪ್ಪುವಿನ ಕಾಲದಲ್ಲಿ ನಮ್ಮ ದೇಶ ಇದುವರೆಗೆ ಹಬ್ಬಿತ್ತು. ಕರ್ನಾಟಕ ಏಕೀಕರಣದಿಂದ ನಮ್ಮ ದೇಶದಲ್ಲಿ ಸಂಪದಭಿವೃದ್ಧಿಯುಂಟಾಗುತ್ತದೆ ಮತ್ತು ಕೈಗಾರಿಕಾಭಿವೃದ್ಧಿ ಆಗುವುದಲ್ಲದೆ ಅರಣ್ಯಸಂಪತ್ತು ಹೆಚ್ಚಾಗುತ್ತದೆ ಮತ್ತು ಖನಿಜ ಸಂಪತ್ತು ಹೆಚ್ಚುತ್ತದೆ. ನಮಗೆ ಹೆಚ್ಚಿಗೆ ಎರೆಭೂಮಿ ಸಿಕ್ಕುತ್ತದೆ. ಸಾಹುಕಾರರ ಸಂಪರ್ಕ ಹೆಚ್ಚಾಗುತ್ತದೆ. ಅದರಿಂದ ಬೇಕಾದಷ್ಟು ದ್ರವ್ಯ ಸಂಪಾದನೆ ಮಾಡಬಹುದು. ನಮ್ಮ ದೇಶದಲ್ಲಿ ಹೆಚ್ಚಿನ ದ್ರವ್ಯ ಸಂಪಾದನೆ ಮಾಡಿ ದೇಶಕ್ಕೆ ಬೇಕಾದಷ್ಟು ಉತ್ಪತ್ತಿ ಮಾಡಲು ಕಾರಣವಾಗುತ್ತದೆ. ದೇಶ ಮುಂದುವರಿಯಬೇಕಾದರೆ ಜನರು ಸಂಕುಚಿತ ಮನೋಭಾವನೆಯನ್ನು ಬಿಟ್ಟು ದೂರದೃಷ್ಟಿಯಿಂದ ಮತ್ತು ಎಲ್ಲಾ ದೇಶಗಳನ್ನೊಳಗೊಂಡು ವಿಶಾಲ ದೃಷ್ಟಿಯಿಂದ ನೋಡಬೇಕೆಂಬುದೇ ನನ್ನ ಆಶಯ. ಯಾರೇ ಆಗಲೀ ಕರ್ನಾಟಕಕ್ಕೆ ಬರುತ್ತಾರೆ ಎಂದು ಹೇಳಿದರೆ ಬೇಡ ಎಂದು ಹೇಳಕೂಡದು. ಜೊತೆಗೆ ಬರುತ್ತೇವೆ ಎಂದು ಹೇಳುವವರನ್ನು ಜೊತೆಗೆ ಕರೆಯದಿರುವುದು ಯಾವ ಧರ್ಮದಲ್ಲಾಗಲಿ ಯಾವ ನೀತಿಯಲ್ಲಾಗಲಿ ಯಾವ ಶಾಸ್ತ್ರದಲ್ಲಾಗಲಿ ಹೇಳಿಲ್ಲ. ಇನ್ನು ಅಕ್ಕಪಕ್ಕದವರನ್ನು ಸೇರಿಸಿಕೊಂಡು ನಮ್ಮ ದೇಶವನ್ನು ದೊಡ್ಡದು ಮಾಡಿಕೊಳ್ಳುವುದಕ್ಕೆ ಯೋಚನೆ ಮಾಡಬೇಕು. ಕರ್ನಾಟಕ ಏಕೀಕರಣವಾದರೆ ನಾವು ಕೆಟ್ಟುಹೋಗುತ್ತೇವೆಂದು ಅನೇಕ ಸಂದರ್ಭಗಳಲ್ಲಿ ಬರೀ ಕೋಮುವಾರು ಭಾವನೆಯಿಂದ ಹೇಳುತ್ತಾ ಹೋಗುತ್ತಿದ್ದಾರೆ. ಇದು ಯಾವ ಜಾತಿಗೂ ಸಂಬಂಧಪಟ್ಟದ್ದು ಅಲ್ಲ. ಈ ವಿಷಯವನ್ನು ಒಂದು ವಿಶಾಲದೃಷ್ಟಿಯಿಂದ ನೋಡಬೇಕು. ಸಂಕುಚಿತ ಮನೋಭಾವನೆಯಿಂದ ನೋಡಕೂಡದು. ನನಗೆ ಶಂಖ ಹೇಳುವ ಮಾತು ಜ್ಞಾಪಕಕ್ಕೆ ಬರುತ್ತದೆ. ಅದೇನೆಂದರೆ,

"ಶರನಿಧಿ ಎನ್ನಯಪಿತ, ಹಿರಿಅಣ್ಣ ಚಂದ್ರ, ಮಹಾಲಕ್ಷ್ಮಿ ಎನ್ನ ಅಗ್ರಜಳು, ಈರೇಳು ಭುವನವ ಸಲಹುವ ಹರಿ ಎನಗೆ ಭಾವ, ಇನಿತಾಪ್ತರಿರಲಾಗಿ, ತಿರಿವವನ ಬಾಯೊಳಗೆ ಸಿಲುಕಿ ಬಿಡಿಸುವವರಾರನು ಕಾಣೆನೆಂದು ಶಂಖ ಬಾಡುರುತ್ತಿಹುದು ಕೇಳ್ ಮುರಾರೀಶಾ ‖"

ಬ್ರಿಟಿಷರ ಕೈಯಿಂದ ನಮ್ಮ ದೇಶವನ್ನು ಬಿಡಿಸಿಕೊಂಡಿದ್ದೇವೆ. ನಮ್ಮ ದೇಶ ನಮ್ಮ ಕೈಯಲ್ಲಿದೆ. ಅಕ್ಕಪಕ್ಕದವರನ್ನು ಸೇರಿಸೋಣ. ನಮ್ಮ ಭಾವನೆ ವಿಶಾಲದೃಷ್ಟಿಯಿಂದ ಕೂಡಿರಲಿ. ಸಂಕುಚಿತಮನೋಭಾವದ ದೃಷ್ಟಿ ಬೇಡ. ಸಭೆಯ ಮುಂದೆ ಯಾವುದಾದರೂ ವಿಷಯ ಚರ್ಚೆಗೆ ಬಂದರೆ ಅದರಮೇಲೆ ನಮ್ಮ ಅಭಿಪ್ರಾಯವನ್ನು ಕೊಡುವಾಗ ನಾವು broad views ಇಟ್ಟುಕೊಂಡು ಯೋಚನೆ ಮಾಡಿ ನಮ್ಮ ಅಭಿಪ್ರಾಯವನ್ನು ಕೊಡಬೇಕು. ಇವೊತ್ತಿನ ದಿವಸ ಕನ್ನಡ ಭಾಷೆಯನ್ನು ಮಾತನಾಡುವವರೆಲ್ಲರೂ ನಮ್ಮ ಜೊತೆಯಲ್ಲಿ ಸೇರಬೇಕು ಎಂಬ ಪ್ರಶ್ನೆ ಬಂದಿದೆ. ಅದರಮೇಲೆ ಅನೇಕ ಮಹನೀಯರಿಂದ ಉಪಯುಕ್ತವಾದ ಸಲಹೆಗಳನ್ನು ಪಡೆಯಬಹುದು. ನಾವು ಅವರ ಸಲಹೆಗಳನ್ನು ಹಾಗೆ ಪಡೆದುಕೊಂಡು ದೇಶವನ್ನು ದೊಡ್ಡದಾಗಿಯೂ ಮಾಡಬಹುದು ನಮ್ಮ ದೇಶವನ್ನು ವಿಸ್ತಾರ ಮಾಡಿದಂತಾಗುವುದೇ ಅಲ್ಲದೆ ನಮ್ಮ ದೇಶಕ್ಕೆ ಅವಶ್ಯಕವಾಗಿ ಬೇಕಾದ ಬಂದರು ದೊರಕಿದಂತಾಗುತ್ತದೆ. ಕರ್ನಾಟಕ ಏಕೀಕರಣವಾಗಿ ಬಟ್ಕಲ್ ರೇವು ನಮಗೆ ದೊರೆತರೆ ವಾಣಿಜ್ಯ ದೃಷ್ಟಿಯಿಂದ ಬಹಳ ಅನುಕೂಲವಾದಂತಾಗುತ್ತದೆ. ಈಗಿನ ದೇಶದ ರಚನೆ

ನೋಡಿದರೆ ಪಾವಗಡದ ಮಧ್ಯದಲ್ಲಿ ಮಡಕಶಿರವೆಂಬ ಒಂದು ಕೋನ ಇದೆ. ನಕ್ಷೆಯಲ್ಲಿ ನೋಡಿದರೆ ಶಿರಸ್ಸೆಲ್ಲೋ ಇದ್ದು ದೇಹಕ್ಕೂ ಅದಕ್ಕೂ ಸಂಬಂಧವಿಲ್ಲದಂತಿರುತ್ತದೆ. ಹೀಗಿರುವಾಗ ಮಡಕಶಿರವನ್ನು ಸೇರಿಸಿಕೊಳ್ಳುವುದು ಸೂಕ್ತವಲ್ಲವೇ? ಈಗ ಅನೇಕ ವಿಧಗಳಲ್ಲಿ ಮಡಕಶಿರಕ್ಕೆ ತೊಂದರೆಯಿರುವುದನ್ನು ಕಾಣುತ್ತಿದ್ದೇವೆ. ಒಂದು ಬಸ್ಸನ್ನೂ ಸಲೀಸಾಗಿ ಬಿಡುವುದಿಲ್ಲ. ಇಂಥ ಕಷ್ಟಗಳನ್ನು ತಪ್ಪಿಸಬೇಕಾದದ್ದು ಆಗತ್ಯ.

ಅಲ್ಲದೆ ಇನ್ನೊಂದು ದೃಷ್ಟಿಯಿಂದಲೂ ನೋಡಬಹುದು. ಹರಿಜನರಂತೂ ಕರ್ಣಾಟಕ ಏಕೀಕರಣಕ್ಕೆ ಎಂದೂ ವಿರೋಧವಾಗಿಲ್ಲ. ಆದಿಕರ್ಣಾಟರು ಆದಿಯಿಂದಲೂ ಕರ್ಣಾಟಕರೇ. ಆದ್ದರಿಂದ ಕರ್ಣಾಟಕವಾಗಬೇಕೆಂದು ಒತ್ತಾಯ ಮಾಡುವವರು ನಾವು. ಕರ್ಣಾಟಕ ಏಕೀಕರಣವಾಗುವುದರಲ್ಲಿ ನಮ್ಮಿಂದ ಯಾವ ಅಡ್ಡಿಯೂ ಬರಲಾರದು.

ಅಲ್ಲದೆ, ನಾವು ಸುಮ್ಮನೆ ವಿರೋಧಿಸಿದರೂ ನ್ಯಾಯವಾಗಿ ಆಗಬೇಕಾದ ಕರ್ಣಾಟಕ ಆಗಿಯೇ ಆಗುತ್ತದೆ. ಕರ್ಣಾಟಕದ ಪ್ರಶ್ನೆಯಿರಲಿ, ಜವಾಬ್ದಾರಿ ಸರ್ಕಾರ ತಾನಾಗಿಯೇ ಅದು ಬರುತ್ತದೆಂದು ಕನಸಿನಲ್ಲಾದರೂ ತಿಳಿದಿದ್ದೆವೆ? ಸುಮ್ಮನೆ ಹೋರಾಟ, ಚಳವಳಿ ನಡೆಯುತ್ತಿತ್ತು. 1936 ನೆಯ ಇಸವಿಯಿಂದ ಹೊಡೆದಾಟ ನಡೆಯಿತು. ಕೊನೆಗೆ ಒಂದು ದಿವಸ ರಾತ್ರಿಯೋರಾತ್ರಿ ಬ್ರಿಟಿಷರು ಬಿಟ್ಟು ಹೊರಟು ಹೋದರು. ಆಗ ಪ್ರತಿಯೊಬ್ಬರೂ ನಾನು ಹೇಳಲಿಲ್ಲವೇ, ನಾನು ಹೇಳಲಿಲ್ಲವೇ ಎಂದು ಹೇಳಿಕೊಳ್ಳುತ್ತಿದ್ದರು. ಹಾಗೆಯೇ ಕರ್ಣಾಟಕವಾದಮೇಲೆ ಎಲ್ಲಾ ಜನರೂ ಹಾಗೆಯೇ ಹೇಳುತ್ತಾರೆ. ಆದ್ದರಿಂದ ಕರ್ಣಾಟಕ ಏಕೀಕರಣವಾಗಬೇಕೆಂದು ನನ್ನ ಸಲಹೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ (ಚಿಂತಾಮಣಿ) — ಸ್ವಾಮಿ, ರಾಜ್ಯಗಳ ಪುನರ್ವಿಂಗಡಣೆಯ ಸಂಬಂಧದಲ್ಲಿ ಇದುವರೆಗೂ ಅನೇಕ ಭಾಷಣಗಳು ನಡೆದಿವೆ. ಈ ವಿಚಾರದಲ್ಲಿ, ಮೊದಲನೆಯದಾಗಿ ಸರ್ಕಾರದವರು ಶೇಷಾದ್ರಿಯವರ ಸಮಿತಿಯನ್ನು ರಚನೆ ಮಾಡಿ ಅಂಕಿ ಅಂಶಗಳನ್ನು ಕ್ರೋಡೀಕರಿಸಿ ನಮಗೆ ಅನುಕೂಲ ಮಾಡಿಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಬೇಕಾದದ್ದು ನನ್ನ ಕರ್ತವ್ಯ. ಏಕೆಂದರೆ ಮೈಸೂರು ದೇಶದ ಜನತೆಯ ಜವಾಬ್ದಾರಿಯನ್ನು ವಹಿಸಿಕೊಂಡಿರುವ ನಮ್ಮ ಸರ್ಕಾರ ಜನತೆಯ ಹಿತವನ್ನು ಕಾಪಾಡಲು ಈ ಕಮಿಟಿಯನ್ನು ಏರ್ಪಡಿಸಿ ಅವರಿಂದ ಅಂಕಿ ಅಂಶಗಳ ವರದಿಯನ್ನು ತರಿಸಿಕೊಟ್ಟು ಬಹಳ ಮಟ್ಟಿಗೆ ಸಹಾಯ ಮಾಡಿದೆ.

ಮೈಸೂರು ದೇಶವನ್ನು ವಿಸ್ತಾರ ಮಾಡಬೇಕೆಂದು ಒಂದು ಕಡೆ ಚರ್ಚೆಯಾಗುತ್ತಿದೆ, ಇನ್ನೊಂದು ಕಡೆ ಇಬ್ಭಾಗ ಮಾಡಬೇಕು ಎಂಬ ಪ್ರಶ್ನೆಯೂ ಬಂದಿದೆ. ಏಕೆಂದರೆ ಭಾಷೆಯ ಆಧಾರದ ಮೇಲೆ ದೇಶವನ್ನು ಕಟ್ಟಬೇಕೆಂದು ನಾವು ಯಾವಾಗ ಪ್ರಯತ್ನ ಪಡುತ್ತಿದ್ದೇವೋ ಆಗ್ಗೆ ಪ್ರದೇಶ ವಿಸ್ತಾರವಾಗುವ ಹಾಗೆ ಇಬ್ಭಾಗವಾಗಲೂಬೇಕು. ಕನ್ನಡ ರಾಜ್ಯ ಕಟ್ಟಿದರೆ ಬೇರೆ ಭಾಷೆ ಆಡತಕ್ಕವರಿಗೆ ಖಂಡಿತ ಇಲ್ಲಿ ಅನುಕೂಲಗಳು ದೊರೆಯುವುದಿಲ್ಲವೆಂಬುದು ಸ್ಪಷ್ಟವಾಗಿದೆ.

ಸಾಮಾನ್ಯವಾಗಿ ಇದುವರೆಗೂ ನಮ್ಮ ಮೈಸೂರು ದೇಶ ಬಹಳ ಮಟ್ಟಿಗೆ ಮುಂದುವರಿದಿದೆ, ಪ್ರಗತಿದಾಯಕವಾಗಿದೆಯೆಂದು ನಾವೆಲ್ಲಾ ಎಷ್ಟೋ ಸಂತೋಷಪಡುತ್ತಿದ್ದೇವೆ. ಎಲ್ಲಾ ಭಾಷೆಗಳನ್ನಾಡತಕ್ಕ ಜನರೂ ಒಗ್ಗಟ್ಟಿನಿಂದ ಇಷ್ಟು ದಿವಸವೂ ಇದ್ದೇವೆ. ಈಗ ಭಾಷೆಯ ಮೇಲೆ ರಾಜ್ಯ ಕಟ್ಟಬೇಕೆಂದರೆ ಆಗ ಖಂಡಿತವಾಗಿಯೂ ಬೇರೆ ಭಾಷೆಗಳನ್ನಾಡತಕ್ಕವರಿಗೆ ಅನಾನುಕೂಲವಾಗುತ್ತದೆಂದು ನಾನು ಭಾವಿಸುತ್ತೇನೆ.

ಎರಡು ಕರ್ಣಾಟಕಗಳಾಗಲಿ ಎಂದು ಇನ್ನು ಕೆಲವು ಸ್ನೇಹಿತರು ಅಭಿಪ್ರಾಯಪಟ್ಟರು. ಇದರಲ್ಲಿ ನನ್ನ ಅಭಿಪ್ರಾಯ ಇಷ್ಟೆ. ಮೈಸೂರ ಮೈಸೂರಿನ ಹಾಗೆಯೇ ಇರಲಿ, ಬೇರೆ ಕನ್ನಡ ಮಾತನಾಡುವ ಪ್ರದೇಶಗಳು ತಾವೇ ಒಂದುಗೂಡಿ ಒಂದು ಪ್ರಾಂತ್ಯವಾಗುವುದರಲ್ಲಿ ತಪ್ಪೇನಿದೆ? ಇಂಡಿಯಾ ದೇಶದಲ್ಲಿ ಎರಡು ಕರ್ಣಾಟಕಗಳು ಇವೆಯೆಂದು ಹೆಮ್ಮೆಪಡುವ ಸಂದರ್ಭ ಕೂಡ ಇದೆ. ಆಡಳಿತದ ದೃಷ್ಟಿಯಿಂದಲೂ ಇದು ಚೆನ್ನಾಗಿರುತ್ತದೆಂದು ಹೇಳುತ್ತೇನೆ. ಹಿಂದೆ ಆಂಧ್ರ ಪ್ರಾಂತ್ಯದ ಮಸೂದೆ ಬಂದಿದ್ದಾಗ ಶ್ರೀ ಪಟ್ಟಾಭಿರಾಮ್‌ರವರು ಈ ರೀತಿ ದೊಡ್ಡ ರಾಜ್ಯಗಳನ್ನು ಕಟ್ಟಲು ನಾನು ಒಪ್ಪುವುದಿಲ್ಲ, ಮಹಾತ್ಮ ಗಾಂಧಿಯವರ ಅಭಿಪ್ರಾಯ ಹೀಗಿರಲಿಲ್ಲ, ಆಡಳಿತದ ಹಿತದೃಷ್ಟಿಯಿಂದ ಚಿಕ್ಕ ಚಿಕ್ಕ ಯೂನಿಟ್ಟುಗಳಾಗಿರಬೇಕೆಂಬುದು ಅವರ ಅಭಿಪ್ರಾಯವಾಗಿತ್ತು ಎಂದು ವಾದಿಸಿದರು. ಈಗ ಈ ರೀತಿ ಅಭಿಪ್ರಾಯ ಕೊಡುತ್ತಾರೆ. ಇದು ನನಗೆ ಅರ್ಥವಾಗಲಿಲ್ಲ. ಆಡಳಿತ ಹಿತದೃಷ್ಟಿಯಿಂದ ರಾಜ್ಯಗಳು ಚಿಕ್ಕದಾಗಿದ್ದರೆ ಅಧಿಕಾರವರ್ಗದವರು ಜನರನ್ನು ಅರ್ಥ ಮಾಡಿಕೊಂಡು ಅವರಿಷ್ಟದಂತೆ ವಿಶ್ವಾಸದಿಂದ ರಾಜ್ಯ ನಡೆಸತಕ್ಕ ಅವಕಾಶವಿರುತ್ತದೆಂಬ ಅಭಿಪ್ರಾಯವೂ ಮಹಾತ್ಮಾಜೀಯವರಲ್ಲಿ ಮೂಡಿತ್ತೆಂದು ನಾನು ತಿಳಿದುಕೊಂಡಿದ್ದೇನೆ. ಈಗ ಆ ಸನ್ನಿವೇಶ ಹೋಗಿ ದೊಡ್ಡ ಸಂಸ್ಥಾನ ಮಾಡಬೇಕೆಂಬ ವಾದ ಬರುತ್ತಿದೆ. ಇದು ನನಗೆ ಅರ್ಥವಾಗುತ್ತಿಲ್ಲ. ಅನೇಕ ಮಾನ್ಯ ಸ್ನೇಹಿತರು ಹೇಳಿದರು, ಕಾಂಗ್ರೆಸ್ ಅನೇಕ ಸಂದರ್ಭಗಳಲ್ಲಿ ಈ ತತ್ವವನ್ನು ಒಪ್ಪಿಕೊಂಡು ಭಾಷಾವಾರು ಪ್ರಾಂತ್ಯ ರಚನೆ ಮಾಡಬೇಕೆಂದು ನಿರ್ಣಯವನ್ನು ಕೂಡ ಮಾಡಿದೆ' ಈಗ ಅದರಂತೆ ನಡೆದುಕೊಳ್ಳಬೇಕಾದುದು ಯುಕ್ತವೆಂದು ಹೇಳಿದರು. ಆಗಿದ್ದ ಸಂದರ್ಭದಲ್ಲಿ ಇಂಥ ವಾಗ್ದಾನಗಳನೇಕವನ್ನು ಕಾಂಗ್ರೆಸ್ಸಿನವರು ಮಾಡಿದರು. ಅವೆಲ್ಲವನ್ನೂ ಈಗ ಕಾಂಗ್ರೆಸ್ಸಿನವರು ನಡೆಸಿಲ್ಲ. ಆಗಿನ ಕಾಲದಲ್ಲಿ ಇಂಗ್ಲಿಷರನ್ನು ಈ ರಾಜ್ಯದಿಂದ ಓಡಿಸಲು ಅನೇಕ ವಿಧವಾಗಿ ಸನ್ನಿವೇಶಕ್ಕೆ ತಕ್ಕಂತೆ ಭಾಷಣಗಳನ್ನು ಮಾಡಬೇಕಾಗಿತ್ತು. ಆ ರೀತಿ ಮಾಡಿ ಸ್ವಾತಂತ್ರ್ಯ ಸಂಪಾದನೆ ಮಾಡಿದರು. ಈಗ ಅದರಂತೆಯೇ ಎಲ್ಲದರಲ್ಲೂ ನಡೆಯುತ್ತಿಲ್ಲ. ಆದ್ದರಿಂದ ಈಗಿನ ಸಂದರ್ಭದಲ್ಲಿ ಆ ಭಾಷಣಗಳನ್ನು ಉದಹರಿಸಿ ನಮಗೆ ಯಾವುದು ಬೇಕೋ ಅದನ್ನು ಉಪಯೋಗಿಸಿಕೊಳ್ಳುವುದು ಚೆನ್ನಾಗಿಲ್ಲ. ಒಂದು ಉದಾಹರಣೆ ಹೇಳುವುದಾದರೆ ಶ್ರೀ ಇಮಾಂರವರು ವಿರೋಧಪಕ್ಷದ ನಾಯಕರಾಗಿ ವಾದ ಮಾಡುತ್ತಾ ಕಾಂಗ್ರೆಸ್ಸಿನ ತತ್ವವನ್ನು ಪ್ರತಿಯೊಂದು ಸಾರಿಯೂ ವಿರೋಧಿಸುತ್ತಿದ್ದವರು ಇದರಲ್ಲಿ ಮಾತ್ರ ಕಾಂಗ್ರೆಸ್ ತತ್ವವನ್ನು ಎತ್ತಿ ಹಿಡಿಯುತ್ತಿದ್ದಾರೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಕಾಂಗ್ರೆಸ್ ತತ್ವವೂ ನಮ್ಮ ತತ್ವವೂ ಒಂದೇ ಆಗಿದ್ದರೆ ನಾವೆಂದಿಗೂ ವಿರೋಧಿಸುವುದಿಲ್ಲ. ನಮ್ಮ ತತ್ವಕ್ಕೆ ವಿರೋಧವಾಗಿದ್ದರೆ ಮಾತ್ರ ವಿರೋಧಿಸುತ್ತೇವೆ ಅಷ್ಟೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಸಮಯ ಬಂದಾಗ ವಿರೋಧಿಸುವ ಮನೋಭಾವವೆಂದು ನಾನು ಹೇಳುತ್ತೇನೆ. ಶ್ರೀ ಪಟ್ಟಾಭಿರಾಮ್‌ರವರು ಇನ್ನೊಂದು ವಾದವನ್ನು ನಮ್ಮ ಮುಂದಿಟ್ಟರು.

(ಶ್ರೀ ಎಂ. ಸಿ. ಆಂಜನೇಯರೆಡ್ಡಿ.)

ಮೈಸೂರು ದೇಶ ಒಂದು ಚಿಕ್ಕ ದೇಶವಾಗಿದ್ದು 11-12 ಜನರು ಮಾತ್ರ ಇಲ್ಲಿಂದ ಪಾರ್ಲಿಮೆಂಟಿಗೆ ಹೋಗುತ್ತಿದ್ದರೆ ಅವರಿಂದ ಏನೂ ಸಾಧಿಸಲು ಸಾಧ್ಯವಾಗುವುದಿಲ್ಲ, ನಮ್ಮ ಜನಸಂಖ್ಯೆ ಎರಡು ಕೋಟಿಯಿದ್ದು ಹೆಚ್ಚು ಜನ ಇಲ್ಲಿಂದ ಹೋದರೆ ತಕ್ಕ ಮಟ್ಟಿಗೆ ಪ್ರಭಾವವನ್ನು ಬೀರಬಲ್ಲದು ಎಂದು ಹೇಳಿದರು. 500 ಜನ ಸದಸ್ಯರಿರತಕ್ಕ ಪಾರ್ಲಿಮೆಂಟಿನಲ್ಲಿ 11 ಜನ ಸದಸ್ಯರಿದ್ದು ಏನು ಸಾಧನೆ ಮಾಡುತ್ತಾರೋ 22 ಜನರಿದ್ದರೂ ಅದನ್ನೇ ಸಾಧನೆ ಮಾಡುತ್ತಾರೆ ಅಷ್ಟೆ.

ಆಮೇಲೆ, ಬೊಂಬಾಯಿಗೆ ಸೇರಿರತಕ್ಕ ಕರ್ಣಾಟಕದಲ್ಲಿ ಕನ್ನಡ ಮಾತನಾಡುವವರಿಗೆ ಬಹಳ ಅನಾನುಕೂಲವಾಗಿ ಕನ್ನಡಿಗರೆಂದರೆ ಬಹಳ ಉದಾಸೀನ ಮಾಡುತ್ತಾರೆಂದು ಇಲ್ಲಿ ಭಾಷಣಗಳಾದುವು. ಸ್ವಾಮಿ, ಈಗ ಪ್ರಜಾಸರ್ಕಾರ ಬಂದಿರುವಾಗ ನಮ್ಮ ರಾಜ್ಯಾಂಗದ ರೀತ್ಯಾ ಇಂತಹ ಅನ್ಯಾಯಗಳು ಏನೇ ಇರಲಿ ಅದನ್ನು ಪಾರ್ಲಿಮೆಂಟಿನಲ್ಲಿ ಎತ್ತಿ ಸಾಧನೆ ಮಾಡುವುದಕ್ಕೆ ಅವಕಾಶವಿದೆ. ಅಂಥ ಅನ್ಯಾಯಗಳಾಗುತ್ತಿದ್ದರೆ ಅದನ್ನು ಪಾರ್ಲಿಮೆಂಟಿನಲ್ಲಿ ತಂದು ತಕ್ಕ ಪರಿಹಾರ ಹೊಂದಬಹುದು. ಆದ್ದರಿಂದ ಆ ದೃಷ್ಟಿಯಿಂದ ಅನಾನುಕೂಲವಾಗಿದೆಯೆಂದು ನಾನು ಒಪ್ಪುವುದಿಲ್ಲ. ಬೊಂಬಾಯಿ ಒಂದು ದೊಡ್ಡ ಪ್ರಾಂತ್ಯವಾಗಿ ಇರುವುದರಿಂದ ಆಡಳಿತದಲ್ಲಿ ಸ್ವಲ್ಪ ಅನ್ಯಾಯ, ಅನಾನುಕೂಲಗಳಾಗಿರಬಹುದು. ಅಷ್ಟೇ ಹೊರತು ಕನ್ನಡ ಮಾತನಾಡುವವರೆಂದು ಹೇಳಿ ಯಾವ ಅನ್ಯಾಯವೂ ಅನಾನುಕೂಲವೂ ಆಗಿರುವುದಿಲ್ಲ. ಆ ರೀತಿ ಅನ್ಯಾಯಗಳಾಗಿದ್ದಿದ್ದರೆ ಅಲ್ಲಿ ಮಂತ್ರಿ ಉಪಮಂತ್ರಿ ಸ್ಥಾನಗಳಂತಹ ದೊಡ್ಡದೊಡ್ಡ ಪದವಿಗಳಿಗೆ ಕನ್ನಡಿಗರಿಗೆ ಅವಕಾಶವಾಗುತ್ತಿತ್ತೇನು ? ಆದಕಾರಣ ಅಂಥ ಪಕ್ಷಪಾತಗಳು ನಡೆಯುತ್ತಿರಲಾರವು. ಏನಿದ್ದರೂ ದೊಡ್ಡ ಪ್ರಾಂತ್ಯವಾಗಿರುವುದರಿಂದ ಜನರು ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳುವುದಕ್ಕೆ ಅವಕಾಶವಿಲ್ಲದೆ ತೊಂದರೆಯಾಗಬಹುದೇ ಹೊರತು ಅನ್ಯಥಾ ಆಗಿರಲಾರದೆಂದು ನಾನು ಭಾವಿಸುತ್ತೇನೆ. ಹೀಗಿರುವಾಗ ಕೇವಲ ಒಂದುಕೋಟಿ ಪ್ರಜಾಸಂಖ್ಯೆಯಿಟ್ಟುಕೊಂಡು ಸುವ್ಯವಸ್ಥಿತವಾಗಿ ಆಡಳಿತ ನಡೆಸಿಕೊಂಡು ಬರುತ್ತಿರುವ ನಮ್ಮ ಮೈಸೂರು ಸಂಸ್ಥಾನದಲ್ಲಿ ಈ ವಿಷಯವನ್ನು ಹಚ್ಚಿಕೊಂಡು ಒಬ್ಬರಿಗೊಬ್ಬರು ವಿರೋಧವಾಗಿ ಮಾತನಾಡುವ ಕಹಿಸನ್ನಿವೇಶ ಹೇಗೆ ಬಂದಿತೋ ಅರ್ಥವಾಗಲಿಲ್ಲ. ದೊಡ್ಡ ರಾಜ್ಯ, ದೊಡ್ಡ ಸಂಪತ್ತು ಸಿಕ್ಕುವ ಸಂದರ್ಭದಲ್ಲಿ ಅದನ್ನು ಬೇಡ ಎಂದು ಹೇಳುವುದು ಸಂಕುಚಿತ ಭಾವನೆಯೆಂದು ನಮ್ಮ ಮಿತ್ರರು ಹೇಳಿದರು. ನಾನು ಹೇಳುವುದಾದರೋ, ಚೆನ್ನಾಗಿರುವವರ ಮನಸ್ಸು ಕೆಡಿಸುವುದಕ್ಕೆ ಆ ಮಿತ್ರರೇಕೆ ಪ್ರಯತ್ನಪಡುತ್ತಾರೋ ಗೊತ್ತಿಲ್ಲ. ಅವರು ಹೇಳುವಂತೆ ಭಾಷೆಯಮೇಲೆ ಮೈಸೂರನ್ನು ದೊಡ್ಡದು ಮಾಡುವುದಕ್ಕೆ ಹೋದರೆ ಖಂಡಿತವಾಗಿ ತೆಲುಗು ಮಾತನಾಡುವ 20 ಲಕ್ಷ ಜನ ತೆಲುಗು ಪ್ರಾಂತ್ಯಕ್ಕೆ ಹೋಗಲೂ ಪ್ರಯತ್ನಪಡುತ್ತಾರೆ. ಆಂಧ್ರರು ಆಗಲೇ ಇದಕ್ಕಾಗಿ ಪ್ರಯತ್ನಪಡುತ್ತಲೂ ಇದ್ದಾರೆ. ಆ ಬಗ್ಗೆ ಒಂದು ನಕ್ಷೆಯನ್ನು ಕೂಡ ಮಾಡಿದ್ದಾರೆ. ಆದ್ದರಿಂದ ಕನ್ನಡಿಗರು ಕನ್ನಡ ಭಾಷೆಯಮೇಲೆ ಸಂಸ್ಥಾನ ಮಾಡ ಹೊರಟರೆ ಆಗ ತೆಲುಗರೂ ಬೇರೆ ಹೋಗುತ್ತಾರೆ.

ಈ ಎಲ್ಲ ದೃಷ್ಟಿಯಿಂದ ಮೈಸೂರು ಮೈಸೂರಾಗಿಯೇ ಇರಬೇಕು. ಯಾವರೀತಿಯಿಂದಲಾದರೂ ಮೈಸೂರನ್ನು ವಿಸ್ತರಿಸಬೇಕೆಂಬ ಅಗತ್ಯವಿದ್ದರೆ ಅದಕ್ಕೆ ಪ್ಲೆಬಿಸೈಟ್ ತಗೆದುಕೊಳ್ಳಬೇಕೆಂದು ನನ್ನ ಮಿತ್ರರು ಆಗಲೇ ಹೇಳಿದ್ದಾರೆ. ಅದಕ್ಕೆ ಕೆಲವರು ಜನತೆಗೆ ಈ ದೊಡ್ಡ ಪ್ರಶ್ನೆಯನ್ನು ತೀರ್ಮಾನಮಾಡತಕ್ಕ ಶಕ್ತಿಯಿಲ್ಲವೆಂದು ಅಭಿಪ್ರಾಯಪಟ್ಟರು. ಪ್ಲೆಬಿಸೈಟ್ ತೆಗೆದುಕೊಂಡಾಗ ವೋಟ್ ಕೊಡುವುದಕ್ಕೆ ಗೊತ್ತಾಗುವುದಿಲ್ಲವೆಂದು ಹೇಳಿದರು. ಆ ರೀತಿಯಾಗಿ ಗೊತ್ತಿಲ್ಲವೆಂದು ಒಪ್ಪುವುದಾದರೆ ಅಂಥ ಕೈಲಾಗದ ಜನರಿಂದ ಚುನಾಯಿತರಾಗಿ ಬಂದಿರುವ ನಾವುಗಳು ಪ್ರತಿನಿಧಿಗಳೆಂದು ಹೇಳಿಕೊಳ್ಳುವುದಕ್ಕೂ ಸಾಧ್ಯವಿಲ್ಲ. ಜನರಲ್ಲಿ ಮತ ತೆಗೆದುಕೊಂಡರೆ ಇವೊತ್ತು ಶೇಕಡ 80ರಷ್ಟು ಜನ ಮೈಸೂರು ಮೈಸೂರಾಗಿಯೇ ಉಳಿಯಬೇಕೆಂದು ಖಂಡಿತ ಹೇಳುತ್ತಾರೆ. ಆದ್ದರಿಂದ ಇಂಥ ದೊಡ್ಡ ಪ್ರಶ್ನೆಯು ಒಂದು ಕೋಟಿ ಜನಗಳ ಭವಿಷ್ಯವನ್ನು ರೂಪಿಸತಕ್ಕ ಪ್ರಶ್ನೆಯಾದ್ದರಿಂದ ಜನತೆಯ ಎದುರಿನಲ್ಲಿಯೇ ಇಟ್ಟು ಜನತೆಯ ಅಭಿಪ್ರಾಯದಮೇಲೆ ತೀರ್ಮಾನಮಾಡುವುದು ಒಳ್ಳೆಯದು ಎಂಬುದು ನನ್ನ ಅಭಿಪ್ರಾಯ. ಮೈಸೂರು ಮೈಸೂರಾಗಿಯೇ ಉಳಿಯುವುದು ಸೂಕ್ತವೆಂದು ನಾನು ಹೇಳುತ್ತೇನೆ.

2-30 P.M.

*ಶ್ರೀ ಆರ್. ಅನಂತರಾಮರ್ (ಚಾಮರಾಜಪೇಟೆ).— ಮಾನ್ಯ ಅಧ್ಯಕ್ಷರೇ, ಈಗಾಗಲೇ ನನ್ನ ಸ್ನೇಹಿತರುಗಳ ಪೈಕಿ ಕೆಲವರು ಈ ಏಕೀಕರಣದ ಬಗ್ಗೆ ಪರವಾಗಿಯೂ ಕೆಲವರು ವಿರೋಧವಾಗಿಯೂ ಈ ಶೇಷಾದ್ರಿಸಮಿತಿಯ ವರದಿಮೇಲೆ ಮಾತನಾಡಿದ್ದಾರೆ. ಈ ವಿಷಯ ಬಹಳ ದಿವಸಗಳಿಂದಲೂ ಚರ್ಚೆಯಾಗುತ್ತಿದೆ ಈ ವಿಷಯ ಬಹಳ ಪ್ರಾಮುಖ್ಯವಾದಂಥದು. ಈಗ ನಮ್ಮ ಕೇಂದ್ರ ಸರ್ಕಾರದವರು ಈ ನಾನಾಸಂಸ್ಥಾನಗಳನ್ನು ಪುನರ್ವಿಂಗಡಣೆ ಮಾಡತಕ್ಕ ಸಂಬಂಧವಾಗಿ ಒಂದು ಹೈಪವರ್ ಕಮಿಟಿಯನ್ನು ನೇಮಕ ಮಾಡಿದ್ದಾರೆ. ಹಾಗೆ ನೇಮಕ ಮಾಡಲ್ಪಟ್ಟಿರುವಂಥ ಸಮಿತಿಯವರು ಈಗಾಗಲೇ ಈ ಆಂಧ್ರ, ಕೇರಳ, ತಮಿಳುನಾಡು, ಮಹಾರಾಷ್ಟ್ರ, ಕನ್ನಡ ಪ್ರಾಂತ್ಯಗಳಲ್ಲಿ ಸಂಚಾರ ಮಾಡಿ ನಾನಾ ಜನರ, ಸಂಘಗಳ, ಸಂಸ್ಥೆಯವರ ಅಭಿಪ್ರಾಯಗಳನ್ನು ಶೇಖರಣೆ ಮಾಡಿಕೊಂಡು ಹೋಗಿದ್ದಾರೆ. ಉತ್ತರದೇಶದಲ್ಲಿ ಆ ಕಡೆ ಕೂಡ ಈ ಪುನರ್ವಿಂಗಡಣೆಯ ಬಗ್ಗೆ ಗಮನ ಕೊಟ್ಟಿದ್ದಾರೆ. ಆದ್ದರಿಂದ ಇದೊಂದು ಕಠಿಣ ದೊಡ್ಡ ಸಮಸ್ಯೆ. ಇದನ್ನು ನಾವು ಬಹಳ ಕೂಲಂಕಷವಾಗಿ ವಿಮರ್ಶೆಮಾಡಬೇಕಾಗಿದೆ. ಈಗಾಗಲೇ ನನ್ನ ಕೆಲವು ಸ್ನೇಹಿತರು ಮೈಸೂರು ಈಗಿರುವಂಥ ಮೈಸೂರಾಗಿ ಉಳಿಯಬೇಕೆಂದು ಹೇಳಿದ್ದಾರೆ. ಮತ್ತೆ ಕೆಲವರು ಈ ಮೈಸೂರು ದೇಶದ ಅಕ್ಕಪಕ್ಕದಲ್ಲಿರುವ ಕನ್ನಡ ಮಾತನಾಡುವ ಜನಗಳಿರತಕ್ಕಂಥ ಪ್ರದೇಶಗಳೆಲ್ಲಾ ಒಟ್ಟಿಗೆ ಮೈಸೂರಿಗೆ ಸೇರಿ ಅಖಂಡ ಮೈಸೂರಾಗಬೇಕೆಂದು ಹೇಳಿದ್ದಾರೆ. ಈಗಿರತಕ್ಕಂಥ ಮೈಸೂರು ಕೇವಲ ಎಂಟು ಹತ್ತು ಜಿಲ್ಲೆಗಳಿಂದ ಕೂಡಿದ್ದಾಗಿದೆ. ಈ ಹಿಂದೆ ಇದ್ದಂಥ ಮೈಸೂರೋ, ಆಗ ಇದಕ್ಕೆ ಇಡೀ ಕರ್ಣಾಟಕ ಪ್ರದೇಶವೆಲ್ಲಾ ಸೇರಿ ಒಂದು ದೊಡ್ಡ ರಾಜ್ಯವಾಗಿತ್ತು. ಹೀಗೆ ಒಂದು ದೊಡ್ಡ ರಾಜ್ಯವಾಗಿದ್ದಂಥ ಆಗಿನ ಅಖಂಡ ಕರ್ಣಾಟಕ ಪ್ರಾಂತ್ಯವನ್ನೂ ಇತ್ತೀಚೆಗೆ 2-3 ಭಾಗವಾಗಿ ಹರಿದು ಹಂಚಿಬಿಟ್ಟಿದ್ದಾರೆ. ಕಾರಣವೇನೆಂದರೆ ಕರ್ಣಾಟಕದ ಭಾವನೆಯುಳ್ಳಂಥ ಮತ್ತು ವಾತ್ಸಲ್ಯವುಳ್ಳಂಥ ಜನಗಳು ಯಾರೂ ಉಳಿಯಬಾರದೆಂಬ ಭಾವನೆಯಿಂದಲೂ ಇದನ್ನು ಹರಿದು ಹಂಚಿಬಿಟ್ಟರು.

ಇಂಗ್ಲೀಷಿನವರು ಇಲ್ಲಿ ಆಡಳಿತ ಮಾಡುತ್ತಿದ್ದಾಗ, ಅವರನ್ನು ಇಲ್ಲಿಂದ ದೇಶಬಿಟ್ಟು ಹೊರಡಿ ಎಂದು ಹೇಳುತ್ತಿದ್ದಾಗ ನಾವೆಲ್ಲರೂ ಈ ಅಖಂಡ ಕನ್ನಡ ನಾಡಿನ ವೈಭವವನ್ನು ಎಷ್ಟುಸಾರಿ ನಾವುನಾವುಗಳೇ ಮಾತನಾಡಿಕೊಂಡಿಲ್ಲ? ಆ ದಿವಸ ಹಾಗೆ ಆ ದೇಶವನ್ನು ಆ ಇಂಗ್ಲೀಷರು ಹರಿದು ಹಂಚಿದಕಾರಣದಿಂದ ನಮ್ಮನ್ನು ಬಿಟ್ಟು ಅಗಲಿ ಹೋದ ನಮ್ಮ ಅಣ್ಣತಮ್ಮಂದಿರುಗಳನ್ನೆಲ್ಲಾ ಪುನಃ ನಾವುಗಳು ಒಟ್ಟಾಗಿ ಕೂಡಿಸಬೇಕೆಂದು ಎಷ್ಟುಸಾರಿ ಮಾತನಾಡಿಕೊಂಡಿಲ್ಲ? ಹೀಗೆಲ್ಲಾ ನಾವುಗಳೇ ಈ ಸ್ವಾತಂತ್ರ್ಯ ಬರುವ ಮುನ್ನ ಕನ್ನಡ ಬಂಧುಗಳೆಲ್ಲಾ ಒಂದಾಗಬೇಕೆಂದು ಹೇಳುತ್ತಿದ್ದಂಥವರು, ಈಚೆಗೆ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಈ ರಾಜ್ಯಗಳ ಪುನರ್ವಿಂಗಡಣೆ ಆಗಬೇಕೆಂದು ಕೆಲವರೂ ಆಗಬಾರದೆಂದು ಕೆಲವರೂ ವಾದಮಾಡಲು ಪ್ರಾರಂಭಿಸಿದ್ದಾರೆ. ಈ ಹಿಂದೆ ಅಂದರೆ ಭಾರತಕ್ಕೆ ಸ್ವಾತಂತ್ರ್ಯ ಬರುವ ಮುನ್ನ ನಮ್ಮ ಹಿಂದೂಸ್ಥಾನದಲ್ಲಿ ಸುಮಾರು 560 ಚಿಕ್ಕಪುಟ್ಟ ಸಂಸ್ಥಾನಗಳಿದ್ದವು. ಚಿಕ್ಕಪುಟ್ಟ ಸಂಸ್ಥಾನಗಳನ್ನೆಲ್ಲಾ ಒಟ್ಟುಕೂಡಿಸಿ ಅಲ್ಲಲ್ಲೇ ಒಂದೊಂದು ದೊಡ್ಡ ದೇಶವನ್ನು ಮಾಡಬೇಕೆಂಬ ಆಸೆ ಆ ನಮ್ಮ ಸರ್ದಾರ್ ವಲ್ಲಭಾಯಿ ಪಟೇಲರಿಗೆ ಇತ್ತು. ಅದೇ ರೀತಿಯಾಗಿ ಈ ಹಿಂದೆ ಅವರು ಕೆಲವು ದೇಶಗಳನ್ನು ಒಂದರಲ್ಲೊಂದು ವಿಲೀನೀಕರಣಮಾಡಿದರು. ಆದರೆ ಏನೋ ಕೆಲವು ಬೇರೆ ಕಾರ್ಯಕಲಾಪಗಳ ದೃಷ್ಟಿಯಿಂದ ಆಗ ಈ ಮದ್ರಾಸ್, ಟ್ರಾವಂಕೂರ್, ಕೊಚಿನ್, ಹೈದ್ರಾಬಾದ್ ಮತ್ತು ಕಾಶ್ಮೀರ ಇತ್ಯಾದಿ ಕೆಲವುಗಳನ್ನು ವಿಲೀನೀಕರಣ ಮಾಡುವ ಪ್ರಶ್ನೆಯನ್ನು ಮುಂದಕ್ಕೆ ಹಾಕಿದರು. ಹರಿದು ಹಂಚಿದ್ದಂಥ ಪ್ರದೇಶಗಳು ಅಂದರೆ ಆಗಿನ ಬ್ರಿಟಿಷ್ ಇಂಡಿಯಾದಲ್ಲಿ ಸೇರಿದ್ದ ನಾನಾಭಾಷೆಯ ಪ್ರದೇಶಗಳನ್ನು ಆಯಾ ಭಾಷೆ ಆಧಾರದ ಮೇಲೆ ಪುನರ್ವಿಂಗಡಣೆ ; ಮಾಡಬೇಕೆಂಬ ಉದ್ದೇಶ ಅವರಿಗೆ ಬಹಳವಾಗಿತ್ತು. ಹಾಗೆ ಮಾಡಿದ್ದರೆ ನಮಗೆ ಬಹಳ | ಒಳ್ಳೆಯದಾಗುತ್ತಿತ್ತು. ಆದರೆ ಆದಿವಸ ಅವರು ಈ ಪ್ರಶ್ನೆಯನ್ನು ಕೈಬಿಟ್ಟಿದ್ದರಿಂದ ಈ ದಿವಸ ಆ ಕಾಶ್ಮೀರದ ಪ್ರಶ್ನೆ ಹಾಗೆಯೇ ಉಳಿದಿದೆ. ಭಾಷೆಯ ಆಧಾರದಮೇಲೆ ಈ ಹರಿದು ಹಂಚಿರುವಂಥ ಪ್ರದೇಶಗಳೆಲ್ಲಾ ಪುನಃ ಒಂದಾಗಬೇಕೆಂದು ಅನೇಕರು ಹೇಳುತ್ತಿದ್ದಾರೆ. ಅಂತೂ ಹಾಗೆ ಈ ವಿಲೀನೀಕರಣ ಆಗಲೇಬೇಕಾಗಿದೆ. ಈ ಹಿಂದೆಯೇ ಅಂದರೆ ದೇಶಕ್ಕೆ ಸ್ವಾತಂತ್ರ್ಯ ಬಂದ ತರುಣದಲ್ಲೇ ಈ ವಿಲೀನೀಕರಣ ಪ್ರಶ್ನೆಯನ್ನು ಅವರು ನೆರವೇರಿಸಿದ್ದಿದ್ದರೆ ಇತ್ತೀಚೆಗೆ ಹೈದರಾಬಾದಿನಲ್ಲಿ ನಡೆದಂಥ ಪೋಲೀಸ್ ಆಕ್ಷನ್ ಇತ್ಯಾದಿ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾದ ಪ್ರಶ್ನೆಯಾಗಲಿ ಅಥವಾ ಹೀಗೆ ಈ ದಿವಸ ಕೆಲವರು ಇದಾಗಬೇಕು, ಮತ್ತೆ ಕೆಲವರು ಇದಾಗಬಾರದು ಎಂದು ಹೇಳಿ ವಾದಮಾಡತಕ್ಕಂಥ ಸಂದರ್ಭಗಳು ಒಂದೂ ಇಲ್ಲದೆ ಇವೆಲ್ಲಾ ನಿರ್ಮೂಲವಾಗಿ ಹೋಗುತ್ತಿದ್ದವು. ಆದರೆ ಆ ದಿವಸ ಆ ಸರ್ದಾರ್ ಪಟೇಲರು ಕೆಲವನ್ನು ಮಾತ್ರ ವಿಲೀನಿಕರಣ ಮಾಡಿ ಮತ್ತೆ ಕೆಲವನ್ನು ಹಿಂದಕ್ಕೆ ಹಾಕಿದರು. ಆ ಒಂದುಕಾರಣದಿಂದ ಈ ನಮ್ಮ ಮೈಸೂರು ಇತ್ಯಾದಿ ಇನ್ನೂ ಕೆಲವು ಭಾಗಗಳು ಹೀಗೆ ಉಳಿಯಲು ಅವಕಾಶವಾಯಿತು. ಆದರೆ ಸರ್ದಾರ್ ವಲ್ಲಭಾಯಿ ಪಟೇಲರು ನಮ್ಮ ಮೈಸೂರಿನ ಪ್ರಶ್ನೆಯನ್ನು ಏತಕ್ಕಾಗಿ ಹಿಂದಕ್ಕೆ ಹಾಕಿದರು ಎಂದರೆ ಇಲ್ಲಿಯ ಪ್ರಜೆಗಳು ಹೇಗೂ ಮುಂದುವರಿಯುತ್ತಿದ್ದಾರೆ, ಇಲ್ಲಿಯ ಮಹಾರಾಜರೂ ಕೂಡ ಪುರೋಗಾಮಿಗಳಾಗಿದ್ದಾರೆ ಎನ್ನುವಂಥ ಒಂದು ಅಂಶವನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಪ್ರಶ್ನೆಯನ್ನು ಕೆಲವು ದಿನಗಳ ತನಕ ಹಿಂದಿಟ್ಟರು. ಆದರೆ ಅವರಲ್ಲಿ ಈ ರಾಜ್ಯಗಳನ್ನು ಭಾಷಾವಾರು ಆಧಾರದಮೇಲೆ ಪುನರ್ವಿಂಗಡಣೆ ಮಾಡಬೇಕೆಂಬ ಆಸೆ ತುಂಬ ಇತ್ತು. ಹಾಗೆಯೇ ಅವರು ಮಾಡುತ್ತಲೂ ಇದ್ದರು. ಆದರೆ ಅವರು ಅಷ್ಟರಲ್ಲೇ ಕಣ್ಮರೆಯಾಗಿ ಹೋದರು. ಅದಕಾರಣ ಈಗಲೂ ಕೂಡ ಅವರ ಆಸೆಯ ಪ್ರಕಾರವೇ ನಾವೂಸಹ ಈದಿವಸ ಈ ದೇಶಗಳನ್ನೆಲ್ಲಾ ಭಾಷೆಯ ಆಧಾರದಮೇಲೆಯೇ ಪುನರ್ವಿಂಗಡಣೆ ಮಾಡಬೇಕಾಗಿದೆ. ನಮ್ಮ ದೇಶಕ್ಕೆ ಈ ಸ್ವಾತಂತ್ರ್ಯ ಬಾರದ ಮುನ್ನ ಮತ್ತು ಈ ದೇಶಕ್ಕೆ ಇಂಗ್ಲೀಷರು ಬಾರದಮುನ್ನ ದೇಶ ಹೀಗಿತ್ತೆಂಬ ವಿಚಾರದಲ್ಲಿ ಚಾರಿತ್ರಿಕ ಹಿನ್ನೆಲೆಯೂ ಕೂಡ ಸರ್ವರಿಗೂ ತಿಳಿದಿದ್ದೇ ಆಗಿದೆ: ಈ ಹಿಂದೆ ದೇಶಕ್ಕೆ ಸ್ವಾತಂತ್ರ್ಯ ಬಂದ ತಕ್ಷಣವೇ ಹಿಂದೂದೇಶದ ರಾಜ್ಯಾಂಗ ರಚನೆಗೋಸ್ಕರವಾಗಿ ಶ್ರೀ ಬಾಬೂ ರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಲಾಗಿತ್ತು. ಆಗ ಈ ದೇಶಗಳನ್ನೆಲ್ಲಾ ಭಾಷಾ ಆಧಾರದಮೇಲೆ ಪುನರ್ವಿಂಗಡಣೆ ಮಾಡಬೇಕೆಂಬ ವಿಚಾರ ಆ ಸಭೆಯಲ್ಲಿ ಚರ್ಚೆಗೆ ಬಂದಿತ್ತು. ಆಗ ಈ ದೇಶವನ್ನು ಪುನಃ ಭಾಷಾವಾರು ಆಧಾರದಮೇಲೆ ನಿರ್ಮಾಣಮಾಡಬೇಕೆಂಬ ತೀರ್ಮಾನಕ್ಕೆ ಬಂದು, ಆಗ ಈ ಉದ್ದೇಶಕ್ಕಾಗಿಯೇ ಮತ್ತೊಂದು ಸಮಿತಿಯನ್ನು ಸಹ ಆಗ ಏರ್ಪಾಡುಮಾಡಿದರು. ಅದೇರೀತಿಯಾಗಿ ಈ ರಾಜ್ಯಗಳ ಪುನರ್ವಿಂಗಡಣೆ ಕೂಡ ಆಗಬೇಕೆಂದು ಆ ರಾಜ್ಯಾಂಗದಲ್ಲಿ ಕೂಡ ಒಂದು ಕ್ಲಾಜನ್ನು ಅಡಕ ಮಾಡಿರುತ್ತಾರೆ. ಆ ಕಾನೂನಿಗನುಗುಣವಾಗಿಯೇ ಆಗ ಧಾರ್‌ಸಮಿತಿ ಎಂಬ ಒಂದು ಸಮಿತಿಯನ್ನು ನೇಮಕ ಮಾಡಿದ್ದರು. ಆ ಧಾರ್‌ಸಮಿತಿಯವರು ಕೆಲವುಕಾಲ ಕುಳಿತು ಈ ಬಗ್ಗೆ ಅನೇಕ ವಿಚಾರಗಳನ್ನೆಲ್ಲಾ ಆಲೋಚನೆಮಾಡಿ ಸರ್ಕಾರಕ್ಕೆ ಒಂದು ರಿಪೋರ್ಟನ್ನು ಕೊಟ್ಟಿರುತ್ತಾರೆ. ಆದರೆ ಆಗ ಆ ಮೊದಲನ ಸಮಿತಿಯವರು ಭಾಷೆಯ ಆಧಾರದಮೇಲೆ ದೇಶವನ್ನು ತಾತ್ಕಾಲಿಕವಾಗಿ ಸದ್ಯಕ್ಕೆ ಪುನರ್ವಿಂಗಡಣೆ ಮಾಡುವುದು ಬೇಡ ಎಂದು ಹೇಳಿದ್ದರು. ಆದರೆ ಅವರು ಈ ಮೈಸೂರಿನ ವಿಚಾರದಲ್ಲಿ ಬೇರೆ ರೀತಿಯಾಗಿ ಹೇಳಿದ್ದಾರೆ. ಈ ನಮ್ಮ ಮೈಸೂರ ನೆರೆನಾಡಿನೊಡನೆ ಸೇರಿದರೆ ಬಹಳ ಸುಲಭವಾಗಿ ಕರ್ಣಾಟಕಪ್ರಾಂತ್ಯ ನಿರ್ಮಾಣವಾಗುತ್ತದೆ ಎಂದು ಅವರು ಹೇಳಿದ್ದಾರೆ. ಈ ಸಂದರ್ಭದಲ್ಲಿ ಅವರು ತಮ್ಮ ವರದಿಯಲ್ಲಿ ಏನು ಹೇಳಿದ್ದಾರೆಂಬುದನ್ನೇ ಓದಿಬಿಟ್ಟರೆ ಬಹಳ ಚೆನ್ನಾಗಿರುತ್ತೆಂದು ನನ್ನ ಮನಸ್ಸಿಗೆ ಹೊಳೆಯುತ್ತದೆ. ಆದುದರಿಂದ ನಾನೀಗ ಅದನ್ನು ಓದುತ್ತೇನೆ. The Dhar Commission submitted its report on 10-12-48, wherein it said:

> "If Mysore had been willing to join the Union, it could easily have formed a nucleus round which the Kannada speaking districts of Madras and Bombay could be brought together and reared into an administratively convenient Province. . . ."

ನಾನು ಹೀಗೆ ಈ ವಿಚಾರಗಳನ್ನೆಲ್ಲಾ ಒತ್ತಿಒತ್ತಿ ಏತಕ್ಕಾಗಿ ಓದಿ ಹೇಳುತ್ತಿದ್ದೇನೆ ಎಂದರೆ ಈಗಾಗಲೇ ಮಾತನಾಡತಕ್ಕಂಥ ನನ್ನ ಕೆಲವು ಮಾನ್ಯಸ್ನೇಹಿತರು

(ಶ್ರೀ ಆರ್. ಅನಂತರಾಮನ್.)

ಗಳು ಅವರ ತೀರ್ಮಾನವನ್ನು ಗೌರವಿಸಬೇಕೆಂಬ ದೃಷ್ಟಿಯಿಂದಲೂ ಮತ್ತು ಹೀಗೆ ದೇಶ ವಿಶಾಲವಾದರೆ ಆಡಳಿತ ದೃಷ್ಟಿಯಿಂದ ತೊಂದರೆಯಾಗುತ್ತದೆ, ಆದ ಕಾರಣ ಹೀಗೆ ದೇಶ ವಿಶಾಲವಾಗುವುದು ಬೇಡ ಎಂದು ವಾದಿಸುವುದು ಸರಿಯಾದದ್ದಲ್ಲ ಎನ್ನುವುದನ್ನು ಸೂಚಿಸಲೂ ನಾನು ಈ ವಾಕ್ಯಗಳನ್ನು ಒತ್ತಿ ಹೇಳುತ್ತಿದ್ದೇನೆ: ಆ ವರದಿಯಲ್ಲಿ ಹೀಗೆ ಹೇಳಿದ್ದಾರೆ.—

> "It can be easily formed into an administratively convenient province, but the Mysore State does not appear to be yet ready to merge itself in Karnataka province and we cannot say whether public opinion or Government policy is prepared to merge Union territory into the Indian State."

ಈಗ ನಾವು ಈ ಸಮಸ್ಯೆಯನ್ನು ಇನ್ನೊಂದು ದೃಷ್ಟಿಯಿಂದ ನೋಡಿದಾಗ್ಯೂ ಕೂಡ ಈ ಪುನರ್ವಿಂಗಡಣೆ ಅಗತ್ಯವೆಂದೇ ಕಾಣುತ್ತದೆ. ಈ ಹಿಂದೆ ಇಂಡಿಯಾ ದೇಶದಲ್ಲಿ ವಿಂಗಡಿಸಲಾಗಿದ್ದಂಥ ಕೆಲವು ಭಾಗಗಳನ್ನು ಬ್ರಿಟಿಷ್ ಸ್ಟೇಟ್‌ಗಳೆಂದು ಕರೆಯಲಾಗುತ್ತಿತ್ತು. ಆ ಬ್ರಿಟಿಷ್ ಸ್ಟೇಟ್‌ಗಳ ಸ್ಥಾನಮಾನಗಳು ಈ ದೇಶೀಯ ಸಂಸ್ಥಾನಗಳಿಗಿಂತಲೂ ಹೆಚ್ಚಿನದಾಗಿತ್ತು. ಆಗ ನಾವು ಈ ರೀತಿ ಭಿನ್ನಭೇದಗಳಿಡುವುದು ಸರಿಯಾದುದಲ್ಲ ಎಂದು ಹೇಳುತ್ತಿದ್ದೆವು. ಧಾರ್ ಸಮಿತಿಯವರು ಈ ಭಾಷಾವಾರು ಪ್ರಾಂತ್ಯಗಳ ನಿರ್ಮಾಣಕ್ಕೆ ಸಾಕಷ್ಟು ಉತ್ತೇಜನ ತೋರಿಸದೆ ಹೋದುದರಿಂದ ಆಗ ಮತ್ತೊಂದು ಸಮಿತಿಯನ್ನು ಅಂದರೆ ಜೆ. ವಿ. ಪಿ. ಎನ್ನತಕ್ಕಂಥ ಒಂದು ಸಮಿತಿಯನ್ನು ನೇಮಕ ಮಾಡಲಾಯಿತು. ಈ ಸಮಿತಿಯು ಜವಹರ್‌ಲಾಲ್ ನೆಹ್ರೂರವರೂ ಮತ್ತು ವಲ್ಲಭಾಯಿ ಪಟೇಲರೂ ಮತ್ತು ಪಟ್ಟಾಭಿ ಸೀತಾರಾಮಯ್ಯನವರೂ—ಹೀಗೆ ಮೂರು ಜನಗಳಿಂದ ಕೂಡಿದ್ದಾಗಿತ್ತು. ಈ ಮೂವರ ಸಮಿತಿಯ ವರದಿಯಲ್ಲಿ ಈ ಭಾಷಾವಾರು ಪ್ರಾಂತ್ಯಗಳ ನಿರ್ಮಾಣದ ಬಗ್ಗೆ ಏನು ಹೇಳಿರುತ್ತಾರೆಂಬ ಅಂಶವನ್ನು ತಾವೆಲ್ಲರೂ ಈಗಾಗಲೇ ಓದಿರುತ್ತೀರಿ. ಈ ಮೂರು ಜನಗಳಿಂದ ಏರ್ಪಾಡಾಗಿರತಕ್ಕಂಥ ಸಮಿತಿಯವರು ಸರ್ಕಾರಕ್ಕೆ ತಾ॥ 10-12-1948 ರಲ್ಲಿ ಒಂದು ವರದಿಯನ್ನೊಪ್ಪಿಸಿದ್ದಾರೆ. ಈ ವರದಿಯಲ್ಲಿ ಅವರು ಆಂಧ್ರಪ್ರಾಂತ್ಯ ಕೂಡಲೇ ನಿರ್ಮಾಣವಾಗಬೇಕೆಂದು ಒಪ್ಪಿಕೊಂಡಿದ್ದಾರೆ. ಆಗ ಅವರು ಆಂಧ್ರ ಪ್ರಾಂತ್ಯವನ್ನು ಹೇಗೆ ನಿರ್ಮಾಣ ಮಾಡಿದರೋ ಅದೇ ರೀತಿ ಇನ್ನುಳಿದ ಬೇರೆಬೇರೆ ಭಾಷೆಗಳ ವಿಚಾರದಲ್ಲಿ ಸಹ ಬೇರೆಬೇರೆ ಯಾವ ಪ್ರಾಂತ್ಯ ನಿರ್ಮಾಣಗಳನ್ನು ಮಾಡೋಣವೆಂತಲೇ ಆ ವರದಿಯಲ್ಲಿ ಹೇಳಿದ್ದಾರೆ. 1946ನೆಯ ಇಸವಿ ನವೆಂಬರ್ ತಿಂಗಳು ತಾರೀಖು 2 ರಲ್ಲೋ ಅಥವಾ 3ರಲ್ಲೋ ಬೆಂಗಳೂರಿನಲ್ಲಿ ಅಖಿಲ ಮೈಸೂರು ಕಾಂಗ್ರೆಸ್ ಅಧಿವೇಶನ ಜರುಗಿತು. ಅದು ಶ್ರೀಮಾನ್ ಕೆ. ಸಿ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಆ ದಿವಸ ಶ್ರೀಮಾನ್ ಕೆ. ಸಿ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಈ ಅಖಂಡ ಕರ್ಣಾಟಕ ಪ್ರಾಂತ್ಯ ನಿರ್ಮಾಣದ ಬಗ್ಗೆ ಒಂದು ಠರಾವು ಪಾಸಾಗಿರುತ್ತದೆ. ಆ ಠರಾವು ಬಹಳ ಮಹತ್ವಪೂರಿತವಾದದ್ದು. ಏತಕ್ಕೆಂದರೆ ನಾನೂ ಸಹ ಆ ದಿವಸ ಆ ಅಧಿವೇಶನದ ಕಾರ್ಯಕಲಾಪಗಳಲ್ಲಿ ಭಾಗವಹಿಸಿದ್ದೆ. ಆ ದಿವಸ ಭಾರಿ ಮಳೆ ಬಂದು ಜನಗಳು ಆ ಸಭೆಯಲ್ಲಿ ನಿಲ್ಲುವುದಕ್ಕೆ ಅಸಾಧ್ಯವಾಗಿತ್ತು. ಅಂಥ ಭಾರಿ ಮಳೆ ಬರುತ್ತಿದ್ದಾಗ್ಯೂ ಆ ಸ್ಥಳ ಬಿಟ್ಟು ಒಬ್ಬರೂ ಕದಲಲಿಲ್ಲ. ಆ ದಿವಸ ಜನರ ಮನಸ್ಸಿನಲ್ಲಿ ಅಂಥ ಒಂದು ದೃಢನಿಶ್ಚಯವಿದ್ದು ಈ ಸಮಸ್ಯೆಯನ್ನು ಬಗೆಹರಿಸಿದ್ದಾರೆ. ಅಲ್ಲಿ ನೆರೆದಿದ್ದಂಥ ಮಹಾ ಜನಸಂದಣಿಯಲ್ಲಿ ಪ್ರತಿಯೊಬ್ಬರಿಗೂ ನಮ್ಮ ಮೈಸೂರಿಗೆ ಅತಿ ಶೀಘ್ರವಾಗಿ ಜವಾಬ್ದಾರಿ ಸರ್ಕಾರ ಬಂದೇ ಬರುತ್ತದೆ, ಅದು ಬಂದತಕ್ಷಣವೇ ಈ ಭಾಷಾವಾರು ಪ್ರಾಂತ್ಯಗಳನ್ನು ನಿರ್ಮಾಣ ಮಾಡಲೇಬೇಕೆಂಬ ಒಂದು ದೃಢವಾದಂಥ ನಿಶ್ಚಯಮನಸ್ಸು ಆ ಜನರಲ್ಲೆಲ್ಲಾ ಇದ್ದಿತೆಂಬುದು ಕಂಡುಬರುತ್ತಿತ್ತು. ಆದುದರಿಂದಲೇ ಆ ದಿವಸ ಅಂಥ ದೊಡ್ಡಮಳೆ ಬರುತ್ತಿದ್ದಾಗ್ಯೂ ಜನರು ಅಲ್ಲೇ ಕುಳಿತು ಆ ಠರಾವನ್ನು ಪಾಸ್ ಮಾಡಿದರು ಮತ್ತು ಆ ದಿವಸವೇ ಆದಷ್ಟು ಬೇಗ ಈ ಅಖಂಡ ಕರ್ಣಾಟಕ ಸ್ಥಾಪನೆಯಾಗಲೇಬೇಕೆಂದು ಸರ್ವರೂ ಏಕ ಕಂಠದಿಂದ ನುಡಿದಿದ್ದಾರೆ. ಆ ದಿವಸ ಆ ಸಭೆಯಲ್ಲಿ ಬಹಳ ಜನಗಳು ಸೇರಿದ್ದರು. . . .

ಶ್ರೀ ಜೆ. ಮಹಮ್ಮದ್ ಇಮಾಂ.—ಹಾಗಿದ್ದರೆ ಆ ದಿವಸ ಆ ಸಭೆಯಲ್ಲಿ ಶ್ರೀ ಹುಚ್ಚಮಾಸ್ತಿಗೌಡರೂ ಇದ್ದರೆ? ಅವರೂ ಕೂಡ ಈ ಠರಾವಿಗೆ ಓಟ್ ಮಾಡಿದರೋ?

ಶ್ರೀ ಆರ್. ಅನಂತರಾಮನ್.—ಹೌದು. ಅವರೂ ಮಾಡಿದ್ದಾರೆ. ಅನಂತರ ಬೀರೂರಿನಲ್ಲಿ ಒಂದು ಅಖಿಲ ಮೈಸೂರು ಕಾಂಗ್ರೆಸ್ ಅಧಿವೇಶನ ಜರುಗಿತು. ಆ ಅಧಿವೇಶನಕ್ಕೆ ನಾನೂ ಹೋಗಿದ್ದೆ. ಅಲ್ಲಿ ಇನ್ನೂ ಅನೇಕ ಮಾನ್ಯ ಸ್ನೇಹಿತರುಗಳೆಲ್ಲರೂ ಸೇರಿದ್ದರು. ಆ ಅಧಿವೇಶನದಲ್ಲಿ ಸಹ ಈ ಅಖಂಡ ಕರ್ಣಾಟಕ ಪ್ರಾಂತ್ಯ ನಿರ್ಮಾಣದ ಬಗ್ಗೆ ಒಂದು ಠರಾವು ಬಂದು ಆ ಅಧಿವೇಶನದಲ್ಲಿ ಸಹ ಅದನ್ನು ಸರ್ವಾನುಮತದಿಂದ ಅನುಮೋದಿಸಲಾಗಿರುತ್ತದೆ. ಆಗಲೂ ಕೂಡ ಆ ಅಧಿವೇಶನದಲ್ಲಿ ಸೇರಿದ್ದ ಮಹನೀಯರೆಲ್ಲರೂ ಏಕಕಂಠದಿಂದ ಆ ಠರಾವಿಗೆ ತಮ್ಮ ಒಪ್ಪಿಗೆಯನ್ನು ವ್ಯಕ್ತಪಡಿಸಿರುತ್ತಾರೆ. ಇತ್ತೀಚೆಗೆ ನಮ್ಮ ಕಾಂಗ್ರೆಸ್ ಅಧ್ಯಕ್ಷರಾದಂಥ ಶ್ರೀಮಾನ್ ಎಸ್. ಚೆನ್ನಯ್ಯನವರು ಇಡೀ ಕರ್ಣಾಟಕದಲ್ಲೆಲ್ಲಾ ಹೋಗಿ ಅಲ್ಲಿ ತಿರುಗಾಡಿ ನೋಡಿಕೊಂಡು ಬಂದಿದ್ದಾರೆ. ಈ ಬಗ್ಗೆ ಅವರಾಗಲೇ ತಮ್ಮ ವರ್ಕಿಂಗ್ ಕಮಿಟಿಯಲ್ಲಿ ಒಂದು ತೀರ್ಮಾನಕ್ಕೆ ಬಂದಿರುತ್ತಾರೆ. ಈ ಹಿಂದೆಯೇ ಈ ಕಾಂಗ್ರೆಸ್ ಸಂಸ್ಥೆ ಯಾವ ಒಂದು ತತ್ವವನ್ನು ಅನುಮೋದಿಸಿ ಅದಕ್ಕನುಸಾರವಾಗಿ ಠರಾವುಗಳನ್ನು ಪಾಸ್ ಮಾಡಿರುತ್ತದೆಯೋ ಆ ಪ್ರಕಾರ ನಾವೀದಿವಸ ನಾವೆಲ್ಲರೂ ನಮ್ಮ ಆ ಹಿಂದಿನ ಮಾತಿನ ಪ್ರಕಾರ ನಮ್ಮ ವಚನವನ್ನು ಉಳಿಸಿಕೊಳ್ಳಲೇಬೇಕಾಗಿದೆ. ಅದರಂತೆ ನಾವು ಈ ದಿವಸ ನಡೆಯಲೇಬೇಕಾಗಿರುತ್ತೆಂದು ಅವರು ತಿಳಿಸಿಬಿಟ್ಟಿದ್ದಾರೆ. ಈ ವಿಚಾರವಾಗಿ ನಾನು ಈಗ ಅಷ್ಟು ಲಂಬಿಸಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಇಷ್ಟೇ ಅಲ್ಲದೆ ನಮಗೆ ಸ್ವಾತಂತ್ರ್ಯ ಬಂದ ತರುವಾಯ ನಮ್ಮ ರಾಜ್ಯಾಂಗ ನಿರ್ಮಾಣ ಸಭೆಯು ಕೆಲಸ ಮಾಡುತ್ತಿದ್ದಾಗ ಸಹ ಆ ಸಭೆಯಲ್ಲಿ ಬಹಳ ಜವಾಬ್ದಾರಿಯುತರಾದಂಥ ಸದಸ್ಯರುಗಳಿದ್ದರು. ಆಗಲೂ ಕೂಡ ನಮ್ಮ ಈ ಮೈಸೂರು ರಾಜ್ಯಾಂಗಸಭೆಯಲ್ಲಿ ಈ ಬಗ್ಗೆ ಒಂದು ಠರಾವನ್ನು ತಂದು ನಮ್ಮ ಮೈಸೂರಿಗೆ ಅಕ್ಕಪಕ್ಕದಲ್ಲಿರುವ ನೆರೆಹೊರೆಯ ಕನ್ನಡ ಭಾಗಗಳು ನಮ್ಮ ಮೈಸೂರಿಗೆ ಸೇರಲು ಇಷ್ಟಪಡುವುದಾದರೆ ಅವರು ಸೇರಲು ಯಾವ ಅಭ್ಯಂತರವೂ ಇರಬಾರದೆಂದು ಆ ದಿವಸವೇ ಅದನ್ನು ಅನುಮೋದಿಸಿದ್ದಾರೆ. ಅದರಂತೆ ರಾಜ್ಯಾಂಗದಲ್ಲಿ ಒಂದು ಅವಕಾಶವನ್ನು

ಕೂಡ ಕಲ್ಪಿಸಿರುತ್ತಾರೆ. ಈ ವಿಚಾರ ತಮಗೆಲ್ಲರಿಗೂ ತಿಳಿದದ್ದೇ ಆಗಿದೆ. ಇದಾದ ತರುವಾಯ 1952 ರಲ್ಲಿ ಮಹಾಚುನಾವಣೆಗಳು ನಡೆಯಬೇಕಾಗಿ ಬಂದಂಥ ಕಾಲದಲ್ಲಿ ಎ.ಐ.ಸಿ.ಸಿ. ಯವರ ತೀರ್ಮಾನಕ್ಕನುಸಾರವಾಗಿ, ಆ ಎಲೆಕ್ಷನ್ ಮ್ಯಾನಿಫೆಸ್ಟೊದಲ್ಲಿ ಈ ಭಾಷಾವಾರು ಪ್ರಾಂತ್ಯಗಳ ನಿರ್ಮಾಣದ ಬಗ್ಗೆ 18ನೆಯ ಪುಟದಲ್ಲಿ ಹೀಗೆ ಹೇಳಿದ್ದಾರೆ. ಆಗ ನಾನು ಇಲ್ಲಿ ಮೇಯರ್ ಆಗಿದ್ದೆ. ಆಗ ಇಲ್ಲಿಗೆ ಕರ್ಣಾಟಕದಿಂದ ಶ್ರೀಮಾನ್ ಕಾಲಾ ವೆಂಕಟರಾಯರು, ಶ್ರೀಮಾನ್ ಎಸ್. ನಿಜಲಿಂಗಪ್ಪನವರು ಇತ್ಯಾದಿ ಅನೇಕ ಮಾನ್ಯ ಸದಸ್ಯರುಗಳು ಬಂದಿದ್ದರು. ಅವರೆಲ್ಲರೂ ಕರ್ಣಾಟಕ ಪ್ರಾಂತ್ಯವಾಗಲೇಬೇಕೆಂದು ಹೇಳಿದ್ದಾರೆ. ಆದರೆ ಈಗತಾನೆ ಕೆಲವರು ನನ್ನ ಸ್ನೇಹಿತರು ಇಲ್ಲಿ ಮಾತನಾಡುತ್ತ "ಇದೆಲ್ಲಾ ಸುಳ್ಳು, ಕಾಂಗ್ರೆಸ್ ಸಂಸ್ಥೆಯವರು ಈ ವಿಚಾರವಾಗಿ ಎಂದೂ ಕಮಿಟ್ ಮಾಡಿಕೊಂಡಿಲ್ಲ" ಎಂದು ಹೇಳಿದ್ದಕ್ಕಾಗಿ ನಾನೀಗ ಈ ತಪಶೀಲುಗಳನ್ನೆಲ್ಲಾ ಹೇಳಬೇಕಾಗಿಬಂತು.

Election Manifesto—page 15

> "A demand for redistribution of provinces on a linguistic basis has been persistently made in the south and west of India. The Congress expressed itself in favour of linguistic provinces many years ago. A decision on this question ultimately depends upon the wishes of the people concerned. While linguistic reasons have an undoubtedly a certain cultural and other importance, there are other factors also such as economic, administrative and financial, which have to be taken into consideration. Where such a demand represents the agreed views of the people concerned, the necessary steps prescribed by the Constitution including the appointment of a Boundary Commission should be taken."

ಜನತೆಯ ಅಭಿಪ್ರಾಯಬೇಕು ಎಂದು ಹೇಳುತ್ತಿದ್ದಾರೆ. ಇದು ದೊಡ್ಡ ಸಮಸ್ಯೆ ಎಂದು ಮಾನ್ಯ ಸಭೆಯಲ್ಲಿ ಪ್ರತಿಯೊಬ್ಬರೂ ಒಪ್ಪಬೇಕು. ತಮ್ಮನ್ನೆಲ್ಲಾ ಎದುರುಹಾಕಿಕೊಂಡು ಕೆಲಸ ಮಾಡಬೇಕಲ್ಲ ಎಂದು ಸ್ನೇಹಿತರು ಹೇಳಿದ್ದಕ್ಕೋಸ್ಕರ ಇದನ್ನು ಹೇಳುತ್ತಿದ್ದೇನೆ. ಒಂದು ಸಮಿತಿಯನ್ನು ನೇಮಿಸಿ, ಅಂಕಿ ಅಂಶಗಳನ್ನು ಶೇಖರಿಸಿದಮೇಲೆ ಈ ಸಭೆಯಲ್ಲಿ ಚರ್ಚಿಸುವುದು ಒಳ್ಳೆಯದು ಎಂದು ಈ ಸಭೆಯ ಸದಸ್ಯರು ಅಭಿಪ್ರಾಯಪಟ್ಟುದರ ಪರಿಣಾಮವಾಗಿ ಶೇಷಾದ್ರಿ ಸಮಿತಿಯನ್ನು ನಮ್ಮ ಸರ್ಕಾರದವರು ನೇಮಿಸಿದರು. ಈ ಸಮಿತಿಯಲ್ಲಿರುವ ನಿಪುಣರು ಕರ್ಣಾಟಕದ ಅನೇಕ ಭಾಗಗಳಿಗೆ ಹೋಗಿ ಅಂಕಿ ಅಂಶಗಳನ್ನು ತಿಳಿದುಕೊಂಡು ಬಂದರು. ಆದರೆ ಇನ್ನೂ ಹೆಚ್ಚಿಗೆ ಅಂಕಿಅಂಶಗಳನ್ನು ತಿಳಿದುಕೊಳ್ಳಬಹುದಾಗಿತ್ತು ಎಂದು ಶ್ರೀ ಕಂಠೀ ಮತ್ತು ಇತರ ಸ್ನೇಹಿತರು ಹೇಳಿದರು. ಈ ಸಂದರ್ಭದಲ್ಲಿ ಕರ್ಣಾಟಕ Provincial Congress ಕಮಿಟಿಯವರು ಒಂದು memorandum ಕೊಟ್ಟಿದ್ದಾರೆ. ಅವರೂ ಒಂದು ಕಮಿಟಿಯನ್ನು ನೇಮಿಸಿದ್ದರು. ಆ ಕಮಿಟಿಯನ್ನು ಅವರು ಕೇಳದೆ ಹೋದರು. ಅವರೂ ಸಹ ನಾವು ಬೇಕಾದರೆ ಅಷ್ಟು ಅಂಕಿಅಂಶಗಳನ್ನು ತಿಳಿಸುವುದಕ್ಕೆ ಪ್ರಯತ್ನಮಾಡುತ್ತೇವೆ, ನಮ್ಮ ಸಹಕಾರವನ್ನು ಕೊಡುವುದಕ್ಕ ಸಿದ್ಧರಾಗಿದ್ದೇವೆ ಎಂದು ಹೇಳಿದರು. ಆದರೆ ಮಾನ್ಯ ಸ್ನೇಹಿತರು ಅವರನ್ನು ಕೇಳಲಿಲ್ಲ. ಈ ಕಮಿಟಿ ಅಲ್ಲದೆ ಇನ್ನೂ ಎಷ್ಟೋ ಕಮಿಟಿಗಳು ಕರ್ಣಾಟಕ ಏಕೀಕರಣ ವಿಚಾರವಾಗಿ ಕೆಲಸಮಾಡುತ್ತಿವೆ. ಇವರು ಅವರ ಹತ್ತಿರ ಸಹ ಮಾತುಕತೆ ನಡೆಸಿದ್ದರೆ ಎಷ್ಟೋ ಅಂಕಿಅಂಶಗಳನ್ನು ತಿಳಿದುಕೊಳ್ಳಬಹುದಾಗಿತ್ತು. ಬೊಂಬಾಯಿ, ಹೈದರಾಬಾದ್ ಮತ್ತು ಇತರ ಸರ್ಕಾರದವರೊಡನೆ ನೇರವಾಗಿ ಪತ್ರವ್ಯವಹಾರ ನಡೆಸಿ ಎಂಟು ಹತ್ತು ಕಡೆ ಒಂದು ತಿಂಗಳು ಪ್ರವಾಸಮಾಡಿ ಒಂದು ವರದಿ ಕೊಟ್ಟಿದ್ದಾರೆ. ಅವರು ಮನಸ್ಸು ಮಾಡಿದ್ದರೆ ಇನ್ನೂ ಹೆಚ್ಚಿನ ಅಂಕಿಅಂಶಗಳನ್ನು ಕೊಡಬಹುದಾಗಿತ್ತು. ಅವರು ಮನಸ್ಸು ಮಾಡಿಲ್ಲ. ಆದಾಗ್ಯೂ ಚಿಂತೆ ಇಲ್ಲ. ಕೊಟ್ಟಿರುವ ವರದಿಯ ಜೊತೆಯಲ್ಲಿ ಕರ್ಣಾಟಕ Provincial Congress ಸಮಿತಿಯವರು ಕೊಟ್ಟಿರುವ memorandum ಇದೆ. ಅದನ್ನು ನಾವು ಈ ವರದಿಯ ಜೊತೆಯಲ್ಲಿ ಓದಿದರೆ ವಿಚಾರಗಳು ತಿಳಿಯುತ್ತವೆ. ಕೆ.ಪಿ.ಸಿ.ಸಿ. ಏರ್ಪಡಿಸಿದ ಸಮಿತಿಗೆ ನಾನೂ ಒಬ್ಬ ಸದಸ್ಯನು. ಶ್ರೀ ಪಿ. ಆರ್. ರಾಮಯ್ಯನವರೂ ಒಬ್ಬರು. ನಾವು ಒಂದೆರಡು ಮೀಟಿಂಗ್‌ಗಳಲ್ಲಿ ಭಾಗವಹಿಸಿದ್ದೆವು, ಅಲ್ಲಿಯ ಜನರು memorandum ತಯಾರುಮಾಡಿದ್ದಾರೆ. ಅಂಕಿ ಅಂಶಗಳನ್ನು ಕೂಡಿಸುವುದಕ್ಕೆ ನೂರಾರು ಜನ ಉತ್ಸಾಹದಿಂದ ಕೆಲಸಮಾಡಿದ್ದಾರೆ, ಎಲ್ಲರೂ ಸರ್ಕಾರದವರೊಡನೆ ನೇರವಾಗಿ ಸಂಬಂಧ ಇಟ್ಟುಕೊಂಡು ಅಂಕಿಅಂಶಗಳನ್ನು ಸಂಗ್ರಹಿಸಿ memorandum ತಯಾರು ಮಾಡಿದ್ದಾರೆ. ಅದರಲ್ಲಿ ಎಷ್ಟೋ ಸತ್ಯವಾದ ವಿಚಾರಗಳಿವೆ. ಕೆಲವು ಸ್ನೇಹಿತರು ಅದು ಸಮರ್ಪಕವಾಗಿಯಾಗಿಲ್ಲವೆಂದು ಹೇಳುತ್ತಾರೆ. ಆದರೆ ರಿಪೋರ್ಟ್ ಚೆನ್ನಾಗಿದೆ. ಅದನ್ನು ಅನೇಕ ಮಾನ್ಯ ಸದಸ್ಯರು ಓದಿದ್ದಾರೆ. ಅದರಲ್ಲಿ ಈ ಏಕೀಕರಣ ಪ್ರಶ್ನೆಯ ಹಿನ್ನೆಲೆ ಕೊಟ್ಟಿರುವುದಲ್ಲದೆ historical ಮತ್ತು ಆರ್ಥಿಕ ವಿಚಾರದಮೇಲೆ ಬಹಳ ಚನ್ನಾಗಿ ಚರ್ಚೆ ಮಾಡಿದ್ದಾರೆ. ಈ ವಿಚಾರ Reorganisation ಸಮಿತಿಯವರು ಬಂದಂಥ ಸಂಬಂಧದಲ್ಲಿ ಒಂದು ಉತ್ತಮವಾದ memorandum ಕೊಡುವುದರಲ್ಲಿ ಎಷ್ಟೋ ಕ್ಲಿಷ್ಟ ಸಮಸ್ಯೆಗಳನ್ನು ವಿವರಿಸಿ ಅವುಗಳ ಪರಿಹಾರದಲ್ಲಿ ಅನುಕೂಲಮಾಡಿಕೊಡಬೇಕೆಂದು ಮಾಡಿದ್ದಾರೆ. ಇದನ್ನೂ ಸಹ ನಾವು ಗಮನಕ್ಕೆ ತಗೆದುಕೊಳ್ಳಬೇಕಾದದ್ದು ನಮ್ಮ ಮುಖ್ಯ ಕರ್ತವ್ಯವಾಗಿದೆ. ಈಗ ಮೈಸೂರು ಏತಕ್ಕೆ ಇದ್ದ ಹಾಗೆ ಇರಬಾರದು, ಇತರ ದೇಶಗಳು ಬೇಕಾದರೆ ಪ್ರಾಂತಗಳನ್ನು ಮಾಡಿಕೊಳ್ಳಲಿ ಎಂದು ನಮ್ಮ ಸ್ನೇಹಿತರು ಹೇಳುತ್ತಾರೆ. ಉದಾಹರಣೆಗೆ ಮಹಾರಾಷ್ಟ್ರದವರನ್ನು ತಗೆದುಕೊಳ್ಳಿ, ಅವರು ಮಹಾರಾಷ್ಟ್ರವಾಗಬೇಕೆಂದು ಹೊಡೆದಾಡುತ್ತಿದ್ದಾರೆ. ಅಲ್ಲಿ ಪಾರ್ಟಿಯವರೂ ಪ್ರತಿಯೊಬ್ಬ ಗಂಡಸೂ, ಹೆಂಗಸೂ ಒಗ್ಗಟ್ಟಿನಿಂದ ಸೇರಿಕೊಂಡು ಮಹಾರಾಷ್ಟ್ರಪ್ರಾಂತಕ್ಕೋಸ್ಕರ ಹೊಡೆದಾಡುತ್ತಿದ್ದಾರೆ. ಆಂಧ್ರ ದೇಶ ನೋಡಿ. ಅಲ್ಲಿ ಎಲ್ಲಾ ಪಾರ್ಟಿಗಳೂ ವಿಶಾಲ ಆಂಧ್ರವಾಗಬೇಕು, ಹೈದರಾಬಾದ್ ಒಡೆಯಬೇಕು, ಹೈದರಾಬಾದನ್ನು ರಾಜಧಾನಿಯನ್ನಾಗಿ ಮಾಡಬೇಕು, ಅಕ್ಕಪಕ್ಕದ ಪ್ರದೇಶಗಳನ್ನು

(ಶ್ರೀ ಆರ್. ಅನಂತರಾಮನ್.)

ಸೇರಿಸಬೇಕು ಎಂದು ಹೇಳುತ್ತಿದ್ದಾರೆ. ಕೇರಳ ಪ್ರಾಂತವಾಗಬೇಕು ಎಂದು ಕೆಲವರು ಹೇಳುತ್ತಿದ್ದಾರೆ. ತಮಿಳುನಾಡು ಏಕಪ್ರಾಂತವಾಗಿ ಉಳಿಯಬೇಕು ಎಂದು ಆಶೆಪಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಮೈಸೂರು ಇದ್ದ ಹಾಗೆ ಇರುತ್ತದೆಯೇ, ಹೆಚ್ಚಿಸುವುದಕ್ಕೆ ಅವಕಾಶವಾಗುವುದಿಲ್ಲವೇ, ಅಥವಾ ಕಮ್ಮಿಯಾಗುವುದಕ್ಕೆ ಅವಕಾಶವಾಗುವುದಿಲ್ಲವೇ ಎಂಬುದನ್ನು ಯೋಚನೆಮಾಡಬೇಕು. ನಾವು ಸುಮ್ಮನೆ ಇದ್ದರೂ ವಿಶಾಲ ಮೈಸೂರು ಅಥವಾ ಕರ್ಣಾಟಕವಾಗಬಹುದು. ಹೈದರಾಬಾದ್ ಒಡೆಯುವ ಸಮಯ ಬಂದರೆ ಅಲ್ಲಿಯ ಮೂರು ಡಿಸ್ಟ್ರಿಕ್ಟುಗಳನ್ನು ಎಲ್ಲಿಗೆ ತೆಗೆದುಕೊಂಡು ಹೋಗಬೇಕು? ಬೊಂಬಾಯಿನಲ್ಲಿರುವ ಮೂರು ಕರ್ಣಾಟಕ ಡಿಸ್ಟ್ರಿಕ್ಟುಗಳನ್ನು ಇಲ್ಲಿ ಇಡಬೇಕು. ಮದರಾಸಿನಲ್ಲಿರುವ ಒಂದೆರಡು ಡಿಸ್ಟ್ರಿಕ್ಟುಗಳು ಎಲ್ಲಿ ಹೋಗಬೇಕು? ಇದು ದೊಡ್ಡ ಸಮಸ್ಯೆ. ಅಕ್ಕಪಕ್ಕದಲ್ಲಿ ತಮ್ಮ ತಮ್ಮ ಭಾಷೆಗಳನ್ನು ಆಧಾರವಾಗಿಟ್ಟುಕೊಂಡು ಪ್ರಾಂತ್ಯಗಳನ್ನು ರಚನೆ ಮಾಡಬೇಕು ಎಂದು ಹೇಳುತ್ತಿರುವಾಗ ಮೈಸೂರಿನಲ್ಲಿ ಕೆಲವರು ಬೇಡ ಎಂದು ಹೇಳದೆ ಇದ್ದರೂ ಕೆಲವು ಕಾರಣಗಳನ್ನು ಕೊಟ್ಟಿದ್ದಾರೆ. ಅದಕ್ಕೆ ಸಮಂಜಸವಾಗಿ ಉತ್ತರ ಕೊಟ್ಟು ಅವರ ಮನಸ್ಸನ್ನು ನಮ್ಮ ಕಡೆ ಒಲಿಸಿಕೊಳ್ಳಬೇಕು. ಕೆಲವರು ವಿರುದ್ಧ ಅಭಿಪ್ರಾಯಕೊಟ್ಟರೆ ಅವರು ನಮ್ಮ ಶತ್ರುಗಳೆಂದು ತಿಳಿಯಬಾರದು. ಅವರು ನಮ್ಮ ಅಣ್ಣ ತಮ್ಮಂದಿರು, ವಿವೇಕ ದೃಷ್ಟಿಯಿಂದ ಮತ್ತು ದೂರದೃಷ್ಟಿಯಿಂದ ನೋಡಿದರೆ ಮೈಸೂರು ಇದ್ದಹಾಗೆ ಇರಬೇಕೆಂದು ಹೇಳಲು ನಮ್ಮ ಮನಸ್ಸು ಒಪ್ಪುವುದಿಲ್ಲ. ಯಾವಾಗಲೂ ತೆರೆದ ಮನಸ್ಸು ಇರಬೇಕು. ಕರ್ಣಾಟಕ ಪ್ರಾಂತ ಬೇಡ, ಬೇಕು ಎಂಬ ಮನಸ್ಸು ಮಾಡಿಕೊಂಡು ಬರಬಾರದು. ಚರ್ಚೆಯಾದಮೇಲೆ ಇದು ಸರಿಯೋ ಅದು ಸರಿಯೋ ಎಂದು ವಿಮರ್ಶೆಮಾಡಿ ತೆರೆದ ಮನಸ್ಸಿನಿಂದ ಒಪ್ಪಿಕೊಳ್ಳೋಣ. ಬೆಂಗಳೂರು, ಚಿತ್ರದುರ್ಗ ಡಿಸ್ಟ್ರಿಕ್ಟುಗಳು ಬೇಕು ಎಂದು ಆಂಧ್ರದ ಮಂತ್ರಿಮಂಡಲ ಮತ್ತು ಎಲ್ಲಾ ಪಾರ್ಟಿಗಳೂ ಕೇಳುತ್ತಿದ್ದಾರೆ. ಮೈಸೂರು ಇದ್ದ ಹಾಗೆ ಇರಬೇಕು. ಯಾವ ಭಾಗವನ್ನೂ ಬಿಟ್ಟುಕೊಡುವುದಕ್ಕೆ ಸಿದ್ಧವಾಗಿಲ್ಲ. ಮೈಸೂರನ್ನು ಉಳಿಸಿಕೊಳ್ಳಬೇಕು. ಇತರ ಪ್ರಾಂತಗಳಿಂದ ಬರತಕ್ಕ ಕನ್ನಡಿಗರನ್ನೂ ಸೇರಿಸಿಕೊಳ್ಳಬೇಕು. ವಿಶಾಲ ಆಂಧ್ರವಾಗಲಿ ಅಥವಾ ಮಹಾ ರಾಷ್ಟ್ರವಾಗಲಿ, ಕೇರಳವಾಗಲಿ ಅದು ಅವರ ಹಣೆಬರಹ ಎಂದು ನಾವು ಸುಮ್ಮನೆ ಇರುವುದಕ್ಕೆ ಆಗುವುದಿಲ್ಲ. ಈ ಸಂದರ್ಭದಲ್ಲಿ ನಾವು ಬಹಳ ಹುಷಾರಾಗಿರಬೇಕು. ಮೈಸೂರಿನ ಒಂದು ಹಳ್ಳಿಯನ್ನೂ ಕಳೆದುಕೊಳ್ಳುವುದಕ್ಕೆ ನಾವು ಸಿದ್ಧರಾಗಿಲ್ಲ. ಸುತ್ತುಮುತ್ತಲಿರುವ ಕರ್ಣಾಟಕದ ಬಂಧುಗಳು ಸೇರುತ್ತೇವೆಂದು ಹೇಳಿದರೆ, ಅದನ್ನು ನಿರಾಕರಿಸಕೂಡದು.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಅವನ್ನು ಹೇಗೆ ಉಳಿಸಿಕೊಳ್ಳುತ್ತೀರಿ?

ಶ್ರೀ ಆರ್. ಅನಂತರಾಮನ್.—ಸುಮ್ಮನೆ ಇರುವುದು ಬೇಡ. ವಿರೋಧಿಸಿ ಇಲ್ಲವೇ ಅನುಮೋದಿಸಿ ಮಾತನಾಡಬೇಕು. ನಾವೆಲ್ಲ ಒಂದು ಮುಕ್ತಕಂಠದಿಂದ ಮೈಸೂರು ಇದ್ದಹಾಗೆಯೇ ಇರಬೇಕು ಎಂದು ಹೇಳಬೇಕು. ಇಲ್ಲವೇ ಮೈಸೂರು ಪ್ರಾಂತಕ್ಕೆ ಅಣ್ಣ ತಮ್ಮಂದಿರನ್ನು ಸೇರಿಸಿಕೊಳ್ಳಬೇಕು ಮತ್ತು ಮೈಸೂರಿನಿಂದ ಒಂದು ಹಳ್ಳಿಯನ್ನು ತೆಗೆದುಕೊಳ್ಳುವುದಕ್ಕೆ ಅವರಿಗೆ ಹಕ್ಕಿಲ್ಲ ಎಂದು ದೃಢಮನಸ್ಸಿನಿಂದ ಹೇಳಬೇಕು. ಕಾಂಗ್ರೆಸ್ಸಿನವರು ಇಂಡಿಯಾ ದೇಶಕ್ಕೆ ಸ್ವಾತಂತ್ರ್ಯ ಬರಬೇಕೆಂದು ಹೋರಾಡಿದರು. ಸತ್ಯಾಗ್ರಹಮಾಡುತ್ತಿದ್ದರು. ಮುಸ್ಲಿಂ ಲೀಗಿನವರು ಸುಮ್ಮನೆ ನಿಂತುಕೊಳ್ಳುತ್ತಿದ್ದರು. ಸ್ವಾತಂತ್ರ್ಯಕ್ಕೋಸ್ಕರ ಹೋರಾಡಿದವರಿಗೆ ಮುಂದಕ್ಕೆ ಯಾವ ಸ್ಥಿತಿ ಆಯಿತು ಎಂದರೆ ಪಾಕೀಸ್ಥಾನ ಮತ್ತು ಹಿಂದೂಸ್ಥಾನ ಎಂದು ಎರಡು ರಾಷ್ಟ್ರಗಳಾದವು. ನಾವುಗಳು ಈಗ ಬಹಳ ಹುಷಾರಿನಲ್ಲಿರಬೇಕ , ಮೈಸೂರಿನ ಯಾವ ಭಾಗವನ್ನೂ ಕಳೆದುಕೊಳ್ಳುವುದಕ್ಕೆ ಒಬ್ಬರೂ ಸಿದ್ಧರಾಗಿರಕೂಡದು. ಕೆಲವರು ನಮ್ಮ ಸ್ನೇಹಿತರು ಎರಡು ಕನ್ನಡ ಪ್ರಾಂತಗಳು ಏತಕ್ಕೆ ಆಗಕೂಡದು. ಮೈಸೂರು ಇದ್ದಹಾಗೆ ಇರಲಿ, ಇತರರನ್ನು ಸೇರಿಸಿ ಇನ್ನೊಂದು ಪ್ರಾಂತವನ್ನು ಮಾಡೋಣ ಎಂದು ಹೇಳುತ್ತಾರೆ. ದಕ್ಷಿಣದಲ್ಲಿರತಕ್ಕ ಕೊಡಗು, ಮಂಗಳೂರು, ಕೊಳ್ಳೇಗಾಲ, ಮೈಸೂರಿಗೆ ಸೇರಿಸೋಣ, ಉತ್ತರ ಕರ್ಣಾಟಕದವರನ್ನು ಬೇರೆ ಪ್ರಾಂತ್ಯ ಮಾಡೋಣ ಎನ್ನುತ್ತಾರೆ. ಆಗ ಉತ್ತರ ಕರ್ಣಾಟಕದಲ್ಲಿ 60-70 ಲಕ್ಷ ಜನಸಂಖ್ಯೆ ಆಗುತ್ತದೆ. 60-70 ಲಕ್ಷ ಜನರಿಗೋಸ್ಕರ ಒಂದು ಪ್ರಾಂತ ಮಾಡುವುದಕ್ಕೆ ಆಗುತ್ತದೆಯೇ? ಈಗ A, B ಮತ್ತು C ಸಂಸ್ಥಾನಗಳಿವೆ. ಸಂಸ್ಥಾನಗಳನ್ನೆಲ್ಲಾ ಸಮಾನವಾಗಿ ಹಂಚಿ ಒಂದೊಂದು ಪ್ರಾಂತಕ್ಕೆ ಎರಡು ಮೂರು ಕೋಟಿ ಪ್ರಜೆಗಳಿರುವಂತೆ ಪ್ರಾಂತರಚನೆ ಮಾಡಬೇಕು ಎಂದು ಹೇಳುತ್ತಾರೆ. ಅಂಥ ಸಂದರ್ಭದಲ್ಲ 60-70 ಲಕ್ಷವಿರುವ ಸಂಸ್ಥಾನಗಳನ್ನು ಏರ್ಪಡಿಸುವುದಕ್ಕೆ ಆಗುತ್ತದೆಯೇ? ಹುಬ್ಬಳ್ಳಿಯನ್ನೋ, ಧಾರವಾಡವನ್ನೋ ರಾಜಧಾನಿಯಾಗಿ ಮಾಡಿದರೆ ಎಷ್ಟು ಖರ್ಚಾಗುತ್ತದೆ? ಇಂಡಿಯಾ ಸರ್ಕಾರದವರು ಕರ್ನೂಲನ್ನು ರಾಜಧಾನಿ ಮಾಡಬೇಕಾದರೆ, 3-4 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದರು. ಹೀಗೆ ಒಂದು ರಾಜಧಾನಿ, ಇನ್ನೊಂದು ಮಂತ್ರಿ ಮಂಡಲ, ಒಂದು Public Service Commission, ಒಂದು ಹೈಕೋರ್ಟ್ ಮಾಡುತ್ತಾ ಹೋದರೆ ಎಷ್ಟು ದುಡ್ಡು ಖರ್ಚಾಗುತ್ತದೆ! ಹಾಗೆ ಮಾಡುತ್ತಾ ಹೋದರೆ ಪ್ರತಿಯೊಂದು ಡಿಸ್ಟ್ರಿಕ್ಟಿಗೂ ಒಂದು ಪ್ರಾಂತ ಮಾಡಿ ಎಂದು ಕೇಳುವ ಸಂದರ್ಭ ಬರುತ್ತದೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. $2\frac{1}{2}$ ಕೋಟಿ ಅಥವಾ ಮೂರು ಕೋಟಿ ಪ್ರಜಾಸಂಖ್ಯೆಯಿರುವ ಒಂದು ಪ್ರಾಂತ್ಯ ಮಾಡಿದರೆ ಆಗ ಅದು ಒಂದು viable unit ಆಗುತ್ತದೆ. ಒಬ್ಬ ದೊಡ್ಡ ಸ್ನೇಹಿತರು "ಇಷ್ಟು ದೊಡ್ಡ ಪ್ರಾಂತವಾದರೆ ರಾಜ್ಯ ಆಳುವುದಕ್ಕೆ ಆಗುವುದಿಲ್ಲ. ರಾಜಧಾನಿ ಬಹಳ ದೂರದಲ್ಲಿರುತ್ತದೆ. ಅಲ್ಲಿಗೆ ಜನಗಳು ಬರಬೇಕಾದರೆ ಬಹಳ ಕಷ್ಟವಾಗುತ್ತದೆ" ಎಂದು ಹೇಳಿದರು. ಈ ವಿಚಾರವಾಗಿ ಎಲ್ಲರೂ ಮಾತನಾಡಿದ್ದಾರೆ. ಈಗಿನ ನಾಗರಿಕತೆಯಲ್ಲಿ ದೂರದ ಪ್ರಶ್ನೆಯೇ ಬರುವುದಿಲ್ಲ. ಈಗ Aeroplanes ನಲ್ಲಿ ಅರ್ಧ ಗಂಟೆ, ಒಂದು ಗಂಟೆಯಲ್ಲಿ ಎಲ್ಲಿಗೆ ಬೇಕಾದರೂ ಹೋಗಬಹುದು, ದೂರದ ಪ್ರಶ್ನೆಯೇ ಬರುವುದಿಲ್ಲ. ಮುಖ್ಯವಾಗಿ ನಮ್ಮ ಮನಸ್ಸು ಹತ್ತಿರವಿರಬೇಕು, ಮನಸ್ಸೊಂದು ಹತ್ತಿರವಿದ್ದರೆ ರಾಜಧಾನಿ ಎಷ್ಟು ದೂರವಿದ್ದರೂ ಏನೂ ಅನಾನುಕೂಲವಾಗುವುದಿಲ್ಲ. ದೆಹಲಿ ಎಷ್ಟು ದೂರವಿದೆ? ಕನ್ಯಾಕುಮಾರಿವರೆಗೆ ರಾಜ್ಯಭಾರ ಮಾಡುವುದಿಲ್ಲವೇ? ಆಡಳಿತದಲ್ಲ ದಕ್ಷತೆ ಇಲ್ಲವೇ? ಆದ್ದರಿಂದ ರಾಜಧಾನಿ ಎಷ್ಟು ದೂರದಲ್ಲಿದ್ದರೂ administration group ಮಾಡಬಹುದು. ಮದರಾಸಿನವರು ಬಳ್ಳಾರಿಯನ್ನು ಒಂದು administration group ಮಾಡಿದ್ದರು. ಅಲ್ಲಿ

ಕೆಲವು ಅಧಿಕಾರಿಗಳು ಕೆಲಸ ನಡೆಸುತ್ತಿದ್ದರು. ಮದರಾಸ್ ನೇರವಾಗಿ ಆಡಳಿತ ನಡೆಸುತ್ತಿರಲಿಲ್ಲ. ಆದ್ದರಿಂದ ದೂರದ ಪ್ರಶ್ನೆ ಬರುವುದಿಲ್ಲ. ಮನಸ್ಸು ಹತ್ತಿರವಿರಬೇಕು ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಕೆಲವು ಸ್ನೇಹಿತರು ಬೆಂಗಳೂರು 10-20-30 ವರ್ಷಗಳ ಮೇಲೂ ರಾಜಧಾನಿಯಾಗಿ ಇರುತ್ತದೆಯೇ ಎಂದು ಕೇಳಿದರು. ನಾವು ನಾಳೆ ಬದುಕಿರುತ್ತೇವೆ ಎಂದು ಹೇಳುವುದಕ್ಕಾಗುತ್ತದೆಯೇ? 100 ವರ್ಷಗಳಿಗೆ ದೆಹಲಿಯಂತೆ ಈಗ ಬೆಂಗಳೂರು ರಾಜಧಾನಿಯೋ, ಹೈದರಾಬಾದ್ ರಾಜಧಾನಿಯೋ ಆಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಅದು ಮುಂದಿನ ಜನಾಂಗಕ್ಕೆ ಮತ್ತು ಮುಂದಿನ ಪರಿಸ್ಥಿತಿಗೆ ಅನುಗುಣವಾಗಿ ಬಂದ ಸದಸ್ಯರಿಗೆ ಸೇರಿದ ವಿಚಾರ. ಬೆಂಗಳೂರು ಬಿಟ್ಟು ಹೊರಗಡೆ ರಾಜಧಾನಿಮಾಡುವುದಕ್ಕಾಗುತ್ತದೆಯೇ? ಬೆಂಗಳೂರು ಪಟ್ಟಣದಲ್ಲಿ ಹವಾ ಚೆನ್ನಾಗಿರುತ್ತದೆ. ಕೋಟ್ಯಂತರ ರೂಪಾಯಿಗಳನ್ನು ಖರ್ಚುಮಾಡಿ ಕಟ್ಟಿಸಿದ ಪಾರ್ಲಿಮೆಂಟ್‌ಹೌಸ್ ಮತ್ತು ಎಷ್ಟೋ ಇತರ ಕಟ್ಟಡಗಳು ಇಲ್ಲಿವೆ. ಧಾರವಾಡ, ದಾವಣಗೆರೆ ಅಥವಾ ಹುಬ್ಬಳ್ಳಿಯನ್ನೋ ರಾಜಧಾನಿಯಾಗಿ ಮಾಡಿದರೆ 20 ಕೋಟಿ ರೂಪಾಯಿಗಿಂತಲೂ ಹೆಚ್ಚು ದುಡ್ಡನ್ನು ಕಟ್ಟಡಗಳಿಗಾಗಿ ಇಡಬೇಕಾಗುತ್ತದೆ. ಆಗ ಸದಸ್ಯರು ಕಣ್ಣುಮುಚ್ಚಿಕೊಂಡು ಕೈಕಟ್ಟಿಕೊಂಡು ಅದನ್ನೇ ರಾಜಧಾನಿಯನ್ನಾಗಿ ಮಾಡಿ ಎಂದು ಹೇಳುವುದಕ್ಕಾಗುತ್ತದೆಯೇ? ಒಂದು ರಾಜಧಾನಿ ಬದಲಾವಣೆ ಮಾಡಬೇಕಾದರೆ ಒಗ್ಗಟ್ಟಿನಿಂದ ಕೆಲಸಮಾಡಬೇಕಾಗುತ್ತದೆ. ಆದ್ದರಿಂದ ಮಾನಸ್ಸಿಗೆ •ತೋರಿದರೆ ಕೂಡಲೇ ರಾಜಧಾನಿ ಬದಲಾವಣೆ ಮಾಡುವುದಕ್ಕಾಗುತ್ತದೆಯೇ ಎಂಬುದನ್ನು ಯೋಚನೆಮಾಡಬೇಕು. ಇದೂ ಅಲ್ಲದೆ ನಮ್ಮ ಸ್ನೇಹಿತರು, ಕೆ.ಪಿ.ಸಿ.ಸಿ. ಸಮಿತಿಯವರು ಬೆಂಗಳೂರು ರಾಜಧಾನಿಯನ್ನಾಗಿ ಉಳಿಸುವುದಕ್ಕೆ ಒಪ್ಪಿಕೊಂಡಿದ್ದಾರೆ. ಇನ್ನು ರಾಜರ ಪ್ರಶ್ನೆ. ಇವೊತ್ತು ರಾಜರು ಇರಬಹುದು, ನಾಳೆ ಹೋಗಬಹುದು, ಅಥವಾ ನಾಳೆ ಅವರು ಗವರ್ನರ್ ಆಗಿ ಬರಬಹುದು. Reorganisation of States ಮಾಡಿದಮೇಲೆ ರಾಜರು ಇರುತ್ತಾರೆಯೇ ಎಂದು ಹೇಳುವುದಕ್ಕಾಗುವುದಿಲ್ಲ, ಮೈಸೂರಿನ ವೈಶಿಷ್ಟ್ಯ ಇರುತ್ತದೆಯೇ ಎಂದು ಹೇಳುವುದಕ್ಕಾಗುವುದಿಲ್ಲ. ಅವರು ಹೋಗುವ ಕಾಲ ಬಂದಿದೆ. Socialistic pattern of society ಬಂದರೆ ರಾಜರುಗಳು ಹೋಗುತ್ತಾ ಇರಬೇಕು. ಜನತೆಯೇ ರಾಜರು ಆಗಬೇಕು. ಸಾರ್ವಭೌಮತ್ವ ಅವರ ಕೈಯಲ್ಲಿ ಇರಬೇಕು.

3 P.M.

ಸಾರ್ವಭೌಮತ್ವ ಅವರ ಕೈಯಲ್ಲಿದೆ. ಅದು ಶಾಶ್ವತವಾಗಿ ಇದ್ದರೆ, ನಮ್ಮ ಮಹಾರಾಜರೇ ರಾಜಪ್ರಮುಖರಾಗಿರುತ್ತಾರೆಂದೂ ಹೇಳುವುದಕ್ಕಾಗುವುದಿಲ್ಲ. ನಮ್ಮ younger elements ಏನು ಹೇಳುತ್ತಾರೋ ಹೇಳುವುದಕ್ಕೆ ಸಾಧ್ಯವಿಲ್ಲ. ಸಮಾನ ಭಾವನೆ ಬಂದಾಗ, ಒಂದು ದೇಶದಲ್ಲಿ ರಾಜಪ್ರಮುಖರಿರುವುದು, ಇನ್ನೊಂದು ದೇಶದಲ್ಲಿ ಗವರ್ನರ್ ಇರುವುದು ಸಾಧ್ಯವೆಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ, ಅದು discrimination ಮಾಡಿದ ಹಾಗಾಗುತ್ತದೆ. ಆದ್ದರಿಂದ ಮಹಾರಾಜರಿದ್ದರೇನೋ ನಮಗೆ ಸಂತೋಷ. ಆದರೆ ಮುಂದೇನಾಗುತ್ತದೆಯೋ ಗೊತ್ತಿಲ್ಲ.

ಇನ್ನೊಂದು ದೊಡ್ಡ ಪ್ರಶ್ನೆಯೇನೆಂದರೆ, ಈಗ ನಮಗೆ ಬರುವ ಕರ್ಣಾಟಕ, ಅಂಕಿ ಅಂಶಗಳನ್ನು ನೋಡಿದರೆ, ಎಲ್ಲಾ ಭಾಗಗಳಲ್ಲೂ ಹಿಂದುಳಿದಿದೆ, ವೈದ್ಯ, ರಸ್ತೆ, ವಿದ್ಯಾಭ್ಯಾಸ ಯಾವುದೊಂದು ಸರಿಯಿಲ್ಲ, ಈ ರಿಪೋರ್ಟಿನಲ್ಲಿ ಕೂಡ ಸರಿಯಿಲ್ಲವೆಂದು ತಿಳಿಸಿದ್ದಾರೆ ಎಂದು ಕೆಲವರು ಹೇಳಿದರು. ಒಂದು ವೇಳೆ ಅದು ಸರಿಯೆಂದು ಒಪ್ಪಿಕೊಂಡರೂ, ಅವರು ಅಂಥ ಹೀನಸ್ಥಿತಿಯಲ್ಲಿರುವಾಗ ಅವರ ಸಹಾಯಕ್ಕೆ ನಾವು ಹೋಗಬೇಕಾದದ್ದು ಧರ್ಮ. ಹೈದರಾಬಾದಿನಿಂದ ಮೂರು ಡಿಸ್ಟ್ರಿಕ್ಟುಗಳು ಬರಲಿವೆ. ಅವು ಜಹಗೀರಿಗಳಾಗಿದ್ದುವು. ಈಗ ನಮ್ಮಲ್ಲಿ ಯಳಂದೂರು ಜಹಗೀರಿ, ಶೃಂಗೇರಿ ಜಹಗೀರಿಗಳಿದ್ದಹಾಗೆ. ಆ ಜಹಗೀರ್‌ದಾರರುಗಳು ಜನರ ಕಷ್ಟ ಸುಖಗಳನ್ನು ಕೇಳದೆ ಅವು ಹಿಂದುಳಿದಿವೆ. ರಾಜರುಗಳಿದ್ದವರು ಎಷ್ಟೋ ಮಟ್ಟಿಗೆ ಜನರ ಕಷ್ಟಸುಖಕ್ಕೆ ನೆರವಾದರೂ ಬಂದಂಥ ಹಣವನ್ನು ತೆಗೆದುಕೊಂಡು ತಾವು ಪರದೇಶಗಳಿಗೆ ಹೋಗಿ ಸುಖವಾಗಿದ್ದರು. ಅಂಥ ಪ್ರದೇಶಗಳು ಈಗ ಕರ್ಣಾಟಕದಲ್ಲಿ ವಿಲೀನವಾಗಲಿವೆ. ಆದ್ದರಿಂದ ನ್ಯಾಯವಾಗಿಯೇ ಆ ದೇಶಗಳು ಬಹಳ ಹಿಂದುಳಿದಿವೆ. ಅವುಗಳನ್ನು ನಮ್ಮ ಸಮಕ್ಕೆ ತರುವುದಕ್ಕೆ ಪ್ರಯತ್ನಪಡುವುದು ನಮ್ಮ ಮುಖ್ಯ ಕರ್ತವ್ಯ. ನಮ್ಮ ಸ್ನೇಹಿತರು ಹೇಳಬಹುದು, ಈಗಾಗಲೇ ಮೈಸೂರಿನಲ್ಲಿ 4 ಕೋಟಿ ರೂಪಾಯಿಗಳ ಡಿಫಿಸಿಟ್ ಇದೆ, ಇನ್ನು ಅವರೂ ನಮ್ಮೊಡನೆ ಬಂದು ಸೇರಿದರೆ 5-6 ಕೋಟಿ ಡಿಫಿಸಿಟ್ ಬರುತ್ತದೆ, ನಾವು ಇನ್ನೂ ಹಿಂದೆ ಬೀಳುತ್ತೇವೆಂದು. ಇದಕ್ಕೆ ನಾನು ಹೇಳುವುದು ಇಷ್ಟೆ; ಹೇಗಿದ್ದರೂ ಈ planning period ನಲ್ಲಿ ಡಿಫಿಸಿಟ್ ಎಂಬುದು ತಪ್ಪಿದ್ದಲ್ಲ. ನಮ್ಮ ಬಡ್ಜೆಟ್ಟು ಈ ವರ್ಷ 4 ಕೋಟಿ ಡಿಫಿಸಿಟ್ ಇರುವುದು ಮುಂದಿನ ವರ್ಷ 5 ಕೋಟಿ ಆಗಬಹುದು. ರಾಷ್ಟ್ರೀಕರಣ ಕಾರ್ಯ ತೆಗೆದುಕೊಂಡಾಗ ಹೆಚ್ಚಿಗೆ ಹಣ ಖರ್ಚುಮಾಡಬೇಕಾಗಿ ಬಂದೇ ಬರುತ್ತದೆ. ಡಿಫಿಸಿಟ್ ಆಗುತ್ತದೆಂದು ಹೇಳಿ ಇತರ ಪ್ರಾಂತ್ಯಗಳನ್ನು ಬರಕೂಡದೆಂದು ಹೇಳುವುದು ಸರಿಯಲ್ಲ.

ಅಲ್ಲದೆ, ಬೇರೆಯಾಗಿ ಕರ್ಣಾಟಕದವರೇ ಒಂದು ರಾಜಧಾನಿ ಮಾಡಿಕೊಳ್ಳಬೇಕಾದರೆ 4 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದವರ ಮೂಲಕ ಖರ್ಚು ಮಾಡಬೇಕಾಗಿ ಬರುತ್ತದೆ. ಅದನ್ನು ನಮಗೆ ಕೊಡಿಯೆಂದರೆ ಅವರು ಕೊಡುವುದಕ್ಕೆ ಹಿಂಜರಿಯುವುದಿಲ್ಲ. ಈ ದಿವಸ ಅವರು ನಮ್ಮನ್ನು ಬಿಟ್ಟು ಬೇರೆ ರಾಜಧಾನಿ ಮಾಡಿಕೊಳ್ಳುತ್ತೇವೆಂದು ಹೇಳುತ್ತಿದ್ದಾರೆಯೇ?

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಬಳ್ಳಾರಿಗೆ ಈಗ ಕೊಡುತ್ತಿದ್ದಾರೆ, ನೋಡಿ!

ಶ್ರೀ ಆರ್. ಅನಂತರಾಮನ್.—ನಾವು ಕೇಳಿಲ್ಲ ಅಷ್ಟೆ. ಬಳ್ಳಾರಿಯ ವಿಷಯ ನಮ್ಮ ಮುಂದೆ ಬಂದಾಗಲೂ ಹೀಗೆಯೇ ಕೆಲವರು ಬೇಡ ಎಂದರು, ಕೆಲವರು ಹೊಗಳಿದರು. ಸೇರಿಯಾದ ಮೇಲೂ ಕೆಲವರು ಏಕೆ ಬಂತು ಎಂದು ಹೇಳುತ್ತಿದ್ದಾರ ಇದು ಸರಿಯಲ್ಲ. ಹಣದ ವಿಷಯ ಬಂತೆಂದರೆ ಒಬ್ಬರು ದೂರವಿರಬೇಕು, ಇತರ ವಿಷಯಗಳಲ್ಲಾದರೆ ಹತ್ತಿರ ಇರಬೇಕೆಂದು ಹೇಳುವುದು ಸರಿಯಲ್ಲ. ಅಲ್ಲಿ ಉತ್ಪತ್ತಿ ಸರಿಯಾಗಿಲ್ಲವೆಂದು ಹೇಳಿ ಅವರನ್ನು ದೂರ ಮಾಡಕೂಡದು. ಯಾವುದಾದರೂ ಒಂದು ಡಿಸ್ಟ್ರಿಕ್ಟಿನಲ್ಲಿ ಕ್ಷಾಮ ಬರಬಹುದು. ಕ್ಷಾಮ ಬಂದಾಗ ಹೊಟ್ಟೆ ಬಟ್ಟೆ ಕಟ್ಟಿ ಕಾಪಾಡುವುದು ನಮ್ಮ ಕರ್ತವ್ಯ. ಇಂಥ ವಿಷಯಗಳಲ್ಲಿ ಉದಾರ ಭಾವನೆ ನಮ್ಮಲ್ಲಿ ಬೆಳೆಯಬೇಕು. ಇಷ್ಟುಮಟ್ಟಿಗೆ ಹಣದ ದೃಷ್ಟಿಯನ್ನಿಟ್ಟುಕೊಂಡರೆ ಯಾರೂ ನೆಂಟಸ್ತನ ಮಾಡುವುದಕ್ಕೇ ಆಗುವುದಿಲ್ಲ. ಅಷ್ಟು ಸಂಕುಚಿತ ದೃಷ್ಟಿಯನ್ನಿಟ್ಟುಕೊಳ್ಳಕೂಡದು. ನಮ್ಮ ಅಣ್ಣತಮ್ಮಂದಿರ ಕಷ್ಟ

(ಶ್ರೀ ಆರ್. ಅನಂತರಾಮ್.)

ಸುಖಗಳನ್ನು ನೋಡಬೇಕಾದದ್ದು ನಮ್ಮ ಧರ್ಮವೆಂದು ನಾನು ಹೇಳುತ್ತೇನೆ. ಮೈಸೂರೇತರ ಕರ್ಣಾಟಕದವರು ಮೂರು ಪ್ರಾಂತ್ಯ ಸರ್ಕಾರಗಳ ಕೈಕೆಳಗೆ ಸಿಕ್ಕಿಬಿದ್ದಿದ್ದಾರೆ. ಮದ್ರಾಸಿನಲ್ಲಿ ಕನ್ನಡಿಗರು ಬಹಳ ಕೊನೆಯಲ್ಲಿರುವವರು. ಅವರಿಗೆ ಸಾಕಷ್ಟು ನಿಗಾ ಕೊಟ್ಟಿಲ್ಲ. ಹೋದ ಬಜೆಟ್ ಅಧಿವೇಶನದಲ್ಲಿ ಮಲಬಾರು ಮತ್ತು ಸೌತ್ ಕೆನರಾದವರು ತಾವು ಬಹಳ ಹಿಂದುಳಿದಿದ್ದೇವೆಂದು ಹೇಳಿ ಆ ಸದಸ್ಯರು ಮುಕ್ತಕಂಠದಿಂದ ಕಟುವಾಗಿ ಟೀಕೆ ಮಾಡಿರುವುದನ್ನು ನೋಡಿದ್ದೇವೆ. ಮದರಾಸಿನವರು ತಮಿಳುನಾಡನ್ನು ಅಭಿವೃದ್ಧಿಮಾಡುತ್ತಿದ್ದಾರೆಯೇ ಹೊರತು ಕನ್ನಡ ದೇಶದ ಕಡೆ ನೋಡಿಲ್ಲ. ಅಲ್ಲಿನ ಅಸೆಂಬ್ಲಿಯಲ್ಲಿ ಐದಾರು ಜನರು ಮಾತ್ರ ಸದಸ್ಯರಿದ್ದಾರೆ. 200 ಜನ ಸದಸ್ಯರಿರುವ ಕಡೆ 5-6 ಕನ್ನಡಿಗರಿದ್ದು ತಾನೇ ಏನಾದೀತು ?

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಬಿದರೆ, ಬಿಜಾಪುರದವರು ಮುಂದೆ ನಮ್ಮನ್ನೂ ಅದೇ ರೀತಿ ದೂರುತ್ತಾರೆ.

ಶ್ರೀ ಆರ್. ಅನಂತರಾಮ್.—ದೂರಿದರೆ, ಅವರ ಕಷ್ಟಸುಖಗಳನ್ನು ಹೋಗಲಾಡಿಸುವುದು ನಮ್ಮ ಕರ್ತವ್ಯ. ಮದರಾಸ್ ಸರ್ಕಾರದವರು, ಬೊಂಬಾಯಿ ಸರ್ಕಾರದವರು ಆಗುವುದಿಲ್ಲವೆಂದು ಹೇಳಿದಹಾಗೆ ನಾವು ಹೇಳುವುದಕ್ಕಾಗುವುದಿಲ್ಲ. ಬೊಂಬಾಯಿನ ಶಾಸನ ಸಭೆಯಲ್ಲಿ 10-15 ಜನ ಮಾತ್ರ ಕನ್ನಡಿಗರಿದ್ದಾರೆ. ಐದಾರು ತಿಂಗಳ ಹಿಂದೆ ನಾನು ಅಲ್ಲಿಗೆ ಹೋಗಿದ್ದಾಗ ಅಲ್ಲಿ ಆಧ ಒಂದು ವಿಚಾರ ಹೇಳಿದರು. ಗದಗ್ ಪಟ್ಟಣಕ್ಕೆ ನಲ್ಲಿ ಚರಂಡಿ ವ್ಯವಸ್ಥೆಗೆ ದುಡ್ಡು ಕೊಡಬೇಕೆಂದು ಹೇಳಿ ಅರ್ಧ ಮೊಬಲಗನ್ನು ಗ್ರಾಂಟ್ ರೂಪವಾಗಿಯೂ ಇನ್ನರ್ಧವನ್ನು ಸಾಲವಾಗಿಯೂ ಕೊಡಬೇಕೆಂದು ಸರ್ಕಾರದವರನ್ನು ಕೇಳಿದ್ದಕ್ಕೆ, ಅಲ್ಲಿನ ಮುಖ್ಯಮಂತ್ರಿಗಳು, "ನೀವೆಲ್ಲಾ ಕರ್ಣಾಟಕ ಪ್ರಾಂತ ಮಾಡಿಕೊಂಡು ಹೋಗಬೇಕೆನ್ನುವಾಗ ನಾವೇಕೆ ಕೊಡಬೇಕು" ಎಂದು ಹೇಳಿದರಂತೆ. ಹೀಗೆ ಆ ಕನ್ನಡಿಗರನ್ನು ತುಳಿಯುತ್ತಿದ್ದಾರೆ. ಮಂಗಳೂರು, ಅತ್ತಕಡೆ ಒಂದು ಸೇತುವೆಯನ್ನು ಕೂಡ ಕೊಟ್ಟಿಲ್ಲ. ಅದೇ ಬೊಂಬಾಯಿನ ಹತ್ತಿರದ ಗುಜರಾತನ್ನು ನೋಡಿ. . . .

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—A point of order, Sir. ಬೇರೆ ಸರ್ಕಾರದವರು ತಮ್ಮ ಪ್ರಜೆಗಳ ವಿಷಯದಲ್ಲಿ ಪಕ್ಷಪಾತ ನೀತಿಯನ್ನನುಸರಿಸುತ್ತಿದ್ದಾರೆಂದು ನಾವು ಟೀಕೆಮಾಡುವುದು ಸರಿಯಲ್ಲ.

ಶ್ರೀ ಆರ್. ಅನಂತರಾಮ್.—ನನ್ನ ಅಭಿಪ್ರಾಯ ಹೇಳಿದೆ ಅಷ್ಟೆ.

ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಅಲ್ಲಿನ ಸರ್ಕಾರಗಳು ತಮಗೆ ಸೇರಿರುವ ಕೆಲವು ಭಾಗಗಳನ್ನು develop ಮಾಡಿಲ್ಲವೆಂಬುದು ಒಂದು fact. ಅದನ್ನು ಹೇಳುವುದರಲ್ಲಿ ತಪ್ಪೇನಿಲ್ಲ.

ಶ್ರೀ ಆರ್. ಅನಂತರಾಮ್.—ನನ್ನ ಅಭಿಪ್ರಾಯ ಇಷ್ಟು. ಅವರು ಅಷ್ಟು ನಿರ್ಲಕ್ಷ್ಯಮಾಡಿದ್ದಾರೆ. ಆದ್ದರಿಂದ ನಾವು ತಿಳಿಯಬೇಕು. ನಮ್ಮ ಕನ್ನಡಿಗರು ಹರಿದು ಹಂಚಿಹೋಗಿ ಬಹಳ ದುಸ್ಥಿತಿಯಲ್ಲಿದ್ದಾರೆ. ತಾವು ನೋಡಿದರೆ ಕಣ್ಣೀರು ಬರುತ್ತದೆ. ಅವರನ್ನು ನಮ್ಮೊಡನೆ ಸೇರಿಸಿಕೊಂಡು ಮೇಲಕ್ಕೆತ್ತುವುದು ನಮ್ಮ ಕರ್ತವ್ಯವಲ್ಲವೆ ?

ಶ್ರೀ ಜಿ ಎ. ತಿಮ್ಮಪ್ಪಗೌಡ.—ನಿಮ್ಮನ್ನೇ ಡೆಪ್ಯೂಟ್ ಮಾಡಬೇಕು !

ಶ್ರೀ ಆರ್. ಅನಂತರಾಮ್.—ಡೆಪ್ಯೂಟ್ ಮಾಡಿದರೆ ಸಂತೋಷವೇ. ಆಂಧ್ರದಲ್ಲಿ ಚುನಾವಣೆಗಳಾದಾಗ ಇಲ್ಲಿನ ಕಾಂಗ್ರೆಸ್ಸಿನವರು ಹೋಗಿ ಸಹಾಯ ಮಾಡಲಿಲ್ಲವೆ ? ಹಾಗೆಯೇ ಬೇರೆಯವರಿಗೆ ಕಷ್ಟ ಬಂದಾಗ ನಾವು ಸಹಾಯ ಮಾಡುವುದು ನಮ್ಮ ಕರ್ತವ್ಯ. ನಮ್ಮ ಕನ್ನಡಿಗರೀಗ ದುಸ್ಥಿತಿಯಲ್ಲಿದ್ದಾರೆ. ಅವರಿಗೆ ಸಹಾಯ ಮಾಡಬೇಕೆಂದು ಹೇಳುತ್ತೇನೆ.

ನಮ್ಮ ಸ್ನೇಹಿತರು ಹೇಳಿದ ಒಂದು ವಾದವನ್ನು ಇನ್ನೊಂದು ದೃಷ್ಟಿಯಿಂದ ನೋಡೋಣ. ಕರ್ಣಾಟಕ ದೇಶ ನಮ್ಮೊಡನೆ ಸೇರುವುದಕ್ಕೆ ಅದು ಬಹಳ ಹಿಂದುಳಿದಿದೆಯೆಂದು ಹೇಳಿದ್ದಾರೆ. ಈಗ ಪಾಂಡಿಚೆರಿ ಇಂಡಿಯಾ ದೇಶಕ್ಕೆ ಸೇರಿತು ; ಗೋವಾ ಸೇರುವುದರಲ್ಲಿದೆ. ಇದನ್ನು ಇಂಡಿಯಾ ದೇಶಕ್ಕೆ ಸೇರಿಸಿಕೊಳ್ಳುವ ಸಂದರ್ಭದಲ್ಲಿ ಇಂಡಿಯಾ ಸರ್ಕಾರದವರೇನಾದರೂ ಅವು ಆರ್ಥಿಕವಾಗಿ ಹಿಂದುಳಿದಿವೆಯೇ ಇಲ್ಲವೇ ಎಂದು ನೋಡಿದರೇ ? ನಮ್ಮ ಸಂಸ್ಕೃತಿ ಅವರ ಸಂಸ್ಕೃತಿ ಬೇರೆಯಲ್ಲ, ಅವರೂ ನಮ್ಮ ಜನರು ಎಂಬ ಭಾವನೆಯಿಂದ ಒಂದುಗೂಡಬೇಕೆಂದಿದ್ದೇವೆ. ಗೋವಾದಲ್ಲಿ ಇಂದು ಎಷ್ಟು ಸ್ವತಂತ್ರ ಚಳವಳಿ ನಡೆಯುತ್ತಿದೆ ನೋಡಿ. ಬಹಳ ಆಸೆಯಿಂದ ನಮ್ಮೊಡನೆ ಸೇರಬೇಕೆಂದು ಹೇಳುತ್ತಿದ್ದಾರೆ. ಅವರ ಕಷ್ಟಕ್ಕೆ ನಾವು ಹೋಗುವುದು ನ್ಯಾಯ. ಜವಹರಲಾಲ್‌ರವರು ಈ ಸಮಸ್ಯೆಯನ್ನು 'ಅವರು ಹಿಂದುಳಿದಿದ್ದಾರೆ, ನಾವು ಮುಂದುವರಿದಿದ್ದೇವೆ' ಎಂದು ಸುಮ್ಮನಿರಬೇಕೆಂದು ಹೇಳಿಲ್ಲ. ಗೋವಾ ಪಾಂಡಿಚೆರಿ ಸೇರಿಸಿಕೊಂಡ ಅವರೂ ಸುಖವಾಗಿರುವಂತೆ ಮಾಡಬೇಕಾದದ್ದು ಅವಶ್ಯಕ.

ಅಲ್ಲದೆ, ಯಾವುದೇ ಹೊಸ ಪ್ರದೇಶವನ್ನು ಸೇರಿಸಿಕೊಳ್ಳುವಾಗಲೂ Reaction ಇದ್ದೇ ಇರುತ್ತದೆ. ಸಿವಿಲ್ ಸ್ಟೇಷನ್ನನ್ನು ಸೇರಿಸಿಕೊಳ್ಳುವಾಗಲೂ ಹೀಗೆಯೇ ಇತ್ತು. ಈ ಚಿಕ್ಕ ಭಾಗವನ್ನು ಸೇರಿಸಿಕೊಳ್ಳುವುದಕ್ಕೇ ಸೇರಿಸ ಕೂಡದೆಂದು ಎಷ್ಟು ಪ್ರತಿಕ್ರಿಯೆ ! ಸಿಟಿ ಹಿಂದುಳಿದಿದೆ, ಸಿವಿಲ್ ಸ್ಟೇಷನ್ ಮುಂದುವರಿದಿದೆಯೆಂದು ಹೇಳುತ್ತಿದ್ದರು. ಆಗಲೂ ನಾನು ಹೇಳಿದೆ ; ಸೇರಿಸಿಕೊಳ್ಳುವುದರಲ್ಲಿ ತೊಂದರೆಯೇನಿಲ್ಲ, ಹತ್ತಾರು ವರ್ಷಗಳಾದಮೇಲೆ ಪ್ರತ್ಯೇಕತಾ ಮನೋಭಾವ ಹೊರಟು ಹೋಗುತ್ತದೆ ಎಂದು ಹೇಳಿದೆ. ಅದರಂತೆ ಈಗ ಪ್ರತ್ಯೇಕತೆಯ ಮನೋಭಾವ ಹೋಗಿಲ್ಲವೆ?

ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—ಅವರ ಕಷ್ಟ ಇನ್ನೂ ನೀಗಿಲ್ಲ

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈಗಲೂ ಅಲ್ಲಿ ಒಂದು ಅಡ್ರೆಸ್ ಕೊಡುವುದು ಇಲ್ಲೊಂದು ಅಡ್ರೆಸ್ಸು ಕೊಡುವುದು ಇದ್ದೇ ಇದೆ.

ಶ್ರೀ ಆರ್. ಅನಂತರಾಮ್.—ಅದೂ ಸ್ವಲ್ಪಸ್ವಲ್ಪ ಇದೆ. ಆದರೂ ಆ ಭಿನ್ನ ಮನೋಭಾವ ನಿಧಾನವಾಗಿ ಹೋಗುತ್ತಿರುವುದನ್ನು ಕಾಣಬಹುದು. ಕೆಲವರು ಆಡಳಿತ ದೃಷ್ಟಿಯಿಂದ ಕರ್ಣಾಟಕ ಪ್ರಾಂತ್ಯವನ್ನು ನೋಡಬೇಕೇ ಹೊರತು ಬೇರೆ ದೃಷ್ಟಿಯಿಂದ ನೋಡಕೂಡದೆಂದು ಹೇಳಿದ್ದಾರೆ. ಆದರೆ ನಮ್ಮ ಹಿರಿಯರು ಹೇಳಿರುವುದು, ಒಂದು ಸಂಸ್ಥಾನವನ್ನು ರಚಿಸಬೇಕಾದರೆ, ಆಡಳಿತ ದೃಷ್ಟಿ, ಅಕ್ಕಪಕ್ಕದ ಪ್ರಾಂತ್ಯದೊಡನೆ ಹೊಂದಿಕೊಳ್ಳುವುದು ಮತ್ತು ಭಾಷೆ—ಇವು ಮೂರನ್ನೂ ನೋಡಬೇಕೇ ಹೊರತು ಬರೀ ಆಡಳಿತ ದೃಷ್ಟಿಯಿಂದ ನೋಡುವುದಲ್ಲ—ಬರೀ ಆಡಳಿತ ದೃಷ್ಟಿಯಿಂದ ನೋಡಿದರೆ ಮೈಸೂರನ್ನೇ ಎರಡು ಭಾಗವಾಗಿ ಮಾಡಬೇಕೆಂದೂ ಹೇಳಬಹುದು. ಅದಕ್ಕೇ ನಮ್ಮ ಮುಖಂಡರು, ಆಡಳಿತ ದೃಷ್ಟಿಯ ಜೊತೆಗೆ contiguity ಮತ್ತು

ಭಾಷೆಯನ್ನು ನೋಡಬೇಕೆಂದು ಹೇಳಿರುವುದು. ಉದಾಹರಣೆಗೆ ಮಂಗಳೂರಿದೆ ; ಮದ್ರಾಸಿನವರು ಅದನ್ನು ಆಳುವುದು ಬಹಳ ಕಷ್ಟ. ಹಾಗೆಯೇ ಮಡಕಶಿರ, ಹೊಸೂರು. ಇಂಥ ಸಂದರ್ಭದಲ್ಲಿ ಮಗ್ಗಲು ಪ್ರಾಂತ್ಯಕ್ಕೆ ಸೇರಿಸಿದರೆ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದಲೇ ಇಂಡಿಯಾ ಸರ್ಕಾರದವರು ಕಮಿಷನನ್ನು ರಚಿಸಬೇಕಾದರೆ ಈ ಮೂರು ಅಂಶಗಳನ್ನೂ ಸೇರಿಸಿ ಕೊಟ್ಟಿದ್ದಾರೆ. ಆದ್ದರಿಂದ ನಾವು ಇಲ್ಲಿ ಮಾತನಾಡುವಾಗಲೂ ಈ ಮೂರು ಅಂಶಗಳನ್ನೂ ಗಮನದಲ್ಲಿಟ್ಟುಕೊಂಡು ಮಾತನಾಡಬೇಕು.

ಆ ಮೇಲೆ ಇನ್ನೊಂದು ವಿಷಯವನ್ನು ನಮ್ಮ ಮಾನ್ಯ ಸ್ನೇಹಿತರು ಹೇಳಿದ್ದಾರೆ—ಅದೇನೆಂದರೆ ಅವರು ಬಹಳ ಹಿಂದುಳಿದಿದ್ದಾರೆ—ಎಂದು ಆದರೆ ವಿಚಾರಗಳನ್ನು ಒಳಹೊಕ್ಕು ನೋಡುವುದಾದರೆ ಅವರು ನಮಗಿಂತಲೂ ಅನೇಕ ವಿಚಾರಗಳಲ್ಲಿ ಮುಂದುವರಿದಿದ್ದಾರೆಂದು ಧಾರಾಳವಾಗಿ ಹೇಳಬಹುದು. ಆ ನಮ್ಮ ಕನ್ನಡ ಬಂಧುಗಳೆಲ್ಲರೂ ಬಹಳ ಎಂಟರ್‌ಪ್ರೈಸಿಂಗ್ ಆಗಿದ್ದಾರೆ. ಆದರೆ ಅವರ ನಾಡಿನಲ್ಲಿ ನಮ್ಮ ಹಾಗೆ ಈ ವಿದ್ಯುಚ್ಛಕ್ತಿಯನ್ನು ತಯಾರಿಸಲು ಅನುಕೂಲವಿಲ್ಲದಿದ್ದಾಗ್ಯೂ ಅಲ್ಲಿನ ಜನಗಳೆಲ್ಲಾ ಒಂದಾಗಿ ಸೇರಿಕೊಂಡು ಒಂದು ಕಂಪನಿ ಮಾಡಿಕೊಂಡು ಅಲ್ಲಿನ ದೊಡ್ಡ ದೊಡ್ಡ ಸ್ಥಳಗಳಿಗೆಲ್ಲಾ ಈ ದಿವಸ ವಿದ್ಯುಚ್ಛಕ್ತಿಯ ಬೆಳಕನ್ನು ಒದಗಿಸುತ್ತಿದ್ದಾರೆ. ಹೀಗೆ ಕೆಲವು ವಿಚಾರಗಳಲ್ಲಿ ನಾವು ಹಿಂದುಳಿದಿದ್ದರೆ ಕೆಲವು ವಿಚಾರಗಳಲ್ಲಿ ಅವರೂ ಹಿಂದುಳಿದಿರಬಹುದು. ಅಂತೂ ಯಾರೊಬ್ಬರೂ ಪರಿಪೂರ್ಣತೆಯನ್ನು ಮುಟ್ಟಿಲ್ಲ. ಈ ದಿವಸ ಅವರ ಸೀಮೆಯಲ್ಲಿ ಒಳ್ಳೆ ರಸ್ತೆಗಳಲ್ಲಿ, ಬಹಳ ಧೂಳು ತುಂಬಿದ ರಸ್ತೆಗಳಿರುತ್ತವೆಂದು ಹೇಳಿದರು. ಆದರೆ ಅಲ್ಲಿಯ ಜನರು ಸರ್ಕಾರದ ನೆರವನ್ನೇ ಕೇಳದೆ ಅವರೇ ಆ ಕೆಲಸಗಳನ್ನೆಲ್ಲಾ ಮಾಡಿಕೊಂಡು ಬರುತ್ತಿದ್ದಾರೆ. ಹಾಗೆ ಆ ಜನರಲ್ಲಿ ಕಂಡುಬರತಕ್ಕಂಥ ಒಂದು ಎಂಟರ್‌ಪ್ರೈಸಿಂಗ್ ಸ್ಪಿರಿಟ್ ನಮ್ಮಲ್ಲಿರತಕ್ಕಂಥ ನಮ್ಮ ಜನರಲ್ಲಿ ಕಂಡುಬರುತ್ತಿಲ್ಲ. ಈ ದಿವಸ ಆ ಉತ್ತರ ದೇಶದ ಜನರಲ್ಲಿ ಅಂಥ ಒಂದು ಎಂಟರ್‌ಪ್ರೈಸಿಂಗ್ ಸ್ಪಿರಿಟ್ ಇದೆ. ಈ ದಿವಸ ಅಲ್ಲಿ ಎಷ್ಟೊಂದು ಈ ಕೋಆಪರೇಟೀವ್ ಸೊಸೈಟಿಗಳವೆ ! ಅಲ್ಲಿಯ ಜನರೇ ಸೇರಿಕೊಂಡು ಎಂಥಾ ಒಂದು ದೊಡ್ಡ ವಿಶ್ವವಿದ್ಯಾನಿಲಯನ್ನು ಸ್ಥಾಪಿಸಿದ್ದಾರೆಂಬುದನ್ನು ನೋಡಿದರೆ ನಮ್ಮಗೆಲ್ಲಾ ಬಹಳ ಆಶ್ಚರ್ಯವಾಗುತ್ತದೆ. ನಾವೀದಿವಸ ನಮ್ಮಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾಗ್ಯೂ ನಮ್ಮಲ್ಲಿ ಅಂಥ ಒಂದು ದೊಡ್ಡ ಯೂನಿವರ್ಸಿಟಿಯಿಲ್ಲ. ಹೀಗೆ ಅಲ್ಲಿನ ಜನರಲ್ಲಿ ಒಂದು ಉಮೇದು ಬಹಳ ಶ್ಲಾಘನೀಯವಾದುದಾಗಿದೆ. ಹೀಗೆ ಆ ದೇಶದ ಜನರು ಇಲ್ಲಿಯತನಕ ಆ ಖಾಸಗೀ ಜನರ ನೆರವಿನಿಂದಲೇ ಮುಂದುವರಿಯುತ್ತಾ ಬಂದಿದ್ದಾರೆ. ಅದಕ್ಕಾಗಿ ಅವರನ್ನು ಹೊಗಳಬೇಕಾಗಿದೆ. ಅಲ್ಲಿ ನಮ್ಮ ದೇಶದ ಕಾಡುಗಳಿಗಿಂತಲೂ ಬಹಳ ದೊಡ್ಡದಾದ ಕಾಡುಗಳಿರುತ್ತವೆ. ಆದರೆ ಅವರು ಅವುಗಳನ್ನೆಲ್ಲಾ ಸರಿಯಾಗಿ ಉಪಯೋಗಿಸಿಕೊಳ್ಳುತ್ತಿಲ್ಲ. ಆದುದರಿಂದ ಆ ಪ್ರಾಂತ್ಯಗಳೆಲ್ಲಾ ಸೇರಿಕೊಂಡು ಒಂದು ಕರ್ಣಾಟಕ ಪ್ರಾಂತ್ಯ ನಿರ್ಮಾಣವಾದರೆ ಅದರಿಂದ ದೇಶಾಭಿವೃದ್ಧಿಗೆ ಬಹಳ ಸಹಾಯವಾಗುತ್ತದೆ. ಸುಮಾರು 200 ಮೈಲಿಗಿಂತಲೂ ಹೆಚ್ಚಾಗಿ ಆ ಸಮುದ್ರತೀರ ಈ ಕರ್ಣಾಟಕಕ್ಕೆ ಸೇರುತ್ತದೆ. ಈ ಹಿಂದೆ ಆ ಭಟ್ಕಲ್ ಬಂದರನ್ನು ನಮ್ಮ ಮೈಸೂರಿಗೆ ಸೇರಿಸಿಕೊಳ್ಳಲು ನಮ್ಮವರೆಲ್ಲಾ ಎಷ್ಟು ಕಷ್ಟಪಟ್ಟರೂ ಅದು ಸಾಧ್ಯವಾಗಲಿಲ್ಲ. ಈಗ ಅಂಥ ಕ್ಲಿಷ್ಟಕರವಾಗಿದ್ದಂಥ ಸಮಸ್ಯೆಯೆಲ್ಲಾ ಮಾಯವಾಗಿ ಆ ಪ್ರದೇಶಗಳೆಲ್ಲವೂ ಏನೊಂದೂ ಕಷ್ಟವಿಲ್ಲದಂಥ ರೀತಿಯಲ್ಲಿ ತಾವೇತಾವಾಗಿ ಬಂದು ಈಗ ಮೈಸೂರಿಗೆ ಸೇರತಕ್ಕಂಥ ಸುಸಮಯ ಒದಗಿದೆ. ಈಗ ತಾನೆ ಮಾತನಾಡಿದಂಥ ನನ್ನ ಸ್ನೇಹಿತರು ಆ ಪ್ರದೇಶಗಳಲ್ಲಿ ಅಂಥ ಅನುಕೂಲತೆಗಳೇನಿವೆಯೆಂದು ಕೇಳಿದರು. ಈ ದಿವಸ ಮಂಗಳೂರು ಮತ್ತು ಮಲ್ಪೆ ಈ ಸ್ಥಳಗಳಲ್ಲಿ ಎಂಥ ಫಿಷಿಂಗ್ ಕೆಲಸ ನಡೆಯುತ್ತಿದೆ! ಅಲ್ಲಿ ಸಿಕ್ಕುವ ಮೀನುಗಳನ್ನು ಅವರು ಇಡೀ ಕರ್ಣಾಟಕಕ್ಕೇ ಸರಬರಾಯಿ ಮಾಡಬಹುದು. ಮೈಸೂರಿಗೆ ಆಹಾರದ ಅಭಾವವಿದ್ದಾಗ ಈ ಸ್ಥಳಗಳಿಂದ ಬೇಕಾದಷ್ಟು ಈ ಮೀನು ಸರಬರಾಯಿ ಆಯಿತು. ಹೀಗೆಲ್ಲಾ ಬಹಳ ಅನುಕೂಲವಿರುತ್ತವೆ. ಆದರೆ ಇಂಥ ಎಷ್ಟೋ ವಿಚಾರಗಳನ್ನು ಶೇಷಾದ್ರಿ ಸಮಿತಿಯವರು ವಿಮರ್ಶೆ ಮಾಡಲು ಪ್ರಯತ್ನಪಟ್ಟಿಲ್ಲ. ಕರ್ಣಾಟಕ ಪ್ರಾಂತ್ಯ ನಿರ್ಮಾಣವಾಗುವುದರಿಂದ ಹೀಗೆಲ್ಲಾ ಎಷ್ಟು ಅನುಕೂಲವಾಗುತ್ತದೆ ಎನ್ನುವುದನ್ನು ನಾವೆಲ್ಲರೂ ಚನ್ನಾಗಿ ಪರ್ಯಾಲೋಚನೆ ಮಾಡಿ ಮಾತನಾಡಬೇಕಾಗಿದೆ.

ಇನ್ನು ಈ ಕರ್ಣಾಟಕ ಪ್ರಾಂತ್ಯ ನಿರ್ಮಾಣದ ಬಗ್ಗೆ ಕೊನೆಯದಾಗಿ ನಾನು ಇನ್ನೊಂದು ಮುಖ್ಯ ವಿಚಾರವನ್ನು ತಿಳಿಸಬೇಕಾಗಿದೆ. ಕನ್ನಡ ಭಾಷೆಯನ್ನಾಡತಕ್ಕಂಥ ಭಾಗಗಳನ್ನೆಲ್ಲಾ ಒಟ್ಟುಗೂಡಿಸಿದರೆ ಬಹಳ ಸೊಗಸಾದಂಥ ಮತ್ತು ಸರ್ವಾಂಗ ಸುಂದರವಾದಂಥ ರಾಜ್ಯ ನಿರ್ಮಾಣವಾಗುತ್ತದೆ. 200 ಮೈಲಿಗೂ ಮೇಲ್ಪಟ್ಟಂಥ ಸಮುದ್ರತೀರದಿಂದ ಹಿಡಿದು ಇಡೀ ಮಲೆನಾಡೆಲ್ಲ ಈ ಕರ್ಣಾಟಕಕ್ಕೆ ಸೇರುತ್ತದೆ. ಕರ್ಣಾಟಕ ಪ್ರಾಂತ್ಯ ನಿರ್ಮಾಣವಾದರೆ ದೇಶದ ಕಲ್ಯಾಣವನ್ನು ಸಾಧಿಸಿದಂತೆಯೆ ಎಂದು ನಾವೆಲ್ಲರೂ ಭಾವಿಸಲು ಯಾವ ಸಂಶಯವೂ ಇಲ್ಲ. ಈ ದೃಷ್ಟಿಯಿಂದ ನಾವು ಈ ಪ್ರಶ್ನೆಯನ್ನು ಪರಿಶೀಲನೆ ಮಾಡಬೇಕಾದದ್ದು ಯುಕ್ತವಾಗಿರುತ್ತದೆಂದು ಭಾವಿಸಿದ್ದೇನೆ. ಇನ್ನು ಕೆಲವರು ಎರಡು ಕರ್ಣಾಟಕ ಪ್ರಾಂತ್ಯಗಳು ಬೇಕಾಗಿದ್ದರೆ ರಚನೆಯಾಗಲಿ ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ ಎಂದು ಹೇಳಿದರು. ಆದರೆ ಹಾಗೆ ಮಾಡುವುದು ಸರಿಯಾದುದಲ್ಲ. ಒಂದೇ ಒಂದು ಕರ್ಣಾಟಕ ಪ್ರಾಂತ್ಯನಿರ್ಮಾಣದಿಂದ ದೇಶಕ್ಕೆ ಬಹಳ ಅನುಕೂಲವಿದೆ. ಎರಡಾದರೆ ಅದರಿಂದ ಅನುಕೂಲಕ್ಕೆ ಪ್ರತಿಯಾಗಿ ಅನಾನುಕೂಲವಾಗುತ್ತದೆ. 2 ಕೋಟಿ ಪ್ರಜಾಸಂಖ್ಯೆಯಾದಾಗ್ಯೂ ಅದೇನೂ ಅಷ್ಟೊಂದು ದೊಡ್ಡ ರಾಜ್ಯವಾಗುವುದಿಲ್ಲ. 53 ಸಾವಿರ ಚದರ ಮೈಲಿ ವಿಸ್ತೀರ್ಣವುಳ್ಳ ದೇಶವೇನೂ ಅಂಥ ಅತಿ ದೊಡ್ಡ ದೇಶವಾಗುವುದಿಲ್ಲ. ಈ ದಿವಸ ಪ್ರಾಂತ್ಯಗಳಲ್ಲಿ ಸೇರಿಕೊಂಡಿರುವಂಥ ಕನ್ನಡಿಗರೆಲ್ಲರೂ ನಮ್ಮ ಅಣ್ಣತಮ್ಮಂದಿರುಗಳು ಮತ್ತು ನಮ್ಮ ಸ್ನೇಹಿತರುಗಳು. ಅವರ ಕಷ್ಟ ಸುಖಗಳಲ್ಲಿ ನಾವೂ ಸಹ ಭಾಗಿಗಳಾಗಬೇಕಾದದ್ದು ನ್ಯಾಯವಾಗಿದೆ. ಏನೋ ದುರದೃಷ್ಟವಶಾತ್ ಅವರು ಹಿಂದೆ ನಮ್ಮೆಲ್ಲರನ್ನು ತೊರೆದು ಬಿಟ್ಟು ನಮ್ಮನ್ನು ಅಗಲಬೇಕಾಗಿ ಬಂತು. ಅನಿವಾರ್ಯದಿಂದ ಅಗಲಿ ಹೋದರು. ಈ ದಿವಸ ಅವರು 'ನಾವೂ ನಿಮ್ಮೊಡನೆ ಬಾಳಬೇಕೆಂದು ಆಸೆಪಡುತ್ತಿದ್ದೇವೆ' ಎಂದು ಕೇಳುತ್ತಿರುವಾಗ ನಾವೇಕೆ ಅದಕ್ಕೆ ಅಡ್ಡಿಪಡಿಸಬೇಕು ? ಈಗಾಗಲೇ ನಾವು ಈ ನಮ್ಮ ಬೆಂಗಳೂರಿಗೆ ಪಕ್ಕದಲ್ಲಿದ್ದಂಥ ಸಿವಿಲ್ ಸ್ಟೇಷನ್ನನ್ನು ಬ್ರಿಟಿಷರು ಬಿಟ್ಟು ಹೋದ ಕೂಡಲೆ ನಮ್ಮ ದೇಶಕ್ಕೆ ಸೇರಿಸಿಕೊಳ್ಳಲಿಲ್ಲವೇ ! ಅದರಂತೆಯೇ ಈ ದಿವಸ ಆ ನಮ್ಮ

(ಶ್ರೀ ಆರ್. ಅನಂತರಾಮನ್.)

ಬಂಧುಗಳು ಈ ದಿವಸ ನಮ್ಮೊಡನೆ ಬಂದು ಸೇರಿಕೊಳ್ಳುತ್ತೇವೆಂದರೆ ನಾವು ಬೇಡ ಎನ್ನುವುದು ಸರಿಯಾದದ್ದಲ್ಲ. ಎಂದೇ ಆಗಲಿ ಅವರೂ ನಾವೂ ಒಂದಾಗಿ ಬಾಳಲೇಬೇಕು. ಅದು ಅನಿವಾರ್ಯ. ಈ ಹಿಂದೆಯೇ ವಲ್ಲಭಭಾಯಿ ಪಟೇಲ್‌ರವರು ಈ ರಾಜ್ಯಗಳನ್ನೆಲ್ಲಾ ಈ ಭಾಷಾವಾರು ಆಧಾರದ ಮೇಲೆ ಒಂದರಲ್ಲೊಂದನ್ನು ಸೇರಿಸಿಬಿಟ್ಟಿದ್ದರೆ ಈ ದಿವಸ ನಮ್ಮ ಮುಂದೆ ಈ ಪ್ರಶ್ನೆ ಬರಲು ಅವಕಾಶವೇ ಇರುತ್ತಿರಲಿಲ್ಲ. ನಮಗೆಲ್ಲಾ ಈ ಕಷ್ಟವೇ ತಪ್ಪಿಹೋಗುತ್ತಿತ್ತು. ಆದಕಾರಣ ತಾವೆಲ್ಲರೂ ಈ ಅಖಂಡ ಕರ್ನಾಟಕ ಪ್ರಾಂತ್ಯನಿರ್ಮಾಣಕ್ಕೆ ಬೆಂಬಲ ನೀಡಿ ಸರ್ವರೂ ಇದಕ್ಕೆ ತಮ್ಮ ಸಮ್ಮತಿಯನ್ನು ಸೂಚಿಸಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—The House will now rise for lunch and meet at 3-50.

The House rose for Lunch at Twenty-two Minutes past Three of the Clock and met again at Fifty-five Minutes past Three of the Clock.

[MR. SPEAKER in the Chair.]

*ಶ್ರೀ ಎಲ್. ಸಿದ್ದಪ್ಪ (ಚನ್ನಗಿರಿ).—ಮಾನ್ಯ ಅಧ್ಯಕ್ಷರೇ, ಸ್ವಾಮಿ; ಶ್ರೀ ಶೇಷಾದ್ರಿ ಸಮಿತಿಯವರು ಸರ್ಕಾರಕ್ಕೆ ಒಪ್ಪಿಸಿರುವಂಥ ಈ ಒಂದು ವರದಿಯ ಬಗ್ಗೆ ಇಲ್ಲಿಗೆ 4-5 ದಿವಸಗಳಿಂದಲೂ ಬಹಳವಾಗಿ ಚರ್ಚೆ ನಡೆಯುತ್ತಿದೆ; ಈ ಸಂಬಂಧದಲ್ಲಿ ಅನೇ ಮಾನ್ಯಸದಸ್ಯರುಗಳು ಮಾತನಾಡುತ್ತ ಕರ್ನಾಟಕಕದ ಪೂರ್ವ ಇತಿಹಾಸವನ್ನೂ ಮತ್ತು ಅವರ ಹಿಂದಿನ ವೈಭವ ಇತ್ಯಾದಿ ಅನೇಕ ವಿಷಯಗಳನ್ನೂ ಈಗಾಗಲೇ ಪ್ರಸ್ತಾಪಮಾಡಿರುವುದರಿಂದ ನಾನೀಗ ಆ ವಿಷಯಗಳಿಗೆಲ್ಲಾ ಕೈಹಾಕುವುದಿಲ್ಲ. ಹಿಂದಿನ ಅಖಂಡ ಕರ್ನಾಟಕ ಪ್ರಾಂತ್ಯ ಹೇಗೆ ಮತ್ತು ಯಾವ ಕಾರಣಗಳಿಂದ ಒಡೆದು ಈ ದಿವಸ ಬೇರೆ ಬೇರೆ ಎರಡು ಮೂರು ಆಡಳಿತಕ್ಕೆ ಒಳಗಾಯಿತು ಎನ್ನುವ ವಿಚಾರವನ್ನು ಕೂಡ ಈಗಾಗಲೇ ಅನೇಕ ಮಾನ್ಯಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಆದರೆ ಈಗ ಮಾತನಾಡಿರತಕ್ಕ ಸದಸ್ಯರುಗಳಲ್ಲಿ ಕೆಲವರು ರಾಜ್ಯಗಳ ಪುನರ್ವಿಂಗಡಣೆಗೆ ವಿರೋಧವಾಗಿ ಮಾತನಾಡಿದ್ದಾರೆ. ಹಾಗೆ ಅವರು ಈ ಪ್ರಶ್ನೆಯನ್ನು ವಿರೋಧ ಮಾಡಲು ಅವಕಾಶವಿಲ್ಲವೆಂಬುದನ್ನು ಸೂಚಿಸಲು ಕೆಲವು ಅಂಶಗಳನ್ನು ವಿಮರ್ಶೆಮಾಡಬೇಕೆಂಬುದೇ ನನ್ನ ಮುಖ್ಯ ಆಸೆ. ಅದಕ್ಕಾಗಿ ನಾನೀಗ ನಾಲ್ಕು ಮಾತುಗಳನ್ನಾಡಲು ಇಷ್ಟಪಟ್ಟಿದ್ದೇನೆ. ಈಗ ಮಾತನಾಡಿರತಕ್ಕ ಅನೇಕ ಸದಸ್ಯರಲ್ಲಿ ಕೆಲವರು "ಈ ನಮ್ಮ ಮೈಸೂರೇತರ ಕರ್ನಾಟಕದಲ್ಲಿರುವ ಕನ್ನಡ ಭಾಗಗಳು ಎಲ್ಲಾ ವಿಧದಲ್ಲಿಯೂ ಬಹಳ ಹಿಂದುಳಿದಿವೆ. ಆದಕಾರಣ ಇನ್ನು ಮುಂದಕ್ಕೆ ಈ ಮೈಸೂರು ದೇಶದ ಏಳಿಗೆಗಾಗಿ ಏನೇನು ಅನುಕೂಲತೆಗಳನ್ನು ಮಾಡಬೇಕಾಗಿದೆಯೋ ಅಂಥ ಪ್ರಯತ್ನಗಳನ್ನೆಲ್ಲಾ ನಾವು ಈಗ ಬದಿಗಿಟ್ಟು ನಾವು ನಮ್ಮ ದೇಶದ ಹಣವನ್ನು ಇನ್ನುಮುಂದೆ ನಮ್ಮ ಮೈಸೂರಿನೊಡನೆ ಸೇರತಕ್ಕಂಥ ಈ ಹಿಂದುಳಿದ ಭಾಗಗಳ ಅಭಿವೃದ್ಧಿಗಾಗಿ ಖರ್ಚುಮಾಡಬೇಕಾಗಿ ಬರುತ್ತದೆ" ಎಂದು ಹೇಳಿದ್ದಾರೆ. ಈ ಹಿಂದೆ ಆಂಧ್ರ ಪ್ರಾಂತ್ಯ ನಿರ್ಮಾಣವಾಗತಕ್ಕ ಕಾಲದಲ್ಲಿ ಇದೇ ಸಭೆಯ ಮುಂದೆ ಚರ್ಚೆಗಾಗಿ ಬಂದಿದ್ದ ಆಂಧ್ರ ಮಸೂದೆಯ ಮೇಲೆ ಮಾತನಾಡುವಾಗ ನಾವೆಲ್ಲರೂ ಆ ಮಸೂದೆಗೆ ನಮ್ಮ ಸ್ವಾಗತವನ್ನು ನೀಡುತ್ತ ಹೀಗೆ ರಾಜ್ಯಗಳು ಪುನರ್ವಿಂಗಡಣೆಯಾಗತಕ್ಕ ಕಾಲದಲ್ಲಿ ನಾವು ಈ ಪ್ರಶ್ನೆಯನ್ನು ಒಂದು ಲಾಭದ ದೃಷ್ಟಿಯಿಂದ ನೋಡಬಾರದೆಂದು ಹೇಳಿದ್ದೇವೆ. ನಾನು ಆ ದಿವಸ ಆ ಚರ್ಚೆಯಲ್ಲಿ ಭಾಗವಹಿಸಿದ್ದಾಗಲೂ ಕೂಡ ಏನು ಹೇಳಿದ್ದೆನೋ ಅದನ್ನೇ ನಾನು ಈಗ ಈ ಸಂದರ್ಭದಲ್ಲಿಯೂ ಹೇಳುತ್ತಿದ್ದೇನೆ. ಈ ದಿವಸ ಕಾರಣಾಂತರಗಳಿಂದ ಆ ಕೇಂದ್ರ ಸರ್ಕಾರದವರು ಒಂದು ಹೈಪವರ್ ಕಮಿಷನ್ನನ್ನು ನೇಮಕಮಾಡಿದ್ದಾರೆ. ಆ ಸಮಿತಿಯವರು ಸರ್ಕಾರಕ್ಕೆ ಒಪ್ಪಿಸತಕ್ಕಂಥ ವರದಿಯನ್ನು ನಾವೀಗ ನಿರೀಕ್ಷಣೆ ಮಾಡುತ್ತಿದ್ದೇವೆ. ಈಗ ನಾವು ಉದಾಹರಣೆಗೆ ಆ ಬೊಂಬಾಯಿ ಪ್ರಾಂತ್ಯವನ್ನು ತೆಗೆದುಕೊಳ್ಳೋಣ. ಈಗತಾನೆ ಮಾತನಾಡಿದ ಶ್ರೀ ಆರ್. ಅನಂತರಾಮನ್‌ರವರು ಬೊಂಬಾಯಿ ಪ್ರಾಂತ್ಯದಲ್ಲಿ ಸೇರಿರತಕ್ಕಂಥ ಮಹಾರಾಷ್ಟ್ರರೆಲ್ಲರೂ ಮಹಾರಾಷ್ಟ್ರ ಪ್ರಾಂತ್ಯ ನಿರ್ಮಾಣವಾಗಲೇಬೇಕೆಂದು ಏಕಕಂಠದಿಂದ ಕೇಳುತ್ತಿದ್ದಾರೆಂದು ಹೇಳಿದರು. ಹಾಗೆ ಅಲ್ಲಿ ಮರಾಠೆ ಭಾಷೆಯನ್ನಾಡತಕ್ಕಂಥ ಪ್ರದೇಶಗಳೆಲ್ಲಾ ಒಟ್ಟಾಗಿ ಸೇರಿಕೊಂಡು ಅಲ್ಲಿ ಮಹಾರಾಷ್ಟ್ರ ಪ್ರಾಂತ್ಯ ನಿರ್ಮಾಣವಾದ ಮೇಲೆ ಆ ಪಕ್ಕದಲ್ಲಿದ್ದ ಉಳಿಯುವಂಥ ಅಂದರೆ ಆ ಮಹಾರಾಷ್ಟ್ರ ಪ್ರಾಂತ್ಯಕ್ಕೂ ಮತ್ತು ಈ ನಮ್ಮ ಮೈಸೂರಿಗೂ ಮಧ್ಯೆ ಉಳಿಯತಕ್ಕಂಥ ನಾಲ್ಕು ಕನ್ನಡ ಮಾತನಾಡತಕ್ಕಂಥ ಜಿಲ್ಲೆಗಳ ಆಡಳಿತದ ವ್ಯವಸ್ಥೆ ಹೇಗಾಗಬೇಕೆಂಬ ಪ್ರಶ್ನೆ ತಾನೇ ತಾನಾಗಿ ಉದ್ಭವಿಸುತ್ತದೆ. ಹಾಗೆ ಉದ್ಭವಿಸುವುದು ನ್ಯಾಯವಾಗಿಯೂ ಇದೆ. ಹೀಗೆ ಸಂದರ್ಭಗಳೊದಗಿದಾಗ ಅವರು ನಮ್ಮ ಮೈಸೂರಿನೊಡನೆ ಸೇರಲೇಬೇಕಾಗುತ್ತದೆ. ಅದು ವಿನಾ ಬೇರೆ ಮಾರ್ಗವೇ ಇಲ್ಲ. ಪರಿಸ್ಥಿತಿ ಹೀಗಿರುವಾಗ ನಾವು 'ನಮ್ಮದು ಮೊದಲೇ ಡಿಫಿಸಿಟ್ ಬಡ್ಜೆಟ್ಟಿನ ದೇಶ, ನಮ್ಮ ಈ ಡಿಫಿಸಿಟ್ ಇವುಗಳ ವಿಲೀನೀಕರಣದಿಂದ ಇನ್ನೂ ಜಾಸ್ತಿ ಆಗುತ್ತದೆ; ಇದರಿಂದ ನಮ್ಮ ಅನುಕೂಲತೆಗಳು ನಮಗೆ ಕಡಮೆಯಾಗುತ್ತವೆ' ಎಂದು ಹೇಳುವುದಕ್ಕೆ ಅವಕಾಶವೇ ಇಲ್ಲ! ಹಾಗೆ ಹೇಳತಕ್ಕದ್ದು ನ್ಯಾಯವಾದದ್ದೂ ಅಲ್ಲ. ಕಾರಣವೇನೆಂದರೆ ನಮಗೆ 1947 ನೆಯ ಇಸವಿ ಆಗಸ್ಟ್ 15 ರಂದು ಸ್ವಾತಂತ್ರ್ಯ ಬಂದಾಗ ನಮ್ಮ ದೇಶದ ನಾಯಕರಾಗಿರುವಂಥ ನೆಹರೂ ಅವರು ಇಡೀ ದೇಶದ ಜನತೆಗೆ ಸಂದೇಶ ಕೊಡುವಂಥ ವೇಳೆಯಲ್ಲಿ ಅವರು ಭಾಷಣಮಾಡುತ್ತ "ನಮಗಿಂದು ಸ್ವಾತಂತ್ರ್ಯ ಲಭಿಸಿದೆ, ದೇಶಕ್ಕೆ ಸ್ವಾತಂತ್ರ್ಯ ಬಂದಿದೆ. ನಾವುಗಳೆಲ್ಲರೂ ಇಡೀ ಭರತಖಂಡದ 36 ಕೋಟಿ ಜನರ ಶ್ರೇಯಸ್ಸಿಗಾಗಿ ದುಡಿಯಬೇಕಾಗಿರುತ್ತದೆ" ಎಂದು ಸಾರಿದ್ದಾರೆ. ಹಾಗೆ ಅವರು ಇಡೀ ಭರತಖಂಡದಲ್ಲಿರತಕ್ಕಂಥ ಎಲ್ಲಾ ಜನರ ದರ್ಜೆ, ಜೀವನದ ಮಟ್ಟ, ಇತ್ಯಾದಿಗಳೆಲ್ಲಾ ಮೇಲ್ಪಟ್ಟಕ್ಕೆ ತರಬೇಕೆಂದು ಹೇಳುತ್ತಿರುವಾಗ ನಾವಿಲ್ಲಿ ಈ ದಿವಸ ಕುಳಿತುಕೊಂಡು ನಮ್ಮ ಮೈಸೂರಿಗೆ ನಮ್ಮ ಅಕ್ಕಪಕ್ಕದ ಪ್ರಾಂತ್ಯಗಳ ಕನ್ನಡಿಗರು ಸೇರಿದರೆ ಅದರಿಂದ ನಮಗೆ ಸ್ವಲ್ಪ ತೊಂದರೆಯಾಗುತ್ತದೆ, ಅದರಿಂದ ನಮ್ಮ ಬಡ್ಜೆಟ್ ಮತ್ತಷ್ಟು ಡಿಫಿಸಿಟ್ ಆಗುತ್ತದೆ, ಎಂದು ಹೇಳುವ ಭಾವನೆ ಜನರಲ್ಲಿ ಬರಬಾರದು ; ಅದಕ್ಕೆ ಅವಕಾಶವೇ ಇಲ್ಲ. ಆದರೆ ಈವರೆಗೆ ಮಾತನಾಡಿರತಕ್ಕಂಥ ಮಾನ್ಯ

ಸದಸ್ಯರ ಪೈಕಿ ಒಬ್ಬೊಬ್ಬರು ಹೊರಗಿನ ಕನ್ನಡ ಪ್ರದೇಶಗಳ ಬಗ್ಗೆ ಮಾತನಾಡುತ್ತ ಅಲ್ಲಿರತಕ್ಕವರೆಲ್ಲರೂ ಕೇವಲ ಮಣ್ಣನ್ನು ತಿನ್ನುತ್ತಿದ್ದ ಹಾಗೂ, ಈ ಮೈಸೂರಿನಲ್ಲಿರತಕ್ಕವರೆಲ್ಲಾ ಪೂರ್ತಿಯಾಗಿ ಅಮೃತವನ್ನೇ ಸೇವಿಸುತ್ತಿದ್ದ ಹಾಗೂ ಮಾತನಾಡಿ ಆ ಪ್ರದೇಶಗಳೆಲ್ಲಾ ಅಷ್ಟೊಂದು ಹಿಂದೆ ಬಿದ್ದಿರುತ್ತವೆಯೇನೋ ಎನ್ನುವ ಹಾಗೆ ಮಾತನಾಡಿದ್ದಾರೆ. ಆದರೆ ಇರತಕ್ಕಂಥ ವಾಸ್ತವಾಂಶಗಳನ್ನು ನೋಡುವುದಾದರೆ ಅಲ್ಲಿ ಕೆಲವು ಕಡೆ ರಸ್ತೆಗಳ ಸೌಕರ್ಯ ಕಡಮೆಯಾಗಿರಬಹುದು. ಕೆಲವು ಕಡೆ ಕೆಲವು ಪಾಠಶಾಲೆಗಳ ಸಂಖ್ಯೆ ಕಮ್ಮಿಯಾಗಿರಬಹುದು. ಕೆಲವು ಕಡೆ ವೈದ್ಯ ಸೌಕರ್ಯವೂ ಕಡಮೆಯಾಗಿಬಹುದು. ಆದರೆ ಇನ್ನು ಕೆಲವು ಮಾನ್ಯ ಸದಸ್ಯರು ಆ ಭಾಗದಲ್ಲಿ ಕೆಲಕೆಲವು ಪ್ರದೇಶಗಳು ನಮ್ಮ ಮೈಸೂರಿಗಿಂತಲೂ ಅನೇಕ ವಿಚಾರದಲ್ಲಿ ಮುಂದುವರಿದಿರುತ್ತವೆಂತಲೂ ಹೇಳಿದ್ದಾರೆ. ಈಗ ಈ ಸಮಿತಿಯವರು ಒಪ್ಪಿಸಿರುವಂಥ ವರದಿಯಲ್ಲಿರತಕ್ಕ ಅಂಕಿಅಂಶಗಳೆಲ್ಲಾ ನಿಜವೆಂತಲೂ ಒಪ್ಪಿಕೊಂಡರೂ ಕೂಡ ಅವರು ಕೊಟ್ಟಿರತಕ್ಕಂಥ ಅಂಕಿಅಂಶಗಳ ಆಧಾರಗಳು ಈ ಪ್ರಾಂತ್ಯಗಳ ಪುನರ್ವಿಂಗಡಣೆಗೆ ಪ್ರತಿಬಂಧಕವಾಗಬಾರದೆಂದು ಹೇಳುತ್ತೇನೆ. ಇದಕ್ಕೆ ಕಾರಣವೇನೆಂಬುದನ್ನು ಅನೇಕರು ಈಗಾಗಲೇ ತಿಳಿಸಿರುತ್ತಾರೆ. ಆದರೆ ಈಗಾಗಲೇ ಮಾತನಾಡಿರತಕ್ಕಂಥ ಸದಸ್ಯರ ಪೈಕಿ ಕೆಲವರು ಮತ್ತು ಶ್ರೀ ಜಿ. ಎ. ತಿಮ್ಮಪ್ಪಗೌಡರು ಧಾರ್ ಸಮಿತಿಯ ಮತ್ತು ಜೆ.ವಿ.ಪಿ. ವರದಿಗಳ ಬಗ್ಗೆ ಪ್ರಸ್ತಾಪ ಮಾಡುತ್ತ ಈಗ ಕರ್ಣಾಟಕ ಏಕೀಕರಣಕ್ಕೆ ಸಕಾಲವಾಗಿಲ್ಲ ಎಂದು ಒಂದು ಅಭಿಪ್ರಾಯವನ್ನು ಬೇರೆ ವ್ಯಕ್ತಪಡಿಸಿದ್ದಾರೆ. ಆದರೆ ಈ ಹಿಂದೆಯೇ ಈ ಪ್ರಶ್ನೆಯನ್ನು ಕಾರ್ಯರೂಪಕ್ಕೆ ತರಬೇಕೆಂದು ಒತ್ತಾಯಪಡಿಸಿದಾಗ ಆ ದಿವಸ ನಮ್ಮ ದೇಶದ ನಾಯಕರು ಆಗ ಎಂದರೆ 1949, 50 ಮತ್ತು 51 ನೇ ಸಾಲುಗಳಲ್ಲಿ ಈ ಕಾರ್ಯಕ್ಕಿಂತಲೂ ಬಹಳ ತ್ವರಿತವಾಗಿ ಗಮನ ಕೊಡಬೇಕಾಗಿದ್ದಂಥ ಆಹಾರದ ಕೊರತೆ ಇತ್ಯಾದಿ ಕೆಲವು ವಿಚಾರಗಳಿಗೆ ಗಮನ ಕೊಡಬೇಕಾಗಿದ್ದುದರ ದೆಸೆಯಿಂದ ಇದನ್ನು ಕೊಂಚ ಹಿಂದಕ್ಕೆ ಇಟ್ಟಿದ್ದರು.

4 P.M.

1953 ರಲ್ಲಿ ಆಂಧ್ರಪ್ರಾಂತ ಯಾವಾಗ ನಿರ್ಮಾಣವಾಯಿತೋ ಅಲ್ಲಿಂದೀಚೆಗೆ ಇದನ್ನು ವಿಮರ್ಶೆ ಮಾಡುವುದು ಬೇಡ ಎಂದು ಹೇಳುವುದು ಸರಿಯಲ್ಲ. ಈಗ ಕಾಲ ಬಹಳ ಸನ್ನಿಹಿತವಾಗಿದೆ. ಕೇಂದ್ರ ಸರ್ಕಾರದವರು ಒಂದು ಹೈ ಪವರ್ ಕಮಿಷನ್ ನೇಮಕಮಾಡಿ ಈ ವಿಷಯದ ಮೇಲೆ ಒಂದು ವರದಿಯನ್ನು ಕೊಡಿ ಎಂದು ಕೇಳಿದ್ದಾರೆ. ಹೈ ಪವರ್ ಕಮಿಷನ್‌ನವರೂ ಕೂಡ ಆಯಾಯ ಪ್ರಾಂತಗಳಿಗೆ ಹೋಗಿ ಅನೇಕ ಮುಖಂಡರುಗಳಿಂದ ಮತ್ತು ಸಂಸ್ಥೆಗಳಿಂದ ಅಭಿಪ್ರಾಯಗಳನ್ನು ಶೇಖರಣೆ ಮಾಡುತ್ತಿದ್ದಾರೆ. ಹೀಗಿರುವಾಗ ಇದರ ವಿಚಾರದಲ್ಲಿ ಖಚಿತವಾದ ಅಭಿಪ್ರಾಯವನ್ನು ಕೊಡುವುದಕ್ಕೆ ಬಹಳ ಸರಿಯಾದ ಕಾಲ ಈಗ ಒದಗಿದೆ. ಆದ್ದರಿಂದ ಇದನ್ನು ಇನ್ನೂ ಮುಂದುವರಿಸಬೇಕು ಎಂದು ಹೇಳುವ ವಾದದಲ್ಲಿ ಏನೂ ತಿರುಳಿಲ್ಲವೆಂದು ಹೇಳುತ್ತೇನೆ.

ಇನ್ನೊಂದು ವಿಷಯ. ಮೈಸೂರು ಸಂಸ್ಥಾನದ ಮಧ್ಯಭಾಗದಲ್ಲಿ ವಾಸಮಾಡುವವರಿಗೆ ನಮ್ಮ ಹಾಗೆ ಗಡಿಯಲ್ಲಿ ಇರುವವರಿಗೆ ಎಷ್ಟು ಕಷ್ಟವಿದೆ ಎಂಬುದು ಹೇಗೆ ಗೊತ್ತಾಗುತ್ತದೆ? ನಮ್ಮ ಬಂಧುಮಿತ್ರರೆಲ್ಲರೂ ಪಕ್ಕದಲ್ಲಿಯೇ ಇರುತ್ತಾರೆ. ನಮ್ಮ ಜಿಲ್ಲೆಗೆ ಆ ಕಡೆಯಿಂದ ಕನ್ಯೆಯನ್ನು ತಂದುಕೊಳ್ಳುವುದು ಮತ್ತು ಅಲ್ಲಿಗೆ ಕೊಡುವುದು ವಾಡಿಕೆಯಲ್ಲಿ ಉಂಟು. ಆದ್ದರಿಂದ ಅವರ ತೊಂದರೆಗಳು ಎಷ್ಟಿವೆ ಎಂಬುದು ನಮ್ಮ ಗಡಿನಾಡು ಪ್ರದೇಶದಲ್ಲಿ ವಾಸಮಾಡುವವರಿಗೆ ಚೆನ್ನಾಗಿ ಗೊತ್ತಿದೆ. ಬೊಂಬಾಯಿ ಕರ್ಣಾಟಕ ಜನಗಳ ದೃಷ್ಟಿಯಿಂದ ನೋಡಿದರೆ, ಕಾರಣಾಂತರದಿಂದ ಇಲ್ಲಿ ಹಿಂದೆ ಆಡಳಿತ ನಡೆಸುತ್ತಾ ಇದ್ದವರು ವಿಶೇಷವಾಗಿ ಗುಜರಾತಿನವರು ಮತ್ತು ಮಹಾರಾಷ್ಟ್ರ ಭಾಗದಿಂದ ಬರತಕ್ಕವರು, ಅದರ ಪರಿಣಾಮವಾಗಿ, ಕರ್ಣಾಟಕದಲ್ಲಿ ಏನೇನು ಸೌಕರ್ಯಗಳು ಒದಗಬೇಕೋ, ಅವನ್ನು ಒದಗಿಸುವುದಕ್ಕೆ ಅವಕಾಶವಿಲ್ಲದೆ ಹೋಗಿ ಅದು ತೀರ ಹಿಂದುಳಿದ ಪ್ರದೇಶವಾಗಿದೆ. ಬಾಕಿ ಪ್ರಾಂತಗಳಿಗಿಂತ ಅದು ಬಹಳ ಹಿಂದುಳಿದ ಪ್ರದೇಶವಾಗಿದೆ. ಇದರ ಪರಿಣಾಮವಾಗಿ, ನಮ್ಮ ಸ್ನೇಹಿತರಾದ ಶ್ರೀ ಆರ್. ಅನಂತರಾಮನ್ ಹೇಳಿದ ಹಾಗೆ, ಪ್ರೈವೇಟ್ adventure ಬಹಳ ಹೆಚ್ಚಾಗಿ ಪ್ರವರ್ಧಮಾನಕ್ಕೆ ಬಂದಿದೆ. ನಮ್ಮಲ್ಲಿ ಪ್ರತಿಯೊಂದಕ್ಕೂ ಸರ್ಕಾರವನ್ನು ನಂಬುತ್ತೇವೆ. ಅಲ್ಲಿ ಸರ್ಕಾರ ಯಾವ ರೀತಿಯೂ ಅನುಕೂಲಗಳನ್ನು ಒದಗಿಸದೆ ಹೋದುದರ ಪರಿಣಾಮವಾಗಿ ಏನೋ ಜನಗಳು ಮುಂದೆ ಬಂದು ಕೆಲವು ಅನುಕೂಲಗಳನ್ನು ತಾವೇ ಮಾಡಿಕೊಂಡಿದ್ದಾರೆ. ಅದು ಒಂದು ದೊಡ್ಡ ವಿಶೇಷ. ಅದು ನಮ್ಮಲ್ಲಿ ಬಹಳ ಹೆಚ್ಚಾಗಿ ಬೆಳೆಯಬೇಕು. ಮಂಡ್ಯ ಡಿಸ್ಟ್ರಿಕ್ಟಿನಲ್ಲಿ ಒಂದು ಗ್ರಾಮಕ್ಕೆ ಹೋದೆ, ಅಲ್ಲಿ ಚಾವಡಿಯಲ್ಲಿ ಕೆಲವು ಹೆಂಚುಗಳು ಬಿದ್ದುಹೋಗಿದ್ದುವು. ಅದಕ್ಕೆ ಗ್ರಾಮ ಮುಖಂಡರನ್ನು ಕೇಳಿದೆ. ನಾವು ಏತಕ್ಕೆ ಹಾಕಿಸಬೇಕು, ಸರ್ಕಾರದವರು ಬಂದು ಮಾಡಬೇಕು ಎಂದು ಅವರು ಹೇಳಿದರು. ನಮ್ಮ ಮನೋಭಾವ ಹೀಗಿದೆ. ಆದರೆ ನಮ್ಮ ಕರ್ಣಾಟಕದಲ್ಲಿರುವ ನೆರೆಹೊರೆಯವರು ತಮಗೆ ಏನೂ ಅನುಕೂಲತೆಗಳು ಸರ್ಕಾರದಿಂದ ದೊರೆಯದೆ ಹೋದರೂ ಅವರು ಅನುಕೂಲತೆಗಳನ್ನು ತಮ್ಮ ಸ್ವಂತ ಹಣದಿಂದಲೇ ಮಾಡಿಕೊಂಡಿದ್ದಾರೆ. ಆದ್ದರಿಂದ ಕರ್ಣಾಟಕ ಏಕೀಕರಣ ಭಾಷೆಯ ದೃಷ್ಟಿಯಿಂದ ಆಗಬೇಕು ಎಂದು ಹೇಳುವುದಿಲ್ಲ. ಆದರೆ ಬೇರೆ ಕಾರಣದಿಂದ ಇದು ಆಗುವುದು ಬಹಳ ಅವಶ್ಯಕ. ಇನ್ನೂ ಒಂದು ವಿಷಯವೇನೆಂದರೆ ಈ ವಿಚಾರದಲ್ಲಿ ಮೈಸೂರಿನ ಮುಖಂಡರುಗಳು ಯಾವ ಧೋರಣೆ ಮೊದಲಿನಿಂದಲೂ ತಾಳಿದ್ದಾರೆಂಬುದನ್ನು ಸ್ವಲ್ಪ ನೋಡಬೇಕಾಗಿದೆ. ಶ್ರೀ ತಿಮ್ಮಪ್ಪಗೌಡರು ತಮ್ಮ ಭಾಷಣದಲ್ಲಿ 1948 ನೇ ಇಸವಿಯಲ್ಲಿ ಅಸೆಂಬ್ಲಿಯಲ್ಲಿ ಆದ ನಿರ್ಣಯದ ವಿಚಾರವನ್ನು ಪ್ರಸ್ತಾಪ ಮಾಡಿದರು. ಅದಕ್ಕಿಂತ ಹಿಂದೆ ಹೋಗುವುದಾದರೆ Mysore Constituent Assembly ಸಭೆ ಇತ್ತು. ಆ ಸಭೆಯಲ್ಲಿ ನಾನೂ ಸದಸ್ಯನಾಗಿದ್ದೆನು. ಆಗ ಕೂಡ ಈ ವಿಷಯ ಚರ್ಚೆಗೆ ಬಂತು. ಆ ಸಭೆಯಲ್ಲಿ ಮೈಸೂರಿನ ವೈಶಿಷ್ಟ್ಯ ಉಳಿಯಬೇಕು ಎಂಬ ಠರಾವನ್ನು ಎಲ್ಲರೂ ಪ್ರತಿಪಾದಿಸಿದರು. ಮೈಸೂರಿನ ವೈಶಿಷ್ಟ್ಯವೇನೆಂದರೆ, ಮೈಸೂರಿನಲ್ಲಿ ಶ್ರೀಮನ್ಮಹಾರಾಜರು ಇದ್ದಾರೆ. ಆದರೆ ಬ್ರಿಟಿಷ್ ಇಂಡಿಯಾದ ಇತರ ಕನ್ನಡ ಭಾಗಗಳಲ್ಲಿ ಮಹಾರಾಜರು ಇಲ್ಲ. ಆದ್ದರಿಂದ ಇತರ ಕನ್ನಡ ಭಾಗಗಳು ಮೈಸೂರಿನಲ್ಲಿ ಸೇರಬೇಕಾದರೆ ಈ ರೀತಿಯ ಕಷ್ಟಬರುತ್ತಿತ್ತು. ಆ ಕಷ್ಟಗಳೂ ಕೂಡ ನಿವಾರಣೆಯಾಗಲಿ ಎನ್ನುವ ಉದ್ದೇಶದಿಂದ, ಹೊರಗಡೆ ಮದರಾಸ್ ಮತ್ತು ಬೊಂಬಾಯಿಯಲ್ಲಿರುವ ಕರ್ಣಾಟಕದ ಮುಖಂಡರುಗಳು, ಶ್ರೀಮನ್ಮಹಾರಾಜರವರು, ರಾಜಪ್ರಮುಖರೋ ಅಥವಾ ಮಹಾರಾಜರಾಗಿಯೋ ಇರಲಿ, ಅವರು ಎಷ್ಟು ವರ್ಷಗಳು

(ಶ್ರೀ ಎಲ್. ಸಿದ್ದಪ್ಪ.)

ಇರುತ್ತಾರೋ ಅಲ್ಲಿಯವರೆಗೆ ಅವರು ಕರ್ಣಾಟಕದ ಗವರ್ನರ್ ಆಗಿರುವುದಕ್ಕೆ ಏನೂ ತೊಂದರೆ ಇಲ್ಲ ಎಂದು ಹೇಳಿದ್ದಾರೆ. ಕರ್ಣಾಟಕ ಪ್ರಾಂತವಾದರೆ ಬೆಂಗಳೂರು ಮುಖ್ಯಪಟ್ಟಣವಾಗಿ ಉಳಿಯುತ್ತದೆಯೋ ? ಎಂದು ಸಂಶಯ ಬಂದಿದೆ. ಆ ಸಂಶಯ ಕೂಡ ನಿವಾರಣೆಯಾಗಬೇಕು ಎನ್ನುವ ಉದ್ದೇಶದಿಂದ ಬೆಂಗಳೂರು ರಾಜಧಾನಿಯಾಗಿರಬೇಕು ಎಂಬುದರಲ್ಲಿ ನಮ್ಮ ಅಭ್ಯಂತರವಿಲ್ಲವೆಂದು ಅವರು ಹೇಳಿದ್ದಾರೆ. ಇವೆಲ್ಲಾ ಕಾರಣಗಳಿಂದ Constituent Assembly ಯಲ್ಲಿ ಹಿಂದೆಯೇ ಮೈಸೂರಿನ ಅಕ್ಕಪಕ್ಕದಲ್ಲಿರುವ ಕರ್ಣಾಟಕ ಪ್ರದೇಶಗಳು ಮೈಸೂರಿಗೆ ಸೇರಿ expand ಆಗುವುದಾದರೆ ಅದಕ್ಕೆ ಏನೂ ಅಭ್ಯಂತರವಿಲ್ಲ ಎಂದು ಒಂದು ನಿರ್ಣಯವೂ ಕೂಡ ಪಾಸ್ ಆಗಿದೆ. ಶ್ರೀ ತಿಮ್ಮಪ್ಪಗೌಡರು ತಮ್ಮ ಭಾಷಣದಲ್ಲಿ 1949-50 ನೇ ಸಾಲಿನಲ್ಲಿ Representative Assembly ಯಲ್ಲಿ ಈ ವಿಷಯದಲ್ಲಿ ಠರಾವು ಆಯಿತು ಎಂದು ಹೇಳಿದರು. ಕರ್ಣಾಟಕ ಪ್ರಾಂತ್ಯ ಆಗುವುದು ಬೇಡ ಎಂದು ಹೇಳಿ ಠರಾವು ಆಗಿಲ್ಲ; ಆಗ ಈ ವಿಷಯ ಚರ್ಚೆಗೆ ಬಂದಾಗ ಆಗಿನ ನಮ್ಮ ರಾಷ್ಟ್ರದ ನಾಯಕರು ಆಗ ಭಾರಿ ಭಾರಿ ತುರ್ತಾದ ಸಮಸ್ಯೆಗಳನ್ನು ಬಗೆಹರಿಸಬೇಕಾಗಿರುವುದರಿಂದ ಈ ವಿಷಯಕ್ಕೆ ಗಮನಕೊಡುವುದು ಸರಿಯಲ್ಲ ಎಂದು ಅಭಿಪ್ರಾಯಪಟ್ಟು ಆ ಮೇರೆಗೆ ಸದ್ಯಕ್ಕೆ ಇರುವಂತೆಯೇ ಮುಂದುವರಿಸೋಣವೆಂದು ತೀರ್ಮಾನ ಆಯಿತೇ ಹೊರತು ಕರ್ಣಾಟಕ ಏಕೀಕರಣ ಆಗಬಾರದು ಎಂದು ತೀರ್ಮಾನವಾಗಿಲ್ಲ. ಕರ್ಣಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯವರು ಫಸಲ್ಅಲಿ ಸಮಿತಿಯವರು ಮುಂದೆ ಒಪ್ಪಿಸಿರತಕ್ಕ ಮೆಮೊರ್ಯಾಂಡಮ್‌ನಲ್ಲಿ ಅಡಕವಾಗಿರುವ ಹಾಗೆ, ಮೊದಲಿನಿಂದಲೂ ಕನ್ನಡ ಭಾಗಗಳನ್ನು ಸೇರಿದಂಥ ಕರ್ಣಾಟಕ ಪ್ರಾಂತ ಆಗಬೇಕು ಎಂದು ಮೈಸೂರಿನ ನಾಯಕರೂ ಕೂಡ ಅಭಿಪ್ರಾಯಪಟ್ಟಿದ್ದಾರೆ. ಈ ಬಗ್ಗೆ ಮೈಸೂರಿನಿಂದ ಕಾಂಗ್ರೆಸ್ ಕಮಿಟಿಯಿಂದ ನೇಮಕವಾದ ಸಬ್-ಕಮಿಟಿ ಕೂಡ ಈ ಪ್ರಾಂತಗಳಲ್ಲಿ ಸಂಚಾರಮಾಡಿ ವಾಪಸ್ಸು ಬಂದು ಒಂದು ವರದಿಯನ್ನು ಒಪ್ಪಿಸಿದ್ದಾರೆ. ಆ ವರದಿಯಲ್ಲಿ ಒಂದೇ ಭಾಗವನ್ನು ಈ ಸಭೆಯ ಅವಗಾಹನೆಗೆ ತರಲಿಚ್ಛಿಸುತ್ತೇನೆ. ಇದು ಚರ್ಚೆಗೆ ಬಂದಾಗ ಶ್ರೀ ತಿಮ್ಮಪ್ಪಗೌಡರು ಮತ್ತು ಕೆಲವು ಮಹನೀಯರು ಕರ್ಣಾಟಕ ಪ್ರಾಂತವಾಗಬೇಕೆಂದು ಖಚಿತವಾಗಿ ನಿರ್ಧಾರಕ್ಕೆ ಬಂದಿಲ್ಲ ಎಂದು ಹೇಳಿದರು. ಆದರೆ ಕರ್ಣಾಟಕ ಆಗಬೇಕಾದುದು ಅವಶ್ಯಕ ಎಂದು ಸ್ಪಷ್ಟವಾಗಿ ನಿರ್ಧಾರಕ್ಕೆ ಬಂದಿರುವುದನ್ನು ರಿಪೋರ್ಟಿನಲ್ಲಿ ನಮೂದು ಮಾಡಿದ್ದಾರೆ. Appendix 12ರಲ್ಲಿ ಹೀಗಿದೆ:

"As the Mysore State Congress stand has always been in favour of United Karnataka with His Highness the Maharaja of Mysore as the Constitutional Head, the Committee recommends to the Working Committee that the formation of Akhila Karnataka Province is essential with the Maharaja of Mysore as the Constitutional Head and Bangalore as its capital, but the time for implementation of the same is not opportune at this juncture, and hence the Committee further recommends that the question of implementation may be postponed until the political situation improves in this direction."

ಆಗಲೇ ನಾನು ಹೇಳಿದಹಾಗೆ, ಭಾರತದ ನಾಯಕರುಗಳಿಂದ ಪಂಡಿತ್ ಜವಹರ್‌ಲಾಲ್ ನೆಹರೂ, ಸರ್ದಾರ್ ವಲ್ಲಭಭಾಯ್ ಪಟೇಲ್, ಮುಂತಾದವರು ಆಗ ಭಾರಿ ಭಾರಿ ಸಮಸ್ಯೆಗಳನ್ನು ಬಗೆಹರಿಸಿ ಅನಂತರ ಈ ಸಮಸ್ಯೆಗೆ ಗಮನಕೊಡಬೇಕೆಂದು ಹೇಳಿದ್ದಾರೆ. ಆ ಸಮಸ್ಯೆಯನ್ನು ಈಗ ಬಗೆ ಹರಿಸಿರುವುದರಿಂದ ಈ ವಿಷಯಕ್ಕೆ ನಾವು ಗಮನಕೊಡಬಹುದು ಎಂದು ಇದರಿಂದ ವ್ಯಕ್ತಪಡುತ್ತದೆ. ಇಂಡಿಯಾ ಸರ್ಕಾರದವರು ಹೈ ಪವರ್ ಕಮಿಷನ್ ನೇಮಕಮಾಡಿರುವುದರಿಂದ ಇದಕ್ಕೆ ಕಾಲ ಬಹಳ ಸನ್ನಿಹಿತವಾಗಿದೆ ಎಂಬುದು ಗೊತ್ತಾಗುತ್ತದೆ. ಆದುದರಿಂದ ಎಲ್ಲಾ ಕರ್ಣಾಟಕ ಭಾಗಗಳನ್ನೂ ಒಳಗೊಂಡಿರತಕ್ಕ ಪ್ರಾಂತವಾಗಬೇಕು ಎಂಬುದಕ್ಕೆ ಆಕ್ಷೇಪಣೆಗಳನ್ನು ಇಂದು ಮಾನ್ಯ ಸದಸ್ಯರು ಎತ್ತಿರುವುದರಲ್ಲಿ ಯಾವ ತಿರುಳೂ ಇಲ್ಲವೆಂಬುದು ವ್ಯಕ್ತಪಡುತ್ತದೆ. ಮುಖ್ಯವಾಗಿ ನಮ್ಮ ದೇಶದ ಪಕ್ಕದಲ್ಲಿರುವವರು ಒಂದು ರೀತಿ ಕಷ್ಟ ಸ್ಥಿತಿಯಲ್ಲಿದ್ದು ನಾವು ಸುಖವಾಗಿರಬೇಕು ಎಂದು ತಾಳತಕ್ಕ ಧೋರಣೆ ಸರಿಯಾದುದಲ್ಲ. ನ್ಯಾಯವಾಗಿ ಮಹಾರಾಷ್ಟ್ರ ಆದರೆ, ತಮಿಳುನಾಡು ಆದರೆ, ಆಂಧ್ರ ಪ್ರಾಂತವಾದರೆ ಮೈಸೂರು ಸ್ಟೇಟಿನ ಪಕ್ಕದಲ್ಲಿರುವ ಕನ್ನಡ ಭಾಗಗಳು ಬೇರೆ ಹೋಗುವುದಕ್ಕೆ ಸಾಧ್ಯವಿಲ್ಲ. ಎರಡು ಪ್ರಾಂತಗಳಾಗಲಿ ಎರಡು ಕರ್ಣಾಟಕ ಪ್ರದೇಶಗಳಾಗಲಿ ಎಂದು ಕೆಲವರು ವಾದವನ್ನು ಮುಂದಿಟ್ಟರು. ಅದೂ ಕೂಡ ಸರಿಯಲ್ಲ. ಕಳೆದ ವರ್ಷ ಶಿವಮೊಗ್ಗಾದಲ್ಲಿ ಒಂದು ಮಲೆನಾಡು conference ಆಯಿತು. ಮಾನ್ಯ ಸದಸ್ಯರು ಅನೇಕರು ಆ conferenceನಲ್ಲಿ ಭಾಗ ವಹಿಸಿದ್ದರು. ಅಲ್ಲಿಯೂ ಕೂಡ ಇದರ ಬಗ್ಗೆ ಒಂದು resolution ಆಯಿತು. ಭಾಷಣ ಮಾಡಿದ ಮಹನೀಯರು "ಮಲೆನಾಡು ಭಾಗಗಳು ಬೇರೆ ಬೇರೆ ಪ್ರಾಂತಗಳಲ್ಲಿ ಹರಿದು ಹಂಚಿಹೋಗಿವೆ. ಈ ಎಲ್ಲಾ ಮಲೆನಾಡು ಭಾಗಗಳೂ ಮುಂದೆ ಒಟ್ಟುಗೂಡಿ ಒಂದೇ ಪ್ರಾಂತ್ಯಕ್ಕೆ ಸೇರಿದರೆ, ಆಗ ಮಲೆನಾಡು ಪ್ರಾಂತ ಮುಂದುವರಿಯುವುದಕ್ಕೆ ಅನುಕೂಲವಾಗುತ್ತದೆ. ಮಲೆನಾಡಿನಲ್ಲಿರತಕ್ಕ ಪ್ರಕೃತಿ ಸಂಪತ್ತು ಜನಗಳಿಗೂ ಉಪಯೋಗವಾಗಿ ಅನುಕೂಲವಾಗುತ್ತದೆ. ಆ ರೀತಿ ಕನ್ನಡ ಮಾತನಾಡುವವರು ಸೇರುವುದರಿಂದ ಮಲೆನಾಡಿನ ಬಹುಭಾಗ ಸೇರುತ್ತದೆ ಮತ್ತು ಅಲ್ಲಿರತಕ್ಕ ಪ್ರಕೃತಿ ಸಂಪತ್ತನ್ನು ಮನುಷ್ಯನ ಸಾಧನೆಗೆ ಉಪಯೋಗಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಕರ್ಣಾಟಕ ಪ್ರಾಂತ ಆಗಬೇಕಾದುದು ಅಗತ್ಯ" ಎಂದು ಹೇಳಿದರು.

ಇನ್ನು ಎರಡು ಪ್ರಾಂತಗಳು ಆಗಬೇಕು ಎಂಬ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ಈಗಾಗಲೇ ನಮ್ಮ ಪಕ್ಕದಲ್ಲಿ ಪ್ರಾಂತಗಳು ಇವೆ. ಆಂಧ್ರ ಪ್ರಾಂತ್ಯ ಎರಡು ಕೋಟಿ ಜನಗಳನ್ನು ಒಳಗೊಂಡಿರತಕ್ಕ ಪ್ರಾಂತ್ಯ. ಅವರು ಆ ಪ್ರಾಂತ್ಯ ಇನ್ನೂ ಮುಂದುವರಿದು ಹೈದರಾಬಾದಿನಲ್ಲಿ ತೆಲಗು ಮಾತನಾಡುವ ಭಾಗಗಳು ಸೇರಿ ವಿಶಾಲ ಆಂಧ್ರ ಪ್ರಾಂತವಾಗಬೇಕು, ಎಂದು ಹೇಳುತ್ತಾರೆ. ಅದು ಆದರೆ ಎರಡು ಕೋಟಿಗಿಂತ ಹೆಚ್ಚಿಗೆ ಜನಸಂಖ್ಯೆ ಇರುವ ಪ್ರಾಂತ್ಯವಾಗುತ್ತದೆ. ತಮಿಳುನಾಡು ಅದೇ

ರೀತಿ ಒಂದು ದೊಡ್ಡ ಪ್ರಾಂತವಾಗುತ್ತದೆ. ಆದ್ದರಿಂದ ಎರಡು ಕೋಟಿ ಜನಗಳು ಇರತಕ್ಕ ಒಂದು ಪ್ರಾಂತವಾದರೆ ಆಡಳಿತ ದೃಷ್ಟಿಯಿಂದ ಅಷ್ಟು ಚೆನ್ನಾಗಿ ಇರುವುದಿಲ್ಲ ಎಂದು ಹೇಳತಕ್ಕ ವಾದದಲ್ಲಿ ಕೂಡ ಏನೂ ತಿರುಳಿಲ್ಲ. ಇವೆಲ್ಲಾ ಕಾರಣಗಳಿಂದ ಕನ್ನಡ ಮಾತು ಮಾತನಾಡತಕ್ಕ ಮೈಸೂರಿನ ಅಕ್ಕ ಪಕ್ಕದಲ್ಲಿರುವ ಪ್ರದೇಶಗಳು ಸೇರಿ ಒಂದು ಪ್ರಾಂತವಾಗುವುದು ಬಹಳ ಅವಶ್ಯಕ. ಈ ಬಗ್ಗೆ ಈ ಸಭೆ ಒಮ್ಮನಸ್ಸಿನಿಂದ ತನ್ನ ಒಪ್ಪಿಗೆಯನ್ನು ಕೊಡುವುದು ಬಹಳ ಅವಶ್ಯಕವೆಂದು ಹೇಳುತ್ತೇನೆ.

*ಶ್ರೀ ಕೆ. ಸಿಂಗಾರಿಗೌಡ (ನಾಗಮಂಗಲ).—ಕೇಂದ್ರ ಸರಕಾರದವರು ಈ ಪ್ರಾಂತ್ಯ ಪುನರ್ವಿಂಗಡನೆ ಸಮಿತಿಯನ್ನು ನೇಮಿಸಿದ ಮೇಲೆ ಮೈಸೂರು ವಿಸ್ತಾರವಾಗಲೇಬೇಕೇ ಅಥವಾ ಈಗ ಇರುವಂತೆ ಇರಬೇಕೇ ಎನ್ನುವ ಸಮಸ್ಯೆಯನ್ನು ಬಿಡಿಸತಕ್ಕ ಸನ್ನಿವೇಶ ನಮ್ಮ ಮುಂದೆ ಇದೆ. ಆ ಪ್ರಶ್ನೆಯನ್ನು ಬಿಡಿಸುವಾಗ ಜಾತಿ ಮತ್ತು ಮತ ಎಂಬ ಈ ಸಂಶಯ ಇಟ್ಟುಕೊಂಡು ಸಮಸ್ಯೆಯನ್ನು ಸ್ವಲ್ಪ ಜಟಿಲಮಾಡಿಕೊಂಡಿದ್ದೇವೆ. ಪ್ರತಿಯೊಬ್ಬ ಮನುಷ್ಯನೂ ಕೂಡ ಆಯಾ ಸನ್ನಿವೇಶ ಮತ್ತು ಕಾಲದ ಪರಿಸ್ಥಿತಿಗೆ ಪರಾಧೀನವಾಗಿ ನಡೆದುಕೊಂಡು ಬಂದಿರುವುದನ್ನು ನಮ್ಮ ಸ್ವಾತಂತ್ರ್ಯದ ಚರಿತ್ರೆ ತಿಳಿಸುತ್ತದೆ. 400 ವರ್ಷಗಳ ಕೆಳಗೆ 1564ರಲ್ಲಿ ವಿಜಯನಗರದ ಸಾಮ್ರಾಜ್ಯ ಒಡೆದುಹೋದ ಮೇಲೆ ಕನ್ನಡ ಮಾತನಾಡತಕ್ಕ ಜನ ಬೇರೆ ಬೇರೆ ಪ್ರಾಂತಗಳ ಆಡಳಿತಕ್ಕೆ ಸಿಕ್ಕಿ ಅವರವರ ಆಡಳಿತ ವ್ಯವಹಾರಕ್ಕೆ ತಕ್ಕಂತೆ ನಡೆದುಕೊಂಡು ಬಂದಿದ್ದಾರೆ. ಭಾಷಾವಾರು ಪ್ರಾಂತರಚನೆ ವಿಷಯದಲ್ಲಿ ನನ್ನ ಹಿಂದೆ ಮಾತನಾಡಿದ ಶ್ರೀಯುತ ಕೆ. ಪಟ್ಟಾಭಿರಾಮ್‌ರವರು ಮತ್ತು ಶ್ರೀಯುತ ಎಚ್. ಎಂ. ಚನ್ನಬಸಪ್ಪನವರು ಭಾಷಾವಾರು ಪ್ರಾಂತ ರಚನೆ ವಿಷಯದಲ್ಲಿ ಭಾಷೆಯನ್ನು ಪ್ರಾಧಾನ್ಯವಾಗಿಟ್ಟುಕೊಂಡು ಪ್ರಾಂತ್ಯಗಳನ್ನು ಮಾಡುವುದು ಹುಚ್ಚುತನ ಎಂದು ಈ ಸಭೆಯ ಮುಂದೆ ಇಟ್ಟರು. ಅದೇ ವಿಷಯವನ್ನು ಶೇಷಾದ್ರಿ ಸಮಿತಿ ವರದಿಯಲ್ಲಿ 19ನೇ ಪುಟದಲ್ಲಿ ಪ್ರಸ್ತಾಪನೆ ಮಾಡಿದ್ದಾರೆ. ಅದರಲ್ಲಿ ಹೀಗಿದೆ :—

> "From the foregoing survey, it is obvious to us that however carefully boundaries may be drawn, the presence of linguistic minorities cannot be eliminated unless we contemplate an exchange of population on a linguistic basis. It appears to us that over-emphasis of linguistic considerations raises more problems than it is supposed to solve."

ಈ ದೃಷ್ಟಿಯಿಂದ ನಾನು ಈ ಪ್ರಾಂತ ವಿಂಗಡಣೆಯ ಸಮಸ್ಯೆಯನ್ನು ನೋಡಿದೆ. ಹಿಂದೆ ಇದನ್ನು ಸಮರ್ಥನೆ ಮಾಡಿರತಕ್ಕ ಕೆಲವು ಮಾನ್ಯ ಸ್ನೇಹಿತರು ಚಾರಿತ್ರಿಕ ದೃಷ್ಟಿಯಿಂದ, ಹಿಂದಿನ ಕನ್ನಡ ಸಾಮ್ರಾಜ್ಯದ ಗತವೈಭವವನ್ನು ನೆನೆದು ಕನ್ನಡ ನಾಡನ್ನು ವಿಸ್ತರಿಸಬೇಕಾದ್ದು ಅವಶ್ಯಕವೆಂದು ಹೇಳಿದ್ದಾರೆ. ಆದರೆ, ಇಂದಿನ ಸಮಸ್ಯೆಯನ್ನು ಅವರು ಸ್ವಲ್ಪಮಟ್ಟಿಗೆ ವಿಮರ್ಶೆ ಮಾಡಿದ್ದರೆ, ಸ್ವಲ್ಪ ವಿವೇಚನೆಯಿಂದ ಈ ಪ್ರಾಂತ್ಯ ವಿಸ್ತಾರವಾಗಬೇಕೆ ಎಂಬುದನ್ನು ಆಲೋಚನೆ ಮಾಡಿದ್ದರೆ, ಆ ನುಡಿಗೆ ಅವರು ಅಷ್ಟು ಪ್ರಾಧಾನ್ಯತೆಯನ್ನು ಕೊಡುತ್ತಿರಲಿಲ್ಲವೆಂದು ನಾನು ತಿಳಿದಿದ್ದೇನೆ. ಪ್ರಾಂತ್ಯ ವಿಂಗಡಣೆಯ ಸಮಿತಿಯ ನೇಮಕದ ಬಗ್ಗೆ ಹಿಂದೆ ಜವಹರಲಾಲ್‌ರವರು ಹೇಳಿಕೆ ಕೊಡುವಾಗ ಅವರು ಒಂದು ಅಂಶವನ್ನು ಮುಖ್ಯವಾಗಿ ಪ್ರಸ್ತಾಪಮಾಡಿದ್ದಾರೆ. ಒಂದು ದೇಶದಲ್ಲಿ ಅಥವಾ ಒಂದು ಪ್ರಾಂತ್ಯದಲ್ಲಿರತಕ್ಕ ಜನ, ಒಂದು ಭಾಷೆ ಅಥವಾ ಅಲ್ಲಿರತಕ್ಕ ಸಂಸ್ಕೃತಿ—ಇವುಗಳು ಪ್ರಾಂತ್ಯ ರಚನೆಗೆ ಒಂದು ಸಾಧನವೆಂದು ಭಾವಿಸುವುದಾದರೂ ಕೂಡ ಆಡಳಿತದ ಹಿತ, ಹಣಕಾಸಿನ ಪರಿಸ್ಥಿತಿ ಇವುಗಳನ್ನು ಪ್ರಾಮುಖ್ಯವಾಗಿ ಗಣನೆಗೆ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಆದ್ದರಿಂದ, ಈ ದೃಷ್ಟಿಯಿಂದ ಇಂದು ಮೈಸೂರು ವಿಸ್ತಾರವಾಗಬೇಕೇ ಅಥವಾ ಈಗಿನ ಸ್ಥಿತಿಯಲ್ಲಿಯೇ ಇರಬೇಕೇ ಎಂಬುದನ್ನು ಯೋಚನೆ ಮಾಡಬೇಕಾಗಿದೆ ವಿರೋಧ ಪಕ್ಷದ ನಾಯಕರು ಈ ವಿಷಯದಮೇಲೆ ಮಾತನಾಡುವಾಗ ಒಂದು ಮಾತು ಹೇಳಿದ್ದಾರೆ: 'ಈ ಸಮಸ್ಯೆ ಇಷ್ಟು ಜಟಿಲವಾಗಿರುವುದಕ್ಕೆ ಮುಖ್ಯವಾದ ಕಾರಣ, ಆ ಪ್ರಾಂತ್ಯದ ಜನ ಈ ಪ್ರಾಂತ್ಯದಲ್ಲಿರತಕ್ಕ ಜನ ಒಬ್ಬರನ್ನೊಬ್ಬರು ಅರಿತುಕೊಳ್ಳುವ ಸನ್ನಿವೇಶವಿರಲಿಲ್ಲ; ಒಬ್ಬರನ್ನೊಬ್ಬರು ಅರಿತಿಲ್ಲ,' ಎಂದು ಹೇಳಿದ್ದಾರೆ. ಒಂದು ಸಂಸಾರದ ಆಗುಹೋಗುಗಳನ್ನೇ ಆಗಲಿ, ಒಂದು ದೇಶದ ಆಗುಹೋಗುಗಳನ್ನೇ ಆಗಲಿ ಸರಿಯಾಗಿ ಜನತೆಯ ಸುಖ ಶಾಂತಿಯನ್ನು ಅರಿತು ಜನರು ಒಬ್ಬರನ್ನೊಬ್ಬರು ಅರಿತರೇ ಪ್ರಗತಿಯನ್ನು ಸಾಧಿಸಲು ಸಾಧ್ಯ. ಈ ಒಂದು ದೃಷ್ಟಿಯಿಂದಲೇ ಮೈಸೂರು ಈಗಿರುವ ಹಾಗೆಯೇ ಇದ್ದ ಪಕ್ಷದಲ್ಲಿ ಒಳ್ಳೆಯದೆಂದು ನನ್ನ ಅಭಿಮತ. ಏಕೆಂದರೆ, ಈ ಎರಡು ಪ್ರದೇಶಗಳಲ್ಲಿರತಕ್ಕ ಜನ ಒಂದಾಗಬೇಕೆಂಬ ಕೂಗು ಬಂದಿರುವುದು 1946ನೆಯ ಇಸವಿಯಿಂದ ಮಾತ್ರ. ಧಾರ್ ಸಮಿತಿ ರಚನೆಯಾದ ಸಂದರ್ಭದಲ್ಲಿ ಕೂಡ ಅಖಂಡ ಕರ್ಣಾಟಕದ ಪ್ರಶ್ನೆಯಿರಲಿಲ್ಲ. ಸ್ವಾತಂತ್ರ್ಯ ಚಳವಳಿ 1948ರಲ್ಲಿ ಷುರುವಾದಾಗ ಜನರ ಮನಸ್ಸಿನಲ್ಲಿ ಈ ಕರ್ಣಾಟಕದ ಪ್ರಶ್ನೆ ಅಂಕುರಿಸಿತು. ಆ ಪ್ರಶ್ನೆಯೇ ಈ ದಿವಸ ಇಷ್ಟು ಜಟಿಲವಾಗಿದೆ. ಹಣಕಾಸಿನ ಪರಿಸ್ಥಿತಿಯಿಂದ, ಮೈಸೂರು ವಿಸ್ತಾರವಾದ ಪಕ್ಷಕ್ಕೇ, ಇಲ್ಲಿನ ಜನಕ್ಕೆ, ಇವರ ಹಿತಕ್ಕೆ ವಿಷ್ಟುಮಟ್ಟಿಗೆ ಧಕ್ಕೆ ಬರುತ್ತದೆಂಬುದನ್ನು ಸ್ವಲ್ಪ ವಿಮರ್ಶೆ ಮಾಡುವುದು ಅವಶ್ಯಕ. ಸ್ವಾತಂತ್ರ್ಯ ಬಂದ ಮೇಲೆ ಸುಖೀರಾಜ್ಯ ನಿರ್ಮಾಣ ಮಾಡಬೇಕೆಂದು ಸರ್ಕಾರದವರು ತೊಡಗಿದಮೇಲೆ ಆ ಪ್ರಾಂತ್ಯದಲ್ಲಿ ವಾಸ ಮಾಡತಕ್ಕ ಪ್ರತಿಯೊಬ್ಬ ಪ್ರಜೆಗೂ ಕೂಡ ತಕ್ಕ ಸೌಲಭ್ಯ, ಸೌಕರ್ಯಗಳನ್ನು ಒದಗಿಸಿಕೊಟ್ಟು ಅವರ ಜೀವನ ಮಟ್ಟ ಉನ್ನತಿಗೆ ಬರುವುದಕ್ಕೆ ಶ್ರಮಿಸಬೇಕಾದದ್ದು ಸರ್ಕಾರದವ ಕರ್ತವ್ಯ. ಇಂದಿನ ಪರಿಸ್ಥಿತಿಯಲ್ಲಿ ನಮ್ಮ ಮೈಸೂರು ದೇಶದ ಹಣಕಾಸಿನ ವಿಷಯ ಉತ್ತಮವಾಗಿಲ್ಲ, ಆಶಾದಾಯಕವಾಗಿಲ್ಲ. ಜನರ ಆಶೆ ಆಕಾಂಕ್ಷೆಗಳು ದಿನದಿನಕ್ಕೂ ಬಹಳಮಟ್ಟಿಗೆ ಹೆಚ್ಚುತ್ತಿವೆ. ಎಲ್ಲಕ್ಕೂ ಸರ್ಕಾರದವರು ಜವಾಬ್ದಾರಿ ವಹಿಸಿ ಜನತೆಯ ಜೀವನದಲ್ಲಿ ಚೈತನ್ಯವನ್ನುಂಟು ಮಾಡಬೇಕೆಂಬ ಹಂಬಲಿಕೆ ಹೊಂದಿದ್ದರೂ ಅದನ್ನು ಸಾಧಿಸಲು ಶಕ್ತರಾಗಿಲ್ಲ. ಇಂಥ ಪರಿಸ್ಥಿತಿಯಲ್ಲಿ ಅಖಂಡ ಕರ್ಣಾಟಕವನ್ನು ರಚಿಸಿ ಹೈದರಾಬಾದು ಪ್ರಾಂತ್ಯದ, ಬೊಂಬಾಯಿ ಪ್ರಾಂತ್ಯದ ಮತ್ತು ಮದರಾಸ್ ಪ್ರಾಂತ್ಯದ ಕನ್ನಡ ಭಾಗಗಳನ್ನು ಮೈಸೂರಿಗೆ ಸೇರಿಸಿದರೆ ನಮ್ಮ ಹಣಕಾಸಿನ ಸ್ಥಿತಿಯಲ್ಲಿ ಏನು ಏರುಪೇರುಗಳಾಗುತ್ತವೆಂಬುದನ್ನು ಸ್ವಲ್ಪಮಟ್ಟಿಗೆ ನಾವೆಲ್ಲರೂ ಗಮನಿಸಬೇಕು. ಬೊಂಬಾಯಿ ಪ್ರಾಂತ್ಯ

(ಶ್ರೀ ಕೆ. ಸಿಂಗಾರಿಗೌಡ.)

ಒಂದರಲ್ಲೇ 89 ಕೋಟಿ ರೂಪಾಯಿಗಳಷ್ಟು ಸಾಲವಿದೆ. ಪ್ರಾಂತ್ಯ ಪುನರ್ವಿಂಗಡಣೆಯಾದ ಪಕ್ಷಕ್ಕೆ ಲೇಣೆದೇಣೆಗಳನ್ನು ಹಂಚಿಕೆಮಾಡುವ ಸಂದರ್ಭ ಬಂದರೆ ಆಗ್ಗೆ ಮೈಸೂರು ತನ್ನ ಸರ್ಕಾರದ ಸಾಲದ ಜೊತೆಗೆ ಈ ಎರಡು ಮೂರು ಸರ್ಕಾರಗಳ ಹೊರೆಯನ್ನು ಖಂಡಿತ ವಹಿಸಬೇಕಾಗುತ್ತದೆ. ಸಮಿತಿಯವರ ವರದಿಯ ಪ್ರಕಾರ ಸುಮಾರು 36ಕೋಟಿ ರೂಪಾಯಿಗಳ ಸಾಲವನ್ನು ನಾವು ಹೊತ್ತುಕೊಳ್ಳಬೇಕಾಗಿ ಬರುತ್ತದೆ. ಸಾಲದಕ್ಕೆ ಈಗ ರಾಷ್ಟ್ರಾಭಿವೃದ್ಧಿ ಕೆಲಸಗಳಿಗೆ ಬೇರೆ ಕೈಹಾಕಿದ್ದಾರೆ. ಆ ದೃಷ್ಟಿಯಿಂದ ಬೇರೆ ಸುಮಾರು 20 ಕೋಟಿ ರೂಪಾಯಿಗಳ ಹೊರೆಯನ್ನು ವಹಿಸಿಕೊಳ್ಳಬೇಕಾಗಿದೆ. ಇದಲ್ಲದೆ ಸಮಿತಿಯವರ ವರದಿಯಲ್ಲಿ ಹೇಳಿರುವ ಪ್ರಕಾರ ಆ ಜನರು ಮೇಲ್ಮಟ್ಟಕ್ಕೆ ಬರಬೇಕಾದರೆ ತಕ್ಕ ಸೌಲಭ್ಯಗಳನ್ನು ನಮಗೆ ಇಲ್ಲಿ ಇರುವ ಹಾಗೆಯೇ ಒದಗಿಸಬೇಕಾದರೆ ಇನ್ನು 12 ಕೋಟಿ ರೂಪಾಯಿಗಳು ಹೆಚ್ಚಿಗೆ ಬೇಕೆಂದು ಹೇಳಿದ್ದಾರೆ. ಈ ಎಲ್ಲ ದೃಷ್ಟಿಯಿಂದಲೂ ಮೈಸೂರು ವಿಸ್ತಾರವಾದ ಪಕ್ಷಕ್ಕೆ ನಮ್ಮ ಹಣಕಾಸಿನ ಪರಿಸ್ಥಿತಿ ಬಹಳ ಕಷ್ಟಕ್ಕೆ ಬರುತ್ತದೆ ಮತ್ತು ಮೈಸೂರಿನ ಜನತೆ ಎಷ್ಟು ಪ್ರಗತಿಯನ್ನು ಸಾಧಿಸಬೇಕೆಂದು ಬಯಸುತ್ತಿದೆಯೋ ಅದು ಕೇವಲ ಬಯಕೆಯಾಗಿಯೇ ಉಳಿಯುತ್ತದೆ. ಸಮಿತಿಯವರು ತಮ್ಮ ವರದಿಯಲ್ಲಿ ಈ ನೀತಿಯ ಏಕೀಕರಣದಿಂದ 600 ಮೈಲಿಗಳ ದೂರದ ಆವರಣದಲ್ಲಿ ಆಡಳಿತ ನಡೆಸಬೇಕಾಗುತ್ತದೆಂದು ಹೇಳಿದ್ದಾರೆ. ಯಾವ ಸರ್ಕಾರವೇ ಆಗಲಿ ಅದರ ಉನ್ನತ ಅಧಿಕಾರಿಗಳು ಜನತೆಯೊಡನೆ ನಿಕಟ ಸಂಪರ್ಕವಿಟ್ಟುಕೊಳ್ಳದೆ ಹೋದರೆ ಬಹುಶಃ ಅಂಥ ಆಡಳಿತದಿಂದ ಯಾವ ಅನುಕೂಲವೂ ಆಗುವುದಿಲ್ಲ. ಈ ವರದಿಯಲ್ಲಿ ಹೇಳಿರುವಂತೆ ವಿಸ್ತಾರಗೊಂಡ ಮೈಸೂರಿನಲ್ಲಿ ನ್ಯಾಯ ಶೀಘ್ರದಲ್ಲಿ ಮತ್ತು ಖರ್ಚಿಲ್ಲದೆ ದೊರಕಬೇಕಾದರೆ ಮೈಸೂರು ಹೈಕೋರ್ಟಿಗೆ ಸಂಬಂಧಪಟ್ಟಂತೆ ಇನ್ನೊಂದು ಬೆಂಚನ್ನು ಬೇರೆಕಡೆ ಕೊಡಬೇಕಾಗಿ ಬರುತ್ತದೆ. ಸಂಬಳ ಸಾರಿಗೆಗಳ ವಿಷಯದಲ್ಲಿಯೂ, ವಿಲೀನಗೊಂಡರೆ, ಬೇರೆ ಬೇರೆ ಪ್ರಾಂತ್ಯಗಳಲ್ಲಿ ಏನು ಸಂಬಳ ಸಾರಿಗೆಗಳಿವೆಯೋ ಆ ಮಟ್ಟಕ್ಕೆ ಮೈಸೂರಿನ ಸಂಬಳ ಸಾರಿಗೆಗಳನ್ನು ಹೆಚ್ಚುಮಾಡಬೇಕಾಗಿ ಬರುತ್ತದೆ. ಜೊತೆಗೆ ಈಗ ಅಲ್ಲಿರತಕ್ಕ ಡಿಸ್ಟ್ರಿಕ್ಟುಗಳನ್ನು ಮತ್ತು, ತಾಲ್ಲೂಕುಗಳನ್ನು ದೊಡ್ಡದಾಗಿರುವುವುಗಳನ್ನು ಚಿಕ್ಕ ಚಿಕ್ಕವಾಗಿ ಮಾಡಬೇಕಾಗಿರುವುದರಿಂದ ಅದಕ್ಕಾಗಿ ಹೆಚ್ಚಿಗೆ ಸಿಬ್ಬಂದಿ ನೇಮಕ ಮಾಡಬೇಕಾಗಿರುವುದು ಹೆಚ್ಚಿನ ಖರ್ಚಿಗೆ ಕಾರಣವಾಗಿ ಮೈಸೂರಿಗೆ ಬಹಳ ಕಷ್ಟಬರುತ್ತಧೆ. ಶಾಂತಿ ಪರಿಪಾಲನೆಯ ದೃಷ್ಟಿಯಿಂದಲೂ ಇಷ್ಟೊಂದು ವಿಸ್ತಾರವಾದ ಪ್ರದೇಶವಿದ್ದರೆ ಕಷ್ಟ. ಈ ಎಲ್ಲ ದೃಷ್ಟಿಯಿಂದ ಮೈಸೂರನ್ನು ವಿಸ್ತಾರಗೊಳಿಸುವುದು ಸಮಂಜಸವಲ್ಲವೆಂದು ನನ್ನ ವಾದ. 'ಮನೆಯನ್ನು ಕಟ್ಟದಿರು ಮೂರು ಲೋಕಕ್ಕೆ' ಎಂಬ ನಾಣ್ಣುಡಿಯಂತೆ ನಮ್ಮ ದೇಶವನ್ನು ವಿಪರೀತ ವಿಸ್ತರಗೊಳಿಸುವುದು ಉಚಿತವಲ್ಲ. ಆಂಜನೇಯನು ಚಿಕ್ಕವನಾಗಿದ್ದಾಗ ತನಗೆ ಶಕ್ತಿಯಿದೆಯೆಂದು ಹೆಮ್ಮೆಯಿಂದ ಸೂರ್ಯನನ್ನು ಮುಟ್ಟುತ್ತೇನೆಂದು ಹೋದುದರ ಪರಿಣಾಮವೇನಾಯಿತೆಂಬುದನ್ನು ನಾವು ಈ ಸಂದರ್ಭದಲ್ಲಿ ಅರಿತುಗೊಳ್ಳಬೇಕು. ಇಂದು ನಾವು ಮೈಸೂರನ್ನು ದಕ್ಷತೆಯಿಂದ ಆಳಬಲ್ಲವರಾಗಿದ್ದೇವೆಂದು ಇನ್ನೂ ಇತರ ಭಾಗಗಳನ್ನು ಸೇರಿಸಿಕೊಂಡರೆ ಮುಂದೆ ಕಣ್ಣು ಕಣ್ಣು ಬಿಡಬೇಕಾದ ಪ್ರಮೇಯ ಬರುತ್ತದೆ. ಈ ದೃಷ್ಟಿಯಿಂದ ಮೈಸೂರನ್ನು ವಿಶಾಲಗೊಳಿಸುವುದು ಅಪ್ರಕೃತವೆಂದು ಸೂಚನೆ ಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಟಿ. ಸಿ. ಬಸಪ್ಪ (ತರೀಕೆರೆ).—ಅಧ್ಯಕ್ಷರೇ ಇಲ್ಲಿಯವರೆಗೂ ಶೇಷಾದ್ರಿ ಸಮಿತಿಯವರ ವರದಿಯಮೇಲೆ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಹೀಗೆ ಮಾತನಾಡಿದವರನ್ನು ಎರಡು ಮೂರು ಗುಂಪಾಗಿ ಭಾಗಮಾಡಬಹುದೆಂದು ನನಗೆ ತೋರುತ್ತದೆ. ಕರ್ಣಾಟಕ ಪ್ರಾಂತ್ಯವಾಗಬೇಕೆಂದು ಹೇಳುವವರು ಒಂದು ಗುಂಪು. ಮೈಸೂರು ಮೈಸೂರಾಗಿಯೇ ಉಳಿಯಬೇಕೆಂದು ಹೇಳುವವರು ಇನ್ನೊಂದು ಗುಂಪು, ಇನ್ನು ಕೆಲವರು ಫಸಲಾಲಿ ಕಮಿಷನ್ನಿನವರು ಏನು ತೀರ್ಮಾನ ಕೊಡುತ್ತಾರೋ ಅದನ್ನು ಒಪ್ಪಿಕೊಳ್ಳೋಣ ಎಂದು ಅಭಿಪ್ರಾಯಪಟ್ಟಿದ್ದಾರೆ. ಶ್ರೀಮಾನ್ ತಿಮ್ಮಪ್ಪಗೌಡರ ವಾದವನ್ನು ನೋಡಿದ ಪಕ್ಷಕ್ಕೆ, ಅವರು ಈ ಭಾಷಣವನ್ನು ಫಸಲಾಲಿ ಸಮಿತಿ ನೇಮಕವಾಗುವುದಕ್ಕೆ ಮುಂಚೆಯೇ ಮಾಡಿದ್ದರೆ ಬಹುಶಃ ಚೆನ್ನಾಗಿರುತ್ತಿತ್ತೆಂದು ಕಾಣುತ್ತದೆ. ಈಗಾಗಲೇ ಇಂಡಿಯಾ ಸರ್ಕಾರದವರು ಈ ಕಮಿಷನ್ನನ್ನು ನೇಮಿಸಿದ್ದಾಗಿದೆ; ಅವರ ಹೇಳಿಕೆಯಂತೆ ಪ್ರಾಂತ್ಯ ವಿಂಗಡಣೆ ಆಗಬೇಕಾಗಿದೆ. ಅಂದಮೇಲೆ ಇನ್ನು 15-20 ವರ್ಷಗಳು ಮುಂದಕ್ಕೆ ಹಾಕೋಣವೆನ್ನುವ ಪ್ರಶ್ನೆಯೇ ಇಲ್ಲ. ಈಗಿರತಕ್ಕ ಇಂಡಿಯಾ ದೇಶದ ಸನ್ನಿವೇಶ ನೋಡಿದರೆ; ಈಗ 28 ಸಂಸ್ಥಾನಗಳಿವೆ. ಈ ಸಂಸ್ಥಾನಗಳನ್ನು ಎ. ಬಿ. ಸಿ ತರಗತಿಯ ಸಂಸ್ಥಾನಗಳೆಂದು ವಿಂಗಡಿಸಿರುವುದರಲ್ಲಿ ಭೌಗೋಳಿಕವಾಗಿಯಾಗಲಿ, ಚಾರಿತ್ರಕವಾಗಿಯಾಗಲಿ, ಐತಿಹಾಸಿಕವಾಗಿಯಾಗಲಿ, ಯಾವ ರೀತಿಯಲ್ಲೇ ನೋಡಿದರೂ ನ್ಯಾಯ-ನೀತಿಗಳಿಲ್ಲ. ಅದರಲ್ಲೂ ದಕ್ಷಿಣ ಇಂಡಿಯಾದ ವಿಷಯದಲ್ಲಿ ಬಹಳ ಅನ್ಯಾಯವಾಗಿದೆ. ಇದಕ್ಕೆ ಕಾರಣ ಚಾರಿತ್ರಕ ವಿಷಯವಾಗಿದೆ. ಇಂಗ್ಲೀಷರು ಇದ್ದಾಗ ಆಗಿನ ತಮ್ಮ ಅನುಕೂಲಕ್ಕೆ ತಕ್ಕಂತೆ ವಿಂಗಡಣೆ ಮಾಡಿದರು. ಇದರಿಂದ ದಕ್ಷಿಣ ಇಂಡಿಯಾದವರಿಗೆ ಹೆಚ್ಚಿನ ಕಷ್ಟವಾಗಿದೆಯೇ ಹೊರತು ಉತ್ತರ ಇಂಡಿಯಾದವರಿಗೆ ಇದರಿಂದ ಏನೂ ಧಕ್ಕೆಯಿಲ್ಲ. ಶ್ರೀಮಾನ್ ತಿಮ್ಮಪ್ಪಗೌಡರು ಹೇಳಿದರು, ಇಂಡಿಯಾ ದೇಶದಲ್ಲಿ ಇಂಥ ಅನೇಕ ಕ್ಲಿಷ್ಟವಾದ ಸಮಸ್ಯೆಗಳಿವೆ, ಆದ್ದರಿಂದ ಸದ್ಯಕ್ಕೆ ಈ ಪ್ರಶ್ನೆಯನ್ನು ಮುಂದಕ್ಕೆ ಹಾಕಬಹುದು ಎಂದು ಹೇಳಿದರು. ಆದರೆ, ಅವರೇ ಈ ಸಂದರ್ಭದಲ್ಲಿ ಹೇಳಿದ ಒಂದು ವಿಷಯವನ್ನು ಅರ್ಥಮಾಡಿಕೊಳ್ಳೋಣ. ಅವರು ಪೂಣೆಯಲ್ಲಿ ಓದುತ್ತಿರುವಾಗ ಅಲ್ಲಿನ ಮಹರಾಷ್ಟ್ರದ ಜನರು ಕನ್ನಡಿಗರನ್ನು ಯಾವ ರೀತಿ ತುಚ್ಛವಾಗಿ ಕಾಣುತ್ತಿದ್ದರೆಂಬುದನ್ನು ತಿಳಿಸಿದ್ದಾರೆ. ಮಾನ್ಯ ಶ್ರೀ ತಿಮ್ಮಪ್ಪಗೌಡರು ಮರಾಠಿಗರು ಕನ್ನಡಿಗರಿಗೆ ಇಷ್ಟು ಕಷ್ಟ ಕೊಡುತ್ತಿದ್ದಾರೆಂಬುದನ್ನು ತಿಳಿದಿದ್ದರೂ ಅವರದನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ಭಾಷಾವಾರು ಪ್ರಾಂತ್ಯ ವಿಂಗಡನೆ ಇನ್ನೂ ಮುಂದಕ್ಕೆ ಹೋಗಬಹುದೆಂದು ಹೇಳುವಾಗ ನನ್ನ ಮನಸ್ಸಿಗೆ ವ್ಯಸನವಾಗುತ್ತದೆ.

ಸ್ವಾಮಿ, 1799ನೆಯ ಇಸವಿಯಲ್ಲಿ ಮೈಸೂರು ಯುದ್ಧಕ್ಕೆ ಮುಂಚೆ ಕರ್ಣಾಟಕವೆಲ್ಲಾ ಒಂದಾಗಿತ್ತು. ಈ ಯುದ್ಧವಾದಮೇಲೆ, ನಾಲ್ಕು ಭಾಗವಾಗಿ ಬೊಂಬಾಯಿ ಕೊನೆಯಲ್ಲಿ, ಮದ್ರಾಸಿನ ಕೊನೆಯಲ್ಲಿ ಕನ್ನಡ ಭಾಗಗಳು ವಿಧವಿಧವಾಗಿ ಸೇರಿಕೊಂಡವು. ಆ ಪ್ರಾಂತ್ಯಗಳಲ್ಲಿ ತೆಲುಗು, ತಮಿಳು ಭಾಷೆಗಳವರು ಮೆಜಾರಿಟಿಯಲ್ಲಿದ್ದುದರಿಂದ, ಅವರು ಈ ಅಲ್ಪ ಸಂಖ್ಯಾತರಾದ ಕನ್ನಡಿಗರಿಗೆ ಹೆಚ್ಚಿಗೆ ತೊಂದರೆ ಕೊಡುತ್ತಾ ಬಂದುದರ ದೆಸೆಯಿಂದ ಕರ್ನಾಟಕ ಪ್ರಾಂತ್ಯ ಸಂಕುಚಿತವಾಗುತ್ತಾ ಬರುತ್ತಿದೆ. ಬಹು ಸಂಖ್ಯಾತರಾದ

ಭಾಷಾ ಜನಗಳು ಅಲ್ಪ ಸಂಖ್ಯಾತರಾದ ಭಾಷಾ ಜನಗಳಮೇಲೆ ದಬ್ಬಾಳಿಕೆ ನಡೆಸುತ್ತಾ, ಯಾವ ಸೌಕರ್ಯವನ್ನೂ ಕೂಡ ಕೊಡದೆ ಬರಬರುತ್ತಾ ಪೂರ್ವ ಪಾಕಿಸ್ಥಾನ ಹೇಗೆ ಇಂಡಿಯಾ ದೇಶವನ್ನು ಬಿಟ್ಟು ಹೊರಗೆ ಹೋಗಬೇಕಾಯಿತೋ ಹಾಗೆಯೇ ನಾವೂ ಇನ್ನು 10-15 ವರ್ಷ ಸುಮ್ಮನಿದ್ದರೆ ಮೈಸೂರುದೇಶದ ಕರ್ಣಾಟಕದಲ್ಲಿಯೂ ಕನ್ನಡ ಮಾತನಾಡುವವರೂ ಇಲ್ಲದಂತಾಗುವ ಪರಿಸ್ಥಿತಿ ಬಂದೀತೆಂದು ನನಗನ್ನಿಸುತ್ತದೆ. ನಾವು ಮೈಸೂರಿನವರು, ಸುಖವಾಗಿದ್ದೇವೆ, ಮೈಸೂರೇತರ ಕನ್ನಡಿಗರ ಕಷ್ಟ ನಮಗೇಕೆ, ಏನಾದರೂ ಮಾಡಿಕೊಳ್ಳಲಿ ಎಂದು ಅನೇಕ ಸ್ನೇಹಿತರು ಹೇಳಿದರು. ಈ ವಾದ ಸಮಂಜಸವಾದದ್ದಲ್ಲ. ನಮ್ಮಲ್ಲಿಯೂ ಹರಿಜನರಿದ್ದಾರೆ. ಕೆಲವು ಹಿಂದುಳಿದ ಡಿಸ್ಟ್ರಿಕ್ಟುಗಳೂ ನಮ್ಮಲ್ಲಿವೆ. ಅವರು ಹಿಂದುಳಿದಿರುವಾಗ, ಅವರ ಕಷ್ಟ ನಮಗೇಕೆ, ಅವರನ್ನೇ ಬೇರೆ ಪ್ರಾಂತ್ಯಕ್ಕೆ ಕಳುಹಿಸೋಣ, ಚೆನ್ನಾಗಿರುವವರು ಚೆನ್ನಾಗಿಯೇ ಇರೋಣ ಎಂದು ಹೇಳುವುದು ನ್ಯಾಯವೇ? ಆ ಕರ್ಣಾಟಕ ಪ್ರಾಂತ್ಯದವರೂ ನಮ್ಮ ಸ್ನೇಹಿತರು, ಬಂಧುಗಳು. ಅವರು ಹಿಂದುಳಿದಿದ್ದಾರೆಂದು ಹೇಳಿ ಅವರು ನಮ್ಮ ಮಟ್ಟಕ್ಕೆ ಬರುವವರೆಗೂ ಬೇರೆ ಪ್ರಾಂತ್ಯ ಮಾಡಿಕೊಳ್ಳಲಿ ಎಂದು ಹೇಳುವುದು ಚೆನ್ನಾಗಿಲ್ಲ. ಅದು ಸೂಕ್ತವೂ ಅಲ್ಲ. ಈ ರೀತಿಯ ನಿರ್ಲಕ್ಷ್ಯದಿಂದಲೇ ಇತರ ಕನ್ನಡಿಗರಿಗೆ ತೊಂದರೆಯಾಗುತ್ತಿದೆಯೆಂಬುದನ್ನು ನಾನು ಸೂಚಿಸಬಯಸುತ್ತೇನೆ. ಈ ಕಾರಣದಿಂದಲೇ ಬಾಕಿ ಬಹುಸಂಖ್ಯಾತ ಭಾಷಾ ಜನಗಳ ಕಿರುಕುಳಕ್ಕೆ ಸಿಕ್ಕಿ ಯಾವ ಪ್ರಗತಿಯನ್ನೂ ಹೊಂದದೆ ಹಿಂದುಳಿಯಲು ಕಾರಣವಾಗಿರುವುದರಿಂದ ನಾವು ಈಗಲಾದರೂ ಮುನ್ನೆಚ್ಚರಿಕೆ ತೆಗೆದುಕೊಂಡು ಆ ಸಹೋದರರನ್ನೂ ನಮ್ಮ ಸಂಗಡ ಸೇರಿಸಿಕೊಂಡು ಅತ್ಯಂತ ವೈಭವಯುತವಾಗಿ ಕರ್ಣಾಟಕ ಸಂಸ್ಕೃತಿಯು ಇನ್ನೂ ದೇದೀಪ್ಯಮಾನದಿಂದ ಬೆಳಗುವಂತೆ ಮಾಡಲು ಪ್ರಯತ್ನಿಸುವುದೊಳ್ಳೆಯದಲ್ಲವೆ?

4-30 P.M.

ಈಗಾಗಲೇ ಶ್ರೀ ಅನಂತರಾಮರ್ರವರು ಹೇಳಿರುವ ಹಾಗೆ, ಆಂಧ್ರರಿಗೆಲ್ಲಾ ಆಂಧ್ರದೇಶದ ಜನರಮೇಲೆ ಹೆಚ್ಚು ಪ್ರೇಮವಿರುತ್ತದೆ. ತಮಿಳರಿಗೆ ತಮಿಳು ದೇಶದ ಜನರಮೇಲೆ ಹೆಚ್ಚು ಪ್ರೇಮವಿರುತ್ತದೆ. ಇದರಂತೆಯೇ ಆಯಾ ಜನಾಂಗದವರಿಗೆ ಮತ್ತು ಭಾಷೆಯವರಿಗೆ ಅವರವರ ದೇಶದಮೇಲೆ ಮತ್ತು ಭಾಷಾ ಜನಗಳಮೇಲೆ ಹೆಚ್ಚಿನ ಅಭಿಮಾನವಿದ್ದೇಇರುತ್ತದೆ. ಆದರೆ ಆ ರೀತಿ ಇತರ ಭಾಷಾವಾರು ಪ್ರಾಂತ್ಯಗಳೆಲ್ಲಾ ಅಭಿವೃದ್ಧಿಗೆ ಬರಲಿ, ಈ ಕನ್ನಡನಾಡು ಮತ್ತು ಕನ್ನಡಿಗರ ಏಳಿಗೆ ಏನಾದರೂ ಆಗಲಿ ಎಂದು ಹೇಳುವುದು ಬಹಳ ತಪ್ಪು. ಸ್ವಾಮಿ, ದೇಶಕ್ಕೆ ಸ್ವಾತಂತ್ರಬಂದಿದೆ. ನಾವೆಲ್ಲರೂ ಹೀಗೇ ಯಾವಾಗ್ಲೂ ಸುಖವಾಗಿರುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ದೇಶದಲ್ಲಿ ಎಲ್ಲಾ ಜನಾಂಗಗಳೂ ಸುಖವಾಗಿರಬೇಕು. ಇಲ್ಲದಿದ್ದರೆ ಕ್ರಾಂತಿಕಾರಕ ಬದಲಾವಣೆಗಳಾಗುವುದು ಖಂಡಿತ. ದೇಶಕ್ಕೆ ಲಭಿಸಿರತಕ್ಕ ಸ್ವಾತಂತ್ರ್ಯ ಉಳಿಯಬೇಕಾದರೆ ದೇಶದಲ್ಲಿರತಕ್ಕಂಥ ಜನರೆಲ್ಲಾ ಸುಖವಾಗಿರಲೇಬೇಕು. ಇಷ್ಟೇ ಅಲ್ಲದೆ ದೇಶ ದೊಡ್ಡದಾಗಿದ್ದು, ಜನಾಂಗವೂ ಸಹ ದೊಡ್ಡದಾಗಿದ್ದರೆ ಆ ದೇಶದ ಮೇಲೆ ಯಾರಾದರೂ ಧಾಳಿ ಮಾಡಲು ಉಪಕ್ರಮಿಸಿದರೆ ಅದನ್ನು ತಡೆಗಟ್ಟಲು ಮತ್ತು ನಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ನಮಗೊಂದು ಹೆಚ್ಚಿನ ಅವಕಾಶವಿರುತ್ತದೆ. ಆದರೆ ಈ ರೀತಿಯಾಗಿ ಒಂದು ತತ್ವದ ಆಧಾರದಮೇಲೆ ಒಂದು ದೇಶವನ್ನು ಕಟ್ಟಬೇಕೆಂದು ಹೇಳುವಾಗ ಯಾರೂ ಈ ಆರ್ಥಿಕ ದೃಷ್ಟಿಯನ್ನು ಗಮನದಲ್ಲಿಟ್ಟುಕೊಳ್ಳದೆ ಅದನ್ನು ಮಾಡಿ ಎಂದು ಹೇಳುವುದಿಲ್ಲ. ಅಕ್ಕಪಕ್ಕದಲ್ಲಿ ವಾಸ ಮಾಡತಕ್ಕಂಥ ಒಂದು ಭಾಷೆಯ ಜನರು ಅಧಿಕ ಸಂಖ್ಯೆಯಲ್ಲಿ ಎಲ್ಲೆಲ್ಲಿ ವಾಸಮಾಡುತ್ತಿದ್ದಾರೋ ಅಂಥವರನ್ನೆಲ್ಲಾ ಒಟ್ಟುಕೂಡಿಸಿ ಒಂದು ಪ್ರಾಂತ್ಯವನ್ನು ಮಾಡಬೇಕೆಂದು ಹೇಳಬಹುದೇ ಹೊರತು ಬೊಂಬಾಯಿ ಪಟ್ಟಣದಲ್ಲಿ ಒಂದು ಭಾಗದಲ್ಲಿ ಹೆಚ್ಚು ಕನ್ನಡಿಗರಿದ್ದರೆ ಆ ಭಾಗವನ್ನು ಕರ್ನಾಟಕ ಪ್ರಾಂತ್ಯಕ್ಕೆ ಸೇರಿಸಿ ಎಂದು ಹೇಳಲು ಸಾಧ್ಯವಿಲ್ಲ. ಬಾಕಿ ಎಲ್ಲಾ ಅಂಶಗಳನ್ನೂ ಗಮನದಲ್ಲಿಟ್ಟುಕೊಂಡು ಅಂತು ಮುಖ್ಯವಾಗಿ ಭಾಷೆಯ ಆಧಾರದಮೇಲೆ ಪ್ರಾಂತ್ಯ ವಿಂಗಡನೆ ಮಾಡುವುದು ಅತಿ ಸಾಧುವೂ, ನ್ಯಾಯವೂ ಆದ ಮಾರ್ಗವೆಂದು ನಾನು ಹೇಳಬಯಸುತ್ತೇನೆ. ಇದು ಬಹಳ ಆವಶ್ಯಕವಾದಂಥ ವಿಚಾರ. ಆದರೆ ಈಗಾಗಲೇ ಮಾತನಾಡಿರತಕ್ಕ ಸದಸ್ಯರ ಪೈಕಿ ಶ್ರೀ ಎ. ವಿ. ನರಸಿಂಹರೆಡ್ಡಿಯವರೂ ಮತ್ತು ಡಿ. ದೇವರಾಜ ಅರಸಿನವರೂ ಈ ಏಕೀಕರಣ ಪ್ರಾಂತ್ಯಕ್ಕೆ ಬಹಳ ಜನರ ವಿರೋಧಾಭಿಪ್ರಾಯವಿದೆ ಎಂದು ಹೇಳಿದರು. ಅಷ್ಟೇ ಅಲ್ಲದೆ ಅವರು ಮುಂದುವರಿದು ಭಾಷಣಮಾಡುತ್ತ ಈ ಅಸೆಂಬ್ಲಿಯಲ್ಲೇ ಸುಮಾರು 60 ಜನ ಸದಸ್ಯರು ಈ ಕರ್ಣಾಟಕ ಪ್ರಾಂತ್ಯ ನಿರ್ಮಾಣಕ್ಕೆ ವಿರೋಧವಾಗಿದ್ದಾರೆ ಅಂತಲೂ ಹೇಳಿದರು. ಆದರೆ ಇದೆಲ್ಲಾ ಅವರ ಮನಸ್ಸಿನಲ್ಲಿರುವಂಥ ಒಂದು ವಿಷನ್ ಥಿಂಕಿಂಗ್ ಎಂದು ಕಾಣುತ್ತದೆ. ಅಂದರೆ ಅವರ ಸ್ವಂತ ಅಭಿಪ್ರಾಯದ ಅಳತೆಯ ಕೋಲಿನಿಂದ ವಿಧಾನಸಭಾ ಸದಸ್ಯರ ಅಭಿಪ್ರಾಯವನ್ನು ಅಳತೆಮಾಡುತ್ತಿದ್ದಾರೆ. ಮುಕ್ಕಾಲು ಭಾಗದ ಜನರು ಇದಕ್ಕೆ ವಿರೋಧವಾಗಿದ್ದಾರೆಂದು ಅವರು ಹೇಳಿದರು. ಇದನ್ನು ಅವರು ಯಾವ ಗಣಿತ ಶಾಸ್ತ್ರದ ಆಧಾರದಮೇಲೆ ಹೇಳಿದ್ದಾರೋ ಅದು ನನಗಂತೂ ಹೊಳೆಯುತ್ತಿಲ್ಲ. ಈಗಾಗಲೇ ದೇಶಾದ್ಯಂತವೂ ಇರತಕ್ಕ ಜನರೆಲ್ಲರೂ ತಕ್ಷಣ ಈ ಕರ್ಣಾಟಕ ಪ್ರಾಂತ್ಯ ರಚನೆಯಾಗಬೇಕೆಂದು ಎಲ್ಲಾ ಪತ್ರಿಕೆಗಳ ಮೂಲಕವೂ ಪ್ರಕಟಣೆಗಳನ್ನು ಹೊರಡಿಸುತ್ತಲೇ ಇದ್ದಾರೆ. ಆದುದರಿಂದ ಈಗಾಗಲೇ ಮಾತನಾಡಿರತಕ್ಕಂಥ ಆ ಶ್ರೀ ಎ. ವಿ. ನರಸಿಂಹರೆಡ್ಡಿಯವರು ಮತ್ತು ಡಿ. ದೇವರಾಜಅರಸ್ ಇವರುಗಳು ಹೇಳಿರತಕ್ಕಂಥ ಅಭಿಪ್ರಾಯಗಳು ಅವರ ಸ್ವಂತ ಅಭಿಪ್ರಾಯಗಳಾಗಿವೆ. ದೇಶದಲ್ಲಿ ಮುಕ್ಕಾಲು ಭಾಗದ ಜನರು ಈ ಕರ್ಣಾಟಕ ಪ್ರಾಂತ್ಯ ಬೇಗ ನಿರ್ಮಾಣವಾಗಬೇಕೆಂದು ಹೇಳಿದ್ದಾರೆ. ಈ ಅಸೆಂಬ್ಲಿಯಲ್ಲಿ ಕೂಡ ಮುಕ್ಕಾಲುಪಾಲು ಸದಸ್ಯರು ರಾಜ್ಯಗಳ ಪುನರ್ವಿಂಗಡಣೆಯಾಗಬೇಕು, ಕರ್ಣಾಟಕ ಪ್ರಾಂತ್ಯ ರಚನೆಯಾಗಬೇಕೆಂದು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. The majority of the members are for forming Karnataka as early as possible.

ಸ್ವಾಮಿ ಇನ್ನು ಶ್ರೀ ಜಿ. ಎ. ತಿಮ್ಮಪ್ಪಗೌಡರು ಮಾತನಾಡುತ್ತ ಕಾಂಗ್ರೆಸ್ ಸಂಸ್ಥೆಯವರು ಸಮಯಕ್ಕೆ ತಕ್ಕಹಾಗೆ ಈ ವಿಚಾರದಲ್ಲಿ ಮಾತನಾಡಿದ್ದಾರೆಯೇ ಹೊರತು ಇದು ಆಗಲೇ ಬೇಕೆಂಬ ಉದ್ದೇಶ ಕಾಂಗ್ರೆಸ್ ಸಂಸ್ಥೆಗೇನೂ ಇರಲಿಲ್ಲ ಎಂದು ಹೇಳಿದರು. ಎಂ. ಪಿ. ಸಿ. ಸಿ. ಯವರು ಈ ವಿಚಾರವಾಗಿ ಯಾವತ್ತೂ ಒತ್ತಾಯ ಮಾಡಿಲ್ಲ ಎಂದು ಹೇಳಿದರು. ಮೈಸೂರು ವಿಶಾಲವಾಗಬೇಕೆಂದು ಎಲ್ಲಾ ಪಕ್ಷಗಳು ಹೇಳುತ್ತಿರುವಾಗ ಇವರು ಈ ರೀತಿ

(ಶ್ರೀ ಟಿ. ಸಿ. ಬಸಪ್ಪ.)

ಹೇಳಿದ್ದು ಬಹಳ ಆಶ್ಚರ್ಯ. ಈ ಭಾಷಾವಾರು ಪ್ರಾಂತ್ಯಗಳ ನಿರ್ಮಾಣವನ್ನೂ ಮತ್ತು ಕರ್ಣಾಟಕ ಪ್ರಾಂತ್ಯ ನಿರ್ಮಾಣವನ್ನೂ ಕಾಂಗ್ರೆಸ್ ಸಂಸ್ಥೆ ಬಹಳ ಹಿಂದಿನಿಂದಲೂ ಒಪ್ಪಿಕೊಂಡು ಆ ತತ್ವವನ್ನು ಆದಷ್ಟು ಬೇಗ ಆಚರಣೆಯಲ್ಲಿ ತರಬೇಕೆಂದಿರುವಾಗ ಕೆಲವು ಮಾನ್ಯ ಸದಸ್ಯರು ಕಾಂಗ್ರೆಸ್ಸಿನವರು, ಈ ವಿಚಾರ ದಲ್ಲಿ ಇನ್ನೂ ಭಿನ್ನಾಭಿಪ್ರಾಯ ಹೊಂದಿದ್ದಾರೆಂದು ಹೇಳಿರತಕ್ಕದ್ದು ಬಹಳ ಆಶ್ಚರ್ಯವನ್ನುಂಟುಮಾಡಿರು ತ್ತದೆ. ಇಷ್ಟೇ ಅಲ್ಲದೆ ಹೀಗೆ ಆದಿಯಿಂದಲೂ ಕಾಂಗ್ರೆಸ್ ಸಂಸ್ಥೆ ಮತ್ತು ಇತರ ಅನೇಕ ಸಂಘ ಸಂಸ್ಥೆಗಳು ಈ ತತ್ವವನ್ನು ಅಂಗೀಕಾರಮಾಡಿದ್ದಾಗ್ಯೂ ಈ ರಾಜ್ಯಗಳ ಪುನರ್ವಿಂಗಡಣೆಯಿಂದ ದೇಶದಲ್ಲಿ ಅನೈಕಮತ್ಯ ಉಂಟಾಗುತ್ತದೆಂದು ಹೇಳಿರತಕ್ಕದ್ದು ಇನ್ನೂ ಪರಮಾಶ್ಚರ್ಯವನ್ನುಂಟುಮಾಡಿದೆ. ಮಹಾತ್ಮ ಗಾಂಧಿಯವರ ಹೆಸರನ್ನೂ ಸಹ ಬಳಸಿ "ಅವರು ಈ ಭಾಷಾವಾರು ಪ್ರಾಂತ್ಯಗಳ ನಿರ್ಮಾಣದ ವಿಚಾರ ವನ್ನು ಆಗಿನ ಕಾಲ ಮತ್ತು ಸನ್ನಿವೇಶಗಳಿಗೆ ತಕ್ಕಂತೆ ಹೇಳಿದ್ದರೇ ಹೊರತು ಅವರಿಗೆ ಈ ಬಗ್ಗೆ ಅಷ್ಟಾಗಿ ಅಭಿಪ್ರಾಯವಿರಲಿಲ್ಲ" ಎಂದು ಕೂಡ ಹೇಳಿದ್ದಾರೆ. ಮಹಾತ್ಮ ಗಾಂಧಿಯವರು ಈ ಬಗ್ಗೆ ಏನು ಹೇಳಿದ್ದಾರೆಂಬುದನ್ನೀಗ ನೋಡೋಣ.

"The creation of Karnataka as a separate province cannot be resisted and I cherish the idea of Karnataka Province being formed."

ಅವರು ಹೀಗೆಂದು ಹೇಳಿದ್ದಾರೆ. ನೆಹರೂರವರ ಸಮಿತಿ ಯವರೂ ಕೂಡ ಈ ವಿಚಾರದಲ್ಲಿ ಒಂದು ನಿರ್ಧಾರವಾದ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಅದು ಈರೀತಿ ಇದೆ.

"It is well recognised that rapid progress in education as well as in general culture and in most departments of life depends on language. If a foreign language is the medium of instruction, business and affairs and the life of the country must necessarily be stunted. No democracy can exist where a foreign language is used for these purposes. A democracy must be well informed and must be able to understand and follow public affairs in order to take an effective part in them. It is inconcievable that a democracy can do this if a foreign language is largely used. It becomes essential, therefore, to conduct the business and politics of a country in a language which is understood by the masses. So far as the provinces are concerned this must be the provincial language. We are certainly not against the use of English. Indeed from the necessities of the situation we feel that English must, as at present, continue for some time to come to be the most convenient medium for debate in the Central Legislature. We also believe that a foreign language—and this is likely to be English—is essential for us to develop contacts with the thoughts and the science and life of other countries. . . ."

ಹೀಗೆ ಆ ನೆಹ್ರೂರವರ ಸಮಿತಿಯವರೂ ಕೂಡ ಈ ಪ್ರಾಂತ್ಯಗಳ ನಿರ್ಮಾಣದ ವಿಚಾರವಾಗಿ ಹೇಳುತ್ತ ಪ್ರಾಂತೀಯ ಭಾಷೆಗೆ ಬಹಳ ಪ್ರಾಮುಖ್ಯತೆಯನ್ನು ಕೊಡಬೇಕೆಂದು ಅವರ ವರದಿಯಲ್ಲೇ ನಮೂದಿಸಿರು ತ್ತಾರೆ. ಇದೆಲ್ಲವೂ ಆದ ಬಳಿಕ ಇತ್ತೀಚೆಗೆ ನೆಹ್ರೂ ಅವರು ಕರ್ಣಾಟಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ದ್ದಂಥ ಶ್ರೀ ಎಸ್. ನಿಜಲಿಂಗಪ್ಪನವರಿಗೆ ಬರೆದಿರ ತಕ್ಕ ತಾರೀಖು 28-10-1953ರ ಪತ್ರ ಒಂದರಲ್ಲಿ ಹೀಗೆ ಬರೆದಿರುತ್ತಾರೆ:

"As I have said above, Karnataka's claim for a separate State is not only well known but is generally accepted. The question is in what manner to give effect to it. I do not think that Mysore offers much difficulty."

ಈ ಎಲ್ಲಾ ಕಾರಣಗಳಿಂದ ನಾನು ಹೇಳುವುದೇ ನೆಂದರೆ ಈ ಕರ್ಣಾಟಕ ಪ್ರಾಂತ್ಯ ರಚನೆಯ ಬಗ್ಗೆ ಅವರಾರಿಗೂ ಯಾವ ಭಿನ್ನಾಭಿಪ್ರಾಯವೂ ಇರು ವುದಿಲ್ಲವೆಂಬುದು ಸರ್ವರಿಗೂ ವೇದ್ಯವಾಗುತ್ತದೆ. ಆದರೆ ಮೈಸೂರಿನಲ್ಲಿ ಮಾತ್ರ ಕೆಲವರಿಗೆ ಈ ವಿಚಾರದಲ್ಲಿ ಭಿನ್ನಾಭಿಪ್ರಾಯವಿರಬಹುದು. ಆದರೆ ಆ ಭಿನ್ನಾಭಿ ಪ್ರಾಯಕ್ಕೆ ನಿಜವಾದ ಆಧಾರಗಳು ಮಾತ್ರ ಯಾವವೂ ಇರುವುದಿಲ್ಲವೆಂದು ನನಗೆ ಹೊಳೆಯುತ್ತಿದೆ. ಅಂತೂ ಒಟ್ಟಿನಲ್ಲಿ ಹೇಳುವುದಾದರೆ ದೇಶದಲ್ಲಿರತಕ್ಕಂಥ ಜನ ರೆಲ್ಲರೂ ಇದಕ್ಕೆ ಒಪ್ಪಿದ್ದಾರೆಂದು ನಾನು ಖಚಿತವಾಗಿ ಹೇಳಲಿಚ್ಛಿಸುತ್ತೇನೆ.

ಈಗ ನಮ್ಮ ಸಭೆಯ ಮುಂದೆ ಮಂಡಿಸಿರತಕ್ಕಂಥ ಈ ಶೇಷಾದ್ರಿ ವರದಿಯಲ್ಲಿ ಅವರು ಕೆಲಕೆಲವು ಅಭಿಪ್ರಾಯ ಗಳನ್ನು ಮಾತ್ರ ಕೊಟ್ಟಿದ್ದಾರೆ. ಇನ್ನು ಕೆಲವು ಅಂಕಿ ಅಂಶಗಳು ದೊರೆತಿಲ್ಲವೆಂದು ಹೇಳಿದ್ದಾರೆ. ಆದುದರಿಂದ ಈ ವರದಿ ಸಂಪೂರ್ಣವಾದುದಲ್ಲವೆಂಬುದು ಸರ್ವರಿಗೂ ವೇದ್ಯವಾಗುತ್ತದೆ. ಇದೊಂದು ಸಂಪೂರ್ಣ ವರದಿ ಯೆಂದು ಅನ್ನಿಸಕೊಳ್ಳಬೇಕಾಗಿದ್ದರೆ ಇದರಲ್ಲಿ ಇನ್ನೂ ಅನೇಕ ವಿಷಯಗಳನ್ನು ಅವರು ಅಡಕಮಾಡಬೇಕಾ ಗಿತ್ತು. ಆದಕಾರಣ ನಾವೀದಿವಸ ನಮ್ಮ ಅಭಿಪ್ರಾಯ ಗಳನ್ನು ವ್ಯಕ್ತಪಡಿಸುವಾಗ ನಾವು ಇದರಲ್ಲಿ ಕಂಡ ಅಂಕಿ ಅಂಶಗಳಮೇಲೆ ಅಷ್ಟು ಗಮನವಿಟ್ಟು ಮಾತನಾಡಬೇ ಕಾದ ಅವಶ್ಯಕತೆಯಿಲ್ಲವೆಂಬುದು ತಾನಾಗಿಯೇ ವೇದ್ಯ ವಾಗುತ್ತದೆ. ಆದರೆ ಕೇಂದ್ರಸರ್ಕಾರದವರು ನೇಮಿಸಿರ ತಕ್ಕಂಥ ಫಸಲಾಲಿ ಸಮಿತಿಯವರೂ ಸಹ ಮೈಸೂರು ಸಂಸ್ಥಾನಕ್ಕೆ ಬಂದು ಇಲ್ಲಿಯ ಜನರ ಅಭಿಪ್ರಾಯವನ್ನು ಶೇಖರಣೆ ಮಾಡಿಕೊಂಡು ಹೋಗಿದ್ದಾರೆ. ಆದರೆ ಈ ದಿವಸ ಈ ರಾಜ್ಯಗಳ ಪುನರ್ವಿಂಗಡಣೆಯಾಗ ಬೇಕೆಂದು ಹೇಳುವಾಗ ನಮ್ಮ ದೇಶದ ಕೋಲಾರ ಮತ್ತು ಚಿತ್ರದುರ್ಗ ಜಿಲ್ಲೆಗಳನ್ನು ತೆಗೆದುಕೊಂಡು ಹೋಗಿ

ಬಂಗಾಳಕ್ಕೆ ಸೇರಿಸಬೇಕೆಂದರೆ ಸಾಧ್ಯವಾಗುತ್ತದೆಯೇನು ? ಆ ರೀತಿ ಮಾಡಬೇಕೆಂದು ಯಾರೂ ಹೇಳುವುದಿಲ್ಲ. ಅದು ಸಾಧ್ಯವೂ ಇಲ್ಲ. ಆದರೆ ಅಡ್ಮಿನಿಸ್ಟ್ರೇಷನ್ನಿಗೆ ಅನುಕೂಲವಾಗತಕ್ಕ ರೀತಿಯಲ್ಲಿ ನಮ್ಮ ಅಕ್ಕಪಕ್ಕದ ಪ್ರಾಂತ್ಯಗಳಲ್ಲಿ—ನಮ್ಮ ದೇಶಕ್ಕೆ ಹೊಂದಿಕೊಂಡಿರುವಂಥ ಬೊಂಬಾಯಿ, ಮದ್ರಾಸು, ಹೈದರಾಬಾದ್ ಮತ್ತು ಕೊಡಗು ಈ ಪ್ರಾಂತ್ಯಗಳಲ್ಲಿ ಹೆಚ್ಚು ಭಾಗ ಕನ್ನಡ ಮಾತನಾಡುವಂಥ ಭಾಗಗಳು ಯಾವ ಯಾವವು ಇವೆಯೋ ಅಂಥ ಭಾಗಗಳನ್ನು ಮಾತ್ರ ಸೇರಿಸಿ ಒಂದು ಪ್ರಾಂತ್ಯ ನಿರ್ಮಾಣಮಾಡಬೇಕೆಂದು ಹೇಳುವುದರಲ್ಲಿ ತಪ್ಪೇನಿದೆ? ಈ ದಿವಸ ಭಾಷೆಯ ಆಧಾರದಮೇಲೆ ಆಂಧ್ರಪ್ರಾಂತ್ಯ ನಿರ್ಮಾಣವಾಗಿಲ್ಲವೇನು ? ಈ ಭಾಷೆ ಆಧಾರದಮೇಲೆಯೇ ಆ ಆಂಧ್ರ ಪ್ರಾಂತ್ಯ ನಿರ್ಮಾಣವಾಯಿತು. ಆಗ ಅದರಲ್ಲಿ ಅಡಕ ಮಾಡಲು ಸಾಧ್ಯವಾಗದೆ ಇದ್ದಂಥ ಕನ್ನಡ ಪ್ರದೇಶವಾಗಿದ್ದ ಆ ಬಳ್ಳಾರಿ ಜಿಲ್ಲೆಯನ್ನು ನಮ್ಮ ಮೈಸೂರಿಗೆ ಸೇರಿಸಿ ಕೊಟ್ಟಿದ್ದಾರೆ.

ಯಾರು ಏನೇ ಮಾತಾಡಲಿ, ಈಗ ಪ್ರಾಂತಗಳನ್ನು ವಿಂಗಡನೆ ಮಾಡಬೇಕಾದರೆ, ಭಾಷಾದೃಷ್ಟಿಯೇ ಮುಖ್ಯವೆಂದು ನಾನು ತಿಳಿದುಕೊಂಡಿದ್ದೇನೆ. ಮುಂದೆಯೂ ಸಹ ಇದೇ ರೀತಿ ವಿಂಗಡನೆಯಾಗುವುದಕ್ಕೆ ಅವಕಾಶವಿದೆ. ಇನ್ನೊಂದು ವಿಷಾದದ ಸಂಗತಿಯೆಂದರೆ, ಶೇಷಾದ್ರಿ ಸಮಿತಿಯವರು ತಮ್ಮ ವರದಿಯಲ್ಲಿ ಹೇಳಿರುವ ವಿಚಾರ,

> "ಮೇಲೆ ಕಂಡ ಸರ್ವೆ ಪರಿಶೀಲನೆಯಿಂದ, ಸರಹದ್ದುಗಳನ್ನು ಎಷ್ಟೇ ಜಾಗರೂಕತೆಯಿಂದ ನಿರ್ಧರಿಸಿದರೂ, ಭಾಷಾವಾರು ಆಧಾರದ ಮೇಲೆ ಜನರನ್ನು ವರ್ಗಾಯಿಸುವಂತೆ ನಾವು ಉದ್ದೇಶಿಸಿದ ಹೊರತು ಬೇರೆ ಬೇರೆ ಭಾಷೆಗಳನ್ನಾಡತಕ್ಕ ಅಲ್ಪ ಸಂಖ್ಯಾತರನ್ನು ಬಿಟ್ಟು ಬಿಡುವುದಕ್ಕೆ 'ಸಾಧ್ಯವಿಲ್ಲವೆಂಬುದು ನಮಗೆ ಸ್ಪಷ್ಟವಾಗಿ ಕಂಡುಬರುತ್ತದೆ. ಭಾಷಾವಾರು ಅಧಾರದಮೇಲೆ ಪ್ರದೇಶಗಳ ಪುನರ್ವಿಂಗಡನೆಯ ಸಮಸ್ಯೆಯನ್ನು ಬಗೆಹರಿಸುವುದು ನಾವು ಭಾವಿಸುವಷ್ಟು ' ಸುಲಭಸಾಧ್ಯವಾದ ಸಮಸ್ಯೆಯಲ್ಲವೆಂಬುದು ನಮಗೆ ವ್ಯಕ್ತವಾಗುವುದು."

ಬೊಂಬಾಯಿ ಪಟ್ಟಣದಲ್ಲಿರತಕ್ಕ ಕನ್ನಡಿಗರನ್ನು ಇಲ್ಲಿಗೆ ವರ್ಗಾಯಿಸಿ ಇಲ್ಲಿರತಕ್ಕ ಬೇರೆ ಭಾಷೆಮಾತನಾಡುವ ಜನಗಳನ್ನು ಬೇರೆ ಕಡೆ ವರ್ಗಾಯಿಸಬೇಕಾಗುತ್ತದೆ ಎಂಬ ಅಭಿಪ್ರಾಯ ಅವರಿಗೆ ಬಂತಲ್ಲಾ ಎಂದು ವಿಷಾದವಾಗುತ್ತದೆ. ಮುಖ್ಯವಾಗಿ ಭಾಷೆಯ ಆಧಾರದಮೇಲೆ contiguous areas ಸೇರಿಸಿಕೊಂಡು ಪ್ರಾಂತಗಳನ್ನು ಮಾಡುವುದೇ ಸರಿಯಾದ ಮಾರ್ಗವೆಂದು ತಿಳಿದುಕೊಂಡಿದ್ದೇನೆ.

ಇನ್ನು assets ಮತ್ತು liabilities ವಿಚಾರ ಹೇಳಿದರು. ಮುಖ್ಯ ಮಂತ್ರಿಗಳು ಆಂಧ್ರ ಬಿಲ್ಲಿನಮೇಲೆ ಮಾತನಾಡಬೇಕಾದರೂ ಇದೇ ಪ್ರಶ್ನೆ ಬಂತು. ಅನೇಕರು ಬಳ್ಳಾರಿ ತೆಗೆದುಕೊಂಡರೆ ನಮಗೆ ನಷ್ಟವಾಗುತ್ತದೆ, ತೆಗೆದು ಕೊಳ್ಳಬೇಕಾಗಿಲ್ಲವೆಂದು ವಾದ ಮಾಡಿದರು. ಆದರೆ, ಮಾನ್ಯ ಮುಖ್ಯ ಮಂತ್ರಿಗಳು "ಉತ್ತರೋತ್ತರ ಬಳ್ಳಾರಿಯಿಂದ ನಷ್ಟವಾಗುವುದಕ್ಕಿಂತ ಅನುಕೂಲವಾಗುತ್ತದೆ" ಎಂದು ಹೇಳಿದರು. ಇದೇ ದೃಷ್ಟಿಯನ್ನು ಇಡೀ ಕರ್ಣಾಟಕದ ಪ್ರಾಂತ್ಯ ರಚನೆಯ ವಿಚಾರದಲ್ಲಿ ಇಟ್ಟುಕೊಳ್ಳಬೇಕು. ನಾನು ನೋಡಿದ್ದರಲ್ಲಿ ಇಡೀ ಇಂಡಿಯಾ ದೇಶದಲ್ಲಿ ಎಲ್ಲಕ್ಕಿಂತಲೂ ಸೊಗಸಾದ ಮಲೆನಾಡಿನ ಪ್ರಕೃತಿ ಸೌಂದರ್ಯ, ಖನಿಜ ವಸ್ತುಗಳು, ನೀರಾವರಿಯ ಅವಕಾಶ ಮತ್ತು ವಿದ್ಯುಚ್ಛಕ್ತಿಯ ಅವಕಾಶ—ಇವನ್ನೆಲ್ಲಾ ಉಪಯೋಗಿಸಿಕೊಂಡ ಪಕ್ಷದಲ್ಲಿ ಕರ್ಣಾಟಕ ಪ್ರಾಂತ ಇಡೀ ಭರತ ಖಂಡದಲ್ಲಿ ಹೆಸರುವಾಸಿಯಾದ ಮತ್ತು ಒಂದು ಸುಂದರವಾದ ಹೆಚ್ಚು ಸಂಪತ್ತಿನ ಪ್ರಾಂತ್ಯವಾಗುತ್ತದೆ ಎನ್ನುವುದರಲ್ಲಿ ಏನೇನೂ ಅನುಮಾನವಿಲ್ಲ. ಈ ಬಗೆಯ ಕರ್ಣಾಟಕ ಪ್ರಾಂತವಾಗಬೇಕು. ತಾತ್ಕಾಲಿಕ ಹಣಕಾಸಿನ ಪರಿಸ್ಥಿತಿಯ ದೃಷ್ಟಿಯಿಂದಲೇ ನೋಡದೆ ದೇಶದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಮತ್ತು ಮುಂದಿನ ಭವ್ಯ ಆದರ್ಶವನ್ನು ಗಮನದಲ್ಲಿಟ್ಟುಕೊಂಡು ಮುಖ್ಯವಾಗಿ ನಮ್ಮ ಭಾಷೆ ಮತ್ತು ಸಂಸ್ಕೃತಿಯನ್ನು ಬೆಳೆಸಲು ಅನುಕೂಲವಾಗುವುದರಲ್ಲಿ ಸಂಶಯವಿಲ್ಲ ಎಂಬ ದೃಷ್ಟಿಯಿಂದ ಕರ್ಣಾಟಕ ಪ್ರಾಂತ್ಯ ಮಾಡಬೇಕು ಎಂದು ಹೇಳುತ್ತೇನೆ.

ಇನ್ನೊಂದು ಮಾತು. ನಮ್ಮ ಕನ್ನಡ ಭಾಷೆ ಬೆಳೆಯುವುದಕ್ಕೆ ಕಮ್ಮಿ ಜನರಿದ್ದಾರೆ, ಪ್ರಯೋಜನವಿಲ್ಲ. ಪತ್ರಿಕೆಗಳಾಗಲಿ, ಪುಸ್ತಕಗಳಾಗಲಿ ಹೆಚ್ಚಿಗೆ ಬಳಕೆಗೆ ಬರಲು ಅಥವಾ ಸಂಸ್ಕೃತಿ ಪ್ರಚಾರವನ್ನು ಮಾಡಲು ಕಡಿಮೆ ಜನರಿದ್ದ ಪಕ್ಷದಲ್ಲಿ ಅವಕಾಶವಿರುವುದಿಲ್ಲ. ಉದಾಹರಣೆ ಹೇಳುತ್ತೇನೆ. ಉತ್ತರ ಕರ್ಣಾಟಕದಲ್ಲಿ ಸಂಯುಕ್ತ ಕರ್ಣಾಟಕ ಪತ್ರಿಕೆಗೆ ಎಷ್ಟು circulation ಇದೆ ನೋಡಿ. ನಾವು ಬಹಳ ಪ್ರಗತಿ ಹೊಂದಿದ್ದೇವೆ, ಬಹಳ ಮುಂದುವರಿದಿದ್ದೇವೆ ಎಂದು ಮೈಸೂರಿನವರು ಹೆಮ್ಮೆಪಡುತ್ತೇವೆ. ಆದರೆ ನಮ್ಮ ತಾಯಿನಾಡು, ಪ್ರಜಾವಾಣಿ ಪತ್ರಿಕೆಗೆ ಎಷ್ಟು circulation ಇದೆ ನೋಡಿ? ಉತ್ತರ ಕರ್ಣಾಟಕದ ಆ ಒಂದು ಪತ್ರಿಕೆಗೆ ನಮ್ಮ ಪತ್ರಿಕೆಗಳ ಎರಡು-ಮೂರರಷ್ಟು circulation ಇದೆ. ಏತಕ್ಕೆಂದರೆ, ಅವರಲ್ಲಿ ರಾಜಕೀಯ ಜಾಗೃತಿ, ಅಲ್ಲಿಯ ಜನರಲ್ಲಿ ಕರ್ಣಾಟಕ ಭಾಷಾ ಮತ್ತು ಸಂಸ್ಕೃತಿಯಮೇಲೆ ಜಾಸ್ತಿ ಪ್ರೇಮವಿದೆ. ಆದ್ದರಿಂದ ಜನಗಳೆಲ್ಲಾ ಅಷ್ಟು ಮುಂದಕ್ಕೆ ಬರುವುದಕ್ಕೆ ಅವಕಾಶವಾಯಿತು. ಅಂತಹ ಜನಗಳ ಸಂಗಡ ಮಿಲನವಾಗುವುದು ಬೇಡ ಎಂದು ಹೇಳುವುದು ಸರಿಯಲ್ಲ. ಅವರು ದೇಹದಾರ್ಢ್ಯ ಚೆನ್ನಾಗಿದ್ದು ಪುಷ್ಟಿಯಾಗಿರುವ ಜನಗಳು. ಆದ್ದರಿಂದ ಎಲ್ಲಾ ಭಾಗಗಳಿಂದಲೂ ನೋಡಿದ ಪಕ್ಷದಲ್ಲಿ, ಕರ್ಣಾಟಕ ಪ್ರಾಂತ್ಯ ನಿಜವಾದ ಸೌಂದರ್ಯದನಾಡು ಆಗುತ್ತದೆ. ಎಲ್ಲರೂ ಸಹ ಒಂದುಗೂಡಿ ಪ್ರಯತ್ನಪಟ್ಟರೆ ಜಾಗ್ರತೆ ಕರ್ಣಾಟಕ ಪ್ರಾಂತವಾಗುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು-ದಕ್ಷಿಣ).—ಸ್ವಾಮಿ, ಇದುವರೆಗೆ ಈ ಶೇಷಾದ್ರಿ ಸಮಿತಿಯವರ ವರದಿಯಮೇಲೆ ನಮ್ಮ ಸ್ನೇಹಿತರು ಮಾತನಾಡಿದುದನ್ನು ನಾನು ಕುತೂಹಲದಿಂದಲೂ ಮತ್ತು ಹೆಚ್ಚಿನ ಎಚ್ಚರಿಕೆಯಿಂದಲೂ ಕೇಳಿದ್ದೇನೆ. ಈಗ ನಮ್ಮ ಮುಂದೆ ಇರುವ ಪ್ರಶ್ನೆ ಒಂದು ದೊಡ್ಡ ಆನೆಯೋಪಾದಿಯಲ್ಲಿ ಇದ್ದು, ಪ್ರತಿಯೊಬ್ಬ ಕುರುಡನೂ ಆನೆಯ ಬೇರೆ ಬೇರೆ ಭಾಗಗಳನ್ನು ನೋಡಿ ಆತನಿಗೆ ಮನಸ್ಸಿಗೆ ಏನು ಹೊಳೆಯುತ್ತದೆಯೋ ಆ ರೀತಿ ತಮ್ಮ ವಿವರಣೆಗಳನ್ನು ಕೊಟ್ಟಂತೆ ನನಗೆ ಭಾಸವಾಗುತ್ತದೆ. ಈ ಒಂದು ವರದಿಯನ್ನು ಇಷ್ಟು ಹಣ ಖರ್ಚುಮಾಡಿ ಈ ಸಭೆ ಮುಂದೆ ಚರ್ಚಿಸುವುದಕ್ಕೆ ಸರ್ಕಾರದವರು ತಂದಿರುವ ಮುಖ್ಯ ಉದ್ದೇಶ, ದೇಶದ ಮುಂದೆ ಇರುವ ದೊಡ್ಡ ಸಮಸ್ಯೆಯನ್ನು ಬಹಳ ಸುಲಭವಾಗಿ ಪರಿಹಾರ ಮಾಡಲು ಸಲಹೆಗಳನ್ನು ಕೊಡಬೇಕು ಎನ್ನುವುದೇ ಆಗಿದೆ. ಇಲ್ಲಿ ಕೊಟ್ಟಿರತಕ್ಕ ಅಂಕಿ ಅಂಶಗಳ ಪರಿಶೀ

(ಶ್ರೀ ಬಿ. ಟಿ. ಕೆಂಪರಾಜ್.)

ಲನೆಯನ್ನು ಮಾಡಿದ್ದಲ್ಲಿ ಬೇರೆ ಪ್ರಾಂತಗಳಲ್ಲಿರುವ ಕನ್ನಡ ಭಾಗಗಳು ಕೆಲವು ವಿಧಗಳಲ್ಲಿ ಮುಂದೆ ಹೋಗಿವೆ, ಕೆಲವು ವಿಧಗಳಲ್ಲಿ ಹಿಂದೆಬಿದ್ದಿವೆ ಎಂಬುದು ಗೊತ್ತಾಗುತ್ತದೆ. ಹಾಗೆಯೇ ಮೈಸೂರು ಸಂಸ್ಥಾನವೂ ಸಹ ಕೆಲವು ವಿಧಗಳಲ್ಲಿ ಮುಂದುವರಿದಿದೆ, ಕೆಲವು ವಿಧಗಳಲ್ಲಿ ಹಿಂದುಳಿದಿದೆ. ಆದ್ದರಿಂದ ಈ ಅಂಕಿ ಅಂಶಗಳನ್ನು ಗಜ ಕಡ್ಡಿಯಿಂದ ಅಳೆದಂತೆ ಅಳೆದು ಕರ್ಣಾಟಕ ಪ್ರಾಂತ ಆಗಬಾರದು, ಈ ಪ್ರಶ್ನೆ ಬಹಳ ಜಟಿಲವಾದುದು ಎಂದು ವಾದ ಮಾಡುವುದು ಅಷ್ಟು ಸಮಂಜಸವಾದುದಲ್ಲವೆಂದು ನನಗಾದರೂ ಎನ್ನಿಸುತ್ತದೆ. ಮೈಸೂರು ಇದ್ದಹಾಗೆಯೇ ಇರಬೇಕೇ ಅಥವಾ ಮೈಸೂರು ಇತರ ಪ್ರಾಂತಗಳ ಜೊತೆಯಲ್ಲಿ ಸೇರಿ ವಿಶಾಲ ಕರ್ಣಾಟಕವಾಗಬೇಕೇ ಎಂಬುದು ಈಗ ನಮ್ಮ ಮುಂದೆ ಉದ್ಭವಿಸಿರುವ ಎರಡು ಪ್ರಶ್ನೆಗಳು. ಮೊದಲನೆ ಪ್ರಶ್ನೆಯನ್ನು ನಾವು ಯೋಚಿಸುವಾಗ ಮೈಸೂರು ಏತಕ್ಕಾಗಿ ಇದ್ದಹಾಗೆ ಇರಬೇಕು ಎಂದು ಕೆಲವು ಸದಸ್ಯರು ಅಥವಾ ಬಹುತೇಕ ಸದಸ್ಯರು ಅಭಿಪ್ರಾಯಪಡುತ್ತಾರೆ ಎಂಬುದನ್ನು ಸದಸ್ಯರು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕಾದುದು ಅವಶ್ಯಕ. ಮೈಸೂರು ತನ್ನದೇ ಆದ ವೈಶಿಷ್ಟ್ಯ, ತನ್ನದೇ ಆದ ಆಡಳಿತಕ್ರಮ, ತನ್ನದೇ ಆದ ಸರ್ವತೋಮುಖವಾದ ಅಭಿವೃದ್ಧಿ ಇದನ್ನು ಕಾಪಾಡಿಕೊಂಡು ಬಂದಿದೆ. ಆದ್ದರಿಂದ ಮೈಸೂರು ಇದ್ದಹಾಗೆಯೇ ಇರಬೇಕು ಎನ್ನುವ ಅಭಿಪ್ರಾಯವನ್ನು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಹಾಗೆಯೇ ಕರ್ಣಾಟಕ ಆಗಬೇಕೆಂದು ಹೇಳತಕ್ಕ ಮಾನ್ಯ ಸದಸ್ಯರು ಕರ್ಣಾಟಕ ಪ್ರಾಂತ್ಯವಾದ ಪಕ್ಷದಲ್ಲಿ ಮೈಸೂರಿನ ವೈಶಿಷ್ಟ್ಯ ಅಷ್ಟೇನೂ ಕೆಡುವುದಿಲ್ಲ, ಮೈಸೂರಿಗೆ ಅಷ್ಟೇನೂ ಕುಂದಕವುಂಟಾಗುವುದಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ. ಇವೆರಡಕ್ಕೂ ಮಧ್ಯದಲ್ಲಿ ನಾವು ಒಂದು ಸುಗಮವಾದ ಮಾರ್ಗವನ್ನು ಕಂಡುಹಿಡಿಯಬೇಕಾದದ್ದು ಇಂದಿರುವ ನಮ್ಮ ಸಮಸ್ಯೆ. ಏತಕ್ಕಾಗಿ ಕೇಂದ್ರ ಸರ್ಕಾರದವರು ಪ್ರಾಂತಗಳ ಪುನರ್ವಿಂಗಡನಾ ಸಮಿತಿಯನ್ನು ನೇಮಿಸಿದ್ದಾರೆ? ಇದು ನಮ್ಮ ಮೈಸೂರಿಗೆ ನೇರವಾಗಿ ಸಂಬಂಧಪಟ್ಟ ಪ್ರಶ್ನೆಯೆಂದು ಪರಿಗಣಿಸದೆ ಇರುವುದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಒಂದು ಉದಾಹರಣೆಯನ್ನು ಕೊಡಬಹುದು. ಬಳ್ಳಾರಿ ಜಿಲ್ಲೆಯ ಸಮಸ್ಯೆ ಉದ್ಭವಿಸಿದಾಗ ಹತ್ತು ತಾಲ್ಲೂಕುಗಳಲ್ಲಿ ಏಳು ತಾಲ್ಲೂಕುಗಳನ್ನು ಮೈಸೂರು ಸಂಸ್ಥಾನಕ್ಕೆ ಸೇರಿಸಿಕೊಳ್ಳಬೇಕು ಎಂದು ಕೇಂದ್ರ ಸರ್ಕಾರದಿಂದ ಒಂದು ಆದೇಶವು ಬಂತು. ಆಗ ಇದೇ ವಿಧವಾದಂಥ ಜಿಜ್ಞಾಸೆ ನಡೆದರೂ ಸಹ ಕೇಂದ್ರ ಸರ್ಕಾರದ ಆದೇಶಕ್ಕೆ ನಾವು ಮನ್ನಣೆ ಕೊಟ್ಟು ಬಳ್ಳಾರಿಯ ಏಳು ತಾಲ್ಲೂಕುಗಳನ್ನು ಸೇರಿಸಿಕೊಳ್ಳಬೇಕಾಯಿತು. ಅದೇ ರೀತಿ ಪೊಟ್ಟಿ ಶ್ರೀರಾಮುಲುರವರು ಪ್ರಾಣವನ್ನು ನೀಗಿದಾಗ ಉದ್ಭವಿಸಿದ ಆಂಧ್ರ ಸಮಸ್ಯೆಯನ್ನು ಬಿಡಿಸಿದಾಗ ಬಳ್ಳಾರಿ ಸಮಸ್ಯೆಯು ಒಂದು ರೀತಿಯಲ್ಲಿ ಪರಿಹಾರವಾಯಿತು. ಹೀಗೆ ಬಹಳ ಪ್ರಾಮುಖ್ಯವಾದ ಸಮಸ್ಯೆಗಳು ಉದ್ಭವಿಸುವಾಗ ಯಾವ ಕೇಂದ್ರೀಕೃತವಾದ ಸರ್ಕಾರವು ಆಡಳಿತ ಸೂತ್ರಗಳನ್ನು ತನ್ನ ಕೈಯ್ಯಲ್ಲಿಟ್ಟುಕೊಂಡಿದೆಯೋ ಆ ಸರ್ಕಾರವು ಎಲ್ಲಾ ಆಡಳಿತ ದೃಷ್ಟಿಯಿಂದಲೂ ಆಲೋಚನೆಮಾಡಿ ಒಂದು ತೀರ್ಮಾನವನ್ನು ಕೊಟ್ಟರೆ ಅದಕ್ಕೆ ನಾವೆಲ್ಲರೂ ತಲೆ ಬಾಗಬೇಕಾದದ್ದು ಅತ್ಯಗತ್ಯ. ಅಂದಮೇಲೆ ಮೈಸೂರು ಏತಕ್ಕಾಗಿ ಉಳಿಯಬೇಕು ಎನ್ನುವುದಕ್ಕೆ ಪ್ರಾಮುಖ್ಯವಾದ ಕಾರಣಗಳಿವೆ. ಒಂದನೆಯದಾಗಿ ಮೈಸೂರು ಒಂದು composite administrative unit ಆಗಿದೆ. ಹೈದರಾಬಾದ್ ಸಂಸ್ಥಾನವು ಅದೇ ರೀತಿ ಒಂದು composite administrative unit ಆಗಿದೆ. ಹೀಗೆ ಒಂದು composite administrative unit ಆಗಿರುವ ಸಂಸ್ಥಾನವನ್ನು ಒಡೆಯಬಾರದು.

Sri A. BHEEMAPPA NAIK (Molakalmuru).—What about Bombay ?

Sri B. T. KEMPARAJ.—I shall come to that. I do not know why our friend is so eager. ಸ್ವಾಮಿ, ಮೈಸೂರಿನಲ್ಲಿ ಕನ್ನಡ ಮಾತನಾಡತಕ್ಕಂಥ ಜನರು ಇದ್ದಾರೆ. ತೆಲುಗು ಮಾತನಾಡತಕ್ಕಂಥ ಜನರೂ ಇದ್ದಾರೆ.

ತೆಲುಗು ಮಾತನಾಡುವವರು, ತಮಿಳು ಮಾತನಾಡುವವರು, ಕನ್ನಡ ಮಾತನಾಡುವವರು, ಇನ್ನೂ ಅನೇಕ ಮಾತನಾಡುವವರೂ ಇದ್ದಾರೆ. ಅಂದಮೇಲೆ ಕನ್ನಡ ಎಂಬ ಭಾಷೆಯ ಆಧಾರದಮೇಲೆ ಕರ್ನಾಟಕ ಪ್ರಾಂತವನ್ನು ರಚಿಸಬೇಕೆಂದು ಯೋಚಿಸಿ, ಜೊತೆಗೆ ನಮ್ಮಲ್ಲಿರುವ ಆಂಧ್ರರನ್ನೂ ತಮಿಳರನ್ನೂ ಇಟ್ಟುಕೊಳ್ಳಬೇಕೆಂದರೆ, ಅದು ಅಕ್ಕಿಯಮೇಲೆ ಆಸೆ ನೆಂಟರಮೇಲೆ ಪ್ರೀತಿ ಎಂದ ಹಾಗಾಗುತ್ತದೆ. ಏಕೆಂದರೆ ಕನ್ನಡ ಮಾತನಾಡುವ ಪ್ರದೇಶಗಳನ್ನು ಸೇರಿಸಿ ಒಂದು ಪ್ರಾಂತ್ಯವನ್ನು ನಿರ್ಮಿಸುವುದು ಅಗತ್ಯವೆಂದಮೇಲೆ, ತೆಲುಗರಿರತಕ್ಕ ಪ್ರದೇಶಗಳನ್ನು ಬಿಟ್ಟುಕೊಡುವುದಕ್ಕೆ ಸಾಧ್ಯವಿಲ್ಲ ಬೇರೆ ಕನ್ನಡ ಮಾತನಾಡುವವರರೊಡನೆಯೇ ಸೇರಬೇಕೆಂದು ಹೇಳಿ ವಾದ ಹೂಡುವುದು ಬಹಳ ಕಟುವಾದ ಟೀಕೆಗಳಿಗೆ ಎಡೆ ಕೊಟ್ಟೇ ಕೊಡುತ್ತದೆ. ಈಗ ಬೆಂಗಳೂರು ಜಿಲ್ಲೆ, ಕೋಲಾರ ಜಿಲ್ಲೆ ತುಮಕೂರು ಜಿಲ್ಲೆಗಳಲ್ಲಿ ತೆಲುಗರಿದ್ದಾರೆ. ಕನ್ನಡ ಭಾಷೆಯ ಆಧಾರದಮೇಲೆ ಸಂಸ್ಥಾನವೊಂದನ್ನು ರಚಿಸುತ್ತೇವೆಂದು ಹೇಳಿದಮೇಲೆ ತೆಲುಗು ಮಾತನಾಡುವ ಈ ಪ್ರದೇಶಗಳನ್ನೂ ಹಾಗೆಯೇ ನಮ್ಮ ಮಗ್ಗುಲಲ್ಲೇ ಇಟ್ಟುಕೊಳ್ಳುತ್ತೇವೆಂದು ವಾದಿಸುವುದು ಅಷ್ಟು ಸಮಂಜಸವಾಗಿ ಕಾಣುತ್ತದೆಯೇ? ಆದ್ದರಿಂದಲೇ ಅನೇಕ ಸ್ನೇಹಿತರು, ಮೈಸೂರು ಇದ್ದ ಹಾಗೆಯೇ ಇರಬೇಕು, ಹಾಗೇನಾದರೂ ಫಜಲಾಲಿ ಸಮಿತಿಯವರು ಅಕ್ಕಪಕ್ಕದ ರಾಷ್ಟ್ರಗಳನ್ನು ನಮಗೆ ಸೇರಿಸಬೇಕೆಂದು ಅಭಿಪ್ರಾಯಪಟ್ಟರೆ ಮಾತ್ರ ಆ ವರದಿಯ ಪ್ರಕಾರ ಯಾವ ಯಾವ ಪ್ರಾಂತ್ಯಗಳು ಉಳಿದ ಪ್ರಾಂತ್ಯಗಳಿಗೆ ಸೇರಿಸಲು ಅವಕಾಶವಿಲ್ಲದೆ ಇಲ್ಲಿಗೇ ಸೇರಬೇಕಾಗಿರುತ್ತವೆಯೋ, ಆ ಭಾಗಗಳನ್ನು ಸೇರಿಸಿ ವಿಶಾಲ ಮೈಸೂರನ್ನು ಸ್ಥಾಪಿಸಲು ಅವಕಾಶವಿದೆಯೆಂದು ಹೇಳಿದ್ದಾರೆ. ಆದ್ದರಿಂದ ಭಾಷೆಯ ಆಧಾರದಮೇಲೆ ನಾವು ವಾದಿಸುವಾಗ, ರಾಜ್ಯಾಡಳಿತ ದೃಷ್ಟಿಯಿಂದ ಅದಕ್ಕೆಷ್ಟು ಪ್ರಾಮುಖ್ಯತೆ ಕೊಡಬಹುದೋ ಅಷ್ಟು ಪ್ರಾಮುಖ್ಯತೆ ಕೊಡಬಹುದೇ ವಿನಾ, ಭಾಷೆಯನ್ನೇ ಆಧಾರವಾಗಿಟ್ಟುಕೊಂಡು ಪ್ರಾಂತ್ಯ ನಿರ್ಮಾಣ ಮಾಡಬೇಕೆಂದು ಹೊರಟರೆ ಬೇರೆ ಭಾಷೆಗಳನ್ನಾಡುವ ವ್ಯಕ್ತಿಗಳ ಅಭಿಪ್ರಾಯಗಳಿಗೂ ಮನ್ನಣೆಕೊಟ್ಟು ಅವರ ವಾದವನ್ನೂ ಪುರಸ್ಕರಿಸಿದಂತಾಗುತ್ತದೆ. ಇತರ ವಿಚಾರಗಳಿಂದ ಮೈಸೂರು ಮುಂದೆ ಹೋಗಿದೆ, ಉಳಿದ ಕನ್ನಡ ಪ್ರಾಂತ್ಯಗಳು ಹಿಂದೆ ಬಿದ್ದಿವೆ ಎಂಬುದು ಈ ದಿನ ಅಷ್ಟು ಪ್ರಾಮುಖ್ಯವಲ್ಲ, ಏಕೆಂದರೆ ಹಿಂದೂದೇಶ ಒಂದು ಎಂಬ ಅಭಿಪ್ರಾಯ ನಮ್ಮಲ್ಲಿ ಮೂಡಬೇಕೆಂದು ಅನೇಕರು ಅಭಿಪ್ರಾಯಪಟ್ಟಿದ್ದಾರೆ. ಅದೂ ಅಲ್ಲದೆ, ಕೇಂದ್ರ ಸರ್ಕಾರದವರೂ ಸುಮಾರು 400 ಕೋಟಿ ರೂಪಾಯಿ

ಗಳ ಜೋತಾ ಬಡ್ಜೆಟ್ ಇಟ್ಟುಕೊಂಡು ದೇಶಕ್ಕೆ ಆಗಬೇಕಾದ ಅನುಕೂಲಗಳನ್ನು ಏರ್ಪಡಿಸುವುದಕ್ಕೆ ಎರಡನೆಯ ಪಾಂಚವಾರ್ಷಿಕ ಯೋಜನೆಯನ್ನು ಸಿದ್ಧಗೊಳಿಸಿದ್ದಾರೆ. ಪಂಚವಾರ್ಷಿಕ ಯೋಜನೆಯನ್ನು ಸಿದ್ಧಗೊಳಿಸಿ ಅನೇಕ ಯೋಜನೆಗಳನ್ನು ಕೈಕೊಂಡು ದೇಶದಲ್ಲಿರತಕ್ಕ ಆಹಾರ ಕೊರತೆಯೇ ಮುಂತಾದ ದೊಡ್ಡದೊಡ್ಡ ಸಮಸ್ಯೆಗಳನ್ನು ಪರಿಹಾರ ಮಾಡಲು ಪ್ರಯತ್ನಿಸುತ್ತಿರುವಾಗ ಈ ಸಣ್ಣ ಸಮಸ್ಯೆಯಮೇಲೆ ಜಿಜ್ಞಾಸೆ, ವಾದವಿವಾದಗಳಲ್ಲಿ ತೊಡಗತಕ್ಕದ್ದು ಸಕಾಲವಲ್ಲ ಮತ್ತು ಸಮಂಜಸವಲ್ಲವೆಂದು ನನ್ನ ಅಭಿಪ್ರಾಯ. ಅಂಥ ಅಗತ್ಯವಾದ ಯಾವ ದೊಡ್ಡ ಪ್ರಶ್ನೆಯೇ ಬರಲಿ ಇಡೀ ಹಿಂದೂದೇಶದ ದೃಷ್ಟಿಯಿಂದ ಪರಿಹರಿಸಲು ಕೇಂದ್ರ ಸರ್ಕಾರದ ಸಹಾಯ ನಮಗೆ ಇದ್ದೇಇದೆ. ಒಂದು ಉದಾಹರಣೆ ಹೇಳುವುದಾದರೆ, ಹೈದರಾಬಾದು ಸಂಸ್ಥಾನದ ಕನ್ನಡ ಪ್ರದೇಶಗಳನ್ನು ನಾವು ಸೇರಿಸಿಕೊಳ್ಳಬಹುದೆಂದು ಹೇಳಿ ಕೆಲವು ಮಾನ್ಯ ಸದಸ್ಯರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಈ ಸಮಸ್ಯೆಯ ಬಗ್ಗೆ ದೇಶದ ಮುಖಂಡರು, 'ಹೈದರಾಬಾದು ಸಂಸ್ಥಾನವನ್ನು ಒಡೆಯಲು ಕಾಲ ಸನ್ನಿಹಿತವಾಗಿಲ್ಲ, ಹೈದರಾಬಾದು ಸಂಸ್ಥಾನ ಎರಡುಕೋಟಿಗೂ ಮೇಲ್ಪಟ್ಟಿನ ಜನಸಂಖ್ಯೆಯಿಂದ ಕೂಡಿ ಅಲ್ಲಿ ಅನೇಕ ರೀತಿಯಲ್ಲಿ ಈಗತಾನೆ ತೀವ್ರ ಬದಲಾವಣೆಗಳಾಗಿ ಆ ದೇಶದ ಜನರ ಪರಿಸ್ಥಿತಿ ಕ್ರಮೇಣ ಉತ್ತಮಗೊಳ್ಳುತ್ತಿದೆ' ಎಂದು ಹೇಳುತ್ತಿದ್ದಾರೆ.

ಆದ್ದರಿಂದ, ಒಟ್ಟಿನ ಮೇಲೆ ಹೇಳುವುದಾದರೆ, ನನ್ನ ಅಭಿಪ್ರಾಯದಲ್ಲಿ ಫಸಲಾಲಿ ಸಮಿತಿಯ ವರದಿಯನ್ನು ನಾವು ಕಾಯುವುದು ಉಚಿತ, ಮತ್ತು ಮೈಸೂರನ್ನು ಅಷ್ಟು ಸುಲಭವಾಗಿ ಭಾಷೆಯ ಆಧಾರದಮೇಲೆ ಪುನರ್ರಚಿಸಬೇಕೆಂಬ ವಾದವನ್ನು ಎತ್ತಿಹಿಡಿಯುವುದಾದರೆ ಬೇರೆ 'ಭಾಷೆಗಳನ್ನಾಡುವವರಿಗೂ ಅವರ ಮನೋಭಿಪ್ರಾಯಕ್ಕೆ ಮನ್ನಣೆ ಕೊಡಬೇಕಾಗಿ ಬರುತ್ತದೆ. ಆದ್ದರಿಂದ ಅಕ್ಕಿಯಮೇಲೆ ಆಸೆ ನೆಂಟರ ಮೇಲೆ ಪ್ರೀತಿಯನ್ನು ಬಯಸದೆ ಮೈಸೂರು ಹೀಗೆಯೇ ಇರಬೇಕು, ಒಂದುವೇಳೆ ಆಡಳಿತ ದೃಷ್ಟಿಯಿಂದ ಮೈಸೂರು ಸಂಸ್ಥಾನಕ್ಕೆ ಅಕ್ಕಪಕ್ಕದ ರಾಜ್ಯಗಳು ಸೇರಿ ಪರಿಪೂರ್ಣ ರಾಜ್ಯ ಬೇಕಾದರೆ ಆಗಬಹುದು ಎಂದು ವ್ಯಕ್ತಪಡಿಸುತ್ತಾ, ಈ ಸಮಸ್ಯೆಯನ್ನು ನಾವು ಬಹಳ ಕೂಲಂಕಷವಾಗಿ ದೂರದೃಷ್ಟಿಯಿಂದ ಯೋಚಿಸಿ ತೀರ್ಮಾನ ಮಾಡಬೇಕಾದದ್ದು ಅತ್ಯಾವಶ್ಯಕವೆಂದು ಹೇಳಿ ಮುಗಿಸುತ್ತೇನೆ.

ಶ್ರೀ ಟಿ. ಹನುಮಯ್ಯ (ಹಿರಿಯೂರು—ಅನುಸೂಚಿತ ಜಾತಿಗಳು).—ಮಾನ್ಯ ಅಧ್ಯಕ್ಷರೇ, ಅನೇಕ ಮಾನ್ಯ ಸದಸ್ಯರು ರಾಜ್ಯ ಪುನರ್ವಿಂಗಡಣೆಯ ವಿಷಯದಲ್ಲಿ ಬಹಳ ವಿಪುಲವಾದ ಚರ್ಚೆನಡೆಸಿದ್ದಾರೆ. ಸ್ವಾಮಿ, ನನಗೆ ತಿಳಿದಮಟ್ಟಿಗೆ ಭಾರತ ಸ್ವಾತಂತ್ರವಾಗುವುದಕ್ಕೆ ಮುಂಚೆ ಅಖಿಲಭಾರತ ಕಾಂಗ್ರೆಸ್ ಸಂಸ್ಥೆ ಹಾಗೂ ಮೈಸೂರು ಕಾಂಗ್ರೆಸ್ ಸಂಸ್ಥೆ ದೇಶ ಪುನರ್ವಿಂಗಡಣೆಯಾಗಬೇಕೆಂದು ಹೇಳಿ ಸುಮಾರು ಮೂವತ್ತು ವರುಷಗಳಿಂದಲೂ ಸತತವಾಗಿ ಜನಗಳ ಮುಂದೆ ಇಟ್ಟಿದ್ದಾರೆ. ಅಷ್ಟೇ ಅಲ್ಲದೆ, ಸ್ವಾತಂತ್ರ್ಯ ಬಂದಮೇಲೆಯೂ ಕೂಡ ಮೈಸೂರಿನಲ್ಲಿ ನಡೆದ ರಾಜ್ಯಾಂಗ ಘಟನಾ ಸಮಿತಿಯಲ್ಲಿ ಮೈಸೂರಿನ ವೈಶಿಷ್ಟ್ಯವನ್ನು ಉಳಿಸಿಕೊಂಡು, ಮೈಸೂರಿನ ಧವಳ ಕೀರ್ತಿಯನ್ನು ಬೆಳೆಸಿಕೊಂಡು ಮೈಸೂರಿಗೆ ಧಕ್ಕೆ ಬಾರದಂತೆ ದೇಶದ ಅಕ್ಕಪಕ್ಕದ ಕನ್ನಡ ಪ್ರಾಂತ್ಯಗಳನ್ನು ಸೇರಿಸಿಕೊಳ್ಳುವುದರಲ್ಲಿ ಯಾವ ಅಭ್ಯಂತರವೂ ಇಲ್ಲವೆಂದು ಎಲ್ಲರೂ ಸರ್ವಾನುಮತದಿಂದ ಒಪ್ಪಿಕೊಂಡಿದ್ದೇವೆ. ಆದ್ದರಿಂದ ಮುಖ್ಯವಾಗಿರುವುದು ಈ ವಿಲೀನೀಕರಣದಿಂದ ಮೈಸೂರಿಗೆ ಯಾವ ವಿಧದಲ್ಲೂ ಧಕ್ಕೆ ಬರಕೂಡದೆಂಬುದು. ಈಗ ಈ ವಿಲೀನೀಕರಣದಿಂದಲಾದರೋ ನಮ್ಮ ಮೈಸೂರಿನ ಶ್ರೀಮನ್ಮಹಾರಾಜರವರಿಗೆ ಕರ್ಣಾಟಕ ಸಿಂಹಾಸನಾಧೀಶರೆಂಬ ಹೆಸರು ಬರುತ್ತದೆ. ನಾವು ಸುಮಾರು 1799ನೆಯ ಇಸವಿಗೆ ಹಿಂದಿನಿಂದಲೂ ಹಿಂದೂದೇಶದ ಆಡಳಿತದ ವಿಮರ್ಶೆ ಮಾಡಿದರೆ ಶ್ರೀ ಎ. ಭೀಮಪ್ಪನಾಯಕರಂಥ ಪಾಳೆಯಗಾರರು ಮತ್ತು ಶ್ರೀ ದೇವರಾಜ ಅರಸ್‌ರವರಂಥ ರಾಜರುಗಳಿದ್ದ ದೇಶ ಇದು. ಆದ್ದರಿಂದ ಈಗ ಬಿಟ್ಟುಹೋಗಿರುವ ಕನ್ನಡ ಪ್ರಾಂತ್ಯಗಳನ್ನು ಮೈಸೂರಿಗೆ ಸೇರಿಸಿ ಇವರ ಕೀರ್ತಿಯನ್ನು ಮತ್ತಷ್ಟು ಬೆಳಗಿಸುವುದು ಬಹಳ ಅಗತ್ಯವೆಂದು ನಾನು ಸೂಚಿಸುತ್ತೇನೆ. ವಿಜಯನಗರದ ಸಾಮ್ರಾಜ್ಯದ ಇತಿಹಾಸ, ನಾವಿಂದು ಹಾಳುಹಂಪೆಯನ್ನು ನೋಡಿದರೆ ನೆನಪಿಗೆ ಬಂದಾಗ ನಾವೆಲ್ಲಾ ಅಂಥ ಕರ್ಣಾಟಕಕ್ಕೆ ಸೇರಿದವರೆಂಬ ಹೆಮ್ಮೆ ಮೂಡುತ್ತದೆ. ಮುತ್ತು, ರತ್ನ, ಪಚ್ಚೆ ವೈಡೂರ್ಯಗಳು ಮಾರಾಟ ಮಾಡುತ್ತಿದ್ದ ನಮ್ಮ ದೇಶ ಎಂದು ಹೆಮ್ಮೆ ಪಡುತ್ತೇವೆ.

5 P.M.

ಆದುದರಿಂದ ಕರ್ಣಾಟಕ ಪ್ರಾಂತ್ಯ ನಿರ್ಮಾಣವಾದರೇನೆ ಆಗ ಅದೊಂದು ಬಹಳ ಸಂಪದಭಿವೃದ್ಧಿಯ ರಾಜ್ಯವೆಂದು ಹೇಳಲು ಸಾಧ್ಯವಾಗುತ್ತದೆ. ಯಾವುದೇ ಒಂದು ದೇಶ ದೊಡ್ಡದಾದಾಗ್ಯೂ ಅದಕ್ಕೆ ತಕ್ಕ ಹಾಗೆ ಅದರಲ್ಲಿ ಅನುಕೂಲತೆಗಳು ಹೆಚ್ಚಾಗಿರಬೇಕು. ಈಗ ಉದಾಹರಣೆಗೆ ಹೇಳುವುದಾದರೆ—ಬೊಂಬಾಯಿ, ಮದರಾಸ್, ಕಲ್ಕತ್ತ ಇತ್ಯಾದಿ ದೇಶಗಳೆಲ್ಲಾ ದೊಡ್ಡದಾಗಿದ್ದಾಗ್ಯೂ ಅವು ಹೇಗೆ ಮುಂದುವರಿದಿರುತ್ತವೆ ಎನ್ನುವುದನ್ನು ನೋಡಿದರೆ ಆ ದೇಶಗಳಿಗೆಲ್ಲಾ ದೊಡ್ಡದೊಡ್ಡ ಬಂದರುಗಳಿದ್ದು ಅಲ್ಲಿ ಅನೇಕ ಕೈಗಾರಿಕೋದ್ಯಮಗಳು ನಡೆಯುತ್ತಿರುವುದರಿಂದ ಆ ಪಟ್ಟಣಗಳೆಲ್ಲಾ ಅಷ್ಟೊಂದು ಮುಂದುವರಿಯಲು ಅವಕಾಶವಾಯಿತು. ಈ ಹಿಂದೆ ಈ ನಮ್ಮ ಮೈಸೂರು ದೇಶ ಈಗ ಎಷ್ಟಿದೆಯೋ ಅಷ್ಟೇ ಇರಲಿಲ್ಲ. ಇದೊಂದು ಅಖಂಡ ಕರ್ಣಾಟಕ ದೇಶವಾಗಿತ್ತು. ಆದರೆ ಇತ್ತೀಚೆಗೆ ಮೈಸೂರು ಒಂದನೆ ಯುದ್ಧ, ಎರಡನೆ ಯುದ್ಧ, ಮೂರನೆ ಯುದ್ಧ ಮತ್ತು ನಾಲ್ಕನೆ ಯುದ್ಧವಾದನಂತರ ಅಖಂಡ ಕರ್ಣಾಟಕ ರಾಜ್ಯದಲ್ಲಿ ಸೇರಿದ್ದಂಥ ಕನ್ನಡ ಭಾಗಗಳನ್ನೆಲ್ಲಾ ಹರಿದು ಅಕ್ಕಪಕ್ಕದಲ್ಲಿರುವ ಮದರಾಸ್, ಬೊಂಬಾಯಿ ಮತ್ತು ಹೈದರಾಬಾದ್ ರಾಜ್ಯಗಳಿಗೆ ಹಂಚಿಕೊಟ್ಟರು. ಹಾಗೆ ನಮ್ಮ ಕನ್ನಡ ನಾಡನ್ನು ಆ ದಿವಸ ಅವರು ಹರಿದು ಹಂಚಿಕೆ ಮಾಡಿದ್ದರಿಂದ ಈ ದಿವಸ ಇರತಕ್ಕ ಮೈಸೂರು ಈ ಸ್ಥಿತಿಯಲ್ಲಿ ಚಿಕ್ಕ ರಾಜ್ಯವಾಗಿ ಉಳಿಯಿತು. ಆದರೆ ಈ ದಿವಸ ಪುನಃ ಕನ್ನಡ ಮಾತನಾಡತಕ್ಕಂಥ ಜನರೆಲ್ಲರೂ ಒಂದಾಗಬೇಕೆಂದು ಹೇಳುತ್ತಿದ್ದೇವೆ. ಹೀಗೆ ಒಂದು ಭಾಷೆಯನ್ನಾಡತಕ್ಕಂಥ ಜನರೆಲ್ಲಾ ಒಂದಾದರೆ ಬಹಳ ಅನುಕೂಲವಾದ ಆಡಳಿತ ನಡೆಸಲು ಸಾಧ್ಯವಾಗುತ್ತದೆ. ಜನರಲ್ಲಿ ಒಂದು ಐಕ್ಯಮತ್ಯ ಉಂಟಾಗಬೇಕಾದರೆ ಭಾಷೆಯ ಅಗತ್ಯ ಕೂಡ ಬಹಳ ಮುಖ್ಯವಾಗಿರುತ್ತದೆ. ನಾನು 1941ರಲ್ಲಿ ಉತ್ತರ ಇಂಡಿಯಾ ಪ್ರವಾಸಕ್ಕೆ ಹೋಗಿದ್ದೆನು. ಅಲ್ಲಿ ನಾನು ಯಾವ ಭಾಗದಲ್ಲಿ ತಿರುಗಾಡಿದಾಗ್ಯೂ ನನಗೆ ಕನ್ನಡ ಮಾತನಾಡತಕ್ಕಂಥ ಜನರೇ ಸಿಕ್ಕಲಿಲ್ಲ. ಆಗ ಒಂದು ದಿವಸ ನಾನು ಹರಿದ್ವಾರಕ್ಕೆ ಬಂದೆ. ಅಲ್ಲಿ ಒಬ್ಬರು ನನಗೆ ಕನ್ನಡ ಮಾತನಾಡ

(ಶ್ರೀ ಟಿ. ಹನುಮಯ್ಯ.)

ತಕ್ಕವರ ಸ್ನೇಹ ಬೆಳೆಯಿತು. ಆಗ ನನಗೆ ಉಂಟಾದ ಆನಂದಕ್ಕೆ ಪಾರವೇ ಇರಲಿಲ್ಲ. ಕನ್ನಡ ಮಾತನಾಡತಕ್ಕಂಥ ಜನರನ್ನು ಕಂಡೇನೆ ಎಂದಿರುವಾಗ ನನಗೆ ಅವರು ಸಿಕ್ಕಿದ್ದು ಬಹಳ ಪರಮಾನಂದವನ್ನುಂಟು ಮಾಡಿತು. ಆಗ ನನಗೆ ನನ್ನ ಹೆತ್ತ ತಾಯಿಯನ್ನು ಕಂಡಿದ್ದರೆ ಎಷ್ಟು ಆನಂದ ಉಂಟಾಗುತ್ತಿತ್ತೋ ಅದಕ್ಕೂ ಮಿಗಲಾದಂಥ ಆನಂದ ಆ ಭಾಷೆಯ ಪರಿಶ್ರಮದಿಂದ ನನಗೆ ಉಂಟಾಯಿತು. ಹೀಗೆ ಪ್ರತಿಯೊಬ್ಬರಿಗೂ ಅವರವರ ಭಾಷೆಯೆಂದರೆ ಬಹಳ ಪ್ರೇಮವಿದ್ದೇ ಇರುತ್ತದೆ. ಈ ದೃಷ್ಟಿಯಿಂದ ಈ ಸಮಸ್ಯೆಯನ್ನು ಪರಿಶೀಲನೆ ಮಾಡಬೇಕಾಗಿದೆ. ಈ ಕಾರಣದಿಂದ ನಮ್ಮ ಮೈಸೂರು ಅಖಂಡ ಕರ್ಣಾಟಕದಲ್ಲಿ ಸೇರಿ ನಮ್ಮನ್ನು ಅಗಲಿಹೋಗಿರತಕ್ಕಂಥ ನಮ್ಮ ಅಣ್ಣತಮ್ಮಂದಿರುಗಳನ್ನು ನಾವು ಪುನಃ ಆದರದಿಂದ ಬರಮಾಡಿಕೊಳ್ಳುವುದು ಬಹಳ ಆನಂದದಾಯಕವಾದಂಥ ವಿಚಾರವಾಗಿದೆ. ಇಲ್ಲಿಯತನಕ ಅವರು ಅನ್ಯಭಾಷೆಯ ಜನರು ಎಲ್ಲಿ ಅಧಿಕ ಸಂಖ್ಯಾತರಾಗಿದ್ದಾರೋ ಅಂಥ ರಾಜ್ಯದಲ್ಲಿ ಸೇರಿಕೊಂಡಿರುವುದರಿಂದ ಅವರ ಅಭಿವೃದ್ಧಿ ಮತ್ತು ಏಳಿಗೆಗಳಿಗೆಲ್ಲಾ ಬಹಳ ಕುಂಠಿತವಾಗಿರುತ್ತವೆ. ಆದುದರಿಂದ ನಾವು ಈ ದಿವಸ ಕನ್ನಡ ದೇಶವಾದಂಥ ಈ ಮೈಸೂರಿಗೆ ಬಂದು ಸೇರಿಕೊಳ್ಳುತ್ತೇವೆಂದು ಕೇಳುತ್ತಿದ್ದಾರೆ ಅವರು ಬಹಳ ಹಿಂದುಳಿದಿದ್ದಾರೆ, ಅವರು ನಮ್ಮೊಡನೆ ಸೇರುವುದು ಬೇಡ, ಅವರು ಹಾಗೆಯೇ ಹಿಂದೆ ಬಿದ್ದಿರಲಿ, ನಾವು ಹೀಗೆಯೇ ಮುಂದುವರಿಯೋಣ ಎಂದು ಹೇಳುವುದು ಅಷ್ಟೊಂದು ಉಚಿತವಾಗಿ ಕಾಣುವುದಿಲ್ಲ. ಈ ರಾಜ್ಯಗಳ ಪುನರ್ವಿಂಗಡಣೆಯು ಅತ್ಯಗತ್ಯವೆಂದು ನಮ್ಮ ಹಿರಿಯ ನಾಯಕರಾದ ನೆಹ್ರೂಅವರೇ ಹೇಳಿದ್ದಾರೆ. ಹೀಗೆ ದೇಶವನ್ನು ಪುನರ್ವಿಂಗಡಣೆ ಮಾಡುವಾಗ ನಾವು ಆಡಳಿತ ದೃಷ್ಟಿಗಿಂತಲೂ ಅಧಿಕವಾಗಿ ಭಾಷೆಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಡಲೇಬೇಕು. ಈ ದೃಷ್ಟಿಯಿಂದಲೂ ಸಹ ನಮ್ಮ ಅಕ್ಕಪಕ್ಕದ ದೇಶದಲ್ಲಿ ಬೇರೆ ಭಾಷೆಯ ಜನರೊಂದಿಗೆ ಸೇರಿರತಕ್ಕಂಥ ನಮ್ಮ ಅಣ್ಣತಮ್ಮಂದಿರುಗಳು ಈ ದಿವಸ ನಮ್ಮ ಜೊತೆಗೆ ಬಂದು ಸೇರಿಕೊಳ್ಳುತ್ತೇವೆಂದರೆ ನಾವು ಅದಕ್ಕೆ ಬೇಡ ಎಂದು ಹೇಳುವುದು ಖಂಡಿತ ಸರಿಯಾದದ್ದಲ್ಲ. 'ಕರೆದು ಹೆಣ್ಣು ಕೊಟ್ಟರೆ ಅಳಿಯನಿಗೆ ಮಲರೋಗ ಬಂತು' ಎನ್ನುವ ಹಾಗೆ—ನಾವೂ ನೀವೂ ಅಣ್ಣತಮ್ಮಂದಿರುಗಳು, ನಿಮ್ಮನ್ನು ಅಗಲಿ ನಾವು ನೂರಾರು ವರ್ಷಗಳಾಯಿತು, ನಾವು ಬಹಳ ಹಿಂದುಳಿದಿದ್ದೇವೆ, ನಾವು ಕಷ್ಟದಲ್ಲಿದ್ದೇವೆ, ನಾವು ನಿಮ್ಮೊಡನೆ ಸೇರಲು ನಿಮ್ಮ ಸಹಕಾರ ನೀಡಿ' ಎಂದು ಕೇಳಿದರೆ ನಾವು ಬೇಡ ಎಂದು ಹೇಳುವುದು ಸರಿಯಾದದ್ದಲ್ಲ. ಅವರು ನಮ್ಮೊಡನೆ ಬಂದು ಸೇರುವುದರಿಂದ ಬಹಳ ಅನುಕೂಲವಿದೆ. ಆಡಳಿತಕ್ಕೇನೂ ತೊಂದರೆಯಾಗುವುದಿಲ್ಲ. ಆದರೆ ಕೆಲವು ಮಾನ್ಯ ಸದಸ್ಯರು ಮಾತನಾಡುತ್ತ ಹಳ್ಳಿ ಹಳ್ಳಿಗೂ ಹೋಗಿ, ನಮ್ಮ ಅಕ್ಕಪಕ್ಕದ ಪ್ರಾಂತ್ಯಗಳು ನಮ್ಮ ದೇಶಕ್ಕೆ ಸೇರುವದು ಬೇಕೇ ಅಥವ ನಿಮಗೆ ಬೇಡವೇ ಎಂದು ಜನರನ್ನು ಕೇಳಿ ಅವರ ರೆಫರಂಡಂ ತೆಗೆದುಕೊಳ್ಳಬೇಕು ಎಂದು ಹೇಳಿದರು. ಆದರೆ ಇಂಥ ಒಂದು ಪ್ರಶ್ನೆಯನ್ನು ನಾವು ಅವರಾರನ್ನೂ ಕೇಳದೆ ಹಾಗೆಯೇ ನಡೆಸಿದರೂ ಇದರಿಂದ ಜನಗಳಿಗೆ ಯಾವ ತೊಂದರೆಯೂ ಆಗುವುದಿಲ್ಲ. ಆದರೆ ಹಾಗೆ ಮಾತನಾಡಿದ ಮಾನ್ಯ ಸದಸ್ಯರುಗಳಿಗೆಲ್ಲಾ ನಾನೊಂದು ಪ್ರಶ್ನೆ ಹಾಕುತ್ತೇನೆ—ಏನೆಂದರೆ ಮೊನ್ನೆತಾನೆ ನಾವು ಇದೇ ಸಭೆಯಲ್ಲಿ ಕುಳಿತು ಆ ಅಗ್ರಿಕಲ್‌ಚರಲ್ ಇನ್‌ಕಂ ಟ್ಯಾಕ್ಸ್ ಬಿಲ್ಲನ್ನು ದೇಶದ ಜನರ ಅಭಿಮತ ಪಡೆಯದೇನೇ ಪಾಸ್ ಮಾಡಿರುತ್ತೇವೆ. ಇದರಿಂದ ಅವರ ತಲೆಯಮೇಲೆ ಬೀಳುವ ತೆರಿಗೆ ಹೊರೆ ಇನ್ನೂ ಜಾಸ್ತಿಯಾದಂತಾಯಿತು. ಹೀಗಿದ್ದರೂ ಯಾರು ದೇಶಾದ್ಯಂತವೂ ಹಳ್ಳಿ ಹಳ್ಳಿಗೂ ಹೋಗಿ ಜನರನ್ನು ಇದು ನಿಮಗೆ ಬೇಕೇ ಅಥವಾ ಬೇಡವೇ ಎಂದು ಕೇಳಿ ಬಂದು ಅನಂತರ ಅದಕ್ಕೆ ಬೆಂಬಲ ನೀಡಿದ್ದೀರಿ ! ಎಂದು ಕೇಳುತ್ತೇನೆ. ಹಾಗೆ ನಾವು ಆ ದಿವಸ ಆ ಮಸೂದೆಯನ್ನು ದೇಶದಲ್ಲಿರತಕ್ಕಂಥ ಜನರ ಅಭಿಪ್ರಾಯವನ್ನು ತೆಗೆದುಕೊಳ್ಳದೆ ಹಾಗೇನೆ ಏತಕ್ಕಾಗಿ ಪಾಸ್‌ಮಾಡಿದೆವೆಂದರೆ ನಿಜವಾಗಿಯೂ ಆ ಮಸೂದೆಗೆ ದೇಶದ ಹಿತದೃಷ್ಟಿಯಿಂದ ಬೆಂಬಲ ನೀಡಬೇಕಾದದ್ದು ಉಚಿತವಾಗಿರುತ್ತದೆಯೆಂದು ತಿಳಿದುಬಂದಕಾರಣ ಅದನ್ನು ನಾವು ಆ ದಿವಸ ಹಾಗೆ ಪಾಸ್ ಮಾಡಿದೆವು. ಅದನ್ನು ಜಾರಿಗೂ ತಂದೆವು. ಆದುದರಿಂದ ದೇಶಕ್ಕೆ ಯಾವುದು ಪ್ರಾಮುಖ್ಯವಾಗಿ ಆಗಬೇಕೋ ಯಾವುದರಿಂದ ದೇಶಕ್ಕೆ ಏಳಿಗೆ ಆಗುತ್ತದೆಯೋ ಅಂಥ ವಿಷಯಗಳಲ್ಲಿ ಇದೂ ಕೂಡ ಒಂದಾಗಿರುವುದರಿಂದ ನಾವು ಆ ರೀತಿ ಜನರ ರೆಫರಂಡಂ ಏನೂ ತೆಗೆದುಕೊಳ್ಳಬೇಕಾಗಿಲ್ಲವೆಂದು ಹೇಳುತ್ತೇನೆ. ಹಾಗೂ ಒಂದುವೇಳೆ ತೆಗೆದುಕೊಂಡರೆ ದೇಶಾದ್ಯಂತವೂ ಇರತಕ್ಕ ಜನರಲ್ಲಿ 100ಕ್ಕೆ 75 ಮಂದಿ ಇದನ್ನು ಬೇಡ ಎಂದು ಹೇಳುವುದಿಲ್ಲವೆಂದು ನಾನು ದೃಢವಾಗಿ ಹೇಳುತ್ತೇನೆ. ಕೆಲವು ಸದಸ್ಯರು ಭಾಷಣಮಾಡುತ್ತ ನಮಗೆ ದೇಶವೇನೂ ದೊಡ್ಡದಾಗುವುದು ಬೇಕಾಗಿಲ್ಲ ಎಂದು ಹೇಳಿದ್ದಾರೆ. ಇದೊಂದು ಬಹಳ ಆಶ್ಚರ್ಯಕರವಾದ ಅಭಿಪ್ರಾಯವಾಗಿದೆ. ಸಾಮಾನ್ಯವಾಗಿ ಜನರ ಮನೋಭಿಪ್ರಾಯ ಹೇಗಿರುತ್ತೆಂದರೆ—ಒಬ್ಬ ಮನುಷ್ಯನು ತಾನು ಒಂದು ಸಮಿತಿಗೆ ಒಬ್ಬ ಸಾಮಾನ್ಯ ಸದಸ್ಯನಾಗಿ ಬಿಟ್ಟರೆ, ಆತನು ನನಗೆ ಮತ್ತೇನೂ ಬೇಡ ಇಷ್ಟೇ ಸಾಕು ಎಂದು ಎಂದಿಗೂ ಹೇಳುವುದಿಲ್ಲ. ಹಾಗೆ ಯಾವಾಗ ಒಬ್ಬ ಮನುಷ್ಯ ಒಂದು ಸಲ ಒಂದು ಸಂಸ್ಥೆಗೆ ಸದಸ್ಯನಾಗಿಬಿಡುತ್ತಾನೋ ಆಗ ಆತನಿಗೆ ನಾನು ಮುಂದಕ್ಕೆ ಜಿಲ್ಲಾಬೋರ್ಡಿಗೆ ಸದಸ್ಯನಾಗಬೇಕು, ಅಸೆಂಬ್ಲಿ ಸದಸ್ಯನಾಗಲು ಚುನಾವಣೆಗೆ ನಿಲ್ಲಬೇಕು, ಪಾರ್ಲಿಮೆಂಟಿಗೂ ನಿಂತು ಚುನಾವಣೆ ಹೊಂದಬೇಕು ಎಂದು ಆಶೋತ್ತರಗಳಿರುವುದು ಸ್ವಾಭಾವಿಕ. ವಿಚಾರಗಳು ಹೀಗಿರುವಾಗ ನಮ್ಮ ಮಾನ್ಯ ಸದಸ್ಯರುಗಳು ಕೆಲವರು ನಮಗೆ ಈಗ ದೇಶ ಎಷ್ಟಿದೆಯೋ ಅಷ್ಟೇ ಸಾಕು, ಅದು ಹೆಚ್ಚಾಗುವುದೇ ನಮಗೆ ಬೇಡ ಎಂದು ಹೇಳುತ್ತಿರುವುದರ ಅರ್ಥವೇ ನನಗೆ ಆಗುತ್ತಿಲ್ಲ. ದೇಶ ವಿಶಾಲವಾಗಬೇಕು, ಭಾರತದಲ್ಲಿ ಒಂದು ಜಾತ್ಯತೀತ ರಾಷ್ಟ್ರವನ್ನು ಕಟ್ಟಬೇಕು, ಸೋಷಿಯಲಿಸ್ಟಿಕ್ ಪ್ಯಾಟರನ್ ವ್ಯವಸ್ಥೆಯನ್ನೂ ಜಾರಿಗೆ ತರಬೇಕು ಎಂದು ದೇಶಾದ್ಯಂತವೂ ಹೇಳುತ್ತಿರುವಾಗ ನಾವಿಲ್ಲಿ ಹೀಗೆ ಹೇಳುವುದು ಯಾವ ತತ್ವದ ಆಧಾರವೋ ನಾನಂತೂ ಕಾಣೆ. ಈಗಾಗಲೇ ಶ್ರೀ ಟಿ. ಸಿ. ಬಸಪ್ಪನವರು ಹೇಳಿರುವ ಹಾಗೆ ನಮ್ಮ ಮೈಸೂರು ದೇಶ ಎಲ್ಲ ವಿಚಾರಗಳಲ್ಲಿಯೂ ಸ್ವಪರಿಪೂರ್ಣತೆಯನ್ನು ಪಡೆದಿದೆಯೇನು ? ದೇಶದಲ್ಲಿರತಕ್ಕಂಥ ಜನರೆಲ್ಲರೂ ಸ್ವಪರಿಪೂರ್ಣತೆಯನ್ನು ಅನ್ನ, ಬಟ್ಟೆ, ವಿದ್ಯಾ ಇತ್ಯಾದಿ ವಿಷಯಗಳಲ್ಲೆಲ್ಲಾ ಪಡೆದಿರುತ್ತಾರೇನು ? ಇಲ್ಲಿಗೆ ನೂರಾರು ವರ್ಷಗಳಿಂದಲೂ ಹರಿಜನರು ಎಲ್ಲಾ ವಿಚಾರಗಳಲ್ಲಿಯೂ ಹಿಂದುಳಿದಿದ್ದಾರೆ, ಇವರ ಅಭಿವೃದ್ಧಿಯಾಗದ ವಿನಾ ದೇಶಕ್ಕೆ ಏಳಿಗೆಯಿಲ್ಲ. ಇವರು ಉದ್ಧಾರವಾದರೆ ಆಗ ರಾಷ್ಟ್ರವೂ ಉದ್ಧಾರವಾಯಿತೆಂದು ಹೇಳಬಹುದು. ಇತರರೂ ನಮ್ಮ ದೇಶಕ್ಕೆ

ಬಂದರೆ ನಾವು ಅವರ ಅಭಿವೃದ್ಧಿಯನ್ನೂ ಕೂಡ ಕೈಬಿಡಲು ಸಾಧ್ಯವಿಲ್ಲ. ಹೀಗಿರುವಾಗ ನಾವು ಈ ದೊಡ್ಡ ದೊಡ್ಡ ಭಾವನೆಗಳನ್ನೆಲ್ಲಾ ಬದಿಗೊತ್ತಿ 'ನಮ್ಮ ದೇಶ ಬಹಳ ಮುಂದುವರಿದಿದೆ ; ನಮ್ಮ ದೇಶದಲ್ಲಿ ರಸ್ತೆಗಳೆಲ್ಲಾ ಬಹಳ ಚೆನ್ನಾಗಿವೆ; ಆಸ್ಪತ್ರೆಗಳು ಜಾಸ್ತಿಯಾಗಿರುತ್ತವೆ, ಹೆಚ್ಚಿನ ಸಂಖ್ಯೆಯಲ್ಲಿ ಪಾಠಶಾಲೆಗಳಿರುತ್ತವೆ' ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಈಗಾಗಲೇ ಇಂಡಿಯಾ ' ಸರ್ಕಾರದವರು ಅಖಂಡ ಭಾರತದ ಏಳಿಗೆಗಾಗಿ ಕೈಗೊಂಡಿರುವ ಯೋಜನೆಯಲ್ಲಿ ಮೊದಲನೆಯ ಪಂಚವಾರ್ಷಿಕ ಯೋಜನೆ ಮುಗಿದು ದ್ವಿತೀಯ ಪಂಚವಾರ್ಷಿಕ ಯೋಜನೆ ಪ್ರಾರಂಭವಾಗುವುದರಲ್ಲಿದೆ. ನಮಗೆ ಆಹಾರದ ಕುಗ್ರಾಮವಿದ್ದ ಕಾಲದಲ್ಲಿ ಅನ್ಯ ದೇಶದವರೆಲ್ಲಾ ನಮಗೆ ಆಹಾರದ ಸರಬರಾಜು ಮಾಡಲಿಲ್ಲವೇನು ? ಆ ದಿವಸ ಹಿಂದುಳಿದ ದೇಶದ ಪಾಡು ಹಿಂದುಳಿದ ದೇಶಕ್ಕಾಗಲಿ, ಮುಂದುವರಿದ ದೇಶದ ಪಾಡು ಮುಂದುವರಿದ ದೇಶಕ್ಕಾಗಲಿ ಎಂದು ಹೇಳಿದ್ದರೆ ಆದಿವಸ ಯಾರಯಾರ ಪಾಡು ಏನೇನಾಗುತ್ತಿತ್ತು ಎನ್ನುವುದನ್ನು ನಾವು ಗಮನದಲ್ಲಿಟ್ಟುಕೊಂಡು ಮಾತನಾಡುವುದು ಬಹಳ ಒಳ್ಳೆಯದೆಂದು ಹೇಳುತ್ತೇನೆ, ಆದರೆ ನಾನಂತೂ ಪಾಶ್ಚಾತ್ಯ ರಾಷ್ಟ್ರಗಳಿಗೆ ಹೋಗಿಬಂದಿಲ್ಲ. ಹೋಗಿಬಂದಿರತಕ್ಕವರು ಹೇಳಿದ್ದನ್ನು ಕೇಳಿದ್ದೇನೆ. ಆ ದೇಶಗಳಲ್ಲಿ ಪ್ರತಿಯೊಂದು ಪಂಗಡದವರೂ ಮುಂದೆ ಬರುವುದಕ್ಕೆ ಕಾರಣ ಅಲ್ಲಿಯ ಆಡಳಿತ ವಿಚಕ್ಷಣೆಯೇ ಮೂಲವೆಂದು ಹೇಳುತ್ತಿದ್ದಾರೆ. ಅಲ್ಲಿ ಕೂಲಿಯವರಿಗೂ ಸಹ ಇಷ್ಟೇ ಕೂಲಿ ಕೊಡಬೇಕು, ಇಷ್ಟೇ ಕೆಲಸ ಮಾಡಿಸಿಕೊಳ್ಳಬೇಕು ಎನ್ನತಕ್ಕ ಬಗ್ಗೆ ಎಲ್ಲದಕ್ಕೂ ಕಾನೂನುಗಳನ್ನ ಮಾಡಿದ್ದಾರಂತೆ. ಆದರೆ, ನಾವು ಮೊನ್ನೆತಾನೆ ಇಲ್ಲಿ ಒಂದು ಟೆನೆನ್ಸಿ ಆಕ್ಟನ್ನು ಜಾರಿಗೆ ತಂದಿದ್ದೇವೆ. ಹೀಗೆ ಜಗತ್ತಿನಲ್ಲಿರುವ ಪ್ರತಿಯೊಂದು ರಾಷ್ಟ್ರವೂ ಆ ದೇಶದಲ್ಲಿರತಕ್ಕಂಥ ಸರ್ವರ ಏಳಿಗೆಗೋಸ್ಕರವಾಗಿ ಶ್ರಮಿಸುತ್ತಿರುವಂಥ ಕಾಲದಲ್ಲಿ 'ಯಾರು ಹೇಗಾದರೂ ಇರಲಿ, ನಾವು ಮಾತ್ರ ಸುಖವಾಗಿದ್ದರೆಸಾಕು' ಎಂದು ಹೇಳತಕ್ಕ ಜನರು ಇನ್ನೂ ನಮ್ಮ ದೇಶದಲ್ಲಿದ್ದಾರಲ್ಲಾ ಎನ್ನುವುದು ಇದರಿಂದ ವೇದ್ಯವಾಗುತ್ತದೆ. ಆದರೆ, ಇಂಥ ಭಾವನೆ ಎಷ್ಟು ಬೇಗ ತೊಲಗಿದರೆ ದೇಶಕ್ಕೆ ಅಷ್ಟೂ ಒಳ್ಳೆಯದಾಗುತ್ತದೆ. ಈ ರೀತಿ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರೆ ಏನು ಗೊತ್ತಾಗುತ್ತದೆಂದರೆ, ಜನ ಹಿತದೃಷ್ಟಿಯನ್ನು ಗಮನಿಸದೆ, ವಿಶಾಲ ಭಾವನೆಯಿಂದ ವರ್ತಿಸಲು ಮನಸ್ಸಿಲ್ಲದೆ, ನಾವೆಲ್ಲರೂ ಭಾರತದ ಪುತ್ರರು, ಭಾರತೀಯರು ಎನ್ನುವ ಅಭಿಮಾನವನ್ನೆಲ್ಲಾ ತೊರೆದು ಮಾತನಾಡಿದ್ದಾರೆಂಬುದು ಎದ್ದು ಕಾಣಿಸುತ್ತಿದೆಯೇ ಹೊರತು ಅವರೆಲ್ಲ ದರಿದ್ರರು ಎಂದು ಹೇಳಿರುವುದು ಅರ್ಥವಿಲ್ಲದ ಮಾತು. ಅವರೂ ಕೂಡ ನಮ್ಮ ಹಾಗೆಯೇ ಮುಂದುವರಿಯಬೇಕಾದ್ದು ದೇಶದ ಹಿತದೃಷ್ಟಿಯಲ್ಲಿ ತೀರಾ ಅಗತ್ಯ. ಅಕ್ಕಸಕ್ಕದ ಪ್ರಾಂತ್ಯಗಳವರ ಏಳಿಗೆಗೆ ಗಮನಕೊಡದಿರುವುದು ಸರಿಯಲ್ಲ.

ಸ್ವಾಮಿ, ಸರದಾರ್ ವಲ್ಲಭಾಯಿ ಪಟೇಲರು 562 ಚಿಕ್ಕ ಚಿಕ್ಕ ಸಂಸ್ಥಾನಗಳನ್ನೆಲ್ಲಾ ವಿಲೀನೀಕರಣ ಮಾಡಿದ್ದಾರೆ. ಯಾರಾದರೂ ದೇಶವನ್ನು ಹಾಗೆ ವಿಲೀನೀಕರಣ ಮಾಡದೆ ಇಟ್ಟಿರುವುದಕ್ಕಾಗುತ್ತದೆಯೇ! ನಾವು ನೀವು ಎಲ್ಲರೂ ಕೂಡ, ಜಾತಿ, ಕುಲ, ಗೋತ್ರ ವ್ಯತ್ಯಾಸವಿಲ್ಲದೆ ದೇಶಾಭಿವೃದ್ಧಿ ಮಾಡಬೇಕು ಎಂದು ಒಂದೇ ಮನೋಭಾವ ಬೆಳೆಸಿಕೊಂಡು ಇರಬೇಕಾದರೆ ಪಕ್ಕದಲ್ಲಿ ಬೇರೆ ಪ್ರಾಂತ್ಯದಲ್ಲಿರುವ ಮಕ್ಕಳೇ ಬೇರೆ ಎಂದು ಹೇಳುವುದು ಯಾವ ನ್ಯಾಯ ? ಸಾಧಾರಣವಾಗಿ ದೇಶ ಸ್ವತಂತ್ರವಾದಮೇಲೆ ದೇಶ ವಿಂಗಡನೆಯಾಗುವುದು ಅಗತ್ಯ.

[MR. DEPUTY SPEAKER in the Chair.]

ಕೇಂದ್ರ ಸರ್ಕಾರದವರು ಫಸಲಾಲಿ ಸಮಿತಿಯವರನ್ನು ನೇಮಿಸಿ ಆಡಳಿತ ದೃಷ್ಟಿಯಿಂದ ದೇಶದ ಮರುವಿಂಗಡನೆ ಏರ್ಪಡಬೇಕಾದುದು ಅಗತ್ಯವೆಂದು ಹೇಳಿದ್ದಾರೆ. ದೇಶ ಪುನರ್ವಿಂಗಡನೆಯ ಬಗ್ಗೆ ಅನೇಕ ಜನ ಮಾನ್ಯ ಸದಸ್ಯರು ಹೇಳುವುದರಲ್ಲಿ ತಿರುಳಿಲ್ಲವೆಂದು ನನ್ನ ಭಾವನೆ. ಏಕೆಂದರೆ ನಾವು ಯಾವಾಗಲೂ ಸಂಶಯ ಪಡಬಾರದು. ದೇಶ ದೊಡ್ಡದು. ಭರತಖಂಡ ಬಹಳ ದೊಡ್ಡ ದೇಶ. ದೊಡ್ಡ ಜನಾಂಗ. ಪಂಡಿತ್ ಜವಹರ್‌ಲಾಲ್ ನೆಹರೂ ಅವರು ಪ್ರಪಂಚದಲ್ಲೇ ವಂದನಾರ್ಹರು. ಇಂಡಿಯಾ ದೇಶದ ಮೂಲೆ ಮೂಲೆಯಲ್ಲಿರತಕ್ಕ ಪ್ರತಿಯೊಬ್ಬ ಪ್ರಜೆಯೂ ಕೂಡ ಮುಂದುವರಿಯಬೇಕು, ದೇಶ ಅಭಿವೃದ್ಧಿಯಾಗಬೇಕು ಎಂದಿರುವಾಗ ಈಗ ಏತಕ್ಕೆ ಚಿಕ್ಕದಾರಿಯಲ್ಲಿ ಹೋಗಬೇಕಾಗಿದೆ ? ಪಕ್ಕದಲ್ಲಿರುವ ಪ್ರಾಂತದ ಜನರು ಬರಬೇಕಾಗಿಲ್ಲ ಎಂದು ಹೇಳುವುದರಲ್ಲಿ ಅರ್ಥವಿಲ್ಲವೆಂದು ನಾನು ಮಾನ್ಯ ಸದಸ್ಯರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮೈಸೂರು ದೇಶದಲ್ಲಿ ಎಷ್ಟು ಆಸ್ಪತ್ರೆಗಳು, ಎಷ್ಟು ರಸ್ತೆಗಳು, ಎಷ್ಟು ಸಂಚಾರ ಸೌಕರ್ಯಗಳು ಮತ್ತು ಎಷ್ಟು ವಿದ್ಯಾಭ್ಯಾಸದ ಅನುಕೂಲತೆಗಳಿವೆ, ಎಂಬುದನ್ನು ನೋಡಿ. 100ಕ್ಕೆ 75 ಜನರು ಗ್ರಾಮಾಂತ ಪ್ರದೇಶದಲ್ಲಿ ವಾಸಮಾಡುತ್ತಿದ್ದಾರೆ. ಯಾವ ಯಾವ ಕಾಲೇಜುಗಳನ್ನು ಹಳ್ಳಿಗಳಿಗೆ ಏರ್ಪಾಡು ಮಾಡಿದ್ದೀರಿ! ಆಸ್ಪತ್ರೆಗಳು ಮತ್ತು ಕಾಲೇಜುಗಳೆಲ್ಲಾ ಪಟ್ಟಣಗಳಲ್ಲಿವೆ. ಪಟ್ಟಣಗಳಲ್ಲಿರುವವರು ಸುಖ ಮತ್ತು ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. ಆದರೆ 100ಕ್ಕೆ 75 ಜನರಿರುವ ಹಳ್ಳಿಗಾಡಿನಲ್ಲಿ ಸ್ಕೂಲ್ ಕೊಡಬೇಕಾದರೆ ದುಡ್ಡು ಕೊಡಿರಿ, ಇಲ್ಲದಿದ್ದರೆ ಸ್ಕೂಲ್ ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತೀರಿ. ಪಟ್ಟಣಗಳಲ್ಲಿ ಕಾಲೇಜುಗಳನ್ನು ಕೊಡುವುದಕ್ಕೆ ಆಗುತ್ತದೆ. ಕಟ್ಟಡಗಳು ಆಗುತ್ತವೆ. ಸ್ಕೂಲುಗಳಿಗೆ lecturers ಬರುತ್ತಾರೆ. ಗ್ರಾಮದಲ್ಲಿರುವ ದೇಶದ ಮುಕ್ಕಾಲು ಭಾಗದ ಜನಗಳನ್ನು ನಿರ್ಲಕ್ಷ್ಯದಿಂದ ಕಾಣಲಿಲ್ಲವೇ ? ಕಾರಣಾಂತರದಿಂದ ಅದು ಆಗಿರಬಹುದು. ಇವೊತ್ತಿನ ದಿವಸ ಗ್ರಾಮಾಂತರದಲ್ಲಿರುವ ಜನಗಳಿಗೂ ಕೂಡ ಸೌಲಭ್ಯಗಳನ್ನು ಒದಗಿಸಬೇಕಾಗಿ ಬರುತ್ತದೆ. ಕಾರಣಾಂತರದಿಂದ ಈ ರೀತಿ ಆಗಿದ್ದರೆ, ಅದನ್ನೇ ದೊಡ್ಡ ಕಾರಣವೆಂದು ಇಟ್ಟುಕೊಳ್ಳಕೂಡದು. ಮದರಾಸ್, ಬೊಂಬಾಯಿ, ಹೈದರಾಬಾದ್‌ನಲ್ಲಿರುವ ಕನ್ನಡ ಮಾತನಾಡುವ ಜನಗಳನ್ನು ಆ ಸರ್ಕಾರಗಳು ನಿರ್ಲಕ್ಷ್ಯಮಾಡುವುದು ಸ್ವಾಭಾವಿಕ. ಅಲ್ಲಿರತಕ್ಕ ಜನಗಳು ಎಷ್ಟೋ ಕಷ್ಟಪಟ್ಟಿದ್ದಾರೆ. ಇವೊತ್ತಿನ ದಿವಸ ಮೈಸೂರು ಬಿಟ್ಟು ಹೊರಗೆ ಹೋದರೆ ಯಾವ ಜಾತಿಯವನೇ ಆಗಿರಲಿ ಆತನು ಕನ್ನಡ ಮಾತನಾಡಿದರೆ ಅವನ ಜೊತೆಯಲ್ಲಿ ಎಲ್ಲಾ ಸಮಾಚಾರಗಳನ್ನೂ ಮಾತನಾಡುತ್ತೇವೆ. ನನಗೆ ಗೊತ್ತಿಲ್ಲದೇ ಇರುವ ತಮಿಳು, ಇಂಗ್ಲಿಷ್, ಫ್ರೆಂಚ್ ಭಾಷೆ ಮಾತನಾಡುವವನ ಸಹವಾಸನ್ನಾಗಲಿ, ಅವನ ಜೊತೆಗೆ ಮಾತನಾಡುವುದಕ್ಕಾಗಲಿ ಹೋಗುವುದಿಲ್ಲ. ನಮ್ಮ ಭಾಷೆಯನ್ನು ಮಾತನಾಡುವವರು ಎಲ್ಲಿಂದ ಬಂದರೂ ಏನು ವ್ಯಾಪಾರ ಮಾಡುತ್ತೀರಿ ಮುಂತಾದ ವಿಚಾರಗಳನ್ನು ಮಾತನಾಡುತ್ತೇವೆ. ಇವೊತ್ತಿನ ದಿವಸ ಪಕ್ಕದ ಪ್ರಾಂತಗಳಲ್ಲಿರುವ ಜನಗಳಿಗೆ ಕನ್ನಡ ಸ್ಕೂಲುಗಳಿಲ್ಲ. ಅವರು ಮನೆಯಲ್ಲಿ

(ಶ್ರೀ ಟಿ. ಹನುಮಯ್ಯ.)

ಮಾತನಾಡುವುದು ಕನ್ನಡ. ಆದರೆ ಸ್ಕೂಲುಗಳಲ್ಲಿ ಹೇಳಿಕೊಡುವುದು ಮರಾಠಿ! ಹಿಂದಿ ಇರುವುದರಿಂದ ಕನ್ನಡ ಭಾಷೆ ತುಂಡು ತುಂಡಾಗಿ ಚೂರು ಚೂರಾಗಿ ಕನ್ನಡ ಭಾಷೆ ಹಿಂದೆ ಎಷ್ಟು ವೈಭವದಿಂದ ಇತ್ತೋ ಅದು ಇವೊತ್ತಿನ ದಿವಸ ಹೋಗಿ ಬಹಳ ಹೀನಸ್ಥಿತಿಗೆ ಬಂದಿದೆ. ಕೋಟ್ಯಂತರ ಜನಗಳು ಕಾರಣಾಂತರದಿಂದ ಯುದ್ಧ ಮಾಡಿ ರಾಜ್ಯ ಕಳೆದುಕೊಂಡು ಬೇರೆಕಡೆ ಹೋಗಿರುವುದರಿಂದ ಅವರಿಗೆ ಈ ತರಹ ತೊಂದರೆಯಾಗಿದೆ. ಆದ್ದರಿಂದ ನಾವೆಲ್ಲರೂ ಕೂಡ ಅಕ್ಕಪಕ್ಕದ ಪ್ರಾಂತದ ಕನ್ನಡ ಜನಗಳು ನಮ್ಮ ದೇಶಕ್ಕೆ ಬಂದು ಸೇರುವುದರಲ್ಲಿ ಯಾವ ಭಿನ್ನಾಭಿಪ್ರಾಯವನ್ನೂ ಪಡಕೂಡದು. ನಾವೆಲ್ಲರೂ ಅವರನ್ನು ಜೊತೆಗೆ ಸೇರಿಸತಕ್ಕದ್ದು ಬಹಳ ಒಳ್ಳೆಯದು ಎಂದು ನನಗೆನ್ನಿಸುತ್ತದೆ. ಅನೇಕ ಮಾನ್ಯ ಸದಸ್ಯರು ನಮ್ಮ ದೇಶದಲ್ಲಿ ಒಂದು ಕೋಟಿ ಜನ ಇದ್ದಾರೆ, ಅವರದು ಒಂದು ಕೋಟಿ ಜನ ಆಗಬಹುದು, ಆದ್ದರಿಂದ ಎರಡು ಕನ್ನಡ ಪ್ರಾಂತ್ಯಗಳನ್ನು ಮಾಡಿದರೆ ಆಗುವುದಿಲ್ಲ ಎಂದು ಹೇಳಿದರು. ಕನ್ನಡ ಮಾತನಾಡತಕ್ಕ ಜನಗಳು ಎಲ್ಲಾ ಒಂದು ಸಂಸಾರ, ಒಂದುಮನೆ, ಒಂದುದೇಶ, ಒಂದು ಅಡಳಿತದಲ್ಲಿ ಇರೋಣ ಎಂದು ಹೇಳಿದರೆ, ಬೇಡ ಅವರೇ ಒಂದು ಪ್ರಾಂತ್ಯ ಮಾಡಿಕೊಳ್ಳಲಿ, ನಮ್ಮದೇ ಒಂದು ಪ್ರಾಂತ್ಯವಾಗಲಿ, ಅವರದು ಒಂದುಕೋಟಿ ಜನಸಂಖ್ಯೆ ನಮ್ಮದು ಒಂದು ಕೋಟಿ ಜನಸಂಖ್ಯೆಯಾಗುತ್ತದೆ ಎಂದು ಹೇಳುವುದನ್ನು ನೋಡಿದರೆ, ಗಂಡಹೆಂಡರನ್ನು ಬೇರೆ ಮಾಡಿದರೆ ಸುಖವಾಗುತ್ತದೆ ಎಂದು ಹೇಳಿದ ಹಾಗಾಗುತ್ತದೆ. ಅವರು ನಮ್ಮ ಹತ್ತಿರದಲ್ಲಿ 'ಒಂದೇ ಪ್ರಾಂತ್ಯದಲ್ಲಿರೋಣ, ನಮ್ಮಲ್ಲಿ ಏನು ವೈಶಿಷ್ಟ್ಯ ಇದೆಯೋ ಅದನ್ನು ಇನ್ನೂ ಹೆಚ್ಚಿಗೆ ಮಾಡೋಣ' ಎಂದು ಹಾತೊರೆಯುತ್ತಿದ್ದಾರೆ. ನಮ್ಮ ಜೊತೆಯಲ್ಲಿ ಬರುವವರನ್ನು ಬೇಡ ಎಂದು ಹೇಳುವುದು ಸರಿಯಲ್ಲ. ಇದರ ಜೊತೆಗೆ ಮುಖ್ಯ ಮಂತ್ರಿಗಳಾದ ಶ್ರೀ ಕೆ. ಹನುಮಂತಯ್ಯನವರು ಹೈದರಾಬಾದಿನ ನಾನಲ್ ನಗರದಲ್ಲಿ ಕೂಡ ದೇಶವಿಂಗಡನೆ ಆಗತಕ್ಕದ್ದು ಬಹಳ ಅಗತ್ಯ ಎಂದು ಹೇಳಿದ್ದಾರೆ. ಇದು ಬಹಳ ಅಗತ್ಯವೆಂದು ನನಗನ್ನಿಸುತ್ತದೆ. ಅನೇಕ ಮಾನ್ಯ ಸದಸ್ಯರು 'ಕರ್ಣಾಟಕ ಪ್ರದೇಶವೆಲ್ಲಾ ಯಾವ ಒಂದು ವಿಚಾರದಲ್ಲಿಯೂ ಕೂಡ ಮುಂದುವರಿದಿಲ್ಲ, ಇಂಥ undeveloped areasಗಳಿಗೆ ಸರ್ಕಾರದವರು ಏನು ಮಾಡುತ್ತಾರೆ' ಎಂದು ಕೇಳಿದರು. ಇವೊತ್ತಿನ ದಿವಸದಲ್ಲಿ ಮೈಸೂರು ದೇಶದ ಎಲ್ಲಾ ಭಾಗಗಳೂ ಒಂದೇ ರೀತಿಯಾಗಿ ಒಂದೇ ಸಮನಾಗಿ ಅಭಿವೃದ್ಧಿಯಾಗಿವೆಯೇ? ಒಂದುಕಡೆ ಜಾಸ್ತಿ ಹಣ ಸಹಾಯ ಮಾಡಿದರೆ ಇನ್ನೊಂದುಕಡೆ ಕಡಿಮೆ ಮಾಡುತ್ತಾರೆ. ಇನ್ನೊಂದುಕಡೆ ದುಡ್ಡೇ ಕೊಡುವುದಿಲ್ಲ. ಆಡಳಿತ ದೃಷ್ಟಿಯಿಂದ ಲೋಪ ದೋಷಗಳು ಆಗುತ್ತವೆಯೇ ಇಲ್ಲವೇ ಎಂದು ಹೇಳುವುದಕ್ಕಾಗುವುದಿಲ್ಲ. ಜೊತೆಗೆ ಕೋಟ್ಯಾಂತರ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು undeveloped areasನಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಕೊಡುತ್ತಾ ಇರುವಾಗ್ಗೆ ನಮಗೆ ಏಕೆ ಹೆದರಿಕೆ? ಬೇರೆ ಪ್ರಾಂತ್ಯಗಳು ನಮ್ಮ ದೇಶಕ್ಕೆ ಬಂದಾಗ್ಗೆ ನಮಗೆ ಬಹಳ ದುಡ್ಡು ನಷ್ಟವಾಗುತ್ತದೆ, ನಮ್ಮಲ್ಲಿರತಕ್ಕ ದುಡ್ಡನ್ನು ಅವರಿಗೆ ಖರ್ಚುಮಾಡಬೇಕಾಗುತ್ತದೆ ಎಂದು ಹೇಳಿದರೆ ನನಗಾದರೂ ಅರ್ಥವಾಗುವುದಿಲ್ಲ. ಏಕೆಂದರೆ ದುಡ್ಡು ಒಂದುಕಡೆ ಸೇರುತ್ತಾ ಇದ್ದರೆ ಇನ್ನೊಂದುಕಡೆ ಕಡಿಮೆಯಾಗುತ್ತದೆ. ನೀರು ದಿಣ್ಣೆಗೆ ಹೋಗುವುದಿಲ್ಲ. ಯಾವಾಗಲೂ ಕೆಳಗೆ ಹೋಗುತ್ತದೆ. ಅದೇ ರೀತಿಯಾಗಿ ಎಲ್ಲವನ್ನೂ ಸಮನಾಗಿ ಮಾಡಬೇಕಾದರೆ ಎಲ್ಲಾ undeveloped areas ಕೂಡ ಅಭಿವೃದ್ಧಿ ಸ್ಥಿತಿಗೆ ತರಬೇಕು. ಆದ್ದರಿಂದ ಮೈಸೂರು ಮುಂದುವರಿದ ದೇಶವೆಂದು ಒಪ್ಪಿಕೊಂಡರೂಕೂಡ, ಮೈಸೂರು ದೇಶದ ಎಲ್ಲಾ ಭಾಗಗಳೂ ಒಂದೇ ಸಮನಾಗಿ ಅಭಿವೃದ್ಧಿಯಾಗಿವೆ ಎಂದು ಹೇಳುವುದಕ್ಕಾಗುವುದಿಲ್ಲ. ಕೆಲವು ಡಿಸ್ಟ್ರಿಕ್ಟ್‌ಗಳಲ್ಲಿ ಜನರು ಹೆಚ್ಚಿನ ಆಸಕ್ತಿ ವಹಿಸಿ ಅನೇಕ ಅಭಿವೃದ್ಧಿ ಕೆಲಸ ನಡೆದಿವೆ. ಕೆಲವುಕಡೆ ನಡೆದಿಲ್ಲ. ಆದ್ದರಿಂದ ಇವೊತ್ತು ನಮ್ಮ ಕಡೆಯಲ್ಲಿ ಅಭಿವೃದ್ಧಿ ಕಾರ್ಯಗಳನ್ನು ನಡೆದಿಲ್ಲ ಎಂದು ಅದನ್ನೇ ಆಧಾರ ಇಟ್ಟುಕೊಂಡು ನಾವು ಹಿಂದುಳಿದಿದ್ದೇವೆ ಎಂದು ಹೇಳುವುದು ಅಷ್ಟು ಸೂಕ್ತವಲ್ಲವೆಂದು ನಾನು ಹೇಳಬೇಕಾಗಿದೆ. ಆದಕಾರಣ ಮುಖ್ಯವಾಗಿ ನಾವೆಲ್ಲರೂ ವಿಶಾಲ ಹೃದಯದಿಂದ ಅಥವಾ ದೊಡ್ಡ ಧ್ಯೇಯ ಸಾಧನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ದೇಶದ ಹಿತದೃಷ್ಟಿಯಿಂದ ಕೆಲಸ ಮಾಡಬೇಕು. ಖಂಡಿತವಾಗಿಯೂ ಇದರಲ್ಲಿ ಯಾವ ಧಕ್ಕೆಯೂ ಬರುವುದಿಲ್ಲ. ಅನೇಕ ಮಾನ್ಯ ಸದಸ್ಯರು ಬಹಳ ಕೂಲಂಕಷವಾಗಿ ಮತ್ತು ಬಹಳ ಕುತೂಹಲದಿಂದ ವಿಚಾರಮಾಡಿದ್ದಾರೆ. ಒಬ್ಬರು ಪರವಾಗಿಯೂ ಮತ್ತೊಬ್ಬರು ವಿರೋಧವಾಗಿಯೂ ಮಾತನಾಡಿದ್ದಾರೆ. ಆದರೆ ನಾವೆಲ್ಲರೂ ಕೂಡ ಭಾರತದ ಪ್ರಜೆಗಳು ಎಂಬುದನ್ನು ಮರೆಯಬಾರದು. ಇವೊತ್ತು ಐಶ್ವರ್ಯವಂತರಿದ್ದರೆ ಅವರ ಮೇಲೆ ತೆರಿಗೆ ಹಾಕಿ ಅವರ ದುಡ್ಡನ್ನು ತೆಗೆದುಕೊಳ್ಳಲು ನಾವೆಲ್ಲರೂ ಪ್ರಯತ್ನಮಾಡುವುದಿಲ್ಲವೇನು? ಅದೇ ರೀತಿಯಲ್ಲಿ ಈ ಹೊತ್ತು ನಾವೆಲ್ಲರೂ ಪಕ್ಕದ ಪ್ರಾಂತ್ಯವನ್ನು ಒಳಗೊಂಡು ದೊಡ್ಡ ಕನ್ನಡ ಪ್ರಾಂತ್ಯದಲ್ಲಿರುವುದಾದರೆ ನಮಗೆ ದುಃಖವಾಗುವುದಿಲ್ಲ. ಆದ್ದರಿಂದ, ನಾವೆಲ್ಲರೂ ಒಮ್ಮನಸ್ಸಿನಿಂದ, ವಿಶಾಲ ದೃಷ್ಟಿಯಿಂದ, ದೇಶದ ಹಿತದೃಷ್ಟಿಯಿಂದ ಒಂದಾಗೋಣ. 200 ವರ್ಷಗಳ ಹಿಂದೆ ನಮ್ಮಿಂದ ಹರಿದು ಹಂಚಿಹೋಗಿರತಕ್ಕ ಭಾಗಗಳು ಮತ್ತೆ ಬಂದು ಒಟ್ಟುಗೂಡಿದರೆ ಅಭ್ಯಂತರವಿಲ್ಲ. ಆದ್ದರಿಂದ ಒಂದಾಗಲು ಎಲ್ಲರೂ ಸಹಕಾರ ನೀಡಬೇಕೆಂದು ಹೇಳಿ ನಾನು ಮುಗಿಸುತ್ತೇನೆ.

*ಶ್ರೀ ಜಿ. ಪಾಪಣ್ಣ (ಶಿಡ್ಲಘಟ್ಟ-ಚಿಕ್ಕಬಳ್ಳಾಪುರ).—ಅಧ್ಯಕ್ಷರೆ, ಶೇಷಾದ್ರಿ ಸಮಿತಿಯವರ ವರದಿ ಈಗ ಕೆಲವಾರು ದಿವಸಗಳಿಂದ ನಮ್ಮ ಮುಂದಿದೆ. ಅದರ ಪರವಾಗಿಯೂ ಮತ್ತು ವಿರೋಧವಾಗಿಯೂ ಅನೇಕ ಸದಸ್ಯರು ಮಾತನಾಡಿದ್ದಾರೆ. ಈ ಸಮಿತಿಯನ್ನು ನೇಮಿಸಿ ಅಂಕಿ ಅಂಶಗಳನ್ನು ಸಂಗ್ರಹಿಸಬೇಕೆಂದು ಹೇಳಿದುದರ ಉದ್ದೇಶ, ಕರ್ಣಾಟಕವಾಗುವುದರಿಂದ ಸಾಧಕಬಾಧಕಗಳೇನು, ಸರ್ಕಾರ ಆಡಳಿತ ನಡೆಸಬೇಕಾದರೆ ಏನೇನು ಕಷ್ಟನಷ್ಟಗಳುಂಟಾಗುತ್ತವೆ ಎಂಬುದನ್ನು ತಿಳಿದುಕೊಳ್ಳಬೇಕು ಎಂದು ಈ ವರದಿಯಲ್ಲಿ ತಿಳಿಸಿದೆ. ಏಕೀಕರಣವಾಗುವುದರಿಂದ ಏನೇನು ಸಾಧಕಬಾಧಕಗಳಿವೆಯೆಂಬುದನ್ನು ಎಲ್ಲಾ ದೃಷ್ಟಿಯಿಂದಲೂ ಇಲ್ಲಿ ಚರ್ಚಿಸಿದ್ದಾರೆ. ಈ ವರದಿ ಈಗ ಸಭೆಯ ಮುಂದಿದೆ.

ಯಾವ ದೃಷ್ಟಿಯಿಂದ ನೋಡಿದರೂ ಕೂಡ ಮೈಸೂರು ವಿಶಾಲವಾಗುವುದು 'ಮೈಸೂರಿನ ಹಿತದೃಷ್ಟಿಯಿಂದಲೇ ಒಳ್ಳೆಯದಲ್ಲವೆಂದು ನಿರ್ವಿವಾದವಾಗಿ ಈ ಸಮಿತಿಯ ವರದಿಯಿಂದ ಸ್ಪಷ್ಟವಾಗಿದೆ. ಆದರೂ, ಕೆಲವು ಮಾನ್ಯ ಸದಸ್ಯರು ಈ ಸಮಿತಿಯ ಅಂಕಿ ಅಂಶಗಳ ಆಧಾರದ ಮೇಲೆಯೇ ನಾವು ಒಂದು ಪ್ರಾಂತ್ಯವನ್ನು ರಚನೆ ಮಾಡುವುದಕ್ಕಾಗುವುದಿಲ್ಲ, ಇಲ್ಲಿ ಕೊಟ್ಟಿರುವುದು ಕೇವಲ ಶುಷ್ಕವಾದ ಅಂಕಿ ಅಂಶಗಳೆಂದು

ಹೇಳಿ ವಾದ ಮಾಡುತ್ತಿದ್ದಾರೆ. ಅದಕ್ಕೆ ಸೇರಿದಹಾಗೆ ಮತ್ತೊಂದು ವಾದವೇನಿದೆಯೆಂದರೆ, ಬರೀ ವರದಿಯೇ ಅಲ್ಲದೆ ಹಿಂದಿನಿಂದಲೂ ಕಾಂಗ್ರೆಸ್ ಸಂಸ್ಥೆ ಭಾಷಾವಾರು ಪ್ರಾಂತ್ಯ ರಚನಾ ತತ್ವವನ್ನು ಒಪ್ಪಿಕೊಂಡಿದೆಯೆಂಬುದನ್ನು ಕೂಡ ಇನ್ನು ಕೆಲವರು ಹೇಳಿದ್ದಾರೆ. ಈಚೆಗೆ ಅದನ್ನು ಕಾಂಗ್ರೆಸ್ಸಿನವರೇ ವಿರೋಧಿಸುತ್ತಿದ್ದಾರೆಂದು ಅವರು ಆಶ್ಚರ್ಯವನ್ನು ವ್ಯಕ್ತಪಡಿಸಿದ್ದಾರೆ.

ಈ ತತ್ವವನ್ನೊಪ್ಪಿಕೊಳ್ಳುವುದಕ್ಕೆ ಆಗ್ಗೆ ಏನು ಕಾರಣವಿತ್ತೋ ಗೊತ್ತಿಲ್ಲ. ಒಂದುವೇಳೆ ಭಾಷಾವಾರು ತತ್ವದಮೇಲೆ ಪ್ರಾಂತ್ಯಗಳ ವಿಂಗಡಣೆ ಮಾಡಬೇಕೆಂಬ ಉದ್ದೇಶವೇ ಕಾಂಗ್ರೆಸ್ಸಿಗೆ ಇದ್ದಿದ್ದರೆ, ಈ ಸಮಿತಿಯನ್ನೇ ನೇಮಿಸುತ್ತಿರಲಿಲ್ಲ. ಸ್ವಾತಂತ್ರ್ಯ ಬಂದ ತರುಣದಲ್ಲಿ ಇಂಡಿಯಾ ಸರ್ಕಾರದವರು ಅನೇಕ ಸಣ್ಣ ಸಣ್ಣ ಸಂಸ್ಥಾನಗಳನ್ನು ಪಕ್ಕದ ಪ್ರಾಂತ್ಯಗಳೊಡನೆ ವಿಲೀನಗೊಳಿಸಿದರು ; ಆಗ ಯಾವ ಸಂಸ್ಥಾನದ ಸರ್ಕಾರದವರೂ ಪ್ರತಿಭಟಿಸಲಿಲ್ಲ ; ಹಾಗೆಯೇ ಮೈಸೂರಿನ ಪಕ್ಕದ ಪ್ರಾಂತ್ಯಗಳೊಡನೆ ವಿಲೀನ ಮಾಡಿದ್ದರೆ ಏನು ಮಾಡುತ್ತಿದ್ದರು ; ಟಿಪ್ಪುಸುಲ್ತಾನನ ಕರ್ನಾಟಕ ಯಾವ ರೀತಿಯಿತ್ತೋ ಅದೇ ರೀತಿ ಮಾಡಿದ್ದಲ್ಲಿ ಏನು ಮಾಡುತ್ತಿದ್ದರು ಎಂಬ ವಾದವನ್ನು ಹೇಳಿದರು. ಒಂದುವೇಳೆ ಆ ಉದ್ದೇಶ ಇಂಡಿಯಾ ಸರ್ಕಾರದವರಿಗಿದ್ದರೆ ಈ ಮೊದಲೇ ಅದನ್ನು ಮಾಡುತ್ತಿದ್ದರು. ಆ ರೀತಿಯ ಅಭಿಪ್ರಾಯವಿರಲಿಲ್ಲವೆಂಬುದು ಇದರಿಂದಲೇ ವ್ಯಕ್ತವಾಗುತ್ತದೆ. ಅದಕ್ಕಾಗಿಯೇ ಭಾಷಾವಾರು ಪ್ರಾಂತ ತತ್ವದ ಮೇಲೆ ಆಡಳಿತ ನಡೆಸಬೇಕೆಂದು ಮೊದಲು ಒಪ್ಪಿದ್ದರೂ ಈಚೆಗೆ ಆಡಳಿತವನ್ನು ಸ್ವಲ್ಪಕಾಲ ನಡೆಸಿ ಭಾಷಾವಾರು ವಿಭಜನೆ ಮಾಡುವುದರಿಂದ ಏನು ತೊಂದರೆಯಾಗುತ್ತದೆಂಬುದನ್ನು ಆಡಳಿತ ನಡೆಸತಕ್ಕ ಕಾಂಗ್ರೆಸ್ ಸಂಸ್ಥೆ ಅರಿತುಕೊಂಡು ನಾಸಿಕ್ ನಗರದಲ್ಲಿ ತಾವು ಹಿಂದೆ ಮಾಡಿದ್ದ ನಿರ್ಣಯದಿಂದ ದೂರ ಸರಿದು, ಬರೀ ಆರ್ಥಿಕ ಮತ್ತು ಆಡಳಿತ ದೃಷ್ಟಿಯಿಂದ ಹಾಗೂ ಜನಗಳ ಅಭಿಪ್ರಾಯದ ಮೇಲೆ ಮಾಡಬೇಕೆಂದು ಹೇಳಿ ಒಂದು ಸಮಿತಿಯನ್ನು ನೇಮಿಸಿ ಅದು ಕೂಲಂಕಷವಾಗಿ ಈ ಸಮಸ್ಯೆಯನ್ನು ಪರಿಶೀಲಿಸಿ ಸಲಹೆ ಮಾಡುವುದಕ್ಕೆ ಅಧಿಕಾರ ಕೊಟ್ಟಿದ್ದಾರೆ. ಅದಕ್ಕನುಸಾರವಾಗಿ ನಮ್ಮ ಸರ್ಕಾರದವರೂ ಕೂಡ ಏಕೀಕರಣದಿಂದಾಗುವ ಸಾಧಕ ಬಾಧಕಗಳನ್ನು ತಿಳಿದುಕೊಳ್ಳುವುದಕ್ಕಾಗಿ ಒಂದು ಸಮಿತಿಯನ್ನು ಮಾಡಿದರು. ಆ ವರದಿ ಈಗ ನಮ್ಮ ಮುಂದಿದೆ. ಅದನ್ನು ಯಾವ ದೃಷ್ಟಿಯಿಂದ ಪರಿಶೀಲಿಸಿದರೂ ಅನುಕೂಲಕ್ಕಿಂತ ಪ್ರತಿಕೂಲಗಳೇ ಅಗುತ್ತವೆಂದು ತೋರುತ್ತದೆ. ಆದ್ದರಿಂದ ಅಂಕಿ ಅಂಶಗಳನ್ನು ಬಿಟ್ಟು ಕರ್ನಾಟಕ ಪ್ರಾಂತವಾಗುವುದರ ಸಾಧಕ ಬಾಧಕಗಳನ್ನು ಯೋಚನೆ ಮಾಡದೆ ಯಾವುದನ್ನೂ ಮಾಡುವುದು ಸೂಕ್ತವಲ್ಲ. ಕೆಲವು ಮಾನ್ಯ ಸ್ನೇಹಿತರು ಇನ್ನೊಂದು ವಾದವನ್ನು ನಮ್ಮ ಮುಂದಿಟ್ಟರು. ಬೊಂಬಾಯಿ ಕರ್ನಾಟಕದಲ್ಲಾಗಲಿ, ಹೈದರಾಬಾದಿನಲ್ಲಿಯಾಗಲಿ ಅಲ್ಲಿ ಕನ್ನಡಿಗರು ಅಲ್ಪಸಂಖ್ಯಾತರಾಗಿದ್ದುಕೊಂಡು ಅನೇಕ ರೀತಿಯ ಕಿರುಕುಳಕ್ಕೊಳಗಾಗಿದ್ದಾರೆ ಎಂದು. ಆಮಾತು ನಿಜವೆಂದು ಒಪ್ಪುವುದಾದರೆ, ಅದೇ ರೀತಿ ಮೈಸೂರಿನಲ್ಲಿ ಅಲ್ಪಸಂಖ್ಯಾತರಾಗಿರುವ ತೆಲುಗರು, ತಮಿಳರು ಮತ್ತು ಇತರರೂ ಕೂಡ ಅಲ್ಲಿ ಕನ್ನಡ ಜನರು ಯಾವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೋ ಅದೇ ಅಭಿಪ್ರಾಯವನ್ನು ವ್ಯಕ್ತಪಡಿಸಬಹುದಾಗಿತ್ತು. ಆದರೆ ಮೈಸೂರಿನಲ್ಲಿ ಆ ಅಭಿಪ್ರಾಯಕ್ಕೆ ಎಡೆಯಿಲ್ಲದ ಹಾಗೆ ನಡೆದುಕೊಂಡು ಹೋಗುತ್ತಿದ್ದೇವೆ. ಆದ್ದರಿಂದ ಬೊಂಬಾಯಿ ಕನ್ನಡಿಗರು ಈ ವಾದವನ್ನು ಏಕೆ ತರುತ್ತಿದ್ದಾರೋ ಅಥವಾ ನಿಜವಾಗಿಯೂ ಅವರನ್ನು ನಿರ್ಲಕ್ಷ್ಯ ಮಾಡುತ್ತಿದ್ದಾರೋ, ನಮಗೆ ಗೊತ್ತಿಲ್ಲ. ನನಗನ್ನಿಸುತ್ತದೆ, ಬಹುಶಃ ಇದಕ್ಕೆಲ್ಲ ಕಾರಣ, ಮುಂಚೆ ಕಾಂಗ್ರೆಸ್ ಸಂಸ್ಥೆ ಭಾಷಾವಾರು ಪ್ರಾಂತ್ಯ ರಚನೆಯನ್ನು ಅಂಗೀಕರಿಸಿದ್ದು. ಅದರ ಮೇಲೆ ವಿಶೇಷ ಚಳವಳಿ ನಡೆಯಿತು. ಆ ಚಳವಳಿಯ ದೆಸೆಯಿಂದ ಭಾಷಾವಾರು ಪ್ರಾಂತ್ಯ ನಿರ್ಮಾಣದ ಮನೋಭಾವ ಜನರಲ್ಲಿ ಬೆಳೆದು ಬಂದು ಈಗ ಈ ಪರಿಣಾಮವಾಗಿದೆಯೆಂದು ನನಗೆ ತೋರುತ್ತದೆ. ಇಲ್ಲದಿದ್ದರೆ, ಮೈಸೂರಿನಲ್ಲಿಯೂ ಕೂಡ ಇಲ್ಲಿರುವ ಅಲ್ಪಸಂಖ್ಯಾತರಲ್ಲಿ ಇದೇ ತರಹ ಒಂದು ಅಭಿಪ್ರಾಯ ಮೂಡಬೇಕಾಗಿತ್ತು. ಮೈಸೂರಿನಲ್ಲಾಗಲಿ ಹೈದರಾಬಾದಿನಲ್ಲಾಗಲಿ ಅಂಥಾದ್ದಾಗಿಲ್ಲ. ಅಷ್ಟೇಕೆ, ಮದ್ರಾಸಿನಿಂದ ಬೇರ್ಪಟ್ಟ ಆಂಧ್ರದವರು ವಿಶಾಲಾಂಧ್ರಕ್ಕೆ ಯಾವ ರೀತಿ ಚಳವಳಿ ನಡೆಸಿದರೂ ಹೈದರಾಬಾದಿನ ತೆಲುಗು ಪ್ರಾಂತ್ಯದವರು ತಮಗೆ ಆಂಧ್ರ ಪ್ರಾಂತ್ಯಕ್ಕೆ ಸೇರಲು ಇಷ್ಟವೆಂದು ಹೇಳಿ, ತಾವೇ ಬೇರೆ ಪ್ರಾಂತ್ಯ ಮಾಡಿಕೊಳ್ಳುವುದಾಗಿ ಒಂದು Resolutionನ್ನು ಕೂಡ ಮಾಡಿದ್ದಾರೆ. ಆದ್ದರಿಂದ ಮುಖ್ಯವಾಗಿ ಪ್ರಾಂತ್ಯ ಮನೋಭಾವ ಬೆಳೆದುಕೊಂಡು ಬರುತ್ತಿರುವುದರಿಂದ ಅಲ್ಲಿ ಆ ರೀತಿಯ ಚಳವಳಿಗೆ ಅವಕಾಶವಾಗಿದೆ. ಅಂಥ ಮನೋಭಾವ ಮೈಸೂರಿನಲ್ಲಿಲ್ಲ. ಹೀಗಿರುವಾಗ ಅಂಥ ಮನೋಭಾವ ಬೆಳೆದಿರುವ ಜನ ಮೈಸೂರಿನಲ್ಲಿ ಸೇರಿ ವಿಶಾಲ ಕರ್ನಾಟಕ ಮಾಡುವುದಾದರೆ, ಆಗ ಮೈಸೂರಿನಲ್ಲಿರುವ ತಮಿಳರು ತೆಲುಗರು ಯಾವ ಪರಿಸ್ಥಿತಿಗೆ ಇಳಿಯುತ್ತಾರೆಂಬುದನ್ನು ಸ್ವಲ್ಪ ಯೋಚಿಸಿದರೂ ಬಹಳ ನಿರಾಶೆಯುಂಟಾಗುತ್ತದೆ. ಮೊದಲನೆಯದಾಗಿ ಅಲ್ಲಿ ಅವರಿಗೆ ಕಿರುಕುಳವಿದೆಯೋ ಇಲ್ಲವೋ ಗೊತ್ತಿಲ್ಲ. ಎರಡನೆಯದಾಗಿ ಅಂಥ ಕಲುಷಿತ ಮನೋಬೆಳೆದು ಬಂದಿರುವ ಆ ಜನ ಸೌಹಾರ್ದ ಮನೋಭಾವ ಭಾವವಿರುವ ಮೈಸೂರಿನ ಜನರೊಂದಿಗೆ ಬೆರೆದರೆ, ಇಲ್ಲಿಯೂ ಆ ವಿಷಮವಾತಾವರಣವುಂಟಾಗಿ ಇಲ್ಲಿನ ಅಲ್ಪಸಂಖ್ಯಾತರಿಗೆ ಕಿರುಕುಳವಾಗಬಹುದಾದ ಪರಿಸ್ಥಿತಿಯಿದೆ. ಆದ್ದರಿಂದ ಈ ರೀತಿ ಒಂದು ವಿಶಾಲ ಕರ್ನಾಟಕ ಮಾಡುವುದಾದರೆ, ಬೊಂಬಾಯಿನಲ್ಲಿರತಕ್ಕ ಅಲ್ಪಸಂಖ್ಯಾತರ ಕಷ್ಟವನ್ನು ತಪ್ಪಿಸುವುದಕ್ಕೆ ಹೋಗಿ ಮೈಸೂರಿನಲ್ಲಿರತಕ್ಕ ಅಲ್ಪಸಂಖ್ಯಾತರಿಗೆ ಕಿರುಕುಳ ತಂದಂತಾಗುತ್ತದೆ. ಅಂತೂ, ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಬದಲಾಗಿ ಬಿಗಡಾಯಿಸುವುದಕ್ಕೆ ಅವಕಾಶ ಮಾಡಿದಂತಾಗುತ್ತದೆ. ಈಗ ಸ್ವಲ್ಪ ತಿಂಗಳುಗಳ ಹಿಂದೆ ಮೈಸೂರಿಗೆ ಬಳ್ಳಾರಿಯವರು ಬಂದರು ; ಆಗೇನೂ ನಾವು ಇದೇ ಧೋರಣೆಯಿಂದ ಮಾತನಾಡಲಿಲ್ಲ. ಕಾರಣವೇನೆಂದರೆ ಭಾಷೆಯಮೇಲೆ ನಾವು ಅದನ್ನು ಮಾಡಲಿಲ್ಲ. ಅಲ್ಲಿನವರೂ ಆ ರೀತಿಯ ಜನ ಅಲ್ಲ. ಆದರಿಂದಲೇ ಹೃತ್ಪೂರ್ವಕವಾಗಿ ನಾವು ಬಳ್ಳಾರಿಯ ಜನರನ್ನು ಸ್ವಾಗತಿಸಿದೆವು. ಆದ್ದರಿಂದ ಇದನ್ನು ಭಾಷೆಯ ದೃಷ್ಟಿಯಿಂದ ಮಾಡಹೊರಟರೆ ಬಹಳ ಅನಾನುಕೂಲವಾಗುತ್ತದೆ. ಆಡಳಿತ ದೃಷ್ಟಿಯಿಂದ ಹೇಳುವುದಾದರೆ, ಎರಡು ಕರ್ನಾಟಕಗಳನ್ನು ಮಾಡುವುದು ಚೆನ್ನಾಗಿರುತ್ತದೆ. ಆಡಳಿತಾನುಕೂಲತೆಯ ದೃಷ್ಟಿಯಿಂದ ಯಾವ ಯಾವ ಭಾಗಗಳನ್ನು ಮೈಸೂರಿಗೆ ಸೇರಿಸಬಹುದೋ ಅವುಗಳನ್ನು ಮಾತ್ರ ಸೇರಿಸಿದರೆ ನಿಜವಾಗಿಯೂ ಸುಗಮವಾಗಿ ನಡೆದುಕೊಂಡು ಹೋಗುತ್ತದೆ, ಅನುಕೂಲವಾದ ವಾತಾವರಣವೂ ಬರುತ್ತದೆ. ಅಂಥ ಒಂದು ಮೈಸೂರನ್ನು ನಿರ್ಮಿಸುವುದು ಇಡೀ ಭಾರತದ ದೃಷ್ಟಿಯಿಂದ ಸೂಕ್ತ

(ಶ್ರೀ ಜಿ. ಪಾಪಣ್ಣ.)

ವೆಂದು ಹೇಳುತ್ತೇನೆ. ಏಕೆಂದರೆ, ಆಂಧ್ರರಿಗೂ ಅವರ ಭಾಷೆಯ ಮೇಲೆ ಪ್ರೇಮವಿದೆ; ತಮಿಳರಿಗೂ ಅವರ ಭಾಷೆಯ ಮೇಲೆ ಪ್ರೇಮವಿದೆ. ಅವರವರು ತಮ್ಮ ತಮ್ಮ ಭಾಷಾ ವ್ಯಾಮೋಹದ ಮೇಲೆ ತಮ ತಮಗೇ ಒಂದು ಪ್ರಾಂತ್ಯ ಮಾಡಿಕೊಳ್ಳುತ್ತಿದ್ದರೆ ಸನ್ನಿವೇಶ ಏನಾಗುತ್ತದೆಂಬುದು ತಮಗೆ ಗೊತ್ತಿದೆ. ಆಂಧ್ರದಲ್ಲಿ ಏನು ಪರಿಸ್ಥಿತಿಯಿದೆಯೆಂಬುದು ತಮಗೇ ಗೊತ್ತು. ತಿರುವಾಂಕೂರು—ಕೊಚ್ಚಿನ್‌ನಲ್ಲಿ ತಮಿಳರ ಸ್ಥಿತಿ ಏನಾಗಿದೆಯೆಂಬುದನ್ನು ನೀವೇ ನೋಡಿದ್ದೀರಿ. ಬಿಹಾರಿನಲ್ಲಿ ಏನಾಗುತ್ತಿದೆಯೆಂಬುದು ಗೊತ್ತಿದೆ. ಇವೆಲ್ಲಾ ನೋಡಿದ ಮೇಲೆ ಭಾಷೆಯ ಮೇಲೆ ರಾಜ್ಯ ನಿರ್ಮಾಣ ಮಾಡುವುದರ ಸೂಕ್ತಾ ಸೂಕ್ತತೆಯನ್ನು ಯೋಚನೆ ಮಾಡಬಹುದು. ಮೈಸೂರಿನಲ್ಲಾದರೋ ಇಂದು ಭಾಷೆಯ ಗೊಂದಲವಿಲ್ಲದೆ ಸ್ನೇಹಪೂರ್ವಕವಾಗಿ ಎಲ್ಲಾ ಭಾಷೆಯವರೂ ನಡೆದುಕೊಂಡು ಹೋಗುತ್ತಾ ಇತರರಿಗೆ ಮಾರ್ಗದರ್ಶಕರಾಗಿದ್ದೇವೆ. ಆದ್ದರಿಂದ ಮೈಸೂರನ್ನು ಹೀಗೆಯೇ ಉಳಿಸಿಕೊಳ್ಳುವುದು ಲೇಸು, ಎಲ್ಲರೂ ಒಟ್ಟಿಗೆ ಸೇರುವುದು ಸರಿಯಲ್ಲವೆಂದು ನನ್ನ ಅಭಿಮತ ಸೂಚಿಸಿ ಮುಗಿಸುತ್ತೇನೆ.

5-30 P.M.

ಶ್ರೀ ಕೆ. ಕೊಟ್ರ ಬಸವನಗೌಡ (ಕೂಡ್ಲಿಗಿ).—ಅಧ್ಯಕ್ಷರೇ,ನಮ್ಮ ಮುಂದೆ ಈಗ ಚರ್ಚೆಗಾಗಿ ರಾಜ್ಯಗಳ ಪುನರ್ವಿಂಗಡಣೆಯ ಸಂಬಂಧವಾಗಿ ಬಂದಿರತಕ್ಕ ಈ ಶೇಷಾದ್ರಿ ವರದಿಯಮೇಲೆ ಮೂರು ನಾಲ್ಕು ದಿವಸಗಳಿಂದಲೂ ಚರ್ಚೆ ನಡೆಯುತ್ತಲೇ ಬಂದಿದೆ. ಈ ಶೇಷಾದ್ರಿಕಮಿಟಿಯನ್ನು ರಚಿಸುವುದಕ್ಕೆ ಮುನ್ನ ಹೋದ ವರ್ಷದ ಜೂನ್ ತಿಂಗಳಲ್ಲಿ ನಾವು ಒಂದು ಪಾರ್ಟಿ ಮೀಟಿಂಗನ್ನು ಕರೆದಿದ್ದೆವು. ಆಗ ಆ ಸಭೆಯಲ್ಲಿ ಕೆಲವರು ಕರ್ಣಾಟಕ ಪ್ರಾಂತ್ಯ ನಿರ್ಮಾಣದ ವಿಚಾರದಲ್ಲಿ ವಿರೋಧಾಭಿಪ್ರಾಯವನ್ನೂ ಇನ್ನು ಹಲವರು ಆಗ ತಕ್ಕದ್ದು ಅನುಕೂಲವಾದುದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಆಗ ಅದೇ ಸಭೆಯಲ್ಲಿ ಕೇಂದ್ರ ಸರ್ಕಾರ ರಚಿಸಿರುವ ಫಸಲಾಲಿ ಸಮಿತಿಯವರು ನಮ್ಮ ದೇಶಕ್ಕೆ ಬಂದಾಗ ನಾವು ಏನೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಬೇಕೆಂಬ ಪ್ರಶ್ನೆ ಎದ್ದಿತು. ಆಗಲೂ ಕೂಡ ಕೆಲವು ಭಿನ್ನಾಭಿಪ್ರಾಯಗಳು ತಲೆದೋರಿದ್ದರಿಂದ ಆಗ ಈ ಸಮಿತಿಯನ್ನು ನೇಮಕ ಮಾಡಬೇಕಾದ ಅಗತ್ಯ ಕಂಡು ಬಂದಿತು. ಅದರಂತೆ ಏರ್ಪಾಡು ಮಾಡಿದ್ದಾರೆ. ಆದರೆ ಹಾಗೆ ಈ ಒಂದು ಸಮಿತಿಯನ್ನು ನೇಮಕ ಮಾಡಬೇಕೆಂದು ನನ್ನ ಸಹೋದರರು ಹೇಳಿದಾಗಲೂ ಕೂಡ ನಾನು ನನ್ನ ಪರವಾಗಿ ಈ ಸಮಿತಿಯನ್ನು ನೇಮಿಸುವುದು ಅನಾವಶ್ಯಕ ಎಂದೇ ಹೇಳಿದ್ದೇನೆ. ಈ ದಿವಸ ನಮಗೆ ಮುಖ್ಯವಾಗಿ ಬೇಕಾಗಿರತಕ್ಕದ್ದು ಈ ಅಂಕಿ ಅಂಶಗಳಲ್ಲ. ನಮಗೆ ಬೇಕಾಗಿರುವುದು ಒಂದು ವಿಶಾಲ ದೃಷ್ಟಿ ಮತ್ತು ಒಂದು ಭಾಷಾಭಿಮಾನ. ಭಾಷಾವಾರು ರಾಜ್ಯ ನಿರ್ಮಾಣವೇ ಶಾಸ್ತ್ರೋಕ್ತವಾದದ್ದು ಎನ್ನುವುದು ನಮಗೆ ಆರ್ಷೇಯದಿಂದಲೂ ಚರಿತ್ರೆಗಳಿಂದ ಕಂಡು ಬರುತ್ತಿದೆ. ಆದರೆ ನಮಗೆ ಈ ಅಂಕಿ ಅಂಶಗಳ ಅಗತ್ಯವಿರುವುದು ಯಾವಾಗ ಅಂದರೆ ನಾವು ಯಾವುದಾದರೊಂದು ಸ್ವತ್ತನ್ನು ಖರೀದಿ ಮಾಡುವಾಗ ನಮಗೆ ಈ ಅಂಕಿ ಅಂಶಗಳ ಅಗತ್ಯವಿರುತ್ತದೆ. ಆದರೆ ಇಲ್ಲಿಯ ತನಕ ರಾಜ್ಯಗಳನ್ನು ಯಾರು ಯಾರು ಕಟ್ಟಿದ್ದಾರೋ ಅವರು ಯಾರು ಹೀಗೆ ಒಂದು ಅಂಕಿ ಅಂಶಗಳನ್ನಿಟ್ಟುಕೊಂಡು ರಾಜ್ಯಗಳನ್ನು ಕಟ್ಟಿಲ್ಲ. ಆಂಧ್ರ ರಾಜ್ಯವನ್ನೂ ಕೂಡ ಒಂದು ಭಾಷೆಯ ಅಧಾರದ ಮೇಲೆ ಕಟ್ಟಲ್ಪಟ್ಟಿತೇ ಹೊರತು ಹೀಗೆ ಒಂದು ಅಂಕಿ ಅಂಶಗಳ ಆಧಾರದ ಮೇಲೇನೂ ಅದನ್ನು ಕಟ್ಟಲಿಲ್ಲ ಅನ್ನುವುದನ್ನು ತಾವುಗಳ್ಯಾರೂ ಮರೆಯಬಾರದು. ಇದರಲ್ಲಿ ಲಾಭ ನಷ್ಟದ ಪ್ರಶ್ನೆಯೇ ಏಳುವುದಿಲ್ಲ. ಶ್ರೀ ಶೇಷಾದ್ರಿ ಸಮಿತಿಯಲ್ಲಿ ಶ್ರಮವಹಿಸಿದ ವ್ಯಕ್ತಿಗಳೆಲ್ಲಾ ದೊಡ್ಡ ಮನುಷ್ಯರಿರಬಹುದು. ಆದರೆ ಅವರು ಈ ವರದಿಯನ್ನು ತಯಾರಿಸುವ ಬಗ್ಗೆ ಒಂದು ಪಕ್ಕದ ನೋಟವನ್ನು ಮಾತ್ರ ಚಿತ್ರಿಸಿದ್ದಾರೆಯೇ ಹೊರತು ಮತ್ತೊಂದು ಪಕ್ಕದ ಚಿತ್ರವನ್ನು ಚಿತ್ರಿಸಿಲ್ಲ. ಹೀಗೆ ಮೇಲು-ಕೀಳುಗಳೆರಡನ್ನೂ ಹೋಲಿಸದೆ ಕೇವಲ ಕೀಳು ವಿಚಾರಗಳ ಪ್ರಶ್ನೆಯನ್ನು ತಗೆದುಕೊಂಡು ಮೈಸೂರನ್ನು ಇತರ ಕರ್ಣಾಟಕ ಪ್ರಾಂತ್ಯಗಳೊಡನೆ ಹೋಲಿಕೆ ಹಾಕಿ ಈ ಒಂದು ವರದಿಯನ್ನು ತಯಾರಿಸಿದ್ದಾರೆ. ಕರ್ನಾಟಕ ಪ್ರಾಂತ್ಯ ನಿರ್ಮಾಣವಾದರೆ ಕೋಟಿಗಟ್ಟಲೆ ಬಡ್ಜೆಟ್‌ಖೋತಾ ಆಗುತ್ತದೆ ಎಂದು ಹೇಳಿದರೇ ಹೊರತು ಅಲ್ಲಿರತಕ್ಕಂಥ ಪ್ರಕೃತಿ ಸಾಧನ ಸಂಪತ್ತುಗಳ ವಿಚಾರಗಳನ್ನೆಲ್ಲಾ ಕೈ ಬಿಟ್ಟಿದ್ದಾರೆ. ಆ ಪ್ರದೇಶಕ್ಕೆ ಇಷ್ಟು ಖರ್ಚಾಗುತ್ತದೆ ಎಂದು ಹೇಳುವಾಗ ಅದರಿಂದ ಬರತಕ್ಕ ಉತ್ಪತ್ತಿ ಏನಿದೆ ಎನ್ನುವುದನ್ನೇಕೆ ಇವರು ತಿಳಿಸಲಿಲ್ಲ? ಈ ಕರ್ಣಾಟಕಾಭಿಮಾನಗಳ ವರದಿಯಲ್ಲಿ ಹೀಗೆ ಹೇಳಿದ್ದಾಗ್ಯೂ ಚಿಂತೆಯಿಲ್ಲ. ಆದರೆ ಇತರ ಕೆಲವು ಸರ್ಕಾರಿ ದೊಡ್ಡ ದೊಡ್ಡ ಹೆಸರುವಾಸಿಯಾದಂಥ ಅರ್ಥಿಕ ನಿಪುಣರೂ ಮತ್ತು ಸುಪ್ರಸಿದ್ಧಿ ಹೊಂದಿದ ಭೂಗರ್ಭ ಸಂಶೋಧಕರೂ ಈ ಕರ್ಣಾಕಟ ಪ್ರಾಂತ್ಯದ ಸಂಪತ್ತಿನ ವಿಚಾರದಲ್ಲಿ ಹೀಗೆ ಹೇಳಿದ್ದಾರೆ:—

Dr. Krishna Kumar, Geologist, Government of India, said :—

"A noteworthy point is that although mining is a Central subject, Industries are provincial subjects and according to Dr. Dunn, the Superintending Geologist of India, in India, as in most countries, the vast and growing mineral industry forms the foundation of all other industries. The mineral resources of Karnataka are therefore the very back bone of almost all industries that Karnataka could possibly hope to develop."

ಮತ್ತೊಬ್ಬ ಡಾಕ್ಟರ್ ಹೀಗೆ ಹೇಳಿದ್ದಾರೆ:—

"Mineral development in Karnataka provides not only the raw materials for many varieties of marketable goods, but also the machinery and tools which make possible the manufacture into saleable articles of raw materials grown from the land. If rapid industrialisation is one of India's high aims, one cannot see how India could continue to afford to neglect areas like Karnataka."

Dr. Alexandar Christie observed:

> "The Dharwar District and the adjoining area contained specimens of all rocks and served as an example of the general geognotical structure of the entire peninsula of India."

> "A study of the mineral map reveals that Karnataka possesses India's second largest mineral groupings, the first largest being spread over Orissa, C. P., Bihar and Bengal."

ಈ ಕೆಲವು ಕಾರಣಗಳಿಂದ ನಾವು ಈ ಪ್ರಾಂತ್ಯಗಳಲ್ಲಿರತಕ್ಕಂಥ ಅನುಕೂಲತೆಗಳನ್ನು ಗಮನಿಸುವುದಾದರೆ ನಮ್ಮ ಇಡೀ ಭರತಖಂಡದಲ್ಲೇ ಈ ಕರ್ಣಾಟಕ ಪ್ರಾಂತ್ಯದಲ್ಲಿ ಇರುವಷ್ಟು ಖನಿಜ ಸಂಪತ್ತು ಮತ್ತೊಂದು ಭಾಗದಲ್ಲಿಲ್ಲವೆಂದು ಖಚಿತವಾಗಿ ಹೇಳಬಹುದಾಗಿದೆ. ಇನ್ನು ಈ ಅರಣ್ಯ ಸಂಪತ್ತನ್ನು ತೆಗೆದುಕೊಂಡರೆ ಈ ದಿವಸ ಈ ಮೈಸೂರಿನಲ್ಲಿ ಏನೊಂದು ಅರಣ್ಯ ಸಂಪತ್ತಿದೆಯೋ ಇದಕ್ಕಿಂತಲೂ ಅತಿಶಯವಾದಂಥ ಹೆಚ್ಚಿನ ಅರಣ್ಯ ಸಂಪತ್ತು ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿರುತ್ತದೆ. ಈ ದಿವಸ ಈ ಕನ್ನಡ ಭಾಗಗಳನ್ನೆಲ್ಲಾ ಮೈಸೂರಿಗೆ ಸೇರಿಸುವುದರಿಂದ ಸರ್ಕಾರಕ್ಕೆ ಎಂಟು ಹತ್ತು ಕೋಟಿ ರೂಪಾಯಿಗಳ ವೆಚ್ಚ ಹೆಚ್ಚಾಗುತ್ತದೆಂದು ಕಂಡುಬಂದರೂ ಚಿಂತೆಯಿಲ್ಲ; ಇಷ್ಟೇಕೆ ಇನ್ನೂ 50 ಕೋಟಿ ಖರ್ಚಾದರೂ ನಾವುಗಳು ಯಾರೂ ಅದಕ್ಕೆ ಚಿಂತೆ ಪಡಬೇಕಾಗಿಲ್ಲವೆಂದು ಹೇಳುತ್ತೇನೆ. ಕಾರಣವೇನೆಂದರೆ ಈ ದಿವಸ ಇಡೀ ಮೈಸೂರಿನ ಜನಸಂಖ್ಯೆ ಒಂದು ಕೋಟಿಯನ್ನು ಇನ್ನೂ ಮುಟ್ಟಿಲ್ಲ ಮತ್ತು ಈಗ ಈ ಮೈಸೂರು ಹೊರಗಡೆಯಿರತಕ್ಕ ಕರ್ಣಾಟಕ ಪ್ರಾಂತ್ಯಗಳಲ್ಲಿರತಕ್ಕಂಥ ಭೂಗರ್ಭ ಸಂಪತ್ತನ್ನೆಲ್ಲಾ ನಾವು ರೂಢಿಸಿಕೊಂಡರೆ ಆಗ ಸುಮಾರು 70-80 ಕೋಟಿ ರೂಪಾಯಿಗಳ ಆದಾಯ ಬರುವುದು ಒಂದೇ ಅಲ್ಲದೆ ಕೋಟ್ಯಂತರ ಜನರಿಗೆ ಉದ್ಯೋಗ ದೊರಕಿಸಿ ಕೊಡುವಂಥ ಅನೇಕ ರೀತಿಯ ಕೈಗಾರಿಕಾ ಕಾರ್ಖಾನೆಗಳನ್ನು ಇಲ್ಲಿ ಸ್ಥಾಪಿಸುವುದಕ್ಕೆ ಅನುಕೂಲವಿದೆ. ಈ ದಿವಸ ಮೈಸೂರು ಕೈಗಾರಿಕೆಯಲ್ಲಿ ಅಷ್ಟೇನೂ ಮುಂದುವರಿದಿಲ್ಲ. ಈ ದಿವಸ ಕನ್ನಡಿಗರು ಸೇರಿಕೊಂಡಿರತಕ್ಕಂಥ ಮದರಾಸ್ ಮತ್ತು ಬೊಂಬಾಯಿ ಪ್ರಾಂತ್ಯಗಳಲ್ಲಿ ವಾಸ ಮಾಡತಕ್ಕಂಥ ಅಧಿಕ ಸಂಖ್ಯಾತ ಜನರು ಈ ಕನ್ನಡಿಗರಿರುವ ಪ್ರದೇಶಗಳ ಅಭಿವೃದ್ಧಿಗಾಗಿ ಶ್ರಮಿಸಿದ್ದರೆ ಅಲ್ಲಿ ಕೋಟ್ಯಂತರ ರೂಪಾಯಿಗಳ ವರಮಾನ ಬರತಕ್ಕಂಥ ಕೈಗಾರಿಕಾ ಕಾರ್ಖಾನೆಗಳನ್ನು ಸ್ಥಾಪಿಸಿ ಆ ಪ್ರದೇಶಗಳನ್ನು ಏಳಿಗೆ ತರಲು ಅವಕಾಶವಿತ್ತು. ಆದರೆ ಅವರು ಹೀಗೆ ಮಾಡಲಿಲ್ಲ. ಅವರಲ್ಲಿ ಪಕ್ಷಪಾತ ಭಾವನೆಯಿಲ್ಲದಿದ್ದರೆ ಇದನ್ನೆಲ್ಲಾ ಏಕೆ ಕೈ ಬಿಡುತ್ತಿದ್ದರು ? ಒಂದೇ ಮಾತಿನಲ್ಲಿ ಹೇಳುವುದಾದರೆ ಈ ದಿವಸ ವೆಸ್ಟ್ ಪಂಜಾಬಿನಲ್ಲಿರುವ ಪಾಕೀಸ್ತಾನಕ್ಕೂ ಈಸ್ಟ್ ಪಂಜಾಬಿನ ಪ್ರದೇಶಕ್ಕೂ ಏನು ತಕರಾರುಗಳು ನಡೆಯುತ್ತಿವೆಯೋ ಹಾಗೆ ಈ ಪ್ರಾಂತ್ರಗಳಲ್ಲಿಯೂ ನಡೆಯುತ್ತಾ ಬಂದುದರಿಂದ ಈ ಪ್ರದೇಶಗಳು ಅಭಿವೃದ್ಧಿಯಲ್ಲಿ ಹಿಂದೆ ಬೀಳಲು ಕಾರಣವಾಯಿತು. ಉದಾಹರಣೆ ನಾನೀಗ ಒಂದು ಮಾತನ್ನು ಹೇಳಬೇಕಾಗಿದೆ. ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರು ಬಹಳ ದೊಡ್ಡ ಮನುಷ್ಯರು, ಅವರಲ್ಲಿ ನನಗೂ ತುಂಬ ಗೌರವವಿದೆ. ಆದರೆ ಅಂಥ ದೊಡ್ಡ ಮನುಷ್ಯರೂ ಕೂಡ ನಮ್ಮ ಕನ್ನಡಿಗರ ವಿಚಾರದಲ್ಲಿ ಪಕ್ಷಪಾತ ಭಾವನೆಯನ್ನು ತೋರಿಸಿರುವಂಥ ಒಂದು ವಿಚಾರ ನನಗೆ ಈಗಲೂ ಚೆನ್ನಾಗಿ ಜ್ಞಾಪಕದಲ್ಲಿದ್ದೇ ಇದೆ. ಒಂದಾವರ್ತಿ ಒಂದು ಅನಾಹುತಕ್ಕೆ ತುತ್ತಾಗಿ ಸುಮಾರು ಹತ್ತು ಸಾವಿರ ಸಂಸಾರಗಳು ನಿರಾಶ್ರಿತರಾಗಿ ಹೋದರು. ಆಗ ಇವರು ಗವರ್ನರ್ ಜನರಲ್ ಆಗಿದ್ದರು. ಇವರು ಈ ಹತ್ತು ಸಾವಿರ ಜನರ ಕ್ಷೇಮ ಲಾಭಗಳಿಗಾಗಿ ಕೇವಲ ಎರಡು ಸಾವಿರ ರೂಪಾಯಿಗಳ ಸಹಾಯವನ್ನು ಒದಗಿಸಿ ಕೊಟ್ಟರು. ಆಗ ನಾವು ಇವರನ್ನು ಖುದ್ದಾಗಿ ಕಂಡು ಮಾತನಾಡಿಕೊಂಡು ಬರಬೇಕೆಂದು ಹೋದಾಗ ಇವರು ನಮಗೆ ಇಂಟರ್‌ವ್ಯೂ ಮಾಡಲಿಕ್ಕೂ ಸಹ ಅವಕಾಶಕೊಡದಂತೆ ತಿರಸ್ಕಾರ ಭಾವನೆಯನ್ನು ತೋರಿಸಿಬಿಟ್ಟರು. ಆಗ ಕ್ಷಾಮದ ಭೀಕರತೆ ಬೇರೆ ಹೆಚ್ಚಾಗಿತ್ತು. ರಿಮಿಷನ್‌ಗಾಗಿ ಅರ್ಜಿಸಲ್ಲಿಸಿದೆವು ಅದಕ್ಕೂ ಸಹ ಇವರು ಗಮನ ಕೊಡಲಿಲ್ಲ. ಆದರೆ ಆ ತಮಿಳುನಾಡಿನಲ್ಲಿ ಒಂದಾವರ್ತಿ ಸೈಕ್ಲೋನ್ ಬಂದು ಅಲ್ಲಿನ ಜನರಿಗೆ ತೊಂದರೆ ಬಂದಾಗ ಇದೇ ಶ್ರೀ ರಾಜಗೋಪಾಲಾಚಾರ್ಯರು ಟ್ರಂಕಾಲ್ ಮೇಲೆ ಟ್ರಂಕಾಲ್ ಮಾಡಿ ಕಲೆಕ್ಟರಿಗೆ ಸ್ಪೆಷಲ್ ಆರ್ಡರ್‌ಗಳನ್ನು ಕೊಟ್ಟು ಆ ತಮಿಳರಿಗೆ ಕೋಟ್ಯಂತರ ರೂಪಾಯಿಗಳ ಸಹಾಯವನ್ನೊದಗಿಸಿದರು. ಅವರು ಹೀಗೆ ಏತಕ್ಕಾಗಿ ಮಾಡಿದರೆಂದರೆ ಅವರಲ್ಲಿ ದೇಶಾಭಿಮಾನಕ್ಕಿಂತಲೂ ಆ ಭಾಷಾಭಿಮಾನ ಹೆಚ್ಚಾಗಿದ್ದುದರಿಂದ ಹಾಗೆ ಮಾಡಿದರೆಂದು ಗೊತ್ತಾಗುತ್ತದೆ. ಹೀಗೆ ಯಾರಲ್ಲೇ ಆಗಲಿ ಒಂದೊಂದು ಸಂಕುಚಿತ ಭಾವನೆಗಳು ಇದ್ದೇ ಇರುತ್ತವೆಂಬುದನ್ನು ಮಾನ್ಯ ಸಭಿಕರ ಗಮನಕ್ಕೆ ತರಲು ನಾನೀಗ ಈ ವಿಚಾರವನ್ನು ಪ್ರಸ್ತಾಪ ಮಾಡಬೇಕಾಗಿ ಬಂತು. ಬ್ರಿಟಿಷರು ಈ ದೇಶಕ್ಕೆ ಬಂದ ನಂತರ ಅವರು ಅವರ ಆಡಳಿತಕ್ಕನುಗುಣವಾಗಿ ದೇಶವನ್ನು ವಿಭಜನೆ ಮಾಡಿದಾಗ್ಯೂ ಅವರಾದರೂ ಈ ದೃಷ್ಟಿಯನ್ನು ತೋರಿದು ಅವರೇನು ರಾಜ್ಯವಿಭಜನೆ ಮಾಡಿಲ್ಲ. ಭಾಷಾವಾರು ಆಧಾರದ ಮೇಲೆ ಇದನ್ನು ಮಾಡಿದ್ದಾರೆ. ಈ ದಿವಸ ರಚಿತವಾದಂಥ ಆ ಆಂಧ್ರನಾಡನ್ನು ಯಾವ ಆಧಾರದ ಮೇಲೆ ಮಾಡಿದ್ದಾರೆ ? ಅದನ್ನು ಕೂಡ ಈಗ ಈ ಭಾಷಾ ಆಧಾರದ ಮೇಲೆ ರಚನೆ ಮಾಡಿದ್ದಾರೆ. ಆದರೆ ಈ ಸಭೆಯಲ್ಲಿ ಈಗ ಯಾವ ಯಾವ ಮಾನ್ಯ ಸದಸ್ಯರು ಈ ಭಾಷಾವಾರು ಪ್ರಾಂತ್ರಗಳು ಬೇಡ ಎಂದು ವಾದ ಮಾಡಿದ್ದಾರೋ ಅವರಾದರೂ ಏತಕ್ಕಾಗಿ ಇದನ್ನು ಬೇಡವೆಂದು ಹೇಳುತ್ತಿದ್ದಾರೆಂಬ ಬಗ್ಗೆ ಅವರು ತಮ್ಮ ಮನಸ್ಸನ್ನು ಬಿಚ್ಚಿ ಮಾತನಾಡಿಲ್ಲ. ನ್ಯಾಯವಾದಂಥ ಕಾರಣಗಳೇನಿವೆ ಎನ್ನುವುದನ್ನೂ ಸಹ ತಿಳಿಸಿಲ್ಲ. ಅವರೆಲ್ಲಾ ಇದನ್ನು ಹೀಗೇಕೆ ವಿರೋಧಿಸುತ್ತಿದ್ದಾರೆಂದರೆ ಅವರು ಅವರ ಒಂದು ಸ್ವಾರ್ಥ ಧ್ಯೇಯಕ್ಕಾಗಿ ಹೀಗೆ ವಿರೋಧಿಸುತ್ತಾರೆಂದು ನಾನು ನನ್ನ ಮನಸ್ಸನ್ನು ಬಿಚ್ಚಿ ಝುಳಝುಳ ಹೇಳಬೇಕಾಗಿದೆ. ಅವರು ಈ ದಿವಸ ತಮ್ಮ ಕೈಯಲ್ಲಿರುವ ಅಧಿಕಾರ ನಾಳೆ ಈ ರಾಜ್ಯಗಳ ಪುನರ್ವಿಂಗಡಣೆಯಾದಲ್ಲಿ ಅದು ತಮ್ಮ ಕೈ ಬಿಟ್ಟು ಹೋಗಬಹುದೆಂಬ ದೃಷ್ಟಿಯಿಂದ ಹೀಗೆ ಇದನ್ನು ವಿರೋಧಿಸಿರುತ್ತಾರೆಂದು ಎದ್ದು ಕಾಣುತ್ತಿದೆ. ಈ ದಿವಸ ಕೂಡ ನಮ್ಮಲ್ಲಿ ಇಂಥ ಸ್ವಾರ್ಥಪರರಾದ ನಮ್ಮ ಅಣ್ಣ ತಮ್ಮಂದಿರುಗಳು ಇದ್ದಾರಲ್ಲಾ ಎನ್ನತಕ್ಕ ಬಗ್ಗೆ ನಾನು ತುಂಬ ವ್ಯಥೆ ಪಡುತ್ತೇನೆ. ಹಿಂದೆ ಇಲ್ಲಿ

(ಶ್ರೀ ಕೆ. ಕೊಟ್ರ ಬಸವನಗೌಡ.)

ಬ್ರಿಟಿಷರು ಇದ್ದಾಗ ಅವರು ಇದೆಲ್ಲಾ ಬೇಡ ಎನ್ನುತ್ತಿದ್ದರು. ಅದು ಸಹಜವಾಗಿಯೇ ಇತ್ತು. ಆದರೆ ಆ ದಿವಸ ಆ ಬ್ರಿಟಿಷರು ಏನು ಹೇಳುತ್ತಿದ್ದರೋ ಅದೇ ಮಾತನ್ನು ಈ ದಿವಸ ನಮ್ಮ ಅಣ್ಣ ತಮ್ಮಂದಿರುಗಳೂ ಹೇಳುತ್ತಿದ್ದಾರಲ್ಲಾ ಎನ್ನುವುದೇ ನನಗೆ ತುಂಬ ವ್ಯಥೆಯನ್ನುಂಟುಮಾಡಿದೆ. ಈ ದಿವಸ ನಮ್ಮ ದೇಶ ಇದ್ದ ಹಾಗೆ ಇರಲಿ, ಇದು ದೊಡ್ಡದಾದರೆ ಅಭಿವೃದ್ಧಿಯಾಗಲು ಬಹಳ ಕಷ್ಟವಿದೆಯೆಂದು ನನ್ನ ಸಹೋದರರು ಕೆಲವರು ಹೇಳಿದರು. ಅದಕ್ಕೆ ನಾನು ಕೇಳುತ್ತೇನೆ—ಆ ಕೊಡಗು ದೇಶ ನಮ್ಮ ಮೈಸೂರಿಗಿಂತಲೂ ಬಹಳ ಚಿಕ್ಕದಾಗಿದೆ ಆದುದರಿಂದ ಕೊಡಗು ನಮ್ಮ ಮೈಸೂರಿಗಿಂತಲೂ ಮುಂದುವರಿದಂಥ ಒಂದು ದೇಶವಾಗಿದೆಯೇನು? ಹೀಗೆ ಚಿಕ್ಕದಾಗಿರತಕ್ಕಂಥ ಎರಡು ಮೂರು ಜಿಲ್ಲೆಗಳಷ್ಟು ವಿಸ್ತೀರ್ಣವುಳ್ಳ ಪ್ರದೇಶಗಳನ್ನೆಲ್ಲಾ ನಾವು ಅವು ಹಾಗೆಯೇ ಇರಲಿ ಎಂದು ಹೇಳಿದರೆ ಅವು ಒಂದೊಂದೂ ಸ್ವತಂತ್ರ ಪ್ರದೇಶವಾಗಿ ಬಾಳಲು ಸಾಧ್ಯವಿದೆಯೇ ಎಂದು ಕೇಳುತ್ತೇನೆ? ಹೀಗೆ ಚಿಕ್ಕ ಪುಟ್ಟ ದೇಶಗಳನ್ನೆಲ್ಲಾ ಒಂದುಮಾಡಬೇಕೆಂಬ ದೃಷ್ಟಿಯಿಂದಲೇ ಕೇಂದ್ರಸರ್ಕಾರದವರು ಪ್ರತಿಯೊಂದು ಸ್ಟೇಟಿಗೂ ವಿಶೇಷವಾಗಿ ಸಹಾಯ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರದವರ ಧ್ಯೇಯ ಅಷ್ಟು ಉದಾರವಾಗಿರುವಾಗ, ನಾವು ಶ್ರೀಮಂತರಾಗಿದ್ದೇವೆ, ಆದ್ದರಿಂದ ನಾವು ನಮ್ಮ ಪಾಡಿಗೆ ಇರೋಣ, ಬಡವರು ಅವರ ಪಾಡಿಗೆ ಅವರು ಇರಲಿ, ಅವರ ಕ್ಷೇಮ ಚಿಂತನೆಗಳೆಲ್ಲಾ ನಮ್ಮಗೇಕೆ ಬೇಕು ಎನ್ನತಕ್ಕಂಥವರ ಜೀವನವೂ ಒಂದು ಜೀವನವೇ?

ಆದ್ದರಿಂದ ಈ ವಿಶಾಲದೃಷ್ಟಿಯಿಂದ ಕರ್ಣಾಟಕ ಪ್ರಾಂತ್ಯ ಆಗುವುದು ಒಳ್ಳೆಯದು. ದೂರದೃಷ್ಟಿಯಿಂದ ನೋಡಬೇಕೇವಿನಾ ಸಂಕುಚಿತ ಭಾವನೆಯಿಂದ ನೋಡುವುದು ತಪ್ಪು. ಹಾಗೆ ಮಾಡಿದರೆ ಮುಂದಿನ ಪೀಳಿಗೆ ನಮ್ಮನ್ನು ಶಪಿಸುವುದಲ್ಲದೆ ಅವರ ಅಧೋಗತಿಗೆ ಇದು ಕಾರಣವಾಗುತ್ತದೆ. ಕನ್ನಡ ಭಾಷೆ ಮಾತನಾಡುವ ಭಾಗಗಳನ್ನು ಎರಡು ಪ್ರಾಂತ್ಯಗಳಾಗಿ ಮಾಡಿದರೆ ತಾಯಿ ಮಗುವನ್ನು ಬೇರೆ ಮಾಡಿದ ಹಾಗಾಗುತ್ತದೆ, ಕೈಕಾಲು ಕತ್ತರಿಸಿಹಾಕಿದಂತಾಗುತ್ತದೆ. ಒಂದೇ ತಾಯಿಯನ್ನು ಎರಡು ಭಾಗವಾಗಿ ಮಾಡುವ ಸಂಕುಚಿತ ದೃಷ್ಟಿ ಹೋಗಬೇಕು. ಎಂದಾದರೂ ಕರ್ಣಾಟಕ ಪ್ರಾಂತ್ಯ ಆಗಲೇ ಬೇಕು. ಆಗಿಯೇ ಆಗುತ್ತದೆ. ಈಗ ಇರುವುದು ಕರ್ಣಾಟಕ ಪ್ರಶ್ನೆಯಲ್ಲ. ಭಾರತದೇಶದಾದ್ಯಂತ ಇರುವ ಪ್ರಾಂತ್ಯಗಳ ಪುನರ್ವಿಂಗಡನೆಯೇ ರಾಜ್ಯಗಳ ಪುನರ್ವಿಂಗಡನಾ ಸಮಿತಿಯ ಉದ್ದೇಶ. ಪ್ರಾಂತ್ಯ ಪುನರ್ವಿಂಗಡನಾ ಚಳವಳಿಯು ಇಂಡಿಯಾದೇಶದಲ್ಲೆಲ್ಲಾ ಇದೆ. ಮಹಾರಾಷ್ಟ್ರ, ಪಂಜಾಬು, ತಮಿಳು ಪ್ರಾಂತ್ಯಗಳಾಗಬೇಕೆಂದು ಹೊಡೆದಾಡುತ್ತಿದ್ದಾರೆ. ಈ ಎಲ್ಲಾ ಪ್ರಾಂತ್ಯಗಳೂ ಭಾಷೆಗಳ ಆಧಾರದ ಮೇಲೆಯೇ ಆಗಬೇಕೆಂದು ಹೊಡೆದಾಡುತ್ತಿದ್ದಾರೆ. ಕರ್ಣಾಟಕ ಭಾಗಗಳು ಮಾತ್ರ ಇದ್ದ ಹಾಗೆ ಇರಲಿ, ಬಾಕಿ ಪ್ರಾಂತ್ಯಗಳನ್ನು ಮಾಡುತ್ತೇವೆಂದರೆ ಸರಿಹೋಗುವುದಿಲ್ಲ. ಎಂದಾದರೂ ಕರ್ಣಾಟಕ ಪ್ರಾಂತ್ಯ ಆಗಲೇ ಬೇಕು. ಅದು ಆಗುವವರೆಗೂ ದೇಶದಲ್ಲಿ ಶಾಂತಿ ನೆಲಸುವುದಿಲ್ಲ. ಇಂಡಿಯಾ ಸರ್ಕಾರದಲ್ಲಿ ಪಂಡಿತ್ ನೆಹರೂ ಅವರಂಥ ಮುತ್ಸದ್ದಿಗಳಿದ್ದಾರೆ. ಆದಾಗ್ಯೂ ಈ ವಿಚಾರದಲ್ಲಿ ಇಂಡಿಯಾ ಸರ್ಕಾರದವರು ಬಹಳ ತಪ್ಪುಮಾಡುತ್ತಿದ್ದಾರೆ. ನ್ಯಾಯವಾಗಿ ಜಾಗ್ರತೆ ಭಾಷೆಯ ಆಧಾರದ ಮೇಲೆ ಪ್ರಾಂತ್ಯಗಳನ್ನು ಮಾಡಿ ಕರ್ಣಾಟಕ ಪ್ರಾಂತ್ಯ ಮಾಡುವುದು ಅತ್ಯಾವಶ್ಯಕ. ಇದನ್ನು ಮಾಡದೆ ಹೋದರೆ ನಮ್ಮ ದೇಶ ಹಾಳಾಗಿ ಹೋಗುತ್ತದೆ. ಮೈಸೂರಿನ 18ನೇ ಶತಮಾನದ ಚರಿತ್ರೆಯನ್ನು ನೋಡಿದರೆ, ಅನಂತಪುರಜಿಲ್ಲೆ, ಹಿಂದೂಪುರ, ಕಲ್ಯಾಣದುರ್ಗದ ಮುಕ್ಕಾಲು ಭಾಗ ಪ್ರದೇಶವೆಲ್ಲಾ ನಮಗೆ ಸೇರಿತ್ತು. ನೀಲಗಿರಿ ಜಿಲ್ಲೆಯೂ ಮೈಸೂರಿಗೆ ಸೇರಿತ್ತು. ಇತ್ತೀಚೆಗೆ ನಾನಾಕಾರಣದಿಂದ ಮದರಾಸಿಗೆ ಸೇರಿದಮೇಲೆ, ತಮಿಳುನಾಡು ಜನರು ಅಲ್ಲಿಗೆ ಬಂದು ನಮ್ಮ ಕೈಬಿಟ್ಟುಹೋಗಿದೆ. ಉತ್ತರದಲ್ಲಿ ಮಹಾರಾಷ್ಟ್ರ, ಪೂರ್ವದಲ್ಲಿ ಆಂಧ್ರರ ದೆಸೆಯಿಂದ ನಮ್ಮ ದೇಶ ಹಾಳಾಗಿಹೋಗಿದೆ. ನಮ್ಮ ಮಹಾ ನಾಯಕರಿಗೆ ಇದು ಅರ್ಥವಾಗುತ್ತಾ ಇಲ್ಲ. ಇದು ವಿಷಾದಕರವಾದ ಸಂಗತಿಯಾಗಿದೆ. ಆದ್ದರಿಂದ ಭಾಷೆಯ ಆಧಾರದ ಮೇಲೆ administrative contiguity ಆಧಾರದ ಮೇಲೆ ಕರ್ಣಾಟಕ ಪ್ರಾಂತ್ಯವನ್ನು ಮಾಡಬೇಕು. ಮುಂದಿನ ಪೀಳಿಗೆ ಶಪಿಸದಂತೆ ವಿಶಾಲದೃಷ್ಟಿಯನ್ನು ಗಮನಕ್ಕೆ ತೆಗೆದುಕೊಂಡು ಕರ್ಣಾಟಕ ಪ್ರಾಂತ್ಯ ಆಗುವುದಕ್ಕೆ ಅನುಮತಿ ಕೊಡುತ್ತೀರೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಸ್. ಪರಮೇಶ್ವರಪ್ಪ (ಸಿರಗುಪ್ಪೆ).—ಈಗ ಆಂಧ್ರರಾಷ್ಟ್ರ ಬಂದಿದೆ. ಇನ್ನು ಬರುವ ವರ್ಷ ಕರ್ಣಾಟಕರಾಷ್ಟ್ರ ಬರುವುದು ನ್ಯಾಯವಾಗಿದೆ. ಆದಷ್ಟು ಬೇಗ ಕರ್ಣಾಟಕಪ್ರಾಂತ್ಯ ಮಾಡಬೇಕೆಂದು ವಿನಂತಿ. ಅದುವರೆಗೆ ದುಡುಕುವುದು ಅನ್ಯಾಯ. ಆರ್ಥಿಕದೃಷ್ಟಿಯಿಂದ, ಸಾಮಾಜಿಕದೃಷ್ಟಿಯಿಂದ ಈ ರಾಜ್ಯಗಳ ಪುನರ್ವಿಂಗಡನಾ ಪ್ರಶ್ನೆಗೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನೂ ಕೂಲಂಕಷವಾಗಿ ಆಲೋಚನೆ ಮಾಡುವುದಕ್ಕಾಗಿ ಫಸಲಾಲಿ ಕಮಿಟಿಯನ್ನು ಏರ್ಪಾಡುಮಾಡಿದ್ದಾರೆ. ಬರೀ ಭಾಷೆ ಆಧಾರದ ಮೇಲೆ ಈ ಪ್ರಶ್ನೆಯನ್ನು ವಿಮರ್ಶೆ ಮಾಡಬೇಕೆಂದು ಹೇಳಿಲ್ಲ. ಮೊದಲು ಬಳ್ಳಾರಿ ಜಿಲ್ಲೆಯ ಆರು ತಾಲ್ಲೂಕ್‌ಗಳನ್ನು ಮೈಸೂರಿಗೂ ಮೂರು ತಾಲ್ಲೂಕುಗಳನ್ನು ಆಂಧ್ರಕ್ಕೂ ಸೇರಿಸಬೇಕೆಂದು ಸಲಹೆ ಮಾಡಿದರು. ಆಗ ಅಲ್ಲಿ ಗಲಾಟೆಯಾಗಿ ಮಲಬಾರ್ ಪೋಲೀಸಿನವರು ಹೋಗಿ ಶಾಂತಿಯನ್ನು ಏರ್ಪಡಿಸಬೇಕಾಯಿತು. ಈ ವಿಚಾರ ಮದರಾಸ್ ಅಸೆಂಬ್ಲಿಯಲ್ಲಿ ಚರ್ಚೆಗೆ ಬಂದು ಒಂದು ಕಮಿಟಿ ರಿಪೋರ್ಟಾಗಿ ಆ ಮೇಲೆ ಶ್ರೀ ಮಿಶ್ರಾರವರು ಅಲ್ಲಿಗೆ ಹೋಗಿ ವಿಚಾರ ಮಾಡಿ ಬಳ್ಳಾರಿಯ ಆರು ತಾಲ್ಲೂಕುಗಳನ್ನು ಮೈಸೂರಿಗೂ ಉಳಿದ ಮೂರು ತಾಲ್ಲೂಕುಗಳನ್ನು ಆಂಧ್ರಕ್ಕೂ ಕೊಡುವಂತಾಯಿತು. ಕರ್ಣಾಟಕರಾಷ್ಟ್ರ ಆಗಬೇಕಾದ ಪರಿಸ್ಥಿತಿ ಈಗ ಒದಗಿದೆ ಎಂದು ತೋರುತ್ತದೆ. ಒಬ್ಬನಿಗೆ ಉಪ್ಪು ರುಚಿ, ಇನ್ನೊಬ್ಬನಿಗೆ ಕಾರ ರುಚಿ, ಮತ್ತೊಬ್ಬನಿಗೆ ಸಿಹಿ ರುಚಿ ಆಗಿರುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ಅವರಿಗೆ ತೋರಿದಂತೆ ಮಾತನಾಡಬಹುದು. ನೂರೈವತ್ತು ವರ್ಷಗಳ ಕಾಲ ಇಂಗ್ಲಿಷರು ರಾಜ್ಯಭಾರ ಮಾಡಿ ಕಬ್ಬನ್ನು ಹಿಂಡಿ ಸಿಪ್ಪೆ ಬಿಟ್ಟಂತೆ ನಮ್ಮನ್ನು ಬಿಟ್ಟುಬಿಟ್ಟು ಹೋದರು. ಈಗ ನಮಗೆ ಸ್ವಾತಂತ್ರ್ಯ ಬಂದು ಎಂಟು ವರ್ಷಗಳಾದವು. ಆದರೂ ನಾವು ಇನ್ನೂ ಸಾಕಷ್ಟು ಬಲಯುತರಾಗಿಲ್ಲ; ಅಲ್ಲಿ ತಗ್ಗು ಇದೆ, ಇಲ್ಲಿ ದಿಣ್ಣೆ ಇದೆ ಎಂದು ಹೇಳುತ್ತಿದ್ದೇವೆ. ಮೈಸೂರಿನವರು ಮುಂದುವರಿದಿದ್ದಾರೆ ಎಂದು ಹೇಳುತ್ತಾರೆ. ಅದಕ್ಕೆ ಕಾರಣ ಇದೆ. ಯಾವಾಗಲೂ ರಾಜಾ ಪ್ರತ್ಯಕ್ಷ ದೇವತಂ ಎಂಬಂತೆ ಮೈಸೂರಿನಲ್ಲಿ ಹಿಂದಿನಿಂದಲೂ ರಾಜರು 'ಪ್ರಜೆಗಳನ್ನು ಪ್ರೇಮದಿಂದ ನೋಡುತ್ತಿದ್ದರಲ್ಲದೆ ಅವರ ಸೌಕರ್ಯದ ಕಡೆಗೆ ಗಮನಕೊಡುತ್ತಿ

ದ್ದರು. ಈ ಕಾರಣದಿಂದ ಮೈಸೂರಿನ ಪ್ರಜೆಗಳು ಮುಂದಕ್ಕೆ ಬಂದರು.

ಶ್ರೀ ಶಿವನಂಜೇಗೌಡ (ಮೈಸೂರು ತಾಲ್ಲೂಕು).—ತಮ್ಮನ್ನೆಲ್ಲಾ ಅಣ್ಣತಮ್ಮಂದಿರೆಂದು ನಾವಾಗಲೇ ಒಪ್ಪಿಕೊಂಡಿದ್ದೇವೆ. ಆದ್ದರಿಂದ ತಮ್ಮ ವಿಚಾರದಲ್ಲಿ ಏನೂ ತೊಂದರೆ ಇಲ್ಲ.

ಶ್ರೀ ಎಸ್. ಪರಮೇಶ್ವರಪ್ಪ.—ಹೌದು. ಒಪ್ಪಿಕೊಂಡಿದ್ದೀರಿ. ನಾವೆಲ್ಲಾ ನಿಮ್ಮ ಅಣ್ಣತಮ್ಮಂದಿರು. ಆದರೆ ಶ್ರೀ ಕೆ. ಪಟ್ಟಾಭಿರಾಮಯ್ಯರವರು ಹೇಳಿದಹಾಗೆ 1799ರಲ್ಲಿ ಅಂದರೆ ಟಿಪ್ಪುಸುಲ್ತಾನ್ ಕಾಲದಲ್ಲಿ ಅವರೆಲ್ಲಾ ದೂರ ಹೋಗುವಂತಾಯಿತು. ಈಗ ಅವರು ಸಮೀಪಕ್ಕೆ ಬರುತ್ತಾರೆಂದು ಹೇಳುತ್ತಿದ್ದಾರೆ. ಈ ಸಂದರ್ಭದಲ್ಲಿ ಶ್ರೀ ವೇಮನ ಹೇಳಿದ ಮಾತುಗಳು ನನಗೆ ಜ್ಞಾಪಕಕ್ಕೆ ಬರುತ್ತದೆ. ಅವರು ಹೀಗೆ ಹೇಳುತ್ತಾರೆ.

'' ಚಂಪದಗಿನ ಎಟ್ಟಿ ಶತ್ರುವು ತನಚೇತ ಚಿಕ್ಕಿ
ನೇನಿ ಕೀಡು ಚೇಯರಾದು ಪೊಸಗ ಮೇಲು
ಜೇಸಿ ಪೊಮ್ಮನುಟೇ ಚಾಲು, ವಿಶ್ವದಾಭಿ
ರಾಮ, ವಿನರ ವೇಮ,''

ಅಂದರೆ ಶತ್ರುಗಳಾದಂಥವರೂ ಕೂಡ ನಮ್ಮ ಸಮೀಪಕ್ಕೆ ಬಂದರೆ, ಅವರನ್ನು ಮನ್ನಣೆಕೊಟ್ಟು ಹಿಂದಕ್ಕೆ ಕಳುಹಿಸಿಕೊಡುತ್ತೇವೆ. ನಮ್ಮ ಕೈಗೆ ಸಿಕ್ಕಿದರೆ ಅವರನ್ನು ಕೊಲ್ಲಬಾರದು ಎಂದಿರುವಾಗ ನಮ್ಮ ಅಣ್ಣತಮ್ಮಂದಿರು ನಮ್ಮ ಸಮೀಪಕ್ಕೆ ಬರುತ್ತೇವೆಂದು ಹೇಳಿದರೆ, ಅವರನ್ನು ಬರುವುದು ಬೇಡ ಎಂದು ಹೇಳುವುದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಬಳ್ಳಾರಿಯನ್ನು ಹೇಗೆ ಸ್ವಾಗತ ಮಾಡಿದ್ದೀರೋ ಅದರಂತೆಯೇ ಉಳಿದ ಕರ್ಣಾಟಕದ ಭಾಗಗಳನ್ನು ಸ್ವಾಗತಿಸಬೇಕು. ಹಿಂದಿನಿಂದಲೂ ದೊಡ್ಡದೊಡ್ಡ ಮಹನೀಯರು ಪ್ರತಿಯೊಬ್ಬರೂ ಈ ರೀತಿ ಮಾಡುತ್ತೇವೆಂದು ಹೇಳುತ್ತಾ ಬಂದಿದ್ದಾರೆ. ಅವರನ್ನು ಬರುವುದು ಬೇಡ ಎಂದು ಹೇಳುವುದು ಸರಿಯಲ್ಲ. ಭೂದೇವಿ ಹೀಗೆ ಹೇಳುತ್ತಾಳೆ,

'' ಎಟ್ಟಿ ದುಷ್ಕರ್ಮನಿನ್ನೈನ ಭರಿಂಚುಗಲನು
ಗಾನಿ ಆಡಿತಪ್ಪಿನವಾನಿ ಮೋಯ ಜಾಲನೇ
ಅನೆ ಭೂದೇವಿ ಬ್ರಹ್ಮವದ್ದ ''

ಮಾನ್ಯ ಸದಸ್ಯರು ಆಕಡೆ ಈಕಡೆ ಮಾತನಾಡುವುದರಲ್ಲಿ ತಪ್ಪಿಲ್ಲ. ಪ್ರತಿಯೊಬ್ಬ ಕಾಂಗ್ರೆಸ್ ಸದಸ್ಯರು ಕಾಂಗ್ರೆಸ್ಸಿನಿಂದ ದೇಶಕ್ಕೆ ಸುಖವಿದೆ, ಅಹಿಂಸಾಪರಮೋ ಧರ್ಮ: ಎಂದು ಹೇಳಿ ಕಾಂಗ್ರೆಸ್ಸಿನಲ್ಲಿದ್ದವರು ನಿಜವಾಗಿಯೂ ಕಷ್ಟಪಟ್ಟು ಪ್ರಾಣವನ್ನು ಕೊಟ್ಟು ಸ್ವರಾಜ್ಯ ತಂದಿದ್ದಾರೆ. ದೊಡ್ಡ ದೊಡ್ಡ ಮಹನೀಯರು ಮಾತನಾಡಿ, ಅಲ್ಲಿ ಬಿಸಿಲು ಬರುತ್ತದೆ, ಇಲ್ಲಿ ಕೊಡೆ ಹಿಡಿಯಿರಿ ಎಂದು ಹೇಳುವುದು ಸಮಂಜಸವಾಗಿ ಕಾಣುವುದಿಲ್ಲ. ಭೂದೇವಿ ದುಷ್ಕೃತ್ಯ ಮಾಡಿದವರನ್ನು ತಾನು ಹೊರಲು ತಯಾರಾಗಿದ್ದೇನೆ, ಆದರೆ ಆಡಿದ ಮಾತಿಗೆ ತಪ್ಪುವವರು ಭಾರವಾಗುತ್ತಾರೆ ಅಂಥವರನ್ನೇ ಭೂಮಿಮೇಲೆ ಹುಟ್ಟಿಸಬಾರದು ಎಂದು ಬ್ರಹ್ಮನನ್ನು ಕೇಳಿಕೊಂಡಳಂತೆ. ಸ್ವಾತಂತ್ರ್ಯ ಬಂದ ಮೇಲೆ ನಮ್ಮ ದೇಶ ಉದ್ಧಾರವಾಗುವುದಕ್ಕೆ ಆಸ್ಪದವಿದೆ. ಪಾಂಚವಾರ್ಷಿಕ ಯೋಜನೆಗಳನ್ನು ಕಾರ್ಯಗತಮಾಡುತ್ತಿದ್ದೇವೆ. ಇಂಥಾದ್ದರಲ್ಲಿ ಅಲ್ಲಿ ತಗ್ಗು ಇದೆ. ಇಲ್ಲಿ ದಿಣ್ಣೆ ಇದೆ. ನಾವು ಇದ್ದಂತೆಯೇ ಮುಂದುವರಿಸಿ ಎಂದು ಹೇಳುವುದು ಸರಿಯಲ್ಲ. ಪಂಡಿತ್ ಜವಹರ್‌ಲಾಲ್‌ರವರು ಅಮೇರಿಕಾಕ್ಕೆ ಹೋದಾಗ ಅಲ್ಲಿ President Truman ಖುದ್ದು interview ಕೊಟ್ಟರು. ನಮ್ಮ ದೇಶದಲ್ಲಿ ಅಧ್ಯಾತ್ಮಕ ಶಕ್ತಿ ಇದೆ, ಧರ್ಮ ಇದೆ. ನಾವು ಏನೇನು ಆಡಿರುತ್ತೇವೋ ಅದನ್ನು ಒಪ್ಪಿಕೊಂಡು ಅದರಂತೆ ನಡೆಯಬೇಕು. ಯಾವ ಸಮಯದಲ್ಲಿ ಏನು ಆಗಬೇಕೋ, ಅದು ಆಗಿಯೇ ತೀರುತ್ತದೆ ಎಂದು ಭಗವದ್ಗೀತೆಯಲ್ಲಿ ಹೇಳಿದೆ. ಆದ್ದರಿಂದ ಮಾನ್ಯ ಸ್ನೇಹಿತರು ನಮ್ಮೊಡನೆ ಬಂದು ಸೇರಿಕೊಳ್ಳುತ್ತೇವೆಂದು ಹೇಳುವವರನ್ನು ಶತ್ರುಗಳಂತೆ ನೋಡಬಾರದು. ಒಂದುವೇಳೆ ಶತ್ರುಗಳಾದರೂ ಅವರಿಗೆ ಉಪಕಾರ ಮಾಡಬೇಕು. ಅಪಕಾರ ಮಾಡಬಾರದು. 1921ರಲ್ಲಿ ಕೇಳ್ಕರ್ ಈ ವಿಚಾರದಲ್ಲಿ award ಕೊಟ್ಟಿದ್ದಾರೆ. ಅಂತು ಬಳ್ಳಾರಿಯ ಮೂರು ತಾಲ್ಲೂಕುಗಳ ಸ್ಥಿತಿ ತ್ರಿಶಂಕು ಸ್ವರ್ಗದಲ್ಲಿ ಇದ್ದಹಾಗೆ ಇದೆ.

ಮನುಷ್ಯ ಅಲ್ಲಿ ಬೇರೆ ಇಲ್ಲ, ಇಲ್ಲಿ ಬೇರೆ ಇಲ್ಲ. ನಾವೆಲ್ಲರೂ ಹೊಂದಿಕೊಂಡು ಹೋಗಬೇಕು ಅಷ್ಟೆ. ಚಾಂಡರಿ ಕಮೀಷನ್ ಬಂದಾಗ ಬೇಕಾದರೆ ಬದಲಾವಣೆ ಮಾಡಬಹುದೆಂದು ಹೇಳಿದರು. ಅವರು ಹೇಳಿ ಮಾಡುವುದಕ್ಕಿಂತ ನಾವಾಗಿಯೇ ಸ್ವಾಗತ ನೀಡುವುದು ರಾಜನೀತಿ. ವರಮಾನದ ದೃಷ್ಟಿಯಿಂದ ನೋಡಿದರೂ ಕೂಡ ರಾಯಚೂರು ಒಂದು ಡಿಸ್ಟ್ರಿಕ್ಟು ತನ್ನ ಹತ್ತಿಯ ಬೆಳೆಯಿಂದ ನಿಮ್ಮ ಕೋಲಾರದ ಚಿನ್ನದಗಣಿಗೆ ಸಮನಾಗಿದೆಯೆನ್ನಬಹುದು; ರಾಜಲ್ ಬಂಡ ಪ್ರಾಜೆಕ್ಟ್ ಎಂಬುದಿದೆ; ಒಂದು ಲಕ್ಷ ಎಕರೆ ಅದರಿಂದ ತರಿ ಆಗುತ್ತದೆ; ಗುಲ್ಬರ್ಗ ಡಿಸ್ಟ್ರಿಕ್ಟಿನ ವಿಷಯದಲ್ಲಿ ಶೇಷಾದ್ರಿ ಕಮಿಟಿ ಬಹಳ ಮಟ್ಟಿಗೆ ಹೇಳಬೇಕಾದದ್ದನ್ನೆಲ್ಲಾ ಬಿಟ್ಟಿದೆ. ಅಲ್ಲಿ ಅಮೃತ್ ಮಹಲ್ ಸಿಕ್ಕುವ ಪ್ರಸಿದ್ಧವಾದ ಶಬಾಬಾದ್ ಇದೆ. ಇದರಿಂದಲೇ ಹೈದರಾಬಾದ್ ಸಂಸ್ಥಾನಕ್ಕೆ ವರ್ಷಕ್ಕೆ ಮೂರುಕೋಟಿ ಉತ್ಪತ್ತಿ ಬರುತ್ತದೆ. ಅದನ್ನಿಲ್ಲಿ ಹೇಳಿಲ್ಲ. ಸಿರಿಗುಪ್ಪ ಪ್ರಾಜೆಕ್ಟಿನಿಂದ 90,000 ಎಕರೆಗಳು ಸಾಗುವಳಿಗೆ ಬರುತ್ತವೆ. ಇದನ್ನೆಲ್ಲಾ ಲೆಕ್ಕಕ್ಕೆ ತೆಗೆದುಕೊಂಡು ತೆರಿಗೆ ಬರುವುದನ್ನು ಲೆಕ್ಕ ಹಾಕಿದರೆ ಎಷ್ಟೋ ಆದಾಯ ನಮಗೆ ಬರುತ್ತದೆ. ಬಾರ್ಸಿ, ಅಕ್ಕಲಕೋಟೆ ಮುಂತಾದ ಪ್ರದೇಶಗಳಲ್ಲಿ ಮುತ್ತಿನಂತಿರುವ ಬಿಳಿಜೋಳ ಬೆಳೆಯುತ್ತದೆ. ಎಲ್ಲಿಯೂ ಅಂಥ ಜೋಳ ಬೆಳೆಯುವುದಿಲ್ಲ. ಬಿದರೆ ಜಿಲ್ಲೆಯಲ್ಲಿ ಬೆಳೆಯುವಂಥ ಪಲಾವ್ ಅಕ್ಕಿ ಇಂಡಿಯಾದೇಶದಲ್ಲೇ ಪ್ರಸಿದ್ಧಿಯಾಗಿದೆ. ಆದ್ದರಿಂದ ನಾವು ಸಂಕುಚಿತ ಮನೋಭಾವವನ್ನು ಬಿಟ್ಟು ದೂರದೃಷ್ಟಿಯಿಂದ ಅವರನ್ನು ಸ್ವಾಗತಿಸಿ ಧೈರ್ಯದಿಂದ ಮುಂದೇನು ಬಂದರೂ ಅನುಭವಿಸೋಣ. ಆ ಪ್ರದೇಶ ಇನ್ನೂ ಮಗುವಿನಂತಿದೆ; ದೊಡ್ಡದಾಗಿಲ್ಲ. ಈ ಎಂಟು ವರ್ಷದಲ್ಲಿ ಇಷ್ಟು ಮುಂದುವರಿದಿವೆ! ಅಲ್ಲದೆ ಇಂಥ ವಿಷಯಗಳಲ್ಲಿ ಇಂಡಿಯಾ ಪ್ರಪಂಚಕ್ಕೆ ಮಾರ್ಗದರ್ಶಕವಾಗಿರಬೇಕು. ಇಂಥ ಧರ್ಮದೇಶದಲ್ಲಿ ಅಣ್ಣತಮ್ಮಂದಿರು ಗುದ್ದಾಟವಾಡುವುದು ಸರಿಯಲ್ಲ. ಸ್ವಾತಂತ್ರ್ಯಬಂದ ಹೊಸದರಲ್ಲಿ ಪಟೇಲರು ಹೇಳಿದ ಒಂದು ಮಾತನ್ನು ನೆನಪಿಗೆ ತಂದುಕೊಳ್ಳಿ. ಇಂಗ್ಲೀಷಿನವರು 150 ವರ್ಷಗಳ ಕಾಲ ಇಲ್ಲಿ ರಾಜ್ಯಭಾರ ಮಾಡಿದರೂ ಅವರು ಕೇವಲ ಇಲ್ಲ ಭೂಮಿಯ ಮೇಲಿರುವ ವಸ್ತುಗಳನ್ನು ಮಾತ್ರ ಒಯ್ದಿದ್ದಾರೆ, ಅಷ್ಟೆ. ಇನ್ನೂ ನಮ್ಮಲ್ಲಿರುವ ಖನಿಜ ಸಂಪತ್ತು ಹಾಗೆಯೇ ಇದೆ. ಭೂಮಿಯೊಳಗಿರುವುದೆಲ್ಲವನ್ನೂ ಅವರಿಗೆ ಒಯ್ಯಲಾಗಿಲ್ಲ. ಆದ್ದರಿಂದ ಇಂದು ನಾವು ಸಂಶೋಧನೆ ನಡೆಸಿ ಭೂಮಿಯೊಳಗಿರುವ ಭಂಗಾರವನ್ನು ತೆಗೆಯಲು ಪ್ರಯತ್ನಿಸೋಣ; ಇದರಿಂದ ಇಂಡಿಯಾವನ್ನು ಬಂಗಾರದಿಂದ ಕಟ್ಟಬಹುದು ಎಂದು ಹೇಳಿದ ವಲ್ಲಭಾಯ್ ಪಟೇಲರ ವಾಕ್ಯಗಳು ಸತ್ಯದಿಂದ ಕೂಡಿದಂಥವು. ಇಂಡಿಯಾ ದೇಶದಲ್ಲಿದ್ದ 562 ಸಂಸ್ಥಾನ

(ಶ್ರೀ ಎಸ್. ಪರಮೇಶ್ವರಪ್ಪ.)

ಗಳನ್ನು ಒಂದು ರಕ್ತಪಾತವಿಲ್ಲದೆ ಪಟೇಲರು ಒಂದುಗೂಡಿಸಿದರು ; 50 ವರ್ಷಗಳಕಾಲ ಇಂಗ್ಲೀಷಿನವರು ಎಷ್ಟು ಕಷ್ಟಪಟ್ಟರೂ, ಯುದ್ಧಮಾಡಿದರೂ ಈ ಐಕ್ಯತೆಯನ್ನು ತರಲಾಗಿರಲಿಲ್ಲ. ಸಂಸ್ಥಾನದ ಅರಸರಿಗೆ ಕಾಂಪೆನ್‌ಸೇಷನ್ ಎಷ್ಟು ಬೇಕೋ ಅಷ್ಟು ಕೊಟ್ಟು ಎರಡು ವರ್ಷಗಳಕಾಲದಲ್ಲಿ ಎಲ್ಲ ರಾಜರಿಗೂ ಲಗಾಮು ಹಾಕಿದರು; ಯಾರಿಗೂ ಯಾವ ನೋವೂ ಇಲ್ಲದೆ ಮಾಡಿದರು. ಇಷ್ಟೆಲ್ಲಾ ಎಸಗಿದ ಆ ಮಹಾವ್ಯಕ್ತಿಗಳು ಹೃದಯಸ್ತಂಭನದಿಂದ ನೋವಾಗಿ ಚಿಕಿತ್ಸೆಗೆ ಬೊಂಬಾಯಿಗೆ ಏರೋಪ್ಲೇನಿನಲ್ಲಿ ಹೋದ ಸಮಯದಲ್ಲಿ ಒಂದು ವಾಕ್ಯವನ್ನು ಅಪ್ಪಣೆ ಕೊಡಿಸಿದರು. "ನಮ್ಮ ದೇಶವನ್ನು ಇನ್ನು ಯಾರೂ ಆಳುವುದಕ್ಕೆ ಅಧಿಕಾರವಿಲ್ಲ. ನಮ್ಮ ದೇಶ ಯಾರಿಂದಲೂ ನಾಶವಾಗುವುದಿಲ್ಲ. ಆದರೆ, ಅದು ನಮ್ಮ ದೇಶದ ಜನರಿಂದಲೇ ನಾಶವಾದೀತು. ಇದನ್ನು ತಪ್ಪಿಸಲು ನಾವೆಲ್ಲರೂ ಶ್ರಮಿಸಬೇಕು" ಎಂದು ಹೇಳಿದರು. ಇವೇ ಅವರ ಅಂತ್ಯ ಹಿತನುಡಿಗಳಾದುವು. ಬೊಂಬಾಯಿನಲ್ಲಿ ಸತ್ತಮೇಲೆ ಅವರ ಅಸ್ಥಿಯನ್ನು ತ್ರಿವೇಣಿ ಸಂಗಮದಲ್ಲಿ ಹಾಕುವಾಗ ಪಟೇಲರು ನುಡಿದ ಈ ವಾಕ್ಯಗಳನ್ನು ಉದ್ಘೋಷಿಸಿದರು. ಆ ಹಿತನುಡಿಗಳನ್ನು ನಾವು ನೆನಪಿನಲ್ಲಿಡಬೇಕು, ನಾವು ನಾವು ಗುದ್ದಾಟವಾಡುವುದು ಸರಿಯಲ್ಲ. ನಾವೆಲ್ಲರೂ ಅಣ್ಣತಮ್ಮಂದಿರು. ಹೇಗೂ ಅವರು ನಮ್ಮಲ್ಲಿಗೆ ಬಂದೇ ಬರುತ್ತಾರೆ. ಕೊನೆಗೆ ಅಖಂಡ ಕರ್ಣಾಟಕ ಆಗಿಯೇ ಆಗುತ್ತದೆ. ಬಂದಾಗ ಅವರು ನಮ್ಮನ್ನು ನೋಡಿ, 'ಶತ್ರುಗಳಂತೆ ಮಾತನಾಡಿದರು' ಎಂದು ತಿಳಿದುಕೊಳ್ಳದಿರಲಿ. ಆದ್ದರಿಂದ ಗುದ್ದಾಟ ಮಾಡುವುದು ಬೇಡ. ಸಂಪತ್ತಿನ ವಿಷಯ ತೆಗೆದುಕೊಂಡರೆ, ಅಲ್ಲಿನ ಮೂರು ತಾಲ್ಲೂಕುಗಳಲ್ಲಿ ಶೇಕಡ 75 ಜನರು income-tax ಕೊಡುವವರಾಗಿದ್ದಾರೆ; ಶೇಕಡ 75 ಜನ ಸೇಲ್ಸ್ ಟ್ಯಾಕ್ಸ್ ಕೊಡುತ್ತಾರೆ. ಇಲ್ಲಿನ ಏಳು ತಾಲ್ಲೂಕುಗಳೂ ಒಂದು ತೂಕ, ಅಲ್ಲಿನ ಮೂರು ತಾಲ್ಲೂಕುಗಳೇ ಒಂದು ತೂಕ. ಆದ್ದರಿಂದ ಆ ತಾಲ್ಲೂಕುಗಳನ್ನು ಸೇರಿಸಿಕೊಳ್ಳುವುದಕ್ಕೆ ನೀವೆಲ್ಲರೂ ಒಪ್ಪಿಗೆ ಕೊಡಬೇಕು. ನಮ್ಮ ಮಾನ್ಯ ಸ್ನೇಹಿತರಾದ ನಾರಾಯಣರೆಡ್ಡಿಯವರೇನೋ ಆವೇಶದಲ್ಲಿ ಏನೋ ಮಾತನಾಡುತ್ತಾರೆ. ಅವರನ್ನೇನೂ ನಾನು ಆಪಾದನೆ ಮಾಡುತ್ತಿಲ್ಲ. ಅವರೂ ನಮ್ಮ ಸ್ನೇಹಿತರೇ. ಅವರಿಗೂ ಗೊತ್ತಿದೆ; ನಮ್ಮ ನಾಗಯ್ಯ ರೆಡ್ಡಿಯವರಿಗೂ ಆಂಧ್ರ ಸಂಪರ್ಕದ ಅನುಭವವಿದೆ. ಆಂಧ್ರದಲ್ಲಿರತಕ್ಕ ಗೌಡರಿಗೂ ಇಲ್ಲಿ ನಮ್ಮ ಜಿಲ್ಲೆಯಲ್ಲಿರತಕ್ಕ ಗೌಡರಿಗೂ ವ್ಯತ್ಯಾಸವಿದೆ. ಆದ್ದರಿಂದ ಅವರೊಡನೆ ಕೂಡಿರುವುದಕ್ಕೆ ಅವರೂ ಇಷ್ಟಪಡಲಾರರು. ಮಾನ್ಯ ರೆಡ್ಡಿಯವರಿಗೆ ಇಲ್ಲಿರತಕ್ಕ ಗೌರವ ಅಲ್ಲಿ (ಆಂಧ್ರದಲ್ಲಿ) ದೊರೆಯುವುದಿಲ್ಲವೆಂದು ನನಗೆ ಗೊತ್ತು. ಆದ್ದರಿಂದ ಅವರು ಇಲ್ಲಿಂದ ಅಲ್ಲಿಗೆ ಹೋಗಬೇಕೆನ್ನುವುದಾದರೆ 'ಬೇಡ' ಎಂದು ಮನವಿಮಾಡಿಕೊಂಡು ನಾನು ಈ ಭಾಷಣವನ್ನು ಮುಗಿಸುತ್ತೇನೆ.

Mr. DEPUTY SPEAKER.—The House will now rise and meet at Thirty Minutes past Eight of the Clock the next day.

The House adjourned at Six of the Clock for the day to meet again at Thirty Minutes past Eight of the Clock on Tuesday, the 26th April 1955.

WD 4508—GPB—550—8-10-55

MYSORE LEGISLATIVE ASSEMBLY

FIFTY-FIRST DAY.

Tuesday, 26th April 1955.

The House met in the Assembly Hall, Old Public Offices, Bangalore, at Thirty Minutes past Eight of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS

Shimoga Town Municipal Council (Drainage Scheme).

Q.—259. SRI S. R. NAGAPPA SETTY (Shimoga).—

Will the Government be pleased to state:—

(*a*) the total estimated cost of Shimoga Town Municipal drainage scheme and the amount of grant and loan given by Government;

(*b*) the amount spent yearwar from the beginning;

(*c*) the total amount spent towards the establishment for a separate staff employed for the drainage scheme from the beginning yearwar;

(*d*) the amount provided for 1954-55 and the amount spent;

(*e*) how much amount is required to complete the scheme and how many years it will take to complete the scheme;

(*f*) how much area of Shimoga Town comes under drainage scheme;

(*g*) the amount of interest collected from Shimoga Municipality towards the loan given?

A.—SRI KADIDAL MANJAPPA (Minister for Revenue and Public Works).—

			Rs.
(*a*)	Estimated cost	...	5,40,856
	Grant	...	2,67,818
	Loan	...	1,17,605

(*b*)—

		Rs.	a.	p.
1949-50	...	1,97,801	5	0
1950-51	...	43,389	5	0
1951-52	...	42,908	9	6
1952-53	...	95,897	9	9
1953-54	...	44,039	15	0
1954-55 (to end of December 1954)	...	8,414	9	6
Total	...	4,32,451	5	9

(*c*) Though the staff was first sanctioned for attending to Drainge Works, it was all along entrusted with other duties also, such as sanitary works of Shimoga District and Shimoga Town Water Supply. The establishment charges incurred on account of the staff are given below:—

		Rs.	a.	p.
1947-48	...	2,241	9	0
1948-49	...	4,928	5	0
1949-50	...	8,255	0	0
1950-51	...	9,674	6	0
1951-52	...	9,530	10	0
1952-53	...	10,635	6	0
1953-54	...	15,955	14	0
1954-55 (to end of December 1954)	...	10,540	13	0
Total	...	71,761	15	0

(*d*) No amount has been provided. Outlay incurred to end of December 1954 is Rs. 8,414-9-6.

(*e*) Rs. 7,64,403 as per revised estimate. Two more years.

(*f*) About one square mile.

(*g*) Nil.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—Revised estimate 7,64,403 ರೂಪಾಯಿಗಳು ಎಂದು ಹೇಳಿದ್ದೀರಿ, ಇದರಲ್ಲಿ ಮೊದಲು ಅಂದಾಜು ಮಾಡಿದ 54,08,56 ರೂಪಾಯಿಗಳು ಸೇರಿಕೊಂಡು 7 ಲಕ್ಷ ರೂಪಾಯಿ ಚಿಲ್ಲರೆ ಆಗಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—5 ಲಕ್ಷ ರೂಪಾಯಿಗಳಿದ್ದುದು 7 ಲಕ್ಷ ರೂಪಾಯಿಗಳಾಗಿವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಅಂದಾಜಿನಲ್ಲಿರುವ ಈ ವ್ಯತ್ಯಾಸವನ್ನು ಸರ್ಕಾರದವರು ವಹಿಸಿಕೊಳ್ಳುತ್ತಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಮುಂದೆ ತೀರ್ಮಾನ ಮಾಡಬೇಕಾಗುತ್ತದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈ ಕೆಲಸವನ್ನು ಇಷ್ಟು ನಿಧಾನ ಮಾಡಿಕೊಂಡು ಈಗಾಗಲೇ 4 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಶಿವಮೊಗ್ಗಾದಲ್ಲಿ ಅಲ್ಲಿ ಇಲ್ಲಿ ಗುಂಡಿಗಳನ್ನು ತೋಡಿದ್ದರಿಂದ ಏನು ಪ್ರಯೋಜನವಾಯಿತು?

ಶ್ರೀ ಕಡಿದಾಳ್ ಮಂಜಪ್ಪ.—ಶಿವಮೊಗ್ಗಾದಲ್ಲಿ ರೈಲ್ವೆ ಲೈನ್ ಮುಖಾಂತರ ಇದು ಹೋಗಬೇಕಾಗಿದೆ. ಆದ್ದರಿಂದ ರೈಲ್ವೆ ಇಲಾಖೆ ಜೊತೆಗೆ ವ್ಯವಹಾರ ಮಾಡಬೇಕಾದ್ದರಿಂದ ಸ್ವಲ್ಪ ನಿಧಾನವಾಗಿದೆ. ಇದನ್ನು ಜಾಗ್ರತೆ ಮಾಡಿಸುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—Septic tank ಮಾಡುವುದಕ್ಕೋಸ್ಕರ ಜಮೀನು ಅಕ್ವೈರು ಮಾಡಲಾಗಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಮಾಡಿದ್ದಾರೆಂದು ನೆನಪು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ—ಈ ಮೂರು ವರ್ಷಗಳ ಕೆಳಗೆ septic tank ಮಾಡುವುದಕ್ಕೋಸ್ಕರ contract ಕೊಟ್ಟಿರುವುದು ನಿಜವೇ ?

Sri Kadidal MANJAPPA.—I want notice.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈ ಬಗ್ಗೆ ಈ ವರ್ಷ ಗ್ರಾಂಟನ್ನು ಒದಗಿಸದೆ ಇರುವುದಕ್ಕೆ ಕಾರಣ ವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಶಿವಮೊಗ್ಗಾ ಮುನಿಸಿಪಾಲಿಟಿಗೆ Bus-stand, water supply scheme, ಮತ್ತು ಕೆಲವು stallಗಳನ್ನು ಕಟ್ಟುವುದಕ್ಕೆ ದುಡ್ಡು ಒದಗಿಸಿರುವುದರಿಂದ ಇದಕ್ಕೆ ಈ ವರ್ಷ ಹಣ ಕೊಡುವುದಕ್ಕಾಗಲಿಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಸುಮಾರು ಒಂದು ಚದರ ಮೈಲಿ ಪ್ರದೇಶಕ್ಕೆ ಮಾತ್ರ ಈ ಡ್ರೈನೇಜ್ ಸ್ಕೀಂನಿಂದ ಅನುಕೂಲವಾಗುತ್ತದೆ ಎಂದು ಹೇಳಿದ್ದೀರಿ. ಶಿವಮೊಗ್ಗಾ ನಗರಕ್ಕೆ ಚರಂಡಿ ವ್ಯವಸ್ಥೆಯನ್ನು ಮಾಡಬೇಕಾದರೆ 50 ಲಕ್ಷ ರೂಪಾಯಿಗಳು ಬೇಕಾಗುತ್ತವೆಯೋ ?

ಶ್ರೀ ಕಡಿದಾಳ್ ಮಂಜಪ್ಪ.—50 ಲಕ್ಷ ರೂಪಾಯಿಗಳಷ್ಟು ಬೇಕಾಗಿರಲಾರದು. ಆದರೆ ಇನ್ನೂ ಸ್ವಲ್ಪ ಜಾಸ್ತಿ ಬೇಕಾಗಬಹುದು.

ಶ್ರೀ ಎಸ್. ಅರ್. ನಾಗಪ್ಪಶೆಟ್ಟಿ.—ಈ ವರ್ಷದಲ್ಲಿ ಕೆಲಸ ಪ್ರಾರಂಭಮಾಡಿ ಸಮರ್ಪಕವಾಗಿ ಕೆಲಸ ಮಾಡಿಸಿಕೊಡುತ್ತೀರೋ ?

ಶ್ರೀ ಕಡಿದಾಳ್ ಮಂಜಪ್ಪ.—ಆದಷ್ಟು ಜಾಗ್ರತೆ ಕೆಲಸ ಮಾಡಿಸಬೇಕೆಂಬುದೇ ಸರ್ಕಾರದ ಉದ್ದೇಶ.

Contribution Works, Vani Vilas Water Works Sub-Division, Mysore

Q.—796. Sri B. NARAYANASWAMY (Mysore City South).—

Will the Government be pleased to state :—

(*a*) whether the Vani Vilas Water Works Sub-Division of Mysore is regularly sending reports of the outlay incurred for all cantribution works as required by the P.W.D. Code and the Municipal Accounts Manual ; if not, since when such reports have not been sent and the amount of such contribution works during the period (details of the works carried out and works not carried out may be given) ;

(*b*) whether any reference is made by the Municipality to the Government in this behalf ; if so, when ; the steps taken by the Government to settle the account ?

A.—Sri Kadidal MANJAPPA (Minister for Revenue and Public Works).—

(*a*) (i) Yes.

(ii) Does not arise in view of the reply above. (For details of works carried out and yet to be carried, please see statement laid on the Table of the House.)

(*b*) Yes. During August 1954. Arrangements have been made to verify the accounts and to take necessary action.

Sri B. NARAYANASWAMY.—May I know the total amount of contribution that is pending with the department ?

Sri Kadidal MANJAPPA.— I want notice.

Sri B. NARAYANASWAMY.—Is Government aware that these contribution amounts are being deposited in advance of the execution of the works ?

Sri Kadidal MANJAPPA.—That has been done according to rules.

Sri B. NARAYANASWAMY.—Sir, my question is whether these amounts are being deposited in advance before the work is taken up ?

Sri Kadidal MANJAPPA.— The Government has given a loan for this work. I think the loan amount will be credited as and when occasion arises.

Sri B. NARAYANASWAMY.—Is Government aware that in spite of depositing the amount in advance, there is inordinate delay in the execution of the works by the Department ?

Sri Kadidal MANJAPPA.—I should say that the Municipal Council at Mysore should be thankful to Government because we took the necessary steps to take up this work very early.

Sri B. NARAYANASWAMY.— May I know Sir the number of works that are still pending with the department?

Sri Kadidal MANJAPPA.—I do not understand the question.

Sri B. NARAYANASWAMY.—Sir, my question is, the number of works that are pending in the department after receiving the contribution amount.

Sri Kadidal MANJAPPA.—Is it in connection with the Water Supply Scheme ?

Sri B. NARAYANASWAMY.—Yes, Sir.

Sri Kadidal MANJAPPA.—There are a number of works mentioned in the estimate. It is a big list. I cannot definitely state the number of items which are under execution and which are pending execution.

Sri B. NARAYANASWAMY.—May I request the Government to kindly direct the department to immediately take up the works for which contribution amounts have been received, in view of the scarcity of water supply in Mysore City ?

Sri Kadidal MANJAPPA.—We have taken all necessary steps.

Land Grants to Harijans under Depressed Class Darkhast Rules.

Q.—888. Sri H. T. PUTTAPPA (Hoskote-Anekal-Scheduled Castes).—

Will the Government be pleased to state :—

(*a*) the number of acres of land distributed to Harijans in every taluk of Bangalore District since 1st April 1954 under Depressed Class Darkhast Rules;

(*b*) the number of acres of land distributed to Non-Harijans ?

A.—Sri Kadidal MANJAPPA (Minister for Revenue and Public Works).—

(*a*)—

		A.	G.
Bangalore North	...	86	07
Bangalore South	...	111	00
Hoskote	...	28	03
Devanahalli	...	49	00
Dodballapur	...	84	38
Nelamangala	...	65	32
Anekal	...	77	00
Ramanagaram	...	99	00
Channapatna	...	56	00
Magadi	...	160	06
Kanakapura	...	202	00

(*b*)—

Bangalore North	...	77	26
Bangalore South	...	55	00
Hoskote	...	213	36
Devanahalli	...	16	00
Dodballapur	...	43	23
Nelamangala	...	72	06
Anekal	...	42	00
Ramanagaram	...	96	23½
Magadi	...	98	10
Kanakapura	...	624	00

ಶ್ರೀ ಎಚ್. ಟಿ. ಪುಟ್ಟಪ್ಪ.—ಎಷ್ಟು ದರಖಾಸ್ತು ಅರ್ಜಿಗಳು ಬಂದಿವೆ ?

Sri Kadidal MANJAPPA.—That has been disallowed.

ಅಧ್ಯಕ್ಷರು.—ಇದಕ್ಕೂ ನೀವು ಕೇಳಿರುವ ಪ್ರಶ್ನೆಗೂ ಸಂಬಂಧವಿಲ್ಲದಿರುವುದರಿಂದ ಅದನ್ನು ತಳ್ಳಿಹಾಕಲಾಗಿದೆ.

Deaf and Dumb School, Mysore.

Q.—64. Sri S. SRINIVASA IYENGAR (T.-Narasipur).—

Will the Government be pleased to state :—

(*a*) when the Deaf and Blind Boys School at Mysore was established;

(*b*) the year in which the Institution was brought under the control of the Education Department;

(*c*) the number of pupils studying in the Institution for the last 10 years (separate figures for Deaf and Blind may kindly be given);

(*d*) the amount of money spent annually both for the Institution and the Hostel;

(*e*) the duration of study for the Blind and Deaf ;

(*f*) the opportunity offered for further study;

(*g*) the equipment supplied by Government for training Deaf Boys ;

(*h*) whether a circular has been issued by the Government of India, as long back as 1950 directing the bifurcation of the Deaf and Blind sections and establishing separate schools ?

A.—Sri Kadidal MANJAPPA (Minister for Revenue and Public Works) [On behalf of SRI A. G. RAMACHANDRA RAO (Minister for Law and Education).—

(*a*) 23rd October 1901.

(*b*) In 1927

(*c*)

Year		Deaf		Blind
1945—46	...	36	...	45
1946—47	...	42	...	59
1947—48	...	50	...	62
1948—49	...	46	...	49
1949—50	...	47	...	49
1950—51	...	58	...	42
1951—52	...	50	...	61
1952—53	...	37	...	54
1953—54	...	34	...	50
1954...55	...	39	...	46

(*d*) (i) Institution ; Rs. 30,542-10-0 per annum.

(ii) Hostel : Rs. 7,295-12-1 per annum.

(*e*) Blind ... 8 years.
Deaf ... 7 years.

(*f*) There is no opportunity for further study, but a sheltered workshop in the school gives them employment and further training in a craft.

(*g*) Nil.

(*h*) Yes.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಸಂಸ್ಥಾನದಲ್ಲಿ ಕಿವುಡು ಮತ್ತು ಮೂಗ ಹುಡುಗ ಹುಡುಗಿಯರ ಸಂಖ್ಯೆ ಎಷ್ಟು ಎಂಬುದು ಗೊತ್ತಿದೆಯೇ ?

Sri Kadidal MANJAPPA.—We have no statistics.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ನನ್ನ (g) ಪ್ರಶ್ನೆಗೆ ಉತ್ತರವಾಗಿ ಕಿವುಡು ಬಾಲಕರಿಗೆ ಪಾಠ ಕಲಿಸುವುದಕ್ಕೋಸ್ಕರ ಯಾವ ವಿಧವಾದ ಸಲಕರಣೆಗಳೂ ಇಲ್ಲ ಎಂದು ಹೇಳಿದ್ದೀರಿ. ಅಂಥ ಸಲಕರಣೆಗಳನ್ನು ಒದಗಿಸಬೇಕಾದ ಅಗತ್ಯವಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅಗತ್ಯವಿರುವುದು ನಿಜ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಬಾಕಿ ಸಂಸ್ಥಾನಗಳಲ್ಲಿ ಇವರಿಗೆ ಯಾವ ರೀತಿ ಸಲಕರಣೆಗಳನ್ನು ಒದಗಿಸಿದ್ದಾರೆಂಬ ವಿಷಯವನ್ನು ತಿಳಿದುಕೊಂಡು ನಮ್ಮ ಸರ್ಕಾರದವರು ಇಲ್ಲಿ ಒದಗಿಸುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಕಿವುಡ ಮತ್ತು ಮೂಗರ ಸ್ಕೂಲುಗಳಲ್ಲಿ ಪಾಠ ಪ್ರವಚನಗಳನ್ನು ಹೇಳುವುದಕ್ಕೋಸ್ಕರ ಇದ್ದ superintendentರನ್ನು ಅಮೇರಿಕಾ ದೇಶಕ್ಕೆ ಹೆಚ್ಚಿಗೆ ಶಿಕ್ಷಣ ಪಡೆಯುವುದಕ್ಕೆ ಸರ್ಕಾರದವರು ಕಳುಹಿಸಿದ್ದಿರಾ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು. ಡಾಕ್ಟರ್ ನಟೇಶ್ವರವರನ್ನು ಕಳುಹಿಸಿದ್ದೆವು.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಯಾವ ವಿದ್ಯೆಯಲ್ಲಿ ಶಿಕ್ಷಣ ಪಡೆಯುವುದಕ್ಕೋಸ್ಕರ ಅವರನ್ನು ಕಳುಹಿಸಿ ಕೊಟ್ಟಿರಿ ?

Mr. SPEAKER.—That question is disallowed.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಈ ಸಂಸ್ಥೆಯನ್ನು ದಯುವಿಟ್ಟು upgrade ಮಾಡುವುದಕ್ಕೆ ಸರ್ಕಾರದವರು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಯೇ ?

Sri Kadidal MANJAPPA.—We will consider the suggestion.

Sri Mulka GOVINDA REDDY.—May I know whether Dr. Hellan Keller visited the Mysore State ?

Sri Kadidal MANJAPPA.—I was told she visited.

Sri Mulka GOVINDA REDDY.—Has she made any recommendations regarding improvements ?

Sri Kadidal MANJAPPA.—I have no information.

Sri Mulka GOVINDA REDDY.—Are you aware when Dr. Hellan Keller arrived in Bangalore, the Government did not send any epresentatives to receive her ?

Sri Kadidal MANJAPPA.—We had sent our representatives to receive her.

Mr. SPEAKER.—That does not arise out of this question.

Sri SYDNEY A. THOMAS.—Are you aware that certain number of them have been absorbed in the Telephone Factory ?

Sri Kadidal MANJAPPA.—I want notice.

ಶ್ರೀ ಆರ್. ಅನಂತರಾಮನ್.—ಬೆಂಗಳೂರು ನಗರದಲ್ಲಿ ಕಿವುಡರ ಮೂಕರ ಪಾಠಶಾಲೆಯೊಂದಿದೆಯಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಇದೆ.

ಶ್ರೀ ಆರ್. ಅನಂತರಾಮನ್.—ಕಾರ್ಪೊರೇಷನ್ನು ಅದನ್ನು ಸರಿಯಾಗಿ ನಡೆಸುತ್ತಿಲ್ಲ, ಸರ್ಕಾರದವರೇ ನಡೆಸಬೇಕು ಎಂದು ಮನವಿ ಬಂದಿಲ್ಲವೇ ?

Sri Kadidal MANJAPPA.—I don't think that question does arise.

Yelahanka Middle School (Construction of building.)

Q.—520. Sri K. V. BYRE GOWDA (Bangalore North).—

Will the Government be pleased to state :—

when would they commence the building work of Yelahanka Middle School in Bangalore North Taluk ?

A.—Sri Kadidal MANJAPPA (Minister for Revenue and Public Works) [On behalf of SRI A. G. RAMACHANDRA RAO Minister for Law and Education)].—

Revised plan and estimate amounting to Rs. 32,000 for the construction of the building for this Middle School have already been countersigned by the Director of Public Instruction and forwarded to the Executive Engineer, Bangalore Division.

ಶ್ರೀ ಕೆ. ವಿ. ಬೈರೇಗೌಡ.—32,000 ರೂಪಾಯಿಗಳಿಗೆ ಮಂಜೂರು ಮಾಡಿದೆಯೆಂದು ಹೇಳಿದ್ದೀರಿ. ಈ ಸಾರಿ ಕಟ್ಟಡವನ್ನು ಕಟ್ಟಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಪ್ರಯತ್ನ ಮಾಡುತ್ತೇವೆ. ಬಡ್ಜೆಟ್ಟಿನಲ್ಲಿ ಸೇರಿಸಿದೆ.

ಶ್ರೀ ಕೆ. ವಿ. ಬೈರೇಗೌಡ.—Countersignature ಕೂಡ ಆಗಿದೆ; ಇನ್ನೂ ಏಕೆ ತಡವಾಗಬೇಕು ?

ಶ್ರೀ ಕಡಿದಾಳ್ ಮಂಜಪ್ಪ.—ಎಸ್ಟಿಮೇಟ್ ಸ್ಯಾಂಕ್ಷನ್ ಆದಮೇಲೆ ಕೂಡಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

High School Classes Promotions.

Q.—674. Sri M. LINGANNA (Nanjangud).—

Will the Government be pleased to state :—

(*a*) whether they have received complaints regarding the percentage of promotion in the I and II year of the High Schools conducted during the last week of February in Nanjangud High School ;

(*b*) If so, what steps they have taken in this matter ?

A.—Sri Kadidal MANJAPPA (Minister for Revenue and Public Works) [On behalf of SRI A. G. RAMACHANDRA RAO (Minister for Law and Education)].—

(*a*) Yes.

(*b*) The promotions have been declared as per rules.

Sri M. LINGANNA.—Is it a fact that the percentage of failures in the I Year and II Year classes are too large in number and the promotion is not consistent with the circular issued by the Director of Public Instruction ?

Sri Kadidal MANJAPPA.—Promotions have been declared as per rules.

Sri M. LINGANNA.—I want to know what steps the Government have taken on the complaints that have been received ?

Sri Kadidal MANJAPPA.—It is usual to file complaints.

Sri M. LINGANNA.—Is it only 40 per cent in the I Year and 50 per cent in the II Year have failed in this High School ?

Sri Kadidal MANJAPPA.—If definite allegation is made that rules have not been adhered to in promoting the students, we may enquire into the matter; simply because they are failed, that is not the reason for interference.

Sri M. LINGANNA.—Has it come to the notice of Government that in spite of a circular issued by the Director of Public Instruction that promotions should be liberal in view of the fact that the students had no time to read the text books, the failure is too large a percentage ; what action the Government intend to take in this matter ?

Sri Kadidal MANJAPPA—According to the reports the Government have received, rules have been adhered to by the school authorities. The percentage of passes vary from school to school for various reasons, mainly depending upon the performance of the students.

Sri M. LINGANNA.—Is it a fact that students had no time even to study their books because the examinations have had to be conducted before the Survodaya Day ?

Sri Kadidal MANJAPPA.—That applies to all the schools.

Sri M. LINGANNA.—Have they not received complaints from almost all the heads of High Schools that the percentage of passes is too low and that they are not in keeping with the circular issued by the Director of Public Instruction ?

Sri Kadidal MANJAPPA.—We have not received complaints from all the High Schools.

Sri M. LINGANNA.—Have they received complaints from certain High Schools if not from all the High Schools ?

Sri Kadidal MANJAPPA.—I want notice.

Sri M. LINGANNA.—Do the Government intend inquiring and giving liberal promotions to the students, Sir ?

Sri Kadidal MANJAPPA.—If rules have been infringed we can interfere and set right matters, but if there are no cases of infringement of rules, we cannot interfere.

Sri M. LINGANNA.—Does not 40 per cent or 50 per cent of failure indicate the untimely conducting of examination ?

Sri Kadidal MANJAPPA.—It reflects upon the performance of the students.

Sri M. LINGANNA.—Are the Government aware that the time given to students to study for examination was too small a period and that they could not read almost all the text books in view of the fact that Education Reforms were inaugurated on the 30th January ?

Sri Kadidal MANJAPPA.—The students were expected to study from the commencement of the academical year.

Sri M. LINGANNA.—Is it not a fact that the examinations were conducted two months earlier than the usual time ?

Mr. SPEAKER.—That is a known fact. You can approach the concerned man and get the necessary information.

Sri M. LINGANNA.—My point is, time being very short the examinations were held three months earlier than the usual time ; it is a matter for the Government to consider, Sir.

Sri Kadidal MANJAPPA.—We will enquire into the matter.

Agricultural Department (Promotions in Gazetted Ranks).

Q.—680. Sri G. PUTTASWAMI (Chikmagalur-Mudigere—Scheduled Castes) [On behalf of Sri B. RACHIAH (Yelandur-Scheduled Castes)]. -

Will the Government be pleased to state :—

(*a*) the number and names of Gazetted Officers in the Agricultural Department (answers to be furnished with dates of their entry into service, qualification and pay) ;

(*b*) the names of Assistant Directors who have been promoted to the cadre of Senior Assistant Directors (communitywar answer to be given) ;

(*c*) whether it is not a fact that the juniors have been promoted in preference to seniors ?

A.—Sri Kadidal MANJAPPA (Minister for Revenue and Public Works) [On behalf of DR. R. NAGAN GOWDA (Minister for Agriculture)].—

(*a*) 47 ; for details please see statement below.

(*b*) Please see statement below.

(*c*) No.

List showing the Gazetted Officers in the Agricultural Department as on 1st April 1955.

Serial No.	Name	Date of entry into service	Qualification	Pay	Remarks
	Sriyuths—			Rs.	
1	M K Appajappa ...	31—7—1929	B.A., I.A.S. ...	1,180+200	Director of Agriculture, Commissioner for Food Production, Development Commissioner for Community Projects, Director of Statistics.
2	B P Balakrishna ...	22—6—1945	B.Sc., B.Sc.(Agri.) (Edin.)	425	
	Accounts Assistant.—				
3	C Britto ...	1—2—1936	B.A. ...	300+50	
	Deputy Director.—				
4	M Mallaraj Urs ...	6—4—1939	B.Sc., B.Sc.(Agri.) (Edin.)	700	
	Senior Assistant Directors.—				
5	M L Subbanna ...	1—2—1933	B Sc. (Hons.) ...	450	O.O.D. Tobacco Company
6	H A Abdur Rubb ...	22—12—1928	B.Sc. ...	300	
7	B Rudramurthy ...	27—6—1944	M.Sc., M.S. (U.S.A.) ...	450	O.O.D. as Extension Officer
8	B P Balakrishna ...	22—6—1945	BSc., B.Sc.(Agri.) (Edin.)	425	O.O.D. as Headquarters Assistant see Sl. No. 2.
9	C M Revanna ...	14—8—1943	B.Sc. (Hons.) ...	400	D.A.O., Bellary
10	C Ramiah (Temp.) ...	2—5—1930	L.Ag. ...	300	Agricultural Officer, T.B. Project, Bellary.
	Asst. Directors of Agriculture.—				
11	H C Nanjiah ...	14—5—1941	B.Sc. ...	275	Hassan
12	G N Alasingrachar ...	12—12—1949	B.Sc., B.Sc.(Agri.) ...	230	Kolar
13	B P Venkataramiah ...	7—9—1950	Do ...	230	Officer-in-charge, A.R.S., Mandya
14	N Narasimiah ...	8—9—1950	B.Sc.(Agri.) ...	230	Bangalore
15	R Ali Hyder ...	3—5—1937	Do ...	200	Chikmagalur

(Sri KADIDAL MANJAPPA.)

List showing the Gazetted Officers in the Agricultural Department as on 1st April 1955—*contd.*

Serial No.	Name	Date of entry into service	Qualification	Pay	Remarks
	Sriyuths—			Rs.	
16	H V Puttanaik ...	2—5—1950	B.Sc. (Agri.) ...	230	Superintendent, A.R.S., Hebbal.
17	R Dwarakinath ..	11—7—1949	Do ...	230	O.O.D. as Project Executive Officer, N.E.S. Block, Malavalli.
18	B J Nanjundappa ...	4—4—1950	B.Sc., B.Sc. (Agri.) ...	230	Community Project, Shiralkoppa
19	C Gopalakrishna ...	21—12—1949	Do ...	230	Tumkur
20	H Mahadeviah ...	6—9—1950	M.Sc. (Agri.) ...	230	Chitaldrug
21	G V B Naidu ...	13—1—1944	B.Sc. (Hons.) ...	260	Mysore
22	K Basavaraja Urs ...	21—8—1929	L.Ag. ...	260	Mandya
23	P Basaviah ...	27—4—1950	B.Sc. (Agri.) ...	230	Cotton Extension Officer, Bangalore.
	Apiarist.—				
24	B G Gupta ...	4—1—1941	...	200	Bangalore
	Agricultural Statistician and Meteorologist.—				
25	A Ananthapadmanabha Rao ...	14—10—1935	B.A., M.S. (IOWA) ...	425	Technical Assistant to the Director of Statistics, Bangalore.
	Agricultural Engineer.—				
26	K N Dhwajan ...	16—5—1930	B.E. ...	575	Reverted to D.P.W. from 1st April 1955.
27	K Ramaswamy ...	27—3—1934	B.E. ...	350	Tractor Engineer, Bangalore
	Agricultural Chemist—				
28	S P Govindarajan ...	11—12—1939	B.Sc. (Hons.), Ph.D. (Lond.) D.I.C.A.R.I.C.	500+75	Bangalore
	Assistant Chemist—				
29	B Bhimasena Rao ...	25—9—1930	B.A. ...	200	Do
	Bio-Chemist, Compost Scheme—				
30	A R Anantharamiah ...	29—8—1936	B.A. ...	200	Do
	Economic Botanist.—				
31	B Venkoba Rao ...	19—2—1929	B.Sc., M.S. (U.S.A.) ...	550	Do

List showing the Gazetted Officers in the Agricultural Department as on 1st April 1955.—*concld.*

Serial No.	Name	Date of entry into service	Qualification	Pay	Remarks
	Sriyuths—			Rs.	
	Senior Assistant Botanists.—				
32	T Srinivasamurthy ...	1—10—1928	M.Sc. ...	320	Paddy Special Officer
33	K Gopala Iyengar ...	1—5—1937	M.Sc. ...	305	
34	G Srinivasa Iyengar ...	1—5—1937	M.Sc. ...	290	Cotton Scheme
35	S G Narasimhachar ...	10—8—1937	M.Sc. ...	230	Physiological Scheme
36	Ghouse Mohiyuddin ...	13—12—1949	B.Sc., B.Sc.(Agri.) ...	230	Areca Research Scheme
	Entomologist.—				
*Sri H. M. CHANNABASAPPA (Periyapatna).—I move my Resolution which is as follows:—

"This Assembly is of the opinion that the salary payable to any Government servant in the State including I.A.S. and I.P.S. Officers, Members of the Public Service Commission and Judicial Officers should not exceed Rs. 1,000 (Rupees one thousand) per mensem and that the money saved thereof should be set apart for improving the conditions of the low paid officials in the State.

"It is further of the opinion that, Government should take necessary action in the matter after obtaining the approval of the Government of India to revise salaries of I.P.S. and I.A.S. and Judicial Officers."

Mr. SPEAKER.—Resolution moved :

"That this Assembly is of the opinion that the salary payable to any Government servant in the State including I.A.S. and I.P.S. Officers, Members of the Public Service Commission and Judicial

* Asterisk indicates that the speeches and remarks made are not revised by the Member concerned.

Officers should not exceed Rs. 1,000 (Rupees one thousand) per mensem and that the money saved thereof should be set apart for improving the conditions of the low paid officials in the State."

"It is further of the opinion that Government should take necessary action in the matter after obtaining the approval of the Government of India to revise salaries of I.P.S. and I.A.S. and Judicial Officers."

* Sri P. R. RAMAIYA (Basavangudi).—Sir, I am raising a point of order. In the resolution moved by the Hon'ble Member Sri H. M. Channabasappa, he raised the question of the salaries of the I.A.S. and I.P.S. officers. But as far as officers under the Government of Mysore are concerned, those were appointed by the Public Service Commission in Mysore and by the Mysore Government. They are no doubt under the competence and control of this House and this House is entitled to move a resolution in respect of officers appointed by the Mysore Government. But with regard to the I.A.S. and I.P.S. Officers it is my humble opinion and also it is a point of Constitution whether as embodied in this resolution, *i.e.*, salaries payable to any Government servant in the State including the I.A.S. and I.P.S. Officers—and the High Court Judges, he has not mentioned—it is in the competence of this House and also in the competence of this Government to determine the question of the salaries of I.A.S. and I.P.S. Officers. These officers belong to the All-India cadre. Their appointment, their promotions and other things are controlled by the Government of India. They have got their own Public Service Commission with regard to the appointment of I.A.S. and I.P.S. officers. They hold an examination and some times that Public Service Commission visits Indian States to consider the question of the M.C.S. Officers and others, and it is within their competence to appoint a committee and do the needful. Therefore, I raise a point of order that it is not within the competence of this House to consider the question of I.A.S. and I.P.S. officers and the High Court Judges.

* Sri M. LINGANNA (Nanjangud).—With due deference to the movers of the resolutions, I wish to submit to the Chair most humbly that the resolutions as they are worded and in the present form cannot be fruitfully discussed and taken a decision upon, for this simple reason. The first resolution moved by Sri B. Hutche Gowda does not mention anything about I.A.S. and I.P.S. and Judicial Officers or other officers whos cadre belongs to the All-India structure. But the second resolution specifically lays down that the salaries of I.A.S. and I.P.S. officers and also members of the Public Service Commission and Judicial Officers, including High Court Judges should be cut down to Rs. 1,000. Resolution No. 2 is a specific resolution. As my learned friend Sri P. R. Ramaiya has submitted, I am of the opinion that the resolution as worded cannot be a subject matter of discussion, because it is a matter pertaining to the All-India cadre and also that the salaries have been fixed by the Constitution and because the salaries of the Judges and members of the Public Service Commission come definitely under certain provisions of the Constitution. Now, we are trying to take a decision upon the provisions of the very Consti-tution itself, for which this House is not competent. It is only the Parliament that has got a right to change the salary structure of the Public Service Commission either of Mysore State or of any other State, or the Judiciary including the High Court Judges. It is laid down on certain principles and they have specified the salary to be paid in the Constitution. If the resolution is amended to this effect that this Assembly recommends to the Government of India that the salaries payable, etc., if a little alteration is made this way, then we can disuss it; because, than it will become a recommendatory resolution. Then whatever we say will be a sort of appeal. Then the opinion of the House can be conveyed to the Government of India. Therefore, I submit that Resolution No. 2—and it indirectly

(SRI M. LINGANNA.)

implicates Resolution No. 1—cannot be discussed and it is not within the competence of this House to discuss unless the movers move an amendment to the effect that "this House recommends to the Government of India that the salary payable, etc." Otherwise we are not competent to move and discuss this resolution.

*Sri Mulka GOVINDA REDDY (Chitaldrug).—Sir, regarding the first resolution, there is no point of order at all. Regarding the second resolution, Sri Ramaiya and Sri Linganna tried to make out a case that since the I.A.S., I.P.S. and Judicial Officers come under the purview of the Government of India, we are not competent to move a resolution regarding the curtailment of salaries that are allowed to these officers. Sir, the salaries of these officers are subject to the vote of the Legislature. In the second para of Sri H. M. Channabasappa's resolution, it is definitely pointed out that "it is further of the opinion that Government should take necessary action in the matter after obtaining the approval of the Government of India to revise salaries of I.P.S. and I.A.S. and Judicial Officers." Therefore, we are quite competent to discuss those resolutions.

*Sri H. M. CHANNABASAPPA.—Sir, about the competency of this House to discuss this resolution raised by Sri P. R. Ramaiya and Sri Linganna, I wish to submit that both of them did not show under what provision of law this House is not competent. With regard to I.A.S. services, article 312 of the Constitution lays down the procedure. The Parliament may by law provide for integration of services all over the State. That does not provide for the fixing up of salaries. Nothing prevents the Government of India to revise the salary structure of the I.A.S. and I.P.S. Officers. This House, inasmuch as it has got to vote the salaries of these officers, is perfectly competent to raise a debate on the desirability or otherwise of fixing their salaries and make a recommendation to the Government of India, and in this respect my resolution is explicitly clear.

Sri P. R. RAMAIYA.—No doubt, this House has got the power of voting on the salaries of these officers as determined by the Government of India and the Parliament. Therefore, the point of determining the salary—how much should be paid—is a question which is not in the competency of this House and this Government. It is only the Parliament and the Government of India that can do so. I perfectly agree with Sri Channabasappa when he says that this House has got the power to vote on the salaries determined by the Parliament. But this House has no power to determine the salaries.

Sri H. M. CHANNABASAPPA.—I am sorry, Sir, that the Hon'ble Member has made it worse by raising another point. It is within the competency of this House to say what the salary structure of these officers ought to be. I quite see that it is within the competence of the Central Government to determine the amount. But nothing prevents this House to make an opinion as to what the salary structure in the future should be. The second portion of my resolution makes it clear. It is an expression of opinion "it is the opinion of this house. . . ." Nothing prevents this House from expressing an opinion, and what use it will be with the Government is a different thing altogether. Therefore, the point of order raised by Sri P. R. Ramaiya is practically baseless. Another point raised is about the judicial officers. I may bring to the notice of Sri Linganna that this Statute does not provide specifically the salaries of the judicial officers including the Chief Justice and other judges. Only with regard to the Chief Justice of the Supreme Court and other Judges of the Supreme Court and also judges of Part A States, it is specifically provided for in the Schedule of the Constitution. So far as Part B States are concerned, there is absolutely nothing provided by way of fixing the salary of these officers in the Constitution and therefore, it is within the competence of this House to fix the salaries of Judicial officers in accordance with the provisions of law. With regard to the Public Service Commission also, there is nothing specifically stated in the

Constitution preventing this House to revise their salary structure to suit its own finances and to suit the economy of the State. Therefore, the point of order raised by Hon'ble Sri P. R. Ramaiya and Sri Linganna are baseless. My resolution is perfectly in order and this House is perfectly competent to make an expression of what their salary should be.

(*Several Members rose*).

Sri K. PUTTASWAMY (Srirangapatna).—On a point of order, Sir. The only thing that now remains for the Chair is to give its ruling. We are spending much of our time by discussing on the admissibility or otherwise of the resolutions.

Mr. SPEAKER.—I am trying to elicit the points of view of the House.

*Sri J. MOHAMED IMAM (Jagalur).—The point of order raises the question whether this House is competent to discuss the pay structure of the I. A. S. and other officers who are appointed by the Central Government. It must be understood that though they are appointed by the Central Government, it is from this exchequer that their salaries are paid. Under the Constitution we are empowered to discuss all items which come under charged items. We may not reduce the salaries of High Court Judges. Under the Constitution, we are entitled to express our opinion on the pay and salaries of these officers. We have therefore got every right to express our opinion, since the amount is met by our Government, about their salaries and about the possible changes in them. Secondly, it is true that the Mysore Government have no power to reduce or enhance the salaries. But nothing prevents us from passing a resolution and sending it to the Central Government for their further action. Of course, the ultimate decision vests with them. We can however raise a discussion and express our opinion on this important matter which vitally affects the finances of the State.

11 A.M.

Mr. SPEAKER.—So far as the point of order raised by both Sri P. R. Ramiya and Sri M. Linganna, are concerned, the Assembly is not going to fix or reduce the salary of the Judicial Officers, the Members of the Public Service Commission, the I.A.S. or I.P.S. officers. The resolution is merely an expression of opinion of this Hon'ble House. Therefore, it is stated in the later part of the second resolution that it is left to the Government to take such action as is necessary with the approval or the concurrence of the Central Government. Therefore nothing prohibits this Hon'ble House to discuss these resolutions. And I allow these resolutions to be discussed.

Sri V. VENKATAPPA (Channapatna).—Is not the opinion of the House binding on the Government, Sir? It must be in the form of a recommendation to the Central Government. Any decision taken in this House is binding on the Government.

Mr. SPEAKER.—Government should take necessary action after obtaining the approval of the Government of India. Therefore it is in order.

(*Sri Hutche Gowda rose*).

Mr. SPEAKER.—I request the Hon'ble Member to take not more than ten minutes, because other Hon'ble Members want to have an opportunity to speak.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಸರ್ಕಾರದ ನೌಕರರಿಗೆ ಕೊಡತಕ್ಕ ಸಂಬಳದ ವಿಚಾರದಲ್ಲಿ ಅವರ scaleನ್ನು ಪುನರ್ವಿಮರ್ಶಿಸಿ ಒಂದು ನ್ಯಾಯಬದ್ಧವಾದ ಮತ್ತು ಜನಗಳ ಅವಶ್ಯಕತೆ ಹಾಗೂ ಸಂಸ್ಥಾನದ ಆರ್ಥಿಕ ಸ್ಥಿತಿಗನುಗುಣವಾಗಿ ನಿಷ್ಕರ್ಷೆ ಮಾಡಬೇಕೆಂದು ಅನೇಕ ವರ್ಷಗಳಿಂದಲೂ ಈ ಶಾಸನ ಸಭೆಯಲ್ಲಿ ಹೇಳುತ್ತಿದ್ದೇವೆ. ಸ್ವಾತಂತ್ರ್ಯ ಬರುವುದಕ್ಕೆ ಮುಂಚೆಯೂ ಕೂಡ ಒಂದು ನಿರ್ಣಯವೇ ಈ ಸಭೆಯ ಮುಂದೆ ಬಂದಿತ್ತು. ಅದಾದಮೇಲೆ 1946 ರಲ್ಲಿ ಸಂಬಳ ಸಾರಿಗೆಗಳ ವಿಮರ್ಶೆ ನಡೆಯಿತು. ಸರ್ಕಾರದವರು ಒಂದು revised scaleನ್ನು ಎಲ್ಲರಿಗೂ ಮಂಜೂರು ಮಾಡಿದರು. ಈ revised scale, ನಮ್ಮ ನಿರೀಕ್ಷಣೆಗನುಸಾರವಾಗಿ ಇಲ್ಲದಿದ್ದರೂ ಸ್ವಲ್ಪಮಟ್ಟಿಗೆ ಉತ್ತಮವಾದಂತಾಯಿತು. ಆದರೆ, ಕೆಳದರ್ಜೆಯ ನೌಕರರಿಗೆ ಕೊಟ್ಟ ರೀತಿಯಲ್ಲಿ ಮೇಲಿನ ದರ್ಜೆಯ ನೌಕರರಿಗೂ ಜಾಸ್ತಿ ಮಾಡಿಬಿಟ್ಟರು. ನಮ್ಮ ಆಶಯವೇನೆಂದರೆ, ನಮ್ಮ ದೇಶದ ಇಂದಿನ ಅರ್ಥಿಕ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರಿ ನೌಕರಿಯಲ್ಲಿಲ್ಲದವರು ಯಾವ ರೀತಿ ಜೀವನ ಮಾಡುತ್ತಿದ್ದಾರೆಯೋ ಅದಕ್ಕನುಸಾರವಾಗಿ ಸರ್ಕಾರಿ ನೌಕರರ ಸಂಬಳವನ್ನೂ ಉತ್ತಮಪಡಿಸಿ, ಸರ್ಕಾರಿ ನೌಕರರೇ ಆಗಲಿ, ಕೈಗಾರಿಕಾ ವರ್ಗದವರೇ ಆಗಲಿ, ವ್ಯವಸಾಯಗಾರರೇ ಆಗಲಿ ಎಲ್ಲರಿಗೂ ಕನಿಷ್ಠ

(ಶ್ರೀ ಬಿ. ಹುಚ್ಚೇಗೌಡ.)

ಮಟ್ಟದ ಜೀವನ ದೊರಕಬೇಕು ಎಂಬುದು. ಇದನ್ನು ನಾವು ಮೊದಲಿನಿಂದಲೂ ಕೇಳುತ್ತಿದ್ದೆವು. ಈಚೆಗೆ 1947 ನೆಯ ಇಸವಿಯ ತರುವಾಯ ದೇಶದಲ್ಲಿ ಪ್ರಜಾಸತ್ತಾತ್ಮಕ ಸರ್ಕಾರ ಸ್ಥಾಪನೆಯಾದಮೇಲಂತೂ ಪ್ರತಿಯೊಬ್ಬ ಪ್ರಜೆಯ ಯೋಗಕ್ಷೇಮವನ್ನೂ ನೋಡಿಕೊಳ್ಳಬೇಕಾದುದರ ಜವಾಬ್ದಾರಿ ಸರ್ಕಾರದಮೇಲೆ ಬಿದ್ದು ಇದರ ಅವಶ್ಯಕತೆ ಇನ್ನೂ ಜಾಸ್ತಿಯಾಗಿದೆ. ಹಿಂದಾದರೋ ದೇಶದ ಸಾಧನ ಸಂಪತ್ತುಗಳನ್ನು ಉಪಯೋಗಿಸಿಕೊಳ್ಳಬೇಕಾದರೆ ಯಾರು ಶಕ್ತರಾಗಿದ್ದರೋ, ಜಹಗೀರದಾರರೂ, ಇನಾಂದಾರರೂ ಅಗಿ ಜನರನ್ನ ಶೋಷಣೆಮಾಡತಕ್ಕ ಶಕ್ತಿ ಹೊಂದಿದ್ದರೋ ಅವರು ಮಾತ್ರ ಉಪಯೋಗಿಸಿಕೊಳ್ಳುತ್ತಿದ್ದರು. ಈಗ ತಿಳಿವಳಿಕಸ್ಥರ ಕಾಲ. ಈಗ ವಿದ್ಯಾವಂತರಾಗಿರುವವರು, ಲೇಖನಿಯಲ್ಲಿ ವಾಕ್ಚಾತುರ್ಯದಲ್ಲಿ ಗಟ್ಟಿಗರಾಗಿರುವವರು ದೇಶದ ಸಂಪತ್ತನ್ನು ಹಂಚಿಕೊಳ್ಳುವುದಕ್ಕೆ ಅವಕಾಶವಾಗಿದೆ. ಇದೇ ರೀತಿ ಹಿಂದುಳಿದ ರಾಷ್ಟ್ರಗಳ ಸಂಪತ್ತನ್ನು ಮುಂದುವರಿದ ಪಾಶ್ಚಾತ್ಯ ರಾಷ್ಟ್ರಗಳು ಶೋಷಣೆ ಮಾಡುವುದಕ್ಕೆ ಪ್ರಯತ್ನಿಸುತ್ತಿದ್ದರು. ದೇಶದಲ್ಲಿಯೂ ಹೀಗೆ ಹಿಂದುಳಿದ ಜನಗಳ ಶೋಷಣೆಯಾಗುತ್ತಿದೆಯೆಂಬ ಕಾರಣದಿಂದಲೇ ಸ್ವಾತಂತ್ರ್ಯ ಬರುವುದಕ್ಕೆ ದಾರಿಯಾಯಿತು. ಯಾವ ಅಧಿಕಾರಿಗೇ ಆಗಲಿ ತಿಂಗಳಿಗೆ 500 ರೂಪಾಯಿಗಳಿಗೆ ಮೇಲ್ಪಟ್ಟು ಸಂಬಳವಿರಕೂಡದೆಂದು ವಾದಮಾಡಿ ಸ್ವಾತಂತ್ರ್ಯ ಹೋರಾಟ ನಡೆಸಿದರು. ಈಗ ಸ್ವಾತಂತ್ರ್ಯ ಬಂದಮೇಲೆ ಅದನ್ನು ಜಾರಿಗೆ ಕೊಡಬೇಕಾದ ಕೆಲಸ ಉಳಿದಿದೆ. ಯಾರು ಇದಕ್ಕಾಗಿ ಮೊದಲಿನಿಂದಲೂ ಪ್ರಚಾರ ಮಾಡುತ್ತಿದ್ದರೋ ಅವರೇ ಇದನ್ನು ಜಾರಿಗೆ ತರುವುದಕ್ಕೆ ಪ್ರಯತ್ನಮಾಡಬೇಕಾಗಿತ್ತು. ಆ ರೀತಿ ಮಾಡದಿದ್ದುದು ತುಂಬಾ ವಿಷಾದಕರ. ನಮ್ಮ ದೇಶದಲ್ಲಿ 1947ರಲ್ಲಿ revised scaleನ್ನು ಮಂಜೂರು ಮಾಡಬೇಕೆಂದು ಹೇಳಿ ನಾನಾ ತೆರಿಗೆಗಳನ್ನು ಜಾರಿಗೆ ತಂದರು. ಕೆಲವು ತೆರಿಗೆಗಳ ದರಗಳನ್ನೂ ಒಂದಕ್ಕೆರಡು ಮಾಡಿದರು. ಸಂಬಳ ಸಾರಿಗೆಗಳ ಖರ್ಚು 398 ಲಕ್ಷವಿದ್ದುದು 998 ಲಕ್ಷ ರೂಪಾಯಿಗಳಿಗೆ ಏರಿಸಲಾಯಿತು. ಇಷ್ಟು ಖರ್ಚಾದರೂ ನಿಜವಾಗಿ ಯಾರಿಗೆ ಅತ್ಯಾವಶ್ಯಕವಾಗಿ ಹೆಚ್ಚಿನ ಸಂಬಳ ಕೊಡಬೇಕಾಗಿತ್ತೋ ಅವರಿಗೆ ಸಿಗಲಿಲ್ಲ. ಈಗಿನ ಜನಜೀವನದ ಮಟ್ಟ ಯಾವ ರೀತಿಯಿದೆಯೆಂಬುದನ್ನು ನೋಡಬೇಕು. ಕನಿಷ್ಠ ಸಂಬಳ ನಿಗದಿಮಾಡಬೇಕಾದರೆ ಜನಜೀವನದ ಮಟ್ಟ ಯಾವ ರೀತಿಯಿದೆ ಯೆಂಬುದನ್ನು ನೋಡಬೇಕಾಗಿದೆ. ಹಿಂದೆ ಇವರು ಸಂಬಳ ನಿಗದಿಮಾಡಬೇಕಾದರೆ ಈ ದೃಷ್ಟಿಯಿಂದ minimum basic pay ಏನಿರಬೇಕು, ತುಟ್ಟಿಭತ್ಯ ಏನಿರಬೇಕು ಎಂಬುದನ್ನು ನೋಡಿ ಮಾಡಬೇಕಾದದ್ದು ನ್ಯಾಯವಾಗಿತ್ತು. ಇದೇ ಸಂದರ್ಭದಲ್ಲಿ ಇನ್ನೊಂದಂಶವನ್ನೂ ಅವರು ದೃಷ್ಟಿಯಲ್ಲಿಡಬೇಕಾಗಿತ್ತು. ಯಾವ ನೌಕರನಿಗೇ ಆಗಲಿ ಅತಿ ಹೆಚ್ಚಿಗೆಯೂ ಇರಕೂಡದು. ಹೆಚ್ಚಿಗೆ ಸಂಬಳ ಬರುವವರಿಗೂ ಕಡಮೆ ಸಂಬಳ ಬರುವವರಿಗೂ ಒಂದು ಸಾಧಾರಣ ಅಂತರವಿರಬೇಕು. ಈಗಲಾದರೋ ಒಂದಕ್ಕೆ 200ರಷ್ಟು, 250ರಷ್ಟು ಅಂತರವಿದೆ. ಇದನ್ನು ತಪ್ಪಿಸಬೇಕಾದದ್ದು ಈ ಕಾಲದಲ್ಲಿ ಅತ್ಯಂತ ಜರೂರಾಗಿದೆ. ಯಾವನಿಗೇ ಆಗಲಿ, ಆತನಿಗೆ ನ್ಯಾಯವಾದ ಅವಶ್ಯಕತೆಗಳಿಗೆ, ಖರ್ಚುವೆಚ್ಚಗಳಿಗೆ ಎಷ್ಟು ಬೇಕೋ ಅದಕ್ಕಿಂತ ಹೆಚ್ಚಿಗೆ ಕೊಡಕೂಡದೆಂಬುದು ಒಂದು ನೀತಿ. ಹಾಗೆಯೇ ಕಡಮೆ ಸಂಬಳ ಬರುವವನೂ ಕನಿಷ್ಠ ಜೀವನದ ಮಟ್ಟಕ್ಕೂ ಕೆಳಗಿಳಿಯುವಷ್ಟು ಇರಕೂಡದು. ಅವನು ಮತ್ತು ಅವನ ಮಕ್ಕಳಿಗೆ ಜೀವನಕ್ಕೆ ತಿಂಗಳಲ್ಲಿ 30 ದಿವಸಗಳವರೆಗೆ ಆಗುವಷ್ಟು, ಜೊತೆಗೆ ಮಕ್ಕಳಿಗೆ ವಿದ್ಯಾಭ್ಯಾಸ, ಮನೆ, ಬಟ್ಟೆಬರೆಗಳಿಗೆ ಸಾಕಾಗುವಷ್ಟಾದರೂ ಕೊಡಬೇಕು.

ಈ ದೃಷ್ಟಿಯಿಂದ ನೋಡುವುದಾದರೆ, ಈ ನಿರ್ಣಯದಲ್ಲಿ ಹೇಳಿರುವ ಪ್ರಕಾರ ಒಬ್ಬ ಸರ್ಕಾರಿ ನೌಕರನಿಗೆ 50 ರೂಪಾಯಿಗಳನ್ನಾದರೂ ಕೊಡಬೇಕೆಂದು ಹೇಳುತ್ತೇನೆ. ಐವತ್ತು ರೂಪಾಯಿಗಳೂ ಸಾಕಾಗುವುದಿಲ್ಲವೆಂದೇ ಹೇಳಬೇಕು. ಆದರೂ, ಇಷ್ಟಾದರೂ ಇದ್ದರೆ ಸರ್ಕಾರದವರು ಈ ನಿರ್ಣಯವನ್ನು ಒಪ್ಪಿಕೊಂಡಾರು ಎಂಬ ಅಭಿಪ್ರಾಯದಿಂದ ಕೊನೆಯಪಕ್ಷ 50 ರೂಪಾಯಿಗಳಾದರೂ ಈ ಕನಿಷ್ಠದರ್ಜೆಯವರಿಗೆ ದೊರೆಯುವಂತಾಗಲೆಂದು ನಾನು ನಿರ್ಣಯದಲ್ಲಿ ಸೂಚಿಸಿದ್ದೇನೆ. ಹಿಂದೆ ಇಂಡಿಯಾ ಸರ್ಕಾರದವರು ಪೇ-ಕಮಿಷನ್ ಎಂಬುದನ್ನು ಮಾಡಿ 30 ರೂಪಾಯಿ ಸಂಬಳ ಬರುವವನಿಗೆ 25 ರೂಪಾಯಿಗಳಾದರೂ ತುಟ್ಟಿಭತ್ಯ ಕೊಡಬೇಕು, 55 ರೂಪಾಯಿ ಬರುವವರಿಗೆ 35 ರೂಪಾಯಿಗಳಾದರೂ ಕೊಡಬೇಕು ಎಂದು ಮಾಡಿದರು. ನಮ್ಮ ದೇಶದಲ್ಲಿಯೂ ಅದೇ ರೀತಿಯಲ್ಲಿ ಒಂದು ನ್ಯಾಯವಾದ ಸಂಬಳಸಾರಿಗೆಗಳ ವ್ಯವಸ್ಥೆಯನ್ನು ಮಾಡಬೇಕು. ಹಾಗೆ ಮಾಡಬೇಕಾದರೆ ಕಡಮೆದರ್ಜೆಯ ನೌಕರರಿಗೆ ಅವನ ಜೀವನಕ್ಕೆ ಸಾಕಾಗುವಂತೆ ಕನಿಷ್ಠ ಪರಿಮಿತಿಗಿಂತ ಹೆಚ್ಚಿಗೆ ಇರುವಂತೆ ಒದಗಿಸಬೇಕಾದದ್ದು ಅವಶ್ಯಕ. ಅದೇ ಸಂದರ್ಭದಲ್ಲಿ, ಹೆಚ್ಚಿನ ಸಂಬಳದಾರರಿಗೂ ಸಂಸ್ಥಾನದ ಆರ್ಥಿಕಸ್ಥಿತಿ, ಜೀವನಮಟ್ಟ, ಸಂಸ್ಥಾನದಲ್ಲಿರತಕ್ಕ ಇತರ ಸಾಧಕ ಬಾಧಕಗಳನ್ನು ನೋಡಿಕೊಂಡು ಸಂಬಳಗಳನ್ನು ನಿಷ್ಕರ್ಷೆ ಮಾಡುವುದೂ ಅವಶ್ಯಕ. ಇದೇ ನೀತಿಯನ್ನನುಸರಿಸಿ ಇಂಡಿಯಾ ಸರ್ಕಾರದವರೂ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಮೂರು ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಯಾರಿಗೂ ಇರಕೂಡದೆಂದು ಅವರೂ ಮಾಡಿದ್ದಾರೆ. ಇದಲ್ಲದೆ, ಈಚೆಗೆ ಆವಡಿಯಲ್ಲಿ ಇದಕ್ಕೆ ಸಂಬಂಧಪಟ್ಟಹಾಗೆ ಒಂದು ನಿರ್ಣಯವನ್ನು ಕೂಡ ಮಾಡಿದಹಾಗೆ ಗೊತ್ತಾಗಿದೆ. ದೇಶದ ಸ್ಥಿತಿಗತಿಗಳಿಗನುಸಾರವಾಗಿ ಇತರ ಜನರ ಜೀವನ ಮಟ್ಟಕ್ಕನುಸಾರವಾಗಿ ಅಧಿಕಾರಿಗಳ ಸಂಬಳಗಳನ್ನು ನಿಷ್ಕರ್ಷೆ ಮಾಡಬೇಕೆಂಬ ಮನೋಭಾವವುಳ್ಳವರಾಗಿದ್ದಾರೆ. ಈ ಮಧ್ಯೆ I.A.S. ಮತ್ತು I.P.S. ಎಂಬ ಹುದ್ದೆಗಳ ಕಷ್ಟ ಬೇರೆ ಬಂದಿದೆ. ಈ ಬಗ್ಗೆ ಸಭೆಯಲ್ಲಿ ಒಂದು point of order ಕೂಡ ಬಂತು. ಇದು ನಮ್ಮ ಮೇಲೆ ಹೊರಿಸಿದ ಹೊರೆ. ನಮ್ಮ ದೇಶದಲ್ಲಿ ಮೊದಲಿನಿಂದಲೂ ಸಿವಿಲ್ ಸರ್ವಿಸ್ ಇದ್ದೇ ಇತ್ತು; ಇಂಡಿಯಾ ದೇಶದ ಎಲ್ಲಾ ಸರ್ವಿಸ್ಸಿನಿಂದಲೂ ಶ್ರೇಷ್ಠ ರೀತಿಯಲ್ಲಿ ಕೆಲಸಮಾಡುವವರೆಂದು ಹೊಗಳಿಸಿಕೊಂಡಿದ್ದರು. ಅಂಥವರಲ್ಲೂ ಇಂಡಿಯಾ ದೇಶದಲ್ಲಿ ಎಲ್ಲರಿಗಿಂತಲೂ ಕಡಮೆಯ ದರ್ಜೆಯ ಸಂಬಳಗಳು ನಮ್ಮಲ್ಲಿದ್ದವು. ನಮ್ಮವರು ಉತ್ತಮರಾಗಿದ್ದರೂ ಕಡಮೆ ಸಂಬಳ ತೆಗೆದುಕೊಳ್ಳುತ್ತಿದ್ದರು. ಹೀಗಿರುವಾಗ ಇಂಡಿಯಾ ದೇಶದವರು ಈಪ್ರಕಾರ I.A.S. and I.P.S. ಮಾಡಿ ಹೆಚ್ಚಿಗೆ ನಿಗದಿ ಮಾಡಿದ್ದರಿಂದ ನಾವೂ ಹೆಚ್ಚಿಗೆ ಕೊಡಬೇಕಾಗಿ ಬಂತು. ನಮ್ಮ ದೇಶದಗ ಹೆಚ್ಚು ಹೆಚ್ಚಿಗೆ ವರಮಾನ ಬರುತ್ತಿದ್ದ ಬಾಬುಗಳೆಲ್ಲವನ್ನೂ ಅವರು ತೆಗೆದುಕೊಂಡು ಹೋದ ಮೇಲೆ ಅವರೇ ಇದನ್ನೂ ವಹಿಸಿಕೊಳ್ಳುವುದು ಸೂಕ್ತ. ಆಗ್ಗೆ ನಾವು ನಮಗೆ ಬೇಕಾದವರನ್ನು ನೇಮಕಮಾಡಿಕೊಳ್ಳಬಹುದು. ಈ ಅಂಶವನ್ನು ಅವರಿಗೆ ಕಡ್ಡಾಯವಾಗಿ

ತಿಳಿಸುವುದರಲ್ಲಿ ತೊಂದರೆಯಿಲ್ಲ. ನಮ್ಮ ದೇಶದ ಸ್ಥಿತಿಗತಿಗಳಿಗೆ ಅವು ಅನುಗುಣವಾಗಿಲ್ಲ. ನಮ್ಮಲ್ಲಿರುವ ಜನರು ಕಡಮೆ ಸಂಬಳವಾದರೂ ದೇಶಾಭಿಮಾನದಿಂದ ಕೆಲಸಮಾಡುತ್ತಾರೆ. ದುಡ್ಡಿಗೆ ಮಾತ್ರ ನಮ್ಮ ಜನ ಕೆಲಸಮಾಡುವವರಲ್ಲವೆಂಬ ಅಂಶವನ್ನು ನಾವು ಇಂಡಿಯಾ ಸರ್ಕಾರದವರ ಗಮನಕ್ಕೆ ತಂದರೆ ಅವರೂ ಒಪ್ಪಿಕೊಳ್ಳುತ್ತಾರೆಂದು ನಂಬಿದ್ದೇನೆ.

ನಮ್ಮ ದೇಶದಲ್ಲಿ ಕಡಮೆ ಸಂಬಳ ಬರತಕ್ಕವರು 41,157 ಜನ ಇದ್ದಾರೆಂದು ಹೇಳಿ ಲೆಕ್ಕದಿಂದ ಗೊತ್ತಾಗಿದೆ. ಸುಮಾರು 8,000 ಜನ 25 ರೂಪಾಯಿಗಳಿಗೂ ಕಡಮೆ ಬರುವವರಿದ್ದಾರೆ. ಒಟ್ಟಿನಲ್ಲಿ ಸುಮಾರು 50 ಸಾವಿರ ಜನ ಕಡುಬಡತನದಲ್ಲಿ ನರಳುತ್ತಿರುವಾಗ, ಕಷ್ಟ ದೆಶೆಯಲ್ಲಿದ್ದುಕೊಂಡು ಅಹನ್ಯಹನಿ ಕಾಲಕ್ಷೇಪ ಮಾಡುತ್ತಿರುವಾಗ, ಜಾಸ್ತಿ ಸಂಬಳ ಬರತಕ್ಕ 10,000 ಜನ ಸರ್ಕಾರದ ಟ್ರೆಷರಿಯಿಂದ ಹೆಚ್ಚಿಗೆ ಹಣ ತೆಗೆದುಕೊಂಡು ಸುಖ ಲೋಲುಪರಾಗಿರುವುದು ನ್ಯಾಯವಲ್ಲ. ಅವರೂ ಕೂಡ ಇದನ್ನು ಒಪ್ಪುವುದಿಲ್ಲವೆಂದು ನಾನು ತಿಳಿದಿದ್ದೇನೆ. ಸಂಬಳ ನಿಷ್ಕರ್ಷೆ ಮಾಡಬೇಕಾದರೆ, ಒಬ್ಬರಿಗೆ ಹೆಚ್ಚಿಗೆ ಕೊಟ್ಟು ಒಬ್ಬರಿಗೆ ಕಡಮೆ ಕೊಟ್ಟರೆ ಗೊಣಗುಟ್ಟುತ್ತಾರೆಯೇ ಹೊರತು Pay structure ನಲ್ಲಿ, Pay scalesನಲ್ಲಿ ಎಲ್ಲರಿಗೂ ಒಂದೇ ಆಗಿದ್ದರೆ ಅಷ್ಟು ಅಸಮಾಧಾನಕ್ಕೆ ಕಾರಣವಿರುವುದಿಲ್ಲ. ನ್ಯಾಯವಾಗಿ ಇಡೀ ದೇಶಕ್ಕೆ ಸಂಬಂಧಪಟ್ಟಂತೆ ಒಂದೇ ಸ್ಕೇಲ್ ಗೊತ್ತುಮಾಡಿದರೆ ಗೊಣಗುಟ್ಟುವುದಕ್ಕೆ ಯಾರಿಗೂ ಅವಕಾಶವೇ ಇರುವುದಿಲ್ಲ.

ನಮ್ಮ ದೇಶದಲ್ಲಿರುವ ಈ ಮೂರನೆಯ ದರ್ಜೆಗೆ ಸೇರಿರುವ ನೌಕರರು ಬಹಳ ಹಿಂದುಳಿದಂಥ ದರ್ಜೆಯಲ್ಲಿದ್ದಾರೆ. ಹೀಗೆ ಬಹಳ ಹಿಂದುಳಿದ ದರ್ಜೆ ನೌಕರರ ಸಂಖ್ಯೆಯು ಸುಮಾರು 24 ಸಾವಿರ ಇದೆ. ಈಗ ಇವರೆಲ್ಲರಿಗೂ ಸಂಬಳವನ್ನು ಜಾಸ್ತಿ ಮಾಡಬೇಕಾಗಿದೆ. ಈ ದಿವಸ ಒಬ್ಬ ನೌಕರನಿಗೆ ಎಷ್ಟೇ ಕಡಮೆ ಎಂದರೂ 50 ರೂಪಾಯಿಗಳ ಸಂಬಳವನ್ನಾದರೂ ಕೊಡಲೇಬೇಕು. ಇಷ್ಟು ಕೊಟ್ಟಾಗ್ಯೂ ಕೂಡ ಅತನ ಜೀವನಕ್ಕೆ ಈ 50 ರೂಪಾಯಿಗಳು ಒಂದು ತಿಂಗಳಿಗೆ ಏತಕ್ಕೂ ಸಾಲುವುದಿಲ್ಲ. ತೀರಾ ಹೆಚ್ಚಿನ ಸಂಬಳ ಪಡೆಯತಕ್ಕಂಥ ಜನರು ಇತ್ತೀಚೆಗೆ ಜಾಸ್ತಿಯಾಗುತ್ತಿದ್ದಾರೆ...

ಶ್ರೀ ಕಡಿದಾಳ್ ಮಂಜಪ್ಪ (ರೆವಿನ್ಯೂ ಮತ್ತು ಮುಜರಾ ಮತ್ತು ಶಾಖೆಗಳ ಮಂತ್ರಿಗಳು).—ಈಗ ಈ ಮಿನಿಯಲ್ ಕೇಡರಿನಲ್ಲಿರತಕ್ಕವರಿಗೆ ಮತ್ತು ಸ್ಕೂಲ್ ಮಾಸ್ಟರುಗಳಿಗೆ ಈ ಪ್ರಕಾರ ಸಂಬಳ ಕೊಟ್ಟರೆ ಎಷ್ಟಾಗುತ್ತಂಬುದನ್ನು ತಾವು ಹೇಳಬಲ್ಲಿರಾ ?

ಶ್ರೀ ಬಿ. ಹುಚ್ಚೇಗೌಡ.—ಎಲ್ಲಾ ಸೇರಿಕೊಂಡರೆ ಸುಮಾರು ಒಂದು ಕೋಟಿ ಅರವತ್ತು ಲಕ್ಷ ರೂಪಾಯಿಗಳು ಆಗಬಹುದು. ಈಗ ನಾವು ಕೊಡುತ್ತಿರುವುದೇ 880 ಲಕ್ಷ ಆಗುತ್ತದೆ. ಆದುದರಿಂದ ತಾವು ಈ ದಿವಸ ಈ ಬೇಸಿಕ್ ಸಂಬಳವನ್ನು 50 ರೂಪಾಯಿಗಳಿಗೆ ನಿಗದಿಮಾಡಿ ಅದರ ಜೊತೆಗೆ ತಾವು ಈ ತುಟ್ಟೀ ಭತ್ಯವನ್ನೂ ಕೊಡುವುದಾದರೆ ಅದಕ್ಕೆ ನನ್ನ ತಕರಾರೇನೂ ಇಲ್ಲ. ಈಗ ಕೆಲವರಿಗೆ ಕೇವಲ 30-31 ರೂಪಾಯಿಗಳ ಸಂಬಳ ಮಾತ್ರ ಬರುತ್ತಿದೆ. ಈಗ ಕೊಡುತ್ತಿರುವ ಸಂಬಳ ಮತ್ತು ಇವರಿಗೆ ಕೊಡುತ್ತಿರುವ ತುಟ್ಟೀ ಭತ್ಯ ಇವುಗಳೆರಡನ್ನೂ ಸ್ವಲ್ಪ ಹೆಚ್ಚು ಕಡಿಮೆ ಮಾಡಿದರೆ ಸರಿಹೋಗಬಹುದು. ಆಗ ತಮಗೆ ಇದರಿಂದ ಒಂದು ಕೋಟಿ ರೂಪಾಯಿಗಳು ಹೆಚ್ಚಾಗಿ ಖರ್ಚಾಗಬಹುದು. ಆದರೆ ಆಗ ಇದಕ್ಕೆ ಸರಿಯಾಗಿ ತಮಗೆ ಈ ತುಟ್ಟಿ ಭತ್ಯದಲ್ಲಿ ಒಂದು ಕೋಟಿ ರೂಪಾಯಿಗಳ ಉಳಿತಾಯವೂ ಆಗುತ್ತದೆ. ಆದರೆ ಈ ಲೆಕ್ಕಗಳನ್ನೆಲ್ಲಾ ನಾನೀಗ ಖಚಿತವಾಗಿ ಗುಣಾಕಾರ ಹಾಕಿ ಹೇಳುತ್ತಿಲ್ಲ. ಒಟ್ಟಿನಲ್ಲಿ ತೆಗೆದುಕೊಂಡರೆ ತಾವು ಈ ದಿವಸ ಈ 22 ರೂಪಾಯಿಗಳ ಸಂಬಳ ಕೊಡುತ್ತಿರುವವರಿಗೆ ಮಾತ್ರ ಸ್ವಲ್ಪ ಜಾಸ್ತಿ ಖರ್ಚಾಗಬಹುದು. ಆದರೆ ಇತ್ತೀಚೆಗೆ ಈ ಸಾವಿರಕ್ಕೆ ಮೇಲ್ಪಟ್ಟು ಸಂಬಳ ಪಡೆಯುತಕ್ಕಂಥವರ ಸಂಖ್ಯೆ ಒಂದು ನೂರಕ್ಕೆ ಸ್ವಲ್ಪ ಜಾಸ್ತಿಯಾಗಿರಬಹುದು. ಮೊದಲು 90 ಜನ ಮಾತ್ರ ಇದ್ದರು. ಈ ಜನರಿಗೆ ಮಾತ್ರ ಇದು ಸ್ವಲ್ಪ ಅಫೆಕ್ಟ್ ಆಗುತ್ತದೆ. ಆದರೆ ಹೀಗೆ ಕಡಮೆ ಸಂಬಳ ತೆಗೆದುಕೊಳ್ಳುತ್ತಿರುವ ನೌಕರರೆಲ್ಲಾ ಸುಮಾರು 1928 ರಿಂದಲೂ ಅಜಿಟೇಟ್ ಮಾಡುತ್ತಲೇ ಬರುತ್ತಿದ್ದಾರೆ. ಅವರು ಅವರಿಗೆ ಈ ಕನಿಷ್ಠ ದರ್ಜೆ ಸಂಬಳ ಅಂದರೂ ಮಾಹೇಯಾನ 40 ರೂಪಾಯಿಗಳಿಗಿಂತಲೂ ಕಡಮೆ ಸಂಬಳವನ್ನು ಯಾರಿಗೂ ಕೊಡಬಾರದೆಂದೂ ಆ ರೀತಿ ಅವರ ಸಂಬಳ ಸಾರಿಗೆಗಳನ್ನು ಜಾಸ್ತಿ ಮಾಡಬೇಕೆಂದೂ ಕೇಳುತ್ತಿದ್ದಾರೆ. ಆದರೆ 1947ರಲ್ಲಿ ಕೆಲವರಿಗೆ ಮಾತ್ರ ಆ ರೀತಿ 40 ರೂಪಾಯಿಗಳ ಮಿನಿಮಂ ಸಂಬಳವನ್ನು ಕೊಟ್ಟರು. ಇನ್ನೂ ಅನೇಕರಿಗೆ ಈ ಗ್ರೇಡ್ ಸಿಕ್ಕಿಲ್ಲ. ನನಗೆ ಇನ್ನೂ ಅನೇಕ ವಿಚಾರಗಳನ್ನು ತಿಳಿಸಬೇಕೆಂಬ ಆಸೆಯಿತ್ತು. ಆದರೆ ಅದಕ್ಕೆಲ್ಲಾ ಕಾಲಾವಕಾಶವಿಲ್ಲದ್ದರಿಂದ ನಾನು ಬೇಗ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ. ನಾನು ಕೇಳತಕ್ಕದ್ದಾದರೂ ಈ ಕೇವಲ ಬಡ ನೌಕರರಾಗಿರತಕ್ಕಂಥವರ ವಿಚಾರದಲ್ಲಿ ತಾವು ನ್ಯಾಯ ದೊರಕಿಸಿ ಕೊಡಿ ಎಂದು ಕೇಳುತ್ತಿದ್ದೇನೇ ಹೊರತು ಮತ್ತೇನೂ ಇಲ್ಲ. ಸರ್ಕಾರದವರಿಗೆ ಮಿತವ್ಯಯ ಮಾಡಲು ಬೇಕಾದಷ್ಟು ಅವಕಾಶವಿರುತ್ತದೆ. ಅನಾವಶ್ಯಕವಾದಂಥ ಕೆಲಸಗಳಿಗೆಲ್ಲಾ ಸರ್ಕಾರದವರು ಲೆಕ್ಕಾಚಾರವಿಲ್ಲದಂತೆ ಹಣವನ್ನು ವೆಚ್ಚ ಮಾಡುತ್ತಿದ್ದಾರೆ. ಈಗ ನಾನು ಕೇಳುತ್ತಿರುವುದು ಈ ಕನಿಷ್ಠ ದರ್ಜೆಯವರಿಗೆ ಸಂಬಳವನ್ನು ಜಾಸ್ತಿ ಕೊಡಿ ಎಂದು ಈ ದಿವಸ ಯಾರಿಗೇ ಆಗಲಿ ತಿಂಗಳಿಗೆ 100 ರೂಪಾಯಿಗಳಿಗೆ ಕಡಿಮೆ ಸಂಬಳವಿದ್ದರೆ ಅವರಿಗೆ ಜೀವನ ನಡೆಸುವುದಕ್ಕಾಗುವುದಿಲ್ಲ. ಆದುದರಿಂದ ಸರ್ಕಾರದವರು ನಾನು ತಂದಿರತಕ್ಕಂಥ ಈ ನಿರ್ಣಯವನ್ನು ಒಪ್ಪಿಕೊಂಡು ಈ ಕಡಮೆ ದರ್ಜೆ ನೌಕರರ ಸಂಬಳ ಸಾರಿಗೆಗಳನ್ನು ಅವರ ಜೀವನೋಪಾಯಕ್ಕೆ ಅನುಕೂಲವಾಗುವಂತೆ ಹೆಚ್ಚಿಸಬೇಕೆಂದು ಕೇಳಿಕೊಳ್ಳುತ್ತೇನೆ. ತಾವು ಎಷ್ಟೋ ಅನವಶ್ಯಕವಾದ ಬಾಬುಗಳಲ್ಲಿ ಅನ್ಯಾಯವಾಗಿ ಹಣವನ್ನು ಖರ್ಚು ಮಾಡುತ್ತಿದ್ದೀರಿ. ಈ ದಿವಸ ಸರ್ಕಾರದವರು ನಮ್ಮನ್ನು ಅವರ ನಂಬಿಕೆಗೆ ತೆಗೆದುಕೊಂಡರೆ ಅವರಿಗೆ ಈ ಹಣವನ್ನು ಹೇಗೆ ಉಳಿಸಬಹುದೆಂಬುದನ್ನು ನಾವು ಅವರಿಗೆ ತೋರಿಸಿಕೊಡಲು ಸಿದ್ಧವಾಗಿದ್ದೇವೆ. ಆದರೆ ತಾವು ಕಳೆದ ಎರಡು—ಮೂರು ವರ್ಷಗಳಿಂದಲೂ ಖೋತಾ ಬಡ್ಜೆಟ್ಟಾಗುತ್ತಿದೆ ಎಂದು ಹೇಳಿ, ಈ ಬಡವರ ಹೊಟ್ಟೆಯಮೇಲೆ ಹೊಡೆಯುವುದು ತಮಗೆ ಖಂಡಿತ ಧರ್ಮವಲ್ಲ ಎಂದು ಹೇಳುತ್ತೇನೆ. ತಾವು ಈ ದಿವಸ ಅವರಿಗೆ ಯಾವಾಗ ಹೊಟ್ಟೆ ತುಂಬ ಕೊಡುತ್ತಿಲ್ಲವೋ ಅವರು ಕೈತುಂಬ ಕೆಲಸ ಮಾಡುತ್ತಿಲ್ಲ. ಈ ದಿವಸ ಸರ್ಕಾರದವರು ನಮ್ಮನ್ನು ಅವರ ವಿಶ್ವಾಸಕ್ಕೆ ತೆಗೆದುಕೊಂಡರೆ, ಹಾಗೊಂದು ಅವಕಾಶವನ್ನು ಅವರು ನಮಗೆ ಕಲ್ಪಿಸಿ ಕೊಡುವುದಾದರೆ, ನಾವು ಈಗ ಇರತಕ್ಕ ಬಡ್ಜೆಟ್ಟಿನಲ್ಲೇ ಇದಕ್ಕೆ ಅವಕಾಶವಿದೆಯೆಂಬುದನ್ನು ತೋರಿಸಿಕೊಡಲು ತಯಾರಿರುತ್ತೇವೆಂದು ಹೇಳಿ ಈ ನಿರ್ಣಯಕ್ಕೆ ಈ ಮಾನ್ಯ ಸಭೆಯವರೆಲ್ಲರೂ

(ಶ್ರೀ ಬಿ. ಹುಚ್ಚೇಗೌಡ.)

ತಮ್ಮ ಬೆಂಬಲ ನೀಡಬೇಕೆಂದು ಹೇಳಿ ನಾನು ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ವಾಮಿ, ಈಗ ನಾನು ಮಂಡಿಸತಕ್ಕಂಥ ನನ್ನ ನಿರ್ಣಯದಲ್ಲಿ ಈಗ ನಮ್ಮ ಸಂಸ್ಥಾನದಲ್ಲಿರುವ ನೌಕರರುಗಳನ್ನೆಲ್ಲಾ ಸಾಮಾನ್ಯವಾಗಿ ಮೂರು ವಿಭಾಗಗಳನ್ನಾಗಿ ಮಾಡಿ ನನ್ನ ನಿರ್ಣಯದಲ್ಲಿ ಈ ಉನ್ನತಾಧಿಕಾರಿಗಳ ಸಂಬಳದ ಮಟ್ಟ ಅಂದರೆ ಅವರ ಸಂಬಳದ ಪರಮಾವಧಿ ಒಂದು ಸಾವಿರಕ್ಕಿಂತ ಮೇಲೇರತಕ್ಕದ್ದಲ್ಲ ಎನ್ನುವುದು ಒಂದು ಭಾಗ. ಇದರಲ್ಲಿ ಈ ಐ. ಎ. ಎಸ್. ಮತ್ತು ಐ. ಪಿ. ಎಸ್. ಅಧಿಕಾರಿಗಳಿಗೂ ಕೂಡ ಸೇರಿರುತ್ತಾರೆ. ಇದ್ಧರಂತೆಯೇ ಇನ್ನು ಈ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರಿಗೂ ಮತ್ತು ಜುಡಿಷಿಯಲ್ ಆಫೀಸರುಗಳಿಗೂ ಕೂಡ ಪರಮಾವಧಿ ಸಂಬಳ ಒಂದು ಸಾವಿರಕ್ಕಿಂತ ಜಾಸ್ತಿ ಇರಕೂಡದು, ಹೀಗೆ ಈ ಉನ್ನತಾಧಿಕಾರಿಗಳ ಸಂಬಳವನ್ನು ಸಾವಿರ ರೂಪಾಯಿಗಳಿಗೆ ಇಳಿಸುವುದರಿಂದ ಉಳಿತಾಯವಾಗತಕ್ಕಂಥ ಹಣವನ್ನು ಕೆಳದರ್ಜೆ ನೌಕರರಿಗೆ ಉಪಯೋಗಿಸತಕ್ಕದ್ದು ಎನ್ನುವುದು ಎರಡನೇ ಭಾಗ. ಇನ್ನು ಮೂರನೆಯ ವಿಚಾರ ಎಂದರೆ ಈ ಬಗ್ಗೆ ನಮ್ಮ ಮೈಸೂರು ಸರ್ಕಾರದವರು ಕೇಂದ್ರ ಸರ್ಕಾರದೊಡನೆ ವ್ಯವಹಾರ ನಡೆಸಿ ಈ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಎನ್ನತಕ್ಕಂಥದು ಈ ಮೂರು ಮೂಲ ಅಭಿಪ್ರಾಯಗಳನ್ನು ನಾನು ಈ ನನ್ನ ನಿರ್ಣಯದಲ್ಲಿ ಅಡಕ ಮಾಡಿದ್ದೇನೆ. ಈ ಇಂಟೆಗ್ರೇಷನ್ ಅಫ್ ಸರ್ವಿಸಸ್ ಆಗುವುದಕ್ಕೆ ಮುನ್ನ ನಮ್ಮ ಸಂಸ್ಥಾನದಲ್ಲಿ ಗೆಜೆಟೆಡ್ ಅಧಿಕಾರಿಗಳ ಪರಮಾವಧಿ ಸಂಬಳ 1,400 ರೂಪಾಯಿ ಗಳಿದ್ದವು. ಈ ಇಂಟೆಗ್ರೇಷನ್ ಆದ ತರುವಾಯ ಐ.ಎ.ಎಸ್ ಕೇಡರ್ ಜಾರಿಗೆ ಬಂದಮೇಲೆ ಇವರ ವೇತನ 1,800 ರೂಪಾಯಿ ಗಳಿಗೇರಿತು. ಆದರೆ ಇತ್ತೀಚೆಗೆ ಈ ಐ.ಎ.ಎಸ್. ಕೇಡರಿನಲ್ಲೇ ಕೆಲವು ಅಧಿಕಾರಿಗಳಿಗೆ ಮಾತ್ರ ಮಾಹೇಯಾನ ರೂ. 2,250 ವೇತನ ಕೊಡಬೇಕೆಂಬ ಸೂಚನೆ ಕೇಂದ್ರದಿಂದ ಬಂದಿರುತ್ತೆಂದು ಕೇಳುತ್ತೇನೆ. ಹೀಗೆ ಈ ಅಧಿಕ ಪ್ರಮಾಣದಲ್ಲಿ ಸಂಬಳವನ್ನು ಕೇವಲ ಮೂರು ಹುದ್ದೆಗಳಿಗೆ ಅಂದರೆ ನಮ್ಮ ಸರ್ಕಾರದಲ್ಲಿ ಕೆಲಸ ಮಾಡತಕ್ಕ ಚೀಫ್ ಸೆಕ್ರೆಟರಿ, ರೆವಿನ್ಯೂ ಕಮಿಷನರ್ ಮತ್ತು ಫೈನಾನ್ಷಿಯಲ್ ಸೆಕ್ರೆಟರಿಗಳಿಗೆ ಕೊಡಬೇಕೆಂಬ ಸೂಚನೆ ಬಂದಿದೆಯೆಂದು ನನಗೆ ತಿಳಿದು ಬಂದಿದೆ. ಹೀಗೆ ನಮ್ಮ ಇಂಡಿಯಾ ದೇಶದಲ್ಲಿ ಉನ್ನತ ಸಂಬಳ ಕೊಡತಕ್ಕಂಥ ನೀತಿ ಯಾವಾಗ ಜಾರಿಗೆ ಬಂದಿತೆಂಬ ಬಗ್ಗೆ ಒಂದೆರಡು ಮಾತುಗಳನ್ನು ಈ ಸಂದರ್ಭದಲ್ಲಿ ಸೂಚಿಸತಕ್ಕದ್ದು ಯುಕ್ತವಾಗಿರುತ್ತೆಂದು ನಾನು ಭಾವಿಸುತ್ತೇನೆ. ನಮ್ಮ ಇಂಡಿಯಾ ದೇಶದಲ್ಲಿ ಬ್ರಿಟಿಷರು 18-19ನೆಯ ಶತಮಾನದಲ್ಲಿ ರಾಜ್ಯಾಡಳಿತ ನಡೆಸುತ್ತಿದ್ದಾಗ ಇಲ್ಲಿ ಇಂಗ್ಲೀಷರಿಗೆ ನೌಕರಿ ಕೊಡಬೇಕಾದ ಅಗತ್ಯ ಬಂತು. ಆಗ ಅವರು ಅವರ ಜನಗಳಿಗೋಸ್ಕರವಾಗಿ ಹೀಗೆ ಭಾರಿ ಸಂಬಳಗಳನ್ನು ಕೊಡುವುದಕ್ಕೆ ಪ್ರಾರಂಭ ಮಾಡಿದರು. ಹೀಗಾಗಿ ಕೇವಲ ಆ ಇಂಗ್ಲೀಷರ ಅನುಕೂಲತೆಗೋಸ್ಕರವಾಗಿ ಈ ಭಾರಿ ಸಂಬಳಗಳನ್ನು ಇಲ್ಲಿ ಕೊಡಬೇಕೆಂದು ಆಗ ಮೊಕರೂರು ಮಾಡಿದರು. ಆದರೆ ಈ ಭಾರಿ ಭಾರಿ ಸಂಬಳ ಸಾರಿಗೆಗಳ ಸ್ಕೇಲುಗಳೆಲ್ಲಾ ಆಗಿದ್ದಂಥ ಆ ಇಂಪೀರಿಯಲ್ ಸರ್ವೀಸಿನವರಿಗೆ ಮಾತ್ರ ಅನ್ವಯಿಸುವಂಥಾದ್ದಾಗಿದ್ದವೇ ಹೊರತು ಈ ಭರತ ಖಂಡದವರಾರಿಗೂ ಇದರಲ್ಲಿ ಅವಕಾಶವೇ ಇರಲಿಲ್ಲ. ಈ ದರ್ಜೆಯಲ್ಲಿ ನೌಕರರಿಗೆ ಬರುತ್ತಿದ್ದಂಥ ಇಂಗ್ಲೀಷ್ ಅಧಿಕಾರಿಗಳೆಲ್ಲರೂ ಇಂಗ್ಲೆಂಡಿನಿಂದಲೇ ನೇರವಾಗಿ ಚುನಾಯಿತರಾಗಿ ಇಲ್ಲಿಗೆ ಬರುತ್ತಿದ್ದರು. ಆಗ ಅಂದರೆ ಸುಮಾರು 1886ರಲ್ಲಿ ಭಾರತೀಯರು ಈ ಹುದ್ದೆಗಳಿಗೂ ಕೆಲವರು ಅಜಿಟೇಟ್ ಮಾಡಿದರು. ಆಗ ಒಂದು ಸಮಿತಿಯನ್ನು ಬ್ರಿಟಿಷ್ ಸರ್ಕಾರದವರು ನೇಮಕ ಮಾಡಿದರು. ಆ ಸಮಿತಿಯವರು ಈ ವಿಚಾರದಲ್ಲಿ ಬಹಳ ದೂರ ಹೋಗಲಿಲ್ಲ. ಅವರು ಆಗ್ಗೆ ಈ ಹುದ್ದೆಗಳನ್ನು ಸ್ವಲ್ಪಮಟ್ಟಿಗಾದರೂ ಇಂಡಿಯನ್ನೈಸ್ಡ್ ಮಾಡಿದರೆ ಸಾಕೆಂಬ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಆಗ ಇದ್ದಂಥ ಇಂಪೀರಿಯಲ್ ಸರ್ವೀಸಿನಲ್ಲೇ-ಕೆಲವು ಪ್ರಾವಿನ್ಷಿಯಲ್ ಸಿವಿಲ್ ಸರ್ವೀಸ್ ಸ್ಥಾನಗಳನ್ನು ನೇಮಕ ಮಾಡಿ ಈ ಸಂಬಳದ ದರ್ಜೆಯಲ್ಲಿ ಸ್ವಲ್ಪಮಟ್ಟಿಗೆ ಏರುಪೇರಿದ್ದರೂ ಪರವಾ ಇಲ್ಲ—ಈ ಭಾರತೀಯರಿಗೂ ಸಹ ಈ ಕೆಲವು ಗೌರವ ಸ್ಥಾನಗಳನ್ನು ಕೊಡಬೇಕೆಂಬುದಾಗಿ ಆ ಸಮಿತಿಯವರು ಹೇಳಿದರು. ಆದರೆ ಇದನ್ನೇನೂ ಅವರು ಅಷ್ಟರಮಟ್ಟಿಗೆ ಕಾರ್ಯಗತ ಮಾಡಲಿಲ್ಲ. ಆಗ ಪುನಃ ಈ ಸಂಬಳ ಸಾರಿಗೆಗಳ ತಕರಾರು ಮತ್ತೆ ಪ್ರಾರಂಭವಾಯಿತು. ಪುನಃ 1886ರಲ್ಲಿ ಇಸ್ಲಿಂಗಟನ್ ಅವರ ಅಧ್ಯಕ್ಷತೆಯಲ್ಲಿ ಮತ್ತೊಂದು ಸಮಿತಿಯನ್ನು ನೇಮಕಮಾಡಿ ಈ ನೌಕರರ ವಿಚಾರದಲ್ಲಿ ಎಲ್ಲಾಗಳನ್ನೂ ಕೂಲಂಕಷವಾಗಿ ವಿಮರ್ಶೆಮಾಡಿ ಸರ್ಕಾರಕ್ಕೆ ಒಂದು ವರದಿಯನ್ನು ತಕ್ಷಣ ಒಪ್ಪಿಸಬೇಕೆಂದು ಗೊತ್ತು ಮಾಡಿದರು. ಆ ಕಮಿಷನ್ನಿನವರು ಈ ಉನ್ನತ ಅಧಿಕಾರಿಗಳ ಸಂಬಳ ಸಾರಿಗೆಗೂ ಮತ್ತು ಸಾಮಾನ್ಯ ನೌಕರರ ಸಂಬಳ ಸಾರಿಗೆಗೂ ಇದ್ದಂಥ ಒಂದು ದೊಡ್ಡ ವ್ಯತ್ಯಾಸವನೇನಿತ್ತೋ ಅದನ್ನು ಮಾತ್ರ ಅವರು ಸರಿಪಡಿಸಲು ಯಾವ ಕಾರ್ಯಕ್ರಮವನ್ನೂ ಕೈಗೊಳ್ಳಲಿಲ್ಲ. ಆ ಸಮಿತಿಯವರು ಈ ಉನ್ನತ ದರ್ಜೆಯ ಮತ್ತು ಕೆಳದರ್ಜೆಯ ನೌಕರರ ಬಗ್ಗೆ ಕೆಲವು ಅಂಕಿ ಅಂಶಗಳನ್ನು ಕ್ರೋಢಿಕರಿಸಿ ಅವುಗಳ ಬಗ್ಗೆ ಒಂದು ವರದಿಯನ್ನೊಪ್ಪಿಸಿದರು. ಆದರೆ ಈ ದಿವಸದವರೆಗೂ ಈ ಉನ್ನತ ಅಧಿಕಾರ ಸ್ಥಾನದಲ್ಲಿ ಕೆಲಸ ಮಾಡತಕ್ಕಂಥ ಅಧಿಕಾರಿಗಳು ಕಾಲದ ಪರಿಸ್ಥಿತಿಗನುಗುಣವಾಗಿ ಈ ಸಂಬಳಗಳನ್ನು ಕಡಿಮೆ ಮಾಡಿ ಎಂದು ಹೇಳಿರುವುದಿಲ್ಲ. ಆದರೆ ಕೇಳದರ್ಜೆ ನೌಕರರು ಮಾತ್ರ ಆ ಕಮಿಷನ್ ಅವರ ಮುಂದೆ ಹೇಳಿಕೆ ಕೊಡತಕ್ಕಂಥ ಕಾಲದಲ್ಲಿ ಈ ಅನಾವಶ್ಯಕವಾಗಿ ಸಂಬಳ ಕೊಡತಕ್ಕದ್ದನ್ನು ಕಡಿಮೆ ಮಾಡಿ ಎಂದು ಖಚಿತವಾಗಿ ಹೇಳಿರುತ್ತಾರೆ. ಈ ಸಂಬಳ ಸಾರಿಗೆ ಕೊಡತಕ್ಕ ವಿಚಾರದಲ್ಲಿ ಆ ಸಮಿತಿಯವರು ಏನು ಹೇಳಿದ್ದಾರೆಂಬ ಬಗ್ಗೆ ಒಂದೆರಡು ಅಂಶಗಳನ್ನು ಮಾತ್ರ ನಾನೀಗ ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಗಾಡ್‌ಗಿಲ್ ಸಮಿತಿಯವರು ತಮ್ಮ ವರದಿಯನ್ನು 1931ರಲ್ಲಿ ಸರ್ಕಾರಕ್ಕೆ ಒಪ್ಪಿಸಿರುತ್ತಾರೆ. ಇವರು ಒಪ್ಪಿಸಿರುವ ಆ ವರದಿಯಲ್ಲಿ ಹೀಗೆ ಹೇಳಿದ್ದಾರೆ:

Report of the Central Pay Commission, (page 34.)

"This view was strongly urged by Dr. Gadgil in a pamphlet that he published about 15 years ago. Quoting an observation of Sir William Beveridge that the civil servant "must look upon his

salary as maintenance adequate to the needs of himself and to bring up his family according to the highest standard of education in the country and that is not always the standard of the business world and the profit making world", he maintained that high scales of pay in the Indian public service had been responsible for artificially diverting the attention of our young men from other fields and concentrating it on Government service. An even more serious consequence, according to him, was that the standards and conceptions of Indian officers had become a reflected image of the standards and conceptions of European officials and a large number of educated Indians had developed aspirations and expectations which in the ordinary course were scarcely likely to be attained by most of them. Like many others, he condemned the wide gulf between the earnings of those in the higher ranks and the emoluments of the less fortunate among the public servants in this country."

ಈ ಸಮಿತಿಯವರು ಪ್ರಸ್ತಾಪ ಮಾಡಿರತಕ್ಕ ಅನೇಕ ವಿಷಯಗಳಲ್ಲಿ ಒಂದು ಬಹಳ ಮುಖ್ಯವಾದ ವಿಚಾರವನ್ನು ಅವರು ಪ್ರಸ್ತಾಪಮಾಡಿದ್ದಾರೆ. ಈ ಹೆಚ್ಚಿನ ಸಂಬಳ ಸಾರಿಗೆಗೆ ಜನರ ಮನಸ್ಸು ಯಾವ ರೀತಿ ಓಡುತ್ತಿದೆ ಎನ್ನತಕ್ಕ ಬಗ್ಗೆ ಅವರು ಈ ರೀತಿ ಹೇಳಿದ್ದಾರೆ. ಇದೇ ಬಹಳ ಪ್ರಾಮುಖ್ಯವಾದಂಥ ವಿಚಾರ. ಆ ದಿವಸ ಆ ಇಂಗ್ಲೀಷ್ ಅಧಿಕಾರಿಗಳಿಗೆ ಹೇಗೆ ಎರಡು ಸಾವಿರ ಮೂರು ಸಾವಿರ ರೂಪಾಯಿಗಳ ಸಂಬಳ ಸಾರಿಗೆಗಳನ್ನು ಕೊಡಲಾಗುತ್ತಿತ್ತೋ ಅಷ್ಟೇ ಸಂಬಳವನ್ನು ಈ ದಿವಸ ಈ ಭಾರತೀಯರಿಗೂ ಸಹ ಕೊಡಲೇಬೇಕೆಂಬ ಬಗ್ಗೆ ಈ ಜನರ ಒಂದು ಮನೋಭಿಪ್ರಾಯ ಯಾವರೀತಿ ಓಡುತ್ತಿದೆ ಅಂದರೆ, ಅವರ ಒಂದು ಸುಪೀರಿಯಾರಿಟಿ ಕಾಂಪ್ಲೆಕ್ಸ್ ಅವರ ನೀತಿ, ನಡೆ, ನುಡಿ, ಅವರ ದರ್ಪ, ಧೋರಣೆ ಇತ್ಯಾದಿಗಳೆಲ್ಲಾ ಆ ಬ್ರಿಟಿಷ್ ಅಧಿಕಾರಿಗಳ ಆದರ್ಶದ ಮಟ್ಟಕ್ಕೆ ಏರಬೇಕೆಂಬ ಒಂದು ಚಪಲವನ್ನು ನಮ್ಮ ಅಧಿಕಾರಿಗಳೂ ಕೂಡ ತಮ್ಮ ಮನಸ್ಸಿನಲ್ಲಿಟ್ಟುಕೊಂಡು ತಮ್ಮ ತಮ್ಮಲ್ಲೇ ಒಂದು ಪೈಪೋಟಿಯಿಂದ ನಾವೂ ಸಹ ಅವರಂತೆಯೇ ಆ ಒಂದು ಆದರ್ಶದ ಮಟ್ಟವನ್ನ ಪಡೆಯುತ್ತೇವೆಂದು ಪ್ರಯತ್ನ ಮಾಡಿದರು. ಆ ಪ್ರಯತ್ನಗಳನ್ನೆಲ್ಲಾ ಅನುಷ್ಠಾನಕ್ಕೆ ತರಲು ಪ್ರಯತ್ನ ಪಟ್ಟರು. ಈ ರೀತಿಯಾಗಿ ಈ ನಮ್ಮ ಅಧಿಕಾರಿಗಳೂ ಕೂಡ ಒಂದು ಅಭಿಪ್ರಾಯವನ್ನು ಹೀಗೆ ವ್ಯಕ್ತಪಡಿಸುತ್ತಾ ತಮಗೂ ಆ ಬ್ರಿಟಿಷ್ ಅಧಿಕಾರಿಗಳಿಗೆ ಕೊಟ್ಟಹಾಗೆ ಮೂರು-ನಾಲ್ಕು ಸಾವಿರ ರೂಪಾಯಿಗಳ ಸಂಬಳ ಕೊಡಬೇಕೆಂದು ಒತ್ತಾಯ ಹಾಕಲು ಪ್ರಾರಂಭಿಸಿದರು. ಹೀಗೆ ಮೊದಲು ವಾದ ಮಾಡಲು ಪ್ರಾರಂಭಿಸಿ ನಂತರ ಇತ್ತೀಚೆಗೆ ಹಾಗೆ ಉನ್ನತಮಟ್ಟದಲ್ಲಿ ಸಂಬಳ ಸಾರಿಗೆ ಕೊಡದೆ ಹೋದರೆ ಈ ಉನ್ನತ ಸ್ಥಾನದಲ್ಲಿ ಕೆಲಸ ಮಾಡಲು ಸಾಧ್ಯವೇ ಇಲ್ಲ ಎನ್ನುವ ಮನೋಭಾವ ಅವರಲ್ಲಿ ಹುಟ್ಟುವುದಕ್ಕೆ ಅವಕಾಶವಾಯಿತು. ಈ ದಿವಸ ಈ ಉನ್ನತ ಸ್ಥಾನಗಳಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳು ಈ ಉನ್ನತ ಸ್ಥಾನದಲ್ಲಿ ಕೆಲಸ ಮಾಡುವಾಗ ತಮ್ಮ ಆ ಒಂದು ಇಂಟೆಗ್ರಿಟಿ, ಆನೆಸ್ಟಿ, ಲಾಯಲ್ಟಿ, ಎಫಿಷಿಯೆನ್ಸಿ, ಇತ್ಯಾದಿಗಳನ್ನೆಲ್ಲಾ ಇಟ್ಟುಕೊಂಡು ಕೆಲಸ ಮಾಡಬೇಕಾಗಿದ್ದರೆ ಈ ರೀತಿ ಅಧಿಕ ಪ್ರಮಾಣದಲ್ಲಿ ಸಂಬಳ ಸಾರಿಗೆಗಳನ್ನು ಕೊಡಲೇಬೇಕು, ಇಲ್ಲವಾದರೆ ಅವರು ಟೆಂಪ್ಟೇಷನ್‌ಗೆ ಒಳಗಾಗುತ್ತಾರೆಂದು ಹಾಗೆ ಅವರಿಗೆ ಕೊಡತಕ್ಕ ಸಂಬಳ ಸಾರಿಗೆಗಳನ್ನು ಕಡಿಮೆ ಮಾಡಿದರೆ ಅವರಲ್ಲಿರತಕ್ಕ ದಕ್ಷತೆಯೆಲ್ಲಾ ಹೊರಟುಹೋಗಿಬಿಡುತ್ತದೆಂದೂ, ಆಗ ಪ್ರಭಾವಶಾಲಿಗಳಾರೂ ಈ ನೌಕರಿಗಳಿಗೆ ಬರುವುದೇ ಇಲ್ಲವೆಂದೂ ಈಗ ಹೇಳುತ್ತಿದ್ದಾರೆ. ಆದುದರಿಂದ ಈ ದಿವಸ ಈ ರಾಜ್ಯಾಡಳಿತ ನಡೆಸಲು ಯಥೇಷ್ಟವಾಗಿ ಅವರಿಗೆ ಸಂಬಳ ಸಾರಿಗೆಗಳನ್ನು ಕೊಡಲೇಬೇಕಾಗಿದೆಯೆಂದೂ, ಹಾಗೆ ಕೊಡುವುದಕ್ಕೆ ಒಪ್ಪದಿದ್ದರೆ ಅವರು ಇಲ್ಲಿ ಈ ನೌಕರಿಗಳನ್ನೆಲ್ಲಾ ಬಿಟ್ಟುಬಿಟ್ಟು ಬೇರೆ ಪ್ರಾಂತ್ಯಗಳಲ್ಲಿ ಹೆಚ್ಚಿನ ಸಂಬಳ ಸಾರಿಗೆಗೆ ಪ್ರೈವೇಟ್ ಕೆಲಸಗಳಿಗೆ ಹೊರಟು ಹೋಗುತ್ತಾರೆಂತಲೂ ಕೂಡ ಹೇಳುತ್ತಿದ್ದಾರೆ.

11-30 A.M.

ಅದಕ್ಕೂ ಕೂಡ ಈ ರಿಪೋರ್ಟಿನಲ್ಲಿ ಒಂದು ಅಭಿಪ್ರಾಯವನ್ನು ಸೂಚನೆ ಮಾಡಿದ್ದಾರೆ. ಯಾವಾಗಲೂ ಒಂದು ರಾಜ್ಯಭಾರದ ಆರ್ಥಿಕ ವ್ಯವಸ್ಥೆಯನ್ನು ಬದಲಾಯಿಸಬೇಕಾದ ಪಕ್ಷದಲ್ಲಿ ಅದನ್ನು ಒಂದು ಯಾವುದೋ ರೀತಿಯಲ್ಲಿ ಮಾಡುವುದು ಸಾಧುವಲ್ಲ ಎಂದು ಹೇಳಿದ್ದಾರೆ. ಈ ಬಗ್ಗೆ ಅವರ ಅಭಿಪ್ರಾಯವನ್ನು ಇಲ್ಲಿ ಸೂಚಿಸತಕ್ಕದ್ದು ಸೂಕ್ತ. Page 27 ರಲ್ಲಿ ಈ ರೀತಿ ಹೇಳಿದ್ದಾರೆ.

"Any attempt to remedy social inequalities or to change the pattern of economic distribution must be directly made by the State, by measures that will embrace all classes of subjects. While we do not deny the possible indirect effects of public salaries on private business, it seems to us unfair and undesirable to reduce the salaries of public servants below a certain level while leaving private business alone. The principle of giving to each man according to his needs can be fairly applied only if its counterpart of 'taking from each man according to his means' is also simultaneously enforced."

ಅಂದರೆ ಯಾವ ಒಬ್ಬ ಮನುಷ್ಯನು ಇಷ್ಟೇ ಸಂಬಳ ತೆಗೆದುಕೊಂಡು ಕೆಲಸಮಾಡಬೇಕೆಂದು ಹೇಳುವಾಗ ಬೇರೆ ಸರ್ಕಾರಗಳಲ್ಲಿ ಯಥೇಷ್ಟವಾಗಿ ಹಣ ಕೊಡುವ

(ಶ್ರೀ ಎಚ್. ಎಂ. ಚನ್ನಬಸಪ್ಪ.)

ಜನಗಳು ಇದ್ದರೆ ಅಂತಹ ಹೆಚ್ಚಿಗೆ ಸಂಬಳ ಕೊಡುವುದನ್ನು ತಪ್ಪಿಸಬೇಕೆಂಬುದೇ ನನ್ನ ಅಭಿಪ್ರಾಯವಾಗಿದೆ. ಬುದ್ಧಿವಂತರು ಮತ್ತು ದಕ್ಷರು ಆಗಿದ್ದವರು ಎಲ್ಲಿ ಹೋದರೂ ಇಷ್ಟೇ ಸಂಬಳ ಕೊಡಬೇಕೆಂಬ ಒಂದು ಪರಿಸ್ಥಿತಿ ಏರ್ಪಾಡು ಆದರೆ ಆಗ್ಗೆ ಈ ಸರ್ಕಾರ ತನ್ನ ಆಡಳಿತವನ್ನು ನಡೆಸುವುದಕ್ಕೆ ಯೋಗ್ಯರಾದಂಥ ಜನಗಳನ್ನು ನಿಯಾಮಕ ಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಒಂದು ಸಾವಿರ ರೂಪಾಯಿಗಳ ಮೇಲ್ಪಟ್ಟು ಸಂಬಳ ಇರಕೂಡದು ಎಂದು 'ಹೇಳುವಾಗ ಕೇವಲ ಅಧಿಕಾರಿಗಳ ಸಂಬಳವನ್ನು ಮಾತ್ರ ಕಡಿಮೆ ಮಾಡಬೇಕು' ಬಾಕಿ ಕಡೆ private sectorನಲ್ಲಿ ಎಷ್ಟು ಬೇಕಾದರೂ ಕೊಟ್ಟುಕೊಳ್ಳಲಿ ಎಂದು ಹೇಳುವುದರಲ್ಲಿ ಏನೂ ಅರ್ಥವಿಲ್ಲ. ಮೊನ್ನೆ ತಾನೆ Gold Mining Committee ವರದಿಯನ್ನು ಚರ್ಚೆ ಮಾಡುವಾಗ Covenanted Officers ಎಂದರೆ ಅಲ್ಲಿ Chairman ಮುಂತಾದವರಿಗೆ ಐದು ಸಾವಿರದಿಂದ ಹತ್ತು ಸಾವಿರದವರೆಗೆ ಸಂಬಳ ಕೊಡುವ ಪರಿಸ್ಥಿತಿ ದೇಶದಲ್ಲಿ ಇದೆ. ಇಷ್ಟು ಹಣವನ್ನು ಕೊಡುವ ಶಕ್ತಿ ಅವರಲ್ಲಿದ್ದುದರಿಂದ ಅಧಿಕಾರಿಗಳು ಅಲ್ಲಿಗೆ ಹೋಗುವುದಕ್ಕೆ ಇಷ್ಟಪಡುತ್ತಾ ಇರುವುದು. ಹಿಂದೆ ಬ್ರಿಟಿಷರು ಭಾರತ ದೇಶವು ರಾಜ್ಯಭಾರ ಮಾಡುವುದಕ್ಕೆ ಷುರು ಮಾಡಿದಾಗ Covenanted Officers ಎಂಬ ಹೆಸರು ನಮ್ಮ ದೇಶದಲ್ಲಿ ಬಂತು. ಆ ಹೆಸರು ಇವತ್ತೂ ಕೂಡ ಇದೆಯಲ್ಲಾ ಎಂದು ಪರಿತಪಿಸಬೇಕಾಗಿದೆ. ಈ ಅಧಿಕಾರಿಗಳ ಸಂಬಳವು ಎಷ್ಟು ಇರಬೇಕು ಎಂದು ನಿರ್ಧರ ಮಾಡುವಾಗ ಮುಖ್ಯವಾಗಿ ಗಮನಿಸಬೇಕಾದ ಅಂಶಗಳು ಯಾವುವು ಎಂಬುದನ್ನು ಸ್ವಲ್ಪ ಯೋಚನೆ ಮಾಡಬೇಕು. ಮೊಟ್ಟಮೊದಲನೆಯದಾಗಿ ನಾನು ಈ ಸಭೆಯ ಮನಕ್ಕೆ ತರುವುದು ಏನೆಂದರೆ ಮೈಸೂರು ಸಂಸ್ಥಾನದಲ್ಲಿರತಕ್ಕಂಥ ಉನ್ನತ ಅಧಿಕಾರಿಗಳು ಯಾರು ಯಾರು ಇದ್ದಾರೋ ಅವರು ಇವತ್ತಿನವರೆಗೆ ಒಂದು ಸೇವಾ ಮನೋಭಾವದಿಂದ ಕೆಲಸಮಾಡುತ್ತಾ ಬಂದರೇ ವಿನಾ ಅವರು ಯಥೇಚ್ಛವಾಗಿ ಸಂಬಳ ಸಾರಿಗೆಗಳನ್ನು ಕೊಟ್ಟರೆ ಕೆಲಸ ಮಾಡುತ್ತೇವೆ, ಇಲ್ಲದಿದ್ದರೆ ಮಾಡುವುದಿಲ್ಲವೆಂದು ಇದುವರೆಗೂ ಯಾರೂ ಹೇಳಿಲ್ಲ. ಇದು ವಾಸ್ತವಿಕವಾಗಿ ಅಭಿನಂದನೀಯವಾದ ವಿಷಯ. ಇಂತಹ ದೇಶದಲ್ಲಿ ಒಂದು ಹೊಸ ಪರಿಸ್ಥಿತಿಯನ್ನು ರೂಪುಮಾಡಬೇಕೆಂದು ನಮ್ಮ ಸಭೆಯ ಮುಂದೆ ಒಂದು ನಿರ್ಣಯ ತಂದಿರುವಾಗ ನಮ್ಮ ಸಂಸ್ಥಾನದಲ್ಲಿ ಬುದ್ಧಿವಂತರೂ, ಶಕ್ತರೂ, ದಕ್ಷರೂ, ಆಗಿರತಕ್ಕ ಅಧಿಕಾರಿಗಳು ಈ ವಿಷಯದಲ್ಲಿ ವಿರೋಧ ಕನಸಿನಲ್ಲಾಗಲೀ ಮನಸ್ಸಿನಲ್ಲಾಗಲೀ ತೋರಿಸುತ್ತಾರೆಂದು ನಾನು ನಂಬಿಲ್ಲ. ಮೈಸೂರು ದೇಶದ ಅಧಿಕಾರಿಗಳು ಇಡೀ ಭರತ ಖಂಡಕ್ಕೆ ಆದರ್ಶವಾಗಿ ಬಂದಿದ್ದಾರೆ. ಇನ್ನು ಮುಂದೆಯೂ ಭರತ ಖಂಡಕ್ಕೆ ಅಷ್ಟೇ ಆದರ್ಶರಾಗಬೇಕು ಎಂದು ನನ್ನ ಆಶೆ. ಈ ಸಭೆ ಮುಂದೆ ಕೆಲಸ ಮಾಡುವುದಕ್ಕೆ ಮುಂಚೆ ಮತ್ತು ಕೇಂದ್ರ ಸರ್ಕಾರದವರು ಈ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಕೊಡುವುದಕ್ಕೆ ಮುಂಚೆ ಸೇವಾಮನೋಭಾವನೆಯಿಂದ ದೇಶದ ಕೆಲಸಗಳನ್ನು ಮಾಡಿ ಅವರು ಧನ್ಯರಾಗಬೇಕು ಮತ್ತು ಉದಾರ ಮನಸನ್ನು ತೋರಿಸಬೇಕೆಂದು ನಾನು ಕೋರುತ್ತೇನೆ. ಇದರಲ್ಲಿ ಮುಖ್ಯವಾಗಿ ಗಮನಿಸಬೇಕಾದದ್ದು ಸಾಮಾಜಿಕ ನ್ಯಾಯ ದೊರಕಬೇಕು. ಆಡಳಿತದಲ್ಲಿ ಭದ್ರತೆ ದೊರಕಬೇಕು, ಮತ್ತು ಅಧಿಕಾರಕ್ಕೆ ಬರತಕ್ಕ ಜನರ ಯೋಗ್ಯತೆ ಮತ್ತು ಅವಶ್ಯಕತೆ ಇವೆರಡನ್ನೂ ಸಹ ಗಮನದಲ್ಲಿಟ್ಟುಕೊಂಡು ನಾವು ಸಂಬಳವನ್ನು ಮೊಕರರು ಮಾಡಬೇಕು. ಅದಲ್ಲದೆ ಕೆಳದರ್ಜೆ ನೌಕರರಿಗೂ ಮತ್ತು ಮೇಲು ದರ್ಜೆ ನೌಕರರಿಗೂ ಇರುವ ಹೆಚ್ಚಿನ ಅಂತರವನ್ನು ಸಾಧ್ಯವಾದಷ್ಟು ಕಡಿಮೆ ಮಾಡಬೇಕು. ಈಗ ಎಷ್ಟು ಬೇಕಾದರೂ ಒಬ್ಬ ಆಫೀಸರಿಗೆ ಕೊಡೋಣ. ಆದರೆ ಸಂಬಳ ಸಾರಿಗೆಯನ್ನು ಬಹಳ ಹೆಚ್ಚಿಗೆ ಮಾಡಬೇಕಾದ ಅವಕಾಶವಿಲ್ಲ, ಆದ್ದರಿಂದ ಈಗ ಸಂಬಳಗಳಲ್ಲಿರುವ ಅಂತರವನ್ನು ಕಡಿಮೆ ಮಾಡಬೇಕು ಎಂದು ಹೇಳುತ್ತೇನೆ. ಯಥೇಷ್ಟವಾಗಿ ಸಂಬಳ ಸಾರಿಗೆಗಳನ್ನು ಆಫೀಸರುಗಳಿಗೆ ಕೊಟ್ಟ ಮಾತ್ರದಿಂದಲೇ corruption ಕಡಿಮೆಯಾಗುತ್ತದೆ, ದೇಶದಲ್ಲಿ ದಕ್ಷತೆ ಹೆಚ್ಚುತ್ತದೆ ಎನ್ನುವ ವಾದವನ್ನು ನಾನು ಒಪ್ಪುವವನಾಗಿಲ್ಲ. ಎಷ್ಟೋ ಅಧಿಕಾರಿಗಳು ಸಣ್ಣಪುಟ್ಟ ಸಂಬಳಗಳನು ತೆಗೆದುಕೊಂಡು ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ಅಧಿಕಾರಿಗಳಲ್ಲಿ ಮೇಲೆ ಹೇಳಿದಂತೆ ಮನೋಭಾವನೆ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಇದರ ಜೊತೆಗೆ ಜನಜೀವನದ ಅವಶ್ಯಕತೆ, ಧರ್ಮ, ನೀತಿ ಇವುಗಳೆಲ್ಲವನ್ನೂ ಗಮನದಲ್ಲಿಟ್ಟುಕೊಂಡು, ಈ ಅಧಿಕಾರಿಗಳಿಗೆ ಎಷ್ಟು ಸಂಬಳ ಅವಶ್ಯಕವೋ ಅಷ್ಟನ್ನ ಖಂಡಿತವಾಗಿಯೂ ಕೊಡೋಣ, ನಮ್ಮ ದೇಶದ ಕೆಲಸಗಳನ್ನು ಮಾಡುವಾಗ, ಅವರಿಗೆ ನೋವು ಉಂಟುಮಾಡುವುದು ನೀತಿಯಲ್ಲ. ಧರ್ಮವೂ ಅಲ್ಲ. ಅವರು ರಾಜ್ಯದ ಕೆಲಸವನ್ನು ಯಶಸ್ವಿಯಾಗಿ ದಕ್ಷತೆಯಿಂದ ನಿರ್ವಹಿಸುವುದಕ್ಕೆ ಎಷ್ಟು ಅವಶ್ಯಕವಾದ ಸಂಬಳವನ್ನು ಕೊಡಬೇಕೋ ಅಷ್ಟನ್ನೂ ಕೊಡೋಣ. ಆದರೆ ಅನಾವಶ್ಯಕವಾದುದನ್ನು ಕೊಡಬೇಕು ಎನ್ನುವ ವಾದವನ್ನು ಅವರು ಒಪ್ಪುವುದಿಲ್ಲ. ನಾನೂ ಒಪ್ಪುವುದಿಲ್ಲ. ಈ ಸಭೆ ಮುಂದೆ ಇರತಕ್ಕ ನಿರ್ಣಯದ ಪ್ರಕಾರ ಇವತ್ತಿನ ಪರಿಸ್ಥಿತಿಗೆ ಒಂದು ಸಹಸ್ರ ರೂಪಾಯಿಗಳನ್ನು ಒಬ್ಬ ಮನುಷ್ಯನಿಗೆ ಕೊಟ್ಟರೆ ಅದು ಒಂದು ಸೇವಾ ಮನೋಭಾವನೆಯಿಂದ ಕೆಲಸ ಮಾಡತಕ್ಕವನಿಗೆ ಕೊಡುವ ಸಂಬಳ. ಆತನು ಆ ಸಂಬಳ ತನ್ನ ಉದರ ಪೋಷಣೆಗಾಗಿ ಮಾತ್ರ ಕೊಟ್ಟಿರುವುದು. ತಾನು ಮಾಡತಕ್ಕ ಸೇವೆ ರಾಷ್ಟ್ರಾಭಿವೃದ್ಧಿಗಾಗಿ ಎಂದು ತಿಳಿದುಕೊಂಡು ಆತನು ದುಡಿದ ಪಕ್ಷದಲ್ಲಿ ನನ್ನ ಅಭಿಪ್ರಾಯದಲ್ಲಿ ಮತ್ತು ಈ ಮಾನ್ಯ ಸಭೆಯ ಅಭಿಪ್ರಾಯದಲ್ಲಿ ಅಷ್ಟು ಸಂಬಳ ಕೊಟ್ಟರೆ ಸಾಕು ಎಂದು ನನಗನ್ನಿಸುತ್ತದೆ.

Mr. SPEAKER.—Does the Hon'ble Member want this to be merely discussed?

Sri H. M. CHANNABASAPPA.—I would like to place a few figures for the benefit of this House and to facilitate future discussion. ನಮ್ಮ ದೇಶದಲ್ಲಿ I.A.S. ಸ್ಕೀಮನ್ನು ಒಪ್ಪಿಕೊಂಡ ದಿವಸ ಆ ದರ್ಜೆಯ ಪರಮಾವಧಿ ಸಂಬಳ 1,800 ರೂಪಾಯಿ ಇತ್ತು. I. A. S. ಸ್ಕೀಮನ್ನು ಒಪ್ಪಿಕೊಂಡ ದಿವಸ ಉದ್ವೇಗ ಪೂರಿತವಾದ ಭಾಷಣಗಳು ನಡೆದವು ಆಗ ನಮ್ಮ ಮುಖಂಡರಾದಂಥ ಶ್ರೀ ಕೆ. ಸಿ. ರೆಡ್ಡಿಯವರು ಬಹಳ ಉಜ್ವಲವಾದ ಭಾಷಣವನ್ನು ಮಾಡಿ ದೇಶಕ್ಕೆ ಇದು ಅವಶ್ಯಕವೆಂದು ಹೇಳಿದರು. ಶ್ರೀ ಭೀಮಪ್ಪ ನಾಯಕರು ನಿರ್ಣಯದ ಮೇಲೆ ಮಾತನಾಡುವಾಗ ದೇಶದ ಹಿತಕ್ಕೆ ಯಾವುದು ಧಕ್ಕೆ ತರುತ್ತದೆಯೋ ಅದನ್ನು ತೆಗೆದುಹಾಕುವುದಕ್ಕೆ ಕೇಂದ್ರ ಸರ್ಕಾರಕ್ಕೆ ಅಧಿಕಾರ ಇದೆ. ಆದ್ದರಿಂದ ಅದನ್ನು ಯೋಚನೆ ಮಾಡಬೇಕಾಗಿಲ್ಲ ಎಂದು ಹೇಳಿದರು. ಆ ಪ್ರಶ್ನೆಯನ್ನು ಏತಕ್ಕೆ ಹೇಳುತ್ತಾ ಇದ್ದೇನೆ ಎಂದರೆ ಈಗ ಆ ಸಮಸ್ಯೆ

ಂದಿದೆ. ಈ ಸಭೆ ಮತ್ತು ಪಾರ್ಲಿಮೆಂಟ್ ಸಭೆ
ಮತ್ತು ಕೇಂದ್ರ ಸರ್ಕಾರ ಈ ಹೊಸ ಪರಿಸ್ಥಿತಿ
ಯಲ್ಲಿ ಒದಗಿರತಕ್ಕಂಥ ಸಮಸ್ಯೆಯನ್ನು ಹೊಸದಾಗಿ
ನೋಡಬೇಕಾಗಿದೆ. ನಾವು ಸಮತಾ ವಾದವನ್ನು
ಒಪ್ಪಿ ದೇಶಾದ್ಯಂತ ಒಬ್ಬರಿಗೊಬ್ಬರಿಗೆ ಅಂತಸ್ತಿನಲ್ಲಿ
ಇರುವ ವ್ಯತ್ಯಾಸವನ್ನು ಕಡಿಮೆ ಮಾಡಬೇಕೆಂದು
ಹೊರಟಿರುವಾಗ ಈ ಕ್ಷೇತ್ರದಲ್ಲಿ ಸಹಾ ಅದೇ
ರೀತಿ ಕಡಿಮೆ ಮಾಡುವುದು, ನ್ಯಾಯವೂ, ಸೂಕ್ತವೂ
ಆಗಿದೆ. ಈ ಸಂಬಂಧದಲ್ಲಿ ಒಂದು ಮಾತು ಹೇಳ
ಬೇಕಾಗಿದೆ. I.A.S. ಆಫೀಸರಿಗೆ ಯಾವ retrospec-
tive effect ಸಂಬಳ ಸಾರಿಗೆಗಳನ್ನು ಮೊಕರೂರು
ಗಮಾಡಿಕೊಟ್ಟಾಗ ಒಬ್ಬೊಬ್ಬರಿಗೆ 1,500 ರೂಪಾಯಿ
ಯಿಂದ ಹಿಡಿದು ಹನ್ನೆರಡು ಸಾವಿರ ರೂಪಾ
ಯಿಗಳವರೆಗೆ ಕೊಟ್ಟಿರತಕ್ಕ ಎಲ್ಲಾ ಒಟ್ಟು ಮೊಬಲ
ಗನ್ನೂ ಸೇರಿಸಿದರೆ ಸುಮಾರು $1\frac{3}{4}$ ಲಕ್ಷ ರೂಪಾಯಿ
ಗಳನ್ನು ಏಕಾ ಏಕಿ ಖಜಾನೆಯಿಂದ ಕೊಟ್ಟಹಾಗಾಗಿದೆ.
ನಾನು ಈ ದಿವಸ ಪ್ರಶ್ನೆ ಮಾಡುತ್ತೇನೆ ಆ ಸಂಬಳ
ಗಳನ್ನು ಕೊಟ್ಟಿದ್ದರಿಂದ ಅವರಲ್ಲಿ ಏನಾದರೂ ದಕ್ಷತೆ
ಹೆಚ್ಚಿತೇ ! ಸತ್ಯಸಂಧತೆ ಹೆಚ್ಚಿತೇ ! ದೇಶದಲ್ಲಿ ಅಸಾ
ಧಾರಣ ಕೆಲಸ ಮಾಡಿದರೇ ? ಎಂದು. ಅನೇಕರಿಗೆ
ಹಣ ಬಂದೇ ಬಂತು. ಕೆಲವರಿಗೆ ಈ ಹಣದಿಂದ
ಏನು ಮಾಡಬೇಕು ಎಂದು ಯೋಚನೆ ಹಿಡಿಯಿತು.
ಈ ರೀತಿ ಮಾಡುವುದರಲ್ಲಿಯಾವ ನೀತಿ ಇದೆ,
ಯಾವ ಧರ್ಮ ಇದೆಯೆಂದು ಕೇಳುತ್ತೇನೆ. ಸಾವಿರದ
ಎಂಟುನೂರು ರೂಪಾಯಿಗಳಿರುವಾಗ ಏಕಾಏಕಿ
2,500 ರೂಪಾಯಿಗಳನ್ನು ಕೊಡಬೇಕು ಎಂದು
ಕೇಂದ್ರ ಸರ್ಕಾರದವರು ಸಲಹೆ ಮಾಡಿರುವಾಗ
ನಾಳೆ ಅವರಿಗೆ 2,500 ರೂಪಾಯಿಗಳನ್ನು
ಕೊಟ್ಟರೆ ಅವರಲ್ಲಿ ಏಕಾ ಏಕಿ ದಕ್ಷತೆ ಹೆಚ್ಚುವುದಿಲ್ಲ,
ಸತ್ಯಸಂಧತೆ ಹೆಚ್ಚುವುದಿಲ್ಲ. ಅವರಲ್ಲಿ ಇದ್ದುದು ಇದ್ದೇ
ಇರುತ್ತದೆ. ಆದ್ದರಿಂದ ಈ ರೀತಿ ಅವರಿಗೆ 2,500
ರೂಪಾಯಿಗಳ ಸಂಬಳ ನಿರ್ಧರಮಾಡುವುದರಲ್ಲ ಅರ್ಥ
ವಿಲ್ಲ. ಈಗ ನಮ್ಮ ಸಂಸ್ಥಾನದಲ್ಲಿ ನಲವತ್ತೆಂಟು ಜನ
ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಸಂಬಳ ತೆಗೆದು
ಕೊಳ್ಳುವವರು ಇದ್ದಾರೆ. ಇವರ ಜೊತೆಗೆ ಏಳು ಜನ
University ಮತ್ತು Insurance ಇಲಾಖೆಗಳಲ್ಲಿ
ಇದ್ದಾರೆ. ಹೀಗೆ ಒಟ್ಟು ಐವತ್ತೈದು ಜನ ಸಾವಿರ
ರೂಪಾಯಿಗಳಿಗೆ ಮೇಲ್ಪಟ್ಟು ಸಂಬಳ ತೆಗೆದುಕೊಳ್ಳು
ವವರು, ಇದ್ದಾರೆ. ಈ ಒಂದು ಕಾರ್ಯಕ್ರಮದಿಂದ
2,75,000 ರೂಪಾಯಿಗಳು ನಮ್ಮ ಸಂಸ್ಥಾನಕ್ಕೆ
ಉಳಿತಾಯವಾಗುತ್ತದೆ. ಇದನ್ನು ಹೇಳುವಾಗ
ಒಂದು ಅಂಶವನ್ನು ಸಭೆಯ ಗಮನಕ್ಕೆ ತರಬೇಕೆಂದು
ಆಶಿಸುತ್ತೇನೆ. ನಾನು ಈ ನಿರ್ಣಯ ತಂದಿರುವುದು
ಇದರಿಂದ ಒಂದು ಮಹತ್ತರ ಉಳಿತಾಯವಾಗುತ್ತದೆ,
ಹಾಗೆ ಉಳಿತಾಯವಾದ ಹಣವನ್ನು ಬೇರೆ ಕೆಲಸಗಳಿಗೆ
ಉಪಯೋಗಿಸಿ ಅದರಿಂದ ಒಳ್ಳೆಯ ಪ್ರಯೋಜನ
ಪಡೆಯಬಹುದು ಎಂಬ ಉದ್ದೇಶದಿಂದ ಅಲ್ಲ. ಈಗ
ದೇಶದಲ್ಲಿರತಕ್ಕ ಜನರ ಮನೋಭಾವನೆ ಬದಲಾವಣೆ
ಆಗಬೇಕು, ನಮ್ಮ ದೃಷ್ಟಿಕೋಣ ಬದಲಾವಣೆಯಾಗ
ಬೇಕು, ಇಂತಹ ಒಂದು ಸುಯೋಗವನ್ನು ನಮ್ಮ
ಅಧಿಕಾರಿಗಳು ಪಡೆದು ಅವರ maintenanceಗೆ
ಎಷ್ಟು ಬೇಕೋ ಅಷ್ಟನ್ನು ಮಾತ್ರ ತೆಗೆದುಕೊಂಡು
ಕೆಲಸ ಮಾಡತಕ್ಕ ಒಂದು ಸೇವಾ ತತ್ಪರತೆಯು ಅವರಲ್ಲಿ
ಉತ್ಪನ್ನವಾಗುವಂತೆ ಮಾಡಿ ಕೆಳದರ್ಜೆ ಮತ್ತು
ಮೇಲುದರ್ಜೆ ಅಧಿಕಾರಿಗಳಲ್ಲಿ ಇರುವ ವಿಪರೀತ
ಅಂತರವು ಕಡಿಮೆಯಾಗಲಿ ಎನ್ನುವ ದೃಷ್ಟಿಯಿಂದ
ಇದನ್ನು ತಂದಿದ್ದೇನೆ. ಮೇಲುದರ್ಜೆ ಅಧಿಕಾರಿ
ಗಳು ಎರಡು ಸಾವಿರದಿಂದ ಮೂರು ಸಾವಿರ
ರೂಪಾಯಿಗಳವರೆಗೆ ಸಂಬಳ ತೆಗೆದುಕೊಳ್ಳುವುದನ್ನು
ನೋಡಿ ಇದೇ ರೀತಿ ಮನಸ್ಸಿನಲ್ಲಿ ಒಂದು ಉದ್ವೇಗ
ಆಗುವ ಸನ್ನಿವೇಶ ಹೋಗಬೇಕು ಎನ್ನುವ ದೃಷ್ಟಿ
ಯಿಂದ ನಾನು ಈ ನಿರ್ಣಯವನ್ನು ತಂದಿದ್ದೇನೆ.

ಶ್ರೀ ಹುಚ್ಚೇಗೌಡರು ಮಾತನಾಡುವಾಗ non-
gazetted officerಗಳಿಗೆ ಐವತ್ತು ರೂಪಾಯಿ
basic pay ಮಾಡಬೇಕು ಎಂದು ಹೇಳಿದರು. ಈಗ
100,764 ಜನ non-gazetted officers ಇದ್ದಾರೆ.
ಇದರಲ್ಲಿ menials 10,000 ಜನ ಇದ್ದಾರೆ. ಇವರಿ
ಗಾಗಿ 764 ಲಕ್ಷ ರೂಪಾಯಿಗಳನ್ನು ಸರ್ಕಾರದವರು
ಖರ್ಚುಮಾಡುತ್ತಿದ್ದಾರೆ. Basic salaryಯನ್ನು
ಐವತ್ತು ರೂಪಾಯಿಗಳಿಗೆ fix ಮಾಡಬೇಕು ಎಂದು
ಹೇಳುವಾಗ financial commitment ಎಷ್ಟಾಗ
ಬಹುದೆಂಬುದನ್ನು ನೋಡಬೇಕು. ಇದನ್ನು ನಾನು
ಈ ಸಭೆ ಗಮನಕ್ಕೆ ತರಲಿಚ್ಛಿಸುತ್ತೇನೆ. ಒಂದು ವೇಳೆ
basic salary ಐವತ್ತು ರೂಪಾಯಿ ಆಗಿ ಅದರ
ಜೊತೆಗೆ ಈಗ ಕೊಡುತ್ತಾ ಇರುವ ತುಟ್ಟಿ ಭತ್ಯವನ್ನು
ಅವರಿಗೆ ಕೊಡಬೇಕು ಎಂದು ನಮ್ಮ ಅಭಿಪ್ರಾಯ
ವಿದ್ದರೆ ಆಗ್ಗೆ ನಮ್ಮ ಸಂಸ್ಥಾನಕ್ಕೆ ಎಪ್ಪತ್ತೈದು ಲಕ್ಷ
ರೂಪಾಯಿಗಳು ಪ್ರತಿ ವರ್ಷವೂ ಖರ್ಚಾಗುತ್ತದೆ.
ತುಟ್ಟಿ ಭತ್ಯವನ್ನು merge ಮಾಡಿ ಯಾರಿಗೂ ಐವತ್ತು
ರೂಪಾಯಿಗಳಿಗೆ ಕಡಿಮೆ ಸಂಬಳ ಇರಕೂಡದು ಎಂದು
ನಿರ್ಧಾರ ಮಾಡುವುದಾದರೆ ಆಗ್ಗೆ ಮೂವತ್ತು ಲಕ್ಷ
ರೂಪಾಯಿಗಳು ಸಾಕು. ನಮ್ಮ ಮುಂದೆ ಇರುವ
ಅಂಕಿ ಅಂಶಗಳ ಆಧಾರದ ಮೇಲೆ ಇದನ್ನು ತಮಗೆ
ತಿಳಿಸುತ್ತಿದ್ದೇನೆಯೇ ಹೊರತು ಅಂದಾಜಿನ ಮೇಲೆ
ಹೇಳುತ್ತಾ ಇಲ್ಲ. ಈ ಸಂದರ್ಭದಲ್ಲಿ ಒಂದು ಗಮ
ನಾರ್ಹವಾದ ವಿಷಯವನ್ನು ಸಭೆಯ ಗಮನಕ್ಕೆ ತರ
ಬೇಕೆಂದು ಇದ್ದೇನೆ. ನಮ್ಮ ಕಾನೂನುಗಳ ಪ್ರಕಾರ
ಅಧಿಕಾರಿಗಳಿಗೆ ಎಷ್ಟೇ ಸಂಬಳ ಬರಲಿ ಅವರಿಗೆ
pension ಕೊಡುವುದು ಆರನೂರು ರೂಪಾಯಿಗಳು.
ಈ ತರಹ ಕಾನೂನು ಇದ್ದಾಗ್ಯೂ ಈಗ ಮೂರು ಜನ
retired officerಗಳಿಗೆ 2,700 ರೂಪಾಯಿಗಳ
ಪೆನ್‌ಷನ್ನನ್ನು ಕೊಡುತ್ತಿದ್ದೇವೆ. ಯಾವ ನೀತಿಗೆ
ಅನುಗುಣವಾಗಿ ಹೀಗೆ ಕೊಡುತ್ತಿದ್ದಾರೆ ಎಂಬುದನ್ನು
ನಾನು ತಿಳಿಯಲು ಅನರ್ಹನಾಗಿದ್ದೇನೆ. ಒಂದು
ವೇಳೆ ಯಾರಾದರೂ ವಿಶೇಷ ರೀತ್ಯ ಸೇವೆಯನ್ನು
ದೇಶಕ್ಕೆ ಮಾಡಿದರೆ ಮತ್ತು ಅವರು ಖಂಡಿತವಾಗಿ
ಬಡವರು ಆಗಿದ್ದ ಪಕ್ಷದಲ್ಲಿ ಅವರು ತೃಪ್ತಿಯಿಂದ
ಜೀವನ ಮಾಡಲಿ ಎಂದು ಈ ರೀತಿ ಕೊಡುವುದು
ನ್ಯಾಯ. ಆದರೆ ಈಗ ನಾವು ಕೊಡುತ್ತಾ ಇರುವ
ಜನರು millionaires, multi-millionaires
ಆಗಿದ್ದಾರೆ. ಅವರಿಗೆ ವಿಶೇಷ ರೀತಿಯಲ್ಲಿ ಎರಡು
ಸಾವಿರ ರೂಪಾಯಿಗಳ ಜೊತೆಗೆ ಐದು ಜನ ಜವಾನ
ರನ್ನೂ ಕೊಟ್ಟು ಒಬ್ಬೊಬ್ಬರಿಗೆ 26,736 ರೂಪಾಯಿ
ಗಳನ್ನು ಖರ್ಚುಮಾಡುತ್ತಿದ್ದೇವೆ. ಅವರಿಗೆ 7,300
ರೂಪಾಯಿಗಳನ್ನು ಕೊಟ್ಟಿರುವುದೇ ಸಾಕು. 17,700
ರೂಪಾಯಿಗಳನ್ನು ಒಬ್ಬರಿಗೂ ಮತ್ತು 17,700
ರೂಪಾಯಿಗಳನ್ನು ಇನ್ನೊಬ್ಬರಿಗೂ ಕೊಡುತ್ತಿದ್ದೇವೆ.
ಇವರಿಗೆಲ್ಲಾ ಕಾನೂನು ಪ್ರಕಾರ ಪೆನ್‌ಷನ್ ಕೊಟ್ಟರೆ
ನಲವತ್ತು ಸಾವಿರ ರೂಪಾಯಿಗಳು ದೇಶಕ್ಕೆ ಉಳಿಯು
ತ್ತದೆ. ಇಂತಹ ಸನ್ನಿವೇಶದಲ್ಲಿ ಇಷ್ಟು ವಿಷಯಗಳ
ನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ನಮ್ಮ ಕೈಯ್ಯಲ್ಲಿ
ಯಾವುದು ಸಾಧ್ಯವೋ, ಈ ಸಭೆಯ ಅಧಿಕಾರಕ್ಕೆ
ಯಾವ ಯಾವ ವಿಷಯ ಒಳಪಟ್ಟಿದೆಯೋ ಆ ವಿಚಾರ
ದಲ್ಲಾದರೂ ನಾವು ಸಮಾಜಕ್ಕೆ ನ್ಯಾಯವನ್ನು ದೊರ
ಕಿಸದೆ ಹೋದ ಪಕ್ಷದಲ್ಲಿ ಖಂಡಿತವಾಗಿ ನಾವು ತಪ್ಪು
ಮಾಡಿದಂತಾಗುತ್ತದೆ.

(ಶ್ರೀ ಎಚ್. ಎಂ. ಚನ್ನಬಸಪ್ಪ.)

ಆದ್ದರಿಂದ, ನಾನು ಮೊದಲೇ ಹೇಳಿದಂತೆ, ಶ್ರೀ ಹುಚ್ಚೇಗೌಡರ ನಿರ್ಣಯವನ್ನು ನಾವು ಒಪ್ಪುವುದಾದರೆ 74 ಲಕ್ಷ ರೂಪಾಯಿಗಳು ನಮಗೆ ಖರ್ಚಾಗುತ್ತವೆ. ಅವರು ಹೇಳಿದ್ದು, ಬಡ್ಜೆಟ್ಟು ಖೋತಾ ಆದರೂ ಪರವಾಗಿಲ್ಲ, ಮಾಡಿಬಿಡಿ ಎಂದು. ಕೆಳದರ್ಜೆಯವರಿಗೆ living wage ಕೊಡಬೇಕೆಂಬುದರಲ್ಲಿ ಯಾರದೂ ಭಿನ್ನಾಭಿಪ್ರಾಯವಿಲ್ಲ. ಆದರೆ, ಅದರಂತೆ ಕಾರ್ಯಕ್ರಮ ಕೈಕೊಳ್ಳಬೇಕಾದರೆ ಯಾವ ರೀತಿ ಮಾಡಬೇಕೆಂಬುದನ್ನು ಅವರು ಹೇಳಿದ್ದರೆ ನಾನೂ ಅವರ ನಿರ್ಣಯವನ್ನು ಒಪ್ಪುತ್ತಿದ್ದೆ. ಆದ್ದರಿಂದ ಈ ವಿಷಯವನ್ನು ಎಲ್ಲರೂ ಪರಿಶೀಲನೆಮಾಡಬೇಕೆಂದು ನಾನು ಸೂಚಿಸುತ್ತೇನೆ. ಸರ್ಕಾರದವರು ಹೇಳಬಹುದು, I.A.S. ಮತ್ತು I.P.S. ಆಫೀಸರುಗಳ ವಿಷಯದಲ್ಲಿ ತಮಗೆ ಹತೋಟಿಯಿಲ್ಲ ಎಂದು. ಆದರೆ, ಮುಖ್ಯಮಂತ್ರಿಗಳು ಇಂಟೆಗ್ರೇಷನ್ ಮಾಡತಕ್ಕ ಕಾಲದಲ್ಲಿ ಮಾಡಿದ ಭಾಷಣವನ್ನು ಅವರ ಗಮನಕ್ಕೆ ತರುತ್ತೇನೆ. ಈ ಇಂಟೆಗ್ರೇಷನ್ನಿಂದ ದೇಶಕ್ಕೆ ತೊಡಕಾಗುವ ಪಕ್ಷಕ್ಕೆ "We are going to the extent of determining by the Ballot Box" ಎಂದು ಹೇಳಿದ್ದಾರೆ. Ballot Boxಗೆ ಹೋದರೂ ಪರವಾಯಿಲ್ಲ, ಈ ವಿಷಯವನ್ನು ಇಂಡಿಯಾ ಸರ್ಕಾರದವರ ಮುಂದೆ ತೆಗೆದುಕೊಂಡು ಹೋಗಿ ಇಡೀಭಾರತಕ್ಕೆ ಮುಂದಾಳಾಗಿ ಹೋಗಿ ಇದನ್ನು ಸರಿಪಡಿಸಬೇಕೆಂದು ನಾನು ಸರ್ಕಾರದವರಿಗೆ ಸಲಹೆ ಮಾಡುತ್ತೇನೆ.

*ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಅಧ್ಯಕ್ಷರೇ, ಈಗ ಸಭೆಯ ಮುಂದೆ ಚರ್ಚೆಗೆ ಬಂದಿರತಕ್ಕ ವಿಶೇಷ ನಿರ್ಣಯವನ್ನು ನಾನು ಸಮರ್ಥಿಸುತ್ತಾ ಒಂದೆರಡು ವಿಷಯಗಳನ್ನು ಹೇಳಬೇಕೆಂದಿದ್ದೇನೆ. ಈಗಾಗಲೇ ಶ್ರೀ ಚನ್ನಬಸಪ್ಪನವರು ಸೂಕ್ಷ್ಮವಾಗಿ ಸಂಬಳಸಾರಿಗೆಗಳ ಮತ್ತು ಅಧಿಕಾರಿಗಳ ಚರಿತ್ರೆಯನ್ನು ನಮಗೆ ಕೊಟ್ಟಿದ್ದಾರೆ. I.A.S. ಮತ್ತು I.P.S. ಇವರ ಸಂಬಂಧದಲ್ಲಿ ಕೂಡ ಅವರು ಮಾತನಾಡಿದ್ದಾರೆ.

ಈಗ ಮುಖ್ಯವಾಗಿ ಕೆಳದರ್ಜೆಯ ನೌಕರರ ಸಂಬಳ ಸಾರಿಗೆಗಳನ್ನು ಹೆಚ್ಚಿಸುವ ವಿಷಯವಾಗಿ ದೇಶದಲ್ಲಿ ಅನೇಕ ವರ್ಷಗಳಿಂದ ಸಹಾನುಭೂತಿಯುತವಾದ ದೃಷ್ಟಿಕೋನ ಬೆಳೆದುಬಂದಿದೆ ಎಂಬುದನ್ನು ನಾವು ಅರಿಯಬೇಕು. ಈಚೆಗೆ ನಮ್ಮ ಸಂಸ್ಥಾನದ ಮುಖ್ಯಮಂತ್ರಿಗಳೂ ಕೂಡ ವಿದ್ಯುಚ್ಛಕ್ತಿ ಕೆಲಸಗಾರರ ಹೋರಾಟ ನಡೆದ ಸಂದರ್ಭದಲ್ಲಿ, 'ನಾವು ಸಂಸ್ಥಾನದ ಎಲ್ಲಾ ನೌಕರರ ಸಂಬಳಸಾರಿಗೆಗಳನ್ನೂ ಕೂಲಂಕಷವಾಗಿ ಪರಿಶೀಲನೆಮಾಡಿ ಆ ಬಗ್ಗೆ ಸಲಹೆ ಕೊಡುವುದಕ್ಕೆ ಒಂದು ಸಮಿತಿಯನ್ನು ರಚಿಸುವವರಾಗಿದ್ದೇವೆ' ಎಂದು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಅಲ್ಲದೆ, ಈಚೆಗೆ ಈ ಸಂಬಂಧದಲ್ಲಿ ಒಂದು ಸುಧಾರಣೆಯ ರೂಪದಲ್ಲಿ ಜಾರಿಗೆ ತಂದಿರುವ ಒಂದು ಕಾರ್ಯಕ್ರಮವೆಂದರೆ ದೊಡ್ಡ ದೊಡ್ಡ ಅಧಿಕಾರಿಗಳಿಗೆ ಕೊಡುತ್ತಿದ್ದಂಥ ತುಟ್ಟಿಭತ್ಯವನ್ನು ಖೋತಾಮಾಡಿದ್ದು. ಆದರೆ ಈ ಕಾರ್ಯಕ್ರಮ ಪೂರ್ತಿಯಾಗಿ ಮುಂದುವರಿಯಲಿಲ್ಲ. ಮಧ್ಯಕ್ಕೆ ನಿಂತುಹೋದುದು ಬಹಳ ವಿಷಾದಕರ. ಅದಕ್ಕಾಗಿ ಇವೊತ್ತು ಈ ಸಭೆಯ ಮುಂದೆ ತಮ್ಮ ಅಪ್ಪಣೆ ಪಡೆದು ಒಂದು ವಿಶೇಷ ನಿರ್ಣಯವನ್ನು ಸರ್ಕಾರದವರು ಪರಿಶೀಲನೆ ಮಾಡಬೇಕೆಂದು ಇಡುತ್ತಿದ್ದೇವೆ.

ಈಗಿರತಕ್ಕ ಸಂಬಳದ ರಚನೆ ಸುಮಾರು 19-ನೆಯ ಶತಮಾನದ ಕಾಲದಿಂದ ಹಾಗೆಯೇ ಮುಂದುವರಿದುಕೊಂಡು ಬಂದಿದೆ. ಮಧ್ಯೆ ಅಲ್ಲಿ ಇಲ್ಲಿ ಕೆಲವು ಸಮಿತಿಗಳ ಶಿಫಾರಸಿನ ಮೇಲೆ ಅಲ್ಪಸ್ವಲ್ಪ ಬದಲಾವಣೆಯಾಗಿದ್ದರೂ ಸ್ವರೂಪದಲ್ಲಿ ಮೂಲಭೂತವಾಗಿ ಯಾವ ಬದಲಾವಣೆಯೂ ಆಗಿಲ್ಲವೆಂದೇ ಹೇಳಬಹುದಾಗಿದೆ. ಇಂಡಿಯಾ ಸರ್ಕಾರದವರೂ ಕೂಡ ಈ ಬಗ್ಗೆ ಹಿಂದೆ ಅನೇಕ ಕಮಿಟಿಗಳನ್ನು ಸ್ಥಾಪನೆಮಾಡಿದರು. 1946 ರಲ್ಲಿ ಶ್ರೀನಿವಾಸ ವರದಾಚಾರ್‌ರವರ ಕಮಿಟಿ ಆಯಿತು. ಅನಂತರ ಗ್ಯಾಡ್ಗಿಲ್ ಕಮಿಟಿ ಬಂತು. ಆ ಸಂಬಂಧದಲ್ಲಿ ಗೋರ್‌ವಾಲ್‌ರವರು ಕೆಲವು ಉಪಯುಕ್ತ ಸಲಹೆಗಳನ್ನೂ ಕೊಟ್ಟರು. ಈ ವರದಿಗಳೆಲ್ಲವನ್ನೂ ನಾವು ನೋಡಿರುವುದರಲ್ಲಿ ಕೇಂದ್ರಸರ್ಕಾರದ ಸಂಬಳ ಸಾರಿಗೆಗಳಿಗೂ ಪ್ರಾಂತಸರ್ಕಾರಗಳ ಸಂಬಳ ಸಾರಿಗೆಗಳಿಗೂ ಬಹಳ ಅಂತರವಿರುವುದು ಕಂಡುಬರುತ್ತದೆ. ಇವೊತ್ತು ರೈಲ್ವೆ, ಟೆಲಿಗ್ರಾಫ್ ಇಲಾಖೆಗಳಲ್ಲಿ ನೋಡಿದರೆ, ಅಲ್ಲಿನ ನೌಕರರು ಹೆಚ್ಚಿಗೆ ಸಂಬಳವನ್ನು ಪಡೆಯುತ್ತಿದ್ದಾರೆ; ಹಾಗೂ ಹೋರಾಟವನ್ನು ಇನ್ನೂ ನಡೆಸುತ್ತಲೇ ಇದ್ದಾರೆ. ಅದನ್ನೇ ಬೇರೆ ಸರ್ಕಾರಿ ನೌಕರರ ಸಂಬಳಸಾರಿಗೆಗಳಿಗೆ ಹೋಲಿಸಿದರೆ, ಈಗ ತಾನೆ ಈ ನಿರ್ಣಯದ ಮಾನ್ಯಸೂಚಕರು ಹೇಳಿದ ಹಾಗೆ 50 ರೂಪಾಯಿಗಳಿಗಿಂತಲೂ ಕಡಮೆ ಸಂಬಳ ಬರುವವರು ಸುಮಾರು 40,000 ಜನ ಎಂತಲೂ, 25 ರೂಪಾಯಿಗಳಿಗೂ ಕಡಿಮೆ ಬರುವವರು 7,500 ಜನ ಎಂತಲೂ ಗೊತ್ತಾಗುತ್ತದೆ. ಈ ಸಂಬಳಗಳನ್ನು ನೋಡಿದರೇ ಬಹಳ ಸಂಕಟವಾಗುತ್ತದೆ. ಏಕೆಂದರೆ, ಈ ನೌಕರರು ಒಬ್ಬೊಬ್ಬರೇ ಇರುವುದಿಲ್ಲ. ಅವರಿಗೂ ಸಂಸಾರ ಇರುತ್ತದೆ. ಒಂದು ಸಂಸಾರಕ್ಕೆ 3 ಜನ unit ಎಂದಿಟ್ಟುಕೊಂಡು, 1936 ರಲ್ಲಿ 100 ರೂಪಾಯಿ living index ಎಂದಿಟ್ಟುಕೊಂಡರೂ, 1942 ರಿಂದ 1948ರವರೆಗೆ ನೋಡಿದಲ್ಲಿ ಯಾವಾಗಲೂ cost of living index 200-150 ಕ್ಕಿಂತ ಕಡಿಮೆ ಹೋಗಿಲ್ಲ. ಇವತ್ತಿನ index ನೋಡಿದರೆ 230ಕ್ಕೂ ಜಾಸ್ತಿಯಾಗಿದೆ. ಹೀಗಿರುವಾಗ ಈ ಬಡ ನೌಕರರು ಯಾವ ರೀತಿ ಜೀವನ ನಡೆಸಿಕೊಂಡು ಬಂದರೆಂಬುದೇ ಬಹಳ ಆಶ್ಚರ್ಯಕರವಾದ ವಿಷಯವೆಂದು ಹೇಳಬಹುದು. ಇಂಥ ಸಂದರ್ಭದಲ್ಲಿ ಈಚೆಗೆ dearness allowanceನ್ನು ಖೋತಾ ಮಾಡಬೇಕೆಂದು ಹೇಳಿ ಶ್ರೀಮಾನ್ ಶಿವಪ್ಪನವರು ಅಭಿಪ್ರಾಯವನ್ನು ವ್ಯಕ್ತಪಡಿಸಿದಂತೆ ಜ್ಞಾಪಕ. ನಾವೀಗ ನೋಡುತ್ತಿರುವ ಹಾಗೆ cost of living ಕಡಮೆಯಾಗುವ ಸೂಚನೆಯೇ ಕಂಡು ಬರುತ್ತಿಲ್ಲ. ಇತ್ತೀಚೆಗೇನೋ ಧಾನ್ಯಗಳ ಬೆಲೆ ಸ್ವಲ್ಪ ಇಳಿದಿದ್ದರೂ, House rent ವಿಷಯದಲ್ಲಾಗಲಿ, ಟ್ರಾನ್ಸ್‌ಪೋರ್ಟ್ ವಿಷಯದಲ್ಲಾಗಲಿ ಏನೂ ಇಳಿದಿಲ್ಲ. ಹೀಗಿರುವಾಗ dearness allowanceನ್ನು ಖೋತಾ ಮಾಡಬೇಕೆಂಬುದರಲ್ಲಿ, ಅದರಲ್ಲೂ ಕೆಳದರ್ಜೆಯ ನೌಕರರಿಗೆ ಕಡಮೆ ಮಾಡಬೇಕೆಂಬುದರಲ್ಲಿ, ಯಾವ ಅರ್ಥವೂ ಇಲ್ಲ. 1942 ನೆಯ ಇಸವಿ ಆಗಸ್ಟ್ ತಿಂಗಳಿನಲ್ಲಿ ಯುದ್ಧದ ಪರಿಣಾಮವಾಗಿ ಬೆಲೆಗಳು ಏರಿದ್ದರಿಂದ ತುಟ್ಟಿಭತ್ಯವನ್ನು ಮೊದಲನೆಯದಾಗಿ ನಾನ್-ಗೆಜೆಟೆಡ್ ಆಫೀಸರುಗಳಿಗೆ ಮಾತ್ರ ಕೊಟ್ಟರು. ಅನಂತರ 1944 ರಲ್ಲಿ ಗೆಜೆಟೆಡ್ ಆಫೀಸರಿಗೂ ತುಟ್ಟಿಭತ್ಯವನ್ನು ಕೊಡುವುದಕ್ಕೆ ಶುರುಮಾಡಿದರು. ಅದು ಹಾಗೆಯೇ ಮುಂದುವರಿದುಕೊಂಡು ಬಂತು. ಈ ಸಂಬಂಧದಲ್ಲಿ ಜಸ್ಟಿಸ್ ರಾಜಾಧ್ಯಕ್ಷರು postal ಇಲಾಖೆಯ ವಿಚಾರದಲ್ಲಿ ತೀರ್ಮಾನ ಕೊಡುತ್ತಾ ಈ ರೀತಿ ಹೇಳಿದ್ದಾರೆ:—

> Mr. Justice Rajadhyaksha who adjudicated on the dispute between the Government and the Postal staff, in the middle of 1946, was

of the opinion that an average working class family in India comprised more than three consumption units. Even on the three units basis, he came to the conclusion that Rs. 65-70 per mensem represented the minimum requirements of an average working class family in Bombay according to the prices prevailing in 1946. In less expensive areas (referred to by him as "B" class areas, according to the classification adopted by the Postal Department), Rs. 55-60 represented this minimum. It has always been recognised that the cost of living of a middle class family is higher than that of a working class family; taking this excess to be 80 per cent., Mr. Justice Rajadhyaksha came to the conclusion that the cost of living of an average lower middle class family at the present level of prices must be between Rs. 120 and Rs. 125 in places like Calcutta and Bombay and between Rs. 100 and 105, in cheaper areas. At the Provincial Representatives' Conference, the Bengal representative stated that as a result of enquiries about the cost of living among Bhadralog (middle class) outside the city of Calcutta, the Bengal Government had been given to understand that Rs. 80 to 85 was considered a living wage for families of that class.

ಹೀಗೆ, ಅವರೂ ಕೂಡ ಸೂಚಿಸಿದ್ದಾರೆ. ನಾವು ಈಗ ಸೂಚಿಸಿರತಕ್ಕ 50 ರೂಪಾಯಿಗಳು ಯಾವುದೇ ರೀತಿಯಿಂದ ನೋಡಿದರೂ ಹೆಚ್ಚಲ್ಲವೆಂದು ಹೇಳಬಹುದಾಗಿದೆ. ಅಲ್ಲದೆ ಇತ್ತೀಚೆಗೆ ರಚನೆಯಾಗಿದ್ದ ಸೆಂಟ್ರಲ್ ಪೇ ಕಮಿಷನ್ನಿನವರೂ ಕೂಡ ಯಾವುದೇ ಸಂದರ್ಭದಲ್ಲಿಯೂ Basic living wage 45 ರೂಪಾಯಿಗಳಿಗೆ ಕಡಮೆಯಾಗಿ ಇರಲೇಬಾರದು ಎಂದು ಸಲಹೆ ಮಾಡಿದ್ದಾರೆ. ಆದ್ದರಿಂದ ಈ ಹೊತ್ತು ಸರ್ಕಾರಿ ಬಡನೌಕರರು ಒಂದು ಮಾದರಿಯ ಜೀವನ ನಡೆಸಿಕೊಂಡು ಹೋಗಬೇಕಾದರೆ ಈಗ ನೀವು ಕೊಡುತ್ತಿರುವ $14\frac{1}{2}$ ರೂಪಾಯಿ $18\frac{1}{2}$ ರೂಪಾಯಿಗಳ ಸಂಬಳಗಳಲ್ಲೇ ಅವರನ್ನಿಡತಕ್ಕದ್ದು ಸರ್ಕಾರಕ್ಕೆ ಗೌರವತರತಕ್ಕದಲ್ಲ. ನೀವು ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ನೋಡಿದರೆ, ಮುಖ್ಯವಾದ ವಿದ್ಯಾಭ್ಯಾಸ ಇಲಾಖೆಯಲ್ಲಿ 50 ರೂಪಾಯಿಗಳಿಗಿಂತ ಕಡಿಮೆ ಸಂಬಳ ಪಡೆಯತಕ್ಕ ನೌಕರರು ಸುಮಾರು 20,000 ದಷ್ಟು ಇದ್ದಾರೆಂದು ಕಂಡುಬರುತ್ತದೆ. ಈ ಕಾರಣದಿಂದಲೇ ಈ ಹೊತ್ತು ನಮ್ಮ ದೇಶದಲ್ಲಿ ವಿದ್ಯಾಭ್ಯಾಸ ಇಲಾಖೆಯಲ್ಲಿ ಸಾಕಷ್ಟು ಉಪಾಧ್ಯಾಯರ ಸಂಖ್ಯೆ ದೊರೆಯುತ್ತಿಲ್ಲ, ಕೆಲಸ ಹೆಚ್ಚಿನ ದಕ್ಷತೆಯಿಂದ ನಡೆದುಕೊಂಡು ಬರುತ್ತಿಲ್ಲವೆಂದು ಕಂಡುಬರುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—20,000 ಜನವೆಂದು ಹೇಳಿದಿರಲ್ಲಾ, ತುಟ್ಟಿ ಭತ್ಯವನ್ನೂ ಲೆಕ್ಕಕ್ಕೆ ತೆಗೆದುಕೊಂಡ ಮೇಲೆಯೂ ಸಂಖ್ಯೆ ಅಷ್ಟಾಗುತ್ತದೆಯೇ ?

ಶ್ರೀ ಎಸ್. ಗೋಪಾಲಗೌಡ.—ನಾನು Basic living wages ಇಟ್ಟುಕೊಂಡು ಮಾತನಾಡುತ್ತಿದ್ದೇನೆ, ಆದ್ದರಿಂದ ಇವೊತ್ತು ಶ್ರೀ ಚನ್ನಬಸಪ್ಪನವರು ಸಲಹೆ ಮಾಡಿರುವಹಾಗೆ ಮಾನ್ಯ ಮಾಜಿ ದಿವಾನರುಗಳ ಪೆನ್‌ಷನ್‌ಗಳನ್ನು ಇಳಿಸುವುದರಿಂದ 40,000 ರೂಪಾಯಿಗಳನ್ನು ಉಳಿತಾಯ ಮಾಡಬಹುದು. ನಾನು ಶ್ರೀಮನ್ಮಹಾರಾಜರ Privy Purse ನ್ನು ಕಡಿಮೆ ಮಾಡುವುದರಿಂದಲೂ ಹಣ ಉಳಿತಾಯ ಮಾಡಬಹುದೆಂದು ಹೇಳುತ್ತೇನೆ. ತಮಗೆ ಮನಸ್ಸಿದ್ದರೆ ಏನು ಬೇಕಾದರೂ ಮಾಡಬಹುದು, Socialistic Pattern of Societyಯನ್ನು ಜಾರಿಗೆ ತರುವುದಾಗಿ ಉದ್ಘೋಷಣೆ ಮಾಡಿದ್ದೀರಿ, ಆ ದಿಕ್ಕಿನಲ್ಲಿಯೇ ಹೋಗುತ್ತೇವೆಂದು ಹೇಳಿದ್ದೀರಿ. ಆದ್ದರಿಂದ, ಮೊದಲನೆಯ ಬಾಗಿ ಈಗಿರುವ ಒಂದಕ್ಕೆ 200ರಷ್ಟು, 250 ರಷ್ಟಿರುವ ಸಂಬಳಗಳ ಅಂತರವನ್ನು ಒಂದಕ್ಕೆ ಹತ್ತರಷ್ಟಾದರೂ ಇರುವಂತೆ ಮಾಡುವುದಕ್ಕೆ ಪ್ರಯತ್ನಪಡಿರಿ. ಕನಿಷ್ಠ ಸಂಬಳ 100 ರೂಪಾಯಿ ಗರಿಷ್ಠ ಸಂಬಳ 1,000 ರೂಪಾಯಿಯೆಂಬುದು, ಈಗಿರತಕ್ಕ ಸಂಸ್ಥಾನದ ಮತ್ತು ಕೇಂದ್ರದ ಆರ್ಥಿಕ ಪರಿಸ್ಥಿತಿಗನುಗುಣವಾಗಿದೆಯನ್ನಬಹುದು. ಆದ್ದರಿಂದ ಸರ್ಕಾರದವರು ಈ ರೀತಿ ಮಾಡಿ ಮೊದಲು ಒಂದು ಮಾದರಿ ಹಾಕಿಕೊಟ್ಟರೆ ಬೇರೆ Section ಗಳಲ್ಲಿಯೂ ಸಂಬಳ ಸಾರಿಗೆಗಳನ್ನು ಗೊತ್ತು ಮಾಡುವಾಗ, ಕಾರ್ಮಿಕರ ಜೀವನ ವೆಚ್ಚಕ್ಕೆ ಸರಿಯಾಗಿ ಸಂಬಳ ನಿಗದಿಮಾಡುವಾಗ, ಇದನ್ನು ಮೂಲಭೂತವಾಗಿಟ್ಟುಕೊಂಡು ಮುಂದುವರಿಯುವುದಕ್ಕೆ ಬಹಳ ಅನುಕೂಲವಾಗುತ್ತದೆ. ಆದ್ದರಿಂದ ಸರ್ಕಾರದವರು ಹಣವನ್ನು ಹೆಚ್ಚಿಸಿಕೊಳ್ಳತಕ್ಕ ಬಗ್ಗೆ ಎಲ್ಲೆಲ್ಲಿ economy measures ಜಾರಿಗೆ ತರಬಹುದೊ ಅಲ್ಲಿ ಜಾರಿಗೆ ತಂದು ಸಂಸ್ಥಾನದ ಆಡಳಿತ ವರ್ಗದಲ್ಲಿರತಕ್ಕ ಅಸಂತೃಪ್ತಿಯನ್ನು ಹೋಗಲಾಡಿಸುವುದು ಮತ್ತು ಮಾನವೀಯತೆಯ ಹಾಗೂ ಧಾರ್ಮಿಕ ದೃಷ್ಟಿಯಿಂದ ಈ ಪರಿಸ್ಥಿತಿಯನ್ನು ತೊಡೆದು ಹಾಕುವುದು ಅತ್ಯಗತ್ಯ. ಈ ಹಿಂದೆಯೇ ಇದನ್ನು ಮಾಡಬೇಕಾಗಿತ್ತು. ಇನ್ನೂ ಮುಂದಕ್ಕೆ ಹಾಕುವುದಕ್ಕೆ ಪ್ರಯತ್ನ ಪಡುವುದು ಅಮಾನುಷ. ಹಿಂದೆ I.A.S. ಮತ್ತು I.P.S. ಹುದ್ದೆಗಳನ್ನು ಕೊಡುವಾಗ Retrospective effect ಕೊಟ್ಟು ಅವರಿಗೆ ಹಣಸಹಾಯ ಮಾಡಿಕೊಟ್ಟರೆಂದು ಕೇಳಿದ್ದೇನೆ. ಅದೇರೀತಿ ಈ ಬಡಕುಟುಂಬಗಳವರಿಗೂ ಸುಮಾರು 1944 ನೆಯ ಇಸವಿಯಿಂದ 1954 ನೆಯ ಇಸವಿಯವರೆಗೂ Retrospective effect ಕೊಟ್ಟು ಈ ಹತ್ತು ವರ್ಷಗಳಲ್ಲಿ ಬರುವ ಹಣವನ್ನು lumpsum ಆಗಿ ಕೊಡುವುದು ಕೂಡ ಬಹಳ ಸೂಕ್ತವೆಂದು ಹೇಳಿ, ಇದನ್ನು ಸರ್ಕಾರದವರು ವಿಶಾಲ ಮನಸ್ಸಿನಿಂದ ಹೆಚ್ಚಿಸಬೇಕೆಂದು ಹೇಳುತ್ತೇನೆ; ಮತ್ತು ಈ ವಿಷಯದಲ್ಲಿ ಹೆಚ್ಚಿಗೆ ಕಾಲ ವಿಳಂಬ ಮಾಡದೆ ಈ ಮಂತ್ರಿಮಂಡಳದ ಅವಧಿ ಮುಗಿಯುವುದರೊಳಗಾಗಿಯೇ ಆ ದಿಕ್ಕಿನಲ್ಲಿ ತನ್ನ ಹೆಜ್ಜೆಯನ್ನಿಟ್ಟು ಬೇರೆ ಪ್ರಾಂತ್ಯಗಳಿಗೆ ಮಾದರಿಯಾಗಿ ವರ್ತಿಸುತ್ತಾರೆಂದು ನಾನು ತಿಳಿದಿದ್ದೇನೆ. ತಿರುವಾಂಕೂರು ಕೊಚ್ಚಿನ್‌ನಲ್ಲಿ ಈಗಾಗಲೇ ಸ್ವಲ್ಪಮಟ್ಟಿಗೆ ಈ ಬಗ್ಗೆ ಪ್ರಯತ್ನ ಪಟ್ಟಿದ್ದಾರೆ.

(ಶ್ರೀ ಎಸ್. ಗೋಪಾಲಗೌಡ.)

ಅವರಂತೆ ತಾವೂ ಕೂಡ ಮಾಡುತ್ತೀರೆಂದು ಆಶಿಸಿ ನನ್ನ ಮಾತನ್ನು ಮುಗಿಸುತ್ತೇನೆ.

12 NOON.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ನಮ್ಮವರೇ, ಸ್ವಾಮಿ, ಅವರು ; ನನ್ನ ಅರ್ಧಭಾಗ ; ನನ್ನ ಸಹೋದರರು. ಒಂದೇ ಮನೆತನದಲ್ಲಿ ನಾಲ್ಕು ಜನ ಮಕ್ಕಳು ಹುಟ್ಟುತ್ತಾರೆ. ಒಬ್ಬನು ಸದ್ಗುಣಿಯಾಗಬಹುದು, ಇನ್ನೊಬ್ಬನು ಅಪಮಾರ್ಗ ಹಿಡಿಯಬಹುದು. ಇದು ದೈವಲೀಲೆ. ಆದರೂ ಹೆತ್ತ ತಾಯಿಯು ಎಲ್ಲರನ್ನೂ ಸುಧಾರಿಸಿಕೊಂಡು ಹೋಗಬೇಕಾಗುತ್ತದೆ. ಈ ವರ್ತನೆಗಳಿಗೆ ನಾವು ಆಶ್ಚರ್ಯ ಪಡಬೇಕಾಗಿಲ್ಲ; ಅದೆಲ್ಲ ಸ್ವಾಭಾವಿಕ. ಇದು 'ಮೋಸ'! ಎಂದು ಮಾತ್ರ ಹೇಳಬಲ್ಲೆ. ಅದಕ್ಕಿಂತ ಹೆಚ್ಚಿನ ಪದಪ್ರಯೋಗ ಮಾಡುವುದಕ್ಕೆ ನನಗೆ ಶಕ್ತಿಯಿಲ್ಲ. ಏಕೆಂದರೆ ಸ್ವಾತಂತ್ರ್ಯ ಸಂಪಾದನೆ ಮಾಡಬೇಕಾದರೆ, ಯಾವ ಉದ್ದೇಶದಿಂದ ಹೋರಾಡಿದೆವು, ಯಾವ ಧ್ಯೇಯವನ್ನಿಟ್ಟುಕೊಂಡು ಆ ಗುರಿಯನ್ನು ಸಾಧಿಸಿದೆವು, ಎಷ್ಟು ಹುಮ್ಮಸ್ಸಿನಿಂದ ಒಂದು ನೀತಿಗೆ ಕಟ್ಟು ಬಿದ್ದು ಮುಂದುವರಿದೆವು ಎಂಬುದನ್ನು ಅವರು ಮರೆತಿದ್ದಾರೆ. ಇವೊತ್ತು ಆ ಹುಮ್ಮಸ್ಸು ಮಾಯವಾಗಿರಬೇಕಾದರೆ ಆಸೆಯಿಂದಲ್ಲದೆ ಮತ್ತೇನು ? ನನಗೇನು ಬೇಕು, ನಮ್ಮ ಜನಾಂಗಕ್ಕೇನುಬೇಕು ಎಂದು ತಕ್ಕಡಿ ಹಿಡಿದುಕೊಂಡು ತೂಕ ನೋಡಿದ ಹಾಗಿದೆ. ಸ್ವಲ್ಪ ವಿಷಯಕ್ಕೆಲ್ಲಾ ಇಂಥ ಯೋಚನೆಗಳು ಬರಕೂಡದು. ಸೃಷ್ಟಿ ಮಾಡುವ ಭಗವಂತನು ಎಲ್ಲರನ್ನೂ ಕಾಪಾಡುತ್ತಾನೆ. ಅಂಥದಕ್ಕೆ ನಾವು ಏನಾದರೂ ಮಾಡುತ್ತೇವೆನ್ನುವುದು ಸರಿಯೇ ? ನಿಮಿತ್ತಮಾತ್ರದವರು ನಾವುಗಳು. ಹೀಗಿರುವಾಗ ಈ ಹೊತ್ತು ನಮ್ಮ ಜೊತೆಯಲ್ಲಿ ಹುಟ್ಟಿ ಬೆಳೆದವರು ಆಡಳಿತ ದೃಷ್ಟಿಯಿಂದ ನಮ್ಮೊಡನೆ ಸೇರಬೇಕೆಂದು ಹೇಳುವಾಗ ಬೇಡವೆಂದು ಹೇಗೆ ಹೇಳುವುದೋ ನನಗಂತೂ ಅರ್ಥವಾಗುತ್ತಿಲ್ಲ. ಅದರಲ್ಲೂ ಕೆಲವರು ಯಾವ ರೀತಿ ಹೇಳಿದರೆಂದರೆ, ಭಿಕ್ಷುಕರು ಬಂದರೆ ಹೋಗಯ್ಯಾ ಎಂದು ಹೇಳುವಂತೆ ಹೇಳಿದ್ದಾರೆ. ಆ ರೀತಿ ಏನೂ ಅವರು ಬೇಡುತ್ತಿಲ್ಲ. ಅಲ್ಲಿ ಆಸ್ಪತ್ರೆಗಳಿಲ್ಲ ಎಂದು ಹೇಳಿದರು. ಆಸ್ಪತ್ರೆಗಳಿಲ್ಲವೆಂದಮೇಲೆ, ಈಗ ನಮ್ಮೆಲ್ಲರ ಎದುರಿನಲ್ಲಿ ಯೋಜನೆಗಳನ್ನು ಹಾಕುತ್ತಿರುವುದೇನು ? ಇಡೀ ದೇಶದ ಚಿತ್ರವನ್ನಿಟ್ಟುಕೊಂಡು ದೇಶವನ್ನು ಸರಿಯಾಗಿ ಕಟ್ಟಬೇಕೆಂದು ಯೋಜನೆ ಹಾಕುತ್ತಿದ್ದೇವೆಯೇ ಹೊರತು ಯಾವ ಒಂದು ಭಾಗವನ್ನೇ ಬೆಳೆಸಬೇಕೆಂದು ಮಾಡುತ್ತಿಲ್ಲ. ಈ ಯೋಜನೆಗಳ ಕಡೆಗೆ ನಮ್ಮ ಸಹೋದರರ ದೃಷ್ಟಿ ಹೋಗಲಿ. ಇನ್ನು ಹತ್ತು ವರ್ಷಗಳು ಹೋದರೆ ಇಂಡಿಯಾ ದೇಶದ ಯಾವುದೊಂದು ಹಳ್ಳಿಯಲ್ಲೂ ಅನ್ನ ಬಟ್ಟೆ ಇಲ್ಲವೆನ್ನುವವರು ಯಾರೂ ಇರುವುದಿಲ್ಲ. ದೊಡ್ಡ ದೊಡ್ಡ ಯೋಜನೆಗಳನ್ನು ಕೈಕೊಂಡು ದೇಶವನ್ನು ಅಭಿವೃದ್ಧಿಗೊಳಿಸಲು ಯೋಚನೆಮಾಡುತ್ತಿದ್ದಾರೆ. ಹೀಗಿರುವಾಗ ನಮ್ಮ ಸಹೋದರರು ಇಲ್ಲಿಗೆ ಬಂದರೆ ಏನೋ ಆಗುತ್ತದೆಂದು ಗಾಬರಿಯೇಕೋ ಗೊತ್ತಿಲ್ಲ. ನಾನು ಈ ರೀತಿ ಮಾತನಾಡಿದರೆ ಸಿದ್ದಮ್ಮನವರು ಲಿಂಗಾಯಿತರಾದ್ದರಿಂದ ಹೀಗೆ ಮಾತನಾಡಿದರು ಎಂದು ಹೇಳುತ್ತಾರೆ. ಆ ಮಾತು ಸರಿಯಲ್ಲ. ನಾವೂ ಅವರೂ ಒಂದೇ ಕರಳುಬಳ್ಳಿಯವರು. 300-400 ವರ್ಷಗಳಿಂದ ನಾವೂ ಅವರೂ ಕೊಟ್ಟು ತಂದು ನೆಂಟಸ್ತನ ಬೆಳೆದು ಬಂದಿದೆ. ನಮ್ಮ ಸಹೋದರರ ಕಷ್ಟಸುಖಗಳನ್ನು ನೋಡಬೇಕಾದದ್ದು ಧರ್ಮ. ನಮ್ಮದೂ ಅವರದೂ ಒಂದೇ ಎನ್ನುವುದು - ಸ್ವಾಭಾವಿಕ. ಶ್ರೀ ತಿಮ್ಮಪ್ಪಗೌಡರು ತಮ್ಮ ಬುದ್ಧಿವಂತಿಕೆಯಿಂದ ಯಾವುದಾದರೂ ಹೇಳಿ ಸಭೆಯನ್ನು ಒಪ್ಪಿಸಬಹುದು. ನಾನು ಹಾಗೆ ಒಪ್ಪಿಸುವುದಕ್ಕೆ ನಿಂತಿಲ್ಲ ಮನುಷ್ಯ ಧರ್ಮವೇನೆಂಬುದನ್ನು ಅವರವರ ಹೃದಯ ಒಪ್ಪಿಕೊಂಡರೆ ಸಾಕು. ಮಿಕ್ಕವರನ್ನು ಒಪ್ಪಿಸುವುದೆಲ್ಲಿಂದ ಬಂತು ? ನಿದ್ದೆ ಹತ್ತಿಲ್ಲದಿದ್ದರೂ ಹತ್ತಿದಹಾಗೆ ಸೋಗು ಹಾಕಿಕೊಳ್ಳುವ ಜನರಿಗೆ ಹೇಗೆ ಒಪ್ಪಿಸುವುದಕ್ಕೆ ಸಾಧ್ಯ ? ಒಂದುವೇಳೆ ನಿದ್ದೆ ಹತ್ತಿದ್ದರಾದರೂ ತಮಟೆ ಹೊಡೆದು ಎಬ್ಬಿಸಬಹುದು. ನಮ್ಮ ಮೈಸೂರು ದೇಶದ ಅಭಿವೃದ್ಧಿ ಯೋಜನೆಯಲ್ಲಿ ಒಂದು ದೊಡ್ಡ ವೈಶಿಷ್ಟ್ಯವಿದೆ. ನಿಜವಾಗಿಯೂ ನನಗನ್ನಿಸುತ್ತದೆ, ಇದಕ್ಕೆ ಧಕ್ಕೆ ತಂದರೆ ಇದರ ವೈಶಿಷ್ಟ್ಯ ಉಳಿಯುತ್ತದೆಯೇ ? ಸಂಸ್ಕೃತಿ ಪ್ರಚಾರಕ್ಕೆ ಇವೊತ್ತು ಬೇಕಾದಷ್ಟು ಖರ್ಚುಮಾಡುತ್ತಿದ್ದಾರೆ. ನಮ್ಮ ಒಡನಾಡಿಗಳು ಕೆಲವು ಕಾರಣಗಳಿಂದ ಕೆಲವು ವರ್ಷಗಳು ಭಾಗವಾಗಿದ್ದವರು ಮತ್ತೆ ನಮ್ಮೊಡನೆ ಬರುತ್ತೇವೆಂದು ಹೇಳಿದರೆ ಬರಬೇಡವೆಂದು ಹೇಳುವುದು ಯಾವ ಧರ್ಮ, ಯಾವ ನ್ಯಾಯ ? ಅದು ಸಂಸ್ಕೃತಿಯೇ ? ಹೀಗೆ ಮಾಡಬಾರದು. ನಮ್ಮ ಸಂಸ್ಥಾನದ ಕೀರ್ತಿಗೆ ಕಳಂಕ ತರುವಂತಹದಿದು. ಏನೋ ಹೇಳಿ ನನ್ನನ್ನು ಒಪ್ಪಿಸಬಹುದು. ಆದರೂ ಮೈಸೂರು ಸಂಸ್ಥಾನದವರು ಈ ರೀತಿ ಮಾಡಿದರೆಂದು ಕಳಂಕ ಬರುತ್ತದೆ. ಚರಿತ್ರಕಾರರು ಮುಂದೆ ಖಂಡಿತ ಇದನ್ನು ಬರೆಯುತ್ತಾರೆ. ಅಂಥ ಕಳಂಕ ನಮ್ಮ ದೇಶಕ್ಕೆ ಬರಲಿಕ್ಕೆ ಆಸ್ಪದ ಕೊಡಬೇಡಿರೆಂದು ನಾನು ಬೇಡಿಕೊಳ್ಳುತ್ತೇನೆ. ಒಮ್ಮತವಿಲ್ಲವೆಂದು ಹೇಳಬಹುದು. ಯಾವ ಕಾಲದಲ್ಲಿ ತಾನೆ ಒಮ್ಮತದಿಂದ ದೊಡ್ಡ ಕೆಲಸಕಾರ್ಯಗಳು ಆಗಿವೆ ? ಗಾಂಧಿಟೋಪಿಯವರು ಹಿರದೆ ಆ ಜವಾಬ್ದಾರಿ ಸರ್ಕಾರ ಬರುವುದಕ್ಕೆ ಸ್ವಾತಂತ್ರ್ಯದ ಹೋರಾಟ ನಡೆಸಿದರಲ್ಲಾ, ಅದಕ್ಕೆ ಎಲ್ಲರೂ ಒಪ್ಪಿದ್ದರೇ ? ಆ ಕಾಲದಲ್ಲಿ ಜನರು, ಜವಾಬ್ದಾರಿ ಸರ್ಕಾರವೇ ಬೇಕಾಗಿಲ್ಲ, ಬ್ರಿಟಿಷರೇ ಇರಲಿ ಎಂದು ಹೇಳುವವರಿರಲಿಲ್ಲವೇ ? ಆದ್ದರಿಂದ ಯಾವ ದೊಡ್ಡ ಕೆಲಸಗಳಾಗಬೇಕಾದರೂ ಒಮ್ಮತದಿಂದ ಆಗುವುದಿಲ್ಲ. ಅಲ್ಲದೆ ನಮ್ಮ ಕಾಂಗ್ರೆಸ್ಸಿ

ವರು ಎಲ್ಲರೂ ಹಿಂದೆ ಒಪ್ಪಿದ್ದರು ಈ ತತ್ವಕ್ಕೆ. ವರು ಈಗ ಬದಲಾಗಿದ್ದಾರೆ. ಶ್ರೀ ರಾಮಯ್ಯ ವರು ಹೇಳಿದಹಾಗೆ 'ದುನಿಯಾ ಬದಲ್‌ಗಯಾ' ಗಿದೆ. ಜನ ಹೀಗೆ ಆಗಕೂಡದು. ಅವರೇನೂ ನಾಥರಲ್ಲ, ಅನೀತಿವಂತರಲ್ಲ. ಅವರೂ ನಮ್ಮ ಸರಿ ಮಾನರೆಂದು ಭಾವಿಸಿಕೊಳ್ಳಬಹುದು. ಅವರಲ್ಲೂ ತ್ತಮವಾದ ಅನೇಕ ಯೋಜನೆಗಳು ನಡೆಯುತ್ತಿವೆ. ಟಪ್ರಭ; ಮಲ್ಲಪ್ರಭಾ, ಭಾರಿ ಯೋಜನೆಗಳು. ಮಗಿಂತ ಒಳ್ಳೊಳ್ಳೆಯ ಜಮೀನುಗಳಿವೆ. ಅವರೂ ವೇಕಾದಷ್ಟು ದವಸ ಬೆಳೆಯುತ್ತಿದ್ದಾರೆ. ಆದ್ದರಿಂದ ನೀವು ಹೇಳುವಷ್ಟು ನಿರ್ಗತಿಕರಲ್ಲ ಅವರು. ಒಂದು ವೇಳೆ ಇದ್ದರೂ, ಈಗ ನಮಗೆ ಕಷ್ಟವಿಲ್ಲ. ದೇಶಕ್ಕಾಗಿ ಹೋರಾಡಬೇಕಾದರೆ ಕಷ್ಟವಿತ್ತು. ಅವರೂ, ನಾವು ಜವಾಬ್ದಾರಿ ಸರ್ಕಾರ ಕಾಣುತ್ತೇವೆಯೇ ನಮ್ಮ ಸಹೋದರರು ಮಂತ್ರಿಗಳಾಗುತ್ತಾರೆಯೇ ಎಂದು ಕಾದಿದ್ದರು. ಆದರೆ, ಈಗ ಇನ್ನೂ ಅವರ ಸ್ಥಿತಿ ಬದಲಾವಣೆಯಾಗಿಲ್ಲ, ಮುಂದಾದರೂ ಬದಲಾವಣೆ ಯಾದೀತೇ ಎಂದು ಆಶೆಯಿಂದಿದ್ದಾರೆ. ಆದ್ದರಿಂದ ಒಳ್ಳೆಯ ಹೃದಯದಿಂದ ಇದನ್ನು ಆಗಮಾಡಿ ಎಂದು ನಾನು ಪ್ರಾರ್ಥನೆ ಮಾಡುತ್ತೇನೆ.

ನಾನು ಇನ್ನು ಹೆಚ್ಚಿಗೆ ಮಾತನಾಡುವುದಿಲ್ಲ. ಕೆಲವು ಜನ ಹೇಳಿದರು, ಮೈಸೂರಿನಲ್ಲಿ ಬಹಳ ಜನ ವಿರೋಧವಾಗಿದ್ದಾರೆ ಎಂದು. ಅದು ಸರಿಯಾದ ಮಾತಲ್ಲ. ಏಕೆಂದರೆ, ಸರ್ವಪಕ್ಷ ಸಮ್ಮೇಳನವೆಂದು ಹಿಂದೆ ಅರಸೀಕೆರೆಯಲ್ಲಿ ಕರೆದಿದ್ದೆವು; ಅದಕ್ಕೆ ನಾನೇ ಅಧ್ಯಕ್ಷತೆ ವಹಿಸಿದ್ದೆ. ಆಗ ಜನರ ಅಭಿಪ್ರಾಯ ತೆಗೆದುಕೊಳ್ಳಬೇಕೆಂದು ಹೇಳಿ ಎಲ್ಲಾ ಡಿಸ್ಟ್ರಿಕ್ಟ್‌ಗಳಲ್ಲಿಯೂ ತಿರುಗಿ ನೋಡಿದ್ದೇವೆ. ಬೆಂಗಳೂರು, ಮೈಸೂರು ಮಾತ್ರ ಉಳಿದಿತ್ತು. ಆ ಕಾಲದಲ್ಲಿ ಬೋರಣ್ಣಗೌಡರೂ ನಮ್ಮ ಜೊತೆಯಲ್ಲೇ ಬಂದಿದ್ದರು. ಆಗಲೇ ಬೇಕಾದಷ್ಟು ಜನ ಪ್ರೋತ್ಸಾಹ ಬೆಂಬಲಗಳನ್ನು ಕೊಟ್ಟರೆಂಬುದು ಅವರಿಗೂ ಗೊತ್ತಿದೆ. ಸತ್ಯಾಗ್ರಹ ಹೂಡಿ, ಇಷ್ಟಿಷ್ಟು ಜನರನ್ನು ಕಳುಹಿಸುತ್ತೇವೆಂದು ಅನೇಕರು ಹೇಳಿದ್ದಾರೆ. ನಾವೇನೇ, ಸತ್ಯಾಗ್ರಹ ಬೇಕಾಗಿಲ್ಲ, ಹಾಗೆ ಮಾಡಬಾರದು ಎಂದು ಸಮಾಧಾನಮಾಡಿ tour ಮಾಡಿಕೊಂಡು ಬಂದಿದ್ದೇವೆ. ಆದ್ದರಿಂದ, ಜನಾಭಿಪ್ರಾಯ ಅವರು ಹೇಳಿದಂತಿಲ್ಲ. ಅಲ್ಲದೆ, ಸುಮ್ಮನೆ ನಾಲ್ಕು ಜನರು ಹೇಳುವುದರಿಂದ ಇದು ಆಗುವುದಿಲ್ಲ. ಕೆಲವು ವಿಷಯಗಳು ಬೇಕು ಎಂದರೂ ಬರುವುದಿಲ್ಲ, ಬೇಡ ಎಂದರೂ ಬಿಡುವುದಿಲ್ಲ. ಜವಾಬ್ದಾರಿ ಸರ್ಕಾರ ತಾನೇ ಹೇಗೆ ಬಂತು? ಬ್ರಿಟಿಷರು ಏನು ಹೇಳುತ್ತಿದ್ದರು? ತಮ್ಮ ರಾಜ್ಯದಲ್ಲಿ ಸೂರ್ಯ ಮುಳುಗುವುದಿಲ್ಲವೆಂದು ಹೇಳುತ್ತಿದ್ದರು. ಅಂಥಾದ್ದು ಈಗ ಏನಾಯಿತು? ಇದೆಲ್ಲಾ ಕಾಲಮಹಿಮೆ.

ಒಟ್ಟಿನಲ್ಲಿ ನನ್ನ ಅಭಿಪ್ರಾಯದಲ್ಲಿ ಇವೊತ್ತು ಏಕೀಕರಣ ಆಗಬೇಕು ಎಂದು ಹೇಳುತ್ತೇನೆ. ಎರಡು ಕರ್ಣಾಟಕಗಳಾಗಕೂಡದು. ಏಕೆಂದರೆ, ಅವರೇ ಬೇರೆ ಇರಲಿ, ನಾವೇ ಬೇರೆ ಇರೋಣವೆಂದರೆ ಆಡಳಿತ ದೃಷ್ಟಿಯಿಂದ ಖರ್ಚುವೆಚ್ಚಗಳು ಜಾಸ್ತಿಯಾಗುತ್ತವೆ. ಈ ದೃಷ್ಟಿಯಿಂದ ಏಕೀಕರಣವಾಗಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಬಿ. ವಿ. ನಾರಾಯಣರೆಡ್ಡಿ (ಬಾಗೆಪಲ್ಲಿ-ಗುಡಿಬಂಡೆ).—ಅಧ್ಯಕ್ಷರೇ, ಇದುವರೆಗೂ ಈ ಫ್ಯಾಕ್ಟ್ ಫೈಂಡಿಂಗ್ ಕಮಿಟಿಯವರ ವರದಿಯಮೇಲೆ ಮಾತನಾಡಿದವರಿಂದ ಮೂರು ವಿಧವಾದ ಅಭಿಪ್ರಾಯಗಳು ಬಂದಿವೆ. ಮೈಸೂರನ್ನೊಳಗೊಂಡ ಕರ್ಣಾಟಕ ಮಾಡುವುದು ಒಂದು; ಎರಡು ಕನ್ನಡ ಪ್ರಾಂತ್ಯಗಳನ್ನು ಮಾಡುವುದು ಇನ್ನೊಂದು. ಮೈಸೂರು ಸಂಸ್ಥಾನ ಈಗಿರುವ ರೀತಿಯಲ್ಲಿಯೇ ಇರಲಿ ಎಂಬುದು ಇನ್ನೊಂದು. ನನ್ನ ಅಭಿಪ್ರಾಯದಲ್ಲಿ ಇವು ಮೂರೂ ಅವಿವೇಕವಾದ ಅಭಿಪ್ರಾಗಳೆಂದೇ ಹೇಳಬೇಕಾಗಿದೆ. ಏಕೆಂದರೆ, ಹಿಂದೆ ಕಾರಣಾಂತರದಿಂದ ಎಷ್ಟೋ ಯುದ್ಧಗಳು ನಡೆದು ಈಸ್ಟ್ ಇಂಡಿಯಾ ಕಂಪೆನಿಯವರಾಗಿ ಬ್ರಿಟಿಷರು ಆಡಳಿತ ಮಾಡುವವರೆಗೂ ಅನೇಕಸಾರಿ ಅವರ ಇಷ್ಟಾನುಸಾರ ಪ್ರಾಂತ್ಯಗಳ ವಿಂಗಡಣೆ ಮಾಡಿಕೊಂಡು ಬಂದರು. ಒರಿಸ್ಸಾ Stateನ್ನು ಎಷ್ಟು hap-hazard ಆಗಿ ಮಾಡಿದೆಯೆಂದು ಮಾನ್ಯಸದಸ್ಯರೇ ತಿಳಿಸಿದ್ದಾರೆ. ಆ ಕಾಲದಲ್ಲಿ ಪ್ರತಿಯೊಂದು ಪಕ್ಷದವರೂ States Re-organisation ಆಗಬೇಕು, linguistic ಪ್ರಕಾರವೇ ವಿಂಗಡಣೆಯಾಗಬೇಕೆಂದು ಹೇಳಿದರು; ಅಲ್ಲದೆ 1945 ರಲ್ಲಿ ಹೇಗಿತ್ತೊ ಈಗ ಹಾಗಿಲ್ಲ; 1930, 1935 ರಲ್ಲಿದ್ದ ಪರಿಸ್ಥಿತಿ ಹೀಗಿರಲಿಲ್ಲ, ಎಷ್ಟೋ ಬದಲಾವಣೆಗಳಾಗಿವೆ. Linguistic ಪ್ರಕಾರ ಏಕೆ ಪ್ರಾಂತ್ಯ ವಿಂಗಡಣೆ ಮಾಡಬೇಕೆಂದು ಹೇಳಿದರೆ, ಒಂದು ಜನಾಂಗ ಯಾವ ಭಾಷೆಯಲ್ಲಿ ಮಾತನಾಡುತ್ತಾರೋ ಆ ಭಾಷೆಯಲ್ಲಿ ಸರ್ಕಾರಕ್ಕೆ ಕೋರಿಕೆಯನ್ನು ಸಲ್ಲಿಸಿದರೆ ಆ ಆಫೀಸರುಗಳಿಗೆ ಅರ್ಥವಾಗುತ್ತದೆಯೇ ಹೊರತು ಬೇರೆ ಭಾಷೆಯಲ್ಲಿ ಅರ್ಥವಾಗುವುದಿಲ್ಲ. ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಬೇಕಾದರೂ ಮಾತೃಭಾಷೆಯಲ್ಲಿ ಮಾಡಿಸಿದರೆ ಏನಾದರೂ ಅನುಕೂಲವಾಗುತ್ತದೆ ಅಷ್ಟೆ. ಹಾಗಿಲ್ಲದೆ, ಮಾತೃಭಾಷೆಯೊಂದಾಗಿ ವಿದ್ಯಾಭ್ಯಾಸ ಪರಭಾಷೆಯಲ್ಲಾದರೆ, 5-6 ವರ್ಷಗಳ ವಿದ್ಯಾಭ್ಯಾಸದಲ್ಲಿ ಒಂದೆರಡು ವರ್ಷ ಅನ್ಯಭಾಷೆಯನ್ನು ತಿಳಿದುಕೊಳ್ಳುವುದರಲ್ಲೇ ಕಳೆದು ಹೋಗುತ್ತದೆ. ಈ ದೃಷ್ಟಿಯಿಂದ, ದೇಶ ಉನ್ನತಸ್ಥಿತಿಗೆ ಬರಬೇಕಾದರೆ ಭಾಷಾ ಸ್ವಾತಂತ್ರ್ಯ, ಆಡಳಿತ ಸ್ವಾತಂತ್ರ್ಯವಿರಬೇಕಾದದ್ದು ಅವಶ್ಯಕ—ಆಗಲೇ ಮಾನವನ ಮನಸ್ಸು ವಿಕಾಸಗೊಳ್ಳಲು ಒಳ್ಳೆಯ ವಾತಾವರಣವಿದ್ದಂತಾಗುತ್ತದೆ. ಈ ಉದ್ದೇಶದಿಂದ ಭಾಷಾವಾರು ಪ್ರಾಂತ್ಯ ವಿಂಗಡಣೆ ಮಾಡಬೇಕೆಂದು ದೊಡ್ಡ ದೊಡ್ಡ ವ್ಯಕ್ತಿಗಳು, ಮಹಾತ್ಮಾ ಗಾಂಧಿಯವರೂ ಕೂಡ ಹೋರಾಡಿದರು. ಆದರೆ ಬರಬರುತ್ತಾ ಸಂಕುಚಿತ ಭಾವನೆ ಬೆಳೆಯುತ್ತಾ ಬಂದು administrative convenienceಗೆ ಸರಿಯಾಗಿ ವಿಂಗಡಣೆಗಳಾಗಬೇಕೆಂದು ಹೇಳುತ್ತಲಿದ್ದಾರೆ. ಪಲ್ಲಕ್ಕಿಯಮೇಲೆ ಹೋಗಬೇಕೆಂದರೆ, ಪಲ್ಲಕ್ಕಿ ಹೊರುವವರು ಬೇಕೇ ಬೇಕು; ಈ ದೃಷ್ಟಿಯಿಂದ ಪಲ್ಲಕ್ಕಿ ಹೊರುವವರನ್ನು ಕೈಗೆ ಹಾಕಿಕೊಳ್ಳೋಣ ಎನ್ನುವ ರೀತಿಯಲ್ಲಿ ಈಗ ಈ ಪ್ರಾಂತ್ಯ ರಚನೆ ಮುಂದುವರಿಯುತ್ತದೆಯೇ ಹೊರತು ನಿಜವಾಗಿ ಯಾವರೀತಿ ಹೋಗಬೇಕೆಂಬುದನ್ನು ನೋಡಿ ಮಾಡುತ್ತಿಲ್ಲ. ಸಾಮಾನ್ಯವಾಗಿ ಆಂಧ್ರರ ಚರಿತ್ರೆಯೇನೆಂಬುದು ಎಲ್ಲರಿಗೂ ಗೊತ್ತಿದೆ. ಡಾಕ್ಟರುಗಳಿಗಂತೂ ಅದರ ಪರಿಚಯ ಇನ್ನೂ ಜಾಸ್ತಿ. ಏಕೆಂದರೆ ಆಂಧ್ರ ಬುಲೆಟಿನ್ ಅವರು ನೋಡುತ್ತಿರುತ್ತಾರೆ. ಮಾನ್ಯ ಇಮಾಂ ಸಾಹೇಬರಿಗೆ ಅದರ ವಿಷಯ ಏನೇನೂ ಗೊತ್ತಿಲ್ಲ. 7 ಶತಮಾನಗಳ ಹಿಂದಿನ ಚರಿತ್ರೆ ಅದಕ್ಕಿದೆ. ಶಾತವಾಹನನೆಂಬವನು ಶಕಪುರುಷ. ಚಂದ್ರವಳ್ಳಿಯ ಹತ್ತಿರ ಶಾತವಾಹನನ ಕಾಲದ ನಾಣ್ಯಗಳು ಕೂಡ ಸಿಕ್ಕಿವೆ. ಈ ರೀತಿಯಾಗಿ ಆಂಧ್ರಭಾಷೆಗೆ ಪುರಾತನ ಸಂಸ್ಕೃತಿಯಿದೆ; ಅದರದೇ ಒಂದು ಚರಿತ್ರೆಯಿದೆ, ಪುರಾಣಗಳ ಕಾಲದಿಂದಾಗಿ ಹರಿಶ್ಚಂದ್ರ, ಶುನಶ್ಯೇಫಾದಿಗಳ ಕಾಲ ಸಂಸ್ಕೃತಿಯ ಹಿನ್ನೆಲೆ ಆಂಧ್ರರಿಗೆ ಇದೆ. ಹೀಗಿರುವಾಗ

(ಶ್ರೀ ಬಿ. ವಿ. ನಾರಾಯಣರೆಡ್ಡಿ.)

ಅವರಿಗೂ ಸಹ ಅವರ ಒಂದು ಸಂಸ್ಕೃತಿ, ಅವರ ಒಂದು ಕಲ್ಚರ್ ಬೆಳೆದುಕೊಂಡು ಸಾವಿರಾರು ವರ್ಷಗಳಿಂದಲೂ ಬಂದಿರುತ್ತದೆ. ಆದುದರಿಂದ ಮಾನ್ಯ ಸದಸ್ಯರು ಅವರ ವಿಚಾರದಲ್ಲಿ ಹೀಗೆಲ್ಲಾ ಹೇಳಬಾರದು. ನಿಮ್ಮ ಕನ್ನಡ ಚರಿತ್ರೆಯಲ್ಲಿ ಕನ್ನಡಿಗರು ಹೇಗೆ ಒಂದು ಸಂಪ್ರದಾಯಬೆಳೆಸಿಕೊಂಡು ಬಂದಿದ್ದಾರೋ ಹಾಗೆ ಅದೇ ನಿಮ್ಮ ಕನ್ನಡ ಚರಿತ್ರೆಯಲ್ಲೆ ಈ ಆಂಧ್ರರ ವಿಚಾರದಲ್ಲಿ ಶಾತವಾಹನನು ಶಕಪುರುಷನಾಗಿ ಬಹಳ ಹಿಂದಿನಿಂದಲೂ ಒಂದು ಆಂಧ್ರರ ಪ್ರತ್ಯೇಕ ಸಂಪ್ರದಾಯವನ್ನು ಅನಾದಿಯಿಂದಲೂ ಬೆಳಸಿಕೊಂಡು ಬಂದಿದ್ದಾನೆ. ಇದೆಲ್ಲಾ ವಿಚಾರಗಳೂ ನಿಮ್ಮ ಕನ್ನಡ ಚರಿತ್ರೆಗಳನ್ನೇ ಓದಿದರೆ ಚೆನ್ನಾಗಿ ಗೊತ್ತಾಗುತ್ತದೆ. ನಿಮ್ಮ ಕನ್ನಡ ಶಕ ಪುರುಷರೂ ಕೂಡ ಈ ಆಂಧ್ರರಲ್ಲಿ ಇಂಟರ್‌ಕನೆಕ್ಷನ್ ಮಾಡಿಕೊಂಡು ಆಂಧ್ರ ಮತದ ಕುಮಾರರೆಡ್ಡಿ ಎಂಬತಕ್ಕವರಿಗೆ ಮಗಳನ್ನು ಕೊಟ್ಟು ಲಗ್ನಮಾಡಿದ್ದರೆಂಬ ವಿಚಾರ ಕೂಡ ಇದೆ. ಈಗಲೂ ನಮ್ಮ ಮನೆತನದ ಹೆಸರು 'ರೆಡ್ಡಿ' ಗಳು ಎಂದು ಇದೆ. ಆಗ ನಮ್ಮ ರಾಜ್ಯ ಈಗಿನ ಮಾಗಡಿವರೆಗೂ ಇತ್ತು. ಆಗ ನಮ್ಮವರು ಇಲ್ಲಿಯವರೊಂದಿಗೆ ಲಗ್ನ, ಮದುವೆ, ಮುಂಜಿ ಇತ್ಯಾದಿಗಳನ್ನೆಲ್ಲಾ ಮಾಡಿಕೊಂಡು ತಮ್ಮದೇ ಆದಂಥ ಒಂದು ಸಂಸ್ಕೃತಿಯನ್ನು ಬೆಳಸಿಕೊಂಡು ಬಂದಿರುತ್ತಾರೆ. ಆಗ ಅವರು ಈ ಲಿಂಗ್‌ವಿಸ್ಟಿಕ್ ವಿಚಾರದಲ್ಲಿ village as a unit ಮಾಡಿಕೊಂಡು ಲಿಂಗ್‌ವಿಸ್ಟಿಕ್ ಪ್ರಾವಿನ್ಸ್‌ಮಾಡಿ ಎಂದು ಹೇಳಿದ್ದಾರೆ. ಹೀಗೆಲ್ಲಾ ಇರುವಾಗ ತಾವು ಈ ಆಂಧ್ರರ ವಿಚಾರದಲ್ಲಿ ಹೀಗೆಲ್ಲಾ ಹೇಳಬಾರದು. ಇಲ್ಲಿಯತನಕ ನೀವು ಯಾವುದನ್ನು ಹಿಂದೂಸ್ಥಾನ ಎಂದು ಕರೆಯುತ್ತಿದ್ದಿರೋ ಅದರಲ್ಲೇ ಈ ದಿವಸ ಪಾಕೀಸ್ಥಾನ ಕೂಡ ಆಗಿದೆ. ಅದೇ ರೀತಿ ನೀವು ಯಾವುದನ್ನು ಕನ್ನಡ ಪ್ರಾಂತ್ಯಎಂದು ಕರೆಯುತ್ತೀರೋ ಅದನ್ನೇ ನಾವು ಆಂಧ್ರಪ್ರಾಂತ್ಯ ಎಂದು ಕರೆಯುತ್ತೇವೆ. ಆದರೆ ನಮ್ಮ ಶ್ರೀ ಇಮಾಂ ಸಾಹೇಬರು ಹೇಳಿರುವುದನ್ನು ನೋಡಿದರೆ ನನಗೆ ಸಂಕಟವೂ ಬರುತ್ತದೆ, ನಗುವೂ ಬರುತ್ತದೆ, ಹಾಗೆ ಹೇಳಿದ್ದಾರೆ: ಅವರು ಏನು ಹೇಳಿದ್ದಾರೆಂದರೆ: "ತಾವು ಈ ಮೈಸೂರು ಸಂಸ್ಥಾನದಲ್ಲಿ ವಿಲೇಜ್ ಯೂನಿಟ್ಟಾಗಿ ತೆಗೆದುಕೊಂಡರೆ 13½ ಲಕ್ಷಕ್ಕೆ ಮೇಲ್ಪಟ್ಟ ಜನಗಳು ಆಂಧ್ರನಾಡಿಗೆ ಸೇರಬೇಕಾಗುತ್ತದೆ. ನಮಗೆ 5 ಜಿಲ್ಲೆಗಳಲ್ಲಿಯೂ ಆಂಧ್ರಕ್ಕೆ ಸೇರಬೇಕಾದ ಪ್ರದೇಶ ಇದೆ. ಅಂದರೆ ತಾವು ಚಿತ್ತೂರು, ಅನಂತಪುರದಿಂದ ಉದ್ದಕ್ಕೂ ಒಂದು ಗೆರೆಯನ್ನು ಈ ತುಮಕೂರು, ಬೆಂಗಳೂರು ಮತ್ತು ಕೋಲಾರದವರೆಗೆ ಎಳೆದರೆ ಆಗ ನಮ್ಮ ಆಂಧ್ರರ ಪ್ರಜಾಸಂಖ್ಯೆ ಶೇಕಡ 70 ರಷ್ಟು 80ರಷ್ಟು ಆಗುತ್ತದೆ. ಈಗ ಕೋಲಾರದಲ್ಲಿ ಶೇಕಡ 50ರಷ್ಟು ತೆಲುಗು ಮಾತನಾಡತಕ್ಕವರಿರುತ್ತಾರೆ. ಹೀಗೆ ತಾವು ಭಾಷಾವಾರ್ ಪ್ರಾಂತ್ಯ ವಿಂಗಡಿಸತಕ್ಕ ಬಗ್ಗೆ village as a unit ಆಗಿ ತೆಗೆದುಕೊಳ್ಳಿ ಅಂದರೆ ಆಗುವುದಿಲ್ಲ" ಎಂದು ಇವರು ಹೇಳಿದ್ದಾರೆ. ನೀವು 1799ರಿಂದ ಎಷ್ಟು ಕಷ್ಟಬದ್ಧಿದ್ದೀರೋ ಆಂಧ್ರರಾದ ನಾವೂ ಕೂಡ ಅಷ್ಟೇಕಷ್ಟಬದ್ಧಿದ್ದೇವೆ. ಈ ದಿವಸ ನಾನು ಈ ಸಭೆಯಲ್ಲಿ ತೆಲುಗಿನಲ್ಲೇನಾದರೂ ಮಾತನಾಡಿಬಿಟ್ಟರೆ ಆ ಸ್ಟೆನೋಗ್ರಾಫರಿಗೆ ಬರೆದುಕೊಳ್ಳುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಇಲ್ಲಿ ಹೀಗೆ ನಾವೀದಿವಸ ಒಂದು ಕ್ಲೆರಿಕಲ್ ಜಾಬಿನ ಆಸೆಗೋಸ್ಕರವಾಗಿ ಕನ್ನಡವನ್ನು ಕಲಿಯಬೇಕಾಗಿ ಬಂದಿದೆ. ಈ ದಿವಸ ನೀವುಗಳೆಲ್ಲಾ, ಇತರ ಆ ಕನ್ನಡ ಭಾಗಗಳಲ್ಲಿರತಕ್ಕಂಥ ಕನ್ನಡ ಜನರು ಏಳಿಗೆಗೆ ಬರಲಿಲ್ಲ, ಅವರಿಗೆ ಸಾಕಷ್ಟು ಶಾಲೆಗಳಿಲ್ಲ, ಅವರು ಬಹಳ ಕಷ್ಟದ ಅವಸ್ಥೆಯಲ್ಲಿದ್ದಾರೆ ಎಂದು ಏನೊಂದು ವಾದ ಎತ್ತಿ ಅವರೆಲ್ಲರನ್ನೂ ಈ ಮೈಸೂರಿಗೆ ಸೇರಿಸಿಕೊಳ್ಳಬೇಕೆಂದು ಹೇಳುತ್ತಿದ್ದೀರೋ ಹಾಗೆ ನಾವೂ ಕೂಡ ನಮ್ಮ ಅಭಿವೃದ್ಧಿಗೋಸ್ಕರವಾಗಿ ನಾವು ಆಂಧ್ರಕ್ಕೆ ಹೋಗುತ್ತೇವೆ ಎಂತ ಹೇಳಿದರೆ ಅದಕ್ಕೆ ನೀವೇಕೆ ಅಡ್ಡಿ ಬರುತ್ತೀರಿ ? ಈಗತಾನೆ ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು ಕೆಳಮಟ್ಟದಲ್ಲಿರತಕ್ಕಂಥ ನಮ್ಮ ಸಹೋದರರನ್ನು ನಾವು ಆ ಕೆಳಮಟ್ಟದಲ್ಲೇ ಬಿಡಬಾರದು ಮೇಲಕ್ಕೆ ಎತ್ತಬೇಕು ಎಂತ ಹೇಳಿದರು. ಅದು ನಿಜ. "ದೇಶಮು ಅಂಟೆ ಮಟ್ಟಿಗಾದು, ದೇಶಮು ಅಂಟೆ ಮನುಷ್ಯಲು' ಅನ್ನಿ ಚೆಪ್ಪಿಂಡಾರು. ಅದೇ ರೀತಿ ಈಗ ತಾವೆಲ್ಲರೂ ಆ ಹೊರಗಡೆಯ ಕನ್ನಡ ಭಾಗಗಳನ್ನು ಮೈಸೂರಿಗೆ ಸೇರಿಸಿಕೊಂಡರೆ ಅಲ್ಲಿ ಬೇಕಾದಷ್ಟು ಖನಿಜಸಂಪತ್ತಿದೆ, ಅರಣ್ಯ ಸಂಪತ್ತಿದೆ, ಇವುಗಳಿಂದ ಮನುಷ್ಯನ ಆರ್ಥಿಕ, ಸಾಮಾಜಿಕ ಜೀವನವನ್ನು ಅಭಿವೃದ್ಧಿಗೊಳಿಸಬಹುದು, ಮಾನವನ ಜೀವನವನ್ನು ಹೀಗೆಲ್ಲಾ ವಿಕಾಸಗೊಳಿಸಬಹುದೆಂತ ಹೇಳುತ್ತಿದ್ದುದೂ ಅಲ್ಲದೆ ನಮ್ಮೆಲ್ಲರ ಬಾಯಿಮುಚ್ಚಿಸಲು ಇದೊಂದು ಒಳ್ಳೆ ಅಡ್ಮಿನಿಸ್ಟ್ರೇಟೀವ್ ಯೂನಿಟ್ ಆಗುತ್ತೆಂದು ಹೇಳುತ್ತಿದ್ದಾರೆ. ನಾವು ನಮ್ಮ ಅಭಿವೃದ್ಧಿಯಾಗಲಿಲ್ಲ ಎಂದು 150 ವರ್ಷಗಳಿಂದಲೂ ಒಂದೇ ಸಮನಾಗಿ ಹೊಡೆದುಕೊಂಡು ಸಾಯುವ ಸ್ಥಿತಿಗೆ ಬಂದಿದ್ದೇವೆ. ಈಗ ನಮ್ಮ ಶ್ರೀ ನಾಗಯ್ಯ ರೆಡ್ಡಿಯವರೂ ಬೆಂಗಳೂರಿನಲ್ಲೇ ಇದ್ದಾರೆ. ಆದರೆ ಏನು ಮಾಡುವುದು ? ಈ ದಿವಸ ಈ ಬೆಂಗಳೂರು ಸಿಟಿಯಲ್ಲಿ ಕನ್ನಡ ಮಾತನಾಡುವವರಿಗಿಂತಲೂ ಅಧಿಕವಾಗಿ ಆಂಧ್ರಭಾಷೆ ಮತ್ತು ತಮಿಳು ಭಾಷೆ ಆಡತಕ್ಕಂಥ ಜನಗಳ ಇಲ್ಲಿದ್ದಾರೆ. ನಾಳೆ ಬೌಂಡರಿಕಮಿಷನ್ ಬಂದನಂತರ ಈ ವಿಚಾರಗಳೆಲ್ಲಾ ತೀರ್ಮಾನವಾಗಬೇಕಾಗಿದೆ. ಹಾಗಿರುವಾಗ ಕೆಲವು ಮಾನ್ಯ ಸದಸ್ಯರು ಇದು ಹೀಗೇ ಆಗುತ್ತದೆ, ಅದು ಹಾಗೇ ಆಗುತ್ತದೆ ಎಂದು ಹೇಳುವುದು ಶುದ್ಧ ತಪ್ಪು ರಿ ಈ ದಿವಸವೇ ಅವರು ಅವರ ಒಂದು ಗುರಿಯನ್ನು ಮುಟ್ಟಿದ ಹಾಗೆ ಮಾತನಾಡಿರುತ್ತಾರೆ. ಹಾಗೆ ನೀವೆಲ್ಲರೂ ಎಷ್ಟು ಅಭಿಮಾನದಿಂದ ಮಾತನಾಡಿದ್ದೀರೋ ನಾನೂ ಕೂಡ ಅಷ್ಟೇ ಅಭಿಮಾನದಿಂದ ಹೇಳುವುದೇನೆಂದರೆ— ಯಾವುದು ತೆಲುಗರ ದೇಶಕ್ಕೆ ಸೇರಬೇಕು ಯಾವುದು ಬೇಡ ಎನ್ನತಕ್ಕದ್ದನ್ನು ನಾವೆಲ್ಲರೂ ಆ ಬೌಂಡರಿಕಮಿಷನವರಿಗೆ ಬಿಡೋಣ ಮತ್ತು ಆಂಧ್ರರಾಜ್ಯ ಅಖಂಡ ಆಗಬೇಕೆಂದ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಗಂಗಾನಾಯ್ಕ (ಶಿಕಾರಿಪುರ-ಸೊರಬ ಅನುಸೂಚಿತ ಜಾತಿಗಳು).—ಸ್ವಾಮಿ, ಇಲ್ಲಿಯವರೆಗೆ ಮಾತನಾಡಿರತಕ್ಕಂಥ ಅನೇಕ ಮಾನ್ಯ ಸದಸ್ಯರಲ್ಲಿ. ಕೆಲವರು ಈ ಏಕೀಕರಣದ ವಿಷಯದಲ್ಲಿ ಇದು ಕೂಡಲೇ ಆಗಬೇಕೆಂದೂ, ಕೆಲವರು ಇದು ಸದ್ಯಕ್ಕೆ ಆಗುವುದು ಬೇಡವೆಂದೂ, ಕೆಲವರು ಎರಡು ಕರ್ಣಾಟಕಗಳಾಗಲಿ ಎಂದೂ ಹೇಳಿದ್ದಾರೆ. ಆದರೆ ಈ ಬಗ್ಗೆ ನಾನು ಇಷ್ಟನ್ನೇ ಹೇಳುತ್ತೇನೆ. ಒಂದೇ ಒಂದು ಅಖಂಡ ಕರ್ಣಾಟಕವಾಗಬೇಕು. ಈಗಾಗಲೇ ನವಮಾಸ ತುಂಬಿ ಗಂಡು ಕೂಸಿನ ಜನನಕ್ಕೆ ಕಾಲ ಸನ್ನಿಹಿತವಾಗುತ್ತಾ ಬಂದಿದೆ. ಇದು ಆಗಿಯೇ ಆಗುತ್ತದೆಂದು ಹೇಳಿ ನನ್ನ ಮಾತುಗಳನ್ನು ಪೂರೈಸುತ್ತೇನೆ.

* ಶ್ರೀ ಬಿ. ವೈ. ನೀಲೇಗೌಡ (ಪಾಂಡವಪುರ).—ಸ್ವಾಮಿ, ಈಗ ಸಭೆಯ ಮುಂದೆ ಚರ್ಚೆಗಾಗಿ ಬಂದು ನಿಂತಿರತಕ್ಕಂಥ ವಿಷಯವು ಒಂದು ದೊಡ್ಡ ಜಟಿಲವಾ

ದಂಥ ಸಮಸ್ಯೆಯನ್ನೊಳಗೊಂಡಂಥ ವಿಷಯವಾಗಿದೆ. ಇದರಿಂದ ಮುಂದೆ ದೇಶದಲ್ಲಿ ಏನಾಗಬಹುದು, ಇದು ಮುಂದಕ್ಕೆ ಯಾವರೂಪ ತಾಳುತ್ತದೆ, ಜನರಲ್ಲಿ ಮುಂದೆ ಎಷ್ಟರಮಟ್ಟಿಗೆ ಇದು ಎಂತಹ ಕಳವಳಕ್ಕೆದಾರಿ ಮಾಡಿಕೊಡುತ್ತದೆ ಎನ್ನತಕ್ಕಂಥ ಈ ಯಾವ ಒಂದು ವಿಚಾರದಲ್ಲೂ ನಾನು ಇನ್ನೂ ನನ್ನ ಒಂದು ನಿರ್ದಿಷ್ಟವಾದ ಅಭಿಪ್ರಾಯನ್ನು ಇಟ್ಟುಕೊಂಡಿಲ್ಲ. ಆದರೆ ಇಂದು ಹೇಳುತ್ತಿರುವಂಥ ಈ ಏಕೀಕರಣವಾದಲ್ಲಿ ಮುಂದೆ ದೇಶದಲ್ಲಿ ಏನೊಂದು ಕಳವಳ ಉದ್ಭವವಾಗುತ್ತದೆ ಎನ್ನತಕ್ಕ ವಿಚಾರದಲ್ಲಿ ನಾನೀಗ ಸದ್ಯಕ್ಕೆ ಏನನ್ನೂ ಮಾತನಾಡಲು ಇಷ್ಟಪಡುವುದಿಲ್ಲ. ಈ ವಿಷಯದಲ್ಲಿ ನನಗೊಂದು ನಿರ್ದಿಷ್ಟವಾದ ಅಭಿಪ್ರಾಯವಿರುವುದಿಲ್ಲ. ಈಗಾಗಲೇ ನನ್ನ ಹಲವಾರು ಸ್ನೇಹಿತರು ಯಾವುದೋ ಒಂದು ದೃಷ್ಟಿಯನ್ನಿಟ್ಟುಕೊಂಡು ತಮ್ಮ ತಮ್ಮ ಅಭಿಪ್ರಾಯಗಳನ್ನು ಈಗ ತಮ್ಮ ಮುಂದೆ ಇಟ್ಟಿದ್ದಾರೆ. ಆದರೆ ಈ ವಿಚಾರದಲ್ಲಿ ನಮ್ಮ ನಮ್ಮ ವೈಯಕ್ತಿಕ ಅಭಿಪ್ರಾಯಗಳೇನೇ ಇರಲಿ ಅವುಗಳನ್ನು ಈ ಸಂದರ್ಭದಲ್ಲಿ ಇಲ್ಲಿ ವ್ಯಕ್ತಪಡಿಸುವುದು ಅಷ್ಟು ಯುಕ್ತವಾದದ್ದಲ್ಲವೆಂದು ನಾನು ತಿಳಿದಿದ್ದೇನೆ. ನಾವೀ ದಿವಸ ಇಲ್ಲಿಗೆ ಯಾರಿಂದ ಚುನಾಯಿತರಾಗಿ ಬಂದು ಕುಳಿತಿದ್ದೇವೋ ಮತ್ತು ಯಾರ ಕಷ್ಟಸುಖಗಳನ್ನು ರಕ್ಷಣೆ ಮಾಡುತ್ತೇವೆಂದು ಜವಾಬ್ದಾರಿಯನ್ನು ಹೊತ್ತಿದ್ದೇವೋ ಅಂಥವರ ಹಿತಸಾಧನೆಯ ಬಗ್ಗೆ ನಾನೀಗ ಏನನ್ನೂ ಮಾತನಾಡದೆ ಸುಮ್ಮನೆ ಕುಳಿತುಬಿಟ್ಟರೆ ಆಗ ಇದು ನನ್ನ ಬೇಜವಾಬ್ದಾರಿ ಆದೀತೆಂಬ ಶಂಕೆಯಿಂದಲೂ ಮತ್ತು ನಾನು ನನ್ನ ಕರ್ತವ್ಯದಲ್ಲಿ ಲೋಪಮಾಡಬಾರದೆಂಬ ಉದ್ದೇಶದಿಂದಲೂ ಎರಡು ಮಾತುಗಳನ್ನಾಡಲು ತಮ್ಮ ಮುಂದೆ ನಿಂತಿದ್ದೇನೆ.

ಈಗಾಗಲೇ ಮಾತನಾಡಿದಂಥ ಸದಸ್ಯರಲ್ಲಿ ಕೆಲವರು ನಮ್ಮ ಮೈಸೂರು ಚರಿತ್ರೆಯನ್ನು ಸಂಪೂರ್ಣವಾಗಿ ವಿವರಣೆಮಾಡುತ್ತ ಹಿಂದಿದ್ದಂಥ ಹೈದರ್ ಮತ್ತು ಟಿಪ್ಪುಸುಲ್ತಾನರ ಕಾಲದಲ್ಲಿ ರಾಜ್ಯ ಹೇಗಿತ್ತು, ಎಲ್ಲಿಯವರೆಗೂ ವಿಸ್ತರಿಸಲ್ಪಟ್ಟಿತ್ತು, ಈ ಅಖಂಡ ಮೈಸೂರಿನ ಕೀರ್ತಿ ಎಲ್ಲಿಯವರೆಗೂ ಹಬ್ಬಿತ್ತು, ಎನ್ನತಕ್ಕಂಥ ವಿಚಾರಗಳನ್ನೆಲ್ಲಾ ಪ್ರಸ್ತಾಪ ಮಾಡಿದ್ದಾರೆ. ಆದರೆ ಹಿಂದೆ ಇದು ಅಷ್ಟೇನೂ ಒಂದು ದೊಡ್ಡ ರಾಜ್ಯವಾಗಿರಲಿಲ್ಲ. ಹಿಂದಿನ ದಿವಸಗಳಲ್ಲಿ ಇದರ ಕಾರ್ಯಕ್ಷೇತ್ರ ಬಹಳ ಚಿಕ್ಕದಾಗಿತ್ತು. ಅಷ್ಟು ಹೆಚ್ಚಿನ ಜನಸಂಖ್ಯೆ ಇಲ್ಲದಿದ್ದಾಗ್ಯೂ ಹಿಂದಿನವರು ತಮ್ಮ ಒಂದು ಹೆಮ್ಮೆಗೋಸ್ಕರವಾಗಿ ರಾಜ್ಯವನ್ನು ಅವರೇನೂ ಹೆಚ್ಚಿಸುತ್ತಾ ಹೋಗಲಿಲ್ಲ. ಆದಾಗ್ಯೂ ಕೆಲವರು ತಮ್ಮ ಬಾಹುಬಲದಮೇಲೆ ಹೆಚ್ಚು ವಿಸ್ತೀರ್ಣವಾಗಿರತಕ್ಕ ರಾಜ್ಯಗಳನ್ನು ಕಟ್ಟಿದ್ದಾಗ್ಯೂ ಅವರು ಜನರ ಹಿತಸಾಧನೆಗಾಗಿ ಹಾಗೇನೂ ಮಾಡಲಿಲ್ಲ ಎಂದು ಹೇಳಬೇಕಾಗಿದೆ. ಹಿಂದಿನವರು ಅವರವರ ಸಿಂಹಾಸನವನ್ನು ಅವರು ಉಳಿಸಿಕೊಳ್ಳಬೇಕಾಗಿದ್ದರೆ ಅವರ ಹಿಡಿತಕ್ಕೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಉಳಿಸಿಕೊಳ್ಳಲು ಪ್ರಯತ್ನ ಮಾಡಿದರೇ ವಿನಾ ಅವರ ಕಾರ್ಯಕ್ಷೇತ್ರವನ್ನು ಬಹಳ ವಿಶಾಲ ಗೊಳಿಸಬೇಕೆಂದೇನೂ ಅವರು ಮಾಡಲಿಲ್ಲ. ಶ್ರೀ ಕೆ. ಪಟ್ಟಾಭಿರಾಮನ್‌ರವರಿಗೆ ಸರ್ವೋದಯದ ವಿಚಾರದಲ್ಲಿ ಸಂಪೂರ್ಣ ನಂಬಿಕೆ ಇದೆ. ಅದರ ತತ್ವಗಳ ಬಗ್ಗೆ ನಂಬಿಕೆ ಇಟ್ಟುಕೊಂಡಿರತಕ್ಕಂಥವರಲ್ಲಿ ಇವರೂ ಒಬ್ಬರು. ಈ ತತ್ವಗಳ ಆಧಾರದಮೇಲೆ ಒಂದು ದೇಶಾಭಿವೃದ್ಧಿ ಆಗಬೇಕಾದರೆ ದೇಶ ಯಾವ ರೀತಿ ಇರಬೇಕು, ಅದು ಯಾವ ಆಧಾರಗಳ ಮೇಲೆ ಪುನರ್ವಿಂಗಡಣೆ ಆಗಬೇಕು ಎನ್ನತಕ್ಕಂಥ ವಿಚಾರಗಳಲ್ಲಿ ಅಚಲವಾದಂಥ ನಂಬಿಕೆಯನ್ನು ಯಾರಾರು ಇಟ್ಟುಕೊಂಡಿದ್ದಾರೋ ಅಂಥವರ ಪೈಕಿ ಶ್ರೀ ಕೆ. ಪಟ್ಟಾಭಿರಾಮನ್‌ರವರೂ ಒಬ್ಬರಾಗಿದ್ದಾರೆ. ಹೀಗೆ ಒಂದು ಖಚಿತವಾದ ಅಭಿಪ್ರಾಯವನ್ನು ಉಳ್ಳವರೆಲ್ಲರೂ ದೇಶದಲ್ಲಿ ಈ ಆಡಳಿತ ಕೇಂದ್ರೀಕೃತವಾಗಬಾರದೆಂದೂ, ಹಾಗೆ ವಿಕೇಂದ್ರೀಕರಣ ಮಾಡಿದಾಗಲೇ ಆ ಸರ್ವೋದಯ ತತ್ವಗಳ ಪ್ರಕಾರ ದೇಶಗಳನ್ನ ಒಂದು ಸುಖರಾಜ್ಯವನ್ನಾಗಿ ಕಟ್ಟಲು ಸಾಧ್ಯವಾಗುತ್ತದೆ ಎಂದು ಹೇಳುತ್ತಿದ್ದಾರೆ. ಹೀಗೆ ಆ ಸರ್ವೋದಯದ ತತ್ವಗಳನ್ನು ನಂಬಿರತಕ್ಕವರು ದೊಡ್ಡ ದೊಡ್ಡ ಪದಗಳನ್ನು ಉಪಯೋಗಿಸಿ ಈ ಅಖಂಡ ಕರ್ಣಾಟಕವೇನೂ ಅಂಥ ಒಂದು ದೊಡ್ಡ ರಾಜ್ಯವಾಗುವುದಿಲ್ಲ ಎಂದು ಹೇಳಿದ್ದಾರೆ. ಆದರೆ ನಾವೀಗ ಪ್ರಸ್ತಾಪ ಮಾಡುತ್ತಿರುವುದು ನೂರಾರು ಚದರ ಮೈಲಿಗಳವರೆಗೆ ನಮ್ಮ ರಾಜ್ಯವನ್ನು ವಿಸ್ತಾರ ಮಾಡೋಣ ಎಂದು. ಆದರೆ ಇಂಥ ಒಂದು ದೊಡ್ಡ ರಾಜ್ಯವನ್ನು ಸ್ಥಾಪನೆಮಾಡಲು ಸಾಧ್ಯವೇ ಎನ್ನುವುದನ್ನು ನಾವೀಗ ಆಲೋಚನೆ ಮಾಡಬೇಕಾಗಿದೆ.

5-30 P.M.

ಟಿಪ್ಪುಸುಲ್ತಾನ್ ಕಾಲದಲ್ಲಿ ಶ್ರೀರಂಗಪಟ್ಟಣ ರಾಜಧಾನಿ ಆಗಿದ್ದಾಗ್ಗೆ ನೂರಾರು ಮೈಲಿಗಳವರೆಗೂ ರಾಜ್ಯ ವಿಸ್ತಾರ ಆಗಿದ್ದು ಅದನ್ನು ಆಳುತ್ತಿದ್ದರು ಎಂದು ಹೇಳಿದರು. ನಾನು ಅದನ್ನು ಚರಿತ್ರೆಯಲ್ಲಿ ಓದಿದ್ದು ನಿಜ. ಆದರೆ N.E.S. ಬ್ಲಾಕ್ಸ್ ಪ್ರಾರಂಭ ಮಾಡಬೇಕು, Five-year plan ಮಾಡಬೇಕು, ದೇಶದ ಪ್ರಗತಿಯನ್ನು ಸಾಧಿಸಬೇಕು, ದೇಶದ ಸರ್ವತೋಮುಖ ಏಳಿಗೆಗೆ ಸಾಧನೆ ಮಾಡಬೇಕು ಎಂದು ಯಾವ ರಾಜನೇ ಆಗಲೀ, ಯಾವ ಸರ್ಕಾರವೇ ಆಗಲೀ, ಯಾವ ಸಂಸ್ಥಾನಾಧಿಪತಿಯೇ ಆಗಲೀ ಶ್ರಮಿಸಿದ್ದು ನಾ—ಕಾಣೆ;—ಅದರಲ್ಲೂ ಟಿಪ್ಪುಸುಲ್ತಾನ್ ಕಾಲದಲ್ಲಿ ಈ ತರಹ ಯಾವ ಸ್ಕೀಂ ಮಾಡಿದ್ದೂ ನನಗೆ ಗೊತ್ತಿಲ್ಲ. ಟಿಪ್ಪುಸುಲ್ತಾನ್ ಕಾಲದಲ್ಲಿ ರಾಜ್ಯಭಾರ ಮಾಡಿದ ತರಹವೇ ಬೇರೆ, ಈಗ ನಮ್ಮ ಮುಂದೆ ಇರುವ ರಾಜ್ಯಭಾರವೇ ಬೇರೆ. ಈಗ ಅವಿದ್ಯಾವಂತರನ್ನು ಚಾವಟಿಯಿಂದ ಹೊಡೆದು ವಿದ್ಯಾವಂತರನ್ನಾಗಿಮಾಡುವ ಕಾಲ ಬಂದಿದೆ. ಹಿಂದೆ ಉಪಾಧ್ಯಾಯರು ಬೆತ್ತದಿಂದ ಹೊಡೆದು ಪಾಠ ಕಲಿಸುತ್ತಿದ್ದರು, ನಮಗೆ ಪಾಠ ಚೆನ್ನಾಗಿ ಬರುತ್ತಿತ್ತು. ಅಂತಹಕಾಲ ಬರುತ್ತದೆ. ಜವಾಬ್ದಾರಿ ಸರ್ಕಾರ ಬಂದಿರುವ ಕಾಲದಲ್ಲಿ ಇಲ್ಲದ ಸಲ್ಲದ ವಿಚಾರಗಳನ್ನು ವಿಸ್ತಾರ ಮಾಡಿಕೊಂಡು ಹೋದರೆ ನಿರ್ದಿಷ್ಟವಾದ ಕಾಲದಲ್ಲಿ ನಾವು ನಮ್ಮ ಮುಂದೆ ಇರತಕ್ಕ ಗುರಿಯನ್ನು ಸಾಧಿಸುವುದಕ್ಕೆ ಸಾಧ್ಯವೇ ಎಂಬುದನ್ನು ನೋಡಬೇಕು. ಇನ್ನೊಂದು ನಿರ್ವಿವಾದವಾದ ವಿಚಾರ ಏನೆಂದರೆ, ಮೈಸೂರು ಮುಂದಕ್ಕೆ ಬಂದಿದೆ ಮತ್ತು ಕೆಲವು ಕರ್ಣಾಟಕದ ಭಾಗಗಳು ಹಿಂದುಳಿದಿವೆ. ಹಿಂದುಳಿದ ಪ್ರಾಂತಗಳು ಹಿಂದೆಯೇ ಇರಲಿ, ಮುಂದೆ ಇರುವವರ ಸೌಕರ್ಯಗಳಿಗೆ ಅಡ್ಡಿ ಬರುವುದು ಸರಿ ಎನ್ನುವ ವ್ಯಕ್ತಿ ನಾನಲ್ಲ. ಮುಂದೆ ಹೋಗಿರುವವರ ಕರ್ತವ್ಯ ಹಿಂದುಳಿದಿರುವವರನ್ನು ತಮ್ಮ ಜೊತೆಯಲ್ಲಿ ಮುಂದಕ್ಕೆ ತೆಗೆದುಕೊಂಡು ಹೋಗುವುದೇ ಆಗಿದೆ. ಆಗ ಅವರು ಮುಂದೆ ಬಂದಿದ್ದಕ್ಕೆ ಸಾರ್ಥಕವಾಗುತ್ತದೆ. ನಮಗೆ ಅನುಕೂಲವಾಗಿದೆ. ಬೇರೆಯವರಿಗೆ ಬೇಡ ಎಂದು ಹೇಳುವುದನ್ನು ಒಪ್ಪುವುದಕ್ಕಾಗುವುದಿಲ್ಲ. ಅವರು ಹಿಂದುಳಿದಿದ್ದರೆ ಅವರನ್ನು ನಮ್ಮ ಜೊತೆಗೆ ಸೇರಿಸಿಕೊಳ್ಳೋಣ ಎಂದರೆ ಮುಂದುವರಿದಿದ್ದವರಿಗೆ ಅತೃಪ್ತಿ ಆಗುತ್ತದೆ. ಈ

(ಶ್ರೀ ಬಿ. ವೈ. ನೀಲೇಗೌಡ.)

ಅತೃಪ್ತಿಯೂ ಇಬ್ಬರಲ್ಲಿಯಲ್ಲ ಉಂಟಾಗದಂತೆ ನೋಡಬೇಕು. ಇಂಡಿಯಾ ದೇಶದ ಇತರ ಭಾಗಗಳನ್ನು ಗಣನೆಗೆ ತೆಗೆದುಕೊಂಡರೆ ನಾವು ಬಹಳ ವೇಗವಾಗಿ ಹೋಗುತ್ತಿದ್ದೇವೆ. ಇಂತಹ ವೇಗದಲ್ಲಿ ಮುಂದುವರಿದು ಹೋಗಬೇಕಾದರೆ ಇಂಥಿಂಥಾದ್ದೇ ಮಾಡಬೇಕು ಎಂದು ನಮ್ಮ ಮುಂದೆ ಇಟ್ಟುಕೊಂಡಿದ್ದೇವೆ. ಅವರೂ ನಮ್ಮ ಜೊತೆಯಲ್ಲಿ ಬರಬೇಕಾದರೆ ನಿರ್ದಿಷ್ಟವಾದ ಗುರಿಯಿಟ್ಟುಕೊಂಡಿರಬೇಕು. ಅವರ ಜೊತೆಯಲ್ಲಿ ಸೇರಬೇಕಾದರೆ ನಾವು ಮುಂದುವರಿಯಬೇಕೆಂಬ ದೃಷ್ಟಿ ಇಟ್ಟುಕೊಂಡಿದ್ದೇವೆ. ನಮ್ಮಲ್ಲಿ ಖೋತಾ ಬಡ್ಜೆಟ್ ಇದೆ ಎಂಬುದನ್ನು ಎರಡು ಕಡೆ ವಾದ ಮಾಡುವವರು ಹೇಳುತ್ತಾರೆ. ಆದ್ದರಿಂದ ಅವರು ಬಂದು ಸೇರಿದರೆ ಹಣಕಾಸಿನ ಮುಗ್ಗಟ್ಟು ಜಾಸ್ತಿಯಾಗುತ್ತದೆ. ಈಗ ಯಾವ ವೇಗದಲ್ಲಿ ಮುಂದುವರಿಯುತ್ತಿದ್ದೇವೆಯೋ, ಅಷ್ಟೇ ವೇಗದಲ್ಲಿ ಪ್ರಗತಿ ಸಾಧನೆ ಮಾಡುವುದಕ್ಕಾಗುವುದಿಲ್ಲ ಎಂದು ಎರಡು ಪಕ್ಷದವರೂ ಒಪ್ಪಿಕೊಂಡಿರುತ್ತಾರೆ. ಒಂದು ಪಕ್ಷದವರು ಇಂಡಿಯಾ ದೇಶ ಒಂದೇ ಆಗಿರುವಾಗ ಇಂಡಿಯಾ ದೇಶವನ್ನೆಲ್ಲಾ ಒಂದೇ ಮಟ್ಟಕ್ಕೆ ತರಬೇಕೆಂದು ನಿರ್ಧರಿಸಿಕೊಂಡಿರುವಾಗ ಜೊತೆಯಲ್ಲಿ ಇದ್ದರೂ ಅಥವಾ ನಾವು ಬೇರೆಕಡೆ ಇದ್ದರೂ, ಜವಾಬ್ದಾರಿ ಎಲ್ಲರಮೇಲೂ ಇದೆ. ಆದ್ದರಿಂದ ಅವರು ನಮ್ಮ ಜೊತೆಗೆ ಬರಲಿ ಎಂದು ಹೇಳುತ್ತೇನೆ. ಅವರು ಹಿಂದುಳಿದಿರುವವರನ್ನು ತೆಗೆದುಕೊಂಡರೆ, ನಮ್ಮ ವೇಗಕ್ಕೆ ಅಡ್ಡಿ ಆಗುತ್ತದೆ ಎಂದು ಅತೃಪ್ತಿ ಸೂಚಿಸುತ್ತಾರೆ. ಹಾಗೆ ಎರಡು ವಾದಗಳಲ್ಲಿಯೂ ಅತೃಪ್ತಿಪಡತಕ್ಕ ಅಂಶಗಳು ಸೇರಿವೆ. ದೇಶದಲ್ಲಿ ಅತೃಪ್ತಿಯಿಂದ ಜೀವನ ಮಾಡುವುದಕ್ಕೆ ಬದಲು, ಅವರೂ ಬದುಕಲಿ, ನಾವೂ ಬದುಕೋಣ ಎನ್ನುವ ಮಾರ್ಗವನ್ನು ಅನುಸರಿಸಬೇಕು. ಒಬ್ಬರು ಲೋಯರ್ ಸೆಕೆಂಡರಿಯಲ್ಲಿ, ಇನ್ನೊಬ್ಬರು ಎಸ್.ಎಸ್.ಎಲ್.ಸಿ.ಯಲ್ಲಿ, ಮತ್ತೊಬ್ಬರು, ಬಿ.ಎ.ಯಲ್ಲಿ ಓದುತ್ತಿದ್ದಾರೆ ಎನ್ನೋಣ. ಈ ಮೂವರಿಗೂ ಏಕಕಾಲದಲ್ಲಿ ಪಾಠ ಹೇಳುವುದಕ್ಕಾಗುವುದಿಲ್ಲ. ಅಂತೆಯೇ ಎಲ್ಲರನ್ನೂ ಕಟ್ಟಿಕೊಂಡು ಒಂದು ಅಂತಸ್ತಿನ ಮತ್ತು ಒಂದು ಮಟ್ಟದ ರಾಜ್ಯವನ್ನು ಕಟ್ಟುತ್ತೇವೆಂದರೆ, ಅದು ಸಾಧ್ಯವಾಗುವುದಿಲ್ಲ. ಆದ್ದರಿಂದ administrative unitನ್ನು ತೀರ್ಮಾನ ಮಾಡುವಾಗ ಕೇವಲ ಪ್ರಜಾಸಂಖ್ಯೆ ಮತ್ತು ವಿಸ್ತೀರ್ಣದಮೇಲೆ ಪ್ರಾಂತಗಳನ್ನು ಮಾಡಬಾರದು. ಸರ್ಕಾರದ ಗುರಿಯೇನಿದೆ, ಸರ್ಕಾರದ ಕಾರ್ಯಕ್ಷೇತ್ರ ಏನಿದೆ, ಸರ್ಕಾರದ ಜವಾಬ್ದಾರಿ ಏನಿದೆ ಎಂಬುದನ್ನೆಲ್ಲಾ ಗಮನಿಸಿ ನಮ್ಮ ಗುರಿಯನ್ನು ಸಾಧಿಸಬೇಕಾದರೆ ಎಷ್ಟು ಚಿಕ್ಕದಾಗಿದ್ದರೆ ಅಷ್ಟು ಸುಲಭದಲ್ಲಿ ಸಾಧಿಸಬಹುದೆಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು ತೀರ್ಮಾನ ಮಾಡಬೇಕು. ಶ್ರೀ ಕೆ. ಪಟ್ಟಾಭಿರಾಮನ್‌ರವರು ಈ ಭಾಷೆಯ ಆಧಾರದ ಮೇಲೆ ಪುನರ್‌ವಿಂಗಡಣೆ ಮಾಡಿದರೆ ಕೋಲಾರ ಡಿಸ್ಟ್ರಿಕ್ಟನ್ನು ಏನು ಮಾಡುತ್ತೀರಿ ಎಂದು ಕೇಳಿದ. ಭಾಷಾವಾರು ಪ್ರಾಂತ್ಯಗಳನ್ನು ಮಾಡುವ ತತ್ವವನ್ನು ಒಪ್ಪಿಕೊಳ್ಳುವುದಾದರೆ, ಆ ತತ್ವಕ್ಕೆ ಅನುಸಾರವಾಗಿ ಈ ವಿಚಾರದಲ್ಲಿಯೂ ನಡೆದುಕೊಳ್ಳಬೇಕೆಂದು ಶ್ರೀ ಚನ್ನಬಸಪ್ಪನವರು ಹೇಳಿದಾಗ ನನ್ನ ಮನಸ್ಸು ಬಹಳ ನೋಯಿತು. ಶ್ರೀ ಪಟ್ಟಾಭಿರಾಮನ್‌ರವರು ತೆಲುಗು ರಾಜ್ಯದಲ್ಲಿ ಹುಟ್ಟಿದವರಾದರೂ ಕನ್ನಡ ಭಾಷೆಯಲ್ಲಿ ಪ್ರಭಾವ ಶಾಲಿಗಳಾದವರು. Though Sri Pattabhiraman was born in Telugu place, he became a master in Kannada language. His speech was so effective that it opened our eyes. He was one of those leaders who created patriotism in the minds of so-called Kannada People. Whether a man who has created such a history in Kannada language has got to be condemned as a non-Kannada speaking person and sent out is a question which burns our hearts.

ಕನ್ನಡ ಭಾಷೆಯನ್ನು ಕಲಿತು ತಮ್ಮ ಕನ್ನಡ ಭಾಷೆ ಪ್ರಭಾವವನ್ನು ಬೀರಿ ಜನರ ಕಣ್ಣು ತೆರೆದು ತೋರಿಸಿ ತ್ಯಾಗಮಾಡಿದ ಶ್ರೀ ಪಟ್ಟಾಭಿರಾಮನ್‌ರವರನ್ನು ನೀವು ಕನ್ನಡಿಗರಲ್ಲ, ನೀವು ಹೋಗಿ ಎನ್ನಬೇಕಾದರೆ ನಮ್ಮ ಮನಸ್ಸಿನಲ್ಲಿ ಯಾವರೀತಿ ಆಗುತ್ತದೆ?

Sri J. MOHAMED IMAM.—I have been claiming that they are hundred percent Kannadigas. ಅವರು ಇರಬೇಕು ಎಂದು ಹೇಳುತ್ತಾ ಇದ್ದೇವೆ, ಹೋಗಿ ಎಂದು ಹೇಳುತ್ತಾ ಇಲ್ಲ. ಅವರನ್ನು condemn ಮಾಡುತ್ತಾ ಇಲ್ಲ.

ಶ್ರೀ ಬಿ. ವೈ. ನೀಲೇಗೌಡ.—ಭಾಷೆಯನ್ನೇ ಆಧಾರವಾಗಿಟ್ಟುಕೊಂಡು ಪ್ರಾಂತ್ಯಗಳನ್ನು ಮಾಡಿದರೆ ತೆಲುಗು ಮಾತನಾಡತಕ್ಕ ಜನರಿರುವ ಕೋಲಾರ ಡಿಸ್ಟ್ರಿಕ್ಟ್‌ನ್ನು ಏನುಮಾಡುತ್ತೀರಿ ಎಂದು ಕೇಳಿದ್ದಕ್ಕೆ ಒಬ್ಬರೇ ಒಬ್ಬರು ಅವರು ನಮ್ಮನ್ನು ಬಿಟ್ಟುಹೋಗಬಹುದು ಎಂದು ಉತ್ತರ ಕೊಟ್ಟರು. ಕೋಲಾರ ಡಿಸ್ಟ್ರಿಕ್ಟಿನಲ್ಲಿರುವ ಶ್ರೀ ನಾಗಯ್ಯರೆಡ್ಡಿ, ಶ್ರೀ ಚಂಗಲರಾಯರೆಡ್ಡಿ ಮುಂತಾದವರು ಕನ್ನಡ ಪರಿಣತರಲ್ಲವೇ? ನಾನು ವೈಯಕ್ತಿಕವಾಗಿ ಏನೂ ಹೇಳುತ್ತಾ ಇಲ್ಲ. ನಮ್ಮೊಡನೆ ನಿಂತು, ಬೆಂದು ಕಷ್ಟಪಟ್ಟು ಕೊನೆಯಲ್ಲಿ ನಾವು-ಸುಖವಾಗಿ ಊಟಮಾಡುವ ಕಾಲದಲ್ಲಿ ಅವರನ್ನು ಹೊರಡಿ ಎಂದು ಹೇಳುವುದು ಸರಿಯಲ್ಲ. ಈ ದೃಷ್ಟಿಯಿಂದ ರಾಜ್ಯವನ್ನು ಚಿಕ್ಕದಾಗಿಟ್ಟುಕೊಂಡರೆ ನಮ್ಮ ಪ್ರಗತಿಯನ್ನು ಸಾಧಿಸುವುದಕ್ಕೆ ಸುಲಭವಾಗುತ್ತದೆ. ಪ್ರಾಂತ್ಯಗಳನ್ನು ಪುನರ್‌ವಿಂಗಡಣೆ ಮಾಡುವಾಗ Administrative convenience ಪ್ರಾಧಾನ್ಯವಾಗಿಟ್ಟುಕೊಂಡು ಯಾವುದಾದರೂ ಸನ್ನಿವೇಶದಲ್ಲಿ ಸುಲಭವಾಗಿ ತೀರ್ಮಾನ ಮಾಡುವುದಕ್ಕೆ ಸಾಧ್ಯವಿದ್ದರೆ ಆಗ ಭಾಷೆಯನ್ನು ಬೇಕಾದರೆ ಆಧಾರವಾಗಿ ಇಟ್ಟುಕೊಳ್ಳಿ. ಮೈಸೂರು ದೇಶ ಇದ್ದಹಾಗೆ ಇಟ್ಟುಕೊಂಡು ಇತರ ಕನ್ನಡಿಗರು ಒಂದು ಪ್ರಾಂತ್ಯವನ್ನು ಮಾಡಿಕೊಂಡರೆ ನಮ್ಮ ಅಡ್ಡಿ ಇರುವುದಿಲ್ಲ, ಅವರಿಗೆ ಏನೂ ತೊಂದರೆಯಾಗುವುದಿಲ್ಲ ಎಂದು ಹೇಳುತ್ತೇನೆ. ನನ್ನ ವೈಯಕ್ತಿಕ ಅಭಿಪ್ರಾಯದಿಂದ ಹೇಳುವುದಾದರೆ ದೇಶ ವಿಶಾಲವಾದರೆ, ಕೇಸುಗಳು ಹೆಚ್ಚುತ್ತವೆ. ನಾನು ಲಾಯರಾಗಿರುವುದರಿಂದ ನನಗೆ ಹೆಚ್ಚಿಗೆ ಪ್ರಯೋಜನವಾಗುತ್ತದೆ. ಶ್ರೀಮತಿ ಬಳ್ಳಾರಿ ಸಿದ್ದಮ್ಮನವರಿಗೆ ಅದರಿಂದ ಪ್ರಯೋಜನವಾಗುವುದಿಲ್ಲ. ನನ್ನ ಕ್ಷೇತ್ರದೃಷ್ಟಿ ಹೇಳುವುದಾದರೆ ನನ್ನ ಕ್ಷೇತ್ರದ ಜನರು ಇದಕ್ಕೆ ಬಹಳ ವಿರೋಧವಾಗಿದ್ದಾರೆ. ನಮ್ಮನ್ನು ಐದು ವರ್ಷಗಳಿಗೊಮ್ಮೆ ಚುನಾಯಿಸಿ ಇಲ್ಲಿಗೆ ಕಳುಹಿಸುತ್ತಾರೆ. ಈ ಐದು ವರ್ಷಗಳಲ್ಲಿ ಏನೇನು ಮಾಡಬೇಕು ಎಂದು ನಮಗೆ ನಿರ್ದಿಷ್ಟವಾಗಿ ಸೂಚನೆಗಳನ್ನು ಕೊಡದೇ ಇದ್ದರೂ ಈ ವಿಚಾರದಲ್ಲಿ ಅನೇಕ ಸಂಪ್ರದಾಯಗಳಿವೆ. ಇಂಗ್ಲೆಂಡ್ ದೇಶದಲ್ಲಿ ಯಾವುದಾದರೂ ಹೊಸತತ್ವವನ್ನು ತರಬೇಕಾದರೆ ಅದನ್ನು, ಚುನಾವಣೆ ಕಾಲದಲ್ಲಿ ಮ್ಯಾನಿಫೆಸ್ಟೋನಲ್ಲಿ ಹಾಕಿಕೊಳ್ಳುತ್ತಾರೆ. ಲೇಬರ್ ಪಾರ್ಟಿಯವರು

ಕೈಗಾರಿಕೆಯನ್ನು ರಾಷ್ಟ್ರೀಕರಣ ಮಾಡಿದಾಗ ಒಂದು ನಿರ್ದಿಷ್ಟವಾದ ತತ್ವವನ್ನು ಇಟ್ಟುಕೊಂಡು ರಾಷ್ಟ್ರೀಕರಣ ಮಾಡಿದರು. ಅವನ್ನು ಬದಲಾಯಿಸಬೇಕಾದರೆ, ಪುನಃ ಎಲೆಕ್ಷನ್ ಮ್ಯಾನಿಫೆಸ್ಟೋನಲ್ಲಿ ನಮೂದುಮಾಡಿ ಬದಲಾಯಿಸಿದರು. ಇದು ಈಗಿನ ಜನಾಂಗದ ಭವಿಷ್ಯ ಮಾತ್ರವಲ್ಲ, ಭಾವೀ ಜನಾಂಗದ ಭವಿಷ್ಯವನ್ನು ರೂಪಿಸುವಂತಹುದು. ಅದಕ್ಕೆ ನಮಗೆ ಪ್ರತ್ಯಕ್ಷವಾಗಿಯಾಗಲೀ ಅಪ್ರತ್ಯಕ್ಷವಾಗಿಯಾಗಲೀ ಅಧಿಕಾರ ಇಲ್ಲದೇ ಇರುವಾಗ ಮೈಸೂರಿನ ವೈಶಿಷ್ಟ್ಯವನ್ನು ಬದಲಾಯಿಸುವುದು ಧರ್ಮವಲ್ಲ ಎಂದು ಹೇಳುತ್ತೇನೆ. ನಾನು ಎರಡು ಕರ್ಣಾಟಕಗಳಾಗಬೇಕೆಂಬುದನ್ನು ಒಪ್ಪಿ ನನ್ನ ಭಾಷಣವನ್ನು ಮುಗಿಸುತ್ತೇನೆ.

* ಶ್ರೀ ಸಿದ್ದಯ್ಯ ಉರುಫ್ ಕುನ್ನಯ್ಯ (ಗುಂಡ್ಲುಪೇಟೆ-ಹೆಗ್ಗಡದೇವನಕೋಟೆ ಅನುಸೂಚಿತ ಜಾತಿಗಳು).— ನಾನು ಈ ಸಮಯದಲ್ಲಿ ಖಚಿತವಾಗಿ ಹೇಳಬೇಕಾದರೆ ಕನ್ನಡನಾಡು ಆಗಬೇಕು. ಇದೇ ಕಾಂಗ್ರೆಸ್ಸಿನ ಗುರಿ. ಬೇಗನೇ ಕರ್ಣಾಟಕ ಪ್ರಾಂತ ರಚನೆಯಾಗಲಿ ಎಂದು ಹಾರೈಸುತ್ತೇನೆ.

* ಶ್ರೀ ಎಚ್. ಸಿ. ಲಿಂಗಾರೆಡ್ಡಿ (ಮಾಲೂರು).— ಶೇಷಾದ್ರಿ ಸಮಿತಿ ಅಂಕಿ ಅಂಶಗಳ ವಿಷಯವನ್ನು ನಾವು ಚರ್ಚೆಗೆ ತೆಗೆದುಕೊಂಡು ಕೊನೆಗೆ ಬರುತ್ತಾ ಬರುತ್ತಾ ಅಂಕಿಅಂಶಗಳ ವಿವರಗಳಿಗೆ ಯಾರೂ ಹೋಗದೆ ಇರುವುದು ನೋಡಿದರೆ ಈ ಅಂಕಿಅಂಶಗಳಿಗೆ ಸರಿಯಾದ ಬೆಲೆಯನ್ನು ಕೊಡುವುದಕ್ಕೆ ಸದಸ್ಯರಿಗೆ ಇಷ್ಟವಿಲ್ಲವೆಂದು ಗೊತ್ತಾಗುತ್ತದೆ.

ಅಧ್ಯಕ್ಷರು.—ಅಂಕಿಅಂಶಗಳು ಎಂಟು ದಿವಸಗಳಿಂದ ಚರ್ಚೆಯಾಗುತ್ತಿವೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಅಂಕಿಅಂಶಗಳು ಬೇಕಾಗಿಲ್ಲ ಎಂದು ಮಾನ್ಯ ಮಿತ್ರರಾದ ಶ್ರೀ ಪಟ್ಟಾಭಿರಾಮಯ್ಯರವರು, ಶ್ರೀ ಸಿದ್ದಲಿಂಗಯ್ಯನವರು, ಶ್ರೀ ಚನ್ನಬಸಪ್ಪನವರು ಮತ್ತು ಅನೇಕರು ಹೇಳುವುದನ್ನು ನೋಡಿದರೆ ನನಗೆ ಬಹಳ ಆಶ್ಚರ್ಯವಾಗುತ್ತದೆ. ಈ ವಾದ ವಿವಾದಗಳನ್ನು ಕೇಳಿರುವವರಿಗೆ ಬಹುಶಃ ಒಂದು ಭಾಷೆ ಮಾತನಾಡುವವರೂ, ಇನ್ನೊಂದು ಭಾಷೆ ಮಾತನಾಡುವವರೂ ಯುದ್ಧ ಮಾಡುತ್ತಿದ್ದಾರೆಂದು ಭಾಸವಾಗುವುದರಲ್ಲಿ ಯಾವ ಆಶ್ಚರ್ಯವೂ ಕಾಣುವುದಿಲ್ಲ.

Mr. SPEAKER.—It should not be inferred like that. Even when discussing a Bill, there was much opposition. I think more opposition than in the present debate.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಭಾಷಣದ ವಿವಾದಗಳನ್ನು ನೋಡಿದರೆ ನಾವು ಭಾರತೀಯರು ಅಲ್ಲವೋ ಎನ್ನುವ ಸಂಶಯ ಬರುವುದಕ್ಕೆ ಕಾರಣವಾಗುತ್ತದೆ. ಇಷ್ಟೊಂದು ಚರ್ಚೆ, ಇಷ್ಟೊಂದು ಭಿನ್ನಾಭಿಪ್ರಾಯ ಇರುವುದನ್ನು ನೋಡಿದರೆ ಭಾಷಾವಾರು ಪ್ರಾಂತ್ಯ ವಿತಕ್ಕೆಬೇಕೋ ಎಂದು ನನಗನ್ನಿಸುತ್ತದೆ. ಮೈಸೂರು ಸಂಸ್ಥಾನದ ಅಕ್ಕಪಕ್ಕದ ಕನ್ನಡ ಭಾಗಗಳು ಒಂದಾಗಬೇಕೇ ಬೇಡವೇ ಎನ್ನುವ ವಿಷಯವನ್ನೂ ಕೂಡ ಕಾಂಗ್ರೆಸ್ಸಿನ ನಾಯಕರು ಆಲೋಚನೆ ಮಾಡಿದ್ದಾರೆ. ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಭಾಷೆಯ ಆಧಾರದ ಮೇಲೆ ಪ್ರಾಂತವಿಂಗಡನೆ ಆಗಬೇಕು ಎಂಬ ಕೂಗು ಎದ್ದಿದೆ. ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಬೇಕು. ಧಾರ್ ಸಮಿತಿಯವರು ಈ ಪ್ರಾಂತವಿಂಗಡನೆ ಆಗಬೇಕು ಎಂಬ ವಿಷಯದಲ್ಲಿ ಅಷ್ಟು ಪ್ರೋತ್ಸಾಹಕರವಾದ ವರದಿಯನ್ನು ಕೊಡದೇ ಇದ್ದುದರ ಮೇಲೆ. ನಮ್ಮ ದೇಶದ ಮೂವರು ಮಹಾನಾಯಕರು ಈ ವಿಷಯವನ್ನು ಚರ್ಚೆ ಮಾಡಿ J. V. P. report ಬರೆದಿದ್ದಾರೆ. ಅದರಲ್ಲಿ ಭಾಷಾವಾರು ಪ್ರಾಂತ ರಚನೆಯನ್ನು ಯಾವ ಒಂದು ಬೆಳಕಿನಲ್ಲಿ ನೋಡಬೇಕು, ಯಾವ ದೃಷ್ಟಿಯಿಂದ ನೋಡಬೇಕು ಎಂದು ಹೇಳಿರುವುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬೇಕೆಂದು ನಾನು ಬಹಳವಾಗಿ ಇಚ್ಛಿಸುತ್ತೇನೆ. ಮಾತನಾಡಿದವರ ಪೈಕಿ ಅನೇಕ ಸ್ನೇಹಿತರು ದೇಶದಲ್ಲಿ ಕನ್ನಡ ಮಾತನಾಡುವ ಭಾಗಗಳೆಲ್ಲಾ ಒಂದಾಗಬೇಕೆಂದು ಹೇಳಿ ಅದಕ್ಕೆ ಅಂಕಿಅಂಶಗಳ ಆಧಾರ ಕೊಡದೆ ಭಾವನಾ ಪ್ರಪಂಚಕ್ಕೆ ಅವರ ವಾದವನ್ನು ತೆಗೆದುಕೊಂಡು ಹೋಗುತ್ತಿರುವುದನ್ನು ನೋಡಿದರೆ ಅಂಕಿಅಂಶಗಳು ಒಂದೂ ಕೂಡ ಬೇಕಿಲ್ಲವೆಂಬ ಭಾವನೆ ನಮ್ಮ ಸ್ನೇಹಿತರಲ್ಲಿ ಇದ್ದ ಹಾಗೆ ಕಾಣುತ್ತದೆ. ಈ ಸಮಸ್ಯೆಯನ್ನು ಒಂದು ನಿಷ್ಪಕ್ಷಪಾತ ದೃಷ್ಟಿಯಿಂದ ನೋಡಬೇಕು. ನಾವು ಭಾರತೀಯರು ಎಲ್ಲರೂ ಒಂದೇ ಎಂದು ಹೇಳುವುದು ಹೋಗಿ ನಾವು ಆಂಧ್ರರು, ನಾವು ಕನ್ನಡಿಗರು ಎಂದು ಭಾಷೆಯ ವ್ಯತ್ಯಾಸವನ್ನು ತೋರಿಸುವುದು ಸರಿಯಲ್ಲ. ಅನೇಕ ಮಾನ್ಯ ಸದಸ್ಯರು ಮಾತನಾಡುತ್ತಾ ಪ್ರದೇಶಗಳು ಸುಮ್ಮನೆ ಬರುತ್ತವೆಯೇ, ಹಿಂದಿನ ಕಾಲದಲ್ಲಿ ಅದಕ್ಕಾಗಿ ಯುದ್ಧ ಮಾಡಬೇಕಾಗಿತ್ತು, ಈಗ ಹಾಗೆ ಮಾಡಬೇಕಾಗಿಲ್ಲ ಎಂದು ಹೇಳುವುದನ್ನು ನೋಡಿದರೆ ನಾವು ಭಾರತೀಯರು ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಂಡಿದ್ದಾರೆಯೇ, ಭಾರತೀಯರಲ್ಲಿ ಐಕಮತ್ಯ ಅವರಿಗೆ ಬೇಕಾಗಿದೆಯೇ ಎಂದು ನನಗೆ ಸಂಶಯವುಂಟಾಗಿದೆ.

ಈ ಸಮಸ್ಯೆಯನ್ನು ಯಾವ ದೃಷ್ಟಿಯಿಂದ ನೋಡಬೇಕೆಂದು J.V.P ರಿಪೋರ್ಟಿನ ವರದಿಯಲ್ಲಿ ಹೇಳಿದೆ. ಅದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

"It is clear that in giving effect to this principle a great many difficulties of a far-reaching character have to be faced. Whatever the origin of these provinces, and however artificial they may have been, a century or so of political, administrative and to some extent economic unity in each of the existing provincial areas had produced a certain stability and a certain tradition, and any change in this would naturally have an upsetting effect" ಎಂದು ಹೇಳಿದ್ದಾರೆ. ಹಾಗೆಯೇ ಮುಂದುವರಿಯುತ್ತಾ.

"There can be no doubt that the new problems that have arisen since August 1947 have made a vast difference to India. We have to adjust all our thinking and our activity to the new conditions that have arisen in India and the problems of today. There can be no greater error than to think of today, in terms of yesterday, or to

(ಶ್ರೀ ಎಚ್. ಸಿ. ಲಿಂಗಾರೆಡ್ಡಿ.)

seek to solve today's problems in terms of yesterday's."

ಎಂದು ಹೇಳಿದೆ. ಆದ್ದರಿಂದ ಈ ಸಮಸ್ಯೆಯನ್ನು ಸ್ವಾತಂತ್ರ್ಯ ಬಂದ ಮೇಲೆ ಯಾವ ಯಾವ ಸಮಸ್ಯೆಗಳು ಉದ್ಭವಿಸಿವೆಯೆಂಬದುನ್ನು ನೋಡಿ ಹೇಗೆ ಬಗೆಹರಿಸಬೇಕೆಂಬುದನ್ನು ಹೊಸ ಬೆಳಕಿನಲ್ಲಿ ಯೋಚನೆ ಮಾಡಬೇಕೆಂದು ಸೂಚಿಸಿದ್ದಾರೆ. ನಮ್ಮ ಮಹಾನಾಯಕರು ಈಗಿನ ಪರಿಸ್ಥಿತಿಯನ್ನು ಗಮನಿಸಬೇಕು. ಹಿಂದಿನ ಪರಿಸ್ಥಿತಿಯನ್ನು ನೋಡಿ ಮಾಡುವುದರಿಂದ ದೇಶಕ್ಕೆ ಹಾನಿಯಾಗುತ್ತದೆಂದು ಅವರು ಎಚ್ಚರಿಸಿದ್ದಾರೆ. ಕೆಲವು ಸ್ನೇಹಿತರು ಹೇಳಿದ್ದಾರೆ, ಭಾಷಾವಾರು ಪ್ರಾಂತ್ಯಗಳಾದರೆ ಮೈನರ್ ಭಾಷೆಗಳೆಂಬಗೊಂದಲಕ್ಕೆ ಅವಕಾಶವೇ ಇಲ್ಲವೆಂದು ಹೇಳಿದ್ದಾರೆ. ಅದೇ ಅಂಶವನ್ನು ಪ್ರಸ್ತಾಪಿಸುತ್ತಾ ಜೆ.ವಿ.ಪಿ. ರಿಪೋರ್ಟಿನಲ್ಲಿ ಹೇಳಿರುವುದನ್ನು ಮಾನ್ಯ ಸದಸ್ಯರು ಗಮನಿಸಬೇಕು, ಅಲ್ಲಿ ಹೇಳಿದ್ದಾರೆ.

'It must be remembered that it is impossible to have clear and rigid demarcations of linguistic areas. However definite such an area might be, it flows into another linguistic area and where the two may meet, there is a mixed bilingual area. Inevitably if a linguistic division is made there will be trouble about this middle area and it will not be easy to decide where it should go. Immediately conflict will arise and passions will be aroused. People's attention will be diverted from the urgent problems of the day, which are essentially economic, to this totally unnecessary conflict which can do good to no one."

Mr. SPEAKER.—Even the Reorganisation Committee will not take only the language as the main consideration. That will be one of the points for considerations.

*ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಇವೊತ್ತಿನ ದಿವಸ ಮೈಸೂರು ಸಂಸ್ಥಾನದ ಜನಸಂಖ್ಯೆಯನ್ನು ನೋಡುವುದಾದರೆ, ಹಾಗೂ ಹೈದರಾಬಾದು, ಬೊಂಬಾಯಿ ಮುಂತಾದುವುಗಳ ಭಾಗಗಳು ಸೇರಿ ಕರ್ಣಾಟಕವಾಗುವ ಪ್ರದೇಶದ ಜನಸಂಖ್ಯೆಯನ್ನು ನೋಡುವುದಾದರೆ, ಅಲ್ಲಿ ಎಲ್ಲಾ ಭಾಗಗಳಲ್ಲೂ ಮೈಸೂರಿನಲ್ಲಿರವಂತೆ ಕನ್ನಡಿಗರ ಸಂಖ್ಯೆಯೇ ಹೆಚ್ಚಾಗಿಲ್ಲ. ಹೈದರಾಬಾದಿನಲ್ಲಿ ಬಿದರೆ, ಗುಲ್ಬರ್ಗ, ರಾಯಚೂರಿನಲ್ಲಿರುವ 11 ಲಕ್ಷ ಒಟ್ಟು ಪ್ರಜಾಸಂಖ್ಯೆಯಲ್ಲಿ ಕನ್ನಡಿಗರ ಸಂಖ್ಯೆ ಕೇವಲ 3 ಲಕ್ಷದ 35 ಸಾವಿರದಷ್ಟಿದ್ದಾರೆ. ಅಲ್ಲದೆ ಬಿದರೆ ಜಿಲ್ಲೆಯವರು ತಾವು ಕನ್ನಡ ಪ್ರಾಂತ್ಯಕ್ಕೆ ಸೇರುವುದಿಲ್ಲವೆಂದು ಹೋರಾಟ ಮಾಡುತ್ತಿದ್ದಾರೆಂದು ಕೂಡ ನಮ್ಮ ಸ್ನೇಹಿತರು ಹೇಳಿದ್ದಾರೆ. ಹೀಗಿರುವಾಗ ಬಾಕಿ ಭಾಷೆಗಳವರ ಪರಿಸ್ಥಿತಿ ಏನಾಗುತ್ತದೆಂಬುದನ್ನು ಯೋಚನೆ ಮಾಡಿ. ಗುಲ್ಬರ್ಗ ಜಿಲ್ಲೆಯಲ್ಲಿರುವ 14 ಲಕ್ಷ ಪ್ರಜಾಸಂಖ್ಯೆಯಲ್ಲಿ ಏಳು ಲಕ್ಷ ಜನ ಮಾತ್ರ ಕನ್ನಡಿಗರು. ಬೊಂಬಾಯಿ ಪ್ರಾಂತ್ಯದ ಮೂರು ಜಿಲ್ಲೆಗಳನ್ನು ಸೇರಿಸಿಕೊಳ್ಳಬೇಕೆಂದು ಹೇಳುತ್ತಿದ್ದೀರಿ. ಆ ಮೂರು ಜಿಲ್ಲೆಗಳಲ್ಲಿ ಬೆಳಗಾಂ ಜಿಲ್ಲೆಯಲ್ಲಿ ನೋಡುವುದಾದರೆ ಕನ್ನಡಿಗರು ಹೆಚ್ಚಾಗಿ ಇಲ್ಲ. ಮೈಸೂರು ಸಂಸ್ಥಾನವಾದರೋ ಒಂದು composite State ಆಗಿದೆ. ವಿವಿಧ ಭಾಷೆಗಳಿಂದ ಕೂಡಿದ ಒಂದು ಸಂಸ್ಥಾನ ಇದು. ನಮ್ಮ ದೃಷ್ಟಿಯಲ್ಲಿ ಭಾಷಾವಾರು ಸಮಸ್ಯೆಯೇ ಇದುವರೆಗೂ ಬಂದಿಲ್ಲ. ಕೋಲಾರ ಜಿಲ್ಲೆಯಲ್ಲಿ ಬಹು ಸಂಖ್ಯಾತರು ತೆಲುಗರಾಗಿದ್ದರೂ, ಹಾಗೆಯೇ ಇನ್ನು ಕೆಲವು ಜಿಲ್ಲೆಗಳಲ್ಲಿ ತಮಿಳರು ಹೆಚ್ಚಾಗಿದ್ದರೂ, ಇಷ್ಟು ಜನರೂ ಸೌಹಾರ್ದದಿಂದ ವಾಸಮಾಡಿಕೊಂಡಿದ್ದಾರೆ. ಭಾಷೆಯ ದಾಂಧಲೆ ಮೈಸೂರು ಸಂಸ್ಥಾನದಲ್ಲೂ ಇಷ್ಟುಹೊತ್ತಿಗೆ ಬಂದಿದ್ದರೆ ಬಹುಶಃ ಈಗ ಮಾತನಾಡಿದ ಅನೇಕ ಸ್ನೇಹಿತರು ಭಾಷಾವಾರು ವಿಂಗಡಣೆ ಬೇಡವೇ ಬೇಡ ಎಂದ ಹೇಳುತ್ತಿದ್ದರು. ಇವೊತ್ತಿನ ದಿವಸ ಬಳ್ಳಾರಿ ಜಿಲ್ಲೆಯಲ್ಲಿ ಏನು ನಡೆಯುತ್ತಿದೆಯೆಂಬುದನ್ನು ಮಾನ್ಯ ಸದಸ್ಯರು ಗಮನಿಸಲಿ. ಅಲ್ಲಿ ಆಂಧ್ರರು ಮತ್ತು ತಮಿಳರು ಒಬ್ಬರಿಗೊಬ್ಬರು ಶತ್ರುಗಳಂತೆ ಹೊಡೆದಾಟವಾಡುತ್ತಿದ್ದಾರೆ. ಸೌಹಾರ್ದ ಇಲ್ಲವೇ ಇಲ್ಲ. ಮೈಸೂರು ಸಂಸ್ಥಾನದಲ್ಲಾದರೋ ಯಾವವಿಧವಾದ ವೈಷಮ್ಯವೂ ಇಲ್ಲ. ಈಗ ಮೈಸೂರು ಸಂಸ್ಥಾನದ 100 ಲಕ್ಷ ಪ್ರಜಾಸಂಖ್ಯೆಯಲ್ಲಿ 66 ಲಕ್ಷ ಜನ ಕನ್ನಡಿಗರಾಗಿದ್ದಾರೆ. ಬೆಂಗಳೂರು ಕಾರ್ಪೊರೇಷನ್ ಪ್ರದೇಶದಲ್ಲಿ ಶೇಕಡ 23·7 ಮಾತ್ರ ಕನ್ನಡಿಗರು. ತೆಲುಗರು ಶೇಕಡ 17·8. ತಮಿಳರು ಶೇಕಡ 31·7. ತುಮಕೂರಿನಲ್ಲಿಯೂ ತೆಲುಗರ ಸಂಖ್ಯೆಯೇ ಜಾಸ್ತಿ. ಕೆ.ಜಿ.ಎಫ್. ತೆಗೆದುಕೊಂಡರೆ ತಮಿಳರು ಶೇಕಡ 61·2, ತೆಲುಗರು ಶೇಕಡ 19·8, ಕನ್ನಡಿಗರು ಶೇಕಡ 5·4 ಮಾತ್ರ. ಹೀಗೆ ಮೈಸೂರು ಸಂಸ್ಥಾನದ ನಾನಾ ಭಾಗಗಳಲ್ಲಿ ನಾನಾ ಭಾಷೆಗಳವರು ಬಹುಸಂಖ್ಯೆಯಲ್ಲಿದ್ದಾರೆ. ಇಂಥ ಸಂದರ್ಭದಲ್ಲಿ ಹೈದರಾಬಾದಿನ ಪ್ರಾಂತ್ಯಗಳನ್ನಾಗಲಿ, ಬೊಂಬಾಯಿನ ಪ್ರಾಂತ್ಯಗಳನ್ನಾಗಲಿ ಭಾಷೆಯ ಆಧಾರದಮೇಲೆ ತೆಗೆದುಕೊಂಡು ಪ್ರಾಂತ್ಯ ವಿಂಗಡಣೆ ಮಾಡುತ್ತೇವೆಂದು ಹೇಳುವುದಾದರೆ, ಇಲ್ಲಿ ತಮಿಳರು ಬಹುಮತವಿರತಕ್ಕ ಕೆಲವು ,ಭಾಗಗಳ ಮತ್ತು ಆಂಧ್ರರು ಬಹುಮತವಿರತಕ್ಕ ಭಾಗಗಳ ಪರಿಸ್ಥಿತಿಯೇನಾಗುತ್ತದೆಂಬುದನ್ನು ದಯವಿಟ್ಟು ಗಮನಿಸಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಎಲ್ಲ ಭಾಷೆಗಳವರೂ ಹೊಂದಿಕೊಂಡು ಸುಖವಾಗಿದ್ದ ಈ ಸಂಸ್ಥಾನಕ್ಕೆ ದುರದೃಷ್ಟವಶಾತ್ ಈಗ ಈ ಕಲ್ಮಷ ವಾತಾವರಣ ಬರಲಿದೆ. ಅದು ಬರಕೂಡದೆಂದು ಪ್ರಯತ್ನಗಳು ಹಿಂದೆ ಎಷ್ಟೋ ನಡೆದಿವೆ. ಆದರೆ, ಈಗ ಇಂಡಿಯಾ ಸರ್ಕಾರದವರು ಪ್ರಾಂತ್ಯ ಪುನರ್ವಿಂಗಡಣೆಗೆ ಸಮಿತಿಯನ್ನು ನೇಮಕ ಮಾಡಿದಮೇಲೆ ಮೈಸೂರು ಸಂಸ್ಥಾನದವರೂ ತಮ್ಮ ಅಭಿಪ್ರಾಯವನ್ನು ತಿಳಿಸುವುದು ಮುಖ್ಯವೆಂದು ತಿಳಿದುಕೊಂಡು ಈ ಸಮಿತಿಯವರ ವರದಿಯನ್ನು ನಮ್ಮ ಮುಂದಿಟ್ಟಿದ್ದಾರೆ. ಈ ವರದಿಯ ವಿಷಯದಲ್ಲಿ ಹೆಚ್ಚು ಟೀಕೆ ಮಾಡಿರುವ ಮಹನೀಯರು, ಶ್ರೀ ಪಟ್ಟಾಭಿರಾಮನ್‌ರವರೂ ಹಾಗೂ ಸಿದ್ದಲಿಂಗಯ್ಯನವರೂ ಕೂಡ ಈ ವರದಿಯನ್ನು ಬಹಳ ಚೆನ್ನಾಗಿದೆಯೆಂದೂ ಅದನ್ನು ತಯಾರು ಮಾಡಿರುವವರು ಒಳ್ಳೆಯ ಮೇಧಾವಿಗಳೆಂದೂ ಹೊಗಳಿದ್ದಾರೆ. ಆದರೂ, ಅಂಕಿಅಂಶಗಳನ್ನು ಮಾತ್ರ ಒಪ್ಪಿಕೊಳ್ಳುವುದಿಲ್ಲವೆನ್ನುತ್ತಾರೆ. ಈ ಸಮಿತಿಯವರು

ಮೂರು ತಿಂಗಳುಗಳ ಕಾಲ ಅಕ್ಕಪಕ್ಕದ ಪ್ರಾಂತ್ಯಗಳಿಗೆ ಹೋಗಿ ಪ್ರವಾಸಮಾಡಿ ಅಂಕಿಅಂಶಗಳನ್ನು ಶೇಖರಿಸಿ ಆ ಸರ್ಕಾರಗಳ ಸಹಾಯ ಪಡೆದು ಬಹಳ ಉಪಯುಕ್ತವಾದ, ಆಧಾರಯುತವಾದ ಮತ್ತು ಕಾಲಕ್ಕನುಗುಣವಾದ ರೀತಿಯಲ್ಲಿ ವರದಿಯನ್ನು ತಯಾರು ಮಾಡಿಟ್ಟಿದ್ದಾರೆ. ಆದ್ದರಿಂದ ಈ ಸಮಸ್ಯೆಯನ್ನು, ನಾವೆಲ್ಲರೂ ಭಾರತೀಯರು, ನಮ್ಮ ದೇಶ ಮುಂದಕ್ಕೆ ಬರಬೇಕು, ನಮ್ಮ ದೇಶದಲ್ಲಿ ಒಗ್ಗಟ್ಟಿರಬೇಕು, ನಮ್ಮ ದೇಶ ಐಶ್ವರ್ಯಯುತವಾದ ದೇಶವಾಗಬೇಕೆಂಬ ಸಮಗ್ರ ದೃಷ್ಟಿಯಿಂದ ನೋಡಬೇಕೇ ಹೊರತು ಭಾಷೆ, ಭಾಷೆ ಎಂದು ಪೈಪೋಟಿ ಭಿನ್ನಾಭಿಪ್ರಾಯಗಳಿಂದ ಈ ಸಮಸ್ಯೆಯನ್ನು ನೋಡಬಾರದೆಂಬುದು ಈ ವರದಿಯಲ್ಲಿ ಸ್ಪಷ್ಟವಾಗಿದೆ. ಭಾಷಾವಾರು ಪ್ರಾಂತ್ಯವೆನ್ನುವುದನ್ನು ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ನಾನಾಗಲೇ ಹೇಳಿದೆ. ಹೈದರಾಬಾದಿನಲ್ಲಿ ಮತ್ತು ಮೈಸೂರು ಸಂಸ್ಥಾನದಲ್ಲಿ ಬೇರೆ ಬೇರೆ ಭಾಷೆಗಳವರು ಬಹು ಸಂಖ್ಯಾತರಾಗಿರತಕ್ಕ ವಿಷಯವನ್ನೂ ಕೂಡ ಹೇಳಿದ್ದೇನೆ. ಉತ್ತರ ಇಂಡಿಯಾದಲ್ಲಿ ಅಲ್ಲಿನ ಸಂಸ್ಥಾನಗಳು ಬಹಳ ದೊಡ್ಡವಾಗಿವೆ. ಉತ್ತರ ಪ್ರದೇಶ ದೊಡ್ಡ ಪ್ರದೇಶ. ಮದರಾಸ್ ಕೂಡ ದೊಡ್ಡದಾಗಿತ್ತು. ಆ ಪ್ರಾಂತ್ಯಗಳನ್ನು ಮೈಸೂರಿನ ಹಾಗೆ ಚಿಕ್ಕ ಚಿಕ್ಕದಾಗಿಟ್ಟುಕೊಂಡಿದ್ದರೆ ಅಲ್ಲಿಕೂಡ ಭಾಷಾವಾರು ಪ್ರಶ್ನೆಯೇ ಬರುತ್ತಿರಲಿಲ್ಲ. ಉತ್ತರ ಪ್ರದೇಶದಲ್ಲಿ ಒಂದೇ ಮಾತನಾಡುವ ಪ್ರದೇಶವಾಗಿದ್ದರೂ ಅದನ್ನೇ ಇವೊತ್ತು ಚಿಕ್ಕ ಚಿಕ್ಕ ಪ್ರಾಂತ್ಯವಾಗಿ ವಿಂಗಡಿಸಬೇಕೆಂದು ಹೇಳಿದ್ದಾರೆ. ಹೀಗಿರುವಾಗ ಕರ್ಣಾಟಕ ಪ್ರಾಂತ್ಯ ಮಾಡಬೇಕೆಂದು ಹೇಳಿ ನಮ್ಮ ಪ್ರಾಂತ್ಯವನ್ನು ದೊಡ್ಡದು ಮಾಡಿಕೊಳ್ಳುವುದು ಸರಿಯಲ್ಲ. ಫಜಲಾಲಿ ಸಮಿತಿಗೆ ಕೊಟ್ಟಿರತಕ್ಕ ಮೆಮೊರಾಂಡಂನಲ್ಲಿ ಅನೇಕ ವಿಷಯಗಳನ್ನು ಉಲ್ಲೇಖಿಸಿದ್ದಾರೆ. ಬರೀ ಭಾಷೆಯನ್ನೇ ಪರಿಗಣಿಸಬೇಕೆಂದು ಹೇಳಿಲ್ಲ. ಬರೀ ಭಾಷೆಯಮೇಲೆಯೇ ನೋಡುವುದಾದರೆ ಜನಗಳ ಸೌಕರ್ಯವನ್ನು ನೋಡುವುದಕ್ಕಾಗುವುದಿಲ್ಲವೆಂದು ಅವರೇ ಹೇಳಿದ್ದಾರೆ. ಅವರು ಹೇಳುತ್ತಾರೆ:

"8. The existence of larger States such as Uttar Pradesh and Bombay is a definite disadvantage from the administrative point of view. These larger States have become so unwieldy that serious inconvenience is caused to the people; particularly to those who are in the border districts. It is for this very reason that a movement has been started recently for the formation of a smaller State constituting the north-western districts of Uttar Pradesh with Delhi as its headquarters."

ಸೈಮನ್ ಕಮಿಷನ್ನಿನವರೂ ಅದೇ ರೀತಿಯ ಅಭಿಪ್ರಾಯ ಕೊಟ್ಟಿದ್ದಾರೆ.

"Most of them (Provinces) are too populous and extensive, having regard to the cultural level and economic conditions of their inhabitants, to allow of the easy working of the machinery of representative Government on a reasonably extensive franchise."

"10. That the existing States are too extensive and populous can be seen from a few comparisons. The States of Uttar Pradesh and Bombay are each of them bigger than Italy. Madhya Pradesh exceeds Great Britain in size, and Orissa, one of the smallest amongst the Part 'A' States, is bigger than Portugal. If we turn from areas to population, the scale of things is not less significant. Uttar Pradesh has more inhabitants than Great Britain. Even Assam, which is one of the smallest Sates, has more inhabitants than Portugal."

Mr. SPEAKER.—The Hon'ble Member has taken more than 15 minutes. At this rate he will not be able to finish his speech. That is why I suggested that only main points might be touched.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಒಟ್ಟಿನಲ್ಲಿ, ಈ ಪ್ರಕಾರ ಅವರು ಅಂಕಿಅಂಶಗಳನ್ನು ಶೇಖರಿಸಿ ಫಜಲಾಲಿ ಸಮಿತಿಗೆ ಒಪ್ಪಿಸಿರತಕ್ಕ ವರದಿಯಲ್ಲೂ ಕೂಡ ಪ್ರಾಂತ್ಯಗಳು ದೊಡ್ಡ ದೊಡ್ಡವುಗಳಾಗಿರುವುದು ಬೇಡವೇಬೇಡ, ಚಿಕ್ಕ ಚಿಕ್ಕದಾಗಿದ್ದರೆ ರಾಜ್ಯಭಾರ ನಡೆಸುವ ದೃಷ್ಟಿಯಿಂದ, ಪ್ರಾಂತ್ಯಗಳ ಯೋಗಕ್ಷೇಮದ ದೃಷ್ಟಿಯಿಂದ ಅನುಕೂಲವೆಂದು ಹೇಳಿ ಉತ್ತರ ಇಂಡಿಯಾದವರು ಪ್ರಾಂತ್ಯಗಳನ್ನು ಚಿಕ್ಕ ಚಿಕ್ಕದಾಗಿ ಮಾಡುವುದನ್ನು ಯೋಚಿಸುವಾಗ ನಾವು, ಮೈಸೂರು ಸಂಸ್ಥಾನದವರು ದೊಡ್ಡದು ಮಾಡುವುದಕ್ಕೆ ಹೋಗುವುದು ಸರಿಯೇ ಎಂಬುದನ್ನು ಬಹಳ ಎಚ್ಚರಿಕೆಯಿಂದ ನೋಡಬೇಕೆಂದು ಹೇಳುತ್ತೇನೆ.

6 P.M.

ಇನ್ನೂ ತೆಲುಗು ಪ್ರದೇಶವೆಲ್ಲಾ ಈಗ ಕರ್ಣಾಟಕಕ್ಕೆ ಸೇರಬೇಕೆಂದು ಹೇಳುತ್ತಿದ್ದಾರೆ. ಈಗಾಗಲೇ ಆ ಬಳ್ಳಾರಿ ಜಿಲ್ಲೆಯೊಂದು ನಮ್ಮ ಮೈಸೂರು ಸಂಸ್ಥಾನಕ್ಕೆ ಸೇರಿಕೊಂಡಪ್ರಯುಕ್ತ ನಮಗೀಗ 60 ಲಕ್ಷ ರೂಪಾಯಿಗಳ ಖೋತಾ ಬರುತ್ತೆಂದು ಗೊತ್ತಾಗಿದೆ.

ಅಧ್ಯಕ್ಷರು.—ಅನೇಕರು ಈ ವಿಚಾರವನ್ನೆಲ್ಲಾ ತಿಳಿಸಿದ್ದಾರೆ. ತಾವು ಬೇರೆ ವಿಷಯಗಳೇನಾದರೂ ಇದ್ದರೆ ಅವುಗಳನ್ನು ಹೇಳಿ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಈಗ ಆ ಹೈದರಾಬಾದಿನಿಂದ ಬೇರೆ ಕೆಲವು ಭಾಗಗಳು ನಮ್ಮ ಮೈಸೂರಿಗೆ ಸೇರುತ್ತವೆ; ಮದರಾಸ್ ಪ್ರಾವಿನ್ಸಿನಿಂದ ಕೆಲವು ಭಾಗಗಳೂ ಮತ್ತು ಬೊಂಬಾಯಿ ಪ್ರಾಂತ್ಯದಿಂದ ಕೆಲವು ಭಾಗಗಳೂ ಮೈಸೂರಿಗೆ ಸೇರಬೇಕಾಗಿದೆ. ಆದರೆ ಈ ದಿವಸ ಹೀಗೆ ಮೈಸೂರಿಗೆ ಸೇರತಕ್ಕಂಥ ಆ ಪ್ರದೇಶಗಳೆಲ್ಲಾ ಯಾವ ರೀತಿಯಿವೆ ಎನ್ನುವುದನ್ನು ನಾವು ಗಮನಿಸಬೇಕಾಗಿದೆ. ಆ ಪ್ರದೇಶಗಳಲ್ಲಿ

(ಶ್ರೀ ಎಚ್. ಸಿ. ಲಿಂಗಾರೆಡ್ಡಿ.)

ಎಲ್ಲಿಯೂ ಒಂದು ಪಂಚಾಯಿತಿ ಹಾಲಿಲ್ಲ, ಸಾಕಷ್ಟು ಪಾಠಶಾಲೆಗಳಿಲ್ಲ, ಆಸ್ಪತ್ರೆಗಳಿಲ್ಲ, ರಸ್ತೆಗಳಿಲ್ಲ. ಹೀಗೆಲ್ಲಾ ಅಲ್ಲಿ ತುಂಬ ಅನಾನುಕೂಲಗಳಿರುತ್ತವೆಂಬ ಅಂಶವನ್ನು ಮಾನ್ಯ ಸದಸ್ಯರನೇಕರು ಮರೆತಿರುವಂತೆ ಕಾಣುತ್ತಿದೆ. ಈ ದಿವಸ ಅಲ್ಲಿರತಕ್ಕಂಥ ಪರಿಸ್ಥಿತಿಯನ್ನೂ ಮತ್ತು ನಮ್ಮ ಮೈಸೂರಿನ ಪರಿಸ್ಥಿತಿಯನ್ನೂ ಹೋಲಿಕೆ ಹಾಕಿ ನೋಡಿದರೆ ಇದು ಚೆನ್ನಾಗಿ ಕಾಣುತ್ತದೆ. ಈ ದಿವಸ ನಾವು ಈ ರಾಜ್ಯಗಳ ಪುನರ್ವಿಂಗಡಣೆಗೆ ಒಪ್ಪಿಕೊಂಡರೆ ಮುಂದಕ್ಕೆ ನಾವು ನಮ್ಮ ಹಳ್ಳಿಗಾಡುಗಳ ಕ್ಷೇಮ ಚಿಂತನೆಯನ್ನು ಕೇಳುವುದಕ್ಕೇ ಆಗುವುದಿಲ್ಲ. ಒಂದುವೇಳೆ ಕೇಳಿದರೂ ಕೂಡ ದುಡ್ಡೂ ಸಹ ಇರುವುದಿಲ್ಲ. ಮೈಸೂರಿಗೆ ಇದರಿಂದ ತುಂಬ ಕಷ್ಟ ಬರುತ್ತದೆ. ಮೈಸೂರಿನ ಪ್ರಗತಿ ಪುನಃ 50 ವರ್ಷಗಳ ಕಾಲ ಹಿಂದಕ್ಕೆ ಇಡಬೇಕಾಗುತ್ತದೆ. ಆದರೆ ಈ ಕರ್ಣಾಟಕ ಪ್ರಾಂತ್ಯವೆಲ್ಲಾ ಒಂದಾಗಬೇಕೆಂಬ ಉದ್ದೇಶ ಸದ್ಯಕ್ಕೆ ಬೇಕಾಗಿಲ್ಲವೆಂದು ಕಳೆದ ಅಕ್ಟೋಬರ್ ಅಧಿವೇಶನದಲ್ಲೇ ಹೇಳಲಾಗಿತ್ತು. ಆದರೆ ಹೀಗೆ ದೇಶವನ್ನು ಭಾಷಾಧಾರದ ಮೇಲೆ ವಿಂಗಡಿಸುವುದಕ್ಕೆ ಬದಲಾಗಿ ನಾವೆಲ್ಲರೂ ಭಾರತೀಯರು, ಭಾರತಮಾತೆಯ ಪುತ್ರರು, ನಾವೆಲ್ಲರೂ ಒಂದೇ ಎನ್ನತಕ್ಕಂಥ ಭಾವನೆಯನ್ನು ಬೆಳೆಸಿಕೊಂಡು ಬರುವುದು ಒಳ್ಳೆಯದೆಂದು ಹೇಳುತ್ತೇನೆ. ಆದರೆ ಈ ದಿವಸ ನಮ್ಮ ದೇಶದಲ್ಲಿ ಹಲವಾರು ಭಾಷೆಗಳಿವೆ. ಈ ಪೈಕಿ ಎಲ್ಲ ಭಾಷೆಯನ್ನೂ ಅಭಿವೃದ್ಧಿಗೆ ತರಬೇಕೆಂಬ ಆಸೆ ಸರ್ಕಾರಕ್ಕೆ ಇದ್ದೇ ಇದೆ. ಈ ದಿವಸ ಮೈಸೂರಿನಲ್ಲಿ 20 ಲಕ್ಷಕ್ಕೂ ಮೇಲ್ಪಟ್ಟು ಆಂಧ್ರರಿದ್ದಾರೆ. ಆದರೆ ಅವರಾರೂ ಇಲ್ಲಿಯವರೆಗೆ ಯಾವ ಒಂದು ಚಳವಳಿಯನ್ನೂ ಹೂಡಿಲ್ಲ. ಏನೇ ಆಗಲಿ ರಾಜ್ಯಗಳನ್ನು ಭಾಷೆ ಆಧಾರದಮೇಲೆ ರಚಿಸುವುದು ಒಳ್ಳೆಯದಲ್ಲವೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಬಿ. ರಾಚಯ್ಯ (ಯಳಂದೂರು ಅನುಸೂಚಿತ ಜಾತಿಗಳು.—ಮಾನ್ಯ ಸಭಾಪತಿಗಳವರೇ, ಈ ರಾಜ್ಯಗಳ ಪುನರ್ವಿಂಗಡಣೆಯ ವಿಷಯವಾಗಿ ಶ್ರೀ ಶೇಷಾದ್ರಿ ಸಮಿತಿಯವರು ಒಪ್ಪಿಸಿರತಕ್ಕಂಥ ವರದಿಯ ಬಗ್ಗೆ ಈಗ್ಗೆ ಐದು-ಆರು ದಿವಸಗಳಿಂದಲೂ ಚರ್ಚೆಯು ಬಹಳ ವಿಪುಲವಾಗಿ ನಡೆಯುತ್ತಿದೆ. ಕೆಲವರು ಈ ಮೈಸೂರು ಮೈಸೂರಾಗಿಯೇ ಉಳಿಯಬೇಕೆಂದು ಹೇಳಿದ್ದಾರೆ. ಅದರ ಅರ್ಥವೇನೆಂಬುದೇ ಗೊತ್ತಾಗಲಿಲ್ಲ. ಮತ್ತೆ ಕೆಲವರು ಈ ಮೈಸೂರನ್ನೊಳಗೊಂಡ ಅಖಂಡ ಕರ್ಣಾಟಕ ಸ್ಥಾಪನೆಯಾಗಬೇಕೆಂದು ಹೇಳಿದ್ದಾರೆ. ಮತ್ತೆ ಕೆಲವರು ದಕ್ಷಿಣ ಕನ್ನಡ ಜಿಲ್ಲೆ ಮತ್ತು ನೀಲಗಿರಿ ಈ ಪ್ರದೇಶಗಳು ಮಾತ್ರ ಸೇರಿಕೊಳ್ಳಲಿ, ಉತ್ತರ ಕರ್ಣಾಟಕವನ್ನೇನೂ ನಾವು ಸೇರಿಸಿಕೊಳ್ಳುವುದು ಬೇಡ ಎಂದು ಹೇಳಿದ್ದಾರೆ. ಹೀಗೆ ಒಬ್ಬೊಬ್ಬರೂ ಒಂದೊಂದು ರೀತಿಯಾಗಿ ಹೇಳಿದ್ದಾರೆ. ಆದರೆ ಈಗಿನ ಮೈಸೂರು ಮೈಸೂರಾಗಿಯೇ ಉಳಿಯಲಿ ಎಂದು ಹೇಳಿರತಕ್ಕದ್ದರಲ್ಲಿ ಒಂದು ಅರ್ಥವಿದೆ. ಆದರೆ ಉತ್ತರ ಕರ್ಣಾಟಕ ಮತ್ತು ಇತರ ಕನ್ನಡ ಪ್ರದೇಶಗಳೆಲ್ಲಾ ಸೇರಿ ಒಂದು ಕರ್ಣಾಟಕವಾಗಲಿ ಎಂದು ಹೇಳಿರತಕ್ಕವರ ಮಾತಿನಲ್ಲೇ ಒಂದು ಅರ್ಥವಿದೆ. ಆದರೆ ಕಾಲಕ್ಕೆ ತಕ್ಕಂತೆ ಈ ರಾಜ್ಯಗಳನ್ನು ಪುನರ್ವಿಂಗಡಣೆ ಮಾಡಲು ಕೇಂದ್ರ ಸರ್ಕಾರದವರು ಈಗ ಒಂದು ವರದಿಯನ್ನೊಪ್ಪಿಸತಕ್ಕ ಬಗ್ಗೆ ಒಂದು ಹೈಪವರ್ ಸಮಿತಿಯನ್ನು ನೇಮಕ ಮಾಡಿದ್ದಾರೆ. ಈ ವಿಷಯ ತಮಗೆಲ್ಲರಿಗೂ ತಿಳಿದಿದ್ದೇ ಆಗಿದೆ. ಈ ಹಿಂದೆ ಆಡಳಿತ ನಡೆಸುತ್ತಿದ್ದಂಥ ಬ್ರಿಟಿಷ್ ಸಾಮ್ರಾಜ್ಯಶಾಹಿ ದೌಲತ್ತಿನಲ್ಲಿ ಈ ದೇಶವನ್ನು ತುಂಡು ತುಂಡಾಗಿ ಕತ್ತರಿಸಿ ಎ.ಬಿ.ಸಿ. ರಾಜ್ಯಗಳೆಂದು ನಿರ್ಮಾಣ ಮಾಡಿದರು. ಇವುಗಳಲ್ಲಿ ಒಂದು ಪೂರಾ ದೊಡ್ಡದಾಗಿಯೂ ಮತ್ತೊಂದು ಪೂರಾ ಚಿಕ್ಕದಾಗಿಯೂ ಇರುತ್ತದೆ. ಆದರೆ ಹೀಗೆ ರಾಷ್ಟ್ರ ವಿಭಜನೆ ಮಾಡುವುದು ಆಡಳಿತ ದೃಷ್ಟಿಯಿಂದಲೂ ಮತ್ತು ಭಾಷಾವಾರು ದೃಷ್ಟಿಯಿಂದಲೂ ಸರಿಯಾದ್ದಲ್ಲವೆಂದು ಅವರು ಹೇಳಿದ್ದಾರೆ. ಈಗ ಈ ಅವ್ಯವಸ್ಥೆಯನ್ನೆಲ್ಲಾ ಸರಿಪಡಿಸಲು ಮೈಸೂರು ಸರ್ಕಾರದವರೂ ಕೂಡ, ಈ ಬಗ್ಗೆ ಇತರರಿಗೆ ಒಂದು ತಲೆ ನೋವು ಬಂದುದರಿಂದ ಇವರೂ ಸಹ ಮೈಸೂರು ಹೊರಗಡೆಯಿರುವಂಥಾ ಕನ್ನಡ ಪ್ರದೇಶಗಳ ಸ್ಥಿತಿಗತಿಗಳೇನಿದೆ ಎಂಬುದನ್ನು ನೋಡಿ ಅಲ್ಲಿರತಕ್ಕಂಥ ನಿಜಸ್ವರೂಪವನ್ನು ಕುರಿತು ಒಂದು ವರದಿಯನ್ನು ನಮ್ಮ ಸರ್ಕಾರಕ್ಕೊಪ್ಪಿಸಲು ಒಂದು ಸಮಿತಿಯನ್ನು ಏರ್ಪಾಡುಮಾಡಿದ್ದರು. ಈ ದಿವಸ ನಮ್ಮ ಮೈಸೂರಿಗೆ ಸೇರತಕ್ಕಂಥ ಭಾಗಗಳಲ್ಲಿ ಕೆಲವು ಹೈದರಾಬಾದಿನಲ್ಲೂ, ಕೆಲವು ಭಾಗಗಳು ಬೊಂಬಾಯಿ ಅಧಿಪತ್ಯದಲ್ಲೂ, ಇನ್ನು ಕೆಲವು ಮದ್ರಾಸ್ ಪ್ರಾಂತ್ಯದಲ್ಲೂ ಸೇರಿರುತ್ತವೆ. ಹೀಗೆ ಬೇರೆ ಬೇರೆ ಆಡಳಿತಕ್ಕೊಳಪಟ್ಟಿರುವಂಥ ಈ ಕನ್ನಡ ಪ್ರದೇಶಗಳ ನಿಜಸ್ವರೂಪದ ಚಿತ್ರ ಒಂದನ್ನು ತಯಾರಿಸಿ ಈ ಮಾನ್ಯ ಸಭೆಯ ಮುಂದೆ ಇಡಬೇಕಾದುದು ಅವರ ಕರ್ತವ್ಯವಾಗಿತ್ತು ಎಂದು ಹೇಳುತ್ತೇನೆ. ಆ ಸಮಿತಿಯವರು ಈ ದಿವಸ ಈ ಒಂದು ವರದಿಯಲ್ಲಿ ಯಾವಯಾವ ಕನ್ನಡ ಭಾಗಗಳ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೋ ಅವುಗಳೆಲ್ಲಾ ಮೈಸೂರಿಗೆ ಸೇರಲೇ ಬೇಕಾದುದು ಅನಿವಾರ್ಯ ಎನ್ನುವುದನ್ನು ತಿಳಿದುಕೊಂಡೇ ಅವರು ಈ ವಿಚಾರಗಳನ್ನೆಲ್ಲಾ ತಿಳಿಸಿರುತ್ತಾರೆ. ಹಾಗೆ ಈ ಭಾಗಗಳು ಮೈಸೂರಿಗೆ ಸೇರಬೇಕಾಗಿಲ್ಲವೆನ್ನುವುದಾಗಿದ್ದರೆ ಈ ಸಮಿತಿಯವರು ಈ ವಿಚಾರಗಳನ್ನೆಲ್ಲಾ ವಿಮರ್ಶೆ ಮಾಡಬೇಕಾದದ್ದೇ ಇರುತ್ತಿರಲಿಲ್ಲ. ಈ ದಿವಸ ಈ ವರದಿಯಲ್ಲಿ ನಮೂದಿಸಿರುವಂಥ ಪ್ರದೇಶಗಳಲ್ಲಿರತಕ್ಕಂಥ ಕನ್ನಡಿಗರೆಲ್ಲರೂ ಏಕಕಂಠದಿಂದ ಮೈಸೂರಿಗೆ ಸೇರಲು ಇಷ್ಟವುಳ್ಳವರಾಗಿದ್ದಾರೆ. ಹೀಗೆ ಯಾರುಯಾರು ತಮ್ಮ ಸ್ವಂತ ಇರಾದೆಯಿಂದ ನಮ್ಮ ಸಂಸ್ಥಾನಕ್ಕೆ ಸೇರುತ್ತೇವೆಂದು ಹೇಳುತ್ತಾರೋ ಅಂಥವರಿಗೆಲ್ಲ ನಮ್ಮ ಸುಸ್ವಾಗತವಿದೆ ಎಂಬುದಾಗಿ ಕಾಂಗ್ರೆಸ್ ಸಂಸ್ಥೆಯವರು ಹಿಂದಿನಿಂದಲೂ ಹೇಳುತ್ತಲೇ ಬಂದಿದ್ದಾರೆ. ಇದಕ್ಕೆ ಕಾನ್ಸ್ಟಿಟ್ಯೂಷನ್ನಲ್ಲಿ ಕೂಡ ಅವಕಾಶ ಮಾಡಿರುತ್ತದೆ. ಆದುದರಿಂದ ಈಗ ಇರತಕ್ಕ ಮೈಸೂರು ಇನ್ನು ಕಡಿಮೆಯಾಗುವುದಾಗಲಿ ಅಥವಾ ಇದು ಇದ್ದಹಾಗೆಯೇ ಇರುವುದಾಗಲಿ ಇನ್ನು ಮುಂದೆ ಸಾಧ್ಯವಾಗುವುದಿಲ್ಲ. ಆದರೆ ಒಂದು ದೇಶ ಚಿಕ್ಕದಾಗುವುದಕ್ಕೇ ಆಗಲಿ ಅಥವಾ ದೊಡ್ಡದಾಗುವುದಕ್ಕೇ ಆಗಲಿ ಅದಕ್ಕೆಲ್ಲಕ್ಕೂ ಒಂದು ಮಿತಿಯಿದೆ. ಅಂಥ ಒಂದು ಮಿತಿಯನ್ನಿಟ್ಟುಕೊಳ್ಳದೆ ಮಾಡುವುದಕ್ಕಾಗುವುದಿಲ್ಲ. ಈಗಾಗಲೇ ಸುಮಾರು ಎರಡು ಕೋಟಿ ಜನ ಸಂಖ್ಯೆಯನ್ನೊಳಗೊಂಡ ಆಂಧ್ರ ಪ್ರಾಂತ್ಯ ನಿರ್ಮಾಣವಾಗಿದೆ. ಅದೇ ರೀತಿ ಮಹಾರಾಷ್ಟ್ರ ರಾಜ್ಯವನ್ನು ಕೂಡ ಸ್ಥಾಪನೆ ಮಾಡಬೇಕೆಂದು ಕೇಳುತ್ತಿದ್ದಾರೆ. ಹೀಗೆಲ್ಲಾ ಜನರು ಕೇಳುತ್ತಿದ್ದುದರಿಂದಲೇ ಈ ದೇಶಗಳನ್ನೆಲ್ಲಾ ಆಡಳಿತ ದೃಷ್ಟಿಯಿಂದಲೂ ಮತ್ತು ವಯಬಲ್ ದೃಷ್ಟಿಯಿಂದಲೂ ಮತ್ತು ಇತರ ಕೆಲವು ಪ್ರಾಮುಖ್ಯವಾದಂಥ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಈ ರಾಜ್ಯಗಳನ್ನು

ಯಾವ ರೀತಿ ಪುನರ್ವಿಂಗಡಣೆ ಮಾಡಬೇಕೆಂಬ ವಿಚಾರದಲ್ಲಿ ಸರ್ಕಾರಕ್ಕೆ ಸಲಹೆಯನ್ನೊಪ್ಪಿಸಲು ಹೈಪವರ್ ಸಮಿತಿಯನ್ನು ನೇಮಕ ಮಾಡಲಾಗಿದೆ. ಆ ಸಮಿತಿಯವರು ನಾನಾ ಕಡೆಗಳಿಂದ ಈಗಾಗಲೇ ಅಭಿಪ್ರಾಯಗಳನ್ನು ಶೇಖರಣೆ ಮಾಡಿಕೊಂಡಿದ್ದಾರೆ. ಆದರೆ ಈಗ ನಮಗೆ ಹೆಸರಿನಿಂದೇನೂ ಅಷ್ಟು ಪ್ರಾಧಾನ್ಯತೆ ಹೊಂದಬೇಕಾಗಿಲ್ಲ. ತಾವು ಈಗಿರತಕ್ಕಂಥ ಮೈಸೂರನ್ನು ಮುಂದೆ ಅಖಂಡ ಮೈಸೂರು ಎಂದಾದರೂ ಕರೆಯಿರಿ ಅಥವಾ ಅಖಂಡ ಕರ್ಣಾಟಕ ಎಂದಾದರೂ ಕರೆಯಿರಿ, ಕನ್ನಡ ನಾಡೆಲ್ಲಾ ಒಂದಾಗಲೇ ಬೇಕೆಂಬುದು ನಿರ್ವಿವಾದವಾದ ಅಂಶ. ಅದರೆ ಕೆಲವು ಮಾನ್ಯ ಸದಸ್ಯರು ಮಾತನಾಡುತ್ತ ಮೈಸೂರು ಹೊರಗಡೆಯಿರತಕ್ಕಂಥ ಕನ್ನಡ ಪ್ರದೇಶದಲ್ಲಿ ಸಾಕಷ್ಟು ವೈದ್ಯ ಸೌಕರ್ಯಗಳಿರುವುದಿಲ್ಲವೆಂದು ಹೇಳಿದರು. ಅದಕ್ಕೆ ನಾನು ಇಷ್ಟೇ ಹೇಳುತ್ತೇನೆ. ನಾನು ಈಗ ಒಬ್ಬ ಜಹಗೀರ್‌ದಾರರು ಇರತಕ್ಕಂಥ ಕಾನ್ಸ್ಟಿಟ್ಯೂಯೆನ್ಸಿಯಿಂದ ಬರುತ್ತಿದ್ದೇನೆ. ಆದರೆ ಈ ಜಹಗೀರ್‌ದಾರರುಗಳು ಇರತಕ್ಕಂಥ ಕಡೆಯಲ್ಲಿ ರೈತರಿಗೆ ಆಗಿರುವಷ್ಟು ಅನ್ಯಾಯಗಳು ಮತ್ತೆಲ್ಲೂ ಆಗಿರಲಾರದೆಂದು ಹೇಳುತ್ತೇನೆ. ಈ ದಿವಸ ನಮ್ಮ ಮೈಸೂರಿನ ಹೊರಭಾಗದಲ್ಲಿರತಕ್ಕಂಥ ಆ ಕನ್ನಡ ಪ್ರದೇಶಗಳನ್ನು ಈ ದಿವಸ ಕೆಲವು ಮಾನ್ಯ ಸದಸ್ಯರು ಏನು ಅವುಗಳನ್ನೆಲ್ಲಾ ಬಹಳ ಹಿಂದೆ ಬಿದ್ದಿರುವಂಥ ಪ್ರದೇಶಗಳೆಂದು ಹೇಳುತ್ತಿದ್ದಾರೋ ಅಂಥ ಆ ಭಾಗಗಳೆಲ್ಲವೂ ಈ ಜಹಗೀರ್‌ದಾರ್‌ರ ತಾಲ್ಲೂಕಿಗಿಂತಲೂ ಬಹಳ ಉತ್ತಮ ಸ್ಥಿತಿಯಲ್ಲಿರುತ್ತವೆಂದು ನಾನು ಹೇಳುತ್ತೇನೆ. ಈ ದಿವಸ ಹಾಗೆ ಆ ಪ್ರದೇಶಗಳೆಲ್ಲಾ ಬಹಳ ಹಿಂದುಳಿದಿರಬೇಕಾಗಿದ್ದರೆ ಅದಕ್ಕೆ ಮುಖ್ಯ ಕಾರಣ ಅಲ್ಲಿರತಕ್ಕಂಥ ಜೋಡಿ ಮತ್ತು ಜಹಗೀರ್‌ದಾರರುಗಳೇ ಎಂತ ಹೇಳಬೇಕಾಗಿದೆ. ಆ ಕೆಲವು ಜಿಲ್ಲೆಗಳಲ್ಲಿ ಈ ರೀತಿ ಅನಾನುಕೂಲಗಳಿರುತ್ತವೆ. ಹಾಗೆ ಅಲ್ಲಿನ ಜನತೆಗೆ ಆ ಜೋಡೀದಾರರು ಹಾಗೆ ಒಂದು ಕಿರುಕುಳ ಕೊಡದೆಯಿದ್ದಿದ್ದರೆ ಈ ದಿವಸ ಆ ಪ್ರದೇಶಗಳೆಲ್ಲ ಅಷ್ಟು ಹಿಂದೆ ಬೀಳಲು ಕಾರಣವೇ ಇರುತ್ತಿರಲಿಲ್ಲ. ಆದುದರಿಂದ ನಾವು ಈ ದಿವಸ ಯಾವ ಒಂದು ದೇಶವನ್ನೇ ಆಗಲಿ ಅದು ಹಿಂದುಳಿದಿರುವ ಪ್ರದೇಶವೇ ಅಥವಾ ಮುಂದುವರಿದಿರುವ ಪ್ರದೇಶವೇ ಎಂದು ವಿಂಗಡಿಸಿ ವಿಲೀನೀಕರಣ ಮಾಡುವುದಕ್ಕಾಗುವುದಿಲ್ಲ. ಆ ರೀತಿ ನೋಡುತ್ತಾ ಹೋದರೆ ಪ್ರತಿಯೊಂದು ಭಾಗವೂ ಹಿಂದುಳಿದಿರುವಂಥ ಪ್ರದೇಶವೆಂದೇ ನಿರ್ಧರಿಸಬೇಕಾಗುತ್ತದೆ. ಆದಕಾರಣ ಈ ದಿವಸ ದೇಶವನ್ನು ನಾವು ಒಂದು ಹೊಸ ರೂಪದಲ್ಲಿ ಕಟ್ಟಬೇಕಾಗಿರುವುದರಿಂದ ಇವುಗಳನ್ನೆಲ್ಲಾ ಒಂದು ಫೆಡರಲ್ ಮಾದರಿ ಸರ್ಕಾರದ ಆಡಳಿತಕ್ಕೆ ಸೇರಿಸಿ ಈ ಭಾಗಗಳಿಗೆ ದೊರಕಬೇಕಾದಂಥ ಸರಿಸಮಾನವಾದಂಥ ಹಕ್ಕು ಬಾಧ್ಯತೆಗಳನ್ನು ದೊರಕಿಸಿಕೊಡಲೇ ಬೇಕಾಗುತ್ತದೆ. ಇದಕ್ಕಾಗಿಯೇ ಕೇಂದ್ರ ಸರ್ಕಾರದವರು ಹೆಚ್ಚಿನ ಕಾತುರತೆಯಿಂದ ಸಹಾಯ ಸಹಕಾರಗಳನ್ನು ನೀಡುತ್ತಿದ್ದಾರೆ. ಹಿಂದುಳಿದ ಪ್ರದೇಶಗಳನ್ನೆಲ್ಲಾ ಅಭಿವೃದ್ಧಿಗೆ ತರಬೇಕಾದಂಥ ಭಾರ ಈ ದಿವಸ ಕೇಂದ್ರ ಸರ್ಕಾರದವರ ಮೇಲೆ ಬಿದ್ದಿದೆ. ಈ ದಿವಸ ಈ ಅಂಕಿ ಅಂಶಗಳ ಸಮಿತಿಯವರು ಒಪ್ಪಿಸಿರುವ ವರದಿಯು ಬಹಳ ಮಟ್ಟಿಗೂ ನಿಜವಾಗಿಯೇ ಇರಬಹುದು. ಆದರೆ ಈಗ ಇಂಡಿಯಾ ಸರ್ಕಾರದವರು ದೇಶವನ್ನು ಪುನರ್ವಿಂಗಡಣೆ ಮಾಡಲೇ ಬೇಕೆಂಬ ತೀರ್ಮಾನಕ್ಕೆ ಬಂದಿದ್ದಾರೆ. ಆದಕಾರಣ ಯಾವ ಭಾಗದಲ್ಲಿ ಏನು ಡಿಫಿಸಿಟ್ ಆಗಿದ್ದರೂ ಆ ಬಗ್ಗೆ ಅವರು ಸಹಾಯ ಮಾಡಬೇಕಾಗಿದೆ. ಈ ದಿವಸ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ಆಂಧ್ರ ಪ್ರಾಂತ್ಯವನ್ನು ನಿರ್ಮಾಣ ಮಾಡಿದ್ದಾರೆ. ಆದರೆ ಕರ್ಣಾಟಕ ಪ್ರಾಂತ್ಯ ನಿರ್ಮಾಣಕ್ಕೆ ಅಷ್ಟಾಗುವುದಿಲ್ಲ. ಕರ್ಣಾಟಕ ಪ್ರಾಂತ್ಯ ನಿರ್ಮಾಣವಾದರೆ ಮೈಸೂರಿನ ವ್ಯಾಪಾರಾಭಿವೃದ್ಧಿಗೆ ಹೆಚ್ಚು ಅನುಕೂಲವಾಗುತ್ತದೆ. ಆಗ ಈ ಮೈಸೂರು ನಾನಾ ರೀತಿಯಲ್ಲಿ ಅಭಿವೃದ್ಧಿಗೆ ಬರಲು ದಾರಿಯಾಗುತ್ತದೆ. ಈ ಪ್ರಾಂತ್ಯ ನಿರ್ಮಾಣದಿಂದೇನೂ ತೊಂದರೆಯಾಗುವುದಿಲ್ಲವಾದ ಕಾರಣ ಎಲ್ಲ ಕನ್ನಡ ಭಾಗಗಳನ್ನೂ ಒಳಗೊಂಡಒಂದೇ ಒಂದು ಕರ್ಣಾಟಕ ಪ್ರಾಂತ್ಯ ನಿರ್ಮಾಣವಾಗಬೇಕಾದದ್ದು ಯುಕ್ತವೆಂದು ಹೇಳಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು).—ಸ್ವಾಮಿ, ನಾನು ಇಲ್ಲಿಯವರೆಗೂ ಈ ಶೇಷಾದ್ರಿ ವರದಿಯಮೇಲೆ ಆಗಿರತಕ್ಕಂಥ ಚರ್ಚೆಗಳನ್ನೂ ಮತ್ತು ಭಾಷಣಗಳನ್ನೂ ಕೇಳಿದ್ದೇನೆ. ಆದರೆ ಈ ವಿಷಯದಲ್ಲಿ ಮಾತನಾಡುವುದಕ್ಕೆ ಮೊದಲೇ ನಾನು ಒಬ್ಬ ಹರಿಜನ ಸ್ತ್ರೀಯಾಗಿ ಹುಟ್ಟಿದ್ದರೆ ಎಷ್ಟೋ ಸಂತೋಷವಾಗುತ್ತೆಂದು ನನಗೆನ್ನಿಸುತ್ತದೆ. ಇದಕ್ಕೆ ಕಾರಣವೇನೆಂದರೆ, ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು ಮಾತನಾಡುವುದಕ್ಕೆ ಎದ್ದ ಕೂಡಲೇ ಇವರೇನು ಲಿಂಗಾಯಿತರೇ ಎಂದು ಕೇಳತಕ್ಕ ಕೂಗು ಬಂತು. ಈಗ ನಾನು ಮಾತನಾಡುವುದಕ್ಕೆ ಪ್ರಾರಂಭಿಸುವಾಗಲೂ ಇವರೇನು ಒಕ್ಕಲಿಗರೇ ಎನ್ನತಕ್ಕಂಥ ಕೂಗು ಕೇಳಿಬರುತ್ತದೆ. ಆದರೆ ಈ ವಿಚಾರದಲ್ಲಿ ಬಹುಮತವಾಗಿ ಕೆಲವರು ಈ ಕರ್ಣಾಟಕ ಪ್ರಾಂತ್ಯ ಬೇಕೆಂತಲೂ ಇನ್ನು ಕೆಲವರು ಬೇಡ ಎಂತಲೂ ಹೇಳುತ್ತಿರುವಂತೆ ಗೊತ್ತಾಗುತ್ತದೆ. ಈ ವಿಚಾರದಲ್ಲಿ ನಾನು ಹಿಂದೆಯೂ ಸಹ ನನ್ನ ಅಭಿಪ್ರಾಯವೇನಿರುತ್ತೆಂಬುದನ್ನು ಖಚಿತವಾಗಿ ತಿಳಿಸಿರುವುದರಿಂದ ಈಗ ನಾನು ಅದನ್ನು ಗೋಪ್ಯವಾಗಿಟ್ಟುಕೊಳ್ಳುವುದು ನ್ಯಾಯವಲ್ಲವೆಂಬ ದೃಷ್ಟಿಯಿಂದ ನಾನೀಗ ಮಾತನಾಡಲು ಪ್ರಯತ್ನಪಡುತ್ತೇನೆ. ಎಂದು ಜನರು ಈ ದೇಶವನ್ನು ಭಾಷಾವಾರು ತತ್ವದಮೇಲೆ ವಿಭಜನೆ ಮಾಡಬೇಕೆಂದು ಹೇಳಿದರೋ ಆ ದಿವಸವೇ ನಾನು ಇದನ್ನು ತೀವ್ರವಾಗಿ ವಿರೋಧಮಾಡಿದ್ದೇನೆ. ಈ ವಿಚಾರದಲ್ಲಿ ನಾವು ದೇಶದಲ್ಲಿರತಕ್ಕಂಥ ಪ್ರತಿಯೊಬ್ಬ ಜನರ ಅಭಿಪ್ರಾಯವನ್ನೂ ಪಡೆದನಂತರ ಈ ವಿಚಾರವಾಗಿ ಮಾತನಾಡತಕ್ಕದ್ದು ಒಳ್ಳೆಯದೆಂದು ಹೇಳುತ್ತೇನೆ. ಆದರೆ ಈಗಾಗಲೇ ಭಾರತ ಸರ್ಕಾರದವರು ಆಂಧ್ರ ಪ್ರಾಂತ್ಯವನ್ನು ಭಾಷಾವಾರು ತತ್ವದಮೇಲೆ ನಿರ್ಮಾಣ ಮಾಡಲಿಲ್ಲವೇ ಎಂದು ಕೆಲವರು ಕೇಳಬಹುದು. ಆದರೆ ಅವರು ಹಾಗೆ ಮಾಡಿದ್ದು ಬಹಳ ತಪ್ಪು. ಈ ದಿವಸ ಆಂಧ್ರ ಪ್ರಾಂತ್ಯವನ್ನು ಯಾವ ರೀತಿ ರಚನೆ ಮಾಡಿದ್ದಾರೋ ಅದೇ ರೀತಿ ಇತರ ಪ್ರಾಂತ್ಯಗಳನ್ನು ನಿರ್ಮಾಣ ಮಾಡಬೇಕೆಂದು ಹೇಳಿದರೆ ಅದು ನಮ್ಮ ದೇಶಕ್ಕೆ ಮುಂದೊಂದು ವಿಪತ್ತೆಂದು ನಾನು ಹೇಳುತ್ತೇನೆ. ಆದರೆ ಈಗಾಗಲೇ ಮಾತನಾಡಿರತಕ್ಕಂಥ ಸದಸ್ಯರಲ್ಲಿ ಕೆಲವರು ಅಖಂಡ ಕರ್ಣಾಟಕವಾಗಬೇಕೆಂದು ಹೇಳಿದ್ದರೆ ಮತ್ತೆ ಕೆಲವರು ಹೊರಗಿನ ಕನ್ನಡ ಪ್ರದೇಶದಲ್ಲಿ ಸರಿಯಾದ ಸ್ಕೂಲುಗಳ ಅನುಕೂಲತೆಯಿಲ್ಲ, ಅಲ್ಲಿ ಕೆರೆಗಳಿಲ್ಲ, ರಸ್ತೆಗಳಿಲ್ಲ ಎಂದು ಹೇಳಿದ್ದಾರೆ. ಇವುಗಳೆಲ್ಲಾ ಸಣ್ಣಪುಟ್ಟ ವಿಷಯಗಳೆಂದು ನಾನು ಅಲ್ಲಗಳೆಯುವಂತಿಲ್ಲ. ಆದರೆ ನಮಗೆ ಈಗಾಗಲೇ ಆರ್ಥಿಕ

(ಶ್ರೀಮತಿ ಬಿ. ಎಲ್. ಸುಬ್ಬಮ್ಮ).

ಮುಗ್ಗಟ್ಟು ಜಾಸ್ತಿಯಾಗುತ್ತಿದೆ ಅನ್ನುವಾಗಲೇ ಬಳ್ಳಾರಿ ಜಿಲ್ಲೆಯೊಂದು ನಮ್ಮ ಮೈಸೂರಿಗೆ ಸೇರಿದ್ದರಿಂದ ನಮಗೆ ಎಷ್ಟೊಂದು ದುಡ್ಡಿನ ತೊಂದರೆ ಬಂತು? ಇದಕ್ಕಾಗಿ ತಾವು ಹೇಳಬಹುದು, ಕೇಂದ್ರ ಸರ್ಕಾರದವರು ನಮಗೆ ಸಹಾಯ ಮಾಡುತ್ತಾರೆ ಎಂದು. ಆದರೆ ನಮಗೆ ಇಲ್ಲಿಯವರೆಗೆ ಕೇಂದ್ರ ಸರ್ಕಾರದಿಂದ ಅಂಥ ನೆರವು ಏನು ಬಂದಿದೆ ಎಂದು ಕೇಳುತ್ತೇನೆ. ನಮಗೆ ಈಗಾಗಲೇ 50-60 ಲಕ್ಷ ರೂಪಾಯಿಗಳ ಡಿಫಿಸಿಟ್ ಜಾಸ್ತಿಯಾಯಿತು. ಇದೇ ಡಿಫಿಸಿಟ್ ಇನ್ನು ಮುಂದಕ್ಕೂ ಇದ್ದೇ ಇರುತ್ತದೆ. ಹೀಗೆ ಈ ಇತರ ಭಾಗಗಳನ್ನು ನಮ್ಮ ಮೈಸೂರಿಗೆ ಸೇರಿಸಿಕೊಳ್ಳುವುದರಿಂದ ಆ ಜನರೆಲ್ಲರ ಕಷ್ಟ-ನಷ್ಟಗಳನ್ನು ನಾವು ಅನುಭವಿಸಬೇಕಾಗಿದೆ. ಯಾರದೋ ಹಿತಕ್ಕಾಗಿ ನಾವು ಈ ದಿವಸ ನಮ್ಮ ಜನರಮೇಲೆ ತೆರಿಗೆ ಹಾಕಬೇಕಾಗಿದೆ. ಆದರೆ ಈಗಾಗಲೇ ನಾವು ನಮ್ಮ ಜನರ ಬೆನ್ನು ಮುರಿದು ಹೋಗುವತನಕ ತೆರಿಗೆಗಳನ್ನು ಹಾಕಿದ್ದೇವೆ. ಮೊನ್ನೆತಾನೆ ನಾವಿನ್ನೂ ನಮ್ಮ ಜನರ ಮೇಲೆ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸನ್ನು - ಹಾಕಿದ್ದೇವೆ. ಹೀಗೆ ನಾವು ಈ ದಿವಸ ಅನೇಕ ಕಷ್ಟ ನಷ್ಟಗಳಿಗೆ ಆಗಲೇ ಈಡಾಗಿದ್ದೇವೆ. ಆದ್ದುದರಿಂದ ನಾವು ಯಾವ ಕೆಲಸವನ್ನೇ ಮಾಡಲಿ ದೂರದೃಷ್ಟಿಯನ್ನಿಟ್ಟುಕೊಂಡು ಮಾಡಬೇಕಾಗಿದೆ ಈ ದಿವಸ ನಮ್ಮ ದೇಶದ ಹೊರಗಡೆಯಿರತಕ್ಕ ನಮ್ಮ ಕನ್ನಡ ಬಂಧುಗಳಿಗೆ ತೊಂದರೆಗಳಿರಬಹುದು. ಅವರಿಗೆ ಆಡಳಿತ ದೃಷ್ಟಿಯಿಂದಲೂ ತೊಂದರೆ ಇರಬಹುದು. ಆದರೆ ಇದರಲ್ಲಿ ಒಂದು ಕೋಮುವಾರು ಬಣ್ಣವನ್ನು ಹಚ್ಚಿ ಈ ಅಖಂಡ ಕರ್ಣಾಟಕಕ್ಕೆ ಒಕ್ಕಲಿಗರು ವಿರೋಧವಾಗಿದ್ದಾರೆಂದೂ ಲಿಂಗಾಯಿತರು ಪರವಾಗಿದ್ದಾರೆಂದೂ ಹೇಳುತ್ತಿರುವುದು ಖಂಡಿತ ಲಾಯಖ್ಖಾದ್ದಲ್ಲ ಎಂದು ಹೇಳುತ್ತೇನೆ. ಆಡಳಿತಗಾರರು ತಮ್ಮ ಜವಾಬ್ದಾರಿಯನ್ನು ತಾವು ಸರಿಯಾಗಿ ಒಂದು ವಿಮರ್ಶಾತ್ಮಕ ದೃಷ್ಟಿಯಿಲ್ಲದೆ ಮಾಡಿದ್ದೇ ಆದರೆ ಅವರು ತಮ್ಮ ಕರ್ತವ್ಯದಲ್ಲಿ ಭ್ರಷ್ಟರಾಗುತ್ತಾರೆ. ಆದರೆ ಈ ದಿವಸ ನಮಗೆ ಕಾಣುತ್ತಿರುವ ರೀತಿಯಲ್ಲಿ, ಈಗಾಗಲೇ ಅನೇಕ ಮಾನ್ಯ ಸದಸ್ಯರು ಹೇಳುತ್ತಿರುವ ರೀತಿಯಲ್ಲಿ, ನಾವು ಹೊರಗಡೆಯಿರತಕ್ಕಂಥ ನಮ್ಮ ಸಹೋದರರಿಗೆ ರಸ್ತೆಗಳ ಸೌಕರ್ಯ, ಬಾವಿ, ಕೆರೆ, ಸ್ಕೂಲು ಇತ್ಯಾದಿಗಳನ್ನು ಕಲ್ಪಿಸಿಕೊಡಬೇಕಾಗುತ್ತದೆ. ಹೀಗೆ ನಾನಾ ಬಾಬುಗಳಲ್ಲಿ ಅವರಿಗೆ ಈ ದಿವಸ ತುಂಬ ಅನಾನುಕೂಲವಿರುತ್ತದೆ. ಆದರೆ ಈ ಪ್ರಜಾಪ್ರಭುತ್ವಾಡಳಿತದಲ್ಲಿ ನಾವೆಲ್ಲಾ ಒಂದೇ ರೀತಿಯಾಗಿ ಕ್ಷೇಮವಾಗಿರಬೇಕೆಂದು ನಾನೂ ಸಹ ಹೇಳುತ್ತೇನೆ. ಈಗ ಕೇಂದ್ರ ಸರ್ಕಾರದವರು ಜಾರಿಗೆ ತಂದಿರುವ ಪಂಚವಾರ್ಷಿಕ ಯೋಜನೆಯಲ್ಲಿ ಈ ಪ್ರಾಂತ್ಯಗಳೆಲ್ಲಾ ಮುಂದುವರಿಯಲಿ. ಹಾಗೆ ಹಿಂದುಳಿದ ಪ್ರದೇಶಗಳೆಲ್ಲಾ ಮುಂದಕ್ಕೆ ಬರಲಿ. ಇದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಆದರೆ ಭಾಷಾವಾರು ಆಧಾರದಮೇಲೆ ರಾಜ್ಯಗಳನ್ನು ವಿಂಗಡಿಸಿದರೆ ತುಂಬ ತೊಂದರೆಯಾಗುತ್ತದೆಂದು ಹೇಳುತ್ತೇನೆ. ಈಗ ಮದರಾಸ್ ಪ್ರಾಂತ್ಯದಲ್ಲಿ ಎಲ್ಲೋ ಒಂದು ಮೂಲೆಯಲ್ಲಿ ಇರತಕ್ಕಂಥ ಕನ್ನಡ ಜನರಿರುವ ಪ್ರದೇಶವನ್ನು ಮೈಸೂರಿಗೆ ಸೇರಿಸಿದರೆ ಅವರಿಗೆ ತೊಂದರೆ ಎಷ್ಟಾಗುತ್ತದೆಂಬುದನ್ನು ನಾವು ಆಲೋಚನೆ ಮಾಡಬೇಕು. ಆದರೆ ಹೀಗೆ ಈ ದಿವಸ ಹಿಂದುಳಿದಿರತಕ್ಕಂಥ ಪ್ರದೇಶಗಳ ಅಭಿವೃದ್ಧಿಗಾಗಿ ಏನೇನು ಅನುಕೂಲ ಮಾಡಬೇಕೆಂಬುದನ್ನು ಕೇಂದ್ರ ಸರ್ಕಾರದವರು ಪರಿಶೀಲನೆ ಮಾಡಬೇಕಾಗಿದೆ. ಆಡಳಿತಕ್ಕೆ ಚಿಕ್ಕ ಚಿಕ್ಕ ಪ್ರಾಂತಗಳು ಇದ್ದರೆ ಅನುಕೂಲ. ಹತ್ತು-ಇಪ್ಪತ್ತು ಲಕ್ಷ ಪ್ರಜೆಗಳಿಗೆ ಒಂದು ಪ್ರಾಂತ್ಯ ಮಾಡಿ ಎಂದು ಹೇಳುವುದಿಲ್ಲ. ಮೈಸೂರು ಸಂಸ್ಥಾನದ ಜನಸಂಖ್ಯೆ ಸುಮಾರು ಒಂದು ಕೋಟಿ ಇದೆ. ಒಂದು ಕೋಟಿ ಪ್ರಜಾ ಸಂಖ್ಯೆಗೆ ಒಂದು ಪ್ರಾಂತ್ಯಮಾಡಿ, ಅದರಿಂದ ಮೈಸೂರು ಸಂಸ್ಥಾನ ಮುಂದುವರಿಯುತ್ತದೆ ಎಂದು ಹೇಳುತ್ತೇನೆ. ನನ್ನ ಸಹೋದರರು ಮಾತನಾಡುತ್ತಾ ಮೈಸೂರು ಚಿಕ್ಕ ಪ್ರದೇಶವಾದ್ದರಿಂದ ಮುಂದುವರಿದಿಲ್ಲ, ಮಹಾರಾಜರ ಕೃಪಾಕಟಾಕ್ಷದಿಂದಲೂ ಅದರ ಜೊತೆಗೆ ಜವಾಬ್ದಾರಿ ಆಡಳಿತ ಇದ್ದುದರಿಂದಲೂ ಮುಂದುವರಿಯಿತು ಎಂದು ಹೇಳಿದರು. ಅಲ್ಲಿ ಸ್ಕೂಲುಗಳಿಗೆ, ಆಸ್ಪತ್ರೆಗಳಿಗೆ ತೊಂದರೆ ಇದೆ. ರಸ್ತೆಗಳ ಸೌಕರ್ಯ ಇಲ್ಲ. ತಮಗೆ ಆಗಬೇಕಾದ ಅನುಕೂಲಗಳನ್ನು ಮಾಡಿಕೊಡಿ ತಾವು ಹಿಂದುಳಿದಿದ್ದೇವೆ ಎಂಬ ವಿಶಾಲವಾದ ಭಾವನೆಯಿಂದ ಒಂದು ಪ್ರಾಂತ್ಯ ರಚನೆ ಮಾಡಿ ಎಂದು ಹೇಳುವುದಾದರೆ ಮಲೆನಾಡಿನ ಪ್ರಕೃತಿ ಸೌಂದರ್ಯ ನೋಡಿ, ಮಲೆನಾಡಿನ ಗೋಮಟೇಶ್ವರನನ್ನು ನೋಡಿ ಆ ರೀತಿ ಪ್ರಾಂತ ರಚನೆ ಮಾಡುವುದಕ್ಕಾಗುವುದಿಲ್ಲ. ನಮ್ಮ ಆಡಳಿತ ಹೇಗಿದೆ ನಮ್ಮ ವಿದ್ಯಾಭ್ಯಾಸ ಸಮರ್ಪಕವಾಗಿದೆಯೇ ಎಂಬುದನ್ನು ವಿಮರ್ಶೆ ಮಾಡಿದ ಪಕ್ಷದಲ್ಲಿ ಸ್ಕೂಲುಗಳು ಇಲ್ಲದೆ ಕಷ್ಟಪಡುತ್ತಿದ್ದೇವೆ ಮತ್ತು ಇದ್ದ ಸ್ಕೂಲುಗಳಿಗೆ ಕಟ್ಟಡಗಳೇ ಇಲ್ಲ. ತತ್ವ ಮುಖ್ಯವಲ್ಲ, ನಮಗೆ ಕೆಲಸ ಮಾಡುವುದು ಮುಖ್ಯವಾಗಿರುತ್ತದೆ. ಒಂದುವೇಳೆ ಭಾಷಾ ಆಧಾರದಮೇಲೆ ಪ್ರಾಂತಗಳನ್ನು ಹಂಚುತ್ತಾರೆಂದು ಇಟ್ಟುಕೊಳ್ಳೋಣ. ಆ ರೀತಿ ಹಂಚುವಾಗ ಕೋಲಾರ, ಬೆಂಗಳೂರು ಮತ್ತು ಮೈಸೂರಿನ ಇತರ ಭಾಗಗಳು ಹೊರಟುಹೋದರೆ ಮೈಸೂರಿನ ವ್ಯಕ್ತಿತ್ವ ಏನೂ ಉಳಿಯುವುದಿಲ್ಲ. ಮೊದಲಿನಿಂದಲೂ ನಮ್ಮನ್ನೇ ನಂಬಿಕೊಂಡು ಬಂದಿರತಕ್ಕ ಜನಗಳನ್ನು ಕಷ್ಟಕ್ಕೆ ಗುರಿಪಡಿಸುವುದು ಸರಿಯಲ್ಲ. ಹಿಂದೆ ಕರ್ಣಾಟಕದ ರಾಜರು ಯುದ್ಧಮಾಡಿ, ಕರ್ಣಾಟಕ ಸಾಮ್ರಾಜ್ಯವನ್ನು ಸ್ಥಾಪನೆ ಮಾಡಿದರು. ಹಾಗೆ ಸ್ಥಾಪನೆ ಮಾಡುವಾಗ ಜನಗಳಮೇಲೆ ಒಂದು ಗುಲಾಮಗಿರಿ ಹೊರಿಸಿದರು. ಇವತ್ತು ಸಾರ್ವಜನಿಕ ಚುನಾವಣೆ ಇದೆ., ಜನರ ಕುಂದು ಕೊರತೆಗಳನ್ನು ಕೇಳುವದಕ್ಕೆ ಭಾರತ ಸರ್ಕಾರ ಇದೆ. ಈ ರೀತಿ ಇರುವಾಗ್ಗ ನಮಗೆ ಬೇರೆ ಬೇರೆ ಪ್ರಾಂತಗಳನ್ನು ಕೊಡಬೇಕೆಂದು ಕೇಳುವುದು ಅಷ್ಟು ಉತ್ತಮವಲ್ಲವೆಂದು ಹೇಳುತ್ತಿದ್ದೇನೆ. ಒಂದುವೇಳೆ ಭಾಷೆಯನ್ನೇ ಆಧಾರವಾಗಿ ತೆಗೆದಕೊಂಡು ಕರ್ಣಾಟಕ ಪ್ರಾಂತ್ಯವನ್ನು ಮಾಡುತ್ತೇವೆಂದು ಹೇಳಿದರೆ, ಕರ್ಣಾಟಕ ಪ್ರಾಂತ ಮಾಡಿದ ಮೇಲೂ ಕೂಡ 30-32 ಲಕ್ಷ ಕನ್ನಡಿಗರು ಉಳಿದು ಹೋಗುತ್ತಾರೆ. ಈ ರೀತಿ ಕನ್ನಡ ಸಾಮ್ರಾಜ್ಯವನ್ನು ಯಾರ ಸಂತೋಷಕ್ಕೋಸ್ಕರ ಕಟ್ಟಬೇಕು ? ಕೇಂದ್ರದಲ್ಲಿ ಸರ್ಕಾರ ಬಲಯುತವಾಗಿಲ್ಲದೆ ಹೋಗಿದ್ದರೆ ಆಂಧ್ರರೂ ಕನ್ನಡಿಗರೂ ಬಳ್ಳಾರಿಗಾಗಿ ಯುದ್ಧ ಮಾಡಬೇಕಾಗುತ್ತಿತ್ತು. ಶ್ರೀ. ನಾರಾಯಣರೆಡ್ಡಿಯವರೂ ಮತ್ತು ಶ್ರೀಮತಿ ಸಿದ್ದಮ್ಮನವರೂ ಮಾತನಾಡಿದುದನ್ನು ನೋಡಿದರೆ ಯುದ್ಧ ಮಾಡುತ್ತಾರೆಯೇ ಎಂಬ ಭಾಸವಾಗುತ್ತಿತ್ತು. ತೆಲುಗು, ತೆಲುಗು ಎಂದು ಅವರು ಹೇಳುವುದು, ಕನ್ನಡ, ಕನ್ನಡ ಎಂದು ಇವರು ಹೇಳುವುದು. ಇಂತಹ ಶಬ್ದಗಳಿಗೆ ನಾವು ಮಾರುಹೋಗಬಾರದು. ಒಳ್ಳೆಯ ವಿಷಯಗಳನ್ನು ನೋಡಿ, ತುಲನಮಾಡಿ ಐಕ್ಯತೆಯನ್ನು ಸಂಪಾದನೆ ಮಾಡಿಕೊಳ್ಳಬೇಕು. ಭಾಷಾವಾರ ತತ್ವದಮೇಲೆ ರಾಜ್ಯವನ್ನು ಕಟ್ಟಿದರೆ ಖಂಡಿತವಾಗಿ ಭಾರತದ ಐಕ್ಯತೆಗೆ

ಕುಂದುಬರುತ್ತದೆ; ಆರ್ಥಿಕ ಮುಗ್ಗಟ್ಟು ಉಂಟಾಗುತ್ತದೆ; ರಾಜಕೀಯದಲ್ಲಿ ಬಿಕ್ಕಟ್ಟು ಬರುತ್ತದೆ. ಆದ್ದರಿಂದ ಭಾಷೆಯ ಆಧಾರದಮೇಲೆ ಪ್ರಾಂತಗಳನ್ನು ರಚಿಸತಕ್ಕದ್ದು ಸಾಧುವಾದುದಲ್ಲ. ಆದಕಾರಣ ಭಾಷಾವಾರು ತತ್ವದ ಪ್ರಕಾರ ಪ್ರಾಂತಗಳನ್ನು ವಿಭಜನೆ ಮಾಡುವುದಕ್ಕೆ ನಾನು ವಿರೋಧನಾಗಿದ್ದೇನೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಇಜಾರಿ ಸಿರಸಪ್ಪ (ಸಿರಗುಪ್ಪ).—ಮಾನ್ಯ ಅಧ್ಯಕ್ಷರೇ, ಪ್ರಾಂತ್ಯಗಳ ವಿಂಗಡನೆಯ ವಿಚಾರವಾಗಿ ಮೈಸೂರು ಸರ್ಕಾರದವರಿಂದ ರಚಿಸಲ್ಪಟ್ಟ ಶೇಷಾದ್ರಿ ಸಮಿತಿಯ ವರದಿಯ ಮೇಲೆ ನಡೆದ ಚರ್ಚೆಯನ್ನು ನಾನು ಆಮೂಲಾಗ್ರವಾಗಿ ಕೇಳಿದ್ದೇನೆ. ಅನೇಕ ಮಾನ್ಯ ಸದಸ್ಯರು ಅಂಕಿ ಸಂಖ್ಯೆಗಳ ಸಹಾಯದಿಂದ ಈ ವಿಷಯಗಳ ಪೂರ್ಣ ಚಿತ್ರವನ್ನು ಚೆನ್ನಾಗಿ ತಿದ್ದಿ ತೋರಿಸಿಕೊಟ್ಟಿದ್ದಾರೆ. ಬಹುಶಃ ನಾನು ಯಾವ ಒಂದು ಹೆಚ್ಚಿನ ಅಂಕಿಅಂಶಗಳ ಕಡೆಗೆ ಗಮನ ಕೊಡದೆ ಸ್ಥೂಲವಾಗಿ ಕರ್ಣಾಟಕದ ಜನರೆಲ್ಲರೂ ಒಟ್ಟುಗೂಡಿ ಒಂದು ಆಡಳಿತಕ್ಕೆ ಏಕೆ ಬರಬೇಕೆಂದು ಹೇಳಬಯಸುತ್ತೇನೆ. ಇಂದು ಮಾತನಾಡಿದ ಅನೇಕ ಜನರಲ್ಲಿ ಮೈಸೂರು ಈಗ ಹೇಗೆ ಇದೆಯೋ ಹಾಗೆಯೇ ಮುಂದೆಯೂ ಇರಲಿ ಎಂಬ ಅಭಿಪ್ರಾಯವು ಕಂಡು ಬಂದುದು ತಮಗೆಲ್ಲಾ ಗೊತ್ತಿದೆ. ಹಿಂದೆ ಮೈಸೂರು ಹೀಗೆ ಇರಲಿಲ್ಲ. ಇನ್ನು ಮುಂದೆ ಮೈಸೂರು ಈ ರೀತಿ ಇರುವುದಕ್ಕೆ ಸಾಧ್ಯವಿಲ್ಲ. ಹಿಂದೆ ಚಾಳುಕ್ಯರು, ಕದಂಬರು, ರಾಷ್ಟ್ರಕೂಟರು, ಮತ್ತು ಅನೇಕ ರಾಜರ ಕಾಲದಲ್ಲಿ ಚರಿತ್ರೆಯ ಕಡೆ ಲಕ್ಷ್ಯ ಕೊಟ್ಟು ನೋಡಿದರೆ ಮೈಸೂರು ಎಷ್ಟೊಂದು ವಿಸ್ತಾರವಾದ ಕನ್ನಡ ನಾಡು ಆಗಿತ್ತೆಂಬುದು ನಮಗೆ ಗೋಚರವಾಗುತ್ತದೆ. ಆ ಮೇಲೆ ಬ್ರಿಟಿಷ್ ಸರ್ಕಾರದ ಅಂಕಿತದಲ್ಲಿ ಸಿಕ್ಕಿಕೊಂಡಾಗ ನಮ್ಮಲ್ಲಿದ್ದ ಒಗ್ಗಟ್ಟನ್ನು ಮುರಿದು ನಮ್ಮಲ್ಲಿ ರಾಷ್ಟ್ರೀಯತೆ ಉಳಿಯದಂತೆ ನಮ್ಮ ಜನರನ್ನು ವಿಂಗಡನೆ ಮಾಡಿ, ಅವರ ಆಡಳಿತ ಅವರ ಕೈಯಲ್ಲಿ ನಿರಂತರವೂ ಇರಲು ನಮ್ಮ ಒಗ್ಗಟ್ಟು ಮತ್ತು ಸ್ವಾತಂತ್ರ್ಯ ಮನೋಭಾವದ ಬೆಳವಣಿಗೆಯನ್ನು ಕುಗ್ಗಿಸುವುದಕ್ಕೆ ನಿರ್ಮಿಸಿದಂತಹ ಒಂದು ರೇಖೆಯಲ್ಲಿ ನಾವು ಇವತ್ತಿನ ದಿವಸ ಜೀವಿಸಿಕೊಂಡು ಹೋಗುತ್ತಾ ಇರುವುದು ತಮಗೆಲ್ಲರಿಗೂ ಗೊತ್ತಿದೆ. ಇನ್ನೊಂದು ವಿಚಾರ. ಶ್ರೀಮನ್ಮಹಾರಾಜರ ವಿಚಾರವಾಗಿ ಬಹುಶಃ ಎಲ್ಲರೂ ಮಾತನಾಡಿದ್ದಾರೆ. ನಾನು ಮಹಾರಾಜರ ವಿಷಯವಾಗಿ ಒಂದು ಅಂಶವನ್ನು ತಮ್ಮ ಮುಂದೆ ಇಡಲು ಬಯಸುತ್ತೇನೆ. ಯಾವ ಮಹಾರಾಜರು ಕರ್ಣಾಟಕ ರತ್ನ ಸಿಂಹಾಸನಾಧೀಶ್ವರರೆಂದು ಹೊಗಳಿಸಿಕೊಳ್ಳುತ್ತಿದ್ದಾರೋ ಅಂತಹ ಮಹಾರಾಜರ ಆಡಳಿತದಲ್ಲಿ ಹೊರಗಿನ ಕನ್ನಡ ನಾಡು ಬರಕೂಡದು ಎಂದು ಹೇಳಲು ಮನಸ್ಸು ಹೇಗೆ ಒಪ್ಪುತ್ತದೆ ಎಂದು ನಾನು ಕೇಳಬಯಸುತ್ತೇನೆ.

Sri Mulka GOVINDA REDDY (Chitaldrug).—We don't want Rajapramukh.

ಶ್ರೀ ಇಜಾರಿ ಸಿರಸಪ್ಪ.—ಅವರು ಇರುವವರೆಗೂ ನಾವು ಅವರು ಅಂಕಿತದಲ್ಲಿ ಇರಲೇಬೇಕು. Part (A) ಮತ್ತು Part (B) ಸ್ಟೇಟುಗಳು ಇರುವವರೆಗೂ ಮಹಾರಾಜರು ಇರಲೇಬೇಕಾಗುತ್ತದೆ. ಆಮೇಲೆ ಜನತೆಯ ಹಿತ ಸಾಧನೆಯಾಗುವುದಾದರೆ ಪ್ರಾಂತ್ಯಗಳ ಪುನರ್ವಿಂಗಡನೆಯನ್ನು ಮಾಡಬಹುದೆಂದು ಅನೇಕ ಪ್ರಾಂತ್ಯ ರಚನೆಯ ವಿರೋಧಿಗಳೂ ಹೇಳಿದ್ದಾರೆ. ಈ ಸಂದರ್ಭದಲ್ಲಿ ಒಂದು ಅಂಶವನ್ನು ಮಾತ್ರ ಹೇಳಬಯಸುತ್ತೇನೆ. ಮೈಸೂರಿನ ಹಿತಕ್ಕಾಗಿ ಮಾತ್ರ ಈ ಪ್ರಾಂತ್ಯದ ಪುನರ್ವಿಂಗಡನೆಯನ್ನು ಮಾಡಬೇಕೆಂಬ ದೃಷ್ಟಿಯನ್ನಿಟ್ಟುಕೊಳ್ಳಬೇಕೆಂದು ರಾಜಪ್ರಮುಖರು ಹೇಳಲಿಲ್ಲ. ಈ ಪುನರ್ವಿಂಗಡನೆಗೆ ಸಂಬಂಧಪಟ್ಟ ಎಲ್ಲಾ ಜನರ ಹಿತವನ್ನು ಸಾಧಿಸಬಹುದಾದರೆ ಮಾತ್ರ ಅಂತಹ ಪುನರ್ವಿಂಗಡನೆಯಾಗಬಹುದು ಎಂದು ಹೇಳುತ್ತೇನೆ. ಮೈಸೂರಿನ ಹಿತವನ್ನು ಮಾತ್ರ ಮನಸ್ಸಿನಲ್ಲಿಟ್ಟುಕೊಳ್ಳುವುದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಎಲ್ಲಾ ಕನ್ನಡನಾಡಿನ ಜನರೂ ಒಂದೇ ಆಡಳಿತಕ್ಕೆ ಒಳಪಡುವಲ್ಲಿ ಎಲ್ಲಾ ಜನರ ಹಿತವನ್ನೂ ಸಾಧಿಸಬಹುದು ಎಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡ ಈ ವಿಚಾರವನ್ನು ಯೋಚನೆ ಮಾಡಿದರೆ ಮಾತ್ರ ಅದು ಸಮಂಜಸವಾಗಿ ಕಾಣುತ್ತದೆ ಎಂದು ನನ್ನ ಭಾವನೆ.

ಇನ್ನು ಅಂಕಿಅಂಶಗಳ ವಿಚಾರ. ಶೇಷಾದ್ರಿ ಸಮಿತಿಯವರ ಅಂಕಿಅಂಶಗಳು ತಪ್ಪು, ಅವರು ಅನ್ಯಾಯ ಮಾಡಿದ್ದಾರೆ ಎಂದು ಕರ್ಣಾಟಕ ಪ್ರಾಂತ್ಯವಾಗಬೇಕು ಎಂದು ಹೇಳುವ ಜನ ಯಾರೂ ಹೇಳಲಿಲ್ಲ. ಅವರು ತಿಳುವಳಿಕೆಯುಳ್ಳವರು. ಜವಾಬ್ದಾರಿಯುತ ಸರ್ಕಾರಗಳು ಕೊಟ್ಟು ಅನೇಕ ಅಂಕಿ ಸಂಖ್ಯೆಗಳನ್ನು ಸಂಗ್ರಹಿಸಿ ನಮ್ಮ ಮುಂದೆ ಇಟ್ಟಿದ್ದಾರೆ. ಆದರೆ ಇದು ಅಪೂರ್ಣವೆಂದು ಮಾತ್ರ ನಾನು ಹೇಳಬಯಸುತ್ತೇನೆ. ಫಜಲಾಲಿ ಸಮಿತಿಯವರು ಸರಕಾರದ ಅಭಿಪ್ರಾಯವನ್ನೂ ಸಾರ್ವಜನಿಕ ಅಭಿಪ್ರಾಯವನ್ನೂ ಮತ್ತು ಸಂಘ ಮತ್ತು ಗೋಷ್ಠಿಗಳ ಅಭಿಪ್ರಾಯವನ್ನೂ ಪಡೆದು ಈ ವಿಚಾರದಲ್ಲಿ ಅನೇಕ ಅಂಕಿ ಸಂಖ್ಯೆಗಳನ್ನು ಸಂಗ್ರಹಿಸಿ ಒಂದು ತೀರ್ಮಾನಕ್ಕೆ ಬರುವವರಾಗಿದ್ದಾರೆ. ಶೇಷಾದ್ರಿ ಸಮಿತಿಯವರು ಮುಂಬಯಿ, ಕರ್ಣಾಟಕ, ಮತ್ತು ಹೈದರಾಬಾದ್ ಕರ್ಣಾಟಕ ಸಂಬಂಧವಾಗಿ ಆಯಾ ಸರ್ಕಾರದವರು ಕೊಟ್ಟ ಅಂಕಿಅಂಶಗಳನ್ನು ಇಟ್ಟಿದ್ದಾರೆ. ಅದು ಪರಿಪೂರ್ಣವಲ್ಲವೆಂದು ಮಾತ್ರ ನಾನು ತಮ್ಮ ಮುಂದೆ ಹೇಳಬಯಸುತ್ತೇನೆ. ಶ್ರೀ ದೇವರಾಜ ಅರಸ್ ಮತ್ತು ಶ್ರೀ ಪುಟ್ಟಸ್ವಾಮಿಯವರು ಮಾತನಾಡುವಾಗ ಬಹು ನಿರಾಶಾದಾಯಕವಾದ ಕನ್ನಡ ನಾಡಿನ ಚಿತ್ರವನ್ನು ನಮ್ಮ ಮುಂದೆ ಕೊಟ್ಟಿದ್ದಾರೆಂದು ಹೇಳಬೇಕಾಗಿದೆ. ಆರ್ಥಿಕ ತಜ್ಞರೂ, ರಾಜಕೀಯ ತಜ್ಞರೂ ಮತ್ತು ಸಮಾಜದ ಸೇವೆಯನ್ನು 30-35 ವರ್ಷಗಳಿಂದ ಮಾಡಿಕೊಂಡು ಬಂದಂಥ ಜನರೂ ಅಂಕಿ ಸಂಖ್ಯೆಗಳ ಮೂಲಕ ತಮ್ಮ ಧೋರಣೆಯನ್ನು ವ್ಯಕ್ತಪಡಿಸಿದ್ದಾರೆ. ಇವೆಲ್ಲಕ್ಕೂ ನಿಗಾ ಕೊಡದೆ ಶೇಷಾದ್ರಿ ಸಮಿತಿಯವರು ಕೊಟ್ಟ ಅಪೂರ್ಣವಾದ ಅಂಕಿ ಸಂಖ್ಯೆಗಳ ಆಧಾರದ ಮೇಲೆ ಕನ್ನಡದ ಎಲ್ಲಾ ಭಾಗಗಳು ಒಂದುಗೂಡುವುದು ಬೇಡ, ಮೈಸೂರು ಇದ್ದ ಹಾಗೆಯೇ ಉಳಿಯಲಿ, ನಾವು ಪ್ರಗತಿಯನ್ನು ಸಾಧಿಸೋಣ ಎಂದು ಸಂಕುಚಿತ ಬುದ್ಧಿಯನ್ನು ತಾಳಿರುವುದು ವಿಷಾದಕರವಾದುದು ಎಂದು ಹೇಳುತ್ತೇನೆ. ಶ್ರೀ ಕಂಠಿಯವರು ಅಂಕಿ ಸಂಖ್ಯೆಗಳ ವಿಚಾರ ಮೊನ್ನೆ ಮಾತನಾಡಿದಾಗ ಪ್ರಶ್ನೆಗಳ ಸುರಿಮಳೆಯಾಯಿತು. ಶ್ರೀ ಕಂಠಿಯವರು ಹೇಳಿದ ಅಂಕಿ ಸಂಖ್ಯೆಗಳು ಹೇಗೆ ನಿಜವಾದುವು ಮತ್ತು ಆಧಾರಯುತವಾದುವು ಎಂದು ಕೇಳಿದ್ದು ಜ್ಞಾಪಕವಿದೆ. ಅವರು ಮುಂಬಯಿನಲ್ಲಿ ಹಳ್ಳಿಹಳ್ಳಿಗೂ ಮಾಡಿಕೊಂಡಿರುವ ರಸ್ತೆಗಳ ವಿಚಾರದಲ್ಲಿ ಯಾವ ವಿಧವಾದ ಅಂಕಿ ಅಂಶಗಳೂ ಶೇಷಾದ್ರಿ ಸಮಿತಿ ವರದಿಯಲ್ಲಿ ದೊರೆಯುವಂತಿಲ್ಲ ಎಂದು ಹೇಳಿದರು, ಆಸ್ಪತ್ರೆಗಳ ವಿಚಾರ ತೆಗೆದುಕೊಂಡಾಗ ಖಾಸಗೀ ರೀತ್ಯ ಆಸ್ಪತ್ರೆಗಳ ಮತ್ತು ಸಾರ್ವಜನಿಕ ಹಣದಿಂದ ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ಮುನಿಸಿಪಾಲಿಟಿಗಳ ಧನ ಸಹಾಯದಿಂದ ನಡೆದುಕೊಂಡುಬಂದ Health Centreಗಳ

(ಶ್ರೀ ಇಜಾರಿ ಸಿರಸಪ್ಪ.)

ವಿಚಾರ ಏನೂ ಕಂಡು ಬರುತ್ತಾ ಇಲ್ಲ. ವಿಲೇಜ್ ಪಂಚಾಯಿತಿಗಳ ಸಹಾಯದಿಂದ ಔಷಧೀ ಸಾಮಾಗ್ರಿಗಳನ್ನು ಒದಗಿಸಿಕೊಟ್ಟು ಜನರ ರೋಗರುಜಿನಗಳನ್ನು ನಿರ್ಮೂಲ ಮಾಡುವುದಕ್ಕೆ ಒಂದು ಯೋಜನೆಯನ್ನು ಮುಂಬಯಿ ಸರ್ಕಾರದವರು ಕೈಕೊಂಡಿರುವುದು ತಮಗೆಲ್ಲರಿಗೂ ಗೊತ್ತಿದೆ. ಪ್ರಪಂಚದಲ್ಲಿ ವಿಖ್ಯಾತವಾಗಿರುವ B. C. G. Vaccination ನಮ್ಮಲ್ಲಿ ಹೆಚ್ಚಿಗೆ ನಡೆದಿದೆಯೋ, ನಿಮ್ಮಲ್ಲಿ ಹೆಚ್ಚಿಗೆ ನಡೆದಿದೆಯೋ ಎಂಬುದನ್ನು ಸ್ವಲ್ಪ ಲಕ್ಷ್ಯಗೊಟ್ಟು ನೋಡಬೇಕೆಂದು ವಿನಂತಿ ಮಾಡುತ್ತೇನೆ. ಖನಿಜ ಸಂಪತ್ತುಗಳ ವಿಚಾರವಾಗಿ ಶ್ರೀ ದೇವರಾಜ ಅರಸಿನವರು ಖನಿಜಗಳು ಸಿಕ್ಕುವುದು imaginery ಎಂದು ಹೇಳಿದರು. ಅನೇಕ ತಜ್ಞರೂ, ಮೆಟಲರ್ಜಿಸ್ಟ್ಸ್ ಸಂಶೋಧನೆ ಮಾಡಿ ಹಿಂದೂಸ್ಥಾನದ ಯಾವ ಯಾವ ಭಾಗಗಳಲ್ಲಿ ಯಾವ ಯಾವ ಖನಿಜ ಸಂಪತ್ತು ದೊರಕಬಹುದು ಎಂದು ಒಂದು ವರದಿ ರೂಪವಾಗಿ ಸರ್ಕಾರಕ್ಕೆ ಕೊಟ್ಟಿರುವಾಗ ಖನಿಜಗಳು ಸಿಕ್ಕಿದರೂ ಸಿಕ್ಕಬಹುದು, ಸಿಕ್ಕದೆ ಹೋದರೂ ಹೋಗಬಹುದು ಎಂಬ ಹೇಳಿಕೆ ಅರ್ಥಪೂರ್ಣವಾದುದು ಮತ್ತು ನಿಜವಾದುದು ಎಂದು ಒಪ್ಪಲಿಕ್ಕೆ ನಾನು ತಯಾರಾಗಿಲ್ಲ. ವಿದ್ಯಾಭ್ಯಾಸದ ವಿಚಾರವಾಗಿ ವರದಿಯಲ್ಲಿ ಪ್ರಸ್ತಾಪಮಾಡುತ್ತಾ ವಿದ್ಯಾಭ್ಯಾಸ ಮುಂದುವರಿದಿದೆ ಎಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ಇನ್ನೊಂದು ವಿಚಾರವನ್ನು ಮಾನ್ಯ ಸಭೆಯ ಮುಂದೆ ಇಡಲು ಬಯಸುತ್ತೇನೆ. ಯಾವಾಗಲೂ ಮೈಸೂರು ಸಂಸ್ಥಾನದಲ್ಲಿ ಬರೀ ಸರ್ಕಾರದ ಸಹಾಯದಿಂದ ಪುಕ್ಕಟ್ಟೆ Scholarship ಮತ್ತು Freeship ಇವುಗಳ ಮೂಲಕ ವಿದ್ಯಾಭ್ಯಾಸವನ್ನು ಪ್ರೌಢಶಾಲೆಗಳವರೆಗೆ ಮುಂದುವರಿಸಿಕೊಂಡು ವಿದ್ಯಾವಂತರನ್ನಾಗಿ ಮಾಡಿದ್ದಾರೆ. ಆದರೆ ಮುಂಬಯಿ ಕರ್ಣಾಟಕದ ಕಡೆ ನೋಡಿ. ಸರ್ಕಾರದ ಸಹಾಯವಿಲ್ಲದೆ ಖಾಸಗೀ ಅಥವಾ ಸಾರ್ವಜನಿಕರ ಉತ್ತೇಜನ ಮತ್ತು ಧನ ಸಹಾದಿಂಧ ಮುಂಬಯಿ ಕರ್ಣಾಟಕದಲ್ಲಿ 16 ಕಾಲೇಜುಗಳನ್ನು ನಡೆಸಿಕೊಂಡ ಬಂದಿರುವುದು ಹೆಮ್ಮೆಯ ಮಾತಲ್ಲವೇ? ಅದನ್ನು ಗಮನಿಸಬೇಕಾದುದು ಅತ್ಯಗತ್ಯವೆಂದು ತಮ್ಮ ಮುಂದೆ ಹೇಳುತ್ತೇನೆ. ಇನ್ನು ಹೈದರಾಬಾದಿನ ವಿಚಾರವಾಗಿ ಅನೇಕ ಜನರು ಅನೇಕ ವಿಷಯಗಳನ್ನು ಮಾತನಾಡಿದ್ದಾರೆ. ಈ ವರದಿಯಲ್ಲಿ ಒಂದು ತಪ್ಪನ್ನು ಮಾಡಿದ್ದಾರೆಂದು ಹೇಳ ಬಯಸುತ್ತೇನೆ; Terms of referenceನಲ್ಲಿ ಸೇರಬಹುದಾದ ಕರ್ಣಾಟಕ ಭಾಗಗಳು ಯಾವುವು ಮತ್ತು ಅವುಗಳ ಆರ್ಥಿಕ, ಸಾಮಾಜಿಕ, ಮತ್ತು ಸಂಸ್ಕೃತಿಯ ವಿಚಾರವಾಗಿ ಹೇಳುತ್ತಾ ಆಯಾಯ ಗಡಿಯಲ್ಲಿ ಕಡಿಮೆ ಜನ ಕನ್ನಡಿಗರು ಇದ್ದಾರೆ, ಇತರ ಹೆಚ್ಚಿನ ಜನ ಇತರ ಭಾಷೆ ಮಾತನಾಡುವವರು ಇದ್ದರೆ ಆಗ ಅವರಲ್ಲಿ ಹೋರಾಟವಾಗಬಹುದು, transfer of population ಆಗಬಹುದು ಎಂದು ಸ್ವಲ್ಪ ಅವರ ಗಡಿಯನ್ನು ಮ್ಯಾರಿ ಸಮಿತಿಯವರು ಅವರ ಅಭಿಪ್ರಾಯವನ್ನು ಕೊಟ್ಟಿದ್ದಾರೆ ಎಂದು ಹೇಳಬಹುದು. ಪ್ರಾಂತಗಳ ಪುನರ್ವಿಂಗಡನೆಯನ್ನು ಕೈಗೊಳ್ಳುವಾಗ ಗಡಿಗಳ ನಿರ್ಣಯದ ವಿಷಯದಲ್ಲಿ ಒಂದು Boundary Commission ಏರ್ಪಾಡು ಮಾಡಿ ಬೌಂಡರಿಯನ್ನು ಗೊತ್ತು ಮಾಡಿದರೆ ಎಲ್ಲಾ ಪಂಗಡದವರೂ ಮತ್ತು ಎಲ್ಲಾ ಪ್ರಾಂತ್ಯಗಳವರೂ ಅದನ್ನು ಒಪ್ಪಿಕೊಳ್ಳಲೇಬೇಕು, ಈ ರೀತಿ ಹೋರಾಟವಾಗದಂತೆ ಸರ್ಕಾರದವರು ನೋಡಿಕೊಳ್ಳಬೇಕೆಂದು ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಗಡಿ ನಿರ್ಣಯ ಸಮಿತಿಯವರು ಒಂದು ಗಡಿಯನ್ನು ಗೊತ್ತುಮಾಡಿದ ಮೇಲೆ ಆ ನಿರ್ಣಯಕ್ಕೆ ಎಲ್ಲರೂ ತಲೆಬಾಗಬೇಕಾಗುತ್ತದೆ. ಅದಕ್ಕೆ ಹೋರಾಟ ಮಾಡುವುದು ಒಳ್ಳೆಯದಲ್ಲ. ಆ ರೀತಿ ಮಾಡುವುದೂ ಸಾಧ್ಯವಿಲ್ಲ. ಅದ್ದರಿಂದ transfer of population ಎಂಬ ಅಂಜಿಕೆಯನ್ನು ಹುಟ್ಟಿಸುವಂಥ ಕೆಲವು ಅಭಿಪ್ರಾಯಗಳನ್ನು ಈ ವರದಿಯಲ್ಲಿ ಕೊಟ್ಟಿರುವುದು ಅಷ್ಟೊಂದು ಸಾಧುವಾದುದಲ್ಲ ಎಂದು ಹೇಳುತ್ತೇನೆ, ಹೈದರಾಬಾದ್ ಸಂಸ್ಥಾನದಲ್ಲಿ ಕನ್ನಡ ಭಾಗಗಳು ಹಿಂದುಳಿದಿರುವುದಕ್ಕೆ ಕಾರಣವಿದೆ. ಅಲ್ಲಿ ಕನ್ನಡ ಶಾಲೆಗಳಿಗೆ ಆಸ್ಪದವಿರಲಿಲ್ಲ. ಕನ್ನಡ ಜನತೆ, ಕನ್ನಡವನ್ನು ಕಲಿಯುವುದಕ್ಕೆ ಆಸ್ಪದವಿಲ್ಲದ ಹಾಗೆ ಉರ್ದು medium of instruction ಇದ್ದು ಉರ್ದು ಭಾಷೆಯನ್ನು ಕಲಿಯುತ್ತಿದ್ದರು. ಅಂಥಾದ್ದರಲ್ಲಿ ಕನ್ನಡ ಅಕ್ಷರಾಭ್ಯಾಸ ಯಾವರೀತಿ ಮುಂದುವರಿಯಬೇಕು ಎಂಬುದಕ್ಕೆ ಗಮನಕೊಡಬೇಕಾಗಿದೆ. ಯಾರು ನಮ್ಮನ್ನು ಆಳುತ್ತಿದ್ದರು, ನಾವು ಹೇಗೆ ಕಷ್ಟಗಳನ್ನು ಸಹಿಸುತ್ತಿದ್ದೆವು, ಬ್ರಿಟಿಷ್ ಸರ್ಕಾರದವರು ಜನರ ಏಳಿಗೆಗೆ ಹೇಗೆ ಆತಂಕವನ್ನು ಉಂಟುಮಾಡುತ್ತಿದ್ದರು, ವಿದ್ಯುಚ್ಛಕ್ತಿ ಯೋಜನೆಯನ್ನು ಕೈಗೊಳ್ಳಬೇಕಾಗಿದ್ದರೆ ಅವರು ಯಾವ ರೀತಿ ಬರುತ್ತಿದ್ದರು ಎಂಬುದನ್ನು ಯೋಚನೆ ಮಾಡಬೇಕು. ಜೋಗ್ ವಿದ್ಯುಚ್ಛಕ್ತಿ, ಕಾವೇರಿ ಅಣೆಕಟ್ಟು, ನಿಮ್ಮಲ್ಲಿ ಇರದೇ ಇದ್ದರೆ ಹೆಮ್ಮೆಯ ಮೈಸೂರು, ಮುಂದುವರಿದ ಮೈಸೂರು ಎಂದು ಹೇಳುವ ಪರಿಸ್ಥಿತಿ ಉಂಟಾಗುತ್ತಿತ್ತೇ ಎಂದು ಪ್ರಶ್ನೆಮಾಡುತ್ತೇನೆ.

ಅದೇ ರೀತಿಯಲ್ಲಿ ಬ್ರಿಟಿಷರು ನಮಗೇನಾದರೂ ಅನುಕೂಲತೆ ಮಾಡಿಕೊಟ್ಟಿದ್ದರೆ, ಎಲ್ಲ ಕನ್ನಡ ಭಾಗದ ಪ್ರದೇಶಗಳ ಉತ್ಕರ್ಷವಾಗಬೇಕು, ಅಲ್ಲಿನ ಜನಗಳ ಮುಂದುವರಿಯಬೇಕು ಎಂದು ಏನಾದರೂ ಒಂದು ಮಾರ್ಗವನ್ನು ಮಾಡಿಕೊಟ್ಟಿದ್ದರೆ ಮೈಸೂರಿಗಿಂತ ನಾವು ಉತ್ತಮ ಸ್ಥಿತಿಯಲ್ಲಿರುತ್ತಿದ್ದೆವೆಂದು ನಾನು ಹೇಳಬಲ್ಲೆ. ಇದಕ್ಕೆ ದೃಷ್ಟಾಂತವಾಗಿ ತುಂಗಭದ್ರಾ ಯೋಜನೆಯೊಂದನ್ನು ಪರಿಗಣಿಸಿದರೇ ಸಾಕು. 1857ನೆಯ ಇಸವಿಯಿಂದ ಅಲ್ಲಿಯ ಜನರು ಒಂದೇ ಸಮನಾಗಿ ಈ ಯೋಜನೆ ಕೈಗೊಳ್ಳಲೆಂದು ಕಂಠಶೋಷಣೆ ಮಾಡಿಕೊಂಡರೂ ಆಳರಸರಾದ ಬ್ರಿಟಿಷರು ನಮಗೆ ಕೊಟ್ಟಿರಲಿಲ್ಲ. ನಿಮ್ಮಂತೆ ವಿದ್ಯುಚ್ಛಕ್ತಿಯ ಅನುಕೂಲತೆಗಳನ್ನು ನಮಗೆ ಕಲ್ಪಿಸಿಕೊಟ್ಟಿದ್ದರೆ ನಿಮಗಿಂತ ಹೆಚ್ಚಿನ ಉತ್ಕೃಷ್ಟ ಸ್ಥಿತಿಯಲ್ಲಿರುತ್ತಿದ್ದೆವೆಂದು ಹೇಳಬಲ್ಲೆ. ಆದ್ದರಿಂದ ಇಂದು ನೀವು ಸುಖೀರಾಜ್ಯ ಕಟ್ಟಬೇಕೆಂದು ಹೊರಟಿರುವಾಗ ಕೈಗಾರಿಕಾ ಉತ್ಪಾದನೆಗೆ, ನೀರಾವರಿಗೆ ಬೇಕಾದ ವಿದ್ಯುಚ್ಛಕ್ತಿಯನ್ನೊದಗಿಸುವುದಕ್ಕೆ ಎಲ್ಲಾ ಕಾರ್ಯಕ್ರಮಗಳನ್ನೂ ಕೈಗೊಂಡರೆ ಯಾವ ಮೂಲೆಯಲ್ಲೂ ಸಹ ಆ ಜನಗಳು ಹಿಂದೆ ಬೀಳುವುದಿಲ್ಲ. ಹಿಂದುಳಿದ ನಾಡು ಎಂದು ಇನ್ನು ಮುಂದೆ ಯಾವ ಭಾಗವನ್ನೂ ಇಂಡಿಯಾ ದೇಶದಲ್ಲಿ ಕರೆಯುವ ಹಾಗಿರುವುದಿಲ್ಲ. ಇನ್ನು ಎರಡು ಮೂರು ವರ್ಷಗಳು ಮಾತ್ರ ನಮಗೆ ಸಮಯ ಕೊಟ್ಟರೆ ಸಾಕು. ಮುಂಬೈ ಕರ್ನಾಟಕವನ್ನೇ ಆಗಲಿ, ಹೈದರಾಬಾದ್ ಕರ್ನಾಟಕವನ್ನೇ ಆಗಲಿ, ಅಥವಾ ಮಾತೆತ್ತಿದರೆ ತಾವು ಬೆಟ್ಟುಟ್ಟು ತೋರಿಸುತ್ತಿರುವ ಬಳ್ಳಾರಿ ಜಿಲ್ಲೆಯಾಗಲಿ ಉನ್ನತ ಸ್ಥಿತಿಗೆ ಬರುವುದಕ್ಕೆ ಇನ್ನೂ 2-3 ವರ್ಷ ಕಾದು ನೋಡಬೇಕು ಅಷ್ಟೆ. ಈ ಸಂದರ್ಭದಲ್ಲಿ ಬಳ್ಳಾರಿಯ ವಿಷಯವನ್ನೆತ್ತಿ ಅನೇಕರು ಹೇಳಿದ್ದಾರೆ. ಅದ ಕೊರತೆಯ ಪ್ರಾಂತ್ಯ, ಬಳ್ಳಾರಿಯಲ್ಲಿ ಆಂಧ್ರರಿಗೂ ಕನ್ನಡಿಗರಿಗೂ ಇಂದು ಹೋರಾಟ ನಡೆಯುತ್ತಿದೆ ಎಂದು ಉದಹರಿಸಿ, ಇಂಥ ವಿಷಯಗಳು ಕರ್ಣಾಟಕ ಪ್ರಾಂತ್ಯವಾದರೆ ಎಷ್ಟೋ

ಶಗುತ್ತವೆ ಎಂದು ಹೇಳಿದ್ದಾರೆ. ಬಳ್ಳಾರಿಯಂಥ ಸಾಧು ಜನರು ಎಲ್ಲಿಯೂ ಇಲ್ಲ. ನಮ್ಮಲ್ಲಿ ಕರ್ಣಾಟಕರು ಬೇರೆ ಆಂಧ್ರರು ಬೇರೆ ಎಂಬ ಭಾವನೆಯಿಲ್ಲ. ಆದೋನಿ, ರಾಯಚೂರ್, ರಾಯದುರ್ಗಗಳಲ್ಲಿ ಆಂಧ್ರರು ಅಷ್ಟೊಂದು ಗಲಾಟೆ ಮಾಡುತ್ತಿದ್ದರೂ ನಾವು ಸುಮ್ಮನಿರುವುದನ್ನು ನೋಡಿದರೆ ನಮ್ಮ ಸಹನ ಶಕ್ತಿ ಕಾಣುತ್ತದೆ. ಅಮೇಲೆ ಇಂದು ನೀವು ಆಡಿ ತೋರಿಸುವ ಬಳ್ಳಾರಿ ಜಿಲ್ಲೆಯ ಕೊರತೆಯ ವಿಷಯವಾಗಿಯೂ ನಾನು ಮಾತನಾಡಬಲ್ಲೆ. ಅದು ಕೊರತೆಯ ಪ್ರದೇಶವೇ ಅಲ್ಲ. ಮದರಾಸಿನವರು ಕೊಟ್ಟ ಲೆಕ್ಕದಿಂದ ಅದು ಕೊರತೆಯ ಜಿಲ್ಲೆ ಅಷ್ಟೆ. ಅಂಥದರಲ್ಲಿ "ನಾವು ಕೊರತೆಯ ಪ್ರದೇಶವನ್ನು ಹೊತ್ತುಕೊಂಡಿದ್ದೇವೆ, ಬಹಳ ಉಪಕಾರ ಮಾಡಿದ್ದೇವೆ" ಎಂದು ಆಗಾಗ್ಗೆ ಹೇಳುತ್ತಿದ್ದೀರಿ. ನಾನು ಅಂಕಿ ಸಂಖ್ಯೆಗಳನ್ನೂ ಕೊಟ್ಟು ಅದು ಕೊರತೆಯ ಜಿಲ್ಲೆಯಲ್ಲವೆಂದು ಹೇಳಲು ಇಷ್ಟಪಡುತ್ತೇನೆ. ವಿದ್ಯುಚ್ಛಕ್ತಿಯ ಸರಬರಾಯಿಯ ವಿಚಾರವಾಗಿ ಈ ಅಧಿವೇಶನದಲ್ಲಿ ಪ್ರಶ್ನೆಗಳನ್ನು ಕೇಳುತ್ತಾ, ಹೆಚ್ಚಿನ ಮುತುವರ್ಜಿ ಆ ಭಾಗಕ್ಕೆ ವಹಿಸಿ ನಾಗಣ್ಣಗೌಡರು ಬಳ್ಳಾರಿಗೆ ವಿದ್ಯುಚ್ಛಕ್ತಿಯನ್ನು ಹರಿಸಿದ್ದಾರೆ ಎಂದು ಹೇಳಿದರು. ವಾಸ್ತವಾಂಶ ಆ ರೀತಿಯಿಲ್ಲ. ಮೈಸೂರು ಸರ್ಕಾರದವರಿಗೂ ಮದ್ರಾಸ್ ಸರ್ಕಾರದವರಿಗೂ ಬಳ್ಳಾರಿ ಜಿಲ್ಲೆಗೆ 4,000 ಕಿಲೋವಾಟ್‌ನಷ್ಟು ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ಹಿಂದೆಯೇ ಒಪ್ಪಂದವಾಗಿತ್ತು. ಮುದ್ರಾಸ್ ಸರ್ಕಾರದವರೇ sanction ಮಾಡಿದ್ದರು. ಮದನ್ನು ಡಾ. ನಾಗಣ್ಣಗೌಡರು ಕಾರ್ಯರೂಪಕ್ಕೆ ತಂದರೇ ಹೊರತು ಮೈಸೂರಿಗೆ ಮೀಸಲಾಗಿದ್ದ ವಿದ್ಯುಚ್ಛಕ್ತಿಯನ್ನಾವುದನ್ನೂ ಬಳ್ಳಾರಿಗೆ ಕೊಟ್ಟಿಲ್ಲವೆಂದು ನಾನು ಹೇಳಬಯಸುತ್ತೇನೆ.

ಆಡಳಿತ ವಿಚಾರವಾಗಿ ಅನೇಕ ಅಡ್ಡಿ ಆತಂಕಗಳು ಬರಬಹುದೆಂದು ಈ ರಿಪೋರ್ಟಿನಲ್ಲಿ ತಿಳಿಸಿದ್ದಾರೆ. ಅಡ್ಡಿ ಅಡಚಣೆಗಳು ಎಂದಿಗೂ ಬರುವುದಿಲ್ಲ. ಇಂದು ಮದರಾಸ್ ಪ್ರಾಂತ್ಯ ಬೊಂಬಾಯಿ ಪ್ರಾಂತ್ಯಗಳು ಯಾವ ರೀತಿ ಕೊರತೆಯನ್ನು ಸರಿದೂಗಿಸಿಕೊಂಡು ಹೋಗುತ್ತಿವೆ? ಇದು ಅವುಗಳಲ್ಲಿರತಕ್ಕ ಬಂದರಿನ ಉತ್ಪಾದನೆಯಿಂದ. ಮದರಾಸ್ ಪ್ರಾಂತ್ಯದಲ್ಲಿ ಮಲಬಾರ್ ಪ್ರದೇಶ ಎರಡು ಕೋಟಿ ರೂಪಾಯಿಗಳ ಕೊರತೆಯ ಪ್ರದೇಶ. ಅದನ್ನು ಹೇಗೆ ಸರಿದೂಗಿಸಿಕೊಂಡು ಹೋಗುವುದಕ್ಕೆ ಸಾಧ್ಯವಾಗಿದೆ ಗೊತ್ತಿದೆಯೇ? ಅದು ಅಲ್ಲಿರುವ ರೇವು ಪಟ್ಟಣದ ಉತ್ಪತ್ತಿಯ ಮೂಲಕ ಅಲ್ಲವೇ? ಅದೇ ರೀತಿ ನಮಗೊಂದು ಬಂದರು ಸಿಕ್ಕುವುದಾದರೆ, ಅದರಿಂದಾಗಿ ಹೆಚ್ಚಾಗುವ ವ್ಯಾಪಾರೋದ್ಯಮಗಳಿಂದ ಬರಬಹುದಾದ ಆದಾಯದಿಂದ ಯಾವ ಕೊರತೆಯೂ ಒಟ್ಟುಗೂಡಿದ ಕರ್ಣಾಟಕಕ್ಕೆ ಬರುವುದಿಲ್ಲ. ಆದ್ದರಿಂದ ಅಖಿಲ ಕರ್ಣಾಟಕವಾದರೆ ಕೊರತೆ ಬರುತ್ತದೆಂಬ ಅಂಜಿಕೆಯನ್ನಿಟ್ಟುಕೊಳ್ಳುವುದು ಬೇಡ. ಕನ್ನಡ ನಾಡಿನಲ್ಲಿ ಎಲ್ಲಾ ತೆರದ ಸಂಪತ್ತುಗಳೂ ಕಂಡುಬರುತ್ತವೆ. ಸರಿಯಾದ ರೀತಿಯಲ್ಲಿ ಅವುಗಳನ್ನು ವಿನಿಯೋಗಿಸಿಕೊಳ್ಳದೆ ಅವುಗಳಿಂದ ಹೆಚ್ಚು ಉತ್ಪಾದನೆ ಉಂಟುಮಾಡಿಕೊಳ್ಳಲು ಆಸಕ್ತಿ ವಹಿಸದೆ ನಿರ್ಲಕ್ಷ್ಯದಿಂದ ಇದ್ದುದರ ಪರಿಣಾಮವಾಗಿ ಉತ್ಪಾದನಾ ಶಕ್ತಿ ಕಡಮೆಯಾಗಿದೆ. ಅಲ್ಲದೆ ಕೊರತೆಯಾಗಬಹುದೆಂಬ ನಿಮ್ಮ ಶಂಕೆಗೆ ಇನ್ನೂ ಒಂದು ಹೇಳುತ್ತೇವೆ. ಅಂಕಿ ಸಂಖ್ಯೆಗಳಿಂದ budgetary positionನನ್ನು ಪರಿಶೀಲಿಸುವುದಾದರೂ, ಅಷ್ಟೇನೂ ನಿರಾಶಾದಾಯಕವಾಗಿ ಅವರು ಕೊಟ್ಟಿರುವ ಅಂಕಿಗಳನ್ನು ನೋಡುವುದಾದರೂ ಆ ಭಾಗಕ್ಕೆ ಇರುವ ಕೊರತೆಯೆಲ್ಲಾ ಕೇವಲ ಒಂದು ಕೋಟಿ ರೂಪಾಯಿ! ನಮ್ಮಲ್ಲಿರುವ ಕೊರತೆಯಾದರೋ 4 ಕೋಟಿ ರೂಪಾಯಿ! ಹೀಗಿರುವಾಗ ಆ ಪ್ರಾಂತ್ಯ ನಮಗೆ ಸೇರುವುದರಿಂದ ಯಾರಿಗೆ ಲಾಭ? ಯಾರಿಗೆ ನಷ್ಟ! ಈ ನಾಲ್ಕು ಕೋಟಿ ರೂಪಾಯಿಗಳ ಕೊರತೆಯನ್ನು ಅವರೂ ಹಂಚಿಕೊಳ್ಳುವಾಗ ಈ ನಾಡಿಗೆ ಲುಕ್ಸಾನೇ? ಎಂಬುದನ್ನು ಪರಿಶೀಲಿಸಬೇಕೆಂದ ನಾನು ವಿನಯದಿಂದ ಕೇಳುತ್ತೇನೆ.

ಇನ್ನು ನಮ್ಮೆಲ್ಲರಿಗೂ ಹಿರಿಯರೂ ಹಾಗೂ ಮೈಸೂರು ದೇಶದ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಶ್ರೀ ವೀರಣ್ಣಗೌಡರ ಭಾಷಣದ ಕಡೆ ಈ ಸಭಾ ಸದಸ್ಯರ ಲಕ್ಷ್ಯವನ್ನು ಎಳೆಯಬಯಸುತ್ತೇನೆ. ಅವರು ಬಹು ದಿವಸಗಳ ಹಿಂದೆ ಕರ್ಣಾಟಕ ಪ್ರಾಂತ್ಯ ಸಮಿತಿಯಲ್ಲಿದ್ದುದು ಎಲ್ಲರಿಗೂ ಗೊತ್ತಿರಬಹುದು. ಆ ಸಂದರ್ಭದಲ್ಲಿ ಅವರು ಇಲ್ಲಿಂದ ಆ ಕಡೆಗೆ ಪ್ರವಾಸ ಹೋಗುತ್ತಿದ್ದುದೂ ಗೊತ್ತಿರಬಹುದು. ಆಗ್ಗೆ ಒಂದು ಸಾರಿ, ನಮ್ಮ ಜನಪ್ರಿಯ ನಾಯಕರಾದ ನಿಜಲಿಂಗಪ್ಪನವರನ್ನು ಅಧ್ಯಕ್ಷರಾಗಿ ಒಮ್ಮತವಾಗಿ ಚುನಾಯಿಸಬೇಕೆಂಬ ಸಂದರ್ಭ ಬಂದಾಗ ನಮ್ಮ ಈ ಶ್ರೀ ವೀರಣ್ಣಗೌಡರು ಮಾಡಿದ ಭಾಷಣದ ಧೋರಣೆಯನ್ನು ಈ ಸಭೆಯ ಮಾನ್ಯ ಸದಸ್ಯರು ಗಮನಿಸಲಿ. ಹೊರನಾಡ ಕನ್ನಡಿಗರೂ ಮೈಸೂರಿಗರೂ ಸೇರಿ ಒಂದೇ ಆಡಳಿತಕ್ಕೆ ಬಂದು ಎಲ್ಲರ ಹಿತ ಸಂಬಂಧಗಳು ಏಕರೀತಿಯಲ್ಲಿ ಬೆಳೆಯಲಿ; ನಾವೂ ನೀವೂ ಒಂದಾಗಬೇಕು; ನಮ್ಮ ನಿಮ್ಮ ಬಳಕೆಗೆ ಅನುವಾಗಲು ಒಂದು ಸೇತುವೆಯನ್ನು ಕಟ್ಟುವಂತೆ ಇಂದು ನಿಜಲಿಂಗಪ್ಪನವರನ್ನು ಅಧ್ಯಕ್ಷರಾಗಿ ಆರಿಸಿಕೊಂಡಿದ್ದೇವೆ ಎಂದು ಅವರು ಮಾಡಿದ ಭಾಷಣವನ್ನು ಇಂದು ಮರೆತಂತಿದೆ. ತಮ್ಮ ನಿಜ ಅಭಿಪ್ರಾಯವನ್ನು ಬೇಕೆಂದು ಮುಚ್ಚಿಟ್ಟು ಎರಡು ಕರ್ಣಾಟಕವಾಗಬೇಕೆಂದು ಹೇಳಿದರೋ ಏನೋ ಗೊತ್ತಿಲ್ಲ. ಶ್ರೀ ಪಟ್ಟಾಭಿರಾಮರ್‌ರವರು ಹಳೆಯ ಕಾಂಗ್ರೆಸ್ ಮುಖಂಡರು. ಅವರು ಎಲ್ಲರೂ ಸೇರಿ ಸ್ವಾತಂತ್ರ್ಯದ ಚಳವಳಿಯನ್ನು ಯಾವ ರೀತಿ ಸಾಗಿಸಿಕೊಂಡು ಬಂದರು, ಭಾಷಾವಾರು ಪ್ರಾಂತ್ಯ ಹೇಗೆ ಆಡಳಿತ ಸುಗಮವಾಗಿ ಹೋಗುವುದಕ್ಕೆ ಅವಶ್ಯಕವೆಂದು ಹೇಳಿ ಒಂದು ಜನತೆಯನ್ನು ಒಂದು ಆಡಳಿತದಲ್ಲಿ ತರುವುದಕ್ಕೆ ಪ್ರಯತ್ನಪಡಬೇಕೆಂದು ಯಾವ ರೀತಿ ಕಾಂಗ್ರೆಸ್ಸಿನವರು ಮಾತು ಕೊಟ್ಟಿದ್ದರು, ಅವರು ಏಕೆ ಈಗ ಮರೆತಿದ್ದಾರೆ ಎಂಬುದನ್ನು ಹೇಳಿದ್ದಾರೆ. ಅಲ್ಲದೆ, ಒಂದು ತತ್ವವನ್ನು ಒಪ್ಪಿಕೊಂಡ ಮೇಲೆ, ಆ ತತ್ವವನ್ನು ಕಾರ್ಯರೂಪಕ್ಕೆ ತರಬೇಕಾದರೆ ಎಲ್ಲೆಲ್ಲಿ ಯಾವಯಾವ ರೀತಿ ವಿಂಗಡಣೆ ಮಾಡಬೇಕು, ಯಾವಯಾವ ಮಾರ್ಪಾಡು ಮಾಡಬೇಕು, ಹಿಂದೂಸ್ಥಾನದ ನಕಾಶೆಯನ್ನು ಯಾವ ರೀತಿ ಬದಲಾವಣೆ ಮಾಡಬೇಕೆಂದು ಹೊರಟಿರುವಾಗ ಮೈಸೂರಿನವರು ಬೇಡ ಎಂದು ಕುಳಿತುಕೊಂಡರೆ ಮೈಸೂರಿನ ಚರಿತ್ರೆಯನ್ನು ಮುಂದೆ ಯಾವ ರೀತಿ ಬರೆಯುತ್ತಾರೆಂಬುದನ್ನು ಯೋಚನೆ ಮಾಡಬೇಕು. ಕನ್ನಡಿಗರು ಒಟ್ಟುಗೂಡಿ, ಕನ್ನಡ ಜನಾಂಗದ ಉತ್ಕರ್ಷವಾಗುವಾಗ, ಮೈಸೂರಿನ ಜನತೆ ಅಡ್ಡಿಯನ್ನು ಉಂಟು ಮಾಡಿದರು ಎಂದು ಮುಂದಿನ ಚರಿತ್ರೆಕಾರರು ಬರೆಯಬಹುದು. ಹಿಂದೂಸ್ಥಾನ ಸರ್ಕಾರದವರು ಪುನರ್ವಿಂಗಡಣೆ ಮಾಡಿಯೇ ಮಾಡುತ್ತಾರೆ; ನಿಮಗಾಗಿ ನಿಲ್ಲುವುದಿಲ್ಲ. ಮರಾಠಿಗರನ್ನು ಕೇಳುವಂತಿಲ್ಲ; ಆಂಧ್ರರು ಈಗಾಗಲೇ ಮಾಡಿಕೊಂಡಿದ್ದಾರೆ. ಹಿಂದುಳಿದ ಅನೇಕ ಪ್ರಾಂತಗಳ ಬೆಳವಣಿಗೆಯಾಗಬೇಕಾಗಿದೆ. ಹೀಗಿರುವಾಗ ನಾವು ಸುಮ್ಮನೆ ಕುಳಿತರೆ ಯಾರೂ ಕೇಳುವುದಿಲ್ಲ.

(ಶ್ರೀ ಇಜಾರಿ ಸಿರಸಪ್ಪ)

ಇನ್ನು ಅಂಕಿ ಸಂಖ್ಯೆಗಳ ವಿಚಾರ. ಹಿಂದೆ ಒರಿಸ್ಸಾ ಮತ್ತು ಸಿಂಧ್ ಪ್ರಾಂತ್ಯಗಳಾಗುವಾಗ, ಅವು ಕೊರತೆಯ ಪ್ರಾಂತ್ಯಗಳಾಗುತ್ತವೆ, ಆದ್ದರಿಂದ ಅವುಗಳನ್ನು ಮಾಡುವುದು ಬೇಡ ಎಂದು ನಿರ್ಧರಿಸಿದ್ದರು. ಸರ್ಕಾರದವರು ಅದೇ ರೀತಿ ವಾದಿಸಿದರು. ಆದರೂ ಕಾರಣಾಂತರಗಳಿಂದ ಆ ಪ್ರಾಂತ್ಯಗಳಾದುವು. ಅಂದು ಸಿಂಧ್ ಮತ್ತು ಒರಿಸ್ಸಾ ಪ್ರಾಂತ್ಯಗಳು ಯಾವ ರೀತಿ ಕಷ್ಟಪಡುತ್ತಿದ್ದುವೆಂಬುದನ್ನು ನಾವು ಗಮನಿಸಬೇಕು. ಅಂಥಾದ್ದು ಈಗ ಕೊರತೆಯೆಲ್ಲಾ ಹೋಗಿ ಎಲ್ಲ ಜನಗಳೂ ಸುಖವಾಗಿ ಬಾಳುತ್ತಿರುವುದನ್ನು ಕಾಣಬಹುದು. ಅಂಕೆ ಸಂಖ್ಯೆಗಳನ್ನು ನೋಡಿದರೆ ಇಂದು ಒಂದು ರೀತಿಯಾಗಿರಬಹುದು; ನಾಳೆ ಬದಲಾಯಿಸಬಹುದು. ಅಲ್ಲದೆ ಕನ್ನಡನಾಡಿನ ವಿಚಾರದಲ್ಲಿ ಅನೇಕ ಆರ್ಥಿಕ ತಜ್ಞರು ಏನು ಹೇಳಿದ್ದಾರೆಂಬುದನ್ನು ಗಮನಿಸಿ. ಕನ್ನಡ ನಾಡನ್ನು, ಕನ್ನಡ ಜನಾಂಗವನ್ನು ಒಂದು ಆಡಳಿತಕ್ಕೆ ತರುವುದರಲ್ಲಿ ಹಣಕಾಸಿನ ತೊಂದರೆ ಯಾವುದೂ ಇಲ್ಲವೆಂದು ಹೇಳಿದ್ದಾರೆ. ಆದ್ದರಿಂದ ಕನ್ನಡನಾಡಿನ ಹಿತದೃಷ್ಟಿಯಿಂದ, ಹಿಂದೂಸ್ಥಾನದ ಭವಿತವ್ಯದ ಒಂದು ಚಿತ್ರದ ದೃಷ್ಟಿಯಿಂದ, ಒಗ್ಗಟ್ಟಿನ ದೃಷ್ಟಿಯಿಂದ ಸಂಕುಚಿತ ಮನೋಭಾವವನ್ನು ಬಿಟ್ಟು ಎಲ್ಲರೂ ಒಮ್ಮನಸ್ಸಿನಿಂದ ಕರ್ಣಾಟಕವಾಗಲೆಂದು ಹೇಳೋಣ. ಕರ್ಣಾಟಕವೆಂದ ಮಾತ್ರಕ್ಕೆ ಕರ್ಣಾಟಕವೆಂಬ ಬೇರೆ ಹೆಸರು ಕೊಡುವುದಕ್ಕೆ ಹೋಗುವುದಿಲ್ಲ. ವಿಸ್ತಾರ ಮೈಸೂರಾಗಬೇಕೆಂದು ಎಲ್ಲರೂ ಒಪ್ಪಿದ್ದಾರೆ. ಮೈಸೂರಿನ ರಾಜಪ್ರಮುಖರನ್ನೇ ಇಡೀ ಕರ್ಣಾಟಕದ ರಾಜಪ್ರಮುಖರೆಂದೂ ಪರಿಗಣಿಸುವುದಕ್ಕೆ ಒಪ್ಪಿಕೊಂಡಿದ್ದೇವೆಂದು ಹೇಳಿದ್ದಾರೆ. ಆಡಳಿತಕ್ಕೂ ಬೇರೊಂದು ಮುಖ್ಯ ಪಟ್ಟಣ ಬೇಡ; ಹೆಚ್ಚಿಗೆ ಖರ್ಚಿಗೆ ಅವಕಾಶವಿಲ್ಲದಂತೆ ಮೈಸೂರು ಎಲ್ಲ ಕನ್ನಡ ಭಾಗಗಳನ್ನೂ ಒಳಗೊಂಡ ವಿಶಾಲ ಮೈಸೂರು, ಬೃಹದ್ ಮೈಸೂರನ್ನು ನಿರ್ಮಾಣ ಮಾಡಿದ ಕೀರ್ತಿಯನ್ನು ಸಂಪಾದಿಸುತ್ತೀರಿ; ಈ ದೃಷ್ಟಿಯಿಂದ ಇದಕ್ಕೆ ಸಂಪೂರ್ಣ ಬೆಂಬಲ ನೀಡಬೇಕೆಂದು ಎರಡು ಮಾತುಗಳನ್ನು ಹೇಳಿ ಮುಗಿಸುತ್ತೇನೆ.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ).—ಅಧ್ಯಕ್ಷರೇ, ಈ ಸಭೆಯಲ್ಲಿ ವಿಪುಲವಾಗಿ ನಡೆಯುತ್ತಿರುವ ಈ ಚರ್ಚೆಯನ್ನು ಕಿವಿನೆಟ್ಟಗೆ ಮಾಡದೆ ಕೇಳದಿರುವ ಜನ ಇಲ್ಲವೆಂದು ನನ್ನ ಭಾವನೆ. ಕರ್ಣಾಟಕ ಪ್ರಾಂತ್ಯರಚನೆಯ ಪ್ರಶ್ನೆ ಮೈಸೂರಿಗೆ ಮಾತ್ರ ಸಂಬಂಧಪಟ್ಟ ಪ್ರಶ್ನೆಯಲ್ಲವೆಂದು ನಾನು ಭಾವಿಸಿದ್ದೇನೆ. ಕರ್ಣಾಟಕದ ಪ್ರಶ್ನೆಯನ್ನು ನಾವು ಮನಸ್ಸಿನಲ್ಲಿಟ್ಟುಕೊಂಡು ಮಾತನಾಡುವಾಗ ಅದರ ಹಿನ್ನೆಲೆಯನ್ನು ಎಷ್ಟು ದೂರ ಬಿಡಿಸಿಕೊಂಡು ಹೋಗಬೇಕೆಂಬುದನ್ನು ನಾವು ಎಚ್ಚರಿಕೆಯಿಂದ ನೋಡಬೇಕಾಗಿದೆ. ಕಾರಣವೇನೆಂದರೆ, ಕನ್ನಡನಾಡಿನ ಇತಿಹಾಸ ಸಾಧಾರಣವಾದದ್ದಲ್ಲ. ಅದನ್ನು ನಾವು ಮನಸ್ಸಿನಲ್ಲಿಟ್ಟುಕೊಂಡು, ಆ ಕೀರ್ತಿ ವೈಭವದ ಚಿತ್ರವೇನೆಂಬುದನ್ನು ಮನಸ್ಸಿಗೆ ತೆಗೆದುಕೊಂಡರೆ, ಕರ್ಣಾಟಕ ರಚನೆಯಾಗಬೇಕೇ ಬೇಡವೇ ಎಂಬ ಪ್ರಶ್ನೆ ಕೇಳುವುದೇ ಅಸಂಭವವೆಂದು ಹೇಳುತ್ತೇನೆ.

ಆದರೂ ನಾವು ಈ ಪ್ರಶ್ನೆಯ ವಿಷಯದಲ್ಲಿ ಜವಾಬ್ದಾರಿಯಿಂದ ಮಾತನಾಡುವಾಗ ನಮ್ಮ ಮಾತಿಗೆ ಒಂದು ರೂಪ, ಎಲ್ಲೆಕಟ್ಟು ಹಾಕುವುದು ಅನಿವಾರ್ಯ. ಆ ದೃಷ್ಟಿಯಿಂದ ನಾನು ಹೇಳುತ್ತೇನೆ.

ಈ ಸಂದರ್ಭದಲ್ಲಿ ಮುಖ್ಯವಾಗಿ ನಾಲ್ಕು ಅಂಶಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಕೆಲವು ವಿಷಯಗಳನ್ನು ಹೇಳಿದರೆ ಸಾಕಾಗಿದೆ. ಕಮಿಟಿಯವರು ಕೊಟ್ಟ ವರದಿಯ ಮೇಲೆ ಅನೇಕ ವಿಧವಾದ, ಪರ ಮತ್ತು ವಿರೋಧವಾದ ಅಂಕಿಅಂಶಗಳನ್ನು ಕೊಟ್ಟು ಸದಸ್ಯರುಗಳು ಮಾತನಾಡಿದ್ದಾರೆ. ಕೆಲವರು ಹೇಳಿದಂತೆ, ಕಮಿಟಿಯವರು ಕೊಟ್ಟಿರತಕ್ಕ ಅಂಕಿಅಂಶಗಳೆಲ್ಲಾ ಸಂಪೂರ್ಣವಾಗಿ ಸಾಧುವಾದದ್ದಲ್ಲವೆಂದೂ ಹೇಳುವುದಕ್ಕಾಗುವುದಿಲ್ಲ, ಹಾಗೆಯೇ, ಅವರು ಸಂಗ್ರಹಿಸಿರುವ ಅಂಕಿಅಂಶಗಳೆಲ್ಲಾ ಕೇವಲ 'ಸರಸ್ವತಿಯ ಮುರುಕು' ಎಂತಲೂ ಭಾವಿಸುವುದಕ್ಕಾಗುವುದಿಲ್ಲ. ಮನುಷ್ಯನ ಮಿತಿ ಎಷ್ಟಿದೆ ಅದಕ್ಕನುಗುಣವಾಗಿ ಆಗಿನ ಸಂದರ್ಭಾನುಸಾರ giving due margin to the sentimental aspects of human nature ಎಡೆಗೊಟ್ಟು ಮಾಡಿದ್ದಾರೆನ್ನಬಹುದು. Logic ಗೊತ್ತಿರುವವರಿಗೆ ಹೇಳಬೇಕಾಗಿಲ್ಲ. ಅಂದಮೇಲೆ ಅಂಕಿಅಂಶಗಳನ್ನು ಎಷ್ಟರ ಮಟ್ಟಿಗೆ ಉಪಯೋಗಿಸಿಕೊಳ್ಳಬೇಕೆಂಬ ವಾದ ಮುಗಿಯಿತು.

ಇಷ್ಟಾದಮೇಲೆ ಪ್ರಾಂತ್ಯ ರಚನೆಯಾಗಲೇಬೇಕು, ಎಂದು ಈ ಬಗ್ಗೆ ಮೈಸೂರಿನ ಜನರೇನಾದರೂ ಅರ್ಜಿ ಹಾಕಿಕೊಂಡಿದ್ದರೇ ಎಂದು ಕೇಳಿದರೆ ಅದೂ ಇಲ್ಲ. ಇನ್ನು ಮೈಸೂರು ಗಡಿಯ ಹೊರಗಡೆ ಇರತಕ್ಕಂಥ ಆ ಜನಗಳೇನಾದರೂ ನೆಹರೂರವರಿಗೆ ಒಂದು ಅರ್ಜಿ ಬರೆದು ನೀವು ಒಂದು ಬೌಂಡರಿ ಕಮಿಷನನ್ನು ಕೂಡಲೇ ನೇಮಕಮಾಡಿ ನಮ್ಮನ್ನು ಮೈಸೂರಿಗೆ ಸೇರಿಸಿ ಎಂದು ಕೇಳಿಕೊಂಡಿದ್ದಾರೆಯೇ ಅಂದರೆ ಅದೂ ಸಹ ಇಲ್ಲ. ಆದರೆ ಈಗ ಪರಿಸ್ಥಿತಿ ಏನಾಗಿದೆ ಎಂದರೆ ಸಮುದ್ರದ ಅಲೆಯೊಂದಿಗೆ ಸರಸವಾಡುತ್ತಿದ್ದಂಥವರಲ್ಲಿ ಕೆಲವರನ್ನು ಸಮುದ್ರದ ಅಲೆ ಹೊಡೆದುಕೊಂಡು ಬಂದು ತನ್ನ ದಡದಲ್ಲಿರುವ ಮರಳಿಗೆ ನೂಕಿದಾಗ ಅವರು ಹೇಗೆ ಆ ಮರಳಿನಲ್ಲಿ ಸಿಕ್ಕಿ ಹೊರಳಾಡುತ್ತಿರುತ್ತಾರೋ ಹಾಗೇ ನಾವೂ ಸಹ ಈ ದಿವಸ ಈ ವಿಚಾರದಲ್ಲಿ ಹಿಂದಕ್ಕೂ ಮುಂದಕ್ಕೂ ಹೊರಳಾಡುತ್ತಿದ್ದೇವೆ. ನೀರಿನಲ್ಲಿ ಬಿದ್ದಿದ್ದ ಮೀನನ್ನು ಎತ್ತಿ ದಡಕ್ಕೆ ಹಾಕಿದಾಗ ಅದು ಹದ್ದಿನ ಬಾಯಿಗೆ ಸಿಕ್ಕುವಾಗ ಆ ತಾಯಿ ಮೀನು ಹೇಗೆ ಅದನ್ನು ನೋಡುತ್ತದೋ ಹಾಗೇ ನಮ್ಮನ್ನು ಬಿಟ್ಟು ಅಗಲಿರತಕ್ಕವರನ್ನು ನಾವೀಗ ನೋಡುತ್ತಿದ್ದೇವೆ. ಈ ದಿವಸ ಮೈಸೂರು ಚರಿತ್ರೆಯಲ್ಲಿ ಯಾವ ರಕ್ತಪಾತವೂ ಇಲ್ಲದೆ ದೇಶವು ತನ್ನಷ್ಟಕ್ಕೆ ತಾನೇತಾನಾಗಿ ವಿಶಾಲವಾಗುತ್ತಿರುವಾಗ ಮತ್ತು ಈ ಹಿಂದೆ ನಾವು ಕಳೆದುಕೊಂಡಿದ್ದಂಥ ಭಾಗಗಳೆಲ್ಲಾ ಪುನಃ ನಮಗೆ ಬಂದು ಸೇರಿ ನಮ್ಮ ದೇಶ ವಿಶಾಲವಾಗತಕ್ಕಂಥ ವೇಳೆಯಲ್ಲಿ ಹೀಗೆ ವಿಶಾಲವಾಗತಕ್ಕಂಥ ದೇಶವನ್ನು "ಆಳಲಾರೆವು" ಎಂದು ಹೇಳತಕ್ಕ ಜನರು ದೇಶದಲ್ಲಿ ಇನ್ನೂ ಇದ್ದಾರಲ್ಲಾ ಅನ್ನುವುದು ಗೊತ್ತಾದುದರ ಜೊತೆಗೆ ಇಂಥವರನ್ನು ಕಣ್ಣಿನಿಂದ ನೋಡತಕ್ಕಂಥ ಆ ಒಂದು ಪುಣ್ಯ ಈ ದಿವಸ ನಮ್ಮ ಪಾಲಿಗೆ ಬಂದಿದೆ. ಆದರೆ ಈ ನಮ್ಮ ಮೈಸೂರಿನ ಕೀರ್ತಿಯನ್ನು ಕಮ್ಮಿಮಾಡಬೇಕೆಂಬ ಅಭಿಪ್ರಾಯ ನನಗಿಲ್ಲ. ಹಿಂದಿನ ರಾಜ ಮಹಾರಾಜರುಗಳ ಕಾಲದಲ್ಲಿ ಒಬ್ಬರೇ ದಿವಾನರು ಇರುತ್ತಿದ್ದಾಗ್ಯೂ ದೇಶ ಎಷ್ಟು ವಿಶಾಲವಾದಾಗ್ಯೂ ಅವರು ಆಡಳಿತ ದೃಷ್ಟಿಯಲ್ಲಿ ಯಾವ ತೊಂದರೆಯನ್ನೂ ಕಾಣದೆ ಇದ್ದಾಗ್ಯೂ, ಅಂಥ ಕಾಲದಲ್ಲಿ ಕೂಡ ಅವರೆಲ್ಲರೂ ನಮ್ಮ ದೇಶ ಇನ್ನೂ ವಿಶಾಲವಾಗಬೇಕೆಂದು ಹೇಳುತ್ತಿದ್ದರು. ಆದರೆ ನಾವು ಈ ದಿವಸ ಹಾಗೆ ದೇಶ ವಿಶಾಲವಾದರೆ

ಅದನ್ನು ನಾವು ಆಳುವುದಕ್ಕಾಗುವುದಿಲ್ಲ ಎಂದು ಕೆಲವು ಮಾನ್ಯಸದಸ್ಯರು ಎತ್ತಿರತಕ್ಕ ವಾದಸರಣಿಯನ್ನು ನೋಡಿದರೆ ಆ ಹಿಂದಿನವರ ವಾದಸರಣಿಯನ್ನು ಇವರು ತಿರುವಿ ಹಾಕಿಕೊಂಡಿರುವ ಹಾಗೆ ನನಗೆ ಭಾಸವಾಗುತ್ತಿದೆ. ಈ ದಿವಸ ಭಾರತದ ದೇಶಾದ್ಯಂತವೂ ಈ ಪ್ರಾಂತ್ಯಗಳ ಪುನರ್ರಚನೆಯಾಗಬೇಕೆಂಬ ಗೋಳು ಎದ್ದು ಕೇಳುತ್ತಿದೆ. ಆದಕಾರಣ ಇದನ್ನು ಪರಿಹಾರ ಮಾಡಲು ಒಂದು ಮಾರ್ಗವನ್ನು ಕಂಡುಹಿಡಿಯುವುದಕ್ಕಾಗಿ ಈ ದಿವಸ ಶಕ್ತಿವಂತರೂ, ಮತ್ತು ಪ್ರಭಾವಶಾಲಿಗಳೂ ಆದಂಥ ಜನರನ್ನು ಕೇಂದ್ರ ಸರ್ಕಾರ ಕೂಡಿಸಿದೆ. ಅವರು ಏನು ಮಾಡಬಹುದೋ ಅದನ್ನು ಮಾಡಿಯೇ ಮಾಡುತ್ತಾರೆ. ಈ ಹಿಂದೆ ಕೇಂದ್ರ ಸರ್ಕಾರದವರೇನೂ ನಮ್ಮ ಹತ್ತಿರ ಬಂದು ನಿಮಗೆ ಬಳ್ಳಾರಿ ಜಿಲ್ಲೆ ಬೇಕೋ ಅಥವಾ ಬೇಡವೋ ಅಂತ ನಮ್ಮನ್ನೇನೂ ಕೇಳಲಿಲ್ಲ. ಅವರ ಪಾಡಿಗೆ ಅವರೇನು ಮಾಡಬೇಕೋ ಅದನ್ನು ಮಾಡಿಬಿಟ್ಟರು. ಆಗ ಆ ಬಳ್ಳಾರಿ ತನ್ನ ಪಾಡಿಗೆ ತಾನೆ ಬಂದು ಮೈಸೂರಿಗೆ ಸೇರಿಕೊಂಡಿತು. ಈಗ ನಮ್ಮ ಮೈಸೂರಿನ ಜನಸಂಖ್ಯೆ ಸುಮಾರು ಒಂದು ಕೋಟಿಯಿರಬಹುದು. ನಾಳೆ ಅಖಂಡ ಕರ್ಣಾಟಕವಾದರೆ ಇದರ ಜನಸಂಖ್ಯೆ $2\frac{1}{2}$ ಕೋಟಿಗೆ ಹೆಚ್ಚಬಹುದು. ಅಷ್ಟು ಹೆಚ್ಚಿದಾಗ್ಯೂ ಈ ಜನಸಂಖ್ಯೆಯು ಮದರಾಸ್ ಮತ್ತು ಯು.ಪಿ. ಗಳ ಜನಸಂಖ್ಯೆಯಷ್ಟೆಂದೂ ಜಾಸ್ತಿಯಾಗಲಾರದು ಎಂದೆನ್ನತಕ್ಕವರೂ ಇಲ್ಲಿ ದುರ್ಲಭವಾಗಿದ್ದಾರೆ. ಹೀಗೆ ಇದನ್ನು ಇವರು ಯಾವುದೋ ಒಂದು ದೃಷ್ಟಿಯಿಂದ ದೇಶ ದೊಡ್ಡದಾಗುವುದು ಬೇಡ, ಅದು ಹಾಗೇ ಇರಲಿ ಎಂದು ಹೇಳಿದ್ದಾರೆ. ಇವರಲ್ಲಿ ಅಂಥ ಯಾವುದೋ ಒಂದು ಅಂಜಿಕೆ ಇದ್ದರೂ ಇರಬಹುದು. ಆದರೆ ಒಂದು ದೊಡ್ಡ ಸರಪಣಿಯಲ್ಲಿ ಯಾವುದೋ ಒಂದು ಕೊಂಡಿ ಸ್ವಲ್ಪ ವೀಕ್ ಆಗಿದ್ದರೂ ಆ ಸರಪಣಿಯ ಇತರ ಕೊಂಡಿಗಳೆಲ್ಲಾ ಒಂದಕ್ಕೊಂದು ಅಂಟಿಕೊಂಡೇ ಇರುತ್ತವೆ. ಅದರ ಹಾಗೆ ಈ ದಿವಸ ಈ ಕರ್ಣಾಟಕದ ಪ್ರಶ್ನೆಯೂ ಇರುವುದರಿಂದ ಅಲ್ಲಿ-ಇಲ್ಲಿ ಕೊಂಚ ಲೋಪದೋಷಗಳಿದ್ದರೂ ಕರ್ಣಾಟಕ ಪ್ರಾಂತ್ಯವಾಗುವುದೇನೋ ಆಗಿಯೇ ಆಗುತ್ತದೆ. ಆದರೆ ಇಲ್ಲಿಯತನಕ ಆಗಿರತಕ್ಕ ಚರ್ಚೆಯನ್ನು ನೋಡಿದರೆ ಕೆಲವರು ಮಾತನಾಡುತ್ತ, ಕೇಂದ್ರ ಸರ್ಕಾರದವರು ಅವರಾಗಿಯೇ ಅವರು ಆಗಲಿ ಎಂದು ಹೇಳಿದರೆ ಆಗಬೇಕಾದರೆ ಈ ಕರ್ಣಾಟಕ ಪ್ರಾಂತ್ಯ ನಿರ್ಮಾಣವಾಗಲಿ, ಅದಕ್ಕೆ ಬದಲಾಗಿ ನಾವೇಕೆ ಈಗ ಈ ಕರ್ಣಾಟಕ ಪ್ರಾಂತ್ಯ ನಿರ್ಮಾಣಮಾಡಿ' ಎಂದು ಕೇಳಬೇಕು ಎಂದು ಪ್ರಶ್ನೆ ಹಾಕಿದ್ದಾರೆ. ಆದರೆ ಹಾಗೆ ಅವರು ತಲೆಮೇಲೆ ಮಟ್ಟಿದರೆ ಆಗ ಆಗಲಿ ಎಂದು ಹೇಳತಕ್ಕಂಥ ಜನರೂ ನಮ್ಮಲ್ಲಿದ್ದಾರೆಂದು ಗೊತ್ತಾಗುತ್ತದೆ. ಆದರೆ ಹಾಗೆ ಅವರು ನಮ್ಮ ತಲೆಯಮೇಲೆ ಮಟ್ಟಿ ನೀವು ಇಂಥಿಂಥ ಭಾಗಗಳನ್ನು ತೆಗೆದುಕೊಳ್ಳಲೇಬೇಕೆಂದು ಹೇಳುವುದಕ್ಕೆ ಮುಂಚಿತವಾಗಿಯೇ ನಾವೇ ಆ ನಮ್ಮ ಕರ್ಣಾಟಕ ಬಂಧುಗಳಿರತಕ್ಕಂಥ ಪ್ರದೇಶವನ್ನೆಲ್ಲಾ ನಮಗೆ ಸೇರಿಸಿಕೊಡಿ ಎಂದು ಕೇಳತಕ್ಕಂಥ ಒಂದು ವಿಶಾಲ ಹೃದಯವನ್ನಿಟ್ಟುಕೊಂಡು ಏಕೆ ವರ್ತಿಸಬಾರದೆಂಬುದೇ ನನಗೆ ಅರ್ಥವಾಗಿಲ್ಲ. ಇವರು ಹೀಗೆ ಮಾತನಾಡಿರತಕ್ಕದ್ದು ಆ ನಮ್ಮ ಸಹೋದರರುಗಳಿಗೆಲ್ಲಾ ಅವರ ಮನಸ್ಸನ್ನು ನೋಯಿಸಿದಂತಾಗಿದೆ. ಆದರೆ ಇದಕ್ಕೆ the human nature should answer them. ಹೀಗೆ ನುಡಿದಿರತಕ್ಕ ಬಗ್ಗೆ ಅವರ ಮನಸ್ಸಿಗೆ ಅವರಿಗೆ ಅವರೇ ಉತ್ತರ ಹೇಳಿಕೊಳ್ಳಬೇಕು. ಆದರೆ ಹೀಗೆ ಈ ದಿವಸ ಇವರು ಈ ವಿಚಾರದಲ್ಲಿ ಕೇಂದ್ರ ಸರ್ಕಾರದವರು ಹೇಗೆ ಹೇಳಿದರೆ ಹಾಗೆ ನಾವು ಒಪ್ಪಿಕೊಳ್ಳುತ್ತೇವೆಂದು ಹೇಳಿದ ಹಾಗಾಯಿತು. ಆದರೆ ಈ ಹಿಂದೆ ಇದ್ದಂಥ ಆ ಒಂದು ಕರ್ಣಾಟಕ ಪ್ರಾಂತ್ಯದ ಹುಟ್ಟು, ಅದರ ನಿಜರೂಪವೇನಿತ್ತೆಂಬ ಬಗ್ಗೆ ಅದಕ್ಕೆಲ್ಲಾ ಒಂದು ಸರಿಯಾದ ಹದ್ದು ಬಸ್ತಿರುತ್ತದೆ. ಆದಕಾರಣ ಆಡಳಿತ ದೃಷ್ಟಿಯಿಂದಲೂ ಅಂಥ ಕಷ್ಟಗಳು ಯಾವೂ ಬರಲು ಅವಕಾಶವಿಲ್ಲ. ಹಿಂದೆ ಈ ಕನ್ನಡನಾಡಿನ ಹಿರಿಮೆಯನ್ನು ನೋಡಿ ಅದನ್ನು ತಾಳಲಾರದೆ ಇದನ್ನು ಹರಿದು ಹಂಚಿಹಾಕಿಬಿಟ್ಟರು. ಹಿಂದಿನ ಕಾಲದಲ್ಲಿ ದೇಶ ಹೇಗಿತ್ತೆಂಬ ಬಗ್ಗೆ ಆ ಪರಕೀಯರೇ ಹೀಗೆ ಹೇಳಿದ್ದಾರೆ—

> "Imperialism, in the name of Dharma, in the name of culture, in the name of custom, has taken the breath of people less fortunate than the rulers."

ಹೀಗೆಂದು ಹೇಳಿ ಅವರೇ ಇದನ್ನು ಬರೆದಿರುತ್ತಾರೆ. ಹಿಂದೆ ನಮ್ಮ ಭಾರತದಲ್ಲಿ ಎಂತಹ ಶಕ್ತಿಯಿತ್ತು! ಅದೆಲ್ಲವನ್ನೂ ಅವರು ಶೋಷಣೆ ಮಾಡಿದರು. ಆದರೆ ಈ ದಿವಸ ಇಲ್ಲಿ ನಡೆದಿರತಕ್ಕಂಥ ವಾದಗಳ ಸರಣಿಯನ್ನು ನೋಡಿದರೆ 'ಹಳೆ ಬರದಲ್ಲಿ ಸತ್ತವನಿಗೆ ಹೊಸ ಬರದಲ್ಲಿ ಹೆದರಿಕೆಯಿಲ್ಲವೆಂದು' ಹೇಳಿದ ಹಾಗೆ ಕಾಣುತ್ತದೆ. ಆದರೆ ಹೀಗೆ ಹೇಳಿರತಕ್ಕದ್ದಾದರೂ ನಾನು ಇದನ್ನು ಒಂದು ವಾರ್ನಿಂಗ್ ರೂಪವಾಗಿದೆಯೆಂದು ಹೇಳಲಾರೆ. ಇದು ಒಂದು ಪ್ರಿಕಾಷನ್ ರೂಪವಾಗಿರುತ್ತೆಂದು ಹೇಳಬಹುದಾಗಿದೆ. ಈ ದಿವಸ ಯಾವ ಯಾವ ಭಾಗಗಳು ಸೇರಿದರೆ ಒಂದು ಸಮಗ್ರ ಕರ್ಣಾಟಕ ಪ್ರಾಂತ್ಯವಾಗುತ್ತೆಂದು ಕೆಲವರು ಹೇಳುತ್ತಿದ್ದರೆ ಮತ್ತೆ ಕೆಲವರು ಅಷ್ಟೆಲ್ಲಾ ಬೇಡ ಇಷ್ಟಾದರೇ ಸಾಕು ಎಂದು ಒಂದು ವಾದಮಾಡಿದರು. ಆದರೆ ಇಂಥ ಒಂದು ಸಂಕುಚಿತವಾದಕ್ಕೆ ಅವಕಾಶವೇ ಇಲ್ಲ. ಇಂಥ ಒಂದು ಕಲ್ಯಾಣ ಪಟ್ಟಣದಲ್ಲಿರತಕ್ಕಂಥ ಜನರೇ ಹೀಗೆ ಶಂಕೆಪಡುತ್ತಿದ್ದಾರೆ ಅಂದರೆ ಇದು ನನಗಂತೂ ಬಹಳ ಆಶ್ಚರ್ಯ. ಏನೋ ಹಳ್ಳಿಯ ಜನರು ಹಾಗೆ ಹೇಳುತ್ತಾರೆ ಅಂತ ಅನ್ನುವಹಾಗಿಲ್ಲ. ಈ ದಿವಸ ಹಳ್ಳಿಯಿಂದ ಡೆಲ್ಲಿಯವರೆಗೂ ಈ ರೀತಿಯ ಭಯಗಳೆಲ್ಲಾ ಮಾಯವಾಗುತ್ತಾ ಬರುತ್ತಿವೆ. ಪ್ರಜಾಪ್ರಭುತ್ವ ಯುಗದಲ್ಲಿ ಲೀಡರ್ ಆಗಬಲ್ಲವನು ಒಬ್ಬನೇ ಇದ್ದಾನೇನು! ಮತ್ತೊಬ್ಬ ದಕ್ಷನಾದ ಲೀಡರ್ ಮುಂದೆ ಬಂದ ಕೂಡಲೇ ಹಿಂದಿದ್ದ ಲೀಡರ್ ಆಟೋಮ್ಯಾಟಿಕ್ ಆಗಿ ತಾನು ರಿಟೈರ್ ಆಗುತ್ತಾನೆ. ಇಂಥ ವಿಚಾರಗಳಿಗೆಲ್ಲಾ ತಾವು ಈ ದಿವಸ ಒಂದು ಬೇಲಿ ಹಾಕಿ ತಡೆಗಟ್ಟಲು ಖಂಡಿತ ಸಾಧ್ಯವಿಲ್ಲ. ಆ ಗ್ರೀಕ್ ಮತ್ತು ರೋಮಿನಂಥ ದೇಶಗಳಲ್ಲೂ ಎಷ್ಟೋ ಧೀರರಾದ ನಾಯಕರು ತಮ್ಮ ಪದವಿಯನ್ನು ಬೇರೆಯವರಿಗೆ ಬಿಟ್ಟುಕೊಟ್ಟು ಹೋಗಿದ್ದಾರೆ. ಧೀಮಂತರಾದಂಥ ಬ್ರಿಟಿಷ್ ಸಾಮ್ರಾಟರ ಅಂಥ ಒಂದು ಇಂಪೀರಿಯಲ್ ಪದವಿಯೇ ಇಲ್ಲಿ ಉಳಿಯಲಿಲ್ಲ ಎನ್ನುವಾಗ ನಾವೇಕೆ ಅಷ್ಟು ಇದಕ್ಕೆ ಯೋಚನೆ ಮಾಡಬೇಕು! ಎಷ್ಟೋ ಧರ್ಮಗಳು ಈಗಾಗಲೇ ಮಾಯವಾಗಿವೆ. ಈ ದಿವಸ ನಮ್ಮಲ್ಲಿರತಕ್ಕಂಥ ಅಸ್ಪೃಶ್ಯತೆಯನ್ನು ನಿವಾರಣೆ ಮಾಡಲು ಈ ದಿವಸ ಆ ಪರಮಾತ್ಮನೇ ಸಾಕ್ಷಾತ್ತಾಗಿ ಬಂದಾಗ್ಯೂ— what an amount of revolutionary change has been brought about in the Gandhian Yuga—ಸಾಧ್ಯವೇ ಅನ್ನು

L.A.

(ಶ್ರೀ ಕೆ. ಪ್ರಭಾಕರ್)

ಷ್ಯದನ್ನು ನಾವು ಆಲೋಚನೆ ಮಾಡಬೇಕಾಗಿದೆ. ಇಂಥ ವಿಚಾರಗಳ ಬಗ್ಗೆ ತಾವು ಒಂದು ಪ್ಲೆಬಿಸೈಟನ್ನು ಹಾಕಿ ಎಂದು ಹೇಳುವುದಕ್ಕೆ ಆಗುತ್ತದೆಯೇ? ಈಗ ಇಲ್ಲಿಗೆ ಬಂದು ಕುಳಿತಿರತಕ್ಕಂಥ ಸದಸ್ಯರುಗಳಿಗೆ ಓಟ್ ಕೊಟ್ಟು ಕಳುಹಿಸಿರತಕ್ಕಂಥವರಲ್ಲಿ ಕೆಲವರು ಕರ್ಣಾಟಕ ಬೇಕು ಎನ್ನತಕ್ಕವರೂ ಓಟ್ ಕೊಟ್ಟಿರಬಹುದು ಮತ್ತು ಅದು ಬೇಡ ಎನ್ನತಕ್ಕವರೂ ಈಗ ಓಟ್ ಕೊಟ್ಟಿರಬಹುದು. ಆದರೆ ಈ ದಿವಸ ಹಾಗೆ ಕರ್ಣಾಟಕ ಪ್ರಾಂತ್ಯ ಆಗ ಬೇಕು ಅಥವಾ ಅದು ಬೇಡ ಎನ್ನತಕ್ಕವರಲ್ಲಿ ಎಷ್ಟು ಜನರು ಇದರ ಅರ್ಥವನ್ನು ಸರಿಯಾಗಿ ಮಾಡಿಕೊಳ್ಳ ಬಲ್ಲರು ಎನ್ನತಕ್ಕಂಥ ಒಂದು ಪ್ರಶ್ನೆಯನ್ನು ನಾನೀಗ ಹಾಕಬೇಕಾಗಿದೆ. ನಾವೀದಿವಸ ಸರ್ಕಾರಕ್ಕೆ ಎಷ್ಟೋ ವಿಚಾರಗಳಲ್ಲಿ ಸಲಹೆ ನೀಡುತ್ತಿದ್ದೇವೆ. ಅಂದರೆ ಈ ಸಲಹೆಗಳೆಲ್ಲಕ್ಕೂ ಅವರ ಅಭಿಮತವನ್ನು ಪಡೆದೇ ನೀಡಬೇಕೆಂದರೆ ಅದ ಸಾಧ್ಯವಾಗುತ್ತದೆಯೇ ಎಂದು ಕೇಳುತ್ತೇನೆ? ಈ ದಿವಸ ಹರಿಜನರ ಉದ್ಧಾರ ವಿನ್ನೂ ಆಗಿಲ್ಲ, ಅವರ ಬುದ್ಧಿಯ ಮಟ್ಟ ಬೆಳೆದಿಲ್ಲ, ಅವರಲ್ಲಿ ಅಜ್ಞಾನದ ಮಟ್ಟ ಇನ್ನೂ ಎಷ್ಟಿದೆ ಅನ್ನ ತಕ್ಕ ಬಗ್ಗೆ ಅದನ್ನು ನಿರ್ಧರಿಸಲು ಈ ಬಗ್ಗೆ ಒಂದು ಓಟ್ ಹಾಕಿ ಎಂದು ಹೇಳಿದರೆ ಇದನ್ನು ಹಾಗೆ ತೀರ್ಮಾನಮಾಡಲು ನೆಹ್ರೂರವರ ಕೈಲಿ ಆದರೂ ಸಾಧ್ಯವಾದೀತೆ? ಹೀಗೆ ಹೇಳುತ್ತಾ ಹೋದರೆ ಎಷ್ಟೋ ವಿಚಾರಗಳಿರುತ್ತವೆ. ಇಂಥವುಗಳ ಬಗ್ಗೆ ನಾವು ಓಟ್ ಹಾಕುವುದಕ್ಕಾಗುವುದಿಲ್ಲ. ಜನರು ಓಟ್ ಮಾಡುವುದಕ್ಕೆ ಮುಂಚೆ ವಿಷಯಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು. ಹಾಗೆ ಅರ್ಥ ಮಾಡಿ ಕೊಂಡು ಓಟ್ ಮಾಡಬಲ್ಲ ಜನರು ಎಷ್ಟಿದ್ದಾರೆ?

There are people who say that democracy is too early for India. It is not a vain talk. Considering the implications and complications of democracy, it is no doubt too early, but it requires the great nerve of a great man to swim in the troubled water of politics.

ಈ ದಿವಸ ಜನರಲ್ಲಿ ಇನ್ನೂ ಅಷ್ಟರಮಟ್ಟಿಗೆ ವಿದ್ಯಾ ಪ್ರಸಾರಣೆ ನಡೆದಿಲ್ಲ. ಈ ದಿವಸ ಜನರು ಯಾವ ಸ್ಥಿತಿಯಲ್ಲಿದ್ದಾರೆ ಎನ್ನುವುದನ್ನು ನಾವು ಗಮನಿಸ ಬೇಕಾದದ್ದು ಮುಖ್ಯ. ಬಲಾಢ್ಯರಾಗಿ ಜನ ರನ್ನು ತಮ್ಮ ಕೈಲಿಟ್ಟುಕೊಂಡರೆ ಆಗ ಈ ಕರ್ಣಾಟಕ ಪ್ರಾಂತ್ಯಬೇಕೆ, ಬೇಡವೇ ಎನ್ನುವ ಪ್ರಶ್ನೆಯೇ ಮಾಯ ವಾಗಬಹುದು. ಈಕಡೆ ಸೇರಿದರೆ ಅನುಕೂಲ ಹೆಚ್ಚೋ ಆ ಕಡೆ ಸೇರಿದರೆ ಅನುಕೂಲ ಹೆಚ್ಚೋ ಎನ್ನತಕ್ಕಂಥ ಮನೋಭಾವ ಜನರಲ್ಲಿರುವಾಗ ವಿಷಯಗಳ ಅರ್ಥದ ವಿಚಾರಕ್ಕೆ ಯಾರೂ ಮನಸ್ಸು ಕೊಡುವುದಿಲ್ಲ. ಆದರೆ ಈಗತಾನೆ ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು ನಾನು ಹರಿಜನ ಸ್ತ್ರೀಯಾಗಿ ಹುಟ್ಟಿದ್ದರೆ ಚೆನ್ನಾ ಗಿತ್ತು ಎಂದು ಹೇಳಿದರು. ಆದರೆ ನಾವೇನೂ ಇದರ ವಿಚಾರ ತಿಳಿಯದೆ ಹೇಳುತ್ತಿದ್ದೇವೆಂದು ಅವರು ಭಾವಿಸಿದ್ದಾರೋ ಏನೋ ತಿಳಿಯದು. ಆದರೆ ನಾವು ಈ ಕಡೆಯವರೂ ಅಲ್ಲ, ಆ ಕಡೆಯವರೂ ಅಲ್ಲ. ಕರ್ಣಾಟಕದ ಹಿರಿಮೆಯೇನೆಂಬುದನ್ನು ತಿಳಿದು ಕೊಂಡಿರುವುದರಿಂದಲೇ ನಾವೀಗ ಈ ವಿಚಾರ ಪ್ರಸ್ತಾಪಮಾಡುತ್ತಿದ್ದೇವೆ. ಈಗ ಇಂಡಿಯಾ ದೇಶದಲ್ಲಿ ಗ್ರೇಡ್‌ವಾರ್ ಅಡ್ಮಿನಿಸ್ಟ್ರೇಷನ್ ನಡೆಯು ತ್ತಿದೆ. ಹೀಗೆ ಈ ಇಂಡಿಯಾ ದೇಶದಲ್ಲಿ ಒಂದು ದೇಶ ವನ್ನು ಚಿಕ್ಕದಾಗಿಯೂ, ಮತ್ತೊಂದನ್ನು ದೊಡ್ಡ ದಾಗಿಯೂ ಯಾರು ವಿಭಾಗ ಮಾಡಿದರು? ಹೀಗೆ ಚಿಕ್ಕ ಪುಟ್ಟ ಸಂಸ್ಥೆಗಳು ನೂರಾರನ್ನು ಮಾಡಿದ್ದಾಗ್ಯೂ ಅವುಗಳ ಬಗ್ಗೆ ಅಷ್ಟು ಅಶ್ರದ್ಧೆಯನ್ನು ತೋರಿಸಲು ಕಾರಣವಿಲ್ಲ. ಆದರೂ ಅವುಗಳ ಬಗ್ಗೆ ಅಂಥ ಅಶ್ರದ್ಧೆ ಯನ್ನು ತೋರಿಸಿರುತ್ತಾರೆಂಬ ಅಂಶವನ್ನು ಮರೆಯ ಬಾರದೆಂದು ಶ್ರೀ ಕೆ. ಪಟ್ಟಾಭಿರಾಮ್ರರವರು ತಿಳಿಸಿ ದ್ದಾರೆ. We are believers in the virtues of democracy. ಹೀಗೆ ಅವರು ಈ ದಿವಸ ತಮ್ಮ ಅನುಕೂಲತೆಗಾಗಿ ಕ್ಯೂನಲ್ಲಿ ನಿಲ್ಲಬೇಕಾಗಿದೆ. ಇದಕ್ಕೆ ಸಂಖ್ಯಾ ಬಲವೇ ಬಹಳ ಮುಖ್ಯ. ಹಾಗಿದ್ದರೂ ಈ ಸಂಖ್ಯಾಬಲದಿಂದೇನೂ ಅನುಕೂಲವಾಗುವುದಿಲ್ಲ, ರಾಜ್ಯ ಚಿಕ್ಕದಾಗಿಯೇ ಇರಲಿ ಎಂದು ಹೇಳುತ್ತಿರುವುದು ಸರಿಯಲ್ಲ. ಆದರೆ ಈ ದಿವಸ ಈ ಪ್ರಶ್ನೆಗೆ ಸರಿಯಾದಂಥ ಉತ್ತರವನ್ನು ಯಾರು ಹೇಳಬೇಕಾಗಿದೆ ಅಂದರೆ ಯಾರು ಈ ದಿವಸ ಗಂಜಿಗೆ ಉಪ್ಪಿಲ್ಲದೆ ಅದನ್ನು ಹಾಗೇ ಕುಡಿಯುತ್ತಿದ್ದಾರೋ ಅವರೇ ಇದಕ್ಕೆ ಉತ್ತರ ಹೇಳ ಬೇಕಾಗಿದೆ. We cannot develop democracy in mutual distrust. ಈ ದಿವಸ ಯಾವ ಒಂದು ರಾಜ್ಯಕ್ಕಾಗಲಿ ಅಥವಾ ರಾಷ್ಟ್ರಕ್ಕಾಗಲಿ ಯಾರು ಒಂದು ಕವಚದೋಪಾದಿಯಲ್ಲಿದ್ದಾರೋ ಅಂಥ ಜನ ಈ ಪರಿಸ್ಥಿತಿಯ ಬಗ್ಗೆ ಇನ್ನೂ 'ಅಯ್ಯೋ ಪಾಪ' ಎನ್ನತಕ್ಕಂಥ ಭಾವನೆ ಇರುತ್ತದೆ. ಇಂಥ ಭಾವನೆಯ ಶೇಷ ಅಷ್ಟಿಷ್ಟು ಅವರಲ್ಲಿ ಈ ದಿವಸ ಉಳಿದಿರುತ್ತೆಂದು ನಾನು ತಿಳಿದುಕೊಂಡಿ ದ್ದೇನೆ. ಆದರೆ ಈ ದಿವಸ ಯಾವ ಜನರು ಈ ಕರ್ಣಾ ಟಕ ಏಕೀಕರಣ ಆಗಲೇಬಾರದೆಂದು ಹೇಳಿದ್ದಾರೋ ಅಂಥವರ ಹೃದಯವನ್ನು ಕೂಲಂಕಷವಾಗಿ ಬಿಚ್ಚಿ ನೋಡಿದರೆ ಅವರ ಅಂತರಾಳದಲ್ಲಿ ಇದು ಆಗಲೇ ಬೇಕು ಎನ್ನುವಂಥ ಅಂಶವಿನ್ನೂ ಉಳಿದಿರುತ್ತೆಂಬುದು ಗೊತ್ತಾಗುತ್ತದೆ. ನಮ್ಮ ಸ್ಟೇಟ್ ಒಂದು ಕಾಂಪೋ ಜಿಟ್‌ಸ್ಟೇಟು—ಇದರ ಕೀರ್ತಿ ಹೀಗೆಯೇ ಉಳಿಯಲಿ ಎನ್ನುವುದಾಗಿದ್ದರೆ ಏಕೆ ಈ ಕರ್ಣಾಟಕ ಪ್ರಾಂತ್ಯ ನಿರ್ಮಾಣದಬಗ್ಗೆ ಒಂದು ಸಮಿತಿಯನ್ನು ನೇಮಕ ಮಾಡಬೇಕಾಗಿತ್ತು? ಈ ಸ್ವರಾಜ್ಯ ಸ್ಥಾಪನೆಗಾಗಿ ನಮಗಿಂತಲೂ ಉತ್ತರ ಕರ್ಣಾಟಕದವರು ಹೆಚ್ಚು ಕಷ್ಟಗಳನ್ನು ಅನುಭವಿಸಿದ್ದಾರೆ. ಅಲ್ಲಿ ನಮ್ಮ ಅನೇಕ ಅಕ್ಕತಂಗಿಯರೂ, ಅಣ್ಣತಮ್ಮಂದಿರುಗಳೂ ಜೈಲಿಗೆ ಹೋಗಿದ್ದಾರೆ, ಗಂಡ ಪಾತಾಳಕ್ಕೆ ಹೋದರೆ— ಹೆಂಡತಿ ವೈಕುಂಠಕ್ಕೆ ಹೋದಳು ಎನ್ನುವಂತಾಗಿದೆ. ಅವರು ಹಾಗೆ ಈ ದೇಶಸೇವೆಗಾಗಿ ಎಷ್ಟರಮಟ್ಟಿಗೆ ದುಡಿದಿದ್ದಾರೆಂಬುದನ್ನು ನಾವೀದಿವಸ ಕಣ್ಣು ತೆರೆದು ನೋಡಿದರೆ ಆಗ ಏತಕ್ಕಾಗಿ ನಾವೀದಿವಸ ಉತ್ತರ ಕರ್ಣಾಟಕವನ್ನು ನಮ್ಮ ದೇಶಕ್ಕೆ ಸೇರಿಸಿಕೊಳ್ಳ ಬೇಕೆಂಬುದು ಚೆನ್ನಾಗಿ ಅರ್ಥವಾಗುತ್ತದೆ. ಆದರೆ ಅವರೇನೂ ಬೇರೆ ಜನರಲ್ಲ—ಅಥವಾ ಮತ್ತೊಬ್ಬರ ಬಲವಿಲ್ಲದೆ, ನಿಸ್ಸಹಾಯಕರಾಗಿರತಕ್ಕಂಥ ಜನ ರೇನೂ ಅಲ್ಲ. ಅವರೆಲ್ಲರಲ್ಲೂ ಉತ್ಸಾಹ, ಶ್ರದ್ಧೆ, ಇವೆ. ಅವರಿಗೆ ಈ ದಿವಸ ನಮ್ಮೊಡನೆ ಸೇರಲು ಅವಕಾಶ ದೊರೆಯದಿದ್ದರೆ ಅವರೇನೂ ಇನ್ನು ಉಳಿಯುವುದೇ ಕಷ್ಟ ಎನ್ನುವಂಥ ಪ್ರಸಂಗವೇನೂ ಇಲ್ಲ. ಆದರೆ ಈ ಹಿಂದೆಯೇ ನೆಹರೂರವರು ಮೊದಲು ಗೊಂಡು ಅನೇಕ ದೊಡ್ಡ ದೊಡ್ಡ ಮಹನೀಯರುಗಳು ಈ ಏಕೀಕರಣದ ವಿಚಾರವಾಗಿ ಅಖಂಡ ಕರ್ಣಾಟಕ ಕೂಡಲೇ ನಿರ್ಮಾಣವಾಗಬೇಕೆಂಬುದಾಗಿ 3-4 ನಿರ್ಣಯಗಳನ್ನು ಪಾಸ್‌ಮಾಡಿದ್ದಾರೆ. ಈ ಮಧ್ಯೆ ದೇಶದಲ್ಲಿ ಯುದ್ಧ ದಾಹದಿಂದ ವಾತಾವರಣ

ಬಸಿಯಾಗಿದ್ದುದರಿಂದ ಕೆಲವು ಅನಿವಾರ್ಯಗಳಿಗೋಸ್ಕರವಾಗಿ ಈ ಪ್ರಶ್ನೆಯನ್ನು ತಾತ್ಕಾಲಿಕವಾಗಿ ಬಿಟ್ಟಿರೋಣವೆಂದು ಆಗ ಹೇಳಿದ್ದರು. ಆದರೆ ಹಾಗೆ ಒಂದಾವರ್ತಿ ಶಿಫಾರ್ಸು ಮಾಡಿರತಕ್ಕಂಥ ವಿಚಾರದಲ್ಲಿ ಜನರು ಇಷ್ಟು ಬೇಗ ಬ್ಯಾಂಕ್‌ರಪ್ಟ್ಸ್ ಆಗುತ್ತಾರೆಂದು ಯಾರೂ ಭಾವಿಸಿರಲಿಲ್ಲ. ಈ ದಿವಸ ಹಿಂದಿನ ದಿನಗಳ ಒಂದು ನೆನಪನ್ನು ಜನರ ಮನಸ್ಸಿಗೆ ತರುವುದಕ್ಕಾಗಿ ಈ ವಿಚಾರಗಳನ್ನೆಲ್ಲಾ ಪ್ರಚಾರ ಮಾಡಬೇಕಾಗಿರುತ್ತದೆಯೇ ಹೊರತು ಸುಮ್ಮನೆ ಜನರಲ್ಲಿ ಒಂದು ಇಲ್ಲದ ಸೆಂಟಿಮೆಂಟನ್ನು ಹುಟ್ಟಿಸಿ ಜನರಿಗೆ ನೀರು ಕುಡಿಸಬೇಕು ಎಂದು ಯಾರಲ್ಲೂ ಆ ಭಾವನೆಗಳಿಲ್ಲ. ಉತ್ತರ ಕರ್ಣಾಟಕ ಕಾಂಗ್ರೆಸ್ ಸಂಸ್ಥೆಯು ದೇಶಾಭ್ಯುದಯಕ್ಕಾಗಿ ಶ್ರಮಿಸಿರತಕ್ಕಂಥ ಹಿಂದಿನ ಚರಿತ್ರೆಯನ್ನು ತಾವೀದಿವಸ ತೆಗೆದು ನೋಡುವುದಾದರೆ ಅಲ್ಲಿಯ ಜನರು ಮೈಸೂರು ಕಾಂಗ್ರೆಸ್‌ನವರು ಸಲ್ಲಿಸಿರತಕ್ಕಂಥ ಸೇವೆಗಳೇನಿರುತ್ತವೆಯೋ ಅವುಗಳಿಗೆ ಯಾವುದಕ್ಕೂ ಕಡಮೆಯಿಲ್ಲದಂಥ ಸೇವೆಯನ್ನು ಸಲ್ಲಿಸಿದ್ದಾರೆ. ಆದರೆ ಅವರು ಈ ದಿವಸ ಬಡತನಕ್ಕೆ ಸಿಕ್ಕಿದ್ದಾರೆ; ಬಡವರಿಗೆ ಮಕ್ಕಳು ಜಾಸ್ತಿ. ಏತಕ್ಕೆಂದರೆ ಶ್ರೀಮಂತರಿಗೆ ಕೊಬ್ಬು ಜಾಸ್ತಿಯಾಗಿ productive capacity ಕಮ್ಮಿಯಾಗಿ ಅವರಿಗೆ ಮಕ್ಕಳು ಕಮ್ಮಿ. ಈ ದಿವಸ ಒಬ್ಬ ಕಡುಬಡವನಿಗೆ ಉಡುತೊಡಲು ಏನೂ ಗತಿಯಿಲ್ಲದಿದ್ದಾಗ್ಯೂ ಆತನಿಗೆ ಐದು ಜನ ಮಕ್ಕಳಿದ್ದರೆ—ಮುಂದೆ ಅವರು ದೊಡ್ಡವರಾದಮೇಲೆ, ಅವರು ಪ್ರಾಯಕ್ಕೆ ಬಂದಮೇಲೆ ಅವರು ದುಡಿಮೆಮಾಡಲು ಶಕ್ತರಾದಕೂಡಲೇ ಆ ಸಂಸಾರದ ಬಡತನ ಕೂಡಲೆ ಮಾಯವಾಗುತ್ತದೆ. ಈ ದಿವಸ ಕರ್ಣಾಟಕ ಪ್ರಾಂತ್ಯದ ವಿಚಾರವೂ ಅಷ್ಟೆ. ಈ ಹಿಂದೆ ಇಡೀ ಭಾರತದಲ್ಲೇ ಈ ಕರ್ಣಾಟಕದ ವೈಭವ ಹೇಗಿತ್ತೆಂಬುದನ್ನು ನಾವೆಲ್ಲರೂ ಓದಿ ತಿಳಿದಿದ್ದಾಗಿದೆ. ಈಗಲೂ ಸಹ ಅದೇ ರೀತಿಯಾಗಿ ಆ ಹಿಂದಿನ ವೈಭವಗಳೆಲ್ಲಾ ಮತ್ತೊಮ್ಮೆ ಉದಯವಾಗಿ 'ಕರ್ಣಾಟಕ ರತ್ನ ಸಿಂಹಾಸನಾಧೀಶ್ವರ' ಎಂಬ ಬಿರುದಾಂಕಿತವನ್ನು ಕನ್ನಡನಾಡಿನ ಜನತೆ ಪಡೆಯಬೇಕೆಂದು ಹಾರೈಸುತ್ತೇನೆ—ಜೈ ಹಿಂದ್!

*ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಸ್ವಾಮಿ, ಅಧ್ಯಕ್ಷರೇ, ಈಗ ಈ ಮಾನ್ಯ ಸಭೆಯಲ್ಲಿ ಈ ಕರ್ಣಾಟಕ ಏಕೀಕರಣದಮೇಲೆ ಆಗಿರತಕ್ಕಂಥ ಎಲ್ಲಾ ದಿವಸಗಳ ಚರ್ಚೆಯನ್ನೂ ಒಟ್ಟಾಗಿ ಕೂಡಿಸಿ ಒಂದೇ ಪುಸ್ತಕದಲ್ಲಿ ಅಚ್ಚು ಹಾಕಿಸಿ ಸದಸ್ಯರುಗಳಿಗೆ ಅವುಗಳನ್ನು ಒದಗಿಸಬೇಕೆಂದು ನಾನು ತಮ್ಮಲ್ಲಿ ಅರಿಕೆಮಾಡಿಕೊಳ್ಳುತ್ತೇನೆ.

7 P.M.

*ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು ಉತ್ತರ).—ಮಾನ್ಯ ಅಧ್ಯಕ್ಷರೇ, ಈ ಶೇಷಾದ್ರಿ ಸಮಿತಿಯ ವರದಿ ವಿಷಯದಲ್ಲಿ 4-5 ದಿವಸಗಳಿಂದ ವಿಪುಲವಾದ ಚರ್ಚೆ ನಡೆಯುತ್ತಿದೆ. ಮಾನ್ಯಸದಸ್ಯರುಗಳು ಶೇಷಾದ್ರಿ ವರದಿಯಲ್ಲಿ ಅಷ್ಟಾಗಿ ಉಪಯೋಗಕರವಾದ ಅಂಶಗಳಿಲ್ಲ ಎನ್ನುವ ಭಾವನೆಯಿಂದ ಮಾತನಾಡುತ್ತಿದ್ದಾರೆ. ಹಾಗಾದರೆ ಸರ್ಕಾರದವರು ಸುಮಾರು 20 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಈ ಸಮಿತಿಯನ್ನು ಏತಕ್ಕೋಸ್ಕರ ರಚನೆ ಮಾಡಿದರು ಎಂಬ ಪ್ರಶ್ನೆ ನಮ್ಮ ಮುಂದೆ ಬರುತ್ತದೆ. ಆದರೆ ಫಸಲಾಲಿ ಸಮಿತಿಯವರು ನಮ್ಮ ಸಂಸ್ಥಾನಕ್ಕೆ ಬಂದಾಗ ಅವರ ಮುಂದೆ ಈ ವಿಷಯದಲ್ಲಿ ನಮ್ಮ ತೀರ್ಮಾನವನ್ನು ಹೇಳಲು ಈ ಸಮಿತಿಯ ವರದಿಯನ್ನು ಆಧಾರವಾಗಿಟ್ಟುಕೊಳ್ಳಬೇಕೆಂದು ಸದಸ್ಯರೂ ಸರ್ಕಾರದವರೂ ಇದುವರೆಗೆ ಯಾವ ತೀರ್ಮಾನವನ್ನೂ ಕೊಡದೆ-ತಡೆ ಮಾಡಿರುವುದು ತಮಗೆಲ್ಲಾ ಗೊತ್ತಿದೆ. ಇವೊತ್ತಿನ ದಿವಸ-ನಮ್ಮ ಕೈ ಇದು ಸೇರಿ ಇದರಿಂದ ನಿಜವಾದ ಅಂಕಿಅಂಶಗಳು ನಮ್ಮ ಮುಂದೆ ಇರುವಾಗ ಅವು ಅನಾವಶ್ಯಕ ಎನ್ನುವ ವಾದವನ್ನು ನಮ್ಮ ಸ್ನೇಹಿತರು ಮಾಡುತ್ತಿದ್ದಾರೆ. Facts and figures ಇಲ್ಲದೆ ಏನು ವಾದ ಮಾಡಿದರೂ ಅದರಿಂದ ಪ್ರಯೋಜನವಾಗುವುದಿಲ್ಲ. ಸ್ನೇಹಿತರು ಕಾಂಗ್ರೆಸ್ಸಿನ resolutions ವಗೈರೆಗಳನ್ನು ಉದಹರಿಸಿ ಹಿರಿಯ ನಾಯಕರು ಕರ್ಣಾಟಕ ಏಕೀಕರಣ ಆಗಬೇಕು ಎಂದು ಹೇಳಿದ್ದನ್ನು ನಮ್ಮ ಗಮನಕ್ಕೆ ತಂದರು. ಆಗ ಸರ್ಕಾರ ತಮ್ಮ ಕೈಗೆ ತೆಗೆದುಕೊಳ್ಳದೇ ಇರುವಾಗ, ಆಡಳಿತ ತಮ್ಮ ಕೈಯಲ್ಲಿ ಇಲ್ಲದೇ ಇರುವಾಗ ಕಾಂಗ್ರೆಸ್ಸಿನ ರೀತಿ ನೀತಿಗಳು ಬೇರೆಯಾಗಿದ್ದವು. ಸರ್ಕಾರವನ್ನು ಈಗ ಕೈಗೆ ತೆಗೆದುಕೊಂಡಮೇಲೆ practical difficulties ಏನು ಎಂಬುದು ಗೊತ್ತಾಗಿದೆ. ಅಂಕಿ ಅಂಶಗಳನ್ನು ಬಿಟ್ಟು ಮಾತನಾಡಲು ಸಾಧ್ಯವಿಲ್ಲ. ಶ್ರೀ ಪುಟ್ಟಸ್ವಾಮಿಯವರು ಕೂಲಂಕಷವಾಗಿ ಈ ವಿಷಯವನ್ನು ಸಭೆಯಲ್ಲಿ ಚರ್ಚಿಸಿದ್ದಾರೆ. ನಮ್ಮ ಸ್ನೇಹಿತರು facts ಬೇಕಿಲ್ಲ. ಭಾರತ ದೇಶವೆಲ್ಲಾ ಒಂದು ಎಂಬ ದೃಷ್ಟಿಯಿಂದ ಕೆಲಸ ಮಾಡಬೇಕು ಎಂದು ಹೇಳಿದರು. ಅದು ಖಂಡಿತ. ಈ ರೀತಿ ಭಾರತ ಒಂದಲ್ಲ ಎನ್ನುವ ದೃಷ್ಟಿ ಇರುವದಾದರೆ ನಾವು ಒಬ್ಬರಿಗೊಬ್ಬರಿಗೆ ಕಷ್ಟಕಾಲದಲ್ಲಿ ಸಹಾಯ ಮಾಡುತ್ತಿರಲಿಲ್ಲ. ನಮ್ಮ ದೇಶದಲ್ಲಿ ಆಗಾಗ್ಗೆ ಭೂಕಂಪ ಇತ್ಯಾದಿ ಆಗಿ ನಮ್ಮ ದೇಶದ ಜನರು ತೊಂದರೆಗೆ ಸಿಕ್ಕಿಕೊಂಡಾಗ ನಾವೆಲ್ಲರೂ ಕೈಲಾದ ಸಹಾಯವನ್ನು ಮಾಡಲಿಲ್ಲವೇ? ನಮ್ಮಲ್ಲಿ ಭೇದಭಾವನೆ ಇಲ್ಲ. ನಾನು ಒಬ್ಬ ಜವಾಬ್ದಾರಿಯುತ ಸದಸ್ಯ. ಆಯಾ ಕ್ಷೇತ್ರಗಳ ಅಭಿಪ್ರಾಯ ಏನು ಎಂಬುದನ್ನು ಪ್ರತಿಬಿಂಬಿಸಿ ಆಯಾ ಕ್ಷೇತ್ರಗಳ ಜನರ ಮನೋಭಾವನೆ ಏನು ಇದೆಯೆಂಬುದನ್ನು ತಿಳಿದುಕೊಂಡು ಅದರಂತೆ ಮಾತನಾಡಬೇಕು. ಅದು ನಮ್ಮ ಹೆಗ್ಗುರಿ ಎಂದು ತಿಳಿದುಕೊಂಡು ಮಾತನಾಡುತ್ತಿದ್ದೇನೆ. ನಾನು ಮಾನ್ಯ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಉತ್ತರ ಕರ್ಣಾಟಕ ಪ್ರಾಂತ್ಯಕ್ಕೆ ಹೋಗಿದ್ದೆ. ಆ ಪ್ರದೇಶಗಳು ನಿಜವಾಗಿಯೂ ತಾವು ಹೇಳುವಷ್ಟು ಮಟ್ಟಿಗೆ ಹಿಂದುಳಿದಿವೆ ಎಂದು ಹೇಳುವುದಿಲ್ಲ. ಅಲ್ಲಿ ಬೇಕಾದಷ್ಟು ಸೌಲಭ್ಯಗಳಿವೆ. ಆದರೆ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತೆಗೆದುಕೊಂಡಮೇಲೆ ಕರ್ಣಾಟಕ ಪ್ರಾಂತ ಮಹಾರಾಷ್ಟ್ರ ಎಂಬ ಭೇದಭಾವದಿಂದ ರಾಜ್ಯಭಾರ ಮಾಡುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಯಾವ ಯಾವ ಪ್ರಾಂತ್ಯದಲ್ಲಿ ಕೊರತೆ ಇದೆಯೋ ಅಲ್ಲಿಗೆ ಸಾಕಾದಷ್ಟು ಹಣ ಒದಗಿಸಿ ಸರಿದೂಗಿಸುವುದಕ್ಕೆ ಬೇಕಾದಷ್ಟು ಶ್ರಮಪಡುತ್ತಿದ್ದಾರೆ. ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು ಕರ್ಣಾಟಕದ ಭಾಗಗಳ ಜನರು ಬಹಳ ಕಷ್ಟಪಡುತ್ತಿದ್ದಾರೆಎಂದು ಹೇಳಿದರು. ಆದರೆ ಬೊಂಬಾಯಿನಲ್ಲಿ ಮಹಾರಾಷ್ಟ್ರದವರು, ಕನ್ನಡಿಗರು ಎಂಬ ಭೇದ ಭಾವನೆಯನ್ನು ಅಲ್ಲಿಯ ಸರ್ಕಾರದ ರಾಜಸೂತ್ರಗಳನ್ನು ಹಿಡಿದಿರುವವರು ತೋರಿಸುತ್ತಿಲ್ಲ. ಕರ್ಣಾಟಕದ ಜನರು ಮೈಸೂರಿನ ಜನತೆಗೆ ಕರ್ಣಾಟಕ ಆಗಬೇಕೆಂದು ಹೇಳುತ್ತಿದ್ದಾರೆ. ಹೀಗೆ ಕರ್ಣಾಟಕ ಒಂದಾಗಬೇಕು ಎಂಬ ಮನೋಭಾವನೆ ಇರುವುದು ಸಾಮಾನ್ಯವಾಗಿ ರಾಜಕೀಯದಲ್ಲಿರುವವರಲ್ಲಿ ಮತ್ತು ವಿಷಯಗಳನ್ನು ಅರಿತುಕೊಂಡಿರತಕ್ಕವರಲ್ಲಿ, ಅಂಥ ಜನರು ಅಲ್ಲಿ ಹೆಚ್ಚಾಗಿ ಇದ್ದಾರೆ. ಇಲ್ಲಿ ಸಾಮಾನ್ಯ ಜನಗಳಿಗೆ ಈ

(ಶ್ರೀ ಕೆ. ವಿ. ಬೈರೇಗೌಡ)

ವಿಷಯ ಅಷ್ಟಾಗಿ ಗೊತ್ತಿಲ್ಲ. ನಮ್ಮ ಮೈಸೂರು ಸಿಟಿ, ಬೆಂಗಳೂರು ಮತ್ತು ಕೋಲಾರ, ತುಮಕೂರು, ಮಂಡ್ಯ ಈ ಭಾಗಗಳಲ್ಲಿ ಸೇರಿ ಕರ್ಣಾಟಕ ಎಂಬುದು ಕನಸಾಗಿದೆ, ಕರ್ಣಾಟಕ ಏತಕ್ಕೆ ಒಂದಾಗಬೇಕು ಎಂದು ಆಶ್ಚರ್ಯಪಡುತ್ತಾರೆ. ನಮ್ಮ ದೇಶಕ್ಕೆ ಈಗ ಬೇಕಾದ ಸೌಕರ್ಯಗಳಮೇಲೆ ಜನರ ಗಮನ ಹೋಗಿದೆ. ರಾಜ್ಯ ದೊಡ್ಡದು ಆಗಬೇಕು; ಕರ್ಣಾಟಕ ಪ್ರಾಂತ ಮಾಡಬೇಕು ಎನ್ನುವ ವಿಷಯಕ್ಕೆ-ಗಮನ ಕೊಡುತ್ತಾ ಇಲ್ಲ. ಈ ಸಂದರ್ಭದಲ್ಲಿ ಅದರಲ್ಲೂ ಈಗ ಒಳ್ಳೆಯ ರಾಜ್ಯಭಾರ ನಡೆಯುತ್ತಾ ಇರುವಾಗ, ಕರ್ಣಾಟಕ ಪ್ರಶ್ನೆಯನ್ನು ಹುಟ್ಟಿಸಿ ವಾತಾವರಣವನ್ನು ಕಲಕಿಸು ವುದು ಒಳ್ಳೆಯದಲ್ಲ. ದೇಶ ಕಟ್ಟುವುದಕ್ಕೋಸ್ಕರ 5 ವರ್ಷಗಳ ಮತ್ತು 10 ವರ್ಷಗಳ ಯೋಜನೆಗಳಿವೆ. ಅದನ್ನೆಲ್ಲಾ ಕಾರ್ಯಗತ ಮಾಡುವುದಕ್ಕೆ ಎಲ್ಲರೂ ಪ್ರಯತ್ನ ಮಾಡಿ ಪ್ರಗತಿಯನ್ನು ಸ್ಥಾಪಿಸಬೇಕೆಂದು ಕಾಂಗ್ರೆಸ್ ಸರಕಾರದವರೂ ಮತ್ತು ರಾಜಕೀಯ ಮುಂದಾಳುಗಳೂ ಹೇಳುತ್ತಿದ್ದಾರೆ. ಅದನ್ನು ಸಾಧಿ ಸಲು ಮನಸ್ಸು ಮಾಡಬೇಕು. ಅದನ್ನು ಬಿಟ್ಟು ಕರ್ಣಾಟಕಪ್ರಾಂತ್ಯ ಮಾಡಿ, ರಾಜ್ಯ ದೊಡ್ಡದು ಮಾಡಿ ಪ್ರಗತಿಯನ್ನು ಸಾಧಿಸುತ್ತೇವೆ ಎಂದರೆ, ಅದ ರಲ್ಲಿ ರುಳಿಲ್ಲವೆಂದು ಹೇಳುತ್ತೇನೆ. ಇವೊತ್ತಿನ ದಿವಸ ನಾವು ದೇಶದ ಪ್ರಜೆಗಳ ಅಭಿಪ್ರಾಯವನ್ನು ಪ್ರತಿ ಬಿಂಬಿಸಲು ಮತ್ತು ಆಯಾ ಕ್ಷೇತ್ರದ ಜನರ ಅಭಿ ಪ್ರಾಯಗಳನ್ನು ಪ್ರತಿಬಿಂಬಿಸಲು ಈ ಸಭೆಗೆ ಬಂದಿ ದ್ದೇವೆ. ನನ್ನ ಕ್ಷೇತ್ರದ ಅಭಿಪ್ರಾಯವನ್ನು ಹೇಳುವು ದಾದರೆ, ನನ್ನ ಕ್ಷೇತ್ರದ ಜನರಿಗೆ ಇದರಲ್ಲಿ ಹೆಚ್ಚಿಗೆ ಆಸಕ್ತಿ ಇಲ್ಲ. ಈ ಪ್ರಶ್ನೆಯನ್ನು ಇನ್ನು ತೆಗೆದು ಕೊಳ್ಳದೇ ಇರುವುದು ಕ್ಷೇಮ. ಮೊದಲನೆಯ ಮತ್ತು ಎರಡನೆಯ ಪಾಂಚವಾರ್ಷಿಕ ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೆ ಎಲ್ಲರೂ ಪ್ರಯತ್ನ ಮಾಡ ಬೇಕು. ಈಗ ಈ ಗೊಂದಲದಲ್ಲಿ ಕೈಹಾಕಿ ವಾತಾ ವರಣವನ್ನು ಕಲಕಬೇಡಿ. ಇದನ್ನೇ ನಮ್ಮ ಮುಖಂಡರು ಗಳು ಹೇಳುತ್ತಿದ್ದಾರೆ. ಮೈಸೂರು ದೇಶದಲ್ಲಿ ನಾಲ್ಕಾರು ಭಾಷೆಗಳಿವೆ. ತೆಲುಗರು, ತಮಿಳರು, ಕನ್ನಡಿಗರು ಎಂಬ ಭೇದಭಾವವಿಲ್ಲದೆ ಬೆಂಗಳೂರಿನಲ್ಲಿ ವಾಸಮಾಡುತ್ತಿದ್ದಾರೆ. ನಮಗೆ ಮುಖ್ಯವಾಗಿ ಬೇಕಾಗಿರುವುದು ದೇಶಾಭಿಮಾನ. ದೇಶಾಭಿಮಾನ ವಿದ್ದ ವ್ಯಕ್ತಿ ಯಾರೇ ಆಗಲಿ ಚುನಾಯಿಸಿ ಬರುವುದಕ್ಕೆ ಈಗ ಅವಕಾಶವಿದೆ. ಇಂತಹ ವಾತಾವರಣವನ್ನು ಕಲಕದೆ ಕೆಲವುಕಾಲ ಹೀಗೆ ನಡೆದುಕೊಂಡು ಹೋಗ ಬೇಕು; ಮತ್ತು ಯೋಜನೆಗಳು ಯಶಸ್ವಿಯಾಗಲು ಬಹಳ ದುಡಿಯಬೇಕಾಗುತ್ತದೆ. ಸ್ನೇಹಿತರು ಭಾಷೆಯ ಆಧಾರದಮೇಲೆ ಪ್ರಾಂತ್ಯ ನಿರ್ಮಾಣ ಮಾಡಬೇಕೆಂದು ಹೇಳುತ್ತಾರೆ. ಹೀಗೆ ಕರ್ಣಾಟಕ ಮಾಡುವುದಾದರೆ, ಸ್ವಾಭಾವಿಕವಾಗಿ ಇನ್ನೊಂದು ಪ್ರಶ್ನೆ ಏಳುತ್ತದೆ. ಮೈಸೂರಿನಲ್ಲಿ ಇತರ ಭಾಷೆ ಗಳನ್ನು ಮಾತನಾಡತಕ್ಕ ಜನ ಕೋಲಾರ ಮತ್ತು ಬೆಂಗಳೂರಿನ 6-7 ತಾಲ್ಲೂಕುಗಳಲ್ಲಿದ್ದರೆ ನಾವು ಭಾಷೆ ಯನ್ನು ಗುರಿಯಾಗಿಟ್ಟುಕೊಂಡು ದೇಶವನ್ನು ಕಟ್ಟುವು ದಾದರೆ, ಅವರು ಭಾಷೆಯ ಆಧಾರದಮೇಲೆ ಆಂಧ್ರಕ್ಕೋ ತಮಿಳುನಾಡಿಗೋ ಹೋಗಲು ತಯಾ ರಾಗಿದ್ದೇವೆಂದು ಹೇಳಬಹುದು. ಸಹಸ್ರಾರು ವರ್ಷ ಗಳಿಂದ ಒಂದು ಕಡೆ ಇದ್ದು, ಈಗ ಅವರನ್ನು ಕೈಬಿಡು ವುದು ನ್ಯಾಯವೇ, ಧರ್ಮವೇ ಎಂಬುದನ್ನು ಮುಂದೆ ಯೋಚನೆ ಮಾಡಬೇಕಾಗಿದೆ. ಈ ದೃಷ್ಟಿಯಿಂದ ಸಮಸ್ಯೆಯನ್ನು ಯೋಚನೆ ಮಾಡಬೇಕು. ಹೈ ಪವರ್ ಕಮಿಷನ್ನವರು ದೇಶವನ್ನು ಪುನರ್ನಿರ್ಮಾಣ ಮಾಡು ವವರಾಗಿದ್ದಾರೆ. ಆದ್ದರಿಂದ ಅದಕ್ಕೆ ನಾವು ಹೆಚ್ಚಿನ ಪ್ರಾಧಾನ್ಯತೆ ಕೊಡದೆ ದೇಶ ಮುಂದೆ ಬರಬೇಕು ಎಂಬ ಉದ್ದೇಶದಿಂದ ದೇಶದ ಜನತೆಗೆ ಏನೇನು ಅಗತ್ಯವಾಗಿ ಆಗಬೇಕೋ ಆ ಕೆಲಸಕಾರ್ಯಗಳಿಗೆ ಹೆಚ್ಚು ಗಮನ ಕೊಡಬೇಕು. ಅದಕ್ಕೆ ಮನಸ್ಸು ಕೊಡ ಬೇಕು. ಒಂದು ಕಡೆ ನಮ್ಮ ಸ್ನೇಹಿತರು ಕರ್ಣಾಟಕ ವಾಗಬೇಕು ಎಂಬ ಪ್ರಚಾರಕಾರ್ಯದಲ್ಲಿ ತೊಡಗುವು ದಾದರೆ ಅಷ್ಟೇ ಪ್ರಮಾಣದಲ್ಲಿ ಇನ್ನೊಂದರ ಭಾಗದ ಜನರು ಅದನ್ನು ಮಾಡಕೂಡದು ಎಂದು ಪ್ರಚಾರ ಮಾಡಲು ಹೊರಡುತ್ತಾರೆ. ಇದು ಮನುಷ್ಯನ ಸ್ವಾಭಾವಿಕವಾದ ಗುಣ. ಇಂತಹ ಒಂದು ಗುಣಕ್ಕೆ ಅವಕಾಶಕೊಡದೆ ದೇಶಾಭಿವೃದ್ಧಿಗೆ ಮತ್ತು ದೇಶದ ಹಿತಕ್ಕೆ ಕೆಲಸ ಮಾಡಿ, ಮೈಸೂರು ಈಗ ಯಾವ ರೀತಿ ಇದೆಯೋ ಅದೇ ರೀತಿ ಅದು ಇನ್ನೂ ಕೊಂಚ ಕಾಲ ಇರಬೇಕು. ಕೇಂದ್ರ ಸರಕಾರದವರು ಹಾಕಿರತಕ್ಕಂಥ plans successful ಆಗಬೇಕಾದರೆ, ಅದೇ ರೀತಿ ಕೊಂಚಕಾಲ ಇರುವುದು ಕ್ಷೇಮ. ಮೈಸೂರು ಮೈಸೂರಾಗಿಯೇ ಉಳಿಯಬೇಕು ಎಂದು ಪ್ರಾರ್ಥನೆ ಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಕೆ. ಪಂಚಾಕ್ಷರಯ್ಯ (ಅರಸೀಕೆರೆ).—ಸ್ವಾಮಿ, ಈ ಅಂಕಿ ಅಂಶಗಳ ಪರಿಶೀಲನಾ ಸಮಿತಿ ವರದಿಯ ಮೇಲೆ ಈಗ ನಡೆದಿರತಕ್ಕಂಥ ವಿಪುಲವಾದ ಚರ್ಚೆಯ ವಿಷಯದಲ್ಲಿ ಎರಡು ಅಭಿಪ್ರಾಯಗಳು ವ್ಯಕ್ತವಾಗಿವೆ. ಸ್ವಾಮಿ, ಬಹಳ ದೊಡ್ಡದಾಗಿ ನಾವು ಈ ವಿಷಯ ವನ್ನು ಚರ್ಚೆ ಮಾಡುತ್ತಿದ್ದೇವೆ ಎಂದು ನನ್ನ ಅಭಿ ಪ್ರಾಯ. ಈಗ ಕರ್ಣಾಟಕ ಏಕೀಕರಣ ವಿಚಾರದಲ್ಲಿ ಚಳವಳಿ ಹೋರಾಟದ ಬಗ್ಗೆ ಚರ್ಚೆ ಮಾಡತಕ್ಕ ಕಾಲ ಮೀರಿಹೋಗಿದೆ ಎಂದು ನನ್ನ ಅಭಿಪ್ರಾಯ. ಏತ ಕ್ಕೆಂದರೆ ಕರ್ಣಾಟಕವಾಗಬೇಕು ಎನ್ನುವ ಕನ್ನಡಿಗರ ಚಳುವಳಿಯ ಕಾಲ ಒಂದು ಇತ್ತು. ಅದು ಪೂರೈಸಿ ಹೋಗಿದೆ. ಈಗ ನಮ್ಮ ದೇಶದ ನಾಯಕರು ಈ ಕನ್ನಡ ಮಾತನಾಡತಕ್ಕ ಜನರ ವಿಷಯವಾಗಲೀ ಇಲ್ಲವೇ ಇನ್ನೊಂದು ಪ್ರಾಂತದ ವಿಷಯವೇ ಆಗಲೀ ಅಖಿಲ ಭಾರತ ದೃಷ್ಟಿಯಿಂದ ನೋಡುತ್ತಾ ಇದ್ದಾರೆ. ದೇಶದ ರಾಜಕೀಯ ಪರಿಸ್ಥಿತಿ, ವಿವಿಧ ಪ್ರಾಂತಗಳ ರಾಜಕೀಯ ಅಭಿವೃದ್ಧಿಗಳು ಇವನ್ನೆಲ್ಲಾ ಗಮನಿಸಿರ ತಕ್ಕ ನಮ್ಮ ನಾಯಕರು ಇದನ್ನು ಅಖಿಲ ಭಾರತ ಪ್ರಶ್ನೆಯಾಗಿ ಮಾಡಿಕೊಂಡಿದ್ದಾರೆ. ಈ ಸಂದರ್ಭ ದಲ್ಲಿ ಕರ್ಣಾಟಕ ಏಕೀಕರಣ ಅಗತ್ಯ. ಅಷ್ಟೇ ಅಲ್ಲ. ಅದು ಅವಶ್ಯಕವೂ ಹೌದು. ಈ ಬಗ್ಗೆ ನಮ್ಮ ಸರ್ಕಾರದವರು ನೇಮಿಸಿದ ಅಂಕಿ ಅಂಶಗಳ ಸಮಿತಿಯ ವರದಿ ನಮ್ಮ ಕೈಯಲ್ಲಿದೆ. ಈ ಭೌಗೋಳಿಕ, ಚಾರಿ ತ್ರಿಕ, ಸಂಸ್ಕೃತಿ, ಭಾಷೆ ಇವುಗಳಿಂದ ಮತ್ತು ಜನತೆಯ ಅಭಿಪ್ರಾಯದಿಂದ ದೂರ ಸರಿದು, ಕೇವಲ ನಿರ್ಜೀವ ವಾದ ಅಂಕಿ ಅಂಶಗಳಿಂದಲೇ ಈ ಸಮಸ್ಯೆಯನ್ನು ನೋಡತಕ್ಕದ್ದು ಅಷ್ಟು ಸಮಂಜಸ ಅಲ್ಲ. ಈ ವರದಿ ಪೂರ್ಣ ಚಿತ್ರವನ್ನು ಕೊಡುವುದಿಲ್ಲ ಎನ್ನುವ ಬಗ್ಗೆ ಅನೇಕರು ಈಗಾಗಲೇ ಅಭಿಪ್ರಾಯವನ್ನು ವ್ಯಕ್ತಪಡಿಸಿ ದ್ದಾರೆ. ಇದರಲ್ಲಿರುವ ಕೆಲವು ಸತ್ಯಾಂಶಗಳನ್ನು ಕೂಡ ಗಮನಿಸಬೇಕಾಗುತ್ತದೆ. ನಾನು ಅಂಕಿ ಅಂಶ ಗಳ ವಿಷಯಕ್ಕೆ ಹೋಗುವುದಿಲ್ಲ. ಅದರ ಬಗ್ಗೆ ಬೇಕಾದಷ್ಟು ಚರ್ಚೆಯಾಗಿದೆ. ಮೈಸೂರು ಕೆಲವು ವಿಚಾರಗಳಲ್ಲಿ ಮುಂದುವರಿದಿದ್ದರೆ ಇನ್ನು ಕೆಲವು ವಿಚಾರಗಳಲ್ಲಿ ಇತರ ಕನ್ನಡ ಭಾಗಗಳಿಗಿಂತ ಹಿಂದು ಳಿದಿದೆ. ಅಂಕಿಅಂಶಗಳಮೇಲೆ ನನಗಿಂತ ಮುಂಚೆ ಮಾತನಾಡಿದ ಸದಸ್ಯರು ಬಹಳ ಸ್ಪಷ್ಟವಾಗಿ ಅಭಿ

ಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಈ ವಿಷಯದಲ್ಲಿ ನಾನು ಹೆಚ್ಚಿಗೆ ಹೇಳುವುದಿಲ್ಲ. ನಾವು ಏನು ಒಂದು ತತ್ವನನ್ನು ಒಪ್ಪಿಕೊಂಡು ಬಂದಿದ್ದೇವೋ ಆ ಒಂದು ತತ್ವವನ್ನು ನಾವು ಬಿಡದೆ ಹಾಗೆಯೇ ಅನುಸರಿಸಿಕೊಂಡು ಬರಬೇಕೆಂಬುದೇ ನನ್ನ ಅಭಿಪ್ರಾಯ. ಅನೇಕ ವರ್ಷಗಳಿಂದ ಕಾಂಗ್ರೆಸ್ಸಿನ ಪವಿತ್ರ ಧ್ಯೇಯಗಳಲ್ಲಿ Linguistic Provinces ಸೇರಿದೆ. ಅದನ್ನು ಯಾರೂ ಅಲ್ಲಗಳೆಯುವಹಾಗಿಲ್ಲ. ಯುಗಪುರುಷರಾದ ಮಹಾತ್ಮ ಗಾಂಧಿ, ಮುಂತಾದ ಮಹಾನಾಯಕರು ರಾಷ್ಟ್ರದ ಪ್ರಗತಿಯಾಗಬೇಕಾದರೆ, ಸುಭದ್ರವಾದ ರಾಜ್ಯವನ್ನು ರಚಿಸಬೇಕಾದರೆ ಭಾಷೆಗಳಿಗೆ ಅನುಗುಣವಾಗಿ ಪ್ರಾಂತಗಳನ್ನು ರಚಿಸಬೇಕಾದ್ದು ನಿರ್ವಿವಾದವಾಗಿದೆ ಎಂದು ಅವರ ಭಾಷಣಗಳಲ್ಲಿ ಹೇಳಿರುವುದು ಎಲ್ಲರಿಗೂ ವೇದ್ಯವಾಗಿದೆ. ಹೀಗಿದ್ದೂ ಭಾಷಾವಾರು ದೃಷ್ಟಿಯಿಂದ ಪ್ರಾಂತ್ಯಗಳನ್ನು ಮಾಡುವುದಕ್ಕೆ ವಿರೋಧ ಸೂಚಿಸುವುದು ಒಳ್ಳೆಯದಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಹೀಗೆ ಅಂಕಿ ಅಂಶಗಳಿಗೆ ತತ್ವವನ್ನು ಒಳಪಡಿಸುವುದು ಬುದ್ಧಿವಂತರ ಲಕ್ಷಣವಲ್ಲ. ಆ ತತ್ವಕ್ಕೆ ಅಂಕಿ ಅಂಶಗಳು ಸಾಧಕವಾಗಬೇಕೇ ವಿನಾ ಆ ತತ್ವಕ್ಕೆ ಅಂಕಿ ಅಂಶಗಳನ್ನು ಅಡ್ಡಿ ತರುವುದು ವಿವೇಕವಲ್ಲ ಎಂದು ನಾನು ಹೇಳುತ್ತೇನೆ. ಇದರಲ್ಲಿ ಸಾಧಕ ಬಾಧಕಗಳಿವೆ. ಕರ್ಣಾಟಕದ ಇತರ ಭಾಗಗಳು per capita ಭೂಮಿ ಮತ್ತು ಖಾಸಗೀ ಉದ್ಯಮದ ವಿಷಯದಲ್ಲಿ ನಮಗಿಂತಲೂ ಹೆಚ್ಚು ಇದೆಯೆಂದು ಹೇಳುತ್ತಾರೆ.

ಈ ಎಲ್ಲ ಅಂಶಗಳನ್ನೂ ಗಮನದಲ್ಲಿಟ್ಟುಕೊಂಡು ನಾವು ಇವೊತ್ತಿನ ದಿವಸ ಈ ವಿಷಯದಲ್ಲಿ ಒಂದು ತೀರ್ಮಾನ ತೆಗೆದುಕೊಳ್ಳಬೇಕು. ಈಗ ನಾವು ಕೈಕೊಳ್ಳತಕ್ಕ ತೀರ್ಮಾನ ಮುಂದಿನ ಜನಾಂಗದ ಭವಿಷ್ಯತ್ತಿಗೆ, ಎರಡು ಕೋಟಿ ಕನ್ನಡಿಗರು ಓದತಕ್ಕ ಇತಿಹಾಸದಲ್ಲಿ ಬಹಳ ಪ್ರಾಮುಖ್ಯವಾದ ವಿಷಯ. ಮುಂದಿನ ಜನಾಂಗ ಓದತಕ್ಕ ಸಂದರ್ಭದಲ್ಲಿ ಇಂಥ ಮಹಾ ಸಭೆ ಇಂಥ ಪ್ರಾಮುಖ್ಯವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿತು, ಅದರಿಂದಾಗಿ ಇಂಥ ಒಂದು ಬಲಾಢ್ಯ ಪ್ರಾಂತ್ಯವನ್ನಾಳುವ ಸುಯೋಗ ಒದಗಿತೆಂಬ ಕೀರ್ತಿ ಆಚಂದ್ರಾರ್ಕವಾಗಿ ಈ ಸಭೆಗೆ ದೊರೆಯಲಿ. ಆದಕಾರಣ ಎಲ್ಲರೂ ಒಮ್ಮನಸ್ಸಿನಿಂದ ಸ್ವಾಗತಿಸಿ ಏಕಮನಸ್ಸಿನಿಂದ ಬೆಂಬಲ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಡಿ. ಎಂ. ಗೋವಿಂದರಾಜು (ನೆಲಮಂಗಲ).—ಮಾನ್ಯ ಅಧ್ಯಕ್ಷರೇ, ಸುಮಾರು ನಾಲ್ಕೈದು ದಿವಸಗಳಿಂದಲೂ ಶೇಷಾದ್ರಿ ಸಮಿತಿಯವರು ಒದಗಿಸಿರುವ ಅಂಕಿ ಅಂಶಗಳ ಮೇಲೆ ನಮ್ಮ ಮೈಸೂರು ದೇಶ ಯಾವರೀತಿಯಿರಬೇಕು, ಈಗಿನ ಸ್ಥಿತಿಯೇ ಇರಬೇಕೇ ಅಥವಾ ವಿಶಾಲವಾಗಬೇಕೇ ಎಂಬ ವಿಷಯದಲ್ಲಿ ವಿಪುಲವಾದ ಚರ್ಚೆ ನಡೆಯುತ್ತಿರುವುದು ನಮಗೆಲ್ಲರಿಗೂ ಗೊತ್ತೇ ಇದೆ. ಮುಖ್ಯವಾಗಿ ಮೈಸೂರುದೇಶ ವಿಶಾಲವಾಗಬೇಕೆನ್ನುವುದರಲ್ಲಿ ಯಾವರೀತಿ ಆಗಬೇಕು, ಯಾವ ಉದ್ದೇಶಕ್ಕಾಗಿ ಆಗಬೇಕೆಂಬುದನ್ನು ಎಲ್ಲರೂ ಗಾಢವಾಗಿ ಯೋಚನೆ ಮಾಡಬೇಕು. ಏಕೆಂದರೆ ನಾವೆಲ್ಲರೂ ಭಾರತೀಯರು ಎಂಬ ಭಾವನೆಯಿಂದ ದೇಶವನ್ನು ಕಟ್ಟುವುದರಲ್ಲಿ ನಿರತರಾಗಿದ್ದೇವೆ. ಆದ್ದರಿಂದ ನಾವು ಯಾವುದೇ ಒಂದು ಭಾಷೆಗೆ ಪ್ರಾಮುಖ್ಯತೆಯನ್ನು ಕೊಟ್ಟದ್ದೇ ಆದರೆ ಖಂಡಿತವಾಗಿ ಇಂಡಿಯಾ ದೇಶಕ್ಕೆ ಬಹಳ ಹಾನಿಯಾಗುತ್ತದೆ. ನಾವು ರಾಜ್ಯಭಾರ ನಡೆಸುವುದರ ಅನುಕೂಲತೆಯ ದೃಷ್ಟಿಯಿಂದ ಈ ವಿಷಯವನ್ನು ಪರಿಶೀಲಿಸಬೇಕೇ ಹೊರತು ಭಾಷೆಯ ಆಧಾರದಮೇಲೆ ಪ್ರಾಂತ್ಯಗಳನ್ನು ಕಟ್ಟುತ್ತಾ ಹೋದರೆ ಖಂಡಿತವಾಗಿಯೂ ಒಳ್ಳೆಯದಾಗುವುದಿಲ್ಲ. ಯಾವ ಉದ್ದೇಶಕ್ಕಾಗಿ ಸ್ವಾತಂತ್ರ್ಯ ಹೋರಾಟ ನಡೆಸಿದೆವೋ, ಆ ಉದ್ದೇಶಕ್ಕೆ ಇದು ಕಳಂಕ ತರುವುದರಲ್ಲಿ ಯಾವ ಸಂಶಯವೂ ಇಲ್ಲ. ನಮ್ಮ ರಾಜಪ್ರಮುಖರೂ ಕೂಡ ಇದೇ ವಿಷಯವನ್ನು ಒತ್ತಿ ಹೇಳಿದ್ದಾರೆ. ನಮ್ಮ ಮೈಸೂರು ವಿಶಾಲವಾಗಬೇಕಾದರೆ ನಮ್ಮ ದೇಶದ ಹಿತದೃಷ್ಟಿಯೇ ನಮ್ಮ ಮುಖ್ಯ ಗುರಿಯಾಗಿರಲಿ, ಮತ್ತಾವ ಕಾರಣದಿಂದಲೂ ವಿಶಾಲ ಮಾಡುವ ಯೋಚನೆ ಮಾಡುವುದು ಸೂಕ್ತವಲ್ಲವೆಂದು ರಾಜಪ್ರಮುಖರು ಹೇಳಿರುವುದೂ ಮಾನ್ಯ ಸದಸ್ಯರು ಯೋಚನೆ ಮಾಡಬೇಕಾದ ವಿಷಯ. ಅದಕ್ಕೆ ಸರಿಯಾಗಿ ಶೇಷಾದ್ರಿ ಸಮಿತಿಯವರೂ ಅಂಕಿಅಂಶಗಳನ್ನು ಸವಿಸ್ತಾರವಾಗಿ ಒದಗಿಸಿದ್ದಾರೆ. ಅವರು ಭಾಷಾವಾರು ಪ್ರಾಂತ್ಯವಾಗಲಿ ಅಥವ ಹೋಗಲಿ ಎಂಬ ಯಾವ ಪಕ್ಷವನ್ನು ವಹಿಸಿಯೇನೂ ಹೇಳಿಲ್ಲ. ತಮಗೆ ಸಿಕ್ಕಿದಂಥ ಅಂಕಿ ಅಂಶಗಳನ್ನು ಮುಚ್ಚುಮರೆಯಿಲ್ಲದೆ ತಿಳಿಸಿ ನಮ್ಮ ಅಭಿಪ್ರಾಯಕ್ಕೆ ಬಿಟ್ಟಿದ್ದಾರೆ. ಅದನ್ನು ನೋಡಿ ನಮ್ಮ ರಾಜ್ಯ ಯಾವರೀತಿ ವಿಸ್ತಾರವಾಗಬೇಕು, ಯಾವರೀತಿ ವಿಸ್ತಾರವಾದರೆ ನಮ್ಮ ಜನರಿಗೆ ಒಳ್ಳೆಯದಾಗುತ್ತದೆಂಬದನ್ನು ನಿರ್ಧರಿಸಿಕೊಳ್ಳಬಹುದು. ಇವೊತ್ತು ಬೊಂಬಾಯಿ ಪ್ರಾಂತ್ಯ ವಿಶಾಲವಾಗಿರುವುದರಿಂದ, ಅವರ ರಾಜ್ಯಭಾರದಲ್ಲಿ ಜನತೆಗೆ ಎಷ್ಟುಮಟ್ಟಿಗೆ ಅನುಕೂಲತೆ ದೊರೆಯಬೇಕಾಗಿತ್ತೋ ಅಷ್ಟುಮಟ್ಟಿಗೆ ಸಿಕ್ಕುತ್ತಿಲ್ಲವೆಂಬ ವಿಷಯ ತಮಗೆಲ್ಲರಿಗೂ ತಿಳಿದು ಬರುತ್ತಿದೆ. ಆದ್ದರಿಂದ ಎಷ್ಟರಮಟ್ಟಿಗೆ ವಿಸ್ತಾರವಾಗಬೇಕು, ಎಷ್ಟು ವಿಸ್ತಾರವಾದರೆ ಒಳ್ಳೆಯದಾಗುತ್ತದೆಂಬುದನ್ನು ಇದರಿಂದ ತಿಳಿದುಕೊಳ್ಳಬಹುದಾಗಿದೆ. ಇವೊತ್ತಿನ ದಿವಸ ವಿದ್ಯಾಭ್ಯಾಸ, ವೈದ್ಯಕೀಯ ಸೌಕರ್ಯ, ರಸ್ತೆ ಮೊದಲಾದ ಪ್ರತಿಯೊಂದು ವಿಷಯದಲ್ಲೂ ನಮ್ಮದೇಶದಲ್ಲಿ ದಕ್ಷತೆಯಿಂದ ಕೆಲಸ ನಡೆಯುತ್ತಿರುವುದಕ್ಕೆ, ನಮ್ಮ ದೇಶ ಇಂಡಿಯಾ ದೇಶದಲ್ಲೇ ಮಾದರಿಯಾಗುವರೀತಿಯಲ್ಲಿ ಕೆಲಸ ಮಾಡುತ್ತಿರುವುದಕ್ಕೆ ಒಂದು ಮುಖ್ಯ ಕಾರಣ ನಮ್ಮದೇಶದ ಚೌಕಟ್ಟು ಅಷ್ಟು ವಿಶಾಲವಾಗದೆ ಚಿಕ್ಕದಾಗಿರುವುದರಿಂದ ಎಲ್ಲ ವಿಷಯಗಳಿಗೂ ಗಮನಕೊಡುವುದಕ್ಕೆ ಸಾಧ್ಯವಾಗಿರುವುದು. ಈ ಸಂದರ್ಭದಲ್ಲಿ ನೇಮಕವಾಗಿರುವ ಫಸಲಾಲಿ' ಕಮಿಟಿಯವರು ಕೂಡ ಬರೀ ಭಾಷೆಗೆ ಗಮನಕೊಡದೆ ಆಡಳಿತ ದೃಷ್ಟಿಯಿಂದ ರಾಜ್ಯ ಎಷ್ಟರಮಟ್ಟಿಗೆ ವಿಸ್ತಾರವಾಗುವುದು ಉಚಿತವೆಂಬುದನ್ನು ಗಮನಿಸಿ ಗಡಿ ನಿರ್ಧಾರ ಮಾಡುತ್ತಾರೆಂಬುದರಲ್ಲಿ ಸಂದೇಹವಿಲ್ಲ. ಅದೇ ಪ್ರಕಾರ ನಾವೂ ಕೂಡ ಇಂದು ಭಾಷೆಗೆ ಅಷ್ಟು ಪ್ರಾಧಾನ್ಯ ಕೊಡದೆ ಮೈಸೂರು ದೇಶ ಎಷ್ಟರಮಟ್ಟಿಗೆ ವಿಸ್ತಾರವಾದರೆ ನಮ್ಮ ದೇಶಕ್ಕೆ ಒಳ್ಳೆಯದಾಗುತ್ತದೆಂಬುದನ್ನು ಯೋಚನೆ ಮಾಡುವುದಾದರೆ ಸೌತ್ ಕೆನರಾ, ಕೊಡಗು, ಕೊಳ್ಳೇಗಾಲ, ಮಡಕಶಿರ—ಈ ಪ್ರದೇಶಗಳನ್ನು ಸೇರಿಸಿಕೊಂಡರೆ ಒಳ್ಳೆಯದಾಗಬಹುದೆಂದು ಅನೇಕ ಮಾನ್ಯ ಸ್ನೇಹಿತರು ಹೇಳಿರುವುದನ್ನು ಯೋಚನೆ ಮಾಡಬಹುದು.

ಹಾಗಿಲ್ಲದೆ, ಕೆಲವು ಮಾನ್ಯ ಸ್ನೇಹಿತರು ಹೇಳಿದ ಹಾಗೆ ಭಾಷೆಗೆ ಪ್ರಾಧಾನ್ಯತೆ ಕೊಡುವುದಾದರೆ, ನಮ್ಮಲ್ಲಿನ ಕೋಲಾರದ ಗತಿಯೇನಾಗುತ್ತದೆಂಬುದನ್ನು ಯೋಚನೆಮಾಡಿ. ನಮ್ಮ ಬೆಂಗಳೂರಿನಲ್ಲಿಯೂ ತಮಿಳರ ಸಂಖ್ಯೆಯೇ ಜಾಸ್ತಿಯಿದೆ ಎಂದು ಬೇರೆ ಹೇಳಿದ್ದಾರೆ. ಇವೊತ್ತಿನ ದಿವಸ ನಾವು ನಮ್ಮ

(ಶ್ರೀ ಡಿ. ಎಂ. ಗೋವಿಂದರಾಜು)

ಮೈಸೂರಿನ ಯಾವ ಪ್ರಜೆಯನ್ನೂ ಹೊರಕ್ಕೆ ಕಳುಹಿಸುವುದಕ್ಕೆ ಇಷ್ಟಪಡುವುದಿಲ್ಲ. ಆದ್ದರಿಂದ ನಾವಿಂದು ಭಾಷಾವಾರು ಪ್ರಾಂತ್ಯ ವಿಂಗಡಣೆಯ ವಿಷಯಕ್ಕೆ ತಲೆ ಕೆಡಿಸಿಕೊಳ್ಳುವುದಕ್ಕಿಂತ ದೇಶದ ಅಭಿವೃದ್ಧಿಯನ್ನು ಸಾಧಿಸುವುದಕ್ಕೆ, ದೇಶದಲ್ಲಿ ಸುಭದ್ರವಾದ ಆಡಳಿತವನ್ನು ಉಂಟುಮಾಡುವುದಕ್ಕೆ ಯಾವರೀತಿ ವಿಂಗಡಣೆ ಮಾಡಬೇಕೆಂಬ ದೃಷ್ಟಿಯಿಂದ ಎಲ್ಲರೂ ಕೆಲಸಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಜೈಹಿಂದ್.

ಶ್ರೀ ಬಿ. ಪಿ. ನಾಗರಾಜಮೂರ್ತಿ (ಮಳವಳ್ಳಿ).—ಮಾನ್ಯ ಅಧ್ಯಕ್ಷರೇ, ಶೇಷಾದ್ರಿ ಸಮಿತಿಯವರು ಒಪ್ಪಿಸಿರತಕ್ಕ ಅಂಕಿ ಅಂಶಗಳ ವರದಿಯಮೇಲೆ ಇದುವರೆಗೂ 50 ಜನರು ಭಾಗವಹಿಸಿ 32 ಜನರು ಪ್ರಾಂತ್ಯ ವಿಸ್ತರಣೆಯಾಗಬೇಕೆಂದೂ, 18 ಜನರು ವಿಸ್ತರಣೆ ಬೇಡವೆಂದೂ ಅಭಿಪ್ರಾಯ ಪಟ್ಟಿದ್ದಾರೆ. ಈ 18 ಜನ ಬೇಡವೆಂದವರಲ್ಲಿಯೂ ಕೂಡ ಅವರು ಹೇಳಿದ ವಾದವನ್ನು ಸ್ವಲ್ಪ ಕೂಲಂಕಷವಾಗಿ ವಿಮರ್ಶೆ ಮಾಡಿ ನೋಡುವುದಾದರೆ, ಕೆಲವರು ಎರಡು ಕರ್ನಾಟಕ ಬೇಕೆನ್ನುವವರೂ ಇದ್ದಾರೆ. ಅಲ್ಲಿಗೆ ಪ್ರಾಂತ್ಯ ವಿಂಗಡಣೆಯ ತತ್ವವನ್ನೊಪ್ಪಿಕೊಂಡು, ಅಕ್ಕಪಕ್ಕದ ರಾಜ್ಯವನ್ನೊಳಗೊಂಡ ಮೈಸೂರು ಒಂದು ಕರ್ಣಾಟಕ, ಇತರ ಕನ್ನಡ ಪ್ರದೇಶಗಳು ಒಂದು ಕರ್ನಾಟಕವೆಂದು ಮಾಡಿ ಎಂದು ಹೇಳಿದಂತಾಯಿತು. ಇವರಲ್ಲೇ ಇನ್ನು ಕೆಲವರು, ಸದ್ಯಕ್ಕೆ ಈ ಪ್ರಶ್ನೆ ಬೇಡ, ಇನ್ನು ಕೆಲವಾರು ವರ್ಷವಾದಮೇಲೆ ಒಂದು ಕರ್ಣಾಟಕವನ್ನು ಮಾಡೋಣವೆಂದೂ ಹೇಳಿದ್ದಾರೆ. ಇವರನ್ನೆಲ್ಲಾ ಬಿಟ್ಟು ನಿಜವಾಗಿ ವಿರೋಧಮಾಡಿದವರನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಖಂಡಿತವಾಗಿ ಪ್ರಾಂತ್ಯ ವಿಸ್ತರಣೆಯಾಗುವುದು ಬೇಡವೆನ್ನುವವರು ಹತ್ತನೆಯ ಒಂದು ಭಾಗದಷ್ಟು ಕೂಡ ಆಗುವುದಿಲ್ಲ.

ಇನ್ನು ನನ್ನ ಸ್ವಂತ ಅಭಿಪ್ರಾಯ ಹೇಳುವುದಾದರೆ, ಈ ಪ್ರಶ್ನೆ ನಮ್ಮ ಮುಂದೆ ಬರುವುದಕ್ಕೆ ಕಾಲ ಸನ್ನಿಹಿತವಾಗಿಲ್ಲ. ಯಾವ ಕಾಲದಲ್ಲಿ ಚರ್ಚೆಯಾಗಬೇಕಾಗಿದೆಯೋ ಆ ಕಾಲ ಬಂದಿಲ್ಲ. ಸರ್ಕಾರದವರು ಅನಿರೀಕ್ಷಿತವಾಗಿ ಮುಂಚಿತವಾಗಿ ತಂದಿದ್ದಾರೆಂದು ಹೇಳಬೇಕಾಗಿದೆ. ಏಕೆಂದರೆ ವಿಸ್ತರಣೆಯನ್ನೇ ಆಗಲಿ, ಸಂಕುಚಿತಮಾಡುವುದನ್ನೇ ಆಗಲಿ ಯಾವ ಪ್ರಾಂತ್ಯಕ್ಕೂ ತೀರ್ಮಾನ ಮಾಡಿಕೊಳ್ಳುವುದಕ್ಕೆ ಸರ್ವಾಧಿಕಾರವಿಲ್ಲ; ರಾಜ್ಯಾಂಗದ ಪ್ರಕಾರ ರಾಷ್ಟ್ರಾಧ್ಯಕ್ಷರಿಗೂ, ಆ ಮೂಲಕ ಲೋಕಸಭೆಗೂ ಕೊಟ್ಟಿದ್ದಾರೆ. ರಾಜ್ಯಾಂಗದ ಮೂರನೆಯ ವಿಧಿಯ ಪ್ರಕಾರ ರಾಷ್ಟ್ರಾಧ್ಯಕ್ಷರು ಒಂದು ಮಸೂದೆಯ ರೂಪದಲ್ಲಿ ಇದನ್ನು ಲೋಕಸಭೆಯಮುಂದೆ ತಂದು, ಆ ಮೇಲೆ ಆ ಮಸೂದೆಗೆ ಯಾವಯಾವ ಪ್ರಾಂತ್ಯಗಳ ಗಡಿ ವ್ಯತ್ಯಾಸವಾಗುತ್ತವೆಯೋ ಆ ಪ್ರಾಂತ್ಯಗಳ ಶಾಸನಸಭೆಗಳ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕಾಗಿದೆಯೋ ಹೊರತು ಅವರು ತೀರ್ಮಾನ ತೆಗೆದುಕೊಳ್ಳಬಹುದೆಂದೂ ಇಲ್ಲ. ಅಲ್ಲದೆ ಈಗ ಯಾವಯಾವ ಕನ್ನಡ ಮಾತನಾಡತಕ್ಕ ಜನಗಳು ಮೈಸೂರಿಗೆ ಸೇರಬೇಕೆಂದಿದ್ದಾರೋ ಅವರಿಗೆ ಸಂಬಂಧಪಟ್ಟ ಶಾಸನ ಸಭೆಗಳ ಮುಂದೆ ಈ ವಿಧವಾದ ಚರ್ಚೆ ಬಂದಿರುವುದನ್ನೂ ನಾವು ನೋಡಿಲ್ಲ. ಅಂಥಾದ್ದರಲ್ಲಿ, ಕಾಲ ಪರಿಪಕ್ವವಾಗಿ ಈ ವಿಷಯ ಬರುವುದಕ್ಕೆ ಮೊದಲೇ, ಇದನ್ನು ಸಭೆಯ ಮುಂದಿಟ್ಟು ಏಕೆ ಗೊಂದಲ ಮಾಡಿದರೋ ಗೊತ್ತಿಲ್ಲ. ಇದು ಕೇಂದ್ರ ಸರ್ಕಾರದವರು ರಚನೆ ಮಾಡಿರುವ ಫಸಲಾಲಿ ಸಮಿತಿಯವರು ಕೇಂದ್ರ ಸರ್ಕಾರದವರಿಗೆ ತಮ್ಮ ವರದಿಯನ್ನು ಕೊಡುವುದಕ್ಕೆ ಆಯಾ ಪ್ರಾಂತ್ಯ ಸರ್ಕಾರಗಳ ಅಭಿಪ್ರಾಯವನ್ನು ತಿಳಿದುಕೊಳ್ಳುವುದಕ್ಕೆ ಪ್ರಾಂತ್ಯ ಸರ್ಕಾರಗಳನ್ನು ಖಚಿತವಾಗಿ ಕೇಳಿರುವಲ್ಲಿ, ಇವರು ಇದನ್ನು ಶಾಸನಸಭೆಯಲ್ಲಿ ಹಾಕಿ ಗೊಂದಲಕ್ಕೆ ಕಾರಣವಾಗಿ ಮಾಡಿದ್ದಾರೆ.

Mr. SPEAKER.—It is not a fact. They have not asked the Government to give its opinion. It is only the Central Government that can ask the State Government to give its opinion. The Government has organised the Fact Finding Committee to collect the data and to furnish its opinion. The Hon'ble Members invited to give their opinion.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಕೇಂದ್ರ ಸರ್ಕಾರದಿಂದಲೇ ಆಗಲಿ, ಪ್ರಾಂತ್ಯ ಪುನರ್ವಿಂಗಡಣಾ ಸಮಿತಿಯ ವರಿಂದಲೇ ಆಗಲಿ ಈ ಪ್ರಶ್ನೆಯನ್ನು ಶಾಸನ ಸಭೆಯ ಮುಂದೆ ಇಡಬೇಕೆಂದು ಇಲ್ಲದಿರುವಾಗ ಇದನ್ನು ಈ ಸಭೆಯ ಮುಂದೆ ತಂದಿದ್ದೇ ಉಚಿತವಲ್ಲವೆಂದು ನನ್ನ ಅಭಿಪ್ರಾಯ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಯಾವಾಗಲಾದರೂ ಬರುತ್ತಿತ್ತು.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಬರುವಾಗ ಬರಲಿ. ಇದು ಸಮಯವಲ್ಲ. ಬಳ್ಳಾರಿಯನ್ನು ಮೈಸೂರಿಗೆ ಸೇರಿಸುವಾಗ, ಲೋಕ ಸಭೆಯಲ್ಲಿ ಮುಂಚೆ ಇಟ್ಟು, ಅನಂತರ, ಆ ಮಸೂದೆಯ ಮೇಲೆ ನಮ್ಮ ಅಭಿಪ್ರಾಯವನ್ನು ಕೇಳಿದರೇ ವಿನಾ, ಆ ಮಸೂದೆ ತಯಾರಾಗುವುದಕ್ಕೆ ಮೊದಲೇ ನಮ್ಮನ್ನು ಕೇಳಲಿಲ್ಲ. ಆ ರೀತಿಯಾಗಿ ಈ ವಿಷಯದಲ್ಲೂ ಮಾಡಿದ್ದರೆ ಚೆನ್ನಾಗಿತ್ತು. ಅದನ್ನು ಮಾಡುವುದಕ್ಕೆ ಮೊದಲೇ ಇವರು ಇದನ್ನು ಸಭೆಯಮುಂದೆ ತಂದಿದ್ದೇ ಸೂಕ್ತವಲ್ಲವೆಂದು ನನ್ನ ಅಭಿಪ್ರಾಯ.

ಹೇಗೇ ಆಗಲಿ, ಮುಂದಾದರೂ ಇದನ್ನು ಚರ್ಚೆ ಮಾಡಬೇಕಾಗಿತ್ತು ಎಂದು ಒಪ್ಪಿಕೊಂಡರೂ ಪ್ರಾಂತ್ಯ ವಿಸ್ತರಣೆಯನ್ನು ಯಾವ ಹಿನ್ನೆಲೆಯಿಂದ ನೋಡಬೇಕು ಎಂಬುದು ಮುಖ್ಯ. ಇವೊತ್ತಿನ ದಿವಸ ರಾಷ್ಟ್ರದ ಮುಂದಿನ ಗುರಿ ಸಮಾಜವಾದ ಸಿದ್ಧಾಂತವಾಗಿದೆ. ಈ ದೃಷ್ಟಿಯಿಂದ ಹೊರಟು ದೇಶವನ್ನು ಶಕ್ತಿಯುತವಾದ, ಸಂಪದ್ಯುಕ್ತವಾದ ಮತ್ತು ಜಾತ್ಯತೀತವಾದ ರಾಷ್ಟ್ರವಾಗಿ ಮಾಡಬೇಕೆಂಬ ಹಿನ್ನೆಲೆಯಿಂದ ಈ ಪ್ರಶ್ನೆಯನ್ನು ಪರಿಶೀಲಿಸುವುದಾದರೆ ಏಕೀಕರಣದ ಬಗ್ಗೆ ಯಾವ ವಿರೋಧವಾಗಲಿ, ವೈಷಮ್ಯವಾಗಲಿ ಬರುವುದಕ್ಕೆ ಕಾರಣವಿಲ್ಲವೆಂದು ಹೇಳಬಲ್ಲೆ. ಏಕೆಂದರೆ, ಪರಕೀಯರು ಹಿಂದೂಸ್ಥಾನವನ್ನು ಆಕ್ರಮಿಸಿಕೊಂಡಾಗ ಯಾವರೀತಿ ಪ್ರಾಂತ್ಯವಿಂಗಡಣೆ ಮಾಡಿಕೊಂಡರೆಂಬುದನ್ನು ಸ್ವಲ್ಪ ಯೋಚಿಸಿದರೆ ಅರ್ಥವಾಗುತ್ತದೆ. ಮುಂಚೆ ಅವರು ಕೇವಲ ಜಲದುರ್ಗಗಳನ್ನು ಆಕ್ರಮಣ ಮಾಡಿಕೊಂಡು ಅಲ್ಲಿ ಪಟ್ಟಣಗಳನ್ನು ನಿರ್ಮಿಸಿಕೊಂಡರು. ಹೀಗೆ ಬೊಂಬಾಯಿ, ಮದರಾಸ್, ಕಲ್ಕತ್ತ ಮುಂತಾಗಿ ಮೊಥ ಮೊದಲು ಯಾವ ಯಾವುದನ್ನು ಆಕ್ರಮಣ ಮಾಡಿಕೊಂಡರೋ ಅವುಗಳನ್ನೇ ಕೇಂದ್ರವಾಗಿ ಮಾಡಿಕೊಂಡು ಅಲ್ಲಿ ಆಡಳಿತವನ್ನು ರೂಡಿಸುವುದಕ್ಕೆ ಅನುಕೂಲವಾಗಿ ಪ್ರಾಂತ್ಯ ವಿಭಜನೆ ಮಾಡಿಕೊಂಡರು. ಅಂದಮೇಲೆ ಅವರು ಮಾಡಿದ ಪ್ರಾಂತ್ಯ ವಿಭಜನೆ ಯಾವ ತತ್ವದಮೇಲೆಯೂ ಮಾಡಿದ್ದಲ್ಲವೆಂಬುದು ವೇದ್ಯವಾಗಿದೆ. ಆದ್ದರಿಂದಲೇ ಪರಕೀಯರು ನಮ್ಮ ದೇಶವನ್ನು ಬಿಟ್ಟಮೇಲೆ ಸ್ವಾತಂತ್ರ್ಯ ಸಂಪಾದಿಸಿದ ಮಹಾ

ನಾಯಕರು ಬ್ರಿಟಿಷರು ಮಾಡಿದ ವಿಭಜನೆ ನ್ಯಾಯವಾಗಿಲ್ಲ, ಅವರ ಆಡಳಿತ ಸೌಕರ್ಯಕ್ಕಾಗಿ ಮಾಡಿದ ವಿಭಜನೆ, ದೇಶದ ಐಕ್ಯತೆಗೆ, ದೇಶದ ಉನ್ನತಿಗೆ ಸಮಂಜಸವಾಗಿಲ್ಲ, ಅದನ್ನು ಪುನರ್ವಿಂಗಡಣೆ ಮಾಡುವುದು ಸೂಕ್ತವೆಂದು ಒಪ್ಪಿಕೊಂಡಿರುವುದು ಸಮ್ಮತವಾಗಿದೆ.

ಅಂದಮೇಲೆ, ಪ್ರಾಂತ್ಯ ಪುನರ್ವಿಂಗಡಣೆ ಮಾಡುವುದರ ಅವಶ್ಯಕತೆಯಿದೆಯೆಂದಾಯಿತು. ಇನ್ನು ಈ ವಿಂಗಡಣೆಗೆ, ಯಾವ ದೃಷ್ಟಿಯಿಂದಲೇ ನೋಡಲಿ ಭಾಷೆ ಒಂದು ಪ್ರಮುಖ ಪಾತ್ರವನ್ನು ವಹಿಸುತ್ತದೆ. ರಾಜಕೀಯ ದೃಷ್ಟಿಯಿಂದ ನೋಡುವುದಾದರೆ, ಹಿಂದೆ ಕಾಂಗ್ರೆಸ್ಸಿನವರು ಕಾಂಗ್ರೆಸ್ ಪ್ರಾಂತ್ಯ ಸಮಿತಿಗಳನ್ನು ಮಾಡಿದಾಗ ಭಾಷಾವಾರು ತತ್ವದಮೇಲೆಯೇ ಮಾಡಿದರೆಂಬುದನ್ನು ನಮ್ಮ ಕಾಂಗ್ರೆಸ್ ಮಿತ್ರರು ಮರೆಯಬಾರದು. ಸಾಂಸ್ಕೃತಿಕ ದೃಷ್ಟಿಯಿಂದ ನೋಡುವುದಾದರೂ ಕೂಡ ಮೈಸೂರಿನ ತಾತಂದಿರೂ ಕನ್ನಡ ಸಾಹಿತ್ಯ ಪರಿಷತ್ತಿನ ಪಿತಾಮಹರೂ ಆದ ವಿಶ್ವೇಶ್ವರಯ್ಯನವರು ಸಾಂಸ್ಕೃತಿಕ ದೃಷ್ಟಿಯಿಂದ ನಮ್ಮ ಪರಿಷತ್ತು ಇಡೀ ಕರ್ಣಾಟಕಕ್ಕೆ ಒಂದು ಸಾಹಿತ್ಯ ಕೇಂದ್ರ, ಒಂದು ಸಾಹಿತ್ಯ ಪರಿಷತ್ತು ಆಗಬೇಕೆಂದು ಹೇಳಿದ್ದಾರೆ. ಹೀಗೆ ಹೇಳಿರುವುದರಲ್ಲಿ ಯಾವ ಅನುಮಾನಕ್ಕಾಗಲಿ, ಈರ್ಷೆಗಾಗಲಿ ಎಡೆ ಕೊಟ್ಟಿಲ್ಲವೆಂಬುದನ್ನು ಮರೆಯಬಾರದು. ಈಗ ಕೇಂದ್ರ ಸರ್ಕಾರದವರು ಆಡಳಿತ ವಹಿಸಿಕೊಂಡಮೇಲೆ, ಯಾವ ಭಾಷಾವಾರು ಪ್ರಾಂತ್ಯ ಮಾಡತಕ್ಕದ್ದೂ ಅನಾವಶ್ಯಕ, ಹಾಗೆ ಮಾಡುವುದು ಸೂಕ್ತವಲ್ಲ ಎಂದು ಕೆಲವರು ಹೇಳಿದರು. ಆದರೆ ಇಂಥ ವಿಷಯವನ್ನು ಅಷ್ಟು ಸುಲಭವಾಗಿ ತೀರ್ಮಾನಮಾಡುವುದಕ್ಕಾಗುವುದಿಲ್ಲ. ಇದನ್ನು ಬಹಳ ವಿಶಾಲ ದೃಷ್ಟಿಯಿಂದ ನಿರ್ಣಯಿಸಲು ಅವಕಾಶವಿರಬೇಕು ಎಂದು ತಿಳಿಸಿದ್ದಾರೆ. ಆದರೆ ಈ ದಿವಸ ದೇಶದಲ್ಲಿರತಕ್ಕಂಥ ಪ್ರತಿಯೊಬ್ಬರ ಮುಂದೆ ಹೋಗಿ ತಮ್ಮ ಅಭಿಪ್ರಾಯವೇನು ಎಂದು ಕೇಳುವ ಮೊದಲು ಆ ಜನರಿಗೆಲ್ಲಾ ಅಷ್ಟು ತಿಳಿವಳಿಕೆಯಿದೆಯೇ ಅನ್ನುವುದನ್ನು ನಾವು ಮೊದಲು ಯೋಚಿಸಬೇಕು. ಯಾವಾಗ ಕೇಂದ್ರ ಸರ್ಕಾರದವರು ಈ ಪ್ರಾಂತ್ಯಗಳನ್ನು ಭಾಷಾವಾರು ಅಧಾರದಮೇಲೆ ವಿಂಗಡಿಸಬೇಕೆಂಬ ತತ್ವವನ್ನು ಒಪ್ಪಿಕೊಂಡರೋ ಹಾಗೆ ಒಂದಲ್ಲ ಹಲವಾರು ಬಾರಿ ಒಪ್ಪಿಕೊಂಡಮೇಲೆ ಈ ದಿವಸ ಹಾಗೆಲ್ಲಾ ಆಗಬಾರದೆಂದು ಹೇಳುವುದು ಸರಿಯಲ್ಲ. ಈ ದಿವಸ ಮೈಸೂರನ್ನು ವಿಸ್ತರಣ ಮಾಡಿದರೆ ಆರ್ಥಿಕ ದೃಷ್ಟಿಯಿಂದ ತುಂಬ ಅನಾನುಕೂಲಗಳೂ, ಇಲ್ಲದ ಅನುಕೂಲ್ಯಗಳೂ ಉಂಟಾಗುತ್ತವೆಂದು ಕೆಲವರು ಹೇಳಿದರು. ಈಗ ಉದಾಹರಣೆಗಾಗಿ ನಾನು ಹೇಳುವುದಾದರೆ ಮೊನ್ನೆ ತಾನೆ ನಾವು ಈ ಜೋಡಿ-ಜಹಗೀರುಗಳನ್ನು ರದ್ದುಪಡಿಸಿದೆವು. ಈ ದೊಡ್ಡ ದೊಡ್ಡ ಜಮೀನ್ದಾರರೂ, ಜೋಡೀದಾರರೂ ನೂರಾರು ವರ್ಷಗಳಿಂದ ಅನುಭವಿಸಿಕೊಂಡು ಬರುತ್ತಿದ್ದಂಥ ಸ್ವತ್ತುಗಳನ್ನೆಲ್ಲಾ ಕಿತ್ತುಕೊಂಡು ಅವರ ಹೊಟ್ಟೆಯಮೇಲೆ ಹೊಡೆದ ಹಾಗೆ ಮಾಡತಕ್ಕಂಥ ಸಂದರ್ಭ ಬಂದಿದ್ದಾಗ ದೇಶದಲ್ಲಿ ಹೋಗಿ ಎಷ್ಟು ಜನರ ಓಟ್ ಪಡೆದು ಅದನ್ನು ಮಾಡಿದರು ಎಂದು ನಾನೀಗ ಕೇಳಬೇಕಾಗಿದೆ. ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು ಮಾತನಾಡುತ್ತ ನಾವೆಲ್ಲರೂ ಭಾರತೀಯರು, ಭಾರತದ ದೇಶದ ಜನರು ಎಂಬುದನ್ನು ಯಾರೂ ಮರೆಯಬಾರದು ಎಂದು ಹೇಳಿದರು. ಅವರು ಹೇಳಿದ್ದನ್ನೇ ಅವರು ಚೆನ್ನಾಗಿ ಅರ್ಥಮಾಡಿಕೊಂಡಿದ್ದರೆ ಈ ಕಷ್ಟ ಸಮಸ್ಯೆಯೇ ಉದ್ಭವವಾಗದಂತೆ ಇದನ್ನು ಪರಿಹರಿಸಲು ಎಂದೋ ಸಾಧ್ಯವಾಗುತ್ತಿತ್ತು. ಈಗ ಬೇರೆ ಪ್ರಾಂತ್ಯಗಳ ಪುನರ್ರಚನೆಯಾಗಲಿ ಅಥವಾ ಅವುಗಳ ವಿಭಜನೆಯಾಗಲಿ ಈ ಒಂದು ತಕರಾರಿನಿಂದ ಅದು ಸರ್ವ ಸಮನ್ವಯವಾಗಿ ಆಗುವುದಿಲ್ಲ. ಈ ದಿವಸ ಆ ಕೇಂದ್ರ ಸರ್ಕಾರದವರೇ ಪ್ರತಿಯೊಂದು ಭಾಗದಲ್ಲಿಯೂ ಹೆಚ್ಚು ಆಡಳಿತವನ್ನು ಅವರೇ ವಹಿಸಿಕೊಂಡಿದ್ದಾರೆ. ಆದುದರಿಂದ ಈಗ ಒಂದು ಪ್ರಾಂತ್ಯವು ಇನ್ನೊಂದು ಪ್ರಾಂತ್ಯದ ಮೇಲೆಯೂ ಯುದ್ಧಮಾಡಿ ಆ ದೇಶದಲ್ಲಿರುವಂಥ ಜನರನ್ನು ಓಡಿಸಿಬಿಡಬೇಕು ಎನ್ನುವಂಥ ಪ್ರಶ್ನೆಯೇನೂ ಈಗ ಇರುವುದಿಲ್ಲ. ಹೀಗಿರುವಾಗ ಕೆಲವರು ಏತಕ್ಕಾಗಿ ಹೀಗೆ ಇದನ್ನು ವಿರೋಧಿಸುತ್ತಿದ್ದಾರೆ ಎನ್ನುವುದೇ ಅರ್ಥವಾಗುತ್ತಿಲ್ಲ. ಮೈಸೂರು ಸರ್ಕಾರಕ್ಕೆ ಈಗಾಗಲೇ $4\frac{1}{2}$ ಕೋಟಿ ರೂಪಾಯಿಗಳ ಖೋತಾ ಆಗಿದೆ, ಅಂಥಾದ್ದರಲ್ಲಿ ಈಗ ಈ ಪ್ರಾಂತ್ಯಗಳ ವಿಂಗಡಣೆಯಿಂದ ಈ ಖೋತಾ ಮತ್ತಷ್ಟು ಜಾಸ್ತಿಯಾಗುತ್ತದೆಂದು ಹೇಳಿದರು. ಈ ವಾದಕ್ಕೂ ಸಹ ಅವಕಾಶವಿಲ್ಲ. ಈ ದಿವಸ ಮೈಸೂರು ದೇಶದ ಸಂಪದಭಿವೃದ್ಧಿಯು ಅಷ್ಟು ಸರ್ವತೋಮುಖವಾಗಿ ನಡೆದಿದ್ದರೆ ಈ ದಿವಸವೂ ಸಹ ನಾವು ಜನರ ಮೇಲೆ ಒಂದಾದಮೇಲೆ ಒಂದರಂತೆ ತೆರಿಗೆಗಳನ್ನು ಹೇರಬೇಕಾದಂಥ ಪ್ರಮೇಯವೇಕೆ ಇರುತ್ತಿತ್ತು? ಹೀಗೆ ಕೇವಲ ಸಾಮಾನ್ಯ ವಿಚಾರಗಳ ಕಡೆಗೆ ಗಮನ ಕೊಟ್ಟು ಇಂಥ ಮಹತ್ವಪೂರಿತವಾದಂಥ ಪ್ರಶ್ನೆಯನ್ನು ಬೇಡ ಎಂದು ಹೇಳುವುದು ಸರಿಯಾದದ್ದಲ್ಲ. ಈ ದಿವಸ ನಾವೇಕೆ ಈ ಪ್ರಶ್ನೆಯನ್ನು ಇಷ್ಟು ತೀವ್ರವಾಗಿ ಇಲ್ಲಿ ಚರ್ಚಿಸಬೇಕು ! ಯಾವ ಜನರು ನಮ್ಮೊಡನೆ ಸೇರಬೇಕೆಂದು ಇಷ್ಟಪಡುತ್ತಾರೋ ಅವರು ಬೇಕಾದರೆ ಇದನ್ನು ಇತ್ಯರ್ಥಪಡಿಸಿಕೊಂಡು ಬರಲಿ ಎಂದು ಒಬ್ಬರು ಮಾನ್ಯ ಸದಸ್ಯರು ಹೇಳಿದರು. ಆದರೆ ಇದು ಅಷ್ಟು ಸರಿಯೆಂದು ಹೇಳುವುದಕ್ಕಾಗುವುದಿಲ್ಲ. ಮತ್ತೆ ಕೆಲವರು ಈ ಮೈಸೂರು ತನ್ನದೇ ಆದಂಥ ಒಂದು ವೈಶಿಷ್ಟ್ಯವನ್ನು ಉಳಿಸಿಕೊಂಡು ಬಂದಿದೆ ಎಂದು ಹೇಳಿ ಆ ಕೊಡಗಿನ ಉದಾಹರಣೆ ಹೇಳಿಕೊಟ್ಟರು. ಹಾಗೆ ದೇಶ ಎಷ್ಟು ಚಿಕ್ಕದಾದರೆ ಅಷ್ಟೂ ಒಳ್ಳೆಯದೆಂದು ಹೇಳತಕ್ಕವರು ಈಗ ಮೈಸೂರು ದೇಶದಲ್ಲಿರತಕ್ಕಂಥ 10 ಜಿಲ್ಲೆಗಳನ್ನೂ 10 ದೇಶಗಳನ್ನಾಗಿಯೆ ಮಾಡಿದ್ದರೆ ಇನ್ನೂ ಚೆನ್ನಾಗಿರುತ್ತೆಂದು ಹೇಳಿದ ಹಾಗಾಯಿತು. ಈ ದಿವಸ ಮೈಸೂರಿನ ಮೇಲ್ಮೈಯ ಲಕ್ಷಣಗಳನ್ನು ಗಮನದಲ್ಲಿಟ್ಟುಕೊಂಡು ಈ ದೇಶವನ್ನು ಮಲೆನಾಡು ಮೈದಾನ ಮತ್ತು ಬೆಂಗಾಡು ಸೀಮೆ ಎಂದು ಸಾಮಾನ್ಯವಾಗಿ ಮೂರು ವಿಭಾಗಗಳನ್ನಾಗಿ ವಿಂಗಡ ಮಾಡಬಹುದು. ಹೀಗೆ ಮಾಡಿದರೆ ಒಂದು ಜಿಲ್ಲೆಯಲ್ಲೇ ಒಂದು ಭಾಗಕ್ಕಿಂತ ಮತ್ತೊಂದು ಭಾಗ ಹೆಚ್ಚಿನ ಅಭಿವೃದ್ಧಿಗೆ ಬಂದಿರುವುದು ಗೊತ್ತಾಗುತ್ತದೆ. ಹೀಗೆ ದೇಶದ ಪ್ರತಿಯೊಂದು ಭಾಗವೂ ಎಲ್ಲಾ ರೀತಿಯಲ್ಲೂ ಅಭಿವೃದ್ಧಿಗೆ ಬಂದಿರುವುದಿಲ್ಲವೆಂಬ ಅಂಶವನ್ನು ಸರ್ವರೂ ಅರಿತಿದ್ದೀರಿ. ಈ ದಿವಸ ಆ ಕರ್ಣಾಟಕ ಪ್ರಾಂತ್ಯದಲ್ಲೂ ಹೀಗೆ ಕೆಲವು ಚೆನ್ನಾಗಿ ಮುಂದುವರಿದಿರುವ ಪ್ರದೇಶಗಳೂ ಮತ್ತೆ ಕೆಲವು ಮುಂದುವರಿಯದಿರುವ ಪ್ರದೇಶಗಳೂ ಇರುತ್ತವೆ. ಈ ದಿವಸ ಹಿಂದುಳಿದಿರತಕ್ಕಂಥ ಪ್ರದೇಶಗಳ ಏಳಿಗೆಗಾಗಿ ಕೇಂದ್ರ ಸರ್ಕಾರ ನೆರವನ್ನು ನೀಡಲು ಸಿದ್ಧವಾಗಿದೆ. ದೇಶದಲ್ಲಿ ಯಾವ ಯಾವ ಭಾಗದಲ್ಲಿ ಅನುಕೂಲತೆಗಳು ಕಡಮೆಯಾಗಿವೆಯೋ ಮತ್ತು ದೇಶದಲ್ಲಿ ಬಡತನ ಹೆಚ್ಚಾಗಿ ಎಲ್ಲೆಲ್ಲಿದೆಯೋ ಅಂಥ ಪ್ರದೇಶಗಳಿಗೆ ಒಂದು ಹೆಚ್ಚಿನ ಸಹಾಯ ಸೌಕರ್ಯಗಳನ್ನು ಒದಗಿಸಲು ನಾವೆಲ್ಲರೂ ಹಿಂದೆ

(ಶ್ರೀ ಬಿ. ಪಿ. ನಾಗರಾಜಮೂರ್ತಿ.)

ಏನೊಂದು ತ್ಯಾಗಮಾಡಿ ದೇಶಕ್ಕೆ ಸ್ವಾತಂತ್ರ್ಯವನ್ನು ತಂದೆವೋ ಅದಕ್ಕಿಂತಲೂ ಮಿಗಿಲಾಗಿ ಈ ದಿವಸ ನಾವು ಆ ಹಿಂದುಳಿದಿರತಕ್ಕಂಥ ನಮ್ಮ ಸಹೋದರರುಗಳಿಗೆ ತ್ಯಾಗ ಮಾಡಿದರೇನೇ ದೇಶ ಉತ್ತಮಸ್ಥಿತಿಗೆ ಬರಲು ಸಾಧ್ಯವಾಗುತ್ತದೆ ಎನ್ನುವುದೇ ನನ್ನ ವಾದ. ಈ ದಿವಸ ಇರತಕ್ಕಂಥ ಪ್ರಾಂತ್ಯಗಳಲ್ಲಿ ಕೊಡಗಿನಂಥ ಚಿಕ್ಕ ದೇಶವೂ ಮತ್ತು ಉತ್ತರ ಪ್ರದೇಶದಂಥ ದೊಡ್ಡ ದೇಶವೂ ಇರತಕ್ಕದ್ದನ್ನು ನೋಡಿದರೆ ಇವುಗಳಿಗೆ ಅಜಗಜಾಂತರ ವ್ಯತ್ಯಾಸವಿದೆ. ಹೀಗಿರುವುದು ಖಂಡಿತ ಸೂಕ್ತವಾದುದಲ್ಲ. ಲೋಕ ಸಭೆಯಲ್ಲಿ. ಕೂಡ ಈ ಸಂಸ್ಥಾನಗಳ ಪ್ರಾತಿನಿಧ್ಯ ಇವುಗಳಿಗೆ ಸಾಕಷ್ಟು ದೊರಕುತ್ತಿಲ್ಲ ಎನ್ನುವುದನ್ನು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಆದರೆ ಈ ಭಾಷಾವಾರು ಪ್ರಾಂತ್ಯರಚನೆಗಳಾಗಬೇಕೆಂದು ಹೇಳಿರತಕ್ಕದ್ದನ್ನು ಕೆಲವು ಮಾನ್ಯ ಸದಸ್ಯರು ಇದನ್ನು ಅತಿರೇಕವಾಗಿ ತೆಗೆದುಕೊಂಡಿದ್ದಾರೆ. ಒಂದು ಭಾಷೆಯ ಪ್ರಾಂತ್ಯ ನಿರ್ಮಾಣವಾದರೆ ಅಲ್ಲಿ ಬೇರೆ ಭಾಷೆಯನ್ನಾಡತಕ್ಕ ಜನರನ್ನು ಆ ಪ್ರಾಂತ್ಯದಿಂದಲೇ ಬಿಟ್ಟು ಓಡಿಸಬೇಕು ಎನ್ನತಕ್ಕಂಥ ವಾದವನ್ನು ಯಾರೂ ಒಪ್ಪುವುದಿಲ್ಲ. ಇಂಥ ವಿಚಾರದಲ್ಲಿ ಮಿಠಾಯಿ ಕೊಯ್ದುಹಾಗೆ ವಿಭಾಗ ಮಾಡುವುದಕ್ಕಾಗುವುದಿಲ್ಲ. ಭಾಷಾವಾರು ಪ್ರಾಂತ್ಯಗಳ ವಿಭಜನೆ ಮಾಡಬೇಕೆಂದರೆ ಬಹುಸಂಖ್ಯಾತರು ಮಾತನಾಡುವ ಭಾಷೆ ಆಧಾರದ ಮೇಲೆ ಅವರನ್ನೆಲ್ಲಾ ಒಂದುಗೂಡಿಸುವುದು ಎಂದರ್ಥ. ಇಷ್ಟು ಹೊರತು ಇವರೆಲ್ಲರನ್ನೂ ಒಂದುಮಾಡಬೇಕಾದರೆ ಅನ್ಯಭಾಷೆ ಆಡತಕ್ಕವರನ್ನು ಅಲ್ಲಿಂದ ಬಿಟ್ಟೋಡಿಸಬೇಕೆಂದು ಇದರ ಅರ್ಥವಲ್ಲ. 1920 ರಿಂದಲೂ ಪತ್ರಿಕೋದ್ಯಮಿಗಳು ಈ ಕರ್ಣಾಟಕಪ್ರಾಂತ್ಯ ನಿರ್ಮಾಣವಾಗಬೇಕೆಂದು ಹೇಳುತ್ತಲೇ ಇದ್ದಾರೆ; ಮೈಸೂರು ವಿಸ್ತಾರವಾಗಬೇಕೆಂದು ಹೇಳುತ್ತಿದ್ದಾರೆ. ಮಹಾತ್ಮಗಾಂಧಿಜಿಯವರೇ ಮೊದಲಾಗಿ ಅನೇಕಜನ ರಾಷ್ಟ್ರನಾಯಕರು ಸಹ ನೆಹ್ರೂ ಅವರು ಮೊದಲುಗೊಂಡು ಎಲ್ಲರೂ ಈ ಪ್ರಾಂತ್ಯಗಳನ್ನು ಪುನರ್ವಿಂಗಡಣೆ ಮಾಡಬೇಕಾದರೆ ಈ ಭಾಷಾವಾರು ತತ್ವದ ಹೊರತು ಮತ್ತೆ ಯಾವುದನ್ನೂ ಆಧಾರವಾಗಿಟ್ಟುಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಸಾಹಿತಿಗಳೆಲ್ಲರೂ ಕೂಡ ಭಾಷಾವಾರು ಪ್ರಾಂತ್ಯರಚನೆ ಸೂಕ್ತ ಎಂದು ಸಾರಿದ್ದಾರೆ. ಅನೇಕ ವೇಳೆ ಈ ಆಕಾಶವಾಣಿ ಮೂಲಕವೂ ಕೂಡ ಈ ಭಾಷಾವಾರು ಪ್ರಾಂತ್ಯದ ಅಗತ್ಯವನ್ನು ಪ್ರಕಟಣೆ ಮಾಡಿದ್ದಾರೆ. ಅನೇಕ ಕವಿಪುಂಗವರು '' ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು '' ಎಂದು ಹಾಡಿ ಕರ್ಣಾಟಕ ಪ್ರಾಂತ್ಯದ ನಿರ್ಮಾಣ ಬೇಗ ಆಗಬೇಕೆಂದು ಹೇಳಿದ್ದಾರೆ. ಶ್ರೀ ಕೆ. ವಿ. ಪುಟ್ಟಪ್ಪನವರು ಈ ಅಖಂಡ ಕರ್ಣಾಟಕದ ಅಗತ್ಯವನ್ನೂ ಮತ್ತು ಅದರ ಹಿರಿಮೆಯನ್ನೂ ನಿರ್ಭಯವಾಗಿಯೂ ಮತ್ತು ನಿರ್ದಾಕ್ಷಿಣ್ಯವಾಗಿಯೂ ಚಿತ್ರಿಸಿ ಸಾರ್ವಜನಿಕರ ಮುಂದೆ ಇಟ್ಟಿದ್ದಾರೆ. ಹೀಗೆ ಪ್ರತಿಯೊಬ್ಬರೂ ಕರ್ಣಾಟಕ ಪ್ರಾಂತ್ಯ ಬೇಕೆಂದು ಸಾರಿದ್ದಾರೆ. ಇನ್ನು ಪ್ರತಿಯೊಂದು ರಾಜಕೀಯ ಪಕ್ಷಗಳೂ ಕೂಡ ಇದನ್ನು ಒಪ್ಪಿಕೊಂಡಿವೆ. ಹೀಗೆ ದೇಶದಲ್ಲಿರುವ ಜನರೆಲ್ಲಾ ಕರ್ಣಾಟಕ ಪ್ರಾಂತ್ಯನಿರ್ಮಾಣ ಎಂದಿಗಾದೀತೋ ಎಂದು ಕಾದು ಕೂತಿದ್ದಾರೆ.

ಶ್ರೀ ಎಂ. ರಾಜಶೇಖರಮೂರ್ತಿ (ಎಳಂದೂರು) — ರವೀಂದ್ರನಾಥ ಟ್ಯಾಗೋರ್ ಅವರು '' ಪಂಜಾಬು, ಸಿಂಧು, ಗುಜರಾತ, ಮರಾಠಾ। ದ್ರಾವಿಡಯುತ್ಕಲ ವಂಗ ''—ಎಂಬುದಾಗಿ ಹಾಡಿದ್ದಾರೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಹೌದು. ಎಂದಿಗೂ ಈ ಭಾಷಾವಾರು ತತ್ವದ ಮೇಲೆ ದೇಶವನ್ನು ವಿಭಜನೆ ಮಾಡಬೇಕೆಂಬ ಉದ್ದೇಶ ಬುಡಮೇಲಾಗಿಲ್ಲ. ಆದರೆ ಈ ದಿವಸ ಈ ಭಾಷಾವಾರು ತತ್ವದ ಮೇಲೆ ಕರ್ಣಾಟಕ ಪ್ರಾಂತ್ಯವನ್ನು ನಿರ್ಮಾಣ ಮಾಡಿದರೆ ನಮ್ಮ ಮೈಸೂರಿನವರಿಗೆ ಕೆಲವು ಸೌಲಭ್ಯಗಳು ಈಗ್ಗೆ ಸದ್ಯಕ್ಕೆ ಕಡಮೆಯಾಗುವುದಾದರೂ ಮುಂದೆ ಇದು ಬಹು ಬೆಲೆಯುಳ್ಳ ಪ್ರಾಂತ್ಯವಾಗುತ್ತದೆಂದು ಹೇಳುವುದರಲ್ಲಿ ಯಾವ ಸಂದೇಹವೂ ಇರುವುದಿಲ್ಲ. ಆ ಹೊರಗಡೆಯ ಕರ್ಣಾಟಕ ಪ್ರದೇಶದಲ್ಲಿರತಕ್ಕಂಥ ಜನರು ನಮ್ಮವರಿಗಿಂತಲೂ ದುಡಿಮೆಯಲ್ಲಿ ಬಹಳ ಘಟ್ಟಿಗರು. ಇದರ ಜೊತೆಗೆ ಕೇಂದ್ರಸರ್ಕಾರದಿಂದ ಹೆಚ್ಚಿನ ಸಹಾಯ ಬರತಕ್ಕಂಥ ಅವಕಾಶ ಬೇರೆಯಿದೆ. ಆದರೆ ಮೈಸೂರು ಈ ದಿವಸ ಇಷ್ಟು ಉನ್ನತಮಟ್ಟಕ್ಕೆ ಬರಲು ಇದು ಒಂದು ಚಿಕ್ಕ ದೇಶವಾಗಿದ್ದುದೇ ಕಾರಣ ಎಂದು ಹೇಳಿದ್ದನ್ನು ನಾನು ಖಂಡಿತ ಒಪ್ಪಲಾರೆ. ಕಾಂಗ್ರೆಸ್ ಆಡಳಿತ ಬರುವುದಕ್ಕೆ ಮುನ್ನ ಅನೇಕ ರಾಜಕೀಯತಜ್ಞರು ಈ ದೇಶದ ಆಡಳಿತವನ್ನು ವಹಿಸಿಕೊಂಡಿದ್ದುದರಿಂದ, ಅವರ ಮೇಧಾವಿತನದಿಂದ ಈ ದೇಶ ಮುಂದುವರಿಯಲು ಸಾಧ್ಯವಾಯಿತೇ ವಿನಾ ದೇಶ ಚಿಕ್ಕದಾದುದರಿಂದ ಮುಂದುವರಿಯಿತು ಎನ್ನುವುದು ಅರ್ಥವಿಲ್ಲದ ಮಾತು ಎಂದು ಹೇಳಲೇಬೇಕಾದ್ದಿಲ್ಲ. ಹಿಂದೆ ಮೈಸೂರು ಸಂಸ್ಥಾನದ ಉತ್ಪತ್ತಿ ಮೂರು ಕೋಟಿ ರೂಪಾಯಿಗಳಿದ್ದಾಗಲೇ ದೇಶ ಪ್ರಗತಿ ಮಾರ್ಗದಲ್ಲಿತ್ತು. ಆಗ ದೇಶದಲ್ಲಿದ್ದ ಜನರೂ ಸಹ ಹೆಚ್ಚಿನ ರೀತಿಯಲ್ಲಿ ಸಹಾಯ ನೀಡುತ್ತಿದ್ದರು. ಆದರೆ ಅವರ ಆಡಳಿತ ಮುಗಿದ ಮೇಲೆ ದೇಶ ಅಷ್ಟು ಪ್ರಗತಿಮಾರ್ಗದಲ್ಲೇನೂ ಮುಂದುವರಿದಿಲ್ಲ. ಹೀಗಿದ್ದರೂ ದೇಶ ಚಿಕ್ಕದಾಗಿಯೇ ಇರಬೇಕು ; ಹೀಗಿದ್ದರೇ ಮುಂದುವರಿಯಲು ಸಾಧ್ಯ ಎಂದು ಮಾಡಿರತಕ್ಕ ವಾದವನ್ನು ಯಾರೂ ಒಪ್ಪುವುದಕ್ಕಾಗುವುದಿಲ್ಲ. ಅದು ಸರಿಯಾದ ವಾದವೇ ಅಲ್ಲ. ದೇಶ ಇಷ್ಟೇ ಇರಬೇಕು, ಇದಕ್ಕಿಂತ ಜಾಸ್ತಿ ಆಗಬಾರದು ಎಂದು ತೀರ್ಮಾನ ಹೇಳತಕ್ಕಂಥ ಅಧಿಕಾರ ಈ ದಿವಸ ನಮ್ಮ ಕೈಯಲ್ಲಿಲ್ಲ. ಅದಕ್ಕಾಗಿ ಈ ದಿವಸ ಒಂದು ಸಮಿತಿಯನ್ನು ನೇಮಕ ಮಾಡಿದ್ದಾರೆ. ಈ ದಿವಸ ಆ ಇಂಡಿಯಾ ಸರ್ಕಾರದವರು ನೇಮಕಮಾಡಿರತಕ್ಕಂಥ ಆ ಫಜಲಾಲಿ ಸಮಿತಿಯವರು ಕೊಡತಕ್ಕಂಥ ತೀರ್ಮಾನಕ್ಕೆ ಎಲ್ಲರೂ ತಲೆಬಾಗಬೇಕು. ಸರ್ವದೃಷ್ಟಿಯಿಂದಲೂ ದೇಶ ದೊಡ್ಡದಾಗುವುದು ಒಳ್ಳೆಯದು, ನಾವು ಇದನ್ನು ಸ್ವಾಗತ ಮಾಡಲೇಬೇಕು. ಮುಂದಕ್ಕೆ ಇದರ ಅಭಿವೃದ್ಧಿ ಬಹಳ ಉಜ್ವಲ ಉಳ್ಳದ್ದಾಗಿದೆ. ಈ ದಿವಸ ನಮ್ಮ ಕಣ್ಣು ಮುಂದೆ ಕಾಣುತ್ತಿರುವಂಥ ಅನುಕೂಲತೆಗಳು ನಮಗೆ ಬೇಡ ಎಂದು ಹೇಳುವುದು ಅಂಥ ಒಂದು ರಾಜಕೀಯ ನೈಪುಣ್ಯತೆಯೆಂದು ಹೇಳಲಾರೆ. ಪ್ರಾಂತ್ಯಗಳೆಲ್ಲಾ ವಿಸ್ತಾರವಾಗಲೇಬೇಕು. ಅದು ಆಗಿಯೇ ಆಗುತ್ತದೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಎಸ್. ಎಂ. ಲಿಂಗಪ್ಪ (ಕೃಷ್ಣರಾಜಪೇಟೆ).—ಸ್ವಾಮಿ, ಕೆಲವು ದಿವಸಗಳಿಂದಲೂ ಈ ರಾಜ್ಯಗಳ ಪುನರ್ನಿರ್ಮಾಣದ ವಿಚಾರವಾಗಿ ಶೇಷಾದ್ರಿ ಸಮಿತಿಯವರು ಒಪ್ಪಿಸಿರತಕ್ಕಂಥ ವರದಿಯ ಬಗ್ಗೆ ವಿಪುಲವಾದ ಚರ್ಚೆ ನಡೆಯುತ್ತಿದೆ. ಈ ಭಾಷಾವಾರು ಆಧಾರದ ಮೇಲೆ ನಮ್ಮ ಸಂಸ್ಥಾನ ವಿಶಾಲವಾಗಬೇಕು ಎಂದು ಕೆಲವರೂ ಮತ್ತು ಈ ಭಾಷಾವಾರು ಪ್ರಾಂತ್ಯದ ತತ್ವಗಳ ಮೇಲೆ ಮಾಡಬಾರದೆಂದು, ವಿರೋಧಿಸುತ್ತ ಕೆಲವರು ಮಾತನಾಡಿರುತ್ತಾರೆ. ಹೀಗೆ ಭಾಷಾವಾರು

ಆಧಾರದಮೇಲೆ ರಾಜ್ಯಗಳನ್ನು ಪುನರ್ವಿಂಗಡಣೆ ಮಾಡುವುದು ಅಷ್ಟೇನೂ ಮುಖ್ಯವಾದುದಲ್ಲ. ರಾಜ್ಯಗಳನ್ನು ಪುನರ್ವಿಂಗಡಣೆ ಮಾಡಬೇಕಾಗಿದ್ದರೆ ಅನೇಕ ವಿಚಾರಗಳನ್ನು ಗಮನಿಸಬೇಕಾಗಿದೆ ಎಂದು ಈಗ ಕೆಲವು ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ಸಭೆಯ ಮುಂದೆ ವ್ಯಕ್ತಪಡಿಸಿದ್ದಾರೆ. ಆದರೆ ಕೆಲವರ ಅಭಿಪ್ರಾಯದಲ್ಲಿ ರಾಜ್ಯಗಳ ಪುನರ್ವಿಂಗಡಣೆಗೆ ಈ ಭಾಷೆಯೇ ಬಹು ಮುಖ್ಯವಾದ ಆಧಾರವಾಗಿರಬಹುದು. ಆದರೆ ನನ್ನ ಅಭಿಪ್ರಾಯದಲ್ಲಿ ಈ ರಾಜ್ಯಗಳ ಪುನರ್ನಿರ್ಮಾಣದ ಬಗ್ಗೆ ನಾವು ಬಹು ಮುಖ್ಯವಾಗಿ ಆಲೋಚಿಸಬೇಕಾದದ್ದು ಏನೆಂದರೆ ಅವುಗಳ ಭೌಗೋಳಿಕ ವಿಚಾರ, ಆಡಳಿತ ಸೌಕರ್ಯ, ಆರ್ಥಿಕ ಪರಿಸ್ಥಿತಿ ಇತ್ಯಾದಿ ವಿಚಾರಗಳ ಬಗ್ಗೆ ನಾವು ನಮ್ಮ ಪೂರ್ಣ ಗಮನವನ್ನಿಡಬೇಕಾಗಿರುತ್ತೆಂದು ನನಗನ್ನಿಸುತ್ತಿದೆ. ಈ ದೃಷ್ಟಿಗಳಿಂದ ನಾವೀದಿವಸ ಈ ಶೇಷಾದ್ರಿ ಸಮಿತಿಯ ವರದಿಯಲ್ಲಿ ಅಡಗಿರತಕ್ಕಂಥ ಅಂಶಗಳನ್ನು ಗಮನಕ್ಕೆ ತೆಗೆದುಕೊಂಡು ನೋಡಿದರೆ ಮೈಸೂರು ಹೊರಗಡೆಯ ಕರ್ಣಾಟಕ ಪ್ರದೇಶದಲ್ಲಿರತಕ್ಕಂಥ ಆರ್ಥಿಕ ಪರಿಸ್ಥಿತಿಯನ್ನೂ ಮತ್ತು ನಮ್ಮ ಮೈಸೂರಿನ ಆರ್ಥಿಕ ಪರಿಸ್ಥಿತಿಯನ್ನೂ ಒಂದಕ್ಕೊಂದು ಹೋಲಿಸಿ ನೋಡಬೇಕಾದುದು ಬಹಳ ಮುಖ್ಯವಾದಂಥ ವಿಚಾರ. ಹೀಗೆ ನಾವು ಈ ದಿವಸ ನಮ್ಮ ಸಂಸ್ಥಾನದ ಆರ್ಥಿಕ ಪ್ರಗತಿಯನ್ನು ಹೊರಗಡೆ ಇರತಕ್ಕಂಥ ಆ ಕನ್ನಡ ಪ್ರಾಂತ್ಯಗಳ ಆರ್ಥಿಕ ಪರಿಸ್ಥಿತಿಗೆ ಹೋಲಿಸಿ ನೋಡಿದರೆ ನಮ್ಮಲ್ಲಿರತಕ್ಕಂಥ ಸ್ಥಿತಿಗತಿಗಳು ಅಲ್ಲಿರುವುದಿಲ್ಲವೆಂಬುದು ಕಂಡುಬರುತ್ತದೆ. ಇಂಥ ದೇಶಗಳ ಪುನರ್ವಿಂಗಡಣೆಯಲ್ಲಿ ಬಹಳ ವ್ಯತ್ಯಾಸವಿದೆ. ಈ ದಿವಸ ನಾವು ಈ ರಾಜ್ಯಗಳ ಪುನರ್ವಿಂಗಡಣೆಗೆ ಭಾಷೆಯೇ ಮುಖ್ಯವಾದಂಥ ಮೂಲಾಧಾರವಾಗಿರಬೇಕೆಂದು ಹೇಳಿದ ಮೇಲೆ ಅನೇಕ ವರ್ಷಗಳಿಂದ, ಅನೇಕ ಶತಮಾನಗಳಿಂದಲೂ ಇಲ್ಲಿ ನೆಲಸಿರತಕ್ಕಂಥ ಅನ್ಯಭಾಷೆಯನ್ನಾಡುವ ಜನರನ್ನು ನಾವು ಈ ದಿವಸ ಹೊರಗಡೆ ಬೇರೆ ಪ್ರದೇಶಕ್ಕೆ ಕಳುಹಿಸಬೇಕಾಗುತ್ತದೆ. ಹೀಗೆ ಭಾಷೆಯ ಆಧಾರವನ್ನೇ ತೆಗೆದುಕೊಂಡು ಹೇಳುವುದಾದರೆ ಈ ದಿವಸ ನಮ್ಮ ಸಂಸ್ಥಾನದಲ್ಲಿರುವ ಅಂದರೆ ಶತಮಾನಗಳಿಂದಲೂ ನಮ್ಮೊಡನೆ ಬಾಳಿಕೊಂಡು ಬಂದಿರುವಂಥ ಅನ್ಯಭಾಷೆಯ ಜನರನ್ನು.—ನಮ್ಮ ಕಷ್ಟ-ಸುಖಗಳಲ್ಲಿ ಭಾಗಿಗಳಾಗಿದ್ದಂಥ ಜನರನ್ನು, ನಾವು ಅವರು ಬೇರೆ ಪ್ರಾಂತ್ಯಗಳಿಗೆ ಇಷ್ಟಪಟ್ಟರೆ ಹೋಗಬಹುದೆಂದು ಹೇಳಿದಹಾಗಾಯಿತು. ಆದರೆ ಈ ತತ್ವಕ್ಕೆ ಒಪ್ಪಿಕೊಂಡು ಈ ನಮ್ಮ ಬಂಧುಗಳನ್ನೆಲ್ಲಾ ಅವರು ಬೇರೆ ಕಡೆಗೆ ಹೋಗಬೇಕೆಂದರೆ ಅವರನ್ನು ಹಾಗೆ ಬಿಟ್ಟುಕೊಡಲು ನಾನೀ ದಿವಸ ಸಿದ್ಧವಾಗಿಲ್ಲ. ನಾನು ಈ ಬಗ್ಗೆ ನನ್ನ ಕ್ಷೇತ್ರದಲ್ಲಿರತಕ್ಕಂಥ ಜನರ ಅಭಿಪ್ರಾಯವನ್ನು ಕೇಳಬೇಕಾಗಿದೆ. ಆದರೆ ನನ್ನ ಕ್ಷೇತ್ರದಲ್ಲರತಕ್ಕಂಥ ಜನರ ಅಭಿಪ್ರಾಯದಲ್ಲಿ ಈ ನಮ್ಮ ಮೈಸೂರಿನ ವಿಸ್ತರಣಕ್ಕೆ ವಿರೋಧವಾಗಿದ್ದಾರೆಂದು ಹೇಳುತ್ತೇನೆ. ಇಂದು ನಾವೆಲ್ಲರೂ ಭಾರತೀಯರು. ನಾವು ಭಾಷಾವಾರು ಆಧಾರದ ಮೇಲೆ ಪ್ರಾಂತ್ಯಗಳನ್ನು ಅಥವಾ ರಾಜ್ಯಗಳನ್ನ ವಿಂಗಡಣೆ ಮಾಡಬೇಕು ಎಂದು ಹೇಳ ವ ಭಾಗದಲ್ಲಿ ನಮ್ಮಲ್ಲಿ ರಾಷ್ಟ್ರೀಯ ಮನೋಭಾವನೆಗಿಂತ ಪ್ರಾಂತೀಯ ಮನೋಭಾವನೆ ಜಾಸ್ತಿಯಾಗುತ್ತದೆ. ಇನ್ನು ನಾವು ಈ ವಿಶಾಲ ಭಾರತದಲ್ಲಿ ಯಾವ ಭಾಷೆಯನ್ನೇ ಆಡಲಿ, ಯಾವ ಭಾಗದಲ್ಲೇ ಇರಲಿ ನಾವು ಭಾರತೀಯರು ಎಂಬುದನ್ನು ಮರೆಯಬಾರದು. ಈ ದೃಷ್ಟಿಯಿಂದ ನನ್ನ ಸ್ವಂತ ಅಭಿಪ್ರಾಯವನ್ನು ಹೇಳುವುದಾದರೆ ಪ್ರಾಂತೀಯ ಪುನರ್ವಿಂಗಡಣೆ ಮತ್ತು ಮೈಸೂರು ವಿಶಾಲವಾಗುವುದ ಅನಾವಶ್ಯಕ. ನಮ್ಮ ದೇಶದಲ್ಲಿ ನಾನಾ ಭಾಷೆಗಳನ್ನು ಆಡತಕ್ಕ ಜನರಿದ್ದಾರೆ. ಮೈಸೂರು ವಿಶಾಲವಾಗುವುದರಿಂದ ಮೈಸೂರಿನ ಪ್ರಗತಿಗೆ ಬಹಳ ಅಡ್ಡಿಯಾಗುತ್ತದೆ. ಮೈಸೂರಿನ ಜನತೆಯ ಮೇಲೆ ನಾವು ಹೊರಬಾರದ ಹೊರೆಯನ್ನು ಹೊರಿಸಿ ಅವರ ಪ್ರಗತಿಯನ್ನು ಇನ್ನೂ 50 ವರ್ಷಗಳಕಾಲ ತಡೆದು ನಿಲ್ಲಿಸಬೇಕಾಗುತ್ತದೆ. ಈ ದೃಷ್ಟಿಯಿಂಥ ಮೈಸೂರು ಈಗ ಹೇಗೆ Composite State ಆಗಿ ನಾನಾ ಭಾಷೆಗಳನ್ನು ಆಡತಕ್ಕ ಜನಗಳನ್ನೊಳಗೊಂಡು ಇದೆಯೋ ಅದೇ ರೀತಿ ಮುಂದೆಯೂ ಇರಬೇಕೆಂದು ನನ್ನಭಿಪ್ರಾಯ.

